[illegible] ವರ್ಷ ಒಂದಕ್ಕೆ ರೂಪಾಯಿ 2-0-0 Registered No. M. 498. ಟಪ್ಪಾಲು ಹಾಸಲು ಸೇರಿ ರೂಪಾಯಿ 2-13-0

ಸ್ವದೇಶಾಭಿಮಾನಿ.

(ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ೧೯೦೭ರಲ್ಲಿ ಸ್ಥಾಪಿತವಾದುದು.)

ಪ್ರತಿ ಶುಕ್ರವಾರವೂ ಮಂಗಳೂರು ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ.

ರತ್ನೈರ್ಮಹಾರ್ಹೈಸ್ತುತುಷುರ್ನ ದೇವಾ । ನ ಭೇಜಿರೇ ಭೀಮವಿಷೇಣ ಭೀತಿಮ್ ॥ ಸುಧಾಂ ವಿನಾ ನ ಪ್ರಯಯುರ್ವಿರಾಮಂ । ನ ನಿಶ್ಚಿತಾರ್ಥಾದ್ವಿರಮಂತಿ ಧೀರಾಃ ॥ ೧ ॥

ದೊರೆಯಲನುಪಮರತ್ನಗಳು ಸಾ । ಗರವ ಮಥಿಸಲು ಸುರರಿಗದರಿಂ । ಹರುಷವಾಯಿತೆ? ಮತ್ತೆ ವಿಶ್ವವ ಸುಡುತ ಬರುತಿರುವ ॥

ಗರಲಕವರಂಜಿದರೆ? ಸುಧೆಯನು । ಮರೆತು ಕಷ್ಟದ್ರರ ತೆರದಿ ಕುಳಿತರೆ? । ಕೆರಳಿ ಬಲ್ಲರೆ ತೊರೆದು ಧೀರರು ನಿಶ್ಚಿತಾರ್ಥವನು? ॥ ೧ ॥

(Oldest Kanarese Weekly in South Kanara)

ಪುಸ್ತಕ ೨೮. ಮಂಗಳೂರು, ತಾ. ೩ನೇ ಶುಕ್ರವಾರ ಅಗೋಸ್ತು ೧೯೩೪ (3-8-'34) ಸಂಚಿಕೆ ೩೧

THE CANARA BANKING CORPORATION, UDIPI, LTD.

(Incorporated in British India)

Established 1906

Head office:—UDIPI, S. K. **Branches:—Coondapoor, Mangalore, Shimoga & Madras.**

Abstract Statement of affairs of the CANARA BANKING CORPORATION UDIPI LTD, as on 30th June, 1934.

	LIABILITIES.			ASSETS	
1	Paid up Capital	Rs. 2,25,000-0-0	1	Bank Premises,	Rs. 66,269-12-9
2	Reserve and other funds	" 2,50,000-0-0	2	Investment on G. P. notes	" 6,37,466-4-6
3	Deposits	" 23,52,192-0-10	3	Authorised Investments	" 24,69,522-6-4
4	Due to Bankers	" 3,18,859-1-2	4	Bills for collection	39,249-3-6
5	Sundries	" 89,923-3-3	5	Sundries	" 39,980-13-3
6	Bills per contra	39,249-3-6	6	Cash on hand & with bankers.	" 22,735-0-5
	Total	32,75,223-8-9		Total	32,75,223-8-9

Office of the Corporation
UDIPI. S. K.
9-7-34.

M. Shrinivas Prabhu,
Ag. Manager.

(Regd.)

ಅಮೃತಾಂಜನ.

ಇದು ಕೆಟ್ಟ ಶಿರೋವೇದನೆ, ಕಸ್ಸಕೊಡುವ ವಾತ, ಛಾತಿ ನೋವು, ವಿಶೇಷ ಉಳುಕು, ಅಸಹನೀಯ ಹಲ್ಲುನೋವು, ವಿಪರೀತ ಛಳಿಯ, ಬಹು ಶೀತ, ಸಹಿಸಲಸದಳವಾದ ಚಳಿ, ಕೈಕಾಲು ಮರಗಟ್ಟುವುದು, ಲುಂಬಾಗೊ ಮೊದಲಾದ ಎಲ್ಲಾ ತರದ ಬೇನೆಗಳನ್ನೂ ಅತೀ ತ್ವರೆಯಲ್ಲೇ ಗುಣಪಡಿಸುತ್ತದೆ. ಎಲ್ಲೆಲ್ಲಿಯೂ ಮಾರಲ್ಪಡುತ್ತಿದೆ.

ರಿಂಗ್‌ವರ್ಮ್ ಮುಲಾಮು— ಇದು ರಿಂಗ್‌ವರ್ಮನ್ನೂ ಕಜ್ಜಿಯನ್ನೂ ಇನ್ನಿತರ ಚರ್ಮರೋಗಗಳನ್ನೂ, ಮೂರು ಸಲ ಮುಟ್ಟಿಸುವುದರೊಳಗೆ ಗುಣಪಡಿಸುತ್ತದೆ.

ಡಬ್ಬಿ 1ಕ್ಕೆ 6 ಆಣೆ ಡಜನಿಗೆ ರೂ- 3-8-0. ಅಂಚೆವೆಚ್ಚ ಪ್ರತ್ಯೇಕ.

ಅಮೃತಾಂಜನ ಡಿಪೋ.

ಮದರಾಸು ಮತ್ತು ಬೊಂಬಾಯಿ

ದಿ ಬೊಂಬೇ ಲ್ಯಾಫ್ ಎಶ್ಯೂರೆನ್ಸ್ ಕಂಪೆನಿ ಲಿಮಿಟೆಡ್, ಬೊಂಬೇ.

1908ರಲ್ಲಿ ಸ್ಥಾಪಿತವಾದುದು.

ಪೊಲಿಸಿದಾರರಿಗೆ ವಿಶೇಷ ರಿಯಾಯತಿ.

ವರ್ಷಾವಧಿಯ ಪ್ರೀಮಿಯಮ್ಮುಗಳನ್ನು ತೆರುವ ಎಲ್ಲಾ ಪೊಲಿಸಿದಾರರಿಗೂ "ಸಿಲ್ವರ್ ಜ್ಯೂಬಿಲಿ" ರಿಯಾಯತಿಯಾಗಿ ಅವರವರ ಮುಂದಿನ ಪ್ರತಿ ವಾರ್ಷಿಕ ಪ್ರಿಮಿಯಮ್ಮಿನಲ್ಲಿ ಶೇಕಡಾ 2½ ಸಲೆಯಷ್ಟು ಕಡಿಮೆಯಾದ ಮೊಬಲಗನ್ನು ತೆರುವ ರಿಯಾಯತಿ ಕೊಡಲಾಗಿದೆ. ಈ ರಿಯಾಯತಿಯ ಪ್ರಯೋಜನವನ್ನು ಆಗಲೇ ನೂರಾರು ಮಂದಿ ಪೊಲಿಸಿದಾರರು ಪಡಕೊಂಡಿದ್ದಾರೆ. ವರ್ಷಕ್ಕೊಮ್ಮೆ ಪ್ರಿಮಿಯಮ್ಮಿನ ಕಂತನ್ನು ಕಟ್ಟಲಪೇಕ್ಷಿಸುವವರು ತಮ್ಮ ಪೊಲಿಸಿಯ ನಂಬರುಗಳನ್ನು ನಮೂದಿಸಿ ನಮಗೆ ಯಾ ಸಮ್ಮಂಧಪಟ್ಟ ನಮ್ಮ ಇತರ ಆಫೀಸಿಗೆ ತಿಳಿಸಬೇಕಾಗಿ ಈ ಮೂಲಕ ವಿನಂತಿ ಮಾಡಿಕೊಳ್ಳೋಣಾಗುತ್ತದೆ.

ವಿ: ಸೂ:—ಪ್ರಾತಿನಿಧ್ಯವಿಲ್ಲದ ಜಿಲ್ಲೆಗಳಿಂದ ಉತ್ಸಾಹಶಾಲಿ ಗೃಹಸ್ಥರುಗಳ ಏಜನ್ಸಿ ಅರ್ಜಿಗಳು ಅಂಗೀಕರಿಸಲಾಗುವುವು.

ಕೊಚ್ಚಿಕಾರ್ ಬ್ರದರ್ಸ್, ಮದ್ರಾಸ್ ಬ್ರೇಂಚ್ ಸೆಕ್ರೆಟರಿಯವರು.

ಆಫೀಸುಗಳು:—(1) ಪೋಸ್ಟ್ ಬೋಕ್ಸ್ ನಂಬ್ರ 337, [illegible] ರೋಡ್, ಮದ್ರಾಸ್; (2) ವಿಶ್ವೇಶ್ವರಪುರಂ ಸರ್ಕಲ್, ಬೆಂಗಳೂರು ಸಿಟಿ; (3) ಮಂಗಳೂರು, ದಕ್ಷಿಣ ಕನ್ನಡ; (4) ಉಡುಪಿ, ದಕ್ಷಿಣ ಕನ್ನಡ; (5) [illegible] ಬಿಲ್ಡಿಂಗ್, [illegible], ಬೊಂಬಾಯಿ, ನಂಬ್ರ 2; (6) ಕಲ್ಲಿಕೋಟೆ

[illegible]

[illegible] ಸಂಗೀತ [illegible] ಎಂದು [illegible] ... [illegible] ಅದರಿಂದ ಈ "ಹಿಂದೂ [illegible]" [illegible] ದೇಹದಲ್ಲಿ ಬಲಬೇಕು [illegible] "ದಂಡು" ತೆಗೆಯುತ್ತೇನೆ, "ಬಸ್ಸ" [illegible] ನಗಬಾರದು—

ರಾಮುಲಕ್ಷ್ಮಣ್ ಜಾನಕೀ,
ಜೈಬೋಲೊ ಹನುಮಾನಕೀ,
ಒಂದು, ಎರಡು, ಮೂರು—
ಜೈ! ರಾಮುಲಕ್ಷ್ಮಣ್ ಜಾನಕೀ,
ಜೈಬೋಲೊ ಗಾಂಧಿರಾಜಕೀ!
ಹಾತ್ ದೇವೊ ಸೋಟ್ ಕೀ
ಜೈ! ಮಾರ್ ಖಾಲೊ ಶೀರ್ ಕೀ

ಇದಿಷ್ಟಿಗೆ ಸಾಕು, ಇದು ಹಿಂದೂಗಳ ರಣಗೀತೆ ಯಾಯಿತು. ಇನ್ನು ಮುಸಲ್ಮಾನರದ್ದೊಂದನ್ನು ಹೇಳಿ ಮುಂದರಿಯುತ್ತೇನೆ:—

ರಾಯಿಲಾಹ ಇಲ್ಲಲ್ಲಾ, ಹಿಲ್ಲಲ್ಲಾ!
ಜನರ ಕೈಂಪಲಿ ಕಾಸು ಇಲ್ಲಲ್ಲಾ!
ರಾಯಿಲಾಹ ಅಲ್ಲಲ್ಲಾ, ಅಲ್ಲಲ್ಲಾ!
ಸಾಯ್ಬನ ಪದಾ ಸುಳ್ಳಲ್ಲಾ, ಸುಳ್ಳಲ್ಲಾ!

× × × × ×

ಈ ಪದಕ್ಕೂ ಸಾಹಿತ್ಯಕ್ಕೂ ಅರ್ಥವೇನು ಎಂದು ಸಾಹಿತಿಗಳು ಕೇಳಬಹುದು! ಸಾಯ್ಬನು ಸಿಟ್ಟಿನಿಂದ ಹೇಳಬಹುದು. ಅರ್ಥವಿಲ್ಲದೆ ಏನಾಗುತ್ತದಯ್ಯ ಲೋಕದಲ್ಲಿ?

× × × × ×

ಜವಾಹರಲಾಲರನ್ನು "ಬಿಡುಗಡೆ ಮಾಡೋದಿಲ್ಲ" ಎಂದು ಹೋರರು ಅರ್ಥವಿಲ್ಲದೆ ಹೇಳಿದರೆ? ಯಾ ಶ್ರೀಧರರು ಅರ್ಥವಿಲ್ಲದೆ ಸಮಾಧಾನ ಹೊಂದಿದರೆ? ಎಲ್ಲಕ್ಕೂ ಅರ್ಥವಿದೆ ಸ್ವಾಮಿ, ಈ ಲೋಕದಲ್ಲಿ ದೊಮ್ಮ ಮಾಡಿದುದು, ಮಾಡಿಸುವುದು, ಬರೆದುದು, ಬರೆಯುವುದು, ಬರೆಸುವುದು ಎಲ್ಲಾ ಅರ್ಥವಿದ್ದೇ ಎಂದು ಖಂಡಿತ ನಂಬಿ!

× × × × ×

ಸ್ವದೇಶಾಭಿಮಾನಿಯನ್ನು ನೀವು ಸುಮ್ಮನೆ ಓದುತ್ತೀರಾ? ಅರ್ಥವಾಗಬೇಕು; ಬುದ್ಧಿಬರಬೇಕು: ಬುದ್ಧಿವಂತರಾಗಬೇಕು ಎಂದಲ್ಲವೇ ಅಲ್ಲ? ಹಾಗೆ ಸಾಯ್ಬನ ಪದಕ್ಕೂ ಅರ್ಥವಿದೆಯೆಂದೆನ್ನಿ.

× × × × ×

ವೈಸರಾಯರು ಅರ್ಥವಿಲ್ಲದೆ ಲಂಡನಿಗೆ ಹೋದರೇ? ಅರ್ಥವಿಲ್ಲದೆ ಮೆಕ್‌ಡೊನಾಲ್ಡರು ರಜಾ ಕಳೆಯ ತೀರ ಪ್ರದೇಶಭೂಮಿಗೆ ಹೊರಟರೆ? ಅರ್ಥವಿಲ್ಲದೆ ಸಾಯ್ಬ ಸ್ವದೇಶಾಭಿಮಾನಿಗೆ ಬಂದನೇ? ಅರ್ಥವಿಲ್ಲದೆ ತಾಲೂಕು ಬೋರ್ಡು, ಡಿಸ್ಟ್ರಿಕ್ಟ ಬೋರ್ಡಿಗೆ ಬಂತೆ?

× × × × ×

[illegible]

[illegible] ಗಾಂಧಿಯು [illegible] ಮಾಗು [illegible]

× × × × ×

[illegible] ಹೇಳಿದರು— [illegible] ಸ್ವರ್ಗವು ಕಾಂಗ್ರೆಸ್ಸಿನ ಕೀಲಿಕೈ [illegible] ಒಂದೇ ಸೀಟೇ ನಮ್ಮ ನ್ಯಾಶೆಲ್ ಬಸ್ಸು— ಅಥವಾ [illegible]"

× × × × ×

ಇದನ್ನು ಕೇಳಿ ಬಂದವರು ಕಾಂಗ್ರೆಸ್ ಬುದ್ಧಿ ಹೇಳಿದರಯ್ಯ! "ಅದೆಲ್ಲ ನಮಗೆ ಸಾಧ್ಯವಿಲ್ಲ—ನಾವು ಹೀಗೆ, ಸುಮ್ಮನೆ ಹೇಳಿದ್ದು" ಎಂದುಕೊಂಡು ಓಡಿಯೇ ಹೋದರು!

× × × × ×

ಕಾಶಿಯೆಂಬುದು ಬಹಳ ಪವಿತ್ರಕ್ಷೇತ್ರವೆಂದು ಸ್ನಾನಕ್ಕೆ ಅಲ್ಲಿಗೆ ಓಡುವವರು ಧಾರಾಳ! ಆದರೆ, ಕಾಶಿಯಲ್ಲಿ ಸ್ನಾನಗಳನ್ನು ಕಂಡರೆ ಮಾತ್ರ ಕಾಶಿಗೆ ಕಳುಹಿಸುವ ಹಣವನ್ನು ಬಿಹಾರಿಗೆ ಕಳುಹಿಸುವುದು ಹಿತವೆಂದು ತಿಳಿಯುವವರಿದ್ದಾರೆ?

ಜಯವಾಗಲಿ ಈ ಕಾಶಿಯ ಕೀಲಿಗೆ,—

'ಸಾಯ್ಬ'

ನೋಟೀಸು.

ಕಾರ್ಕಳ ಡಿಸ್ಟ್ರಿಕ್ಟ್ ಮುನ್ಸೀಫ್ ಕೋರ್ಟಿನಲ್ಲಿ.

ಕ್ರಮ ನಂಬ್ರ 223/34.

ನರ್ಸಿಂಹ ಕಮ್ತಿ, ಹೆಜ್ಮಾಡಿ ಕೃಷ್ಣ ಕಮ್ತಿರ ಮಗ, ಹೆಜ್ಮಾಡಿ ಕಸಬಾ, ಹಾಲಿ ಬೊಂಬಾಯಿ ಶಹರಲ್ಲಿರುತ್ತಾನೆ—ವಾದಿ.

1. ಲೋರ್ಸ್ಸಿ ಫೆನಾರ್ಂಡ, ಜುವಾಂ ಫೆರ್ನಾಂಡರ ಮಗ, ಹೆಜ್ಮಾಡಿ ಕಸಬಾ ಕೊಕ್ರಾಣಿಯಲ್ಲಿ ಬಾಬುಕುಡ್ವರ ಪಕ್ಲ ಬಾಬಣ್ಣ ನಾಯ್ಕನ ಮನೆಯಲ್ಲಿರುವವ. 2. ಲೋರೆನ್ಸ ಅರ್. ಪ್ರೇರಾ, ದುಮಿಂಗ್ ಗಾಬ್ರಿಯೇಲ್ ಪ್ರೇರರ ಮಗ, ಪಲ್ಮಾರ ಗ್ರಾಮದ ಅವರಾಲಲ್ಲಿರುವವ—

ಪ್ರತಿವಾದಿರು.

ವಾದಿಯು ಪ್ರತಿವಾದಿರ ಮೇಲೆ ಮೂಲಗೇಣಿ ಗೇಣಿ ಬಾಕಿ ಬಗ್ಗೆ ರೂ. 92—7—9ಕ್ಕೆ ಮಾಡಿದ ಸದ್ರಿ ದಾವೆಯು ತನ್ನಿ ಬಗ್ಗೆ ತಾ. 18—8—34ಕ್ಕೆ ಇಟ್ಟಿದೆ. ಆ ದಿವಸ ಬೆಳಗ್ಗೆ 10 ಗಂಟೆಗೆ ಸದ್ರಿ ಪ್ರತಿವಾದಿರು ಸದ್ರಿ ಕೋರ್ಟಿಗೆ ಹಾಜರಾಗಿ ಉದಾಹರಣೆ ಕೊಡದಿದ್ದರೆ ಅವರನ್ನು ಶಿವ್ಯಾ ಮಾಡಿ ನಂಬ್ರವನ್ನು ತೀರ್ಮಾನಿಸಲಾದೀತು ಎಂಬುದಾಗಿ ಈ ಮೂಲಕ ತಿಳಿಸೋಣಾಗುತ್ತದೆ.

ಕಾರ್ಕಳ, 26—7—34. } M. Mukunda Kamath, ವಾದಿ ಕಡೆ ವಕೀಲ್

[illegible]

[illegible] ಬಾಚ್ಚ, [illegible]

'ಕುಂತಳ ಕೌಮುದಿ'

ಎಂಬ ಹಿಂದೂಸ್ಥಾನದ ಪ್ರಸಿದ್ಧ [illegible] ಕೂದಲುಗಳ ಬುಡವನ್ನು [illegible] ಕಡೆಯಿಂದ ತಿಕ್ಕಿರಿ.

(ಮನಸ್ಸಿಗೆ ಉಲ್ಲಾಸಕರವಾದ ಸುಗಂಧವನ್ನು ಕೊಡುತ್ತದೆ.)

ಹಿಂದೂಸ್ಥಾನದಲ್ಲೆಲ್ಲ ಸರ್ವತ್ರ ಉಪಯೋಗಿಸಲ್ಪಡುತ್ತಿದೆ.

ತಯಾರಿಸುವವರು:— ಬೆಲೆ ಸೀಸೆ ಒಂದಕ್ಕೆ ರೂ. 0—12—0.

ಆರ್. ಸಿ. ಸೇನ್ ಎ ಡ್ ಕೋ.,

ಲಿಮಿಟೆಡ್, ಕಲ್ಕತ್ತ.

ಏಜಂಟರು:—

ಕುಂತಳ ಕೌಮುದಿ ತೈಲ,

ವೆನ್‌ಲಾಕ್ ಆಸ್ಪತ್ರೆ ಎದುರು, ಮಂಗಳೂರು.

ಶ್ರೀ ವಿಲಾಸ

ಗಣಪತಿ ಹೈಸ್ಕೂಲ್ ರಸ್ತೆ, × ಮಂಗಳೂರು.

ಸರಕಾರೀ ಉದ್ಯೋಗಸ್ಥರಿಂದಲೂ, ವಿದ್ಯಾರ್ಥಿಗಳಿಂದಲೂ, ಪುರಪ್ರಮುಖರಿಂದಲೂ ಆದರಿಸಲ್ಪಡುತ್ತಿರುವ

ಮಂಗಳೂರಿನ ಒಂದು ಪ್ರಾಮುಖ್ಯ ಉಪಹಾರಗೃಹ.

ಶುದ್ಧ ತಿಂಡಿ, ತಾಜಾತುಪ್ಪದ ಮಿಠಾಯಿ, ಎಲ್ಲ ಬಗೆಯ ಒಳ್ಳೆಯ ಸೌಮ್ಯಪಾನೀಯಗಳು,— ಶುಚಿತ್ವ, ಸ್ಥಳಾನುಕೂಲತೆ ಇವೆಲ್ಲವುಗಳಿಗಾಗಿ 'ಶ್ರೀ ವಿಲಾಸ'ವು ಹೆಸರುಗೊಂಡಿದೆ.

[ವಿವಾಹ, ಉಪನಯನ, ಸತ್ಕಾರಕೂಟ ಇತ್ಯಾದಿಗಳ ಸಂದರ್ಭದಲ್ಲಿ, ಬೇಕಾದ ತರದ ತಿಂಡಿ ತಿನಸುಗಳ ಸಪ್ಲೈಗಿಸಲಾಗುವುದು.]

ಸುಜೀರ ಗೋಪಾಲ ನಾಯ್ಕ್, ಪ್ರೊಪ್ರೈಟರ್.

॥ ಶ್ರೀರಸ್ತು ॥

ಯಸ್ಯ, ಜನ್ಮ ಸಮಯೇ ನಹಿಲಬ್ಧ ಜನ್ಮಪತ್ರ ಶುಭಾಶುಭ ಫಲ ಪ್ರಕಾಶಿನೀ ।
ಅಂಧಕಂಭವತಿ ತಸ್ಯಜೀವಿತಂ । ದೀಪಹೀನಮಿವ ಮಂದಿರಂ ನಿಶಿ ॥

ಶ್ರೀಹರಿ ಪ್ರಸಾದ ಜ್ಯೋತಿಷಾಲಯ

ಸ್ನೇಹಿತರೇ, ನಮ್ಮಲ್ಲಿಗೆ ನೀವು ಹುಟ್ಟಿದ ಸಮಯವನ್ನು ಕಳುಹಿಸಿದರೆ, ನಾವು ನಿಮ್ಮ ಜಾತಕವನ್ನು ಶುದ್ಧಮಾಡಿ ಜೀವಿತ ಕಾಲದಲ್ಲಿ ಉಂಟಾಗುವ ಶುಭಾಶುಭ ಫಲಗಳನ್ನೂ ಅಶುಭಕ್ಕೆ ತಕ್ಕುದಾದ ಪರಿಹಾರವನ್ನೂ ಸಹ ಬರೆದು ಕಳುಹಿಸುತ್ತೇವೆ. ಅದಲ್ಲದೆ ಎಲ್ಲಾ ವಿಧ ಪ್ರಶ್ನವಿಚಾರಗಳನ್ನೂ ನಮ್ಮಲ್ಲಿ ನೋಡಲಾಗುತ್ತದೆ.

ದೊಡ್ಡ ಜಾತಕ ಒಂದಕ್ಕೆ ರೂ. 10-0-0. ಸಣ್ಣದಕ್ಕೆ ರೂ. 5-0-0

ಒಂದು ವರ್ಷದ ಫಲ ಮಾತ್ರಕ್ಕೆ ರೂ. 1-0-0 ಕೊಡಬೇಕು.

ನಮ್ಮ ವಿಳಾಸ:— ಜ್ಯೋತಿಷಿ ರಾಮಕೃಷ್ಣ ಭಟ್ಟ, ಕೋಡಿಕಲ್, ಬೋಳೂರು ಗ್ರಾಮ, ಪೋಸ್ಟು ಬಿಜಯಿ, ಮಂಗಳೂರು.

ಇಳಿಸಿದ ದರಗಳು.

ಶ್ರೀ. ಎಂ. ಗಣಪತಿರಾವ್ ಐಗಳ್, ಇವರಿಂದ ರಚಿತವಾದ

ದಕ್ಷಿಣ ಕನ್ನಡ ಜಿಲ್ಲೆಯ ಪ್ರಾಚೀನ ಇತಿಹಾಸ

ದಕ್ಷಿಣ ಕನ್ನಡ ಜಿಲ್ಲೆಗೆ ಸಂಬಂಧಪಟ್ಟ ಅತ್ಯಂತ ಚಾರಿತ್ರಿಕ ವಿಷಯಗಳನ್ನೊಳಗೊಂಡಿದೆ. ಇಷ್ಟು ವಿವರವುಳ್ಳ, ಹಾಗೂ ಸಂಪೂರ್ಣವೆನಿಸಿದ ನಮ್ಮ ಜಿಲ್ಲೆಯ ಇತಿಹಾಸ ಗ್ರಂಥವು ಈ ವರೆಗೆ ಪ್ರಕಟವಾಗಿಲ್ಲ. ಈ ಜಿಲ್ಲೆಯ ವಿಷಯವಾಗಿ ಏನಾದರೂ ತಿಳಕೊಳ್ಳಬೇಕಾದವರಿಗೆ ಉತ್ತಮ ಮತ್ತು ಸಾಧಾರವಾದ ಒಂದೇ ಒಂದು ಹಸ್ತಕ.

ಮೊದಲಿನ ಬೆಲೆ ರೂ. ೨—೮—೦ ಇಳಿಸಿದ ದರ ರೂ. ೧—೧೨—೦

ಕೆಲವೇ ಪ್ರತಿಗಳು ಉಳಿದಿವೆ.

[ಪ್ರತಿ ಪ್ರತಿಗಳು ಬೇಕಾದವರು, ಪ್ಯಾಕಿಂಗ್ ಮತ್ತು ಪೋಸ್ಟೇಜ್ ಕೂಡಿ ರೂ. ೨—೦—೦ನ್ನು ಮನಿಯಾರ್ಡರ್ ದ್ವಾರಾ ಕಳುಹಿಸಬೇಕು. ವಿ. ಪಿ. ಕಳುಹಲಾಗುವುದಿಲ್ಲ.]

ಪ್ರಕಾಶಕರು:— ಶಾರದಾ ಛಾಪಖಾನೆ, ಕಥಬೀದಿ ಮಂಗಳೂರು (ದ. ಕ.)

Karnataka Chemical and Pharmaceutical Works, Ltd., Udipi. (South India)

ಕುಂಭಕೋಣದಲ್ಲಿಯೂ ಮಧುರೆಯಲ್ಲಿಯೂ ಮೈಸೂರಿನಲ್ಲಿಯೂ ಸುವರ್ಣ ಪದಕಗಳನ್ನು ಪಡೆದಿರುವ

ಕರ್ನಾಟಕ ಕೆಮಿಕಲ್ ಎಂಡ್ ಫಾರ್ಮಸ್ಯೂಟಿಕಲ್ ವರ್ಕ್ಸ್, ಲಿಮಿಟೆಡ್, ಉಡುಪಿ. (ದಕ್ಷಿಣ ಹಿಂದೂಸ್ಥಾನ).

ನಮ್ಮಲ್ಲಿ ಟಿಂಕ್ಚರ್, ವಗೈರೆ ಎಲ್ಲಾ ಎಲ್ಲೋಪತಿಕ್ ಔಷಧ ದ್ರವ್ಯಗಳೂ, ಆಯುರ್ವೇದಿಯ ಔಷಧಿಗಳೂ, ಟೊಯ್ಲೆಟ್ ಸಾಮಗ್ರಿಗಳೂ, ಸಾಬೂನುಗಳೂ, ಫೌಂಟನ್ ಪೆನ್ ಶಾಯಿಗಳೂ ತಯಾರಿಸಲ್ಪಡುತ್ತವೆ.

ದ್ರಾಕ್ಷಾಸವ, ಪ್ರಸೂತಿ ಸಂಜೀವನ, ಸಿರೋವಿಗರ್, ಸ್ನೋ, ಕ್ಷೀರಬಲಾ, ಕಾರ್ಪೋಫಾಸ್ಫೇಟಿನ್ ಯುಟೇರಿನಾ, ಇಂಕ್ಸ್

ಮೆನೇಜಿಂಗ್ ಡೈರೆಕ್ಟರ್—ವೆಂಕಟ್ರಾಯ ಅಜ್ಜಪ್ಪ ಬಾಳಿಗ.

ಹೆಡ್ ಆಫೀಸು, ಉಡುಪಿ. (ದಕ್ಷಿಣ ಹಿಂದೂಸ್ಥಾನ).

ಬ್ರೇಂಚ ಆಫೀಸು ದೇವಕರಣ ಮೆನ್ಷನ್ಸ್, 45 ಪ್ರಿನ್ಸೆಸ್ ಸ್ಟ್ರೀಟ್, ಬೊಂಬಾಯಿ ನಂ. 2.

ಪಶ್ಚಿಮ ಕರಾವಳಿ ಮತ್ತು ಮೈಸೂರು ಪ್ರಾಂತ್ಯಗಳ ಪ್ರಾಮುಖ್ಯ ಏಜಂಟರು:—

ಕರ್ನಾಟಕ ಪ್ರೊಡಕ್ಟ್ಸ್ ಡಿಸ್ಟ್ರಿಬ್ಯೂಟಿಂಗ್ ಕಂಪೆನಿ, ಮಂಗಳೂರು.

ಅನುಕ್ರಮಣಿಕೆ.

ಅಗ್ರಲೇಖ
ನಮ್ಮ ಜಿಲ್ಲೆಯ ರಿಸೆಟ್ಲ್‌ಮೆಂಟು ವಿ ... ೪
ಸ್ಫುಟವಿಚಾರಗಳು ... ,,
ಮೂಲೆಮೂಲೆಯಿಂದ ... ೧೦
ನೋಟಗಳು ... ೮
ವರ್ತಮಾನ ಸಂಗ್ರಹ ... ,,
ವಿವಿಧ ಸಮಾಚಾರಗಳು ... ೧೧
ಪತ್ರವ್ಯವಹಾರ ... ೧೩
ಮಣಿಸು ... ೨
ಗಾಂಧೀಜಿಯವರೊಡನೆ ಮುರಿಯಲ್ ಲೆಸ್ಟರರ ಪ್ರವಾಸ ... ೫
ಮಂಗಳೂರು ... ೯

ಸ್ವದೇಶಾಭಿಮಾನಿ.

ತಾ. ೩ನೇ ಶುಕ್ರವಾರ ಆಗೋಸ್ತು ೧೯೩೪

ನಮ್ಮ ಜಿಲ್ಲೆಯ ರಿಸೆಟ್ಲ್‌ಮೆಂಟು ವಿಚಾರ.

ಮೂವತ್ತು ವರುಷಗಳಿಗೊಮ್ಮೆ ಕೈಕೊಳ್ಳುವುದೆಂದು ಗೊತ್ತಾಗಿರುವ ಆ ರಿಸೆಟ್ಲ್‌ಮೆಂಟು ಯೋಜನೆಯು, ೧೯೩೧ರಿಂದ ನಮ್ಮ ವರ್ಗದಾರರ ಪ್ರಬಲ ನಿರೋಧದಿಂದಲೋ ಮತ್ತೇತರಿಂದಲೋ ಈ ತನಕವೂ ಕಾರ್ಯರೂಪಕ್ಕೆ ಬಾರದೆ ಕೇವಲ ಸಿದ್ಧತೆಗಳೇ ನಡೆದು ಕೊನೆಗೆ ಕೆಲಕಾಲದ ಹಿಂದೆ ಪ್ರಕಟವಾದ ಸೆಟ್ಲ್‌ಮೆಂಟ್ ಆಫೀಸರರ ವರದಿಯ ಮೇಲೆ ಸ್ಪೆಶ್ಯಲ್ ರಿಸೆಟ್ಲ್‌ಮೆಂಟ್ ಆಫೀಸರರ ಪುನರ್ವಿಮರ್ಶೆ ನಡೆದು, ಕೆಲವೊಂದು ಸಲಹೆಗಳೊಂದಿಗೆ ಇದೀಗ ಹೊರಬಿದ್ದಿದೆ. ನಂಜಾ ಜಮೀನಿನ ಉತ್ಪತ್ತಿಯು ಕಳೆದ ಸೆಟ್ಲ್‌ಮೆಂಟಿನ ನಂತರ ಹೆಚ್ಚುತ್ತ ಈಗ ಸೇಕಡಾ ೮೮ರಷ್ಟು ಹೆಚ್ಚಿರುವುದಾಗಿಯೂ, ಅದುಕಾರಣ, ಸೇಕಡಾ ೧೮॥ರಷ್ಟು ಅಧಿಕ ಕಂದಾಯವನ್ನು ಹೊರಿಸಬರುವುದೆಂದೂ ಸೆಟ್ಲ್‌ಮೆಂಟ್ ಆಫೀಸರರ ಅಭಿಪ್ರಾಯವಿತ್ತು. ಆದರೆ ಸ್ಪೆಶ್ಯಲ್ ಸೆಟ್ಲ್‌ಮೆಂಟ್ ಆಫೀಸರರು ವರ್ಗದಾರರ ಮನವಿಗಳನ್ನು ಸಿರೀಕ್ಷಿಸಿಯೋ ಜಿಲ್ಲೆಯ ಸ್ಥಿತಿಯನ್ನು ಸ್ವ-ಇಚ್ಛೆಯಿಂದಲೇ ವಿಮರ್ಶಿಸಿಯೋ ಅದನ್ನು ತಿದ್ದಿ, ಸೇಕಡಾ ೧೨॥ಯಷ್ಟು ಅಧಿಕ ಕಂದಾಯವನ್ನು ಮಾತ್ರ ವಿಧಿಸಬಹುದೆಂದು ರೆವೆನ್ಯೂ ಬೋರ್ಡಿಗೆ ಸಲಹೆಯಿತ್ತಿರುವರು. ಇದು ಮಲಬಾರು ಜಿಲ್ಲೆಯಲ್ಲಿ ವಿಧಿಸಿದಷ್ಟೇ ಸಮತೂಕಕ್ಕೆ ನಮ್ಮ ಜಿಲ್ಲೆಯನ್ನೂ ತಂದು ನಿಲ್ಲಿಸುವುದಂತೆ. ಬೆಟ್ಟು ಜಮೀನುಗಳಲ್ಲಿಯೂ ಬೆಳೆಯ ಮೌಲ್ಯವು ಹೆಚ್ಚಿದೆಯಾದರೂ ಆ ಕ್ಷೇತ್ರವು ಇನ್ನೂ ಚಿಕ್ಕದೇ ಆಗಿರುವ ಕಾರಣ ಇದರಮೇಲೆ ಆ ಸೆಟ್ಲ್‌ಮೆಂಟಿನ ದಂಡವು ಬೀಸಲಿಲ್ಲ. ಇನ್ನು, ಬಾಗಾಯತುಗಳ ವಿಚಾರವಾಗಿಯೂ ಸೇಕಡಾ ೧೨॥ಯ ಹೆಚ್ಚಳವೇ ಶಿಫಾರಸು ಮಾಡೋಣಾಗಿದೆ. ಇದು ಕೂಡ ನಮ್ಮನ್ನು ಮಲಬಾರಿನ ಸಮತೂಕಕ್ಕೆ ತರುವುದಂತೆ.

ಈ ಮೇಲಿನ ಶಿಫಾರಸುಗಳನ್ನು ರೆವಿನ್ಯೂ ಬೋರ್ಡು, ದಕ್ಷಿಣ ಕನ್ನಡದ ರಹಿತ ವರ್ಗಕ್ಕೊಂದು ದೊಡ್ಡ ರಿಯಾಯತಿಯೆಂದು, ಸ್ವೀಕರಿಸಿಯದೆ. ಈ ಅಧಿಕ ಕಂದಾಯದಿಂದ ಸರಕಾರಕ್ಕೆ ಸುಮಾರು ೩ ಲಕ್ಷ ರೂಪಾಯಿಯಷ್ಟು ಆದಾಯ ಹೆಚ್ಚುವುದೆಂದು ತಿಳಿಯಲಾಗಿದೆ. ಈ 'ರಿಯಾಯತಿ'ಯು ನಮ್ಮ ಜಿಲ್ಲೆಯ ಈಗಿನ ಪರಿಸ್ಥಿತಿಯಲ್ಲಿ ಹೊತ್ತುಹಾಕುವುದು ಈ ಮೂರು ಲಕ್ಷಗಳ ಭಾರವನ್ನು!

ಉತ್ಪತ್ತಿಯ ಮೌಲ್ಯವು ಹೆಚ್ಚಿದೆಯೆಂಬುದನ್ನು, ೨೦ ವರ್ಷಗಳ ಕೆಳಗಿನ ದರಗಳಿಗೆ ಹೋಲಿಸಿ ತಿಳಿದುಕೊಂಡುದಾದರೆ,—ಈ ತುಲನೆಯು ಅನ್ಯಾಯವಾಗುವುದೆಂದು ಯಾರಾದರೂ ಹೇಳದಿರಲಾರರು. ವಿದೇಶೀ ಆಕ್ಕಿಯ ಆಮದು, ಸಾರ್ವತ್ರಿಕ ಆರ್ಥಿಕ ಮುಗ್ಗಟ್ಟು ಇವುಗಳ ನಡುವೆ ಜಜ್ಜಲ್ಪಡುತ್ತಿರುವ ರೈತರ ಸ್ಥಿತಿಯು ದೊರೆತನಕ್ಕೆ ಇನ್ನೂ ಚೆನ್ನಾಗಿ ಗೋಚರವಾಗಿಲ್ಲವೆಂದು ಎಣಿಸಬೇಕೆ? ಪ್ರಚಲಿತ ಧಾರಣೆಗಳು ತುಲನಾತ್ಮಕವಾಗಿ ನೋಡಿದರೆ, ೧೯೦೦ರ ಧಾರಣೆಗಳಿಗಿಂತ ಚೆನ್ನಾಗಿಲ್ಲವೆಂದು ಹಲವರ ವ್ಯಕ್ತ ಅಭಿಪ್ರಾಯವಿದೆ. ಅದನ್ನು ಬಿಟ್ಟು, ರೆವಿನ್ಯೂ ಬೋರ್ಡಿನವರು ತಮ್ಮ ಈ ಯೋಜನೆಗೆ ಅನುಕೂಲವೆಂದು ಕಂಡು ಬಂದ ಯಾವುದೋ ಒಂದು ಕಾಲದ ಧಾರಣೆಗಳನ್ನು ಕಂಡು ಹಿಡಿದು ಇದುವೇ ನ್ಯಾಯವೆಂದು ಮುಂದಿಡುವುದು ಯೋಗ್ಯವಲ್ಲ.

ವರ್ಗದಾರರ ಮನವಿಗಳು, ಸೆಟ್ಲ್‌ಮೆಂಟಿನ ಯೋಜನೆಗೆ ವಿರುದ್ಧವಾಗಿ, ಸರಕಾರಕ್ಕೆ ಎಷ್ಟು ತಲಪಿಲ್ಲ? ಅವುಗಳಲ್ಲಿ ವಿನಂತಿಸಿಕೊಂಡುದರ ಅರ್ಧಾಂಶದಷ್ಟನ್ನಾದರೂ ಸರಕಾರವು ನಡೆಸಿಕೊಡುವುದಾದರೆ ಈಗಳಿನ ಈ ಸೇಕಡಾ 12½ಯ ಸಂಖ್ಯೆಯು ಲಿಖಿಸಲ್ಪಡುತಿದ್ದಿಲ್ಲವೆಂದು ನಮ್ಮ ಅಭಿಮತ. ನಮ್ಮ ವರ್ಗದಾರರ ಸ್ಥಿತಿಯನ್ನು ಅವರೇ ಬಲ್ಲಷ್ಟು ಸರಕಾರವು ತಿಳಿದಿರದು. ಮನವಿಗಳು ಉತ್ಪ್ರೇಕ್ಷಿಸಿ ನುಡಿದಿವೆಯೆಂದು ಸರಕಾರದ ಅಭಿಪ್ರಾಯವಿರುವುದಾದರೆ,—ಯೋಗ್ಯ ಪ್ರತಿನಿಧಿಗಳ ಸಮಿತಿಯನ್ನೇರ್ಪಡಿಸಿ, ತನಿಖೆ ನಡೆಸಿ, ಆ ಸಮಿತಿಯ ಅಭಿಪ್ರಾಯವನ್ನಾದರೂ ಪಡೆಯಬಹುದಿತ್ತು. ಆದಾಯವೊಂದರ ಕಡೆಗೆ ದೃಷ್ಟಿಯಿಟ್ಟ ದೊರೆತನಕ್ಕೆ ಮಾತ್ರ ಇದೊಂದೂ ಅವಶ್ಯವೆಂದು ಕಂಡುಬರಲಿಲ್ಲವೆಂದು ತೋರುವುದು. ಇನ್ನು, ಎಮ್. ಎಲ್. ಸಿ. ಗಳು ಏನು ಮಾಡುವರಂತೆ?

ಸ್ಫುಟವಿಚಾರಗಳು.

ಸೇನರ ಮೂರು ಚಿಕಿತ್ಸೆಗಳು!

ಭಯೋತ್ಪಾದಕರ ಚಳವಳದ ಮೂಲೋತ್ಪಾಟನಕ್ಕೆ, ಎಸೆಂಬ್ಲಿಯಲ್ಲಿ, ಸಂಭಾವಿತ ಎಸ್. ಎನ್. ಸೇನರವರು ಮೂರು ಚಿಕಿತ್ಸೆಗಳನ್ನು ಸೂಚಿಸಿರುವರು. (೧) ಶಾಲೆಗಳಲ್ಲಿ ಕಡ್ಡಾಯವಾದ ಧಾರ್ಮಿಕ ಶಿಕ್ಷಣ (೨) ತರುಣರಿಗೆ ಉದ್ಯೋಗ ಮತ್ತು (೩) ಬಾಲ್ಯವಿವಾಹ. ಮೂರನೇ ಚಿಕಿತ್ಸೆಯ ಸೂಚನೆಯನ್ನು ಮಾತ್ರ ಕೇಳಿ ಎಸೆಂಬ್ಲಿ ಮೆಂಬರರು ನಗುವನ್ನು ತಡೆಯಲಾರದಾದರು. ವಿವಾಹವು ತರುಣರ ಮೇಲೆ ಮಹತ್ತರವಾದ ಜವಾಬುದಾರಿಯನ್ನು ಹೊತ್ತು ಹಾಕುವುದು. ವಿವಾಹಿತರು ಭಯೋತ್ಪಾದಕ ಚಳವಳಗಳಂತಹ ಸ್ವನಾಶ-ಪರನಾಶಕ ವೃತ್ತಿಗೆ ತಮ್ಮ ಚಿತ್ತವೃತ್ತಿಯನ್ನೊಲಿಸಿಕೊಳ್ಳದಂತಾಗುವುದೆಂದು ಸೇನರು 'ಸೇನ್' (Sane) ಆಗಿಯೇ ನುಡಿದಿರಬೇಕು. ಬಾಲವಿವಾಹದ ಪ್ರಶ್ನೆಯಂತಿರಲಿ. ಉದ್ಯೋಗಗಳನ್ನು ಕಲ್ಪಿಸಿಕೊಡುವ ಸೇನರ ಹಂಚಿಕೆಯು ಸರ್ವಮಾನ್ಯವೇ. ಉದ್ಯೋಗವಿಲ್ಲದಾತನು ವಿವಾಹವನ್ನೂ ಆಗನಷ್ಟೆ. ಕಡ್ಡಾಯವಾದ ಧಾರ್ಮಿಕ ಶಿಕ್ಷಣವೆಷ್ಟು ಪರಿಣಾಮಕಾರಿಯಾಗುವುದೋ ಹೇಳಬರುವುದಿಲ್ಲ. ಮುಖ್ಯತಃ,ನಿರುದ್ಯೋಗವೇ ಚಳವಳದ ಉಜ್ವಲತೆಗೆ ಅವಕಾಶಕೊಡುತ್ತಿದೆ. ಸರಕಾರವು ಎಲ್ಲಿಯೋ ಏನನ್ನೋ ಹುಡುಕುತ್ತ ಕತ್ತಲೆಯಲ್ಲಿ ಸಂಚರಿಸುವವರಂತೆ ಇರುವುದಕ್ಕಿಂತ ನಿರುದ್ಯೋಗ ಸಮಸ್ಯಾನಿವಾರಣೆಗೆ ಕ್ರಮವಹಿಸಿದಂತಾಗದೇ?

ವರ್ಣದ್ವೇಷದ ವಿಷಮವಾತಾವರಣವು

ಅಮೇರಿಕ-ಬ್ರಿಟನ್‌ಗಳಲ್ಲಿ ಮಾತ್ರ ಇರುವುದೆಂದು ತಿಳಿವುದು ತಪ್ಪು. ಹಿಂದೂ ದೇಶದಲ್ಲಿ ಸಾಕಷ್ಟು ನಿದರ್ಶನಗಳಿವೆ. ಅಲ್ಲಹಾಬಾದಿನ ಸಿವಿಲ್ ಆಸ್ಪತ್ರೆಯ ಸುಪರಿಂಟೆಂಡೆಂಟರು—'ಈ ಆಸ್ಪತ್ರೆಯ ಹೊರ-ಚಿಕಿತ್ಸಾ ವಿಭಾಗವನ್ನು ಎರಡು ಸಾವಿರದೊಳಗಿನ ವಾರ್ಷಿಕೋತ್ಪತ್ತಿಯಿರುವ ಯುರೋಪೀಯ ಮತ್ತು ಆಂಗ್ಲೋ - ಇಂಡಿಯಾನರಿಗೆ ಮಾತ್ರ ತೆರೆದಿಡಲಾಗುವುದು; ಹಿಂದೀ ಕ್ರೈಸ್ತರೂ ಹಿಂದೀಯರೂ ಮತ್ಯಾವುದಾದರೂ ಡಿಸ್ಪೆನ್ಸರಿಯಲ್ಲಿ ಔಷಧ ಪಡೆಯಬೇಕು' ಎಂದು ನೋಟೀಸು ಹಚ್ಚಿರುವರೆಂದು ಸುದ್ದಿ. ಆಸ್ಪತ್ರೆಯನ್ನು ನಡೆಸಲು ಹಿಂದೀಯರೂ ಹಣ ಕೊಡುತ್ತಾರೆ. ಆ ಹಣ ತೆತ್ತ ಕರಿಯ ಕರವು ಯಾವ ಶರೀರದ್ದೋ ಆ ಶರೀರ ಮಾತ್ರ ಔಷಧಿ ಬೇಡಬಾರದೆಂದರೆ ಈ ವರ್ಣದ್ವೇಷದ ವಿತರಣಕ್ಕೂ, ಔಷಧವಿಲ್ಲವೆಂದಾಯಿತು. ಆಸ್ಪತ್ರೆಯಲ್ಲೂ ವರ್ಣದ್ವೇಷದ ಬೀಜಬಿತ್ತುವ ಈ ವರ್ತನೆಯು ಜನರಲ್ಲಿ ಪ್ರತಿಕ್ರಿಯೆಯ ಭಾವವನ್ನುದಯಿಸಿದರೆ ಅದಕ್ಕೆ ಹೊಣೆ ಯಾರು?

ಮೆಕ್ಡೊನಾಲ್ಡ ಸಾಹೇಬರು ರಜೆ ಪಡಕೊಂಡ ಮೇಲೆ,—

—ಇಂಗ್ಲಾಂಡಿನ ಟೋರಿಗಳ ಧೋರಣೆಯು ಕಾರ್ಯರೂಪದಲ್ಲಿ ಸ್ಪಷ್ಟವಾಗಬಹುದೆಂಬೊಂದು ನಿರೀಕ್ಷೆಯು ಸತ್ಯವಾಗಿದೆ. ಮೆಕ್ಡೊನಾಲ್ಡರ ಸ್ಥಾನದಲ್ಲಿ ಪ್ರಧಾನರಾಗಿರುವ ಬೊಲ್ಡವಿನರು, ಅಶ್ವಾರೂಢರಾಗಿ ಮುಂಬರಿಯುತ್ತಿರುವರು. ಬ್ರಿಟನಿನ ವಾಯು ಸೈನ್ಯದ ವಿಚಾರವನ್ನೆ ಅವರು ಮುಂದಾಗಿ ಪಾರ್ಲಿಮೆಂಟಿನಲ್ಲಿ ಮುಂತಂದು, 'ಮಹಾ ಅಪಾಯಕರವೆನಿಸುವಂತೆ ನಮ್ಮ ಸೈನ್ಯ ಸಾಮಗ್ರಿಗಳನ್ನು ಕಡಿಮೆಮಾಡಿರುವೆವು!' ಎಂದು ತಮ್ಮ ಅಂಜಿಕೆಯನ್ನು ಪ್ರಕಟಿಸಿರುವರು. ಬ್ರಿಟನು ತನ್ನ ಯುದ್ಧ ಸಾಮಗ್ರಿಗಳನ್ನು ಕಡಿಮೆಮಾಡಿದ್ದನ್ನು ಇತರರೂ ಅನುಸರಿಸದ ಕಾರಣ ಬ್ರಿಟನು ಹೆಚ್ಚಿಸಲೆಂದು ಅದರ ಗೂಢಾರ್ಥ. ಇನ್ನು ೪೧ ವಿಮಾನಗಳನ್ನು ಹೆಚ್ಚಿಸಬಹುದೆಂದೊಂದು ಸೂಚನೆ! ಜಿನೀವದ ತಮಾಷೆ ಇನ್ನೂ ಮುಗಿದಿಲ್ಲ. ಆದರೆ, ಬಹುಶಃ ಮಂಗಳಾರತಿಗೆ ಇನ್ನು ಹೆಚ್ಚು ತಾಮಸವಿರದು. ಶಸ್ತ್ರ ಸನ್ಯಾಸದ ಬಾಧ್ದ ಭಾಷಣಗಳನ್ನು ಕೇಳಿ ಬೇಸರಗೊಂಡ ಪ್ರಪಂಚವು ಇನ್ನು ಪರಿಷತ್ತಿನ ಸ್ಮಶಾನ ಯಾತ್ರೆಯ ವಾರ್ತೆ ಕೇಳಬೇಕೆಂದು ಮಾತ್ರ ಕಾಯುತ್ತಿದೆ.

ಆಸ್ಟ್ರಿಯದ ವಿದ್ಯಮಾನಗಳು

—ಶಾಂತಿಪ್ರಿಯರಿಗೆ, ಮತ್ತೊಂದು ಘೋರ ಯುದ್ಧವು ಸಂಭವಿಸಲು ಇದುವೇ ಕಿಚ್ಚಿನ ಕಿಡಿಯಾಗಬಹುದೇ ಎಂಬ ಸಂದೇಹಕ್ಕೆಡೆ ಮಾಡಿವೆ. ಡೊಲ್ಫಸರವರ ಹಿಂದು ಕೊಲೆಯು ಮತ್ತೆಷ್ಟು ಲಕ್ಷ ಮಂದಿಗಳ ಹತ್ಯೆಗೆ ಕಾರಣವಾಗಬಹುದೋ ಎಂಬ ಈ ಭೀತಿ ಹುಟ್ಟಿದುದು ಸಹಜ. ೧೯೧೪ರಲ್ಲಾರಂಭವಾದ ಆ ಮಹಾಯುದ್ಧಕ್ಕೂ ಇಂತಹದೇ ಒಂದು ಘಟನೆಯು ಕಾರಣವಾಯಿತು. ಆ ಯುದ್ಧವು ಮುಗಿದು, ಸಂಧಿಯಾಗಲು, ಜರ್ಮನಿಯ ಸಂಬಂಧದಿಂದ ಪೂರ್ಣವಾಗಿ ಆಸ್ಟ್ರಿಯವು ಪೃಥಕ್ಕರಿಸಲ್ಪಟ್ಟಿತು. ಜರ್ಮನಿ—ಆಸ್ಟ್ರಿಯಗಳ ಸಂಬಂಧಕ್ಕೆ ಅಂದಿನಿಂದ ನಡೆದ ಪ್ರಯತ್ನಗಳೆಲ್ಲವೂ ನಿಷ್ಫಲವೇ ಆದುವು. ಆಸ್ಟ್ರಿಯವೀಗ ಕೇವಲ ೬,೭೦೪,೦೦೦ ಜನಸಂಖ್ಯೆಯ ಪುಟ್ಟ ರಾಜ್ಯ. ಆಸ್ಟ್ರಿಯ ಜರ್ಮನಿಗಳೊಂದಾದರೆ ಜರ್ಮನರ ಬಲವು ೭೨ ಮಿಲ್ಲಿಯವಾಗುವುದು. ಹಾಗಾಗದಂತೆಯೆ ಉಳಿದ ಪ್ರಬಲ ಜನಾಂಗಗಳು ಆಸ್ಟ್ರಿಯದ ಹಿತಚಿಂತನೆಯಿಂದ ಅದನ್ನು ದೂರವಿರಿಸುವಲ್ಲಿ ಸಹಾನುಭೂತಿಯಿಂದ ವರ್ತಿಸಿದ್ದುವು. ಡೊಲ್ಫಸರವರು ಇಟೇಲಿ ಮತ್ತು ಫ್ರಾನ್ಸುಗಳ ಸ್ನೇಹಾಭಿಲಾಷೆಯಿಂದ ಜರ್ಮನಿಯ ಅಪೇಕ್ಷೆಯನ್ನು ನಿರಾಕರಿಸಿದುದೇ ತಲೆತಿರುಕ ನಾಝಿಗಳನ್ನು ಆಕೃತ್ಯಕ್ಕೆ ಪ್ರೇರೇಪಿಸಿದುದಾಗಿರಬೇಕು. ಪ್ರಕೃತಕ್ಕೆ 'ಶಾಂತಿ' ಸ್ಥಾಪನೆಯಾಯಿತೆಂಬ ಸುದ್ದಿಯಿದೆಯಾದರೂ ಮತ್ತೊಂದು ಯುದ್ಧವು ಸಂಭವಿಸಬಹುದೇ ಎಂಬ ಸಂದೇಹಕ್ಕೆ ಆಸ್ಟ್ರಿಯ—ಜರ್ಮನಿಗಳೊಳಗಣ ಮುಂದಿನ ವಿದ್ಯಮಾನಗಳೇ ಉತ್ತರ ಕೊಡಬೇಕಾಗಿದೆ!

ಕಮ್ಯೂನಿಸ್ಟ್ ಪಕ್ಷಕ್ಕೆ ನಿರ್ಬಂಧ.

ಹಿಂದೂದೇಶದೊಳಗಿನ ಕಮ್ಯೂನಿಸ್ಟ್ ಪಕ್ಷವನ್ನೂ, ಅದರ ಅನೇಕ ಶಾಖೋಪಶಾಖೆಗಳನ್ನೂ ಸರಕಾರವು ನ್ಯಾಯಬಾಹಿರವೆಂದು ಸಾರಿದೆ. ಭಾಷಣ ಸ್ವಾತಂತ್ರ್ಯ, ವ್ಯಕ್ತಿಸ್ವಾತಂತ್ರ್ಯಗಳು ಹಿಂದೂದೇಶದಲ್ಲಿ ಅಪಾಯಕರವೆಂದು ಸರಕಾರಕ್ಕೆ ಚೆನ್ನಾಗಿ ತಿಳಿದಿದೆ. ಬ್ರಿಟನಿನಲ್ಲಿ ಕಮ್ಯೂನಿಸ್ಟ್ ಪಂಗಡವಿರಬಹುದಾದರೆ, ಅದು ಪಾರ್ಲಿಮೆಂಟಿಗೆ ಮೆಂಬರರನ್ನು ಕಳುಹಬಹುದೆಂದೂ ಇದ್ದರೆ, ಹಿಂದೂ ದೇಶದಲ್ಲೇಕಾಗಬಾರದು?—ಎಂಬ ಪ್ರಶ್ನೆಗೆ ಉತ್ತರವಿಷ್ಟೇ:—ಇಂಡಿಯವು ಪರತಂತ್ರ ದೇಶ; ಮೊದಲೇ ಕೊಂಗ್ರೆಸ್ ಚಳವಳದ ಉಜ್ವಲತೆಯಿರುವಲ್ಲಿ ಕಮ್ಯೂನಿಸ್ಟ್ ಚಳವಳವೂ ಕೂಡಿ—ಜ್ವಾಲೆಗಳು ಶತಗುಣಿತವಾಗಬಹುದು. ಮಾತ್ರ,—ಯಾವುದನ್ನು ಸರಕಾರವು ನಿರ್ಬಂಧಿಸಲೆತ್ನಿಸುವುದೋ ಅದು ಗೂಢವಾಗಿ ಉಜ್ವಲಿಸಿ ಭಯಂಕರರೂಪವನ್ನು ತಾಳದೇ ಎಂಬುದನ್ನು ಸರಕಾರವು ಯೋಚಿಸಿದಂತೆ ತೋರುವುದಿಲ್ಲ. ಕಮ್ಯೂನಿಸ್ಟ್ ಪಕ್ಷವು ಸರಕಾರವನ್ನು ಪದಚ್ಯುತ ಮಾಡುವ ಉದ್ದೇಶವನ್ನುಳ್ಳುದಾಗಿದೆಯಾದರೆ—ಹಿಂಸಾತ್ಮಕವಾದ ಕ್ರಾಂತಿಯೇನೂ ಗೋಚರವಾಗಿಲ್ಲ. ಬಹಿರಂಗವಾಗಿ ನಡೆಯುತ್ತಿದ್ದುದನ್ನು ಗೂಢವಾಗಿ ನಡೆಯಲಾರಂಭಿಸಿದರೆ ಭೀಕರರೂಪವನ್ನೆ ತಾಳುವುದೆಂಬುದನ್ನರಿತು ಸರಕಾರವು ಎಚ್ಚರದಿಂದಿರಲಿ!

ಇದು ದುಂದುವ್ಯಯವಲ್ಲವೇ?

ಇಂಡಿಯವು "ಲೀಗ್ ಒಫ್ ನೇಶನ್ಸ್" ಎಂಬ ಆ ಪ್ರಸಿದ್ಧ ಕೂಟಕ್ಕೆ ತೆರುವ ಚಂದಾ ಎಷ್ಟು?—೧೯೩೪ರಲ್ಲಿ ೧೫ ಲಕ್ಷ ರೂಪಾಯಿಯೆಂದು ಎಸೆಂಬ್ಲಿಯಲ್ಲಿ ಗೃಹಮಂತ್ರಿಗಳ ಉತ್ತರ. ಆ ಕೂಟದ ಸೆಕ್ರೆಟರಿಯೇಟಿನಲ್ಲಿ ("ಇಂಟರ್ನೇಶನಲ್ ಲೇಬರ್ ಆಫೀಸಿ"ನಲ್ಲಿ ಕೂಡಿ) ಒಟ್ಟು ೬ ಮಂದಿ ಹಿಂದೀಯರು ಮಾತ್ರ ನೇಮಿತರಾಗಿರುವರು. ಬೆಕ್ಕನ್ನು ಸಾಕಲಾರದನಿಗೆ ಆನೆಯ ಗೊಡವೆಯೇಕೆಂಬಂತೆ ಬಡ ಇಂಡಿಯಕ್ಕೆ,—ತಕ್ಕುದಾದ ಪ್ರತಿಫಲ ದೊರೆಯದೆ ಅಷ್ಟು ಶ್ರೀಮಂತಿಕೆಯೇಕೆ?—ಎಂಬ ಪ್ರಶ್ನೆಗಳಿದ್ದುವೆ.

ಮಾಲವೀಯ - ಅಣೆಯವರ ರಾಜೀನಾಮೆ.

ಕಮ್ಯೂನಲ್ ಎವಾರ್ಡಿನ ಕುರಿತಾಗಿ ಎದ್ದ ಅಭಿಪ್ರಾಯಭೇದದಿಂದ ಪಂಡಿತ ಮಾಲವೀಯರೂ ಅಣೆಯವರೂ ಕೊಂಗ್ರೆಸ್ ಪಾರ್ಲಿಮೆಂಟರಿ ಬೋರ್ಡಿನ ತಮ್ಮ ಸ್ಥಾನಕ್ಕೆ ರಾಜೀನಾಮೆ ಕೊಟ್ಟುದು,—ಕೊಂಗ್ರೆಸ್ಸಿನ ನೂತನ ಕಾರ್ಯಾರಂಭದ ಈ ಸಮಯದಲ್ಲಿ ಅತ್ಯಂತ ವಿಷಾದಕರವೆನ್ನಬೇಕಾಗಿದೆ. ಕಮ್ಯೂನಲ್ ಎವಾರ್ಡು ಕೆಲ ಮುಸ್ಲಿಮರಿಗೆ ಸ್ವೀಕಾರ್ಯವೆಂದು ತೋರಿತು, ಹಿಂದೂ-ಸಿಕ್ಖರಿಗೆ ಅಂಗೀಕಾರಾರ್ಹವಲ್ಲವೆಂದು ಕಂಡಿತು—ಈ ಕಾರಣದಿಂದ ಕೊಂಗ್ರೆಸ್ ಕಮಿಟಿಯು 'ಅದನ್ನು ತಿರಸ್ಕರಿಸಲೂ ಇಲ್ಲ, ಅಂಗೀಕರಿಸಲೂ ಇಲ್ಲ.' ಅದನ್ನು ಸ್ಪಷ್ಟವಾಗಿ ತಿರಸ್ಕರಿಸಲೇ ಬೇಕೆಂದು ಮಾಲವೀಯರ ಆಗ್ರಹವಿತ್ತು. ಇದುವೇ ರಾಜೀನಾಮೆಯ ಕಾರಣವಾಯಿತು. 'ಸ್ವೀಕರಿಸಲೂ ಇಲ್ಲ, ಅಂಗೀಕರಿಸಲೂ ಇಲ್ಲ'ವೆಂಬ ಕೊಂಗ್ರೆಸ್ ಕಮಿಟಿಯ ನಿರ್ಧಾರವು, ಹಲವರಿಗೆ ಅರ್ಥವಾಗದಂತಹ ರೀತಿಯದಾಗಿದೆಯೆಂಬುದು ನಿಜ. ಆದರೆ, ಮಾಲವೀಯರಂತಹವರು ಅದನ್ನು ಸಮಾಧಾನ ಚಿತ್ತದಿಂದ ಮುಂದೆ ಸ್ಪಷ್ಟವಾಗಿ ತೀರ್ಮಾನಿಸುವುದಕ್ಕೊಪ್ಪಿ, ತಮ್ಮ ಅಮೂಲ್ಯ ಸಹಕಾರದಿಂದ ಕೊಂಗ್ರೆಸ್ ಕಾರ್ಯವನ್ನು ಮುಂದೊತ್ತಬಹುದಿತ್ತೆಂದು ನಮಗನಿಸುತ್ತದೆ. ಪರಂತು,—ಮಾಲವೀಯರು ಯಾವಾಗಲೂ ಒಬ್ಬೊಂಟಿಗರಾಗಿಯೋ ಕಾರ್ಯಸಾಧನೆ ಮಾಡುವ ನಿಸ್ಸಹಾಯ ಶೂರರು. ಸಂಘವಾಗಿ ಸೇರಿ ಕೆಲಸ ಮಾಡುವುದರಲ್ಲಿ ಅವರಿಗೆ ಆಸಕ್ತಿ ಕಡಿಮೆ. ಅವರ ರಾಜೀನಾಮೆಯ ವಾರ್ತೆಯನ್ನು ಕೇಳಿ—ಕೊಂಗ್ರೆಸಿನಲ್ಲಿ ಒಡಕುಂಟಾಯಿತು ಎಂದು ಜನರು ಭಾವಿಸುವುದು ಮಾತ್ರ ತಪ್ಪು. ಮಾಲವೀಯರ 'ಕೊಂಗ್ರೆಸ್‌ಹೃದಯ'ವೆಂದೂ ಮಾರ್ಪಾಟು ಹೊಂದಿ, ಅವರು ಸ್ವರಾಜ್ಯ ಸಂಗ್ರಾಮದಿಂದ ವಿಮುಖರಾಗುವುದಿಲ್ಲವೆಂದು ಭರವಸೆಯಿಂದ ಹೇಳಬಹುದಾಗಿದೆ.

FRESH CONSIGNMENT ARRIVED:

UNEQUAL QUALITY——————EXCEPTIONAL PRICE.

A TIRE THAT SAVES YOU REPUTATION AND MONEY.

The Canara Public Conveyance Co., Ltd.

MANGALORE.

ಗಾಂಧಿಜಿಯವರೊಡನೆ ಮುರಿಯಲ್ ಲೆಸ್ಟರಳ ಪ್ರವಾಸ.

(ಮಿಸ್ ಮುರಿಯಲ್ ಲೆಸ್ಟರಳ ಲೇಖನದಿಂದ)

ಅಮೆರಿಕ, ಜಾಪಾನ್, ಚೈನಾಗಳಲ್ಲಿ ನನ್ನ ಭಾಷಣಗಳಾದ ನಂತರ ಲಂಡನಿಗೆ ಹೋಗಲು ಹೊರಟಾಗ ಕೆಲವು ದಿನಗಳ ಮಟ್ಟಿಗೆ ಕಲ್ಕತ್ತದಲ್ಲಿಳಿದೆ. ಆದರೆ ನಾನು ಸ್ವದೇಶ ಹಿಂದಿರುಗಿ ಹೋಗುವ ಮೊದಲು ಕೊಯಮುತ್ತೂರಿನ ಅಸ್ಪೃಶ್ಯರ ಆಶ್ರಮದಲ್ಲಿ ತನ್ನೊಡನೆ ಒಂದು ದಿನ ಇದ್ದು ಹೋಗಬೇಕೆಂದು ಗಾಂಧಿಜೀಯವರ ಸಕ್ಕರೆಯ ಪತ್ರ ಬಂದಿದ್ದಿತು.

ಕೊಯಮುತ್ತೂರಿನಲ್ಲಿಳಿದುದೇ ತಡ,— ಅವರ ಪ್ರಚಂಡ ಆಧ್ಯಾತ್ಮ ಲೋಕದಲ್ಲಿ ಸೇರಿಕೊಂಡೆ; ಜನಜಲಧಿಯೊಳಗೆ ಸಿಲುಕಿಕೊಂಡೆ. ಬೆಳಿಗ್ಗೆ ೪-೩೦ಕ್ಕೆ ಗಾಂಧಿಯವರ ಪ್ರಾರ್ಥನಾ ಕಾಲ. ೫-೩೦ಕ್ಕೆ ಬೆಳಗ್ಗಿನ ಭೋಜನ. ಘಂಟೆ ೬ರೊಳಗೆ ಗಂಟು ಮೂಟೆ ಕಟ್ಟಿ ಇನ್ನೊಂದೂರಿಗೆ ಹೊರಡಲು ಸಿದ್ಧ. ೬-೩೦ರೊಳಗೆ ಪರವೂರು ಸಂಚಾರಕ್ಕೆ ಹೊರಟೂ ಆಯಿತು. ೮ ಘಂಟೆಯಾಗುವುದರೊಳಗೆ ಸಭೆ, ಭಾಷಣ, ಇತ್ಯಾದಿಗಳು! ರಾತ್ರಿ ೧೦-೩೦ಕ್ಕೆ ನಿದ್ರಾಕಾಲ.

ಒಂದು ದಿನದ ಕೆಲವು ಸಭೆಗಳಲ್ಲಿ ಸುಮಾರು ೫೦,೦೦೦ ಜನರ ಸತ್ಕಾರ ಗಾಂಧಿಗೆ! ಹೆಚ್ಚಿನ ಸಭೆಗಳು ಬಯಲು ಪ್ರದೇಶಗಳಲ್ಲಿ. ಸಭೆ ಮುಗಿದೊಡನೆ ದುಡ್ಡು ದುಗ್ಗಾಣಿಯನ್ನರ್ಪಿಸುವ ಸಾವಿರಾರು ಜನರ ಒತ್ತಾಟ. ಬೆಳ್ಳಿ, ಭಂಗಾರ ಬೆಳ್ಳಿಯ ಚರಕ, ನಗ, ಚಿತ್ರ, ಪ್ರತಿಮೆ, ಸಾಬೂನು, ಮಿಠಾಯಿ, ಹಣ್ಣುಹಂಪಲುಗಳು ಜನರಕಾಣಿಕೆ. ಗಾಂಧೀ—ಚಕ್ರವರ್ತಿಗಳ ಭೇಟಿಯ ಚಿತ್ರಗಳೂ ಇವೆ.

ಸಾಮಗ್ರಿಗಳು ರಾಶಿ ಬಿದ್ದೊಡನೆ, ಜನರ ಸಂದರ್ಶನಾವೇಶವು ಶಾಂತವಾದೊಡನೆ ವಿಲೆವಾರಿಗೆ ಆರಂಭ; ಬಿಹಾರಿನ ನಿರ್ಗತಿಕರಿಗಾಗಿ ಸಹಾಯಧಾನವೂ ಇದೆ. ಒಮ್ಮೆ ನಾನೂ ನನ್ನ ಹೇಟನ್ನು ಮುಂದೆ ಮಾಡಿ ಹರಿಜನರ ಸಭೆಯಲ್ಲಿ ಬೇಡುವ ಭಾಗ್ಯವೂ ದಕ್ಕಿತು. ಕೈ ಮುಂದಾದೊಡನೆ ಜನರು ಜೇಬಿಕ್ಕೆ ಕೈಯಿಕ್ಕುವರು; ಸ್ತ್ರೀಯರ ಸೆರಗಿನ ತುದಿಯಲ್ಲಿನ ಚಿಕ್ಕಾಸುಗಳು ಪ್ರೇಮಪುರಸ್ಸರವಾಗಿ ಹೇಟಿನೊಳಗೆ ಬಿದ್ದುಬಿಟ್ಟುವು.

ಒಮ್ಮೆ ನಮ್ಮ ವಾಹನಗಳು ಜನರಿಂದ ನಿಲ್ಲಿಸಲ್ಪಟ್ಟುವು. ಬಂದವರು ಕದಲದೆ ನಿಂತುಬಿಟ್ಟರು. ಅವರ ಮುಂದಾಳೊಬ್ಬನು ಮುಂಬರಿದು, "ಮಹಾತ್ಮಾಜೀ, ನಮಗೆ ನೀರು ಕುಡಿಯಲು ಬಾವಿಯಿಲ್ಲ, ನೀರಿಗಾಗಿ ಇನ್ನೊಂದು ಹಳ್ಳಿಗೆ ಹೋಗಬೇಕು; ಅಲ್ಲಿ ಕೂಡಾ ಬೇರೆಯವರು ನಮ್ಮ ಕೊಡಗಳನ್ನು ತುಂಬುವ ತನಕ ಕಾದುಕುಳಿತಿರಬೇಕು. 'ದಯಮಾಡಿ ಸಹಾಯಮಾಡಿರಿ'' ಎಂದನು.

ಇನ್ನೊಂದು ಚಿತ್ರ. ೨೪ ತಾಸುಗಳೊಳಗೆ ಇನ್ನೊಂದು ಪ್ರದೇಶವನ್ನು ಸೇರಿದೆವು—ಹರಿಜನರ ಹಳ್ಳಿ. ಜನರೆಲ್ಲ ಶೌಚದಿಂದಿದ್ದರು. ಆತ್ಮಭರವಸೆಯು ಅವರಲ್ಲಿ ತುಂಬಿಕೊಂಡಂತಿತ್ತು. ಗ್ರಾಮವೆಲ್ಲ ನಿರ್ಮಲವಾಗಿದ್ದಿತು. ಹಳ್ಳಿಯ ಒಂದು ತೋಟದ ಮಧ್ಯೆ ಒಂದು ದೇವಾಲಯ. ಜನರು ಅಲ್ಲಿಗೆ ಹೋಗಿ ಬರುತ್ತಲಿದ್ದರು. ಭಕ್ತಿಯ ವಾತಾವರಣ; ಪ್ರೇಮದ ಸುಗ್ಗಿ ಈ ಗ್ರಾಮದಲ್ಲಿ. ಇದಕ್ಕೆ ಕಾರಣವೇನೆಂದು ಮನಸಾ ಕೇಳುತ್ತಿದ್ದೆ. ಅಷ್ಟರಲ್ಲಿ ಭೋಜನಕ್ಕೆ ಕುಳಿತಿದ್ದ ಒಬ್ಬಾಕೆಯನ್ನು ನೋಡಿದೆ. ಹಸುರು ಸೀರೆಯನ್ನುಟ್ಟಿದ್ದಳು. ಹೃದಯಸಂಭೂತಿಯೋ ಎಂಬಂತೆ ಕಂಡಿತು. ವಿಚಾರಿಸಲಾಗಿ, ಅವಳ ಪ್ರೇಮಮಯ ಸಾಹಸದ ಪರಿಣಾಮವಾಗಿ ಈ ಹಳ್ಳಿಯು ಇಷ್ಟು ಉನ್ನತಿ ಹೊಂದಿತೆಂದು ತಿಳಿದು ಬಂತು. ಬ್ರಾಹ್ಮಣಿಯವಳು. ಪತಿಯೊಡನೆ ಹರಿಜನ ಕೇರಿಯಲ್ಲಿ ವಾಸಿಸುತ್ತಿರುವಳು.

ಕಾಲ್ನಡೆಯಲ್ಲಿದ್ದರೂ, ವಾಹನ ಸಂಚಾರದಲ್ಲಿದ್ದರೂ, ಜನರ ಕೋಲಾಹಲವು ಎಲ್ಲಿಯೂ ತಪ್ಪಿದ್ದಿಲ್ಲ. ರಾತ್ರೀಹಗಲೂ ಒಂದೇ ರೀತಿ. ಮೈಲಿ ಮೈಲಿಗಳ ತನಕ ಸಾಲಾಗಿ ಜನರ ಗೋಡೆ—ಜಯಕಾರ! ಒಂದು ನಿಮಿಷ ಬಿಡುವಿಲ್ಲ. ಪತ್ರ ಬರೆಯಲು ಸಮಯವಿಲ್ಲ. ಬಂದ ಪತ್ರ ಬಿಡಿಸಲು ಅನುವಿಲ್ಲ. ಗಾಂಧಿಯೊಡನೆ ಸಂಚರಿಸುವುದೆಂದರೆ ಈ ಕಾಗದ ಪುಸ್ತಕಗಳಿಗೆ ಪೆಟ್ಟಿಗೆಗಳಲ್ಲೇ ವಿಶ್ರಾಂತಿಕೊಡುವ ದಿನಗಳು. ಕೆಲವು ಗ್ರಂಥಗಳನ್ನು ಹಿಡಿದುಕೊಂಡಿದ್ದೆ. ಅವುಗಳ ಹಾಳೆ ಮಗುಚಲು ಎಡೆ ಸಿಗಲಿಲ್ಲ. ಸ್ಟೇಶನು ಸ್ಟೇಷನುಗಳಲ್ಲಿ ಜನರ ಗುಂಪು. ಮಹಾಘೋಷ! ಗಾಂಧಿ ಬರುವರೆಂದು ತಿಳಿದ ಜನರು ಆರೇಳು ದಿನಗಳ ವರೆಗೆ ರೈಲು ಸ್ಟೇಷನುಗಳಲ್ಲಿ ತಂಗಿರುತ್ತಾರೆ. ರಾಷ್ಟ್ರಪುರುಷನನ್ನು, ನಗ್ನ ಸಂತನನ್ನು ಕಾಣಲು ಬಯಕೆ. ದೇಶಕ್ಕಾಗಿ, ಬಡವರಿಗಾಗಿ, ತನ್ನ ಸರ್ವಸ್ವವನ್ನರ್ಪಿಸಿದ ಪುಣ್ಯಪುರುಷಪುಂಗವನನ್ನು ಕಾಣಬೇಕೆಂಬ ಆಕಾಂಕ್ಷೆ ಈ ಜನರಿಗೆ. ಜನರ ಒತ್ತಾಟ ಚಿಕ್ಕಾಟಗಳು ಬಲವಾಗಿದ್ದರೂ, ರೈಲಿನಲ್ಲಿ, ಚಾವಡಿಗಳಲ್ಲಿ ಗಾಂಧಿಯವರು ನಿದ್ರಿಸುತ್ತಿರುವುದನ್ನು ಮಾತ್ರ ಕಂಡರೆ ಬಾಯಿಗೆ ಬೀಗ ಮುದ್ರೆಯನ್ನು ಹಾಕಿಕೊಂಡಂತಹ ಮೌನ ಪ್ರೇಮದಿಂದ, ಮಣಿದು ಹಿಂದಿರುಗುವರು. ಗಾಂಧಿ ಸುಖಿಸಬೇಕು,— ತಮ್ಮೊಡನೆ ಇರಬೇಕು ಎಂಬ ಮನದಾಶೆ ಈ ಬಡಜೀವಿಗಳಲ್ಲಿ. ಮನೆ ಮಂದಿರಗಳ ಮಾಡುಗಳಲ್ಲಿ ನಿಂತು ಗಾಂಧಿಯವರನ್ನು ನೋಡಿ ವಂದನೆಗಳನ್ನರ್ಪಿಸಿ, ಹರ್ಷಿತರಾಗಿ—ದೇವರನ್ನು ಕಂಡೆವೆಂದು ನಲಿಯುತ್ತಿರುವ ಜನರ ಸಂಖ್ಯೆ ಅಪಾರ.

ಬಿಡಾರದಿಂದ ಹೊರಗಾದೊಡನೆ ಜನರ ಪುಷ್ಪ ಮಾಲಿಕೆಗಳು ಗಾಂಧಿಯ ಕೊರಳನ್ನಲಂಕರಿಸಲಾರಂಭ. ಹಣ್ಣುಹಂಪಲುಗಳು ಬುಟ್ಟಿಗಳಲ್ಲಿ ಹೊರಲಾರದಷ್ಟು ರಾಶಿಯಾಗಲಾರಂಭ.

ಗಾಂಧಿಯೊಡನೆ ೨೪ ತಾಸುಗಳ ಸಂಚಾರ ಮಾಡಿ ದೊರೆತ ಅನುಭವದ ಧೈರ್ಯ ನನ್ನಲ್ಲಿದೆ. ನಾನು ಕೊಲೊಂಬೊಗೆ ಹೊರಟಾಗ ಅವರ ರೈಲು ಉತ್ತರಕ್ಕೆ ತೆರಳಿತು.

ನಾನು ಹೊರಡುವ ಮುಂಜಾನೆ ಗಾಂಧಿಯವರು ೧೨-೩೦ಕ್ಕೆ ಎದ್ದರು! ನಾವೆಲ್ಲ ನಾಲ್ಕು ಘಂಟೆಗೆ ಎದ್ದೆವು. ಎರಡು ತಾಸುಗಳ ರೈಲು ಸಂಚಾರ ಮುಗಿದೊಡನೆ ೮೦ ಮೈಲುಗಳ ಮೋಟಾರು ಸಂಚಾರವಾಯಿತು. ದಾರಿಯಲ್ಲಿ, ಅಲ್ಲಲ್ಲಿ ಜನರ ಕಾಣಿಕೆ. ದರ್ಶನಾಪೇಕ್ಷಿತರಾಗಿ ಮೋಟಾರಿನ ಎದುರಲ್ಲಿ ನಿಲ್ಲುವವರ ಸಂಖ್ಯೆ ಬಹಳ. ಸಂಚಾರವು ಬೆಳೆದಂತೆ ಬಿಹಾರ್‌ನ ಚೀಲವೂ ಹರಿಜನ ಚೀಲವೂ ಬೆಳೆದುವು.

ನನಗೆ ನಿದ್ದೆಯ ಮಬ್ಬು ಹಿಡಿದಿತ್ತು. ದೇಹದ ಶಕ್ತಿ ಮಾಯವಾದಂತಿದ್ದಿತು. ಆದರೆ ಗಾಂಧಿಯವರು ಎತ್ತರ ವೇದಿಕೆಯ ಮೆಟ್ಟಲಿನ ಮೇಲೆ ಓಡಿ, ಮೇಲೆ ನಿಂತು ಲವಲವಿಕೆಯಿಂದ ಭಾಷಣಕ್ಕಾರಂಭಿಸಿದರು.

ಅಷ್ಟರಲ್ಲಿ ಗಾಂಧಿಯವರಿಂದಲೇ ಬಂತೊಂದು ಆಜ್ಞೆ—ಹರಿವಾಣ ಹಿಡಿದು ಸಭಿಕರೊಡನೆ ನಾನು ಬೇಡಬೇಕೆಂದು. ನಿದ್ದೆಯ ಆಲಸ್ಯವನ್ನು ಹಿಡಿದೋಡಿಸುವ ಶಕ್ತಿ ಈ ಗಾಂಧಿಯವರದು. ಎದ್ದು ಬೇಡಿದೆ—ಮುದ್ರಾಸಿನಿಂದ ೫೦ ಮೈಲುಗಳ ಸಂಚಾರವನ್ನು ನಿದ್ದೆಗೆಟ್ಟು ಮಾಡಿದ ಕಾಲವದು, ತಲೆಯನ್ನು ತಿರುಗಿಸುವಂತಿತ್ತು.

ಸಭೆಯ ಮಧ್ಯೆ ವಿರಾಜಿಸುತ್ತಿದ್ದ ಗಾಂಧಿಯವರು ಭಿಕ್ಷವೆತ್ತುತ್ತ, ಪರಿಹಾಸ್ಯಮಾಡುತ್ತ, ಉಪದೇಶಿಸುತ್ತಲಿದ್ದರು. ನಾನು ಹೊರಡಲು ಸಿದ್ಧವಾಗುತ್ತಿದ್ದೆ. ಆಗಲೇ ಬಾಪುರವರು ಹೇಳಿದರು: 'ಇಲ್ಲಿ ಬಾ ನೋಡು, ಈ ದಾನವನ್ನು!' ಹೋಗಿ ನೋಡಿದೆ—ನೋಡುವಂತಹದ್ದೆ. ೬೫ ವರ್ಷ ಪ್ರಾಯದ ವೃದ್ಧನೊಬ್ಬನು ಸುಂದರವಾದ ಜಂಬೆಯೊಂದನ್ನು ನಗುತ್ತ ಕಾಣಿಕೆಯಾಗಿ ಕೊಡುತ್ತಿದ್ದನು. ಆ ಜಂಬೆಗೇನು ಗೊತ್ತು? ತನ್ನನ್ನು ಸಲುವಿಗೆ ಇಡುವರೆಂದು! ಕೆಲವು ರೂಪಾಯಿಗಳು ಹರಿಜನ ಚೀಲಕ್ಕೆ ಬಿದ್ದುವು.

ಬೆಳಿಗ್ಗೆ ನಾಲ್ಕು ಘಂಟೆಗೆ ಆಶ್ರಮಕ್ಕೆ ತಲುಪಿದೆವು. ಒಮ್ಮೆ ಬೆಳಿಗ್ಗೆ ೬ ಘಂಟೆಗೆ ಕೂಡಿ ಬಂದ ಮಹಾಸಭೆಯು ೯ ಘಂಟೆಯ ವರೆಗೆ ಕಾದು ಕುಳಿತಿರಬೇಕಾಯಿತು. ಮಹಾತ್ಮರು ಆಕಸ್ಮಾತ್ ಆಗಮಿಸಿರಲಿಲ್ಲ. ತನ್ಮಧ್ಯೆ ಮಳೆ ಬಂತು—ಆದರೂ ಜನರು ಕದಲಲಿಲ್ಲ. ೨½ ತಾಸು ಇರುವಾಗ ಗಾಂಧಿಯವರು ಬಂದರು—೨೦,೦೦೦ ಜನರು ಅಲ್ಲೇ ಇದ್ದರು! ಇವರೇನೋ ನಿಶ್ಶಕ್ತ ಗಾಂಧಿ? ಮ. ಶಾ.

ವಿಯಾನ್ನಾ ಗಲಭೆಗಳು.

ಡಾ। ಡೊಲ್ಫಸರವರ ಕೊಲೆ.

ಡಾ। ಡೊಲ್ಫಸರವರು ಆಸ್ಟ್ರಿಯದ ಹೊಸ ಸರ್ವಾಧಿಕಾರಿಯೆಂದು ಸಾರಿ ಮೂರು ತಿಂಗಳಾದುದಿಲ್ಲ,— ಕಳೆದ ಗುರುವಾರ ಅವರನ್ನು ರೋಷೋನ್ಮತ್ತ ನಾಝಿಗಳು (ಜರ್ಮನಿಯ ಹಿಟ್ಲರ್ ಪಂಥದವರು) ಬಂದೂಕಿನಿಂದ ಹೊಡೆದು ಕೊಂದರೆಂಬ ವಾರ್ತೆ, ವಿದ್ಯುತ್ಪಾತದಂತೆ ಪ್ರಪಂಚವನ್ನು ತಟಸ್ಥವನ್ನಾಗಿ ಮಾಡಿಬಿಟ್ಟಿದೆ. ಡೊಲ್ಫಸರವರ ಹಸ್ತಕರಾದ ಮೇಜರ್ ಫೇಯವರು ನಾಝಿಯವರ ಕೈಯಲ್ಲಿ ಬಂಧಿಯಾದರು.

ಡೊಲ್ಫಸರವರು, ಜರ್ಮನಿಯ ಹಿಟ್ಲರರಂತೆ ಆಸ್ಟ್ರಿಯದಲ್ಲಿನ ಪ್ರಜಾ ಸ್ವಾತಂತ್ರ್ಯದ ಮೇಲೆ ಗದೆಯೆತ್ತಿದವರಾದರೂ ಹಿಟ್ಲರರ ಮತ್ತು ಡೊಲ್ಫಸರ ಕಾರ್ಯಕ್ರಮಗಳಲ್ಲಿ ಭೇದವಿದ್ದೇ ಇದ್ದಿತು. ಡೊಲ್ಫಸರವರು ಶಾಂತವಾಗಿ ಕೆಲಸನಡೆಸುವವರು.

ಡೊಲ್ಫಸರು ಆಸ್ಟ್ರಿಯದ ರಾಜ್ಯಸೂತ್ರಗಳನ್ನು ಕೈಯಲ್ಲಿ ಹಿಡಿವಾಗ ಜರ್ಮನಿಯ ವಿರೋಧವಿತ್ತು.

ಆಸ್ಟ್ರಿಯದ ನಾಝಿಗಳೆಲ್ಲ ಡೊಲ್ಫಸರ ಅಧಿಕಾರಕ್ಕೆ ವಿರೋಧಿಗಳೆಂಬುದು,—ಪೂರ್ಣವಾಗಿ ವ್ಯಕ್ತವಾದುದಾಯಿತು. ಸ್ವಾತಂತ್ರ್ಯ ಅಪಹರಣದಿಂದ ನಾಝಿ ಪ್ರಜಾ ವರ್ಗದಲ್ಲಿದ್ದ ರೋಷಾಗ್ನಿಯೆಂದೂ ಎನ್ನಬಹುದು.

ತಾ. ೨೫ರಲ್ಲಿ ನಾಝಿಗಳು, ಆಕಸ್ಮಿಕವಾಗಿ ದಂಗೆ ಎದ್ದರು. ಬ್ರೋಡ್ ಕಾಸ್ಟಿಂಗ್ ಸ್ಟೇಷನನ್ನು ವಶಪಡಿಸಿ, ಡೊಲ್ಫಸ್ ಸರಕಾರವು ರಾಜೀನಾಮೆ ಕೊಟ್ಟಿದೆಯೆಂಬ ಸುಳ್ಳು ವಾರ್ತೆಯನ್ನು ಹರಡಿಸಲಾಯಿತು. ಅಧಿಕಾರಿಗಳು ಇದು ನಿಜವಲ್ಲವಾಗಿ ಪ್ರಕಟಣೆ ಹೊರಡಿಸಿ, ನಾಝಿ ಒಳಸಂಚುಗಾರರ ದಂಗೆಯೇಳುವ ಪೂರ್ವ ಸೂಚನೆಗಳನ್ನು ಕಂಡು, ಕಚೇರಿಗಳಲ್ಲ್ಲ, ಅಧಿಕಾರಿಗಳ ಬಂಗಲೆಗಳಲ್ಲ, ರಸ್ತೆಗಳಲ್ಲಿ ಕಾವಲು ಇರಿಸಿದ್ದರು. ಬ್ರೋಡ್ ಕಾಸ್ಟಿಂಗ್ ಸ್ಟೇಷನನ್ನು ವಶಪಡಿಸಿಕೊಂಡು ಸುಳ್ಳು ವಾರ್ತೆ ಹರಡಿದ ನಾಝಿಗಳನ್ನು ಸೆರೆಹಿಡಿಯಲಾಯಿತಾದರೂ—ಇತ್ತ ಡೊಲ್ಫಸರ ಕಚೇರಿಯನ್ನು ಮತ್ತಿತರ ನಾಝಿಗಳು ಮುತ್ತಿ ಡೊಲ್ಫಸರನ್ನೂ, ಅವರ ಹಸ್ತಕರಾದ ಮೇಜರ್ ಫೇ ಮೊದಲಾದವರನ್ನೂ ಬಂದಿಗಳಾಗಿ ಇರಿಸಿಬಿಟ್ಟರು. ಪೋಲೀಸ್ ಮುಖಂಡನು ಬಂದು ನಾಝಿಗಳೊಡನೆ ಒಪ್ಪಂದಕ್ಕಾಗಿ ಯತ್ನಿಸಿ—ವಿಫಲವಾಗಲು, ಕಾದಾಟವಾರಂಭವಾಗಿ, ಅವರನ್ನು ಶರಣು ಬರುವಂತೆ ಮಾಡಿದನು. ಆದರೆ ಪೋಲೀಸ್ ಮುಖಂಡನನ್ನು ಜೇರಿಬ್ಬರು ನಾಝಿಗಳು ಅಂದೇ ಕೊಲೆಮಾಡಿದರು!

ಸೈನ್ಯದ ಕಾವಲು ಸಾಗಲಿಲ್ಲ. ನಾಝಿಗಳು ಛಾನ್ಸಲರಿ ಕಚೇರಿಯನ್ನು ವಶಪಡಿಸಿಕೊಂಡರು. ಡೊಲ್ಫಸರನ್ನು ಬಂದೂಕು ಹಾರಿಸಿ ಕೆಡವಿದರು. ಕೆಡವಲ್ಪಟ್ಟ ಛಾನ್ಸಲರ ಡೊಲ್ಫಸರು ಯಾವ ಚಿಕಿತ್ಸೆಯೂ ಫಲಕಾರಿಯಾಗದೆ, ಬಳಿಯಲ್ಲಿದ್ದ ಕೆಲವರೊಡನೆ,— 'ನನ್ನ ಮಕ್ಕಳನ್ನು ರಕ್ಷಿಸಿರಿ' ಎಂದು ವಿನಂತಿಸಿ ಕಣ್ಣು ಮುಚ್ಚಿದರು.

ವಿಯಾನ್ನಾ ನಗರದೊಳಗಿನ ಗಲಭೆಯಂತೆ ಆಸ್ಟ್ರಿಯದ ಇತರ ಕಡೆಗಳಲ್ಲೂ, ಸರಕಾರ ವಿರೋಧಿಗಳಾದ ನಾಝಿಗಳು ದಂಗೆಯೆದ್ದು ನಾನಾ ಅನರ್ಥಗಳಿಗೆ ಕಾರಣರಾದರು. ಅನೇಕ ಕಡೆಗಳಲ್ಲಿ ಮಾರ್ಶಲ್ ಲೋ ಜ್ಯಾರಿ ಮಾಡಲ್ಪಟ್ಟಿದೆ.

ಹೊಸ ಛಾನ್ಸಲರರ ನೇಮಕದ ಪ್ರಶ್ನೆಯೆದ್ದಿದೆ. ಮುಂಬರುವರಾರು? ತಿಳಿದಿಲ್ಲ.

ಜರ್ಮನಿಯಿಂದ ಹಿಟ್ಲರರು, ಸದ್ಯದ ವಿದ್ಯಮಾನಗಳು ಶಾಂತಸ್ವಭಾವ ಹೊಂದುವ ತನಕ ಮಂತ್ರಿಸ್ಥಾನದಲ್ಲಿ ಬದಲಿ ನೋಡಲೆಂದು ವಾನ್‌ಪಾಪನರು ಹೋಗುವಂತೆ ಕೇಳಿಕೊಂಡಿರುವರು.

ದಂಗೆಗಾರರು ಆಸ್ಟ್ರಿಯದ ಒಂದೆರಡು ನಗರಗಳನ್ನು ವಶಪಡಿಸಿಕೊಂಡಂತೆಯೂ, ಸರಕಾರೀ ಸೈನ್ಯವು ಅದನ್ನು ಪುನಃ ಮರಳಿ ಪಡೆದಂತೆಯೂ ವಾರ್ತೆಗಳಿವೆ.

ಈ ವಿಪ್ಲವದಲ್ಲಿ ಜರ್ಮನಿಯ ಒಳಸಂಚು ಇರಬಹುದೆಂದು ಅಲ್ಲಲ್ಲಿ ಸಂದೇಹದ ಸುಳಿವು ಇದೆಯಾದರೂ ಹಿಟ್ಲರರು ಸ್ನೇಹದ ಕರವನ್ನೊಡ್ಡಿದುದನ್ನು ನೋಡಿ, ಇಂಗ್ಲಾಂಡು ಅಥವಾ ಫ್ರಾನ್ಸ್ ಪತ್ರಿಕಾ ಪ್ರಪಂಚವು ಸ್ಪಷ್ಟೋಕ್ತಿ ಆಡದಂತಾಗಿದೆ. ನಾಝಿ ವರ್ತನೆಯ ವಿಷಯವಾಗಿ ಆಸ್ಟ್ರಿಯದ ಹಿತಚಿಂತಕರಲ್ಲೊಬ್ಬರಾದ ಇಟೆಲಿಯ ಮುಸ್ಸಲೋನಿಯವರೂ ನಿಷೇಧಸೂಚಕ ಪತ್ರ ಬರೆದರೆಂಬ ಪಿರಿಕ್ಷೆ ಸತ್ಯವಾಗಲಿಲ್ಲ.

ಯುರೋಪಿನ ರಾಷ್ಟ್ರಗಳೊಳಗಿನ ಯುದ್ಧಕ್ಕೆ ಈ ದುರ್ಘಟನೆಯು ಕಾರಣವಾಗಬಹುದೇ ಎಂಬ ಭೀತಿಯೊಂದು ಹಲವರಲ್ಲಿ ಉಂಟಾದುದು ಇನ್ನೂ ತಣ್ಣಗಾದುದಿಲ್ಲ.

ಬೊಂಬಾಯಿಯ ಮೊಗವೀರ

ವ್ಯವಸ್ಥಾಪಕ ಮಂಡಳಿ.

ಈ ಮಂಡಳಿಯ ಗೌರವ ಕಾರ್ಯದರ್ಶಿಗಳು ಹೀಗೆ ಬರೆಯುತ್ತಾರೆ:- "ಈ ವರ್ಷದಲ್ಲಿ ಮಂಗಳೂರು, ಉಡುಪಿ ಮತ್ತು ಬೊಂಬಾಯಿಯಲ್ಲಿ ವಿದ್ಯಾ ವ್ಯಾಸಂಗ ಮಾಡುತ್ತಿರುವ ೨೪ ಮಂದಿ ವಿದ್ಯಾರ್ಥಿಗಳಿಗೆ ಈ ಕೆಳಗಿನಂತೆ ವೇತನಗಳು ಕೊಡಲ್ಪಟ್ಟಿವೆ:— ತಿಂಗಳಿಗೆ ರೂ. ೫ರಂತೆ ೧; ರೂ. ೧೨ರಂತೆ ೧; ರೂ. ೧೦ರಂತೆ ೨; ರೂ. ೮ರಂತೆ ೬; ರೂ. ೬ರಂತೆ ೫; ರೂ. ೫ರಂತೆ ೧; ರೂ. ೪ರಂತೆ ೮; ರೂ. ೩ರಂತೆ ೧;

"ಕಥಾಕುಂಜ"

ಬೆಳಗಾಂವಿ.

ಉದ್ದಾಮ ಲೇಖಕರಿಂದ ಬರೆಯಲ್ಪಡುವ ಸಣ್ಣ ಕತೆ, ಸಣ್ಣ ನಾಟಕಗಳನ್ನು ಪ್ರಕಟಿಸುವ

ಮಾಸಿಕ ಇದೊಂದೆ!

ವಾರ್ಷಿಕ ಚಂದಾ ಅಂಚೆವೆಚ್ಚ ಸೇರಿ ರೂ. 2—4—0.

ಇಂದೇ ಚಂದಾದಾರರಾಗಿರಿ!

FRESH CONSIGNMENT ARRIVED.

UNEQUAL QUALITY——————EXCEPTIONAL PRICE.

A TIRE THAT SAVES YOU REPUTATION AND MONEY.

The Canara Public Conveyance Co., Ltd.

MANGALORE.

ಗಾಂಧಿಜಿಯವರೊಡನೆ ಮುರಿಯಲ್ ಲೆಸ್ಟರಳ ಪ್ರವಾಸ.

(ಮಿಸ್ ಮುರಿಯಲ್ ಲೆಸ್ಟರಳ ಲೇಖನದಿಂದ)

ಅಮೆರಿಕ, ಜಾಪಾನ್, ಚೈನಾಗಳಲ್ಲಿ ನನ್ನ ಭಾಷಣಗಳಾದ ನಂತರ ಲಂಡನಿಗೆ ಹೋಗಲು ಹೊರಟಾಗ ಕೆಲವು ದಿನಗಳ ಮಟ್ಟಿಗೆ ಕಲ್ಕತ್ತದಲ್ಲಿದ್ದೆ. ಆದರೆ ನಾನು ಸ್ವದೇಶ ಹಿಂದಿರುಗಿ ಹೋಗುವ ಮೊದಲು ಕೊಯಮುತ್ತೂರಿನ ಅಸ್ಪೃಶ್ಯರ ಆಶ್ರಮದಲ್ಲಿ ತನ್ನೊಡನೆ ಒಂದು ದಿನ ಇದ್ದು ಹೋಗಬೇಕೆಂದು ಗಾಂಧಿಜೀಯವರ ಸತ್ಕಾರದ ಪತ್ರ ಬಂದಿದ್ದಿತು.

ಕೊಯಮುತ್ತೂರಿನಲ್ಲಿಳಿದುದೇ ತಡ,—ಅವರ ಪ್ರಚಂಡ ಅಧ್ಯಾತ್ಮ ಲೋಕದಲ್ಲಿ ಸೇರಿಕೊಂಡೆ; ಜನಜಲಧಿಯೊಳಗೆ ಸಿಲುಕಿಕೊಂಡೆ. ಬೆಳಿಗ್ಗೆ ೪—೨೦ಕ್ಕೆ ಗಾಂಧಿಯವರ ಪ್ರಾರ್ಥನಾ ಕಾಲ. ೫—೩೦ಕ್ಕೆ ಬೆಳಗ್ಗಿನ ಭೋಜನ. ಘಂಟೆ ೬ರೊಳಗೆ ಗಂಟು ಮೂಟೆ ಕಟ್ಟಿ ಇನ್ನೊಂದೂರಿಗೆ ಹೊರಡಲು ಸಿದ್ಧ. ೬—೩೦ರೊಳಗೆ ಪರವೂರು ಸಂಚಾರಕ್ಕೆ ಹೊರಟೂ ಆಯಿತು. ೮ ಘಂಟೆಯಾಗುವುದರೊಳಗೆ ಸಭೆ, ಭಾಷಣ, ಇತ್ಯಾದಿಗಳು! ರಾತ್ರಿ ೧೦-೩೦ಕ್ಕೆ ನಿದ್ರಾಕಾಲ.

ಒಂದು ದಿನದ ಕೆಲವು ಸಭೆಗಳಲ್ಲಿ ಸುಮಾರು ೫೦,೦೦೦ ಜನರ ಸತ್ಕಾರ ಗಾಂಧಿಗೆ! ಹೆಚ್ಚಿನ ಸಭೆಗಳು ಬಯಲು ಪ್ರದೇಶಗಳಲ್ಲಿ, ಸಭೆ ಮುಗಿದೊಡನೆ ದುಡ್ಡು ದುಗ್ಗಾಣಿಯನ್ನರ್ಪಿಸುವ ಸಾವಿರಾರು ಜನರ ಒತ್ತಾಟ. ಬೆಳ್ಳಿ, ಭಂಗಾರ ಬೆಳ್ಳಿಯ ಚರಕ, ನಗ, ಚಿತ್ರ, ಪ್ರತಿಮೆ, ಸಾಬೂನು, ಮಿಠಾಯಿ, ಹಣ್ಣುಹಂಪಲುಗಳು ಜನರಕಾಣಿಕೆ. ಗಾಂಧೀ—ಚಕ್ರವರ್ತಿಗಳ ಭೇಟಿಯ ಚಿತ್ರಗಳೂ ಇವೆ.

ಸಾಮಗ್ರಿಗಳು ರಾಶಿ ಬಿದ್ದೊಡನೆ, ಜನರ ಸಂದರ್ಶನಾವೇಶವು ಶಾಂತವಾದೊಡನೆ ಏಲಮಿಗೆ ಆರಂಭ; ಬಿಹಾರಿನ ನಿರ್ಗತಿಕರಿಗಾಗಿ ಸಹಾಯದಾನವೂ ಇದೆ. ಒಮ್ಮೆ ಗಾಂಧಿ ನನ್ನ ಹೇಟನ್ನು ಮುಂದೆ ಮಾಡಿ ಹರಿಜನರ ಸಭೆಯಲ್ಲಿ ಬೇಡುವ ಭಾಗ್ಯವೂ ದಗಿತು. ಕೈ ಮುಂದಾದೊಡನೆ ಜನರು ಚೀಲಕ್ಕೆ ಕೈಯಿಕ್ಕುವರು; ಸ್ತ್ರೀಯರ ಸೆರಗಿನ ತುದಿಯಲ್ಲಿನ ಚಿಕ್ಕಾಸುಗಳು ಪ್ರೇಮಪುರಸ್ಸರವಾಗಿ ಹೇಟಿನೊಳಗೆ ಬಿದ್ದುಬಿಟ್ಟುವು.

ಒಮ್ಮೆ ನಮ್ಮ ವಾಹನಗಳು ಜನರಿಂದ ನಿಲ್ಲಿಸಲ್ಪಟ್ಟುವು. ಬಂದವರು ಕದಲದೆ ನಿಂತುಬಿಟ್ಟರು. ಅವರ ಮುಂದಾಳೊಬ್ಬನು ಮುಂಬರಿದು, "ಮಹಾತ್ಮಾಜೀ, ನಮಗೆ ನೀರು ಕುಡಿಯಲು ಬಾವಿಯಿಲ್ಲ, ನೀರಿಗಾಗಿ ಇನ್ನೊಂದು ಹಳ್ಳಿಗೆ ಹೋಗಬೇಕು; ಅಲ್ಲಿ ಕೂಡಾ ಬೇರೆಯವರು ನಮ್ಮ ಕೊಡಗಳನ್ನು ತುಂಬುವ ತನಕ ಕಾದುಕುಳಿತಿರಬೇಕು. ದಯಮಾಡಿ ಸಹಾಯಮಾಡಿರಿ" ಎಂದನು.

ಇನ್ನೊಂದು ಚಿತ್ರ. ೨೪ ತಾಸುಗಳೊಳಗೆ ಇನ್ನೊಂದು ಪ್ರದೇಶವನ್ನು ಸೇರಿದೆವು—ಹರಿಜನರ ಹಳ್ಳಿ. ಜನರೆಲ್ಲ ಶೌಚದಿಂದಿದ್ದರು. ಆತ್ಮ ಭರವಸೆಯು ಅವರಲ್ಲಿ ತುಂಬಿಕೊಂಡಂತಿತ್ತು. ಗ್ರಾಮವೆಲ್ಲ ನಿರ್ಮಲವಾಗಿದ್ದಿತು. ಹಳ್ಳಿಯ ಒಂದು ತೋಟದ ಮಧ್ಯೆ ಒಂದು ದೇವಾಲಯ. ಜನರು ಅಲ್ಲಿಗೆ ಹೋಗಿ ಬರುತ್ತಲಿದ್ದರು. ಭಕ್ತಿಯ ವಾತಾವರಣ; ಪ್ರೇಮದ ಸುಗ್ಗಿ ಈ ಗ್ರಾಮದಲ್ಲಿ. ಇದಕ್ಕೆ ಕಾರಣವೇನೆಂದು ಮನಸಾ ಕೇಳುತ್ತಿದ್ದೆ. ಅಷ್ಟರಲ್ಲಿ ಭೋಜನಕ್ಕೆ ಕುಳಿತಿದ್ದ ಒಬ್ಬಾಕೆಯನ್ನು ನೋಡಿದೆ. ಹಸುರು ಸೀರೆಯನ್ನುಟ್ಟಿದ್ದಳು. ದೈವಸಂಭೂತೆಯೋ ಎಂಬಂತೆ ಕಂಡಿತು. ವಿಚಾರಿಸಲಾಗಿ, ಅವಳ ಪ್ರೇಮಮಯ ಸಾಹಸದ ಪರಿಣಾಮವಾಗಿ ಈ ಹಳ್ಳಿಯು ಇಷ್ಟು ಉನ್ನತಿ ಹೊಂದಿತೆಂದು ತಿಳಿದು ಬಂತು. ಬ್ರಾಹ್ಮಣಿಯವಳು. ಪತಿಯೊಡನೆ ಹರಿಜನ ಕೇರಿಯಲ್ಲಿ ವಾಸಿಸುತ್ತಿರುವಳು.

ಕಾಲ್ನಡೆಯಲ್ಲಿದ್ದರೂ, ವಾಹನ ಸಂಚಾರದಲ್ಲಿದ್ದರೂ, ಜನರ ಕೋಲಾಹಲವು ಎಲ್ಲಿಯೂ ತಪ್ಪಿದ್ದಿಲ್ಲ. ರಾತ್ರೀಹಗಲೂ ಒಂದೇ ರೀತಿ. ಮೈಲಿ ಮೈಲಿಗಳ ತನಕ ಸಾಲಾಗಿ ಜನರ ಗೋಡೆ—ಜಯಕಾರ! ಒಂದು ನಿಮಿಷ ಬಿಡುವಿಲ್ಲ. ಪತ್ರ ಬರೆಯಲು ಸಮಯವಿಲ್ಲ. ಬಂದ ಪತ್ರ ಬಿಡಿಸಲು ಅನುವಿಲ್ಲ. ಗಾಂಧಿಯೊಡನೆ ಸಂಚರಿಸುವುದೆಂದರೆ ಈ ಕಾಗದ ಪುಸ್ತಕಗಳಿಗೆ ಪೆಟ್ಟಿಗೆಗಳಲ್ಲೇ ವಿಶ್ರಾಂತಿಕೊಡುವ ದಿನಗಳು. ಕೆಲವು ಗ್ರಂಥಗಳನ್ನು ಹಿಡಿದುಕೊಂಡಿದ್ದೆ. ಅವುಗಳ ಹಾಳೆ ಮಗುಚಲು ಎಡೆ ಸಿಗಲಿಲ್ಲ. ಸ್ಟೇಶನು ಸ್ಟೇಷನುಗಳಲ್ಲಿ ಜನರ ಗುಂಪು. ಮಹಾಘೋಷ! ಗಾಂಧಿ ಬರುವರೆಂದು ತಿಳಿದ ಜನರು ಆರೇಳು ದಿನಗಳ ವರೆಗೆ ರೈಲು ಸ್ಟೇಷನುಗಳಲ್ಲಿ ತಂಗಿರುತ್ತಾರೆ. ರಾಷ್ಟ್ರಪುರುಷನನ್ನು, ನಗ್ನ ಸಂತನನ್ನು ಕಾಣಲು ಬಯಕೆ. ದೇಶಕ್ಕಾಗಿ, ಬಡವರಿಗಾಗಿ, ತನ್ನ ಸರ್ವಸ್ವವನ್ನರ್ಪಿಸಿದ ಪುಣ್ಯಪುರುಷಪುಂಗವನನ್ನು ಕಾಣಬೇಕೆಂಬ ಆಕಾಂಕ್ಷೆ ಈ ಜನರಿಗೆ. ಜನರ ಒತ್ತಾಟ ತಿಕ್ಕಾಟಗಳು ಬಲವಾಗಿದ್ದರೂ, ರೈಲಿನಲ್ಲಿ, ವಾಹನಗಳಲ್ಲಿ ಗಾಂಧಿಯವರು ನಿದ್ರಿಸುತ್ತಿರುವುದನ್ನು ಮಾತ್ರ ಕಂಡರೆ ಬಾಯಿಗೆ ಬೀಗ ಮುದ್ರೆಯನ್ನು ಹಾಕಿಕೊಂಡಂತಹ ಮೌನ ಪ್ರೇಮದಿಂದ, ಮಣಿದು ಹಿಂದಿರುಗುವರು. ಗಾಂಧಿ ಸುಖಿಸಬೇಕು,—ತಮ್ಮೊಡನೆ ಇರಬೇಕು ಎಂಬ ಮನದಾಶೆ ಈ ಬಡಜೀವಿಗಳಲ್ಲಿ. ಮನೆ ಮಂದಿರಗಳ ಮಾಡುಗಳಲ್ಲಿ ನಿಂತು ಗಾಂಧಿಯವರನ್ನು ನೋಡಿ ನಂದನೆಗಳನ್ನರ್ಪಿಸಿ, ಹರ್ಷಿತರಾಗಿ—ದೇವರನ್ನು ಕಂಡೆವೆಂದು ಸಲಿಯುತ್ತಿರುವ ಜನರ ಸಂಖ್ಯೆ ಅಪಾರ.

ಬಿಹಾರದಿಂದ ಹೊರಗಾದೊಡನೆ ಜನರ ಪುಷ್ಪ ಮಾಲಿಕೆಗಳು ಗಾಂಧಿಯ ಕೊರಳನ್ನಲಂಕರಿಸಲಾರಂಭ. ಹಣ್ಣುಹಂಪಲುಗಳು ಬುಟ್ಟಿಗಳಲ್ಲಿ ಹೊರಲಾರದಷ್ಟು ರಾಶಿಯಾಗಲಾರಂಭ.

ಗಾಂಧಿಯೊಡನೆ ೨೪ ತಾಸುಗಳ ಸಂಚಾರ ಮಾಡಿ ದೊರೆತ ಅನುಭವದ ಡೈರಿ ನನ್ನಲ್ಲಿದೆ. ನಾನು ಕೊಲೊಂಬೊಗೆ ಹೊರಟಾಗ ಅವರ ರೈಲು ಉತ್ತರಕ್ಕೆ ತೆರಳಿತು.

ನಾನು ಹೊರಡುವ ಮುಂಜಾನೆ ಗಾಂಧಿಯವರು ೧೨-೩೦ಕ್ಕೆ ಎದ್ದರು! ನಾವೆಲ್ಲ ನಾಲ್ಕು ಘಂಟೆಗೆ ಎದ್ದೆವು. ಎರಡು ತಾಸುಗಳ ರೈಲು ಸಂಚಾರ ಮುಗಿದೊಡನೆ ೮೦ ಮೈಲುಗಳ ಮೋಟಾರು ಸಂಚಾರವಾಯಿತು. ದಾರಿಯಲ್ಲಿ, ಅಲ್ಲಲ್ಲಿ ಜನರ ಕಾಣಿಕೆ. ದರ್ಶನಾಪೇಕ್ಷಿತರಾಗಿ ಮೋಟಾರಿನ ಎದುರಲ್ಲಿ ನಿಲ್ಲುವವರ ಸಂಖ್ಯೆ ಬಹಳ. ಸಂಚಾರವು ಬೆಳೆದಂತೆ ಬಿಹಾರ್‌ನ ಚೀಲವೂ ಹರಿಜನ ಚೀಲವೂ ಬೆಳೆದುವು.

ನನಗೆ ನಿದ್ದೆಯ ಮಬ್ಬು ಹಿಡಿದಿತ್ತು. ದೇಹದ ಶಕ್ತಿಮಾಯವಾದಂತಿದ್ದಿತು. ಆದರೆ ಗಾಂಧಿಯವರು ಎತ್ತರ ವೇದಿಕೆಯ ಮೆಟ್ಟಲಿನ ಮೇಲೆ ಓಡಿ, ಮೇಲೆ ನಿಂತು ಲೀಲೆಯಿಂದ ಭಾಷಣಕ್ಕಾರಂಭಿಸಿದರು.

ಅಷ್ಟರಲ್ಲಿ ಗಾಂಧಿಯವರಿಂದಲೇ ಬಂತೊಂದು ಆಜ್ಞೆ—ಹರಿವಾಣ ಹಿಡಿದು ಸಭಿಕರೊಡನೆ ನಾನು ಬೇಡಬೇಕೆಂದು. ನಿದ್ದೆಯ ಆಲಸ್ಯವನ್ನು ಹಿಡಿದೋಡಿಸುವ ಶಕ್ತಿ ಈ ಗಾಂಧಿಯವರದು. ಎದ್ದು ಬೇಡಿದೆ—ಮದ್ರಾಸಿನಿಂದ ೫೦ ಮೈಲುಗಳ ಸಂಚಾರವನ್ನು ನಿದ್ದೆಗೆಟ್ಟು ಮಾಡಿದ ಕಾಲವದು, ತಲೆಯನ್ನು ತಿರುಗಿಸುವಂತಿತ್ತು.

ಸಭೆಯ ಮಧ್ಯೆ ವಿರಾಜಿಸುತ್ತಿದ್ದ ಗಾಂಧಿಯವರು ಭಿಕ್ಷವೆತ್ತುತ್ತ, ಪರಿಹಾಸ್ಯಮಾಡುತ್ತ, ಉಪದೇಶಿಸುತ್ತಲಿದ್ದರು. ನಾನು ಹೊರಡಲು ಸಿದ್ಧವಾಗುತ್ತಿದ್ದೆ. ಆಗಲೇ ಬಾಪೂಜಿಯವರು ಹೇಳಿದರು. 'ಇಲ್ಲಿ ಬಾ ನೋಡು, ಈ ದಾನವನ್ನು!' ಹೋಗಿ ನೋಡಿದೆ—ನೋಡುವಂತಹದ್ದೆ. ೭೫ ವರ್ಷ ಪ್ರಾಯದ ವೃದ್ಧನೊಬ್ಬನು ಸುಂದರವಾದ ಜೇಕೆಯೊಂದನ್ನು ನಗುತ್ತ ಕಾಣಿಕೆಯಾಗಿ ಕೊಡುತ್ತಿದ್ದನು. ಆ ಜೇಕೆಗೇನು ಗೊತ್ತು? ತನ್ನನ್ನು ಏಲಮಿಗೆ ಇಡುವರೆಂದು! ಕೆಲವು ರೂಪಾಯಿಗಳು ಹರಿಜನ ಚೀಲಕ್ಕೆ ಬಿದ್ದುವು.

ಬೆಳಿಗ್ಗೆ ನಾಲ್ಕು ಘಂಟೆಗೆ ಆಶ್ರಮಕ್ಕೆ ತಲುಪಿದೆವು. ಒಮ್ಮೆ ಬೆಳಿಗ್ಗೆ ೬ ಘಂಟೆಗೆ ಕೂಡಿಬಂದ ಮಹಾಸಭೆಯು ೯ ಘಂಟೆಯ ವರೆಗೆ ಕಾದು ಕುಳಿತಿರಬೇಕಾಯಿತು. ಮಹಾತ್ಮರು ಅಕಸ್ಮಾತ್ ಆಗಮಿಸಲಿಲ್ಲ. ತನ್ಮಧ್ಯೆ ಮಳೆ ಬಂತು—ಆದರೂ ಜನರು ಕದಲಲಿಲ್ಲ. 2½ ತಾಸು ಇರುವಾಗ ಗಾಂಧಿಯವರು ಬಂದರು—೨೦,೦೦೦ ಜನರು ಅಲ್ಲೇ ಇದ್ದರು! ಇವರೇನೋ ನಿಶ್ಯಕ್ತ ಗಾಂಧಿ? ಮ. ಜಾ.

ವಿಯಾನ್ನಾ ಗಲಭೆಗಳು.

ಡಾ। ಡೊಲ್ಫಸರವರ ಕೊಲೆ.

ಡಾ। ಡೊಲ್ಫಸರವರು ಆಸ್ಟ್ರಿಯದ ಹೊಸ ಸರ್ವಾಧಿಕಾರಿಯೆಂದು ಸಾರಿ ಮೂರು ತಿಂಗಳಾದುದಿಲ್ಲ,—ಕಳೆದ ಗುರುವಾರ ಅವರನ್ನು ರೋಷೋನ್ಮತ್ತ ನಾಝಿಗಳು (ಜರ್ಮನಿಯ ಹಿಟ್ಲರ್ ಪಂಥದವರು) ಬಂದೂಕಿನಿಂದ ಹೊಡೆದು ಕೊಂದರೆಂಬ ವಾರ್ತೆ, ವಿದ್ಯುತ್ಪಾತದಂತೆ ಪ್ರಪಂಚವನ್ನು ತಟಸ್ಥವನ್ನಾಗಿ ಮಾಡಿಬಿಟ್ಟಿದೆ. ಡೊಲ್ಫಸರವರ ಹಸ್ತಕರಾದ ಮೇಜರ್ ಫೇಯವರು ನಾಝಿಯವರ ಕೈಯಲ್ಲಿ ಬಂಧಿಯಾದರು.

ಡೊಲ್ಫಸರವರು, ಜರ್ಮನಿಯ ಹಿಟ್ಲರರಂತೆ ಆಸ್ಟ್ರಿಯದಲ್ಲಿನ ಪ್ರಜಾ ಸ್ವಾತಂತ್ರ್ಯದ ಮೇಲೆ ಗದೆಯೆತ್ತಿದವರಾದರೂ ಹಿಟ್ಲರರ ಮತ್ತು ಡೊಲ್ಫಸರ ಕಾರ್ಯಕ್ರಮಗಳಲ್ಲಿ ಭೇದವಿದ್ದೇ ಇದ್ದಿತು. ಡೊಲ್ಫಸರವರು ಶಾಂತವಾಗಿ ಕೆಲಸನಡೆಸುವವರು.

ಡೊಲ್ಫಸರು ಆಸ್ಟ್ರಿಯದ ರಾಜ್ಯಸೂತ್ರಗಳನ್ನು ಕೈಯಲ್ಲಿ ಹಿಡಿವಾಗ ಜರ್ಮನಿಯ ವಿರೋಧವಿತ್ತು.

ಆಸ್ಟ್ರಿಯದ ನಾಝಿಗಳೆಲ್ಲ ಡೊಲ್ಫಸರ ಅಧಿಕಾರಕ್ಕೆ ವಿರೋಧಿಗಳೆಂಬುದು,—ಪೂರ್ಣವಾಗಿ ವ್ಯಕ್ತವಾದುದಾಯಿತು. ಸ್ವಾತಂತ್ರ್ಯ ಅಪಹರಣದಿಂದ ನಾಝಿ ಪ್ರಜಾ ವರ್ಗದಲ್ಲೆದ್ದ ರೋಷಾಗ್ನಿಯೆಂದೂ ಎನ್ನಬಹುದು.

ತಾ. ೨೫ರಲ್ಲಿ ನಾಝಿಗಳು, ಆಕಸ್ಮಿಕವಾಗಿ ದಂಗೆ ಎದ್ದರು. ಬ್ರೇಡ್ ಕಾಸ್ಟಿಂಗ್ ಸ್ಟೇಷನನ್ನು ವಶಪಡಿಸಿ, ಡೊಲ್ಫಸ್ ಸರಕಾರವು ರಾಜೀನಾಮೆ ಕೊಟ್ಟಿದೆಯೆಂಬ ಸುಳ್ಳು ವಾರ್ತೆಯನ್ನು ಹರಡಿಸಲಾಯಿತು. ಅಧಿಕಾರಿಗಳು, ಇದು ನಿಜವಲ್ಲವಾಗಿ ಪ್ರಕಟಣೆ ಹೊರಡಿಸಿ, ನಾಝಿ ಒಳಸಂಚುಗಾರರು ದಂಗೆಯೇಳುವ ಪೂರ್ವ ಸೂಚನೆಗಳನ್ನು ಕಂಡು, ಕಚೇರಿಗಳಲ್ಲಿ, ಅಧಿಕಾರಿಗಳ ಬಂಗಲೆಗಳಲ್ಲಿ, ರಸ್ತೆಗಳಲ್ಲಿ ಕಾವಲು ಇರಿಸಿದ್ದರು. ಬ್ರಾಡ್ ಕಾಸ್ಟಿಂಗ್ ಸ್ಟೇಷನನ್ನು ವಶಪಡಿಸಿಕೊಂಡು ಸುಳ್ಳು ವಾರ್ತೆ ಹರಡಿದ ನಾಝಿಗಳನ್ನು ಸೆರೆಹಿಡಿಯಲಾಯಿತಾದರೂ—ಇತ್ತ ಡೊಲ್ಫಸರ ಕಚೇರಿಯನ್ನು ಮತ್ತಿತರ ನಾಝಿಗಳು ಮುತ್ತಿ ಡೊಲ್ಫಸರನ್ನೂ, ಅವರ ಹಸ್ತಕರಾದ ಮೇಜರ್ ಫೇ ಮೊದಲಾದವರನ್ನೂ ಬಂದಿಗಳಾಗಿ ಇರಿಸಿಬಿಟ್ಟರು. ಪೋಲೀಸ್ ಮುಖಂಡನು ಬಂದು ನಾಝಿಗಳೊಡನೆ ಒಪ್ಪಂದಕ್ಕಾಗಿ ಯತ್ನಿಸಿ—ವಿಫಲವಾಗಲು, ಕಾದಾಟವಾರಂಭವಾಗಿ, ಅವರನ್ನು ಶರಣು ಬರುವಂತೆ ಮಾಡಿದನು. ಆದರೆ ಪೋಲೀಸ್ ಮುಖಂಡನನ್ನು ಬೇರಿಬ್ಬರು ನಾಝಿಗಳು ಅಂದೇ ಕೊಲೆಮಾಡಿದರು!

ಸೈನ್ಯದ ಕಾವಲು ಸಾಗಲಿಲ್ಲ. ನಾಝಿಗಳು ಛಾನ್ಸಲರ ಕಚೇರಿಯನ್ನು ವಶಪಡಿಸಿಕೊಂಡರು. ಡೊಲ್ಫಸರನ್ನು ಬಂದೂಕು ಹಾರಿಸಿ ಕೆಡವಿದರು. ಕೆಡವಲ್ಪಟ್ಟ ಛಾನ್ಸಲರ ಡೊಲ್ಫಸರು ಯಾವ ಚಿಕಿತ್ಸೆಯೂ ಫಲಕಾರಿಯಾಗದೆ, ಬಳಿಯಲ್ಲಿದ್ದ ಕೆಲವರೊಡನೆ,—'ನನ್ನ ಮಕ್ಕಳನ್ನು ರಕ್ಷಿಸಿರಿ!' ಎಂದು ವಿನಂತಿಸಿ ಕಣ್ಣು ಮುಚ್ಚಿದರು.

ವಿಯಾನ್ನಾ ನಗರದೊಳಗಿನ ಗಲಭೆಯಂತೆ ಆಸ್ಟ್ರಿಯದ ಇತರ ಕಡೆಗಳಲ್ಲೂ, ಸರಕಾರ ವಿರೋಧಿಗಳಾದ ನಾಝಿಗಳು ದಂಗೆಯೆದ್ದು ನಾನಾ ಅನರ್ಥಗಳಿಗೆ ಕಾರಣರಾದರು. ಅನೇಕ ಕಡೆಗಳಲ್ಲಿ ಮಾರ್ಶಲ್ ಲೋ ಜ್ಯಾರಿ ಮಾಡಲ್ಪಟ್ಟಿದೆ.

ಹೊಸ ಛಾನ್ಸಲರರ ನೇಮಕದ ಪ್ರಶ್ನೆಯೆದ್ದಿದೆ. ಮುಂಬರುವರಾರು? ತಿಳಿದಿಲ್ಲ.

ಜರ್ಮನಿಯಿಂದ ಹಿಟ್ಲರರು, ಸದ್ಯದ ವಿದ್ಯಮಾನಗಳು ಶಾಂತಸ್ವಭಾವ ಹೊಂದುವ ತನಕ ಮಂತ್ರಿಸ್ಥಾನದಲ್ಲಿ ಬದಲಿ ನೋಡಲೆಂದು ವಾನ್ ಪಾಪನರು ಹೋಗುವಂತೆ ಕೇಳಿಕೊಂಡಿರುವರು.

ದಂಗೆಗಾರರು ಆಸ್ಟ್ರಿಯದ ಒಂದೆರಡು ನಗರಗಳನ್ನು ವಶಪಡಿಸಿಕೊಂಡಂತೆಯೂ, ಸರಕಾರೀ ಸೈನ್ಯವು ಅದನ್ನು ಪುನಃ ಮರಳಿ ಪಡೆದಂತೆಯೂ ವಾರ್ತೆಗಳಿವೆ.

ಈ ವಿಪ್ಲವದಲ್ಲಿ ಜರ್ಮನಿಯ ಒಳಸಂಚು ಇರಬಹುದೆಂದು ಅಲ್ಲಲ್ಲಿ ಸಂದೇಹದ ಸುಳಿವು ಇದೆಯಾದರೂ ಹಿಟ್ಲರರು ಸ್ನೇಹದ ಕರವನ್ನೊಡ್ಡುದುದನ್ನು ನೋಡಿ, ಇಂಗ್ಲಾಂಡು ಅಥವಾ ಫ್ರಾನ್ಸ್ ಪತ್ರಿಕಾ ಪ್ರಪಂಚವು ಸ್ಪಷ್ಟೋಕ್ತಿ ಆಡದಂತಾಗಿದೆ. ನಾಝಿ ವರ್ತನೆಯ ವಿಷಯವಾಗಿ ಆಸ್ಟ್ರಿಯದ ಹಿತಚಿಂತಕರಲ್ಲೊಬ್ಬರಾದ ಇಟೇಲಿಯ ಮುಸ್ಸಲೋನಿಯವರೂ ನಿಷೇಧಸೂಚಕ ಪತ್ರ ಬರೆದರೆಂಬ ನಿರೀಕ್ಷೆ ಸತ್ಯವಾಗಲಿಲ್ಲ.

ಯುರೋಪಿನ ರಾಷ್ಟ್ರಗಳೊಳಗಿನ ಯುದ್ಧಕ್ಕೆ ಈ ದುರ್ಘಟನೆಯು ಕಾರಣವಾಗಬಹುದೇ ಎಂಬ ಭೀತಿಯೊಂದು ಹಲವರಲ್ಲಿ ಉಂಟಾದುದು ಇನ್ನೂ ತಣ್ಣಗಾದುದಿಲ್ಲ.

ಬೊಂಬಾಯಿಯ ಮೊಗವೀರ ವ್ಯವಸ್ಥಾಪಕ ಮಂಡಳಿ.

ಈ ಮಂಡಳಿಯ ಗೌರವ ಕಾರ್ಯದರ್ಶಿಗಳು ಹೀಗೆ ಬರೆಯುತ್ತಾರೆ:—"ಈ ವರ್ಷದಲ್ಲಿ ಮಂಗಳೂರು, ಉಡುಪಿ ಮತ್ತು ಬೊಂಬಾಯಿಯಲ್ಲಿ ವಿದ್ಯಾ ವ್ಯಾಸಂಗ ಮಾಡುತ್ತಿರುವ ೨೫ ಮಂದಿ ವಿದ್ಯಾರ್ಥಿಗಳಿಗೆ ಈ ಕೆಳಗಿನಂತೆ ವೇತನಗಳು ಕೊಡಲಾಗಿವೆ:—ತಿಂಗಳಿಗೆ ರೂ. ೧೫ರಂತೆ ೧; ರೂ. ೧೨ರಂತೆ ೧; ರೂ. ೧೦ರಂತೆ ೨; ರೂ. ೮ರಂತೆ ೯; ರೂ. ೬ರಂತೆ ೫; ರೂ. ೫ರಂತೆ ೧; ರೂ. ೪ರಂತೆ ೮; ರೂ. ೩ರಂತೆ ೧;

"ಕಥಾ ಕುಂಜ"
ಬೆಳಗಾಂವಿ.

ಉದ್ದಾಮ ಲೇಖಕರಿಂದ ಬರೆಯಲ್ಪಡುವ ಸಣ್ಣ ಕತೆ, ಸಣ್ಣ ನಾಟಕಗಳನ್ನು ಪ್ರಕಟಿಸುವ ಮಾಸಿಕ ಇದೊಂದೆ!

ವಾರ್ಷಿಕ ಚಂದಾ ಅಂಚೆವೆಚ್ಚ ಸೇರಿ ರೂ. 2—4—0.

ಇಂದೇ ಚಂದಾದಾರರಾಗಿರಿ!

ಲೋಧ್ರ

ಸುಪ್ರಸವಕ್ಕಾಗಿ ದಿವ್ಯ ಟಾನಿಕ್.

ಸ್ತ್ರೀಯರಿಗೊಂದು ಮಹಾ ವರ.

ಯಾವ ತರದ ಅಥವಾ ಎಲ್ಲಾ ತರದ ಮುಟ್ಟು ದೋಷ, ಮುಟ್ಟಾಗುವುದರಲ್ಲಿ ನೋವು, ಅಕ್ರಮ ತರದ ಮತ್ತು ಮುಟ್ಟಾಗದಿರುವಿಕೆ, ಬಿಳಿ ಸೆರಗು, ಗರ್ಭಕೋಶದ ದೋಷ ಅಶುದ್ಧ ಮುಟ್ಟು, ಬಂಜೆತನ, ಸೂತಿಕಾವಾಯು, ಅಶುದ್ಧರಕ್ತ, ಮೇರೆ ದಾಟಿ ಅಥವಾ ಬೇಕಾದಷ್ಟು ಮುಟ್ಟಾಗದಿರುವುದು, ಸ್ತ್ರೀಯರ ಅಂಗಾಂಗಗಳ ಇನ್ನಿತರ ಅನೇಕಾನೇಕ ರೋಗಗಳುಳ್ಳ ಸ್ತ್ರೀಯರನ್ನು ಈ ಔಷಧಿಯು ಸಂಪೂರ್ಣ ಗುಣಗೊಳಿಸಿರುತ್ತದೆ.

ಲೋಧ್ರ

ಎರಡು ಸೈಜಿನಲ್ಲಿ ದೊರೆಯುತ್ತದೆ. ರೂ. 3 ಮತ್ತು 1—10—0

ಕೇಸರಿ ಕುಟೀರಂ

ಇಂಡಿಯನ್ ಕೆಮಿಸ್ಟ್ಸ್ ಮತ್ತು ಡ್ರಗಿಸ್ಟ್ಸ್, ಎಗ್ಮೋರ್ ಮದರಾಸು,

Sole Agents for West Coast and North Kanara:—

Wanted Agents in Principal Towns. ಪೋಪ್ಯುಲರ್ ಸ್ಟೋರ್ಸ್,

For terms Apply to:—POPULAR STORES, Mangalore. ರಥಬೀದಿ ಮಂಗಳೂರು.

WE HOLD IN STOCK OF

English into Kanarese Teacher.
Hindi into Kanarese Teacher.
Marathi into Kanarese Teacher
Marathi into Gujarathi Teacher
Novels and well known Dramas in Hind. and all sorts of books for Schools and Colleges.

Wanted Agents and Canvassers throughout Karnatak districts.

Apply for full particulars with 1½ Annas Stamp:—

THE MANAGER
The National Kanara News Agency
SIR PHIROJSHA METHA ROAD,
Fort Bombay

ಕ್ಷಯಕ್ಷೀಣಾದಿಗಳಿಗೆ

ಚ್ಯವನಪ್ರಾಶಾವಲೇಹ.

ಪ್ರಸೂತಿ ರೋಗಾದಿಗಳಿಗೆ

ದಶಮೂಲಾರಿಷ್ಟ.

(ಕಸ್ತೂರಿ ಮಿಶ್ರಣ)

ಸಮಸ್ತ ವಾತರೋಗಗಳಿಗೆ

ಮಹಾನಾರಾಯಣ ತೈಲ.

ಶ್ರೀ ರಾಮಕೃಷ್ಣ ಧರ್ಮವೈದ್ಯಾಶ್ರಮ ಸಂಘ, ಡೊಂಗರಕೇರಿ ರಸ್ತೆ, ಮಂಗಳೂರು.

++ ++

ಫಲಸಾರಯುಕ್ತ ಟೋನಿಕ್.

ಕಿತ್ತಳೆ ಮತ್ತು ನಿಂಬೆ ಹಣ್ಣುಗಳ ಸಾರದೊಂದಿಗೆ ಎಲ್ಲ ಬಗೆಯ ಲವಣಗಳನ್ನೂ (ಶುದ್ಧ ದೇಶೀ) ಮೂಲಿಕೆಗಳನ್ನೂ ಸೇರಿಸಿ ತಯಾರಿಸಲಾದುದು. ಸೇವಿಸಲು ರುಚಿಕರ. ಅಜೀರ್ಣ, ಮಲಬದ್ಧತೆ, ಆಮವಾತ ಇತ್ಯಾದಿಗಳನ್ನು ಹೋಗಲಾಡಿಸುವುದು. ಹಸಿವನ್ನು ಹೆಚ್ಚಿಸಿ, ರಕ್ತಶುದ್ಧಿಯನ್ನುಂಟುಮಾಡುತ್ತದೆ. 12 ಸಾರಿ ಸೇವಿಸುವ ಬಾಟ್ಲಿಯ ಕ್ರಯ ರೂ. 1 (ಒಂದು ಮಾತ್ರ).

ಮಿನರಲ್ ಟೋನಿಕ್ ಮಾತ್ರೆಗಳು.

ರಕ್ತ ಶುದ್ಧಿಗೂ ವೃದ್ಧಿಗೂ—ಉತ್ತಮವಾದ ಲೋಹಧಾತುಗಳಿಂದ ತಯಾರಿಸಲ್ಪಟ್ಟುದು. ಮೂತ್ರಕೋಶ ಮತ್ತು ಕರುಳುಗಳನ್ನು ಕ್ರಮಪಡಿಸಿ, ದೇಹವನ್ನು ಪುಷ್ಟಿಗೊಳಿಸಿ, ತಂಪನ್ನುಂಟುಮಾಡುವುದು. ಚೈತನ್ಯ—ಉತ್ಸಾಹ—ಪುಂಶಕ್ತಿಗಳು ಖಂಡಿತ ಪ್ರಾಪ್ತಿಯಾಗುವುವು. 12 ಮಾತ್ರೆಗಳ ಬಾಟ್ಲಿಗೆ ರೂ. 1 ಮಾತ್ರ. (ಪತ್ರವ್ಯವಹಾರ ಇಂಗ್ಲೀಷಿನಲ್ಲಿ.) ವಿಳಾಸ:—

Non-Pareil Stores,
Big Street, (s. m.) Triplicane,
MADRAS.

ನಿಮ್ಮ ಸಿದ್ಧತೆಯಾಗಿದೆಯೇ?



ನೆಲಗಡಲೆ ಸುಲಿಯುವ ಋತುವು ಈಗಾಗಲೆ ಆರಂಭವಾಗುವುದು. ಅದು ಕಾರಣ, ಯಾವ ವಿಳಂಬವೂ ಇಲ್ಲದೆ, ಋತು ಆರಂಭದಲ್ಲೇ ನಿಮ್ಮ ಕಾರ್ಯಾರಂಭವನ್ನೂ ಮಾಡಲು ಈಗಲೇ ನಿಮ್ಮ ಯಂತ್ರಗಳನ್ನು ಕೊಂಡುಕೊಂಡು ಇಟ್ಟುಕೊಳ್ಳುವುದುತ್ತಮ. ನೀವು ಯಾವ ಯಂತ್ರವನ್ನು ಬಯಸುವಿರಿ? ಅಥಾರ್ತ್ ಸರ್ವತ್ರ ಹೆಸರುಹೊಂದಿದ—

ಕಿರ್ಲೋಸ್ಕರ

"ಕಲ್ಯಾಣ" ನೆಲಗಡಲೆ ಯಂತ್ರ.

ಇದು ಪೂರ್ಣ ಸುಧಾರಣೆಗಳನ್ನೊಳಗೊಂಡಿದ್ದು, ಚಲಿಸಲು ಸುಲಭವಾಗಿರುವಂತೆ ಕಡಿಮೆ ಖರ್ಚಿನಲ್ಲಿ ಹೆಚ್ಚು ಲಾಭಬರುವಂತೆ ಕೆಲಸ ಮಾಡಬಲ್ಲುದು. ಸಂಪೂರ್ಣ ವಿವರಕ್ಕೆ ನಮಗೆ ಬರೆಯಿರಿ:

ಕಿರ್ಲೋಸ್ಕರ ಬ್ರದರ್ಸ್, ಲಿಮಿಟೆಡ್, ಕಿರ್ಲೋಸ್ಕರವಾಡಿ.

ಯಂತ್ರ ದೊರೆಯುವ ಸ್ಥಳ:—ಮೆಸರ್ಸ್ ಪೆರ್ರಿ ಎಂಡ್ ಕೊ. ಲಿಮಿಟೆಡ್,
ಮೌಂಟ್ ರೋಡ್, ಮದ್ರಾಸ್.

ಚಿತ್ರಾಕೃತಿ ಸಮೇತ

ಋಗ್ವೇದೀ ಸಂಧ್ಯಾವಂದನೆ.

(ವೃಷ್ಣವರಿಗೆ—ಊರ್ಧ್ವಪುಂಡ್ರ—ಮುದ್ರಾಧಾರಣ ವಿಧಿ)
ಸ್ಮಾರ್ತರಿಗೆ—ಭಸ್ಮಧಾರಣ ವಿಧಿ, ಕೂಡಿ)

ಎಂ. ನರಸಿಂಗರಾವ್, ಬಿ. ಎ., ಎಂ. ಎಲ್.
ಇವರಿಂದ ರಚಿತವಾದ
ಪ್ರತಿಪದಾರ್ಥಟೀಕಾ ವಿಧುಸಹಿತ.

ಬೆಲೆ ಆಣೆ 8.

(30, 60, 100 ಪ್ರತಿಗಳನ್ನು ಒಮ್ಮೆಲೆ ಪಡೆಕೊಳ್ಳುವವರಿಗೆ ಒಳ್ಳೆಯ ಡಿಸ್ಕೌಂಟು)

ವಿಳಾಸ:— ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು.

ನಮ್ಮ ಸಲಹೆಯೇ ಪ್ರಾಧಾನ್ಯವಾದದ್ದೆಂದು ತಿಳಿಯಬೇಡಿ.

ಕಲ್ಲಿಕೋಟೆ ಆಶೋಕ ಆಸ್ಪತ್ರೆಯ ಚೀಫ್ ಮೆಡಿಕಲ್ ಆಫೀಸರರಾದ ಡಾ। ವಿ. ಬಿ. ರಾಮನ್, ಎಂ. ಆರ್., ಸಿ. ಎಸ್. ಇವರು ಬರೆದಿರುವುದನ್ನು ಓದಿ ನೋಡಿ—"ನಾನು ನಿಮ್ಮ ಆಶ್ಚರ್ಯಕರವಾದ ಜೀವಾಮೃತಂ ಟಾನಿಕನ್ನು ನರಗಳಲ್ಲಿ ಉರಿತ ಇರಿತ ಹಸಿವು ಕಡಿಮೆಯಾಗಿರುವುದು, ತೂಕವು ಕಡಿಮೆಯಾಗಿರುವುದು, ಇವು ಪ್ರಾಪ್ತವಾಗಿರುವ ಅನೇಕ ರೋಗಿಗಳಿಗೆ ಕೊಟ್ಟಿರುತ್ತೇನೆ. ಅದರ ಫಲಿತಾಂಶಗಳು ಬಹು ತೃಪ್ತಿಕರವಾಗಿವೆ. ಜೀವಾಮೃತವನ್ನು ದೇಹಶಕ್ತಿ ಕುಗ್ಗಿರುವ ಎಲ್ಲಾ ಸಂದರ್ಭಗಳಲ್ಲೂ ಸರ್ವೇ ಸಾಮಾನ್ಯವಾಗಿ ಉಪಯೋಗಿಸಬಹುದೆಂದು ನಾನು ಮನಃಪೂರ್ವಕವಾಗಿ ಶಿಫಾರಸು ಮಾಡುತ್ತೇನೆ"

ಜೀವಾಮೃತವು

ನರಗಳಿಗೆ ಶಕ್ತಿ ಕೊಡುತ್ತದೆ. ವೀರ್ಯ ವೃದ್ಧಿಮಾಡುತ್ತದೆ. ಹಸಿವು ಹೆಚ್ಚಿಸುತ್ತದೆ. ರಕ್ತ ವೃದ್ಧಿಮಾಡುತ್ತದೆ.

ಪಂಡಿತ ಡಿ. ಗೋಪಾಲಾಚಾರ್ಲುರವರ **ಜೀವಾಮೃತವು**

ಎಲ್ಲಾ ಔಷಧ ಮಾರುವವರಲ್ಲೂ, ಸ್ಟೋರುಗಳಲ್ಲೂ ದೊರೆಯುತ್ತದೆ. (ಸಂಪೂರ್ಣ ವಿವರಗಳಿಗೆ ಇವತ್ತೇ ಬರೆಯಿರಿ)

ಆಯುರ್ವೇದಾಶ್ರಮಂ, ಪೋ. ಬಾಕ್ಸ್ ನಂ. 2ಙ. ಮದ್ರಾಸು.

ಸೋಲ್ ಏಜಂಟರು:— ಸಿಟಿ ಮೆಡಿಕಲ್ ಮತ್ತು ಜನರಲ್ ಏಜನ್ಸಿ, ೯೨ ಚಿಕ್ಕಪೇಟೆ ಬೆಂಗಳೂರು. (ಉಡುಪಿ ಹೋಟೆಲ್ ಹತ್ತಿರ)
ದಕ್ಷಿಣ ಕನ್ನಡದ ಏಜಂಟರು— ಪೋಪ್ಯುಲರ್ ಸ್ಟೋರ್ಸ್, ಮಂಗಳೂರು. P. No. 104

FOR
**High Class
Printing**
ART OR ORDINARY
CONSULT US
The Sharada Press, Mangalore.

ಕಸಿ ಗಿಡಗಳು.

ಸಪೋಡಿಲ್ಲ (ಚಿಕ್ಕು)

ಈ ಮರವು ನಮ್ಮ ಜಿಲ್ಲೆಯ ಎಲ್ಲಾ ಭಾಗದಲ್ಲಿಯೂ ಸರಿಯಾಗಿ ಬೆಳೆದು, 3ನೇ ವರ್ಷದಲ್ಲಿಯೇ ತಪ್ಪದೆ ಫಲ ಬಿಡುತ್ತದೆ. ಒಂದು ಮರದಲ್ಲಿ ಸಾವಿರಗಟ್ಲೆ ಹಣ್ಣಾಗುವುದು. ಒಂದು ಎಕ್ರೆಯಲ್ಲಿ ವರ್ಷಕ್ಕೆ ರೂ. 1000 ಮೇಲೆ ಉತ್ಪತ್ತಿಯಾಗುವುದು. ಹಣ್ಣು ಅತಿ ಮಧುರ, ಒಳ್ಳೇ ರುಚಿ, ಕಾಯಿಲೆಯವರಿಗೆ ಉತ್ತಮ ಆಹಾರ. ಅದರಲ್ಲಿ ಕಬ್ಬಿಣ ಸತ್ವ ಮತ್ತು ವಿಟಮಿನ್ ತುಂಬ ಇರುವುದರಿಂದ ರಕ್ತವನ್ನು ವೃದ್ಧಿಸುವುದು, ಮರದಲ್ಲಿ ಯಾವಾಗಲೂ ಹಣ್ಣು ಇರುವುದು, ಎಲ್ಲ ತೋಟದಲ್ಲಿಯೂ ಇರತಕ್ಕದ್ದು. ಕ್ರಯ ರೂ. 1—4—0 ಮಾತ್ರ. ನಮ್ಮಲ್ಲಿ ಮಾವು ಮತ್ತು ಇತರ ಕಸಿಗಿಡಗಳು ಕೂಡ ದೊರೆಯುತ್ತವೆ. ಕ್ರಯ ಪಟ್ಟಿಗೆ ಕೆಳಗಣ ವಿಳಾಸಕ್ಕೆ ಬರೆಯುವುದು.

ಗಿಡಗಳು ಎಲ್ಲಾ ಕೃಷಿ ದಿವಾನ್ ಸ್ಟೇಟರಲ್ಲಿ ದೊರೆಯುತ್ತವೆ.

ಕೆ. ಎಮ್. ಸೆಟ್ಟಿ, ಕೆನರಾ ನರ್ಸರಿ,
ಕಾಪು, ಪೋಸ್ಟು, ದ. ಕನ್ನಡ.

An Advertisement in

'Swadeshabhimani'

Means a sure fortune to you

Ask for Contract Rates.

The Swadeshabhimani office,
Car Street, Mangalore.

ENGLISH in a MONTH.

ಒಂದೇ ತಿಂಗಳಲ್ಲಿ ಇಂಗ್ಲಿಷ್

ಪಿ. ವಿ. ಉಪಾಧ್ಯಾಯ, B. A. L. L. B. ಇವರಿಂದ ಬರೆಯಲ್ಪಟ್ಟ ಹೊಸ ರೀತಿಯಿಂದ ಸುಲಭದಲ್ಲಿ ಸ್ವತಂತ್ರವಾಗಿ ವ್ಯವಹಾರಕ್ಕೆ ಅವಶ್ಯ ಬರುವಷ್ಟು ಇಂಗ್ಲಿಷ್ ಕಲಿಸಬಲ್ಲ ನಾಡುಕಾಡಿ ಪುಸ್ತಕ. ಬೆಲೆ 0—8—0.

ದೊರೆಯುವ ಸ್ಥಳ:—

ಮಂಗಳೂರು—1. ಕೆ. ಭೋಜರಾವ್, 2. ಶೆಣೈ ಬ್ರದರ್ಸ್. ಉಡುಪಿ—ತುಳುನಾಡ್ ಪ್ರೆಸ್. ಕಾರ್ಕಳ—ಆರ್. ವಿಟ್ಟಪ್ಪ ಶೆಣೈ. ಮುಂಬಾಯಿ—ನೇಶನಲ್ ಕೆನರಾ ನ್ಯೂಸ್ ಏಜನ್ಸಿ. ಹೆಚ್ಚಿನ ಮಾಹಿತಿಗೆ ಬರೆಯಿರಿ:—ಕೆ. ಆದಿರಾಜಯ್ಯ, ಕಾರ್ಕಳ ದ. ಕ.

...ಜ್ಞಾನ.

(ಪ್ರಬಂಧಮಾಲೆ)

ಲೇಖಕರು—ಶ್ರೀ ಶಿವರಾಮ ಕಾರಂತ.

ಅಧ್ಯಾಯ ೮.

...ಸಾಯನ ವಿಜ್ಞಾನ

ರಸಾಯನ—ಎಂದೊಡನೆಯೇ ಬಾಯಿನೀರು ಯಾರಿಗೂ ...ರುವುದು. ಹಾಗೆಂದು ಈ ರಸಾಯನ ಜ್ಞಾನದ ವಸ್ತು...ಗಳನ್ನು ತಿನ್ನುವುದಕ್ಕೆ ಬರುವುದಿಲ್ಲ. ಇವುಗಳ ಉಪಯೋಗ ...ರೆ, ರಾಸಾಯನ ಪಂಡಿತನು ಪಾಕ ಶಾಸ್ತ್ರಿಯಂತೆ ನಾನಾ ...ಥದ ವಸ್ತುಗಳನ್ನು ಬೆರೆಯಿಸಿ—ನವಸೃಷ್ಟಿಯನ್ನು ಮಾಡು...ತ್ತಾನೆ. ಈಗೀಗ ಹೊಸ ವಿಶ್ವಾಮಿತ್ರನೇ ಅವನು. ಹಳೆ ...ಶ್ವಾಮಿತ್ರನ ಪಾಲಿಗೆ ಬರೇ ಒಬ್ಬ ತ್ರಿಶಂಕುವಿದ್ದರೆ—ಇವನ ಪಾಲಿಗೆ ನಾವೆಲ್ಲರೂ ತ್ರಿಶಂಕುಗಳೇ. ಇಂಥವನ ಚಮತ್ಕಾರ ...ಟುವಟಿಕೆಗಳನ್ನು ಕಾಣಲು—ಅವನು ಕೆಲಸ ಮಾಡುವ ...ಾದಿಯಾವುದೆಂದು, ನಾವು ತಿಳಿಯಲು ಯತ್ನಿಸಬೇಕು.

ಪ್ರಪಂಚದ ಯಾವತ್ತೂ ವಸ್ತುಗಳು—ಅಂದರೆ ಕಲ್ಲು, ಕಬ್ಬಿಣ, ಮಣ್ಣು ಮಸಣ—ಹಾಲು ಸಕ್ಕರೆ ಚೊಕ್ಲೇಟು—ನಾವು ನೀವು—ಎಲ್ಲಾ ವಸ್ತುಗಳು ಬರೇ ಒಂದೇ ಒಂದು ಮೂಲ ವಸ್ತುವಿನಿಂದಾಯಿತೆಂದು ಈ ಶಾಸ್ತ್ರದಲ್ಲಿ ಹೇಳುವುದು. ಇದನ್ನು ಬೇಕಾದ ರೀತಿಯಿಂದ ಕೂಡಿಸಿಬಿಟ್ಟರೆ—ನಾನಾ ವಸ್ತುಗಳು ಉಂಟಾಗುವುವು.

ಎಲ್ಲ ವಸ್ತುಗಳನ್ನು ಒಡೆಯಲು ಬಂದರೆ—ತೀರ ಮೂಲವಸ್ತುವಾಗಿ ಒಡೆಯಲು ಬಂದರೆ—ಅವೆಲ್ಲಾ ಸೂಕ್ಷ್ಮ ಸೂಕ್ಷ್ಮಕ್ಕಿಂತ ಸೂಕ್ಷ್ಮ ವಿದ್ಯುದ್ರೇಣುಗಳಾಗಿ ಬಿಡುವುವು. ಈ ರೇಣುಗಳಲ್ಲಿ—ಹೆಣ್ಣು ಜಾತಿಯವು (Electron), ಗಂಡು ಜಾತಿಯವು (Proton), ನಪುಂಸಕ ಜಾತಿಯವು (Wentron) ಗಳಿವೆ. ಆದರೆ ಈ ಜಾತಿಯ ತಾಜಾ ಮೂಲುಗಳನ್ನು ಸೃಷ್ಟಿಯಲ್ಲಿ ಕಾಣುವುದಕ್ಕಿಲ್ಲ. ಅವೆಲ್ಲ, ಬೇರೆ ಬೇರೆ ಪ್ರಮಾಣದಲ್ಲಿ ಸೇರಿಕೊಂಡು—ಪರಮ ಅಣುಗಳಾಗಿವೆಯಂತೆ! ಪರಮಾಣುಗಳ ಕುಟುಂಬವೇ—ಅಣು. ಇವುಗಳಿಂದ ಪ್ರಪಂಚದ ಮೂಲಧಾತುಗಳು ಉಂಟಾದುವಂತೆ. ಪ್ರಪಂಚದ ಮೂಲಧಾತುಗಳು—ಅಮ್ಲಜನಕ, ಜಲಜನಕ, ಸಾರಜನಕ, ಸೀತಾಜನಕ, ರಾಮಜನಕ......ಎಂಬಿತ್ಯಾದಿ ಹಲವು ಜನಕಗಳಿಂದಲೂ, ಕಬ್ಬಿಣ, ತಾಮ್ರ, ನಿಕ್ಕೆಲು, ಚಿನ್ನ, ರೇಡಿಯಮ್, ಲಿಥಿಯಮ್, ಸೋಡಿಯಮ್, ಬೇರಿಯಮ್—ಇತ್ಯಾದಿ ಲೋಹಗಳಿಂದಲೂ, ಕೂಡಿ ಆದುವಂತೆ. ಇವುಗಳ ಸಂಖ್ಯೆ ಹೆಚ್ಚುಕಡಿಮೆ—90 ಇರಬಹುದು. ನಮ್ಮ ಹಿರಿಯರು ಪ್ರಪಂಚ ಸೃಷ್ಟಿಗೆ ಉಪಯೋಗಿಸಿದ—ಪೃಥ್ವಿ, ಅಪ, ತೇಜ, ವಾಯು, ಆಕಾಶ—ವೆಂಬ ಪಂಚ ಭೂತಗಳು, ಈ 90 ಧಾತುಗಳು ಬಂದ ಬಳಿಕ ಅಡಗಿದ್ದುವೆಂದು ತಿಳಿದು ಬರುವುದು.

ಈಗ ರಸಾಯನಿಕನ ಈ ಧಾತುಗಳನ್ನು ಕೊಂಡು ಮಾಡುವ ಕಸರತ್ತುಗಳನ್ನು ನೋಡುವ. ಅವನಿಗೀಗ ಅಮ್ಲಜನಕ ವಾಯು ಬೇಕಾಗಿದೆಯೆಂದು ತಿಳಿಯಿರಿ. ಸೀಸಾಮ್ಲವೆಂಬ ಒಂದು ವಸ್ತುಯಿದೆಯೆಂದು ತಿಳಿಯಿರಿ. ಇದು ಸೀಸಕ್ಕೂ ಅಮ್ಲಕ್ಕೂ ಆದ ನಂಟುತನದ ಫಲ. ಈ ಮನುಷ್ಯನು ಮೆಲ್ಲಗೆ ಅದನ್ನು ಕಾಯಿಸಿ ಅವರ ದೋಸ್ತಿ ಕಡಿಯುವಂತೆ ಮಾಡಿ—ಅಮ್ಲವಾಯುವನ್ನೆ ಬೇರೆಮಾಡಿ ಬಿಡುತ್ತಾನೆ. ಯಾವಾಗಲೂ ಈ ಧಾತುಗಳ ಗೆಳೆತನ ಇಷ್ಟು ಶಿಥಿಲವೆಂದು ತಿಳಿಯಬೇಡಿ. ಕೆಲವು ಬಾರಿ ಅಮ್ಲವಾಯುವು ಕೆಲವು ಧಾತುಗಳನ್ನು ಮದುವೆಯಾದರೆ—ಸಾಮಾನ್ಯಕ್ಕೆ ಬಿಡುವ ಹಾಗಿಲ್ಲ. ಉದಾ—ಪೆಟ್ಲುಪ್ಪು ಇದೆ. ಇದು—ಪೊಟಾಸಿಯಮ, ಸಾರಜನಕ, ಅಮ್ಲವಾಯುಗಳ ಮಿಶ್ರಕುಟುಂಬ, ಇವರ ದೋಸ್ತಿ ಬಲು ಗಟ್ಟಿ. ಇಂಥವರ ದೋಸ್ತಿ ಬಿಡಿಸಬೇಕಾದರೆ—ಬೇರೆ ವಸ್ತುಗಳನ್ನು ತೋರಿಸಿ, ಅದರ ಹತ್ತಿರ ಈ ವಾಯು ಬರುವಂತೆ ಮಾಡಿ—ತಿದುಗಿ ಆ ವಸ್ತುವಿನಿಂದ ಅದನ್ನು ತಪ್ಪಿಸುತ್ತಾನೆ. ಮುಖ್ಯತಃ ಚಾಣಕ್ಯ ನೀತಿಯಲ್ಲಿ ಹೇಳುವಂತೆ ಸಾಮ, ದಾನ, ಭೇದ, ದಂಡ—ಎಂಬ ಚತುರೋಪಾಯಗಳನ್ನು ರಾಸಾಯನಿಕನು ಈ ವಿಷಯದಲ್ಲಿ ತೋರಿಸುತ್ತಾನೆ. ಇವೆಲ್ಲವುಗಳಿಂದ ವರ್ಣಸಂಕರ ಮಾಡುವುದೇ ಇವನ ದುರುದ್ದೇಶ. ಒಂದು ಕುಟುಂಬದ ಹೆಂಡತಿ ಮತ್ತೊಬ್ಬರಿಗೆ, ಒಬ್ಬರ ಮಕ್ಕಳು ಮಗದೊಬ್ಬರಿಗೆ ಹೀಗೆಲ್ಲಾ ಮಾಡಿ—ತಾನು ಹೊಸ ಸೃಷ್ಟಿ ಮಾಡಿರುತ್ತೇನೆ—ಎಂದು ರಸಾಯನಿಕನು ಹಿಗ್ಗುತ್ತಾನೆ.

ಡಿಕಾಕ್ಷನ್ ಕಾಫಿಗೆ ಯೋಗ್ಯವಾದ ದಿವ್ಯನೀರನ್ನು ತಂದು ಅದರೊಳಗೆ ವಿದ್ಯುತ್ತಿನ ಸೂಜಿ ಎರಡನ್ನು ಚುಚ್ಚಿ—ಒಳ್ಳೇ ಗೌರವದಿಂದ ಸಂಸಾರ ಮಾಡಿಕೊಂಡಿದ್ದ ಜಲಜನಕ, ಅಮ್ಲಜನಕ—ಎಂಬ ವಾಯುಗಳನ್ನು ದಾಂಪತ್ಯವಿಚ್ಛೇದ ಮಾಡಿಸುತ್ತಾನೆ. ಮುಖ್ಯತಃ ರಸಾಯನ ಶಾಸ್ತ್ರವೆಂದರೆ ವಿವಾಹವಿಚ್ಛೇದ ನೀತಿ ಎನ್ನಲೂ ಬಹುದು—ಇಲ್ಲವಾದರೆ 'ಅಸುರೀ ನೀತಿ' ಎನ್ನಬಹುದು.

ಈಗೀಗ ಈ ಪಂಡಿತರ ಹಿಂಡುಗಳು ಮಾಡಿರುವ ಕೆಲಸ ಸಾಮಾನ್ಯವಲ್ಲ...ಬರೇ ಹತ್ತಿಯನ್ನೆ ತಂದು ಅದರ ಮೇಲೆ ತೇಜಪ್ಪಿನ ಎಣ್ಣೆ (Nitric acid) ಸುರಿದು, ಅದರ ಉರಿಗೆ ಹತ್ತಿಯು ಹೇಳಿದ್ದನ್ನು ಕೇಳುವಂತೆ ಮಾಡಿ—ತುಪಾಕಿಯ ಸಿಡಿಮದ್ದನ್ನು ಮಾಡಿರುತ್ತಾರೆ! ಈ ಮದ್ದು ಸಿಡಿದರೆ ಬಲು ಜೋರಿಂದ ಸಿಡಿಯುವುದು. ಅದರಿಂದ—ಸೆಲುಲಾಯ್ಡ್ ನಂತಹ ಹೊಸ ಜಾತಿಯ ಪದಾರ್ಥಗಳನ್ನು ಮಾಡಿದ್ದಾನೆ. ಇದಾದರೂ ಕ್ಷಮ್ಯ, ಏತಕ್ಕೂ ಬಾರದ—ತಾರೆಣ್ಣೆ (ಡಾಮರು ಯಾನೆ (Coal-Tar)ಯನ್ನು ಅಟ್ಟಕ್ಕೇರಿಸಿ ಬಿಟ್ಟಿದ್ದಾನೆ. ಅದೇ ದೇವರೆನ್ನುವಂತೆ ಮಾಡಿದ್ದಾನೆ. ಅದರಿಂದ—ನಾನಾ ತರದ ಬಣ್ಣಗಳನ್ನು ಮಾಡಿದುದು ಸಾಲದೆ, ಸುವಾಸನೆಯ ಅತ್ತರಗಳನ್ನು ಮಾಡಿದ್ದಾನೆಂದರೆ—ಇದೆಷ್ಟರ ಸೀಕಲಾಟವೆಂದು ನಿಮಗೆ ತಿಳಿಯುವುದು. ಜಾತಿಯಿಲ್ಲದವರನ್ನು ಹೀಗೆ ಉಚ್ಚ ಪಟ್ಟಕ್ಕೇರಿಸಿದರೆ ಉತ್ತಮಕುಲದ ವ್ಯಕ್ತಿಗಳನ್ನು ಮ್ಲೇಚ್ಛಸಮಾನವಾಗಿ ಮಾಡಿರುತ್ತಾನೆ. ರತ್ನಗಳಲ್ಲಿ ಶ್ರೇಷ್ಠವಾದ—ವಜ್ರವನ್ನು ಸುಟ್ಟು, ಅದು ಬರೇ ಇದ್ದಲು—ಎಂದುಬಿಟ್ಟನು, ಅನ್ನುವುದಷ್ಟೇ ಅಲ್ಲ—ಇದ್ದಲು ಕಾಯಿಸಿ ವಜ್ರ ಮಾಡಲು ತೊಡಗಿಬಿಟ್ಟನು! ಕಲಿಯುಗದಲ್ಲಿ ಶ್ರೇಷ್ಠನೇ ಕನಿಷ್ಠನು, ಕನಿಷ್ಠನೇ ಶ್ರೇಷ್ಠನು—ಎಂಬ ಮಾತು ನಿಜವು. ಇದ್ದಲೂ, ವಜ್ರವೂ ಸಮವೆಂಬ ಇವನ ನೀತಿಯೆಂಥದು? ಸುಟ್ಟರೆ ಎರಡೂ ಒಂದೆಂಬುದೇ? ಸುಟ್ಟರೆ—ವಿಜ್ಞಾನಿಯೂ ಸಹ ಬೂದಿಯಾಗುತ್ತಾನೆ.

ಸುಡುವ ವಿಚಾರದಲ್ಲಿ ಇನ್ನೊಂದು ಮಾತು—ನಮ್ಮ ಶವವನ್ನು (ಈಗಲೇ ಅಲ್ಲ—ಸತ್ತ ಬಳಿಕ) ಉಳಿಸಬಾರದು. ಅದು ಉಳಿದರೆ ಬಂಧುಮಿತ್ರರು ಬಲು ವ್ಯಥೆಗೆ ಗುರಿಯಾದಾರು—ಎಂದು ಸುಡುವ ನಿರ್ಣಯ ಮಾಡಿದರೆ ರಾಸಾಯನಿಕನ ತೀರ್ಮಾನಕ್ಕೆ ಅದೂ—ವಿರುದ್ಧವೆ! ಇವನ ಹೇಳಿಕೆಯಂತೆ—ಸುಟ್ಟರೆ ವಸ್ತುಗಳು ನಾಶವಾಗುವುದಿಲ್ಲವಂತೆ. ಬರೇ ರೂಪಾಂತರವಾಗುವುವಂತೆ! ಘನಾಕಾರದಿಂದ—ಪ್ರೇತಾಕಾರಕ್ಕೆ ಸೇರುವುವಂತೆ. ಹಿಂದಿನ ಕಾಲದಲ್ಲಿ—ಯುಗಾಂತ್ಯಕ್ಕೆ ಪರಶಿವನು ಹಣೆಗಣ್ಣನ್ನು ತೆರೆದು ಜಗತ್ತನ್ನು ಭಸ್ಮ ಮಾಡುತ್ತಿದ್ದನು. ಈಗ ಅದಕ್ಕೆ ಹಾದಿಯಿಲ್ಲ. "ಎ ಶಿವನೇ, ಇದು ವ್ಯರ್ಥ ಸಾಹಸ. ಪ್ರಪಂಚವನ್ನು ಅಂಗಾರಾಮ್ಲ, ಆಲಿಸಾಮ್ಲ, ಇತ್ಯಾದಿ—ಇತ್ಯಾದಿ ಆಮ್ಲಗಳನ್ನಾಗಿ ಮಾಡುತ್ತೀಯಲ್ಲವೆ..."—ಎನ್ನುತ್ತಾನೆ ರಸಾಯನಿಕನು!

ಇವನ ಶೋಧೆಗಳ ಸಹಾಯವನ್ನು ಪಡೆದಲ್ಲಿ—ಶಿವನಿಗೆ ಉಪಯೋಗವಿಲ್ಲವಾದರೂ—ಯಮನಿಗೆ ಬಲು ಸಹಾಯವಿದೆ. ಅವನ ದಂಡಾಲಯದಲ್ಲಿ *, ಈಗಿರುವ ಬಲು ಬೊಡ್ಡು ತರದ ವ್ಯವಸ್ಥೆಯನ್ನು ತೆಗೆದು ಹೊಸ ಏರ್ಪಾಡು ಮಾಡಬಹುದು. ಉದಾ

(1) ಅಲ್ಲಿರುವ ಎಣ್ಣೆಯ ಕೊಪ್ಪರಿಗೆಗಳು ಬರೇ 80°—Fಗೆ ಕಾಯಬಹುದು. ಜಾಸ್ತಿ ಪಾಪ ಮಾಡಿದವರನ್ನು ಇದರಲ್ಲಿ ತಳ್ಳುವುದೆಂದರೆ ದೀಪಾವಳಿ ಸ್ನಾನ ಮಾಡಿಸಿದಂತೆಯೇ ಸರಿ. ಅದರ ಬದಲು—ರಾಸಾಯನಿಕ ಕುಲುಮೆಗಳಲ್ಲಿ—ಕಾವನ್ನು 4000—5000°Fಗೂ ಏರಿಸಬಹುದು. ಹೆಚ್ಚೇನು 10,000°Fಕ್ಕೂ—ಏರಿಸಲು ಬಂದೀತು.

(2) ಪಾಪಿಗಳ ಶಿರವನ್ನು ಗರಗಸದಿಂದ ಸಿಗಿದು ತುಂಡು ಮಾಡುವುದು. ಇದು ಬಲು ಮೆಲ್ಲಗಾಗುವ ಕೆಲಸ. ತಲಾ ಒಂದರ ಇಬ್ಬಿಬ್ಬರು ಸಿಗಿಯುವವರು ಬೇಕು.. ಅದರ ಬದಲು—ಪಿಕ್ರಿಕ್ ಎಸಿಡ್‌ನಂಥ ಸ್ಫೋಟಕವನ್ನು ಹತ್ತಿಪ್ಪತ್ತು ಜನರ ಹೊಟ್ಟೆಯಲ್ಲಿ ತುಂಬಿಸಿ—ಬಲು ದೂರದಿಂದ ವಿದ್ಯುತ್ತಿನ ಮುಖಾಂತರ ಉಧಾಯಿಸಿದರೆ—ನಿಮಿಷ ಸಹಸ್ರಾಂಶದಲ್ಲಿ ಅವರ ಎಲುಬಿನ ತುಣುಕು ಸಿಗದಂತೆ ಮಾಡಬಹುದು. ಈ ಉಪಯೋಗದಿಂದ ಯಮಾಲಯದ ಶಿಬ್ಬಂದಿ ಖರ್ಚನ್ನು ಕಡಿಮೆಮಾಡಬಹುದು.

(3) ದೇವೇಂದ್ರನ ಅನುಯಾಯಿಗಳಾದ ಸುರರಿಗೆ ಅಮೃತವನ್ನೊದಗಿಸುವ ವ್ಯವಸ್ಥೆಯು ಈ ತನಕ ಯಮನ 'ಡಿಸ್ಟಿಲರಿ'ಯಿಂದ, ಗಾಣಗಳಿಂದ ನಡೆಯಬೇಕಿತ್ತು. ಇನ್ನಾದರೆ—ರಾಸಾಯನಿಕನ ಹೇಳಿಕೆಯಂತೆ—ತಾರೆಣ್ಣೆಯಿಂದಲೋ, ರಾಗಿ ಗಂಜಿಯಿಂದಲೋ ದಿವ್ಯವಾದ—ರಾಸಾಯನಿಕ ಅಮೃತವನ್ನು ಮಾಡಬಹುದು.

(4) ಯಮಾಲಯದ ಜನರಿಗೆ ಸಮರೂಪ (Uniform) ಒದಗಿಸಲು ರೇಶ್ಮೆ ಬಟ್ಟೆಗಳು ಬೇಕಿದೆ. ಇದಕ್ಕಾಗಿ ಯಮನ ಆಳುಗಳು ರೇಶ್ಮೆ ಹುಳುಗಳನ್ನು ಸಾಕಬೇಕಲ್ಲವೆ. ಇನ್ನು—ಅಲ್ಲಿಗೆ ಬರುವ ಮನುಷ್ಯರನ್ನೋ, ಪಾಪ ಮಾಡಿದ ಮರಗಳನ್ನೋ ಗೊಜ್ಜು (Pulp) ಮಾಡಿ ಅದರಿಂದ 'ಆರ್ಟ ಸಿಲ್ಕ್' ತಯಾರಿಸಬಹುದು.

(5) ಹಾವು, ಚೇರೆ, ಒಳ್ಳೆ, ಮೊದಲಾದ ಪ್ರಾಣಿಗಳನ್ನು ಕೊಂಡ ಘಾತುಕರನ್ನು ಯಮಾಲಯದಲ್ಲಿ—ವಿವಿಧ ಜಂತುಗಳು ತುಂಬಿರುವ ಕೂಪಗಳಲ್ಲಿ ಕೆಡವಿ ಕೊಲಿಸುವರಂತೆ.

ರಾಸಾಯನಿಕನ ಬೆಂಬಲವಿದ್ದರೆ—ಸಾಸಿವೆ ಗಾಳಿ (Mustard Gas) ಯಂಥ ಭಯಂಕರ ಗಾಳಿಯಲ್ಲಿ ಸಾವಿರಾರು ಜನರನ್ನು ಉರುಳಿಸಿ, ಅದಕ್ಕೂ ಹೆಚ್ಚಿನ ವೇದನೆಯನ್ನು ಉಂಟುಮಾಡಬಹುದು. ಇದರಿಂದ—ಹಾವು, ಚೇರೆ, ಕನ್ನಡಿ ಮೊದಲಾದುವುಗಳನ್ನು ಸಾಕಲು—ಇಲಿ, ಹೆಗ್ಗಣಗಳನ್ನು ಹುಡುಕಲು ಹೋಗುವ ತೊಂದರೆಯಾದರೂ ತಪ್ಪೀತು..

ಇವನಿಂದ ಯಮನಿಗೆ ಮಾತ್ರವಲ್ಲ, ಕ್ಷೀರಸಾಗರಶಾಹಿಯಾದ ವಿಷ್ಣುವಿಗೂ ಸ್ವಲ್ಪ ಸಹಾಯವಿದೆ. ಈಗೀಗ ಕಡಲು ಉಪ್ಪಾಗುತ್ತ ಬಂದು, ಆ ಉಪ್ಪು ನೀರಿನ ಸಂಪರ್ಕದಿಂದ ಕ್ಷೀರಸಾಗರವು ಕೆಟ್ಟುಹೋಗಿರಬೇಕೆಂಬ ಅನುಮಾನವಿದೆ. ರಾಸಾಯನಿಕನ ಬಲದಿಂದ—ಎಮ್ಮೆ ದನಗಳ ಹಾಲನ್ನು ಸಾಗರದಲ್ಲಿ ತುಂಬಿಸಿಕೊಂಡಿದ್ದು—ಅದು ನಾರದಂತೆ, ಕೆಡದಂತೆ ಎಚ್ಚರ ನೋಡಿಕೊಂಡಿರುವ ಬದಲು ರಾಸಾಯನಿಕ ಸೃಷ್ಟಿಯಿಂದ—ಗರಗಸದ ಹುಡಿ, ಹುಲ್ಲುಗಳಿಂದಲೇ ಹಾಲನ್ನು ತಯಾರಿಸಿ (ಹಾಲೇ ಬೇಕೆಂದಿದ್ದರೆ) ಈ ಯಾವತ್ತು ಅಪಾಯಗಳಿಂದ ದೂರಾಗಬಹುದು.

ಅಂತು ರಾಸಾಯನ ಪಂಡಿತನು ತನ್ನ ಹೊಸ ಪಾಕಶಾಸ್ತ್ರದಿಂದ, ನಳಪಾಕ, ಯಮಪಾಕಗಳ ವಿಧಾನಗಳಿಗೆ ಬಲುದೊಡ್ಡ ಸ್ಪರ್ಧಿಯಾಗಿ ನಿಂದಿರುತ್ತಾನೆ. ಈಗೀಗ ಅವನ ಯೋಚನೆಯು ನಿರ್ಜೀವ ವಸ್ತುಗಳಿಂದ (ಧಾತುಗಳಿಂದ) ಸಜೀವ ಪ್ರಾಣಿಗಳ ತಯಾರಿಯ ಕಡೆಗೆ ಹೋಗಿದೆ. ಇದನ್ನು ಆಕ್ಷೇಪಿಸಿದವರೊಬ್ಬರೂ ಕಾಣೆ. ಒಂದು ದಿನ ಅವನು ಈ ಕಾರ್ಯದಲ್ಲಿ ಯಶಸ್ಸುಗೊಂಡರೆ—ಬ್ರಹ್ಮಾಂಡದಲ್ಲಿ ಇವನ ಸೃಷ್ಟಿಗಳೇ ಅಧಿಕವಾಗಿ, ಬ್ರಹ್ಮನಿಗೆ ಜಾಗವಿಲ್ಲವಾದೀತೆಂಬ ಭೀತಿಯು ಪರಮಾಧಿಕವಾಗಿದೆ.

ರಸಾಯನ ಪಂಡಿತನು—ಗರಗಸದ ಹುಡಿ, ತಾರೆಣ್ಣೆ ಮೊದಲಾದುವುಗಳಲ್ಲಿ ತನ್ನ ಬುದ್ಧಿಶಕ್ತಿಯನ್ನು ಉಪಯೋಗಿಸುತ್ತಿದ್ದರ ಬದಲು, ಗವೆ, ಸಕ್ಕರೆ, ಕೇಸರಿ, ತುಪ್ಪ, ಹಾಲು—ಗಳಂತಹ ಅಮೋಘ ವಸ್ತುಗಳೊಡನೆ ತನ್ನ ಪಾಂಡಿತ್ಯವನ್ನು ತೋರಿಸಿದ್ದರೆ—ಅವನ ಮಕ್ಕಳು ಮರಿಗಳಿಗಾದರೂ, ಕಾಫಿ ಹೊಟೆಲುಗಳಲ್ಲೋ, ಮಠಗಳಲ್ಲೋ ಯಾತ್ರಿಯಿಂದ ಉದ್ಯೋಗವು ದೊರೆಯುತ್ತಿತ್ತು. ಈ ಕೆಲಸವು ಅವನು ತೊಡಗಿದಂದಿನಿಂದ ಇದ್ದವರ ಉದ್ಯೋಗವೇ ಹೋಗುತ್ತಿದೆ.

[ಸಶೇಷ]

* ದಂಡದ ಆಲಯದಲ್ಲಿ, ದಂಡನೆಯ ಆಲಯ. ಇದಕ್ಕೆ ನಷ್ಟ ಸಂಧಿ ಎನ್ನುತ್ತಾರೆ.

ಮೇರಿ ಡ್ರೆಸ್ಲರಳ ಮರಣ.

ಮೆಟ್ರೋ ಗೋಲ್ಡ್‌ವಿನ್ ಮೇಯರ್ಸ್ ಕಂಪೆನಿಯವರ ಅನೇಕ ಚಿತ್ರಗಳಲ್ಲಿ ಅಭಿನಯಿಸಿದ ಪ್ರಖ್ಯಾತ ಸಿನೆಮ ನಟಿ ಮೇರಿ ಡ್ರೆಸ್ಲರಳು ಇದೇ ತಾ. ೨೯ರಲ್ಲಿ ಕೆಲಿಫೋರ್ನಿಯದ ಸಾಂತಾ ಬಾರ್ಬರಾ ಎಂಬಲ್ಲಿ ಕಾಲವಾದಳು. ಡ್ರೆಸ್ಲರಳ ಜನನ ೧೮೬೯ರಲ್ಲಿ—ಕೆನಡದ ಕೋಬರ್ಗ್ ಎಂಬಲ್ಲಾಯಿತು. ಇವಳು ಪ್ರಹಸನಗಳಲ್ಲಿ ಪಾತ್ರವಹಿಸುತ್ತಿದ್ದಳು. ಮೊದಲು ಚಾರ್ಲಿ ಚಾಪ್ಲಿನನೊಂದಿಗೆ "ಟಿಲ್ಲಿಸ್ ಪಂಕ್ಚರ್ಡ್ ರೊಮಾನ್ಸ್" ಎಂಬುದರಲ್ಲಿ ಅಭಿನಯಿಸಿ, ಅಲ್ಲಿಂದ ಹೆಸರು ಹೊಂದಿ, ಮೆಟ್ರೋ ಕಂಪೆನಿಗೆ ಸೇರಿದಳು. "ಎಮ್ಮಾ" "ಕೊಟ್ ಶಿಪ್ ಮೆಂಟ್" "ಮಿನ್ ಎಂಡ್ ಬಿಲ್" ಮೊದಲಾದ ಚಿತ್ರಗಳಲ್ಲಿ ಪ್ರಾಮುಖ್ಯ ಪಾತ್ರವನ್ನು ವಹಿಸಿದ್ದಳು.

ಬೊಂಬಾಯಿಯ ವಸ್ತುಪ್ರದರ್ಶನಾಲಯದಲ್ಲಿ ಕಳವು.

ಬೊಂಬಾಯಿಯ ಪ್ರಿನ್ಸ್ ಒಫ್ ವೇಲ್ಸ್ ಮ್ಯೂಝಿಯಮಿನಿಂದ, ಬೌದ್ಧ ಕಾಲೀನ ಚಾರಿತ್ರಿಕ ಮಹತ್ವದ ಕೆಲವು ವಸ್ತುಗಳು ಕಳವಾಗಿವೆ. ಇವುಗಳಲ್ಲಿ ಕೆಲವು ಹಳೆ ನಾಣ್ಯಗಳು ಮಾತ್ರ ಓರ್ವ ಸರಾಫನಲ್ಲಿ ದೊರೆತುವು. ಇನ್ನು, ಒಂದು ಉಂಗುರ, ಸ್ವರ್ಣ ಪತ್ರ, ಇತ್ಯಾದಿ ಕೆಲವಸ್ತುಗಳು ಕರಗಿಸಲ್ಪಟ್ಟಿವೆಯಂತೆ. ಇಬ್ಬರ ದಸ್ತಗಿರಿಯಾಗಿದೆ.

NOTES
ನೋಟಗಳು

ಹಿಂದೂದೇಶದಲ್ಲಿ ಕೆಲವೊಂದು ಮಾಲಧಿಕಾರಿಗಳು ತೆರೆದ ಸಂಘ, ಕಟ್ಟಡ, ರಸ್ತೆಗಳಿಗೆ ಅವರವರ ಹೆಸರು ಬರುವುದಿದೆ. ಹೀಗೆ ವೈಸರಾಯರ, ಗವರ್ನರರ ಹೆಸರುಗಳ ಸಂಘಗಳೂ, ರಸ್ತೆಗಳೂ, ಕಟ್ಟಡಗಳೂ, ಗ್ರಂಥಾಲಯಗಳೂ, ಇತ್ಯಾದ [illegible]ವಿವೆ.

* * *

ನಮ್ಮ ರಾಷ್ಟ್ರೀಯ ಬಾಲಿಕಾ ಪಾಠಶಾಲೆಯೂ ಈಗ ಹೆಸರನ್ನು ಬದಲಾಯಿಸಿತು. ಆದರೆ, ಭೇದವಿಷ್ಟೇ:—ಸಂಘ ರಸ್ತೆ—ಕಟ್ಟಡಗಳ ಹೆಸರುಗಳು ಅವುಗಳನ್ನು ತೆರೆದವರ ಸಮಕ್ಷಮವೇ ನಾಮಕರಣ ಮಾಡಲ್ಪಟ್ಟವು. ರಾಷ್ಟ್ರೀಯ ಬಾಲಿಕಾ ಪಾಠಶಾಲೆಯು, ಶಾಲೆಯ ಶಂಕುಸ್ಥಾಪನೆ ಮಾಡಿದ ಮಾನಿಸಿಯು ಕಾಲವಾದನಂತರ—ಎರಡನೆ ಬಾರಿ ನಾಮಕರಣ ಮಾಡಲ್ಪಟ್ಟಿತು.

* * *

ಹದಿನಾರು ವರುಷಗಳ ನಂತರವೇ ಈ ಎರಡನೆ ಹೆಸರು ಇಡಲ್ಪಾಯಿತಾದ ಕಾರಣ, ಇನ್ನು ಮೊದಲನೆ ಹೆಸರನ್ನು ಜನರು ಮರೆತು, ಇನ್ನು ಹದಿನಾರು ವರ್ಷಗಳ (ಅಥವಾ ಮೂರನೆ ಹೆಸರೊಂದು ಬರುವ) ತನಕ ಆ ಎರಡನೆ ಹೆಸರಿನಿಂದಲೇ ಸಂಬೋಧಿಸಬಹುದೆಂದು ತೋರುತ್ತದೆ.

* * *

ಆದರೆ, ಹೆಸರನ್ನು ಬದಲಾಯಿಸುವುದೊಂದು ಸುಧಾರಣೆಯೆನಿಸಿದರೂ,—ಉಳಿದೆಲ್ಲ ಶಾಲೆಗಳು ತಂತಮ್ಮ ಶಂಕುಸ್ಥಾಪಕರ ಹೆಸರನ್ನು ನೆನಪಿಗೆ ತಂದು ಶಾಲೆಗಳಿಗೆ ಇರಿಸಿದರೆ, ಜನರಿಗೆ ಹೆಸರುಗಳನ್ನು ಸ್ಮರಣೆಯಲ್ಲಿಟ್ಟುಕೊಳ್ಳುವ ಗೊಂದಲವೊಂದು ತೋರೀತೆಂದು ಮಾತ್ರ ಅಂಜಿಕೆ.

* * *

ರಸ್ತೆಗಳನ್ನು ದುರುಸ್ತಿಮಾಡುವಾಗ ಹಾಕುವ ಹೊಯ್ಗೆಯಲ್ಲಿ ಕುಪ್ಪಿಯ ಚೂರುಗಳಿವೆಯೆಂದು ಅನೇಕರ ಅಂಬೋಣ. ಪಾದರಕ್ಷೆಯಿಲ್ಲದವರು ಆ ಚೂರುಗಳನ್ನು ಬಿಟ್ಟು ಉಳಿದ ಸ್ಥಳದಲ್ಲಿ ಕಾಲಿಟ್ಟು ಹೋಗಬೇಕೆಂದು ನಮ್ಮ ಸಲಹೆ.

* * *

ಉರ್ವದ ಇಗರ್ಜಿಯಲ್ಲಿ ಅದೊಂದು ಸಂದರ್ಭದಲ್ಲಿ, ಗುರುಗಳು ಶಾಂತತಾಭಂಗವಾಗದಂತೆ ಪೋಲೀಸ್ ಸಹಾಯವನ್ನು ಕೋರಿದರೆಂದು ಸುದ್ದಿ. ಪಟ್ಟೈರಿಗಳನ್ನು ಜಯಿಸಿದ ಗುರುಗಳನ್ನು 'ಪ್ಯಾರಿಶನರು'ಗಳು ಅಷ್ಟು ಕೆಣಕಿದರೇ? —

* * *

ದಯಾಸ್ವಭಾವ, ಕ್ಷಮಾಗುಣ, ವರ್ಚಸ್ಸುಗಳು ಶಾಂತಿಭಂಗವಾಗದಂತೆ ಸಾಧಿಸಲಾರವಾದರೆ,—ಯಾರಾದರೊಬ್ಬರು ಉಪವಾಸ ದೀಕ್ಷೆಯ ಕಷ್ಟವನ್ನಾಚರಿಸದೆ ಸುಲಭವಾಗಿ ಪೋಲೀಸರನ್ನು ಕರೆಸಿ ಶಾಂತಿಯನ್ನು ಕಾಪಾಡಬಹುದು. ಇದನ್ನು ಗಾಂಧೀಜೀಯವರೂ, ಡಾ| ಕಿಚಲೂಯವರೂ ತಿಳಿದಂತೆ ತೋರುವುದಿಲ್ಲ.

* * *

'ಕೊಬ್ಬನ್ನು ಕರಗಿಸಲಿಕ್ಕಾಗಿರಬೇಕು!'—ಎಂದು,—ಡಾ| ಕಿಚಲೂಯವರ ಉಪವಾಸದ ಕುರಿತು,—ತಪ್ಪದೆ ದಿನಕ್ಕೆ ಮೂರೂಟಗಳನ್ನು ಮಾಡುತ್ತಿರುವ ಸಂಪಾದಕರುಳ್ಳ ಆಂಗ್ಲ ಪತ್ರಿಕೆಯೊಂದರ ಟೀಕೆ. ಉಪವಾಸದಿಂದ ಕೊಬ್ಬು ಮಾತ್ರ ಕರುಗುವುದೆಂಬುದನ್ನು ತಿಳಿದವರು ಊಟ ಬಿಡಲೇಬಾರದೆಂದು ಸೂಚನೆ.

* * *

ಹಗಲು ಘಂಟೆ ೪||ಗೆ ಬಾವುಟಗುಡ್ಡೆಯಲ್ಲಿ ನೇಣು ಹಾಕಿಕೊಂಡು ಒಂದು ಆತ್ಮಹತ್ಯೆ! ನೇಣು ಹಾಕಿಕೊಂಡ ಮೇಲೆ ನೋಡಿದವರು ಸ್ವಾಭಾವಿಕವಾಗಿ ಹೆಚ್ಚು ಮಂದಿ. ಇಂತಹ ಆತ್ಮಹತ್ಯಕ್ಕೆ ಆ ನೇಣಿನ ಹಗ್ಗ ಹೊರತು ಮತ್ತಾರು ಹೊಣೆ?

* * *

ರಸ್ತೆಗಳಲ್ಲಿನ ಗೋಳಿಮರಗಳನ್ನು ಮುನಿಸಿಪಾಲಿಟಿಯವರು ಕಡಿದು, ನೆರಳಿಗೆ ಒಂದೆರಡು ಮರಗಳಿರಲೆಂದು ಆ ಗುಡ್ಡದಲ್ಲಿ ಅವುಗಳನ್ನು ಇರಗೊಟ್ಟರೆ, ಕೃತಜ್ಞತೆಯಿಲ್ಲದೆ ಹೀಗೆ ದುರುಪಯೋಗ ಮಾಡಿಕೊಳ್ಳುವವರೂ ಇರುವರೇ? ಇನ್ನು "ಮರ ಕಡಿಯುವವನೇ, ಆ ಮರವನ್ನು ಉಳಿಸು!" ಎನ್ನುವುದೊಳ್ಳೆಯದಲ್ಲವೇ?

* * *

ಜವಾಹರಲಾಲರು ಜೈಲು ವಠಾರದೊಳಗೆ ಎರಡು ದಿನಗಳಿಗೊಮ್ಮೆ ಮಾತ್ರ ತಿರುಗಾಡುತ್ತಿರಬಹುದೆಂದು ಅಧಿಕಾರಿಗಳ 'ವರದಾನ'! ಇದೊಂದು ದಯೆ. ಆ ತಿರುಗಾಟದ ನಡುವಣ ದಿನಗಳಲ್ಲಿ ಓಡುತ್ತಿರಬೇಕೆಂದು ವಿಧಿಸಿದುದಿಲ್ಲ. ಇದೂ ಒಂದು ದಯೆ. ಆದರೆ, ತಿರುಗಾಡಬಾರದ ಆ ಅಪಾಯಕರ ದಿನ ನಾವುದು?

ಮಾಲವೀಯ-ಅಣೆಯವರ ರಾಜೀನಾಮೆ.

ಕಮ್ಯೂನಲ್ ಎವಾರ್ಡಿನ ಗೊಂದಲ.

"ಕಮ್ಯೂನಲ್ ಎವಾರ್ಡನ್ನು ಕಾಂಗ್ರೆಸ್ಸು ಸ್ವೀಕರಿಸಲೂ ಇಲ್ಲ; ತಿರಸ್ಕರಿಸಲೂ ಇಲ್ಲ" ಎಂಬ ಅಸ್ಪಷ್ಟವಾದ ನಿರ್ಧಾರವನ್ನು ಕಾಂಗ್ರೆಸ್ ಕಮಿಟಿಯು ತನ್ನ ಅಪೇಕ್ಷೆಯಂತೆ ಬದಲಾಯಿಸದ ಕಾರಣ, ಪಂಡಿತ ಮಾಲವೀಯರು ಕಾಂಗ್ರೆಸ್ ಪಾರ್ಲಿಮೆಂಟರಿ ಬೋರ್ಡಿನ ಅಧ್ಯಕ್ಷ ಸ್ಥಾನಕ್ಕೆ ರಾಜೀನಾಮೆ ಕೊಟ್ಟಿರುವರು. ಅಣೆಯವರೂ ರಾಜೀನಾಮೆಕೊಟ್ಟು,—ಆದರೆ ಕಾಂಗ್ರೆಸ್ಸಿನ ಕಾರ್ಯಕಲಾಪಗಳಲ್ಲಿ, ಕಾಂಗ್ರೆಸ್ ಕೆಲಸಗಾರನಾಗಿ ನನ್ನ ಸಹಕಾರವಿದ್ದೇ ಇರುವುದು' ಎಂದು ತಿಳಿಸಿರುವರು. ಇವರ ರಾಜೀನಾಮೆಯನ್ನು ಕಾಂಗ್ರೆಸ್ ಕಾರ್ಯಕಾರಿ ಕಮಿಟಿಯು ನಿರ್ವಾಹವಿಲ್ಲದೆ ಅಂಗೀಕರಿಸಿದೆಯೆಂಬ ಪ್ರಕಟಣೆ ಹೊರಟಿದೆ. ಪಂಡಿತಜಿಯವರನ್ನು ಇತರ ಸದಸ್ಯರು ಸಮಾಧಾನಗೊಳಿಸಲೆಳಸಿದುದು ನಿಷ್ಫಲವಾಯಿತು. ಕಮ್ಯೂನಲ್ ಎವಾರ್ಡನ್ನು ಸ್ಪಷ್ಟವಾಗಿ ತಿರಸ್ಕರಿಸಬೇಕೆಂದೇ ಮಾಲವೀಯರ ಹಟವಿತ್ತು.

ಪಂಡಿತ ಮಾಲವೀಯರ ಸ್ಥಾನದಲ್ಲಿ ಕಾಂಗ್ರೆಸ್ ಪಾರ್ಲಿಮೆಂಟರಿ ಬೋರ್ಡಿನ ಅಧ್ಯಕ್ಷರಾಗಿ ಅಬ್ದುಲ್ ಕಲಂ ಆಜಾದರನ್ನು ಚುನಾಯಿಸಲಾಗಿದೆ.

ಕಾಂಗ್ರೆಸ್ಸಿಗರವಾಗಿ ಎಸೆಂಬ್ಲಿಗೆ ಪ್ರವೇಶ ಪಡೆದ ನಂತರ, ಕಮ್ಯೂನಲ್ ಎವಾರ್ಡಿನ ಪ್ರಶ್ನೆ ಬಂದಾಗ ಅದನ್ನು ತಮ್ಮ ಆತ್ಮಕ್ಕೆ ಸರಿದೋರಿದಂತೆ ಟೀಕಿಸಿ ವಿರೋಧಿಸಬಹುದೆಂಬೊಂದು ಚಿಕಿತ್ಸೆಯನ್ನು ಸತ್ಯಮೂರ್ತಿಯವರು ಸೂಚಿಸಿದ್ದರು. ಇದಕ್ಕೆ ಗಾಂಧೀಜಿಯವರ ಒಪ್ಪಿಗೆಯೂ ಇತ್ತು.

ಗಾಂಧೀಜಿ—ಪಂಡಿತಜೀಯರಿಗೆ ಇಷ್ಟೊಂದು ತೀವ್ರ ಅಭಿಪ್ರಾಯ ಭೇದವು ವ್ಯಕ್ತವಾಗುವುದು ಇದೇ ಮೊದಲನೆ ಬಾರಿ.

ಮಾಲವೀಯರ ರಾಜಿನಾಮೆಯಿಂದ ಕಾಂಗ್ರೆಸ್ ಮೆಂಬರರಿಗೆಲ್ಲ ಅಸಮಾಧಾನವಿದೆ.

ಎಸೆಂಬ್ಲಿ ಚುನಾವಣೆಗೆ ಉಮೇದ್ವಾರರು

ಕಾಂಗ್ರೆಸ್ ಪಾರ್ಲಿಮೆಂಟರಿ ಬೋರ್ಡಿನ ಚುನಾವಣಾ ಸಮಿತಿಯು ಈ ಕೆಳಗಿನವರನ್ನು ಚುನಾಯಿಸಿದೆ:—

ಗಂಜಾಮ್—ವಿಶಾಖಪಟ್ಟಣಗಳ ಪರವಾಗಿ ಶ್ರೀ ವಿ. ವಿ. ಗಿರಿ; ಪೂರ್ವ ಗೋದಾವರಿ—ಪಶ್ಚಿಮ ಗೋದಾವರಿ ಮತ್ತು ಕೃಷ್ಣಾ ಜಿಲ್ಲೆ—ಶ್ರೀ ಕೆ. ನಾಗೇಶ್ವರರಾವ್ ಪಂತಲು; ನೆಲ್ಲೂರು—ಗುಂಟೂರು—ಶ್ರೀ ಎನ್. ಜಿ. ರಂಗ; ಮದ್ರಾಸ್ ನಗರ—ಶ್ರೀ ಎಸ್. ಸತ್ಯಮೂರ್ತಿ; ಚೆಂಗಲ್ಪಟ್ಟು—ದಕ್ಷಿಣ ಅರ್ಕಾಡು—ಶ್ರೀ ಸಿ. ಎನ್. ಮುತ್ತುರಂಗ ಮೊದಲಿಯಾರ್; ತ್ರಿಚಿನಾಪಳ್ಳಿ—ತಂಜಾವೂರು—ಡಾ| ಟಿ. ಎಸ್. ಎಸ್. ಎಸ್. ರಾಜನ್; ಕೊಯಮುತ್ತೂರು:—ಶ್ರೀ ಅವನಾಶಿಲಿಂಗಮ್ ಚೆಟ್ಟಿಯಾರ್; ಮಲಬಾರು—ದಕ್ಷಿಣ ಕನ್ನಡ—ಮಿ| ಸಾಮುವೇಲ್ ಆರೋನ್. ಮದ್ರಾಸು (ಇಂಡಿಯನ್ ಕಾಮರ್ಸ್) ಶ್ರೀ ಸಾಮಿ ವೆಂಕಟಾಚಲಂ ಚೆಟ್ಟಿ. ಮುಂಬಾಯಿ ನಗರ:—ಶ್ರೀ ಕೆ. ಎಫ್. ನರಿಮನ್ ಮತ್ತು ಡಾ| ದೇಶಮುಖ್. ಗುಜರಾಥ:—ಭುಲಾಭಾಯಿ ದೇಸಾಯಿ. ಉತ್ತರ ಕನ್ನಡ:—ಶ್ರೀ ಎಸ್. ಕೆ. ಹೊಸಮನಿ, ಪ್ಲೀಡರ್. ಮಹಾರಾಷ್ಟ್ರ:—ಶ್ರೀ ಎನ್. ವಿ. ಗಾಡ್ಗಿಲ್ ಕೇಶವರಾವ್ ಜೋಶಿ, ಮಹಾರಾಷ್ಟ್ರ ಮುಸ್ಲಿಂ ಸೆಂಟ್ರಲ್ ಡಿವಿಜನ್: ಡಾ| ಖಾಜಿ ಅಬ್ದುಲ್ ಹಮೀದ್.

ಮಹಾತ್ಮರ ಉಪವಾಸ ಸಪ್ತಾಹ.

ಮಹಾತ್ಮಾಜಿಯವರ ಉಪವಾಸವು ಇದೇ ತಾ. ೭ರಿಂದ ೧೪ರ ವರೆಗೆ ನಡೆಯುವುದು. ಮಹಾತ್ಮಾಜಿಯವರೊಂದು ಪ್ರಕಟಣೆ ಹೊರಡಿಸಿರುವರು—

"ನನ್ನ ಉಪವಾಸದ ಸಮಯದಲ್ಲಿ ಯಾರೂ ವಾರ್ಧಕ್ಕೆ ಬರುವ ಶ್ರಮ ವಹಿಸಬಾರದು. ಆ ದಿನಗಳಲ್ಲಿ ನಿಮ್ಮ ಸಹಾನುಭೂತಿಯನ್ನು ತೋರುವ ಉತ್ತಮ ಸಾಧನವೆಂದರೆ, ಹರಿಜನರನ್ನು ಶಕ್ಯವಿದ್ದಷ್ಟು ಸ್ನೇಹ ಭಾವದಿಂದ ಕಂಡು ಸಹಾಯಮಾಡುವುದು. ಅವರು ತಮ್ಮ ಎದುರಾಳಿಗಳನ್ನು ದಯಾಭಾವದಿಂದಲೇ ಜಯಿಸಬಹುದು. ತಪ್ಪುಮಾಡಿ, ಧೈರ್ಯದಿಂದ ಅದನ್ನೊಪ್ಪಿಕೊಂಡವರು ಇನ್ನುಮುಂದೆ ಅಂತಹ ತಪ್ಪನ್ನು ಮಾಡದಂತೆ ಪ್ರತಿಜ್ಞೆಮಾಡಿಕೊಂಡು ತಮ್ಮ ಕರ್ತವ್ಯಭಾಗವನ್ನು ಸಲ್ಲಿಸಲಿ, ಉಪವಾಸದಿಂದಲ್ಲ."

ಹಿಂದೂ ಬಾಲಕ ಬಾಲಕಿಯರ ಅಪಹಾರ.

ಹಿಂದೂ ಮಹಾಸಭೆಯ ನಿರ್ಧಾರ.

ಹಿಂದೂ ಬಾಲಕರನ್ನೂ ಬಾಲಿಕೆಯರನ್ನೂ ಅನ್ಯಮತೀಯರು ಅಪಹರಿಸಿಕೊಂಡು ಹೋಗುವ ದುರ್ಘಟನೆಗಳು ಇತ್ತೀಚೆಗೆ ಹೆಚ್ಚುತ್ತಿವೆ. ಈ ವಿಷಯವಾಗಿ ಹಿಂದೂ ಮಹಾಸಭೆಯು ಸಭೆಯೊಂದು ಸೇರಿ ಈ ಕೆಳಗಿನ ಠರಾವುಗಳನ್ನು ಮಾಡಿದೆ. (೧) ಹಿಂದೂ ಬಾಲಕ ಬಾಲಕಿಯರ ಅಪಹಾರಗಳ ವಿಷಯವಾಗಿ ಪ್ರತಿಯೊಂದು ನಗರದಲ್ಲಿ ಹಿಂದೂಗಳು ಸಭೆ ಸೇರಿ ಅವುಗಳನ್ನು ತೀವ್ರ ಪ್ರತಿಭಟಿಸಬೇಕು. (೨) ಹಿಂದೂಗಳು ಶಾರೀರಿಕ ವ್ಯಾಯಾಮವನ್ನು ಕಡ್ಡಾಯವಾಗಿ ಮಾಡಿಕೊಳ್ಳಬೇಕು. (೩) ಸರಕಾರದವರು ಅನ್ಯಾಯಾಚಾರಗಳನ್ನು ತಡೆಯಲು ತೀಕ್ಷ್ಣ ಕಾನೂನುಗಳನ್ನು ರಚಿಸಬೇಕು. (೪) "ಸ್ತ್ರೀಯರ ರಕ್ಷಣಾನಿಧಿ" ಎಂಬ ನಿಧಿಯೊಂದನ್ನು ಹಿಂದೂಗಳು ಹಿಂದೂ ಮಹಾಸಭೆಯ ನೇತೃತ್ವದಲ್ಲಿ ರಚಿಸಬೇಕು.

ಕಮ್ಯೂನಿಸ್ಟ್ ಚಳವಳಿ ಮೇಲೆ ಸರಕಾರದ ಗದೆ.

ಇಂಡಿಯದೊಳಗಿನ ಕಮ್ಯೂನಿಸ್ಟ್ ಪಕ್ಷವೂ ಅದರ ಹಲವು ಶಾಖೆಗಳೂ ಬೇಕಾಯಿದೆಶೀರವೆಂದು ಇಂಡಿಯಾ ದೊರೆತನವು ಸಾರಿದೆ.

ಮಹಾತ್ಮಾಗಾಂಧಿ ವಿದ್ಯಾರ್ಥಿವೇತನ.

ಬ್ರಿಟಿಷ್ ಗಿಯಾನದಲ್ಲಿ ನೆಲೆಸಿರುವ ಶ್ರೀ ಎ. ಇ. ಶ್ರೀರಾಮ ಎಂಬ ಹಿಂದೀ ಪ್ರಮುಖರೊಬ್ಬರು, ೫೦೦ ಪವನಿನ "ಮಹಾತ್ಮಾ ಗಾಂಧಿ ವಿದ್ಯಾರ್ಥಿವೇತನ" ಎಂಬ ಹೆಸರಿನ ವೇತನವನ್ನು ಇರಿಸಿರುವರು. ಇದು ಅಲ್ಲಿಯ ಹಿಂದೀ ವಿದ್ಯಾರ್ಥಿ—ವಿದ್ಯಾರ್ಥಿನಿಗಳಿಗೆ ಮಾತ್ರ ದೊರೆವುದು.

ಸೈನ್ಯಸಂಸರಣಾ ಮಸೂದೆ!

ಈ ಮಸೂದೆಯನ್ನು ಸಿಲೆಕ್ಟ್ ಕಮಿಟಿಯು ಅನುಮೋದಿಸಿದೆ.

ಕಾಂಗ್ರೆಸ್ ಕಮಿಟಿಯವರ ವಿನಂತಿ

ಎಸೆಂಬ್ಲಿ ಚುನಾವಣೆಗೆ ಉಮೇದ್ವಾರರನ್ನಾರಿಸಿ ಕಾಂಗ್ರೆಸ್ ಕಾರ್ಯಕಾರಿ ಸಮಿತಿಯು, ವೋಟುದಾರರೆಲ್ಲ ಅವರಿಗೇ ತಮ್ಮ ವೋಟುಗಳನ್ನಿತ್ತು ಚುನಾಯಿಸಬೇಕೆಂದು ವಿನಂತಿಸುತ್ತದೆ. ಎಸೆಂಬ್ಲಿಯಲ್ಲಿ ತಾನು ಚುನಾಯಿಸಿದ ಮೆಂಬರರ ಮೂಲಕ ಸಾಧಿಸುವ ಕಾರ್ಯಗಳಾವುವೆಂದೂ ಪುನಃ ಸ್ಪಷ್ಟೀಕರಿಸಲಾಗಿದೆ. ಮುಖ್ಯವಾಗಿ ಶ್ವೇತಪತ್ರದ ತಿರಸ್ಕಾರ; ದಬ್ಬಾಳಿಕೆಯ ಕಾನೂನುಗಳನ್ನು ತೆಗೆದುಹಾಕಿಸಲು ಯತ್ನ.

ಮಧ್ಯಪ್ರಾಂತ್ಯದಲ್ಲಿ ವಾಂತಿಭೇದಿ.

ಕಳೆದ ಜುಲೈ ತಾ. ೨೦ಕ್ಕೆ ಅಂತ್ಯವಾಗುವ ಒಂದು ವಾರದಲ್ಲೇ ಮಧ್ಯಪ್ರಾಂತದಲ್ಲಿ ೧೫೩ ಜನರಿಗೆ ವಾಂತಿಭೇದಿ ತಗಲಿ, ೧೦೨ ಮರಣಗಳಾಗಿವೆ! ಜುಲೈ ತಿಂಗಳಲ್ಲಿ ಒಟ್ಟು ೪೦೮೮ ಮರಣಗಳು ವಾಂತಿಭೇದಿಯಿಂದಲೇ ಸಂಭವಿಸಿವೆ. ಬೇರೆ ಬೇರೆ ನಗರಗಳಿಂದ ಜಾಡ್ಯವು ನಾಗಪುರ, ಭಂಡಾರಾ, ಅಕೋಲಾ ಎಂಬಲ್ಲಿಗೂ ಹರಡಿದೆ. ರೈಪುರ—ಬಿಲಾಸಪುರಗಳಲ್ಲಿ ಹೆಚ್ಚುತ್ತಿದೆ.

ಪೋಲೆಂಡಿನ ನೆರೆ.

ಪೋಲೆಂಡಿನಲ್ಲಿ ೧೫೦೦ ಚದರ ಮೈಲುಗಳಷ್ಟು ಪ್ರದೇಶವು ಇಪ್ಪತ್ತು ಅಡಿ ನೀರಿನ ಕೆಳಗೆ ಮುಳುಗಿಯೇ ಇದೆ. ಸಾಂಡೋಮಿಯರ್ ಎಂಬಲ್ಲಿ ಸಾವಿರಾರು ಜನರು ಮನೆಮಾಡುಗಳಲ್ಲಿ ಕುಳಿತು ಒಂದೆರಡು ದಿನ ಕಳೆದರಂತೆ. ಮನೆಗಳು ಕುಸಿದುಬಿದ್ದು ಹಲವು ಮರಣಗಳಾಗಿವೆ. ಪೋಲೆಂಡಿನ ಚರಿತ್ರದಲ್ಲಿ ಅತಿ ಭಯಂಕರವಾದ ನೆರೆಯಿದೆಂದು ಹೇಳುವರು.

ಡಾ| ಕಿಚಲೂಯವರ ಉಪವಾಸ.

ಅಮೃತಸರದಲ್ಲಿ ಕಾಂಗ್ರೆಸ್ ಕಮಿಟಿ ಚುನಾವಣೆಗಳಲ್ಲಿ ಪಂಗಡಗಳೊಳಗೆ ವಿವಾದವೂ ಕಲಹವೂ ಉಂಟಾಯಿತೆಂದು ಮನನೊಂದು ಡಾ| ಕಿಚಲೂಯವರು ಏಳು ದಿನಗಳ ಉಪವಾಸವನ್ನಾರಂಭಿಸಿ ಮುಗಿಸಿದರು.

ಪಠಾಣನ ಹಟ.

ಗಡಿನಾಡಿನ ಪಠಾಣನೊಬ್ಬನು ಕಾಶಿಗೆ ಬಂದು, ಗಾಂಧಿಜಿಯವರ ದರ್ಶನಕ್ಕಾಗಿ ಕಾಯುತ್ತಿದ್ದಾನೆ. ಆತನು ಶಾ| ಭಾ| ಚಳವಳದಲ್ಲಿ ಭಾಗವಹಿಸಿ ಅನೇಕ ಬಾರಿ ಜೈಲುವಾಸವನ್ನನುಭವಿಸಿದವನಂತೆ. ಈಗ, ತನಗೆ ಅನ್ನಕ್ಕೆ ಗತಿಯಿಲ್ಲವೆಂದೂ ಕಾಂಗ್ರೆಸಿನವರು ಜೀವನೋಪಾಯವನ್ನು ಕಲ್ಪಿಸಿಕೊಡಬೇಕೆಂದೂ ಈತನ ಹಟ. ಕಾಂಗ್ರೆಸ್ ಅಧ್ಯಕ್ಷರು ಕಾಶೀ ವಿದ್ಯಾಪೀಠದಿಂದ ಮೋಟಾರಿನಲ್ಲಿ ಹೊರಗೆ ಬರುತ್ತಿರುವಾಗ ಈತನು ಆ ಮೋಟಾರಿನಡಿಗೆ ಮಲಗಿದನು. ಅಧ್ಯಕ್ಷರು ಮೋಟಾರಿನಿಂದಿಳಿದು, ಸ್ವಲ್ಪ ಅಂತರವನ್ನು ಪಾದಚಾರಿಯಾಗಿ ದಾಟಿದರು. ಪಠಾಣನು ಇನ್ನು ಉಪವಾಸ ಹಿಡಿವೆನೆಂಬ ಬೆದರಿಕೆ ಹಾಕುತಿದ್ದಾನೆ.

ಮದ್ರಾಸಿಗೊಂದು ಹೊಸ ಫಿಲ್ಮ್ ಕಂಪೆನಿ.

ಮದರಾಸಿನಲ್ಲಿ "ವೇಲ್ ಪಿಕ್ಚರ್ಸ್ ಲಿಮಿಟೆಡ್" ಎಂಬ ಹೆಸರಿನ ಹೊಸ ಫಿಲ್ಮ್ ಕಂಪೆನಿಯುಂಟಾಗಿದೆ. ಇದರ ಪ್ರಾರಂಭೋತ್ಸವವನ್ನು ಮದ್ರಾಸ್ ಗವರ್ನರ ಸಾಹೇಬರು ಜರಗಿಸಿದರು.

ಗಾಂಧಿಜಿಯವರ ಕಾರ್ಯಕ್ರಮವೇನು?

ಏನೆಂದು ಇನ್ನೂ ಸ್ಪಷ್ಟೀಕರಣವಾಗಿಲ್ಲವಾದರೂ ಅವರು ಸದ್ಯ ಬೊಂಬಾಯಿಯ ಕಾಂಗ್ರೆಸ್ ಅಧಿವೇಶನವು ಮುಗಿವ ತನಕವಾದರೂ, ಕಾರಾಗೃಹವನ್ನು ಕಾಣುವಂತಹ ಯಾವ ಕಾರ್ಯಕ್ಕೂ ಕೈಹಚ್ಚುವಂತಿಲ್ಲವೆಂದು ನಂಬಲಾಗಿದೆ.

ಸಂಕ್ಷೇಪವಾರ್ತೆ.

ಮುಂಬಯಿ ಗವರ್ನರರಾದ ಬ್ರಬೋರ್ನ್ ಸಾಹೇಬರು ಬಂಗಲೋರಿಗೆ ದಯಮಾಡಿಸಿ, ಅಲ್ಲಿ ಹೊಸದಾಗಿ ಕಟ್ಟಿಸಿದ ಒಂದು ಸಂಘವನ್ನು ತೆರೆವ ಸಮಾರಂಭವನ್ನು ಜರಗಿಸಿದರು. ಸಂಘಕ್ಕೆ "ಬ್ರಬೋರ್ನ್ ಸಂಘ"ವೆಂದು ಹೆಸರು ಕೊಡಲಾಗಿದೆ.

ಡಾ| ಕಿಚಲೂಯವರ ಒಂದು ವಾರದ ಉಪವಾಸವು ಮುಗಿಯಿತಷ್ಟೆ. ಶರೀರದಲ್ಲಿ ೨೦ ರಾತ್ತು ಇಳಿದುದು ತೋರಿಬಂದಿದೆ.

ಆಸ್ಸಾಮಿನಲ್ಲಿ ಪುನಃ ನೆರೆ ಬಂದು ಹಾವಳಿ ಗಿಟ್ಟಿದೆ.

ಬಾಂಗಕೋಕ್ಕದಿಂದ ಕಲ್ಕತ್ತೆಗೆ ಕಳೆದವಾರ ಪುನಃ ೧೩೦೦೦ ಗೋಣಿ ಅಕ್ಕಿ ಬಂದಿದೆ. ಸಿಂಗಾಪುರದಿಂದ ೮೦೭ ಗೋಣಿ ಅಡಿಕೆಯೂ ಬಂದಿದೆ. ೭೩೫೦ ಗೋಣಿ ನೆಲಗಡಲೆ ಮಾತ್ರ ರಫ್ತಾಯಿತು.

ಕಲ್ಕತ್ತಾ ವಿಶ್ವವಿದ್ಯಾಲಯದ ವೈಸ್ ಛಾನ್ಸಲರರಾದ ಸರ್ ಸುಹ್ರವರ್ಧಿಯವರು ಸದ್ಯದಲ್ಲಿ ನಿವೃತ್ತಿ ಹೊಂದಲಿರುವರು. ವಿಶ್ವವಿದ್ಯಾಲಯದವರು ಅವರಿಗೆ "ಡಾಕ್ಟರ್ ಆಫ್ ಲಾಯನ್ಸ್" ಎಂಬ ಬಿರುದನ್ನು ಕೊಟ್ಟು ಸನ್ಮಾನಿಸಲಿರುವರು.

ಮಂಗಳೂರು.

ಹೊಸ ಕೋರ್ಟುರಸ್ತೆ ಮತ್ತು ಕೊಯಿಲೊ ಓಣಿ ಯಲ್ಲಿ ವಿದ್ಯುತ್ ಕಂಭಗಳನ್ನು ದುಂಡಗಿನ ದೀಪಗಳನ್ನು ನಿಲ್ಲಿಸುವ ಕುರಿತಾಗಿ ಮಂಗಳೂರು ಇಲೆಕ್ಟ್ರಿಕ್ ಕಂಪೆನಿ ಯವರು ಮುನಿಸಿಪಾಲಿಟಿಯನ್ನು ವಿಚಾರಿಸಿದಲ್ಲಿ—ಕಳೆದ ಮುನಿಸಿಪಲ್ ಸಭೆಯಲ್ಲಿ ಕಂಭಗಳನ್ನು ಅಗಲ ಕಿರಿದಾದ ರಸ್ತೆಗಳಲ್ಲಿ ಕಂಭಗಳ ಮೇಲಿಂದ ಹಾಸಬಾರದಾಗಿಯೂ, ಮುನಿಸಿಪಾಲಿಟಿಯ ಅಪ್ಪಣೆ ಪಡೆಯದೆ ಲೈನನ್ನು ಎಲ್ಲಿಯೂ ಮುಂದುವರಿಸಕೂಡದಾಗಿಯೂ ಕಂಪೆನಿಗೆ ತಿಳಿಸುವಂತೆ ನಿರ್ಮಾನವಾಯಿತು ಕಂಪೆನಿಯವರ ಕರಾರು ಮುನಿಸಿಪಾಲಿಟಿಯೊಡನೆ ಇನ್ನೂ ಪೂರ್ಣವಾದುದಿಲ್ಲ ವಂತೆ. ಅದು ಆಗದೆ ವಿದ್ಯುತ್ಪ್ರವಾಹದ ಪುರಜನೆಯನ್ನು ಹೆಚ್ಚಾಗಿ ಪಡಕೊಳ್ಳುವ ವಿಷಯವು ಗಮನಿಸೋಣಾಗ ವೆಂದೂ ನಿರ್ಣಯವಾಗಿದೆ.

ಮಂಗಳೂರು ಮುನಿಸಿಪಾಲಿಟಿಯವರ ಹೊಸ ನಿಬಂಧನೆಗಳ ಪ್ರಕಾರ ಮೋಟಾರ್ ಬಸ್ಸು, ಲೋರಿ, ಟೇಕ್ಸಿ ಇತ್ಯಾದಿ ಬಾಡಿಗೆ ಬಗ್ಗೆ ಇರುವ ಮೋಟಾರ್ ವಾಹನಗಳು ಈ ಕೆಳಗಿನ ರಸ್ತೆಗಳಲ್ಲಿ ಮಾತ್ರ ಓಡಾಡ ಬಹುದು:—ಕೂಳೂರು ಕಡೆಗೆ ಹೋಗುವ ಯಾ ಆ ಕಡೆ ಯಿಂದ ಬರುವ ವಾಹನಗಳಿಗೆ ಹಂಪನಕಟ್ಟಾ, ಕೋರ್ಟು ರಸ್ತೆ, ಕೊಯಿಲೊ ರಸ್ತೆ, ಉರ್ವ ಮೈದಾನು ರಸ್ತೆ. ಉಳ್ಳಾಲ ಕಡೆಗೆ—ಹಂಪನಕಟ್ಟೆ, ಕೋರ್ಟುರಸ್ತೆ, ಕೊಯಿಲೋ ರಸ್ತೆ, ಬಲ್ಮಠ ಮಾರ್ಗ, ಬಂಟ್ವಾಳ ಕಡೆಗೆ ಹಂಪನಕಟ್ಟೆ ಯಿಂದಾಗಿ ಕೋಮನ್‌ವೆಲ್ತ್ ಹೊಸೇರಿ ಫೆಕ್ಟರಿಯ ಉದ್ದಕ್ಕಿರುವ ರಸ್ತೆ, ಗುರುಪುರ ಕಡೆಗೆ—ಹಂಪನಕಟ್ಟೆ ಬೆಂದೂರು ರಸ್ತೆ, ಕದ್ರಿ ಬಡಾವಣೆ ರಸ್ತೆ (೨) ಹಂಪನ ಕಟ್ಟೆ, ಕೋರ್ಟು ರಸ್ತೆ, ಕೊಯಿಲೋರಸ್ತೆ ಮತ್ತು ಕದ್ರಿ ರಸ್ತೆ ಬಾಡಿಗೆಗೆ ಇರುವ ಯಾವ ಮೋಟಾರ್ ವಾಹನವೂ ಮೇಲೆ ನಮೂದಿಸಿದ ಈ ಮಾರ್ಗಗಳ ಹೊರತಾಗಿ ಮತ್ತಾವ ರಸ್ತೆಯಲ್ಲಾಗಲಿ ಓಣಿಯಲ್ಲಾಗಲಿ ಅಧಿಕಾರಿ ಗಳ ವಿಶೇಷ ಅಪ್ಪಣೆ ದೊರೆಯದೆ ಚಲಿಸಕೂಡದು. ಬಾಡಿಗೆಯ ಯಾವ ಲೋರಿಯೂ ಭವಂತಿ ಜೋಡು ಮಠ, ಬ್ರಾಹ್ಮ, ತ್ರಿಶೂಲೇಶ್ವರ ಗುಡಿಯ ಗದ್ದೆ ಹೊಸಗದ್ದೆ ಈ ರಸ್ತೆಗಳಲ್ಲಾಗಲಿ ಪೇಟೆ ಪ್ರಭುಗಳ ಯಂತಹ ಗಲ್ಲಿಗಳಿಂದಾಗಲಿ ೧೫ ಫೀಟಿಗಿಂತ ಕಡಿಮೆ ಅಗಲವುಳ್ಳ ಯಾವ ರಸ್ತೆಯಿಂದಾಗಲಿ ವಿಶೇಷ ಅಪ್ಪಣೆ ಯಿಲ್ಲದೆ ಓಡಾಡಕೂಡದು ಬಾಡಿಗೆ ಇಲ್ಲದ ಸಮಯ ದಲ್ಲಿ ರಸ್ತೆಗಳಲ್ಲಿ ನಿಲ್ಲಿಸಲ್ಪಡಬಾರದು.

ಮೋಟಾರ್ ವಾಹನಗಳ ಕುರಿತಾಗಿ ಮುನಿಸಿಪಾಲಿಟಿಯ ಹೊಸ ನಿಬಂಧನೆಗಳಲ್ಲಿ ಮೋಟಾರ್ ಬಸ್ಸುಗಳು ಪ್ರಯಾಣಿಕರಿಗೆ ವಿಧಿಸುವ ಮೋಟಾರ್ ಚಾರ್ಜುಗಳ ಈ ಕೆಳಗಿನಂತಿದೆ — ಮೊದಲಿನ ಮೈಲಿಗೆ ಎರಡಾಣೆ ವ ತ್ತು ಆ ಮೇಲಿನ ಅಂತರಕ್ಕೆ ಮೈಲಿಗೆ ಒಂದಾಣೆಗೆ ಮೀರಬಾರದು, ಮೂರರಿಂದ ಐದು ವಯಸ್ಸಿನೊಳಗಿನವರಿಗೆ ಅರ್ಧ ಚಾರ್ಜು ಮೂರು ವಯಸ್ಸಿನೊಳಗಿನ ಮಕ್ಕಳಿಗೆ ಚಾರ್ಜು ಇಲ್ಲ ಟೇಕ್ಸಿಗಳೂ (ಒಬ್ಬ ಡ್ರೈವರ ವಿರಹಿತ) ಮೈಲಿಗೆ ಎರಡಾಣೆಗೆ ಮೀರದಂತೆ ಚಾರ್ಜು ಮಾಡ ಬೇಕು.

ಈ ಮೇಲಿನ ಅಪ್ಪಣೆಯು ದೆಸೆಯಿಂದ ರಥಬೀದಿಯಲ್ಲಿನ ಕಂಬ್ಯಾಂಡ್ ಆಫೀಸಿನ ಮುಂದೆಯಾಗಲಿ, ಮತ್ತಾವ ಮೋಟಾರ್ ಕಂಪೆನಿ ಟಿಕೇಟು ಆಫೀಸುಗಳ ಮುಂದೆ ಯಾಗಲಿ ಬಸ್ಸುಗಳು ಇದೇ ತಾ ೧೧ರಿಂದ ನಿಲ್ಲುತ್ತಿಲ್ಲ ಕಂಬ್ಯಾಂಡ್ ಆಫೀಸಿನವರ ಬಸ್ಸುಗಳೆಲ್ಲಾ ಹಳೇ ಜೇಡಿ ಗುಡ್ಡೆಗೆ ಒಯ್ಯಲ್ಪಟ್ಟಿದೆ.

ಮಂಗಳೂರು ಮುನಿಸಿಪಾಲಿಟಿಯ ಒಂದು ಸಭೆಯು ತಾ ೩ನೇ ಸೋಮವಾರ ಸಂಜೆ ೫-೩೦ಕ್ಕೆ ಜರುಗುವುದು.

ಮಲಬಾರು, ನೀಲಗಿರಿ ಮತ್ತು ದಕ್ಷಿಣ ಕೆನರಾ ಕನ್ಸ್ಟಿಟ್ಯೂಯನ್ಸಿಯಿಂದ ಕೊಂಗ್ರೆಸ್ ಪರವಾಗಿ ಕಣ್ಣಾನೂರಿನ ಶ್ರೀ ಸಾಮುವೇಲ್ ಆರೋನ್, ಇವರು ಬರುವ ಎಸೆಂಬ್ಲಿ ಚುನಾವಣೆಗೆ ಉಮೇದ್ವಾರರೆಂದು ಕೇಳುತ್ತೇವೆ ಇವರು ಕಳೆದ ಶಾಸನಭಂಗ ಚಳವಳದಲ್ಲಿ ಎರಡು ಬಾರಿ ಸಜೆ ಗೊಳಗಾಗಿದ್ದರು. ಹಿಂದೊಮ್ಮೆ ಕಣ್ಣಾನೂರು ಮುನಿಸಿಪಾಲಿಟಿಯ ಅಧ್ಯಕ್ಷರಾಗಿದ್ದರು, ಕಣ್ಣಾನೂರಿನಲ್ಲಿ ನೇಯ್ಗೆ ಕಾರ್ಖಾನೆಗಳನ್ನಿರಿಸಿ, ದೇಶೀ ಅರಿವೆಗಳ ಪ್ರಚಾರ ಕಾರ್ಯದಲ್ಲಿ ತುಂಬ ಶ್ರಮ ವಹಿಸುತ್ತಿರುವರು.

ಜಿಲ್ಲಾ ಹರಿಜನ ಸೇವಾ ಸಂಘದ ಸಭೆಯೊಂದು ಇದೇ ಕಳೆದ ಸೋಮವಾರ ಸಾಯಂಕಾಲ ೫-೩೦ ಘಂಟೆಗೆ ಡಾ। ಎಚ್ ವಿ ಆಡಪರವರಲ್ಲಿ, ಶ್ರೀಮಾನ್ ರಾಮ ಕೃಷ್ಣ ಪುಂಜರವರ ಅಧ್ಯಕ್ಷತೆಯಲ್ಲಿ ಜರಗಿತು. ಕೇಂದ್ರ ಬೋರ್ಡು ಮತ್ತು ಪ್ರಾಂತಿಕ ಬೋರ್ಡುಗಳಿಂದ ಬಂದ ಪತ್ರವ್ಯವಹಾರವನ್ನೋದಲಾಗಿ, ಅವುಗಳ ಸೂಚನೆ ಮೇರೆಗೆ ನಮ್ಮ ಜಿಲ್ಲೆಯ ಕಾರ್ಯದ ಕುರಿತಾಗಿ ಹೊಸ ಯೋಜನೆ ಮಾಡಲಾಯಿತು! ಅದನ್ನು ಪ್ರಾಂತಿಕ ಬೋರ್ಡಿನ ಮೂಲಕ ಕೇಂದ್ರ ಬೋರ್ಡಿಗೆ ಕಳುಹಿಸುವಂತೆ ನಿರ್ಣಯ ವಾಯಿತು. ಅಲ್ಲದೆ ಕಾರ್ಯಾರಂಭ ಮಾಡಲು ಈ ಮೊದಲು ಕೇಳಿಕೊಂಡ ರೂ ೫೦೦ನ್ನು ಕೂಡಲೇ ಕಳುಹ ಬೇಕಾಗಿ ಕೇಳಿಕೊಳ್ಳುವಂತೆ ನಿರ್ಧಾರವಾಯಿತು, ಬಿ, ಸಿ ಮಿಶ್ಯನಿನವರು ಹರಿಜನ ಹುಡುಗಿಯರ ಬೋರ್ಡಿಂಗ್ ಕಟ್ಟಿಸುವ ಬಗ್ಗೆ ಕೇಳಿದ ಸಹಾಯ ಧನವನ್ನು ಅಗತ್ಯ ಕೊಡುವಂತೆ ಬೋರ್ಡನ್ನು ಕೇಳಿಕೊಳ್ಳಬೇಕೆಂದೂ ನಿರ್ಣಯಿಸಲಾಯಿತು.

ಶ್ರೀಮಾನ್ ತಲಚ್ಚೇರಿ ರಂಗರಾವ್, ಬಿ.ಎ., ಎಲ್ ಎಲ್, ಬಿ, ಇವರು ಮಾರ್ಕೆಟು ವಾರ್ಡಿನಿಂದ ಕೊಂಗ್ರೆಸ್ ಪರವಾಗಿ ಬರುವ ಮುನ್ಸಿಪಲ್ ಕೌನ್ಸಿಲಿನ ಚುನಾವಣೆಗೆ ಉಮೇದ್ವಾರರಾಗಿರುವರಾಗಿ ತಿಳಿಯುಬರುತ್ತದೆ.

ಪಾಂಡೇಶ್ವರದಲ್ಲಿ ಮುನಿಸಿಪಾಲಿಟಿಯು ಶಾಲಾ—ಹೊಸ ಕಟ್ಟೋಣದಲ್ಲಿ ಬಿ ಸಿ ಮಿಶ್ಯನಿನವರು ನಡೆಸುವ ಧರ್ಮಾರ್ಥ ರಾತ್ರಿಶಾಲೆಗೆ ಹರಿಜನರಲ್ಲದ ಇತರ ಸಮಾಜ ಗಳವರೂ ಕೂಡ ಬಂದು ವಿದ್ಯಾಭ್ಯಾಸದ ಪ್ರಯೋಜನ ಹೊಂದಬಹುದೆಂದು ಏರ್ಪಾಡಿದೆಯಾಗಿ ನಮ್ಮ ನಗರದ ಬಾತ್ಮಿದಾರರು ಬರೆಯುತ್ತಾರೆ.

ನಮ್ಮ ಜಿಲ್ಲೆಯೊಳಗೆ ಹರಡುತ್ತಿರುವ ಕುಷ್ಠರೋಗ ನಿವಾರಣೆಯ ಕುರಿತು ಆಲೋಚಿಸಲು ಕಳೆದ ಶನಿವಾರ ಸಾಯಂಕಾಲ ಸ್ಥಳೀಯ ಗವರ್ನಮೆಂಟ್ ಕಾಲೇಜಿನಲ್ಲಿ ಒಂದು ಸಾರ್ವಜನಿಕ ಸಭೆ ಸೇರಿತು ಸಭೆಗೆ ಅನೇಕ ವೈದ್ಯ ಮಹಾಶಯರುಗಳೂ ಮಾನ್ಯ ಜಿಲ್ಲಾ ಕಲೆಕ್ಟರೇ ಮೊದಲಾದ ಪ್ರಮುಖ ವರ್ಗದ ಅಧಿಕಾರಿಗಳೂ ದಯ ಮಾಡಿಸಿದ್ದರು ನಮ್ಮ ಡಿ ಬೋ ಅಧ್ಯಕ್ಷರಾದ ಶ್ರೀ ಎ ಬಿ ಶೆಟ್ಟಿ ಎಮ್ ಎಲ್ ಸಿ ಇವರು ಅಗ್ರಾಸನ ವನ್ನು ವಹಿಸಿದ್ದರು ಫಾದರ್ ಮುಲ್ಲರ್ಸ್ ಅಸ್ಪತ್ರೆಯ ಡಾ। ಎ ಎಫ್ ಕೊಯಿಲೋ ಎಮ್ ಬಿ ಬಿ ಎಸ್ ಇವರು ಭಾಷಣ ಮಾಡುತ್ತ ನಮ್ಮ ಜಿಲ್ಲೆಯಲ್ಲೇ ಸುಮಾರು ೪ ಸಾವಿರದಷ್ಟು ಕುಷ್ಠರೋಗಿಗಳಿರುವರೆಂದೂ ಅವರ ಬಗ್ಗೆ ಇರುವ ಆರು ಚಿಕಿತ್ಸಾಲಯಗಳು ಸಾಲ ವೆಂದೂ ಕುಷ್ಠರೋಗಿಗಳುಳಿಕೊಳ್ಳಲು ಸಾಕಷ್ಟು ಸ್ಥಳಾನುಕೂಲತೆಯ ಪ್ರತ್ಯೇಕ ಕಟ್ಟಡವೊಂದು ಅವಶ್ಯಕವೆಂದೂ ಕುಷ್ಠ ರೋಗವು ಆರಂಭದ ಅವಸ್ಥೆಯಲ್ಲಿ ಗುಣಪಡಿಸ ಬರುವ ವ್ಯಾಧಿಯೆಂದೂ [illegible] ಆದಕಾರಣ ಸಾರ್ವಜನಿಕರೂ ಸಹಕರಿಸ ಬೇಕೆಂದೂ [illegible] ಅನಂತರ ನಮ್ಮ ಜಿಲ್ಲಾ ಸೆಲ್ತಾಫೀಸರರಾದ ಡಾ [illegible] ಬಾಳಿಗಾ ಜಿಲ್ಲಾ ಕುಷ್ಠರೋಗ [illegible] ವರದಿ ಕೊಂಡು ವ್ಯತ್ಯಾಸವನ್ನು ವಿವರಿಸುತ್ತ ಡಿಸ್ಟ್ರಿಕ್ಟ್ ಬೋರ್ಡಿ ನವರು ಕಳೆದ ವರ್ಷಗಳಿಂದ ಕುಷ್ಠ ರೋಗ ನಿವಾ ರಣಾ ಕಾರ್ಯಕ್ಕೆ ರೂ ೧೦೦೦ ವಾರ್ಷಿಕ ಸಹಾಯ ಧನ ವನ್ನು ಕೊಡುತ್ತಿದ್ದರೂ [illegible] ಮತ್ತೂ ಹೆಚ್ಚು ಹಣದ ಅವಶ್ಯಕತೆಯಿದೆಯೆಂಬುದನ್ನು ವಿಶದೀಕರಿಸಿ ಭಾಷಣ ಮಾಡಿದರು ಇವರನ್ನ ಹಿಂಬಾಲಿಸಿ ಮಾನ್ಯ ಜಿಲ್ಲಾ ಕಲೆಕ್ಟರ್ ದೊರೆಗಳವರಾದ ಮಿ। ಬಿ ಎಮ್ ಗೋಪ್ ಐ ಸಿ ಎಸ್ ರವರು ಭಾಷಣ ಮಾಡುತ್ತ ಕುಷ್ಠ ರೋಗಿಗಳು ಪೇಟೆಯ ಸಾರ್ವಜನಿಕ ರಸ್ತೆಗಳಲ್ಲಿ ಕುಳಿತುಕೊಳ್ಳುವುದು ಅನಿಚ್ಛನೀಯವೆಂದೂ ಚಿಕ್ಕ ಮಕ್ಕಳಿಗೆ ಈ ರೋಗವು ತಗಲುವ ಸಂಭವ ಹೆಚ್ಚಿರುವ ಕಾರಣ ಅಂಥದನ್ನು ತಡೆಯಲೆತ್ನಿಸಬೇಕೆಂದೂ, ದಾನ ಧರ್ಮಗಳಿಗೆ ಹೆಸರಾದ ದೇಶದವರಾದ ನಾವು ಕುಷ್ಠ ರೋಗಿಗಳನ್ನು ಚಿಕಿತ್ಸಿಸುವುದರಲ್ಲಿ ದಾನಧರ್ಮಗಳನ್ನುಪಯೋಗಿಸಬೇಕೆಂದೂ ಮುಂತಾಗಿ ಹಿತಸೂಚನೆಗಳನ್ನು ಕೊಟ್ಟನಂತರ ಪಟ್ಟಣದೊಳಗೆ ಕುಷ್ಠರೋಗ ನಿವಾರಣಾ ವಿಷಯವಾಗಿ ಆಲೋಚಿಸಿ, ಕಾರ್ಯ ಸಾಧಿಸಲು ೨೭ ಮಂದಿ ಸದಸ್ಯರಿರುವ ಒಂದು ಸಮಿತಿಯು ರಚನೆಯಾಯಿತು.

ಇದೇ ಬರುವ ತಾ ೧೧ನೇ ಶನಿವಾರ ಸಾಯಂಕಾಲ ೬ ಘಂಟೆ ಹೊತ್ತಿಗೆ ದಕ್ಷಿಣ ಕನ್ನಡ ಹಿಂದೀ ಪ್ರಚಾರ ಸಭೆಯ ಸಹಾಯಾರ್ಥ ಭಾರತ ಭಾಷಾ ಪ್ರವರ್ಧಕ ನಾಟಕ ಮಂಡಳಿಯವರು ಗಣಪತಿ ಹೈಸ್ಕೂಲಿನಲ್ಲಿ "ರಾಣಾ ಪ್ರತಾಪಸಿಂಹ" ಎಂಬ ಹಿಂದೀ ನಾಟಕವನ್ನಾಡುವರಾಗಿ ತಿಳಿದುಬರುತ್ತದೆ ಮಹಾಜನರು ಪ್ರೋತ್ಸಾಹಿಸಬೇಕಾಗಿ ಕೋರಲಾಗಿದೆ.

ಇದೇ ಕಳೆದ ಬುಧವಾರ ಅಪರಾಹ್ನ ೪॥ ಘಂಟೆಗೆ ಸುಮಾರು ೨೦ ವರ್ಷ ಪ್ರಾಯದ ಕುಲುಜಾತಿಯ ತರುಣ ನೊಬ್ಬನು ಬಾವಟೆಗುಡ್ಡೆಯಲ್ಲಿ ಮುನಿಸಿಪಲ್ ಗ್ರಂಥಾಲಯದ ಬಳಿಯ ಲೇಡೀಸ್ ಕ್ಲಬ್ಬಿನ ಎದುರಿನ ಒಂದು ಮರಕ್ಕೆ ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿರುವನು ಇದನ್ನು ಮೊದಲು ನೋಡಿದವನೊಬ್ಬನು ಪೋಲಿಸ್ ಸ್ಟೇಶನಿಗೆ ವರ್ತಮಾನ ಮುಟ್ಟಿಸಿದ ನಂತರ ಪೋಲೀಸರು ಬಂದು ಶವವನ್ನು ಕೊಂಡೊಯ್ದರು. ಹಗಲು ಹೊತ್ತಿನಲ್ಲಿ ಇಂತಹ ಸಾರ್ವಜನಿಕ ಸ್ಥಳದಲ್ಲಿ ಈ ಆತ್ಮಹತ್ಯೆ ನಡೆದುದನ್ನು ಕೇಳಿ ಹಲವರು ಬೆರಗಾಗಿರುವರು.

ಇದೇ ಕಳೆದ ಜುಲೈ ತಾ, ೨೮ಕ್ಕೆ ಅಂತ್ಯವಾಗುವ ಒಂದು ವಾರದ ನಮ್ಮ ನಗರದ ಆರೋಗ್ಯದ ವರದಿ ಮರಣಗಳು ೨೯, ಜನನ—೬೪, ಮರಣಗಳ ಪ್ರಕೃತಿ ಗೋರ ೨, ಆಮಶಂಕೆ ೪, ಅತಿಸಾರ ೨, ನ್ಯೂಮೋನಿಯಾ ೨, ಕ್ಷಯ ೩, ಇತರ ಶ್ವಾಸಕೆ ೧೮ ಸಂಬಂಧವಾದವು ೧, ಅನಘಾಡ ೨, ಮತ್ತಿತರ ಕಾರಣಗಳಿಂದ ೧೪ ಒಂದು ವಯಸ್ಸಿನೊಳಗಣ ಶಿಶು ಮರಣ ೯ ವರದಿಯ ಈ ವಾರದಲ್ಲಿ ಸಿಡುಬಿನಿಂದ ಮರಣಗಳಿಲ್ಲದಿರುವುದೊಂದು ಸಂತೋಷಕರ ಕೇವಲ ಇಬ್ಬರಿಗೆ ಮಾತ್ರ ಸಿಡುಬು ತಗಲಿದಂತೆ ವರದಿ ಹೇಳುತ್ತದೆ.

ತನ್ನ ದಾಯಾದಿಯನ್ನು ಕೊಂದ ಆಪಾದನೆಯಲ್ಲಿ ಸೆಶನ್ಸಿಗೆ ಕಮಿಟ್ ಮಾಡಲ್ಪಟ್ಟ ನೆಂಕಪ್ಪ ಗೌಡ ಎಂಬವನಿಗೆ ಇಲ್ಲಿಯ ಸೆಶನ್ಸ್ ಜಡ್ಜರು ಕಳೆದ ವಾರ ಆಜನ್ಮ ದ್ವೀಪಾಂತರ ವಾಸದ ಶಿಕ್ಷೆ ವಿಧಿಸಿರುವರು.

ಸ್ಥಳೀಯ ಶ್ರೀ ಕೃಷ್ಣ ಸಿನೆಮದಲ್ಲಿ ನಾಳೆಯಿಂದ ಮೆಟ್ರೋ ಗೋಲ್ಡ್ವಿನ್ ಮೇಯರ್ಸ್ ಕಂಪೆನಿಯವರ "ಮಾಸ್ಕ್ ಆಫ್ ಫು ಮೆಂಚು" ಎಂಬ ಭಯಾನಕ ಘಟನಾ ವಿಶೇಷದ ಚಲಚ್ಚಿತ್ರವು ಪ್ರದರ್ಶಿಸಲ್ಪಡುವುದು ಇದಾದ ನಂತರ ಇಂಪೀರಿಯಲ್ ಕಂಪೆನಿಯವರ ಸುಲೋಚನಾ" ಅಥವಾ 'ಟೆಂಪಲ್ ಬೆಲ್ಸ್' ಎಂಬ ಚಿತ್ರವೂ ಅನಂತರ ರೇಡಿಯೋ ಕಂಪೆನಿಯವರ ಗರ್ಲ್ ಕ್ರೇಝಿ ಎಂಬ ಹಾಸ್ಯರಸಪ್ರಧಾನ ಚಿತ್ರವೂ ಪ್ರದರ್ಶಿಸಲಾಗುವುವು ಎಂದು ಆಡಳಿತಗಾರರು ತಿಳಿಸುತ್ತಾರೆ.

ನೂತನ ದೃಶ್ಯಾವಳಿಗಳಿಂದ ಶ್ರೀ ವೆಂಕಟ್ರಮಣಸ್ವಾಮಿ ಥಿಯೇಟ್ರಿಕಲ್ ಕಂಪೆನಿಯವರು ಸದ್ಯದಲ್ಲಿಯೇ 'ಭಕ್ತ ಕನಕದಾಸ' ಎಂಬ ನಾಟಕವನ್ನಾಡಲಿರುವರಾಗಿ ತಿಳಿದು ಬರುತ್ತದೆ.

೧೯೧೮ನೇ ವರ್ಷದ ರಾಷ್ಟ್ರೀಯ ಶಿಕ್ಷಣ ಚಳವಳದ ಸಮಯದಲ್ಲಿ ಸಾರ್ವಜನಿಕರಿಂದ ಆರಂಭಿಸಲ್ಪಟ್ಟ ಇಲ್ಲಿಯ ರಾಷ್ಟ್ರೀಯ ಬಾಲಿಕಾ ಪಾಠಶಾಲೆ National Girls School ಇದರ ಹೆಸರನ್ನು ಈ ವರ್ಷ ಒರೆಯಂಟ್ ಗರ್ಲ್ಸ್ ಸ್ಕೂಲ್ ಎಂಬುದಾಗಿ ಪರಿವರ್ತಿಸಿರುವರು. ಡಾ। ವೆಂಕಟರಾಯರು ೧೯೧೮ರಲ್ಲಿ ಇಲ್ಲಿಗೆ ಬಂದಾಗ ಈ ಶಾಲೆಯು ಸ್ಥಾಪನೆ ಮಾಡಿದ್ದರು ಈ ಶಾಲೆಯನ್ನು ಥಿಯೊಸೊಫಿಕಲ್ ಲೋಜಿನವರು ಹಾಯರ್ ಎಲಿಮೆಂಟರಿ ಶಾಲೆಯಾಗಿ ನಡೆಸುತ್ತಿದ್ದಾರೆ.

ಇದೇ ಕಳೆದ ವಾರ ಶ್ರೀ ವೆಂಕಟ್ರಮಣ ದೇವಸ್ಥಾನದಲ್ಲಿ ಆಶ್ರಮ ವಸ್ತ್ರ ಪ್ರದಾನದ ಕತೆಯನ್ನು ಶ್ರೀ [illegible] ಕನಕದಾಸ ಚರಿತೆಯನ್ನು [illegible] ಚರಿತೆಯನ್ನು ಶ್ರೀ [illegible] ಜರಗಿಸಿದರು [illegible] ಕಥಾಂತ್ಯದಲ್ಲಿ ಇಂಥಾ ಕಥೆಗಳಿಂದಾಗುವ ಪ್ರಯೋಜನಗಳನ್ನು ವಿವರಿಸಿ ಶ್ರೀ [illegible] ಸ್ಫೂರ್ತಿಯಿಂದ ಕೆಲವು ಮಾತುಗಳನ್ನಾಡಿ ಸಭಿಕರನ್ನು ಸಂತೋಷಗೊಳಿಸಿದರು.

ಕೆನರಾ ಹೈಸ್ಕೂಲಿನ ಭುವನೇಂದ್ರ ಸಭಾಸದನದಲ್ಲಿ ಇಲ್ಲಿಯ ಕರ್ನಾಟಕ ಮಿತ್ರ ಮಂಡಳಿಯ ವರ್ಷಾರಂಭ ಭಾಷಣವನ್ನು ಇದೇ ತಾ ೫ನೇ ಸೋಮವಾರ ಸಂಜೆ ೬॥ ಘಂಟೆಗೆ ಶ್ರೀಮಾನ್ [illegible] ಯವರು ಯಶಸ್ವಿಯಾಗಿ ನಡೆಸಿದರು ಬಳಿಕ ಮಂಡಳಿಯ ಅಧ್ಯಕ್ಷರಾದ ರಾ ಬ ವಾಮನ ಭಟ್ ಬಿ ಎ ಯವರು ಭಾಷಣಕರ್ತರಿಗೂ ಸಭಿಕರಿಗೂ ಅಭಿವಂದನೆಗಳನ್ನರ್ಪಿಸಲು ಅಂದಿನ ಸಭಾಕಾರ್ಯಕ್ಕೆ ಮಂಗಳವಾಯಿತು.

ಕೆಂಟೋನ್ಮೆಂಟ್ ನಿವಾಸಿಗಳ ಕೇಳಿಕೆ.

ಅಂಬಾಲಾ (ಪಂಜಾಬ)ದಲ್ಲಿ ಅಖಿಲ ಭಾರತ ಕೆಂಟೋನ್ಮೆಂಟ್ ಸಂಘ ವೆಂಬೊಂದು ಸಂಘವಿದೆ. ಹಿಂದೂದೇಶದೊಳಗಿನ ಕೆಂಟೋನ್ಮೆಂಟ್‌ಗಳ ನಿವಾಸಿಗಳು ಇದರ ಸದಸ್ಯರು ಹಿಂದೂದೇಶದ ಎಲ್ಲ ಕೆಂಟೋನ್ಮೆಂಟು ಗಳಲ್ಲಿ ವಾಸಿಸುವವರ ಸಂಖ್ಯೆ ಸುಮಾರು ೧೦ ಲಕ್ಷ. ಇವರ ಪರವಾಗಿ ಎಸೆಂಬ್ಲಿಯಲ್ಲಿ ಪ್ರಾತಿನಿಧ್ಯವಿಲ್ಲ ಆದ ಕ್ಕಾಗಿ ಈ ಸಂಘದವರು ಈ ರೀತಿಯಾಗಿ ಪ್ರಕಟಣೆ ಕೊಟ್ಟಿರುವರು—ನಮ್ಮ ಪ್ರಾತಿನಿಧ್ಯವೂ ಎಸೆಂಬ್ಲಿ ಯಲ್ಲಿದ್ದೇ ಇರಬೇಕು. ನಮ್ಮವರು ಎಸೆಂಬ್ಲಿ ಚುನಾವಣೆಗೆ ನಿಲ್ಲುವಂತೆ ಸಾಧಿಸಬೇಕು. ನಮ್ಮ ವೋಟು ಗಳನ್ನು ನಮ್ಮವರಿಗೇ ಕೊಡಬೇಕು. ನಮ್ಮವರು ಚುನಾಯಿಸಲ್ಪಡದಿರುವ ಸಂದರ್ಭದಲ್ಲಿ ಕೆಂಟೋನ್ಮೆಂಟುಗಳ ಪರವಾಗಿ ಸರಕಾರವು ಒಂದು ಸ್ಥಾನವನ್ನು ಕಾದಿಡುವಂತೆ ಸಾಧಿಸಬೇಕು ಈ ಬಗ್ಗೆ ನಮ್ಮ ಸಂಘದ ಕಾರ್ಯಕಾರಿ ಸಮಿತಿಯ ವಿಶೇಷ ಸಭೆಯೊಂದು ಸೇರಿ, ಕೆಂಟೋನ್ಮೆಂಟ್ ನಿವಾಸಿಗಳಿಗೆ ಮುಂದಾಳಾಗಬೇಕಾಗಿದೆ.

ತಾಲೂಕುಗಳಿಂದ.

ಉಡುಪಿ—ರೆವಿನ್ಯೂ ಅಧಿಕಾರಿಗಳು, ಇಲ್ಲಿಯ ದೊಡ್ಡಣ್ಣಗುಡ್ಡ ಎಂಬಲ್ಲಿಯ ಮುಸಲ್ಮಾನರು ನಾಲ್ಕು ಎಕ್ರೆ ಸ್ಥಳವನ್ನು ಮಹಮ್ಮದೀಯರಿಗೆ ಒಂದು ಮಸೀದಿ ಯನ್ನು ಕಟ್ಟುವ ಬಗ್ಗೆಯೂ, ಶವಸಂಸ್ಕಾರದ ಬಗ್ಗೆಯೂ ಬಿಟ್ಟುಕೊಟ್ಟಿರುವರಾಗಿ ತಿಳಿದುಬರುತ್ತದೆ.

ಪುತ್ತೂರು:—'ಸ್ವದೇಶಾಭಿಮಾನಿ'ಯ ತಾ ೧೩—೬—೩೪ನೇ ಸಂಚಿಕೆಯಲ್ಲಿ, "ತಾಲ್ಲೂಕುಗಳಿಂದ" ಎಂಬ ಶಿರೋನಾಮೆಯ ಕೆಳಗೆ ಪುತ್ತೂರು ಬಾತ್ಮಿಯಲ್ಲಿ—ಕಡಬಾರು ಗ್ರಾಮದಲ್ಲಿರುವ ಕಕ್ಕೆ ಶ್ರೀನಿವಾಸ ಅಬ್ಬರಡಂತಾಯರವರು ಬಾಲವಿಧವೆಯಾದ ತಮ್ಮ ಮಗಳನ್ನು ಸಕಲೇಶಪುರದ ಒಬ್ಬ ಹುಡುಗನಿಗೆ ಕೊಟ್ಟು ವಿಧವಾವಿವಾಹವನ್ನು ಪ್ರಚಾರಗೊಳಿಸಿದರೆಂಬ ಮತ್ತು ಪಾಶಿಸಿಗುವ ಗ್ರಾಮವು ಕಡೆಕಾರ್ ಎಂದು ಪ್ರಕಟವಾದುದು ನಿಜವಲ್ಲವೆಂದೂ, ತನ್ನ ಮಗಳಿಗೆ ೯ನೇ ವಯಸ್ಸಿನಲ್ಲಿ ವಿವಾಹವಾಗಿದ್ದು ಪತಿಯು ಇತ್ತೀಚೆಗೆ ದೈವಾಧೀನನಾದನೆಂದೂ, ವಿವಾಹವು ಜರಗಿತೆಂದು ಆ ಬಾತ್ಮಿದಾರರು ಹೇಳುವ ಸಮಯದಲ್ಲಿ ತಾನು ಘಟ್ಟದಲ್ಲಿದ್ದೆನೆಂದೂ, ಆ ಸುಳ್ಳು ವರ್ತಮಾನವನ್ನು ತನ್ನ ವೈರಿಗಳು ದ್ವೇಷದಿಂದ ಕೊಟ್ಟಿರಬೇಕೆಂದೂ ಶ್ರೀ ಶ್ರೀನಿವಾಸ ಅಬ್ಬರಡಂತಾಯ ಈಶ್ವರ ಅಬ್ಬರಡಂತಾಯರ ಮಗ, ಮಂಗಳೂರು ತಾಲೂಕಿನ ಉಳೆಪಾಡಿ ಗ್ರಾಮದಲ್ಲಿರುವವರು, ಇವರು ಬರೆದು ತಿಳಿಸುತ್ತಾರೆ ಸುಳ್ಳು ವರ್ತಮಾನವು ಪ್ರಕಟವಾದುದಕ್ಕಾಗಿ ವಿಷಾದಿಸುವೆವು.

ಪಡುಬಿದ್ರಿ—ಸುಮಾರು ೩೪ ವರ್ಷಗಳಿಂದ ಬೇರೆ ಬೇರೆ ಬೋರ್ಡು ಶಾಲೆಗಳಲ್ಲಿ ಅಧ್ಯಾಪಕ ವೃತ್ತಿಯನ್ನು ಮನಃಪೂರ್ವಕವಾದ ಶ್ರದ್ಧೋತ್ಸಾಹಗಳಿಂದ ಕೈಕೊಂಡಿದ್ದ ಹಾಗೂ ಸ್ಥಳೀಯ ಬೋರ್ಡ್ ಹುಡುಗರ ಶಾಲೆಯನ್ನು ಮೊದಲಾಗಿ ತೆರೆಯಲು ಮುಖ್ಯೋಪಾಧ್ಯಾಯರಾಗಿ ನೇಮಕಹೊಂದಿ ಬಂದು ತನ್ನ ಕರ್ತವ್ಯವನ್ನು ಸಸಾಂಗವಾಗಿ ಪೂರೈಸಿರುವ ಅಪರ ವಯಸ್ಸಿಗೆ ಬಂದಿರುವರಾದರೂ ತರುಣ ಉಪಾಧ್ಯಾಯರಂತೆಯೇ ಕೆಲಸದಲ್ಲಿ ಚಟುವಟಿಕೆಯನ್ನು ತೋರಿಸುತ್ತಲಿದ್ದ ಶ್ರೀಯುತ ಮೂಲ್ಕಿ ದೇವರಾಯರು ತಾರೀಕು ೨೯—೭—೩೪ನೇ ರವಿವಾರ ಪೂರ್ವಾಹ್ನ ಕೆಲಸದಿಂದ ನಿವೃತ್ತಿಹೊಂದುವ ಮುಂಚಿತವಾಗಿಯೇ ದೈವಾಧೀನರಾದರು ಮೃತರ ಆತ್ಮಕ್ಕೆ ಪರಮಾತ್ಮನು ಚಿರಶಾಂತಿಯನ್ನೀಯಲಿ! ಅವರ ಪ್ರೇಮದ ಕುಟುಂಬಕ್ಕೆ ಆಯುರಾರೋಗ್ಯೈಶ್ವರ್ಯವನ್ನನುಗ್ರಹಿಸಲಿ!

೫೦೦೦೦ ರೂಪಾಯಿ ನಷ್ಟ ಪರಿಹಾರ ದ್ರವ್ಯ

ಗಯಾ ಡಿಸ್ಟ್ರಿಕ್ಟ್ ಬೋರ್ಡನ್ನು ಸರಕಾರವು ಪದಚ್ಯುತ ಮಾಡಿ ಖಾನ್ ಬಹದೂರ್ ಅಬ್ದುಲ್ ಹಮೀದ ಎಂಬ ಒಬ್ಬ ಎಡಿಶನಲ್ ಡಿಸ್ಟ್ರಿಕ್ಟ್ ಮೆಜಿಸ್ಟ್ರೇಟ ಇವರನ್ನು ಸ್ಪೆಶ್ಯಲ್ ಆಫೀಸರರನ್ನಾಗಿ ೧೯೩೦ರಲ್ಲಿ ನೇಮಿಸಿ ಆ ಬಳಿಕ ಬೋರ್ಡಿನ ಡಿಸ್ಟ್ರಿಕ್ಟ್ ಇಂಜಿನಿಯರಾಗಿದ್ದ ಎಸ್ ಕೆ ಪಿ ಸಿಂಹರವರ ಬೋರ್ಡನ್ನು [illegible] ತರದಲ್ಲಿ ವಂಚಿಸಿ ಹಣ ತಿಂದಿದ್ದಾರೆಂದಿತ್ಯಾದಿ ಆಪಾದನೆ ಬಂದು ಮೊಕದ್ದಮೆ ಹೂಡಲ್ಪಟ್ಟರು. ಸಿಂಹರನ್ನು ಕೆಲಸದಿಂದ ತೆಗೆದು ಹಾಕಿದರು. ಸಿಂಹರು, ತನ್ನ ಮೇಲೆ ಆಪಾದನೆ ಬೇಕಾಬಿಟ್ಟಿಯಾದ ದುರುದ್ದೇಶದ ಪರಿಣಾಮವಾಗಿಯೆಂದೂ, ತನ್ನನ್ನು ಕೆಲಸದಿಂದ ತೆಗೆದುಹಾಕಿದುದರಿಂದ ಅಪಕೀರ್ತಿ ತನ್ನ ಮಾನವನ್ನು ನಷ್ಟಪಡಿಸಿದ ದಕ್ಕಾಗಿ ಅನುಕ್ರಮವಾಗಿ ರೂ ೫೦ ಸಾವಿರದಂತೆ ಕೊಡಿಸಬೇಕೆಂದೂ ವ್ಯಾಜ್ಯ ತಂದರು ಅದು ಸಿಂಹರಿಗೆ ಗುಣವಾಗಿ ಡಿಸ್ಟ್ರಿಕ್ಟ್ ಬೋರ್ಡಿನವರು ಸಿಂಹರಿಗೆ ರೂ ೫೦ ಸಾವಿರ ಕೊಡಬೇಕೆಂದೂ, ಸುಳ್ಳು ಆಪಾದನೆ ಹೊರಿಸಿದುದಕ್ಕೆ ಖಾನ್ ಬಹದ್ದೂರರು ರೂ ೩೫೦೦೦ ಪ್ರತ್ಯೇಕ ಕೊಡಬೇಕೆಂದೂ ತೀರ್ಪು ಹೊರಟಿದೆ.

ರೈಲುಬಂಡಿಗಳ ಸಮಯ.

	ಹೊರಡುವ ಸಮಯ	ಇಲ್ಲಿಗೆ ತಲುಪುವ ಸಮಯ
ಮ್ಯಾಲ್	ಬೆಳಿಗ್ಗೆ ೯ ೫೫	ಸ್ಸಾಯಂ ೬-೨೦
ಮಿಕ್ಸೆಡ್	,, ೩	ರಾತ್ರೆ ೮ ೪೫
ಪೆಸೆಂಜರ್	ಅಪರಾಹ್ನ ೧೨.೫೫	ಅಪರಾಹ್ನ ೩ ೫೦
ಶಟ್ಲ್	ಸ್ಸಾಯಂ ೫.೨೫	ಬೆಳಿಗ್ಗೆ ೯ ೩೦

ಹೊಸ ಸರ್ವೀಸುಗಳು.

ಕಾಂಞಂಗಾಡ್	ಬೆಳಿಗ್ಗೆ ೮ ೩೦,	
ವರೆಗಿನ ಬಂಡಿ		ಅಪರಾಹ್ನ ೧ ೨೫
ಕಾಸರಗೋಡು	ಅಪರಾಹ್ನ ೩ ೨೫,	
ವರೆಗಿನ ಬಂಡಿ,		ಸ್ಸಾಯಂ ೬-೧೫,

ಮೂಲೆಮೂಲೆಯಿಂದ

ಮಡಿಕೇರಿ

ಇಲ್ಲಿಯ ಬಾಲಿಕಾ ಪಾಠಶಾಲೆಯು ಮಳೆಗಾಲದ ರಜೆ ಮುಗಿದು ಆಗೋಸ್ತು ತಾ. ೧ನೇ ದಿನ ತೆರೆಯಲ್ಪಟ್ಟಿತು.

ಮಡಾಪುರದಲ್ಲಿ ಪ್ಲೇಗು ಪ್ರಾರಂಭವಾಗಿದೆ. [illegible] ಜನರಿಗೆ ತಗಲಿ ೩ ಮಂದಿ ಮೊನ್ನೆ ಮೃತರಾದರು.

ಕೊಡಗು ಹರಿಜನ ಸೇವಕ ಸಂಘದ ಸಭೆಯೊಂದು ತಾ. ೬ನೇ ಸೋಮವಾರ ಬೆಳಿಗ್ಗೆ ೧೧ ಘಂಟೆಗೆ ಜರಗಲಿರುವುದು.

ರ್‍ಯಾಪಾಲೀಕಂಡ ಮೇದಪ್ಪನವರು ಬೆಂಗಳೂರು ಕೆಂಟೋನ್‌ಮೆಂಟಿನ ಡಿಸ್ಟ್ರಿಕ್ಟ್ ಮತ್ತು ಸೆಶನ್ಸ್ ಜಡ್ಜರಾಗಿ ಖಾಯಂ ಆಗಿದ್ದಾರೆ.

ಹುದಿಕೇರಿ ಹಾಯರ್ ಎಲಿಮೆಂಟರಿ ಸ್ಕೂಲಿನ ಹೆಡ್‌ಮಾಸ್ಟರರಾದ ಶ್ರೀ. ಕೆ. ಗೋವಿಂದಯ್ಯನವರು ತಾ. ೨೫ನೇ ದಿನ ದೈವಾಧೀನರಾದರು.

ಕೊಡಗು ಸರಕಾರವು ಮದ್ರಾಸು ಸರಕಾರದೊಡನೆ ಪತ್ರವ್ಯವಹಾರ ನಡೆಸಿದ ಪರಿಣಾಮವಾಗಿ ಮದ್ರಾಸು ವೆಟರಿನರಿ ಕೋಲೇಜಿನಲ್ಲಿ ಕೊಡಗು ವಿದ್ಯಾರ್ಥಿಗಳು ವರ್ಷಂಪ್ರತಿ ಕೊಡಬೇಕಾಗಿದ್ದ ರೂ. ೪೦೦ರ ಫೀಸನ್ನು ರೂ. ೬೦ಕ್ಕೆ ಇಳಿಸಲಾಗಿದೆ.

ಹುಬ್ಬಳ್ಳಿ.

ತಾ. ೨೨ರಲ್ಲಿ ಇಲ್ಲಿಯ ಮಲ್ಲಿಕಾರ್ಜುನ ಥಿಯೇಟರಿನಲ್ಲಿ ಬಾಲಗಂಧರ್ವ ನಾಟಕ ಮಂಡಳಿಯು ನಾಟಕವೆಂದು ಜ್ಯಾಹೀರು ಮಾಡಿದ್ದರೂ, ಶ್ರೀ ಬಾಲಗಂಧರ್ವರಿಗೆ ವಿಪರೀತ ಜ್ವರವು ಬಂದುದರ ಪರಿಣಾಮವಾಗಿ, ಮಾರಲ್ಪಟ್ಟ ಟಿಕೇಟುಗಳ ಹಣವನ್ನು ಹಿಂದೆಕೊಟ್ಟು ಆ ದಿನದ ನಾಟಕವನ್ನು ರದ್ದುಪಡಿಸಿದರು. ಗದಗ, ಹಾವೇರಿ, ರಾಣಿಬೆನ್ನೂರು, ಶಿರ್ಸಿ ಮೊದಲಾದ ಕಡೆಗಳಿಂದ ನಾಟಕ ನೋಡಬಂದ ಜನಕಂಡವು ನಿರಾಶೆಗೊಂಡಿತು.

ಬೆಳಗಾಂವಿ.

ಸರದಾರ ವಲ್ಲಭಭಾಯಿ ಪಟೇಲರು ಕರೆದುದರಿಂದ ದೇಶಭಕ್ತ ಗಂಗಾಧರರಾಯರು ತಾ. ೨೦ನೇ ದಿನ ಮುಂಬಾಯಿಗೆ ಹೊರಟರು. ಕರ್ನಾಟಕ ರೈತರ ಹಿತಚಿಂತನೆಯ ಕುರಿತು ವಿಚಾರ ವಿನಿಮಯವಾಗಲಿದೆ.

ದಿವಾಕರ ರಂಗರಾಯರ ಆರೋಗ್ಯವು ಬಹಳವಾಗಿ ಕೆಟ್ಟು ಹೋಗಿ, ಅವರು ಸಂಪೂರ್ಣ ಗುಣಮುಖರಾಗಲು ಇನ್ನೂ ಕೆಲವು ದಿನಗಳು ಬೇಕೆಂದು ತಿಳಿದಿದೆ.

ಕಾರವಾರ.

ಇಲ್ಲಿಯ ಹರಿಜನ ಸೇವಾಸಂಘದ ಪರವಾಗಿ ಜಿಲ್ಲಾ ಹರಿಜನ ಸೇವಾ ಸಂಘವನ್ನು ಸ್ಥಾಪಿಸುವುದಕ್ಕಾಗಿ ಕಳೆದ ವಾರ ಇಲ್ಲಿ ಸಾರ್ವಜನಿಕ ವಾಚನಾಲಯದಲ್ಲೊಂದು ಸಭೆಸೇರಿತ್ತು.

ಅಂಕೋಲಾದಲ್ಲಿ ಕರನಿರಾಕರಣೆ ಮಾಡಿ ಕಷ್ಟಕ್ಕೊಳಗಾದವರ ಕಷ್ಟ ನಿವಾರಣೆಯ ಬಗ್ಗೆ ಇಲ್ಲಿ ಮಂಡಲವೊಂದನ್ನು ಸ್ಥಾಪಿಸಲಾಗಿದೆ. ಶ್ರೀ ಸುಬ್ಬರಾವ್ ಹಳದೀಪುರಕರರ ಅಧ್ಯಕ್ಷತೆಯಲ್ಲೊಂದು ಸ್ಥಾನಿಕ ಉಪಮಂಡಲವು ನೇಮಿಸಲ್ಪಟ್ಟಿದೆ.

ತಾನು ಕೊಂಗ್ರೆಸ್ಸಿನವನಾಗಿದ್ದು ಕಾಯಿದೆ ಭಂಗವನ್ನು ಮಾಡಿ ಅನೇಕ ಸಲ ಸೆರೆಯನ್ನನುಭವಿಸಿ ಈಗ ಅನ್ನಕ್ಕೆ ಗತಿಯಿಲ್ಲದಿರುವೆನೆಂದೂ, ತನ್ನ ಹೊಟ್ಟೆ ಪಾಡಿಗಾಗಿ ವ್ಯವಸ್ಥೆ ಮಾಡದಿದ್ದರೆ ತಾನು ಸತ್ಯಾಗ್ರಹವನ್ನು ಮಾಡುವೆನೆಂದೂ ಬೆನಾರಿಸ್‌ನಲ್ಲಿ ಗವಿನಾಡಿನ ಒಬ್ಬ ಪಠಾನನು ಛಲ ತೊಟ್ಟಿರುವನು. ಗಾಂಧಿಜೀಯವರು ಬೆನಾರಿಸ್‌ನಲ್ಲಿಳಿದೊಡನೆ ಅವರನ್ನು ಮುಖತಾ ಕಾಣಬೇಕೆಂದು ಇವನು ಹಟತೊಟ್ಟು, ವಿಜಯಿಯಾಗಲಿಲ್ಲ. ತಾ. ೩೦ರಲ್ಲಿ ಕೊಂಗ್ರೆಸ್ ಅಧ್ಯಕ್ಷರು ಮೋಟರಿನಲ್ಲಿ ಹೋಗುತ್ತಿರುವಾಗ ಅವರ ಕಾರನ್ನು ನಿಲ್ಲಿಸಿ ಬೇಡಿಕೊಂಡನು. ಅಧ್ಯಕ್ಷರು ಕಾರಿನಿಂದಿಳಿದು ನಡೆದುಕೊಂಡೇ ಸ್ವಲ್ಪ ದೂರ ಹೋದರು.

ನೋಟೀಸು.

ಕಾರ್ಕಳ ಡಿಸ್ಟ್ರಿಕ್ಟ್ ಮುನ್ಸೀಫ್ ಕೋರ್ಟಿನಲ್ಲಿ.

O. S. No. 112/1934.

ನರ್ಸ್ಸ ನ್ಯಾಕ—ವಾದಿ.

ಮತ್ತು

1. ಕೋಟಿ ಮ್ಯೊಳಿ 2. ಹೂವಯ್ಯ ಮ್ಯೊಳಿ—ಪ್ರತಿವಾದಿರು.

ಇವರೊಳಗೆ—

1ನೇ ಪ್ರತಿವಾದಿ ಅಳಿಯ 2ನೇ ಪ್ರತಿವಾದಿ ಹೂವಯ್ಯ ಮ್ಯೊಳಿಗೆ ತಿಳಿಯಪಡಿಸುವುದೇನೆಂದರೆ:—

ಪ್ರತಿವಾದಿರು ತಾ. 28–2–'31ರಲ್ಲು ವಾದಿಗೆ ಬರಕೊಟ್ಟ ಡಿಮಾಂಡು ಪ್ರೊಮಿಸರಿ ನೋಟಿನ ಬಾಬ್ತು ಬಹ ಅಸಲು ಬಡ್ಡಿ ಬಾಕಿ ರೂ. 181–10–9ಕ್ಕೆ ಪ್ರತಿವಾದಿರ ಮೇಲೆ ಮಾಡಿರುವ ಸದ್ರಿ ದಾವೆಯು ಇದೇ ಬರುವ ತಾ. 16–8–'34ಕ್ಕೆ ಸದ್ರಿ ಕೋರ್ಟಿನಲ್ಲಿ ತನ್ನಿ ಬಗ್ಗೆ ಇಟ್ಟಲುತ್ತದೆ. ಆದ್ದರಿಂದ ಸದ್ರಿ ದಾವೆಯ ಕುರಿತು ಆಕ್ಷೇಪಯಿರುವದಾದರೆ ತಾ. 16–8–'34ರಲ್ಲು ಶ್ಯಾಮ ಘಂಟೆ 10ಕ್ಕೆ ಸದ್ರಿ ಕೋರ್ಟು ಮುಂದೆ ಖುದ್ದುಸಿಂದಾಗಲಿ ವಕೀಲರ ಮುಖಾಂತರವಾಗಲಿ ಹಾಜ್ರಾಗತಕ್ಕದ್ದು. ತಪ್ಪಿದರೆ ನಿಮ್ಮ ಗೈರ ಹಾಜ್ರಿಯಿಂದ ಏಕಪಕ್ಷವಾಗಿ ತೀರ್ಮಾನಿಸಲ್ಪಡುವದು.

Karkal, 25–7–'34 } **H. K. Gopalkrishna Rao,** *Vakil for Plaintiff.*

ನೋಟೀಸು.

ದಕ್ಷಿಣ ಕನ್ನಡ ಜಿಲ್ಲಾ ಸಭೋರ್ಡಿನೇಟ್ ಕೋರ್ಟಿನಲ್ಲಿ.

ಕ್ರಮ ನಂಬ್ರ 78/1931.

ಕೂಡಿಬ್ಯೆಲು ಶ್ರೀ ಪಾರೀಶ್ವನಾಥ ಸ್ವಾಮಿ ಬಸ್ತಿ, ಇದರ ಟ್ರಸ್ಟಿಗಳು ವ ಭಜಕರು ಆಗಿರುವ, ನಾವೂರ, ಮಣಿನಾಲ್ಕೂರು, ಕರಪಾಡಿ ವ ದೇವಸ್ಯ ಪಡೂರ ಗ್ರಾಮಗಳ ಜೈನ ಮಠದ ಸದ್ರಿ ಬಸ್ತಿಯ ಎಲ್ಲಾ ಭಜಕರ ಕಡೆಯಿಂದಲೂ ಕೂಡಾ (೧) ದೇವರಾಜ ಹೆಗಡೆ, ನೇಮಣ್ಣ ಹೆಗಡೆರ ಮಗ, ಮಂಗಳೂರು ತಾಲ್ಲೂ ನಾವೂರ ಗ್ರಾಮಸ್ಥ. (೨) ಕೇಚಪ್ಪ ಅಜ್ಜಾ, ಚಂದಯ್ಯ ಅಜ್ಜರ ಅಳಿಯ, ಮಂಗಳೂರು ತಾಲೂಕು ಮಣಿನಾಲ್ಕೂರು ಗ್ರಾಮಸ್ತ— ವಾದಿರು.

ಮತ್ತು

ನೇಮರಾಜ ಕೂಡಾ 8 ಜನರು ಪ್ರತಿವಾದಿರು.

ನಾವೂರ, ಮಣಿನಾಲ್ಕೂರು ಕರಪಾಡಿ ವ ದೇವಸ್ಯ ಪಡೂರು ಗ್ರಾಮಗಳ ಜೈನ ಮಠದ ಮೇಲ್ಕಾಣಿಸಿದ ಕೂಡಿಬ್ಯೆಲು ಶ್ರೀ ಪಾರೀಶ್ವನಾಥ ಸ್ವಾಮಿ ಬಸ್ತಿಯ ಭಜಕರಿಂದ ಸರ್ವರಿಗೂ ಈ ಮೂಲಕ ತಿಳಿಯಪಡಿಸುವುದೇನೆಂದರೆ:—

ಕೂಡಿಬ್ಯೆಲು ಶ್ರೀ ಪಾರೀಶ್ವನಾಥ ಸ್ವಾಮಿ ಬಸ್ತಿ ಕಡೆಯಿಂದ ಅದರ ಮೊಕ್ತೇಸರರು ವ ಭಜಕರು ಆಗಿರುವ ನಾವೂರು ಮಣಿನಾಲ್ಕೂರು ಕರಪಾಡಿ ವ ದೇವಸ್ಯಪಡೂರ ಗ್ರಾಮಗಳ ಜೈನ ಮಠದ ಸದ್ರಿ ಬಸ್ತಿಯ ಎಲ್ಲಾ ಭಜಕರ ಕಡೆಯಿಂದಲೂ ಕೂಡಾ ಮೇಲೆ ಕಾಣಿಸಿದ ದೇವರಾಜ ಹೆಗಡೆ ಮತ್ತು ಕೇಚಪ್ಪ ಅಜ್ಜರು ಸದ್ರಿ ಕ್ರಮ ನಂಬ್ರ 78/1931ನೇ ವ್ಯಾಜ್ಯವನ್ನು ನಡೆಸುವರೆ ಮಾಡಿದ ಅರ್ಜಿ ಮೇಲೆ ಆದ ಕೋರ್ಟು ಹುಕುಂ ಪ್ರಕಾರ ಸದ್ರಿ ವ್ಯಾಜ್ಯದ ವಿಚಾರಣೆಯು ಇದೇ ಬರುವ ಸಪ್ಟಂಬರ್ ತಿಂಗಳ ತಾ. 4ನೇಗೆ ನಿಶ್ಚಯಿಸಿರುವುದರಿಂದ ಆಕ್ಷೇಪಣೆವುಳ್ಳವರು ತಮ್ಮ ಆಕ್ಷೇಪಗಳನ್ನು ಸದ್ರಿ ವ್ಯಾದೆಗೆ ಜ್ಯಾಹೀರು ಮಾಡಿಕೊಳ್ಳತಕ್ಕದ್ದು.

ಮಂಗಳೂರು, 31–7–34 } **K. Varada Rao,** *Advocate for Plaintiffs*

The Canara Public Conveyance Company, Ltd., Mangalore.

WE TAKE UTMOST CARE OF PASSENGERS.

Read the following letter:—

Modern Hindu Hotel,
Calicut, 17–6–1934.

Dear Sir,

We wish to thank you for all that you did for us to make our stay at Mangalore comfortable. It is extremely nice of you to have looked after us as you did.

Yours faithfully,

(Sd.) **A. V. Ramaswami.**

The same service is offered to all. We call for reports from passengers, if they have failed to receive similar attention and assure to take prompt action to see that inconvenience is not repeated.

Chikmagalur Public Conveyance Motor Service, Chikmagalur.

ಚಿಕ್ಕಮಗಳೂರು ಪಬ್ಲಿಕ್ ಕನ್ವೆಯನ್ಸ್ ಮೋಟರ್ ಸರ್ವಿಸ್,

ಚಿಕ್ಕಮಗಳೂರು.

ಮುಂಬಾಯಿಯಿಂದ – ಮಂಗಳೂರಿಗೆ.

ಮಂಗಳೂರಿನಿಂದ – ಮುಂಬಾಯಿಗೆ.

ಅಲ್ಲದೆ

ಹುಬ್ಬಳ್ಳಿ, ಧಾರವಾಡ, ಗೋವಾ, ಮುಂಬಾಯಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಯ ಎಲ್ಲಾ ಭಾಗಗಳಿಗೆ ಪ್ರಯಾಣ ನಡಿಸಲಿಕ್ಕೆ.

ಮಂಗಳೂರು – ಕಡೂರು ಹಾದಿಗಿಂತ ಉತ್ತಮ ಬೇರೆ ಹಾದಿಯಿಲ್ಲ!

ಹೊಸ ಬಸ್ಸುಗಳು. ಅನುಕೂಲ ಪ್ರಯಾಣ ಸೌಕರ್ಯಗಳು.

ಕಡೂರು ಜಿಲ್ಲೆಯೊಳಗಿನ ಎಲ್ಲಾ ಕಾಫಿ ತೋಟಗಳಿಗೆ ಕೂಲಿಕಾರರನ್ನು ತರಲಿಕ್ಕೂ ಅಲ್ಲಿಂದ ಕೊಂಡುಹೋಗಲಿಕ್ಕೂ ನಾವು ಎಲ್ಲಾ ತರದ ಸಹಾಯವನ್ನೂ ಕೊಡುತ್ತೇವೆ.

ಚಿಕ್ಕಮಗಳೂರಿನಿಂದ— ಶಿವಮೊಗ್ಗಕ್ಕೆ, ಬೀರೂರಿಗೆ, ಕಡೂರಿಗೆ.
— ಮೂಡಗೆರೆಗೆ, ಸಕಲೇಶಪುರಕ್ಕೆ.
— ಮಂಗಳೂರಿಗೆ, ಮೂಡಬಿದ್ರೆಗೆ, ಪುತ್ತೂರಿಗೆ, ಮೂಲ್ಕಿಗೆ.
— ಧರ್ಮಸ್ಥಳಕ್ಕೆ, ವೇಣೂರಿಗೆ, ಸುಬ್ರಹ್ಮಣ್ಯಕ್ಕೆ.

ನಿರಾಯಾಸದ ಪ್ರಯಾಣ! ಉತ್ಸಾಹಕರ ಸೌಕರ್ಯ!

ಬೇಕಾದ ಮಾಹಿತಿಗೆ ನಮ್ಮ ಆಫೀಸಿಗೆ ಬರೆದು ತಿಳಿದುಕೊಳ್ಳಿರಿ.

ವಿವಿಧ ವಿಷಯ.

...ವ್ಮು ಮೋಟಾರಿಗೆ ಇನ್ನು ಸೂರ್ಯನೇ 'ಡ್ರೈವರ್'!

ಡಚ್ ವೈಜ್ಞಾನಿಕರೊಬ್ಬರ ಒಂದು ನೂತನ ಶೋಧವು ಬ್ರಿಟಿಷ ಮೋಟಾರು ಕಾರ್ಖಾನೆದಾರರ ಚಿತ್ತವನ್ನು ಸೆಳೆದಿದೆ. "ಫೋಟೋ ಇಲೆಕ್ಟ್ರಿಕ್ ಸೆಲ್" ಎಂಬೊಂದು ಯಂತ್ರವದು. ಇದು ಸೂರ್ಯರಶ್ಮಿಯು ಕೆಲವೊಂದು ಲೋಹಗಳ ಮೇಲೆ ಬೀಳುವುದರಿಂದುಂಟಾಗುವುದು. ಈ 'ಸೆಲ್'ನ ಶಕ್ತಿಯನ್ನು ಶತಪಾಲು ಹೆಚ್ಚಿಸಿ, ಮೋಟಾರನ್ನು ಯಾವ ಬಗೆಯ ಹೆಚ್ಚಿನ ವೆಚ್ಚಗಳೂ ಇಲ್ಲದೆ ನಡೆಸಬಹುದೆಂದು ಈ ಡಚ್ ವೈಜ್ಞಾನಿಕರ ಅಭಿಪ್ರಾಯ. ಮಾನವ ದೇಹಕ್ಕೆ ಚೈತನ್ಯ ಕೊಡುವ ಸೂರ್ಯನು ಯಂತ್ರಗಳಿಗೂ ಕೊಟ್ಟೇ ಕೊಡುವನೆಂದು ಅವರ ಅಭಿಮತ. ಇದು ಫಲರೂಪಕ್ಕೆ ಬಂದರೆ, ಮಹಾ ಅದ್ಭುತಕರ ಶೋಧವೆನಿಸುವುದು.

ಮೂರು ವಯಸ್ಸಿನ ಹುಡುಗ—ಕುಡುಕ!

ಎಂತಹ ದುಃಖಕರ ವಾರ್ತೆ! ಇಂಗ್ಲೆಂಡಿನ ಕಾರ್ಡಿಫ್ ಎಂಬಲ್ಲಿಯ ಬ್ಲೋಡ್ವಿನ್ ಪಾರ್ಕರ್ ಎಂಬ ಹೆಂಗುಸು; ಆಕೆಯ ವಯಸ್ಸು ೪೫. ಆಕೆ ರಸ್ತೆಯಿಂದ ಹೋಗುವಾಗ್ಗೆ, ಮೂಗು ತುಂಬ ಮದ್ಯಪಾನ ಮಾಡಿದುದು ಕಂಡುಬಂತು. ಸರಿಯಾದ ಹೆಜ್ಜೆ ಇಡಲಾರದೆ ಮುಗ್ಗರಿಸಿ ನಡೆಯುತ್ತಿದ್ದಳು. ಆಕೆಯ ಕರವನ್ನು ಹಿಡಿದು ೩ ವರ್ಷ ೩ ತಿಂಗಳ ಮಗುವೊಂದು—ಅದೂ ತಪ್ಪು ಹೆಜ್ಜೆ ಇಡುತ್ತ ಸಾಗಿತ್ತು. ಪೋಲೀಸರು ಹೆಂಗಸನ್ನು ಹಿಡಿದು ನಿಲ್ಲಿಸಿ, ನೋಡಿದರು,— ಆ ಪಾಪಿ ಹೆಂಗಸು ತನ್ನ ಚಿಕ್ಕ ಮಗುವಿಗೂ ಚೆನ್ನಾಗಿ ಕುಡಿಸಿದ್ದಳು. ಅದು ಬೋಧೆಯೇ ಇಲ್ಲದೆ ನಿಂತುಕೊಂಡಿತ್ತು. ನೋಡುತ್ತಿದ್ದಂತೆ ಮಗುವು ಬಿದ್ದುಬಿಟ್ಟಿತು. ಮರಣಪಟ್ಟಿತೆಂದು ಊಹಿಸಿ ಆಸ್ಪತ್ರೆಗೆ ಸಾಗಿಸಿದರು. ಮಗು ಬದುಕಿಕೊಂಡಿತು. ಹೆಂಗುಸನ್ನು ವಿಚಾರಣೆಗೊಳಪಡಿಸಿದಾಗ, ತಾನು ಕುಡಿದೂ ಮಗುವಿಗೂ ಕುಡಿಸಿದ ರಹಸ್ಯ ಹೊರಬಿತ್ತು.

ಇದು 'ದೇವರ ದಯೆ!'

ಪರಮಾತ್ಮನ ದಯೆ—ಅಹುದು. ಒಂದು ವಿಚಿತ್ರ ಸುದ್ದಿಯಿಂದ ಅದು ಮತ್ತಷ್ಟು ದೃಢವಾಯಿತು. ನಾಸ್ತಿಕರು ನಂಬುವಂತಿಲ್ಲವಾದರೂ—ಡಾಕ್ಟರರು ಕಣ್ಣಾರೆ ಕಂಡು 'ನಂಬಲಾರದಿರುವುದು ಅಸಾಧ್ಯ'ವೆಂದಿರುವರು.

ಸಂತಾಲ್ ಪರಗಣಾ ಎಂಬಲ್ಲಿನ ಡಾ. ಸತ್ಯೇಂದ್ರನಾಥ ಬೆನರ್ಜಿಯೆಂಬವರ ಮಗನು ಕ್ಷಯ (Pthisis) ರೋಗದಿಂದ ಹಾಸಿಗೆ ಹಿಡಿದಿದ್ದನು, ವಿಚಕ್ಷಣ ಡಾಕ್ಟರುಗಳೆಲ್ಲ, ಇನ್ನೊಂದು ವಾರದೊಳಗೆ ಹುಡುಗನು ಮರಣ ಹೊಂದುವನಾಗಿ ಖಂಡಿತಾಭಿಪ್ರಾಯ ಕೊಡಿದ್ದರು. ರಾತ್ರೆ ತಾಯಿಗೊಂದು ಕನಸು:—'ನಿನ್ನ ಮಗನು ಬದುಕುವನು; ಆತನ ಹಾಸಿಗೆಯಡಿಯಲ್ಲಿ ತಾಮ್ರದ ಕಾಲಾಣೆ ನಾಣ್ಯವಿದೆ. ಅದನ್ನು ನೀರಲ್ಲಿ ಮುಳುಗಿಸಿ, ಆ ನೀರನ್ನು ಹುಡುಗನಿಗೆ ಪಾನಮಾಡಲು ಕೊಡು' ಎಂದು, ಕುಳ್ಳ ಶರೀರದ ಒಂದು ವಿಚಿತ್ರ ದೇವತೆಯು ನುಡಿದಂತಾಯಿತು. ಮರುದಿನ ತಾಯಿಯು ಎದ್ದು ನೋಡಿದಳು, ಹುಡುಗನ ಹಾಸಿಗೆಯಡಿಯಲ್ಲಿ ನಾಣ್ಯವಿದೆ! ಅದನ್ನು ತೆಗೆದು ನೀರಲ್ಲಿ ಮುಳುಗಿಸಿ ಹುಡುಗನಿಗೆ ಆ ನೀರು ಕುಡಿಯಗೊಟ್ಟಳು. ಆಶ್ಚರ್ಯ! ಮರುದಿನವೇ ಹುಡುಗನಿಗೆ ಜ್ವರ ಬಿಟ್ಟಿತು. ಮೂರು ದಿನಗಳಲ್ಲಿ ಹುಡುಗನು ನಡೆದುಹೋಗುವ ಶಕ್ತಿ ಪಡೆದನು. ಈಗ, ರೋಗದ ಕುರುಹುಗಳೇ ಇಲ್ಲದೆ ಮೈ ಭಾರ ಹೆಚ್ಚಿದುದೂ ತೋರಿ ಬಂದಿದೆ!

ಆಡಿನ ಹಾಲು.

'ಗುಡ್ ಹೆಲ್ತ್' ಪತ್ರಿಕೆಯಲ್ಲಿ ಐ. ಟಿ. ಬ್ಲೆಲೋಕ್ ಎಂಬವರು ಹೀಗೆ ಬರೆಯುತ್ತಾರೆ—"ಆಡಿನ ಹಾಲಿನಲ್ಲಿ ಕ್ಷಯರೋಗ ಅಣುಗಳಿರುವುದಿಲ್ಲ. ಅದನ್ನು ಭರವಸೆಯಿಂದ, ಕಾಯಿಸದೆ ಕೂಡ ಸೇವಿಸಬಹುದು. ಹಾಲನ್ನು ನಾವು ಹೆಚ್ಚಾಗಿ ಕಾಯಿಸಿದರೆ 'ವಿಟಮಿನ್'ಗಳು ನಾಶವಾಗುವುವು. ಮಕ್ಕಳಿಗೆ ಕೆಲವೊಂದು ವ್ರಣಗಳು ಕೂಡ, ಗೋವಿನ ಹಾಲಿನ ಬದಲಾಗಿ ಆಡಿನ ಹಾಲು ಕೊಡುವುದರಿಂದ ಗುಣವಾದುದು ಕಂಡುಬಂದಿದೆ. ಈ ಹಾಲು ಮಕ್ಕಳಿಗೂ ವೃದ್ಧರಿಗೂ ವಿಶೇಷಕಾರವಾಗಿ ಒಳ್ಳೆಯದು. ಆಡಿನ ಹಾಲಿನಲ್ಲಿ ಕಬ್ಬಿಣದ ಅಂಶವೂ ಹೆಚ್ಚಿರುವುದರಿಂದ ರಕ್ತವಿಹೀನತೆಯಲ್ಲಿಯೂ ಇದು ಉಪಯೋಗಕರ. ಜೀರ್ಣವಾಗಲು ಇದು ಸುಲಭವಾದುದು. ಜೀರ್ಣಶಕ್ತಿ ಕಡಿಮೆಯುಳ್ಳವರು ಇದನ್ನು ಸೇವಿಸಬಹುದು. ಇದರಲ್ಲಿ ಪ್ರೋಟೀನೂ ಹೆಚ್ಚಾಗಿದೆ. ಮೊಲೆಹಾಲಿಗಿಂತ ಮೂರು ಪಾಲು ಜಾಸ್ತಿ ಮತ್ತು ದನದ ಹಾಲಿಗಿಂತ ಎರಡು ಪಾಲು ಹೆಚ್ಚು ಲವಣವೂ ಆಡಿನ ಹಾಲಿನಲ್ಲಿದೆ. ಆಡಿನ ಹಾಲಿನ ಮತ್ತೊಂದು ವೈಶಿಷ್ಟ್ಯವೆಂದರೆ—ಅದರಲ್ಲಿ ನೀರಿನ ಅಂಶವು ಕಡಿಮೆ.

ಮೂರು ಬಗೆಯ ಹಾಲುಗಳು.

	ಆಡು	ದನ	ಮನುಷ್ಯ
ನೀರು	86·45	87·40	86·40
ಗಟ್ಟಿ ಪದಾರ್ಥ	·85	·76	·90
ಕೇಸಿಯನ್	3·00	3·00	1·00
ಅಲ್ಬುಮಿನ್	1·00	·40	1·30
ಕೊಬ್ಬು	4·20	3·75	3·50
ಸಕ್ಕರೆ	4·50	4·70	7·00

ನಶ್ಯದಿಂದ ಶೀತ ಗುಣವಾಗುವುದಿಲ್ಲ!

"ಹೆಲ್ತ್" ಪತ್ರಿಕೆಯ ಶ್ರೀಮಾನ್ ಡಾ. ಎಮ್. ಸಂಜೀವರಾವ್, (ಮದ್ರಾಸು ಜನರಲ್ ಆಸ್ಪತ್ರೆ) ಇವರು ಹೀಗೆ ಬರೆಯುತ್ತಾರೆ—

ನಶ್ಯದಿಂದ ಶೀತವು ನಿಲ್ಲುವುದಿಲ್ಲ. ಬದಲಾಗಿ ಶೀತವು ಹೆಚ್ಚುತ್ತದೆ. ನಶ್ಯ ಸೇವಿಸಿದ ಕೂಡಲೇ ಮೂಗಿನಿಂದ ಮತ್ತಷ್ಟು ಸಿಂಬಳವು ಹರಿದುಹೋಗುವುದರಿಂದ ಶೀತವು ಗುಣವಾಗುವುದೆಂಬ ಭ್ರಾಂತಿ ಮಾತ್ರ. ಆ ಗುಣವು ತಾತ್ಕಾಲಿಕವಾದುದು. ನಶ್ಯವನ್ನೂ ಅಂತಹ ಬೇರೆ ತೀಕ್ಷ್ಣ ವಸ್ತುಗಳನ್ನೂ ಯಾವಾಗಲೂ ಸೇವಿಸಬಾರದು.

ಪ್ರಚಲಿತಸಮಾಚಾರ.

ಸೈಕಲ್ ಸವಾರಿಯ ದಾಖಲೆ.

ಎಡೆಬಿಡದೆ ಒಬ್ಬ ಮನುಷ್ಯನು ಎಷ್ಟು ಘಂಟೆಗಳ ಕಾಲ ಸೈಕಲ್ ಸವಾರಿ ಮಾಡಬಲ್ಲನು? ಈ ತನಕ ಅದರ ದಾಖಲೆ ೫೮ ಘಂಟೆ ೧೬॥ ನಿಮಿಷ. ಅದ್ಭುತ ಆಟವದು. ಢಿಲ್ಲಿ ನಗರದ ಬಂಗಾಳೀ ಕ್ಲಬ್ಬಿನವರ ನೇತೃತ್ವದಲ್ಲಿ ಕಳೆದ ವಾರ ಇಂತಹ ಆಟ ನಡೆದಾಗ ೨೫ ವಯಸ್ಸಿನ ಬಿ. ಎಲ್. ನಾಗ ಮತ್ತು ೧೬ ವಯಸ್ಸಿನ ಎಸ್. ಸಿ. ರೋಯ್ ಎಂಬಿಬ್ಬರು ಬಾಲಕರು ಈ ಕೆಳಗಿನಂತೆ ದಾಖಲೆಯನ್ನು ಸ್ಥಾಪಿಸಿರುವರು:—

ಘಂಟೆ	ರೋಯ್. ಮೈಲುಗಳು.	ನಾಗ. ಮೈಲುಗಳು.
6	45·60	42·95
12	76·70	90·20
18	117·82	133·77
24	158·32	174·27
30	198·80	216·61
36	238·09	254·66
40	262·6	270·2
50	325·84	343·02
51-33	–	354·18
58–16½	343·64	—

ರೋಯನು ಈ ಸ್ಪರ್ಧೆಯ ನಂತರ ಸೌಖ್ಯವಾಗಿರುವನು. ನಾಗನಿಗೆ ಮಾತ್ರ ಎರಡು ಮೂರು ದಿನ ತಲೆ ತಿರುಗುತ್ತಲೇ ಇತ್ತು.

ಪ್ರಪಂಚದ ದಾಖಲೆ.

ಈಜುವುದರಲ್ಲಿ ಹೆಸರಾದ ಕಲ್ಕತ್ತೆಯ ಪ್ರಫುಲ್ಲ ಘೋಷನು ಕೈಗಳಿಗೆ ಕೋಳ ತೊಟ್ಟುಕೊಂಡು ಈಜಾಡಿ ಪ್ರಪಂಚದ ದಾಖಲೆಯನ್ನು ಸ್ಥಾಪಿಸಲು ನಿಶ್ಚಯಿಸಿದ್ದನು. ಸಾಮಾನ್ಯ ಈಜಿನಲ್ಲೀತನು ೭೯ ಘಂಟೆ ೨೭ ನಿಮಿಷ ಎಡೆಬಿಡದೆ ಈಜಾಡಿ ದಾಖಲೆಯನ್ನು ಸ್ಥಾಪಿಸಿದ್ದಾನೆ. ಇದೇ ಕಳೆದ ಜುಲಾಯಿ ತಿಂಗಳಲ್ಲಿ ಕೈಗಳಿಗೆ ಕೋಳ ತೊಟ್ಟುಕೊಂಡು ೨೫ ಘಂಟೆಗಳ ತನಕ ಈಜಾಡಿರುವನು. ಈಗ ಢಾಕ್ಕಾ ಜಿಲ್ಲೆಯ ರಾಮ್ನಾ ಎಂಬಲ್ಲಿ, ವಿಶ್ವವಿದ್ಯಾಲಯದ ಕೆರೆಯಲ್ಲಿ, ಕೈಗಳಿಗೆ ಕೋಳ ತೊಟ್ಟುಕೊಂಡು ೫೦ ಘಂಟೆಗಳ ಕಾಲ ಎಡೆಬಿಡದೆ ಈಜಾಡುವೆನೆಂದು ಹೊರಟಿರುವನು!

ಡಾ। ಸ್ಪೈಗೆಲಳ 'ಶಾಪ!'

ಗಾಂಧಿಜಿಯವರು ಈ ವಾರದಲ್ಲಿ ತಮ್ಮ ಪ್ರತಿಜ್ಞೆಗನುಸಾರವಾಗಿ ೭ ದಿನಗಳ ಉಪವಾಸವನ್ನು ಆರಂಭಿಸುವರು. ಆ ಉಪವಾಸದ ಸಮಯದಲ್ಲಿ ಅವರೊಡನೆ ಇರಲೆಂದು, ಅವರ ಜರ್ಮನ್ ಶಿಷ್ಯೆಯಾದ ಡಾ। ಸ್ಪೈಗೆಲಳು ಸಬರ್ಮತಿ ಆಶ್ರಮದಿಂದ ಹೇಳದೆ 'ಪರಾರಿ.' ಆಕೆಯ ಕೊಠಡಿಯಲ್ಲಿ ಹುಡುಕಿದಾಗ ತಾನು ವಾರ್ಧಕ್ಕೆ ಹೊರಟಿರುವೆನೆಂಬ ಅರ್ಥದ ಪತ್ರ ಬರೆದಿಟ್ಟಿದ್ದಳು. ಈಕೆಗೆ ಮಹಾತ್ಮಾಜಿಯವರು, ಅಹಮ್ಮದಾಬಾದಿನಿಂದ ವಾರ್ಧಕ್ಕೆ ಹೊರಟುಬರಲು ರೈಲು ಖರ್ಚಿಗೂ ಕಳುಹಿಸಲಿಲ್ಲವಂತೆ. ಆದಕಾರಣ ನಡೆಕೊಂಡು ಹೊರಟಿರುವಳು. ಮುಂದೆ ಸಹಾಯ ಸಿಗದಿದ್ದರೆ ರೈಲು ಹತ್ತುವಳು.

ಜಪಾನಿನ ಪ್ರಜಾಸಂಖ್ಯೆ—

—ಹಾವಸೆಯಂತೆ ಹೆಚ್ಚುತ್ತಿದೆ! ೧೯೩೩ರಲ್ಲಿ ಅಲ್ಲಿ ೯೭೩,೨೦೯ ಜನಸಂಖ್ಯೆ ಹೆಚ್ಚಿತು—ಅಂದರೆ ೩,೧೩೧,೧೨೫ ಜನನಗಳಾದುವು. ಅದು ಘಂಟೆಗೆ ೩೫೭ ಆಯಿತು! ಆದರೂ ಇದು ೧೯೩೨ಕ್ಕಿಂತ ೬೧,೬೧೮ದಷ್ಟು ಕಡಿಮೆಯಾಯಿತಂತೆ. ೧೯೩೨ರಲ್ಲಿ ಅಲ್ಲಿ ಸರಾಸರಿ ಘಂಟೆಗೆ ೧೦೦೦ ಜನನಗಳಾಗಿದ್ದುವು!

ಮರಣಗಳಿಗೂ ಕಡಿಮೆಯಿಲ್ಲ!

ಜಪಾನಿನ ಜನಸಂಖ್ಯೆಯ ಮಾತು ಹಾಗಾಯಿತು. ಇನ್ನು ಮರಣಗಳೋ?—೧೯೩೩ರಲ್ಲಿ ೧,೧೯೩,೯೮೭ ಮರಣಗಳಾದುವು. ಇದು ೧೯೩೨ರ ಸಂಖ್ಯೆಗಿಂತ ೧೯,೦೪೧ ಹೆಚ್ಚಾಯಿತು. ಸರಾಸರಿ ಘಂಟೆಗೆ ೧೩೬ ಮರಣಗಳು!

ಮುಸ್ಸಲೋನಿಯವರು—

ಜರ್ಮನಿಗೆ ಪ್ರಯಾಣಬೆಳೆಸುವವರಿದ್ದಾರೆಂದು ಸುದ್ದಿ. ಹಿಟ್ಲರರು ಇಟೆಲಿಗೆ ಬಂದಿದ್ದರಲ್ಲ; ಮುಸ್ಸಲೋನಿಯವರು ಬದಲಾಗಿ ಅಲ್ಲಿಗೆ ಹೊರಟಿರುವರು. ಇವರು ಹೊರಡುವುದು ನಿಜವಾದರೆ ಮುಸ್ಸಲೋನಿಯವರು ಇಟೆಲಿಯ ಸರ್ವಾಧಿಕಾರಿಯಾದ ನಂತರ ಕೈಕೊಳ್ಳುವ ಪರದೇಶ ಪ್ರಯಾಣ ಇದೇ ಮೊದಲನೆಯದಾಗುವುದು. ಆದರೆ, ಆಸ್ಟ್ರಿಯದ ಗಡಿಬಿಡಿಯೊಂದಾಯಿತಲ್ಲ—ಈ ಕಾರಣದಿಂದ ಸದ್ಯಃ ಹೊರಡುವರೇ?

ತುಂಡು ಸುದ್ದಿ.

ಹಿಂದೂದೇಶದಲ್ಲಿ ಬೆಳ್ಳಿಯ ತುಂಬ 'ದಾಸ್ತಾ'ನಿದೆ. ಇಂಡಿಯಾ ದೊರೆತನವು ರೂಪಾಯಿ ನೋಟುಗಳನ್ನು ಹೊರಡಿಸಲು ಇಚ್ಛಿಸುವುದಿಲ್ಲವಾಗಿ ಪ್ರಕಟಿತವಾಗಿದೆ.

ನಾಗಪುರದ ಮಜೂರ ಮುಖಂಡರಾದ ಶ್ರೀ। ಆರ್. ಡಿ. ಬೇಹಾರರಿಗೆ ಒಂದೂವರೆ ವರ್ಷದ ಕಠಿಣ ಬಂಧನ ದಂಡನೆಯಾಯಿತು.

ಮದನಪಲ್ಲಿಯಲ್ಲೊಂದು ಜೂಜುಕೋರರ ಕೂಟಕ್ಕೆ ಪೋಲೀಸರ ದಾಳಿಯಾಗಿ ೩೦ ಮಂದಿಯನ್ನು ಸೆರೆ ಹಿಡಿಯಲಾಯಿತು.

ಪ್ರಖ್ಯಾತ ವೈಮಾನಿಕರಾದ ಸರ್. ಎಲನ್ ಜೆ. ಕೊಬ್ಬಾಮ್‌ರವರು ಸದ್ಯದಲ್ಲಿ ಹಿಂದೂದೇಶಕ್ಕೆ ಬಂದು, ವಿಮಾನ ಕಸರತ್ತುಗಳನ್ನು ಪ್ರದರ್ಶಿಸಲಿರುವರಂತೆ.

ಬಿಸಿಯಾದ ಕಬ್ಬಿಣವನ್ನಾದರೂ ಯಾವ ಅಪಾಯವೂ ಇಲ್ಲದೆ ಕೈಯಲ್ಲಿ ಹಿಡಿಯಬಹುದಾದ ಕೈಚೀಲಗಳು ಇಂಗ್ಲಾಂಡಿನಲ್ಲಿ ಸಿದ್ಧವಾಗಿವೆ.

ಕಪುರ್ತಲಾದಲ್ಲಿ ಪುನಃ ಕರ್ಫ್ಯೂ ಆರ್ಡರ್ ಜ್ಯಾರಿ ಮಾಡಲಾಗಿದೆ.

ಸೆಂಟ್ರಲ್ ಆಫ್ರಿಕದಿಂದ ಲಂಡನಿಗೆ ಇಂಪೀರಿಯಲ್ ಎಂಪೇಸ್ ವಿಮಾನದಲ್ಲಿ ಒಯ್ಯಲ್ಪಡುತ್ತಿದ್ದ ನಾಲ್ಕು ಸಾವಿರ ಪವನಿನಷ್ಟು ಬಂಗಾರವು ನಡುದಾರಿಯಲ್ಲಿ ಕಾಣೆಯಾಗಿದೆ.

ಛಾಪಖಾನಾ ಕೆಲಸಗಾರರು ಕಲಬಿನ ವಿಷಯವಾಗಿ ಮಾಡಿದ ಮನವಿಯನ್ನು ಯಜಮಾನರುಗಳು ಸ್ವೀಕರಿಸಲೊಪ್ಪದಕಾರಣ ಡಬ್ಲಿನ್ ನಗರದಲ್ಲಿ ಕಳೆದ ಶುಕ್ರವಾರ ಒಂದು ದಿನ ಯಾವ ಪತ್ರಿಕೆಯೂ ಅಚ್ಚಾಗಲಿಲ್ಲ.

ಬಿಹಾರ್ ಪ್ರಾಂತದ ಜೈಲುಗಳಲ್ಲಿರುವ ೮೫ ಶಾ। ಭಾ ಕೈದಿಗಳಲ್ಲಿ ಕಳೆದ ವಾರ ೨೪ ಮಂದಿಯನ್ನು ಬಿಡುಗಡೆ ಮಾಡಿದರು.

ಹಜಾರಿಬಾಗ್ ಜೈಲಿನಲ್ಲಿರುವ ರಾಜಕೀಯ ಕೈದಿಗಳ ಮೇಲೊಂದು ಲಾಠಿ ಚಾರ್ಜು ಜರಗಿತೆಂದು ಸುದ್ದಿ. ಯಾರು ಹೊಡೆದರು, ಏಕೆ ಹೊಡೆದರು ಎಂದು ತಿಳಿದು ಬರಲಿಲ್ಲ.

ಬ್ರಿಟಿಷರ ಹೊಸ ಯುದ್ಧನಾವೆಯೊಂದು ('ಎಂಪಿಯನ್') ಸಮುದ್ರಕ್ಕಿಳಿಸಲಾಯಿತು.

ವೈಸರಾಯರಾದ ಮಹಾಮಾನ್ಯ ಲೋರ್ಡ್ ವಿಲ್ಲಿಂಗ್ಡನ್ನರು ಇದೇ ತಾ. ೧೩ಕ್ಕೆ ಕರಾಚಿಗೆ ಬಂದಿಳಿಯುವರು.

ಸರ್ ಹೆನ್ರಿಹೇಗರವರು ಸಂಯುಕ್ತ ಪ್ರಾಂತ್ಯದ ಗವರ್ನರರಾಗಿ ಬರುವ ಡಿಸೆಂಬರ ತಾ. ೩ರಲ್ಲಿ ಚಾರ್ಜು ವಹಿಸುತ್ತಾರೆ.

ವೈಸರಾಯರವರು (ಸರ್ ಜೋರ್ಜ್ ಸ್ಟೇನ್ಲಿ) ಇಂದೋರಿಗೆ ಹೋಗಿ ರಾಜಸನ್ಮಾನಗಳನ್ನು ಸ್ವೀಕರಿಸಿದರು.

'ಕೋಟಿ' ಹೆಸರಿನ ಸುಗಂಧದ್ರವ್ಯಗಳ ವ್ಯಾಪಾರಿಯಾದ, ಕೋಟ್ಯಾಧೀಶ ಫ್ರಾಂಕೋಯ್ಸ್ ಕೋಟಿಯವರು (ಫ್ರಾನ್ಸ್)ನಲ್ಲಿ ಕಾಲವಾದರು.

ಥಿಯೊಸೊಫಿಕಲ್ ಸೊಸೈಟಿಯ ಅಧ್ಯಕ್ಷರಾದ ಡಾ। ಜಿ. ಎಸ್. ಅರುಂಡೇಲರವರು ಸಪತ್ನೀಕರಾಗಿ ಅಮೇರಿಕಕ್ಕೆ ಹೊರಟಿರುವರು.

ಅಮೇರಿಕದಲ್ಲಿ ಉಷ್ಣವಾತತರಂಗ ಸಂಚಾರದಿಂದ ಘಂಟೆಗೆ ೧೫ರಂತೆ ಮರಣಗಳಾಗುತ್ತಿವೆ. ಈ ತನಕ ಸುಮಾರು ೬೦೦ ಮರಣಗಳಾದುವು.

1876ನೇ ಇಸವಿಯಿಂದಲೂ ಪ್ರಸಿದ್ಧಿ ಹೊಂದಿದ

ಎಮ್. ಗಣಪಯ್ಯ ಎಂಡ್ ಸನ್ಸ್‌ರವರ

ಶಾಸ್ತ್ರೀಯ ಮತ್ತು ಅನುಭವಸಿದ್ಧ ಔಷಧಗಳು.

ಮಹಾ ಮದನಕಾಮೇಶ್ವರಿ ಲೇಹ:—ಆಯುರ್ವೇದ ಶಾಸ್ತ್ರದಲ್ಲಿ ಅತಿ ಪ್ರಾಮುಖ್ಯತೆಯನ್ನು ಪಡೆದ ಔಷಧಿ. ನರಗಳ ಮತ್ತು ಜನನೇಂದ್ರಿಯದ ಶಕ್ತಿಹೀನತೆ, ಎದೆನೋವು, ಮಲಬದ್ಧತೆ, ಅಜೀರ್ಣ, ಅರುಚಿ, ಅಗ್ನಿಮಾಂದ್ಯ, ವಾಯು ಉಪದ್ರ ಮೊದಲಾದುವುಗಳನ್ನು ಹೋಗಲಾಡಿಸಿ ಮಾನಸಿಕ ಶಕ್ತಿಯನ್ನು ಹೆಚ್ಚಿಸುವುದು. ರಕ್ತವೃದ್ಧಿಯನ್ನೂ, ವೀರ್ಯ ವೃದ್ಧಿಯನ್ನೂ ಉಂಟುಮಾಡಿ ದೇಹಕ್ಕೆ ಸಂಪೂರ್ಣ ಆರೋಗ್ಯವನ್ನು ಉಂಟುಮಾಡುವುದು. ನಿರೋಗಿಗಳೂ, ಶ್ರಮಜೀವಿಗಳೂ ಇದನ್ನು ಪ್ರತಿನಿತ್ಯ ಸೇವಿಸಿದ್ದಲ್ಲಿ ಶ್ರಮ ಪರಿಹಾರವಾಗಿ ಸುಖನಿದ್ರೆಯು ಲಭಿಸುವುದು.

ಬಾಟ್ಲಿ 1ರ ರೂ. 2–0–0. ಬಾಟ್ಲಿ 3ರ ರೂ. 5–12–0.

ಮೇಹ ಕುಠಾರ:—ಪ್ರಮೇಹ, ಮೂತ್ರಕೃಚ್ಛ್ರ, ಮೂತ್ರ ಹೋಗದಿರುವಿಕೆ, ಮೂತ್ರ ಹೋಗುವಾಗ ಉರಿ, ಮೂತ್ರದ್ವಾರದಿಂದ ಕೀವು ಬರುವುದು, ಮೂತ್ರದಿಂದ ಧಾತು ಹೋಗುವುದು, ಮೂತ್ರ ಆಗಾಗ ಬಂದು ತಡೆಯಲಿಕ್ಕೆ ಸಾಧ್ಯವಿಲ್ಲದಿರುವುದು ಇವೇ ಮೊದಲಾದ ಹಲವು ಮೂತ್ರಕೋಶದ ರೋಗಗಳಿಗೆ ಸಿದ್ಧೌಷಧ.

ಡಬ್ಬಿ 1ಕ್ಕೆ ರೂ. 2–8–0. ಡಬ್ಬಿ 3ರ ರೂ. 7–0–0.

ಕಸ್ತೂರಿ ಮಿಶ್ರಿತ ದಶಮೂಲಾರಿಷ್ಟ:—ಇದು ಬಾಣಂತಿಯರಿಗೆ ಅತ್ಯದ್ಭುತಕರವಾದ ಶಕ್ತಿವರ್ಧಕ ರಸಾಯನವಾಗಿರುತ್ತದೆ. ಪ್ರಸವಿಸಿದ ನಂತರ ಅವರ ಪ್ರಸವದ ಆಯಾಸವನ್ನು ಹೋಗಲಾಡಿಸಿ ಗರ್ಭಕೋಶದ ವೇದನೆಗಳನ್ನು ಸಮಾಧಾನಪಡಿಸುವುದು. ಗರ್ಭಕೋಶದಲ್ಲಿ ಕೆಡುಕು ರಕ್ತವು ನಿಲ್ಲದಂತೆ ಮಾಡಿ, ಅಗ್ನಿಮಾಂದ್ಯ, ಅರುಚಿ, ಸಂಧಿನ ಜ್ವರ, ರಕ್ತಹೀನತೆ, ನಿದ್ರಾಭಂಗ ಮೊದಲಾದುವುಗಳನ್ನು ಹೋಗಲಾಡಿಸಿ, ದೇಹವನ್ನು ಶಕ್ತಿವಂತವೂ ಆರೋಗ್ಯವಂತವೂ ಮಾಡುವುದು. ಬಾಣಂತಿಯರು ಪುಷ್ಟಿಹೊಂದಿ, ಶಿಶುವಿಗೂ ಧಾರಾಳವಾಗಿ ಹಾಲು ಸಿಕ್ಕುವಂತೆ ಮಾಡುವುದು.

ಬಾಟ್ಲಿ 1ಕ್ಕೆ ರೂ. 1–8–0. ಬಾಟ್ಲಿ 2ರ ರೂ. 3–0–0.

ಇಪ್ಪತ್ತೈದು ವರ್ಷಗಳ ಹಿಂದೆ.

ಮಹಾತ್ಮಾಜಿಯವರ ಸಂಚಾರ ಕಲ್ಕತ್ತೆಯಲ್ಲಿ.

ಬಂಗಾಳದ ಕಾಂಗ್ರೆಸ್ ವಿವಾದವನ್ನು ಗಾಂಧಿಜಿಯವರಿಂದ ತೀರ್ಮಾನಿಸಲಾಗಲಿಲ್ಲ. (ಅಥವಾ ಅವರು ಪರಿಣಾಮಕಾರಿಯಾದ ಸಿದ್ಧಾಂತವನ್ನು ಸೂಚಿಸಲಿಲ್ಲ.) ಅಹಿಂಸಾವರಿಗೆ ವಿವಾದ ತೀರ್ಮಾನದ ಕಾರ್ಯಭಾಗವನ್ನು ವಹಿಸಿಕೊಟ್ಟರು.

ಕಾರ್ಪೊರೇಶನಿನವರು ಮಹಾತ್ಮಾಜಿಯವರನ್ನು ಸ್ವಾಗತೀಕರಿಸಿ ಮಾನಪತ್ರ ವನ್ನರ್ಪಿಸಿದ ಆ ಸಮಾರಂಭವು, ಕಲ್ಕತ್ತೆಯಲ್ಲಿ ಅಪೂರ್ವವೂ ಅತಿ ಗಂಭೀರವೂ ಎನಿಸುವಂತೆ ವಿಶೇಷ ವೈಭವದಲ್ಲಿ ಜರಗಿತು. ಲೋಭಾನವು ಉರಿಯುತ್ತಿರಲು; ಜನಸಾಗರದ ಜಯಘೋಷದ ನಡುವೆ ಅರೆಬೆತ್ತಲೆ ಫಕೀರನನ್ನು ಕಲ್ಕತ್ತಾ ನಗರಶಾಸಕರು ಸ್ವೀಕರಿಸಿ, ಪುಷ್ಪಾಲಂಕೃತವಾದ ಕಾರ್ಪೊರೇಶನ್ ಗೃಹದೊಳಗೆ ಕರೆದೊಯ್ದರು. ಮೇಯರರು ಮಾನಪತ್ರವನ್ನರ್ಪಿಸಿದರು. 'ಜಾತೀಯ ದ್ವೇಷದ ಕೀಳುತನ ನಿನ್ನಲ್ಲಿಲ್ಲ. ಸೋದರತ್ವದ ಬೋಧಕನು ನೀನು. ನವಚೇತನದಾಯಕನು. ಸ್ವಾರ್ಥತ್ಯಾಗದಿಂದ, ದೀನದರಿದ್ರರ ನಾಯಕತ್ವದಿಂದ, ಆತ್ಮಸಂಯಮನದಿಂದ, ಶಾಂತಿಪಾಠ ಉಪದೇಶದಿಂದ, ಸರ್ವರಿಗೂ ಆದರ್ಶನು. ಬಂಗಾಳದವರ ಹೃದಯಾಕಾಶದಲ್ಲಿ ನೆಲೆಸಿರುವಿ ನೀನು. ಹೇ ಭಿಕ್ಷು! ಹೇ ವಿಶ್ವಪ್ರೇಮಿ! ಹೇ ಮಹಾತ್ಮ! ನಿನ್ನ ಕಾರ್ಯಪಥವು ಕಠಿನವಿದ್ದರೂ ನಿಶ್ಚಿತ ಗುರಿಗೆ ಮುಟ್ಟುವಂತೆ ಜಯಹೊಂದಲೆಂದು ನಮ್ಮ ಹೃತ್ಪೂರ್ವಕ ಪ್ರಾರ್ಥನೆ' ಎಂಬ ಸಾರಾಂಶವುಳ್ಳ ಆ ಮಾನಪತ್ರವು ಬೆಳ್ಳಿಯ ಪೆಟ್ಟಿಗೆಯಲ್ಲಿರಿಸಿ ಕೊಡಲಾದುದನ್ನು ಮಹಾತ್ಮರು ಐದು ಸಾವಿರ ರೂಪಾಯಿಗಳಿಗೆ ಹರಾಜು ಹಾಕಿದರು.

ಮುಂದೆ ಗಾಂಧಿಜಿಯವರು ಕೆಲವೊಂದು ಸಭೆಗಳಲ್ಲಿ ಭಾಷಣಮಾಡಿ, ಧನಸಂಗ್ರಹ ಮಾಡುತ್ತ, ಮುಂಬರಿದು, ಕಾನ್ಪುರಕ್ಕೆ ಬಂದು ಅಲ್ಲಿ ಒಂದೆರಡು ದಿನ ತಂಗುತ್ತ, ೬ ಜಿಲ್ಲೆಗಳಿಂದ ಬಂದ ಸುಮಾರು ರೂ. ೨೫೦೦೦ನ್ನು ಪಡೆದು, ಕಾಶಿಗೆ ಹೊರಟರು.

ಕಾಶಿಗೆ ತಾ. ೨೭ಕ್ಕೆ ಗಾಂಧಿಜಿಯವರು ತಲಪಿದರು. ಅವರನ್ನು ಕಾಶೀನಗರ ನಿವಾಸಿಗಳು ಜಯಘೋಷದಿಂದ ಸ್ವಾಗತೀಕರಿಸಿದರು. ಗಾಂಧಿಜಿಯವರು ಕಾಶಿ ವಿದ್ಯಾಪೀಠದಲ್ಲಿಳಿದುಕೊಂಡಿರುವರು.

ಸನಾತನಿಗಳು ಕರಿಯ ಬಾವುಟಗಳ ಮೆರವಣಿಗೆ ನಡೆಸಿದ್ದರು.

ಬಿಹಾರಿನ ಸ್ಥಿತಿಯೇನು?

ನೆರೆಗಳು ಬೆಳೆಯನ್ನು ಅನೇಕ ಕಡೆಗಳಲ್ಲಿ ಪೂರ್ಣ ನಾಶಪಡಿಸುವಷ್ಟು ಹಾನಿಕರವಾಗಿ ಪರಿಣಮಿಸಿದುವಾದರೂ—ಪ್ರಾಂತ್ಯದ ಸರಾಸರಿ ಬೆಳೆಯನ್ನು ಗಣಿಸಿದರೆ—ಈ ತನಕ ನಾಶವಾದ ಬೆಳೆ ರೂಪಾಯಿಗೆರಡಾಣೆಯಷ್ಟು. ಚಂಪಾರಣ್ಯದಲ್ಲಿ ಪ್ರಾಣಹಾನಿಯಾಗಲಿಲ್ಲ. ಆದರೆ, ಇನ್ನೂ ಅನೇಕ ಕಡೆಗಳಲ್ಲಿ ನೆರೆಯು ಇಳಿದು ಹೋಗುದುದಿಲ್ಲ. ನೆರೆಹಾವಳಿಯನ್ನು ತಡೆವ—ಯಾ ಚಿಕಿತ್ಸಿಸುವ—ಒಂದು ಕಮಿಟಿಯು ಕೆಲಸ ಮಾಡುತ್ತಿದೆ. ನಿರಾಶ್ರಿತರಾದವರಿಗೆ ವಸತಿಗಳನ್ನು ಕಲ್ಪಿಸಿಕೊಡುವ ಕ್ರಮವೂ ಹೊಸದಾಗಿ ತಲೆದೋರಿದೆ. ಭೂಕಂಪವು ಬಿಟ್ಟು ಹೋದುದನ್ನು ನೆರೆಯು ಪೂರೈಸುತ್ತಿದೆಯೆಂಬ ಗೋಳು ಕೇಳುತ್ತಿದೆ. ಬೆಳೆಯೆಲ್ಲ ಫಲಕ್ಕೆ ಬರುವುದೆಂಬ ಧೈರ್ಯವಾರಲ್ಲೂ ಇಲ್ಲ. ಅಂತು ಬಿಹಾರ್ ಪ್ರಾಂತ್ಯವು ದುಃಖಚರಿತ್ರೆಯನ್ನೇ ಬರೆಯುತ್ತಿದೆ!

ಕಾಶಿಯಲ್ಲಿ ಕಾಂಗ್ರೆಸ್ ಕಾರ್ಯಕಾರಿ ಸಮಿತಿ ಸಭೆ.

—ಕಾಶಿಯಲ್ಲಿ, ವಿದ್ಯಾಪೀಠದಲ್ಲಿ ತಾ. ೨೭ರಲ್ಲಿ ಸೇರಿತು. ಡಾ। ಅಲಮುಅವರು ಬರೆದ ರಾಜೀನಾಮೆ ಪತ್ರವು ಓದಲಾಗಿ, ರಾಜೀನಾಮೆಯು ಅಂಗೀಕೃತವಾಯಿತು. ಸಭೆಗೆ, ಅಬುಲ್ ಕಲಂ ಅಜಾದ್, ರಾಜಗೋಪಾಲಾಚಾರ್, ಭುಲಾಭಾಯಿ ದೇಸಾಯಿ, ಬಾಬು ರಾಜೇಂದ್ರ ಪ್ರಸಾದ, ಮಾಲವೀಯರು, ಮೊದಲಾದವರು ದಯಮಾಡಿಸಿದ್ದರು. ಸಭೆಗೆ ಸರದಾರ್ ವಲ್ಲಭಭಾಯಿ ಪಟೇಲರು ಅಧ್ಯಕ್ಷರಾಗಿದ್ದರು. ಪಂಡಿತ ಜವಾಹರಲಾಲರ ಬಿಡುಗಡೆಯ ವಿಚಾರ, ಕಮ್ಯುನಲ್ ಎವಾರ್ಡಿನ ಪ್ರಶ್ನೆ, ಗಫರ್‌ಖಾನರ ಬಿಡುಗಡೆ ವಿಚಾರ, ಇವೆಲ್ಲ ಚರ್ಚೆಗೆ ಬರುವ ವಿಷಯಗಳು. ಕಮ್ಯುನಲ್ ಎವಾರ್ಡು, ಶ್ವೇತಪತ್ರವನ್ನು ತಿರಸ್ಕರಿಸುವುದರೊಂದಿಗೇ ಬಿದ್ದು ಹೋಯಿತೆಂದು ಕಾಂಗ್ರೆಸ್ ಕಮಿಟಿಯು ತನ್ನಷ್ಟಕ್ಕೇ ತೃಪ್ತಿಯಿಂದಿರುವುದರಲ್ಲಿ ಅರ್ಥವಿಲ್ಲವೆಂದೂ, ಅದನ್ನು ಎದುರಿಸಿ ಹೋರಾಡಬೇಕೆಂದೂ ಮಾಲವೀಯರ ಪಕ್ಷ. ಇದನ್ನು ಕಮಿಟಿಯು ಇತ್ಯರ್ಥಿಸಿ, ಅನುಕೂಲ ಅಭಿಪ್ರಾಯವನ್ನು ವ್ಯಕ್ತಪಡಿಸದಿದ್ದರೆ ಮಾಲವೀಯರು ಕಾಂಗ್ರೆಸ್ ಪಾರ್ಲಿಮೆಂಟರಿ ಬೋರ್ಡಿನಿಂದ ದೂರವಾಗುವರು. ಅಣೆಯವರೂ ಈ ಅಭಿಪ್ರಾಯವುಳ್ಳವರಾಗಿದ್ದಾರೆ. ಇದರ ಇತ್ಯರ್ಥವಿನ್ನೂ ಆದುದಿಲ್ಲ.

ಮುಂದಿನ ಸುದ್ದಿಯನ್ನು ೮ನೇ ಪುಟದಲ್ಲಿ ನೋಡಿ.

[೧೯೦೯ನೇ ಜುಲಾಯಿ ತಾ. ೩೦ನೇ 'ಸ್ವದೇಶಾಭಿಮಾನಿ' ಸಂಚಿಕೆಯಿಂದ.]

ಸಂಪಾದಕೀಯ
ಕೀರ್ತಿಶೇಷ ಅಮ್ಮೆಂಬಳ ಸುಬ್ರಾಯ ಪೈಗಳವರು.

ಕಳೆದ ಆದಿತ್ಯವಾರ ಶ್ಯಾಮ ಘಂಟೆ ೪ಕ್ಕೆ ಬಹುಮಾನಪಟ್ಟ ಹೈಕೋರ್ಟ ವಕೀಲರೂ ಪ್ರಜಾ ಮುಂದಾಳುಗಳಲ್ಲೊಬ್ಬರೂ ಆದ ಸುಬ್ರಾಯ ಪೈಗಳವರು ತಮಗೆ ಹಲವು ವರ್ಷಗಳಿಂದ ಬಾಧಿಸುತ್ತಿರುವ ವಾತರೋಗದಿಂದ ಪರವನ್ನೈದಿದರೆಂಬುದನ್ನು ತಿಳಿಸಲು ವ್ಯಾಕುಲಪಡುತ್ತೇವೆ.

\+ + + + + +

ಬಡಜನರನ್ನು ಭಂಡವಾಳಿಕರ ಬಾಯಿಯಿಂದ ತಪ್ಪಿಸಲೋಸುಗವೂ ಜನರಲ್ಲಿ ಸಹಕಾರ ಶೀಲವನ್ನು ಬೆಳೆಸುವಂತೆಯೂ 'ಕೆನರಾ ಹಿಂದೂ ಪರ್ಮನೆಂಟ್ ಫಂಡ್' ಎಂಬ ಬ್ಯಾಂಕನ್ನು ಸ್ಥಾಪಿಸಲಿಕ್ಕೆ ಮುಖ್ಯ ಪುರುಷರಾಗಿದ್ದರು. (ಇದು ಈಗಿನ "ಕೆನರಾ ಬ್ಯಾಂಕ್ ಲಿಮಿಟೆಡ್" ಎಂಬ ಸಂಸ್ಥೆಯಾಗಿ ಹೆಸರು ಹೊಂದಿದೆ. ಸಂ। ಸ್ವ।)

\+ + + + + +

ಗೌಡ ಸಾರಸ್ವತ ಪರಿಷದದ ಸ್ಥಾಪನೆಯು ಈ ಮಹಾತ್ಮರ ಜೀವನಕ್ಕೆ ಮಕುಟಪ್ರಾಯವಾಗಿದೆ. ಇವರ ಪರ್ಚಸ್ವದಿಂದಲೇ ಪ್ರತಿನಿಧಿಗಳು ಮಲಬಾರ, ಕೊಚ್ಚಿ, ಧಾರವಾಡ, ಬೆಳಗಾಂವ, ಶಹಾಪುರ, ಖಾನಪುರ, ಬೊಂಬಾಯಿ, ಗೋವಾ, ಮೈಸೂರು ಕಡೆಗಳಿಂದ ನೆರೆದರು.

\+ + + + + +

ಮರುದಿನ ಸಾಹುಕಾರರೆಲ್ಲರೂ ಅಂಗಡಿ-ಭಂಡಸಾಲೆಗಳನ್ನು ಮುಚ್ಚಿದರು. ಡಿಸ್ಟ್ರಿಕ್ಟ್ ಜಡ್ಜಿಯವರು ಕೋರ್ಟಿಗೆ ಬಂದಾಗ ಪರ್ಚಮಾನಪೇಡ ಖಿನ್ನವದನರಾದರು. ತನಗೆ ನಿನ್ನೆ ತಿಳಿದಿದ್ದರೆ ತಾನು ಆ ತೇಜಸ್ವಿಯಾದ, ಸತ್ವವಂತನಾದ, ದಾನಶೀಲನಾದ ಸದ್ಗೃಹಸ್ಥನನ್ನು ಕಡೆಸಾರಿ ದೃಷ್ಟಿಸುತಿದ್ದೆನೆಂದು ಸಿಟ್ಟು ಸಿರಿಟ್ಟರು. ಕೀರ್ತಿಶೇಷರ ಹೆಸರಲ್ಲಿ ಡಿಸ್ಟ್ರಿಕ್ಟ್‌ನ ಸಬ್ ಕೋರ್ಟು, ಮುನ್ಸೀಫ್ ಕೋರ್ಟುಗಳು ಮೊಖೂಪಾಯಿತು. ಊರೂರುಗಳಲ್ಲಿ ಜನರು ಸಭೆ ನೆರೆದು ಸಹಸಂತಾಪಗಳನ್ನು ಸೂಚಿಸಿರುವರು. ಬಂಟ್ವಾಳದಲ್ಲಿ ಜನರು ೨೧ ಮುಡಿ ಅಕ್ಕಿಯನ್ನು ಬಡವರಿಗೆ ದಾನ ಮಾಡಿದರೆಂದು ತಿಳಿದುಬರುವುದು.

\+ + + + + +

ಆ ಪುಣ್ಯಾತ್ಮನ ಸ್ಮರಣಾರ್ಥವಾಗಿ ಕೆಲ್ಲ ಏರ್ಪಾಡಾಗತಕ್ಕದ್ದು. ಅವರ ಗುಣಗಣ ಸ್ಮರಣೆಯನ್ನು ನಮ್ಮಲ್ಲಿ ಸದಾ ನೆಲೆಗೊಳಿಸಿ ಅವರ ಸನ್ಮಾರ್ಗದಲ್ಲಿ ಹೆಜ್ಜೆ ಇಡುವುದು ಆ ಸುಗುಣಿ ಸುಬ್ರಾಯ ಪೈಗಳವರಿಗೆ ಪ್ರಿಯವಾದ ಸ್ಮಾರಕಚಿಹ್ನೆಯಾಗಿದೆ.

ವರ್ತಮಾನಗಳು.

ವಿದೇಶ:—ಫ್ರಾನ್ಸ್ ದೇಶಕ್ಕೂ ಇಂಗ್ಲಾಂಡಕ್ಕೂ ಮಧ್ಯವಿರುವ ಸಮುದ್ರ ಕಾಲುವೆಯನ್ನು ಆಕಾಶದಲ್ಲಿ ಹಾರಾಡಿ ದಾಟಲಿಕ್ಕೆ ಮಿ। ಲಿಥಮ್ ಎಂಬವರು ಒಂದು ಮೊನೊಪ್ಲೇನ್ ಎಂಬ ವಾಹನದಲ್ಲಿ ಕೂತು ದಾಟಲಿಕ್ಕೆ ಪ್ರಯತ್ನಿಸಿದರು. "ಡೈಲಿ ಮೈಲ್" ಎಂಬ ಪತ್ರವು ಸಾವಿರ ಪವನನ್ನು ಈ ಬಗ್ಗೆ ಉಚಿತವಾಗಿ ಇಟ್ಟಿತ್ತು. ಲಿಥಮರವರು ಕೆಲವು ದಿವಸಗಳವರೆಗೆ, ತಕ್ಕದಾದ ಗಾಳಿಯು ಸಿಕ್ಕುವ ವರೆಗೆ ಕಾದುಕೊಂಡು ಈ ತಿಂಗಳ ತಾ. ೧೯ರಲ್ಲಿ ತಮ್ಮ ಈ ನವೀನ ವಾಹನದಲ್ಲಿ ಕಲೈಸ್ ಎಂಬಲ್ಲಿಂದ ಈ ಕಾಲುವೆಯನ್ನು ದಾಟಲು ಹೊರಟರು. ಆಕಾಶದಲ್ಲಿ ಹಾರಾಡಿಕೊಂಡು ೮½ ಮೈಲುಗಳ ವರೆಗೆ ಬರಲು ಇವರಿಗೆ ಸಾಧ್ಯವಾಯಿತು. ಆದರೆ ಈ ವಾಹನದ ಒಂದು ಯಂತ್ರವು ಇಷ್ಟರಲ್ಲಿ ಹಾಳಾದ್ದರಿಂದ ಪೂರ್ಣವಾಗಿ ದಾಟಲಿಕ್ಕೆ ಆಗಲಿಲ್ಲ.

ಹಿಂದೂದೇಶ:—ವಿನಾಯಕ ದಾಮೋದರ ಸಾವರಕರರವರಿಂದ ಬರೆಯಲ್ಪಟ್ಟ, ೧೮೫೭ನೇ ಇಸವಿಯ ಸಿಪಾಯಿದಂಗೆಯ ಕುರಿತಾದ ಪುಸ್ತಕವು ಹಿಂದುಸ್ಥಾನದಲ್ಲಿ ಸರಕಾರದಿಂದ ನಿಷಿದ್ಧಿಸಲ್ಪಟ್ಟಿದೆ.

ಕಲಿಕತ್ತೆಯ ಸುತ್ತುಮುತ್ತಲೂ ದಿನಂಪ್ರತಿ ಎಂಬಂತೆ ಆಗುತ್ತಿರುವ ದರೋಡೆ ಕಳವು ಮೊದಲಾದವುಗಳಿಗೆ, ಪೋಲೀಸಿನವರೂ ಸಹಾಯ ಮಾಡುತ್ತಿರುವರೆಂಬ ಜನರ ಊಹೆಗೆ ತಕ್ಕದಾದ ಆಧಾರವು ಇತ್ತಲಾಗೆ ಕಲ್ಕತ್ತೆಯಲ್ಲಿ ಸಿಕ್ಕಿರುವುದಂತೆ.

ಮಂಡಲೆ ಜೈಲಿನಲ್ಲಿ ಪ್ಲಾಂತಿಭೇದ ರೋಗವು ತಲೆದೋರಿರುವುದರಿಂದ ತಿಲಕರವರನ್ನು ಮಂಡಲೆ ಜೈಲಿನಿಂದ ನ್ಯಾಕಿ ಜಿಲ್ಲಾ ಜೈಲಿಗೆ ಒಯ್ದಿರುವರಂತೆ.

ನಮ್ಮ ಜಿಲ್ಲೆ.

ಉಡುಪಿ, ಕಾಸರಗೋಡು, ಮುಲ್ಕಿ, ಕುಂಬಳೆ, ಬಂಟ್ವಾಳ ಮೊದಲಾದ ಕಡೆಗಳಲ್ಲೆಲ್ಲ ಸುಬ್ರಾಯ ಪೈಗಳವರ ಮರಣದ ಬಗ್ಗೆ ದುಃಖ ಸೂಚಕ ಸಭೆಗಳಾಗಿವೆ.

ಇದೇ ಜುಲಾಯಿ ತಿಂಗಳಲ್ಲಿ ದಕ್ಷಿಣ ಸರ್ಕಲಿನ ವಿದ್ಯಾ ಇಲಾಖೆಯ ಇನ್ಸ್‌ಪೆಕ್ಟರರವರು ಡಿರೆಕ್ಟರರ ಅನುಮತಿ ಮೇರೆಗೆ ಸದರಿ ಇಲಾಖೆಯ ಆಫೀಸರರಿಗೂ, ಎಲ್ಲ ಸೆಕೆಂಡರಿ ಶಾಲೆಯ ಮಾಸ್ತರರುಗಳಿಗೂ ಒಂದು ಸರ್ಕಿಲಾರನ್ನು ಕಳುಹಿಸಿರುವರು. ಇದರ ಮುಖ್ಯ ಸಾರಾಂಶವೇನೆಂದರೆ:—ಶಾಲೆಯ ಮಕ್ಕಳು ಹೊಗೆಸೊಪ್ಪು, ನೇದುವುದನ್ನೂ ಅಮಲು ಪದಾರ್ಥಗಳನ್ನು ಸೇವಿಸುವುದನ್ನೂ ನಿಲ್ಲಿಸುವ ಹಾಗೆಯೂ ಕಟ್ಟು ನಿಟ್ಟು ಮಾಡಬೇಕು. ಉಪಾಧ್ಯಾಯರು ತಾವಾಗಿ ಆ ಸರ್ಕಲಾರಿನ ಪ್ರಕಾರ ನಡೆಯುವಂತೆ ಪ್ರಯತ್ನಿಸಿ, ಮಕ್ಕಳ ಎದುರಿಗೆ ಪುಡಿ ಎಳೆಯುವುದು, ವೀಳ್ಯ ತಿನ್ನುವುದು, ಇನ್ನು 'ರಾಸ್ಕಲ್'—'ಸ್ಟುಪಿಡ್ ಗೂಸ್' ಎಂಬ ಮಾತುಗಳಿಂದ ಬೈಯುವುದನ್ನೂ ನಿಲ್ಲಿಸ ಪ್ರಯತ್ನಿಸುವರೆಂದು ಹಾರೈಸುತ್ತೇವೆ.

ಅಮೇರಿಕದ ಪ್ರಸಿದ್ಧ ಸರ್ಜನ್ ದಂತವೈದ್ಯರಾದ—

ಡಾ। ವಿರೋ ಪಿ. ಡೆ ಸಾ, ಡಿ. ಡಿ. ಎಸ್.,

ಇವರು "ಕೊಪ್ರನ್" ದಂತಮಂಜನದ ವಿಷಯವಾಗಿ ಹೀಗೆ ಬರೆಯುತ್ತಾರೆ:—



ಎಲ್ಲೆಲ್ಲೂ ದೊರೆವುದು.

ನಾನು, ಶಾಸ್ತ್ರೋಕ್ತವಾದ ಈ 'ಕೊಪ್ರನನ್ನು' ನನ್ನ ವೈದ್ಯಕೀಯ ಸಲಹೆ ನಡೆದ ದಂತ ಬಾಧೆಯುಳ್ಳವರಿಗೆ ನಿರವಿಸಿ, ಜಾಗರೂಕತೆಯಿಂದ ಅದರ ಗುಣಗಳನ್ನು ಕಂಡಿರುವೆನು.

ಕೊಪ್ರನ್ ದಂತ ಮಂಜನದ ಗುಣವಿವರವೆಲ್ಲ ಅಕ್ಷರಶಃ ನಿಜ. ಅದರಲ್ಲುಪಯೋಗವಾಗುವ ಮುಖ್ಯ ವಸ್ತುಗಳೆಲ್ಲ ಪ್ರತ್ಯಪ್ರತ್ಯೇಕವಾಗಿ ಬಹು ಕಾಲದಿಂದ ಹಲ್ಲುಗಳಿಗೆ ಬಲವೀವ ಗುಣಗಳುಳ್ಳವೆಂದು ಸಿದ್ಧಾಂತವಾಗಿರಲು, ಅವುಗಳೆಲ್ಲ ಸೇರಿ ಉಂಟಾದ ಈ ಮಂಜನವು ಅತ್ಯುತ್ತಮವೇ ಆಗಿದೆ.

ಬಾಟೂಲಿನ ಹಸಿ ಕಡ್ಡಿಯೇ ಹಲ್ಲುಗಳಿಗೆ ಆರೋಗ್ಯಕರ; ಇತರ ಜಿನಸುಗಳೊಂದಿಗೆ ಈ ಬಾಟೂಲಿನ ಸತ್ವವು ಸೇರಿದೆಯಾದ ಕಾರಣ 'ಕೊಪ್ರನ್' ಒಂದು ಆದರ್ಶ ದಂತಮಂಜನವಾಯಿತು. ನಾನು ಕಂಡಂತೆ ಕೊಪ್ರನಿನಿಂದ ವಸಡುಗಳಿಂದಾಗುವ ಸ್ರಾವ ನಿಂತು, ಅವು ಪುಷ್ಟಿಗೊಂಡು, ನವಚೇತನ ಹೊಂದುತ್ತವೆ. ಅದರ ಉಪಯೋಗದಿಂದ ಬಾಯೊಳಗಿನ ವಿಷಕಾರಕ ಕ್ರಿಮಿಗಳು ನಾಶವಾಗುವುವು. ಅದರ ರುಚಿಯು ಹಿತಕರವಾಗಿದ್ದು, ಬಾಯಿಯ ದುರ್ವಾಸನೆ ನೀಗಿ, ಉಚ್ಛ್ವಾಸಕ್ಕೊಂದು ಸೌರಭವುಂಟಾಗುವುದು.

ಈಗ ಪೇಟೆಯಲ್ಲಿರುವ ದಂತಮಂಜನಗಳಲ್ಲಿ ಕೊಪ್ರನಿಗೆ ಅಗ್ರಸ್ಥಾನವಿರುವುದನ್ನು ನಾನು ಮುಂದಾಗಿ ಕಾಣಬಲ್ಲೆ.

ಕೊಪ್ರನಿಗೆ ಶಿಫಾರಸು ಬೇಕಾಗಿಲ್ಲ; ಬೇಕು ನಿಮ್ಮದೊಂದು ಪರೀಕ್ಷೆ ಮಾತ್ರ.

ಅದನ್ನುಪಯೋಗಿಸಿದಂತೆ ಆರೋಗ್ಯಕರವಾಗಿ ಬೆಳೆವುವು ನಿಮ್ಮ ಹಲ್ಲುಗಳು; ಅದುವೇ ಕೊಪ್ರನಿಗೆ ಸರ್ವ ಜನಾದರವನ್ನು ಸಾಧಿಸಿಕೊಡುವುದು.

ತಯಾರಿಸುವವರು:—

ಕೊಪ್ರನ್ ಕೆಮಿಕಲ್ ಕೋ., ಲಿಮಿಟೆಡ್, 83/85 ತಾರದೇವ್ ರೋಡ್, ಬೊಂಬಾಯಿ.

ಸಂಪಾದಕರ ಟಪ್ಪಾಲುಪೆಟ್ಟಿಗೆ.

ಪತ್ರಿಕಾರರ ಅಭಿಪ್ರಾಯಗಳಿಗೆ ನಾವು ಜವಾಬ್ದಾರರಲ್ಲ. ಎಲ್ಲ ಲೇಖಕರು ತಮ್ಮ ಸಂಪೂರ್ಣ ಹೆಸರು ವಿಳಾಸಗಳನ್ನು ಕೊಡತಕ್ಕದ್ದು. ದೀರ್ಘ ಲೇಖನಗಳಿಗೆ ಎಡೆ ಕೊಡಲಾಗುವುದಿಲ್ಲ. ಲೇಖನಗಳು ಸಾರ್ವಜನಿಕ ಹಿತದೃಷ್ಟಿಯುಳ್ಳವುಗಳಾಗಿದ್ದು ಯುಕ್ತ ಶೈಲಿಯಲ್ಲಿರತಕ್ಕದ್ದು.
(ಸಂ. ಸ್ವ.)

ಆಧುನಿಕ ನಾಟಕಗಳೂ ನಟವರ್ಗವೂ.

ಕರ್ನಾಟಕಭಾಷೆಯ ಸೇವೆಯು ಈಗೀಗ ಬಹು ಮುಖ್ಯವಾಗಿ ನಡೆಯುತ್ತಿರುವುದು ಕನ್ನಡ ಭಾಷಾ ವೃದ್ಧಿಯ ದೃಷ್ಟಿಯಿಂದ ಖುಷಿ ಚಿಹ್ನೆಯಿಂದೇ ಹೇಳಬೇಕಾಗಿದೆ.— ದೈನಿಕ, ಸಾಪ್ತಾಹಿಕ, ಮಾಸಿಕ ಪತ್ರಿಕೆಗಳ ಮೂಲಕವಾಗಿಯೂ, ಬಯಲಾಟ, ಯಕ್ಷಗಾನ, ತಾಳಮದ್ದಳೆ, ನಾಟಕಗಳ ಮೂಲಕವಾಗಿಯೂ ಕನ್ನಡ ಭಾಷೆಯು ದಿನೇ ದಿನೇ ಊರ್ಜಿತವಾಗುತ್ತಿರುವ ವಿಷಯವು ಕನ್ನಡವನ್ನು ಹಳಿಯುವ ಇನ್ನಿತರ ಭಾಷಾಸೇವಕರ ಕಣ್ಣುಗಳನ್ನು ಮೆಲ್ಲಮೆಲ್ಲನೆ ತೆರೆಯುವಂತಹುಗಳೇ.

ನಾಟಕಗಳ ಮೂಲಕ ಭಾಷಾಸೇವೆಯಾಗುವಷ್ಟು ಬೇರಾವ ಸಾಧನದಿಂದಲಾದರೂ ಆಗದು. ಜನಸಾಮಾನ್ಯರನ್ನು ಕಥಾ ಸಂವಿಧಾನ ಭಾವನಾ ಸಾಮ್ರಾಜ್ಯಗಳೊಡನೆ ಕೊಂಡೊಯ್ದು ಹೋಗಿ ಅವರಿಗೆ ಕನ್ನಡ ಭಾಷೆಯ ಪ್ರಾಮುಖ್ಯತೆಯನ್ನೂ ಅಗಾಧತೆಯನ್ನೂ ತಿಳಿಸುವ ಮಹಾಶಕ್ತಿಯೆಂದರೆ ರಂಗಭೂಮಿಯೊಂದೇ. ಎಂದಾಗ್ಯೂ ನಾಟಕಗಳ ಕಡೆಗೆ ನಟವರ್ಗದ ಕಡೆಗೆ ಕನ್ನಡಿಗರು ಎಷ್ಟೊಂದು ಪರಿಪೂರ್ಣ ಲಕ್ಷ್ಯವಹಿಸಬೇಕೆಂಬುದು ವ್ಯಕ್ತವಾಗದಿರದು.

ಆದರೆ, ಇತ್ತೀಚೆಗೆ ಈ ಮಹಾಕಲೆಯು ಅವನತಿ ಹೊಂದುತ್ತಾ ಬರುತ್ತದೆ. ಕಲಾವಂತರೂ ವಿದ್ಯಾಸಂಪನ್ನರೂ ಆದವರ ಮಾರ್ಗದರ್ಶಿತ್ವವಿಲ್ಲದೆ ಹೆಟ್ಟಿನಮಟ್ಟಿಗೆ ಆರಂಭಕರಿಂದಲೇ ಈ ಕಲೆಯ ಉಪಾಸನೆ ಗಾರಂಭವಾಗಿದೆ. ಈ ಕಲೋಪಾಸನೆಯಿಂದಲೇ ಜೀವನ ನಡೆಸಲು ಟೊಂಕಕಟ್ಟಿರುವ ವಿದ್ವಾಂಸರ ಸಂಖ್ಯೆಯು ಅತ್ಯಂತ ಕಡಿಮೆಯಾಗಿದೆ. ಇದರಿಂದಲೇ ಜನಸಾಮಾನ್ಯಕ್ಕೆ ನಾಟಕದಲ್ಲಿರುವ ಅಭಿರುಚಿಯು ದಿನೇ ದಿನೇ ಕುಗ್ಗುತ್ತಾ ಬರುವಂತಿದೆ.

ಎಲ್ಲಾ ನಾಟಕಸಂಸ್ಥೆಗಳೂ ವರದಾಚಾರ್ಯರ, ಗುಬ್ಬಿಕಂಪೆನಿಯ, ಗದಗ ಕಂಪೆನಿಯ ಅಥವಾ ಚಂದ್ರಕಲಾ ಕಂಪೆನಿಯಂತಾಗಬೇಕೆಂದು ಈ ಲೇಖನದ ತಾತ್ಪರ್ಯವಲ್ಲ. ಯಾರೇ ಆಗಲಿ, ಎಂತಹವನೇ ಆಗಲಿ, ರಂಗಭೂಮಿಗಿಳಿಯಲಾಶಿಸುವ ಮೊದಲು ನಾಟ್ಯಕಲೆಯ ಸಮತೋಲ (Poise) ವನ್ನು ಹೊಂದದೆ ಈ ಸಾಹಸಕ್ಕೆಳಿಯಬಾರದು. ಸ್ವಾಭಾವಿಕವಾಗಿ ತನ್ನಲ್ಲಿ ನಾಟ್ಯಕಲೋಪಾಸನೆಯ ರುಚಿಯಿದ್ದರೆ, ಅದನ್ನು ಸದ್ದಾರಿಯಲ್ಲಿ ನಡೆಸಿ ಅದನ್ನು ಪರಿಪೂರ್ಣ ಅನುಭವವನ್ನು ಹೊಂದಬೇಕು. ಪ್ರಸಿದ್ಧ ನಟರಿಂದ ಅಭಿನಯಿಸಲ್ಪಟ್ಟಿರುವ ನಾಟಕಗಳನ್ನು ನೋಡಿ ಕಲಿಯುವುದರಿಂದ ಅತ್ಯಂತ ಪ್ರಯೋಜನವಿದೆ.

ನಾಟಕದ ಅಂತಿಮೋದ್ದೇಶವು ಕರ್ನಾಟಕ ರಂಗಭೂಮಿಯ ಸಂಪೂರ್ಣ ಸುಧಾರಣೆಯೆಂಬುದನ್ನು ಪ್ರತಿಯೊಂದು ನಾಟಕ ಕಂಪೆನಿಯೂ, ನಟನೂ ತಿಳಿದಿರತಕ್ಕದ್ದು. ನಾಟಕವು ಜನರ ಸ್ತುತಿಗೆ, ಆದರಕ್ಕೆ ಪಾತ್ರವಾಗದಿದ್ದರೆ ತಾನಲ್ಲ!— ತನ್ನ ಕಂಪೆನಿಯಲ್ಲ,— ಕರ್ನಾಟಕ ರಂಗಭೂಮಿಯೇ ಅಧೋಗತಿಗೀಡಾಗುವುದೆಂಬುದನ್ನು ನಾಟಕ ಕಂಪೆನಿಯವರೂ, ನಟವರ್ಗವೂ ತಿಳಿಯಬೇಕಾಗಿದೆ.

ಹೀಗೆಂದಾಗ, ಪಾತ್ರಗಳನ್ನಾರಿಸುವ ಕಲೆಯ ಕುರಿತೂ ಹೇಳಬೇಕಾಗಿದೆ.— ನಟರಿಗಿಂತಲೂ ಪ್ರಾಮುಖ್ಯ ನಟರನ್ನಾರಿಸುವವನು. ಯಾರೊಬ್ಬನಾಗಲೀ ಅಥವಾ ಮುಂದಾಳಾಗಿ ಬಂದವನಾಗಲೀ ಅಥವಾ ಹಣವೆಚ್ಚ ಮಾಡುವವನಾಗಲೀ ಪಾತ್ರಗಳನ್ನರಿಯಲು ಸಮರ್ಥನೆಂದು ತಿಳಿಯಬಾರದು. ಪಾತ್ರಗಳನ್ನು ಚುನಾಯಿಸುವವನು ಆದರ್ಶ ನಾಟ್ಯಕಲಾವಂತನಾಗಿರಬೇಕು. ಅವನಿಗೆ ನಾಟಕಸಂಬಂಧವಾದ ಸಕಲ ಅನುಭವವೂ ಇರಬೇಕು. ಅಂತಹವನೇ ಸಂಸ್ಥೆಯ ಮುಖಂಡನಲ್ಲದೆ ದ್ರವ್ಯವೆಚ್ಚ ಅಥವಾ ಎದೆಗೊಟ್ಟವನು ಆಗಲಾರನು. ಒಬ್ಬನ ಸ್ವಭಾವವಾವುದೊ ಅದನ್ನನುಸರಿಸಿ ಅವನಿಗೆ ಪಾತ್ರವನ್ನು ಕೊಡಬೇಕು.— ನಿತ್ಯ ಹಾಸ್ಯ ಪ್ರಿಯನಾದವನಿಗೆ ಹಾಸ್ಯಗಾರನ ಪಾತ್ರವನ್ನೂ, ನಿತ್ಯ ಗಾಂಭೀರ್ಯಪ್ರಿಯನಾದವನಿಗೆ ಆ ಗಾಂಭೀರ್ಯಕ್ಕನುಸಾರವಾಗಿಯೂ ಪಾತ್ರವನ್ನು ಕೊಡಬೇಕು. ಅಲ್ಲದೆ ಒಬ್ಬನ ಅಪೇಕ್ಷೆ ಮೇರೆಗೆ, ಅವನ ಅನುಕೂಲತೆಯ ಮೇರೆಗೆ ದಾಕ್ಷಿಣ್ಯಕ್ಕೆ ಕಟ್ಟುಬಿದ್ದು ನಾಟಕವು "ಹೇಗಾದರೂ" ಆಗಿಹೋಗಲೆಂಬ ಆವಸರದಿಂದ ಪಾತ್ರಚುನಾವಣೆ ಮಾಡಬಾರದು.

ವಿಮರ್ಶಕ.

ತಾ॰ ೨೦-೭-೩೪ರಲ್ಲಿ ಕೆರಗಾಲು ಗ್ರಾಮದ ನಾಯಕನಕಟ್ಟೆಯಲ್ಲಿ ಜರಗಿದ ಉಪ್ಪುಂದ, ಬಿಜೂರು, ಕೆರಗಾಲು, ಖಂಬದಕೋಣೆ, ಹೇರಂಜಾಲು ವಗೈರೆ ಗ್ರಾಮಸ್ಥರ ಮಹಾಸಭೆಯ ಪ್ರೊಸಿಡಿಂಗ್ಸು:—

ಹಾಜರು— ಮ॰ ರಾ॰ ನಾಯಕನಕಟ್ಟೆ ಕೃಷ್ಣಭಟ್ಟರು, ಜಂಟಿ ಕೃಷ್ಣಯ್ಯ ಹೆಬ್ಬಾರರು, ಬವಲಾಡಿ ನಾರಾಪ್ಪಯ್ಯ ಹೆಬ್ಬಾರರು, ದೊಡ್ಡಮನೆ ರಾಮಣ್ಣ ಸೆಟ್ಟರು, ಉಪ್ಪುಂದ ದೇವಪ್ಪಯ್ಯ ವೈದ್ಯರು, ಹೇರಂಜಾಲು ಕುಪ್ಪಯ್ಯ ಹೆಬ್ಬಾರರು, ಖಂಬದಕೋಣೆ ಶಿವರಾಮ ಭಟ್ಟರು ಮೊದಲಾದ ೨೦೦ ಜನರು.

೧. ಈ ಸಭೆಗೆ ಮ॰ ರಾ॰ ನಾ. ಕೃಷ್ಣಭಟ್ಟರನ್ನು ಅಧ್ಯಕ್ಷರನ್ನಾಗಿ ನಿಯಮಿಸಲಾಯಿತು. ೨. ನಂಬ್ರ ೨೧ನೇ ನಾಗೋಡಿರಸ್ತೆಯಲ್ಲಿರುವ ವಸರೆ ಮತ್ತು ಹಾಳ್ಕಲ್ಲು ಹೊಳೆಗಳಿಗೆ ಸಂಕಕಟ್ಟಿಸಬೇಕಾಗಿ ಈ ಮುಂಚೆ ನಮ್ಮ ದ. ಕ. ಡಿ. ಬೋರ್ಡಿನವರು ಮಾಡಿರುವ ತೀರ್ಮಾನದ ಕುರಿತು ಈ ಸಭೆಯವರು ಸಾರ್ವಜನಿಕ ಹಿತದೃಷ್ಟಿಯಿಂದ ತರ್ಕ ವಿಚಾರನಡೆಸಿದ ನಂತರ ಸರ್ವಾನುಮತದಿಂದ ಕೆಳಗೆ ಕಾಣಿಸಿರುವ ನಿರ್ಣಯಗಳಾದುವು.— I. ಡಿಸ್ಟ್ರಿಕ್ಟ್ ಬೋರ್ಡಿನವರ ತೀರ್ಮಾನದಲ್ಲಿ ವಸರೆ ಹೊಳೆಗೆ ಸಂಕಕಟ್ಟಿಸತಕ್ಕ ಅಂಶವನ್ನು ಬದಲಾಯಿಸಿ ಅದರ ಬಗ್ಗೆ ನಂಬ್ರ ೨೨ನೇ ಉತ್ತರಕರಾವಳಿ ರಸ್ತೆಯ ಅತೀ ಉಪ್ಪರವಲ್ಲಿರುವ ಹಂಗಾರ ಹೊಳೆಗೆ ಸಂಕ ಕಟ್ಟಿಸುವುದು ಅತೀ ಅವಶ್ಯವೂ ಸುಲಭವೂ ಆಗಿರುವುದಲ್ಲದೆ, ಸರ್ವ ಜನರಿಗೂ ಅತ್ಯಂತ ಪ್ರಯೋಜನಕರವಾಗಿದೆ. II. ವಸರೆ ಹೊಳೆಯ ಸಂಕದಿಂದ ಬೈಂದೂರು ನಾಗೋಡಿ ಪ್ರಯಾಣಕ್ಕೆ ಮಾತ್ರ ಅನುಕೂಲವಾಗುವುದು. ಅದರ ಬಗ್ಗೆ ಹಂಗಾರ ಹೊಳೆಗೆ ಸಂಕ ಕಟ್ಟಿಸಿದ್ದಲ್ಲಿ ಬೈಂದೂರು, ಖಂಬದಕೋಣೆ, ಗೋಳಿಹೊಳೆ ಮಾರ್ಗವಾಗಿ ನಾಗೋಡಿ ಪ್ರಯಾಣಕ್ಕೂ ಅನುಕೂಲವಾಗುವುದಲ್ಲದೆ ಗಂಗೊಳ್ಳಿ, ಬೈಂದೂರು, ಭಟ್ಕಳ ವಗೈರೆ ದಕ್ಷಿಣ ಉತ್ತರ ಕನ್ನಡ ಜಿಲ್ಲೆಗಳಿಗೆ ಪ್ರಾಮುಖ್ಯವಾದ ಕರಾವಳಿ ರಸ್ತೆಯ ಪ್ರಯಾಣಕ್ಕೂ ತುಂಬಾ ಅನುಕೂಲವುಂಟಾಗುವುದು. III. ಬೈಂದೂರು ನಾಗೋಡಿಗಳಿಗೆ ಮಳೆಗಾಲದಲ್ಲಿ ಮೋಟಾರು ವಗೈರೆ ಚಲಾವಣೆ ನಡೆಸುವಲ್ಲಿ ಖಂಬದಕೋಣೆ ಗೋಳಿಹೊಳೆ ರಸ್ತೆಯನ್ನು ಇನ್ನೂ ಕೆಲವು ಮಟ್ಟಿಗೆ ದುರುಸ್ತಿಪಡಿಸಬೇಕಾದ ಅಗತ್ಯ ಬರಬಹುದಾದರೂ ಅದರ ದುರುಸ್ತಿಯು ಹೆಚ್ಚಿನ ಪ್ರಯಾಸಕರವಾಗಿಲ್ಲ. ಮತ್ತು ಇಂತಹ ದುರುಸ್ತಿಯು ಬೈಂದೂರು ನಾಗೋಡಿ ರಸ್ತೆಗೂ ಅಗತ್ಯವಾಗಬಹುದು. IV. ಈ ಪ್ರಕಾರ ವಸರೆ ಹೊಳೆಯ ಬದಲು ಹಂಗಾರಹೊಳೆಗೆ ಸೇತುವೆಯನ್ನು ಕಟ್ಟಿಸಿ ಖಂಬದಕೋಣೆ, ಗೋಳಿಹೊಳೆ ರಸ್ತೆಯನ್ನು ದುರುಸ್ತಿಪಡಿಸಿದರೆ ಗಂಗೊಳ್ಳಿ, ಬೈಂದೂರು, ಭಟ್ಕಳ ಹೊನ್ನಾವರ, ನಾಗೋಡಿ ಈ ಎಲ್ಲಾ ಕಡೆಗಳಿಗೆ ಆರೆ ಮಳೆಗಾಲವೆಂಬ ಯಾವ ತೊಂದರೆಯೂ ಇಲ್ಲದೆ ಪರಸ್ಪರವಾಗಿ ಬಸ್ಸು, ಗಾಡಿ ವಗೈರೆ ವಾಹನಗಳನ್ನು ಚಲಾಯಿಸಲಿಕ್ಕೂ, ವ್ಯಾಪಾರವಹಿವಾಟಿಗೂ, ಸರಕಾರಿ ನೌಕರರ ಪ್ರಯಾಣ ಸೌಕರ್ಯಕ್ಕೂ, ಫೊರೆಸ್ಟ್ ಇಲಾಖೆಯವರ ಎಲ್ಲ ತರಹದ ಹಿವಾಟಿಗೂ ತುಂಬಾ ಅನುಕೂಲವಾಗುವುದಲ್ಲದೆ ಖರ್ಚಿನ ಬಾಬನ್ನು ಎಣಿಸುವುದಾದರೂ ಕೂಡ ವಸರೆಹೊಳೆಗಿಂತ ಹಂಗಾರಹೊಳೆಗೆ ಹೆಚ್ಚಿಗೆ ಖರ್ಚು ಬೇಕಾಗಲಿಕ್ಕಿಲ್ಲ. V. ಈ ಎಲ್ಲಾ ಕಾರಣಗಳಿಂದ ಮಾನ್ಯ ಡಿಸ್ಟ್ರಿಕ್ಟ್ ಬೋರ್ಡಿನವರು ವಾತ್ಸಲ್ಯಪಟ್ಟು ಈ ಮೊದಲು ಮಾಡಿದ ತೀರ್ಮಾನವನ್ನು ಪುನರ್ವಿಮರ್ಶೆಗೆ ತಂದು ವಸರೆಹೊಳೆಯ ಬದಲು ಹೆಚ್ಚು ಕಡಿಮೆ ಅಷ್ಟೇ ಖರ್ಚಿನಿಂದ ಆಗತಕ್ಕ ಹಾಗೂ ಸರಕಾರಕ್ಕೂ ಜನತೆಗೂ ಅತ್ಯಂತ ಹೆಚ್ಚಿನ ಪ್ರಯೋಜನಕರವಾಗಿರುವ ಹಂಗಾರ ಹೊಳೆ ಮತ್ತು ಹಾಳ್ಕಲ್ಲು ಹೊಳೆಗಳಿಗೆ ಸೇತುವೆ ಕಟ್ಟುವ ಯೋಜನೆಯನ್ನು ಮಾಡಿ ಅದರಂತೆ ೨ ಹೊಳೆಗಳಿಗೆ ಸೇತುವೆಯನ್ನು ಪೂರೈಸಿ ಜನರಿಗೆ ಹೆಚ್ಚಿನ ಅನುಕೂಲಪಡಿಸಬೇಕಾಗಿಯೂ ವಸರೆ ಹೊಳೆಯ ಸೇತುವೆಯ ವಿಚಾರವನ್ನು ಪ್ರತ್ಯೇಕ ನಿಲ್ಲಿಸಬಹುದಾಗಿಯೂ ಈ ಸಭೆಯು ಅತ್ಯಂತ ನಮ್ರದಿಂದ ಪ್ರಾರ್ಥಿಸುತ್ತದೆ. VI. ಇದರ ನಕಲನ್ನು ಮಾನ್ಯ ದಕ್ಷಿಣ ಕನ್ನಡ ಜಿಲ್ಲಾ ಕಲೆಕ್ಟರ್ ಧೊರೆಗಳವರಿಗೂ, ಡಿಸ್ಟ್ರಿಕ್ಟ್ ಬೋರ್ಡ್ ಪ್ರೆಸಿಡೆಂಟರವರಿಗೂ, ಡಿಸ್ಟ್ರಿಕ್ಟ್ ಬೋರ್ಡ್ ಅಸಿಸ್ಟಾಂಟ್ ಇಂಜಿನಿಯರ ಮುಖಾಂತರ ಇಂಜಿನಿಯರಿಗೂ, ಕುಂದಾಪುರ ಡಿ. ಸಬ್ ಕಲೆಕ್ಟರ್ ಧೊರೆಗಳವರಿಗೂ, ಉತ್ತರ ಮಂಗಳೂರು ಡಿವಿಜನ್ ಡಿಸ್ಟ್ರಿಕ್ಟ್ ಫೊರೆಸ್ಟ್ ಆಫೀಸರರಿಗೂ, ಈ ಜಿಲ್ಲೆಯ ವರ್ತಮಾನ ಪತ್ರಗಳಿಗೂ ಕೂಡ ಕಳುಹಿಸಿಕೊಡುವರೆ ಸಭಾಧ್ಯಕ್ಷರಿಗೆ ಅಧಿಕಾರ ಕೊಡಲ್ಪಟ್ಟು ನಂತರ ಸಭೆಯು ವಿಸರ್ಜಿಸಲ್ಪಟ್ಟಿತು.

(ಸಹಿ)
ಕೃಷ್ಣ ಭಟ್ಟ,
ಅಧ್ಯಕ್ಷ.

ದಕ್ಷಿಣ ಕನ್ನಡ ಜಿಲ್ಲಾ ಭೂಮಾಲಿಕರ ಸಂಘ,— ಪ್ರಕಟಣೆ.

ರಿಸೆಟ್ಲುಮೆಂಟ್

ಇದೇ ಜುಲಾಯಿ ತಾ. ೮ರಲ್ಲು ಜರಗಿದ ಕಾರ್ಯಕಾರಿ ಮಂಡಳದ ನಿರ್ಣಯದ ಪ್ರಕಾರ ರಿಸೆಟ್ಲುಮೆಂಟು ವಿಷಯದಲ್ಲಿ ರಯಿತರ ಹೇಳಿಕೆಗಳನ್ನು ಪಡೆದು ಆಕ್ಷೇಪಣೆಯನ್ನು ತಯಾರಿಸುವ ಬಗ್ಗೆ ನಿರ್ಣಯಿಸಿದ ಕಮಿಟಿಯು ಈ ಕೆಳಗೆ ಕಾಣಿಸಿದ ಪ್ರಕಾರ ಆಯಾಯ ಸ್ಥಳದ ಮುಸಾಫರ ಬಂಗ್ಲೆಯಲ್ಲಿ ಆಯಾಯ ತಾರೀಕಿನ ಬೆಳಿಗ್ಗೆ ೧೧ ಘಂಟೆಯಿಂದ ಸೇರುವುದು.

ರಿಸೆಟ್ಲುಮೆಂಟು ವಿಷಯವಾಗಿ ರೈತರ ಯಾವತ್ತೂ ಹೇಳಿಕೆಗಳನ್ನು ಕಮಿಟಿಯ ಮುಂದೆ ಬರಹ ಮೂಲಕ ಯಾ ಬಾಯ್ದೆರೆಯಿಂದ, ಆ ಸಮಯ ಹೇಳಿಕೊಳ್ಳಬಹುದು. ಬರಹ ಮೂಲಕ ತಿಳಿಸಬೇಕೆಂದಿರುವವರು ದಯವಿಟ್ಟು ಅವರ ಹೇಳಿಕೆಗಳನ್ನು ಮುಂದಾಗಿಯೇ ನನಗೆ ಆದಷ್ಟು ಬೇಗನೇ ಕಳುಹಿಸಿಕೊಡಬೇಕು.

ಸೆಟ್ಲುಮೆಂಟು ರಿಪೋರ್ಟಿನ ಹತ್ತು ಇಂಗ್ಲಿಷ್ ಪ್ರತಿಗಳು ಮತ್ತು ೩೦ ಕನ್ನಡ ಪ್ರತಿಗಳು ಕಲೆಕ್ಟರರ ಮೂಲಕ ಈ ದಿನ ಸಿಕ್ಕಿರುತ್ತವೆ ಬೇಕಾದವರು ಹಣಕೊಟ್ಟು ಪಡಕೊಳ್ಳಬಹುದು.

ಕಮಿಟಿಯು ಕೂಡುವ ಸ್ಥಳ ಮತ್ತು ಸಮಯ.

ರವಿವಾರ, ಆಗೋಸ್ತು ತಾ ೧೨— ಕುಂದಾಪುರ.
ಆದಿತ್ಯವಾರ, ,, ,, ೧೯— ಉಡುಪಿ.
,, ,, ,, ೨೬— ಕಾಸರಗೋಡು.
ರವಿವಾರ, ಸಪ್ಟಂಬರ ,, ೨— ಪುತ್ತೂರು.
ಆದಿತ್ಯವಾರ, ,, ,, ೯— ಕಾರ್ಕಳ.
,, ,, ,, ೧೬— ಮಂಗಳೂರು.
(ಡಿಸ್ಟ್ರಿಕ್ಟ್ ಬೋರ್ಡು ಆಫೀಸು)

ಕೋಟಿ ರಾಮಕೃಷ್ಣ ಕಾರಂತ,
ಕಾರ್ಯದರ್ಶಿ.

ಮಂಗಳೂರು, ೨೭-೭-'೩೪.

ಮುಟ್ಟಿರಪದವು ಶಾಲೆಯಲ್ಲಿ ಕೂಡಿದ ಪೆರುವಾಯಿ, ಅಳಿಕೆ ಗ್ರಾಮಗಳ ವರ್ಗದಾರರ ಸಭೆಯ ಪ್ರೊಸಿಡಿಂಗ್ಸ್.

ತಾ. ೨೫-೭-೩೪.

ಈ ಸಭೆಗೆ ಪೆರುವಾಯಿ ಗ್ರಾಮದ ಅಜ್ಜಾವರ ಸುಬ್ಬಣ್ಣ ಭಟ್ರ ಮಗ ಕೃಷ್ಣಭಟ್ಟರನ್ನು ಅಧ್ಯಕ್ಷರನ್ನಾಗಿ ಸರ್ವಸಮ್ಮತದಿಂದ ಚುನಾಯಿಸಲಾಯಿತು. ಹಾಜರು: ಅಧ್ಯಕ್ಷರು ಕೂಡಾ ೫೦ ಜನರು.

೧. ಅಳಿಕೆ ಮತ್ತು ಪೆರುವಾಯಿ ಗ್ರಾಮದ ಹೆಟ್ಟಿನ ಗದ್ದೆಗಳಲ್ಲಿ ಚಾಲ್ತಿ ಬೆಳೆಯ ಪೈರುಗಳಲ್ಲಿ ರೈಸ್ ಹಿಸ್ಪಾ ಎಂಬ ಜಾತಿಯ ನೊಣಗಳ ಹಾವಳಿಯು ವಿಶೇಷವಾಗಿ ಹಬ್ಬಿರುವುದರಿಂದ, ಅದರ ನಿವಾರಣೋಪಾಯಗಳನ್ನು ಸರಕಾರದವರು ಮಾಡದೆ ಅನಿವಾರ್ಯ ಎಂಬ ಸಂಗತಿ ಸಭೆಯ ಮುಂದೆ ಇಡಲಾಯಿತು.

೨. ಇದರ ನಿವಾರಣೋಪಾಯದ ಕುರಿತು ಎಗ್ರಿಕಲ್ಚರಲ್ ಡಿಪಾರ್ಟ್‌ಮೆಂಟಿನಿಂದ ಕೊಡೋಣಾದ ಅನುಭವ ಮೇರೆಗೆ ಕೈಬಲೆಗಳ ಮೂಲಕವಾಗಿಯಾಗಲೀ, ಎಲೆಯ ತುದಿಗಳನ್ನು ಕತ್ತರಿಸುವುದರಿಂದಾಗಲೀ ಏನೂ ಫಲಿತಾಂಶ ತೋರಿಬರಲಿಲ್ಲವಾಗಿ ಹೆಚ್ಚಿನವರ ಅಭಿಪ್ರಾಯದಿಂದ ತಿಳಿಯಲಾಯಿತು.

೪. ವ್ಯವಸಾಯ ಇಲಾಖೆಯವರಿಂದ ಕೊಡಲ್ಪಟ್ಟ ಪ್ರಕಟಣೆಯಿಂದ ತೋರುವ ೬ ಮಿನಾಶಕ ಮದ್ದುಗಳನ್ನು ಉಪಯೋಗಿಸಬಹುದೆಂದರೆ ಈ ಸಾಧನೆಗೆ ಹೆಚ್ಚಿಗೆ ಖರ್ಚು ತಗಲುವುದರಿಂದ ಅದನ್ನು ಸಹಿಸಿಕೊಳ್ಳಲು ಪ್ರತಿ ವರ್ಗದಾರರಿಂದ ಯಾ ಬಡ ರೈತ ಆಂದರೆ ಬೇಸಾಯಗಾರರಿಂದ ಅನುಕೂಲವಿಲ್ಲದ್ದರಿಂದ ದಯಾಳು ಸರಕಾರದವರೇ ತಕ್ಕ ನಿರ್ಮೂಲಮಾಡಬೇಕೆಂಬ ಸಂಗತಿ ತೀರ್ಮಾನಿಸಲಾಯಿತು.

೫. ಇದರ ಯಥಾ ನಕಲನ್ನು ಮಾನ್ಯ ದಕ್ಷಿಣ ಕನ್ನಡಾ ಜಿಲ್ಲಾ ಕಲೆಕ್ಟರ್ ಧೊರೆಗಳವರಿಗೂ, ವರ್ಗದಾರರ ಜಿಲ್ಲಾ ಸಂಘದ ಕಾರ್ಯದರ್ಶಿಯವರಿಗೂ, ವ್ಯವಸಾಯ ಇಲಾಖೆಯ ಆಫೀಸು, ಮಂಗಳೂರು ಇವರಿಗೂ ಕಳುಹಿಸುವರೆ ರಾ. ಸುಬ್ರಣ್ಣಭಟ್ಟರಿಗೆ ಅಧಿಕಾರ ಕೊಡಲಾಯಿತು.

ವಿಧವಾವಿವಾಹ ಪ್ರಚಾರವೂ ಇಂದಿನ ವಾತಾವರಣವೂ.

ನಮ್ಮ ಜಿಲ್ಲೆಯಲ್ಲಿ ವಿಧವಾವಿವಾಹವು ಸಮಾಜಕ್ಕೆ ಅತ್ಯಾವಶ್ಯಕವಾದ ಸುಧಾರಣೆಯೆಂದು ಪ್ರಾಯಶಃ ಎಲ್ಲರೂ ಒಪ್ಪಿಕೊಳ್ಳಲು ಪ್ರಾರಂಭಿಸಿರುವರು. ಈ ಜಿಲ್ಲೆಯ ಎಷ್ಟೋ ಮಹನೀಯರು ಶ್ರೀಯುತ ಆಕದಾಸರ ಪುಸ್ತಕದಲ್ಲಿ ಸಹಿಮಾಡಿದವರಿರುವರು. ಇವರಲ್ಲಿ ಕೆಲವರು ಬಾಲವಿಧವೆಯರ ಪಾಲಕರೂ ಸಮೀಪ ಸಂಬಂಧಿಕರೂ ಇರಬಹುದು. ಆದರೇನು? ಯಾರಿಗೂ ಈ ವಿಷಯದಲ್ಲಿ ಬಹಿರಂಗವಾಗಿ ಮುಂದೆ ಬಂದು ಇದು ಕಾರ್ಯರೂಪಕ್ಕೆ ಬರುವಂತೆ ಮಾಡಲು ಸಹಕರಿಸುವ ಧೈರ್ಯವು ಇರುವುದು ಕಂಡುಬರುವುದಿಲ್ಲ. ಯಾರಾದರೂ ಮುಂದೆ ಬಂದು ಕೆಲಸಮಾಡುವವರಿದ್ದರೆ ಒಳಗಿಂದೊಳಗೆ ಸಹಕರಿಸಲು ಬೇಕಾದಷ್ಟು ಮಂದಿ ಮಹನೀಯರೂ ಮಹಿಳೆಯರೂ ಸರ್ವಸಾಧಾರಣವಾಗಿ ಇದ್ದಾರೆಂದು ನಿರ್ಭಯವಾಗಿ ಹೇಳಬಹುದು. ಕುಂಬಳೆ ಸೀಮೆಯ ವಿಧವಾವಿವಾಹ ಪ್ರಚಾರದಲ್ಲಿ ಕಮಿಟಿಯವರು ವರನಿಗೆ ಒದಗಿಸಿದ ಧೈರ್ಯ ಹೇಳಿರುವರಲ್ಲದೆ ಇನ್ನು ಮುಂದೆ ಬಂದು ಕೆಲಸಮಾಡಿರುವುದಿಲ್ಲ. ಪುತ್ತೂರು ತಾಲೂಕಿನಲ್ಲಿ ಇತ್ತೀಚೆಗೆ ಒಂದು ವಿಧವಾವಿವಾಹವು ಜರಗಿತೆಂದು ತಾ. ೧೩-೭-೩೪ನೇ ಸ್ವದೇಶಾಭಿಮಾನಿಯಲ್ಲಿ ಪ್ರಕಟವಾದ ವಾರ್ತೆಯು ಬಹಳ ಸಂಕ್ಷೇಪವಾಗಿರುವುದರಿಂದ ಅದು ಇನ್ನೂ ಕೌತುಕವಾಗಿಯೇ ಉಳಿದಿದೆ. ಕೆಲವು ದಿನಗಳ ಹಿಂದೆ ಉಪ್ಪಿನಂಗಡಿಗೆ ಸಮೀಪ ಒಂದು ವಿಶೇಷವಾದ ವಿಧವಾವಿವಾಹವು ಜರಗಿತೆಂದು ವರ್ತಮಾನವಿದೆ. ವರನಿಗೂ ಊಟಕ್ಕೆ ಬಂದವರಿಗೂ ಗೊತ್ತಾದದ್ದು ಮದುವೆ ಮನೆಯಲ್ಲಿಯಂತೆ! ವರನು ಮದುವೆಯಾಗದೆ ಕಳೆಯಲಿಲ್ಲವಂತೆ! ಊಟಕ್ಕೆ ಬಂದವರು ಊಟಮಾಡದೆ ಹೋಗಲಿಲ್ಲವಂತೆ!!

ಕುಂಬಳೆ ಸೀಮೆಯ ಪ್ರಚಾರದಿಂದ ವರನು ಬಹಿರಂಗವಾಗಿ ಮುಂದೆ ಬಂದಿರುವನು. ಅವನಿಗೆ ಜೋಡಿಲ್ಲೆಲ್ಲಾ ಸ್ವಾಗತಗಳಿದ್ದರೂ ವಿಧವೆಯರ ಪಾಲಕರು ಮಾತ್ರ ಅವನನ್ನು ವಕ್ರದೃಷ್ಟಿಯಿಂದ ಕಾಣುತ್ತಿರುವರು. ವಿಧವೆಯರಿರುವ ಹಳ್ಳಿಗೆ ಅವನು ಕಾಲಿಟ್ಟ ಕೂಡಲೇ ಪಾಲಕರು ಕೆಲವೆಡೆಗಳಲ್ಲಿ ಜಾಗರೂಕರಾಗಿರುತ್ತಾರೆ. ಆದರೂ ವಿಧವೆಯರ ಸ್ವತಃ ಇಂಗಿತವು ಹೇಗಿದೆಯೆಂಬುದನ್ನು ತಿಳಿಯಲು ವರನಿಗೆ ತುಂಬಾ ಸಹಕಾರಿಗಳು ಅಲ್ಲಲ್ಲಿ ದೊರೆಯುತ್ತಿರುವರೆಂದು ಪ್ರಾಯಶಃ ಪಾಲಕರಿಗೆ ಗೊತ್ತಿಲ್ಲದಿರಬಹುದು. ೧೮ ವರ್ಷಕ್ಕೆ ಮಿಕ್ಕಿದ ಯೋಗ್ಯ ವಿಧವೆಯು ಸಮ್ಮತಿಸುವುದಾದರೆ ಪಾಲಕರ ಒಪ್ಪಿಗೆಯಿಲ್ಲದಿದ್ದರೂ ವರನು ಅವಳನ್ನು ಕೊಂಡು ಹೋಗಿ ಪರಿಗ್ರಹಿಸುವುದರಲ್ಲಿರುವನೆಂದು ಅವನು ಈ ಮೊದಲೇ ಸಾರಿರುವುದರಿಂದ ಅವನ ಬರವು ಕೆಲವೆಡೆಗಳಲ್ಲಿ ದಿಗಿಲಿಗೆ ಕಾರಣವಾಗಿದೆಯೆಂದು ತೋರುತ್ತದೆ.

ವಾತಾವರಣವು ಎಷ್ಟೇ ಅನುಕೂಲವಾಗಿದ್ದರೂ ವಿಧವಾವಿವಾಹವು ಸಮಾಜಹಿತಕರವೆಂದು ಜನರು ಒಪ್ಪಿಕೊಳ್ಳುವುದಿದ್ದರೂ ಸಮಾಜದಲ್ಲಿ ಸುಧಾರಕರೆನಿಸುವ ಮುಖಂಡರು ಧೈರ್ಯದಿಂದ ಮುಂದೆ ಬಂದು ಸಹಕರಿಸದಿದ್ದರೆ ಪ್ರಚಾರವು ಯಶಸ್ವಿಯಾಗುವ ಸಂಭವ ಕಂಡುಬರುವುದಿಲ್ಲ. ಅಂತಹ ಧೈರ್ಯವಿಲ್ಲದಿದ್ದರೆ ಈ ಮುಖಂಡ ಸುಧಾರಕರಿಗೆ ಶ್ರೀ. ಆಕದಾಸರ ಪುಸ್ತಕದಲ್ಲಿ ಸಹಿಮಾಡುವ ಸಾಹಸ ಯಾಕೆ ಬೇಕಿತ್ತೊ ಗೊತ್ತಾಗುವುದಿಲ್ಲ. ಅವರು ಸಹಿಮಾಡಿದ್ದಕ್ಕಾಗಿ ಪಶ್ಚಾತ್ತಾಪಪಡುವುದಿದ್ದರೆ ವರನು ಉಮೇದ್ವಾರಿಕೆಯನ್ನು ಹಿಂತೆಗೆಯಲು ಸನ್ನದ್ಧನಾಗಿರುವನು. ಹಾಗಲ್ಲದಿದ್ದರೆ ಸುಧಾರಕರು ಸಭೆ ಸೇರಲಿ. ವರನೂ ಬರುವನು.

N. Keshava Bhatta.

[illegible]!

ಅದು ಲಂಡನ್ ವಿಶ್ವ ವಿದ್ಯಾಲಯದ ಮಾತು. ಆ ವಿಶ್ವ ವಿದ್ಯಾಲಯಕ್ಕೆ ಅಮೇರಿಕದ ಕಾರ್ನೆಗಿ ಕೊರ್ಪೊರೇಶನಿನವರು ಡೊಮಿನಿಯನುಗಳಿಂದ ಕೆಲವು ವಿದ್ಯಾರ್ಥಿಗಳನ್ನು ಕರೆಸಿ ಶಿಕ್ಷಣಕೊಡಲೂ, ಒಬ್ಬ ಉಪಾಧ್ಯಾಯನನ್ನು ಡೊಮಿನಿಯನುಗಳಿಂದಲೇ ಆರಿಸಿ ಕರೆಸಿ ಕೆಲಸ ಕೊಡಲೂ ೩ ವರ್ಷಗಳ ತನಕ ೪೫೦೦ ಪವನುಗಳಂತೆ ಕೊಡಲು ನಿಶ್ಚಯಿಸಿರುವರು! ಲೀವರ್‌ಪೂಲ್ ವಿಶ್ವವಿದ್ಯಾಲಯಕ್ಕೊಂದು ಹೊಸ ಗ್ರಂಥಾಲಯವನ್ನು ರಚಿಸಲು ಅಲ್ಲಿಯ ಹೆರಲ್ಡ್ ಎಲ್. ಕೊಹನ್ ಎಂಬ ಶ್ರೀಮಂತರು ಒಂದು ಲಕ್ಷ ಪವನುಗಳನ್ನು ದಾನ ಮಾಡಿರುತ್ತಾರೆ.

ಮದರಾಸಿನ ಗವರ್ನರರಿಗೆ—

ಮದರಾಸು ಕೊರ್ಪೊರೇಶನಿನವರೊಂದು ಮಾನಪತ್ರವನ್ನರ್ಪಿಸಿ ಸತ್ಕರಿಸಿದರು. ಸರ್ ಮಹಮ್ಮದ್ ಉಸ್ಮಾನರವರು ಹಿಂದೊಮ್ಮೆ ೧೨ ವರ್ಷಗಳ ತನಕ ಆ ಕೊರ್ಪೊರೇಶನಿನ ಅಧ್ಯಕ್ಷರಾಗಿದ್ದರು; ಶರೀಫರಾಗಿದ್ದರು; ಅನಂತರ ಸರಕಾರದ ಹೋಮ್ ಮೆಂಬರರಾಗಿ ಗವರ್ನರರ ಸ್ಥಾನದಲ್ಲಿ ಬದಲಿನೋಡುವ ಗೌರವ ಪದವಿಯಲ್ಲಿ ವಿರಾಜಮಾನರಾದವರು.

ಹಿಂದೀ ವೈಮಾನಿಕನ ಪತ್ತೆಯಿಲ್ಲ.

ಪ್ರಪಂಚವನ್ನು ಸುತ್ತಾಡಿ ಬರುವೆನೆಂದು ವಿಮಾನದಲ್ಲಿ, ಕರಾಚಿಯಿಂದ ಹೊರಟ ಚೌಲಾರವರ ಸುದ್ದಿ, ಅವರು ಹೊರಟಂದಿನಿಂದ ಈ ತನಕ ತಿಳಿದುಬಂದಿಲ್ಲ. ಇದು ಗಾಬರಿಗೆ ಕಾರಣವಾಗುತ್ತಿದೆ.

ಕೊಂಗ್ರೆಸ್ ಸಭಾಧಿವೇಶನದ ಸಿದ್ಧತೆಗಳು—

ಬೊಂಬಾಯಿಯಲ್ಲಿ ನಡೆಯುತ್ತಿವೆ. ಅಧಿವೇಶನವು, ಇದೇ ಅಕ್ಟೋಬರ ಕೊನೆಯ ವಾರದಲ್ಲಿ, ಜರಗಲಿದೆ. ಅಖಿಲ ಭಾರತ ಖಾದಿ ಪ್ರದರ್ಶನವೊಂದನ್ನು ಈ ಸಂದರ್ಭದಲ್ಲಿ ಜರಗಿಸುವರು. ಸ್ವಯಂಸೇವಕ ದಳದ ರಚನೆಯಾಗುತ್ತಿದೆ. ಸ್ವಯಂಸೇವಕಿಯರ ದಳದ ಮೇಲ್ವಿಚಾರಕರಾಗಿ ಶ್ರೀಮತಿ ಪ್ಯಾರಿನ್ ಕೆಪ್ಟನರನ್ನೂ ಕುಮಾರಿ ಸೋಫಿಯಾ ಸೋಮ್ಜಿಯವರನ್ನೂ ನೇಮಿಸಲಾಗಿದೆ. (ರಾಷ್ಟ್ರಸಭೆಯ ಈ ಅಧಿವೇಶನವು ೪೮ನೆಯದು.)

ಝಾರೋ ಆಗನ ಮರಣವು—

ಮತ್ತೊಂದು ಮರಣಕ್ಕೆ ಕಾರಣವಾಯಿತು. (ಪ್ರಪಂಚದ ಅತಿವೃದ್ಧನೆಂದು ೧೬೦ ವಯಸ್ಸಿನ ಝಾರೋ ಆಗನ ಖ್ಯಾತಿ.) ಝಾರೋವು ಅಂಫೆ ಅಮೇತ್ ಮುಟಾಫಾ ಎಂಬಾಕೆಗೆ, ೧೦೦ ವರ್ಷಗಳ ಹಿಂದೆ, ವಿವಾಹಕ್ಕಾಗಿ ಕೇಳಿದ್ದನು. ಆದರೆ, ಕುಟುಂಬದವರ ಆಕ್ಷೇಪದಿಂದಾಗಿ ಮುಟಾಫಳು ಮತ್ತೋರ್ವ ಶ್ರೀಮಂತನ ಜನಾನಾವನ್ನು ಸೇರಿದಳು. ಕಳೆದ ತಿಂಗಳಲ್ಲಿ ಝಾರೋ ಆಗನು ಕಾಲವಾದನೆಂಬುದನ್ನು ಕೇಳಿದ ಕೂಡಲೇ ಆಕೆ ಮೃತಪಟ್ಟಳಂತೆ! ಮುಟಾಫಳ ವಯಸ್ಸು ೧೨೨!

ದಿನನಿತ್ಯದ ಆಹಾರ.

ಒಂದು ಸಾಮಾನ್ಯ ಪ್ರಕೃತಿಯ ಮಾನವನಿಗೆ, ದೇಹ ಬೆಳವಣಿಗೆಗೂ, ಆರೋಗ್ಯ ಪಾಲನೆಗೂ ಬೇಕಾಗುವ ಆಹಾರದ ಪಟ್ಟಿಯನ್ನು ಡಾ। ಎಚ್. ಸಿ. ಮೆಂಕಲ್ ಎಮ್. ಡಿ. ಇವರು ಈ ರೀತಿ ವಿವರಿಸುವರು:-

(೧) ಅರ್ಧ ಸೇರಿನಿಂದ ಒಂದು ಸೇರಿನಷ್ಟು ಹಾಲು. (೨) ಯಾವುದಾದರೊಂದು ಬಗೆಯ ಹಣ್ಣು, (೩) ಒಳ್ಳೆಯ ಒಂದು ಹಸಿ ತರಕಾರಿ; ಬೇಯಿಸಿದ (ಆವಿಯಲ್ಲಿ ಬೇಯಿಸಿದರೆ ಉತ್ತಮ) ತರಕಾರಿ, (೪) ಬೇಳೆ, (೫) ಎರಡು ಚಪಾತಿ, (೬) ಬೆಣ್ಣೆ ಹಚ್ಚಿದ 'ಬ್ರೆಡ್ಡು' (ರೊಟ್ಟಿ), (೭) ಮೊಸರು. ಒಂದು ಊಟದಿಂದ ಮತ್ತೊಂದರ ಅಂತರದಲ್ಲಿ ದಿನಕ್ಕೆ ಸುಮಾರು ೪ ಕುಡುತೆ ನೀರು.

ಮಂಗಳೂರಿನ ಪೇಟೆಧಾರಣೆ.

ಸಾಮುಗ್ರಿಗಳು	ಇಂದ	ವರೆಗೆ
	ರೂ. ಆ.	ರೂ. ಆ.
ರಾಶಿ ಅಕ್ಕಿ ...	3—10	4— 2
ಮುಚ್ಚಿತ ...	4— 4	4—12
ಗುಡ್ಡ ...	3—12	4— 4
ಸಣ್ಣ ...	3—10	4—
ಊರ ಅವ್ವಲ್ ಬೆಳ್ತಿಗೆ ...	4— 0	4—10
ರಂಗೂನು ಬೆ. ಗೋ. ಗ್ರ್ಯ...	4—14	5— 4
ಎಲ್ಲೂರು ಬೆ. ಮು. ಗ್ರ್ಯ...	3— 6	3— 8
ಗೋದಿ ಗೋಣಿ ಗ್ರ್ಯ ...	10— 0	12— 8
ತೊಗರಿ ಗೋಣಿ ಗ್ರ್ಯ ...	9— 8	10— 0
ಹುರುಳಿ ಗೋಣಿ ಗ್ರ್ಯ ...	6— 2	6— 4
ಕಡಲೆ ಗೋಣಿ ಗ್ರ್ಯ ...	8— 4	9— 8
ತೊಗರಿಬೇಳೆ ಗೋಣಿ ಗ್ರ್ಯ...	10— 0	17— 0
ಉದ್ದು ಗೋಣಿ ಗ್ರ್ಯ ...	7— 0	7— 8
ಹೆಸರು ಗೋಣಿ ಗ್ರ್ಯ ...	7— 0	7— 8
ಊರುಬೆಲ್ಲ ಖಂಡಿ ಗ್ರ್ಯ ...	40— 0	45— 0
ಉಪ್ಪು ಗೋಣಿ ಗ್ರ್ಯ ...	5— 4	5— 8
ಕೊಬ್ರಿ ಖಂಡಿ ಗ್ರ್ಯ ...	40— 0	47— 0
ಕೊಬ್ರಿ ಹಿಂಡಿ ಖಂಡಿ ಗ್ರ್ಯ...	19— 0	19— 8
ಎಳ್ಳಿಂಡಿ ಖಂಡಿ ಗ್ರ್ಯ ...	23—12	27— 0
ಕೊಬ್ರಿ ಎಣ್ಣೆ ಮಣ ಗ್ರ್ಯ...	2—14	3—14
ಎಳ್ಳೆಣ್ಣೆ ಮಣ ಗ್ರ್ಯ ...	5— 0	6— 0
ಚಿಮಿಣಿಎಣ್ಣೆ ಪೆಟ್ಟಿಗೆ ಗ್ರ್ಯ...	6— 8	8— 0
ಮೋರಿಸ ಸಕ್ಕರೆ ಮು. ಗ್ರ್ಯ...	3—10	3—14
ಹೊಸ ಮೆಣಸು ...	6— 4	7— 8
ಸಾಸಿವೆ ಮುಡಿ ಗ್ರ್ಯ ...	4— 8	5— 4
ಕಾಳುಮೆಣಸು ಖ. ಗ್ರ್ಯ ...	136— 8	137— 8
ಯೇಲಕ್ಕಿ ಮಣ ಗ್ರ್ಯ ...	18— 0	22— 0
ಹೊಸ ಗೇರುಬೀಜ ಮು. ಗ್ರ್ಯ	3— 3	3— 4
ಕಬ್ಬಿಣ ಖಂಡಿ ಗ್ರ್ಯ ...	42— 0	44— 0
ತಾಂಬ್ರ ತಗಡು ಮು. ಗ್ರ್ಯ...	10— 0	10— 0
ತಾಂಬ್ರ ಪಾತ್ರಗಳು ಮು. ಗ್ರ್ಯ	13— 0	14— 8
ಬೀಡಿಬೆಳ್ಳಿ ಸೇರು ಗ್ರ್ಯ ...	14—12	15— 0
ಹಿತ್ತಾಳೆ ತಗಡು ಮು. ಗ್ರ್ಯ...	9— 0	9— 8
ಪವನು ಗ್ರ್ಯ ...	20—10	21— 0
ಹುಣಿಸೆ ಹುಳಿ ಖಂಡಿ ಗ್ರ್ಯ	30— 0	35— 0
ನೇಟಿವ್ ಕಾಫಿ ಖಂಡಿ ಗ್ರ್ಯ	182— 0	198— 0
ಪ್ಲಾಂಟೇಶನ್ ಕಾಫಿ ಖಂಡಿ ಗ್ರ್ಯ...	296— 8	280— 8
ಹಳೆ ಅಡಿಕೆ ...	118— 0	124— 0
ಹೊಸ ಅಡಿಕೆ ..	62— 0	92— 0

೨೫ ವರ್ಷಗಳ ಹಿಂದೆ ಮಂಗಳೂರಿನ ಪೇಟೆಧಾರಣೆ.

(೩೧ ೩ನೇ ಜುಲಾಯಿ, ೧೯೦೯)

ಅಕ್ಕಿ ಮುಡಿಗೆ ರೂ. ೪-೧೧-೨ರಿಂದ ರೂ. ೫—೮—೨ರ ವರೆಗೆ.

ಬೀಗಗೋಟು ಅಡಿಕೆ ಖಂಡಿ ಗ್ರ್ಯ. ರೂ. ೮೫.

ತೆಂಗಿನೆಣ್ಣೆ ಮಣ ಗ್ರ್ಯ ರೂ. ೫-೮-೨.

ಕಾಫಿ ಖಂಡಿ ಗ್ರ್ಯ ,, ೨೦೫.

'WIMCO'

ಸ್ವಂತ ಉಪಯೋಗದಲ್ಲಿ ಯಾವಾಗಲೂ ವಿಶ್ವಾಸಯೋಗ್ಯವಾದ ಬೆಂಕಿಕಡ್ಡಿಗಳೆಂದರೆ-

'ವಿಮ್ಕೋ'

ಈಗಿನ ಎಕ್ಸೈಜ್ ಸುಂಕ ತೆತ್ತ ಮತ್ತು ಬೆಂಡ್ರೋಲ ಹಚ್ಚಿದ ಸದರಿ 'ವಿಮ್ಕೋ' ೩ ಅರ್ಧ ಸೈಜು ಸುಮಾರು 40 ಕಡ್ಡಿಗಳಿರುವ ಪೆಟ್ಟಿಗೆಯ ಮ್ಯಾಚಸ್ ಬರುವುದುಂಟು.

ಬೆಲೆ ಗುರುಸ್ ಒಂದರ ರೂ. 2-2-0.

ಬೇಕಾದವರು ಈ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳುವುದು.

ಮೆಸ್ಸರ್ಸ್ ಸುಜೀರ್ ಅಚ್ಚುತ ರಾಯಪ್ಪ ನಾಯಕ್ ಮತ್ತು ಕಂಪೆನಿ,
ಬಂದರ, ಮಂಗಳೂರು.

ರೆಪ್ರೆಜೆಂಟೇಟಿವ್ಸ್:— ದಿ ವೆಸ್ಟರ್ನ್ ಇಂಡಿಯಾ ಮ್ಯಾಚ್ ಕಂಪೆನಿ, ಲಿಮಿಟೆಡ್,
ಮುಂಬಾಯಿ.

[ಗುಣಬಾರದಿದ್ದರೆ ಹಣ ವಾಪಾಸು]

ಸುಪ್ರಸಿದ್ಧ ವೈದ್ಯರಾದ ಎಮ್. ಕೆ. ರಜಪೂತ ಇ. ...

ಸಂತತಿ ಪ್ರತಿಬಂಧಕ ಚೂರ್ಣ (ರಿಜಿಸ್ಟರ್ಡ)

ಬಹಳ ಸಾರಿ ಹಡಿಯುವುದರಿಂದ ಹೆಂಗಸರ ಅತಿಯ ಅಶಕ್ತಿಯಾಗುತ್ತದೆ. ಬಹಳ ಬಡತನದಲ್ಲಿ ವಿಶೇಷ ಮಕ್ಕಳಾಗುವುದರಿಂದ ದುಃಖವಾಗುತ್ತದೆ. ಈ ಕಾರಣದಿಂದಲೂ ಅಥವಾ ಬೇರೆ ಕಾರಣದಿಂದಲೂ ಮಕ್ಕಳನ್ನು ಹಡಿಯುವುದು ಬಂದಾಗಬೇಕೆಂದು ಇಚ್ಛಿಸುವವರು ಈ ಚೂರ್ಣವನ್ನು ಉಪಯೋಗಿಸಬೇಕು. ಇದರ ಸೇವನೆಯಿಂದ ಮುಟ್ಟಾಗುವಿಕೆಯು ನೇಮದಂತೆ ಸುರುವಿರುವುದು. ಶರೀರಕ್ಕೆ ಏನೂ ಅಪಾಯವಾಗದೆ ಸಂಸಾರಸುಖವು ಪೂರ್ಣವಾಗಿದ್ದು ಕೂಡಲೇ ಗರ್ಭಧಾರಣ ಬಂದಾಗುವುದು. ಇದನಂತರ ಏನು ಮಾಡಿದರೂ ಸುರುವಾಗುವುದಿಲ್ಲ. ಮೊದಲೇ ಪೂರಾ ವಿಚಾರ ಮಾಡಿ ಔಷಧ ಬೇಡಿರಿ. ಮುಂಬೈ ಸರ್ಟಿಫಿಕೇಟ ಡಾಕ್ಟರ ಡಿ. ಎ. ವೈದ್ಯ, ಎಲ್. ಸಿ. ಪಿ. ಎಸ್. ಕಳವಾದೂಪಿಪು ಠಾಣೆ. - ಈ ಚೂರ್ಣದಿಂದ ಯಾವ ತರದ ಅಪಾಯವಾಗದು ಗರ್ಭಧಾರಣವೂ ಆಗುವುದಿಲ್ಲ. ಪೂರ್ಣ ಗುಣಕಾರಿ ದಬ್ಬಿ ಕಿಮ್ಮತ್ತು ರೂ. ೪-೦ ವಿ. ಪಿ. ಖರ್ಚು ಅ

ವಿಳಾಸ:—ಸಂಜೀವಿನೀ ಔಷಧಾಲಯ ಮು ಪೋ. ಮಿರಜ, S. M. C.

ಅದನ್ನು ಅಲಕ್ಷಿಸದಿರಿ!

ಶಿಶು ಜೀವನವು ಅತಿ ಕೋಮಲ ಹಾಗೂ ಅನಿಶ್ಚಿತ! ಅದು ಕೇಳುತ್ತಿರುವುದು ಕೆಲ್ಸಿಯಂ, ಫೊಸ್ಫರಸ್, ವಿಟಮಿನ್ (ಎ. ಬಿ. ಸಿ. ಡಿ.) ಮತ್ತು ಪ್ರಾಚೀನ ಆಯುರ್ವೇದವು ನಿರ್ಮಿಸಿದ, ನವಜೀವನದಾಯಕವಾದ ಹಿಂದೂದೇಶದ ಕೆಲವೊಂದು ಮೂಲಿಕೆಗಳ ಸಾರವನ್ನು!

ಪ್ರಪಂಚವನ್ನೆಲ್ಲ ಹುಡುಕಿನೋಡಿ,—ಇಂತಹ ಅದ್ಭುತಕರ ಮತ್ತು ಶೀಘ್ರ ಫಲದಾಯಕ ಶಾಸ್ತ್ರೋಕ್ತ ಔಷಧ ದೊರೆವುದೇ ಎಂದು! ಈ "ಬೇಬಿಸ್ ಜುವೆನಲ್"ಗೆ ಆಲ್ ಇಂಡಿಯಾ ಸೈಂಟಿಫಿಕ್ ಎಂಡ್ ಸೆನಿಟರಿ ಎಕ್ಸಿಬಿಷನಿನಲ್ಲಿ ಸ್ವರ್ಣಪದಕ ದೊರೆತಿರುವುದೇ ಅದರ ಗುಣಕ್ಕೊಂದು ಪ್ರಮಾಣ.

BABY'S Juveol
RECOMMENDED BY EMINENT MEDICAL MEN.

ಎಲ್ಲ ಕೆಮಿಸ್ಟರಲ್ಲಿಯೂ ರೂ. 2 ಮತ್ತು ರೂ. 1¼ಕ್ಕೆ ದೊರೆಯುತ್ತದೆ.
ಅಥವಾ
ಮೆಸರ್ಸ್ ಶೈ ಫಾರ್ಮಸಿ ಎಂಡ್ ಕಂಪೆನಿ,
ರಥಬೀದಿ, ಮಂಗಳೂರು.

ಶಾಲಿವಾಹನ ಶಕ ೧೮೫೬ನೆಯ ಭಾವ ಸಂವತ್ಸರದ ಆಷಾಢ ಬ। ೯ ಶನಿವಾರದಿಂದ— ಆಷಾಢ ಬ। ೧೫ ಶುಕ್ರವಾರದ ವರೆಗಿನ ಪಂಚಾಂಗ. (೧೯೩೪ನೇಯ ವೃಷಭ—ಚೇಶ)

ತಾರೀಖು	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ಚಂದ್ರ	ಸೂರ್ಯ ಉ.	ಸೂರ್ಯ ಅಸ್ತ	ಹಬ್ಬ
4	ಶನಿ	೯	೩೦.೦	ರೋಹಿಣೀ	೨೩.೩೦	೧೯	6.18	6.54	● ಅಮಾವಾಸ್ಯೆ
5	ರವಿ	೧೦	೧.೪೪	ಮೃಗಶಿರಾ	೨೮.೧೪	೨೦	6.18	6.54	
6	ಸೋಮ	೧೧	೪.೩೧	ಆರ್ದ್ರಾ	೩೩.೪೪	೨೧	6.19	6.54	
7	ಕುಜ	೧೨	೮.೩೦	ಪುನರ್ವಸೂ	೪೦.೦	೨೨	6.19	6.53	
8	ಬುಧ	೧೩	೧೩.೧	ಪುಷ್ಯಾ	೪೬.೩೦	೨೩	6.19	6.53	
9	ಗುರು	೧೪	೧೭.೪೩	ಆಶ್ಲೇಷಾ	೫೩.೪೪	೨೪	6.19	6.53	
10	ಶುಕ್ರ	●	೨೩.೪೪	ಮಘಾ	೫೮.೩೦	೨೫	6.19	6.52	

ಶ್ರೀಮಧ್ಭುವನೇಂದ್ರ ಮಹೌಷಧಾಲಯ, ಕಟಪಾಡಿ, ದ. ಕ.

ಪಾರಂಪರ್ಯದ ಅನುಭವಸಿದ್ಧೌಷಧಗಳು — **ಸ್ವರ್ಣ, ರಜತ ಪದಕಗಳನ್ನು ಪಡೆದ ದಿವ್ಯೌಷಧಗಳು**

1. ಕೃಷ್ಣಕ್ಷಾರ—(ರಕ್ತದೋಷ ಸಂಬಂಧ ಯಾವತ್ತೂ ರೋಗಗಳಿಗೆ ದಿವ್ಯೌಷಧ). 2. ಗರ್ಭಪಾಲ—(ಗರ್ಭಶೂಲ, ಗರ್ಭಸ್ರಾವಗಳಿಗೆ ಅತೀ ಉಪಯುಕ್ತ) 3. ಚಂದ್ರಮಸ್—ಕಾಂತಿ ವೃದ್ಧಿಗೆ ಅತ್ಯುತ್ತಮ). 4. ಕಾಲಾಂಜನ—(ನೇತ್ರ ರೋಗಗಳಿಗೆ ದಿವ್ಯೌಷಧ) 5. ಮಧುರೀ ಕೃತನಿಂಬ ತೈಲ—(ಸರ್ವ ತರದ ವಾತರೋಗಗಳಿಗೂ, ಚರ್ಮ ವ್ಯಾಧಿಗಳಿಗೂ ಉತ್ತಮ.) 6. ಧುವ ಶೋಧನ—ಕಾರ್ಶ್ಯರೋಗ, ನೋವುಗಳಿಗೆ ಅತ್ಯುತ್ತಮ. 7. ರಸಬಿಂದು—ಫರಂಗಿ, ಮೇಹ, ದುಷ್ಟ ವ್ರಣಗಳಿಗೆ ಸಿದ್ಧೌಷಧ. 8. ಮಹಾ ಮದನಕಾಮೇಶ್ವರೀ ಲೇಹ್ಯ—ನಪುಂಸಕತ್ವ, ಧಾತು ಕ್ಷೀಣತೆ ಮುಂತಾದ ತೊಂದರೆಗಳಿಗೆ ಅತೀ ಉಪಯುಕ್ತ.

ನಮ್ಮ ಔಷಧಗಳು ದೊರೆಯುವ ಸ್ಥಳಗಳು:

ಬೊಂಬಾಯಿ ಸಂಸ್ಥಾನದ ಪ್ರಾಮುಖ್ಯ ಏಜಂಟರು:—(ಉತ್ತರಕನ್ನಡ ಜಿಲ್ಲೆ ಹೊರತು) ಕೊಟ್ಟೇಶ್ವರ ಅನಂದ್ರಾಯ ಪೈ, ಲೋಹಾರ್ ಚಾಳ್, ಬೊಂಬಾಯಿ ನಂಬ್ರ 2.

ಮಂಗಳೂರು:—1. ರಾಘವೇಂದ್ರ ರಂಗ ಪೈ, ರಥಬೀದಿ, ಮಂಗಳೂರು. 2. ಡಾಕ್ಟರ್ ಕೆ. ಎಸ್. ಭಂಡಾರಿ, ಕೆನರಾ ಡಿಸ್ಪೆನ್ಸರಿ, ಕೊಡಿಯಾಲ್‌ಬೈಲ್, ಮಂಗಳೂರು. 3. ಆರ್. ಗೋಪಾಲ ಕೃಷ್ಣರಾವ್, ಪ್ರೊಪ್ರೈಟರ್, ಗೋಪಾಲಕೃಷ್ಣ ವೈದ್ಯಾಶ್ರಮ, ಮಾರ್ಕೆಟ್ ಕ್ರಾಸ್ ರೋಡ್, ಮಂಗಳೂರು. ಬಂಟ್ವಾಳ:—ವೇದಮೂರ್ತಿ ಬಿ. ಶಂಕರಾಚಾರ್, ಶ್ರೀ. ಗೋಪಾಲಕೃಷ್ಣ ಆಯುರ್ವೇದಿಕ್ ಫಾರ್ಮಸಿ, ಬಂಟ್ವಾಳ. ಮೂಡಬಿದ್ರಿ:—ಡಾಕ್ಟರ್ ಎಸ್. ವಿ. ಮಲ್ಯ, ಮೂಡಬಿದ್ರಿ. ಕಾರ್ಕಳ:—ವಿ. ಎ. ಶೆಣೈ, ಕೆಮಿಸ್ಟ್ ಕಾರ್ಕಳ. ಮಂಜೇಶ್ವರ:—ಕೆ. ಸರ್ವೋತ್ತಮ ಬಾಳಿಗಾ ಮತ್ತು ಬೆಳ್ಳ ನಾರಾಯಣ ಶ್ಯಾನುಭೋಗ, ಮರ್ಚಂಟ್ಸ್, ಮಂಜೇಶ್ವರ. ಕಾಪು:—ಡಾಕ್ಟರ್ ಬಿ. ಕೆ. ಬೇಕಲ್ಸ್ ಡಿಸ್ಪೆನ್ಸರಿ ಕಾಪು. ಉದ್ಯಾವರ:—ಯು. ಗೋಪಾಲ ಶ್ಯಾನುಭೋಗ, ಮರ್ಚಂಟ್ ಉದ್ಯಾವರ. ಉಡುಪಿ:—1. ವೈಷ್ಣವ ಫಾರ್ಮಸಿ, 2. ಡಾಕ್ಟರ್ ಪಿ. ರಾಘವೇಂದ್ರ ನಾಯಕ್ ಡಿಸ್ಪೆನ್ಸರಿ, 3. ಪಾಂಗಾಳ ಜನಾರ್ಧನ ನಾಯಕ್ ಎಂಡ್ ಕೊ, ಹೊಸ್ಪಿಟಲ್ ರೋಡ್, ಉಡುಪಿ, 4. ಆರ್. ಎಸ್. ಶೆಣೈ, ರಥಬೀದಿ, ಉಡುಪಿ. ಕಲ್ಯಾಣಪುರ:—ಡಾಕ್ಟರ್ ಟಿ. ಮಹಮ್ಮದ್ ಇಸ್ಮಾಯಿಲ್, ತಿಮ್ಮಣ್ಣಕುದ್ರು ಕಲ್ಯಾಣಪುರ. ಬ್ರಹ್ಮಾವರ:—1. ಕೊಜ್ಜಿಕಾರ ವೈಕುಂಠ ಪೈ ಎಂಡ್ ಸನ್ಸ್, ಮರ್ಚಂಟ್ಸ್, ಬ್ರಹ್ಮಾವರ. 2. ಕೆ. ಶೇಣಗಿರಿ ನಾಗಪ್ಪಾ ಎಂಡ್ ಸನ್ಸ್, ಕೆಮಿಸ್ಟ್ ಎಂಡ್ ಡ್ರಗ್ಗಿಸ್ಟ್ಸ್, ಬ್ರಹ್ಮಾವರ. ಬಾರ್ಕೂರು:—ಬಿ. ಭಗವಂತ ಮಲ್ಯ, ಪ್ರೊಪ್ರೈಟರ್, ಆರ್. ಪಿ. ಔಷಧಾಲಯ, ಬಾರ್ಕೂರು. ಕೋಟ:—ವೇದಮೂರ್ತಿ ನಾಗೇಶ ನರಸಿಂಹ ಭಟ್ಟ, ಮುರಲೀಧರ ಕೃಷ್ಣ ದೇವಸ್ಥಾನ, ಕೋಟಿ ವರುಣತೀರ್ಥ, ಕೋಟ. ಕುಂದಾಪುರ:—1. ಕೆ. ಆರ್. ಭಟ್ಟ, ಕೆಮಿಸ್ಟ್, ಕುಂದಾಪುರ. 2. ಡಾಕ್ಟರ್ ಕೆ. ಆರ್. ಕಾಮತ್ ಡಿಸ್ಪೆನ್ಸರಿ, ಕುಂದಾಪುರ. ಗಂಗೊಳ್ಳಿ:—ಬಿ. ಸುರೇಂದ್ರನಾಥ ನಾಯಕ್, ಮರ್ಚಂಟ್, ಗಂಗೊಳ್ಳಿ. ಬೈಂದೂರು:—ಕೆ. ಪುತ್ತು ಶ್ಯಾನುಭೋಗ, ಮರ್ಚಂಟ್ ಬೈಂದೂರು. ಭಟ್ಕಳ:—ವಿಠೋಬ ನರಸಿಂಹ ನಾಯಕ್, ಗುಡಿ ಅಂಗಡಿಕಾರ್, ಮರ್ಚಂಟ್ ಎಂಡ್ ಕಂಟ್ರಾಕ್ಟರ್, ಭಟ್ಕಳ ಉ. ಕನ್ನಡಾ. ಅಂಕೋಲಾ:—ಕೃಷ್ಣ ಹಮ್ಮಣ್ಣ ನಾಯಕ್, ಪಟ್ವಾರ್, ಧರ್ಮಶಾಲೆಯ ಬಳಿ, ಅಂಕೋಲಾ, ಉ. ಕನ್ನಡಾ. ಹೆಬ್ರಿ:—1. ಎಚ್. ಮುಕುಂದ ಪೈ ಮತ್ತು ಡಾಕ್ಟರ್ ಎಂ. ಪಿ. ಕಲ್ಯಾಣ್, ಹೆಬ್ರಿ. 2. ಡಾಕ್ಟರ್ ವ್ಯಾ. ಆರ್. ಆಚಾರ್ಯ, ರೂರಲ್ ಡಿಸ್ಪೆನ್ಸರಿ, ಹೆಬ್ರಿ. ಹಾಲಾಡಿ:—ಯು. ನರಸಿಂಹ ಕಾಮತ್, ಮರ್ಚಂಟ್ ಹಾಲಾಡಿ. ಹೊಸಂಗಡಿ:—ಎಚ್. ರಾಮಚಂದ್ರ ಕಾಮತ್, ಮರ್ಚಂಟ್ ಹೊಸಂಗಡಿ, ಕುಂದಾಪುರ ತಾಲೂಕು. ನಗರ:—ಸಿ. ನಾರಾಯಣ ರಾವ್, ಸಾಹುಕಾರ, ನಗರ. ತೀರ್ಥಹಳ್ಳಿ:—ಡಾಕ್ಟರ್ ಕೆ. ನರಸಿಂಹಾ, ಶ್ರೀ ಕೃಷ್ಣಾ ಡಿಸ್ಪೆನ್ಸರಿ, ತೀರ್ಥಹಳ್ಳಿ. ಕೊಪ್ಪ:—ಡಾಕ್ಟರ್ ಟಿ. ಕೆ. ಭಟ್, ಎಂ. ಬಿ. ಎಂಡ್ ಬಿ. ಎಸ್., ಪೋಪ್ಯುಲರ್ ಫಾರ್ಮಸಿ, ಕೊಪ್ಪ, ಕಡೂರು ಡಿಸ್ಟ್ರಿಕ್ಟ್. ಶಿವಮೊಗ್ಗಾ:—ಡಾಕ್ಟರ್ ಎಂ. ಆರ್. ಪೈ, ಬಿಗ್ ಬಜಾರ್, ಶಿವಮೊಗ್ಗಾ. ಸಾಗರ:—ಡಾಕ್ಟರ್ ಬಿ. ನರಹರಿ ರಾವ್, ಸಾಗರ.

ಹೆಚ್ಚಿನ ಮಾಹಿತಿ ಬಗ್ಗೆ ಈ ವಿಳಾಸಕ್ಕೆ ಬರಕೊಳ್ಳಬಹುದು. **ನಾಯಕ್ ಬ್ರದರ್ಸ್**, ಶ್ರೀಮದ್ಭುವನೇಂದ್ರ ಮಹೌಷಧಾಲಯ, ಪೋಸ್ಟು ಕಟಪಾಡಿ, ದ. ಕ.

ಶುದ್ಧ ಸ್ವದೇಶಿ! — **ಸ್ವದೇಶಿ ಭಾಂಡವಾಳದಿಂದ** — **ಸ್ವದೇಶಿಯರಿಗಾಗಿ!**

ಗಂಧದ ಸಾಬೂನು (ಸೆಂಡಲ್‌ವುಡ್) ನಿರ್ವಿವಾದವಾಗಿ ಅತ್ಯುತ್ತಮವಾದುದು!

ತಾಜಾ ಗಂಧದ ತೈಲ ಮೊದಲಾದ ವನಸ್ಪತಿ ತೈಲಗಳಿಂದಲೇ ತಯಾರಿಸಿದ ಅತ್ಯುತ್ತಮ ಸಾಬೂನು.

ಮೈಸೂರು ಸರಕಾರದ ಗಂಧದೆಣ್ಣೆ ಕಾರ್ಖಾನೆಯಲ್ಲಿ ದೊರೆವ ಆ ಉತ್ತಮ ಎಣ್ಣೆಯ ಸ್ನಿಗ್ಧ ಸುಗಂಧವುಳ್ಳದ್ದು.

ಪ್ರಾಣಿಜನ್ಯ ಚರ್ಬಿಯ ಸ್ಪರ್ಶವೂ ಇಲ್ಲದ

ಮಲಬಾರು ಸೋಪ್

ಮಲಬಾರು ಸೇಂಡಲ್ ವುಡ್.

ದಿ ವೆಜಿಟೇಬಲ್ ಸೋಪ್ ವರ್ಕ್ಸ್, ಕಲ್ಲಿಕೋಟೆ.

ಪ್ರೊಪ್ರೈಟರ್:—ಸನ್ ಬ್ರೆಂಡ್ ಕೊಡಿಯ ಖ್ಯಾತಿಯ ಸೇಟ್ ನಾಗಜೀ ಪುರುಷೋತ್ತಮ ಮತ್ತು ಕಂಪೆನಿ, ಕಲ್ಲಿಕೋಟೆ.

ಈ ಜಿಲ್ಲೆಗೆ ಪ್ರವರ್ತಕರು:— **ರಾಘವೇಂದ್ರ ರಂಗ ಪೈ ರಥಬೀದಿ, ಮಂಗಳೂರು.**

ಇಂದೇ ಆರಂಭಿಸಿರಿ!

ಸುಪ್ರಸಿದ್ಧ **ಆತಂಕನಿಗ್ರಹ ಮಾತ್ರೆ**ಗಳನ್ನು ಉಪಯೋಗಿಸಲಿಕ್ಕೆ.

ಜೀವನದ ಶಿಥಿಲತೆಯು ಹಿಂದೆಯಸ್ನೇರಿ. ಲೋಕದಲ್ಲಿ ಸಾವಿರಾರು ಜನರು ಅದನ್ನು ಪ್ರತಿದಿನವೂ ಉಪಯೋಗಿಸುತ್ತಿದ್ದಾರೆ.

ನರ ಮತ್ತು ಶಾರೀರಿಕ ದೌರ್ಬಲ್ಯಕ್ಕೆ ಭದ್ರತೆಯು.

ಆರೋಗ್ಯಕ್ಕೆ ಕವಚವು.

32 ಮಾತ್ರೆಗಳ ಟಿನ್ನೊಂದಕ್ಕೆ ರೂ. **1**

ಹೆಚ್ಚಿನ ವಿವರಕ್ಕೆ, ಧರ್ಮಾರ್ಥ ಹಾಗೂ ಟಪ್ಪಾಲು ಖಾಸಲು ವಿನಹ ಕಳುಹಿಸಲ್ಪಡುವ ನಮ್ಮ

ಕಾಮಶಾಸ್ತ್ರವನ್ನೋದಿರಿ.

Agents:—Shah Company, MANGALORE.
" Pearl & Sons, MANGALORE.

Atank Nigrah Pharmacy,
Chickpet, Bangalore.

ಆತಂಕನಿಗ್ರಹ ಫಾರ್ಮಸಿ,
ಚಿಕ್ಕಪೇಟೆ, ಬೆಂಗಳೂರು.

ಎಲ್ಲಾ ಚಂದಾದಾರರು ತಮ್ಮ ಪತ್ರವ್ಯವಹಾರದೊಂದಿಗೆ ಅವರವರ ಚಂದಾ ನಂಬರುಗಳನ್ನು ಅಗತ್ಯವಾಗಿ ನಮೂದಿಸತಕ್ಕದ್ದು. ಸಂ. ಸ್ವ.

BUY ADVERTISED GOODS

ದಿ ಪೊಪ್ಯುಲರ್ ಇನ್ಶೂರೆನ್ಸ್ ಕಂಪೆನಿ, ಲಿಮಿಟೆಡ್,

(ಹೆಡ್ ಆಫೀಸು—ಮಂಗಳೂರು).

ನಮ್ಮ ಜಿಲ್ಲೆಯು ಪ್ರತಿ ವರ್ಷವೂ ಸುಮಾರು 15 ಲಕ್ಷ ರೂಪಾಯಿಗಳನ್ನು ಪ್ರೀಮಿಯಮ್ ರೂಪದಲ್ಲಿ ದೇಶೀಯ ಮತ್ತು ಪರದೇಶೀಯ ಕಂಪೆನಿಗಳಿಗೆ ಪ್ರವಾಹರೂಪವಾಗಿ ಸಲ್ಲಿಸುತ್ತಲೇ ಇದೆಯಲ್ಲದೆ, ಈ ಜಿಲ್ಲೆಯು ತಾನಾಗಿ ಒಂದೇ ಒಂದು ಜೀವವಿಮೆ ಸಂಘವನ್ನು ಇದುವರೆಗೆ ಘಟಿಸಿಲ್ಲ. ನಮ್ಮ ದೇಶದ ಈ ದೆಸೆಯಲ್ಲಿ, ನಮ್ಮದಿದೇ ಮೊದಲನೆ ಪ್ರಯತ್ನವಾಗಿದೆ.

ಈ ಕಂಪೆನಿಯ ವಿಚಾರದಲ್ಲಿ ಹೇಳುವುದಾದರೆ,—ಕಂಪೆನಿಯು ನಿಮ್ಮದೇ; ನಿಮಗೆ ತಿಳಿದಿರುವ ಮತ್ತು ನಿಮ್ಮ ವಿಶ್ವಾಸಕ್ಕೆ ಅರ್ಹರಾಗಿರುವವರೇ ಆಡಳಿತವನ್ನು ನಿರ್ವಹಿಸುವರು; ನಿಮ್ಮ ಹಣವು ಸ್ವದೇಶದಲ್ಲಿ ಸಂಪದಭ್ಯುದಯ ಕಾರ್ಯಗಳಿಗಾಗಿ ವಿನಿಯೋಗಿಸಲ್ಪಡುವುದು;—ಎಂಬೀ ವಿಷಯಗಳನ್ನು ಪರ್ಯಾಲೋಚಿಸಿದಲ್ಲಿ, ಸ್ವದೇಶವಾತ್ಸಲ್ಯವುಳ್ಳವರೆಲ್ಲರೂ ಈ ಕಂಪೆನಿಯನ್ನು ಪ್ರೋತ್ಸಾಹಿಸುವುದು ಅವಶ್ಯವೆಂದು ತಾನಾಗಿ ಹೊಳೆಯದಿರದು.

ಪ್ರತಿ ಒಂದು ವಿಧದಲ್ಲಿಯೂ ನಿಮ್ಮದಾದ ಈ ಕಂಪೆನಿಯಲ್ಲಿ ಒಂದು ಪೊಪ್ಯುಲರ್ ಪೊಲಿಸಿಯನ್ನು ಪಡೆದು ಸ್ವದೇಶೀಯರ ಪ್ರಯತ್ನಗಳನ್ನು ಪ್ರೋತ್ಸಾಹಿಸಿರಿ!

ಹೆಚ್ಚಿನ ವಿವರಕ್ಕೆ ಹೆಡ್ ಆಫೀಸಿಗೆ ಬರೆದುಕೊಂಡರೆ, ಸಂತೋಷದಿಂದ ಕೂಡಲೆ ತಿಳಿಸಲಾಗುವುದು.

☞ **ಎಲ್ಲಾ ಕಡೆಗಳಲ್ಲಿಯೂ ಯೋಗ್ಯ ಏಜಂಟರುಗಳು ಬೇಕು. ಧಾರಾಳ ಕಮಿಶನ್ ಕೊಡಲಾಗುವುದು.**

ಬೊಂಬಾಯಿ ಸಂಸ್ಥಾನದ ಪ್ರಾಮುಖ್ಯ ಏಜಂಟರು:—ಪ್ರಭಾಕರ ಕಂಪೆನಿ, 415 ಶೇಖ್ ಮೇಮನ್ ರಸ್ತೆ, ಬೊಂಬಾಯಿ.

WANTED

Four Organisers to organise the work of the South Indian General Assurance Society, Ltd., in the following places noted below. Capable organisers can expect to have attractive and encouraging terms with sound footing for their future.

(1) South Canara, (2) Mysore, Hassan and Coorg, (3) Kadur, Shimoga, Chitaldroog and Tumkur, (4) Mangalore, Kolar.

For terms and other particulars please apply to—

The Divisional Manager,
The South Indian General Assurance Co. Ltd.,
64, III Cross Road, Srirampur Extn. Malleswaram Post, BANGALORE,

OR

The Managing Agents,
The S. I. G. A. Co. Ltd.
55, Poonamallee High Road, Kilpauk, MADRAS.

ಕಾಶ್ಮೀರ್ ಗರಿಕದ ...
ಅಂಡ್ ಸನ್ಸ್, ಕಾರಕಲ್ಲು, ...
[ಸತ್ಯಕೃಷ್ಣ ... ಇಂಗ್ಲಿಷ್ ...]

Shiromani Narayanacharya,
Choukhamba, Benares City

ಶಾಸ್ತ್ರಗಳೇ ಪೂರ್ವದ ಅರೋಗ್ಯವೇ, ಅಥವಾ ಅಗಿತವರೇ? ರಾಮನ್ನಾಯ್ಯನವರೇ ... ಆರೋಗ್ಯವೇ, ಸುಖವಾದ ಆರೋಗ್ಯ ಅದೃಷ್ಟವಂತನ ಅವರು ರುದ್ರಾಕ್ಷಿಯನ್ನು ಯಾವಾಗಲೂ ಧಾರಣೆಮಾಡುತ್ತಿದ್ದರು. ಅದರಿಂದ ಏನು ಫಲ? ಅದನ್ನು ಧರಿಸಿದರೆ ಜೀರ್ಣಶಕ್ತಿ, ಬುದ್ಧಿಶಕ್ತಿ, ವಿದ್ಯಾಭಿವೃದ್ಧಿ, ಆರೋಗ್ಯವೃದ್ಧಿ, ಸಂಪತ್ತು ಕೀರ್ತಿ ಇವುಗಳೆಲ್ಲಾ ಆಗುವುವು. ಹಾಗಾದರೆ, ನಮಗೆ ಅಂತಹ ರುದ್ರಾಕ್ಷಿ ಎಲ್ಲಿ ದೊರೆಯುತ್ತದೆ? ಅದು ಲೋಕಪ್ರಸಿದ್ಧಿ ಹೊಂದಿದ ನಮ್ಮ ಕಾಶೀ ಶ್ರೀ ಮಂಡಲ ಶಿರೋಮಣಿ ನಾರಾಯಣಾಚಾರ್ಯರಲ್ಲಿಯೇ ಯೋಗ್ಯವಾದ ಕ್ರಯಕ್ಕೆ ಉತ್ತಮ ತರದ ರುದ್ರಾಕ್ಷಿ ದೊರೆಯುತ್ತದೆ.

ಸಣ್ಣ ಅಧ್ಯ ಪ್ರಮಾಣದ ಕಂಠೀರ ೧ಕ್ಕೆ ಬೆಲೆ ೧ರಿಂದ ರೂ. ೨೫ರ ವರೆಗೆ. ೧೦೮ ರುದ್ರಾಕ್ಷಿಗಳುಳ್ಳ ಸರ ೧ಕ್ಕೆ ಬೆಲೆ ೩ರಿಂದ ರೂ. ೨೫ರ ವರೆಗೆ, ಗೌರೀಶಂಕರ ರುದ್ರಾಕ್ಷಿ ೧ಕ್ಕೆ ರೂ. ೩ರಿಂದ ರೂ. ೫೦ರ ವರೆಗೆ ಮತ್ತು 3–4–5–6–7–8 ಮುಖಗಳ ಕಾಳು ೧ಕ್ಕೆ ಬೆಲೆ ೪ರಿಂದ ರೂಪಾಯಿ 10. ಮತ್ತು 9–10–11 ಮುಖಗಳುಳ್ಳ ಕಾಳು ೧ಕ್ಕೆ ರೂ. ೨೦ರಿಂದ ೩೦೦ರ ವರೆಗೆ. 12–13–14 ಮುಖದ ಕಾಳು ೧ಕ್ಕೆ ರೂಪಾಯಿ ೫೦ರಿಂದ 1000 ವರೆಗೆ. ಸಣ್ಣ ರುದ್ರಾಕ್ಷಿ ಅವರೆಕಾಳಿಗಿಂತ ಸಣ್ಣದಾಗಿರುತ್ತ ಕ್ರಯ ಜಾಸ್ತಿ. ದೊಡ್ಡ ರುದ್ರಾಕ್ಷಿ ಅದಕ್ಕಿಂತ ದೊಡ್ಡದಾಗಿದ್ದು ಕ್ರಯ ಕಡಿಮೆ ಇರುತ್ತದೆ. (ವಿವರಕ್ಕೆ ಕೆಳಗಿನ ವಿಳಾಸಕ್ಕೆ ಬರೆದರೆ ಇನಾಮಾಗಿ ಕಳುಹಿಸುತ್ತೇವೆ. 1 ಅಣೆ ಸ್ಟಾಂಪು ಕಳುಹಿಸಿದರೆ 8 ಇನಾಮುಗಳು— 1 ವಿಶ್ವೇಶ್ವರ ಪಟ, 1 ಕಾಶೀ ನಕ್ಷೆ, 1 ಕ್ಯಾಲೆಂಡರ್ ಸೊಡನೆ 8 ಇನಾಮುಗಳು)

ಶಿರೋಮಣಿ ನಾರಾಯಣಾಚಾರ್ಯ
ಚೌಖಂಬಾ, ಬನಾರಸ್ (ಕಾಶೀ)

ಪಂಡಿತ ಜವಾಹಿರಲಾಲ ನೆಹರೂ ಬಂದಾಗ್ಗೆ ಹುಬ್ಬಳ್ಳಿ ಪ್ರದರ್ಶನದಲ್ಲಿ ಸುವರ್ಣ ಪದಕ ದೊರೆತ
ಒಂದೇ ಸವನಾಗಿ ೩೫ ವರ್ಷದ ಅನುಭವದಿಂದ

ಹಿಂದೂದೇಶದ ಸಾವಿರಾರುಜನರಿಂದ ವರ್ಣಿಸಲ್ಪಟ್ಟ ಆಯುರ್ವೇದೀಯ,
ಹಾಗು ಮತ್ತು ಬೌಷ್ಧಿಕ ವನಸ್ಪತಿಗಳಿಂದ ತಯಾರಿಸಿದುದು. ಮತ್ತು ಇದರ ಗುಣಕ್ಕಾಗಿ ಅನೇಕ ಸರ್ಟಿಫಿಕೇಟುಗಳು ಮತ್ತು ಭಂಗಾರದ ಪದಕು
ದೊರೆತಿರುವಪರದೇಶದಲ್ಲಿ ಬಿಡಾಗುವ ಶಕ್ತಿಯ ಮೇಲೆ ಹೊಡೆಲನ ಶರಗತಿಯ ಟಾನಿಕ

ದ್ರಾಕ್ಷಾಮೃತ

ಈ ದ್ರಾಕ್ಷಾಮೃತವು ಸಹ್ಯಾದ್ರಿ ಪರ್ವತದಲ್ಲಿರುವ ಅನೇಕ ವನಸ್ಪತಿಗಳೊಂದಿಗೆ ದ್ರಾಕ್ಷಾರಸವನ್ನು ಮಿಶ್ರಮಾಡಿ ಸ್ವದೇಶೀ ಯಂತ್ರದಿಂದ ಶಾಸ್ತ್ರೀಯ ಪದ್ಧತಿ ಪ್ರಕಾರ ತಯಾರು ಮಾಡಿರುವುದರಿಂದ ಸ್ವಾದಿಷ್ಟವೂ ಮತ್ತು ಮಧುರವೂ ಆಗಿದೆ.

ಇದರ ಸೇವನೆಯಿಂದ ಶರೀರದೊಳಗಿನ ಹಳೇ ಕಸಿಕ (ಗರಮಿ) ಸಂಪೂರ್ಣ ನಾಶವಾಗುತ್ತದೆ ಮತ್ತು ಧಾತುಸ್ರಾವ, ಸ್ವಪ್ನಾವಸ್ಥೆಯಿಂದ ಅಥವಾ ಬೇರೆ ಯಾವುದೇ ವಿಕಾರದಿಂದ ಬಂದ ಅಶಕ್ತತೆಯಿಂದ ಕೈಕಾಲು, ಸೊಂಟ ಉರುವು ಬೀಳೋಣ, ಯಾವಾಗಲೂ ಎಲ್ಲ ದಿನದಲ್ಲಿ ಜ್ವರ ಇರೋಣ, ಸಡು ಬೋಲೋಣ, ಪಿತ್ತದಿಂದ ಕಣ್ಣಿಗೆ ಕತ್ತಲೆ ಬಂದು ಘೋಳಿಕೆ ಬರೋಣ, ಸೌಖ್ಯ ಸಾವು ಆಗದೇ ಇರೋಣ, ಮುಂತಾದ ಎಲ್ಲಾ ವಿಕಾರಗಳು ಸ್ವಚ್ಛವಾಗಿ ಕ್ಷುಧಾಗ್ನಿಯು ಬೆಳೆಯುತ್ತದೆ. ಮತ್ತು ಅನ್ನ ಚೆನ್ನಾಗಿ ಪಚನವಾಗಿ ಸೌಖ್ಯ ಸಾಧ್ಯವಾಗುತ್ತದೆ. ಇದರ ಸೇವನೆಯಿಂದ ತರುಣರಿಗೆ ವ್ಯಭಿಚಾರದಿಂದ ಅಥವಾ ಬೇರೆ ಕಾರಣದಿಂದ ಬಂದ ಧಾತು ಕ್ಷೀಣತೆ, ನಪುಂಸಕತ್ವ ಇದ್ದರೆ ಅದು ಹೋಗಿ ಪುನಃ ಯೌವನವಂತರಾಗಿ ಶರೀರ ಬಲವಾಗಿ ಮುಖ್ಯತು ಪುಷ್ಟಿವಂತರಾಗುವರು. ಹೆಂಗಸರಿಗೂ ಮತ್ತು ಮಕ್ಕಳಿಗೂ ಈ ಔಷಧವು ಗುಣಕಾರಿ ಇದೆ. ಮುಟ್ಟಾಗದಿದ್ದರೆ ಮತ್ತು ಉಷ್ಣದ ಗರ್ಭ ಸಂಬಂಧವಾದ ರೋಗಗಳಿದ್ದರೂ ಅವುಗಳೆಲ್ಲ ಗುಣವಾಗಿ ಹೆಂಗಸರಿಗೆ ಸಂತತಿ ವೃದ್ಧಿಯಾಗುವುದು. ಅಶಕ್ತ ಹುಡುಗರು ಬಲವಂತರಾಗುವರು. ಈ ಔಷಧದ ೩ ಬಾಟ್ಲಿಗಳನ್ನು ಸೇವನೆ ಮಾಡಿದರೆ ಪೂರ್ಣ ಗುಣ ಬರುತ್ತದೆ. ಇದರ ಅನುಭವ ೧ ಬಾಟ್ಲಿ ಸೇವನೆಮಾಡಿದ ನಂತರ ತಿಳಿದೀತು.

ಬಾಟ್ಲಿ ಬೆಲೆ ೧–೪–೦, ೩ ಬಾಟ್ಲಿಗೆ ೩–೮–೦, ಇದ್ದುನ ಬಾಟ್ಲಿಗೆ ರೂಪಾಯಿ ಟಪಾಲ ಖರ್ಚು ಪೋಷ್ಟೇಜ ಬೇರೆ ಬೀಳುತ್ತದೆ.
ಪ್ರಸಿದ್ಧ ಕೆಮಿಸ್ಟ ಮತ್ತು ಸ್ಟೋರ್ಸದೊಳಗೆ ಮತ್ತು ಕಿರಾಣಿ ಅಂಗಡಿಯಲ್ಲಿ ಸಿಗುವುದು.

ವ್ಯವಸ್ಥಾಪಕ:— ದ್ರಾಕ್ಷಾಮೃತ ಕಾರ್ಯಾಲಯ, ಘೋಷ್ಟ ನಿಪ್ಪಾಣಿ ಜಿಲ್ಲಾ, (ಬೆಳಗಾಂವಿ)
ಸಿಕ್ಕುವ ಸ್ಥಳ:— ಮಂಗಳೂರು—ಗಜಾನನ ಮೆಡಿಕಲ್ ಹಾಲ್ ಮತ್ತು ಮಿಟಾರ್ ಕಾರ್ ಬ್ರದರ್ಸ್, ಕಾರ್ ಸ್ಟ್ರೀಟ್.
ಕುಂದಾಪುರ—ಕೆ. ಆರ್. ಭಟ್ಟ. ಉಡುಪಿ—ಪೈ ಫಾರ್ಮೆಸಿ, ಮತ್ತು ಕೆ. ಶೇಷಗಿರಿ ಪೈ. ಕಾರ್ಕಳ— ಎ. ವಿ. ಶೆಣೈ. ಪುತ್ತೂರು—ಗೋಪಾಲ ನಾರಾಯಣ ಪೈ ಮತ್ತು ಫಾರ್ಮೆಸಿ. ಕಾಸರಗೋಡು— ಕೆ. ರಾಮ ನಾಯ್ಕ, ಕೋರ್ಟ್ ರಸ್ತೆ. ಬಂಟ್ವಾಳ— ಬಿ. ಎಚ್. ವಾಸುದೇವ ಪೈ. 2–6–38

ಸ್ವದೇಶಾಭಿಮಾನಿಗೆ ಚಂದಾದಾರರಾಗಿರಿ!

Canara Bank, Limited.

Established 1906.

Authorised Capital	10,00000–0–0
Subscribed capital	6,00,000—0—0
Paid up Capital	3,30,000—0—0
Reserves	4,31,000–0–0

Head Office:—Bunder, Mangalore. Local Offices:- City & Bunder.

BRANCHES:— Bombay, Cochin, Calicut, Ernakulam, Alleppey, Chikmagalur, Ganguli, Coondapoor, Udipi, Karkal, Puttur, Kasaragod, & Buntwal Out-agency.

Interest is allowed on Current, Fixed and Savings Bank Accounts, rates of which may be ascertained on application. Advances made on approved securities at easy rates. All kinds of Banking business transacted. Rules of business on application.

The Bangalore Branch Office of the Bank at No. 1 Albert Victor Road, Bangalore City has been opened on 8–1–34.

A. Madhava Pal,
Secretary.

LOOK SHARP! LOOK AHEAD!!

Murdeshwar's Banking Institute.

Pioneer Institute on the West Coast

Opens out Careers for Businessmen, Graduates, Under-graduates, and S. S. L. C's and also for those who have not passed any University examination.

Coaches students for the Specialised Banking Courses (C. A. I. B & C. A. I. I. B.) and also for Accountancy, Secretarial, and Insurance Courses (L. A. A., A. C. R. A., F. C. R. A., F. I. S. A., A. C. I. I., etc.,

Ambitious students wishing to obtain responsible positions such as those of Managers and Secretaries in Business line should join immediately. Ladies are also coached.

Enrol yourself NOW. Classes are in full swing. Expert tuition (Oral or Postal) by well-qualified and experienced teachers.

FEES VERY MODERATE.

For further particulars apply to—

The Principal,
2 Fernandes Mansion,
Hampankatta, Mangalore (S. India)

77 Years!

Two generations of approved service enables us to pick and choose what is cheap, lasting & good to suit the pockets & the tastes of our longstanding wide circle of

CUSTOMERS

who know our

Premier House for Swadeshi.

Mill Yarns—Handloom Cloths, Dhoties—Saries—Cintzes etc.

Shrinivas Ranga Pai
Sawkar Mahal,
Car Street, MANGALORE.

Printed & Published By A. S. Kamath at the Sharada Press, Car Street, Mangalore. Editor V. S. Kudva.

ವಾರ್ಷಿಕ ಮುಂಗಡ ಚಂದಾ ರೂಪಾಯಿ 2—0—0   Registered No. M. 498.   ಟಪ್ಪಾಲು ಹಾಸಲು ಸೇರಿ ರೂಪಾಯಿ 2—10—0

ಸ್ವದೇಶಾಭಿಮಾನಿ.

(ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ೧೯೦೭ರಲ್ಲಿ ಸ್ಥಾಪಿತವಾದುದು.)
ಪ್ರತಿ ಶುಕ್ರವಾರವೂ ಮಂಗಳೂರು, ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ.

ರತ್ನೈರ್ಮಹಾರ್ಹೈಸ್ತುತುಷುರ್ನ ದೇವಾ । ನ ಭೇಜಿರೇ ಭೀಮವಿಷೇಣ ಭೀತಿಮ್ ॥ ಸುಧಾಂ ವಿನಾ ನ ಪ್ರಯಯುರ್ವಿರಾಮಂ । ನ ನಿಶ್ಚಿತಾರ್ಥಾದ್ವಿರಮಂತಿ ಧೀರಾಃ ॥ ೧ ॥
ದೊರೆಯುಲನುಪಮರತ್ನಗಳು ಸಾ । ಗರವ ಮಥಿಸಲು ಸುರರಿಗದರಿಂ । ಹರುಷವಾಯಿತೆ? ಮತ್ತೆ ವಿಶ್ವವ ಸುಡುತ ಬರುತಿರುವ ॥
ಗರಲಕವರಂಜಿದರೆ? ಸುಧೆಯನು । ಪಡೆತು ಕ್ಷುದ್ರರ ತೆರದಿ ಕುಳಿತರೆ? । ತೆರಳೆ ಬಲ್ಲರೆ ತೊರೆದು ಧೀರರು ನಿಶ್ಚಿತಾರ್ಥವನು? ॥ ೧ ॥

(Oldest Kanarese Weekly in South Kanara)

ಪುಸ್ತಕ ೨೮.   ಮಂಗಳೂರು, ತಾ. ೧೦ನೇ ಶುಕ್ರವಾರ ಆಗೋಸ್ತು ೧೯೩೪   (10–8–'34)   ಸಂಚಿಕೆ ೩೨

THE CANARA BANKING CORPORATION, UDIPI, LTD.

(Incorporated in British India)
Established 1906

Head office:—UDIPI, S K   **Branches:—Coondapoor, Mangalore, Shimoga & Madras**

Abstract Statement of affairs of the CANARA BANKING CORPORATION UDIPI LTD, as on 30th June 1934

	Liabilities			Assets	
1	Paid up Capital	Rs 2 25,000-0	1	Bank Premises	Rs. 66 269-12 9
2	Reserve and other funds	2,50,000 0 0	2	Investment on G I notes	„ 6,37,466 4 6
3	Deposits	23 52 192 0 10	3	Authorised Investments	„ 24,69 522 6 4
4	Due to Bankers	3 8 659 1 2	4	Bills for collection	39,249 3 6
5	Sundries	89 923 3 3	5	Sundries	„ 39,980 13 3
6	Bills per contra	39 249 3 6	6	Cash on hand & with bankers	„ 22 735 0 5
	Total	32 75 223 8 9		Total	32 75 223 8 9

Office of the Corporation
UDIPI S K
9–7–34

M. Shrinivas Prabhu,
Ag Manager

(Regd.)

ಅಮೃತಾಂಜನ.

ಇದು ಕೆಟ್ಟ ಶಿರೋವೇದನೆ, ಕಣ್ಣುಕೊಡುವ ವಾತ, ಛಾತಿ ನೋವು, ವಿಶೇಷ ನೆಗಡಿ, ಅಸಹನೀಯ ಹಲ್ಲುನೋವು, ವಿಪರೀತ ಕಾಯಿ, ಬಹು ಶೀತ, ಸಹಿಸಲಸದಳವಾದ ಚಳಿ, ಕೈಕಾಲು ಮರಗಟ್ಟುವುದು, ಲಂಬಾಗೋ ಮೊದಲಾದ ಎಲ್ಲಾ ತರದ ಬೇನೆಗಳನ್ನು ಅತೀ ತ್ವರೆಯಲ್ಲೇ ಗುಣ ಪಡಿಸುತ್ತದೆ ಎಲ್ಲೆಲ್ಲಿಯೂ ಮಾರಲ್ಪಡುತ್ತಿದೆ

ರಿಂಗ್‌ವರ್ಮ್ ಮುಲಾಮು— ಇದು ರಿಂಗ್‌ವರ್ಮನ್ನೂ ತುರಿಕೆಯನ್ನೂ ಇನ್ನಿತರ ಚರ್ಮರೋಗಗಳನ್ನೂ, ಮೂರು ಸಲ ಮುಟ್ಟಿಸುವುದರೊಳಗೆ ಗುಣಪಡಿಸುತ್ತದೆ.

ಡಬ್ಬಿ 1ಕ್ಕೆ 6 ಆಣೆ   ಡಜನಿಗೆ ರೂ- 3—8—0   ಅಂಚೆವೆಚ್ಚ ಪ್ರತ್ಯೇಕ

ಅಮೃತಾಂಜನ ಡಿಪೋ,

ಮದರಾಸು   ಮತ್ತು   ಬೊಂಬಾಯಿ

ದಿ ಬೊಂಬೇ ಲ್ಯಾಫ್ ಎಶ್ಯೂರೆನ್ಸ್ ಕಂಪೆನಿ ಲಿಮಿಟೆಡ್, ಬೊಂಬೇ.

1908ರಲ್ಲಿ ಸ್ಥಾಪಿತವಾದುದು.

ಪೋಲಿಸಿದಾರರಿಗೆ ವಿಶೇಷ ರಿಯಾಯತಿ.

ವರ್ಷಾವಧಿಯ ಪ್ರೀಮಿಯಮ್ಮುಗಳನ್ನು ತೆರುವ ಎಲ್ಲಾ ಪೋಲಿಸಿದಾರರಿಗೂ "ಸಿಲ್ವರ್ ಜ್ಯೂಬಿಲಿ" ರಿಯಾಯತಿಯಾಗಿ ಅವರವರ ಮುಂದಿನ ಪ್ರತಿ ವಾರ್ಷಿಕ ಪ್ರಿಮಿಯಮ್ಮಿನಲ್ಲಿ ಶೇಕಡಾ 2½ ಸಲೆಯಷ್ಟು ಕಡಿಮೆಯಾದ ಮೊಬಲಗನ್ನು ತೆರುವ ರಿಯಾಯತಿ ಕೊಡಲಾಗಿದೆ. ಈ ರಿಯಾಯತಿಯ ಪ್ರಯೋಜನವನ್ನು ಆಗಲೇ ನೂರಾರು ಮಂದಿ ಪೋಲಿಸಿದಾರರು ಪಡಕೊಂಡಿದ್ದಾರೆ. ವರ್ಷಕ್ಕೊಮ್ಮೆ ಪ್ರಿಮಿಯಮ್ಮಿನ ಕಂತನ್ನು ಕಟ್ಟಲಪೇಕ್ಷಿಸುವವರು ತಮ್ಮ ಪೋಲಿಸಿಯ ನಂಬರುಗಳನ್ನು ನಮೂದಿಸಿ ನಮಗೆ ಯಾ ಸಮ್ಮಂದಪಟ್ಟ ನಮ್ಮ ಇತರ ಆಫೀಸಿಗೆ ತಿಳಿಸಬೇಕಾಗಿ ಈ ಮೂಲಕ ವಿನಂತಿ ಮಾಡಿಕೊಳ್ಳೋಣಾಗುತ್ತದೆ.

ವಿ ಸೂ.—ಪ್ರಾತಿನಿಧ್ಯವಿಲ್ಲದ ಜಿಲ್ಲೆಗಳಿಂದ ಉತ್ಸಾಹಶಾಲಿ ಗೃಹಸ್ಥರುಗಳ ಏಜನ್ಸಿ ಅರ್ಜಿಗಳು ಅಂಗೀಕರಿಸಲಾಗುವುವು.

ಕೊಟ್ಟಿಕಾರ್ ಬ್ರದರ್ಸ್, ಮದ್ರಾಸ್ ಬ್ರೇಂಚ್ ಸೆಕ್ರೆಟರಿಯವರು.

ಆಫೀಸುಗಳು:—(1) ಪೋಸ್ಟ್ ಬಾಕ್ಸ್ ನಂಬ್ರ 337, ಪಬ್ಲಿಕ್ ರೋಡ್, ಮದ್ರಾಸ್; (2) ವಿಶ್ವೇಶ್ವರಪುರಂ ಸರ್ಕಲ್, ಬೆಂಗಳೂರು ಸಿಟಿ; (3) ಮಂಗಳೂರು, ದಕ್ಷಿಣ ಕನ್ನಡ, (4) ಉಡುಪಿ, ದಕ್ಷಿಣ ಕನ್ನಡ; (5) ಇಸ್ಮಾಯಿಲ್ ಬಿಲ್ಡಿಂಗ್, ಲೋಹರ್‌ಚಾಲ್, ಬೊಂಬಾಯಿ, ನಂಬ್ರ 2; (6) ಕಲ್ಲಿಕೋಟೆ

[illegible]

ಬಿಸ್ಕೃತಿ ನಾಟಕ ಸ್ವಾಮಿ ಈ ದಿನಗಳಲ್ಲಿ! ಎಲ್ಲಿ ನೋಡಿದರೂ ನಾಟಕ! ಮಕ್ಕಳುಮರಿಗಳಿಂದ ಹಿಡಿದು ಮುದುಕ ಮುದ್ಕಿಗಿರುವವರೆಲ್ಲರೊಳಗೂ ನಾಟಕ!

× × × × ×

ಒಸ್ಟ್ರಿಯಾದಲ್ಲಿ ಸೋಲ್ಫಸರ ಕೊಲೆಯ ನಾಟಕ! ಜರ್ಮನಿಯಲ್ಲಿ ಚಿನ್ಸಲರ ಮರಣದ ನಾಟಕ! ಇಂಗ್ಲೆಂಡಿನಲ್ಲಿ ಮೆಕ್ಡೊನಾಲ್ಡರ ರಜೆಯ ನಾಟಕ! ಹಿಂದೂಸ್ಥಾನದಲ್ಲಿ ಗಾಂಧಿಯ ಉಪವಾಸದ ನಾಟಕ! ಕಾಶಿಯಲ್ಲಿ ಸನಾತನಿಗಳ ಕೋಪದ ನಾಟಕ! ಮಂಗಳೂರಲ್ಲಿ ಬಾಲಕ ನಾಟಕ ಕಂಪೆನಿಗಳ ಹೊಡೆದಾಟದ ನಾಟಕ! ವ್ವವ್ವ, ಏನು ತಮಾಷೆ! ಈ ನಾಟಕ ಕಂಪೆನಿಗಳಿಗೆ ಸ್ಟೇಜ್ ದೊರೆತುದೇ ಆಶ್ಚರ್ಯವೆನ್ನಿ!

× × × × ×

ಒಸ್ಟ್ರಿಯದ ನಾಟಕದ ಫಲವಾಗಿ ಯುದ್ಧವಾಗಲಿದೆಯೆಂದು ಊಹೆ! ಜರ್ಮನಿಯ ನಾಟಕದಲ್ಲಿ ಯುದ್ಧದ ಬಿಸನವೆಂದು ಭಾವನೆ! ಇಂಗ್ಲಾಂಡಿನ ನಾಟಕದಲ್ಲಿ ಹಿಂದೀಯರಿಗೆ ಟೋಪ್ಪಿಯೆಂದು ಮತ! ಗಾಂಧಿಯ ಉಪವಾಸದಿಂದ ಕೊಟ್ಟು ಕರಗುತ್ತದೆಂದು ಒಂದು ಆಂಗ್ಲ ಪತ್ರಿಕೆಯ ಅಭಿಪ್ರಾಯ! ಕಾಶಿ ಸನಾತನಿಗಳ ನಾಟಕದಿಂದ ಪೋಲೀಸರ ಕೋಲುಗಳಿಗೆ ಕೆಲಸವಾಯಿತೆಂದು ಆಲೋಚನೆ! ಮಂಗಳೂರ ನಾಟಕ ಕಂಪೆನಿಗಳ ವೈಷಮ್ಯದಿಂದ ನಾಟಕ ಕಲೆಯ "ಮರ್ಡರ್" ಎಂಬುದು ಖಂಡಿತ!

× × × × ×

ಹೇಳಿದ ಮಾತನ್ನು ಕೇಳದವರು ನಾಟಕವನ್ನೇಕೆ ಆಡಬೇಕು? ನಾಟಕಕಲೆಯನ್ನರಿಯದವರು ಅದನ್ನಾಡಿ ಏಕೆ ಕೊಲ್ಲಬೇಕು? ಇದನ್ನು ಕಂಡು ಜಗದಂಬೆ ಮೆಚ್ಚುವಳೇ?. ಉಪರದ ಕೊಂಗ್ರಿಗೇಶನ್‌ನ ಸಮಯದಲ್ಲಿ ಪೋಲೀಸರ ಕಾವಲು ಇದ್ದುದನ್ನು ಕಂಡು ಯೇಸುಕ್ರಿಸ್ತನು ಮನಸ್ಸು ನೊಂದುಕೊಂಡಂತೆ, ಈ ಕಲಾಭಿಮಾನಿಗಳ ಅಭಿಮಾನವನ್ನು ಕಂಡು ಜನರು ನಗರೆ?

× × × × ×

ಈ ಜನರು ಏನೇನೋ ಮಾಡುತ್ತಿದ್ದಾರೆನ್ನಿ! ಜವಾಹರಲಾಲರು ಎರಡು ದಿನಗಳಿಗೊಮ್ಮೆ ಮಾತ್ರ ಚಾವಡಿ ಮೇಲೆ ಬಂದು ಬೇಕಾದ ಹಾಗೆ ತಿರುಗಾಡಿ ಹೋಗಬೇಕೆಂದು ಈ ಜೈಲು ಜನರ ಆಜ್ಞೆಯಂತೆ! ಪಂಡಿತ ಮಾಲವೀಯರು ಗಾಂಧಿಯ ಪಕ್ಷವನ್ನು ಬಿಟ್ಟರಂತೆ! ನೋಡಿ! ಈ ಜನರ ತಿಣುಕು!

ಬೈ ಜನರಿಗಲ್ಲ!

'ಸಾಯ್ಬು'



ಸ್ವಾಭಾವಿಕವಾದ ದೀರ್ಘ ನಿದ್ರೆಯು ಆರೋಗ್ಯಕ್ಕೆ ಆವಶ್ಯಕ.

ಅನೇಕರಿಗೆ ರಾತ್ರಿ ಸರಿಯಾದ ನಿದ್ರೆ ಬರುವುದಿಲ್ಲ—ಕಾರಣವೇನು? ನರಗಳು ನಿರ್ಬಲವಾಗಿವೆ. ಮೆದುಳು ನಿಃಶಕ್ತವಾಗಿವೆ. ಬೇಸರದಿಂದಲೂ, ವಿಪರೀತ ಕೆಲಸದಿಂದಲೂ, ಹವಾ ಗುಣದಿಂದಲೂ, ಆವೇಶದಿಂದಲೂ ಹೀಗಾಗುತ್ತದೆ.

ಆರೋಗ್ಯದಿಂದಿರಬೇಕಾದರೆ, ನೀವು ಸರಿಯಾಗಿ ನಿದ್ರೆಮಾಡಬೇಕು. ಸರಿಯಾಗಿ ನಿದ್ರೆ ಹತ್ತದಿದ್ದರೆ ಆರೋಗ್ಯವು ನೆಟ್ಟಗಾಗುವುದಿಲ್ಲ. ಮೆದುಳು ಮತ್ತು ನರಗಳನ್ನು ಸಮಾಧಾನಗೊಳಿಸುವುದರಿಂದಲೇ ಸರಿಯಾದ ನಿದ್ರೆಯು ಬರುವುದು. ಸರಿಯಾದ ಪೋಷಣೆಯೇ ಇದಕ್ಕೆ ಅಗತ್ಯ. ಅಂತಹ ಪೋಷಣೆಯೂ, ಮೆದುಳು ನರಗಳ ಸಮಾಧಾನವೂ ಒಳ್ಳೇ ನಿದ್ರೆಯೂ ರುಚಿಕರವಾದ 'ಓವಲ್ಟಿನ್' ಸೇವನೆಯಿಂದ ಲಭಿಸುತ್ತವೆ. ಈ ಅಮೂಲ್ಯ ಪಾನೀಯವು ಪ್ರಕೃತಿಯ ಆಹಾರಗಳಿಂದಲೇ ತಯಾರಿಸಲ್ಪಟ್ಟಿದೆ. ಬೆಳೆದ ಬಾರ್ಲಿ, ದನದ ಕೆನೆ ಹಾಲು ಮತ್ತು ಸ್ಪೆಶಲ್ ಕೊಕ್ಕೋಗಳಿಂದ ಇದನ್ನು ತಯಾರಿಸಲಾಯಿತು. ಅಸಂಖ್ಯಾತ ಸಾವಿರಾರು ಜನರು ಈ ಓವಲ್ಟಿನ್ ಪಾನೀಯದಿಂದಲೇ ಇದ್ದ ನಿದ್ರೆಯನ್ನು ಹೊಂದುತ್ತಿರುವರು—ಶಕ್ತಿಯನ್ನು ಸಂಪಾದಿಸುತ್ತಿರುವರು.

OVALTINE

ಸ್ವಾಭಾವಿಕವಾದ ದೀರ್ಘ ನಿದ್ರೆಯನ್ನು ಕೊಡುತ್ತದೆ.

ತಯಾರಿಯಲ್ಲಿ ಕೈಯಲ್ಲಿ ಸ್ಪರ್ಶಿತವಾಗಿಲ್ಲ. ಎಲ್ಲಾ ಕೆಮಿಸ್ಟರಲ್ಲಿಯೂ ಸ್ಟೋರುಗಳಲ್ಲಿಯೂ ದೊರೆಯುತ್ತದೆ.

ಏಜೆಂಟ್—ಜೇಮ್ಸ್ ರೈಟ್ 85ಎ. ರಿಪನ್ ಸ್ಟ್ರೀಟ್ ಕಲ್ಕತ್ತ. ಮತ್ತು ಬೊಂಬಾಯಿ, ಮದ್ರಾಸುಗಳಲ್ಲಿ.

OV/108

ಕಣ್ಣಿನ ಪರೆ.

"ಬಿ—ಸನ್" ಎಂಬ 'ನೇತ್ರಭಾಸ್ಕರ'— ಈ ಔಷಧವು ಕಣ್ಣುಪರೆ, ದೃಷ್ಟಿಮಾಂದ್ಯ ಇತ್ಯಾದಿಯನ್ನು ಶೀಘ್ರವಾಗಿಯೂ ಶಾಶ್ವತವಾಗಿಯೂ ಗುಣಪಡಿಸುತ್ತದೆ. ಶಸ್ತ್ರಕ್ರಿಯೆಯು ಅವಶ್ಯವಿಲ್ಲ. ಖಂಡಿತ ಗುಣಲಾಭ. ಗುಣವಾಗದಿದ್ದರೆ ಹಣ ವಾಪಸ್. ಕ್ರಯ ರೂ 2.

ಪತ್ರವ್ಯವಹಾರ ಇಂಗ್ಲೀಷಿನಲ್ಲಿ:—

Hary yasram, Panchpota, Bengal

ಕುಷ್ಠರೋಗ ಮತ್ತು ಬಿಳಿ ತೊನ್ನು.

ಎಷ್ಟು ದೀರ್ಘಕಾಲ ಅಥವಾ ಯಾವ ಕಾರಣವೇ ಇರಲಿ, ನಾಲ್ಕೇ ವಾರಗಳಲ್ಲಿ ಪೂರ್ಣ ಗುಣಪಡಿಸುವುದು. ಮಾತ್ರೆಯ ಖಾತರಿ, ಗ್ಯಾರಂಟಿ. ವಿವರವನ್ನು ಅಪೇಕ್ಷಿಸಿದ್ದಲ್ಲಿ ಕಳುಹಿಸಲಾಗುವುದು.

ವಿಳಾಸ:—

Kamala Works, Panchpota, Bengal.

ದಿ. ಕೆನರಾ ನ್ಯೂಸ್ ಏಜನ್ಸಿ.

ಪ್ರೊಪ್ರೈಟರ್: ಬಿ. ಅಚ್ಯುತಪ್ಪೈ.

ಕಾರ್ಕಳ.

ಇಲ್ಲಿ ಎಲ್ಲಾ ವರ್ತಮಾನ ಪತ್ರಗಳೂ, ಇತರ ಪುಸ್ತಕಗಳೂ ವಿಕ್ರಯಿಸಲ್ಪಡುತ್ತವೆ.

(ಬಾಪು: ಬಸ್ ಸ್ಟೇಂಡಿನ ಬಳಿ)

Karnataka Chemical and Pharmaceutical Works, Ltd., Udipi. (South India)

ಕುಂಭಕೋಣದಲ್ಲಿಯೂ ಮಧುರೆಯಲ್ಲಿಯೂ ಮೈಸೂರಿನಲ್ಲಿಯೂ ಸುವರ್ಣ ಪದಕಗಳನ್ನು ಪಡೆದಿರುವ

ಕರ್ಣಾಟಕ ಕೆಮಿಕಲ್ ಎಂಡ್ ಫಾರ್ಮಸ್ಯೂಟಿಕಲ್ ವರ್ಕ್ಸ್, ಲಿಮಿಟೆಡ್, ಉಡುಪಿ. (ದಕ್ಷಿಣ ಹಿಂದೂಸ್ಥಾನ).

ನಮ್ಮಲ್ಲಿ ಟಿಂಕ್ಚರ್, ವಗೈರೆ ಎಲ್ಲಾ ಎಲ್ಲೋಪೆತಿಕ್ ಔಷಧ ದ್ರವ್ಯಗಳೂ, ಆಯುರ್ವೇದಿಯ ಔಷಧಿಗಳೂ, ಟೊಯ್ಲೆಟ್ ಸಾಮಗ್ರಿಗಳೂ, ಸಾಬೂನುಗಳೂ, ಫೌಂಟನ್ ಪೆನ್ ಶಾಯಿಗಳೂ ತಯಾರಿಸಲ್ಪಡುತ್ತವೆ.

ದ್ರಾಕ್ಷಾಸವ, ಪ್ರಸೂತಿ ಸಂಜೀವನ, ನಿಯೊವಿಗರ್, ಸ್ನೋ, ಕ್ಷೀರಬಲಾ, ಕಾರ್ವೋಫ್ಲೋಜಿಸ್ಟಿನ್ ಯುಟೇರಿನಾ, ಇಂಕ್ಸ್

ಮೆನೆಜಿಂಗ್ ಡೈರೆಕ್ಟರ್—ವೆಂಕಟರಾಯ ಅಪ್ಪಾಪ್ಪ ಬಾಳಿಗ.

ಹೆಡ್ ಆಫೀಸು, ಉಡುಪಿ. (ದಕ್ಷಿಣ ಹಿಂದೂಸ್ಥಾನ)

ಬ್ರೇಂಚ ಆಫೀಸು ದೇವಕರಣ ಮೆನ್ಶನ್ಸ್, 48 ಪ್ರಿನ್ಸೆಸ್ ಸ್ಟ್ರೀಟ್, ಬೊಂಬಾಯಿ ನಂ. 2.

ಪಶ್ಚಿಮ ಕರಾವಳಿ ಮತ್ತು ಮೈಸೂರು ಪ್ರಾಂತ್ಯಗಳ ಪ್ರಾಮುಖ್ಯ ಏಜಂಟರು:—

ಕರ್ಣಾಟಕ ಪ್ರೊಡಕ್ಟ್ಸ್ ಡಿಸ್ಟ್ರಿಬ್ಯೂಟಿಂಗ್ ಕಂಪೆನಿ, ಮಂಗಳೂರು.

ಅನುಕ್ರಮಣಿಕೆ.

ಅಗ್ರಲೇಖ
ಕಾಂಗ್ರೆಸ್ಸಿನ ಪ್ರಕೃತದ ಪರಿಸ್ಥಿತಿ. ೧
ಸ್ಫುಟವಿಚಾರಗಳು ೩
ಮಹಾತ್ಮಾಜೀಯವರ ಉಪವಾಸಾರಂಭ ೧೦
ಸೂಚನೆಗಳು ೮
ವರ್ತಮಾನ ಸಂಗ್ರಹ ೫
ವಿವಿಧ ಸಮಾಚಾರಗಳು ೧೧
ಪತ್ರವ್ಯವಹಾರ ೧೪
ಮೊಳಕು ೩
ರೈತರ ಹಾದಿಯಾವುದು? ೬
ಮಂಗಳೂರು ೯

ಸ್ವದೇಶಾಭಿಮಾನಿ.

ತಾ. ೧೦ನೇ ಶುಕ್ರವಾರ ಆಗೋಸ್ಟು ೧೯೩೪

ಕಾಂಗ್ರೆಸ್ಸಿನ ಪ್ರಕೃತದ ಪರಿಸ್ಥಿತಿ.

ಪಂಡಿತ ಮಾಲವೀಯ ಮತ್ತು ಅಣೆಯವರ ರಾಜೀನಾಮೆಗಳು ದೇಶದ ಸಮಸ್ತರಲ್ಲಿ ಭಿನ್ನಾಭಿಪ್ರಾಯಗಳನ್ನು ಹುಟ್ಟಿಸುವ ಬದಲಾಗಿ, ಕಾಂಗ್ರೆಸ್ಸಿನಲ್ಲಿ ಒಡಕುಂಟಾಯಿತೆಂಬ ವಿಕಾಭಿಪ್ರಾಯವನ್ನೆ ಉಂಟುಮಾಡಿತೆನ್ನಬಹುದು. ಕಾಂಗ್ರೆಸಿನಲ್ಲಿ ಯಾವಾಗಲೂ ಏಕೋದ್ದೇಶವಿದ್ದಿತಾದರೂ-ಇರುವುದಾದರೂ, ಏಕಮುಖವ ಮಾತ್ರ ಅರ್ಧ ಶತಮಾನದ ಅದರ ಇತಿಹಾಸದಲ್ಲಿ ಎಂದೂ ಇದ್ದಂತೆ ತೋರುವುದಿಲ್ಲ. ಎರಡು ಪಂಗಡಗಳು, ಎರಡು ತರಗತಿಗಳು ಎಂದೆಂದೂ ತೋರಿವೆ. ಕಾಂಗ್ರೆಸ್ಸು ದೇಶದ ಯಾವುದಾದರೊಂದು ಪ್ರಾಮುಖ್ಯ ಪ್ರಶ್ನೆಯಲ್ಲಿ ತನ್ನ ನಿಶ್ಚಿತ ಧೋರಣೆಯನ್ನು ಒಮ್ಮೆ ವ್ಯಕ್ತಪಡಿಸಿ, ತೃಪ್ತಿ ಹೊಂದಿಲ್ಲದೆ ಪಂಗಡಗಳನ್ನು ಸಮಾಧಾನಪಡಿಸ ಲೆತ್ನಿಸಿ, ಆ ಪಂಗಡವು ಪ್ರಬಲ ವಿರೋಧವನ್ನೆಬ್ಬಿಸಲೆತ್ನಿಸಿದಾಗ ಮಾತ್ರ ತನ್ನ ಪೂರ್ವದ ನಿರ್ಧಾರವನ್ನು ತೊಲಗಿ ಆ ಪಂಗಡದ ಸಮಾಧಾನಕ್ಕೆಂದು ಬಗ್ಗುತ್ತಿರುವುದು ಅಂತಹ ಒಡಕುಗಳನ್ನು ಮತ್ತಷ್ಟು ಹೆಚ್ಚಿಸಲು ಕಾರಣವಾಗಿದೆಯೆನ್ನಬಹುದು. ಜಾತೀಯ ನಿರ್ಧಾರದ ಕುರಿತಾಗಿ ಮಾತ್ರ ಅದು ಯಾವ ನಿಶ್ಚಿತ ಅಭಿಪ್ರಾಯವನ್ನೂ ಹೇಳದೆ 'ಅಂಗೀಕರಿಸಲೂ ಇಲ್ಲ, ಸ್ವೀಕರಿಸಲೂ ಇಲ್ಲ'ವೆಂದು ಚಮತ್ಕಾರಿಕವಾಗಿ ಆಡಿದ್ದನ್ನುಗಾಯಿತು. ನಿಶ್ಚಿತಾಭಿಪ್ರಾಯವನ್ನು ಮಾತ್ರ ಮೆಚ್ಚುವ ಮಾಲವೀಯ ಅಣೆಗಳವರು ಪದವನ್ನೊಪ್ಪದೆ ರಾಜೀನಾಮೆ ಕೊಟ್ಟುದೇನೂ ಆಶ್ಚರ್ಯವಲ್ಲವೆಂದು ನಮಗನಿಸುತ್ತದೆ.

ಮಾಲವೀಯ-ಅಣೆಗಳವರು ಕಾಂಗ್ರೆಸ್ಸಿನ ಧ್ಯೇಯಕ್ಕೆ ವಿರುದ್ಧವಾಗಿ ದೇಶಕ್ಕೆ ಘಾತಕವಾದುದೇನನ್ನೂ ಮಾಡಲಾರದಾದರೂ, ಹಳೆ ರಾಷ್ಟ್ರೀಯ ಪಕ್ಷವನ್ನು ಪುನರುಜ್ಜೀವಿಸಿ ಎಸೆಂಬ್ಲಿ ಚುನಾವಣೆಗಳಲ್ಲಿ ಕಾಂಗ್ರೆಸ್ ಉಮೇದ್ವಾರರನ್ನು ಪ್ರತಿಭಟಿಸುವರೆಂಬುದು ಖಚಿತವಿದೆ. ರಾಷ್ಟ್ರೀಯ ಪಕ್ಷವನ್ನು ಪುನರುಜ್ಜೀವಿಸುವುದೆಂದರೆ—ಕಾಂಗ್ರೆಸ್ ಪಕ್ಷದ ಹಲವರನ್ನು ರಾಷ್ಟ್ರೀಯ ಪಕ್ಷಕ್ಕೆ ಪರಿವರ್ತಿಸುವುದೆಂದೂ ಹೇಳಬಹುದು. ಅತ್ತ ಅತೃಪ್ತರಾದ ಸಂಯುಕ್ತ ಪ್ರಾಂತ್ಯದ ಕಾಂಗ್ರೆಸ್ ಮುಖಂಡರೂ ಕೌನ್ಸಿಲ್ ಬಹಿಷ್ಕಾರಕ್ಕೆ ಪ್ರಚಾರಕಾರ್ಯವನ್ನು ಕೈಕೊಳ್ಳುವರೆಂದು ಪ್ರಕಟವಾಗಿದೆ. ಹೀಗೆ ಕಾಂಗ್ರೆಸಿನ ಬಲವು ಬಹುಮಟ್ಟಿಗೆ ಪರೀಕ್ಷೆಗಿಡಲ್ಪಡುವುದೆಂದು ಹೇಳಬೇಕಾಗಿದೆ. ಮಾಲವೀಯರು ರಾಷ್ಟ್ರೀಯ ಪಕ್ಷವನ್ನು ಕಟ್ಟಿಕೊಳ್ಳುವರಾದರೂ ಚುನಾವಣೆಗಳಲ್ಲಿ ಕಾಂಗ್ರೆಸ್ ಉಮೇದ್ವಾರರನ್ನು ಪ್ರತಿಭಟಿಸಿಯೂ, ಸಂಯುಕ್ತಪ್ರಾಂತ್ಯದ ಕಾಂಗ್ರೆಸ್ ಮುಖಂಡರು ವಿರುದ್ಧ ಪ್ರಚಾರ ನಡೆಸಿಯೂ ಮುಂದರಿವರೆಂದಾದರೆ ಅವರು ಕಾಂಗ್ರೆಸ್ ಕೆಲಸಗಾರರೆನಿಸರೆಂದೂ, ಹಾಗೆ ಮಾಡುವುದೂ ಕಾಂಗ್ರೆಸ್ ಕೆಲಸಗಾರನೆನಿಸಲು ಇಚ್ಛಿಸುವುದೂ ಅಸಾಧ್ಯವೆಂದೂ ಕಾಂಗ್ರೆಸ್ ಕಮಿಟಿಯು ತಿಳಿಸುವುದಿದೆಯೇ? ನಮಗೆ ಸಂದೇಹವಿದೆ. ಇಂತಹ ಶಿಸ್ತು ಇಲ್ಲದಿರುವುದೇ ಕಾಂಗ್ರೆಸ್ಸಿನ ದೊಡ್ಡ ಕುಂದು. ಅಭಿಪ್ರಾಯ ಭೇದಗಳು ಎಲ್ಲಿಯೂ ಯಾವ ಪಂಗಡದಲ್ಲಿಯೂ ಇದ್ದೇ ಇವೆ. ಆದರೆ, ಕಠಿನವಾದ ಶಿಸ್ತು ಇದ್ದಲ್ಲಿ ಅಭಿಪ್ರಾಯ ಭೇದಗಳು ಒಡಕನ್ನು ತರಲಾರವು. ಮಾಲವೀಯ-ಅಣೆಯವರು ಪಾರ್ಲಿಮೆಂಟರಿ ಬೋರ್ಡಿನ ತಮ್ಮ ಸ್ಥಾನಗಳಿಗೆ ರಾಜೀನಾಮೆ ಕೊಟ್ಟಿರುವರಾದರೂ ಅವರಿನ್ನೂ ಕಾಂಗ್ರೆಸ್ ಸದಸ್ಯರಾಗಿಯೇ ಇರುವರು. ಅವರ ರಾಜೀನಾಮೆಗಾಗಿ ಕಾಂಗ್ರೆಸ್ ಕಮಿಟಿಯು ವಿಷಾದವನ್ನಷ್ಟೆ ಪ್ರಕಟಿಸಿ, ಸುಮ್ಮಗಾಗಿದೆ. ಇರಲಿ.

ಆದರೆ, ದೇಶದವರ ಕರ್ತವ್ಯವೇನು?— ನಿಶ್ಚಯವಾಗಿ ಕಾಂಗ್ರೆಸ್ಸಿನ ಬೆಂಬಲಕ್ಕೆ ನಿಲ್ಲಬೇಕಾದುದು. ಮಾಲವೀಯರ ಮುತ್ಸದ್ದಿತನ್ನ ಯೋಗ್ಯತೆ, ಹೃದಯನೈರ್ಮಲ್ಯಗಳು ಪ್ರಶ್ನಿಸಲ್ಪಡುವಂತಹುಗಳಲ್ಲವೆಂಬುದು ಖಂಡಿತ. ಅವರು ಬೇರ್ಪಟ್ಟುದರಿಂದ ಕಾಂಗ್ರೆಸ್ಸಿನ ಮೇಲೆ ಅನಾದರ ತೋರಿಸುವುದು ಮೂರ್ಖತನ. ಕಳೆದ ಅರ್ಧ ಶತಮಾನದಿಂದಲೂ ಕಾಂಗ್ರೆಸ್ಸು ಪ್ರಜಾಹಿತಚಿಂತನೆಯಿಂದ, ನಿರ್ವಂಚನೆಯಿಂದ ಹೋರಾಡುತ್ತಲಿದೆಯೆಂಬುದನ್ನು ತಿಳಿದವರು ಬರುವ ಚುನಾವಣೆಗಳಲ್ಲಿ ಕಾಂಗ್ರೆಸ್ಸಿನ ಬೆಂಬಲಕ್ಕೆ ನಿಂತು, ಅದರ ಹೊಸ ಕಾರ್ಯಕ್ರಮವಿದು ಜಯಪ್ರದವಾಗುವಂತೆ ಸಾಧಿಸಿಕೊಡುವುದರಲ್ಲಿ ತ್ರಿಕರಣಪೂರ್ವಕವಾಗಿ ದುಡಿಯುವುದು ಅಗತ್ಯ.

ಸ್ಫುಟ ವಿಚಾರಗಳು.

ವರ್ಗಾವರ್ಗಿಗಳ ಚಟವು—

ನಮ್ಮ ಸರಕಾರಕ್ಕಿದ್ದಷ್ಟು ಮತ್ತಾವ ಸರಕಾರಕ್ಕೂ ಇರದೆಂದೆಣಿಸಬೇಕಾಗಿದೆ. ಪೂಸಾದಲ್ಲಿರುವ ವ್ಯವಸಾಯ ಸಂಸ್ಥೆಯನ್ನು, ಅತಿ ವ್ಯಯ ಮಾಡಿ ಡಿಲ್ಲಿಯ ಬಳಿಗೆಲ್ಲಿಗೋ ಒಯ್ಯುವರಂತೆ. ಜನರ ವಿರೋಧವನ್ನು ಅಲಕ್ಷಿಸಿ ಸರಕಾರವು ಕೈಕೊಂಡ ಈ ನಿರ್ಧಾರಕ್ಕೆ ೭ ಸಾವಿರ ಮೈಲುಗಳ ದೂರದಿಂದ 'ಮೇಲಪ್ಪಣೆ'ಯೂ ವಿಳಂಬವಿಲ್ಲದೆ ದೊರೆಯಿತೆನ್ನುವಾಗ—ಸರಕಾರದ ಯಂತ್ರವು ವೇಗವಾಗಿ ನಡೆಯುತ್ತಿದೆಯೆಂದು ತಿಳಿಯಬಹುದು. ಹೊಸ ಡಿಲ್ಲಿಯನ್ನು, ಅರಣ್ಯ ಕಡಿದು, ೧೫ ಕೋಟಿ ರೂಪಾಯಿಗಳಿಂದ ಕಟ್ಟಲಾಯಿತು. ಈಗ, ಈ ವ್ಯವಸಾಯ ಸಂಸ್ಥೆಯನ್ನೊಯ್ದು ಪ್ರತಿಷ್ಠಿಸಲು ೪೦ ಲಕ್ಷ ರೂಪಾಯಿಗಳ ವೆಚ್ಚ ತಗಲಬಹುದೆಂದು ಅಂದಾಜಾಗಿದೆ. ನಮ್ಮ ಸರಕಾರಗಳ ವಾರ್ಷಿಕ ಬಜೇಟುಗಳಲ್ಲಿ ಶಿಕ್ಷಣ—ಆರೋಗ್ಯಪಾಲನ ಇತ್ಯಾದಿ ವಿಭಾಗಗಳಲ್ಲಿನ ಅಂಕೆಗಳಿಂದ ಒಂದೊಂದೇ ಮಾಯವಾಗುತ್ತಿರುವಾಗ ಇಂತಹ ವರ್ಗಾವರ್ಗಿಗಳ ಬಗ್ಗೆ ಲಕ್ಷಗಳ ಸಂಖ್ಯೆಗಳು ಮಂಜೂರಾಗುತ್ತಿರುವುದು ಚೋದ್ಯ.

ಪೂಸಾಸಂಸ್ಥೆಯ ಪೂರ್ವಚರಿತ್ರವೇನು?

ವ್ಯವಸಾಯಗಾರರಿಗೆ ನೂತನ ಶೋಧಗಳಲ್ಲಿ ಸಹಾಯವಾಗಲು ಈ ವ್ಯವಸಾಯ ಶೋಧನಾ ಸಂಸ್ಥೆಯು, ಲೋರ್ಡ್ ಕರ್ಝನರು ವೈಸರಾಯರಾಗಿದ್ದಾಗ, ಸ್ಥಾಪಿಸಲ್ಪಟ್ಟಿತು. ಅದನ್ನು ಬಿಹಾರಿನಲ್ಲಿ ಸ್ಥಾಪಿಸಿದ ಕಾರಣವಿಷ್ಟೆ. ಉತ್ತರ ಬಿಹಾರ ಪ್ರಾಂತ್ಯದಲ್ಲಿ ನೀಲಿ ಬೆಳೆವ ಬ್ರಿಟಿಷ್ ತೋಟಗಾರರು ಹಲವರು; ಅವರು ತಮ್ಮ ವ್ಯವಸಾಯ ಸಂಬಂಧವಾದ ಶೋಧಗಳಲ್ಲಿದ್ದರು. ಆದರೆ, ಜರ್ಮನರ ಒಂದು ಬಗೆಯ ಬಣ್ಣವು ಇಲ್ಲಿಗೆ ಆಮದಾಗಿ, ಬ್ರಿಟಿಷ್ ಪ್ಲಾಂಟರರ ವ್ಯವಸಾಯವು ಅವನತಿ ಹೊಂದುವಂತಾಗಲು, ಅವರೆಲ್ಲ ಬೇರೆ ಬೆಳೆಗಳನ್ನು ಬೆಳೆಯಬಾರದೇಕೆಂದು ಆಲೋಚಿಸ ಹತ್ತಿದರು. ಇದೇ ಸಮಯದಲ್ಲಿ ಅಮೇರಿಕನ್ ಕೋಟ್ಯಾಧೀಶ ರೊಬ್ಬರ ೩೦ ಸಾವಿರ ಪವನುಗಳ ದಾನ ಬಂತು. ಲೋರ್ಡ್ ಕರ್ಝನರು ಇದರ ಸಹಾಯದಿಂದ ಪೂಸಾದಲ್ಲೊಂದು ಸಂಸ್ಥೆಯನ್ನು ಸ್ಥಾಪಿಸಿದರು. ಹೀಗೆ,—ಬ್ರಿಟಿಷ್ ಪ್ಲಾಂಟರುಗಳ ಸಹಾಯಾರ್ಥ ಲೋರ್ಡ ಕರ್ಝನರಿಂದ ಈ ಸಂಸ್ಥೆಯು ಸ್ಥಾಪನೆಯಾಯಿತೆನ್ನಬಹುದು. ಹಿಂದೀಯರೂ ಪ್ರಯೋಜನ ಪಡುತ್ತಿರುವರು. ಈ ಸಮಯದಲ್ಲಿ, 'ಪೂಸಾದಲ್ಲಿ ಈ ಸಂಸ್ಥೆಯನ್ನು ಸ್ಥಾಪಿಸಿದುದು ತಪ್ಪು' ಎನ್ನುತ್ತ ಬೇರೆ ಕಡೆಗೆ ವರ್ಗಾಯಿಸುವರಲ್ಲ ದುಂದು ವ್ಯಯಮಾಡಿ!—ಎಂದು ಜನರು ನೊಂದುಕೊಳ್ಳುವುದು ಸರಿಯಲ್ಲವೇ?

ಮಹಾತ್ಮಾಜಿಯವರ ಹರಿಜನ ಸಂಚಾರವು

ಸಮ್ಯಕ್ಕೆ ಮುಗಿಯಿತು. ಪೂನಾ-ಒಪ್ಪಂದದ ಸಮಯದಲ್ಲಿ, ಹರಿಜನರ ಬಗ್ಗೆ ಅವರು ಕೊಟ್ಟ ಆಶ್ವಾಸನೆಯನ್ನವರು ಪಾಲಿಸಿದರೆಂದು ಹರಿಜನರಷ್ಟೆ ಅಲ್ಲ, ಲೋಕವೇ ತಿಳಿಕೊಂಡಂತಾಯಿತು. ಆರ್ಥಿಕ ದುರವಸ್ಥೆಯು ಸರ್ವತ್ರ ಪ್ರಸರಿಸಿರುವ ಈ ಕಾಲದಲ್ಲಿ ಎಂಟು ಲಕ್ಷಗಳಷ್ಟು ಧನ ಸಂಗ್ರಹ ಮಾಡಿದುದು,—ಹರಿಜನ ಕಾರ್ಯದ ಕಡೆಗೆ ಮೇಲ್ಜಾತಿಯವರ ಸಹಾನುಭೂತಿಯಿದೆಯೆಂಬುದನ್ನಲ್ಲದೆ ಗಾಂಧಿಜಿಯವರ ತೇಜೋ ಮಹಿಮೆಯೂ ಕಿಂಚಿತ್ತಾದರೂ ಕಡಿಮೆಯಾದುದಿಲ್ಲವೆಂಬುದನ್ನು ಸೂಚಿಸುತ್ತದೆ. ಏಳು ದಿನಗಳ ಅವರ ಶಿರಶನ ವ್ರತವು ಮುಗಿದು ಅವರು ನವಚೇತನದಿಂದ ಹರಿಜನ ಕಾರ್ಯವನ್ನು ಪೂರ್ಣಗೊಳಿಸಲು ನವೋತ್ಸಾಹದಿಂದ, ಬರುವರೆಂದು ಹಾರೈಸುವ.

ಶೃಂಖಲಾಬದ್ಧ ಪ್ರಜೆಗಳಿಗೊಬ್ಬ ಹಿತಚಿಂತಕರು

—ನಮ್ಮ ಮದರಾಸು ಸರಕಾರದ ಮುಖ್ಯ ಸಚಿವರಾದ ಬೊಬ್ಬಿಲಿ ರಾಜರು! ಶಾಲೆಗಳಲ್ಲಿ ಅನುಕ ಪಟಗಳನ್ನಿಡಬಾರದೆಂಬ ಸರಕಾರೀ ಆಜ್ಞೆಯ ವಿಷಯವಾಗಿ ಶ್ರೀಮಾನ್ ಎ. ಬಿ. ಶೆಟ್ಟರು ಕೌನ್ಸಿಲಿನಲ್ಲಿ ಪ್ರಶ್ನಿಸಿದಾಗ 'ರಾಜಕೀಯಗಳಲ್ಲಿ ಸಂಬಂಧಿಸಿದವರ ಚಿತ್ರಪಟಗಳನ್ನು ಶಾಲೆಗಳಲ್ಲಿಡುವುದು ಅಪೇಕ್ಷಣೀಯವಲ್ಲ'ವೆಂದರು ಈ ಮಹಾನುಭಾವರು! ದಾಸ್ಯಮನೋವೃತ್ತಿಯ ಪರಮಾವಧಿಯೆನ್ನಲೇ ಇದನ್ನು? ನಮ್ಮ ಪ್ರಸಿದ್ಧ ದೇಶಭಕ್ತರ ಚಿತ್ರಗಳು ಶಾಲೆಗಳಲ್ಲಿರಬಾರದೆನ್ನುವುದು ನಮ್ಮ ದೇಶದ ಬಾಲಕರನ್ನು—ನಮ್ಮ ಮುಂದಿನ ಜನಾಂಗವನ್ನು—ವಂಚಿಸಿದಂತಾಗದೇ? ಮಹಾತ್ಮಾಜಿಯವಂಥವರು ದುರ್ಬೋಧಕರೆಂಬ ಅಥವಾ ಅವರ ಚಿತ್ರಗಳನ್ನು ನೋಡುವುದರಿಂದ ಮಕ್ಕಳಲ್ಲಿ ಬಂಡಾಯವೆಬ್ಬಿಸುವ ಮನೋಭಾವವು ಉದಯಿಸೀತೆಂಬ ಅಂಜಿಕೆಯೋ? ಯಾವ ವಿದೇಶೀ ಮಹನೀಯನಾದರೂ ನಮ್ಮ ಮದರಾಸು ಸರಕಾರದ ಈ ಆಜ್ಞೆಯನ್ನು ಕೇಳಿ ಅಚ್ಚರಿಗೊಳ್ಳದಿರನು. ಸರಕಾರವು ತನ್ನ ತಪ್ಪನ್ನು ಬೇಗನೇ ತಿದ್ದಿಕೊಳ್ಳುವುದೆಂದೆಣಿಸುವೆವು.

ಹಿಂದೂಸ್ಥಾನೀ ಸೇವಾದಲದ ತಪ್ಪುಗಳು

ಯಾವುವು, ಎಷ್ಟು ಎಂದು ಇನ್ನೂ ಜನರಿಗೆ ಅಳೆಸಿಗದಷ್ಟು ಗಾಢವಾದ ನಿರ್ಬಂಧದಲ್ಲಿ ಸರಕಾರವು ಅದನ್ನಿರಿಸಿದೆ. ಕಾಂಗ್ರೆಸ್ ಸಂಸ್ಥೆಗಳ ಮೇಲಿನ ನಿರ್ಬಂಧವು ತೆಗೆದು ಹಾಕಲ್ಪಟ್ಟರೂ, ಕಾಂಗ್ರೆಸ್ ಧ್ಯೇಯಗಳನ್ನು ಮತ್ತೊಂದು ರೂಪದಲ್ಲಿ ಸಾಧಿಸುತ್ತಿರುವ ಈ ದಲವು ಮಾತ್ರ ಇನ್ನೂ ಪ್ರತಿಬಂಧಿತವಾಗಿಯೇ ಇದೆ. ಗಡಿನಾಡಿನ ಕೆಂಪಂಗಿಗಳ ಸಾಲಿನಲ್ಲೇ ಹಿಂದೂದೇಶದ ಈ 'ಖಾಕಿಅಂಗಿ'ಗಳನ್ನು ಸರಕಾರವು ಪರಿಗಣಿಸಿದೆಯೋ— ಅದೂ ತಿಳಿದಿಲ್ಲ. ಕಾಂಗ್ರೆಸ್ ಕಾರ್ಯಕಾರಿ ಮಂಡಳಿಯೂ ಸೇವಾದಲದ ಮೇಲಿನ ಈ ನಿರ್ಬಂಧದ ಕುರಿತಾಗಿ ಆಲೋಚಿಸಿದುದಿಲ್ಲ,—ಆಲೋಚಿಸದೇ ಎಂದು ಯುಕ್ತಪ್ರಾಂತ್ಯದ ಕಾಂಗ್ರೆಸ್ ಕಮಿಟಿಯು ಪ್ರಶ್ನಿಸಲಿದೆ. ಯಾರನ್ನು ಯಾರು ಪ್ರಶ್ನಿಸಿದರೂ, ಗಡಿನಾಡಿನ ಕೆಂಪಂಗಿಗಳು ಮತ್ತು ಹಿಂದೂಸ್ಥಾನದ 'ಖಾಕಿ ಅಂಗಿ'ಗಳು ಇವುಗಳೊಳಗೆ ಅಪ್ರಮೇಯವಾದ ರಾಜದ್ರೋಹದ ಸಾಗರವಿದೆಯೆಂದು ಅಂಜುವ ಸರಕಾರಕ್ಕೆ ಮಾತ್ರ ತದ್ವಿರುದ್ಧವಾಗಿ ಖಚಿತಪಡಿಸುವವರಾರು?

ಇದು 'ಡೆಪ್ಯುಟೇಶನು'ಗಳ ಯುಗ!

ಯಾರೂ ಯಾವ ಬಗೆಯ ಡೆಪ್ಯುಟೇಶನುಗಳನ್ನೂ ಮೇಲಧಿಕಾರಿಗಳ ಬಳಿಗೆ ಒಯ್ಯಬಹುದು, ಎಂದಾದರೆ—ಸಂಯುಕ್ತ ಪ್ರಾಂತ್ಯದ ನೋನ್-ಗಜೆಟೆಡ್ ಪೋಲೀಸ್ ಎಸೋಸಿಯೇಶನಿನ ಪ್ರತಿನಿಧಿಗಳು ಅಧಿಕದ ಚೀಫ್ ಜಸ್ಟಿಸರಲ್ಲಿಗೆ ಒಯ್ದ ಮನವಿಯಲ್ಲೇನು ತಪ್ಪು?— ಅಲ್ಲಿಯ ಪ್ರೊಸೆಕ್ಯೂಟಿಂಗ್ ಪೋಲೀಸ್ ಇನ್ಸ್‌ಪೆಕ್ಟರುಗಳಿಗೂ ಸಬ್ ಇನ್ಸ್‌ಪೆಕ್ಟರುಗಳಿಗೂ, ತಾವು ನಿವೃತ್ತಿ ಹೊಂದಿದ ನಂತರ ಕೋರ್ಟುಗಳಲ್ಲಿ ಪ್ಲೀಡರುಗಳಾಗಿ ವ್ಯವಹರಿಸಲಿಕ್ಕೆ ಸುಗಮ ಪಥವನ್ನು ಕಲ್ಪಿಸಿಕೊಡಲು ವಕೀಲರುಗಳ ಮಸೂದೆಯನ್ನು ಅನುಕೂಲವಾಗಿ ತಿದ್ದುವಂತಾಗಬೇಕೆಂದು ಮನವಿಯ ಸಾರಾಂಶ. ಚೀಫ್ ಜಸ್ಟಿಸರರು, 'ಆಲೈಸಬೇಕಾದುದಕ್ಕೆ ಆಲೈಸಿದರು; ಉತ್ತರ ಕಳುಹುವೆನೆಂದು ಹೇಳಬೇಕಾದುದಕ್ಕೆ ಕಳುಹುವೆನೆಂದರು. ಏನು ಉತ್ತರ ಕೊಡುವರೋ ಇನ್ನು ತಿಳಿಯಬೇಕಾಗಿದೆ. ಕೋರ್ಟುಗಳೆಲ್ಲ ವಕೀಲರುಗಳಿಂದ ತುಂಬಿದರೇನಾಯಿತು?—ಪೋಲೀಸ್ ಇಲಾಖೆಯಲ್ಲಿ ಕೆಲಸ ಮಾಡಿ ಮುಪ್ಪಿನಲ್ಲೂ ಉತ್ಸಾಹವನ್ನು ಕಳಕೊಳ್ಳದಿರುವ ಈ ಪೋಲೀಸ್ ಆಫೀಸರುಗಳಿಗೆ,—ವಕಾಲತಿಗೆಂದೇ ತೀರ್ಗಡೆ ಹೊಂದಿ ಬರುವವರ ಸ್ಥಾನದಲ್ಲಾದರೂ ಸ್ಥಳ ಕೊಟ್ಟರೆ—ಅವರು ಪೋಲೀಸ್ ಇಲಾಖೆಯ ತಮ್ಮ ಜ್ಞಾನಾಮೃತವನ್ನು ಕೋರ್ಟುಗಳಲ್ಲಿ ಸೂಚಿಸಿ ಕೃತಾರ್ಥರಾಗರೇ?

ಕಪುರ್ತಲಕ್ಕೂ ಈಸೋಂಕು ತಗಲಿತಲ್ಲ!

ಭೂತಲದ ರಾಜರುಗಳಿಗೇನೂ ನೆಮ್ಮದಿ ಯಿಲ್ಲ. ಅಳಿದುಳಿದ ಕೆಲವು ಚಿಕ್ಕ ರಾಜರುಗಳು ನಮ್ಮ ದೇಶದಲ್ಲಿ ನಾಮಮಾತ್ರಕ್ಕೆ ಇದ್ದು ತಮ್ಮ ಹೆಚ್ಚಿನ ಆಯುಷ್ಯವನ್ನೆಲ್ಲ ವಿಲಾಯತಿಯ ವಿದ್ಯುದ್ದೀಪಗಳ ಕೆಳಗೆ ಕಳೆಯುತ್ತಿರುವರು. ತಮ್ಮ ರಾಜ್ಯದಲ್ಲೇನು ನಡೆಯುತ್ತಿದೆಯೆಂದು ಇವರಿಗೆ ತಿಳಿದಿದೆಯೇ? ಕಪುರ್ತಲಾದಲ್ಲಿ ಅದೊಂದು ದುರ್ದೈವೀ ಕ್ಷಣದಲ್ಲಿ ಗೋಲೀಬಾರಿನ ನಾಟಕ ನಡೆಯಿತು. ವಿಚಾರಣೆಯೂ ಯಿತು. ಒಂದೂ ಪೋಲೀಸ್ ಆಫೀಸರರೊಬ್ಬರನ್ನು ಸ್ಥಾನಭ್ರಷ್ಟ ಮಾಡಿ, ಬದಲಿಗೆ ಪಂಜಾಬಿನ ಮುಸ್ಲಿಂ ಮಹನೀಯನೊಬ್ಬನಿಗೆ ಸ್ಥಳ ಕೊಟ್ಟರು. ಈಗ ಹೊಸ ವಾರ್ತೆ—ಆ ಸಂಸ್ಥಾನದ ಆಡಳಿತವನ್ನು ಬ್ರಿಟಿಷ್ ಇಂಡಿಯನ್ ಆಫೀಸರರೊಬ್ಬರು ನೋಡಿಕೊಳ್ಳುವಂತೆ ವ್ಯವಸ್ಥೆಯಾಗಲಿದೆಯೆಂದು! ಬ್ರಿಟಿಷರಿನಿಗೇ ಆ ಕಾರ್ಯಭಾರ ದೊರೆಯಬಹುದೆಂದು ಹೇಳಬಹುದು! ಇಂತಹ ಬದಲಾವಣೆಯಾಗಲು ಸಂಸ್ಥಾನಕ್ಕೊದಗಿದ ವಿಪತ್ತು ಎಂತಹದೋ ತಿಳಿದಿಲ್ಲ. ರಾಜರಿಗೆ ಇದರ ಸುದ್ದಿಯಿಲ್ಲದೆ—ಅವರೆಲ್ಲೋ ವಿಲಾಸದಲ್ಲಿರಬಹುದು. ರಾಜ್ಯಭಾರದ ಭಾರವಂತೂ ವರ್ಗಹೊಂದುತ್ತಿದೆ. ಫೆಡರೇಶನಿಗೆ (ಸಮ್ಮಿಳಿತ ರಾಜ್ಯಭಾರ ಪದ್ಧತಿಗೆ) ಸೇರಬಾರದೆಂದವರ ನಾಲಗೆ ಎಷ್ಟು ಚೆನ್ನಾಗಿದೆ!

FRESH CONSIGNMENT ARRIVED.

UNEQUAL QUALITY——————EXEPATIONAL PRICE.

A TIRE THAT SAVES YOU REPUTATION AND MONEY

The Canara Public Conveyance Co., Ltd.

MANGALORE.

ಜರ್ಮನಿಯ ಅಧ್ಯಕ್ಷರಾದ ವಾನ್ ಹಿಂಡನ್‌ಬರ್ಗರ ಮರಣ.

ಪ್ರೆಸಿಡೆಂಟ್ ಹಿಂಡನ್ ಬರ್ಗರವರು, ಇದೇ ತಾ. ೨ರಲ್ಲಿ, ತಮ್ಮ ೮೭ನೇ ವಯಸ್ಸಿನಲ್ಲಿ, ಬರ್ಲಿನ್ ನಗರದಲ್ಲಿ ಕಾಲವಾದರು. ಈ ದಿನವು, ಮಹಾ ಯುದ್ಧವಾರಂಭವಾದ ೨೦ನೇ ವರ್ಷದ ಸ್ಮಾರಕದಿನವಾಗಿದೆ!

ಇವರು ಜರ್ಮನಿ ದೇಶದ ಪೋಸನ್ ಎಂಬಲ್ಲಿ ೧೮೪೭ನೇ ಅಕ್ಟೋಬರ ತಾ. ೨ರಲ್ಲಿ ಜನಿಸಿದರು. ಇವರ ತಂದೆಯವರು ಸೇನಾಧಿಕಾರಿಗಳಲ್ಲೊಬ್ಬರು. ಹಿಂಡನ್‌ಬರ್ಗರ ಶಿಕ್ಷಣವೂ ಅದೇ ಪಥಕ್ಕೆ ಹರಿಯಿತು. ೧೮ನೇ ವಯಸ್ಸಿನಲ್ಲಿ ಇವರು ಸೈನಿಕನಾಗಿ ಸೇರಿದರು. ಕೊನಿಗ್ರಾಟ್ಜ್ ಎಂಬಲ್ಲಾದ ಯುದ್ಧದಲ್ಲಿ ಶೌರ್ಯವನ್ನು ತೋರಿದರು. ೧೮೭೦—೭೧ರಲ್ಲಿ ನಡೆದ ಯುದ್ಧದಲ್ಲಿಯೂ ಅಸಾಮಾನ್ಯ ಭಾಗ ವಹಿಸಿದರು. ೧೯೦೩ರಲ್ಲಿ ಇವರು ಜನರಲ್ ಪದವಿಗೇರಿದರು. ೧೯೧೧ರಲ್ಲಿ ನಿವೃತ್ತಿ ಹೊಂದಿದರು. ಆದರೆ, ೧೯೧೪ರಲ್ಲಿ ಯುರೋಪಿನ ಮಹಾಯುದ್ಧವು ಆರಂಭವಾಯಿತು. ಜನರಲ್ ಹಿಂಡನ್‌ಬರ್ಗರಿಗೆ ಕರೆಬಂತು. ಜರ್ಮನಿಯ ೮ನೇ ಪಡೆಗೆ ಇವರೇ ಸೇನಾನಾಯಕರಾದರು. ರಷ್ಯದವರಿಗೆದುರಾಗಿ ವಿಚಕ್ಷಣತೆಯಿಂದಲೂ, ಪರಾಕ್ರಮದಿಂದಲೂ ಕಾದಾಡಿ, ಕೀರ್ತಿಗಳಿಸಿದರು. ೧೯೧೬ರಲ್ಲಿ ಇವರನ್ನು ಜನರಲ್ ಸಿಬಂದಿಯ ನಾಯಕರನ್ನಾಗಿ ಮಾಡಿದರು. ಮುಂದಿನ ಘಟನೆಗಳು ಚರಿತ್ರೆಯಲ್ಲಿ ಲಿಖಿತವಾಗಿವೆ. ಅಮೇರಿಕವು ಇಂಗ್ಲಾಂಡಿನ ಸಹಾಯಕ್ಕೆ ಮುಂದರಿಯಿತು. ಜರ್ಮನಿಯ ಸಹಾಯಕರಾದ ಆಸ್ಟ್ರಿಯ, ತುರ್ಕಿ, ಬಲ್ಗೇರಿಯಗಳು ಹಿಮ್ಮೆಟ್ಟಿದುವು. ಕೈಸರರು ಹೊಲ್ಲೆಂಡಿಗೆ ಪಲಾಯನ ಮಾಡಿದರು. ಆದರೂ, ಎದೆಗೆಡದೆ, ಹಿಂಡನ್‌ಬರ್ಗರು ಜರ್ಮನಿಗೆ ಮರಳಿ, ಜರ್ಝರಿತವಾದ ತನ್ನ ಮಾತೃಭೂಮಿಯನ್ನು ನವಚೇತನ ತುಂಬಿ ಪುನರ್ಘಟಿಸಿ ತರುವುದರಲ್ಲಿ ನಿರತರಾದರು. ೧೯೨೫ರಲ್ಲಿ ಇವರು ಜರ್ಮನ್ ರಿಪಬ್ಲಿಕದ ಅಧ್ಯಕ್ಷರಾಗಿ ಚುನಾಯಿಸಲ್ಪಟ್ಟರು. ೧೯೩೨ರಲ್ಲಿ, ಹಿಟ್ಲರರು ಇವರ ಪ್ರತಿದ್ವಂದ್ವಿಯಾಗಿ ಅಧ್ಯಕ್ಷ ಚುನಾವಣೆಗೆ ನಿಂತಿದ್ದರೂ, ಹಿಟ್ಲರರಿಗಿಂತ ೬ ಮಿಲ್ಲಿಯ ವೋಟುಗಳನ್ನು ಹೆಚ್ಚಾಗಿ ಸಂಗ್ರಹಿಸಿ, ಇವರೇ ಪುನಃ ಅಧ್ಯಕ್ಷರಾಗಿ ಚುನಾಯಿಸಲ್ಪಟ್ಟರು.

ಜರ್ಮನಿಯ ಪ್ರಾಣದಾತರಲ್ಲೊಬ್ಬರೆಂದು ಇವರ ಕುರಿತಾಗಿ ಆಡುವರು. ಅದಕ್ಕಿಂತ ಹೆಚ್ಚಿನ ಗೌರವವು ಇನ್ನಾವುದು ತಾನೆ ಇರಬಹುದು?

ಹಿಟ್ಲರರಿಗೆ ಹೊಸ ಅಧಿಕಾರ.

ಪ್ರೆಸಿಡೆಂಟ್ ಹಿಂಡನ್ ಬರ್ಗರ ಸ್ಥಾನದಲ್ಲಿ ಈಗ ವಿರಾಜಿಸುವವರು ಹಿಟ್ಲರರು. ಮಂತ್ರಿ ಮಂಡಲವು, ಹಿಟ್ಲರರಿಗೆ ಛಾನ್ಸಲರ ಮತ್ತು ಅಧ್ಯಕ್ಷರ ಅಧಿಕಾರಗಳನ್ನು ಕೊಟ್ಟಿದೆ.

ಜರ್ಮನಿಯ ದಿವಂಗತ ಪ್ರೆಸಿಡೆಂಟ್ ಹಿಂಡನಬರ್ಗರವರು.

ರೈತರ ಹಾದಿಯಾವುದು?

ದಕ್ಷಿಣಕನ್ನಡ ಜಿಲ್ಲೆಯ ರೈತರ ಕಣ್ಣು ತೆಕ್ಕಲೆ ಬರುವ ಸಂದಿಗ್ಧ ಸಮಯವಿದು. ಈ ಕಾಲದಲ್ಲಿ ಸ್ಪಷ್ಟವಾದ ಹಾದಿಯನ್ನು ಅವರು ಕಂಡುಕೊಳ್ಳದಿದ್ದರೆ ಖಂಡಿತವಾಗಿಯೂ ಭವಿಷ್ಯವನ್ನು ಕೆಡಿಸಿಕೊಳ್ಳುವರು. ಸರಕಾರಕ್ಕೆ ೩೦ ವರುಷಕ್ಕೊಮ್ಮೆ ರಿಸೆಟ್ಲ್‌ಮೆಂಟನ್ನು ಮಾಡಬೇಕೆಂಬ ಪದ್ಧತಿಯನ್ನು ಬಿಟ್ಟುಬಿಡುವಷ್ಟರ ಪರಿಸ್ಥಿತಿಯೇ ಕಾಣದಿರುವುದು ಆಶ್ಚರ್ಯಕರ ಮತ್ತು ಖೇದಕರ. ರೈತರ ಪರಿಸ್ಥಿತಿಯು ಬಹು ಗುಪ್ತವಾಗಿರಿಸಲ್ಪಟ್ಟಿದೆ. ಆಧುನಿಕ ಜಗತ್ತಿನಲ್ಲಿ ಪ್ರದರ್ಶಿಸಲ್ಪಡಲನುಕೂಲವಾಗುವಂಥ ಸಲಕರಣೆಗಳು ರೈತ್ವಾರಿಯಲ್ಲಿಲ್ಲದ ದೆಸೆಯಿಂದ ಅದು ತನ್ನ ಎಲ್ಲಾ ವಿಪತ್ತುಗಳೊಡನೆ ಹಿಂಬದಿಯಲ್ಲಿ ಬಿದ್ದಿದೆ. ಆ ಗೂಢ ಸಮಸ್ಯೆಯನ್ನು ಪ್ರಯತ್ನಪಟ್ಟು ಬಿಡಿಸುವ ಹುಟ್ಟು ಸಂಬಂಧವುಳ್ಳ ಸರಕಾರವಿಲ್ಲದ್ದರಿಂದ ಈ ಪರಿಸ್ಥಿತಿಯು ಸ್ಥಾವರವಾಗಿ ನಿಂತಿದೆ. ಸರಕಾರವು ಈ ಭಾಗದಲ್ಲಿ ಮಾಡುತ್ತಿರುವ ಕೆಲಸವೆಂದರೆ, ರೈತರ ಜೀವಮಾನದ ಸಾರವನ್ನೆಲ್ಲಾ ತನ್ನ ಉಪಯೋಗಕ್ಕಾಗಿ ವಿನಿಯೋಗಿಸಿಕೊಳ್ಳುವುದು! ಈ ಪರಿಸ್ಥಿತಿಯು ನಿರಾತಂಕವಾಗಿ ಮುಂದುವರಿಯುವ ಲಕ್ಷಣಗಳು ಕಂಡುಬರುತ್ತಿವೆ. ರಿಸೆಟ್ಲ್‌ಮೆಂಟನ್ನು ಪುನಃ ಜ್ಯಾರಿಗೆ ತರುವ ಪ್ರಯತ್ನವನ್ನು ಸದ್ಯದ ರೈತರ ಆರ್ಥಿಕ ದುರವಸ್ಥೆಯ ದೃಷ್ಟಿಯಿಂದ ಬಹಳವಾಗಿ ನಿಷೇಧಿಸಬೇಕಾಗುತ್ತದೆ. ರಿಸೆಟ್ಲ್‌ಮೆಂಟಿನ ವಿಚಾರವು ಕಳೆದ ಎರಡು ಮೂರು ವರ್ಷಗಳಿಂದ ಕೌನ್ಸಿಲಿನಲ್ಲಿ ಗುಡುಗುತ್ತಿದ್ದು, ಜಿಲ್ಲೆಯ ಕೌನ್ಸಿಲು ಮೆಂಬರರ ಪ್ರಯತ್ನದಿಂದ ಈ ವರೆಗೆ ಮುಂದುವರಿಯುತೆನ್ನಬಹುದು. ಆದರೆ ಇದರಿಂದ ಪ್ರಯೋಜನವೇನು? ಒಂದು ವಿಪತ್ತಿನೊಡನೆ ಹೋರಾಡಿ ಅದನ್ನು ಎರಡು ಹೆಜ್ಜೆ ಹಿಂದೂಡುವ ಕೆಲಸವನ್ನು ಮಾಡಬಲ್ಲೆವಾದರೆ, ಆ ಸಾಹಸದ ಪರಿಣಾಮವನ್ನು ಹೆಚ್ಚಿಸಿ ಪೂರ್ಣಗೆಲವನ್ನು ಸಂಪಾದಿಸಲಾರೆವೆ? ಇಂದಿನ ಸಂಕಷ್ಟವು ದೈವದತ್ತವಾದುದೇನೂ ಅಲ್ಲ. ಆಕ್ಷೇಪ ತಡೆಕೊಡರುಗಳಿಗೆಡೆಯಿರುವ ಅದೊಂದು ಚಲನಾಪದ್ಧತಿಯ ಕೆಲಸವಿದು. ಈ ಭಾಗದಲ್ಲಿ ರೈತರು ತಮ್ಮ ಚೇತನವನ್ನೊಮ್ಮೆ ಉಪಯೋಗಿಸಿ ನೋಡಬಾರದೇಕೆ?

ವಿಪತ್ತಿಗೊಳಗಾದವರು ರೈತರು; ಅವರು ಇದರ ನಿವಾರಣೆಗಾಗಿ ಎಡಬಲದ ಕಡೆಗೆ ನೋಡಬಹುದು. ಅಲ್ಲೇನು ದೊರಕೀತು? ರೈತರು ಕತ್ತುನೀಡುವ ಕಡೆಗಳಲ್ಲಿ ರಿಸೆಟ್ಲ್‌ಮೆಂಟನ್ನು ನಿರ್ಮಿಸಿರುವ ಸರಕಾರವೂ ಒಂದೆಂಬುದನ್ನು ಮರೆಯಬಾರದು. ಇದೇ ರೀತಿಯ ಪರಕೀಯ ಪಕ್ಷಗಳನ್ನು ಸಹಾಯಕ್ಕಾಗಿ ಆಶ್ರಯಿಸಿದರೆ ರೈತರ ಯಥಾರ್ಥ ಹಿತ ಸಾಧನೆಯಾಗದು. ಹೊರಗಿನ ಸಹಾಯದಿಂದಲೇ ಹೊರಗಿನ ವಿಪತ್ತನ್ನಿದ್ದಿಗಟ್ಟುವ ಪರಾವಲಂಬನೆಯಿಂದ ರೈತರ ಸ್ವಸ್ಥಾನವು ಸುಧಾರಿಸದು. ಅದ್ದರಿಂದ ರೈತರಲ್ಲಿ ಚೇತನವು ಹೊರಬೀಳಬೇಕು. ಬೇಡವಾದುದನ್ನು ಖಂಡಿತವಾಗಿ ತಿರಸ್ಕರಿಸಿ ಬಿಡುವ ಸ್ವತಂತ್ರ ಸ್ಥಾನವನ್ನವರು ಸಂಪಾದಿಸಬೇಕು. ಈ ದೃಷ್ಟಿಯಿಂದ ನೋಡಿದರೆ, ಇಂದಿನ ವಿಪತ್ಕಾಲವೇ ರೈತರ ಸುವರ್ಣ ಸಂದರ್ಭವೆನ್ನಬಹುದು. ಇದನ್ನವರು ಸರಿಯಾಗಿ ಉಪಯೋಗಿಸಿಕೊಳ್ಳಬೇಕು. ರಿಸೆಟ್ಲ್‌ಮೆಂಟಿನ ಪದ್ಧತಿಯನ್ನು ಸರ್ವಶಕ್ತಿಯಿಂದ ಇದಿರಿಸಬೇಕು. ಇದಕ್ಕಾಗಿ ಇಡೀ ಜಿಲ್ಲೆಯಲ್ಲಿ ಚೇತನಮಯ ಸಂಘಟನಾ ಕಾರ್ಯವು ಅತ್ಯಂತ ತ್ವರೆಯಿಂದ ನಡೆಯಬೇಕಾಗಿದೆ. ರೈತರ ಪರವಾಗಿ ಕೆಲಸ ಮಾಡಲಿಚ್ಛಿಸುವ ಸಂಸ್ಥೆಗಳೂ ವ್ಯಕ್ತಿಗಳೂ ಈ ಕಡೆಗೆ ಗಮನಕೊಡುವರೆಂದು ನಿರೀಕ್ಷಿಸಬಹುದೇ?

೧. ಇಡೀ ಜಿಲ್ಲೆಯಲ್ಲಿ ರಿಸೆಟ್ಲ್‌ಮೆಂಟು ನಿಷೇಧಕ ದಿನವೊಂದನ್ನು ಕ್ಷಿಪ್ರದಲ್ಲಿಯೇ ಆಚರಿಸುವಂತೆ ಮಾಡಬೇಕು. ಪ್ರಕೃತದ ಪರಿಸ್ಥಿತಿಯಲ್ಲಿ ಜಿಲ್ಲಾ ವರ್ಗದಾರರ ಸಭೆಯವರು ಅದನ್ನು ನಿರ್ಣಯಿಸಿ, ಪ್ರತಿಯೊಂದು ಹಳ್ಳಿಯಲ್ಲಿಯೂ ಆಚರಿಸಲ್ಪಡುವಂತೆ ಅಲ್ಲಲ್ಲಿಯ ಕೆಲಸಗಾರರು ನೋಡಬೇಕು.

೨. ನಿಷೇಧಕ ದಿನದಲ್ಲಿ ಪ್ರತಿಯೊಂದು ಕಡೆಯಲ್ಲಿಯೂ ರೈತರ ಸಂಘಗಳು ಸ್ಥಾಪಿಸಲ್ಪಟ್ಟು ವ್ಯವಸ್ಥಾಪೂರ್ವಕವಾಗಿ ಕೆಲಸ ನಡೆಯುವ ಏರ್ಪಾಡಿಯಾಗಬೇಕು. ತಾಲೂಕು ಸಮಿತಿಗಳು ಒಂದೊಂದು ಉಪಸಮಿತಿಯನ್ನೇರ್ಪಡಿಸಿ ಇಡೀ ತಾಲೂಕಿನಲ್ಲಿ ದಕ್ಷತೆಯಿಂದ ಕೆಲಸಮಾಡುವ ಜವಾಬ್ದಾರಿಯನ್ನು ಅದಕ್ಕೀಯತಕ್ಕದ್ದು. ಜಿಲ್ಲಾ ಮಹಾ ಸಭೆಗೆ ಪ್ರಮುಖ ಮೆಂಬರರಿರುವ ಪ್ರತ್ಯೇಕವಾದೊಂದು ಸಮಿತಿಯಿದ್ದು, ಆ ಸಮಿತಿಯವರು ಅಗತ್ಯಬಿದ್ದಲ್ಲಿ ಮೇಲಧಿಕಾರಿಗಳೊಡನೆ ವ್ಯವಹರಿಸಿ, ಹೊರಗಿನ ಎಲ್ಲಾ ಕೆಲಸಗಳನ್ನು ನಿರ್ವಹಿಸುವಂತಿರಬೇಕು. ಜಿಲ್ಲೆಯೊಳಗಿನ ಸಣ್ಣ ದೊಡ್ಡ ಸಂಘಗಳೊಳಗೆ ಯೋಗ್ಯ ಸಂಬಂಧವಿರತಕ್ಕದ್ದು.

೩. ಪ್ರತಿಯೊಂದು ಸ್ಥಳೀಕ ಸಂಘವೂ ಕೆಲಸಗಾರರನ್ನು ನಿಯಮಿಸಿ ತನ್ನ ಅಧಿಕಾರಕ್ಕೊಳಪಟ್ಟ ಸ್ಥಳಗಳ ನಂಜ, ಪುಂಜ, ಬಾಗಾಯತುಗಳ ಉತ್ಪತ್ತಿಯ ವಿವರ, ಕಳೆದ ಸೆಟ್ಲ್‌ಮೆಂಟಿನ ಕಾಲಕ್ಕೂ ಈ ಕಾಲಕ್ಕೂ ಇರುವ ಧಾರಣೆಯ ವ್ಯತ್ಯಾಸ ಮೊದಲಾದುವುಗಳನ್ನು ಸವಿವರವಾಗಿ ಸಂಗ್ರಹಿಸಿ ಜಿಲ್ಲಾ ಸಂಘಕ್ಕೆ ಆಧಾರಕ್ಕಾಗಿ ಕಳುಹಿಸತಕ್ಕದ್ದು. ಇಡೀ ಜಿಲ್ಲೆಯ ಭೂವಿವರಣೆಯ ನಿಜವಾದ ದಾಖಲೆಯೊಂದು, ಸ್ಪೆಶ್ಯಲ್ ಸೆಟ್ಲ್‌ಮೆಂಟ್ ಆಫೀಸರರ ರಿಪೋರ್ಟಿಗೆ ಪ್ರತಿಯಾಗಿ ಅಗತ್ಯವಾಗಿ ಬೇಕಾಗಿದೆ.

೪. ಬೇಡಿಕೆಗಳೆಲ್ಲಾ ನಿರಾಕರಿಸಲ್ಪಟ್ಟು ತೀರ್ವೆಯನ್ನೇರಿಸುವ ನಿರ್ಧಾರವನ್ನು ಸರಕಾ

(೧೦ನೇ ಪುಟಕ್ಕೆ ಮುಂದುವರಿಯುವುದು.)

ಮಂಗಳೂರು ಸಬ್‌ಕೋರ್ಟು ಕ್ರಮ ನಂಬ್ರ 72/1921ನೇ (ಕ್ರಮ ಅಮ್ಲುಜಾರಿ ನಂಬ್ರ 149/1922ನೇ) ಸ್ಕೀಮು ರೂಲು ಪ್ರಕಾರ.

ಕಾಪು ಶ್ರೀ ವೆಂಕಟರಮಣ ದೇವರ ಭಂಡಾರದ ಬಾಬ್ತು ಅಧ್ಯ ಶ್ರೀಮುಖ ಸಂವತ್ಸರದ ಶ್ರಾವಣ ಶು॥ ೬ ತಾ. 28—7—1933ರಿಂದ ಅಧ್ಯ ಭಾವ ಸಂವತ್ಸರದ ಆಷಾಢ ಶು॥ ೧೫, ತಾ. 26-7-1934 ವರೇಗಿನ ಒಂದು ವರುಷದ ಲೆಖ್ಖದ (ಜುಮಲಾ) ಜಮಾಖರ್ಚು ಗೋಷ್ವಾರೆ.

ಜಮಾ

ತಪಶೀಲು	ಕೆಂ.ಕ್ಯಾ	ಅಕ್ಕಿ ಮು.	ಸೇ.	ನಗದು ರೂ.	ಆ.	ಪೈ.
ತಾ. 27—7 1933ರ ಶಿಲ್ಕು—			8¾	22	3	6
ತಸದೀಕು—				6	0	0
ವಸ್ತುಗಳ ಗೇಣಿ—	804	19	5	81	13	0
ಅನ್ಯಕಪಡಿಗೆ ಸಾಲಿಯಾನ ಬಾಬ್ತು—		2	6	6		
ಕ್ರಯಕ್ಕೆ ಕೊಂಡದ್ದು—	369	23	35¾			
ಹಳೇ ಮೋರಿಗುಡಿ ಭಂಡಾರದ್ದು—	50	3	14			
ಗುಡಸ್ತಾ ಬಾಕಿಯದ್ದ ಅನ್ಯಕಪಡಿ ಅಕ್ಕಿ ಕ್ರಯ ವಸೂಲು—				100		
ಬಡ್ಡಿಯಿಂದ ಶಾಶ್ವತವಾಗಿ ಪ್ರತಿ ವರ್ಷ ಸಂಕರ್ಪಣೆ ಮಾಡಿಸುವ ಬಗ್ಗೆ ಡಿಪಾಜಿಟು ಬಂದದ್ದು—				88		
ಚಿತ್ರ ದಬ್ಬಿಯಲ್ಲಿ ಬಂದದ್ದು—				2	0	2
ಅನಂತವ್ರತದ ಖರ್ಚಿನ ಬಗ್ಗೆ ರೂ.50.				50		
ನಗದಿಗೆ ವಿಕ್ರಯ ಮಾಡಿದ ಅಕ್ಕಿ ಕ್ರಯ—				14	8	0
ಕೈಗಡಾ ತಂದ ಸಾಲ—				361	8	0
ಜುಮಲಾ	783	48	27¼	732	0	8

ಖರ್ಚು

ತಪಶೀಲು	ಕೆಂ.ಕ್ಯಾ	ಅಕ್ಕಿ ಮು.	ಸೇ.	ನಗದು ರೂ.	ಆ.	ಪೈ.
ಸರಕಾರ ತೀರ್ವೆಗೆ 1934ನೇ ಇಸವಿಗೆ—				15	13	0
ದೇವಸ್ಥಾನಗಳ ಕಮಿಟಿ ಮುದ್ರಾಸು ಬೋರ್ಡು ಆಫೀಸಿಗೆ 1343ನೇ ಫಸಲಿ ವರಮಾನ—				9	12	0
ಸಮಾರಾಧನೆಗಳಿಗೆ—	50		28	66	15	9
ಉತ್ಸವದ ವಿನಿಯೋಗಗಳಿಗೆ—				37	15	5
ಡಿಪಾಜಿಟು ಹಣಗಳ ಬಡ್ಡಿಗಳ ಸಂಕರ್ಪಣೆಗೆ				6	8	0
ಅನಂತನ ವ್ರತದ ಖರ್ಚು—				49	10	8
ವಸಂತ ಪೂಜೆಗಳಿಗೆ—				33	14	6
ನಿತ್ಯ ನೈವೇದ್ಯ ಅಕ್ಕಿ ತೆಂಗಿನೆಣ್ಣೆಯು ಎಲೆಅಡಿಕೆ ಬತ್ತಿ ಕಟ್ಟಿಗೆ ವಗೈರೆ ಕೊಂಡ ಕ್ರಯ ಮತ್ತು ಜೀನ್ಸು—	726	39		155	1	10
ನಿತ್ಯನಂದಾದೀಪ (1¼) ವಿಶೇಷ ಸೇವೆ ಇತ್ಯಾದಿಗೆ ಎಣ್ಣೆ ದಬ್ಬಾ 25 ಬೇಳೆ 2ರ ಕ್ರಯ				116	12	0
ಅರ್ಚಕರಿಗೆ ನಗದಿ ಕಲಬು ಸಂದದ್ದು—				48	0	0
ವ್ಯವಹರಣೆಗಳ ಬಗ್ಗೆ—				56	2	0
ಕ್ರಯಕ್ಕೆ ಕೊಂಡ ಸ್ಥಿರಾಸ್ತಿ ಕ್ರಯ—				106	1	6
ನಗದಿಗೆ ವಿಕ್ರಯ ಅಕ್ಕಿ—		4				
ತಾ. 26-7-1934ರ ಶಿಲ್ಕು— ಮತ್ತು ಕಿ. ದಿನ ನರ ಬತ್ತಿ-ಎಲೆಅಡಿಕೆ ಸಹಾ	5	4	41¼	29	6	0
ಜುಮಲಾ	783	48	27¼	732	0	8

ಮೊಕ್ಕಾಂ—ಕಾಪು, ತಾ. 26-7-1934 } K. Vsudeva Camthy, Commissioner, ಒಡಿಟರ್ D. M. C. Udipi

ಶ್ರೀಧರ ಕಾಮತರಾಗ ವಕೀಲ, ಪ್ರೆಸಿಡೆಂಟ್.

ಲೋಧ್ರ

ಸುಪ್ರಸವಕ್ಕಾಗಿ ದಿವ್ಯ ಟಾನಿಕ್.

ಸ್ತ್ರೀಯರಿಗೊಂದು ಮಹಾ ವರ.

ಯಾವ ತರದ ಅಥವಾ ಎಲ್ಲಾ ತರದ ಮುಟ್ಟು ದೋಷ, ಮುಟ್ಟಾಗುವುದರಲ್ಲಿ ನೋವು, ಅತ್ಯನುತರದ ಮತ್ತು ಮುಟ್ಟು ನಿರುವಿಕೆ, [illegible] ಗರ್ಭಕೋಶದ ದೋಷ ಅಪುಷ್ಟ ಮುಟ್ಟು, ಬಂಜೆತನ, ಸೂತಿಕಾವಾಯು, [illegible] ರಕ್ತ ಮೇಲೆ ದಾಟಿ ಅಥವಾ ಬೇಕಾದಷ್ಟು ಮುಟ್ಟಾಗದಿರುವುದು, ಸ್ತ್ರೀಯರ ಅಂಗಾಂಗಗಳ ಇನ್ನಿತರ ಅನೇಕ ನೇಕ ರೋಗಗಳುಳ್ಳ ಸ್ತ್ರೀಯರನ್ನು ಈ ಔಷಧಿಯು ಸಂಪೂರ್ಣ ಗುಣಗೊಳಿಸಿರುತ್ತದೆ.

ಲೋಧ್ರ

ಎರಡು ಸೈಜಿನಲ್ಲಿ ದೊರೆಯುತ್ತದೆ. [illegible] 1-10-0.

ಕೇಸರಿ ಕುಟೀರಂ.

ಇಂಡಿಯನ್ ಕೆಮಿಸ್ಟ್ಸ್ ಮತ್ತು ಡ್ರಗಿಸ್ಟ್ಸ್, ಎಗ್ಮೋರ್ ಮದರಾಸು.

Sole Agents for West Coast and North Kanara:—

Wanted Agents in Principal Towns. ಪಾಪ್ಯುಲರ್ ಸ್ಟೋರ್ಸ್,

For terms Apply to:—POPULAR STORES, Mangalore. [illegible]

WE HOLD IN STOCK OF

English into Kanarese Teacher

Hindi into Kanarese Teacher

Marathi into Kanarese Teacher

Marathi into Gujarathi Teacher

Novels and well known Dramas in Hindi and all sorts of books for Schools and Colleges.

Wanted Agents and Canvassors throughout Karnatak districts.

Apply for full particulars with 1½ Annas Stamp:—

THE MANAGER,

The National Kanara News Agency

SIR PHIROJSHA METHA ROAD,

Fort Bombay.

ಫಲಸಾರಯುಕ್ತ ಟೊನಿಕ್.

[illegible] 12 ಸಾರಿ ಸೇವಿಸುವ ಬಾಟ್ಲಿಯ ಕ್ರಯ ರೂ. 1 (ಒಂದು ಮಾತ್ರ).

ಮಿನರಲ್ ಟೋನಿಕ್ ಮಾತ್ರೆಗಳು.

[illegible] 12 ಮಾತ್ರೆಗಳ ಬಾಟ್ಲಿಗೆ ರೂ. 1 ಮಾತ್ರ. [illegible]

Non-Pareil Stores,

Big Street, (s. m.) Triplicane,

MADRAS.

ನಿಮ್ಮ ನಿದ್ರಿತರಾಗಿದ್ದೀರೋ?

[illegible]



"ಕಲ್ಯಾಣಿ" ನೆಲಗಡಲೆ ಯಂತ್ರ.

[illegible]

[illegible] P. No. 104

ನಿಮ್ಮ ಸಲಹೆಂದೇ [illegible]

[illegible]

[illegible]

[illegible]

ಪಂಡಿತ ಡಿ. ಗೋಪಾಲಾಚಾರ್ಲುರವರ [illegible]

[illegible]

P. No. 104

ಸ್ತ್ರೀಯರ [illegible]

ದಶಮೂಲಾರಿಷ್ಟ

[illegible]

[illegible] ತೈಲ.

[illegible]

[illegible]

[illegible]

FOR

High Class

Printing

[illegible]

CONSULT US

The Sharada Press, Mangalore.

ಚಿಕ್ಕ [illegible]

[illegible] 1000 [illegible] ರೂ. 1—4—0 [illegible]

An Advertisement In

'Swadeshabhimani'

Means a sure fortune to you

Ask for Contract Rates.

The Swadeshabhimani office,

Car Street, Mangalore.

[illegible] ಚಿಕಿತ್ಸಾಲಯ

[illegible] ರೂ. 10-0-0. [illegible] ರೂ. 5-0-0. [illegible] ರೂ. 1-0-0 [illegible]

ಶ್ರೀಮತಿ ನೆಲ್ಲಿ ಸೇನಗುಪ್ತರ [illegible] ಭಾಷಣ.

ಸ್ವದೇಶಿಯ ಮಹತ್ವ.

ಸೇಲಮಿನಲ್ಲಿ ಅಖಿಲಭಾರತ ಸ್ವದೇಶೀ ವಸ್ತುಪ್ರದರ್ಶನದ ಉದ್ಘಾಟನ ಸಮಾರಂಭವನ್ನು ಜರಗಿಸುತ್ತ, ಶ್ರೀಮತಿ ನೆಲ್ಲಿ ಸೇನಗುಪ್ತರವರು ಈ ಕೆಳಗಿನ ವಿಚಾರಪೂರ್ಣವಾದ ಭಾಷಣವನ್ನಿತ್ತರು:

"ನನಗೂ ನನ್ನ ಮೃತ ಪತಿಗೂ ಗೌರವವಿತ್ತುದಕ್ಕೆ ನಿಮಗೆ ಅಭಿನಂದನಗಳು. ಸ್ವದೇಶೀ ಚಳವಳದಲ್ಲಿ ಸಾಮಾನ್ಯವಲ್ಲದ ಕಾರ್ಯಭಾರವನ್ನು ಹೊತ್ತ ಕಲ್ಕತ್ತೆಗೂ ಇದು ಗಣನೀಯ ಗೌರವವು.

'ಇಂತಹ ಪ್ರದರ್ಶನಗಳೇ ಭಾಷಣಗಳಿಗಿಂತಲೂ ಚೆನ್ನಾಗಿ, ಸ್ವದೇಶೀ ಮಂತ್ರವನ್ನು ಬಡವ ಬಲ್ಲಿದರೆಲ್ಲರಲ್ಲೂ ನಾಟಿ ಕುಳಿತುಕೊಳ್ಳುವಂತೆ ಪರಿಣಾಮಕಾರಿಯಾಗುವುವು. ಹಿಂದೂದೇಶದಲ್ಲೀಗ ಸ್ವದೇಶೀ ಪ್ರದರ್ಶನಗಳ ಸಂಖ್ಯೆ ಹೆಚ್ಚುತ್ತಿರುವುದು ಸಲ್ಲಕ್ಷಣವಾಗಿದೆ. ನಾವು ಅಂಗಡಿಗಳಲ್ಲಿ ಸ್ವದೇಶೀ ವಸ್ತುಗಳನ್ನು ನೋಡುತ್ತಿರುವೆವಾದರೂ ಅವುಗಳೆಲ್ಲವನ್ನೂ ಇದೊಂದೇ ಕಡೆಯಲ್ಲಿ ನೋಡುವುದರಲ್ಲೊಂದು ಆನಂದವಿದೆ. ಸ್ವದೇಶೀ ಚೇತನವು [illegible] ಪ್ರದರ್ಶನಗಳಿಂದಲೇ [illegible].

ಸ್ವದೇಶೀ ವಸ್ತುಗಳ [illegible] ತನ್ನು ಸಾಮಾನುಗಳನ್ನ [illegible] [illegible] ಕೆಳ ಬೇಕಾಗಿದೆ. [illegible] ದಲ್ಲಿ ಬಹಳ [illegible] ವಸ್ತುಗಳನ್ನು [illegible] ವಂತೆ, ಆಕರ್ಷಕವಾಗಿ [illegible] ಆದೆಂದು [illegible] ನನ್ನು ಚಿಕ್ಕ ಕೈಗಾರಿಕೆಗಳಲ್ಲವೂ [illegible] ಕಷ್ಟಕ್ಕೀಡಾಗಿ [illegible] ವಿದೇಶೀ ವಸ್ತುಗಳೊಡನೆ ಸ್ಪರ್ಧಿಸಲಾರದಂತಾಗಿ [illegible]. ಆದರೂ, ಇತ್ತೀಚೆಗೆ ಸ್ವದೇಶೀ ವಸ್ತುಗಳು [illegible] [illegible] ಯುವಕರು [illegible] ಕಳಕೊಳ್ಳುತ್ತಿರುವರು [illegible] ಕೈಗಾರಿಕೆಗಳ [illegible] ಎಲ್ಲಿಗೆ [illegible] ಅಭಿಮತ.

ಇನ್ನು ಕೈಮಗ್ಗಗಳ ಕೈಗಾರಿಕೆಯ [illegible] ಸಾಧ್ಯತೆಗಳ [illegible] ಇರುವೇ [illegible] ಕೈಗಾರಿಕೆ [illegible] [illegible]. ಇದು ಹಾಗಿದ್ದಿತು. [illegible] ದಲ್ಲಿ [illegible] ಗಿರಣಿಗಳು [illegible] ಮಿಲ್ಲಿನ ರಾಟ್ಟೆಗಳನ್ನು ಮಾತ್ರ ನೂಲನ್ನು ಉಪಯೋಗಿಸುತ್ತಾ ಗ ಕೈಮಗ್ಗಗಳು [illegible] ಮಿಲ್ಲಿನ [illegible] ಗಳನ್ನುಪಯೋಗಿಸುತ್ತಿದ್ದುವೆಂದು ಕೇಳಿ ನಿಮಗಾಶ್ಚರ್ಯವಾಗಬಹುದು. ಇತ್ತೀಚೆಗೆ ಕೈಮಗ್ಗಗಳ ಕೈಗಾರಿಕೆಯು ಅವನತಿಯು ಗೋಚರಿಸಿದೆ. ಮೇಲಿನ ಸಂಖ್ಯೆಗಳು ಕೈಗಾರಿಕೆಯ ಪುನರುಜ್ಜೀವನದ ಸಾಧ್ಯತೆಯ ಭರವಸೆಯನ್ನು ಹುಟ್ಟಿಸದಿರದು. ೧೯೨೧ರಲ್ಲಿ ಗಾಂಧಿಜಿಯವರ ಖಾದಿ ಚಳವಳವು ಕೈಮಗ್ಗದ ನೇಯ್ಗೆ ಕೈಗಾರಿಕೆಯನ್ನು ಬಹುಮಟ್ಟಿಗೆ ಚೇತನಗೊಳಿಸಿತಾದರೂ ಕೆಲಕಾಲದ ನಂತರ ಅದು ಹಿಂದೆಬಿದ್ದುದು ಗೋಚರಿಸಿತು. ಖಾದಿ ಕೈಗಾರಿಕೆಯು, ವರ್ಷದ ನಡುವೆ ಕೆಲಸವಿಲ್ಲದ ಹೆಚ್ಚಿನ ಸಮಯದಲ್ಲಿ, ಸಂಪಾದನೆಯನ್ನು ಹೆಚ್ಚಿಸಿ ಸಂಸಾರದ ಚಿಕ್ಕಪುಟ್ಟ ಅನುಕೂಲತೆಗಳನ್ನೊದಗಿಸುತ್ತದೆ. ಇದು ಹಿಂದೆ ಸಾವಿರಾರು ಬೇಸಾಯಗಾರರಿಗೆ ಕೆಲಸ ಕೊಟ್ಟಿದೆ; ಮುಂದೆಯೂ ಕೊಟ್ಟೇ ಕೊಡುವುದು. ಅದೊಂದನ್ನೇ ಬೇಸಾಯಗಾರರು ಜೀವನದ ವೃತ್ತಿಯಾಗಿ ಕೈಕೊಳ್ಳಬೇಕಾಗಿಲ್ಲ; ಉಪವೃತ್ತಿ

ಯಾಗಿ ಸ್ವೀಕರಿಸಬೇಕು. ಸ್ವಾಭಿಮಾನ [illegible] ಸ್ವಾತಂತ್ರ್ಯ ಇವು ಖಾದಿಯಲ್ಲಡಗಿವೆ. ಸರಕಾರವು ಈ ಖಾದಿ ಕೈಗಾರಿಕೆಗೆ, ತಮ್ಮ ಅಧಿಕಾರದೊಳಗಣ ನೌಕರರಿಗೆ ಪೋಷಾಕುಗಳ ನ್ನೊದಗಿಸುವ ಮೂಲಕ ಬಹುಮಟ್ಟಿಗೆ ಪ್ರೋತ್ಸಾಹಿಸಬಹುದು. ಕಲ್ಕತ್ತಾ ಕಾರ್ಪೊರೇಶನವರು ಈ ಕ್ರಮವನ್ನು ಕೈಕೊಂಡಿರುವರು. ಇದು ಇತರ ನಗರಸಭೆಗಳಿಗೂ ಮೇಲ್ಪಂಕ್ತಿಯಾಗಿದೆ. ಸರಕಾರವು ಮಾತ್ರ ಪ್ರೋತ್ಸಾಹ ಕೊಡುವುದರಲ್ಲಿ ಹಿಂಜರಿದುದು ವಿಷಾದಕರ. ಆದಾಗ್ಯೂ ಮಿರ್ಜಿಗಳತ್ತೊರಗಿ [illegible] ಸ್ವದೇಶಿಯ ಮಹತ್ವ [illegible] ದಾಯದ ಆರ್ಥಿಕ-ಸಾಮಾಜಿಕೋನ್ನತಿಗೆ ಅದುವೇ ಮುಖ್ಯವಾಗಿದೆ. ಅದಿ ಬಚ್ಚಿಟ್ಟಾಗಿರುವ ನಮ್ಮ ಜನಾಂಗಕ್ಕೆ ಪಸ್ತುಬೇಕು; ಅದನ್ನು ಖಾದಿಯೇ [illegible] ಅದಿ [illegible] [illegible] ಪ್ರಾರ್ಥಿಸುವುದು.

(ಈ ಪ್ರದರ್ಶನದ ಸ್ವಾಗತ ಸಮಿತಿಯ ಅಧ್ಯಕ್ಷರಾದ ಶ್ರೀ [illegible])

[illegible] ಯವರ [illegible] ಸ್ವದೇಶೀ ವಸ್ತುಗಳ ಪ್ರಸಾರಕ್ಕೆ [illegible] [illegible] ಭಾಷಣ ಮಾಡಿದರು.)

ಪ್ರದರ್ಶನವು [illegible] ತ್ತಲಿದೆ. [illegible] ಹಲವು ವಿಧದ ವಸ್ತುಗಳು ಪ್ರದರ್ಶಿತವಾಗಿವೆ.

ಸ. [illegible] ನೆಲ್ಲಿ [illegible] ಚಿತ್ರ [illegible]

(ಸ್ವದೇಶೀ [illegible])

ಗ್ರಾಮಗಳಲ್ಲಿ ಸಾಲದ ಹೊರೆ ಏರಲು ಕಾರಣವೇನು?

ಒಂದು ದೇಶದ [illegible] ಅದರ ಪಟ್ಟಣದ [illegible] ಹಳ್ಳಿಗಳ [illegible] ಗಳು. [illegible] ಲ್ಲಿವೆ. [illegible] ದಲ್ಲಿ [illegible]

[illegible] ಹಳ್ಳಿ [illegible] ಬೆಳೆಯು [illegible] ಒಂದು [illegible] ದಲ್ಲಿ ತಮ್ಮ ಬೇಸಾಯದ [illegible] [illegible] ಆದಕ್ಕೆ ಕಾರಣವೇನು?

[illegible]

ಸಾಲಗಳೆನ್ನು ನಾವತ [illegible] [illegible] ಗಳಿಂದ [illegible] ಹಿಂದೂದೇಶದ [illegible] [illegible] ಗಳನ್ನು [illegible] ಗಾರರ ಸಂಖ್ಯೆಯೂ [illegible] ವೃದ್ಧಿಯಾಗುತ್ತದೆ.

ಬೆಳ್ಮಣ್ಣಿನಲ್ಲಿ ನಡೆದ ಒಂದು ವಿಚಿತ್ರ ಘಟನೆ.

ದಕ್ಷಿಣ ಕನ್ನಡ ಜಿಲ್ಲೆಯ ಬೆಳ್ಮಣ್ಣಿನಲ್ಲಿ ಇತ್ತೀಚೆಗೆ [illegible] ಬೆಳ್ಮಣ್ಣು [illegible] ದೇವಸ್ಥಾನದ [illegible] ಈ ಸ್ಥಳದಲ್ಲಿ [illegible] ಸ್ಥಳ [illegible] ನಾಗಬನದಲ್ಲಿ [illegible]. ಇದೇ ತಿಂಗಳ ತಾರೀಕು ೮ನೇ [illegible] ಬೆಳಗ್ಗೆ ಘಂಟೆ 7-30ರ ಸಮಯ; ಇದಕ್ಕೆ [illegible]

[illegible]

ದಕ್ಷಿಣ ಕನ್ನಡ ಜಿಲ್ಲಾ [illegible] ಸಂಘ

[illegible]

8-18-34 [illegible] 11 [illegible]

[illegible] 10 [illegible]

[illegible] 31 [illegible] 11 [illegible]

[illegible] 26 [illegible]

[illegible] (ಶ್ರೀ [illegible])

ಮುಟ್ಟುಗೋಲು ಹಾಕಲ್ಪಟ್ಟ ಕೊಂಗ್ರೆಸು ನಿಧಿಗಳು.

NOTE...S
ನೋಟಗಳು.

ಗಾಂಧಿಜಿಯವರನ್ನು ಕಾಶಿಯ ಒಬ್ಬ ಶರ್ಮರು 'ಎರೆಸ್ಟ್' ಮಾಡಲು ಹೋಗಿ, ಎರೆಸ್ಟಿಗೆ ಒಪ್ಪದ ಅವರ ಭಾವಚಿತ್ರವನ್ನು ೫ ಘಂಟೆಗಳ ಕನಕ ತೂಗಹಾಕಿ, ಸುಟ್ಟು ಬಿಟ್ಟರು.

* * *

ರಾವಣನು ಸೀತೆಯ ನೆರಳನ್ನೊಯ್ದು ದನೆಂದು ಕೇಳಿದ್ದೇವೆ. ಶರ್ಮರು ಅದಕ್ಕಿಂತ ಹೆಚ್ಚು ಮಾಡಿದರು.—ನೆರಳನ್ನು ಸುಟ್ಟುಬಿಟ್ಟರು.

* * *

ಮತ್ತೊಂದು ಶಾಪ: 'ಕಾಳಭೈರವನು ಪರಲೋಕದಲ್ಲಿ ಗಾಂಧಿಜಿಯವರನ್ನು ಶಿಕ್ಷಿಸು ವನೆಂದು' ಶಿಕ್ಷಿಸಲೇಬೇಕೆಂದು ಕಾಳಭೈರವನ ಲ್ಲಿಗೆ ಡೆಪ್ಯುಟೇಶನನ್ನು ಒಯ್ಯುವ ಸಿದ್ಧತೆಗಳಾ ಗಿರಬಹುದೆಂಬ ಸಂದೇಹ ತೋರುವುದು. 'ಲಾಲಭೈರವನು ಈ ಲೋಕದಲ್ಲಿ ಪೀಡಿಸು ವುದು ಸಾಲದೇ?

* * *

ಜೋಡುಮಠ ರಸ್ತೆಯಿಂದ ಗೌರಿ ಮಠ ರಸ್ತೆಗೆ ತಿರುಗುವಲ್ಲಿ—ಆ ಚಿಕ್ಕ ಅಡ್ಡರಸ್ತೆ ಯೊಂದು, ವಿದ್ಯುದ್ದೀಪಗಳಿರುವ ರಸ್ತೆಗಳ ನಡುವೆ ಸಿಲುಕಿ, ದೀಪಗಳ ಪ್ರಕಾಶದ ಬಣ್ಣ ವನ್ನು ನುಂಗುವ ಮಸಿಯಂತೆ ರಾತ್ರಿಕಾಲದಲ್ಲಿ ಸಹಜವಾಗಿ ಕಪ್ಪಗಾಗುತ್ತಿದೆ. ಯಾರಾದ ರೊಬ್ಬನು ಕುತೂಹಲದಿಂದ ಒಂದು ಬದಿಯಲ್ಲಿ ನಿಂತು ಎಣಿಕೆ ಮಾಡಿದರೆ—ಒಂದು ಘಂಟೆ ಯೊಳಗೆ ಹತ್ತು ತಲೆಗಳು ಕಣ್ಣುಕಾಣದೆ ಡಿಕ್ಕಿ ಹೊಡೆದುಕೊಳ್ಳುವ ಶಬ್ದಕೇಳಿ ಕಂಗಾಲಾಗ ದಿರನು.

* * *

ಡಿಕ್ಕಿಹೊಡೆದುಕೊಳ್ಳುವ ವ್ಯಾಯಾಮವು ಮಾನವನ ಆರೋಗ್ಯಪಾಲನೆಗೆ ಅವಶ್ಯವೆಂದಾ ದರೆ 'ಇಲ್ಲಿ ದೀಪವಿದ್ದರಾಗುತಿತ್ತು'' ಎಂದು ಯಾರೂ ಆಶಿಸಬಾರದಾಗಿ ವಿನಂತಿ

* * *

ಮುನ್ಸಿಪ ಕಾಲದಲ್ಲಿ ಯಾರಾದರೂ ಅಪೇಕ್ಷಿಸುವುದು ಶಾಂತಿಯನ್ನು! ಆದರೆ, ಸಂಯುಕ್ತ ಪ್ರಾಂತ್ಯದ ಕೆಲ ಪೋಲೀಸಾಫೀಸರ ರಿಗೆ, ನಿವೃತ್ತಿಹೊಂದಿದನಂತರ ಕೋರ್ಟುಗಳಲ್ಲಿ ವಕೀಲರಾಗಿ ವ್ಯವಹರಿಸುವ ಆಸೆಯಂತೆ! ಹೊಸ ವಕೀಲರುಗಳ ಬಳಿಯಲ್ಲಿ ಇವರಿಗೆ ಆರಾಮಕುರ್ಚಿಗಳನ್ನಿಡಲು ಕೋರ್ಟು ಕಟ್ಟಡ ಗಳ ಬಡಾವಣೆ ನಡೆಯುಬಹುದು

* * *

ಉದಾರಿಗಳ ಔದಾರ್ಯದ ಸುದ್ದಿಗಳು ಬೆಳಕಿಗೆ ಬಾರದಿರುವುದಿಲ್ಲ ಸರ್ ಸಿ ಪಿ ರಾಮಸ್ವಾಮಿ ಅಯ್ಯರರು, ತ್ರಾವಣಕೋರಿನ ರಾಜರಿಗೆ ವಕೀಲರು, ತಮ್ಮ ತಲಬಿನಲ್ಲಿ ತಿಂಗಳಿಗೆ ೧ ಸಾವಿರ ರೂಪಾಯಿಯಷ್ಟನ್ನು ಬಿಟ್ಟುಕೊಡುವರಂತೆ! (ಅಂದರೆ, ೧ ವರ್ಷಕ್ಕೆ ೪೮ ಸಾವಿರ ರೂಪಾಯಿಗಳನ್ನು ಮಾತ್ರ ಪಡೆಯುವರು)

* * *

ತಿಂಗಳಿಗೊಂದು ಸಾವಿರವೆಂದುದು, ವರ್ಷಕ್ಕೆ ೧೨ ಸಾವಿರವಾಯಿತು. ಅಯ್ಯರರು ಇನ್ನೆಷ್ಟು ವರ್ಷ ಆ ಸಂಸ್ಥಾನದ ರಾಜರ ವಕೀಲರಾಗಿ ಉಳಿವರೋ ಅಷ್ಟು ಕಾಲದ ಲೆಕ್ಕವನ್ನು ನೋಡಿದರೆ,—ಅಯ್ಯರರು ತ್ಯಾಗ ಮಾಡಿದ ಹಣದ ಮೊತ್ತವನ್ನು ನೋಡಿ ಸಂಸ್ಥಾನ ದವರು ಬೆರಗಾಗದಿರರೆಂದು ಖಚಿತವಿದೆ.

ಎಸೆಂಬ್ಲಿಯ ಅವಧಿ.

ನಮ್ಮ ಲೆಜಿಸ್ಲೇಟಿವ್ ಎಸೆಂಬ್ಲಿಯು ಆದೇ ವರ್ಷದ ಕೊನೆಯ ತನಕ ರದ್ದುಮಾಡುವುದಿಲ್ಲವೆಂದು ಗವರ್ನರ ಜನರಲರು ಅಪ್ಪಣೆಕೊಡಿಸಿದುದನ್ನು ಎಸೆಂಬ್ಲಿ ಅಧ್ಯಕ್ಷರು ಎಸೆಂಬ್ಲಿಯಲ್ಲಿ ಓದಿ ಹೇಳಿದರು.

ಎಸೆಂಬ್ಲಿಯಲ್ಲಿ ಸರ್ ಹೆನ್ರಿಕ್ರೇಕರ ಪ್ರಕಟಣೆ.

ಶಾಸನಭಂಗ ಚಳವಳದ ಸಂಬಂಧವಾಗಿ ಸರಕಾರ ದವರು ಮುಟ್ಟುಗೋಲು ಹಾಕಿದ ಕೊಂಗ್ರೆಸ್ಸಿನ ಹಣ ವನ್ನು ತಿರಿಗಿ ಕೊಡುವ ಆಲೋಚನೆಯೇ ಇಲ್ಲವೆಂದು ಗೃಹಮಂತ್ರಿಗಳಾದ ಸರ್ ಹೆನ್ರಿಕ್ರೇಕರವರು ಸ್ಪಷ್ಟವಾಗಿ ಹೇಳಿರುವರು. ಹೀಗೆ ಸರಕಾರದ ಖಜಾನೆಗೆ ಸೇರಿದ ಆ ಹಣವು ಪ್ರಾಂತಿಕ ಸರಕಾರಗಳ ವ್ಯಯದ ಪಟ್ಟಿಗಳಿಗೆ ಹಂಚಿಹೋಗಿದೆ!

ಸರೋಜಿನಿಯವರು ಬೆಂಗಳೂರಲ್ಲಿ.

ಬೆಂಗಳೂರಿನಲ್ಲಿ ಇದೇ ತಾ ೧ನೇ ದಿನ, ಜಿಲ್ಲಾ ಕೊಂಗ್ರೆಸ್ ಕಮಿಟಿಯ ಆಶ್ರಯದಲ್ಲಿ ದಿವಂಗತ ತಿಲಕ ರವರ ಪುಣ್ಯತಿಥಿಯು ಆಚರಿಸಲ್ಪಟ್ಟಿತು ಈ ಸಂದರ್ಭ ದಲ್ಲಿ ಅಧ್ಯಕ್ಷಸ್ಥಾನವನ್ನಲಂಕರಿಸಲು ಒದಗಿದ ಶ್ರೀಮತಿ ಸರೋಜಿನಿ ದೇವಿಯವರು ದಿವಂಗತ ತಿಲಕರ ಗುಣಾವಳಿ, ರಾಜಕೀಯರಂಗದಲ್ಲಿ ಅವರ ಕೀರ್ತಿ ಜನರು ಅವ ರಿಂದ ಕಲಿತುಕೊಳ್ಳಬೇಕಾದುದನ್ನು ವಿವರಿಸಿ ಭಾಷಣ ಮಾಡಿದರು

ಪ್ರಫುಲ್ಲ ಕುಮಾರ ಘೋಷನ ಊಟದ ದಾಖಲೆ

ಕಲ್ಕತ್ತೆಯ ವಿಖ್ಯಾತ ಊಟಗಾರನಾದ ಪ್ರಫುಲ್ಲ ಕುಮಾರ ಘೋಷನು ೫೦ ಘಂಟೆಗಳ ಕಾಲ ಢಾಕ್ಕದ ವಿಶ್ವವಿದ್ಯಾಲಯದ ಕೆರೆಯಲ್ಲಿ ಕೈಗಳಿಗೆ ಕೋಳ ತೊಟ್ಟು ಕೊಂಡು ಈಜಾಡಿ, ಪ್ರಪಂಚದ ದಾಖಲೆಯನ್ನು ಸುಮಾರು ೨೦ ಘಂಟೆಗಳಿಗೆ ಹಿಂದಿಕ್ಕಿ, ವಿಜಯಿ ಯಾಗಿರುವನು!

ಕೌನ್ಸಿಲ್ ವಾರ್ತೆಗಳು

ಇದೇ ಕಳೆದ ತಾ ೪ರಲ್ಲಿ ನಡೆದ ಮದ್ರಾಸು ಲೆ ಜಿಸ್ಲೇಟಿವ್ ಕೌನ್ಸಿಲಿನ ಅಧಿವೇಶನದಲ್ಲಿ ನಡೆದ ಪ್ರಶ್ನೋತ್ತರಗಳಲ್ಲಿ, ಈ ಕೆಳಗಿನ ವಿಷಯಗಳು ಬಯಲಿಗೆ ಬಂದಿವೆ

ಶಾಲೆಗಳಲ್ಲಿ ಪಟಗಳು

ಶ್ರೀ। ಎ ಬಿ ಶೆಟ್ಟಿ — ರಾಜರಾಣಿಯರ ಹೊರತಾದ ಇತರ ಪಟಗಳನ್ನು ಡಿ। ಎಡ್ಯುಕೇಶನಲ್ ಆಫೀಸರರ ಅಪ್ಪಣೆಯಿಲ್ಲದೆ ಲೋಕಲ್ ಬೋರ್ಡುಗಳ ಕೈಕೆಳಗಣ ಶಾಲೆಗಳಲ್ಲಿ ಹಚಬಾರದೆಂದು ಸರಕಾರದ ಹುಕುಂ ಹೊರಟ ದುದು ನಿಜವೇ?

ಉತ್ತರ — ಆಹುದು ಕೆಲವು ಅನಪೇಕ್ಷಿತ ಪಟ ಗಳನ್ನು ಕೆಲ ಶಾಲೆಗಳು ಇಡುತ್ತಿವೆ ಅದನ್ನು ತಡೆದು ಕ್ರಮಪಡಿಸಬೇಕಾಗಿತ್ತು

ಶ್ರೀ। ಸುಬ್ರಹ್ಮಣ್ಯ ಭಟ್ಟರು — 'ಅನಪೇಕ್ಷಿತ'ವೆಂದ ರೇನು? ಮಹಾತ್ಮಾಜಿಯವರ ಪಟವು ಅನಪೇಕ್ಷಿತ ವಾಗುವುದೇ?

ಉತ್ತರ — ರಾಜಕೀಯಗಳಲ್ಲಿ ಸಂಬಂಧವಿರುವವರ ಪಟಗಳನ್ನಿಡಲು ಆಕ್ಷೇಪ

ಮೋಟಾರು ತೆರಿಗೆಗಳು

ಶ್ರೀ। ಎ ಬಿ ಶೆಟ್ಟಿ — ಕಳೆದ ವರ್ಷ ಪ್ರಾಂತಿಕ ಸರಕಾರಕ್ಕೆ ವಸೂಲಾದ ಪ್ರಾಂತಿಕ ತೆರಿಗೆಯೆಷ್ಟು? ಅವುಗಳಲ್ಲೆಷ್ಟು ಡಿ। ಬೋರ್ಡು ಮತ್ತು ಮುನಿಸಿಪಾಲಿಟಿ ಗಳಿಗೆ ಸಂದಿದೆ?

ಉತ್ತರ: ೧೯೩೩—೩೪ನೇ ವರ್ಷದಲ್ಲಿ ವಸೂಲಾದ ತೆರಿಗೆಯ ಮೊತ್ತ ರೂ ೩೩,೬೬,೭೦೮ ಇದರಲ್ಲಿ, ಲೋಕಲ್ ಬೋರ್ಡುಗಳಿಗೆ ಸಂದುದು ರೂಪಾಯಿ ೩೦ ೩೩,೯೪೧ ಮದ್ರಾಸು ನಗರದಲ್ಲಿ ವಸೂಲಾ ದುದು ರೂ, ೧,೦೨,೦೩೬ ಸಂದುದು ರೂ ೧ ೬೨,೪೪೩

೧೮೧೮ನೇ ರೆಗ್ಯುಲೇಶನ್

ಈ ಹೆಸರಿನ ಮಸೂದೆಯೊಂದು ಇದೆ ಈ ಶಾಸನದ ನಂತೆ ತಮಗೆ ಸಂದೇಹ ತಂದ ಯಾವನನ್ನಾದರೂ ಕೈದು ಮಾಡಿ, ವಿಚಾರಣೆಯಿಲ್ಲದೆ, ಸರಕಾರವು ತಮ್ಮ ಇಚ್ಛೆ ಯುದ್ದಕ್ಕೂ ಅವಧಿ ಕಾರಾಗ್ರಹದಲ್ಲಿರಿಸಬಹುದು, ಇದನ್ನು ತೆಗೆದುಹಾಕಬೇಕೆಂದು ಅಮರನಾಥ ದತ್ತರು ಎಸೆಂಬ್ಲಿ ಯಲ್ಲೊಂದು ಮಸೂದೆ ತಂದಿರುವರು ಮಸೂದೆಯ ಮೇಲೆ ಚರ್ಚೆನಡೆದು ಮುಗಿದಿಲ್ಲ ಗೃಹಮಂತ್ರಿಗಳೂ, ನೊಮಿನೇಟೆಡ್ ಮೆಂಬರರೂ, ಸರಕಾರೀ ಮೆಂಬರರೂ, ಮಸೂದೆಯನ್ನು ಪ್ರತಿಭಟಿಸಿರುವರು

ಭಯಂಕರವಾದ ವಿಷ.

ಚೀನೀಯರಿಂದ ೩೦೦೦ ವರ್ಷಗಳಿಂದ ಪ್ರಯೋಗಿಸ ಲ್ಪಡುತ್ತಿದ್ದ ಭಯಂಕರ ತರದ ವಿಷವೊಂದನ್ನು ತಯಾ ರಿಸುವ ವಿಧಾನವನ್ನು ಮೆಲ್ಬೋರ್ನಿನ ಪ್ರೊಫೆಸರ್ ಒಸ್ಬೋರ್ನ್ ಎಂಬವರು ಕಂಡುಹಿಡಿದಿರುವರು. ಇದು ವರ್ಣರಹಿತವಾದುದು ಪ್ರಯೋಗಿಸಿದಾಗ, ಬಲಿಯಾದ ವನ ಶವವನ್ನು ಯಾವ ಚಾಣಾಕ್ಷವೈದ್ಯನು ಪರೀಕ್ಷಿಸಿ ದರೂ ರಹಸ್ಯ ಹೊರಬೀಳುವುದಿಲ್ಲವಂತೆ ಒಂದೇ ತಟಕು ವಿಷವು, ಒಂದೇ ಕ್ಷಣದಲ್ಲಿ ಒಬ್ಬನನ್ನು ಕೊಲ್ಲ ಬಹುದು

ಸಿಂಧದ ಇಬ್ಬರು ಡಕಾಯಿತರನ್ನು

ಸಾರ್ವಜನಿಕ ರಸ್ತೆಯಲ್ಲೋ ಮತ್ತೆಲ್ಲೋ ಜನರೆದು ರಿಗೆ ಗಲ್ಲಿಗೇರಿಸುವರಂತೆ ಇದು ಇತರ ಡಕಾಯಿತ(?)ರಿ ಗೊಂದು ಎಚ್ಚರಿಕೆಯಾಗುವುದಂತೆ. "ಜನರ ಮೇಲೆ ಇದರಿಂದೆಂತಹ ಪರಿಣಾಮವಾಗಬಹುದೆಂದು ಸರಕಾ ರಕ್ಕೆ ತಿಳಿದಿದೆಯೇ? ಎಂದು 'ಹಿಂದೂ' ಪತ್ರಿಕೆ ಪ್ರಶ್ನಿಸುತ್ತಿದೆ ಕೇಳುವವರಾರು?

ಕಳೆದ ವಾರ ಕಾಲವಾದ, ಮೆಟ್ರೊ ಗೋಲ್ಡ್ವಿನ್ ಮೇಯರ್ಸ್ರ ಅನೇಕ ಚಿತ್ರಗಳಲ್ಲಿ ಪಾತ್ರ ವಹಿಸಿದ ಸುಪ್ರಸಿದ್ಧ ಸಿನೆಮನಟಿ ಮಿಸ್ ಮೇರಿ ಡ್ರೆಸ್ಲರ್

ಗಾಂಧಿಜಿಯವರ ಅಪೇಕ್ಷೆ

ಶ್ರೀ ಅಣೆಯವರು ತಮ್ಮ ಉಪವಾಸದ ಸಮಯದಲ್ಲಿ ತಾ, ೧೧ರಿಂದ ೧೮ರ ತನಕ ತಮ್ಮ ಬಳಿಯಲ್ಲಿರಬೇ ಕೆಂದು ಮಹಾತ್ಮಾಜಿಯವರು ತಮ್ಮ ಇಚ್ಛೆಯನ್ನು ಪ್ರಕಟಿಸಿರುವರು ಅಣೆಯವರು ಕಾಶಿಯಿಂದ ವಾರ್ಧಕ್ಕೆ ಈಗಲೇ ಹೊರಟಿರುವರು

ದಿವಂಗತ ಹಿಂಡನ್‌ಬರ್ಗರು—

—ಜರ್ಮನಿಯ ಕೊನೆಯ ಅಧ್ಯಕ್ಷರು ಇನ್ನು ಬಹುಶಃ ಜರ್ಮನಿಗೆ ಅಧ್ಯಕ್ಷರುಗಳಿಲ್ಲ ಹಿಟ್ಲರರು ಅಧ್ಯಕ್ಷಪದವಿಯ ಅಧಿಕಾರಗಳನ್ನೂ ಹೊಂದಿರುವ ರಾದರೂ 'ಅಧ್ಯಕ್ಷ'ರೆಂಬ ನಾಮಧೇಯದಿಂದ ಆಳು ತ್ತಿಲ್ಲ. ಕೇವಲ "ಸರ್ವಾಧಿಕಾರಿ" ಹಿಂಡನ್‌ಬರ್ಗರ ಅಂತ್ಯೇಷ್ಟಿ ಸತ್ಕಾರಗಳು ಇದೇ ಕಳೆದ ಮಂಗಳವಾರ ರಾಜಯೋಗ್ಯ ಮರ್ಯಾದೆಯಿಂದ ಜರಗಿದುವು ಜರ್ಮನಿಯು ಈ ವಾರದಿಂದ ಸಂಪೂರ್ಣವಾಗಿ ರಾಜ ಪ್ರಭುತ್ವದ ಹೊಸ ಅಧ್ಯಾಯವನ್ನು ಬರೆಯುವುದು

ಅಸ್ಸಾಮಿನ ನೆರೆಯ ವಾರ್ತೆಗಳು

ನೆರೆಹಾವಳಿಯ ಭೀಕರತೆ ದಕ್ಷಿಣ ಕನ್ನಡಕ್ಕೇನೂ ಪರಕೀಯವಲ್ಲ ಆದರೆ ಅಸ್ಸಾಮಿನ ವಾರ್ತೆ ಬಹಳ ಭಯಂಕರವಾಗಿದೆ ಈ ಕೆಳಗಣ ಊರು ಗಳಲ್ಲಿ ಎಷ್ಟು ಮಂದಿಗೆ ಸಹಾಯವೊದಗಿಸಬೇಕಾಗಿದೆ ಯೆಂಬುದರಿಂದಲೇ ಆ ಚಿತ್ರವೊಂದನ್ನು ನಾವು ಕಲ್ಪಿಸಿ ಕೊಳ್ಳಬಹುದು — ಸಿಲ್ಚಾರಿನಲ್ಲಿ ೧೨೦ ಕುಟುಂಬ ಗಳು ನಿರ್ಗತಿಕವಾಗಿವೆ, ಈಗಾರಸಾತಿಯಲ್ಲಿ ೭೫ ಗ್ರಾಮಗಳು, ಚಿರಶ್ರೀ ಎಂಬಲ್ಲಿ ೧೦ ಗ್ರಾಮಗಳು, ಲಕ್ಷ್ಮೀಬಜಾರದಲ್ಲಿ ೧೦ ಗ್ರಾಮಗಳು, ಅಗ್ನಾರದಾ ಎಂಬಲ್ಲಿ ೫ ಗ್ರಾಮಗಳು ಬಾರೋಹಾಲ್ ಎಂಬಲ್ಲಿ ೧೨ ಗ್ರಾಮಗಳು ಶಿಯೋಲಾ ಎಂಬಲ್ಲಿ ೧೫ ಗ್ರಾಮ ಗಳು; ಪಾಂಚಖಂಡಾ ಎಂಬಲ್ಲಿ ೩೦ ಗ್ರಾಮಗಳು, ಲೋಟಾ ಎಂಬಲ್ಲಿ ೨೦ ಗ್ರಾಮಗಳು, ಬಹದೂರ ಪುರ ದಲ್ಲಿ ೨೦ ಗ್ರಾಮಗಳು!

ಹಿಟ್ಲರರ ಹೊಸ ಪದವಿಗೆ ಪ್ರಜಾಮತ

ಜರ್ಮನಿಯ ಅಧ್ಯಕ್ಷಸ್ಥಾನದಲ್ಲಿ ತಾತ್ಕಾಲಿಕವಾ ಹರ್ ಹಿಟ್ಲರರನ್ನ ನೇಮಿಸಲಾಗಿದೆ. ಇದಕ್ಕಾಗಿ ಇದೆ ತಾ ೧೯ರಲ್ಲಿ ಜನಮತವನ್ನು ಪಡೆಯುವರು. ಹಿಟ್ಲರರ ಹಸ್ತಕರಾದ ಜನರಲ್ ಗೋಬೆಲ್ಸರು ಹಿಟ್ಲರರಿಗೇ ಎಲ್ಲ ವೋಟುಗಳು ದೊರೆವಂತೆ ಪ್ರಚಾರಕಾರ್ಯವನು ವಿಚಕ್ಷಣತೆಯಿಂದ ಸಾಗಿಸುವರು ಪ್ರತಿಯೊಬ್ಬನೂ ವೋಟುಕೊಡಬೇಕು. ಈ ಸಾರ್ವಪ್ರಚಾರಕ್ಕಾಗಿ ೩೦೦೦ ಸಿನೇಮಾ ಕಂಪೆನಿಗಳು ಚಿತ್ರಗಳನ್ನು ಪ್ರದರ್ಶಿಸುವುವು ಹಿಟ್ಲರರ ಕಡೆಗೆ ಸಹಾನುಭೂತಿಯನ್ನು ಪೂರ್ಣವಾ ಸಂಪಾದಿಸಲು. ಭಾಷಣಗಳನ್ನು ಪ್ರಚುರಗೊಳಿಸಲಿಕ್ಕೆ ೨ ಲಕ್ಷ ಲೌಡ್ ಸ್ಪೀಕರುಗಳು ಇರಿಸಲ್ಪಡುವುವು ನೌಕರಿಯಲ್ಲಿರುವವರು, ವ್ಯಾಪಾರಿಗಳು, ಸ್ತ್ರೀ ಪುರುಷ ರೆಲ್ಲ ತಮ್ಮ ಸ್ಥಾನಗಳನ್ನು ಭದ್ರವಾಗಿಟ್ಟುಕೊಳ್ಳುವ ಆಸೆಯಿದ್ದರೆ (?) ಹಿಟ್ಲರರನ್ನೆ ಚುನಾಯಿಸಬೇಕಾಗಿ ಬಂದಿದೆ ೪೦ ಮಿಲ್ಲಿಯ ವೋಟುಗಳನ್ನೂ (ಜರ್ಮನಿ ಯಲ್ಲಿ ಅಷ್ಟು) ಹಿಟ್ಲರರೇ ಪಡೆವಂತೆ ಸಾಧನೆಗಳಾಗಿವೆ, ಚುನಾವಣೆಗಳ ಇತಿಹಾಸದಲ್ಲಿ ಇಂತಹ ಪ್ರಚಂಡ ಪ್ರಚಾರ ನಡೆದುದಿಲ್ಲ

ಆಸ್ಟ್ರಿಯಾದ ಪರಿಸ್ಥಿತಿ

ಆಸ್ಟ್ರಿಯಾದಲ್ಲೀಗ ಗಲಭೆ ತೋರುವುದಿಲ್ಲ ಆದರೆ, ಜನರ ಹೃದಯಗಳಲ್ಲಿ ಮಾತ್ರ ಶಾಂತಿಯಿಲ್ಲ ನಾಝಿ ಗಳಿಗೆದುರಾಗಿ ಚಳವಳಿವೊಂದು ಸರಕಾರದ ಕಡೆಯಿಂದ ನಡೆದಿದೆಯೆನ್ನಬಹುದು ಹರ್ ಹಿಟ್ಲರರು ಇವೇ ಆಸ್ಟ್ರಿಯಾದ ಹಿತಚಿಂತಕರ ಪಾತ್ರವನ್ನು ವಹಿಸಿ, ವಾನ್ ಪೇಪನರನ್ನು ಜರ್ಮನ್ ಪ್ರತಿನಿಧಿಯಾಗಿ, ಸದ್ಯ ಕಳಿಸಲು ಅಪ್ಪಣೆಕೊಟ್ಟಿರುವರು ಇಟೇಲಿಯು ನಾಝಿ ಗಳಿಗೆ ವಿರುದ್ಧವಾಗಿ ಆಸ್ಟ್ರಿಯಾದ ಡೊಲ್ಫಸ್ ಪಕ್ಷದೊಡನೆ ಸಹಾನುಭೂತಿ ತೋರುತ್ತಿದೆಯೆಂದೂ ಫಾಸಿಸ್ಟ್‌ಪಕ್ಷದ ಮೇಲೆಲ್ಲ ಆಸ್ಟ್ರಿಯಾದ ನಾಝಿಗಳು — ಹಿಟ್ಲರರ ಅನು ಯಾಯಿಗಳ ಬಹಿಷ್ಕಾರದ ಗದೆಯೆತ್ತಿರುವರು ಡೊಲ್ಫಸರವರ ಕೊಲೆಯ ಒಂದು ವಾರದ ನಂತರ ನಾಝಿ ಗಳು ಇಟೇಲಿಯ ಉಪವಸ್ತ್ರ ವಸ್ತುಗಳನ್ನು ಬಹಿಷ್ಕರಿಸಿ ಹತ್ತಿದ್ದಾರೆ ನಾಝಿ ಮುಖಂಡರಿಬ್ಬರಿಗೆ ಮರಣಾಂತ ಶಿಕ್ಷೆ ವಿಧಿಸಲ್ಪಟ್ಟಿದೆ. ಭಯೋತ್ಪಾದಕರ ಕೂಟವೀಗ ಚಳವಳ ಆರಂಭಿಸಿದೆ.

ಮುಂಬಾಯಿಯ ಕೊಂಗ್ರೆಸ್ ಅಧಿವೇಶನ

ಮುಂಬಯಿಯಲ್ಲಿ ನಡೆಯಬೇಕೆಂದು ಗೊತ್ತಾಗಿರುವ ಕೊಂಗ್ರೆಸಿನ ೪೮ನೇ ಅಧಿವೇಶನಕ್ಕೆ ಮುಂಬಾಯಿಯ ಸರಕಾರವು ಆಜಾದ್ ಮೈದಾನವನ್ನು ಕೊಡಿಸಲಾಗುವು ದಿಲ್ಲವಾಗಿ ತಿಳಿಸಿದೆ. ಈಗ, ಚರ್ಚ್‌ಗೇಟ್ ಸ್ಟೇಶನಿನ ಪಶ್ಚಿಮಕ್ಕಿರುವ ಸ್ಥಳವನ್ನು ಕೇಳಲಾಗಿದೆ

ಮಹಾತ್ಮಾಜಿಯವರು ಕಂಟಕದಿಂದ ಪಾರಾದರು

ಇದು ಉಪವಾಸದ ದೂತಲ್ಲ ಮಹಾತ್ಮಾಜಿಯವರು ಕರಾಚಿಯಿಂದ ಲಾಹೋರಿಗೆ ಪ್ರಯಾಣಮಾಡುತ್ತಿದ್ದಾಗ ಅವರು ಕುಳಿತ ಬಂಡಿಯು ಇಂಜಿನಿಗೆ ಸಮೀಪದಲ್ಲಿ ಇದ್ದು, ಇಂಜಿನಿನ ಒಂದು ಚಕ್ರವು ಜಿಗುಕುಬಿಟ್ಟು ಎರಡು ಹೋಳಾಗಿತ್ತೆಂದೂ, ಆದರೆ, ಅದು ಕೆಲವು ಮೈಲುಗಳ ಅಂತರವನ್ನು ದಾಟಿದ ಮೇಲೆ ಮತ್ತೊಂದು ಸ್ಟೇಶನಿನಲ್ಲಿ ಕಂಡುಹಿಡಿಯಲಾಯಿತೆಂದೂ, ಅದು ತುಂಡಾಗಿ ಬೀಳದಿದ್ದುದು ಮಹಾ ಆಶ್ಚರ್ಯವೆಂದೂ, ಹಾಗೇನಾದರೂ ಆಗುತ್ತಿದ್ದರೆ, ಇಂಜಿನು ಬಿದ್ದು — ಅದ ರೊಂದಿಗೆ ಮಹಾತ್ಮಾಜಿಯವರು ಕುಳಿತ ಗಾಡಿಯೂ ಬೀಳಬಹುದಿತ್ತೆಂದೂ ಇತ್ತೀಚೆಗೆ ಪ್ರಕಟವಾಗಿದೆ.

ಯುವಕನ ಆತ್ಮಹತ್ಯೆ

ಮದ್ರಾಸಿನ ಪೀಪಲ್ಸ್ ಪಾರ್ಕಿನಲ್ಲಿ, ರೇಡಿಯೋಸ್ಟೇಂಡ್ ಬಳಿ, ಟಿ. ಪಿ. ಶ್ರೀನಿವಾಸ ಅಯ್ಯಂಗಾರ ಎಂಬ ಯುವ ಕನ ಶವವು ಕಾಣಸಿಕ್ಕಿತು ಬಿ ಏ ಪಾಸಾದ ಹುಡುಗ. ಉದ್ಯೋಗವಿರಲಿಲ್ಲ ವೈರಾಗ್ಯ ತಾಳಿ ಆತ್ಮಹತ್ಯೆ ಮಾಡಿಕೊಂಡಿರುವೆನೆಂದು ಪತ್ರ ಬರೆದಿಟ್ಟಿರು ವನು.

ಮಂಗಳೂರು.

ಕಳೆದ ಆದಿತ್ಯವಾರ "ಆರ್ಯ ವಿದ್ಯಾವಿಜಯ ನಾಟಕ ಸಭೆ"ಯ ಜನರಲ್ ಬೋರ್ಡಿ ಸಭೆಯು ಜರಗಿ, ಶ್ರೀ ಪ. ರಮಾನಂದ ರಾವ್, ಎಂ. ಎ. ಪ್ರೊಫೇಸರ್, ಗವರ್ನಮೆಂಟ್ ಕೊಲೇಜ್, ಇವರನ್ನು ಅಧ್ಯಕ್ಷರನ್ನಾಗಿಯೂ, ಶ್ರೀ ಅಣ್ಣಾವರ ಬಾಬು ಇವರನ್ನು ಉಪಾಧ್ಯಕ್ಷರನ್ನಾಗಿಯೂ, ಶ್ರೀ ಎ. ಮಂಜುನಾಥ ಶಾಲಿವಾಹನರನ್ನು ಕಾರ್ಯದರ್ಶಿಗಳನ್ನಾಗಿಯೂ, ಶ್ರೀಗಳಾದ ಕೆ. ರಾಮರಾವ್, ನಾರಾಯಣರಾಯರನ್ನು ಜನರಲ್ ಬೋರ್ಡಿಯ ಸದಸ್ಯರನ್ನಾಗಿಯೂ ಆರಿಸಲಾಯಿತು. ಮಂಡಳಿಯವರು ಸದ್ಯದಲ್ಲೇ "ಚಂದ್ರಗುಪ್ತ" ಎಂಬ ಐತಿಹಾಸಿಕ ನಾಟಕವನ್ನು ಅಭಿನಯಿಸಲಿರುವರಾಗಿ ತಿಳಿದುಬರುತ್ತದೆ.

ಇದೇ ತಾ. ೧೨ನೇ ಆದಿತ್ಯವಾರ ಪ್ರಾತಃಕಾಲ ಘಂಟೆ ೧೧ಕ್ಕೆ ಕುದ್ರೋಳಿಯ ಶ್ರೀ ಗೋಕರ್ಣನಾಥ ಕ್ಷೇತ್ರದಲ್ಲಿ ಪ್ರಸಿದ್ಧ ಗವಾಯಿ ವೀರಭದ್ರಪ್ಪ ಹಾರ್ಮೋನಿಯಂ ಮಾಸ್ತರ್, ಹುಬ್ಬಳ್ಳಿ ಇವರ ಗಾಯನಕಚೇರಿಯು ಜರಗಲಿರುವುದು ಸರ್ವರಿಗೂ ಸುಸ್ವಾಗತವಿದೆ.

ನಮ್ಮ ಜಿಲ್ಲೆಯ ತಹಶೀಲದಾರರಾದ ಮಿ। ಕೆ ಗುಲಾಂ ಮಹಮ್ಮದ್ ಸಾಹೇಬರು ಡಿಪ್ಯೂಟಿ ಕಲೆಕ್ಟರರಾಗಿ ಬದಲಿ ನೋಡಲು ನೇಮಕಹೊಂದಿದ್ದು, ಜನರಲ್ ಡ್ಯೂಟಿ [illegible]ಮೇಲೆ ಬೆಂಗಳೂರಿಗೆ ವರ್ಗಾಯಿಸಲ್ಪಟ್ಟಿರುವರು.

ಉಳ್ಳಾಲ ಮಿ। ಅಬ್ದುಲ್ ರಹಿಮಾನ್ ಬ್ಯಾರಿಗಳವರ ಮಗಳಿಗೆ 'ಭೂತ' ಹಿಡಿದುದನ್ನು ಉಚ್ಚಾಟನೆ ಮಾಡಲು ಅಲ್ಲೇ ಸಮೀಪದಲ್ಲಿ ವಾಸವಾಗಿರುವ ಹೆಂಗುಸೊಬ್ಬಳು ಬಂದು, ಒಂದು ಕೋಣೆಯಲ್ಲಿ ಮಲಗಿದ್ದಳೆಂದೂ ಆಕೆಯೊಂದಿಗೆ ಅದೇ ಮನೆಯ ಮತ್ತೊರ್ವ ಬಾಲಿಕೆಯೂ ಮಲಗಿದ್ದಳೆಂದೂ, ಬೆಳಗ್ಗೆ ಆ ಕೋಣೆಯ ಬಾಗಿಲು ತೆರೆಯಲ್ಪಡದಿರುವುದನ್ನು ನೋಡಿ, ವಿಸ್ಮಿತರಾಗಿ ಮನೆಯವರು [illegible] ಬಾಗಿಲನ್ನೊಡೆದು ನೋಡಲು, ಇಬ್ಬರೂ ಪ್ರಾಣತ್ಯಾಗ ಮಾಡಿದ್ದರೆಂದು ಒಂದು ಸುದ್ದಿ.

"ಮಂಗಳೂರು ಕ್ರಿಸೆಂಟ್ ಕ್ಲಬ್ಬಿ"ನ ಕೆಲವು ಉದಾರಿ ಮುಸ್ಲಿಂ ಬಾಂಧವರು ಬಡ ಬಡ ಮುಸ್ಲಿಂ ವಿದ್ಯಾರ್ಥಿಗೆ ವಂತಿಗೆಯಿಂದ ಧನಸಹಾಯ ಮಾಡಿ ವಿದ್ಯಾಭ್ಯಾಸಕ್ಕೆ ಅನುಕೂಲತೆಗಳನ್ನು ಮಾಡಿಕೊಟ್ಟಿರುವುದು ಸ್ತುತ್ಯ. ಸ್ವಸಮಾಜದ ಇತರ ಅಥ್ಯ ಮಹನೀಯರೂ ಇವರನ್ನನುಸರಿಸಿ ತಮ್ಮ ಯಥಾನುಶಕ್ತಿ ದ್ರವ್ಯ ಸಹಾಯ ಮಾಡಿ ವಿದ್ಯಾಪ್ರಸಾರಕ್ಕೆ ಪ್ರೋತ್ಸಾಹ ಕೊಡುವರೆಂದು [illegible] ಎಂಬೊಬ್ಬ ಬಾತ್ಮಿದಾರರು ಬರೆಯುತ್ತಾರೆ.

ನಮ್ಮ ಡಿಸ್ಟ್ರಿಕ್ಟ್ ಬೋರ್ಡು ಮೆಂಬರರೂ ಕನರಾ ಬ್ಯಾಂಕಿನ ಡೈರೆಕ್ಟರರಲ್ಲೊಬ್ಬರೂ ಆಗಿರುವ ಶ್ರೀ ಎಂ ಪದ್ಮನಾಭ ರಘುನಾಥ ಪೈಯವರು ನಂಬ್ರ ೯ನೇ ಗೋಳಿಕಟ್ಟೆ ವಾರ್ಡಿನ ಬರುವ ಮುನಿಸಿಪಲ್ ಚುನಾವಣೆಗೆ ಉಮೇದ್ವಾರರಾಗಿರುವರೆಂದು ತಿಳಿದುಬರುತ್ತದೆ. ನಂಬ್ರ ೨೦ನೇ ಹೊಗೆ ಬಜಾರ್ ವಾರ್ಡಿಗೆ ಶ್ರೀ ಕೆ ನಾರಾಯಣ ಭಂಡಾರಿಗಳವರು ಉಮೇದ್ವಾರರಾಗಿರುವರು. ನಂಬ್ರ ೧೪ನೇ ಮಾರ್ಕೆಟು (ಸೌತ್) ವಾರ್ಡಿಗೆ ಕಸಬಾ ಬಜಾರ ಪಂಚಾಯತಿ ಕೋರ್ಟಿನ ಪ್ರೆಸಿಡೆಂಟರೂ ಮಂಗಳೂರು ಕೋಅಪರೇಟಿವ್ ಟೌನ್ ಬ್ಯಾಂಕಿನ ಡೈರೆಕ್ಟರ್ ಮತ್ತು ಮುನ್ಸಿಪಲ್ ಕೌನ್ಸಿಲರ ಡಾ। ಯು. ರಾಘವೇಂದ್ರ ಪೈಯವರು ಉಮೇದ್ವಾರರಾಗಿ ನಿಲ್ಲುತ್ತಾರೆಂತ ಕೇಳುತ್ತೇವೆ.

ಇದೇ ತಾ. ೪ಕ್ಕೆ ಅಂತ್ಯವಾಗುವ ಒಂದು ವಾರದ ನಮ್ಮ ನಗರದ ಆರೋಗ್ಯ ವರದಿ — ಮರಣಗಳು ೩೧, ಜನನಗಳು ೩೪, ಮರಣಗಳ ಪೈಕಿ, ಸಿಡುಬು ೨, ವಿಷಮಜ್ವರ ೨, ಬಾಣಂತಿ ೧, ಶ್ವಾಸಕೋಶ ಸಂಬಂಧವಾದುವು ೬ ಮತ್ತು ಇತರ ಕಾರಣಗಳಿಂದ ೨೦, ಇವುಗಳಲ್ಲಿ ಒಂದು ವರುಷ್ಕೊಳಗಣ ಶಿಶುಮರಣ ೬. ವರದಿಯ ಈ ವಾರದಲ್ಲಿ ೧೪ ಜನರಿಗೆ ಸಿಡುಬು ತಗಲಿದಂತೆ ತಿಳಿದುಬರುತ್ತದೆ. ಇದರ ಮುಂಚಿನ ವಾರ ಕೇವಲ ೨ ಸಿಡುಬಿನ ಆಕ್ರಮಣಗಳು ಮಾತ್ರವಿದ್ದುವು, ಮರಣಗಳಿರಲಿಲ್ಲ.

ಶ್ರೀಕೃಷ್ಣ ಸಿನೆಮಾದಲ್ಲಿ ಇದೇ ತಾ. ೧೧ನೇ ರವಿವಾರದಿಂದ ರೇಡಿಯೋ ಪಿಕ್ಚರ್ಸನವರ "ಗರ್ಲ್ ಕ್ರೇಜಿ" ಎಂಬ ಪ್ರಹಸನವು ಪ್ರದರ್ಶಿಸಲ್ಪಡುವುದು. ಇದರಲ್ಲಿ ಪ್ರಖ್ಯಾತ ಹಾಸ್ಯಗಾರರಾದ ವೂಲ್ಸಿ ಮತ್ತು ವ್ಹೀಲರ್ ಎಂಬವರು ಪ್ರಮುಖ ಪಾತ್ರವಹಿಸಿರುವರು.

ಕಾಪು ಭೂತಸ್ಥಾನದ ಕೆಲವು ಆಭರಣಗಳನ್ನು ಕಳವು ಮಾಡಿ ತಂದಿರುವನೆಂಬ ಅಪಾದನೆಯಲ್ಲಿ, ಕಳೆದ ತಾರೀಕು ೨೭ನೇ ಶುಕ್ರವಾರ ಬೋಳೂರಿನಲ್ಲಿ ಒಬ್ಬ ಬಿಲ್ಲವನನ್ನು ಕೈದುಮಾಡಿರುವರಾಗಿ ತಿಳಿದುಬರುತ್ತದೆ.

"ಮಂಗಳೂರು ಸ್ವದೇಶೀ ಸ್ಟೋರ್ಸ್"ನವರು ನಡೆಸುವ ಖಾದಿ ಪ್ರಾಯ್ಜುಚಿಟ್ಟು ಎಂಬ ಬಹುಮಾನದ ಸೋಡ್ತಿಯು ಇದೇ ತಾ. ೨ರಲ್ಲಿ ೧೦ನೇ ಸಲ ಎತ್ತಲಾಗಿ, ನಂಬ್ರ ೧೪ನೇ ಶ್ರೀಯುತ ಎಂ. ದಿ ಕಾಮತ್, ಇವರ ಹೆಸರಿನಲ್ಲಿ ಸಂದಿದೆಯಾಗಿ ವ್ಯವಸ್ಥಾಪಕರು ತಿಳಿಸುತ್ತಾರೆ.

ಇದೇ ತಿಂಗಳ ತಾರೀಕು ೧೨ನೇ ಆದಿತ್ಯವಾರ ಬೆಳಗ್ಗೆ ೮॥ ಗಂಟೆಗೆ ಸಿಟಿ ಆರ್ಯ ಸಮಾಜ ಮಂದಿರದಲ್ಲಿ "ಯಜ್ಞೋಪವೀತ ಮಹತ್ವ" ಎಂಬ ಕುರಿತು ಭಾಷಣವಿದೆ, ಸರ್ವರಿಗೂ ಸ್ವಾಗತವಿದೆ.

ಬೊಂಬಾಯಿಯಲ್ಲಿ ನೆಲೆಸಿರುವ ದಕ್ಷಿಣ ಕನ್ನಡ ಜಿಲ್ಲೆ ಮತ್ತು ಕೇರಳದ ಗೌಡಸಾರಸ್ವತ ಬ್ರಾಹ್ಮಣ ಸಮಾಜದವರ ಒಂದು ಪ್ರಾಥಮಿಕ ಸಭೆಯು ಇದೇ ಕಳೆದ ಜುಲೈ ತಿಂಗಳ ತಾ ೨೦ನೇ ರವಿವಾರ, ಶ್ರೀ ಕಸ್ತೂರಿ ನಾಗೇಶ ಪೈಯವರ ಅಧ್ಯಕ್ಷತೆಯಲ್ಲಿ ಬೊಂಬಾಯಿಯಲ್ಲಿ ಜರಗಿ, ಸ್ವಸಮಾಜದ ಆರ್ಥಿಕ—ಸಾಮಾಜಿಕ ಸ್ಥಿತಿಗತಿಗಳ ಏಳಿಗೆಯನ್ನು ಸಾಧಿಸಲು ಒಂದು ಸಂಘವನ್ನು ಸ್ಥಾಪಿಸಬೇಕೆಂದು ನಿಶ್ಚೈಸಲಾಯಿತು. ಈ ಸಂಘದ ನಿಯಮಾವಳಿ, ಉದ್ದೇಶಗಳು ಕಾರ್ಯಕ್ರಮ ಇತ್ಯಾದಿಗಳನ್ನು ರಚಿಸುವ ಬಗ್ಗೆ ಒಂದು ತಾತ್ಕಾಲಿಕ ಕಮಿಟಿಯ ರಚನೆಯೂ ಆಯಿತು. ಈ ಸಮಿತಿಯವರು ರಚಿಸಿದ ನಿಯಮಾವಳಿಗಳನ್ನು ಇದೇ ತಾ ೩೧ರಲ್ಲಿ ಕೂಡಲಿರುವ ಮಹಾಸಭೆಯಲ್ಲಿಟ್ಟು ಮಂಜೂರಾತಿ ಪಡೆಯೋಣವಾಗಬೇಕೆಂದೂ ಗೊತ್ತಾಗಿದೆ. ಸ್ವಸಮಾಜದವರಾರಾದರೂ ತಮ್ಮ ಸೂಚನೆಗಳನ್ನು ಕಳುಹುವುದಿದ್ದರೆ "Secretary, 2nd floor, Kerwala Building, Lohar Chawl, Bombay 2" ಈ ವಿಳಾಸಕ್ಕೆ ಕಳುಹಬಹುದು.

ಮಂಗಳೂರು ತಾಲೂಕು ಟೀಚರ್ ಮೆನೇಜರರ ಸಂಘದ ಮಹಾಸಭೆಯು ತಾ ೧೨—೮—೩೪ನೇ ಆದಿತ್ಯವಾರ ಅಪರಾಹ್ನ ೨ ಗಂಟೆಗೆ ಮಂಗಳೂರಿನ ಬಾಲಸಾಹಿತ್ಯ ಮಂಡಲದಲ್ಲಿ ಜರಗಬೇಕಾಗಿ ಎಲ್ಲಾ ಟೀಚರ್ ಮೆನೇಜರರಿಗೂ ಪ್ರತ್ಯೇಕ ಆಮಂತ್ರಣ ಕೊಟ್ಟಿದೆ. ಆ ಪ್ರಕಾರ ಮಂಗಳೂರು ತಾಲೂಕಿನ ಎಲ್ಲಾ ಟೀಚರ್ ಮೆನೇಜರರೂ ದಯಮಾಡಿ ಒಂದು ಸಂಘದ ಮೆಂಬರರಾಗಬೇಕಾಗಿ ಅತೀ ದೈನ್ಯದಿಂದ ಮಂಗಳೂರು ತಾಲೂಕು ಟೀಚರ್ ಮೆನೇಜರ ಸಂಘದ ಕಾರ್ಯದರ್ಶಿಯವರು ಅರಿಕೆಮಾಡಿಕೊಳ್ಳುತ್ತಾರೆ.

"ಸಿಟಿ ಆರ್ಯಸಮಾಜದ ತ್ರೈಮಾಸಿಕದ ದ್ವಿತೀಯ ಅಧಿವೇಶನವು ಇದೇ ತಾ ೫ನೇ ಆದಿತ್ಯವಾರ ಬೆಳಗ್ಗೆ ೯ ಗಂಟೆಗೆ ಜರಗಿತು. ಶ್ರೀಕೃಷ್ಣಾಷ್ಟಮಿಯ ಕುರಿತು ಒಂದು ಸಾರ್ವಜನಿಕ ಸಭೆ ಜರಗಿಸುವ ಮತ್ತು ಉಪಾಕರ್ಮದ ವಿಧಿ ಆಚರಿಸುವ ಬಗ್ಗೆ ತಕ್ಕ ಏರ್ಪಾಡುಗಳನ್ನು ಮಾಡುವಂತೆ ನಿಶ್ಚಯಿಸಲಾಯಿತು. ಆ ಮೇಲೆ ಗತ ಮೂರು ತಿಂಗಳ ವರದಿಯನ್ನೂ ಜಮಾ ಖರ್ಚಿನ ಲೆಕ್ಕಪತ್ರಗಳನ್ನೂ ಪರಿಶೀಲಿಸಿ ಮಂಜೂರುಗೊಳಿಸಲಾಯಿತು. ಈ ಅವಧಿಯಲ್ಲಿ ಸಮಾಜದ ಮಂದಿರದಲ್ಲಿ ೧೪ ಸಾಪ್ತಾಹಿಕ ಅಧಿವೇಶನಗಳೂ, ಒಂದು ಮಾಸಿಕ ಅಧಿವೇಶನವೂ ಜರಗಿವೆ. ಇವುಗಳಲ್ಲಿ ಶ್ರೀಯುತರುಗಳಾದ ಬಸ್ತಿ ದಾಸಪ್ಪ ಶೆಣೈ, ಬಿ ಮೋಹನಪ್ಪ ತಿಂಗಳಾಯರು ಬಿ ನರ್ಸಪ್ಪ, ಎ ೭.೬ ಕೃಷ್ಣ ನಾಯ್ಕ, ಬಿ ಲಕ್ಷ್ಮಣದೇವ ವಿದ್ಯಾರ್ಥಿ, ಮೊದಲಾದವರುಗಳಿಂದ ಭಿನ್ನಭಿನ್ನ ವಿಷಯಗಳ ಕುರಿತು ೧೩ ಭಾಷಣಗಳು ನಡೆದಿವೆ. ಜುಲಾಯಿ ತಿಂಗಳ ತಾ ೨೦ರ ವರೆಗೆ ಸದಸ್ಯರ ಸಂಖ್ಯೆ ೩೦ಕ್ಕೆ ಮುಟ್ಟಿದೆ. ಇವರಲ್ಲಿ ಶ್ರೀಯುತ ಕೆ ಕರಿಯಣ್ಣ ಶೆಟ್ಟಿ, ಕಂಬರ್ಪಾಡಿ ಗೋಪಾಲಕೃಷ್ಣಯ್ಯನವರು ಈ ಇಬ್ಬರು ಮಹನೀಯರು ಪರಪೋಷಕರಾಗಿರುತ್ತಾರೆ. ತಾ ೧೦—೬—೩೪ರಲ್ಲಿ ಸಮಾಜ ಮಂದಿರದಲ್ಲಿ ೪ ಮಂದಿ ಮಹಮ್ಮದೀಯರನ್ನು ಶುದ್ಧಿಗೊಳಿಸಲಾಗಿದೆ. ಇದುವರೆಗಿನ ಸರ್ವ ಕಾರ್ಯಕ್ರಮಗಳನ್ನೂ ಸ್ಥಳೀಯ ಪತ್ರಿಕೆಗಳಲ್ಲಿ ಪ್ರಕಟಿಸಲ್ಪಟ್ಟಿದೆ. ಇದಕ್ಕಾಗಿ ಪತ್ರಿಕಾಕರ್ತರುಗಳಿಗೆ ಸಮಾಜದವರ ಪರವಾಗಿ ಧನ್ಯವಾದವನ್ನರ್ಪಿಸುತ್ತೇವೆ. ಪ್ರತಿಯೊಂದು ಹಿಂದೂಹಬ್ಬಗಳನ್ನು ವೈದಿಕವಿಧಿಯಿಂದ ಆಚರಿಸುವಂತೆ ಸಮಾಜದ ಕಡೆಯಿಂದ ವ್ಯವಸ್ಥೆಗಳಾಗುತ್ತಿವೆ" ಎಂದು ಕಾರ್ಯದರ್ಶಿಯವರು ಬರೆಯುತ್ತಾರೆ.

ಮಂಗಳೂರು ಮುನಿಸಿಪಾಲಿಟಿಯ ಈ ಬಾರಿಯ ಚುನಾವಣೆಗೆ ನಂಬ್ರ ೭ನೇ ವಾರ್ಡಿಗೆ ಡಾ। ಯು. ನರಸಿಂಹ ನಾಯಕರವರು ಉಮೇದ್ವಾರರಾಗಿ ನಿಲ್ಲುವರೆಂದು ತಿಳಿದುಬರುತ್ತದೆ.

ಕಂಕನಾಡಿಯ ಸಮೀಪ, ರಾಮಪ್ಪ ಎಂಬಾತನನ್ನು ಸುಬ್ಬಪ್ಪ ಎಂಬಾತನು, ಜಗಳಪತ್ತಿ, ಚೂರಿಯಿಂದ ತಿವಿದು ಕೊಂದನಾಗಿ ಪ್ರಕಟವಾಗಿದೆ. ಪಡಬಿನಲ್ಲಿ ಒಂದು ವಿಷಪ್ರಯೋಗದ ಮರಣವಾದಂತೆ ಮಾತೆಯಿದೆ.

ತಾಲೂಕುಗಳಿಂದ.

ಉಡುಪಿ — ಇದೇ ತಾ. ೬ನೆಗೆ ಉಡುಪಿ ತಾಲೂಕಿನ ಸೇಂದಿ ಅಂಗಡಿಗಳ ಹರಾಜು ಎಂದಿನಂತೆ ತಾಲೂಕು ಆಫೀಸಿನಲ್ಲಿ ನಡೆಯಿತು. ಜನರ ಕೈಯಲ್ಲಿ ಹಣದ ಹುಟ್ಟುಯಿಂದಿದೆಯಾದರೂ, ಗುತ್ತಿಗಳು ಕಳೆದ ವರ್ಷಕ್ಕಿಂತ ಹೆಚ್ಚಿಗೆ ಏನೇನಾಗೇ ಬೀಳಲ್ಪಟ್ಟವು. ಈಗಾಗಲೇ ಮಳೆಯು ಬಹು ನಿಧಾನಿಸಿ, ಮುಂದಿನ ಬೆಳೆಯು ಹೇಗಾದೀತೆಂಬುದಾಗಿ ನಿಶ್ಚಯವಿಲ್ಲದಿದ್ದಾಗ್ಯೂ, ಕುಡಿತತನಕ್ಕೇನೂ ಭಂಗವಿಲ್ಲದಂತಾಯಿತು.

ವಿಟ್ಲ — ಇಲ್ಲಿಗೆ ಸಮೀಪವಿರುವ ಪಡಾಲು ಎಂಬಲ್ಲಿಯ ಸಾಲಗ ತ್ಯಾಂಪ ಎಂಬವರೊಬ್ಬರು (ಇವರು ಗಟ್ಟಕ್ಕೆ ಅಕ್ಕಿಗಳನ್ನು ಕೂಡಿಸಿ ಕಳುಹುವ ವ್ಯಾಪಾರಿಯಂತೆ) ತನ್ನ ಧನಿಯ ಕಾಫಿಯನ್ನು ಮಂಗಳೂರಲ್ಲಿ ವಿಕ್ರಯಿಸಿ ಸುಮಾರು ರೂ ೩೦೦ನ್ನು ಒಡಕೊಂಡು ಬಂದು, ಶಾಣೆ ಮಂಗಳೂರಿನಲ್ಲಿದ್ದು ಅಲ್ಲಿಂದ ಕಾಲ್ನಡೆಯಾಗಿ ನಡುಕತ್ತಲೆಯಲ್ಲಿ ಹೊರಟುಹೋಗುತ್ತಿದ್ದಾಗ, ಯಾರೋ ಮೂವರು ಧೂರ್ತರು ಬಂದು ಇವರನ್ನು ಹೆದಮುರಿಗೆ ಕಟ್ಟಿ, ಬಾಯಿಗೆ ವಸ್ತ್ರತುರುಕಿ ಅವರೊಡನಿದ್ದ ದೊಕ್ಕದಲ್ಲಿ ಕೈಗೆ ಸಿಕ್ಕಿದುದಷ್ಟನ್ನೋ ಎತ್ತಿ ಓಡಿದರಂತೆ.

ಮಣಿಪುರ — "ನಮ್ಮ ಡಿಸ್ಟ್ರಿಕ್ಟ್ ಬೋರ್ಡಿನ ಪ್ರೆಸಿಡೆಂಟರವರು ಈ ಗ್ರಾಮದಲ್ಲಿ ಒಂದು ಬೋರ್ಡ ಶಾಲೆಯನ್ನು ತೆರೆಯಲು ಹುಕುಂ ಕೊಟ್ಟಿರುವುದು ಈ ಗ್ರಾಮದ ಮಕ್ಕಳ ಭಾಗ್ಯೋದಯವೇ ಸರಿ. ಸದ್ರಿ ಬೋರ್ಡ ಶಾಲೆಯನ್ನು ತಾ ೪ನೇ ಶನಿವಾರ ಪೂರ್ವಾಹ್ನ ೧೦ಕ್ಕೆ ಉದ್ಯಾವರ ಬೋರ್ಡ ಶಾಲೆಯಿಂದ ವರ್ಗವಾಗಿ ಇಲ್ಲಿಗೆ ಬಂದ ಬಿ ತಮ್ಮಯ್ಯ ಕೇದಿಗೆ[illegible] ಉಪಾಧ್ಯಾಯರು ಗ್ರಾಮ ನಿವಾಸಿಗಳ ಕೂಡುವಿಕೆಯಿಂದ ತೆರೆದರು. ಸದ್ರಿ ದಿನ ಸುಮಾರು ೩೦ ಮಕ್ಕಳು ಹಾಜರಿದ್ದರು. ಶಾಲೆಯ ಮುಂದಿನ ಏಳಿಗೆಯು [illegible] ಆಗಿರುವುದು. ಈ ಉಪಾಧ್ಯಾಯರು ಬಹಳ ಉನ್ನತಿಯಲ್ಲಿದ್ದ ಉದ್ಯಾವರ ಶಾಲೆಯನ್ನು ತನ್ನ ಏಕಾಂತ ಶ್ರಮದಿಂದ ತುಂಬಾ ವೃದ್ಧಿ ಮಾಡಿದವರೆಂದು ಕೇಳುತ್ತೇವೆ. ಗ್ರಾಮಸ್ಥರ ಅರ್ಜಿಗೆ ಗಮನಕೊಟ್ಟು ಚಟುವಟಿಕೆಯಿಂದ ಕೆಲಸ ಮಾಡುವ ಈ ಉಪಾಧ್ಯಾಯರನ್ನೇ ಆರಿಸಿ, ಇಲ್ಲಿಗೆ ವರ್ಗಾಯಿಸಿ ಒಡುಕ್ಕಿತ್ತಿದಲ್ಲಿ ಶಾಲೆಯನ್ನು ತೆರೆಯುವಂತೆ ಮಾಡಿದ ದಯಾಳು ಪ್ರೆಸಿಡೆಂಟರಿಗೆ ಗ್ರಾಮಸ್ಥರಾದ ನಾವೆಲ್ಲರೂ ತುಂಬಾ ಆಭಾರಿಯಾಗಿರುತ್ತೇವೆ" ಎಂದು ಬಾತ್ಮಿದಾರರೊಬ್ಬರು ಬರೆಯುತ್ತಾರೆ.

ಫಲಿಮಾರು — ಕಳೆದ ತಿಂಗಳಲ್ಲಿ ಸ್ಥಳೀಯ ಹಾಯರ ಶಾಲೆಯ ವಾರ್ಷಿಕ ಪರೀಕ್ಷೆಯು ಉಡುಪಿ ರೇಂಜಿನ ಜೂನಿಯರ್ ಡೆಪ್ಯೂಟಿ ಇನ್ಸಪೆಕ್ಟರರವರಿಂದ ನಡೆಸಲ್ಪಟ್ಟಿತು. ಶಾಲೆಯ ಅಭಿವೃದ್ಧಿಗೆ ಊರವರ ಸಹಾಯ ಬೇಕೆಂದೂ, ಇನ್ನು ಮುಂದಕ್ಕೆ ಇದನ್ನು ಮಾದರಿ ಶಾಲೆಯಾಗಿ ಪರಿಣಮಿಸಲ್ಪಡುವುದೆಂದೂ, ಜಿಲ್ಲಾ ಬೋರ್ಡಿಗೆ ಗೌರವ ತರುವಂಥಾದ್ದೆಂದೂ ಶಾಲಾ ಇನ್ಸ್ಪೆಕ್ಟರರು ಅಭಿಪ್ರಾಯವನ್ನು ಬರೆದಿರುವರು.

ಇಲ್ಲಿಯ ಬೋರ್ಡ ಹುಡುಗಿಯರ ಶಾಲೆಗೆಂದು ಬಿಂಗಡಿಸಿಟ್ಟ ಪರಂಬೋಕು ಸ್ಥಳವನ್ನು ರೆವಿನ್ಯೂ ಡಿಪಾರ್ಟಮೆಂಟಿನವರು ಒಂದು ಸಲ ರದ್ದುಮಾಡಿದ್ದರು. ಆ ಬಗ್ಗೆ ಊರವರ ಒಂದು ಮನವಿಯು ನಮ್ಮ ಜಿಲ್ಲಾ ಕಲೆಕ್ಟರ ದೊರೆಗಳವರಿಗೆ ಒಪ್ಪಿಸಿದ ಮೇಲೆಗೆ, ಅವರು ಬಡ ಹಳ್ಳಿಗರ ಮೊರೆಯನ್ನು ಕೇಳಿ ಆ ಸ್ಥಳವನ್ನು ಕನ್ಯಾಶಾಲೆಗೆಂದೇ ಬಿಂಗಡಿಸಿಟ್ಟು, ಆ ಬಗ್ಗೆ ಹುಕುಮನ್ನು ದಯಪಾಲಿಸಿರುತ್ತಾರೆ.

ಇದೇ ತಾ ೩ನೇ ಶುಕ್ರವಾರ ಇಲ್ಲಿಯ ಸಾರ್ವಜನಿಕ ವಾಚನಾಲಯದ ದ್ವಿತೀಯ ವರ್ಧಂತ್ಯುತ್ಸವವು ಶ್ರೀಯುತ ಪ ಎಲ್ಲ ರಾಮಕೃಷ್ಣ ಪೂಂಜರವರ ಅಧ್ಯಕ್ಷತೆಯಲ್ಲಿ ಬಹು ವಿಜೃಂಭಣೆಯಿಂದ ನಡೆಯಿತು. ಅಧ್ಯಕ್ಷರು ತಮ್ಮ ಭಾಷಣದಲ್ಲಿ —"[illegible]ಯಿಂದ ನ್ಯಾಯವಾದ ಕ್ರಮಗಳನ್ನು ಈ ಹಳ್ಳಿಗರು ಅನುಸರಿಸಿದ್ದು ಇತರ ಹಳ್ಳಿಗರಿಗೊಂದು ಮಾದರಿಯೆಂದೂ, ಸ್ಥಳೀಯ ಉನ್ನತವಾದ ಕಟ್ಟೆಯ ಸಮೀಪ ಕ್ಲಬ್ಬಿಗೊಂದು ಸ್ವಂತ ಕಟ್ಟೋಣವನ್ನು ಹಳ್ಳಿಗರ ಸಹಕಾರದಿಂದ ಕಟ್ಟಿಸುವುದು ಶ್ಲಾಘನೀಯವೆಂದೂ, ತಾನು ಕೂಡಾ ದ್ರವ್ಯಸಹಾಯವನ್ನೀಯುವೆನೆಂದೂ" ನುಡಿದರು.

ಕಾಸರಗೋಡು — ಶ್ರೀ ಯೋಗೀಶ್ವ ವೆಂಕಟೇಶ್ವರ ಭಟ್ಟರು ಇದೇ ಕಳೆದ ಜೂನ್ ತಾ. ೧೮ರಲ್ಲಿ ಒಂದು ಭಯಂಕರವಾದ ಹುಲಿಯನ್ನು ಕೊಂದ ಸಂತರ, ಇದೇ ಕಳೆದ ಜುಲೈ ತಾ ೧೬ರಲ್ಲಿ, ತನ್ನ ಸಹೋದರರೊಡಗೂಡಿ ಕಾಡಿಗೆ ಹೋಗಿ ಮತ್ತೊಂದು ಗಂಡು ಹುಲಿಯನ್ನು ಹೊಡೆದು ಕೊಂದು, ತಮಗೆ ಈ ಪದವು ದೊರೆತ 'ಹುಲಿಭಾವ' ಎಂಬ ಹೆಸರನ್ನು ಅನ್ವರ್ಥಗೊಳಿಸಿರುವುದು ಒಂದು ಬಾತ್ಮಿ.

ಬಂಟ್ವಾಳ — ಕನರಾ ಗರ್ಲ್ಸ್ ರೇಂಜಿನ ಸಬ್ ಅಸಿಸ್ಟಾಂಟ್ ಇನ್ಸಪೆಕ್ಟ್ರೆಸ್‌ರವರು ಇಲ್ಲಿಯ ಬೋರ್ಡ ಹುಡುಗಿಯರ ಶಾಲೆಯನ್ನು ಳಿಕ್ಕನೆ ಸಂದರ್ಶಿಸಿ ಈ ಶಾಲೆಯ ಕೆಲಸವು ಸಮರ್ಪಕವಾಗಿ ನಡೆಯುವದಿಲ್ಲವೆಂದೂ ಮಕ್ಕಳ ಸಂಖ್ಯೆಯು ಕಡಿಮೆಯಾದ ಎಂದೂ ಇದಕ್ಕಾಗಿ ಈ ಶಾಲೆಯ ಎಲ್ಲಾ ಉಪಾಧ್ಯಾಯಿನಿಯರನ್ನು ವರ್ಗಾಯಿಸಬೇಕೆಂದೂ ಡಿಸ್ಟ್ರಿಕ್ಟ ಬೋರ್ಡಿಗೆ ಬರೆಯುತ್ತೇನೆಂದು ಹೇಳಿಹೋದರಂತೆ. ಬಂಟ್ವಾಳದಲ್ಲಿ ಈಗ ಜ್ವರ, ಮೈಲಿಗೆ, ಕೆಪ್ಪಟೆರಾಯ ಮುಂತಾದ ರೋಗಗಳು ಇರುವುದರಿಂದ ಮಕ್ಕಳ ಸಂಖ್ಯೆಯೂ ಕಡಿಮೆಯಾಗಲು ಕಾರಣ. ಆಸ್ಪತ್ರೆಯ ರಿಜಿಸ್ಟರೇ ಇದಕ್ಕೆ ಸಾಕ್ಷಿ. ಬೋರ್ಡಿನವರು ಇಲ್ಲಿ ಉಪಾಧ್ಯಾಯಿನಿಯರನ್ನು ಕಳುಹಿಸುವುದಾದರೆ ಗೌಡ ಸಾರಸ್ವತ ಉಪಾಧ್ಯಾಯಿನಿಯರನ್ನೇ ಕಳುಹಿಸಬೇಕು. ಏಕೆಂದರೆ ಬಂಟ್ವಾಳವು ಗೌಡ ಸಾರಸ್ವತ, ಸಾರಸ್ವತರ ಕೇಂದ್ರ. ಈ ಶಾಲೆಯಲ್ಲಿ ಕೆಥೋಲಿಕ ಹುಡುಗಿ ಬಂದಿದೆ. ಇದಕ್ಕಾಗಿ ಈ ಶಾಲೆಗೆ ಇನ್ನು ಇನ್ನು ಕೆಥೋಲಿಕ್ ಉಪಾಧ್ಯಾಯಿನಿಯರನ್ನು ನೇಮಿಸಿದರೆ ಮಕ್ಕಳ ಸಂಖ್ಯೆಯು ಎಂದಿಗೂ ಹೆಚ್ಚಾಗಲಾರದು. ಶಾಲೆಯು ಅಭಿವೃದ್ಧಿಯಾಗಲಾರದು. ಗೌಡಸಾರಸ್ವತ ಉಪಾಧ್ಯಾಯಿನಿಯರೇ ಬೇಕಾಗಿರುವರು ಎಂದು ಬಾತ್ಮಿ.

ಹಿರುವ ಸಪ್ಟಂಬರ ತಿಂಗಳಲ್ಲಿ ನಡೆಯುವ ಹಿಂದೀ ಪರೀಕ್ಷೆಗೆ ೪೦ ಮಂದಿ ಪ್ರಾಥಮಿಕಕ್ಕೂ ಒಬ್ಬರು ಮಧ್ಯಮಕ್ಕೂ ೮ ಮಂದಿ[illegible] ಕುಳಿತುಕೊಳ್ಳಲಿದ್ದಾರೆ.

ಇಲ್ಲಿಯ ಲೋಕಲ್ ಫಂಡ ಆಸ್ಪತ್ರೆಯನ್ನು ಜಿಲ್ಲಾ ಸರ್ಜನರು ಸಂದರ್ಶಿಸಿ ಆಸ್ಪತ್ರೆಯ ಕೆಲಸವು ಒಳ್ಳೇ ರೀತಿಯಲ್ಲಿ ನಡೆಯುತ್ತದೆಂದೂ ಇದನ್ನು ಅಭಿವೃದ್ಧಿಪಡಿಸಲಿಕ್ಕೆ ಬೋರ್ಡಿನವರು ಸ್ವಲ್ಪ ಹಣ ಖರ್ಚು ಮಾಡುವದು ಅತೀ ಅಗತ್ಯವೆಂದೂ ಅಭಿಪ್ರಾಯ ಪಟ್ಟರಂತೆ. ಪ್ರೆಸಿಡೆಂಟರೂ ಇದೇ ಅಭಿಪ್ರಾಯ ಪಟ್ಟು ಹೋದರಂತೆ. ಏನು ಮಾಡುತ್ತಾರೋ ನೋಡಲಿಕ್ಕಿದೆ.

ಪಂಡಿತ ಜವಾಹರಲಾಲ ನೆಹರೂರವರ ಧರ್ಮಪತ್ನಿ ಶ್ರೀಮತಿ ಕಮಲಾ ನೆಹರೂಯವರು ಅಸ್ವಸ್ಥರಾಗಿರುವರು.

ಪ ಬಿಶ ಮಾಲವೀಯರು ರಾಷ್ಟ್ರೀಯ ಪಕ್ಷವನ್ನು ಪ್ರಸಮುಷ್ಟೀವಿಸಿ ಶ್ರೀ ಅಣೆ ಮತ್ತು ಕಮ್ಯೂನಲ್ ಅವಾರ್ಡನ್ನು ಪ್ರತಿಭಟಿಸಲಿರುವರೆಂಬುದು ಪ್ರಕಟವಾಗಿದೆ. ಆ ಬಗ್ಗೆ ಒಂದು ಪರಿಷತ್ತನ್ನು ಕೂಡಿಸಲಿರುವರು.

ರೈಲುಬಂಡಿಗಳ ಸಮಯ.

	ಹೊರಡುವ ಸಮಯ	ಇಲ್ಲಿಗೆ ತಲಪುವ ಸಮಯ
ಮೈಲ್	ಬೆಳಗ್ಗೆ ೯ ೫೫	ರಾತ್ರಿ ೪ ೨೦
ಮಿಕ್ಸಡ್	೬	ರಾತ್ರಿ ೮ ೧೫
ಪೆಸೆಂಜರ್	ಅಪರಾಹ್ನ ೧೨ ೫೫	ಅಪರಾಹ್ನ ೩ ೪೦
ಪೋಸ್ಟ್	ಸಾಯಂ ೫.೨೫	ಬೆಳಗ್ಗೆ ೯ ೩೦

ಹೊಸ ಸರ್ವೀಸುಗಳು.

ಕಾಂಞಂಗಾಡ್ ವರೆಗಿನ ಬಂಡಿ	ಬೆಳಗ್ಗೆ ೮ ೩೦,	ಅಪರಾಹ್ನ ೧ ೨೫
ಕಾಸರಗೋಡು ವರೆಗಿನ ಬಂಡಿ	ಅಪರಾಹ್ನ ೩ ೨೫	ಸಾಯಂ ೬.೨೫

ಗೇರನ್ನು ರಫ್ತು ಮಾಡುವವರು.

ಸಂಯುಕ್ತ ಸಂಸ್ಥಾನದ ಪ್ರಮುಖ ವಿಜಸ್ವಿಯು ಗೇರುಬೀಜಗಳನ್ನು ರಫ್ತುಮಾಡುವ ಪ್ರಮುಖ ಸಂಸ್ಥೆ ಯಾ ವ್ಯಾಪಾರಸ್ಥನ ಪ್ರಾತಿನಿಧ್ಯವನ್ನು ವಹಿಸಲು ಅಪೇಕ್ಷಿಸುತ್ತದೆ. ಪತ್ರವ್ಯವಹಾರವನ್ನು ಒಯಿಸಲಾಗಿದೆ.

ವಿಳಾಸ —

A G Herrmann Co.,
105 Hudson Street,
New York City, U. S. A
Reference Irving Trust Company
of New York City

ಮಹಾತ್ಮಾ ಗಾಂಧಿಯವರ ಉಪವಾಸಾರಂಭ.

ವಾರ್ಧಾ, ತಾ. 7—8—34.

ಮಹಾತ್ಮಾಜಿಯವರು, ತಮ್ಮ ಉಪವಾಸ ಸಪ್ತಾಹವನ್ನು ಈ ದಿನ ಆರಂಭಿಸಿರುವರು.

'ಉಪವಾಸ ವ್ರತವೆಂಬುದು ಆಶ್ರಮ ಜೀವನದ ಮುಖ್ಯಾಂಗವಾಗಿ ಪರಿಣಮಿಸಿದೆ. ಅಸ್ಪೃಶ್ಯತೆಯನ್ನು ಸ್ವಾತ್ಮ ಪರಿಶೋಧನೆ ಮತ್ತು ಆತ್ಮಶುದ್ಧಿಯಿಂದಲ್ಲದೆ ಅಳಿಸುವುದು ಅಸಾಧ್ಯವಾಗಿದೆ' ಎಂದು ಮಹಾತ್ಮಾಜಿಯವರು, ವಾರ್ಧದ ಸತ್ಯಾಗ್ರಹ ಆಶ್ರಮದಲ್ಲಿ, ಇಂದು ಮುಂಜಾನೆ ೪ ಘಂಟೆಗೆ ನೆರೆದ ಆಶ್ರಮವಾಸಿಗಳನ್ನು ಸಂಬೋಧಿಸಿ ನುಡಿಯುತ್ತ, ತಮ್ಮ ನಿಶ್ಚಿತ ವ್ರತವನ್ನಾರಂಭಿಸಿದರು; ನಿತ್ಯದಂತೆ ಪ್ರಾರ್ಥನೆಯು ನಡೆಯಿತು. ಇತರ ವೇಳೆಗಳಂತೆ ವಿಶೇಷ ಪ್ರಾರ್ಥನೆ ಯಾವುದೂ ಇರಲಿಲ್ಲ.

ಮಹಾತ್ಮಾಜಿಯವರು ಯಾವ ವೇಳೆಯಲ್ಲಿ ತಮ್ಮ ವ್ರತವನ್ನಾರಂಭಿಸುವರೆಂದು ಯಾರಿಗೂ ತಿಳಿದಿರಲಿಲ್ಲ. ತಾ. ೬ನೇ ರಾತ್ರಿಯೇ ಆಶ್ರಮವಾಸಿಗಳಿಗೆ ತಮ್ಮ ನಿರ್ಧಾರವನ್ನು ತಿಳಿಸಿದರು.

ಉಪವಾಸಾರಂಭದ ಸಮಯದಲ್ಲಿ ಜಮ್ನಾಲಾಲ ಬಜಾಜರ ಪತ್ನಿಯವರೂ, ಕಾಕಾ ಕಾಲೇಲಕರ, ಕಸ್ತೂರಿಬಾಯಿ ಗಾಂಧಿ, ಥಕ್ಕರ್ ಬಾಬಾ, ಮೊದಲಾದವರೂ ಇದ್ದರು. ಮೊದಲು ಮಹಾದೇವ ದೇಸಾಯಿಯವರು ಗೀತೆಯಿಂದ ಕೆಲಶ್ಲೋಕಗಳನ್ನೆತ್ತಿ ಓದಿ ಹೇಳಿ, ಆಶ್ರಮದ ಭಜನಗೀತಗಳು ನಡೆದುವು.

ಅನಂತರ ಮಹಾತ್ಮಾಜಿಯವರು ನೆರೆದವರಿಗೆ ಚಿಕ್ಕ ಹಿತೋಪದೇಶವನ್ನು ಕೊಟ್ಟು, "ಅಖಿಲ ಹಿಂದೂಸ್ಥಾನದ ನನ್ನ ಸಂಚಾರವು ನನ್ನ ಪ್ರಕೃತಿಯನ್ನು ನಿರ್ಬಲಗೊಳಿಸಿದೆ. ಹೆಚ್ಚು ನೀರನ್ನೂ ನಾನು ಇತ್ತೀಚೆಗೆ ತೆಗೆದುಕೊಳ್ಳಲಾರದವನಾಗಿದ್ದೇನೆ. ಆದಕಾರಣ ನನ್ನ ಈ ಉಪವಾಸವು ಕಷ್ಟಮಯವಾಗಿ ತೋರಬಹುದು. ದೇವರು ನನಗೆ ಈ ಉಪವಾಸದ ಪರೀಕ್ಷೆಯಿಂದ ತೇರ್ಗಡೆಗೊಳಿಸಲೆಂದು ಪ್ರಾರ್ಥಿಸಿರಿ" ಎನ್ನುತ್ತ— ಒಂದಿಷ್ಟು ಜೇನು, ಫಲಸಾರ ಮತ್ತು ಆಡಿನ ಹಾಲನ್ನು ಸ್ವೀಕರಿಸಿದರು. ಅನಂತರ ನೂಲಲು ಕುಳಿತು, ಸುಮಾರು ೬ ಘಂಟೆಯ ಸಮಯಕ್ಕೆ ತಾನು ಉಪವಾಸದ ಉಗ್ರದೀಕ್ಷೆಯನ್ನಾರಂಭಿಸಿರುವೆನು ಎಂದು ಸಾರಿದರು.

ಡಾಕ್ಟರರ ಅಭಿಪ್ರಾಯ. (ತಾ. 8—8—34)

(ಮೂವರು ಡಾಕ್ಟರರು ಮಹಾತ್ಮಾಜಿಯವರನ್ನು ಪರೀಕ್ಷಿಸಿ, ಉಪವಾಸವನ್ನು ಕೈಕೊಳ್ಳುವಷ್ಟು ದೇಹಶಕ್ತಿಯು ಚೆನ್ನಾಗಿಲ್ಲವೆಂದು ತಮ್ಮ ಅಭಿಪ್ರಾಯವನ್ನು ವ್ಯಕ್ತಗೊಳಿಸಿದ್ದರು.) ಮಹಾತ್ಮಾಜಿಯವರ ಹೃತ್ಕೋಶದ ಸ್ಥಿತಿಯು ಚೆನ್ನಾಗಿಲ್ಲವಂತೆ. ಇನ್ನೊಂದು ವಾರದ ನಂತರ ಆರಂಭಿಸಬಹುದೆಂದು ಡಾಕ್ಟರರು ಕೇಳಿಕೊಂಡರೂ ಮಹಾತ್ಮಾಜಿಯವರು ಒಪ್ಪಲಿಲ್ಲ. ಅಣೆಯವರು ಬಂದಿರುವರು.

ಗಾಂಧಿಯವರ ಪ್ರಕಟಣೆ.

ಉಪವಾಸವನ್ನಾರಂಭಿಸುವ ಮೊದಲು, ತಾ: ೬ರಲ್ಲಿ ಮಹಾತ್ಮಾಜಿಯವರು ಈ ರೀತಿಯಾಗಿ ಪ್ರಕಟಣೆ ಕೊಟ್ಟಿರುವರು—

"ನಾನು ನಾಳೆ ಉಪವಾಸವನ್ನಾರಂಭಿಸುವ ಮೊದಲು, ಹರಿಜನ ಕೆಲಸಗಾರರು ತನ್ನ ಆತ್ಮಶುದ್ಧಿಯ ಕಡೆಗೆ ಹೆಚ್ಚಿನ ಗಮನಕೊಟ್ಟು ತಮ್ಮ ಮುಂದಿರುವ ಕಾರ್ಯದ ಮೇಲೆ ಚಿತ್ತವನ್ನು ಸ್ಥಿರಗೊಳಿಸಬೇಕಾಗಿ ಹೇಳಲು ಇಚ್ಛಿಸುತ್ತೇನೆ. ಕೆಲಸಗಾರರು ತಾವು ಪರಿಶುದ್ಧರಾಗಬೇಕು; ತಮ್ಮವರನ್ನೂ ಪರಿಶುದ್ಧಗೊಳಿಸಬೇಕು. ಸತತ ಯತ್ನವಿಲ್ಲದೆ ಅಸ್ಪೃಶ್ಯತೆಯ ಪಿಶಾಚವು ನಾಶವಾಗದು. ಪ್ರತಿಯೊಂದು ಸಂಗತಿಯಲ್ಲೂ ಪ್ರತಿಯೊಬ್ಬನೂ ಉಪವಾಸವನ್ನು ಕೈಕೊಳ್ಳುವುದು ಸರಿಯಲ್ಲವೆಂಬುದನ್ನೂ ತಿಳಿಯಬೇಕು. ವಿಶ್ವಾಸವಿಲ್ಲದೆ ಉಪವಾಸವನ್ನು ಕೈಕೊಳ್ಳುವುದರಿಂದ ಅದು ದುಃಖಪರ್ಯವಸಾಯಿಯಾಗಬಹುದು. ಯೋಗ್ಯತೆ ಪಡೆಯದೆ ಕೈಕೊಳ್ಳುವ ಇಂತಹ ಭೌತಿಕ ಆಯುಧಗಳು ಮಹಾ ಅಪಾಯಕಾರಕಗಳಾಗಿವೆ."

"ಕೊಂಗ್ರೆಸ್ ಕೆಲಸಗಾರರಿಗೊಂದು ಮಾತು. ಕಳೆದ ತಿಂಗಳಂತೆಲ್ಲ ನನಗೆ ಅವರದೇ ಆಲೋಚನೆ. ಈ ಉಪವಾಸ ಸಪ್ತಾಹದಲ್ಲೂ ಅವರ ವಿಷಯವಾಗಿಯೇ ಆಲೋಚನೆಗಳು ತುಂಬ ಬಹುದು. ಅನೇಕ ಕಡೆಗಳಲ್ಲಿ ತಾತ್ಕಾಲಿಕವಾದ ಖಾದಿ ಉಡುಪುಗಳನ್ನು ತೊಡಿಸಿ, ಅನ್ಯಾಯವಾದ ವಿಧಾನದಿಂದ, ಮೋಸದಿಂದ, ಅನೇಕ ಕೊಂಗ್ರೆಸ್ ಕೆಲಸಗಾರರು ಚುನಾವಣೆಗಳಲ್ಲಿ ಕಾದಾಡಿರುವರೆಂಬುದನ್ನು ಕೇಳಿ ದುಃಖಸಂತಪ್ತನಾಗಿರುವೆನು. ಕೆಲಪ್ರಾಂತ್ಯಗಳ ಚುನಾವಣೆಗಳಲ್ಲಿ ಸತ್ಯವೂ ಅಹಿಂಸಾವ್ರತವೂ ಮಾಯವಾಗಿದ್ದುವಂತೆ. ನನ್ನ ಉಪವಾಸವು ಈ ಅಶುದ್ಧ ವಿಧಾನಗಳ ಬಗ್ಗೆ ಆಗಿರದಿದ್ದರೂ, ಇನ್ನಾದರೂ ಕೊಂಗ್ರೆಸ್ ಕೆಲಸಗಾರರು ಸತ್ಯಾಚರಣೆಯ ಪಥದಿಂದ ತಪ್ಪಿ ಹೆಜ್ಜೆ ಇಡದೆ, ಕೊಂಗ್ರೆಸ್ ಸಂಸ್ಥೆಯು ತನ್ನ ನಿಶ್ಚಿತ ಧ್ಯೇಯದಂತೆ ನಡೆಯುತ್ತಿದೆಯೆಂಬುದನ್ನೆಲ್ಲರೂ ಗುರುತಿಸಿ ಖಚಿತಪಟ್ಟುಕೊಳ್ಳುವಂತೆ—ಅತ್ಯ ಪರಿಶುದ್ಧತೆಯಿಂದ ಸದ್ವರ್ತನೆಯಿಡುವರಾಗಿ ನಂಬುವೆನು.

"ಕೊನೆಯದಾಗಿ, ನನ್ನ ಸ್ನೇಹಿತರೆಲ್ಲರೊಡನೆ ಕೇಳಿಕೊಳ್ಳುವುದೇನೆಂದರೆ,—ನನ್ನ ಈ ಚಿಕ್ಕ ತಪಸ್ಸನ್ನು ದೇವರು ಆಶೀರ್ವದಿಸಲೆಂದು ಅವರು ಪ್ರಾರ್ಥಿಸಿಕೊಳ್ಳಲಿ!"

ಡಾ॥ ಡೊಲ್ಫುಸರವರ ಜೀವನ ಚರಿತ್ರ

ಆಸ್ಟ್ರೀಯದ ನಾಝೀಯವರ ಕ್ರೋಧಾಗ್ನಿಗೆ ಬಲಿಯಾದ, ಛಾನ್ಸಲರ ಡೊಲ್ಫುಸರವರ ಜೀವನ ಚರಿತ್ರವನ್ನು, ನಮ್ಮ ವಾಚಕರ ಬಗ್ಗೆ, ಸಂಕ್ಷಿಪ್ತವಾಗಿ ಇಲ್ಲಿ ಕೊಡುವೆವು.

ಡೊಲ್ಫುಸರವರು 1892ನೇ ಅಕ್ಟೋಬರ ತಾ. 4ರಲ್ಲಿ ವಿಯಾನ್ನಾದಿಂದ 80 ಮೈಲು ದೂರವಿರುವ ಟೀಕ್ಸಿಂಗ್ ಎಂಬ ಹಳ್ಳಿಯಲ್ಲಿ—ಬೇಸಾಯಗಾರರ ಒಂದು ಕುಟುಂಬದಲ್ಲಿ – ಜನನಕ್ಕೆ ಬಂದರು. ಚಿಕ್ಕಂದಿನಿಂದಲೂ ಡೊಲ್ಫುಸರವರು ಚುರುಕು ಬುದ್ಧಿಯವರು. ತಾಯ್ತಂದೆಗಳು ಬಡತನದಲ್ಲಿ ಇದ್ದರಾದರೂ ಕಷ್ಟದಿಂದ ತನ್ನ ಮಗನಿಗೆ ಪ್ರೌಢ ವಿದ್ಯಾಭ್ಯಾಸವನ್ನು ಮಾಡಿಸಿದರು. ಡೊಲ್ಫುಸರವರು ವಿಯಾನ್ನಾ ವಿಶ್ವವಿದ್ಯಾಲಯದಲ್ಲಿ ವಕೀಲಿ ವೃತ್ತಿಗಾಗಿ ಕಲಿತು ತಮ್ಮ ಶಿಕ್ಷಣವನ್ನು ಪೂರೈಸಿ, ಅಲ್ಲಿಂದ ಬರ್ಲಿನ್ ನಗರಕ್ಕೆ ಅರ್ಥಶಾಸ್ತ್ರ ಮತ್ತು ರಾಜಕೀಯಗಳಲ್ಲಿ ಜ್ಞಾನ ಸಂಪಾದಿಸುವ ಬಗ್ಗೆ ಹೊರಟುಹೋದರು. ಯುರೋಪಿನ ಯುದ್ಧಪ್ರಾರಂಭವಾಗುತ್ತಲೇ ಅವರು ಪುನಃ ವಕೀಲಿ ವೃತ್ತಿಯನ್ನು ಕೈಕೊಂಡರು. ಕೆಲಕಾಲದ ನಂತರ ಸೈನ್ಯದೊಳಗೆ ಸಾಮಾನ್ಯ ಸೈನಿಕನಾಗಿ ಸೇರಿದರು; ಅಲ್ಪ ಕಾಲದಲ್ಲಿ ಲೆಫ್ಟನೆಂಟ್ ಸ್ಥಾನಕ್ಕೆ ಏರಿಸಲ್ಪಟ್ಟರು.

ಯುದ್ಧಾನಂತರ ಅವರು ರಾಜಕೀಯ ರಂಗವನ್ನು ಪ್ರವೇಶಿಸಿದರು. ಆಸ್ಟ್ರೀಯದ ಜನಸಂಖ್ಯೆಯಲ್ಲಿ ೬ನೇ 3 ಅಂಶ ಜನರು ಬೇಸಾಯಗಾರರಾದುದರಿಂದಲೂ ಸೇಕಡಾ 93ರಷ್ಟು ಮಂದಿ ರೋಮನ್ ಕೆಥೋಲಿಕರಾದುದರಿಂದಲೂ ಡೊಲ್ಫುಸರವರು ಅನುಕೂಲ ಕ್ಷೇತ್ರದಲ್ಲಿ ಪದಾರ್ಪಣ ಮಾಡಿದಂತಾಯಿತು. ಆಸ್ಟ್ರೀಯದಲ್ಲಿ ಆಗ ಕಮ್ಯೂನಿಸ್ಟ್ ಪಕ್ಷದ ಚಳವಳಿಕ್ಕೆದುರಾಗಿ ಹೋರಾಡಲು ಕ್ರಿಶ್ಚನ್ ಸೋಶಲಿಸ್ಟ್ ಪಕ್ಷವೊಂದಿದ್ದಿತು. ಡೊಲ್ಫುಸರವರು ಈ ಪಕ್ಷವನ್ನು ಸೇರಿದರು.

ಬೇಸಾಯಗಾರರ ಹಿತಚಿಂತನೆಯೇ ಡೊಲ್ಫುಸರವರ ಮುಖ್ಯ ಉದ್ದೇಶ. ಬೇಸಾಯಗಾರರ ಪಕ್ಷವೊಂದನ್ನು, ದಕ್ಷಿಣ ಆಸ್ಟ್ರೀಯದಲ್ಲಿ ರಚಿಸಿದರು. 1927ರಲ್ಲಿ ಡೊಲ್ಫುಸರವರು ಮಜೂರರ ಪಕ್ಷದ ಡೈರೆಕ್ಟರರಾಗಿ ಚುನಾಯಿಸಲ್ಪಟ್ಟರು. ರೈಲ್ವೆಯ ಕಾರ್ಯಕಾರಿ ಮಂಡಳಿಯ ಸದಸ್ಯರಾಗಿಯೂ ಆರಿಸಲ್ಪಟ್ಟರು. ಇವರ ಕಾರ್ಯ ಕ್ಷಮತೆ, ದಕ್ಷತೆ, ಇವುಗಳನ್ನು ಗುರುತಿಸಿ, ಇವರನ್ನು 1930ರಲ್ಲಿ ಅಧ್ಯಕ್ಷ ಪದವಿಗೇರಿಸಿದರು. ೧೯೩೧ರಲ್ಲಿ ಇವರನ್ನು ಕೃಷಿ ಇಲಾಖೆಯ ಮಂತ್ರಿಗಳನ್ನಾಗಿಯೂ ೧೯೩೨ನೇ ಮೇ ತಿಂಗಳಲ್ಲಿ ಮುಖ್ಯ ಸಚಿವರನ್ನಾಗಿಯೂ ನೇಮಿಸಲಾಯಿತು.

ಮಂತ್ರಿಯಾಗಿ ಡೊಲ್ಫುಸರವರು ಅನೇಕ ಸುಧಾರಣೆಗಳನ್ನು ಮಾಡಿರುವರು. ಆಸ್ಟ್ರಿಯದ ಆರ್ಥಿಕ ಪರಿಸ್ಥಿತಿಯನ್ನು ಸುಧಾರಿಸುವಲ್ಲಿ ವಿಚಕ್ಷಣತೆಯಿಂದ ಸಾಧಿಸಿರುವರು. ಆಸ್ಟ್ರಿಯದ ವ್ಯಾಪಾರ ವಹಿವಾಟುಗಳ ಅವನತಿಯನ್ನು ತಡೆದು, ವೃದ್ಧಿಪಥಕ್ಕೆ ತಿರುಗಿಸಿರುವರು. ರೈಲ್ವೆ ಮತ್ತು ಇತರ ಕೆಲವು ಸಾರ್ವಜನಿಕ ಇಲಾಖೆಗಳನ್ನು ಸುಧಾರಿಸಿರುವರು. ಅನೇಕ ಬ್ಯಾಂಕುಗಳನ್ನು ಉನ್ನತಾವಸ್ಥೆಗೆ ತಂದಿರುವರು.

ಬಡ ಕುಟುಂಬದಲ್ಲಿ ಜನಿಸಿದ ಡೊಲ್ಫುಸರವರು ಕೇವಲ ತಮ್ಮ ಸ್ವಬುದ್ಧಿ, ಸ್ವಸಾಮರ್ಥ್ಯ ಇವುಗಳಿಂದಲೆ ತಮ್ಮ ಆ ಗೌರವದ ಸ್ಥಾನವನ್ನು ಸಂಪಾದಿಸಿದರು. ಅವರ ದೇಶಭಕ್ತಿಯೂ ಉಜ್ವಲವಾಗಿತ್ತು.

ನಾಝಿಗಳ ಚಳವಳಿಯನ್ನೊತ್ತಿಯಿಡಲು ಅವರು ವಿಶೇಷಯತ್ನ ಕೈಕೊಂಡು ಭದ್ರಮುಷ್ಟಿಯಿಂದ ಆಳಿದರು; ನಾಝೀ ಪುರುಳರ ರೋಷಾಗ್ನಿಗೆ ತುತ್ತಾದರು.

ಡೊಲ್ಫುಸರವರ ತಾಯ್ತಂದೆಗಳಿನ್ನೂ ಜೀವಿಸಿದ್ದು, ತಮ್ಮ ಪ್ರಖ್ಯಾತ ಪುತ್ರನ ಅಂತ್ಯೇಷ್ಟಿ ಸತ್ಕಾರವನ್ನು ಕಾಣಲು ಬಂದಿದ್ದರು.

ಅಸ್ಪೃಶ್ಯತಾ ಮಸೂದೆ.

ಬೊಂಬಾಯಿ ಪ್ರಾಂತಿಕ ಹರಿಜನ ಸೇವಾಸಂಘದವರು ಸರಕಾರಕ್ಕೊಂದು ಮನವಿ ಬರೆದುಕೊಂಡಿರುವರು. ಸರಕಾರದವರು ಕೇಂದ್ರ ಶಾಸನ ಸಭೆಯವರ ಅನುಮತಿಯಿಂದ ಅಸ್ಪೃಶ್ಯತಾ ಮಸೂದೆಯನ್ನು ಮಂಜೂರು ಮಾಡಿ, ಶಾಸನವಾಗಿ ಜ್ಯಾರಿಗೆ ತರಬಹುದೆಂದೂ, ಪೂರ್ವದ ಹಿಂದೂ ರಾಜರು ಕೂಡ ಧಾರ್ಮಿಕ ವಿಷಯಗಳಲ್ಲಿ ತಮ್ಮ ಅಧಿಕಾರವನ್ನು ನಡೆಸಿರುವರೆಂದೂ, ಈಗಿನ ನಮ್ಮ ಸರಕಾರವು ವಿದೇಶೀಯವಾದ ಕಾರಣ ಹಿಂದೂಗಳ ಧಾರ್ಮಿಕ ವಿಷಯಗಳಲ್ಲಿ ಕೈಹಾಕಬಾರದೆಂಬ ವಾದವು ಸಕಾರಣವಲ್ಲವೆಂದೂ ಆ ಮನವಿಯು ನಿವೇದಿಸಿದೆ.

ಈ ಮಸೂದೆಯು, ಬೊಂಬಾಯಿಯ ಹರಿಜನ ಸೇವಾಸಂಘದವರ ಅಭಿಪ್ರಾಯದಲ್ಲಿ, ಧಾರ್ಮಿಕ ಆಚಾರಗಳ ಮೇಲೇನೂ ಅನರ್ಥಕರ ಪರಿಣಾಮವನ್ನುಂಟುಮಾಡುವುದಿಲ್ಲ. ಅಸ್ಪೃಶ್ಯರು ಮೇಲ್ಜಾತಿಯವರ ಕೈಕೆಳಗೆ ಪಡುತ್ತಿರುವ ಕಷ್ಟಕ್ಲೇಶಗಳನ್ನು ದೂರ ಮಾಡುವುದೇ ಇದರ ಉದ್ದೇಶ. ಅಸ್ಪೃಶ್ಯತೆಯು ಅನ್ಯಾಯವೆಂದು ಹಲವು ಹಿಂದೂಗಳು ಮನಗಂಡಿರುವರು. ಆದರೂ, ಒಂದು ಶಾಸನವು ಇಲ್ಲದೆ ಅಸ್ಪೃಶ್ಯರು ಮೇಲ್ಜಾತಿಯವರೊಂದಿಗೆ ಸಮಾನವಾಗಿ ನಡೆಯುವುದು ದುಸ್ತರವೆನಿಸುವುದು. ಹಿಂದೂ ಜನಾಂಗದ ಮೇಲ್ಮೆಯನ್ನು ಚಿಂತಿಸಿ ಸರಕಾರವು ಈ ಮಸೂದೆಗೆ ಬೆಂಬಲ ಕೊಟ್ಟು, ಅದನ್ನು ಶಾಸನವನ್ನಾಗಿ ಮಾಡಬೇಕೆಂದು ವಿನಂತಿಸಲ್ಪಟ್ಟಿದೆ.

NOTICE

ಅತ್ತಾವರು ವೈಕುಂಠ ಪ್ರಭು ಬೇಂಕ್, ಮಂಗಳೂರು

ಈ ಕೆಳಗೆ ಹೆಸರು ಕಾಣಿಸಿದವರು ಸದರಿ ಬೇಂಕಿನಿಂದ ಚಿನ್ನಾಭರಣಗಳ ಆಧಿನ ಮೇಲೆ ಪಡೆದ ಸಾಲಗಳನ್ನಾಗಲೀ ಅದರ ಬಡ್ಡಿಯನ್ನಾಗಲೀ ವಾಯಿದೆಗೆ ಸರಿಯಾಗಿ ಇತ್ತುದರಿಂದಲೂ ಸದರಿಯವರಿಗೆ ಬಿಟ್ಟ ರಿಜಿಸ್ಟ್ರಿ ನೋಟೀಸು, ಅವರಿಗೆ ಮುಟ್ಟದೆ ಜಗದೆ ಇರುವ ಕಾರಣದಿಂದಲೂ ಈ ಮೂಲಕ ತಿಳಿಯಪಡಿಸುವದೇನಂದರೆ:—ಸದರಿಯವರಿಂದ ಬೇಂಕಿಗೆ ಸಲ್ಲತಕ್ಕ ಸಾಲದ ಅಸಲು, ಬಡ್ಡಿ ಐವೇಜು, ರಿಜಿಸ್ಟ್ರಿ ನೋಟೀಸು ಖರ್ಚು ಮತ್ತು ಈ ನೋಟೀಸು ಖರ್ಚು ವ ಬಡ್ಡಿಗೆ ಬಡ್ಡಿ ಕೂಡಿಸಿ ಇದೇ 1934ನೇ ಇಸವಿ ಆಗೋಸ್ತು ತಿಂಗಳ ತಾರೀಕು 18ನೇ ಶನಿವಾರದ ಒಳಗೆ ತಂದುಕೊಟ್ಟು ಅಡವಿಟ್ಟ ನಗಗಳನ್ನು ಸದರಿಯವರು ಬಿಡಿಸಿಕೊಂಡು ಹೋಗದೆ ಇದ್ದರೆ, ಸದರಿಯವರು ಈಡಾಗಿಟ್ಟ ನಗಗಳನ್ನು ಇದೇ 1934ನೇ ಇಸವಿ ಆಗೋಸ್ತು ತಿಂಗಳ ತಾರೀಕು 25ನೇ ಶನಿವಾರ ದಿವಸ ಮಧ್ಯಾಹ್ನ ಘಂಟೆ 2ಕ್ಕೆ ಸರಿಯಾಗಿ ಬೇಂಕಿನ ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡಲಾದೀತು.

	ಸಾಲದ ನಂಬ್ರ	ಸಾಲ ಪಡಕೊಂಡವರ ಹೆಸರು ಮತ್ತು ವಿಳಾಸ.	ಬೇಂಕಿಗೆ ಬರಬೇಕಾದ ಅಸಲು ರೂ
1	1187/33	ಶೂನ ಪೂಜಾರ, ಕಾಂತ ಪೂಜಾರಿ ಮಗ, ಬಜಪ್ಪೆ ಗ್ರಾಮ, ಜೇವು ಜಾದೆ ಮನೆ, ಪೋಸ್ಟು ಬಜಪ್ಪೆ	30
2	47/34	ಸಂಕಪ್ಪ ಬಾರಿ, ಪರಮೇಶ್ವರಿ ಬಾರಿಗಳ ಮಗ, ಸುರತ್ಕಲ್ ಪೇಟೆ, ಪೋಸ್ಟು ಸುರತ್ಕಲ್	16
3	101/34	ಡಿ ಡಿ ಡಿ ಡಿ	20
4	856/32	ಮಂಜಪ್ಪ ಪೂಜಾರಿ, ಸೋಮಯ್ಯನವರ ಮಗ, ಮಣ್ಣಗುಡ್ಡೆ, ಮಂಗಳೂರು	16
5	837/32	ಡಿ ಡಿ ಡಿ ಡಿ	15
6	469/32	ಕೆ. ರಾಮಚಂದ್ರ ನ್ಯಾಕ, ಪದ್ಮನಾಭ ನ್ಯಾಕರ ಮಗ, c/o ಕೆನರಾ ಬೇಂಕ್, ಮಂಗಳೂರು	15
7	1533/32	ಪಕೀರಪ್ಪ ಬೆಳ್ಚಾಡ, ಕಳ್ಳಮುಜಲು ಅಪ್ಪಯ್ಯ ಬೆಳ್ಚಾಡರ ಅಳಿಯ, ಬಾಳೆಪುಣಿ ಗ್ರಾಮ, ಪೋಸ್ಟು ಪಜೀರು	9
8	2072/32	ಡಿ ಡಿ ಡಿ ಡಿ ಡಿ	10
9	1215/32	ಶೇಕಬ್ಬಾರಿ, ಹಮ್ಮಬ್ಬಾರಿಗಳ ಮಗ, ಕೈರಂಗಳ ಗ್ರಾಮ, ಬಡಜೆ, ಪೋಸ್ಟು ಕಣಂಬೂರು	5
10	1614/32	ಅಬ್ದುಲ್ ಗಫೂರ್, ಅಬ್ದುಲ್ ಲತೀಫರ ಮಗ, ಜುಮ್ಮಾ ಮಸೀದಿ ಎದುರು, ಗೋಳಿಕಟ್ಟೆ ಬಜಾರ್, ಮಂಗಳೂರು	5
11	2373/33	ಕರಿಯ ಮುದಿವಾಳ, ಬೊಗ್ರ ಮುದಿವಾಳನ ಮಗ, ಉರ್ವ, ಆರ್. ಟಿ. ಕಂಪೆನಿ ಬಳಿ, ಮಂಗಳೂರು	20
12	1918/33	ಕಂಡಪ್ಪ, ಕರ್ತಪ್ಪನವರ ಮಗ – ಡ್ರೈವರ್, ಸಿ. ಪಿ. ಸಿ. ಕಂಪೆನಿ, ಡಿ	15
13	1326/33	ಸುಂದರ್ ಶೇಟ್, ಸುಬ್ರಾಯ ಶೇಟ್ರ ಮಗ, ಮಾರ್ಕೆಟು ರೋಡ್, ಸರಾಫ್, ಮಂಗಳೂರು	65
14	1051/33	ಡಿ ಡಿ ಡಿ ಡಿ	40

ಎ. ವಿ. ಪಿ. ಬೇಂಕ್,
ಮಂಗಳೂರು.
ತಾರೀಕು 8—8—'34

A. V. Prabhu,
ಪ್ರೊಪ್ರೈಟರ್.

ವಿವಿಧ ವಿಷಯ.

ಹಗ್ಗದ ಐಂದ್ರಜಾಲ—

...ವನ್ನು ಇಂಗ್ಲಾಂಡಿನಲ್ಲಿ ಇಬ್ಬರು ಫಕೀರರು ನಾಗರೀಕರ ಸಭೆಯ ಮುಂದೆ ಆಡಿತೋರಿಸಿದ್ದಾರೆಂದೇ ಪ್ರಕಟವಾಗಿದೆ, ನಂಬದಿರಲು ಸಾಧ್ಯವಿಲ್ಲ. ಹಿಂದೀಯರೊಬ್ಬರು ಲಂಡನಿನ ಐಂದ್ರಜಾಲ ಸಂಘದ ಪತ್ರಿಕೆಯಲ್ಲಿ, ನಡೆದುದೆಲ್ಲವನ್ನೂ ವಿವರಿಸಿದ್ದಾರೆ. ಹಗ್ಗವು ಸುಮಾರು ೧೫ ಅಡಿ ಎತ್ತರಕ್ಕೆ ನಿಲ್ಲಿಸಲ್ಪಟ್ಟಿತು, ಹುಡುಗನೊಬ್ಬನು ಅದನ್ನೇರಿ ಹೋಗಿ ಮಾಯವಾದನು, ಪುನಃ ಕೆಳಗಿಳಿದುಬಂದನು, ಪ್ರೇಕ್ಷಕರು ಬೆರಗಾಗಿರುವರು, ಫಕೀರರು ೫೦೦ ಪವನುಗಳ ಬಹುಮಾನವನ್ನು ಎತ್ತಿಬಿಟ್ಟರು! ಇದೇ ಆಟವನ್ನು ಬೊಂಬಾಯಿಯಲ್ಲಿ ಆಡಿತೋರಿಸುವವರಿಗೆ ೧೦ ಸಾವಿರ ರೂಪಾಯಿಗಳನ್ನು ಕೊಡುವೆನೆಂದು ಬೊಂಬಾಯಿಯ "ಟೈಮ್ಸ್ ಆಫ್ ಇಂಡಿಯಾ" ಪತ್ರಿಕೆ ಪ್ರಕಟಿಸಿದೆಯಂತೆ

ಆನೆಯು ಮನುಷ್ಯನಾದುದು!

ಅದ್ಭುತಕತೆಯಲ್ಲ ನಿಜವಾಗಿಯೂ ನಡೆದುದೇ ಎಂದು, ಶ್ರೀ ಎ. ಎ. ನಾರಾಯಣ ಎಂಬವರು "ರೋಯ್ಸ್ ವೀಕ್ಲಿ" ಪತ್ರಿಕೆಯಲ್ಲಿ ಬರೆಯುತ್ತಾರೆ. ನಾರಾಯಣರವರ ತಂದೆಯವರು ಅದನ್ನು ಹೇಳಿದರು ಅವರು ಈಗಲೂ ಜೀವಿಸಿದ್ದಾರೆ ಅವರೊಮ್ಮೆ ಕೊಚ್ಚಿ ಸಂಸ್ಥಾನದ ನೆಲ್ಲುವಾಯಿ ಎಂಬ ಹಳ್ಳಿಯಲ್ಲಿದ್ದರು. ಒಂದು ದಿನ ತಮ್ಮ ಸ್ನೇಹಿತರಾದ ನಂಬಿಯಾರರೊಬ್ಬರ ಜತೆಯಲ್ಲಿ ಹೋಗುವಾಗ, ಇಕ್ಕಟ್ಟಾದ ನಿರ್ಜನಪಥವೊಂದರಲ್ಲಿ ಅವರಿಗೊಂದು ಆನೆ ಕಾಣಸಿಕ್ಕಿತು. ಅದಕ್ಕೆ ಒಂದೇ ದಂತ, ಏಕದಂತದ ಆನೆಗಳಿಗೆ ತುಂಟತನ ಹೆಚ್ಚಂತೆ ನಾರಾಯಣರವರ ತಂದೆಯವರು ಭಯದಿಂದ ನಡುಗಿದರು ನಂಬಿಯಾರರು ಮಾತ್ರ ಮುಂದೆ ಹೋಗಿ ಆ ಆನೆಯನ್ನೊಮ್ಮೆ ದೃಷ್ಟಿಸಿದರು ಆನೆಯು ಓಡಲಾರಂಭಿಸಿತು "ನಿಲ್ಲು!" ಎಂದು ಗದರಿಸಿದರು ನಂಬಿಯಾರರು ಆನೆ ನಿಂತಿತು ನಂಬಿಯಾರರು ಅದನ್ನೇರಿ ಕುಳಿತು ಸವಾರಿಮಾಡಿದರು ನಂಬಿಯಾರರ ಕೈಯಲ್ಲೊಂದು ಬೆತ್ತ ಅದರಿಂದ ಆನೆಗೆ ಬಿಸ್ಕಾಗಿ ಹೊಡೆಯುತ್ತಲೇ ಇದ್ದರು ಥಕ್ಕನೆ ಆನೆಯು ಮಾಯವಾಯಿತು ನಂಬಿಯಾರರು ಒಬ್ಬ ಮನುಷ್ಯನ ಹೆಗಲ ಮೇಲೆ ಕುಳಿತಿದ್ದರು! ಅತನು "ದಮ್ಮಯ್ಯ, ಬಿಟ್ಟುಬಿಡಿ!" ಎಂದು ಬೇಡಿಕೊಳ್ಳುತ್ತಿದ್ದನು! ನಂಬಿಯಾರರು ಕೊನೆಗೆ ಅತನಿಗೆ ಎಚ್ಚರಿಕೆಕೊಟ್ಟು ಬಿಟ್ಟುಬಿಟ್ಟರು 'ಒಡಿಯ' ಎಂಬ ಪಂಗಡದವರು ತಮ್ಮ ಪಂಗಡಕ್ಕೆ ತಿಳಿದ ಅದೊಂದು ವಿದ್ಯೆಯಿಂದ ಬೇಕಾದ ಮಾಯಾ ದೇಹಗಳನ್ನು ಧರಿಸುವರಂತೆ ಈ ಆನೆಯೂ ಅಂತಹ ಒಬ್ಬ 'ಒಡಿಯ'ನಂತೆ ಅತನು ಒಬ್ಬ ರಾಜನನ್ನು ಹೆದರಿಸಲೆಂದು ಬಂದಿದ್ದನಂತೆ ಹಗ್ಗದ ಐಂದ್ರಜಾಲದಂತೆ ಈ ವಿದ್ಯೆ ಕೂಡ ಮಾಯವಾಗುತ್ತಿದ್ದು, ಇನ್ನು ಮುಂದಿನವರು ಕೇಳಿ ನಗುವುದಕ್ಕೆ 'ಅದ್ಭುತಕಥೆ'ಯಾಗಿಯೇ ಉಳಿವುದು—ಎಂದು ನಾರಾಯಣರವರು ಬರೆಯುತ್ತಾರೆ

ನಾಗಜ್ಜನಿಗೇನ್ನು ಹುಚ್ಚು'

...ಪುರ ಎಂಬಲ್ಲಿಯ ವಾರ್ತೆ — ಬಾಬು ಶಿವನಾಥ ಭಟ್ಟಾಚಾರ್ಜಿ ಎಂಬವರೊಬ್ಬ ಗೃಹಸ್ಥರು ಅವರ ಹೆಂಡತಿ ೯ ವರ್ಷ ಪ್ರಾಯದ ಒಬ್ಬ ಮಗಳು ಇಬ್ಬರು ಚಿಕ್ಕ ಹುಡುಗರು ಒಂದೇ ಕೋಣೆಯಲ್ಲಿ ಮಲಗಿದ್ದರು, ದೀಪ ಉರಿಯುತ್ತಿತ್ತು, ಒಂದು ನಾಗರ ಹಾವು ಬಂದು ಅಕೆಯ ಮೈಮೇಲೇರಿತು ಅಕೆ ಕದಲದೆ ತಾಯಿಯನ್ನೆಬ್ಬಿಸಿದಳು, ಹಾವು ಮೆಲ್ಲನೆ ಆ ಹುಡುಗರ ಮೈಮೇಲಿಂದ (ಅವರು ನಿದ್ರಿಸುತ್ತಿದ್ದರು) ಹಾದು ಹೋಗಿ, ಪುನಹ ಆ ಹುಡುಗಿಯ ಬಳಿಗೆ ಬಂದು, ಅಕೆಗೊಂದು ಮುದ್ದಿಟ್ಟು, ಹೋಯಿತಂತೆ

ಅಮಲೇರಿದವರಿಗೆ ಅದು!—

ಅದೊಂದು ಚಿಕ್ಕ ಯಂತ್ರ, "ಅಲ್ಕೊಹೊಲೋಮೀಟರ್" ಎಂದು ಹೆಸರು ರಷ್ಯದ ಪೋಲೀಸರು ಅದನ್ನುಪಯೋಗಿಸುತ್ತಿದ್ದಾರೆ. ಯಾರಾದರೂ ಸುರಾಪಾನ ಮಾಡಿರುವರಾದರೆ ಈ ಯಂತ್ರವನ್ನು ಅವನ ಮೂಗಿನ ಮುಂದೆ ಹಿಡಿದು, ಒಂದು ಗಾಜಿನ ನಳಿಗೆಯ ಮೂಲಕ ೧೫ ಸೆಕುಂದು ಗಾಳಿಯೂದು ಎಂದರೆ—ಅದರೊಳಗಿನ ವರ್ಣವಿಹೀನ ದ್ರಾವಕವೊಂದರಿಂದ, ಅವನು ಪಾನ ಮಾಡಿರುವನೋ ಇಲ್ಲವೋ ಎಂಬುದು ತಿಳಿಯುವುದು ಪಾನಮಾಡಿರುವನಾದರೆ ನಳಿಗೆಯೊಳಗಿನ ದ್ರಾವಕವು ನಸುಕೆಂಪಗಾಗಿ ಮಾರ್ಪಡುವುದು

ಪ್ರಚಲಿತಸಮಾಚಾರ.

ಕುಮಾರಿ ಮೇಯೋ ಅಮ್ಮಣ್ಣಿಯು—

— ಹಿಂದೂದೇಶದ ಸಂಚಾರಕ್ಕೆ ಮತ್ತೊಮ್ಮೆ ಬರುವಳಂತೆ! ಆಕೆಯ 'ಮದರ್ ಇಂಡಿಯಾ' ಮತ್ತು 'ದೇವದಾಸಿಯರು' ಎಂಬ ಪುಸ್ತಕಗಳ ನಂತರ ಮತ್ತೊಂದು ಗ್ರಂಥವನ್ನು ಬರೆಯುವ ಆಸೆಯಾಗಿರಬಹುದು. ಅಮೇರಿಕಾನರಿಗೆ ಯಾವುದಾದರೊಂದು ನವೀನತೆ ಆಗಾಗ ಬೇಕು ಹಿಂದೂದೇಶದವರ ವಿಷಯವೆಂದರೆ ಗಿರಾಕಿಗಳಿಗೆ ಕಡಿಮೆಯಿಲ್ಲ, ಅಂತಹ ಅನುಕೂಲ ದೇಶದಲ್ಲಿ ಬೆಳೆದ ಮೇಯೋಳಿಗೆ ಈಗ ಒಂದು ಚಿಕ್ಕ ಪ್ರಯಾಣವನ್ನು ಕೈಕೊಳ್ಳಬೇಕಾಗಿದೆ, ನಮ್ಮ ಸರಕಾರದ ಪರವಾ! ಸಹಾಯ ದೊರೆಯಬಹುದುದೇ? ಎಷ್ಟು? ಎಂದು ಜನರು ಕುತೂಹಲದಿಂದ ನೋಡುತ್ತಿರುವರು.

ಗಾಂಧಿಜಿಯವರ 'ಎರೆಸ್ಟ್!'

ಗಾಬರಿಯಾಗದಿರಿ— ಕಾಶಿಯ ಸನಾತನಿಗಳು ಗಾಂಧಿಯವರನ್ನು ಎರೆಸ್ಟ್ ಮಾಡಲು ಹೋದರು "ಸನಾತನ ಧರ್ಮ ಸೈನ್ಯದ" ಪರವಾಗಿ 'ಇನ್ಸಪೆಕ್ಟರ್' ಮುಖಿಯಾಮ ಶರ್ಮರು 'ಎರೆಸ್ಟ್ ವಾರಂಟು' ಹಿಡಿದು ಕಾಶಿ ವಿದ್ಯಾಪೀಠಕ್ಕೆ ಹೋದರು ವಾರಂಟ"ನ್ನು ಗಾಂಧಿಜಿಯವರಿಗೆ ಕೊಟ್ಟರು. ಸರದಾರ ಪಟೇಲರೇ ಮೊದಲಾದವರೂ ಅಲ್ಲಿದ್ದರು ಆಗೋಸ್ತು ತಾ ೩ರ ತನಕ ಈ 'ವಾರಂಟು'ನ ವಿಷಯ ಆಲೋಚಿಸಲು ಸಮಯಕೊಡಿರೆಂದು ಗಾಂಧಿಜಿಯವರು ಕೇಳಿದರು ಶರ್ಮರು ಒಪ್ಪಲಿಲ್ಲ ಗಾಂಧಿಜಿಯವರು "ಇದು ಅನ್ಯಾಯ"ವೆಂದು ವಾರಂಟಿನ ಮೇಲೆ ಬರೆದು ಕೊಟ್ಟು, ತಾನು ಕೈದಿಗೆ ಒಳಗಾಗುವುದಿಲ್ಲವೆಂದರು

ಚಿತ್ರವನ್ನೇ ಸುಟ್ಟುಬಿಟ್ಟರಲ್ಲ!

ಎಂತಹ ಪರಾಕ್ರಮ! ಆ ಶರ್ಮರದು! ಗಾಂಧಿಜಿಯವರು ಕೈದಿಗೆ ಒಳಗಾಗುವುದಿಲ್ಲವೆಂಬುದನ್ನು ಕೇಳಿ ಶರ್ಮರು ಗಾಂಧಿಜಿಯವರ ಒಂದು ಭಾವಚಿತ್ರವನ್ನು ೫ ಗಂಟೆಗಳ ಕಾಲ ತಲೆಕೆಳಗಾಗಿ ತೂಗಹಾಕಿ ಅನೇಕ ಜನರ ಮುಂದೆ ಸುಟ್ಟು ಹಾಕಿದರು. ಆ ನಂತರ

'ಕಾಂಭ್ವೈಗನವು ನಿಮ್ಮನ್ನು ದಂಡಿಸುವನು'!

"ಶಿವನು ನಿಮ್ಮನ್ನು ದಂಡಿಸುವನು!" ಎಂದು ತಮ್ಮ ಭಾಷಣದಲ್ಲಿ ಹೇಳಿದರು ಅವರೇ ಶರ್ಮರು. ಗಾಂಧಿಜಿಯವರು ಧರ್ಮದ್ರೋಹಿಯಾದುದರಿಂದ ಅವರಿಗೆ ಈ ಶಿಕ್ಷೆಯಂತೆ

ಆಂಧ್ರ ದೇಶದಲ್ಲಿ—

ಕಳೆದ ವಾರ ಬೀಸಿದ ಬಿರುಗಾಳಿಯಿಂದ ಕೆರೆ ಬಾವಿ ನದಿಗಳೆಲ್ಲಾ ತುಂಬಿ, ಉಕ್ಕಿ ಹರಿದು ಬಹು ನಷ್ಟವನ್ನುಂಟುಮಾಡಿ, ಚಿಕ್ಕ ಗುಡಿಸಲುಗಳನ್ನು ಕೆಡಹಿತ್ತಿದೆ

ಹೆಂಡತಿಗೆ ದುಲ್ಬಾತೆ ನೀಡಿಸಿದನಯ್ಯ!

ಏನು ವಿಚಿತ್ರ ಮನುಷ್ಯರಿವರು—ಬಿಳಿಯ 'ದೊರೆ'ಗಳು! ಕೇಂಬ್ರಿಜಿನ ಮೈಗ್ನೆಸ್ ಬಾಲ್ಸ್- ಹೊಡ್ಸನ್ ಎಂಬ ಸೊಲಿಸಿಟರನು ತನ್ನ ಆಫೀಸಿನ ಹೊರಗೆ ಇಟ್ಟು ಹೋದ ಮೋಟಾರನ್ನು ಗಂಡನೊಡನೆ ಕೇಳದೆ ಅತನ ಹೆಂಡತಿ ಸವಾರಿಗೊಯ್ದಳಂತೆ ಅಕೆಯ ಮೇಲೊಂದು ಮೊಕದ್ದಮೆ ಗಂಡನದು!—ಎರಡು ಪವನು ದಂಡ ವಿಧಿಸಲಾಯಿತು, ಗಂಡ ಹೆಂಡಿರೇನೂ ದಾಂಪತ್ಯಬಿಟ್ಟೇದ ಮಾಡಿಕೊಂಡವರಲ್ಲ; ಅನ್ಯೋನ್ಯದಿಂದ ಒಂದೇ ಮನೆಯಲ್ಲಿರುವವರು! ದೀಯುವರು ಕೋರ್ಟಿನ ಪ್ರಯೋಜನವನ್ನು ಇಷ್ಟಕ್ಕೂ ಪಡೆಯುವವರು!

ಮಧ್ಯಪ್ರಾಂತ್ಯದಲ್ಲಿ ಪ್ರಾಂತಿಭೇದಿ

ಎಂತಹ ಅನಾಹುತ ಮಾಡಿಬಿಟ್ಟಿದೆ—ಐದೇ ವಾರಗಳಲ್ಲಿ ೫೫೫೮ ಮರಣಗಳು! ಈ ನಡುವೆ ಸಿಡುಬೂ ಇದೆಯಂತೆ, ನಾಗಪುರದಲ್ಲಿ ೧೧೮ ಮಂದಿ ಬಲಿಯಾದರು— ಐದೇ ವಾರಗಳಲ್ಲಿ! ಈಗ ಶಾಂತವಾಗುತ್ತಾ ಬರುತ್ತಿದೆಯಾಗಿ ಆರೋಗ್ಯ ಶಾಖೆಯವರು ಸಮಾಧಾನ ಹೇಳುತ್ತಿದ್ದಾರೆ.

ಮಹಾತ್ಮಾಜಿಯವರ ಹರಿಜನಯಾತ್ರೆ—

ಮುಗಿಯಿತು, ಇನ್ನೂ ಅವರಿಗೆ ವಿಶ್ರಾಂತಿಯನ್ನು ಪಡೆಕ್ಕಿಲ್ಲ. ಈಗ ಒಂದು ವಾರದ ನಿಶ್ಚಿತ ಉಪವಾಸವನ್ನು ಮಾಡಿ, ಉಪವಾಸಾನಂತರ ಅವಶ್ಯವಿರುವಷ್ಟು ವಿಶ್ರಾಂತಿಯನ್ನು ಪಡೆದರೆನ್ನುವ ಆ ಮೇಲೆ ಪುನಃ ಕಾರ್ಯಾರಂಭ ಮಾಡುವರು ಅದೇನೆಂದು ಮಾತ್ರ ಇನ್ನೂ ನಿಶ್ಚಯವಾಗಿ ಪ್ರಕಟವಾಗಿಲ್ಲ. ಹರಿಜನ ಕಾರ್ಯಕ್ಕೆಂದು ಅವರು ಹಿಂದೂದೇಶದ ಎಲ್ಲಾ ಭಾಗಗಳಲ್ಲಿ ಒಟ್ಟುಗೂಡಿಸಿದ ನಿಧಿಯ ಮೊತ್ತ ರೂ ೮ ಲಕ್ಷಕ್ಕೆ ಮುಕ್ಕಿದೆ, (ಸಂಯುಕ್ತ ಪ್ರಾಂತದಲ್ಲಿ ರೂ ೫೭ ಸಾವಿರ ಮತ್ತು ಕಾಶಿಯಲ್ಲಿ ರೂ ೧೦ ಸಾವಿರ ಜಮೆಯಾಗಿದೆ) ಇವರ ಹರಿಜನ ಸಂಚಾರವು ಮುಗಿದ ನೆನಪಿಗಾಗಿ ಅಖಿಲ ಭಾರತ ಹರಿಜನ ದಿನಾಚರಣೆಯು ದೇಶದಲ್ಲೆಲ್ಲ ನಡೆಯಿತು.

ಉಪವಾಸದ ಮುಂಚಿತವಾಗಿ—

ಗಾಂಧಿಜಿಯವರನ್ನು ವೈದ್ಯರು ಪರೀಕ್ಷಿಸಿದರು ಆರೋಗ್ಯವು ನೆಟ್ಟಗಿದ್ದಂತೆ ಕಂಡುಬರಲಿಲ್ಲ ಅವರ ದೈಹಿಕ ಭಾರವೀಗ ೧೦೦ ರಾತ್ತಲುಗಳಷ್ಟು ಮಾತ್ರ ಇದೆ ಕೆಲಕಾಲದ ಹಿಂದೆ ೧೧೦ ರಾತ್ತಲುಗಳಿದ್ದರು, ಕಾರ್ಯದ ಭಾರವೂ ಕೊಂಚವಿದ್ದಂತೆ ಮಾಡಿಯಿದೆ ಹಾಗಿದ್ದರೂ ಅವರ ಉಪವಾಸವು ನಿಶ್ಚಿತ ದಿನದಲ್ಲಿ ಆರಂಭವಾಗುವುದು

ತಾಳೆಮರದ ಸಕ್ಕರೆ

ಇಂಪೀರಿಯಲ್ ದಿಪಾರ್ಟಮೆಂಟಿನವರಿಗೆ— ತಾಳೆಮರದ ರಸದಿಂದ ಸಕ್ಕರೆ ತಯಾರಿಸುವುದನ್ನು ಪ್ರದರ್ಶಿಸಲು— ಸರಕಾರದವರು ಅಪ್ಪಣೆ ಕೊಟ್ಟಿರುವರು. ಇದರ ಪರೀಕ್ಷೆಯು ತಿನ್ನವೆಲ್ಲಿ ಜಿಲ್ಲೆಯಲ್ಲಿ ನಡೆಯುವುದು ಒಬ್ಬ ಪರಿಣಿತರಾದವರು ದಿನಕ್ಕೆ ೩ ಸಾವಿರ ರಾತ್ತಲು ರಸವನ್ನೊದಗಿಸ ಬಹುದೆಂದು ಮಾತುಕೊಟ್ಟಿದ್ದಾರೆ ತಿನ್ನವೆಲ್ಲಿ ಜಿಲ್ಲೆಯಲ್ಲಿ ಒಂದು ಕೋಟಿ ತಾಳೆಮರಗಳಿವೆಯಂತೆ

ಮನುಷ್ಯನಲ್ಲ, ಭೂತವೂ ಅಲ್ಲ, ಮತ್ತೇನು?

—ಅಮೇರಿಕಾ ಪ್ರಶ್ನೆಯು ಲಿಂಕನ್‌ಶಾಯರಿನ 'ಸೌತ್ ರೆಸ್ಟನ್ ಹೋಲ್' ಎಂಬ ೪ ಶತಮಾನಗಳ ಹಿಂದಿನ ಒಂದು ಮನೆಯಲ್ಲಿನ ವಿಚಿತ್ರ ಘಟನೆಗಳಿಂದ ಜನರಲ್ಲುಂಟಾಗಿ, ಇನ್ನೂ ರಹಸ್ಯವಾಗಿಯೇ ಉಳಿದಿದೆ. ಮನೆಯೆಲ್ಲವನ್ನೂ ಭದ್ರವಾಗಿ ಮುಚ್ಚಿದರೂ, ಯಾರೋ ಮಾಡಿನ ಸಿಲಿಂಗಿಗೆ ತೂತು ಮಾಡಿ ಕೋಣೆಗೆ ಹಾರುವರು! ಸಿಕ್ಕಿದ ತಿಂಡಿ ತಿನ್ನುವರು, ಹಾಸಿಗೆಯಲ್ಲಿ ಮಲಗುವರು! ಎಲ್ಲಾ ಕೋಣೆಗಳಲ್ಲೂ, ಬಲಾತ್ಕಾರದಿಂದಾದರೂ ಬಾಗಿಲು ತೆರೆದು ಸಂಚರಿಸುವರು ಒಬ್ಬ ಹುಡುಗಿ ಮಾತ್ರ ಒಂದು ದಿನ ನೋಡಿದ್ದಳಂತೆ 'ಉದ್ದ ಮೂತಿ ರೋಮವುಳ್ಳ ಬಾಲ!' ಎಂದು ವಿವರಿಸಿದಳು, ಕಪಿಯಾಗಿರಬಹುದೇ ಎಂಬೊಂದು ಸಂದೇಹ ಹುಟ್ಟಿತು.

ತುಂಡು ಸುದ್ದಿ.

ಮದರಾಸಿನ ಕೌನ್ಸಿಲ್ ಗೃಹದಲ್ಲಿ, ಗವರ್ನರರಾಗಿದ್ದ ಸರ್ ಎಂ. ಉಸ್ಮಾನರವರ ಭಾವಚಿತ್ರದ ಅನಾವರಣವಾಯಿತು,

ಆಸ್ಸಾಮಿನಲ್ಲಿ ಬಲವಾದ ಮಳೆಯಾಗುತ್ತಲೇ ಇದೆ,

ಬೊಂಬಾಯಿಯನ್ನು ಹಿಂದೂದೇಶದ ಕೇಂದ್ರ ವಿಮಾನ ನಿಲ್ದಾಣವನ್ನಾಗಿ ಮಾಡಬೇಕೆಂಬ ಕೇಳಿಕೆಯನ್ನು ಬೊಂಬಾಯಿ ಕೋರ್ಪರೇಶನಿನವರು ಸರಕಾರದ ಮುಂದಿರಿಸಲಿರುವರು,

ಇಟೇಲಿಯು ಒಂದು ಹೊಸ ಯುದ್ಧನಾವೆಯನ್ನು ಸಮುದ್ರಕ್ಕಿಳಿಸಿತು,

ದಿ| ಸೇನಗುಪ್ತರ ಪತ್ನಿಯವರು ಮದರಾಸಿಗೆ ಸಂದರ್ಶನವಿತ್ತರು, ಅಲ್ಲಿಂದ ಸೇಲಮಿಗೆ ಮುಂದರಿದಿರುವರು

ರಾಮನಾಡ್ ಜಿಲ್ಲೆಯ ಉಪ್ಪತ್ತೂರ್ ಗ್ರಾಮದ ಕಳಿಯಾರಿಗಳ ಮನೆಯಲ್ಲಿ ಒಂದು ಬಾಂಬು ಸ್ಫೋಟನಗೊಂಡಿತೆಂದೂ, ಕಳಿಯಾರಿಯ ಸಹೋದರನೊಬ್ಬನು ಜಖಂಗೊಂಡು ಮರಣೋನ್ಮುಖನಾಗಿರುವನೆಂದೂ ಸುದ್ದಿ.

ಶ್ರೀಮತಿ ಕಸ್ತೂರಿಬಾಯಿ ಗಾಂಧಿಯವರಿಗೆ ಪ್ರಾಂತಿಭೇದಿಯು ತಲೆದೋರಿ—ಈಗ ಗುಣಮುಖರಾಗಿರುವರು,

ಪಂಜಾಬ ಕೌನ್ಸಿಲಿನ ಅವಧಿಯೂ ಒಂದು ವರ್ಷಕ್ಕೆ ಮುಂದುವರಿಸಲ್ಪಟ್ಟಿತು.

ತಾತ್ಕಾಲಿಕವಾಗಿ ಅಖಿಲ ಭಾರತ ಕಾಂಗ್ರೆಸ್ ಕಮಿಟಿ ಕಚೇರಿಯು ಬೊಂಬಾಯಿಯಲ್ಲಿ ತೆರೆಯಲ್ಪಡುವುದು.

ಬಾರ್ದೋಲಿ ಕಾಂಗ್ರೆಸ್ ಕೆಲಸಗಾರರು ಸರದಾರ ವಲ್ಲಭಬಾಯಿಯವರನ್ನು ಬೊಂಬಾಯಿಯಲ್ಲಿ ಕಂಡು, ಬಾರ್ದೋಲಿಯ ದುಸ್ಥಿತಿಯನ್ನು ನಿವೇದಿಸಿಕೊಂಡರು,

ಸಿಲೋನಿಗೆ ಆಮದಾಗುವ ಹತ್ತಿಯ ನೂಲಿನ ಮೇಲಿದ್ದ ನೇಕಡಾ ೫ರ ಕರವು ತೆಗೆದುಹಾಕಲ್ಪಟ್ಟಿದೆ.

ಗಂಜಾಮದಲ್ಲಿ ಕೊಲರಾ ರೋಗವು ತಲೆದೋರಿ ಕಳೆದ ತಾ ೩ಕ್ಕೆ ಅಂತ್ಯವಾಗುವ ಒಂದು ವಾರದಲ್ಲಿ ೩೬೧ ಮರಣಗಳಾಗಿವೆ, ಶಾಲೆಗಳು ಮುಚ್ಚಲಾಗಿವೆ,

ಸರದಾರ್ ವಲ್ಲಭಭಾಯಿಯವರ ಮೂಗಿನ ಮೇಲೆ ಶಸ್ತ್ರಕ್ರಿಯೆ ನಡೆಯಿತಾದರೂ ಇನ್ನೂ ಉಪಶಮನ ಹೊಂದಲಿಲ್ಲ ಡಾ| ಶರ್ಮರವರು ಮತ್ತೊಮ್ಮೆ ಪರೀಕ್ಷಿಸಲಿದ್ದಾರೆ

ಬೆಂಗಳೂರಿನ ಬಾಲವೀರ ದಳದ (ಬೋಯ್ ಸ್ಕಾಟ್) ಸಂಘದ ವಾರ್ಷಿಕ ಸಮ್ಮೇಳನವು ಇದೇ ತಾ ೪ರಲ್ಲಿ ಜರಗಿತು. ೭೫೦ ಬಾಲವೀರರು ಭಾಗವಹಿಸಿದ್ದರು,

ದಕ್ಷಿಣ ಮಲಬಾರಿನ ರಾಮನ್ ಎಮುಕ್ತುಚನ್ ಎಂಬ ಯುವಕನು ಹಿಂದೂದೇಶವನ್ನು ಪಾದಚಾರಿಯಾಗಿ ಸುತ್ತಿಬರಲು ಹೊರಟಿರುವನು

ಬೇಟೆನಾಯಿಗಳನ್ನು ತಂದು ಎಲ್ಲ ಕೋಣೆಗಳನ್ನೂ, ಮನೆ ಮಾಡನ್ನೂ (ಹಂಚು ತೆಗೆದು) ಹುಡುಕಿದರು, ಬೇಟೆನಾಯಿ ಎಲ್ಲೋ ಏನೋ ವಾಸನೆ ಕಂಡು ಬೊಗಳಿತು ಅದಕ್ಕೆ ಈ ಗೂಢಪ್ರಾಣಿ ಸಿಕ್ಕಿದುದಿಲ್ಲ ಸಶಸ್ತ್ರ ಮನುಷ್ಯರು ಆ ಮನೆಯ ಕಾವಲು ಮಾಡುತ್ತಿದ್ದಾರೆ.

1876ನೇ ಇಸವಿಯಿಂದಲೂ ಪ್ರಸಿದ್ಧಿ ಹೊಂದಿದ

ಎಮ್. ಗಣಪಯ್ಯ ಎಂಡ್ ಸನ್ಸ್, ಮಂಗಳೂರು.

ಇವರ ಶಾಸ್ತ್ರೀಯ ಮತ್ತು ಅನುಭವಸಿದ್ಧ ಔಷಧಗಳು.

ಮಹಾ ಮದನಕಾಮೇಶ್ವರಿ ಲೇಹ:—ಆಯುರ್ವೇದ ಶಾಸ್ತ್ರದಲ್ಲಿ ಅತಿ ಪ್ರಾಮುಖ್ಯತೆಯನ್ನು ಪಡೆದ ಔಷಧಿ. ನರಗಳ ಮತ್ತು ಜನನೇಂದ್ರಿಯದ ... ಶಕ್ತಿಹೀನತೆ ಎದೆನೋವು, ಮಲಬದ್ಧತೆ ಅಜೀರ್ಣ, ಅರುಚಿ, ಅಗ್ನಿಮಾಂದ್ಯ, ವಾಯು ಉಪದ್ರ ಮೊದಲಾದುವುಗಳನ್ನು ಹೋಗಲಾಡಿಸಿ ಮಾನಸಿಕ ಶಕ್ತಿಯನ್ನು ಹೆಚ್ಚಿಸುವುದು. ರಕ್ತವೃದ್ಧಿಯನ್ನೂ ವೀರ್ಯ ವೃದ್ಧಿಯನ್ನೂ ಉಂಟುಮಾಡಿ ದೇಹಕ್ಕೆ ಸಂಪೂರ್ಣ ಆರೋಗ್ಯವನ್ನು ಉಂಟುಮಾಡುವುದು. ವಿದ್ಯಾರ್ಥಿಗಳೂ, ಶ್ರಮಜೀವಿಗಳೂ ಇದನ್ನು ಪ್ರತಿನಿತ್ಯ ಸೇವಿಸುವಲ್ಲಿ ಶ್ರಮ ಪರಿಹಾರವಾಗಿ ಸುಖನಿದ್ರೆಯು ಲಭಿಸುವುದು,

ಬಾಟ್ಲಿ 1ರ ರೂ. 2-0-0. ಬಾಟ್ಲಿ 3ರ ರೂ. 5-12-0.

ಮೇಹ ಕುಠಾರ:—ಪ್ರಮೇಹ, ಮೂತ್ರಕೃಚ್ಛ್ರ, ಮೂತ್ರ ಹೋಗದಿರುವಿಕೆ, ಮೂತ್ರ ಹೋಗುವಾಗ ಉರಿ, ಮೂತ್ರದ್ವಾರದಿಂದ ಕೀವು ಬರುವುದು, ಮೂತ್ರದಿಂದ ಧಾತು ಹೋಗುವುದು, ಮೂತ್ರ ಆಗಾಗ ಒಂದು ಕಡಿಯಲಿಕ್ಕೆ ಸಾಧ್ಯವಿಲ್ಲದಿರುವುದು ಇವೇ ಮೊದಲಾದ ಹಲವು ಮೂತ್ರಕೋಶದ ರೋಗಗಳಿಗೆ ಸಿದ್ಧೌಷಧ,

ಡಬ್ಬಿ 1ಕ್ಕೆ ರೂ. 2 8-0. ಡಬ್ಬಿ 3ರ ರೂ. 7-0-0.

ಕಸ್ತೂರಿ ಮಿಶ್ರಿತ ದಶಮೂಲಾರಿಷ್ಟ—ಇದು ಬಾಣಂತಿಯರಿಗೆ ಅತ್ಯದ್ಭುತಕರವಾದ ಶಕ್ತಿವರ್ಧಕ ರಸಾಯನವಾಗಿರುತ್ತದೆ. ಪ್ರಸವಿಸಿದ ನಂತರ ಆವರ ಪ್ರಸವದ ಆಯಾಸವನ್ನು ಹೋಗಲಾಡಿಸಿ ಗರ್ಭಕೋಶದ ವೇದನೆಗಳನ್ನು ಸಮಾಧಾನಪಡಿಸುವುದು, ಗರ್ಭಕೋಶದಲ್ಲಿ ಕೆಡುಕು ರಕ್ತವು ನಿಲ್ಲದಂತೆ ಮಾಡಿ, ಅಗ್ನಿಮಾಂದ್ಯ ಅರುಚಿ, ನಂಜಿನ ಜ್ವರ, ರಕ್ತಹೀನತೆ ನಿದ್ರಾಭಂಗ ಮೊದಲಾದುವುಗಳನ್ನು ಹೋಗಲಾಡಿಸಿ, ದೇಹವನ್ನು ಶಕ್ತಿವಂತವೂ ಆರೋಗ್ಯವಂತವೂ ಮಾಡುವುದು, ಬಾಣಂತಿಯರು ಪುಷ್ಟಿಹೊಂದಿ, ಶಿಶುವಿಗೂ ಧಾರಾಳವಾಗಿ ಹಾಲು ಸಿಕ್ಕುವಂತೆ ಮಾಡುವುದು,

ಬಾಟ್ಲಿ 1ಕ್ಕೆ ರೂ. 1-8-0. ಬಾಟ್ಲಿ 2ರ ರೂ. 3-0-0.

ನೋಟೀಸು.

ಕುಂದಾಪುರ ಡಿಸ್ಟ್ರಿಕ್ಟ್ ಮುನ್ಸೀಫ್ ಕೋರ್ಟಿನಲ್ಲಿ.

O. P. No. 70/1934.

ಭಾಗೀರಥಿ ಅಮ್ಮ, ಶ್ರೀನಿವಾಸ ಪ್ರಭುಗಳ ವಿಧವೆ, ಕುಂದಾಪುರ ತಾಲ್ಲೂಕು ಉಪ್ಪುಂದ ಗ್ರಾಮ—ಅರ್ಜಿದಾರಳು.

ಮತ್ತು

ರಾಮ ಪ್ರಭು, ಸುಬ್ರಾಯ ಪ್ರಭು ಮುಂ—ಎದ್ರಿ.

ಸದರಿ ಎದ್ರಿಗೆ ವ ಯಾವತ್ತು ಜನರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ:—

ಅರ್ಜಿದಾರಳ ಗಂಡ ಮೃತ ಶ್ರೀನಿವಾಸ ಪ್ರಭುವು ದಿ ಪೊಪ್ಯುಲರ್ ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್., ಮಂಗಳೂರು, ಇದರಲ್ಲಿ ರೂ. 1000ಕ್ಕೆ ಲೈಫ್ ಇನ್ಶೂರೆನ್ಸ್‌ಗೆ ಸೇರಿರುವ ದಾಗಿಯೂ, ಅವನು ತಾ. 6-4-'34ರಲ್ಲು ಮೃತಪಟ್ಟಿರುವದರಿಂದ ಸದ್ರಿ ಪೊಲಿಸಿಯ ಹಣವನ್ನೂ ಪಡೆಯುವರೆ ಅವನ ಮಕ್ಕಳ ಗಾರ್ಡಿಯನಳಾದ ಅರ್ಜಿದಾರಳು ಅರ್ಹಳೆಂತಲೂ, ಈ ಕುರಿತು ತನಗೆ ವಾರೀಸು ಸರ್ಟಿಫಿಕೇಟು ಕೊಡಿಸಬೇಕಾಗಿಯೂ, ವಗೈರೆ ಅರ್ಜಿದಾರಳು ಮೇಲ್ಕಂಡ ಅರ್ಜಿ ದಾಖಲು ಮಾಡಿರುತ್ತಾಳೆ. ಈ ಕುರಿತು ಯಾರದ್ದಾದರೂ ಆಕ್ಷೇಪಯಿರುವದಾದರೆ ತಾ. 16-8-'34ನೇ ದಿವಸ ಹಗಲು 11 ಘಂಟೆಗೆ ಮೇಲ್ಕಂಡ ಕೋರ್ಟಿನಲ್ಲಿ ಹ್ಯಾಜರು ಮಾಡಿಕೊಳ್ಳತಕ್ಕದ್ದೆಂಬ ಸಂಗ್ತಿಯನ್ನು ಈ ಮೂಲಕ ತಿಳಿಯಪಡಿಸಿಯದೆ.

Kundapur, } (*Sd.*) A. V. N. Hebbar,
2—8—1934. } *Pleader for Petitioner.*

WANTED.

Honest, intelligent and hard-working clerks for our Shedimane and Mudur Branches. Also 2 Lorry Drivers. Apply to,

The Lakshmi Forest Co., Ltd.,
Mangalore or Coondapoor.

Stock Taking Sale.

The Lakshmi Forest Co., Ltd., Bunder, Mangalore are selling timber and firewood very cheap to reduce surplus stocks.

ಇಪ್ಪತ್ತೈದು ವರ್ಷಗಳ ಹಿಂದೆ.

[೧೯೦೯ನೇ ಆಗೋಸ್ತು ತಾ. ೬ನೆಯ ಸಂಚಿಕೆಯಿಂದ.]

ಸಂಪಾದಕೀಯ.

ಪಾರಸಿ ರಾಜಕೀಯ ಪ್ರಳಯ.

ತುರ್ಕ್ಯದಲ್ಲಿ ಸುಲ್ತಾನ್ ಅಬ್ದುಲ್ ಹಮೀದನ ನಿರಂಕುಶ ಪ್ರವರ್ತನಕ್ಕೆ ಜನರು ಎದುರಿದ್ದು ಸುಲ್ತಾನನನ್ನು ಸಿಂಹಾಸನದಿಂದ ತಳ್ಳಿ ಅವನ ಬಂಧು ರಶೀದ್ ಎಫೆಂಡಿಯನ್ನು ಸುಲ್ತಾನ್ ೫ನೇ ಮಹಮ್ಮದನೆಂಬ ಹೆಸರಿನಿಂದ ಗದ್ದಿಗೆಯಲ್ಲಿ ಕೂಡ್ರಿಸಿ ಹ್ಯಾಗೆ ತುರ್ಕ್ಯದಲ್ಲಿ ಪಾರ್ಲಿಮೆಂಟ್ ಪ್ರತಿನಿಧಿ ಸಭೆಯನ್ನು ಸ್ಥಾಪಿಸಿದರೆಂದು ಈ ಮೊದಲೇ ತಿಳಿಸಿರುವೆವಷ್ಟೆ. ಇದು ನೆರೆರಾಜ್ಯವಾದ ಪರ್ಶಿಯಾದೇಶಕ್ಕೆ ಮೇಲ್ಪಂಕ್ತಿಯಾಯಿತು. ಅಲ್ಲಿ ಆಳುತ್ತಿದ್ದ ಶಹಾ ೫ನೇ ಮಹಮ್ಮದನೆಂಬವನನ್ನು ಜನರು ತಳ್ಳಿಬಿಟ್ಟು ಅವನ ಮಗ ೧೩ ವರುಷದ ಹುಡುಗನಿಗೆ ಸುಲ್ತಾನ್ ಅಮದ್ ಶಹಾ ಎಂಬ ಹೆಸರಿನಿಂದ ಪಟ್ಟಕಟ್ಟಿರುವರು.

\+ \+ \+ \+ \+ \+

ತುರ್ಕ್ಯದಲ್ಲಿಯೂ ಪರ್ಶಿಯದಲ್ಲಿಯೂ ರಾಜಕೀಯ ಪ್ರಳಯದಲ್ಲಿ ಅನಾವಶ್ಯಕ ಕ್ರೌರ್ಯ—ರಕ್ತಪಾತಗಳು ಸಂಭವಿಸಲಿಲ್ಲ. ತಮ್ಮ ಕೈ ಅಧಿಕಾರ ಸಿಕ್ಕಿದರೂ ಪರಪಕ್ಷದವರ ಪ್ರಾಣಹಾನಿಯಿಂದ ಪ್ರಜಾ ಮುಖಂಡರು ಪೂರ್ವ ವೈರವನ್ನು ತೃಪ್ತಿಗೊಳಿಸಲಿಲ್ಲ. ಇನ್ನು ಮುಂದೆಯೂ ಈ ರಾಜಕೀಯ ಮಾರ್ಪಾಟವು ರಕ್ತಪಾತವಿಲ್ಲದೆ ಕಡೆಗಂಡು ರಾಜ್ಯ ಹಿತಕರವಾದ ಅಧಿಪತ್ಯವು ಸ್ಥಾಪಿಸಲ್ಪಡುವುದೆಂದು ಕೋರುವೆವು.

\+ \+ \+ \+ \+ \+

ವರ್ತಮಾನಗಳು.

ಪ್ರೊಫೆಸರ್ ದೀಕ್ಷಿತರವರು ಭಾರತೀಯರ ರಾಜಕೀಯ ಶಿಕ್ಷಣದ ಬಗ್ಗೆ ಇಂಗ್ಲಾಂಡಿನಲ್ಲಿ ತಕ್ಕ ಏರ್ಪಾಡು ಮಾಡಿರುವರು.

ಸಿಂಹಾಸನದಿಂದ ತೆಗೆದು ಹಾಕಲ್ಪಟ್ಟ ಪರಶಿಯದ ಷಹಾನು ಪರಿಸಿಯವನ್ನು ಕೂಡ್ಲೆ ಬಿಟ್ಟುಹೋದಲ್ಲಿ ೫೦೦೦೦ ಪವನುಗಳನ್ನು ವರುಷಂಪ್ರತಿ ಪೆನಶನಾಗಿ ಕೊಡುವರೆ ಪರಸಿಯಾ ಸರಕಾರದವರು ಒಪ್ಪಿರುವರಂತೆ.

ಸ್ಟೇಟ್ ಸೆಕ್ರೆಟರಿಗಳ ಅನುಮತಿ ಮೇರೆಗೆ, ದನಸಧಾನ್ಯಗಳ ಕ್ರಯುವೇರಿದ ವಿಷಯವನು ತನಿಖಿ ಮಾಡುವರೆ ಒಬ್ಬ ಆಫೀಸರರನ್ನು ನೇಮಿಸಿರುವರು.

ಆಲಿಪುರದ ಬೊಂಬ ಮೊಕದ್ದಮೆಯ ತನಿಖಿಯನ್ನು ಈ ತಾ. ೯ಕ್ಕೆ ಇಟ್ಟಿರುವರು.

ಕಳೆದ ತಾ. ೩೧ಕ್ಕೆ ಅಂತ್ಯವಾಗುವ ವಾರದಲ್ಲಿ ಇಡೀ ಹಿಂದೂಸ್ಥಾನದಲ್ಲಿ ೬೨೩ ಪ್ಲೇಗು ಮರಣಗಳಿದ್ದುವು. ಮುಂಬಾಯಿ ಸಂಸ್ಥಾನದಲ್ಲಿ ೧೫೨, ಮದ್ರಾಸು ೯೯, ಬಂಗಾಳ ೨೬, ಸಂಯುಕ್ತ ಸಂಸ್ಥಾನ ೧೯೩, ಪಂಜಾಬು ೧೫, ಬರ್ಮಾ ೪೮, ಮೈಸೂರು ೩೭, ಮಧ್ಯ ಪ್ರಾಂತ್ಯ ೩.

ಮೊರ್ಲೆ ಪ್ರಭುಗಳ ಹಿಂದೂಸ್ಥಾನದ ರಾಜ್ಯಭಾರ ಮಾರ್ಪಾಟಗಳನ್ನು ಕಳೆದ ಶನಿವಾರದ ಗಜೆಟಿನಲ್ಲಿ ಪ್ರಕಟಿಸಿರುವರು.

ನಮ್ಮ ಜಿಲ್ಲೆ.

ದಿವಂಗತ ಅಮ್ಮೆಂಬಳ ಸುಬ್ರಾಯ ಪೈಗಳವರ ಮರಣದ ಬಗ್ಗೆ ಜಿಲ್ಲೆಯ ಬೇರೆ ಬೇರೆ ತಾಲೂಕುಗಳಲ್ಲಿ ಪುರಜನರ ಸಭೆಗಳೂ ಪ್ರತ್ಯೇಕವಾಗಿ ಬೇರೆ ಬೇರೆ ಸಂಘ–ಸಂಸ್ಥೆಗಳ ಸಭೆಗಳೂ ದುಃಖಸೂಚನಾರ್ಥ ಜರಗಿ ಅನೇಕ ಕಡೆಗಳಲ್ಲಿ ಬಡಬಗ್ಗರಿಗೆ ಅಕ್ಕಿ ಹಂಚಲಾಯಿತು.

ವಿವಿಧ ವಿಷಯ.

ರಂಗೂನ್ ಪಟ್ಟಣದ ಸಿವಿಲ್ ಜನರಲ್ ಆಸ್ಪತ್ರೆಯಲ್ಲಿ ಶಸ್ತ್ರಪ್ರಯೋಗದಿಂದ 'ಆನೆಕಾಲ'ನ್ನು ಗುಣಪಡಿಸಿರುವರು.

ಹಿಂದೂಸ್ಥಾನಕ್ಕೆ ಆಮದಾಗುವ ವಿದೇಶಿ ಕಾಗದದ ಮೊತ್ತವು ಕಳೆದ ಐದು ವರ್ಷಗಳಿಂದ ೫೭.೩೮, ೬೪.೩೭, ೭೦.೪೮, ೮೦.೧೧ ಮತ್ತು ೯೯.೭೪ ಲಕ್ಷ ರೂಪಾಯಿಗಳಿಗೆ ಕ್ರಮವಾಗಿ ಹೆಚ್ಚುತ್ತಲಿರುವುದು.

ಕಲ್ಕತ್ತೆಯಲ್ಲಿಯ ಕಾಳೀಘಾಟಿನ ಬಾಬು ಅಶುತೋಷ ಮಲ್ಲಿಕ್ ಎಂಬವರು ರೂಪಾಯಿ–ಆಣೆ–ಪೈ ಮತ್ತು ಪೌಂಡ್–ಶಿಲ್ಲಿಂಗ್–ಪೆನ್ಸ್ ಲೆಕ್ಕದಲ್ಲಿ ಗುಣಾಕಾರ, ಭಾಗಾಕಾರ ಕಳೆಯುವುದು ಕೂಡಿಸುವುದು ಇವುಗಳನ್ನು ಅದೆಷ್ಟು ತ್ವರ್ಯದಲ್ಲಿಯೂ ತಪ್ಪಿಲ್ಲದೆಯೂ ಮಾಡುವಂತೆ ಒಂದು ನವೀನ ಸಣ್ಣ ಯಂತ್ರವನ್ನು ರಚಿಸಿರುವರು.

ಮಂಗಳೂರು ಸಬ್ ಕೋರ್ಟ್ ಕ್ರಮನೆಂಬ್ರ 47/1931 ನೇ (ಕ್ರಮ ಅಮ್ಲ ಜಾರಿ ನಂಬ್ರ 142/1922ನೇ) ಸ್ಕೀಮು ರೂಲುಪ್ರಕಾರ –

ಕಾಪು ಶ್ರೀ ಹಳೇ ಮಾರಿಗುಡಿ ಭಂಡಾರದ ಬಾಬ್ತು ಅಧ್ಯ ಶ್ರೀಮುಖ ಸಂ॥ರ ಶ್ರಾವಣ ಶು॥ ೬ ತಾ. 28-7-1933ರಿಂದ ಅಧ್ಯ ಭಾವ ಸಂ॥ರದ ಆಷಾಢ ಶು॥ ೧೫ ತಾ. 26-7-1934ರ ವರೇಗಿನ ಒಂದು ವರುಷದ ಲೆಕ್ಕದ ಜಮಾ ಖರ್ಚಿನ ಜುಮಲಾ ಗೋಶ್ವಾರೆ ತಖ್ತೆ.

ಜಮಾ.

ತಪಶೀಲು—	ಇತರ	ಅಕ್ಕಿ ಮು.	ಅಕ್ಕಿ ಸೇ.	ನಗದು ರೂ.	ನಗದು ಆ.	ನಗದು ಪೈ
ಗುರಸ್ತ ತಾ. 28-7-33ರ ಶಿಲ್ಕು ನಗದಿ ಮತ್ತು ಚಿನ್ನದ ಮುಗುತಿಗಳು 15 ಬೆಳ್ಳಿ ಸೇ. 2 ತೊಲೆ 2¼ ಟಿ. ಬೊಟ್ಟು 8. ಟಿ. ಲಲಕ 2. ಟಿ. ಮುರು 4. ಟಿ. ಚಂದ್ರಮುರು 1. ಟಿ. ಪಟ್ಟಿಮೊಳೆ 1 ಸಹಾ–				8	8	6
ಬೆಳ್ಳುಗಳ ಗೇಣಿ—ತೆಂಗಿನಕಾಯಿ—	372	124	14	538	15	2
ಡಿ ಸೀಯಾಳ—	460					
ಗದ್ದಿಗೆ ಪೂಜೆಗಳ ಬಗ್ಗೆ–				1879	0	4
ಕುಂಕುಮಾರ್ಚನೆಗೆ–				79	14	0
ಹರಕೆ ಬಂದದ್ದು ನಗದಿ ಮತ್ತು ಪವನ 6ಲ್ಲಿ ವಿಕ್ರಿತ ಜರ ಸಹಾ–				102	9	0
ಹರಿಕೆ ಬಂದದ್ದು ಶಿಲ್ಕು ಪವನ 1. ಮುಗುತಿಗಳು 21. ಅರ್ಧಪವನ 1. ಟಿ. ಮುಸ್ತಿ 1. ಟಿ. ಮುರು 2. ಟಿ. ಕೃಷ್ಣಿಚೂರು 6. ಟಿ. ಕರಿಮಣಿ 2. ಬೆಳ್ಳಿ ತೊಟ್ಟು ವಗೈರೆ ತೊಲೆ 2 ಸಹಾ.						
ನವರಾತ್ರಿ ವಿನಿಯೋಗದ ಬಗ್ಗೆ		3	13	16	0	3
ಮಾರಿಪೂಜೆ ದಿನಗಳ ಕಾಣಿಕೆ–				491	2	5
ನಗದಿ ವಿಕ್ರಿತ ಅಕ್ಕಿ ಮುಡಿ 112ರ–				423	8	0
ಸ್ಥಿರಾಸ್ತಿ ಈಡು ವ ದಸ್ತಾವೇಜಿನ ಅಸಲು ಬಡ್ಡಿ ವೈಕಿ ವಸೂಲು–				335	0	6
ಜುಮಲಾ ತೆಂಗಿನಕಾಯಿ / ಸೀಯಾಳ	372 / 460	127	27	3874	10	2

ಖರ್ಚು.

ತಪಶೀಲು—	ಇತರ	ಅಕ್ಕಿ ಮು.	ಅಕ್ಕಿ ಸೇ.	ನಗದು ರೂ.	ನಗದು ಆ.	ನಗದು ಪೈ
1934ನೇ ಇಸವಿ ಸರಕಾರ ತೀರ್ವೆ ವಸೂಲಿಗೇಣಿ—				170	8	0
				4	10	0
ಗದ್ದಿಗೆ ಪೂಜೆಗಳ ಬಗ್ಗೆ				158	11	5
ಡಿ ಸೀಯಾಳ–	460					
ಡಿ ತೆಂಗಿನಕಾಯಿ–	322					
ಕುಂಕುಮಾರ್ಚನೆಗಳಿಗೆ–				53	4	0
ನವರಾತ್ರಿ ವಿನಿಯೋಗಗಳಿಗೆ–		3	7	134	2	0
ಮಾರಿಪೂಜೆಗಳಿಗೆ–				300	1	9
ವ್ಯವಹರಣೆಗಳಿಗೆ–				20	3	3
ನಗದಿ ವಿಕ್ರಿತ ಅಕ್ಕಿ–		112				
ವೆಂಕಟ್ರಮಣ ದೇವರ ಮತ್ತು ಈ ಭಂಡಾರದ ಆಸೂರಿ ಖರ್ಚು–				308	8	2
ವೆಂಕಟ್ರಮಣ ದೇವಸ್ಥಾನದ ಬಡಗು ಅಂಬಲ, ತಗ್ಗಡಚಪ್ಪರ, ವಗೈರೆ ಕಟ್ಟಡಗಳಿಗೆ ಅಸ್ತಿಗಳ ಕೃಷಿಗಳಿಗೆ ಸಹಾ–				1844	13	6
ವೆಂಕಟ್ರಮಣ ದೇವರ ವಿನಿಯೋಗಕ್ಕೆ ಮತ್ತು ಪುನಃ ಪ್ರತಿಷ್ಠೆ ತಯಾರಿಗೆ ಸಹಾ–	ತೆಂಗಿನಕಾಯಿ 50	3	14	68	14	0
ನವಕರರಿಗೆ ಪಾಲಗದವರೀಗೆ ಸಹಾ ಸಂಬಳ–		7		636	15	8
ಸ್ಥಿರಾಸ್ತಿಗಳು ಈಡು ಮಾಡಿಕೊಂಡ ಪ್ರತಿಫಲದ ರೂ. 1350ರಲ್ಲಿ ಗುರಸ್ತ ಬಹಾ ಈಡಿನ ಸಾಲಮುಟ್ರು ಮಾಡಿ ದಾತಾಭರ್ತಿಗೆ ಸಂದದ್ದು				40	13	9
ವೆಂ॥ ದೇವರ ಮತ್ತು ಈ ಭಂಡಾರದ ಒಂದುವರುಷದ ಲೆಕ್ಕಗಳು ಓಡಿಟ ಮಾಡಿ ಯಾ ಗೋಶ್ವಾರೆ ತಯಾರಿಸಿದ ಉಡ್ಪಿ ಡಿ. ಮು. ಕೋರ್ಟಿನ ಕಮೀಶನರ ಕಟ್ಟಾಡಿ ವಾಸುದೇವ ಕಮ್ತಿಯವರಿಗೆ ಫೀಸು–				25	0	0
ತಾ. 26-7-1934ರ ಶಿಲ್ಕು ಅಕ್ಕಿ ನಗದು ಮತ್ತು-ಶಿಲ್ಕು ಚಿನ್ನದ ಮೂಗುತಿಗಳು 36. ಟಿ. ಬೊಟ್ಟುಗಳು 8. ಟಿ. ಲಲಕಗಳು 2. ಶಿವ ಮುರುಗಳು 6. ಟಿ. ಚಂದ್ರಮುರು 1. ಟಿ. ಪಟ್ಟಿಮೊಳೆ 1. ಪವನು 1. ಅರ್ಧಪವನು 1. ಟಿ. ಮುಸ್ತಿ 1. ಕರಿಮಣಿ 2. ಟಿ. ಕೃಷ್ಣಿಚೂರು 6. ಬೆಳ್ಳಿ ದಾಗಿನಗಳು 10ರ ತೊಲೆ 3 ಕೂಡಾ ಬೆಳ್ಳಿ ಸೇರು 2 ತೊಲೆ 4¼ ಸಹಾ ಆಗಿರುತ್ತದೆ.		2	6	101	0	8
ಜುಮಲಾ ತೆಂಗಿನಕಾಯಿ / ಸೀಯಾಳ	372 / 460	127	27	3874	10	2

ಮೊಕ್ಕಾಂ— ಕಾಪು, } K. Vasudeva Camthy, Commissioner,
ತಾ. 26-7-'34. } ಓಡಿಟರ್ D. M. C. Udipi.

ಶ್ರೀಧರ ಕಾಪುಭಾಗ, ಪಟೇಲ್,
ಪ್ರೆಸಿಡೆಂಟ್.

ಸಂಪಾದಕರ ಟಪ್ಪಾಲುಪೆಟ್ಟಿಗೆ.

ಬಾತ್ಮಿದಾರರ ಅಭಿಪ್ರಾಯಗಳಿಗೆ ನಾವು ಜವಾಬ್ದಾರರಲ್ಲ. ಎಲ್ಲ ಲೇಖಕರು ತಮ್ಮ ಸಂಪೂರ್ಣ ಹೆಸರು ವಿಳಾಸಗಳನ್ನು ಕೊಡತಕ್ಕದ್ದು. ದೀರ್ಘ ಲೇಖನಗಳಿಗೆ ಎಡೆ ಕೊಡಲಾಗುವುದಿಲ್ಲ. ಲೇಖನಗಳು ಸಾರ್ವಜನಿಕ ಹಿತದೃಷ್ಟಿಯಿಂದಿದ್ದು ಯುಕ್ತ ಶೈಲಿಯಲ್ಲಿರತಕ್ಕದ್ದು. (ಸಂ. ಸ್ವ.)

ಇಗರ್ಜಿ ಶಾಲೆಗಳು.

ಪ್ರತಿ ರೋಮನ್ ಕೆಥೋಲಿಕ್ ಇಗರ್ಜಿಗೊಂದು ಶಾಲೆ. ಅಲ್ಲಿ ಕಲಿಯುವ ವಿದ್ಯಾರ್ಥಿಗಳೆಂದರೆ ರೋಮನ್ ಕೆಥೋಲಿಕ್ ಬಾಲಕರೇ. ಹಿಂದೂ ಬಾಲಕರೆಂದರೆ ತೀರ ಕಡಿಮೆ. ಪಡೆಯುವುದೇನೋ ಗ್ರಾಂಟು. ಅದು ಸಾರ್ವಜನಿಕ ಹಣ. ಅಂತಹ ಸಾರ್ವಜನಿಕ ಹಣವನ್ನು ಬರೇ ಒಂದೊಂದು ಮತದವರಿಗೆ ವಿನಿಯೋಗಿಸುವುದೆಂದರೆ ವಿಷಾದಕರ. ಇಗರ್ಜಿಗಳಲ್ಲಿ ಶಾಲೆಗಳನ್ನಿಡುವ ಮುಖ್ಯ ಉದ್ದೇಶವೇ ತಮ್ಮ ಮಕ್ಕಳಿಗೆ ಶಾಸ್ತ್ರವನ್ನು ಕಲಿಸುವುದಕ್ಕಾಗಿಯೆ. ವಾರಗಳಲ್ಲಿ ಐದು ದಿನ ಶಾಲೆ. ದಿನಕ್ಕೈದು ಗಂಟೆ ಕೆಲಸ. ಅದರಲ್ಲಿ ಪ್ರತಿಯೊಂದು ದಿನ ಘಳ್ಗೆ ಒಂದೊಂದು ಪಾಠ ಶಾಸ್ತ್ರ. ಡಿಪಾರ್ಟಮೆಂಟಿನವರಿಗೆ ಮಾತ್ರ ಐದು ಗಂಟೆಯ ಕೆಲಸ. ಶಾಲಾ ಇನ್ಸ್ಪೆಕ್ಷನ್ ನಡೆಯುವ ದಿನ ಶಾಸ್ತ್ರದ ಪಾಠ ಮಾಯ. ಕಾಲನಿಯಮಿತ ಪಟ್ಟಿಯಲ್ಲಿ ಬೇರೆಯೇ. ಗುರುಗಳ ಕೈಕೆಳಗಿರುವ ಶಾಲೆಗಳಲ್ಲಿಯೂ ಹೀಗಿದೆಯೇ? ಪ್ರರಾಂಬರಿಸದೆ ಬರೆದೆನೆಂದು ನನ್ನನ್ನು ಟೀಕಿಸಲೂಬಹುದು. ನಾನೇ ಕೆಲಸಮಾಡುತ್ತಿರುವ ಅಗ್ರಾರ್ ಇಗರ್ಜಿಶಾಲೆಯೇ ಇದಕ್ಕೆ ನಿದರ್ಶನ. ತಾರೀಖು ೩೧–೭–೩೪ರಲ್ಲಿ ಬಜ್ಜೋಡಿನ ಸೆಂಟರಿನ ಉಪಾಧ್ಯಾಯ ಸಂಘದಲ್ಲಿ ಹಾಜರಿದ್ದ ಮಾನ್ಯ ಗುರುಗಳು, ನಮಗೆ 'Communal' ಶಾಲೆಗಳೇ ಬೇಕು ಎಂದು ಒತ್ತಿ ಹೇಳಿದರು. ಅದ್ದರಿಂದ ಅವರ ಉದ್ದಿಷ್ಟಗಳೇನೆಂದು ಸ್ಪಷ್ಟವಾಯಿತು. ಅಂಥ ಶಾಲೆಗಳನ್ನು ಚೆಂಪಿಯನ್ ಸ್ಕೀಮಿಗೆ ಒಳಪಡಿಸದಿದ್ದರೆ ಬೇರೆ ಮತದವರಿಗೆ ಬರಿ ಅನ್ಯಾಯ ಮಾಡಿದಂತಾಗುತ್ತದೆ.

ಮೇಲಿನ ವಿಧದ ಶಾಲೆಗಳೆಲ್ಲಾ ಕೆಥೋಲಿಕ್ ಎಜುಕೇಶನ್ ಬೋರ್ಡಿನ ಕೈಕೆಳಗಿವೆ. ಶಾಲಾ ಸಿಬಂದಿಯ ಖರ್ಚು ಮಾತ್ರ ಆಯಾ ಶಾಲೆಗೆ ಸಿಕ್ಕುವ ಗ್ರ್ಯಾಂಟಿನ ಹುಡುಗರ ಸಂಬಳದಿಂದಲೇ ನಡೆಯಬೇಕು. ಸಿಬಂದಿಯ ಖರ್ಚು ಜಾಸ್ತಿಯಾಗಿ ಆದಾಯವು ಕಡಿಮೆಯಾದರೆ ಉಪಾಧ್ಯಾಯರ ಸಂಬಳದಲ್ಲಿ ಕಡಿತ. ಆದಾಯ ಹೆಚ್ಚಿದರೆ ಮಾತ್ರ ಪಾರಿತೋಷಕ ಎಂಬ ನಿಯಮದ ಮೇಲೆ ಕೆಲಸ ನಡೆಸುವ ಕ್ರಮವನ್ನು ಜಾರಿಗೆ ತಂದಿರುವರು. ಇದಕ್ಕೆ ಮೊದಲು ಕಡಿಮೆಯಾದ ಹಣವನ್ನು ಆಯಾ ಇಗರ್ಜಿಯವರೇ ಕೊಡುತ್ತಿದ್ದರು. ಈಗ ಮಾತ್ರ ಇಗರ್ಜಿಯು ಹಣವನ್ನು ಶಾಲೆಗಳಿಗೆ ತೆಗೆಯಕೂಡದೆಂದು ಮಾನ್ಯ ಬಿಶೋಪರ ಅಪ್ಪಣೆ.

ಇದಕ್ಕೆ ನಿದರ್ಶನವಾಗಿ ಅಗ್ರಾರ್ ಇಗರ್ಜಿಗೆ ಸಂಬಂಧಪಟ್ಟ ಜೂನಿಯರ್ ಎಲಿಮೆಂಟರಿ ಶಾಲಾ ಉಪಾಧ್ಯಾಯರಿಗೆ ೧೯೩೩–೩೪ರ ಇಸವಿಯ ಸಂಬಳದಲ್ಲಿ ಶೇಕಡಾ ಹತ್ತರಂತೆ ಕಡಿತ. ಅದಕ್ಕೆ ಸಂಬಂಧಪಟ್ಟ ಉಳಿದ ಎಲಿಮೆಂಟರಿ ಶಾಲಾ ಉಪಾಧ್ಯಾಯರಿಗೆ ಶೇಕಡಾ ಇಪ್ಪತ್ತರಂತೆ ಕಡಿತ. ಈ ರೀತಿ ಸಂಬಳದ ಬಟ್ವಾಡೆ ಆಯಿತು. ಒಪ್ಪದವರಿಗೆ ಕೆಲಸದಿಂದ ನಿವೃತ್ತಿ ಎಂದು ನೋಟೀಸು. ಹೀಗಾಗಿ ಕೆಲಸದ ಆಶೆಯಿಂದ ಅವರ ಹೇಳಿಕೆಯ ಮೇರೆಗೆ ನಡೆಯಬೇಕಾಯಿತು. ಆದರೆ ಇದಕ್ಕೆ ಒಪ್ಪದ ಅಗ್ರಾರ್ ಶಾಲಾ ಹೆಡ್ ಮಾಸ್ತರರಿಗೆ ಶಿಕ್ಷೆ ವಿಧಿಸುವ ರೂಪದಲ್ಲಿ ೩೫ ರೂಪಾಯಿ ಸಂಬಳದಲ್ಲಿದ್ದವರನ್ನು ಒಮ್ಮೆಗೆ ೨೦ ರೂಪಾಯಿಗಳಿಗೆ ನಿಲ್ಲಬೇಕೆಂದು ಅಪ್ಪಣೆ. ಒಪ್ಪದ ಕಾರಣ, ಕಳೆದ ಜುಲಾಯಿ ತಿಂಗಳ ೩೧ಕ್ಕೆ ಶಾಲೆಯಿಂದ ನಿವೃತ್ತಿಯಾಯಿತು.

ಮೇಲಿನ ಈ ವಿಷಯಗಳನ್ನು ಎಜುಕೇಶನ್ ಕೌನ್ಸಿಲಿಗೆ ಒಂದೆರಡು ಸಲ ತಿಳಿಸಿದರೂ ಪರಾಂಬರಿಸಿ ನೋಡುವುದು ಕಾಣುವುದಿಲ್ಲ. ಅದ್ದರಿಂದ ಸಂಬಂಧಪಟ್ಟ ಅಧಿಕಾರಿಗಳಾದರೂ ಈ ಎಲ್ಲಾ ಅನರ್ಥಗಳನ್ನು ಕಂಡು ಹಿಡಿದು ಬಡ ಉಪಾಧ್ಯಾಯರನ್ನು ಕಾಪಾಡಬೇಕೆಂದು ನನ್ನ ಪ್ರಾರ್ಥನೆ. ದೇವರೇ, ನಿನಗಾದರೂ ಕರುಣ ಇಲ್ಲವೆ?

ಇತಿ ಹಿತೈಷಿ.

ಡಿಸ್ಟ್ರಿಕ್ಟ್ ಬೋರ್ಡ್ ಮೂಲಶಾಲೆಗಳ ಉಪಾಧ್ಯಾಯರ ವರ್ಗಾವರ್ಗಿ.

ಡಿಸ್ಟ್ರಿಕ್ಟ್ ಬೋರ್ಡಿನ ಕೈಕೆಳಗಿರುವ ಮೂಲ ಶಾಲೆಗಳ ಉಪಾಧ್ಯಾಯರಿಗೆ ಬಹುಪಕ್ಷ ತಿಂಗಳು ೧೮ ರೂ. ೧೫ಕ್ಕಿಂತ ಹೆಚ್ಚಿಗೆ ಸಂಬಳ ಸಿಕ್ಕುವುದು ದುರ್ಲಭ. ಇಂಥಾ ಉಪಾಧ್ಯಾಯರು ಈ ಅಲ್ಪ ಸಂಬಳದಿಂದಲ್ಲಿ ತಮ್ಮ ಕುಟುಂಬ ಪೋಷಣೆಯನ್ನು ನೆರವೇರಿಸುವುದು ಅಸಾಧ್ಯವೆಂಬ ಸಂಗತಿಯು ದಯಾಳು ಪ್ರೆಸಿಡೆಂಟರಿಗೆ ತಿಳಿದಿರುವ ವಿಷಯವೇ ಆಗಿದೆ. ಇಂಥಾ ಉಪಾಧ್ಯಾಯರಿಗೆ ಎರಡು ತಿಂಗಳಿಗೊಮ್ಮೆ ಒಂದೂರಿನಿಂದ ಇನ್ನೊಂದು ಊರಿಗೆ ವರ್ಗಾಯಿಸುತ್ತಾ ಇದ್ದರೆ, ಆ ಉಪಾಧ್ಯಾಯರ ಗತಿಯೇನು? ಉಪಾಧ್ಯಾಯರ ಕುಟುಂಬ ಒಂದು ಕಡೆ, ಶಾಲೆ ಒಂದು ಕಡೆ, ಹೊಟ್ಟೆ ಇನ್ನೊಂದು ಕಡೆ. ತಪ್ಪುಮಾಡಿದ ಉಪಾಧ್ಯಾಯರನ್ನು ಒಂದೂರಿನಿಂದ ಇನ್ನೊಂದೂರಿಗೆ ಶಿಕ್ಷಾರ್ಥವಾಗಿ ವರ್ಗಾಯಿಸುವುದಾದರೂ ನ್ಯಾಯ. ಮನಃಪೂರ್ವಕವಾಗಿ ಕೆಲಸಮಾಡುತ್ತಾ, ಶಾಲಾಭಿವೃದ್ಧಿಯನ್ನು ಮಾಡುತ್ತಿರುವ ಉಪಾಧ್ಯಾಯರನ್ನು ಅನ್ಯಾಯವಾಗಿ ಪರವೂರುಗಳಿಗೆ ವರ್ಗಾಯಿಸಿ ಕಷ್ಟನಷ್ಟಗಳಿಗೆ ಗುರಿಪಡಿಸುವುದೆಂದರೆ "ಬೆಕ್ಕಿಗೆ ಆಟ ಇಲಿಗೆ ಪ್ರಾಣ ಸಂಕಟ"ವೆಂಬಂತಲ್ಲವೇ? ಉರ್ದು ಟ್ರೈನಾದ ಉಪಾಧ್ಯಾಯರು ಬೇಕಾದ ಶಾಲೆಗಳಿಗೆ ಕನ್ನಡ ಟ್ರೈನಾದ ಉಪಾಧ್ಯಾಯರನ್ನೂ, ಕನ್ನಡ ಟ್ರೈನಾದ ಉಪಾಧ್ಯಾಯರು ಬೇಕಾದ ಶಾಲೆಗಳಿಗೆ ಉರ್ದು ಟ್ರೈನಾದ ಉಪಾಧ್ಯಾಯರನ್ನೂ ವರ್ಗಾಯಿಸುವುದು, ಯಾವ ಕಾರ್ಯಕ್ಕೆ? ಶಾಲೆಯ ಅಭಿವೃದ್ಧಿಗೋ? ಶಾಲೆಯ ಅಧೋಗತಿಗೋ? ಬಲ್ಲವನೇ ಬಲ್ಲ. ಮೊನ್ನೆ ತಾನೆ ತಾಲೂಕು ಬೋರ್ಡುಗಳೆಲ್ಲವು ಹೋಗಿ ಡಿಸ್ಟ್ರಿಕ್ಟ್ ಬೋರ್ಡಿಗೆ ಸಂಯೋಜಿಸಲ್ಪಟ್ಟಿರುವುದರಿಂದ ಒಂದು ವೇಳೆ ಮಾನ್ಯ ಪ್ರೆಸಿಡೆಂಟರಿಗೆ ಉಪಾಧ್ಯಾಯರ ನಿಜವಾದ ಯೋಗ್ಯತೆಗಳು ಗೊತ್ತಿಲ್ಲದಿರಬಹುದು. ಆದರೆ ಆಯಾ ತಾಲೂಕುಗಳ ಸಂಪೂರ್ಣ ಅನುಭವವುಳ್ಳ ಕ್ಲಾರ್ಕುಗಳನ್ನು ವಿಚಾರಿಸಬಹುದೆಂದು ನನ್ನ ಅಭಿಪ್ರಾಯ.

ಇದೇ ಕಳೆದ ಜುಲಾಯಿ ತಿಂಗಳಲ್ಲಿ ಉಳ್ಳಾಲ ಮಾಪಿಳ್ಳ ಬೋರ್ಡು ಶಾಲೆಯ ಉರ್ದು ಉಪಾಧ್ಯಾಯರು ತರಬೇತಿಗಾಗಿ ಟ್ರೈನಿಂಗ್ ಶಾಲೆಗೆ ಹೋದರು. ಅದ್ಯಾರು ಕಣ್ಣೂರು ಶಾಲೆಯಲ್ಲಿ ಉರ್ದುಭಾಷೆಯು ಕಲಿಸಲ್ಪಡುವುದಿಲ್ಲ. ಉರ್ದುಭಾಷೆಯೇ ಗೊತ್ತಿಲ್ಲದ ಈ ಶಾಲೆಯ ಸಹಾಯಕ ಉಪಾಧ್ಯಾಯರನ್ನು ಉರ್ದು ಉಪಾಧ್ಯಾಯರಾಗಿ ಉಳ್ಳಾಲ ಶಾಲೆಗೆ ವರ್ಗಾಯಿಸಿದ್ದು, ಅದೇ ಅದ್ಯಾರು ಕಣ್ಣೂರು ಶಾಲೆಯಲ್ಲಿ ಮುಖ್ಯ ಉಪಾಧ್ಯಾಯರಾಗಿ ಶಾಲೆಯನ್ನು ಅಭಿವೃದ್ಧಿಗೊಳಿಸುತ್ತಿದ್ದವರನ್ನು ಡಿಗ್ರೇಡ್ ಮಾಡಿ ಅದೇ ಶಾಲೆಯಲ್ಲಿ ಸಹಾಯಕರಾಗಿ ಇರಿಸಿದ್ದು. ಉರ್ದು ಕಲಿಸಲು ಯೋಗ್ಯರಾಗಿಯೂ, ಚೆನ್ನಾಗಿ ಅರಬಿ ಬಲ್ಲವರಾಗಿಯೂ ಕಣ್ಣೀರುಬಾವಿ ಶಾಲೆಯಲ್ಲಿ ಸಹಾಯಕರಾಗಿಯೂ ಇದ್ದವರನ್ನು ಅದ್ಯಾರು ಕಣ್ಣೂರು ಶಾಲೆಗೆ ಮುಖ್ಯ ಉಪಾಧ್ಯಾಯರನ್ನಾಗಿ ನೇಮಿಸಿದ್ದು. ಅಲ್ಲಿಗೆ ಉರ್ದು ಉಪಾಧ್ಯಾಯರು ಅಗತ್ಯವಿಲ್ಲ. ಈಗ ಉಳ್ಳಾಲದಲ್ಲಿ ಉರ್ದು ಪಾಠಕ್ಕೆ ಉಪಾಧ್ಯಾಯರಿಲ್ಲ. ಹಾಗಾದರೆ ಈ ವರ್ಗಾವರ್ಗಿಗಳಿಂದ ಉರ್ದುಶಾಲೆಗಳಿಗೇನು ಪ್ರಯೋಜನ? ಅದ್ಯಾರು ಕಣ್ಣೂರು ಶಾಲೆಯ ಮುಖ್ಯ ಉಪಾಧ್ಯಾಯರಿಗೆ ಡಿಗ್ರೇಡ್ ಮಾಡುವ ಉದ್ದೇಶದಿಂದಲೋ? ಅಲ್ಲದಿದ್ದರೆ ಕಣ್ಣೀರುಬಾವಿ ಶಾಲೆಯ ಸಹಾಯಕ ಉಪಾಧ್ಯಾಯರನ್ನು ಅದ್ಯಾರು ಕಣ್ಣೂರು ಶಾಲೆಯಲ್ಲಿ ಮುಖ್ಯ ಉಪಾಧ್ಯಾಯರ ಸ್ಥಾನಕ್ಕೇರಿಸುವ ಉದ್ದೇಶದಿಂದಲೋ? ಉರ್ದು ಉಪಾಧ್ಯಾಯರೊಬ್ಬರನ್ನು ಉಳ್ಳಾಲಕ್ಕೆ ವರ್ಗಾಯಿಸಿದರೆ ಸಾಕಾಗುತ್ತಿತ್ತಲ್ಲವೆ? ವರ್ಗಾವರ್ಗಿ ಮೂಲಗಳಿಂದ ಶಾಲೆಗಳು ಹಾಳಾಗುತ್ತದೆಂದು ಹೇಳುವ ಮಾತು ನಿಜವೇ ಆಗಿದೆಯೆಂದು ನನ್ನ ಭಾವನೆ.

ಈ ವರ್ಗಾವರ್ಗಿಗಳ ಬೆಸರಿಯಿಂದ ಶಾಲಾಭಿವೃದ್ಧಿಯು ಕೆಟ್ಟು ಹೋಗುವುದೆಂಬ ತಮ್ಮ ಸ್ವಾನುಭವಗಳನ್ನು ಕಾಣಿಸಿ, ಅದ್ಯಾರು ಕಣ್ಣೂರು ಗ್ರಾಮಸ್ಥರು ತಮ್ಮದೊಂದು ಮನವಿಯನ್ನು ಮ. ರಾ. ರಾ. ಡಿಪ್ಯುಟಿ ಇನ್ಸ್‌ಪೆಕ್ಟರರ ಮುಖಾಂತರ ಡಿ. ಬೋ. ಪ್ರೆಸಿಡೆಂಟರಿಗೆ ಬರಕೊಂಡಿರುವರಂತೆ. ಡಿಪ್ಯುಟಿ ಇನ್ಸ್‌ಪೆಕ್ಟರರೂ ಈ ವರ್ಗಾವರ್ಗಿಯು ಸರಿಯಲ್ಲವೆಂದು ಒಳ್ಳೆಯ ಶಿಫಾರಸು ಬರೆದಿರುವರೆಂದು ಸುದ್ದಿಯು ಇದೆ. ದಯಾಳು ಪ್ರೆಸಿಡೆಂಟರು ನೊಂದವರ ಮೊರೆಯನ್ನು ಲಾಲಿಸಿ ನ್ಯಾಯವನ್ನು ಪಾಲಿಸಬೇಕಾಗಿಯೂ, ಶಾಲಾಭಿವೃದ್ಧಿಯು ಕೆಟ್ಟುಹೋಗದಂತೆ ತಕ್ಕ ನಿಗಾವನ್ನಿಡಬೇಕಾಗಿಯೂ ಅರಿಕೆ.

ವಿದ್ಯಾಪ್ರೇಮಿ.

ಗುರುವಾಯನಕೆರೆ ಪೇಟೆಯಲ್ಲಿ ಜುಗಾರಿ ವ ಪೋಕ್ರಿಗಳ ಕೂಟ.

ಗುರುವಾಯನಕೆರೆ ಪೇಟೆಯಲ್ಲಿ ಇತ್ತೀಚೆ ಪೋಲಿಸ್ ಬೀಟು ಇಲ್ಲ. ರಾತ್ರಿ ಹಗಲು ಬಿಡದೆ ಜುಗಾರಾಟವು ಬಹಿರಂಗವಾಗಿ ನಡೆಯುತ್ತಲಿದೆ. ಜುಗಾರಿಗಳು, ಕಳ್ಳರು, ಕಾಕಪೋಕರು, ವೃತ್ತಿಹೀನರೂ ಅಲ್ಲಲ್ಲಿ ಜಮೆಯಾಗಿ ಕೊಂಡೇ ಇದ್ದಾರೆ. ಬೆಳ್ತಂಗಡಿಯ ಈಗಿನ ದಯಾಳು ಸಬ್ ಇನ್ಸ್‌ಪೆಕ್ಟರ್ ಸಾಹೇಬರ ಸವಾರಿಯು ಆಗಾಗ್ಗೆ ಈ ಗುರುವಾಯನಕೆರೆ ಪೇಟೆಗೆ ಬಂದಾಗ್ಯೂ ಧೈರ್ಯದಿಂದ ಆಟಗಳು ನಡೆಯುತ್ತಲಿವೆ. ನಮ್ಮ ಗ್ರಾಮದ ಪಟೇಲರಾದರೂ ಇಂಥಾ ತಕ್ಸೀರುಗಳನ್ನು ರಿಪೋರ್ಟು ಮಾಡಿ, ಅಣಗಿಸುವುದರಲ್ಲಿ ಮನಸ್ಸುಮಾಡಬಹುದಿತ್ತು. ಹೇಳುವವರ್ಯಾರು? ಪೇಟೆ ಹೇಳದವರಿಬ್ಬರು ಮೇಲಧಿಕಾರಿಗಳಾದರೂ ಈ ವಿಷಯದಲ್ಲಿ ಜಾಗ್ರತೆ ಇಡದಿದ್ದರೆ ಇದರಿಂದಾಗಿ ಹಲವು ವಿಧಗಳ ತಕ್ಸೀರುಗಳು ನಡೆಯಲಿಕ್ಕೆ ಆಸ್ಪದವಾಗುವುದಲ್ಲದೆ, ಜನರಿಗೂ ಹೆಚ್ಚಿನ ಕಷ್ಟವ ತೊಂದರೆಗಳು ಉಂಟಾಗುವರೇ ಕಾರಣವಾಗುವುದು.

'ಪ್ರತ್ಯಕ್ಷದರ್ಶಿ.'

ಆರ್ಯ ವಿದ್ಯಾವಿಜಯ ನಾಟಕ ಸಭೆಯ ಗೊತ್ತುವಳಿಗಳು.

(೧) ಆರ್ಯ ವಿದ್ಯಾವಿಜಯ ನಾಟಕ ಸಭಾ, ಮಂಗಳೂರು, ಎಂದು ಇದರ ವಿಳಾಸ.

(೨) ಕನ್ನಡ ನಾಟಕಗಳನ್ನಭಿನಯಿಸಿ, ಸದಸ್ಯರ ನಾಟಕ ಕಲಾ ಜ್ಞಾನವನ್ನು ವೃದ್ಧಿಸುವುದು ಇದರ ಉದ್ದೇಶ.

(೩) ನಾಟಕ ಕಲಾಜ್ಞಾನವನ್ನಾಶಿಸುವವರನ್ನು ಮೆನೇಜಿಂಗ್ ಕಮಿಟಿಯು ಸದಸ್ಯರನ್ನಾಗಿ ಸ್ವೀಕರಿಸುವುದು.

(೪) ಸದಸ್ಯರು ತಮ್ಮ ಸಂಪಾದನಾಶಕ್ತಿಯನ್ನರಿತು ಆಣೆ ಎರಡರಿಂದ ೮ರ ವರೆಗಿನ ಮಾಸಿಕ ವಂತಿಗೆಯನ್ನು ಕೊಡಬೇಕು. (ಈ ಎರಡು ತರಗತಿಗಳ ಸದಸ್ಯರ ದರ್ಜೆಗಳಲ್ಲಿ ಮೇಲುಕೀಳೆಂಬ ಭೇದವಿಲ್ಲ.)

(೫) ಸಭೆಗೆ ಸಹಾಯಕರು ಬೇಕೆಂಬ ಆಗತ್ಯ ಕಂಡರೆ ಸಭೆಯು ಒನರರಿ ಸದಸ್ಯರನ್ನು ಸ್ವೀಕರಿಸುವುದು.

(೬) ಮೆನೇಜಿಂಗ್ ಕಮಿಟಿಯಲ್ಲಿ ಅಧ್ಯಕ್ಷ, ಉಪಾಧ್ಯಕ್ಷ, ಕಾರ್ಯದರ್ಶಿ ಮತ್ತು ಜನರಲ್ ಬೋಡಿಯು ವರ್ಷಾವಧಿ ಸಭೆಯಲ್ಲಿ ಚುನಾಯಿತರಾದ ಇಬ್ಬರು ಸದಸ್ಯರು ಇರುವರು.

(೭) ಬೇಕಾದ ನಾಟಕಗಳನ್ನು ಆರಿಸಿಕೊಂಡು ಅದನ್ನಭಿನಯಿಸಲು ಸರ್ವ ಏರ್ಪಾಡು ಮಾಡುವುದು ಮೆನೇಜಿಂಗ್ ಕಮಿಟಿಯ ಕರ್ತವ್ಯ.

(೮) ಒಂದು ನಾಟಕವನ್ನಭಿನಯಿಸಿದ ೧೫ ದಿವಸಗಳೊಳಗೆ ಮೆನೇಜಿಂಗ್ ಕಮಿಟಿಯು ಆಯವ್ಯಯ ಪಟ್ಟಿಯನ್ನು ಜನರಲ್ ಬೋಡಿ ಸಭೆಯಲ್ಲಿ ಅನುಮೋದನೆಗಾಗಿ ಇಡಬೇಕು.

(೯) ನಾಟಕದಲ್ಲಿ ದೊರೆತ ಉಳಿಕೆ ಮೊಬಲಗನ್ನು ಸಂಪೂರ್ಣವಾಗಿ ಧರ್ಮಾರ್ಥ ಕೆಲಸಗಳಿಗುಪಯೋಗಿಸಬಾರದು.

(೧೦) ಈ ಸಭೆಯು ಎಮೆಚೂರ್ಸ್‌ರದಾಗಿರುವುದರಿಂದ, ನಾಟಕದಲ್ಲಿ ಅಭಿನಯಿಸಿದುದಕ್ಕಾಗಿ ಯಾವ ಸದಸ್ಯನೂ ವೇತನದ ಹಕ್ಕುಳ್ಳವನಾಗಲಾರನು. ಆದರೆ ಹಾರ್ಮೋನಿಯಮ್, ತಬಲೆ ಬಾರಿಸುವವರಿಗೂ, ಗ್ರೀನ್ ರೂಮಿನ ಮೆನೇಜರರಿಗೂ ಕಮಿಟಿಯ ಇಚ್ಛಾನುಸಾರ ವೇತನ ಕೊಡಬಹುದು.

(೧೧) ಮೆನೇಜಿಂಗ್ ಕಮಿಟಿಯ ಅಪ್ಪಣೆ ವಿನಾ ಸದಸ್ಯರು ಯಾವ ನಾಟಕ ಕಂಪೆನಿಯಲ್ಲೂ ಭಾಗವಹಿಸಬಾರದು.

(೧೨) ಸಭೆಯ ಎಲ್ಲಾ ವ್ಯವಹಾರಗಳಲ್ಲೂ ಜನರಲ್ ಬೋಡಿಯೇ ಸರ್ವಾಧಿಕಾರವುಳ್ಳದ್ದು.

ನೋಟೀಸು.

ಕಾರ್ಕಳ ಡಿಸ್ಟ್ರಿಕ್ಟ್ ಮುನ್ಸೀಫ್ ಕೋರ್ಟಿನಲ್ಲಿ.

O. P. No. 67/'34.

ದಾಸಪ್ಪ ಪ್ರಭು ಸಹಾ—ಅರ್ಜಿದಾರರು.

1ನೇ ಅರ್ಜಿದಾರನ ಮಗ ಮುಕುಂದ ಪ್ರಭು ಮೃತಪಟ್ಟಿರುವದರಿಂದ ಅವರ ಬಾಬ್ತು ಎಂಪಾಯರ್ ಒಫ್ ಇಂಡಿಯಾ ಲೈಫ್ ಎಶ್ಯೂರೆನ್ಸು ಕಂಪೆನಿಯಿಂದ ಪೋಲಿಸಿ ನಂಬ್ರ 84835ರ ಪ್ರಕಾರ ಬರತಕ್ಕ ಹಣವನ್ನು ವಸೂಲು ಮಾಡುವ ಬಗ್ಗೆ ಮೃತನ ಮ್ಯಾನರ ಮಕ್ಕಳಾದ ರಮಾನಾಥ—ದಯಾನಂದರ ಬಗ್ಗೆ ಅವರ ಕ್ಷೇಮಚಿಂತಕ ಪಿತಾಮಹ 1ನೇ ಅರ್ಜಿದಾರನ ಹೆಸರಿಗೆ ವಾರಿಸು ಸರ್ಟಿಫಿಕೇಟು ಕೊಡಬೇಕಾಗಿ ಮಾಡಿದ ಅರ್ಜಿಯು ಕೇಸ್ಸಿ ಬಗ್ಗೆ ತಾ. 8–9–'34ಕ್ಕೆ ಇಟ್ಟಿರುವದರಿಂದ ಆಕ್ಷೇಪಿಸುವವರು ಆ ದಿನ 11 ಘಂಟೆಗೆ ಕೋರ್ಟು ಮುಂದೆ ಹಾಜರಾಗಿ ಆಕ್ಷೇಪಿಸಬಹುದು.

P. Ramachandra Rao,
ಅರ್ಜಿದಾರನ ಕಡೆ ವಕೀಲ.

ರೇಶ್ಮೆಯಂತೆ, ನುಣುಪಾದ ಮತ್ತು ಹೊಳಪಾದ ಕೇಶಧಾಮ

ದಿನನಿತ್ಯದ ಸ್ನಾನಕ್ಕೆ ಮುಂಚಿತವಾಗಿ ನಿಮ್ಮ ಕೂದಲುಗಳನ್ನು ಚೆನ್ನಾಗಿ ಬಾಚಿ, ಒತ್ತಿ ಸಿಂಪ ನವರಿ, ಆ ನಂತರ

"ಕುಂತಲ ಕೌಮುದಿ"

ಎಂಬ ಹಿಂದೂಸ್ಥಾನದ ಪ್ರಸಿದ್ಧ ಕೇಶ ತೈಲ್ಯದಿಂದ ಕೂದಲುಗಳ ಬುಡವನ್ನು ಜಾಗರೂಕತೆಯಿಂದ ತಿಕ್ಕಿರಿ.

(ಮನಮುಗ್ಧಕರವಾದ ಸುಗಂಧವನ್ನುಳ್ಳದು.)

ಹಿಂದೂಸ್ಥಾನದಲ್ಲೆಲ್ಲ ಸರ್ವತ್ರ ಉಪಯೋಗಿಸಲ್ಪಡುತ್ತಿದೆ.

ತಯಾರಿಸುವವರು:— ಬೆಲೆ ಸೀಸೆ ಒಂದಕ್ಕೆ ರೂ 0—12—0.

ಆರ್. ಸಿ. ಸೇನ್ ಎಂಡ್ ಕೋ., ಲಿಮಿಟೆಡ್, ಕಲ್ಕತ್ತ.

ಏಜಂಟರು:—

ಕುಂತಳ ಕೌಮುದಿ ತೈಲ, ಜನರಲ್ ಆಸ್ಪತ್ರೆ ಎದುರು, ಮಂಗಳೂರು.

ಶ್ರೀ ವಿಲಾಸ

ಗಣಪತಿ ಹೈಸ್ಕೂಲ್ ರಸ್ತೆ, × ಮಂಗಳೂರು.

ಸರಕಾರೀ ಉದ್ಯೋಗಸ್ಥರಿಂದಲೂ, ವಿದ್ಯಾರ್ಥಿಗಳಿಂದಲೂ, ಪುರಪ್ರಮುಖರಿಂದಲೂ ಆದರಿಸಲ್ಪಡುತ್ತಿರುವ—

ಮಂಗಳೂರಿನ ಒಂದು ಪ್ರಾಮುಖ್ಯ ಉಪಹಾರಗೃಹ.

ಶುದ್ಧ ತಿಂಡಿ, ತಾಜಾತುಪ್ಪದ ಮಿಠಾಯಿ, ಎಲ್ಲ ಬಗೆಯ ಒಳ್ಳೆಯ ಸೌಮ್ಯ ಪಾನೀಯಗಳು,—ಶೌಚ್ಯ, ಸ್ಥಳಾನುಕೂಲತೆ ಇವೆಲ್ಲವುಗಳಿಗಾಗಿ 'ಶ್ರೀ ವಿಲಾಸ'ವು ಹೆಸರುಗೊಂಡಿದೆ.

[ವಿವಾಹ, ಉಪನಯನ, ಸತ್ಕಾರಕೂಟ ಇತ್ಯಾದಿಗಳ ಸಂದರ್ಭದಲ್ಲಿ, ಬೇಕಾದ ತರದ ತಿಂಡಿ ತಿನಸುಗಳನ್ನೊದಗಿಸಲಾಗುವುದು.]

ಸುಜೀರ ಗೋಪಾಲ ನಾಯಕ್, ಮ್ಯಾನೇಜರ್.

ಇದೇ ತಿಂಗಳ ತಾ. ೭ನೇ ಮಂಗಳವಾರ ಬೆಳಿಗ್ಗೆ ಮಂಜೇಶ್ವರ ಶ್ರೀ ಮದನಂತೇಶ್ವರ ದೇವಸ್ಥಾನದ ಹೆಬ್ಬಾಗಿಲಲ್ಲಿ ಒಂದು ದೊಡ್ಡ ತಗಡ ಪೆಟ್ಟಿಗೆಯು ಒಬ್ಬರಿಗೆ ಕಾಣಸಿಕ್ಕಿತೆಂದೂ ಅದನ್ನು ತೆರೆಯಲಾಗಿ ಅದರಲ್ಲಿ ಅನೇಕ ಆಭರಣಗಳಿದ್ದುವೆಂದೂ, ಇವು ಯಾರ ಸೊತ್ತೆಂದು ತಿಳಿದಿಲ್ಲವೆಂದೂ ಬಾತ್ಮಿಯಿದೆ.

ನೋಟೀಸು.

ಕಾಸರಗೋಡು ಡಿಸ್ಟ್ರಿಕ್ಟ್ ಮುನ್ಸೀಫ್ ಕೋರ್ಟಿನಲ್ಲಿ.

O. P. No. 92/'84.

ಶಿವರಾಮ ಕೃಷ್ಣನ್ (ವ್ಯಾನರ್) ಮೃತಪಟ್ಟ ದೇವಕಿ ಅಮ್ಮನ ಮಗ, ಇವನ ಕ್ಷೇಮ ಚಿಂತಕ P. K. ಕುಂಞಿ ರಾಮನ್, ಅಡಿಯೋಡಿ ಲಕ್ಷ್ಮಿ ಅಮ್ಮನ ಮಗ, ಪುಲಿಕ್ಕೋಡು ಗ್ರಾಮದಲ್ಲಿರುವವ—ಅರ್ಜಿದಾರ.

ಮತ್ತು

1. ಶಂಕರನ್ ಅಡಿಯೋಡಿ, ಕುಟ್ಟನ್ ಅಡಿಯೋಡಿ ಅಳಿಯ, 2. ಲಕ್ಷ್ಮಿ ಅಮ್ಮ 1ನೇ ರೆಸ್ಪಾಂಡೆಂಟು ಶಂಕರನ್ ಅಡಿಯೋಡಿಯ ಅಕ್ಕ, 3. ನಾರಾಯಣಿ ಅಮ್ಮ 2ನೇ ರೆಸ್ಪಾಂಡೆಂಟಳು ಲಕ್ಷ್ಮಿ ಅಮ್ಮನ ಮಗಳು, ಪುಲಿಕೋಡು ಗ್ರಾಮದಲ್ಲಿರುವವರು—ರೆಸ್ಪಾಂಡೆಂಟರು.

ಪುಲಿಕೋಡು ಗ್ರಾಮದಲ್ಲಿರುವ ಮೃತಪಟ್ಟ ದೇವಕಿ ಅಮ್ಮಗೆ ಎಲ್ಲಾ ಸ್ಥಿರಚರ ಸೊತ್ತುಗಳಿಂದ ವ ಪ್ರೊನೋಟಿನಿಂದ ಸಿಕ್ಕತಕ್ಕ ಐವಜನ್ನು ವಸೂಲು ಮಾಡುವರೆ ಅರ್ಜಿದಾರಗೆ ಸಕ್ಸೆಶನ್ ಸರ್ಟಿಫಿಕೇಟು ಕೊಡಿಸಬೇಕಾಗಿ ದಾಖಲು ಮಾಡಿದ ಮೇಲ್ಕಂಡ ಅರ್ಜಿಯು ತಾ. 20–8–'84ಕ್ಕೆ ತನ್ಸಿಗೆ ಇಟ್ಟಿರುತ್ತದೆ. ಆಕ್ಷೇಪಣೆಯುಳ್ಳವರು ತಮ್ಮ ಆಕ್ಷೇಪಣೆಗಳನ್ನು ಆ ದಿವಸ ಕೋರ್ಟಿಗೆ ದಾಖಲು ಮಾಡತಕ್ಕದೆಂತಲೂ ಈ ಮೂಲಕ ತಿಳಿಸೋಣಾಗುತ್ತದೆ.

C. M. Kunhambu Nair,
Vakil for Petitioner.

ಮಂಗಳೂರಿನ ಪೇಟೆಧಾರಣೆ.

ಸಾಮಗ್ರಿಗಳು	ಇಂದ	ವರೆಗೆ
	ರೂ. ಆ.	ರೂ. ಆ.
ರಾಶಿ ಅಕ್ಕಿ ...	3—10	4— 2
ಮುಡಿ ...	4— 4	4—13
ಗುಡ್ಡ ...	3—12	4— 4
ಸುಗ್ಗಿ ...	3—10	4—
ಊರ ಅವಲ್ ಬೆಲ್ತಿಗೆ ...	4— 0	4—10
ರಂಗೂನು ಬಿ. ಗೋ. ಗಳ್ಳ...	4—1[illegible]	5— 4
ಎಲ್ಲೂರು ಬಿ. ಕು. ಗಳ್ಳ...	3— 6	3— 8
ಗೋದಿ ಗೋಣಿ ಗಳ್ಳ ...	10— 0	12— 8
ತೊಗರಿ ಗೋಣಿ ಗಳ್ಳ ...	9— 8	10— 0
ಹುರುಳಿ ಗೋಣಿ ಗಳ್ಳ ...	6— 2	6— 4
ಕಡಲೆ ಗೋಣಿ ಗಳ್ಳ ...	8— 4	9— 8
ತೊಗರಿಬೇಳೆ ಗೋಣಿ ಗಳ್ಳ...	10— 0	17— 0
ಉದ್ದು ಗೋಣಿ ಗಳ್ಳ ...	7— 0	7— 8
ಹೆಸರು ಗೋಣಿ ಗಳ್ಳ ...	7— 0	7— 8
ಊರುಬೆಲ್ಲ ಖಂಡಿ ಗಳ್ಳ ...	40— 0	45— 0
ಉಪ್ಪು ಗೋಣಿ ಗಳ್ಳ ...	5— 4	5— 8
ಕೊಬ್ರಿ ಖಂಡಿ ಗಳ್ಳ ...	40— 0	47— 0
ಕೊಬ್ರಿ ಹಿಂಡಿ ಖಂಡಿ ಗಳ್ಳ...	19— 0	19— 8
ಎಳ್ಳಿಂಡಿ ಖಂಡಿ ಗಳ್ಳ ...	23—12	27— 0
ಕೊಬ್ರಿ ಎಣ್ಣೆ ಮಣ ಗಳ್ಳ...	2—14	3—14
ಎಳ್ಳೆಣ್ಣೆ ಮಣ ಗಳ್ಳ ...	5— 0	6— 0
ಚಿಮಿಣಿಎಣ್ಣೆ ಪೆಟ್ಟಿಗೆ ಗಳ್ಳ...	6— 8	8— 0
ಮೋರಿಸ ಸಕ್ಕರೆ ಮ. ಗಳ್ಳ...	3—10	3—14
ಹೊಸ ಮೆಣಸು ...	6— 4	7— 8
ಸಾಸಿವೆ ಮುಡಿ ಗಳ್ಳ ...	4— 8	5— 4
ಕಾಳುಮೆಣಸು ಖ. ಗಳ್ಳ ...	136— 8	137— 8
ಮೇಲಕ್ಕಿ ಮಣ ಗಳ್ಳ ...	18— 0	22— 0
ಜೋಸಗೇರುಬೀಜ ಮು. ಗಳ್ಳ	3— 3	3— 4
ಕಬ್ಬಿಣ ಖಂಡಿ ಗಳ್ಳ ...	42— 0	44— 0
ತಾಂಮ್ರತಗಡು ಮ. ಗಳ್ಳ...	10— 0	10—0
ತಾಂಮ್ರಪಾತ್ರಗಳು ಮ. ಗಳ್ಳ	13— 0	14— 8
ಬೀಟಿಬೆಳ್ಳಿ ಸೇರು ಗಳ್ಳ ...	14—12	15— 0
ಹಿತ್ತಾಳೆ ತಗಡು ಮ. ಗಳ್ಳ...	9— 0	9— 8
ಪವನು ಗಳ್ಳ ...	20—10	21— 0
ಹುಣಸೆ ಹುಳಿ ಖಂಡಿ ಗಳ್ಳ	30— 0	35— 0
ನೇಟಿವ್ ಕಾಫಿ ಖಂಡಿ ಗಳ್ಳ	182— 0	198— 0
ಫಿಬೇರಿ ಕಾಫಿ ಖಂಡಿ ಗಳ್ಳ...	296— 8	280— 8
ಹಳೆ ಅಡಿಕೆ ...	118— 0	124— 0
ಹೊಸ ಅಡಿಕೆ ...	62— 0	92 — 0

ಇಪ್ಪತ್ತೈದು ವರ್ಷಗಳ ಹಿಂದೆ ಮಂಗಳೂರು ಪೇಟೆಯ ಧಾರಣೆ

(ತಾ. ೬–೮–೧೯೦೯)

ಅಕ್ಕಿ	ರೂ. ೪–೧೧–೦ರಿಂದ ೫–೮–೦.
ಅಡಿಕೆ	ರೂ. ೮೫–೦–೦.
ತೆಂಗಿನೆಣ್ಣೆ	ರೂ. ೫–೧೦–೦.
ಕಾಫಿ ಖಂಡಿ ೧ರ	ರೂ. ೨೦೫–೦–೦.

ಸೈಂಟಿಫಿಕ್ ಸ್ವರ್ಣಾಭರಣಗಳು.

(ನಿಜವಾದ ಬಂಗಾರಕ್ಕೆ ಬದಲಾಗಿ ಇವು ತಯಾರಿಸಲ್ಪಟ್ಟವು.)

ಹೈಕೋರ್ಟು ಜಡ್ಜರುಗಳಿಂದಲೂ, ಸರಕಾರದ ಮಂತ್ರಿಗಳಿಂದಲೂ, ಇತರ ಪ್ರಮುಖರಿಂದಲೂ ಕೊಂಡಾಡಲ್ಪಟ್ಟಿವೆ.

ಪತ್ರವ್ಯವಹಾರವನ್ನು ಇಂಗ್ಲಿಷಿನಲ್ಲೇ ಮಾಡಬೇಕು.

ಹೊಸ ಕೆಟಲಾಗು ಧರ್ಮಾರ್ಥ.

ವಿಳಾಸ:-

The Scientific Gold Bangles Co., Ltd.,
Head Office:–43, Byrangimatum Street,
Post Box No. 203, Madras.

“ಕಥಾ ಕುಂಜ”

ಬೆಳಗಾಂವಿ.

ಉದ್ದಾಮ ಲೇಖಕರಿಂದ ಬರೆಯಲ್ಪಡುವ ಸಣ್ಣ ಕತೆ, ಸಣ್ಣ ನಾಟಕಗಳನ್ನು ಪ್ರಕಟಿಸುವ **ಮಾಸಿಕ ಇದೊಂದೆ!**

ವಾರ್ಷಿಕ ಚಂದಾ ಅಂಚೆವೆಚ್ಚ ಸೇರಿ ರೂ. 2—4—0

ಇಂದೇ ಚಂದಾದಾರರಾಗಿರಿ!

'WIMCO'

ಸ್ವಂತ ಉಪಯೋಗದಲ್ಲಿ ಯಾವಾಗಲೂ ವಿಶ್ವಾಸಯೋಗ್ಯವಾದ್ದ
ಬೆಂಕಿ ಕಡ್ಡಿಗಳೆಂದರೆ-

‘ವಿಮ್ಕೋ’

ಈಗಿನ ಎಕ್ಸೈಜ್ ಸುಂಕ ತೆತ್ತ ಮತ್ತು ಬೆಂಡ್ರೋಲು ಹಚ್ಚಿದ ಸದರಿ ‘ವಿಮ್ಕೋ’ ½ ಅರ್ಧ ಸೈಜು ಸುಮಾರು 40 ಕಡ್ಡಿಗಳಿರುವ ಪೆಟ್ಟಿಗೆಯ ಪ್ಯಾಕೆಟ್ ಬರುವುದುಂಟು.
ಬೆಲೆ ಗುರುಸ್ ಒಂದರ ರೂ. 2–2–0.
ಬೆಂಡ್ರೋಲ್ ಇಲ್ಲದ ಫುಲ್‌ಸೈಜ್ 60 ಕಡ್ಡಿಗಳ ಬಾಬ್ತು ಗ್ರೋಸ್ ಒಂದಕ್ಕೆ ರೂ. 2–4–0.
ಬೇಕಾದವರು ಈ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳುವುದು.

ಮೆಸ್ಸರ್ಸ್ ಸುಜೀರ್ ಅಚ್ಯುತ ರಾಯಪ್ಪ ನಾಯಕ್ ಮತ್ತು ಕಂಪೆನಿ,
ಬಂದರ, ಮಂಗಳೂರು.

ರೆಪ್ರೆಜೆಂಟೇಟಿವ್ಸ್:— ದಿ ವೆಸ್ಟರ್ನ್ ಇಂಡಿಯಾ ಮ್ಯಾಚ್ ಕಂಪೆನಿ, ಲಿಮಿಟೆಡ್,
ಮುಂಬಾಯಿ.

[ಗುಣಬಾರದಿದ್ದರೆ ಹಣ ವಾಪಾಸು]

ಸುಪ್ರಸಿದ್ಧ ವೈದ್ಯರಾದ ಎಮ್. ಕೆ. ರಜಪೂತ ಇವರ

ಸಂತತಿ ಪ್ರತಿಬಂಧಕ ಚೂರ್ಣ (ರಿಜಿಸ್ಟರ್ಡ)

ಬಹಳ ಸಾರಿ ಹಡೆಯುವುದರಿಂದ ಹೆಂಗಸರ ಆಕೃತಿಯು ಅಶಕ್ತಿಯಾಗುತ್ತದೆ. ಬಹಳ ಬಡತನದಲ್ಲಿ ವಿಶೇಷ ಮಕ್ಕಳಾಗುವುದರಿಂದ ದುಃಖವಾಗುತ್ತದೆ. ಈ ಕಾರಣದಿಂದಲೂ ಅಥವಾ ಬೇರೆ ಕಾರಣದಿಂದಲೂ ಮಕ್ಕಳನ್ನು ಹಡೆಯುವುದು ಬಂದಾಗಬೇಕೆಂದು ಇಚ್ಛಿಸುವವರು ಈ ಚೂರ್ಣವನ್ನು ಉಪಯೋಗಿಸಬೇಕು. ಇದರ ಸೇವನೆಯಿಂದ ಮುಟ್ಟಾಗುವಿಕೆಯು ನೇಮದಂತೆ ನಡೆಯುವುದು. ಶರೀರಕ್ಕೆ ಏನೂ ಅಪಾಯವಾಗದೆ ಸಂಸಾರಸುಖವು ಪೂರ್ಣವಾಗಿದ್ದು ಕೂಡಲೇ ಗರ್ಭಧಾರಣ ಬಂದಾಗುವುದು. ತದನಂತರ ಏನು ಮಾಡಿದರೂ ಸುರುವಾಗುವುದಿಲ್ಲ. ಕೂಡಲೇ ಪೂರಾ ವಿಚಾರ ಮಾಡಿ ಔಷಧ ಬೇಡಿರಿ. ಮುಖ್ಯ ಸರ್ಟಿಫಿಕೇಟು ಡಾಕ್ಟರ ಡಿ. ಪಿ. ವೈದ್ಯ, ಎಲ್. ಸಿ. ಪಿ. ಎಸ್., ಕೊಲ್ಹಾಪುರ. ಇವರು ಹೇಳುವದು ಕಾಣೇ: – ಈ ಚೂರ್ಣದಿಂದ ಯಾವ ತರದ ಅಪಾಯವಾಗದು ಗರ್ಭಧಾರಣವೂ ಆಗುವುದಿಲ್ಲ. ಪೂರ್ಣ ಗುಣಕಾರಿ ಡಬ್ಬಿ ಕಿಮ್ಮತ್ತು ರೂ. [illegible], ವಿ. ಪಿ. ಆಣೆ [illegible]

ವಿಳಾಸ:—ಸಂಜೀವಿನೀ ಔಷಧಾಲಯ ಮು. ಪೊ. ಮಿರಜಿ, S. M. C.

ಅದರ ಬೆಲೆಯೇನೂ ಇಲ್ಲ!—

ಅಂದರೆ,— ನೀವದರ ಹಲವು ಗುಣಗಳನ್ನು ಗಣಿಸಿದರೆ! ‘ಬೇಬೀಸ್ ಜುವೆನೋಲ್’ವು ಮಕ್ಕಳಿಗೆ, ಪ್ರಪಂಚದ ಅತಿದಿವ್ಯ ಟಾನಿಕ್ ಎಂಬುದಕ್ಕೆ,— ಇತ್ತಲಾಗೆ ದೇಶದ ಪ್ರಸಿದ್ಧ ವೈದ್ಯರೂ ವೈಜ್ಞಾನಿಕರೂ ಜರಗಿಸಿದ ಆಲ್ ಇಂಡಿಯಾ ಸೆಸಿಟಿರಿ ಮತ್ತು ಸೈಂಟಿಫಿಕ್ ಎಕ್ಸಿಬಿಶನ್‌ನಲ್ಲಿ ಸ್ವರ್ಣಪದಕವನ್ನು ಪಡೆದಿದೆಯೆಂಬುದಕ್ಕಿಂತ ಬಲವಾದ ರುಜುವಾತು ಬೇಕೆ? ಇಂದಿನಿಂದಲೇ ನಿಮ್ಮ ಮಗುವಿಗೆ ಈ ಸರಳ, ಸುರಕ್ಷಿತ ಹಾಗೂ ಶಾಸ್ತ್ರೀಕೃತ ಅಮೃತವನ್ನು ಕೊಡಲಾರಂಭಿಸಿರಿ. ನಿಮ್ಮ ಮಗುವು ಆರೋಗ್ಯ – ಪುಷ್ಟಿಗಳನ್ನು ಹೊಂದಿ ಬಹು ಕಾಲ ಬಾಳುವುದೇ ನಿಮಗೊಂದು ಮಹಾನಿಧಿಯ ಲಭ್ಯತೆಯಾದಂತೆ.

ಇದನ್ನೇ ಕೊಂಡುಕೊಳ್ಳುವ ಆಗ್ರಹವಿರಲಿ—

BABY'S Juvenol
RECOMMENDED BY EMINENT MEDICAL MEN.

ಎಲ್ಲ ಕೆಮಿಸ್ಟರಲ್ಲಿಯೂ ರೂ. 2 ಮತ್ತು ರೂ. 1¼ಕ್ಕೆ ದೊರೆಯುತ್ತದೆ.
ಅಥವಾ
ಮೆಸರ್ಸ್ ಪೈ ಫಾರ್ಮಸಿ ಎಂಡ್ ಕಂಪೆನಿ,
ಕೊಡಿಯಾಲಬೈಲು, ಮಂಗಳೂರು.

ಶಾಲಿವಾಹನ ಶಕ ೧೮೫೬ನೆಯ ಭಾವ ಸಂವತ್ಸರದ ಶ್ರಾವಣ ಶು। ೧ ಶನಿವಾರದಿಂದ– ಶ್ರಾವಣ ಶು। ೭ ಶುಕ್ರವಾರದ ವರೆಗಿನ ಪಂಚಾಂಗ. ([illegible] ವೃಷಭ—ಬೇಶ)

ತಾರೀಖು	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	[illegible]	ಸೂರ್ಯ ಉ.	ಸೂರ್ಯ ಅಸ್ತ	ವಿಶೇಷ
11	ಶನಿ	೧	೨೬.೪೬	ಪುಬ್ಬ	೬೦.೦	೨೬	6.19	6.52	[illegible]
12	ರವಿ	೨	೩೦.೪೪	ಉತ್ತರಾ	೩.೦೪	೨೭	6.20	6.51	
13	ಸೋಮ	೩	೩೩.೫೧	ಹಸ್ತ	೭.೧	೨೮	6.20	6.51	
14	ಮಂಗಳ	೪	೩೫.೧	ಚಿತ್ತ	೯.೦೪	೨೯	6.20	6.50	
15	ಬುಧ	೫	೩೫.೧೪	ಸ್ವಾತಿ	೧೦.೫೦	೩೦	6.20	6.50	
16	ಗುರು	೬	೩೪.೧	ವಿಶಾಖಾ	೧೨.೪೬	೩೧	6.20	6.49	
17	ಶುಕ್ರ	೭	೩೨.೦	ಅನುರಾಧಾ	೯.೪೪	೧	6.20	6.49	

ಜ್ಞಾನ.

(ಪ್ರಬಂಧಮಾಲೆ)

ಲೇಖಕರು:— ಶ್ರೀ ಶಿವರಾಮ ಕಾರಂತ.

ಅಧ್ಯಾಯ ೯.

ಉದ್ಯೋಗ.

ಕೃತ, ತ್ರೇತ, ದ್ವಾಪರ, ಕಲಿಗಳೆಂಬ ನಾಲ್ಕು ಯುಗಗಳ ಹೆಸರನ್ನು ನೀವು ಕೇಳಿರಬಹುದು. ಈಗ ನಡೆಯುವುದು ಕಲಿಯುಗವಂತೆ. ಅದರ ಪ್ರಥಮ ಪಾದವಾದ ಈ ಕಾಲದಲ್ಲಿ—ಹೊಸತೊಂದು ಯುಗವು ತೊಡಗಿದೆ—ಅದೇ ಉದ್ಯೋಗಯುಗ. ಉದ್ಯೋಗವು ತೊಡಗಿದಂತೆ ಅದರ ವಿರೋಧ ಸಾಧಿಸಲು ನಿರುದ್ಯೋಗವೂ ಜತೆಯಲ್ಲಿ ತೊಡಗಿದೆ. ಮೊದಲಿನ ಯುಗದ ಮುಖಂಡರು—ಕಬ್ಬಿಣ, ಕಲ್ಲಿದ್ದಲು—ಪೆಟ್ರೋಲು—ಇತ್ಯಾದಿಯಾದರೆ ಈ ಸಂಗಡದ ಮುಖಂಡರು ಮನುಷ್ಯರು.

ಉದ್ಯೋಗ ಯುಗವೆಂದರೆ—ಯಂತ್ರಯುಗ. ಮನುಷ್ಯನಿಂದಾಗುವ ಕೆಲಸವನ್ನು ಯಂತ್ರಗಳಿಂದ ಮಾಡಿಸುವುದು ಅದರ ಗುಟ್ಟು. ಯಂತ್ರಗಳು ಚುರುಕಾದಂತೆ, ಕೆಲಸವೂ ಚುರುಕಾಗುವುದು. ಕೈಯಿಂದ ನೂರು ಗಜ ನೂಲಲು ಒಂದು ತಾಸು ಹಿಡಿದರೆ ರಾಟೆಯೆಂಬ ಯಂತ್ರವು 800 ಗಜ ನೂಲುವುದು. ಈಗಿನ ದೊಡ್ಡ ಯಂತ್ರಗಳು ನಿಮಿಷಕ್ಕೆ ಅದರ 1,00,00,000-(ಇನ್ನೂ ಕೆಲವು ಸೊನ್ನೆಗಳಿವೆ.) ಪಾಲು ನೂಲುವುವು. ನಾನಾ ತರದ ಚುರುಕಿನ ಮಗ್ಗ ಮಾಡಿ, ನೇಯುವ ಕೆಲಸವನ್ನು, ಗಂಜಿ ಹಾಕುವ, ರಂಗಾಯಿಸುವ, ಮಡಚುವ, ಹೊಲಿಯುವ, ಉಡುವ ಕೆಲಸವನ್ನೂ ಸಹ ಯಂತ್ರಗಳೇ ಮಾಡುತ್ತವೆ. ಇವುಗಳಿಂದಾಗಿ ಮನುಷ್ಯನಿಗೆ ಇಂದು ತುಂಬಾ ವಿರಾಮ ದೊರಕಿದೆ. ಇಂದು ಯಂತ್ರವು ಮಾಡದ ಕೆಲಸವಿಲ್ಲ—ನಮಗಾಗಿ ಹಲ್ಲುಜ್ಜುವ ಯಂತ್ರದಿಂದ ಹಿಡಿದು ನಿದ್ರೆ ಮಾಡುವ ಯಂತ್ರಗಳ ತನಕ ಇವೆ.

ಈಗ ಇಲ್ಲಿ ಕುಳಿತರೆ ಇನ್ನೆರಡು ತಾಸಿನಲ್ಲಿ ಬೆಂಗಳೂರು, ಇನ್ನೂ ಕೆಲವೇ ದಿನಗಳಲ್ಲಿ ಹಿಂದೂಸ್ಥಾನದಿಂದ ಅಮೇರಿಕಕ್ಕೆ ಕಾಲು ತಾಸು ಸಾಕೆಂದೂ, ಮತ್ತೆ ಕೆಲವು ದಿನಗಳಲ್ಲಿ ಚಂದ್ರನ ತನಕ ೫ ತಾಸಿನಲ್ಲಿ ಹೋಗಿ ಬರಬಹುದೆಂದೂ ಅಂದಾಜು ಮಾಡಿದ್ದಾರೆ. ಒಂದು ಯಂತ್ರವು, ಇನ್ನೊಂದನ್ನು ಸೇರಿ ಇಷ್ಟೆಲ್ಲ ಅದ್ಭುತಕ್ಕೆ ಕಾರಣವಾಗಿದೆ.

ಮೊದಲು ಹುಟ್ಟಿದುದು—ಉಗಿಯಂತ್ರ. ಕೈಗಾಡಿಯನ್ನು ಹುರುಳಿ ಇಲ್ಲದೆ ಸಾಗಿಸುವ ಈ ಯಂತ್ರವನ್ನು ನೀವು ಕಂಡಿರಬಹುದು. ಮೋಟಾರಿನ ಬಾನೆಟು ಕಳಚಿದರೆ—ಅದರೊಳಗಿರುವುದು ಪೆಟ್ರೋಲು ಯಂತ್ರ. ಇದು ಒಂದು ಬಗೆಯ ಸರಾಯಿ ಕುಡಿದೇ ಓಡುತ್ತದೆ. ಅದರಿಂದಲೇ ಅದಕ್ಕೆ ಅಷ್ಟು ಚುರುಕುತನ. ವಿಮಾನಗಳನ್ನು ಒಯ್ಯುವ ಯಂತ್ರಗಳೂ ಸರಾಯಿ ಯಂತ್ರಗಳು. ಇವುಗಳಿಗೆ ಸರಾಯಿಯಿಂದ ಅಮಲೇರಿ ವೇಗವು ಮನೋವೇಗವಾಗುವಂತೆ, ಅದರಲ್ಲಿ ಕುಳಿತವರಿಗೂ ಹಾಗಾಗುವುದಿಲ್ಲವೆಂದು ಯಾಂತ್ರಿಕರು ಭರವಸೆ ಕೊಡುತ್ತಾರೆ. ಈ ಯಂತ್ರಗಳು ಇನ್ನಷ್ಟು ಸುಧಾರಣೆ ಯಾಗಲಿವೆಯಂತೆ. ಆಗ ಅವು ಸರಾಯಿಯ ಬದಲು ಭಂಗೀಪಾನಕವನ್ನು ಉಪಯೋಗಿಸಬಹುದು.

ಇದನ್ನು ನಡೆಯಿಸಲು ಒಬ್ಬೊಬ್ಬ ಎಂಜಿನಿಯರನು ಬೇಕು. ಈಗಾಗಲೇ—ಅವನಿಲ್ಲದೆ ರೇಡಿಯೋ—ಎಂಬ ದೆವ್ವದಂಥ ಶಕ್ತಿಯ ಸಹಾಯದಿಂದ ಅವನ್ನು ಬರಿದೆ ಓಡಾಡಿಸುತ್ತಾರೆ. ಇನ್ನು ಕೆಲವೇ ಸಮಯದಲ್ಲಿ—ಈ ಯಂತ್ರಗಳು ತಮ್ಮ ಆರೈಕೆಯನ್ನು ತಾವೇ ನೋಡಿಕೊಂಡು ತಮ್ಮ ಮಿದುಳಿನಿಂದ ತಾವೇ ಯೋಚಿಸುವುವಂತೆ. ಅಂದರೆ, ತಮಗೆ ಬೇಕಾಗುವ ಪೆಟ್ರೋಲಿನ ಅಂಗಡಿ ಬಂದೊಡನೆ ತಾನಾಗಿ ಕುಡಿದುಕೊಂಡು ಹೋಗುವುದು, ಮೈಗೆ ತಾನಾಗಿ ಗ್ರೀಸ್ ಸವರಿಕೊಳ್ಳುವುದು. ಟಾಯರು, ಟ್ಯೂಬು ತೂತಾದರೆ ತಾನೇ ರಿಪೇರಿ ನಡೆಸುವುದು—ಇತ್ಯಾದಿ. ಯಾಂತ್ರಿಕ ಮಿದುಳು ಬಂದು ಬಿಟ್ಟ ಬಳಿಕ, ತನಗೆ ಖುಶಿಬಂದಲ್ಲಿಗೆ ಅದು ಹೇಳ ಕೇಳದೆ ಸಂಚಾರಕ್ಕೆ ಹೋಗಬಹುದು.

ಹಿಂದಿನ ಕಾಲದಲ್ಲೂ ಇಂಥ ಯಂತ್ರಗಳು ಸ್ವರ್ಗದಲ್ಲಿ ಇದ್ದುವೆಂದೂ—ಅನ್ನುತ್ತಾರೆ. ಕಾಮಧೇನು, ಕಲ್ಪತರುಗಳಲ್ಲ ಬೇಡಿದ್ದನ್ನು ತಯಾರಿಸಿಕೊಡುವ ಯಂತ್ರಗಳಾಗಿದ್ದುವು. 'ಬಿಸ್ಕಿಟು, ಅಂಬೋಡೆ' ಬೇಕೆಂದು—ಇಂದ್ರನು ಈ ಧೇನುವನ್ನು [illegible]ಲು ಅದು ಕೂಡಲೆ ಕೊಡುತ್ತಿತ್ತಂತೆ. ಇಡ್ಲಿ, ದೋಸೆಗಳನ್ನು [illegible] ಸುರಿದರೆ ಅದನ್ನೂ ಕೊಡುತ್ತಿತ್ತಂತೆ. ಇದರಿಂದಾಗಿ ಅಲ್ಲಿನ ಸುರ[illegible] ಸಂಪತ್ತು ಅನುಕೂಲತೆಗಳ ವಿಚಾರವಾಗಿ ನಿಶ್ಚಿಂತರಾಗಿದ್ದರಿಂದೂ, ರಂಭೋರ್ವಶಿಯರಂಥ ನರ್ತಕಿಯರೊಡನೆ ದಿನದ ೨೪ ತಾಸುಗಳನ್ನು ಸಹ ಕುಣಿದೇ ಕಳೆಯುತ್ತಿದ್ದರಿಂದೂ, ಅವರಿಗೆ ಎರಡನೇ ಕೆಲಸವೇ ಇದ್ದಿಲ್ಲವೆಂದೂ ಪುರಾಣಗಳು ಹೇಳುವುವು. ಇದರಿಂದಾಗಿ ಅಲ್ಲವೆ—ರಾಕ್ಷಸರಿಗೆ ಅವರ ಮೇಲೆ ಸಿಟ್ಟು ಬಂದುದು. ನಮ್ಮಲ್ಲೂ ಯಂತ್ರಧೇನು, ಯಂತ್ರ ತರುಗಳು ಹೆಚ್ಚಾದರೆ ಈ ರೀತಿ ಸುರಾಸುರ ಯುದ್ಧವಾಗಬಹುದು. ಯುದ್ಧ—ದೇವತೆಗಳೇ ಈ ನವೀನ ಧೇನುಗಳನ್ನು ಕದಿಯಲು ಬರಬಹುದೆಂಬ ಭೀತಿಯಿದೆ.

ಮನುಷ್ಯನು ಮಾಡುವ ಕೆಲಸವನ್ನೆಲ್ಲಾ ಯಂತ್ರಗಳು ಮಾಡತೊಡಗಿವೆ. ಅಷ್ಟೇ ಸರಿಯಲ್ಲ, ಯಂತ್ರಿಕ ಮನುಷ್ಯರೇ ನಿರ್ಮಾಣವಾಗಿರುವರು. ಈ 'ರಾಬಟ್' ಜನರು ಅಂಗಡಿಯಲ್ಲಿ ಕುಳಿತು, ಬಂದ ಗಿರಾಕಿಗಳಿಗೆ ಏನು ಬೇಕೆಂದು ಕೇಳುವುವು. ವಸ್ತುಗಳನ್ನು ಮಾರುವುವು. ಬಂದ ದುಡ್ಡನ್ನು ಯಜಮಾನನಿಗೆ ಕೊಡುವುವು. ಇವುಗಳ ಬುದ್ಧಿ ಇನ್ನಷ್ಟು ಚುರುಕಾದರೆ ಕಾಸನ್ನು ತಾವೇ ಇರಿಸಿಕೊಳ್ಳಲೂ ಬಹುದು. ಒಮ್ಮೆ ಇಂಥ ಒಂದು ಯಂತ್ರ ಮನುಷ್ಯನನ್ನು ಬೆಲೆಗೆ ಕೊಂಡರೆ ನಿಮ್ಮ ಚಿಂತೆ ಪರಿಹಾರವಾಯಿತೆಂದು ತಿಳಿಯಿರಿ.

ಬೆಳಿಗ್ಗೆ—ನಿಮ್ಮನ್ನು ಬೇಗ 9 ಘಂಟೆಗೆ ಎಚ್ಚರ ಮಾಡಲು ಹೇಳಿದರೆ—ಅವನು ಬಂದು ಎಚ್ಚರ ಮಾಡಿಯಾನು. ಕಾಫಿ—ಟೀ ತಂದು ಕೊಡುವನು. ನಿಮ್ಮ ಬೂಟ್ಸನ್ನು ಉಜ್ಜುವನು. ಕೋಟಡಿಯನ್ನು ಗುಡಿಸುವನು. ಗೆರೇಜಿಗೆ ಹೋಗಿ ನಿಮ್ಮ ಕಾರನ್ನು ತಂದು ನಿಮ್ಮನ್ನು ವಿಹಾರಕ್ಕೆ ಸಂತೆಯ ತನಕ ಒಯ್ಯುವನು. ಸಂಜೆ—ಉದ್ಯಾನಕ್ಕೆ—ಸಮುದ್ರ ತೀರಕ್ಕೆ ಒಯ್ಯುವನು. ಅಲ್ಲಿ ನಿಮ್ಮ ಜತೆಯಲ್ಲಿ ಗೆಳೆಯನೋ ಗೆಳತಿಯೋ ಆಗಿ ಕುಣಿಯುವನು—ನಡು ಕತ್ತಲೆಗೆ ಮನೆಗೆ ಕರೆದು ತರುವನು. ನಿಮಗೆ ಬೇಕಾದ ಪಾನೀಯವನ್ನು ಕೊಡುವನು. ತೂಕಡಿಕೆ ಬರಲು, ಹಾಸಿಗೆಯನ್ನು ಬಿಡಿಸಿ ಕೊಡುವನು. ನೀವು ನಿದ್ರೆ ಮಾಡಿರಿ. ಅವನಿಗೆ ನಿದ್ರೆಯೇ ಬೇಕಿಲ್ಲ. ಇಂಥ ಅದ್ಭುತ ಯುಗದಲ್ಲಿ ನಾವಿರುವುವೆಂದು ನಿಮಗೆ ತಿಳಿದಿದೆಯೋ?

ಒಂದೆ ನಿಮಿಷಕ್ಕೆ ಒಂದು ಸಿಗರೇಟು ಆಗುತ್ತಿದ್ದರೆ—ಈ ಕ್ಷಣಕ್ಕೆ ಒಂದು ಯಂತ್ರವು 1,000,000 ಸಿಗರೇಟು ಮಾಡಬಲ್ಲುದು. ಒಂದೇ ತಾಸಿನಲ್ಲಿ ನಿಮ್ಮೂರಿನ ನದಿ ಸರೋವರಗಳನ್ನು ವಿಸ್ಕಿಯಿಂದಲೇ ತುಂಬಿಸುವ ಶಕ್ತಿಯುಳ್ಳ ಯಂತ್ರಗಳಿವೆ. ಒಂದೇ ದಿನದಲ್ಲಿ ಪ್ರಪಂಚವನ್ನೆಲ್ಲ ವಸ್ತ್ರದಿಂದ ಮುಚ್ಚಿಸುವಷ್ಟು ಬಟ್ಟೆ ನಿರ್ಮಾಣ ಮಾಡಬಲ್ಲ ಯಂತ್ರಗಳಿವೆ. ಅರೆ ತಾಸಿನಲ್ಲಿ ತಿಂಗಳಿಗೆ ಬೇಕಾಗುವ ಅಡಿಗೆ ಮಾಡುವ ಯಂತ್ರಗಳು, ಅವು ಹಳಸಿ ಹೋಗದಂತೆ ನೋಡುವ ಯಂತ್ರಗಳೂ ಇವೆ. ಈಗಿನ ಯಂತ್ರಗಳ ಉದ್ಯೋಗಶೀಲತೆ ಅಷ್ಟು ಹೆಚ್ಚಿದೆ. ಇದರಿಂದಾಗಿ ಅವುಗಳ ಅಪ್ಪನಾದ ಮನುಷ್ಯನಿಗೆ ಉದ್ಯೋಗವು ಇಲ್ಲವಾಗಿದೆ. ಬ್ರಹ್ಮನ ಸೃಷ್ಟಿಯ ಕಾರ್ಯವನ್ನು ಅವನೇ ಮುಂದರಿಸುತ್ತಿರುವುದರಿಂದ ಅವನಿಗಾದರೂ ವಿರಾಮವಿರುವಂತೆ ನಮಗೂ ಇಂದು ವಿರಾಮ ದೊರೆತಿದೆ.

ಇಂದು—ನಿರುದ್ಯೋಗಿಗಳ ಸಂಖ್ಯೆ ಬಲು ಹೆಚ್ಚಿದೆಯೆಂದೂ ಅದರಿಂದ ದೇಶಕ್ಕೆ ಅಪಾಯ ಉಂಟೆಂದೂ ಅನ್ನುತ್ತಾರೆ ಹಲವರು. ಇದೇಕೋ ತಿಳಿಯದು. ಹೀಗಿರಲು—'ನಿರುದ್ಯೋಗಿ'—ಎಂಬ ಪದಕ್ಕೆ ಅರ್ಥವೇನೆಂದು ನಾವು ವಿಚಾರಿಸಬೇಕು. ನಿರುದ್ಯೋಗಿ—ಎಂದರೆ ಕೆಲಸವಿಲ್ಲದವನು—ಎಂದು. ಎಲ್ಲ ಕೆಲಸವಿಲ್ಲದವರೂ ಈ ಸಾಲಿಗೆ ಸೇರುವುದಿಲ್ಲ. ಹಣವಿರುವವರು ಉದ್ಯೋಗ ಮಾಡದಿದ್ದರೂ ನಿರುದ್ಯೋಗಿಗಳಲ್ಲವೆಂದೂ, ಹಣವಿಲ್ಲದೆ ಸುಮ್ಮನಿರುವವರು ನಿರುದ್ಯೋಗಿಗಳೆಂದೂ—ಅಂಥವರಿಂದ ಮಾತ್ರ ದೇಶಕ್ಕೆ ಹಾಳೆಂದೂ ತಿಳಿಯತಕ್ಕದ್ದು.

ಶ್ರೀಮಂತರು ಕೆಲಸವನ್ನು ಮಾಡಬೇಕಿಲ್ಲ ನಿಜ. ಹಿಂದೆ ಇಂದ್ರನು ಕೆಲಸ ಮಾಡಿದ್ದನೇ! ಅವನಿಗೆ ಸುರಧೇನು ವಿತ್ತು. ರಾಕ್ಷಸರಿಗೆ—ಸುರಧೇನುವಿದ್ದಿಲ್ಲ. ಆದುದರಿಂದ ರಾಕ್ಷಸರು ಮಾತ್ರ ಅಡುಗೆ ಮಾಡುವುದು, ಬೇಟೆಯಾಡುವುದು; ಈ ಎಲ್ಲಾ ಕೆಲಸವನ್ನು ಮಾಡುವುದು ಅವಶ್ಯವಾಯಿತು. ಈಗಿನ ಶ್ರೀಮಂತರು—ಇಂದ್ರರು. ದುಡ್ಡಿಲ್ಲದ ನಿರುದ್ಯೋಗಿಗಳು—ರಾಕ್ಷಸರು. ಅಡುಗೆ ಇವರೇ ಮಾಡಿ, ಬೇಯಿಸುವುದು ಇವರ ಕರ್ತವ್ಯ. ಇದರಿಂದಾಗಿ—ಹಿಂದಿನ ರಾಕ್ಷಸರಂತೆ ಈಗಿನ ರಾಕ್ಷಸರು ಯಂತ್ರಧೇನುವನ್ನು ಕದಿಯಲು ಯತ್ನಿಸುತ್ತಿರುವರೆಂದು ಅನ್ನುತ್ತಾರೆ. ಆದರೆ ದೇವರು ಯಾವಾಗಲೂ ದೇವತೆಗಳ ಸಲುವಾಗಿಯೇ ಹೋರಾಡುವವರಲ್ಲವೆ!

ನಿರುದ್ಯೋಗದಿಂದ ಜಗತ್ತಿಗೆ ಕೆಡುಕಿಲ್ಲ. ಮನುಷ್ಯನಿಗೆ ವಿರಾಮ ಬೇಕು ಇದರಿಂದಲೇ—ಇಂದ್ರಲೋಕದವರೆಲ್ಲ ಉತ್ತಮ ಹಾಡುಗಾರರು, ನರ್ತನಕಾರರೂ ಆದರು. ಇಂದ್ರಲೋಕವು ಕಲಾ ಲೋಕವಾಯಿತು. ರಾಕ್ಷಸರು—ಕಲಾಹೀನರೂ ಕ್ರೂರಿಗಳೂ ಆದರು. ಒಂದೇ, ಒಂದು ಕವಿತೆಯನ್ನು ಬರೆಯದೆ ಹೋದರು. ಈಗಲೂ ಹಾಗಾಗುವ ಚಿಹ್ನೆ ಬಹಳವಿದೆ. ಶ್ರೀಮಂತರು—ಯಾವತ್ತು ಜೀವನವೂ ರಸಿಕ ಜೀವನ ಮಾಡುತ್ತಾರೆ. ಎಲ್ಲೆಲ್ಲಿ ಸೌಂದರ್ಯವಿದೆಯೋ ಅಲ್ಲಿ ಅದನ್ನು ಬೆನ್ನಟ್ಟಿ ಹೋಗಿ ಒಲಿಸಿಕೊಳ್ಳುತ್ತಾರೆ. ಆಗ ಉಳಿದ ನಿರುದ್ಯೋಗಿಗಳ ಕರ್ತವ್ಯವೇನು?...ಅವರು ಶ್ರೀಮಂತರಿಗಾಗಿ ಕಲಾವಿದರಾಗಬಹುದು.

ನಿರುದ್ಯೋಗಿಗಳ ಸಂಖ್ಯೆ ಬಹಳವಾಗಿದ್ದರೂ ತೊಂದರೆಯಿಲ್ಲ. ಹಿಂದೆ ರಾಕ್ಷಸರೂ ಅಸಂಖ್ಯಾತರಾಗಿಯೇ ಇದ್ದರು. ಇವರಿಗೆ ನಿರುದ್ಯೋಗವು ದೊರೆತುದರಿಂದ ತಮ್ಮ ಶಕ್ತಿಯನ್ನು ಅವರು ಬೆಳೆಯಿಸಿಕೊಳ್ಳಬಹುದು. ತಮ್ಮ ಹಸಿವನ್ನು ಜಯಿಸಿ ಅವರು ತಪಸ್ಸನ್ನು ಮಾಡಬಹುದು. ಇಹಲೋಕದ ನಶ್ವರತೆಯನ್ನು ಅರಿತು ಪರಶಿವನನ್ನು ಒಲಿಸಿಕೊಳ್ಳಬಹುದು. 'ಸಂಸಾರವು ಮಾಯಾಮಯ'ವೆಂದು ಕಾವ್ಯ, ತತ್ವಜ್ಞಾನಗಳನ್ನು ಬರೆಯಬಹುದು. ಅವರಲ್ಲಿ ಕೆಲವರು ಚಿತ್ರಕಾರರಾಗಿ ಸೃಷ್ಟಿ ಸೌಂದರ್ಯವನ್ನು ಬರೆದು ಅದರವೇ ದೃಷ್ಟಿ ತಾಗುವಂತೆಯೂ ಮಾಡಬಹುದು.

ಇಷ್ಟು ಕೆಲಸವಾದ ಬಳಿಕವೂ ನಿರುದ್ಯೋಗಿಗಳು ಉಳಿಯುವುದು ಸಹಜ. ಅಂಥವರ ಸಲುವಾಗಿ ದೇಶದ ಶ್ರೀಮಂತ ಮುಖಂಡರು—'ಸ್ವರ್ಗದ ಸಲುವಾಗಿ ಅಡಿಯನ್ನು ಮುಂದಿಡಲು'— ಸಮರವನ್ನು ಕಲ್ಪಿಸುತ್ತಾರೆ. ಒಂದು ಯುದ್ಧವೆಂದರೆ ಕೋಟಿಗಟ್ಟಲೆ ಜನರಿಗೆ ದೇಶ ಭಕ್ತಿಯನ್ನು, ಶೌರ್ಯ ಪರಾಕ್ರಮಗಳನ್ನು ತೋರಿಸುವ ಸಂದರ್ಭ. ನಿರುದ್ಯೋಗಿಗಳು ಬರೇ ಸ್ವರ್ಗಸಾಧಕ ಯುದ್ಧ ಮಾಡುತ್ತಿದ್ದರೆ, ಉಳಿದ ಶ್ರೀಮಂತರು ಅವರಿಗಾಗಿ ಹಣವನ್ನು ನದಿಯಂತೆ ಸುರಿಯುವರು. ಎಷ್ಟು ಬಂದರೂ, ಅವರೆಲ್ಲರಿಗೂ ತಪ್ಪದೆ ಸುರಲೋಕವು—ದೊರೆಯುವಂತೆ ಯಂತ್ರ ತುಫಾಕಿ, ಯಂತ್ರ ವಿಮಾನ, ಯಂತ್ರ ಮೋಕ್ಷದಾಯಿನಿ ವಿಷಗಾಳಿ ಮೊದಲಾದ ಸಲಕರಣೆಗಳನ್ನು ನಿರ್ಮಿಸಿದ್ದಾರೆ. ಇಂದಿನ ಉದ್ಯೋಗ ಯುಗದಲ್ಲಿ ಕೆಲಸವಿಲ್ಲದವರೇ ಇಲ್ಲ.

[ಸಶೇಷ]

ಬಿಹಾರಿನ ಸಂಕಷ್ಟ ಪೀಡಿತರಿಗೆ ಸಂದ ಸಹಾಯ.

ಭೂಕಂಪ ಸಂಕಷ್ಟಪೀಡಿತ ಬಿಹಾರ್ ನಿವಾಸಿಗಳಿಗೆ, ಸಂದ ಸಹಾಯವೆಷ್ಟೆಂಬುದನ್ನು ಬಾಬುರಾಜೇಂದ್ರ ಪ್ರಸಾದರವರು ಈ ರೀತಿಯಾಗಿ ವಿವರಿಸಿರುವರು:—ಜೂನ್ ತಿಂಗಳ ತನಕ ಆದ ಧನಸಂಗ್ರಹ ರೂ. ೨೭ ಲಕ್ಷ; ಸಾಮಾನುಗಳು ಸುಮಾರು ೩ ಲಕ್ಷ ರೂಪಾಯಿಗಳಷ್ಟು; ಮಾರ್ಚ ತಾ. ೩೧ರ ತನಕ ೧,೯೦,೦೦೦ ರೂಪಾಯಿಗಳು ನಗದಿಯಾಗಿ ಸಹಾಯ ಧನವಾಗಿ ಸಂದಿವೆ. ಈ ತನಕ ೭೫೦೦ ಬಾವಿಗಳನ್ನು ತೋಡಿಸಲಾಗಿದೆ; ೭೦೦ ಕೆರೆಗಳನ್ನೂ ಅಗೆಸಿರುವರು. (ಬಿಹಾರ್ ಭೂಕಂಪದಲ್ಲಿ ಸುಮಾರು ಒಂದು ಲಕ್ಷ ಬಾವಿಗಳೂ ಕೆರೆಗಳೂ ಹುಗಿದು ಹೋಗಿವೆಯಂತೆ.) ಚಂಪಾರಣ್ಯದಲ್ಲಿ ನಿರುದ್ಯೋಗಿಗಳಿಗೆ ಸಂದ ಸಹಾಯ ದ್ರವ್ಯ ರೂಪಾಯಿ ೧೭,೦೦೦; ಮುಜಫರಪುರದಲ್ಲಿ ರೂ. ೧೯,೦೦೦; ಕಬ್ಬಿನ ವ್ಯವಸಾಯಗಾರರು, ದಾಸ್ತಾನಿರುವ ಕಬ್ಬನ್ನು ಮಾರಾಟ ಮಾಡುವಂತೆ ಸಹಾಯ ಧನವಾಗಿ ರೂ. ೨೦ ಸಾವಿರ ಸಂದಿದೆ. ಜೂನ್ ತಿಂಗಳಾಂತ್ಯದಲ್ಲಿ ರೈಲ್ವೆ ಕಂಪೆನಿಯವರು ರವಾನೆ ದರಗಳ ರಿಯಾಯತಿಯನ್ನು ರದ್ದುಪಡಿಸಿದರಂತೆ. ನೆರೆಹಾವಳಿಯೂ ನಿರೀಕ್ಷಿಸಿದುದಕ್ಕಿಂತ ಮೊದಲೇ—೫೦ ಸಾವಿರ ಜನರನ್ನು ನಿರಾಶ್ರಿತರನ್ನಾಗಿ ಮಾಡಿದೆ. ಇವರ ಸಹಾಯಾರ್ಥ ೫೦ ಸಾವಿರ ರೂಪಾಯಿಗಳು ಮಂಜೂರಾಗಿವೆ.

ಸಂಕ್ಷೇಪ ವಾರ್ತೆ.

ಮದರಾಸು ಒಳಸಂಚಿನ ಮೊಕದ್ದಮೆಯ ಇಬ್ಬರು ಕೈದಿಗಳು ಇದೇ ಕಳೆದ ತಾ. ೧೭ರಿಂದ ಕೊಯಮುತ್ತೂರು ಜೈಲಿನಲ್ಲಿ ಉಪವಾಸ ಹಿಡಿದಿರುವರೆಂದೂ, ಬಲಾತ್ಕಾರದಿಂದ ಆಹಾರ ಕೊಡಲಾಗುತ್ತಿದೆಯೆಂದೂ ಪ್ರಕಟವಾಗಿವೆ.

ಜಯಲಕ್ಷ್ಮಿ ಎಂಬ ಹೆಸರಿನ ಗೃಹಿಣಿಯೊಬ್ಬಳು ಮದರಾಸಿನಲ್ಲಿ ಸೀರೆಗೆ ಬೆಂಕಿ ಹತ್ತಿ, ಆಸ್ಪತ್ರೆಗೊಯ್ಯಲ್ಪಟ್ಟರೂ ಫಲಕಾರಿಯಾಗದೆ, ಮೃತಪಟ್ಟಳು.

[illegible]

The Canara Bank Ltd., Puttur.

ದ ಕೆನರಾ ಬ್ಯಾಂಕ್ ಲಿಮಿಟೆಡ್,

ಪುತ್ತೂರು.

ಈ ಕೆಳಗೆ ಹೆಸರು ಕಾಣಿಸಿದವರು ಪುತ್ತೂರಿನ ಬ್ಯಾಂಕಿನಿಂದ ಚಿನ್ನಾಭರಣಗಳ ಆಧಾರದ ಮೇಲೆ ಪಡೆದ ಸಾಲದ ಮೊಬಲಗನ್ನಾಗಲೀ, ಅದರ ಬಡ್ಡಿಯನ್ನಾಗಲೀ ಕ್ಲಪ್ತದಲ್ಲಿ ಕೊಡದೆ ಬಾಕಿ ಮಾಡಿದುದರಿಂದ ಅವರಿಗೆ ಬಿಟ್ಟ ರಿಜಿಸ್ಟ್ರಿ ನೋಟೀಸು ಮರಳಿ ಬಂದುದರಿಂದಲೂ ಈ ಮೂಲಕ ತಿಳಿಯಪಡಿಸುವದೇನೆಂದರೆ ಸದ್ರಿಯವರಿಂದ ಬ್ಯಾಂಕಿಗೆ ಸಲ್ಲತಕ್ಕ ಸಾಲದ ಅಸಲು, ಬಡ್ಡಿ, ರಿಜಿಸ್ಟ್ರಿ ನೋಟಿಸು ಖರ್ಚಿನ, ಈ ನೋಟೀಸು ಖರ್ಚು ಸಹ ಕೂಡಿಸಿ ತಾ. 20-8-34ರ ಒಳಗೆ ತಂದು ಕೊಟ್ಟು ಅಡವಿಟ್ಟ ನಗಗಳನ್ನು ಬಿಡಿಸಿಕೊಂಡು ಹೋಗದೆ ಬಾಕಿಯಿಟ್ಟಲ್ಲಿ ಅಡವಿಟ್ಟ ನಗಗಳನ್ನು ತಾ. 28-8-34ನೇ ಮಂಗಳವಾರ ಬೆಳಗ್ಗೆ ಘಂಟೆ 9ಕ್ಕೆ ಬ್ಯಾಂಕಿನ ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡಲಾಗುವುದು.

1. L. 464/33. Ganapathi Naik S/o Annappa Naik, Cultivator, Neralakatta, Uppinangady Rs. 40—0—0
2. L. 83/31. B. R. Krishna Pai, Pushpalaya Estate Bhagamandala Rs. 45—0—0.
3. L. 7/33. B. R. Krishna Pai, Pushpalaya Estate, Bhagamandala Rs. 60—0—0.
4. L. 521/33. Do Rs. 150—0—0.
5. L. 629/33. Do Rs. 65—0—0.
6. L. 689/33 Do Rs. 70—0—0.

Canara Bank Ltd., Puttur, 8—8—34. } A. Venkat Rao, Agent.

([illegible])

ರಕ್ತ ಸುರಿಸದೆ, ಶಾಂತ [illegible] ಸರಿಯಾದ [illegible]ಯನ್ನು ಮಾಡಿ, ತನ್ನ ಶಕ್ತಿ [illegible] ನಿರಾಕರಿಸುವ ಸಂಘವನ್ನು ರೈತರ ಸಂಘಗಳು ರಚಿಸಬೇಕು. ಇದು ಕಾಯಿದೆಭಂಗದ ಆಕಾರಕ್ಕೆ ತಿರುಗದೆ ತನ್ನ ಅಸಾನುಕೂಲತೆಯ ಪ್ರದರ್ಶನದ ರೂಪದಲ್ಲೇ ನಿಲ್ಲುವಂತೆ ರೈತ ಸಭೆಯು ಜಾಗ್ರತೆಯಾಗಬೇಕು.

ಶಕ್ತಿಪೂರ್ಣ ವಿರೋಧವು ಬಾರದಿರುವಲ್ಲಿ ತನ್ನ ತಪ್ಪನ್ನು ತಿದ್ದಿಕೊಳ್ಳುವ ಅಭ್ಯಾಸವು ಸರಕಾರಕ್ಕಿಲ್ಲ. ಅದರ ಯಂತ್ರವನ್ನು ತಿರುಗಿಸುವ ಕೆಲಸವು ರೈತರಿಂದಲೇ ಆಗಬೇಕಾಗಿದೆ. ಸುವ್ಯವಸ್ಥಿತ ಚಳವಳಿಯಿಲ್ಲದೆ ಯಾವ ಸಾಧನೆಯೂ ಫಲಿಸದು. ಪರರ ಬೋಧನೆಯಿಂದಾಗುವ ಜಾಗೃತಿಯು ಬತ್ತಿಹೋಗುವದು; ಆಪತ್ತಿಗೊಳಗಾಗಿ ಹುಟ್ಟುವ ಎಚ್ಚರಿಕೆಯಲ್ಲಿ ಸ್ವಾಭಾವಿಕತೆಯಿದ್ದು ಪರಿಣಾಮವನ್ನದು ಕೊಡುತ್ತದೆ. ದಕ್ಷಿಣಕನ್ನಡದ ರೈತರು ಆವೇಶದಿಂದಲ್ಲ, ಆಡಂಬರದಿಂದಲ್ಲ,— ಕೇವಲ ತನ್ನ ಆತ್ಮರಕ್ಷಣೆಯ ಅಗತ್ಯವಿದ್ದು ಚಳವಳಿಸಬೇಕಾಗಿ ಬಂದಿದೆ. ತೀರ್ವೆಯು ಕಡಿಮೆಯಾಗಬೇಕೆಂದು ಸರಕಾರದೆದುರು [illegible] ಕೊಳ್ಳುವೆವು, ಕಾರಣಯುಕ್ತವಾದ ಚಳವಳಿ ಎಲ್ಲಿ ಹುಟ್ಟುತ್ತದೋ ಅಲ್ಲಿಯೇ [illegible] ಗತಿಯುಳ್ಳ ತೀರ್ವೆಯೇರುವುದೆಂದರೆ ಎಂತಹ ವಿಪರೀತವಿದು! ರೈತ ಹಿತಾಕಾಂಕ್ಷಿಗಳು ಈ ಕಡೆಗೆ ಹೆಚ್ಚಿನ ಗಮನವಿತ್ತು ಕೂಡಲೇ ಕಾರ್ಯಕ್ಕೆ ಕೈಹಚ್ಚದಿದ್ದರೆ, ಚಿರಕಾಲ ಬಾಳುವ ತಪ್ಪೊಂದನ್ನು ಮಾಡಿಟ್ಟ ಜವಾಬ್ದಾರಿಯನ್ನು ಹೊರಬೇಕಾಗುವುದು. ಜಿಲ್ಲಾ [illegible]ದಾರರ ಸಂಘವು ಈ ಕಡೆಗೆ ಗಮನಕೊಡುತ್ತದೆ?

M. V. H.

ಅಮೇರಿಕದ ಪ್ರಸಿದ್ಧ ಸರ್ಜನ್ ದಂತವೈದ್ಯರಾದ—
ಡಾ। ವಿರೋ ಪಿ. ಡೆ ಸಾ, ಡಿ. ಡಿ. ಎಸ್.

ಇವರು "ಕೊಪ್ರನ್" ದಂತಮಂಜನದ ವಿಷಯವಾಗಿ ಹೀಗೆ ಬರೆಯುತ್ತಾರೆ:—

ನಾನು, ಶಾಸ್ತ್ರೋಕ್ತವಾದ ಈ 'ಕೊಪ್ರನನ್ನು' ನನ್ನ ವೈದ್ಯಕೀಯ ಸಲಹೆ ಪಡೆದ ದಂತ ಬಾಧೆಯುಳ್ಳವರಿಗೆ ನಿರವಿಸಿ, ಜಾಗರೂಕತೆಯಿಂದ ಅದರ ಗುಣಗಳನ್ನು ಕಂಡಿರುವೆನು.

ಕೊಪ್ರನ್ ದಂತ ಮಂಜನದ ಗುಣವಿವರವೆಲ್ಲ ಅಕ್ಷರಶಃ ನಿಜ. ಅದರಲ್ಲುಪಯೋಗವಾಗುವ ಮುಖ್ಯ ವಸ್ತುಗಳೆಲ್ಲ ಪ್ರತ್ಯೇಕಪ್ರತ್ಯೇಕವಾಗಿ ಬಹು ಕಾಲದಿಂದ ಹಲ್ಲುಗಳಿಗೆ ಬಲವೀವ ಗುಣಗಳುಳ್ಳವೆಂದು ಸಿದ್ಧಾಂತವಾಗಿರಲು, ಅವುಗಳೆಲ್ಲ ಸೇರಿ ಉಂಟಾದ ಈ ಮಂಜನವು ಅತ್ಯುತ್ತಮವೇ ಆಗಿದೆ.

ಬಾಯಿಯೊಳಗಿನ ಹಸಿ ಕಿಡ್ಡಿಯೇ ಹಲ್ಲುಗಳಿಗೆ ಆರೋಗ್ಯಕರ; ಇತರ ಜಿನಸುಗಳೊಂದಿಗೆ ಈ ಬಾಯೊಳಿನ ಸತ್ವವು ಸೇರಿದೆಯಾದ ಕಾರಣ 'ಕೊಪ್ರನ್' ಒಂದು ಆದರ್ಶ ದಂತಮಂಜನವಾಯಿತು. ನಾನು ಕಂಡಂತೆ ಕೊಪ್ರನಿನಿಂದ ವಸಡುಗಳಿಂದಾಗುವ ಸ್ರಾವ ನಿಂತು, ಅವು ಪುಷ್ಟಿಗೊಂಡು, ನವಚೇತನ ಹೊಂದುತ್ತವೆ. ಅದರ ಉಪಯೋಗದಿಂದ ಬಾಯೊಳಗಿನ ವಿಷಕಾರಕ ಕ್ರಿಮಿಗಳು ನಾಶವಾಗುವುವು. ಅದರ ರುಚಿಯು ಹಿತಕರವಾಗಿದ್ದು, ಬಾಯಿಯ ದುರ್ವಾಸನೆ ನೀಗಿ, ಉಚ್ಛ್ವಾಸಕ್ಕೊಂದು ಸೌರಭವುಂಟಾಗುವುದು.

ಈಗ ಪೇಟೆಯಲ್ಲಿರುವ ದಂತಮಂಜನಗಳಲ್ಲಿ ಕೊಪ್ರನಿಗೆ ಅಗ್ರಸ್ಥಾನವಿರುವುದನ್ನು ನಾನು ಮುಂದಾಗಿ ಕಾಣಬಲ್ಲೆ.

ಎಲ್ಲೆಲ್ಲೂ ದೊರೆವುದು.

ಕೊಪ್ರನಿಗೆ ಶಿಫಾರಸು ಬೇಕಾಗಿಲ್ಲ; ಬೇಕು ನಿಮ್ಮದೊಂದು ಪರೀಕ್ಷೆ ಮಾತ್ರ.

ಅದನ್ನುಪಯೋಗಿಸಿದಂತೆ ಆರೋಗ್ಯಕರವಾಗಿ ಬೆಳೆವುವು ನಿಮ್ಮ ಹಲ್ಲುಗಳು; ಅದುವೇ ಕೊಪ್ರನಿಗೆ ಸರ್ವ ಜನಾದರವನ್ನು ಸಾಧಿಸಿಕೊಡುವುದು.

ತಯಾರಿಸುವವರು:—

ಕೊಪ್ರನ್ ಕೆಮಿಕಲ್ ಕೊ।, ಲಿಮಿಟೆಡ್, 83/85 ತಾರದೇವ್ ರೋಡ್, ಬೊಂಬಾಯಿ.

The Canara Public Conveyance Company, Ltd., Mangalore.

WE TAKE UTMOST CARE OF PASSENGERS.

Read the following letter:—

Modern Hindu Hotel,
Calicut, 17—6 1934.

Dear Sir,

We wish to thank you for all that you did for us to make our stay at Mangalore comfortable. It is extremely nice of you to have looked after us as you did.

Yours faithfully,

(Sd.) **A. V. Ramaswami.**

The same service is offered to all. We call for reports from passengers, if they have failed to receive similar attention and assure to take prompt action to see that inconvenience is not repeated.

Chikmagalur Public Conveyance Motor Service, Chikmagalur.

ಚಿಕ್ಕಮಗಳೂರು ಪಬ್ಲಿಕ್ ಕನ್ವೆಯನ್ಸ್ ಮೋಟರ್ ಸರ್ವಿಸ್,
ಚಿಕ್ಕಮಗಳೂರು.

ಮುಂಬಾಯಿಯಿಂದ - ಮಂಗಳೂರಿಗೆ.

ಮಂಗಳೂರಿನಿಂದ - ಮುಂಬಾಯಿಗೆ.

ಅಲ್ಲದೆ

ಹುಬ್ಬಳ್ಳಿ, ಧಾರವಾಡ, ಗೋವಾ, ಮುಂಬಾಯಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಯ ಎಲ್ಲಾ ಭಾಗಗಳಿಗೆ ಪ್ರಯಾಣ ನಡಿಸಲಿಕ್ಕೆ

ಮಂಗಳೂರು—ಕಡೂರು ಹಾದಿಗಿಂತ ಉತ್ತಮ ಬೇರೆ ಹಾದಿಯಿಲ್ಲ!

ಹೊಸ ಬಸ್ಸುಗಳು. ಅನುಕೂಲ ಪ್ರಯಾಣ ಸೌಕರ್ಯಗಳು

ಕಡೂರು ಜಿಲ್ಲೆಯೊಳಗಿನ ಎಲ್ಲಾ ಕಾಫಿ ತೋಟಗಳಿಗೆ ಕೂಲಿಕಾರರನ್ನು ತರಲಿಕ್ಕೂ ಅಲ್ಲಿಂದ ಕೊಂಡುಹೋಗಲಿಕ್ಕೂ ನಾವು ಎಲ್ಲಾ ತರದ ಸಹಾಯವನ್ನೂ ಕೊಡುತ್ತೇವೆ.

ಚಿಕ್ಕಮಗಳೂರಿನಿಂದ— ಶಿವಮೊಗ್ಗಕ್ಕೆ, ಬೇಲೂರಿಗೆ, ಕಡೂರಿಗೆ.
— ಮೂಡಗೆರೆಗೆ, ಸಕಲೇಶಪುರಕ್ಕೆ.
— ಮಂಗಳೂರಿಗೆ, ಮೂಡಬಿದ್ರೆಗೆ, ಪುತ್ತೂರಿಗೆ, ಮೂಲ್ಕಿಗೆ.
—ಧರ್ಮಸ್ಥಳಕ್ಕೆ, ವೇಣೂರಿಗೆ, ಸುಬ್ರಹ್ಮಣ್ಯಕ್ಕೆ.

ನಿರಾಯಾಸದ ಪ್ರಯಾಣ! ಉತ್ಸಾಹಕರ ಸೌಕರ್ಯ!

ಬೇಕಾದ ಮಾಹಿತಿಗೆ ನಮ್ಮ ಆಫೀಸಿಗೆ ಬರೆದು ತಿಳಿದುಕೊಳ್ಳಿ.

ಈ ಗ್ರಂಥವು ಎಷ್ಟು ಪ್ರಯೋಜನಕಾರಿ ಎಂಬುದನ್ನು ಈ ಕೆಳಗೆ ಬರೆದಿರುವ ಒಂದೆರಡು ಸರ್ಟಿಫಿಕೇಟುಗಳನ್ನು ನೋಡಿರಿ.

ಯೋಗ್ಯತಾ ಪತ್ರಿಕೆಗಳು.

ಮಹಾಶಯರೇ!

ತಮ್ಮಿಂದ ಕಳುಹಿಸಲ್ಪಟ್ಟ ೩ನೇ ಭಾಗ ವಿದ್ಯಾಗುರು ಗ್ರಂಥವು ತಲ್ಪಿ ಎಲ್ಲಾ ವಿಷಯಗಳು ತಿಳಿದವು. ಅದರಿಂದ ನಾವು ಈ ಕಾಲಕ್ಕೆ ಗುರುಭಾವವನ್ನು ಹೊಂದಿ ಅತ್ಯಂತದವರೆಗೆ ಕೊಂಡಾಡಿಸಿಕೊಳ್ಳುವ ಗ್ರಂಥವು ಬಹಳ ಚನ್ನಾಗಿರುತ್ತದೆ, ಬಹು ಸಾಹಸಪಟ್ಟು ಮಾಡಿರುವ ತಮ್ಮ ಗ್ರಂಥವು ಸರ್ವ ಸಮ್ಮತವಾಗಿ ಬಹುಜನಗಳ ಸಂತೋಷಕ್ಕೆ ಪಾತ್ರವಾಗಿರುತ್ತದೆ. ದಯವಿಟ್ಟು ೪ನೇ ಭಾಗಕ್ಕೆ ಕಳುಹಿಸಿಕೊಡುವುದು ತಮ್ಮ ಕೀರ್ತಿಯನ್ನು ಜಗದ್ವಿಖ್ಯಾತವಾಗುವಂತೆ ನಿತ್ಯವೂ ಬೇಕಾಗಿ ಪ್ರಾರ್ಥನೆ.

(Sd.) ಜ್ಯೋತಿಷ್ಯದ ಯಸ್. ತಮ್ಮಯ್ಯ, ಹೊಸಸಿಗೆರೆ, ಹಟ್ಟಿಪುರು ಪೋಸ್ಟು, ತಾ॥ 7-12-27.

TRUE COPY.

ಭಾರತ ಜ್ಯೋತಿಷ್ಯ ವೈದ್ಯಾಲಯದ ಮೇನೇಜರವರ ಸನ್ನಿಧಿಗೆ—ತಮ್ಮ ಕಂಪೆನಿಯಿಂದ ತರಿಸಿದ ವಿದ್ಯಾಗುರು ಭಾಗ ೩ನೇ ಮತ್ತು ವಿಭವ ಸಂ॥ ರದ ಪಂಚಾಂಗವನ್ನು ಸಹ ನೋಡಿದೆ. ಬಹಳ ಚನ್ನಾಗಿರುತ್ತದೆ. ಕಾಯಿಲೆಯನ್ನು ಅದಕ್ಕೆ ಔಷಧವನ್ನು ಸಹ ಪರೀಕ್ಷೆಮಾಡಿ ನೋಡಿದೆ. ನಮ್ಮ ತಮ್ಮನಿಗೆ ಮೇಹ ಸಂಬಂಧ ಕಾಯಿಲೆ ಆಗಿತ್ತು. ತಮ್ಮ ವಿದ್ಯಾಗುರು ಗ್ರಂಥದ ೩ನೇ ಭಾಗದಲ್ಲಿ ಬರೆದ ಪ್ರಕಾರ ಈಗ ಗುಣವಾಗಿರುತ್ತಾನೆ. ತಮ್ಮ ಪಂಚಾಂಗವನ್ನು ಸಣ್ಣ ಹುಡುಗರು ಸಹ ನೋಡಿಕೊಳ್ಳುವಂತೆಯೂ, ಮನಸ್ಸಿನಲ್ಲಿರುವದನ್ನು ತಿಳಿದುಕೊಳ್ಳುವದಕ್ಕೆ ತಮ್ಮ ಪಂಚಾಂಗ ಬಹಳ ಅನುಕೂಲವಾಗಿರುತ್ತೆ. ಮುಂದು ಕಾಗದ ಕಳುಹುತ್ತಲೇ ಅಪೇಕ್ಷೆಯಂತೆ ಸಾಮಾನುಗಳನ್ನು ಕಳುಹಿಸುತ್ತಾ ಇರುವುದು ತುಂಬಾ ಸಂತೋಷವಾಗಿರುತ್ತೆ.

(Sd.) ಕೆ. ವೆಂಕಟರಾಮಭಟ್ಟ, ಕೆ. ನಾಗಭಟ್ಟ,
ಹರಿಹರಪುರ, ತಾ॥ 18—2—28

TRUE COPY.

ಇದೇ ರೀತಿ ಅನೇಕಾನೇಕ ಸರ್ಟಿಫಿಕೇಟುಗಳು ಬಂದಿರುತ್ತವೆ. ತಮ್ಮಗಳ ಅವಗಾಹನೆಕ್ಕಾಗಿ ಒಂದೆರಡು ಸರ್ಟಿಫಿಕೇಟುಗಳನ್ನು ಮಾತ್ರ ಇಲ್ಲಿ ಬರೆದಿರುತ್ತೆ. ಸ್ಥಳ ಸಂಕೋಚದಿಂದ ಯಾವತ್ತು ಸರ್ಟಿಫಿಕೇಟುಗಳನ್ನು ಬರೆಯಲು ಅವಕಾಶವಿಲ್ಲ.

ಜೀವದ ಗುಟ್ಟು ! **೧೦೦೦ ರೂಪಾಯಿ ಬಹುಮಾನ !** **ಭಾಗ್ಯದ ಸೊತ್ತು !**

ಸುಖ ಜೀವನ ! ವಂಶ ಪಾವನ !

ಶಾಸ್ತ್ರ ಅನುಭವಸಂಗ್ರಹವೆಂಬ

ಜೀವರತ್ನಪ್ರದೀಪಿಕೆ.

ತಂದೆಯು ಮಕ್ಕಳಿಗೂ ಸಹ ಹೇಳದೆ ಇರತಕ್ಕ ಅನುಭವ ಕಂಡ ಮರ್ಮವಿಷಯಗಳನ್ನೇ ಒಳಗೊಂಡಿರುತ್ತೆ. ಈ ಗ್ರಂಥದಲ್ಲಿರುವ ವಿಷಯಗಳು ಅನುಭವವಾದವುಗಳಲ್ಲವೆಂದು ವ್ಯಕ್ತಪಡಿಸುವವರಿಗೆ ಒಂದು ಸಾವಿರ ರೂಪಾಯಿ ಬಹುಮಾನ ಕೊಡಲ್ಪಡುತ್ತೆ. ಕೇವಲ ಲೋಕೋಪಕಾರಕ್ಕಾಗಿ ಪ್ರಚಾರಿಸಲ್ಪಟ್ಟಿರುವುದರಿಂದ ಕ್ರಯವನ್ನು ತೀರಾ ಕಡಿಮೆ ಇಟ್ಟಿರುತ್ತೆ. ಕ್ರಯ ಪ್ರತಿ ೧ಕ್ಕೆ ರೂ. ೨—೮—೦. ಟಿ. ಪ. ಪ್ರತ್ಯೇಕ.

ಈ ಗ್ರಂಥದ ಜ್ಯೋತಿಷ್ಯ, ಪ್ರಶ್ನೆ, ಪ ಶಕುನ, ಯಂತ್ರ, ಮಂತ್ರ ರಹಸ್ಯದಲ್ಲಿ ಗ್ರಹಗಳ ಬಲಾಬಲ ತಾರತಮ್ಯ ವಿಚಾರ, ವಿವಾಹಮುಹೂರ್ತವನ್ನು ನಿರ್ಣಯಿಸುವುದಕ್ಕೆ ಬೇಕಾದ ಸಲಹೆಗಳು, ವಿವಾಹ ಲಗ್ನಪತ್ರಿಕೆ ಕ್ರಮ, ವಿವಾಹಪ್ರಶ್ನೆ, ಕನ್ಯಾ, ವರಲಾಭ ಪ್ರಶ್ನೆಗಳು, ಕನ್ಯಾ, ವರಲಾಭಕ್ಕೆ ಮಾಡುವ ಕ್ರಮ, ಸುರತಪ್ರಶ್ನೆ, ದಂಪತಿಗಳಲ್ಲಿ ಪ್ರೀತಿ ಹುಟ್ಟುವದಕ್ಕಾಗಿ ಮಾಡುವ ಕ್ರಮ, ಶಾಂತಿಕಲಾಪ್ರಶ್ನೆ, ಶೋಭನ ಮುಹೂರ್ತ ವಿಚಾರ, ಸ್ತ್ರೀಪುರುಷರ ಗರ್ಭಧಾರಣೆ ನಿರ್ಣಯ, ಸ್ತ್ರೀಪ್ರಸಂಗ ಪ್ರೀತಿಪ್ರಶ್ನೆ ವಿಚಾರ, ಸ್ತ್ರೀಪುರುಷ ವೈರಸ್ಯ ಪರಿಹಾರಕ್ರಮ, ಗರ್ಭಭ್ರಾಂತಿಪ್ರಶ್ನೆ, ಗರ್ಭರಕ್ಷೆಯಪ್ರಶ್ನೆ, ಗರ್ಭರಕ್ಷಣ ವಿಧಿ, ಬಾಲಾರಿಷ್ಟ ಪ್ರಶ್ನೆ, ಬಾಲಾರಿಷ್ಟದೋಷಪರಿಹಾರವಿಧಿ, ಸ್ತ್ರೀಪುರುಷ ಪ್ರಸವ ಪ್ರಶ್ನೆ ವಿಚಾರ, ಸ್ತ್ರೀಪುರುಷ ಶಿಶುವನ್ನು ಪಡೆಯುವ ಮರ್ಮಗಳು, ಸಂತಾನಪ್ರಶ್ನೆ, ಸಂತಾನದೋಷಪರಿಹಾರವಿಧಿ, ವ್ಯಾಪಾರ ಉದ್ಯೋಗ ಪ್ರಶ್ನೆ, ಉದ್ಯೋಗಸುಖೋಪಾಯ ವಿಧಿ, ತೇಜಿ ಮಂದಿ ವಿಚಾರ, ವ್ಯಾಪಾರ ಜೀನಸಿನ ಲಾಭ, ದೀರ್ಘವ್ಯಾಪಾರ ಪ್ರಶ್ನೆ ವಿಚಾರ, ಸ್ಥಳ ಪರೀಕ್ಷೆ ವ್ಯಾಪಾರಪ್ರಶ್ನೆ, ಅಂಗಡಿ ಸ್ಥಾಪಿಸುವ ಪ್ರಶ್ನೆ, ಅಂಗಡಿ ಸ್ಥಾಪಿಸುವ ಮುಹೂರ್ತ ನಿರ್ಣಯ, ಅಂಗಡಿ ದೋಷ ಪ್ರಶ್ನೆ ವಿಚಾರ, ಅಂಗಡಿ ದಿಗ್ಬಂಧನಕ್ರಮ, ಗೃಹ ಕ್ರಯ ಪ್ರಶ್ನೆ, ಗೃಹದೋಷ ಪ್ರಶ್ನೆ ವಿಚಾರ, ಗೃಹದಿಗ್ಬಂಧನಕ್ರಮ, ಗೃಹನಿರ್ಮಾಣ ಪ್ರಶ್ನೆ, ಗೃಹನಿರ್ಮಾಣ ಮುಹೂರ್ತ ನಿರ್ಣಯ, ಭೂಮಿಕ್ರಯಪ್ರಶ್ನೆ, ಸಸ್ಯಪ್ರಶ್ನೆ, ಸಸ್ಯನಾಶಕವಿಚಾರ, ಭೂದೋಷಪ್ರಶ್ನೆ ವಿಚಾರ, ಭೂದೋಷ ನಿವಾರಣಕ್ರಮ, ಬೀಜಬಿತ್ತುವ ಮುಹೂರ್ತ ವಿಚಾರ, ವೃಷ್ಟಿಪ್ರಶ್ನೆ, ಕುಳಿತೋಗದಿರುವ ವಿಚಾರ, ಸಸ್ಯ ವೃದ್ಧಿಯೋಗಗಳು, ಪಶುಕ್ರಯಪ್ರಶ್ನೆ, ಪಶುಗಳನ್ನು ಕೊಡುವ ಮುಹೂರ್ತ ವಿಚಾರ, (ಪಶು)ಪ್ರಶ್ನೆ, ಪಶುಗಳು ತಪ್ಪಿಸಿಕೊಂಡು ಹೋದರೆ ಮಾಡುವ ಕ್ರಮ, ಮಾರ್ಗಪ್ರಶ್ನೆ, ಪಶುಗಳ ದೃಷ್ಟಿದೋಷ, ಗ್ರಹದೋಷ ನಿವಾರಣೆ ಕ್ರಮ, ವ್ಯಾಜ್ಯಪ್ರಶ್ನೆ, ವ್ಯಾಜ್ಯ, ಕುಸ್ತಿ, ಚರಿತಾರ್ಥ ಮುಂತಾದವುಗಳಲ್ಲಿ ಜಯವಾಗುವುದಕ್ಕೆ ಮಾಡುವಕ್ರಮ, ಸುಭಿಕ್ಷ, ದುರ್ಭಿಕ್ಷಾದಿ ಪ್ರಶ್ನೆ ವಿಚಾರ, ಸಂವತ್ಸರ, ಮಾಸಫಲ ಪ್ರಶ್ನೆ ವಿಚಾರ, ಗ್ರಹಗಳು ಕಾಡುವ ಸಮಯದಲ್ಲಿ ಮಾಡುವಕ್ರಮ, ಪ್ರಯಾಣಪ್ರಶ್ನೆ, ಪ್ರಯಾಣಕ್ಕೆ ಶುಭಾಶುಭ ಶಕುನ ನಿರ್ಣಯ, ಪ್ರಯಾಣಮುಹೂರ್ತ ವಿಚಾರ, ಪ್ರಯಾಣ ಸುಖೋಪಾಯದ ಕ್ರಮ, ಧಾತುವಾದ ಪ್ರಶ್ನೆ, ಬೇಂಟೆ ಪ್ರಶ್ನೆ, ಬೇಂಟೆ ಸುಖೋಪಾಯಕ್ರಮ, ಪರಸ್ಥಳಕ್ಕೆ ಹೋದವರ ವಿಚಾರದಲ್ಲಿ ಪ್ರಶ್ನೆ, ಕೃಷ್ಣಪ್ರಶ್ನೆ, ನೌಕರಿ ಪ್ರಶ್ನೆ, ನೌಕರಿ ಪ್ರಾಪ್ತಿಸುವದಕ್ಕಾಗಿ ಮಾಡುವ ಕ್ರಮ, ನಷ್ಟವಸ್ತು ಪ್ರಶ್ನೆ ವಿಚಾರ, ಬಂಧಮೋಕ್ಷ ಪ್ರಶ್ನೆ ವಿಚಾರ, ಬಂಧಮುಕ್ತವಿಧಿ, ಭೂಗತ ದ್ರವ್ಯ ಪ್ರಶ್ನೆ ವಿಚಾರ, ರೋಗಪ್ರಶ್ನೆ ವಿಚಾರ, ರೋಗಶಾಂತಿವಿಧಿ, ಭೋಜನಪ್ರಶ್ನೆ, ಸ್ವಪ್ನಪ್ರಶ್ನೆ, ಸ್ವಪ್ನದೋಷಪರಿಹಾರವಿಧಿ, ಮುಷ್ಟಿಪ್ರಶ್ನೆ ಮೂಕಪ್ರಶ್ನೆ, ಜಲಪ್ರಶ್ನೆ, ಭಾವಿಯನ್ನು ತೆಗೆಸುವದಕ್ಕೆ ಮುಹೂರ್ತ, ವಿದ್ಯಾಪರೀಕ್ಷೆ ಪಾಸು ಪ್ರಶ್ನೆ ವಿಚಾರ, ವಿದ್ಯಾರಂಭ ಮುಹೂರ್ತ ನಿರ್ಣಯ, ಚೋರಪ್ರಶ್ನೆ ಇವೇ ಮೊದಲಾದ ಅನುಭವಯುಕ್ತ ರಹಸ್ಯ ವಿಷಯಗಳನ್ನು ಬರೆದಿರುತ್ತೆ.

ಕುಂಡಲಿರಹಸ್ಯದಲ್ಲಿ:—ಕುಂಡಲಿಯನ್ನು ಹಸ್ತದಲ್ಲಿ ತೆಗೆದುಕೊಂಡಕೂಡಲೆ ಕುಂಡಲಿಯಿಂದ ಜಾತಕನ ವಯಸ್ಸು, ಜನ್ಮ ಮಾಸ, ಜನ್ಮ ಪಕ್ಷ, ಜನ್ಮ ತಿಥಿ, ಜನ್ಮ ಕಾಲವನ್ನು ತಿಳಿಯುವಕ್ರಮ, ಸ್ತ್ರೀಪುರುಷ ಜಾತಕ, ಶುಭಕುಂಡಲಿ, ನಷ್ಟಾಂಶಕಕುಂಡಲಿಗಳನ್ನು ತಿಳಿಯುವಕ್ರಮ, ಚಿತ್ರದಿಂದ ದೋಷವನ್ನು ನೋಡಿ, ಪರಿಹಾರ ಮಾಡುವುದನ್ನು ಎಂಬುವದನ್ನು ತಿಳಿಯುವ ಕ್ರಮ, ಬಾಲಾರಿಷ್ಟ ಮರಣವಿಚಾರ, ಜಾತಕನ ರೂಪ, ದೇಹಸುಖ, ಕಷ್ಟ, ದೇಹಸೌಖ್ಯ, ಕ್ಷೀಣತ್ವ, ವಾತ, ಪಿತ್ಥ, ಗುಣಾದಿಯೋಗಗಳನ್ನು ತಿಳಿಯುವಕ್ರಮ, ಶಿರಸ್ಥಾನಯೋಗ, ಜಾತಕನ ವಂಶವಿಚಾರ, ಗಂಡಾಂತಯೋಗ, ಧನ, ವಿದ್ಯಾಯೋಗವಿಚಾರ, ನೇತ್ರ, ಮುಖ, ದಂತ, ಕುಟುಂಬ ವಿಚಾರ, ಪತ್ನ್ಯಾದಿದ್ರವ್ಯವಿಚಾರ, ಭೋಜನಯೋಗ, ಪ್ರಯಾಣಯೋಗ, ಭ್ರಾತೃಯೋಗ, ಬಲಪರಾಕ್ರಮಯೋಗವಿಚಾರಗಳು, ದಾಸಿ, ದಾಸಯೋಗವಿಚಾರ, ಕರ್ಣ, ಕಂಠವಿಚಾರ, ಬಂಧುಯೋಗ, ಗೃಹ, ಭೂಮಿ, ವಾಹನ, ಪಶು, ಮಾತೃಯೋಗವಿಭಾಗಗಳು, ಕಪಟ, ಮಿತ್ರ ಪಟ್ಟಯೋಗ, ಶಯ್ಯಾಸುಖಾಸುಖಯೋಗ, ಶಾಸ್ತ್ರವಿಚಾರ, ಲೇಖನ ಮತ್ತು ಗ್ರಂಥವಿಚಾರ, ಸಂತಾನಯೋಗವಿಚಾರ, ಸಂತಾನ ನಷ್ಟತೆ ಕಾರಣ, ಶಾಪದೋಷನಿವಾರಣ ಕ್ರಮ, ಬುದ್ಧಿವಿಚಾರ, ಶತ್ರುವಿಚಾರ, ರೋಗಗಂಡಾಂತರಗಳ ವಿಚಾರ, ಕಳತ್ರವಿಚಾರ, ವ್ಯಭಿಚಾರಯೋಗ, ಆಯುಷ್ಯವಿಚಾರ, ಮರಣಹೇತುವಿಚಾರ, ಮರಣಸ್ಥಳವಿಚಾರ ದುರ್ಮರಣಾದಿ ಯೋಗಗಳು, ಪಿತೃವಿಚಾರ, ದಾನಧರ್ಮವಿಚಾರ, ಭಾಗ್ಯಯೋಗ, ಜೀವನವಿಚಾರ, ಕೀರ್ತಿವಿಚಾರ, ಕ್ಷೇತ್ರ ಭ್ರಾತೃವಿಚಾರ, ರಾಜಭಾಗ್ಯಯೋಗಗಳು, ಇವೇ ಮೊದಲಾದವುಗಳನ್ನು ಕುಂಡಲಿ ನೋಡಿದ ಕೂಡಲೆ ಹೇಳುವ ಅನುಭವ ರಹಸ್ಯಗಳನ್ನು ಬರೆದಿರುತ್ತೆ.

ರಮಲಶಾಸ್ತ್ರರಹಸ್ಯದಲ್ಲಿ:—ಆಯುಷ್ಯಪ್ರಶ್ನೆ: ದೈವಪ್ರಶ್ನೆ, ಮರಣಹೇತುಪ್ರಶ್ನೆ, ಕಷ್ಟಕಾಲ, ನಿರ್ಣಯಪ್ರಶ್ನೆ, ಇಷ್ಟಕಾರ್ಯಸಿದ್ಧಿ ಪ್ರಶ್ನೆ, ಧನಲಾಭಪ್ರಶ್ನೆ, ಧನ ಸಾಲಕೊಡುವ ಪ್ರಶ್ನೆ, ಋಣಮುಕ್ತಪ್ರಶ್ನೆ, ವಿಚಾರಗಳು, ಕ್ರಯವಿಕ್ರಯಪ್ರಶ್ನೆ, ಪರದೇಶ ಕ್ರಯ ವಿಕ್ರಯಪ್ರಶ್ನೆ, ಧಾತು, ಮೂಲ, ಜೀವ, ಧಾನ್ಯಾದಿ ವ್ಯಾಪಾರಪ್ರಶ್ನೆ, ಮಿತ್ರತ್ವಪ್ರಶ್ನೆ ವಿಚಾರ, ಭೋಜನಪ್ರಶ್ನೆ, ವಕೀಲಪ್ರಶ್ನೆ, ವಕೀಲನಿಂದ ಜಯವೋ ಅಪಜಯವೋ, ಸಮಾಚಾರ ಪ್ರವಾಸಪ್ರಶ್ನೆ, ಗೃಹಕ್ರಯಪ್ರಶ್ನೆ, ಗೃಹನಿರ್ಮಾಣ, ಗೃಹಪ್ರವೇಶಪ್ರಶ್ನೆ, ಭೂಕ್ರಯ ಪ್ರಶ್ನೆ, ಜಲಪ್ರಶ್ನೆ, ವೈರಪ್ರಶ್ನೆ, ಶಕುನಪ್ರಶ್ನೆ, ಈ ಗ್ರಾಮದಿಂದ ಸುಖವೋ, ಕಷ್ಟವೋ, ಶೀತಕಪ್ರಶ್ನೆ, ಭೂಗತದ್ರವ್ಯ ಪ್ರಶ್ನೆ, ಮಾತಾಪಿತೃ ಆಯುಷ್ಯಪ್ರಶ್ನೆ, ಪಶುಕ್ರಯಪ್ರಶ್ನೆ, ಗೃಹದೋಷಪ್ರಶ್ನೆ, ಸಂತಾನ ಪ್ರಶ್ನೆ, ಸ್ತ್ರೀಪುರುಷ ಜನನಪ್ರಶ್ನೆ, ಗರ್ಭಪ್ರಶ್ನೆ, ಲಕ್ಷ್ಮೀ ಪ್ರಶ್ನೆ, ರೋಗಪ್ರಶ್ನೆ, ಬೇಂಟೆಪ್ರಶ್ನೆ, ಕನ್ಯಾ ವರಪ್ರಶ್ನೆ, ಚೋರಪ್ರಶ್ನೆ, ಪರೀಕ್ಷಾಪಾಸು ವಿಷಯಪ್ರಶ್ನೆ, ವ್ಯವಹಾರಪ್ರಶ್ನೆ, ಊರಿಗೆ ಹೋದವರ ಪ್ರಶ್ನೆ, ಧರ್ಮಕಾರ್ಯಪ್ರಶ್ನೆ, ಮುಷ್ಟಿ ಪ್ರಶ್ನೆ, ರಾಜಮುದ್ರಾತೆ, ರಾಜಬೇಟಿಪ್ರಶ್ನೆ, ಜೀವನೋಪಾಯಪ್ರಶ್ನೆ, ನೌಕರಿ, ಉದ್ಯೋಗಪ್ರಶ್ನೆ, ಸಾಲಿನ ವ್ಯಾಪಾರಪ್ರಶ್ನೆ, ಬಂಧಮುಕ್ತಪ್ರಶ್ನೆ, ವೃಷ್ಟಿಪ್ರಶ್ನೆ, ಸಂವತ್ಸರಮಾಸ ಫಲಪ್ರಶ್ನೆ, ಸುಭಿಕ್ಷ ದುರ್ಭಿಕ್ಷಪ್ರಶ್ನೆ, ಭೂಮಿದೋಷಪ್ರಶ್ನೆ, ಗೃಹದೋಷಪ್ರಶ್ನೆ, ಯುದ್ಧ ಜಯಾಪಜಯ ಪ್ರಶ್ನೆ, ಇವೇ ಮೊದಲಾದ ಪ್ರಶ್ನೆಗಳನ್ನು ಹೇಳುವ ರಮಲಶಾಸ್ತ್ರದ ಅನುಭವ ರಹಸ್ಯಗಳನ್ನು ಬರೆದಿರುತ್ತೆ.

ಸಾಮುದ್ರಿಕರಹಸ್ಯದಲ್ಲಿ:—ಹಸ್ತದಲ್ಲಿರುವ ರೇಖೆ, ಗ್ರಹಸ್ಥಾನಗಳ ಪರಿಚಯ, ನಾನಾಬಗೆಯ ರೇಖೆಗಳನ್ನು ಅವುಗಳ ಆಕೃತಿಗಳನ್ನು ತೋರಿಸುವ ನಾನಾವಿಧ ಸ್ತ್ರೀಪುರುಷರ ಹಸ್ತಚಿತ್ರಗಳನ್ನು ಹಾಕಿರುವದಲ್ಲದೆ ಅವುಗಳ ಫಲಗಳನ್ನು ತಿಳಿಯುವ ಕ್ರಮಗಳನ್ನು ಚಿಕ್ಕಚಿಕ್ಕ ಬಾಲಕರಿಗೂ ಸಹ ತಿಳಿಯುವಂತೆ ಬರೆದಿರುತ್ತೆ. ಸಾಮುದ್ರಿಕಶಾಸ್ತ್ರವನ್ನು ಇಷ್ಟು ವಿರಳವಾಗಿ ತಿಳಿಯುವಂತೆ ನಾನಾಬಗೆ ಚಿತ್ರಗಳೊಂದಿಗೆ ಬರೆಯಲ್ಪಟ್ಟ ಗ್ರಂಥಗಳು ಇದುವರೆಗೂ ಬಯಲಿಗೆ ಬರಲಿಲ್ಲವೆಂದು ಸಂತೋಷವಾಗಿ ಹೇಳಬಹುದು. ಗ್ರಂಥವನ್ನು ನೋಡಿದರೆ ಇದರ ಸ್ವಾರಸ್ಯವು ತಿಳಿಯಬಹುದು.

ಅನುಭವ ವೈದ್ಯರಹಸ್ಯದಲ್ಲಿ:—ರಸಾದಿ ಸರ್ವ ಜೀನಸುಗಳ ಅನುಭವವಾದ ಶುದ್ಧಿ ಕ್ರಮಗಳು, ಸರ್ವವಿಧ ವ್ಯಾಧಿಚಿಕಿತ್ಸಾಕ್ರಮಗಳು. ನಾನಾಬಗೆ ಅನುಭವಕಂಡ ಮಾತ್ರೆಗಳ ಕ್ರಮಗಳು, ಅವುಗಳ ಉಪಯೋಗಗಳು, ತಲೆಶೂಲೆ, ಅರತಲೆಶೂಲೆ, ನಿದ್ರಾಭಂಗ, ಅಧಿಕನಿದ್ರಾ, ಕಣ್ಣುಬೇನೆ, ಕಣ್ಣಿನಲ್ಲಿ ಹುವ್ವ ಕೂತಿದ್ದು, ಇರಳುಗಣ್ಣು ಮುಂತಾದ ಚಿಕಿತ್ಸಾಕ್ರಮಗಳು, ಪೀನಸರೋಗ, ದಂತಶೂಲೆ, ಗೂರ್ಲು, ಕೆಮ್ಮು; ಎದೆಶೂಲೆ, ಹೊಟ್ಟೆಶೂಲೆ, ರಕ್ತಭೇದಿ, ವಾಯುಶೂಲೆ, ಗುಲ್ಮರೋಗ, ಮೂಲವ್ಯಾಧಿ, ಗುದಾರೋಗ, ಮೂತ್ರಕಟ್ಟು, ಬಹುಮೂತ್ರ, ಮೇಹ ಅಂಡವಾಯು, ಮೇಹರೋಗಗಳು ಪರಂಗಿ, ಅಂಡವಾಯು ಮುಂತಾದ ನಾನಾಬಗೆ ರೋಗ ಚಿಕಿತ್ಸಾಕ್ರಮಗಳು, ನಾನಾಬಗೆ ಧಾತುಪುಷ್ಟಿ ಲೇಹ್ಯಕ್ರಮಗಳು, ಸ್ತ್ರೀಯರ ಮುಟ್ಟಿನ ಕಟ್ಟು, ಬಿಳೇಸೆರಗು, ಕೆಂಪುಸೆರಗು, ಅತಿರಕ್ತಪ್ರವಾಹ, ಪ್ರಸವವೇದನೆ, ಮುಂತಾದ ಚಿಕಿತ್ಸಾಕ್ರಮಗಳು, ಬಾಲಕರ ಸರ್ವವಿಧರೋಗ ಚಿಕಿತ್ಸೆಗಳು, ಹುರುಕು, ಕಜ್ಜಿ, ಇಸಬು, ಸಾರುಹುಣ್ಣು, ನಾನಾಬಗೆ ಕೆಟ್ಟ ಹುಣ್ಣುಗಳ ಚಿಕಿತ್ಸಾಕ್ರಮಗಳು, ತೊನ್ನಿನ ಚಿಕಿತ್ಸೆ, ಕೈಮುಸುಗು ಚಿಕಿತ್ಸೆ, ಹಾವು, ಚೇಳು, ನಾಯಿ, ಹೆಗ್ಗಣ ಮುಂತಾದ ವಿಷಚಿಕಿತ್ಸಾಕ್ರಮಗಳು, ಕಾಲರಾ ಚಿಕಿತ್ಸೆ ಕ್ರಮಗಳು, ಮಕ್ಕಳ ಪುಷ್ಟಿ ಔಷಧಗಳು, ಕೈಕಾಲು ಹಿಡಿದುಕೊಂಡಿದ್ದರೆ ಮಾಡುವ ಚಿಕಿತ್ಸೆಗಳು, ನಾನಾಬಗೆ ತೈಲ, ಭೃಂಗಾಮಲಕ ತೈಲ, ಚಂದನಾದಿ ತೈಲ, ಇವುಗಳ ಕ್ರಮಗಳು, ಅವುಗಳ ಮುಖ್ಯವಾದ ಉಪಯೋಗಗಳು, ಪರಮಾನಂದ ಚೂರ್ಣ, ಕಸ್ತೂರಿ ಮಾತ್ರೆ, ಲೀನಸಿದ್ಧಿ, ಅಮೃತಬಳ್ಳಿಯ ಸತ್ವ, ಮತ್ತು ಅರ್ಕಕ್ರಮ, ಸರ್ವ ಜೀನಸುಗಳ ಸತ್ವಕ್ರಮಗಳು, ಅಫ್ಯಾನ ಲೋಬಾನ ಮುಂತಾದ ಎಣ್ಣೆಗಳನ್ನು ತೆಗೆಯುವ ಕ್ರಮಗಳು ಅವುಗಳ ಗುಣೋಪಯೋಗಗಳು, ಯುನಾನಿ ಸಿಂಧೂರಕ್ರಮ, ಮೂಲಿಕೆಗಳಿಂದ ಉಪ್ಪನ್ನು ತೆಗೆಯುವ ಕ್ರಮಗಳು, ಅವುಗಳ ಉಪಯೋಗಗಳು, ರಂಕದ್ರಾವಕ ಕ್ರಮ, ಕವಡೆ, ಶಂಖು, ಹವಳ, ಗುಗ್ಗುಳ, ಸತುವು, ತವರ, ತಾಮ್ರ, ಬೆಳ್ಳಿ, ಸೀಸ, ಬಂಗಾರ, ಗಂಧಕ, ತಾಳಕ, ರಸಕರ್ಪೂರ, ಇಂಗ್ಲೀಕ, ಪಾಷಾಣ ಮುಂತಾದ ಅನುಭವಪಾತ್ರವಾದ ಭಸ್ಮಕ್ರಮಗಳು, ಕ್ಷಯ, ಪಾಂಡು, ಶ್ವಾಸಕಾಸ, ಕುಷ್ಠ ಮುಂತಾದ ಘನವ್ಯಾಧಿಗಳಿಗೆ ಈ ಭಸ್ಮಗಳನ್ನು ಉಪಯೋಗಿಸುವ ಕ್ರಮಗಳು, ಸರ್ವರೋಗಗಳಿಗೂ ಸಂಜೀವಿನಿ ಔಷಧಕ್ರಮ, ಪಶುಗಳ ಜಲರೋಗ ನಿವಾರಣ ಕ್ರಮಗಳು, ಪಶುಗಳ ಹಿರೇಬೇನೆ ಚಿಕಿತ್ಸಾಕ್ರಮಗಳು, ಇವೇ ಮೊದಲಾದ ಉಪಯುಕ್ತವಾದ ಅನುಭವಕಂಡ ಔಷಧಗಳನ್ನೇ ಬರೆದಿರುತ್ತೆ. ಇದರಲ್ಲಿ ಅನುಭವವಿಲ್ಲದ ಔಷಧ ಒಂದಾದರೂ ಇರುವುದಿಲ್ಲ.

ಸ್ವಾಗತಮಹಾಶಯರೇ! ಹೆಚ್ಚು ಹೇಳುವದೇನದೆ? ಈ ಗ್ರಂಥದಲ್ಲಿ ತಂದೆಯು ಮಕ್ಕಳಿಗೂ ಸಹ ಹೇಳದಂಥ ಅನುಭವ ವಿಷಯಗಳನ್ನೇ ಬರೆದಿರುತ್ತೆ. ಗ್ರಂಥವನ್ನು ನೋಡಿದಮಾತ್ರದಿಂದಲೇ ತಿಳಿಯುವುದಲ್ಲದೆ ಮರ್ಮಗಳನ್ನು ಬಯಲಿಗಿಟ್ಟಿದ್ದಕ್ಕಾಗಿ ಕೊಂಡಾಡದೆ ಇರಲಾರಿರಿ, ಕೇವಲ ಒಂದೇ ಒಂದು ಅನುಭವದ ವಿಷಯಕ್ಕಾಗಿ ಎಷ್ಟು ಪ್ರಯಾಸಪಡಬೇಕಾಗುತ್ತೆಂಬುವುದನ್ನು ತಾವೇ ಯೋಚಿಸಿರಿ.

ಕ್ರಯ ಪ್ರತಿ ೧ಕ್ಕೆ ರೂ. ೨—೮—೦. ಟಿ. ಪ. ಪ್ರತ್ಯೇಕ.

ಪತ್ತೆ:-ಮೇನೇಜರ್, ಭಾರತಜ್ಯೋತಿಷ್ಯ ವೈದ್ಯಾಲಯ,
ಹರಪನಹಳ್ಳಿ, (ಜಿಲ್ಲಾ ಬಳ್ಳಾರಿ.)

ದಿ ಪವರ್ ಪ್ರಿಂಟಿಂಗ್ ವರ್ಕ್ಸ್, ಚಿಕ್ಕಪೇಟೆ, ಬೆಂಗಳೂರು ಸಿಟಿ.

ಹೆಚ್ಚಿನ ವಿವರಕ್ಕೆ ಹೆಡ್ ಆಫೀಸಿಗೆ ಬರೆದುಕೊಂಡರೆ, ಸಂತೋಷದಿಂದ ಕೂಡಲೆ ತಿಳಿಸಲಾಗುವುದು.
☞ ಎಲ್ಲಾ ಕಡೆಗಳಲ್ಲಿಯೂ ಯೋಗ್ಯ ಏಜಂಟರುಗಳು ಬೇಕು. ಧಾರಾಳ ಕಮಿಷನ್ ಕೊಡಲಾದೀತು.
ಬೊಂಬಾಯಿ ಸಂಸ್ಥಾನದ ಪ್ರಾಮುಖ್ಯ ಏಜಂಟರು:—ಪ್ರಭಾಕರ ಕಂಪೆನಿ, 415 ಠಾಕೂರದ್ವಾರ ರಸ್ತೆ, ಬೊಂಬಾಯಿ.

ನೋಟೀಸು.

The Canara Bank Ltd., Puttur.

ದಿ ಕೆನರಾ ಬ್ಯಾಂಕ್ ಲಿಮಿಟೆಡ್,

ಪುತ್ತೂರು.

ಈ ಕೆಳಗೆ ಹೆಸರು ಕಾಣಿಸಿದವರು ಮೇಲ್ಕಂಡ ಬ್ಯಾಂಕಿನಿಂದ ಚಿನ್ನಾಭರಣಗಳ ಈಡಿನ ಮೇಲೆ ಪಡೆದ ಸಾಲದ ಮೊಬಲಗನ್ನಾಗಲೀ, ಅದರ ಬಡ್ಡಿಯನ್ನಾಗಲೀ ವ್ಯಾಧಿಗೆ ಕೊಡದೆ ಬಾಕಿ ಮಾಡಿದುದರಿಂದ್ದ ಅವರಿಗೆ ಬಿಟ್ಟ ರಿಜಿಸ್ಟ್ರಿ ನೋಟೀಸು ಪರತು ಬಂದುದರಿಂದಲೂ ಈ ಮೂಲಕ ತಿಳಿಯ ಪಡಿಸುವದೇನೆಂದರೆ ಸದ್ರಿಯವರಿಂದ ಬೇಂಕಿಗೆ ಸಲ್ಲತಕ್ಕ ಸಾಲದ ಅಸಲು, ಬಡ್ಡಿ, ರಿಜಿಸ್ಟ್ರಿ ನೋಟಿಸು ಖರ್ಚು ವ ಈ ನೋಟೀಸು ಖರ್ಚು ಸಹ ಕೂಡಿಸಿ ತಾ. 20-8-34ರ ಒಳಗೆ ತಂದು ಕೊಟ್ಟು, ಅಡವಿಟ್ಟ ನಗಗಳನ್ನು ಬಿಡಿಸಿಕೊಂಡು ಹೋಗದೆ ಬಾಕಿಯುಟ್ಟಲ್ಲಿ ಈಡಿಟ್ಟ ನಗಗಳನ್ನು ತಾ. 28-8-34ನೇ ಮಂಗಳವಾರ ಬೆಳಿಗ್ಗೆ ಘಂಟೆ 9ಕ್ಕೆ ಬ್ಯಾಂಕಿನ ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡಲಾಗುವುದು.

1. L. 464/33. Ganapathi Naik S/o Annappa Naik, Cultivator, Neralakatta, Uppinangady Rs. 40—0—0
2. L. 83/31. B. R. Krishna Pai, Pushpalaya Estate Bhagamandala Rs. 45—0—0.
3. L. 7/33. B. R. Krishna Pai, Pushpaluya Estate, Bhagamandala Rs. 60–0–0.
4. L. 521/33. Do Rs. 150–0–0.
5. L. 629/33. Do Rs. 65–0–0.
6. L. 689/33 Do Rs. 70–0–0.

Canara Bank Ltd., Puttur, 2—8—34. } **A. Venkat Rao,** *Agent.*

(ಕಡೆ ಪುಟದಿಂದ ಮುಂದುವರಿದುದು.)

ರವು ಮಾಡಿದಕ್ಕೆ ತಾವು ನಿರ್ಧರಿಸಿದ ವರಿಸ್ಥಿತಿಯು ಸರಿಯಾದ ವಿಮರ್ಶೆಯನ್ನು ಮಾಡಿ, ತಮ್ಮ ಶಕ್ತಿಮೀರಿ ಪ್ರತಿಭಟನೆಯನ್ನು ನಿರಾಕರಿಸುವ ಸಂಭವವನ್ನು ರೈತರ ಸಂಘಗಳು ವಹಿಸಬೇಕು. ಇದು ಕಾಯಿದೆಭಂಗದ ಆಕಾರಕ್ಕೆ ತಿರುಗದೆ ತಮ್ಮ ಅನಾನುಕೂಲತೆಯ ಪ್ರದರ್ಶನದ ರೂಪದಲ್ಲೇ ನಿಲ್ಲುವಂತೆ ರೈತ ಸಭೆಯು ಜಾಗ್ರತೆಯಿಡಬೇಕು.

ಶಕ್ತಿಪೂರ್ಣ ವಿರೋಧವು ಬಾರದಿರುವಲ್ಲಿ ತನ್ನ ತಪ್ಪನ್ನು ತಿದ್ದಿಕೊಳ್ಳುವ ಅಭ್ಯಾಸವ ಸರಕಾರಕ್ಕಿಲ್ಲ. ಅವರ ಯಂತ್ರವನ್ನು ವಿರುದ್ಧದೆಸೆಗೆ ತಿರುಗಿಸುವ ಕೆಲಸವು ರೈತರಿಂದಲೇ ಆಗಬೇಕಾಗಿದೆ. ಸುವ್ಯವಸ್ಥಿತ ಚಳವಳಿಯಿಲ್ಲದೆ ಯಾವ ಸಾಧನೆಯೂ ಫಲಿಸದು. ಪರರ ಬೋಧನೆಯಿಂದಾಗುವ ಜಾಗೃತಿಯು ಒತ್ತಾಯದ್ದು; ಆಪತ್ತಿಗೊಳಗಾಗಿ ಹುಟ್ಟುವ ಎಚ್ಚರಿಕೆಯಲ್ಲಿ ಸ್ವಾಭಾವಿಕತೆಯಿದ್ದು ಪರಿಣಾಮವನ್ನದು ಕೊಡುತ್ತದೆ. ದಕ್ಷಿಣಕನ್ನಡದ ರೈತರು ಆವೇಶದಿಂದಲ್ಲ, ಆಡಂಬರದಿಂದಲ್ಲ,— ಕೇವಲ ತಮ್ಮ ಆತ್ಮರಕ್ಷಣೆಯ ಅಗತ್ಯಬಿದ್ದು ಚಳವಳಿಸಬೇಕಾಗಿ ಬಂದಿದೆ. ತೀರ್ವೆಯು ಕಡಿಮೆಯಾಗಬೇಕೆಂದು ಸರಕಾರವೇ ಒಪ್ಪಿಕೊಳ್ಳುವಷ್ಟು ಕಾರಣಯುಕ್ತವಾದ ವಾದವು ಎಲ್ಲಿ ಹುಟ್ಟಿರುವುದೋ ಅಲ್ಲಿಯೇ ಸೇಕಡಾ ೧೨ರಷ್ಟು ತೀರ್ವೆಯೇರುವುದೆಂದರೆ ಎಂತಹ ವಿಪರೀತವಿದು! ರೈತ ಹಿತಾಕಾಂಕ್ಷಿಗಳು ಈ ಕಡೆಗೆ ಹೆಚ್ಚಿನ ಗಮನವಿತ್ತು ಕೂಡಲೇ ಕಾರ್ಯಕ್ಕೆ ಕೈಹಚ್ಚದಿದ್ದರೆ, ಚಿರಕಾಲ ಬಾಳುವ ತಪ್ಪೊಂದನ್ನು ಮಾಡಿಟ್ಟ ಜವಾಬ್ದಾರಿಯನ್ನು ಹೊರಬೇಕಾಗುವುದು. ಜಿಲ್ಲಾ ವರ್ಗದಾರರ ಸಂಘವು ಈ ಕಡೆಗೆ ಗಮನಕೊಡುವುದೇ?

M. V. H.

ಅಮೇರಿಕದ ಪ್ರಸಿದ್ಧ ಸರ್ಜನ್ ದಂತವೈದ್ಯರಾದ—

ಡಾ॥ ವಿರೋ ಪಿ. ಡೆ ಸಾ, ಡಿ. ಡಿ. ಎಸ್.,

ಇವರು "ಕೊಪ್ರನ್" ದಂತಮಂಜನದ ವಿಷಯವಾಗಿ ಹೀಗೆ ಬರೆಯುತ್ತಾರೆ:—



ಎಲ್ಲೆಲ್ಲೂ ದೊರೆವುದು.

ನಾನು, ಶಾಸ್ತ್ರೋಕ್ತವಾದ ಈ 'ಕೊಪ್ರನನ್ನು' ನನ್ನ ವೈದ್ಯಕೀಯ ಸಲಹೆ ಪಡೆದ ದಂತ ಬಾಧೆಯುಳ್ಳವರಿಗೆ ನಿರವಿಸಿ, ಜಾಗರೂಕತೆಯಿಂದ ಅದರ ಗುಣಗಳನ್ನು ಕಂಡಿರುವೆನು.

ಕೊಪ್ರನ್ ದಂತ ಮಂಜನದ ಗುಣವಿವರವೆಲ್ಲ ಅಕ್ಷರಶಃ ನಿಜ. ಅದರಲ್ಲುಪಯೋಗವಾಗುವ ಮುಖ್ಯ ವಸ್ತುಗಳೆಲ್ಲ ಪ್ರತ್ಯೇಕಪ್ರತ್ಯೇಕವಾಗಿ ಬಹು ಕಾಲದಿಂದ ಹಲ್ಲುಗಳಿಗೆ ಬಲವೀವ ಗುಣಗಳುಳ್ಳದೆಂದು ಸಿದ್ಧಾಂತವಾಗಿರಲು, ಅವುಗಳೆಲ್ಲ ಸೇರಿ ಉಂಟಾದ ಈ ಮಂಜನವು ಅತ್ಯುತ್ತಮವೇ ಆಗಿದೆ.

ಬಾಬೂಲಿನ ಹಸಿ ಕಡ್ಡಿಯೇ ಹಲ್ಲುಗಳಿಗೆ ಆರೋಗ್ಯಕರ; ಇತರ ಜಿನಸುಗಳೊಂದಿಗೆ ಈ ಬಾಬೂಲಿನ ಸತ್ವವು ಸೇರಿದೆಯಾದ ಕಾರಣ 'ಕೊಪ್ರನ್' ಒಂದು ಆದರ್ಶ ದಂತಮಂಜನವಾಯಿತು. ನಾನು ಕಂಡಂತೆ ಕೊಪ್ರನಿನಿಂದ ವಸಡುಗಳಿಂದಾಗುವ ಸ್ರಾವ ನಿಂತು, ಅವು ಪುಷ್ಟಿಗೊಂಡು, ನವಚೇತನ ಹೊಂದುತ್ತವೆ. ಅದರ ಉಪಯೋಗದಿಂದ ಬಾಯೊಳಗಿನ ವಿಷಕಾರಕ ಕ್ರಿಮಿಗಳು ನಾಶವಾಗುವುವು. ಅದರ ರುಚಿಯು ಹಿತಕರವಾಗಿದ್ದು, ಬಾಯಿಯ ದುರ್ವಾಸನೆ ನೀಗಿ, ಉಚ್ಛ್ವಾಸಕ್ಕೊಂದು ಸೌರಭವುಂಟಾಗುವುದು.

ಈಗ ಪೇಟೆಯಲ್ಲಿರುವ ದಂತಮಂಜನಗಳಲ್ಲಿ ಕೊಪ್ರನಿಗೆ ಅಗ್ರಸ್ಥಾನವಿರುವುದನ್ನು ನಾನು ಮುಂದಾಗಿ ಕಾಣಬಲ್ಲೆ.

ಕೊಪ್ರನಿಗೆ ಶಿಫಾರಸು ಬೇಕಾಗಿಲ್ಲ; ಬೇಕು ನಿಮ್ಮದೊಂದು ಪರೀಕ್ಷೆ ಮಾತ್ರ.

ಅದನ್ನುಪಯೋಗಿಸಿದಂತೆ ಆರೋಗ್ಯಕರವಾಗಿ ಬೆಳೆವುವು ನಿಮ್ಮ ಹಲ್ಲುಗಳು; ಅದುವೇ ಕೊಪ್ರನಿಗೆ ಸರ್ವ ಜನಾದರವನ್ನು ಸಾಧಿಸಿಕೊಡುವುದು.

ತಯಾರಿಸುವವರು:—

ಕೊಪ್ರನ್ ಕೆಮಿಕಲ್ ಕೋ., ಲಿಮಿಟೆಡ್, 83/85 ತಾರದೇವ್ ರೋಡ್, ಬೊಂಬಾಯಿ.

The Canara Public Conveyance Company, Ltd., Mangalore.

WE TAKE UTMOST CARE OF PASSENGERS.

Read the following letter:—

Modern Hindu Hotel,
Calicut, 17—6 1934.

Dear Sir,

We wish to thank you for all that you did for us to make our stay at Mangalore comfortable. It is extremely nice of you to have looked after us as you did.

Yours faithfully,
(Sd.) **A. V. Ramaswami.**

The same service is offered to all. We call for reports from passengers, if they have failed to receive similar attention and assure to take prompt action to see that inconvenience is not repeated.

Chikmagalur Public Conveyance Motor Service, Chikmagalur.

ಚಿಕ್ಕಮಗಳೂರು ಪಬ್ಲಿಕ್ ಕನ್ವೆಯನ್ಸ್ ಮೋಟರ್ ಸರ್ವಿಸ್,

ಚಿಕ್ಕಮಗಳೂರು.

ಮುಂಬಾಯಿಯಿಂದ — ಮಂಗಳೂರಿಗೆ.

ಮಂಗಳೂರಿನಿಂದ — ಮುಂಬಾಯಿಗೆ.

ಅಲ್ಲದೆ

ಹುಬ್ಬಳ್ಳಿ, ಧಾರವಾಡ, ಗೋವಾ, ಮುಂಬಾಯಿ ಮತ್ತು ದಕ್ಷಿಣ ಕನ್ನ[ಡ]

ಜಿಲ್ಲೆಯ ಎಲ್ಲಾ ಭಾಗಗಳಿಗೆ ಪ್ರಯಾಣ ನಡಿಸಲಿಕ್ಕೆ

ಮಂಗಳೂರು—ಕಡೂರು ಹಾದಿಗಿಂತ ಉತ್ತಮ ಬೇರೆ ಹಾದಿಯಿಲ್ಲ!

ಹೊಸ ಬಸ್ಸುಗಳು. ಅನುಕೂಲ ಪ್ರಯಾಣ ಸೌಕರ್ಯಗಳು

ಕಡೂರು ಜಿಲ್ಲೆಯೊಳಗಿನ ಎಲ್ಲಾ ಕಾಫಿ ತೋಟಗಳಿಗೆ

ಕೂಲಿಕಾರರನ್ನು ತರಲಿಕ್ಕೂ ಅಲ್ಲಿಂದ ಕೊಂಡುಹೋಗ

ಲಿಕ್ಕೂ ನಾವು ಎಲ್ಲಾ ತರದ ಸಹಾಯವನ್ನೂ ಕೊಡುತ್ತೇವೆ.

ಚಿಕ್ಕಮಗಳೂರಿನಿಂದ— ಶಿವಮೊಗ್ಗಕ್ಕೆ, ಬೀರೂರಿಗೆ, ಕಡೂರಿಗೆ.
— ಮೂಡಗೆರೆಗೆ, ಸಕಲೇಶಪುರಕ್ಕೆ.
— ಮಂಗಳೂರಿಗೆ, ಮೂಡಬಿದ್ರೆಗೆ, ಪುತ್ತೂರಿಗೆ, ಮೂಲ್ಕಿಗೆ.
—ಧರ್ಮಸ್ಥಳಕ್ಕೆ, ವೇಣೂರಿಗೆ, ಸುಬ್ರಹ್ಮಣ್ಯಕ್ಕೆ.

ನಿರಾಯಾಸದ ಪ್ರಯಾಣ! ಉತ್ಸಾಹಕರ ಸೌಕರ್ಯ!

ಬೇಕಾದ ಮಾಹಿತಿಗೆ ನಮ್ಮ ಆಫೀಸಿಗೆ ಬರೆದು ತಿಳಿದುಕೊಳ್ಳಿ.

ಶ್ರೀಮಧುವನೇಂದ ಮಹೌಷಧಾಲಯ. ಕಟಪಾಡಿ. ದ. ಕ.

ಈ ಗ್ರಂಥವು ಎಷ್ಟು ಪ್ರಯೋಜನಕಾರಿ ಎಂಬುದನ್ನು ಈ ಕೆಳಗೆ ಬರೆದಿರುವ ಒಂದೆರಡು ಸರ್ಟಿಫಿಕೇಟುಗಳನ್ನು ನೋಡಿರಿ.

ಯೋಗ್ಯತಾ ಪತ್ರಿಕೆಗಳು.

ಮಹಾಶಯರೇ! ತಮ್ಮಿಂದ ಕಳುಹಿಸಲ್ಪಟ್ಟ ೨ನೇ ಭಾಗ ವಿದ್ಯಾಗುರು ಗ್ರಂಥವು ತಲ್ಪಿ ಎಲ್ಲಾ ವಿಷಯಗಳು ತಿಳಿದ್ದಾಯಿತು. ಆದರೆ ತಾವು ಈ ಕಾಲಕ್ಕೆ ಗುರುಭಾವವನ್ನು ಹೊಂದಿ ಈಶ್ವರಾಂಶದಂತೆ ಕೊಂಡಾಡಿಸಿಕೊಳ್ಳುವ ಗ್ರಂಥವು ಬಹಳ ಚನ್ನಾಗಿರುತ್ತದೆ. ಬಹು ಸಾಹಸಪಟ್ಟು ಮಾಡಿರುವ ನಿಮ್ಮ ಗ್ರಂಥವು ಸರ್ವತನ್ಮತವಾಗಿ ಬಹುಜನಗಳ ಸಂತೋಷಕ್ಕೆ ಪಾತ್ರವಾಗಿರುತ್ತದೆ. ದಯವಿಟ್ಟು ೩ನೇ ಭಾಗಕ್ಕೆ ಕೂಡಲೆ ವಿದ್ಯಾ ಟುಮಾಡಿ ನಿಮ್ಮ ಕೀರ್ತಿಯನ್ನು ಜಗದ್ವಿಖ್ಯಾತವಾಗುವಂತೆ ವಿಶದಪಡಿಸಬೇಕಾಗಿ ಪ್ರಾರ್ಥನೆ.

(Sd.) ಜ್ಯೋತಿಷ್ಯದ ಯಸ್. ತಮ್ಮಯ್ಯ, ಹೊಸೂಗೆರೆ, ಹೆಬ್ಬೂರು ಪೋಸ್ಟು, ತಾ॥ 7-12-27.

TRUE COPY.

ಭಾರತ ಜ್ಯೋತಿಷ್ಯ ವೈದ್ಯಾಲಯದ ಮೇನೇಜರವರ ಸನ್ನಿಧಿಗೆ—ತಮ್ಮ ಕಂಪೆನಿಯಿಂದ ತರಿಸಿದ ವಿದ್ಯಾಗುರು ಭಾಗ ೨ನೇ ಮತ್ತು ವಿಭವ ಸಂ॥ ರದ ಪಂಚಾಂಗವನ್ನು ಸಹ ನೋಡಿದೆ. ಬಹಳ ಚನ್ನಾಗಿರುತ್ತದೆ. ತಾಯಿತೆಯನ್ನು ಅದಕ್ಕೆ ಔಷಧವನ್ನು ಸಹ ಪರೀಕ್ಷೆಮಾಡಿ ನೋಡಿದೆ. ನನ್ನ ತಮ್ಮನಿಗೆ ಮೇಹ ಸಂಬಂಧ ಕಾಯಿಲೆ ಆಗಿತ್ತು. ನಿಮ್ಮ ವಿದ್ಯಾಗುರು ಗ್ರಂಥದ ೨ನೇ ಭಾಗದಲ್ಲಿ ಬರೆದ ಪ್ರಕಾರ ಈಗ ಗುಣವಾಗಿರುತ್ತಾನೆ. ನಿಮ್ಮ ಪಂಚಾಂಗವನ್ನು ಸಣ್ಣ ಹುಡುಗರು ಸಹ ನೋಡಿಕೊಳ್ಳುವಂತೆಯೂ, ಮನಸ್ಸಿನಲ್ಲಿರುವುದನ್ನು ತಿಳಿದುಕೊಳ್ಳುವದಕ್ಕೆ ನಿಮ್ಮ ಪಂಚಾಂಗ ಬಹಳ ಅನುಕೂಲವಾಗಿರುತ್ತೆ. ಮತ್ತು ಕಾಗದ ತಲುಪುತ್ತಲೇ ಅಪೇಕ್ಷೆಯಂತೆ ಸಾಮಾನುಗಳನ್ನು ಕಳುಹಿಸುತ್ತಾ ಇರುವುದು ತುಂಬಾ ಸಂತೋಷವಾಗಿರುತ್ತೆ.

(Sd.) ಕೆ. ವೆಂಕಟರಾಮಭಟ್ಟ, ಕೆ. ನಾಗಭಟ್ಟ,
ಹರಿಹರಪುರ, ತಾ॥ 18—2—28

TRUE COPY.

ಇದೇ ರೀತಿ ಅನೇಕಾನೇಕ ಸರ್ಟಿಫಿಕೇಟುಗಳು ಬಂದಿರುತ್ತವೆ. ತಮ್ಮಗಳ ಅವಗಾಹನಕ್ಕಾಗಿ ಒಂದೆರಡು ಸರ್ಟಿಫಿಕೇಟುಗಳನ್ನು ಮಾತ್ರ ಇಲ್ಲಿ ಬರೆದಿರುತ್ತೆ. ಸ್ಥಳ ಸಂಕೋಚದಿಂದ ಯಾವತ್ತು ಸರ್ಟಿಫಿಕೇಟುಗಳನ್ನು ಬರೆಯಲು ಅವಕಾಶವಿಲ್ಲ.

ಜೀವದ ಗುಟ್ಟು! ೧೦೦೦ ರೂಪಾಯಿ ಬಹುಮಾನ! ಭಾಗ್ಯದ ಸೊತ್ತು!

ಸುಖ ಜೀವನ! ವಂಶ ಪಾವನ!

ಶಾಸ್ತ್ರ ಅನುಭವಸಂಗ್ರಹವೆಂಬ

ಜೀವರತ್ನಪ್ರದೀಪಿಕೆ.

ತಂದೆಯು ಮಕ್ಕಳಿಗೂ ಸಹ ಹೇಳದೆ ಇರತಕ್ಕ ಅನುಭವ ಕಂಡ ಮರ್ಮವಿಷಯಗಳನ್ನೇ ಒಳಗೊಂಡಿರುತ್ತೆ. ಈ ಗ್ರಂಥದಲ್ಲಿರುವ ವಿಷಯಗಳು ಅನುಭವವಾದವುಗಳಲ್ಲವೆಂದು ವ್ಯಕ್ತಪಡಿಸುವವರಿಗೆ ಒಂದು ಸಾವಿರ ರೂಪಾಯಿ ಬಹುಮಾನ ಕೊಡಲ್ಪಡುತ್ತೆ. ಕೇವಲ ಲೋಕೋಪಕಾರಕ್ಕಾಗಿ ಪ್ರಚಾರಿಸಲ್ಪಟ್ಟಿರುವುದರಿಂದ ಕ್ರಯವನ್ನು ತೀರಾ ಕಡಿಮೆ ಇಟ್ಟಿರುತ್ತೆ. ಕ್ರಯ ಪ್ರತಿ ೧ಕ್ಕೆ ರೂ. ೨—೮—೦ ಟ. ಕ. ಪ್ರತ್ಯೇಕ.

ಈ ಗ್ರಂಥದ ಜ್ಯೋತಿಷ್ಯ, ಪ್ರಶ್ನೆ, ಮುಹೂರ್ತ, ಯಂತ್ರ, ಮಂತ್ರ ರಹಸ್ಯದಲ್ಲಿ ಗ್ರಹಗಳ ಬಲಾಬಲ ತಾರತಮ್ಯ ವಿಚಾರ, ವಿವಾಹಮುಹೂರ್ತವನ್ನು ನಿರ್ಣಯಿಸುವುದಕ್ಕೆ ಬೇಕಾದ ಸಲಹೆಗಳು, ವಿವಾಹ ಲಗ್ನಪತ್ರಿಕೆ ಕ್ರಮ, ವಿವಾಹಪ್ರಶ್ನೆ, ಕನ್ಯಾ, ವರಲಾಭ ಪ್ರಶ್ನೆಗಳು, ಕನ್ಯಾ, ವರಲಾಭಕ್ಕೆ ಮಾಡುವ ಕ್ರಮ, ಸುರತಪ್ರಶ್ನೆ, ದಂಪತಿಗಳಲ್ಲಿ ಪ್ರೀತಿ ಹುಟ್ಟುವದಕ್ಕಾಗಿ ಮಾಡುವಕ್ರಮ, ಕಾಮುಕಲಹಪ್ರಶ್ನೆ, ನಿಷೇಕ ಮುಹೂರ್ತ ವಿಚಾರ, ಸ್ತ್ರೀಪುರುಷರ ಕಲಾಸ್ಥಾನ ನಿರ್ಣಯ, ಸ್ತ್ರೀಪುಂಸ ಪ್ರೀತಿಪ್ರಶ್ನೆ ವಿಚಾರ, ಸ್ತ್ರೀಪುರುಷ ವೈರತ್ವ ನಾಶನಕ್ರಮ, ಗರ್ಭಭ್ರಾಂತಿಪ್ರಶ್ನೆ, ಗರ್ಭಕ್ಷೇಮಪ್ರಶ್ನೆ, ಗರ್ಭರಕ್ಷಣ ವಿಧಿ, ಬಾಲಾನಾಂ ಜೀವಿತ ಪ್ರಶ್ನೆ, ಬಾಲಾನಾಂ ದೋಷಪರಿಹಾರವಿಧಿ, ಸ್ತ್ರೀಪುರುಷ ಪ್ರಸವ ಪ್ರಶ್ನೆವಿಚಾರ, ಸ್ತ್ರೀಪುರುಷ ಶಿಶುವನ್ನು ಪಡೆಯುವ ಮರ್ಮಗಳು, ಸಂತಾನಪ್ರಶ್ನೆ, ಸಂತಾನದೋಷಪರಿಹಾರವಿಧಿ, ವ್ಯಾಪಾರ ಉದ್ಯೋಗ ಪ್ರಶ್ನೆ, ಉದ್ಯೋಗಸುಖೋಪಾಯ ವಿಧಿ, ತೇಜಿ ಮಂದಿ ವಿಚಾರ, ವ್ಯಾಪಾರ ಜೀನಸಿನ ಲಾಭ, ದೀರ್ಘವ್ಯಾಪಾರ ಪ್ರಶ್ನೆವಿಚಾರ, ಸ್ಥಳ ಪರಸ್ಥಳ ವ್ಯಾಪಾರಪ್ರಶ್ನೆ, ಅಂಗಡಿ ಸ್ಥಾಪಿಸುವ ಪ್ರಶ್ನೆ, ಅಂಗಡಿ ಸ್ಥಾಪಿಸುವ ಮುಹೂರ್ತ ನಿರ್ಣಯ, ಅಂಗಡಿ ದೋಷ ಪ್ರಶ್ನೆವಿಚಾರ, ಅಂಗಡಿ ದಿಗ್ಬಂಧನಕ್ರಮ, ಗೃಹ ಕ್ರಯ ಪ್ರಶ್ನೆ, ಗೃಹದೋಷ ಪ್ರಶ್ನೆವಿಚಾರ, ಗೃಹದಿಗ್ಬಂಧನಕ್ರಮ, ಗೃಹನಿರ್ಮಾಣ ಪ್ರಶ್ನೆ, ಗೃಹನಿರ್ಮಾಣ ಮುಹೂರ್ತ ನಿರ್ಣಯ, ಭೂಕ್ರಯಪ್ರಶ್ನೆ, ಸಸ್ಯಪ್ರಶ್ನೆ, ಸಸ್ಯಬಾಧಕವಿಚಾರ, ಭೂದೋಷಪ್ರಶ್ನೆವಿಚಾರ, ಭೂದೋಷ ನಿವಾರಣಕ್ರಮ, ಬೀಜಬಿತ್ತುವ ಮುಹೂರ್ತ ವಿಚಾರ, ವೃಷ್ಟಿಪ್ರಶ್ನೆ, ಮಳೆಯೋಗಗಳ ವಿಚಾರ, ಸದ್ಯವೃಷ್ಟಿಯೋಗಗಳು, ಪಶುಕ್ರಯಪ್ರಶ್ನೆ, ಪಶುಗಳನ್ನು ತರುವ ಮುಹೂರ್ತ ವಿಚಾರ, ಪಶುನಷ್ಟ ಪ್ರಶ್ನೆ, ಪಶುಗಳು ತಪ್ಪಿಸಿಕೊಂಡು ಹೋದರೆ ಮಾಡುವ ಕ್ರಮ, ದುಗ್ಧಪ್ರಶ್ನೆ, ಪಶುಗಳ ದೃಷ್ಟಿದೋಷ, ಗ್ರಹದೋಷ ನಿವಾರಣ ಕ್ರಮ, ವ್ಯಾಜ್ಯಪ್ರಶ್ನೆ, ವ್ಯಾಜ್ಯ, ಕುಸ್ತಿ, ಕುರಿಕಾಳಗ ಮುಂತಾದವುಗಳಲ್ಲಿ ಜಯವಾಗುವುದಕ್ಕೆ ಮಾಡುವಕ್ರಮ, ಸುಭಿಕ್ಷ, ದುರ್ಭಿಕ್ಷಾದಿ ಪ್ರಶ್ನೆವಿಚಾರ, ಸಂವತ್ಸರ, ಮಾಸಫಲ ಪ್ರಶ್ನೆವಿಚಾರ, ಗ್ರಹಗಳು ಕಾಡುವ ಸಮಯದಲ್ಲಿ ಮಾಡುವಕ್ರಮ, ಪ್ರಯಾಣಪ್ರಶ್ನೆ, ಪ್ರಯಾಣಕ್ಕೆ ಶುಭಾಶುಭ ಶಕುನ ನಿರ್ಣಯ, ಪ್ರಯಾಣಮುಹೂರ್ತ ವಿಚಾರ, ಪ್ರಯಾಣ ಸುಖದಾಯಕ ಕ್ರಮ, ಧಾತುವಾದ ಪ್ರಶ್ನೆ, ಬೇಂಟೆ ಪ್ರಶ್ನೆ, ಬೇಂಟೆ ಸುಖದಾಯಕಕ್ರಮ, ಪರಸ್ಥಳಕ್ಕೆ ಹೋದವರ ವಿಚಾರದಲ್ಲಿಪ್ರಶ್ನೆ, ಭೃತ್ಯಪ್ರಶ್ನೆ, ನೌಕರಿ ಪ್ರಶ್ನೆ, ನೌಕರಿ ಪ್ರಾಪ್ತಿಸುವದಕ್ಕಾಗಿ ಮಾಡುವ ಕ್ರಮ, ನಷ್ಟ ಭೃತ್ಯಪ್ರಶ್ನೆವಿಚಾರ, ಬಂಧಮೋಕ್ಷ ಪ್ರಶ್ನೆ ವಿಚಾರ, ಬಂಧಮುಕ್ತವಿಧಿ, ಭೂಗತ ದ್ರವ್ಯ ಪ್ರಶ್ನೆ ವಿಚಾರ, ರೋಗಪ್ರಶ್ನೆ ವಿಚಾರ, ರೋಗಶಾಂತಿವಿಧಿ, ಭೋಜನಪ್ರಶ್ನೆ, ಸ್ವಪ್ನಪ್ರಶ್ನೆ, ಸ್ವಪ್ನದೋಷಪರಿಹಾರವಿಧಿ, ಮುಷ್ಟಿಪ್ರಶ್ನೆ ಮೂಕಪ್ರಶ್ನೆ, ಜಲಪ್ರಶ್ನೆ, ಭಾವಿಯನ್ನು ತೆಗೆಸುವದಕ್ಕೆ ಮುಹೂರ್ತ, ವಿದ್ಯಾಪರೀಕ್ಷೆ ಪಾಸು ಪ್ರಶ್ನೆವಿಚಾರ, ವಿದ್ಯಾರಂಭ ಮುಹೂರ್ತ ನಿರ್ಣಯ, ಚೋರಪ್ರಶ್ನೆ ಇವೇ ಮೊದಲಾದ ಅನುಭವಯುಕ್ತ ರಹಸ್ಯವಿಷಯಗಳನ್ನು ಬರೆದಿರುತ್ತೆ.

ಕುಂಡಲಿರಹಸ್ಯದಲ್ಲಿ:—ಕುಂಡಲಿಯನ್ನು ಹಸ್ತದಲ್ಲಿ ತೆಗೆದುಕೊಂಡಕೂಡಲೆ ಕುಂಡಲಿಮೇಲಿಂದ ಜಾತಕನ ವಯಸ್ಸು, ಜನ್ಮ ಮಾಸ, ಜನ್ಮ ಪಕ್ಷ, ಜನ್ಮ ತಿಥಿ, ಜನ್ಮ ಕಾಲವನ್ನು ತಿಳಿಯುವಕ್ರಮ, ಸ್ತ್ರೀಪುರುಷ ಕುಂಡಲಿ, ದುಷ್ಟಕುಂಡಲಿ, ನಪುಂಸಕಕುಂಡಲಿಗಳನ್ನು ತಿಳಿಯುವಕ್ರಮ, ಪಿತೃದಿಂದೋತ್ಪನ್ನನೋ, ಪರಪುರುಷದಿಂದೋತ್ಪನ್ನನೋ ಎಂಬುವದನ್ನು ತಿಳಿಯುವ ಕ್ರಮ, ಬಾಲಾರಿಷ್ಟಮರಣವಿಚಾರ, ಜಾತಕನ ರೂಪ, ದೇಹಸುಖ, ಕಷ್ಟ, ದೇಹಸೌಖ್ಯ, ಕ್ಷೀಣತ್ವ, ವಾತ, ಪಿತ್ಥ, ಗುಣಾದಿಯೋಗಗಳನ್ನು ತಿಳಿಯುವಕ್ರಮ, ಶಿರಚ್ಛೇದಯೋಗ, ಜಾತಕನ ವಂಶವಿಚಾರ, ಸಂಚಾರಯೋಗ, ಧನ, ವಿದ್ಯಾಯೋಗವಿಚಾರ, ನೇತ್ರ, ಮುಖ, ದಂತ, ಕುಟುಂಬ ವಿಚಾರ, ರತ್ನಾದಿದ್ರವ್ಯವಿಚಾರ, ಭೋಜನಯೋಗ, ಪ್ರಯಾಣಯೋಗ, ಭ್ರಾತೃಯೋಗ, ಬಲಪರಾಕ್ರಮಯೋಗವಿಚಾರಗಳು, ದಾಸಿ, ದಾಸಯೋಗವಿಚಾರ, ಕರ್ಣ, ಕಂಠವಿಚಾರ, ಬಂಧುಯೋಗ, ಗೃಹ, ಭೂಮಿ, ವಾಹನ, ಪಶು, ಮಾತೃಯೋಗವಿಚಾರಗಳು, ಕಪಟ, ನಿಷ್ಕಪಟಯೋಗ, ಶಯ್ಯಾಸುಖಾಸುಖಯೋಗ, ಸಾಕ್ಷಿವಿಚಾರ, ಲೇಖನಾ ಮತ್ತು ಗ್ರಂಥವಿಚಾರ, ಸಂತಾನಯೋಗವಿಚಾರ, ಸಂತಾನನಷ್ಟಕೆ ಕಾರಣ, ತದ್ದೋಷನಿವಾರಣ ಕ್ರಮ, ಬುದ್ಧಿವಿಚಾರ, ಶತ್ರುವಿಚಾರ, ರೋಗಗಂಡಾಂತರಗಳ ವಿಚಾರ, ಕಳತ್ರವಿಚಾರ, ವ್ಯಭಿಚಾರಯೋಗ, ಆಯುಷ್ಯವಿಚಾರ, ಮರಣಹೇತುವಿಚಾರ, ಮರಣಸ್ಥಳವಿಚಾರ ದುರ್ಮರಣಾದಿಯೋಗಗಳು, ಪಿತೃವಿಚಾರ, ದಾನಧರ್ಮವಿಚಾರ, ಭಾಗ್ಯಯೋಗ, ಜೀವನವಿಚಾರ, ಕೀರ್ತಿವಿಚಾರ, ಶ್ರೇಷ್ಠ ಭ್ರಾತೃವಿಚಾರ, ಲಾಭವ್ಯಯಯೋಗಗಳು, ಇವೇ ಮೊದಲಾದುವುಗಳನ್ನು ಕುಂಡಲಿ ನೋಡಿದ ಕೂಡಲೆ ಹೇಳುವ ಅನುಭವ ರಹಸ್ಯಗಳನ್ನು ಬರೆದಿರುತ್ತೆ.

ರಮಲಶಾಸ್ತ್ರರಹಸ್ಯದಲ್ಲಿ:—ಆಯುಷ್ಯಪ್ರಶ್ನೆ, ದೈವಪ್ರಶ್ನೆ, ಮರಣಹೇತುಪ್ರಶ್ನೆ, ಕಷ್ಟಕಾಲ ನಿರ್ಣಯಪ್ರಶ್ನೆ, ಇಷ್ಟಕಾರ್ಯಸಿದ್ಧಿ ಪ್ರಶ್ನೆ, ಧನಲಾಭಪ್ರಶ್ನೆ, ಧನ ಸಾಲತರುವ ಪ್ರಶ್ನೆ, ಋಣಮುಕ್ತಪ್ರಶ್ನೆ ವಿಚಾರಗಳು, ಕ್ರಯವಿಕ್ರಯಪ್ರಶ್ನೆ, ಪರದೇಶ ಕ್ರಯ ವಿಕ್ರಯಪ್ರಶ್ನೆ, ಧಾತು, ಮೂಲ, ಜೀವ, ಧಾನ್ಯಾದಿ ವ್ಯಾಪಾರಪ್ರಶ್ನೆ, ಮಿತ್ರಶತ್ರುಪ್ರಶ್ನೆವಿಚಾರ, ಭೋಜನಪ್ರಶ್ನೆ, ವಕೀಲಪ್ರಶ್ನೆ, ವಕೀಲನಿಂದ ಜಯವೋ ಅಪಜಯವೋ, ಸಮೀಪಪ್ರವಾಸಪ್ರಶ್ನೆ, ಗೃಹಕ್ರಯಪ್ರಶ್ನೆ, ಗೃಹನಿರ್ಮಾಣ, ಗೃಹವಾಸಪ್ರಶ್ನೆ, ಭೂಕ್ರಯಪ್ರಶ್ನೆ, ಜಲಪ್ರಶ್ನೆ, ವೈರುಪ್ರಶ್ನೆ, ಪಶುನಷ್ಟಪ್ರಶ್ನೆ, ಈ ಗ್ರಾಮದಿಂದ ಸುಖವೋ, ಕಷ್ಟವೋ, ದೇವತಪ್ರಶ್ನೆ, ಭೂಗತದ್ರವ್ಯ ಪ್ರಶ್ನೆ, ಮಾತಾಪಿತೃ ಆಯುಷ್ಯಪ್ರಶ್ನೆ, ಪಶುಕ್ರಯಪ್ರಶ್ನೆ, ಗೃಹದೋಷಪ್ರಶ್ನೆ, ಸಂತಾನಪ್ರಶ್ನೆ, ಸ್ತ್ರೀಪುರುಷ ಜನನಪ್ರಶ್ನೆ, ಗರ್ಭಪ್ರಶ್ನೆ, ಲಕ್ಷ್ಯಬೇಟೆ ಪ್ರಶ್ನೆ, ರೋಗಪ್ರಶ್ನೆ, ಬೇಂಟೆಪ್ರಶ್ನೆ, ಕನ್ಯಾ ವರಪ್ರಶ್ನೆ, ಚೋರಪ್ರಶ್ನೆ, ಪರೀಕ್ಷೆಪಾಸು ವಿಷಯಪ್ರಶ್ನೆ, ವ್ಯವಹಾರಪ್ರಶ್ನೆ, ಊರಿಗೆ ಹೋದವರ ಪ್ರಶ್ನೆ, ಧರ್ಮಕಾರ್ಯಪ್ರಶ್ನೆ, ಮುಷ್ಟಿಪ್ರಶ್ನೆ, ರಾಜಮರ್ಯಾದೆ, ರಾಜಭೇಟಿಪ್ರಶ್ನೆ, ಜೀವನೋಪಾಯಪ್ರಶ್ನೆ, ನೌಕರಿ, ಉದ್ಯೋಗಪ್ರಶ್ನೆ, ಸಾಲಿನ ವ್ಯಾಪಾರಪ್ರಶ್ನೆ, ಬಂಧಮುಕ್ತಪ್ರಶ್ನೆ, ವೃಷ್ಟಿಪ್ರಶ್ನೆ, ಸಂವತ್ಸರಮಾಸ ಫಲಪ್ರಶ್ನೆ, ಸುಭಿಕ್ಷ ದುರ್ಭಿಕ್ಷಪ್ರಶ್ನೆ, ಭೂದೋಷಪ್ರಶ್ನೆ, ಗೃಹದೋಷಪ್ರಶ್ನೆ, ಯುದ್ಧ ಜಯಾಪಜಯ ಪ್ರಶ್ನೆ, ಇವೇ ಮೊದಲಾದ ಪ್ರಶ್ನೆಗಳನ್ನು ಹೇಳುವ ರಮಲಶಾಸ್ತ್ರದ ಅನುಭವ ರಹಸ್ಯಗಳನ್ನು ಬರೆದಿರುತ್ತೆ.

ಸಾಮುದ್ರಿಕರಹಸ್ಯದಲ್ಲಿ:—ಹಸ್ತದಲ್ಲಿರುವ ರೇಖೆ, ಗ್ರಹಸ್ಥಾನಗಳ ಪರಿಚಯ, ನಾನಾಬಗೆಯ ರೇಖೆಗಳನ್ನು ಅವುಗಳ ಆಕೃತಿಗಳನ್ನು ತೋರಿಸುವ ನಾನಾವಿಧ ಸ್ತ್ರೀಪುರುಷರ ಹಸ್ತಚಿತ್ರಗಳನ್ನು ಹಾಕಿರುವದಲ್ಲದೆ ಅವುಗಳ ಫಲಗಳನ್ನು ತಿಳಿಯುವ ಕ್ರಮಗಳನ್ನು ಚಿಕ್ಕಚಿಕ್ಕ ಬಾಲಕರಿಗೂ ಸಹ ತಿಳಿಯುವಂತೆ ಬರೆದಿರುತ್ತೆ. ಸಾಮುದ್ರಿಕಶಾಸ್ತ್ರವನ್ನು ಇಷ್ಟು ವಿರಳವಾಗಿ ತಿಳಿಯುವಂತೆ ನಾನಾಬಗೆ ಚಿತ್ರಗಳೊಂದಿಗೆ ಬರೆಯಲ್ಪಟ್ಟ ಗ್ರಂಥಗಳು ಇದುವರೆಗೂ ಭೂಮಿಯಲ್ಲಿ ಬರಲಿಲ್ಲವೆಂದು ಸಂತೋಷವಾಗಿ ಹೇಳಬಹುದು. ಗ್ರಂಥವನ್ನು ನೋಡಿದರೆ ಇದರ ಸ್ವಾರಸ್ಯವು ತಿಳಿಯಬರುತ್ತದೆ.

ಅನುಭವ ವೈದ್ಯರಹಸ್ಯದಲ್ಲಿ:—ರಸಾದಿ ಸರ್ವ ಜೀನಸುಗಳ ಅನುಭವವಾದ ಶುದ್ಧಿ ಕ್ರಮಗಳು, ಸರ್ವವಿಧ ಜ್ವರಚಿಕಿತ್ಸಾಕ್ರಮಗಳು, ನಾನಾಬಗೆ ಅನುಭವಕಂಡ ಮಾತ್ರೆಗಳ ಕ್ರಮಗಳು, ಅವುಗಳ ಉಪಯೋಗಗಳು, ತಲೆಶೂಲೆ, ಅರತಲೆಶೂಲೆ, ನಿದ್ರಾಭಂಗ, ಅಧಿಕನಿದ್ರಾ, ಕಣ್ಣು ಬೇನೆ, ಕಣ್ಣಿನಲ್ಲಿ ಹುವ್ವು ಕೂತಿದ್ದು, ಇರಳುಗಣ್ಣು ಮುಂತಾದ ಚಿಕಿತ್ಸಾಕ್ರಮಗಳು, ಸೀನಸರೋಗ, ಪಕ್ಕಶೂಲೆ, ಗೂರ್ಲು, ಕೆಮ್ಮು, ಎದೆಶೂಲೆ, ಹೊಟ್ಟೆಶೂಲೆ, ರಕ್ತಭೇದಿ, ನಾಯಿಶೂಲೆ, ಗುಲ್ಮರೋಗ, ಮೂಲವ್ಯಾಧಿ, ಗುದಾರ್ಶರೋಗ, ಮೂತ್ರಕಟ್ಟು, ಬಹುಮೂತ್ರ, ಮೇಹ ಅಂಡವಾಯು, ಮೇಹರೋಗಗಳು, ಪರಂಗಿ, ಅಂಡಬಾವು ಮುಂತಾದ ನಾನಾಬಗೆ ರೋಗ ಚಿಕಿತ್ಸಾಕ್ರಮಗಳು, ನಾನಾಬಗೆ ಧಾತುಪುಷ್ಟಿ, ಲೇಹ್ಯಕ್ರಮಗಳು, ಸ್ತ್ರೀಯರ ಹೊಟ್ಟೆಕಟ್ಟು, ಬಿಳೀಸೆರಗು, ಕೆಂಪುಸೆರಗು, ಅತಿರಕ್ತಸ್ರಾವ, ಪ್ರಸವವೇದನೆ, ಮುಂತಾದ ಚಿಕಿತ್ಸಾಕ್ರಮಗಳು, ಬಾಲಕರ ಸರ್ವವಿಧರೋಗ ಚಿಕಿತ್ಸಗಳು, ಹುರುಕು, ಕಜ್ಜಿ, ಇಸಬು, ನಾರುಹುಣ್ಣು, ನಾನಾಬಗೆ ಕೆಟ್ಟ ಹುಣ್ಣುಗಳ ಚಿಕಿತ್ಸಾಕ್ರಮಗಳು, ತೊನ್ನಿನ ಚಿಕಿತ್ಸೆ, ಕೈಮುಸುಗು ಚಿಕಿತ್ಸೆ, ಹಾವು, ಚೇಳು, ಇಲಿ, ಹೆಗ್ಗಣ ಮುಂತಾದ ವಿಷಚಿಕಿತ್ಸಾಕ್ರಮಗಳು, ಕಾಲರಾ ಚಿಕಿತ್ಸೆ ಕ್ರಮಗಳು, ಮಕ್ಕಳ ಪುಷ್ಟಿ ಔಷಧಗಳು, ಕೈಕಾಲು ಹಿಡಿಮಕೊಂಡಿದ್ದರೆ ಮಾಡುವ ಚಿಕಿತ್ಸಗಳು, ರಾಮಬಾಣತೈಲ, ಭೃಂಗಾಮಲಕ ತೈಲ, ಕುಚಕವರ್ಧಕ ತೈಲ, ಅವುಗಳ ಕ್ರಮಗಳು, ಅವುಗಳ ಮಹತ್ತರವಾದ ಉಪಯೋಗಗಳು, ಪರಿಮಳ ಸ್ನಾನಚೂರ್ಣ, ಕಸ್ತೂರಿ ಮಾತ್ರೆ, ಶೀನಿಪುಡಿ, ಅಮೃತಬಳ್ಳಿಯ ಸತ್ವ, ಮತ್ತು ಅರ್ಕಕ್ರಮ, ಸರ್ವ ಜೀನಸುಗಳ ಸತ್ವಕ್ರಮಗಳು, ಅಜ್ವಾನ, ಲೋಬಾನ ಮುಂತಾದ ಪುಷ್ಪಗಳನ್ನು ತೆಗೆಯುವ ಕ್ರಮಗಳು ಅವುಗಳ ಗುಣೋಪಯೋಗಗಳು, ಯುನಾನಿ ಸಿಂಧೂರಕ್ರಮ, ಮೂಲಿಕೆಗಳಿಂದ ಉಪ್ಪನ್ನು ತೆಗೆಯುವ ಕ್ರಮಗಳು, ಅವುಗಳ ಉಪಯೋಗಗಳು, ಶಂಖದ್ರಾವಕ ಕ್ರಮ, ಕವಡೆ, ಶಂಖ, ಹವಳ, ಗುಗ್ಗುಳ, ಸತುವು, ತವರ, ತಾಮ್ರ, ಬೆಳ್ಳಿ, ಸೀಸ, ಬಂಗಾರ, ಗಂಧಕ, ತಾಳಕ, ರಸಕರ್ಪೂರ, ಇಂಗ್ಲೀಕ, ಶಂಖಪಾಷಾಣ ಮುಂತಾದ ಅನುಭವಪಾತ್ರಿಯಾದ ಭಸ್ಮಕ್ರಮಗಳು, ಕ್ಷಯ, ಪಾಂಡು, ಶ್ವಾಸಕಾಸ, ಕುಷ್ಠ ಮುಂತಾದ ಘನವ್ಯಾಧಿಗಳಿಗೆ ಈ ಭಸ್ಮಗಳನ್ನು ಉಪಯೋಗಿಸುವ ಕ್ರಮಗಳು, ಸರ್ವರೋಗಗಳಿಗೂ ಸಂಜೀವಿನಿ ಔಷಧಕ್ರಮ, ಪಶುಗಳ ಸಕಲರೋಗ ನಿವಾರಣ ಕ್ರಮಗಳು, ಪಶುಗಳ ಹಿರೇಬೇನೆ ಚಿಕಿತ್ಸಾ ಕ್ರಮಗಳು, ಇವೇ ಮೊದಲಾದ ಉಪಯುಕ್ತವಾದ ಅನುಭವಕಂಡ ಔಷಧಗಳನ್ನೇ ಬರೆದಿರುತ್ತೆ. ಇದರಲ್ಲಿ ಅನುಭವವಿಲ್ಲದ ಔಷಧ ಒಂದಾದರೂ ಇರುವುದಿಲ್ಲ.

ವಾಚಕಮಹಾಶಯರೇ! ಹೆಚ್ಚು ಹೇಳುವದೇನದೆ? ಈ ಗ್ರಂಥದಲ್ಲಿ ತಂದೆಯು ಮಕ್ಕಳಿಗೂ ಸಹ ಹೇಳದಂಥ ಅನುಭವ ವಿಷಯಗಳನ್ನೇ ಬರೆದಿರುತ್ತೆ. ಗ್ರಂಥವನ್ನು ನೋಡಿದಮಾತ್ರದಿಂದಲೇ ತಿಳಿಯುವುದಲ್ಲದೆ ಮರ್ಮಗಳನ್ನು ಬಯಲಿಗಿಟ್ಟದ್ದಕ್ಕಾಗಿ ಕೊಂಡಾಡದೆ ಇರಲಾರಿರಿ. ಕೇವಲ ಒಂದೇ ಒಂದು ಅನುಭವದ ವಿಷಯಕ್ಕಾಗಿ ಎಷ್ಟು ಪ್ರಯಾಸಪಡಬೇಕಾಗುತ್ತದೆಂಬುವುದನ್ನು ತಾವೇ ಯೋಚಿಸಿರಿ.

ಕ್ರಯ ಪ್ರತಿ ೧ಕ್ಕೆ ರೂ. ೨—೮—೦. ಟ. ಕ. ಪ್ರತ್ಯೇಕ.

ಪತ್ತೆ:—**ಮೇನೇಜರ್, ಭಾರತಜ್ಯೋತಿಷ್ಯ ವೈದ್ಯಾಲಯ,**
ಹರಪನಹಳ್ಳಿ, (ಜಿಲ್ಲಾ ಬಳ್ಳಾರಿ.)

ದಿ ಪವರ್ ಪ್ರಿಂಟಿಂಗ್ ವರ್ಕ್ಸ್, ಚಿಕ್ಕಪೇಟೆ, ಬೆಂಗಳೂರು ಸಿಟಿ.

ಹೆಚ್ಚಿನ ವಿವರಕ್ಕೆ ಹೆಡ್ ಆಫೀಸಿಗೆ ಬರೆದುಕೊಂಡರೆ, ಸಂತೋಷದಿಂದ ಕೂಡಲೆ ತಿಳಿಸಲಾಗುವುದು.
☞ ಎಲ್ಲಾ ಕಡೆಗಳಲ್ಲಿಯೂ ಯೋಗ್ಯ ಏಜಂಟರುಗಳು ಬೇಕು. ಧಾರಾಳ ಕಮಿಶನ್ ಕೊಡಲಾದೀತು.
ಬೊಂಬಾಯಿ ಸಂಸ್ಥಾನದ ಪ್ರಾಮುಖ್ಯ ಏಜಂಟರು:—ಪ್ರಭಾಕರ ಕಂಪೆನಿ, 415 ಕೇರ್ ಮೇವಾನ್ ರಸ್ತೆ, ಬೊಂಬಾಯಿ.

ನೋಟೀಸು.
The Canara Bank Ltd., Puttur.
ದಿ ಕೆನರಾ ಬ್ಯಾಂಕ್ ಲಿಮಿಟೆಡ್,
ಪುತ್ತೂರು.

ರವು ಮಾಡಿದರೆ, ನಾವು ನಿರ್ಧರಿಸಿದ ಪರಿಸ್ಥಿತಿಯು ಸರಿಯಾದ ವಿಮರ್ಶೆಯನ್ನು ಮಾಡಿ, ತಮ್ಮ ಶಕ್ತಿವಿಹಾರಿ ...ರ್ಯೆಯನ್ನು ನಿರಾ...

ಸವ ಸರಕಾರವಿಲ್ಲ. ಆದರ ಯಂತ್ರವನ್ನು ವಿರುದ್ಧದೆಸೆಗೆ ತಿರುಗಿಸುವ ಕೆಲಸವು ರೈತರಿಂದಲೇ ಆಗಬೇಕಾಗಿದೆ. ಸುವ್ಯವಸ್ಥಿತ ಚಳವಳಿಯಿಲ್ಲದೆ ಯಾವ ಸಾಧನೆಯೂ ಫಲಿಸದು.

ಕಡಿಮೆಯಾಗಬೇಕೆಂದು ಸರಕಾರದೇ ... ಕೊಳ್ಳುವಷ್ಟು ಕಾರಣಯುಕ್ತವಾದ ವಾದವು ಎಲ್ಲಿ ಹುಟ್ಟಿರುವುದೋ ಅಲ್ಲಿಯೇ ನೇಕಡಾ ೧೫ಯಷ್ಟರ ತೀರ್ವೆಯಿರುವುದೆಂದರೆ ಎಂತಹ ...

Supplement to this Issue. ಈ ಜಾಹಿರಾತನ್ನು ಸಂಪೂರ್ಣವಾಗಿ ಓದಿ ತಮ್ಮ ಅಪ್ತಮಿತ್ರರಲ್ಲಿ ಪ್ರಚಾರಪಡಿಸಿರಿ.

ಸಮಸ್ತರ ಪ್ರತಿಮಾಸದ ಫಲ ಮತ್ತು ಸರ್ವಜನೋಪಕರ ವಿಷಯಗಳಿಂದ್ಯುಕ್ತವಾಗಿ ಬಹು ಶೋಧನೆಯಿಂದ ಬರೆಯಲ್ಪಟ್ಟು ಅನೇಕಾನೇಕ ಸರ್ಟಿಫಿಕೇಟುಗಳನ್ನು ಪಡೆದ

ಹರಪುರಿ ಸುಪ್ರಸಿದ್ಧ ತೆಗ್ಗಿನಮಠದ ಯುವ ಸಂ॥ ಸಿದ್ಧಾಂತ ಫಲ ಪಂಚಾಂಗ.

ಹರಪುರದೋಳ್ ನೆರೆಶೋಭಿಸ | ವರತೆಗ್ಗಿನಮಠದ ಚನವೀರಾಖ್ಯ ವಿಭುದರ್ || ವಿರಚಿಸಿದ ಪಂಚಾಂಗವಿದು | ಧರೆಯೊಳ್ ತಾಂ ಮೆರೆಯುತಿಹುದು ಬಹುವತ್ಸರದಿಂ || ೧ ||

ದಪ್ಪವಾದ ಕಾಗದ! ಅಂದವಾದ ಮುದ್ರಣ! ಈ ಪಂಚಾಂಗವನ್ನು ತರಿಸಿ ಓದಿನೋಡಿ ಚನ್ನಾಗಿಲ್ಲದಿದ್ದರೆ ವಾಪ್ಸುಮಾಡಿರಿ. ಕ್ರಯ ಪ್ರತಿ ೧ಕ್ಕೆ ರೂ. ೦—೩—೦

ಈ ಪಂಚಾಂಗದಲ್ಲಿ ತಿಥಿ, ವಾರ, ನಕ್ಷತ್ರ, ಯೋಗ, ಕರಣ, ಗ್ರಹಚಾರಾದಿ ಘಟಿಕಾದಿಗಳು, ಅಮೃತ ಸಿದ್ಧಾದಿಯೋಗಗಳು, ಇಂಗ್ಲೀಷು, ಹಿಂದುಸ್ಥಾನಿ ತೇದಿಗಳು, ಸರ್ವಮತದವರ ವ್ರತಗಳು, ಜಯಂತಿಗಳು, ಹಬ್ಬಗಳು, ಉತ್ಸವಗಳು, ಏಕಾದಶಿ ನಿರ್ಣಯ, ರಾಜಾದಿ ನವನಾಯಕರ ಫಲ, ಉಪನಾಯಕರ ವಿಚಾರ, ಪ್ರತಿದೇಶದಲ್ಲಿ ಉಂಟಾಗುವ ಮಳೆ, ಬೆಳೆ, ರೋಗ, ನಿರೋಗ, ಸುಭಿಕ್ಷ, ದುರ್ಭಿಕ್ಷವಿಚಾರ, ಗುರು, ಶನಿಗಳ ರಾಶಿ ಸಂಚಾರ ಫಲ, ವರ್ಷಕುಂಡಲಿ, ಜಗಲ್ಲಗ್ನ ಕುಂಡಲಿಗಳ ವಿಚಾರ, ವರ್ಷ ಧಾನ್ಯಾದಿಗಳ ನಿರ್ಣಯ, ಗುರು ಶುಕ್ರರ ಅಸ್ತಕಾಲ ನಿರ್ಣಯ, ಗ್ರಹಣಗಳು, ಮಕರ ಸಂಕ್ರಾಂತಿ ಫಲ, ಪ್ರತಿಯೊಬ್ಬರ ಆದಾಯ ವ್ಯಯ, ಕಂದಾಯ ಫಲ, ಗೋಚಾರಫಲ, ಪ್ರತಿಯೊಂದು ಮಳೆಯು ಯಾವಯಾವ ದೇಶದಲ್ಲಿ ಸುವೃಷ್ಟಿ, ಖಂಡವೃಷ್ಟಿ, ಅಲ್ಪವೃಷ್ಟಿ, ಎಂಬ ವಿಷಯ, ಪ್ರತಿಯೊಂದು ಜೀನಸುಗಳ ಪ್ರತಿಮಾಸದಲ್ಲಿ ಕೇಟಮಂದಿವಿಚಾರ, ಪ್ರತಿಯೊಂದು ಹಿಂಗಾರು ಮುಂಗಾರು ಫಸಲು ಎಷ್ಟೆಷ್ಟು ಆಣೆ ಭಾಗ ಫಲಿಸುತ್ತವೆಂಬುವ ವಿಷಯ, ಪ್ರತಿಮಾಸದಲ್ಲಿ ಪ್ರತಿದೇಶದೊಳುಂಟಾಗುವ ರೋಗನಿರೋಗಾದಿಗಳ ವಿಚಾರ, ವಿವಾಹ, ಉಪನಯನ ನೂತನಗೃಹಪ್ರವೇಶ, ನೂತನಗೃಹ ನಿರ್ಮಾಣ ಮುಹೂರ್ತಗಳು, ಪ್ರತಿಯೊಬ್ಬರ ಪ್ರತಿಮಾಸದ ಫಲ, ನವಗ್ರಹಗಳು ಮೇಷಾದಿ ೧೨ ರಾಶಿಗಳಲ್ಲಿರುವಾಗ ಉಂಟಾಗುವ ಶುಭಾಶುಭ ಫಲವಿಚಾರ, ನವಗ್ರಹಗಳು ಪೀಡಿಸುವ ಕಾಲದಲ್ಲಿ ಜಪಿಸಬೇಕಾದ ನವಗ್ರಹ ಸ್ತೋತ್ರ, ಪ್ರತಿಯೊಂದು ಶುಭ ಕಾರ್ಯಗಳ ಮುಹೂರ್ತಗಳನ್ನು ನಿರ್ಣಯಿಸುವ ರಹಸ್ಯಗಳು, ಪ್ರತಿಯೊಂದು ಪ್ರಶ್ನೆಗಳ ಕಾರ್ಯಸಿದ್ಧಿ ಫಲವಿಚಾರ, ಜನನ, ಮರಣ, ಋತುಅರಿಷ್ಟ ವಿಚಾರ, ಶ್ರೀ ಶಿವಲಿಖಿತಚಕ್ರ, ಚಂದ್ರಬಲ, ತಾರಾಬಲ ಕ್ರಮ, ರೋಗಪ್ರಾಪ್ತಿ ನಕ್ಷತ್ರಫಲ, ಸರ್ವ ಮುಹೂರ್ತಗಳ ವಿಚಾರ, ಅಂಗಚಲನ ಫಲ, ಸ್ವರಶಾಸ್ತ್ರ, ಗೃಹ ಆಯ, ಧನ ಋಣಾದಿಗಳನ್ನು ತೆಗೆಯುವ ಕ್ರಮ, ತ್ರಿಪುಷ್ಕರಯೋಗ, ಶೀಘ್ರ ಮರಣಯೋಗವಿಚಾರ, ಚಂದ್ರಕಾಲ ನಲಚಕ್ರ, ಘೋರಕಾಲ ನಲಚಕ್ರ ವಿಚಾರ, ಸ್ವಾತಿಯೋಗ, ಇಂದ್ರಾಯು ಲಕ್ಷಣ, ಸದ್ಯವೃಷ್ಟಿ, ಯೋಗವಿಚಾರ, ನಷ್ಟಪ್ರಶ್ನ ವಿಚಾರ, ಇತ್ಯಾದ್ಯುಪಯುಕ್ತವಾದ ಅನೇಕಾನೇಕ ವಿಷಯಗಳನ್ನು ಇತರ ಮುದ್ರಿತ ಪಂಚಾಂಗವನ್ನಾಗಲಿ, ಜ್ಯೋತಿಷ್ಯರನ್ನಾಗಲಿ ಬಯಸದಂತೆ ಪ್ರತಿಯೊಬ್ಬರಿಗೂ ತಿಳಿಯುವ ಹಾಗೆ ವಚನರೂಪವಾಗಿ ಬರೆದಿರುತ್ತೆ. ಈ ಪಂಚಾಂಗಗಳ ಹಣವು ಧರ್ಮಾರ್ಥ ಜ್ಯೋತಿಷ್ಯ ಶಾಲೆಗೆ ಉಪಯೋಗಿಸಲ್ಪಡುವುದರಿಂದ ಕರ್ನಾಟಕ ವಿದ್ಯಾಭಿಮಾನಿಗಳು ಈ ಪಂಚಾಂಗಗಳನ್ನು ತರಿಸಿಕೊಂಡು ಸಹಾಯಮಾಡಬೇಕೆಂದು ಪ್ರಾರ್ಥನೆ.

ಪಂಚಾಂಗದ ಬಹುಮಾನಗಳು.

೬ ಪಂಚಾಂಗಗಳನ್ನು ತರ್ಸಿಕೊಂಡವರಿಗೆ ಸರ್ವಾರಿಷ್ಟ ನಿವಾರಣೆ ಮತ್ತು ಸರ್ವಕಾರ್ಯ ಸಿದ್ಧಿಕರ ಸೂರ್ಯೋದ್ಧರಣೆಯನ್ನು, ೧೨ ಪಂಚಾಂಗಗಳನ್ನು ತರ್ಸಿಕೊಂಡವರಿಗೆ ಪ್ರತಿಯೊಂದು ಜೀನಸು ಯಾವ ತಿಥಿಯಿಂದ ಯಾವ ತಿಥಿವರೆಗೆ ತೇಜಿ ಅಥವಾ ಮಂದಿಯಾಗಿರುತ್ತವೆಂಬುದನ್ನು ಬಹು ಶೋಧನೆಯಿಂದ ನಿರ್ಣಯಿಸಿ ಬರೆದಿರುವ ಯುವ ಸಂ॥ ರದ ೧೨ ಮಾಸಗಳ ತೇಜಿ ಮಂದಿ ನಿರ್ಣಯವೆಂಬ ವ್ಯಾಪಾರ ಮರ್ಮಗನ್ನಡಿಯನ್ನು, ೧ ಸೂರ್ಯೋದ್ಧರಣೆಯನ್ನು, ೨೫ ಪಂಚಾಂಗಗಳನ್ನು ತರಿಸಿಕೊಂಡವರಿಗೆ ಮೇಲಿನ ಬಹುಮಾನಗಳನ್ನು ಕಳುಹಿಸುವದಲ್ಲದೆ ಈ ನೋಟೀಸಿನಲ್ಲಿ ಕಂಡ ವಿದ್ಯಾಗುರು ಗ್ರಂಥದ ೧ನೇ ಭಾಗ ಬೇಕಾದರೆ ೧ನೇ ಭಾಗವನ್ನು, ೨ನೇ ಭಾಗ ಬೇಕಾದರೆ ೨ನೇ ಭಾಗವನ್ನು ಉಚಿತವಾಗಿ ಕಳುಹಿಸುತ್ತೇವೆ. ೧೦೦,೨೦೦ ಪಂಚಾಂಗಗಳನ್ನು ತರಿಸಿಕೊಂಡವರಿಗೆ ಶೇಕಡಾ ರೂ. ೮-೦-೦ ಗಳ ಪ್ರಕಾರ ಕಳುಹಿಸುತ್ತೇವೆ. ಬಹುಮಾನ ಅಪೇಕ್ಷಕರಿಗೆ ಕ್ರಯ ಪ್ರತಿ ೧ಕ್ಕೆ ೩ ಆಣೆಗಿಂತಲೂ ಕಡಿಮೆ ಬೀಳುವುದಿಲ್ಲ. ೫ ಪಂಚಾಂಗಗಳಿಗಿಂತಲೂ ಕಡಿಮೆ ಕಳುಹಿಸುವದಿಲ್ಲವೆಂಬ ಅಂಶವನ್ನು ವಾಚಕರು ಮರೆಯಬಾರದು. ಕ್ರಯ ಪ್ರತಿ ೧ಕ್ಕೆ ೦-೩-೦.
ಪಂಚಾಂಗ ದೊರೆಯುವ ಪತ್ತೆ:—

ಮೇನೇಜರ್, ಭಾರತ ಜ್ಯೋತಿಷ್ಯ ವೈದ್ಯಾಲಯ, (ಹರಪನಹಳ್ಳಿ, ಜಿಲ್ಲಾ ಬಳ್ಳಾರಿ.)

ಶಕೆ ೧೮೫೧ ರಲ್ಲು ನಾಸಿಕದಲ್ಲಿ ಜರುಗಿದ ೧೯ನೇ ನಿಖಿಲ ಭಾರತೀಯ ವೈದ್ಯ ಸಮ್ಮೇಳನದವರಿಂದ ಪ್ರಶಸ್ತ ಪತ್ರಿಕೆಯನ್ನು ಪಡೆದ ಬಹುಜನ ಪಂಡಿತರಿಂದಲೂ, ಪತ್ರಿಕಾಕರ್ತರಿಂದಲೂ ಶ್ಲಾಘಿಸಲ್ಪಟ್ಟ ಈ ಗ್ರಂಥವನ್ನು ತರ್ಸಿ ಓದಿನೋಡಿ ಚನ್ನಾಗಿಲ್ಲದಿದ್ದರೆ ವಾಪ್ಸುಮಾಡಿರಿ.

ಕುಟುಂಬ ಸಂಜೀವಿನಿ ಕಲ್ಪ! ಷೋಡಶ (೧೬) ಶಾಸ್ತ್ರಗಳ ಮರ್ಮಗಳನ್ನು ಚಿಕ್ಕಚಿಕ್ಕ ಬಾಲಕರಿಗೂ ಸಹ ತಿಳಿಯುವಂತೆ ಬರೆಯಲ್ಪಟ್ಟ ಲೋಕೋಪಕಾರಕಲ್ಪತರು!

ಸುಸಮಯ ಬಿಡಬೇಡಿ.
೫೦೦ ರೂಪಾಯಿ ಬಹುಮಾನ!

ರಹಸ್ಯಬೋಧಾಮೃತವೆಂಬ ವಿದ್ಯಾಗುರು ಭಾಗ ೧.

(ತೃತೀಯ ಮುದ್ರಣ) (ಅನೇಕ ಹೊಸ ವಿಷಯಗಳು ಅಡಕವಾಗಿವೆ)

ಕ್ರಯ ಪ್ರತಿ ೧ಕ್ಕೆ ರೂ. ೨-೦-೦
ಟ. ಕ. ಪ್ರತ್ಯೇಕ.

ಈ ಗ್ರಂಥದಲ್ಲಿ ರುದ್ರಯಾಮಳ, ನಾಗಾರ್ಜುನಾದಿ ತಂತ್ರಗಳಲ್ಲಿ ಹೇಳಿರುವ ಅದೃಶ್ಯ, ಜಲಸ್ತಂಭನ, ಅಗ್ನಿಸ್ತಂಭನ, ವೃಷ್ಟಿ ಬಂಧನ, ವಶೀಕರಣ, ಇಂದ್ರಜಾಲವಿದ್ಯೆಗಳು, ಅಮೇರಿಕಾ ಜರ್ಮನಿ ಗಾರಡಿ ವಿದ್ಯೆಗಳು, ಹಸ್ತಲಾಘವ, ಕರ್ಣಲಾಘವ, ನಾಸಿಕಲಾಘವಾದಿ ಅನೇಕಾನೇಕ ಚಮತ್ಕಾರಗಳನ್ನೊಳಗೊಂಡು ಪಂಡಿತ ಪಾಮರರಿಗಾನಂದವನ್ನುಂಟುಮಾಡುವ ಕೌತುಕರಹಸ್ಯ, ಎಂಥಾ ವಿದ್ಯಾವಿಹೀನರಾದರೂ ಅಭ್ಯಾಸ ಮಾಡಿ ಕೀರ್ತಿಯನ್ನು ಪಡೆಯುವಂತೆ ಬೋಧಿಸುವ ಸರ್ವ ವಿದ್ಯಾಪ್ರಾಪ್ತಿಯುಕ್ತವೆಂಬ ಮಹಾಸ್ವಪ್ನರಹಸ್ಯ, ಅಲ್ಲದೆ ಅನಂಗರಂಗವೆಂಬ ಸ್ತ್ರೀಮರ್ಮಶಾಸ್ತ್ರ, ವೃಕ್ಷಶಾಸ್ತ್ರ, ಯಕ್ಷಿಣಿರಹಸ್ಯ, ಮೂಲಿಕಾ ಯಂತ್ರ ಮಂತ್ರ ಮಂತ್ರರಹಸ್ಯ, ಶಕುನಶಾಸ್ತ್ರ, ಸ್ವಪ್ನಫಲಶಾಸ್ತ್ರ, ಮುಹೂರ್ತ, ಪ್ರಶ್ನೆ, ಸ್ವಾತಿಕೆಳ್ಯಾಗಗಳನ್ನೊಳಗೊಂಡ ಜ್ಯೋತಿಷ್ಯಶಾಸ್ತ್ರ, ರಮಲಶಾಸ್ತ್ರ, ನೆಪೋಲಿಯನ್ ಬೋನಪಾರ್ಟರವರು ಅನುಮೋದಿಸಿದ ಪ್ರಶ್ನ ಫಲಶಾಸ್ತ್ರ ಸ್ವರಶಾಸ್ತ್ರ, ಅದೃಷ್ಟರೇಖಾಶಾಸ್ತ್ರ, ವೈದ್ಯಶಾಸ್ತ್ರ, ಪಾದರಹಸ್ಯ, ಕೈಗಾರಿಕೆ ಈ ೧೬ ಶಾಸ್ತ್ರಗಳು ಚಿಕ್ಕಚಿಕ್ಕ ಬಾಲಕರಿಗೂ ಸಹ ತಿಳಿಯುವಂತೆ ಎಷ್ಟೋ ಕಾಲ ಒಬ್ಬರ ಆಶ್ರಯಮಾಡಿದರೂ ಹೇಳದಂತ ಮರ್ಮಗಳೊಂದಿಗೆ ಬರೆಯಲ್ಪಟ್ಟಿವೆ. ಈ ಗ್ರಂಥವನ್ನು ತರ್ಸಿದ ಮಹಾಶಯರು ಕೊಂಡಾಡಿ ತಾವಾಗಿಯೇ ಸರ್ಟಿಫಿಕೇಟುಗಳನ್ನು ದಯಪಾಲಿಸಿರುವರು. ಬಡವರಾದಿ ಸರ್ವರು ತರಿಸಿಕೊಳ್ಳುವಂತೆ ಬೆಲೆಯನ್ನು ತೀರಾ ಕಡಿಮೆ ಇಟ್ಟಿರುತ್ತೆ. ಈ ಗ್ರಂಥವು ನಿಷ್ಪ್ರಯೋಜನವಾದದ್ದೆಂದು ವ್ಯಕ್ತಪಡಿಸುವವರಿಗೆ ೫೦೦ ರೂಪಾಯಿ ಬಹುಮಾನ ಕೊಡಲ್ಪಡುತ್ತೆ. ಕ್ರಯ ಪ್ರತಿ ೧ಕ್ಕೆ ರೂ. ೨—೦—೦ ಟ. ಕ. ಪ್ರತ್ಯೇಕ.

ಈ ಗ್ರಂಥದ ವಿಷಯವಾಗಿ ಯೋಗ್ಯತಾ ಪತ್ರಿಕೆಗಳನ್ನು ಕೊಟ್ಟ ಪಂಡಿತರು ಪತ್ರಿಕಾಕರ್ತರು ಮತ್ತು ಇತರ ಸಭ್ಯರು.

ಬೆಂಗಳೂರು ಪ್ರಜಾಮಿತ್ರ, ಮೈಸೂರು ಸತ್ಯವಾದಿ ಪತ್ರಿಕಾಕರ್ತರು, ಶ್ರೀ ಜಗದ್ಗುರು ಕೇದಾರಸಂಸ್ಥಾನದ ಸರ್ವಾಧಿಕಾರಿಗಳಾದ ಸಿರಿ ಸಿದ್ಧರಾಮಸ್ವಾಮಿಗಳು, ಆದವಾನಿ ಬಿ. ಸುಂದರಶಾಸ್ತ್ರಿಗಳು, ಬ್ಯಾಡಗಿ ಹಿರೇಮಠದ ಸಿದ್ಧಾಂತಿ ಅನ್ನದಾನ ಶಾಸ್ತ್ರಿಗಳು, ಬೆಂಗಳೂರು ಗೌರ್ನಮೆಂಟ್ ಕೊಲಿಜಿಯೇಟ್ ಹೈಸ್ಕೂಲು ಪಂಡಿತರು, ಎಂ. ಕೃಷ್ಣಪ್ಪನವರು, ಅನೇಕ ಗ್ರಂಥಗಳನ್ನು ಬರೆದಿರುವ ಯಂ. ವಿ. ರಂಗರಾಯರು, ಜಿ. ಸೀತಾರಾಮಯ್ಯ ಬಿ.ಎ., ಯವರು, ಬೆಂಗಳೂರು ಹಯಗ್ರೀವ ಜ್ಯೋತಿಷ್ಯಾಲಯದ ಅಧ್ಯಾಪಕರಾದ ಬಿ. ಎಸ್. ರಂಗಸ್ವಾಮಯ್ಯಂಗಾರ್‌ರವರು, ಹರಿಹರದ ಆಯುರ್ವೇದ ವಿದ್ಯಾಶಾಲೆಗೆ ಶಾಂತವೀರಶಾಸ್ತ್ರಿಗಳು, ಬೈಲಹೊಂಗಲದ ಚನ್ನಪ್ಪ, ಮಲ್ಲಪ್ಪ ಚಿಕಿತ್ಸೆಯವರು, ಯಡತೊರೆ ಸ್ಪೆಷಲ್ ಸಿರಸ್ತೆದಾರ್ ಡಿ. ವಿ. ಕೃಷ್ಣರಾಯರು, ಸಗರಗಟ್ಟಿ ಸ್ಟೇಷನ್ ಮಾಸ್ಟರು, ಶ್ರೀಕೃಷ್ಣ ಮಾಚಾರ್ಯರು, ಕಲಕತ್ತಾ 2-3 ಮೂಲಂಗದೇ... ಬೌಬಜಾರಿನಲ್ಲಿರುವ ಮಾಕಂ ತಿಮ್ಮಯ್ಯಶೆಟ್ಟಿ, ಬಾಗಲಕೋಟೆ, ಬಿ.ಎ.,ಎಲ್.ಎಲ್.ಬಿ., ವಕೀಲು ... ಮಠದ ಮಹಂತಯ್ಯನವರು, ಶೃಂಗೇರಿ ಛತ್ರಂಪತಿ ಆಫೀಸ್ ಕೆ. ಶೇಷಗಿರಿಯವರು, ... ಪಟ್ಟದ ಮಾವಿನಕೆರೆ ವೆಂಕಟರಾಮಭಟ್ಟರು, ತುಂಕೂರು ತಾಲ್ಲೂಕು ಚೆನ್ನಗಿರಿ ಯಸ್. ತಿಮ್ಮಪ್ಪನವರು, ಟಿ. ನರಸೀಪುರದ ತಾಲ್ಲೂಕು ಮೂಗೂರು ಹೋಬಳಿ, ಬೌಹಳ್ಳಿ ಗ್ರಾಮದ ಮಾಸ್ಟರ್ ಆರ್, ವೆಂಕಟರಾಮಯ್ಯನವರು, ಬಸಹಟ್ಟಿ ಸ್ವಾಮಿವಾಸ್ತು ಕುಲಕರ್ಣಿಯವರು, ನುಗ್ಗಿಕೆರೆ ತಾಲ್ಲೂಕು, ಕನೂರಿವಾಸದ ಕೊಟಗಿ ವೆಂಕಟರಾಮಯ್ಯನವರು, ದೊಡ್ಡಬಳ್ಳಾಪುರ ಕೆಂಕೆರೆ ಕರಿಯಣ್ಣನವರ ಮಗ ಚೌಡಯ್ಯನವರು, ಗೋಬಿನಕೋಟೆ ತಾಲ್ಲೂಕು ನೂತನ ಶಿವಪ್ಪಯ್ಯ ಸ್ವಾಮಿಯವರು, ಯಡತೊರೆ ಕುಂಕುಮದ ನರಸಿಂಹಯ್ಯನವರು, ಚನ್ನಮಂಗಳವಿಡು ತಾಲ್ಲೂಕು ಸನಕಗುಮರಿ ಯಸ್ಟೇಟ್ ರೈಟರ್ ಶಿವರಾಮಯ್ಯನವರು, ಮೈಸೂರು ಶ್ರೀ ಆಂಜನೇಯಸ್ವಾಮಿ ಹಾಟೆಲ್ ಎ. ರಾಮಯ್ಯನವರು, ಹಿಪ್ಪರಗಿ ಉರ್ದು ಸ್ಕೂಲು ಹೆಡ್ಮಾಸ್ಟರ್, ಅಜಿಂ ಸುಲೇಮಾನ್‌ರವರು ಮುಂತಾದವರನೇಕರು ಸರ್ಟಿಫಿಕೇಟುಗಳನ್ನು ಕೊಟ್ಟಿರುವರು. ಸ್ಥಲಸಂಕೋಚದಿಂದ ಅನೇಕರ ಹೆಸರುಗಳನ್ನು, ಅವರವರ ಸದಭಿಪ್ರಾಯಗಳನ್ನು ಬರೆಯದೆ ಸರ್ಟಿಫಿಕೇಟುಗಳನ್ನು ಕೊಟ್ಟ ಕೆಲವು ಮಹಾಶಯರ ಹೆಸರುಗಳನ್ನು ಮಾತ್ರ ನಮೂದಿಸಿರುತ್ತೆ.

ಗ್ರಂಥ ದೊರೆಯುವ ಪತ್ತೆ:— ಕ್ರಯ ಪ್ರತಿ ೧ಕ್ಕೆ ರೂ. ೨—೦—೦ ಟ. ಕ. ಪ್ರತ್ಯೇಕ.

ಮೇನೇಜರ್, ಭಾರತ ಜ್ಯೋತಿಷ್ಯ ವೈದ್ಯಾಲಯ,
ಹರಪನಹಳ್ಳಿ, (ಜಿಲ್ಲಾ ಬಳ್ಳಾರಿ.)

ಎಷ್ಟೋ ಕಾಲ ಒಬ್ಬರ ಆಶ್ರಯವನ್ನು ಮಾಡಿದರೂ ದೊರೆಯದಂತ ಮರ್ಮವಿಷಯಗಳನ್ನೊಳಗೊಂಡು ಸುಖಸೌಭಾಗ್ಯನಿಧಿ ಆಗಿ ರಂಜಿಸುತ್ತ ಶಕ ೧೮೫೧ ರಲ್ಲಿ ನಾಸಿಕದಲ್ಲಿ ಜರುಗಿದ ೧೯ನೇ ನಿಖಿಲ ಭಾರತೀಯ ವೈದ್ಯಸಮ್ಮೇಲನದವರಿಂದ ಪ್ರಶಸ್ತ ಪತ್ರಿಕೆಯನ್ನು ಪಡೆದ ಅನೇಕಾನೇಕ ಮಹಾಶಯರಿಂದ ಕೊಂಡಾಡಲ್ಪಟ್ಟ

ಕಲಿಕಾಲ ಕಲ್ಪತರು!

ರಹಸ್ಯಬೋಧಾಮೃತವೆಂಬ ವಿದ್ಯಾಗುರು ಭಾಗ ೨.

ಸಂಸಾರದುಃಖ ಮುಕ್ತ ಕಾಮಧೇನು !!

ಸುಸಮಯವನ್ನು ಬಿಡಬೇಡಿ! ೫೦೦ ರೂಪಾಯಿಗಳ ಬಹುಮಾನ !! (ಅನೇಕ ಹೊಸ ವಿಷಯಗಳು ಅಡಕವಾಗಿವೆ) ದ್ವಿತೀಯ ಮುದ್ರಣ !!!

ಈ ಗ್ರಂಥದಲ್ಲಿರುವ ಒಂದೊಂದು ವಿಷಯಕ್ಕಾಗಿ ಎಷ್ಟು ಬೆಲೆ ಕೊಟ್ಟರೂ ಅಲ್ಪವೇ. ಬಡವರೇ ಮೊದಲಾದ ಸರ್ವರು ತರ್ಸಿಕೊಂಡು ಇದರಪ್ರಯೋಜನವನ್ನು ಹೊಂದಲೆಂಬುವ ದೆಶೆಯಿಂದ ಕ್ರಯವನ್ನು ತೀರ ಕಡಿಮೆ ಇಟ್ಟಿರುತ್ತೆ. ಕ್ರಯ ಪ್ರತಿ ೧ಕ್ಕೆ ೨—೦—೦ ಟ. ಕ. ಪ್ರತ್ಯೇಕ.

ಈ ಗ್ರಂಥದಲ್ಲಿ ಇದುವರೆವಿಗೂ ಯಾರು ಪ್ರಚಾರ ಮಾಡದೆ ಗೂಢವಾಗಿದ್ದ ಪಾಂಚಾಲ ಮರ್ಮ ಅರ್ಥಾತ್ ಕಾಮಶಾಸ್ತ್ರವನ್ನು ಆದಿಯಿಂದ ಅಂತ್ಯದವರೆಗೂ ಸವಿಸ್ತಾರವಾಗಿ ಆಲಿಂಗನ, ಚುಂಬನ, ನಖಾದಿ ಮರ್ಮಗಳನ್ನು ಸಹ ಮರೆಮಾಡದೆ ಬರೆಯಲ್ಪಟ್ಟ ರತಿರಹಸ್ಯವನ್ನು, ಅನೇಕಾನೇಕ ದೇವತಾದಿ ಉಪಾಸನ ಕ್ರಮಗಳನ್ನು, ಅವುಗಳಿಂದುಂಟಾಗುವ ನಾನಾವಿಧ ಫಲಿತಾಂಶಗಳನ್ನೊಳಗೊಂಡ ಉಪಾಸನ ರಹಸ್ಯವನ್ನು, ಪತ್ರ ಪುಷ್ಪ ಮೂಲಿಕೆಗಳಿಂದಲೂ, ಅಂಗಡಿ ಜೀನಸುಗಳಿಂದಲೂ ಕ್ಷಿಪ್ರದಲ್ಲೇ ಔಷಧಗಳನ್ನು ತಯಾರಿಸಿ ಶಿಶುವಿನಿಂದ ಹಿರಿಯವರಿಗೂ ಉಂಟಾಗುವ ಚಿಕ್ಕ ದೊಡ್ಡ ರೋಗಗಳನ್ನು ಗುಣಪಡಿಸುವ ಕ್ರಮಗಳನ್ನೊಳಗೊಂಡ ವೈದ್ಯರಹಸ್ಯವನ್ನು, ಪಶುಗಳ ಸರ್ವವಿಧ ರೋಗಗಳನ್ನು ಕ್ಷಿಪ್ರದಲ್ಲೇ ಗುಣಮಾಡಬಹುದಾದ ಅನೇಕಾನೇಕ ಸುಲಭ ಔಷಧಗಳನ್ನು ಸೂಚಿಸುವ ಪಶುವೈದ್ಯರಹಸ್ಯವನ್ನು, ಜ್ಯೋತಿಷ್ಯದ ಸಾರವನ್ನು ಚನ್ನಾಗಿ ಬೋಧಿಸುವ ಜ್ಯೋತಿಷ್ಯ ತರ್ಕರಹಸ್ಯವನ್ನು, ಪ್ರಶ್ನಶಾಸ್ತ್ರಕ್ಕೆ ಶಿರೋಮಣಿಯಂತಿರುವ ಕೇರಳ ಗ್ರಹರಹಸ್ಯವನ್ನು, ಬಹುಜನ ರುಷಿಗಳಿಂದ ಈ ಕಾಲದಲ್ಲಿ ಕಣ್ಣಿಗೆ ಫಲಾನುಭವವನ್ನು ಕೊಡುವುದೆಂದು ಕೊಂಡಾಡಲ್ಪಟ್ಟ ತಾಜಿಕ ಜ್ಯೋತಿಷ್ಯ ರಹಸ್ಯವನ್ನು, ಸರ್ವವಿಧ ಪ್ರಶ್ನ ಫಲಿತಾಂಶಗಳನ್ನು ಸುಲಭವಾಗಿ ಬೋಧಿಸುವ ಗಣಪತಿಪ್ರಶ್ನ ರಹಸ್ಯವನ್ನು, ಅಲ್ಲದೆ ಅಂಗವಿದ್ಯಾರಹಸ್ಯ, ಉದಕಾರ್ಗಳಶಾಸ್ತ್ರ, ಪಿಟಕಲಕ್ಷಣ ರಹಸ್ಯ, ವಜ್ರ, ಮುತ್ತು, ಪದ್ಮರಾಗ ಪರೀಕ್ಷರಹಸ್ಯ, ಗೋವು, ಅಶ್ವ, ಶ್ವಾನ ಲಕ್ಷಣರಹಸ್ಯಗಳನ್ನು ಚಿಕ್ಕಚಿಕ್ಕ ಬಾಲಕರಿಗೂ ಸಹ ತಿಳಿಯುವಂತೆ ಬಹು ಸ್ವಾರಸ್ಯವಾಗಿ ಬರೆದಿರುತ್ತೆ. ಈ ಗ್ರಂಥದಲ್ಲಿರುವ ಒಂದೊಂದು ವಿಷಯಕ್ಕಾಗಿ ಎಷ್ಟು ಬೆಲೆಕೊಟ್ಟರೂ ಅಲ್ಪವೇ. ಈ ಗ್ರಂಥವು ನಿಷ್ಪ್ರಯೋಜನವಾದದ್ದೆಂದು ವ್ಯಕ್ತಪಡಿಸುವವರಿಗೆ ೫೦೦ ರೂಪಾಯಿ ಬಹುಮಾನ ಕೊಡಲ್ಪಡುತ್ತೆ. ಸರ್ವರು ತರ್ಸಿಕೊಳ್ಳಲೆಂದು ಕ್ರಯವನ್ನು ತೀರಾ ಕಡಿಮೆ ಇಟ್ಟಿರುತ್ತೆ. ಕ್ರಯ ಪ್ರತಿ ೧ಕ್ಕೆ ರೂ. ೨—೦—೦ ಟ. ಕ. ಪ್ರತ್ಯೇಕ. ಪತ್ತೆ:—ಮೇನೇಜರ್, ಭಾರತ ಜ್ಯೋತಿಷ್ಯ ವೈದ್ಯಾಲಯ, ಹರಪನಹಳ್ಳಿ, (ಜಿಲ್ಲಾ ಬಳ್ಳಾರಿ.)

ಬೇಕಾದ ಮಾಹಿತಿಗೆ ನಮ್ಮ ಆಫೀಸಿಗೆ ಬರೆದು ತಿಳಿದುಕೊಳ್ಳಿ.

ಶ್ರೀಮದ್ಭುವನೇಂದ್ರ ಮಹೌಷಧಾಲಯ, ಕಟಪಾಡಿ, ದ. ಕ.

ಪಾರಂಪರ್ಯದ ಅನುಭವಸಿದ್ಧೌಷಧಗಳು **ಸ್ವರ್ಣ, ರಜತ ಪದಕಗಳನ್ನು ಪಡೆದ ದಿವ್ಯೌಷಧಗಳು**

1. ಕೃಷ್ಣಾರಿಷ್ಟ—(ರಕ್ತದೋಷ ಸಂಬಂಧ ಯಾವತ್ತೂ ರೋಗಗಳಿಗೆ ದಿವ್ಯೌಷಧ). 2. ಗರ್ಭಪಾಲ—(ಗರ್ಭಶೂಲ, ಗರ್ಭಸ್ರಾವಗಳಿಗೆ ಅತೀ ಉಪಯುಕ್ತ) 3. ಚಂದ್ರಮಸ್—ವಾಂತಿಭೇದಿಗೆ ಅತ್ಯುತ್ತಮ) 4. ಶೀತಾಂಜನ—(ನೇತ್ರ ರೋಗಗಳಿಗೆ ದಿವ್ಯೌಷಧ) 5. ಮಧುರೀಕೃತನಿಂಬ ತೈಲ—(ಸರ್ವ ತರದ ವಾತರೋಗಗಳಿಗೂ, ಚರ್ಮ ವ್ಯಾಧಿಗಳಿಗೂ ಉತ್ತಮ.) 6. ಧುವನಾಂಜನ—ಕಾಲೀರ ಸೋಂಕುಗಳಿಗೆ ಅತ್ಯುತ್ತಮ. 7. ರಸಬಿಂದು—ಫರಂಗಿ, ಮೇಹ, ದುಷ್ಟ ವ್ರಣಗಳಿಗೆ ಸಿದ್ಧೌಷಧ. 8. ಮಹಾ ಮದನಕಾಮೇಶ್ವರೀ ಲೇಹ್ಯ—ನಪುಂಸಕತ್ವ, ಧಾತು ಕ್ಷೀಣತೆ ಶ್ವಾಸಕಾಸ ಮೊದಲಾದುವುಗಳಿಗೆ ಅತೀ ಉಪಯುಕ್ತ.

ನಮ್ಮ ಔಷಧಗಳು ದೊರೆಯುವ ಸ್ಥಳಗಳು

ಬೊಂಬಾಯಿ ಸಂಸ್ಥಾನದ ಪ್ರಾಮುಖ್ಯ ಏಜಂಟರು:—(ಉತ್ತರಕನ್ನಡ ಜಿಲ್ಲೆ ಹೊರತು) ಕೊಟ್ಟಾರಿ ಆನಂದರಾಯ ಪೈ, ಲೋಹಾರ್ ಚಾಲ್, ಬೊಂಬಾಯಿ ನಂ. 2.

ಮಂಗಳೂರು:—1. ರಾಘವೇಂದ್ರ ರಂಗ ಪೈ, ರಥಬೀದಿ ಮಂಗಳೂರು. 2. ಡಾಕ್ಟರ್ ಕೆ. ಎನ್. ಭಂಡಾರಿ, ಕೆನರಾ ಡಿಸ್ಪೆನ್ಸರಿ, ಕೊಡಿಯಾಲ್‌ಬೈಲ್, ಮಂಗಳೂರು. 3. ಆರ್. ಗೋಪಾಲ ಕೃಷ್ಣರಾವ್, ಪ್ರೊಪ್ರೈಟರ್, ಗೋಪಾಲಕೃಷ್ಣ ವೈದ್ಯಾಶ್ರಮ, ಮಾರ್ಕೆಟ್ ಔಟ್‌ರೋಡ್, ಮಂಗಳೂರು. ಬಂಟ್ವಾಳ:—ವೇದಮೂರ್ತಿ ಬಿ. ಶಂಕರಾಚಾರ್, ಶ್ರೀ. ಗೋಪಾಲಕೃಷ್ಣ ಆಯುರ್ವೇದಿಕ್ ಫಾರ್ಮಸಿ, ಬಂಟ್ವಾಳ. ಮೂಡಬಿದ್ರಿ:—ಡಾಕ್ಟರ್ ಎಮ್. ವಿ. ಮಲ್ಯ, ಮೂಡಬಿದ್ರಿ. ಕಾರ್ಕಳ:—ವಿ. ಪಿ. ಶೆಣೈ, ಕೆಮಿಸ್ಟ್ ಕಾರ್ಕಳ. ಮಂಜೇಶ್ವರ:—ಕೆ. ಸರ್ವೋತ್ತಮ ಬಾಳಿಗಾ ಮತ್ತು ಬೆಳ್ಳೆ ನಾರಾಯಣ ರಾಮನಾಥ, ಮರ್ಚೆಂಟ್ಸ್, ಮಂಜೇಶ್ವರ. ಕಾಪು:—ಡಾಕ್ಟರ್ ಬಿ. ಕೆ. ಬೇಕಲ್ಸ್ ಡಿಸ್ಪೆನ್ಸರಿ ಕಾಪು. ಉದ್ಯಾವರ:—ಯು. ಗೋಪಾಲ ಶ್ಯಾನುಭಾಗ, ಮರ್ಚೆಂಟ್ ಉದ್ಯಾವರ. ಉಡುಪಿ:—1. ವೈನಾಪರ್ಮಸಿ, 2. ಡಾಕ್ಟರ್ ಪಿ. ರಾಘವೇಂದ್ರ ನಾಯಕ್ ಡಿಸ್ಪೆನ್ಸರಿ, 3. ಹಾಂಗರೆ ಜನಾರ್ದನ ನಾಯಕ್ ಎಂಡ್ ಕೊ, ಹೊಸ್ಪಿಟಲ್ ರೋಡ್, ಉಡುಪಿ, 4. ಆರ್. ಎಸ್. ಶೆಣೈ, ರಥಬೀದಿ, ಉಡುಪಿ. ಕಲ್ಯಾಣಪುರ:—ಡಾಕ್ಟರ್ ಟಿ. ಮಹಮ್ಮದ್ ಇಸ್ಮಾಯಿಲ್, ತಿಮ್ಮಣ್ಣಕುದ್ರು ಕಲ್ಯಾಣಪುರ. ಬ್ರಹ್ಮಾವರ:—1. ಕೊಚ್ಚಿಕಾರ ವೈಕುಂಠ ಪೈ ಎಂಡ್ ಸನ್ಸ್ ಮರ್ಚೆಂಟ್ಸ್, ಬ್ರಹ್ಮಾವರ. 2. ಕೆ. ಶೀನಗಿರಿ ನಾಗಪ್ಪ ಎಂಡ್ ಸನ್ಸ್, ಕೆಮಿಸ್ಟ್ ಎಂಡ್ ಡ್ರಗ್ಗಿಸ್ಟ್ಸ್ ಬ್ರಹ್ಮಾವರ. ಬಾರಕೂರು:—ಬಿ. ಭಗವಂತ ಮಲ್ಯ, ಪ್ರೊಪ್ರೈಟರ್, ಆರ್. ಪಿ. ದವಾಖಾನೆ, ಬಾರಕೂರು. ಕೋಟ:—ವೇದಮೂರ್ತಿ ನಾಗೇಶ ನರಸಿಂಹ ಭಟ್ಟ, ಮುರಲೀಧರ ಕೃಷ್ಣ ದೇವಸ್ಥಾನ, ಕೋಟ ಅಮೃತತೀರ್ಥ, ಕೋಟ. ಕುಂದಾಪುರ:—1. ಕೆ. ಆರ್. ಭಟ್ಟ, ಕೆಮಿಸ್ಟ್, ಕುಂದಾಪುರ. 2. ಡಾಕ್ಟರ್ ಕೆ. ಆರ್. ಕಾಮತ್ ಡಿಸ್ಪೆನ್ಸರಿ, ಕುಂದಾಪುರ. ಗಂಗೊಳ್ಳಿ:—ಬಿ. ಸುರೇಂದ್ರನಾಥ ನಾಯಕ್, ಮರ್ಚೆಂಟ್, ಗಂಗೊಳ್ಳಿ. ಬೈಂದೂರು:—ಕೆ. ಪುತ್ತು ಶ್ಯಾನಭಾಗ, ಮರ್ಚೆಂಟ್ ಬೈಂದೂರು. ಭಟ್ಕಳ—ವಾಮನ ನರಸಿಂಹ ನಾಯಕ್, ಗುಡೆ ಅಂಗಡಿಕಾರ್, ಮರ್ಚೆಂಟ್ ಎಂಡ್ ಕಂಟ್ರಾಕ್ಟರ್, ಭಟ್ಕಳ ಉ. ಕನ್ನಡ. ಅಂಕೋಲ:—ಕೃಷ್ಣ ಹಮ್ಮಯ್ಯ ನ್ಯಾಕ, ಪಟ್ಟೆವಾಲ್, ಧರ್ಮಶಾಲೆಯ ಬಳಿ, ಅಂಕೋಲಾ, ಉ. ಕನ್ನಡ. ಹೆಬ್ರಿ:—1. ಎಚ್. ಮುಕುಂದ ಪೈ ಮತ್ತು ಡಾಕ್ಟರ್ ಎಂ. ಪಿ. ಕಲ್ಯಾಣ್, ಹೆಬ್ರಿ. 2. ಡಾಕ್ಟರ್ ವ್ಹಿ. ಆರ್. ಆಚಾರ್ಯ, ರೂರಲ್ ಡಿಸ್ಪೆನ್ಸರಿ, ಹೆಬ್ರಿ. ಹಾಲಾಡಿ:—ಎಮ್. ನರಸಿಂಹ ಕಾಮತ್, ಮರ್ಚೆಂಟ್ ಹಾಲಾಡಿ. ಹೊಸಂಗಡಿ:—ಎಚ್. ರಾಮಚಂದ್ರ ಕಾಮತ್, ಮರ್ಚೆಂಟ್ ಹೊಸಂಗಡಿ, ಕುಂದಾಪುರ ತಾಲೂಕು. ನಗರ:—ಪಿ. ನಾರಾಯಣ ರಾವ್, ಶಾನುಭೋಗ, ನಗರ. ತೀರ್ಥಹಳ್ಳಿ:—ಡಾಕ್ಟರ್ ಕೆ. ನಂಸಿಂಹಾ, ಶ್ರೀ ಕೃಷ್ಣಾ ಡಿಸ್ಪೆನ್ಸರಿ, ತೀರ್ಥಹಳ್ಳಿ. ಕೊಪ್ಪ:—ಡಾಕ್ಟರ್ ಟಿ. ಕೆ. ಭಟ್, ಎಂ. ಬಿ. ಎಂಡ್ ಬಿ. ಎಸ್, ಪೋಪ್ಯುಲರ್ ಫಾರ್ಮಸಿ, ಕೊಪ್ಪ, ಕಡೂರ ಡಿಸ್ಟ್ರಿಕ್ಟ್. ಶಿವಮೊಗ್ಗ:—ಡಾಕ್ಟರ್ ಎಂ. ಆರ್. ಪೈ, ಬಿಗ್ ಬಜಾರ್, ಶಿವಮೊಗ್ಗ. ಸಾಗರ:—ಡಾಕ್ಟರ್ ಬಿ. ನಂಜುಂಡ ರಾವ್, ಸಾಗರ.

ಹೆಚ್ಚಿನ ವರ್ತಮಾನಕ್ಕೆ ಈ ವಿಳಾಸಕ್ಕೆ ಬರಕೊಳ್ಳಬಹುದು.

ನಾಯಕ್ ಬ್ರದರ್ಸ್, ಶ್ರೀಮದ್ಭುವನೇಂದ್ರ ಮಹೌಷಧಾಲಯ, ಪೋಸ್ಟ್ ಕಟಪಾಡಿ, ದ. ಕ.

ಶುದ್ಧ ಸ್ವದೇಶಿ! ಸ್ವದೇಶಿ ಭಾಂಡವಾಳದಿಂದ **ಸ್ವದೇಶಿಯರಿಗಾಗಿ!**

ಗಂಧದ ಸಾಬೂನು (ಸೆಂಡಲ್‌ವುಡ್) ನಿರ್ವಿವಾದವಾಗಿ ಅತ್ಯುತ್ತಮವಾದುದು.!

ತಾಜಾ ಗಂಧದ ತೈಲ ಮೊದಲಾದ ವನಸ್ಪತಿ ತೈಲಗಳಿಂದಲೇ ತಯಾರಿಸಿದ ಅತ್ಯುತ್ತಮ ಸಾಬೂನು.

ಮೈಸೂರು ಸರಕಾರದ ಗಂಧದೆಣ್ಣೆ ಕಾರ್ಖಾನೆಯಲ್ಲಿ ದೊರೆವ ಆ ಉತ್ತಮ ಎಣ್ಣೆಯ ಸ್ನಿಗ್ಧ ಸುಗಂಧವುಳ್ಳದ್ದು.

ಪ್ರಾಣಿಜನ್ಯ ಚರ್ಬಿಯ ಸ್ಪರ್ಶವೂ ಇಲ್ಲದ

ಮಲಬಾರು ಸೋಪ್

ಮಲಬಾರು ಸೆಂಡಲ್ ಸೋಪ್

ದಿ ವೆಜಿಟೇಬಲ್ ಸೋಪ್ ವರ್ಕ್ಸ್, ಕಲ್ಲಿಕೋಟೆ.

ಪ್ರೊಪ್ರೈಟರ್:—ಸನ್ ಬ್ರೆಂಡ್ ಕೊಡೆಯ ಪ್ಯಾಕ್ಟರಿಯ ಸೇಟ್ ನಾಗ್‌ಜೀ ಪುರುಷೋತ್ತಮ ಮತ್ತು ಕಂಪೆನಿ, ಕಲ್ಲಿಕೋಟೆ.

ಈ ಜಿಲ್ಲೆಗೆ ಪ್ರವರ್ತಕರು:— ರಾಘವೇಂದ್ರ ರಂಗ ಪೈ, ರಥಬೀದಿ, ಮಂಗಳೂರು.

ಇಂದೇ ಆರಂಭಿಸಿರಿ!

ಸುಪ್ರಸಿದ್ಧ **ಆತಂಕನಿಗ್ರಹ ಮಾತ್ರೆ**

ಗಳನ್ನು ಉಪಯೋಗಿಸಲಿಕ್ಕೆ.

ಜೀವನದ ಜಯಶೀಲತೆಯ ಏನೆಯುನ್ನೇರಿ. ದೇಶದಲ್ಲಿ ಸಾವಿರಾರು ಜನರು ಅದನ್ನು ಪ್ರತಿದಿನವೂ ಉಪಯೋಗಿಸುತ್ತಿದ್ದಾರೆ.

ನರ ಮತ್ತು ಶಾರೀರಿಕ ದೌರ್ಬಲ್ಯಕ್ಕೆ ಭದ್ರತೆಯು.

ಆರೋಗ್ಯಕ್ಕೆ ಕವಚವು.

32 ಮಾತ್ರೆಗಳ ಡಬ್ಬಿಯೊಂದಕ್ಕೆ ರೂ. 1

ಹೆಚ್ಚಿನ ವಿವರಕ್ಕೆ, ಧನಸ್ಥರ್ಥ ಹಾಗೂ ಟಪ್ಪಾಲು ಕಾಸಲು ಏನೂ ಕಳುಹಿಸಲ್ಪಡುವ ನಮ್ಮ

ಕಾಮಶಾಸ್ತ್ರವನ್ನೋದಿರಿ.

Agents.—Shab Company, Mangalore.
" Pearl & Sons, Mangalore.

Atank Nigrah Pharmacy,
Chickpet, Bangalore

ಆತಂಕನಿಗ್ರಹ ಫಾರ್ಮಸಿ,
ಚಿಕ್ಕಪೇಟೆ, ಬೆಂಗಳೂರು.

ಎಲ್ಲಾ ಚಂದಾದಾರರು ತಮ್ಮ ಪತ್ರವ್ಯವಹಾರದೊಂದಿಗೆ ಅವರವರ ಚಂದಾ ನಂಬರುಗಳನ್ನು ಅಗತ್ಯವಾಗಿ ನಮೂದಿಸತಕ್ಕದ್ದು. ಸಂ. ಸ್ವ.

BUY ADVERTISED GOODS

ದಿ ಪೊಪ್ಯುಲರ್ ಇನ್ಸೂರೆನ್ಸ್ ಕಂಪೆನಿ, ಲಿಮಿಟೆಡ್,

(ಹೆಡ್‌ಆಫೀಸು — ಮಂಗಳೂರು).

ನಮ್ಮ ಜಿಲ್ಲೆಯು ಪ್ರತಿ ವರ್ಷವೂ ಸುಮಾರು 15 ಲಕ್ಷ ರೂಪಾಯಿಗಳನ್ನು ಪ್ರೀಮಿಯಮ್ ರೂಪದಲ್ಲಿ ದೇಶೀಯ ಮತ್ತು ಪರದೇಶೀಯ ಕಂಪನಿಗಳಿಗೆ ಪ್ರವಾಹರೂಪವಾಗಿ ಸಲ್ಲಿಸುತ್ತಲೇ ಇದೆಯಲ್ಲದೆ, ಈ ಜಿಲ್ಲೆಯು ತಾನಾಗಿ ಒಂದೇ ಒಂದು ಜೀವವಿಮೆ ಸಂಘವನ್ನು ಇದುವರೆಗೆ ಘಟಿಸಿಲ್ಲ. ನಮ್ಮ ದೇಶದ ಈ ದೆಸೆಯಲ್ಲಿ, ನಮ್ಮದೇ ಮೊದಲನೆ ಪ್ರಯತ್ನವಾಗಿದೆ.

ಈ ಕಂಪೆನಿಯ ವಿಚಾರದಲ್ಲಿ ಹೇಳುವುದಾದರೆ,—ಕಂಪೆನಿಯು ನಿಮ್ಮದೇ; ನಿಮಗೆ ತಿಳಿದಿರುವ ಮತ್ತು ನಿಮ್ಮ ವಿಶ್ವಾಸಕ್ಕೆ ಅರ್ಹರಾಗಿರುವವರೇ ಆಡಳಿತವನ್ನು ನಿರ್ವಹಿಸುವರು; ನಿಮ್ಮ ಹಣವು ಸ್ವದೇಶದಲ್ಲೆ ಸಂಪದಭ್ಯುದಯ ಕಾರ್ಯಗಳಿಗಾಗಿ ವಿನಿಯೋಗಿಸಲ್ಪಡುವುದು;—ಎಂಬೀ ವಿಷಯಗಳನ್ನು ಪರ್ಯಾಲೋಚಿಸಿದಲ್ಲಿ, ಸ್ವದೇಶವಾತ್ಸಲ್ಯವುಳ್ಳವರೆಲ್ಲರೂ ಈ ಕಂಪೆನಿಯನ್ನೆ ಪ್ರೋತ್ಸಾಹಿಸುವುದು ಅವಶ್ಯವೆಂದು ತಾನಾಗಿ ಹೊಳೆಯದಿರದು.

ಪ್ರತಿ ಒಂದು ವಿಧದಲ್ಲಿಯೂ ನಿಮ್ಮದಾದ ಈ ಕಂಪೆನಿಯಲ್ಲಿ ಒಂದು ಪೊಪ್ಯುಲರ್ ಪೊಲಿಸಿಯನ್ನು ಪಡೆದು ಸ್ವದೇಶೀಯರ ಪ್ರಯತ್ನಗಳನ್ನು ಪ್ರೋತ್ಸಾಹಿಸಿರಿ:

ಹೆಚ್ಚಿನ ವಿವರಕ್ಕೆ ಹೆಡ್ ಆಫೀಸಿಗೆ ಬರೆದುಕೊಂಡರೆ, ಸಂತೋಷದಿಂದ ಕೂಡಲೆ ತಿಳಿಸಲಾಗುವುದು.

☞ ಎಲ್ಲಾ ಕಡೆಗಳಲ್ಲಿಯೂ ಯೋಗ್ಯ ಏಜಂಟರುಗಳು ಬೇಕು. ಧಾರಾಳ ಕಮಿಶನ್ ಕೊಡಲಾದೀತು.

ಬೊಂಬಾಯಿ ಸಂಸ್ಥಾನದ ಪ್ರಾಮುಖ್ಯ ಏಜಂಟರು:—ಪ್ರಭಾಕರ ಕಂಪೆನಿ, 415 ಶೇಕ್ ಮೇಮನ್ ರಸ್ತೆ, ಬೊಂಬಾಯಿ.

WANTED.

Four Organisers to organise the work of the South Indian General Assurance Society, Ltd., in the following places noted below. Capable organisers can expect to have attractive and encouraging terms with sound footing for their future.

(1) South Canara, (2) Mysore, Hassan and Coorg, (3) Kadur, Shimoga, Chitaldroog, and Tumkur. (4) Mangalore, Kolar.

For terms and other particulars please apply to—

The Divisional Manager,
The South Indian General Assurance Co. Ltd.
64, III Cross Road, Srirampur Extn. Malleswaram Post, BANGALORE.

OR

The Managing Agents,
The S. I. G. A. Co. Ltd.
55, Poonamallee High Road, Kilpauk, MADRAS.

ಪಂಡಿತ ಜವಾಹೀರಲಾಲ ನೆಹರೂ ಬಂದಾಗ್ಗೆ ಹುಬ್ಬಳ್ಳಿ ಪ್ರದರ್ಶನದಲ್ಲಿ ಸುವರ್ಣ ಪದಕ ದೊರೆತ

ಒಂದೇ ಸವನಾಗಿ ೩೫ ವರ್ಷದ ಅನುಭವದಿಂದ

ಹಿಂದೂದೇಶದ ಸಾವಿರಾರು ಜನರಿಂದ ವರ್ಣಿಸಲ್ಪಟ್ಟ ಆಯುರ್ವೇದೋಕ್ತ,

ತಾಜಾ ಮತ್ತು ಔಷಧಿಕ ವನಸ್ಪತಿಗಳಿಂದ ತಯಾರಿಸಿರುವ ಮತ್ತು ಅದರ ಗುಣಕ್ಕಾಗಿ ಅನೇಕ ಸರ್ಟಿಫಿಕೇಟುಗಳು ಮತ್ತು ಭಂಗಾರದ ಪದಕ ದೊರೆತಿರುವಪರದೇಶದಲ್ಲಿ ಖರ್ಚಾಗುವ ಶಕ್ತಿಯ ಮೇಲೆ ಮೊದಲನೆ ತರಗತಿಯ ಟಾನಿಕ

ಈ ದ್ರಾಕ್ಷಾಮೃತವು ಸಹ್ಯಾದ್ರಿ ಪರ್ವತದಲ್ಲಿರುವ ಅನೇಕವನಸ್ಪತಿಗಳ ರಸಾರ್ಕಗಳೊಂದಿಗೆ ದ್ರಾಕ್ಷಾರಸವನ್ನು ಮಿಶ್ರಮಾಡಿ ಸ್ವದೇಶೀ ಯಂತ್ರದಿಂದ ಶಾಸ್ತ್ರೋಕ್ತ ಪದ್ಧತಿ ಪ್ರಕಾರ ತಯಾರು ಮಾಡಿರುವುದರಿಂದ ಸ್ವಾದಿಷ್ಟವು ಮತ್ತು ಮಧುರವು ಆಗಿದೆ.

ದ್ರಾಕ್ಷಾಮೃತ

ಇದರ ಸೇವನೆಯಿಂದ ಶರೀರದೊಳಗಿನ ಹಳೇ ಕಡಕಿ (ಗರಮಿ) ಸಂಪೂರ್ಣ ನಾಶವಾಗುತ್ತದೆ ಮತ್ತು ಧಾತುಸ್ರಾವ, ಸ್ವಪ್ನಾವಸ್ಥೆಯಿಂದ ಅಥವಾ ಬೇರೆ ಯಾವುದೇ ವಿಕಾರದಿಂದ ಬಂದ ಅಶಕ್ತತೆಯಿಂದ ಕೈಕಾಲು, ಕಣ್ಣುಗಳಿಗೆ ಉರುವು ಬೀಳೋಣ, ಯಾವಾಗಲೂ ಎಲುಬಿನಲ್ಲಿ ಜ್ವರ ಇರೋಣ, ನಡು ನೋಯೋಣ, ಪಿತ್ತದಿಂದ ಕಣ್ಣಿಗೆ ಕತ್ತಲಿ ಬಂದು ಘೇರೀಕೆ ಬರೋಣ, ಶೌಚಕ್ಕೆ ಸಾವು ಆಗದೇ ಇರೋಣ, ಮುಂತಾದ ಎಲ್ಲಾ ವಿಕಾರಗಳು ನಷ್ಟವಾಗಿ ಕ್ಷುಧಾಗ್ನಿಯು ಬೆಳೆಯುತ್ತದೆ. ಮತ್ತು ಅನ್ನ ಚೆನ್ನಾಗಿ ಪಚನವಾಗಿ ಶೌಚಕ್ಕೆ ಸಾಫವಾಗುತ್ತದೆ. ಇದರ ಸೇವನೆಯಿಂದ ತರುಣರಿಗೆ ವ್ಯಭಿಚಾರದಿಂದ ಅಥವಾ ಬೇರೆ ಕಾರಣದಿಂದ ಬಂದ ಧಾತು ಕ್ಷೀಣತೆ, ನಪುಂಸಕತ್ವ ಇದ್ದರೆ ಅದು ಹೋಗಿ ಪುನಃ ಯವನವಂತರಾಗಿ ಶರೀರ ಬಲವಾಗಿ ಮಕ್ಕಳು ಪುಷ್ಟಿವಂತರಾಗುವರು. ಹೆಂಗಸರಿಗೂ ಮತ್ತು ಮಕ್ಕಳಿಗೂ ಈ ಔಷಧವು ಗುಣಕಾರಿ ಇದೆ. ಮುಟ್ಟಾಗದಿದ್ದರೆ ಮತ್ತು ಉಷ್ಣದ ಗರ್ಭಸಂಬಂಧವಾದ ರೋಗಗಳಿದ್ದರೂ ಅವುಗಳೆಲ್ಲ ಗುಣವಾಗಿ ಹೆಂಗಸರಿಗೆ ಸಂತತಿ ವೃದ್ಧಿಯಾಗುವುದು. ಅಶಕ್ತ ಮುದುಕರು ಬಲವಂತರಾಗುವರು. ಈ ಔಷಧದ ೩ ಬಾಟ್ಲಿಗಳನ್ನು ಸೇವನೆ ಮಾಡಿದರೆ ಪೂರ್ಣ ಗುಣ ಬರುತ್ತದೆ. ಇದರ ಅನುಭವ ೧ ಬಾಟ್ಲಿ ಸೇವನೆಮಾಡಿದ ನಂತರ ತಿಳಿದೀತು.

ಬಾಟ್ಲಿ ಬೆಲೆ ೧—೪—೦, ೩ ಬಾಟ್ಲಿಗೆ ೩—೮—೦, ಹಲವು ಬಾಟ್ಲಿಗಳಿಗೆ ರೂಪಾಯಿ ಟಪ್ಪಾಲ ಖರ್ಚು ಪೋಷ್ಟೇಜ ಬೇರೆ ಬೀಳುತ್ತದೆ.
ಪ್ರಸಿದ್ಧ ಕೆಮಿಸ್ಟ ಮತ್ತು ಸ್ಟೋರ್ಸದೊಳಗೆ ಮತ್ತು ಕಿರಾಣಿ ಅಂಗಡಿಯಲ್ಲಿ ಸಿಗುವುದು.

ಮ್ಯಾನೇಜರ—ದ್ರಾಕ್ಷಾಮೃತ ಕಾರ್ಯಾಲಯ, ಪೋಷ್ಟ ನಿಪ್ಪಾಣಿ ಜಿಲ್ಲಾ, (ಬೆಳಗಾಂವಿ)

ಸಿಕ್ಕುವ ಸ್ಥಳ:— ಮಂಗಳೂರು—ಗಜಾನನ ಮೆಡಿಕಲ್ ಹಾಲ್ ಮತ್ತು ಮಿಜಾರ್ ರಾವ್ ಬ್ರದರ್ಸ್, ಕಾರ್‌ಸ್ಟ್ರೀಟ್. ಕುಂದಾಪುರ—ಕೆ. ಆರ್. ಭಟ್ಟ, ಉಡುಪಿ—ಪೈ ಫಾರ್ಮೆಸಿ, ಮತ್ತು ಕೆ. ಶೇಷಗಿರಿ ಪೈ. ಕಾರ್ಕಳ—ವಿ. ವಿ. ಶೆಣೈ. ಪುತ್ತೂರು—ಗೋಪಾಲ ನಾರಾಯಣ ಪೈ ಮತ್ತು ಫಾರ್ಮೆಸಿ. ಕಾಸರಗೋಡು—ಕೆ. ರಾಮ ನಾಯ್ಕ, ಕೋರ್ಟ್ ರಸ್ತೆ. ಬಂಟವಾಳ— ಬಿ. ಎಚ್. ವಾಸುದೇವ ಪೈ. 2—6—38

ಡಾಕ್ಟರ ವಾಮನ ಗೋಪಾಳರವರ

ಶುದ್ಧ ರಕ್ತಕ್ಕೆ ಸರ್ವಮಾನ್ಯ ಈ ವರ್ಗದ ಔಷಧ.

ಉಪಯೋಗಿಸುವವರೇ ಪಟ್ಟಿಯನ್ನು ನೋಡಿರಿ.

ಡಾ॥ ಗೌತಮ ರಾವ್ ಕೇಶವರವರ ಪೋಸ್ಪರಸ್ ಗುಳಿಗೆಗಳು.

ಡಾಕ್ಟರ್ ಗೌತಮ ರಾವ್ ಕೇಶವ ಅಂಡ್ ಸನ್ಸ್, ಠಾಕುರದ್ವಾರ, ಮುಂಬಾಯಿ ೪.

ಸ್ಟೋಕಿಸ್ಟ— ಪಾ ಕಂಪನಿ, ಮಂಗಳೂರು.

[ಪತ್ರವ್ಯವಹಾರ ಇಂಗ್ಲಿಷ್ ಅಥವಾ ಮರಾಠಿಯಲ್ಲಿ]

Shiromani Narayanacharya,
Choukhamba. Benares City

ಶಾಸ್ತ್ರಿಗಳೇ ಪೂರ್ವಿಕರು ಆರೋಗ್ಯರೇ ಅಥವಾ ಈಗಿನವರೇ? ರಾಮಣ್ಣಯ್ಯನವರೇ ಪೂರ್ವಿಕರ ಆರೋಗ್ಯವೇ ನಿಜವಾದ ಆರೋಗ್ಯ. ಅದಕ್ಕೆ ಕಾರಣವೇನು? ಅವರು ರುದ್ರಾಕ್ಷಿಯನ್ನು ಬಿಡದೆ ಯಾವಾಗಲೂ ಧಾರಣೆಮಾಡುತ್ತಿದ್ದರು. ಅದರಿಂದ ಏನು ಫಲ? ಅದನ್ನು ಧರಿಸಿದರೆ ಜೀರ್ಣಶಕ್ತಿ, ಬುದ್ಧಿಶಕ್ತಿ, ವಿದ್ಯಾಭಿವೃದ್ಧಿ, ವೀರ್ಯವೃದ್ಧಿ, ಸಂಪತ್ತು ಕೀರ್ತಿ ಇವುಗಳೆಲ್ಲಾ ಆಗುವುವು. ಹಾಗಾದರೆ, ನಮಗೆ ಅಂತಹ ರುದ್ರಾಕ್ಷಿ ಎಲ್ಲಿ ದೊರೆಯುವುದು? ಅದು ಲೋಕಪ್ರಸಿದ್ಧಿ ಹೊಂದಿದ ನಮ್ಮ ಕಾಶೀ ಚೌಖಂಬಾ ಶಿರೋಮಣಿ ನಾರಾಯಣಾಚಾರ್ಯರಲ್ಲಿ ಯೋಗ್ಯವಾದ ಕ್ರಯಕ್ಕೆ ಉತ್ತಮ ತರದ ರುದ್ರಾಕ್ಷಿ ದೊರೆಯುವುದು.

ಸಣ್ಣ ಅಡ್ಕೆ ಪ್ರಮಾಣದ ಕಂಠಿಸರ 1ಕ್ಕೆ ಅಣೆ 10ರಿಂದ ರೂ. 25ರ ವರೆಗೆ. 108 ರುದ್ರಾಕ್ಷಿಗಳುಳ್ಳ ಸರ 1ಕ್ಕೆ ಅಣೆ 3ರಿಂದ ರೂ. 25ರ ವರೆಗೆ. ಗೌರೀಶಂಕರ ರುದ್ರಾಕ್ಷಿ 1ಕ್ಕೆ ರೂ. 3ರಿಂದ ರೂ. 50ರ ವರೆಗೆ. ಮತ್ತು 3—4—5—6—7—8 ಮುಖವುಳ್ಳ ಕಾಳು 1ಕ್ಕೆ ಅಣೆ 4ರಿಂದ ರೂಪಾಯಿ 10 ಮತ್ತು 9—10—11 ಮುಖಗಳುಳ್ಳ ಕಾಳು 1ಕ್ಕೆ ರೂ. 2ರಿಂದ 30ರ ವರೆಗೆ. 12-13—14 ಮುಖದ ಕಾಳು 1ಕ್ಕೆ ರೂಪಾಯಿ 5ರಿಂದ 1000 ವರೆಗೆ. ಸಣ್ಣ ರುದ್ರಾಕ್ಷಿ ಅವರೆಕಾಳಿಗಿಂತ ಸಣ್ಣದಾಗುತ್ತ ಕ್ರಯ ಜಾಸ್ತಿ. ದೊಡ್ಡ ರುದ್ರಾಕ್ಷಿ ಅಡಕೆಗಿಂತ ದೊಡ್ಡದಾಗುತ್ತ ಕ್ರಯ ಜಾಸ್ತಿ ಆಗುವುದು. (ವಿವರಕ್ಕೆ ಕೆಟಲಾಗಿಗೆ ಬರೆದರೆ ಇನಾಮಾಗಿ ಕಳುಹಿಸುತ್ತೇವೆ. 1 ಅಣೆ ಸ್ಟಾಂಪು ಕಳುಹಿಸಿದರೆ 8 ಇನಾಮುಗಳು—1 ವಿಶ್ವೇಶ್ವರ ಪಟ, 1 ಕಾಶೀ ನಕ್ಷೆ, 1 ಕೆಟಲಾಗಿನೊಡನೆ 8 ಇನಾಮುಗಳು)

ಶಿರೋಮಣಿ ನಾರಾಯಣಾಚಾರ್ಯ
ಚೌಖಂಬಾ, ಬನಾರಸ್ (ಕಾಶೀ)

ಸ್ವದೇಶಾಭಿಮಾನಿಗೆ ಚಂದಾದಾರರಾಗಿರಿ!

Canara Bank, Limited.
Established 1906.

Authorised Capital	10,00,000—0—0
Subscribed capital	6,00,000—0—0
Paid up Capital	3,30,000—0—0
Reserves	4,31,000—0—0

Head Office:—**Bunder, Mangalore** Local Offices:—**City & Bunder.**

BRANCHES:— Bombay, Cochin, Calicut, Ernakulam, Alleppey, Chikmagalur, Ganguli, Coondapoor, Udipi, Karkal, Puttur, Kasaragod, & Buntwal Out-agency.

Interest is allowed on Current, Fixed and Savings Bank Accounts, rates of which may be ascertained on application. Advances made on approved securities at easy rates. All kinds of Banking business transacted. Rules of business on application.

The Bangalore Branch Office of the Bank at No. 1 Albert Victor Road, Bangalore City has been opened on 8—1—35.

A. Madhava Pai,
Secretary.

LOOK SHARP! LOOK AHEAD!!

Murdeshwar's Banking Institute.

Pioneer Institute on the West Coast

Opens out Careers for Businessmen, Graduates, Under-graduates, and S. S. L. C's and also for those who have not passed any University examination.

Coaches students for the Specialised Banking Courses (C. A. I. B. & C. A. I. I. B.) and also for Accountancy, Secretarial, and Insurance Courses (L. A. A., A. C. R. A., F. C. R. A., F. I. S. A., A. C. I. I., etc.,

Ambitious students wishing to obtain responsible positions such as those of Managers and Secretaries in Business line should join immediately. Ladies are also coached.

Enrol yourself NOW. Classes are in full swing. Expert tuition (Oral or Postal) by well-qualified and experienced teachers.

FEES VERY MODERATE.

For further particulars apply to—
The Principal,
2 Fernandes Mansion,
Hampankatta, Mangalore (S. India)

77 ವರ್ಷಗಳು.

ಅಸಂಖ್ಯಾತರಾದ ನಮ್ಮ ಗಿರಾಕಿಗಳ ಕೇಳಿಕೆ ಮತ್ತು ಅನುಕೂಲತೆಗಳನ್ನು ಇದೇ ಮುಕ್ಕಾಲು ಶತಮಾನದಿಂದ ತಿಳಿದು, ಅವರಿಗೆ ಸುಲಭ ದರದ ಯೋಗ್ಯ ಹಾಗೂ ಬಹುಕಾಲ ಬಾಳುವ ಸರ್ವತರದ ಉಡುಪುತೊಡುಪುಗಳನ್ನು ಒದಗಿಸುವ ನಮ್ಮ ಎರಡು ತಲಾಂತರಗಳ ಅನುಭವವು ಮುಂದಕ್ಕೂ ಸಂತೃಪ್ತಿಯನ್ನೀಕೊಡುವುದಲ್ಲವೇ?

ಸ್ವದೇಶೀ

ಕಾರ್ಖಾನೆಗಳಲ್ಲಾದ ನೂಲು ಮತ್ತು ಕೈಮಗ್ಗದ ವಸ್ತ್ರ, ಹೊದಿಕೆಗಳೂ, ಬೆಡ್ ಶೀಟ್, ಬಾತ್ ಟುವಾಲುಗಳೂ ಧೋತಿ, ಸೀರೆ— ಬೈರವಾಸು—ಚೆಕ್ಸ—ಚೀಟು ಇತ್ಯಾದಿ ಎಲ್ಲವೂ ಯಾವಾಗಲೂ ಮಾರಾಟಕ್ಕಿವೆ.

ಶ್ರೀನಿವಾಸ ರಂಗ ಪೈ,

[ಸಾಹುಕಾರ ಮಹಾಲ್]
ರಥಬೀದಿ, ಮಂಗಳೂರು.

Srinivasa Ranga Pai,
Representatives for South Canara and Malabar.

For— **A. & F. Harvey,**
Managers: Madura Mills Co, Ltd.

Edited, Printed & Published By A. S. Kamath at the Sharada Press, Car Street, Mangalore.

[illegible] ವರ್ಷ ಒಂದಕ್ಕೆ ರೂಪಾಯಿ 3-0-0 [illegible] ನಂ. ಎಮ್. 495. ಟಪ್ಪಾಲು ಹಾಸಲು ಸೇರಿ ರೂಪಾಯಿ 3-13-0

ಸ್ವದೇಶಾಭಿಮಾನಿ.

(ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ೧೯೦೭ರಲ್ಲಿ ಸ್ಥಾಪಿತವಾದುದು.)

ಪ್ರತಿ ಶುಕ್ರವಾರವೂ ಮಂಗಳೂರು ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ.

ರತ್ನೈರ್ಮಹಾರ್ಹೈಸ್ತುತುಷುರ್ನ ದೇವಾ । ನ ಭೇಜಿರೇ ಭೀಮವಿಷೇಣ ಭೀತಿಮ್ ॥ ಸುಧಾಂ ವಿನಾ ನ ಪ್ರಯಯುರ್ವಿರಾಮಂ । ನ ನಿಶ್ಚಿತಾರ್ಥಾದ್ವಿರಮಂತಿ ಧೀರಾಃ ॥ ೧ ॥
ದೊರೆಯಲನುಪಮರತ್ನಗಳು ಸಾ । ಗರವ ಮಥಿಸಲು ಸುರರಿಂಗದರಿಂ । ಹರುಷವಾಯಿತೆ? ಮತ್ತೆ ವಿಷ್ಷವ ಸುಡುತ ಬರುತಿರುವ ॥
ಗರಲಕೆವರಂಜಿದರೆ? ಸುಧೆಯನು । ಪಡೆತು ಕ್ಷುದ್ರರ ತೆರದಿ ಕುಳಿತರೆ? । ತೆರಳ ಬಲ್ಲರೆ ತೊರೆದು ಧೀರರು ನಿಶ್ಚಿತಾರ್ಥವನು? ॥ ೧ ॥

(Oldest Kanarese Weekly in South Kanara)

ಪುಸ್ತಕ ೨೮. ಮಂಗಳೂರು, ತಾ. ೧೭ನೇ ಶುಕ್ರವಾರ ಆಗೋಸ್ತು ೧೯೩೪ (17-8-34) ಸಂಚಿಕೆ ೩೩

THE CANARA BANKING CORPORATION, UDIPI, LTD.

(Incorporated in British India)

Established 1906

Head office:—UDIPI, S. K. **Branches:—Coondapoor, Mangalore, Shimoga & Madras.**

Notice

The following rates of interest on deposits will come into force with effect from 13-8-1934.

Short term Deposits 2½ %

Fixed Deposits of	3 months		2½%	p. a.
„	„	6 „	3%	„
„	„	9 „	3½%	„
„	„	1 or 2 years	4½%	„
„	„	3 or 4 years	5%	„

(Interest payable half yearly)

Office of the Corporation
UDIPI, S. K.
13-8-34.

By order

M. Shrinivas Prabhu,
Ag. Manager.

(Regd.)

ಅಮೃತಾಂಜನ.

ಇದು ಕೆಟ್ಟ ಶಿರೋವೇದನ, ಕಣ್ಣುಕೊಡುವ ವಾತ, ಛಾತಿ ನೋವು, ವಿಶೇಷ ಉಳುಕು, ಅಸಹನೀಯ ಹಲ್ಲುನೋವು, ವಿಪರೀತ ಛಳಿಯು, ಜಹು ಶೀತ, ಸಹಿಸಲಸದಳವಾದ ಚಳಿ, ಕೈಕಾಲು ಮರಗಟ್ಟುವುದು, ಲುಂಬಾಗೊ ಮೊದಲಾದ ಎಲ್ಲಾ ತರದ ವೇದನೆಗಳನ್ನೂ ಅತೀ ತ್ವರೆಯಲ್ಲೇ ಗುಣಪಡಿಸುತ್ತದೆ. ಎಲ್ಲೆಲ್ಲಿಯೂ ಮಾರಲ್ಪಡುತ್ತಿದೆ.

ರಿಂಗ್‌ವರ್ಮ್ ಮುಲಾಮು— ಇದು ರಿಂಗ್‌ವರ್ಮನ್ನೂ ಕಜ್ಜಿಯನ್ನೂ ಇನ್ನಿತರ ಚರ್ಮರೋಗಗಳನ್ನೂ, ಮೂರು ಸಲ ಮುಟ್ಟಿಸುವುದರೊಳಗೆ ಗುಣಪಡಿಸುತ್ತದೆ.

ಡಬ್ಬಿ 1ಕ್ಕೆ 6 ಆಣೆ ಡಜನಿಗೆ ರೂ. 3-8-0. ಅಂಚೆವೆಚ್ಚ ಪ್ರತ್ಯೇಕ.

ಅಮೃತಾಂಜನ ಡಿಪೋ,

ಮದರಾಸು **ಮತ್ತು** **ಬೊಂಬಾಯಿ**

ದಿ ಬೊಂಬೇ ಲ್ಯಾಫ್ ಎಶ್ಯೂರೆನ್ಸ್ ಕಂಪೆನಿ ಲಿಮಿಟೆಡ್, ಬೊಂಬೇ.

1908ರಲ್ಲಿ ಸ್ಥಾಪಿತವಾದುದು.

ಪೊಲಿಸಿದಾರರಿಗೆ ವಿಶೇಷ ರಿಯಾಯತಿ.

ವರ್ಷಾವಧಿಯ ಪ್ರೀಮಿಯಮ್ಮುಗಳನ್ನು ತೆರುವ ಎಲ್ಲಾ ಪೊಲಿಸಿದಾರರಿಗೂ "ಸಿಲ್ವರ್ ಜ್ಯೂಬಿಲಿ" ರಿಯಾಯತಿಯಾಗಿ ಅವರವರ ಮುಂದಿನ ಪ್ರತಿ ವಾರ್ಷಿಕ ಪ್ರೀಮಿಯಮ್ಮಿನಲ್ಲಿ ಶೇಕಡಾ 2½ ಸಲೆಯಷ್ಟು ಕಡಿಮೆಯಾದ ಮೊಬಲಗನ್ನು ತೆರುವ ರಿಯಾಯತಿ ಕೊಡಲಾಗಿದೆ. ಈ ರಿಯಾಯತಿಯ ಪ್ರಯೋಜನವನ್ನು ಆಗಲೇ ನೂರಾರು ಮಂದಿ ಪೊಲಿಸಿದಾರರು ಪಡಕೊಂಡಿದ್ದಾರೆ. ವರ್ಷಕ್ಕೊಮ್ಮೆ ಪ್ರೀಮಿಯಮ್ಮಿನ ಕಂತನ್ನು ಕಟ್ಟಲಪೇಕ್ಷಿಸುವವರು ತಮ್ಮ ಪೊಲಿಸಿಯ ನಂಬರುಗಳನ್ನು ನಮೂದಿಸಿ ನಮಗೆ ಯಾ ಸಮ್ಮಂಧಪಟ್ಟ ನಮ್ಮ ಇತರ ಆಫೀಸಿಗೆ ತಿಳಿಸಬೇಕಾಗಿ ಈ ಮೂಲಕ ವಿನಂತಿ ಮಾಡಿಕೊಳ್ಳೋಣಾಗುತ್ತದೆ.

ಸೂ:—ಪ್ರಾತಿನಿಧ್ಯವಿಲ್ಲದ ಜಿಲ್ಲೆಗಳಿಂದ ಉತ್ಸಾಹಶಾಲಿ ಗೃಹಸ್ಥರುಗಳ ಏಜನ್ಸಿ ಅರ್ಜಿಗಳು ಅಂಗೀಕರಿಸಲಾಗುವುವು.

ಕೊಚ್ಚಿಕಾರ್ ಬ್ರದರ್ಸ್, ಮದ್ರಾಸ್ ಬ್ರೇಂಚ್ ಸೆಕ್ರೆಟರಿಯವರು.

ಆಫೀಸುಗಳು:—(1) ಪೋಸ್ಟ್ ಬೋಕ್ಸ್ ನಂಬ್ರ 337, ಆರ್ಮೇನಿಯನ್ ಸ್ಟ್ರೀಟ್, ಮದ್ರಾಸ್; (2) ವಿಶ್ವೇಶ್ವರಪುರಂ ಸರ್ಕಲ್, ಬೆಂಗಳೂರು ಸಿಟಿ; (3) ಮಂಗಳೂರು, ದಕ್ಷಿಣ ಕನ್ನಡ, (4) ಉಡುಪಿ, ದಕ್ಷಿಣ ಕನ್ನಡ, (5) ಇಶ್ಯೂರೆನ್ಸ್ ಬಿಲ್ಡಿಂಗ್, ಹೋರ್ನಬಿ ರೋಡ್, ಬೊಂಬಾಯಿ, ನಂಬ್ರ 2; (6) ಕಲ್ಲಿಕೋಟೆ

ಉಪವಾಸ ... ಇವರ ಸಂಪಾದಕರಿಗೆ ಬರೆದ ಪತ್ರದಲ್ಲಿ ... ಕೊಟ್ಟಿದ್ದಾರೆ.

× × × × ×

ನನ್ನ ಬಳಿಗೆ ಬೆಳಿಗ್ಗೆ ಒಬ್ಬ ಸಾಧು ಬಂದ. ಮುಸ ಲ್ಮಾನ ಉಡುಪು ಹಾಕಿದ್ದ. ಹಿಂದೂಸ್ಥಾನಿ ಮಾತ ನಾಡುತ್ತಾ ಭಿಕ್ಷೆ ಕೇಳಿದ. ಸೂರಗಿಯಂತಹ ಒಂದು ಮೊನೆಯನ್ನು — ಹಿಡಿದುಕೊಂಡು ಕುಣಿಯತೊಡಗಿದ. ಕಾಸು ಕೊಡಬೇಕು ಎಂದು-ಇಲ್ಲ ಎಂದೆ. “ಹಾಗಾದರೆ ಈ ಮೊನೆಯನ್ನು ಕಣ್ಣಿಗೆ ಚುಚ್ಚಿಕೊಂಡು ರಕ್ತ ಹರಿಸುವೆ ನೆಂದ. ನಾನು ಮೊನ್ನೆ ಹೇಳಿದ ಕ್ರೋಧವನ್ನು ಹೇಳುತ್ತಾ ಕುಣಿಯತೊಡಗಿದ. ಅದನ್ನು ಕಂಡು ಅವನು ಹಾಡು ವುದು ಮುಸಲ್ಮಾನರ ರಣಗೀತೆಯೆಂದು ಭಾವಿಸಿದೆ. ಅದರ ಅರ್ಥ ನನಗೆ ತಿಳಿಯಲಿಲ್ಲ. ಏನೋ, ಕೇಳಿದು ದನ್ನು ಬರೆದೆ—ಅಷ್ಟೆ!

× × × × ×

ನಾನು ಬರೆದುದೆಲ್ಲಾ ‘ಕಲ್ಪ’ದ ವಾಕ್ಯದ ಯಥಾರ್ಥ ಉಚ್ಚಾರಕ್ಕೆ ಅಜಗಜಾಂತರವಿದೆ ಸ್ವಾಮಿ.

× × × × ×

ನಾನು ಬರೆದುದರಲ್ಲಿ ಒಂದು ಶಬ್ದವೂ ತಮ್ಮ ಮತ ವಿರೋಧವಾಗಿಯೂ, ಉದ್ದೇಶಪೂರ್ವಕವಾಗಿಯೂ ಇಲ್ಲದಿರುವಾಗ, ಶಾಂತಿಪ್ರಿಯರಾದ ತಾವು ಹೀಗೆ ಕೋಪ ಗೊಳ್ಳಬಾರದು ಸಾರ್! ದೊಡ್ಡ ಮನಸ್ಸು ಮಾಡಿ ಕ್ಷಮಿಸಿರಿ!

× × × × ×

ರಾಜನಿಗೆ, ಪ್ರಜೆಗಳಿಗೆ ಮತ್ತು ಮತಕ್ಕೆ ಹಾನಿ ಬಯ ಸುವ ಪೋಲಿಸಿ ಸಾಯ್ಬನಲ್ಲಿಲ್ಲ! ಆದುದರಿಂದಲೇ ಸಾಯ್ಬು ನಾಲ್ಕು ವರ್ಷಗಳಾದರೂ ಜನರ ಪ್ರೀತಿ-ಆದರಗಳಿಗೆ ಪಾತ್ರನಾಗಿ ಸಾಗುತ್ತಿರುವನು. ಹೀಗಿರುವಾಗ, ಮಾನ್ಯ ಕಲೆಕ್ಟರರಾಗಲೀ, ಮಾನ್ಯ ಪೋಲೀಸು ಸುಪರಿಂಟೆಂಡೆಂಟ ರಾಗಲೀ ನನ್ನ ಮೇಲೆ ಎಂದೂ ಸಿಟ್ಟಾಗಲೆಂಬುದು ಖಚಿತ ಸ್ವಾಮಿ!

× × × × ×

ಅಯ್ಯಾ ಮುಸ್ಲಿಮ ಬಂಧುಗಳೇ, ತಮ್ಮ ಮತವೆಂದರೆ ಸಾಯ್ಬನಿಗಾಗಲೀ, ಸಂಪಾದಕರಿಗಾಗಲೀ ಗೌರವಾರ್ಹ. ಸ್ವದೇಶಾಭಿಮಾನಿಯ ಮತ ಸಮತಾಭಾವವು ಈ ಪತ್ರಿಕೆ ಯಲ್ಲಿ ಪ್ರಕಟವಾಗುವ ಮುಸ್ಲಿಮರ ಲೇಖನ ಬಾಹ್ಯ ಗಳಿಂದಲೇ ತಿಳಿಯಬಾರದೆ?

× × × × ×

ನಿಮ್ಮ ‘ಕಲ್ಪ’ದ ಮೇಲೆ ಅಪಹಾಸ್ಯವನ್ನು ಕಟ್ಟಲೇ ಇಲ್ಲ! ಹಾಗೆ ಕಟ್ಟಲಾಗಿದೆಯೆಂದು ಕಲ್ಪಿಸುವಿರಾದರೆ ನಾನೇನು ಮಾಡಲಿ? “ಎಕ್ಸ್‌ಕ್ಯೂಜ್” ಎಂದು ಕೇಳುವೆ ನಷ್ಟೆ! ದಯವಿಟ್ಟು ಚಂದಾದಾರರಾಗಿ ಪ್ರೋತ್ಸಾಹಿಸು ವಿರಾ?

× × × × ×

ಆದರಣೀಯರೇ! ಮಹಾತ್ಮಾ ಗಾಂಧಿಯವರ ಉಪವಾಸ ವೇಗನೆ ಮುಗಿಯಿತು! ‘ಈ ಸಲ ಸಾಯುತ್ತಾನೆ’ ಎಂದು ಡಾಕ್ಟರರು ಕಳವಳಿಸಿದರು! ಆದರೆ ಗಾಂಧಿಯವರು ಬದುಕಿದರು! ಆಯುಷ್ಯದ ಬಲ್ಮೆ ನೋಡಿ!

‘ಸಾಯ್ಬು’

ಬೆಳೆಯುತ್ತಿರುವ ಮಕ್ಕಳಿಗೆ ಸರಿಯಾದ ಪೋಷಣೆಯು ಅಗತ್ಯ.

ಮುಂದಕ್ಕೆ ಚೆನ್ನಾಗಿ ಬೆಳೆಯ ಬೇಕಾದರೆ ಚಿಕ್ಕಂದಿನಲ್ಲೇ ಮಕ್ಕಳನ್ನು ಚೆನ್ನಾಗಿ ಸಲಹಬೇಕು. ಬೆಳೆಯುತ್ತಿರುವ ಮಕ್ಕಳು ಮನಸ್ಸು, ದೇಹ ಗಳಲ್ಲಿ ಆರೋಗ್ಯರಾಗಿಯೂ ಪುಷ್ಟರಾಗಿಯೂ ಬೆಳೆಯಬೇಕಾದರೆ ಸರಿ ಯಾದ ಪೋಷಣೆಯು ಬೇಕು. ನಿತ್ಯದ ಭೋಜನಗಳಲ್ಲಿ ಸರಿಯಾದ ಪೋಷಣೆ ಸಾರವಿಲ್ಲ. ಎಷ್ಟೋ ಚೆನ್ನಾಗಿರಲಿ, ನಿತ್ಯದ ಆಹಾರದಲ್ಲಿ ಮಕ್ಕಳ ಮನದೇಹಗಳನ್ನು ಬೆಳಸುವಷ್ಟು ಸಾರವಿರುವುದಿಲ್ಲ. ಒಂದೇ ಆಹಾರವು ನಿಮ್ಮ ಮಕ್ಕಳನ್ನು ಆರೋಗ್ಯ, ಬಲ, ಶಕ್ತಿಗಳಿಂದ ಪೋಷಿಸುವುದು. ಅದೇ ಆಹಾರವು ‘ಓವಲ್ಟಿನ್’.

ಓವಲ್ಟಿನ್ ಎಂಬುದು ಅಮೋಘವಾದ ಆಹಾರ. ಅದನ್ನು ಪ್ರಕೃತಿಸಿದ್ಧ ವಸ್ತುಗಳಿಂದ ತಯಾ ರಿಸಲಾಗಿದೆ. ಬೆಳೆದ ಬಾರ್ಲಿ, ದನದ ಕೆನೆ ಹಾಲು, ಕೊಕ್ಕೊಗಳಿಂದ ತಯಾರಿಸಲ್ಪಟ್ಟಿದ್ದು, ಆರೋಗ್ಯ ಕಾಯರಾದ ಮಕ್ಕಳಿಗೆ ಅಗತ್ಯ ಬೇಕಾದುದು-ಹೆಸರಾದುದು.

OVALTINE

ಮೆದುಳು, ನರ, ದೇಹಗಳನ್ನು ವೃದ್ಧಿಸುತ್ತದೆ.

ತಯಾರಿಯಲ್ಲಿ ಹಸ್ತ ಸ್ಪರ್ಶಿತವಾಗಿಲ್ಲ. ಎಲ್ಲಾ ಸ್ಟೋರುಗಳಲ್ಲಿಯೂ ಕೆಮಿಸ್ಟರಲ್ಲಿಯೂ ಸಿಗುತ್ತದೆ.

ಏಜಂಟ್—ಜೇಮ್ಸ್ ರ್‍ಯಾಟ್, 8೭ಎ. ಕಿಪನ್ ಸ್ಟ್ರೀಟ್ ಕಲ್ಕತ್ತಾ, ಮತ್ತು ಬೊಂಬಾಯಿ, ಮದ್ರಾಸುಗಳಲ್ಲಿ.

OV/...

ದಿ. ಕೆನರಾ ನ್ಯೂಸ್ ಏಜನ್ಸಿ.

ಪ್ರೊಪ್ರೈಟರ್: ಬಿ. ಅಚ್ಚುತಪ್ಪ.

ಕಾರ್ಕಳ.

ಇಲ್ಲಿ ಎಲ್ಲಾ ವರ್ತಮಾನ ಪತ್ರಗಳೂ, ಇತರ ಪುಸ್ತಕಗಳೂ ವಿಕ್ರಯಿಸಲ್ಪಡುತ್ತವೆ.

(ಶಾಖೆ: ಬಸ್ ಸ್ಟೇಂಡಿನ ಬಳಿ.)

ಕಣ್ಣಿನ ಪರೆ.

“...ಸನ್” ಎಂಬ ‘ನೇತ್ರಭಾಸ್ಕರ’ — ಈ ಔಷಧವು ಕಣ್ಣುಪರೆ, ದೃಷ್ಟಿಮಾಂದ್ಯ ಇತ್ಯಾದಿಯನ್ನು ಶೀಘ್ರ ವಾಗಿಯೂ ಶಾಶ್ವತವಾಗಿಯೂ ಗುಣಪಡಿಸುತ್ತದೆ. ಶಸ್ತ್ರಕ್ರಿಯೆಯು ಅವಶ್ಯವಿಲ್ಲ. ಖಚಿತ ಗುಣಲಾಭ. ಗುಣವಾಗದಿದ್ದರೆ ಹಣ ಹರತ್. ಕ್ರಯ ರೂ. 2.

ಪತ್ರವ್ಯವಹಾರ ಇಂಗ್ಲೀಷಿನಲ್ಲಿ:—

Hary yasram, Panchpota, Bengal.

ಕುಷ್ಠರೋಗ ಮತ್ತು ಬಿಳಿ ತೊನ್ನು.

ಎಷ್ಟು ದೀರ್ಘಕಾಲ ಅಥವಾ ಯಾವ ಕಾರಣ ... ನಾಲ್ಕೇ ವಾರಗಳಲ್ಲಿ ಪೂರ್ಣ ಗುಣಪಡಿಸುವುದು ಯಶಸ್ಸು ಖಾತರಿ; ಗ್ಯಾರಂಟಿ. ವಿವರವನ್ನು ಅಜೀ ಕ್ಷಿಸಿದ್ದಲ್ಲಿ ಕಳುಹಿಸಲಾಗುವುದು.

ವಿಳಾಸ:—

Kamala Works, Panchpota, Bengal.

Karnataka Chemical and Pharmaceutical Works, Ltd., Udipi. (South India)

ಕುಂಭಕೋಣದಲ್ಲಿಯೂ ಮಧುರೆಯಲ್ಲಿಯೂ ಮೈಸೂರಿನಲ್ಲಿಯೂ ಸುವರ್ಣ ಪದಕಗಳನ್ನು ಪಡೆದಿರುವ

ಕರ್ಣಾಟಕ ಕೆಮಿಕಲ್ ಎಂಡ್ ಫಾರ್ಮಸ್ಯೂಟಿಕಲ್ ವರ್ಕ್ಸ್, ಲಿಮಿಟೆಡ್, ಉಡುಪಿ. (ದಕ್ಷಿಣ ಹಿಂದೂಸ್ಥಾನ).

ನಮ್ಮಲ್ಲಿ ಟಿಂಕ್ಚರ್, ವಗೈರೆ ಎಲ್ಲಾ ಎಲ್ಲೋಪತಿಕ್ ಔಷಧ ದ್ರವ್ಯಗಳೂ, ಆಯುರ್ವೇದಿಯ ಔಷಧಿಗಳೂ, ಟ್ಯೊಲೆಟ್ ಸಾಮಗ್ರಿಗಳೂ, ಸಾಬೂನುಗಳೂ, ಫೌಂಟನ್ ಪೆನ್ ಶಾಯಿಗಳೂ ತಯಾರಿಸಲ್ಪಡುತ್ತವೆ.

ದ್ರಾಕ್ಷಾಸವ, ಪ್ರಸೂತಿ ಸಂಜೀವನ, ವಿನೆಗರ್, ಸ್ನೋ,
ಕ್ಷೀರಬಲಾ, ಕಾಮ್ಪೋಫ್ಲೊಜಿಸ್ಟಿನ್ ಯುಟೇರಿನಾ, ಇಂಕ್ಸ್

ಮೆನೆಜಿಂಗ್ ಡೈರೆಕ್ಟರ್—ವೆಂಕಟರಾಯ ಅಚ್ಚಪ್ಪ ಬಾಳಿಗ.

ಹೆಡ್ ಆಫೀಸು.
ಉಡುಪಿ. (ದಕ್ಷಿಣ ಹಿಂದೂಸ್ಥಾನ).

ಬ್ರೇಂಚ ಆಫೀಸು
ದೇವಕರಣ ಮೆನ್ಶನ್ಸ್, 45 ಪ್ರಿನ್ಸೆಸ್ ಸ್ಟ್ರೀಟ್, ಬೊಂಬಾಯಿ ನಂ. 2.

ಪಶ್ಚಿಮ ಕರಾವಳಿ ಮತ್ತು ಮೈಸೂರು ಪ್ರಾಂತ್ಯಗಳ ಪ್ರಾಮುಖ್ಯ ಏಜಂಟರು:—

ಕರ್ಣಾಟಕ ಪ್ರೊಡಕ್ಟ್ಸ್ ಡಿಸ್ಟ್ರಿಬ್ಯೂಟಿಂಗ್ ಕಂಪೆನಿ, ಮಂಗಳೂರು.

ಅನುಕ್ರಮಣಿಕೆ.

ಅಗ್ರಲೇಖ

ನಮ್ಮ ತಾಲೂಕು ಕೊಂಗ್ರೆಸ್ ಸಮಿತಿಯ ನಿರ್ಧಾರ ೩
ಸ್ಫುಟವಿಚಾರಗಳು ೪
ಮಹಾತ್ಮಾಜೀಯವರ ಉಪವಾಸಾರಂಭ. ೧೦
ಕೋಟೆಗಳು ೮
ವರ್ತಮಾನ ಸಂಗ್ರಹ ೧೧
ವಿವಿಧ ಸಮಾಚಾರಗಳು ೧೧
ಪತ್ರವ್ಯವಹಾರ ೧೩
ಮೆಣಸು ೨
ಪೀಲನಾಗಿಣಿಯು ನಿಂದೆಯ ನಾಗಿಣಿಯಾಗಿರುವುದು ೪
ಮಂಗಳೂರು ೯

ಸ್ವದೇಶಾಭಿಮಾನಿ.

ತಾ|೧೭ನೇ ಶುಕ್ರವಾರ ಆಗೋಸ್ಟು ೧೯೩೪

ನಮ್ಮ ತಾಲೂಕು ಕೊಂಗ್ರೆಸ್ ಸಮಿತಿಯ ನಿರ್ಧಾರ.

ಮಂಗಳೂರು ತಾಲೂಕು ಕೊಂಗ್ರೆಸ್ ಸಮಿತಿಯು, ಮುನಿಸಿಪಲ್ ಕೌನ್ಸಿಲಿಗೆ ಸದಸ್ಯರನ್ನು ಕಳುಹುವುದರ ಕುರಿತಾಗಿ ಆಲೋಚಿಸಲು ಒಂದು ವಿಶೇಷ ಸಭೆ ಜರಗಿಸಿ, ಬಹು ಚರ್ಚೆಯ ನಂತರ, 'ಪ್ರಕೃತ ಪರಿಸ್ಥಿತಿಯಲ್ಲಿ' ಕಳುಹಲು ಅಪೇಕ್ಷಿಸುವುದಿಲ್ಲವೆಂದು ತೀರ್ಮಾನ ಮಾಡಿದೆ. ರಾಷ್ಟ್ರಸಭೆಯ ಈಗಿನ ಕಾರ್ಯಕ್ರಮದಂತೆ ನಮ್ಮ ಮುನಿಸಿಪಾಲಿಟಿ ಚುನಾವಣೆಗೆ ಈ ಬಾರಿ, ಕೊಂಗ್ರೆಸ್ ಸಮಿತಿಯಿಂದ ಅಧಿಕೃತರಾದ ಉಮೇದ್ವಾರರು ಮುಂದೆ ಬರಬಹುದೆಂದು ಹಲವು ನಾಗರಿಕರು ನಿರೀಕ್ಷಿಸಿದ್ದರು. ಆದರೆ, ನಮ್ಮ ತಾಲೂಕು ಸಮಿತಿಗೆ ಏತರಿಂದಲೋ ಚುನಾವಣೆಗಳಲ್ಲಿ ಭಾಗವಹಿಸುವ ಉತ್ಸಾಹವಿಲ್ಲದೆ ಹೋಯಿತು.

ಸಮಿತಿಯ ಈ ನಿರ್ಧಾರವು ಅನೇಕರಿಗೆ ಆಶ್ಚರ್ಯವನ್ನುಂಟುಮಾಡದಿರದು. ರಾಷ್ಟ್ರಸಭೆಯಿಂದ ಅಧಿಕೃತರಾದವರಿಗೆ ಸಹಜವಾಗಿ ಉತ್ಸುಕತೆಯಿಂದ—(ಕರ್ತವ್ಯವೂ ಅಹುದು) ನಮ್ಮ ತಾಲೂಕು ಸಮಿತಿಯು ಸಹಾಯಮಾಡುವುದು. ನಮ್ಮ ಸ್ಥಳೀಯ ಕೌನ್ಸಿಲನ್ನು ಮಾತ್ರ ಹೊರತುಪಡಿಸಿ, ಚುನಾವಣೆಗಳು ಅಪೇಕ್ಷಣೀಯವಲ್ಲವೆಂದು ನಿರ್ಧರಿಸಿದ ಕಾರಣವು ಸ್ಪಷ್ಟವಾಗುವುದಿಲ್ಲ. ನಮ್ಮ ಜಿಲ್ಲಾ ಕೊಂಗ್ರೆಸ್ ಕಮಿಟಿ ಮತ್ತು ತಾಲೂಕು ಕಮಿಟಿಗಳ ರಚನೆಯಾಗಿ ಹಿಂದೆರಡು ತಿಂಗಳಾದುವು. ಕೊಂಗ್ರೆಸ್ಸಿಗೆ ಕೆಲ ಮೆಂಬರರನ್ನು ಕೂಡಿಸಿದುದರ ಹೊರತಾಗಿ ಮತ್ತಾವ ವಿಶೇಷ ಕಾರ್ಯವೂ ಅವುಗಳಿಂದ ಈ ತನಕ ನಡೆದುದು ತೋರುವುದಿಲ್ಲ. ಕೌನ್ಸಿಲ್ ಪ್ರವೇಶವು ಕೊಂಗ್ರೆಸ್ಸಿನ ಮುಖ್ಯ ಕಾರ್ಯಾಂಗವಲ್ಲವಾದರೂ ತೀರ ಅಪ್ರಮುಖವೂ ಅಲ್ಲವೆಂಬುದು ಸರ್ವವಿದಿತ ವಿಷಯ. ಹೀಗಿರುವಾಗ ನಮ್ಮ ನಗರ ಸಭೆಗೂ ಕೊಂಗ್ರೆಸ್ ಉಮೇದ್ವಾರರನ್ನು ಕಳುಹುವುದು ಅಪ್ರಶಸ್ತವೆನಿಸಲಾರದಿತ್ತೆಂದೇ ನಮ್ಮ ಅಭಿಪ್ರಾಯ.

ಈ ಬಾರಿಯ ಚುನಾವಣೆಗಳಲ್ಲಿ ಪ್ರತಿಯೊಂದು ವಾರ್ಡಿನಲ್ಲೂ ಎಂಬಂತೆ ತೀವ್ರ ಸ್ಪರ್ಧೆಯುಳ್ಳ ಚಿಹ್ನ ತೋರುತ್ತಿದೆ. ಈ ಸ್ಪರ್ಧೆಯ ಗೊಂದಲದೊಳಗೆ ಕೊಂಗ್ರೆಸ್ ಉಮೇದ್ವಾರರ ಪ್ರವೇಶವು ಅಪೇಕ್ಷಣೀಯವಲ್ಲವೆಂದು ಸಮಿತಿಯು ನೆನಸಿರಬಹುದು. ಆದರೆ, ಕೊಂಗ್ರೆಸ್ ಉಮೇದ್ವಾರರನ್ನು ಮುಂದಿರಿಸುವುದರಿಂದ ಇಂತಹ ಸ್ಪರ್ಧೆಗಳು ತಡೆಯಲ್ಪಡಲಾಗದಿದ್ದರೂ ಕೊಂಗ್ರೆಸ್ಸಿಗಾಗಿ ನಮ್ಮ ಜನರ ಶ್ರದ್ಧೆ—ಪ್ರೇಮಗಳೆಷ್ಟಿದೆಯೋ ಅದು ವ್ಯಕ್ತವಾಗುತ್ತಿತ್ತು. ನಮ್ಮ ನಗರಸಭೆಗೆ ಕೊಂಗ್ರೆಸ್ಸಿನ ಕಡೆಯ ಸದಸ್ಯರು ಚುನಾವಣೆ ಹೊಂದಿ ಹೋಗುವುದರಿಂದ ನಗರದ ಚರಿತ್ರವೇ ಬದಲಾವಣೆ ಹೊಂದುವುದೆಂದು ಹೇಳಬರುವಂತಿಲ್ಲವಾದರೂ,—ಕೊಂಗ್ರೆಸ್ಸು ಜನರ ನಿಜವಾದ ಹಿತಚಿಂತನೆಯಿರುವ, ಜಾತಿವೈಷಮ್ಯದ ಕಳಂಕವಿಲ್ಲದ, ಏಕಮಾತ್ರ ಪ್ರಜಾಪ್ರತಿನಿಧಿ ಎಂಬುದು ಬಹುಮಟ್ಟಿಗೆ ಪ್ರಕಟವಾಗಲು ಸಾಧಕವಾಗುತ್ತಿತ್ತು.

ತಾಲೂಕು ಸಮಿತಿಯು, ಚುನಾವಣೆಗಳ ವಿಷಯದಲ್ಲಿ ಇಷ್ಟು ಅನಾದರವನ್ನು ತೋರಿಸಿದುದು ಮಹಾಪರಾಧವೆಂದು ನಾವು ಹೇಳುವುದಿಲ್ಲ. ಆದರೆ, ಇತರ ಯೋಗ್ಯ ಕಾರ್ಯಕ್ರಮದ (ಪ್ರಕೃತದ) ಅಭಾವದಲ್ಲಿ ಅದನ್ನು ಕೈಕೊಳ್ಳಬಹುದಿತ್ತು. ಈಗ,—ಚುನಾವಣೆಗಳ ಗೊಡವೆ ಬೇಡವೆಂದಾಯಿತು; ಇನ್ನು ಮುಂದಿನ ಕಾರ್ಯಕ್ರಮವೇನು? ಅದು ಪ್ರಕಟವಾಗಬಹುದಷ್ಟೆ.

ತಾಲೂಕು ಸಮಿತಿಯ ಈ ನಿರ್ಧಾರದಿಂದ ಮತ್ತೊಂದು ಸಮಸ್ಯೆಯು ತಲೆದೋರಿರುವುದು. ಈ ನಿರ್ಧಾರಕ್ಕೆ ಮೊದಲೇ ತಮ್ಮ ಉಮೇದ್ವಾರಿಕೆಯನ್ನು ಬಹಿರಂಗಪಡಿಸಿದ ಕೊಂಗ್ರೆಸ್ ಕೆಲಸಗಾರರಿರುವರು. "ಚುನಾವಣೆಗಳಿಗೆ ಕೊಂಗ್ರೆಸ್ ಪರವಾಗಿ ಉಮೇದ್ವಾರರನ್ನು ಕಳುಹುವುದು ಬೇಡ"ವೆಂಬ ನಿರ್ಧಾರವು ಅವರಿಗೆ ಎಷ್ಟು ಲಗಾವಾಗುವುದು? ಅವರ ಉಮೇದ್ವಾರಿಕೆಯು 'ಕೊಂಗ್ರೆಸ್ ಪರವಾಗಿ' ಎಂದು ಪರಿಗಣಿಸಲ್ಪಡಲಾರದಾದರೂ, ಕೊಂಗ್ರೆಸ್ಸಿನ ಅನುಮತಿ ಇಲ್ಲದೆ ಕೊಂಗ್ರೆಸ್ ಕೆಲಸಗಾರರು ಚುನಾವಣೆಗೆ ನಿಲ್ಲಬಹುದೇ?—ಅಥವಾ, ಯಾವಾತನೂ ಸ್ವೇಚ್ಛೆಯಿಂದ ಚುನಾವಣೆಗೆ ನಿಲ್ಲಬಹುದೆಂಬ ಕೊಂಗ್ರೆಸ್ ಸಮಿತಿಯ ಅಭಿಮತವೇ? ನಮ್ಮ ತಾಲೂಕು ಕೊಂಗ್ರೆಸ್ ಸಮಿತಿಯು ಇದನ್ನು ಸ್ಪಷ್ಟಪಡಿಸಿ ಒಂದು ಪ್ರಕಟಣೆ ಕೊಡುವುದೆಂದು ನಿರೀಕ್ಷೆ.

ಸ್ಫುಟವಿಚಾರಗಳು.

ನಮ್ಮ ಸುಣ್ಣಿನ ಮೇಲೆ ಕಣ್ಣು!—

ಯಾರಿಗೆ?—ಇಂಗ್ಲಾಂಡಿನ ವಾಣಿಜ್ಯ ಕುಶಲರಿಗೆ! ಅಲ್ಲಿಯ ಇಂಪೀರಿಯಲ್ ಕೆಮಿಕಲ್ಸ್ ಕಂಪೆನಿಯವರು, ಇಂಡಿಯದ ರಾಸಾಯನಿಕ ಸಾರವನ್ನೆಲ್ಲ ಇಲ್ಲಿಂದ ಎಳೆದುಕೊಂಡೊಯ್ಯಲು ನಮ್ಮ ಸರಕಾರದೊಡನೆ ೫೦ ಅಥವಾ ೬೦ ವರ್ಷಗಳ ಕರಾರು ಮಾಡಿಕೊಳ್ಳಲಿರುವರಂತೆ. ಕರಾರಿಗೆ ನಮ್ಮ ಸರಕಾರದವರು ಏಕದಾ ಸಹಿಹಾಕಲಿಲ್ಲವೆಂಬುದು ಸಂತೋಷಕರ. ಒಮ್ಮೆ ಎಸೆಂಬ್ಲಿ ಮುಂದೆ ಆ ವಿಷಯವನ್ನು ಇಡಿ ತೋರಿಸಿ, ಮಂಜೂರಾತಿ ಪಡೆಯಬಹುದು. ಆದರೆ ನಮ್ಮ ಸರಕಾರವೂ ಮೆಂಬರರೂ ಒಂದು ಚಿಕ್ಕ ಆಲೋಚನೆ ಮಾಡಬೇಕಾಗಿದೆ. ನಮ್ಮ ದೇಶೀಯ ಕ್ಯಾಮಿಕಲ್ ಕಂಪೆನಿಗಳು ಈಗಾಗಲೇ ತಲೆಯೆತ್ತುತ್ತಿವೆಯಷ್ಟೆ. ಈ ಸಮಯದಲ್ಲಿ ಇಂಗ್ಲಾಂಡಿನ ಕ್ಯಾಮಿಕಲ್ ಕಂಪೆನಿಗಳಿಗೆ ಇಲ್ಲಿ ಐದಾರು ಶತವರ್ಷಗಳ ತನಕ—ಇಲ್ಲಿದ್ದುದನ್ನೆಲ್ಲ ಒಯ್ಯಲು ಪರವಾನಗಿ ಕೊಡುವುದು ಸ್ವದೇಶ ಹಿತದೃಷ್ಟಿಯಿಂದ ಘಾತ ಮಾಡಿದಂತಾಗುವುದು. ನಮ್ಮ ಕಂಪೆನಿಗಳು ಅಲ್ಪಾಯುಗಳಾಗಬೇಕಾಗುವುದು. ಶ್ರೀ| ಬಿ. ದಾಸ್ ಎಂಬ ಸದಸ್ಯರೊಬ್ಬರು ಎಸೆಂಬ್ಲಿಯಲ್ಲಿ ಈ ವಿಷಯವಾಗಿ ಪ್ರಶ್ನಿಸಲಿದ್ದಾರೆ. ಎಸೆಂಬ್ಲಿ ಆಸನಗಳನ್ನಲಂಕರಿಸುವ ಮೆಂಬರರು ಮಾತ್ರ ಏನು ಮಾಡುವರೋ!

'ಜವಾಹರರ ಬಿಡುಗಡೆ!'

—ಅಹುದು! ಆದರೆ, ಎಷ್ಟು ಅವಧಿಗೆ? ಎರಡೇ ದಿನಗಳಿಗೆಂದು ವಾರ್ತೆ. ಮುಮೂರ್ಷು ಪತ್ನಿಯನ್ನು ನೋಡಿ ಬರಲು—ಸರಕಾರವು ದಯಾಭಾವದಿಂದ ಅವರನ್ನು ಹೋಗಗೊಟ್ಟಿತು! ಆದರೆ, ಈ ದಯಾಭಾವವು ಮತ್ತಷ್ಟು ವಿಶಾಲವಾಗಿ ವ್ಯಕ್ತವಾಗಬೇಕೆಂದೇ ಸಂಸಾರ ಮಾಯೆಯೊಳಗಿನ ಜನರ ಅಪೇಕ್ಷೆ. ಪತಿಯ ಬಳಿಯಲ್ಲಿರುವುದರಿಂದ ಶ್ರೀಮತಿ ಕಮಲಾನೆಹರೂರವರು ಶೀಘ್ರ ಗುಣಲಾಭ ಹೊಂದುವಂತೆ ಸಹಕಾರಿಯಾಗದಿರದಷ್ಟೇ ಅಲ್ಲ, ಜವಾಹರರೂ, ಪ್ರಾಣೋತ್ಕ್ರಮಣ ಸ್ಥಿತಿಯಲ್ಲಿರುವ ತಮ್ಮ ಪತ್ನಿಯನ್ನು ಬಿಟ್ಟು ಚಿತ್ತಶಾಂತಿಯಿಂದ ಕಾರಾಗೃಹದಲ್ಲಿರುವುದು ಕಷ್ಟತಮವೆನಿಸುವುದು. ಸರಕಾರವು ಇದನ್ನು ಸ್ವೀಕರಿಸುವಷ್ಟು ನಿರ್ದಯತನವನ್ನು ತೋರದೆಂದು ನಿರೀಕ್ಷಿಸಲ್ಪಟ್ಟಿದೆ. ಕೊಂಗ್ರೆಸ್ಸು ಶಾಸನ ನಿರೋಧ ಚಳವಳವನ್ನು ಹಿಂದೆಗೆಯಿತೆಂದು ಸಾರಿದ ಬಹುಕಾಲದ ಮೇಲಾದರೂ ಈ ಬಿಡುಗಡೆ (ಹಾಗೂ ಗಫರ್ ಖಾನರಂತಹ ಜನಪ್ರಿಯರ ಬಿಡುಗಡೆ)ಯನ್ನು ಮಾಡಿ ಸರಕಾರವು ತನ್ನ ದಯಾಪೂರ್ಣವಾದ ವಿಶಾಲಹೃದಯವನ್ನು ವ್ಯಕ್ತಗೊಳಿಸುವುದೆಂದು ಆಶಿಸಬಹುದೇ?

ಬರ್ಮಾ ಕೌನ್ಸಿಲಿನ ವಿದ್ಯಮಾನಗಳು.

—ನಮ್ಮ ಜನರಿಗೆ, 'ಇದು ಜವಾಬ್ದಾರಿ ಸರಕಾರವಹುದೇ?' ಎಂದು ಸಂದೇಹಪಡುವಂತೆ ಮಾಡಿವೆಯೆನ್ನಬಹುದು. ಸರ್ ಒಸ್ವಾರ್ಡ್ ಒಸ್ಲಿಲ್ ಎಂಬವರು ಅಲ್ಲಿಯ ಕೌನ್ಸಿಲಿನ ಅಧ್ಯಕ್ಷ ಪೀಠದಲ್ಲಿ ವಿರಾಜಿಸುವವರು. ಹಲವು ಮೆಂಬರರಿಗೆ ಅವರ ಕಾರ್ಯನಿರ್ವಹಣದಲ್ಲಿ ಅತೃಪ್ತಿ ಕಂಡು, ಅವರನ್ನು ಪದಚ್ಯುತ ಮಾಡಲು ಅವಿಶ್ವಾಸದ ಠರಾವು ತರಲಾಯಿತು. ಗೃಹಮಂತ್ರಿಗಳು ಆ ಠರಾವನ್ನು ಎದುರಾಡಿದರೂ, ಬಹುಮತದಿಂದ ಠರಾವು ಮಂಜೂರಾಗಿ ಹೋಯಿತು. ಆದರೆ, ಗವರ್ನರರು, ತಮ್ಮ ವಿಶೇಷಾಧಿಕಾರದಿಂದ ಆ ಠರಾವನ್ನು ಸಿಂಧುವಾಗಗೊಡದೆ ತಿರಸ್ಕರಿಸಿ ಬಿಟ್ಟಿರುವರು. ಅವಿಶ್ವಾಸದ ಠರಾವಿಗೆ ಕಾರಣಗಳು ಸಾಕಾಗಲಿಲ್ಲವೆಂದೇ ಮೆಂಬರರಿಗೆ ತಿಳಿಸಲಾಗಿದೆ. ಗವರ್ನರರ ಅಭಿಪ್ರಾಯವನ್ನು ಪ್ರಶ್ನಿಸುವವರಾರೂ ಇರಲಾರರಾದರೂ, ಪ್ರಜಾಪ್ರತಿನಿಧಿಗಳಾದ ೫೦ ಮಂದಿ ಸದಸ್ಯರ ಅಭಿಮತವನ್ನು ಮಾನಿಸದಿದ್ದುದು ಪ್ರಜಾ ಹಿತದೃಷ್ಟಿಯಿಂದ, ಶಾಂತಿಪಾಲನೆಯ ದೃಷ್ಟಿಯಿಂದ ಯುಕ್ತವಾದುದೇ? ಇದರಿಂದ ವಿಶ್ವಾಸ ವೃದ್ಧಿಯಾಗುವುದುಂಟೇ?—ಎಂದು ಜನರು ಕೇಳುವಂತಾಗಿದೆ. ಭಾವೀ ಸುಧಾರಣೆಗಳು ಸಮೀಪಿಸುತ್ತಿವೆಯೆಂಬ ಈ ಕಾಲದಲ್ಲಿ, ಅನುಕೂಲ ಪ್ರಜಾಮತವನ್ನು ನಿರೀಕ್ಷಿಸುವ ಸರಕಾರಕ್ಕೆ ಇಂತಹ ಘಟನೆಗಳು ಸಹಾಯಕವಾಗಲ್ಲವೆನ್ನಬೇಕಾಗಿದೆ.

ಇಂಡಿಯಕ್ಕೊಂದು ವಸಾಹತುಬೇಕು-

—ಎಂದು ಕೌನ್ಸಿಲ್ ಟಫ್ ಸ್ಟೇಟಿನಲ್ಲಿ, ಬ್ರಿಟಿಷ್ ಸರಕಾರವನ್ನು ವಿನಂತಿಸಿ ಮಿ| ಹುಸ್ಸೇನ ಇಮಾಮರ ಒಂದು ಠರಾವು! ಬೇಕು—ಆದರೆ, ಕೊಡುವರಾರು? ಅಗತ್ಯವಿಲ್ಲವೆಂದೇ ಅಲ್ಲೇ ಅವರನ್ನು ತಡೆಯಲಾಯಿತು. ಬ್ರಿಟಿಷ್ ನಾಗರಿಕರು, ಸಂಯುಕ್ತ ಅಮೇರಿಕಕ್ಕೊ, ಕೆನಡ ಆಸ್ಟ್ರೇಲಿಯಗಳಿಗೋ ಹೋಗಿ ನೆಲಸುತ್ತಾರೆ. ಹಿಂದೀಯರಿಗೂ, ಹಾಗೆ, ನಿರ್ಬಾಧಿತವಾಗಿ ಎಲ್ಲಿಯಾದರೂ ಹೋಗಿ ನೆಲೆಸಲಾಗದೇ ಎಂಬುದಕ್ಕೆ ಶ್ರೀಮಾನ್ ಪಿ. ಎಸ್. ಸಪ್ರೂಗಳವರೂ ಅನುಕೂಲರಾಗಿರಲಿಲ್ಲ. ಮೈಬಣ್ಣವು ಕರಿಯದಾಗಿರುವ ಹಿಂದೀಯರಿಗೆ ಪರಪ್ರಾಂತ್ಯಗಳಲ್ಲಿ ನೆಲೆಸುವುದು, ಪರತಂತ್ರದಲ್ಲಿದ್ದಷ್ಟುಕಾಲ ಅಸಾಧ್ಯವಾಗಬಹುದು. ವಸಾಹತುಗಳ ಪ್ರಶ್ನೆಯು ಅನುಕೂಲವಾಗಿ ಫಲಿಸಬೇಕಾದರೆ—ಸ್ವಾತಂತ್ರ್ಯ ದೇವತೆಯು ಉತ್ತರಕೊಡದೆ ಸಾಧ್ಯವಾಗುವುದುಂಟೇ?

ಸರ್ ಹೆನ್ರಿ ಕ್ರೇಕರ ಅಭಯವಾಣಿ.

"ಈ ಮಸೂದೆಯು ಶಾಸನ ಗ್ರಂಥದಲ್ಲಿ ಎಂದೆಂದೂ ಉಳಿಯುವುದೆಂದು ಸಂದೇಹ ಪಡಬೇಡಿ; ಚಳವಳವು ತಣ್ಣಗಾಗುವಾಗ ಇದೂ ಅಳಿಸಲ್ಪಡುವುದು"—ಎಂಬ ಅಭಯವಾಣಿಯನ್ನು,—'ಬಂಗಾಳ ಕ್ರಿಮಿನಲ್ ಲೊ ಎಮೆಂಡ್‌ಮೆಂಟಿನ ಸಪ್ಲಿಮೆಂಟರಿ ಎಕ್ಸ್‌ಟೆಂಡಿಂಗ್ ಬಿಲ್' ಎಂಬ ಆ ಹೊಸ ಮಸೂದೆಯು ಮಂಜೂರಾಗುವಾಗ, ಗೃಹಮಂತ್ರಿಗಳು ನುಡಿದರು. ಅದು ಹಾಗೆ ಅಳಿಸಲ್ಪಡುವುದೆಂಬ ಭರವಸೆಯೆಲ್ಲಿಂದ? ಭಯೋತ್ಪಾದಕರ ಬಗ್ಗೆ ಉಂಟಾದ ಮಸೂದೆಗಳು ಸಾಕಾಗದೆ ಈ ಹೊಸ ಅಸ್ತ್ರವೇಕೆ? ಈ ಮೊದಲಿನ ಅಸ್ತ್ರಗಳು ಆ ಚಳವಳವನ್ನು ಎಷ್ಟು ಶಮನಗೊಳಿಸಿವೆ? ಶಾಸನಭಂಗ ಚಳವಳವೀಗ ನಿಂತಿದೆ; ಆದರೆ, ಒರ್ಡಿನೆನ್ಸ್ ಮಸೂದೆಯನ್ನು ಏಕೆ ಸರಕಾರವು ತೊಡೆದುಹಾಕಲಿಲ್ಲ?—ಎಂಬಿಷ್ಟು ಪ್ರಶ್ನೆಗಳಿಗೆ ಉತ್ತರಕೊಡದೆ ಸರ್ ಹೆನ್ರಿಯವರ ಆಶ್ವಾಸನೆಯನ್ನು ಜನರು ನಂಬುವುದುಂಟೇ?

ದುಂದುವ್ಯಯವಾಗುತ್ತಿದೆ—

—ನಮ್ಮ ಶಿಕ್ಷಣಕ್ರಮದಲ್ಲಿ,—ಎಂಬುದಾಗಿ, ಶಿಕ್ಷಣ ಸಪ್ತಾಹದಲ್ಲಿ ಭಾಷಣ ಮಾಡುತ್ತ, ಮೈಸೂರು ದಿವಾನರಾದ ಸರ್ ಮಿರ್ಝಾ ಇಸ್ಮಾಯಿಲರು ಪ್ರಲಾಪಿಸಿದರು. ಹಣ, ಸಮಯ, ಶಕ್ತಿಗಳು ನಿಷ್ಪ್ರಯೋಜಕವಾಗಿ ವಿನಿಯೋಗವಾಗುತ್ತಿವೆಯೆಂದರೆ ಕಾರಣವಿಷ್ಟೆ: ಸೋದ್ದಿಯಂತೆ ಹುಡುಗ—ಹುಡುಗಿಯರು ಶಾಲೆಗಳ ಕಡೆಗೆ ಆಕರ್ಷಿಸಲ್ಪಡುತ್ತಿರುವರು; ಕೆಲವರು ಮಾತ್ರ ಜೀವನಕ್ಕೆ ಮಾರ್ಗವನ್ನು ಕಲ್ಪಿಸಿಕೊಳ್ಳುವರು, ಉಳಿದವರು ನಿರುದ್ಯೋಗದ ಪೀಡೆಯಿಂದ ಆಯುಷ್ಯವನ್ನು ಕಳೆದುಕೊಳ್ಳುವರು. ಪ್ರತಿಯೊಬ್ಬನೂ, ಒಬ್ಬ ಗುಮಾಸ್ತನಾಗಲು, ಸರಕಾರದ ನೌಕರನಾಗಲು—ಶಿಕ್ಷಣದ ಕಡೆಗೆ ಒಲಿದಿರುವನೇ ವಿನಾ—ಜೀವನ ನಿರ್ವಹಣದ ಯೋಗ್ಯ ಕಸಬುಗಳ ಬಗ್ಗೆ ಸಾರ್ಥಕವಾದ ಒಂದು ಮಹದ್ಯೋಜನೆಯು ಎಲ್ಲಿಯೂ ನಡೆದಂತೆ ತೋರುವುದಿಲ್ಲ. ಇದು ಇಂದಿನ ತನಕ ಸಮಸ್ಯೆಯಾಗಿಯೇ ಉಳಿದುದಕ್ಕೆ ಸರಕಾರದವರ ಅಲಕ್ಷ್ಯವು ಎಷ್ಟು ಕಾರಣವೋ ಅಷ್ಟೇ ಪ್ರಜೆಗಳದೂ ಆಗಿದೆ. ಪ್ರತಿಯೊಬ್ಬನೂ 'ಈ ಶಿಕ್ಷಣವು ನಮ್ಮನ್ನು ಎಲ್ಲಿಗೊಯ್ಯುತ್ತಿದೆ?' ಎಂದು ಪ್ರಶ್ನಿಸುವವನು. ಉತ್ತರ ಕೊಡುವವರಾರು?

ಸತ್ತವರಿಗೂ ವಾರಾಂಟಿದೆ

—ಎಂಬುದು ಡಾಕ್ಕದಲ್ಲಿನ ಒಂದು ವಿದ್ಯಮಾನದಿಂದ ತಿಳಿದುಬಂತು. ಅನಿಲಕುಮಾರ ಘೋಷನೆಂಬವನು, ಕ್ರಾಂತಿಕಾರ ಕೂಟದವನೆಂಬ ಸಂದೇಹದಲ್ಲಿ, ಬಂಗಾಳದ ಭಯೋತ್ಪಾದಕರ ಮಸೂದೆಗನುಸಾರ ಸೆರೆಹಿಡಿಯಲ್ಪಡಲು—ವಾರಾಂಟು ಹೊರಟಿತು. ಪೋಲೀಸರು ವಾರಾಂಟು ಹಿಡಕೊಂಡು ಹೋಗಿ ವಿಚಾರಿಸಿದಾಗ, ಘೋಷನು ಕಾಲವಾಗಿ ೧೫ ತಿಂಗಳುಗಳಾದುವೆಂಬ ಉತ್ತರ ಬಂದುದನ್ನು ಕೇಳಿ, ಪೋಲೀಸರಿಗೆ ರಮ್ಯವೆನಿಸಿರಲಿಕ್ಕಿಲ್ಲ. ಘೋಷನು, ನಿವೃತ್ತಿಹೊಂದಿದ ಡಿಸ್ಟ್ರಿಕ್ಟ್ ಮೆಜಿಸ್ಟ್ರೇಟರೊಬ್ಬರ ಮಗನು; ಹದಿನೈದು ತಿಂಗಳ ಹಿಂದೆ ಕಾಲವಾಗಿದ್ದನು. ಆದರೆ ಕಳೆದ ಸೋಮವಾರ ಪೋಲೀಸರಿಗೆ ಆತನು ಬೇಕಾದನು. ಹೋಗಿ ಕೇಳಿದಾಗ ಆ ಉತ್ತರ! ಸತ್ತವನ ಮೇಲೆ ಹೊರಟ ಈ ವಾರಾಂಟಿನ ವಿಷಯವು ಏನನ್ನು ಸೂಚಿಸುತ್ತದೆ? ಸರಕಾರದ 'ಈ 'ಇಂಟೆಲಿಜೆನ್ಸ್ ಬ್ರಾಂಚ್' ಯಾವಾಗಲೂ ತಪ್ಪು ಹೆಜ್ಜೆ ಇಡುವುದಿಲ್ಲವಲ್ಲವೇ?

ವಿದೇಶೀ ಅಕ್ಕಿಯ ಪ್ರಶ್ನೆಯು—

—ಸರಕಾರದ ಸಹಾಯವಿಲ್ಲದೆ ಪರಿಹಾರವಾಗಬಹುದೆಂಬ ಕೆಲವೊಂದು ಚಿಹ್ನೆಗಳು,—ಕಳೆದವಾರ ಪುನಃ ೧೧ ಸಾವಿರ ಗೋಣಿ ಅಕ್ಕಿ ಬಂದಿಳಿದಿದ್ದರೂ—ಸ್ವಲ್ಪ ಆಸೆಯನ್ನು ತೋರುತ್ತಿವೆ. ಸಯಾಮಿನಲ್ಲಿ ಅಕ್ಕಿಯ ಬೆಳೆಯು ಚೆನ್ನಾಗಿಲ್ಲವಂತೆ. ಅದು ಕಾರಣ, ಸಯಾಮಿನವರು ಒಮ್ಮೆ ಅಕ್ಕಿಯನ್ನು ಹಿಂದೂದೇಶಕ್ಕೆ ರಫ್ತು ಮಾಡುವುದನ್ನು ನಿಲ್ಲಿಸಬಹುದು ಎಂದು, 'ಇಂಡಿಯನ್ ಟ್ರೇಡ್ ಜರ್ನಲ್' ಪತ್ರಿಕೆಯ ಅಭಿಪ್ರಾಯ. ಅತ್ತ ಪ್ರಪಂಚದ ಬೇರೆ ಬೇರೆ ಭಾಗಗಳಲ್ಲಿ, ಹವಾಮಾನದ ದೆಸೆಯಿಂದ ಗೋಧಿಯ ಬೆಳೆಯೂ ಬಹುಮಟ್ಟಿಗೆ ಕಡಿಮೆ ಮಾಡಲ್ಪಟ್ಟಿದೆ. ಹಿಂದೂದೇಶದಲ್ಲಿ ಅಕ್ಕಿಯ ಬೆಳೆಯು ಈಗ ಹೆಚ್ಚಿಸಲ್ಪಡುವುದಾದರೆ, ವಿದೇಶೀ ಅಕ್ಕಿಯು ನಿಂತುಹೋಗಲು ಕಾರಣವಾಗುವುದೆನ್ನಬಹುದು.

FRESH CONSIGNMENT ARRIVED.

UNEQUAL QUALITY——————EXCEPTIONAL PRICE.

A TIRE THAT SAVES YOU REPUTATION AND MONEY.

The Canara Public Conveyance Co., Ltd.

MANGALORE.

ನೀಲನಾಗಿಣಿಯು ನಿಂದೆಯ ನಾಗಿಣಿಯಾಗಿರುವಳು!

ನೀವೆಲ್ಲರೂ ಬಲ್ಲಿರಿ—ಆಕೆಯ 'ಪೂರ್ವಾಶ್ರಮದ' ಹೆಸರು ಮಿಸ್ ಕ್ರೇಗ್ ಕುಕ್ ಎಂದು. ಹಿಂದೂದೇಶಕ್ಕೆ ಬಂದು, ಗಾಂಧಿಜಿಯವರ ಆಶ್ರಮವನ್ನು ಸೇರಿ, ಅಲ್ಲಿ 'ನೀಲನಾಗಿಣಿ' ಎಂಬ ನಾಮಧೇಯವನ್ನು ಧರಿಸಿ, ಹರಿಜನ ಕಾರ್ಯಕ್ಕೆಂದು ಊರೂರು ತಿರುಗ ಹೊರಟು,—ಅನೇಕ ಹಿಂದೂ ಯುವಕರನ್ನು ಆಕರ್ಷಿಸಿ, ಅವರೊಂದಿಗೆ ಅಪ್ರಾಕೃತ ಸ್ನೇಹ ಬೆಳೆಸಿ, ತನ್ನ ದೇಹವನ್ನು ಸ್ವೇಚ್ಛೆಯಿಂದ ವಿಕ್ರಯಿಸಿ, ಆ ಮೇಲೆ ಪಶ್ಚಾತ್ತಾಪವನ್ನು ಸೂಚಿಸಿ ಗಾಂಧಿಜಿಯವರಿಗೆ ಪತ್ರ ಬರೆದು, ಪುನಃ ಕುಕರ್ಮದ ನರಕಕ್ಕೆ ದುಮ್ಮಿಕ್ಕಿ, ವ್ಯಾಧಿಪೀಡಿತಳಾಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದು, ಕೊನೆಗೆ ಹಿಂದೂದೇಶವು ಅಸಹನೀಯವೆನಿಸಿದಾಗ, ಅಮೇರಿಕಾನರ ಸಹಾಯ ಪಡೆದೋ ಮತ್ತಾರ ಪ್ರಯತ್ನದಿಂದಲೋ ಇಲ್ಲಿಯ ಕರಾವಳಿಯನ್ನು ಬಿಟ್ಟು ಅಮೇರಿಕಕ್ಕೆ ತೊಲಗಿಹೋದ ಪ್ರಖ್ಯಾತೆಯೇ ಆಕೆ. ಅಮೇರಿಕಕ್ಕೆ ತಲಪಬೇಕಾದರೆ ಒಬ್ಬ ಬಡ ಯುವಕನನ್ನೂ ತನ್ನ ಮೋಹಪಾಶದಲ್ಲಿ ಸಿಲುಕಿಸಿ, ಸ್ವೇಚ್ಛೆಯಾಗಿ ಆನಂದಿಸಿ, ವಿವಾಹವಾಗಿ, ಕೆಲವೇ ದಿನಗಳಲ್ಲಿ ದಾಂಪತ್ಯ ವಿಚ್ಛೇದ ಮಾಡಿಕೊಂಡಳು. ಈಗ,—ಆಕೆಗೆ ವೃತ್ತಿಯಿಲ್ಲ. ಗಾಂಧಿಜಿಯವರನ್ನು ಅಪಹಾಸ್ಯದಿಂದ ವಿವರಿಸಿ ಅಮೇರಿಕದ ಪತ್ರಿಕೆಗಳಿಗೆ ಲೇಖನಗಳನ್ನು ಬರೆಯುತ್ತಿರುವಳು. ಆ ಲೇಖನವೊಂದರ ಸಾರಾಂಶವನ್ನು, ಅವಳ ಮಾತುಗಳಲ್ಲಿ ಇಲ್ಲಿ ಕೊಡುವೆವು.

"ಗಾಂಧಿಜಿಯವರ ಯಾವ ಭಾವಚಿತ್ರವನ್ನು ನೋಡಿದರೂ ಅವರ ಆ ಕುರೂಪವು ಪೂರ್ಣವಾಗಿ ಮನವರಿಕೆಯಾಗದು. ಕೃಶವಾದ ದೇಹ ಅವರದು; ಎಲುಬುಗಳು ಚರ್ಮದ ಮೇಲೆ ಎದ್ದು ನಿಂತಂತಿವೆ; ಮೈಯೆಲ್ಲ ನಿರಿಗೆ; ನೂರು ರಾತ್ತಲಗಳಿಗಿಂತಲೂ ಕಡಿಮೆ ಭಾರ. ಅವರ ಕಿವಿಗಳು ನಮ್ಮ ಸಕ್ಕರೆಯ ಪಾತ್ರದ ಹಿಡಿಯಂತಿವೆ. ಹಲ್ಲುಗಳೆಷ್ಟೋ ಉದುರಿವೆ. ನಾನು ಬಂದಾಗ, ಅವರು ನನ್ನನ್ನು ಕಂಡು ನಸುನಕ್ಕರು. ಬಹಳ ಆಕರ್ಷಕ ನಗು ಅವರದು ಎಂದು ಹೆಸರು ಹೊಂದಿದೆ. ಆದರೆ ನನಗೆ ಮಾತ್ರ ಆ ನಗು ಕಂಡು ಅಸಹನೀಯವೆನಿಸಿತು."

"ಆದರೆ, ಅವರ ಮಾತುಗಳಲ್ಲಿ ಒಂದು ಬಗೆಯ ಸವಿಯಿದೆ. ಅವರು ನಗುತ್ತ, ವಿನೋದಪರವಾಗಿ ಮಾತಾಡುತಿದ್ದಂತೆ, ನಾನು ಅವರ ಕಾಯಕುರೂಪವನ್ನು ಮರೆತುಬಿಟ್ಟೆ. ಅವರ ಮಾತುಗಳಿಗೆ ಮರುಳಾಗಿ ಹೋದೆ.

"ಕೆಲಕಾಲದ ನಂತರ ನಾನು ಬೆಂಗಳೂರಿಗೆ ಹೋಗಿ, ಅಲ್ಲಿ ಅಸ್ಪೃಶ್ಯರ ಒಂದು ಹಳ್ಳಿಯಲ್ಲಿ, ಕೆಲವು 'ಸ್ನೇಹಿತ'ರೊಂದಿಗೆ ಉಳಕೊಂಡೆ. ಅಲ್ಲಿ ನನಗೆ ಕಾಯಿಲೆಯಾಯಿತು. ನಾನು ಅಸ್ಪೃಶ್ಯರ ಹಳ್ಳಿಗೆ ಹೋದುದೇಕೆಂದು ಗಾಂಧಿಜಿಯವರು ಪ್ರಶ್ನಿಸಿ ಪತ್ರ ಬರೆದರು. ಮೋಸ-ಕುತಂತ್ರಗಳ ದುರಾಚಾರದಿಂದ ದೂರವಾಗಲು ಹೋದುದೆಂದು ಉತ್ತರ ಬರೆದೆ. 'ದುರಾಚಾರ'ವೆಂದು ನಾನು ಬರೆದ ಒಂದು ಶಬ್ದವೇ ಅಷ್ಟೊಂದು ಕ್ಷೋಭೆಗೆ ಕಾರಣವಾಯಿತು. ಆ ಪತ್ರವು 'ಹರಿಜನ' ಪತ್ರಿಕೆಯಲ್ಲಿ ಪ್ರಕಟಿಸಲ್ಪಟ್ಟಿತು. ಅನಂತರ ಎಲ್ಲ ಕಡೆಗಳಿಂದಲೂ ನಾನಾ ಪ್ರಶ್ನೆಗಳು; ಎಲ್ಲವೂ ನನ್ನನ್ನು ನೋಯಿಸುವ ಪ್ರಶ್ನೆಗಳು. ಖಿತಾಳಿ ನಾನು ಮೌನವ್ರತಧಾರಣೆಮಾಡಿದೆ.

"ಗಾಂಧಿಜಿಯವರು ಒಂದು ಕೌಪೀನವನ್ನು ಮಾತ್ರ ಧರಿಸುವರೆಂಬುದು ನಿಜ. ಅವರು, ಜೀವನದ ಸವಿಯನ್ನುಂಡು ಮೊದಲೇ ತೀರಿದೆ. ಲಂಡನಿನಲ್ಲಿ ವಿದ್ಯಾರ್ಥಿಯಾಗಿರುವಾಗ ರಾತ್ರಿಕಾಲದ ವಿನೋದಗಳೆಷ್ಟಿವೆಯೋ ಅವೆಲ್ಲ ಅವರಿಂದ ಅನುಭವಿಸಲ್ಪಟ್ಟಿವೆ. ಇನ್ನು ವೃದ್ಧಾಪ್ಯ ಪ್ರಾಪ್ತವಾಗಿದೆ. ಈಗ, ಅವರು ತಲೆಗಿಂಬುಗಳ ರಾಶಿಯ ನಡುವೆ ಕುಳಿತುಸುಖಿಸುತ್ತಾರೆ. ಸುಮಾರು ಪೂರ್ವಾಹ್ನ ೧೧ ಘಂಟೆಗೆ ಅವರನ್ನು ಸ್ತ್ರೀಯರು ಆವರಿಸಿ, ಮೈಗೆ ಎಣ್ಣೆ ತಿಕ್ಕಿ ಮಗುವಿಗೆ ಸ್ನಾನ ಮಾಡಿಸಿದಂತೆ ಮೀಯಿಸುವರು. ಇದಕ್ಕಾಗಿ ನಾನು ಮುಂದೆ ತಾನು ಮುಂದೆ ಎಂದು ಮುಂದೆ ಜಗ್ಗಿ ಬರುತ್ತಿರುವ ಅನೇಕ ಜವ್ವನೆಯರಿರುವರು. ಸರ್ ಎಡ್ಮಂಡ್ ಸ್ಲೇಡರವರ ಮಗಳಾದ ಮಿಸ್ ಮೆಡಲಿನ್ ಸ್ಲೇಡಳು (ಮೀರಾಬೆನ್) ಗಾಂಧಿಜಿಯವರ ವಸ್ತ್ರಗಳನ್ನು ನಿತ್ಯವೂ ತಾನೇ ಒಗೆಯುತ್ತಾಳೆ. ಗಾಂಧಿಜಿಯವರ ಸ್ನಾನಕಾಲದಲ್ಲಿ ಇವಳೇ ನಾಯಿಕೆ. ಆಶ್ರಮವನ್ನು ಬಿಟ್ಟು ಹೋಗುವಂತೆ ನನ್ನನ್ನು ಒತ್ತಾಯಪಡಿಸಿದವರು ಗಾಂಧಿಜಿಯವರೇ.

"ನನಗೆ ಹಿಡಿದುದು ಹುಚ್ಚೋ ಏನೋ! ನಾನೂ ಆಗಾಗ ಉಪವಾಸ ವ್ರತವನ್ನೂ ಮೌನವ್ರತವನ್ನೂ ಆಚರಿಸುತ್ತಿದ್ದೆ.

"ಗಾಂಧಿಜಿಯವರು ತಮ್ಮ ಕಾರ್ಯದರ್ಶಿಗಳಿಂದ—ಜಗತ್ತಿನ ನಾನಾ ಭಾಗಗಳಲ್ಲಿರುವ ತನ್ನ ಕಲ್ಪನೆಯ ಡಾಕ್ಟರುಗಳಿಗೆ—ಅವರ ಮಕ್ಕಳಿಗೆ ಹಿಡಿದ ವ್ಯಾಧಿಯನ್ನು ತಾನು ಗುಣಪಡಿಸಲಾರೆನೆಂದು—ಕಲ್ಪಿತ ಪತ್ರಗಳನ್ನು ಬರೆಸುವುದನ್ನು ನೋಡಿದ್ದೇನೆ. ಅಮೇರಿಕದ ಹುಡುಗಿಯರಿಗೆ ಕೊಡಲ್ಪಡುವ ಧಾರ್ಮಿಕ ಶಿಕ್ಷಣದ ಕುರಿತಾಗಿ ಟೀಕಿಸುತ್ತ ಗಾಂಧಿಜಿಯವರು—'ಅವರು ಸನ್ಯಾಸಾಶ್ರಮವನ್ನು ಸೇರಿದರೆ ಹುಚ್ಚರಾಗುವರು' ಎಂದು ಬರೆಯುತ್ತಾರೆ. 'ಪ್ರಾಯಕ್ಕೆ ಬಂದ ಯಾವ ಹುಡುಗಿಯೂ ತನ್ನ ಇಚ್ಛೆಯಂತೆ ಯಾವನನ್ನಾದರೂ ಸೇರಲು ಮನಸ್ಸಿದ್ದರೆ, ಆಶ್ರಮದಿಂದ ಬೇಕಾದಾಗ ಹೋಗಲು ಸ್ವತಂತ್ರೆ ಇರುವಳು' ಎಂದು ಆಶ್ರಮವಾಸಿಗಳಿಗೆ 'ಅವರು' ಬೋಧಿಸಿದ್ದು—ನಾನು ಬೆಂಗಳೂರಿಂದ ಮರಳಿದ ನಂತರ!

"ಆ ನಂತರ ನಾನು ಆಶ್ರಮವನ್ನು ಬಿಟ್ಟು ಢಿಲ್ಲಿಗೆ ಓಡಿಹೋದೆ. ಅಲ್ಲಿಂದ ಕಲ್ಕತ್ತೆಗೆ ವರ್ಗಾಯಿಸಲ್ಪಟ್ಟೆ. ಕಲ್ಕತ್ತೆಯಲ್ಲಿ ಒಂದು ಕನ್ವೆಂಟಿನಲ್ಲಿದ್ದೆ. ಅಲ್ಲಿಂದ ಅಮೇರಿಕದ ರಾಯಭಾರಿಗಳು ನನ್ನ ಪ್ರಯಾಣದ ವ್ಯವಸ್ಥೆ ಮಾಡಿ, ಅಮೇರಿಕಕ್ಕೆ ಕಳುಹಿಸಿಕೊಟ್ಟರು. ಹೋಗುವಾಗ, ಮೈಸೂರಿನ ಪತ್ನಿಯವರು ನನಗೆರಡು 'ಕೇಕು'ಗಳನ್ನು ಕಳುಹಿದ್ದರು."

ನೀಲನಾಗಿಣಿಯ ಈ ಲೇಖನದೊಂದಿಗೆ, ಗಾಂಧಿಜಿಯವರನ್ನು ಸ್ತ್ರೀಯರು ಸುತ್ತುಗಟ್ಟಿ ಮೀಯಿಸುವ ಒಂದು ಚಿತ್ರವೂ ಪ್ರಕಟವಾಗಿದೆ.

ನಾಗಿಣಿಯು ನಾಗಿಣಿಯಂತೆ, ಯಾವುದೋ ಒಂದು ಕೋಪದಿಂದ ಎಲ್ಲಿಯೋ ಕಚ್ಚಿರುವಳು. ಆದರೆ, ಆ ವಿಷವು ಮಾತ್ರ ಯಾರನ್ನೂ ಬಾಧಿಸದು. ಆಕೆಯ ಲೇಖನದಲ್ಲಿ ಸತ್ಯಾಂಶವೆಷ್ಟಿರಬಹುದೆಂದು ಹಿಂದೂದೇಶದವರೆಲ್ಲರೂ ಬಲ್ಲರು. ವಿದೇಶೀಯರೂ ಹಲವರು ಸುಲಭವಾಗಿ ಮನಗಾಣಬಹುದು. ಇಂತಹ ನಿಂದಾಸ್ಪದ ಲೇಖನಗಳಿಗೆ ಎಡೆಕೊಡಲು ಉತ್ಸುಕರಾಗಿರುವ ಅಮೇರಿಕದ ಪತ್ರಿಕೆಯವರಿಗೆ ನಾಗಿಣಿಯಂತಹ ಒಂದು ಯಂತ್ರವು ದೊರೆತರೂ; ಆಕೆಯ ಈ ಲೇಖನವನ್ನು—ಹಿಂದೂದೇಶದ ವಿಷಯವಾಗಿ ಏನೂ ಅರಿಯದ ಅಮೇರಿಕಾನರೂ ಕೊಂಚ ನಂಬುವರಾದರೂ—ಅದರ ಮಿಥ್ಯದ ಮಿರುಗು ಶೀಘ್ರದಲ್ಲಿ ಮುಸುಕಾಗಿ ಸತ್ಯಪ್ರಕಾಶವು ಗೋಚರಿಸದಿರದೆಂದಿಷ್ಟೇ ಟೀಕೆಯಿಂದ ಈ ಲೇಖನವನ್ನು ಇಲ್ಲಿ ಮುಗಿಸುವೆವು.

"ಡೆಟಿನ್ಯೂಗಳ ಮಸೂದೆ."

ಕ್ರಿಮಿನಲ್ ಲೋ ಎಮೆಂಡ್‌ಮೆಂಟ್ ಮಸೂದೆಯಲ್ಲಿ ಭುಕ್ತವಾಗಿರುವ ಈ ಮೇಲಿನ ಹೆಸರಿನ ಮಸೂದೆಯೊಂದು ಎಸೆಂಬ್ಲಿಯಲ್ಲಿ ಸರಕಾರದವರಿಂದ ಎಸೆಬ್ಲಿ ಮುಂದೆ ತರಲ್ಪಟ್ಟು ಮಂಜೂರಾಯಿತು. ಕೆಲ ಮಂದಿಗಳು ಈ ಮಸೂದೆಯನ್ನು ಸಮರ್ಥಿಸಿದರು; ಕೆಲ ಮಂದಿಗಳು ಮಾತ್ರ ವಿರೋಧಿಸಿದವರು!

ಮಸೂದೆಯು, ಭಯೋತ್ಪಾದಕ ಚಳವಳಿಗಳನ್ನು ನಿರ್ಮೂಲಿಸುವ ಸರಕಾರದ ಅಸ್ತ್ರಗಳಲ್ಲೊಂದಾದರೂ—ಡೆಟಿನ್ಯೂಗಳಿಗೆ ಇದರಿಂದ ಹೆಚ್ಚಿನ ಬಾಧಕವಾಗದೆಂದೂ, ಇದು ಶಾಶ್ವತವಾಗಿ ಸರಕಾರದ ಶಾಸನ ಗ್ರಂಥದಲ್ಲುಳಿಯುವಂತಿಲ್ಲವೆಂದೂ ಗೃಹ ಮಂತ್ರಿಗಳು ಸವಿಯಾಗಿ ಮಾತಾಡಿದರು. ಶ್ರೀ। ಎಸ್. ಸಿ. ಮಿತ್ರರೇ ಮೊದಲಾದವರು ಮಸೂದೆಯನ್ನು ವಿರೋಧಿಸುತ್ತ—"ಬ್ರಿಟಿಷರ 'ನ್ಯಾಯ'ವೆಂಬುದು ಸ್ವಲ್ಪ ಉಳಿದಿದೆಯಾದರೆ ಈ ಮಸೂದೆಯನ್ನು ಮಂಜೂರು ಮಾಡುವುದರಿಂದ ಅಳಿಸಿ ಹೋದಂತಾಗುವುದು. ಭಯೋತ್ಪಾದಕ ಚಳವಳಿಯನ್ನು ವಜ್ರಮುಷ್ಟಿಯಿಂದ ನಿರ್ಮೂಲಗೊಳಿಸಲಾಗುವುದಿಲ್ಲ. ಜನರ ಹಸಿವು, ಆರ್ಥಿಕ ದುರವಸ್ಥೆ, ಮೇಲಾಗಿ ದಬ್ಬಾಳಿಕೆಯ ಕಾನೂನುಗಳು,—ಇವುಗಳಿಂದಲೇ ಭಯೋತ್ಪಾದಕರ ಚಳವಳಿವು ಉಜ್ವಲಿಸುತ್ತಿದೆ" ಎಂದು ವಿವರಿಸಿದರು. ಇವರನ್ನನುಸರಿಸಿ ಅನೇಕ ಸದಸ್ಯರು ಮಸೂದೆಯನ್ನು ಟೀಕಿಸಿ ಭಾಷಣ ಮಾಡಿದರು. ಏನಾದರೂ—ಅದು ಮಂಜೂರಾಗಿಯೇ ಹೋಯಿತು.

[ಭಯೋತ್ಪಾದಕ ಚಳವಳಿಯಲ್ಲಿ ಸಂಬಂಧವಿದ್ದವರೆಂದು ಸಂದೇಹ ಕಂಡವರನ್ನು ಕೈದುಮಾಡಿ, ವಿಚಾರಣೆಯಿಲ್ಲದೆ ಅನಿಯಮಿತ ಅವಧಿಗೆ ಸೆರೆಯಲ್ಲಿರಿಸುವರು. ಇಂಥಹ ದುರ್ಭಾಗಿಗಳನ್ನು 'ಡೆಟಿನ್ಯು' ಎಂದು ಕರೆಯುವರು.]

ಮಹಾತ್ಮಾಜಿಯವರ ಉಪವಾಸ.

ಅತೀ ಉಗ್ರದೀಕ್ಷೆಯದು—ಉಪವಾಸ! ಆದರೆ, ಉಗ್ರವಾದುದನ್ನು ಸಹಿಸುವ ಎದೆಗಾರಿಕೆಯುಳ್ಳವರಲ್ಲವೇ ಅವರು ಮಹಾತ್ಮರು!

ಅಜಮೀರದಲ್ಲಿ ಪಂಡಿತ ಲಾಲನಾಥರನ್ನು 'ಸುಧಾರಕ' ಹೆಸರಿನವನೊಬ್ಬನು ಚೆನ್ನಾಗಿ ಬಡಿದನು. ಲಾಲನಾಥರ ತಲೆಯೊಡೆಯಿತು. 'ಸನಾತನಿ'ಯು ಹರಿಜನ ಚಳವಳಿಕ್ಕೆ ವಿರೋಧಿಯಾದ ಮಾತ್ರದಿಂದ 'ಸುಧಾರಕ'ರಿಗೆ ಶತ್ರುವಾಗುವನೇ? ಒಂದೇ ಆರ್ಯಾವರ್ತದಲ್ಲಿ ಹುಟ್ಟಿದವರು ನಾವು; ಸನಾತನಿಯಾದರೇನು, ಸುಧಾರಕರಾದರೇನು,—ಅಭಿಪ್ರಾಯ ಭೇದವಿದ್ದ ಮಾತ್ರಕ್ಕೆ ಒಬ್ಬರನ್ನೊಬ್ಬರು ಹಗೆಯಿಂದ ಹಿಂಸಿಸುವಷ್ಟು ಮೂರ್ಖತನ ತೋರಬೇಕೆ? ತಾವು ಯಾವ ಕಾರ್ಯವನ್ನು ಈಗ ತಮ್ಮ ಜೀವನದ ಧ್ಯೇಯವಾಗಿ ಸ್ವೀಕರಿಸಿರುವರೋ ಆ ಕಾರ್ಯದಲ್ಲಿ ಸಹಾಯಕನಾಗಲು ಬಂದ ಸ್ವಯಂಸೇವಕನೊಬ್ಬನು ಲಾಲನಾಥರ ಮೇಲೆ ಕೈಮಾಡಿದನೆಂಬುದನ್ನು ಕೇಳಿ ಮಹಾತ್ಮರ ಅತ್ಯಕ್ಕಾದ ವೇದನೆಯನ್ನವರು ಏಳು ದಿನಗಳ ಉಪವಾಸ ದೀಕ್ಷೆಯಿಂದ ನೀಗಿಕೊಳ್ಳಲು ನಿರ್ಧಾರ ಮಾಡಿ, ಉಪವಾಸವನ್ನು ಆರಂಭಿಸಿದರು. ನಿರ್ವಿಘ್ನವಾಗಿ ಉಪವಾಸ ವ್ರತವು ಕೊನೆಗಂಡಿತೆಂಬುದು ಸಂತೋಷಕರ.

ಮೊದಲನೆ ದಿನ:—(ತಾ. 7–8–'34.)

ಮೊದಲನೆ ದಿನವನ್ನು ಮಹಾತ್ಮಾಜಿಯವರು ಹೆಚ್ಚಿನ ಪ್ರಯಾಸವಿಲ್ಲದೆ ಕಳೆದರು. ತಮ್ಮ ಪತ್ರವ್ಯವಹಾರದ ಕೆಲಸವನ್ನು ನಿತ್ಯದಂತೆ ತಾವೇ ಮಾಡಿ ಮುಗಿಸಿದರು. ಅಪರಾಹ್ನ ೨ ತಾಸುಗಳ ನಿದ್ದೆಯಾಯಿತು. ದೇಹಕ್ಕೆ ಶ್ರಮಕೊಡುವ ಮಹತ್ವದ ಕೆಲಸವನ್ನು ಈ ದಿನ ಮಾಡಲಿಲ್ಲ. ಅಗತ್ಯವಿದ್ದಷ್ಟು ನೀರನ್ನು ಕುಡಿದರು. ಬಳಿಯಲ್ಲಿದ್ದವರಿಂದ ರಾಮಾಯಣ ಮತ್ತು ಗೀತೆಯನ್ನೋದಿಸಿ ಕೇಳಿದರು. ಹವೆಯು ತಂಪಾಗಿದ್ದುದು ಉಪವಾಸವನ್ನು ನಿರಾಯಾಸವಾಗಿ ಕಳೆಯಲು ಸಹಕಾರಿಯಾಗುವುದಂತೆ.

ಎರಡನೆ ದಿನ:—(ತಾ. 8–8–'34.)

ಡಾಕ್ಟರರು ಸಾಯಂಕಾಲ ೫ ಘಂಟೆಗೆ ಮಹಾತ್ಮಾಜಿಯವರನ್ನು ಪರೀಕ್ಷಿಸಿ, ದೇಹಸ್ಥಿತಿಯು ತೃಪ್ತಿಕರವಾಗಿರುವುದೆಂದು ತಿಳಿಸಿರುತ್ತಾರೆ. ನಾಡಿಬಡಿತವು ಮೊದಲನೆ ದಿನಕ್ಕಿಂತಲೂ ಈ ದಿನ ಕ್ರಮವಾಗಿದೆ. ಉಪವಾಸವು ಮಹಾತ್ಮಾಜಿಯವರಿಗೆ ದಣಿವಾರಿಸುವಂತಾಯಿಲ್ಲವೆ ದಣುವನ್ನು ಹೆಚ್ಚಿಸುವಂತಾಗಲಿಲ್ಲವೆಂಬಂತಿದೆ. ಈ ದಿನ ಮಹಾತ್ಮರ ಚರ್ಯೆಯು ಆಯಾಸದ ಚಿಹ್ನಗಳೇನನ್ನೂ ತೋರುವುದಿಲ್ಲ. ಕಳೆದ ರಾತ್ರೆ ಸುಖ ನಿದ್ರೆಯಾಗಿದೆ. ೩೨ ಔನ್ಸು ನೀರನ್ನು ಸೇವಿಸಿರುವರು. ಮುಖ ಪ್ರಕ್ಷಾಳನಕ್ಕೆ ಯಾರ ಸಹಾಯವನ್ನೂ ಅಪೇಕ್ಷಿಸುವುದಿಲ್ಲ. ಸ್ನಾನಗೃಹಕ್ಕೂ ಹಟದಿಂದ ತಾವೇ ನಡೆದು ಹೋದರು. ಸರೋಜಿನಿದೇವಿಯವರು 'ಕಷ್ಟಾನುಭವದ ಕಂದರಕ್ಕೆ ನನ್ನ ಪ್ರೇಮವೂ ನಿಮ್ಮನ್ನು ಜತೆಗೂಡಿ ನಡೆಯುತಿದ್ದು, ನಿಮ್ಮನ್ನು ಪ್ರಕಾಶಮಾನವಾದ ವಿಜಯ ಶಿಖರಕ್ಕೆತ್ತುವುದು' ಎಂಬ ಸಂದೇಶವನ್ನು ಕಳುಹಿರುವರು.

ಮೂರನೆ ದಿನ:—(ತಾ. 9–8–'34.)

ನಿತ್ಯದಂತೆ ಮುಂಜಾನೆ ೪ ಘಂಟೆಗೆ ಎದ್ದರು. ಮುಖ ಪ್ರಕ್ಷಾಳನೆ, ಪ್ರಾರ್ಥನೆಗಳಾದುವು. ಆ ಮೇಲೆ ಕೊಂಚ ನಿದ್ದೆ. ಒಂದೆರಡು ತಾಸಿನ ಮೇಲೆ ಸ್ನಾನ.

ಮಧ್ಯಾಹ್ನ ಸ್ವಲ್ಪ ವಾಚನವಾಯಿತು. ಕಾಕಾ ಕಾಲೇಲಕರರ ಚಿರಂಜೀವಿಯವರು ರಾಮಾಯಣ ಮತ್ತು ಗೀತೆಯಿಂದ ಕೆಲವಂಶವನ್ನು ಮಹಾತ್ಮಾಜಿಯವರ ಬಗ್ಗೆ ಓದಿ ಹೇಳಿದರು.

ಶ್ರೀಮತಿ ಜಾನಕೀಬಾಯಿ ಬಜಾಜರೂ (ಜಮ್ನಾಲಾಲರ ಪತ್ನಿ) ಅಮೃತಲಾಲ ಠಕ್ಕರರೂ ಜೆಳಿಗ್ಗೆ ಅವರೊಡನೆ ಇರುತ್ತಾರೆ.

ಈ ದಿನ ಕೊಂಚ ಓಕರಿಕೆ ತಲೆದೋರಿತು. ಡಾಕ್ಟರರು ಪರೀಕ್ಷೆಮಾಡಿ, ಹೃತ್ಕೋಶದ ಸ್ಥಿತಿಯು ತೃಪ್ತಿಕರವಾಗಿದೆಯೆಂದಿರುವರು. ಅವರ ಕೊಠಡಿಗೆ ಹೊರಗಿನವರಾರೂ ಪ್ರವೇಶಿಸದಂತೆಯೂ, ಯಾರೂ ಮಾತಾಡದಂತೆಯೂ ಕಟ್ಟಪ್ಪಣೆ ಇದೆ.

ಡಾ। ಅನ್ಸಾರಿಯವರೂ, ಸರ್ ತೇಜಬಹದ್ದೂರ್ ಸಪ್ರೂಗಳವರೂ ರವೀಂದ್ರನಾಥ ಠಾಕೂರರೂ ತಮ್ಮ ಪ್ರೇಮದ ಸಂದೇಶಗಳನ್ನು ಕಳುಹಿರುವರು.

ನಾಲ್ಕನೆ ದಿನ (ತಾ. 10–8–1234.)

ಬೆಳಗ್ಗೆ ಸ್ವಲ್ಪ ಓಕರಿಕೆಯಾದಂತಾಯಿತು. ಆದರೆ, ಪುನರಾವೃತ್ತಿಯಾಗಲಿಲ್ಲ. ಸುಖನಿದ್ರೆಯಾಗಿದೆ. ಮೈಯ ಕಾಖ ೯೭.೮ ಡಿಗ್ರಿ ಇದೆ. ನಾಡಿ ಬಡಿತ ೬೭. ಸುಮಾರು ೪೦ ಔನ್ಸು ನೀರು ಕುಡಿದರು; ೩೦ ಕಾಳುಗಳಷ್ಟು ಸೋಡಾ ಮತ್ತು ೫ ಔನ್ಸು ಉಪ್ಪನ್ನೂ ಸೇವಿಸಿರುವರು.

ಐದನೇ ದಿನ:—(ತಾ. 11–8–'34)

ಗಾಂಧಿಜಿಯವರು ಇಂದು ಕೂಡ ವಿಶೇಷ ನಿಶ್ಯಕ್ತರಾದಂತೆ ಕಂಡು ಬರಲಿಲ್ಲ. ಯಾರ ಸಹಾಯವೂ ಇಲ್ಲದೆ ತಾವೇ ಹಾಸಿಗೆಯಲ್ಲಿ ಎದ್ದು ಕುಳಿತುಕೊಳ್ಳ ಬಲ್ಲವರಾಗಿದ್ದರು. ಸ್ನಾನವನ್ನು, ಸ್ನಾನಗೃಹಕ್ಕೆ ಹೋಗಿಯೇ ಮಾಡಬೇಕೆಂದು ಅವರ ಹಟವಿತ್ತಾದರೂ ಡಾಕ್ಟರರು ಬಿಡಲಿಲ್ಲ. ಹಾಸಿಗೆ ಬಳಿಗೆ ಒಂದು ದೊಡ್ಡ 'ಟಬ್ಬ'ನ್ನು ತಂದು, ಅಲ್ಲೇ ಸ್ನಾನ ಮಾಡಿಸಲಾಯಿತು. ಗಾಂಧಿಜಿಯವರ ಭಾರವಿಂದು 97 ರಾತ್ತಲಗಳಷ್ಟು ಇದೆ. ಶ್ರೀಮತಿ ಕಸ್ತೂರಿಬಾಯಿಯವರು ಬಳಿಯಲ್ಲೇ ಇದ್ದು, ಪತಿಯ ಆರೈಕೆ ನೋಡಿಕೊಳ್ಳುತ್ತಿರುವರು.

(೧೦ನೇ ಪುಟಕ್ಕೆ ಮುಂದುವರಿದಿದೆ.)

ಲೋಧ್ರ

ಸುಪ್ರಸವಕ್ಕಾಗಿ ದಿವ್ಯ ಟಾನಿಕ್.

ಸ್ತ್ರೀಯರಿಗೊಂದು ಮಹಾ ವರ.

ಯಾವ ತರದ ಅಥವಾ ಎಲ್ಲಾ ತರದ ಮುಟ್ಟು ದೋಷ, ಮುಟ್ಟಾಗುವುದರಲ್ಲಿ ನೋವು, ಅಕ್ರಮ ತರದ ಮತ್ತು ಮುಟ್ಟಾಗದಿರುವಿಕೆ, ಬಿಳಿ ಸೆರಗು, ಗರ್ಭಕೋಶದ ದೋಷ ಅಶುದ್ಧ ಮುಟ್ಟು, ಬಂಜೆತನ, ಸೂತಿಕಾವಾಯು, ಅಶುದ್ಧ ರಕ್ತ, ಮೇರೆ ದಾಟಿ ಅಥವಾ ಬೇಕಾದಷ್ಟು ಮುಟ್ಟಾಗದಿರುವುದು, ಸ್ತ್ರೀಯರ ಅಂಗಾಂಗಗಳ ಇನ್ನಿತರ ಅನೇಕಾನೇಕ ರೋಗಗಳುಳ್ಳ ಸ್ತ್ರೀಯರನ್ನು ಈ ಔಷಧಿಯು ಸಂಪೂರ್ಣ ಗುಣಗೊಳಿಸಿರುತ್ತದೆ.

ಲೋಧ್ರ

ಎರಡು ಸೈಜಿನಲ್ಲಿ ದೊರೆಯುತ್ತದೆ. ರೂ. 8 ಮತ್ತು 1-10-0

ಕೇಸರಿ ಕುಟೀರಂ

ಇಂಡಿಯನ್ ಕೆಮಿಸ್ಟ್ಸ್ ಮತ್ತು ಡ್ರಗಿಸ್ಟ್ಸ್, ಎಗ್ಮೋರ್, ಮದರಾಸು,

Sole Agents for West Coast and North Kanara:—

Wanted Agents in Principal Towns· ಪೊಪ್ಯುಲರ್ ಸ್ಟೋರ್ಸ್,

For terms Apply to:—POPULAR STORES, Mangalore. ರಥಬೀದಿ ಮಂಗಳೂರು.

WE HOLD IN STOCK OF

English into Kanarese Teacher
Hindi into Kanarese Teacher
Marathi into Kanarese Teacher
Marathi into Gujarathi Teacher
Novels and well known Dramas in Hind. and all sorts of books for Schools and Colleges.

Wanted Agents and Canvassors throughout Karnatak districts.

Apply for full particulars with 1½ Annas Stamp:—

THE MANAGER
The National Kanara
News Agency
SIR PHIROJSHA METHA ROAD,
Fort Bombay

ಕ್ಷಯಕ್ಷೀಣಾದಿಗಳಿಗೆ

ಚ್ಯವನಪ್ರಾಶಾವ ಲೇಹ.

ಪ್ರಸೂತಿ ರೋಗಾದಿಗಳಿಗೆ

ದಶಮೂಲಾರಿಷ್ಟ.

(ಕಸ್ತೂರಿ ಮಿಶ್ರಣ)

ಸಮಸ್ತ ವಾತರೋಗಗಳಿಗೆ

ಮಹಾನಾರಾಯಣ ತೈಲ.

ಶ್ರೀ ರಾಮಕೃಷ್ಣ ಧರ್ಮವೈದ್ಯಾಶ್ರಮ ಸಂಘ, ಡೊಂಗರಕೇರಿ ರಸ್ತೆ, ಮಂಗಳೂರು.

++ ++

ಫಲಸಾರಯುಕ್ತ ಟೋನಿಕ್.

ಕಿತ್ತಳೆ ಮತ್ತು ಮಹಾಫಲ ಹಣ್ಣುಗಳ ಸಾರದೊಂದಿಗೆ ಎಲ್ಲ ಬಗೆಯ ಲವಣಗಳನ್ನೂ (ಶುದ್ಧ ದೇಶೀ) ಮೂಲಿಕೆಗಳನ್ನೂ ಸೇರಿಸಿ ತಯಾರಿಸಲಾದುದು. ಸೇವಿಸಲು ರುಚಿಕರ. ಅಜೀರ್ಣ, ಮಲಬದ್ಧತೆ, ಆಮವಾತ ಇತ್ಯಾದಿಗಳನ್ನು ಹೋಗಲಾಡಿಸುವುದು. ಹಸಿವನ್ನು ಹೆಚ್ಚಿಸಿ, ರಕ್ತಶುದ್ಧಿಯನ್ನುಂಟುಮಾಡುತ್ತದೆ. 12 ಸಾರಿ ಸೇವಿಸುವ ಬಾಟ್ಲಿಯ ಕ್ರಯ ರೂ. 1 (ಒಂದು ಮಾತ್ರ).

ಮಿನರಲ್ ಟೋನಿಕ್ ಮಾತ್ರೆಗಳು.

ರಕ್ತ ಶುದ್ಧಿಗೂ ವೃದ್ಧಿಗೂ—ಉತ್ತಮವಾದ ಲೋಹಧಾತುಗಳಿಂದ ತಯಾರಿಸಲ್ಪಟ್ಟದು. ಮೂತ್ರಕೋಶ ಮತ್ತು ಕರುಳುಗಳನ್ನು ಕ್ರಮಪಡಿಸಿ, ದೇಹವನ್ನು ಪುಷ್ಟಿಗೊಳಿಸಿ, ತಂಪನ್ನುಂಟು ಮಾಡುವುದು. ಚೈತನ್ಯ—ಉತ್ಸಾಹ—ಪುಂಶಕ್ತಿಗಳು ಖಂಡಿತ ಪ್ರಾಪ್ತಿಯಾಗುವುವು. 12 ಮಾತ್ರೆಗಳ ಬಾಟ್ಲಿಗೆ ರೂ. 1 ಮಾತ್ರ. (ಪತ್ರವ್ಯವಹಾರ ಇಂಗ್ಲೀಷಿನಲ್ಲಿ.) ವಿಳಾಸ:—

Non-Pareil Stores,
Big Street, (s. m.) Triplicane,
MADRAS.

ನಿಮ್ಮ ಸಿದ್ಧತೆಯಾಗಿದೆಯೇ?



ನೆಲಗಡಲೆ ಸುಲಿಯುವ ಋತುವು ಈಗಾಗಲೆ ಆರಂಭವಾಗುವುದು. ಅದು ಕಾರಣ, ಯಾವ ವಿಳಂಬವೂ ಇಲ್ಲದೆ, ಋತು ಆರಂಭದಲ್ಲೇ ನಿಮ್ಮ ಕಾರ್ಯಾರಂಭವನ್ನೂ ಮಾಡಲು ಈಗಲೇ ನಿಮ್ಮ ಯಂತ್ರಗಳನ್ನು ಕೊಂಡುಕೊಂಡು ಇಟ್ಟುಕೊಳ್ಳುವುದುತ್ತಮ. ನೀವು ಯಾವ ಯಂತ್ರವನ್ನು ಬಯಸುವಿರಿ? ಅಥಾರ್ತ ಸರ್ವತ್ರ ಹೆಸರುಹೊಂದಿದ-

ಕಿರ್ಲೋಸ್ಕರ

"ಕಲ್ಯಾಣ" ನೆಲಗಡಲೆ ಯಂತ್ರ.

ಇದು ಪೂರ್ಣ ಸುಧಾರಣೆಗಳನ್ನೊಳಗೊಂಡಿದ್ದು, ಚಲಿಸಲು ಸುಲಭವಾಗಿರುವಂತೆ ಕಡಿಮೆ ಖರ್ಚಿನಲ್ಲಿ ಹೆಚ್ಚು ಲಾಭಬರುವಂತೆ ಕೆಲಸ ಮಾಡಬಲ್ಲದು. ಸಂಪೂರ್ಣ ವಿವರಕ್ಕೆ ನಮಗೆ ಬರೆಯಿರಿ:

ಕಿರ್ಲೋಸ್ಕರ ಬ್ರದರ್ಸ್, ಲಿಮಿಟೆಡ್, ಕಿರ್ಲೋಸ್ಕರವಾಡಿ.

ಯಂತ್ರ ದೊರೆಯುವ ಸ್ಥಳ:—ಮೆಸರ್ಸ್ ಪೆರ್ರಿ ಎಂಡ್ ಕೊ, ಲಿಮಿಟೆಡ್,
ಮೌಂಟ್ ರೋಡ್, ಮದ್ರಾಸ್.

ಚಿತ್ರಾದಿ ಸಮೇತ

ಋಗ್ವೇದೀ ಸಂಧ್ಯಾವಂದನೆ.

(ಪ್ರಾತಃ ವ್ಯಾಹ್ಯ ಕಾಲಿಕ ... ವಿಧಿ)

ಎಂ. ನರಸಿಂಗರಾವ್, ಬಿ. ಎ., ಎಂ. ಎಲ್.

ಇವರಿಂದ ರಚಿತವಾದ

ಪ್ರತಿಪದಾರ್ಥಟೀಕಾ ವಿಧಿಸಹಿತ.

ಬೆಲೆ ಆಣೆ 3.

(30, 60, 100 ಪ್ರತಿಗಳನ್ನು ಒಟ್ಟಿಗೆ ಪಡಕೊಳ್ಳುವವರಿಗೆ ಒಳ್ಳೆಯ ಡಿಸ್ಕಾಂಟು)

ವಿಳಾಸ:— ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು.

FOR
High Class
Printing
ART OR ORDINARY
CONSULT US
The Sharada Press, Mangalore.

ನಮ್ಮ ಸಲಹೆಯೇ ಪ್ರಾಧಾನ್ಯವಾದದ್ದೆಂದು ತಿಳಿಯಬೇಡಿ·

ಕಲ್ಲಿಕೋಟೆ ಅಶೋಕ ಆಸ್ಪತ್ರೆಯ ಚೀಫ್ ಮೆಡಿಕಲ್ ಆಫೀಸರರಾದ ಡಾ। ವಿ. ಐ. ರಾಮಸ್, ಎಂ. ಆರ್., ಸಿ. ಎಸ್. ಇವರು ಬರೆದಿರುವುದನ್ನು ಓದಿ ನೋಡಿ—"ನಾನು ನಿಮ್ಮ ಆಶ್ಚರ್ಯಕರವಾದ ಜೀವಾಮೃತಂ ಟಾನಿಕನ್ನು ನರಗಳಲ್ಲಿ ಉರಿತ ಇರಿತ ಹಸಿವು ಕಡಿಮೆಯಾಗಿರುವುದು, ತೂಕವು ಕಡಿಮೆಯಾಗಿರುವುದು, ಇವು ಪ್ರಾಪ್ತವಾಗಿರುವ ಅನೇಕ ರೋಗಿಗಳಿಗೆ ಕೊಟ್ಟಿರುತ್ತೇನೆ. ಅದರ ಫಲಿತಾಂಶಗಳು ಬಹು ತೃಪ್ತಿಕರವಾಗಿದೆ. ಜೀವಾಮೃತವನ್ನು ದೇಹಶಕ್ತಿ ಕುಗ್ಗಿರುವ ಎಲ್ಲಾ ಸಂದರ್ಭಗಳಲ್ಲೂ ಸರ್ವ ಸಾಧನವಾಗಿ ಉಪಯೋಗಿಸಬಹುದೆಂದು ನಾನು ಮನಃಪೂರ್ವಕವಾಗಿ ಶಿಫಾರಸು ಮಾಡುತ್ತೇನೆ"

ಜೀವಾಮೃತವು

ನರಗಳಿಗೆ ಶಕ್ತಿ ಕೊಡುತ್ತದೆ. ವೀರ್ಯ ವೃದ್ಧಿಮಾಡುತ್ತದೆ. ಹಸಿವು ಹೆಚ್ಚಿಸುತ್ತದೆ. ರಕ್ತ ವೃದ್ಧಿಮಾಡುತ್ತದೆ.

ಪಂಡಿತ ಡಿ. ಗೋಪಾಲಾಚಾರ್ಲುರವರ **ಜೀವಾಮೃತವು**

ಎಲ್ಲಾ ಔಷಧ ಮಾರುವವರಲ್ಲೂ, ಸ್ಟೋರುಗಳಲ್ಲೂ ದೊರೆಯುತ್ತದೆ. (ಸಂಪೂರ್ಣ ವಿವರಗಳಿಗೆ ಇವತ್ತೇ ಬರೆಯಿರಿ)

ಆಯುರ್ವೇದಾಶ್ರಮಂ, ಪೋ. ಬಾಕ್ಸು ನಂ. ೨೮೭, ಮದ್ರಾಸು.

ಸೋಲ್ ಏಜಂಟರು:- ಸಿಟಿ ಮೆಡಿಕಲ್ ಮತ್ತು ಜನರಲ್ ಏಜನ್ಸಿ, ೩೨ ಚಿಕ್ಕಪೇಟೆ ಬೆಂಗಳೂರು. (ಉಡುಪಿ ಹೋಟೆಲ್ ಹತ್ತಿರ)

ದಕ್ಷಿಣ ಕನ್ನಡದ ಏಜಂಟರು— ಪೊಪ್ಯುಲರ್ ಸ್ಟೋರ್ಸ್, ಮಂಗಳೂರು. P. No. 104

ಸೈಂಟಿಫಿಕ್ ಸ್ವರ್ಣಾಭರಣಗಳು

(ನಿಜವಾದ ಬಂಗಾರಕ್ಕೆ ಬದಲಾಗಿ ಇವು ತಯಾರಿಸಲ್ಪಟ್ಟಿವೆ.)

ಹೈಕೋರ್ಟು ಜಡ್ಜರುಗಳಿಂದಲೂ, ಸರಕಾರದ ಮಂತ್ರಿಗಳಿಂದಲೂ, ಇತರ ಪ್ರಮುಖರಿಂದಲೂ ಕೊಂಡಾಡಲ್ಪಟ್ಟಿವೆ.

ಪತ್ರವ್ಯವಹಾರವನ್ನು ಇಂಗ್ಲಿಷಿನಲ್ಲೇ ಮಾಡಬೇಕು.



ಹೊಸ ಕೆಟಲಾಗು ಧರ್ಮಾರ್ಥ,

ವಿಳಾಸ:-

TheScientificGold Bangles Co., Ltd.,
Head Office:-43, Byrangimatam Street,
Post Box No. 208, Madras.

An Advertisement in
'Swadeshabhimani'
Means a sure fortune to you
Ask for Contract Rates.
The Swadeshabhimani office,
Car Street, Mangalore.

Preserve Your Wealth by BIRTH-CONTROL.

ದೇಶದ ಐಶ್ವರ್ಯವನ್ನು ಮಿತಸಂತತಿಯಿಂದ ಕಾದಿಡ.

ಮೂರೇ ಮೂರು ರೂಪಾಯಿಗಳಿಂದ ಸ್ತ್ರೀಯರಿಗೆ ಪ್ರಸವಭಯವನ್ನು ದಿಲ್ಲಿಸುವುದು. ಬೇಕಾದ್ದಲ್ಲಿ ತಿರಿಗಿ ಗರ್ಭವಾಗುವಂತೆ ಔಷಧವಿದೆ.

ವರ್ಷಕ್ಕೊಂದರಂತೆ ಹೆತ್ತು ತಾಯಿ—ಮಕ್ಕಳು ನರಳದಂತೆ ದೂರ ದೂರ ಮಾಡುವುದು. ಆರೋಗ್ಯಕ್ಕೆ ಹಾನಿಯಿಲ್ಲ.

ವಿಳಾಸ:—ಪಂಡಿತ ಕೆ. ನಾರಾಯಣರಾವ್,
ಆಯುರ್ವೇದ ಭಿಷಕ್, ಕಾರ್ಕಳ, ದ. ಕ.

[N. B.—ಉತ್ತರವನ್ನಪೇಕ್ಷಿಸುವವರು ಒಂದೂವರೆ ಆಣೆಯ ಟಪ್ಪಾಲು ಸ್ಟಾಂಪಿನೊಂದಿಗೆ ಬರೆಯಬೇಕು.]

ಧ್ಯಾನ

(ಪ್ರಬಂಧಮಾಲೆ)

ಲೇಖಕರು—ಶ್ರೀ ಶಿವರಾಮ ಕಾರಂತ.

ಅಧ್ಯಾಯ ೧೦

"ಕೃತಕನನ್ನು ಕೃಶಗೊಳಿಸುವ ಅಪಾರ ಶಕ್ತಿಯೇ ಕೃಷಿ."

ಕೃಷಿಯನ್ನು ಕುರಿತು ಉದ್ಯೋಗಕ್ಕೂ ಮೊದಲೇ ಪ್ರಸ್ತಾಪಿಸುವುದು ನ್ಯಾಯವಿತ್ತು. ಆದರೆ ಕೃಷಿಕನಿಗೆ ಉದ್ಯೋಗಿಯಷ್ಟು ಮರ್ಯಾದೆಯಿಲ್ಲವೆಂದು, ಅನಂತರವೇ ಪ್ರಸ್ತಾಪಿಸುವಂತಾಯಿತು. ಕೃಷಿಯೆಂಬುದು, ಬಲು ಪ್ರಾಚೀನ ಕಾಲದಿಂದ, ಅಂದರೆ ಸೂರ್ಯಚಂದ್ರರು ಹುಟ್ಟಿದಂದಿನಿಂದ, ಮನುಷ್ಯನು ಕಲಿತುಕೊಂಡ ವಿದ್ಯೆ. ಭೂಮಿತಾಯಿಯು ತಾನಾಗಿ ಹೆರುವ ಗಿಡ, ಹಣ್ಣು, ಹಂಪಲು, ಹೀಚುಗಳನ್ನು ತಿಂದು ಬದುಕಬೇಕಾದುದು ಮನುಷ್ಯನ ಕರ್ತವ್ಯ. ಆದರೆ ಅವನ ಜನಸಂಖ್ಯೆಯು ಇವುಗಳ ಸಂಖ್ಯೆಗಿಂತ ಹೆಚ್ಚುತ್ತ ಬರಲು, ಅವನು ಕೃಷಿಯನ್ನು ತೊಡಗಬೇಕಾಯಿತು. ಇದನ್ನು ವಿಧಿವತ್ತಾಗಿ ಮಾಡಿದಲ್ಲಿ ಶಾಸ್ತ್ರಕಾರರಿಗೆ ಈ ವಿಷಯವಾಗಿ ವಿಶೇಷವಾದ ಆಕ್ಷೇಪವಿಲ್ಲ. ವೇದಗಳಿಂದಲೂ ಕೃಷಿಗೆ 'ಮಂಜೂರಾತಿ' ದೊರಕಿದೆ. ವೈದಿಕ ಯುಗದ ಆರ್ಯಾಯತಿಯು ಕೇವಲ ದವಸಧಾನ್ಯಗಳನ್ನು ಬೆಳೆಯುವುದಕ್ಕೂ, ಹತ್ತಿಯ ಬೆಳೆಗೂ ಅನ್ವಯಿಸಿತ್ತು. ಈಗೀಗ ಮನುಷ್ಯನು ಅವುಗಳ ಜತೆಗೆ ಪಡುವಲು, ಹಾಗಲು, ಕೋಸು, ನೀರುಳ್ಳಿ ಮೊದಲಾದುವನ್ನೂ ಬೆಳೆಯುತ್ತ ಬಂದುದಲ್ಲದೆ, ಇತ್ತೀಚೆಗೆ ತಂಬಾಕು, ತೇಯಲೆ, ಕಾಫಿ ರಬ್ಬರು ಮೊದಲಾದುವನ್ನೂ ಬೆಳೆಯಿಸುತ್ತ ಬಂದಿದ್ದಾನೆ. ಇದು ಎಷ್ಟರಮಟ್ಟಿಗೆ ನ್ಯಾಯವೆಂದು ಹೇಳಲು ಬರುವಂತಿಲ್ಲ.

ಕೃಷಿಧರ್ಮವನ್ನು ಮೀರಿದ ಅನ್ಯಾಯಗಾರರಲ್ಲಿ ಅಮೇರಿಕ, ಆಸ್ಟ್ರೇಲಿಯದವರು ತೀರ ಹೆಚ್ಚಿನ ಅಪರಾಧಿಗಳು. ಅವರು ನಿಸರ್ಗದ ನಿಯಮಗಳನ್ನೇ ಮುರಿಯುತ್ತಿದ್ದಾರೆ. ಅವರ ಭೂದೇವಿಯು ಹತ್ತಿ, ತಂಬಾಕು, ಗೋಧಿಗಳನ್ನು ಬೆಳೆಸಲು ಅಶಕ್ತಳಾಗಿದ್ದರೂ ಇವರು ಮದ್ದುಮಾಟಗಳಿಂದ ಆ ಕೆಲಸವನ್ನು ಮಾಡುತ್ತಿದ್ದಾರೆ. ಅಷ್ಟೇ ಅಲ್ಲ, ಇತರ ಭೂದೇವಿಯರಿಗಿಂತ ಚೆನ್ನಾದ ಉತ್ಪನ್ನ ಪಡೆಯುತ್ತಿದ್ದಾರೆ. ಹಿಂದುಸ್ಥಾನದವರು, ಔಷಧೀಶನಾದ ಚಂದ್ರನನ್ನು ಪುಸಲಾಯಿಸಿ ಪಡೆಯುವ ಪೈರಿಗಿಂತ ಹೆಚ್ಚಿನ ಪೈರು ಅವರಿಗೆ! ಇನ್ನೊಂದು ಮಾತು—ಅಲ್ಲಿನ ಜನರಿಗೆ (?) ಮಾತೃಭೂಮಿಯಾದ ಭೂದೇವಿಯ ಮೇಲೆ ಇಷ್ಟಿಷ್ಟು ಗೌರವವಿಲ್ಲ. ಅವರು ಕೇವಲ ಸ್ವಾರ್ಥಪರರ. ಭೂದೇವಿಗೆ ಎಷ್ಟು ನೋವಾಗಬಹುದು, ಏನು—ಎಂಬುದನ್ನು ಎಣಿಸದೆ ನೆಲವನ್ನು ಎರಡೆರಡು ಅಡಿಗಳ ತನಕ ಸೀಳುತ್ತಾರೆ. ಹುಣ್ಣಿನ ಮೇಲೆ ಬರೆಯಿಡುವಂತೆ, ಅದರೊಳಗೆ ನಾನಾತರದ ಉಪ್ಪನ್ನು ತುಂಬುತ್ತಾರೆ. ಈ ಊರಿಗೆ ಅಂಜಿಯೋ ಎಂಬ ಓಪಾದಿಯಲ್ಲಿ, ಅಲ್ಲಿನ ಭೂಮಾತೆಯು ಅವರಿಗೆ ತುಂಬಾ ಬೆಳೆ ಕೊಡುವಳು. ಕಲಿಯುಗದಲ್ಲಿ ಪಾಪಿಗಳಿಗೆ ಜಯವು ಎಂಬ ನಾಣ್ಣುಡಿ ಎಷ್ಟು ನಿಜವು! ಕೆಲವು ಬಾರಿ ಆರು ತಿಂಗಳಿಗೆ ಬರುವ ಗೋಧಿಯ ಫಸಲನ್ನು ಅವರು, ಬಲವಂತದಿಂದ 2-ತಿ. 27½ ದಿವಸದೊಳಗಾಗಿ ಕೀಳುತ್ತಾರೆ. ಇದು ಕೇವಲ ಧರ್ಮವಿರುದ್ಧ. ಗರ್ಭಸ್ರಾವ ಮಾಡಿದಷ್ಟು (ಅದಕ್ಕಿಂತ ಕಡಿಮೆಯಲ್ಲದ) ಮಹಾಪಾತಕವು ಇದರಿಂದ ಬರಲಾರದೇನು?

ಹೀಗೆ ಜುಲುಮಿನಿಂದ ಹೊರಡಿಸಿದ ಬೆಳೆಯನ್ನು ಅವರು ಜುಲುಮಿನಿಂದಲೇ ಕೊಯ್ಯುವರು. ತೆನೆತುಂಬಿದ ಹೊಲದಲ್ಲಿ, ಅವರು ಕೆಲವು ಯಂತ್ರ ಪಶುಗಳನ್ನು ಬಿಡುವರು. ಒಂದು ಯಂತ್ರವು ಪೈರನ್ನು ಕತ್ತರಿಸಿ ಮಡಿಸುವುದು. ಇನ್ನೊಂದು ಎತ್ತಿ ಸಾಗಿಸುವುದು. ಮತ್ತೊಂದು ಕಾಳನ್ನು ಬೇರೆ ಮಾಡುವುದು, ಮಗದೊಂದು ಅದರ ಹೊಟ್ಟನ್ನು ಕೀಳುವುದು. ಆತುರದಿಂದ ಪ್ರಾಣ ಕಳೆದುಕೊಳ್ಳುವವರಂತಿದೆ ಅವರ ಕೆಲಸ. ಗೋಬ್ರಾಹ್ಮಣರ ಸಹಾಯವಿಲ್ಲದೆ ಅವರ ಪೃಥ್ವಿಯು ಸಸ್ಯಶಾಲಿನಿಯಾಗಿರುವುದೆಂಬುದು ತೀರ ಶೋಚನೀಯವು.

ಇದಕ್ಕೂ ಹೆಚ್ಚಿನ ಅನ್ಯಾಯವೆಂದರೆ—ಅವರಲ್ಲಿನ ಒಬ್ಬ ವಿಶ್ವಾಮಿತ್ರನು ಮಾಡುತ್ತಿರುವ ಅನ್ಯಾಯಗಳು. ಶಾಂತಂ ಪಾಪಂ. ಲುಥರ್ ಬರ್ಬಂಕನೆಂಬ ಅಮೇರಿಕದ ಸಸ್ಯಪಂಡಿತನು—ಆರು ತಿಂಗಳಿಗೆ ಫಲಕೊಡುವ ಗಿಡಗಳಿಂದ ಮೂರೇ ತಿಂಗಳಿಗೆ ಫಲ ಬರಿಸುತ್ತಾನೆ. ಮೂರು ತಿಂಗಳವನ್ನು ಆರು ತಿಂಗಳ ತನಕ ಆಯಿಸುತ್ತಾನೆ. ಹುಳಿಗಿಡಗಳು ಸಿಹಿ—ಕಾಯಿ ಬಿಡುವಂತೆ, ಸಿಹಿ—ಗಿಡಗಳು ಹುಳಿಯಾಗುವಂತೆ, ಹಲಸಿನಕಾಯಿಯ ಮುಳ್ಳು ಹೋಗುವಂತೆ, ಮಾವಿಗೆ ಮುಳ್ಳು ಬರುವಂತೆ, ತೆಂಗಿಗೆ ಚಿಪ್ಪು ಹೋಗುವಂತೆ, ಪಪ್ಪಾಯಕ್ಕೆ ಗೊರಟು ಬರುವಂತೆ ಮಾಡಿಬಿಟ್ಟಿದ್ದಾನೆ. ಅಷ್ಟೇ ಅಲ್ಲ. ಯಾವಜ್ಜೀವ ತಂತಮ್ಮ ಜಾತಿಮತಗಳನ್ನು ಉಳಿಸಿಕೊಂಡು ಬರಬೇಕಾಗಿರುವ ಗಿಡಗಳಲ್ಲಿ ವರ್ಣಸಾಂಕರ್ಯ ಮಾಡಿ—ಸಾವಿರಗಟ್ಟಲೆಯಿಂದ—ಸಂಕರ ಜಾತಿಯ ಗಿಡ, ಹೂ, ಬಳ್ಳಿಗಳನ್ನು ಮಾಡಿದ್ದಾನೆ. ಕೆಂಪು ಹೂವಿನ ಗಿಡದ ಗಂಟಲು ಹಿಚುಕಿ ನೀಲ ಹೂವನ್ನು ಹೊರಡಿಸಿದ್ದಾನೆ. ಈಗೀಗ ಬಿಸ್ಕಿಟು, ಇಡ್ಡಲಿ, ಹೋಳಿಗೆಯಂತಹ ಫಲಗಳನ್ನು ಕೊಡುವ ಗಿಡಗಳನ್ನು ಮಾಡಲು ಅವನು ಯತ್ನಿಸುತ್ತಿದ್ದಾನೆ.

ಅವನ ಈ ದುಶ್ಚಾಳಿಗೆ ಮೋಹಿತರಾಗಿ, ಊರೆಲ್ಲ ಜನರು ಈ ಹಾದಿ ಹಿಡಿದಿದ್ದಾರೆ. ಪವಿತ್ರವಾದ ಭಾರತವರ್ಷದಲ್ಲಿ ಈ ರೀತಿಯ ಅನ್ಯಾಯಗಳಾಗುತ್ತಿದೆಯೆಂದು ವದಂತಿ. ಈ ಸಂಗತಿಯನ್ನು ತಿಳಿದ ಮೇಲಾದರೂ, ಸಂಬಂಧಪಟ್ಟ ದೇವತೆಗಳು, ಒಂದಾನೊಂದು ಕಾಲದಲ್ಲಿ ಆಕಾಶಕ್ಕೆ ಎಸೆಯಲ್ಪಟ್ಟು, ಇನ್ನೂ ಅಂತರಿಕ್ಷದಲ್ಲೇ ತೊಳಲುತ್ತಿರುವ ತ್ರಿಶಂಕುವನ್ನು ಕೆಳಕ್ಕಿಳಿಸಬಾರದೇ? ಅದು ಇಷ್ಟವಿಲ್ಲದಲ್ಲಿ ಲುಥರ್ ಬರ್ಬಂಕನನ್ನಾದರೂ ಅಲ್ಲಿಗೆ ರವಾನಿಸಬೇಕು.

ಈ ಜನರು ಕುಲಗೆಡಿಸಿ ಮಾಡಿದ ಗಿಡಗಳ ಪೋಷಣೆಯನ್ನಾದರೂ ಕುಲಗೆಡಿಸಿಯೇ ಮಾಡುತ್ತಿದ್ದಾರೆ. ನ್ಯಾಯವಾಗಿ ಕೊಳೆತ ಗೊಬ್ಬರವನ್ನು ತಿಂದು ಸುಖಿಯಾಗಿ, ತೃಪ್ತಿಗೊಂಡು ಬಿದ್ದಿರಬೇಕಾದ ಗಿಡಗಳಿಗೆ—ಪಾಸ್ಪೇಟು, ನ್ಯಾಟ್ರೇಟು—ಮೊದಲಾದ ಊಟಗಳನ್ನು ತಿಸಿಸುತ್ತಿದ್ದಾರೆ. ಹೆಚ್ಚೇನು—ಬ್ರಾಹ್ಮಣ ಜಾತಿಯ ಸಸ್ಯಗಳಿಗೂ ಸಹ ಎಲುಬಿನ ಹುಡಿ, ಮೀನಿನ ಚಟ್ನಿಗಳನ್ನು ತಿನ್ನಿಸಿ, ಜಾತಿ ಕೆಡಿಸಿದ್ದಾರೆ. ಈ ಅತ್ಯಾಚಾರಕ್ಕೆ ಅಲ್ಲಿನ ಭೂಮಾತೆಯು ಹೆದರಿದಂತೆ, ಗಿಡಮರಗಳೂ ಅಂಜಿ, ಕೇಳಿದಷ್ಟು ಫಲವನ್ನು ಕೊಡುತ್ತಿವೆಯಂತೆ.

ಒಬ್ಬ ಎಕರೆ ಜಮೀನು 500 ಮಣ ಗೋಧಿಯನ್ನು ಹೆರತೊಡಗಿದ ಬಳಿಕ ಅವರಿಗೆ ಬರಗಾಲವೆಂಬುದಿದೆಯೇ? ಬ್ರೆಜಿಲಿನಲ್ಲಿ ಕಾಫಿ ಬೆಳೆದು ಬೆಳೆದು ಬೇಸರವಾಗಿ ಅದರಿಂದಲೇ ಬಿಸಿನೀರು ಕಾಯಿಸುತ್ತಾರೆ. ಆಜೀ ಜೀಬಿಂದ ಇನ್ನೊಂದು ಕಡೆ ಕಲ್ಲಂಗಡಿ ಹಣ್ಣು ಬೆಳೆದು ಕೊಳಿಸಿದರೇ ಇನ್ನೊಂದು ಕಡೆ ಬೆಳ್ಳಕ್ಕಿ ಹಿಂಡು ... ಈಗೀಗ ಗೋವು ಹತ್ತಿಗಳ ಬೆಳೆಯು ಹೆಚ್ಚಿ—ದಿಮ್ಮಿಯು ಅಷ್ಟು ಒಳೆಯ ಬೇಡಿ ಗಿರಾಕಿಯಿಲ್ಲ'—ಎನ್ನುವಂತಾಗಿದೆ.

ಈ ವಿಷಯದಲ್ಲಿ, ಆಕುರೀಪ್ಸತ್ತಿಯಿಂದ ಸಸ್ಯಕುಟುಂಬವನ್ನು ಪೀಡಿಸಿದವರೆಂದರೆ ಭರತಖಂಡದವರೇ ಸರಿ. ಭೂತಾಯಿಗೆ ನೋವಾಗಬಾರದೆಂದು ಅವರು ಕೇಬಿಂದು ಮುಳ್ಳುಗಳಿಗೆ, ಚಿಕ್ಕ ಕಡ್ಡಿಗಳನ್ನು ಸಿಕ್ಕಿಸಿ, ಹೆಗ್ಗಣಗಾತ್ರದ ದನಗಳಿಂದ ಭೂಮಾತೆಯ ಚರ್ಮವನ್ನು ಕೆರೆಯುತ್ತಾರೆ. ಅವಳ ಮೈಯು ಕಶ್ಮಲಗಳಿಂದ ಹೊಲಸಾಗಬಾರದೆಂದು ವಿಶೇಷ ಗೊಬ್ಬರವನ್ನು ಚೆಲ್ಲುವುದಿಲ್ಲ. ಒಂದು ಬೀಜ ಬಿತ್ತುವಲ್ಲಿ, ಅತಿ ಭಕ್ತಿಯಿಂದ ನಾಲ್ಕು ಬೀಜ ಬಿತ್ತಿ, ನಾಲ್ಕು ಬೀಜ ಸಿಗುವಲ್ಲಿ ಒಂದರಿಂದಲೇ ತೃಪ್ತರಾಗುತ್ತಾರೆ. ಅವರ ಈ ಭಕ್ತಿಗೆ ಮೆಚ್ಚಿ ಬ್ರಹ್ಮನು ಅವರಿಗೆ ಸಂತಾನಸಾವಿರವಾಗುವಂತೆ ಹರಸಿರುತ್ತಾನೆ. ಉತ್ತಮ ಬೆಳೆಯು ಬರಲೆಂದು—ಚಂದ್ರನನ್ನು ಕೇಳಿ ಇಂದ್ರನನ್ನು ಪ್ರಾರ್ಥಿಸುತ್ತಾರೆ. ಈ ದೇವತೆಗಳು ಮುನಿದರೆ ಅವರಿಗೆ ವಿರುದ್ಧವಾಗಿ ಎಂದೂ ಆಚರಿಸುವುದಿಲ್ಲ. ಆದರೆ ನಮ್ಮಲ್ಲೂ ಕೆಲವು ಕಪ್ಪು ಕುರಿಗಳುಂಟು. ವಿದೇಶೀಯರನ್ನು ನೋಡಿ ಕೆಲವರು ಕಾವೇರಿ, ಗೋದಾವರಿ, ಸಿಂಧೂಗಳಂತಹ ಪುಣ್ಯವಾಹಿನಿಯರನ್ನು ಕಟ್ಟಿ ಕಿವಿಹಿಡಿದು ತಮ್ಮ ಹೊಲಗದ್ದೆಗಳ ಮಗ್ಗುಲಿಂದ ಹಾಯುವಂತೆ ಮಾಡಿದ್ದಾರೆ. ಇದು ಧರ್ಮವಿರುದ್ಧವೆಂದು ತಿಳಿಯುವುದವಶ್ಯ.

ಭರತಖಂಡದವರು ಆಕಸ್ಮಿಕವಾಗಿ ತಮ್ಮ ಹೊಲಗಳಲ್ಲಿ ಬೆಳೆ ಬಂದರೆ, ಅದನ್ನು ಕೈಗಳಿಂದಲೇ ಎತ್ತಿ ಮನೆಗೆ ಒಯ್ಯುತ್ತಾರೆ. ಆದರೆ ಕೆಲವೊಂದು ಸಂಗತಿಗಳಲ್ಲಿ ಅವರಿಗೆ ಬಿಳಿ ಜನರ ಗಾಳಿಯು ಸೋಂಕಿದೆ. ಅವರಂತೆ ಇವರು ಸೇಬು, ಕೋಸು, ತೇಎಲೆಗಳನ್ನು ಬೆಳೆಯುತ್ತಿದ್ದಾರೆ. ಕೆಲವರು ಗಿಡಗಳಿಗೆ ಎಲುಬು ಮಾಂಸಗಳನ್ನು ತಿನ್ನಿಸುತ್ತಿದ್ದಾರೆ. ಇಂಥ ಧರ್ಮದ್ರೋಹಿಗಳ ಸಂಖ್ಯೆಯು 08% ರಕ್ಕೆ ಮೀರಿಲ್ಲವಾದುದರಿಂದ ಭಾರತಮಾತೆಯು ಸಿಟ್ಟಿಗೇಳಲಾರಳು ಎಂಬುದು ಖಂಡಿತ.

ಈ ದೇಶದ ಮುಖಂಡರಲ್ಲಿ ಹಲವರು, ನಮ್ಮಲ್ಲಿಯ ಬೆಳೆಯು ಅಮೇರಿಕ ಆಸ್ಟ್ರೇಲಿಯಗಳಂತಿಲ್ಲವೆಂದು ಮರುಗುತ್ತಿದ್ದಾರಂತೆ. ಇದು ನಿಜ. ಬೆಳೆಯನ್ನು ಹೆಚ್ಚಿಸಲು ಪಾಶ್ಚಾತ್ಯರ ಅತ್ಯಾಸುರೀವೃತ್ತಿಯು ಯೋಗ್ಯ ಹಾದಿಯಲ್ಲ. ಭಾರತೀಯರಾದ ನಾವು ನಮ್ಮ ನಾಡಿನ ವೈಶಿಷ್ಟ್ಯವನ್ನು ಮರೆಯಬಾರದು. ಬೆಳೆಯನ್ನು ಬೆಳೆಯಬೇಕಾದಲ್ಲಿ, ಇಂದ್ರ ಮೊದಲಾದ ದೇವತೆಗಳನ್ನು ಒಲಿಸಿಕೊಳ್ಳಬೇಕು. ಇಂದ್ರನು ಹೆಚ್ಚಿನ ಮಳೆಯನ್ನು ಸಮುದ್ರದ ಮೇಲೆ ಕೆಡೆಯದಂತೆ ಮಾಡಿ (ಪಂಚಾಂಗವನ್ನು ಓದಿ ತಿಳಿಯಿರಿ), ಕೇವಲ ನಮ್ಮ ನಮ್ಮ ಹೊಲಗದ್ದೆಗಳ ಮೇಲೆಯೇ ಕೆಡೆಯುವಂತೆ ಕೇಳಿಕೊಳ್ಳಬೇಕು. ಹೀಗಾಗಲು ದೇವತೆಗಳು ತೃಪ್ತರಾಗಬೇಕು. ಅವರಿಗೆ ಸಲುವ ಹವಿಸ್ಸು ಈಗ ಸರಿಯಾಗಿ ಸಿಗುತ್ತಿರಲಿಲ್ಲ. ಆ ಕಾರಣದಿಂದ ಅಜಮೇಧ ಗೋಮೇಧ ಯಾಗಗಳು ಅತ್ಯಾವಶ್ಯವು. ಇದರಲ್ಲಿ ಮೊದಲಿನದನ್ನು ಧಾರೆವಾಡ, ಗೋಕರ್ಣಗಳ ಬ್ರಾಹ್ಮಣರಲ್ಲದೆ ಇನ್ನಾರೂ ಮಾಡದಿರುವುದು ಶೋಚನೀಯ. ಅವರಾದರೂ—ಗೋಮೇಧವನ್ನು ಬಿಟ್ಟ ಕಾರಣವು ತಿಳಿಯದು. ದೇವತೆಗಳಿಗೆ ಅವುಗಳ ಮಾಂಸವು ರುಚಿಸದೆಂದೇನು? ಈ ಮೇಧಗಳು ಅಸಾಧ್ಯವಾದಲ್ಲಿ ಭೂಮಿಯಲ್ಲೇ ದೇವತೆಗಳ ವ್ಯಾಸ್ರಾಯರು—ಇರುತ್ತಾರಲ್ಲ. ಅಂಥ ಬ್ರಾಹ್ಮಣರಿಗೆ ಹೋಳಿಗೆ ಲಾಡುಗಳ ಹವಿಸ್ಸು ತೀರ ಅವಶ್ಯವು.

ಈಗಿನ ಕೃಷಿಕರಲ್ಲಿ ಹೆಚ್ಚಿನವರು ಅ—ಬ್ರಾಹ್ಮಣರು. ಬ್ರಾಹ್ಮಣ ಕೃತಕರಿದ್ದರೂ ಅವರು ನೇಗಿಲನ್ನಾಗಲಿ, ಕೋಣನ ಬಾಲವನ್ನಾಗಲಿ ಹಿಡಿಯುವುದು ಶಾಸ್ತ್ರವಿರುದ್ಧವಲ್ಲವೆ? ಅದು ಶೂದ್ರವೃತ್ತಿಯಷ್ಟೆ. ಆದರೆ ಈಗಿನ ಶೂದ್ರರಿಗೆ ಯಾನೆ ಅ-ಬ್ರಾಹ್ಮಣರಿಗೆ ಬ್ರಹ್ಮದ್ವೇಷವು ಹೆಚ್ಚಿರುವ ನಿಮಿತ್ತ ಅವರು ಸಕಾಲಕ್ಕೆ ಭೂಸುರರಿಗೆ ಸಂತರ್ಪಣೆ ಸಮಾರಾಧನೆಗಳನ್ನು ನಡೆಯಿಸುತ್ತಲಿಲ್ಲ. ಇದರಿಂದಾಗಿ ದೇವತೆಗಳು ಮುನಿದಿರುವರೆಂದೂ, ನಮ್ಮ ದೇಶದ ಕೃಷಿಯು ಉನ್ನತವಲ್ಲದ ಸ್ಥಿತಿಗೆ ಬಂದಿದೆಯೆಂದೂ ತಿಳಿಯತಕ್ಕದು. ಅದರ ಇನ್ನೊಂದು ಕಾರಣವೆಂದರೆ, ಧೇನುವನ್ನು ಪೂಜಿಸಬೇಕಾದ ಭಾರತೀಯರು ಕೃಷಿ ಮೊದಲಾದ ಕೆಲಸಗಳಿಗೆ ಕೋಣನನ್ನು ಉಪಯೋಗಿಸಿ ಕೊರಡೆ ಆರತಿಯನ್ನು ಎತ್ತುತಿದ್ದಾರೆ. ಇದರಿಂದ ದೇವತೆಗಳ ಮನಸು ನೊಂದಿರುವರು. 'ಗೋಬ್ರಾಹ್ಮಣ ಹಿತಾಯಚ'—ಎನ್ನಬೇಕಾದ ಶಾಸ್ತ್ರವನ್ನು ಮಹಿಷ ಬ್ರಾಹ್ಮಣ ಹಿತಾಯಚ ಎಂದು ಎದಲಿಸುವಂತಾಗಿದೆ. ಅಲ್ಲದೆ ನರಕಾಧಿಪನಾದ ಯಮನ, ತನ್ನ ವಾಹನವನ್ನು ನೇಗಿಲಿಗೆ ಹೂಡಿದುದ ತೀರ ಅವಮಾನಕರವೆಂದು ತಿಳಿದಿರುತ್ತಾನೆ. ಇದರಿಂದ ಕೋಣನ ಭಕ್ತರು ಎಚ್ಚರವಾಗಿರತಕ್ಕದ್ದು.

[ಸಶೇಷ]

ಉಡುಪಿ.

ಇಲ್ಲಿಯ ಹಿಂದೀ ಪ್ರಚಾರಕರಾದ ಶ್ರೀ ಕೆ ರಾಘವಾಚಾರ್ಯರು ಅನಾರೋಗ್ಯದ ದೆಸೆಯಿಂದ ಪಾಣಾಜೆ ಎಂಬಲ್ಲಿಗೆ ಚಿಕಿತ್ಸೆಗಾಗಿ ತೆರಳಿರುವ ಕಾರಣ ಪಕ್ಕದ ಶ್ರೀ ಬಿ ರಾಮಕೃಷ್ಣಾಚಾರ್, ಬಿ ಎ ಮತ್ತು ಕೆ ಸೀತಾರಾಮ ಶೆಟ್ಟಿಯವರು ಹಿಂದೀ ಕ್ಲಾಸುಗಳನ್ನು ನಡೆಸುತಿದ್ದಾರೆ.

ನೋಟೀಸು.

ಕಾರ್ಕಳ ಡಿಸ್ಟ್ರಿಕ್ಟ್ ಮುನ್ಸೀಫ್ ಕೋರ್ಟಿನಲ್ಲಿ

ಸ್ಮಾಲ ನಂಬ್ರ 231/34

ಇಸಿದೊರ್ ಕುಲಾಸೊ—ವಾದಿ

ಮತ್ತು

ಬಸ್ತ್ಯಾಂ ಪಿಂತ—ಪ್ರತಿವಾದಿ

ಇವರೊಳಗೆ

ಕಾರ್ಕಳ ತಾಲೂಕು ಕರಂಜೆ ಗ್ರಾಮದ ಮಿತ್ತಬೈಲು ಕೈತಾನ್ ಪಿಂತರ ಮಗ ಬಸ್ತ್ಯಾಂ ಪಿಂತರಿಗೆ ಈ ಮೂಲಕ ತಿಳಿಸುವುದೇನೆಂದರೆ—

ನೀವು ಮೇಲೆ ಕಾಣಿಸಿದ ವಾದಿಗೆ ತಾ 27-7-'26 ರಲ್ಲು ಬರೆಸಿಕೊಟ್ಟ ದಿಮಾಂಡು ನೋಟಿನ ಅಸ್ಲು ಬಡ್ಡಿ ಹಣದ ಪೈಕಿ ಸದ್ರಿ ನೋಟಿನ ಹಿಂಬದಿ ಆಗಾಗ ಪರಾ ಗಳನ್ನು ಬರಕೊಟ್ಟು ವಸೂಲು ಕೊಟ್ಟ ಹಣ ಕಳೆದು ಬಾಕಿ ಬರಬೇಕಾದ ಅಸ್ಲು ಬಡ್ಡಿ ಕೂಡಾ ರೂ 87-8-8ಕ್ಕೆ ಸದ್ರಿ ವಾದಿರು ನಿಮ್ಮ ಮೇಲೆ ಸದ್ರಿ ದಾವೆ ಮಾಡಿರುವುದರಿಂದಲೂ ಸದ್ರಿ ದಾವೆಯು ತಾ 10—9—1934ಕ್ಕೆ ಇಟ್ಟಿರುವುದರಿಂದಲೂ ಆ ದಿನ ಬೆಳಿಗ್ಗೆ ಘಂಟೆ 11ಕ್ಕೆ ನೀವು ನಿಮ್ಮ ಕಡೆಯಿಂದ ಕೋರ್ಟಿಗೆ ಉದಾಹರಣೆ ದಾಖಲು ಮಾಡದಿದ್ದರೆ ನಿಮ್ಮ ಮೇಲೆ ಏಕಪಕ್ಷ ಡಿಕ್ರಿ ಕೊಡಲ್ಪಡುವುದು ಎಂಬ ಸಂಗ್ತಿ ಈ ಮೂಲಕ ತಿಳಿಸೋಣವಾಗಿಯದೆ.

Karkala, 14—8—'34 } **P. Ramachandra Rao,**
ವಾದಿಯ ಕಡೆ ವಕೀಲ.

ಪಂಡಿತ ಜವಾಹರಲಾಲ ನೆಹರುಗಳ ಬಿಡುಗಡೆ!

NOTE S.
ನೋಟಗಳು.

ಹಾಗೆ ಹಾಲೆರೆದರೆ ವಿಷ ಮಾತ್ರ ಕೆಟ್ಟದಂತೆ. — ಶೀಲನಾಗಿಣಿಗೂ ಹಾಗಾಯಿತು.

* * *

ಆದರೆ, ಭೇದವಿಷ್ಟೆ: ನಾಗಣ್ಣನು ಅಹಿಂಸೆಗೂ ದಯೆಗೂ ತಲೆಬಗ್ಗಿಸಿದನು; ನಾಗಿಣಿಯು ಮಾತ್ರ ತಲೆಎತ್ತಿದಳು.

* * *

ಮಂಗಳೂರು ಮುನಿಸಿಪಾಲಿಟಿಯ ಚುನಾವಣೆಗಳಿಗೆ ಕಾಂಗ್ರೆಸ್ ಪರವಾಗಿ ಉಮೇದ್ವಾರರನ್ನು ಕಳುಹುವುದು ಬೇಡವೆಂದು ನಮ್ಮ ತಾಲೂಕು ಕಾಂಗ್ರೆಸ್ ಸಮಿತಿಯ ತೀರ್ಮಾನ. ಈ ತೀರ್ಮಾನಕ್ಕೆ ಮೊದಲೇ ಉಮೇದ್ವಾರರಾಗಿ ಮುಂದೆ ಬಂದವರು 'ಕಾಂಗ್ರೆಸ್ ಉಮೇದ್ವಾರ'ರಲ್ಲವಷ್ಟೆ.

* * *

ಮಹಾತ್ಮಾಜಿಯವರ ಉಪವಾಸವು ಮುಗಿಯಿತು. ಸನಾತನಿಗಳ ಮೇಲೆ ಕೈಯೆತ್ತುವುದು ಮೂರ್ಖತನವೆಂದು ಅನೇಕರು ತಿಳಿಕೊಂಡರು. ಆದರೆ,—ನಾಘರಂತಹವರು, ಮುಂಡಾಸಿಲ್ಲದೆ ಸಂಚರಿಸುವುದು ಆರೋಗ್ಯ ದೃಷ್ಟ್ಯಾ ಹಿತಕರವಲ್ಲವೆಂದು ಸಲಹೆ.

* * *

ಅಸ್ವಸ್ಥವಾಗಿರುವ ಪತ್ನಿಯನ್ನು 'ನೋಡಿ' ಬರಲು, ಸರಕಾರವು ಜವಾಹರರಿಗೆ ಎರಡು ದಿನಗಳ 'ರಜೆ' ಕೊಟ್ಟಿದೆ. ಐದಡಿಗಾತ್ರದ ಶ್ರೀಮತಿಯವರನ್ನು 'ನೋಡಿ' ಬರಲು ಅಷ್ಟು ದೀರ್ಘ ಅವಧಿಯ ರಜೆ ಬೇಕಾಗಿರಲಿಲ್ಲವೆಂದು ನಮ್ಮ ಅಭಿಪ್ರಾಯ.

* * *

ಪುನಃ ಹುಚ್ಚು ನಾಯಿಗಳು ಅಲ್ಲಲ್ಲಿ ತಿರುಗಾಡಹತ್ತಿವೆಯೆಂದು ಸುದ್ದಿ. ಆಸ್ಪತ್ರೆಯಿದ್ದೂ ಹುಚ್ಚರನೇಕರು ತಿರುಗಾಡಬಹುದಾದರೆ ಆಸ್ಪತ್ರೆಗಳಿಲ್ಲದ ಆ ನಾಯಿಗಳೇಕೆ ಬಾರದು ಎಂದು ನೆನೆವವರಾರೂ ಇಲ್ಲ.

* * *

ಈಗಳಿನ ಶಿಕ್ಷಣ ಪದ್ಧತಿಯಲ್ಲಿ ನಿಷ್ಪ್ರಯೋಜಕವಾಗಿ ಧಂದುವ್ಯಯವಾಗುತ್ತಿದೆಯಾಗಿ ಮೈಸೂರು ದಿವಾನರು ಅಪ್ಪಣೆಕೊಡಿಸಿದರು. ಸರಕಾರದ ಅಥವಾ ಪ್ರಜೆಗಳ ಕಡೆಯಿಂದಲೇ?—

೧೯೩೨—೩೩ರಲ್ಲಿ ಹಿಂದೂದೇಶದ ಕಾಫಿ ಉತ್ಪತ್ತಿ.

೩೨, ೪೯೦, ೬೯೦ ರಾತ್ತಲುಗಳಷ್ಟು ಕಾಫಿಯು ಉತ್ಪತ್ತಿಯಾಗಿದೆ. ಆ ವರ್ಷದಲ್ಲಿ ಬ್ರಿಟನಿಗೆ, ಹಿಂದಣ ವರ್ಷಕ್ಕಿಂತ ಹೆಚ್ಚು ಕಾಫಿಯು ರಫ್ತಾಯಿತು; ಆದುದು ಕಡಿಮೆಯಾಗಿದೆ.

೬೩೩೬ ಎಕ್ರೆಗಳಷ್ಟು ಕಾಫಿ ಬೆಳೆಯ ಕ್ಷೇತ್ರವನ್ನು ಆ ವರ್ಷದಲ್ಲಿ ವಿಸ್ತರಿಸಿರುವರು.

'ದೇವರಲ್ಲಿ ವಿಶ್ವಾಸವಿರಲಿ'

ಶುದ್ಧ ಹೃದಯದಿಂದ ದೇವರಲ್ಲಿ ವಿಶ್ವಾಸವನ್ನಿರಿಸಿದರೆ ಮಾನವನಿಗೆ ಯಾವ ಅಪಾಯವೂ ಬಾರದು ಎಂದು ನೆರೆದ ಭಕ್ತವೃಂದಕ್ಕೆ ಬೋಧಿಸುತ್ತ, ಉತ್ತರ ಕೆರೋಲಿನಾ ಪ್ರಾಂತ್ಯದ ಸಿಲ್ವಾ ಎಂಬ ಊರಿನ ಆಲ್ಬರ್ಟ್ ಟೀಸ್ಟರ್ ಎಂಬ ಧರ್ಮಬೋಧಕನು, ಒಂದು ನಾಗರಹಾವನ್ನು ಜನರ ಎದುರು ಹಿಡಿದು ಆಡಿಸುತ್ತ, "ನಾನು ಎರಡುಬಾರಿ ಸರ್ಪ ಕಡಿತದ ವಿಷದ ಜ್ವಾಲೆಗಳನ್ನು ಸಹಿಸಿರುವೆನು; ವೈದ್ಯಕೀಯ ಸಹಾಯವನ್ನೇ ಅಪೇಕ್ಷಿಸದೆ, ದೇವರಲ್ಲಿ ವಿಶ್ವಾಸವಿರಿಸಿಯೇ ಬದುಕಿ ಉಳಿದಿರುವೆನು" ಎಂದೆನ್ನುತಿದ್ದರು.

ಪಂಡಿತ ಜವಾಹರಲಾಲ ನೆಹರುಗಳವರ ಧರ್ಮಪತ್ನಿ ಶ್ರೀಮತಿ ಕಮಲಾ ನೆಹರುಗಳವರು ಕಠಿಣ ಕಾಯಿಲೆಯಲ್ಲಿರುವ ಕಾರಣ, ಜವಾಹರರನ್ನು ಎರಡು ದಿನಗಳ ಅವಧಿಗೆ ಬಿಡುಗಡೆಮಾಡಿರುವರೆಂಬ ವದಂತಿ ಬಂದಿದೆ. ಕಮಲಾನೆಹರುಗಳವರ ಸ್ಥಿತಿಯು ನಿರಾಶಾಜನಕವಾಗಿದೆಯೆಂದು ತಿಳಿದುಬರುತ್ತದೆ. ಜವಾಹರರು ಪತ್ನಿಯ ಬಳಿಗೆ ಧಾವಿಸಿರುವರು.



ಜವಾಹರರನ್ನು ಬಿಡುಗಡೆಮಾಡಬೇಕಾದರೆ ಸರಕಾರವು ಕೆಲವೊಂದು ಶರ್ತಗಳನ್ನು ಮುಂದಿರಿಸಿದಂತೆಯೂ, ಪತ್ನಿಯು ಪ್ರಾಣೋತ್ಕ್ರಮಣ ಸ್ಥಿತಿಯಲ್ಲಿರುವಳೆಂಬ ಕಾರಣದಿಂದ ಜವಾಹರರು ಆ ಶರ್ತಗಳಿಗೊಪ್ಪಿದಂತೆಯೂ ವಾರ್ತೆ.

ಜವಾಹರಲಾಲರನ್ನು ಎಷ್ಟು ಕಾಲ ಸರಕಾರದವರು ಪತ್ನಿಯ ಬಳಿಯಲ್ಲಿರಗೊಡುವರೋ ಇನ್ನೂ ತಿಳಿದು ಬಂದಿಲ್ಲ. ಅನೇಕ ಪುರಪ್ರಮುಖರು ಜವಾಹರಲಾಲರನ್ನು ಕಾಣಬಂದರು. ಆದರೆ, ಜವಾಹರರು ಅವರೊಡನೆ ರಾಜಕೀಯ ವಿಷಯಗಳಲ್ಲಿ ಚರ್ಚಿಸಲು ಒಪ್ಪಲಿಲ್ಲ. ಯಾವುದಾದರೂ ಶರ್ತಗಳಿಗೊಪ್ಪಿ ತಾನು ಬಂಧವಿಮೋಚನೆಯನ್ನಪೇಕ್ಷಿಸುವುದಿಲ್ಲವಾಗಿ ಜವಾಹರರು ಸರಕಾರಕ್ಕೆ ಬರೆದಿರುವರಂತೆ. ತನ್ನ ಪತ್ನಿಯನ್ನು ನೋಡಲಪ್ಪಣೆಯಿತ್ತುದಕ್ಕಾಗಿ ಸರಕಾರಕ್ಕೆ ವಂದನೆಗಳನ್ನು ತಿಳಿಸಿರುವರು.

ಕಮಲಾ ನೆಹರುರವರ ಸ್ಥಿತಿಯು, ಪತಿಯ ಆಗಮನದ ನಂತರ ಸ್ವಲ್ಪ ಸುಧಾರಿಸಿದಂತೆ ತಿಳಿದುಬರುತ್ತದೆ.

ಲೋರ್ಡ್ ವಿಲ್ಲಿಂಗ್ಡನ್ನರು ಹಿಂದೂ ದೇಶಕ್ಕೆ ಹೊರಟಿರುವರು.

ನಮ್ಮ ವೈಸರಾಯರಾದ ಲೋರ್ಡ್ ವಿಲ್ಲಿಂಗ್ಡನ್ನರು ಸಪತ್ನೀಕರಾಗಿ ವಿಮಾನದಲ್ಲಿ ಲಂಡನಿನಿಂದ ಇಂಡಿಯಕ್ಕೆ ಹೊರಟಿರುವರು. ಈ ದಿನ ಡಿಲ್ಲಿಗೆ ಬಂದು ತಲಪುವರಾಗಿ ತಿಳಿದುಬರುತ್ತದೆ.

ಚೌಲನು ಲಂಡನಿಗೆ ತಲಪಿದನು.

ಎಷ್ಟೋ ಕಾಲದ ಹಿಂದೆ ಕರಾಚಿಯಿಂದ ವಿಮಾನ ಪ್ರಯಾಣವನ್ನು ಕೈಕೊಂಡ ಹಿಂದೀ ವೈಮಾನಿಕ ಚೌಲನು ಕಾಣೆಯಾಗಿರುವನೆಂದು ಇಷ್ಟು ದಿನವೂ ಪ್ರಕಟವಾದ ನಂತರ,—ಮೊನ್ನೆ ತಾನೆ ಲಂಡನಿನಲ್ಲಿ ಸುರಕ್ಷಿತವಾಗಿ ಬಂದಿಳಿದಿರುವನೆಂದು ವಾರ್ತೆ ಬಂದಿದೆ.

ಬಂದೂಕಿನ ತೋಟಿಯು ಭಾವಚಿತ್ರ ಎತ್ತುವುದು!

ಇಂತಹ ತೋಟಿಯು ಈಗ ಕಂಡುಹಿಡಿಯಲ್ಪಟ್ಟಿದೆ, ಕಳ್ಳರು ಅಥವಾ ದರೋಡೆಕಾರರು ತಲೆತಪ್ಪಿಸಿಕೊಳ್ಳುವಾಗ ಈ ತೋಟಿಯನ್ನೊತ್ತಿ ಬಂದೂಕು ಹಾರಿಸಿದರೆ, ಆ ತೋಟಿಯು ಪೆಟ್ಟಿನಿಂದ ಕಳ್ಳನು ತಲೆತಪ್ಪಿಸಿಕೊಂಡರೂ, ಅದು ಅವನ ಫೊಟೋ ಎತ್ತುವುದಂತೆ!

ಹುಡುಗಿಯರ ಶಾಲೆಯಲ್ಲಿ ಅಧ್ಯಾಪಕರು

ಬೊಂಬಾಯಿಯ ಮುಸ್ಲಿಮರು ಸಭೆಗೂಡಿ, ಅಲ್ಲಿಯ ಆರ್. ಟಿ. ೩. ವಿದ್ಯಾ ಸಂಸ್ಥೆಯಲ್ಲಿ ೧೫ ವರ್ಷಕ್ಕೆ ಮೇಲ್ಪಟ್ಟ ಹುಡುಗಿಯರು ವ್ಯಾಸಂಗ ಮಾಡುತ್ತಿರುವುದರಿಂದ, ಪುರುಷರನ್ನು ಅಧ್ಯಾಪಕರನ್ನಾಗಿ ನೇಮಿಸುವುದು ಖುರಾನಿಗೆ ವಿರುದ್ಧವೆಂದು, ವಿದ್ಯಾಧಿಕಾರಿಗಳಿಗೆ ಮನವಿ ಮಾಡಿರುವರು.

ಬಿಹಾರ್ ಕೌನ್ಸಿಲಿನಲ್ಲಿ 'ಗಲಭೆಗಳು'!

ಬಿಹಾರ್ ಕೌನ್ಸಿಲಿನಲ್ಲಿ, ಅಧ್ಯಕ್ಷರ ಮೇಲೆ ಅವಿಶ್ವಾಸದ ಠರಾವು! ಅದನ್ನು ಗವರ್ನರರು ತಿರಸ್ಕರಿಸಿದರು, ಸದಸ್ಯರು ಕೌನ್ಸಿಲ್ ಕಾರ್ಯಕ್ರಮಗಳಲ್ಲಿ ಭಾಗಿಯಾಗದೆ, "ಅಧ್ಯಕ್ಷರೆ, ಕೊಡಿ ನಿಮ್ಮ ರಾಜೀನಾಮೆ, ನಾಚಿಕೆಯಿದ್ದರೆ!" ಎಂದು ಕೂಗಾಡಿ ಗಲಭೆ ಮಾಡಿದರು. ಕೆಲವು ಸದಸ್ಯರು ಎದ್ದುಹೋದರು. ಮುಂದೆ, ಸೋಮವಾರ ಕೌನ್ಸಿಲ್ ಅಧಿವೇಶನ ಕೂಡಿದಾಗ, ಅಧ್ಯಕ್ಷರು ತಮ್ಮ ರಕ್ಷಣೆಗೆಂದು ಪೋಲೀಸರನ್ನು ಕರೆಸಿದ್ದರು. ಇದನ್ನು ಹಲವರು ಎದುರಾಡಿದರು. ಕೌನ್ಸಿಲ್ ಕಾರ್ಯಗಳು ಬಹಿಷ್ಕೃತವಾದಂತಿವೆ. ಅಧ್ಯಕ್ಷರು, ಸದಸ್ಯರನ್ನು ಗಣಿಸದೆ ಹಟದಿಂದ ರಾಜೀನಾಮೆ ಕೊಡದೆ ಇರುವರು.

ವಿಲಾಯತಿ ಸಿಗರೇಟುಗಳು.

ಇಂಪೀರಿಯಲ್ ಟೊಬೆಕೊ ಕಂಪೆನಿ, ಲಿಮಿಟೆಡ್, ಲಾಹೋರ್ — ಇವರು ತಮ್ಮ ಕಂಪೆನಿಯ ಸಿಗರೇಟುಗಳನ್ನು ದೇಶೀಯವಾಗಿ ಪರಿಗಣಿಸಬೇಕಾಗಿ ಅಪೇಕ್ಷಿಸಿ ಲಾಹೋರ್ ಮುನಿಸಿಪಾಲಿಟಿಗೆ ಅರ್ಜಿ ಮಾಡಿದ್ದರು. ಆದರೆ ಈ ಕಂಪೆನಿಯವರು ಉಪಯೋಗಿಸುವ ಹೊಗೆಸೊಪ್ಪು ವಿದೇಶದ್ದಾದುದರಿಂದ, ಅಂತಹ ಸಿಗರೇಟುಗಳನ್ನು ದೇಶೀಯವಾಗಿ ಎಣಿಸಲಾಗುವುದಿಲ್ಲವೆಂದು ಮುನಿಸಿಪಾಲಿಟಿಯವರು ನಿರ್ಣಯಿಸಿ ಆ ಸಿಗರೇಟುಗಳ ಮೇಲೆ ಸುಂಕವನ್ನೇ ಹೊರಿಸಬೇಕಾಗಿದೆಯೆಂದು ನಿರ್ಧರಿಸಿರುತ್ತಾರೆ.

ಅಮೇರಿಕದಲ್ಲಿ ಮುಷ್ಕರ.

ಅಮೇರಿಕದ ಅಲ್ಯೂಮಿನಿಯಮ್ ಕಂಪೆನಿಯ ೧೨ ಸಾವಿರ ಮಂದಿ ಕೆಲಸಗಾರರು, ಸಂಬಳದ ವಿವಾದದಿಂದ ಮುಷ್ಕರ ಹಿಡಿದಿರುವರು.

ಯುದ್ಧ ಕಾಲದ ಬೋಂಬು! ಕೋವೆಲದಲ್ಲಿನ ಅಪಘಾತ.

ಯುರೋಪಿನ ಮಹಾ ಯುದ್ಧಕಾಲದಲ್ಲಿ, ಕೋವೆಲ್ಲ ಎಂಬಲ್ಲಿನ ಕಾಡಿನಲ್ಲಿ, ರಷ್ಯ ಮತ್ತು ಆಸ್ಟ್ರಿಯದ ಸೈನ್ಯಗಳೊಳಗೆ ಯುದ್ಧವಾದ ಒಂದು ಸ್ಥಳದಲ್ಲಿ, ಒಂದು ಮನೆಯಲ್ಲಿ ಒಂದು ಬೋಂಬು ಉಳಿದುಹೋಗಿತ್ತು. ಕಳೆದ ವಾರ, ಕೆಲವು ಶಾಲಾ ವಿದ್ಯಾರ್ಥಿಗಳು, ವಿಹಾರಾರ್ಥ ಅತ್ತಹೋಗಿ, ಆ ಮನೆಯನ್ನು ಪ್ರವೇಶಿಸಿ, ಅಲ್ಲಿ ದೊರೆತ ಬೋಂಬನ್ನೆತ್ತಲು, ಅದು ಸಿಡಿದು, ೬ ಮಂದಿ ಹತರಾದರು!

ಮದರಾಸಿನಲ್ಲಿ ಸರೋಜಿನಿ ದೇವಿಯವರು.

ಶ್ರೀಮತಿ ಸರೋಜಿನಿ ದೇವಿಯವರು ಬೆಂಗಳೂರಿನಿಂದ ಮದರಾಸಿಗೆ ಮುಂದರಿದು, ಅಲ್ಲಿ ಸ್ತ್ರೀಯರ ಸಭೆಯಲ್ಲಿಯಲ್ಲದೆ,—ಕೆನರಾ ಸೆಂಟ್ರಲ್ ಥಿಯೇಟರಿನಲ್ಲಿ ಜರಗಿದ ಸಾರ್ವಜನಿಕ ಸಭೆಯಲ್ಲಿಯೂ ಭಾಷಣಗಳನ್ನು ಮಾಡಿದರು. ಕಾಂಗ್ರೆಸ್ಸು ಒಂದೇ, ಭಾರತೀಯರ ನೈಜ ಪ್ರಾತಿನಿಧ್ಯವನ್ನು ವಹಿಸಿ ಇರುವುದೆಂದೂ, ಯಾವ ವ್ಯಕ್ತಿಯೂ ಸಮಾಜದಿಂದಾಗಲಿ ಹಿಗ್ಗದ ಯಾ ಕುಗ್ಗದ ಕಾಂಗ್ರೆಸ್ಸಿನ ವರ್ಚಸ್ಸು ಎಂದೆಂದೂ ಕಡಮೆಯಾಗದೆಂದೂ, ಕಾಂಗ್ರೆಸ್ಸಿನ ಪ್ರಕೃತದ ಯೋಜನೆಯಲ್ಲಿ ಸರ್ವರೂ ಸಹಕರಿಸಿ ಕೃತಾರ್ಥರಾಗಬೇಕೆಂದೂ, ದೇವಿಯವರು, ತಮ್ಮ ಗಂಭೀರವಾದ—ಹೃದಯಂಗಮವಾದ ಶೈಲಿಯಲ್ಲಿ ನೆರೆದವರಲ್ಲಿ ವಿನಂತಿಸಿ ಭಾಷಣ ಮಾಡಿದರು. ಅವರಿಗೆ ಅಲ್ಲಿಯ ಕಾಂಗ್ರೆಸ್ ಕಮಿಟಿಯ ಪರವಾಗಿಯೂ ಮಹಿಳಾ ಸಂಘದ ಪರವಾಗಿಯೂ ಮಾನಪತ್ರಗಳು ಅರ್ಪಿಸಲ್ಪಟ್ಟಿವೆ.

ಡಿಲ್ಲಿಯಲ್ಲಿ ಹೊಸ ಇಗರ್ಜಿ.

ನಮ್ಮ ವೈಸರಾಯರಾದ ಲೋರ್ಡ್ ವಿಲ್ಲಿಂಗ್ಡನ್ನರವರ ಧರ್ಮಪತ್ನಿಯವರೇ ಮುಂದಾಳಾಗಿ ಡಿಲ್ಲಿಯಲ್ಲಿ, ಆಂಗ್ಲೇಯರ ಬಗ್ಗೆ ಒಂದು ಹೊಸ ಇಗರ್ಜಿಗಾಗಿ ಇಂಗ್ಲೆಂಡಿನಲ್ಲಿ ರೇಡಿಯೋ ಮೂಲಕ ವಿನಂತಿಸಿದ್ದಲ್ಲಿ, ಸುಮಾರು ೩ ಸಾವಿರ ಪವನಿನಷ್ಟು ಧನಸಂಗ್ರಹವಾಗಿದೆಯೆನಾಗಿ ತಿಳಿದುಬರುತ್ತದೆ.

ಉಪವಾಸದ ಅಂತ್ಯ.

ತಾ. ೧೪ನೇ ಬೆಳಿಗ್ಗೆ ೬-೩೦ಕ್ಕೆ ಮಹಾತ್ಮಾಜಿಯವರು ಸೋಡಾ ಮತ್ತು ಜೇನನ್ನು ಮಿಶ್ರಮಾಡಿ ಬಿಸಿನೀರಲ್ಲಿ ಬೆರಸಿ, ಸೇವಿಸಿ, ತಮ್ಮ ಉಪವಾಸ ವ್ರತಾಹವನ್ನು ಮುಕ್ತಾಯಗೊಳಿಸಿದರು. ಈ ವೇಳೆಯಲ್ಲಿ, ವಾರ್ಧದ ಪುರಪ್ರಮುಖರನೇಕರು ಅಲ್ಲಿಗೆ ಚಿತ್ತೈಸಿದ್ದರು.

ಆಹಾರ ಸ್ವೀಕಾರ ಮಾಡಿದ ಕೂಡಲೇ ಗಾಂಧಿಜಿಯವರು ನೆರೆದವರಿಗೆ ಒಂದು ಚಿಕ್ಕ ಭಾಷಣ ಮಾಡಲು ಯತ್ನಿಸಿದರು. ಆದರೆ ನಿಶ್ಶಕ್ತಿಯಿಂದ ಸಾಧ್ಯವಾಗಲಿಲ್ಲ.

ಗಾಂಧಿಜಿಯವರು ತಮ್ಮ ಏಳು ದಿನಗಳ ಉಪವಾಸದಿಂದ ೮ ರಾತ್ತಲುಗಳಷ್ಟು ಭಾರವನ್ನು ಕಳಕೊಂಡಿರುವರು.

ಹಲವು ಕಡೆಗಳಿಂದ ಅಭಿವಂದನಾ ಸಂದೇಶಗಳು ಬಂದಿವೆ.

"ಈ ಉಪವಾಸದ ಶೀಘ್ರ ಫಲವೆಂದರೆ — ಸುಧಾರಕರ ಅಸಹಿಷ್ಣುತೆಯ ದಮನ" ಎಂಬುದನ್ನು ವಿವರಿಸಿ ಕಾಶೀ ಶಾಲೇಲಕರು ಒಂದು ಪ್ರಕಟಣೆ ಹೊರಡಿಸಿರುವರು.

ಸರದಾರ ವಲ್ಲಭ ಭಾಯಿಯವರ ಆರೋಗ್ಯ.

ಸರದಾರ ವಲ್ಲಭ ಭಾಯಿಯವರು ಇನ್ನೂ ಅಸ್ವಸ್ಥರಾಗಿರುವರು. ಈಗ ಬೊಂಬಾಯಿಯಲ್ಲೇ ಇರುತ್ತಾರೆ. ೧೦೩ ಡಿಗ್ರಿಗಳಷ್ಟು ಜ್ವರವಿದೆ. ಸಂಪೂರ್ಣ ವಿಶ್ರಾಂತಿ



ಪಡೆಯಬೇಕೆಂದು ಡಾಕ್ಟರರು ವಿಧಿಸಿರುವರು, ಮತ್ತೊಮ್ಮೆ ಮೂಗಿನ ಮೇಲೆ ಶಸ್ತ್ರಕ್ರಿಯೆ ನಡೆಸಬೇಕಾಗಿದೆಯೆಂದು ತಿಳಿದುಬಂದಿದೆ.

ಮಂಗಳೂರು.

ಕೆನರಾ ಹೈಸ್ಕೂಲಿನಲ್ಲಿ ಇದೇ ಆಗೋಸ್ತು ತಾ. ೧೯ನೇ ಆದಿತ್ಯವಾರ ಸಾಯಂಕಾಲ ೪॥ ಗಂಟೆಗೆ "ಕನ್ನಡದ ಹೊಸ ಸಾಹಿತ್ಯದ ಹಾದಿಯು ಸರಿಯಲ್ಲ" ಎಂಬ ವಿಷಯವನ್ನು ಶ್ರೀಯುತ ಸೀತಾರಾಮಾಚಾರ್ಯರ ಅಧ್ಯಕ್ಷತೆಯಲ್ಲಿ ಪೂರ್ವಪಕ್ಷದಿಂದ ಶ್ರೀ। ಎಮ್. ಎನ್. ಕಾಮತ್, ಶ್ರೀ। ಹುರುಳಿ ಭೀಮರಾವ್, ಉತ್ತರ ಪಕ್ಷದಿಂದ ಶ್ರೀ। ಉಳ್ಳಾಲ ಮಂಗೇಶರಾವ್, ಬಿ. ಎ., ಎಲ್. ಟಿ. ಶ್ರೀ। ಕಡೆಂಗೋಡ್ಲು ಶಂಕರ ಭಟ್ಟ, ವಿದ್ವಾನ್, ಪ್ರತಿಪಾದಿಸಲಿರುವರು. ಸಾಹಿತ್ಯಪ್ರೇಮಿಗಳೆಲ್ಲರೂ ಬಂದು ಭಾಗವಹಿಸಿಕೊಳ್ಳಬೇಕೆಂದು ವಿನಂತಿಯಿದೆ. ನಂತರ, ಹರಿದಾಸ ಗಂಗಾಚಾರ್ಯರ ಗೋರಾಕುಂಬಾರನೆಂಬ ಹರಿಕಥೆಯೂ ಇದೆ. ಎಲ್ಲರಿಗೂ ಸ್ವಾಗತವಿದೆ ಎಂದು ಎಸ್. ಆರ್. ಆಚಾರ್, ಬಿ.ಎ., ಎಲ್. ಟಿ. ಕಾರ್ಯದರ್ಶಿಗಳು, ತಿಳಿಸುತ್ತಾರೆ.

ಇದೇ ತಾ. ೧೧ಕ್ಕೆ ಅಂತ್ಯವಾಗುವ ಒಂದು ವಾರದ ನಮ್ಮ ನಗರದ ಆರೋಗ್ಯದ ವರದಿ: — ಮರಣಗಳು ೩೩, ಜನನಗಳು ೫೫. ಮರಣಗಳ ಪೈಕಿ ಸಿಡುಬು ೩, ಆಮಶಂಕೆ ೧, ಅತಿಸಾರ ೧, ನ್ಯುಮೋನಿಯಾ ೪, ಕ್ಷಯ ೪, ಇತರ ಶ್ವಾಸಕೋಶಸಂಬಂಧವಾದುದು ೧ ಮತ್ತು ಇತರ ಕಾರಣಗಳಿಂದ ಒಟ್ಟು ೯. ಸಿಡುಬು ಮೂವರಿಗೆ ತಗಲಿದೆ.

ಕಾಂಗ್ರೆಸ್ ಪರವಾಗಿ ನಮ್ಮ ಜಿಲ್ಲೆ, ಮಲಬಾರು ಮತ್ತು ನೀಲಗಿರಿ ಪ್ರಾಂತ್ಯಗಳ ಕೊನ್ಸ್ಟಿಟ್ಯೂಯನ್ಸಿಯಿಂದ ಬರುವ ಎಸೆಂಬ್ಲಿ ಚುನಾವಣೆಗೆ ಉಮೇದ್ವಾರರಾಗಿರುವ ಮಿ। ಸಾಮುವೇಲ್ ಆರೋನರು ಕಣ್ಣಾನೂರಿನಿಂದ ನಿನ್ನೆ ಇಲ್ಲಿಗೆ ಬಂದಿರುವರು.

ಮಂಗಳೂರು.

ಬರುವ ಮುನಿಸಿಪಲ್ ಚುನಾವಣೆಯಲ್ಲಿ, ಜನಾಬ್ ಎ. ಮೂಸಬ್ಬ, ಬಿ. ಎ. ಬಿ. ಎಲ್. ವಕೀಲ, ಇವರು ನಂಬ್ರ ೮ನೇ ಗೋಳಿಕಟ್ಟೆ ವಾರ್ಡಿನಿಂದ ಉಮೇದ್ವಾರರಾಗಿರುವರೆಂದು ತಿಳಿದುಬರುತ್ತದೆ.

"ಇಲ್ಲಿಯ ಬೋಳೂರುಕುದ್ರು ಬಳಿಯಲ್ಲಿ, ಮಂಗಳೂರಿನ ಕೆಲವು ಉತ್ಸಾಹೀ ತರುಣರು "ದಿ ಕೆನರಾ ಯೂನಿಯನ್ ಕ್ಲಬ್" ಎಂಬುದನ್ನು ಇದೇ ತಾ. ೧೯ರಲ್ಲಿ ತೆರೆದಿರುವರು. ಪ್ರಾರಂಭೋತ್ಸವ ಸಮಾರಂಭದ ಸಂದರ್ಭದಲ್ಲಿ, ಶ್ರೀಗಳಾದ ವಿಠ್ಠಲ ಭಕ್ತ, ಸುಂದರನಾಯ್ಕ, ಶ್ರೀನಿವಾಸ ಕಾಮತ್, ಮೋಹನರಾವ್ ಭಾಟ್ಕ, ಮತ್ತು ಅನಂತರಾವ್, ಇವರ ಗಾಯನವು ನಡೆಯಿತು. ಶ್ರೀಯುತ ಕುಳೂರು ರಾಮಕೃಷ್ಣ ನಾಯ್ಕರ ತಬ್ಲಾ ವಾದನ, ಬಾಬುರಾಯ ನಾಯ್ಕರ ಹಾರ್ಮೋನಿಯಮ್ ಕೌಶಲ್ಯ ಇವು ಪ್ರಶಂಸನೀಯವಾಗಿದ್ದುವು. ನೆರೆದವರಿಗೆ ಫಲಾಹಾರ ಸತ್ಕಾರವೂ ಇತ್ತು" ಎಂದು ಬಾತ್ಮಿದಾರರೊಬ್ಬರು ತಿಳಿಸುತ್ತಾರೆ.

"ಹರಿಜನೋದ್ಧಾರಕ್ಕಾಗಿ ದುಡಿಯುತ್ತಿರುವ ನನ್ನ ಮೇಲೆ, ನಾನಾ ಆರೋಪಗಳಿವೆ. ಮುಖ್ಯವಾಗಿ ನಾನು ಹರಿಜನ ಬಾಲಿಕೆಯನ್ನು ವಿವಾಹವಾಗಿದ್ದೇನೆಂಬಾಗಿ ನನ್ನ ವೈರಿಗಳು ಸುಳ್ಳು ವದಂತಿಯನ್ನು ಹರಡಿಸಿರುವರು, ಇದರಿಂದ ನನ್ನ ಮಾತಾಪಿತೃಗಳು ದುಃಖಗೊಂಡಿರುವರೆಂದು ಕೇಳಿದೆ, ನನ್ನ ಶತ್ರುಗಳ ಮೇಲೇನೂ ನನಗೆ ದ್ವೇಷವಿಲ್ಲ. ಆದರೆ, ಇಂತಹ ಸುಳ್ಳು ವಾರ್ತೆಗಳಿಂದ ನಾನು ಹರಿಜನ ಕಾರ್ಯದಲ್ಲಿ ಹಿಮ್ಮೆಟ್ಟುವವನಲ್ಲ" ಎಂದು ಶ್ರೀ ಬಿ. ಎಂ. ರಾಮಯ್ಯ, ದೇರೆಬೈಲು, ಡಿ. ಸಿ. ಎಂ. ಶಾಲಾ ಮಾಸ್ತರ್, ಇವರು ತಿಳಿಸಬಯಸುತ್ತಾರೆ.

ಇದೇ ತಾ. ೧೯–೮–೩೪ನೇ ಆದಿತ್ಯವಾರ ಬೆಳಿಗ್ಗೆ ಘಂಟೆ ೮-೩೦ಕ್ಕೆ ಕಾಂಡೇಶ್ವರದಲ್ಲಿರುವ ಸಿಟಿ ಆರ್ಯ ಸಮಾಜ ಮಂದಿರದಲ್ಲಿ 'ಪಿತೃಯಜ್ಞ'ದ ಕುರಿತು ಭಾಷಣವಿದೆ, ಸರ್ವರಿಗೂ ಸ್ವಾಗತವಿದೆ.

ಕಳೆದ ೩ ವರ್ಷಗಳಿಂದ ಕೌನ್ಸಿಲರರಾಗಿ ನಮ್ಮ ಮುನಿಸಿಪಾಲಿಟಿಯಲ್ಲಿ ಶ್ರಮಪಟ್ಟು ಕೆಲಸಮಾಡುತ್ತಿರುವ ಶ್ರೀ ನಗರ ರಘುನಾಥ ಶೆಣೈಯವರು ಈ ಮುಂದಿನ ಚುನಾವಣೆಗಾಗಿ ೧೦ನೇ ಸೆಂಟ್ರಲ್ ವಾರ್ಡಿಗೆ ಉಮೇದ್ವಾರರೆಂದು ತಿಳಿದುಬರುತ್ತದೆ.

"ಕಳೆದ ಸಂಚಿಕೆಯಲ್ಲಿ ಭೂವ್ಯಾಪಾರಿಗಳ ಸಂಘದ ಮಹಾಸಭೆಯು ಇದೇ ತಿಂಗಳ ತಾ. ೨೬ನೇ ಆದಿತ್ಯವಾರ ದಿನ ಸಾಯಂಕಾಲ ೪ ಗಂಟೆಗೆ ಪುತ್ತೂರಲ್ಲಿ ಜರಗುವುದೆಂದು ಪ್ರಕಟವಾಗಿತ್ತು, ಆದರೆ ಅಂದು ಇತರ ತಾಲೂಕುಗಳಿಂದ ಬರುವವರಿಗೆ ಬೆಟ್ಟದ ತೊಂದರೆಯಾಗುವ ಕಾರಣದಿಂದ ಸದ್ರಿ ಸಭೆಯು ಮಂಗಳೂರು ಡಿಸ್ಟ್ರಿಕ್ಟ್ ಬೋರ್ಡ್ ಆಫೀಸಿನಲ್ಲಿ ಅದೇ ದಿನ ಸಾಯಂ. ೪ ಗಂಟೆಗೆ ಜರಗುವುದು" ಎಂದು ಶ್ರೀ ಕೋಟ ರಾಮಕೃಷ್ಣ ಕಾರಂತರವರು ತಿಳಿಸುತ್ತಾರೆ.

"ಕಳೆದ ೧೯೩೩ನೇ ಇಸವಿ ಅಕ್ಟೋಬರ ತಾ. ೧೯ರಲ್ಲಿ ಸ್ಥಳೀಯ ಪತ್ರಿಕೆಗಳ ಮೂಲಕ ಈ ಜಿಲ್ಲೆಯ ಬೇರೆ ಬೇರೆ ಸ್ಥಳಗಳಲ್ಲಿ ಬೆಳೆಯ ಬೀಜವರಿ, ಸರ್ವೆನಂಬ್ರ, ವಿಸ್ತೀರ್ಣ, ಕೀರ್ವೆ, ಭತ್ತದ ಉತ್ಪತ್ತಿ ವಗೈರೆ ಅನುಭವಗಳನ್ನು ನನಗೆ ಕಳುಹಿಸಿಕೊಡಬೇಕಾಗಿ ಈ ಮುಂಚೆಯೇ ಪ್ರಕಟಿಸಿದ್ದೇನೆ. ಆ ಬಗ್ಗೆ ತಯಾರಿಸಿದ ಛಾಪಾ ಫಾರ್ಮುಗಳು ಸುಮಾರು ೧೫೦ನ್ನು ಜಿಲ್ಲೆಯ ಬೇರೆ ಕಡೆಗಳಿಗೆ ಕಳುಹಿಸಿಕೊಟ್ಟಿರುತ್ತೇನೆ. ಆದರೆ ಫಾರ್ಮು ಪಡಕೊಂಡವರ ಪೈಕಿ, ಹಾಗೆ ಬರಾಯಿಸಿಕೊಟ್ಟವರು ಕೇವಲ ೩ ಮಾತ್ರ ಆಗಿರುತ್ತದೆ. ಆದುದರಿಂದ ಅನುಭವವನ್ನು ಪಡಕೊಂಡವರು ಇತರರು ಕೂಡಾ ಇದ್ದರೆ ದಯಮಾಡಿ ಕೂಡಲೇ ಸದ್ರಿ ಅನುಭವವನ್ನು ನನಗೆ ಕಳುಹಿಸಿಕೊಡಬೇಕು. ಈ ಅನುಭವವು ರಿಸೆಟ್ಲ್‌ಮೆಂಟು ಆಕ್ಷೇಪಣೆ ಹಾಕುವ ಬಗ್ಗೆ ಅಗತ್ಯವಿರುತ್ತದೆ"ಂದು ಶ್ರೀ ಕೋಟ ರಾಮಕೃಷ್ಣ ಕಾರಂತ ಇವರು ಬರೆಯುತ್ತಾರೆ.

"ಕಳೆದ ಹಿಂದೂವರೆ ವರ್ಷಗಳಿಂದ ಉಡುಪಿಯಲ್ಲಿ ಹಿಂದೀ ಪ್ರಚಾರಕಾರ್ಯ ಮಾಡುತಿದ್ದ ಶ್ರೀ ಕೆ. ರಾಘವಾಚಾರ್ ರವರು ತನ್ನ ಅನಾರೋಗ್ಯದ ನಿಮಿತ್ತವಾಗಿ ಕಳೆದ ತಾ. ೨೧ಕ್ಕೆ ಇಲ್ಲಿಂದ ಮಹಾಡಕ್ಕೆ ಹೋಗಿ, ಧನ್ವಂತರ ವೈದ್ಯಶಾಲೆಯಲ್ಲಿ ಚಿಕಿತ್ಸೆ ಹೊಂದುತ್ತಿರುವರು. ಕನ್ನಡ ಜಿಲ್ಲೆಯಲ್ಲಿ ತನುಮನಧನಗಳಿಂದ ಹಿಂದೀ ಸೇವೆಯನ್ನು ಅಷ್ಟೊಂದು ಯಶಸ್ವಿಯಾಗಿ ಮಾಡುತ್ತಾ ಅನೇಕ ವಿದ್ಯಾರ್ಥಿಗಳನ್ನು ಹಿಂದೀಯಲ್ಲಿ ಬೇರೆ ಬೇರೆ ಪರೀಕ್ಷೆಗಳಿಗೆ ಕಳುಹಿಸಿ ಕೊಟ್ಟು, ಹಿಂದೀ ವಿದ್ಯಾರ್ಥಿ ವಿದ್ಯಾರ್ಥಿನಿಯರ ಅವಿಚಲ ಭಕ್ತಿಗೂ ಜನತೆಯ ಆದರಕ್ಕೂ ಪಾತ್ರರಾಗಿದ್ದ ಅವರಿಗೆ ಪರಮಾತ್ಮನು ಆರೋಗ್ಯವನ್ನು ದಯಪಾಲಿಸಿ, ಸೇವೆಯನ್ನು ಮಾಡಿಸುತ್ತಿರಲೆಂದು ಹಿಂದೀ ವಿದ್ಯಾರ್ಥಿ ವಿದ್ಯಾರ್ಥಿನಿಯರ ಹಾಗೂ ಪ್ರಾಂತೀಕರ ಪ್ರಾರ್ಥನೆ" ಎಂದೊಬ್ಬ ಬಾತ್ಮಿ.

ಕಳೆದ ಹಿಂದೀ ಪರೀಕ್ಷೆಯಲ್ಲಿ ನಮ್ಮ ಜಿಲ್ಲೆಯಿಂದ "ರಾಷ್ಟ್ರಭಾಷಾ ವಿಶಾರದ" ಪರೀಕ್ಷೆಗೆ ಕುಳಿತ ಉಡುಪಿಯ ಶ್ರೀ ಪಿ. ರಾಮಕೃಷ್ಣಾಚಾರರೂ, ಪುತ್ತೂರಿನ ವಕೀಲ ಶ್ರೀ ಬಿ. ರಾಮಚಂದ್ರರಾಯರ ಧರ್ಮಪತ್ನಿ ಶ್ರೀಮತಿ ರತ್ನಾದೇವಿ ಇವರಿಬ್ಬರೂ ತೇರ್ಗಡೆ ಹೊಂದಿರುವರು.

ಹವೆಯು ಅನುಕೂಲವಾಗಿದ್ದರೆ ಬೊಂಬಾಯಿ ಸ್ಟೀಮ್ ನೇವಿಗೇಶನ್ ಕಂಪೆನಿಯವರ ಸರಕು ಮತ್ತು ಪ್ರಯಾಣಿಕರ ಸ್ಟೀಮರು ಸರ್ವಿಸು ಇದೇ ಬರುವ ಸಪ್ಟಂಬರ ತಾ. ೧೧ನೇ ಮಂಗಳವಾರದಿಂದ ಆರಂಭವಾಗುವುದು. ಸ್ಟೀಮರುಗಳು ಪ್ರತಿ ಗುರುವಾರ ಇಲ್ಲಿಗೆ ತಲಪಿ, ಮರುದಿನ ಪೂರ್ವಾಹ್ನ ೧೦ ಘಂಟೆಗೆ ಇಲ್ಲಿಂದ ಹೊರಡುವುವು. ಇದೇ ಕಂಪೆನಿಯ ಮತ್ತೊಂದು ಸ್ಟೀಮರು (ಸರಕುಗಳನ್ನು ಹಾಗೂ ಪ್ರಯಾಣಿಕರನ್ನೊಯ್ಯುವ) ಬರುವ ಸಪ್ಟಂಬರ ತಾ. ೧೪ರಿಂದಾರಂಭವಾಗಿ ಪ್ರತಿ ಶುಕ್ರವಾರ ಬೊಂಬಾಯಿಯಿಂದ ಹೊರಟು, ಪ್ರತಿ ಸೋಮವಾರ ಬೆಳಿಗ್ಗೆ ಇಲ್ಲಿಗೆ ತಲಪಿ, ಅಂದೇ ಸಾಯಂಕಾಲ ಇಲ್ಲಿಂದ ಬೊಂಬಾಯಿಗೆ ಹೊರಡುವುದು. ಎಂದಿನಂತೆ, ಎಲ್ಲ ಬಂದರುಗಳಲ್ಲಿ ತಂಗುತ್ತದೆ.

ಶ್ರೀಕೃಷ್ಣ ಸಿನೆಮದಲ್ಲಿ, ಫೋಕ್ಸ್ ಕಂಪೆನಿಯವರ "ಕೊಂಗೊರಿಲ್ಲಾ" ಎಂಬ ಚಿತ್ರವು ಪ್ರದರ್ಶಿಸಲ್ಪಡುತ್ತಿದೆ. ಈ ಚಿತ್ರವು ಸಂಪೂರ್ಣವಾಗಿ ಆಫ್ರಿಕದ ಅಡವಿಗಳಲ್ಲೇ ತೆಗೆಯಲ್ಪಟ್ಟಿತು. ಇದರ ನಂತರ, ಪ್ರಭಾತ್ ಫಿಲ್ಮ್ ಕಂಪೆನಿಯವರ ಅತ್ಯಮೋಘವಾದ "ಸೈರಂಧ್ರಿ" ಎಂಬ ಬಹುವರ್ಣ ಚಿತ್ರವು ಪ್ರದರ್ಶಿಸಲ್ಪಡುವುದು. ಸಂಪೂರ್ಣವಾಗಿಯೂ ನಾನಾ ಬಣ್ಣಗಳಲ್ಲಿರುವ ಈ ಹಿಂದೀ ಚಿತ್ರವು ಇದೇ ಮೊದಲನೆಯದು. ಪ್ರಭಾತ್ ಕಂಪೆನಿಯ ನಟ–ನಟಿಯರೆಲ್ಲ ಇದರಲ್ಲಿ ಅಭಿನಯಿಸಿರುವರೆಂದು ಆಡಳಿತಗಾರರು ತಿಳಿಸುತ್ತಾರೆ.

ಇಲ್ಲಿಂದ ವಿಶಾಖಪಟ್ಟಣಕ್ಕೆ ವರ್ಗವಾಗಿ ಹೋಗುವ ನಮ್ಮ ಜಿಲ್ಲಾ ಜಡ್ಜ ಶ್ರೀ ಸಿ. ವಿ. ರೆಡ್ಡಿಯವರಿಗೆ ಪಬ್ಲಿಕ್ ಪ್ರೊಸಿಕ್ಯೂಟರ್ ಶ್ರೀ ಎಂ. ಎಸ್. ಪ್ರಭುಗಳವರು ಕಳೆದ ವಾರ ಒಂದು ಟೀಪಾರ್ಟಿಯಿತ್ತು ಸತ್ಕರಿಸಿದರು. ರೆಡ್ಡಿಯವರ ಪತ್ನಿಯವರಿಗೆ ಲೇಡೀಸ್ ಕ್ಲಬ್ಬಿನವರು ವಿದಾಯ ಸತ್ಕಾರವನ್ನಿತ್ತರು.

ಮಂಗಳೂರು ತಾ। ಕಾ। ಸಮಿತಿಯ ವಿಶೇಷ ಸಭೆಯೊಂದು ಸ್ಥಳೀಯ ಖಾದಿ ಭಂಡಾರದ ಮಹಡಿಯಲ್ಲಿ ಕಳೆದ ಗುರುವಾರ ಸಂಜೆ ಡಾ। ಶ್ರೀ ಯು. ಪಿ. ಮಲ್ಯರವರ ಅಧ್ಯಕ್ಷತೆಯಲ್ಲಿ ಜರಗಿ, ಬರುವ ಮುನಿಸಿಪಲ್ ಚುನಾವಣೆಯಲ್ಲಿ ಕಾಂಗ್ರೆಸ್ ಸಮಿತಿಯು ಭಾಗವಹಿಸಬೇಕೇ ಎಂಬ ವಿಷಯವು ಚರ್ಚಿಸಲಾಯಿತು. ಕಾರ್ಯಕಾರಿ ಮಂಡಳಿಯ ಸದಸ್ಯರಲ್ಲಿ ಭಿನ್ನಾಭಿಪ್ರಾಯವೆದ್ದು ಈ ವಿಷಯವನ್ನು ಇತ್ಯರ್ಥಗೊಳಿಸಲು ಪ್ರಕೃತ ಕೌನ್ಸಿಲಿನಲ್ಲಿರುವ ಹಾಗೂ ಇತರ ಕಾಂಗ್ರೆಸ್ ಹಿತೈಷಿಗಳ ಅಭಿಮತವನ್ನು ಕೇಳಿಕೊಂಡು, ಅವರ ಸಹಕಾರವಿದ್ದಲ್ಲಿ ಮಾತ್ರ ಕಾಂಗ್ರೆಸಿನ ಪರವಾಗಿ ಉಮೇದ್ವಾರರನ್ನು ಕಳುಹಿಸುವುದು ಸಮಂಜಸವೆಂದು ನಿರ್ಣಯಿಸಲಾಗಿ ಆ ದಿನದ ಸಭೆಯು ಅಲ್ಲಿಯೇ ಕೊನೆಗೊಂಡಿತು.

ಕಳೆದ ಆದಿತ್ಯವಾರ ಸಾಯಂಕಾಲ ಘಂಟೆ ೪-೩೦ಕ್ಕೆ ಕಾಂಗ್ರೆಸ್ ಸಮಿತಿಯ ಸಭೆಯು ಅದೇ ಮಾಳಿಗೆಯಲ್ಲಿ ಪುನಃ ಸೇರಿತು. ಶ್ರೀಗಳಾದ ಡಾ। ವಿಠ್ಠಲಶೆಟ್ಟಿ, ಡಾ। ಯು. ಪಿ. ಮಲ್ಯ, ಕೆ. ಆರ್. ಕಾರಂತ, ಮಾಧವರಾವ್, ಯು. ಸಂಜೀವರಾವ್, ಪದ್ಮನಾಭ ಭಂಡಾರಿ, ಕೆ. ನಾರಾಯಣ ಭಂಡಾರಿ, ರಾಘವೇಂದ್ರ ಪೈ, ಆರ್. ಆರ್. ತಲಚೇರಿಕರ, ಅಬ್ದುಲ್ ಖಾದರ್ ಅಸಾದಿಸಾಹೇಬ, ತಿಮ್ಮಪ್ಪ ಶೆಟ್ಟಿ, ವಿ. ಕೆ. ಉಪಾಧ್ಯಾಯ, ನಾರಾಯಣ ಕಿಲ್ಲೆ, ಕೆ. ಭೋಜರಾವ್, ಮಾರಪ್ಪ ಪಕ್ಕಳ, ವಿಟ್ಠಪ್ಪ ಪ್ರಭು, ಉಳ್ಳಾಲ ಕುಶ್ರು, ಬಿ. ನಾರಾಯಣ ರೈ, ಕೃಷ್ಣಪ್ಪ ತಿಂಗಳಾಯ, ಬಿ. ಅನಂತ ರೈ, ಇವರೇ ಮೊದಲಾದವರು ನೆರೆದಿದ್ದರಲ್ಲದೆ, ಇನ್ನೂ ಕೆಲವರು ಹಾಜರಿದ್ದರು. ಕಾಂಗ್ರೆಸ್ಸಿನವರು ಪ್ರಜಾಪ್ರತಿನಿಧಿ ಸಭೆಗಳನ್ನು ಸೇರಿ ದೇಶದ ರಾಜಕೀಯ ಪರಿಸ್ಥಿತಿಯನ್ನು ಸುಧಾರಿಸಬಹುದೆಂಬುದಾಗಿ ಅಖಿಲ ಭಾರತ ಕಾಂಗ್ರೆಸ್ ಸಮಿತಿಯು ವಿಶಾಲವಾದ ದಾರಿಯನ್ನು ಕೊಟ್ಟಿರುವಾಗ, ಮುನಿಸಿಪಾಲಿಟಿಯ ಚುನಾವಣೆಯಲ್ಲಿ ಭಾಗವಹಿಸಿ ಕಾಂಗ್ರೆಸ್ ಪಂಗಡದ ಕೌನ್ಸಿಲರ್ಸ್ ಸ್ನೇಕೆ ಉಂಟುಮಾಡಬಾರದು ಎಂಬ ಪ್ರಶ್ನೆಯು ಬಹಳ ಸಮಯದ ತನಕ ಚರ್ಚಿಸಲ್ಪಟ್ಟು ಕಡೆಗೆ, ಕೂಡಿದ ಸದಸ್ಯರಲ್ಲಿ ಭಿನ್ನಾಭಿಪ್ರಾಯವು ಎದ್ದುದರಿಂದ "ಪ್ರಕೃತ ಪರಿಸ್ಥಿತಿಯಲ್ಲಿ ಮಂಗಳೂರು ಮುನಿಸಿಪಲ್ ಕೌನ್ಸಿಲು ಚುನಾವಣೆಗೆ ತಾಲೂಕು ಕಾ। ಕಮಿಟಿಯ ಪರವಾಗಿ ಉಮೇದ್ವಾರರನ್ನು ಸದ್ರಿ ಕಮಿಟಿಯು ಕಳುಹಬಾಗುವುದಿಲ್ಲ" ಎಂಬ ಠರಾವು ಬಹುಮತದಿಂದ ಮಂಜೂರಾಗಿ ಸಭೆಯು ಅಂತ್ಯವಾಯಿತು. ಶ್ರೀ ಜೆ. ಎ. ಸಲ್ಡಾನರವರು ಅಧ್ಯಕ್ಷತೆಯನ್ನು ವಹಿಸಿದ್ದರು.

ತಾಲೂಕುಗಳಿಂದ.

ಮೂಲ್ಕಿ — ಇದೇ ಅಗೋಸ್ತು ತಾ. ೨೬ರಲ್ಲು ಸಂಜೆ ಗಂಟೆ ೪-೩೦ಕ್ಕೆ ಮೂಲ್ಕಿ ಲೋಕಲ್ ಫಂಡ್ ಆಸ್ಪತ್ರೆಯ ವಠಾರದಲ್ಲಿ ಮೂಲ್ಕಿ ಆಸ್ಪತ್ರೆಯ ನಿರಾಶ್ರಿತ ಫಂಡಿನ ಕಮಿಟಿಯವರು ಮಾಡಿದ ರೂಲ್ಸ್ ಇತ್ಯಾದಿಗಳನ್ನು ಪಾಸ್ ಮಾಡುವರೆ ಒಂದು ಮಹಾಸಭೆಯನ್ನು ಜರಗಿಸುವುದಾಗಿ ನಿರ್ಣಯಿಸಿರುವುದರಿಂದ ಸರ್ವರೂ ಬರಬೇಕಾಗಿ ವಿನಂತಿಸಲಾಗಿದೆ.

ಸ್ಥಳೀಯ ಸೆಂಟರಿನ ಉಪಾಧ್ಯಾಯರ ಸಂಘದ ಸಾಮಾನ್ಯ ಮಾಸಿಕ ಸಭೆಯು ಇದೇ ತಾ. ೨೮–೭–೩೪ನೇ ಶನಿವಾರ ಘಂಟೆ ೨-೩೦ಕ್ಕೆ ಸ್ಥಳೀಯ ಬೋರ್ಡ ಹೈಸ್ಕೂಲಿನ ಮುಖ್ಯ ಉಪಾಧ್ಯಾಯರಾದ ಶ್ರೀ ಕೆ. ಕೃಷ್ಣರಾವ್, ಬಿ. ಎ., ಎಲ್. ಟಿ. ಇವರ ಅಧ್ಯಕ್ಷತೆಯಲ್ಲಿ, ಸೆಂಟರ್ ಸ್ಕೂಲಿನಲ್ಲಿ ಜರಗಿತು. ಮುಂದಿನ ಸಭೆಯು ಇದೇ ಬರುವ ತಾ. ೨೫ನೇ ಶನಿವಾರ ಎಂದಿನಂತೆ ಸೆಂಟರ್ ಸ್ಕೂಲಿನಲ್ಲೇ ಜರಗುವುದು.

ಸ್ಥಳೀಯ ಬೋ। ಹಾ। ಎಲಿಮೆಂಟರಿ ಶಾಲೆಯ ವಿದ್ಯಾರ್ಥಿಗಳ ಅದೊಂದು ಸಭೆಯು ಇದೇ ತಾ. ೧೧ರಲ್ಲು ಸ್ಥಳೀಯ ಬೋ। ಹೈಸ್ಕೂಲ್ ಅಧ್ಯಾಪಕ ಶ್ರೀ ಯು. ಬಿ. ಅನಂತಯ್ಯನವರ ಅಧ್ಯಕ್ಷತೆಯಲ್ಲಿ ನಡೆದು, ಬಂದ 'ವಿಗ್ರಹಾರಾಧನೆಯ ಒಳಿತು–ಕೇಡು' ಎಂಬುದರ ಕುರಿತು ಚರ್ಚೆ ನಡೆದು ಅಧ್ಯಕ್ಷರ ಸಮಯೋಚಿತ ಭಾಷಣದಿಂದ ಸಭೆಯು ಅಂತ್ಯವಾಯಿತು.

ಪೇಟೆಯಿಂದ ಬಪ್ಪನಾಡು ದೇವಳಕ್ಕೆ ಹೋಗುವ ರಸ್ತೆಯು ತೀರಾ ಹಾಳುಬಿದ್ದಿದೆ. ಗಾಡಿನ ಚೂರಿನಿಂದ ರಸ್ತೆಯ ಮೇಲೆ ಕಾಲಿಡುವುದು ಅಪಾಯಕರವಾಗಿ ಪರಿಣಮಿಸಿದೆ. ಸಂಬಂಧಪಟ್ಟ ಅಧಿಕಾರಿಗಳು ಈ ಕಡೆಗೆ ಲಕ್ಷ್ಯ ಕೊಡುವರೇ?

ಕೋಲಂಬೆ ಗ್ರಾಮದ ಕೇಡಿ ಬಾಬುಪೂಜಾರಿ ಎಂಬವನು ಇತ್ತೀಚೆಗೆ ಕೆಲವು ತಿಂಗಳಿನಿಂದ ತಲೆಮರೆಸಿಕೊಂಡಿದ್ದು, ಸಸಿಹಿತ್ಲಿನಲ್ಲಿ ಬಂದು ನೆಲಸಿ ತನ್ನ ಹೆಸರನ್ನು ಬದಲಾಯಿಸಿಕೊಂಡು, ಜೋತಿಷ್ಯ ಪಂಡಿತ ಎಂಬದಾಗಿ ನಟಿಸಿ, ಅಲ್ಲಲ್ಲಿ ಚಿಲ್ಲರೆ ಕಳವು ಮಾಡುತ್ತಿದ್ದು, ಕಡೆಗೆ ನಮ್ಮ ಜನಪ್ರಿಯ ಪೋಲೀಸ್ ಸಬ್ ಇನ್ಸ್‌ಪೆಕ್ಟರ್ ಶ್ರೀ ಎಂ. ಶೀನಶೆಟ್ಟಿ ಸಾಹಸ–ಚಾತುರ್ಯದಿಂದ ಕೈದು ಮಾಡಲ್ಪಟ್ಟಿರುವನು.

ಸ್ಥಳೀಯ ಬೋರ್ಡು ಹೈಸ್ಕೂಲಿನಲ್ಲಿ ಈಗ ೧೯೭ ಮಕ್ಕಳು ಶಿಕ್ಷಣಹೊಂದುತ್ತಿರುವರು. ಸದ್ರಿ ಶಾಲೆಯ ಸ್ಥಳೀಯ ಎಡ್ವೈಸರಿ ಬೋರ್ಡಿನ ಅಧ್ಯಕ್ಷರಾಗಿ ಶ್ರೀಯುತ ಎಂ. ಆರ್. ಪೂಂಜರು ಚುನಾಯಿಸಲ್ಪಟ್ಟಿರುವರು.

ಇಲ್ಲಿಯ ಆಸ್ಪತ್ರೆಯ ವಠಾರದಲ್ಲಿ ಕೀರ್ತಿಶೇಷ ಬೋಳ ಮಾಧವರಾಯರ ಸ್ಮಾರಕಕ್ಕಾಗಿ ಸದ್ರಿಯವರ ಮಕ್ಕಳು ಕಟ್ಟಿಸುತ್ತಿರುವ "ಕುಷ್ಠರೋಗಿಗಳ ಶೆಡ್ಡ"ನ್ನು ತೆರೆಯುವ ಬಗ್ಗೆ ನಮ್ಮ ಜಿಲ್ಲಾ ಕಲೆಕ್ಟರ ಧೊರೆಗಳವರು ಇದೇ ತಾ. ೧೭ಕ್ಕೆ ಇಲ್ಲಿಗೆ ಬರಲಿರುವರೆಂದು ತಿಳಿದು ಬರುತ್ತದೆ.

ಉಡುಪಿ — ವಾಡಿಕೆಯಂತೆ ಶ್ರೀಲಕ್ಷ್ಮೀ ವೆಂಕಟೇಶ ದೇವಸ್ಥಾನದಲ್ಲಿ ಸಪ್ತಾಹ ಭಜನೋತ್ಸವವು ಇದೇ ಶ್ರಾವಣ ಬ। ೫ಯು ಬುಧವಾರ ಪ್ರಾರಂಭಿಸಿ ೧೨ಯು ಬುಧವಾರ ಮಂಗಳಹೊಂದುತ್ತದೆ.

ಕಾಪು ಮತ್ತು ಶಿರ್ವಗಳಲ್ಲಿ ರೈತರ ಮಹಾಸಭೆಗಳು ರಿಸೆಟ್ಲ್‌ಮೆಂಟ್ ಬಗ್ಗೆ ಆಕ್ಷೇಪಗಳನ್ನು ಮುಂದೊತ್ತುವರೆ ಈ ವಾರದಲ್ಲಿ ನಡೆದಿವೆ.

ಪಡುಬಿದ್ರಿ — ತಾ. ೧೧–೮–೩೪ನೇ ಶನಿವಾರ ಪೂರ್ವಾಹ್ನ ಸ್ಥಳೀಯ ಬೋ। ಹಾಯರ್ ಎಲಿಮೆಂಟರಿ ಶಾಲೆಯಲ್ಲಿ ಇಲ್ಲಿಯ ಕೇಂದ್ರದ ಮೂಲಪಾಠ ಶಾಲಾ ಅಧ್ಯಾಪಕ ಸಂಘದ ಸಭೆಯು ಶ್ರೀ ವೈ. ಲಕ್ಷ್ಮೀನಾರಾಯಣ ಜ್ಯೋತಿಷ್ಯರ ಅಧ್ಯಕ್ಷತೆಯಲ್ಲಿ ಜರಗಿತು. ಕಾರ್ಯಕ್ರಮ ನಿಯಮದಂತೆ ಗತಸಭಾ ವರದಿವಾಚನ, ಶ್ರೀಗಳಾದ ಪಿ. ರಾಮರಾವ್, ವೈ. ಆನಂದರಾವ್ ಇವರ 'ಜೀವಮಿಮೆ' ಹಾಗೂ 'ವಿದ್ಯೆ' ಎಂಬೀ ವಿಷಯಗಳ ಉಪನ್ಯಾಸ ಪಠನ, ಇಲಾಖಾಧೀಶರಿಂದ ಬಂದಿದ್ದ ಹುಕುಂಗಳ ಅನುಭವ ಕೊಡುವಿಕೆಯೇ ಇತ್ಯಾದಿಗಳು ಸುಸೂತ್ರವಾಗಿ ಪೂರೈಸಲ್ಪಟ್ಟವು.

ಇಲ್ಲಿಯ ಬೋ। ಹಾ। ಎ। ಶಾಲೆಯಲ್ಲಿ ತಾ. ೧೮ನೇ ಶನಿವಾರ ಪೂರ್ವಾಹ್ನ ವರ್ಗದಾರರ ಅದೊಂದು ಸಭೆಯನ್ನು ಶ್ರೀ ಕೆ. ಜೆ. ಬಲ್ಲಾಳರು ಜರಗಿಸಲಿಕ್ಕಿರುವರು.

ಹಿಂದೀ ಮಹಿಳೆಯರೂ ಚಿನ್ನಾಭರಣಗಳೂ.

ಅಂದು ಉಡ್ಪಿಗೆ ಮಹಾತ್ಮಾ ಗಾಂಧಿಯವರು ಬಿಜ್ಜೈಸಿದ್ದಾಗ, ಹಿಂದೀ ಮಾನಪತ್ರವನ್ನು ಮಹಾಸಭೆಯವರು ಕುಮಾರಿ ನಿರುಪಮೆಯು ಓದಿ ಅರ್ಪಿಸುವ ವೇಳೆ, ಮಹಾತ್ಮರ ದೃಷ್ಟಿಯು ಅವಳ ಕೈಬಳೆಗಳ ಮೇಲೆ ಬಿದ್ದಿತು. ಮಾನಪತ್ರವನ್ನು ಅರ್ಪಿಸಿಯಾದೊಡನೆ ನನಗೆ ಆ (ಬಂಗಾರದ) ಬಳೆಗಳನ್ನು ಕೊಡಲಾರೆಯಾ ಎಂದು ಕೈ ತೋರಿಸಿದರು, ಕುಮಾರಿಯು ಇದಕ್ಕೆ ಸಿದ್ಧವಾಗಿದ್ದರೂ ಸಂತೋಷದಿಂದಲೂ ಚಿನ್ನದ ಮೇಲಣ ವ್ಯಾಮೋಹದಿಂದಲೋ ಕಂಬನಿದುಂಬಿ ಕೈಬಳೆಗಳನ್ನು ಕೊಡಹೋದಳು. ನೀನು ಕಣ್ಣೀರಿಟ್ಟು ನನಗೆ ಬಳೆಗಳನ್ನು ಕೊಡುವುದಾದರೆ, ನನಗೆ ಅವುಗಳು ಬೇಕಾಗಿಲ್ಲವೆಂದರು. ಕೊನೆಗೆ ಮಹಾತ್ಮರು ಶ್ರೀ ರಾಮಭವನದಲ್ಲಿ ಫಲಾಹಾರ ವಿಶ್ರಾಂತಿ ಹೊಂದುತ್ತಿದ್ದ ವೇಳೆ ತನ್ನ ಬಳೆಗಳನ್ನು ಕುಮಾರಿಯು ಕೊಡಹೋದಳು. ಅವುಗಳನ್ನು ಸ್ವೀಕರಿಸಿ, "ಇನ್ನು ಮುಂದೆ ಆ ಬಳೆಗಳ ಬದಲಿಗೆ ಬೇರೆ ಬಳೆಗಳನ್ನು ಮಾಡಿಸಿಕೊಡಬೇಕಾಗಿ ಹೆತ್ತವರನ್ನು ಬಾಧಿಸಬಾರದು; ಚಿನ್ನಾಭರಣಗಳನ್ನು ತ್ಯಜಿಸಿಬಿಟ್ಟು, ಆದರ್ಶ ಹಿಂದೀ ರಮಣಿಯಾಗಬೇಕೆ"ಂದು ಬುದ್ಧಿವಚನಗಳನ್ನು ನುಡಿದರು. ಈ ಕುಮಾರಿಯು ಕುಂದಾಪುರದಲ್ಲೂ ಮಹಾತ್ಮರ ದರ್ಶನ ಸೇವೆಯಲ್ಲಿ ಭಾಗವಹಿಸಿ, ಮಹಾತ್ಮರ ವಿಹಾರ, ವಾಯುಸೇವನೆಗಳ ಸಮಯ ಒಡನಾಡಿಯಾಗಿದ್ದಳು. ಮಹಾತ್ಮಾಜಿಯವರು "ನೀನು ಹಿಂದೀಯಲ್ಲಿ ಪರಿಶ್ರಮ ಮಾಡಬೇಕು, ಒಡವೆಗಳಿಗಾಗಿ ಹೆತ್ತವರನ್ನು ಉಪದ್ರವಿಸಬಾರದು. ನನಗೆ ಹಿಂದೀಯಲ್ಲಿ ಆಗಿಂದಾಗ ಕಾಗದ ಬರೆಯಬೇಕು"— ಎಂದಿದ್ದರು. ಕರ್ನಾಟಕ ಪ್ರವಾಸದಲ್ಲಿ ಬೆಳಗಾಂವಿನ ಕಡೆಯಿಂದ ಮಹಾತ್ಮರೇ ಕುಮಾರಿನಿರುಪಮೆಗೆ ಕಾಗದ ಬರೆದರು. ಅದರಲ್ಲಿ — ನೀನು ಚಿನ್ನಾಭರಣಗಳನ್ನು ಹಾಕುವುದಿಲ್ಲವಷ್ಟೆ? ಎಂಬುದಾಗಿಯೂ ಪ್ರಸ್ತಾಪಿಸಿದ್ದರು. ಅದಕ್ಕೆ ಉತ್ತರವಾಗಿ ಕುಮಾರಿಯು ಬರೆಯುವಾಗ "ಚಿನ್ನಾಭರಣಗಳನ್ನು ಹಾಕಬಾರದಾಗಿ ನೀವು ಹೇಳುವುದರ ಕಾರಣ ನನಗೆ ತಿಳಿಯುವುದಿಲ್ಲ"ವೆಂದು ಬರೆದಿದ್ದಳು.

ಇದಕ್ಕೆ ಉತ್ತರವಾಗಿ ಮಹಾತ್ಮಾ ಗಾಂಧಿಯವರು ಕಟ್ನಿಕ್‌ನಿಂದ ಬರೆದಿರುವ ಪತ್ರವೇನೆಂದರೆ —

ಚಿ। ನಿರುಪಮಾ,

ನಿನ್ನ ಕಾಗದ ತಲಪಿತು. ನಿನ್ನ ಹಿಂದೀ ಶೈಲಿಯು ಚೆನ್ನಾಗಿದೆ. ಚಿನ್ನಾಭರಣಗಳು ಅನಾವಶ್ಯಕವಾಗಿವೆ. ಚಿನ್ನಾಭರಣಗಳ ಉಪಯೋಗದಿಂದ ಹುಡುಗಿಯರು ಬಾಹ್ಯಸೌಂದರ್ಯಕ್ಕೆ ಮರುಳಾಗುತ್ತಾರೆ. ದಾರಿದ್ರ್ಯದ (ನಮ್ಮ) ದೇಶದಲ್ಲಿ ಚಿನ್ನಾಭರಣಗಳ ಮೋಜು ಇರಬಾರದು. ಈ ಎಲ್ಲಾ ಕಾರಣಗಳೇ ಚಿನ್ನಾಭರಣಗಳಿಗೆ ವಿರೋಧವಾಗಿದೆ.

ಬಾಪುವಿನ ಆಶೀರ್ವಾದಗಳು.

ಭಗಿನಿಯರೇ! ಮಹಾತ್ಮಾ ಗಾಂಧಿಯವರ ಬೋಧೆಯ ಸ್ವಾರಸ್ಯವನ್ನು ಗ್ರಹಿಸಿ, ಬಡ ಹಿಂದೂದೇಶದ ಜನತೆಯಲ್ಲಿ ಸರಳಜೀವನವನ್ನುಂಟುಮಾಡುವಂತೆ ಮೇಲ್ಪಂಕ್ತಿ ತೋರಿಸಿರಿ.

ರೈಲುಬಂಡಿಗಳ ಸಮಯ.

	ಹೊರಡುವ ಸಮಯ	ಇಲ್ಲಿಗೆ ತಲಪುವ ಸಮಯ
ಮೈಲ್	ಬೆಳಿಗ್ಗೆ ೯.೨೫	ಸ್ಯಾಮ ೪.೨೦
ಮಿಕ್ಸೆಡ್	,, ೬	ರಾತ್ರಿ ೮.೪೫
ಪೆಸೆಂಜರ್	ಅಪರಾಹ್ನ ೧೨.೫೫	ಅಪರಾಹ್ನ ೩.೫೦
ಎಕ್ಸ್‌ಪ್ರೆಸ್	ಸ್ಯಾಮ ೫.೨೫	ಬೆಳಿಗ್ಗೆ ೮.೪೦

ಹೊಸ ಸರ್ವೀಸುಗಳು.

ಕಾಂಞಂಗಾಡ್	ಬೆಳಿಗ್ಗೆ ೮.೪೦,	
ವರೆಗಿನ ಬಂಡಿ		ಅಪರಾಹ್ನ ೧.೨೨.
ಕಾಸರಗೋಡು	ಅಪರಾಹ್ನ ೩.೨೫,	
ವರೆಗಿನ ಬಂಡಿ,		ಸ್ಯಾಮ ೬.೦೫,

ಗೇರನ್ನು ರಫ್ತುಮಾಡುವವರು.

ಸಂಯುಕ್ತ ಸಂಸ್ಥಾನದ ಪ್ರಮುಖ ವಿಜಸ್ವಿಯು ಗೇರುಬೀಜಗಳನ್ನು ರಫ್ತುಮಾಡುವ ಪ್ರಮುಖ ಸಂಸ್ಥೆ ಯಾ ವ್ಯಾಪಾರಸ್ಥನ ಪ್ರಾತಿನಿಧ್ಯವನ್ನು ವಹಿಸಲು ಅಪೇಕ್ಷಿಸುತ್ತದೆ. ಪತ್ರವ್ಯವಹಾರವನ್ನು ಬಯಸಲಾಗಿದೆ.

ವಿಳಾಸ:

A. C. Herrmann Co.,
105 Hudson Street,
New York City, U. S. A.
Reference Irving Trust Company of New York City.

[೪೧೨–೮.]

([illegible])

[illegible] (ತಾ. 17-8-'34)

[illegible] ದೇಹಸ್ಥಿತಿಯು ಈ ದಿನ [illegible]ವಾಗಿದೆ. ನಾಡಿಬಡಿತವು ಹೆಚ್ಚಿದೆ. [illegible] ಬಂದಿಲ್ಲ. ಡಾಕ್ಟರರೊಡನೆ ಮಾತಾಡುವಾಗ [illegible] ವಿನೋದಪರವಾಗಿಯೇ ಮಾತಾಡುವರು. ೨-೩ ಟಿನ್ನುಗಳಷ್ಟು ನೀರನ್ನು ಈ ದಿನ ಕುಡಿದಿರುವರು. ಕಳೆದ ಐದು ದಿನಗಳಲ್ಲೂ ಅವರಿಂದ ಇಷ್ಟು ನೀರನ್ನು ಕುಡಿಯಲಾಗಿದ್ದಿಲ್ಲ. ಈ ದಿನ ಮಧ್ಯಾಹ್ನ ಮೌನವ್ರತ ಧಾರಣೆ ಮಾಡಿರುವರು.

ಏಳನೆ ದಿನ (ತಾ. 18-8-'34)

ಇದು ಉಪವಾಸದ ಕೊನೆಯ ದಿನ. ಇನ್ನು ೧೫ ದಿನಗಳ ತನಕ, ಯಾವ ಅಪಾಯವೂ ಇಲ್ಲದೆ ಉಪವಾಸ ಮಾಡಬಹುದೆಂಬಂತೆ ತೋರುವರು. ಅಪರಾಹ್ನ ೩-೩೦ಕ್ಕೆ ಡಾಕ್ಟರರು ಪರೀಕ್ಷಿಸಿ, ಸ್ಥಿತಿಯು ತೃಪ್ತಿಕರವಾಗಿದೆಯೆಂದರು. ನಾಡಿಬಡಿತ ೬೩; ದೇಹದ ಉಷ್ಣ ೯೬.೭ ಡಿಗ್ರಿ ಇದೆ. ಹೃತ್ಕೋಶದ ಸ್ಥಿತಿಯು ಉಪವಾಸಾರಂಭದಂದು ಇದ್ದುದಕ್ಕಿಂತ ಇಂದು ಚೆನ್ನಾಗಿದೆಯಂತೆ!

ಗಾಂಧಿಜಿಯವರು ನಾಳೆ ಬೆಳಿಗ್ಗೆ ೬ ಘಂಟೆಗೆ ಉಪವಾಸವ್ರತವನ್ನು ಮುಗಿಸುವರು.

ಕಮಲಾ ನೆಹರುರವರನ್ನು ಕಾಣಲು ತನಗೆ ಬಿಡುಗಡೆ ಮಾಡಿರುವರಾಗಿ ಪಂಡಿತ ಜವಾಹರರು ಗಾಂಧಿಜಿಯವರಿಗೆ ತಂತಿಮೂಲಕ ತಿಳಿಸಿರುವರು.

ಜೂಜಿನ ಮೋಜು.

ಜೂಜು ಕೋರರು, ಕಳೆದುಕೊಂಡುದನ್ನು ಮರಳಿ ಪಡೆಯಲು ಏನು ಮಾಡುವರು, ಏನು ಮಾಡದಿರರು? ವಾರ್ಸೋ ಎಂಬಲ್ಲಿನ ಕ್ರ್ಯಾವಸ್ಕಿ ಎಂಬಾತನು ಜೂಜಾಡುತ್ತ, ಎದುರಾಳಿಗೆ ಎಲ್ಲ [illegible] ಹೆಂಡತಿಯನ್ನು [illegible] ಅಲ್ಲಿಯೂ ಸೋತನು. [illegible] ಮನೆಗೆ ಬಂದು, ಹೆಂಡತಿಗೆ ನಡೆದುದನ್ನು ವಿವರಿಸಿದನು. ಗಂಡನೂ ಹೆಂಡತಿಯೂ ಕೂಡಿ, ಆಲೋಚಿಸಿದರು. ಕೊನೆಗೆ ಕ್ರ್ಯಾವಸ್ಕಿಯ ಹೆಂಡತಿಯು, ೧೭ ವಯಸ್ಸಿನ ತಂಗಿಯೊಬ್ಬಳಿದ್ದಳು. ಅವಳನ್ನು ಕಳುಹುವುದೆಂದಾಯಿತು. ಕ್ರ್ಯಾವಸ್ಕಿಯ ಎದುರಾಳಿಯು ಕ್ರ್ಯಾವಸ್ಕಿಯ ಹೆಂಡತಿಯನ್ನು ಕಣ್ಣಾರೆ ನೋಡಿರಲಿಲ್ಲ. ೧೭ ವಯಸ್ಸಿನ ಆ ಬಾಲಿಕೆಯನ್ನು, ತಾನು ಗೆದ್ದವಳೆಂದೇ ನಂಬಿ, ಕರಕೊಂಡು ಹೋಗಿ, ತನ್ನಲ್ಲಿ ಇಟ್ಟುಕೊಂಡಿದ್ದನು. ಕೆಲಕಾಲದ ನಂತರ ಅವರೊಳಗೆ ಜಗಳವಾಯಿತು. ನೆರೆಕರೆಯವರು ಬಂದು ಮಧ್ಯಸ್ಥಿಕೆ ವಹಿಸಿದರು. ರಹಸ್ಯವು ಹೊರಬಿತ್ತು. ಈಗ, ಕ್ರ್ಯಾವಸ್ಕಿ, ಕ್ರ್ಯಾವಸ್ಕಿಯ ಹೆಂಡತಿ, ಆಕೆಯ ತಂಗಿ, ಮತ್ತು ಆ ವಿಜಯೀ ಜೂಜುಕೋರ, ಇವರು, ಸೆರೆಯಾಳಾಗಿರುವರು.

ನೋಟೀಸು.

ಕುಂದಾಪುರ ತಾಲೂಕು ಕೋಟೇಶ್ವರ ಗ್ರಾಮದಲ್ಲಿರುವ ಕೆಳಬೀದಿ ವಿಶ್ವೇಶ್ವರ ಐತಾಳರ ಮಕ್ಕಳು ಮ್ಯಾನರರು ಶ್ರೀನಿವಾಸ ಐತಾಳ 1, ಸಣ್ಣಯ್ಯ 1, ರಾಮು 1, ಕೃಷ್ಣ 1, ಅಣ್ಣಪ್ಪಯ್ಯ 1, ಸೂರ್ಯ 1, ಕೂಡಾ 6 ಜನರ ಬಗ್ಗೆ ಸದ್ರಿಯವರ ಚಿಕ್ಕಪ್ಪ ಕುಪ್ಪಯ್ಯ ಐತಾಳನು ಎಲ್ಲಾ ಬೇಂಕುಗಳಿಗೂ, ಎಲ್ಲಾ ಜನರಿಗೂ ಈ ಮೂಲಕ ತಿಳಿಯಪಡಿಸುವುದೇನೆಂದರೆ—ನನ್ನ ಅಣ್ಣನಾದ ಸದ್ರಿ ವಿಶ್ವೇಶ್ವರ ಐತಾಳರು ಕ್ರಮವಾದ ಲಿಖಿತಪತ್ರ ಇರದೆ ಅನಾವಶ್ಯಕ ಇನ್‌ಕಮ್‌ಟೇಕ್ಸ್ ವಗೈರೆ ದಂಡ ತೆರುತ್ತಾ ಅನೇಕರ ದುಸ್ಸಹವಾಸ ಮಾಡಿ ಅವರಿಗೆ ಕಾಫಿ ವಗೈರೆ ಕುಡಿಸುತ್ತಾ ಮತ್ತು ಅನೇಕರಿಗೆ ಬೇಂಕುಗಳಲ್ಲಿ ಜ್ಯಾಮೀನು ಹೇಳಿ ದಂಡ ತೆರುತ್ತಾ ಕುಟುಂಬದ ಜೀವನಕ್ಕೆ ಸಾಕಷ್ಟು ಪಿತ್ರಾರ್ಜಿತ ಹುಟ್ಟುವಳಿ [illegible] ಸಾಲ [illegible] ಇಲ್ಲವಾದರೂ ಸದ್ರಿಯವರು ಅನಾವಶ್ಯಕ ಸಾಲ ಮಾಡುತ್ತಾರಾಗಿ ಕಂಡು ಬಂದುದರಿಂದ ಎಲ್ಲರಿಗೂ ತಿಳಿಸುವುದೇನೆಂದರೆ—ಸದ್ರಿ ವಿಶ್ವೇಶ್ವರ ಐತಾಳರಿಗೆ, ಕುಟುಂಬದ ಸೊತ್ತಿನಲ್ಲಿ 21/1 ಇಪ್ಪತ್ತೊಂದನೇ ಒಂದು ಅಂಶದ ಹಕ್ಕು ಮಾತ್ರ ಇರುತ್ತದೆ. ಅವರು ಮಾಡುವ ಸಾಲಗಳಿಗೆ ಸದ್ರಿ ಮ್ಯಾನರರ ಮತ್ತು ಇತರ ಯಾವ ಮೆಂಬರರ ಸೊತ್ತು ಜವಾಬ್ದಾರಿ ಸಿಕ್ಕಲಿಕ್ಕಿಲ್ಲ. ಇವರ ಬಗ್ಗೆ ಸಾಲ ಮಾಡುವ ಯಾವ ಗರ್ಜೂ ಅವರಿಗೆ ಇರುವುದಿಲ್ಲವೆಂಬ ಸಂಗತಿ ಎಲ್ಲರಿಗೂ ಈ ಮೂಲಕ ಮುಂದಾಗಿ ತಿಳಿಸಿರುತ್ತೇನೆ.

K. Kuppaya Aithala.
ತಾ. 12-8-1934.

TENDER.

The Bombay Steam Navigation Company Ltd., invite tenders for the supply of labour and supervision for the work of stevedoring their steamers plying on the Mangalore Line between Karwar and Mangalore inclusive. Condition of contract may be seen at any of the Company's office and copies of specifications will be supplied on payment of Rs. 5/- per copy. Tenders should be addressed to the Head Office of the Company direct (100, Frere Road, Bombay.) The Company reserves the right of rejecting the lowest or any tender without assigning any reason for so doing. Sealed tenders superscribed "Tenders for Stevedoring" must reach the office of the Company at 100, Frere Road, Bombay by 12 Noon (S. T.) on 25th August 1934.

ಟೆಂಡರು ನೋಟೀಸು.

ಕಾರುವಾರು ಮತ್ತು ಮಂಗಳೂರು ಕೂಡಾ ಸೇರಿರುವ ಈ ಮಂಗಳೂರು ಲ್ಯಾನಿನಲ್ಲಿ ಓಡಾಡತಕ್ಕ ಬೊಂಬಯಿ ಸ್ಟೀಮ್ ನ್ಯಾವಿಗೇಶನ್ ಕಂಪೆನಿಯವರ ಸ್ಟೀಮರುಗಳಿಗೆ ಸರಕುಗಳನ್ನು ಹತ್ತಿಸಲೂ ಇಳಿಸಲೂ ಅಗತ್ಯವಿರುವ ಕೆಲಸಗಾರರನ್ನೂ ಮೇಲ್ವಿಚಾರಕರನ್ನೂ ಒದಗಿಸುವ ಬಗ್ಗೆ ಸದರಿ ಬೊಂ. ಸ್ಟೀ. ನ್ಯಾ. ಕಂಪೆನಿಯು ಈ ಮೂಲಕ ಟೆಂಡರುಗಳನ್ನು ಅಪೇಕ್ಷಿಸುತ್ತಿದೆ. ಈ ಕಂಟ್ರಾಕ್ಟಿನ ಷರತ್ತುಗಳನ್ನು ಕಂಪೆನಿಯ ಯಾವ ಆಫೀಸಿನಲ್ಲಿಯೂ ನೋಡಬಹುದು. ಮತ್ತೂ ಈ ಕುರಿತಾದ ಹೆಚ್ಚಿನ ವಿವರಗಳುಳ್ಳ ಮಾಹಿತಿ ಪತ್ರಗಳನ್ನು ಪ್ರತಿಯೊಂದಕ್ಕೆ 5 ರೂಪಾಯಿ ತೆತ್ತಲ್ಲಿ ಒದಗಿಸಬಹುದು. ಟೆಂಡರುಗಳನ್ನು ಕಂಪೆನಿಯ ಹೆಡ್ ಆಫೀಸ್ (100 ಫ್ರೀಯರ್ ರೋಡ್, ಬೊಂಬಾಯಿ) ಸೀದಾ ರವಾನಿಸತಕ್ಕದ್ದು. ಕಂಪೆನಿಯು ಅತ್ಯಂತ ಕಡಿಮೆಯಾದ ದರಗಳನ್ನುಳ್ಳ ಟೆಂಡರುಗಳನ್ನಾಗಲೀ, ಅಥವಾ ಬೇರೆ ಯಾವ ಟೆಂಡರನ್ನಾಗಲಿ ಯಾವ ಕಾರಣವನ್ನೂ ಕೊಡದೆ ನಿರಾಕರಿಸುವ ಅಧಿಕಾರವನ್ನು ಇಟ್ಟುಕೊಂಡಿದೆ. ಮೊಹರು ಒತ್ತಿದ, ಸರಕುಗಳನ್ನು ಹತ್ತಿಸಿ ಇಳಿಸುವ ಟೆಂಡರುಗಳೆಂದು ಬರಹಮೂಲಕವಾಗಿ ಸೂಚಿಸುವ,- ಆ ಎಲ್ಲಾ ಟೆಂಡರುಗಳೂ, ಇದೇ 1934ನೇ ಅಗೋಸ್ತು 25ನೇ ತಾ. ಮಧ್ಯಾಹ್ನ 12 ಗಂಟೆ (ಸ್ಟ್ಯಾಂಡರ್ಡ್ ಟೈಮ್) ಯೊಳಗಾಗಿ 100, Frere Road, Bombay. ಈ ಕಂಪೆನಿಯ ಆಫೀಸಿಗೆ ತಲ್ಪತಕ್ಕದ್ದು.

Killick Nixon & Co.,
Agents,
The Bombay Steam Navigation Co., Ltd.
ಮಂಗಳೂರು ತಾ. 13-8-1934

The Canara Public Conveyance Company, Ltd., Mangalore.

WE TAKE UTMOST CARE OF PASSENGERS.

Read the following letter:-

Modern Hindu Hotel,
Calicut, 17—6 1934.

Dear Sir,

We wish to thank you for all that you did for us to make our stay at Mangalore comfortable. It is extremely nice of you to have looked after us as you did.

Yours faithfully,
(Sd.) **A. V. Ramaswami.**

The same service is offered to all. We call for reports from passengers, if they have failed to receive similar attention and assure to take prompt action to see that inconvenience is not repeated.

Chikmagalur Public Conveyance Motor Service, Chikmagalur.

ಚಿಕ್ಕಮಗಳೂರು ಪಬ್ಲಿಕ್ ಕನ್ವೆಯನ್ಸ್ ಮೋಟರ್ ಸರ್ವಿಸ್,
ಚಿಕ್ಕಮಗಳೂರು.

ಮುಂಬಾಯಿಯಿಂದ – ಮಂಗಳೂರಿಗೆ.
ಮಂಗಳೂರಿನಿಂದ – ಮುಂಬಾಯಿಗೆ.
ಅಲ್ಲದೆ
ಹುಬ್ಬಳ್ಳಿ, ಧಾರವಾಡ, ಗೋವಾ, ಮುಂಬಾಯಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಯ ಎಲ್ಲಾ ಭಾಗಗಳಿಗೆ ಪ್ರಯಾಣ ನಡಿಸಲಿಕ್ಕೆ.
ಮಂಗಳೂರು—ಕಡೂರು ಹಾದಿಗಿಂತ ಉತ್ತಮ ಬೇರೆ ಹಾದಿಯಿಲ್ಲ!
ಹೊಸ ಬಸ್ಸುಗಳು. ಅನುಕೂಲ ಪ್ರಯಾಣ ಸೌಕರ್ಯಗಳು.
ಕಡೂರು ಜಿಲ್ಲೆಯೊಳಗಿನ ಎಲ್ಲಾ ಕಾಫಿ ತೋಟಗಳಿಗೆ ಕೂಲಿಕಾರರನ್ನು ತರಲಿಕ್ಕೂ ಅಲ್ಲಿಂದ ಕೊಂಡುಹೋಗಲಿಕ್ಕೂ ನಾವು ಎಲ್ಲಾ ತರದ ಸಹಾಯವನ್ನೂ ಕೊಡುತ್ತೇವೆ.

ಚಿಕ್ಕಮಗಳೂರಿನಿಂದ — ಶಿವಮೊಗ್ಗಕ್ಕೆ, ಬೀರೂರಿಗೆ, ಕಡೂರಿಗೆ-
– ಮೂಡಗೆರೆಗೆ, ಸಕಲೇಶಪುರಕ್ಕೆ.
– ಮಂಗಳೂರಿಗೆ, ಮೂಡಬಿದ್ರೆಗೆ, ಪುತ್ತೂರಿಗೆ, ಮೂಲ್ಕಿಗೆ.
—ಧರ್ಮಸ್ಥಳಕ್ಕೆ, ವೇಣೂರಿಗೆ, ಸುಬ್ರಹ್ಮಣ್ಯಕ್ಕೆ.

ನಿರಾಯಾಸದ ಪ್ರಯಾಣ! ಉತ್ಸಾಹಕರ ಸೌಕರ್ಯ!

ಬೇಕಾದ ಮಾಹಿತಿಗೆ ನಮ್ಮ ಆಫೀಸಿಗೆ ಬರೆದು ತಿಳಿದುಕೊಳ್ಳಿರಿ.

ವಿವಿಧ ವಿಷಯ.

ಇದು ಅದೃಷ್ಟವೇ?

ಲಿಸ್ಬನಿನಲ್ಲಿ ಜೋಸೆಫನೆಂಬ ಬಡವನೊಬ್ಬನು ಒಂದು ಲೋಟ್ಟರಿ ಟಿಕೇಟು ಪಡೆಯಲು ೩೦೦೦ ಪವನು ದೊರೆಯಿತು. ಮರುವರ್ಷ ಪುನಃ ಒಂದು ಟಿಕೇಟು ಪಡೆದಾಗ ೩೦೦೦೦ ಪವನು ದೊರೆಯಿತು. ಮುಂದಿನ ವರ್ಷವೂ ಒಂದು ಟಿಕೇಟು ಕೊಂಡುಕೊಂಡನು ೪೦ ೦೦ ಪವನು ದೊರೆತಿದೆಯಂತೆ!

ಕಬ್ಬಿಣದ ತಗಡಿಗಿಂತ 'ಕೊರ್ಕ' ಗಟ್ಟಿಯಾಗಿದೆ.

ಸೈನಿಕರಿಗೆ ಯುದ್ಧಕಾಲದಲ್ಲಿ ಧರಿಸಲು ಕಬ್ಬಿಣದ ತಗಡುಗಳ ಹೇಟುಗಳನ್ನು ಕೊಡುವರು. ಆದರೆ, ಇವರ ಮೇಲೆ ಭಾರವಾದ ಅಥವಾ ಬಲವಾದ ಪೆಟ್ಟು ಬಿದ್ದರೆ, ಧರಿಸಿದಾತನು ಮೂರ್ಛೆ ಹೋಗುವುದಿದೆ. ಈಗ ಕೊರ್ಕನ್ನು ಚೆನ್ನಾಗಿ ಒತ್ತಿ, ಬೇರೆ ಯಾವುದೋ ವಸ್ತುಗಳ ಸಹಾಯದಿಂದ ಬ್ರಿಟಿಷರು ಒಂದು ಹೊಸ ಬಗೆಯ ಹೇಟನ್ನು ತಯಾರಿಸಬೇಕೆಂದು ನಿರ್ಧರಿಸಿರುವರು. ಇದು ಕಬ್ಬಿಣಕ್ಕಿಂತಲೂ ಗಟ್ಟಿಯಾಗಬಹುದಂತೆ. ಇವನ್ನು ಬ್ರಿಟಿಷ್ ಸೈನಿಕರಿಗೆ ಒದಗಿಸುವಂತೆ ಆಲೋಚನೆಯಾಗಿದೆ. ರಹಸ್ಯವಾಗಿ ಕೆಲಸ ನಡೆಯುತ್ತಿದೆ.

ಅದು ಭೂತಚೇಷ್ಟೆಯಂತೆ

ಭಾಕ್ರ್ಶ ಎಂಬ ಹಳ್ಳಿಯಲ್ಲಿ, ಆರು ತಿಂಗಳ ಹಿಂದೆ ಬಿದ್ದ ಮರವೊಂದು, ಈಗ ಚಿಗುರಲಾರಂಭಿಸಿ ಮೆಲ್ಲನೆ ಎದ್ದು ನೆಟ್ಟಗೆ ನಿಲ್ಲಲಾರಂಭಿಸಿದೆ. ಆ ಮರದ ಮೇಲೆ ಒಂದು ಭೂತವಿತ್ತೆಂದೇ ಜನರ ನಂಬಿಕೆಯಿತ್ತು. ಈಗ ಆ ಮರವೇಳುತ್ತಿರುವುದನ್ನು ನೋಡಿ—ಇದು ಆ ಭೂತದ ಚೇಷ್ಟೆಯಾಗಿರಬೇಕೆಂಬ ನಂಬಿಕೆಯು ಅಲ್ಲಿಯ ನಿವಾಸಿಗಳಲ್ಲಿ ಬಲವಾಗಿದೆ.

ಬಿಸಿನೀರು ಸಿಕ್ಕಿದೆ!

—ರಷ್ಯದಲ್ಲಿ! ಭೂಮಿಯ ಅಡಿಯಲ್ಲಿ ಬಿಸಿನೀರು ಇದೆ. ಅದನ್ನು ತೆಗೆದು ಸ್ನಾನಕ್ಕೆ ಬಿಸಿಮಾಡಬೇಕಾದ ಇತರ ವಸ್ತುಗಳಿಗೆ (ಆಹಾರ ಹೊರತು) ಉಷ್ಣವು ಅಗತ್ಯವಿರುವ ತೋಟಗಳಿಗೆ ಉಪಯೋಗಿಸಬಹುದೆಂದು ತಿಳಿದುಬಂದಿದೆ.

ಇವನನ್ನು ಯಾರೂ ನಗಿಸಲಾರರು!

ಡ್ಯಾಕ್‌ಯೋರ್ಕ ಎಂದು ಆತನ ಹೆಸರು. ಆತನು ಕಳೆದ ೧೦ ವರ್ಷಗಳಿಂದ ನಕ್ಕುದೇ ಇಲ್ಲವಂತೆ! ಪ್ರಪಂಚವನ್ನೆಲ್ಲ ಸುತ್ತಾಡಿ ಬಂದಿರುವನು ಆತನು. ಹೋದಲ್ಲೆಲ್ಲ "ನನ್ನನ್ನು ಯಾವ ವಿಧಾನದಿಂದಲಾದರೂ ನಗಿಸುವವರಿಗೆ ನಗದಿ ಬಹುಮಾನ ಕೊಡುವೆನು" ಎಂದು ಸಾರಿದನು. ಎಷ್ಟೋ ಜನರು ಪ್ರಯತ್ನಿಸಿ ನೋಡಿದರು. ಆದರೆ, ಯಾರಿಂದಲೂ ಈ ತನಕ ಸಾಧ್ಯವಾದುದಿಲ್ಲ. (ಈ ಪ್ರಸಿದ್ಧ ಯೋರ್ಕನು ಈಗ ಪೆರಮೌಂಟ್ ಫಿಲ್ಮಿನಲ್ಲಿ ನಟನಾಗಿ ಸೇರಲಿರುವನು)

ಶಂಕಚಕ್ರಗಳು ಅಲ್ಲಾಡುತ್ತಿವೆ!—

—ತಿರುಪತಿಯಲ್ಲಿ! ಇದೇನು ಸೋಜಿಗ?—ದೇವರು ಮುನಿದಿರುವನೇ ಎಂಬ ದಿಗಿಲುಂಟಾಗಿದೆ ಭಕ್ತವೃಂದವು. ಈ ಅದ್ಭುತದಿಂದ ನಾನಾ ತರದ ಭಯಂಕರ ಸಂದೇಹಕ್ಕೆ ಒಳಗಾಗುವಂತಿದೆ. ತಿರುಪತಿ ವೆಂಕಟ್ರಮಣನ ಚಕ್ರವು ಮೊದಲಿಂದಲೂ ಅಲ್ಲಾಡುತ್ತಿದ್ದರೂ ಈಗ ಶಂಖವೂ ಅಲ್ಲಾಡುವುದೆಂದರೆ ಅದರಲ್ಲೇನೋ ವಿಶೇಷವಿರಬೇಕು ಎಂದು ಊಹಿಸಿರುವರು. ಅವೆರಡೂ ಕೆಳಗೆ ಬೀಳದಂತೆ ರೇಶ್ಮೆದಾರಗಳಿಂದ ಕಟ್ಟಿರುವರಂತೆ.

ಪ್ರಾರ್ಥನೆಯ ಮಹತ್ವವೇನು?

"ದೇವರನ್ನು ಬಳಿಗೆ ಕರೆಸುವುದಲ್ಲವಾದರೆ, ನಾವೇ ಆತನ ಬಳಿಗೆ ಮುಂದುವರಿಯುತ್ತಿರುವುದೇ ಪ್ರಾರ್ಥನೆಯ ಮಹತ್ವ. ಪ್ರಾರ್ಥನೆಯು ಮಾನವನ ಹೃದಯವನ್ನು ಶುದ್ಧಿಗೊಳಿಸುತ್ತದೆ. ವಿಶ್ವಬಾಂಧವ್ಯವೆಂಬುದರ ಅರ್ಥವನ್ನು ಅದು ತಿಳಿಸುವುದಲ್ಲದೆ—ಮಾನವವರ್ಗಕ್ಕಾಗಿ ನಾವು ಪಡಬೇಕಾದ ಶ್ರಮದ ಕಡೆಗೆ ನಮ್ಮನ್ನೊಯ್ಯುತ್ತದೆ. ಜೀವನದ ನಮ್ಮ ಧ್ಯೇಯವನ್ನು ಕೊನೆಗಾಣಿಸಲು ಪ್ರಾರ್ಥನೆಯು ನಮಗೆ ಶಕ್ತಿಯನ್ನು ಕೊಡುವುದು" ಎಂದಿಷ್ಟನ್ನು, ಸೈದಾಪೇಟೆಯಲ್ಲಿ ಜರಗಿದ ಸಭೆಯಲ್ಲಿ ಡಾ। ಸ್ಟೇಸ್ಲಿ ಜೋನ್ಸರವರು ವಿವರಿಸಿ ಭಾಷಣ ಮಾಡಿದರು.

ಪ್ರಚಲಿತಸಮಾಚಾರ.

ಇಂತಹ ನರರಾಕ್ಷಸರಿರಬಹುದೇ?

ಕೇಳಿದರೇ ಮೈನಡುಕವುಂಟಾಗುವುದು. ಬಂಗಾಳದ ಕೊಂಡಖಾಲಾ ಎಂಬಲ್ಲಿ ಸಹದೇವ ಎಂಬ ೪ ವರ್ಷದ ಬಾಲಕನನ್ನು, ನೀಲಸಹಾರಾ ಎಂಬಾತನು ತಾನು ಇಟ್ಟುಕೊಂಡ ಮಹಾರ್ತಿ ಎಂಬಾಕೆಯಲ್ಲಿಗೆ ಒಯ್ದು, ಅವನನ್ನೊಂದು ಕೊಠಡಿಯಲ್ಲಿ ಕುಳ್ಳಿರಿಸಿ, ಖರ್ಜೂರವನ್ನು ತಿನ್ನಲು ಕೊಟ್ಟನು. ಹುಡುಗನು ಖರ್ಜೂರವನ್ನು ತಿನ್ನುತ್ತಿದ್ದಾಗ ನೀಲನು ಒಂದು ಕೊಡಲಿಯಿಂದ ಹುಡುಗನ ಕತ್ತನ್ನು ಕತ್ತರಿಸಿ, ಕೈಗಳಿಂದ ಬೆಳೆಗಳನ್ನು ತೆಗೆದು, ಹರಿದ ನೆತ್ತರನ್ನು ಒಂದು ಪಾತ್ರೆಯಲ್ಲಿ ತುಂಬಿ, ಶವದ ತುಂಡುಗಳನ್ನು ವಸ್ತ್ರದಲ್ಲಿ ಸುತ್ತಿ, ತನ್ನ ಮನೆಗೊಯ್ದು ಕಾಳಿಕಾದೇವತೆಯ ಮುಂದಿರಿಸಿ ಪೂಜೆ ಮಾಡಿದನಂತೆ!—ಪೂಜೆಯು ಸಂಪತ್ಸಮೃದ್ಧಿಯ ಆಸೆಯಿಂದ! ನೀಲನನ್ನೂ ಆತನ ಸಹಾಯಕಳಾದ ಮಹಾರ್ತಿಯನ್ನೂ ದಸ್ತಗಿರಿ ಮಾಡಲು,—ಮಹಾರ್ತಿಯು "ಮಾಫಿ ಸಾಕ್ಷಿ"ಯಾದಳು. ನೀಲನಿಗೆ ಪಾಪ! ಇನ್ನವನ ಸಂಪತ್ತಮೃದ್ಧಿಗೆ ಎಣೆಯುಂಟೇ?

ಪ್ರೇಮೋನ್ಮತ್ತನ ಅಕೃತ್ಯ!

ಕಲ್ಕತ್ತೆಯ ವೆಲ್ಲೆಸ್ಲಿ ರಸ್ತೆಯಲ್ಲೊಂದು ಮನೆ. ಮಿಸ್ ಇನೆಝ್ ಪಿರೇರಾ ಎಂಬ ಆಂಗ್ಲೋ ಇಂಡಿಯನ್ ಹುಡುಗಿ. ಆಕೆಯನ್ನು ಜೆ ಡಬ್ಲ್ಯು ರಿಟೆಲ್ಲೊ ಎಂಬಾತನು ಮೋಹಿಸಿದ್ದನು. ಒಂದು ದಿನ ಅಲ್ಲಿಗೆ ಬಂದು ತನ್ನ ಪ್ರಣಯಪೂರಿತ ಹೃದಯವನ್ನು ನಿವೇದಿಸಿದನು. ಆಕೆ ಒಪ್ಪಲಿಲ್ಲ. ಕೋಪಗೊಂಡು ಬೆದರಿಕೆ ಹಾಕಿ ಹೊರಟುಹೋದನು. ಮತ್ತೊಂದು ದಿನ ಬಂದನು. ಅಂಗಲಾಚಿ ಬೇಡಿಕೊಂಡನು. ಆಕೆ ಒಪ್ಪಲೇ ಇಲ್ಲ. ರೋಷೋನ್ಮತ್ತನಾಗಿ ಆಕೆಯನ್ನು ದೊಡ್ಡ ಕತ್ತಿಯಿಂದ ಕಡಿದು ಕೊಂದುಹಾಕಿದನು. ಮನೆಯ ಯಜಮಾನಿಯು ಓಡಿಬಂದಾಗ ಆಕೆಗೂ ಒಂದು ಪೆಟ್ಟುಕೊಟ್ಟು, ರಿಟೆಲ್ಲೊವು ತಾನೂ ಆತ್ಮಹತ್ಯ ಮಾಡಿಕೊಂಡಿರುವನು.

ಹರಿಜನರು ಮಾಟ ಮಾಡಿದರಂತೆ

ಹಾಗೆಂದು ಬೊಸರ್ದ್ ತಾಲೂಕಿನ ಅಂಬಲಿ ಎಂಬ ಗ್ರಾಮದ ಸನಾತನಿಗಳಿಗೆ ಕೋಪ. ಅಲ್ಲಿ ಜಾನುವಾರುಗಳ ಒಂದು ರೋಗವು ಥಕ್ಕನೆ ತಲೆದೋರಿ ಸನಾತನಿಗಳ ದನಕರುಗಳನೇಕ ಮರಣಪಟ್ಟುವು. ಅಂಟುರೋಗವು ನಿಲ್ಲಿಸಲ್ಪಡದಿದ್ದರೆ ಹರಿಜನರನ್ನು ಮರ್ದಿಸುವುದಾಗಿ ಬೆದರಿಕೆ ಹಾಕಲಾಯಿತು. ಆದರೆ ರೋಗವು ನಿಲ್ಲಲಿಲ್ಲ. ಈ ಮಾಟವನ್ನು ಮಾಡಿದ ಹರಿಜನರು ಇನ್ನೂ ಅದನ್ನು ನಿಲ್ಲಿಸಲಿಲ್ಲವೆಂಬ ಕೋಪದಿಂದ ರಾತ್ರಿ ಕಾಲದಲ್ಲಿ ಹಲವರು ಅವರ ವಸತಿಯನ್ನು ಪ್ರವೇಶಿಸಿ, ಅವರನ್ನೆಲ್ಲ ಆ ಗ್ರಾಮದಿಂದ ಓಡಿಸಿದರೆಂದು ದೂರು.

ಇನ್ನು ಸ್ಟೀಮರು 'ಮುಳುಗುವುದಿಲ್ಲ'

ಅಂದರೆ ಜಲದೇವತೆಯು ಒಲಿಯಿತೆಂಬ ಅರ್ಥವಲ್ಲ. ಮಾರ್ಸೆಲಿ ಎಂಬಲ್ಲಿನ ಜುಲಿಯಸ್ ಗಿಲ್ಲೋಮ್ ಎಂಬಾತನು ಒಂದು ನೂತನ ಯಂತ್ರವನ್ನು ಸಿದ್ಧಗೊಳಿಸಿರುವನು. ಅದನ್ನು ಸ್ಟೀಮರ ಗಳಲ್ಲಿರಿಸಿದರೆ ಎಷ್ಟು ದೊಡ್ಡ ಹಡಗವೂ, ಯಾವ ಸಂದರ್ಭದಲ್ಲೂ ಮುಳುಗಲಾರದೆಂದು ಆತನು ಹೇಳುತ್ತಿದ್ದಾನೆ.

'ಮುನ್ನುಡಿ'ಗಳದ್ದೇ ಒಂದು ಗ್ರಂಥ!

ನಿಮಗೆಲ್ಲ ಕೇಳಿ ಆಶ್ಚರ್ಯವಾಗಬಹುದು. ಆದರೆ ನಿಜವಾದ ಸುದ್ದಿಯಿದು. ಜೋರ್ಜ ಬರ್ನಾಡ್ ಷಾ ಎಂಬ ಪ್ರಖ್ಯಾತ ಆಂಗ್ಲ ನಾಟಕಕಾರರ ಎಲ್ಲ ಗ್ರಂಥಗಳ ಮುನ್ನುಡಿಗಳನ್ನು ಒಟ್ಟುಗೂಡಿಸಿ, ಒಂದು ಗ್ರಂಥವು ಪ್ರಕಟಿಸಲ್ಪಟ್ಟಿದೆ.

"ಫಾಸಿಗೆ ಹೋಗುತ್ತಿದ್ದೆ"

"ನವಾಬ್ ಸುರಾಜುದ್ದೌಲನ ಸೇನಾನಾಯಕ ನಾನು! ಕ್ಲೈವನೊಡನೆ ಕಾದಾಡಬೇಕಾಗಿತ್ತು!" ಎಂದನು ಕಲ್ಕತ್ತ ಕೋರ್ಟಿನಲ್ಲಿ ಸಂತೋಷ ಭಟ್ಟಾಚಾರ್ಜಿ ಎಂಬ ಹುಚ್ಚ. ಅವನನ್ನು ಹುಚ್ಚರಾಸ್ಪತ್ರೆಯಿಂದ ಬಿಡುಗಡೆ ಮಾಡಿದ್ದರು. ಗಾಡಿಯಲ್ಲಿ ಕುಳಿತು ೧೪ ರೂಪಾಯಿ ವೆಚ್ಚವಾಗುವಷ್ಟು ಸವಾರಿ ಮಾಡಿದ. ಗಾಡಿಯವನಿಗೆ ಹಣಕೊಡಲಿಲ್ಲ. ಕೋರ್ಟಿಗೆಳೆದು ತಂದಾಗ ಈ ಮೇಲಿನ ವಾಕ್ಯಗಳನ್ನು ಹೇಳಿಬಿಟ್ಟ. ಕೊನೆಗೆ ಆತನ ಸಂಬಂಧಿಕರಾರೋ ಹಣ ತೆತ್ತು, ಅವನನ್ನು ಬಿಡುಗಡೆ ಮಾಡಿಸಿಯರು. (ಒಂದು ವಿಚಿತ್ರವೆಂದರೆ ಆ ಕೋರ್ಟು ಕಟ್ಟಡವು ಹಿಂದೆ ಸುರಾಜುದ್ದೌಲನದಾಗಿತ್ತು)

ಡಾ। ಅನ್ಸಾರಿಯವರು—

ದೇಹಾರೋಗ್ಯವನ್ನು ಸಂಪಾದಿಸಲು ವಿಲಾಯತಿ ಪ್ರವಾಸವನ್ನು ಕೈಕೊಂಡವರು,—ಲಂಡನಿನಲ್ಲಿ ಕೆಲಕಾಲ ಉಳಕೊಂಡರು. ಅಲ್ಲಿ ಹಿಂದೂದೇಶದ ವಿಷಯವಾಗಿ ವೈಸರಾಯರನ್ನೂ ಸರ್ ಸಾಮುವೇಲ್ ಹೋರರನ್ನೂ ಕಂಡು ಸಂಭಾಷಿಸುತ್ತ, ಹಿಂದೂಜನಾಂಗವು ಕೇಳಿದುದಕ್ಕಿಂತ ಕನಿಷ್ಠವಾದ [illegible] ಸುಧಾರಣೆಯು ಅಲ್ಲಿ ಶಾಂತಿಯು ನೆಲೆಸುವಂತೆ ಸಾರ್ಥಕವಾಗಲಾರದಾಗಿ ತಿಳಿಸಿರುವರು.

ಚೀನದಲ್ಲಿ ಆತ್ಮಹತ್ಯೆಗಳು ಹೆಚ್ಚುತ್ತಿವೆ

[illegible]

"ಈ ಮಗುವನ್ನು ರಕ್ಷಿಸಿರಿ"

ಈ ಮೇಲಿನ ಅಕ್ಷರಗಳನ್ನು ಬರೆದು ಒಂದು ಚೀಟನ್ನು ಕುತ್ತಿಗೆಗೆ ಕಟ್ಟಲ್ಪಟ್ಟ ಒಂದು ಶಿಶುವು ಅಲ್ಲಹಾಬಾದಿನ ಜನರಲ್ ಪೋಸ್ಟಾಫೀಸಿನ ಎದುರಲ್ಲಿ ಮಲಗಿ ರೋದಿಸುತ್ತಿತ್ತು. "ಈ ಮಗು ಬ್ರಾಹ್ಮಣರದು. ತಂದೆತಾಯಿಗಳು ಬಡತನದ ದೆಸೆಯಿಂದ ಇದನ್ನು ಸಾಕಲಾರದೆಹೋಗಿದ್ದಾರೆ. ಯಾರಾದರೂ ಕರುಣೆಗೊಂಡು ಕಾಪಾಡಿರಿ!" ಎಂದು ಆ ಚೀಟಿಯಲ್ಲಿ ವಿನಂತಿಸಲಾಗಿತ್ತು. ಪೋಲೀಸರು ಆ ಮಗುವನ್ನು ಒಯ್ದರುವರು.

ತುಂಡು ಸುದ್ದಿ.

ಇಂಗ್ಲಾಂಡಿನ ಸರ್ ರಿಚಾರ್ಡ್‌ಗಾರ್ಟನ್ ಎಂಬ ಕೋಟ್ಯಾಧೀಶರು ಕಾಲವಾಗಿ, ಬ್ರಿಟಿಷ್ ಸರಕಾರದ ಭಂಡಾರಕ್ಕೆ "ಮರಣದ ಸುಂಕ"ವಾಗಿ ಮೂವತ್ತು ಲಕ್ಷ ಪವನುಗಳು ಬಿದ್ದವು.

ಜರ್ಮನಿಯೊಳಗೆ ಬರುವ ವಿದೇಶೀ ಪತ್ರಿಕೆಗಳು ಬಹಿರಂಗವಾಗಿ ತೂಗಹಾಕಲ್ಪಡಬಾರದೆಂದೂ, ಅವುಗಳ ಜಾಹೀರಾತು ಮಾಡಬಾರದೆಂದೂ, ಪತ್ರಿಕಾ ಏಜಂಟರು ಅವುಗಳನ್ನು ತಮ್ಮ ಅಂಗಡಿಯೊಳಗೆ ಮಾತ್ರ ಇಟ್ಟು ಮಾರಾಟ ಮಾಡಬಹುದೆಂದೂ ಜರ್ಮನ್ ಸರಕಾರದ ಕಟ್ಟಾಜ್ಞೆ.

ಲೂಧಿಯಾನ ರೈಲ್ವೇ ಸ್ಟೇಷನಿನ ಟಿಕೇಟು ಕಲೆಕ್ಟರನೊಬ್ಬನು ಓರ್ವ [illegible] ಟಿಕೇಟುಕೊಡುವೆನೆಂದು ಆಕೆಯಿಂದ [illegible] ಆಣೆಗಳನ್ನು ಪಡೆದು ಓಡಿಹೋಗಲು,—ಆತನನ್ನು ಕೈದುಮಾಡಿ, ಒಂದು ವರ್ಷದ ಸಜೆ ವಿಧಿಸಲಾಯಿತು.

ಇತ್ತೀಚೆಗೆ ಕಾಲವಾದ ಫ್ರಾನ್ಸಿನ ಪ್ರಖ್ಯಾತ ಸುಗಂಧ ವ್ಯಾಪಾರಿ ಕೋಟ್ಯಾಧೀಶ ಫ್ರಾನ್ಸಿಸ್ ಕೋಟಿಯವರು ಸಾರ್ವಜನಿಕ ಸಂಸ್ಥೆಗಳಿಗೆ ಸುಮಾರು ೨೫ ಮಿಲ್ಲಿಯ ಫ್ರಾಂಕುಗಳಷ್ಟು ಸಹಾಯ ಧನವನ್ನು ತನ್ನ ಮೀಲುನಾಮೆಯಲ್ಲಿ ಬರೆದಿಟ್ಟಿರುವರೆಂದು ಪ್ರಕಟವಾಗಿದೆ.

ಜಪಾನಿನ ಕಡಿಮೆ ಬೆಲೆಯ 'ವಿಸ್ಕಿ'ಯು, ಸ್ಕೋಟ್ಲೆಂಡಿನ ಹೆಸರಿನಲ್ಲಿ ಸಯಾಮಿನಲ್ಲಿ ಮಾರಾಟವಾಗಹತ್ತಿದೆ.

ಜವಾಲ್ಪುರ ಮೆಜಿಸ್ಟ್ರೇಟ ಕೋರ್ಟಿನ ಮುಂದೆ ಗಟ್ಟಿಯಾಗಿ ಮಾತಾಡಿಕೊಂಡು ಹೋಗುತ್ತಿದ್ದ ಸರ್ಕಸಿನ [illegible] ಮಂದಿಗಳನ್ನು ಹಿಡಿದು, ತಲಾವೊಂದರ ೧೦ ರೂಪಾಯಿಗಳಂತೆ ದಂಡವಿಧಿಸಿರುವರು.

ಬರೋಡಾ ಸಂಸ್ಥಾನದ ಭೂತಾಡಿಯಂಪಾ ಎಂಬಲ್ಲಿ ಅಬ್ಬಾಸ್ ತಯಾಬ್ಜಿಯವರ ಅಧ್ಯಕ್ಷತೆಯಲ್ಲಿ ಹರಿಜನರ ಆಶ್ರಮವನ್ನು ತೆರೆವ ಸಮಾರಂಭವು ಜರಗಿತು. ಇದು, ಮಹಾತ್ಮಾಜಿಯವರು ಸಂಗ್ರಹಿಸಿದ ನಿಧಿಯಿಂದ ಕಟ್ಟಿಸಲ್ಪಡುವ ಮೊದಲನೆ ಆಶ್ರಮ.

[illegible] ನೋಂಲ್ ನೊಬ್ಬನು ತನ್ನ ಕೃತಕ ಕಾಲಿನಲ್ಲಿ ಅಫೀಮನ್ನು ಬಚ್ಚಿಟ್ಟು ಅಬಕಾರಿಯವರ ಕಣ್ಣು ತಪ್ಪಿಸಿ ಒಯ್ಯುತ್ತಿದ್ದಾಗ ಸಿಕ್ಕಿಬಿದ್ದು [illegible] ಸಜೆಗೆ ಗುರಿಯಾದನು.

[illegible] ಅಡಿ ಉದ್ದದ ಒಂದು [illegible] ನ್ನು ಟುಟಿಕೋರಿನದ ಬೆಸ್ತರು [illegible] ಹಿಡಿದರು.

[illegible] ಜಾತೀಯ ಸಮಸ್ಯೆಯನ್ನು ಪರಿಹರಿಸ [illegible] ಎಂದು [illegible] ಮುಸ್ಲಿಂ ವಿಶ್ವವಿದ್ಯಾಲಯದ ಸಂಘದ [illegible] ತರ್ಕ ಸಭೆಯ ಠರಾವು.

ಹೈದರಾಬಾದಿನ ನೈಜಾಮರಿಗೆ ಹಿಸ್ ಹಾಯ್ ನೆಸ್ ಬಿರುದನ್ನು ಕೊಡುವ ಕುರಿತಾಗಿ ಇಂಡಿಯಾ ಸರಕಾರವು ಆಲೋಚಿಸುತ್ತಿದೆಯೆಂದು ವದಂತಿ.

ಚಳಿಯಲ್ಲಿ ಚಳಿಯನ್ನು ತಡೆಯಲಾರದೆ, ನೂರಾರು ಜನರು ರಷ್ಯ ಸಂಚಾರ [illegible] ಮರಣಪಟ್ಟಿರುವರು.

[illegible] ಎಂಬ ರಷ್ಯದವನೊಬ್ಬನು [illegible] ಅಡಿ ಎತ್ತರದಿಂದ (ವಿಮಾನದಿಂದ) ಪೆರೆಷ್ಯೂಟ್ ಎಂಬ ಕೊಡೆ ಹಿಡಿದು ಹಾರಿ ಇಂತಹ ಹಾರಾಟಗಳಲ್ಲಿ ದಾಖಲೆಯನ್ನು ಸ್ಥಾಪಿಸಿರುವನು. ಕೊಡೆಯ [illegible] ಅಡಿ ಕೆಳಗೆ ಹಾರಿದ ನಂತರ ತೆರೆದುಕೊಂಡಿತಂತೆ.

1876ನೇ ಇಸವಿಯಿಂದಲೂ ಪ್ರಸಿದ್ಧಿ ಹೊಂದಿದ

ಎಮ್. ಗಣಪಯ್ಯ ಎಂಡ್ ಸನ್ಸ್, ಮಂಗಳೂರು.

ಇವರ ಶಾಸ್ತ್ರೀಯ ಮತ್ತು ಅನುಭವಸಿದ್ಧ ಔಷಧಗಳು.

ಮಹಾ ಮದನಕಾಮೇಶ್ವರಿ ಲೇಹ।—ಆಯುರ್ವೇದ ಶಾಸ್ತ್ರದಲ್ಲಿ ಅತಿ ಪ್ರಾಮುಖ್ಯತೆಯನ್ನು ಪಡೆದ ಔಷಧಿ. ನರಗಳ ಮತ್ತು ಜನನೇಂದ್ರಿಯದ ಶಕ್ತಿಹೀನತೆ ಎದೆನೋವು, ಮಲಬದ್ಧತೆ ಅಜೀರ್ಣ ಅರುಚಿ ಅಗ್ನಿಮಾಂದ್ಯ ವಾಯು ಉಪದ್ರ ಮೊದಲಾದುವುಗಳನ್ನು ಹೋಗಲಾಡಿಸಿ ಮಾನಸಿಕ ಶಕ್ತಿಯನ್ನು ಹೆಚ್ಚಿಸುವುದು. ರಕ್ತವೃದ್ಧಿಯನ್ನೂ ವೀರ್ಯ ವೃದ್ಧಿಯನ್ನೂ ಉಂಟುಮಾಡಿ ದೇಹಕ್ಕೆ ಸಂಪೂರ್ಣ ಆರೋಗ್ಯವನ್ನು ಉಂಟುಮಾಡುವುದು. ನಿರೋಗಿಗಳೂ ಪ್ರಮೇಹಿಗಳೂ ಇದನ್ನು ಪ್ರತಿನಿತ್ಯ ಸೇವಿಸಿದ್ದಲ್ಲಿ ಶ್ರಮ ಪರಿಹಾರವಾಗಿ ಸುಖನಿದ್ರೆಯು ಲಭಿಸುವುದು.

ಬಾಟ್ಲಿ 1ರ ರೂ 2-0-0   ಬಾಟ್ಲಿ 3ರ ರೂ 5-12-0.

ಮೇಹ ಕುಠಾರ —ಪ್ರಮೇಹ, ಮೂತ್ರಕೃಚ್ಛ್ರ ಮೂತ್ರ ಹೋಗದಿರುವಿಕೆ, ಮೂತ್ರ ಹೋಗುವಾಗ ಉರಿ ಮೂತ್ರದ್ವಾರದಿಂದ ಕೀವು ಬರುವುದು, ಮೂತ್ರದಿಂದ ಧಾತು ಹೋಗುವುದು ಮೂತ್ರ ಆಗ ಗ ಬಂದು ತಡೆಯಲಿಕ್ಕೆ ಸಾಧ್ಯವಿಲ್ಲದಿರುವುದು ಇವೇ ಮೊದಲಾದ ಹಲವು ಮೂತ್ರಕೋಶದ ರೋಗಗಳಿಗೆ ಸಿದ್ಧೌಷಧ.

ಡಬ್ಬಿ 1ಕ್ಕೆ ರೂ 2 8-0   ಡಬ್ಬಿ 3ರ ರೂ. 7-0-0.

ಕಸ್ತೂರಿ ಮಿಶ್ರಿತ ದಶಮೂಲಾರಿಷ್ಟ —ಇದು ಬಾಣಂತಿಯರಿಗೆ ಅತ್ಯದ್ಭುತಕರವಾದ ಶಕ್ತಿವರ್ಧಕ ರಸಾಯನವಾಗಿರುತ್ತದೆ. ಪ್ರಸವಿಸಿದ ನಂತರ ಅವರ ಪ್ರಸವದ ಆಯಾಸವನ್ನು ಹೋಗಲಾಡಿಸಿ ಗರ್ಭಕೋಶದ ವೇದನೆಗಳನ್ನು ಸಮಾಧಾನಪಡಿಸುವುದು. ಗರ್ಭಕೋಶದಲ್ಲಿ ಕೆಡುಕು ರಕ್ತವು ನಿಲ್ಲದಂತೆ ಮಾಡಿ, ಅಗ್ನಿಮಾಂದ್ಯ, ಅರುಚಿ, ನಂಜಿನ ಜ್ವರ, ರಕ್ತಹೀನತೆ, ನಿದ್ರಾಭಂಗ ಮೊದಲಾದುವುಗಳನ್ನು ಹೋಗಲಾಡಿಸಿ, ದೇಹವನ್ನು ಶಕ್ತಿವಂತವೂ ಆರೋಗ್ಯವಂತವೂ ಮಾಡುವುದು, ಬಾಣಂತಿಯರು ಪುಷ್ಟಿಹೊಂದಿ, ಶಿಶುವಿಗೂ ಧಾರಾಳವಾಗಿ ಹಾಲು ಸಿಕ್ಕುವಂತೆ ಮಾಡುವುದು.

ಬಾಟ್ಲಿ 1ಕ್ಕೆ ರೂ. 1-8-0.   ಬಾಟ್ಲಿ 2ರ ರೂ. 3-0-0.

ಮೀರಾಬೆನ್

ಈಗ ನಮ್ಮ ದೇಶದಲ್ಲಿ ಮೀರಾಬೆನ್ನ ಳನ್ನು ಅರಿಯದವರಿಲ್ಲ. ಗಾಂಧೀಜಿಯವರ ಶಿಷ್ಯೆಯಾಗಿ ಅವಳೆಂದು ಎಲ್ಲರಿಗೂ ಗೊತ್ತು. ಅವಳು ಬಿಳಿಯ ಜನಾಂಗಕ್ಕೆ ಸೇರಿದವಳು. ಅವಳು ಇಲ್ಲಿಗೆ ಹೇಗೆ ಅಥವಾ ಏಕೆ ಬಂದವಳೆಂಬ ವಿಷಯವು ನಮ್ಮಲ್ಲಿ ಹಲವರಿಗೆ ಗೊತ್ತಿರಲಾರದು.

ನಮ್ಮ ಭರತಖಂಡದಲ್ಲಿ ಇಷ್ಟು ಸಮಾಜೋದ್ಧಾರಕ ಕೆಲಸಗಳನ್ನು ಮಾಡುತ್ತಿರುವ ಮೀರಾಬೆನ್ನಳು ವಿಲಾಯತಿಯಲ್ಲಿರುವಾಗ ಸಮಾಜದ ಸಲುವಾಗಿ ಏನೊಂದೂ ಕೆಲಸವನ್ನು ಮಾಡಲಿಲ್ಲವಂತೆ! ಆಗ ಅವಳು ಕಲಾಪ್ರಿಯಳು. ಗಾಯನವೆಂದರೆ ಅವಳಿಗೆ ಬಲು ಇಷ್ಟ. ಕಳೆದ ಮಹಾಯುದ್ಧದ ಸಮಯದಲ್ಲಿ ಕಾರಣಾಂತರಗಳಿಂದ ಅವಳಿಗೆ ತನ್ನ ಜೀವನದಲ್ಲಿ ಅತೃಪ್ತಿ ಉಂಟಾಗಿತ್ತು. 'ಬಿಥೊವೆನ್' ಎಂಬ ಯುರೋಪ್ಯ ಹಾಡುಗಾರನ ಹಾಡುಗಳು ಅವಳಲ್ಲಿ ನೈತಿಕ ಜ್ಞಾನವನ್ನು ಮೂಡಿಸಿದುವು. ಇದೇ ಸಮಯದಲ್ಲಿ ರೋಮೆನ್ ರೊಲೆಂಡರು ಬರೆದ 'ಬಿತೋವೆನನ ಚರಿತ್ರೆ (Life of Beethoven)' ಎಂಬ ಪುಸ್ತಕವು ಅವಳಿಗೆ ಸಿಕ್ಕಿತು. ಆ ಪುಸ್ತಕವನ್ನು ಓದಿದ ಮೇಲೆ ಅಷ್ಟು ಚಂದವಾಗಿ ಆ ಪುಸ್ತಕವನ್ನು ಬರೆದ ಆ ಪ್ರಸಿದ್ಧ ಬರಹಗಾರರನ್ನು ನೋಡಬೇಕೆಂಬ ಕುತೂಹಲವುಂಟಾಯಿತು. ಆದರೆ ರೋಮೆನ್ ರೋಲೆಂಡರಿಗೆ ಇಂಗ್ಲಿಷು ಬರಲೊಲ್ಲದು. ಅವರನ್ನು ಕಂಡು ಮಾತನಾಡಬೇಕಾದರೆ ಫ್ರೆಂಚ್ ಕಲಿಯುವುದು ಅತ್ಯಾವಶ್ಯಕವಾಗಿತ್ತು. ಅದಕ್ಕಾಗಿ ಮೀರಾಬೆನ್ನಳು ಸಾಧಾರಣ ಒಂದು ವರುಷ ಕಾಲ ಫ್ರೆಂಚ್ ಭಾಷೆಯನ್ನು ಕಲಿಯುವುದರಲ್ಲಿ ಮಗ್ನಳಾಗಿದ್ದಳು. ಈ ಸಮಯದಲ್ಲಿಯೇ ಅವಳು, ರೋಮೆನ್ ರೊಲೆಂಡರು ಬರೆದ 'ಜೀನ್ ಕ್ರಿಸ್ಟಾಫರ್' ಎಂಬ ಹತ್ತು ಭಾಗಗಳುಳ್ಳ ಫ್ರೆಂಚ್ ಪುಸ್ತಕವನ್ನು ಓದಿದಳು. ಈ ಪುಸ್ತಕವು ಎಲ್ಲಾ ಪ್ರಾಮುಖ್ಯ ಯುರೋಪ್ಯ ಭಾಷೆಗಳಲ್ಲಿ ಪರಿವರ್ತಿಸಲ್ಪಟ್ಟಿದೆ. ಇಂಗ್ಲಿಷು ಭಾಷೆಯಲ್ಲಿ ನಾಲ್ಕು ಭಾಗಗಳಲ್ಲಿದೆ. ಮೀರಾಬೆನ್ನಳಿಗೆ ಈ ಪುಸ್ತಕವನ್ನು ಓದಿದನಂತರ ರೋಮೆನ್ ರೊಲೆಂಡರ ಮೇಲೆ ಇನ್ನೂ ಗೌರವ ಹೆಚ್ಚಾಯಿತು.

ಇದಾದ ಸ್ವಲ್ಪ ದಿನಗಳಲ್ಲಿಯೇ ಅವಳು ರೋಮೆನ್ ರೋಲೆಂಡರನ್ನು ಕಂಡಳು. ಅವರಿಬ್ಬರೊಡನೆ ಪರಿಚಯವಾಯಿತು. ರೋಲೆಂಡರು ತಾನು ಗಾಯನ ಕಲೆಯ ವಿಷಯ ಬರೆದಿದ್ದ ಒಂದು ಪುಸ್ತಕವನ್ನು ಓದಲು ಅವಳಿಗೆ ಕೊಟ್ಟರು. ಮತ್ತೊಮ್ಮೆ ಸಿಕ್ಕಿದಾಗ ರೋಲೆಂಡರು ತಾನು ಗಾಂಧಿಯವರ ಚರಿತ್ರೆಯನ್ನು ಈಗ ತಾನೆ ಬರೆದು ಮುಗಿಸಿರುವುದಾಗಿ ಹೇಳಿದರು. 'ಗಾಂಧಿ' ಎಂಬ ಹೆಸರನ್ನು ಮೀರಬೆನ್ನಳು ಕೇಳಿದುದು ಇದೇ ಮೊದಲನೇ ಬಾರಿ; ರೋಲೆಂಡರು 'ಗಾಂಧಿಯವರು ಎರಡನೆಯ ಕ್ರಿಸ್ತನೆಂ'ದು ಹೇಳಿದರು.

ಗಾಂಧಿಜಿಯವರ ಚರಿತ್ರೆಯು ಹೊರಬಿದ್ದಿತು. ಅದನ್ನು ಮೀರಾಬೆನ್ನಳು ಓದಿಯೂ ಆಯಿತು. ತಾನು ಸಹ ಹೋಗಿ ಗಾಂಧಿಯವರಿಗೆ ಸಹಾಯ ಮಾಡಬೇಕೆಂಬ ಆಶೆಯು ಉತ್ಪನ್ನವಾಯಿತು. ಕೂಡಲೆ ಅವಳು ಇಂಡಿಯಕ್ಕೆ ಟಿಕೇಟನ್ನು ಪಡಕೊಂಡಳು. ಆದರೆ ನಂತರ ಅವಳಿಗೆ ಹೊಳೆಯಿತು, ಏನೆಂದರೆ ತಾನು ಬಹು ಸುಖದಲ್ಲಿ ಬೆಳೆದವಳು, ತನ್ನಿಂದ ಆ ಸುಖಗಳೆಲ್ಲವನ್ನೂ ಒಂದೇಬಾರಿ ವರ್ಜಿಸುವುದು ಅಸಾಧ್ಯವೆನಿಸೀತು. ಆದುದರಿಂದ ತಾನು ಒಂದು ವರುಷದ ತನಕ ಕಷ್ಟ ಜೀವನವನ್ನು ಅಭ್ಯಸಿಸಿ ಆ ಮೇಲೆ ಇಂಡಿಯಕ್ಕೆ ಹೋಗಬಹುದೆಂದು ಆಲೋಚಿಸಿ, ತಾನು ತಂದ ಟಿಕೇಟನ್ನು ವಾಪಾಸು ಮಾಡಿದಳು. ಸರಳ ಜೀವನವನ್ನು ಆ ದಿನದಿಂದಲೇ ಆರಂಭಮಾಡಿದಳು. ಗಾಂಧಿಜಿಯವರೊಡನೆ ಪತ್ರವ್ಯವಹಾರ ನಡೆಸಿ, ತಾನು ಆಶ್ರಮಕ್ಕೆ ಬರಬಹುದೆಂದು ಅವರ ಅಪ್ಪಣೆಯನ್ನು ಪಡೆದುಕೊಂಡಳು. ಗಾಂಧಿಜಿಯವರು ಅವಳನ್ನು ನೋಡಿದೊಡನೆ 'ನೀನು ನನ್ನ ಮಗಳಾಗಿರು' ಎಂದು ಆಶೀರ್ವದಿಸಿದರು. ಅಂದಿನಿಂದ ಅವಳು ಎಷ್ಟು ನಿಸ್ವಾರ್ಥತೆಯಿಂದ ಕೆಲಸ ಮಾಡಿರುವಳೆಂದು ಎಲ್ಲರಿಗೂ ತಿಳಿದಿದೆ. ಅವಳು ಈಗ ಇಂಗ್ಲೆಂಡಿನ ಕೂಲಿ ಕೆಲಸಗಾರರನ್ನು ನೋಡುವುದರ ಸಲುವಾಗಿ ಇಂಗ್ಲೆಂಡಿಗೆ ಹೋಗಿರುತ್ತಾಳೆ. ಸತ್ಯದ ತೇಜವು ಎಲ್ಲವನ್ನೂ ಬೆಳಗಲಿ!

ನಾರಾಯಣ.

ಜಾಭುವಾ ಸಂಸ್ಥಾನದ ಕತೆಯೇನು?

ಜಾಭುವಾ ಸಂಸ್ಥಾನಾಧೀಶರ ಆಡಳಿತದ ಅಕ್ರಮ, ಅನ್ಯಾಯ, ನಿಂದ್ಯ ವರ್ತನೆ, ಮೊದಲಾದುವುಗಳನ್ನು ವಿವರಿಸಿ, ವೈಸರಾಯರಿಗೆ, ಜನರ ಒಂದು ಮನವಿ ತಲಪಿದೆಯಷ್ಟೆ. ಈ ಕಷ್ಟಗಳನ್ನು ಸಹಿಸಲಾರದೆ, ಅನೇಕ ಬಡ ಕುಟುಂಬಗಳು, ಆ ಸಂಸ್ಥಾನವನ್ನು ಬಿಟ್ಟು, ನೆರೆಕರೆಯ ಸಂಸ್ಥಾನಗಳಿಗೋ ಊರುಗಳಿಗೋ ಹೋದುವೆಂದು ಮಧ್ಯ ಪ್ರಾಂತ್ಯದ ಸಂಸ್ಥಾನಗಳ ಪರಿಷತ್ತಿನ ಕಾರ್ಯದರ್ಶಿಗಳಾದ ಕನ್ಹಯ್ಯಲಾಲ ವೈದ್ಯರ ಪ್ರಕಟಣೆಯಿತ್ತು. ಅದನ್ನು ಜಾಭುವಾ ಸಂಸ್ಥಾನಾಧೀಶರು ಅಲ್ಲಗಳೆದಿರುವರು. ಇದನ್ನು ಕೇಳಿ, ಕನ್ಹಯ್ಯಲಾಲ ವೈದ್ಯರು ಪುನಃ ಈ ಕೆಳಗಿನಂತೆ ಪ್ರಕಟಣೆ ಕೊಟ್ಟಿರುತ್ತಾರೆ:—

"ಜಾಭುವಾ ಸಂಸ್ಥಾನಾಧೀಶರು ಪ್ರಜಾಪೀಡಕರೆಂಬ ಮತ್ತು ಅನೇಕ ಜನರು ಸಂಸ್ಥಾನವನ್ನು ಬಿಟ್ಟುಹೋದರೆಂಬ ಪ್ರಕಟಣೆ ನಿಜವಲ್ಲವಾಗಿ ಸಂಸ್ಥಾನದ ದಿವಾನರು ಪ್ರಕಟಿಸಿದ್ದಾರೆ. ಅದರೆ, ಸಂಸ್ಥಾನವನ್ನು ತೊಲಗಿ ಹೋದವರ ಪಟ್ಟಿಯನ್ನು ನೋಡಿ:—

ರೊಪಘಡದಿಂದ ೧೩ ಕುಟುಂಬಗಳು; ಅವ್ಲಿ, ನಾಲ್ ಬೇಡವಾ, ಶಿವಗಡ ಮೊದಲಾದ ಕಡೆಗಳಿಂದ ೬೦ ಕುಟುಂಬಗಳು; ಲಾಲಘಡ ಮೊದಲಾದ ಸಣ್ಣ ಗ್ರಾಮಗಳಿಂದ ೩೦೦ ಜನರು; ಹನುಮಾನಘಡದಿಂದ ೩೦ ಕುಟುಂಬಗಳು; ಜಾಭುವಾ ತೇಸಿಲದಿಂದ ೨೦೦ ಕುಟುಂಬಗಳು; ರಾಣಾಪುರದಿಂದ ೩೦೦ ಕುಟುಂಬಗಳು; ರಂಭಾಪುರದಿಂದ ೫೦ ಕುಟುಂಬಗಳು; ಇದಲ್ಲದೆ ಬೇರೆ ಬೇರೆ ಕಡೆಗಳಿಂದ ಅನೇಕ ಶತ ಕೃಷೀವಲರು ಗಂಟುಮೂಟೆ ಕಟ್ಟಿ ಹೊರಟು ಹೋಗಿರುವರು. ರಾಜರ ಬಲಾತ್ಕಾರದ ಬಿಟ್ಟಿಯಾಗಬೇಕಾಗಿದ್ದ ಕಡೆಗಳಲ್ಲಿನ ಅನೇಕ ಕುಟುಂಬಗಳು— ಈ ಸಂಕಷ್ಟವೇ ಬೇಡವೆಂದು ತೆರಳಿರುವರು. "ಜಾಭುವಾ, ಎಲ್ಲಿಗೆ?" ಎಂಬ ಶಿರೋನಾಮೆಯ ನಮ್ಮ ಪತ್ರಕದಲ್ಲಿ, ಕಷ್ಟಕ್ಲೇಶಗಳನ್ನನುಭವಿಸಿದ ಕುಟುಂಬಗಳ ಪ್ರಕಟಣೆಗಳಿವೆ. ಅವಾವುದನ್ನೂ ರಾಜರಾಗಲಿ ಅವರ ನೌಕರರಾಗಲಿ ಅಲ್ಲಗಳೆದುದಿಲ್ಲ." ವೈಸರಾಯರಿಗೆ ಕಳಿಸಿದ ಮನವಿಯ ವಿಚಾರವೇನಾಗುವುದೋ ನೋಡಬೇಕಾಗಿದೆ.

ಇಪ್ಪತ್ತೈದು ವರ್ಷಗಳ ಹಿಂದೆ.

[ತಾ. 18—8—1909ನೇ ಸ್ವದೇಶಾಭಿಮಾನಿ ಸಂಚಿಕೆಯಿಂದ.]

ಸಂಪಾದಕೀಯ

ಬರುವ ಕೊಂಗ್ರೆಸ್ ಸಭೆ.

ಇದೇ ಬರುವ ದಶಂಬರ ತಿಂಗಳಲ್ಲಿ ರಾಷ್ಟ್ರೀಯ ಸಭೆಯು ಲಾಹೋರ ನಗರದಲ್ಲಿ ನೆರೆಯಬೇಕೆಂದು ಕಳೆದ ಮದ್ರಾಸ್ ಸಭೆಯಲ್ಲಿ ನಿಶ್ಚಯಿಸಲಾಯಿತಷ್ಟೆ. ಈ ಬಗ್ಗೆ ಪಂಜಾಬದಲ್ಲಿ ನಡೆಯುವ ವಿದ್ಯಮಾನಗಳನ್ನು ಕಾಣುವಾಗ ಕೊಂಗ್ರೆಸ್ ಸಭೆಯು ಸೂರಾತ ಅನಾಹುತದ ದಿನದಿಂದ ದೀನವಶೆಯನ್ನೈದಿದಂತೆ ತೋರುವುದು. ೧೮೯೩ರಲ್ಲಿ ಕೊಂಗ್ರೆಸ್ ಲಾಹೋರದಲ್ಲಿ ಮೊದಲನೇ ಸಾರಿ ಕೂಡಿದಾಗ ವಿಶೇಷ ಸಮಾರಂಭವಿತ್ತು. ಅಸಂಖ್ಯಾತ ಜನರು ಅತ್ಯುತ್ಸಾಹಜನಿತ ಜಯಘೋಷದಿಂದ ಅಧ್ಯಕ್ಷರಾದ ದಾದಾಭಾಯಿ ನೌರೋಜಿಯವರನ್ನು ಮೆರವಣಿಗೆಯಲ್ಲಿ ಒಯ್ಯುವಾಗ ಮಾಳಿಗೆಯಿಂದ ಸ್ತ್ರೀಯರು ಪುಷ್ಪವೃಷ್ಟಿಯನ್ನು ಕರೆದಿದ್ದರು. ಈಗ ಅದೇ ಪಂಜಾಬಿಗಳು ಕೊಂಗ್ರೆಸ್ ಕಡೆಗೆ ಶೋಚನೀಯವಾದ ಔದಾಸೀನ್ಯವನ್ನು ತಾಳಿರುವರು.

\+ \+ \+ \+ \+ \+

ಕೊಂಗ್ರೆಸ್ ಸಭೆಯ ಉದ್ದಿಶ್ಯವು ಪ್ರಜಾಸಮೂಹದಲ್ಲಿ ಐಕ್ಯವನ್ನು ಬೆಳಸಿ ಭಾರತೀಯ ಜನಾಂಗವನ್ನು ನಿರ್ಮಿಸುವುದಾಗಿತ್ತು. ಒಂದರ ಹಿಂದೆ ಒಂದು ಪಕ್ಷವು ಕೊಂಗ್ರೆಸನ್ನು ಬಿಟ್ಟು ಹೋದರೆ ಈ ಉದ್ದಿಶ್ಯವು ನೆರವೇರುವುದೇ? ಪ್ರಜೆಗಳಲ್ಲಿ ಅನೇಕರಿಗೆ ಕೊಂಗ್ರೆಸ್ ಸಭೆಯಲ್ಲಿ ವಿಶ್ವಾಸ ಕುಂದಿದೆ; ಸರಕಾರಕ್ಕೆ ಪ್ರಜೆಗಳ ರಾಷ್ಟ್ರೀಯ ಚಲನಗಳಲ್ಲಿ ವಿಶ್ವಾಸ ಕುಂದಿದೆ. ಕೊಂಗ್ರೆಸ್ ರಾಜನೀತಿಯು ಭಿಕ್ಷುಕ ನೀತಿಯೆಂದು ನವೀನ ಪಕ್ಷದವರು ತಿಂಯ್ಯಾಳಿಸಿರುವರು. ನಮ್ಮ ಪ್ರಾರ್ಥನೆಯನ್ನಲ್ಲ— ಯೋಗ್ಯತೆಯನ್ನು ನೋಡಿ ಸರಕಾರದವರು ನಮಗೆ ಸ್ವಾತಂತ್ರ್ಯಗಳನ್ನು ಕೊಡುವರು. ಆದ್ದರಿಂದ ಬಹು ವೈಷಮ್ಯಕಾರಣವಾದ ವಿಷಯಗಳನ್ನು ಬಿಟ್ಟು ಕೊಂಗ್ರೆಸ್ ಸಭೆಯು ಪ್ರಜೆಗಳ ಕಡೆಗೆ ಮುಖ ತಿರುಗಿಸಿ ಅವರಲ್ಲಿ ಯೋಗ್ಯತೆಯನ್ನು ಹೆಚ್ಚಿಸುವ ಮಾರ್ಗವನ್ನು ಅನುಸರಿಸಬೇಕು.

\+ \+ \+ \+ \+ \+

ಹಿಂದೂಸ್ಥಾನದ ಅರಳೆ ಕೈಗಾರಿಕೆ.

ವ್ಯಾಪಾರ ವಹಿವಾಟುಗಳು ಈ ವರ್ಷ ಮಂದವಾಗಿದ್ದರೂ, 'ಕೊಟನ್ ಎಕ್ಸೈಜ್ ಡ್ಯೂಟಿ' ಎಂಬ ಸುಂಕವು ಈ ಕೈಗಾರಿಕೆಯ ಬೆಳೆವಣಿಗೆಗೆ ತೊಡಕಾಗಿದ್ದರೂ ಸ್ವದೇಶೀ ಚಳವಳದಿಂದ ಹಿಂದೂಸ್ಥಾನದ ಅರಳೆ ಕೈಗಾರಿಕೆಯು ಅಭಿವೃದ್ಧಿಸಿರುವುದು.

ವರ್ಷ.	ಕಾರ್ಖಾನೆಗಳು	ಕೂಲಿಯಾಳುಗಳು.
೧೮೮೨-೩	೬೨	೫೩,೬೦೦
೧೮೮೩-೪	೪೮	೮೦,೬೦೦
೧೮೮೪-೫	೧೩೧	೧೨೦,೯೦೦
೧೮೮೫-೬	೧೩೬	೧೪೮,೭೫೦
೧೮೮೬-೭	೨೦೩	೧೭೮,೪೦೦
೧೮೮೭-೮	೨೨೭	೨೨೫,೪೦೦

ವರ್ತಮಾನಗಳು.

'ಬೊಯ್ ಕೊಟ್'ಯಾ 'ಬಹಿಷ್ಕಾರ' ದಿನಾಚರಣೆ ಬಗ್ಗೆ ಪುಣೆಯಲ್ಲಿ ಸಾರ್ವಜನ ಸಭಾಸದನದಲ್ಲಿ ನೆರೆಯಬೇಕೆಂದಿದ್ದ ಸಭೆಯು, ಅಲ್ಲಿಯ ಡಿಸ್ಟ್ರಿಕ್ಟ್ ಮೆಜಿಸ್ಟ್ರೇಟರ ತಾಕೀತಿನ ಪ್ರಕಾರ ನೆರೆಯಲಿಲ್ಲವೆಂತ ಕೇಳುತ್ತೇವೆ. ಬೊಂಬಾಯಿ ಪಟ್ಟಣದವರು ಬೆಂಡೋರಾ ಎಂಬಲ್ಲಿಗೆ ಹೋಗಿ ಬಹಳ ವಿಜೃಂಭಣೆಯಿಂದ ಆಚರಿಸಿದರು. ಕಲ್ಕತ್ತೆಯವರೂ ಆಚರಿಸಿದರು.

ಪೇಶಾವರ ಹತ್ತರ ಸಿಕ್ಕಿರುವ ಬುದ್ಧನ ಅಸ್ಥಿ ಮುಂತಾದವುಗಳು ವೈಸರಾಯ ಪ್ರಭುಗಳಿಂದ ಪರೀಕ್ಷಿಸಲ್ಪಟ್ಟು, ಸಿಲೋನ್, ಬರ್ಮಾ, ಚೀನಾ, ಜಪಾನ ಈ ರಾಜ್ಯಗಳೊಳಗೆ ಹಂಚಿ ಕೊಡುವ ನಿರ್ಣಯವಾಯಿತು.

ವಿಧವಾ ವಿವಾಹ ವಾರ್ಷಿಕೋತ್ಸವವು ಮುಂಬಾಯಿಯಲ್ಲಿ ಕಳೆದ ತಿಂಗಳಲ್ಲಿ ಬಹಳ ವಿಜೃಂಭಣೆಯಿಂದ ನಡೆಯಿತು.

ನಮ್ಮ ಜಿಲ್ಲೆ.

ಮಂಗಳೂರು:—ಕೆನರಾ ಹೈಸ್ಕೂಲಿನಲ್ಲಿ, ಹಳೆ ವಿದ್ಯಾರ್ಥಿಗಳ ಒಂದು ಸಭೆ ತಾರೀಕು ೯—೮—೧೯೦೯ರಲ್ಲಿ ಸೇರಿ, ದಿವಂಗತ ಅಮ್ಮೆಂಬಳ ಸುಬ್ರಾಯ ಪೈಗಳವರ ಹೆಸರಲ್ಲಿ ಒಂದು ವಿದ್ಯಾರ್ಥಿವೇತನ ಯಾ ಇನಾಮನ್ನು ವರುಷಂಪ್ರತಿ ಕೆನರಾ ಹೈಸ್ಕೂಲಿನ ವಿದ್ಯಾರ್ಥಿಗಳೊಬ್ಬನಿಗೆ ಕೊಡುವಂತೆ ಒಂದು ಫಂಡನ್ನು ಏರ್ಪಡಿಸಬೇಕಾಗಿ ನಿರ್ಣಯಿಸಿರುವರು.

ಎರ್ಮಾಳ:—ಇಲ್ಲಿಯ ಪಟೇಲ ಕುಮಾರರಾಯರು ಒಂದು ಚಲೋ ಸ್ವದೇಶೀ ಮಗ್ಗದ ಶಾಲೆಯನ್ನು ಕಟ್ಟಿಸಿರುವರು.

ಅಮೇರಿಕದ ಪ್ರಸಿದ್ಧ ಸರ್ಜನ್ ದಂತವೈದ್ಯರಾದ—

ಡಾ॥ ವಿರೋ ಪಿ. ಡೆ ಸಾ, ಡಿ. ಡಿ. ಎಸ್.,

ಇವರು "ಕೊಪ್ರನ್" ದಂತಮಂಜನದ ವಿಷಯವಾಗಿ ಹೀಗೆ ಬರೆಯುತ್ತಾರೆ:—

ಎಲ್ಲೆಲ್ಲೂ ದೊರೆವುದು.

ನಾನು, ಶಾಸ್ತ್ರೋಕ್ತವಾದ ಈ 'ಕೊಪ್ರನನ್ನು' ನನ್ನ ವೈದ್ಯಕೀಯ ಸಲಹೆ ಪಡೆದ ದಂತ ಬಾಧೆಯುಳ್ಳವರಿಗೆ ನಿರವಿಸಿ, ಜಾಗರೂಕತೆಯಿಂದ ಅದರ ಗುಣಗಳನ್ನು ಕಂಡಿರುವೆನು.

ಕೊಪ್ರನ್ ದಂತ ಮಂಜನದ ಗುಣವಿವರವೆಲ್ಲ ಅಕ್ಷರಶಃ ನಿಜ. ಅದರಲ್ಲುಪಯೋಗವಾಗುವ ಮುಖ್ಯ ವಸ್ತುಗಳೆಲ್ಲ ಪ್ರತ್ಯಪ್ರತ್ಯೇಕವಾಗಿ ಬಹು ಕಾಲದಿಂದ ಹಲ್ಲುಗಳಿಗೆ ಬಲವೀವ ಗುಣಗಳುಳ್ಳವೆಂದು ಸಿದ್ಧಾಂತವಾಗಿರಲು, ಅವುಗಳೆಲ್ಲ ಸೇರಿ ಉಂಟಾದ ಈ ಮಂಜನವು ಅತ್ಯುತ್ತಮವೇ ಆಗಿದೆ.

ಬಾಬೂಲಿನ ಹಸಿ ಕಡ್ಡಿಯೇ ಹಲ್ಲುಗಳಿಗೆ ಆರೋಗ್ಯಕರ; ಇತರ ಜೀನಸುಗಳೊಂದಿಗೆ ಈ ಬಾಬೂಲಿನ ಸತ್ವವು ಸೇರಿದೆಯಾದ ಕಾರಣ 'ಕೊಪ್ರನ್' ಒಂದು ಆದರ್ಶ ದಂತಮಂಜನನಾಯಿತು. ನಾನು ಕಂಡಂತೆ ಕೊಪ್ರನಿನಿಂದ ವಸಡುಗಳಿಂದಾಗುವ ಸ್ರಾವ ನಿಂತು, ಅವು ಪುಷ್ಟಿಗೊಂಡು, ನವಚೇತನ ಹೊಂದುತ್ತವೆ. ಅದರ ಉಪಯೋಗದಿಂದ ಬಾಯೊಳಗಿನ ವಿನಾಶಕಾರಕ ಕ್ರಿಮಿಗಳು ನಾಶವಾಗುವುವು. ಅದರ ರುಚಿಯು ಹಿತಕರವಾಗಿದ್ದು, ಬಾಯಿಯ ದುರ್ವಾಸನೆ ನೀಗಿ, ಉಚ್ಛ್ವಾಸಕ್ಕೊಂದು ಸೌರಭವುಂಟಾಗುವುದು.

ಈಗ ಪೇಟೆಯಲ್ಲಿರುವ ದಂತಮಂಜನಗಳಲ್ಲಿ ಕೊಪ್ರನಿಗೆ ಅಗ್ರಸ್ಥಾನವಿರುವುದನ್ನು ನಾನು ಮುಂದಾಗಿ ಕಾಣಬಲ್ಲೆ.

ಕೊಪ್ರನಿಗೆ ಶಿಫಾರಸು ಬೇಕಾಗಿಲ್ಲ; ಬೇಕು ನಿಮ್ಮದೊಂದು ಪರೀಕ್ಷೆ ಮಾತ್ರ.

ಅದನ್ನುಪಯೋಗಿಸಿದಂತೆ ಆರೋಗ್ಯಕರವಾಗಿ ಬೆಳೆವುವು ನಿಮ್ಮ ಹಲ್ಲುಗಳು; ಅದುವೇ ಕೊಪ್ರನಿಗೆ ಸರ್ವ ಜನಾದರವನ್ನು ಸಾಧಿಸಿಕೊಡುವುದು.

ತಯಾರಿಸುವವರು:—

ಕೊಪ್ರನ್ ಕೆಮಿಕಲ್ ಕೋ., ಲಿಮಿಟೆಡ್, 83/85 ತಾರದೇವ್ ರೋಡ್, ಬೊಂಬಾಯಿ.

[illegible] ತಾಲೂಕು ರೈತರ ಸಂಘ, ಪ್ರಕಟನೆ.

ರಿಸೆಟ್ಲ್‌ಮೆಂಟು.

ನಮ್ಮ ಜಿಲ್ಲೆಯಲ್ಲಿ ಸರಕಾರದವರು ಜ್ಯಾರಿಗೆ ತರಲಿರುವ ರಿಸೆಟ್ಲ್‌ಮೆಂಟಿನ ವಿಷಯ ಸೆಟ್ಲ್‌ಮೆಂಟು ಅಧಿಕಾರಿಯು ತಯಾರಿಸಿರುವ ಸ್ಕೀಮು ರಿಪೋರ್ಟಿಗೆ ನಮ್ಮ ತಾಲೂಕಿನ ಕಡೆಯಿಂದ ಅಕ್ಷೇಪಣೆಗಳನ್ನು ಛಾಪಿ ಮಾಡಿ ಮಾಹಿತಿಯೊಳಗೆ ಕಳುಹಿಸಲಾಗಿದೆ. ಅಕ್ಷೇಪಣೆಗಳನ್ನು ಕಳುಹಿಸಲಿಕ್ಕೆ ಸರಕಾರದವರು ತಾ. ೧-೯-'೩೪ರ ವರೆಗೆ ಮಾಹಿತಿಯನ್ನು ವೃದ್ಧಿಸಿರುವರು. ಸ್ಕೀಮು ರಿಪೋರ್ಟಿನ ಕನ್ನಡ ಮತ್ತು ಇಂಗ್ಲಿಷ್ ಪ್ರತಿಗಳು ಎರಡು ಕನ್ನಡ ಇವೆ. ಅವನ್ನು ಯಾರಾದರೂ ಓದಿ ಅನುಭವ ಮಾಡಿಕೊಳ್ಳಬಹುದು. ಅದರ ಕನ್ನಡ ಭಾಷಾಂತರವು ತಾ. ೨೪-೬-'೩೪ರ ಬಾಗ್ಯಾಳಿನ ಕಂಠೀರವದಲ್ಲಿ ಬರುತ್ತಿದೆ. ನಮ್ಮ ಅಕ್ಷೇಪಣೆಯ ಸಾರಾಂಶವು ತಾ. ೨೪-೬-'೩೪ರ ಬಾಗ್ಯಾಳಿನ ಕಂಠೀರವದಲ್ಲಿಯೂ ಇತರ ಪತ್ರಿಕೆಗಳಲ್ಲಿಯೂ ಪ್ರಕಟವಾಗಿದೆ. ಜಿಲ್ಲಾ ಕಮಿಟಿಯಿಂದ ನೇಮಿಸಲ್ಪಟ್ಟ ರಿಸೆಟ್ಲ್‌ಮೆಂಟು 'ತನಿಖೆ ಮಾಡುವ ಕಮಿಟಿ ಮೆಂಬರರಾದ ಶ್ರೀಗಳಾದ ಎ. ಬಿ. ಶೆಟ್ಟರು ಮತ್ತು ಕಾರಂತರು ತಾ. ೧೯-೮-'೩೪ನೇ ಆದಿತ್ಯವಾರ ದಿವಸ ಸಾಯಂಕಾಲ ೪ ಘಂಟೆಗೆ ಇಲ್ಲಿಯ ಬಂಟರ ಯಾನೆ ನಾಡವರ ಹಾಸ್ಟೇಲಿನಲ್ಲಿ ರೈತರಿಂದ ಬಾಯಿಮೂಲಕ ಅಕ್ಷೇಪಣೆಗಳನ್ನು ಪಡೆದು ತನಿಖೆ ಮಾಡುವರು. ತಾಲೂಕು ಸೆಟ್ಲ್‌ಮೆಂಟು ತನಿಖೆ ಕಮಿಟಿಯವರು ಈ ಕೆಳಗೆ ಕಾಣಿಸಿದ ಪ್ರಕಾರ ಆಯಾಯ ಸ್ಥಳದಲ್ಲಿ ಆಯಾಯ ತಾರೀಕಿಗೆ ಬಂದು ತನಿಖೆ ನಡಿಸುವರು. ರೈತರೆಲ್ಲರೂ ತಮ್ಮ ತಮ್ಮ ಗ್ರಾಮಗಳ ಕುಂದು ಅಕ್ಷೇಪಗಳು ಇದ್ದರೆ ಅವುಗಳನ್ನು ಬರಹ ಮೂಲಕ ನನಗೆ ಮುಂದಾಗಿ ಕಳುಹಿಸುವದು ಒಳ್ಳೇಯದು. ಮತ್ತು ರೈತರೆಲ್ಲರೂ ಅವರವರ ಭೂಮಿಗಳಿಗೆ ಸಮ್ಮಂಧಪಟ್ಟ ಗೇಣಿಚೀಟುಗಳನ್ನು ಕಮಿಟಿಯವರು ಕೂಡುವ ಸ್ಥಳಕ್ಕೆ ತರಬೇಕಾಗಿಯೂ, ಪುಂಜ ಸ್ಥಳವು ಬಾಗ್ಯಾಯತು ಅಥವಾ ನಂಜ ಸ್ಥಳವಾಗಿ ಮಾರ್ಪಡಿಸಲ್ಪಟ್ಟರೆ ಅವುಗಳ ಸರ್ವೆ ವಿವರ ವಗೈರೆಗಳನ್ನು ತರಬೇಕಾಗಿಯೂ, ೧೯೦೩ನೇ ಇಸವಿ ಬಾಗ್ಯಾಯಿತ ಅಕ್ಕಿಯ ಮತ್ತು ತೆಂಗಿನ ಕಾಯಿಯ ಕ್ರಯದ ವಿಷಯ ಕ್ರಮಪ್ರಕಾರವಾಗಿ ಇಡಲ್ಪಟ್ಟ ಲೆಕ್ಕದ ಪುಸ್ತಕವನ್ನು ಕಮಿಟಿಯವರಿಗೆ ತೋರಿಸಬೇಕಾಗಿಯೂ ವಿನಂತಿ.—

ಕಮಿಟಿಯವರು ಕೂಡುವ ಸ್ಥಳ ಮತ್ತು ಸಮಯ.

೧. ಮೂಡಬಿದ್ರೆ ಜೈನರ ಶಾಲೆಯಲ್ಲಿ ತಾ. ೧೨-೮-'೩೪ನೇ ಆದಿತ್ಯವಾರ ಬೆಳಿಗ್ಗೆ ೧೧ ಘಂಟೆಗೆ.

೨. ಬೆಳ್ವಾಯಿ ತಾ. ೧೪-೮-'೩೪ನೇ ಮಂಗಳವಾರ ಸಾಯಂಕಾಲ ೩ ಘಂಟೆಗೆ.

೩. ಬೈಲೂರು ತಾ. ೧೬-೮-'೩೪ನೇ ಗುರುವಾರ ಸಾಯಂಕಾಲ ೩ ಘಂಟೆಗೆ.

೪. ಮುನಿಯಾಲ್ ತಾ. ೧೮-೮-'೩೪ನೇ ಶನಿವಾರ ಬೆಳಿಗ್ಗೆ ೧೧ ಘಂಟೆಗೆ.

೫. ಹೆಬ್ರಿ ತಾ. ೧೮-೮-'೩೪ನೇ ಶನಿವಾರ ಸಾಯಂಕಾಲ ೪ ಘಂಟೆಗೆ.

ಕಾರ್ಕಳ ತಾ. ೧೯-೮-'೩೪ನೇ ಆದಿತ್ಯವಾರ ಮಧ್ಯಾಹ್ನ ೧೧ ಘಂಟೆಗೆ. (ಬಂಟರ ಹಾಸ್ಟೇಲಿನಲ್ಲಿ).

ಕಾರ್ಕಳ, ತಾ. ೧೦-೮-'೩೪. } ಎಂ. ಎಸ್. ಅಧಿಕಾರಿ, ಗೌರವ ಕಾರ್ಯದರ್ಶಿ.

ಶುದ್ಧೀ ಸಮಾಚಾರ.

ಇದೇ ಕಳೆದ ಜುಲಾಯಿ ತಿಂಗಳ ತಾ. ೨೮ರಲ್ಲಿ ಅಂಬಾಲಾ ಜಿಲ್ಲೆಯಲ್ಲಿ ೯೦ ಮಂದಿ ಮಹಮ್ಮದೀಯರು ಶುದ್ಧಿಗೊಳಿಸಲ್ಪಟ್ಟರು.

ಅಕೋಲಾದಲ್ಲಿ ೪ ಮಂದಿ ಮಹಮ್ಮದೀಯರು ಶುದ್ಧಿಗೊಳಿಸಲ್ಪಟ್ಟರು.

ಮುರಾದಾಬಾದಿನಲ್ಲಿ ೬ ಮಂದಿ ಮಹಮ್ಮದೀಯರು ಶುದ್ಧಿಗೊಳಿಸಲ್ಪಟ್ಟರು.

ಅನೇಕಕಡೆಗಳಲ್ಲಿ ಆರ್ಯಧರ್ಮ ಪ್ರಚಾರಮಾಡುತ್ತಿರುವ ಪಂಡಿತ ಅಯೋಧ್ಯಾ ಪ್ರಸಾದರವರು ಅಲ್ಲಿಯ ೨೦೦ ಮಂದಿ ಮಹಮ್ಮದೀಯರನ್ನು ಶುದ್ಧಿಗೊಳಿಸಿದರು. ಈ ಪ್ರಕಾರ ಇದುವರೆಗೆ ಒಟ್ಟಿಗೆ ೩೦೯ ಮಂದಿ ಶುದ್ಧೀಕೃತರಾಗಿ ಹಿಂದೂಗಳಾದರು.

ಸಂಪಾದಕರ ಟಪ್ಪಾಲುಪೆಟ್ಟಿಗೆ.

ಬಾತ್ಮಿದಾರರ ಅಭಿಪ್ರಾಯಗಳಿಗೆ ನಾವು ಜವಾಬ್ದಾರರಲ್ಲ. ಎಲ್ಲ ಲೇಖಕರು ತಮ್ಮ ಸಂಪೂರ್ಣ ಹೆಸರು ವಿಳಾಸಗಳನ್ನು ಕೊಡತಕ್ಕದ್ದು. ದೀರ್ಘ ಲೇಖನಗಳಿಗೆ ಎಡೆ ಕೊಡಲಾಗುವುದಿಲ್ಲ. ಲೇಖನಗಳು ಸಾರ್ವಜನಿಕ ಹಿತದೃಷ್ಟಿಯುಳ್ಳವುಗಳಾಗಿದ್ದು ಯುಕ್ತ ಶೈಲಿಯಲ್ಲಿರತಕ್ಕದ್ದು. (ಸಂ. ಸ್ವ.)

ಪಾಣೆಮಂಗಳೂರಿನ ಗ್ರಾಮ ಪಂಚಾಯತ ಕೋರ್ಟು.

ಈ ಕುರಿತಾಗಿ ನಮಗೊಂದು ಬಾತ್ಮಿ ತಲಪಿದೆ. ಕೋರ್ಟಿನಲ್ಲಿ ಯಾವಾಗಲೂ ಮೆಂಬರರ ಹಾಜರಿ ಸರಿ ಇರುವುದಿಲ್ಲವೆಂದೂ, ಕೋರ್ಟು ಮೂರು ಹಪ್ತೆಗಳಿಗೋ ತಿಂಗಳಿಗೊಮ್ಮೆಯೋ ಜರಗುವುದೆಂದೂ, ಉಗ್ರಾಣಿಯೋ ಕೋರ್ಟಿನ ಎಲ್ಲ ಬರೆವಣಿಗೆಗಳನ್ನು ಮಾಡುತ್ತ ಮೆಂಬರರೆಲ್ಲರ ಮೇಲೆ ತನ್ನ ವರ್ಚಸ್ಸನ್ನು ನಡೆಸುತ್ತಿರುವುದು ಹಲವರಿಗೆ ಅಸಮಾಧಾನಕರವಾಗಿದೆಯೆಂದೂ ಒಬ್ಬ ಬಾತ್ಮಿದಾರರು ಬರೆಯುತ್ತಾರೆ. ಸಂಬಂಧಪಟ್ಟ ಅಧಿಕಾರಿಗಳು ಈ ಕಡೆಗೆ ಗಮನಕೊಡುವರೆಂದು ನಿರೀಕ್ಷಿಸಲಾಗಿದೆ. [ಸಂ. ಸ್ವ.]

ಗುರುವಾಯನಕೆರೆ ಪಂಚಾಯತ ಬೋರ್ಡು.

ಇದರ ಕುರಿತಾಗಿಯೂ ನಮಗೆ, ನಾನಾ ಆಪಾದನೆಗಳುಳ್ಳ ಬಾತ್ಮಿ ತಲಪಿದೆ. ಮೆಂಬರರಲ್ಲಿ ಕೆಲವರು ರಾಜೀನಾಮೆ ಕೊಟ್ಟಿರುವರಂತೆ; ಆದರೂ, ಹೊಸ ಚುನಾವಣೆ ಇನ್ನೂ ಆದುದಿಲ್ಲವೇಕೆ? ಎಂದು ಈ ಬಾತ್ಮಿದಾರರ ಪ್ರಶ್ನೆಯಿದೆ. ಮೂವರು ಮಾತ್ರ ಈಗ ಮೆಂಬರರಾಗಿದ್ದಂತೆಯೂ, ಅವರಲ್ಲೊಬ್ಬನು ಅಧ್ಯಕ್ಷರ ಪಕ್ಷ, ಮತ್ತು ಉಳಿದಿಬ್ಬರು ಪಂಗೀಕರು ಎಂದೂ, ಮಾರ್ಗಗಳ ಸ್ವಚ್ಛತೆ, ದೀಪಗಳ ವ್ಯವಸ್ಥೆ, ತೋಟಗಳ ಕೆಲಸ ಇವೆಲ್ಲ ಕೆಲಕಾಲದಿಂದ ಲೋಪವಾಯಿತೋ ಎಂಬಂತೆ ತೋರುವುದೆಂದೂ, ಪಂಚಾಯತ ಬೋರ್ಡು ಆಫೀಸಿನ ಬಾಗಿಲು ತೆರೆಯದೆ ೨ ತಿಂಗಳಾಯಿತೆಂದೂ ಮುಂತಾಗಿ ನಾನಾ ಆಪಾದನೆಗಳಿವೆ. ಸಂಬಂಧಪಟ್ಟ ಅಧ್ಯಕ್ಷರು ಸಮಾಧಾನಕರವಾದ ಉತ್ತರಕೊಟ್ಟು ಜನರನ್ನು ತೃಪ್ತಿಗೊಳಿಸುವರೆಂದು ಭರವಸೆ. [ಸಂ. ಸ್ವ.]

ದಕ್ಷಿಣಾಫ್ರಿಕದಲ್ಲಿ ಇಂಡಿಯಾ ಸರಕಾರದ ಏಜಂಟ್ ಜನರಲರಾದ ಸರ್ ಕುನ್ವಾರ್ ಮಹಾರಾಜಾ ಸಿಂಘರು

ಸಿಟಿ ಆರ್ಯಸಮಾಜ, ಮಂಗಳೂರು.

ಇದೇ ಕಳೆದ ಮೇ ತಿಂಗಳಿಂದ ಜುಲಾಯಿ ತಾ. ೩೧ರ ತನಕ ಸಿಟಿ ಆರ್ಯಸಮಾಜಕ್ಕೆ ಈ ರೀತಿಯ ಸಹಾಯವು ದೊರೆತಿದೆ:—

ಮೇ ತಿಂಗಳಿಂದ ಜುಲಾಯಿ ೩೧ರ ವರೆಗೆ ಸದಸ್ಯರ ಮಾಸಿಕ ವರ್ಗಣಿ ಮುಖಾಂತರ ದೊರೆತ ರೂ. ೨೫, ಶುದ್ಧೀಕೃತರಾದ ಶ್ರೀಯುತ ಧರ್ಮಪಾಲರಿಂದ ಸಹಾಯಧನ ರೂ. ೧, ಫೆಬ್ರವರಿಯಿಂದ ಎಪ್ರಿಲ್ ತಿಂಗಳ ವರೆಗಿನ ಖರ್ಚು ಕಳೆದು ಶಿಲ್ಕು ರೂ. ೪—೧೧—೪, ಜುಮ್ಲಾ ರೂ. ೩೯—೧೧—೪. ಈ ಬಾಬ್ತು ಜುಲಾಯಿ ೩೧ರ ವರೆಗಿನ ಖರ್ಚು ಬಾಪತುಗಳ ಬಗ್ಗೆ ರೂ. ೧—೮—೦, ಹೋಮಕ್ಕೆ ಸಂಬಂಧಪಟ್ಟ ಸಾಮಾನುಗಳ ಬಗ್ಗೆ ರೂ. ೦—೬—೬, ದಯಾನಂದರ ಚಿತ್ರಪಟದ ಬಗ್ಗೆ ರೂ. ೧—೧—೦, ಬಾಡಿಗೆ ಬಗ್ಗೆ ರೂ. ೧೦, ಟಪ್ಪಾಲು ಖರ್ಚು ರೂ. ೦—೯—೯, ಜುಮ್ಲಾ ರೂ. ೧೩—೯—೪, ಶಿಲ್ಕು ರೂ. ೦೬—೨—೦ ಎಂದು ಬಿ. ಲಕ್ಷ್ಮೀದೇವ ವಿದ್ಯಾರ್ಥಿ, ಕಾರ್ಯದರ್ಶಿ, ಮತ್ತು ವಿ. ಬಾಲಕೃಷ್ಣ ನ್ಯಾಕ, ಕೋಶಾಧ್ಯಕ್ಷ ಇವರು ತಿಳಿಸುತ್ತಾರೆ.

ಕೇಶೈಯಂತಿ, ಸುಮಾಸಾದ ಮತ್ತು ಹೊಳಪಾದ ಕೇಶಧಾಮ

ದಿನನಿತ್ಯದ ಸ್ನಾನಕ್ಕೆ ಮುಂಚಿತವಾಗಿ ನಿಮ್ಮ ಕೂದಲುಗಳನ್ನು ಚೆನ್ನಾಗಿ ಬಾಚಿ, ಬ್ರಶ್ಶಿನಿಂದ ಸವರಿ, ಆ ನಂತರ

"ಕುಂತಳ ಕೌಮುದಿ"

ಎಂಬ ಹಿಂದೂಸ್ಥಾನದ ಪ್ರಸಿದ್ಧ ಕೇಶ ತೈಲ್ಯದಿಂದ ಕೂದಲುಗಳ ಬುಡವನ್ನು ಜಾಗರೂಕತೆಯಿಂದ ತಿಕ್ಕಿರಿ.

(ಮನಮೋಹಕರವಾದ ಸುಗಂಧವನ್ನುಳ್ಳದು.)

ಹಿಂದೂಸ್ಥಾನದಲ್ಲೆಲ್ಲ ಸರ್ವತ್ರ ಉಪಯೋಗಿಸಲ್ಪಡುತ್ತಿದೆ.

ತಯಾರಿಸುವವರು:— ಬೆಲೆ ಸೀಸೆ ಒಂದಕ್ಕೆ ರೂ 0—12—0.

ಆರ್. ಸಿ. ಸೇನ್ ಎಂಡ್ ಕೋ.,

ಲಿಮಿಟೆಡ್, ಕಲ್ಕತ್ತ.

ಏಜಂಟರು:—

ಕುಂತಳ ಕೌಮುದಿ ತೈಲ,

ವೆನ್‌ಲೋಕ್ ಆಸ್ಪತ್ರೆ ಎದುರು, ಮಂಗಳೂರು.

ಶ್ರೀ ವಿಲಾಸ

ಗಣಪತಿ ಹೈಸ್ಕೂಲ್ ರಸ್ತೆ, × ಮಂಗಳೂರು.

ಸರಕಾರೀ ಉದ್ಯೋಗಸ್ಥರಿಂದಲೂ, ವಿದ್ಯಾರ್ಥಿಗಳಿಂದಲೂ, ಪುರಪ್ರಮುಖರಿಂದಲೂ ಆದರಿಸಲ್ಪಡುತ್ತಿರುವ—

ಮಂಗಳೂರಿನ ಒಂದು ಪ್ರಾಮುಖ್ಯ ಉಪಹಾರಗೃಹ.

ಶುದ್ಧ ತಿಂಡಿ, ತಾಜಾ ಕಾಫಿ, ರುಚಿಕರವಾದ ಮಿಠಾಯಿ, ಎಲ್ಲ ಬಗೆಯ ಒಳ್ಳೆಯ ಸೌಮ್ಯ ಪಾನೀಯಗಳು,—ಶುಚಿತ್ವ, ಸ್ಥಳಾನುಕೂಲತೆ ಇವೆಲ್ಲವುಗಳಿಗಾಗಿ 'ಶ್ರೀ ವಿಲಾಸ'ವು ಹೆಸರುಗೊಂಡಿದೆ.

[ವಿವಾಹ, ಉಪನಯನ, ಸಿಹ್ಯಾರಕೂಟ ಇತ್ಯಾದಿಗಳ ಸಂದರ್ಭದಲ್ಲಿ, ಬೇಕಾದ ತರದ ತಿಂಡಿ ತಿನಸುಗಳು ಸಿದ್ಧಗೊಳಿಸಲಾಗುವುದು.]

ಸುಜೀರ ಗೋಪಾಲ ನಾಯಕ್, ಮ್ಯಾನೇಜರ್.

ಉತ್ತರ ಕನ್ನಡ ಜಿಲ್ಲೆಯ ರೈತರ ಇಂದಿನ ಚಿತ್ರ.

೧೯೩೨-'೩೩-'೩೪, ಈ ಮೂರು ವರ್ಷಗಳಲ್ಲಿ ಉತ್ತರ ಕನ್ನಡ ಜಿಲ್ಲೆಯ ರೈತರ ಚರಿತ್ರೆ ವ್ಯಾಪಕವಾಯ್ತು, ಅವರಷ್ಟು ದೀನ, ದರಿದ್ರರು ಇನ್ನೆಲ್ಲಿಯೂ ಇರರು ಎಂಬಷ್ಟು ಭಯಂಕರ ಚಿತ್ರವೇ ಅಲ್ಲಿ, ಎಲ್ಲೆಲ್ಲೂ ಗೋಚರಿಸುತ್ತಿದೆ.

೧೯೩೦ನೇ ಇಸವಿಯ ಕಾನೂನುಭಂಗ ಚಳವಳದ ಕಾಲದಲ್ಲಿ - ೮೦೦ ಮಂದಿ ರೈತರು ಕರನಿರಾಕರಣಾ ಚಳವಳದಲ್ಲಿ ಭಾಗವಹಿಸಿದ್ದರು. ೧೯೩೨ರಲ್ಲಿ ಪುನಃ ೪೦೦ ಮಂದಿ ರೈತರು ಈ ಚಳವಳದ ಪ್ರವಾಹಕ್ಕೆ ಧುಮ್ಮಿಕ್ಕಿದರು. ಆಗಲೂ, ಆ ಮೇಲೆ ಮತ್ತೆರಡು ವರ್ಷವೂ, ಅವರ ಜಮಾನು ಜಪ್ತಿ, ಚರಸ್ಥಿರಸೊತ್ತುಗಳ ಮುಟ್ಟುಗೋಲು, ಸಜೆ, ಇದುವೇ ನಡೆಯಿತು. ೯೦೦ ಜಪ್ತಿಗಳಾದುವು; ೫೫ ಸಾವಿರ ರೂಪಾಯಿ ಮೌಲ್ಯದ ಚರಸೊತ್ತುಗಳು, ಈಗಳನ ಬೆಲೆಯಲ್ಲಿ ರೂ. ೪,೨೨,೮೮೮ ರಷ್ಟು ಮೌಲ್ಯದ ೫೦೦ ಎಕ್ರೆ ಜಮೀನು, ಮತ್ತು ೫೪,೪೫೪ ರೂಪಾಯಿಗಳಷ್ಟು ಮೌಲ್ಯವಾಗುವ ೯೦ ಮನೆಗಳು, - ಇವಿಷ್ಟು ಜಪ್ತಿಯಾಗಿದೆ.

ಕಳೆದ ಮೂರು ವರ್ಷಗಳಲ್ಲಿ ಕೆಲವು ಕಡೆಗಳಲ್ಲಿ ಅಧಿಕ ಪೋಲೀಸರನ್ನಿರಿಸಿ, ೩೫ ಸಾವಿರ ರೂಪಾಯಿ ಪುಂಡ ತೆರಿಗೆಯೂ ರೈತರ ಮೇಲೆ ಹೊರಿಸಲಾಗಿದೆ.

ಅವರ ಇಂದಿನ ಪಾಡು ಹೇಗಿದೆಯೆಂಬುದನ್ನು ಊಹಿಸಿಯೇ ತಿಳಿಯಬಹುದಲ್ಲವೇ?

ನೋಟೀಸು.

ಕಾಸರಗೋಡು ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ.

O. P. No. 100/1934.

1. ನರಸಿಂಹ ಶೆಣ್ವಿ, 2. ಕಮಲಾಕ್ಷ ಶೆಣ್ವಿ, 3. ಸುಂದರ ಶೆಣ್ವಿ, 4. ರಾಮ ಶೆಣ್ವಿ, ಸರಾಫ ಮಂಜುನಾಥ ಶೆಣ್ವಿಯರ ಮಕ್ಕಳು, ಕಾಸರಗೋಡು ಕಸಬೆಯಲ್ಲಿರುವವರು—ಅರ್ಜಿದಾರರು.

ಅರ್ಜಿದಾರರ ತಂದೆ ಮೃತಪಟ್ಟ ಸದರಿ ಸರಾಫ ಮಂಜುನಾಥ ಶೆಣ್ವಿರಿಗೆ ಹೊರಗಿನಿಂದ ಬರತಕ್ಕ ಸಾಲಗಳ ವಸೂಲಿ ಕುರಿತು ಸಕ್ಸೆಶನ್ ಸರ್ಟಿಫಿಕೇಟು ಕೊಡಬೇಕಾಗಿ ಅರ್ಜಿದಾರರು ಅಪೇಕ್ಷಿಸಿ ದಾಖಲುಮಾಡಿದ ಸದರಿ ಅರ್ಜಿಯು ಇದೇ ಅಗೋಸ್ತು ತಾ. 27ಕ್ಕೆ ತನಿಖೆಗೆ ಇಟ್ಟಿರುತ್ತದೆ. ಆ ಕುರಿತು ಆಕ್ಷೇಪ ಇದ್ದವರು ಆ ದಿವಸ ಕೋರ್ಟು ಸಮಯಕ್ಕೆ ಸರಿಯಾಗಿ ಹಾಜರಾಗಿ ಆಕ್ಷೇಪ ಮಾಡತಕ್ಕದ್ದು.

ಕಾಸರಗೋಡು, 9-8-1934. } P. Ananda Rao, *Vakil for Petitioners.*

Notice.

IN THE COURT OF THE DISTRICT JUDGE OF SOUTH KANARA.

Original Petition No. 80/34

Between—

Manjappa Shetty and others,— *Petitioners*

and

Shiva-leviamma and another— *Respondents.*

Notice is hereby given that the Petitioners have filed an application before the District Judge of South Kanara praying that the Respondents as Trustees of the Hosaugady Shri Parishvanath Basti of Maroor village Karkal Taluk, should be called upon to give particulars of the Trust as to its movable and immovable properties with the income thereof and to produce the accounts for the past three years for their audit.

The said petition stands posted to 23—8—1934, and any person interested in the Trust may be present at the hearing on the said date.

Mangalore, 15th Aug. '34. } G. Somashekar Rao, *Vakil for Petitioners.*

ನೋಟೀಸು.

ಡಿಸ್ಟ್ರಿಕ್ಟ್ ಮುನ್ಸೀಫ್ ಕೋರ್ಟಿನಲ್ಲಿ

O. P. No. 40/34.

ಲಕ್ಷ್ಮಿಯಮ್ಮನ ಅಕ್ಕಮ್ಮ ಸಡ್ತಿ, ಮಹಾಬಲೇಶ್ವರ ಶೆಟ್ರ ಹೆಂಡತಿ, ಉಡುಪಿ ತಾಲೂಕು ಕುದ್ರುಗೋಡು ಗ್ರಾಮ- ಅರ್ಜಿದಾರಳು.

ಅರ್ಜಿದಾರಳ ಮಗ ಮೃತ ಮೋಹನದಾಸ ಸೆಟ್ಟಿಯು ಉಡ್ಪಿ ಕೆನರಾ ಬ್ಯಾಂಕಿನಿಂದ ಪಡೆದ No. 881/81ನೇ ಲೋನಿನ ಬಾಬತ್ತು ಅದರ ಜವಾಬ್ದಾರಿ ಬಗ್ಗೆ ಈಡಿಟ್ಟ ಚಿನ್ನಾಭರಣಗಳನ್ನು ಸದ್ರಿ ಬ್ಯಾಂಕಿನಿಂದ ವಾಪಾಸು ಪಡಕೊಳ್ಳುವರೇ, ಕುಟುಂಬದ ಯಜಮಾನ್ತಿಯಾದ ತನ್ನ ಹೆಸರಲ್ಲಿ ಸಕ್ಸೆಶನ್ ಸರ್ಟಿಫಿಕೇಟು ಕೊಡಬೇಕಾಗಿ ಅಪೇಕ್ಷಿಸಿ ದಾಕ್ಲು ಮಾಡಿದ ಮೇಲಿನ ಅರ್ಜಿಯು ಮೇಲ್ಕಂಡ ಕೋರ್ಟಿನಲ್ಲಿ ತಾ. 27-8-34ಕ್ಕೆ ತನ್ನಿಗೆ ಇಟ್ಟಿರುವದರಿಂದ ಆ ಕುರಿತು ಆಕ್ಷೇಪವುಳ್ಳವರು ಸದ್ರಿ ಅರ್ಜಿ ತನ್ನಿ ದವಸ ಬೆಳಿಗ್ಗೆ 10 ಘಂಟೆಗೆ ಕೋರ್ಟಿನ ಮುಂದೆ ಹಾಜ್ರಾಗಿ ಜ್ಯಾಹೀರು ಮಾಡಿಕೊಳ್ಳತಕ್ಕದ್ದು.

ಉಡುಪಿ, 7-8-'34. } ಕೆ. ಜಿ. ಬಲ್ಲಾಳ್, ಅರ್ಜಿದಾರಳ ಕಡೆ ವಕೀಲ.

ನಿಮ್ಮ ಆರೋಗ್ಯವು ಈ ಚಿಕ್ಕ ಗುಳಿಗೆಗಳಲ್ಲಿ

ಸುಭದ್ರವಾಗಿದೆ.

ನೂತನ! ರುಚಿಕರ! ಹಿತಕರ!

ಹರಳೆಣ್ಣೆ ಮಿಶ್ರಿತವಾದ ಸಿಹಿ ಚೊಕಲೇಟು—

ಕೇಸ್-ಫೆನ್-ಮಿಂಟ್

ಹರಳೆಣ್ಣೆ, ಅಗರ್-ಅಗರ್, ಫೆನಲ್‌ಫ್ತಾಲೀನ್, ಪೆಪ್ಪರ್‌ಮಿಂಟ್ ಮತ್ತು ಚೊಕಲೇಟು, ಇವುಗಳನ್ನು ಸೇರಿಸಿ ಸೇವಿಸಲು ಹಿತಕರವಾಗುವಂತೆಯೂ, ಆಬಾಲವೃದ್ಧ ಚಿಕ್ಕದ ಸಕಲರಿಗೂ ಯಾವ ಕಾಲಕ್ಕೂ ಸುಖಭೇದಿಗಾಗಿ ಅನುಕೂಲವಾಗುವಂತೆ ಇದು ತಯಾರಿಸಲ್ಪಟ್ಟಿದೆ. ಮಲಬದ್ಧತೆಯು ಹಲವು ಭಯಂಕರ ರೋಗಗಳನ್ನು ತರಬಲ್ಲುದು. ಮಲಬದ್ಧತೆ ತೋರಿದಾಗೆಲ್ಲ "ಕೇಸ್-ಫೆನ್-ಮಿಂಟ್"ನ್ನು ಸೇವಿಸಿರಿ. ಈ ಚೊಕಲೇಟುಗಳನ್ನು ಒಂದೆರಡು ಸೇವಿಸಿದರೆ ಅನಾಯಾಸವಾದ ಸುಖಭೇದಿ! ಕರುಳುಗಳ ವಿಕಾರವಿಲ್ಲ! ಜಿಗುಪ್ಸೆ ಹುಟ್ಟಿಸುವುದಿಲ್ಲ! ಹೊಟ್ಟೆಯೊಳಗೆ ಯಾವ ವೇದನೆಯೂ ಇಲ್ಲ. ಮಕ್ಕಳು ಆನಂದದಿಂದ ಸೇವಿಸುವರು.

ಈ ಹೆಸರುಗಳೇನು,—ಓದಿರುವಿರಾ?

ವಾತ_ಪಿತ್ತವಾತ_ಸಂಧಿವಾತ_ಕಟಿವಾತ_ಶಿರಶೂಲೆ_ನರದೌರ್ಬಲ್ಯ...... !!!!

ಇವುಗಳಿಗೆ ಹೆದರದವರಾರು? ಇವುಗಳೆಷ್ಟು ಜನರನ್ನು ಕಾಡುತ್ತಿವೆ!

ಡಾ। ಫ್ರಾಯುವರ ಕೆಚೆಟ್ಸ್

ಸೇವನೆಗೆ ಕಷ್ಟವಿಲ್ಲ, ಅರ್ಧ ಕಟ್ಟೆ ನೀರಿನಲ್ಲಿ, — ನೋವು ತರಿಸೋರಿದಾಗಲೆಲ್ಲ— ಈ ಕೆಚೆಟುಗಳನ್ನು ಹಾಕಿ ಸೇವಿಸಿದರೆ — ಅದು ಹೇಗೆ ಗುಣಕಾರಿಯಾಗಿ ಕಾರ್ಯಾರಂಭ ಮಾಡುವುದೆಂಬುದನ್ನು ಆಗಲೇ ಅನುಭವ ಮಾಡುವಿರಿ.

ಕೆಲವೇ ನಿಮಿಷಗಳಲ್ಲಿ ಖಂಡಿತ ಗುಣಲಾಭ!

ನರಗಳ ದೌರ್ಬಲ್ಯ ಸಂಬಂಧವಾದ ಉಪದ್ರಗಳನ್ನೂ ಪರಿಹರಿಸುವುದು.

ಕೊಂಡುಕೊಂಡೇ ಅವನ್ನು ಪರೀಕ್ಷಿಸಿರಿ.

'ಕೆಚೆಟು'ಗಳು ನಿರಪಾಯವಾಗಿ, ಭರವಸೆಯಿಂದ ಸೇವಿಸಲ್ಪಡಲು ಯೋಗ್ಯವಾಗಿವೆ.

ಸಂದೇಹವಿಲ್ಲದೆ ಇಂದೇ ಅವುಗಳ ಗುಣಪರೀಕ್ಷೆ ನಡೆಯಲಿ.

ಬಲು ಕಡಿಮೆ ಕ್ರಯ! ಎಲ್ಲೆಲ್ಲಿಯೂ ದೊರೆಯುವುದು. ಅತಿ ಹೆಚ್ಚು ಫಲ!

The Paragon Products Co., Ballard Estate, Bombay.

ದ. ಕ. ಜಿಲ್ಲೆಯ ಡಿಸ್ಟ್ರಿಬ್ಯೂಟರರು:— M. K. Prabhu, Bantwal + S. Kanara.

ಇನ್ನು ಹತ್ತು ವರ್ಷಗಳಿಗೆ ಯುದ್ಧವಿಲ್ಲ.

ಪ್ರಖ್ಯಾತ ಬ್ರಿಟಿಷ್ ರಾಜನೀತಿಜ್ಞರಲ್ಲೊಬ್ಬರಾದ ಲ್ಯೊಡ್ ಜೋರ್ಜರವರು, ಫ್ರಾನ್ಸಿನ ಒಬ್ಬ ಪತ್ರಿಕಾ ಪ್ರತಿನಿಧಿಯೊಡನೆ ಸಂಭಾಷಿಸುತ್ತ, ತಮ್ಮ ಅಭಿಪ್ರಾಯವನ್ನು ಈ ರೀತಿಯಾಗಿ ತಿಳಿಸಿರುವರು:—"ಇನ್ನು ಹತ್ತು ವರ್ಷಗಳ ತನಕ ಒಂದು ಮಹಾಯುದ್ಧದ ಚಿಂತೆಯಿಲ್ಲ; ಅದನ್ನು ನಾನು ಖಂಡಿತವಾಗಿ ಹೇಳಬಲ್ಲೆ. ಯುದ್ಧ ಸಂಭವಿಸುವಂತೆ ಕಾರಣವಾಗುವ ವಿದ್ಯಮಾನಗಳು ಪ್ರತ್ಯಕ್ಷವಾಗಿರಬಹುದು,—ಆದರೆ, ಪ್ರಕೃತದ ಪ್ರಪಂಚ ಪ್ರಪಂಚ ಸ್ಥಿತಿಯು ಯುದ್ಧಕ್ಕೆ ಇಂಬುಕೊಡುವಂತಿಲ್ಲ; ಕಳೆದ ಮಹಾಯುದ್ಧದ ಸಮಯದಲ್ಲಿ ನಾನು ಬ್ರಿಟಿಷ್ ಸರಕಾರದ ಪ್ರಧಾನನಾಗಿದ್ದೆ—ಇಂತಹ ಯುದ್ಧಗಳನ್ನು ಹೇಗೆ ನಡೆಸುವುದೆಂದು ನನಗೆ ಚೆನ್ನಾಗಿ ತಿಳಿದಿದೆ."

ಯುದ್ಧದ ಚಿಹ್ನೆ!

ಜುಲಾಯಿ ೩೦ರಲ್ಲಿ ಲಂಡನಿನ ಕೊಮನ್ಸ (House of Commons) ಸಭೆಯಲ್ಲಿ ಬ್ರಿಟನಿನ ವಿಮಾನ ದೌರ್ಬಲ್ಯದ ಕುರಿತು ತರ್ಕವಾಯಿತು. ಮಿ। ಬಾಲ್ಡ್ವಿನರ ಹೇಳಿಕೆಯು ಹೀಗೆ ತಿಳಿದುಬಂದಿದೆ. ಕಳೆದ ನಾಲ್ಕು ವರ್ಷಗಳಲ್ಲಿ ಬ್ರಿಟನು ೮೨ ವಿಮಾನಗಳನ್ನು ಹೆಚ್ಚಿಸಿತು; ಫ್ರಾನ್ಸು ೨೦೦ರಿಂದ ೩೦೦ ವಿಮಾನಗಳನ್ನು ಹೆಚ್ಚಿಸಿತು; ಅಲ್ಲದೆ ೧೫ ಮಿಲಿಯ ಸ್ಟರ್ಲಿಂಗನ್ನು ಪೃಥಕ್ಕರಿಸಿಟ್ಟಿದೆ. ಇಟೆಲಿಯು ೬೫ ವಿಮಾನಗಳನ್ನು ಹೆಚ್ಚಿಸಿತು; ೧೦೦೦ದಿಂದ ೧೧೦೦ ವಿಮಾನಗಳನ್ನಿಟ್ಟುಕೊಂಡಿದೆ. ಬೆಲ್ಜಿಯಂ ಶೇಕಡಾ ೩೦ರಷ್ಟು ಯಂತ್ರಗಳನ್ನು ಹೆಚ್ಚಿಸಿತು; ನಾಲ್ಕು ವರ್ಷಗಳಲ್ಲಿ ಅಮೆರಿಕಾವು ೩೪೦ ವಿಮಾನಗಳನ್ನು ಹೆಚ್ಚಿಸಿತು. ಅಲ್ಲದೆ ತನಗೆ ೧೧೮೪ ವಿಮಾನಬಲ ಬೇಕೆಂದು ನಿರ್ಧರಿಸಿರುತ್ತದೆ. ರಷ್ಯವು ಇದರಲ್ಲಿ ಎಲ್ಲರಿಗಿಂತಲೂ ಮುಂದಾಗಿ ನಡೆದಿರುತ್ತದೆ.

ಮಂಗಳೂರಿನ ಪೇಟೆಧಾರಣೆ.

ಸಾಮಗ್ರಿಗಳು	ಇಂದ	ವರೆಗೆ
	ರೂ. ಆ.	ರೂ. ಆ.
ರಾಶಿ ಅಕ್ಕಿ ...	3—10	4— 2
ಮಸ್ಕತಿ ...	4— 4	4—12
ಗುಡ್ಡು ...	3—12	4— 4
ಸುಗ್ಗಿ ...	4— 0	4— 4
ಊರ ಅವ್ವಲ್ ಬೆಳ್ತಿಗೆ ...	4— 0	4—10
ರಂಗೂನು ಬೆ. ಗೋ. ೧ಕ್ಕೆ ...	4—14	5— 4
ಎಲ್ಲೂರು ಬೆ. ಮು. ೧ಕ್ಕೆ ...	3— 6	3— 8
ಗೋದಿ ಗೋಣಿ ೧ಕ್ಕೆ ...	10— 0	12— 8
ತೊಗರಿ ಗೋಣಿ ೧ಕ್ಕೆ ...	9— 8	10— 0
ಹುರುಳಿ ಗೋಣಿ ೧ಕ್ಕೆ ...	6— 2	6— 4
ಕಡಲೆ ಗೋಣಿ ೧ಕ್ಕೆ ...	8— 4	9— 8
ತೊಗರಿಬೇಳೆ ಗೋಣಿ ೧ಕ್ಕೆ ...	10— 0	17— 0
ಉದ್ದು ಗೋಣಿ ೧ಕ್ಕೆ ...	7— 0	7— 8
ಹೆಸರು ಗೋಣಿ ೧ಕ್ಕೆ ...	7— 0	7— 8
ಊರುಬೆಲ್ಲ ಖಂಡಿ ೧ಕ್ಕೆ ...	40— 0	45— 0
ಉಪ್ಪು ಗೋಣಿ ೧ಕ್ಕೆ ...	5— 4	5— 8
ಕೊಬ್ರಿ ಖಂಡಿ ೧ಕ್ಕೆ ...	40— 0	42— 0
ಕೊಬ್ರಿ ಹಿಂಡಿ ಖಂಡಿ ೧ಕ್ಕೆ ...	19— 0	19— 8
ಎಳ್ಳಿಂಡಿ ಖಂಡಿ ೧ಕ್ಕೆ ...	23—12	27— 0
ಕೊಬ್ರಿ ಎಣ್ಣೆ ಮಣ ೧ಕ್ಕೆ ...	2—14	3—14
ಎಳ್ಳೆಣ್ಣೆ ಮಣ ೧ಕ್ಕೆ ...	5— 0	6— 0
ಚಿಮಿಣಿಎಣ್ಣೆ ಪೆಟ್ಟಿಗೆ ೧ಕ್ಕೆ ...	6— 8	8— 0
ಮೋರಿಸ ಸಕ್ಕರೆ ಮ. ೧ಕ್ಕೆ ...	3—10	3—14
ಹೊಸ ಮೆಣಸು ...	7— 0	7— 8
ಸಾಸಿವೆ ಮುಡಿ ೧ಕ್ಕೆ ...	4— 8	5— 4
ಕಾಳುಮೆಣಸು ಖ. ೧ಕ್ಕೆ ...	136— 8	137— 8
ಯೇಲಕ್ಕಿ ಮಣ ೧ಕ್ಕೆ ...	18— 0	22— 0
ಹೊಸ ಗೇರುಬೀಜ ಮು. ೧ಕ್ಕೆ	3— 3	3— 4
ಕಬ್ಬಿಣ ಖಂಡಿ ೧ಕ್ಕೆ ...	42— 0	44— 0
ತಾಂಬ್ರತಗಡು ಮ. ೧ಕ್ಕೆ ...	10— 0	10— 0
ತಾಂಬ್ರಪಾತ್ರಗಳು ಮ. ೧ಕ್ಕೆ	13— 0	14— 8
ಚೀನಿಬೆಲ್ಲ ಸೇರು ೧ಕ್ಕೆ ...	14—12	15— 0
ಹಿತ್ತಾಳೆ ತಗಡು ಮ. ೧ಕ್ಕೆ ...	9— 0	9— 8
ಪವನು ೧ಕ್ಕೆ ...	20—10	21— 0
ಹುಣಿಸೆ ಹುಳಿ ಖಂಡಿ ೧ಕ್ಕೆ	30— 0	35— 0
ನೇಟಿವ್ ಕಾಫಿ ಖಂಡಿ ೧ಕ್ಕೆ	182— 0	198— 0
ಪ್ಲಾಂಟೇಶನ್ ಕಾಫಿ ಖಂಡಿ ೧ಕ್ಕೆ ...	296— 8	280— 8
ಹಳೆ ಅಡಿಕೆ ...	118— 0	124— 0
ಹೊಸ ಅಡಿಕೆ ...	62— 0	92 — 0

'WIMCO'

ಸ್ವಂತ ಉಪಯೋಗದಲ್ಲಿ ಯಾವಾಗಲೂ ವಿಶ್ವಾಸಯೋಗ್ಯವಾದ ಬೆಂಕಿಕಡ್ಡಿಗಳೆಂದರೆ-

'ವಿಮ್ಕೋ'

ಈಗಿನ ಎಕ್ಸೈಜ್ ಸುಂಕ ತೆತ್ತ ಮತ್ತು ಬೆಂಡ್ರೋಲ ಹಚ್ಚಿದ ಸದರಿ 'ವಿಮ್ಕೋ' ೩ ಅರ್ಧ ಸೈಜು ಸುಮಾರು 40 ಕಡ್ಡಿಗಳಿರುವ ಪೆಟ್ಟಿಗೆಯು ಪ್ಯಾಕೆಟ್ ಬರುವುದುಂಟು.

ಬೆಲೆ ಗುರುಸ್ ಒಂದರ ರೂ. 2-2-0.

ಬೆಂಡ್ರೋಲ್ ಇಲ್ಲದ ಫುಲ್‌ಸೈಜ್ 60 ಕಡ್ಡಿಗಳ ಬೊಟ್ಟು ಗ್ರಾಸ್ ಒಂದಕ್ಕೆ ರೂ. 2-4-0. ಬೇಕಾದವರು ಈ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳುವುದು.

ಮೆಸ್ಸರ್ಸ್ ಸುಜೀರ್ ಅಚ್ಯುತ ರಾಯಪ್ಪ ನಾಯಕ್ ಮತ್ತು ಕಂಪೆನಿ, ಬಂದರ, ಮಂಗಳೂರು.

ರೆಪ್ರೆಜೆಂಟೇಟಿವ್ಸ್:— ದಿ ವೆಸ್ಟರ್ನ್ ಇಂಡಿಯಾ ಮ್ಯಾಚ್ ಕಂಪೆನಿ, ಲಿಮಿಟೆಡ್, ಮುಂಬಾಯಿ.

[ಗುಣಬಾರದಿದ್ದರೆ ಹಣ ವಾಪಾಸು]

ಸುಪ್ರಸಿದ್ಧ ವೈದ್ಯರಾದ ಎಮ್. ಕೆ. ರಜಪೂತ ಇವರ

ಸಂತತಿ ಪ್ರತಿಬಂಧಕ ಚೂರ್ಣ (ರಿಜಿಸ್ಟರ್ಡ)

ಬಹಳ ಸಾರಿ ಹಡಿಯುವುದರಿಂದ ಹೆಂಗಸರ ಆಕೃತಿಯು ಅಶಕ್ತವಾಗುತ್ತದೆ. ಬಹಳ ಬಡತನದಲ್ಲಿ ವಿಶೇಷ ಮಕ್ಕಳಾಗುವುದರಿಂದ ದುಃಖವಾಗುತ್ತದೆ. ಈ ಕಾರಣದಿಂದಲೂ ಅಥವಾ ಬೇರೆ ಕಾರಣದಿಂದಲೂ ಮಕ್ಕಳನ್ನು ಹಡಿಯುವುದು ಬಂದಾಗಬೇಕೆಂದು ಇಚ್ಛಿಸುವವರು ಈ ಚೂರ್ಣವನ್ನು ಉಪಯೋಗಿಸಬೇಕು. ಇದರ ಸೇವನೆಯಿಂದ ಮುಟ್ಟಾಗುವಿಕೆಯು ನೇಮದಂತೆ ಸುರುವಿರುವುದು. ಶರೀರಕ್ಕೆ ಏನೂ ಅಪಾಯವಿಲ್ಲ. ಸಂಸಾರಸುಖವು ಪೂರ್ಣವಾಗಿದ್ದು ಕಡಿಮೆ ಗರ್ಭಧಾರಣ ಬಂದಾಗುವುದು. ತದನಂತರ ಏನು ಮಾಡಿದರೂ ಸುರುವಾಗುವುದಿಲ್ಲ. ಮೊದಲೇ ಪೂರಾ ವಿಚಾರ ಮಾಡಿ ಔಷಧ ಬೇಡಿರಿ. ಮುಖ್ಯ ಸರ್ಟಿಫಿಕೇಟ ಡಾಕ್ಟರ ಬಿ. ಎ. ವೈದ್ಯ, ಎಲ್. ಸಿ. ಪಿ. ಎಸ್. ಕೆಳಗಿನಂತೆ ಕೊಡುತ್ತಾರೆ: ಈ ಚೂರ್ಣದಿಂದ ಯಾವ ತರದ ಅಪಾಯವಾಗದು ಗರ್ಭಧಾರಣವೂ ಆಗುವುದಿಲ್ಲ. ಪೂರ್ಣ ಗುಣಕಾರಿ ದಬ್ಬಿ ಕಿಮ್ಮತ್ತು ರೂ. ೪-೦-೦. ವಿ. ಪಿ. ಅಡಿ ೮.

ವಿಳಾಸ:—ಸಂಜೀವಿನೀ ಔಷಧಾಲಯ ಮು ಪೋ. ಮಿರಜ, S. M. C.

ಶಾಲಿವಾಹನ ಶಕ ೧೮೫೬ನೆಯ ಭಾವ ಸಂವತ್ಸರದ ಶ್ರಾವಣ ಶು। ೮ ಶನಿವಾರದಿಂದ— ಶ್ರಾವಣ ಶು। ೧೪ ಶುಕ್ರವಾರದ ವರೇಗಿನ ಪಂಚಾಂಗ. (೧೯೩೪ನೇಯ ವೃಷಭ—ಬೇಶ)

ತಾರೀಖು	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	[illegible]	ಸೂರ್ಯ ಉ.	ಸೂರ್ಯ ಅಸ್ತ	[illegible]
18	ಶನಿ	೮	[illegible]	ಜ್ಯೇಷ್ಠಾ	[illegible]	೨	6.20	6.48	* ಹುಣ್ಣಿಮೆ
19	ರವಿ	೯	[illegible]	ಮೂಲಾ	[illegible]	೩	6.20	6.48	
20	ಸೋಮ	೧೦	[illegible]	ಪೂ.ಷಾಢಾ	[illegible]	೪	6.20	6.47	
21	ಕುಜ	೧೧	[illegible]	ಶ್ರವಣಾ	[illegible]	೫	6.20	6.47	
22	ಬುಧ	೧೨	[illegible]	ಧನಿಷ್ಠಾ	[illegible]	೬	6.20	6.46	
23	ಗುರು	೧೩	[illegible]	ಶತಭಿಷಾ	[illegible]	೭	6.20	6.46	
24*	ಶುಕ್ರ	(ಹುಣ್ಣಿಮೆ)	[illegible]	ಪೂ.ಭಾದ್ರ	[illegible]	೮	6.20	6.46	

"ಕಥಾಕುಂಜ"

ಬೆಳಗಾಂವಿ.

ಉದ್ದಾಮ ಲೇಖಕರಿಂದ ಬರೆಯಲ್ಪಡುವ ಸಣ್ಣ ಕತೆ, ಸಣ್ಣ ನಾಟಕಗಳನ್ನು ಪ್ರಕಟಿಸುವ ಮಾಸಿಕ ಇದೊಂದೆ!

ವಾರ್ಷಿಕ ಚಂದಾ ಅಂಚೆವೆಚ್ಚ ಸೇರಿ ರೂ. 2—4—0

ಇಂದೇ ಚಂದಾದಾರರಾಗಿರಿ!

ಇಪ್ಪತ್ತೈದು ವರ್ಷಗಳ ಹಿಂದೆ ಮಂಗಳೂರು ಪೇಟೆಯ ಧಾರಣೆ

(ತಾ. ೬-೮-೧೯೦೯)

ಅಕ್ಕಿ	ರೂ. ೪-೧೧-೦ರಿಂದ ೫-೮-೦.
ಅಡಿಕೆ	ರೂ. ೮೫-೦-೦.
ತೆಂಗಿನೆಣ್ಣೆ	ರೂ. ೫-೧೦-೦.
ಕಾಫಿ ಖಂಡಿ ೧ರ	ರೂ. ೨೦೫-೦-೦.

ಶ್ರೀಮಧ್ವಭುವನೇಂದ್ರ ಮಹೌಷಧಾಲಯ, ಕಟಪಾಡಿ, ದ. ಕ.

ಪಾರಂಪರ್ಯದ ಅನುಭವಸಿದ್ಧೌಷಧಗಳು — **ಸ್ವರ್ಣ, ರಜತ ಪದಕಗಳನ್ನು ಪಡೆದ ದಿವ್ಯೌಷಧಗಳು**

1. ಕೃಷ್ಣಾರಕ್—(ರಕ್ತದೋಷ ಸಂಬಂಧ ಯಾವತ್ತೂ ರೋಗಗಳಿಗೆ ದಿವ್ಯೌಷಧ). 2. ಗರ್ಭಪಾಲ—(ಗರ್ಭಶೂಲ, ಗರ್ಭಸ್ರಾವಗಳಿಗೆ ಅತೀ ಉಪಯುಕ್ತ) 3. ಚಂದ್ರಮಸ್—ವಾಂತಿ ಭೇದಿಗೆ ಅತ್ಯುತ್ತಮ) 4. ಶಾರಾಂಜನ—(ನೇತ್ರ ರೋಗಗಳಿಗೆ ದಿವ್ಯೌಷಧ) 5. ಮಧುರೀಕೃತನಿಂಬ ತೈಲ—(ಸರ್ವ ತರದ ವಾತರೋಗಗಳಿಗೂ, ಚರ್ಮ ವ್ಯಾಧಿಗಳಿಗೂ ಉತ್ತಮ.) 6. ಭುವನ ರಂಜನ—ಶಾರೀರಕ ನೋವುಗಳಿಗೆ ಅತ್ಯುತ್ತಮ. 7. ರಸಬಿಂದು—ಫರಂಗಿ, ಮೇಹ, ದುಷ್ಟ ವ್ರಣಗಳಿಗೆ ಸಿದ್ಧೌಷಧ. 8. ಮಹಾ ಮದನಕಾಮೇಶ್ವರೀ ಲೇಹ್ಯ—ನಪುಂಸಕತ್ವ, ಧಾತು ಕ್ಷೀಣತೆ ಶ್ವಾಸಕಾಸ ಮೊದಲಾದುವುಗಳಿಗೆ ಅತೀ ಉಪಯುಕ್ತ.

ನಮ್ಮ ಔಷಧಗಳು ದೊರೆಯುವ ಸ್ಥಳಗಳು

ಬೊಂಬಾಯಿ ಸಂಸ್ಥಾನದ ಪ್ರಾಮುಖ್ಯ ಏಜಂಟರು:—(ಉತ್ತರಕನ್ನಡ ಜಿಲ್ಲೆ ಹೊರತು) ಕೊಚ್ಚಿಕಾರ್ ಆನಂದ್ರಾಯ ಪೈ, ಲೋಹಾರ್ ಚಾಲ್, ಬೊಂಬಾಯಿ ನಂ. 2.

ಮಂಗಳೂರು:—1. ರಾಘವೇಂದ್ರ ರಂಗ ಪೈ, ರಥಬೀದಿ ಮಂಗಳೂರು. 2. ಡಾಕ್ಟರ್ ಕೆ. ಎನ್. ಭಂಡಾರಿ, ಕೆನರಾ ಡಿಸ್ಪೆನ್ಸರಿ, ಕೊಡಿಯಾಲ್‍ಬೈಲ್, ಮಂಗಳೂರು. 3. ಆರ್. ಗೋಪಾಲಕೃಷ್ಣರಾವ್, ಪ್ರೊಪ್ರೈಟರ್, ಗೋಪಾಲಕೃಷ್ಣ ವೈದ್ಯಾಶ್ರಮ, ಮಾರ್ಕೆಟ್ ಈಸ್ಟ್‌ರೋಡ್, ಮಂಗಳೂರು. ಬಂಟ್ವಾಳ:—ವೇದಮೂರ್ತಿ ಬಿ. ಶುಕಾಚಾರ್, ಶ್ರೀ. ಗೋಪಾಲಕೃಷ್ಣ ಆಯುರ್ವೇದಿಕ್ ಫಾರ್ಮಸಿ, ಬಂಟ್ವಾಳ. ಮೂಡಬಿದ್ರಿ:—ಡಾಕ್ಟರ್ ಎಮ್. ವಿ. ಮಲ್ಯ, ಮೂಡಬಿದ್ರಿ. ಕಾರ್ಕಳ:—ವಿ. ವಿ. ಶೆಣೈ, ಕೆಮಿಸ್ಟ್, ಕಾರ್ಕಳ. ಮಂಜೇಶ್ವರ್:—ಕೆ. ಸರ್ವೋತ್ತಮ ಬಾಳಿಗಾ ಮತ್ತು ಬೆಳ್ಳೆ ನಾರಾಯಣ ಲ್ಯಾನುಭಾಗ, ಮರ್ಚಂಟ್ಸ್, ಮಂಜೇಶ್ವರ್. ಕಾಪು:—ಡಾಕ್ಟರ್ ಬಿ. ಕೆ. ಜೇಕಬ್ಸ್ ಡಿಸ್ಪೆನ್ಸರಿ ಕಾಪು. ಉದ್ಯಾವರ:—ಯು. ಗೋಪಾಲ ಶ್ಯಾನುಭಾಗ, ಮರ್ಚಂಟ್ ಉದ್ಯಾವರ. ಉಡುಪಿ:—1. ವೈಷ್ಣವ ಫಾರ್ಮಸಿ, 2. ಡಾಕ್ಟರ್ ಪಿ. ರಾಘವೇಂದ್ರ ನಾಯಕ್ ಡಿಸ್ಪೆನ್ಸರಿ, 3. ಬಾಂಗಾಳ ಜನಾರ್ಧನ ನಾಯಕ್ ಎಂಡ್ ಕೊ, ಹೊಸ್ಪಿಟಲ್ ರೋಡ್, ಉಡುಪಿ, 4. ಆರ್. ಎಸ್. ಶೆಣೈ, ರಥಬೀದಿ, ಉಡುಪಿ. ಕಲ್ಯಾಣಪುರ:—ಡಾಕ್ಟರ್ ಟಿ. ಮಹಮ್ಮದ್ ಇಸ್ಮೈಲ್, ತಿಮ್ಮಣ್ಣಕುದ್ರು ಕಲ್ಯಾಣಪುರ. ಬ್ರಹ್ಮಾವರ:—1. ಕೊಚ್ಚಿಕಾರ ವೈಕುಂಠ ಪೈ ಎಂಡ್ ಸನ್ಸ್, ಮರ್ಚಂಟ್ಸ್, ಬ್ರಹ್ಮಾವರ. 2. ಕೆ. ಶೇವಗಿರಿ ನಾಗಪ್ಪಾ ಎಂಡ್ ಸನ್ಸ್, ಕೆಮಿಸ್ಟ್ ಎಂಡ್ ಡ್ರಗ್ಗಿಸ್ಟ್ಸ್, ಬ್ರಹ್ಮಾವರ. ಬಾರ್ಕೂರು:—ಬಿ. ಭಗವಂತ ಮಲ್ಯ, ಪ್ರೊಪ್ರೈಟರ್, ಆರ್. ಪಿ. ಔಷಧಾಲಯ, ಬಾರ್ಕೂರು. ಕೋಟ:—ವೇದಮೂರ್ತಿ ನಾಗೇಶ ನರಸಿಂಹ ಭಟ್ಟ, ಮುರಲೀಧರ ಕೃಷ್ಣ ದೇವಸ್ಥಾನ, ಕೋಟ ವರುಣತೀರ್ಥ, ಕೋಟ. ಕುಂದಾಪುರ:—1. ಕೆ. ಆರ್. ಭಟ್ಟ, ಕೆಮಿಸ್ಟ್, ಕುಂದಾಪುರ. 2. ಡಾಕ್ಟರ್ ಕೆ. ಆರ್. ಕಾಮತ್ ಡಿಸ್ಪೆನ್ಸರಿ, ಕುಂದಾಪುರ. ಗಂಗೊಳ್ಳಿ:—ಜಿ. ಸುರೇಂದ್ರನಾಥ ನಾಯ್ಕ, ಮರ್ಚಂಟ್, ಗಂಗೊಳ್ಳಿ. ಬೈಂದೂರು:—ಕೆ. ಪುತ್ತು ಶ್ಯಾನುಭಾಗ, ಮರ್ಚಂಟ್ ಬೈಂದೂರು. ಭಟ್ಕಳ—ವಾಮನ ನರಸಿಂಹ ನಾಯಕ್, ಗುಡೆ ಅಂಗಡಿಕಾರ್, ಮರ್ಚಂಟ್ ಎಂಡ್ ಕಂಟ್ರಾಕ್ಟರ್, ಭಟ್ಕಳ ಉ. ಕನ್ನಡಾ. ಅಂಕೋಲಾ:—ಕೃಷ್ಣ ಹಮ್ಮಯ್ಯ ನಾಯ್ಕ, ಪಟ್ಟೇವಾಲ್, ಧರ್ಮಶಾಲೆಯ ಬಳಿ, ಅಂಕೋಲಾ, ಉ. ಕನ್ನಡಾ. ಹೆಬ್ರಿ:—1. ಎಚ್. ಮುಕುಂದ ಪೈ ಮತ್ತು ಡಾಕ್ಟರ್ ಎಂ. ಪಿ. ಕಲ್ಕೂರ್, ಹೆಬ್ರಿ. 2. ಡಾಕ್ಟರ್ ವ್ಹಿ. ಆರ್. ಆಚಾರ್ಯ, ರೂರಲ್ ಡಿಸ್ಪೆನ್ಸರಿ, ಹೆಬ್ರಿ. ಹಾಲಾಡಿ:—ಯು. ನರಸಿಂಹ ಕಾಮತ್, ಮರ್ಚಂಟ್ ಹಾಲಾಡಿ. ಹೊಸಂಗಡಿ:—ಎಚ್. ರಾಮಚಂದ್ರ ಕಾಮತ್, ಮರ್ಚಂಟ್ ಹೊಸಂಗಡಿ, ಕುಂದಾಪುರ ತಾಲೂಕು. ನಗರ:—ಸಿ. ನಾರಾಯಣ ರಾವ್, ಸಾಹುಕಾರ, ನಗರ. ತೀರ್ಥಹಳ್ಳಿ:—ಡಾಕ್ಟರ್ ಕೆ. ನರಸಿಂಹಾ, ಶ್ರೀ ಕೃಷ್ಣಾ ಡಿಸ್ಪೆನ್ಸರಿ, ತೀರ್ಥಹಳ್ಳಿ. ಕೊಪ್ಪಾ:—ಡಾಕ್ಟರ್ ಟಿ. ಕೆ. ಭಟ್, ಎಂ. ಬಿ. ಎಂಡ್ ಬಿ. ಎಸ್, ಪೋಪ್ಯುಲರ್ ಫಾರ್ಮಸಿ, ಕೊಪ್ಪಾ, ಕಡೂರು ಡಿಸ್ಟ್ರಿಕ್ಟ್. ಶಿವಮೊಗ್ಗಾ:—ಡಾಕ್ಟರ್ ಎಂ. ಆರ್. ಪೈ, ಬಿಗ್ ಬಜಾರ್, ಶಿವಮೊಗ್ಗಾ. ಸಾಗರ:—ಡಾಕ್ಟರ್ ಬಿ. ನರಹರಿ ರಾವ್, ಸಾಗರ.

ಹೆಚ್ಚಿನ ಮಾಹಿತಿ ಬಗ್ಗೆ ಈ ವಿಳಾಸಕ್ಕೆ ಬರೆಕೊಳ್ಳಬಹುದು. **ನಾಯಕ್ ಬ್ರದರ್ಸ್, ಶ್ರೀಮಧ್ವಭುವನೇಂದ್ರ ಮಹೌಷಧಾಲಯ, ಪೋಸ್ಟ್ ಕಟಪಾಡಿ, ದ. ಕ.**

ಶುದ್ಧ ಸ್ವದೇಶಿ! — **ಸ್ವದೇಶಿ ಭಾಂಡವಾಳದಿಂದ** — **ಸ್ವದೇಶಿಯರಿಗಾಗಿ!**

ಗಂಧದ ಸಾಬೂನು (ಸೆಂಡಲ್‍ವುಡ್) ನಿರ್ವಿವಾದವಾಗಿ ಅತ್ಯುತ್ತಮವಾದುದು!

ತಾಜಾ ಗಂಧದ ತೈಲ ಮೊದಲಾದ ವನಸ್ಪತಿ ತೈಲಗಳಿಂದಲೇ ತಯಾರಿಸಿದ ಅತ್ಯುತ್ತಮ ಸಾಬೂನು.

ಮೈಸೂರು ಸರಕಾರದ ಗಂಧದೆಣ್ಣೆ ಕಾರ್ಖಾನೆಯಲ್ಲಿ ದೊರೆವ ಆ ಉತ್ತಮ ಎಣ್ಣೆಯ ಸ್ನಿಗ್ಧ ಸುಗಂಧವುಳ್ಳದ್ದು.

ಪ್ರಾಣಿಜನ್ಯ ಚರ್ಬಿಯ ಸ್ಪರ್ಶವೂ ಇಲ್ಲದ

ಮಲಬಾರು ಸೋಪ್

ಮಲಬಾರು ಸೇಂಡಲ್ ವುಡ್

ದಿ ವೆಜಿಟೇಬಲ್ ಸೋಪ್ ವರ್ಕ್ಸ್, ಕಲ್ಲಿಕೋಟೆ.

ಪ್ರೊಪ್ರೈಟರ್:—ಸನ್ ಬ್ರಿಂಡ್ ಕೊಡಿಯ ಖ್ಯಾತಿಯ ಸೇಟ್ ನಾಗಜೀ ಪುರುಷೋತ್ತಮ ಮತ್ತು ಕಂಪೆನಿ, ಕಲ್ಲಿಕೋಟೆ.

ಈ ಜಿಲ್ಲೆಗೆ ಪ್ರವರ್ತಕರು:— **ರಾಘವೇಂದ್ರ ರಂಗ ಪೈ ರಥಬೀದಿ, ಮಂಗಳೂರು.**

ಇಂದೇ ಆರಂಭಿಸಿರಿ!

ಸುಪ್ರಸಿದ್ಧ **ಆತಂಕನಿಗ್ರಹ ಮಾತ್ರೆ**

ಗಳನ್ನು ಉಪಯೋಗಿಸಲಿಕ್ಕೆ.

ಜೀವನದ ಜಯಶೀಲತೆಯ ಪಿಟಯನ್ನೇರಿ, ಲೋಕದಲ್ಲಿ ಸಾವಿರಾರು ಜನರು ಅದನ್ನು ಪ್ರತಿದಿನವೂ ಉಪಯೋಗಿಸುತ್ತಿದ್ದಾರೆ.

ನರ ಮತ್ತು ಶಾರೀರಿಕ ದೌರ್ಬಲ್ಯಕ್ಕೆ ಭದ್ರತೆಯು.

ಆರೋಗ್ಯಕ್ಕೆ ಕವಚವು.

32 ಮಾತ್ರೆಗಳ ಟಿನ್ನೊಂದಕ್ಕೆ ರೂ. **1**

ಹೆಚ್ಚಿನ ವಿವರಕ್ಕೆ, ಧರ್ಮಾರ್ಥ ಹಾಗೂ ಟಪ್ಪಾಲು ಹಾಸಲು ವಿನಹ ಕಳುಹಿಸಲ್ಪಡುವ ನಮ್ಮ

ಕಾಮಶಾಸ್ತ್ರವನ್ನೋದಿರಿ.

Agents. - Shah Company, Mangalore.
,, Pearl & Sons, Mangalore.

Atank Nigrah Pharmacy,
Chickpet, Bangalore.

ಆತಂಕನಿಗ್ರಹ ಫಾರ್ಮಸಿ,
ಚಿಕ್ಕಪೇಟೆ, ಬೆಂಗಳೂರು.

ಎಲ್ಲಾ ಚಂದಾದಾರರು ತಮ್ಮ ಪತ್ರವ್ಯವಹಾರದೊಂದಿಗೆ ಅವರವರ ಚಂದಾ ನಂಬರುಗಳನ್ನು ಅಗತ್ಯವಾಗಿ ನಮೂದಿಸತಕ್ಕದ್ದು. ಸಂ. ಸ್ವ.

BUY ADVERTISED GOODS

ದಿ ಪೊಪ್ಯುಲರ್ ಇನ್ಶೂರೆನ್ಸ್ ಕಂಪೆನಿ, ಲಿಮಿಟೆಡ್,

(ಹೆಡ್ ಆಫೀಸು—ಮಂಗಳೂರು).

ನಮ್ಮ ಜಿಲ್ಲೆಯು ಪ್ರತಿ ವರ್ಷವೂ ಸುಮಾರು 15 ಲಕ್ಷ ರೂಪಾಯಿಗಳನ್ನು ಪ್ರೀಮಿಯಮ್ ರೂಪದಲ್ಲಿ ದೇಶೀಯ ಮತ್ತು ಪರದೇಶೀಯ ಕಂಪೆನಿಗಳಿಗೆ ಪ್ರವಾಹರೂಪವಾಗಿ ಸಲ್ಲಿಸುತ್ತಲೇ ಇದೆಯಲ್ಲದೆ, ಈ ಜಿಲ್ಲೆಯು ತಾನಾಗಿ ಒಂದೇ ಒಂದು ಜೀವವಿಮೆ ಸಂಘವನ್ನು ಇದುವರೆಗೆ ಘಟಿಸಿಲ್ಲ. ನಮ್ಮ ದೇಶದ ಈ ದೆಸೆಯಲ್ಲಿ, ನಮ್ಮದಿದೇ ಮೊದಲನೆ ಪ್ರಯತ್ನವಾಗಿದೆ.

ಈ ಕಂಪೆನಿಯ ವಿಚಾರದಲ್ಲಿ ಹೇಳುವುದಾದರೆ,—ಕಂಪೆನಿಯು ನಿಮ್ಮದೇ; ನಿಮಗೆ ತಿಳಿದಿರುವ ಮತ್ತು ನಿಮ್ಮ ವಿಶ್ವಾಸಕ್ಕೆ ಅರ್ಹರಾಗಿರುವವರೇ ಆಡಳಿತವನ್ನು ನಿರ್ವಹಿಸುವರು; ನಿಮ್ಮ ಹಣವು ಸ್ವದೇಶದಲ್ಲಿ ಸಂಪದಭ್ಯುದಯ ಕಾರ್ಯಗಳಿಗಾಗಿ ವಿನಿಯೋಗಿಸಲ್ಪಡುವುದು;—ಎಂಬೀ ವಿಷಯಗಳನ್ನು ಪರ್ಯಾಲೋಚಿಸಿದಲ್ಲಿ, ಸ್ವದೇಶವಾತ್ಸಲ್ಯವುಳ್ಳವರೆಲ್ಲರೂ ಈ ಕಂಪೆನಿಯನ್ನ ಪ್ರೋತ್ಸಾಹಿಸುವುದು ಅವಶ್ಯವೆಂದು ತಾನಾಗಿ ಹೊಳೆಯದಿರದು.

ಪ್ರತಿ ಒಂದು ವಿಧದಲ್ಲಿಯೂ ನಿಮ್ಮದಾದ ಈ ಕಂಪೆನಿಯಲ್ಲಿ ಒಂದು ಪೊಪ್ಯುಲರ್ ಪೊಲಿಸಿಯನ್ನು ಪಡೆದು ಸ್ವದೇಶೀಯರ ಪ್ರಯತ್ನಗಳನ್ನು ಪ್ರೋತ್ಸಾಹಿಸಿರಿ!

ಹೆಚ್ಚಿನ ವಿವರಕ್ಕೆ ಹೆಡ್ ಆಫೀಸಿಗೆ ಬರೆದುಕೊಂಡರೆ, ಸಂತೋಷದಿಂದ ಕೂಡಲೆ ತಿಳಿಸಲಾಗುವುದು.

☞ **ಎಲ್ಲಾ ಕಡೆಗಳಲ್ಲಿಯೂ ಯೋಗ್ಯ ಏಜಂಟರುಗಳು ಬೇಕು. ಧಾರಾಳ ಕಮಿಶನ್ ಕೊಡಲಾದೀತು.**

ಬೊಂಬಾಯಿ ಸಂಸ್ಥಾನದ ಪ್ರಾಮುಖ್ಯ ಏಜಂಟರು—ಪ್ರಭಾಕರ ಕಂಪೆನಿ, 415 ಕಾಲ್ಬಾದೇವಿ ರಸ್ತೆ, ಬೊಂಬಾಯಿ.

WANTED.

Four Organisers to organise the work of the South Indian General Assurance Society, Ltd., in the following places noted below. Capable organisers can expect to have attractive and encouraging terms with sound footing for their future.

(1) South Canara, (2) Mysore, Hassan and Coorg, (3) Kadur, Shimoga, Chitaldroog and Tumkur (4) Mangalore, Kolar.

For terms and other particulars please apply to—

The Divisional Manager,
The South Indian General Assurance Co. Ltd.
64, III Cross Road, Srirampur Extn. Malleswaram Post, BANGALORE.
OR
The Managing Agents,
The S. I. G. A. Co. Ltd.
55, Poonamallee High Road, Kilpauk, MADRAS.

ಪಂಡಿತ ಜವಾಹೀರಲಾಲ ನೆಹರೂ ಬಂದಾಗ್ಗೆ ಹುಬ್ಬಳ್ಳಿ ಪ್ರದರ್ಶನದಲ್ಲಿ ಸುವರ್ಣ ಪದಕ ದೊರೆತ
ಒಂದೇ ಸವನಾಗಿ ೩೫ ವರ್ಷದ ಅನುಭವದಿಂದ
ಹಿಂದೂದೇಶದ ಸಾವಿರಾರು ಜನರಿಂದ ವರ್ಣಿಸಲ್ಪಟ್ಟ ಆಯುರ್ವೇದೋಕ್ತ

[illegible]

ದ್ರಾಕ್ಷಾಮೃತ

[illegible]

2-6-'38

[illegible]

Shiromani Narayanacharya, *Choukhamba, Benares City*

[illegible]

ಶಿರೋಮಣಿ ನಾರಾಯಣಾಚಾರ್ಯ
ಚೌಖಂಬಾ, ಬನಾರಸ್ (ಕಾಶಿ)

ಸ್ವದೇಶಾಭಿಮಾನಿಗೆ ಚಂದಾದಾರರಾಗಿರಿ!

Canara Bank, Limited.
Established 1906.

Authorised Capital	10,00000-0-0
Subscribed capital	6,00,000—0—0
Paid up Capital	3,30,000—0—0
Reserves	4,31,000—0—0

Head Office:—Bunder, Mangalore   Local Offices:—City & Bunder.

BRANCHES:— Bombay, Cochin, Calicut, Ernakulam, Alleppey, Chikmagalur, Ganguli, Coondapoor, Udipi, Karkal, Puttur, Kasaragod, & Buntwal Out-agency.

Interest is allowed on Current, Fixed and Savings Bank Accounts, rates of which may be ascertained on application. Advances made on approved securities at easy rates. All kinds of Banking business transacted. Rules of business on application.

The Bangalore Branch Office of the Bank at No. 1 Albert Victor Road, Bangalore City has been opened on 8-1-35.

A. Madhava Pai,
Secretary.

LOOK SHARP! LOOK AHEAD!!

Murdeshwar's Banking Institute.

Pioneer Institute on the West Coast

Opens out Careers for Businessmen, Graduates, Under-graduates, and S. S. L. C's and also for those who have not passed any University examination.

Coaches students for the Specialised Banking Courses (C. A. I. B. & C. A. I. I. B.) and also for Accountancy, Secretarial, and Insurance Courses (L. A. A., A. C. R. A., F. C. R. A., F. I. S. A., A. C. I. I., etc.,

Ambitious students wishing to obtain responsible positions such as those of Managers and Secretaries in Business line should join immediately. Ladies are also coached.

Enrol yourself NOW. Classes are in full swing. Expert tuition (Oral or Postal) by well-qualified and experienced teachers.

FEES VERY MODERATE.

For further particulars apply to—
The Principal,
2 Fernandes Mansion,
Hampankatta, Mangalore (S. India)

---

77 Years!

Two generations of approved service enables us to pick and choose what is cheap, lasting & good to suit the pockets & the tastes of our longstanding wide-circle of

CUSTOMERS

who know our

Premier House for Swadeshi.

Mill Yarns—Handloom Cloths, Dhoties—Saries—Cintzes etc.

Shrinivas Ranga Pai
Sawkar Mahal,
Car Street, MANGALORE.

Edited, Printed & Published By A. S. Kamath at the Sharada Press, Car Street, Mangalore.

Registered No. M. 491. ಟಪ್ಪಾಲು ಹಾಸಲು ಸೇರಿ ರೂಪಾಯಿ 2–14–0

ಸ್ವದೇಶಾಭಿಮಾನಿ.

(ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ೧೯೦೭ರಲ್ಲಿ ಸ್ಥಾಪಿತವಾದುದು.)
ಪ್ರತಿ ಶುಕ್ರವಾರವೂ ಮಂಗಳೂರು ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ

ರತ್ನೈರ್ಮಹಾರ್ಹೈಸ್ತುತುಷುರ್ನ ದೇವಾ । ನ ಭೇಜಿರೇ ಭೀಮವಿಷೇಣ ಭೀತಿಮ್ ॥ ಸುಧಾಂ ವಿನಾ ನ ಪ್ರಯಯುರ್ವಿರಾಮಂ । ನ ನಿಶ್ಚಿತಾರ್ಥಾದ್ವಿರಮಂತಿ ಧೀರಾ ॥ ೧ ॥
ದೊರೆಯಲನುಪಮರತ್ನಗಳು ಸಾ । ಗರದ ಮಥಿಸಲು ಸುರಗಣದಿಂ । ಹರುಷವಾಯಿತೆ? ಮತ್ತೆ ವಿಷವ ಸುಡುತ ಬರುತಿರುವ ॥
ಗರಳಕೆವರಂಜಿದರೆ? ಸುಧೆಯನು । ಮರಿತು ಕ್ಷುದ್ರರ ತೆರದಿ ಕುಳಿತರೆ । ತೆರಳ ಬಲ್ಲರೆ ತೊರೆದು ಧೀರರು ನಿಶ್ಚಿತಾರ್ಥವನು? ॥ ೧ ॥

(Oldest Kanarese Weekly in South Kanara)

ಪುಸ್ತಕ ೨೮. ಮಂಗಳೂರು, ತಾ. ೨೪ನೇ ಶುಕ್ರವಾರ ಆಗೋಸ್ತು ೧೯೩೪ (24–8–34) ಸಂಚಿಕೆ ೩೪

THE CANARA BANKING CORPORATION, UDIPI, LTD.

(Incorporated in British India)
Established 1906

Head office:—UDIPI, S. K. **Branches:—Coondapoor, Mangalore, Shimoga & Madras.**

Notice.

The following rates of interest on deposits will come into force with effect from 13–8–1934.

Short term Deposits $2\frac{1}{2}$ per cent

Fixed Deposits	of	3 months	$2\frac{1}{2}$	per cent	p. a.
,,	,,	6 ,,	3	,,	,,
,,	,,	9 ,,	$3\frac{1}{2}$	,,	,,
,,	,,	1 or 2 years	$4\frac{1}{2}$	,,	,,
,,	,,	3 or 4 years	5	,,	,,

(Interest payable half yearly)

Office of the Corporation
UDIPI, S. K.
13–8–34.

By order

M. Shrinivas Prabhu,
Ag. Manager.

(Regd.)

ಅಮೃತಾಂಜನ.

ಇದು ಕೆಟ್ಟ ಶಿರೋವೇದನೆ, ಕಷ್ಟಕೊಡುವ ವಾತ, ಧಾರಿ ನೋವು, ವಿಶೇಷ ಉಳುಕು, ಅಸಹನೀಯ ಹಲ್ಲುನೋವು, ವಿಪರೀತ ಛಳಿಯು, ಬಹು ಶೀತ, ಸಹಿಸಲಸದಳವಾದ ಚಳಿ, ಕೈಕಾಲು ಮರಗಟ್ಟುವುದು, ಲುಂಬಾಗೊ ಮೊದಲಾದ ಎಲ್ಲಾ ತರದ ಬೇನೆಗಳನ್ನು ಅತೀ ತ್ವರೆಯಲ್ಲೇ ಗುಣಪಡಿಸುತ್ತದೆ. ಎಲ್ಲೆಲ್ಲಿಯೂ ಮಾರಲ್ಪಡುತ್ತಿದೆ.

ರಿಂಗ್‌ವರ್ಮ್ ಮುಲಾಮು— ಇದು ರಿಂಗ್‌ವರ್ಮನ್ನೂ ಕಜ್ಜಿಯನ್ನೂ ಇನ್ನಿತರ ಚರ್ಮರೋಗಗಳನ್ನೂ, ಮೂರು ಸಲ ಮುಟ್ಟಿಸುವುದರೊಳಗೆ ಗುಣಪಡಿಸುತ್ತದೆ.

ಡಬ್ಬಿ 1ಕ್ಕೆ 6 ಆಣೆ ಡಜನಿಗೆ ರೂ. 3–8–0. ಅಂಚೆವೆಚ್ಚ ಪ್ರತ್ಯೇಕ.

ಅಮೃತಾಂಜನ ಡಿಪೋ,

ಮದರಾಸು ಮತ್ತು ಬೊಂಬಾಯಿ

ದಿ ಬೊಂಬೇ ಲ್ಯಾಫ್ ಎಶ್ಯೂರೆನ್ಸ್ ಕಂಪೆನಿ ಲಿಮಿಟೆಡ್, ಬೊಂಬೇ.

1908ರಲ್ಲಿ ಸ್ಥಾಪಿತವಾದುದು.

ಪೊಲಿಸಿದಾರರಿಗೆ ವಿಶೇಷ ರಿಯಾಯತಿ.

ವರ್ಷಾವಧಿಯ ಪ್ರೀಮಿಯಮ್ಮುಗಳನ್ನು ತೆರುವ ಎಲ್ಲಾ ಪೊಲಿಸಿದಾರರಿಗೂ "ಸಿಲ್ವರ್ ಜ್ಯೂಬಿಲಿ" ರಿಯಾಯತಿಯಾಗಿ ಅವರವರ ಮುಂದಿನ ಪ್ರತಿ ವಾರ್ಷಿಕ ಪ್ರಿಮಿಯಮ್ಮಿನಲ್ಲಿ ಶೇಕಡಾ $2\frac{1}{2}$ ಸಲೆಯಷ್ಟು ಕಡಿಮೆಯಾದ ಮೊಬಲಗನ್ನು ತೆರುವ ರಿಯಾಯತಿ ಕೊಡಲಾಗಿದೆ. ಈ ರಿಯಾಯತಿಯ ಪ್ರಯೋಜನವನ್ನು ಆಗಲೇ ನೂರಾರು ಮಂದಿ ಪೊಲಿಸಿದಾರರು ಪಡಕೊಂಡಿದ್ದಾರೆ. ವರ್ಷಕ್ಕೊಮ್ಮೆ ಪ್ರಿಮಿಯಮ್ಮಿನ ಕಂತನ್ನು ಕಟ್ಟಲಪೇಕ್ಷಿಸುವವರು ತಮ್ಮ ಪೊಲಿಸಿಯ ನಂಬರುಗಳನ್ನು ನಮೂದಿಸಿ ನಮಗೆ ಯಾ ಸಮ್ಮಂಧಪಟ್ಟ ನಮ್ಮ ಇತರ ಆಫೀಸಿಗೆ ತಿಳಿಸಬೇಕಾಗಿ ಈ ಮೂಲಕ ವಿನಂತಿ ಮಾಡಿಕೊಳ್ಳೋಣಾಗುತ್ತದೆ.

ವಿ. ಸೂ:—ಪ್ರಾತಿನಿಧ್ಯವಿಲ್ಲದ ಜಿಲ್ಲೆಗಳಿಂದ ಉತ್ಸಾಹಶಾಲಿ ಗೃಹಸ್ಥರುಗಳ ಏಜನ್ಸಿ ಅರ್ಜಿಗಳು ಅಂಗೀಕರಿಸಲಾಗುವುವು.

ಕೊಚ್ಚಿಕಾರ್ ಬ್ರದರ್ಸ್, ಮದ್ರಾಸ್ ಬ್ರೇಂಚ್ ಸೆಕ್ರೆಟರಿಯವರು.

ಆಫೀಸುಗಳು:—(1) ಪೋಸ್ಟ್ ಬೋಕ್ಸ್ ನಂಬ್ರ 337, ಮೌಂಟ್ ರೋಡ್, ಮದ್ರಾಸ್; (2) ವಿಶ್ವೇಶ್ವರಪುರಂ ಸರ್ಕಲ್, ಬೆಂಗಳೂರು ಸಿಟಿ; (3) ಮಂಗಳೂರು, ದಕ್ಷಿಣ ಕನ್ನಡ; (4) ಉಡುಪಿ, ದಕ್ಷಿಣ ಕನ್ನಡ; (5) ಇಸ್ಮಾಯಿಲ್ ಬಿಲ್ಡಿಂಗ್, ಲೋಹರ್‌ಚೌಲ್, ಬೊಂಬಾಯಿ, ನಂಬ್ರ 2; (6) ಕಲ್ಲಿಕೋಟೆ

[illegible]

ಮಂಗಳೂರಲ್ಲಿ ... ಎಲ್ಲಾ ... ಉತ್ಸವ ... ಕನ್ನಡ ಪತ್ರಿಕೆಯು ... ಹಿಂದೂ ಪತ್ರಿಕೆಯಲ್ಲಿ ಬಿದ್ದು ಎದ್ದು ... ಜಯವಾಗಲಿ ಹಿಂದೂ ... ಜಯವಾಗಲಿ ... [illegible]

ಮೋಹನ! ... ಹೀರಿದ ... ಕಾರಣವೇನೆಂದು ನೀವು ಕೇಳಬಹುದು! ಅದಕ್ಕೆ ಕಾರಣವಿದೆ! ಮೊದಲನೆಯ ಕಾರಣ ... ಎರಡನೆಯ ಕಾರಣ ಗಾಂಧಿಯವರು ಉಪವಾಸ ... ಮೂರನೆಯ ಕಾರಣ ... ರಾಯರಾದ ಲೋರ್ಡ್ ವಿಲ್ಲಿಂಗ್ಡನ್ನರು ಪುನಃ ಹಿಂದೂ ದೇಶಕ್ಕೆ ಬಂದ ಸಂತೋಷ!

ಡಾಕ್ಟರರು ಕೂಡಾ ... ಗಾಂಧಿಯವರು ೭ ದಿನಗಳ ಉಪವಾಸದಲ್ಲಿ ಬದುಕಿ ಈ ಡಾಕ್ಟರ್‌ಗಿರಿಯ ಹೆಮ್ಮೆಗೆ ನೀರು ಕುಡಿಸಿದರು! ಅದರ ಆನಂದ ಸೂಚನೆಗಾಗಿಯಾದರೂ ನಾವು ಕೂಡಾ ... ದಾನ ಮಾಡುವುದು ಕರ್ತವ್ಯವಲ್ಲವೇ?

ಇನ್ನು, ... ಬುದ್ಧಿವಂತರಿಗೆ ಇಂಗ್ಲಾಂಡಿನಲ್ಲಿ ಬೇಕಾದಷ್ಟು ನೀರು ಕುಡಿಸಿ ಹಿಂದೂಸ್ಥಾನಕ್ಕೆ ಪುನಃ ಲೋರ್ಡ್ ವಿಲ್ಲಿಂಗ್ಡನ್ನರು ಬಂದ ಸಂತೋಷ ಸಂಬಂಧವಾಗಿ ನಾವೂ ನೀರು ಕುಡಿಸಬೇಡವೇ?

ಆದುದರಿಂದ "ಭದ್ರಂ ಶುಭಂ ಮಂಗಲಂ"! ಸರ್ವರಿಗೂ ಮಂಗಳವಾಗಲಿ! ಎಲ್ಲರೂ ಶಾಂತರಾಗಿರಿ! ಎಲ್ಲರ ದಾಹವೂ ಆರಲಿ ಎಂದು ಸಾಯ್ಬನ ವರ!

"ಸಾಯ್ಬ ಹೀಗೆಯೇ ನೀರು ಕುಡಿಸುತ್ತಾ, ಕುಡಿಸುತ್ತಾ ಅವನ ಗುಡಾಣವೇ ಖಾಲಿ ಹೋದಾತೋ ಕ್ಯಾ ಕರ್ನಾ ಸಾಬ್?" ಎಂದು ಕೇಳುವವರು ಅನೇಕರಿರುವರು!

ಮುಂಡೆ ಬಂದಾದರೆ ಏನಂತ್ಯ? ಕೆಲಸವಿರುವ ಒಬ್ಬ ಡಾಕ್ಟರರನ್ನು ಕರೆದು ಮುಂಡೆ ಸಂದೂಡಿದರಾಯಿತು! ಆವು ಸಂದೂಡಿದ ಮೇಲೆ ಮುಂಡೆಯನ್ನು ಬಂದು ನೂಡಿದ ನಿಮ್ಮ ಮೇಲೆ ದಾವಾ ಹೂಡಬೇಕೆಂದು ವಕೀಲರಿಗೊಬ್ಬರಿಗೆ ವಕಾಲತು ಕೊಟ್ಟರಾಯಿತು!

ಅದೆಲ್ಲಾ ಕಷ್ಟಸಂಗತಿ ಎಂದು ತಿಳಿಯಬೇಡಿ ಸ್ವಾಮೀ, ಮುಂದೆಯೂ ದುಡ್ಡು ಇದ್ದರೆ ಡಾಕ್ಟರರಾಗಲೀ ವಕೀಲರಾಗಲೀ ಎಲ್ಲರೂ ನಿಮ್ಮ ಕೈಯೊಳಗೆ! ನೋಡಿ ಗಾಂಧಿಯವರು ಬೇಡಿ ಬೇಡಿ ೮ ಲಕ್ಷ ರೂಪಾಯಿ ಕೂಡಿಸಿದರು! ನೋಡಿ. ಅವರಿಗೆ ಮೊನ್ನೆಯ ಉಪವಾಸದಲ್ಲಿ ಯಮರಾಯನೂ ಹೆದರಿದ! ಮುಖ್ಯ ದುಡ್ಡು ಬೇಕಯ್ಯ! ದುಡ್ಡು!

"ದೇವರು ಒಬ್ಬನೇ" ಎಂದೊಡನೆ ಕೋಪಗೊಳ್ಳುವವರು ನಿಮ್ಮಲ್ಲಿದ್ದಾರೆ ಸ್ವಾಮೀ, ನಾನು ಹೇಳಿದ ಮಾತಿನಲ್ಲಿ ಕಲ್ಪನೆ ಬೇಡಾ! ಬೋಲೋ—! ಇಂತಿ ನೀರಾದ

'ಸಾಯ್ಬ'



ನಿಮ್ಮ ಕುಟುಂಬದ ಸದಾರೋಗ್ಯ

ರುಚಿಕರವಾದ ಓವಲ್ಟಿನ್ನನ್ನು ನಿಮ್ಮ ಕುಟುಂಬದ ಪಾನೀಯವಾಗಿ ದಿನನಿತ್ಯ ಉಪಯೋಗಿಸಿರಿ: ಪ್ರಕೃತಿ ಸಿದ್ಧವಾದ ಪಾನೀಯವು ನಿಮ್ಮ ಕುಟುಂಬದವರ ಆರೋಗ್ಯವನ್ನು ವೃದ್ಧಿಸುವುದು. ಓವಲ್ಟಿನ್ ಎಂಬುದು ಸಂಪೂರ್ಣ ಮತ್ತು ಸಂತೃಪ್ತಿಕರವಾದ ಆಹಾರ. ಇದನ್ನು ಸೃಷ್ಟಿಯ ಅಮೂಲ್ಯ ಟೋನಿಕ್ ಆಹಾರಗಳಿಂದ ತಯಾರಿಸಲಾಗಿದೆ. ಬೆಳೆದ ಬಾರ್ಲಿ, ದನದ ದಪ್ಪ ಹಾಲು, ಮತ್ತು ಎಳ್ಳಿನ್ನ ಕೋಳಿಮೊಟ್ಟೆಗಳಿಂದ ಇದು ತಯಾರಾಗಿದೆ. ಆರೋಗ್ಯ ಮತ್ತು ಶಕ್ತಿವರ್ಧನೆಗಳಿಗಾಗಿ ಇದು ಎಲ್ಲಾ ಚೈತನ್ಯವನ್ನು ಕೊಡುತ್ತದೆ.

ಬೆಳಿಗ್ಗೆ ರಾತ್ರಿಯೂ ಒಂದು ಕಪ್ ಓವಲ್ಟಿನ್ ತೆಗೆದುಕೊಂಡರೆ ಇದು ನಿಮ್ಮನ್ನು ಆರೋಗ್ಯವಂತರನ್ನಾಗಿ ಇರುವುದು. ದಿನದ ಕೆಲಸಕ್ಕೆ ಇದು ಚೈತನ್ಯ ಶಕ್ತಿಗಳನ್ನು ಕೊಟ್ಟು ರಾತ್ರಿ ಗಾಢ ನಿದ್ರೆಯನ್ನು ಅದರ ಅಮೋಘ ಶಕ್ತಿಯಿಂದ ಕೊಡುತ್ತದೆ. ನಿಮ್ಮ ಕುಟುಂಬವು ಇದರ ರುಚಿಯನ್ನರಿತು ಆರೋಗ್ಯವಂತವಾಗಿ ಬಾಳಲಿ.

OVALTINE

ಮೆದುಳು, ನರ ಮತ್ತು ದೇಹವನ್ನು ವೃದ್ಧಿಸುತ್ತದೆ.

ತಯಾರಿಯಲ್ಲಿ ಕೈಯಲ್ಲಿ ಸ್ಪರ್ಶಿತವಾಗಿಲ್ಲ. ಎಲ್ಲ ಕೆಮಿಸ್ಟರಲ್ಲಿಯೂ ಸ್ಟೋರುಗಳಲ್ಲಿಯೂ ಸಿಗುತ್ತದೆ,

ಏಜಂಟ್—ಜೇಮ್ಸ್ ರೈಟ್, 85ಎ, ಕ್ಲೈವ್ ಸ್ಟ್ರೀಟ್, ಕಲ್ಕತ್ತ ಮತ್ತು ಬೊಂಬಾಯಿ ಮದ್ರಾಸುಗಳಲ್ಲಿ

OV/೭೭೦

ದಿ. ಕೆನರಾ ನ್ಯೂಸ್ ಏಜನ್ಸಿ.

ಪ್ರೊಪ್ರೈಟರ್: ಬಿ. ಅಚ್ಯುತಪ್ಪೈ,

ಕಾರ್ಕಳ.

ಇಲ್ಲಿ ಎಲ್ಲಾ ವರ್ತಮಾನ ಪತ್ರಿಗಳೂ, ಇತರ ಪುಸ್ತಕಗಳೂ ವಿಕ್ರಯಿಸಲ್ಪಡುತ್ತವೆ.

(ಶಾಪು: ಬಸ್ ಸ್ಟೇಂಡಿನ ಬಳಿ.)

ಕಣ್ಣಿನ ಪರೆ.

"ಐ—ಸನ್" ಎಂಬ 'ನೇತ್ರಭಾಸ್ಕರ'— ಈ ಔಷಧವು ಕಣ್ಣುಪರೆ, ಧೃಷ್ಟಿಮಾಂದ್ಯ ಇತ್ಯಾದಿಯನ್ನು ಶೀಘ್ರವಾಗಿಯೂ ಶಾಶ್ವತವಾಗಿಯೂ ಗುಣಪಡಿಸುತ್ತದೆ. ಶಸ್ತ್ರಕ್ರಿಯೆಯು ಅವಶ್ಯವಿಲ್ಲ. ಖಾತರಿ ಗುಣಲಾಭ, ಗುಣವಾಗದಿದ್ದರೆ ಹಣ ವಾಪಸ್. ಕ್ರಯ ರೂ. 2.

ಪತ್ರವ್ಯವಹಾರ ಇಂಗ್ಲೀಷಿನಲ್ಲಿ:—

Hary yasram, Panchpota, Bengal.

ಕುಷ್ಠರೋಗ ಮತ್ತು ಬಿಳಿ ತೊನ್ನು.

ಎಷ್ಟು ದೀರ್ಘಕಾಲ ಅಥವಾ ಯಾವ ಕಾರಣದಿಂದಾದರೆ, ನಾಳೀ ಮಾರ್ಗಗಳಲ್ಲಿ ಪೂರ್ಣ ಗುಣಪಡಿಸುತ್ತದೆ. ಯಶಸ್ಸು ಖಾತರಿ; ಗ್ಯಾರಂಟಿ. ವಿವರವನ್ನು ಅಪೇಕ್ಷಿಸಿದ್ದಲ್ಲಿ ಕಳುಹಿಸಲಾಗುವುದು.

ವಿಳಾಸ:—

Kamala Works, Panchpota, Bengal.

Karnataka Chemical and Pharmaceutical Works, Ltd., Udipi (South India)

ಕುಂಭಕೋಣದಲ್ಲಿಯೂ ಮಧುರೆಯಲ್ಲಿಯೂ ಮೈಸೂರಿನಲ್ಲಿಯೂ ಸುವರ್ಣ ಪದಕಗಳನ್ನು ಪಡೆದಿರುವ

ಕರ್ಣಾಟಕ ಕೆಮಿಕಲ್ ಎಂಡ್ ಫಾರ್ಮಸ್ಯೂಟಿಕಲ್ ವರ್ಕ್ಸ್, ಲಿಮಿಟೆಡ್, ಉಡುಪಿ. (ದಕ್ಷಿಣ ಹಿಂದೂಸ್ಥಾನ).

ನಮ್ಮಲ್ಲಿ ಟಿಂಕ್ಚರ್ಸ್ ವಗೈರೆ ಎಲ್ಲಾ ಎಲ್ಲೋಪತಿಕ್ ಔಷಧ ದ್ರವ್ಯಗಳೂ, ಆಯುರ್ವೇದಿಯ ಔಷಧಿಗಳೂ, ಟೊಯಿಲೆಟ್ ಸಾಮಗ್ರಿಗಳೂ, ಸಾಬೂನುಗಳೂ, ಫೌಂಟನ್ ಪೆನ್ ಶಾಯಿಗಳೂ ತಯಾರಿಸಲ್ಪಡುತ್ತವೆ.

ದ್ರಾಕ್ಷಾಸವ, ಪ್ರಸೂತಿ ಸಂಜೀವನ, ನಿಯೋವಿಗರ್, ಸ್ನೋ, ಕ್ಷೀರಬಲಾ, ಕಾರ್ಬೊಫ್ಲೋಜಿಸ್ಟಿನ್ ಯುಟೇರಿನಾ, ಇಂಕ್ಸ್

ಮೆನೇಜಿಂಗ್ ಡೈರೆಕ್ಟರ್—ವೆಂಕಟ್ರಾಯ ಅಣ್ಣಪ್ಪ ಬಾಳಿಗ.

ಹೆಡ್ ಆಫೀಸು: ಉಡುಪಿ. (ದಕ್ಷಿಣ ಹಿಂದೂಸ್ಥಾನ)

ಬ್ರೇಂಚ ಆಫೀಸು: ದೇವಕರಣ ಮೆನ್ಶನ್ಸ್, 45 ಪ್ರಿನ್ಸೆಸ್ ಸ್ಟ್ರೀಟ್, ಬೊಂಬಾಯಿ ನಂ. 2.

ಪಶ್ಚಿಮ ಕರಾವಳಿ ಮತ್ತು ಮೈಸೂರು ಪ್ರಾಂತ್ಯಗಳ ಪ್ರಾಮುಖ್ಯ ಏಜಂಟರು:—

ಕರ್ಣಾಟಕ ಪ್ರೊಡಕ್ಟ್ಸ್ ಡಿಸ್ಟ್ರಿಬ್ಯೂಟಿಂಗ್ ಕಂಪೆನಿ, ಮಂಗಳೂರು.

ಅನುಕ್ರಮಣಿಕೆ

ಅಗ್ರಲೇಖ
ರಾಷ್ಟ್ರೀಯ ಪಕ್ಷವೂ ಕಾಂಗ್ರೆಸ್ಸೂ, ೧
ಸ್ಫುಟವಿಚಾರಗಳು ೨
ಮೂಲೆಮೂಲೆಯಿಂದ ೧೦
ಸೂಚನೆಗಳು ೮
ವರ್ತಮಾನ ಸಂಗ್ರಹ ೧೧
ವಿವಿಧ ಸಮಾಚಾರಗಳು ೧೧
ಪತ್ರವ್ಯವಹಾರ ೧೫
ನೀರು! ೩
ಹರಿಜನರ ಮೇಲೆ ಅನ್ಯಾಯವಾಗಿ ಬ್ರಹ್ಮಾಸ್ತ್ರ ೪
ಮಂಗಳೂರು ೯
ಗ್ಯಾನ ೬
ಕಾಂಗ್ರೆಸ್ಸಿನಲ್ಲಿ ಪಾವಿತ್ರ್ಯ ೧೨
ರಾಷ್ಟ್ರೀಯ ಪಕ್ಷದ ಉದಯ ೭

ಸ್ವದೇಶಾಭಿಮಾನಿ.

೨೪ನೇ ಶುಕ್ರವಾರ ಆಗೋಸ್ಟು ೧೯೩೪

ರಾಷ್ಟ್ರೀಯ ಪಕ್ಷವೂ ಕಾಂಗ್ರೆಸ್ಸೂ

ಜಾತೀಯ ಎವಾರ್ಡಿನ ಕುರಿತಾದ ಕಾಂಗ್ರೆಸ್ ಕಮಿಟಿಯ ಅಸ್ಪಷ್ಟ ತೀರ್ಮಾನದ ವಿಷಯವಾಗಿ ಅಭಿಪ್ರಾಯ ಭೇದವೆದ್ದು, ಕಾಂಗ್ರೆಸ್ಸು ಪಾರ್ಲಿಮೆಂಟರಿ ಬೋರ್ಡಿನ ಸದಸ್ಯತನಕ್ಕೆ ರಾಜೀನಾಮೆ ಕೊಟ್ಟ ಪಂಡಿತ ಮಾಲವೀಯರೂ, ಶ್ರೀಯುತ ಅಣೆಯವರೂ ರಾಷ್ಟ್ರೀಯ ಪಕ್ಷವನ್ನು ರಚಿಸಿರುವರು ಆಚಾರ್ಯ ಪ್ರಫುಲ್ಲ ರೈಯವರಂತಹ ದೇಶಾಭಿಮಾನಿಗಳೂ ಈ ಹೊಸಪಕ್ಷದಲ್ಲಿ ಅಪ್ರಮುಖವಲ್ಲದ ಭಾಗವನ್ನು ವಹಿಸಿರುವರು ಈ ಪಕ್ಷದ ಉದ್ದೇಶ–ನಿಯಮಾವಳಿಗಳೂ ಪ್ರಕಟವಾಗಿವೆ

ಪಂಡಿತ ಮಾಲವೀಯ, ಆಚಾರ್ಯ ರೈಯವರಂತಹ ಮುತ್ಸದ್ದಿಗಳು ಕೂಡಿ ಉಂಟಾದ ಈ ನೂತನ ಪಕ್ಷವನ್ನು, ಆರಂಭದಲ್ಲೆ ಅಷ್ಟು ಸುಲಭವಾಗಿ ಟೀಕಿಸುವುದು ಸಾಧ್ಯವಲ್ಲ ಆದರೂ, ಕಾಂಗ್ರೆಸ್ಸು ಈಗೀಗ ಒಂದು ನಿಶ್ಚಿತ ಕಾರ್ಯಕ್ರಮವನ್ನು ಗೊತ್ತುಪಡಿಸಿ ಕಾರ್ಯರಂಗಕ್ಕಿಳಿವ ಸಮಯದಲ್ಲಿ ಈ ಒಡಕುಂಟಾದುದು ಶುಭ ಚಿಹ್ನೆಯಾಗಿರದು ಶಾಂತಶೀಲ ಪಂಡಿತರ ವಿವೇಕಪೂರ್ಣ ಹಿತಸೂಚನೆ ಮತ್ತು ಪ್ರಫುಲ್ಲ ರೈ, ಅಣೆಯವರಂತಹ ಉಜ್ವಲ ದೇಶಾಭಿಮಾನಿಗಳ ಸಹಕಾರವು ಕಾಂಗ್ರೆಸ್ಸಿನ ಪ್ರಕೃತದ ವಿಧಾಯಕ ಕಾರ್ಯವು ಸುಗಮವಾಗಿ ಸಾಗುವಂತೆ ಸಹಾಯಕವಾಗುತ್ತಿದ್ದುವು ಶ್ವೇತಪತ್ರದೊಳಗಿನ ಶಿಫಾರಸುಗಳಾಗಲಿ ಜಾತೀಯ ಎವಾರ್ಡಾಗಲಿ ನಮ್ಮ ಮುಂದ ಪಕ್ಷೀಯರನ್ನು ಕೂಡ ಆಕರ್ಷಿಸಲಿಲ್ಲವೆಂಬುದು ಸರ್ವವೇದ್ಯ ವಿಷಯವು ಜಾತೀಯ ಎವಾರ್ಡನ್ನು ಸ್ಪಷ್ಟವಾಗಿ ತಿರಸ್ಕರಿಸದ ಕಾಂಗ್ರೆಸ್ಸು ಕಮಿಟಿಯ ಅಚಾತುರ್ಯವೂ ಅನೇಕರಿಗೆ ದುಃಖವನ್ನುಂಟುಮಾಡಿದೆಯೆಂಬುದೂ ನಿಜ ಆದರೆ, ಕೇವಲ ಅದೊಂದು ಕಾರಣದಿಂದ ಇಂತಹ ಒಡಕು ಪಳುಂಟಾಗುವುದರಲ್ಲಿ, ನಮ್ಮಲ್ಲಿ ಸಾಂಘಿಕ ಶಕ್ತಿಯಿಲ್ಲವೆಂದಾಯಿತು, ನಮ್ಮ ರಾಜಕೀಯ ಚಳವಳಿಕ್ಕೆ ಇದರಿಂದ ತುಂಬ ಹಾನಿಯಿದೆ

ಕಾಂಗ್ರೆಸ್ ಕೆಲಸಗಾರರನ್ನೆ ಮುಂದಿನ ಚುನಾವಣೆಗೆ ಉಮೇದ್ವಾರರನ್ನಾಗಿ ಆರಿಸಲಾಗುವುದೆಂದು ಕಳೆದ ವಾರ ಕಲ್ಕತ್ತದಲ್ಲಿ ಸೇರಿದ ಪರಿಷತ್ತಿನಲ್ಲಿ ಪ್ರಕಟವಾಗಿದೆ. ಕಾಂಗ್ರೆಸ್‌ವಾಲರನ್ನು ತಮ್ಮ ಮತಕ್ಕೆ ಒಲಿಸಬೇಕೆಂದು ಮಾಲವೀಯರ ಸಾಧನೆಯಿರುವುದು ಸ್ಪಷ್ಟವಾಗಿ ಕಂಡುಬರುವುದು. ರಾಷ್ಟ್ರೀಯ ಪಕ್ಷದ ಮೊಹರನ್ನು ಪಡೆದು ಶಾಸನ ಸಭೆಗಳಿಗೆ ಹೋಗುವ ಯಾರೇ ಆಗಲಿ, ದೇಶ ವಿಘಾತುಕವಾದುದಕ್ಕೆ ಭಾಗಿಯಾಗಲಾರರೆಂಬುದರಲ್ಲಿ ಎರಡು ಅಭಿಪ್ರಾಯಗಳಿರಲಾರವು ರಾಷ್ಟ್ರೀಯ ಪಕ್ಷ ಮತ್ತು ಕಾಂಗ್ರೆಸ್ ಪಕ್ಷದ ಅಭಿಪ್ರಾಯಗಳಲ್ಲಿ ತಾರತಮ್ಯವಿಲ್ಲದೆ ಏಕಮತ ವ್ಯಕ್ತವಾಗುವಲ್ಲಿಲ್ಲ ಜಯಪ್ರಾಪ್ತಿಯಾಗಬಹುದು. ಮಾತ್ರ, ಇವೆರಡು ಪಕ್ಷಗಳ ಎರಡು ಅಭಿಪ್ರಾಯಗಳೂ, ಮೂರನೆ ಪಕ್ಷದ ಒಂದು ಅಭಿಪ್ರಾಯವೂ ದೇಶಕ್ಕೆ ಹಾನಿಕರವಾದ ಫಲವನ್ನು ಮಾತ್ರ ತರುವುವು ಈ ಹೊಸ ಪಕ್ಷವು, ಈ ದೃಷ್ಟಿಯಿಂದ ನಮಗೆ ವರದಾನವಾಗಿ ಬಂದಿಲ್ಲವೆಂದು ಸಂದೇಹಪಡಬೇಕಾಗಿದೆ

ಜಾತೀಯ ಎವಾರ್ಡನ್ನು ತಿರಸ್ಕರಿಸುವುದು ರಾಷ್ಟ್ರೀಯ ಪಕ್ಷಕ್ಕೆ ಸುಲಭವಾಗಿದೆ ಆದರೆ, ಅದರ ಸ್ಥಾನದಲ್ಲಿ ತಾವೇ ಬೇರೊಂದನ್ನು ರಚಿಸಿ ಕೊಡುವುದು ಮಾತ್ರ ಅಷ್ಟು ಸುಲಭವಲ್ಲ ಹೊಸತಾಗಿ ರಚಿಸಿದುದರಲ್ಲಿ ಆ ಪಕ್ಷದೊಳಗೇ ಭಿನ್ನಾಭಿಪ್ರಾಯಗಳೇಳಲಾರವೆಂದು ಹೇಗೆ ಹೇಳಬಹುದು?

ಜಾತೀಯ ಎವಾರ್ಡು ಒಂದೇ ದೇಶದ ಮುಂದಿರುವ ಮಹಾ ಸಮಸ್ಯೆಯಾಗಿರಲಿಲ್ಲ ಇತರ ಎಷ್ಟೋ ಪ್ರಾಮುಖ್ಯ ವಿಷಯಗಳಿವೆ ಕಾಂಗ್ರೆಸ್ಸಿನವರು ಜಾತೀಯ ಎವಾರ್ಡಿನ ವಿಷಯವನ್ನು ಹಾಗೆ ಅಸ್ಪಷ್ಟವಾಗಿ ತೀರ್ಮಾನಿಸಿದುದು ಮಹಾಪರಾಧವಾಗಿ ಎಣಿಸುವುದು ತಪ್ಪು ಜಾತೀಯ ಎವಾರ್ಡಿನ ಕುರಿತಾದ ರದ್ದಾವಿನ ಒಂದು ವಿಷಯವನ್ನಲ್ಲೆ ಬಿಟ್ಟು ಕಾಂಗ್ರೆಸ್ಸಿಗೆ ಒಂದು ನಿಶ್ಚಿತ ಧೋರಣೆಯಿದೆಯೆ ಎಂಬುದನ್ನು ಎಲ್ಲರೂ ಮನಗಾಣಬೇಕು ಕೇವಲ ಶ್ವೇತಪತ್ರ ಮತ್ತು ಜಾತೀಯ ಎವಾರ್ಡುಗಳನ್ನು ಕಾದು[illegible] ರವ ಈ ರಾಷ್ಟ್ರೀಯ ಪಕ್ಷಕ್ಕೆ ಆ ತರ ಧೋರಣೆ [illegible] ಎಂಬುದು ಇನ್ನು ಮುಂದೆ ವ್ಯಕ್ತವಾಗಬೇಕಾಗಿದೆ ಪ್ರಕೃತ ಈ ಪಕ್ಷದ ದೃಷ್ಟಿಯಲ್ಲಿರುವ ಸಮಸ್ಯೆಯ ವಿಷಯವು ಹೇಗಾದರೂ ಮುಗಿದ ನಂತರ,—ಕಾಂಗ್ರೆಸ್ ಕೆಲಸಗಾರರಲ್ಲದ ಇತರರನ್ನೂ ಕೂಡಿಸಿಕೊಂಡ ಈ ಪಕ್ಷದಿಂದ ಪ್ರಯೋಜನಕ್ಕೆ ಬದಲಾಗಿ ಹಾನಿಯೇ ಹೆಚ್ಚಿರಬಹುದೆಂಬ ಸಂದೇಹವು ಈಗಲೇ ಹಲವರನ್ನು ಬಾಧಿಸದಿರದು.

ರಾಷ್ಟ್ರೀಯ ಪಕ್ಷದ ಜನನವು ಬಂಗಾಳದಲ್ಲಿಯೂ ಯಾರಿಗೂ ಆನಂದವನ್ನುಂಟುಮಾಡಿಲ್ಲ ಇತರ ಪ್ರಾಂತ್ಯಗಳಲ್ಲಿ ಬಹ್ವಂಶ ಅತೃಪ್ತಿಯೇ ವ್ಯಕ್ತವಾಗಿದೆ ದೇಶದ ಪ್ರಬಲ ರಾಜಕೀಯ ಸಂಸ್ಥೆಯಾದ ಕಾಂಗ್ರೆಸ್ಸನ್ನು—ಒಂದೇ ಪ್ರಶ್ನೆಯ ಮೇಲೆ—ಮುರಿಯಲೆತ್ನಿಸಿ ಹೊಸಪಕ್ಷವನ್ನು ಸ್ಥಾಪಿಸುವುದರಲ್ಲಿ ಔಚಿತ್ಯವಿಲ್ಲ

ಸ್ಫುಟವಿಚಾರಗಳು.

'ಇಂಡಿಯವು ಆರೋಗ್ಯ ಸ್ಥಿತಿಯಲ್ಲಿದೆ''

—ಎಂದು, 'ಇಂಡಿಯದಲ್ಲೇನೂ ಅಶಾಂತಿಯಿಲ್ಲ, ಸಂಪದಭ್ಯುದಯವಾಗುತ್ತಲಿದೆ'' ಎಂಬ ಅರ್ಥದಲ್ಲಿ ವಾರ್ತಾದಾಯಕನೊಡನೆ, ಇಂಡಿಯಕ್ಕೆ ಹೊರಟಾಗ ನಮ್ಮ ವಿಲ್ಲಿಂಗ್ಡನ್ ಸಾಹೇಬರ ಮಾತು' ''ಇಂಡಿಯದಲ್ಲೆಲ್ಲ ಆನಂದವೆ, ಆರೋಗ್ಯವೆ '' ಎಂದೇ ಹೋಗಿದ್ದರು ಐದು ವರ್ಷಗಳ ಕೆಳಗೆ ಇಂಗ್ಲಾಂಡಿಗೆ ಹೊರಟಾಗ ಐರ್ವಿನ್ ಪ್ರಭುಗಳು' ಹೀಗೆ, ನಮ್ಮ ವೈಸರಾಯ್ ಪ್ರಭುಗಳಿಗೆ ಇಂಡಿಯವು ಸುಖ ಸಮೃದ್ಧಿಯಲ್ಲಿದೆಯೆಂದೇ ಕಾಣುತ್ತಿದೆಯೆಂದಾಯಿತು. ಇವರು ಹೇಳುವುದನ್ನು ಬ್ರಿಟಿಷರು ನಂಬದಿರರು ನಂಬಿಕೆಯನ್ನೆ ತೊರೆದ ಹಿಂದೀಯರಿಗೆ ಮಾತ್ರ ನಂಬಲು ಅಸಾಧ್ಯವಾಗಿದೆ ಗ್ರಾಮಗಳ ಕಡೆಗೆ ದೃಷ್ಟಿ ಹೊರಳಿಸಿರಿ ಸಾಲವಿಲ್ಲದೆ ಮೂರೂಟಗಳನ್ನು ಮಾಡಿ ಇರುವ ರೈತರೆಷ್ಟು ಮಂದಿ ಇದ್ದಾರೆ? ವ್ಯಾಪಾರಸ್ಥರ ಸ್ಥಿತಿಗತಿಗಳ ವಿಮರ್ಶೆ ಮಾಡಿರಿ ಇದೆಲ್ಲ ಆರೋಗ್ಯದ ಚಿಹ್ನೆಗಳಾದರೆ ಅನಾರೋಗ್ಯವೆಂಬುದಾವುದು? ''ಆರೋಗ್ಯ''ದಲ್ಲಿದ್ದ ದೇಶದ ಶಾಸನ ಗ್ರಂಥಗಳಲ್ಲಿ ಹೊಸ ಕ್ಷಾಯಿದೆಗಳು ಕೂಡಿಸಲ್ಪಡುತ್ತಿರುವುದೇಕೆ?

ವಿಲ್ಲಿಂಗ್ಡನ್ ಪ್ರಭುಗಳು ಮಾಡಿದುದೇನು?

ವಿಲ್ಲಿಂಗ್ಡನ್ ಪ್ರಭುಗಳು ಇಂಗ್ಲಾಂಡಿಗೆ ಹೊರಟಾಗ ''ಹೋಗುವರೇಕೆ?'' ಎಂದು ಎದ್ದ ಪ್ರಶ್ನೆಯಂತೆ, ಮರಳಿದ ಮೇಲೆ ಈಗ ''ಅಲ್ಲಿ ಮಾಡಿದುದೇನು? ಎಂಬ ಪ್ರಶ್ನೆಯು ಸರ್ವತ್ರ ಕೇಳಲ್ಪಡುತ್ತಿರುವುದು ಸಹಜ ಭಾವೀ ರಾಜ್ಯಾಂಗರಚನೆಯ ಸುಧಾರಣೆಗಳ ಸಂಬಂಧವಾಗಿ ಅವರು ಹೋದರೆಂದು ತಿಳಿದೆವು ಅವರು ಇಂಗ್ಲಾಂಡಿನಲ್ಲಿದ್ದಷ್ಟು ಕಾಲ ಅಲ್ಲಿ ಇಲ್ಲಿ ಭೋಜನಾಸಿಗಳಿಗೆ ಆಮಂತ್ರಿಸಲ್ಪಟ್ಟರೆಂದು ಮಾತ್ರ ನಾವು ವರ್ತಮಾನಗಳನ್ನೋದಿದೆವಷ್ಟೆಯಲ್ಲದೆ—ಮತ್ತಾವುದನ್ನು ಅವರು ಮಾಡಿದರೆಂಬುದನ್ನು ಕೇವಲ ಊಹಿಸಬೇಕಾಯಿತು ಸರ್ ಸಾಮ್ಯುವೆಲ್ ಹೋರನ್ನು ಕಂಡು ಅವರಿಗೆ ತನಗರಿತುದನ್ನು ತಿಳಿಸಿ ಅವರ ಅಭಿಮತವನ್ನೂ ಪಡೆದಿರಬಹುದು ಇಂಡಿಯದ ವಿಷಯವಾಗಿ ಹೇಗೆ ನಡೆಕೊಳ್ಳಬೇಕೆಂಬುದನ್ನು ಚೆನ್ನಾಗಿ ಮನನ ಮಾಡಿಕೊಂಡಿದ್ದಿರಬಹುದು ಇತರ ಏನನ್ನು ತಂದಿರ ವರೆಗೆ ಆದ ಹಿಂದೀಯರನ್ನು ಆನಂದಗೊಳಿಸೀತೇ? ಸ್ಯಾಮ್ಯುವೆಲರು ಸಿದ್ಧಪಡಿಸಿದ ಯಂತ್ರ—ಶ್ವೇತಪತ್ರ—ಇದನ್ನಲ್ಲ ಮೊದಲಾಗಿ ಚಲಿಸಗೊಡುವ ಹೊಣೆಯು ವಿಲ್ಲಿಂಗ್ಡನ್ ಪ್ರಭುಗಳದ್ದಾಗಬಹುದು ಅದರ ಇಂಗ್ಲಾಂಡ್ ಪ್ರಯಾಣವು ಅದಕ್ಕಿಂತ ಹೆಚ್ಚಿನದೇನನ್ನು ತಂದೀತು? ನೋಡ ತಕ್ಕದ್ದು

ಬಿಹಾರಿನ ಕತೆ ಕೇಳಿದಿರಾ?

ಹೋದ ಹೊಸ ಗಡಗಳೇ ಆ ಪ್ರಾಂತ್ಯವನ್ನು ಹೆಸಕ್ಕೊಕ್ಕಿದೆಯು ಭೂಕಂಪವು ಅಲಿಸಿ ತೊರೆದು ಹೋದ ನೆಲವನ್ನು ಅತಿವೃಷ್ಟಿಯು ಚೆನ್ನಾಗಿ ತೊಳೆದ ಒಟ್ಟಿತ ಈಗ ಅಳಿದುಳಿದ ನೆಲದಲ್ಲಿ ಕಾಲಿಡ ವಾಗ ಹೊಸ ಹೊಸ ಕೂಪಗಳು ಗೋಚರಿಸುತ್ತಿವೆಯಂತೆ ರಿಲೀಫ್ ಕಮಿಟಿಯು ಇಂತಹ ಹೊಂಡಗಳನ್ನು ಬಿರಕುಗಳನ್ನೂ ಮುಚ್ಚಿಸಿದೆಯಾದರೂ ಹೊಸದಾಗಿ ಉಂಟಾಗುತ್ತಿರುವ ಈ 'ಮರಣ ಕೂಪ'ಗಳ ಅನೇಕರಿಗೆ—ತಿಳಿಯದಂತೆ ತಮ್ಮೊಳಗೆ ಎಳೆದು ಕೊಂಡು ಮುಗಿಸುವುವಂತೆ ಏನು, ಉಳಿದ ಪತ್ರಿಕೆಗಳು ಮಾಡಿದ ಸಹಾಯ ಎಲ್ಲಿಗೆ ಸಾಕಾಯಿತು? ಅಶನ-ವಸನಗಳಿಗಾಗಿ ಇನ್ನೂ ಕೂಗಾಡುತ್ತಿರುವವರ ಗತಿಯೇನು? ಸರಕಾರವು ಪ್ರಚಲಿತ ವರ್ಷಾರಂಭದಲ್ಲಿ ಎಸೆಂಬ್ಲಿಯಲ್ಲಿ ಸಾರಿದುದಕ್ಕಿಂತ ಹೆಚ್ಚಿನ ಸಹಾಯವೇನನ್ನು ಮಾಡಿತು? ಪ್ರಜಾ ವರ್ಗವೀಗ ಮತ್ತಷ್ಟು ಔದಾರ್ಯದ ಕರವನ್ನು ಮುಂದೊಡ್ಡಬೇಕಾಗಿದೆ ವೈಸರಾಯ್ ಪ್ರಭುಗಳ ನಿಧಿಯು ಇನ್ನಷ್ಟು ಪ್ರಚಾರಕಾರ್ಯದಿಂದ ಬೆಳೆದು ಬಿಹಾರಿಗೆ ವಿಳಂಬವಿಲ್ಲದೆ ಸಾಗಬೇಕಾಗಿದೆ.

ದಕ್ಷಿಣಾಫ್ರಿಕಕ್ಕೂ ಇಂಡಿಯಕ್ಕೂ ನಂಟು!

ಇದು, ದಕ್ಷಿಣಾಫ್ರಿಕ ಸರಕಾರದ ವ್ಯಾಪಾರೀ ಕಮಿಶನರರಾದ ಬ್ರೆನ್ನನ್ ದೊರೆಗಳ ಸುಖಕನಸು! ಅವರೀಗ ಇಂಡಿಯಕ್ಕೆ ಬಂದಿರುವರು ಇಂಡಿಯ—ಬರ್ಮ—ಸಿಲೋನುಗಳನ್ನು ಸುತ್ತಾಡಿ, ದಕ್ಷಿಣಾಫ್ರಿಕಕ್ಕೂ ನಮ್ಮ ದೇಶಕ್ಕೂ ವ್ಯಾಪಾರದ ನಂಟು ಉಂಟಾಗಿ ಬಲಗೊಳ್ಳುವಂತೆ ಸಾಧಿಸುವುದು ಇವರ ಉದ್ದೇಶ. ಏನು ಸವಿ ಮಾತುಗಳಿವು! ಆ ಕಲ್ಪನೆಯ ನಂಟು ಕಾರ್ಯರೂಪದಲ್ಲಿ ಗೋಚರಿಸಬೇಕೆಂದು ಹಾತೊರೆಯುವವರು ಎಷ್ಟು ಮಂದಿ ಇಲ್ಲ? ಮಾತ್ರ ದಕ್ಷಿಣಾಫ್ರಿಕದ ಹಿಂದೀಯರನ್ನು ಮಾರ್ಜಾಲಗಳೋ ಬೆಕ್ಕುಗಳೋ ಎಂಬಂತೆ ಕಾಣುತ್ತಿರುವ ಅಲ್ಲಿಯ ಬಿಳಿಯ ನಿವಾಸಿಗಳು, ಹಲವು ವರ್ಷಗಳ ಹಿಂದೀಯರ ಚಳವಳಿ—ವಿನಂತಿ—ನಿವೇದನೆಗಳನ್ನು ಎಷ್ಟು ಪುರಸ್ಕರಿಸಿರುವರು? ಅಲ್ಲಿಯ ಸರಕಾರವು ಹಿಂದೀ ನಿವಾಸಿಗಳ ಸ್ಥಿತಿ ಸುಧಾರಣೆಗೆ ಪೇಚಾಡಿದುದು ಎಷ್ಟಂತೆ? ಅದನ್ನೆಲ್ಲ ಕೇಳಿ ಭಾರತವರ್ಷದೊಳಗಿನ ಹಿಂದೀಯರ ಮನೋಭಾವವು ದಕ್ಷಿಣಾಫ್ರಿಕದ ಬಿಳಿದೊರೆಗಳ ವಿಷಯವಾಗಿ ಸವಿಯಾಗಿ ಉಳಿದಿಲ್ಲ ಇಂತಹ ಪರಿಸ್ಥಿತಿಯಲ್ಲಿ ಬಂದ ಈ ಬ್ರೆನ್ನನ್ ಸಾಹೇಬರು ಎಂತಹ ಆಶಾವಾದಿಗಳು'

ಹಿಟ್ಲರರು 'ವಿಜಯಿ'ಯಾದರು!

ಅಹುದು ಜರ್ಮನಿ ದೇಶಕ್ಕೆ ಸರ್ವಾಧಿಪತಿಯೆನಿಸಲು, ಚುನಾವಣೆಯ ಇತಿಹಾಸದಲ್ಲಿ ಹಿಂದೆಂದೂ ಕಂಡೂ ಕೇಳದಂತಹ ಪ್ರಚಾರಕಾರ್ಯದ ಫಲವಾಗಿ, ಮೂವತ್ತೆಂಟು ಮಿಲ್ಲಿಯ ಜರ್ಮನ್ ಪ್ರಜೆಗಳು 'ಹಿಟ್ಲರನು ನಮ್ಮ ಸರ್ವಾಧಿಕಾರಿಯಾಗಿರಲಿ' ಎಂದರು ಆದರೆ, ನಾಲ್ಕು ಮಿಲ್ಲಿಯ ಜನರು ಕೂಡದ ಎಂದರು ಇದೀಗ ಮಹದಾಶ್ಚರ್ಯ ಹಿಟ್ಲರರ 'ವರ್ಚಸ್ಸೆ'ಂಬುದು ವಾಕ್ಪಟುತ್ವ ಧರಿಸಿಯ ಮಾತ್ರ ಮತ್ತು ಅವರ ರೀವಿಗಳಲ್ಲೆ ಇವೆ ಆದರೆ, ನಾಝೀಮಯವಾದ ಜರ್ಮನಿಯಲ್ಲಿಯೂ ಇವರಿಗೆ ೪ ಮಿಲ್ಲಿಯ ವಿರೋಧಿಗಳಿರುವರೆಂದರೆ ಇದು ಶುಭ ಚಿಹ್ನೆಯಲ್ಲ ಸ್ಟೋರ್ಮ್ ಟ್ರೂಪಿನ ಒಳಸಂಚುಗಾರರನ್ನು ಅವರು ಹೆಚ್ಚಿನ ವಿಚಾರಣೆಗಾಸ್ಪದವಿಲ್ಲದೆ ಕೊಲ್ಲಿಸಿದಾಗಲೇ ಹಲವರಲ್ಲಿ ಜಿಗುಪ್ಸೆಯುಂಟಾಗಿದೆಯೆನ್ನಬಹುದು ಅನಂತರ ಜರ್ಮನಿಯ ಸಾಂಘಿಕ ಶಕ್ತಿಗೂ ಶಾಂತಿಸ್ಥಾಪನೆಗೂ ಬಹು ಮಟ್ಟಿಗೆ ಕಾರಣರಾಗಿ ಪ್ರಜೆಗಳ ವಿಶ್ವಾಸಕ್ಕೆ ಪಾತ್ರರಾದ ಹಿಂಡನ್‌ಬರ್ಗರ ಮರಣವು ಸಂಭವಿಸಿತು ಹಿಟ್ಲರರ ವರ್ಚಸ್ಸು ಈಗಲೇ ಜರ್ಮನಿಯಲ್ಲಿ ಕಡಿಮೆಯಾಗುತ್ತಿದೆಯೆಂದು ಸಂಕೋಚವಿಲ್ಲದೆ ಹೇಳಬಹುದಾಗಿದೆ

ಹುಡುಗಿಯರ ಮಾರಾಟ' ನಿಲ್ಲಿಸಬೇಕು—

—ಎಂದು ಎಸೆಂಬ್ಲಿಯಲ್ಲಿ ದಿವಾನ್‌ಬಹದೂರ್ ಕುಮಾರ ರಘುವೀರ ಸಿಂಹರವರ ಮಸೂದೆಯೊಂದು ಆ ಮಸೂದೆಯು ಪಾಸಾಗಿ ಎಲ್ಲರ ಸಮಾನ ಭಾವಕ್ಕೆ ರಬಹುದು ಆದರೆ ತರುಣರ, ವಿಶೇಷವಾಗಿ ಬಿ ಎ ಗಳ—ಮಾರಾಟವನ್ನು ತಡೆಯುವ ಉದ್ದೇಶದಿಂದ ಯಾರಾದರೊಬ್ಬರು ಒಂದು ಮಸೂದೆಯನ್ನು ತರಬಾರದಿತ್ತೇ? ಈ ದುಶ್ಚಾಳಿಯು ಇತ್ತೀಚೆಗೆ ವಿಶೇಷವಾಗಿ ರೂಢಿಗೆ ಬಂದುಬಿಟ್ಟಿದೆ ಬೆಳೆದ ಬಿ ಎ ಗಳಿಗೆ ಸಂರಕ್ಷಣೆಯು ಅಗತ್ಯವಿಲ್ಲದು, ಆದರೆ, ಹೆಣ್ಣು ಸತತ ಹೆಚ್ಚಿಡುವ ಕುಟುಂಬದ ಹಿತಚಿಂತನೆಯು ಸಾಧಿಸಲ್ಪಡಬೇಕಾಗಿದೆ 'ಸಮಾಜದ ಆತ್ಮಸಾಕ್ಷಿಯೇ ಇಂತಹ ಸಮಸ್ಯೆಗಳಿಗೆ ಉತ್ತರಕೊಡಬೇಕಾಗಿದೆ ಎಂದು ಗೃಹಮಂತ್ರಿಗಳೂ ಕೆಲ ಬಿನ್ ಸರಕಾರೀ ಸದಸ್ಯರೂ ನುಡಿದರು ಆದರೆ, ಆತ್ಮಸಾಕ್ಷಿಯೆಂಬುದೇ ವಿಕ್ರಯಿಕ್ಕಿರಿಸಲ್ಪಟ್ಟಾಗ ಉತ್ತರವೆಲ್ಲಿ? 'ಗಲಗಲನೇ ಇಸವಿಯ ಆ ಹಳೇ ಕಾನೂನು ಇರಲೇಬೇಕೆಂಬ ಆವಶ್ಯಕತೆಯನ್ನು ಸರಕಾರವು ಕಂಡಿದೆಯಾದರೆ ಹುಡುಗ-ಹುಡುಗಿಯರ 'ಮಾರಾಟ'ವನ್ನು ನಿರಾತಂಕವಾಗಿ ನಡೆಸುತ್ತಿರುವ ಆ ಪಿಶಾಚಗಳ ಬಗ್ಗೆ ಇರಿಸಬಹುದು' ಎಂದು 'ಅಮೃತಬಜಾರ' ಪತ್ರಿಕೆಯುಸೂಚನೆ

FRESH CONSIGNMENT ARRIVED.

UNEQUAL QUALITY——————EXCEPTIONAL PRICE.

A TIRE THAT SAVES YOU REPUTATION AND MONEY.

The Canara Public Conveyance Co., Ltd.

MANGALORE.

ವರ್ಗದಾರರ ಮೇಲೆ ಅನ್ಯಾಯವಾಗಿ ಬ್ರಹ್ಮಾಸ್ತ್ರ!

ಸರಕಾರದ ತೀರ್ವೆಯ ಪದ್ಧತಿಯ ಮೂಲದಲ್ಲಿಯೇ ಅನ್ಯಾಯವಿದೆ. ದಕ್ಷಿಣ ಕನ್ನಡವು ಬ್ರಿಟಿಷರ ಕೈವಶವಾದ ಮೇಲೆ, ಹೊಸತಾದ ಈ ಸಂಬಂಧವು ನ್ಯಾಯವಾದ ನಿಯಮಗಳಿಂದ ಜೋಡಿಸಲ್ಪಡಲಿಲ್ಲ. ಜಿಲ್ಲೆಯ ಸರಳ ಸ್ವಭಾವಿಗಳನ್ನು ತಮ್ಮ ಸ್ವಾರ್ಥ ಸಾಧನೆಯ ಹಾದಿಯಲ್ಲಿ ಅನುಕೂಲವಾದ ಕಡೆಗಳಲ್ಲಿಯೇ ನಿಲ್ಲಿಸಿ, ಸ್ವೇಚ್ಛೆಯಿಂದ ವರ್ತಿಸಲು ಆಳರಸರಿಗೆ ಸಾಧ್ಯವಾಯಿತು. ಜಿಲ್ಲೆಯ ಆಸ್ತಿ ಮತ್ತು ಉತ್ಪತ್ತಿಯ ವಿಮರ್ಶೆಯ ಗೊಡವೆಗೆ ಹೋಗದೆ ಅನುಕೂಲ ಶಾಸ್ತ್ರವನ್ನು ಆಧಾರವಾಗಿಟ್ಟುಕೊಂಡು ಬ್ರಿಟಿಷರು ಮೊದಲನೇ ಬಾರಿ ತೀರ್ವೆ ವಿಧಿಸಿದರು. ಸ್ವಾರ್ಥ ಸಾಧನೆಯನ್ನಾದರೂ ಸಂಪೂರ್ಣವಾಗಿ ಒಮ್ಮೆಯೇ ಕಲಿಯಲಾಗುವುದಿಲ್ಲ. ಆ ಕಾಲದಲ್ಲಿ ತಪ್ಪಾಗಿ ತೀರ್ವೆ ವಿಧಿಸುವಾಗಲೂ ಒಂದು ಅನ್ಯಾಯವನ್ನು ಗೊತ್ತಿಲ್ಲದೆ ಮಾಡಿಬಿಟ್ಟರು! ಅಂದಿನ ತೀರ್ವೆಯನ್ನು 'ರೈತವಾರಿ ಕಟ್ಟು' ಆಗಿ ನೇಮಿಸಲಾಯಿತು. ತೆರಿಗೆಯ ರಚನೆಗಾಗಿ ಈ ಜಿಲ್ಲೆಯಲ್ಲಿ ಮೊದಲನೇ ಬಂದೋಬಂಧು ನಡೆಸಿದ ಸರ್ ತೋಮಸ್ ಮನ್ರೋರವರು ಪಾರ್ಲಿಮೆಂಟು ಕಮಿಟಿಯ ಮುಂದೆ ೧೮೧೩ನೇ ಇಸವಿಯಲ್ಲಿ ಕೊಟ್ಟ ವಾಗ್ಮೂಲದಲ್ಲಿ ಸ್ಪಷ್ಟವಾಗಿ ಹೀಗೆಂದಿರುವರು:-

—"ದೇಶದಲ್ಲಿಯ ಇಡೀ ಜಮೀನಿನ ಮೇಲೆ ವಿಧಿಸುವ ರೈತವಾರಿ ಕಟ್ಟಿನ ತೀರ್ವೆಯು ಕಾಯಮ್ ಆಗಿದ್ದು, ತನ್ನ ಜಮೀನನ್ನು ಖುದ್ದು ಸಾಗುವಳಿ ಮಾಡುವ ರೈತನಿಗೆ ಇಚ್ಛೆಯಿರುವ ತನಕ ಕಾಯಮ್ ತೀರ್ವೆಯಿಂದ ಆ ಆಸ್ತಿಯನ್ನು ಅನುಭವಿಸಿ ಬರಬಹುದು. ಅವನು ಬಂಜರು ಇಲ್ಲವೆ ಹೆಚ್ಚಿಗೆ ಜಮೀನನ್ನು ಆಗ ಮೆಗೆ ತರುವ ಪಕ್ಷದಲ್ಲಿ ಅದಕ್ಕೆ ಮೊದಲೇ ನಿಶ್ಚಿಸಿದ್ದ ತೀರ್ವೆಯನ್ನು ಕೊಡಬೇಕಲ್ಲದೆ ಹೆಚ್ಚಿಗೆ ತೆರಲು ಬದ್ಧನಲ್ಲ. ಇಲ್ಲಿಯ ರೈತವಾರಿ ಕಟ್ಟು ಮತ್ತು ಬಂಗಾಳದ ಕಾಯಮ್ ಜೇರೀಜು ಕಟ್ಟು ಇವುಗಳೊಳಗೆ ಶಾಶ್ವತದ ಮಟ್ಟಿಗೆ ಭೇದವಿರುವುದಿಲ್ಲ."

ಈ ಸಿದ್ಧಾಂತಕ್ಕನುಸಾರವಾಗಿ ಸಾಧಾರಣ ೬೦ ವರ್ಷಗಳ ವರೆಗೆ ಪ್ರಥಮತಃ ನಿರ್ಣೈಸಲ್ಪಟ್ಟ ತೀರ್ವೆಯು ಜ್ಯಾರಿಯಲ್ಲಿದ್ದಿತು. ಈ ಅವಧಿಯಲ್ಲಿ ಸರಕಾರದ ನಿಯಮದ ಕಟ್ಟು ಮುರಿದು ಬೀಳುವಷ್ಟು ರೈತರ ಆದಾಯವು ಭಾರವಾಗಿ ಹೋದರೆ ಅದಕ್ಕೆ ಸರಕಾರವು ಹೊಣೆಯೆ! ಒಂದು ಸಂಗತಿಯು ಉಕ್ತಾನುಕನಿಷ್ಠವೆಂಬುದು ಅದರ ರೀತಿಯನ್ನು ಹೊಂದಿಕೊಂಡಿಲ್ಲ. ಅದು ವಿಮರ್ಶಕನ ಪಕ್ಷಪಾತವೃತ್ತಿಯನ್ನವಲಂಬಿಸಿದೆ. ಪೋಷಿಸಲಿಚ್ಛಿಸುವವನು ದುರ್ಬಲತೆಯನ್ನು ಕಾಣುವನು-ಕೆಡಿಸಲಿಚ್ಛಿಸುವವನಿಗೆ ಅದೇ ಹೆಚ್ಚೆಂದು ತೋರುವುದು. ೧೯೦೩ರಲ್ಲಿ ರಿಸೆಟ್ಲ್ಮೆಂಟಿಗೆ ತೊಡಗಿದಾಗ ರೈತರ ಸಾಂಪತ್ತಿಕ ಸ್ಥಿತಿಯು ಸರಕಾರದ ದೃಷ್ಟಿಯಿಂದ ಮಾತ್ರ ಸುಧಾರಿಸಿದ್ದಿತು. ಅದು ತನ್ನ ಮಾತನ್ನು ತಾನೇ ಮುರಿದುಕೊಂಡು ತೀರ್ವೆಯನ್ನೇರಿಸಬೇಕೆಂಬ ಒಂದೇ ಧ್ಯೇಯದಿಂದ ಪುನಃ ಸೆಟ್ಲ್ಮೆಂಟನ್ನು ಮಾಡಿತು. ೧೯೦೩ರಲ್ಲಿ ನಡೆದ ರಿಸೆಟ್ಲ್ಮೆಂಟು ನಮ್ಮ ಜಿಲ್ಲೆಗೆ ಮೊದಲನೆಯದು.

ಅಂದಿನ ಮತ್ತು ಇಂದಿನ ರಿಸೆಟ್ಲ್ಮೆಂಟು.

ಅಂದಿನ ಮತ್ತು ಇಂದಿನ ರಿಸೆಟ್ಲ್ಮೆಂಟುಗಳ ವಾತಾವರಣಗಳಲ್ಲಿ ಒಂದು ಇನ್ನೊಂದರ ನಕಲಿಯಂತಿದ್ದು ರೈತರ ದೀರ್ಘ ನಿದ್ರೆಯ ಪರಿಚಯವು ಈ ತುಲನೆಯಿಂದಾಗುತ್ತದೆ. ಸರಕಾರವು ೧೯೦೩ರಲ್ಲಿ ಹಿಡಿದ ರೀತಿಯನ್ನು ಸರ್ವವಿಧದಲ್ಲಿಯೂ ಪುನರಾವರ್ತಿಸಿರುವುದು. ಜಿಲ್ಲೆಯ ವರ್ಗದಾರರಿಗೆ ತಿಳಿಸದೇನೇ ಸೆಟ್ಲ್ಮೆಂಟು ಆಫೀಸರರ ಧೂಮಿಚಾರಣೆ, ಎಲ್ಲಾ ವಿಧದಲ್ಲಿಯೂ ಅಂದಿನ ರಿಪೋರ್ಟನ್ನೇ ಹೋಲುವ ರಿಪೋರ್ಟು, ರೈತರ ಆಕ್ಷೇಪದ ಅನುಕೂಲ ತಪ್ಪಿಸುವ ವಾಯಿದೆ, ಇವೆಲ್ಲಾ ಅಂದಿನ ಆಟಗಳು- ಕಾಲದ ಮಹತ್ವವನ್ನು ಸ್ಪಷ್ಟವಾಗಿ ಖಂಡಿಸುವ ವಿದ್ಯಮಾನವಿದು. ದಕ್ಷಿಣ ಕನ್ನಡದ ರೈತರು ೧೯೦೩ನೇ ಇಸವಿಯ ಹಳೆಯ ಪ್ರತಿಗಳಾಗಿ ಉಳಿದುಕೊಂಡರು—ಸರಕಾರವೂ ಅದೇ ಇಸವಿಯ ರಿಸೆಟ್ಲ್ಮೆಂಟಿನ ಪ್ರತಿಯನ್ನು ರೈತರಿಗೆ ಅನ್ವಯಿಸುವಂತೆ ಪುನರ್ಮುದ್ರಿಸಿತು! ನಮ್ಮ ದಯಾಳು ಸರಕಾರದವರಿಂದ ಕಾಲಮಾನಕ್ಕನುಸಾರವಾದ ನ್ಯಾಯವು ದೊರೆಯುತ್ತಿದೆ ಎಂಬುದಕ್ಕೆ ಇದೂ ಒಂದು ನಿದರ್ಶನ!! ೧೯೦೩ನೇ ಇಸವಿಯಲ್ಲಿ ಉಡುಪಿ ತಾಲೂಕಿನ (ಆಗ ಕಾರ್ಕಳ ತಾಲೂಕು ಉಡುಪಿಗೆ ಸೇರಿತ್ತು) ವರ್ಗದಾರರ ಪರವಾಗಿ ಯೋಗ್ಯ ಆಧಾರಗಳನ್ನೊಳಗೊಂಡ ಆಕ್ಷೇಪದಾಯಕ ಮನವಿಯು ಸರಕಾರಕ್ಕೆ ಕಳುಹಿಸಲ್ಪಟ್ಟಿತ್ತಾದರೂ ವಾಯಿದೆ ಮೀರಿದೆ ಎಂಬ ಕಾರಣದಿಂದ ಅದಕ್ಕೆ ನಿಗಾ ದೊರಕಲಿಲ್ಲ. ಆ ಸಮಯದಲ್ಲಿ ಮನವಿ ರಚನೆಯೇ ಮೊದಲಾದ ರಿಸೆಟ್ಲ್ಮೆಂಟಿನ ಕುರಿತಾದ ಕಾರ್ಯಗಳಲ್ಲಿ ಕೆಲಸಮಾಡಿ ಅನುಭವವಿರುವ ವಕೀಲ್ ಶ್ರೀ ಕೆ. ಲಕ್ಷ್ಮಣ ಪೈಯವರು ಇಂದಿನ ಪರಿಸ್ಥಿತಿಗಾಗಿ ಆಶ್ಚರ್ಯಪಡುತ್ತಿರುವರು. ಸರಕಾರದೊಡನೆ ಮನವಿ ಬಿನ್ನವತ್ತಳೆಗಳಿಂದ ಪ್ರಾರ್ಥಿಸಿಕೊಳ್ಳುವುದರಿಂದ ಪ್ರಯೋಜನವಿಲ್ಲವೆಂಬುದಕ್ಕೆ ಈ ಆಧಾರವು ಸಾಲದೆ? ಯಾವ ತಪ್ಪು ತಿದ್ದುಪಡಿಯಾಗಬೇಕೆಂದು ೩೦ ವರ್ಷಗಳಿಗೆ ಹಿಂದೆಯೇ ತಪ್ಪಿಗೊಳಗಾದ ನೂರಾರು ಮಂದಿ ವರ್ಗದಾರರ ಮನವಿ ಹೋಗಿರುವುದೋ, ಗತಕಾಲದಲ್ಲಿ ಕೆಡಬೇಕಾಗಿದ್ದ ಆ ತಪ್ಪು ಭವಿಷ್ಯತ್ಕಾಲಕ್ಕೂ ನಿರ್ಮಿಸಲ್ಪಡುವುದೆಂದರೆ ಮನವಿಗೆ ಬೆಲೆಯೇನು? ತಾವು ಕೊಟ್ಟ ಪೆಟ್ಟಿನಿಂದ ನೋವಾಗುತ್ತದೆ ಎಂಬುದನ್ನು, ತಿಂದವನು ಪಡುವ ಪೇಚಾಟದಿಂದ ಮಾತ್ರವೇ ತಿಳಿಯುವ ಕಾಲವಿದು! ನಮ್ಮ ಜಿಲ್ಲೆಯ ರೈತರಂತೆ ಸಹನಾಶಕ್ತಿಯನ್ನು ಹೆಚ್ಚಿಸಿಕೊಂಡು ತಟಸ್ಥರಾಗಿದ್ದರೆ ಇನ್ನಷ್ಟು ಪೆಟ್ಟು ತಿನ್ನುವ ಸಂದರ್ಭಗಳನ್ನು ಸಂಪಾದಿಸಿದಂತಾಯಿತೇ ಹೊರತು ಪರಕೀಯರ ಕೈಯನ್ನು ತಡೆಯುವ ಕೆಲಸವಾಗಲಿಲ್ಲ.

ರೈತರೇನು ಮಾಡಬೇಕು?

ತಮಗೆ ಬೇಕಾದುದನ್ನು ಸರಕಾರವು ತಾನಾಗಿ ಮಾಡದಿದ್ದರೆ, ಮಾಡಿಸುವ ಅಧಿಕಾರವು ರೈತರಿಗಿದೆ. ಎಲ್ಲಾ ಧರ್ಮಗಳ ಮೂಲವಾಗಿರುವ ಸತ್ಯಪರಿಪಾಲನೆಯಾದರೂ ಸರಕಾರದಿಂದ ಆಗುವಂತೆ ನೋಡಬೇಕು.

"ತೀರ್ವೆಯು ಯೋಗ್ಯತಾನುಸಾರವಾಗಿ ನ್ಯಾಯವಾಗಿಯೂ ಹೊರಗೆಯಲ್ಲಿ ಮಿತವಾಗಿಯೂ ಇದ್ದು ಜಮೀನಿನ ಮಾಲಿಕನಿಗೆ ಯಾ ವ್ಯವಸಾಯಗಾರನಿಗೆ ಸಾಧಾರಣ ಕಾಲಗಳಲ್ಲಿ ಉಳಿಸಿಕೊಂಡು ದುಷ್ಕಾಲಗಳಲ್ಲಿ ಜೀವನೋಪಾಯ ನಡೆಸಲಿಕ್ಕೆ ಸಾಕಷ್ಟು ಮುನಾಫೆ ಇರುವಂಥಾದ್ದಾಗಿರಬೇಕು."

(ಲೇಂಡ್ ರೆವಿನ್ಯೂ ಪೋಲಿಸಿಯ ೪ನೇ ಪುಟದಲ್ಲಿದೆ) ಇದು ಸರಕಾರದ ಅಂಗೀಕೃತ ಆಚರಣೆಗಾಗಿರುವ ಮಾತುಗಳು! ಸರಕಾರದ ಮಾತು ಮತ್ತು ಕೃತ್ಯವು ಬೇರೆ ಬೇರೆ ಹಾದಿ ಹಿಡಿದರೆ ಅವುಗಳನ್ನು ಒಂದುಗೂಡಿಸುವವರಾರು? ~~ರೈತರು! ರೈತರ ಕಾರ್ಯರಂಗವು ರೈತರಿಂದಲೇ~~ ತುಂಬಿಹೋದರೆ ಸರಕಾರದ ಮಾತು, ಕೃತಿಗಳು ದೂರ ದೂರ ಸರಿದು ಅಡ್ಡಾಡಲನುಕೂಲವೆಲ್ಲಿಂದ? ಅಂತಹ ಗೂಡಿನಲ್ಲಿ ಈಗ ವಿರುದ್ಧ ದೆಸೆ ಹಿಡಿದಿರುವ ಸರಕಾರದ ವಾಗ್ದಾನ ಮತ್ತು ಆಚರಣೆಗಳನ್ನು ಸಿಕ್ಕಿಸಿ ಹಾಕಿದರೆ ದಕ್ಷಿಣ ಕನ್ನಡದ ವಿಪತ್ತು ಆಗಲೇ ದೂರವಾಗುವುದು. ರೈತರೆಲ್ಲಾ ಒಗ್ಗಟ್ಟಿನಿಂದ ಕೂಡಲೇ ಈ ಸಾಹಸಕ್ಕೆ ತೊಡಗುವರೆ?

M. V. H.

ವಿಲಕ್ಷಣ ಮಾದರಿ!

ಹಿಂದೂಸ್ಥಾನದ ಆಶ್ರಿತ ರಾಜರ ಪೈಕಿ, ತ್ರಾವಂಕೋರು ರಾಜರ ಸರಕಾರವು, ಒಂದು ವಿಲಕ್ಷಣ ಅಪ್ಪಣೆಯನ್ನು ಹೊರಡಿಸಿ ಕೃತಾರ್ಥವಾಗಿದೆ. ಕಮ್ಯುನಿಸ್ಟ್ ಧ್ಯೇಯದಿಂದ ಆ ರಾಜ್ಯದಲ್ಲಿ ಸಭೆ ಸೇರುವುದಕ್ಕೂ, ಅಖಿಳಭಾರತ ಕೊಂಗ್ರೆಸ್ಸಿಗೆ ಸದಸ್ಯರನ್ನು ಸೇರಿಸುವುದಕ್ಕೂ ಈ ಸರಕಾರವು ನಿಷೇಧಿಸುತ್ತದಂತೆ; ಕಾರಣ— ಈ ತರದ ವರ್ತನೆಗಳಿಂದ ರಾಜ್ಯದಲ್ಲಿ ಕ್ಷೋಭೆಯುಂಟಾಗಬಹುದೆಂದು. ಕೊಂಗ್ರೆಸ್ಸು ಅಖಿಳ ಭಾರತ ಸಂಸ್ಥೆಯಾಗಿದೆ. ಬ್ರಿಟಿಷ್ ಇಂಡಿಯಾ ಮಾತ್ರದಲ್ಲಿ ಆಶ್ರಿತ ರಾಜ್ಯಗಳಿಗೂ ಸಂಪೂರ್ಣ ಸ್ವಾತಂತ್ರ್ಯವನ್ನು ಸಿದ್ಧಿಸಿಕೊಳ್ಳಬೇಕೆಂಬುದೇ ಅದರ ಧ್ಯೇಯವಾಗಿದೆ. ಕೊಂಗ್ರೆಸ್ಸು ತನ್ನ ಸಾಧನೆಯಿಂದ ಜಯಪ್ರದವಾದರೆ ತನ್ನ ರೂಪ ಬದಲಾವಣೆಯಾಗಬಹುದೆಂಬ ಹೆದರಿಕೆಯಿಂದ ರಾಷ್ಟ್ರೀಯ ಚಳವಳದಲ್ಲಿ, ತನ್ನ ರಾಜ್ಯದ ಪ್ರಜೆಗಳನ್ನು 'ಬೆಕ್ಕಿನ ಬಿಡಾರ ಬೇರೆಯೆಂ'ಬಂತೆ ವಿಂಗಡಿಸಿಡುವ ನೂತನ ವರ್ತನೆಯಿದು. ತ್ರಾವಂಕೋರಿನಂತಹ ಮುಂದುವರಿದ (?) ಆಶ್ರಿತ ಸರಕಾರದ ಕುರುಡು ಬುದ್ಧಿಯೆನ್ನಬೇಕೆ? ಅಥವಾ ಕೊಂಗ್ರೆಸ್ಸಿನ ಅಖಿಳ ಭಾರತ ಧ್ಯೇಯದಿಂದ ಸ್ವರಾಜ್ಯವು ಸಂಘಟಿಸಿದರೆ ತಮ್ಮ ಗೊಂಬೆಯಾಟದ ರಂಗಸ್ಥಳದಿಂದ ವಿರಾಮ ಹೊಂದಬೇಕಾಗುವುದೆಂಬ ಸ್ವಾರ್ಥ ಸಾಧನೆಗಾಗಿಯೆನ್ನಬೇಕೆ? ಅಂತೂ ಸಿ. ಪಿ. ರಾಮಸ್ವಾಮಿ ಅಯ್ಯರ್ ಲೀಗಲ್ ಎಡ್ವೈಸರಿಕೆಯ ಪ್ರಭಾವವೇ ಇದು? ಹಬಿಬುಲ್ಲಾರವರ ದಿವಾನ್‍ಗಿರಿಯ ಪ್ರತಾಪವೇ ಇದು? ಅಲ್ಲವೆಂದರೆ ಕೊಂಗ್ರೆಸ್ಸಿನ ಚಳವಳದಲ್ಲಿ ತನ್ನ ಸರ್ವ ಬಲವನ್ನು ನೆಚ್ಚಿಟ್ಟಿದ್ದ ಬ್ರಿಟಿಷ್ ಸರಕಾರವು ಕೊಂಗ್ರೆಸ್ಸಿನ ಈಗಿನ ವರ್ತನದ ವಿಷಯದಲ್ಲಿ ತಟಸ್ಥವಾಗಿರುವಾಗ ಈ ಆಶ್ರಿತ ರಾಜ್ಯಕ್ಕೆ ಈ ಕಾನೂನಿನ ಅವಶ್ಯಕತೆ ಯಾಕೆ ಬಂದಿರುವುದೋ ತಿಳಿಯುವುದಿಲ್ಲ. ಆದರೆ ತ್ರಾವಂಕೋರಿನ ಪ್ರಜೆಗಳು ಪ್ರಕೃತ ತಮಗೆ ಲೇಶ ಮಾತ್ರವಿದ್ದ ಭಾವನಾ ಸ್ವಾತಂತ್ರ್ಯವನ್ನೂ, ಕಾರ್ಯ ಸ್ವಾತಂತ್ರ್ಯವನ್ನೂ ರಕ್ಷಿಸಿಕೊಳ್ಳಲಿಕ್ಕೆ ತಕ್ಕ ಯೋಜನೆಯನ್ನು ಮಾಡದಿರಲಾರರೆಂದೇ ನಮ್ಮ ನಂಬಿಗೆ!

"ಸ್ಟೇಟ್ಸ್‌ಮೇನ್" ಪತ್ರಿಕೆಗೆ ಆಶ್ಚರ್ಯವಂತೆ!

ಕಲ್ಕತ್ತೆಯ 'ಸ್ಟೇಟ್ಸ್‌ಮೇನ್' ಪತ್ರಿಕೆಗೆ ಆಶ್ಚರ್ಯವಾಗಿದೆಯಂತೆ! ಏಕೆ? ಮಿದುಳು ಭ್ರಮಣ ಮಾಡುತ್ತಿದೆಯೆಂಬರ್ಥವಲ್ಲ. ಕಲ್ಕತ್ತೆಯ ಪ್ರಫುಲ್ಲಕಾಂತ ಘೋಷನು ಡಾಕ್ಕಾ ವಿಶ್ವ ವಿದ್ಯಾಲಯದ ಕೆರೆಯಲ್ಲಿ ೫೭ ಘಂಟೆಗಳ ತನಕ ಎಡೆಬಿಡದೆ ಕೈಕಾಲುಗಳನ್ನು ಕಟ್ಟಿಕೊಂಡು ಈಜಾಡಿ, ಪ್ರಪಂಚದ ದಾಖಲೆಯನ್ನು ಸ್ಥಾಪಿಸಿದುದರ ವಿಷಯವಾಗಿ ಬರೆಯುತ್ತ ಆ ಪತ್ರಿಕೆಯು—"ಈ ದಾಖಲೆಯ ಮಹತ್ವವೇನೋ ದೇವರೇ ಬಲ್ಲ. ಸಮಾಜೋನ್ನತಿಯ ಕಾರ್ಯದಲ್ಲಿ ಇದಕ್ಕೆ ಬೆಲೆಯೇನು?" ಎನ್ನುತ್ತಿದೆ.

ಅದಕ್ಕೆ "ಹಿತವಾದ" ಪತ್ರಿಕೆಯು ಹೀಗೆ ಉತ್ತರ ಕೊಟ್ಟಿದೆ; "ಆಂಗ್ಲೇಯನೊಬ್ಬನು ಆ ದಾಖಲೆಯನ್ನು ಸ್ಥಾಪಿಸಿದ್ದರೆ, ~~ಭಾವಚಿತ್ರ~~, ಸಂಪಾದಕೀಯ ಮತ್ತು ದಪ್ಪ ಅಕ್ಷರಗಳಲ್ಲಿ ಶಿರೋನಾಮೆಗಳ ಉತ್ಸವದಿಂದ ಪತ್ರಿಕೆಯನ್ನಲಂಕರಿಸುತಿತ್ತು—ಈ 'ಸ್ಟೇಟ್ಸ್‌ಮೇನ್' ಪತ್ರಿಕೆ! ಆದರೆ ಕರಿಯನೊಬ್ಬನು ಆ ದಾಖಲೆ ಸ್ಥಾಪಿಸಿದನೆಂಬುದಕ್ಕೆ ಈ ಬಿಳಿ ದೊರೆಗಳಿಗೆ—'ಇಂಥ ಆಟಗಳಿಂದೇನು ಪ್ರಯೋಜನ?'ವೆನ್ನುವಷ್ಟಕ್ಕೆ ತಲೆ ಕರಡಾಗುತ್ತಿದೆ. ವಿಮಾನವೇರಿ ಆಂಗ್ಲೇಯರು ಕೊಡೆ ಹಿಡಿದು ಕೆಳಗೆ ಹಾರುವರಲ್ಲ; ಅಷ್ಟೇ ಮಹತ್ವವು ಈ ಈಜಿನ ಆಟಕ್ಕೂ ಇದೆ, ತಿಳಿಯಿತೇ?"

ಹಿಂದೂಗಳ ಸ್ಮರಣಾಶಕ್ತಿಯು ಅದ್ವಿತೀಯವಾಗಿದೆ.

'ಜೋನ್ ಒಫ್ ಲಂಡನ್' ಎಂಬ ಆಂಗ್ಲ ಪತ್ರಿಕೆಗೆ, ಚಾಮರಾಜಪುರದಿಂದ ಆರ್. ಬಿ. ಸಿಂಗಳೆ ಎಂಬವರು ಹೀಗೆ ಬರೆಯುತ್ತಾರೆ:-

'ಹಿಂದೂಗಳ ಸ್ಮರಣಾಶಕ್ತಿಯು ಪ್ರಪಂಚದಲ್ಲಿ ಅತ್ಯದ್ಭುತವಾದುದು. ಸಂಸ್ಕೃತವನ್ನು ಬಲ್ಲ ಬ್ರಾಹ್ಮಣರು ವೇದವನ್ನು ಬಾಯಿಪಾಠ ಹೇಳುವರು. ಅತಿ ಪುರಾತನವಾದ ಈ ವೇದಗಳಲ್ಲಿ ೨೦ ಸಾವಿರ ಶ್ಲೋಕಗಳಿವೆ. ಅವುಗಳನ್ನು ಪೂರ್ವಕಾಲದಲ್ಲಿ ಅಚ್ಚುಹಾಕಿಡುತ್ತಿರಲಿಲ್ಲ. ಗುರುವು ತನ್ನ ಶಿಷ್ಯನಿಗೆ ಬಾಯಿಪಾಠ ಕಲಿಸುತಿದ್ದನು. ಗೌತಮಬುದ್ಧನ ಉಪದೇಶವು ಪತ್ರಗಳ ಮುಖಾಂತರವಾಗಲಿಲ್ಲ. ಬಾಯ್ದೆರೆಯಾಗಿಯೇ ಒಬ್ಬನಿಂದ ಮತ್ತೊಬ್ಬನಿಗೆ ಬೋಧಿಸಲ್ಪಟ್ಟಿತು. ಪಾಲಿ ಭಾಷೆಯಲ್ಲಿ ಬೌದ್ಧ ಶಾಸ್ತ್ರಗಳು ೧,೩೫೨,೮೦೦ ಶಬ್ದಗಳನ್ನೊಳಗೊಂಡಿವೆ. ಇದು ಬೈಬಲಿಗಿಂತ ದುಬಾರಿ ಸಂಖ್ಯೆಯಷ್ಟಾಯಿತು. ೧೮೮೫ರಲ್ಲಿ ಒಬ್ಬ ಹಿಂದೂವಿಗೆ, ಅಪ್ರತಿಮ ಸ್ಮರಣಾಶಕ್ತಿಗಾಗಿ ಶಿಫಾರಸು ಪತ್ರ ದೊರೆಯಿತು. ಆತನು ತೋರಿದ ಅದ್ಭುತಗಳಿಷ್ಟು:-

(೧) ಬೋರ್ಡನ್ನು ನೋಡದೆ 'ಚೆಸ್' ಆಟವನ್ನಾಡಿದನು.

(೨) ನಾನಾ ವಿಷಯಗಳ ಮೇಲೆ ಸಂಭಾಷಣೆ ನಡೆಸಿದನು.

(೩) ಮೊದಲನೆ ಚರಣವನ್ನು ಕೊಟ್ಟಾಗ ಒಂದು ಸಂಸ್ಕೃತ ಶ್ಲೋಕವನ್ನು ಪೂರ್ಣಗೊಳಿಸಿದನು.

(೪) ೧ ಅಂಕೆಗಳುಳ್ಳ ಒಂದು ಸಂಖ್ಯೆಯನ್ನು ೬ ಅಂಕೆಗಳ ಸಂಖ್ಯೆಯಿಂದ ಗುಣಾಕಾರ ಮಾಡಿ ಉತ್ತರ ಹೇಳಿದನು.

(೫) [illegible] ಕ್ರಮಗಳಲ್ಲಿ [illegible] ಸಂಖ್ಯೆಗಳನ್ನು [illegible] ಹೇಳಿದನು.

ಇತ್ಯಾದಿ ಇತ್ಯಾದಿ ಇತ್ಯಾದಿ.

'ಗಾಂಧಿಜಿಯವರು ಬ್ರಿಟಿಷರ ಶತ್ರುವಲ್ಲ!'

ಮಹಾತ್ಮಾ ಗಾಂಧಿಯವರು ಬ್ರಿಟಿಷರ ಶತ್ರುವೆಂದು, ಬ್ರಿಟಿಷರು ಮಾತ್ರವಲ್ಲ, ಹಿಂದೀಯರಲ್ಲೂ ಕೆಲವರು ತಿಳಿದುಕೊಂಡಿರಬಹುದೆಂದರೆ ಅತಿಶಯೋಕ್ತಿಯಾಗದು. ಆದರೆ, 'ಗಾಂಧಿಯು ಬ್ರಿಟಿಷರ ಹಿತಚಿಂತಕನು' ಎಂದು ಗ್ಲಿಸರ್‌ಬೋಲ್ಟನ್ ಎಂಬ ಆಂಗ್ಲ ಗ್ರಂಥಕಾರರೊಬ್ಬರು ಈಗ, ಗಾಂಧಿಜಿಯವರ ಜೀವನ ಚರಿತ್ರೆಯೊಂದನ್ನು ಬರೆಯುತ್ತ, ಅದರಲ್ಲಿ ಸ್ಪಷ್ಟೀಕರಿಸಿರುವರು. ಮಾತ್ರ, ಇಂಗ್ಲಾಂಡಿನಲ್ಲಿ ಎಷ್ಟು ಪರಿಣಾಮಕಾರಿಯಾಗಬಹುದೋ ಹೇಳಲಸಾಧ್ಯ.

'ಹಿಂಸಾಬದ್ಧ ಮತ್ತು ರಾಜಕೀಯ ಕುತಂತ್ರಗಳ ಈ ಯುಗದಲ್ಲಿ ಗಾಂಧಿಜಿಯವರು ಜಗತ್ತಿಗೆ ಸಾರಲಿರುವ ಮಹತ್ವವಾದ ಒಂದು ಸಂದೇಶವು ಇನ್ನೂ ಉಳಿದಿದೆ. ಇಂಗ್ಲಾಂಡಿನ ಹಿತಚಿಂತಕರಿವರು ಎಂದು ನನಗೆ ಖಚಿತವಾಗಿದೆ. ಆಂಗ್ಲೇಯ-ಹಿಂದೀಯರೊಳಗಿನ ಐಕ್ಯವು ದೂರವಿಲ್ಲ. ಗಾಂಧಿಜಿಯವರು ನಮ್ಮ ಸ್ನೇಹಿತರೆಂಬುದನ್ನೂ ನಾವು ಸ್ವಲ್ಪ ಕಾಲದೊಳಗೆ ತಿಳಿಯದಿರಲಾರೆವು. ಮುಂದೆ ನಾವೇ ಗಾಂಧಿಜಿಯವರ ಪ್ರತಿಮೆಯೊಂದನ್ನು ರಚಿಸಿ, ಪ್ರಾಯಃ ದೇವಾಲಯವೊಂದರಲ್ಲಿರಿಸುವಷ್ಟು ಭಕ್ತಿಯನ್ನೂ ಕೃತಜ್ಞತೆಯನ್ನೂ ಸೂಚಿಸಬಹುದು. ಸತ್ಯ ಶೋಧಕರಾದ ಗಾಂಧಿಯವರ ಪ್ರತಿಯೊಂದು ಕಾರ್ಯ, ನಡೆನುಡಿಗಳು ವಿಶ್ವಬಂಧುತ್ವವನ್ನುಳ್ಳದಾಗಿವೆ. ಸತ್ಯಾಗ್ರಹವೆಂಬೀ ನೂತನ ಸಾಧನವು ಮುಂದೆ ಯುದ್ಧದ ಬದಲಾಗಿ ರೂಢಿಗೆ ಬರುತ್ತ, ಪಾಶವಿಕ ಯುದ್ಧಗಳು ನಿಂತುಹೋಗಲಾರವೆನ್ನುವವರಾರು?' ಎಂಬೀ ಸಾರಾಂಶವು ಆ ಪುಸ್ತಕದಲ್ಲಡಕವಾಗಿದೆ.

ಲೋಧ್ರ

ಸುಪ್ರಸಿದ್ಧವಾಗಿ ದಿವ್ಯ ಟಾನಿಕ್.

ಸ್ತ್ರೀಯರಿಗೊಂದು ಮಹಾ ವರ.

ಯಾವ ತರದ ಅಥವಾ ಎಲ್ಲಾ ತರದ ಮುಟ್ಟು ದೋಷ, ಮುಟ್ಟಾಗುವುದರಲ್ಲಿ ನೋವು, ಅಕ್ರಮ ತರದ ಮತ್ತು ಮುಟ್ಟಾಗದಿರುವಿಕೆ, ಬಿಳಿ ಸೆರಗು, ಗರ್ಭಕೋಶದ ದೋಷ ಅಶುದ್ಧ ಮುಟ್ಟು, ಬಂಜೆತನ, ಸೂತಿಕಾವಾಯು, ಅಶುದ್ಧರಕ್ತ, ಮೇರೆ ದಾಟಿ ಅಥವಾ ಬೇಕಾದಷ್ಟು ಮುಟ್ಟಾಗದಿರುವುದು, ಸ್ತ್ರೀಯರ ಅಂಗಾಂಗಗಳ ಇನ್ನಿತರ ಅನೇಕಾನೇಕ ರೋಗಗಳುಳ್ಳ ಸ್ತ್ರೀಯರನ್ನು ಈ ಔಷಧಿಯು ಸಂಪೂರ್ಣ ಗುಣಗೊಳಿಸಿರುತ್ತದೆ.

ಲೋಧ್ರ

ಎರಡು ಸೈಜಿನಲ್ಲಿ ದೊರೆಯುತ್ತದೆ. ರೂ. 1 ಮತ್ತು 1–10–0

ಕೇಸರಿ ಕುಟೀರಂ

ಇಂಡಿಯನ್ ಕೆಮಿಸ್ಟ್ಸ್ ಮತ್ತು ಡ್ರಗಿಸ್ಟ್ಸ್, ಎಗ್ಮೋರ್ ಮದರಾಸು,

Sole Agents for West Coast and North Kanara:—

Wanted Agents in Principal Towns. ಪೊಪ್ಯುಲರ್ ಸ್ಟೋರ್ಸ್,

For terms Apply to:—POPULAR STORES, Mangalore. ರಥಬೀದಿ ಮಂಗಳೂರು.

ಫಲಸಾರಯುಕ್ತ ಟೊನಿಕ್.

ಕಿತ್ತಳೆ ಮತ್ತು ಮಹಾಫಲ ಹಣ್ಣುಗಳ ಸಾರದೊಂದಿಗೆ ಎಲ್ಲಾ ಬಗೆಯ ಲವಣಗಳನ್ನೂ (ಶುದ್ಧ ದೇಶೀ) ಮೂಲಿಕೆಗಳನ್ನೂ ಸೇರಿಸಿ ತಯಾರಿಸಲಾದುದು. ಸೇವಿಸಲು ರುಚಿಕರ. ಅಜೀರ್ಣ, ಮಲಬದ್ಧತೆ, ಅಪಾನವಾತ ಇತ್ಯಾದಿಗಳನ್ನು ಹೋಗಲಾಡಿಸುವುದು. ಹಸಿವನ್ನು ಹೆಚ್ಚಿಸಿ, ರಕ್ತಶುದ್ಧಿಯನ್ನುಂಟುಮಾಡುತ್ತದೆ. 12 ಸಾರಿ ಸೇವಿಸುವ ಬಾಟ್ಲಿಯ ಕ್ರಯ ರೂ. 1 (ಒಂದು ಮಾತ್ರ).

ಮಿನರಲ್ ಟೋನಿಕ್ ಮಾತ್ರೆಗಳು.

ರಕ್ತ ಶುದ್ಧಿಗೂ ವೃದ್ಧಿಗೂ—ಉತ್ತಮವಾದ ಲೋಹಧಾತುಗಳಿಂದ ತಯಾರಿಸಲ್ಪಟ್ಟುದು. ಮೂತ್ರಕೋಶ ಮತ್ತು ಕರುಳುಗಳನ್ನು ಕ್ರಮಪಡಿಸಿ, ದೇಹವನ್ನು ಪುಷ್ಟಿಗೊಳಿಸಿ, ತಂಪನ್ನುಂಟುಮಾಡುವುದು. ಚೈತನ್ಯ—ಉತ್ಸಾಹ—ಪುಂಶಕ್ತಿಗಳು ಖಂಡಿತ ಪ್ರಾಪ್ತಿಯಾಗುವುವು. 12 ಮಾತ್ರೆಗಳ ಬಾಟ್ಲಿಗೆ ರೂ. 1 ಮಾತ್ರ. (ಪತ್ರವ್ಯವಹಾರ ಇಂಗ್ಲೀಷಿನಲ್ಲಿ.) ವಿಳಾಸ:—

Non-Pareil Stores,
Big Street, (s. m.) Triplicane,
MADRAS.

ನಿಮ್ಮ ಸಿದ್ಧತೆಯಾಗಿದೆಯೇ?



ನೆಲಗಡಲೆ ಸುಲಿಯುವ ಋತುವು ಈಗಾಗಲೆ ಆರಂಭವಾಗುವುದು. ಅದು ಕಾರಣ, ಯಾವ ವಿಳಂಬವೂ ಇಲ್ಲದೆ, ಋತು ಆರಂಭದಲ್ಲೇ ನಿಮ್ಮ ಕಾರ್ಯಾರಂಭವನ್ನೂ ಮಾಡಲು ಈಗಲೇ ನಿಮ್ಮ ಯಂತ್ರಗಳನ್ನು ಕೊಂಡುಕೊಂಡು ಇಟ್ಟುಕೊಳ್ಳುವುದುತ್ತಮ. ನೀವು ಯಾವ ಯಂತ್ರವನ್ನು ಬಯಸುವಿರಿ? ಅರ್ಥಾತ್ ಸರ್ವತ್ರ ಹೆಸರುಹೊಂದಿದ—

ಕಿರ್ಲೋಸ್ಕರ

"ಕಲ್ಯಾಣ" ನೆಲಗಡಲೆ ಯಂತ್ರ.

ಇದು ಪೂರ್ಣ ಸುಧಾರಣೆಗಳನ್ನೊಳಗೊಂಡಿದ್ದು, ಚಲಿಸಲು ಸುಲಭವಾಗಿರುವಂತೆ ಕಡಿಮೆ ಖರ್ಚಿನಲ್ಲಿ ಹೆಚ್ಚು ಲಾಭಬರುವಂತೆ ಕೆಲಸ ಮಾಡಬಲ್ಲುದು. ಸಂಪೂರ್ಣ ವಿವರಕ್ಕೆ ನಮಗೆ ಬರೆಯಿರಿ:

ಕಿರ್ಲೋಸ್ಕರ ಬ್ರದರ್ಸ್, ಲಿಮಿಟೆಡ್, ಕಿರ್ಲೋಸ್ಕರವಾಡಿ.

ಯಂತ್ರ ದೊರೆಯುವ ಸ್ಥಳ:—ಮೆಸರ್ಸ್ ಪೆರ್ರಿ ಎಂಡ್ ಕೊ, ಲಿಮಿಟೆಡ್,
ಮೌಂಟ್ ರೋಡ್, ಮದ್ರಾಸ್.

ನಮ್ಮ ಸಲಹೆಯೇ ಪ್ರಾಧಾನ್ಯವಾದದ್ದೆಂದು ತಿಳಿಯಬೇಡಿ.

ಕಲ್ಲಿಕೋಟೆ ಅಕೋಲ ಆಸ್ಪತ್ರೆಯ ಚೀಫ್ ಮೆಡಿಕಲ್ ಆಫೀಸರರಾದ ಡಾ। ಸಿ. ಐ. ರಾಮನ್, ಎಂ. ಆರ್., ಸಿ. ಎಸ್. ಇವರು ಬರೆದಿರುವುದನ್ನು ಓದಿ ನೋಡಿ—"ನಾನು ನಿಮ್ಮ ಆಶ್ಚರ್ಯಕರವಾದ ಜೀವಾಮೃತಂ ಟಾನಿಕನ್ನು ನರಗಳಲ್ಲಿ ಉರಿತ ಇರಿತ ಹಸಿವು ಕಡಿಮೆಯಾಗಿರುವುದು, ಕಾಕವು ಕಡಿಮೆಯಾಗಿರುವುದು, ಇವು ಪ್ರಾಪ್ತವಾಗಿರುವ ಅನೇಕ ರೋಗಿಗಳಿಗೆ ಕೊಟ್ಟಿರುತ್ತೇನೆ, ಅದರ ಫಲಿತಾಂಶಗಳು ಬಹು ತೃಪ್ತಿಕರವಾಗಿದೆ. ಜೀವಾಮೃತವನ್ನು ದೇಹಶಕ್ತಿ ಕುಗ್ಗಿರುವ ಎಲ್ಲಾ ಸಂದರ್ಭಗಳಲ್ಲೂ ಸರ್ವೇ ಸಾಮಾನ್ಯವಾಗಿ ಉಪಯೋಗಿಸಬಹುದೆಂದು ನಾನು ಮನಃಪೂರ್ವಕವಾಗಿ ಶಿಫಾರಸು ಮಾಡುತ್ತೇನೆ"

ಜೀವಾಮೃತವು

ನರಗಳಿಗೆ ಶಕ್ತಿ ಕೊಡುತ್ತದೆ. ವೀರ್ಯ ವೃದ್ಧಿಮಾಡುತ್ತದೆ. ಹಸಿವು ಹೆಚ್ಚಿಸುತ್ತದೆ. ರಕ್ತ ವೃದ್ಧಿಮಾಡುತ್ತದೆ.

ಪಂಡಿತ ಡಿ. ಗೋಪಾಲಾಚಾರ್ಲುರವರ **ಜೀ ವಾ ಮೃ ತ ವು**

ಎಲ್ಲಾ ಔಷಧ ಮಾರುವವರಲ್ಲೂ, ಸ್ಟೋರುಗಳಲ್ಲೂ ದೊರೆಯುತ್ತದೆ. (ಸಂಪೂರ್ಣ ವಿವರಗಳಿಗೆ ಇವತ್ತೇ ಬರೆಯಿರಿ)

ಆಯುರ್ವೇದಾಶ್ರಮಂ, ಪೋ. ಬಾಕ್ಸು ನಂ. ೨೮೭, ಮದ್ರಾಸು.

ಸೋಲ್ ಏಜಂಟರು:— ಸಿಟಿ ಮೆಡಿಕಲ್ ಮತ್ತು ಜನರಲ್ ಏಜನ್ಸಿ, ೯೩ ಚಿಕ್ಕಪೇಟೆ ಬೆಂಗಳೂರು. (ಉಡುಪಿ ಹೋಟೆಲ್ ಹತ್ತಿರ)

ದಕ್ಷಿಣ ಕನ್ನಡದ ಏಜಂಟರು— ಪೊಪ್ಯುಲರ್ ಸ್ಟೋರ್ಸ್, ಮಂಗಳೂರು. P. No. 104

An Advertisement In

'Swadeshabhimani'

Means a sure fortune to you

Ask for Contract Rates.

The Swadeshabhimani office,
Car Street, Mangalore.

Preserve Your Wealth by BIRTH-CONTROL.

ದೇಶದ ಐಶ್ವರ್ಯವನ್ನು ಮಿತಸಂತತಿಯಿಂದ ಕಾದಿಡಿ.

ಮೂರೇ ಮೂರು ರೂಪಾಯಿಗಳಿಂದ ಸ್ತ್ರೀಯರಿಗೆ ಪ್ರಸವಭಯವನ್ನು ನಿಲ್ಲಿಸುವುದು. ಬೇಕಾದ್ದಲ್ಲಿ ತಿರಿಗಿ ಗರ್ಭವಾಗುವಂತೆ ಔಷಧವಿದೆ.

ವರ್ಷಕ್ಕೊಂದರಂತೆ ಹೆತ್ತು ತಾಯಿ—ಮಕ್ಕಳು ನರಳದಂತೆ ದೂರ ದೂರ ಮಾಡುವುದು. ಆರೋಗ್ಯಕ್ಕೆ ಹಾನಿಯಿಲ್ಲ.

ವಿಳಾಸ:—ಪಂಡಿತ ಕೆ. ನಾರಾಯಣರಾವ್,
ಆಯುರ್ವೇದ ಫಾರ್ಮಸಿ, ಕಾರ್ಕಳ, ದ. ಕ.

[*N. B.*—ಉತ್ತರವನ್ನಪೇಕ್ಷಿಸುವವರು ಒಂದೂಕಾಲಾಣೆಯ ಟಪ್ಪಾಲು ಸ್ಟಾಂಪಿನೊಂದಿಗೆ ಬರೆಯಬೇಕು.]

WE HOLD IN STOCK OF

English into Kanarese Teacher
Hindi into Kanarese Teacher
Marathi into Kanarese Teacher
Marathi into Gujarathi Teacher

Novels and well known Dramas in Hindi and all sorts of books for Schools and Colleges.

Wanted Agents and Canvassors throughout Karnatak districts.

Apply for full particulars with 1½ Annas Stamp:—

THE MANAGER
The National Kanara News Agency
SIR PHIROJSHA METHA ROAD,
Fort Bombay

ಕ್ಷಯಕ್ಷೀಣಾದಿಗಳಿಗೆ,

ಚ್ಯವನಪ್ರಾಶಾವಲೇಹ.

ಪ್ರಸೂತಿ ರೋಗಾದಿಗಳಿಗೆ

ದಶಮೂಲಾರಿಷ್ಟ.

(ಕಸ್ತೂರಿ ಮಿಶ್ರಣ)

ಸಮಸ್ತ ವಾತರೋಗಗಳಿಗೆ

ಮಹಾನಾರಾಯಣ ತೈಲ.

ಶ್ರೀ ರಾಮಕೃಷ್ಣ ಧರ್ಮವೈದ್ಯಾಶ್ರಮ
ಸಂಘ, ಹೊಸಂಗಡಿ ಕೇರಿ ರಸ್ತೆ, ಮಂಗಳೂರು.

ಟಿಪ್ಪಣಿ ಸಮೇತ

ಋಗ್ವೇದೀ ಸಂಧ್ಯಾವಂದನೆ.

(ವೈಷ್ಣವರಿಗೆ—ಊರ್ಧ್ವಪುಂಡ್ರ—ಮುದ್ರಾಧಾರಣ ವಿಧಿ,
ಸ್ಮಾರ್ತರಿಗೆ—ಭಸ್ಮಧಾರಣ ವಿಧಿ, ಕೂಡಿ)

ಎಂ. ನರಸಿಂಗರಾವ್, ಬಿ. ಎ., ಎಂ. ಎಲ್.
ಇವರಿಂದ ರಚಿತವಾದ
ಪ್ರತಿಪದಾರ್ಥಟೀಕಾ ವಿಧಿಸಹಿತ,

ಬೆಲೆ ಆಣೆ 8.

(30, 60, 100 ಪ್ರತಿಗಳನ್ನು ಒಟ್ಟಿಗೆ ಕೊಂಡುಕೊಳ್ಳುವವರಿಗೆ ಹೆಚ್ಚು ಡಿಸ್ಕೌಂಟು)

ವಿಳಾಸ:— ಶಾರದಾ ಪ್ರೆಸ್ ಆಫೀಸು,
ರಥಬೀದಿ, ಮಂಗಳೂರು.

FOR

High Class Printing

ART OR ORDINARY

CONSULT US

The Sharada Press, Mangalore.

ಸೈಂಟಿಫಿಕ್

ಸ್ವರ್ಣಾಭರಣಗಳು

(ನಿಜವಾದ ಬಂಗಾರಕ್ಕೆ ಬದಲಾಗಿ ಇವು ತಯಾರಿಸಲ್ಪಟ್ಟಿವೆ.)

ಹೈಕೋರ್ಟು ಜಡ್ಜರುಗಳಿಂದಲೂ, ಸರಕಾರದ ಮಂತ್ರಿಗಳಿಂದಲೂ, ಇತರ ಪ್ರಮುಖರಿಂದಲೂ ಕೊಂಡಾಡಲ್ಪಟ್ಟಿವೆ.

ಪತ್ರವ್ಯವಹಾರವನ್ನು ಇಂಗ್ಲಿಷಿನಲ್ಲೇ ಮಾಡಬೇಕು.

ಹೊಸ ಕೆಟಲಾಗು ಧರ್ಮಾರ್ಥ.

ವಿಳಾಸ:-

The Scientific Gold Bangles Co., Ltd.,
Head Office:—43, Byragimatam Street,
Post Box No. 203, Madras.

ಗ್ನಾನ

(ಪ್ರಬಂಧಮಾಲೆ)

ಲೇಖಕರು—ಶ್ರೀ ಶಿವರಾಮ ಕಾರಂತ.

ಅಧ್ಯಾಯ ೧೧

ಹೆಂಗಂ—ಗ್ನಾನ

'ಹೆಂಗಂ' ಗ್ನಾನವು ಅತೀವ ಮುಖ್ಯ ಗ್ನಾನವೆಂದೂ ಇದರ ಶಿಕ್ಷಣವನ್ನು ಮಕ್ಕಳಿಗೆ,—ಜನ್ಮಪೂರ್ವಕ್ಕೇನೆ ಕೊಡಲು ತೊಡಗಬೇಕೆಂದೂ—ಕೆಲವು ಪಂಡಿತರ ಮತ. ಕೆಲವರು ಅದರಿಂದಲೇ, ಪ್ರಪಂಚವು ತಲೆ ಕೆಳಗಾಗುತ್ತಿದೆಯೆಂದೂ, ಮುದುಕರಿಂದ ಸಹ ಅದನ್ನು ದೂರಾಗಿರಿಸಬೇಕೆಂದೂ ಅನ್ನುತ್ತಾರೆ. ಇಂಥ ಭಯಂಕರ ಗ್ನಾನವು—'ಹೆಂಗಂ-ಗ್ನಾನ.' ಹೆಣ್ಣುಗಂಡು—ಜ್ಞಾನವೆಂಬುದೇ ಇದರ ತಾತ್ಪರ್ಯ. ಜ್ಞಾನಿಗಳು ಇದನ್ನು 'ಸಂತಾನ ವಿಜ್ಞಾನ'ವೆನ್ನುತ್ತಾರೆ. (ಸಂತಾನವಾಗದೆ ಹೋದರೆ ಇದು ವಿಜ್ಞಾನವಲ್ಲವೆ?) ಈ ಜ್ಞಾನವನ್ನು ತಿಳಿದು ಸಂತಾನ ನಿರೋಧ ಮಾಡುವುದರಿಂದ—ಇದು ನಿಸ್ಸಂತಾನ ವಿಜ್ಞಾನವೂ ಅಹುದು.

ಭೋಗನೀತಿ, ದಾಂಪತ್ಯನೀತಿ, ಶಿಶುನೀತಿ . . . ಮೊದಲಾದ ಯಾವತ್ತು ನೀತಿಗಳು ಇದರಲ್ಲಿ ಸೇರುತ್ತವೆ. ಇನ್ನೂ ಸೇರಬಹುದಾದ ಜನನೇಂದ್ರಿಯ ರೋಗನೀತಿ ಮೊದಲಾದ ಹಲವು ವಿಷಯಗಳು ಇದರಲ್ಲಿವೆ! ಈ ನೀತಿಗಳೆಲ್ಲ ಒಂದರಲ್ಲೊಂದು ಬೆರೆಯುತ್ತವೆ. ಒಂದು ಇನ್ನೊಂದರೊಡನೆ ಬೆರೆತುದು ಹೆಚ್ಚಾಗಿ ಅನೀತಿಯಾಗಲೂಬಹುದು. ಇದು ಅನೀತಿಯೇ—ಎಂದು ಹಲವರು ತಿಳಿಯುತ್ತಾರೆ. ಇದರಲ್ಲಿ ತಿಳಿದುಕೊಳ್ಳುವ ವಿಷಯವನ್ನು ಒಂದೊಂದಾಗಿ ತಿಳಿಯುವ.

ಹೆಣ್ಣು, ಗಂಡು—ಎಂಬುದು ಸೃಷ್ಟಿಯ ಮುಖ್ಯ ಎರಡು ಜಾತಿ. ಇವುಗಳಲ್ಲಿನ ಪರಸ್ಪರ ಆಕರ್ಷಣವು ಇಸ್ಸಲಿ ಕೊಳೊಂಬೊವಿನಷ್ಟು ಸ್ವಾಭಾವಿಕ. ಇದರ ಫಲಿತವೇ ಭೋಗ. ಭೋಗವೆಂಬುದು ಶರೀರದ ಉಸಿರಾಟದಂತೆ ಸ್ವಾಭಾವಿಕವಾದ ಒಂದು ಆವಶ್ಯಕತೆಯೆಂದು ಕೆಲವರ ಮತ. ಅದಕ್ಕೆ ತಡೆಯೂ ಬೇಡ, ತಿದ್ದು ಬೇಡ—ಎನ್ನುತ್ತಾರೆ ಅವರು. ಇತ್ತ ಕೆಲವರು, ಭೋಗವೇ ಕಾಮ. ಕಾಮವೇ ಮಾನವ ಜೀವನದ ಹೋಮ—ಅದನ್ನು ವಿಷದಷ್ಟು ದೂರವಿರಿಸಬೇಕು—ಎನ್ನುತ್ತಾರೆ. 'ಕಾಮಾತ್ ಸಂಜಾಯತೇ ಕಾಮಂ ಇತ್ಯಾದಿ.' ಕಾಮದಿಂದ ಕಾಮವೇ ಹುಟ್ಟೀತೆಂದು, ಅದರಿಂದಲೇ ಕಾಮಿಯು ಹುಟ್ಟುತ್ತಾನೆಂದೂ—ಶಾಸ್ತ್ರ ಹೇಳುತ್ತದೆ. ಪರಮೇಶ್ವರನು ಮದುವೆಯಾದ ಗೃಹಸ್ಥನಾಗಿದ್ದರೂ, ಕಾಮಣ್ಣನನ್ನು ಕೊಂದವನು. ಇರಲಿ—ಈಗ ಮೊದಲಿನ ಪಂಗಡದವರ ವಾದವನ್ನು ತನಖಿಮಾಡುವ. ಮನುಷ್ಯನೂ ಒಂದು ಪ್ರಾಣಿ. ಭೋಗವು ಅಲ್ಲಿಂದಲೇ ಬಂದ ಒಂದು ಸ್ವಭಾವ—ಅದರಲ್ಲಿ ಅಸ್ವಾಭಾವಿಕತೆಯಿಲ್ಲ. ಅಸಹ್ಯತೆಯಿಲ್ಲ. ಸ್ವಾಭಾವಿಕತೆ ಮಾತ್ರವಿದೆ. ಆದುದರಿಂದ ಭೋಗಕ್ಕೆ ತಡೆಯೇನು ಎನ್ನುತ್ತಾರೆ ಅವರು. ಪ್ರಾಣಿಗಳೂ ಋತುಗಾಮಿಗಳೂ, ಸಂತಾನ ಕಾಂಕ್ಷೆಯಿಂದ ಮಾತ್ರ ಭೋಗಪಡುತ್ತವೆ. ಮನುಷ್ಯನು ಹಾಗೆಯೇ ಮಾಡತಕ್ಕದ್ದು—ಎನ್ನುತ್ತಾರೆ. ಅದನ್ನು ಕೇಳಿ, ಪಂಡಿತರು "ಪ್ರಾಣಿಗಳ ಬಳಿಗೆ ಹೋಗಿರಿ. ಅವು ಸಂತಾನ ಬೇಕೆಂದು ಪರಸ್ಪರ ಚರ್ಚೆ, ನಿರ್ಣಯ ಮಾಡದೇನೆ ಹೀಗೆ ಮಾಡುತ್ತವೆ. ಪಶುವು ಋತುಗಾಮಿಯೆಂಬುದು ಸುಳ್ಳು. ಎಷ್ಟೋ ಗಂಡುಗಳು ಈ ನಿಯಮವನ್ನು ಪಾಲಿಸುವುದಿಲ್ಲವೆನ್ನುತ್ತಾರೆ. ಅಷ್ಟೇನೇ—? ಸಂತಾನಕ್ಕೆ ಹೆಣ್ಣು ಗಂಡೆಂಬ ಭೇದವೇ ಬೇಕಿಲ್ಲವಂತೆ. ಅವಿಲ್ಲದೆ ಏಕ ಜಾತಿಯಿಂದಲೇ ಹುಟ್ಟುವ ಪ್ರಾಣಿಗಳಿವೆಯಂತೆ. ಭೋಗವೇ ಇಲ್ಲದುವೂ ಇವೆ. . . . ಆದುದರಿಂದ ಹೆಣ್ಣು, ಗಂಡು ಭೇದವಿದ್ದರೆ, ಅದು ಸ್ವಾಭಾವಿಕವಾಗಿ ಅವರ ಸ್ವಸಂತೋಷಕ್ಕಿರಬೇಕು—ಎಂದು ತೀರ್ಮಾನಿಸುತ್ತಾರೆ.

ಇನ್ನೊಂದು ಪಂಗಡದವರು—ಇಂದ್ರಿಯದ ಮನವೇ ಜೀವನದ ಧ್ಯೇಯ. ಪ್ರತಿಯೊಬ್ಬನೂ ಸಂಯಮಿಯಾಗಬೇಕು. ಪ್ರತಿಯೊಬ್ಬನೂ ತಪಸ್ವಿಯಾಗಲೇಬೇಕು. ಇಲ್ಲವಾದರೆ ನರಕವೇ ಗತಿಯೆನ್ನುತ್ತಾರೆ. ಇದನ್ನು ಅಂತರಂಗದಲ್ಲಿ ಶಾಸ್ತ್ರಿಗಳೂ ಒಪ್ಪುವುದಿಲ್ಲ. . . ಆದುದರಿಂದ—ಈ ಶಾಸ್ತ್ರವನ್ನೇ ಪ್ರತಿಯೊಬ್ಬನು ತಿಳಿದು ಗೌರವಿಸಿದರೆ ಸಾಕೆಂದು—ಆಚರಿಸಲು ಬಾರದವರು ಬಿಟ್ಟುಬಿಡಬಹುದೆಂದೂ ತೀರ್ಮಾನವಾಗಿದೆ.

ಸ್ವಭಾವತಃ ಸ್ತ್ರೀಯು ತುಸು ಕಡಿಮೆ ಕಾಮಿಯೆಂದೂ, ಪುರುಷನು ಅತಿಕಾಮಿಯೆಂದೂ—ಕೆಲವು ಜನ ಗಂಡು ಡಾಕ್ಟರರೂ, ಗಂಡು ಶಾಸ್ತ್ರಿಗಳೂ ನಿರ್ಣಯಿಸಿದ್ದಾರೆ. ಇದರಿಂದ, ಸ್ತ್ರೀಯು ಹೆಚ್ಚು ಗಂಡರನ್ನು ಅಪೇಕ್ಷಿಸಬಾರದೆಂದೂ, ಪುರುಷನು ಕಡಿಮೆ ಹೆಣ್ಣುಗಳನ್ನು ಬಯಸಬಾರದೆಂದೂ ನಿರ್ಣಯಿಸಿ—ಶಾಸ್ತ್ರರಚನೆ ಮಾಡಿರುತ್ತಾರೆ. ಈ ಶಾಸ್ತ್ರವನ್ನು ನಿರೋಧಿಸುವ ಸ್ತ್ರೀಯರಿದ್ದಾರೆ. ಅವರು ಪ್ರಕೃತಿ, ಮತ್ತು ಪುರುಷಕ್ಕೆ (ಗಂಡುಮಾಡಿದ ಧರ್ಮ) ವಿರೋಧಿಗಳೆಂದು ತಿಳಿಯಬೇಕು.

ಡಾಕ್ಟರರೂ ಶಾಸ್ತ್ರಿಗಳೂ ಮಾತಿನಲ್ಲಿ ಮತಭೇದವುಳ್ಳವರಾದರೂ ವರ್ತನೆಯಲ್ಲಿ ಒಗ್ಗಟ್ಟಿನಿಂದಿರುವುದು ಸಂತೋಷಕರ. ಆದರೆ, ಇದರ ಪರಿಣಾಮವಾಗಿ, ಅಥವಾ ಸಂತಾನ ನಿರೋಧ ಜ್ಞಾನವು ಮೊದಲು ಬಾರದ ನಿಮಿತ್ತ—ತಂದೆತಾಯಿಗಳ ಇಷ್ಟಕ್ಕೂ ಹೆಚ್ಚಿದ ಸಂಖ್ಯೆಯಿಂದ ಮಕ್ಕಳು ಜನಿಸುತ್ತವೆ. ಇದು ಹುಟ್ಟುವ ಮಕ್ಕಳ ತಪ್ಪೆಂಬುದರಲ್ಲಿ ಏನೂ ಸಂಶಯವಿಲ್ಲ. ಪ್ರಾಣಿ ಜೀವನದಲ್ಲಿ ಈ ಮಕ್ಕಳು ಬಹುವಾಗಿ ತಮ್ಮ ತಮ್ಮ ಹಾದಿ ತಾವೇ ಹಿಡಿಯುವುವು. ಮನುಷ್ಯ ಸಂತತಿಯು ಮದುವೆಯಾಗಿ, ತಮಗೆ ಮರಿಯಾಗುವ ತನಕ ತಂದೆತಾಯಿಗಳನ್ನು ಆಶ್ರಯಿಸುವುದರಿಂದ—ಆರ್ಥಿಕ ತೊಡಕು ಹೆಚ್ಚಾಗಿದೆ. ಭೋಗವು ಸ್ವಾಭಾವಿಕ ಶಕ್ತಿಯೆಂಬುದು ನಿಜವಾದರೂ—ಸಂತಾನವು ಸ್ವಾಭಾವಿಕವಾಗಿರಬೇಕಾಗಿಲ್ಲ: ಆದರೂ ಜನಸಂಖ್ಯೆ ಹೆಚ್ಚುತ್ತಿದ್ದು ನಿರುದ್ಯೋಗ ಇತ್ಯಾದಿ ವಿಷಯಗಳು ಬೆಳೆದು ಬರುವುದನ್ನು ಕಂಡರೆ—ಸಂತಾನ ನಿರೋಧವು ಅವಶ್ಯವೆಂದು ಡಾಕ್ಟರರು ತರ್ಕಿಸಿದ್ದಾರೆ. ಈಗ ಏನೇನೋ ಯಂತ್ರಸಾಧನಗಳಿಂದ ಸಂತತಿಯನ್ನು ತಡೆಯಲು ಬರುವುದಂತೆ. ಇದರಲ್ಲಿ ಬಲು ಕಚ್ಚಾಟಬಿದ್ದಿದೆ . . . ಹುಟ್ಟಿದ ಮಕ್ಕಳನ್ನು ಮುಂದೆ ಅರೆ ಉಪವಾಸವಿರಿಸಿ ಕೊಲ್ಲಲು ಅನುಕೂಲತೆಯಿರುವಾಗ, ಹುಟ್ಟುವ ಮೊದಲೇ ಕೊಲ್ಲುವುದು ತಪ್ಪೆಂದು ಶಾಸ್ತ್ರಿಗಳು ಅನ್ನುತ್ತಾರೆ. ಹುಟ್ಟುವವರನ್ನು ಅರೆಹೊಟ್ಟೆಯಿರಿಸಿ, ಕೊಂದು ಸಂತಾನ ನಿರೋಧಮಾಡುವ ಬದಲು, ಹುಟ್ಟುವ ಮೊದಲು ತಾವಾಗಿ ಅತಿಭೋಗದಿಂದ ಸತ್ತು—ಜನಸಂಖ್ಯೆ ಕಡಿಮೆ ಮಾಡುವುದು ಲೇಸು—ಎಂದು ಶಾಸ್ತ್ರಿಗಳು ಅನ್ನುತ್ತಾರೆ. ಅಂತು, ಹುಟ್ಟುವ ಮಕ್ಕಳಲ್ಲಿ ಅರ್ಧಾಂಶವನ್ನೂ, ತಂದೆತಾಯಿಗಳಲ್ಲಿ ಅರ್ಧಾಂಶವನ್ನೂ ನಿರ್ನಾಮ ಮಾಡುವ, ಮೂರನೆ ದಾರಿಯೊಂದು ಬಂದಲ್ಲದೆ ಈ ಪ್ರಶ್ನೆಯು ತೀರ್ಮಾನವಾಗುವಂತಿಲ್ಲವಂತೆ!

ಈಗ ವಿಜ್ಞಾನ ಯುಗದ ಇನ್ನೊಂದು 'ತ್ರಕಲೀಪು' ಬಂದಿದೆ. ಒಂದು ಕಡೆ ಡಾಕ್ಟರು ವೈದ್ಯರುಗಳು, ಸಂತಾನವಿಲ್ಲದ ಭೋಗಕ್ಕೆ ವ್ಯವಸ್ಥೆ ಮಾಡುತ್ತಿರಲು ಇತ್ತ ಇನ್ನು ಕೆಲವು ಡಾಕ್ಟರರು, ಭೋಗವಿಲ್ಲದ ಸಂತಾನಕ್ಕೆ ಯತ್ನಿಸುತ್ತಿದ್ದಾರೆ. ಈಗಾಗಲೇ ಒಂದೂವರೆ ಡಜನ್ ಸಂತಾನವು ಈ ರೀತಿಯಲ್ಲಿ ತಯಾರಿಯಾಯಿತು. ಹೆಣ್ಣಿನ ಮುಖವನ್ನು ಗಂಡು ಕಾಣಲಿಲ್ಲ. . . ಈ ಪ್ರಯೋಗದ ಕೊರತೆಯೆಂದರೆ—ಪುರುಷನೇ ವೀರ್ಯದಾತನಾಗಬೇಕು. ಸ್ತ್ರೀಯೇ—ಗರ್ಭಧಾರಿಣಿಯು. ಈ ವಿಧಾನವು ಪ್ರಾಚೀನಕಾಲದಲ್ಲಿ ಇದ್ದಿರಬೇಕೆಂದೂ—ಅದರಿಂದಲೇ ಕುಂತಿಯರಂತಹ ತಾಯಿಯರು ಗರ್ಭವತಿಯರಾದರೆಂದೂ ಕೆಲವರ ಅಂಬೋಣ, ಹಿಂದಿನ ಕಾಲದಲ್ಲಿ ಸಂತಾನ ಪಡೆಯಲು ಇನ್ನೊಂದು ಸುಲಭ ಉಪಾಯವಿತ್ತಂತೆ. ಹಾದಿಯಲ್ಲಿ ಹೋಗುವ ಬೈರಾಗಿಯೊಬ್ಬನಿಂದ—ಹಾಗಲು, ಪಡುವಲು, ಬೆಂಡೆಗಳಂತಹ ಕಾಯಿಗಳನ್ನು ಕೊಂಡು ತಿಂದರಾಯಿತಂತೆ.

ಈಗ ಮೂರನೆಯ ಒಂದು ಪ್ರಯೋಗವೆಂದರೆ—ಸ್ತ್ರೀ ಪುರುಷರಿಬ್ಬರು ತಮ್ಮ ಶುಕ್ಲಶೋಣಿತಗಳನ್ನು ಧಾರೆಯೆರೆದು ಬಿಟ್ಟರೆ, ಡಾಕ್ಟರರೇ ತಮ್ಮ ಮನೆಯಲ್ಲಿ ಒಂದು ಕಾಜಿನ ಹೂಜಿಯಲ್ಲಿ ಅವನ್ನು ಬೆಳೆಯಿಸಿ—ಸಂತಾನವನ್ನು ಬೆಳೆಯಿಸುವುದು. ಇದರಿಂದ ತಾಯಿಂದಿರಿಗೂ ತೊಂದರೆಯಿಲ್ಲ. ಆದರೆ —'ಈ ಮಕ್ಕಳಿಗೆ ಯಾವ ಗೋತ್ರ? 'ಇವರಲ್ಲಿ ವಿವಾಹವಾಗುವುದಾದರೆ (ಆಗ ವಿವಾಹ ಬೇಕಿಲ್ಲ) ಹೋಗಿ ಸೂರ್ಯಸಗೋತ್ರ (Trade Lable) ವಿವಾಹವಾಗಬಾರದಷ್ಟೆ . . .'—ಎಂಬ ಚಿಂತೆ ಬಲವಾಗಿದೆ. ಡಾಕ್ಟರನ ಗೋತ್ರವೇ ಶಿಶುವಿಗೂ ಸಲ್ಲಲಿ—ಎಂಬ ಸೂಚನೆಯೊಂದಿದೆ.

ಸಂತಾನದ ವಿಚಾರವಾಗಿ ಡಾಕ್ಟರರ ಅಭಿಮತ ಹೀಗಂತೆ—ತತ್ಕಾಲಕ್ಕೆ ಸಾಕಲು ಈಗಿನ ಜನಸಂಖ್ಯೆ ಹೆಚ್ಚಾಗಿ ಕಂಡುಬಂದರೂ, ಮುಂದೆ ಯಂತ್ರಗಳು ಬೆಳೆಯುವುದರಿಂದಲೂ—ಯುದ್ಧಗಳು ಬಂದೇ ಬರುವುದರಿಂದಲೂ—ಆ ಚಿಂತೆಯು ಶಾಶ್ವತವಾಗಿ ಯಾರನ್ನೂ ಕಾಡಬೇಕಿಲ್ಲ. ಈ ಕಾರಣಗಳಿಂದಾಗಿ ಇನ್ನು ಮುಂದೆ ಡಾಕ್ಟರರುಗಳಿಗೂ ಶಾಸ್ತ್ರಿಗಳಿಗೂ ಒಡಂಬಡಿಕೆಯಾಗುವ ಸಂಭವವಿದೆ. ಹಿಂದಿನ ಕಾಲದಲ್ಲಿ ಸಂತಾನವೆಂಬುದೇ ಮನುಷ್ಯನು ಕಾಮಿಯೊ ಅಲ್ಲವೊ ಎಂಬುದರ ಸಾಕ್ಷಿಯಾಗಿತ್ತು. ಈಗ ಅದನ್ನು ಪರೋಟಿಗೆ ತರಲು ಬಂದಿದೆಯಾದನಿಮಿತ್ತ, ಸನ್ಯಾಸಿಗಳು, ಪಾದ್ರಿಗಳು, ಕುಲ್ಪಿಗಳು, ಬಿಕ್ಕುಗಳು—ಯಾರೂ—ನಿಗ್ರಹದಲ್ಲಿರಲು ತೊಡಕಿಲ್ಲ.

ಸಂತಾನ ಭೋಗಗಳ ಈ ಪ್ರಶ್ನೆಯು ಬಹಳ ಜಟಿಲವಾಗಿ ಅದರಿಂದುಂಟಾದ ಪ್ರಶ್ನೆಯೆಂದರೆ—ತತ್ಸಂಬಂಧವಾದ—ಮೇಹಫರಂಗಿ—ಮೊದಲಾದ ರೋಗಗಳು: ಸದರಿ ರೋಗಗಳಿಂದ ಸಂತಾನವು ಕೆಡುತ್ತಿದೆಯೆಂದೂ, ಸ್ತ್ರೀಪುರುಷರ ಪ್ರೇಮಜೀವನವೇ ಕೆಡುತ್ತಿದೆಯೆಂದೂ—ಡಾಕ್ಟರರು ನುಡಿಯುತ್ತಾರೆ.

ಇಷ್ಟೆಲ್ಲ ವೈದ್ಯರು ಪರಿಶ್ರಮಪಡುತ್ತಿದ್ದರೂ ಈ ರೋಗಪೀಡಿತರ ಸಂಖ್ಯೆ 110%ಗಿಂತ ಹೆಚ್ಚಾಗಿರುವುದೆಂದು ತೋರುವುದು. ಈ ವಿಷಯದಲ್ಲಿ ಹಿಂದುಸ್ಥಾನವು ತೀರ ಸುರಕ್ಷಿತವಾಗಿದೆ. ಕಾರಣ—ಇಂಥ ಹೊಲಸು ಸಂಖ್ಯೆಗಳ ಶೋಧನೆಯನ್ನು ನಮ್ಮವರು ಮಾಡಿಲ್ಲ. ಅಲ್ಲದೆ—ತಮ್ಮ ಜೀವನದ ಅಂತರಂಗವನ್ನು ಬಹಿರಂಗಪಡಿಸಿ—ತಾವು ರೋಗಿಷ್ಠರು ಎಂದು ಜಗತ್ತಿನ ಎದುರು ಹೇಳಿಕೊಳ್ಳುವಂಥ ಲಜ್ಜೆಗೇಡಿ ಕೆಲಸವನ್ನು ನಮ್ಮ ದೇಶೀಯರು ಮಾಡುತ್ತಲಿಲ್ಲ.

ಇಂಥ ಭಯಂಕರವೆನಿಸಿರುವ ಬೇನೆಯನ್ನು ತಡೆಯಲು ಕೆಲವು ಉಪಾಯಗಳು—

(1) ಅವುಗಳಿಂದ ಪೀಡಿತರಾಗಿರುವವರು ಅದರ—ಸುದ್ದಿ ಹರಡದಂತೆ ನೋಡುವುದು ಅವಶ್ಯ.

(2) ಮಕ್ಕಳು ಹುಟ್ಟಿ ಇದರ ದೆಸೆಯಿಂದ ಅವರಲ್ಲಿ ಕಿವುಡುತನ, ಕುರುಡುತನ, ಮಂದಬುದ್ಧಿಗಳು ಬಂದರೆ ಅದು ಕೇವಲ—ಗ್ರಹಚಾರದಿಂದಲೋ, ಅಪೂರ್ವಜನ್ಮದ ಪಾಪದಿಂದಲೋ ಬಂತೆಂದು ಸಮಾಧಾನ ತಾಳುವುದು.

(3) ಇದರಿಂದಾಗಿ, ಇದ್ದೊಬ್ಬ ಮಡದಿ ಬಂಜೆ*(?)ಯಾದರೆ, ಇನ್ನೊಂದು ಮಡದಿಯನ್ನು ತರುವುದು.

ಪಾಶ್ಚಿಮಾತ್ಯ ದೇಶೀಯರು—ಇಂಥ ಬೇನೆಗಳ ವಿಚಾರವಾಗಿ ನಾಚುಕೆಗೆಟ್ಟು ವರ್ತಿಸಿದುದರಿಂದ—ಅವರಲ್ಲಿ ದಾಂಪತ್ಯಕ್ಕೆ ತೊಡಕು ಬಂದಿದೆ. ಇಂಥಾ ಬೇನೆಗಳು ಸಂಭೋಗದಷ್ಟೇ ಅನಿವಾರ್ಯವೆಂದು ತಿಳಿದಿದ್ದರೂ, ಅಲ್ಲಿನ ಯುವತಿಯರು, ಮದುವೆಯಾಗುವಾಗ ವರರಿಂದ ಮೆಡಿಕಲ್ ಸರ್ಟಿಫಿಕೇಟುಗಳನ್ನು ಕೇಳುತ್ತಾರಂತೆ.! ಇದಕ್ಕೆ ಪ್ರತಿಯಾಗಿ—ಗಂಡಸರು ತಾವು ಸಂಚರಿಸುವ ಗಲ್ಲಿಯ ಸ್ತ್ರೀಯರಿಂದ—ರೋಗರಾಹಿತ್ಯಕ್ಕೆ-ಸರ್ಟಿಫಿಕೇಟನ್ನು ಕೇಳುತ್ತಿದ್ದಾರೆ. ಆದರೆ ಈಗೀಗ ಡಾಕ್ಟರರು ಸುಳ್ಳು ಸರ್ಟಿಫಿಕೇಟು ಕೊಡುವರೆಂದು ತಿಳಿದುಬಂದಿರುವುದರಿಂದ—ಈ ಮಾರ್ಗವೂ ಚೆನ್ನಾಗಿಲ್ಲವೆಂದೂ ನಿರ್ಧಾರವಾಗಿದೆ. ಅದಕ್ಕಾಗಿ—ಪರೀಕ್ಷಾ ವಿವಾಹ ಮಾಡಿಕೊಂಡು, ಪರಸ್ಪರರು ರೋಗರಹಿತರೆಂದು ಅನುಭವವಾದಲ್ಲಿ—ದಾಂಪತ್ಯವು ಮುಂದುವರಿಯತಕ್ಕದೆಂದು ಸೂಚನೆ ಮಾಡಲ್ಪಟ್ಟಿದೆ. ಇಷ್ಟಕ್ಕೂ ವಿಶ್ವಾಸವು ಸಾಲದಲ್ಲಿ—ಮುಂದೆ ಸ್ತ್ರೀಪುರುಷರ ಕೂಟವೇ ಅನಾವಶ್ಯಕವೆಂದೂ—ಯಂತ್ರಯುಗದ ಮನುಷ್ಯನು, ಒಬ್ಬಂಟಿಯೆಂದೂ ಡಾಕ್ಟರು ಹೇಳುತ್ತಾರೆ. ಇತ್ತ ಸಂತತಿಯನ್ನು ಬಯಸುವುದಾದರೆ, ನಿಮಗೆ ಬೇಕಾದ ವೈದ್ಯರಲ್ಲಿಗೆ ಹೋಗಿ ಇಂತಿಷ್ಟು ತಿಂಗಳೊಳಗಾಗಿ—ನನಗೊಂದು, ಗಂಡೊ, ಹೆಣ್ಣೊ (ಮುಂದಕ್ಕೆ ಈ ಭೇದವೇ ಅನಾವಶ್ಯ) ಮಗು ಬೇಕೆಂದರಾಯಿತು. ಈಗಾಗಲೇ ವೈದ್ಯರು ಸ್ತ್ರೀಪುರುಷ ವೈರವನ್ನು ಇಳಿಸಿ ಲೋಕೋಪಕಾರ ಮಾಡಲು—ತಮ್ಮ ಸೃಷ್ಟಿಯಲ್ಲಿ 'ಹೆಂಗಂ' ಮಕ್ಕಳನ್ನು ನಿರ್ಮಾಣ ಮಾಡಲು ಯತ್ನಿಸುತ್ತಿದ್ದಾರೆ. ಎಷ್ಟೋ ಕೂಟಗಳಲ್ಲಿ ಈ ನಿಯಮವಿದೆಯೆಂದೆವಲ್ಲ . . . ಇಂಥ ಸಂತಾನವನ್ನು ಡಾಕ್ಟರರಿಂದ ನಿಶ್ಚಿತ ತಾರೀಕಿಗೆ ಕೊಂಡು, ಹುಟ್ಟಿದ ಮಕ್ಕಳಿಂದ ಬೇಕಾದ ಪಿತೃಭಕ್ತಿಯನ್ನು ಕೊಂಡು, ಅವರಿಗೆ ಸಲಬೇಕಾದ ಶಿಶುಭಕ್ತಿಯನ್ನು ಪಚಾಮಾಡಲು ಸಾಧ್ಯವಿದೆ. ಅಲ್ಲದೆ ಇನ್ನೊಂದು ಲಾಭವುಂಟು. ನಿಮಗೆ ಬೇಕಾದ ಮಗುವು—ಇಂಥ ವಿದ್ಯೆಯಲ್ಲೇ ಪ್ರವೀಣನಿರಬೇಕು—ಅವನಿಗೆ ಮಿದುಳೇ ಜಾಸ್ತಿ, ಶರೀರವೇ ಕಡಿಮೆ—ಅಥವಾ ಶರೀರವೇ ಜಾಸ್ತಿ ಮಿದುಳೇ ಸೊನ್ನೆ—ಹೀಗೆಯೂ ಮಾಡಬಹುದು. ಬುದ್ಧಿ ಮಿದುಳುಗಳನ್ನು ಹೆಚ್ಚಿಸಬಲ್ಲ, ವಿನಾಳಗ್ರಂಥಿಗಳ ರಸವನ್ನು 'ಗಾಜಿನ ಭರಣಿ ಮಕ್ಕಳಿಗೆ' ತಿನಿಸುತ್ತ ಬಂದರಾಯಿತು. ನಿಮಗೆ ಪ್ರೈವಾಸಿಕ ಸ್ವಭಾವದ ಸಂತತಿಯು ಬೇಕೆಂದು ಆರ್ಡರುಮಾಡಿದಲ್ಲಿ—ನಿಮ್ಮ ಡಾಕ್ಟರನು, ಅಂಥವನೊಬ್ಬನಿಂದಲೇ—ಬೀಜವನ್ನು ತರುವನು. ಅವನ ಯತ್ನವು ಫಲಕಾರಿಯಾಗಲಿಲ್ಲವಾದರೆ—'ಹಣಫರತು'—ಕೊಡಲು ಅವನು ಸಿದ್ಧನು. ಅದಿಲ್ಲವಾದರೆ, 'ನೀವು ಸಂತತಿಯನ್ನು ಕೊಂಡುಹೋಗಿ ಅದು ತೃಪ್ತಿಕರವಾದಲ್ಲಿ ಇರಿಸಿಕೊಳ್ಳಿರಿ, ಇಲ್ಲವಾದರೆ ಮರಳಿ ಕೊಡಿ—' ಎಂಬ ಪರೀಕ್ಷಾ ಸಂತಾನ ವ್ಯಾಪಾರವನ್ನು ಮಾಡಬಹುದು.

---

*ಮಕ್ಕಳಿಲ್ಲದ ಮನುಷ್ಯಳಿಗೆ ಈ ಹೆಸರು ಬರುವುದು.

ಶೈಶಾತಿಪ್ರಿಯ ಪ್ರಿಯರಾದ ಭಾರತೀಯ ಮಹಿಳೆಯರು ಹೀಗೆಂದಾದರೂ ಮಾಡುವರೇ? "ಭಾರತಾಂಬೆ ನೀ ಧನ್ಯೆ ಧನ್ಯೆ"

(B ಪುಟಕ್ಕೆ ಮುಂದುವರಿಯುದೆ)

NOTES
ನೋಟಗಳು.

ಅಂಡಮಾನದ ಹವೆಯನ್ನು ಹೊಗಳಿದ ಹೋರ್ ಸಾಹೇಬರನ್ನು ಮರೆಯುವುದುಂಟೇ? ಪೋರ್ಟ್ ಬ್ಲೇರಿನ ಸೆಲ್ಯೂಲರ್ ಜೈಲಿನಲ್ಲಿರುವ ಬಂಗಾಳೀ ಕೈದಿಗಳಲ್ಲಿ ಮೂರು ಮಂದಿಗೆ ಮಾತ್ರ ಕ್ಷಯ ತಗಲಿತಂತೆ.

* * *

ನಾವು ಹವೆಯನ್ನು ದೂರುವುದು ತಪ್ಪು. ಕ್ಷಯವನ್ನು ಅಥವಾ ಅದನ್ನು ಬರಗೊಟ್ಟವರನ್ನೇ ಅದಕ್ಕೆ ಜವಾಬ್ದಾರರನ್ನಾಗಿ ಮಾಡುತ್ತಿರುವುದು ನ್ಯಾಯವಾಗಿದೆ.

* * *

"ನಮ್ಮಲ್ಲಿಯೂ ಬಸ್ಸು ಕಂಪೆನಿಗಳು ಹೆಂಗಸರನ್ನು ಡ್ರೈವರುಗಳನ್ನಾಗಿ ನಿಯಮಿಸಬಾರದೇಕೆ? ಆಚಾರಕ್ಕೂ ಆಯಿತು; ಅನುಕೂಲಕ್ಕೂ ಆಯಿತು" ಎಂದು ನಮ್ಮ ವ್ಯವಸಾಯ ಬಂಧುವಾದ ಕಂಠೀರವನ ಹಿತ ಸೂಚನೆ.

* * *

ಆದರೆ, ಇನ್ನೂ 'ಡ್ರೈವಿಂಗ್' ಕಲಿತಿರದ ಅವರು ಕಡಿಮೆ ಬೆಲೆಯ ಮೋಟಾರು ಕಾರನ್ನು ಓಡಿಸಿಯೇ ಆರಂಭಿಸಬಹುದೆಂದು ನಮ್ಮ ಅಭಿಪ್ರಾಯ. ಅನಾಚಾರವೂ ಅನಾನುಕೂಲತೆಯೂ ಎಷ್ಟು ಕಡಿಮೆಯಾಗುವುದೆಂದೂ, ಆಗಾಗ ಬಸ್ ಪ್ರಯಾಣಕ್ಕೆ ಶರಣು ಹೋಗಬೇಕಾದವರಿಗೆ ತಿಳಿದು, ಭರವಸೆ ಹುಟ್ಟಲವಕಾಶವಾಗುವುದು.

* * *

ವೆನ್‌ಲೋಕ್ ಆಸ್ಪತ್ರೆಯಲ್ಲಿ ನುಸಿಗಳ ಕಾಟ ಹೆಚ್ಚಿದೆಯೆಂದು, ಅಲ್ಲೊಂದು ರಾತ್ರೆ ಉಳಕೊಂಡವರ 'ನೊಂದನುಡಿ.' ಆಸ್ಪತ್ರೆಯಲ್ಲಿ ಮಾತ್ರ ನುಸಿಗಳಿರಲಾರವೆಂದು ತಿಳಿದಿದ್ದ ಇವರಿಗಾಗಿ ಯಾರೂ ಮರುಕಪಡದಿರಲಾರರು.

* * *

ನುಸಿಗಳಿಗಿಂತ ಮಹತ್ವಾದ ವಸ್ತುಗಳಿವೆ. ಗುಣಗ್ರಾಹಿಗಳು ಅದನ್ನರಿತುಕೊಂಡು, ನುಸಿಗಳಿಗಾಗಿ ದೂಂಡಲಾಗದು.

* * *

ಮುನಿಸಿಪಾಲಿಟಿಯ ತೆರಿಗೆಗಳೆಲ್ಲ ಶಿಸ್ತಿನಿಂದ—ಶ್ರದ್ಧೆಯಿಂದ ಜಮೆಗೊಳ್ಳುತ್ತಿವೆಯಾಗಿ ತಿಳಿದುಬಂದಿದೆ. ಕಮಿಶನರರು ಬಂದ ಮೇಲೂ ಜೇನು ಸಡಿಲಾಗಿದ್ದರೆ. . . . . . ಕೇಳುವವರಿಲ್ಲವೇ?

* * *

ಕಮಿಶನರರೂ ಚೆಯರ್‌ಮೆನರೂ ಕೌನ್ಸಿಲರರೂ ವಾರ್ಡುಗಳನ್ನು ಪರೀಕ್ಷೆ ಮಾಡುತ್ತಿರುವರು. ವೆಬ್‌ಸ್ಟರ್ ಮಾರ್ಕೆಟ್ ಹಿಂದುಗಡೆಯ ಮಾರ್ಗವಾಗಿ ರಾಮರಾವ್ ಗಲ್ಲಿಗೆ ಹೋದರೆ ಕೆಲವು ಚಿತ್ರಗಳನ್ನು ಕಾಣಬಹುದು!

* * *

ಅಗಲ ಕಿರಿದಾದ ರಸ್ತೆಗಳಲ್ಲಿ, ದುರುಸ್ತಿಗೆಂದು ಇಬ್ಬದಿಗಳಲ್ಲಿಯೂ ತಿಂಗಳುಗಟ್ಲೆ ಕಲ್ಲು—ಮಣ್ಣುಗಳ ರಾಶಿಯೊಡ್ಡಿದುದರಿಂದ ಕೆಲಕಡೆಗಳಲ್ಲಿ ಗಾಡಿಗಳು ಮಾತ್ರ ಹಾದು ಹೋಗುವ ಸ್ಥಳವುಳಿದಿದೆ. ಜನರು ಕಲ್ಲು ರಾಶಿಯ ಮೇಲೆ ಆಯ ತಪ್ಪದಂತೆ ನಡೆದು ಹೋಗುವ ಸರ್ಕಸನ್ನು ಕಲಿಯುತ್ತಿರುವುದು ಸಂತೋಷಕರ.

* * *

ರಥಬೀದಿಯಲ್ಲಿ ಮೋಟಾರು ಬಸ್ಸುಗಳ ಚಲಾವಣೆ ನಿಲ್ಲಿಸಲಾದ ಮೇಲೆ ಪ್ರಶಾಂತತೆ ಹಬ್ಬಿದೆ. ವ್ಯಾಪಾರ ವಹಿವಾಟುಗಳ ಪ್ರಶಾಂತತೆ ಮಾತ್ರವಲ್ಲ; ಶ್ರೀ ವೆಂಕಟ್ರಮಣ ದೇವಸ್ಥಾನದಿಂದ ಹೂ ಮಾರ್ಕೆಟಿನ ವರೆಗಿನ ರಸ್ತೆ ರಿಪೇರಿಯ ಕೆಲಸವೂ ಶಾಂತವಾಗಿ ನಡೆಯುತ್ತಲಿದೆ.

ಇಂಡಿಯಾ ಸರಕಾರದವರು ನೀಕಡಾ ೩ರ ಬಡ್ಡಿಯಲ್ಲಿ ಸದ್ಯದಲ್ಲೇ ಪುನಃ ೨೦ ಕೋಟಿ ರೂಪಾಯಿಗಳ ಸಾಲವೆತ್ತಲಿರುವರೆಂದು ಸುದ್ದಿ.

ಪೊಲ್ಲಾಚಿ ಬಳಿಯಲ್ಲಿ ಪೋಲೀಸರ ಗೋಳಿಬಾರು!

ಐವರಿಗೆ ಮರಣ: ಐವರಿಗೆ ಜಖಂ!

ಪೊಲ್ಲಾಚಿಯಿಂದ ಸುಮಾರು ಹದಿನೈದು ಮೈಲು ದೂರವಿರುವ ಕೋತವಾಡಿ ಎಂಬಲ್ಲಿ, ಪೋಲೀಸರು ಗುಂಡು ಹಾರಿಸಿದ ಫಲವಾಗಿ ಐವರು ಮಡಿದರೆಂದೂ, ಐವರಿಗೆ ಜಖಂ ಉಂಟಾಗಿದೆಯೆಂದೂ, ವಾರ್ತೆ ಬಂದಿದೆ. ಜಖಂಗೊಂಡವರಲ್ಲಿ ಇಬ್ಬರು ಸ್ತ್ರೀಯರು.

ಆಸ್ತಿ ಸ್ವಾಧೀನತೆಯ ಕಲಹವದು. ಅರಸಕುಡುಂಬನ್ ಎಂಬವರು ೨೫ ಸಾವಿರ ರೂಪಾಯಿಗಳಿಗೆ ಡಿಕ್ರಿ ಪಡೆದು ಸಂಬಂಧಪಟ್ಟ ಆಸ್ತಿಯನ್ನು ಸ್ವಾಧೀನಪಡಿಸಿಕೊಳ್ಳಲು ಕೋತವಾಡಿ ಗ್ರಾಮಕ್ಕೆ ಹೋದಾಗ, ಅಲ್ಲಿಯ ಪಟೇಲರೂ ಮಿರಾಸದಾರರೂ ಆದ ಅಹತೇಶ್ವರ್ ಗೌಂಡನ್ ಎಂಬವರು,—ಆ ಆಸ್ತಿಯ ಮೇಲೆ ತಾನು ಸಾಲ ಕೊಟ್ಟಿರುವ ಕಾರಣ ಆಸ್ತಿಯನ್ನು ವಶಪಡಿಸಿಕೊಳ್ಳಲಾಗದೆಂದು ಹೇಳುತ್ತಾ ಆಕ್ಷೇಪಣೆಗೆಯರಾಡಿದರು. ಸುಮಾರು ೩೦೦ ಗ್ರಾಮನಿವಾಸಿಗಳು, ಆಸ್ತಿ ಸ್ವಾಧೀನತೆಯಾಗದಂತೆ ತಡೆಯಲು ಕಲ್ಲು, ದೊಣ್ಣೆಗಳನ್ನು ಹಿಡಿದು ನಿಂತಿದ್ದರು. ಗಲಭೆಯಾಗಬಹುದೆಂದೂಹಿಸಿ ಕುಡುಂಬನ್‌ರವರು 'ಪೋಲೀಸ್' ಸಹಾಯವನ್ನು ಪಡೆದೇ ಹೋಗಿದ್ದರು. ನೆರೆದವರು ಪೋಲೀಸರ ಮೇಲೆ ಕಲ್ಲು ಬಿಸುಡಿದರಂತೆ, ಪೋಲೀಸರು, ಅವರಿಗೆ ಚದರುವಂತೆ ಹೇಳಿದರು. ಅವರು ಅಲುಗಾಡದಿರಲು, ಗೋಳಿಬಾರು ಮಾಡಲಾಯಿತು. ಫಲವಾಗಿ, ಪಟೇಲರ ಸಹಿತ ಐದು ಮರಣಗಳು! ಐವರಿಗೆ ಜಖಂ!

ಗಲಭೆಯ ವಾರ್ತೆ ಕೇಳಿ ಕೊಯಮುತ್ತೂರಿನಿಂದ ೨೫ ಮಂದಿ ರಿಸರ್ವ್ ಪೋಲೀಸರನ್ನು ಹೆಚ್ಚಿಗೆ ಕಳುಹಿಸಲಾಯಿತು. ಆದರೆ, ಅಲ್ಲಿ ಪರಮಶಾಂತಿ ನೆಲೆಸಿತ್ತು!

ಗಲಭೆಯ ಸ್ಥಳದಲ್ಲಿ ಕಲ್ಲಿನ ರಾಶಿಯಿದೆಯಂತೆ, ಕೆಲವು ಈಟಿಗಳೂ ಕಾಣಸಿಕ್ಕಿವೆಯಂತೆ.

ಆರು ನಿಮಿಷಗಳಲ್ಲಿ ಆರು ಸಿಂಹಗಳು!

ಟ್ರಾನ್ಸ್‌ವಾಲಿನ ಡೈರೆಕ್ಟರ್ ಎಕ್ಸೊ ಎಂಬಾತನು, ತಾನು ಆರೇ ನಿಮಿಷಗಳಲ್ಲಿ ೬ ಸಿಂಹಗಳನ್ನು ಗುಂಡಿಟ್ಟು ಕೊಂದಿರುವೆನಾಗಿ ಹೇಳುತ್ತಾನೆ. ಪ್ರಪಂಚದ ಶಿಕಾರಿಗಳ ಚರಿತ್ರದಲ್ಲಿ ಇದು ದಾಖಲೆಯೆನ್ನಬಹುದು.

'ಮರಣಕಿರಣದ ಯಂತ್ರ'.

ಸಂಯುಕ್ತ ಅಮೇರಿಕದ ಕ್ಲೀವ್‌ಲೇಂಡಿನ ಡಾಕ್ಟರ್ ಅಂಟೋನಿಯೋ ಲೊಂಗೇರಿಯಾ ಎಂಬವರು, 'ಮರಣಕಿರಣದ ಯಂತ್ರ'ವೆಂಬೊಂದು ಭಯಂಕರ ಯಂತ್ರವನ್ನು ಸಿದ್ಧಗೊಳಿಸಿರುವರು. ಇದರ ಕಿರಣಗಳನ್ನು ಮನುಷ್ಯನ ಮೇಲೆ ಬೀಳುವಂತೆ ಮಾಡಿದರೆ, ನೆತ್ತರೆಲ್ಲ ಕೆಲವೇ ನಿಮಿಷಗಳಲ್ಲಿ ನೀರಾಗಿ ಮನುಷ್ಯನು ಸಾಯುವನು. ಇಂತಹ ಯಂತ್ರವನ್ನು ಎಲ್ಲಿಯೂ ಬಹಿರಂಗವಾಗಿ ಪ್ರದರ್ಶಿಸಬಾರದೆಂದು ಸರಕಾರದವರು ಕಟ್ಟಾಜ್ಞೆ ಮಾಡಿರುವರು.

ಹಿಂದೂದೇಶವು ಆರೋಗ್ಯಸ್ಥಿತಿಯಲ್ಲಿದೆ.

ವಿಮಾನದಲ್ಲಿ ಇಂಗ್ಲಾಂಡಿನಿಂದ ಇಂಡಿಯಕ್ಕೆ ಹೊರಡಬೇಕಾದರೆ ಲೋರ್ಡ್ ವಿಲ್ಲಿಂಗ್ಡನ್ನರು ವಾರ್ತಾದಾಯಕನೊಡನೆ—"ಇಂಡಿಯಕ್ಕೆ ಮರಳಿ ಹೋಗಲು ನನಗೆ ಆನಂದವಾಗುತ್ತದೆ. ಇಂಡಿಯವೀಗ ಆರೋಗ್ಯಸ್ಥಿತಿಯಲ್ಲಿದೆ!" ಎಂದರು.

ಬರುವ ರಾಷ್ಟ್ರಸಭಾಧಿವೇಶನದ ಸ್ಥಳದ ವಿವರ.

ಬೊಂಬಾಯಿಯಲ್ಲಿ ಇದೇ ಅಕ್ಟೋಬರ ತಿಂಗಳಲ್ಲಿ ಜರಗುವುದೆಂದು ಗೊತ್ತಾದ ರಾಷ್ಟ್ರ ಸಭಾಧಿವೇಶನಕ್ಕೆ, ರಿಕ್ಲಮೇಶನ್ ಪ್ರದೇಶದಲ್ಲಿ ಸ್ಥಳ ಕೊಡಲಾಗುವುದಿಲ್ಲವಾಗಿ ಸರಕಾರವು ತಿಳಿಸಿದೆ. ಈ ಬಗ್ಗೆ ಕೊಂಗ್ರೆಸ್ ಸ್ವಾಗತ ಸಮಿತಿಯ ಕಾರ್ಯಕಾರೀ ಮಂಡಳಿಯ ಸಭೆ ಕೂಡಿ, ವೊರ್ಲಿ ಸಮುದ್ರತೀರದ ಪ್ರದೇಶದಲ್ಲಿ ಸಭೆ ಕೂಡಿಸುವುದೆಂದು ಗೊತ್ತಾಗಿದೆ. ಈ ಬಗ್ಗೆ ಸನ್ನಾಹಗಳು ನಡೆಯುತ್ತಿವೆ.

ಕೊಂಗ್ರೆಸ್ ಸ್ವಯಂಸೇವಕರಿಗೆ ಉಳಕೊಳ್ಳಲು ವಾರ್ಲಿಯಾಲ್‌ಗಳನ್ನುಪಯೋಗಿಸಲಾಗುವುದು. (ಶಾಸನಭಂಗ ಚಳವಳಿದ ಕಾಲದಲ್ಲಿ, ಕೊಂಗ್ರೆಸ್ ಸ್ವಯಂಸೇವಕರನ್ನು ಇಲ್ಲಿ ಬಂಧಿಸಲಾಗಿತ್ತು.)

ಲೇಬಂಗದ ಅನಾಚಾರದ ಮೊಕದ್ದಮೆ.

ಲೇಬಂಗ (ಡಾರ್ಜಿಲಿಂಗ)ದಲ್ಲಿ, ಬಂಗಾಳ ಗವರ್ನರರ ಮೇಲಾದ ಅನಾಚಾರದ ಮೊಕದ್ದಮೆಯ ವಿಚಾರಣೆಗಾಗಿ ಪ್ರತ್ಯೇಕವಾದ ನ್ಯಾಯಾಧೀಶ ಮಂಡಲವೊಂದು ರಚಿಸಲ್ಪಟ್ಟಿದೆ. ಏಳು ಮಂದಿ ಬಂಗಾಳಿಗಳು ಅಪಾದಿತರು, ಇವರಲ್ಲಿ ಒಬ್ಬಳು ಬಾಲಿಕೆ. "ಅಪಾದಿತರು ಶ್ರೀಸಂಘವೆಂಬ ಸಂಘದ ಸದಸ್ಯರು. ಸ್ವಾತಂತ್ರ್ಯ ಸಾಧನೆಯ ಉದ್ದೇಶದಿಂದ, ಸರಕಾರದ ಮೇಲಧಿಕಾರಿಗಳ ಕೊಲೆಮಾಡಿ ಸರಕಾರಕ್ಕೆ ಭೀತಿಹುಟ್ಟಿಸಬೇಕೆಂದು ಇವರ ಯತ್ನಗಳು. ಅಪಾದಿತರೆಲ್ಲ ಡಾಕ್ಕಾ ಜಿಲ್ಲೆಯವರು. ಗವರ್ನರರ ಕೊಲೆ ಮಾಡಬೇಕೆಂದು ಢಕ್ಕಾದಲ್ಲಿ ನಿಶ್ಚೈಸಿದರು. ಡಾರ್ಜಿಲಿಂಗದಲ್ಲಿ, ಗವರ್ನರರ ಬಹುಮಾನದ ಕುದುರೆ ಓಟದ ದಿನವೇ ಈ ಕೃತ್ಯವನ್ನು ನಡೆಸಬಹುದಾಗಿ ನಿರ್ಧರಿಸಿದರು" ಎಂದು ಸ್ಪೆಶಲ್ ಪಬ್ಲಿಕ್ ಪ್ರೊಸೆಕ್ಯೂಟರು ನ್ಯಾಯಾಧೀಶರ ಮುಂದೆ ನಿವೇದಿಸಿದರು. ಮೊಕದ್ದಮೆ ನಡೆಯುತ್ತಾ ಇದೆ.

ಹೆಂಡತಿಯನ್ನು ನೊಗಕ್ಕೆ ಕಟ್ಟಿದ ಪರಾಕ್ರಮಿ.

ದಿಲಾರಿನ ಆಕೆಪಟ್ ಎಂಬ ಗ್ರಾಮದ ಒಬ್ಬ ರೈತನು. ದೌಲತನೆಂದು ಆತನ ಹೆಸರು; ಪುಂಡಲೀಕನೆಂದು ಆತನ ತಂದೆಯ ಹೆಸರು. ದೌಲತನಿಗೆ ತನ್ನ ಹೆಂಡತಿ ಕಲಾವತಿಯನ್ನು ಕಂಡರಾಗದು. ಪುಂಡಲೀಕನಿಗೂ ಹಾಗೆಯೇ. ಒಂದುದಿನ ಜಗಳವೇಳಲು, ದೌಲತನೂ ಪುಂಡಲೀಕನೂ ಕೂಡಿ, ನೊಗಕ್ಕೆ ಆಕೆಯನ್ನು ಕೋಣದೊಂದಿಗೆ ಕಟ್ಟಿ, ಊರಿನಲ್ಲಿ ಮೆರೆಯಾಡಿಸಿದರಂತೆ. ಇವರ ಮೇಲೆ ಮೊಕದ್ದಮೆ ನಡೆದು, ೪ ತಿಂಗಳಂತೆ ಕಠಿಣ ಸಜೆ ವಿಧಿಸಲಾಗಿದೆ.

ಹೊಸ ಗೃಹಮಂತ್ರಿಗಳು.

ಮದರಾಸು ಸರಕಾರದ ಹೊಸ ಗೃಹಮಂತ್ರಿಗಳಾಗಿ ನೇಮಕ ಹೊಂದಿದ ರಾವ್‌ಬಹದೂರ್ ಎ. ಟಿ. ಪನ್ನೀರ್ಸೆಲ್ವಮರು ಚಾರ್ಜು ವಹಿಸಿಕೊಂಡಿರುವರು.

ಲಂಕಾಶಯರಿನ ಭಾಗ್ಯ!

ಗ್ರೀಸ್ ದೇಶದಿಂದ ಲಂಕಾಶಯರಿನ ಅರಿವೆ ವ್ಯಾಪಾರಿಗಳಿಗೆ, ಅರ್ಧ ಲಕ್ಷ ಪವನು ಬೆಲೆಯ ಹದಿನೇಳು ಲಕ್ಷ ಗಜ ಅರಿವೆಗೆ ಬೇಡಿಕೆ ಬಂದಿದೆ. ಜಪಾನಿನವರ ತೀವ್ರ ಸ್ಪರ್ಧೆಯ ಈ ಕಾಲದಲ್ಲಿ ಈ 'ಆರ್ಡರ' ಬಂದುದನ್ನು ಕಂಡು, ಲಂಕಾಶಯರಿನವರಿಗೆ ಆಶ್ಚರ್ಯ; ಅಂತೇ ಆನಂದವೂ ಇಲ್ಲದಿಲ್ಲ.

ಹೆಡ್ ಮಾಸ್ತರರ ಮೇಲೆ ವಿದ್ಯಾರ್ಥಿಗಳ ದಾವೆ.

ರೇಪಳ್ಳಿಯ ಬೋರ್ಡ್ ಹೈಸ್ಕೂಲಿನ ಕೆಲವು ವಿದ್ಯಾರ್ಥಿಗಳು ತಮ್ಮ ಹೆಡ್‌ಮಾಸ್ತರರ ಮೇಲೊಂದು ದಾವೆ ತಂದಿರುವರು. ಈ ವಿದ್ಯಾರ್ಥಿಗಳು ಕೆಳಗಿನ ತರಗತಿಗೇ ಪುನಃ ಮರಳಿಹೋಗುವಂತೆ ಈ ಹೆಡ್‌ಮಾಸ್ತರರು ಆಜ್ಞಾಪಿಸಿದರಂತೆ. ಈ ಹೆಡ್‌ಮಾಸ್ತರರು ಹೊಸಬರು, ಆ ವಿದ್ಯಾರ್ಥಿಗಳನ್ನು ಮೇಲಿನ ತರಗತಿಗೆ ಕಳುಹಿದವರು ಮತ್ತೊಬ್ಬರು.

ಹಿಟ್ಲರರ ಚುನಾವಣೆ.

ಮೂವತ್ತೆಂಟು ಮಿಲ್ಲಿಯ ಮತಗಳನ್ನು ಪಡೆದು ಹಿಟ್ಲರರು ಜರ್ಮನಿಯ ಪ್ರಜೆಗಳ ಸರ್ವತಂತ್ರ ಸ್ವತಂತ್ರ ಮುಖಂಡರೆನಿಸಿರುವರು.

ಚುನಾವಣೆಗಳು ಬೇರೆ ವಾದ್ಯದಿಂದ ಶಸ್ತ್ರಗಳಲ್ಲೆಲ್ಲ ಡಂಗುರ ಹೊಯ್ಯುತ್ತ "ಹಿಟ್ಲರರನ್ನು ಚುನಾಯಿಸಿರಿ!" ಎಂದು, ಸ್ವಸ್ತಿಕಾ ಚಿಹ್ನವಿರುವ ಬಾವುಟಗಳನ್ನು ಬೀಸುತ್ತ ಉದ್ಘೋಷಿಸುತ್ತಿದ್ದರು. ಮತಗಳ ವಿವರ ಹೀಗಿದೆ:—

ಜುಮ್ಲಾ ಮತಗಳು—	೪೫,೫೫೨,೦೫೯.
ಮತಕೊಟ್ಟವರು—	೪೩,೫೨೯,೭೧೦.
ಅನುಕೂಲ ಮತಗಳು—	೩೮,೩೯೪,೮೪೮.
ಪ್ರತಿಕೂಲ ,, —	೪,೩೦೦,೩೭೦.
ತಟಸ್ಥ —	೮೭೨,೨೯೬.

ನೀಕಡಾ ೮೯.೯ರಷ್ಟು ಮತಗಳು ಹಿಟ್ಲರರಿಗೆ ಅನುಕೂಲವಾಗಿವೆಯೆಂದಾಯಿತು.

ಒಂದು ಹೊಸ ಚಹಾ ಕಾರ್ಖಾನೆ.

ದಕ್ಷಿಣ ಕನ್ನಡ ಜಿಲ್ಲೆಯವರಾದ ದಿವಾನ್ ಬಹದ್ದೂರ್ ಎಸ್. ಎಲ್. ಮತಾಯಸ್, ಕೆ. ಎಸ್. ಐ. ಇವರ ಹೊಸ ಚಹಾ ಕಾರ್ಖಾನೆಯೊಂದನ್ನು ಮೈಸೂರಿನ ಕೆಳಗೂರು ಚಹಾ ತೋಟದಲ್ಲಿ ತೆರೆವ ಸಮಾರಂಭವು ಇದೇ ತಾ. ೧೮ರಲ್ಲಿ ವಿಜೃಂಭಣೆಯಿಂದ ನಡೆಯಿತು. ಚಹಾ ತಯಾರಿಯ ಕೆಲಸವು ಈಗಾಗಲೇ ಆರಂಭಿಸಿದ್ದು, ಇಲ್ಲಿ ಉತ್ಪತ್ತಿಯಾಗುವ ಚಹಾವು ಮೈಸೂರು-ಮೈನಾಡುಗಳಲ್ಲಿ ಬೆಳೆವ ಚಹಾಗಳಲ್ಲಿ ದೊರೆವುದಕ್ಕಿಂತ ಉತ್ತಮವಾಗಿದೆಯೆಂದು ಕಂಡುಬಂದಿದೆ.

ದಿವಾನ್ ಬಹದ್ದೂರರು ಕಾಫಿ ತೋಟಗಳ ಮಾಲೀಕರಾಗಿ ಕಳೆದ ೪೩ ವರ್ಷಗಳಿಂದ ಅನುಭವಸ್ಥರಾದವರು. ಸರಕಾರವು ಇವರಿಗೆ ಉದಾರವಾದ ಶರ್ತಗಳ ೪೦೩—೫ ಎಕ್ರೆಗಳಷ್ಟು ಸ್ಥಳವನ್ನು ಕೊಡಿಸಿದೆಯೆಂದು ತಿಳಿದುಬರುತ್ತದೆ. ಹಿಂದೀ ಚಹಾತೋಟಗಾರರಲ್ಲೊಬ್ಬರಾಗಿ ಇವರು ಗಣನೀಯರಾಗಿ, ಅಭಿವೃದ್ಧಿ ಹೊಂದಬರುವಂತೆ ಹಾರೈಸಲಾಗಿದೆ.

ಮೆಟ್ಟೂರಿನ ಅಣೆಕಟ್ಟು.

ಮೆಟ್ಟೂರಿನ ಅಣೆಕಟ್ಟನ್ನು ತೆರೆವ ಸಮಾರಂಭವು, ನಮ್ಮ ಗವರ್ನರರಾದ ಸರ್ ಜೋರ್ಜ್ ಸ್ಟೇನ್ಲಿಯವರಿಂದ ಇದೇ ಕಳೆದ ತಾ. ೨೧ರಲ್ಲಿ ಜರಗಿತು. ಈ ಅಣೆಕಟ್ಟು ಪ್ರಪಂಚದ ಅಣೆಕಟ್ಟುಗಳಲ್ಲಿ ಅತಿ ದೊಡ್ಡದೆನಿಸಿದೆ.

ಇದು ೧೩ ಲಕ್ಷ ಎಕ್ರೆ ಸ್ಥಳಗಳಷ್ಟು ಜಮೀನಿಗೆ ಸಾಗುವಳಿಗೆ ನೀರನ್ನು ಪೂರೈಸುವುದು. ೬೦ ಚದರಮೈಲುಗಳಷ್ಟು ವಿಸ್ತೀರ್ಣದ ಸರೋವರವು ೯೩,೫೦೦ ಮಿಲ್ಲಿಯ ಕ್ಯೂಬಿಕ್ ಫೀಟುಗಳಷ್ಟು ನೀರಿನ ಸಂಗ್ರಹವನ್ನಿಟ್ಟುಕೊಳ್ಳಬಲ್ಲುದು. ಅಣೆಕಟ್ಟಿಗೆ ವೆಚ್ಚವಾದ ಹಣ ೬೧೮ ಲಕ್ಷ ರೂಪಾಯಿ. ೫೦೩,೦೦೦ ಟನ್ ಸಿಮೆಂಟು ಉಪಯೋಗಿಸಲ್ಪಟ್ಟಿದೆ. ಅಣೆಕಟ್ಟಿನ ಉದ್ದ ೫೩೦೦ ಫೀಟು; ಎತ್ತರ ೨೧೪ ಫೀಟು.

ಸಂಕ್ಷೇಪ ವಾರ್ತೆ.

ಕೊಯಮುತ್ತೂರು ಜೈಲಿನಲ್ಲಿ ರಮಾನಂದ ಚೌಧುರಿ ಎಂಬ ಮಾದಗಾಳ್ ಒಳಸಂಚಿನ ಮೊಕದ್ದಮೆಯ ಕೈದಿಯೊಬ್ಬನು ಉಪವಾಸ ಹಿಡಿದು ೫೦ ದಿನಗಳು ದಾಟಿದುವು. ಉಪವಾಸವನ್ನು ಬಿಟ್ಟುಬಿಡಬೇಕೆಂದು ಗಾಂಧೀಜಿಯವರು ತಂತಿಬಿಟ್ಟಿದ್ದಾರೆ.

ವೈಸರಾಯರಾದ ವಿಲ್ಲಿಂಗ್ಡನ್ ಪ್ರಭುಗಳು ಬರುವ ದಶಂಬರ ತಿಂಗಳಲ್ಲಿ ಕಲ್ಕತ್ತೆಗೆ ಸಂಚಾರ ಹೊರಡುವರು.

ಕೈಮಗ್ಗದ ಕೈಗಾರಿಕೆಯ ಸ್ಥಿತಿಗತಿಗಳನ್ನು ವಿಮರ್ಶಿಸಿ ಅದರ ಸುಧಾರಣೆಗೆ ಯಾವ ಯೋಜನೆಯನ್ನು ಕೈಕೊಳ್ಳಬಹುದೆಂಬ ಬಗೆಗೆ ವರದಿಯೊಪ್ಪಿಸಬೇಕಾಗಿ ಗ್ವಾಲಿಯರ್ ಸಂಸ್ಥಾನಾಧೀಶರು ಒಂದು ಸಮಿತಿಯನ್ನು ನೇಮಿಸಿರುವರು.

ತ್ರಿವೇಂದ್ರಮಿನ ಆಸ್ಪತ್ರೆಯಲ್ಲೊರ್ವ ಹೆಂಗುಸು, ೬ ಗಂಟೆಯ ಅವಧಿಯೊಳಗೆ ನಾಲ್ಕು ಹೆಣ್ಣು ಶಿಶುಗಳನ್ನು ಹೆತ್ತಿರುವಳು. ಶಿಶುಗಳೆಲ್ಲ ಆರೋಗ್ಯವಾಗಿವೆ.

ಅಹಮ್ಮದಾಬಾದಿನ ಬಳಿ ಸಬರಮತಿ ನದಿಯು ಉಕ್ಕಿ ಹರಿದು, ಇಬ್ಬರು ಹತರಾದರು. ಜಾನುವಾರುಗಳೂ ಪ್ರವಾಹದಲ್ಲಿ ಸೆಳೆತಕ್ಕೆ ಸಿಕ್ಕಿಹೋಗಿವೆ.

ಏಳು ಮಂದಿ ಡಕಾಯಿತರು ಬರೋಡಾ ಸಂಸ್ಥಾನದೊಳಗಿನ ದೇವಗಾಂವ ಎಂಬಲ್ಲಿಯ ಸಬ್ ಜೈಲಿನ ಮೇಲೆ ದಾಳಿಯಿಟ್ಟು, ಸಶಸ್ತ್ರ ಪೋಲೀಸರು ಇರಿಸಿದ್ದ ಬಂದೂಕುಗಳನ್ನೂ ತೋಟೆಗಳನ್ನೂ ಹಿಡಕೊಂಡು ಪರಾರಿ!

ಚಿತ್ರಗಾಂಗಿನಲ್ಲಿ ಬೆಂಕಿಯೆದ್ದು ಹಲವು ಅಂಗಡಿಗಳು ಸುಟ್ಟು ಹೋದುವು.

ಗಾಂಧೀಜಿಯವರ ಆರೋಗ್ಯ ವೃದ್ಧಿಯಾಗುತ್ತಾ ಇದೆ. ಹಾಲು ಮತ್ತು ಹಣ್ಣುಹಂಪಲುಗಳನ್ನು ಸ್ವೀಕರಿಸುತ್ತಿರುವರು.

ಕೆಲಸವನ್ನು ಹೆಚ್ಚಿಸಬೇಕೆಂಬ ಕಾರಣದಿಂದ, ಸಂಯುಕ್ತ ಅಮೇರಿಕದ ನೇಯ್ಗೆ ಕೆಲಸಗಾರರು ಬಗ್ಗೆಯಾಗಿ ಒಂದು ಮಹಾ ಮುಷ್ಕರವನ್ನು ನಡೆಸುವ ಯತ್ನದಲ್ಲಿರುವರು.

ಮಂಗಳೂರು.

ಇದೇ ಕಳೆದ ತಾ. ೧೪ನೇ ಶನಿವಾರ ಸ್ಥಳೀಕ ಉಪಾಧ್ಯಾಯ ಉಪಾಧ್ಯಾಯಿನೀಯರ ಸಂಘದ ಮಾಸಿಕ ಸಭೆಯು ಕಾರ್ ಸ್ಟ್ರೀಟ್ ಗರ್ಲ್ಸ್ ಸ್ಕೂಲಿನಲ್ಲಿ ಜರಗಿತು. ಶ್ರೀಮತಿ ಶಾಂಭವೀ ಪೂಂಜ, ರಾಗಳಾದ ಮಾಧವ ರಾವ್, ಕೃಷ್ಣನ್, ರಾಘವೇಂದ್ರ ಪೈ, ಡಾಕ್ಟರ್ ಮಲ್ಯರೇ ಮೊದಲಾದ ಕೌನ್ಸಿಲರರೂ ಬಂದಿದ್ದರು. ಕಾರ್ಯದರ್ಶಿಗಳ ಸೂಚನೆಯಂತೆ ಚೆಯರ್‌ಮೆನ್ ಡಾ| ವಿಟ್ಠಲ ಶೆಟ್ಟರು ಅಧ್ಯಕ್ಷಸ್ಥಾನವನ್ನಲಂಕರಿಸಿದರು. ಪ್ರಾರ್ಥನಾನಂತರ ಶ್ರೀ ಪುರೋಹಿತ್ತಾಯರಿಂದ ರಚಿತವಾದ ಚುನಾವಣೆ ಎಂಬ ಪ್ರಹಸನ ಮತ್ತು ಗಾನ ನರ್ತನಗಳಿಂದ ಶಾಲಾ ಬಾಲಿಕೆಯರು ಸಭಿಕರನ್ನು ಆನಂದಗೊಳಿಸಿದರು. ಉಪಹಾರಾನಂತರ ಪುನಃ ಸಭಾರಂಭವಾಗಿ, ಸಂಘದ ಬೋಲ್ಡಿಯ ಬಗ್ಗೆ ನಿರ್ಧಾರಗಳಾದುವು. ಆ ಮೇಲೆ ಈ ಸಮಾರಂಭವನ್ನು ಯಶಸ್ವಿಯಾಗಿ ಜರಗಿಸುವುದಕ್ಕೆ ಶಾಲಾ ಬಾಲಕಿಯರು ಹಾಗೂ ಉಪಾಧ್ಯಾಯಿನಿಯರು ವಹಿಸಿದ ಪರಿಶ್ರಮವನ್ನು ಶ್ಲಾಘಿಸಿ ಅನೇಕ ಹಿತಸೂಚನೆಗಳನ್ನಿತ್ತು ಸಭಾಧ್ಯಕ್ಷರು ಸೊಗಸಾಗಿ ಭಾಷಣವಿತ್ತರು. ಕೊನೆಗೆ ಹೆಡ್ ಮಿಸ್ಟ್ರೆಸ್ ಶ್ರೀಮತಿ ಕಾವೇರಿಬಾಯಿಯವರೂ, ಸಂಘದ ಕಾರ್ಯದರ್ಶಿ ರಾ| ವೆಂಕಟ್ರಾಯರೂ ಸಭಾಧ್ಯಕ್ಷರಿಗೂ, ಸಭಿಕರಿಗೂ, ಪ್ರಹಸನವನ್ನು ಬರೆದುಕೊಟ್ಟ ಶ್ರೀ ಪುರೋಹಿತ್ತಾಯರಿಗೂ ಕೃತಜ್ಞತೆಯನ್ನರ್ಪಿಸಿದ ಬಳಿಕ ವಿಸರ್ಜನೆಯಾಯಿತು.

ಬ್ರಹ್ಮ ಶ್ರೀ ನಾರಾಯಣ ಗುರುಸ್ವಾಮಿಗಳವರ ಜನ್ಮದಿನಾಚರಣೆಯ ಸಂಬಂಧವಾದ ಮೆರವಣಿಗೆಯು ತಾ. ೨೮-೮-೩೭ನೇ ಶನಿವಾರ ಸಂಜೆ ೬ ಘಂಟೆಗೆ ಸಾಹುಕಾರ ಎಚ್. ಕೊರಗಪ್ಪನವರ ಹೊಸ್ಮನೆಯ ಮನೆಯಿಂದ ಹೊರಟು ಶ್ರೀ ಗೋಕರ್ಣನಾಥ ಕ್ಷೇತ್ರಕ್ಕೆ ತಲಪಲಿರುವುದೆಂದೂ ಭಕ್ತವೃಂದವು ಸಹಕರಿಸಬೇಕಾಗಿಯೂ ದೇವಸ್ಥಾನದ ಆಡಳಿತಗಾರರು ತಿಳಿಸುತ್ತಾರೆ.

ಇದೇ ತಾ. ೧೯ನೇ ಆದಿತ್ಯವಾರ ಶ್ರೀ ಶಿವಭಕ್ತಿಯೋಗ ಸಂಘದಲ್ಲಿ ಶ್ರೀ ಬಿ. ಅಚ್ಯುತ ಬಾಳಿಗರು ಭಕ್ತಿ-ಪ್ರೇಮಗಳ ಕುರಿತಾಗಿ ಹೃದಯಂಗಮವಾಗಿ ಭಾಷಣವಿತ್ತರು.

ರಥಬೀದಿಯ ಕಂಬ್ವಾಂಡ್ ಬುಕ್ಕಿಂಗ್ ಏಜನ್ಸಿಯ ಮಾಳಿಗೆಯ ಮೇಲೆ ಕೆಲವು ವರ್ಷಗಳಿಂದಿದ್ದ ಡಾ| ಕೆ. ಎಂ. ಶೆಣೈಯವರ ಡಿಸ್ಪೆನ್ಸರಿಯನ್ನು ಸ್ಥಳಾಭಾವದ ದೆಸೆಯಿಂದಾಗಿ ಇದೇ ತಾ. ೨೦ರಿಂದ ಮಹಾಮಾಯಿ ದೇವಸ್ಥಾನದ ಬಳಿ ದೊಡ್ಡ ಕಟ್ಟಡಕ್ಕೆ ಒಯ್ದಿರುವರು.

ರಥಬೀದಿಯಲ್ಲಿರುವ ಕಂಬ್ವಾಂಡ್ ಬುಕ್ಕಿಂಗ್ ಏಜನ್ಸಿಯ ಆಫೀಸು, ಅದೇ ಆಫೀಸು ಕಟ್ಟಡದ ಮಾಳಿಗೆಗೆ ಒಯ್ಯಲಾಗಿದೆ.

ಶ್ರೀ ಕೃಷ್ಣ ಸಿನೆಮಾದಲ್ಲಿ ನಾಳೆಯಿಂದ ಮೆಟ್ರೋ ಗೋಲ್ಡ್‌ವಿನ್ ಮೇಯರ್ಸ್ ಕಂಪೆನಿಯವರ "ಎರ್ಥ್ ಯು ಡಿಸ್ಕೋರ್ ಮಿ" ಎಂಬ ಚಿತ್ರವನ್ನು ಪ್ರದರ್ಶಿಸಲಾಗುವುದು. ಪ್ರಪಂಚ ವಿಖ್ಯಾತೆಯಾದ ಗ್ರೆಟಾ ಗಾರ್ಬೊ ಇದರಲ್ಲಿ ಮುಖ್ಯ ಪಾತ್ರ ವಹಿಸಿರುವಳು. ಇದಾದ ಬಳಿಕ ಶ್ಯಾಮ ಸಿನೆಟೋನಿನವರ "ಪಾರ್ಥ ಕುಮಾರ್" ಚಿತ್ರ ಪ್ರದರ್ಶಿಸಲಾಗುವುದು.

ರಾವ್ ಬಹದೂರ್ ಎಸ್. ಎನ್. ಸುವರ್ಣ, ವಕೀಲ, ಇವರ ಸಹೋದರಿ ಶ್ರೀಮತಿ ಶಾರದಾ ಸುವರ್ಣ, ಬಿ.ಎ. ಇವರು ಬರುವ ಮುನಿಸಿಪಲ್ ಚುನಾವಣೆಯಲ್ಲಿ, ಸ್ತ್ರೀಯರ ರಿಸರ್ವ್ ಸೀಟಿಗೆ XIII ಮಾರ್ಕೆಟು ವಾರ್ಡಿನಿಂದ ಉಮೇದ್ವಾರರೆಂದು ತಿಳಿದುಬರುತ್ತದೆ.

ಎಸೆಂಬ್ಲಿ ಚುನಾವಣೆಗೆ ಕೊಂಗ್ರೆಸ್ ಪಾರ್ಲಿಮೆಂಟರಿ ಬೋರ್ಡಿನಿಂದ ನಮ್ಮ ಜಿಲ್ಲೆ, ಮಲಬಾರು ಮತ್ತು ನೀಲಗಿರಿಗಳ ಕೊನ್ಸ್‌ಟಿಟ್ಯೂಯನ್ಸಿಗಳ ಪರವಾಗಿ ಉಮೇದ್ವಾರರಾಗಿ ಆರಿಸಲ್ಪಟ್ಟ ಶ್ರೀ ಸಾಮುವೇಲ್ ಆರೂನರು ಕಳೆದ ಗುರುವಾರ ಬೆಳಿಗ್ಗೆ ಇಲ್ಲಿಗೆ ಚಿತ್ತೈಸಿ, ನಮ್ಮ ಕೊಂಗ್ರೆಸ್ ಕೆಲಸಗಾರರಿಂದ ಸ್ವಾಗತೀಕರಿಸಲ್ಪಟ್ಟರು. ನಾಯರ್‌ಕೆರೆ ಮೈದಾನಿನಲ್ಲಿ ಸಾರ್ವಜನಿಕ ಸಭೆ ಜರಗಿತು. ಶ್ರೀಯುತ ನಾರಾಯಣ ಕಿಲ್ಲೆರವರು ಕೊಂಗ್ರೆಸ್ಸಿನ ಕಾರ್ಯ ಕಲಾಪಗಳ ವಿಷಯವಾಗಿ ಸಂಕ್ಷೇಪವಾಗಿ ವಿಮರ್ಶಿಸಿ ವಿವರಿಸುತ್ತ ಇಂದಿನ ಧ್ಯೇಯ, ನಮ್ಮ ಸಹಕಾರ ಸಹಾನುಭೂತಿಗಳ ಆವಶ್ಯಕತೆಗಳ ಕುರಿತು ಭಾಷಣ ಮಾಡಿದರು. ದೇಶಭಕ್ತ ಕಾರ್ನಾಡು ಸದಾಶಿವರಾಯರು ಶ್ರೀ ಆರೂನ್ನರ ಪರಿಚಯವನ್ನು ಜನರಿಗೆ ಮಾಡಿಕೊಟ್ಟರು. ಶ್ರೀ ಆರೂನರು ಜನರು ಕೊಂಗ್ರೆಸ್ ಉಮೇದ್ವಾರರನ್ನೆ ಏಕೆ ಆರಿಸಬೇಕೆಂಬುದನ್ನು ನೆರೆದವರಿಗೆ ಮನವರಿಕೆಯಾಗುವಂತೆ ವಿವರಿಸಿದ ನಂತರ ಸಭಾಂತ್ಯವಾಯಿತು. ಶ್ರೀ ಆರೂನರು ಮರುದಿನ ಇಲ್ಲಿಂದ ಹೊರಟು ಹೋಗಿರುವರು.

ಬೆಂಗಳೂರಿನಲ್ಲಿ ನೆಲೆಸಿರುವ ಮಂಗಳೂರಿನ ಕೆಲ ಮಹನೀಯರು ಅಲ್ಲೊಂದು ತಮ್ಮ ಸಂಘವನ್ನು ಸ್ಥಾಪಿಸಿರುವರು. ಇದರ ಪ್ರಥಮ ವಾರ್ಷಿಕ ಸಭೆಯು ಕಳೆದ ವಾರ ಅಲ್ಲಿ ಜರಗಿತು. ರಾಜಮಂತ್ರಿ ಪ್ರವೀಣ ಟಿ. ಜೆ. ಡಿ'ಸೋಜರವರು ಸಭಾಧ್ಯಕ್ಷರಾಗಿದ್ದರು. ಸಭೆಯಲ್ಲಿ ಓದಿ ಹೇಳಲಾದ ವರದಿಯಿಂದ, ಸಂಘವು ತನ್ನ ಪ್ರಥಮ ವರ್ಷದಲ್ಲಿ ಗಣನೀಯವಾದ ಪ್ರಗತಿಯನ್ನು ಹೊಂದಿದೆ ಎಂದು ತಿಳಿದುಬರುತ್ತದೆ.

ಮಂಗಳೂರು ಮುನಿಸಿಪಾಲಿಟಿಯ ಮುಂದಿನ ಸಭೆಯು ಇದೇ ತಾ. ೩೭ರಲ್ಲಿ ಮುನಿಸಿಪಲ್ ಆಫೀಸಿನಲ್ಲಿ ಜರಗುವುದು.

ಶ್ರೀ ರಾಮೇಶ್ವರ ಕ್ಷೇತ್ರದಲ್ಲಿ ಶ್ರೀ ಕಾಶೀಮಠ ಸಂಸ್ಥಾನದ ಶ್ರೀ ಕೋದಂಡರಾಮ ದೇವಸ್ಥಾನದ ಮಠದ ಜೀರ್ಣೋದ್ಧಾರದ ಬಗ್ಗೆ ವಾಗ್ದಾನ ಮಾಡಿದವರ ಪಟ್ಟಿ.

1)	ಉಳ್ಳಾಲ ನಾರಾಯಣ ರಾಮಕೃಷ್ಣ ಮಲ್ಯ	ರೂ. 3005
2)	ಸಾಹುಕಾರ ಪಾಂಡುರಂಗ ಲಕ್ಷ್ಮಣ ಪೈ ಎಂಡ್ ಕಂಪೆನಿ	ರೂ. 555
3)	ಮೆಸರ್ಸ್ ಮಲ್ಯ ಬ್ರದರ್ಸ್	ರೂ. 505
4)	ಎಂ ವಿಟ್ಠಲಪ್ರಭು	ರೂ. 505
5)	ಕಸ್ತೂರಿ ಸುಬ್ರಾಯ ಪೈ ಮತ್ತು ಸುಜೀರ ರಾಮಚಂದ್ರ ನಾಯಕ್ ಮತ್ತು ಕಂಪೆನಿ	ರೂ. 1505
6)	ಮಿಜಾರ್ ಅಣ್ಣಪ್ಪ ಅನಂತ ಪೈ ಎಂಡ್ ಸನ್ಸ್ (ಪ್ರಥಮ ಕಂತಿನ ಬಾಬ್ತು)	ರೂ. 505
7)	ಅಮ್ಮೆಂಬಳ ಸುಬ್ರಹ್ಮಣ್ಯಾಚಾರ್ಯ	ರೂ. 205
8)	ಎಂ. ಪದ್ಮನಾಭ ರಘುನಾಥ ಪೈ ಮತ್ತು ಕಂಪೆನಿ	ರೂ. 305
9)	ಕುಡ್ವಿ ಗೋಪಾಲಕೃಷ್ಣ ಶೆಣೈ	ರೂ. 255
10)	ಬಸ್ತಿ ಬ್ರದರ್ಸ್	ರೂ. 251
11)	ಪಂಚಮಾಲ್ ನಾರಾಯಣ ಶೆಟ್ಟಿ	ರೂ. 255
12)	ಶೃಂಗೇರಿ ದಾಸಪ್ಪ	ರೂ. 255
13)	ಮರೋಳಿ ಕೊಗ್ಗ ಕಾಮತ್ ಎಂಡ್ ಸನ್	ರೂ. 251
14)	ಶಿವಗುರು ರಾಮಚಂದ್ರ ಕಾಮತ್ ಎಂಡ್ ಸನ್ಸ್	ರೂ. 125
15)	ಪಂಚಮಾಲ್ ರಮಾನಾಥ ರಾವ್	ರೂ. 205
16)	ಬಿ. ಆರ್. ಹರಿದಾಸ್ (ಪ್ರಥಮ ಕಂತು)	ರೂ. 101
	ಜುಮ್ಲಾ	ರೂ. 8888.

ಯಕ್ಷಗಾನ.

ಇದೇ ಕಳೆದ ತಾ. ೨೧ನೆಯ ದಿವಸ ರಾತ್ರಿ ಶ್ರೀಮದ್ಭುವನೇಶ್ವರಿಯರು ಮಠದಲ್ಲಿ ಯಕ್ಷಗಾನ ಸಮಾರಂಭವೊಂದು ಅತಿ ವಿಜೃಂಭಣೆಯಿಂದ ನೆರವೇರಿತು. ಪ್ರಸಂಗ "ಕರ್ಣ ಪರ್ವ." ಭಾಗವತರು ಶ್ರೀ ಪುತ್ತಿಗೆ ರಾಮಕೃಷ್ಣ ಜೋಯಿಸರು, ಮೃದಂಗವಾದಕರು ರಾ| ಪರ್ಕಳ ಈಶ್ವರಪ್ಪಯ್ಯನವರು. ಎಡ್ವೊಕೇಟ್ ಕೆ. ಬಾಲಕೃಷ್ಣ ರಾಯರು ಕರ್ಣ, ರಾ| ಮದಣ ಬಂಟರು ಕೌರವ, ಶ್ರೀಗಳಾದ ಕೀರಿಕ್ಕಾಡು ಶಾಲಾ ಮಾಸ್ಟರ್ ವಿಷ್ಣು ಹೊಳ್ಳರು ಶಲ್ಯ, ಕಂಡೆತ್ತೋಡಿ ನಾರಾಯಣ ಕೇಕುಣ್ಣಾಯರು ಅರ್ಜುನ, ಪುಂಡೂರು ಗೋಪಾಲಕೃಷ್ಣ ಪುಣಿಂಚತ್ತಾಯರು ಶ್ರೀ ಕೃಷ್ಣ, ಮೊದಲಾದ ಮಹನೀಯರು ಪಾತ್ರಗಳನ್ನು ವಹಿಸಿಕೊಂಡು ಸಭಿಕರಂಜನೆಯಾಗುವಂತೆ ರಸಭರಿತವಾಗಿಯೂ, ಧರ್ಮಾರ್ಥಯುಕ್ತವಾಗಿಯೂ, ಅರ್ಥ ಮಾತನಾಡಿ ಸಭಿಕರ ಪ್ರೇಮಕ್ಕೆ ಪಾತ್ರರಾದರು. ಸಭಾಂತ್ಯದಲ್ಲಿ ಶ್ರೀಪಾದಂಗಳವರಿಂದ ಅನುಜ್ಞೆಯನ್ನು ಪಡೆದು ಎಡ್ವೊಕೇಟ್ ಕೆ. ಬಾಲಕೃಷ್ಣರಾಯರು ಚಿಕ್ಕ ಭಾಷಣವೊಂದನ್ನು ಮಾಡಿದರು. ಸಭಿಕರ ಪರವಾಗಿ ಶ್ರೀಪಾದಂಗಳವರಿಗೆ ಅಭಿವಂದನೆ, ಶ್ರೀಪಾದಂಗಳವರ ಪರವಾಗಿ ಸಭಿಕರಿಗೆ ಉಪಕಾರ ಸ್ಮರಣೆ, ಎಲ್ಲರ ಪರವಾಗಿ ಅಂದಿನ ಭಾಗವತರಲ್ಲಿದ್ದ ಉತ್ಕೃಷ್ಟ ಪೂರ್ವಾಚಾರ ರೀತ್ಯಾ ಯಕ್ಷಗಾನ, ಕಲಾನಿಪುಣತೆಯ ಶ್ಲಾಘನೆ, ಇದಾದ ಅನಂತರ ಈಗಿರುವ ರೀತಿಯಲ್ಲಿ ತೆಂಕಣ ಪ್ರತಿ 'ಕರ್ಣ ಪರ್ವ' ಪ್ರಸಂಗವು ಅಪಶಬ್ದಗಳಿಂದಲೂ ಅಯೋಗ್ಯ ವಿಷಯಗಳಿಂದಲೂ ತುಂಬಿರುವದರಿಂದ ಅದು ಮುದ್ರಣಕ್ಕೆ ಅರ್ಹತೆಯನ್ನು ಹೊಂದಿಲ್ಲವೆಂಬ ಅಭಿಪ್ರಾಯದ ಸೂಚನೆ — ಇವೇ ಆ ಚಿಕ್ಕ ಭಾಷಣದ ಸಾರಾಂಶ ವಿಷಯಗಳಾಗಿದ್ದವು.

ತಾಲೂಕುಗಳಿಂದ.

ಉಡುಪಿ — ಕಳೆದ ವಾರದಲ್ಲಿ ಇಲ್ಲಿಯ ಬೋರ್ಡ್ ಹ್ಯಾಸ್ಕೂಲಿನಲ್ಲಿ ಇಲ್ಲಿಯ ಪ್ರಮುಖ ವಕೀಲರಲ್ಲೊಬ್ಬರಾಗಿರುವ ಶ್ರೀ ಮಟ್ಟಿ ರಾಮಕೃಷ್ಣ ರಾವ್ ಬಿ. ಎ., ಬಿ. ಎಲ್., ವಕೀಲ್, ಇವರು ವಿದ್ಯಾರ್ಥಿಗಳ ಬಗ್ಗೆ "ಕೆಲಸದ ಗೌರವ" (Dignity of labour) ವಿಷಯವಾಗಿ ಹೃದಯಂಗಮವಾದ ಭಾಷಣವಿತ್ತರು. ಹೀಗೆ ಊರ, ಪರವೂರ ಗೃಹಸ್ಥರಾದ ವಿದ್ಯಾರ್ಥಿಗಳಿಗೆ ಪ್ರಿಯಕರವಾದ ಭಾಷಣಗಳನ್ನು ಕೊಡುತ್ತಿರುವುದು ಬಹು ಯೋಗ್ಯವೂ, ಅನುಕರಣೀಯವೂ ಆಗಿದೆ.

ಉಡುಪಿ ತಾಲೂಕಿನ ರೈತರ ಮಹಾಸಭೆಯು ಶ್ರೀ ಆದಮಾರು ಮಠದ ಪಾರುಪತ್ಯಗಾರರಾಗಿರುವ ಶ್ರೀ ವೆಂಕಟಾಚಾರ್ಯರ ಅಧ್ಯಕ್ಷತೆಯಲ್ಲಿ ೩೦ ೧೯ನೇ ಸಾಯಂಕಾಲ ಸ್ಥಳೀಯ ಯೂನಿಯನ್ ಕ್ಲಬ್ಬಿನಲ್ಲಿ ಸೇರಿ ರಿಸೆಟ್ಲ್‌ಮೆಂಟ್ ಅನಾವಶ್ಯಕವಾಗಿದೆಯೆಂದು ಸರ್ವಾನುಮತದಿಂದ ಮಂಜೂರು ಮಾಡಿರುತ್ತದೆ. ಈಗಿಂದೀಗ ಈ ಕುರಿತು ತಾಲೂಕಿನ ಅನೇಕ ಕಡೆಗಳಲ್ಲಿ ರೈತರೆಲ್ಲ ಸೇರಿ ಆಕ್ಷೇಪದ ಠರಾವುಗಳನ್ನು ಮಾಡಿಕೊಂಡು, ಮುಂದಣ ಕಾರ್ಯಕ್ಕೆ ಉದ್ಯುಕ್ತರಾಗಿಸುತ್ತಿರುವರು. ಅಲವಲವು ತಡವಾಗಿಯಾದರೂ ಪ್ರಾರಂಭಿಸಿರುವುದು ಸ್ತುತ್ಯ. ಸರಕಾರಕ್ಕೆ ನಿಜವಾದ ರೈತರ ಸ್ಥಿತಿಗತಿಗಳನ್ನೂ ಸುಖ ದುಃಖಗಳನ್ನೂ ಯೋಗ್ಯ ರೀತಿಯಲ್ಲಿ ತಿಳಿಯಗೊಡುವಂತೆ, ಈಗಣ ಆರ್ಥಿಕ ದುಃಸ್ಥಿತಿಯಲ್ಲಿ ರಿ-ಸೆಟ್ಲ್‌ಮೆಂಟಿನಿಂದ ನಮ್ಮ ಜಿಲ್ಲೆಯ ರೈತರಿಗೆ ಉಂಟಾಗಬಹುದಾದ ಹಾನಿಯನ್ನು ಚೆನ್ನಾಗಿ ವೇದ್ಯಪಡಿಸುವ ಪ್ರಯತ್ನವನ್ನು ಮುಂದಾಳುಗಳು ಎಡೆಬಿಡದೆ ಮಾಡುತ್ತಿರುವುದರಿಂದ ಜಯಶೀಲರಾಗುವುದರಲ್ಲಿ ಸಂದೇಹವಿಲ್ಲ.

ಇದೇ ಹಿ. ೫ರಿಂದ ಪ್ರಾರಂಭಿತವಾದ ಶ್ರೀ ಲಕ್ಷ್ಮೀ ವೆಂಕಟೇಶ ದೇವಳದಲ್ಲಿನ ಭಜನೆ ಸಪ್ತಾಹವು ಇದೇ ೧೨ ಯ ಬುಧವಾರ ಮಂಗಳೋತ್ಸವ ಸಂತರ್ಪಣೆಗಳಿಂದ ಕೊನೆಗೊಂಡಿತು. ಉತ್ಸವಾದಿಗಳು ಬಹು ಸಂಭ್ರಮದಿಂದ ಜರುಗಿದುವು; ಊರ, ಪರವೂರ ಜನಸಂದಣಿಯೂ ಬಹಳವಾಗಿತ್ತು. ಇದರಲ್ಲೂ ಹಲ ಯುವಕರ ಉದ್ಯಮ ಸಾಹಸಗಳು ಸ್ತುತ್ಯಾರ್ಹವಾಗಿವೆ.

ಫಲಿಮಾರು — ಇಲ್ಲಿಯ ಫಲಿಮಾರು ಮಠದಲ್ಲಿ ಸಾಂಪ್ರದಾಯಕ್ಕನುಸಾರವಾಗಿ ಶ್ರೀ ಕೃಷ್ಣ ಜಯಂತಿ ಸಂಬಂಧವಾದ ವಿಟ್ಲಪಿಂಡಿ ಮಹೋತ್ಸವವು ಇದೇ ಭಾವ ನಾಮ ಸಂವತ್ಸರದ ಶ್ರಾವಣ ಬ ೮ ಯು (ತಾ. ೧-೯-೩೭ನೇ) ಬುಧವಾರ ದಿವಸ ಅಪರಾಹ್ನ ೧೨ ಘಂಟೆಗೆ ಶ್ರೀ ಫಲಿಮಾರು ಮಠದಿಂದ ಮೆರವಣಿಗೆ ಹೊರಟು ಶ್ರೀ ಪಡು ಮಹಾಲಿಂಗೇಶ್ವರ ದೇವಸ್ಥಾನಕ್ಕೆ ತಲಪಿ ೫ ಘಂಟೆಯ ತನಕ ಮಹಾ ವೈಭವದಿಂದ ಆಚರಿಸಲ್ಪಡುತ್ತದೆ. ಲಾಠಿ, ಲೇಜಿಮ್, ಡೆಲ್ಸ್ ಫ್ಲೀಟ್ಸ್, ಕೋಲಾಟ ಡೆನ್ಸ್, ಮುಷ್ಟಿ, ಕಾಳಗ, ಶಕ್ತಿ ಪ್ರದರ್ಶನ — ಇವೇ ಮೊದಲಾದ ಹೊಸ ನಮೂನೆಯ ದೇಶಾಭಿಮಾನಿ ವ್ಯಾಯಾಮಗಳು ಇಂದು ಇಲ್ಲಿಯ ವ್ಯಾಯಾಮ ಮಂದಿರದ ವಿದ್ಯಾರ್ಥಿಗಳಿಂದ ಪ್ರದರ್ಶಿಸಲ್ಪಡುವುವು. ಈ ಮಹೋತ್ಸವಕ್ಕೆ ಊರ, ಪರವೂರ ಆಸ್ತಿಕ ಮಹಾ ಜನರು ಪರಿವಾರ ಸಮೇತರಾಗಿ ಬಂದು ಶ್ರೀ ದೇವತಾ ವೈಭವಗಳನ್ನು ನೋಡಿ ಕೃತಾರ್ಥರಾಗಬೇಕಾಗಿ ಮಠದ ಏಜಂಟರಾದ ರಾ| ಶ್ರೀನಿವಾಸ ಪೆಜತಾಯರು ವಿನಂತಿ ಮಾಡುತ್ತಾರೆ.

ಪುತ್ತೂರು — "ಈ ಬಾರಿಯ ದಸರಾ ಮಹೋತ್ಸವದ ಸಮಯ, ಸಾಹಿತ್ಯ ಉತ್ಸವವನ್ನು ಅಕ್ಟೋಬರ ತಾ. ೧೩ ೧೪ರಲ್ಲಿ ಜರುಗಿಸಲು ನಿಶ್ಚೈಸಿರುತ್ತೇವೆ. ಶ್ರೀಮಾನ್ ಬಿ. ಎಂ. ಶ್ರೀಕಂಠಯ್ಯ, ಎಂ. ಎ. (ಬೆಂಗಳೂರು) ಇವರು ಇದರ ಅಧ್ಯಕ್ಷಸ್ಥಾನವನ್ನು ವಹಿಸುವರು. ಸಾಹಿತ್ಯ-ಪ್ರೇಮಿಗಳಾದ ತಾವು ಆ ದಿನಗಳಲ್ಲಿ ನಮ್ಮಲ್ಲಿಗೆ ಬರುವುದಲ್ಲದೆ, ತಮ್ಮ ಕವನ ಮೊದಲಾದುವುಗಳ ವಾಚನದಿಂದ ಉತ್ಸವವನ್ನು ಯಶಸ್ವಿಯಾಗಿ ಮಾಡಬೇಕೆಂದು ಕೋರುತ್ತೇವೆ" ಎಂದು ದಸರಾ ಮಹೋತ್ಸವ ಸಂಬಂಧವಾದ ಸಾಹಿತ್ಯಸಂಘ, ಪುತ್ತೂರು, ಇದರ ಸ್ವಾಗತಾಧ್ಯಕ್ಷರಾದ ಶ್ರೀ ಕೆ. ಶಂಭು ಶರ್ಮರೂ, ಕಾರ್ಯದರ್ಶಿಗಳಾದ ಶ್ರೀ ಸಿ. ಎಸ್. ಶಾಸ್ತ್ರಿ, ಬಿ. ಎ., ಬಿ. ಎಲ್. ಮತ್ತು ಶಿವರಾಮ ಕಾರಂತರು ವಿನಂತಿಸುತ್ತಾರೆ.

ಮೂಲ್ಕಿ — ನಮ್ಮ ಜಿಲ್ಲಾ ಕಲೆಕ್ಟರ್ ಮಿ| ಗೋನ್, ಐ. ಸಿ. ಎಸ್. ರವರು ಇದೇ ಕಳೆದ ತಾ. ೧೫ನೇ ಸಂಜೆಗೆ ಮೂಲ್ಕಿಯಲ್ಲೊಂದು ಪಶು ರೋಗ ಚಿಕಿತ್ಸಾಲಯ ತೆರೆಯೋಣ ಸಮಾರಂಭವನ್ನು ಜರಗಿಸಿದರು. ದಿವಂಗತ ದೋಳ ಮಾಧವರಾಯರ ಮಕ್ಕಳು ಕಟ್ಟಿಸಿದ ಈ ಕಟ್ಟೋಣವನ್ನು ಮೊದಲಾಗಿ ದೊರೆಗಳವರು ಪ್ರವೇಶಿಸಿ ಅಧ್ಯಕ್ಷಸ್ಥಾನವನ್ನೇರಿದರು. ಹೈ ಸ್ಕೂಲ್ ಕರ್ನಾಟಕ ಪಂಡಿತರು ಮತ್ತು ರಾ| ಪುಣಿಂಚತ್ತಾಯರು ಈ ಸಂದರ್ಭಕ್ಕಾಗಿ ರಚಿಸಿದ ಗೀತಗಳನ್ನು ಹೃದಯಂಗಮವಾಗಿ ಹಾಡಿ ಸೋಣಾದ ಮೇಲೆ ಡಾ| ಉಮೇಶರಾಯರು, ಡಾ| ರಾಮಪ್ಪ ಕಣ್ಣಾಡು, ರಾ| ಪುಣಿಂಚತ್ತಾಯರು, ಡಾ| ರಾಮ ಶೆಟ್ಟರು, ಹೆಲ್ತಾಫೀಸರ್ ಬಾಳಿಗರೇ ಮೊದಲಾದವರು ಸಮಯೋಚಿತವಾಗಿ ಮಾತನಾಡಿದರು. ಮುಕ್ತ ಸಭಾಧ್ಯಕ್ಷ ಕಲೆಕ್ಟರ್ ದೊರೆಗಳವರು ಸುಮಾರು ಅರ್ಧ ಘಂಟೆಯ ವರೆಗೆ ಅಂದವಾಗಿ ಭಾಷಣವಿತ್ತರು; ಅದನ್ನು ರಾ| ಪುಣಿಂಚತ್ತಾಯರು ಕನ್ನಡದಲ್ಲಿ ವಿವರಿಸಿದರು. ಅನಂತರ ರಾ| ಯು. ಆರ್. ಪೂಂಜರು ಸಭಾಧ್ಯಕ್ಷರಿಗೂ, ಸಭಿಕರಿಗೂ, ದಾತೃಗಳಾದ ಮಾಧವರಾಯರ ಮಕ್ಕಳಿಗೂ ಧನ್ಯವಾದಗಳನ್ನರ್ಪಿಸಿದ ಬಳಿಕ ಈ ಸಮಾರಂಭವು ಕೊನೆಗೊಂಡಿತು.

ಮೂಡಬಿದ್ರಿ — ಮೂಡಬಿದ್ರಿ ಸೆಂಟರಿನ ಉಪಾಧ್ಯಾಯರ ಸಂಘದ ೯ನೇ ಮತ್ತು ವರುಷಾಂತ್ಯದ ಸಭೆಯು ಇದೇ ೧೯೩೭ನೇ ಅಗೋಸ್ತು ತಿಂಗಳ ೧೪ನೇ ತಾರೀಕಿಗೆ ದಿಗಂಬರ ಜೈನ ಹಾಯರ್ ಎಲಿಮೆಂಟರಿ ಶಾಲೆಯಲ್ಲಿ ಸದ್ರಿ ಶಾಲಾ ಮುಖ್ಯ ಉಪಾಧ್ಯಾಯರಾದ ಪಂಡಿತ ರಮಾನಾಥರಾಯರ ಅಧ್ಯಕ್ಷತೆಯಲ್ಲಿ ಜರುಗಿತು. ೧೬ ಶಾಲೆಗಳ ೪೩ ಮಂದಿ ಅಧ್ಯಾಪಕರು ಹಾಜರಿದ್ದರು. ಹೊಸಬೆಟ್ಟು ಚರ್ಚ್ ಶಾಲಾ ಮುಖ್ಯ ಉಪಾಧ್ಯಾಯರಾದ ಬಿ. ಎಮ್. ಸಿಕೇರರು ೫ನೇ ಕ್ಲಾಸಿನ ಮಕ್ಕಳಿಗೆ ಭೂಗೋಳದಲ್ಲಿ ಭೂಮಿಯ ವರ್ತುಲಾಕೃತಿಯ ವಿಷಯ ಪ್ರಥಮ ಮಾದರಿ ಪಾಠವನ್ನು ಕೊಟ್ಟರು. ನಂತರ ಜೈನ ಶಾಲಾ ಅಧ್ಯಾಪಕರಾದ ಎಮ್. ರಾಜಾರಾಮರವರಿಂದ ಕಲಿಸಲ್ಪಟ್ಟ, ೫ನೇ ಮತ್ತು ೭ನೇ ಕ್ಲಾಸಿನ ವಿದ್ಯಾರ್ಥಿಗಳಿಂದ, ವಿಭೀಷಣ ರಾವಣ ಸಂವಾದದ ನಟನೆಯು ಅಭಿನಯಿಸಲ್ಪಟ್ಟಿತು. ಬರುವ ಸಭೆಯು ಅಕ್ಟೋಬರ ೩ಕ್ಕೆ ಇಡಲ್ಪಟ್ಟಿದೆಯೆಂದು ಎಲ್ಲರಿಗೂ ತಿಳಿಸೋಣಾಗಿಯದೆ.

ಕುಂದಾಪುರ — ಕುಂದಾಪುರದಲ್ಲಿ ತಾ. ೯ನೇ ಅಕ್ಟೋಬರಕ್ಕೆ ಸ್ಥಳೀಯ ಬೋರ್ಡ ಹ್ಯಾಸ್ಕೂಲಿನಲ್ಲಿ ಹಿಂದೀ ಪರೀಕ್ಷೆಗಳು ನಡೆಯುವುವು. ಪ್ರಾಥಮಿಕ ಪರೀಕ್ಷೆಗೆ ೩೧, ಮಧ್ಯಮಾ ಪರೀಕ್ಷೆಗೆ ೧೬ ಮತ್ತು ರಾಷ್ಟ್ರಭಾಷಾ ಪರೀಕ್ಷೆಗೆ ೪ ಹೀಗೆ ಒಟ್ಟಿಗೆ ೫೧ ವಿದ್ಯಾರ್ಥಿ-ವಿದ್ಯಾರ್ಥಿನಿಯರು ಕೂತುಕೊಳ್ಳುವರು. ಇವರ ಪೈಕಿ ವಿದ್ಯಾರ್ಥಿನಿಯರ ಸಂಖ್ಯೆಯು ೨೫ ಎಂಬುದು ಬಹಳ ಪ್ರಶಂಸನೀಯವಾದುದು.

ಬಿಸೆಂಟ್ ಗರ್ಲ್ಸ್ ಸ್ಕೂಲ್, ಮಂಗಳೂರು.

ಇದರ ೧೯೩೬ — ೩೭ರ ವಾರ್ಷಿಕ ವರದಿಯು ಕೈಸೇರಿರುತ್ತದೆ. ಶಾಲೆಯ ಪ್ರಶಂಸನೀಯ ಆಡಳಿತದೊಡನೆ ವಿದ್ಯಾರ್ಥಿಯರ ಸಂಖ್ಯೆಯು ಏರುತ್ತಾ ಹೋಗುವುದೂ ಸಂತೋಷಕರ. ಮೊದಲು "ನೇಶನಲ್ ಗರ್ಲ್ಸ್ ಸ್ಕೂಲ್" ಎಂಬುದಾಗಿದ್ದ ಈ ಶಾಲೆ—ದಿವಂಗತ ಬಿಸೆಂಟಮ್ಮನವರ ಉಜ್ವಲ ಸೇವೆಯ ಸ್ಮರಣಾರ್ಥ ಅವರ ಹೆಸರನ್ನಿಟ್ಟುಕೊಂಡಿದೆ. ಸಾರ್ವಜನಿಕರ ಬೆಂಬಲವು ಈ ಶಾಲೆಗೆ ಸದಾ ಇರಲೆಂದು ಹಾರೈಸುತ್ತೇವೆ.

ರೈಲುಬಂಡಿಗಳ ಸಮಯ.

	ಹೊರಡುವ ಸಮಯ	ಇಲ್ಲಿಗೆ ತಲಪುವ ಸಮಯ
ಮೈಲ್	ಬೆಳಿಗ್ಗೆ ೯.೫೫	ಸ್ಸಾಮು ೪.೨೦
ಮಿಕ್ಸೆಡ್	,, ೬	ರಾತ್ರಿ ೮.೪೫
ಪೆಸೆಂಜರ್	ಅಪರಾಹ್ನ ೧೨.೫೫	ಅಪರಾಹ್ನ ೨.೫೦
ಶಟ್ಲ್	ಸ್ಸಾಮು ೫.೨೫	ಬೆಳಿಗ್ಗೆ ೯.೩೦

ಹೊಸ ಸರ್ವೀಸುಗಳು.

ಕಾಂಞಂಗಾಡ್	ಬೆಳಿಗ್ಗೆ ೮.೩೦,	
ವರೆಗಿನ ಬಂಡಿ		ಅಪರಾಹ್ನ ೧.೩೨.
ಕಾಸರಗೋಡು	ಅಪರಾಹ್ನ ೩.೨೫,	
ವರೆಗಿನ ಬಂಡಿ,		ಸ್ಸಾಮು ೬.೧೫.

ಗೇರನ್ನು ರಫ್ತು ಮಾಡುವವರು.

ಸಂಯುಕ್ತ ಸಂಸ್ಥಾನದ ಪ್ರಮುಖ

ಏಜನ್ಸಿಯು ಗೇರುಬೀಜಗಳನ್ನು ರಫ್ತು ಮಾಡುವ ಪ್ರಮುಖ ಸಂಸ್ಥೆ ಯಾ ವ್ಯಾಪಾರಸ್ಥನ ಪ್ರಾತಿನಿಧ್ಯವನ್ನು ವಹಿಸಲು ಅಪೇಕ್ಷಿಸುತ್ತದೆ. ಪತ್ರವ್ಯವಹಾರವನ್ನು ಬಯಸಲಾಗಿದೆ.

ವಿಳಾಸ:—

A. C. Herrmann Co.,
105 Hudson Street,
New York City, U. S. A.
Reference Irving Trust Company of New York City.

ಮೂಲೆಮೂಲೆಯಿಂದ.

ಕೊಡಗು.

ಕೊಡಗು ಕೌನ್ಸಿಲಿನ ಅವಧಿಯನ್ನು ಒಂದು ವರ್ಷದ ಮಟ್ಟಿಗೆ, ಅಂದರೆ, ತಾರೀಕು ೧೦-೧೧-೩೫ರ ವರೆಗೆ ಮುಂದರಿಸಲಾಗಿದೆಯಾಗಿ ತಿಳಿದುಬಂದಿದೆ.

ಮೂವತ್ತೊಕ್ಲು ಗ್ರಾಮದ ಜೋಕಿರ ಮಾದಪ್ಪನೆಂಬವನು ಮಡಾಪುರದಲ್ಲಿ ಹೊಟೇಲ್ ಕೀಪರ್ ಅಬ್ದುಲ್ಲನೆಂಬವನನ್ನು ಕೊಲ್ಲುವ ಉದ್ದೇಶ ಗುಂಡು ಹೊಡೆದನೆಂಬ ಅಪಾದನೆಯು ಸೆಷನ್ಸ್ ಕೋರ್ಟಿನಲ್ಲಿ ವಿಚಾರಣೆಯಾಗಿ ಆರೋಪಿತನು ತಪ್ಪಿತಸ್ಥನಲ್ಲವೆಂದು ತೀರ್ಮಾನಿಸಿರುವರು.

ಮಡಿಕೇರಿಯಲ್ಲಿ ತಾ. ೯-೮-೩೪ರಿಂದ ೧೫-೮-೩೪ರ ವರೆಗೆ ೧೪ ಇಂಚು ೯೨ ಸೆಂಟುಗಳಷ್ಟು ಮಳೆ ಬಿದ್ದಿದೆ. ಮುಂಚಿಗಿಂತ ೩೦ ಇಂಚು ಮಳೆ ಕಡಿಮೆ.

ಪ್ರೇಜರ್ ಪೇಟೆಯಲ್ಲಿ ಸಿಡುಬು ಎದ್ದಿದೆ. ಒಬ್ಬನಿಗೆ ತಗಲಿ ಗುಣಹೊಂದಿದನು.

ಕೊಡಗಿನ ಸಿವಿಲ್ ಸರ್ಜನರು ಬೆಂಗಳೂರಿಗೆ ಹೋಗಿದ್ದು, ಇನ್ನು ಕೆಲವು ದಿನಗಳಲ್ಲಿ ಹಿಂದಿರುಗುವರಾಗಿ ತಿಳಿದುಬಂದಿದೆ.

ಕೊಡಗು ಕಮಿಶನರರು ದಕ್ಷಿಣ ಕೊಡಗಿಗೆ ಸರ್ಕೀಟು ಹೋಗಿ ಇದೇ ತಾ. ೧೭ರಲ್ಲಿ ಹಿಂದಿರುಗಿರುವರು.

ಬೆಳಗಾಂವಿ.

ಶ್ರೀ ವಾಮನ ರಾವ್ ದೇಸಾಯಿ, ಶ್ರೀ ಕಣಗಲೆ ಮತ್ತು ಶ್ರೀ ಚನ್ನಪ್ಪಾ ವಾಲಿಯವರು ತಮ್ಮ ಅವಧಿಯ ಶಿಕ್ಷೆಯನ್ನನುಭವಿಸಿ ತಾರೀಕು ೧೪ರಲ್ಲಿ ಬಿಡುಗಡೆ ಹೊಂದಿರುವರು.

ಕಳೆದ ವಾರದಲ್ಲಿ ಮಳೆಯು ಒಂದೇ ಸವನೆ ಸುರಿಯಿತು.

ಕರ್ನಾಟಕ ಸ್ಟೂಡೆಂಟ್ಸ್ ಫ್ರಾಟರ್ನಿಟಿ ಸಭೆಯು ತಾ. ೧೨ರಲ್ಲಿ ವಾಡೆಲ್ ಹೈಸ್ಕೂಲಿನಲ್ಲಿ ಜರಗಿ 'ಹೆಣ್ಣು ಮಕ್ಕಳು ಪೋಷಣೆಗಾಗಿ ಗಂಡಸರನ್ನು ಅವಲಂಬಿಸಿಕೊಂಡಿರಬೇಕೋ' ಎಂಬ ಕುರಿತು ಚರ್ಚೆ ನಡೆಯಿತು.

ತಾ. ೧-೬-೩೪ರಿಂದ ತಾ. ೧೬-೮-೩೪ರ ವರೆಗೆ ಇಲ್ಲಿ ೩೭ ಇಂಚು ೯೩ ಸೆಂಟು ಮಳೆ ಗರೆದಿದೆ.

ಗವರ್ನರರು ಇಲ್ಲಿಗೆ ಬರುವ ವೇಳೆ ಅವರಿಗೆ ಮುನಿಸಿಪಾಲಿಟಿಯವರು ಮಾನಪತ್ರವನ್ನರ್ಪಿಸಬಾರದೆಂಬ ವಿರೋಧಾಭಿಪ್ರಾಯವು ಹನುಮನ ಗುಡಿಯಲ್ಲಿ ಜರಗಿದ ಸಭೆಯಲ್ಲಿ ಮಂಜೂರಾಯಿತು.

ವಿಯೆನ್ನಾದಲ್ಲಿರುವ ಶ್ರೀ ಸುಭಾಷ್ಚಂದ್ರ ಬೋಸರು ತಾ. ೮-೮-೩೪ರಲ್ಲಿ "ಯುನೈಟೆಡ್ ಪ್ರೆಸ್ಸಿ"ಗೆ ಒಂದು ಪ್ರಕಟಣೆಯನ್ನು ಕಳುಹಿಸಿ ಹೀಗೆ ಎಚ್ಚರವಿತ್ತಿರುವರು:—

"ಮಧ್ಯ ಯುರೋಪಿನಲ್ಲಿ ಕೆಲವು ಅವಿಶ್ವಸನೀಯ ಸಂಸ್ಥೆಗಳು ಉತ್ಪನ್ನವಾಗಿ ಹಿಂದೂಸ್ಥಾನದ ಪವಿತ್ರ ಹೆಸರನ್ನು ಕೆಡಿಸಿ ಸುಲಿಗೆ ಮಾಡುವ ಹಂಚಿಕೆಗೆಳೆದಿವೆ. ಈ ಸಂಸ್ಥೆಗಳು ಹಿಂದೂದೇಶದಲ್ಲಿ ರಾಷ್ಟ್ರಸೇವಾನಿರತವಾಗಿರುವ ಸಂಸ್ಥೆಗಳ ಹೆಸರನ್ನೇ ಕೆಡಿಸುವಂತಹುಗಳಾಗಿವೆ. ಹಿಂದೂಸ್ಥಾನದಲ್ಲಿರುವ ಹಿತೈಷಿಗಳಿಗೂ ಪತ್ರಿಕೆಗಳಿಗೂ ಯುರೋಪಿನ ಯಾವ ಸಂಸ್ಥೆಯು ವಿಶ್ವಾಸಾರ್ಹವಾದುದು, ಯಾವುದು ಅವಿಶ್ವಾಸಾರ್ಹವಾದುದು ಎಂದು ತಿಳಿದುಕೊಳ್ಳಲು ಸಾಧ್ಯವಾಗುವುದಿಲ್ಲ. ಹಿಂದೂದೇಶದ ರಾಷ್ಟ್ರೀಯ ಪತ್ರಿಕೆಗಳು ಕೆಲವು ಯುರೋಪಿನ ತಂತ್ರಪೂರ್ಣ ಸಂಸ್ಥೆಗಳನ್ನು ತಿಳುವಳಿಕೆಯಿಲ್ಲದೆ ಪ್ರಚುರಗೊಳಿಸಿ ರಾಷ್ಟ್ರೀಯ ಕೆಲಸದಲ್ಲಿ ಹುಟ್ಟಿಕ್ಕಿಂತ ಅತುಳವನ್ನೇ ಹೆಚ್ಚಾಗಿ ತಂದುಕೊಂಡಿರುತ್ತವೆ. ಆದುದರಿಂದ ಹಿಂದೀಯರಿಗಾಗಿ ಯುರೋಪಿನಲ್ಲಿ ಕೆಲಸ ಮಾಡುವ ಸಂಸ್ಥೆಗಳೆಂದಿರುವವುಗಳಿಗೆ ಹಿಂದೀಯ ಹಿತೈಷಿಗಳೂ ಪತ್ರಿಕೆಗಳೂ, ಪ್ರಸಾರದ ಬೆಂಬಲವನ್ನೀಯುವ ಮೊದಲು ಹಿಂದು ಮುಂದಾಲೋಚಿಸಿ ವರ್ತಿಸಬೇಕೆಂದು ನನ್ನ ಹಾರೈಕೆ. ಸ್ವಾರ್ಥದಿಂದ—ಹಿಂದೂದೇಶವನ್ನು ಸೂರೆಮಾಡಲು ಹೊರಟ ಸಂಸ್ಥೆಗಳನ್ನು ಕೆಲವರು ಕಟ್ಟಿ



ಶ್ರೀ ಸುಭಾಷ್ಚಂದ್ರ ಬೋಸರವರು.

ಕೊಂಡಿರುವರು. ಇಂತಹ ಸಂಸ್ಥೆಗಳಲ್ಲಿ ಹಿಂದೂದೇಶದ ವೈರಿಗಳ ಕೈಯಿದೆ. ಒಸ್ಟ್ರಿಯಾದಲ್ಲಿ "ಹಿಂದೂಸ್ಥಾನ್ ಎಕೆಡೆಮಿಕಲ್ ಎಸೋಸಿಯೇಶನ್" ಎಂಬುದೂ, "ಇಂಡಿಯನ್ ಸೆಂಟ್ರಲ್ ಯುರೋಪಿಯನ್ ಸೊಸೈಟಿ" ಎಂಬುದೂ ಮತ್ತೆ ಜೆಕೊಸ್ಲೆವಾಕಿಯಾದಲ್ಲಿ ಇಂಡೊ ಜೆಕೊಸ್ಲೆವಾಕಿಯಾ 'ಸೊಸೈಟಿ ಅಥವಾ "ಪ್ರೊಫೆಸರ್ ಲೆಸ್ನಿ, ಪ್ರೆಸಿಡೆಂಟ್. ಐ. ಸಿ. ಸೊಸೈಟಿ" ಎಂಬುದೂ ವಿಶ್ವಾಸಾರ್ಹ ಸಂಸ್ಥೆಗಳು."

(ಅಮೃತ ಬಜಾರ ಪತ್ರಿಕೆಯಿಂದ.)

Notice.

The Share holders of the Bank of Mangalore Ltd., Mangalore are hereby informed that an intimation has been received from Mr. M. Anantha Prabhu, one of the Shareholders, stating that he intends to propose Mr. P. M. Hegde G. D. A., R. A., Registered Accountant and Auditor, Pereira Building, Mangalore as Auditor in the place of retiring Auditor Mr. M. S. Krishna Rao, for the year 1934-1935 and the said proposal will be considered at the next general meeting of the share holders fixed for 2nd proximo.

Mangalore, 22-8-'34.

N. Upendra Pai,
U. R. Pai,
Managing Directors.

ಬೇಕಾಗಿದ್ದಾರೆ.

ತಿಂಗಳಿಗೆ ರೂ. 200ರ ಮೇಲೆ ಚೀಫ್ ಏಜಂಟರೂ, ರೂ. 100ರ ಮೇಲೆ ಏಜಂಟರೂ ರೂ. 40 ಮತ್ತು ಪ್ರೊವಿಡೆಂಟ್ ಫಂಡ್ ಮತ್ತು ಕಮಿಶನಿನ ಮೇಲೆ ಒರ್ಗನೈಜರರೂ ಬೇಕಾಗಿದ್ದಾರೆ.

ಇಂಗ್ಲಿಷಿನಲ್ಲಿ ಬರೆಯಿರಿ—

Uplifting Banking Corporation Ltd.
169-171, Javeri Bazar, Bombay.

The Canara Public Conveyance Company, Ltd., Mangalore.

WE TAKE UTMOST CARE OF PASSENGERS.

Read the following letter:—

Modern Hindu Hotel,
Calicut, 17—6—1934.

Dear Sir,

We wish to thank you for all that you did for us to make our stay at Mangalore comfortable. It is extremely nice of you to have looked after us as you did.

Yours faithfully,
(Sd.) **A. V. Ramaswami.**

The same service is offered to all. We call for reports from passengers, if they have failed to receive similar attention and assure to take prompt action to see that inconvenience is not repeated.

Chikmagalur Public Conveyance Motor Service, Chikmagalur.

ಚಿಕ್ಕಮಗಳೂರು ಪಬ್ಲಿಕ್ ಕನ್ವೆಯನ್ಸ್ ಮೋಟರ್ ಸರ್ವಿಸ್,
ಚಿಕ್ಕಮಗಳೂರು

ಮುಂಬಾಯಿಯಿಂದ — ಮಂಗಳೂರಿಗೆ.
ಮಂಗಳೂರಿನಿಂದ — ಮುಂಬಾಯಿಗೆ.

ಅಲ್ಲದೆ

ಹುಬ್ಬಳ್ಳಿ, ಧಾರವಾಡ, ಗೋವಾ, ಮುಂಬಾಯಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಯ ಎಲ್ಲಾ ಭಾಗಗಳಿಗೆ ಪ್ರಯಾಣ ನಡಿಸಲಿಕ್ಕೆ ಮಂಗಳೂರು—ಕಡೂರು ಹಾದಿಗಿಂತ ಉತ್ತಮ ಬೇರೆ ಹಾದಿಯಿಲ್ಲ!

ಹೊಸ ಬಸ್ಸುಗಳು. ಅನುಕೂಲ ಪ್ರಯಾಣ ಸೌಕರ್ಯಗಳು

ಕಡೂರು ಜಿಲ್ಲೆಯೊಳಗಿನ ಎಲ್ಲಾ ಕಾಫಿ ತೋಟಗಳಿಗೆ ಕೂಲಿಕಾರರನ್ನು ತರಲಿಕ್ಕೂ ಅಲ್ಲಿಂದ ಕೊಂಡುಹೋಗಲಿಕ್ಕೂ ನಾವು ಎಲ್ಲಾ ತರದ ಸಹಾಯವನ್ನೂ ಕೊಡುತ್ತೇವೆ.

ಚಿಕ್ಕಮಗಳೂರಿನಿಂದ— ಶಿವಮೊಗ್ಗಕ್ಕೆ, ಬೀರೂರಿಗೆ, ಕಡೂರಿಗೆ.
— ಮೂಡಗೆರೆಗೆ, ಸಕಲೇಶಪುರಕ್ಕೆ.
— ಮಂಗಳೂರಿಗೆ, ಮೂಡಬಿದ್ರೆಗೆ, ಪುತ್ತೂರಿಗೆ, ಮೂಲ್ಕಿಗೆ.
—ಧರ್ಮಸ್ಥಳಕ್ಕೆ, ವೇಣೂರಿಗೆ, ಸುಬ್ರಹ್ಮಣ್ಯಕ್ಕೆ.

[illegible] ಪ್ರಯಾಣ — ಉತ್ಸಾಹಕರ ಸೌಕರ್ಯ

ಬೇಕಾದ ಮಾಹಿತಿಗೆ ನಮ್ಮ ಆಫೀಸಿಗೆ ಬರೆದು ತಿಳಿದುಕೊಳ್ಳಿರಿ.

ವಿವಿಧ ವಿಷಯ.

ಜಾತು ಎಷ್ಟು ವೇಗವಾಗಿ ಚಲಿಸಬಲ್ಲುದು?

ಜಾತು ಮನುಷ್ಯನಿಗಿಂತ ವೇಗವಾಗಿ ಚಲಿಸಬಲ್ಲುದು, ಎಷ್ಟು ಸರ್ತಿ, ಆದರೆ, ಕೆಲಿಫೋರ್ನಿಯ ವಿಶ್ವವಿದ್ಯಾಲಯದ ಡಾ| ಕೊಲ್ಬರ್ ಎಂಬ ಪ್ರೊಫೆಸರರ ಅಭಿಪ್ರಾಯದಂತೆ ಜಾತು ತಾಸಿಗೆ ೩.೧/೪ ಮೈಲುಗಳಿಗಿಂತ ಹೆಚ್ಚು ವೇಗವಾಗಿ ಚಲಿಸಲಾರದಂತೆ.

ಹುಟ್ಟಿದ ಕೂಡಲೇ ಎದ್ದು ನಿಂತಿತಂತೆ!

ಅಮೃತಸರ ಸುದ್ದಿಯಿದು. ಜೈಪುರದ ಓರ್ವ ಹೆಂಗಸು, ಕೃಷ್ಣವರ್ಣದ ಮುಖದ, ಕೂದಲುಗಳುಳ್ಳ, ಎರಡು ಕೊಂಬುಗಳಿರುವ ಒಂದು ಗಂಡು ಶಿಶುವನ್ನು ಹೆತ್ತಳಂತೆ. ಭೂಗತವಾದ ಕೂಡಲೇ ಶಿಶುವು ಎದ್ದು ನಿಂತು, ತನ್ನ ಕಾಲಿನ ಅಂಗುಷ್ಠವನ್ನು ಚೀಪತೊಡಗಿತು. ಕೆಲ ಸಮಯದ ನಂತರ ಮಲಗಿತು. ೧೯ ತಾಸುಗಳ ತನಕ ಈ ಶಿಶುವು ಜೀವಂತವಾಗಿತ್ತು. ೧೯ನೇ ತಾಸಿನಲ್ಲಿ ಪುನಃ ಥಕ್ಕನೆ ಎದ್ದು ನಿಂತು, ಕಣ್ಣುಗಳನ್ನು ಮುಚ್ಚಿ ಬಾಯ್ಮುಚ್ಚಿ ಗಟ್ಟಿಯಾಗಿ ಅಳುತ್ತ ಪ್ರಾಣತ್ಯಾಗ ಮಾಡಿತಂತೆ.

'ಸ್ತ್ರೀಯರಿಗೆ ಜಾಗರೂಕತೆ ಹೆಚ್ಚು'

ಹೀಗೆಂದು ಪೆನ್ಸಿಲ್ವೇನಿಯದವರ ಅಭಿಪ್ರಾಯವಿದೆ. ಅಲ್ಲಿರುವ ಮೋಟರ್ ಡ್ರೈವರುಗಳಲ್ಲಿ ಸೇಕಡಾ ೧೮ರಷ್ಟು ಮಹಿಳೆಯರು. ಮಹಿಳೆಯರ ಮೋಟಾರ ಸಂಚಲನದ ಇತಿಹಾಸದಲ್ಲಿ ಸೇಕಡಾ ೩ಕ್ಕಿಂತ ಹೆಚ್ಚು ಅಪಘಾತಗಳಾಗಲಿಲ್ಲವಂತೆ. ಸ್ತ್ರೀಯರೇ ಡ್ರೈವರರಾದರೆ ಅಪಘಾತಗಳು ಬಹುಮಟ್ಟಿಗೆ ಕಡಿಮೆಯಾಗಬಹುದೆಂದು ಅವರ ಅಭಿಪ್ರಾಯ.

ಮಯೂರಗಳು 'ಮೂರ್ಖ'ವಲ್ಲ.

ನವಿಲುಗಳು ತಮ್ಮ ಸೌಂದರ್ಯಕ್ಕಾಗಿ ತಾವೇ ಆನಂದಪಡುವುವೆಂದೂ, ಅವುಗಳಷ್ಟು ಮಂದ ಬುದ್ಧಿಯ ಪಕ್ಷಿಗಳು ಮತ್ತಾವುವೂ ಇಲ್ಲವೆಂದು ಎನ್ನುವವರಿರುವರು. ಆದರೆ, ಮಯೂರಗಳನ್ನು ಸಾಕುತ್ತಿರುವ ಫ್ರಾನ್ಸಿಸ್ ಪಿಟ್ ಎಂಬಾತನ ಅಭಿಪ್ರಾಯವೇ ಬೇರೆ. ತನ್ನ ಬಂಧುಗಳ ಮೇಲೆ ಅತುಲ ಪ್ರೇಮ, ಚುರುಕಾದ ಕಣ್ಣು, ವಿವೇಚನಾ ಶಕ್ತಿ ಇವೆಲ್ಲವೂ ಮಯೂರಗಳಿಗಿದ್ದಷ್ಟು ಕೋಳಿಗಳಿಗಿಲ್ಲವಂತೆ.

ಆತನ ಬೆವರು ಕೆಂಪು!

ಇಂಗ್ಲಿಷ್ ಡಾಕ್ಟರನೊಬ್ಬ, ಈ ಮೊದಲು ಈಜಿಪ್ಟ್ ದೇಶದಲ್ಲಿದ್ದನು, ಈಗ ಇಂಗ್ಲಾಂಡಿಗೆ ಮರಳಿದ್ದಾನೆ. ಈತನಿಗೆ ಬೆವರು ಬಂದರೆ – ಅದರ ಬಣ್ಣ ಕೆಂಪು! ಒಂದು ದಿನ ಕ್ಷೌರ ಮಾಡಿಕೊಳ್ಳುತ್ತಿದ್ದನಂತೆ. ಬೆವರು ಬಂದ ಮುಖದ ಮೇಲೆ ಟಾಲನ್ನಾಡಿಸಿ, ಅದನ್ನು ಕಾಗದಕ್ಕೆ ಒರಸಿದಾಗ, ಕಾಗದವು ಕೆಂಪಗಾದುದನ್ನು ಕಂಡು ಆಶ್ಚರ್ಯಪಟ್ಟನು! ಬೆವರಿದಾಗ, ಈತನು ಧರಿಸಿದ ಬಿಳೀ ವಸ್ತ್ರಗಳೂ ಕೆಂಪಗಾಗುವುವು. ಇದರ ಕಾರಣವೇನೆಂದು ಯಾರಿಗೂ ಹೊಳೆಯಲಿಲ್ಲ.

ವಯಸ್ಸು ನಲ್ವತ್ತೊಂದು ವರ್ಷ ಪ್ರಾಯ!

—ಆದರೂ ಅವನಿಗೆ ಕನ್ನಡಕ ಬೇಕಿಲ್ಲವೆಂದರು! ಅವನೊಬ್ಬ ನಿಗ್ರೋ; ಟುಯಿನೋ ಬರ್ ನಗರದ ಒಂದು ಆಸ್ಪತ್ರೆಗೆ ಹೋಗಿ, "ನನಗೆ ೧೪೧ ವಯಸ್ಸಾಯಿತು. ಕನ್ನಡಕ ಬೇಕಾಗಬಹುದೋ ನೋಡಿ!" ಎಂದನು. ಡಾಕ್ಟರರು ಬಹಳವಾಗಿ ಪರೀಕ್ಷಿಸಿ ನೋಡಿ, ಆ ಮೇಲೆ ಹೇಳಿದರು: "ಕನ್ನಡಕ ಅಗತ್ಯವಿಲ್ಲ; ನಿನ್ನ ದೃಷ್ಟಿಯು ನಿರ್ದೋಷವಾದುದು!" ಎಂದು.

ಮಿಂಚು ವಿನಹ್ನಿಲ್ಲ ಮಾಡುವುದು!

ಹಂಗೇರಿಯಲ್ಲೊಂದು ಹೋಟೆಲು; ಪ್ರಯಾಣಿಕನೊಬ್ಬನು ಅಲ್ಲಿಗೆ ಬಂದು, ಒಂದು ಕಪ್ ಬೀರ್ ಕೇಳಿದನು. ಹೋಟೇಲು ಯಜಮಾನನು ಬೀರನ್ನು ತಂದು ಕೊಡಲು, ಪ್ರಯಾಣಿಕನು ಆ ಕಪ್ಪಿಯನ್ನು ಬಾಯಿಗೆತ್ತಿದನು. ಅದೇ ಕ್ಷಣಕ್ಕೆ ಒಂದು ಸಿಡಿಲು ಕಟ್ಟಿಗೆ ಬಡಿಯಿತು. ಪ್ರಯಾಣಿಕನು ಬಾಯಿಗೆತ್ತಿದ ಆ ಗಾಜಿನ ಕಪ್ಪಿಯು ಚೂರುಚೂರಾಗಿ ಹೋಯ್ತು. ಆಶ್ಚರ್ಯವೆಂದರೆ– ಪ್ರಯಾಣಿಕನಿಗೇನೂ ಹಾನಿ ತಟ್ಟಲಿಲ್ಲ. ಯಜಮಾನನು ಒಳಗೆ ಹೋಗಿ ಬೇರೆ ಬೀರನ್ನು ತಂದನು. ಆದರೆ, ಏನಾಶ್ಚರ್ಯ! ಮಿಂಚಿನ ಒಂದು ಸುಳಿಯು ಬೀರಿನ ಪೀಪಾಯಿಗೆ ತಗಲಿದ ಕಾರಣ, ಬೀರ್ ಎಲ್ಲ ಹುಳಿಹುಳಿಯಾಗಿ ಮಾರ್ಪಟ್ಟಿತ್ತಂತೆ!

ಪ್ರಚಲಿತಸಮಾಚಾರ.

ಗಾಂಧೀಜಿಯವರ ಮುಂದಿನ ಕಾರ್ಯಕ್ರಮವೇನು?

ಇದೀಗ ಎಲ್ಲೆಲ್ಲಿಯೂ ಕೇಳಲ್ಪಡುವ ಪ್ರಶ್ನೆ. ಅವರ ಹರಿಜನ ಕಾರ್ಯವು ಒಂದು ವರ್ಷದ ತನಕ ನಡೆದು ನಿನ್ನೆ ತಾನೇ ಮುಗಿದಿದೆ. ಇನ್ನು ಸದ್ಯಕ್ಕೆ ರಾಜಕೀಯಗಳಲ್ಲಿ ವಿಶೇಷವಾಗಿ ಅವರು ಭಾಗವಹಿಸುವಂತಿಲ್ಲವೆಂದೂ ಅವರಿಂದಲೇ ತಿಳಿದುಬಂದಿದೆ. ಹಾಗಾದರೆ,—ಕಾಂಗ್ರೆಸ್ಸಿನ ಈಗಿನ ವಿಧಾಯಕ ಕಾರ್ಯಕ್ರಮಕ್ಕನುಸಾರವಾಗಿ, ಅವರು ನಡಕೊಳ್ಳುತ್ತ, ಪುನರ್ಘಟನಾ ಕಾರ್ಯದಲ್ಲಿ ಸಹಕಾರಿಯಾಗಬಹುದೆಂದು ತೋರುವುದು. ಹರಿಜನ ಕಾರ್ಯವನ್ನು ಮರೆಯುವಂತಿಲ್ಲ.

ರೂಸ್‌ವೆಲ್ಟರು ಮರಳುಭೂಮಿಗೆ ಹೋರಡುವರು.

ಮಳೆ ಬಾರದೆ ಅಮೇರಿಕದಲ್ಲಿ ಸಂಕಷ್ಟಗಳು ಹೆಚ್ಚುತ್ತಿವೆ. ಅಲ್ಲಿಯ ಪಶ್ಚಿಮ ಪ್ರಾಂತ್ಯದ ಕೇಂದ್ರದಲ್ಲಿ ಈ ಸಂಕಷ್ಟವು ಹೆಚ್ಚಂತೆ. ಅದಕ್ಕಾಗಿ, ಅಧ್ಯಕ್ಷ ರೂಸ್‌ವೆಲ್ಟರು ಒಂದು ಹೊಸ ಯೋಜನೆಯನ್ನು ಹೂಡುವರು. ಸುಮಾರು ಎರಡು ಲಕ್ಷ ಎಕ್ರೆಯಷ್ಟು ಸ್ಥಳದಲ್ಲಿ ಕಾಡನ್ನು ಬೆಳೆಸುವರು. ಕಾಡು ಪ್ರದೇಶವಿದ್ದರೆನೇ ಮಳೆಯು ಕಾಲಕಾಲಕ್ಕೆ ಸರಿಯಾಗಿ ಚೆನ್ನಾಗಿ ಸುರಿಯುವುದು. ಅದಕ್ಕೆ ಸುಮಾರು ೭೫,೦೦೦,೦೦೦ ಡಾಲ್ಲರು ವೆಚ್ಚ ತಗಲಬಹುದೆಂದು ಅಂದಾಜು ಹಾಕಲಾಗಿದೆ.

ಇಂಥ ಕುಕರ್ಮಿಗಳೂ ಇರುವರಲ್ಲ!

ಹೊಲ್ಲೆಂಡಿನಲ್ಲಿ ಕೆಲವು ನಾಝೀ ಪ್ರಚಂಡರು ಒಂದು 'ಉದ್ಯೋಗ' ದೊರಕಿಸಿ ಕೊಡುವ ಸಂಸ್ಥೆಯನ್ನು ತೆರೆದು, ಜರ್ಮನ್ ಯೆಹೂದಿ ಬಾಲಿಕೆಯರಿಗೆ ಉದ್ಯೋಗ ಕೊಡಿಸುವೆವೆಂದು ಹಣ ಸುಲಿದು, ಜರ್ಮನ್ ಸರಕಾರವನ್ನು ತಾವು ದೂರಿ, ಆ ಬಾಲಿಕೆಯರಿಂದಲೂ ದೂರಿ ಬಂದ ಪತ್ರಗಳನ್ನು ಜರ್ಮನ್ ಸರಕಾರಕ್ಕೆ ಮಾರಾಟ ಮಾಡುವ ವೃತ್ತಿ ಕೈಕೊಂಡರಂತೆ. ಇವರನ್ನೀಗ ಡಚ್ ಸರಕಾರವು ಗಡಿಪಾರು ಮಾಡಿದೆ.

ಕಲ್ಕತ್ತೆಯ ಕೋಟಿಗಳು—

—ಕಾರ್ಪೊರೇಶನಿನವರನ್ನು ಯಾವ ವಿಧದಿಂದಲೂ ಮೋಸ ಮಾಡಬಾರದೆಂದು ಅವರ ಭಾವಚಿತ್ರವನ್ನು ತೆಗೆಸಿ ಇಡಬೇಕೆಂದು ಕಲ್ಕತ್ತಾ ಕಾರ್ಪೊರೇಶನಿನವರು ಆಲೋಚಿಸುತ್ತಿರುವರು. ಕಲ್ಕತ್ತದಲ್ಲೀಗ ೧೬೦೦೦ ಕೋಟಿಗಳಿದ್ದಾರೆ.

ಎರಡು ಮಿಲ್ಲಿಯ ಹೊಸಮನೆಗಳು!

ಅಮೇರಿಕದ ಅಧ್ಯಕ್ಷ ರೂಸ್‌ವೆಲ್ಟರರ ಕಾಂಕ್ಷೆಯಿದು! ಎಷ್ಟೋ ಪ್ರಜೆಗಳು, ಅನಾರೋಗ್ಯಕರವಾದ ಮನೆಗಳಲ್ಲಿರುವರು. ಅವರೆಲ್ಲರಿಗೆ ಸಾಲ ಕೊಡಿಸಿ, ಚೊಕ್ಕದಾದ ಹೊಸ ಮನೆಗಳನ್ನು ಕಟ್ಟಿಸಬೇಕೆಂದು ಇವರ ಆಲೋಚನೆ. ಇಂಥವರಲ್ಲಿ, ಹೊಸ ಮನೆ ಕಟ್ಟುವವರಿಗೆ ೧೦ ಸಾವಿರ ಡಾಲ್ಲರುಗಳ ತನಕ, ಮನೆಗೆ ತಗಲುವ ವೆಚ್ಚದ ಸೇಕಡಾ ೮೦ರಷ್ಟು ಸಾಲ ಕೊಡಿಸಬೇಕೆಂದು ನಿರ್ಧಾರವಾಗಿದೆ. ೫೦ ಮಿಲ್ಲಿಯ ಜನಗಳಿಗೆ ಹೊಸಮನೆಗಳಾಗಬೇಕಂತೆ. ಎರಡು ಮಿಲ್ಲಿಯ ಮನೆಗಳೀಗ ಅವಶ್ಯವಾಗಿ ಕಟ್ಟಲ್ಪಡುವುವಂತೆ.

ಜರ್ಮನಿಯವರೇನೂ ಹುಚ್ಚರಲ್ಲ

ಒಳ್ಳೇ ಬುದ್ಧಿವಂತರು! ಪ್ರಪಂಚದ ಎಲ್ಲ ರಾಷ್ಟ್ರಗಳಿಂದಲೂ ಆಟಗಾರರು ಬಂದು ಸೇರಿ, ನಡೆವ "ಒಲಿಂಪಿಕ್ ಪಂದ್ಯಾಟ"ಗಳನೆಯಲ್ಲ,—ಅವು ಈ ವರ್ಷ ಜರ್ಮನಿಯಲ್ಲಿ ನಡೆಯುವುವು. ಈ ವರ್ಷ, ಹೊಕ್ಕಿ ಆಟವನ್ನೇ ಜರ್ಮನಿಯವರು ತೆಗೆದುಹಾಕಿರುವರು. ಕಾರಣ?—ಹೊಕ್ಕಿಯಲ್ಲಿ ಇಂಡಿಯವೇ ಪ್ರಥಮ ಸ್ಥಾನ ಸಂಪಾದಿಸುವುದು. ಕಳೆದ ವರ್ಷವೂ ಇಂಡಿಯವೇ ಗೆದ್ದುಬಿಟ್ಟಿತು. ಜರ್ಮನಿಗೆ ಎರಡನೆಯ ಸ್ಥಾನ ಬರಬಹುದು. ಉಳಿದವರು 'ಹೊಕ್ಕಿ' ಮಟ್ಟಿಗೆ ಸ್ವಲ್ಪ ಹಿಂದೆ. ನಾಝೀ ಜರ್ಮನಿಗೆ—ತಾನು 'ಆರ್ಯ'ವೆಂದು ಮೆರೆವಾಗ ಇಂಡಿಯದ ಕರಿಯರಿಂದ ಸೋಲುಪಡೆವುದೆಂದರೆ–ಅಸ್ಸೀ–ಜರ್ಮನಿಗೆ ಒಪ್ಪೀತೇ?

ಪೋಲೀಸ್ ಕೊನ್ಸಟೇಬಲನಿಗೆ ಫಾಸಿ!

'ವಿನಾಶ್ಚರ್ಯ!' ಎನ್ನಬಹುದು ನೀವು. ಬರೆವನನಿಗೂ ಆಶ್ಚರ್ಯವಾಗಿದೆ. ಆದರೆ, ಆ ಪೋಲೀಸ್ ಕೊನ್ಸ್ಟೇಬಲನು ಮಾಡಿದ ಅಕೃತ್ಯವು ಅಲ್ಪವೇ—ಆದೀಗ ದುಃಖಕರ ಸಹ! ಬೊಂಬಾಯಿ ಪ್ರಾಂತ್ಯದ ಧಾರವಾಡ ಎಂಬ ಹಳ್ಳಿಗೆ, ಒಂದು ಕ್ರಿಮಿನಲ್ ಮೊಕದ್ದಮೆಯ ಸಂಬಂಧವಾಗಿ ಆ ಕೊನ್ಸಟೇಬಲನು—ಸೋಕವಾಲ್ಕಿ ಎಂದು ಹೆಸರು—ಕಳುಹಲ್ಪಟ್ಟಿದ್ದನು. ಚೆನ್ನಾಗಿ ಸುರಾಪಾನ ಮಾಡಿ, ಒಂದು ಹೋಟೇಲಿನಲ್ಲಿ ಗಲಭೆಯೆಬ್ಬಿಸಲು, ಜನರ ಗುಂಪಿನೊಳಗಿರುವನೊಬ್ಬನು "ನಿನ್ನ ಮೇಲಧಿಕಾರಿಗಳಿಗೆ ನಿನ್ನ ಈ ಜೀವನ ದರ್ಶನೆಯನ್ನು ತಿಳಿಸುತ್ತೇನೆ ನೋಡು!" ಎಂದನಂತೆ. ಕೊನ್ಸಟೇಬಲನು ಮನೆಗೆ ಓಡಿ, ತನ್ನ ಬಂದೂಕನ್ನು ತಂದು, ಆತನನ್ನು ಕೊಂದೇ ಬಿಟ್ಟನು! ಇಂತಹವರಿಗೆ ಫಾಸಿಯಾಗದೆ ಹೋದೀತೇ? ಅಪೀಲಿನಲ್ಲಿಯೂ ಫಾಸಿಯೇ ಕಾಯಂ ಮಾಡಲ್ಪಟ್ಟಿದೆ.

ಸರ್ ಮಹಮೂದ್ ಉಸ್ಮಾನರವರು—

—ಕೆಲ ತಿಂಗಳು ಗವರ್ನರರ ಹುದ್ದೆಯಲ್ಲಿ ಬದಲಿ ನೋಡಿದುವಾಯಿತು. ಈಗ, ನಿವೃತ್ತರಾದರು. ಲೋರ್ಡ್ ಎರ್ಸ್ಕಿನ್ನರು ತಮ್ಮ ರಜೆಯನ್ನು ತೀರಿಸಿ, ಹಿಂದೂದೇಶಕ್ಕೆ ಮರಳಿ, ಚಾರ್ಜು ವಹಿಸಿಕೊಂಡರು. ವೈಸರಾಯರಾಗಿ ಬದಲಿಗೋಯಿತ್ತಿದ್ದ ಸರ್ ಜೋರ್ಜ್ ಸ್ಟೇನ್ಲಿಯವರು ಮದರಾಸಿಗೆ ಬಂದು ಗವರ್ನರರ ಚಾರ್ಜು ವಹಿಸಿಕೊಂಡರು. ಉಸ್ಮಾನ್ ಸಾಹೇಬರನ್ನು ಸಾರ್ವಜನಿಕ ಕಾರ್ಯಗಳಲ್ಲಿ ಭಾಗವಹಿಸುವರಂತೆ. ಅವರಿಗೆ ವಿದಾಯಸತ್ಕಾರಗಳಾದುವು. ಇವರ ಭಾವೀ ಸಾರ್ವಜನಿಕ ಸೇವೆಯು ಸರ್ವಜನ ಹಿತಕಾರಿಯಾಗಿ ಸಾಗುವುದೆಂದು ನಂಬಲಾಗಿದೆ.

ಎರಡೇ ಪಾವಾಣೆಗಳಿಗಾಗಿ—

—ಲಾಹೋರ್ ಬಳಿಯ ಅಮರಸಿದ್ಧ ಎಂಬ ಹಳ್ಳಿಯಲ್ಲಿ ಕತ್ತಿಪೆಟ್ಟು! ಜಗಳ—ಶಾಲಾ ಹುಡುಗರೊಳಗೆ! ಒಬ್ಬನು ಇನ್ನೊಬ್ಬನೊಡನೆ ಎರಡು ಪಾವಾಣೆಗಳನ್ನು ಸಾಲಬೇಡಿ ಪಡೆದು, ಹೇಳಿದ ವಾಯಿದೆಗೆ ಮರಳಿ ಕೊಡಲಿಲ್ಲವಂತೆ. ಅದಕ್ಕಾಗಿ ಸಾಲಿಗನಿಗೆ ರೇಗಿತು. ಎದುರಾಳಿಯನ್ನು ತಿವಿದೇ ಬಿಟ್ಟನು! ಇಬ್ಬರ ವಯಸ್ಸು ೧೫ಕ್ಕಿಂತ ಹೆಚ್ಚಿಲ್ಲ!

ತುಂಡು ಸುದ್ದಿ.

ಬೊಂಬಾಯಿಯ ಸಿನೆಮಾ ನಟಿ ಮಿಸ್ ಮೇಹತಾಬಳು, ಅಕ್ರಮವಾಗಿ ಮೋಟಾರ್ ಡ್ರೈವ್ ಮಾಡಿದ ತಪ್ಪಿಗೆ ೩೦೦ ರೂಪಾಯಿ ದಂಡ ವಿಧಿಸಲ್ಪಟ್ಟಳು.

ಬರೋಡೆಯ ಹೊಸ ತರಕಾರಿ ಮಾರ್ಕೆಟಿನಲ್ಲಿ ಅಂಗಡಿಗಳ ಬಾಡಿಗೆಯನ್ನು ಹೆಚ್ಚಿಸಿದುದರ ನಿಷೇಧಾರ್ಥ ಹಲವು ಅಂಗಡಿಗಾರರು, ನಗರದ ಬೇರೆ ಕಡೆಗಳಿಗೆ ತಮ್ಮ ಅಂಗಡಿಗಳನ್ನೊಯ್ಯುತ್ತಿರುವರು.

ಸಿಡಿಮದ್ದಿನ ಕಾರ್ಖಾನೆಗಳನ್ನೆಲ್ಲ ಲಂಡನ್ ನಗರದಿಂದ ಬೇರೆ ಯಾವುದಾದರೂ ಸ್ಥಳಕ್ಕೆ ವರ್ಗಾಯಿಸಬೇಕೆಂದು ಬ್ರಿಟಿಷ್ ಯುದ್ಧ ಇಲಾಖಾ ಮಂತ್ರಿಗಳ ಆಲೋಚನೆ.

ಸ್ವೇಚ್ಛೆಯಿಂದ ಗರ್ಭಪತನ ಮಾಡಿಕೊಳ್ಳುವುದು ಯಾವ ಸಂದರ್ಭದಲ್ಲಿ ನ್ಯಾಯವೆನಿಸಬಹುದು ಎಂಬ ವಿಚಾರ ವಿಮರ್ಶೆಯು ಬ್ರಿಟಿಷ್ ಮೆಡಿಕಲ್ ಕೌನ್ಸಿಲಿನಲ್ಲಾಗುತ್ತಿದೆ.

ಹಿಟ್ಲರರ ಆಳ್ವಿಕೆಯಲ್ಲಿ ಜರ್ಮನಿಯನ್ನು ಬಿಟ್ಟು ತೊಲಗಿದ ೧೫೫೦೦ ಯೆಹೂದೀ ಡಾಕ್ಟರುಗಳಲ್ಲಿ ೧೪೦೦ ಮಂದಿ ಬ್ರಿಟನಿನಲ್ಲಿ ನೆಲೆಸಿರುವರೆಂದೂ, ಹೆಚ್ಚಿನವರು ಪಲೆಸ್ಟೀನಕ್ಕೆ ತೆರಳಿರುವರೆಂದೂ ತಿಳಿದುಬರುತ್ತದೆ.

ಬಡಿಸಾಲ ಮುನಿಸಿಪಲ್ ಚೆಯರ್ಮ್ಯಾನರ ಮನೆಯನ್ನು ರಾಜದ್ರೋಹಾತ್ಮಕ ಸಾಹಿತ್ಯದ ಬಗ್ಗೆ ಪೋಲೀಸರು ಜಪ್ತಿ ಮಾಡಿ, ನಿಷ್ಫಲರಾದರು.

ತುರ್ಕಿಸ್ಥಾನದ ಬಳಿಯಲ್ಲಿ, ಕಪ್ಪು ಸಮುದ್ರದಲ್ಲಿ, ಒಂದು ಲಕ್ಷ ವರ್ಷಗಳ ಹಿಂದೆ ಮೃತಪಟ್ಟ ಕೆಲವು ದೊಡ್ಡ ಮೃಗಗಳು ಇನ್ನೂ ಆ ಸಮುದ್ರದ ನೀರನ್ನು ವಿಷಮಯವಾಗಿ ಮಾಡುತ್ತಿವೆಯಂತೆ.

ಗೋದಾವರಿ ನದಿಯು ಉಕ್ಕಿ ಹರಿದು, ಕೆಲ ಅನಾಹುತಗಳಾಗಿವೆ.

ಫ್ರಾನ್ಸ್ ಸರಕಾರವು ತನ್ನ ರಾಜ್ಯಕ್ಕೆ ಆಮದಾಗುವ ಸರಕುಗಳ ಮೇಲಿನ ಕಸ್ಟಮ್ಸ್ ಸುಂಕವನ್ನು ಸೇಕಡಾ ೧೦ರಷ್ಟು ಹೆಚ್ಚಿಸಿದೆ.

ಜರ್ಮನಿಯ ವಾನ್ ಪೇಪನರು ವಿಯೆನ್ನದ ಮಂತ್ರಿಗಳಾಗಿ ನೇಮಕ ಹೊಂದಿರುವರು.

ಕಮ್ಯೂನಿಸ್ಟ್ ಚಳವಳಿಯ ನಿರ್ಮೂಲನಕ್ಕಾಗಿ ಚೀನಾ ಸರಕಾರವು ಮಹತ್ಪ್ರಯತ್ನಗಳನ್ನು ಕೈಕೊಂಡಿದೆ.

ಯೂನಿಯನ್ ಧ್ವಜವು 'ಮೂತ್ರಿ'ಯಲ್ಲಿ!

'ಮೂತ್ರಿ'ಯೆಂದರೆ ಜಲಬಾಧೆ ತೀರಿಸಿಕೊಳ್ಳುವ ಪಾಯಖಾನೆ. ಎಡಿನ್‌ಬರ್ಗಿನ ಎರಿಕ್ ಲಿಂಕ್ಲೇಟರ್ ಎಂಬ ಕಾದಂಬರಿಕಾರನು, "ಮೆಗ್ಗ್ಸ್ ಮ್ಯಾರಿಮನ್" ಎಂಬ ತನ್ನ ಕಾದಂಬರಿಯಲ್ಲಿ, ಓರ್ವ ಹೆಂಗಸು ಒಂದು ಕೋಟೆಯಿಂದ, ಯೂನಿಯನ್ ಧ್ವಜವನ್ನು ತೆಗೆದು 'ಮೂತ್ರಿ'ಯ ಮೇಲೆ ನೆಟ್ಟು ಖ್ಯಾತಿ ಪಡೆದಳೆಂಬುದನ್ನು ವರ್ಣಿಸಿದ್ದಾನೆ. ಮಿಸೆಸ್ ಕುತ್‌ಬರ್ಟ್ ಎಂಬಾಕೆ ಈಗ ಒಂದು ದಾವೆ ತಂದಿರುವಳು. ಕಾದಂಬರಿಕಾರನು ತನ್ನನ್ನುದ್ದೇಶಿಸಿ ಹಾಗೆ ಬರೆದಿರುವನೆಂದು ಆಕೆಯ ದಾವೆ – ಮಾನನಷ್ಟಕ್ಕಾಗಿ!

1876ನೇ ಇಸವಿಯಿಂದಲೂ ಪ್ರಸಿದ್ಧಿ ಹೊಂದಿದ

ಎಮ್. ಗಣಪಯ್ಯ ಎಂಡ್ ಸನ್ಸ್, ಮಂಗಳೂರು.

ಇವರ ಶಾಸ್ತ್ರೀಯ ಮತ್ತು ಅನುಭವಸಿದ್ಧ ಔಷಧಗಳು.

ಮಹಾ ಮದನಕಾಮೇಶ್ವರಿ ಲೇಹ:—ಆಯುರ್ವೇದ ಶಾಸ್ತ್ರದಲ್ಲಿ ಅತಿ ಪ್ರಾಮುಖ್ಯತೆಯನ್ನು ಪಡೆದ ಔಷಧಿ. ನರಗಳ ಮತ್ತು ಜನನೇಂದ್ರಿಯದ ಶಕ್ತಿಹೀನತೆ, ಎದೆನೋವು, ಮಲಬದ್ಧತೆ, ಅಜೀರ್ಣ, ಅರುಚಿ, ಅಗ್ನಿಮಾಂದ್ಯ, ವಾಯು ಉಪದ್ರ ಮೊದಲಾದುವುಗಳನ್ನು ಹೋಗಲಾಡಿಸಿ ಮಾನಸಿಕ ಶಕ್ತಿಯನ್ನು ಹೆಚ್ಚಿಸುವುದು. ರಕ್ತವೃದ್ಧಿಯನ್ನೂ, ವೀರ್ಯವೃದ್ಧಿಯನ್ನೂ ಉಂಟುಮಾಡಿ ದೇಹಕ್ಕೆ ಸಂಪೂರ್ಣ ಆರೋಗ್ಯವನ್ನು ಉಂಟುಮಾಡುವುದು. ವಿರೋಗಿಗಳೂ, ಶ್ರಮಜೀವಿಗಳೂ ಇದನ್ನು ಪ್ರತಿನಿತ್ಯ ಸೇವಿಸಿದ್ದಲ್ಲಿ ಶ್ರಮ ಪರಿಹಾರವಾಗಿ ಸುಖನಿದ್ರೆಯು ಲಭಿಸುವುದು.

ಬಾಟ್ಲಿ 1ರ ರೂ. 2–0–0. ಬಾಟ್ಲಿ 3ರ ರೂ. 5–12–0.

ಮೇಹ ಕುಠಾರ:—ಪ್ರಮೇಹ, ಮೂತ್ರಕೃಚ್ಛ್ರ, ಮೂತ್ರ ಹೋಗದಿರುವಿಕೆ, ಮೂತ್ರ ಹೋಗುವಾಗ ಉರಿ, ಮೂತ್ರದ್ವಾರದಿಂದ ಕೀವು ಬರುವುದು, ಮೂತ್ರದಿಂದ ಧಾತು ಹೋಗುವುದು, ಮೂತ್ರ ಆಗಾಗ ಬಂದು ತಡೆಯಲಿಕ್ಕೆ ಸಾಧ್ಯವಿಲ್ಲದಿರುವುದು ಇವೇ ಮೊದಲಾದ ಹಲವು ಮೂತ್ರಕೋಶದ ರೋಗಗಳಿಗೆ ಸಿದ್ಧೌಷಧ.

ಡಬ್ಬಿ 1ಕ್ಕೆ ರೂ. 2 8–0. ಡಬ್ಬಿ 3ರ ರೂ. 7–0–0.

ಕಸ್ತೂರಿ ಮಿಶ್ರಿತ ದಶಮೂಲಾರಿಷ್ಟ:—ಇದು ಬಾಣಂತಿಯರಿಗೆ ಅತ್ಯದ್ಭುತಕರವಾದ ಶಕ್ತಿವರ್ಧಕ ರಸಾಯನವಾಗಿರುತ್ತದೆ. ಪ್ರಸವಿಸಿದ ನಂತರ ಅವರ ಪ್ರಸವದ ಆಯಾಸವನ್ನು ಹೋಗಲಾಡಿಸಿ ಗರ್ಭಕೋಶದ ವೇದನೆಗಳನ್ನು ಸಮಾಧಾನಪಡಿಸುವುದು. ಗರ್ಭಕೋಶದಲ್ಲಿ ಕೆಡುಕು ರಕ್ತವು ನಿಲ್ಲದಂತೆ ಮಾಡಿ, ಅಗ್ನಿಮಾಂದ್ಯ, ಅರುಚಿ, ಸಂಜಿನ ಜ್ವರ, ರಕ್ತಹೀನತೆ, ನಿದ್ರಾಭಂಗ ಮೊದಲಾದುವುಗಳನ್ನು ಹೋಗಲಾಡಿಸಿ, ದೇಹವನ್ನು ಶಕ್ತಿವಂತವೂ ಆರೋಗ್ಯವಂತವೂ ಮಾಡುವುದು. ಬಾಣಂತಿಯರು ಪುಷ್ಟಿಹೊಂದಿ, ಶಿಶುವಿಗೂ ಧಾರಾಳವಾಗಿ ಹಾಲು ಸಿಕ್ಕುವಂತೆ ಮಾಡುವುದು.

ಬಾಟ್ಲಿ 1ಕ್ಕೆ ರೂ. 1–8–0. ಬಾಟ್ಲಿ 2ರ ರೂ. 3–0–0.

ಕಾಂಗ್ರೆಸ್ಸಿನಲ್ಲಿ ಪಾವಿತ್ರ್ಯ

ತನ್ನ ಸಾಪ್ತಾಹಿಕ ಉಪವಾಸ ವೇಳೆ ಮಹಾತ್ಮರು ತಿಳಿದುದು.

ಒಬ್ಬರ ಮೇಲೊಬ್ಬರು ಮುಣ್ಣಿರಚುವುದನ್ನು ಕಂಡು ವ್ಯಸನ.

"ಕಾಂಗ್ರೆಸ್ಸಿನ ಪಾವಿತ್ರ್ಯದ ಬಲವೊಂದಲ್ಲದಿದ್ದರೆ ಕಾಂಗ್ರೆಸ್ಸು ನಾಶಹೊಂದುವುದು."

ವಾರ್ಧಾಗಂಜ್, ತಾ. ೧೩.

ಪತ್ರಿಕಾ ಪ್ರತಿನಿಧಿಗಳು ಗಾಂಧೀಜಿಯವರನ್ನು ಸಂದರ್ಶಿಸಿದಾಗ ಮಹಾತ್ಮರು ಹೀಗೆಂದರು:— 'ನನ್ನ ಏಳು ದಿನಗಳ ಉಪವಾಸದ ವೇಳೆ ನಾನು ಕಾಂಗ್ರೆಸ್ಸಿನ ವಿಷಯಕವಾಗಿ ಆಲೋಚಿಸಿಕೊಂಡಿರುವೆನೋ ಎಂದು ನೀವು ನನ್ನನ್ನು ಪ್ರಶ್ನಿಸುವಿರಾದರೆ, ನಾನು—'ಹರಿಜನ' ಪತ್ರಿಕೆಯಲ್ಲಿ ಬರೆದಂತೆ—ನಾನು ಕಾಂಗ್ರೆಸ್ ಪಕ್ಷೀಯರ ಕುರಿತಾಗಿಯೇ ಆ ಏಳು ದಿನಗಳಲ್ಲಿ ಪದೇ ಪದೇ ಚಿಂತಿಸಿರುವೆನೆಂದು ಹೇಳುವೆನು. ರಾಜಕೀಯ ಅರ್ಥವಿಟ್ಟು ನಾನು ಈ ವಿಷಯವನ್ನೆ ಯೋಚಿಸಲಿಲ್ಲ. ಅಥವಾ ಸ್ವಾತಂತ್ರ್ಯದ ರೂಪದಲ್ಲಿ ಕಾಂಗ್ರೆಸ್ಸಿಗೆ ಏನು ಲಭಿಸುವುದೆಂಬ ಕುರಿತೂ ನಾನು ಚಿಂತಿಸಲಿಲ್ಲ. ಆದರೆ, ನಾನು ಕಾಂಗ್ರೆಸ್ಸಿನ ಆಂತರಿಕ ಪಾವಿತ್ರ್ಯದ ಪ್ರಾಮುಖ್ಯತೆಯ ಮೇಲೆಯೇ ಏಕಚಿತ್ತವಿಟ್ಟು ಚಿಂತಿಸಿದೆ. ಕಾಂಗ್ರೆಸ್ಸಿನವರ ವೋಟು ಸಂಪಾದನೆಯ ಆಚರಣೆಯಲ್ಲಿ ದುಷ್ಕ್ರಮಗಳು ತಲೆದೋರಿವೆಯೆಂದು ನನಗೆ ತಿಳಿದು ಬಂದಿದ್ದು, ಈಗೀಗ, ಈ ತಿಳುವಳಿಕೆಯನ್ನು ದೃಢಗೊಳಿಸಲು ನನಗೆ ಅನೇಕ ಕಡೆಗಳಿಂದ ಪತ್ರಗಳು ಬರುತ್ತಿವೆ. ಆ ಏಳು ದಿನಗಳಲ್ಲಿ ಮಲಗಿಕೊಂಡು ನಾನು ಯೋಚಿಸಿಕೊಂಡುದು ಕಾಂಗ್ರೆಸ್ಸಿನವರ ಕರ್ತವ್ಯವೇನೆಂಬುದನ್ನು; ಅವರು ಹೆಚ್ಚಿನ ವೋಟುಗಳನ್ನು ಪಡೆದು ದೊಡ್ಡ ಹುದ್ದೆಯನ್ನು ಹೊಂದಬೇಕೆಂಬುದು ನನ್ನ ಆಶೆಯೇ ಅಲ್ಲ. ಬದಲಿಗೆ, ಪ್ರೇಮಪೂರಿತ ರಾಷ್ಟ್ರ ಸೇವೆಯೇ ಎಲ್ಲಕ್ಕಿಂತಲೂ ಅಗತ್ಯವೆಂಬುದೇ ನನ್ನ ಚಿಂತನೆಯಾಗಿತ್ತು. ಆದರೆ ಈಗ, ಒಬ್ಬನಿಗೊಬ್ಬನು ಮಣ್ಣೆರಚಿಕೊಂಡು, ಮಾತಿನಲ್ಲಿ ಹಿಂಸೆಯನ್ನಾಚರಿಸುತ್ತಿರುವುದನ್ನು ಕಂಡರೆ ನನಗೆ ಅದರ ಅರ್ಥವೇ ಆಗಲಾರದು. ಸ್ವಯಂಸಿದ್ಧರಾಗಿ ಶಾಸನಕ್ಕೆ ಬಗ್ಗುವ ಕಲೆಯನ್ನು ಕಲಿಯದವರಿಗೆ ಸವಿನಯ ಕಾಯಿದೆಭಂಗವು ನಿಶ್ಚಯವಾಗಿಯೂ ಅಗತ್ಯವಿಲ್ಲ; ಆದರೆ ಈ ಚಿಕ್ಕ ಸೂತ್ರವು ಈಗ ಎಲ್ಲೆಲ್ಲೂ ಮರೆಯಲ್ಪಟ್ಟಂತೆ ಕಂಡುಬರುತ್ತದೆ. ಅಲ್ಲದೆ ಹೋದರೆ ನಾವು ಮಾಡಿರುವ ಕ್ರಮನಿಬಂಧನೆಗಳನ್ನು ಶಿರಸಾವಹಿಸುವೆವೆಂದು ನಾವೇ ಪ್ರತಿಜ್ಞೆ ತೊಟ್ಟು, ಈಗ ಅವುಗಳಲ್ಲಿ ಧಿಕ್ಕರಿಸುವ ಪ್ರಸಂಗವನ್ನು ನೋಡಲಿಕ್ಕಿದ್ದಿಲ್ಲ. ನನ್ನ ಮಟ್ಟಿಗೆ, ಮಿಕ್ಕ ಎಲ್ಲಾ ವಿಷಯಗಳು ಆಂತರಿಕ ಪಾವಿತ್ರ್ಯದ ಮಹತ್ವವಿಷಯದೆದುರು ತೃಣಸಮಾನವಾಗಿ ಕಂಡುಬರುತ್ತವೆ. ನನ್ನ ಭಾವನೆಯೇನೆಂದರೆ—ಹೇಗೆ ಹರಿಜನ ಸೇವಕರಲ್ಲಿ ಪಾವಿತ್ರ್ಯವಿಲ್ಲದೆ ಅಸ್ಪೃಶ್ಯತೆಯು ನಾಶವಾಗಲಾರದೋ ಹಾಗೆಯೇ, ಕಾಂಗ್ರೆಸ್ಸಿನವರಲ್ಲಿ ಆಂತರಿಕ ಪಾವಿತ್ರ್ಯವಿಲ್ಲದಿದ್ದರೆ ಈ ಮಹಾ ಕಾಂಗ್ರೆಸ್ಸು ಸಂಸ್ಥೆಯು ಕೂಡಾ ನಾಶ ಹೊಂದುವುದು.

ಇದಲ್ಲದೆ ತತ್ಕಾಲಕ್ಕೆ ನನ್ನಲ್ಲಿ ಯಾವ ಸಂದೇಶವೂ ಇಲ್ಲ. ನನ್ನ ಚಿತ್ತದಲ್ಲಿ ಈ ವಿಷಯಕವಾದ ಪ್ರಾಮುಖ್ಯ ಚಿಂತನೆಗಳಿವೆ.'

[illegible] ಸೂಚನೆ.

ದಿಲ್ಲಿಯ ಕಾಂಗ್ರೆಸು ಕೆಲಸಗಾರರು ಹಾಗು ಹಿಂದೆ ಗಾಂಧಿ ಆಶ್ರಮವಾಸಿಯಾಗಿದ್ದ ಶ್ರೀ. ಕೃಷ್ಣನಾಂದವಾಲರವರು ದಿಲ್ಲಿ ಜಿಲ್ಲಾ ಕಾಂಗ್ರೆಸು ಕಮಿಟಿಯ ಅಧ್ಯಕ್ಷರಿಗೊಂದು ಪತ್ರ ಬರೆದಿರುವರೇನೆಂದರೆ: 'ಕಾಂಗ್ರೆಸು ಚುನಾವಣೆಗಳ ಮತ್ತು ಖಾದಿ ಧಾರಣಕ್ಕೆ ವಿರುದ್ಧವಾದ ವರ್ತನೆಯ ಬಗ್ಗೆ ನಡೆದ ಚರ್ಚೆಗಳಿಂದ ಮಹಾತ್ಮಗಾಂಧಿಯವರು ಇನ್ನೊಂದು ಉಪವಾಸವನ್ನು ಕೈಕೊಳ್ಳುವಂತಾಗುವುದೋ ಎಂದು ನನ್ನ ಸ್ವಂತ ಭಯದಿಂದ ನಾನು ಮುಂಚಿತವಾಗಿಯೇ ಸ್ಪಷ್ಟವಾಗಿ ಹೇಳಬೇಕಾಗುತ್ತದೆ. ಈಗಾಗಲೇ ಯಶಸ್ವಿಯಾಗಿ ಪೂರ್ತಿಗೊಳಿಸಿರುವ ಒಂದು ವಾರದ ಉಪವಾಸ ವ್ರತವನ್ನು ಪ್ರಾರಂಭಿಸುವ ಮೊದಲು ಮಹಾತ್ಮರು ಕೊಟ್ಟ ಲೇಖದಲ್ಲಿ ಅವರು ಕಾಂಗ್ರೆಸು ಸಂಸ್ಥೆಗಳ ಸದಸ್ಯರು ಸ್ವಾಭಾವಿಕವಾಗಿ ಖಾದಿಧಾರಣ ಮಾಡುವುದರ ವಿಷಯ ಪ್ರಸ್ತಾಪಿಸಿದ್ದೇ ಮೂಲ ಕಾರಣ.

ಕಾಂಗ್ರೆಸುವಾಲರೆಲ್ಲ ಮಹಾತ್ಮರು ಇಂತಹ ಪ್ರಾಯಶ್ಚಿತ್ತವನ್ನು ನಮ್ಮ ಪಾಪಗಳಿಗಾಗಿ ಮಾಡದ ಹಾಗೆ ಸರ್ವ ವಿಧಗಳಲ್ಲಿಯೂ ಪ್ರಯತ್ನಿಸುವುದಾವಶ್ಯಕ. ದಿಲ್ಲಿ ಕಾಂಗ್ರೆಸು ಚುನಾವಣೆಗಳ ಗೊಂದಲವನ್ನು ಇತ್ಯರ್ಥಿಸುವುದಕ್ಕೆ ನಿರ್ಮಿಸಲಾದ ಪಂಚಾಯತಿಗೆ ಹಾಕಿಕೊಟ್ಟ ಶರ್ತಗಳ ಕಡೆಗೆ ನಿಮ್ಮ ಲಕ್ಷ್ಯವನ್ನು ಕೊಡಬೇಕಾಗುತ್ತದೆ. ಅದರಲ್ಲಿ ಜಿಲ್ಲಾ ಕಾಂಗ್ರೆಸು ಕಮಿಟಿಗಳಿಗೆ ಸದಸ್ಯತನದ ಅರ್ಜಿ ಮಾಡತಕ್ಕವರು ಸ್ವಾಭಾವಿಕವಾಗಿ ಖಾದಿಧಾರಣ ಮಾಡುವವರಾಗಿರಬೇಕೆಂದು ಸ್ಪಷ್ಟವಾಗಿ ನಮೂದಿಸಿರುತ್ತದೆ; ಮತ್ತು ಅಂತಹ ಗೃಹಸ್ಥರು ಹತ್ತಿ, ಉಣ್ಣೆ ಅಥವಾ ರೇಶ್ಮೆಯಿಂದ ಕೈನೂಲಿನ ಕೈನೇಯ್ಗೆಯ ಖಾದಿ ವಸ್ತ್ರವನ್ನೇ ಸ್ವಾಭಾವಿಕವಾಗಿ ಧರಿಸುವವರೆಂದು ಪಂಚಾಯತ ಸದಸ್ಯರು ಶಿಫಾರಸು ಮಾಡತಕ್ಕದ್ದೆಂದಿದೆ. ಬನಿಯಾನುಗಳು (ಗಂಜಿಫ್ರಾಕುಗಳು), ಕರವಸ್ತ್ರ, ಟುವೆಲು (ಅಂಗವಸ್ತ್ರ) ಮುಂತಾದ ಇತರ ವಸ್ತ್ರಗಳು ಕೂಡ ಸ್ವಾಭಾವಿಕ ಖಾದಿ ಧರಿಸುವವನಿಗೆ ಸಲ್ಲದ್ದೆಂದು ಸೂಚಿಸಿ ಮಂಜೂರುಮಾಡಲಾಗಿದೆ.

ದಿಲ್ಲಿ ಕಾಂಗ್ರೆಸು ಕಮಿಟಿಯ ಚುನಾವಣೆಯು ಕೊನೆಗೊಂಡಿದೆಯಾಗಿ ಇಂತಹ ನ್ಯೂನಾತಿರಿಕ್ತಗಳು ಬೆಳಕಿಗೆ ಬಂದಿವೆ. ನಾವೇ ಮಂಜೂರುಮಾಡಿರುವ ಕ್ರಮಗಳನ್ನು ವಿಶ್ವಾಸಪೂರ್ವಕವಾಗಿ ನಾವು ಪಾಲಿಸುತ್ತಿರಬೇಕೆಂದು ಕಾಂಗ್ರೆಸುವಾಲನಾಗಿ ನನ್ನ ಅಭಿಮತವಾಗಿದೆ. ನಾವು ಅಪೇಕ್ಷಿಸುವುದಾದರೆ ಅದಕ್ಕೆ ವಿರುದ್ಧ ಅಭಿಪ್ರಾಯವನ್ನು ಬಲಪಡಿಸಬಹುದು; ಆದರೆ ಕಾಂಗ್ರೆಸು ಕ್ರಮಗಳಲ್ಲಿ ಅಂತಹ ನಿಬಂಧನೆಯು ಇರುವ ತನಕ ಅದನ್ನು ನ್ಯಾಯದಂತೆ ಮತ್ತು ವಿಶ್ವಾಸದಿಂದ ಪಾಲಿಸಬೇಕು.'

ಕೆಲವು ಸೂಚನೆಗಳು.

(೧) ಜಿಲ್ಲಾ ಕಾಂಗ್ರೆಸು ಸಮಿತಿಯ ಪ್ರತಿಯೊಬ್ಬ ಸದಸ್ಯನು ಕಾಂಗ್ರೆಸು ನೀತಿಗೆ ಅನುಸಾರವಾಗಿ ಪ್ರಮಾಣ ಮಾಡುವಂತೆ ಅಥವಾ ದೃಢಪಡಿಸುವಂತೆ ನಿಬಂಧನೆ ಮಾಡಬೇಕು. ಈ ಪ್ರತಿಜ್ಞೆಯಲ್ಲಿ ಸ್ವಾಭಾವಿಕ ಖಾದಿಧಾರಣದ ಶರ್ತವೂ ನಮೂದಿಸಲಾಗಬೇಕು. ಇದಕ್ಕೆ ವಿರುದ್ಧವಾಗಿ ವರ್ತಿಸುವವರು ರಾಜಿನಾಮೆಕೊಡಬೇಕು ಇಲ್ಲವೆ ಅತನನ್ನು ನಿವೃತ್ತಿಗೊಳಿಸಬೇಕು.

(೨) ಹೊಸತಾಗಿ ಜಿಲ್ಲಾ ಕಾಂಗ್ರೆಸು ಸಮಿತಿಗಳಿಗೆ ಆರಿಸಲಾದ ಸದಸ್ಯರು ಸ್ವಾಭಾವಿಕ ಖಾದಿಧಾರಣಕ್ಕೆ ವಿರೋಧವಾಗಿ ವರ್ತಿಸುವರೆಂದು ತಿಳಿದು ಬಂದ ಮಟ್ಟಿಗೆ, ಆ ಕುರಿತು ಅವರಿಗೆ ಎಚ್ಚರಿಕೆ ಕೊಡುವುದು ಮತ್ತು ಕ್ರಮಪ್ರಕಾರವಾಗಿ ಸಮಿತಿಯಿಂದ ಅವರನ್ನು ಬಹಿಷ್ಕರಿಸುವುದು. ಅವರು ಇನ್ನೂ ಈ ಕ್ರಮಕ್ಕೆ ವಿರುದ್ಧವಾಗಿರುವುದಾದರೆ, ಅವರು ರಾಜಿನಾಮೆ ಕೊಡುವಂತೆ ಕೇಳಿಕೊಳ್ಳುವುದು, ಇಲ್ಲವಾದ್ದಲ್ಲಿ ಅವರನ್ನು ಸಮಿತಿಯಿಂದ ತೆಗೆದು ಹಾಕುವುದು.

ದೇಶಬಾಂಧವರೇ, ಮಹಾತ್ಮರು ಈಚೆಗೆ ಹೇಳಿರುವಂತೆ ಈ ತಿಂಗಳಾಂತ್ಯದ ವರೆಗೆ ವಿಶ್ರಾಂತಿ ಹೊಂದಿ, ಪ್ರಾಯಶಃ ವಿಧಾಯಕ ಕಾರ್ಯಕ್ರಮಕ್ಕೇ ಹೆಚ್ಚಿನ ಲಕ್ಷ್ಯಕೊಡುವವರಿದ್ದಾರೆ—ಅಂದರೆ ಖಾದಿಯೇ ಇದರಲ್ಲಿ ಶ್ರೇಷ್ಠವಾದ್ದು; ಆದ್ದರಿಂದ, ಉದ್ಯಮವೂ ಐಶ್ವರ್ಯವೂ, ದೇಶಪ್ರೇಮವೂ, ದಾನಶೂರತೆಯೂ ಎಲ್ಲ ಒಂದರಲ್ಲೇ ಕೂಡಿರುವ ಪವಿತ್ರ ಖಾದಿಯನ್ನು ಇನ್ನಾದರೂ ಹೆಚ್ಚೆಚ್ಚಾಗಿ ಉಪಯೋಗಿಸಿಯೂ ಇತರರಲ್ಲಿ ಉಪಯೋಗಕ್ಕೆ ಬರುವಂತೆಯೂ ಮಾಡಿ ಕರ್ತವ್ಯಪರರಾಗಿರಿ! ಜೀವಂತ ದೇವರ ಅವತಾರವೆಂದು ಅನ್ನಿಸಿಕೊಳ್ಳುವ ಮಹಾತ್ಮಾ ಗಾಂಧಿಯವರು ಇನ್ನೂ ಇನ್ನೂ ನಮ್ಮ ಪಾಪಗಳಿಗಾಗಿ ಉಪವಾಸ ಕೈಕೊಳ್ಳುವಂತೆ ಮಾಡಿ ಹತ್ಯಾದೋಷಕ್ಕೆ ಒಳಗಾಗಬೇಡಿರಿ! ಖಾದಿಯು ಹಿಂದೂದೇಶದ ಬಡತನವನ್ನು ಹೊಡೆದೋಡಿಸುವ ಲಕ್ಷ್ಮೀದೇವಿ!

ಶ್ರೀ. ನಾ. ಪೈ, ಉಡುಪಿ.

"ಇಂಪೀರಿಯಲ್ ಕೆಮಿಕಲ್ಸ್ ಲಿಮಿಟೆಡ್" ಸಂಸ್ಥೆಗೆ

ಇಂಡಿಯಾ ಸರಕಾರದ ರಿಯಾಯತಿ.

ಈ ಮೇಲಿನ ಹೆಸರಿನ ಕಂಪೆನಿಯು, ಆಂಗ್ಲೇಯರಿಂದ ಹಿಂದೂದೇಶದಲ್ಲಿ ಸ್ಥಾಪಿಸಲ್ಪಟ್ಟಿದೆ. ನಮ್ಮ ಮಾಜಿ ವೈಸರಾಯರೊಬ್ಬರೂ ಈ ಕಂಪೆನಿಯ ಡೈರೆಕ್ಟರುಗಳಲ್ಲೊಬ್ಬರು. ಹಿಂದೂಸ್ಥಾನದೊಳಗಿನ (ಪಂಜಾಬ ಪ್ರಾಂತ್ಯ) ರಾಸಾಯನಿಕ ಧಾತುಗಳನ್ನು, ಸಂಗ್ರಹಿಸಿ ಕೊಂಡೊಯ್ಯುವ ೬೦ ವರ್ಷಗಳ ಪಾಯಿದೆಗೆ, ಆ ಖನಿಜಗಳ ಪ್ರದೇಶವನ್ನು ಸರಕಾರವು ಆ ಕಂಪೆನಿಗೆ ಬಿಟ್ಟು ಕೊಡುವುದೆಂದು ಪ್ರಕಟವಾಗಿದೆ. ಈ ವಿಷಯವಾಗಿ ಎಸೆಂಬ್ಲಿಯಲ್ಲಿ ಹಿಂದೀಯ ಮೆಂಬರರಿಗೂ ಗೃಹಮಂತ್ರಿಗಳಿಗೂ ಆದ ಪ್ರಶ್ನೋತ್ತರಗಳನ್ನೋದಿರಿ:—

ಪ್ರಶ್ನೆ:—ಸರಕಾರವು ಆ ಕಂಪೆನಿಗೆ ಕೊಡಲಿರುವ ರಿಯಾಯತಿಯ ಕೂಲಂಕಷ ವಿವರವನ್ನು ಕೊಡುವುದೇ? ಉತ್ತರ—ಸಾಧ್ಯವಿಲ್ಲ. ಪ್ರಶ್ನೆ—ಹೀಗೆ ರಹಸ್ಯವಾಗಿ ಒಂದು ವಿದೇಶಿ ಕಂಪೆನಿಯೊಡನೆ ಸರಕಾರವು ಕರಾರು ಮಾಡಲು ಕಾರಣವೇನು? ಉತ್ತರ—ಮತ್ತಾವ ಕಂಪೆನಿಯೂ ಸರಕಾರದೊಡನೆ ಕರಾರಿಗೆ ಮುಂದೆ ಬಂದಿಲ್ಲ. ಪ್ರಶ್ನೆ—ಮಾಜಿ ವೈಸರಾಯರೊಬ್ಬರು ಈ ಕಂಪೆನಿಯ ಡೈರೆಕ್ಟರರೆಂಬುದು ನಿಜವೇ? ಉತ್ತರ—ಹಾಗೆಂದು ನನ್ನ ನಂಬಿಕೆ. ಪ್ರಶ್ನೆ—ಒಂದು ಖಾಸಗಿ ವಿದೇಶೀ ಕಂಪೆನಿಯ ವಿಷಯವಾಗಿ ಇಂಡಿಯಾ ಸರಕಾರಕ್ಕೆ ಇಷ್ಟೊಂದು ಆಸಕ್ತಿಯೇಕೆ? ಉತ್ತರ—ಏಕೆಂದರೆ, ಆ ಕಂಪೆನಿಯು ಉಪಯೋಗ ಮಾಡಿಕೊಳ್ಳಲಿರುವ ವಸ್ತುವಿನ ಮಾಲಿಕರು—ಸರಕಾರ. ಪ್ರಶ್ನೆ—ಯಾವುದಾದರೂ ಹಿಂದೀ ಕಂಪೆನಿಯು ಆ ವಸ್ತುಗಳ ಉಪಯೋಗ ಮಾಡಿಕೊಳ್ಳಬಹುದೇ ಎಂಬುದಕ್ಕೆ ಸರಕಾರವು ಜಾಹೀರಾತು ಕೊಟ್ಟಿದೆಯೇ? ಉತ್ತರ—ಯಾರೂ ತಮಗೆ ಬೇಕೆಂದು ಮುಂದೆ ಬಂದಿಲ್ಲದ ಒಂದು ವಸ್ತುವಿಗಾಗಿ, ಒಂದು ಸಂಸ್ಥೆಯು ತನಗೆ ಬೇಕೆಂದು ಮೊದಲನೆ ಸಲಕ್ಕೆ ಮುಂದೆ ಬಂದಾಗ, 'ಮತ್ತಾರಾದರೂ ಮುಂದೆ ಬರುವವರಿದ್ದೀರಾ?' ಎಂದು ಜಾಹೀರು ಪಡಿಸುವುದು ಸರಿಯಲ್ಲ.

ಅಮೇರಿಕದ ಪ್ರಸಿದ್ಧ ಸರ್ಜನ್ ದಂತವೈದ್ಯರಾದ—

ಡಾ। ವಿರೋ ಪಿ. ಡೆ ಸಾ, ಡಿ. ಡಿ. ಎಸ್.,

ಇವರು "ಕೊಪ್ರನ್" ದಂತಮಂಜನದ ವಿಷಯವಾಗಿ ಹೀಗೆ ಬರೆಯುತ್ತಾರೆ:—



ನಾನು, ಶಾಸ್ತ್ರೋಕ್ತವಾದ ಈ 'ಕೊಪ್ರನನ್ನು' ನನ್ನ ವೈದ್ಯಕೀಯ ಸಲಹೆ ಪಡೆದ ದಂತ ಬಾಧೆಯುಳ್ಳವರಿಗೆ ನಿರವಿಸಿ; ಜಾಗರೂಕತೆಯಿಂದ ಅದರ ಗುಣಗಳನ್ನು ಕಂಡಿರುವೆನು.

ಕೊಪ್ರನ್ ದಂತ ಮಂಜನದ ಗುಣವಿವರವೆಲ್ಲ ಅಕ್ಷರಶಃ ನಿಜ. ಅದರಲ್ಲುಪಯೋಗವಾಗುವ ಮುಖ್ಯ ವಸ್ತುಗಳೆಲ್ಲ ಪ್ರತ್ಯಪ್ರತ್ಯೇಕವಾಗಿ ಬಹು ಕಾಲದಿಂದ ಹಲ್ಲುಗಳಿಗೆ ಬಲವೀವ ಗುಣಗಳುಳ್ಳದೆಂದು ಸಿದ್ಧಾಂತವಾಗಿರಲು, ಅವುಗಳೆಲ್ಲ ಸೇರಿ ಉಂಟಾದ ಈ ಮಂಜನವು ಅತ್ಯುತ್ತಮವೇ ಆಗಿದೆ.

ಬಾಬಳಿನ ಹಸಿ ಕಡ್ಡಿಯೇ ಹಲ್ಲುಗಳಿಗೆ ಆರೋಗ್ಯಕರ; ಇತರ ಜಿನಸುಗಳೊಂದಿಗೆ ಈ ಬಾಬೂಲಿನ ಸತ್ವವು ಸೇರಿದೆಯಾದ ಕಾರಣ 'ಕೊಪ್ರನ್' ಒಂದು ಆದರ್ಶ ದಂತಮಂಜನವಾಯಿತು. ನಾನು ಕಂಡಂತೆ ಕೊಪ್ರನಿಂದ ವಸಡುಗಳಿಂದಾಗುವ ಸ್ರಾವ ನಿಂತು, ಅವು ಪುಷ್ಟಿಗೊಂಡು, ನವಚೇತನ ಹೊಂದುತ್ತವೆ. ಅದರ ಉಪಯೋಗದಿಂದ ಬಾಯೊಳಗಿನ ವಿಷಕಾರಕ ಕ್ರಿಮಿಗಳು ನಾಶವಾಗುವುವು. ಅದರ ರುಚಿಯು ಹಿತಕರವಾಗಿದ್ದು, ಬಾಯಿಯ ದುರ್ವಾಸನೆ ನೀಗಿ, ಉಚ್ಛ್ವಾಸಕ್ಕೊಂದು ಸೌರಭವುಂಟಾಗುವುದು.

ಈಗ ಪೇಟೆಯಲ್ಲಿರುವ ದಂತಮಂಜನಗಳಲ್ಲಿ ಕೊಪ್ರನಿಗೆ ಅಗ್ರಸ್ಥಾನವಿರುವುದನ್ನು ನಾನು ಮುಂದಾಗಿ ಕಾಣಬಲ್ಲೆ.

ಎಲ್ಲೆಲ್ಲೂ ದೊರೆವುದು.

ಕೊಪ್ರನಿಗೆ ಶಿಫಾರಸು ಬೇಕಾಗಿಲ್ಲ; ಬೇಕು ನಿಮ್ಮದೊಂದು ಪರೀಕ್ಷೆ ಮಾತ್ರ.

ಅದನ್ನುಪಯೋಗಿಸಿದಂತೆ ಆರೋಗ್ಯಕರವಾಗಿ ಬೆಳೆವುವು ನಿಮ್ಮ ಹಲ್ಲುಗಳು; ಅದುವೇ ಕೊಪ್ರನಿಗೆ ಸರ್ವ ಜನಾದರವನ್ನು ಸಾಧಿಸಿಕೊಡುವುದು.

ತಯಾರಿಸುವವರು:—

ಕೊಪ್ರನ್ ಕೆಮಿಕಲ್ ಕೋ., ಲಿಮಿಟೆಡ್, 83/85 ತಾರದೇವ್ ರೋಡ್, ಬೊಂಬಾಯಿ.

ಸಂಪಾದಕರ ಟಪ್ಪಾಲುಪೆಟ್ಟಿಗೆ.

ಪತ್ರದಾರರ ಅಭಿಪ್ರಾಯಗಳಿಗೆ ನಾವು ಜವಾಬ್ದಾರರಲ್ಲ. ಎಲ್ಲ ಲೇಖಕರು ತಮ್ಮ ಸಂಪೂರ್ಣ ಹೆಸರು ವಿಳಾಸಗಳನ್ನು ಕೊಡತಕ್ಕದ್ದು. ದೀರ್ಘ ಲೇಖನಗಳಿಗೆ ಎಡೆ ಕೊಡಲಾಗುವುದಿಲ್ಲ. ಲೇಖನಗಳು ಸಾರ್ವಜನಿಕ ಹಿತದೃಷ್ಟಿಯುಳ್ಳದ್ದು, ಯುಕ್ತ ಶೈಲಿಯಲ್ಲಿ ರಚಿತವಾದುದು. (ಸಂ. ಸ್ವ.)

"ಗುರುಪುರ ಪೊಳಲಿ ಗಾಡಿರಸ್ತೆ"

ಕಳೆದ ೧೮೮೭ನೇ ಇಸ್ವಿಯಿಂದ ಈ ವರೆಗೆ ಬಂಟ್ವಾಳ, ಪೊಳಲಿ, ಗುರುಪುರ ದಾಖರಸ್ತೆಯನ್ನು ಮಾಡಿಸಿ ಕೊಡಬೇಕೆಂದು ನೂರಾರು ಅರ್ಜಿಗಳನ್ನೂ ಹೇಳಿಕೆಗಳನ್ನೂ ತಾಲೂಕು, ಬೋರ್ಡಿನವರಿಗೆ ಕಳುಹಿಸುತಿದ್ದರು. ಹಾಗೂ ಹೀಗೂ ಬಂಟ್ವಾಳ ರಸ್ತೆಯಿಂದ ಪೊಳಲಿ ಗಡಿವರೇಗೆ ರಸ್ತೆ ಮಾಡಿಸಿದ ತಾಲೂಕು ಬೋರ್ಡು ಅಲ್ಲಿಗೆ ಬಿಟ್ಟುಹೋಯಿತು. ಇನ್ನುಳಿದ ರಸ್ತೆ ಡಿಸ್ಟ್ರಿಕ್ಟ್ ಬೋರ್ಡಿನವರಾದರೂ ಮಾಡಿಸಿದರೆ ಬಹಳ ಉಪಕಾರವಿತ್ತು. ಆದರೆ ಈ ಬೋರ್ಡುಗಳನ್ನು ನಂಬಿ ಕಣ್ಣುಮುಚ್ಚಿ ಕೂತುಕೊಳ್ಳುವುದರಿಂದ ಪ್ರಯೋಜನವಿಲ್ಲವೆಂದು ಹಳ್ಳಿಗರಾದ ನಾವೇ ನಮ್ಮ ಮಟ್ಟಿಗೆ ದ್ವಾಖರಸ್ತೆಯ ಗೊಡವೆಬಿಟ್ಟು, ಗಾಡಿರಸ್ತೆ ಮಾಡಿಸುವುದಾಗಿ ಆಲೋಚಿಸಿದ್ದೇವೆ. ಆ ಬಗ್ಗೆ ಶ್ರೀ ಮಂಗಳೂರು ವಕೀಲ್ ನಾರಾಯಣ [illegible]ರೂ, ಅವರ ಮಗ ರಾಮರಾಯರೂ, ಅಡ್ಡೂರು [illegible] ವೆಂಕಪ್ಪಯ್ಯನವರೂ, ಸಾಧೂರು ಸಂಕಪ್ಪ ಶೆಟ್ರು, ಕಲ್ಲಂಜೆ ಮಂಜಯ್ಯ ಶೆಟ್ರು, ನೂಯಿ ಕೃಷ್ಣಯ್ಯನವರೂ, ಬೆಳ್ಳಿಬೆಟ್ಟು ನರ್ಸುಮಾಸ್ಟ್ರಾಯವರೂ, ಕೂಡಾ ನೂಯಿ ಎಂಬಲ್ಲಿಯ ವರೆಗೆ ಗಾಡಿ ರಸ್ತೆಯನ್ನು ಮಾಡಿಸಿ ಕೊಡುತ್ತೇವೆ ಎಂತ ಹೇಳಿದ್ದು ಮಾತ್ರವಲ್ಲ, ಅವರವರ ಸ್ಥಳಗಳಲ್ಲಿ ರಸ್ತೆ ಕೆಲಸಕ್ಕೆ ಆರಂಭಮಾಡಿಸಿದ್ದಾರೆ. ಉಳಿದ ಸುಮಾರು ೧½ ಸಂಕ್ಷೆ ರಸ್ತೆಯಲ್ಲಿ ಸ್ವಲ್ಪ ಅಂಶ ಸುಜೀರ್ ಮಾಧವ ಲಕ್ಷ್ಮಣ ನ್ಯಾಕರ ಮತ್ತು ದಾಸಣ್ಣ ಪೂಂಜರ ದರಖಾಸ್ತು ಸ್ಥಳದಲ್ಲಿ ಬೀಳುತ್ತದೆ. ಸದ್ರಿ ಸ್ಥಳಗಳನ್ನು ಖಾಸ್ಗಿ ರಸ್ತೆ ಬಗ್ಗೆ ಕೊಡುವರೆಂಬ ನಂಬಿಕೆಯಿದೆ. ಮಾತ್ರವಲ್ಲ ಆ ಸ್ಥಳಗಳಲ್ಲಿ ರಸ್ತೆ ಕೆಲಸವನ್ನು ಗುರುಪುರ ಮಠದ ಚಿನ್ನಬಸಪ್ಪ ಸನ್ಯಾಸಿಯವರೂ, ಪೇಟೆಯ ಸಾಹುಕಾರರೂ ಮಾಡಿಸುವ ಆಲೋಚನೆಯಲ್ಲಿದ್ದಾರಾಗಿ ಕೇಳುತ್ತೇವೆ.

ಲೋಕೋಪಕಾರವಾದ ಈ ಮಹಾಕಾರ್ಯಕ್ಕೆ ಸರ್ವರೂ ಶಕ್ತ್ಯಾನುಸಾರ ಸಹಾಯಮಾಡಿ, ಆದಷ್ಟು ಬೇಗನೇ ರಸ್ತೆಕೆಲಸ ಪೂರೈಸುವಂತೆ ಮಾಡಬೇಕಾಗಿಯೂ ಇದಕ್ಕೆ ಸಹಾಯ ಮಾಡಿದವರ ವಿವರಗಳನ್ನು ಮುಂದಿನ ಸಂಚಿಕೆಗಳಲ್ಲಿ ಪ್ರಕಟಿಸುವುದಾಗಿಯೂ ತಿಳಿಸಬಯಸುವ

ಎನ್. ಎ. ಶೀನಪ್ಪ ಹೆಗ್ಡೆ, ಪೊಳಲಿ.

ಕೃತಜ್ಞತಾಸಮರ್ಪಣ.

ಶಾರೀರಿಕ ಸ್ವಾಸ್ಥ್ಯದ ಕಡೆಗೆ ಅಧಿಕ ಲಕ್ಷ್ಯವನ್ನು ಕೊಡಬೇಕಾದ ಆವಶ್ಯಕತೆ, ಸಮಯಾಭಾವ ಮೊದಲಾದ ಪ್ರತಿಕೂಲ ಕಾರಣಗಳಿಂದಾಗಿ ಈಗ್ಗೆ ಸುಮಾರು ಮೂರು ವರ್ಷಗಳಿಂದ ಕಾರ್ಕಳದಲ್ಲಿ ನಾನು ನಡೆಸಿಕೊಂಡು ಬರುತ್ತಿದ್ದ ಧರ್ಮಾರ್ಥ ಹಿಂದೀ ಭಾಷಾ ಪ್ರಚಾರಕಾರ್ಯವನ್ನು ಸದ್ಯಕ್ಕೆ ತಾತ್ಕಾಲಿಕವಾಗಿ ನಿಲ್ಲಿಸಬೇಕಾಗಿ ಬಂದುದ[illegible] ಅತ್ಯಂತ ಖೇದವಾಗುತ್ತದೆ. ಈ ವರೆಗಿನ [illegible] ಕಾರ್ಯದ ಪರಿಣಾಮವೆಂಬಂತೆ ಮದ್ರಾಸಿನ ದಕ್ಷಿಣ ಭಾರತ ಹಿಂದೀ ಪ್ರಚಾರ ಸಭೆಯವರು ನಡೆಸಿಕೊಂಡು ಬರುತ್ತಿರುವ ಪಬ್ಲಿಕ ಪರೀಕ್ಷೆಗಳಲ್ಲಿ ೬೮ ಮಂದಿ ಪ್ರಥಮ ಪರೀಕ್ಷೆಯನ್ನೂ, ೩೧ ಮಂದಿ ಮಧ್ಯಮ ಪರೀಕ್ಷೆಯನ್ನೂ, ೧೦ ಮಂದಿ ರಾಷ್ಟ್ರಭಾಷಾ ಪರೀಕ್ಷೆಯನ್ನೂ ಕೊಟ್ಟಿರುವರಲ್ಲದೆ, ಸುಮಾರು ಇಷ್ಟೇ ಮಂದಿ ರಾಷ್ಟ್ರಭಾಷೆಯಾದ ಹಿಂದೀ—ಹಿಂದೂಸ್ಥಾನಿಯ ವ್ಯವಹಾರಿಕ ಜ್ಞಾನವನ್ನೂ ಸಂಪಾದಿಸಿರುವರೆಂದು ಹೇಳಬಹುದು. ಕಾರ್ಕಳದಂತಹ ಕ್ಷೇತ್ರದಲ್ಲಿ ನನ್ನಿಂದ ಇಷ್ಟು ಪ್ರಚಾರವು ಆಗಲಿಕ್ಕೆ ಕಾರ್ಕಳದ ಮಹಾಜನರ ತನುಮನಗಳ ಪ್ರೋತ್ಸಾಹವೂ, ಹಿಂದೀಪ್ರೇಮಿ ವಿದ್ಯಾರ್ಥಿಗಳ ಉತ್ಸಾಹವೂ ಕಾರಣವಾಗಿವೆ. ಇವರು ನನ್ನ ಈ ಅಲ್ಪ ಸೇವೆಯನ್ನು ಸ್ವೀಕರಿಸಿ, ಉದಾರಭಾವವನ್ನು ಪ್ರದರ್ಶಿಸಿದುದಕ್ಕಾಗಿ ಇವರೆಲ್ಲರಿಗೂ ಈ ಮೂಲಕ ನನ್ನ ಕೃತಜ್ಞತೆಯನ್ನು ಸಮರ್ಪಿಸುವುದಲ್ಲದೆ, ಮುಂದೆ ಅನುಕೂಲ ಪರಿಸ್ಥಿತಿಯು ಬಂದೊದಗಿದಾಗ ನಾನು ಪುನಃ ಕೈಕೊಳ್ಳಬಹುದಾದ ಈ ಕಾರ್ಯದಲ್ಲಿ ಹಿಂದಿನಂತೆ ಮುಂದೂ ಸಹಾಯವನ್ನಿತ್ತು ಪ್ರೋತ್ಸಾಹಿಸಬೇಕಾಗಿಯೂ ಇವರೊಡನೆ ನಮ್ರತಾಪೂರ್ವಕ ವಿನಂತಿ ಮಾಡಿಕೊಳ್ಳುತ್ತೇನೆ.

ಇತಿ ಸಜ್ಜನವಿಧೇಯ,

ಕಟಪಾಡಿ ಶ್ರೀನಿವಾಸ ಶೆಣೈ,

ಅಧ್ಯಾಪಕ ಮುಕ್ತ ಹಿಂದೀ ಪ್ರಚಾರಕ, ಕಾರ್ಕಳ.

ರಿಸೆಟ್ಲ್‌ಮೆಂಟ್ ರಿಪೋರ್ಟ್.

ದಕ್ಷಿಣ ಕನ್ನಡ ಜಿಲ್ಲೆಯ ರಿಸೆಟ್ಲ್‌ಮೆಂಟ್ ವರದಿಯನ್ನು ಸ್ಪೆಶಲ್ ಸೆಟ್ಲ್‌ಮೆಂಟ್ ಅಧಿಕಾರಿಗಳಾದ ಇ. ಡಬ್ಲ್ಯು. ಬೌಚರ್ ದೊರೆಗಳವರು ಬಹಳ ಚಲೋದಾಗಿ ಬರೆದಿರುತ್ತಾರೆ. ಈ ವರದಿಯನ್ನು ಓದಲಿಕ್ಕೆ ಶುರುಮಾಡಿದ್ದೇ—ಮುಗಿಸದೆ ಕೆಳಕ್ಕಿಡಲಿಕ್ಕೆ ಮನಸ್ಸಾಗಲಿಲ್ಲ. ಅದರ ಭಾಷೆಯೂ, ಸರಳತೆಯೂ, ವಿಷಯಗಳೂ ಅಷ್ಟು ಚೆನ್ನಾಗಿವೆ.

ಸೆಟ್ಲ್‌ಮೆಂಟ್ ವರದಿಯಲ್ಲಿ, ತೀರ್ವೆ ಹೆಚ್ಚಿಸಲಿಕ್ಕೆ ಕೊಟ್ಟ ಕಾರಣಗಳು ಸರಿಯಾದುವುಗಳಲ್ಲ. ಕಳೆದ ಸೆಟ್ಲ್‌ಮೆಂಟಿನಲ್ಲಿ ಕೃಷಿ ಖರ್ಚನ್ನು ಬಹಳ ಕಡಿಮೆಯಾಗಿ ಎಣಿಸಿರುತ್ತಾರೆ, ಈಗಲೂ ಅಷ್ಟೇ ಖರ್ಚಿನಲ್ಲಿ ಸಾಗುವಳಿ ಕೆಲಸವಾಗುತ್ತದೆಂಬ ಮಾತನ್ನು ಕೇಳುವಾಗ—ಸರಕಾರಕ್ಕೆ ಕೃಷಿ ವಿಚಾರದಲ್ಲಿ ಏನೂ ಅನುಭವವಿಲ್ಲವೆಂದೂ, ಅವರು ಈ ವಿಚಾರದಲ್ಲಿ ಸರಿಯಾದ ಶೋಧನೆ ಮಾಡಲಿಲ್ಲವೆಂದೂ ಅರ್ಥವಾಗುತ್ತದೆ. ಹಿಂದಿನ ಸೆಟ್ಲ್‌ಮೆಂಟ್ ಕಾಲದಲ್ಲಿ ಇದ್ದಂತೆ ಈಗ ಕೂಲಿಯೂ ಉಳಿದಿಲ್ಲ. ಅಂದಿಗಿಂತ ಇಮ್ಮಡಿ ಕೂಲಿಯನ್ನು ರೈತನು ಕೊಡಲೇಬೇಕು. ದವಸಧಾನ್ಯಗಳ ಬೆಲೆಯು, ಅಂದಿಗಿಂತ ಇಂದು ಸ್ವಲ್ಪ ಹೆಚ್ಚಾಗಿರುವುದು ನಿಜವಾದರೂ—ರೈತನ ಸಹಜವಾದ ಖರ್ಚುಗಳು ಏರಲಿಲ್ಲವೇನು? ಸರಕಾರದವರು ತಯಾರಿಸಿದ ರೈತನ ಜಾತಕ (ಸೆಟ್ಲ್‌ಮೆಂಟ್ ವರದಿ) ವನ್ನು ಓದಿ ತಿಳಿದುಕೊಳ್ಳುವಷ್ಟು ವಿದ್ಯಾಭ್ಯಾಸವನ್ನು ಪಡೆಯಬೇಕಾದರೂ, ರೈತನು ನಾಲ್ಕಾರು ಐನೂರು ರೂಪಾಯಿಗಳನ್ನು ವೆಚ್ಚಮಾಡಲೇ ಬೇಕಾಗುವುದು. ಇನ್ನು ಪ್ರಯಾಣದ ವೆಚ್ಚ, ಪುಭಶೋಭನಾದಿಗಳ ವೆಚ್ಚ, ಕೋರ್ಟು ವ್ಯವಹರಣೆಯ ವೆಚ್ಚ, ಇವೆಲ್ಲವೂ ದಿನಹೋದಂತೆ ಬೆಳೆಯುತ್ತಾ ಹೋಗುವುವು. ಹೀಗಿರಲು ಧಾನ್ಯಗಳ ಬೆಲೆ ಏರಿದೆ ಎಂಬ ಒಂದು ಕಾರಣದಿಂದ ತೀರ್ವೆ ಹೆಚ್ಚಿಸುವುದು ನ್ಯಾಯವೇ?

ಸೆಟ್ಲ್‌ಮೆಂಟ್ ವರದಿಯಲ್ಲಿ ಪುತ್ತೂರು ತಾಲೂಕಿನಲ್ಲಿರುವ ಚಿಳಾಲು, ಉಜ್ರೆ, ಕಲ್ಮಂಜೆ, ಧರ್ಮಸ್ಥಳ, ಮುಂಡಾಜೆ, ಕೋಡಿಂಬಳ, ನೆಕ್ಕಿಲಾಡಿ, ಸವಣಾಲು ಗ್ರಾಮಗಳನ್ನು ೩ನೇ ಗ್ರೂಪಿನಿಂದ ೪ನೇ ಗ್ರೂಪಿಗೆ ಸೇರಿಸಲು ಶಿಫಾರಸು ಮಾಡಿರುತ್ತಾರೆ. ಈ ಮೊದಲೇ ೪ನೇ ಗ್ರೂಪಿನಲ್ಲಿರುವ ಕಡಬ, ಬಂಟ್ರ, ಕುಟ್ರುಪಾಡಿ, ಕೊಕ್ಕಡ, ನೆಲ್ಯಾಡಿ ಮೊದಲಾದ ೪೩ ಗ್ರಾಮಗಳಿಗೆ ನಂಜದಲ್ಲಿ ಒಂದು ತರಂ ತೀರ್ವೆ ರಿಯಾಯಿತಿ ಇದೆ. ಈ ಹೊಸತಾಗಿ ೪ನೇ ಗ್ರೂಪಿಗೆ ಸೇರಿದ ಮೇಲೆ ಬರೆದ ಎಂಟು ಗ್ರಾಮಗಳಿಗೆ ಈ ರೀತಿಯ ಶಿಫಾರಸು ಇಲ್ಲ. ಇಲ್ಲಿ ವಿಶೇಷವಾದ ಆಶ್ಚರ್ಯದ ವಿಚಾರವಿದೆ. ಕಡಬ ಮಾಗಣೆ ಎಂಬ ಸ್ಥಳಿಯ ಬಲಭಾಗವಾದ (ಹವೆಯಲ್ಲಿಯೂ ಬೆಳೆಯಲ್ಲಿಯೂ ಉತ್ತಮವಾದ) ಕಡಬ, ಬಂಟ್ರಗ್ರಾಮಗಳಿಗೆ ತೀರ್ವೆಯಲ್ಲಿ ಕಡಿಮೆಯಿದೆ, ಎಡಭಾಗವಾದ ಕೋಡಿಂಬಳ, ನೆಕ್ಕಿಲಾಡಿ ಗ್ರಾಮಗಳಿಗೆ ತೀರ್ವೆಯಲ್ಲಿ ಕಡಿಮೆಯಿಲ್ಲ. ಇದು ಯಾವ ನ್ಯಾಯವೋ ದೇವರೇ ಬಲ್ಲ. ಈ ಮೊದಲೇ ನಾಲ್ಕನೇ ಗ್ರೂಪಿನಲ್ಲಿರುವ ಕಡಬ, ಬಂಟ್ರ, ಕುಟ್ರುಪಾಡಿ, ಕೊಕ್ಕಡ ಮೊದಲಾದ ಗ್ರಾಮಗಳಿಗಿಂತ ಈಗ ೪ನೇ ಗ್ರೂಪಿಗೆ ಸೇರುವ ಕಲ್ಮಂಜ, ಧರ್ಮಸ್ಥಳ, ಮುಂಡಾಜೆ, ಕೋಡಿಂಬಳ, ನೆಕ್ಕಿಲಾಡಿ, ಸವಣಾಲು ಮೊದಲಾದ ಗ್ರಾಮಗಳು ಹವೆಯಲ್ಲಿ ಚೆನ್ನಾಗಿರುವವೇ? ಎಂದೂ ಇಲ್ಲ. ಆದಕಾರಣ, ಹೊಸ ೪ನೇ ಗ್ರೂಪಿನ ಗ್ರಾಮಗಳಿಗೂ, ಹಳೆಯ ೪ನೇ ಗ್ರೂಪಿನ ಗ್ರಾಮಗಳಂತೆಯೇ ತೀರ್ವೆಯಲ್ಲಿ ರಿಯಾಯಿತಿ ಮಾಡುವುದು ಸರಕಾರದ ಕರ್ತವ್ಯವಾಗಿದೆ. ಈ ಕುರಿತು ಉಜ್ರೆ, ಕಲ್ಮಂಜ, ಧರ್ಮಸ್ಥಳ, ಮುಂಡಾಜೆ ಮೊದಲಾದ ಗ್ರಾಮಗಳ ನಿವಾಸಿಕರು ಚಳವಳ ಮಾಡಿ ಸರಕಾರದ ತಪ್ಪನ್ನು ತೋರಿಸಿಕೊಟ್ಟು ಸರಿಮಾಡಿಕೊಳ್ಳದಿದ್ದರೆ, ತುಂಬಾ ಅನ್ಯಾಯಕ್ಕೆ ಗುರಿಯಾಗಬೇಕಾಗುವುದು.

ಸೆಟ್ಲ್‌ಮೆಂಟ್ ವರದಿಯಲ್ಲಿ ಅತಿ ನಿಕೃಷ್ಟವೆಂದು ವಿಭಾಗಿಸಲ್ಪಟ್ಟ ಸಿಡ್ಲೆ, ಶಿಶಿಲ, ಮುಲವಂತಿಗೆ, ಮೊದಲಾದ ೪ನೇ ಗ್ರೂಪಿನಲ್ಲಿರುವ ೧೧ ಗ್ರಾಮಗಳಿಗೆ ಮಾತ್ರ ನಂಜದಲ್ಲಿ ಎರಡು ತರಂ ಬೇರೆಯೂ ರಿಯಾಯಿತಿ ಇದೆ. ಆದರೆ ಈ ಗ್ರಾಮಗಳಿಗೆ ಸರಿಸಮಾನವಾದ ಇನ್ನೂ ಅನೇಕ ಗ್ರಾಮಗಳು ೪ನೇ ಗ್ರೂಪಿನಲ್ಲಿರುತ್ತವೆ. ಈಗ ೪ನೇ ಗ್ರೂಪಿನಲ್ಲಿರುವ ೬೩ ಗ್ರಾಮಗಳು ಹೆಚ್ಚಾಗಿ ಒಂದೇ ಸ್ಥಿತಿಯಲ್ಲಿರುತ್ತವೆಯೆಂಬುದು, ಪುತ್ತೂರು ತಾಲೂಕಿನ ಕಾಡು ಗ್ರಾಮಗಳ ಜನರ ಜೀವನ ಸ್ಥಿತಿಗತಿಯ ಮತ್ತು ವ್ಯವಸಾಯದ ವಿಷಯವಾಗಿ, ತಾಲೂಕಿನ ಹೆಚ್ಚಿನ ಮಾಹಿತಿಯುಳ್ಳ ಯೋಗ್ಯ ಜನರಿಂದ ಕೂಡಿದ ಕಮಿಟಿಯೊಂದು ತಾ. ೦೫—೫—೩೧ರಲ್ಲಿ ತಯಾರಿಸಲ್ಪಟ್ಟು ಸರಕಾರಕ್ಕೆ ಕಳುಹಿಸಿಕೊಟ್ಟ ರಿಪೋರ್ಟಿನಲ್ಲಿಯೂ ಕಾಣುತ್ತದೆ. ಆದುದರಿಂದ ಪುತ್ತೂರು ತಾಲೂಕಿನಲ್ಲಿ ೪ನೇ ಗ್ರೂಪಿನಲ್ಲಿರುವ ೬೩ ಗ್ರಾಮಗಳಿಗೂ ಒಂದೇ ರೀತಿಯಾಗಿ ನಂಜದಲ್ಲಿ ಎರಡು ತರಂ ತೀರ್ವೆ ಕಡಿಮೆ ಮಾಡುವುದು ದಯಾಳು ಬ್ರಿಟಿಷ್ ಸರಕಾರದ ಮುಖ್ಯ ಕೆಲಸವಾಗಿರುತ್ತದೆ.

ಸೆಟ್ಲ್‌ಮೆಂಟ್ ವರದಿಯ ಇನ್ನೊಂದು ಕೊರತೆಯೆಂದರೆ ಪುತ್ತೂರು ತಾಲೂಕಿನಲ್ಲಿ ೪ನೇ ಗ್ರೂಪಿನಲ್ಲಿರುವ ಗ್ರಾಮಗಳಲ್ಲಿ ಹುಣಿಸೆ ಮರವನ್ನು ಬಾಗ್ಯಾತಾಗಿ ಎಣಿಸಿರುವುದು. ಕಾಡುಪ್ರದೇಶದ ಹುಣಿಸೆ ಮರಗಳು ಚೆನ್ನಾಗಿ ಫಲಕೊಡುವುದಿಲ್ಲ. ಈ ಗ್ರಾಮಗಳ ಜನರ ಉಪಯೋಗಕ್ಕೆನೇ ಬೇರೆ ಕಡೆಗಳಿಂದ ಹುಣಿಸೆಹುಳಿಯನ್ನು ವ್ಯಾಪಾರಿಗಳ ಮೂಲಕ ತರಿಸುವುದು ವಾಡಿಕೆಯಾಗಿದೆ. ಆದಕಾರಣ, ಹುಣಿಸೆಮರವನ್ನು ೪ನೇ ಗ್ರೂಪಿನಲ್ಲಿ ಬಾಗ್ಯಾತಾಗಿ ಎಣಿಸಬಾರದು.

ತೀರ್ವೆ ಹೆಚ್ಚಿಸುವ ಆತುರದ ವಿಚಾರ—ಜನರು ಈಗ ಇರುವ ತೀರ್ವೆಯನ್ನೇ ಕೊಡಲಿಕ್ಕೆ ಸಾಧ್ಯವಿಲ್ಲದೆ ತೀರ್ವೆ ಕಡಿಮೆ ಮಾಡಬೇಕೆಂದು ಮೊರೆಯಿಡುವಾಗ, ಇನ್ನೂ ತೀರ್ವೆ ಹೆಚ್ಚೆಂದರೆ, ಕಾಲಿಗೆ ಬಿದ್ದ ಬಿದ್ದವನಿಗೆ ತಲೆಗೆ ಮೆಟ್ಟಿದಂತಾಗುವುದು. ರೈತರ ಆರ್ಥಿಕ ಅವನತಿಯು ತೊಲಗುವವರೆಗಾದರೂ ರಿಸೆಟ್ಲ್‌ಮೆಂಟನ್ನು ಮುಂದರಿಸಬಾರದೇ? ಈಗಲೇ ತೀರ್ವೆ ಏರಿಸಿದರೆ ರಯಿತನು ತನ್ನ ಭೂಮಿಯಿಂದಲೇ ವಿರಹಿತನಾಗಬೇಕಾಗುವುದು.

ಬಿ. ಟಿ. ಅರಿಗ ಜೈನ್,

೧೩—೭—೪೧. ಕಡಬ, ದ. ಕ.

ಬೇಲಿಯೇ ಹೊಲವನ್ನು ಮೇದರೆ ಹೇಗೆ?

ನಮ್ಮ ಸಂಸ್ಥಾನದಲ್ಲಿ ಶಾಲೆಗಳ ಸಂಖ್ಯೆಯು ಅತಿರೇಕವಾಗಿದೆಯೆಂಬ ಪ್ರತೀತಿಯಿದೆ. ಇದಕ್ಕೆ ಅಪವಾದವೆಂದರೆ ಉಡುಪಿ ತಾಲೂಕಿನ ಹಿರಿಗ ಗ್ರಾಮದ ಶಿರ್ಲಾಲ! ಇಲ್ಲಿಯ ಆಸುಪಾಸಿನ ಮಕ್ಕಳು ಪ್ರಾಥಮಿಕ ವಿದ್ಯಾಭ್ಯಾಸವನ್ನಾದರೂ ಪಡೆಯಬೇಕಾದರೆ, ಸಾಧಾರಣ ಏಳೆಂಟು ಮೈಲು ದೂರದ ಉಡುಪಿಗಾಗಲೀ ಹಿರಿಯಡ್ಕಕ್ಕಾಗಲೀ ಹೋಗಬೇಕಾಗಿದೆ. ಈ ಭಾಗ್ಯವು ಶ್ರೀಮಂತರ ಮಕ್ಕಳಿಗಲ್ಲದೆ ಬಡವರ ಮಕ್ಕಳಿಗಾಗುವುದಿಲ್ಲ. ಸ. ಮೂರು ಆರು ಮೈಲು ಸುತ್ತಳತೆಯ ಗ್ರಾಮಗಳಿಗೆ ಒಂದಾದರೂ ಹಾಯರ್ ಎಲಿಮೆಂಟರಿ ಶಾಲೆ ಇರುವುದಿಲ್ಲ.

ಈ ಕೊರತೆಯನ್ನು ನಿವಾರಿಸುವುದಕ್ಕಾಗಿ ಹಿರಗ, ಬೆಳ್ಳಂಪಳ್ಳಿ, ಬದಗಿಬೆಟ್ಟು, ಹಿರೇಬೆಟ್ಟು ಮತ್ತು ಅತ್ರಾಡಿ ಈ ೫ ಗ್ರಾಮಗಳ ಮಹನೀಯರ ಸಭೆಯೊಂದನ್ನು ಕರೆದು, ಎಡ್ವಕೇಟ್ ಬಿ. ಹಿರಿಯಣ್ಣ ಹೆಗ್ಗಡೆಯವರ ಅಧ್ಯಕ್ಷತೆಯಲ್ಲಿ ಹತ್ತು ಜನ ಮೆಂಬರರುಳ್ಳ ಒಂದು ಕಮಿಟಿಯನ್ನು ನೇಮಕಮಾಡಿದರು. ಎಲ್ಲರೂ ಪ್ರೋತ್ಸಾಹವೀಯುವ ಭರವಸೆಯನ್ನು ಕೊಟ್ಟು ಒತ್ತಾಯ ಮಾಡಿದುದರಿಂದ ನಾನು ನಿರ್ವಾಹವಿಲ್ಲದೆ ಕಾರ್ಯದರ್ಶಿಯಾಗಬೇಕಾಯಿತು. ಆ ಮೇಲೆ ಬೇಲಿಯೇ ಹೊಲವನ್ನು ಮೇದಂತೆ ಮೆಂಬರರಲ್ಲಿ ಕೆಲವರ ಸ್ವಾರ್ಥಪರತೆಯು ಶಾಲಾ ಸಂಬಂಧವಾದ ಕೆಲಸ ಯಾವುದನ್ನೂ ಮುಂದುವರಿಯದಂತೆ ಮಾಡಿತು. ಗ್ರಾಮಸ್ಥರೆಲ್ಲರೂ ಹಳ್ಳಿಗರ ಸೋಮಾರಿತನದಿಂದ ತಟಸ್ಥರಾಗಿರುವರು.

ಇಲ್ಲಿ ಕೆಲವರು ಎರಡು ಸಾವಿರ ರೂಪಾಯಿ ನಷ್ಟ ಮಾಡಿಕೊಂಡಾದರೂ ಗುತ್ತು ವಹಿಸಿಕೊಳ್ಳುವಂತೆ ಮಾಡಿದರಲ್ಲದೆ, ಊರಲ್ಲಿ ಹೆಚ್ಚಿನವರ ಅಪೇಕ್ಷೆಯಂತೆ ಶಾಲಾ ಸ್ಥಾಪನೆಗೆ ಸಹಾಯಮಾಡಲು ಒಪ್ಪಲಿಲ್ಲ. ಅಜ್ಞಾನದಿಂದ ಕೇವಲ ದುರಾಭ್ಯಾಸಕ್ಕೆ ತುತ್ತಾದ ಬಡವರ ದುಡ್ಡೂ—ಕಳೆದ ವರ್ಷಕ್ಕಿಂತಲೂ ಈ ವರ್ಷ ಇಮ್ಮಡಿಯಾಗಿ ಏರಿಸುವಂತೆ ಗುತ್ತೆದಾರರಿಗೆ ಧೈರ್ಯ ಕೊಟ್ಟಿತು. ಆದರೆ ಬಡಜನರ ಬುದ್ಧಿನಲ್ಲಿ ಕ್ಷೀಣಾಂಶವನ್ನಾದರೂ ಬಡವಿದ್ಯಾರ್ಥಿಗಳ ಬಗ್ಗೆ ಶಾಲೆಗೆ ಹಾಕಲಿಕ್ಕೆ ಮನಸ್ಸು ಒಪ್ಪಲಿಲ್ಲ. ಹಾ! ಇವರ ಹೃದಯವು ಎಷ್ಟು ಕಠಿಣವಾಗಿರಬೇಕು? ಊರಿಗೆ ಉಪದ್ರಕಾರಿಯಾಗುವಷ್ಟು ಆಗಕ್ಕೂ ಹಿತಕಾರಿಯಾಗುವುದರಲ್ಲಿ ಇಲ್ಲದೆ ಹೋಯಿತು. ಇವರಲ್ಲಿ ಗ್ರಾಮಸ್ಥರಲ್ಲಿ ಎಷ್ಟರಮಟ್ಟಿನ ಒಕ್ಕಟ್ಟಿರುವುದೆಂದು ಸ್ಪಷ್ಟವಾಗುವುದು. ಊರಿನ ಪ್ರಮುಖರು ಹಾಗೂ ಶಾಲಾ ಬಗ್ಗೆ ಪ್ರಯತ್ನ ಮಾಡಿದ ಮಹನೀಯರುಗಳು ಈ ಕುರಿತು ಮನಃಪೂರ್ವಕವಾಗಿ ಕೆಲಸಮಾಡದಿದ್ದರೆ ಅವರ ಕೀರ್ತಿಯು ಕಳಂಕಿತವಾಗುವುದರಲ್ಲಿ ಸಂಶಯವಿಲ್ಲ.

ಹಿರ್ಗಾನ, ೧೦—೮—೪೧. ಬಿ. ಸದಾಶಿವ ಹೆಗಡೆ.

ವಿಟಮಿನ್ ಹೆಚ್ಚಾದರೆ!—

ಬಹಳ ಕೆಡುಕಿದೆ. ಮನುಷ್ಯನ ಆಯುರ್ನಾಶಕ್ಕೆ ಅದುವೇ ಕಾರಣವಾಗುವುದೂ ಇದೆ. ಎಡಿನ್‌ಬರ್ಗಿನಲ್ಲಿ ಹದಿನೆಂಟು ತಿಂಗಳ ಒಂದು ಮಗುವಿಗೆ "ವಿಟಮಿನ್ D"ಯನ್ನು ಅವಶ್ಯಕತೆಗಿಂತ ಹೆಚ್ಚು ಕೊಡುತಿದ್ದರು. ಮಗುವಿಗೆ ಮೂತ್ರಕೋಶದ ಪ್ರಕೋಪ ಗೊಂಡು, ಆಸ್ಪತ್ರೆಗೆ ಸಾಗಿಸಿದರೂ ಫಲಕಾರಿಯಾಗದೆ—ಮರಣಪಟ್ಟಿದೆ.

ರೇಶ್ಮೆಯಂತಹ, ನುಣುಪಾದ ಮತ್ತು ಹೊಳಪಾದ ಕೇಶಧಾಮ

ದಿನನಿತ್ಯದ ಸ್ನಾನಕ್ಕೆ ಮುಂಚಿತವಾಗಿ ನಿಮ್ಮ ಕೂದಲುಗಳನ್ನು ಚೆನ್ನಾಗಿ ಬಾಚಿ, ಬ್ರಶ್ಶಿನಿಂದ ಸವರಿ, ಆ ನಂತರ

"ಕುಂತಳ ಕೌಮುದಿ"

ಎಂಬ ಹಿಂದೂಸ್ಥಾನದ ಪ್ರಸಿದ್ಧ ಕೇಶ ತೈಲ್ಯದಿಂದ ಕೂದಲುಗಳ ಬುಡವನ್ನು ಜಾಗರೂಕತೆಯಿಂದ ತಿಕ್ಕಿರಿ.

(ಮನಮುಗ್ಧಕರವಾದ ಸುಗಂಧವನ್ನುಳ್ಳುದು.)

ಹಿಂದೂಸ್ಥಾನದಲ್ಲೆಲ್ಲ ಸರ್ವತ್ರ ಉಪಯೋಗಿಸಲ್ಪಡುತ್ತಿದೆ.

ತಯಾರಿಸುವವರು:— ಬೆಲೆ ಸೀಸೆ ಒಂದಕ್ಕೆ ರೂ. 0—12—0.

ಆರ್. ಸಿ. ಸೇನ್ ಎಂಡ್ ಕೋ.,

ಲಿಮಿಟೆಡ್, ಕಲ್ಕತ್ತ.

ಏಜಂಟರು:—

ಕುಂತಳ ಕೌಮುದಿ ತೈಲ,

ವೆನ್‌ಲೋಕ್ ಆಸ್ಪತ್ರೆ ಎದುರು, ಮಂಗಳೂರು.

ಶ್ರೀ ವಿಲಾಸ

ಗಣಪತಿ ಹೈಸ್ಕೂಲ್ ರಸ್ತೆ, × ಮಂಗಳೂರು.

ಸರಕಾರೀ ಉದ್ಯೋಗಸ್ಥರಿಂದಲೂ, ವಿದ್ಯಾರ್ಥಿಗಳಿಂದಲೂ, ಪುರಪ್ರಮುಖರಿಂದಲೂ ಆದರಿಸಲ್ಪಡುತ್ತಿರುವ—

ಮಂಗಳೂರಿನ ಒಂದು ಪ್ರಾಮುಖ್ಯ ಉಪಹಾರಗೃಹ.

ಶುದ್ಧ ತಿಂಡಿ, ತಾಜಾತುಪ್ಪದ ಮಿಠಾಯಿ, ಎಲ್ಲ ಬಗೆಯ ಒಳ್ಳೆಯ ಸೌಮ್ಯ ಪಾನೀಯಗಳು,—ಶೌಚ್ಯ, ಸ್ಥಳಾನುಕೂಲತೆ ಇವೆಲ್ಲವುಗಳಿಗಾಗಿ 'ಶ್ರೀ ವಿಲಾಸ'ವು ಹೆಸರುಗೊಂಡಿದೆ.

[ವಿವಾಹ, ಉಪನಯನ, ಸತ್ಕಾರಕೂಟ ಇತ್ಯಾದಿಗಳ ಸಂದರ್ಭದಲ್ಲಿ ಬೇಕಾದ ತರದ ತಿಂಡಿ ತಿನಸುಗಳ ಸ್ಪೊಬಗಿಸಲಾಗುವುದು.]

ಸುಜೀರ ದೋಜಾಳ ನಾಯಕ್, ಮ್ಯಾನೇಜರ.

O. S. No. 303 1934

[illegible]

Kundapur, 14-9-34 } A. N. S. Adhar, Plaintiff's Pleader

S. C. No. 241/1934

[illegible]

L. Narayan Rao, Counsel for Plaintiff
21-8-34

" ಕಥಾವಳಿ "

ಬೆಳಗಾವಿ

[illegible]

ಮಂಗಳೂರಿನ ಈಗಿನ ಪೇಟೆಧಾರಣೆ.

[illegible]

ನಿಮ್ಮ ಆರೋಗ್ಯವು ಈ ಚಿಕ್ಕ ಗುಳಿಗೆಗಳಲ್ಲಿ

ಸುಭದ್ರವಾಗಿದೆ.

ಕೇಸ್ - ಫ್ರೆನ್ - ಮಿಂಟ್

ಡಾ|| ಫ್ರಾಯರವರ ಕೆಚೆಟ್ಸ್

ಕೆಲವೇ ನಿಮಿಷಗಳಲ್ಲಿ ಖಂಡಿತ ಗುಣಬರುತ್ತದೆ!

'ಕೆಚೆಟ್ಸು'ಗಳು ನಿರಪಾಯವಾಗಿ, ಭರವಸೆಯಿಂದ ಸೇವಿಸಲ್ಪಡಲು ಯೋಗ್ಯವಾಗಿವೆ.

ಎಲ್ಲೆಲ್ಲಿಯೂ ದೊರೆಯುವುದು.

The Paragon Products Co., Ballard Estate, Bombay

[illegible] M. K. Prabhu, Bantwal S. Kanara.

ಮಂಗಳೂರಿನ ಪೇಟೆಧಾರಣೆ.

ಸಾಮಗ್ರಿಗಳು	ಇಂದ (ರೂ. ಆ.)	ವರೆಗೆ (ರೂ. ಆ.)
[illegible]	4—4	4—8
[illegible]	4—10	5—4
[illegible]	4—4	4—12
[illegible]	4—2	4—8
[illegible]	5—0	5—0
[illegible]	5—10	6—4
[illegible]	4—0	4—0
[illegible]	1—0	12—8
[illegible]	9—8	10—0
[illegible]	6—2	[illegible]—4
[illegible]	8—4	9—8
[illegible]	10—0	17—0
[illegible]	77—0	—8
[illegible]	7—0	7—8
[illegible]	40—0	4—0
[illegible]	5—4	5—8
[illegible]	40—0	42—0
[illegible]	19—0	19—8
[illegible]	23—12	27—0
[illegible]	2—15	3—14
[illegible]	5—0	5—8
[illegible]	6—8	5—0
[illegible]	3—10	3—14
[illegible]	7—0	7—8
[illegible]	4—8	5—4
[illegible]	136—8	137—8
[illegible]	18—0	22—0
[illegible]	3—11	3—5
[illegible]	42—0	44—0
[illegible]	10—0	10—0
[illegible]	13—0	14—8
[illegible]	14—12	15—0
[illegible]	9—0	9—8
[illegible]	20—10	21—0
[illegible]	30—0	35—0
[illegible]	182—0	198—0
[illegible]	226—8	280—8
[illegible]	118—0	124—0
[illegible]	62—0	82—0

'WIMCO'

ಸ್ವಂತ ಉಪಯೋಗದಲ್ಲಿ ಯಾವಾಗಲೂ ವಿಶ್ವಾಸಯೋಗ್ಯವಾದ ಬೆಂಕಿಕಡ್ಡಿಗಳೆಂದರೆ,

' ವಿಮ್ಕೋ '

[illegible] 'ವಿಮ್ಕೋ' ¼ ಅರ್ಧ ಸೈಜು ಸುಮಾರು 40 ಕಡ್ಡಿಗಳಿರುವ ಪೆಟ್ಟಿಗೆಯ ಮ್ಯಾಚಸ್ ಬರುವುದುಂಟು.

ಪ್ರತಿ ಗ್ರೊಸ್ ಒಂದರ ರೂ. 2-2-0

[illegible] 60 ಕಡ್ಡಿಗಳ [illegible] ಗ್ರೊಸ್ ಒಂದಕ್ಕೆ ರೂ. 2-4-0.

ಬೇಕಾದವರು ಈ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳುವುದು

ಮೆಸ್ಸರ್ಸ್ ಸುಜೀರ್ ಅಚ್ಯುತ ರಾಯಪ್ಪ ನಾಯಕ್ ಮತ್ತು ಕಂಪನಿ,
ಬಂದರ, ಮಂಗಳೂರು.

ಕೆಪ್ರಸೆಂಟೆಟಿವ್ — ದಿ ವೆಸ್ಟರ್ನ್ ಇಂಡಿಯಾ ಮ್ಯಾಚ್ ಕಂಪೆನಿ, ಲಿಮಿಟೆಡ್,
ಮುಂಬಯಿ.

[ಗುಣಬಾರದಿದ್ದರೆ ಹಣ ವಾಪಾಸು]

[illegible]

ಸಂತತಿ ಪ್ರತಿಬಂಧಕ ಚೂರ್ಣ (ರಿಜಿಸ್ಟರ್ಡ್)

[illegible]

ವಿಳಾಸ.—[illegible] S. M. C

[illegible]

[illegible]	[illegible]	[illegible]	[illegible]	[illegible]	[illegible]	[illegible]	ಸೂರ್ಯ ಉ	ಸೂರ್ಯ ಅಸ್ತ	[illegible]
25	[illegible]	[illegible]	[illegible]	[illegible]	[illegible]	[illegible]	6 21	6 45	[illegible]
26	[illegible]	[illegible]	[illegible]	[illegible]	[illegible]	[illegible]	6 21	6 44	
27	[illegible]	[illegible]	[illegible]	[illegible]	[illegible]	[illegible]	6 21	6 44	
28	[illegible]	[illegible]	[illegible]	[illegible]	[illegible]	[illegible]	6 21	6 43	
29	[illegible]	[illegible]	[illegible]	[illegible]	[illegible]	[illegible]	6 21	6 43	
30	[illegible]	[illegible]	[illegible]	[illegible]	[illegible]	[illegible]	6 21	6 42	
31	[illegible]	[illegible]	[illegible]	[illegible]	[illegible]	[illegible]	6 21	6 42	

ರಾಷ್ಟ್ರೀಯ ಪಕ್ಷದ ಉದಯ.

ಕಲ್ಕತ್ತಾ ಪರಿಷತ್ತಿನಲ್ಲಿ ಪಂಡಿತ ಮಾಲವೀಯರ ಭಾಷಣ.

ಬುಧವಾರ ಸಂಜೆ [illegible] ಕಾಂಗ್ರೆಸ್ ಅಧಿವೇಶನದವನ್ನು ಸ್ಥಾಪಿಸುವ ಉದ್ದೇಶದಿಂದ 'ರಾಷ್ಟ್ರೀಯ ಪಕ್ಷ'ವೆಂಬ ಒಂದು ಹೊಸ ಪಕ್ಷವನ್ನು ಜನರಿಗೆ ತಿಳಿಸುವ ಸಲುವಾಗಿ ಪಂಡಿತ ಮದನಮೋಹನ ಮಾಲವೀಯರು ಕರೆದಿದ್ದ ಸಭೆಯು ಕಲ್ಕತ್ತೆಯ ರಾಮ್ ಮೋಹನ್ ಗ್ರಂಥಾಲಯದ ಸಭಾಸದನದಲ್ಲಿ ಇದೇ ತಾ. [illegible]ರಲ್ಲಿ ಜರುಗಿತು. ಪರಿಷತ್ತಿಗೆ ಮಾಲವೀಯರು ಅಧ್ಯಕ್ಷರಾಗಿದ್ದರು. ಆಚಾರ್ಯ ಪ್ರಫುಲ್ಲಚಂದ್ರ ರಾಯರವರು ಸ್ವಾಗತ ಸಮಿತಿಯ ಅಧ್ಯಕ್ಷರು.

ಅಧ್ಯಕ್ಷರಾದ ಮಾಲವೀಯರು, ತಮ್ಮ ಭಾಷಣದಲ್ಲಿ, ಪ್ರತ್ಯೇಕವಾದ ಪ್ರಾತಿನಿಧ್ಯದ ಹಾನಿಯನ್ನು ಕುರಿತಾಗಿ ವಿವರಿಸಿ, ಜಾತೀಯ ನಿರ್ಣಯದ ಕುರಿತಾದ ತಮ್ಮ ಆಕ್ಷೇಪಗಳನ್ನು ಒತ್ತಿ ಹೇಳಿದರು.

ಅಧ್ಯಕ್ಷರ ಭಾಷಣ.

"ನಲ್ವತ್ತೆಂಟು ವರ್ಷಗಳ ಹಿಂದೆ ನಾನು ಕಲ್ಕತ್ತೆಗೆ ದ್ವಿತೀಯ ರಾಷ್ಟ್ರಸಭಾಧಿವೇಶನಕ್ಕೆ ಆಗಮಿಸಿದ್ದೆನು. ಅಂದಿನಿಂದ ನಾನು ಕಾಂಗ್ರೆಸ್ಸಿನ ನಮ್ರ ಸೇವಕನಲ್ಲೊಬ್ಬನಾಗಿ ಕೆಲಸ ಮಾಡುತ್ತ ಬಂದಿರುತ್ತೇನೆ. ಈ ಮಧ್ಯದಲ್ಲಿ ಮಾಡಲ್ಪಟ್ಟ ಯಾವುದಾದರೂ ಒಂದು ವಿಶಿಷ್ಟ ಠರಾವಿನ ಕುರಿತಾಗಿ ಅಭಿಪ್ರಾಯ ಭೇದವಿದ್ದ ಮಾತ್ರಕ್ಕೆ ನಾನು ಕಾಂಗ್ರೆಸ್ಸನ್ನು ಬಿಟ್ಟು ಹೊರಗಿದವನಲ್ಲ. ಭಾರತ ವರ್ಷದ ಏಕಾ ಸರಕಾರಂತೆ ಪಾರ್ಲಿಮೆಂಟಾಗಿ ಈ ನಮ್ಮ ರಾಷ್ಟ್ರೀಯ ಸಂಸ್ಥೆಯು ಅಭಿವೃದ್ಧಿಗೊಂಡು ಬರುವಂತೆ ಹಾರೈಸಿದವನು ನಾನು. ಈ ಸಂಸ್ಥೆಯ ಬೆಳವಣಿಗೆಗೆ ನಾವೆಲ್ಲ ದುಡಿದಿರುವೆವು. ಆದುಕಾರಣ, ಕಾಂಗ್ರೆಸ್ಸಿನ ವರ್ಚಸ್ಸು ಕುಂದುವಂತೆ ಆ ರಾಷ್ಟ್ರೀಯ ಸಂಸ್ಥೆಗೆ ವಿರುದ್ಧವಾಗಿ ನಾವು ವರ್ತಿಸುವುದೆಂದು ಭಾವಿಸಲಾಗದು. ಆದರೆ, ಅರ್ಧ ಶತಮಾನದಿಂದಲೂ ಕಾಂಗ್ರೆಸ್ಸು ಯಾವ ಧ್ಯೇಯ ಸಾಧನೆಗಾಗಿ ಶ್ರಮಪಡುತ್ತಲಿದೆಯೋ ಆ ಧ್ಯೇಯವನ್ನೆ ಎತ್ತಿ ಹಿಡಿದು ನಾವು ಸಾಗಿಸುವ ಆವಶ್ಯಕತೆ ಈಗ ಕಂಡುಬಂದಿದೆಯೆಂದೇ ಈ ಹೊಸ ಪಕ್ಷವನ್ನು ರಚಿಸಬೇಕಾಗಿದೆ.

"ಜಾತೀಯ ನಿರ್ಣಯದ ಕುರಿತಾಗಿ ಕಾಂಗ್ರೆಸ್ ಕಾರ್ಯಕಾರಿ ಸಮಿತಿಯು ಮಾಡಿದ ಠರಾವು ಇದಕ್ಕೆ ಕಾರಣವಾಯಿತು. ಆ ಠರಾವಿನ ಒಂದಂಶವನ್ನು ಶ್ರೀಯುತ ಅಣೆಯವರೂ ನಾನೂ ಆಕ್ಷೇಪಿಸಿದೆವು. ನಮ್ಮ ಆಕ್ಷೇಪವು ಕಾರ್ಯಕಾರೀ ಸಮಿತಿಗೆ ಒಪ್ಪಿಗೆಯಾಗುವಂತೆ ಮಾಡುವುದು ನಮ್ಮಿಂದ ಸಾಧ್ಯವಾಗಲಿಲ್ಲ. ಕಾಂಗ್ರೆಸ್ಸಿನ ಪರವಾಗಿ ಎಲೆಕ್ಷನಿಗೆ ನಿಲ್ಲುವವರು, ಜಾತೀಯ ನಿರ್ಣಯದ ಕುರಿತಾಗಿ ತಮ್ಮ ಅಭಿಪ್ರಾಯ ಪ್ರಕಟಿಸುವ ಸ್ವಾತಂತ್ರ್ಯವುಳ್ಳವರಾಗಬೇಕೆಂದು ನಮ್ಮ ಸೂಚನೆಯಿತ್ತು. ಇದು ಅಂಗೀಕೃತವಾಗಲಿಲ್ಲ. [illegible] ಜಾತೀಯ ನಿರ್ಣಯದ ಕುರಿತಾಗಿ ಮತಕೊಡುವ ಸ್ವಾತಂತ್ರ್ಯವು [illegible] ಕಾಂಗ್ರೆಸ್ ಕಾರ್ಯಕಾರಿ ಸಮಿತಿಯು ನಿರ್ಬಂಧಿಸಿದ [illegible] ಕೊಡಬೇಕೆಂದು ನಮಗೆ ತೋರಿತು. ಜಾತೀಯ ನಿರ್ಣಯದ ಕುರಿತಾಗಿ ನಿಷ್ಪಕ್ಷಪಾತ ಸ್ವತಂತ್ರ ಅಭಿಪ್ರಾಯವನ್ನು ಪ್ರಕಟಿಸಬಾರದೆಂಬ ಈ ನಿರ್ಬಂಧವು ಇಷ್ಟವಾಗದ್ದರಿಂದ ನಮಗೆ ತೋರಿದೆ.

"ಈ ಆಕ್ಷೇಪ ದುರದೃಷ್ಟಕರವೆಂದರೂ ನನ್ನ ಹೃದಯವೇದನೆ ತಾಳಲಾರದೆ [illegible]

ಸಮಿತಿಯು ತನ್ನ ಅಭಿಪ್ರಾಯವನ್ನು ಸ್ವೀಕರಿಸುವಂತೆ ಯುಕ್ತವಿತ್ತು, ಆದರೆ, ಸಾಧ್ಯವಾಗಲಿಲ್ಲ. ಜಾತೀಯ ಸಮಸ್ಯೆಯನ್ನು ಸಾರ್ವಜನಿಕರಿಗೆ [illegible] ಸಮರ್ಥನಾದ ಕಾರಣ, ಸರಕಾರವು ಧಯಪಾಲಿಸಿದ ಜಾತೀಯ ನಿರ್ಣಯವನ್ನು ನಾವು ಸ್ವೀಕರಿಸಲೇ ಬೇಕೆಂದು ಹಾರೈಸುವುದು ತಪ್ಪು. ನಾವೇ ಒಂದು ಕಲಹದಿಂದ ಬೇರೆ ಒಂದು ತೀರ್ಮಾನಕ್ಕೆ ಬಂದಿದ್ದಾಗ, ಅದು ಯುಕ್ತವಾಗಿದ್ದ ಹೋದುದರಲ್ಲಿ ಸರಕಾರದ ತೀರ್ಪನ್ನು ಇದೆಯೆಂಬುದನ್ನು ನೆನಪಿಗೆ ತಂದು ಕೊಳ್ಳಿರಿ. ಜಾತೀಯ ನಿರ್ಣಯವನ್ನು ಕೆಲವರೊಂದು ಮುಸ್ಲಿಮರು ತೃಪ್ತಿಯಿಂದ ಸ್ವೀಕರಿಸಬಹುದು. ಆದರೆ, ಅವರಲ್ಲಿ ಹೆಚ್ಚಿನವರು, ತಮಗೆ ಅಲ್ಲಲ್ಲಿ ಕೆಲವೊಂದು ಸ್ಥಾನಗಳು ಹೆಚ್ಚಿಗೆ ದೊರೆತದ್ದು ದೊರೆತ ಯಾವ ವಿಶಿಷ್ಟ ಅಧಿಕಾರವೂ ದೊರೆಕಿಲ್ಲವೆಂಬುದನ್ನು ಮನಗಾಣಬೇಕಾಗಿದೆ. ಕೇವಲ ಪ್ರತ್ಯೇಕ ಪ್ರಾತಿನಿಧ್ಯ ಮತ್ತು ನಿರ್ದಿಷ್ಟ ಸ್ಥಾನಗಳನ್ನು ಪಡೆಯುವ ಸಲುವಾಗಿ ಮಾತ್ರ ಈ ನಿರ್ಣಯವು ಇದ್ದಂತಾಯಿತು. ಜಾತೀಯ ನಿರ್ಣಯದಿಂದ ಭಾರತ ವರ್ಷದ ಭಾವೀ ರಾಜ್ಯರಚನೆಯು ಅಸ್ಥಿರವಾದೀತು. ಅದು ದೇಶಕ್ಕೆ ವಿಘಾತಕವಾಗಿರಬಾರದು. ಮುಸಲ್ಮಾನರ ಪ್ರತ್ಯೇಕತೆಯನ್ನು ನಾವು ಅಲಕ್ಷಿಸುವುದು ಮಹಾ ಅನ್ಯಾಯವಾಗುವುದು.

"ರಾಷ್ಟ್ರಸಭೆಯ ರಚನೆಯಾದಂದಿನಿಂದ, ಹಿಂದೂದೇಶಕ್ಕೆ ಪ್ರಜಾಪ್ರತಿನಿಧಿ ಸರಕಾರವು ಬೇಕೆಂದು ಸರಕಾರಕ್ಕೆ ತಿಳಿಸಲಾಗುತ್ತಿದೆ.

ಶ್ರೀ ಪಂಡಿತ ಮಾಲವೀಯರು.

1885ರಿಂದ ರಾಷ್ಟ್ರಸಭೆಯು, ಜಂಟಿ ಪ್ರಾತಿನಿಧ್ಯದಿಂದ ಮಾತ್ರ ಸಾಧ್ಯವಿರುವ ಈ ಪ್ರಜಾಪ್ರತಿನಿಧಿ ಸರಕಾರದ ರಚನೆಗಾಗಿ ಸಾಧಿಸುತ್ತಿದೆ. ಪ್ರತ್ಯೇಕ ಪ್ರಾತಿನಿಧ್ಯದ ಯೋಜನೆಯು ಮುಸ್ಲಿಮ ಮುತ್ಸದ್ದಿಗಳಿಂದುಂಟಾದುದಲ್ಲ. 1906ರಲ್ಲಿ ಸರಕಾರದವರ ಕೆಲ ಅಧಿಕಾರಿಗಳು ಇದನ್ನು ಅವರ ತಲೆಗೆ ತುಂಬಿದರು. 1909ರಲ್ಲಿ ಅದನ್ನು ಪ್ರತ್ಯೇಕ ಪ್ರಾತಿನಿಧ್ಯವೆಂದು, ಬ್ರಿಟಿಷ ಸರಕಾರವು ಈಗ ನಮಗೆ ಕೊಡುವ ಜಾತೀಯ ನಿರ್ಣಯವು ರಾಷ್ಟ್ರೀಯ ಸಭೆಯು ಕೇಳಿದ ಪ್ರಾತಿನಿಧ್ಯವನ್ನು ಇಲ್ಲದಂತೆ ಮಾಡುವುದು. ಜಂಟಿ ಪ್ರಾತಿನಿಧ್ಯದಿಂದ ಐಕ್ಯಮತ್ಯವು ನೆಲಸಬೇಕೆಂದು ನಮ್ಮ ಕಾಂಗ್ರೆಸ್ಸು ಪ್ರಯತ್ನಿಸುತ್ತಿದೆ. ಪ್ರತ್ಯೇಕ ಪ್ರಾತಿನಿಧ್ಯದಿಂದ ಹಿಂದೂಗಳನ್ನೂ ಮುಸ್ಲಿಮರನ್ನೂ ವಿಭಾಗಿಸುವುದೇ ಪರಸ್ಪರ ದ್ವೇಷ, ಕಲಹಗಳಿಗೆ ದಾರಿಯಾದ ವಿಷಯ [illegible] ಪ್ರತ್ಯೇಕ ಪ್ರಾತಿನಿಧ್ಯವನ್ನು ಅಧಿಕಾರಿಗಳ ಅನುಕೂಲಕ್ಕಾಗಿ ಹಿಂದುಗಳೂ ಮುಸಲ್ಮಾನರೂ ಕಲಹಕ್ಕೆ ಕಾರಣವಾದ [illegible]

ಗಳೂ ಆದರಿಸಬೇಕಾಗಿದೆ. ಮುಸಲ್ಮಾನರು ಸರಕಾರವನ್ನು ಕೇಳಿಕೊಂಡರೆಂದು ಜಾತೀಯ ನಿರ್ಣಯವನ್ನು ಸ್ವೀಕರಿಸುವುದಕ್ಕಿಂತ, ವರ್ಷಗಳ ಹಿಂದೆ ಕಾಂಗ್ರೆಸ್ಸು ಕೊಟ್ಟ ಭರವಸೆಯನ್ನು ನೆನೆಯಬೇಕು ಎಂದು ಗಾಂಧಿಜಿಯವರು ಹೇಳಿದ ರೌಂಡ್ ಟೇಬಲ್ ಪರಿಷತ್ತಿನಲ್ಲಿ ಸ್ಪಷ್ಟವಾಗಿ ಅರುಹಿರುವರು. ಇಷ್ಟು ಮಾತ್ರವಲ್ಲ, ಪ್ರತ್ಯೇಕ ಪ್ರಾತಿನಿಧ್ಯವನ್ನು ದೂರಮಾಡಬೇಕೆಂಬ ಬ್ರಿಟಿಷ್ ಸರಕಾರವು ಪ್ರತ್ಯೇಕ ಪ್ರಾತಿನಿಧ್ಯವನ್ನೇ ನಮಗೆ ಕೊಡಲು ಬಯಸಿದೆ—ಅದನ್ನು ಬಲ್ಲವರು ಕಡೆಯಲ್ಲೂ ಪ್ರತ್ಯೇಕ ಪ್ರಾತಿನಿಧ್ಯವನ್ನೇ ಕೊಟ್ಟಿದೆ. ಮತಕ್ಷೇತ್ರಗಳ ಅಧ್ಯಕ್ಷರಾದ ಯಾವ ರಾಜ್ಯಾಧಿಪತಿಯೂ ಇದನ್ನು ಸ್ವೀಕರಿಸುವನು. ನಮ್ಮ ರಾಷ್ಟ್ರದ ಸಾಕ್ಷವು ಕುಂದುತ್ತಿರುವುದು ನಮಗೆ ಅನುಭವವಾಗುತ್ತಿದೆ. ಮುಸಲ್ಮಾನರು ಸರಕಾರದ ಸ್ಥಾನವನ್ನು ಇದರಿಂದ ಪಡೆಯುತ್ತಿದ್ದಾರೆ. ಮತ್ತು ದೂರಕ್ಕೆ ತಳ್ಳಲ್ಪಡುವರೆಂದು ಹೇಳಬೇಕಾಗಿದೆ.

"ಈ ಜಾತೀಯ ನಿರ್ಣಯ ಮುಸ್ಲಿಮರಿಗೆ, ಅವರು ಕೇಳಿದುದಕ್ಕಿಂತ ಹೆಚ್ಚನ್ನು ಕೊಟ್ಟಿದೆ. ಅವರಿದ್ದುದಕ್ಕಿಂತ ಹೆಚ್ಚಿನ ಪ್ರಾತಿನಿಧ್ಯವು ಅವರಿಗೆ ದೊರೆತಂತಿದೆ. ಪಂಜಾಬು ಬಂಗಾಲ ಮುಸ್ಲಿಮರಿಗೆ ಶಾಸನಸಭೆಯಲ್ಲಿ ಪ್ರಾತಿನಿಧ್ಯವು ಕೊಡಲ್ಪಟ್ಟಿದೆ. ಈ ಮುಸ್ಲಿಮ್ ಪ್ರತಿನಿಧಿಗಳನ್ನು ಮುಸ್ಲಿಮರೇ ಆರಿಸುವರು. ಹಿಂದೂಗಳಾದರೂ ಮತವನ್ನು ಕೊಡುವ ಹಕ್ಕಿಲ್ಲ. [illegible] ಮುಸ್ಲಿಮರಿಂದ ಕೂಡಿರುವ ಕ್ಷೇತ್ರದಲ್ಲಿ ಮುಸ್ಲಿಮರಿಗೆ ಮಾತ್ರ ಮತದಾನದ ಹಕ್ಕು. ಅವರ ಜನಸಂಖ್ಯೆಗಿಂತ ಹೆಚ್ಚು ಸ್ಥಾನಗಳು ದೊರೆತಿವೆ. ಇದು ಹೇಗೆ ಜರುಗಿತು? ಮುಸ್ಲಿಮರ ಜನಸಂಖ್ಯೆ ಸರಕಾರದವರಿಗೆ ಗೊತ್ತು. ಆದರೆ, ಹಿಂದೂಗಳು ಮುಸ್ಲಿಮರ ನ್ಯಾಯ ಬೇಡಿಕೆಯನ್ನು ಕೇಳಬೇಕು. ಈಗ ನಾವು ಒಂದು ವಿದೇಶೀ ಸರಕಾರದ ಕೈಕೆಳಗಿರುವೆವು. ಜಾತೀಯ ನಿರ್ಣಯದ ಮೂಲೆಯಾದರೂ ಪ್ರಜೆಗಳಿಂದ ಪ್ರತಿನಿಧಿಗಳ ಪ್ರಜೆಗಳ ಸರಕಾರವೆಂಬುದು ದೂರವಾಗಿದೆ. ಇದು ಇಲ್ಲ. ಪಂಜಾಬದಲ್ಲಿ ಹಿಂದೂಗಳ ಮೇಲೆ ಮುಸ್ಲಿಮರ ಸರಕಾರ ಮತ್ತು ಸಂಯುಕ್ತ ಪ್ರಾಂತ್ಯಗಳಲ್ಲಿ ಮುಸ್ಲಿಮರ ಮೇಲೆ ಹಿಂದೂಗಳ ಸರಕಾರ ಉಂಟಾಗುವುದು. ಇದು ಪ್ರಜಾಪ್ರಭುತ್ವವಾಗಿದೆಯೇ? ಇದು ಜಾತೀಯ ದುಷ್ಪರಿಣಾಮದ ಮೇಲೆ ನಡೆಯುವ ಅಧಿಕಾರವಾಗಿದೆ. ನಮ್ಮ ದೇಶದ ಪ್ರಜಾ ಹಿತರಕ್ಷಣೆಗೆ ಇದು ಅನುಕೂಲವಾಗದು. ಇದು ನಮಗೆ ಕೊಡುವುದು—ಜಾತೀಯ ನಿರ್ಣಯ! ಹಿಂದೂಗಳಲ್ಲಿ ಐಕ್ಯವನ್ನುಳಿಸಿ, ಕ್ರೈಸ್ತರು, ಆಂಗ್ಲೋ ಇಂಡಿಯನ್ನರು, ಕೈಗಾರಿಕೆ ಇವು ಮೊದಲಾದವರಿಗೆ ಪ್ರತ್ಯೇಕ ಪ್ರಾತಿನಿಧ್ಯ ನೀಡಿರುವುದು ನಮ್ಮ ಮೇಲೆ ಬಲಾತ್ಕಾರವೆಂದಾಯಿತು.

"ಇಂಗ್ಲೆಂಡಿನಲ್ಲಿ 'ರಾಷ್ಟ್ರೀಯ ಮುಸ್ಲಿಮ'ರು ಪ್ರತ್ಯೇಕ ಪ್ರಾತಿನಿಧ್ಯವನ್ನು ವಿರೋಧಿಸಿ, ಜಂಟಿ ಪ್ರಾತಿನಿಧ್ಯವನ್ನು ಸಮರ್ಥಿಸಿ ಬಲವಾದ ಚಳವಳಿಯನ್ನು ಹೂಡಿದರು. ಈ ಆಂದೋಲನದಲ್ಲಿ ಬಂಗಾಲದ ಮುಸ್ಲಿಮರಿಗೆ ಮುಖಂಡರಾದರು. ಬಂಗಾಳದ ಲೆಜಿಸ್ಲೇಟಿವ್ ಕೌನ್ಸಿಲು ಜಂಟಿ ಪ್ರಾತಿನಿಧ್ಯವನ್ನು ಸಮರ್ಥಿಸಿ ಠರಾವು ಮಾಡಿತು. ಇಂಗ್ಲೆಂಡಿನ ಮುಸ್ಲಿಮ ಲೀಗಿನವರು ಕಾಂಗ್ರೆಸ್ಸಿನ ಕಾರ್ಯಕಾರಿ ಸಮಿತಿಯು ನಮ್ಮ ದೇಶಕ್ಕೆ ಜಂಟಿ ಪ್ರಾತಿನಿಧ್ಯದ ಒಂದು ಯೋಜನೆಯನ್ನು ಸಿದ್ಧಗೊಳಿಸಿತು. ಪ್ರತಿ ಮುಸ್ಲಿಮರು ಜಂಟಿ ಪ್ರಾತಿನಿಧ್ಯವನ್ನು ಸಮ್ಮತಿಸಿ ಪ್ರಾತಿನಿಧ್ಯದ ನಿರ್ಣಯವನ್ನು ಹಿಂದೂಗಳು ಮತ್ತು ಮುಸ್ಲಿಮರು ಸ್ವೀಕರಿಸುವ ಬಗೆಗೆ ಮಾತ್ರ ಇವರ ಜನಸಂಖ್ಯೆಗನುಸಾರ ಸ್ಥಾನಗಳನ್ನು ಇವರು ಪಡೆದು ಕೊಳ್ಳಬೇಕು; ಇನ್ನು ಜಂಟಿ ಕ್ಷೇತ್ರಗಳಲ್ಲಿ ಸ್ಪರ್ಧಿಸುವ [illegible]

"ಕಾಂಗ್ರೆಸ್ಸು 'ತಟಸ್ಥ'ವಾಗಿ ಇರುವುದು ಆಗ ಇರುವ ಯೋಜನೆಯ ತಾತ್ಪರ್ಯವಾಗಿತ್ತು.

'ತಟಸ್ಥತೆ' ಎಂಬ ಈ ಶಬ್ದ ಇದೆ. ಹಾಗೆಯೇ ಇರಗೊಡಿಸಿದರೆ ಸ್ವತಂತ್ರ ಸರಕಾರವು ದೊರೆಯಬಾರದೆಂಬುದು ಖಂಡಿತ. ಪ್ರಶ್ನೆಯ ಅವಶ್ಯಕತೆ, ಮತ್ತು ಮುಂದು [illegible] ಇದನ್ನು ನನ್ನ ಬಯಲಿಗೆ ತರಲು ಕಾಂಗ್ರೆಸ್ ಸಮಿತಿಯು ಜಾತೀಯ ನಿರ್ಣಯವನ್ನು ತಿರಸ್ಕರಿಸಿಯೂ—ಪ್ರತ್ಯೇಕ ಪ್ರಾತಿನಿಧ್ಯವನ್ನು ವಿರೋಧಿಸಿ ಜಂಟಿ ಪ್ರಾತಿನಿಧ್ಯವನ್ನು ಕುರಿತಾಗಿ ಪಕ್ಷವನ್ನು ತಿಳಿಸಲಿಲ್ಲ. ಜಾತೀಯ ನಿರ್ಣಯವನ್ನು ತೃಪ್ತಿಯಿಂದ ಸರಕಾರದವರು ಮುಸ್ಲಿಮರಿಗೆ—ಜಾತೀಯ ನಿರ್ಣಯಗಳು ರಾಷ್ಟ್ರೀಯರೆಲ್ಲರೂ ವಿರೋಧಿಗಳಾಗಬೇಕೆಂಬುದನ್ನು ಕಾಂಗ್ರೆಸ್ ಸಮಿತಿಯು ತಿಳಿಸಬೇಕಾಗಿತ್ತು. ಅಂಥ ಭಾವನೆಯನ್ನು ಹುಟ್ಟಿಸಿದ್ದರೆ, ಪ್ರತ್ಯೇಕ ಪ್ರಾತಿನಿಧ್ಯವೆಂಬುದು ಈಗಲೇ ಅನ್ನು ಅಲ್ಪಕಾಲದಲ್ಲಿ ಹೋಗಬೇಕಾಗುತ್ತು. ಸರಕಾರವು ತಮಗೆ ಅನ್ಯಾಯ ಮಾಡಿದರೂ ಕಾಂಗ್ರೆಸ್ಸು ಆ ಅನ್ಯಾಯವನ್ನು ಹೋಗಲಾಡಿಸಲು ಯತ್ನಿಸದೆಂಬ ನಮ್ಮ ಭಾವನೆಯು ಜನರಲ್ಲಿ ಉಂಟಾಗುತ್ತಿತ್ತು. ಆದರೆ, ಕಾಂಗ್ರೆಸ್ ಸಮಿತಿಯು ಜಾತೀಯ ನಿರ್ಣಯದ ಕುರಿತಾಗಿ ತನ್ನ ಅಭಿಪ್ರಾಯವನ್ನು ಸ್ಪಷ್ಟಪಡಿಸಲಾರದೆ ಹೋಯಿತು. ಜಾತೀಯ ನಿರ್ಣಯವನ್ನು ಪೂರ್ಣವಾಗಿ ಸ್ವೀಕರಿಸದೆಯೂ ಅಥವಾ ನಿರಾಕರಿಸದೆಯೂ ಇಲ್ಲ, ಸ್ವರಾಜ್ಯದ ಹಕ್ಕು, ಕಾಂಗ್ರೆಸ್ಸು ತನ್ನ ಧ್ಯೇಯವನ್ನು ತೊರೆದು ನಡೆಯುತ್ತಿದೆಯೆಂದಾಯಿತು.

"ಈಗ ನಮ್ಮ ಕರ್ತವ್ಯವೇನು? ಜಾತೀಯ ನಿರ್ಣಯವನ್ನು ಮುಖ್ಯವಾಗಿ ಯೋಚಿಸಬೇಕು. ಕಾಂಗ್ರೆಸ್ ಕಾರ್ಯಕಾರಿ ಸಮಿತಿಗೆ ಖಚಿತಪಡಿಸುವುದು ನಮ್ಮಿಂದ ಆಗಲಿಲ್ಲವಾದ ಕಾರಣ ನಾವೇ ಒಂದು ಹೊಸ ಪಂಗಡವನ್ನು ರಚಿಸಿ, ಕಾರ್ಯಗತವನ್ನು ಕೈಕೊಳ್ಳಬೇಕೆಂದಾಯಿತು. ಇದರಿಂದ ಕಾಂಗ್ರೆಸ್ಸಿನ ಬಲವು ಕುಂದುತ್ತದೆಂದು ಕಲ್ಪಿಸಿ ಭಯಪಡುವುದು ತಪ್ಪು. ಈಗಲೇ ಈ ಪಕ್ಷದ ಸ್ಥಿತಿಯಲ್ಲಿ ನಾವು ಕಾಂಗ್ರೆಸ್ಸಿನವರ ಅಭಿಪ್ರಾಯವನ್ನು ಕಳೆದುಕೊಳ್ಳಬೇಕು. ಕಾಂಗ್ರೆಸ್ಸಿನ ಧ್ಯೇಯವನ್ನು ಕಾಪಾಡುವುದು ನಮ್ಮ ಕರ್ತವ್ಯವು. ಕಾಂಗ್ರೆಸ್ಸು ತನ್ನ ಹಾದಿಯಲ್ಲಿ ಸಾಗಬೇಕೆಂದು ನಮ್ಮ ಇಚ್ಛೆ. ನಿಯಮಗಳ ಪ್ರಕಾರ ಪೂರ್ವದ ಸ್ಥಿತಿಗೆ ತರುವುದನ್ನು ನಮ್ಮ ಕರ್ತವ್ಯ. ನಮ್ಮ ಈ ರಾಷ್ಟ್ರೀಯ ಪಕ್ಷದ ಧ್ಯೇಯವಾದರೂ ಕಾಂಗ್ರೆಸ್ಸಿನದೇ—ಪ್ರಜಾಪ್ರಭುತ್ವ ಅದ ಕಾರ್ಯ ವಿಧಾನಗಳಿಂದ ಪೂರ್ಣ ಸ್ವರಾಜ್ಯಕ್ಕಾಗಿ ದುಡಿಯುವುದು. ಇದನ್ನು ಸಾಧಿಸುವವರಾದರೂ ಈ ಪಕ್ಷದ ಸದಸ್ಯರಾಗ ಸೇರಬಹುದು. ಕಾಂಗ್ರೆಸ್ಸಿನ ಧ್ಯೇಯಕ್ಕನುಕೂಲವಾಗಿ ನಡೆಯುವ ಈ ಪಕ್ಷದ ಸದಸ್ಯರು, ನಮಗೂ ಕಾಂಗ್ರೆಸ್ಸಿಗೂ ಜಾತೀಯ ನಿರ್ಣಯದ ಕುರಿತಾಗಿ ಮಾತ್ರ ಅಭಿಪ್ರಾಯ ಭೇದವನ್ನು. ಪೂರ್ಣ ಸ್ವಾತಂತ್ರ್ಯ ಬೇಕೆನ್ನುವುದರಲ್ಲಿ ಸಂಶಯವಿಲ್ಲ. ನಮಗೆ ಬೇಕು. ಅಂದರೆ ಪರಕೀಯರ ರಾಜ್ಯದಲ್ಲಿ ಪೂರ್ಣ ಸ್ವಾತಂತ್ರ್ಯಕ್ಕೆ ನಮ್ಮ ಅರ್ಹತೆ ದೊರೆಯಲೇ, ಅನ್ನ ಉಪಜೀವಿಕೆಯು, ನಮಗೂ ಇಷ್ಟೇ ಆರ್ಹತೆಯಿದೆ.

"ಭಾರತ ವರ್ಷದ ಮಿತ್ರರು [illegible] ಪೂರ್ವದ ವೈಭವವನ್ನು [illegible] ಉದ್ದೇಶವು. ಇದರ ಸ್ವಾತಂತ್ರ್ಯವೇ ಭಾರತೀಯರ ಶ್ರೇಯಸ್ಸಿಗೆ ಅನುಕೂಲವಾಗಿರುವುದೆಂಬುದನ್ನು ತೋರಿಸಿ ಇದರ ಕೀರ್ತಿಯು [illegible] ಸಮಾನತೆಯನ್ನು ನೀಡಿ. ಸ್ವಾತಂತ್ರ್ಯವು ಪ್ರೀತಿಸಿದರೆ, ಕೇವಲ ನಮ್ಮನ್ನು ಪೂರ್ವದಂತೆ ಆದರಿಸುವ ಗೌರವವನ್ನು ನೀಡುವುದು, ರಾಷ್ಟ್ರೀಯ ಸ್ವಾತಂತ್ರ್ಯಕ್ಕಾಗಿ ಕೊನೆಯವರೆಗೂ ಹೋರಾಡುವುದು, [illegible] ಸ್ವಾತಂತ್ರ್ಯದಿಂದ ಶಿಸ್ತುಬದ್ಧವಾಗುವುದು ಎಂದು ಘೋಷಿಸುವೆವು."

"ಈ ಪಕ್ಷದ ದುರದೃಷ್ಟಕರವಾದ ನಮ್ಮ ಮಕ್ಕಳ ಹೆಸರುಗಳ ಮೂಲಕ [illegible] ಮತ್ತು ಸ್ವಾತಂತ್ರ್ಯ, ಶಿಸ್ತು [illegible] ಮುಖಂಡರು [illegible] ದೃಢವಾಗಿ [illegible] ಅವರನ್ನು ನಂಬಿ ಕೆಲಸ ಮಾಡುವುದು [illegible]

ನೋಟೀಸು
ಕಾರ್ಕಳ ಡಿಸ್ಟ್ರಿಕ್ಟ್ ಮುನ್ಸೀಫ್ ಕೋರ್ಟಿನಲ್ಲಿ
O. S. No. 303 1934.

ವಾಸುದೇವ ಭಟ್ಟ—ವಾದಿ.
ಶ್ರೀನಿವಾಸಾಚಾರ್ಯ ಸಹ-ಪ್ರತಿವಾದಿರು.
ಪ್ರತಿವಾದಿರು:-1. ಶ್ರೀನಿವಾಸಾಚಾರ್ಯ, 2. ಅನಂತ ಪದ್ಮನಾಭಾಚಾರ್ಯ, 3. ಗೋಪಾಲಕೃಷ್ಣಾಚಾರ್ಯ—ಭೀಮಾಚಾರ್ಯರ ಮಕ್ಕಳು—ಉಡ್ಪಿ ತಾಲೂಕು ನಡ್ಸಾಲು ಗ್ರಾಮದ ಬೇಂಗ್ರೆಯಲ್ಲಿರುವವರು.

ಮೇಲ್ಕಂಡ ವಾದಿಯು ಪ್ರತಿವಾದಿರ ಮೇಲೆ ಮಾಡಿರುವ ಸದ್ರಿ ದಾವೆಯು ತಾರೀಕು 18-9-1934ಕ್ಕೆ ಅಪ್ಪೆರು ತನ್ನಿಗೆ ಇಟ್ಟಿರುತ್ತದೆಂತಲೂ ಸದ್ರಿ ವ್ಯಾಜ್ಯಕ್ಕೆ ಉದಾಹರಣೆ ಕೊಡಲು ಸದ್ರಿ ತಾರೀಕಿಗೆ ಬೆಳಿಗ್ಗೆ 10 ಘಂಟೆಗೆ ಕೋರ್ಟು ಮುಂದೆ ಹಾಜರಾಗಿ ಉದಹರಿಸಬೇಕೆಂತಲೂ ಸದ್ರಿ ದಾವೆಯ 1-2-3ನೇ ಪ್ರತಿವಾದಿರಿಗೆ ಈ ಮೂಲಕ ತಿಳಿಸೋಣಾಗುತ್ತದೆ. ಹಾಗೆ ಹಾಜರಾಗದಿದ್ದಲ್ಲಿ ಸದ್ರಿ ನಂಬ್ರವು ಏಕಪಕ್ಷವಾಗಿ ತೀರ್ಮಾನಿಸಲಾದೀತು.

Karkala, 14-8-34. } A. N. S. Achar, *Pleader for Plaintiff*

ಉಡುಪಿ ಡಿ. ಮುನ್ಸೀಫ್ ಕೋರ್ಟಿನಲ್ಲಿ
S. C. No. 241/1934.

ಲೋಕು ಸೆಟ್ಟಿ—ವಾದಿ
ಮತ್ತು
ದೂಮ ಬೆಲ್ಚಡ-ಸುಬ್ಬ ಬೆಲ್ಚಡನ ಮಗ—ಮಂಗಳೂರು ತಾಲೂಕು ಮಣೇಲ್ ಗ್ರಾಮ—ಪ್ರತಿವಾದಿ.

ಇವರೊಳಗೆ

ವಾದಿಗೆ ಪ್ರತಿವಾದಿಯು ತಾರೀಕು 2-5-1931ರಲ್ಲಿ ರೂ. 25/-ಕ್ಕೆ ಬರೆದುಕೊಟ್ಟ ಡಿಮಾಂಡು ನೋಟಿನ ಅಸ್ಸು ಮತ್ತು ಅದರ ಮೇಲಣ ಸಾಲಿಯಾನ್ ಸೇರಿದಾತಿರಸಲೆ ಬಡ್ಡಿ ಕೂಡಾ ರೂ. 29-6-4ಕ್ಕೆ ವಾದಿಯು ಪ್ರತಿವಾದಿಯ ಮೇಲೆ ದಾಖಲು ಮಾಡಿರುವ ಸದ್ರಿ ವ್ಯಾಜ್ಯವು ತಾ. 17-9-1934ಕ್ಕೆ ಪ್ರತಿವಾದಿಯ ಹಾಜರು ಬಗ್ಗೆ ಇಟ್ಟಿರುತ್ತದೆ. ಪ್ರತಿವಾದಿಯು ಸ್ವತಹಾ ಯಾ ವಕೀಲರ ಮುಖಾಂತರ ಆ ದಿವಸ ಸದ್ರಿ ಕೋರ್ಟು ಮುಂದೆ ಬೆಳಿಗ್ಗೆ ಘಂಟೆ 10ಕ್ಕೆ ಹಾಜರಾಗಿ ತನ್ನ ಉದಾಹರಣೆಗಳನ್ನು ಜಾಹೀರು ಮಾಡಲಿಕ್ಕೆ ತಪ್ಪಿದರೆ ಎಕ್ಸ್ ಪಾರ್ಟಿಯಾಗಿ ಸದ್ರಿ ವ್ಯಾಜ್ಯವು ತೀರ್ಮಾನಿಸೋಣಾದೀತು ಎಂಬ ಸಂಗ್ತಿ ಈ ಮೂಲಕ ತಿಳಿಸೋಣಾಗಿದೆ.

ಉಡುಪಿ, 21-8-'34 } K. L. Narayan Rao, *Counsel for Plaintiff.*

"ಕಥಾ ಕುಂಜ"
ಬೆಳಗಾಂವಿ.
ಉದ್ಯಾಮ ಲೇಖಕರಿಂದ ಬರೆಯಲ್ಪಡುವ ಸಣ್ಣ ಕತೆ, ಸಣ್ಣ ನಾಟಕಗಳನ್ನು ಪ್ರಕಟಿಸುವ ಮಾಸಿಕ ಇದೊಂದೇ!
ವಾರ್ಷಿಕ ಚಂದಾ ಅಂಚೆವೆಚ್ಚ ಸೇರಿ ರೂ. 2—4—0
ಇಂದೇ ಚಂದಾದಾರರಾಗಿರಿ!

ಮಂಗಳೂರಿನ ಈಗಿನ ಪೇಟೆಧಾರಣೆ.

ಅಕ್ಕಿ—ಇತ್ತೀಚೆಗೆ ನಮ್ಮ ಜಿಲ್ಲೆಗೆ ಆಮದಾಗುತ್ತಿದ್ದ ರಂಗೂನು ಅಕ್ಕಿಗೆ ಚೀನಾ ಮತ್ತಿತರ ಭಾಗಗಳ ಧಾರಾಳ ಗಿರಾಕಿಯುಂಟಾಗಿ ಕ್ರಯವು ಏರಿದೆ. ಅಲ್ಲದೆ ಮಲಬಾರ್ ಮಾರ್ಕೆಟ್ ದರ ಕೂಡಾ ಏರಿರುವುದರಿಂದ ಮಂಗಳೂರಲ್ಲಿ ರಂಗೂನು ಅಕ್ಕಿಯ ಬೆಲೆಯು ಮುಡಿಗೆ ಎಂಟಾಣೆಯಂತೆ ಏರಿದೆ. ಬೆಳೆಗಳಿಗೆ ಹುಳು ಹಿಡಿದುದರಿಂದಲೂ, ನೆರೆ ಹಾವಳಿಯಿಂದಲೂ ಈ ದರವು ಇನ್ನೂ ಏರಬಹುದೆಂದು ಊಹನೆ.

ನಿಮ್ಮ ಆರೋಗ್ಯವು ಈ ಚಿಕ್ಕ ಗುಳಿಗೆಗಳಲ್ಲಿ
ಸುಭದ್ರವಾಗಿದೆ.

ಸೋತವರೆ! ರುಚಿಕರ! ಹಿತಕರ!
ಪರಿಣಿತ ವೈದ್ಯರಿಂದ ಸಿದ್ಧಗೊಳಿಸಲ್ಪಟ್ಟ
"ಕೇಸ್—ಫೆನ್—ಮಿಂಟ್"
ಪರಿಣಿತ, ಅಗರ್—ಅಗರ್, ಪೆನೋಲ್ಫ್ತಾಲಿನ್, ಪೆಪ್ಪರ್‌ಮಿಂಟ್ ಮುತ್ತು ಚೊಕೊಲೆಟ್ಟು, ಇವುಗಳನ್ನು ಸೇರಿಸಿ ಸೇವಿಸಲು ಹಿತಕರವಾಗುವಂತೆಯೂ, ಆಬಾಲವೃದ್ಧರೆಲ್ಲರ ಸಕಲರಿಗೂ ಯಾವ ಕಾಲಕ್ಕೂ ಸುಖಭೇದಿಯಾಗಿ ಆಗುವಂತೆ ಇದು ತಯಾರಿಸಲ್ಪಟ್ಟಿದೆ. ಮಲಬದ್ಧತೆಯು ಹಲವು ಭಯಂಕರ ರೋಗಗಳನ್ನು ತರಬಲ್ಲುದು. ಮಲಬದ್ಧತೆ ತೋರಿದಾಗಲೆಲ್ಲ "ಕೇಸ್-ಫೆನ್-ಮಿಂಟ್"ನ್ನು ಸೇವಿಸಿರಿ. ಈ ಚೊಕಲೇಟು ಗಳನ್ನು ಒಂದೆರಡು ಸೇವಿಸಿದರೆ ಆಗ

ಯೂಸವಾದ ಸುಖಭೇದಿ! ಕರುಳುಗಳ ವಿಕಾರವಿಲ್ಲ! ಜಿಗುಪ್ಸೆ ಹುಟ್ಟಿಸುತ್ತದಿಲ್ಲ! ಹೊಟ್ಟೆಯೊಳಗೆ ಯಾವ ವೇದನೆಯೂ ಇಲ್ಲ. ಮಕ್ಕಳು ಆನಂದದಿಂದ ಸೇವಿಸುವರು.
ಬಲು ಕಡಿಮೆ ಕ್ರಯ! ಎಲ್ಲೆಲ್ಲಿಯೂ ದೊರೆಯುವುದು. ಅತಿ ಹೆಚ್ಚು ಫಲ!

ಈ ಹೆಸರುಗಳೇನು,—ಓದಿರುವಿರಾ?
ವಾತ—ಪಿತ್ತವಾತ—ಸಂಧಿವಾತ—ಕಟಿವಾತ—ಶರೀರಾಲಸ್ಯ—ನರದೌರ್ಬಲ್ಯ......!!!!
ಇವುಗಳಿಗೆ ಹೆದರಬೇಕಾಗಿಲ್ಲ. ಇವುಗಳೆಲ್ಲವನ್ನು ಪರಿಹರಿಸಲು ಈ ಮಾತ್ರೆ!
ಡಾ। ಘೌಯಮರ ಕೆಚಿಟ್ಸ್
ಸೇವನೆಗೆ ಕಷ್ಟವಿಲ್ಲ, ಅರ್ಧ ತಟ್ಟೆ ನೀರಲ್ಲಿ, — ನೋವು ತರಿಸೋದಿಲ್ಲ. ಈ ಕೆಚೆಟುಗಳನ್ನು ಹಾಕಿ ಸೇವಿಸಿದರೆ—ಅದು ಹೇಗೆ ಗುಣಕಾರಿಯಾಗಿ ಕಾರ್ಯಾರಂಭ ಮಾಡುವುದೆಂಬುದನ್ನು ಆಗಲೇ ಅನುಭವ ಮಾಡುವಿರಿ.
ಕೆಲವೇ ನಿಮಿಷಗಳಲ್ಲಿ ಖಂಡಿತ ಗುಣಲಾಭ!
ನರಗಳ ದೌರ್ಬಲ್ಯ ಸಂಬಂಧವಾದ ಉಪದ್ರಗಳನ್ನು ಪರಿಹರಿಸುವುದು.
ಕೊಂಡುಕೊಂಡು ಅದನ್ನು ಪರೀಕ್ಷಿಸಿರಿ.
'ಕೆಚೆಟು'ಗಳು ನಿರಪಾಯವಾಗಿ, ಭರವಸೆಯಿಂದ ಸೇವಿಸಲ್ಪಡಲು ಯೋಗ್ಯವಾಗಿವೆ.
ಸಂದೇಹವಿದ್ದರೆ ಇಂದೇ ಅವುಗಳ ಗುಣವರೀಕ್ಷೆ ನಡೆಯಲಿ.

The Baragon Products Co., Ballard Estate, Bombay.
ದ. ಕ. ಜಿಲ್ಲೆಯ ಡಿಸ್ಟ್ರಿಬ್ಯೂಟರರು:— M. K. Prabhu, Bantwal, S. Kanara.

ಮಂಗಳೂರಿನ ಪೇಟೆಧಾರಣೆ.

ಸಾಮುಗ್ರಿಗಳು	ಇಂದ ರೂ.—ಆ.	ವರೆಗೆ ರೂ.—ಆ.
ರಾಶಿ ಅಕ್ಕಿ ...	4— 4	4— 8
ಮುಸ್ಕತಿ ...	4—10	5— 4
ಗುಡ್ಡು ...	4— 4	4—12
ಸುಗ್ಗಿ ...	4— 2	4— 8
ಊರ ಅವ್ವಲ್ ಬೆಸ್ತಿಗೆ ...	5— 0	5— 0
ರಂಗೂನು ಬೆ. ಗೋ. ಗಳ್ಳೆ...	5—10	6— 4
ಎಲ್ಲೂರು ಬೆ. ಮು. ಗಳ್ಳೆ...	4— 0	4— 0
ಗೋದಿ ಗೋಣಿ ಗಳ್ಳೆ ...	10— 0	12— 8
ತೊಗರಿ ಗೋಣಿ ಗಳ್ಳೆ ...	9— 8	10— 0
ಹುರುಳಿ ಗೋಣಿ ಗಳ್ಳೆ ...	6— 2	6— 4
ಕಡಲೆ ಗೋಣಿ ಗಳ್ಳೆ ...	8— 4	9— 8
ತೊಗರಿಬೇಳೆ ಗೋಣಿಗಳ್ಳೆ...	10— 0	17— 0
ಉದ್ದು ಗೋಣಿ ಗಳ್ಳೆ ...	7— 0	7— 8
ಹೆಸರು ಗೋಣಿ ಗಳ್ಳೆ ...	7— 0	7— 8
ಊರುಬೆಲ್ಲ ಖಂಡಿ ಗಳ್ಳೆ ...	40— 0	45— 0
ಉಪ್ಪು ಗೋಣಿ ಗಳ್ಳೆ ...	5— 4	5— 8
ಕೊಪ್ರ ಖಂಡಿ ಗಳ್ಳೆ ...	40— 0	42— 0
ಕೊಪ್ರ ಹಿಂಡಿ ಖಂಡಿ ಗಳ್ಳೆ...	19— 0	19— 8
ಎಳ್ಳಿಂಡಿ ಖಂಡಿ ಗಳ್ಳೆ ...	23—12	27— 0
ಕೊಪ್ರ ಎಣ್ಣೆ ಮುಡಿ ಗಳ್ಳೆ...	2—15	3—14
ಎಳ್ಳೆಣ್ಣೆ ಮುಡಿ ಗಳ್ಳೆ ...	5— 0	5— 8
ಚಿಮುಣಿಎಣ್ಣೆ ಪೆಟ್ಟಿಗೆ ಗಳ್ಳೆ...	6— 8	8— 0
ಮೋರಿಸ ಸಕ್ಕರೆ ಮು. ಗಳ್ಳೆ...	3—10	3—14
ಮೆಣಸು ...	7— 0	7— 8
ಸಾಸಿವೆ ಮುಡಿ ಗಳ್ಳೆ ...	4— 8	5— 4
ಕಾಳುಮೆಣಸು ಖ. ಗಳ್ಳೆ ...	136— 8	137— 8
ಯೇಲಕ್ಕಿ ಮಣ ಗಳ್ಳೆ ...	18— 0	22— 0
ಹೊಸ ಗೇರುಬೀಜ ಮು. ಗಳ್ಳೆ	3— 4	3— 5
ಕಬ್ಬಿಣ ಖಂಡಿ ಗಳ್ಳೆ ...	42— 0	44— 0
ತಾಂಮ್ರತಗಡು ಮ. ಗಳ್ಳೆ...	10— 0	10—0
ತಾಂಮ್ರಪಾತ್ರಗಳು ಮ. ಗಳ್ಳೆ	13— 0	14— 8
ಚೀನಬೆಳ್ಳಿ ಸೇರು ಗಳ್ಳೆ ...	14—12	15— 0
ಟಿನ್ನಾಳಿ ತಗಡು ಮು. ಗಳ್ಳೆ...	9— 0	9— 8
ಹದನು ಗಳ್ಳೆ ...	20—10	21— 0
ಹುಣಿಸೆ ಹುಳಿ ಖಂಡಿ ಗಳ್ಳೆ	30— 0	35— 0
ನೇಟಿವ್ ಕಾಫಿ ಖಂಡಿ ಗಳ್ಳೆ	182— 0	198— 0
ಪ್ಲಾಂಟೇಶನ್ ಕಾಫಿ ಖಂಡಿ ಗಳ್ಳೆ...	296— 8	280— 8
ಹಳೆ ಅಡಿಕೆ ...	118— 0	124— 0
ಹೊಸ ಅಡಿಕೆ ...	62— 0	92— 0

ಇಪ್ಪತ್ತೈದು ವರ್ಷಗಳ ಹಿಂದೆ ಮಂಗಳೂರು ಪೇಟೆಯ ಧಾರಣೆ
(ತಾ. ೬-೮-೧೯೦೯)

ಅಕ್ಕಿ	ರೂ. ೪-೧೧-೦ರಿಂದ ೫-೮-೦.
ಅಡಿಕೆ	ರೂ. ೮೫-೦-೦.
ತೆಂಗಿನೆಣ್ಣೆ	ರೂ. ೫-೧೧-೦.
ಕಾಫಿ ಖಂಡಿ ಗಳ್ಳೆ	ರೂ. ೨೦೫-೦-೦.

'WIMCO'
ಸ್ವಂತ ಉಪಯೋಗದಲ್ಲಿ ಯಾವಾಗಲೂ ವಿಶ್ವಾಸಯೋಗ್ಯವಾದ ಬೆಂಕಿ ಕಡ್ಡಿಗಳೆಂದರೆ.
'ವಿಮ್ಕೋ'
ಈಗಿನ ಎಕ್ಸೈಜ್ ಸುಂಕ ತೆತ್ತ ಮತ್ತು ಬೆಂಡ್ರೋಲ ಹಚ್ಚಿದ ಸದರಿ 'ವಿಮ್ಕೋ' ಅರ್ಧ ಸೈಜು ಸುಮಾರು 40 ಕಡ್ಡಿಗಳಿರುವ ಪೆಟ್ಟಿಗೆಯು ಮ್ಯಾಚಸ್ ಬರುವುದುಂಟು. ಬೆಲೆ ಗುರುಸ್ ಒಂದರ ರೂ. 2-3-0.
ಬೆಂಡ್ರೋಲ್ ಇಲ್ಲದ ಫುಲ್‌ಸೈಜ್ 60 ಕಡ್ಡಿಗಳ ಬಾಕ್ಸ್ ಗ್ರುಸ್ ಒಂದಕ್ಕೆ ರೂ. 2-4-0.
ಬೇಕಾದವರು ಈ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳುವುದು.
ಮೆಸ್ಸರ್ಸ್ ಮುಜೀರ್ ಅಚ್ಚುತ ರಾಯಪ್ಪ ನಾಯಕ್ ಮತ್ತು ಕಂಪೆನಿ,
ಬಂದರ, ಮಂಗಳೂರು.
ರೆಪ್ರೆಜೆಂಟೇಟಿವ್ಸ್:— ದಿ ವೆಸ್ಟರ್ನ್ ಇಂಡಿಯಾ ಮ್ಯಾಚ್ ಕಂಪೆನಿ, ಲಿಮಿಟೆಡ್, ಮುಂಬಾಯಿ.

[ಗುಣಬಾರದಿದ್ದರೆ ಹಣ ವಾಪಾಸು]
ಸುಪ್ರಸಿದ್ಧ ವೈದ್ಯರಾದ ಎಮ್. ಕೆ. ರಜಪೂತ ಇವರ
ಸಂತತಿ ಪ್ರತಿಬಂಧಕ ಚೂರ್ಣ (ರಿಜಿಸ್ಟರ್ಡ)
ಬಹಳ ಸಾಂ ಹಡಿಯುವುದರಿಂದ ಹೆಂಗಸರ ಆತಿಯು ಅಶಕ್ತಿಯಾಗುತ್ತದೆ. ಬಹಳ ಬಡತನದಲ್ಲಿ ವಿಶೇಷ ಮಕ್ಕಳಾಗುವುದರಿಂದ ದುಃಖವಾಗುತ್ತದೆ. ಈ ಕಾರಣದಿಂದಲೂ ಅಥವಾ ಬೇರೆ ಕಾರಣದಿಂದಲೂ ಮಕ್ಕಳನ್ನು ಹಡಿಯುವುದು ಬಂದಾಗಬೇಕೆಂದು ಇಚ್ಛಿಸುವವರು ಈ ಚೂರ್ಣವನ್ನು ಉಪಯೋಗಿಸಬೇಕು. ಇದರ ಸೇವನೆಯಿಂದ ಮುಟ್ಟಾಗುವಿಕೆಯು ನೇಮದಂತೆ ಸುರುವಿರುವುದು. ಶರೀರಕ್ಕೆ ಏನೂ ಅಪಾಯ ಇಲ್ಲದೆ ಸಂಸಾರಸುಖವು ಪೂರ್ಣವಾಗಿದ್ದು ಕೂಡಲೇ ಗರ್ಭಧಾರಣ ಬಂದಾಗುವುದು. ತದನಂತರ ಏನೂ ಮಾಡಿದರೂ ಸುರುವಾಗುವುದಿಲ್ಲ. ಮೊದಲೇ ಪೂರಾ ವಿಚಾರ ಮಾಡಿ ತಿಳಿದ ಬಳಿಕ, ಮುಂಬ್ಯ ಸರ್ಟಿಫಿಕೇಟು ದಾಕ್ಟರ ಬಿ. ಎ. ವೈದ್ಯ, ಎಲ್. ಸಿ. ಪಿ. ಎಸ್, ಕೆಳಗಿನಂತೆ ಬರೆಯುತ್ತಾರೆ: ಈ ಚೂರ್ಣದಿಂದ ಯಾವ ತರದ ಅಪಾಯವಾಗದು ಗರ್ಭಧಾರಣವೂ ಆಗುವುದಿಲ್ಲ. ಪೂರ್ಣ ಗುಣಕಾರಿ ಡಬ್ಬಿ ಕಿಮ್ಮತ್ತು ರೂ. ೪-೦-೦, ವಿ. ಪಿ. ಅಂಚೆ ೮.
ವಿಳಾಸ:—ಸಂಜೀವಿನೀ ಔಷಧಾಲಯ ಮು. ಪೋ. ಮಿರಜ, S. M. C

ಶಾಲಿವಾಹನ ಶಕ ೧೮೫೬ನೆಯ ಭಾವ ಸಂವತ್ಸರದ ಶ್ರಾವಣ ಶು। ೧ಶನಿವಾರದಿಂದ—ಶ್ರಾವಣ ಶು। ೭ ಶುಕ್ರವಾರದ ವರೆಗಿನ ಪಂಚಾಂಗ. (೧೯೩೪ನೇಯ ವೃಷಭ—ಬೇಷ)

ತಾರೀಖು	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ಸೌರ ದಿನ	ಸೂರ್ಯ ಉ.	ಸೂರ್ಯ ಅಸ್ತ	ವಿಶೇಷ
25	ಶನಿ	೧	೪೪.೪೬	ಉ. ಭಾದ್ರ	೩೯.೦	೯	6.21	6.45	*
26	ರವಿ	೨	೩೯.೪೪	ರೇವತಿ	೩೬.೪೪	೧೦	6.21	6.44	
27	ಸೋಮ	೩	೩೪.೪೬	ಅಶ್ವಿನಿ	೩೪.೪೬	೧೧	6.21	6.44	
28	ಕುಜ	೪	೩೫.೧೪	ಭರಣೀ	೩೫.೧೪	೧೨	6.21	6.48	
29	ಬುಧ	೫	೩೬.೧	ಕೃತ್ತಿಕಾ	೩೬.೧	೧೩	6.21	6.43	
30	ಗುರು	೬	೨೯.೨೮	ರೋಹಿಣೀ	೩೫.೧೪	೧೪	6.21	6.42	
31*	ಶುಕ್ರ	೭	೩೧.೦	ಮೃಗಶಿರಾ	೪೨.೩	೧೫	6.21	6.42	

ರಾಷ್ಟ್ರೀಯ ಪಕ್ಷದ ಉದಯ.

ಕಲ್ಕತ್ತ ಪರಿಷತ್ತಿನಲ್ಲಿ ಪಂಡಿತ ಮಾಲವೀಯರ ಭಾಷಣ.

ಬರುವ ಎಸೆಂಬ್ಲಿ ಚುನಾವಣೆಗಳಲ್ಲಿ ಕೊಂಗ್ರೆಸ್ ಉಮೇದ್ವಾರರನ್ನು ಸ್ಪರ್ಧಿಸುವ ದೆಸೆಯಿಂದ 'ರಾಷ್ಟ್ರೀಯ ಪಕ್ಷ'ವೆಂಬ ಒಂದು ಹೊಸ ಪಕ್ಷವನ್ನು ಜನನಕ್ಕೆ ತರುವ ಸಲುವಾಗಿ ಪಂಡಿತ ಮದನಮೋಹನ ಮಾಲವೀಯರು ಏರ್ಪಡಿಸಿದ ಪರಿಷತ್ತು ಕಲ್ಕತ್ತೆಯ ರಾಮ್ ಮೋಹನ್ ಗ್ರಂಥಾಲಯದ ಸಭಾ ಸದನದಲ್ಲಿ ಇದೇ ತಾ. ೧೯ರಲ್ಲಿ ಜರಗಿತು ಪರಿಷತ್ತಿಗೆ ಮಾಲವೀಯರು ಅಧ್ಯಕ್ಷರಾಗಿದ್ದರು. ಆಚಾರ್ಯ ಪ್ರಫುಲ್ಲಚಂದ್ರ ರೈಯವರು ಸ್ವಾಗತ ಸಮಿತಿಯ ಅಧ್ಯಕ್ಷರು.

ಅಧ್ಯಕ್ಷರಾದ ಮಾಲವೀಯರು, ತಮ್ಮ ಭಾಷಣದಲ್ಲಿ, ಪ್ರತ್ಯೇಕವಾದ ಪ್ರಾತಿನಿಧ್ಯದ ಹಾನಿಯನ್ನು ಕುರಿತಾಗಿ ವಿವರಿಸಿ, ಜಾತೀಯ ಏವಾರ್ಡಿನ ಕುರಿತಾದ ತನ್ನ ಆಕ್ಷೇಪಗಳನ್ನು ಒತ್ತಿ ಹೇಳಿದರು

ಅಧ್ಯಕ್ಷರ ಭಾಷಣ.

'ಐವತ್ತೆಂಟು ವರ್ಷಗಳ ಹಿಂದೆ ನಾನು ಕಲ್ಕತ್ತೆಗೆ ತೃತೀಯ ರಾಷ್ಟ್ರಸಭಾಧಿವೇಶನಕ್ಕೆ ಚಿತ್ತೈಸಿದ್ದೆನು ಅಂದಿನಿಂದ ನಾನು ಕೊಂಗ್ರೆಸ್ಸಿನ ನಮ್ರ ಸೇವಕನಲ್ಲೊಬ್ಬನಾಗಿ ಕೆಲಸ ಮಾಡುತ್ತ ಬಂದಿರುತ್ತೇನೆ ಮಂಜೂರು ಮಾಡಲ್ಪಟ್ಟ ಯಾವುದಾದರೂ ಒಂದು ವಿಶಿಷ್ಟ ಠರಾವಿನ ಕುರಿತಾಗಿ ಅಭಿಪ್ರಾಯ ಭೇದವೆದ್ದ ಮಾತ್ರಕ್ಕೆ ನಾನು ಕೊಂಗ್ರೆಸ್ಸನ್ನು ಬಿಟ್ಟು ತೊಲಗಿದ್ದವನಲ್ಲ ಭಾರತ ವರ್ಷದ ಬಿನ್ ಸರಕಾರೀ ಪಾರ್ಲಿಮೆಂಟಾಗಿ ಈ ನಮ್ಮ ರಾಷ್ಟ್ರೀಯ ಸಂಸ್ಥೆಯು ಅಭಿವೃದ್ಧಿಗೊಂಡು ಬರುವಂತೆ ಕಾಂಕ್ಷಿಸಿದವನು ನಾನು ಈ ಸಂಸ್ಥೆಯ ಬೆಳವಣಿಗೆಗೆ ನಾವೆಲ್ಲ ದುಡಿದಿರುವೆವು ಅದುಕಾರಣ, ಕೊಂಗ್ರೆಸ್ಸಿನ ವರ್ಚಸ್ಸು ಕುಂದುವಂತೆ ಆ ರಾಷ್ಟ್ರೀಯ ಸಂಸ್ಥೆಗೆ ವಿರುದ್ಧವಾಗಿ ನಾವು ವರ್ತಿಸುವುವೆಂದು ಭಾವಿಸಲಾಗದು ಆದರೆ, ಅರ್ಧ ಶತಮಾನದಿಂದಲೂ ಕೊಂಗ್ರೆಸ್ಸು ಯಾವ ಧ್ಯೇಯ ಸಾಧನೆಗಾಗಿ ಶ್ರಮಪಡುತ್ತಲಿದೆಯೋ ಆ ಧ್ಯೇಯವನ್ನೇ ಎತ್ತಿ ಹಿಡಿದು ನಾವು ಸಾಧಿಸುವ ಆವಶ್ಯಕತೆ ಈಗ ಕಂಡುಬಂದಿದೆಯೆಂದೇ ಈ ಹೊಸ ಪಕ್ಷವನ್ನು ರಚಿಸಬೇಕಾಗಿದೆ

'ಜಾತೀಯ' ಏವಾರ್ಡಿನ ಕುರಿತಾಗಿ ಕೊಂಗ್ರೆಸ್ ಕಾರ್ಯಕಾರಿ ಸಮಿತಿಯು ಮಾಡಿದ ಠರಾವು ಇದಕ್ಕೆ ಕಾರಣವಾಯಿತು [illegible]ವಿನ ಒಂದಂಶವನ್ನು ಶ್ರೀಯುತ ಅಣೆ[illegible]ರೂ ನಾನೂ ಆಕ್ಷೇಪಿಸಿದೆವು ನಮ್ಮ ಆಕ್ಷೇಪವು ಕಾರ್ಯಕಾರೀ ಸಮಿತಿಗೆ ಉಚಿತವಾಗುವಂತೆ ಮಾಡುವುದು ನಮ್ಮಿಂದ ಸಾಧ್ಯವಾಗಲಿಲ್ಲ ಕೊಂಗ್ರೆಸ್ ಪರವಾಗಿ ಎಸೆಂಬ್ಲಿಗೆ ಚುನಾಯಿತರಾಗಿ ಹೋಗುವವರು, ಜಾತೀಯ ಏವಾರ್ಡಿನ ಕುರಿತಾಗಿ ತಮ್ಮ ಅಭಿಪ್ರಾಯಕ್ಕನುಸಾರ ಮತಕೊಡುವಂತೆ ಸ್ವತಂತ್ರವುಳ್ಳವರಾಗಬೇಕೆಂದು ನಮ್ಮ ಸೂಚನೆಯಿತ್ತು ಇದು ಅಸಂಬದ್ಧವೇ? ನಾನೂ ಅಣೆಯವರೂ ನಮ್ಮ ಇಚ್ಛೆಯಂತೆ ಜಾತೀಯ ಏವಾರ್ಡಿನ ಕುರಿತಾಗಿ ಮತಕೊಡಲು ಸ್ವತಂತ್ರವುಳ್ಳವರಾಗಿರುವೆವೆಂದೂ, ಆದರೆ ಇತರ ಕೊಂಗ್ರೆಸ್ ಮೆಂಬರರಿಗೆ ಆ ಸ್ವತಂತ್ರವು ಕಾರ್ಯಕಾರೀ ಸಮಿತಿಯು ಪರ್ಯಾಲೋಚಿಸದೆ ಕೊಡುವಂತಿಲ್ಲವೆಂದೂ ನಮಗೆ ತಿಳಿಸಲಾಯಿತು ಜಾತೀಯ ಏವಾರ್ಡಿನ ಕುರಿತಾಗಿ ಎಸೆಂಬ್ಲಿಯಲ್ಲಿ ಯಾರೂ ಸ್ವತಂತ್ರ ಅಭಿಪ್ರಾಯವನ್ನು ಪ್ರಕಟಿಸಬಾರದೆಂಬ ಈ ನಿರ್ಬಂಧವು ಅನ್ಯಾಯವೆಂದು ನಮಗೆ ತೋರಿದೆ

"ಈ ಒಡಕು ಬರಬಾರದಿತ್ತೆಂದೇ ನಮ್ಮ ಇಚ್ಛೆಯಿತ್ತು ಮುಂದೆಯೂ, ನಾವು ಕೊಂಗ್ರೆಸ್ ಕಮಿಟಿಯು ನಮ್ಮ ಅಭಿಪ್ರಾಯವನ್ನು ಸ್ವೀಕರಿಸುವಂತೆ ಯತ್ನಪಟ್ಟೆವು, ಆದರೆ, ಸಾಧ್ಯವಾಗಲಿಲ್ಲ ಜಾತೀಯ ಸಮಸ್ಯೆಯನ್ನು ನಾವೇ ನಮ್ಮೊಳಗೆ ತೀರ್ಮಾನಿಸಿಕೊಳ್ಳಲಸಮರ್ಥರಾದ ಕಾರಣ, ಸರಕಾರವು ದಯಪಾಲಿಸಿದ ಜಾತೀಯ ಏವಾರ್ಡನ್ನು ನಾವು ಸ್ವೀಕರಿಸಲೇಬೇಕೆಂದು ವಾದಿಸುವುದು ತಪ್ಪು ನಾವೇ ಹಿಂದೆ ಕೆಲವೊಂದು ಬಾರಿ ಒಂದು ತೀರ್ಮಾನಕ್ಕೆ ಬಂದಿದ್ದಾಗ ಅದು ಯಶಸ್ವಿಯಾಗದೆ ಹೋದುದರಲ್ಲಿ ಸರಕಾರದ ಕೈಯೂ ಇದೆಯೆಂಬುದನ್ನು ನೆನಪಿಗೆ ತಂದುಕೊಳ್ಳಿರಿ ಜಾತೀಯ ಏವಾರ್ಡನ್ನು ಕೆಲವೊಂದು ಮುಸ್ಲಿಮರು ತೃಪ್ತಿಯಿಂದ ಸ್ವೀಕರಿಸಬಹುದು ಆದರೆ, ಅವರಲ್ಲಿ ಹೆಚ್ಚಿನವರು, ತಮಗೆ ಅಲ್ಲಲ್ಲಿ ಕೆಲವೊಂದು ಸ್ಥಾನಗಳು ಹೆಚ್ಚಿಗೆ ದೊರೆತಿರಬಹುದಾದರೂ ಯಾವ ವಿಶಿಷ್ಟ ಅಧಿಕಾರವೂ ದೊರೆತಿಲ್ಲವೆಂಬುದನ್ನು ಮನಗಾಣದಿರಲಾರರು ಕೇವಲ ಪ್ರತ್ಯೇಕ ಪ್ರಾತಿನಿಧ್ಯ ಮತ್ತು ಸೀಟುಗಳನ್ನು ಹಂಚುವ ಸಲುವಾಗಿ ಮಾತ್ರ ಈ ಏವಾರ್ಡು ಇದ್ದಂತಾಯಿತು ಜಾತೀಯ ಏವಾರ್ಡೆಂದರೆ ಭಾರತ ವರ್ಷದ ಭಾವೀ ರಾಜ್ಯರಚನೆಯ ಅಸ್ತಿವಾರವು ಅದು ದೇಶಕ್ಕೆ ವಿಘಾತುಕವಾಗಿರಲಾರದು ಮಹತ್ವದ ಪ್ರಶ್ನೆಯನ್ನು ನಾವು ಅಲಕ್ಷಿಸುವುದು ಮಹಾ ಅನ್ಯಾಯವಾಗುವುದು

'ರಾಷ್ಟ್ರಸಭೆಯು ರಚನೆಯಾದಂದಿನಿಂದ ಹಿಂದುಗಾದೇಶಕ್ಕೆ ಪ್ರಜಾಪ್ರತಿನಿಧಿ ಸರಕಾರವು ಬೇಕೆಂದು ಸರಕಾರಕ್ಕೆ ತಿಳಿಸಲಾಗುತ್ತಿದೆ

ಶ್ರೀ ಪಂಡಿತ ಮಾಲವೀಯರು.

1885ರಿಂದ ರಾಷ್ಟ್ರಸಭೆಯು, ಜಂಟೀ ಪ್ರಾತಿನಿಧ್ಯದಿಂದ ಮಾತ್ರ ಸಾಧ್ಯವಿರುವ ಈ ಪ್ರಜಾಪ್ರತಿನಿಧಿ ಸರಕಾರದ ರಚನೆಗಾಗಿ ಸಾಧಿಸುತ್ತಿದೆ ಪ್ರತ್ಯೇಕ ಪ್ರಾತಿನಿಧ್ಯದ ಯೋಜನೆಯು ಮುಸ್ಲಿಂ ಮುತ್ಸದ್ದಿಗಳಿಂದುಂಟಾದುದಲ್ಲ 1908ರಲ್ಲಿ ಸರಕಾರದ ಕೆಲ ಆಫೀಸರರೇ ಇದನ್ನು ಜನನಕ್ಕೆ ತಂದವರು 1934ರಲ್ಲೂ ಅದನ್ನೇ ಮತ್ತೆ ರೂಢಿಗೆ ತಂದು, ಬಲಪಡಿಸುವುದೇ ಸರಕಾರವು ಈಗ ನಮಗೆ ಕೊಡುವ ಜಾತೀಯ ಏವಾರ್ಡು! ರಾಷ್ಟ್ರೀಯಸಭೆಯು ಕೇಳುತ್ತಿದ್ದುದು ಜಂಟೀ ಪ್ರಾತಿನಿಧ್ಯವನ್ನು, ಹಿಂದೀಯರೆಲ್ಲರೊಳಗೆ ಪರಸ್ಪರ ವಿಶ್ವಾಸ-ಪ್ರೀತಿಗಳು ಬೆಳೆದು ಬಂದು ಶಾಂತಿಯು ನೆಲಸಬೇಕೆಂದು ನಮ್ಮ ಕಾಂಕ್ಷೆ ಪ್ರಜೆಗಳಿಂದ ಪ್ರಜೆಗಳ ಸರಕಾರವು ಪ್ರಜೆಗಳಿಗಾಗಿ ಇರಬೇಕೆಂದು ನಮ್ಮ ಮಹತ್ವಾಂಕ್ಷೆ ಹೀಗಿದ್ದಾಗ, ಪ್ರತ್ಯೇಕ ಪ್ರಾತಿನಿಧ್ಯದಿಂದ ಹಿಂದುಗಳನ್ನೂ ಮುಸ್ಲಿಮರನ್ನೂ ವಿಭಾಗಿಸಿದರೆ—ಪರಸ್ಪರ ಮತ್ಸರ, ದ್ವೇಷ, ಕಲಹಗಳ ದುಷ್ಫಲವಲ್ಲದೆ ಮತ್ತೇನು? ಪ್ರತ್ಯೇಕ ಪ್ರಾತಿನಿಧ್ಯವನ್ನು, ಅಧಿಕಾರವಾಣಿಯಿಂದಾಡುವ ಹಲವರು ನಿಷೇಧಿಸಿರುವರು ಮೊಂಟೆಗ್ಯೂ, ಚೆಮ್ಸ್‌ಫರ್ಡ್ ಮತ್ತು ಸ್ಯಾಮನ್ ಕಮಿಶನು ಗಳೂ ಅದರನ್ನೆದುರಾಡಿವೆ ಜವಾಬ್ದಾರಿ ಸರಕಾರವೆನ್ನಲಾಗದ ಇಂತಹ ಏವಾರ್ಡನ್ನು ಸ್ವೀಕರಿಸುವುದಕ್ಕಿಂತ ವರ್ಷಗಳ್ ತನಕವಾದರೂ ಕೊಂಗ್ರೆಸ್ಸು ಗೊತ್ತು ಗುರಿಯಿಲ್ಲದೆ ಅರಣ್ಯದಲ್ಲಿ ಸಂಚರಿಸೀತು ಎಂದು ಗಾಂಧಿಜಿಯವರು—ಕಳೆದ ರೌಂಡ್‌ಟೇಬಲ್ ಪರಿಷತ್ತಿನಲ್ಲಿ ಸ್ಪಷ್ಟವಾಗಿ ಆಡಿತೋರಿಸಿರುವರು ಇಷ್ಟು ಮಂದಿಯೂ ಪ್ರತ್ಯೇಕ ಪ್ರಾತಿನಿಧ್ಯವನ್ನೆದುರಾಡಿ ಜಂಟೀ ಪ್ರಾತಿನಿಧ್ಯಕ್ಕೆ ಒತ್ತಾಯಪಡಿಸಿದ್ದರೂ ಬ್ರಿಟಿಷ್ ಸರಕಾರವು ಪ್ರತ್ಯೇಕ ಪ್ರಾತಿನಿಧ್ಯವನ್ನೇ ನಮಗೆ ಕೊಡಲು ಬಂದಿದೆ!—ಅನವಶ್ಯವಿಲ್ಲದ ಕಡೆಯಲ್ಲೂ ಪ್ರತ್ಯೇಕ ಪ್ರಾತಿನಿಧ್ಯವನ್ನೇ ಕೊಟ್ಟಿದೆಯೆಂಬುದು ಮತ್ತೊಂದು ಅದ್ಭುತ! ಯಾವ ರಾಷ್ಟ್ರಾಭಿಮಾನಿಯೂ ಇದನ್ನು ಸ್ವೀಕರಿಸನು ನಮ್ಮ ರಾಷ್ಟ್ರದ ಸ್ವತ್ವವು ಕುಂದುತ್ತಿದೆಯೆಂದು ನನಗೆ ಭಾಸವಾಗುತ್ತಿದೆ ಜವಾಬ್ದಾರಿ ಸರಕಾರದ ಸ್ಥಾಪನೆಯು ಇದರಿಂದ ತಡೆಯಲ್ಪಟ್ಟು, ಮತ್ತಷ್ಟು ದೂರಕ್ಕೆ ತಳ್ಳಲ್ಪಡುವುದೆಂದು ಹೇಳಬೇಕಾಗಿದೆ

'ಈ ಜಾತೀಯ ಏವಾರ್ಡು ಮುಸ್ಲಿಮರಿಗೆ, ಅವರು ಕೇಳಿದುದಕ್ಕಿಂತ ಹೆಚ್ಚನ್ನು ಕೊಟ್ಟಿದೆ ಆವಶ್ಯವಿದ್ದುದಕ್ಕಿಂತ ಹೆಚ್ಚಿನ ಪ್ರಾತಿನಿಧ್ಯವು ಅವರಿಗೆ ಕೊಡಲ್ಪಟ್ಟಿದೆ [illegible] ಪ್ರಾತಿನಿಧ್ಯವು ಕೊಡಲ್ಪಟ್ಟಿದೆ ಈ ಮುಸ್ಲಿಮ್ ಪ್ರತಿನಿಧಿಗಳನ್ನು ಮುಸ್ಲಿಮರೇ ಆರಿಸುವರೇ ವಿನಾ ಹಿಂದೂಗಳಾರೂ ಮತಕೊಡಲು ಹಕ್ಕುಳ್ಳವರಾಗಿಲ್ಲ ಮುಸ್ಲಿಮರಿಂದ ಚುನಾಯಿಸಲ್ಪಟ್ಟವರು ಮುಸ್ಲಿಮರಿಗೆ ಮಾತ್ರ ಜವಾಬ್ದಾರರಾಗಿದ್ದು ಅವರ ಹಿತಚಿಂತಕರಾಗಿ ಮಾತ್ರ ಇರುವರು [illegible] ಮುಸ್ಲಿಮರ ಜವಾಬ್ದಾರಿ ಸರಕಾರವಾಗಬಹುದು ಆದರೆ ಹಿಂದೂಗಳ ಮತ್ತು ಕ್ರೈಸ್ತರ ವಿಚಾರವೇನ ಈಗ ನಾವು ಒಂದು ವಿದೇಶೀ ಸರಕಾರದ ಕೈಕೆಳಗಿರುವೆವು ಜಾತೀಯ ಏವಾರ್ಡಿನ [illegible] ಪ್ರಜೆಗಳಿಂದ ಪ್ರಜೆಗಳಿಗಾಗಿ ಪ್ರಜೆಗಳ ಸರಕಾರವು ಒದಗಿ ದೊರೆವುದೆಂದರೆ ಅದು ಇಲ್ಲ [illegible] ಹಿಂದೂಗಳ ಮೇಲೆ ಮುಸ್ಲಿಮರ ಸರಕಾರ ಮತ್ತು ಸಂಯುಕ್ತ ಪ್ರಾಂತ್ಯದಲ್ಲಿ ಮುಸ್ಲಿಮರ ಮೇಲೆ ಹಿಂದೂಗಳ ಸರಕಾರ ಹೀಗಾಗುವುದು ಇದು ಪ್ರಜಾಸತ್ತೆ ಎನಿಸುವುದೇ? ಒಂದು ಜಾತಿಯು ಮತ್ತೊಂದರ ಮೇಲೆ ನಡೆಸುವ ಅಧಿಕಾರದಿಂದ ಪರಿಣಾಮದಲ್ಲಿ ಅದು ಪ್ರಜಾಪೀಡನೆಯಾಗದೆ ಉಳಿದೀತೇ? ಇದನ್ನೀಗ ನಮಗೆ ಕೊಡುವುದು—ಜಾತೀಯ ಏವಾರ್ಡು ಹಿಂದೀಯರಲ್ಲಿ ಬಹ್ವಂಶದವರೂ, ಸೈಮನ್ ಕಮಿಶನೂ, ಚೆಮ್ಸ್‌ಫರ್ಡ್ ಪ್ರಭುಗಳೂ ಮೊಂಟೆಗ್ಯೂ ಸಾಹೇಬರೂ—ಇವರೆಲ್ಲ ವಿರೋಧಿಸಿದುದನ್ನು ಸರಕಾರವು ನಮ್ಮ ಮೇಲೆ ಬಲಾತ್ಕರಿಸುವುದೆಂದಾಯಿತು

೧೯೩೧ರಲ್ಲಿ 'ರಾಷ್ಟ್ರೀಯ ಮುಸ್ಲಿಮರು' ಪ್ರತ್ಯೇಕ ಪ್ರಾತಿನಿಧ್ಯವನ್ನು ನಿರೋಧಿಸಿ, ಜಂಟೀ ಪ್ರಾತಿನಿಧ್ಯವನ್ನು ಸಮರ್ಥಿಸಿ ಬಲವಾದ ಚಳವಳವನ್ನು ಹೂಡಿದರು ಈ ಆಂದೋಲನದಲ್ಲಿ ಬಂಗಾಳವು ಮುಂದಾಳಾಯಿತು ಬಂಗಾಳದ ಲೆಜಿಸ್ಲೇಟಿವ್ ಕೌನ್ಸಿಲು ಜಂಟೀ ಪ್ರಾತಿನಿಧ್ಯವನ್ನು ಸಮರ್ಥಿಸಿ ಠರಾವು ಮಾಡಿತು. ೧೯೩೧ನೇ ಜುಲೈ ತಿಂಗಳಲಿ ಕೊಂಗ್ರೆಸ್ ಕಾರ್ಯಕಾರಿ ಸಮಿತಿಯು ನಮ್ಮ ದೇಶಕ್ಕೆ ಜಂಟೀ ಪ್ರಾತಿನಿಧ್ಯದ ಒಂದು ಯೋಜನೆಯನ್ನು ಸಿದ್ಧಗೊಳಿಸಿತು ಪ್ರತಿಯೊಂದು ಪ್ರಾಂತ್ಯದಲ್ಲೂ ಜಂಟೀ ಪ್ರಾತಿನಿಧ್ಯವಿರಬೇಕೆಂದೂ, ಅಲ್ಪ ಸಂಖ್ಯಾಕರು ಅಪೇಕ್ಷಿಸುವುದಾದರೆ ಮಾತ್ರ ಅವರ ಜನಸಂಖ್ಯೆಯ ದಾಮಾಶಯದಲ್ಲಿ ಅವರ ಬಗ್ಗೆ ಕೆಲವೊಂದು ಸ್ಥಾನಗಳನ್ನು 'ರಿಸರ್ವ್' ಆಗಿ ಇರಿಸಬಹುದೆಂದೂ ಆ ಯೋಜನೆಯ ತಾತ್ಪರ್ಯವಾಗಿತ್ತು.

'ಕಮ್ಯೂನಲ್ ಏವಾರ್ಡನ್ನು ಇದ್ದ ಹಾಗೇ ಇರಗೊಡಿಸಿದರೆ ಸ್ವತಂತ್ರ ಸರಕಾರವು ಬೆಳೆದುಬಾರದೆಂಬುದು ಖಂಡಿತ ಬ್ರಿಟನಿನ ಆಡಳಿತವೇ ಮತ್ತಷ್ಟು ಮುಂದರಿಯುವುದು ಇದನ್ನು ನೀವು ಬಯಸುತ್ತೀರಾ? ಕೊಂಗ್ರೆಸ್ ಕಮಿಟಿಯು ಜಾತೀಯ ಏವಾರ್ಡನ್ನು ತಿರಸ್ಕರಿಸಿದೆಯೆಂದರೂ—ಪ್ರತ್ಯೇಕ ಪ್ರಾತಿನಿಧ್ಯವನ್ನು ವಿರೋಧಿಸಿ ಜಂಟೀ ಪ್ರಾತಿನಿಧ್ಯವನ್ನು ತರುವ ಕುರಿತಾಗಿ ಏನನ್ನೂ ಆಡಲಿಲ್ಲ. ಜಾತೀಯ ಏವಾರ್ಡಿನಿಂದ ತೃಪ್ತಿಹೊಂದಿದ ಸರಕಾರಕ್ಕೂ ಕೆಲ ಮುಸ್ಲಿಮರಿಗೂ—'ಜಾತೀಯ ಏವಾರ್ಡಿಗೆ ರಾಷ್ಟ್ರೀಯರೆಲ್ಲರೂ ವಿರೋಧಿಗಳಾಗಿರುವರು' ಎಂಬುದನ್ನು ಕೊಂಗ್ರೆಸ್ ಕಮಿಟಿಯು ತೋರಿಸಿಕೊಡಬೇಕಾಗಿತ್ತು ಅಂಥ ಭಾವನೆಯನ್ನು ಹುಟ್ಟಿಸಿದ್ದರೆ ಪ್ರತ್ಯೇಕ ಪ್ರಾತಿನಿಧ್ಯವೆಂಬುದು ಈಗಲೋ ಇನ್ನು ಅಲ್ಪಕಾಲದಲ್ಲೊ ಹೋಗಬಹುದಾಗಿತ್ತು ಸರಕಾರವು ತನಗೆ ಅನ್ಯಾಯ ಮಾಡಿದರೂ ಕೊಂಗ್ರೆಸ್ಸು ಆ ಅಕೃತ್ಯವನ್ನು ಹೋಗಲಾಡಿಸಲು ಯತ್ನಿಸಿತೆಂಬ ಸಮಾಧಾನವೂ ಜನರಲ್ಲಿ ಉಂಟಾಗುತಿತ್ತು ಆದರೆ ಕೊಂಗ್ರೆಸ್ ಕಮಿಟಿಯು ಜಾತೀಯ ಏವಾರ್ಡಿನ ಕುರಿತಾಗಿ ತನ್ನ ಅಭಿಪ್ರಾಯವನ್ನು ಸ್ಪಷ್ಟಪಡಿಸಲಾರದೆಹೋಯಿತು ಇದು, ಜಾತೀಯ ಏವಾರ್ಡನ್ನು ಮೌನವಾಗಿ ಸ್ವೀಕರಿಸಿದೆಯೆಂಬ ಅರ್ಥವನ್ನುಂಟುಮಾಡುತ್ತದೆ ತಿರಸ್ಕರಿಸಲೂ ಇಲ್ಲ, ಪುರಸ್ಕರಿಸಲೂ ಇಲ್ಲವೆಂದಾಗ ಕೊಂಗ್ರೆಸ್ಸು ತನ್ನ ಧ್ಯೇಯವನ್ನು ತೊರೆದು ಚಲಿಸುತ್ತಿದೆಯೆಂದಾಯಿತು

ಈಗ ನಮ್ಮ ಕರ್ತವ್ಯವೇನು? ಕಮ್ಯೂನಲ್ ಏವಾರ್ಡನ್ನು ಮುಖ್ಯವಾಗಿ ನಿರೋಧಿಸುವುದು ಕೊಂಗ್ರೆಸ್ ಕಾರ್ಯಕಾರಿ ಸಮಿತಿಗೆ ಉಚಿತವೆನಿಸುವುದು ನಮ್ಮಿಂದ ಅಸಾಧ್ಯವಾಯಿತ್ತೆ ದಾಗ ನಾವೇ ಒಂದು ಹೊಸ ಪಂಗಡವನ್ನು ರಚಿಸಿ ಕಾರ್ಯವನ್ನು ಮುಂದೊತ್ತಬೇಕೆಂದಾಯಿತು ಇದರಿಂದ ಕೊಂಗ್ರೆಸ್ಸಿನ ಬಲವು ಕುಂದೀತು ಅಥವಾ ಕುಂದುವುದೆಂದು ಭಾವಿಸುವುದು ತಪ್ಪು ಈಗಿನ ಈ ಸಂದಿಗ್ಧ ಸ್ಥಿತಿಯಲ್ಲಿ ನಾವು ಕೊಂಗ್ರೆಸ್ಸಿನೊಡನೆ ಅನಾವಶ್ಯಕವಾಗಿ ಕಲಹವೆಬ್ಬಿಸಿ ಕೊಂಗ್ರೆಸ್ಸಿನ ಬಲವನ್ನು [illegible] ಕುಂದಿಸಲು ಯತ್ನಿಸುವಷ್ಟು ಅವಿವೇಕಿಗಳಲ್ಲ ಕೊಂಗ್ರೆಸ್ಸು ತಪ್ಪು ಹಾದಿಯಲ್ಲಿ ಕಾಲಿಟ್ಟರೆ ಅದನ್ನು ಆ ಪಥದಿಂದ ಹಿಮ್ಮೆಟ್ಟಿಸಿ ಪೂರ್ವದ ಸ್ಥಿತಿಗೆ ತರುವುದಷ್ಟೆ ನಮ್ಮ ಕರ್ತವ್ಯ ನಮ್ಮ ಈ ರಾಷ್ಟ್ರೀಯ ಪಕ್ಷದ ಧ್ಯೇಯವಾದರೂ ಕೊಂಗ್ರೆಸಿನಂತೆ—"ನ್ಯಾಯವೂ ಶಾಂತವೂ ಆದ ಕಾಯದೆ ವಿಧಾನಗಳಿಂದ ಪೂರ್ಣ ಸ್ವರಾಜ್ಯಕ್ಕಾಗಿ ದುಡಿಯುವುದು ಇದನ್ನು ಅನುಮೋದಿಸುವ ಯಾರೂ ಈ ಪಕ್ಷದ ಸದಸ್ಯರಾಗಿ ಸೇರಬಹುದು ಕೊಂಗ್ರೆಸ್ಸಿನ ಧ್ಯೇಯಕ್ಕನುಕೂಲವಾಗಿ ನಡೆವವರೇ ಈ ಪಕ್ಷದ ಸದಸ್ಯರು ನಮಗೂ ಕೊಂಗ್ರೆಸ್ಸಿಗೂ ಜಾತೀಯ ಏವಾರ್ಡಿನ ಕುರಿತಾಗಿ ಮಾತ್ರ ಅಭಿಪ್ರಾಯ ಭೇದವಷ್ಟೆ ಪೂರ್ಣ ಸ್ವಾತಂತ್ರ್ಯ ಬೇಕೆನ್ನುವುದರಲ್ಲಿ ಸಂಕೋಚಿಸುವವರು ನಮಗೆ ಬೇಡ ಆಂಗ್ಲೇಯರು ಅವರ ರಾಜ್ಯದಲ್ಲಿ ಪೂರ್ಣ ಸ್ವಾತಂತ್ರ್ಯಕ್ಕೆ ಎಷ್ಟು ಅರ್ಹರಾಗಿರುವರೋ ಅಷ್ಟೇ ನಾವೂ ಬಾಧ್ಯರು, ನಮಗೂ ಅಷ್ಟೇ ಅರ್ಹತೆಯಿದೆ

"ಭಾರತ ವರ್ಷವು ದೊಡ್ಡದು, ಅದರ ಪೂರ್ವದ ವೈಭವದಿಂದ ಚಿರಕಾಲಕ್ಕೂ ದೊಡ್ಡದು ಅದರ ಸ್ಥಾನವು ಪೃಥ್ವಿಯ ಇತರ ಸಾಮ್ರಾಜ್ಯಗಳಿಗಿಂತ ಕೀಳಾಗಿರಲೇಕೆ? ಪೂರ್ಣ ಸ್ವಾತಂತ್ರ್ಯಕ್ಕಿಂತ ಕಡಿಮೆಯಾದುದು ನಮಗೇನೂ ಬೇಡ ನಮಗದು ಬೇಕಾಗಿರುವುದರಿಂದಲೇ, ಕೊಂಗ್ರೆಸ್ಸು ಪೂರ್ವದಂತೆ ಅದಕ್ಕಾಗಿಯೇ ಸಾಧಿಸಬೇಕೆಂದೂ, ರಾಷ್ಟ್ರೀಯ ಕೇಳಿಕೆಗಳಿಗೆ ಕಡಿಮೆಯೆನಿಸುವ ಮತ್ತಾವುದಾದರಿಂದಲೂ ತನ್ನ ನಿಶ್ಚಿತ ಧ್ಯೇಯದಿಂದ ವಿಮುಖವಾಗಬಾರದೆಂದೂ ನಾವು ಇಚ್ಛಿಸುವವರು."

[illegible]

"[illegible] ಶಾಸ್ತ್ರಕಾರರು ಕಮ್ಯೂನಿಸ್ಟರು, ಅವರ್ಣ್ಯದವರ ಯಾವ ಅಧಿಕಾರವೂ ಪ್ರತ್ಯೇಕವಿಲ್ಲ. ಅವರ ಅಪಾಯ್ಯಾರಿಯು ತಮಗಿಲ್ಲ. ಅಂದಿನಿಂದ ಪ್ರಾಮುಖ್ಯ ಸಂಗಡಗಳೂ ಒಡೆಯಲ್ಪಟ್ಟು, ದೂರದೇಶದಿಂದ ದೃಷ್ಟಿಯಿಂದೊಬ್ಬರಿಗೊಬ್ಬರು ಕಾಣುವಂತಾಗುವುದು. ಸ್ವಜಾತಿಯ ಅಧಿಕಾರವೂ ಹಿಂದೆಯಿರಲಿಲ್ಲ, ವಾಣಿಜ್ಯವು ರಕ್ಷಣಾ ಸೂತ್ರಗಳಿಂದ ಬಿಗಿಯಲ್ಪಟ್ಟಿದೆ." ಎಂಬುದನ್ನು ಸ್ಪಷ್ಟೀಕರಿಸಿ, ಜಮ್ನಾದಾಸ್ ಮೇಥಾರವರ ಭಾಷಣವಾಯಿತು.

ಠರಾವುಗಳು.

ಶ್ರೀ ಅಖಿಲ ಚಂದ್ರ ದತ್ತರವರು ಈ ಕೆಳಗಿನ ಠರಾವನ್ನು, ಪಂಪತ್ತಿನ ಅನುಮೋದನೆಗಾಗಿ ಮುಂತಂದರು:—

"ಶಾಸನ ಸಭೆಯಲ್ಲಿಯೂ ದೇಶದಲ್ಲಿಯೂ ಜಾತೀಯ ಎವಾರ್ಡಿಗೆದುರಾಗಿ ಚಳವಳವನ್ನು ಹೂಡಲು ಮತ್ತು ಉದ್ದೇಶ ಸಾಧನೆಗಾಗಿ ಚುನಾವಣೆಗೆ ಉಮೇದ್ವಾರರನ್ನು ಮುಂತರಲು ರಾಷ್ಟ್ರೀಯ ಪಕ್ಷವೆಂಬ ಒಂದು ಹೊಸ ಪಕ್ಷವು ರಚಿಸಲ್ಪಡಬೇಕೆಂದು ಈ ಪರಿಷತ್ತು ಠರಾಯಿಸುತ್ತದೆ."

"ಈ ಪಕ್ಷದ ಧ್ಯೇಯವನ್ನು ಸಮರ್ಥಿಸಿದುಡಿವ ಪ್ರತಿಯೊಬ್ಬ ಕೊಂಗ್ರೆಸ್‌ವಾಲನು ಇದರ ಸದಸ್ಯತನಕ್ಕೆ ಅರ್ಹನಾಗುವನು. ಈ ಪಕ್ಷದ ಮೆಂಬರರಾಗಿರುವ ಕೊಂಗ್ರೆಸ್‌ವಾಲರೊಳಗಿನವರನ್ನು ಚುನಾವಣೆಗೆ ಉಮೇದ್ವಾರರನ್ನಾಗಿ ಚುನಾಯಿಸಲಾಗುವುದು. ಕೆಲವೊಂದು ವಿಶಿಷ್ಟ ಸಂದರ್ಭದಲ್ಲಿ ಪಕ್ಷದ ನಿಯಮ—ನಿಬಂಧನೆಗಳಿಗೊಳಪಟ್ಟು ಅದರ ಧ್ಯೇಯ ಸಾಧನೆಗಾಗಿ ಶ್ರಮಪಡುವ ರಾಷ್ಟ್ರೀಯನೊಬ್ಬನನ್ನೂ ಚುನಾವಣೆಗೆ ಉಮೇದ್ವಾರನನ್ನಾಗಿ ಸಮರ್ಥಿಸಬಹುದು."

ಈ ಠರಾವುಗಳ ಮೇಲೆ ಶ್ರೀ। ಸಂತೋಷಕುಮಾರ ಬಸುಗಳವರು ಒಂದೆರಡು ಆಕ್ಷೇಪಣೆಗಳನ್ನು ತಂದರು. ಪಂಡಿತ ಮಾಲವೀಯರೂ ಶ್ರೀಮಾನ್ ಕೇಳ್ಕರ ಮತ್ತು ಅಣೆಯವರೂ ಅವರ ಸಂದೇಹ ನಿವಾರಣೆಯಾಗುವಂತೆ ವಿವರಿಸಿದ ನಂತರ, ಠರಾವುಗಳು ಮಂಜೂರಾದುವು.

ಆ ನಂತರ ಶ್ವೇತಪತ್ರವನ್ನು ತಿರಸ್ಕರಿಸುವ ಒಂದು ಠರಾವನ್ನು ಶ್ರೀ ಸಂತೋಷಕುಮಾರ ಬಸುಗಳವರು ತರಲು, ಸರ್ವಾನುಮತದಿಂದ ಮಂಜೂರಾಯಿತು.

ಪರಿಷದಾಂತ್ಯದಲ್ಲಿ ಮಾತಾಡುತ್ತ ಮಾಲವೀಯರು, ಧಾರ್ಮಿಕ ವಿಷಯಗಳಲ್ಲಿ ಶಾಸನ ಸಭೆಯು ತನ್ನ ಮೇಲ್ಮೆಯನ್ನು ತೋರಿಸುವುದು ವಿಹಿತವಲ್ಲವೆಂದು ತನ್ನ ಅಭಿಪ್ರಾಯವಾಗಿದೆಯೆಂಬುದನ್ನು ತಿಳಿಸಿ, 'ಮಹಾತ್ಮಾ ಗಾಂಧಿ ಮತ್ತು ಕೊಂಗ್ರೆಸ್ ಕಮಿಟಿಗಳೊಡನೆ ನಮ್ಮ ಅಭಿಪ್ರಾಯ ಭೇದವು ತೊಲಗುವಂತಾದರೆ ನನಗೆ ಮಹದಾನಂದವಾಗದಿರದು'' ಎಂಬುದಾಗಿ ತಮ್ಮ ಭಾಷಣವನ್ನು ಅಂತ್ಯಗೊಳಿಸಿದರು.

ರಾಷ್ಟ್ರೀಯ ಪಕ್ಷದ ಚುನಾವಣೆ ಬೋರ್ಡಿನ ಅಧ್ಯಕ್ಷರಾಗಿ ಪಂಡಿತ ಮಾಲವೀಯರೂ ಉಪಾಧ್ಯಕ್ಷರಾಗಿ ಆಚಾರ್ಯ ಪ್ರಫುಲ್ಲ ಚಂದ್ರ ರೈಯವರೂ, ಕಾರ್ಯದರ್ಶಿಗಳಾಗಿ ಅಣೆಯವರೂ ಚುನಾಯಿಸಲ್ಪಟ್ಟಿರುವರು.

ಕವೀಂದ್ರ ರವೀಂದ್ರರ ಸಂದೇಶ.

ಕವಿವರ್ಯ ರವೀಂದ್ರನಾಥ ಠಾಕೂರರು ಪರಿಷತ್ತಿಗೆ ಈ ಕೆಳಗಿನ ಸಾರಾಂಶವುಳ್ಳ ಸಂದೇಶವನ್ನು ಕಳುಹಿದವರು:—

"ಈ ಪತ್ರವನ್ನು ನಾನು, ಹಿಂದೂಗಳಿಗೂ ಮುಸ್ಲಿಮರಿಗೂ, ಅವೆರಡು ಸಂಗಡಗಳ ಐಕ್ಯವನ್ನು ಚಿಂತಿಸಿಯೇ ಬರೆಯುತ್ತೇನೆ. ಜಾತೀಯ ಎವಾರ್ಡನ್ನು ನಾನು ಯಾವಾಗಲೂ ಅನು[illegible] ಸಂಗಾಗಮಾನ್ನ ಮುಸಲ್ಮಾನರ ಸಂಗಡಗಳಲ್ಲಿ ಉಭಯ ಸಮಾಧಾನದಿಂದ ಇತ್ಯರ್ಥಿಸಿ, ಒಂದು ನಿರ್ಧಾರಕ್ಕೆ ಬರಬೇಕಾದುದಾವಶ್ಯಕ. ಜಾತೀಯ ಸಂಗಡಗಳ ವಿಭಜನೆಯಿಂದ ಸ್ವತಂತ್ರ ಸರಕಾರವು ಸಿದ್ಧಿಸದು."

ಜರ್ಮನಿಯ ಸರ್ವಾಧಿಕಾರಿ ಹರ್ ಹಿಟ್ಲರ್.

ಇಂದು ಜರ್ಮನಿ ದೇಶವು ಹರ್ ಹಿಟ್ಲರರ ವಜ್ರಮುಷ್ಟಿಯ ಕೆಳಗೆ, ಪ್ರಪಂಚದ ಉಳಿದ ರಾಷ್ಟ್ರಗಳ ಟೀಕಾ ಪೂರ್ಣ ದೃಷ್ಟಿಯೆದುರು ನಡೆಯುತ್ತಿದೆ. "ಜರ್ಮನಿ, ಎಲ್ಲಿಗೆ?" ಎಂದು ಪ್ರಶ್ನಿಸುವವರೇ ಹೆಚ್ಚು.

ಆದರೆ, ಯಾರ ಯಾವ ಬಗೆಯ ಟೀಕೆಗೂ ತಿರಸ್ಕಾರಕ್ಕೂ ಮನಸ್ಸುಗೊಡದೆ, ಯಾವ ವಿಧದಲ್ಲೂ ಚಂಚಲರಾಗದೆ, ಹರ್ ಹಿಟ್ಲರರು ತನ್ನ ನಿಶ್ಚಿತ ಕಾರ್ಯಕ್ರಮವನ್ನು ನಿರ್ದಾಕ್ಷಿಣ್ಯವಾಗಿ ಸದಾ ಮುಂದೊತ್ತುತ್ತಿರುವರು. "ರಕ್ಷೆಯ ಹೆಸರಲ್ಲಿ ಶಿಕ್ಷೆಯ ಕರವು ಮೇಲೆತ್ತಲ್ಪಡುತ್ತಿದೆ!" ಎಂದು ಕೂಗುವವರೂ ಇರುವರು. ಆದರೆ, "ಜರ್ಮನಿಯನ್ನು ನೀವಾರೂ ಅರಿಯಲಾರಿರಿ!" ಎನ್ನುತ್ತ ಹರ್ ಹಿಟ್ಲರರು ಮುಂದೆ ಸಾಗುತ್ತಿರುವರು.

ಯೆಹೂದಿಗಳನ್ನು ನಿರ್ದಾಕ್ಷಿಣ್ಯವಾಗಿ ಕಂಡುದಾಯಿತು. ರಾಜ್ಯ ಭ್ರಷ್ಟರಾದರು ಕೆಲವರು; ಕಾರಾಗ್ರಹವನ್ನು ಕಂಡರು ಕೆಲವರು; ಪದಚ್ಯುತರಾದರು ಕೆಲವರು; ವಾಣಿಜ್ಯ ಪ್ರಪಂಚದಿಂದ ಬಲಾತ್ಕಾರದಿಂದ ನಿರ್ಬಂಧಿಸಲ್ಪಟ್ಟರು ಕೆಲವರು. "ಇದೇನನ್ಯಾಯ?" ಎಂದು ಜಗತ್ತು ಕೇಳುತ್ತಿದೆ. "ನೀವು ನನ್ನನ್ನು ಅರಿಯಲಾರಿರಿ!" ಎಂದೇ ನುಡಿಯುತ್ತ ಹಿಟ್ಲರರು ತನ್ನ ಕಾರ್ಯಪಥದಲ್ಲಿ ಮುನ್ನಡೆಯುತ್ತಲೇ ಇದ್ದಾರೆ.

ಮುಸ್ಸಲೋನಿಯ ಹೆಸರೆತ್ತಿದರೆ ನಡುಗದ ರಾಜ್ಯವಿಲ್ಲ. ಹಿಟ್ಲರರ ಮಹತ್ವಾಕಾಂಕ್ಷೆಯೂ ಅದಕ್ಕಿಂತ ಕಡಿಮೆಯಿಲ್ಲ. ತನ್ನ ರಾಜ್ಯದಲ್ಲಿ ಪ್ರತಿಯೊರ್ವನೂ ದಂಡಾಳಾಗಬೇಕು; ದೇಶವು ಸಂಪತ್ಸಮೃದ್ಧಿಯಲ್ಲಿ ಯುರೋಪಿನ ಪ್ರಬಲ ರಾಷ್ಟ್ರಗಳೊಡನೆ ಸ್ಪರ್ಧಿಸಬೇಕು; ಎಂದೇ ಹಿಟ್ಲರರ ಮನೋವಾಂಛಿತ. ಆದರೆ, ಮುಸ್ಸಲೋನಿಯವರಿಗೂ ಹಿಟ್ಲರರಿಗೂ ಅಜಗಜಾಂತರ ಇದೊಂದರಲ್ಲಿ ಒಡೆದು ಕಾಣುವುದು—ಮುಸ್ಸಲೋನಿಯವರು ಯಾವುದಾದರೂ ಒಂದು ವಿಶಿಷ್ಟ ಜಾತಿ, ಪಂಗಡ, ಜನಾಂಗಗಳ ಮೇಲೆ ಹಗೆ ಸಾಧಿಸಲಿಲ್ಲ. ಹಿಟ್ಲರರು ಯೆಹೂದಿಗಳ ಮೇಲೆ ಗದೆಯೆತ್ತಿರುವರು!

ಅಹುದು, ಇಂದು ಹಿಟ್ಲರರು ಜರ್ಮನಿಯ ಸರ್ವಾಧಿಕಾರಿ. ಪ್ರಪಂಚದ ಅಸಾಮಾನ್ಯ ವ್ಯಕ್ತಿಗಳಲ್ಲಿ ಒಬ್ಬರಾದ ಇವರ ಜೀವನ ಕಥೆಯೇನು?

ಹಿಟ್ಲರರು ಆಸ್ಟ್ರಿಯದ ಒಬ್ಬ ಕಸ್ಟಮ್ಸ್ ಆಫೀಸರರಲ್ಲಿ 1889ನೇ ಎಪ್ರಿಲ್ ತಾ. 20ರಲ್ಲಿ ಜನ್ಮವೆತ್ತಿದರು.

ಶಿಕ್ಷಣಪಡೆದು, 1912ರಲ್ಲಿ, ಜರ್ಮನಿಯ ಮ್ಯುನಿಚ್ ನಗರಕ್ಕೆ ತೆರಳಿ, ಅಲ್ಲಿ ಬವರಿಯನ್ ಇನ್‌ಫಂಟ್ರಿದಳದಲ್ಲಿ ಸೈನಿಕನಾಗಿ ಸೇರಿದರು. ಆಗಲೇ ಆಸ್ಟ್ರಿಯದ ಪ್ರಜೆ ಎಂಬ ಇವರ 'ಅಧಿಕಾರವು' ತಪ್ಪಿತು. (ಯುದ್ಧದಲ್ಲಿ ಎರಡು ಬಾರಿ ಗಾಯಗೊಂಡಿದ್ದರು.)

1920ನೇ ಫೆಬ್ರುವರಿಯಲ್ಲಿ "ನೆಶನಲ್ ಸೋಶಲಿಸ್ಟ್ ಜರ್ಮನ್ ವರ್ಕರ್ಸ್ ಪಾರ್ಟಿ" ಎಂಬ ಪಂಗಡದ ರಚನೆಯಾದಾಗ, ಹಿಟ್ಲರರೂ ಒಬ್ಬ ಸದಸ್ಯರಾದರು. ಇವರ ಚಳವಳದ [illegible] 1933ನೇ ಜನವರಿ ತಾ. 30ರಲ್ಲಿ ಹಿಟ್ಲರರು ಪ್ರಾಬಲ್ಯವನ್ನು ಗಳಿಸಿದರು.

1933ನೇ ಜನವರಿ ತಾ. 30ರಲ್ಲಿ ಹಿಟ್ಲರರು, ಪ್ರೆಸಿಡೆಂಟ್ ಹಿಂಡನ್‌ಬರ್ಗರಿಂದ, ಜರ್ಮನಿಯ ಛಾನ್ಸಲರರಾಗಿ ನೇಮಿಸಲ್ಪಟ್ಟುದನ್ನು ಜಗತ್ತು ಕೇಳಿ ಆಶ್ಚರ್ಯಪಟ್ಟಿತು. (ಈ ಮೊದಲು ಇವರು ವಾನ್‌ಪೇಪನರಿಗೆದುರಾಗಿ ಅನೇಕ ಚುನಾವಣೆಗಳಲ್ಲಿ ಸ್ಪರ್ಧಿಸಿದ್ದರು.) ವಾನ್‌ಪೇಪನರು ವೈಸ್ ಛಾನ್ಸಲರರಾದರು.

1934ನೇ ಅಗೋಸ್ತು ತಾ. 2ರಲ್ಲಿ ಜರ್ಮನಿಯ ಅಧ್ಯಕ್ಷರಾದ ಹಿಂಡನ್‌ಬರ್ಗರು ಕಾಲವಾಗಲು, ಹಿಟ್ಲರರು ತಾವು "ಜರ್ಮನಿಯ ಮುಖಂಡ!"ರೆಂದು ಸಾರಿಕೊಂಡರು.

ಇದೇ ತಾ. 19ರಲ್ಲಿ, ಜರ್ಮನ್ ದೇಶದ ಪ್ರಜೆಗಳು ಮತವಿತ್ತು, ಹಿಟ್ಲರರನ್ನು ದೇಶದ ಅಧ್ಯಕ್ಷೀಯ ಅಧಿಕಾರಗಳಿಂದ ಸನ್ಮಾನಿಸಿರುವರು.

ಜರ್ಮನಿಯ ಇಂದಿನ ಧೋರಣೆಯು ಹೊರರಾಷ್ಟ್ರಗಳಿಗೆ ಅಸಂತೃಪ್ತಿಯನ್ನುಂಟುಮಾಡಿದೆ.

"ಹಿಟ್ಲರರು ಜರ್ಮನಿಯನ್ನು ಎಲ್ಲಿಗೆ ನಡೆಸುತ್ತಿರುವರು?" ಎಂಬ ಪ್ರಶ್ನೆಯೇ ಎಲ್ಲೆಲ್ಲೂ ಪ್ರಬಲವಾಗಿದೆ. ಉತ್ತರವನ್ನು 'ಕಾಲ'ನೇ ಕೊಡಬೇಕಾಗಿದೆ.

ಸೈನ್ಯಸಂಸ್ಕರಣಾ ಮಸೂದೆ.

ಎಸೆಂಬ್ಲಿಯಲ್ಲಿ ಚರ್ಚೆ; ಅಧ್ಯಕ್ಷರ ತೀರ್ಮಾನ.

ಎಸೆಂಬ್ಲಿಯ ಚರಿತ್ರದಲ್ಲಿ ಅಭೂತಪೂರ್ವವಾದ ತನ್ನ ಸ್ವತಂತ್ರಾಭಿಪ್ರಾಯದ ತೀರ್ಮಾನವನ್ನು ಕಳೆದ ವಾರ, ಎಸೆಂಬ್ಲಿ ಅಧ್ಯಕ್ಷರಾದ ಸರ್ ಷಣ್ಮುಗಂ ಚೆಟ್ಟಿಯವರು ಕೊಟ್ಟು, ಸರಕಾರೀ ಮೆಂಬರರಿಗೆ ವಿಸ್ಮಯವನ್ನೂ, ದೇಶದವರಿಗೆ ಆನಂದವನ್ನೂ ಉಂಟುಮಾಡಿರುವರು.

ಸೈನ್ಯ ಸಂಸ್ಕರಣಾ ಮಸೂದೆಯೆಂಬ ಹೆಸರಿನ ಅದೊಂದು ಹೊಸ ಮಸೂದೆಯನ್ನು ಸೈನ್ಯ ಇಲಾಖಾ ಕಾರ್ಯದರ್ಶಿಯವರು ಎಸೆಂಬ್ಲಿ ಮುಂದೆ ತಂದಿದ್ದು, ಹಳೆಯದೊಂದು ದಳವನ್ನು ಕ್ರಮೇಣ ರದ್ದುಗೊಳಿಸಿ, ಡೆಹರಾಡೂನಿನ ಹೊಸ ಮಿಲಿಟರಿ ಕೊಲೇಜಿನಿಂದ ತೇರ್ಗಡೆ ಹೊಂದಿ ಬರುವ ಹೊಸ ಹಿಂದೀ ಆಫೀಸರರ ಹೊಸ ದಳವೊಂದನ್ನು ರಚಿಸುವಂತೆ ಸೂಚಿಸಿರುವರಷ್ಟೆ. ಇದರಲ್ಲಿ, ಹಿಂದೀ ಆಫೀಸರರಿಗೂ, ಸಾಂಡ್ಹರ್ಸ್ಟ್ ಕೊಲೇಜಿನಿಂದ ತೇರ್ಗಡೆ ಹೊಂದಿ ಬರುವ ಬ್ರಿಟಿಷ್ ಆಫೀಸರರಷ್ಟೆ ಸ್ಥಾನ, ಗೌರವ, ಅಧಿಕಾರಗಳಿರತಕ್ಕುದೆಂಬ ಬಗೆಗೆ ಸರ್ ಅಬ್ದುರ್ ರಹಿಮರು ಒಂದು ತಿದ್ದುಪಡಿ ತಂದರು. ಈ ತಿದ್ದುಪಡಿಯು ಸ್ವೀಕೃತವಾದರೆ, ಕರಿದೊರೆಗಳೆನಿಪ ಹಿಂದೀ ಆಫೀಸರರ ಕೈಕೆಳಗೆ ಬಿಳಿದೊರೆಗಳಾದ ಬ್ರಿಟಿಷ್ ಸೋಲ್ಜರರೂ ಕೆಲ ಆಫೀಸರರೂ ಕೆಲಸಮಾಡಬೇಕಾಗುವುದೆಂಬುದನ್ನು ನೆನೆದು ಸಹಿಸಲಾರದ ಸೈನ್ಯ ಶಾಖಾ ಕಾರ್ಯದರ್ಶಿಯವರು ಅದನ್ನು ನಿರೋಧಿಸಿ, ಎಸೆಂಬ್ಲಿಗೆ ಆ ತಿದ್ದುಪಡಿಯನ್ನು ಸ್ವೀಕರಿಸುವ ಅಧಿಕಾರವಿಲ್ಲವೆಂಬರ್ಥ ಬರುವಂತೆ ಮಾತಾಡಿದರು. ಲೋ ಮೆಂಬರರೂ ತಮ್ಮ ಕಾನೂನಿನ ಜ್ಞಾನವನ್ನೆಲ್ಲ ಪ್ರಯೋಗಿಸಲು ನೋಡಿದರು. ಈ ಸ್ಥಿತಿಯಲ್ಲಿ ಎಸೆಂಬ್ಲಿ ಅಧ್ಯಕ್ಷರು ತಮ್ಮ ನೈತಿಕ ಧೈರ್ಯವನ್ನು ಪ್ರದರ್ಶಿಸುತ್ತ, ಇಂಡಿಯದ ಲೆಜಿಸ್ಲೇಟಿವ್ ಎಸೆಂಬ್ಲಿಗೆ ಸೈನ್ಯ ಶಾಖೆಯ ಸಂಬಂಧವಾದ ಅಧಿಕಾರಗಳಿಪ್ಪುವೆಯೆಂಬುದನ್ನು ಸ್ಪಷ್ಟೀಕರಿಸಿ, ಆ ತಿದ್ದುಪಡಿಯನ್ನು ಪರ್ಯಾಲೋಚಿಸಲು ಸ್ವೀಕರಿಸಿರುವೆನೆಂದು ಸಾರಿದರು!

ಆಂಗ್ಲೋ—ಇಂಡಿಯನರ ಪರವಾಗಿ ಮೆಂಬರರಾಗಿರುವ ಸರ್ ಹೆನ್ರಿ ಗಿಡ್ನಿಯವರು ತನ್ನ ೧೯ ವರ್ಷ ಕಾಲದ ಎಸೆಂಬ್ಲಿ ಸದಸ್ಯತನದಲ್ಲಿ ಶಾಸ್ತ್ರಶುದ್ಧವೂ ಸ್ವತಂತ್ರವೂ ನ್ಯಾಯಬದ್ಧವೂ ಆದ ತೀರ್ಮಾನವನ್ನು ಕೇಳಿಲ್ಲವೆಂದು, ಆನಂದದಿಂದ ಉದ್ಗಾರ ತೆಗೆದಿರುವರು.

ಸರಕಾರೀ ಸದಸ್ಯರಿಗೆ, ಅಧ್ಯಕ್ಷರ ಈ ತೀರ್ಮಾನವು ವಿದ್ಯುತ್ಪಾತದಂತೆ ಭಾಸವಾಗಿತು.

ಇನ್ನು, ಸಮ್ರಾಟ ಸರಕಾರವು—ಹೋಮ್ ಸಾಹೇಬರ ಕಚೇರಿಯೂ—ಯಾವ ತೀರ್ಮಾನ ಕೊಡುವುದೋ ನೋಡಬೇಕಾಗಿದೆ.

ಇಂಡಿಯ ವಾರ್ತೆ.

ಆಸ್ಟ್ರಿಯದ ಸ್ವಾತಂತ್ರ್ಯವನ್ನು ಕಾಯುತ್ತ, ಈಗಳಿನ ಸ್ಥಿತಿ ಬದಲಾಗದಂತೆ ನೋಡುವಲ್ಲಿ ತಾನು ಸಹಾಯಮಾಡುವೆನೆಂದು ಇಟೇಲಿಯು ತಿಳಿಸಿದೆ.

ಪಂಡಿತ ಜವಾಹರಲಾಲರು ಈ ತನಕ ಪತ್ನಿಯ ಬಳಿಯಲ್ಲಿ ಇರುವರು. ಸರಕಾರದ ಈ ರಿಯಾಯಿತಿಯು ಇನ್ನೆಷ್ಟು ಕಾಲ ಇರುವುವೆಂದೂ ಇನ್ನೂ ತಿಳಿದುಬಂದಿಲ್ಲ.

ಮಂಗಳೂರು.

ಮಂಗಳೂರಿನಲ್ಲಿ ಇದೇ ಜೂನ್ ತಿಂಗಳಾರಂಭದಿಂದ ಈ ತನಕ ಸುಮಾರು ೬೫ ಇಂಚು ಮಳೆ ಬಿದ್ದಿದೆ.

ತಾ. ೧೮ಕ್ಕೆ ಅಂತ್ಯವಾಗುವ ಒಂದು ವಾರದ, ನಮ್ಮ ನಗರದ ಆರೋಗ್ಯದ ವರದಿ:— ಮರಣಗಳು ೨೮; ಜನನ ೪೪. ಮರಣಗಳ ಪೈಕಿ ಸನ್ನಿಪಾತ ೩, ನ್ಯುಮೋನಿಯಾ ೧, ಕ್ಷಯ ೪, ಆಮಶಂಕೆ ೧; ಉಳಿದುವು ಮತ್ತೆ ಕೆಲ ಕಾರಣಗಳಿಂದಾಗಿವೆ.

(೬ನೇ ಪುಟದಿಂದ ಮುಂದುವರಿದುದು)

ಮುಖ್ಯವಾಗಿ—ದಾಂಪತ್ಯ ನೀತಿ ಹುಟ್ಟುವಾಗ ಪುಸ್ತಕವನ್ನೋದದೆ ಹುಟ್ಟಿದ ಮಕ್ಕಳು, ತಮ್ಮ ಜೀವನದಲ್ಲಿ ಅದನ್ನು ಓದಿಯೇ ಉದ್ಧಾರವಾಗಬೇಕೆಂಬುದೇ ಈ ಅಧ್ಯಾಯದ ತಾತ್ಪರ್ಯ. ದಾಂಪತ್ಯನೀತಿಯ ವಿಷಯದಲ್ಲಿ—ಕಡ್ಡಾಯದ ಸಿಂಥೆ ಶಾಸ್ತ್ರ ನಿಯಮಗಳನ್ನು ಮಾಡಬಹುದೆಂದೂ, ಮಾಡುವವರು ಯಾರೂ ಆಗಬಹುದೆಂದೂ ತಿಳಿಯತಕ್ಕದ್ದು. ಆದರೆ—ಅದನ್ನು ಅನುಸರಿಸುವ ವಿಷಯದಲ್ಲಿ ವ್ಯಕ್ತಿಸ್ವಾತಂತ್ರವು ಆವಶ್ಯವೆಂದು ಹಿಂದಿನಿಂದ ಇಂದಿನ ತನಕ ತೀರ್ಮಾನವಾಗಿದೆ.

ಜಾಗ್ರತೆ! ಜಾಗ್ರತೆ!

ರೋಗ ಬಂದ ಮೇಲೆ ನರಳಬೇಡಿರಿ.

ಈ ಪ್ರಪಂಚದಲ್ಲಿ ಅನೇಕರು ಕೆಟ್ಟ ಹೆಂಗಸರ ಸಹವಾಸಕ್ಕೆ ಸಿಕ್ಕಿ ಅನೇಕ ತರದ ವ್ಯಾಧಿಗಳನ್ನು ಅಂಟಿಸಿಕೊಂಡು ಮರಣಾಂತರವೂ ವ್ಯಸನಕ್ಕೆ ಗುರಿಯಾಗುವುದಲ್ಲದೆ, ತಮ್ಮ ಸಂತಾನದಲ್ಲಿಯೂ ಈ ತರದ ವ್ಯಾಧಿಗಳನ್ನು ಅಂಟಿಸಿ, ಪ್ರಪಂಚದ ಸುಖವನ್ನೇ ಮರೆತುಬಿಡುವಂತೆ ಮಾಡುವರು. ಮತ್ತು ಇನ್ನು ಅನೇಕರು ಬಡತನದಲ್ಲಿ ಮಕ್ಕಳಾದರೆ ತೊಂದರೆಯೆಂದು ಔಷಧಿಗಳನ್ನು ತೆಗೆದುಕೊಂಡು ಮಕ್ಕಳಾಗುವುದನ್ನು ನಿಲ್ಲಿಸುತ್ತಾರೆ. ಅದ್ದರಿಂದ ಈ ಅತ್ಯಾಹಿತಗಳು ನಡೆಯಬಾರದೆಂದು ಈಗ ಜರ್ಮನಿಯಲ್ಲಿ ಹೊಸದಾಗಿ ಸ್ತ್ರೀ ಪುರುಷರಿಬ್ಬರಿಗೂ ಆಗುವಂತಹ ಸಾಧನವನ್ನು ಕಂಡು ಹಿಡಿದಿದ್ದಾರೆ. ಇದನ್ನು ಆ ಸಮಯದಲ್ಲಿ ಉಪಯೋಗಿಸುವುದರಿಂದ ಯಾವುದೇ ತರದ ವ್ಯಾಧಿಗಳನ್ನು ಹತ್ತಿರ ಬರದಂತೆ ಶರೀರವನ್ನು ಜಾಗ್ರತೆಯಾಗಿ ಕಾಪಾಡುವುದಲ್ಲದೆ, ಆನಂದವನ್ನೂ ಮತ್ತು ಸುಖವನ್ನೂ ಕೊಡುವುದು. ಬೇಕಾದವರು ಬೇಗನೇ ಬರೆಯಿರಿ.

ಗಂಡಸರದ್ದು 1ಕ್ಕೆ ರೂ. 1–8–0.

ಹೆಂಗಸರದ್ದು 1ಕ್ಕೆ ರೂ. 2–4–0.

ಆರ್ಡರಿನೊಡನೆ 4 ಆಣೆ ಸ್ಟಾಂಪು ಕಳುಹಿಸಬೇಕು.

ವಿಳಾಸ:—

ಕರ್ನಾಟಕ ಏಜನ್ಸಿ, 12, ಕೃಷ್ಣಪ್ಪ ನಾಯ್ಕ ಅಗ್ರಹಾರ, [illegible] ಪೇಟೆ, [illegible]

ಬೊಂಬಾಯಿ ಸಂಸ್ಥಾನದ ಪ್ರಾಮುಖ್ಯ ಏಜಂಟರು—ಶ್ರೀ ಭಾಸ್ಕರ ವಂಶಿ, 416 ಕೆಳ ಮಾಹಿಮ್ ರಸ್ತೆ, ಬೊಂಬಾಯಿ.

ಭಾರೀ ರಸ್ತೆಗಳು ಕಾಣಿಸಿದುವು. ಏನೆಂದೇ ತೋರ ಲಿಲ್ಲ. ಬಲು ಹೊತ್ತಿನ ಬಳಿಕ ಒಂದು ಮೋರೆಯು ಕಾಣಿಸಲು—'ಇದು ಮಾಸ್ತಿಯವರ ನಾಮವೇ' ಎಂದು ನಕ್ಕುಬಿಟ್ಟೆ. ಗ್ರಹಣ ಬಂದರೆ ಉಪವಾಸವಿದ್ದು ಕಳೆ ಯಿಸುತ್ತಾರೆ. ಸಾಕಷ್ಟು ಜಪತಪ ಮಾಡುತ್ತಾರೆ. ಕೇಳಿದರೆ 'ನನಗೆ ನಂಬಿಗೆ ಇದ್ದಿಲ್ಲವಾದರೂ, ನಂಬು ವವರ ಸಲುವಾಗಿ'— ಅನ್ನುತ್ತಾರೆ. ನಾವು ಜಾಸ್ತಿ ಮಾತನಾಡದಂತೆ 'ಬಾಲಜ್ಞಾಕನ' ಕಥೆಯಲ್ಲೊಂದನ್ನು ಹೇಳಿ ರುಜುಪಡಿಸುತ್ತಾರೆ.

ನೀವು "ಊರಿನ ನೋವನ್ನೆಲ್ಲ ಮರೆತು ಕಾಡಿನ ಹೂವನ್ನು ಹೊಗಳುವ ಜನರು"— ಎಂದರೆ ನಾನು 'ನೋವನ್ನು ಬಣ್ಣಿಸಿಲ್ಲವೇ?" ಎನ್ನುತ್ತಾರೆ. ತಾವು ನೋವುಗೊಂಡುದನ್ನು ಹೇಳುತ್ತಾರೆ. ಅವರನ್ನು ವಿಮರ್ಶಿಸಿದರೆ ಸಿಟ್ಟಿಗೂ ಏಳುತ್ತಾರೆ. ಅವರ ಮಲಾ ರದ ಹಾಡುಗಳನ್ನು ಒಮ್ಮೆ ಓದಿ ಹೇಳಿದರು. ಅಲ್ಲಿ ಅವರನ್ನು ಟೀಕಿಸಿದ ವಿಮರ್ಶಕನ ಅಪಾಲಾಪಗಳಿಗೆ ಉತ್ತರವಿತ್ತು— "ಇದನ್ನು ಹಾಕಬೇಕೆ? ಅವನ ಟೀಕೆ ಯಿಂದ ನನಗೇನು"?—ಎಂದರು. ಕೊನೆಗೆ ತಾವೇ— "ಬರೆದು ಅಡಗಿಸಿಡುವುದೇಕೆ? ಒಂದನ್ನು ಮಾದರಿ ಗಾಗಿ ಹಾಕುವ. ನನ್ನ ಸ್ವಭಾವದ ಒಂದು ಚಿತ್ರವನ್ನು ಮರೆಯಿಸಿ ಬಿಡುವುದೇಕೆ?" ಎಂದು ಹೇಳಿದರು.

ಅವರೇ ಅನ್ನುವುದುಂಟು, "ಆಗೊಂದು ಕಾಲ ವಿತ್ತು. ಬಿಸಿ ರಕ್ತ, ನೌಕರಿ—ಎಲ್ಲವು ಸೇರಿ ನನ್ನನ್ನು ಕುಣಿಸುತ್ತಿದ್ದುವು. ತೀರ ಉದ್ಧಟನೆಂದು ನನ್ನನ್ನು ಜನರು ತಿಳಿಯುತ್ತಿದ್ದರು. ಜನರಲ್ಲಿನ ಸ್ವಭಾವ ವ್ಯತ್ಯಾಸಗಳನ್ನು ಕಾಣುವುದರಲ್ಲೆ ನನಗೆ ಆನಂದವಿತ್ತು. ಈಗ ದೃಷ್ಟಿ ಬದಲಿಸಿದೆ. ವಿವಿಧ ಜೀವನದಲ್ಲಿ ಸಾಮ್ಯತೆ ಯೇನು— ಎಂದು ತಿಳಿಯುವ ಮನಸ್ಸು ಬಂದಿದೆ" ಎಂದು.

ಅವರು ಪುತ್ತೂರಿಗೆ ಬಂದಾಗ ಒಂದು ಪುಟ್ಟ ಘಟನೆಯಾಯಿತು. ರಾತ್ರಿ ಅವರ ಮೋಟಾರು ಡ್ರೈವರನ ಸವಾರಿ ಹೊರ ಜಗುಲಿಯಲ್ಲಿ ಮಲಗಿತ್ತು. ರಾತ್ರಿ, ನಮ್ಮೂರ ಹಿಮವು ಬಂದು ಅವನನ್ನು ಚುಂಬಿ ಸುತ್ತಿತ್ತು. ಅವನು ಸದ್ದಿಲ್ಲದೆ ನಡುಗುತ್ತಿದ್ದ. ರಾತ್ರಿ ಆಕಸ್ಮಿಕವಾಗಿ ಹೊರಗೆ ಬಂದ ಮಾಸ್ತಿಯವರಿಗೆ ಅದು ಕಾಣಿಸಿತು. ತನ್ನ ಮೈಮೇಲಿನ ಶಾಲನ್ನು ಅವನಿಗೆ ಕೊಟ್ಟು ಒಳಕ್ಕೆ ಸರಿದರು. ನನ್ನಲ್ಲೂ ಸಹ ಅವರು ತಮ್ಮ ಕರುಣೆಯನ್ನು ತೋರಿಸಿದುದುಂಟು. ಒಂದು ದಿನ ಅವರ ಮನೆಗೆ, ಸಂಚಾರಕ್ಕೆ ಹೋಗೋಣವೆಂದು ಬರಿಗಾಲಿನಿಂದ ಬಂದೆ. ಅವರೂ ಹೊರಟರು. ನನ್ನ ಕಾಲನ್ನು ನೋಡಿದರು; ಬೆರಳುಗಳು ಮಾತ್ರವಿದ್ದುವು. ಬಲವಂತಮಾಡಿ ತಮ್ಮ ಪಾದರಕ್ಷೆಗಳನ್ನು ಉಪ ಯೋಗಿಸಬೇಕೆಂದರು. ಬಾಡಿಗೆಯಿಲ್ಲವೆಂದು ಅವನ್ನು ಎರವಾಗಿ ಪಡೆದು ಸಂಚಾರಕ್ಕೆ ಹೊರಟುದಾಯಿತು. ಸಂಚಾರ ಮುಗಿಸಿ, ಅವನ್ನು ಅವರ ಮನೆಯಲ್ಲಿ ತಂದು ಬಿಟ್ಟರೆ—"ಏತಕ್ಕೆ ತೆಗೆದುಕೊಂಡು ಹೋಗ ಬಾರದು?" ಎಂದರು. ಶುದ್ಧ ಬ್ರಾಹ್ಮಣನಾದ ನಾನು ಆ ದಾನ ಹಿಡಿದರೆ ಹೇಗೆ?

[೫ನೇ ಪುಟದಿಂದ ಮುಂದುವರಿದುದು.]

ಮೋಹನನ ಆತ್ಮ ಸಾಕ್ಷಿಗೆ—ವಜ್ರಾಘಾತ—ಕಬ್ಬಿಣದ ಸಲಾಕೆಯು ಬಲವಾದ ಬರೆ—ಅವನ ಮನಸ್ಸು ಕತ್ತಲಿನಿಂದ ತುಂಬಿತು—ಅವನ ಸಭ್ಯಗೆತೆ—ಅವನ ನೀತಿಗೆ ಅವನ ಪ್ರತಿಷ್ಠೆಗೆ—ಮಾನಕ್ಕೆ—ಎಲ್ಲಕ್ಕೂ ಇದು ಬಲವಾದ ಪೆಟ್ಟು!

"ಕಮಲೆ! ಕಮಲೆ! ಕ್ಷಮಿಸು" ಎನ್ನುತ್ತಾ ಆಕೆಯ ಮೈಮೇಲೆ ಬೀಳಲು ಮುಂದಾದನು.

"ಕ್ಷಮೆ? ಹಾಗಿರಲಿ!—ಅದಿರಲಿ ಹೇಳಿರಿ! ಇದು—ಇದು—ಯಾರಿಗೆ?" ಎಂದು ಮರಳಿ ಶವವನ್ನು ತೋರಿ ಸಿದಳು.

"ಇದು ಯಾರಿಗೆ?—ಯಾರಿಗೆ?" ಎಂದು ಪ್ರಶ್ನಿಸುತ್ತಾ ದಿಕ್ಕು ತೋರದೆ— ಮೋಹನನು— ಎರಡೂ ಕೈಗಳನ್ನು ಮೇಲಕ್ಕೆತ್ತಿ—ಮಾಡಿನ ಕಡೆಗೆ ಮುಖ ಮಾಡಿದನು.

PRINTED AT THE SHARADA PRESS, MANGALORE

ಸ್ವದೇಶಾಭಿಮಾನಿ

ಸಾಹಿತ್ಯ ಸಂಚಿಕೆ.

ಸಂಪುಟ ೩.	ಆಗೋಸ್ತು, ೧೯೩೪.	ಸಂಚಿಕೆ ೫.

ಅನುಕ್ರಮಣಿಕೆ.

ಪುಟ
೧. ಇಟೇಲಿಯ ಮಹಾ ಕವಿ ದಾಂತೆ ಮತ್ತು ಆತನ ಕಾವ್ಯ. . . ೧
೨. ಇದು ಯಾರಿಗೆ? ೩
೩. ನಾಡಿನ ಪ್ರಸಿದ್ಧ ಪುರುಷರು. ೬

ಆಗೋಸ್ತು ತಾ. ೨೪ನೇ ಶುಕ್ರವಾರ, ೧೯೩೪.

ಇಟೇಲಿಯ ಮಹಾ ಕವಿ ದಾಂತೆ ಮತ್ತು ಆತನ ಕಾವ್ಯ.

ಲೇಖಕರು — ಶ್ರೀ। ಬಿ. ಶಂಕರ ಭಟ್ಟ, ವಿದ್ವಾನ್.

ಪಾಶ್ಚಾತ್ಯ ಸಾಹಿತ್ಯದ ಮಧ್ಯಕಾಲೀನ ಕವಿಗಳಲ್ಲಿ ದಾಂತೆಯ ಹೆಸರು ಮುಂದೆ ನಿಲ್ಲುವಂತಹದಾಗಿದೆ. ಇಂದಿಗೆ ಆರುನೂರು ವರ್ಷಗಳ ಮೊದಲು ಆತನು ಯಾವುದನ್ನು ಸೃಷ್ಟಿಸಿದ್ದನೋ, ಇಟಲಿಯವರಿಗೆ ಯಾವ ಪ್ರಸಾದವನ್ನು ಕೊಟ್ಟಿದ್ದನೋ, ಅದು ಅಷ್ಟು ಹಳತಾದರೂ ಕೂಡ ದೇಶಕಾಲಗಳ ಸೀಮೆಯನ್ನತಿಕ್ರಮಿಸಿ ವಿಶ್ವದ ಸಂಪತ್ತಾಗಿ ಉಳಿದಿದೆ. ಇಂದು ಕೇವಲ ಇಟಲಿಯಲ್ಲಿ ಮಾತ್ರವಲ್ಲ ಸಮಸ್ತ ಸಾಹಿತ್ಯಪ್ರೇಮಿ ದೇಶಗಳಲ್ಲೂ ಈತನಿಗೆ ಶ್ರದ್ಧಾಭಕ್ತಿಗಳಿಂದ ತಮ್ಮ ಪ್ರೇಮಪುಷ್ಪಾಂಜಲಿಗಳನ್ನರ್ಪಿಸುತ್ತಾರೆ.

1265ನೇ ಇಸವಿಯಲ್ಲಿ ಇಟಲಿಯ ಫ್ಲಾರೆನ್ಸ್ ಎಂಬ ನಗರದಲ್ಲಿ ದಾಂತೆಯು ಜನ್ಮವೆತ್ತಿದನು. ಈತನ ತಂದೆಯ ಹೆಸರು 'ಅಲ್‌ಪಿಯರಿ' ಎಂದೂ ತಾಯಿಯ ಹೆಸರು 'ಬೇಲಾ' ಎಂದೂ ಆಗಿದೆ.

ದಾಂತೆಯು ಒಂಭತ್ತು ವರ್ಷದ ಬಾಲಕನಾಗಿದ್ದಾಗ ತನ್ನ ಸ್ನೇಹಿತನೊಬ್ಬನ ಮನೆಗೆ ಹೋದನು. ಅಲ್ಲಿ 'ಬಿಟ್ರೀಸ್' ಎಂಬ ಬಾಲಿಕೆಯೊಡನೆ ಆತನ ಪರಿಚಯವಾಯಿತು. ಇದೇ ಪರಿಚಯವು ಬೆಳೆಯುತ್ತಾ ಬೆಳೆಯುತ್ತಾ ಪ್ರಣಯವಾಗಿ ಪರಿಣಮಿಸಿತು. ಈತನ ಪ್ರಣಯಸೂತ್ರದ ಪರಿಣಾಮವಾಗಿ ಪಾಶ್ಚಾತ್ಯ ಸಾಹಿತ್ಯಕ್ಕೆ 'ವೀಟಾನೋವಾ' ಎಂಬ ಸುಂದರವಾದ ಗೀತಾ ಕಾವ್ಯವು ದೊರೆಯಿತು. ದಾಂತೆಯ ಈ ಪ್ರೇಮಪರಿಚಯವನ್ನೂ ಪ್ರಥಮ ದರ್ಶನವನ್ನೂ ವರ್ಣಿಸಿದ ಬಗೆಯನ್ನೋದಿದರೆ ಭಾವುಕರ ಹೃದಯವು ರಸಸ್ರೋತಸ್ಸಿನಿಂದ ತುಂಬಿ ಹರಿಯುತ್ತದೆ. ಈತನು ಬಿಟ್ರೀಸಳನ್ನು ಪ್ರೇಮದ ಪ್ರತಿಮೆಯೆಂದೂ ದೇವತೆಯೆಂದೂ ಭಾವಿಸುತ್ತಿದ್ದನು.

ಬಿಟ್ರೀಸಳನ್ನು ಕೆಲವರು ಕವಿಕಲ್ಪಿತ ನಾಯಿಕೆಯೇ ಹೊರತು ಆಕೆಯೊಬ್ಬ ಮನುಷ್ಯವ್ಯಕ್ತಿ ಅಲ್ಲವೆನ್ನುತ್ತಾರೆ. ಆದರೆ ಬಿಟ್ರೀಸಳೊಬ್ಬ ನಾಯಿಕೆಯಾಗಿದ್ದಳೆಂದೂ ಆಕೆಯನ್ನು ಮುಂದೆ ಸ್ಯಾಮನ್ ದಿವಾರ್ಡೀ ಎಂಬವನು ಮದುವೆಯಾಗಿದ್ದನೆಂದೂ, ತನ್ನ 26ನೇ ವರ್ಷದಲ್ಲಿ ಆಕೆಯು ಇಹಲೋಕವನ್ನು ಬಿಟ್ಟಿದ್ದಳೆಂದೂ ಓಕೇಸಿಯೋ ಎಂಬ ಸಮಾಲೋಚಕನು ಬರೆದಿದ್ದಾನೆ. ಈಕೆಯ ಮರಣದ ವಿಷಯವಾಗಿ ದಾಂತೆಯು ಒಂದು ಶೋಕಗೀತವನ್ನು ಬರೆದಿದ್ದಾನೆ. ಇದಾದ ಮೇಲೆ ಆತನ ಚಾರಿತ್ರ್ಯವು ಸ್ವಲ್ಪ ಸ್ವಲ್ಪ ಪತನದ ಕಡೆಗೆ ಧಾವಿಸತೊಡಗಿತು. ಈ ವಿಷಯವನ್ನು ಸ್ವತಃ ದಾಂತೆಯೇ ಒಂದು ಕಡೆಯಲ್ಲಿ ಸ್ವೀಕರಿಸಿ ಹೀಗೆ ಬರೆದಿದ್ದಾನೆ—"ನಿನ್ನ ಅಂತರ್ಹಿತನಾಗಿದ್ದರೂ ಪಾರ್ಥಿವ ಸುಖಗಳು ನನ್ನನ್ನು ಪದಭ್ರಷ್ಟನನ್ನಾಗಿ ಮಾಡಿದುವು."

"ವೀಟಾನೋವಾ" (Vita Nova) ವನ್ನಲ್ಲದೆ ದಾಂತೆಯು ಅನೇಕ ಸಣ್ಣ ಸಣ್ಣ ಪ್ರೇಮಗೀತೆಗಳನ್ನು ಬರೆದನು. ಈ ಕೆಳಗಿನವುಗಳು ಆತನ ಆದರ್ಶವಾಕ್ಯಗಳು:—"ಯಾವ ಕವಿತೆಯು ಹೃದಯದಿಂದ ಹುಟ್ಟುವುದಿಲ್ಲವೋ ಆ ಕವಿತೆಯು ಏನೂ

ಪ್ರಯೋಜನವಿಲ್ಲ. ಮತ್ತು ಹೃದಯದಲ್ಲಿ ಎಂದಿನ ವರೆಗೆ ಪ್ರೇಮವು ಅಂಕುರಿಸುವುದಿಲ್ಲವೋ ಅಂದಿನವರೆಗೂ ಕವಿತೆಯು ಹೊರಡಲಾರದು. ಆ ಪ್ರೇಮವು ಅಶರೀರಿಯಾಗಿರಲಿಲ್ಲ; ಅದಕ್ಕೆ ಆಕೃತಿಯಿತ್ತು. ಅದರಲ್ಲಿ ಅತೃಪ್ತ ವಾಸನೆಯೂ ಮತ್ತು ಆ ವಾಸನೆಯನ್ನು ಪೂರ್ಣ ಮಾಡುವಂತಹ ಆದಮ್ಯ ಆಕಾಂಕ್ಷೆಯೂ ಇತ್ತು. ಆದರೆ ಈಗ ಆ ಕವಿತೆಗಳ ಮೇಲೆ ಆಧ್ಯಾತ್ಮಿಕ ವ್ಯಾಖ್ಯಾನಗಳಾಗತೊಡಗಿವೆ. ಏನೇ ಆಗಲಿ, ದಾಂತೆಯು ಕವಿತೆಗಳನ್ನು ಬರೆದು ಭಾಷೆ, ಭಾವ, ಮತ್ತು ಶೈಲಿಗಳಿಗೆ ಯಾವ ಮೌಲ್ಯವನ್ನು ಕೊಟ್ಟಿದ್ದಾನೋ ಅದು ಸಾಹಿತ್ಯ ಜಗತ್ತಿನಲ್ಲಿ ವಿರಳವಾಗಿದೆ. ಈತನಿಗಿಂತ ಮೊದಲು ಇಟಲಿಯ ಕೆಲಕವಿಗಳು ಲೇಟಿನಿನಲ್ಲಿ ಮತ್ತು ಫ್ರೆಂಚಿನಲ್ಲಿ ಕವಿತೆಗಳನ್ನು ಬರೆದಿದ್ದರು. ಆದರೆ ದಾಂತೆಯು ಇವರಾರನ್ನೂ ಅನುಕರಿಸಲಿಲ್ಲ. ಈತನು ತನ್ನ ಮಾತೃಭಾಷೆಯಲ್ಲೇ ಕವಿತೆಗಳನ್ನು ಬರೆದನು. ಇಂದು ಅದೇ ಭಾಷೆಯು ಸ್ವಲ್ಪ ಸಂಸ್ಕೃತಿಸಲ್ಪಟ್ಟ ಇಟಾಲಿಯನ್ ಭಾಷೆಯಾಗಿದೆ.

ಪ್ರೇಮದ ವಿರಹಜ್ವಾಲೆಯಿಂದ ದಗ್ಧವಾದ ದಾಂತೆಯ ಹೃದಯದಿಂದ "ವೀಟಾನೋವಾ"ದ ಉಜ್ವಲ ಶಿಖೆಯು ಸಮುದ್ಭಾಸಿತವಾದರೂ ಅದಕ್ಕೆ ದೇಶನಿರ್ವಾಸನೆಯ ನಿಯಂತ್ರಣವು ಕೂಡ ಒಂದು ಕಾರಣವಾಗಿದೆ. 1289ರ ಕಂಪೋಡಿನಾದ ಯುದ್ಧದಲ್ಲಿ ಭಾಗವಹಿಸಿ ದಾಂತೆಯು ಜಯಶಾಲಿಯಾದರೂ ಇಟಲೀ ನಗರದ ಒಂದು ರಾಜಕೀಯ ಷಡ್ಯಂತ್ರದಲ್ಲಿ ಸೇರಿದನೆಂದು ದೇಶದಿಂದ ಹೊರತಳ್ಳಲ್ಪಟ್ಟನು. ಈ ದೇಶನಿರ್ವಾಸನ ಕಾಲದಲ್ಲಿ ಈತನು 'ಡಿವ್ವಾನಾ ಕಾಮಿಡೀಯ' (Divina Commedia)ವೆಂಬ ಮಹಾಕಾವ್ಯವನ್ನು ರಚಿಸಿದನು.

ಈ ಮಹಾಕಾವ್ಯವು ಇನ್‌ಫರ್ನೋ, ಪರಗೇಟರಿಯೋ, ಪೆರಡೈಸ್ ಎಂದು ಮೂರು ಪ್ರಕರಣಗಳಾಗಿ ವಿಭಾಗಿಸಲ್ಪಟ್ಟಿದೆ. ಮೊದಲನೇ ಪ್ರಕರಣದಲ್ಲಿ ನರಕದ ವರ್ಣನೆಯೂ; ಎರಡನೇ ಪ್ರಕರಣದಲ್ಲಿ ಪಾಪಕ್ಷಯ ಭೂಮಿಯ ವರ್ಣನೆಯೂ ಮತ್ತು ಮೂರನೇದರಲ್ಲಿ ಸ್ವರ್ಗದ ವರ್ಣನೆಯೂ ಇದೆ. ಪ್ರತಿಯೊಂದು ಪ್ರಕರಣದಲ್ಲಿ 33 ಸರ್ಗಗಳಿವೆ. ಈ ಗ್ರಂಥದ ಇಂಗ್ಲಿಷ್ ಗದ್ಯಾನುವಾದವನ್ನು ಕಾರ್ಲಾಯಿಲನೂ, ಪದ್ಯಾನುವಾದವನ್ನು ಲಾಂಗ್‌ಫೆಲೋ ಮತ್ತು ಕಾರಿಯೂ ಮಾಡಿದ್ದಾರೆ. ಜಗತ್ತಿನ ಮುಖ್ಯ ಮುಖ್ಯ ಭಾಷೆಗಳಲ್ಲಿ ಇದರ ಅನುವಾದವಾಗಿದೆ.

ಈ ಮಹಾಕಾವ್ಯದ ಕಥಾಸಾರಾಂಶವು ಈ ಕೆಳಗಿನಂತಿದೆ—ದಾಂತೆಯು ಒಂದು ಕಾಡಿನಲ್ಲಿ ತಾನು ಸಂಚರಿಸುತ್ತಿರುವಂತೆ ಸ್ವಪ್ನ ನೋಡುತ್ತಾನೆ. ಹೀಗೆ ತಿರುಗುತ್ತಾ ಕಾಡಿನಲ್ಲಿ ದಾರಿ ತಪ್ಪುತ್ತಾನೆ. ಆ ವನವು ತತ್ಕಾಲಿನ ಯುರೋಪಾಗಿರುತ್ತದೆ. ಆ ಕಾಲದಲ್ಲಿ ವಿಲಾಸಿಯೂ ಕರ್ತವ್ಯಹೀನನೂ ಆದ ಅಲ್ಬರ್ಟನು ಆಸ್ಟ್ರಿಯದ ಸಮ್ರಾಟನಾಗಿದ್ದನು. ಲಂಪಟನಾದ ಎಂಟನೇ ಬೊನಿಫೇಸನು ಧರ್ಮಾಧ್ಯಕ್ಷನಾಗಿದ್ದನು. ಯಾರು ಸತ್ಪಥವನ್ನು ತೋರಿಸುವವರೋ ಅವರು ಅಯೋಗ್ಯರಾಗಿದ್ದರು. ಇದರಿಂದಾಗಿ ಯುರೋಪವು ಅರಣ್ಯದಂತಾಗಿತ್ತು. ದಾಂತೆಯು ತಿರುಗುತ್ತಾ ನಯನಾಭಿರಾಮವೂ ಮನಮೋಹಕವೂ ಆದ ಒಂದು ಪರ್ವತದ ಬಳಿಗೆ ಬಂದನು. ಪ್ರಭಾತಸೂರ್ಯನ ಕಮನೀಯ ಕಿರಣಗಳಿಂದ ಸಮುದ್ಭಾಸಿತವಾದ ಅದರ ಶಿಖರವನ್ನು ದಾಂತೆಯು ಏರತೊಡಗಿದನು. ಆಗ ಕಾಮ, ಕ್ರೋಧ ಮತ್ತು ಮೋಹಗಳು ಭಯಂಕರ ಜಂತುಗಳಾಗಿ ಬಂದು ಆತನನ್ನು ಎದುರಿಸುತ್ತವೆ. ಆಗ ಆತನು ಅವುಗಳೊಂದಿಗೆ ಜಗಳವಾಡತೊಡಗುತ್ತಾನೆ. ಹಾಗೆ ಜಗಳವಾಡುತ್ತಿರುವಾಗ ಲೋಭರೂಪೀವೃಕ್ಷವು ಈತನನ್ನು ಹಿಂದಿನಿಂದ ಆಕ್ರಮಣಮಾಡುತ್ತದೆ. ಆಗ ಈತನು ಪರ್ವತದಿಂದ ಕೆಳಗೆ ಬಿದ್ದನು. ಈ ಸಮಯದಲ್ಲಿ ಛಾಯಾರೂಪದಲ್ಲಿ ವರ್ಜಿಲ್ ಆತನಿಗೆ ದರ್ಶನ ಕೊಟ್ಟು ದಾರಿ ತೋರಿಸುತ್ತೇನೆಂದು ಹೇಳುತ್ತಾಳೆ. ದಾಂತೆಗೆ ಮೊದಲು ಆಕೆಯು ಗುರುತು ಸಿಕ್ಕುವುದಿಲ್ಲ, ಆಕೆಯು ತಾನು ಯಾರೆಂದು ತಿಳಿಸಿದ ಮೇಲೆ ಆತನು ಆಕೆಯ ಹಿಂದೆಯೇ ಹೋಗುತ್ತಾನೆ. ಸ್ವಲ್ಪ ದೂರ ವರ್ಜಿಲೊಂದಿಗೆ ಹೋಗಿ ಆತನು ಮೊದಲನೇ ಇನ್‌ಫರ್ನೋ(Inferno)ದಲ್ಲಿ ಮುಟ್ಟುತ್ತಾನೆ. ಸ್ವಲ್ಪ ಸಮಯದ ಅನಂತರ ಮುಂದೆ ಹೋಗಿ ಪರಗೇಟರಿಗೆ ಮುಟ್ಟುತ್ತಾನೆ. ಈ ಸ್ಥಾನವು ಕ್ರಿಸ್ತಮತ ಪ್ರಕಾರ ಮನುಷ್ಯನ ಮನಸ್ಸು ತಪಸ್ಸಿನಿಂದ ಪರಿಶುದ್ಧವಾಗುವಂತಹ ಸ್ಥಾನವು. ಅವರಿಬ್ಬರೂ ನಡೆದು ನಡೆದು ಪರಗೇಟರಿಯ ಅಂತಿಮ ದ್ವಾರಕ್ಕೆ ಮುಟ್ಟುತ್ತಾರೆ. ಇಲ್ಲಿ ದಾಂತೆಗೆ ಬಿಟ್ರೀಸಳು ಕಾಣಸಿಗುತ್ತಾಳೆ. ಕಾವ್ಯದಲ್ಲಿ ದಾಂತೆಯು ಬಿಟ್ರೀಸಳ ನಾಲ್ಕು ಕಡೆಯನ್ನು ನೋಡಿ ಯಾವ ವರ್ಣನೆಯನ್ನು ಮಾಡಿದ್ದಾನೋ ಅದು ಕವಿಯ ಮಸ್ತಿಷ್ಕದ ಅತ್ಯಂತ ಮಧುರ ಮತ್ತು ಸುಂದರ ನಿರ್ಮಾಣವಾಗಿದೆ. ಸಂಗೀತ, ಸೌರಭ-ಸರಸಿತಸಮೀರ, ಪಕ್ಷಿಗಳ ಕಲಕೂಜನ, ನದಿಗಳ ಕಲಕಲನಿನಾದ, ನಿರ್ಝರಗಳ ಝುರಝುರ ಗತಿ, ಇಂತಹ ವರ್ಣನೆಯು ಕಣ್ಣಮುಂದೆ ಬರುತ್ತದೆ.

ಶ್ಲೋಕವನ್ನು ಬರೆದು ಲಂಚಕೊಟ್ಟಿದ್ದಾರೆ. ಆದುದರಿಂದ ನನ್ನ ಅಭಿಪ್ರಾಯವನ್ನು ಬಿಟ್ಟು ಊರಿನ ಅಭಿಪ್ರಾಯ ಕೊಡುತ್ತೇನೆ. ಮಾಸ್ತಿಯವರ ಕವಿತೆಗಳು—ಉಘೂಗದ್ಯವೆನ್ನುವವರು ಬಹಳ. 'ದೇವರಾಣೆ ಅದು ಕವಿತೆಯಲ್ಲ; ದೊಡ್ಡ ಆಫೀಸರರು ಬರೆದುದರಿಂದ ಅದು ಸಾಹಿತ್ಯ, ಕವಿತೆ—ಇತ್ಯಾದಿ ಆಯಿತು' ಎನ್ನುವವರೂ ಇದ್ದಾರೆ. 'ಉತ್ಕೃಷ್ಟ ಕವಿತೆಗಳು' ಎನುವವರೂ ಇದ್ದಾರೆ. ಆದುದರಿಂದ ತಮಗೆ ಅನುಕೂಲವಾದ ಯಾವ ಅಭಿಪ್ರಾಯವನ್ನೂ ಇದರಿಂದ ಆರಿಸಿ ತೆಗೆದುಕೊಳ್ಳಬಹುದು.

ನನಗೆ ಮಾಸ್ತಿಯವರ ಪರಿಚಯವಿರುವಷ್ಟು ಅವರ ಬರಹಗಳ ಪರಿಚಯವಿಲ್ಲ. ಅವರನ್ನು ಓದಿದಷ್ಟು ಅವರ ಬರಹವನ್ನು ಓದಿಲ್ಲ. ಮೂರು ವರ್ಷಗಳ ಹಿಂದೆ ನನ್ನೊಬ್ಬ ಮಿತ್ರರು ಅವರ ಮನೆಗೆ ನನ್ನನ್ನು ಕರೆದೊಯ್ದು ಪರಿಚಯಮಾಡಿಸಿ ಕೊಟ್ಟರು. ಹೋದ ಒಂದೂಕಾಲು ನಿಮಿಷದೊಳಗಾಗಿ ಕಾಫಿ ಲೋಟವು ಎದುರು ಬಂದು ಕುಳಿತಿತು. ಲೋಟವನ್ನು ಇಣಕಿನೋಡಿದೆ. ಐಯ್ಯಂಗಾರ್ ಸಾಂಪ್ರದಾಯಕ್ಕೆ ಸರಿಯಾಗಿ ಬೆಳ್ಳಿಯ ಲೋಟ. ಅದರ ಗಾತ್ರವು ಏನಾದರೂ ಒಂದು ಗೆಲನಿನಷ್ಟಿತ್ತೆಂದು ಅನಿಸಿತು. ಕುಡಿಯತೊಡಗಿದೆ—ಎಕ್ಸ್ಟ್ರಾಸ್ಟ್ರಾಂಗು. ದಿವ್ಯಮಾಲಿಂದು ಹನಿಯೂ ಬಿಡದಂತೆ ಮುಗಿಸಿದೆ. ಪಾತ್ರೆ ಬರಿದಾಗಲು ಅದರ ಒಳ-ಆಳತೆ ತೆಗೆಯಲು ಬೆರಳನ್ನು ನೀಡಿದೆ. ನಡುಬೆರಳು ಮುಣುಗಿ, ಹಸ್ತವೇ ಕಂತಿತು. ಆ ಕಾಫಿಯನ್ನು ಮರೆಯುವಂತಿಲ್ಲ. ಈ ಕಾಫಿ ಸೇವೆ ಹೋದಾಗಲೆಲ್ಲ ನಡೆಯಬೇಕು. ಮಾಸ್ತಿಯವರು ಮನೆಯಲ್ಲಿಲ್ಲ—ಎಂಬುದನ್ನು ತಿಳಿದೂ ಅವರಲ್ಲಿಗೆ ಹೋಗಿ ಹೊರ ಜಗುಲಿಯ ಮೇಲೆ ಕುಳಿತಿರಿ. ಕಾಫಿ ಟಾಂಕಿ ಬಂದು ನಿಮ್ಮ ಮುಂದೆ ನಿಲ್ಲುವುದು. ನಮ್ಮ ಗೆಳೆಯರಾದ ಶ್ರೀ। ಶಂಕರ ಭಟ್ಟರೊಮ್ಮೆ ಮಾಸ್ತಿಯವರಲ್ಲಿ ಕಾಫಿ—ಕತೆಗಳು ಅವಳಿ ಜವಳಿ ಮಕ್ಕಳು—ಎಂದಿದ್ದರು. ಇದರಲ್ಲಿ ಮೊದಲು ಹುಟ್ಟಿದ್ದು ಯಾವುದು ಎಂದು ನಿರ್ಣಯಿಸುವ ಆಸೆ ನನಗೆ. ಅವರ ಕಾಫಿಯಲ್ಲಿ ಮಂಕು ಕಟ್ಟುವ ಬೇರೆ ಪದಾರ್ಥಗಳನ್ನು ಹಾಕುವರೇ—ಎಂಬುದೊಂದು ಸಂಶಯ. ಇಲ್ಲವಾದರೆ ನಾವು ಅದನ್ನು ತಣ್ಣನೆ ಕುಡಿದು, ಅವರ ಕತೆ ಕೇಳುತ್ತಿರುವುದೇಕೆ?

ಅನಂತರ ಎಷ್ಟೋ ಬಾರಿ ಮಾಸ್ತಿಯವರ ಭೇಟಿಯಾದುದುಂಟು. ಆದರೆ ನಮ್ಮದು ವಿಶೇಷ ಗೆಳೆತನವಾಗಿರಲಿಲ್ಲ. ಅವರು ಮಡಿಕೇರಿಯ ಸಾಹಿತ್ಯ ಪರಿಷತ್ತಿಗೆ ಬಂದಿದ್ದರು. ಅಲ್ಲೊಂದು ಗದ್ದಲವಾಯಿತು, ಎಂದು ಎಲ್ಲೆಲ್ಲೂ ಸುದ್ದಿಯಿದೆಯಲ್ಲ. ಅದನು ಕುರಿತು ಅವರಿಗೆ ನಾನೊಂದು ಕಾಗದ ಬರೆದಿದ್ದೆ. ಆಗ 106°-7 ಉಷ್ಣತೆಯಲ್ಲಿ ನಾನಿದ್ದೆ. ಪತ್ರ 100°ಯಷ್ಟಿತ್ತು. ಅವರಿಂದ ಉತ್ತರ ನಿರೀಕ್ಷಿಸಿದೆ; ಬರಲಿಲ್ಲ. ಅನಂತರ ನಮ್ಮ ಪುತ್ತೂರಿನ ದಸರೆಗೆ ಮೈಸೂರನ್ನು ಬಿಟ್ಟು ಬನ್ನಿ—ಎಂದು ಬರೆದೆ. ಹೆದರಿಯೋ ಏನೋ ಬಂದೇ ಬಿಟ್ಟರು. ವಿಶೇಷ ಜಗಳ ನಮ್ಮಲ್ಲಾಗಲಿಲ್ಲವೆಂದು ಹೇಳಿದರು. ಇರಬೇಕು.

ಮಾಸ್ತಿಯವರ ಪರಿಚಯವನ್ನು ಮಾಡಿಕೊಳ್ಳುವುದು ಸುಲಭ. (ಮಾಡಿಕೊಂಡರೆ ಕಾಫಿ ಇದೆ.) ಅವರೇನೋ ಸರಕಾರಿ ಅಟ್ಟದಲ್ಲಿ ನಿಂತರೂ ಕೆಳಗೆ ಇಳಿಯಲು ಇಷ್ಟಪಡುತ್ತಾರೆ. ಆಫೀಸು ಇಜಾರ, ರುಮಾಲುಗಳಲ್ಲಿ ಇರುವವರಾದರೂ, ಅದನ್ನು ಕಳಚಿಬಿಟ್ಟು ಕೊಳ್ಳೆಗಾಲ ಎಳವಸ್ತ್ರವನ್ನು ತೊಟ್ಟುಕೊಂಡು ಕುಳಿತಿರುವುದರಲ್ಲಿ ಹೆಚ್ಚಿನ ಸಂತೋಷ. ಮಾತುಕತೆಗೆ ಕುಳಿತುಬಿಟ್ಟರೆ—ನಾನಾ ವಿಷಯಗಳು ಬರುವುವು. ಒಮ್ಮೆ ಒಬ್ಬರು ಆಫೀಸರರು ಅವರ ಬಳಿಗೆ ಬಂದು ಮಾತನಾಡುತ್ತ, ಆಡುತ್ತ—"ಸ್ವಾಮಿ, ನಮ್ಮ ಭಾರತೀಯರ ಮೇಲ್ಮೆ ಸ್ವಲ್ಪವೇ . . . . ."ಎಂದು ದೀರ್ಘ ಉಪನ್ಯಾಸಕ್ಕೆ ತೊಡಗಿದರು. "ಸಾಕು ಬಿಡಿ" ಎಂದು ಬೇಗ ಅವರ ಬಾಯಿಗೆ ಬೀಗ ಹಾಕಿಸಿದರು. ಕುಸು ನಿರ್ದಯವಾಗಿ ಕಂಡಿತು. ಆದರೆ—ಅವರಿಗೆ ಪೊಳ್ಳು ಪ್ರಶಂಸೆಯು ಸರಿಕಾಣುವುದಿಲ್ಲ. ಹಿಂದಿನ ಎಷ್ಟೋ ಆಚಾರಗಳನ್ನು ಅವರು ಒಪ್ಪುವುದಿಲ್ಲ. ಹಾಗೆಂದರೆ—ನಮ್ಮಂತೆ ನಾಸ್ತಿಕರು (ಅಸ್ತಿ ಇಲ್ಲದವರು!) ಎಂದು ತಿಳಿಯಬೇಡಿ. ನಾವು ಕುಳಿತಿರುವಾಗಲೇ ಒಳಕ್ಕೆ ಹೋಗಿ ಮೂರು ನಾಮ ಎಳೆದುಕೊಂಡು ಬರುತ್ತಾರೆ.

ಒಮ್ಮೆ ಅವರ ಫೋಟೋ ತೆಗೆದೆ. ಕತ್ತಲು ಮನೆಯಲ್ಲಿ ಅದನ್ನು ತೊಳೆಯುವಾಗ — ಒಮ್ಮೆಗೇ

ನಾಡಿನ ಪ್ರಸಿದ್ಧ ಪುರುಷರು. ೧೪.

ಶ್ರೀ. ಮಾಸ್ತಿ ವೆಂಕಟೇಶ ಐಯ್ಯಂಗಾರರು.

(ಲೇಖಕರು:—ಶ್ರೀ. ಶಿವರಾಮ ಕಾರಂತರು.)

ಮಾಸ್ತಿಯವರ ಪರಿಚಯವಿಲ್ಲದ ಕನ್ನಡಿಗನು ವಿರಳ. ಕರ್ಣಾಟಕ ಸಾಹಿತ್ಯರಂಗಕ್ಕೆ ತೀರ ಮೊದಲು ಕಾಲಿರಿಸಿದ ಮಹಾನುಭಾವರಲ್ಲಿ ಅವರೊಬ್ಬರು. ಅದರಿಂದಾಗಿ ಅವರ ಹೆಸರು ನಮಗೆಲ್ಲ ಪರಿಚಯವಾಗಲು ಕಾರಣವಾಯಿತು. ಅಲ್ಲವಾದರೆ ಅವರ ಹೆಸರು—ಸೆನ್ಸಸ್ ಕಮಿಶನರಾಗಿಯೋ, ಡಿಪ್ಯೂಟಿ ಕಮಿಶನರಾಗಿಯೋ, ಕಂಟ್ರೋಲರರಾಗಿಯೋ ಸರಕಾರಿ ದಪ್ತರ ಸಾಹಿತ್ಯದಲ್ಲಿ ಮಾತ್ರ ಸೇರಿರುತ್ತಿತ್ತು. ಅವರ ಸಾಹಿತ್ಯದ ಹುಚ್ಚು ಅವರ ಸರಕಾರಿ ಕೆಲಸವನ್ನೂ ಪಾತಸಾಡಿಸಿದೆ. ಮೈಸೂರಿನ ಜಾನೆಸುಮಾರಿ ವರದಿಯನ್ನು ಬರೆಯುವಾಗ, ನಮ್ಮ ಸಾಹಿತ್ಯದ ಜಾನೇಸುಮಾರಿಯನ್ನೂ ಅದರಲ್ಲಿ ಮಾಡಿಬಿಟ್ಟಿದ್ದಾರೆ. ಸರಕಾರದ ಶ್ರೀ। ಮಾಸ್ತಿಯವರು ಹಾಗಿದ್ದರೆ, ಬಲು ಸಮಯದ ತನಕ ಬಹಿರಂಗದ ಮಾಸ್ತಿಯವರು ಅಂತರಂಗವಾಗಿದ್ದರು. ಅವರಿಗೆ ಘೋಷಾಪದ್ಧತಿಯ ಮೇಲೆ ಹೆಚ್ಚಿನ ಮಮತೆಯೋ ಏನೋ—ತಮ್ಮ ಬರಹದಲ್ಲಿ ತಾವು ಅಡಗಿದ್ದು 'ಶ್ರೀನಿವಾಸ' ಎಂಬ ಘೋಷಾ ಹೆಸರನ್ನಿರಿಸಿಕೊಂಡರು. ಸಾಹಿತ್ಯ ಜೀವನದ ಅವರ ತೀರ ಮೊದಲಿನ ಹೋರಾಟವೆಂದರೆ ಕಾಲೇಜಿನಲ್ಲಿ ಕಲಿಯುವಾಗಲೇ ಇದ್ದಿರಬೇಕು. ಒಮ್ಮೆ ನಾನು ಅವರಲ್ಲಿಗೆ ನನ್ನ ಗೆಳೆಯರಾದ ಶ್ರೀ। ವಾಮನ ಕುಡ್ವರನ್ನು ಒಯ್ದಿದ್ದೆ. ಪರಿಚಯವಾಗಲು— "ನಿಮ್ಮ ಸ್ವದೇಶಾಭಿಮಾನಿಗೆ ಒಂದಾನೊಂದು ಕಾಲದಲ್ಲಿ ನಾನು ಒಂದಾನೊಂದು ಲೇಖ ಕಳುಹಿಸಿದ್ದೆನೆ"ಂದು ಹೇಳಿದರು.

ಶ್ರೀನಿವಾಸರ ಹಲವು ಸಣ್ಣ ಕಥೆಗಳು ಬೆಳಕಿಗೆ ಬಂದುವು. ಕಥೆಗಳ ಹುಚ್ಚು ಜನರಿಗೂ ಹಿಡಿಯಿತು. ಆಗ ಜನರಿಗೆ ಈ ಕತೆಗಾರನಾರೆಂದು ತಿಳಿಯಲು ಮನವಾಯಿತು. 'ಶ್ರೀನಿವಾಸರು' ಮಹಾಸತಿಯರಂತೆ ಮರೆಯಲ್ಲಿದ್ದರು. ವಿಜಯವು ಅವರನ್ನು ಮಾಸ್ತಿಯವರನ್ನಾಗಿ ಬಯಲಿಗೆಳೆಯಿತು. ಇನ್ನೂ 'ಶ್ರೀನಿವಾಸ'ರಾಗಿಯೇ ಬರೆಯುತಿದ್ದಾರೆ. ನಾವು ಓದುವಾಗ 'ಮಾಸ್ತಿಯವರಿಂದ'—ಎಂದು ತಿದ್ದಿಕೊಂಡರಾಯಿತು.

ಸಣ್ಣ ಕತೆಗಾರರಲ್ಲಿ ಅವರಿಗೆ ದೊಡ್ಡ ಸ್ಥಾನವಿದೆ. 'ಸುಬ್ಬಣ್ಣ'ನೆಂಬ ಸಾದ ಕತೆಯನ್ನು ಬಿಟ್ಟು ಅವರು ದೊಡ್ಡ ಕತೆಯನ್ನು ಬರೆಯಲಿಲ್ಲ. ಬರೆದಿದ್ದರೆ ಎಂಥ ಸ್ಥಾನ ಬಂದೀತೆಂದು ಯಾರು ನಿರ್ಣಯಿಸಬಲ್ಲರು? ಅಂತು ಇಷ್ಟು ನಿಜ—ಅವರ ಕತೆ, ನಾಟಕ, ಕವಿತೆ— ಇವುಗಳೆಲ್ಲ ಕತೆಗಾರನ ಮುದ್ರೆಯನ್ನು ಪಡೆದುವು. ಅವರೊಡನೆ ಮುಖತಃ ಮಾತನಾಡುವಾಗಲೂ ಅವರು ಕತೆಗಾರರೇ. ಕತೆಯಿಲ್ಲದ ಗಳಿಗೆಯಿಲ್ಲ. ತಮ್ಮೂರಿನ ಕತೆ, ತಮ್ಮ ಬಳಗದ ಕತೆ, ತಮ್ಮ ಆಫೀಸು ಜವಾನನ ಕತೆ, ಆಫೀಸಿನ ಮೇಜಿನ ಕತೆ, ಟೀಬ್ ಸಾಹೇಬರ ಕತೆ, ಎಲ್ಲವನ್ನೂ ಏಕರೀತಿಯ ಆದರದಿಂದ ಹೇಳುತ್ತಾರೆ. ಮನೆಗೆ ಬಂದ್ದಾಗ, ಹಾದಿಯಲ್ಲಿ ಹೋಗುವಾಗ, ಸಭೆಯಲ್ಲಿ—ಎಲ್ಲೂ ಕತೆ ಹೇಳುವರು. ಆಫೀಸಿನಲ್ಲಿ ಏನು ಮಾಡುತ್ತಾರೋ ಯಾರು ಬಲ್ಲರು? ಅಲ್ಲೂ ಒಂದೆರಡು ಕತೆಯನ್ನಾದರೂ ಹೇಳಿರಬಹುದು. ಕತೆ ಹೇಳುವುದರಲ್ಲಿ ಮುದುಕರನ್ನು ಮೀರಿಸುತ್ತಾರೆ. ನಾವು ಸುಕ್ಕಲೆಂದು ತಿಳಿಯುತ್ತಾರೆ. ಆ ಕಥೆ ಹೇಳುವುದಿಲ್ಲವೇಕೆ ನಾವು ಹಟ ಹಿಡಿದರೆ—ಮುಂದೆ 'ಕಾಫಿ' ಲೋಟ ಇರಿಸುತ್ತಾರೆ! 'ಕಾಫಿ'— ಎನ್ನುವಾಗ ಯಾರಿಗೂ ಬಾಯಿ ನೀರು ಬಂದೀತು. ಅವರ 'ಕಾಫಿ'ಗೇ ಒಂದು ಕತೆಯಿದೆ. ಅನಂತರ ಹೇಳುತ್ತೇನೆ.

ಅವರ ನಾಟಕಗಳಲ್ಲಿ ಮಂಜುಳಾ, ಯಶೋಧರಾ, ತಾಳಿಕೋಟೆ ಎಂಬುವುಗಳೂ, ಕವಿತೆಗಳೂ ಕನ್ನಡಿಗರಿಗೆ ತೀರ ಪರಿಚಿತವಾದುವು. ನಾನು ವಿಶೇಷ ಅವುಗಳನ್ನು ಬೈಯ್ಯುವುದಕ್ಕಿಲ್ಲ. ಜೋಗದ ಪಾ... ಕಷ್ಟ. ಅವರ ಸಾನೆಟ್ಟುಗಳಲ್ಲಿ—ನನ್ನದೊಂದು ಚಪ...

ಇಲ್ಲಿಂದ ವರ್ಜಿಲನು ಅಗಲುತ್ತಾನೆ. ಡಾಂಟೆಯು ಸ್ಫೂರ್ತಿಯುಕ್ತನಾಗಿ ಬಿಟ್ರೀಸಳು ಇರುವ ಪರ್ವತ ಶಿಖರಕ್ಕೆ ಹೋಗುತ್ತಾನೆ. ಇದೇ ಹತ್ತು ಭಾಗಗಳಾಗಿ ವಿಭಾಗಿಸಲ್ಪಟ್ಟ ಪೆರಡ್ಯಾಸ್. ಡಾಂಟೆಯು ಮೊದಲು ಚಂದ್ರ, ಬುಧ, ಸೂರ್ಯ, ಶುಕ್ರ, ಬೃಹಸ್ಪತಿ, ಮಂಗಳ, ಶನಿ, ಮೊದಲಾದ ಸಪ್ತಗ್ರಹಗಳನ್ನು ದರ್ಶನಮಾಡುತ್ತಾನೆ. ಬಿಟ್ರೀಸಳು ಆತನನ್ನು ಎಂಟನೇ ಜಗತ್ತಿಗೆ ಕೊಂಡುಹೋಗುತ್ತಾಳೆ. ಅಲ್ಲಿಂದ ಈ ಕಲುಷಿತ ಸಂಸಾರವನ್ನು ನೋಡುತ್ತಾಳೆ. ಒಂಭತ್ತನೇ ಭಾಗದಲ್ಲಿ ಪರಮಾತ್ಮನ ನಿವಾಸವಿದೆ. ಈಶ್ವರೀ ದೂತನೊಬ್ಬನು ತಡೆದುದರಿಂದ ಡಾಂಟೆಗೆ ಅದರ ದರ್ಶನವಾಗುವುದಿಲ್ಲ. ಎಷ್ಟೋ ಪವಿತ್ರಾತ್ಮಗಳು ಸ್ವರ್ಗೀಯ ಸಿಂಹಾಸನಗಳಲ್ಲಿ ಶೋಭಿಸುತ್ತವೆ. ಬಿಟ್ರೀಸಳು ಕೂಡ ಸ್ವರ್ಣಸಿಂಹಾಸನದ ಮೇಲೆ ಕುಳಿತು ಡಾಂಟೆಯ ಕಡೆಗೆ ನೋಡಿ ಮಂದಹಾಸವನ್ನು ಬೀರುತ್ತಾಳೆ ಮತ್ತು ಪರಮಾತ್ಮನ ಕಡೆಗೆ ದೃಷ್ಟಿ ಹರಿಯಿಸುತ್ತಾಳೆ. ಇಲ್ಲಿಗೆ ಗ್ರಂಥಸಮಾಪ್ತಿಯಾಗುತ್ತದೆ. ಇದರಿಂದ ಡಾಂಟೆಯ ಸಿದ್ಧಾಂತವೇನೆಂದು ಗೊತ್ತಾಗುತ್ತದೆ. "ಮನುಷ್ಯನು ತನ್ನ ಪುರುಷಾರ್ಥ ಬಲದಿಂದ ನರಕ ಮತ್ತು ಪ್ರಾಯಶ್ಚಿತ್ತದ ಯಂತ್ರಣೆಯನ್ನು ದೂರಮಾಡಬಲ್ಲನು. ಆದರೆ ನಿಸ್ವಾರ್ಥ ಪ್ರೇಮವಿಲ್ಲದೆ ಆತನು ಸ್ವರ್ಗದ ಪವಿತ್ರ ರಾಜ್ಯವನ್ನು ಸೇರಲಾರನು."

ಈ ಗ್ರಂಥದಲ್ಲಿ ನರಕ (Infernno)ದ ವರ್ಣನೆಯು ಬಹಳ ಸುಂದರವಾಗಿದೆ. ಮನುಷ್ಯನಲ್ಲಿ ಅನುತಾಪದ ಕಿಂಚಿದಾಭಾಸವೂ ಇಲ್ಲದಿದ್ದಾಗ ಈ ನರಕವು ಮನುಷ್ಯನ ಪಾಪಾವಸ್ಥೆಯ ದ್ಯೋತಕವು. ಯಾವಾಗ ಆತನು ಪಾಪದಿಂದ ತಾಪಗೊಳ್ಳುತ್ತಾನೋ ಆಗ ಪ್ರಾಯಶ್ಚಿತ್ತವು ಆರಂಭವಾಗುತ್ತದೆ. ಪ್ರಾಯಶ್ಚಿತ್ತದಿಂದ ಪಾಪ ಮಾಡಿ ವಿನಷ್ಟವಾದ ಮನುಷ್ಯಬುದ್ಧಿಯು ಪುನಃ ಸ್ವಚ್ಛವಾಗುತ್ತದೆ. ದರ್ಪ, ಕರ್ಪಣ್ಯ, ಕ್ರೋಧ, ಆಲಸ್ಯ, ಲೋಭ, ಅತಿ ಭೋಜನ ಮತ್ತು ಲಂಪಟತೆಯು ಏಳು ಪ್ರಧಾನ ಪಾಪಗಳಾಗಿವೆ. ಈ ಏಳು ಪಾಪಗಳಿಗೆ ಏಳು ಪ್ರಾಯಶ್ಚಿತ್ತ ಸೋಪಾನಗಳಿವೆ. ಏಳು ಪಾಪಗಳ ಕ್ಷಯವಾದಾಗ ಮನುಷ್ಯನು ಏಳನೇ ಪ್ರಾಯಶ್ಚಿತ್ತ ಸೋಪಾನಕ್ಕೆ ಮುಟ್ಟಿ ಸ್ವರ್ಗಾರೋಹಣಕ್ಕರ್ಹನಾಗುತ್ತಾನೆ. ಪಾಂಡವರ ಸ್ವರ್ಗಾರೋಹಣದಂತೆ ಯಾರಲ್ಲಾದರೂ ಸ್ವಲ್ಪ ಪಾಪದ ಅವಶೇಷವಿದ್ದರೆ ಆತನು ಸ್ವರ್ಗದ ಪರೀಗೆ ಮುಟ್ಟದೆ ಮಧ್ಯದಲ್ಲಿಯೇ ಬೀಳುತ್ತಾನೆ.

ಈ ಮಹಾ ಕಾವ್ಯದ ಪೆರಡ್ಯಾಸ್ ಎಂಬ ಪ್ರಕರಣದಲ್ಲಿ ಅನಂತ ಮತ್ತು ಕರ್ಮ ಸಾಫಲ್ಯದ ಸಮಾಲೋಚನೆಯಿದೆ. ನಿಶ್ಚವಿರುವುದನ್ನು ಅನಂತವೆಂದು ಹೇಳುತ್ತಾನೆ. ಎಲ್ಲಿ ಗತಿಯೂ, ಅಚಲಯೂ, ಉಪಲಯಗಳೂ ಇಲ್ಲವೋ ಅಲ್ಲಿ ಅನಂತದ ಮರ್ಮ ತಿಳಿಯಲಿಕ್ಕಾಗಿ ಬಿಟ್ರೀಸಳು ಕರೆದುಕೊಂಡು ಹೋಗುತ್ತಾಳೆ. ಅಲ್ಲಿ ದಿನ ರಾತ್ರಿಗಳ ಪರಿವರ್ತನೆವಾಗುವುದಿಲ್ಲ. ಅಲ್ಲಿಂದ ಬಿಟ್ರೀಸಳು ಡಾಂಟೆಗೆ ತೋರಿಸಿ:—"ನೋಡು ಗ್ರಹ ನಕ್ಷತ್ರ ತಾರಾಗಣಗಳು ಅಲ್ಲಿ ತಿರುಗುತ್ತಿವೆ. ಅಲ್ಲಿ ಭೂತ ಭವಿಷ್ಯತ್ ವರ್ತಮಾನಗಳ ವಿಕಾಸವಿದೆ. ನಾನೀಗ ಇರುವಲ್ಲಿ ಕಾಲದ ಪರಿಣಾಮವಿಲ್ಲ. ಯಾವುದು ಕಾಲಾತೀತವೋ ಅದು ಅನಂತವು" ಎಂದು ಹೇಳಿದಳು. ಫಲಪ್ರಾಪ್ತಿಯೆಂದರೇನು? ಯಾವಾಗ ಮನುಷ್ಯನ ಆಕಾಂಕ್ಷೆಯು ಪರಮಾತ್ಮನ ಆಕಾಂಕ್ಷೆಯೊಂದಿಗೆ ಪೂರ್ಣವಾಗಿ ಬೆರೆಯುತ್ತದೋ ಆಗ ಜೀವನದ ಸಾಫಲ್ಯವಾಗುತ್ತದೆ. ಹೀಗೆ ಬರೆದಿದೆ. To see God is to see as God sees" ಅಂದರೆ ಭಗವಂತನು ಜಗತ್ತನ್ನು ಯಾವ ದೃಷ್ಟಿಯಿಂದ ನೋಡುತ್ತಾನೋ ಆ ದೃಷ್ಟಿಯಿಂದ ನಾವು ಆತನನ್ನು ನೋಡಬೇಕು." ಇದಿಷ್ಟು ಈ ಮಹಾ ಕಾವ್ಯದ ವರ್ಣನಾತ್ಮಕ ವಿಷಯವು. ಡಾಂಟೆಯು ತನ್ನ ಜೀವನ ಕಾಲದಲ್ಲಿ ಕಷ್ಟಗಳನ್ನನುಭವಿಸಿ ತಪ್ತಕಾಂಚನ ಸಂಕಾಶನಾಗಿ 1381ನೆ ಇಸವಿಯಲ್ಲಿ ಈ ಭೂಲೋಕದಿಂದ ಮಹಾ ಪ್ರಸ್ಥಾನ ಮಾಡಿದನು. ಆತನ ನಾಮವು ಇಂದು ಪ್ರತಿ ದಿಕ್ಕಿನಲ್ಲಿ ಪ್ರತಿಧ್ವನಿ ಮಾಡುತ್ತಿದೆ.

(ಶ್ರೀ ಕಾಮೇಶ್ವರ ಶರ್ಮರ ಲೇಖನದಿಂದ).

ಇದು ಯಾರಿಗೆ?

ಒಂದು ಶೋಕಪೂರ್ಣ ದೃಶ್ಯ.

(ಲೇಖಕ.—ಶ್ರೀ। ಕೆಮ್ಮಿಂಜೆ ಸುಬ್ರಾಯ ಉಪಾಧ್ಯಾಯ.)

ಮನೆಯ ಮೂಲೆಯ ಕೋಣೆಯಲ್ಲೊಂದು ದೀಪವು ಉರಿಯುತ್ತಿದೆ. ದೀಪದ ಮುಂದೆ ತೂಗುತ್ತಿರುವ, ಕಬ್ಬಿಣದ ಸರಪಣಿಯುಳ್ಳ, ಹಿತ್ತಾಳೆಯ ತೊಟ್ಟಿಲು. ತೊಟ್ಟಿಲಿನೊಳಗೆ ದಪ್ಪವಾದ ಹಾಸಿರುವ ಹಾಸಿಗೆಯಲ್ಲಿ ಮಗುವು ಮಲಗಿದೆ.

ತೊಟ್ಟಿಲ ಬಳಿ ಜೋಲುಮೋರೆಯಿಂದ, ಮಂಡಿಯೂರಿ, ಮಗುವಿನ ಮೋರೆಯನ್ನೇ ದಿಟ್ಟಿಸುತ್ತಾ, ಕನಲಿ—ತಾಯಿ—ಕುಳಿತಿರುವಳು. ಪತಿಯಿಂದ ದೂರಾಗಿರುವ ಆಕೆಯ ಬಾಳ್ವೆಯಲ್ಲಿ, ಮನಸ್ಸಿಗೆ ಏಕಮಾತ್ರ ಸುಖದಾಯಕ ವಿಷಯವಾದೀ ಮಗುವು, ತೊಟ್ಟಿಲ

ನೊಳಗೆ ಚೇಷ್ಟೆಯಿಲ್ಲದೆ ಬಿದ್ದುಕೊಂಡಿದೆ. ಕಣ್ಣು ಗಳು ಮುಚ್ಚಿಕೊಂಡಿವೆ. ಅವು ತೆರೆಯುವುವೆಂಬ ಬಯಕೆಯಿಂದಲೋ ಎಂಬಂತೆ ತಾಯಿ ಅದನ್ನೇ ದಿಟ್ಟಿಸುತ್ತಿರುವಳು. ಆದರೆ, ಆ ಕಣ್ಣುಗಳು, ತೆರೆಯಲು ಮುಚ್ಚಿದ ಕಣ್ಣುಗಳು ಅಲ್ಲವೆಂಬ ವಿಚಾರವು ಆಕೆಗೆ ಬಾರದು. ಭವಿಷ್ಯವನ್ನು ಯಾರು ನಿರಾಶೆಯಿಂದ ತುಂಬಿದರೂ—ತಾಯಿಯಾದ ಆಕೆಗೆ ಆಸೆ. ಮುಗಿಯದ ಆಸೆ.

ದಿಟ್ಟಿಸುತ್ತಿದ್ದಂತೆ ಒಮ್ಮೆ ಮೊಗವೆತ್ತಿ ನಿಟ್ಟುಸಿರಿಟ್ಟಳು. ಕಣ್ಣಿಂದ ಅಶ್ರುಧಾರೆಯು ಪ್ರವಹಿಸಿತು. ಅದನ್ನು ಒರಸಿ, ಬೆಳಕಿನಿಂದ ತುಂಬಿದ ಕೋಣೆಯನ್ನು ನೋಡಿದಳು. ಕತ್ತಲು. ದೀಪವಿದ್ದೂ ಕತ್ತಲು! ಮನವು ಕತ್ತಲಿಂದ ತುಂಬಿರಲು ಹೊರಗಿನ ಯಾವ ಬೆಳಕು ತಾನೇ ಗೋಚರಿಸುವುದು?

"ಆಸೆಯನ್ನು ಬಿಡಿರಮ್ಮಾ—ಮಗುವು ನಿಮ್ಮದಲ್ಲ, ದೇವರದು!" ಎಂದ ಡಾಕ್ಟರನ ನುಡಿಯು ಆಕೆಯ ಹೃದಯದಲ್ಲಿ ಸುಳಿಯುತ್ತಿತ್ತು. 'ದೇವರದಾಗುವ ಮಗುವು ನನಗೇಕೆ ಸಿಕ್ಕಿತು? ಬೇಕೆಂದು ಬಯಸಿ ಹಡೆದ ಮಗುವನ್ನು ಕೈಯಿಂದ ಕಿತ್ತುಕೊಂಡೊಯ್ಯುವ ನಿರ್ದಯನೇ ದೇವರು? ಅಂತಹ ಕಲ್ಲೆದೆಯವನನ್ನು ದೇವರೆಂದು ಕರೆಯುವರೇ?' ಎಂಬ ಶಂಕೆಯು ಆಕೆಯ ಮನದಲ್ಲಿ ಮೂಡುವುದು. ಎಳೆಯ ಸಂಸಾರಿಯಾದ ಆಕೆಯ ಮನದಲ್ಲಿ ಉತ್ತರವೆ ಹೊಳೆಯದು. ಮೌನವಾಗಿ ಹೊರಬಿದ್ದ ಮತ್ತೊಂದು ನಿಟ್ಟುಸಿರೇ ಹೃದಯದ ಭಾವಕ್ಕೆ ಪ್ರತ್ಯುತ್ತರ.

ಮಗುವು ಕೈಕಾಲು ಕೊಡವಿ, ವಿಕಾರವಾಗಿ ತಿರಚಿಕೊಂಡಿತು. ತಾಯಿಯು "ಅಯ್ಯೋ!" ಎಂದು ಗಾಬರಿಯಿಂದ ಬೊಬ್ಬಿಟ್ಟಳು. ಹೊರಗಿನಿಂದ ಅವಳ ತಾಯಿ ಸುಬ್ಬಮ್ಮ, ತಂದೆ ವೆಂಕಟ, ತಮ್ಮ ಗೋಪ ಮೂವರೂ ಗಾಬರಿಯಿಂದ ಓಡಿಬಂದರು.

"ಕಮಲೆ! ಏನಾಯ್ತು ಮಗುವಿಗೆ?" ಎಂದು ಮಗಳ ದುಃಖವನ್ನು ಶಾಂತಗೊಳಿಸುವ ನುಡಿಗಳಿಂದ ಸುಬ್ಬಮ್ಮನು ತೊಟ್ಟಿಲಿನೊಳಗೆ ಇಣಿಕಿ ನೋಡಿದರು. ವೆಂಕಟನೂ ಗೋಪನೂ "ಏನಾಯ್ತು ಮಗುವಿಗೆ?" ಎಂಬ ಕಾತರವನ್ನು ಸೂಚಿಸಿದರು. "ಏನಾಯ್ತು ಮಗುವಿಗೆ?"—ಏನಾಗುವುದೆಂದು ಅವರು ಬಲ್ಲರು. ಆಸೆಯುಳಿದ ಡಾಕ್ಟರರು ಏನಾಗುವುದೆಂದು ಸೂಚಿಸಿ ತೆರಳಿದ್ದರು. ಆದರೂ "ಏನಾಯ್ತು ಮಗುವಿಗೆ?" ಈ ಪ್ರಶ್ನೆ!—ಬರೀ ಹೆತ್ತ ಕರುಳಿನ ಬೇಗೆಯನ್ನು ಆರಿಸಲೋಸುಗ.

ಕಮಲೆಯು "ಏನಾದರೂ ಆಗುವುದಲ್ಲಾ! ಆದರೆ ಅವರು ಬಂದರೇ?" ಎಂದು ಪ್ರಶ್ನಿಸಿದಳು.

"ಅವನು ಇಂದಿನ ಟ್ರೈನಿಗೆ ಬರಬಹುದು. ನಿನ್ನೆ ಟೆಲಿಗ್ರಾಮ್ ಬಂದಿದೆ: ಬಂದೇ ಬರುವನು. ಕೆಲವೇ ನಿಮಿಷಗಳಲ್ಲಿ ಬರಬಹುದು" ಎಂದು ಕನ್ನಡಕ ಸರಿಗೊಳಿಸುತ್ತಾ ಮುದುಕ ವೆಂಕಟನು ನುಡಿದನು.

"ಅಷ್ಟರ ವರೆಗಾದರೂ" ಎನ್ನುತ್ತಾ ಮುಂದೆ ಮಾತನಾಡಲಾರದೆ ಕಮಲೆಯು ಮಗುವಿನ ಕಡೆಗೆ ನೋಡಿದಳು. ಎಲ್ಲರೂ ಆ ಕಡೆ ನೋಡಿದರು, ಮಗುವಿನ ಉಚ್ಛ್ವಾಸ ನಿಶ್ವಾಸಗಳು ಭರದಿಂದ ಸಾಗುತ್ತಿವೆ. ಕಮಲೆಯು ತೊಟ್ಟಿಲಿನಿಂದ ಮಗುವನ್ನು ಎತ್ತಿ ತೊಡೆಯ ಮೇಲೆ ಮಲಗಿಸಿಕೊಂಡಳು.

"ಅಷ್ಟರ ವರೆಗೆ ಹೇಗಾದರೂ ಇರಲಿ" ಎಂದು ಸುಬ್ಬಮ್ಮನು "ಸಂತೈಸಿಕೊ ಮಗು" ಎಂದು ಮಗಳ ಬಳಿ ಕುಳಿತು ಬೆನ್ನು ತಟ್ಟಿದಳು.

ಬೆನ್ನು ತಟ್ಟಿದರೆ ಎದೆಗೆ ಹೇಗೆ ತಾಳ್ಮೆ ಬರಬೇಕು? ಹೆತ್ತ ತಾಯಿಯ ಧೈರ್ಯವು ಮಗಳ ಸಂಕಷ್ಟದಲ್ಲಿ ನೆರವಾಗಿ ಸಂತೈಸುವೆನೆಂದಿದ್ದರೂ ಹೆತ್ತ ಕರುಳಿನ ತುಂಡು, ಕೊರಗಿ ಕರಗುತ್ತಿರುವಾಗ, ಎದೆಗಾದರೂ ಸಹನೆ ಹೇಗೆ ನಿಲ್ಲಬೇಕು?—

"ಮಗುವು ಏನೇ ಆಗಲಿ?—ಅವರು ಒಮ್ಮೆ ಬಂದಿದ್ದರೆ!" ಎಂದು ಕಮಲೆಯು ತಂದೆಯ ಮೋರೆಯನ್ನು ನೋಡಿದಳು.

ವೆಂಕಟನು ಆ ನೋಟದಲ್ಲಿ—ವಿಚಿತ್ರ ಭಾವಗಳನ್ನು ಕಂಡನು. "ಅವರೊಮ್ಮೆ ಬಂದಿದ್ದರೆ!"—ಅಹುದು ಅವನೇ ಇಷ್ಟಕ್ಕೂ ಕಾರಣನೆಂದು ಎಲ್ಲರೂ ಬಲ್ಲರು, ಡಾಕ್ಟರನು ಹೇಳಿದ ಬಳಿಕ. ಅದಕ್ಕೂ ಮೊದಲು ಅರಿತಿದ್ದುದಿದ್ದರೆ, ಅದು—ಕಮಲೆಯು ಮಾತ್ರ ಪಾಪ. ಈಗ ಉಳಿದವರೂ ಅದನ್ನರಿತರು. ಆ ತನಕ ಅವರು—ಹಾಗೆಂದು ಏನೂ ಅರಿಯರು. ಆದರೆ ಈಗ?—ಈಗ?—ಅವನು—ಅವನೇ ಮಗುವಿನ ವಿನಾಶಕ್ಕೆ ಕಾರಣೀಭೂತನೆಂದು ಅವರು ಅರಿತರು. ಅವರೆಲ್ಲರೂ—ಅವನ ಬರವನ್ನು ನಿರೀಕ್ಷಿಸುತ್ತಿರುವರು. ಅತೃಪ್ತ ತನುರ್ಮನಗಳಿಂದ—ಅವನ ಕೈಗೆ ಕನ್ನಡಿಯನ್ನು ಕೊಡುವ ಬಯಕೆಯಿಂದ.

ಹೊರಗೆ ಮೆಟ್ಟಲಿನಿಂದ ಬೂಟ್ಸಿನ ಸಪ್ಪಳ ಕೇಳಿಸಿತು. ವೆಂಕಟನು "ನೋಡು, ಗೋಪ ಯಾರು ಬಂದರೆಂದು" ಎಂದು ಹುಬ್ಬು ಗಂಟಿಕ್ಕಿ ಮಗನಿಗೆ ಅಜ್ಞಾಪಿಸಿದನು.

ಗೋಪನು ಹೊರಗೆ ಹೋದನು. "ಬನ್ನಿರಿ ಭಾವ. ಒಳಗೆ ಹೋಗೋಣ" ಎಂದು ಗೋಪುವು ಮೋಹನನು ಬೂಟ್ಸು ಕಳಚುತ್ತಿದ್ದಂತೆ ಹೇಳಿದನು. ಬೂಟ್ಸು ಕಳಚಿ, ಕೋಟು ಕಳಚಿ, ಮೇಜಿನ ಮೇಲಿಟ್ಟು, ಮೋಹನನು ಒಳಗೆ ಬಂದನು.

"ಅವನು ಬಂದನು, ಮಗು ಕಮಲೆ—" ಎಂದು ಮುದುಕನು ಮಗಳ ಕಡೆಗೆ ನೋಡಿದನು.

"ಬಂದಿರೇ? ಬನ್ನಿ, ನೋಡಿ. ಆಸೆಯಿಲ್ಲ" ಎಂದು ಕಮಲೆಯು ಪತಿಯ ಮುಖವನ್ನು ನಿರಾಶೆ ದ್ವೇಷಗಳಿಂದ ದಿಟ್ಟಿಸಿದಳು.

ಮೋಹನನು ಹತ್ತಿರ ಕುಳಿತು "ಆಯಿತು. ವಿಧಿಯು ಈ ದುಃಖವನ್ನು ಕಾಣಲಿಕ್ಕೆ ನನ್ನನ್ನು ಎಳೆದು ತಂದುದು. ಹೊರಟ ಶಕುನಗಳೆಲ್ಲವೂ ಕೆಡುಕು" ಎಂದು ಉದ್ಗಾರವೆತ್ತಿದನು.

"ಹುಂ; ಎಲ್ಲವೂ ಕೆಡುಕು!" ಎಂದು ಕಮಲೆಯು ಮಗುವಿನ ಹಣೆಯ ಮೇಲೆ ಕೈಯಾಡಿಸಿಸಿದಳು!

"ಹುಟ್ಟಿದಾಗಲೇ ಆಯುಸ್ಸು ಕಡಿಮೆಯಿತ್ತು. ಜೋಯಿಸರು 'ಋಣಪುತ್ರ, ಕರ್ಮಪುತ್ರನಲ್ಲ' ಎಂದಿದ್ದರು ಮಾವ! ಈ ಮಗುವನ್ನು" ಎಂದು ಮೋಹನನು ವೆಂಕಟನ ಮೊಗವನ್ನು ನೋಡಿದನು.

ವೆಂಕಟನು ನಿರುತ್ತರನಾಗಿ, ನಿಟ್ಟುಸಿರಿಟ್ಟನು. "ಡಾಕ್ಟರರು ಏನು ಹೇಳಿದರು ಗೋಪು?" ಎನ್ನುತ್ತಾ ಮೋಹನನು ಮೈದುನನನ್ನು ನೋಡಿದನು.

"ಕರ್ಮಧ ಫಲ" ಎಂದರು. ಒಟ್ಟು ನಿರಾಶೆ—ಮೋಹನನು ನಿರುತ್ತರನು—ಕೆಲಹೊತ್ತು ಮೌನ!

ಮಗುವು—ಉಸಿರು ಬಿಡುತ್ತಿದ್ದುದು ಬಲವಾಗಿ ಒಮ್ಮೆ ಉಸಿರು ಬಿಟ್ಟಿತು. ಮರುಕ್ಷಣದಲ್ಲಿ ಅಂಗಾಂಗಗಳು ಶೀತಲ ತಾಯಿಯ ಕೈಗಳು ಆ ಶೀತಲ ಸ್ಪರ್ಶದಿಂದ ಸಡಿಲುಗೊಂಡುವು. ತಂದೆಯ ಕೈಗಳು ಅದನ್ನು ಆದರಿಸಲು ಮುಂದಾದುವು. ಆದರೆ ಆ ಗಳಿಗೆಯಲ್ಲಿ—ತಂದೆ ತಾಯಿಗಳ ಕೈಗಳು—ಮಗುವನ್ನು ಮುಟ್ಟಿದ್ದ ಆ ದಿವ್ಯ ಗಳಿಗೆಯಲ್ಲಿ—ಒಂದು ಉಸಿರು ಬಲವಾಗಿ ಹೊರನೆಗೆದು—ಮರುಕ್ಷಣದಲ್ಲಿ ಉಸಿರೇ ನಿಂದಿತು—ಮತ್ತೆ ಮಗುವು ಮರದ ತುಂಡಿನಂತೆ ಗಡುಸು—ಹಿಮದ ಗಡ್ಡೆಯಂತೆ ಶೀತಲ. ಮುಗಿಯಿತು.

ತಾಯಿಯು ಅಲ್ಲೇ ಅತ್ತು ಉರುಳಿದಳು—ವೆಂಕಟನು ಮಗಳನ್ನು ಸಂತೈಸುತ್ತಿರುವನು—ಆದರೆ ಬೊಬ್ಬಿಡುವ ಹೆಂಗಸಿಗೆ ಯಾವುದರಿಂದೇನು ಸಮಾಧಾನ? ತೊಡೆಯ ಮೇಲೆ ಮಗುವಿನ ಶವವನ್ನಿಟ್ಟು, ಹಣೆಗೆ ಕೈಯಿಟ್ಟ ಮೋಹನನು— ಕಣ್ಣೀರಿಡುತ್ತಿರುವನು—"ಇಷ್ಟಕ್ಕಲ್ಲವೇ ನೀನು ಮಗನಾಗಿ ಜನಿಸಿದುದು" ಎಂದು ತಂದೆಯ ಪ್ರಲಾಪ.

ಕಮಲೆಯು ಬಿಕ್ಕಿ ಬಿಕ್ಕಿ ಅಳುತ್ತಾ ಎದ್ದು ಕುಳಿತಳು. ಗಂಡನ ತೊಡೆಯ ಮೇಲಿದ್ದ ಮಗುವನ್ನೊಮ್ಮೆ ನೋಡಿದಳು. ಮರುಕ್ಷಣದಲ್ಲಿ ಗಂಡನ ಮೋರೆಯನ್ನು ನೋಡಿದಳು. "ನಿಮ್ಮದನ್ನು ತೆಗೆದುಕೊಳ್ಳಲು ಬಂದಿರಾ ಕೊನೆಗೆ?" ಎಂದು ಅಳುತ್ತಾ ಪ್ರಶ್ನಿಸಿದಳು.

"ಯಾರು ಕೊಂಡುಹೋದರು? ಯಾರು ಕೊಟ್ಟರೋ ಅವರು. ನೀನೇಕೆ ನನ್ನನ್ನು ಚುಚ್ಚುವಿಯಾ?" ಎಂದು ಮರ್ಮವೇದನೆಯಿಂದ ಗಂಡನ ಪ್ರಶ್ನೆ.

"ಕೊಟ್ಟವರು ಕೊಂಡೊಯ್ದುದು ದಿವ್ಯ ವಸ್ತು. ಅದು ಅವರಿಗಾಗಲಿ. ನಮಗೆ ಅದರ ಋಣವಿಲ್ಲ—ನಮ್ಮ ಕರ್ಮದ ಫಲವನ್ನು ಅನುಭವಿಸಿದೆವು. ಆದರೆ ಇದು—ಇದು—ಎನ್ನುತ್ತಾ ಕಮಲೆಯು ಬಿಕ್ಕಿ ಬಿಕ್ಕಿ ಅಳುತ್ತಾ ಶವದ ಕಡೆಗೆ ಕೈನೀಡಿದಳು.

"ಮಾರಿ! ಸುಮ್ಮನಾಗು!—ಹೀಗೆಲ್ಲಾ ಬಿಕ್ಕಿ ಬಿಕ್ಕಿ ಬೊಬ್ಬಿಟ್ಟರೆ ಹೋದುದು ಬರುವುದೇ? ಹೀಗೇಕೆ ಮಾತನಾಡುತ್ತಿರುವೆ?" ಎಂದು ಮೋಹನನು ಹಣೆಯ ಮೇಲಿದ್ದ ಕೈಯನ್ನು ಪತ್ನಿಯ ಹೆಗಲ ಮೇಲಿರಿಸಿದನು.

"ನಮ್ಮ ಕೈಹಿಡಿದ ತಪ್ಪಿಗೆ ಈ ಅನುಭವ—ಈ ದುಃಖ, ಈ ಪುತ್ರಶೋಕ. ಇದು ನಿಮ್ಮ ಕರ್ಮದ ಫಲ—ನಿಮ್ಮಿಂದಾಗಿ ಹೀಗಾಯಿತು—ನೀವೇ ಇಷ್ಟಕ್ಕೂ ಕಾರಣರು" ಎನ್ನುತ್ತಾ ಮಗಳು ತಂದೆಯ ಮೋರೆಯನ್ನು ನೋಡಿದಳು.

"ಹೌದು ಮೋಹನ—ಡಾಕ್ಟರರು ಹೇಳಿದರು. ನಿನ್ನ ವ್ಯಾಧಿಯೇ ಮಗುವಿಗೆ!" ಮುಂದೆ ನುಡಿಯದೆ ಮುದುಕನು ನಿಟ್ಟುಸಿರಿಟ್ಟನು.

[ಆನೇ ಘಟಕ್ಕೆ ಮುಂದುವರಿದಿದೆ.]

ಶ್ರೀಮಧ್ವಭುವನೇಂದ್ರ ಮಹೌಷಧಾಲಯ, ಕಟಪಾಡಿ, ದ. ಕ.

ಪಾರಂಪರ್ಯದ ಅನುಭವಸಿದ್ಧೌಷಧಗಳು **ಸ್ವರ್ಣ, ರಜತ ಪದಕಗಳನ್ನು ಪಡೆದ ದಿವ್ಯೌಷಧಗಳು**

1. ಕ್ಷಾರ್-(ರಕ್ತದೋಷ ಸಂಬಂಧ ಯಾವತ್ತು ರೋಗಗಳಿಗೆ ದಿವ್ಯೌಷಧ). 2. ಗರ್ಭಪಾಲ-(ಗರ್ಭಶೂಲ, ಗರ್ಭಸ್ರಾವಗಳಿಗೆ ಅತೀ ಉಪಯುಕ್ತ). 3. ಚಂದ್ರಮುಸ್-ವಾಂತಿ ಭೇದಿಗೆ ಅತ್ಯುತ್ತಮ). 4. ನೇತ್ರಾಂಜನ-(ನೇತ್ರ ರೋಗಗಳಿಗೆ ದಿವ್ಯೌಷಧ). 5. ಮಧುರೀಕೃತನಿಂಬ ತೈಲ-(ಸರ್ವ ತರದ ವಾತರೋಗಗಳಿಗೂ, ಚರ್ಮ ವ್ಯಾಧಿಗಳಿಗೂ ಉತ್ತಮ.) 6. ಧುವ ಸಂಜೀವನ-ಬಾಲರೋಗಗಳಿಗೆ ಅತ್ಯುತ್ತಮ. 7. ರಸಬಿಂದು-ಫರಂಗಿ, ಮೇಹ, ದುಷ್ಟ ವ್ರಣಗಳಿಗೆ ಸಿದ್ಧೌಷಧ. 8. ಮಹಾ ಮದನಕಾಮೇಶ್ವರೀ ಲೇಹ್ಯ-ನಪುಂಸಕತ್ವ, ಧಾತು ಕ್ಷೀಣತೆ ಅತ್ಯಸಹಾಯ ಮೊದಲಾದುವುಗಳಿಗೆ ಅತೀ ಉಪಯುಕ್ತ.

ನಮ್ಮ ಔಷಧಗಳು ದೊರೆಯುವ ಸ್ಥಳಗಳು

ಬೊಂಬಾಯಿ ಸಂಸ್ಥಾನದ ಪ್ರಾಮುಖ್ಯ ಏಜಂಟರು:—(ಉತ್ತರಕನ್ನಡ ಜಿಲ್ಲೆ ಹೊರತು) ಕೊಚ್ಚಿಕಾರ್ ಅನಂದ್ರಾಯ ಪೈ, ಲೋಹಾರ್ ಚಾಲ್, ಬೊಂಬಾಯಿ ನಂಬ್ರ 2.
ಮಂಗಳೂರು:—1. ರಾಘವೇಂದ್ರ ರಂಗ ಪೈ, ರಥಬೀದಿ ಮಂಗಳೂರು. 2. ಡಾಕ್ಟರ್ ಕೆ. ಎಸ್. ಭಂಡಾರಿ, ಕೆನರಾ ಡಿಸ್ಪೆನ್ಸರಿ, ಕೊಡಿಯಾಲ್‌ಬೈಲ್, ಮಂಗಳೂರು. 3. ಆರ್. ಗೋಪಾಲ ಕೃಷ್ಣರಾವ್, ಪ್ರೊಪ್ರೈಟರ್, ಗೋಪಾಲಕೃಷ್ಣ ವೈದ್ಯಾಶ್ರಮ, ಮಾರ್ಕೆಟ್ ಈಸ್ಟ್ ರೋಡ್, ಮಂಗಳೂರು. ಬಂಟ್ವಾಳ:—ವೇದಮೂರ್ತಿ ಬಿ. ಶುಕಾಚಾರ್, ಶ್ರೀ. ಗೋಪಾಲಕೃಷ್ಣ ಆಯುರ್ವೇದಿಕ್ ಫಾರ್ಮಸಿ, ಬಂಟ್ವಾಳ. ಮೂಡಬಿದ್ರಿ:—ಡಾಕ್ಟರ್ ಎಮ್. ವಿ. ಮಲ್ಯ, ಮೂಡಬಿದ್ರಿ. ಕಾರ್ಕಳ:—ವಿ. ವಿ. ಶೆಣೈ, ಕೆಮಿಸ್ಟ್ ಕಾರ್ಕಳ. ಮಂಜೇಶ್ವರ:—ಕೆ. ಸರ್ವೋತ್ತಮ ಬಾಳಿಗಾ ಮತ್ತು ಡಿ. ನಾರಾಯಣ ಶ್ಯಾನುಭಾಗ, ಮರ್ಚೆಂಟ್ಸ್, ಮಂಜೇಶ್ವರ. ಕಾಪು:—ಡಾಕ್ಟರ್ ಬಿ. ಕೆ. ಬೇಕಲ್ಸ್ ಡಿಸ್ಪೆನ್ಸರಿ ಕಾಪು. ಉದ್ಯಾವರ:—ಯು. ಗೋಪಾಲ ಶ್ಯಾನುಭಾಗ, ಮರ್ಚೆಂಟ್ ಉದ್ಯಾವರ. ಉಡುಪಿ:—1. ವೈಫಾರ್ಮಸಿ, 2. ಡಾಕ್ಟರ್ ಪಿ. ರಾಘವೇಂದ್ರ ನಾಯಕ್ ಡಿಸ್ಪೆನ್ಸರಿ, 3. ಪಾಂಗಾಳ ಜನಾರ್ದನ ನಾಯಕ್ ಎಂಡ್ ಕೊ, ಹೊಸ್ಪಿಟಲ್ ರೋಡ್, ಉಡುಪಿ, 4. ಆರ್. ಎಸ್. ಶೆಣೈ, ರಥಬೀದಿ, ಉಡುಪಿ. ಕಲ್ಯಾಣಪುರ:—ಡಾಕ್ಟರ್ ಟಿ. ಮಹಮ್ಮದ್ ಇಸ್ಮೈಲ್, ತಿಮ್ಮಣ್ಣಕುದ್ರು ಕಲ್ಯಾಣಪುರ. ಬ್ರಹ್ಮಾವರ:—1. ಕೊಚ್ಚಿಕಾರ ವೈಕುಂಠ ಪೈ ಎಂಡ್ ಸನ್ಸ್, ಮರ್ಚೆಂಟ್ಸ್, ಬ್ರಹ್ಮಾವರ. 2. ಕೆ. ಶೇಷಗಿರಿ ನಾಗಪ್ಪ ಎಂಡ್ ಸನ್ಸ್, ಕೆಮಿಸ್ಟ್ ಎಂಡ್ ಡ್ರಗ್ಗಿಸ್ಟ್ಸ್, ಬ್ರಹ್ಮಾವರ. ಬಾರಕೂರು:—ಬಿ. ಭಗವಂತ ಮಲ್ಯ, ಪ್ರೊಪ್ರೈಟರ್, ಆರ್. ಪಿ. ಔಷಧಾಲಯ, ಬಾರಕೂರು. ಕೋಟ:—ವೇದಮೂರ್ತಿ ನಾಗೇಶ ನರಸಿಂಹ ಭಟ್ಟ, ಮುರಲೀಧರ ಕೃಷ್ಣ ದೇವಸ್ಥಾನ, ಕೋಟ ವರುಣತೀರ್ಥ, ಕೋಟ. ಕುಂದಾಪುರ:—1. ಕೆ. ಆರ್. ಭಟ್ಟ, ಕೆಮಿಸ್ಟ್, ಕುಂದಾಪುರ. 2ದ ಡಾಕ್ಟರ್ ಕೆ. ಆರ್. ಕಾಮತ್ ಡಿಸ್ಪೆನ್ಸರಿ, ಕುಂದಾಪುರ. ಗಂಗೊಳ್ಳಿ:—ಜಿ. ಸುರೇಂದ್ರನಾಥ ನಾಯಕ್, ಮರ್ಚೆಂಟ್, ಗಂಗೊಳ್ಳಿ. ಬೈಂದೂರು:—ಕೆ. ಪುತ್ತು ಶ್ಯಾನುಭಾಗ, ಮರ್ಚೆಂಟ್ ಬೈಂದೂರು. ಭಟ್ಕಳ—ವಾಮನನರಸಿಂಹ ನಾಯಕ್, ಗುಡೆ ಅಂಗಡಿಕಾರ್, ಮರ್ಚೆಂಟ್ ಎಂಡ್ ಕಂಟ್ರಾಕ್ಟರ್, ಭಟ್ಕಳ ಉ. ಕನ್ನಡ. ಅಂಕೋಲ:—ಕೃಷ್ಣ ಹಮ್ಮಯ್ಯ ನ್ಯಾಕ, ಪಟ್ಟೇವಾರ್, ಧರ್ಮಶಾಲೆಯ ಬಳಿ, ಅಂಕೋಲಾ, ಉ. ಕನ್ನಡ. ಹೆಬ್ರಿ:—1. ಎಚ್. ಮುಕುಂದ ಪೈ ಮತ್ತು ಡಾಕ್ಟರ್ ಎಂ. ಪಿ. ಕಲ್ಕೂರ್, ಹೆಬ್ರಿ. 2. ಡಾಕ್ಟರ್ ವ್ಯಾ. ಆರ್. ಆಚಾರ್ಯ, ರಾಯಲ್ ಡಿಸ್ಪೆನ್ಸರಿ, ಹೆಬ್ರಿ. ಹಾಲಾಡಿ:—ಯು. ನರಸಿಂಹ ಕಾಮತ್, ಮರ್ಚೆಂಟ್ ಹಾಲಾಡಿ. ಹೊಸಂಗಡಿ:—ಎಚ್. ರಾಮಚಂದ್ರ ಕಾಮತ್, ಮರ್ಚೆಂಟ್ ಹೊಸಂಗಡಿ, ಕುಂದಾಪುರ ತಾಲೂಕು. ನಗರ:—ಸಿ. ನಾರಾಯಣ ರಾವ್, ಸಾಹುಕಾರ, ನಗರ. ತೀರ್ಥಹಳ್ಳಿ:—ಡಾಕ್ಟರ್ ಕೆ. ನರಸಿಂಹಾ, ಶ್ರೀ ಕೃಷ್ಣಾ ಡಿಸ್ಪೆನ್ಸರಿ, ತೀರ್ಥಹಳ್ಳಿ. ಕೊಪ್ಪ:—ಡಾಕ್ಟರ್ ಟಿ. ಕೆ. ಭಟ್, ಎಂ. ಬಿ. ಎಂಡ್ ಬಿ. ಎಸ್, ಪೋಪ್ಯುಲರ್ ಫಾರ್ಮಸಿ, ಕೊಪ್ಪ, ಕಡೂರು ಡಿಸ್ಟ್ರಿಕ್ಟ್. ಶಿವಮೊಗ್ಗ:—ಡಾಕ್ಟರ್ ಎಂ. ಆರ್. ಪೈ, ದಿಗ್ ಬಜಾರ್, ಶಿವಮೊಗ್ಗ. ಸಾಗರ:—ಡಾಕ್ಟರ್ ಬಿ. ನರಹರಿ ರಾವ್, ಸಾಗರ.

ಹೆಚ್ಚಿನ ಮಾಹಿತಿ ಬಗ್ಗೆ ಈ ವಿಳಾಸಕ್ಕೆ ಬರಕೊಳ್ಳಬಹುದು. **ನಾಯಕ್ ಬ್ರದರ್ಸ್, ಶ್ರೀಮಧ್ವಭುವನೇಂದ್ರ ಮಹೌಷಧಾಲಯ, ಪೋಸ್ಟ್ ಕಟಪಾಡಿ, ದ. ಕ.**

ಶುದ್ಧ ಸ್ವದೇಶಿ! ಸ್ವದೇಶಿ ಭಾಂಡವಾಳದಿಂದ **ಸ್ವದೇಶಿಯರಿಗಾಗಿ!**

ಗಂಧದ ಸಾಬೂನು (ಸೆಂಡಲ್ ವುಡ್) ನಿರ್ವಿವಾದವಾಗಿ ಅತ್ಯುತ್ತಮವಾದುದು!

ತಾಜಾ ಗಂಧದ ತೈಲ ಮೊದಲಾದ ವನಸ್ಪತಿ ತೈಲಗಳಿಂದಲೇ ತಯಾರಿಸಿದ ಅತ್ಯುತ್ತಮ ಸಾಬೂನು.

ಮೈಸೂರು ಸರಕಾರದ ಗಂಧದೆಣ್ಣೆ ಕಾರ್ಖಾನೆಯಲ್ಲಿ ದೊರೆವ ಆ ಉತ್ತಮ ಎಣ್ಣೆಯ ಸ್ನಿಗ್ಧ ಸುಗಂಧವುಳ್ಳದ್ದು.

ಪ್ರಾಣಿಜನ್ಯ ಚರ್ಬಿಯ ಸ್ಪರ್ಶವೂ ಇಲ್ಲದ

ಮಲಬಾರು ಸೋಪ್

ಮಲಬಾರು ಸೆಂಡಲ್ ವುಡ್

ದಿ ವೆಜಿಟೇಬಲ್ ಸೋಪ್ ವರ್ಕ್ಸ್, ಕಲ್ಲಿಕೋಟೆ.

ಪ್ರೊಪ್ರೈಟರ್:—ಸನ್ ಬೈಂಡ್ ಕೊಡೆಯ ಪ್ರಾತಿಯ ಸೇಟ್ ನಾಗಜೀ ಪುರುಷೋತ್ತಮ ಮತ್ತು ಕಂಪೆನಿ, ಕಲ್ಲಿಕೋಟೆ.

ಈ ಜಿಲ್ಲೆಗೆ ಪ್ರವರ್ತಕರು:— ರಾಘವೇಂದ್ರ ರಂಗ ಪೈ ರಥಬೀದಿ, ಮಂಗಳೂರು.

ಇಂದೇ ಆರಂಭಿಸಿರಿ!

ಸುಪ್ರಸಿದ್ಧ **ಆತಂಕನಿಗ್ರಹ ಮಾತ್ರೆ**

ಗಳನ್ನು ಉಪಯೋಗಿಸಲಿಕ್ಕೆ.

ಜೀವನದ ಜಯಶೀಲತೆಯ ವಿಷಯನ್ನರಿರಿ. ಲೋಕದಲ್ಲಿ ಸಾವಿರಾರು ಜನರು ಅದನ್ನು ಪ್ರತಿದಿನವೂ ಉಪಯೋಗಿಸುತ್ತಿದ್ದಾರೆ.

ನರ ಮತ್ತು ಶಾರೀರಿಕ ದೌರ್ಬಲ್ಯಕ್ಕೆ ಭದ್ರತೆಯು.

ಆರೋಗ್ಯಕ್ಕೆ ಕವಚವು.

32 ಮಾತ್ರೆಗಳ ಟಿನ್ನೊಂದಕ್ಕೆ ರೂ. 1

ಹೆಚ್ಚಿನ ವಿವರಕ್ಕೆ, ಧರ್ಮಾರ್ಥ ಹಾಗೂ ಟಪ್ಪಾಲು ಕಾಸಲು ವಿನಹ ಕಳುಹಿಸಲ್ಪಡುವ ನಮ್ಮ

ಕಾಮಶಾಸ್ತ್ರವನ್ನೋದಿರಿ.

Agents:—Shah Company, MANGALORE.
" Pearl & Sons, MANGALORE.

Atank Nigrah Pharmacy,
Chickpet, Bangalore.

ಆತಂಕನಿಗ್ರಹ ಫಾರ್ಮಸಿ,
ಚಿಕ್ಕಪೇಟೆ, ಬೆಂಗಳೂರು.

ಎಲ್ಲಾ ಚಂದಾದಾರರು ತಮ್ಮ ಪತ್ರವ್ಯವಹಾರದೊಂದಿಗೆ ಅವರವರ ಚಂದಾ ನಂಬರುಗಳನ್ನು ಅಗತ್ಯವಾಗಿ ನಮೂದಿಸತಕ್ಕದ್ದು. ಸಂ. ಸ್ವ.

BUY ADVERTISED GOODS

ದಿ ಪೋಪ್ಯುಲರ್ ಇನ್ಶೂರೆನ್ಸ್ ಕಂಪೆನಿ, ಲಿಮಿಟೆಡ್,

(ಹೆಡ್ ಆಫೀಸು—ಮಂಗಳೂರು).

ನಮ್ಮ ಜಿಲ್ಲೆಯು ಪ್ರತಿ ವರ್ಷವೂ ಸುಮಾರು 15 ಲಕ್ಷ ರೂಪಾಯಿಗಳನ್ನು ಪ್ರೀಮಿಯಮ್ ರೂಪದಲ್ಲಿ ದೇಶೀಯ ಮತ್ತು ಪರದೇಶೀಯ ಕಂಪೆನಿಗಳಿಗೆ ಪ್ರವಾಹರೂಪವಾಗಿ ಸಲ್ಲಿಸುತ್ತಲೇ ಇದೆಯಲ್ಲದೆ, ಈ ಜಿಲ್ಲೆಯು ತಾನಾಗಿ ಒಂದೇ ಒಂದು ಜೀವವಿಮೆ ಸಂಘವನ್ನು ಇದುವರೆಗೆ ಘಟಿಸಿಲ್ಲ. ನಮ್ಮ ದೇಶದ ಈ ದೆಸೆಯಲ್ಲಿ, ನಮ್ಮದಿದೇ ಮೊದಲನೆ ಪ್ರಯತ್ನವಾಗಿದೆ.

ಈ ಕಂಪೆನಿಯ ವಿಚಾರದಲ್ಲಿ ಹೇಳುವುದಾದರೆ,—ಕಂಪೆನಿಯು ನಿಮ್ಮದೇ; ನಿಮಗೆ ತಿಳಿದಿರುವ ಮತ್ತು ನಿಮ್ಮ ವಿಶ್ವಾಸಕ್ಕೆ ಅರ್ಹರಾಗಿರುವವರೇ ಆಡಳಿತವನ್ನು ನಿರ್ವಹಿಸುವರು; ನಿಮ್ಮ ಹಣವು ಸ್ವದೇಶದಲ್ಲಿ ಸಂಪದಭ್ಯುದಯ ಕಾರ್ಯಗಳಿಗಾಗಿ ವಿನಿಯೋಗಿಸಲ್ಪಡುವುದು;—ಎಂಬೀ ವಿಷಯಗಳನ್ನು ಪರ್ಯಾಲೋಚಿಸಿದಲ್ಲಿ, ಸ್ವದೇಶವಾತ್ಸಲ್ಯವುಳ್ಳವರೆಲ್ಲರೂ ಈ ಕಂಪೆನಿಯನ್ನು ಪ್ರೋತ್ಸಾಹಿಸುವುದು ಅವಶ್ಯವೆಂದು ತಾನಾಗಿ ಹೊಳೆಯದಿರದು.

ಪ್ರತಿ ಒಂದು ವಿಧದಲ್ಲಿಯೂ ನಿಮ್ಮದಾದ ಈ ಕಂಪೆನಿಯಲ್ಲಿ ಒಂದು ಪೋಪ್ಯುಲರ್ ಪೋಲಿಸಿಯನ್ನು ಪಡೆದು ಸ್ವದೇಶೀಯರ ಪ್ರಯತ್ನಗಳನ್ನು ಪ್ರೋತ್ಸಾಹಿಸಿರಿ!

ಹೆಚ್ಚಿನ ವಿವರಕ್ಕೆ ಹೆಡ್ ಆಫೀಸಿಗೆ ಬರೆದುಕೊಂಡರೆ, ಸಂತೋಷದಿಂದ ಕೂಡಲೆ ತಿಳಿಸಲಾಗುವುದು.

☞ **ಎಲ್ಲಾ ಕಡೆಗಳಲ್ಲಿಯೂ ಯೋಗ್ಯ ಏಜಂಟರುಗಳು ಬೇಕು. ಧಾರಾಳ ಕಮಿಶನ್ ಕೊಡಲಾದೀತು.**

ಬೊಂಬಾಯಿ ಸಂಸ್ಥಾನದ ಪ್ರಾಮುಖ್ಯ ಏಜಂಟರು:—ಪ್ರಭಾಕರ ಕಂಪೆನಿ, 415 ಶೇಖ್ ಮೇಮೂನ್ ರಸ್ತೆ, ಬೊಂಬಾಯಿ.

WANTED.

Four Organisers to organise the work of the South Indian General Assurance Society, Ltd., in the following places noted below. Capable organisers can expect to have attractive and encouraging terms with sound footing for their future.

(1) South Canara, (2) Mysore, Hassan and Coorg, (3) Kadur, Shimoga, Chitaldroog and Tumkur, (4) Mangalore, Kolar.

For terms and other particulars please apply to—

The Divisional Manager,
The South Indian General Assurance Co. Ltd.
64, III Cross Road, Srirampur Extn. Malleswaram Post, BANGALORE.

OR

The Managing Agents,
The S. I. G. A. Co. Ltd.
55, Poonamallee High Road, Kilpauk, MADRAS.

ಪಂಡಿತ ಜವಾಹೀರಲಾಲ ನೆಹರೂ ಬಂದಾಗ್ಗೆ ಹುಬ್ಬಳ್ಳಿ ಪ್ರದರ್ಶನದಲ್ಲಿ ಸುವರ್ಣ ಪದಕ ದೊರೆತ

ಒಂದೇ ಸವನಾಗಿ ೩೫ ವರ್ಷದ ಅನುಭವದಿಂದ

ಹಿಂದೂದೇಶದ ಸಾವಿರಾರು ಜನರಿಂದ ವರ್ಣಿಸಲ್ಪಟ್ಟ ಆಯುರ್ವೇದೋಕ್ತ

[illegible] ಮತ್ತು [illegible] ವನಸ್ಪತಿಗಳಿಂದ ತಯಾರಿಸಿರುವ ಮತ್ತು ಇದರ ಗುಣಕ್ಕಾಗಿ ಅನೇಕ ಸರ್ಟಿಫಿಕೇಟುಗಳು ಮತ್ತು ಭಂಗಾರದ ಮೆಡಲು ದೊರೆತಿರುವಪರದೇಶದಲ್ಲಿ [illegible] ಶಕ್ತಿಯ ಮೇಲೆ ಮೊದಲನೆ [illegible]

ದ್ರಾಕ್ಷಾಮೃತ

ಈ ದ್ರಾಕ್ಷಾಮೃತವು ಸಹ್ಯಾದ್ರಿ ಪರ್ವತದಲ್ಲಿರುವ ಅನೇಕ ವನಸ್ಪತಿಗಳ ರಸಾರ್ಕಗಳೊಂದಿಗೆ ದ್ರಾಕ್ಷಾರಸವನ್ನು ಮಿಶ್ರಮಾಡಿ ಸ್ವದೇಶೀ ಯಂತ್ರದಿಂದ ಶಾಸ್ತ್ರೋಕ್ತ ಪದ್ಧತಿ ಪ್ರಕಾರ ತಯಾರು ಮಾಡಿರುವುದರಿಂದ ಸ್ವಾದಿಷ್ಟವು ಮತ್ತು ಮಧುರವು ಆಗಿದೆ.

ಇದರ ಸೇವನೆಯಿಂದ ಶರೀರದೊಳಗಿನ ಹಳೇ ಕಡಕಿ (ಗರಮಿ) ಸಂಪೂರ್ಣ ನಾಶವಾಗುತ್ತದೆ ಮತ್ತು ಧಾತುಸ್ರಾವ, ಸ್ವಪ್ನಾವಸ್ಥೆಯಿಂದ ಅಥವಾ ಬೇರೆ ಯಾವುದೇ ವಿಕಾರದಿಂದ ಬಂದ ಅಶಕ್ತತೆಯಿಂದ ಕೈಕಾಲು, ಕಣ್ಣುಗಳ ಉರುಪು [illegible], ಯಾವಾಗಲೂ ಎಲುಬಿನಲ್ಲಿ ಜ್ವರ ಇರೋಣ, ತಲೆ ನೋಯೋಣ, ಪಿತ್ತದಿಂದ ಕಣ್ಣಿಗೆ ಕತ್ತಲೆ ಬಂದು [illegible] ಬರೋಣ, ಶೌಚಕ್ಕೆ ಸಾಫ್ ಆಗದೇ ಇರೋಣ, ಮುಂತಾದ ಎಲ್ಲಾ ವಿಕಾರಗಳು ನಷ್ಟವಾಗಿ ಸ್ವಾಭಾಗ್ಯವು ಬೆಳೆಯುತ್ತದೆ. ಮತ್ತು ಅನ್ನ ಚೆನ್ನಾಗಿ ಪಚನವಾಗಿ ಶೌಚಕ್ಕೆ ಸಾಫವಾಗುತ್ತದೆ. ಇದರ ಸೇವನೆಯಿಂದ ತರುಣರಿಗೆ ವ್ಯಭಿಚಾರದಿಂದ ಅಥವಾ ಬೇರೆ ಕಾರಣದಿಂದ ಬಂದ ಧಾತು ಕ್ಷೀಣತೆ, ನಪುಂಸಕತ್ವ ಇದ್ದರೆ ಅದು ಹೋಗಿ ಪುನಃ ಯುವನವಂತರಾಗಿ ಶರೀರ ಬಲವಾಗಿ [illegible] ಹೆಂಗಸರಿಗೂ ಮತ್ತು ಮಕ್ಕಳಿಗೂ ಈ ಔಷಧವು ಗುಣಕಾರಿ ಇದೆ. ಮುಟ್ಟಾಗದಿದ್ದರೆ ಮತ್ತು ಉಷ್ಣದ ಗರ್ಭ ಸಂಬಂಧವಾದ ರೋಗಗಳಿದ್ದರೂ ಅವೆಲ್ಲ ಗುಣವಾಗಿ ಹೆಂಗಸರಿಗೆ ಸಂತತಿ ವೃದ್ಧಿಯಾಗುವುದು. ಅಶಕ್ತ ಹುಡುಗರು ಬಲವಂತರಾಗುವರು. ಈ ಔಷಧದ ೪ ಬಾಟ್ಲಿಗಳನ್ನು ಸೇವನೆ ಮಾಡಿದರೆ ಪೂರ್ಣ ಗುಣ ಬರುತ್ತದೆ. ಇದರ ಅನುಭವ ೧ ಬಾಟ್ಲಿ ಸೇವನೆಮಾಡಿದ ನಂತರ ತಿಳಿದೀತು.

ಬಾಟ್ಲಿ ಬೆಲೆ ೧—೯—೦, ೪ ಬಾಟ್ಲಿಗೆ ೩—೮—೦, ಪರದೇಶ ಬಾಟ್ಲಿಗೆ [illegible] ಬೇರೆ ಬೀಳುತ್ತದೆ.
ಪ್ರಸಿದ್ಧ ಕೆಮಿಸ್ಟ ಮತ್ತು ಸ್ಟೋರ್ಸದೊಳಗೆ ಮತ್ತು ಕಿರಾಣಿ ಅಂಗಡಿಯಲ್ಲಿ ಸಿಗುವುದು.

ಮ್ಯಾನೇಜರ—ದ್ರಾಕ್ಷಾಮೃತ ಕಾರ್ಯಾಲಯ, [illegible] ಜಿಲ್ಲಾ, (ಬೆಳಗಾಂವಿ)

ಸಿಕ್ಕುವ ಸ್ಥಳ:— ಮಂಗಳೂರು—ಗಜಾನನ ಮೆಡಿಕಲ್ ಹಾಲ್ ಮತ್ತು ಮಿಜಾರ್ ಕಾರ್ ಬ್ರದರ್ಸ್, ಕಾರ್‌ಸ್ಟ್ರೀಟ್. ಕುಂದಾಪುರ—ಕೆ. ಆರ್. ಭಟ್ಟ. ಉಡುಪಿ—ಪೈ ಫಾರ್ಮೆಸಿ, ಮತ್ತು ಕೆ. ಶೀನಗಿರಿ ಪೈ. ಕಾರ್ಕಳ—ವಿ. ವಿ. ಶೆಣೈ. ಪುತ್ತೂರು—ಗೋಪಾಲ ನಾರಾಯಣ ಪೈ ಮತ್ತು ಫಾರ್ಮೆಸಿ. ಕಾಸರಗೋಡು—ಕೆ. ರಾಮ ನಾಯ್ಕ, ಕೋರ್ಟ ರಸ್ತೆ. ಬಂಟವಾಳ—ಬಿ. ಎಚ್. ವಾಸುದೇವ ಪೈ. 2—6—'38

ಸ್ವದೇಶಾಭಿಮಾನಿಗೆ ಚಂದಾದಾರರಾಗಿರಿ!

Canara Bank, Limited.

Established 1906.

Authorised Capital	10,00,000—0—0
Subscribed capital	6,00,000—0—0
Paid up Capital	3,30,000—0—0
Reserves	4,31,000—0—0

Head Office:—**Bunder, Mangalore** Local Offices:—**City & Bunder.**

BRANCHES:— Bombay, Cochin, Calicut, Ernakulam, Alleppey, ~~Chikmagalur, Ganguli, Coondapoor, Udipi, Karkal,~~ Puttur, Kasaragod, & Buntwal Out-agency.

Interest is allowed on Current, Fixed and Savings Bank Accounts, rates of which may be ascertained on application. Advances made on approved securities at easy rates. All kinds of Banking business transacted. Rules of business on application.

The Bangalore Branch Office of the Bank at No. 1 Albert Victor Road, Bangalore City has been opened on 8—1—34.

A. Madhava Pai,
Secretary.

LOOK SHARP! LOOK AHEAD!!

Murdeshwar's Banking Institute.

Pioneer Institute on the West Coast

Opens out Careers for Businessmen, Graduates, Under-graduates, and S. S. L. C's and also for those who have not passed any University examination.

Coaches students for the Specialised Banking Courses (C. A. I. B. & C. A. I. I. B.) and also for Accountancy, Secretarial, and Insurance Courses (L. A. A., A. C. R. A., F. C. R. A., F. I. S. A., A. C. I. I., etc.,

Ambitious students wishing to obtain responsible positions such as those of Managers and Secretaries in Business line should join immediately. Ladies are also coached.

Enrol yourself NOW. Classes are in full swing. Expert tuition (Oral or Postal) by well-qualified and experienced teachers.

FEES VERY MODERATE.

For further particulars apply to—

The Principal,
2 Fernandes Mansion,
Hampankatta, Mangalore (S. India).

[illegible]

[ಧನ್ವಂತರಿ ... illegible]

Shiromani Narayanacharya,
Choukhamba, Benares City

ಶಾಸ್ತ್ರಗಳೇ ಪುರಾಣಗಳು ಅರೋಗ್ಯದೇ ಅಥವಾ ಅನಿಸಿದರೇ ರಾಮಣ್ಣಯ್ಯನವರೇ [illegible] ಅರೋಗ್ಯವೇ ನಿಜವಾದ ಆರೋಗ್ಯ. ಅದಕ್ಕೆ ಕಾರಣವೇನು? ಅವರು ರುದ್ರಾಕ್ಷಿಯನ್ನು [illegible] ಯಾವಾಗಲೂ ಧಾರಣಮಾಡುತ್ತಿದ್ದರು. ಅದರಿಂದ ಏನು ಫಲ? ಅದನ್ನು ಧರಿಸಿದರೆ ಜೀರ್ಣಶಕ್ತಿ, ಬುದ್ಧಿಶಕ್ತಿ, ವಿದ್ಯಾಭಿವೃದ್ಧಿ, ವೀರ್ಯವೃದ್ಧಿ, ಸಂಪತ್ತು ಕೀರ್ತಿ ಇವುಗಳೆಲ್ಲಾ ಆಗುವುವು. ಹಾಗಾದರೆ, ನಮಗೆ ಅಂತಹ ರುದ್ರಾಕ್ಷಿ ಎಲ್ಲಿ ದೊರೆಯುವುದು? ಅದು ಲೋಕಪ್ರಸಿದ್ಧಿ ಹೊಂದಿದ ನಮ್ಮ ಕಾಶೀ ಚೌಖಂಬಾ ಶಿರೋಮಣೀ ನಾರಾಯಣಾಚಾರ್ಯರಲ್ಲಿ ಯೋಗ್ಯವಾದ ಕ್ರಯಕ್ಕೆ ಉತ್ತಮ ತರದ ರುದ್ರಾಕ್ಷಿ ದೊರೆಯುವುದು.

ಸಣ್ಣ ಅಕ್ಕೆ ಪ್ರಮಾಣದ ಕಂಠಿಸರ 1ಕ್ಕೆ ಅಡಿ 1ರಿಂದ ರೂ. 25ರ ವರೆಗೆ. 108 ರುದ್ರಾಕ್ಷಿಗಳುಳ್ಳ ಸರ 1ಕ್ಕೆ ಆಡಿ 3ರಿಂದ ರೂ. 25ರ ವರೆಗೆ. ಗೌರೀಶಂಕರ ರುದ್ರಾಕ್ಷಿ 1ಕ್ಕೆ ರೂ. 3ರಿಂದ ರೂ. 500 ವರೆಗೆ. ಮತ್ತು 3—4—5—6—7—8 ಮುಖಗಳ ಕಾಳು 1ಕ್ಕೆ ಆಡಿ 4ರಿಂದ ರೂಪಾಯಿ 10. ಮತ್ತು 9—10—11 ಮುಖಗಳುಳ್ಳ ಕಾಳು 1ಕ್ಕೆ ರೂ. 3ರಿಂದ 30ರ ವರೆಗೆ. 12—13—14 ಮುಖದ ಕಾಳು 1ಕ್ಕೆ ರೂಪಾಯಿ 5ರಿಂದ 100ರ ವರೆಗೆ. ಸಣ್ಣ ರುದ್ರಾಕ್ಷೀ ಅವರೆಕಾಳಿಗಿಂತ ಸಣ್ಣದಾಗುತ್ತಾ ಕ್ರಯ ಜಾಸ್ತಿ. ದೊಡ್ಡ ರುದ್ರಾಕ್ಷೀ ಅಡಕೆಗಿಂತ ದೊಡ್ಡದಾಗುತ್ತ ಕ್ರಯ ಜಾಸ್ತಿ ಆಗುವುದು. (ವಿವರಕ್ಕೆ ಕೆಟಲಾಗಿಗೆ ಬರೆದರೆ ಇನಾಮಾಗಿ ಕಳುಹಿಸುತ್ತೇವೆ. 1 ಆಣೆ ಸ್ಟಾಂಪು ಕಳುಹಿಸಿದರೆ 3 ಇನಾಮುಗಳು— 1 ವಿಶ್ವೇಶ್ವರ ಪಟ, 1 ಕಾಶೀ ನಕ್ಷೆ, 1 ಕೆಟಲಾಗ ನೊಡನೆ 3 ಇನಾಮುಗಳು)

ಶಿರೋಮಣಿ ನಾರಾಯಣಾಚಾರ್ಯ
ಚೌಖಂಬಾ, ಬೆನಾರಿಸ್ (ಕಾಶೀ)

---

77 Years!



Two generations of approved service enables us to pick and choose what is cheap, lasting & good to suit the pockets & the tastes of our longstanding wide circle of

CUSTOMERS

who know our

Premier House for Swadeshi.

Mill Yarns—Handloom Cloths, Dhoties—Sarees—Cintzes etc.

Shrinivas Ranga Pai
Sowkar Mahal,
Car Street, MANGALORE.

Edited, Printed & Published By A. S. Kamath, at the Sharada Press, Car Street, Mangalore.

ವಾರ್ಷಿಕ ಮುಂಗಡ ಚಂದಾ ... 2-0-0 **Registered No. M. 498.** ... 2-14-0

ಸ್ವದೇಶಾಭಿಮಾನಿ.

(ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ೧೯೦೭ರಲ್ಲಿ ಸ್ಥಾಪಿತವಾದುದು.)

ಪ್ರತಿ ಶುಕ್ರವಾರವೂ ಮಂಗಳೂರು ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ

ರತ್ನೈರ್ಮಹಾರ್ಹೈಸ್ತುತುಷುರ್ನ ದೇವಾ । ನ ಭೇಜಿರೇ ಭೀಮವಿಷೇಣ ಭೀತಿಮ್ ॥ ಸುಧಾಂ ವಿನಾ ನ ಪ್ರಯಯುರ್ವಿರಾಮಂ । ನ ನಿಶ್ಚಿತಾರ್ಥಾದ್ವಿರಮಂತಿ ಧೀರಾ ॥ ೧ ॥

ದೊರೆಯಲನುಪಮರತ್ನಗಳು ಸಾ । ಗರವ ಮಥಿಸಲು ಸುರರಿಗದರಿಂ । ಹರುಷವಾಯಿತೆ? ಮತ್ತೆ ವಿಷವ ಸುಡುತ ಬರುತಿರುವ ॥

ಗರಲಕವರಂಜಿದರೆ? ಸುಧೆಯನು । ಮರೆತು ಕ್ಷುದ್ರರ ತೆರದಿ ಕುಳಿತರೆ? । ತೆರಳ ಬಲ್ಲರೆ ತೊರೆದು ಧೀರರು ನಿಶ್ಚಿತಾರ್ಥವನು? ॥ ೧ ॥

(Oldest Kanarese Weekly in South Kanara)

ಪುಸ್ತಕ ೨೮. | ಮಂಗಳೂರು, ತಾ. ೩೧ನೇ ಶುಕ್ರವಾರ ಅಗೋಸ್ತು ೧೯೩೪ | (31-8-'34) | ಸಂಚಿಕೆ ೩೫

THE CANARA BANKING CORPORATION, UDIPI, LTD.

(Incorporated in British India)

Established 1906

Head office:—UDIPI, S. K. **Branches:—Coondapoor, Mangalore, Shimoga & Madras.**

Notice.

The following rates of interest on deposits will come into force with effect from 13-8-1934.

Short term Deposits 2½ per cent

Fixed Deposits of	3 months	2½	per cent p. a.
,, ,,	6 ,,	3	,, ,,
,, ,,	9 ,,	3½	,, ,,
,, ,,	1 or 2 years	4½	,, ,,
,, ,,	3 or 4 years	5	,, ,,

(Interest payable half yearly)

Office of the Corporation
UDIPI, S. K.
12—8—34.

By order

M. Shrinivas Prabhu,
Ag. Manager.

(Regd.)

ಅಮೃತಾಂಜನ.

ಇದು ಕೆಟ್ಟ ಶಿರೋವೇದನೆ, ಕಚ್ಚಿಕೊಡುವ ವಾತ, ಛಾತಿ ನೋವು, ವಿಶೇಷ ಉಳುಕು, ಅಸಹನೀಯ ಹಲ್ಲುನೋವು, ವಿಪರೀತ ಛಳಿಯು, ಬಹು ಶೀತ, ಸಹಿಸಲಸದಳವಾದ ಚಳಿ, ಕೈಕಾಲು ಮರಗಟ್ಟುವುದು, ಲುಂಬಾಗೂ ಮೊದಲಾದ ಎಲ್ಲಾ ತರದ ಬೇನೆಗಳನ್ನೂ ಅತೀ ತ್ವರೆಯಲ್ಲೇ ಗುಣ ಪಡಿಸುತ್ತದೆ. ಎಲ್ಲೆಲ್ಲಿಯೂ ಮಾರಲ್ಪಡುತ್ತಿದೆ.

ರಿಂಗ್‌ವರ್ಮ್ ಮುಲಾಮು— ಇದು ರಿಂಗ್‌ವರ್ಮನ್ನೂ ಕಜ್ಜಿಯನ್ನೂ ಇನ್ನಿತರ ಚರ್ಮರೋಗಗಳನ್ನೂ; ಮೂರು ಸಲ ಮುಟ್ಟಿಸುವುದರೊಳಗೆ ಗುಣಪಡಿಸುತ್ತದೆ.

ಡಬ್ಬಿ 1ಕ್ಕೆ 6 ಆಣೆ ಡಜನಿಗೆ ರೂ. 3—8—0. ಅಂಚೆವೆಚ್ಚ ಪ್ರತ್ಯೇಕ.

ಅಮೃತಾಂಜನ ಡಿಪೋ,

ಮದರಾಸು **ಮತ್ತು** **ಬೊಂಬಾಯಿ**

ದಿ ಬೊಂಬೇ ಲ್ಯಾಫ್ ಎಶ್ಶೂರೆನ್ಸ್ ಕಂಪೆನಿ ಲಿಮಿಟೆಡ್, ಬೊಂಬೇ.

1908ರಲ್ಲಿ ಸ್ಥಾಪಿತವಾದುದು.

ಪೊಲಿಸಿದಾರರಿಗೆ ವಿಶೇಷ ರಿಯಾಯತಿ.

ವರ್ಷಾವಧಿಯ ಪ್ರೀಮಿಯಮ್ಮುಗಳನ್ನು ತೆರುವ ಎಲ್ಲಾ ಪೊಲಿಸಿದಾರರಿಗೂ "ಸಿಲ್ವರ್ ಜ್ಯೂಬಿಲಿ" ರಿಯಾಯತಿಯಾಗಿ ಅವರವರ ಮುಂದಿನ ಪ್ರತಿ ವಾರ್ಷಿಕ ಪ್ರೀಮಿಯಮ್ಮಿನಲ್ಲಿ ಶೇಕಡಾ 2½ ಸಲೆಯಷ್ಟು ಕಡಿಮೆಯಾದ ಮೊಬಲಗನು, ತೆರುವ ರಿಯಾಯತಿ ಕೊಡಲಾಗಿದೆ. ಈ ರಿಯಾಯತಿಯ ಪ್ರಯೋಜನವನ್ನು ಆಗಲೇ ನೂರಾರು ಮಂದಿ ಪೊಲಿಸಿದಾರರು ಪಡಕೊಂಡಿದ್ದಾರೆ. ವರ್ಷಕ್ಕೊಮ್ಮೆ ಪ್ರೀಮಿಯಮ್ಮಿನ ಕಂತನ್ನು ಕಟ್ಟಲಪೇಕ್ಷಿಸುವವರು ತಮ್ಮ ಪೊಲಿಸಿಯ ನಂಬರುಗಳನ್ನು ನಮೂದಿಸಿ ನಮಗೆ ಯಾ ಸಮ್ಮಂಧಪಟ್ಟ ನಮ್ಮ ಇತರ ಆಫೀಸಿಗೆ ತಿಳಿಸಬೇಕಾಗಿ ಈ ಮೂಲಕ ವಿನಂತಿ ಮಾಡಿಕೊಳ್ಳೋಣಾಗುತ್ತದೆ.

ವಿ. ಸೂ:—ಪ್ರಾತಿನಿಧ್ಯವಿಲ್ಲದ ಜಿಲ್ಲೆಗಳಿಂದ ಉತ್ಸಾಹಶಾಲಿ ಗೃಹಸ್ಥರುಗಳ ಏಜನ್ಸಿ ಅರ್ಜಿಗಳು ಅಂಗೀಕರಿಸಲಾಗುವುವು.

ಕೊಚ್ಚಿಕಾರ್ ಬ್ರದರ್ಸ್, ಮದ್ರಾಸ್ ಬ್ರೇಂಚ್ ಸೆಕ್ರೆಟರಿಯವರು.

ಆಫೀಸುಗಳು:—(1) ಪೋಸ್ಟ್ ಬೋಕ್ಸ್ ನಂಬ್ರ 337, ಮೌಂಟ್ ರೋಡ್, ಮದ್ರಾಸ್; (2) ಚಿಕ್ಕಪೇಟೆ ... ಬೆಂಗಳೂರು ಸಿಟಿ; (3) ಮಂಗಳೂರು, ದಕ್ಷಿಣ ಕನ್ನಡ; (4) ಉಡುಪಿ, ದಕ್ಷಿಣ ಕನ್ನಡ; (5) ಇಸ್ಮಾಯಿಲ್ ಬಿಲ್ಡಿಂಗ್, ಲೋಹರ್ ಚಾಲ್, ಬೊಂಬಾಯಿ, ನಂಬ್ರ 2; (6) ಕಲ್ಲಿಕೋಟೆ.

ಸೀಡು.

[illegible] "ಎಂದು ನೀವು ಆಲೋಚನೆ ಹೊರಿಸಬಹುದು. ಹಾಗೆನ್ನುವ ನಿಮ್ಮ ಆಲೋಚನೆ—ಆಲೋಚನೆ ತಪ್ಪೆಂದು ನಾನು ಹೇಳುವುದಿಲ್ಲ; (ಹೇಳಿದರೆ ನೀವು ಕೇಳುವುದಿಲ್ಲ ಎಂದೂ ನನಗೆ ಗೊತ್ತು!)

× × × × ×

ಏನು ಹೇಳಲಿ? ಹಲ್ಲು ಕಳೆದುಕೊಂಡ ಗಾಂಧೀಜಿಯವರಿಗೂ, ಪಂಡಿತ ಮಾಲವೀಯರಿಗೂ ಜಟಾಪಟಿಯಾಗುತ್ತಲಿದೆ! ಅದು ನಿಮಗೆ ಗೊತ್ತು! ಬ್ರಿಟಿಷ ಸರಕಾರದವರು "ಕಮ್ಯೂನಲ್ ಎವಾರ್ಡ್" ಎಂಬ ಒಂದು "ನೌಟಾಂಗ್" ಹಲ್ವಾವನ್ನು ಇಂಡಿಯದ ಟೇಬಲಿನಲ್ಲಿಟ್ಟಿರುತ್ತಾರೆ. ಅದನ್ನು ಈಗ ತಿನ್ನಬೇಕೋ, ಮತ್ತು ತಿನ್ನಬೇಕೋ ಎಂಬುದು ಈ ಮುದಿ ಮೂರುತಿಗಳ ವಿವಾದ ವಿಷಯ!

× × × × ×

"ಹೇ ನಾರಾಯಾ, ಅದು ಟೇಬಲಲ್ಲೇ ಇರಲಿ, ಅದನ್ನು ತಿನ್ನುವ ಕುರಿತು ಈಗ ಆಲೋಚನೆ ಬೇಡ. ಬೇಕಾದರೆ ತಿನ್ನೋಣ; ಬೇಡವಾದರೆ ಬಿಡೋಣ—ಎಲ್ಲಾ ಮತ್ತೆ!" ಎಂದು ನಮ್ಮ ಗಾಂಧೀಪ್ಪನವರ ಬೋಧನೆ.

× × × × ×

"ಹೇ, ಮುಲಾಮುಜೀ, ಆದಾಗದು! ಅದನ್ನು ನೋಡಿ ನೋಡಿ ನನಗೆ ಬಾಯಲ್ಲಿ ನೀರೂರುತ್ತದೆ! ಈ ನೀರೂರುವುದೂ ಬೇಡ—ಅದನ್ನಲ್ಲಿಡುವುದೂ 'ಬೇಡಾ! ಈ ಎವಾರ್ಡ್ ಒಂದು ಫುಟ್‌ಬೋಲ್ ಎಂದು ಭಾವಿಸಿ, ಒಂದು ಆಟ ಆಡೋಣ" ಎಂದು ನಮ್ಮ ಮಾಲಯ್ಯನವರ ಹಿತವಾದ!

× × × × ×

ಈ "ಫಜೀತಿ"ಯನ್ನು ನೋಡಿ ಇಂಗ್ಲಾಂಡಿನಲ್ಲಿ ತಗಡೆ, ಚೊಕ್ಕಟೊ, ತುಂಬಿ, ಮೊಂಟೆ ಮತ್ತು ಕತ್ತೆ ಕಿರುಬಗಳು ನರ್ತಿಸುತ್ತಾ ಹಾಡಲಾರಂಭಿಸಿವೆ. ಅವುಗಳ ಒಂದು ಪದ ಹೀಗಿದೆ:—

"ಇದು ಏತರ ಜಟಾಪಟಿ?
ನಿಮ್ಮ ಮೂಗನು ಮುಂದರೆ ಕಟಾಕುಟಿ!
ಇದು ಏತಕೆ ಲಟಾಪಟಿ?
ನಿಮ್ಮ ಕಿವಿಯನು ಹಿಂಡುವೆ, ಪಟಾಪಟಿ!"

ಈ ಪದವನ್ನು ಕೇಳಿ ನನ್ನ ಆಫೀಸಿನ ಕುರ್ಚಿ, ಮೇಜು, ಪೇಪರ್‌ಬಾಸ್ಕೆಟ್ ಎಲ್ಲಾ ಕುಣಿಯಲಾರಂಭಿಸಿವೆ. ರಕ್ಷಿಸು ನಮ್ಮ ನನವರಕಾ!

× × × × ×

ಇನ್ ದಿಸ್ ಕನೆಕ್ಷನ್ ನಾನೊಂದು ಕಥೆ ಹೇಳಬೇಕಾಗುತ್ತದೆ. ಚಿತ್ತವಿಟ್ಟು ಕೇಳಿ: ಎರಡು ಎತ್ತುಗಳಿದ್ದುವು! (ಕೋಪಿಸಬಾರದು!) . . . . . . ಅವುಗಳು ಜಗಳವಾಡುತ್ತವೆಂದು ಅವುಗಳ ಕೊಂಬುಗಳನ್ನು ಕಡಿದು ಮೂತಿಗೆ ಸರಿಗೆಯ ಒಂದೊಂದು ಕೊಕ್ಕೆಗಳನ್ನು ಸಿಕ್ಕಿಸಿದ್ದರು.

× × × × ×

ಯಾವಾಗಲೂ ಒಂದೇ ಪಾತ್ರೆಯಲ್ಲಿ ಗಂಜಿ ಕುಡಿಯುವ ಅಭ್ಯಾಸ ಅವುಗಳದು; ಒಂದು ದಿನ . . . . (ಶುಕ್ರವಾರ ಎಂದು ಇಟ್ಟುಕೊಳ್ಳಿ ಬೇಕಾದರೆ) . . . .

[illegible]

× × × × ×

[illegible] ರೆಕ್ಕೆಯು!

× × × × ×

"[illegible] ದೇಹಂ" ಎಂದು ಸರಳವಿಯೊಬ್ಬರು ಹೇಳಿರುವರು. ಅದಕ್ಕೆ ವರಕವಿಯಾದ ನನ್ನ ಒಂದು ಪಂಕ್ತಿ ಕೂಡಿಸಿದರೆ "ಪ್ರೇಮದಹೀ ಮುಸುಕಂ" ಎಂದು ಆಗುತ್ತದೆ.

ಗಾಂಧಿನಾಮಮಯಂಕೀ ಜೈ!

'ಸಾಯಿತ್ಯ'

ಜಾಗ್ರತೆ! ಜಾಗ್ರತೆ!

ರೋಗ ಬಂದ ಮೇಲೆ ನರಳಬೇಡಿರಿ.

ಈ ಪ್ರಪಂಚದಲ್ಲಿ ಅನೇಕರು ಕೆಟ್ಟ ಜನಗಳ ಸಹವಾಸಕ್ಕೆ ಸಿಕ್ಕಿ ಅನೇಕ ತರದ ವ್ಯಾಧಿಗಳನ್ನು ಅಂಟಿಸಿಕೊಂಡು ಮರಣಾಂತರವೂ ವ್ಯಸನಕ್ಕೆ ಗುರಿಯಾಗುವುದಲ್ಲದೆ, ತಮ್ಮ ಸಂತಾನದಲ್ಲಿಯೂ ಈ ತರದ ವ್ಯಾಧಿಗಳನ್ನು ಅಂಟಿಸಿ ಪ್ರಪಂಚದ ಸುಖವನ್ನೇ ಮರೆತು ಬಿಡುವಂತೆ ಮಾಡುವರು, ಮತ್ತು ಇನ್ನು ಅನೇಕರು ಬಡತನದಲ್ಲಿ ಮಕ್ಕಳಾದರೆ ತೊಂದರೆಯೆಂದು ಔಷಧಿಗಳನ್ನು ತೆಗೆದುಕೊಂಡು ಮಕ್ಕಳಾಗುವುದನ್ನು ನಿಲ್ಲಿಸುತ್ತಾರೆ. ಆದ್ದರಿಂದ ಈ ಅಕೃತ್ಯಗಳು ನಡೆಯಬಾರದೆಂದು ಈಗ ಜರ್ಮನಿಯಲ್ಲಿ ಹೊಸದಾಗಿ ಸ್ತ್ರೀ ಪುರುಷರಿಬ್ಬರಿಗೂ ಆಗುವಂತಹ ಸಾಧನವನ್ನು ಕಂಡು ಹಿಡಿದಿದ್ದಾರೆ. ಇವನ್ನು ಆ ಸಮಯದಲ್ಲಿ ಉಪಯೋಗಿಸುವುದರಿಂದ ಯಾವುದೇ ತರದ ವ್ಯಾಧಿಗಳನ್ನು ಹತ್ತಿರ ಬರದಂತೆ ಶರೀರವನ್ನು ಜಾಗ್ರತೆಯಾಗಿ ಕಾಪಾಡುವುದಲ್ಲದೆ, ಆನಂದವನ್ನೂ ಮತ್ತು ಸುಖವನ್ನೂ ಕೊಡುವುದು ಬೇಕಾದವರು ಬೇಗನೇ ಬರೆಯಿರಿ.

ಗಂಡಸರದ್ದು 1ಕ್ಕೆ—ರೂ. 1-8-0.

ಹೆಂಗಸರದ್ದು 1ಕ್ಕೆ ರೂ. 2 4-0.

ಆರ್ಡರಿನೊಡನೆ 4 ಆಣೆ ಸ್ಟಾಂಪು ರವಾನಿಸಬೇಕು.

ವಿಳಾಸ:.

ಕರ್ನಾಟಕ ಏಜನ್ಸಿ, 82, ಕೃಷ್ಣಪ್ಪ ನ್ಯಾಕ್ ತಂಕ್ ಸ್ಟ್ರೀಟ್, ಜಿ. ಟಿ. ಮದ್ರಾಸು.

[illegible]

[illegible]

"ಕುಂತಳ ಕೌಮುದಿ"

ಎಂಬ ಹಿಂದೂಸ್ಥಾನದ ಪ್ರಸಿದ್ಧ ಕೇಶ ತೈಲದಿಂದ ಕೂದಲುಗಳ ಬುಡವನ್ನು ಜಾಗರೂಕತೆಯಿಂದ ತಿಕ್ಕಿರಿ.

(ಮನಸ್ಸಮಗ್ರಕರವಾದ ಸುಗಂಧವನ್ನುಳ್ಳದು.)

ಹಿಂದೂಸ್ಥಾನದಲ್ಲೆಲ್ಲ ಸರ್ವತ್ರ ಉಪಯೋಗಿಸಲ್ಪಡುತ್ತಿದೆ.

ತಯಾರಿಸುವವರು:— ಬೆಲೆ ಸೀಸೆ ಒಂದಕ್ಕೆ ರೂ. 0-12-0.

ಆರ್. ಸಿ. ಸೇನ್ ಎಂಡ್ ಕೋ.,

ಲಿಮಿಟೆಡ್, ಕಲ್ಕತ್ತೆ.

ಏಜಂಟರು:—

ಕುಂತಳ ಕೌಮುದಿ ತೈಲ,

ವೆನ್ಲಾಕ್ ಆಸ್ಪತ್ರೆ ಎದುರು, ಮಂಗಳೂರು.

ಶ್ರೀ ವಿಲಾಸ

ಗಣಪತಿ ಹೈಸ್ಕೂಲ್ ರಸ್ತೆ, × ಮಂಗಳೂರು.

ಸರಕಾರೀ ಉದ್ಯೋಗಸ್ಥರಿಂದಲೂ, ವಿದ್ಯಾರ್ಥಿಗಳಿಂದಲೂ, ಪುರಪ್ರಮುಖರಿಂದಲೂ ಆದರಿಸಲ್ಪಡುತ್ತಿರುವ -

ಮಂಗಳೂರಿನ ಒಂದು ಪ್ರಾಮುಖ್ಯ ಉಪಹಾರಗೃಹ.

ಶುದ್ಧ ತಿಂದಿ, ತಾಜಾತುಪ್ಪದ ಮಿಠಾಯಿ, ಎಲ್ಲ ಬಗೆಯ ಒಳ್ಳೆಯ ಸೌಮ್ಯ ಪಾನೀಯಗಳು,— ಶೌಚ್ಯ, ಸ್ಥಳಾನುಕೂಲತೆ ಇವೆಲ್ಲವುಗಳಿಗಾಗಿ 'ಶ್ರೀ ವಿಲಾಸ'ವು ಹೆಸರುಗೊಂಡಿದೆ.

[ವಿವಾಹ, ಉಪನಯನ, ಸತ್ಕಾರಕೂಟ ಇತ್ಯಾದಿಗಳ ಸಂದರ್ಭದಲ್ಲಿ, ಬೇಕಾದ ತರದ ತಿಂದಿ ತಿನಿಸುಗಳನ್ನೊದಗಿಸಲಾಗುವುದು.]

ಸುಜೀರ ಗೋಪಾಳ ನಾಯಕ್, ಮ್ಯಾನೇಜರ್.

ಕುಷ್ಠರೋಗ ಮುಕ್ತಿ ಬಿಳಿ ತೊನ್ನು.

ಎಷ್ಟು ದೀರ್ಘಕಾಲ ಅಥವಾ ಯಾವ ಕಾರಣದೇ ಇರಲಿ, ನಾಲ್ಕೇ ವಾರಗಳಲ್ಲಿ ಪೂರ್ಣ ಗುಣಪಡಿಸುವುದು. ಯಶಸ್ಸು ಖಾತರಿ; ಗ್ಯಾರಂಟಿ. ವಿವರವನ್ನು ಅಪೇಕ್ಷಿಸಿದ್ದಲ್ಲಿ ಕಳುಹಿಸಲಾಗುವುದು.

ವಿಳಾಸ:—

Kamala Works, Panchpota, Bengal.

ಕಣ್ಣಿನ ಪೊರೆ.

"ಐ—ಸನ್" ಎಂಬ 'ನೇತ್ರಭಾಸ್ಕರ'—ಈ ಔಷಧವು ಕಣ್ಣುಪೊರೆ, ದೃಷ್ಟಿಮಾಂದ್ಯ ಇತ್ಯಾದಿಯನ್ನು ಶೀಘ್ರವಾಗಿಯೂ ಶಾಶ್ವತವಾಗಿಯೂ ಗುಣಪಡಿಸುತ್ತದೆ. ಶಸ್ತ್ರಕ್ರಿಯೆಯು ಆವಶ್ಯಕವಿಲ್ಲ. ಖಾತರಿ ಗುಣಲಾಭ, ಗುಣವಾಗದಿದ್ದರೆ ಹಣ ವಾಪಸ್. ಕ್ರಯ ರೂ. 2.

ಪತ್ರವ್ಯವಹಾರ ಇಂಗ್ಲೀಷಿನಲ್ಲಿ:—

Hary yaeram, Panchpota, Bengal.

1876ನೇ ಇಸವಿಯಿಂದಲೂ ಪ್ರಸಿದ್ಧಿ ಹೊಂದಿದ

ಎಮ್. ಗಣಪಯ್ಯ ಎಂಡ್ ಸನ್ಸ್, ಮಂಗಳೂರು.

ಇವರ ಶಾಸ್ತ್ರೀಯ ಮತ್ತು ಅನುಭವಸಿದ್ಧ ಔಷಧಗಳು.

ಮಹಾ ಮದನಕಾಮೇಶ್ವರಿ ಲೇಹ:—ಆಯುರ್ವೇದ ಶಾಸ್ತ್ರದಲ್ಲಿ ಅತಿ ಪ್ರಾಮುಖ್ಯತೆಯನ್ನು ಪಡೆದ ಔಷಧಿ. ನರಗಳ ಮತ್ತು ಜನನೇಂದ್ರಿಯದ ಶಕ್ತಿಹೀನತೆ, ಎದೆನೋವು, ಮಲಬದ್ಧತೆ, ಅಜೀರ್ಣ, ಅರುಚಿ, ಅಗ್ನಿಮಾಂದ್ಯ, ವಾಯು ಉಪದ್ರ ಮೊದಲಾದುವುಗಳನ್ನು ಹೋಗಲಾಡಿಸಿ ಮಾನಸಿಕ ಶಕ್ತಿಯನ್ನು ಹೆಚ್ಚಿಸುವುದು. ರಕ್ತವೃದ್ಧಿಯನ್ನೂ, ವೀರ್ಯ ವೃದ್ಧಿಯನ್ನೂ ಉಂಟುಮಾಡಿ ದೇಹಕ್ಕೆ ಸಂಪೂರ್ಣ ಆರೋಗ್ಯವನ್ನು ಉಂಟುಮಾಡುವುದು. ನಿರೋಗಿಗಳೂ, ಶ್ರಮಜೀವಿಗಳೂ ಇದನ್ನು ಪ್ರತಿನಿತ್ಯ ಸೇವಿಸಿದ್ದಲ್ಲಿ ಶ್ರಮ ಪರಿಹಾರವಾಗಿ ಸುಖನಿದ್ರೆಯು ಲಭಿಸುವುದು.

ಬಾಟ್ಲಿ 1ರ ರೂ. 2-0-0. ಬಾಟ್ಲಿ 3ರ ರೂ. 5-12-0.

ಮೇಹ ಕುಠಾರ:—ಪ್ರಮೇಹ, ಮೂತ್ರಕೃಚ್ಛ್ರ, ಮೂತ್ರ ಹೋಗದಿರುವಿಕೆ, ಮೂತ್ರ ಹೋಗುವಾಗ ಉರಿ, ಮೂತ್ರದ್ವಾರದಿಂದ ಕೀವು ಬರುವುದು, ಮೂತ್ರದೀದ ಧಾತು ಹೋಗುವುದು, ಮೂತ್ರ ಆಗಾಗ ಬಂದು ತಡಿಯಲಿಕ್ಕೆ ಸಾಧ್ಯವಿಲ್ಲದಿರುವುದು ಇವೇ ಮೊದಲಾದ ಹಲವು ಮೂತ್ರಕೋಶದ ರೋಗಗಳಿಗೆ ಸಿದ್ಧೌಷಧ.

ಡಬ್ಬಿ 1ಕ್ಕೆ ರೂ. 2-8-0. ಡಬ್ಬಿ 3ರ ರೂ. 7-0-0.

ಕಸ್ತೂರಿ ಮಿಶ್ರಿತ ದಶಮೂಲಾರಿಷ್ಟ:—ಇದು ಬಾಣಂತಿಯರಿಗೆ ಅತ್ಯದ್ಭುತಕರವಾದ ಶಕ್ತಿವರ್ಧಕ ರಸಾಯನವಾಗಿರುತ್ತದೆ. ಪ್ರಸವಿಸಿದ ನಂತರ ಅವರ ಪ್ರಸವದ ಆಯಾಸವನ್ನು ಹೋಗಲಾಡಿಸಿ ಗರ್ಭಕೋಶದ ವೇದನೆಗಳನ್ನು ಸಮಾಧಾನಪಡಿಸುವುದು. ಗರ್ಭಕೋಶದಲ್ಲಿ ಕೆಡುಕು ರಕ್ತವು ನಿಲ್ಲದಂತೆ ಮಾಡಿ, ಅಗ್ನಿಮಾಂದ್ಯ, ಅರುಚಿ, ನಂಜಿನ ಜ್ವರ, ರಕ್ತಹೀನತೆ, ನಿದ್ರಾಭಂಗ ಮೊದಲಾದುವುಗಳನ್ನು ಹೋಗಲಾಡಿಸಿ, ದೇಹವನ್ನು ಶಕ್ತಿವಂತವೂ ಆರೋಗ್ಯವಂತವೂ ಮಾಡುವುದು, ಬಾಣಂತಿಯರು ಪುಷ್ಟಿಹೊಂದಿ, ಶಿಶುವಿಗೂ ಧಾರಾಳವಾಗಿ ಹಾಲು ಸಿಕ್ಕುವಂತೆ ಮಾಡುವುದು.

ಬಾಟ್ಲಿ 1ಕ್ಕೆ ರೂ. 1-8-0. ಬಾಟ್ಲಿ 3ರ ರೂ. 3-0-0.

Karnataka Chemical and Pharmaceutical Works, Ltd., Udipi. (South India)

ಕುಂಭಕೋಣದಲ್ಲಿಯೂ ಮಧುರೆಯಲ್ಲಿಯೂ ಮೈಸೂರಿನಲ್ಲಿಯೂ ಸುವರ್ಣ ಪದಕಗಳನ್ನು ಪಡೆದಿರುವ

ಕರ್ಣಾಟಕ ಕೆಮಿಕಲ್ ಎಂಡ್ ಫಾರ್ಮಸ್ಯೂಟಿಕಲ್ ವರ್ಕ್ಸ್, ಲಿಮಿಟೆಡ್, ಉಡುಪಿ. (ದಕ್ಷಿಣ ಹಿಂದೂಸ್ಥಾನ).

ನಮ್ಮಲ್ಲಿ ಟಿಂಕ್ಚರ್, ವಗೈರೆ ಎಲ್ಲಾ ಎಲ್ಲೋಪೆತಿಕ್ ಔಷಧ ದ್ರವ್ಯಗಳೂ, ಆಯುರ್ವೇದಿಯ ಔಷಧಿಗಳೂ, ಟ್ಯಾಲೆಟ್ ಸಾಮಗ್ರಿಗಳೂ, ಸಾಬೂನುಗಳೂ, ಫೌಂಟನ್ ಪೆನ್ ಶಾಯಿಗಳೂ ತಯಾರಿಸಲ್ಪಡುತ್ತವೆ.

ದ್ರಾಕ್ಷಾಸವ, ಪ್ರಸೂತಿ ಸಂಜೀವನ, ನಿಯೊವಿಗರ್, ಸ್ನೋ, ಕ್ಷೀರಬಲಾ, ಕಾಪ್ರೋಫ್ಲೋಜಿಸ್ಟಿನ್, ಯುಟೇರಿನಾ, ಇಂಕ್ಸ್

ಮೆನೆಜಿಂಗ್ ಡೈರೆಕ್ಟರ್—ವೆಂಕಟರಾಯ ಅಣ್ಣಪ್ಪ ಬಾಳಿಗ.

ಹೆಡ್ ಆಫೀಸು. ಬ್ರೇಂಚ ಆಫೀಸು

ಉಡುಪಿ. (ದಕ್ಷಿಣ ಹಿಂದೂಸ್ಥಾನ) ದೇವಕರಣ ಮೆನ್ಷನ್, 45 ಪ್ರಿನ್ಸೆಸ್ ಸ್ಟ್ರೀಟ್, ಬೊಂಬಾಯಿ ನಂ. 2.

ಪಶ್ಚಿಮ ಕರಾವಳಿ ಮತ್ತು ಮೈಸೂರು ಪ್ರಾಂತ್ಯಗಳ ಪ್ರಾಮುಖ್ಯ ಏಜಂಟರು:—

ಕರ್ಣಾಟಕ ಪ್ರೊಡಕ್ಟ್ಸ್ ಡಿಸ್ಟ್ರಿಬ್ಯೂಟಿಂಗ್ ಕಂಪನಿ, ಮಂಗಳೂರು.

ಅನುಕ್ರಮಣಿಕೆ.

ಅಗ್ರಲೇಖ
ಖಾನ್ ಅಬ್ದುಲ್ ಗಫರ್ ಖಾನರ ಬಿಡುಗಡೆ. ೧
ಸ್ಫುಟವಿಚಾರಗಳು ,,
ಮೂಲೆಮೂಲೆಯಿಂದ ೧೦
ನೋಟಗಳು ೮
ವರ್ತಮಾನ ಸಂಗ್ರಹ ,,
ವಿವಿಧ ಸಮಾಚಾರಗಳು ೧೧
ಪತ್ರವ್ಯವಹಾರ ೧೪
ನೀರು! ೨
ಮತ್ತೊಂದು ಮಹಾಯುದ್ಧವು ಮಿಂಚಿನಂತೆ ಬರಲಹುದು. ೧೨
ಮಂಗಳೂರು ೯
ಗ್ರಾಸ ೬
ಜವಾಹರಲಾಲರನ್ನು ಪುನಃ ದಸ್ತಗಿರಿ ಮಾಡಿದರು. ೧೨

ಸ್ವದೇಶಾಭಿಮಾನಿ.

ತಾ. ೩೧ನೇ ಶುಕ್ರವಾರ ಆಗೋಸ್ತು ೧೯೩೪

ಖಾನ್ ಅಬ್ದುಲ್ ಗಫರ್ ಖಾನರ ಬಿಡುಗಡೆ

'ಗಡಿನಾಡಿನ ಗಾಂಧಿ'ಯೆಂದು ಪರಿಚಿತರಾಗಿರುವ ಗಡಿಪ್ರಾಂತ್ಯದ 'ಕೆಂಪಂಗಿ'ಗಳ ಮುಖಂಡರಾದ ಖಾನ್ ಅಬ್ದುಲ್ ಗಫರ್ ಖಾನರನ್ನೂ ಅವರ ಸಹೋದರರನ್ನೂ ಅನಿರೀಕ್ಷಿತವಾಗಿ ಬಂಧವಿಮೋಚನಗೊಳಿಸಿ ಸರಕಾರವು ತನ್ನ ಔದಾರ್ಯವನ್ನು ಪ್ರಕಟಿಸಿದೆ. ದೇಶವಿಘಾತುಕವಾದ ಆಂದೋಲನವೊಂದನ್ನು ನಡೆಸುವ ಗಡಿನಾಡಿನ ಸೂತ್ರಧಾರರಿವರೆಂದು ಇವರನ್ನು ಸರಕಾರವು ಇಷ್ಟು ಕಾಲವೂ ಬಂಧನದಲ್ಲಿರಿಸಿತ್ತಾದರೂ, ಕೇವಲ ದೇಶಸಂಘಟನಾ ಕಾರ್ಯಸಾಧಕವಾದ ಚಳವಳವನ್ನೆ ಇವರು ನಡೆಸುವವರೆಂದು ನಂಬಿದ್ದ ಜನರಿಗೆ ಸರಕಾರದ ಮನೋ—ಜಾಗ್ರತವನ್ನು ತಿಳಿವುದು ಕಷ್ಟತಮವಾಯಿತು. ಕೊಂಗ್ರೆಸ್ ಕಾರ್ಯಕಾರಿ ಸಮಿತಿಯು ಶಾಸನವಿರೋಧ ಚಳವಳಿಯನ್ನು ಹಿಂದೆಗೆದಿದೆಯೆಂಬ ಪ್ರಕಟಣೆಯಾದ ನಂತರವಾದರೂ ಖಾನರ ಬಿಡುಗಡೆಯಾಗಬಹುದೆಂದು, ಅವರನ್ನು ಅಂತಃಕರಣಪೂರ್ವಕವಾಗಿ ಪ್ರೀತಿಸುವವರ ನಿರೀಕ್ಷೆಯಿತ್ತು. ಆದರೆ, ಆಗಲೂ ಸರಕಾರವು, ಜನರ ಮನೋಭಾವವನ್ನಲಕ್ಷಿಸಿ, ಖಾನರು ಕೊಂಗ್ರೆಸ್ ಚಳವಳಿಕ್ಕಿಂತ ಅಪಾಯಕರವಾದ ಬೇರೆ ಚಳವಳದ ಉತ್ಪಾದಕರೆಂತೆ ಆಡಿ ತೋರಿಸಿದರು. ಕಾರಾಗೃಹದಲ್ಲಿ ಅಸ್ವಾಸ್ಥ್ಯ ತಲೆದೋರಿದರೂ, ಅದು ವಿಮೋಚನೆಯನ್ನು ಕೇಳುವಷ್ಟು ವಿಶೇಷವಲ್ಲವೆಂದೇ ಅವರ ಬಂದೀವಾಸವು ಬೆಳೆಸಲ್ಪಟ್ಟಿತು. ಈಗ, ಸರಕಾರದವರು ಅವರನ್ನು ಆಕಸ್ಮಿಕವಾಗಿ ಬಿಡುಗಡೆ ಮಾಡಿರುವುದು, ವಿಶಾಲ ಮನೋಭಾವವನ್ನು ಪ್ರದರ್ಶಿಸದಿಲ್ಲವೆಂಬುದನ್ನು ಪುಷ್ಟೀಕರಿಸುವುದು.

ಆದರೆ, ಬಹುಕಾಲದ ಆ ಬಂದೀವಾಸದ ನಂತರ ಖಾನರು ತಮ್ಮ ವಿಮೋಚನೆಯನ್ನು ಪೂರ್ಣವಾಗಿ ಆನಂದಿಸಲಾಗದಂತೆ, ಬಿಡುಗಡೆಯ ಬೆನ್ನ ಹಿಂದೆಯೇ ಬಂದ ಪ್ರತಿಬಂಧದ ನೋಟೀಸಿನ ವಿಷಯವು ಅನೇಕರಿಗೆ—"ಈ ಬಿಡುಗಡೆಯು ದುಃಖಕರವಾದ ಸುಖವು" ಎಂದಾಡಿಕೊಳ್ಳುವಂತೆ ಮಾಡಿದೆ. ಇರಲಿ; ತಾಮಸವಾದರೂ ಬಿಡುಗಡೆಯನ್ನೇನೊ ಸರಕಾರವು ಮಾಡಿತು. ಅಂತೆಯೇ, ಖಾನರು ಗಡಿಪ್ರಾಂತ್ಯವನ್ನಾಗಲಿ ಪಂಜಾಬನ್ನಾಗಲಿ ಪ್ರವೇಶಿಸಲು ಆತಂಕವಿಲ್ಲವೆಂಬುದನ್ನು ಮನಗಂಡು ಸದ್ಯದಲ್ಲಿ ಆ ಪ್ರತಿಬಂಧದ ಹುಕುಮನ್ನು ಹಿಂದೆಗೆಯುವುದೆಂದು ನಿರೀಕ್ಷಿಸುವ.

ಖಾನರು ಈಗಾಗಲೇ ಬೊಂಬಾಯಿಗೆ ಹೊರಡಿರುವರೆಂದು ಕೇಳಿದೆವು. ಇದೇ ಬರುವ ಅಕ್ಟೋಬರದಲ್ಲಿ ಕೂಡಲಿರುವ ರಾಷ್ಟ್ರಸಭಾಧಿವೇಶನದಲ್ಲಿ ಅವರ ಅಮೂಲ್ಯ ಸಹಕಾರವೂ ಮುತ್ಸದ್ದಿತನವೂ ದೇಶದ ಭಾವೀ ಕಾರ್ಯಕ್ರಮವನ್ನು ರೂಪಿಸಿ ತರುವುದರಲ್ಲಿ ಸಾಧಕವಾಗುವುದೆಂಬ ನಂಬಿಕೆಯಿದೆ.

ಈಗ, ಮತ್ತೊಂದು ವಿಚಾರವು ಖಾನರ ಬಿಡುಗಡೆಯ ದೆಸೆಯಿಂದ ಪ್ರಕಟವಾಗುವಂತಾಯಿತು. ಪತ್ನಿಯು ಮರಣಶಯ್ಯೆಯಲ್ಲಿರುವಳೆಂಬ ಕಾರಣದಿಂದ, ಬಿಡುಗಡೆ ಮಾಡಲ್ಪಟ್ಟ ಪಂಡಿತ ಜವಾಹರಲಾಲರ ವಿಮೋಚನೆಯ 'ಸುಖ'ವು, ಅಷ್ಟು ಬೇಗನೆ, ಅಷ್ಟು ಆಕಸ್ಮಿಕವಾಗಿ, ಕೊನೆಗೊಳ್ಳುವುದಾಯಿತೇ?—ಎಂದು ಮರುಕಪಡುವವರೇ ಹಲವು ಮಂದಿ. ಜವಾಹರರನ್ನು ಕೇವಲ ರಾಜದ್ರೋಹಾತ್ಮಕವಾದ್ದೊಂದು ಭಾಷಣದ ಅಪರಾಧಕ್ಕಾಗಿ ಬಂಧಿಸಲಾಗಿತ್ತು. ಅವರ ಸಜೆಯ ಅವಧಿಯು ಈಗಾಗಲೇ ಮುಗಿಯುತ್ತ ಬಂತು. ಅವರ ಉಳಿದ ಸಜಾ ಅವಧಿಯನ್ನು ರದ್ದುಮಾಡಿ, ಬಂಧವಿಮೋಚನೆ ಮಾಡಿದರೆ ಜವಾಹರರು ಪುನಃ ರಾಜದ್ರೋಹಾತ್ಮಕವಾದ ಭಾಷಣ ಮಾಡಲಾರರೆಂಬುದಕ್ಕೆ ಅವರಾಗಲಿ ಮತ್ತಾರಾಗಲಿ, ಹೊಣೆಯಾಗುವವರಿಲ್ಲವಾದರೂ,—ಮುಖ್ಯವಾಗಿ ಪತ್ನಿಯು ಮೃತ್ಯುಶಯ್ಯೆಯಲ್ಲಿರುವಷ್ಟು ಕಾಲ ಜವಾಹರರೇನೂ, "ಪಂಜರದಿಂದ ಬಿಡಲ್ಪಟ್ಟ 'ಹರಾಮಿ'ಸಿಂಗ"ನಾಗುತ್ತಿದ್ದಿಲ್ಲ. ಅಥವಾ ಅವರನ್ನು ಪುನಃ ಯಾವ ಕಾಲಕ್ಕೆ ಬೇಕಾದರೂ ಸೆರೆ ಹಿಡಿವುದು ಸರಕಾರಕ್ಕೇನೂ ಪ್ರಯಾಸವಾಗುತಿದ್ದಿಲ್ಲ. ಜವಾಹರರ ಪತ್ನಿ ಹಾಗೂ, ಅವರ ವಯೋವೃದ್ಧ ಮಾತೋಶ್ರೀ—ಇವರಿಬ್ಬರೂ ಅಸ್ವಸ್ಥವಾಗಿರುವರು. ಜವಾಹರರನ್ನು ಪುನಃ ಕಳೆದ ವಾರ "ಆನಂದಭವನ"ದಲ್ಲಿ ದಸ್ತಗಿರಿ ಮಾಡಿ ಒಯ್ಯುವಾಗ ತಾಯ-ಮಕ್ಕಳ ಆ ವಿದಾಯವೆಷ್ಟು ಕರುಣಾಜನಕವಾಗಿತ್ತೋ ಅದನ್ನು ವಾರ್ತಾದಾಯಕನು ವಿವರಿಸುತ್ತಾನೆ. ಸರಕಾರವು ಯಂತ್ರದಂತೆ ತನ್ನ ಕಾರ್ಯವನ್ನು ಮಾಡುತ್ತಿರುವುದು ನ್ಯಾಯಬದ್ಧವಾಗಿರಬಹುದು; ಆದರೆ, ಕೆಲವೊಂದು ವಿಶಿಷ್ಟ ಸಂದರ್ಭಗಳಲ್ಲಿ ಆ ನಿಶ್ಚಿತ ಪಥದಲ್ಲಿ ಕೊಂಚ ತಪ್ಪಿದು ಪ್ರೇಮಕ್ಕೆಡೆಗೊಡಬೇಕಾಗುವುದು.

ಖಾನರ ಬಿಡುಗಡೆ ಮಾಡಿದಂತೆ ಸರಕಾರವು ಜವಾಹರಲಾಲರನ್ನೂ ಬಿಡುಗಡೆ ಮಾಡಲೆಂದೇ ಜನಗುತವಿದೆ. ಅದನ್ನು ಸರಕಾರವು ಅಲಕ್ಷಿಸುವುದೇ?

ಸ್ಫುಟವಿಚಾರಗಳು.

ಸರ್ ಮಹಮ್ಮದ್ ಉಸ್ಮಾನರವರು.

ಒಂಭತ್ತು ವರ್ಷಗಳ ತನಕ ಮೂರು ಬಾರಿ ಎಗ್ಸಿಕ್ಯೂಟಿವ್ ಕೌನ್ಸಿಲರರಾಗಿಯೂ ಮೂರು ತಿಂಗಳ ತನಕ ನಮ್ಮ ಪ್ರಾಂತ್ಯದ ಹುದ್ದೆಗಳಲ್ಲಿ ಅತೀವ ಉಚ್ಚವೂ ದಬಾಬ್ದಾರಿವುಳ್ಳದ್ದೂ ಆದ ಗವರ್ನರ್ ಪದವಿಯಲ್ಲಿ ರಾರಾಜಿಸಿಯೂ ನಿವೃತ್ತರಾದರು. ಸರಕಾರದ ಗಜೇಟು ಅವರ ಸೇವೆಯನ್ನು ಪ್ರಶಂಸಿಸುತ್ತ 'ಅನೇಕ ಬಗೆಯ ಅಪಾಯಕರ ಆಂದೋಲನಗಳ ಸಂದಿಗ್ಧ ಸ್ಥಿತಿಯಲ್ಲಿಯೂ ಶಾಂತಿ ನ್ಯಾಯಗಳನ್ನು ಕುಂದಿಲ್ಲದಂತೆ ಪಾಲಿಸಿಕೊಂಡು ಬಂದ ಇವರ ಕಾರ್ಯನಿರ್ವಹಣ......' ಎಂದು ಕೃತಜ್ಞತೆಯಿಂದ ದಾಖಲು ಮಾಡಿಕೊಂಡುದನ್ನು ಓದಿ ಯಾರಿಗೂ ಸಂತೋಷವಾಗದಿರದು. ಹರಿಜನ ಚಳವಳದ ಗಲಭೆ, ಕೊಂಗ್ರೆಸ್ ಸಭೆಗಳು, ಎಸೆಂಬ್ಲಿ ಅಧಿವೇಶನ, ಗಾಂಧಿಜಿಯವರ ಉಪವಾಸ, ಹೀಗೆ ಹಲವು ವಿಧದಲ್ಲಿ ನಮ್ಮ ಚಿತ್ತವು ವಿಶೇಷವಾಗಿ ಉತ್ತರ ಹಿಂದೂಸ್ಥಾನದ ಕಡೆಗೆ ಸೆಳೆಯಲ್ಪಟ್ಟುದರಿಂದ ಸರ್ ಉಸ್ಮಾನರವರ ಕಾರ್ಯನಿರ್ವಹಣದ ಕೂಲಂಕಷಗಳು ತಿಳಿದುಬಾರದಂತಾಯಿತು. ಆದರೂ, ಸರ್ ಉಸ್ಮಾನರವರು ಅನೇಕ ಕಡೆಗಳಿಗೆ ಸತ್ಕಾರ ಕೂಟಗಳಿಗೂ ಪ್ರಾರಂಭೋತ್ಸವಗಳಿಗೂ ಹೋಗುತಿದ್ದರೆಂಬುದು,—ಅನೇಕ ಮಹತ್ವಿಕೆಯ ಕಾರ್ಯಬಾಹುಳ್ಯದಲ್ಲೂ ಅವರು ಪ್ರಜೆಗಳ ಆಮಂತ್ರಣವನ್ನಲಕ್ಷಿಸುವವರಲ್ಲವೆಂಬುದನ್ನಷ್ಟೆಯಲ್ಲದೆ, ಅಷ್ಟಾದರೂ ಕಾರ್ಯವನ್ನು ಮರೆತಿಲ್ಲವೆಂಬುದರಿಂದ ಅವರ ವಿಚಕ್ಷಣತೆಯನ್ನೂ ತೋರಿಸುತ್ತದೆ. ನಿವೃತ್ತರಾಗಿ, ಸಾರ್ವಜನಿಕ ಸೇವೆಯ ತನ್ನ ಕಾಂಕ್ಷೆಯನ್ನು ಬಯಲು ನಡಿಸಿದ ಇವರು ನಮ್ಮ ಪ್ರಾಂತ್ಯದೊಳಗಿನ ಹಿಂದೂ–ಮುಸ್ಲಿಂ ಸ್ನೇಹವನ್ನು ಇನ್ನಷ್ಟು ಬಲಪಡಿಸಲು ಶ್ರಮಪಡುವರೆಂದು ಭರವಸೆಪಡಬಹುದಾಗಿದೆ.

ದೊಡ್ಡಣ್ಣನವರು ಯುದ್ಧಾತುರರಾಗಿರುವರು!

ಅಂದರೆ ಈ ಬಾರಿಯು ಅವರ ಯುದ್ಧವು ಪುಣ್ಯಕಾರ್ಯಕ್ಕಾಗಿರುವುದು. ಎಸೆಂಬ್ಲಿ ಚುನಾವಣೆಯು ಅವರನ್ನಾಕರ್ಷಿಸಿದೆ. ತಾಸಿಲ್ಲದೆ ಕೇಂದ್ರ ಶಾಸನ ಸಭೆಯಲ್ಲಿ ಯಾವ ಮಹತ್ವವೂ ಇಲ್ಲದೆ ಆದರ ಗೌರವ–ಮತ್ತು ಉಪಯೋಗಗಳೇನೂ ಇಲ್ಲದಂತಾದೀತೆಂದು ಅವರು ಸಹಜವಾಗಿ ಎಣಿಸಿ, ಆ ಗೌರವ—ಮಹತ್ವ—ಉಪಯೋಗಗಳನ್ನು ಎಸೆಂಬ್ಲಿಗೆ ಕೊಡಲು ಚುನಾವಣೆಗೆ ಮುಂದೆ ಬಂದಿರುವರು. ಆದರೆ, ಎಂತಹ ದುರ್ದೈವ!—ಸರ್ ಮಹಮ್ಮದ್ ಯಾಕೂಬರು,—ಮೌಲಾನರಿಂದ ಎಸೆಂಬ್ಲಿಗೆ

ಮೌಲಾನಾ ಶೌಕತಾಲಿಯವರು.

ಉಪಯೋಗಕ್ಕಿಂತ ಹೆಚ್ಚು ಹಾನಿಯೇ ಎಂಬಭಿಪ್ರಾಯವುಳ್ಳವರಾಗಿರುವರಲ್ಲ! ಯಾಕೂಬರು ಅಲ್ಲಿಗೇ ಬಿಡದೆ, ಲಕ್ನೋಕಡೆಯಿಂದ ಅವರ ಹೆಸರು ಎಸೆಂಬ್ಲಿಗೆ ಮತದಾರರ ಪಟ್ಟಿಯಲ್ಲಿದ್ದುದನ್ನೂ ನೆಪದಿಂದು, ದೂರಿಟ್ಟಿರುವರು. ಯುದ್ಧಾತುರರಾದ ಮೌಲಾನಾ ಶೌಕತಾಲಿಯವರಿಗೆ, ಕಾಳಗಕ್ಕೇಳಲು ಇದೊಂದು ಆಮಂತ್ರಣವಲ್ಲದೆ ಮತ್ತೇನು? ಮಲ್ಲಯುದ್ಧವಿಶಾರದರಂತೆ ಮೌಲಾನರು ಈಗಾಗಲೇ ರಣರಂಗಕ್ಕಿಳಿದು ತನ್ನ ಧ್ವಂದ್ವಿಯನ್ನೆದುರಿಸಲು ಭುಜಗಳನ್ನಪ್ಪಳಿಸಿಕೊಂಡು ನಿಂತಿರುವರು. ಜಯಾಪಜಯಗಳು ದೈವಾಧೀನ!

ಅಲ್ಲಿಗೂ ಇಲ್ಲಿಗೂ ಇಷ್ಟು ಬೇಧ.

ಬರ್ಮಾ ಕೌನ್ಸಿಲಿನ ಅಧ್ಯಕ್ಷರ ಮೇಲೆ ಅವಿಶ್ವಾಸದ ಠಾವು ಬಂದು ಬಹುಮತವು ಠರಾವಿಗೆ ಅನುಕೂಲವಾಗಿದ್ದರೂ ಗವರ್ನರ್ ಸಾಹೇಬರ ಕೃಪೆಯಿಂದ ಅಧ್ಯಕ್ಷರು ಪೀಠಕ್ಕೆ ಅಂಟಿಕೊಳಿತರು. ಮಧ್ಯಪ್ರಾಂತ್ಯದ ಕೌನ್ಸಿಲಿನ ಅಧ್ಯಕ್ಷರ ಮೇಲೂ ಒಂದು ಅವಿಶ್ವಾಸದ ಠರಾವು! ಆದರೆ, ಬಹುಮತವಿಲ್ಲದೆ ಅಧ್ಯಕ್ಷರು ಪೀಠದಲ್ಲುಳಿದರು. ಮಧ್ಯಪ್ರಾಂತ್ಯದ ಅಧ್ಯಕ್ಷರು ಬರ್ಮಾದ ಅಧ್ಯಕ್ಷರಂತೆ ಪ್ರತಿನಿಧಿಗಳ ವಿರೋಧವನ್ನು ಗಣಿಸದೆ ಕುಳಿತಿರಲಿಲ್ಲವೆಂದಾಯಿತು. ಇದಕ್ಕಾಗಿ ಅವರು ತಮ್ಮನ್ನು ತಾವೇ ಅಭಿನಂದಿಸಿಕೊಳ್ಳದಿರರು. ಆದರೆ, ಈ ಠರಾವನ್ನು ಇವರು ಅಲಕ್ಷಿಸಿ ಮುಂದೆಯೂ ಅಜಾಗರೂಕತೆಯಿಂದ ವರ್ತಿಸಲಾರರಷ್ಟೆ? ಅವಿಶ್ವಾಸದ ಠರಾವುಗಳು—ಮಂಜೂರಾಗಲಿ ಬಿದ್ದುಹೋಗಲಿ-ಅಧ್ಯಕ್ಷರಿಗೆ ಭೂಷಣವಾಗಿಲ್ಲ.

ಬರ್ಮಾ ಕೌನ್ಸಿಲಿನ ಅವಧಿ ಬೆಳೆಸಿದರು.

ಆದರೇನು? ಇದರಿಂದ ಕೌನ್ಸಿಲ್ ವಿಧ್ಯಮಾನಗಳು ತಿದ್ದಲ್ಪಟ್ಟಂತಾಯಿತೇ? ಕಾರ್ಯವು ಸುಗಮವಾಗಿ ನಡೆಯುವಂತೆ ಸಾಧಿಸಿಕೊಟ್ಟಂತಾಯಿತೇ—ಇತ್ತೀಚೆಗೆ ಬಂದ ವಾರ್ತೆಯಂತೆ, ಅಧ್ಯಕ್ಷರ ಮೇಲಿನ ತಮ್ಮ ಅವಿಶ್ವಾಸದ ಠರಾವು, ಗವರ್ನರರ ವಿಶೇಷಾಧಿಕಾರದಿಂದ ನಿಷ್ಫಲವಾದ್ದುದಕ್ಕೆ ಮನನೊಂದ ಸದಸ್ಯರು,—ಆ ಕೌನ್ಸಿಲನ್ನು ಬಹಿಷ್ಕರಿಸಲಿರುವರೆಂದೂ, ಅಧ್ಯಕ್ಷ ಗ್ಲಾನವಿಲ್ ಸಾಹೇಬರು ಹಾಳೂರ ದೊರೆಯಂತೆ ಜನಶೂನ್ಯವಾದ ಆ ಕೌನ್ಸಿಲ್ ಗೃಹದಲ್ಲಿ ಅಧ್ಯಕ್ಷತನವನ್ನು ವಹಿಸಬೇಕಾಗಬಹುದೆಂದೂ ತೋರುತ್ತದೆ. ಹಕೀಮನನ್ನು ಬದಲಾಯಿಸಬಹುದು, ಹುಕುಮನ್ನು ಆಗದೆಂಬಂತೆ, ಗವರ್ನರ್ ಸಾಹೇಬರ ಆ ಹುಕುಂ ಇನ್ನು ಹಿಂದೆಗೆಯಲ್ಪಡುವುದುಂಟೇ? ಆಸೆಯಿಲ್ಲ. ಅದುಕಾರಣವೇ, ಆ ನೊಂದ ಸದಸ್ಯರು ಕೌನ್ಸಿಲನ್ನು ಪ್ರವೇಶಿಸುವರೆಂಬ ಆಸೆಯೂ ಇಲ್ಲ. ಗವರ್ನರರು ಅಧ್ಯಕ್ಷರ ಬಗ್ಗೆ ಇರುವರೋ ಅಥವಾ ಅಧ್ಯಕ್ಷರೂ ಗವರ್ನರರೂ ಕೌನ್ಸಿಲಿನ ತತ್ಪ್ರಾಪ್ತ ದೇಶದ ಬಗ್ಗೆ ಇರುವರೋ?

ಮುಲ್ಕಿಯಲ್ಲೊಂದು ಹಾಯರ್ ಎಲಿಮೆಂಟರಿ ಶಾಲೆ—

—ಅಗತ್ಯವಿದೆಯೆಂಬುದನ್ನು ಸ್ಪಷ್ಟೀಕರಿಸಿ, ಅಲ್ಲಿಯ ನಿವಾಸಿಗಳ ಮನವಿಯೊಂದು ನಮ್ಮ ಡಿಸ್ಟ್ರಿಕ್ಟ್ ಬೋರ್ಡ್ ಪ್ರೆಸಿಡೆಂಟರಿಗೆ ತಲುಪಿದೆ. ಕೊಲಪೂರು ಗ್ರಾಮದಲ್ಲಿರುವ ೮ ಹುಡುಗರ ಶಾಲೆಗಳು ಮತ್ತು ೨ ಹುಡುಗಿಯರ ಶಾಲೆಗಳಲ್ಲಿ ಅನುಕ್ರಮವಾಗಿ ಏಳು ಮತ್ತು ಒಂದು ಮುಲ್ಕಿಯಲ್ಲಿವೆ. ಇವುಗಳಲ್ಲಿ ಸುಮಾರು ೫೦೦ ಬಾಲಕರೂ ೭೦ ಬಾಲಿಕೆಯರೂ ವಿದ್ಯಾಭ್ಯಾಸ ಪಡೆಯುತ್ತಿರುವರು. ಇವರಲ್ಲಿ ೨೦೦ ಬಾಲಕರು ಮತ್ತು ಕಡಿಮೆಪಕ್ಷ ೫೦ ಬಾಲಿಕೆಯರಾದರೂ ಸೆಕೆಂಡರಿ ಶಿಕ್ಷಣವನ್ನಪೇಕ್ಷಿಸಬಹುದು. ವಿದ್ಯಾರ್ಥಿಗಳ ಹೆತ್ತವರಲ್ಲಿ ಹೆಚ್ಚಿನವರು ತೀರ ಬಡವರಾದ ಕಾರಣ, ತಮ್ಮ ಮಕ್ಕಳನ್ನು ಉಡುಪಿ ತನಕ ಕಳುಹಿಸುವುದು ಯಾವ ದೃಷ್ಟಿಯಿಂದಲೂ ಅಸಾಧ್ಯವಾಗಿದೆಯೆಂಬುದರಲ್ಲಿ ಎರಡು ಅಭಿಪ್ರಾಯಗಳಿರಲಾರವು. ಉಡುಪಿ ಮತ್ತು ಕಿದಿಯೂರುಗಳಲ್ಲಿರುವ ಸೆಕೆಂಡರಿ ಶಾಲೆಗಳಿಂದಲೂ ಮುಲ್ಕಿ ನಿವಾಸಿಗಳಿಗೆ ಸೌಕರ್ಯವಿಲ್ಲ. ವಿದ್ಯಮಾನಗಳು ಹೀಗಿರುವಾಗ, ಸೆಕೆಂಡರಿ ಶಿಕ್ಷಣವನ್ನು ಬಯಸುವ ಆ ಮಕ್ಕಳು ನಿರುಪಾಯವಾಗಿ ತಮ್ಮ ಶಿಕ್ಷಣಪ್ರಗತಿಯನ್ನು ಅರ್ಧದಲ್ಲೆ ಕಡಿದುಕೊಳ್ಳಬೇಕಾಗುವುದು. ಮುಲ್ಕಿಯಲ್ಲೊಂದು ಹಾಯರ್ ಎಲಿಮೆಂಟರಿ ಶಾಲೆಯಿಲ್ಲದಿರುವುದು ದೊಡ್ಡ ಕೊರತೆಯಾಗಿದೆ. ಉಡುಪಿ ತಾಲೂಕು ಬೋರ್ಡಿನವರಿಗೆ ಈ ಕುರಿತು ಹಿಂದೆ ಮನವಿ ಮಾಡಿದ್ದಾಗ, ಸಹಾನುಭೂತಿಯಿಂದ ಆಲೋಚಿಸಲಾಗುವುದೆಂಬ ಆಶ್ವಾಸನೆ ಕೊಡಲ್ಪಟ್ಟಿದ್ದರೂ, ಅದು ಹೇಗೋ ಕಾರ್ಯರೂಪಕ್ಕೆ ಬಂದು ಫಲಿಸಲಿಲ್ಲ. ಡಿಸ್ಟ್ರಿಕ್ಟ್ ಬೋರ್ಡಿನವರು ಹಾಯರ್ ಎಲಿಮೆಂಟರಿ ಶಾಲೆಯನ್ನು ತೆರೆವುದಾದರೆ, ಈಗಳಿನ ಅಲ್ಲಿಯ ಶಾಲಾಕಟ್ಟಡವೇ ಸಾಕಾಗಬಹುದೆಂದೂ, ಅಗತ್ಯಕಂಡ ಒಂದೆರಡು ತರಗತಿಗಳ ಬಡಾವಣೆಗೆ ತಾನು ಸಹಾಯ ಮಾಡುವೆನೆಂದು ಶಾಲಾ ಎಡ್ವೈಸರಿ ಸಮಿತಿಯ ಸದಸ್ಯರಾದ ಶ್ರೀ ಬಿ. ಅಣ್ಣಾಯ್ಯನವರು ಆಶ್ವಾಸನೆ ಕೊಟ್ಟಿರುವರೆಂದೂ ತಿಳಿದು ಬರುತ್ತದೆ. ಡಿಸ್ಟ್ರಿಕ್ಟ್ ಬೋರ್ಡಿನವರು ಮುಲ್ಕಿ ಪುರನಿವಾಸಿಗಳ ಮನವಿಯನ್ನು ಸಹಾನುಭೂತಿಯಿಂದ ಪರ್ಯಾಲೋಚಿಸಿ, ಅವರ ಕೋರಿಕೆಗಳನ್ನು ಪೂರೈಸುವರಾಗಿ ನಂಬಲಾಗಿದೆ.

FRESH CONSIGNMENT ARRIVED.

UNEQUAL QUALITY——————EXCEPTIONAL PRICE.

A TIRE THAT SAVES YOU REPUTATION AND MONEY.

The Canara Public Conveyance Co., Ltd.

MANGALORE.

ಮತ್ತೊಂದು ಮಹಾಯುದ್ಧವು ಮಿಂಚಿನಂತೆ ಬರಬಹುದು!

ಯುರೋಪಿನ ಮಹಾಯುದ್ಧದ ಇಪ್ಪತ್ತು ವರ್ಷಗಳ ನಂತರ ಸಿದ್ಧತೆಗಳು!

೧೯೧೪ರಲ್ಲಿ ಆರಂಭವಾದ ಆ ಯುರೋಪಿನ ಮಹಾಯುದ್ಧದ ನೆನಪು, ಈ ೧೯೩೪ರಲ್ಲಿ—೨೦ ವರ್ಷಗಳ ನಂತರ, ಮತ್ತೊಂದು ಮಹಾ ಭಯಂಕರ ಯುದ್ಧವು ನಡೆವುದೇ ಎಂಬ ಭೀತಿ ಹುಟ್ಟಿಸುವಂತೆ ಪದೇ ಪದೇ ನಮ್ಮನ್ನು ಸಂದೇಹಕ್ಕೆಡೆಗೊಡುತ್ತಿದೆ. ಕಾರಣ? ಪ್ರಪಂಚದ ಪರಿಸ್ಥಿತಿಯು ಹಾಗಿದೆ. ಫ್ರಾನ್ಸ್, ಇಟಲಿ, ಅಮೇರಿಕದಂತಹ ಪ್ರಬಲ ರಾಷ್ಟ್ರಗಳೂ ದಿಗಿಲುಗೊಂಡಿವೆಯೋ ಎಂಬಂತೆ ಭಾಷಣಗಳ ಪ್ರಸಾರ ಮಾಡುತ್ತ, ಅದರೊಂದಿಗೆ ಯುದ್ಧ ಹತ್ಯಾರುಗಳನ್ನು ಅವಸರದಿಂದ ಕೂಡಿಡುವ ಕ್ರಮದಲ್ಲಿವೆ. ಬ್ರಿಟನಿನಲ್ಲಿ ಬಾಲ್ಡವಿನ್, ಲೋರ್ಡ್ ಹೈಲ್‌ಶಿಮ್, ಲಂಡನ್ ಬರಿ ಸಾಹೇಬರು—ಯುದ್ಧ ಹತ್ಯಾರುಗಳನ್ನೂ ಸೈನ್ಯ ಸಾಮಗ್ರಿಗಳನ್ನೂ ಹೆಚ್ಚಿಸುವ ಆವಶ್ಯಕತೆಯನ್ನು ಹೆಚ್ಚಿಸಿದ ವರ್ತನೆಯನ್ನು ಸಮರ್ಥಿಸುವುದರಲ್ಲಿ ತಾನು ಮುಂದೆ ನಾನು ಮುಂದೆ ಎಂದು ಮುಂದೆ ಜಗ್ಗುತ್ತಿದ್ದಾರೆ. ಸಂಕ್ಷೇಪತಃ, ಯುರೋಪು ಖಂಡವೆಲ್ಲ ಇಂದು, ಒಂದು ಭಾವೀ ಯುದ್ಧದ ವಿಷಯವಾಗಿ ಮಾತಾಡುತ್ತ, ಯುದ್ಧ ಸಾಮಗ್ರಿಗಳನ್ನು ಸಿದ್ಧಪಡಿಸಿ ರಾಶಿಯೊಡ್ಡುತ್ತಿದೆ.

ಬ್ರಿಟ್ನಿನು—

—ವಿಶೇಷವಾಗಿ ವಿಮಾನ ಸೈನ್ಯವನ್ನು ಬಲಗೊಳಿಸುವುದರಲ್ಲಿ ನಿರತವಾಗಿದೆ. ಬ್ರಿಟ್ನಿನ ನೌಕಾ ಸೈನ್ಯವು ಸಬಲವಾಗಿದೆಯೆಂದು ಅದಕ್ಕೆ ಖಚಿತವಿದ್ದಂತೆ ತೋರುವುದು.

ಫ್ರಾನ್ಸು—

—ತನ್ನ ಪೂರ್ವಗಡಿಯಲ್ಲಿ ಕೊಂಕ್ರೀಟ್ ಮತ್ತು ಉಕ್ಕಿನ ಆವರಣವನ್ನು ಹಾಕಿ, ಅದನ್ನು ಜಾಸ್ತಿ ತೀಕ್ಷದ ತನಕವೂ ಮುಂದುವರಿಸುವ ವಿಷಯವಾಗಿ ಆಲೋಚಿಸುತ್ತಿದೆ. ವಿಮಾನ ಸೈನ್ಯವನ್ನು ಸುದೃಢಗೊಳಿಸುವ ಯತ್ನಗಳಾಗಿವೆ. ಈ ಸೈನ್ಯವು ಶತ್ರುಗಳ ವಿಮಾನ ದಂಡನ್ನು ತಡೆವ ರೀತಿ, ಶತ್ರು ಸೈನ್ಯವನ್ನು ಮುತ್ತುವ ರೀತಿ, ಇವುಗಳ ಪ್ರದರ್ಶನ ರೂಪವಾದ ಯುದ್ಧಗಳೂ ನಡೆಯುತ್ತಿವೆ.

ಪೋಲೆಂಡು—

—ತನ್ನ ನೌಕಾಸೈನ್ಯದ ವಿಷಯ ಬಹಳ ಜಾಗರೂಕತೆಯಿಂದಿದೆ.

ಬೆಲ್ಜಿಯಮ್

—ತನ್ನ ಭೂಸೈನ್ಯವನ್ನು ಹೆಚ್ಚಿಸುವ ಹವಣಿಯಲ್ಲೇ ಇದ್ದು, ಆಧುನಿಕ ಯುದ್ಧ ಸಾಮಗ್ರಿಗಳನ್ನು ಕೂಡಿಸಿಕೊಂಡು ಸಿದ್ಧವಾಗಿದೆ.

ಸ್ವಿಝರ್ಲೆಂಡು—

—ಇಂದು 'ಶಾಂತಿ'ಯ ದೇಶವಾದರೂ ಯುದ್ಧ ಸಾಮಗ್ರಿಗಳ ಬಗ್ಗೆ ಹೆಚ್ಚು ಮೊಬಲಗನ್ನು ಮಂಜೂರುಮಾಡಿದೆ.

ರಷ್ಯ,

ರಷ್ಯದ ಸಿದ್ಧತೆಗಳು ಆಗಿವೆ; ಆಗುತ್ತಲೂ ಇವೆ. ಆಧುನಿಕ ಯಾಂತ್ರಿಕ ಸಾಧನಗಳೆಲ್ಲವೂ ಈಗ ರಷ್ಯದೊಡನೆ ಇವೆ. ನೌಕಾಸೈನ್ಯವು ಬಲಗೊಂಡಿದೆ. ಆಕಾಶ ಸೈನ್ಯವು ಸುಧಾರಿಸಲ್ಪಟ್ಟಿದೆ. ಜರ್ಮನಿ—ಜಾಪಾನುಗಳೊಡನೆ, ಯುದ್ಧವನ್ನು ಪ್ರೇರೇಪಿಸುವ ಯಾ ಯುದ್ಧಕ್ಕೆ ಕಾರಣವಾಗುವ ಕಲಹಗಳೇಳದಂತೆ ಕರಾರುಗಳನ್ನು ಮಾಡುತ್ತಲಿದೆ.

ಇಟೀಲಿ.

ಇಟೀಲಿಯು ಯಾವತ್ಕಾಲಕ್ಕೂ ಯಾವ ಅಪಾಯಕ್ಕೂ ಸಿದ್ಧವಾಗಿಯೇ ಇದೆಯೆಂದು ಇತರ ರಾಷ್ಟ್ರಗಳೆಲ್ಲ ಬಲ್ಲವು. ಶಸ್ತ್ರ ಸನ್ಯಾಸದಲ್ಲಿ ಮುಸ್ಸಲೋನಿಯವರಿಗೆ ನಂಬಿಕೆಯೇ ಇಲ್ಲವೆಂಬುದು ಪ್ರಕಟ ಸತ್ಯ. ೫೦೦ ಮೆಷಿನ್ ಗನ್ನುಗಳನ್ನೊದಗಿಸಬೇಕೆಂದು ಬ್ರೆಸ್ಕಿಯಾ ನಗರದ ಬ್ರಿಡಾ ಕಾರ್ಖಾನೆಗೆ 'ಆರ್ಡರು' ತಲಪಿದೆ. ಇನ್ನಿತರ ಕಾರ್ಖಾನೆಗಳಿಗೆ ಇತರ ಬಗೆಯ ಹತ್ಯಾರುಗಳಿಗಾಗಿ ಆರ್ಡರು ಹೋಗಿದೆ. ೪ ಲಕ್ಷ ತೋಫಿನ ಗುಂಡುಗಳನ್ನು ಮತ್ತೊಂದು ಕಂಪೆನಿಯು ಸಿದ್ಧಗೊಳಿಸುತ್ತಿದೆ. ಯುದ್ಧ ಹತ್ಯಾರುಗಳನ್ನು ತಯಾರಿಸುವ ಅಲ್ಲಿಯ ಕಾರ್ಖಾನೆಗಳಲ್ಲಿ ದಿನದ ಎಂಟೂ ತಾಸು ಬಿಡುವಿಲ್ಲದೆ ಕೆಲಸ ನಡೆದೇ ಇದೆ; ಇವರಿಗೆ ಒಳ್ಳೆಯ ತಲಬೂ ಕೊಡಲಾಗುತ್ತಿದೆ.

ಮಿಂಚಿನಂತೆ ಬರಬಹುದು!

"ಮುಂದಿನ ಯುದ್ಧವು ಮಿಂಚು ಬಡೆದಂತೆ, ಪೂರ್ವಸೂಚನೆಯಿಲ್ಲದೆ, ಆಕಸ್ಮಿಕವಾಗಿ ಬರುವುದು!" ಎಂದು ಫ್ರಾನ್ಸಿನ ಯುದ್ಧ ಇಲಾಖಾ ಮಂತ್ರಿಗಳಾದ ಮಾರ್ಶಲ್ ಪಿಟೈನರು ನುಡಿದಿರುವರು. "ಜನರೆಲ್ಲ ಈ ಯುದ್ಧಕ್ಕೆ ಸಿದ್ಧರಾಗಿರಲಿ!" ಎಂದು ಅವರ ಎಚ್ಚರಿಕೆ.

ಅಮೇರಿಕಕ್ಕೆ—

—ವಿಮಾನ 'ಸೈನ್ಯವು ಸಾಲದಂತೆ! ಈಗ ಇರುವ ವಿಮಾನಗಳ ಸಂಖ್ಯೆಯನ್ನು ೨೩೨೦ಕ್ಕೆ ಹೆಚ್ಚಿಸಬಾರದೇ ಎಂದು ಪ್ರಶ್ನೆಯೆದ್ದಿದೆ, ಆಲೋಚಿಸಲಾಗುತ್ತಿದೆ.

ಯುದ್ಧಕ್ಕೆ ಕಾರಣ?

ಈ ಮಹಾಯುದ್ಧವು ಸಂಭವಿಸಲು ಕಾರಣವಾಗುವ ಕಿಡಿಯಾವುದಿರಬಹುದು? ಫ್ರಾನ್ಸ್—ಇಟೀಲಿಗಳೊಳಗಣ ವಿವಾದವಾಗಿರಬಹುದೇ? ಯುದ್ಧಸಾಮಗ್ರಿಗಳ ವಿಷಯವಾಗಿ ಇರುವ ಜರ್ಮನಿಯ ಈ ಸಮಾನತೆಯ ಕೇಳಿಕೆ ಯಾಗಿರಬಹುದೇ? ಅದೇನೂ ಇರಲಿ,-ಇಂದು ಯುರೋಪಿನ ಮಹಾಯುದ್ಧದ ಇಪ್ಪತ್ತೇ ವರ್ಷಗಳ ನಂತರ—ಯುರೋಪಿನ ಎಲ್ಲ ರಾಷ್ಟ್ರಗಳೂ ಆ ಭಾವೀ ಯುದ್ಧಕ್ಕಾಗಿ ಸಿದ್ಧತೆಗಳನ್ನು ನಡೆಸಿವೆ!

ಕಳೆದ ಮಹಾಯುದ್ಧದಲ್ಲಿ ೯ ಮಿಲ್ಲಿಯ ಜನರು ಮಡಿದರು; ೨೧ ಮಿಲ್ಲಿಯ ಜನರು ಜಖಂಗೊಂಡರು. ಇನ್ನು, ಮತ್ತೊಂದು ಮಹಾಯುದ್ಧವಾದರೆ....?

ಮದ್ಯಪಾನ ನಿಷೇಧ.

ಲಂಡನಿನಲ್ಲಿ ಇತ್ತೀಚೆಗೆ ನಡೆದ ಮದ್ಯಪಾನ ನಿಷೇಧ ಕೊಂಗ್ರೆಸ್ಸಿನ ಕಾರ್ಯಕ್ರಮವು ಸ್ವಾರಸ್ಯವುಳ್ಳದ್ದಾಗಿದೆ. ಈ ಕೊಂಗ್ರೆಸ್ಸು ಸ್ಥಾಪಿತವಾಗಿ ಸುಮಾರು ೭೫ ವರುಷಗಳಾದುವು. ಈ ವರುಷದ ಕೂಟವು ಇದರ ೩೦ನೇ ಅಧಿವೇಶನ. ಸಭೆಯಲ್ಲಿ ೨೬ ರಾಷ್ಟ್ರಗಳ ಪ್ರತಿನಿಧಿಗಳು ಬಂದು ಸೇರಿದ್ದರು. ಹಿಂದುಸ್ಥಾನದ ವಿಷಯ ಈ ಸಭೆಯಲ್ಲಿ ಏನು ಹೇಳಲ್ಪಟ್ಟಿದೆಯೋ ಅದನ್ನು ಮಾತ್ರ ಇಲ್ಲಿ ಕೊಟ್ಟಿದೆ.

ಸರ್ ರೋಜರ್ಸ್ಸರು ತನ್ನ ಇಂಡಿಯದ ಅನುಭವದ ಮೇಲೆ ಮಾತಾಡಿದರು. ಅವರು ಇಂಡಿಯಾಕ್ಕೆ ಬಂದ ಸಮಯದಲ್ಲಿ, ವ್ಹಿಸ್ಕಿಯನ್ನು ತೆಗೆದುಕೊಳ್ಳದಿದ್ದರೆ ಇಂಡಿಯಾದಲ್ಲಿ ಬದುಕುವುದು ಅಸಾಧ್ಯವೆಂದು ಅವರೊಡನೆ ಅವರ ಸ್ನೇಹಿತರು ಹೇಳಿದ್ದರು. ಇದು ಸುಳ್ಳೆಂದು ಅವರಿಗೆ ತಮ್ಮ ಸ್ವಂತ ಅನುಭವದಿಂದ ವ್ಯಕ್ತವಾಯಿತು. ಹಿಂದೂದೇಶದವರಲ್ಲಿ ಅತಿಥಿಗಳಿಗೆ ಮದ್ಯವನ್ನು ಕೊಡುವ ಸಮಾಜ ಪದ್ಧತಿಯು (?) ಅತಿ ಹೀನ ಮತ್ತು ಅಪಾಯಕರವೆಂದು ಅವರು ಅಭಿಪ್ರಾಯಪಟ್ಟರು.

ಮಾನ್ಯ ಸಿ. ರಾಜಗೋಪಾಲಾಚಾರ್ಯರದೊಂದು ಪತ್ರವು ಕೊಂಗ್ರೆಸ್ಸಿನ ಇದಿರಿನಲ್ಲಿತ್ತು. ಅದರ ಪ್ರತಿಗಳು ಸದಸ್ಯರೊಳಗೆ ಹಂಚಲ್ಪಟ್ಟದ್ದವು. ರಾಜಗೋಪಾಲಾಚಾರ್ಯರು, ಹಿಂದೂದೇಶದವರು ಮದ್ಯಪಾನ ನಿಷೇಧಕರೆಂದೂ, ಅದು ಬರೇ ಕೆಲವರನ್ನು ಮಾತ್ರ ಬಾಧಿಸುತ್ತಿದೆಯೆಂದೂ ಬರೆದಿದ್ದರು. ಹಾಗೆ ಮದ್ಯಪಾಯಿಗಳಾದವರು ಬಡವರಾದರೆ ಆಗ ಪರಿಣಾಮವು ಅನರ್ಥಕರವಾಗುವುದೆಂದೂ ಬರೆದಿದ್ದರು. ಅಭ್ಯಾಸ, ಮತ ಮತ್ತು ಸಮಾಜ ಪದ್ಧತಿ ಇವು ಮೂರೂ ಸಂಪೂರ್ಣ ನಿಷೇಧಕ್ಕೆ ಒಪ್ಪಿಗೆಯನ್ನು ಕೊಡುತ್ತಿವೆ. ಆದರೆ ಸರಕಾರವು ಅದಕ್ಕೆ ಸಿಗುವ ತೆರಿಗೆಯ ದೆಸೆಯಿಂದ ನಿಷೇಧಕ್ಕೆ ಒಪ್ಪುವುದಿಲ್ಲ.

ಹೊರಗಿನಿಂದ ಬರುವ ಮದ್ಯಪಾನಗಳ ಮೇಲಿನ ಸುಂಕವು ಕೇಂದ್ರ ಸರಕಾರಕ್ಕೂ ಸ್ಥಳೀಯ ಮದ್ಯಪಾನಗಳ ಮೇಲಿನ ತೆರಿಗೆಯು ಪ್ರಾಂತಿಕ ಸರಕಾರಕ್ಕೂ ಸಲ್ಲುತ್ತಿದೆ. ಸ್ಥಳೀಯ ಮದ್ಯಪಾನಗಳ ಮೇಲಿನ ತೆರಿಗೆಯು ಸರಕಾರದ ಆದಾಯಕ್ಕಾಗಿ ಅಲ್ಲ. (ಇದು ಸರಕಾರದ ವಾದ) ಅದು ಎಲ್ಲಾ ಜನರು ಮದ್ಯಗಳನ್ನು ತಯಾರು ಮಾಡದಂತೆ ಬಂದೋಬಸ್ತಿಗಾಗಿ(!) ಅಂತೂ ಬರುವ ತೆರಿಗೆ ಹಣವನ್ನು ನೆನಸಿದೊಡನೆ ಮದ್ಯಪಾನ ನಿಷೇಧ ವಿಚಾರವು ತೀರಾ ಮರೆತು ಹೋಗುವುದು. ಸರಕಾರಕ್ಕೆ ಸಿಗುವ ತೆರಿಗೆಯು ಮಿಲಿಯಗಟ್ಟಲೆ ಜಾಸ್ತಿಯಾಗುತ್ತಿದೆ. ೧೯೦೦ನೇ ಇಸವಿಯಲ್ಲಿ ಸಿಕ್ಕದ ರೂ. ೩೦ ಮಿಲಿಯ. ೧೯೩೦ರಲ್ಲಿ ೨೩೮ ಮಿಲಿಯ. ಇಷ್ಟು ದೊಡ್ಡದಾದ ಆದಾಯವನ್ನು ಒಂದೇ ಸವನೆ ಕಳಕೊಳ್ಳಲಾರೆವೆಂದು ಸರಕಾರದವರ ವಾದ. ಆದರೆ ಈಗ ನ್ಯಾಯವಲ್ಲದ ಖರ್ಚುಗಳೆಷ್ಟೂ ನಡೆಯುತ್ತಿವೆ. ದೃಷ್ಟಾಂತವಾಗಿ ಸೈನ್ಯದ ಖರ್ಚು. ಇದನ್ನು ಏತಕ್ಕೆ ಕಡಿಮೆ ಮಾಡಬಾರದು? ಸರಕಾರವು ತಾನು ಹಲವು ಮದ್ಯದ ಅಂಗಡಿಗಳನ್ನು ಮುಚ್ಚಿರುವುದಾಗಿ ಹೇಳುತ್ತದೆ. ಆದರೆ ಇದು ನಿಜವಾದ ಸಂಗತಿಯಲ್ಲ. ಬೊಂಬಾಯಿ ಪ್ರಾಂತಿಕ ಸರಕಾರವು ಹಲವು ಅಂಗಡಿಗಳನ್ನು ಇತ್ತೀಚೆಗೆ ಹೆಚ್ಚಿಸಿರುತ್ತದೆ ಎಂದು ತಿಳಿದು ಬರುವುದು.

ಹಿಂದೂದೇಶದ ಮಹಾಜನವು ಮೊದಲಿನಿಂದಲೂ ಸಂಪೂರ್ಣ ನಿಷೇಧಕ್ಕೆ ತನ್ನ ಸಹಿಯನ್ನು ಕೊಟ್ಟಿತ್ತು. ಗೋಖಲೆಯವರು ೧೯೧೨ನೇ ಇಸವಿಯಲ್ಲಿ ಅದನ್ನು ಸೂಚಿಸಿದ್ದರು. ೧೯೨೫ನೇ ಇಸವಿಯಲ್ಲಿ ೩೦,೦೦೦ ಮಹಿಳೆಯರ ಸಹಿಯು ಮದ್ಯಪಾನ ಸಂಪೂರ್ಣ ನಿಷೇಧ ಪತ್ರಕ್ಕೆ ಹಾಕಲ್ಪಟ್ಟಿತು. ೧೯೩೧ರಲ್ಲಿ ಸರ್ವ ಪಕ್ಷೀಯ ಪರಿಷತ್ತಿನವರು ಮದ್ಯಪಾನ ನಿಷೇಧವನ್ನು ಮುಖ್ಯವಾಗಿಟ್ಟುಕೊಂಡು ಇಂಡಿಯಕ್ಕೊಂದು ಚಲನಾಕ್ರಮ (Constitution)ವನ್ನು ತಯಾರಿಸಿದರು. ಈಗ ಅಂದರೆ ೧೯೧೯ನೇ ಇಸವಿಯ ನಂತರ ಅಬ್ಕಾರೀ ಇಲಾಖೆಯು ಜವಾಬ್ದಾರೀ (responsible) ಮಂತ್ರಿಗಳ ಕೈಯಲ್ಲಿದೆಯಾದರೂ ಮದ್ಯಪಾನ ನಿಷೇಧವೇಕೆ ಸೂಚಿಸಲ್ಪಡುವುದಿಲ್ಲ? ಕಾರಣವನ್ನು ಹುಡುಕಲು ದೂರ ಹೋಗಬೇಕಾದುದಿಲ್ಲ. ಆ ಇಲಾಖೆಯ ಮೇಲೆ ಜವಾಬ್ದಾರೀ ಮಂತ್ರಿಗಳಿಗೆ ಪೂರ್ಣ ಅಧಿಕಾರವಿದೆಯೆಂಬುದು ಮಿಥ್ಯ. ಕೇಂದ್ರ ಸರಕಾರವು ತನ್ನ ಸುಂಕವನ್ನು ಬಿಡಲೊಲ್ಲದು. ಪ್ರಾಂತಿಕ ಸರಕಾರಕ್ಕೆ ತನ್ನ ತೆರಿಗೆಯನ್ನು ಬಿಟ್ಟುಬಿಡುವ ಮನಸ್ಸಿಲ್ಲ. ಅಂತೂ ಒಂದೆರಡು ಪ್ರಾಂತಿಕ ಸರಕಾರಗಳಾದರೂ ಮದ್ಯಪಾನ ನಿಷೇಧ ಕಾರ್ಯಕ್ಕೆ ಆರ್ಥಿಕ ಸಹಾಯವನ್ನು ಮಾಡುವಂತೆ ತೋರಿಸುತ್ತಿರುವುದು ಸ್ತುತ್ಯ. ಮದ್ರಾಸು ಸರಕಾರವೂ ಸ್ವಲ್ಪ ಸಹಾಯವನ್ನು ಮಾಡಿದೆ.

ಆಚಾರ್ಯರು ಹಿಂದೂ ನೇಶನಲ್ ಕಾಂಗ್ರೆಸು ಸಂಪೂರ್ಣ ನಿಷೇಧವನ್ನೇ ಎತ್ತಿ ಹಿಡಿಯುವುದೆಂದೂ ಮತ್ತು ಎಂದಾದರೊಂದು ದಿನ ಹಿಂದುಗಳು ಸ್ವತಂತ್ರರಾದಾಗ ಸಂಪೂರ್ಣ ನಿಷೇಧವನ್ನೇ ಅನುಸರಿಸುವರೆಂದೂ ಹೇಳಿ ತಮ್ಮ ಪತ್ರವನ್ನು ಮುಗಿಸಿದ್ದರು.

ರೆವರೆಂಡ್ ಹರ್ಬರ್ಟ್ ಎಂಡರ್‌ಸನ್‌ರವರು, ಹಿಂದೂಸ್ಥಾನವೂ ಮದ್ಯನಿಷೇಧವೂ ಎಂಬ ವಿಷಯದ ಮೇಲೆ ಮಾತನಾಡಿದರು. ಮದ್ಯಪಾನ ನಿಷೇಧದ ಕುರಿತು ಸರಕಾರದ ಅಲಕ್ಷ್ಯವನ್ನು ಖಂಡಿಸಿದರು. ಹಿಂದೂ ದೇಶದಲ್ಲಿ ಪ್ರತಿ ೧೦೦ ಜನರಿಗೆ ೩ ಗೆಲನ್ ಮದ್ಯದಂತೆ ಖರ್ಚಾಗುವುದನ್ನು ನೋಡಿ ನಾವು ಅದನ್ನು ಅಲ್ಪವೆಂದು ಗ್ರಹಿಸಬಹುದು. ಆದರೆ ಅವರ ಸಂಪಾದನೆಯ ಕಡೆಗೆ ದೃಷ್ಟಿಯಿಟ್ಟಲ್ಲಿ ಈ ಮದ್ಯವು ಅವರ ಅರ್ಥ ಸಂಪಾದನೆಯನ್ನು ನುಂಗಿಬಿಡುವುದು. ಅರ್ಥಾತ್ ಇಷ್ಟು ಮದ್ಯಸೇವನೆಯ ಪರಿಣಾಮವಾಗಿ ಎಷ್ಟೋ ಬಡ ಕುಟುಂಬಗಳು ಉಪವಾಸ ಬೀಳಬೇಕಾಗುವುದು. ಹಿಂದೂದೇಶದ ಪ್ರತಿಯೊಂದು ಮತವು ಮದ್ಯಪಾನ ನಿಷೇಧವನ್ನು ಸಾರುತ್ತಿದೆ. ಹೀಗಿರುವಾಗ ಇಂತಹದೊಂದು ದೇಶದಲ್ಲಿ ಮದ್ಯಪಾನ ನಿಷೇಧವು ಆಗಲಿಲ್ಲವಾದರೆ ಅದಕ್ಕೆ ಸರಕಾರದವರ ಅಸಡ್ಡೆಯೇ ಕಾರಣ. ಸರಕಾರಕ್ಕೆ ಈ ತೆರಿಗೆಯನ್ನು ಮನ್ನಾಮಾಡಿದರೆ ಆಗುವ ನಷ್ಟವನ್ನು ತುಂಬಿಸುವುದರ ಸಲುವಾಗಿ ಈಗ ೫೦ ವರುಷಗಳಲ್ಲಿ ನಾಲ್ಮಡಿ ಹೆಚ್ಚಿದ ದುಬಾರಿ ಸೈನ್ಯದ ಖರ್ಚನ್ನು ತುಂಬಾ ತಗ್ಗಿಸಬಹುದು. ಇವರು ಇನ್ನೂ ಅನೇಕ ವಿಷಯಗಳನ್ನು ಹೇಳಿ ಹಿಂದೂ ದೇವರಲ್ಲಿ ತನ್ನ ಒಲವು ಸಂಪೂರ್ಣವುಂಟೆಂದು ಹೇಳಿದರು.

ರಂಗ ಅಯ್ಯರರ ದೇವಾಲಯ ಪ್ರವೇಶದ ಮಸೂದೆಯು ಹಿಂಪೆಗೆಯಲ್ಪಟ್ಟಿತು.

ಶ್ರೀಮಾನ್ ರಂಗ ಅಯ್ಯರರು ಕಳೆದ ವರ್ಷ ಎಸೆಂಬ್ಲಿಯಲ್ಲಿ ತಂದಿದ್ದ ದೇವಾಲಯ ಪ್ರವೇಶದ ಮಸೂದೆಯು, ಸದಸ್ಯರ ಯಾ ಸರಕಾರದ ಬೆಂಬಲವಿಲ್ಲವೆಂದು ಹಿಂದೆಗೆಯಲ್ಪಟ್ಟಿತು. ಸರಕಾರದ್ದು ಈ ಮಸೂದೆಯ ವಿಷಯವಾಗಿ ಜನಮತವನ್ನು ಸಂಗ್ರಹಿಸಿದುದರ ಫಲಿತಾಂಶವೆಂದರೆ "ಬಹುಮತವು ಮಸೂದೆಗೆ ವಿರುದ್ಧವಾಗಿದೆ"ಯೆಂಬುದು.

ಅನಾವಶ್ಯಕವಾಗಿ, ಕಾರಣವಿಲ್ಲದೆ, ಕೆರಳಿಸಲ್ಪಡದೆ, ರಂಗ ಅಯ್ಯರರು ಕೊಂಗ್ರೆಸ್ಸನ್ನೂ ಗಾಂಧಿಜಿಯವರನ್ನೂ ದೂರಿ, ಅನೇಕ ಮೆಂಬರರ ಅಸಮಾಧಾನಕ್ಕೆ ಪಾತ್ರರಾದರು.

ಮಸೂದೆಯು ಚರ್ಚೆಯೆದ್ದಾಗ ಸರ್ ಮಹಮುದ್ ಯಾಕೂಬರು ಎದ್ದು, ಹರಿಜನರು ತಲೆಕರಡು ಮಾಡಿಕೊಳ್ಳುವ ಬದಲಾಗಿ ಇಸ್ಲಾಮನ್ನು ಸೇರಲೆಂದು ಸೂಚಿಸಿ ಸುಮ್ಮನಾದರು.

ಹಿಂದೂದೇಶದಲ್ಲಿನ ಚಳವಳ, ಸಂಕಷ್ಟಗಳಿಗೆ ಕಾರಣಭೂತರು ಗಾಂಧಿಜಿಯವರೆಂದು ರಾಜಾ ಬಹದೂರ್ ಕೃಷ್ಣಮಾಚಾರ್ಯರ ಅದ್ಭುತ ಶೋಧ!

ಹರಿಜನರ ಪರವಾಗಿ ಸದಸ್ಯರಾಗಿರುವ ಎಮ್. ಸಿ. ರಾಜರವರು, ಗಾಂಧಿಜಿಯವರು ಹರಿಜನ ಬಂಧುವೆಂದು ಹೊಗಳಿ ಮಾತಾಡಿದ್ದರಷ್ಟೆಯಲ್ಲದೆ, ಕೆಲವು ಸನಾತನಿಗಳ ಕೈಕೆಳಗೆ ಹರಿಜನರು ಪಟ್ಟ—ಪಡುವ—ಕಷ್ಟಗಳನ್ನೂ ಹೇಳಿ ಭಾಷಣ ಮಾಡಿದರು.

ಗೃಹ ಮಂತ್ರಿಗಳು ಮಸೂದೆಯನ್ನು ವಿರೋಧಿಸಿದರು. "ಜನರು ವಿರೋಧ ಭಾವನೆಯನ್ನು ಪ್ರಕಟಿಸಿರುವರು. ಹರಿಜನರಲ್ಲೂ ಕೂಡ ಉತ್ಸಾಹವಿಲ್ಲ" ವೆನ್ನುತ್ತ ರಂಗ ಅಯ್ಯರರು ತಮ್ಮ ಮಸೂದೆಯನ್ನು ಹಿಂದೆಗೆದು, ಕೈ ತೊಳೆದುಕೊಂಡರು.

ಲೋಧ್ರ

ಸುಪ್ರಸವಕ್ಕಾಗಿ ದಿವ್ಯ ಟಾನಿಕ್.

ಸ್ತ್ರೀಯರಿಗೊಂದು ಮಹಾ ವರ.

ಯಾವ ತರದ ಅಥವಾ ಎಲ್ಲಾ ತರದ ಮುಟ್ಟು ದೋಷ, ಮುಟ್ಟಾಗುವುದರಲ್ಲಿ ನೋವು, ಅಕ್ರಮ ತರದ ಮತ್ತು ಮುಟ್ಟಾಗದಿರುವಿಕೆ, ಬಿಳಿ ಸೆರಗು, ಗರ್ಭಕೋಶದ ದೋಷ ಅಶುದ್ಧ ಮುಟ್ಟು, ಬಂಜೆತನ, ಸೂತಿಕಾವಾಯು, ಅಶುದ್ಧರಕ್ತ, ಮೇರೆ ದಾಟಿ ಅಥವಾ ಬೇಕಾದಷ್ಟು ಮುಟ್ಟಾಗದಿರುವುದು, ಸ್ತ್ರೀಯರ ಅಂಗಾಂಗಗಳ ಇನ್ನಿತರ ಅನೇಕಾನೇಕ ರೋಗಗಳುಳ್ಳ ಸ್ತ್ರೀಯರನ್ನು ಈ ಔಷಧಿಯು ಸಂಪೂರ್ಣ ಗುಣಗೊಳಿಸಿರುತ್ತದೆ.

ಲೋಧ್ರ

ಎರಡು ಸೈಜಿನಲ್ಲಿ ದೊರೆಯುತ್ತದೆ. ರೂ. 8 ಮತ್ತು 1–10–0

ಕೇಸರಿ ಕುಟೀರಂ

ಇಂಡಿಯನ್ ಕೆಮಿಸ್ಟ್ಸ್ ಮತ್ತು ಡ್ರಗಿಸ್ಟ್ಸ್, ಎಗ್ಮೋರ್ ಮದರಾಸು,

Sole Agents for West Coast and North Kanara:—

Wanted Agents in Principal Towns. ಪೊಪ್ಯುಲರ್ ಸ್ಟೋರ್ಸ್,

For terms Apply to:—Popular Stores, Mangalore. ರಥಬೀದಿ ಮಂಗಳೂರು.

WE HOLD IN STOCK OF

English into Kanarese Teacher
Hindi into Kanarese Teacher
Marathi into Kanarese Teacher
Marathi into Gujarathi Teacher
Novels and well known Dramas in Hind. and all sorts of books for Schools and Colleges.

Wanted Agents and Canvassors throughout Karnatak districts.

Apply for full particulars with 1¼ Annas Stamp:—

THE MANAGER
The National Kanara News Agency
Sir Phirojsha Metha Road,
Fort Bombay

ನಿಮ್ಮ ಸಿದ್ಧತೆಯಾಗಿದೆಯೇ?



ನೆಲಗಡಲೆ ಸುಲಿಯುವ ಋತುವು ಈಗಾಗಲೆ ಆರಂಭವಾಗುವುದು. ಅದು ಕಾರಣ, ಯಾವ ವಿಳಂಬವೂ ಇಲ್ಲದೆ, ಋತು ಆರಂಭದಲ್ಲೇ ನಿಮ್ಮ ಕಾರ್ಯಾರಂಭವನ್ನೂ ಮಾಡಲು ಈಗಲೇ ನಿಮ್ಮ ಯಂತ್ರಗಳನ್ನು ಕೊಂಡುಕೊಂಡು ಇಟ್ಟುಕೊಳ್ಳುವುದುತ್ತಮ. ನೀವು ಯಾವ ಯಂತ್ರವನ್ನು ಬಯಸುವಿರಿ? ಅಥಾತ್ ಸರ್ವತ್ರ ಹೆಸರುಹೊಂದಿದ–

ಕಿರ್ಲೋಸ್ಕರ

"ಕಲ್ಯಾಣ" ನೆಲಗಡಲೆ ಯಂತ್ರ.

ಇದು ಪೂರ್ಣ ಸುಧಾರಣೆಗಳನ್ನೊಳಗೊಂಡಿದ್ದು, ಚಲಿಸಲು ಸುಲಭವಾಗಿರುವಂತೆ ಕಡಿಮೆ ಖರ್ಚಿನಲ್ಲಿ ಹೆಚ್ಚು ಲಾಭಬರುವಂತೆ ಕೆಲಸ ಮಾಡಬಲ್ಲುದು. ಸಂಪೂರ್ಣ ವಿವರಕ್ಕೆ ನಮಗೆ ಬರೆಯಿರಿ:

ಕಿರ್ಲೋಸ್ಕರ ಬ್ರದರ್ಸ್, ಲಿಮಿಟೆಡ್, ಕಿರ್ಲೋಸ್ಕರವಾಡಿ.

ಯಂತ್ರ ದೊರೆಯುವ ಸ್ಥಳ:—ಮೆಸರ್ಸ್ ಪೆರ್ರಿ ಎಂಡ್ ಕೊ, ಲಿಮಿಟೆಡ್,
ಮೌಂಟ್ ರೋಡ್, ಮದ್ರಾಸ್.

ಫಲಸಾರಯುಕ್ತ ಟೊನಿಕ್.

ಕಿತ್ತಳೆ ಮತ್ತು ಮಹಾಫಲ ಹಣ್ಣುಗಳ ಸಾರದೊಂದಿಗೆ ಎಲ್ಲ ಬಗೆಯ ಲವಣಗಳನ್ನೂ (ಶುದ್ಧ ದೇಶೀ) ಮೂಲಿಕೆಗಳನ್ನೂ ಸೇರಿಸಿ ತಯಾರಿಸಲಾದುದು. ಸೇವಿಸಲು ರುಚಿಕರ. ಅಜೀರ್ಣ, ಮಲಬದ್ಧತೆ, ಆಮವಾತ ಇತ್ಯಾದಿಗಳನ್ನು ಹೋಗಲಾಡಿಸುವುದು. ಹಸಿವನ್ನು ಹೆಚ್ಚಿಸಿ, ರಕ್ತಶುದ್ಧಿಯನ್ನುಂಟುಮಾಡುತ್ತದೆ. 12 ಸಾರಿ ಸೇವಿಸುವ ಬಾಟ್ಲಿಯ ಕ್ರಯ ರೂ. 1 (ಒಂದು ಮಾತ್ರ).

ಮಿನರಲ್ ಟೋನಿಕ್ ಮಾತ್ರೆಗಳು.

ರಕ್ತ ಶುದ್ಧಿಗೂ ವೃದ್ಧಿಗೂ—ಉತ್ತಮವಾದ ಲೋಹಧಾತುಗಳಿಂದ ತಯಾರಿಸಲ್ಪಟ್ಟುದು. ಮೂತ್ರಕೋಶ ಮತ್ತು ಕರುಳುಗಳನ್ನು ಕ್ರಮಪಡಿಸಿ, ದೇಹವನ್ನು ಪುಷ್ಟಿಗೊಳಿಸಿ, ತಂಪನ್ನುಂಟುಮಾಡುವುದು. ಚೈತನ್ಯ—ಉತ್ಸಾಹ—ಪುಂಶಕ್ತಿಗಳು ಖಂಡಿತ ಪ್ರಾಪ್ತಿಯಾಗುವುವು. 12 ಮಾತ್ರೆಗಳ ಬಾಟ್ಲಿಗೆ ರೂ. 1 ಮಾತ್ರ. (ಪತ್ರವ್ಯವಹಾರ ಇಂಗ್ಲೀಷಿನಲ್ಲಿ.) ವಿಳಾಸ:—

Non-Pareil Stores,
Big Street, (s. m.) Triplicane,
MADRAS.

ಕ್ಷಯಕ್ಷೀಣಾದಿಗಳಿಗೆ
ಚ್ಯವನಪ್ರಾಶಾವಲೇಹ.

ಪ್ರಸೂತಿ ರೋಗಾದಿಗಳಿಗೆ
ದಶಮೂಲಾರಿಷ್ಟ.
(ಕಸ್ತೂರಿ ಮಿಶ್ರಣ)

ಸಮಸ್ತ ವಾತರೋಗಗಳಿಗೆ
ಮಹಾನಾರಾಯಣ ತೈಲ.

ಶ್ರೀ ರಾಮಕೃಷ್ಣ ಧರ್ಮವೈದ್ಯಾಶ್ರಮ ಸಂಘ, ಡೊಂಗರಕೇರಿ ರಸ್ತೆ, ಮಂಗಳೂರು.

ಚಿತ್ರಾಯುತ ಸಹೋತ
ಋಗ್ವೇದೀ ಸಂಧ್ಯಾವಂದನೆ.
(ವೈಷ್ಣವರಿಗೆ_ಊರ್ಧ್ವಪುಂಡ್ರ_ಮುದ್ರಾಧಾರಣ ವಿಧಿ)
ಸ್ಮಾರ್ತರಿಗೆ_ಭಸ್ಮಧಾರಣ ವಿಧಿ, ಕೂಡಿ)
ಎಂ. ನರಸಿಂಗರಾವ್, ಬಿ. ಎ., ಎಂ. ಎಲ್.
ಅವರಿಂದ ರಚಿತವಾದ
ಪ್ರತಿಪದಾರ್ಥಟೀಕಾ ವಿಧಿಸಹಿತ.
ಬೆಲೆ ಆಣೆ 8.
(30, 60, 100 ಪ್ರತಿಗಳನ್ನು ಒಮ್ಮೆಲೆ ಪಡಕೊಳ್ಳುವವರಿಗೆ ಪ್ರತ್ಯೇಕ ಡಿಸ್ಕೌಂಟು)
ವಿಳಾಸ:— ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು.

ನಮ್ಮ ಸಲಹೆಯೇ ಪ್ರಾಧಾನ್ಯವಾದದ್ದೆಂದು ತಿಳಿಯಬೇಡಿ.

ಕಲ್ಲಿಕೋಟೆ ಅಶೋಕ ಆಸ್ಪತ್ರೆಯ ಚೀಫ್ ಮೆಡಿಕಲ್ ಆಫೀಸರರಾದ ಡಾ. ವಿ. ಬಿ. ರಾಮನ್, ಎಂ. ಆರ್., ಸಿ. ಎಸ್. ಇವರು ಬರೆದಿರುವುದನ್ನು ಓದಿ ನೋಡಿ—"ನಾನು ನಿಮ್ಮ ಆಶ್ಚರ್ಯಕರವಾದ ಜೀವಾಮೃತಂ ಟಾನಿಕನ್ನು ನರಗಳಲ್ಲಿ ಉರಿತ ಇರಿತ ಹಸಿವು ಕಡಿಮೆಯಾಗಿರುವುದು, ಕೂಳವು ಕಡಿಮೆಯಾಗಿರುವುದು, ಇವು ಪ್ರಾಪ್ತವಾಗಿರುವ ಅನೇಕ ರೋಗಿಗಳಿಗೆ ಕೊಟ್ಟಿರುತ್ತೇನೆ. ಅದರ ಫಲಿತಾಂಶಗಳು ಬಹು ತೃಪ್ತಿಕರವಾಗಿದೆ. ಜೀವಾಮೃತವನ್ನು ದೇಹಶಕ್ತಿ ಕುಗ್ಗಿರುವ ಎಲ್ಲಾ ಸಂದರ್ಭಗಳಲ್ಲೂ ಸರ್ವೇ ಸಾಮಾನ್ಯವಾಗಿ ಉಪಯೋಗಿಸಬಹುದೆಂದು ನಾನು ಮನಃಪೂರ್ವಕವಾಗಿ ಶಿಫಾರಸು ಮಾಡುತ್ತೇನೆ"

ಜೀವಾಮೃತವು

ನರಗಳಿಗೆ ಶಕ್ತಿ ಕೊಡುತ್ತದೆ. ವೀರ್ಯ ವೃದ್ಧಿಮಾಡುತ್ತದೆ. ಹಸಿವು ಹೆಚ್ಚಿಸುತ್ತದೆ. ರಕ್ತ ವೃದ್ಧಿಮಾಡುತ್ತದೆ.

ಪಂಡಿತ ಡಿ. ಗೋಪಾಲಾಚಾರ್ಲುರವರ **ಜೀವಾಮೃತವು**

ಎಲ್ಲಾ ಔಷಧ ಮಾರುವವರಲ್ಲೂ, ಸ್ಟೋರುಗಳಲ್ಲೂ ದೊರೆಯುತ್ತದೆ. (ಸಂಪೂರ್ಣ ವಿವರಗಳಿಗೆ ಇವತ್ತೇ ಬರೆಯಿರಿ)

ಆಯುರ್ವೇದಾಶ್ರಮಂ, ಪೋ. ಬಾಕ್ಸು ನಂ. ೩೮೭, ಮದ್ರಾಸು.

ಸೋಲ್ ಏಜಂಟರು:— ಸಿಟಿ ಮೆಡಿಕಲ್ ಮತ್ತು ಜನರಲ್ ಏಜನ್ಸಿ, ೯೨ ಚಿಕ್ಕಪೇಟೆ ಬೆಂಗಳೂರು. (ಉಡುಪಿ ಹೋಟೆಲ್ ಹತ್ತಿರ)
ದಕ್ಷಿಣ ಕನ್ನಡದ ಏಜಂಟರು— ಪೊಪ್ಯುಲರ್ ಸ್ಟೋರ್ಸ್, ಮಂಗಳೂರು. P. No. 104

FOR
High Class Printing
ART OR ORDINARY
CONSULT US
The Sharada Press, Mangalore.

An Advertisement in 'Swadeshabhimani'

Means a sure fortune to you

Ask for Contract Rates.

The Swadeshabhimani office,
Car Street, Mangalore.

Preserve Your Wealth by BIRTH-CONTROL.

ದೇಶದ ಐಶ್ವರ್ಯವನ್ನು ಮಿತಸಂತತಿಯಿಂದ ಕಾದಿಡಿ.

ಮೂರೇ ಮೂರು ರೂಪಾಯಿಗಳಿಂದ ಸ್ತ್ರೀಯರಿಗೆ ಪ್ರಸವಭಯವನ್ನು ನಿಲ್ಲಿಸುವುದು. ಬೇಕಾದ್ದಲ್ಲಿ ತಿರಿಗಿ ಗರ್ಭವಾಗುವಂತೆ ಔಷಧವಿದೆ.

ವರ್ಷಕ್ಕೊಂದರಂತೆ ಹೆತ್ತು ತಾಯಿ—ಮಕ್ಕಳು ನರಳದಂತೆ ದೂರ ದೂರ ಮಾಡುವುದು. ಆರೋಗ್ಯಕ್ಕೆ ಹಾನಿಯಿಲ್ಲ.

ವಿಳಾಸ:—ಪಂಡಿತ ಕೆ. ನಾರಾಯಣರಾವ್,
ಆಯುರ್ವೇದ ಫಾರ್ಮಸಿ, ಕಾರ್ಕಳ, ದ. ಕ.

[N. B.—ಉತ್ತರವನ್ನಪೇಕ್ಷಿಸುವವರು ಒಂದಾಣೆಯ ಅಂಚೆ ಸ್ಟಾಂಪಿನೊಂದಿಗೆ ಬರೆಯಬೇಕು.]

ಸೈಂಟಿಫಿಕ್ ಸ್ವರ್ಣಾಭರಣಗಳು

(ನಿಜವಾದ ಬಂಗಾರಕ್ಕೆ ಬದಲಾಗಿ ಇವು ತಯಾರಿಸಲ್ಪಟ್ಟಿವೆ.)

ಹೈಕೋರ್ಟು ಜಡ್ಜರುಗಳಿಂದಲೂ, ಸರಕಾರದ ಮಂತ್ರಿಗಳಿಂದಲೂ, ಇತರ ಪ್ರಮುಖರಿಂದಲೂ ಕೊಂಡಾಡಲ್ಪಟ್ಟಿವೆ.

ಪತ್ರವ್ಯವಹಾರವನ್ನು ಇಂಗ್ಲಿಷಿನಲ್ಲೇ ಮಾಡಬೇಕು.

ಹೊಸ ಕೆಟಲಾಗು ಧರ್ಮಾರ್ಥ.

ವಿಳಾಸ:–

The Scientific Gold Bangles Co., Ltd.,
Head Office:—43, Byragimatam Street,
Post Box No. 203, Madras.

ಜ್ಞಾನ

(ಪ್ರಬಂಧಮಾಲೆ)

ಲೇಖಕರು— ಶ್ರೀ ಶಿವರಾಮ ಕಾರಂತ

ಅಧ್ಯಾಯ ೧೨

ಹೆಂಗಸು—ಪ್ರಶ್ನೆಗಳು.

ಈ ಮೊದಲಿನ ಅಧ್ಯಾಯದಲ್ಲಿ ಹೆಣ್ಣು ಗಂಡಿನ ಕೇವಲ ಪ್ರಾಣಿಯ ಕೂಟವನ್ನು, ಅಥವಾ ಯಾಂತ್ರಿಕ ಮಿಲನವನ್ನು ಕುರಿತು ಹೇಳಿದುದಾಯಿತು. ಅವರಿಗೆ ಆತ್ಮವಿರುವುದೆಂಬುದ ರಿಂದ (ಹೆಣ್ಣಿಗೆ ಆತ್ಮವಿರಲೇ ಬೇಕೆಂಬ ನಿಯಮವಿಲ್ಲ)—ಅವರ ಆತ್ಮ ಉನ್ನತಿಗೆ ಕಾರಣವಾದ ಸಾತಿವ್ರತ್ಯ, ಪಾತಿವ್ರತ್ಯ, ಹೆಂಗಸು—ಪ್ರಶ್ನೆಗಳೂ ಹೇಗಿರಬೇಕು ಎಂಬ ಸಂಗತಿಯನ್ನು ಸ್ವಲ್ಪ ವಿಮರ್ಶಿಸುವ.

ಈ ವಿಷಯವಾಗಿ 'ಸ್ತ್ರೀಧರ್ಮ ರಹಸ್ಯ' ಎಂಬ ಅಧ್ಯಾಯದಲ್ಲಿ ಹೆಚ್ಚಾಗಿ ಹೇಳುವೆವು. ಅದು ಕೇವಲ ಆದರ್ಶ ಭಾರತ ಮಹಿಳೆಯರ ಸಲುವಾಗಿ ಇದೆಯೆಂದೂ—ಆರ್ಯಾವರ್ತದ ಹೊರಗಿನ ಪದ್ಧತಿಗಳು ಇದರಿಂದ ಭಿನ್ನವಾಗಿದೆಯೆಂದೂ ತಿಳಿಯುವುದು ಅವಶ್ಯ. ಇದರಿಂದ—ಈ ವಿದೇಶೀಯ ಹೆಂಗಂಪ್ರತೆಗಳಿಗೆ—ಸ್ವರ್ಗ, ಮೋಕ್ಷಗಳೆರಡೂ ಇಲ್ಲ ಎಂಬ ವಿಚಾರ ತಿಳಿದಿರುವುದು ಅವಶ್ಯ.

ಈ ಅಧ್ಯಾಯದಲ್ಲಿ ದಾಂಪತ್ಯ ನೀತಿಯಾಗಲಿ, ವಿವಾಹ ಸಂಸ್ಥೆಯಾಗಲಿ ಹೇಗೆ ಆಗಿರಬಹುದು, ಬೆಳೆಯದ ಇತರ ಸಮಾಜಗಳಲ್ಲಿ ಹೇಗಿದೆ—ಎಂಬ ವಿಚಾರ ಮಾಡುವ. ಇದರ ಮೂಲಚಿತ್ರವನ್ನು ಕಾಣಲು, ಸುಧಾರಿಸಿದ ಸಮಾಜಗಳು ಉಪಯೋಗವಿಲ್ಲ. ತೀರಾ ಕಾಡುಜನರೇ ಬೇಕು. ಇಂಥವರು—ದಕ್ಷಿಣ ಅಮೇರಿಕ, ಮಧ್ಯ ಆಫ್ರಿಕ, ಉತ್ತರ ಆಸ್ಟ್ರೇಲಿಯಗಳಲ್ಲೂ, ಯಾವತ್ತು ಸೌತ್ ಸೀ ದ್ವೀಪಗಳಲ್ಲೂ ಇರುವರೆಂದು ತಿಳಿದು ಬಂದಿದೆ. ಅವರ ಜೀವನವನ್ನು ಕದ್ದು ನೋಡಲು ಅವಕಾಶವಿದೆ. ಈ ಜನರು ಬಲು ನಾಚಿಕೆಗೆಟ್ಟವರು—ಎಂದು ಭಾರತೀಯರು ತಿಳಿಯುವುದು ಅವಶ್ಯ.

ಸೌತ್ ಸೀ ಜನರಲ್ಲಿ—ಇನ್ನೂ ಸಂತಾನವಾಗುತ್ತಿದೆಯೆಂಬುದಕ್ಕೆ ಈಗ ಹುಟ್ಟುತ್ತಿರುವ ಮಕ್ಕಳೇ ಸಾಕ್ಷಿ. ಆದರೆ ಅವರಲ್ಲಿನ ಸ್ತ್ರೀಯರು ಪುರುಷರಿಂದಾಗಿ ಗರ್ಭ ತಾಳುವುದಿಲ್ಲವೆಂಬೂ, ದೇವರೋ, ದೈವವೊ ಬಂದು ಮಗುವನ್ನು ತಾಯಿಯ ಹೊಟ್ಟೆಯೊಳಗಿರಿಸಿ, ಓಡುವರೆಂದೂ ಹೇಳುತ್ತಾರೆ. ಬರೇ ಹೆರಿಗೆಯು ಕೆಲಸವು ತಾಯಿಯದು. ಆದರೆ ಸ್ತ್ರೀ ಪುರುಷ ಸಂಭೋಗವು ಅವರಲ್ಲಿದೆ. ಆ ಜೀವನದ ಇತರ ಆಟಗಳಂತೆ—ಅದೂ ಒಂದು ವಿಶೇಷ ಪ್ರಾಮುಖ್ಯತೆಯಿಲ್ಲದ ಆಟವಂತೆ.

ಅವರಿಗೆ ತಂದೆಯಿಲ್ಲ. ತಾಯಿಯೇ ಸರ್ವಸ್ವವಂತೆ.

ಅವರಲ್ಲಿ ಮದುವೆಯಿದೆ. ಗಂಡನು ಮಡದಿಯನ್ನು ಮನೆಯ ಅತಿಥಿಗೆ ಎರವಾಗಿ ಕೊಡುತ್ತಾನೆ. ಅದರಿಂದಲೋ ಏನೋ ಅಲ್ಲಿಗೆ ಬಿಳಿ ಜನರು ಬಹಳವಾಗಿ ಹೋಗುತ್ತಿದ್ದಾರೆ.

ಕೆಲವು ಕಾಡುಜನರು—ಭೋಗ ಶಿಕ್ಷಣವನ್ನು ಮುಂದಿನ ದಂಪತಿಗಳಿಗೆ ಕೊಡುತ್ತಾರಂತೆ.

ಇವರೆಲ್ಲ ಬಲು ಕೆಟ್ಟವರಿರಬೇಕು.

ಆದರೂ—ಅವರ ಊರಿಗೆ—ಮೇಹ ಮೊದಲಾದ ದಿವ್ಯ ಬೇನೆಗಳು ಹೆಚ್ಚಿಲ್ಲವೆಂಬುದು ವಿಷಾದಕರ. ಇದನ್ನೀಗ ನಾಗರಿಕರು ಅವರಿಗೆ ಒಪ್ಪಿಸುತ್ತಾ ಬಂದಿದ್ದಾರೆ.

ಈ ಕಾಡುಜನರು ಭೋಗವೆಂದರೆ ಹೆದರುವುದೂ ಇಲ್ಲವಂತೆ! ಮುಗ್ಧರಾಗುವುದೂ ಇಲ್ಲವಂತೆ. ಒಬ್ಬನ ಹೆಂಡತಿಯನ್ನು ಒಬ್ಬನು ಕದಿಯುವುದೂ ಇಲ್ಲವಂತೆ. ಇದರಿಂದಾಗಿ ಒಬ್ಬಳ ಗಂಡನನ್ನು ಇನ್ನೊಬ್ಬಳು ಕದಿಯುವುದೂ ಇಲ್ಲವಂತೆ.

ಕೆಲವು ಪಂಗಡದವರಲ್ಲಿ ಸಾತಿವ್ರತ್ಯವೇ ಮುಖ್ಯವಂತೆ!

ಕೆಲವರಲ್ಲಿ ಪಾತಿವ್ರತ್ಯವು ಕಡ್ಡಾಯವಂತೆ. ಈ ಎರಡು ಪಂಥದವರಿಗೆ ಸ್ವರ್ಗವು ಖಂಡಿತವಾಗಿ ಸಿಗುವುದೆಂದು ಅವರವರ ಶಾಸ್ತ್ರವು ಹೇಳುವುದಿಲ್ಲವಂತೆ!

ಇಷ್ಟಿದ್ದರೂ—ಅವರು ತಮ್ಮ ಮಕ್ಕಳನ್ನ ತಾವೇ ಪ್ರೀತಿ—ಬೆಳೆಗಿಸುತ್ತಾರಂತೆ!

ಕೆಲವು ಕಡೆಗಳಲ್ಲಿ, ಮಕ್ಕಳು ಸಮಾಜದ ಬದುಕುಗಳಂತೆ.

ಈ ಎಲ್ಲ ಕಾರಣಗಳಿಂದ—ಪಂಡಿತರು, ಮನುಷ್ಯನಿಗೂ ಮೊದಲು ವಿವಾಹವೆಂಬೊಂದು ಸಂಸ್ಥೆಯಿದ್ದಿಲ್ಲವೆಂದೂ ಅನಂತರವೇ ಉಂಟಾಯಿತೆಂದೂ ತೀರ್ಮಾನಿಸಿದ್ದಾರೆ! ಆದರೆ ಪಶು ಸಮಾಜದಲ್ಲೂ ಹಾಗೆಯೇ ಇದೆಯಂತೆ. ಆದುದರಿಂದ ಈ ಸಮಾಜವು ಮನುಷ್ಯನಿಗೆ ತೀರ ಸಮೀಪವಾದುದಂತೆ.

ಮನುಷ್ಯನಿಗೆ ಬುದ್ಧಿ ಬರಲು—ತನ್ನ ಮದುವೆಯು ಹುಲಿ ಕರಡಿಯ ಮದುವೆಯಂತೆ, ಬಿಡಗಿಲ್ಲದಿರಬಾರದೆಂದು ವಿವಾಹ ನಿಯಮವನ್ನು ಮಾಡಿದನೆಂದೂ, ಅನಂತರ ಪುರೋಹಿತರು ಬಂದು ಶಾಸ್ತ್ರೋಕ್ತ ಮದುವೆ ಮಾಡಿಸ ತೊಡಗಿದರೆಂದೂ ಹೇಳುತ್ತಾರೆ. ಅದರಿಂದಲೇ ನಮ್ಮ ಇಂದಿನ—ದಕ್ಷಿಣೆ, ವರಮಾನ್ಯ, ವರದಕ್ಷಿಣೆ....ಗಳ ಮದುವೆಯು ಉಂಟಾಯಿತಂತೆ! ಹೀಗೆಲ್ಲಾ ಮಾಡಿದುದರಿಂದ ದಂಪತಿಗಳ ಜೀವನದ ಕಟ್ಟು ಗಟ್ಟಿಯಾಗಿ ಅವರಿಗೆ ಮೋಕ್ಷ ಸಿಗಲು ಅವಕಾಶವಾಗಿದೆ.

ಮನೆಯಲ್ಲಿ ಹೆಣ್ಣು ಸಂತಾನ ಜಾಸ್ತಿಯಾಗಿ, ಈ ಪೀಡೆ ತಪ್ಪಿದರೆ ಸಾಕೆಂದು ಮನಸ್ಸು ಬಂದು—'ಈ ನನ್ನ ಮಗಳನ್ನು ಈಗಲೇ (೮ ವರುಷದೊಳಗೆ) ಕೊಂಡು ಹೋದವರಿಗೆ ಧನ ಕನಕ ಸಹಿತವಾಗಿ ದಾನ ಕೊಡುತ್ತೇನೆ'—ಎಂದು ಅಪ್ಪನು ಹೇಳತೊಡಗಿದುದರಿಂದ—ಕನ್ಯಾದಾನ ಪದ್ಧತಿಯು ಉಂಟಾಯಿತು.

ಹುಡುಗಿಯರ ಸಂಖ್ಯೆಯೇ ಕಡಿಮೆಯಾಗಿ, ತರುಣರು ಹಾತೊರೆಯುತ್ತಿರಲು ಸ್ವಯಂವರ ಪದ್ಧತಿಯು ಬಂತೆಂದೂ ಹೇಳುವರು.

ಸ್ವಯಂವರದಿಂದ ಹೆಣ್ಣಿನ ಅಧಿಕಾರವು ಬೆಳೆದು ಆಕೆಯು ಗಂಡನಿಂದ ಕನಿಷ್ಠ ½ ಹಕ್ಕನ್ನಾದರೂ ಬೇಡಿದಳಂತೆ. ಇದರಿಂದಲೇ ಆಕೆ ಅರ್ಧಾಂಗಿ ಆದಳು. ಈಗ ಸಾಕಷ್ಟು ಸ್ತ್ರೀಯರು ಸಮಾಜದಲ್ಲಿರುವುದರಿಂದ ಈ ನಿಯಮವು ರೂಢಿಯಲ್ಲಿಲ್ಲ.

ಈ ಹೆಂಗಂ—ಪ್ರತ್ಯದ ಬೆನ್ನ ಹಿಂದೆಯೇ ಅವರ ಶರೀರದ ಭೂಷಣದ ವಿಚಾರ ಬಂದಿದೆ. ಅರ್ಧಾಂಶ ಬಟ್ಟೆ ಹಾಕುವುದು, ತಾಳಿ ಕಟ್ಟುವುದು ಇತ್ಯಾದಿ ಅಭ್ಯಾಸಗಳು.

ಮದುವೆಯಾಗಿ ಹೋದ ಹೆಂಗಸರು, ಸ್ವತಂತ್ರರೊ ಪರಾಧೀನರೊ ಆಮುದರಿಂದ ಅವರನ್ನು ಪ್ರತ್ಯೇಕಿಸಿಡಲು ಹಾಕುವ ಗುರುತೇ ಮಾಂಗಲ್ಯ ಕುಂಕುಮ ಇತ್ಯಾದಿ ಸಾಮಾನುಗಳು.

ಕೆಲವು ಸಮಾಜದಲ್ಲಿ—ಗಂಡಸರೇ ನಗ್ನರಾಗಿರುವರಂತೆ. ಕೆಲವುಗಳಲ್ಲಿ ಹೆಂಗಸರು. ಕೆಲವು ಸಮಾಜಗಳಲ್ಲಿ—ಅವಿವಾಹಿತರು. ಕೆಲವುಗಳಲ್ಲಿ—ವಿವಾಹಿತರು. ಇತರ ಸಮಾಜದಲ್ಲಿ—ವಿವಾಹಿತ, ಅವಿವಾಹಿತತನದ ಬೆರಕೆಗೆ ಸರಿಯಾಗಿ—ಬಟ್ಟೆಬರೆಗಳ ಧರಿಸುವಿಕೆ ಇದೆಯೆಂದು ತಿಳಿದರೆ ಸಾಕು.

ನಗ್ನತೆಯೆಂದರೆ—ಕೆಲವು ಸಮಾಜದವರಿಗೆ ನಾಚುಗೆಯೇ ಆಗುವುದಿಲ್ಲವಂತೆ! ಅವರಿಗೆ ಬಟ್ಟೆಯಿದ್ದರೇನೆ ನಾಚುಗೆಯಂತೆ. ಬಟ್ಟೆಯಿರುವ ಸಮಾಜದವರಿಗೆ ಬಟ್ಟೆಯಿಲ್ಲದಿರುವಿಕೆಯೇ ನಾಚುಗೆಯಂತೆ. ಈ ಕಾರಣಗಳಿಂದ ಬಟ್ಟೆಯಿಂದ ನಾಚುಗೆ ಬಂತೇ—ನಾಚುಗೆಯಿಂದ ಬಟ್ಟೆ ಬಂತೇ—ಎಂಬ ವಾದ ಹೊರಟು, ಬೀಜವೃಕ್ಷ ನ್ಯಾಯದಂತೆ ಬಹಳ ವಿಚಾರತರಂಗಗಳನ್ನು ಎಬ್ಬಿಸಿಬಿಟ್ಟಿದೆ.

ಇದರಲ್ಲೊಂದು ಸಮಾಧಾನ. ಈ ನಗ್ನ ಸಮಾಜದವರಲ್ಲಿ ಉಡುಗೆ ತೊಡುಗೆಯ ಆಸೆಯು ಮೆಲ್ಲಗೆ ಹೆಚ್ಚುತ್ತಿರುವುದೆಂಬುದು. ಇದಿಲ್ಲವಾಗಿದ್ದರೆ—ಮೆಂಚೆಸ್ಟರಿನ ಗಿರಣಿ ಜನರಿಗೆ ಕೆಲಸವೇ ಇಲ್ಲವಾಗುತ್ತಿತ್ತು. ಆದರೆ ಜರ್ಮನಿ, ಕೆನಡಾ ಮೊದಲಾದ ದೇಶಗಳಲ್ಲಿ—ಜನರು ಬಹಿರಂಗವಾಗಿ, ಬಟ್ಟೆಯನ್ನು ಬಿಡುತ್ತ ಬಂದಿರುತ್ತಾರೆ! ಹಾಲಿವುಡ್ಡಿನಲ್ಲಿ—ಇವೆರಡರ ಸಮತೆಯನ್ನು ಕಾಣುತ್ತೇವೆ. ಅಂತು—ಪ್ರಪಂಚದಲ್ಲಿ—ನಗ್ನತೆಯು ಬೇಕೇ ಬೇಡವೇ—ಕೆಟ್ಟದೇ ಒಳ್ಳೆದೇ—ಎಂಬ ಬಲವಾದ ಚರ್ಚೆ ಮೂಡುತ್ತಿದೆ.

ಮನುಷ್ಯರಿಗೂ ಇತರ ಪ್ರಾಣಿಗಳಿಗೂ ಇರುವ ಮುಖ್ಯ ವ್ಯತ್ಯಾಸವೇ ಬಟ್ಟೆಯೆಂದು ಕೆಲವರ ಅಂಬೋಣ.

ಕೃತಿಮತೆಗೂ, ನೈಸರ್ಗಿಕ ಜೀವನಕ್ಕೂ ಇರುವ ವ್ಯತ್ಯಾಸವೇ ಬಟ್ಟೆಯೆಂದು ಕೆಲವರ ಅಂಬೋಣ.

ಈ ಅಭಿಪ್ರಾಯಗಳಲ್ಲಿ ರಾಜಿಯಾಗುವ ಸಂಭವ ಸದ್ಯಕ್ಕಿಲ್ಲ.

ನಗ್ನತೆಯಿಂದ, ಅನೀತಿ ಇನ್ನಷ್ಟು ಹೆಚ್ಚೀತೆಂದು ಶಾಸ್ತ್ರವಾದಿಗಳು ಹೇಳುತ್ತಾರೆ! ಅವರ ನಗ್ನತೆಯನ್ನು ಶಾಸ್ತ್ರಗಳು ಮುಚ್ಚುವುದಿಲ್ಲವಂತೆ! ಇತ್ತ—ಬಟ್ಟೆಬರೆ ಮುಚ್ಚಿಕೊಂಡಿರುವ ಜನರಲ್ಲಿ ಅನೀತಿಯ ಪರಾಕಾಷ್ಠತೆಯು (ಅದಕ್ಕೊಂದು ಪರಾಕಾಷ್ಠತೆಯಿದೆಯೇ?) ಬಂದಿದೆಯೆಂದೂ, ನಗ್ನ ಕಾಡುಜನರಲ್ಲಿ—ಕಾಮದ ಹಾವಳಿ ಕಡಿಮೆಯೆಂದೂ—ಎರಡನೆ ಪಂಗಡದವರ ಅಂಬೋಣ. ಎರಡು ಪಂಗಡದವರ ಸರಾಸರಿ ತೆಗೆದು ಅರ್ಧ ನಗ್ನತೆಯು ಶ್ರೇಯಸ್ಕರವೆಂದೂ, ಆರೋಗ್ಯ ದೃಷ್ಟಿಯಿಂದಲೂ ಲೇಸೆಂದೂ ಕೆಲವರ ಮತ. ಈ ಅಭಿಪ್ರಾಯಗಳಲ್ಲಿ ರಾಜಿಯಾಗಲು ಉಪಾಯವೇ ಇಲ್ಲವೆಂದು ಕೆಲವರ ಮತ. ಚಳಿಗಾಲದಲ್ಲಿ ನಿಮಗೆ ಬಟ್ಟೆ ಬೇಡವೇ—ಎಂದು ಕೆಲವರ ವಾದ. ಸೆಕೆಗಾಲಕ್ಕೆ ಈ ಬಟ್ಟೆ ಹೆಚ್ಚಲ್ಲವೇ—ಎಂದು ಉಳಿದವರ ಪ್ರತಿವಾದ. ಒಂದು ಪಂಗಡದವರು ಬಟ್ಟೆಯ ಸಂಖ್ಯೆಯನ್ನು ಏರಿಸುತ್ತ ಹೋಗುವಾಗ, ಇನ್ನೊಂದು ಪಂಗಡದವರು ತಗ್ಗಿಸುತ್ತ ಬರುತ್ತಿದ್ದಾರೆ.... ಈ ಎರಡೂ ಜನರು—ಸಮತೆಗೆ ಬಂದಾಗ ತಡೆದು ನಿಲ್ಲಿಸುವ ಉಪಾಯವಿದೆಯೇ—ಎಂದು ಕೆಲವರು ಯೋಚಿಸುತ್ತಿದ್ದಾರೆ.

ಇದು ಬರೇ ಆರೋಗ್ಯದ ಪ್ರಶ್ನೆಯಲ್ಲ...ಧರ್ಮದ ಅಡಿಗಟ್ಟಾದ ಪಾತಿವ್ರತ್ಯ—ಸಾತಿವ್ರತ್ಯಗಳನ್ನು ಕಾಯುವುದೇ ಬಟ್ಟೆಬರೆಗಳು. ಅವನ್ನು ಎಸೆಯುವುದೆಂದರೆ—ಧರ್ಮವನ್ನು ಎಸೆದಂತಲ್ಲವೆ!—ಎಂದು ಮಹಾ ಪಂಡಿತರ ಮಹಾ ಮಹಾ ವಾದ.

ಇಲ್ಲಿಗೂ ತರ್ಕ ಮುಗಿಯದು. ಧರ್ಮವು ನೈಸರ್ಗಿಕವಾಗಿರಬೇಕು. ಅದರಲ್ಲಿ ಕೃತಿಮತೆ ಇರಕೂಡದೆಂದೂ ಕೆಲವರ ಅಭಿಪ್ರಾಯ. ಅದಕ್ಕೆ—ಕೆಲವು ಪಂಡಿತರು "ಪೀತಾಂಬರವನ್ನು ಉಟ್ಟುಕೊಂಡೇ—ಶ್ರೀ ವಿಷ್ಣುವು—ಅಂಬರಧಾರಿಗಳಾದ ಜನರ ಸಲುವಾಗಿ ಧರ್ಮವನ್ನು ಸಾರಿದನು. ಉಳಿದವರು ಧರ್ಮಬಾಹಿರರು"—ಎನ್ನುತ್ತಾರೆ. ವಿಷ್ಣುವು ಪೀತಾಂಬರವನ್ನ ಉಟ್ಟಿರುವನೆಂಬುದು ನಿರ್ವಿವಾದ. ಮೊನ್ನೆ ತಾನೆ, ಅಚ್ಚಾದ ಒಂದು ಚಿತ್ರದಲ್ಲಿ ವಿಷ್ಣುವಿಗೆ ಪೀತಾಂಬರವಿತ್ತು. ಜಹೋವನು ಸಹ (ಬಿಳಿ) ಬಟ್ಟೆ ಉಡುವ ದೇವರು. ಅಮರ ಲೋಕದವರಂತು—ತೀರ ಲೇಟೆಸ್ಟ್ ಫೇಶನಿನ ಬಟ್ಟೆ ಉಡುತ್ತಾರಂತೆ. ದೇವರಲ್ಲೂ ಇದರ ವಿರೋಧ ಪಂಗಡವುಂಟೆಂದು—ಜೈನ ತೀರ್ಥಂಕರರು ಹೇಳುತ್ತಾರೆ.

ಈ ಪ್ರಶ್ನೆಯ ತೀರ್ಮಾನವು—ಈಗ ವೈದ್ಯರು ತಮ್ಮ ಶೋಧನಾಲಯಗಳಲ್ಲಿ ಬೆಳೆಯಿಸುತ್ತಿರುವ ಹೆಂಗಂ—ಸಂತಾನದ ಪೈರಿನ ಮೇಲೆ ಹೊಂದಿರುವುದು. ಕಾರಣ ಈ ಹೆಂಗಂ ಜನರಿಗೆ—ನಾಚುಕೆಯು ಬೇಕಿಲ್ಲ. ಅದರ ಜತೆಗೆ ಬಟ್ಟೆಬರೆಯು ಸಹ. ಅವರಿಗೆ ಲಗ್ನವೂ ಅನಾವಶ್ಯಕವಾಗುವುದು. ಲಗ್ನವಿಲ್ಲದ ಮೇಲೆ—ಮಧುಪರ್ಕಕ್ಕೂ ಬಟ್ಟೆಯು ಬೇಡ. ಆಗ ಶವಕ್ಕೆ ಬಟ್ಟೆ ಮುಚ್ಚಬೇಕೇ—ಅದರ ನಾಚುಗೆಯನ್ನು ಕಾಯಬೇಕೇ—ಎಂಬ ಒಂದು ಪ್ರಶ್ನೆ ಉಳಿಯುವುದು. ಅದನ್ನು ನಮಗಿಂತ ಹೆಣಗಳೇ ತೀರ್ಮಾನಿಸಲು ಯೋಗ್ಯವು. ಇಲ್ಲವಾದರೆ ಅಂಥ ಪಂಡಿತರು ಬೇಕು.

ಆದರೆ— ಈ ನವಯುಗದಲ್ಲಿ, ಮೆಂಚೆಸ್ಟರ್, ಮುಂಬಯಿ, ಜಪಾನಿನ ಹತ್ತಿ ಗಿರಣಿಗಳು ಕೆಲಸ ನಿಲ್ಲಿಸಿ, ಬಿಡಬೇಕಾಗುವುದಲ್ಲ—ಎಂಬ ಪ್ರಶ್ನೆಯಿದೆ. ಅವರ ಬಟ್ಟೆಗೆ ಗಿರಾಕಿಯು ಅವಶ್ಯವೇ ಆದರೆ, ನಮ್ಮ ಭೂಮಿಯ ಮೇಲೆ ಬಟ್ಟೆಯ ಚಪ್ಪರವನ್ನು ಹಾಕಿ, ಇಲ್ಲಿನ ವಿಮಾನವನ್ನು ಇತರ ಗ್ರಹಸ್ಥರಿಂದ (—ಗ್ರಹವಾಸಿ) ಕಾಯ್ದುಕೊಳ್ಳುವುದವಶ್ಯ. ಕಾರಣ—ಅಲ್ಲಿನ ಜನರಿಗೆ ಬಟ್ಟೆಯಿದೆಯೋ ಇಲ್ಲವೋ—ತಿಳಿಯದು. ಆದುದರಿಂದ ಅವರಲ್ಲಿ ಪಾತಿವ್ರತ್ಯ, ಸಾತಿವ್ರತ್ಯಗಳು ಹೇಗಿವೆಯೆಂದು ತಿಳಿಯದು. ದೂರದಿಂದಲೇ ದುರ್ಬೀನಿಟ್ಟು ನೋಡಿ, ಅಲ್ಲಿನವರೂ ನಮ್ಮಂತಾಗಿದ್ದರೆ ಮತ್ತೂ ಕಷ್ಟ.

ಕಡ್ಡಾಯ ಶಿಕ್ಷಣ.

ಕಲ್ಕತ್ತಾ ಕೊರ್ಪೊರೇಶನಿನವರು ಪ್ರಥಮದ್ದಾಗಿ ಅವರ ಒಂದು ವಾರ್ಡಿನಲ್ಲಿ ೬—೧೦ ವರ್ಷಗಳೊಳಗಿನ ಮಕ್ಕಳೆಲ್ಲಾ ಕಡ್ಡಾಯವಾಗಿ ಪ್ರಾಥಮಿಕ ವಿದ್ಯಾಭ್ಯಾಸವನ್ನು ಹೊಂದುವ ಯೋಜನೆಯನ್ನು ಮಾಡಿರುತ್ತಾರೆ. ಈ ವಾರ್ಡಿನಲ್ಲಿ ೨೧೭೩ ಮಕ್ಕಳು ಪ್ರಯೋಜನ ಹೊಂದುವರಾಗಿಯೂ, ಈ ಪೈಕಿ ಸುಮಾರು ೧೧೦೦ ಮಕ್ಕಳು ಅಭ್ಯಾಸ ಮಾಡುತ್ತಿರುವುದಿಲ್ಲವಾಗಿಯೂ, ಇದಕ್ಕಾಗಿ ವರ್ಷಾವಧಿ ರೂ. ೨೪೦೦೦ ಹೆಚ್ಚಿಗೆ ಖರ್ಚು ತಗಲುವುದಾಗಿಯೂ, ಈ ಬಗ್ಗೆ ಸರಕಾರದ ಸಹಾಯ ಇಲ್ಲವೆ ಹೆಚ್ಚಿನ ಕರದ ಆವಶ್ಯಕತೆ ಇಲ್ಲದೇನೆ ವ್ಯವಸ್ಥೆ ಮಾಡುವುದಾಗಿಯೂ ತಿಳಿದು ಬರುತ್ತದೆ. ಪಟ್ಟಣದಾತರೇ, ಮಕ್ಕಳ ವಿದ್ಯಾಭ್ಯಾಸದ ಜವಾಬ್ದಾರಿಯನ್ನು ನಿರ್ವಹಿಸಿರಿ!

ಗಫರ್ ಖಾನರ ಬಿಡುಗಡೆಯಾಯಿತು!

NOTES ಟೀಕೆಗಳು.

ನಗರದೊಳಗೆ ಹುಚ್ಚು ನಾಯಿಗಳ ಕಾಟ ಹೆಚ್ಚಿದೆ. ಆಸ್ಪತ್ರೆಯಲ್ಲಿ ಸುಮಾರು ೨೦ ಮಂದಿಗೆ ಕಳೆದ ವಾರ ಚಿಕಿತ್ಸೆ ನಡೆಯುತ್ತೆಂದು ಕೇಳಿದೆವು.

* * *

ಹುಚ್ಚು ಇಲ್ಲದ ಬೀದಿ ನಾಯಿ (stray dogs)ಗಳು ಮುನಿಸಿಪಲ್ ಕೋಟೆಗಳ ಸಾಮೋಪಾಯಕ್ಕೆ ಸೋತು ಊರ್ವ ಮೈದಾನಿನ 'ಲೆಥಲ್ ಚೇಂಬರಿ'ನ ಸದಸ್ಯರಾಗಿ ಚಿರಶಾಂತಿಯನ್ನು ಹೊಂದಿದುದಕ್ಕೆ ಹುಚ್ಚು ನಾಯಿಗಳು ನಿರಪರಾಧಿಗಳಾದ ಜನರನ್ನು ಕಚ್ಚಿ ಸೇಡು ತೀರಿಸಿಕೊಳ್ಳುವುದು ಜನರಿಗೆ ನ್ಯಾಯವೆಂದು ಕಂಡಿಲ್ಲವೆಂದು ತೋರುವುದು. ಕೋಟೆಗಳ ಕೈಗೆ ಸಿಗದ ಹುಚ್ಚು ನಾಯಿಗಳು ಬೀದಿ ನಾಯಿಗಳಿಗಿಂತ ಹೆಚ್ಚು ಬುದ್ಧಿಯುಳ್ಳವೆಂದು ಕಾಣುತ್ತದೆ.

* * *

ನಾನಾ ಬಗೆಯ ಅಂಟುರೋಗಗಳಿಂದ ನರಳುವವರು ರಸ್ತೆಗಳ ಬದಿಯಲ್ಲಿ ಮಲಗಿ ರಾಗಬದ್ಧವಾಗಿ ಕೂಗಿಕೊಳ್ಳುತ್ತಿರುವುದು ಇತ್ತೀಚೆಗೆ ವಿಶೇಷವಾಗಿದೆ. ಮೋಟಾರುಗಳಿಲ್ಲದೆ ನಿಧಾನವಾಗಿ ನಡೆದುಹೋಗಬೇಕಾಗಿರುವವರು ಆ ರೋಗಿಗಳ ವ್ರಣಗಳನ್ನು ನೋಡಿ ತತ್ವಜ್ಞಾನಿಗಳಾಗಿ 'ಮಾರ್ಪಡುವ'ರೆಂದು ಭರವಸೆ.

* * *

ಮಂಗಳೂರು ನಗರದ ಅನೇಕ ಸಂಘ-ಸಂಸ್ಥೆ-ಮಂಡಲಿಗಳೀಗ ಬೆನೆಫಿಟ್ ನಾಟಕಗಳ ಮೇಲೆ ಅವಲಂಬಿಸಿವೆ. ಶ್ರೀ ವೆಂಕಟ್ರಮಣನ ದಯೆ!

* * *

ನಮ್ಮ ತಾಲೂಕು ಕೊಂಗ್ರೆಸ್ ಕಮಿಟಿಯು ಮುನಿಸಿಪಲ್ ಚುನಾವಣೆಗೆ ಉಮೇದ್ವಾರರನ್ನು ಏಕೆ ಕಳುಹಿಸುವುದಿಲ್ಲವೆಂಬ ಬಗ್ಗೆ ಕಾರಣವನ್ನು ಕೊಟ್ಟಿಲ್ಲ. ಕಾರಣವನ್ನು ಕೊಡಬೇಕೋ ಬೇಡವೋ ಎಂಬುದನ್ನು ನಿರ್ಣಯಿಸಲು ಕಾರ್ಯಕಾರಿ ಸಮಿತಿಯ ಒಂದು ಸಭೆ ಕೂಡಬೇಕಾಗಿದೆಯೆಂದು ತೋರುವುದು.

* * *

ಅಥವಾ,-ಕಾರ್ಯವನ್ನು ನಿರೀಕ್ಷಿಸುವ ಜನರಿಗೆ ಕಾರಣವನ್ನೇಕೆ ತಿಳಿಸಲೆಂದು ಮೌನವಾಗಿರಬಹುದೇ?

* * *

ಅಕ್ಟೋಬರ ತಾ. ೧ರಿಂದ ಬೆಂಡ್ರೋಲು ಹಚ್ಚಿರದ ಬೆಂಕಿಪೆಟ್ಟಿಗೆಗಳನ್ನು ಮಾರಾಟಮಾಡಕೂಡದಾಗಿ ಸರಕಾರದ ಪ್ರಕಟಣೆ. ಅಕ್ಟೋಬರದೊಳಗೆ ಬೆಂಡ್ರೋಲಿಲ್ಲದ ಬೆಂಕಿಪೆಟ್ಟಿಗೆಗಳು ಮಾರಾಟವಾಗಬೇಕೆಂಬ ಆತುರದಿಂದ, ಕಾರ್ಖಾನೆಗಳಿಗೆ ಆರ್ಡರೂ ಕಡಿಮೆ. ಇನ್ನು ಅವುಗಳಿಗೆ (ಅಕ್ಟೋಬರದಲ್ಲಿ) ಬೆಂಡ್ರೋಲು ಹಚ್ಚುವುದು ಇಮ್ಮಡಿ ವೆಚ್ಚಕ್ಕೆ ಕಾರಣವಾಗುವುದರಿಂದ ಬೆಂಕಿಪೆಟ್ಟಿಗೆಗಳಿಗೆ ಸಿಗರೇಟುಪೆಟ್ಟಿಗೆಗಳಷ್ಟು ದರವೇರುವುದು ಅಸಂಭವವಲ್ಲ.

* * *

ಪೂರ್ವದಲ್ಲಿ ಢಾಕ್ಕಾ ಮಸ್ಲಿನನ್ನು ಧರಿಸುವವನು ಮಹಾ ಶ್ರೀಮಂತನೆನಿಸುತಿದ್ದನಂತೆ. ಈ ಅಕ್ಟೋಬರದಿಂದ ಬೆಂಕಿಪೆಟ್ಟಿಗೆಗಳನ್ನು ಕೊಂಡುಕೊಳ್ಳುವವನಿಗೂ ಅಷ್ಟೇ ಮರ್ಯಾದೆ ಸಲ್ಲುವುದರಲ್ಲಿ ಸಂದೇಹವಿಲ್ಲ.

* * *

ಅಕ್ಟೋಬರದಿಂದ ಬೆಂಡ್ರೋಲಿಲ್ಲದ ಬೆಂಕಿಪೆಟ್ಟಿಗೆಗಳನ್ನು ಮಾರಾಟಮಾಡಿದರೆ ತಕ್ಷೀರಾಗಬಹುದು. ಕೊಂಡುಕೊಳ್ಳುವುದೂ ತಕ್ಷೀರಾಗುವುದೇ ಎಂಬುದನ್ನು ಸರಕಾರದವರು ಸ್ಪಷ್ಟೀಕರಿಸುವುದುತ್ತಮ.

ಗಡಿನಾಡಿನ ಗಾಂಧಿಯೆನಿಸುವ ಖಾನ್ ಅಬ್ದುಲ್ ಗಫರ್ ಖಾನರನ್ನೂ ಅವರ ಸಹೋದರರಾದ ಡಾ। ಖಾನರನ್ನೂ ಇದೇ ತಾ. ೨೭ನೇ ಅಪರಾಹ್ನ ೪-೩೦ಕ್ಕೆ ಹಜಾರಿಬಾಗ್ ಜೈಲಿನಿಂದ ಬಿಡುಗಡೆ ಮಾಡಿದರೆಂಬ ವಾರ್ತೆ ತಿಳಿಯಬಂದಿದೆ. ಬಾಬೂರಾಜೇಂದ್ರ ಪ್ರಸಾದರವರು ಖಾನರು ಜೈಲಿನ ದ್ವಾರಕ್ಕೆ ಬಂದು ಗಾಂಧಿಜಿಯವರನ್ನು ಭೆಟ್ಟಿಯಾಗಬೇಕೆಂದು ಕಾಯುತ್ತಿದ್ದರು. ಕಾರಣ, ಅವರ ಬಿಡುಗಡೆಯೊಂದಿಗೆ—"ನೀವು ಪಂಜಾಬನ್ನಾಗಲೀ ಗಡಿನಾಡನ್ನಾಗಲೀ ಪ್ರವೇಶಿಸಬಾರದು" ಎಂಬ ನೋಟೀಸು!

ಖಾನರ ಬಿಡುಗಡೆಯು ಅನಿರೀಕ್ಷಿತವೂ ಆಶ್ಚರ್ಯಕರವೂ ಆಗಿದೆ. ಖಾನರು ತನ್ನ ಸಹೋದರರೊಂದಿಗೆ ಬೊಂಬಾಯಿಗೆ ಹೋಗಲಿರುವರೆಂದು ಸುದ್ದಿ.

ಮಂಗ್ರೋಲ್ ಸರಕಾರದ ಹುಕುಂ! ಪಂ। ರಾಮಚಂದ್ರ ಶರ್ಮರ ಉಪವಾಸ.

ದನಗಳನ್ನು ಕಡಿಯಬಹುದೆಂದು ಮಂಗ್ರೋಲ್ ದರಬಾರು ಅಪ್ಪಣೆ ಕೊಡಿಸಿತು. ಆದರಿಂದ ಮಾನಸೊಂದ ಪಂಡಿತ ರಾಮಚಂದ್ರ ಶರ್ಮರವರು ಉಪವಾಸ ಹಿಡಿದು, —ದರಬಾರಿನವರು ತಮ್ಮ ಅಪ್ಪಣೆಯನ್ನು ಹಿಂದೆಗೆಯುವ ತನಕ ಆಹಾರ ಸ್ವೀಕಾರಮಾಡೆನೆಂಬ ಹಟತೊಟ್ಟರು.

ಸರಕಾರಕ್ಕೆ ಮನವಿ ಮಾಡಿ, ಆ ಅಪ್ಪಣೆಯನ್ನು ಹಿಂದೆಗೆಯುವಂತೆ ಸಾಧಿಸಲಾಗುವುದಾಗಿ ಮಂಗ್ರೋಲ್ ಮಹಾಜನರ ಪರವಾಗಿ ಪಂಡಿತ ರಾಮಚಂದ್ರ ಶರ್ಮರನ್ನು ಸಮಾಧಾನಪಡಿಸಲು, ಶರ್ಮರು ಉಪವಾಸವನ್ನು ನಿಲ್ಲಿಸಿದರೆಂಬ ವಾರ್ತೆ ಬಂದಿದೆ.

ವಾಂತಿಭೇದಿ ರೋಗಿಯು ಬಾವಿಗೆ ಹಾರಿದನು!

ಮುಝಫ್ಫರಪುರ ಜಿಲ್ಲೆಯ ಅಹಿ ಎಂಬ ಗ್ರಾಮದಿಂದ ಭಯಂಕರ ವಾರ್ತೆಯೊಂದು ಬಂದಿದೆ. ಪಂಡಿತ ಉಪಾಧ್ಯ ಎಂಬಾತನು ಕಾಶಿಯಿಂದ ತನ್ನ ಹಳ್ಳಿಗೆ ಮರಳುವಾಗ ಅವನಿಗೆ ವಾಂತಿಭೇದಿ ಕಾಣಿಸಿಕೊಂಡಿತು. ಸಹಿಸಲಾಗದ ದಾಹ! ನೀರಿಗಾಗಿ ಕೂಗಿದನು. ವಾಂತಿಭೇದಿಯವರಿಗೆ ನೀರು ಕೊಡಬಾರದೆಂಬ ಕಾರಣದಿಂದ ಯಾರೂ ಕೊಡಲಿಲ್ಲ. ಬೇಡಿದನು, ಯಾರೂ ಕೊಡಲಿಲ್ಲ. ಉಪಾಧ್ಯನು ದಾಹ ಸಹಿಸಲಾರದೆ ಬಾವಿಗೆ ಹಾರಿಯೇ ಬಿಟ್ಟನು. ಬಾವಿಯಲ್ಲಿ ೩ ಘಂಟೆಗಳ ತನಕ ಇದ್ದು, ಬೇಕಾದಷ್ಟು ನೀರು ಕುಡಿದನು; ಬಾವಿಯಲ್ಲೇ ವಾಂತಿ; ಬಾವಿಯಲ್ಲೆ ಭೇದಿ. ಕೊನೆಗೆ ಆತನನ್ನು ಮೇಲಕ್ಕೆ ತೆಗೆದರು, ಪ್ರಯೋಜನವಾಗದೆ ಪ್ರಾಣಬಿಟ್ಟನು. ಇದಾದ ಆರ ದಿವಸಗಳಲ್ಲೇ ಆ ಬಾವಿಯ ನೀರನ್ನು ಕೆಲವರು ಉಪಯೋಗಿಸಿದರಂತೆ. ಒಂದೇ ದಿನದಲ್ಲಿ ೨೫ ಜನರು ವಾಂತಿಭೇದಿಗೆ ಬಲಿಯಾದರು!

ಇಂಗ್ಲಾಂಡ್ ಆಸ್ಟ್ರೇಲಿಯಾ ಕ್ರಿಕೆಟ್ ಪಂದ್ಯಾಟ.

ಇಂಗ್ಲಾಂಡು ಮತ್ತು ಆಸ್ಟ್ರೇಲಿಯಾ ಕ್ರಿಕೆಟ್ ಪಂಗಡಗಳೊಳಗೆ ಇಂಗ್ಲಾಂಡಿನಲ್ಲಿ ನಡೆಯುತ್ತಿದ್ದ ಕ್ರಿಕೆಟ್ ಪಂದ್ಯಾಟಗಳು ಮುಗಿದು, ಆಸ್ಟ್ರೇಲಿಯದವರು ಜಯಶೀಲರಾದರು.

ಸಂಕ್ಷೇಪ ವಾರ್ತೆ.

ನಮ್ಮ ಸರಕಾರದವರು, ಇಂಡಿಯಾದಲ್ಲಿ ವೈಮಾನಿಕ ತರಬೇತಿ ಕೊಡುವ ಒಂದು ಮುಪದ್ಯೋಜನೆಯನ್ನು ಮಾಡಿದ್ದು, ಈ ಬಗ್ಗೆ ಕೆಲವು ಲಕ್ಷ ರೂಪಾಯಿಗಳನ್ನು ವೆಚ್ಚ ಮಾಡಲಿರುವರು.

ಹಿಟ್ಲರರ ಆಜ್ಞೆಯಿಂದ ಜರ್ಮನಿಯಿಂದ ಹೊರಡಿಸಲ್ಪಟ್ಟು, ಡಚ್ಚರ ಅಮ್ಸ್ಟರ್‌ಡಮ್ ಎಂಬ ನಗರದಲ್ಲಿ ನೆಲೆಸಿದ ೩೦೦ ಯಹೂದಿಯರನ್ನು ಡಚ್ ಅಧಿಕಾರಿಗಳೂ ಗಡೀಪಾರು ಮಾಡುವರಂತೆ.

ಪ್ರೌಢ ಶಿಕ್ಷಣವನ್ನೂ ದೇಶಭಾಷೆಯಲ್ಲಿ ಕೊಡುವಂತೆ ಯತ್ನಗಳಾಗಬೇಕೆಂದು ಶ್ರೀ. ಚಿಂತಾಮಣಿ ಕೇಳ್ಕರವರ ವಿನಂತಿ.

ವ್ಯಾಪಾರಸ್ಥರೇ, ಎಚ್ಚರಿಕೆ!

ಸೆಪ್ಟಂಬರ, —ಇದೇ ಅಕ್ಟೋಬರ ೩೦ಗಳಿಂದ, ಸರಕಾರದವರ ಬೆಂಡ್ರೋಲು ಇಲ್ಲದ ಬೆಂಕಿಪೆಟ್ಟಿಗೆಗಳನ್ನು ಮಾರಾಟಮಾಡಕೂಡದಾಗಿದೆ.

ಖಾನ್ ಅಬ್ದುಲ್ ಗಫರ್ ಖಾನರವರು. [ನಡುವೆ ಕೂತವರು]

ಮಿಸ್ ಮೇಯೋ ಹಿಂದೂದೇಶಕ್ಕೆ ಬರುವಳೇ?

"ಮದರ್ ಇಂಡಿಯಾ" ಪುಸ್ತಕವನ್ನು ಬರೆದು ಪ್ರಸಿದ್ಧಿ ಹೊಂದಿದ ಮಿಸ್ ಮೇಯೋ ಹಿಂದೂದೇಶಕ್ಕೆ ಬರಲಿರುವಳೆಂದು ಸುದ್ದಿ ಹಬ್ಬಿದೆ. ಇದು ಸರಕಾರಕ್ಕೆ ತಿಳಿದಿರುವುದೇ ಎಂದು ಎಸೆಂಬ್ಲಿಯಲ್ಲಿ ಪ್ರಶ್ನೆ. 'ಕೇಳಿರುವೆನು' ಎಂದು ಗೃಹಮಂತ್ರಿಗಳ ಉತ್ತರ. "ಅವಳಿಗೆ ಸರಕಾರವು ಏನು ಸಹಾಯ ಮಾಡುವುದಂತೆ?" ಎಂಬ ಎರಡನೇಯ ಪ್ರಶ್ನೆಗೆ, ಗೃಹಮಂತ್ರಿಗಳಿಂದ ಸ್ಪಷ್ಟವಾದ ಉತ್ತರ ದೊರೆತಿಲ್ಲ.

ಅಮೇರಿಕದ ಮಜೂರರ ಹಿತಸಾಧನೆ. ಅಧ್ಯಕ್ಷ ರೂಸ್‌ವೆಲ್ಟರ ಹೊಸ ಕಾಯಿದೆ.

ಸಂಯುಕ್ತ ಅಮೇರಿಕದಲ್ಲೀಗ ಸುಮಾರು ಹತ್ತು ಮಿಲ್ಲಿಯ ಜನರು ನಿರುದ್ಯೋಗಿಗಳಾಗಿರುವರು. ಕಾರ್ಖಾನೆಗಳವರು ಇದ್ದ ಕೂಲಿಯಾಳುಗಳ ಸಂಬಳವನ್ನು ಕಡಿಯುವುದೂ, ಕೂಲಿಯಾಳುಗಳ ಸಂಖ್ಯೆಯನ್ನು ಕಡಿಮೆ ಮಾಡಿ ಕೆಲಸವನ್ನು ಪ್ರತಿಯೊಬ್ಬನಿಗೆ ಹೆಚ್ಚಿಗೆಯಾಗಿ ಹಂಚಿಕೊಡುವುದೂ ನಿರುದ್ಯೋಗವು ಹೆಚ್ಚಲು ಕಾರಣವಾಗುತ್ತಿದೆ. ಅದಕ್ಕಾಗಿ, ರೂಸ್‌ವೆಲ್ಟರವರು, ಒಂದು ಹೊಸ ಕಾಯಿದೆಯನ್ನು ಜ್ಯಾರಿಗೆ ತಂದಿರುವರು:-ಕೆಲಸಗಾರರಿಗೆ ಈ ಮೊದಲು ಇದ್ದ ೪೦ ಘಂಟೆಗಳ ವಾರವನ್ನು ೩೬ ಗಂಟೆಗಳಿಗಿಳಿಸಲಾಗಿದೆ. ಕೂಲಿಯಾಳುಗಳ ಸಂಬಳದಲ್ಲಿ ವಿನಾಕಾರಣವಾಗಿ ಕಡಿತಗಳಾಗಬಾರದು. ಇದರಿಂದ ನಿರುದ್ಯೋಗವು ಬಲುಮಟ್ಟಿಗೆ ಕಡಿಮೆಯಾಗಬಹುದೆಂದು ನಿರೀಕ್ಷಿಸಲಾಗಿದೆ.

ಹಸಿವು! ಹಸಿವು!!

ನೆರೆಹಾವಳಿಯ ಪ್ರದೇಶದಲ್ಲಿ ಸಂಚರಿಸಿ ನೋಡುವವರಿಗೆ ಅದರ ಭೀಕರ ನೋಟವು ಸಿಗುವುದು. ಹೊಟ್ಟೆಗೆ ಅನ್ನವಿಲ್ಲ; ಉಡಲು ಬಟ್ಟೆಯಿಲ್ಲ. ದೀನದರಿದ್ರರ ಮುಖಗಳೇ ಗೋಚರಿಸುತ್ತವೆ; ಇದೀಗ ಬಿಹಾರಿನ ಇಂದಿನ ಚಿತ್ರ.

ಸಮಗಂಗಾ ಜಿಲ್ಲೆಯ ಮನಾಹಾ ಗ್ರಾಮದ ದಿವಾನ್ ಕೋಟನೆಂಬವನಿಗೆ ಆರು ದಿನಗಳಿಂದ ಅನ್ನವಿರಲಿಲ್ಲ. ನೆರೆಕರೆಯ ಮುಕ್ಕ್ಯಂದು ಗ್ರಾಮದ ಖರಗರಾಮ ಎಂಬಾತನಿಗೆ ತನ್ನ ಸಹೋದರಿಯನ್ನು ರೂ. ೫, ಮತ್ತು ೧ ಮಣ ೩೦ ಸೇರು ಅಕ್ಕಿಗಾಗಿ ಮಾರಾಟ ಮಾಡಿರುವನು!

ಬಿಹಾರಿನಲ್ಲಿ ನೆರೆ!

ಕೋಸಿ ಮತ್ತು ಗಂಗಾನದಿಗಳಲ್ಲಿ ನೀರು ಉಕ್ಕಿ ಹರಿಯಲಾರಂಭವಾಗಿದ್ದು, ಪಾಟ್ನಾ—ಶಹಬಾದುಗಳಲ್ಲಿ ನೆರೆಯ ಭಯವೆದ್ದಿದೆ. ಅರಾ ನಗರವು ನೀರಿನಲ್ಲಿ ಮುಳುಗಿದೆ. ನೂರಾರು ಹಳ್ಳಿಗಳು ಜಲಮಂತ್ರ ಜಪಿಸುತ್ತಿವೆ. ದರ್ಭಾಂಗಾ ಕಡೆಯಿಂದಲೂ ನೆರೆಯ ವಾರ್ತೆಗಳಿವೆ. ನೆರೆನೀರಿನಲ್ಲಿ ತೇಲುವ ಮನುಷ್ಯರನ್ನೂ ಜಾನುವಾರನ್ನೂ ಕಂಡು, ಅವರನ್ನು ರಕ್ಷಿಸಲಾಯಿತು. ನಿರಾಶ್ರಿತರಿಗೆ ಸಹಾಯ ಸಲ್ಲಿಸುವ ಕೆಲಸವು ಬಾಬು ರಾಜೇಂದ್ರ ಪ್ರಸಾದರವರ ನೇತೃತ್ವದಲ್ಲಿ ನಡೆಯುತ್ತಿದೆ.

ಪೂಸಾ ಸಂಸ್ಥೆ.

ಪೂಸಾ ವ್ಯವಸಾಯ ಸಂಶೋಧನಾ ಸಂಸ್ಥೆಯನ್ನು ಡಿಲ್ಲಿಗೆ ಒಯ್ಯುವುದೆಂಬುದಕ್ಕೆ ಸರಕಾರದ ಆರ್ಥಿಕ ಶಾಖೆಯ ಒಪ್ಪಿಗೆ ದೊರೆಯಿತು.



ಮದ್ರಾಸಿನ ಟ್ರಿಪ್ಲಿಕೇನ್ ಹೈ ರೋಡಿನಲ್ಲಿ, ಮೊನ್ನೆ ಡಾ। ಯು. ರಾಮರಾಯರ ಅಧ್ಯಕ್ಷತೆಯಲ್ಲಿ ತೆರೆಯಲ್ಪಟ್ಟ ಶ್ರೀ ಕೆ. ಸೀತಾರಾಮರಾಯರ "ಮೋಡರ್ನ್ ಕೇಫ್" ಎಂಬ ಭವ್ಯ ಉಪಹಾರಗೃಹದ ಚಿತ್ರವಿದು. ಒನರೇಬಲ್ ಜಸ್ಟಿಸ್ ಸರ್ ವಿ. ರಮೇಶಮ್, ಇವರು ಇದರ ಪ್ರವೇಶೋತ್ಸವವನ್ನು ಆರಗಿಸಿದರು. ಈ ಉಪಹಾರಗೃಹದ ಮುಖ್ಯ ಆಫೀಸು ಮೈಸೂರಲ್ಲಿಯೂ, ಒಂದು ಶಾಖೆಯು ಉದಕಮಂಡಲದಲ್ಲಿಯೂ ಇದೆ.

ಮಂಗಳೂರು.

ಇದೇ ಬರುವ ತಾ ೧೦-೯-೧೯೩೪ನೇ ಶನಿವಾರ ಸಾಯಂಕಾಲ ಗಂಟೆ ೬-೩೦ಕ್ಕೆ ಸನ್ಯಾಸಿಗುಡ್ಡೆಯಲ್ಲಿರುವ ಮಂಗಳೂರು ಆರ್ಯಸಮಾಜದ ಮಂದಿರದಲ್ಲಿ ಶ್ರೀ ಕೃಷ್ಣಜಯಂತಿ ಉತ್ಸವವು ಆಚರಿಸಲ್ಪಡುವುದು. ಈ ಸಂದರ್ಭದಲ್ಲಿ ಶ್ರೀಯುತ ಕಾರ್ನಾಡ ಸದಾಶಿವರಾಯರ ಅಧ್ಯಕ್ಷತೆಯಲ್ಲಿ ಈ ಕೆಳಗೆ ಹೆಸರು ಕಾಣಿಸಿದ ಮಹನೀಯರು ಭಾಷಣಗಳನ್ನು ಕೊಡುವರು. ಸರ್ವರಿಗೂ ಸ್ವಾಗತವಿದೆ. ಶ್ರೀಯುತರುಗಳಾದ ಬಿ ಅಚ್ಯುತಬಾಳಿಗ, ಬಿ. ಎ, ಎಲ್, ಟಿ, ಎಮ್. ಮಾಧವರಾವ್, ಬಿ ಎ ಬಿ. ಎಲ್, ಬಿ. ಮೋಹನಪ್ಪ ತಿಂಗಳಾಯ

ಇದೇ ಆಗೋಸ್ತು ತಾ ೨೦ನೇ ಶುಕ್ರವಾರ ಪ್ರಾತಃಕಾಲ ೮ ಗಂಟೆಗೆ ಇಲ್ಲಿಯ ಸಿಟಿ ಆರ್ಯಸಮಾಜ ಮಂದಿರದಲ್ಲಿ "ಉಪಾಕರ್ಮ" ವಿಧಿ ಆಚರಿಸಲಾಯಿತು. ಶ್ರೀಯುತರುಗಳಾದ ಬಿ ಲಕ್ಷ್ಮಣದೇವ ವಿದ್ಯಾರ್ಥಿ, ಬಾಲಕೃಷ್ಣನಾಯ್ಕ, ಯು. ಗೋವಿಂದಾಚಾರ್ಯ, ಕೊರಗ ಪಂಡಿತ ಮುಂತಾದವರು ಪೌರೋಹಿತ್ಯವನ್ನು ವಹಿಸಿದ್ದರು ಶ್ರೀಯುತ ಬಾಲಕೃಷ್ಣನಾಯ್ಕರವರು ಯಜ್ಞೋಪವೀತ ಸಂಸ್ಕಾರದ ಕುರಿತು ಭಾಷಣವಿತ್ತರು ಈ ಸಲ ೨೦ ಮಂದಿ ಯಜ್ಞೋಪವೀತ ಸ್ವೀಕರಿಸಿದರು ಇವರಲ್ಲಿ ೧೩ ಮಂದಿ ಹೊಸಬರು. ಕಿಂಚಿತ್ ಫಲಾಹಾರ ಹಂಚಲಾಗಿ ಶಾಂತಿಪಾಠದೊಂದಿಗೆ ಅಂದಿನ ಕಾರ್ಯವು ಸಮಾಪ್ತಿಗೊಂಡಿತು.

ಬರುವ ಮುನಿಸಿಪಲ್ ಚುನಾವಣೆಯಲ್ಲಿ ೧೩ನೇ ವಾರ್ಡಿಗೆ ಶ್ರೀಮತಿ ಶಾಂಭವಿ ಆರ್ ಭಂಡಾರವರು ಉಮೇದ್ವಾರರಾಗಿ ನಿಲ್ಲುವರೆಂದು ತಿಳಿದುಬರುತ್ತದೆ ಮಿ। ಹಾರೂನ್ ಹಾಜಿ ಅಬ್ದುಲ್ ಸತ್ತಾರ್ ಇವರು ನಂಬ್ರ ೩ನೇ ಕುವೆಲ್ಲೋಳಿ ವಾರ್ಡಿಗೂ ಮಿ ದಾವೂದ್ ಹಾಜಿ ಅಬ್ದುಲ್ ಸತ್ತಾರ್ ಇವರು ನಂಬ್ರ ೯ನೇ ಬಂದರ ವಾರ್ಡಿಗೂ ನಿಲ್ಲುವರಾಗಿ ತಿಳಿದುಬರುತ್ತದೆ ವಕೀಲ ರಾವ್‌ಬಹದ್ದೂರ್ ಎನ್ ಎಸ್ ಸುವರ್ಣರವರು ಬರುವ ಮುನಿಸಿಪಲ್ ಚುನಾವಣೆಯಲ್ಲಿ, ನಂಬ್ರ ೧೯ನೇ ವಾರ್ಡಿಗೆ ಉಮೇದ್ವಾರರಾಗಿರುವರೆಂದು ತಿಳಿಸುತ್ತಾರೆ ಇವರು ಕಳೆದ ಮೂರು ವರ್ಷಗಳಿಂದಲೂ ಮುನಿಸಿಪಲ್ ಕೌನ್ಸಿಲರರಾಗಿ ಎಷ್ಟು ಶ್ರದ್ಧೆಯಿಂದ ಕೆಲಸಮಾಡಿರುವರೆಂಬುದು ಜನರಿಗೆ ತಿಳಿದೇ ಇದೆ

"ಇದೇ ಬರುವ ಸಪ್ಟಂಬರ ತಿಂಗಳ ತಾ ೨ನೇ ಆದಿತ್ಯವಾರ ಸಾಯಂಕಾಲ ಘಂಟೆ ೬-೩೦ಕ್ಕೆ ಪಾಂಡೇಶ್ವರದಲ್ಲಿರುವ ಅಚ್ಚುತರ ಮುನ್ಸಿಪಲ್ ಶಾಲೆಯಲ್ಲಿ ಶ್ರೀ ಕೃಷ್ಣಜಯಂತಿ ಉತ್ಸವವು ಮಂಗಳೂರು ಸಿಟಿ ಆರ್ಯಸಮಾಜದ ಪರವಾಗಿ ಇಲ್ಲಿಯ ನಗರ ಸಭಾಧ್ಯಕ್ಷರಾದ ಡಾ। ಕೆ ವಿಠ್ಠಲಪ್ಪ ಅಧ್ಯಕ್ಷತೆಯಲ್ಲಿ ಜರಗುವುದು. ಶ್ರೀಯುತರುಗಳಾದ ಬಿ ಅಚ್ಯುತ ಬಾಳಿಗ ಬಿ ಎ ಎಲ್. ಟಿ, ಪುಂಡೂರು ಲಕ್ಷ್ಮೀನಾರಾಯಣ ಪುಣಿಂಚತ್ತಾಯ ವಿಶ್ವೇಶ್ವರ ನಾರಾಯಣ ಬಿಜೂರ್ ಮೊದಲಾದ ಕೆಲವು ಮಹನೀಯರುಗಳು ಭಾಷಣಮಾಡುವರು ನೀರೇಶ್ವಾಲ್ಯ ಆರ್ಯ ಭಜನೆ ಮಂಡಳಿಯ ಸಂಗೀತವೂ ಇರುವುದು ಸರ್ವರೂ ಕ್ಲಪ್ತ ಸಮಯಕ್ಕೆ ಬಂದು ಕಳೆಯಿಸಬೇಕಾಗಿ ವಿನಂತಿ ಎಂದು ಸಂಬಂಧಪಟ್ಟವರು ತಿಳಿಸುತ್ತಾರೆ.

ಬ್ರಹ್ಮ ಶ್ರೀ ನಾರಾಯಣ ಗುರುಸ್ವಾಮಿಯವರ ೭೮ನೇ ಜನ್ಮ ದಿನೋತ್ಸವವು ಕಳೆದ ೨೫ನೇ ದಿನ ಶನಿವಾರ ಮೆರವಣಿಗೆ, ಸಂಕೀರ್ತನೆ ಭಾಷಣಗಳೊಡಗೂಡಿ ಶ್ರೀ ಗೋಕರ್ಣನಾಥ ದೇವಸ್ಥಾನದವರಿಂದ ಬಹು ವಿಜೃಂಭಣೆಯಿಂದ ಜರಗಿಸಲ್ಪಟ್ಟಿತು

"ಮಿತ್ರಮಂಡಳಿಯು ಸಣ್ಣ ಕತೆಗಳ ಸ್ಪರ್ಧೆಯೊಂದನ್ನು ಏರ್ಪಡಿಸಲು ನಿರ್ಣಯಿಸಿರುವುದು ದಕ್ಷಿಣ ಕನ್ನಡದ ವಿದ್ಯಾರ್ಥಿಗಳು ಮಾತ್ರ ಇದರಲ್ಲಿ ಭಾಗವಹಿಸಿಕೊಳ್ಳಬಹುದು. ಕಥೆಗಳು ಅರ್ಧ ತಾವಿನ ೧೨ ಪುಟಗಳೊಳಗಿದ್ದು, ಭಾಷೆಯು ಸರಳವಾಗಿರಬೇಕು ಸಪ್ಟಂಬರ ತಾ ೩೦ರೊಳಗೆ ಅವುಗಳನ್ನು ಕೆಳಗಿನ ವಿಳಾಸಕ್ಕೆ ಪ್ರವೇಶ ಹಾಸಲು ೬ ಕಾಸು ಸ್ಟಾಂಪಿನೊಡನೆ ಮತ್ತು ತಾವು ವಿದ್ಯಾರ್ಥಿಗಳೆಂದು ಶಾಲಾ ಮುಖ್ಯೋಪಾಧ್ಯಾಯರ ಪ್ರಮಾಣಪತ್ರದೊಡನೆ ಕೆಳಗಿನ ವಿಳಾಸಕ್ಕೆ ಕಳುಹಿಸಬೇಕು. ಪ್ರಥಮ ಸ್ಥಾನ ಪಡೆದ ಕತೆಗೆ ಬಹುಮಾನ ಕೊಡುವರು. ಮೊದಲಿನ ನಾಲ್ಕು ಸ್ಥಾನ ಪಡೆದ ಕತೆಗಳನ್ನು ಪುಸ್ತಕರೂಪವಾಗಿ ಪ್ರಕಟಿಸಲೂ ಬಹುದು" ಎಂದು ಅಧ್ಯಕ್ಷ, ಮಿತ್ರಮಂಡಳಿ, ಕೆನರಾ ಹೈಸ್ಕೂಲು, ಮಂಗಳೂರು ಇವರು ಬರೆಯುತ್ತಾರೆ.

ಇದೇ ಬರುವ ಮುನಿಸಿಪಲ್ ಚುನಾವಣೆಗೆ ೧೦ನೇ ವಾರ್ಡಿಗೆ ಶ್ರೀ ಸುಜೀರ್ ಗೋಪಾಲನಾಯ್ಕರು ಉಮೇದ್ವಾರರಾಗಿ ನಿಲ್ಲುತ್ತಾರೆಂದು ತಿಳಿದುಬರುತ್ತದೆ.

ಕುಂದಾಪುರದಲ್ಲಿ ವಕೀಲರಾಗಿದ್ದ ಶ್ರೀ। ಮಂಗಳೂರು ರಾಮಚಂದ್ರ ಕಮ್ತಿಯವರು ಇದೇ ತಾ. ೨೩ನೇ ಗುರುವಾರ, ತಮ್ಮ ೬೩ನೇ ವಯಸ್ಸಿನಲ್ಲಿ ಕಾಲವಾದರೆಂದು ತಿಳಿಸಲು ವಿಷಾದಿಸುತ್ತೇವೆ. ಇವರು, ಕೆನರಾ ಹೈಸ್ಕೂಲಿನ ಆರಂಭದಿಂದ ಅಧ್ಯಾಪಕರಾಗಿ ಅನೇಕ ವರ್ಷ ತಮ್ಮ ಅಮೂಲ್ಯ ಸೇವೆಯನ್ನರ್ಪಿಸಿದವರು. ಮೃತರ ಸ್ಮರಣಾರ್ಥ ಇದೇ ತಾ. ೨೭ನೇ ಸೋಮವಾರ ಅಪರಾಹ್ನ ಒಂದು ಗಂಟೆಯ ತನಕ, — ಡಿಸ್ಟ್ರಿಕ್ಟ್ ಎಡ್ಯುಕೇಶನಲ್ ಆಫೀಸರರು ಶಾಲಾ ಇನ್ಸ್‌ಪೆಕ್ಷನನ್ನು ನಡೆಸುತ್ತಿದ್ದರೂ — ಶಾಲೆಯನ್ನು ಮುಚ್ಚಲಾಯಿತಲ್ಲದೆ, ಅಧ್ಯಾಪಕರು ಸಭೆ ಸೇರಿ, ಮೃತರ ಆತ್ಮಕ್ಕೆ ಶಾಂತಿಯನ್ನು ಕೋರಿ ಠರಾವು ಮಾಡಲ್ಪಟ್ಟು ಅವರ ಕುಟುಂಬಕ್ಕೆ ಕಳುಹಲಾಯಿತು

ನಮ್ಮ ಜಿಲ್ಲಾ ವರ್ಗದಾರರ ಸಭೆಯು ಇದೇ ಕಳೆದ ರವಿವಾರ ಡಿಸ್ಟ್ರಿಕ್ಟ್‌ಬೋರ್ಡು ಆಫೀಸಿನಲ್ಲಿ ಜರಗಿತು. ಸೆಟ್ಲಮೆಂಟ್ ಯೋಜನೆಯ ವರದಿಯಲ್ಲಿರುವ ಆಕ್ಷೇಪಣೆಗಳನ್ನು ಶ್ರೀ। ಕೆ ಆರ್. ಕಾರಂತರವರು ಸವಿವರವಾಗಿ ಸ್ಪಷ್ಟೀಕರಿಸಲು, ಸರಕಾರಕ್ಕೆ ಕಳುಹಬೇಕೆಂದಿರುವ ಆ ಆಕ್ಷೇಪಣಾ ಪತ್ರವು ಸರ್ವಾನುಮತದಿಂದ ಮಂಜೂರಾಯಿತು ನಮ್ಮ ಜಿಲ್ಲೆಯ ೧೨ ಮಂದಿ ಪ್ರತಿನಿಧಿಗಳು ಎಮ್ ಎಲ್ ಸಿ ಗಳೊಂದಿಗೆ ಇದೇ ಬರುವ ತಿಂಗಳಲ್ಲಿ ಗವರ್ನರರನ್ನು ಕಂಡು ಮನವಿಮಾಡುವಂತೆ ಗೊತ್ತಾಗಿದೆ

ಅಂಕೋಲೆಯಲ್ಲಿ ನಡೆಯುತ್ತಿರುವ ದೇಶಭಕ್ತ ಕಾರ್ನಾಡು ಸದಾಶಿವರಾಯರ ಮೇಲಿನ ಮೊಕದ್ದಮೆಯು ಇನ್ನೂ ತೀರ್ಮಾನವಾದುದಿಲ್ಲ. ಪುನಃ ಇದೇ ಬರುವ ಸಪ್ಟಂಬರ ತಾ ೧೮ಕ್ಕೆ ಮುಂದುವರಿಸಲ್ಪಟ್ಟದೆಯೆಂದು ತಿಳಿದುಬರುತ್ತದೆ

ಮಂಗಳೂರು ಸೌತ್ ಡಿವಿಜನಿನ ಡಿಸ್ಟ್ರಿಕ್ಟ್ ಫೋರೆಸ್ಟ್ ಆಫೀಸರ ಮತ್ತು ಡಿಪ್ಯುಟಿ ಕನ್ಸರ್ವೇಟರ್ ಆಫ್ ಫೋರೆಸ್ಟ್ ಆಗಿದ್ದ ಮಿ ಡಬ್ಲ್ಯೂ. ಜಿ. ಡಾಯ್ಸನ್ನರವರು ಸೇಲಂ ನೋರ್ತ್ ಡಿವಿಜನಿಗೆ ವರ್ಗಾಯಿಸಲ್ಪಟ್ಟಿದ್ದು, ಅವರ ಸ್ಥಾನದಲ್ಲಿ ಗೋದಾವರಿ ನೋರ್ತ್ ಡಿವಿಜನಿನ ಶ್ರೀ ಇ. ಕೆ ಕೃಷ್ಣನ್‌ರವರು ಇಲ್ಲಿಗೆ ವರ್ಗಾಯಿಸಲ್ಪಟ್ಟಿರುತ್ತಾರೆ

ಇದೇ ತಾ ೨೫ಕ್ಕೆ ಅಂತ್ಯವಾಗುವ ಒಂದು ವಾರದ ನಮ್ಮ ನಗರದ ಆರೋಗ್ಯದ ವರದಿ — ಮರಣಗಳು ೨೭ ಜನನಗಳು ೪೭ ಮರಣಗಳ ಪೈಕಿ ಸಿಡುಬು ೨, ಸಿಸಮ ಜ್ವರ ೨ ನ್ಯುಮೋನಿಯಾ ೪ ಕ್ಷಯ - ಇತರ ಶ್ವಾಸೋಚ್ಛ್ವಾಸ ಸಂಬಂಧವಾದುವು ೨ ಆಮಶಂಕೆ ೧ ಶಿಶುಜನನ ೧, ಆತ್ಮಹತ್ಯೆ ೧ ಅಪಘಾತ ೧ ಮತ್ತು ಇತರ ಕಾರಣಗಳಿಂದ ೧೧ ಈ ವಾರದಲ್ಲಿ ಮೂವರಿಗೆ ಸಿಡುಬು ರೋಗ ಅಂಟಿದೆ

ಶ್ರೀ ರಾಮೇಶ್ವರ ಕ್ಷೇತ್ರದಲ್ಲಿ ಶ್ರೀ ಕಾಶೀಮಠ ಸಂಸ್ಥಾನದ ಶ್ರೀ ಕೋದಂಡರಾಮ ದೇವಸ್ಥಾನದ ಮಠದ ಜೀರ್ಣೋದ್ಧಾರದ ಬಗ್ಗೆ ವಾಗ್ದಾನ ಮಾಡಿದವರ ಪಟ್ಟಿ — (ಕಳೆದ ಸಂಚಿಕೆಯಿಂದ ಮುಂದರಿದುದು)

ಉಳ್ಳಾಲ ಸುಬ್ರಾಯ ನಾಯ್ಕ ಎಂಡ್ ಕೋ

ರೂ ೨೨೫

ಓ ರಂಗಪ್ಪಭಂಡಾರಿ ಅಂಡ್ ಸನ್ಸ್

(ಜುವೆಲರ್ಸ್) ರೂ ೨೨೫

ವಿ ಶ್ರೀನಿವಾಸ ನಾಗಪ್ಪ ಚೌಡಯ್ಯ ರೂ ೨೦೫

ತಿದ್ದುಪಡಿ — ನಮ್ಮ ಕಳೆದ ಸಂಚಿಕೆಯಲ್ಲಿ 'ಶ್ರೀ ರಾಮೇಶ್ವರಕ್ಷೇತ್ರ' ಎಂಬ ಶಿರೋನಾಮೆಯ ಕೆಳಗೆ (ಪುಟ ೯) ಪ್ರಕಟವಾದ ೬ನೇ "ಅಮ್ಮೆಂಬಳ ಸುಬ್ಬಣ್ಣಾಚಾರ್ಯ" ಎಂಬುದನ್ನು "ಅಮ್ಮೆಂಬಳ ಸುಬ್ಬಣ್ಣ ಚಾರ್ಯ" ಎಂದೂ ೧೫ನೇ "ಪಂಚಮಾಲ್ ರಮಾನಾಥರಾವ್" ಎಂಬುದನ್ನು "ಪಂಚಮಾಲ್ ಉಮಾನಾಥರಾವ್" ಎಂದೂ ತಿದ್ದಿಕೊಳ್ಳತಕ್ಕದ್ದು

ಇಲ್ಲಿಯ ಶರಾವಿನ ಶ್ರೀ। ಗಣಪತಿ ದೇವಸ್ಥಾನದಲ್ಲಿ ಇದೇ ಕಳೆದ ಮಂಗಳವಾರ ನಡುರಾತ್ರಿ, ಹೇಗೋ ಒಳಗೆ ಪ್ರವೇಶ ಪಡೆದು, ದೇವರ ಡಬ್ಬಿಯಿಂದ ಹಣ ಕದಿಯಲು ಯತ್ನಿಸುತ್ತಿದ್ದವನೊಬ್ಬನನ್ನು ಅಲ್ಲಿ ನಿದ್ರಿಸುತ್ತಿದ್ದ ಅರ್ಚಕರು ಎಚ್ಚರಗೊಂಡು ಸೆರೆಹಿಡಿದು ಪೋಲೀಸರಿಗೊಪ್ಪಿಸಿರುವರು. ಈತನು ಸ್ಥಾನಿಕ ಬ್ರಾಹ್ಮಣನಂತೆ.

ಅನಿರೀಕ್ಷಿತವಾಗಿ ಬೊಂಬಾಯಿ ಸ್ಟೀಮ್ ನೆವಿಗೇಶನ್ ಕಂಪೆನಿಯವರ "ಎಸ್ ಎಸ್. ಸರಸ್ವತಿ" ಎಂಬ ಸ್ಪೆಶಲ್ ಸ್ಟೀಮರು ನಿನ್ನೆ ಬೊಂಬಾಯಿಯಿಂದ ಹೊರಟಿದ್ದು, ಕಾರವಾರದಲ್ಲಿ ಮಾತ್ರ ತಂಗುತ್ತ, ನಾಳೆ ಇಲ್ಲಿಗೆ ಬಂದು ತಲಪುವುದೆಂದು ವಾರ್ತೆಬಂದಿದೆ

ಪೇರಿಬೈಲು ಡಿ. ಸಿ. ಎಮ್. ಶಾಲೆಯ ಮುಖ್ಯೋಪಾಧ್ಯಾಯರಾದ ಶ್ರೀ। ಬಿ. ಎಮ್. ರಾಮಯ್ಯನವರು ಕಳೆದ ರವಿವಾರ ಅಪರಾಹ್ನ ಗಂಟೆ ಎಕ್ಕೆ ಕೊಟ್ಟಾರಗುಡ್ಡೆ ಡಿ. ಸಿ. ಎಮ್. ಶಾಲೆಗೆ ಹೋಗಿದ್ದಾಗ ಅವರನ್ನು, ಅಲ್ಲಿಯ ವಾರ್ಡನರು ಅದಿದ್ರಾವಿಡ ವಿದ್ಯಾರ್ಥಿಗಳಿಂದ ಕಟ್ಟಿಹಾಕಿಸಿದರೆಂದೂ, ಕೊನೆಗೆ ಶ್ರೀ। ವಿಶ್ವೇಶ್ವರರಾಯರು ಅವರ ಬಿಡುಗಡೆ ಮಾಡಿಸಿದರೆಂದೂ ಒಂದು ವಿಚಿತ್ರ ಸುದ್ದಿ!!! ಶ್ರೀ ರಾಮಯ್ಯನವರು ಅಲ್ಲಿಗೆ ಹೋದುದೇಕೆ, ವಾರ್ಡನರು ಅವರನ್ನು ಕಟ್ಟಿಹಾಕಿಸಿದುದೇಕೆ, ಇವೆರಡರ ಕಾರಣಗಳು ಇನ್ನು ಪ್ರಕಟವಾಗಬೇಕಾಗಿದೆ.

ಇದೇ ಕಳೆದ ತಾ. ೨೩ನೇ ಗುರುವಾರ ಇಲ್ಲಿರುವ ಶ್ರೀ ವೆಂಕಟರಮಣ ಥಿಯೆಟ್ರಿಕಲ್ ನಾಟಕ ಕಂಪೆನಿಯವರು ಇಲ್ಲಿಯ ಕೃಷ್ಣ ಭಜನಾಮಂಡಳಿಯ ಪರವಾಗಿ 'ಹರಿಶ್ಚಂದ್ರ' ಎಂಬ ನಾಟಕವನ್ನಾಡಿದರು ನಾಟಕಾಂತ್ಯದಲ್ಲಿ — "ಚರಿತ್ರೆಯು ಪುನರಾವೃತ್ತಿಯಾಗುತ್ತಿದೆ ಇಂತಹ ಹರಿಶ್ಚಂದ್ರರು ಭಾರತಮಾತೆಯ ಗರ್ಭದಲ್ಲಿ ಮತ್ತೂ ಜನಿಸಿರುವರು. ಇಂದೀಗ ಪಂಡಿತ ಜವಾಹರಲಾಲ ನೆಹರುಗಳೂ ಒಂದು ರೀತಿಯಲ್ಲಿ ಅಭಿನವ ಹರಿಶ್ಚಂದ್ರರಾಗಿ ಚಂದ್ರಮತಿಯಂತಹ ತನ್ನ ಸತಿ ಕಮಲಾನೆಹರುಗಳೊಡನೆ ಸತ್ಯಧರ್ಮಕ್ಕಾಗಿ ಮಹತ್ತಾದ ಕಷ್ಟಕ್ಕೆ ಒಳಗಾಗಿರುವರು! ಈ ಅಭಿನವ ಹರಿಶ್ಚಂದ್ರ — ಚಂದ್ರಮತಿಯರೂ ಮುಂದೆ ಜಯಶೀಲರಾಗಿ ಚಿರಾಯುಗಳಾಗಿರುವಂತೆ ಜಗದೀಶ್ವರನಲ್ಲಿ ಮೊರೆಯಿಡುವುದು ನಮ್ಮೆಲ್ಲರ ಕರ್ತವ್ಯ" ಎಂದು ಮೊದಲಾಗಿ ಸ್ಫೂರ್ತಿಯಿಂದ ಭಾಷಣವಿತ್ತು, ನಾಟಕ ಮಂಡಳಿಯವರ ಸಹಾಯವನ್ನೂ ಭಜನಾ ಮಂಡಲಿಯವರ ಸಾಹಸವನ್ನೂ ಶ್ಲಾಘಿಸಿ ಶ್ರೀ ಪುಣಿಂಚತ್ತಾಯರು ಸಭಿಕರನ್ನು ಸಂತೋಷಗೊಳಿಸಿದರು. ಮತ್ತೆ ಶನಿವಾರ ವೈಶ್ಯಸಮಾಜದವರ ಸಹಾಯಾರ್ಥವಾಗಿಯೂ ಮಂಡಲಿಯವರು ಮತ್ತೊಂದು ನಾಟಕವನ್ನಾಡಿದರು

ಇದೇ ಬರುವ ಮುನ್ಸಿಪಲ್ ಕೌನ್ಸಿಲರ ಚುನಾವಣೆಗೆ ವಾರ್ಡ್ ನಂಬ್ರ ೭ನೆಗೆ ಶ್ರೀಯುತ ಸಾಹುಕಾರ ವಿಠ್ಠಲ ಶಾಂತಾರಾಮರವರು ಉಮೇದುವಾರರೆಂದು ಈ ಮಹನೀಯರು ನಮಗೆ ತಿಳಿಸಿರುತ್ತಾರೆ

"ಶ್ರೀ ಕೃಷ್ಣಸಿನೆಮದಲ್ಲಿ ಈ ದಿನ ಶ್ರೀ ಕೃಷ್ಣ ಜನ್ಮಾಷ್ಟಮಿಯ ಸಲುವಾಗಿ "ಪಾರ್ಥಕುಮಾರ" ಎಂಬ ಚಿತ್ರವು ಪ್ರದರ್ಶಿತವಾಗಲಿದ್ದು ಆರಂಭ ೨ ೩೦ರ ಒಂದು ದೇಖಾವೆಯು ಧರ್ಮಾರ್ಥವಾಗಿ ಇರಿಸಲಾಗಿದೆ, ಸಾಯಂಕಾಲ ೫ ೧೫ ೬ ೪೦ ಮತ್ತು ರಾತ್ರಿ ೯ ೩೦ರ ಮೂರು ದೇಖಾವೆಗಳಿಗೆ ಎಲ್ಲ ತರಗತಿಗಳಲ್ಲಿಯೂ ಅರ್ಧದರ ನಾಳೆಯಿಂದ ಪೆರಮೌಂಟ್ ಕಂಪೆನಿಯವರ "ಕೀಂಗ್ ಎಂಡ್ ಎ ಪೋಕ್" ಎಂಬ ಚಿತ್ರವು ಪ್ರದರ್ಶಿಸಲ್ಪಡುವುದು" ಎಂದ ಆಡಳಿತಗಾರರು ತಿಳಿಸುತ್ತಾರೆ



ಬಿಹಾರಿನ ಭೂಕಂಪನಿರಾಶ್ರಿತರಿಗಾಗಿ ಶ್ರಮಪಡುತ್ತಲಿರುವ ಶ್ರೀ। ಬಾಬೂರಾಜೇಂದ್ರ ಪ್ರಸಾದರವರು.

ಸ್ವೀಕಾರ

ಪುತ್ತೂರಿನ ಮುಸ್ಲಿಂ ಸುಧಾರಣಾ ಸಂಘದವರ ಪ್ರಕಟಣೆಯಾದ "ಕರ್ನಾಟಕದ ಮುಸ್ಲಿಮರೂ ಸುಧಾರಣೆಯೂ" ಎಂಬ ಈ ಪುಸ್ತಕ ಪ್ರತಿಯು (ಕರಪತ್ರ ೩) ನಮ್ಮ ಕೈಸೇರಿದೆ ಇದರಲ್ಲಿ ಲೇಖಕರಾದ ಜನಾಬ್ ಕೆ ಬಿ. ಮಹಮ್ಮದ್, ಎಸ್ ಎಮ್ ಇವರು "ಮುಸ್ಲಿಮ ಸ್ತ್ರೀಪರದೆ ಮತ್ತು ಗೋಷ" "ಮುಸ್ಲಿಂ ಸ್ತ್ರೀಯರೂ ಅಕ್ಷರಾಭ್ಯಾಸವೂ" ಮತ್ತು "ಮುಸ್ಲಿಂ ಪೂರ್ವಿಕರು' ಈ ಮೂರು ವಿಷಯಗಳನ್ನು ಸುಲಭಗ್ರಾಹ್ಯವಾದ ಶೈಲಿಯಲ್ಲಿ ಮನದಟ್ಟಾಗುವಂತೆ ಪ್ರತಿಪಾದಿಸಿರುವರು. ಸುಧಾರಣಾಕಾಂಕ್ಷಿಗಳಾಗಿ ಜನಾಬ್ ಮಹಮ್ಮದ್‌ರವರು ಈ ಪುಸ್ತಕವನ್ನು ಧರ್ಮಾರ್ಥವಾಗಿ ಹಂಚುವ ಏರ್ಪಾಡು ಮಾಡಿರುವರು ಮುಸ್ಲಿಂ ಬಾಂಧವರು ಇದರ ಸದುಪಯೋಗ ಮಾಡಿಕೊಳ್ಳುವರೆಂದು ಹಾರೈಸಲಾಗಿದೆ.

'ಸಂಕ್ಷಿಪ್ತ ಜೈನ ಇತಿಹಾಸ'— ಅನುವಾದಕರು — ಶ್ರೀ ಮಾನ್ಯರು ಪಂ. ವರ್ಧಮಾನ ಹೆಗ್ಡೆ, ಮೂಡಬಿದ್ರೆ. ಬೆಲೆ: ೦-೧-೦, ಈ ಮೇಲಿನ ಚಿಕ್ಕ ಪಹಿಯನ್ನು ಸಂತೋಷದಿಂದ ಸ್ವೀಕರಿಸುತ್ತೇವೆ.

ತಾಲೂಕುಗಳಿಂದ.

ಮೂಲ್ಕಿ — ಬಿಲ್ಲವ ಸೇವಾಸಮಾಜ ಸಂಘದ ಚಾರಿಟಿ ಕೇವಾಣಿತಿಯಿಂದ ರೂ. ೩೦೦ (ಇನ್ನೂರು)ರನ್ನು ಮೂಲ್ಕಿ ಟೌನ್ ಬೇಂಕಿನಲ್ಲಿ ಒಂದು ವರ್ಷದ ಅವಧಿಗೆ ಠೇವಣಿಯಾಗಿ ಇಡಲಾಯಿತು ಮುಂಬಾಯಿಯಿಂದ ಪ್ರಥಮವಾಗಿ ಮು। ರಾ। ರಾ। ಎಮ್ ಕೊರಪ್ಪನವರೂ, ಎಮ್ ಮೋನಪ್ಪ ಅಮೀನರವರೂ, ಎಸ್, ಬಿ, ಲಂಚನ್‌ರವರೂ ಎಮ್. ವೆಂಕಪ್ಪ ಲಂಚನ್‌ರವರೂ ಧನಸಹಾಯವನ್ನು ಮಾಡಿರುವರು. ಇವರ ಮಾದರಿಯನ್ನು ಬೊಂಬಾಯಿ ಜಾತಿಬಾಂಧವರು ಅನುಸರಿಸಬೇಕಾಗಿ ಸಂಬಂಧಪಟ್ಟವರು ಪ್ರಾರ್ಥಿಸುತ್ತಾರೆ.

ಉಡುಪಿ — ಮಹಾತ್ಮಾ ಗಾಂಧಿಯವರಿಂದ ದಕ್ಷಿಣ ಜಿಲ್ಲೆಯಲ್ಲಿ ತೆರೆಯಲಾದ ಒಂದೇ ಒಂದು ಖಾದಿ ಅಂಗಡಿಯು (ಸ್ವದೇಶಿ ಭಂಡಾರ ಲಿಮಿಟೆಡ್‌ನಿಂದ ನಡೆಯಿಸಲ್ಪಡುವ) ಇತ್ತೀಚೆಗೆ ಅಖಿಲಭಾರತ ಚರಖಾ ಸಂಘದ ಕರ್ನಾಟಕ ಶಾಖೆಯಿಂದ ಶುದ್ಧ ಖಾದಿಯನ್ನು ವಿಕ್ರಯಿಸುವುದೆಂಬುದಾಗಿ ಪ್ರಮಾಣಪತ್ರವನ್ನು ಹೊಂದಿರುತ್ತದೆಂದು ತಿಳಿಸಲು ಸಂತೋಷಪಡುತ್ತೇವೆ

ಹಿರಿಯಡ್ಕ — ಇದೇ ತಿಂಗಳ ಕಳೆದ ತಾ. ೧೧ಕ್ಕೆ ಮಂಗಳೂರು ಸಿಟಿ ಆರ್ಯಸಮಾಜದ ಕಾರ್ಯದರ್ಶಿಯವರೂ ಸದ್ಧರ್ಮ ಪ್ರಚಾರಕ ಗ್ರಂಥಮಾಲೆಯ ಸಂಪಾದಕರೂ ಮತ್ತು ಹಿಂದೀ ಪ್ರಚಾರಕರೂ ಆಗಿರುವ ಬಿ. ಲಕ್ಷ್ಮಣದೇವ ವಿದ್ಯಾರ್ಥಿಯವರು ಇಲ್ಲಿಗೆ ಬಂದಿದ್ದು ಇಲ್ಲಿಯ ಹಾಯರ್ ಎಲಿಮೆಂಟರಿ ಶಾಲೆಯಲ್ಲಿ ಕೀರ್ತನಾ ರೂಪದಲ್ಲಿ ಎರಡು ಉಪನ್ಯಾಸಗಳನ್ನು ಮಾಡಿದರು ಜನಸಂದಣಿಯು ವಿಶೇಷವಾಗಿತ್ತು ಇಲ್ಲಿಯ ಪೋಸ್ಟ ಮಾಸ್ಟರ್ ಶ್ರೀಯುತ ಶ್ರೀನಿವಾಸ ಭಟ್ಟ ಕಾಲೋಚಿತವಾದ ಚಿಕ್ಕ ಭಾಷಣವನ್ನಿತ್ತರು. ಉಪನ್ಯಾಸ ಕರ್ತರು ತಮ್ಮ ಭಾಷಣದಲ್ಲಿ ವರ್ತಮಾನ ಕಾಲದ ಹಿಂದೂ ಸಮಾಜದ ಪರಿಸ್ಥಿತಿಯನ್ನು ವಿವರಿಸಿ ವೈದಿಕ ಧರ್ಮದ ತತ್ವಗಳನ್ನು ಎಲ್ಲರಿಗೂ ಮನತಗೊಳಿಸಿದರು ಊರವರ ಸಹಕಾರವು ಸಂಪೂರ್ಣ ಇತ್ತು. ಇಲ್ಲಿಯ ವೈದಿಕ ಧರ್ಮಪ್ರಚಾರಕ ಮಂಡಳಿಯವರು ತುಂಬಾ ಪರಿಶ್ರಮವನ್ನು ವಹಿಸಿದ್ದರು.

ತಾ. ೨೬ನೇ ಆದಿತ್ಯವಾರ ಪ್ರಾತಃಕಾಲ ಘಂಟೆ ೮ಕ್ಕೆ ಇಲ್ಲಿಯ ಮಿತ್ರಮಂಡಳಿಯ ವಾಚನಾಲಯದಲ್ಲಿ ಒಂದು ಸಭೆ ಜರಗಿತು. ಹವನ, ಸಂಧ್ಯಾಭಜನೆ ಪ್ರಾರ್ಥನೆ ಇತ್ಯಾದಿಗಳು ನೆರವೇರಿದ ನಂತರ ಶ್ರೀಯುತ ವಿದ್ಯಾರ್ಥಿಗಳು ಆರ್ಯಸಮಾಜದ ತತ್ವಗಳ ಕುರಿತು ಮತ್ತು ಅಗ್ನಿಹೋತ್ರ ಸಂಧ್ಯಾವಂದನೆಗಳ ಕುರಿತು ಚಿಕ್ಕ ಭಾಷಣವನ್ನಿತ್ತರು ಆ ಮೇಲೆ ಸಮಾಜ ಸಮ್ಮತಿಯಿಂದ ಮಂಗಳೂರು ಸಿಟಿ ಆರ್ಯಸಮಾಜದ ಒಂದು ಶಾಖೆಯನ್ನು ಸ್ಥಾಪಿಸಲಾಯಿತು. ಹೊಸತಾಗಿ ಸೇರಿದ ಸದಸ್ಯರ ಪೈಕಿ ೬ ಮಂದಿ ಮಹನೀಯರುಗಳುಳ್ಳ ಒಂದು ಕಾರ್ಯನಿರ್ವಾಹಕ ಸಮಿತಿಯು ಸ್ಥಾಪಿಸಲ್ಪಟ್ಟಿತು ಪ್ರತಿ ಭಾನುವಾರ ಪ್ರಾತಃಕಾಲ ಸಾಪ್ತಾಹಿಕ ಅಧಿವೇಶನಗಳು ನೆರವೇರುವಂತೆ ವ್ಯವಸ್ಥೆ ಮಾಡಲಾಗಿದೆ

ರೈಲು ಬಂಡಿಗಳ ಸಮಯ.

	ಹೋಗುವ ಸಮಯ	ಇಲ್ಲಿಗೆ ತಲಪುವ ಸಮಯ
ಮೈಲ್	ಬೆಳಿಗ್ಗೆ ೯ ೫೫	ಶ್ಯಾಮ ೪ ೨೦
ಮಿಕ್ಸೆಡ್	೬	ರಾತ್ರಿ ೮ ೪೫
ಪೆಸೆಂಜರ್	ಅಪರಾಹ್ನ ೫೫	ಅಪರಾಹ್ನ ೨ ೫೦
ಏಟ್	ಶ್ಯಾಮ ೫ ೩೫	ಬೆಳಿಗ್ಗೆ ೯ ೪೦

ಹೊಸ ಸರ್ವೀಸುಗಳು

ಕಾಂಞಂಗಾಡ್	ಬೆಳಿಗ್ಗೆ ೮ ೪೦	
ವರೆಗಿನ ಬಂಡಿ		ಅಪರಾಹ್ನ ೧ ೩೦
ಕಾಸರಗೋಡು	ಅಪರಾಹ್ನ ೪-೩೫	
ವರೆಗಿನ ಬಂಡಿ		ಶ್ಯಾಮ ೬-೧೫

ಗೇರನ್ನು ರಫ್ತುಮಾಡುವವರು.

ಸಂಯುಕ್ತ ಸಂಸ್ಥಾನದ ಪ್ರಮುಖ ಏಜನ್ಸಿಯು ಗೇರುಬೀಜಗಳನ್ನು ರಫ್ತುಮಾಡುವ ಪ್ರಮುಖ ಸಂಸ್ಥೆ ಯಾ ವ್ಯಾಪಾರಸ್ಥನ ಪ್ರಾತಿನಿಧ್ಯವನ್ನು ವಹಿಸಲು ಅಪೇಕ್ಷಿಸುತ್ತದೆ ಪತ್ರ ವ್ಯವಹಾರವನ್ನು ಬಯಸಲಾಗಿದೆ.

ವಿಳಾಸ.—

A. C. Herrmann Co,
105 Hudson Street,
New York City, U. S. A.
Reference Irving Trust Company
of New York City.

[illegible]

ಕೊಡಗು.

[illegible] ಹೋಗಲಿಚ್ಛಿಸುವವರು ಇಲ್ಲಿಂದ ಹೊರಡುವ ಮೊದಲು ಡಾಕ್ಟರ್ [illegible] ಸರ್ಜನರಿಂದ ಶಿಫಾರಸು ಪತ್ರವನ್ನು ಪಡೆದುಕೊಳ್ಳಬೇಕೆಂದು ಪ್ರಕಟವಾಗಿದೆ.

ಕೊಡಗಿನಲ್ಲಿ ಪ್ರಕೃತ ಜಾರಿಯಲ್ಲಿರುವ ಸಹಕಾರಿ ಸಂಘಗಳ ಕ್ರಮಗಳನ್ನು ತಿದ್ದುಪಡಿ ಮಾಡುವ ಬಗ್ಗೆ ಕೊಡಗು ಕೌನ್ಸಿಲಿನಲ್ಲಿ ಒಂದು ಶಾಸನವು ಸರಕಾರದವರಿಂದ ಬರಲಿರುವುದೆಂದು ತಿಳಿದುಬರುತ್ತದೆ.

ತಾ. ೧೬-೮-೩೪ರಿಂದ ತಾ. ೨೨-೮-೩೪ರ ವರೆಗೆ ಮಡಿಕೇರಿಯಲ್ಲಿ ೮ ಇಂಚು ೯೮ ಸೆಂಟ್ಸು ಮಳೆ ಬಿದ್ದಿದೆ.

ಮಡಿಕೇರಿ ಸೆಂಟ್ರಲ್ ಹೈಸ್ಕೂಲಿನ ಬೋರ್ಡಿಂಗ್‌ನಲ್ಲಿ ಪ್ಲೇಗಿನ ಇಲಿಗಳು ಸಕ್ತಿರುತ್ತವೆ. ಈ ತಾ. ೨೦ರಲ್ಲು ತೆರೆಯಬೇಕೆಂದಿದ್ದ ಶಾಲೆಯನ್ನು ಬರುವ ತಾ. ೯ರಲ್ಲಿ ತೆರೆಯುವರು.

ಮೈಸೂರು.

ಮಂಡ್ಯದ ದ್ವಿತೀಯ ದರ್ಜೆಯ ಆರೋಗ್ಯಾಧಿಕಾರಿಗಳಾಗಿರುವ ಶ್ರೀ। ಟಿ. ಚಂದ್ರಶೇಖರಯ್ಯನವರು ಏಳು ತಿಂಗಳುಗಳ ರಜೆ ಪಡೆದು ಅಮೇರಿಕಕ್ಕೆ ಹೋಗಲಿರುವುದರಿಂದ ಅವರ ಸ್ಥಾನಕ್ಕೆ ಡಾ। ಎಸ್. ಪಾರ್ಥಸಾರಥಿಯವರನ್ನು ನೇಮಿಸಲಾಗಿದೆ.

ಮೈಸೂರು ಮೆಡಿಕಲ್ ಕೊಲೇಜು ಸಂಘದ ಪ್ರಾರಂಭೋತ್ಸವವು ಡಾ। ರೊಬಿನ್ಸನ್‌ರವರಿಂದ ಆರಂಭಿಸಲ್ಪಟ್ಟಿತು.

[illegible]

[illegible] ಗ್ರಾಮದ ಹೆಸರನ್ನು ಜಯಚಾಮರಾಜಪುರವೆಂದು ಬದಲಾಯಿಸಲಾಗಿದೆಯೆಂದು ಪ್ರಭುತ್ವದ ಪ್ರಕಟಣೆಯಾಗಿದೆ.

ತೀರ್ಥಹಳ್ಳಿ.

ರೈತರ ಸಭೆ:—ತಾ. ೩-೯-೩೪ನೇ ಸೋಮವಾರ ಮಧ್ಯಾಹ್ನ ೪ ಘಂಟೆಗೆ ಈ ತಾಲೂಕಿನ ರೈತರ ಸಭೆಯು ಶ್ರೀರಾಮಮಂದಿರದಲ್ಲಿ ನಡೆಯುತ್ತದೆ. ರೈತರಿಗೆ ಕಂದಾಯ ಕಡಮೆಯಾಗತಕ್ಕ ವಗೈರೆ ಪರಿಹಾರ ಕೇಳಿಕೊಂಡು, ಈ ಬಗ್ಗೆ ಸರಕಾರದವರಿಂದ ನೇಮಕವಾದ ಕಮಿಟಿಗೆ ಠರಾವು ಕಳುಹಿಸುವ ಏರ್ಪಾಡು ಮಾಡಲು, ಸಕಲ ರೈತರು ದಯಮಾಡಿಸಬೇಕು.

ಮುನಿಸಿಪಲ್ ಮೀಟಿಂಗ್:— ಈ ಮಾಹೆ ತಾ. ೩೧-೮-೩೪ನೇ ದಿನ ನಡೆಯುವ ಮುನಿಸಿಪಲ್ ಮೀಟಿಂಗಿನ ನೋಟೀಸಿಗೆ ಪ್ರೆಸಿಡೆಂಟರು ಸಹಿ ಮಾಡದೆಯೂ, ಹಿಂದಿನ ಮೀಟಿಂಗಿನಲ್ಲಿ ತೀರ್ಮಾನವಾದ ಹಾಗೆ ಕ್ರಮವಾದ ಮೀಟಿಂಗಿನ 'ಅಜೆಂಡ' ಕೊಡದೆಯೂ ಮೆಂಬರುಗಳಿಗೆ ಬಹಳ ವ್ಯಸನವನ್ನುಂಟುಮಾಡಿದೆ.

ಪ್ರಾಥಮಿಕ ಪಾಠಶಾಲೆ:— ಇಲ್ಲಿಯ ಟವನ್ ಪ್ರೈಮರಿ ಬಾಯ್ಸ್ ಸ್ಕೂಲು ಕಟ್ಟಡವು ಚಿಕ್ಕದಾಗಿರುವುದರಿಂದ ಹಾಲಿ ಓದುತ್ತಿರುವ ವಿದ್ಯಾರ್ಥಿಗಳಿಗೆ ಕುಳಿತುಕೊಳ್ಳಲು ತುಂಬಾ ಅನಾನುಕೂಲವಾಗಿದೆ. ಅಲ್ಲದೆ, ಈ ಊರಿಗೆ ಒಂದೇ ಒಂದು ಸ್ಕೂಲಾಗಿದೆ. ಈ ಸ್ಕೂಲಿಗೆ ಸುಮಾರು ೨-೩ ಮೈಲಿ ಫಾಸಲೆಯಿಂದ ಚಿಕ್ಕ ಮಕ್ಕಳು ಬರಬೇಕಾಗಿದೆ. ಅಲ್ಲದೆ, ಊರು ದಿನೇ ದಿನೇ ಬಡಾವಣೆಯಾಗುತ್ತಿರುವುದರಿಂದ, ಘನ ಸರಕಾರದವರು ಟವನಿನ ಮಧ್ಯದಲ್ಲಿ

[illegible] ಎಂದು [illegible]

ಸಂಕ್ಷೇಪ ವಾರ್ತೆಗಳು.

ಹಾರ್ಬಿನ್‌ನಿಂದ ಬಂದ ವಾರ್ತೆಯಿಂದಾಗಿ ಮಂಚುಕೋವಿನಲ್ಲಿ ೩೦೦ ಮಂದಿ ಬಂಡಾಯಗಾರರು ೩೬ ಮಂದಿ ಕೊರಿಯನ್ ನಿವಾಸಿಕರನ್ನು ಕೊಂದಿಕ್ಕಿದರೆಂದು ತಿಳಿದುಬರುತ್ತದೆ.

ಲಾಹೋರಿನಲ್ಲಿ ಮುಸ್ಲಿಮ ಜಮೀನ್ದಾರನೊಬ್ಬನು ಭೂಮಿಯ ಕುರಿತು ತನಗೂ ನೆರೆಹೊರೆಯವರಿಗೂ ಇರುವ ವಿವಾದವನ್ನು ಪಡೇರಿಗೆ ತಿಳಿಸಹೋಗಿದ್ದಾಗ ವೈರಿಗಳು ಅವನನ್ನು ದಾರಿಯಲ್ಲೇ ಹತಮಾಡಿದರು.

ಅಲ್‌ಗೀರ್ಸ್ ಎಂಬಲ್ಲಿ ಒಂದು ಮೋಟರ್, ಒಂದು ಹುಣಿಗೆ ಬಿದ್ದು ೧೫ ಮಂದಿ ಮೃತರಾದರು.

ಮದ್ರಾಸಿನ ಚೂಲೈ ಹ್ಯಾರೋಡ್‌ನಲ್ಲಿ ಕಣ್ಣಯ್ಯ ಎಂಬವನು, ಚಲಿಸುತಿದ್ದ ಟ್ರೇಮ್‌ನಿಂದ ಹಾರುವಾಗ ಬಿದ್ದು ಮರಣೋನ್ಮುಖನಾಗಿ ಆಸ್ಪತ್ರೆಗೆ ಸಾಗಿಸಲ್ಪಟ್ಟಿರುತ್ತಾನೆ.

ತಾ. ೨೪ರಲ್ಲಿ ಮದ್ರಾಸಿನ ಸೈದಾಪೇಟೆಯಲ್ಲಿ ಬಸ್ ಬಿದ್ದು ಒಬ್ಬಳು ಮೃತಳಾಗಿ ೩ ಮಂದಿ ವಿಶೇಷ ಜಖಂಗೊಂಡಿರುವರು.

ನೋಟೀಸು.

[illegible] ಕೋರ್ಟಿನಲ್ಲಿ.

S. C. No. [illegible]

ಸದಿಯನ್ನು [illegible] ವಾದಿಳು

ಮತ್ತು

1. ರಂಗು ಪೂಜಾರ್ತಿ, 2. [illegible] ಹೆಂಗಸು—ಪ್ರತಿವಾದಿರು.

ಇವರೊಳಗೆ—

ಸದ್ರಿ ಪ್ರತಿವಾದಿರು ವಾದಿಳಿಗೆ ತಾರೀಕು 28-8-'32ರಲ್ಲಿ ರೂಪಾಯಿ 45/—ಕ್ಕೆ ಬರಕೊಟ್ಟ ಡಿಮಾಂಡು ಪ್ರೊಮಿಸರಿ ನೋಟಿನ ಬಾಬ್ತು ಬಹ ಹಣಗಳನ್ನು ಬರಮಾಡಿಕೊಳ್ಳುವರೆ ವಾದಿಳು ಸದ್ರಿ ಪ್ರತಿವಾದಿರ ಮೇಲೆ ಮಾಡಿದ ಮೇಲಿನ ದಾವೆಯು ತಾರೀಕು 10-9-'34ಕ್ಕೆ ಆಖೈರು ತನ್ನಿಗೆ ಈ ಕೋರ್ಟಿನಲ್ಲಿ ಇಡಲ್ಪಟ್ಟಿದೆ. ಆದುದರಿಂದ ಸದ್ರಿ ದಿನಸ ಪೂರ್ವಾಹ್ನ 10 ಘಂಟೆಗೆ ಸದ್ರಿ ಪ್ರತಿವಾದಿರು ಈ ಕೋರ್ಟಿನ ಮುಂದೆ ಹಾಜರಾಗಿ ಆ ಕುರಿತು ಏನಾದರೂ ಆಕ್ಷೇಪವಿದ್ದರೆ ಅದನ್ನು ಜ್ಯಾಹೀರು ಮಾಡಿಕೊಳ್ಳಬಹುದು. ತಪ್ಪಿದರೆ ಸದ್ರಿ ಪ್ರತಿವಾದಿರ ಗೈರು ಹಾಜರಿಯಲ್ಲಿ ಸದ್ರಿ ದಾವೆಯು ತೀರ್ಮಾನಿಸಲ್ಪಡುವುದು ಎಂಬುದನ್ನು ಸದ್ರಿ ಪ್ರತಿವಾದಿರಿಗೆ ಈ ಮೂಲಕ ಜ್ಯಾಹೀರು ಮಾಡೋಣಾಗಿಯದೆ.

ಕಾರ್ಕಳ,
25-8-'34.

ಬೈಕಾಡಿ ವಾಸುದೇವ ರಾವ್,
ಎಡ್ವೊಕೇಟ್.

ಬೇಕಾಗಿದೆ.

ಮಂಗಳೂರು ಬಂದರದಲ್ಲಿ ೫೦೦ ಡಬ್ಬಿ ಚಿಮ್ಣಿ ಎಣ್ಣೆ ಹಿಡಿಯುವ ಒಂದು ಗೋಡೌನು ಬೇಕಾಗಿದೆ. ಕಟ್ಟೋಣವು ಕಲ್ಲಿನದ್ದಾಗಿರಬೇಕು. ನದೀತೀರದಲ್ಲಿದ್ದರೆ ಉತ್ತಮ. ಬಾಡಿಗೆ ಮತ್ತು ಇತರ ವಿಷಯಗಳನ್ನು ನಮೂದಿಸಿ ಕೂಡಲೇ ಬರೆಯಿರಿ.

"ಜವಾಹಿರ್" ಮಾರ್ಕಿನ ಚಿಮ್ಣಿ ಎಣ್ಣೆಯನ್ನು ಮಾರಲು ಮಂಗಳೂರು ಪಟ್ಟಣಕ್ಕೊಬ್ಬ ಏಜಂಟರು ಬೇಕಾಗಿದ್ದಾರೆ. ವ್ಯಾಪಾರಿಗಳು ಮಾತ್ರವೇ ಬರೆಯಿರಿ.

Apply:—**T. Madhava Pai,**
Distributor, Kasaragod S. K.

The Canara Public Conveyance Company, Ltd., Mangalore.

WE TAKE UPMOST CARE OF PASSENGERS.

Read the following letter:—

Modern Hindu Hotel,
Calicut, 17—6—1934.

Dear Sir,

We wish to thank you for all that you did for us to make our stay at Mangalore comfortable. It is extremely nice of you to have looked after us as you did.

Yours faithfully,
(Sd.) **A. V. Ramaswami.**

The same service is offered to all. We call for reports from passengers, if they have failed to receive similar attention and assure to take prompt action to see that inconvenience is not repeated.

Chikmagalur Public Conveyance Motor Service, Chikmagalur.

ಚಿಕ್ಕಮಗಳೂರು ಪಬ್ಲಿಕ್ ಕನ್ವೆಯನ್ಸ್ ಮೋಟರ್ ಸರ್ವಿಸ್,
ಚಿಕ್ಕಮಗಳೂರು

ಮುಂಬಾಯಿಯಿಂದ - ಮಂಗಳೂರಿಗೆ.
ಮಂಗಳೂರಿನಿಂದ - ಮುಂಬಾಯಿಗೆ.

ಅಲ್ಲದೆ

ಹುಬ್ಬಳ್ಳಿ, ಧಾರವಾಡ, ಗೋವಾ, ಮುಂಬಾಯಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಯ ಎಲ್ಲಾ ಭಾಗಗಳಿಗೆ ಪ್ರಯಾಣ ನಡಿಸಲಿಕ್ಕೆ ಮಂಗಳೂರು—ಕಡೂರು ಹಾದಿಗಿಂತ ಉತ್ತಮ ಬೇರೆ ಹಾದಿಯಿಲ್ಲ!

ಹೊಸ ಬಸ್ಸುಗಳು. ಅನುಕೂಲ ಪ್ರಯಾಣ ಸೌಕರ್ಯಗಳು

ಕಡೂರು ಜಿಲ್ಲೆಯೊಳಗಿನ ಎಲ್ಲಾ ಕಾಫಿ ತೋಟಗಳಿಗೆ ಕೂಲಿಕಾರರನ್ನು ತರಲಿಕ್ಕೂ ಅಲ್ಲಿಂದ ಕೊಂಡುಹೋಗಲಿಕ್ಕೂ ನಾವು ಎಲ್ಲಾ ತರದ ಸಹಾಯವನ್ನೂ ಕೊಡುತ್ತೇವೆ.

ಚಿಕ್ಕಮಗಳೂರಿನಿಂದ— ಶಿವಮೊಗ್ಗಕ್ಕೆ, ಬೇಲೂರಿಗೆ, ಕಡೂರಿಗೆ.
— ಮೂಡಗೆರೆಗೆ, ಸಕಲೇಶಪುರಕ್ಕೆ.
— ಮಂಗಳೂರಿಗೆ, ಮೂಡಬಿದ್ರೆಗೆ, ಪುತ್ತೂರಿಗೆ, ಮೂಲ್ಕಿಗೆ.
— ಧರ್ಮಸ್ಥಳಕ್ಕೆ, ವೇಣೂರಿಗೆ, ಸುಬ್ರಹ್ಮಣ್ಯಕ್ಕೆ.

ನಿರಾಯಾಸದ ಪ್ರಯಾಣ! ಉತ್ಸಾಹಕರ ಸೌಕರ್ಯ!

ಬೇಕಾದ ಮಾಹಿತಿಗೆ ನಮ್ಮ ಆಫೀಸಿಗೆ ಬರೆದು ತಿಳಿದುಕೊಳ್ಳಿರಿ.

ಸಂಪಾದಕರ ಟಪ್ಪಾಲು ಪೆಟ್ಟಿಗೆ.

ಬಾತ್ಮೀದಾರರ ಅಭಿಪ್ರಾಯಗಳಿಗೆ ನಾವು ಜವಾಬ್ದಾರರಲ್ಲ. ಎಲ್ಲ ಲೇಖಕರು ತಮ್ಮ ಸಂಪೂರ್ಣ ಹೆಸರು ವಿಳಾಸಗಳನ್ನು ಕೊಡತಕ್ಕದ್ದು. ದೀರ್ಘ ಲೇಖನಗಳಿಗೆ ಎಡೆ ಕೊಡಲಾಗುವುದಿಲ್ಲ. ಲೇಖನಗಳು ಸಾರ್ವಜನಿಕ ಹಿತದೃಷ್ಟಿಯುಳ್ಳದ್ದು ಯುಕ್ತ ಶೈಲಿಯುಳ್ಳದ್ದು ಆಗಿರತಕ್ಕದ್ದು. (ಸಂ. ಸ್ವ.)

ಶಿವಳ್ಳಿ ಬ್ರಾಹ್ಮಣರ ಸಮಾಚಾರ.

ಮಹಾಸ್ವಾಮಿ,

"ಸಂಯುಕ್ತ ಕರ್ನಾಟಕ"ದ ತಾ. ೪-೮-೨೪ರ ಸಂಚಿಕೆಯಲ್ಲಿ ಕೋಟಸ್ಥ ಬ್ರಾಹ್ಮಣರ ವಿಷಯದಲ್ಲಿ ಬಂದ ಬರಹದ ಬಗ್ಗೆ ಆಕ್ಷೇಪವನ್ನೆತ್ತಿ, "ಶಿವಳ್ಳಿ ಬ್ರಾಹ್ಮಣ"ನೆಂದು ಸಹಿ ಹಾಕಿ ಒಬ್ಬರು ಅದೇ ಪತ್ರಿಕೆಯ ತಾರೀಕು ೧೪-೮-೨೪ನೆಯ ಸಂಚಿಕೆಯಲ್ಲಿ ಒಂದು ಬರಹವನ್ನು ಕೊಟ್ಟಿದ್ದಾರೆ. ಅದಕ್ಕೆ ಸಮಂಜಸವಾದ ಐತಿಹಾಸಿಕ ಕಾರಣಗಳುಳ್ಳ ಉತ್ತರವನ್ನು ಕಳಿಸಿದರೆ ಅದನ್ನು ಈ ವರೆಗೂ ಸಂಪಾದಕರು ಪ್ರಕಟಿಸುವ ಗೊಡವೆಗೆ ಹೋಗಲಿಲ್ಲ. ಮೊದಲು ನಾನು ಕಳಿಸಿದ ಸುದ್ದಿಯನ್ನಾದರೂ ಏತಕ್ಕೆ ಪ್ರಕಟಿಸಿದರೆಂದು ನನಗೆ ವ್ಯಸನವಾಗಿದೆ. ಅವರ ಪ್ರಕಟಣೆಯಲ್ಲಿ ಮುದ್ರಣದ ತಪ್ಪುಗಳುಂಟಾಗಿ ನನಗೆ ತೊಂದರೆಯಾಗಿದ್ದರೂ, ಅವರು ನನಗೆ ಉತ್ತರಕೊಡುವ ಎಡೆಯನ್ನು ಕೊಡದಿದ್ದುದು ಶೋಚನೀಯ.

ಶಿವಳ್ಳಿ ಬ್ರಾಹ್ಮಣನು ತನ್ನ ಬರಹದಲ್ಲಿ "ಬಾತ್ಮೀದಾರರು ಹಾಸನ, ಚಿತ್ರದುರ್ಗ, ಧಾರವಾಡಗಳಲ್ಲಿ ನಡೆದ ಕೇಸುಗಳಿಗೆ ಮತಾಭಿಮಾನವೇ ಹೊರತು ವೃತ್ತಿಮತ್ಸರವೆಂಬ ಹೇಳುವುದು ಶುದ್ಧ ಸುಳ್ಳು" ಎಂಬದಾಗಿ ಆರೋಪಿಸಿದ್ದಾನೆ. ವೃತ್ತಿಮತ್ಸರವೆಂದು ನಾನೆಂದಿಗೂ ಬರೆದವನಲ್ಲ. ನಾನು "ಸಂಯುಕ್ತ ಕರ್ನಾಟಕ"ದ ಕಚೇರಿಗೆ ಕಳುಹಿಸಿದ ಬರಹದಲ್ಲಿ "ವೃತ್ತಿ ಮಾತ್ಸರ್ಯ"ವೆಂದು ನಿಶ್ಚಯವಾಗಿ ಬರೆದಿರುವೆನು. ಆದರೆ, ಮೊಳೆ ಜೋಡಿಸುವುದರಲ್ಲಿ ಕಣ್ಣು ತಪ್ಪಿ ಕೈಮೋಸವಾಗಿರಬೇಕು. ಬೇಕಿದ್ದರೆ ಮಾನ್ಯ ಸಂಪಾದಕರು ಇನ್ನೊಮ್ಮೆ ಓದಿನೋಡಲಿ.

ಆದರೆ ವೃತ್ತಿಮಾತ್ಸರ್ಯವಿದ್ದ ಬಳಿಕ ವ್ಯಾಜ್ಯ ಮಾಡುವವರಲ್ಲಿ ವೃತ್ತಿಮತ್ಸರವಿದ್ದೀತೆಂಬುದೇಕಿಲ್ಲವೇ? ಇನ್ನು ಮತಾಭಿಮಾನವೋ ವೃತ್ತಿಮಾತ್ಸರ್ಯವೋ ಎಂಬ ವಿಷಯ. ಮತಾಭಿಮಾನವಿರಬೇಕಾದುದು ಸಹಜ. ಆದರೆ, ಮತಾಭಿಮಾನದ ನೆಲವಿಗೆ ಬಿದ್ದು ಇನ್ನೊಬ್ಬರ ಜಾತಿಕುಲಗೋತ್ರಗಳನ್ನೆತ್ತಿ ಪ್ರಚಾರಮಾಡಬೇಕಾದರೆ ಕೆಲವು ಸಂಗತಿಗಳನ್ನು ಗಮನಿಸಬೇಕಾಗುತ್ತದೆ. (೧) ಪ್ರಚಾರಪಡಿಸುವ ವಿಷಯವು ಸತ್ಯವಾಗಿರಬೇಕು. (೨) ಅದು ತಮಗೆ ಸಂಬಂಧಪಟ್ಟಿದ್ದಿರಬೇಕು. (೩) ಆ ಪ್ರಚಾರದಲ್ಲಿ ತನ್ನವರ ಹಿತದ ಸದ್ಬುದ್ಧಿಯಿರಬೇಕು. (೪) ಅದು ತನ್ನ ಕರ್ತವ್ಯವಾಗಿರಬೇಕು.

ಸಿದ್ಧಾಂತ ಕೋಟಸ್ಥ ಬ್ರಾಹ್ಮಣರ ಸಂಗಡದವರು ಸ್ವಾರ್ಥದೇಶಸ್ಥರು. ತಾವು ಆರ್ಯಾವರ್ತ ದೇಶಸ್ಥರು ಎಂಬದಾಗಿ ಹೇಳುತ್ತಿರಲು ವೈಷ್ಣವರೆಂಬ ಶಿವಳ್ಳಿ ಬ್ರಾಹ್ಮಣರು, ಅವರ ಶಿಷ್ಯವರ್ಗಕ್ಕಾಗಲಿ ಈ ಸ್ಥಾನದವರ ಬಗ್ಗೆ "ಬ್ರಾಹ್ಮಣರಲ್ಲವೆಂದೂ ದ್ವಿವಿಧ ಬ್ರಾಹ್ಮಣರ ಸದ್ವ್ಯವಹಾರಕ್ಕೆ ಅನರ್ಹರೆಂದೂ" ತಮ್ಮ ಹೊರತು ಇತರ ಜಾತಿಯವರಲ್ಲಿ ಸಹ ಪ್ರಕಟಿಸುವುದಕ್ಕೆ ಅಧಿಕಾರವಾಗಲಿ ಸಂಬಂಧವಾಗಲೀ ಹೇಗೆ ಬರುತ್ತದೆ? ಬಹಳವಾದರೆ ಇವರು ತಮ್ಮ ಮಠದ ಶಿಷ್ಯರಿಗೆ ಮಾತ್ರ ಕಟ್ಟುಪ್ಪಣೆಯನ್ನು ಮಾಡಬಹುದು. ಆ ಮೇರೆಯನ್ನು ಮೀರುವ ಹಕ್ಕು ಇವರಿಗಿಲ್ಲ. ಅದಲ್ಲದೆ ದಕ್ಷಿಣ ಕನ್ನಡ ಜಿಲ್ಲೆಯ ಶಿವಳ್ಳಿಯವರನ್ನು ಬಿಟ್ಟು, ಗಟ್ಟದ ಮೇಲಿನ ವೈಷ್ಣವರಿಗೆ ಸಹ ಮುದ್ರಾಧಾರಣೆಯಿಲ್ಲದಿರುವುದನ್ನು ಕೊಡುವ ಅಧಿಕಾರವು ಈ ಉಡುಪಿ ಸ್ವಾಮಿಗಳಿಗೆ ಇಲ್ಲವೆಂಬುದು ಲೋಕಪ್ರಸಿದ್ಧವಾದ ಸಂಗತಿ. ಏಕೆಂದರೆ ಶ್ರೀ ಮಧ್ವಾಚಾರ್ಯರು ಉಡುಪಿಯಲ್ಲಿ ಅಷ್ಟಮಠಗಳನ್ನು ಸ್ಥಾಪಿಸಿದರೂ ತಮ್ಮ ತರುವಾಯ ಜಗದ್ಗುರು ಪಟ್ಟವನ್ನು ಆತ್ಮೀಯಭಾವನೆಯಿಂದ ಗಟ್ಟದ ಮೇಲಿನ ಶ್ರೀ ಪದ್ಮನಾಭ ತೀರ್ಥರಿಗೆ ದಯಪಾಲಿಸಿದರು. ಶ್ರೀ ಮಧ್ವಾಚಾರ್ಯರು ಶಿವಳ್ಳಿಗಳಲ್ಲ. ಅವರು, ಹಿಂದಿನವರು ದಕ್ಷಿಣ ಕನ್ನಡ ಜಿಲ್ಲೆಯನ್ನಾಳುವಾಗ ಹೇಳಿದರು ಬೇಲೂರುಗಳಿಂದ ಹೊಯ್ಸಳ ಅರಸರ ರಾಜನ ಕಾಲದಲ್ಲಿ ಈ ಕಡೆಗೆ ಹೋದ ಬ್ರಾಹ್ಮಣರ ವಂಶದ ಬ್ರಾಹ್ಮಣರು, ಅವರು ಶುದ್ಧ ಕನ್ನಡಿಗರು. ಶಿವಳ್ಳಿಗಳು ಶ್ರೀ ಆಚಾರ್ಯರು ಉದ್ಧಾರ ಮಾಡಿದರೆಂದು ಶ್ರೀ ಧರ್ಮದೇವ ಸಿದ್ಧಾಂತದಲ್ಲಿ ಮುಂತಾದ ಹಲವು ಬರೆಯುತ್ತಾರೆ.

"It is interesting in this connection to note that the same Sri Madhwacharya, among whose followers today the hereditary caste system and untouchability have found strong-hold, converted many fishermen—the so called untouchables—into Brahmins. This is too well known a fact to require any proof. Many of the Shivalli Brahmins today admit plainly that they originally belonged to the fishermen class. Even to this day in some parts a woman belonging to the Shivalli Brahmin Community has to fish in water on the occasion of her marriage ceremony, of course in memory of her original caste!"

From Vedic Magazine for March 1923
Page 542.

ಶಿವಳ್ಳಿಗರು ಅನುಲೋಮ ಸಂತತಿಯವರೆಂದು ಅನುಮಾನಪಡಲಿಕ್ಕೆ ಅವರ ಮದುವೆಯ ಸಮಯದಲ್ಲಿ ದಂಪತಿಗಳು ನಾಗವಲ್ಲಿಯ ದಿನ ಮೀನು ಹಿಡಿಯುವ ಶಾಸ್ತ್ರವನ್ನು ಮಾಡುವುದೂ, ಅವರ ಹೆಂಗಸರು ಮಾಡಿದ ಅಡುಗೆಯು ದೇವರ ನೈವೇದ್ಯಕ್ಕೆ ಒದಗುವುದಿಲ್ಲವೆಂಬ ವಾಡಿಕೆಯೂ, ತಾವು ಕೂತ ಪಂಕ್ತಿಯ ಮಧ್ಯ ನಿಂತು ಸಂತರ್ಪಣೆಗೆ ಹೊರಡುವ ಕೃಷ್ಣಾರ್ಪಣದ ನೀರನ್ನು ಚಿಮುಕಿಸಿದ ಬಳಿಕ ಊಟಮಾಡುವ ಸಾಮಾನ್ಯ ಪದ್ಧತಿಯೂ, ಇನ್ನೂ ಅವರ ಅನೇಕ ಆಚಾರಗಳೂ ಕಾರಣವಾಗಿರಬಹುದೆಂದು ಹೊಡೆಗಾರರಾದ ಇತಿಹಾಸ ಸಂಶೋಧಕರ ಅಭಿಪ್ರಾಯವಂತೆ. ಅದಲ್ಲದೆ, ದಕ್ಷಿಣ ಕನ್ನಡ ಜಿಲ್ಲೆಯ ಸರಕಾರದ ಪ್ರಕಟಣೆಯಾದ "Sturroks Manual of S. Kanara" ಎಂಬ ಪುಸ್ತಕದಲ್ಲಿಯೂ, ಈ ಶಿವಳ್ಳಿಗರ ಮೂಲದ ವಿಷಯದಲ್ಲಿ Piscatorial origin ಎಂದರೆ—ಮೀನ ಸಂತತಿ ಎಂಬರ್ಥವು ಬರುವಂತೆ ವರ್ಣಿಸಿದೆ.

ಬೇರೆಯವರು ಹೇಳುವುದನ್ನು ನಂಬುವುದು ಕಷ್ಟವಾಗಬಹುದು. ಇಂದು ಶಿವಳ್ಳಿಗರಲ್ಲಿ ದಿಗ್ಗಂತಿ ಪಂಡಿತರಾದ ಸಾಹಿತ್ಯಶಿರೋಮಣಿ ಬಿ. ಶ್ರೀನಿವಾಸಭಟ್ಟರು ತಾವು ಬರೆದ "ಉಡುಪಿಕ್ಷೇತ್ರ ಮಹಿಮಾ" ಎಂಬ ಪುಸ್ತಕದ ೧೩ನೆಯ ಪುಟದಲ್ಲಿ ಈ ಶಿವಳ್ಳಿಯವರಲ್ಲಿ "ಕೆಲವು ಕುಲದವರು ಪಟ್ಟದಿಗಗಳೆಂದೂ, ಇತರರು ಕ್ರಿಶರ್ಮಗಳೆಂದೂ ಸಂಕೀರ್ಣಯೆಂದಯುತ್ತು" ಎಂಬದಾಗಿ ಧಾರಾಳವಾಗಿ ಬರೆದುಬಿಟ್ಟಿದ್ದಾರೆ. ಆದುದರಿಂದ ಇವರೆಂದಿನಿಂದ ಮೇರೆಗೆ ಶಿವಳ್ಳಿಗರಲ್ಲಿ 'ಕೆಲವರು' ಮಾತ್ರ ಪಟ್ಟಮಿಗಳು. ಮಿಕ್ಕ ಬಹುಭಾಗವೆಲ್ಲ ಕ್ರಿಶರ್ಮಿಗಳೆಂದಾಯಿತು. ದಾನ, ಪ್ರತಿಗ್ರಹ, ಯಜನ, ಯಾಜನ, ಅಧ್ಯಯನ, ಅಧ್ಯಾಪನಗಳೆಂಬ ಷಟ್ಕರ್ಮಗಳಲ್ಲಿ ಇವರಿಗೆ ದಾನ, ಯಜನ, ಅಧ್ಯಯನಗಳ ಅಧಿಕಾರ ಮಾತ್ರ ಇದೆಯೆಂದಾಯಿತು. ಆದುದರಿಂದಲೇ ಶ್ರೀ ಮಧ್ವಾಚಾರ್ಯರು ಜಗದ್ಗುರು ಪಟ್ಟವನ್ನು ಶಿವಳ್ಳಿಯವರಿಗೆ ಕೊಟ್ಟಿರಬಹುದೋ? ಈ ಶಿವಳ್ಳಿಗರಲ್ಲಿ ಕೆಲವು ವಿದ್ವಾಂಸರು ತಮಗೆ ತಾವೇ ಶಾಬ್ದಗ್ರಸ್ತರೆಂದು ಹೇಳಿಕೊಂಡು ತಮ್ಮನ್ನು ಗುಜರ್, ಮಹಾರಾಷ್ಟ್ರ, ಆಂಧ್ರ, ಕರ್ನಾಟಕ, ದ್ರಾವಿಡರೆಂಬ ಪಂಚದ್ರಾವಿಡರಲ್ಲಿ ಸೇರಿಸಿಲ್ಲವೆಂದು ಸಂತಾಪಪಡುವವರೂ ಇದ್ದಾರೆಂದು ನನ್ನ ಸ್ವಂತದ ಅನುಭವ. ತೌಳವ (ಶಿವಳ್ಳಿ) ಬ್ರಾಹ್ಮಣರು ಪಂಚದ್ರಾವಿಡರಲ್ಲಿ ಸಮಾವೇಶವಾಗುತ್ತಾರೋ ಇಲ್ಲವೋ ಎಂಬುದು ವಾದಗ್ರಸ್ತ ವಿಷಯವಿರಬಹುದು. ಅಂತೂ ಶ್ರೀ ಮಧ್ವಾಚಾರ್ಯರಿಗೆ ಈ ಶಿವಳ್ಳಿಗರಿಗೆ ಸ್ತ್ರೀ ಸಂಪರ್ಕವಾಗುವ ಮುಂಚೆಯೇ ಶ್ರೀ ಕೃಷ್ಣನ ಪೂಜೆಗೆ ನೇಮಿಸುವುದು ಹೇಗೆ ಸಮಂಜಸವಾಗಿ ಕಂಡಿರಬಹುದೆಂಬುದೇ? ಏನೋ ಉಡುಪಿಯ ಅಷ್ಟಮಠಗಳಿಗೆ ಬಾಲಯತಿಗಳನ್ನೇ ಯೋಜಿಸಿ ಅವರು ಬಿಟ್ಟಿದ್ದರು ಎರಡೆರಡು ತಿಂಗಳು ಶ್ರೀ ಕೃಷ್ಣನ ಪೂಜೆಯನ್ನು ಮಾಡಬೇಕೆಂದು ವಿಧಿಸಿದರು. ಹೀಗೆ ಅನುಮಾನ ಮಾಡಲಿಕ್ಕೆ ಕಾರಣವೇನೆಂದರೆ ಬೇರೆ ಮಾಧ್ವವೈಷ್ಣವ ಪೀಠಗಳಲ್ಲೆಲ್ಲ ವೃದ್ಧಯತಿಗಳೇ ಇದ್ದಾರೆ. ಉಡುಪಿಯ ಸ್ವಾಮಿಗಳು ಮಠಗಳ ಅಧಿಭಾವದಲ್ಲಿಯೂ ಕೇವಲ ಪೂಜಾ (ಅರ್ಚಕ)ಗಳಾಗಿದ್ದರು. ಎರಡು ತಿಂಗಳಿಗೊಮ್ಮೆ ಬಗೆಬಗೆ ಪರ್ಯಾಯ ಮತ್ತು ಎರಡು ತಿಂಗಳಿಗೊಮ್ಮೆ ಆಗಲು ಪ್ರಾರಂಭವಾದದ್ದು ಶ್ರೀ ವಾದಿರಾಜ ಸ್ವಾಮಿಗಳ ಕಾಲದಲ್ಲಿ. ಈ ಸ್ವಾಮಿಗಳ ಕಾಲದ ಪೂಜೆಯೂ ಹೊರತು ಉಳಿದ ಮಠದವರಂತೆ ಧರ್ಮಪ್ರಚಾರದ ಗುರುದೀಕ್ಷೆಯಲ್ಲ. ಇತ್ತೀಚೆಗೆ ಇವರು ತಮ್ಮಲ್ಲಿಯ ಕೆಲವು ಶಿಷ್ಯಮನೆತನಗಳಿಗೆ ಮಾತ್ರ ಮುದ್ರಾಧಾರಣೆಯನ್ನು ಕೊಡುವ ಪರಿಪಾಠವಿದೆ. ಆದರೆ, ಈ ಉಡುಪಿ ಸ್ವಾಮಿಗಳ ಮತ್ತು ಶಿವಳ್ಳಿಗರ ಇಂದಿನ ಹಿಂದಿನ ಚರಿತ್ರೆವಿಚಾರವನ್ನು ಇನ್ನೊಂದು ಪ್ರಸಂಗದಲ್ಲಿ ನೋಡುವ.

ಇಂತು ವೈಷ್ಣವರ ಮೇಲೆಯೇ ಸಂಪೂರ್ಣಾಧಿಕಾರವಿಲ್ಲದವರಿಗೆ ಸ್ವಾರ್ಥದೇಶಸ್ಥರ ಜಾತಿನಿರ್ಣಯದ ಸಂಬಂಧವೆಲ್ಲಿಂದ ಬಂತು? ಅದಲ್ಲದೆ ೩೦೦-೪೦೦ ವರ್ಷಗಳ ಮುಂಚಿನಿಂದಲೂ ನಮ್ಮ ಮಠದ ಸದ್ಬ್ರಾಹ್ಮಣ ಶಿಷ್ಯರೆಂದು ಶ್ರೀ ಜಗದ್ಗುರು ಶೃಂಗೇರಿ ಮಠದವರು ಬಾಂಬುರಿಗಳ ಅಭಿಪ್ರಾಯಪಡುತ್ತಿರುವಾಗ, ದಕ್ಷಿಣ ಕನ್ನಡದಲ್ಲಿ ಹಾಗೆ ಹೀಗೆ ಹೇಳುವುದಕ್ಕೆ ಪ್ರಕಟಿಸುವ ಅಧಿಕಾರವು ಇವರಿಗೆ ಹೇಗೆ ಸಲ್ಲುತ್ತದೆ? ಒಂದುವೇಳೆ ಉಡುಪಿ ಮಠದ ಧಣಿಗಳು ಕೋಟಸ್ಥ ಬ್ರಾಹ್ಮಣರಲ್ಲಿ ಊಟಕ್ಕೆ ಬರುವುದಿಲ್ಲೆಂದು ಒಪ್ಪಿಕೊಂಡರೂ, ಕೋಟಸ್ಥ ಬ್ರಾಹ್ಮಣರಿಗೆ ಶೃಂಗೇರಿ ಮಠದಲ್ಲಿ ದೊರಕುತ್ತಿರುವ ಸದ್ವ್ಯವಹಾರ ಸಂಗ್ರಾಹ್ಯತ್ವಗಳನ್ನು ತಪ್ಪಿಸುವ ಸಾಮರ್ಥ್ಯ ಪಾದರೂ ಈ ಉಡುಪಿಯ ಸ್ವಾಮಿಗಳಿಗಲ್ಲವೆಯೋ? ನೋಲಿ ವಿವರಿಸಿದ ಸಂಗತಿಗಳಿಂದ ಒಂದು ವಿಷಯ ಸ್ಪಷ್ಟವಾಗುವುದಿಲ್ಲವೇ? ಕೋಟಸ್ಥಬ್ರಾಹ್ಮಣರು ಈ ಶಿವಳ್ಳಿಗರಲ್ಲಿ ಅನ್ನವ್ಯವಹಾರವನ್ನು ನಡೆಸದಿರಲು, ಗಟ್ಟದ ಮೇಲಿನ ಮಾಧ್ವವೈಷ್ಣವರಂತೆ ಈ ಶಿವಳ್ಳಿಗರು ಬೇರೆ ಕೆಲವು ವಿಶಿಷ್ಟ ಆಚಾರಗಳನ್ನಿಟ್ಟಿರುವುದೇ ಕಾರಣವಿರಬಹುದು.

ಹೇಗೂ ಈ ಕೋಟಸ್ಥರೆಂಬ ಆರ್ಯಾವರ್ತದೇಶಸ್ಥರು ದಕ್ಷಿಣ ಕನ್ನಡದ ಮೂಲನಿವಾಸಿಗಳಲ್ಲ. ಇವರು ಅಹಮ್ಮದನಗರ ಪ್ರಾಂತ್ಯದಿಂದ ಬಂದವರೆಂದು ಮಠದ ಹಿಂದಿನ ರಿಕಾರ್ಡುಗಳಲ್ಲಿ ತೋರಿಬರುತ್ತದೆ. "ಶಿವಳ್ಳಿ ಬ್ರಾಹ್ಮಣ" ಬರೆಹಗಾರನು ಈ ಬಗ್ಗೆ ಒಂದು ದೊಡ್ಡ ಕುಂಬಳಕಾಯಿಯಂತಹ ಸವಾಲನ್ನು ಹಾಕಿರುವನು. ಆರ್ಯಾವರ್ತವು ವಿಂಧ್ಯಹಿಮಾಚಲಗಳ ಮಧ್ಯಪ್ರದೇಶವೆಂದೂ, ಅಹಮ್ಮದನಗರವು ವಿಂಧ್ಯದ ದಕ್ಷಿಣಕ್ಕೆ ಬಲು ದೂರವಿದೆಯೆಂದೂ, ಆದುದರಿಂದಲೇ ಕೋಟಸ್ಥರು ಆರ್ಯಾವರ್ತ ದೇಶಸ್ಥರೆಂಬುದು ವಿಚಾರಾರ್ಹವಾದ ವಿಷಯವಲ್ಲವೆಂದೂ ಅವನ ಸುಲಭವಾದ ಅಭಿಪ್ರಾಯ. ದಕ್ಷಿಣ ಕನ್ನಡ ಜಿಲ್ಲೆಗೆ ಅಹಮ್ಮದನಗರ ಪ್ರಾಂತ್ಯದಿಂದ ಬಂದವರೆಂದರೆ ಅವರು ಅಹಮ್ಮದನಗರಕ್ಕೆ ಆರ್ಯಾವರ್ತದಿಂದ ಬಂದಿರಲಿಕ್ಕಿಲ್ಲೆಂದು ಅರ್ಥವಾಗುತ್ತದೋ? ತಮ್ಮ ಪೂರ್ವಜರೆಲ್ಲ ಮೂಲದಿಂದಲೂ ಅಹಮ್ಮದನಗರದಲ್ಲಿಯೇ ವಾಸಿಸುತ್ತಿದ್ದರೆಂದು ಕ್ಷೇತ್ರಾದಿ ಜನರು ಎಲ್ಲಿ ಹೇಳಿದ್ದಾರೆ? ಅದಲ್ಲದೆ ಪಂಚದ್ರಾವಿಡ ಬ್ರಾಹ್ಮಣರೆಲ್ಲ ಆರ್ಯಾವರ್ತದಿಂದಲೇ ದಕ್ಷಿಣಾಪಥಕ್ಕೆ ಬಂದವರೆಂದು ಎಲ್ಲರ ಮತ. ಆದುದರಿಂದ ಅವರು ಮುಂಚೆ ಆರ್ಯಾವರ್ತದಲ್ಲಿದ್ದು, ನಂತರ ಅಹಮ್ಮದನಗರ ಪ್ರಾಂತ್ಯಕ್ಕೆ ಕಾಲಕ್ರಮೇಣ ಬಂದು, ಕೊನೆಗೆ ದಕ್ಷಿಣ ಕನ್ನಡಕ್ಕೆ ಏಕೆ ಹೋಗಿರಬಾರದು? ಈ ಶಿವಳ್ಳಿ ಬ್ರಾಹ್ಮಣನಿಗೆ ಆರ್ಯಾವರ್ತದ ಮೇರೆಯು ಕಾಲಕಾಲಕ್ಕೆ ಹಿಗ್ಗುತ್ತ ಹೋಗಿದೆಯೆಂಬ ಅಂಶವು ಗೊತ್ತಿಲ್ಲ. ಅಮರಕೋಶದ ಟೀಕೆಗಳ ಒಂದು ಅಕ್ಷರದ ಶ್ಲೋಕಾರ್ಥವನ್ನು ಅಮರಿಸಿಬಿಟ್ಟರೆ ತಿಳಿಕೆಂದು ಹಗುರಾಗಿ ತಿಳಿದುಬಿಟ್ಟಿದ್ದಾನೆ. ಇಂದು ಆರ್ಯಾವರ್ತವು ಕಾವೇರಿಯ ವರೆಗೂ ಹಬ್ಬಿದೆಯೆಂದು ವಿದ್ವಾಂಸರ ಮತ.

ಈ ಶಿವಳ್ಳಿಗರು ಅಹಿಚ್ಛತ್ರದಿಂದ ಬಂದವರೆಂದು ಹೇಳಿಕೊಳ್ಳುತ್ತಾರೆ. ಅವರಲ್ಲಿ ಕೆಲವು ಪಂಡಿತರು ಅಹಿಚ್ಛತ್ರವು ಅಯೋಧ್ಯೆಯ ಸಮೀಪವರ್ತಿಯಾಗಿದೆಯೆಂದು ಹೇಳುವರು. ಈ ಮಾತಿನ ಮೇರೆಗೆ ಆಲೋಚನೆ ಮಾಡಿದರೆ ಇವರ ಕುಲಮೂಲವೂ ಅಯೋಧ್ಯೆಯ ಹಿಂದಿನ ಭಾಷೆಗೂ ದೂರ ಸಂಬಂಧವೂ ಇದ್ದಂತೆ ತೋರುವುದಿಲ್ಲ. ಆದುದರಿಂದ ಇವರ ಆಚಾರ ಮುಂತಾದುವುಗಳ ವಿಶಿಷ್ಟತೆಯಿಂದ ದ್ರಾವಿಡದಿಂದ ಇವರು ಬಂದಿರುವರು ಮಾತ್ರ ಧಾರಾಳವಾಗಿ ಸುಲಭವಾಗಿ ಸಿದ್ಧಮಾಡಿ ಕೊಡಬಹುದು. ಇವರೆಲ್ಲ ಸೇರಿಬರ ನಾಗರಖಂಡ ಹಿಸನೆಗೆ (ಅಹಿಚ್ಛತ್ರ) ಸೇರಿದವರೆಂದು ಭಾವಿಸಲು ಸಾಧ್ಯವಿದೆ. ಅದಿರಲಿ.

ಶಿವಳ್ಳಿಬ್ರಾಹ್ಮಣನು ಹಾಸನದ ಕೇಸಿನ ತೀರ್ಮಾನಕ್ಕೆ ಬೇಸರಪಟ್ಟಂತೆ ತೋರುತ್ತದೆ. ಆ ಕೇಸಿನ ಮೊದಲ ಬೇರಿ, ಅಲ್ಲಿ ಅವಮಾನವೆಂದು ಫಿರ್ಯಾದಿಯರು ಅರ್ಜಿಯಲ್ಲಿ ಕಾಣಿಸಿದ ವಿಷಯವು ಪ್ರತ್ಯೇಕ, ಅಪರಾಧಿಗಳು ಹಂಚಿದ ಕಾಗದಗಳು ಹಿಂದಿನ ಶಕ್ಲವನ್ನು ಕೋರುತ್ತವೆ. ಅಪರಾಧಿಯು ತೋಟಸ್ಥರು ಬ್ರಾಹ್ಮಣರಲ್ಲವೆಂದು ಸಾರಿದ್ದ [illegible] ತೀರ್ಮಾನದಲ್ಲಿ "It cannot be disputed that the complainants' castemen are treated as Brahmins by the Shringeri Mutt." ಫಿರ್ಯಾದಿಯವರನ್ನು ಶೃಂಗೇರಿ ಮಠದವರು ಬ್ರಾಹ್ಮಣರೆಂದು ನಡೆಸಿಕೊಳ್ಳುತ್ತಾರೆಂಬುದನ್ನು ಯಾರಿಂದಲೂ ಅಲ್ಲಗಳೆಯಲು ಸಾಧ್ಯವಿಲ್ಲ" ಎಂಬುದಾಗಿ ಖಂಡಿತವಾಗಿ ಬರೆದಿದ್ದಾರೆ. ಅಪರಾಧಿಗಳ ಬಿಡುಗಡೆಯಾಗಲು ಫಿರ್ಯಾದಿಯರ ಅರ್ಜಿಯು ಐಕ್ಯತೆಯಲ್ಲಿ ಸಂದಿಗ್ಧವಾಗಿಯೂ ನಿರ್ಜಾಲವಾಗಿಯೂ ಇದ್ದುದೇ ಕಾರಣವೆಂದು ಹೇಳುತ್ತಾರೆ. ಅಂತೂ ಆ ಕೇಸಿನ ಅಪೀಲು ಬೆಂಗಳೂರು ಕೋರ್ಟಿನಲ್ಲಿ ನಡೆಯಬಹುದು.

ಪ್ರಸ್ತುತ ಬರೆದ ಉದ್ದೇಶವು ಶಿವಳ್ಳಿಗರ ಹಿಂದೆಯಲ್ಲ. ಬರೆ ಕೋಟಸ್ಥಬ್ರಾಹ್ಮಣರ ಆತ್ಮಸಂರಕ್ಷಣೆ. "ಶಿವಳ್ಳಿಬ್ರಾಹ್ಮಣ"ನಿಗೆ ಕೊನೆಗೊಂದು ವಿಜ್ಞಾಪನೆಯನ್ನು ಮಾಡುವೆನು. ಶಿವಳ್ಳಿಗರು ಮತವಿಚಾರದಲ್ಲಿ "ತನ್ನ ಎಲೆಯ ಮೇಲೆ ಸತ್ತ ಕತ್ತೆಯು ಬಿಟ್ಟು ಪರರ ಎಲೆಯ ಮೇಲಿನ ನೊಣನ ಓಡಿಸದಿರು" ಎಂಬ ಸೂಕ್ತಿಸಾರವನ್ನು ಗಮನಿಸಿ ತಮ್ಮ ಪದ್ಧತಿಯಲ್ಲಿ ಕಾಪಿರಲು ಪ್ರಯತ್ನಪಟ್ಟರೆ ನನಗೆ ಅವರಲ್ಲಿ ಯಾವ ವಿಧವಾದ ವೈಷಮ್ಯವೂ ಇಲ್ಲೆಂದು ತ್ರಿಕರಣಪೂರ್ವಕವಾಗಿ ಹೇಳುತ್ತೇನೆ.

ಎಚ್. ಗೋವರ್ಧನರಾಯ,
ಕೋಟಸ್ಥ ಬ್ರಾಹ್ಮಣ.

ಶ್ರೀ ಯು. ಎಸ್. ಭಟ್ಟರಿಗೆ.

ತಾ. ೬-೮-೧೯೨೪ರ ಸ್ವದೇಶಾಭಿಮಾನಿಯಲ್ಲಿ ನಿಮ್ಮ ಹೆಸರಿನಲ್ಲಿ ಪ್ರಕಟವಾದ ಲೇಖನವನ್ನು ಓದಿದೆನು. ಕಾರಣಾಂತರದಿಂದ ಉತ್ತರಕೊಡಲು ಸುಯೋಗವು ಒದಗಲಿಲ್ಲವಲ್ಲದೆ ಅನ್ಯಥಾ ನೀವು ಊಹಿಸಲು ಕಾರಣವಿಲ್ಲ. ತಾಂಡವನೃತ್ಯವನ್ನಾಡುವವರಾರು? ಪ್ರಾಯಶಃ ಮುದ್ರಣಾಲಯದಲ್ಲಿ ನೀವು ಕಲಿತಿರಬೇಕು. ಪ್ರೌಢ ಶಿಷ್ಯವರ ಮಾತಿಗೆ ನೋಕರಿಯಾಡಿಸುವವನು ಕಟ್ಟುಬಿದ್ದು ವಸ್ತ್ರತುಹಾಕುವುದು ಧರ್ಮವಲ್ಲ. ಮುಗ್ಧ ಈಗ ಅರಳು ಸ್ವರಕ್ತಿ ಇಲ್ಲದೆ ಅನ್ನರನ್ನು ಜೀವಿಯ ಎನ್ನುವ ಕಾಲ ಬಂತೆ?

ಪರಿಚಯ— ತಾವು ನಾಲೆಯ ಹೆಡ್ಮಾಸ್ತರ ಪರಿಚಯ ನಿಮಗೆ ಇರುವುದಕ್ಕಿಂತಲೂ ನನಗೆ ಹೆಚ್ಚಿಗಿದೆ. ನಾನು ಅಧ್ಯಾಪಕನಾಗಿದ್ದ ೪ ವರ್ಷ ಕಾಲದಲ್ಲಿ ನನ್ನ ಉಡುಪಿಶಾಲೆಗೆ ಹೆಡ್ಡನ ಎಲ್ಲಾ ಅಧ್ಯಾಪಕರ ಪರಿಚಯ ಮಾಡಿಕೊಂಡಿದ್ದೆ. ನೀವು ಉಡುಪಿ ಶಾಲೆಯಾಕಿನ ಯಲ್ಲಿದ್ದು ಇವರ ಪರಿಚಯ ಮಾಡಿಕೊಂಡಿರೆಂದು? ಉಡುಪಿಯ ಅನ್ನಶಾಲೆಯಲ್ಲಿ ತಾ. ೨೬-೧೦-'೨೪ ಮತ್ತು ೯-೧೦-೧೯೨೪ರಲ್ಲಿ ಜರಗಿದ ಪ್ರಚಂಡ ಮಹಾಸಭೆಗಳಲ್ಲಿ 'ಇವರ' ಪರಿಚಯ ನನಗಾಗಿತ್ತು. ಅಲ್ಲದೆ ಅನೇಕ ಉಪಾಧ್ಯಾಯರು ಪ್ರೈಡ್ ಸ್ಕೇಲಿನ ಮಹಾತ್ಮರೆಂದು ತಿಳಿಸಿದ್ದರು. ಅಲ್ಲದೆ ಈ ವರ್ಷ ಮೇ ತಿಂಗಳಲ್ಲಿ ತಾವು ನಲ್ವರಿಯಲ್ಲಿ ಮುಖತಃ ಮಾತನಾಡಿಯೂ ಇರುವೆ.

ನೀವು ಇವರಿಗೆ ಅನೇಕ ಇನ್ಸ್ಪೆಕ್ಟರ ಶಿಫಾರಸ್ಸಿನ ಪತ್ರ ಇದೆಯೆನ್ನುವಿರಿ. ಆದರೆ, ಇವರು ಇಂಗ್ಲಿಷ್ ಭಾಗದಲ್ಲಿ ಉತ್ತೀರ್ಣರಾಗಿಲ್ಲವೆಂದು ಏಕೆ ಹೇಳುವುದಿಲ್ಲ? ಇನ್ನಾದರೂ ಸಂಪೂರ್ಣ ಸೆಕೆಂಡರಿ ಯ ಅಧ್ಯಾಪಕರಾಗಬಾರದೇಕೆ? ಉಡುಪಿ ಶಾಲೆಗಳ ದೊರೆಯ ಅಧ್ಯಾಪಕರಲ್ಲ ಮುಖರನ್ನು ವಿದ್ವಾಂಸರುಗಳನ್ನು "ಸಿದ್ಧಿ ನಿಲ್ಲಿಸಬಾರದೆಂದು ಕರೆಯುವ ಸಮಯ ಇವರೇಕೆ ಹಿಂದುಳಿದರು? ಶಾಲೆಶಾಲೆಯಲ್ಲಾಗಲಿ ಮಕ್ಕಳ ತಾತ್ಕಾಲಿಕ ಮಾಡುವಲ್ಲಿ ಎಷ್ಟರವರೆಗೆ ಭಾಗವಹಿಸಿದ್ದಾರೆ? ಇವರ ಹೆಸರೇ ಪದಿಯಲ್ಲಿ ಕಾಣಸಿಗುವುದಿಲ್ಲವಂತೆ? ಅವರನ್ನು ಓರ್ವ ಇನ್ಸ್ಪೆಕ್ಟರು "ಡಾಕ್ಟರ್ ಹೆಡ್ಡರ್ ಮಾಸ್ತರ್" ಎಂದು ಕರೆದಿರುವುದನ್ನು ಶ್ರೀ ಭಟ್ಟರೇ ನೀವೇಕೆ ಎತ್ತಿ ಬರೆಯಲಿಲ್ಲ? ಇವರಿಗೆ ೧೪ ಸಂಬಳ ಸೆಕೆಂಡರಿ ಶಾಲೆಯಲ್ಲಿ ಆರಂಭದಲ್ಲಿತ್ತು ಎಂದು ಬರೆಯುತ್ತೀರಿ. ಇವರ ಕಾಲದಲ್ಲಿ ಉಪಾಧ್ಯಾಯರು ಅತಿ ವಿರಳವಾಗಿದ್ದರು. ಅಂಥ ಅಪೂರ್ಣ ಸೆಕೆಂಡರಿಯವರಿಗೆ ಸೆಕೆಂಡರಿ ಶಾಲೆಯಲ್ಲಿ ಉಳಿಗಾಲವಿಲ್ಲವೆಂಬುದನ್ನು ಶ್ರೀ ಭಟ್ಟರನ್ನು ತಿಳಿಯರೇ? ಮಿಸ್ಸರೀ ಗಿನ್ನಿಪರೀಕ್ಷೆಗಳು ಇವರಿಗೆ ಕಾರ್ಕಳದಲ್ಲಿ ಆರು ತಿಂಗಳ ಕಾಲ ತಿಂಗಳಿಗೆ ರೂ. ೧೦ರಂತೆ ಶಿಫಾರಸ್ ಮಾಡಿ ಕೆಲಸಕೊಟ್ಟದ್ದನ್ನು ಮರೆಯುತ್ತಿದ್ದೀರೇಕೆ?

ಈ ಮಹಾಶಯರು ಕೆಲವು ಸಹಾಯಕ ಉಪಾಧ್ಯಾಯರ ಭವಿಷ್ಯವನ್ನು ಹಾಳುಮಾಡಲು ಇನ್ಸ್ಪೆಕ್ಟ (ಇನ್ನೂ ಇದೆ ಮುಂದುವರಿಯುವುದು.)

ಜವಾಹರಲಾಲರನ್ನು ಪುನಃ ದಸ್ತಗಿರಿಮಾಡಿದರು!

ಶ್ರೀಮತಿ ಕಮಲಾ ನೆಹರುಯವರ ಕಾಯಿಲೆಯ ದೆಸೆಯಿಂದಾಗಿ ಕೆಲದಿನಗಳ ಬಗ್ಗೆ ಬಿಡುಗಡೆ ಮಾಡಲ್ಪಟ್ಟ ಪಂಡಿತ ಜವಾಹರಲಾಲರನ್ನು ಕಳೆದ ಗುರುವಾರ ಸಾಯಂಕಾಲ ೭ ಘಂಟೆಗೆ ಪುನಃ ದಸ್ತಗಿರಿ ಮಾಡಿ, ನೈನಿ ಜೈಲಿಗೆ ಕೊಂಡೊಯ್ದರು.

ದಸ್ತಗಿರಿಯಾಗುವುದೆಂದು ನಿರೀಕ್ಷಿಸಿದ್ದರಾದರೂ ಈ ದಿನವೇ ಅವರನ್ನು ಹೀಗೆ ಆಕಸ್ಮಿಕವಾಗಿ ಕೈದುಮಾಡಿ ಒಯ್ಯುವರೆಂದು ಯಾರೂ ನಿರೀಕ್ಷಿಸಿರಲಿಲ್ಲ. ಸಾಯಂಕಾಲ ೭ ಘಂಟೆಗೆ ಅಲ್ಲಹಾಬಾದಿನ ಸಿಟಿ ಡಿಪ್ಯುಟಿ ಪೋಲೀಸ್ ಸುಪರಿಂಟೆಂಡೆಂಟರಾದ ರೈಸಾಹೇಬ್ ಪ್ಯಾರಿ ಶಂಕರರು "ಆನಂದ ಭವನಕ್ಕೆ ಬರಲು,–ಪಂಡಿತರು ನಗುಮೊಗದಿಂದ ಅವರನ್ನು ಸ್ವೀಕರಿಸಿ, ಅರೆತಾಸಿನೊಳಗೆ ಅವರೊಡನೆ ಹೊರಡಲು ಸಿದ್ಧವಾದರು. 'ಆನಂದ ಭವನ'ದಲ್ಲಿ ಆಗ ಹೆಚ್ಚು ಮಂದಿ ಇರಲಿಲ್ಲ. ಪತ್ನಿಯೊಡನೆ–ತಾನು ಪುನಃ ಜೈಲಿಗೆ ಹೋಗುವೆನೆಂದೂ, ಸಂತೋಷಚಿತ್ತಳಾಗಿರತಕ್ಕುದೆಂದೂ ಕೊನೆಯ ಮಾತುಗಳನ್ನಾಡಿ ಪಂಡಿತ ಜವಾಹರಲಾಲರು ಹೊರಗೆ ಬಂದು,–ಅಲ್ಲಿ ನೆರೆದ ಇತರ ಬಂಧುಗಳೊಡನೆ ವಿದಾಯವನ್ನು ಬೇಡಿ, ಸುಪರಿಂಟೆಂಡೆಂಟರೊಡನೆ ಮೋಟಾರಿನಲ್ಲಿ ಕುಳಿತು ನಡೆದರು!

ಆಸ್ಟ್ರಿಯಾ ವಿದ್ಯಮಾನಗಳ ಸಿಂಹಾವಲೋಕನ.

'ಆಸ್ಟ್ರಿಯದ ವಿದ್ಯಮಾನಗಳೆ'ನ್ನುವುದಕ್ಕಿಂತ ಡೊಲ್ಫಸರವರ ಕಾರ್ಯ ನಿರ್ವಹಣವೆನ್ನಬಹುದು.

ಡೊಲ್ಫಸರ ಆಳ್ವಿಕೆಯ ತತ್ವವು ಫಾಸಿಸ್ಟ್ ತತ್ವವೆನ್ನಬಹುದು. ಮುಸ್ಸಲೋನಿಯವರ ಹಜ್ಜೆಯಲ್ಲಿ ನಡೆಯಹೋದವರು ಡೊಲ್ಫಸರು. ಹಿಟ್ಲರರಿಗೂ ಡೊಲ್ಫಸರಿಗೂ ಹೆಚ್ಚಿನ ತಾರತಮ್ಯವಿದ್ದಿತೆನ್ನಲಾಗುವುದಿಲ್ಲ. ಜರ್ಮನಿಯೊಡನೆ ಆಸ್ಟ್ರಿಯವು ಐಕ್ಯವಾಗಿರಬೇಕೆಂಬುದನ್ನು ಡೊಲ್ಫಸರು ಒಪ್ಪಲಿಲ್ಲ. ಅದುವೇ ಜರ್ಮನ್–ಆಸ್ಟ್ರಿಯಗಳೊಳಗಣ ಅಭಿಪ್ರಾಯ ಭೇದ.

ಭಂಡವಾಳಿಗರಶಕ್ತಿ ಹಿಡಿದು, ಮಜೂರ ವರ್ಗವನ್ನೂ ಸಂಘಗಳನ್ನೂ ಮುರಿದು ಒಂದೇ ವ್ಯಕ್ತಿಯು 'ಸರ್ವಾಧಿಕಾರ'ವನ್ನು ಸ್ಥಾಪಿಸುವ ಹಂಚಿಕೆ ಡೊಲ್ಫಸರವರದು. ಡೊಲ್ಫಸರು ಬೇಸಾಯಗಾರರ ಕುಟುಂಬದಿಂದಲೇ ಬಂದರೆಂಬುದು ನಿಜ. ಆದರೆ, ಅವರು ಭಂಡವಾಳಿಗರಾಗಿ, ಅವರಿಂದಲೇ ಬೆನ್ನು ತಟ್ಟಲ್ಪಟ್ಟವರು. ಆದರೆ, ಭಂಡವಾಳಿಗರ ಪ್ರತಿ ದ್ವಂದ್ವಿಗಳು ಕೆಲವರೂ ನಗರಗಳ ಕೆಲ ಮಧ್ಯ ತರಗತಿಯವರೂ ಡೊಲ್ಫಸರಿಗೆ ಶತ್ರುವಾದರು; ನಾಝಿಗಳೊಡನೆ ಸೇರಿ ಡೊಲ್ಫಸರನ್ನು ದ್ವೇಷಿಸಿದರು. ಡೊಲ್ಫಸರವರ ಬೆಂಬಲಕ್ಕಿದ್ದವರು ಸೇಕಡಾ ೨೦ ಮಂದಿ ಮಾತ್ರ.

ಭಂಡವಾಳಿಗರ ಕೂಟಗಳ ಅಪೇಕ್ಷೆಯಂತೆ ಡೊಲ್ಫಸರವರು ಹಜ್ಜೆ ಹಜ್ಜೆಗೂ ಮಜೂರರನ್ನು ಪೀಡಿಸಿದರು,–ಅವರು ದಂಗೆಯೇಳುವ ತನಕ ಪೀಡಿಸಿದರು. ದಂಗೆಯನ್ನು ಡೊಲ್ಫಸರು ಅತ್ಯಂತ ಕ್ರೂರತನದಿಂದ ಅಡಗಿಸಿದರು. ಆದರೆ ಕೂಲಿಯಾಳುಗಳ ದಾವಾನಲವನ್ನು ಸಂಪೂರ್ಣ ನೊಂದಿಸಲಾಗಲಿಲ್ಲ. ಆ ದಂಗೆಯ ಆಕ್ರೋಶವು ಚಿರಂಜೀವಿಯೋ ಎಂಬಂತೆ ಮಜೂರರ ಹೃದಯದೊಳಗೇ ಇದ್ದಿತು!

ಆಸ್ಟ್ರಿಯದಲ್ಲಿ ಕ್ರಾಂತಿಕಾರರ ಚಳವಳಿವು ಹೆಚ್ಚುತ್ತ ಹೋಯಿತು. ನಾಝಿಗಳ ಬಲವು ಪ್ರವರ್ಧಮಾನವಾಗುತ್ತ ಹೋಯಿತು.

ಇದೇ ಫೆಬ್ರವರಿ ತಾ. ೧೭ರಲ್ಲಿ ಫ್ರಾನ್ಸ್, ಇಟೇಲಿ ಮತ್ತು ಬ್ರಿಟನುಗಳು ಕೂಡಿ, ಜರ್ಮನಿಯು ಆಸ್ಟ್ರಿಯದ ಮೇಲಿನ ತನ್ನ ಬಾಧ್ಯಸ್ಥಿಕೆಯನ್ನು ತೊರೆಯಬೇಕೆಂದೂ ಆಸ್ಟ್ರಿಯವು ಸ್ವತಂತ್ರವಾಗಿರತಕ್ಕುದೆಂದೂ ಆಸ್ಟ್ರಿಯದ ಪರವಾಗಿ ತಮ್ಮ ಅಭಿಪ್ರಾಯವಿತ್ತುವು. ಅಂದಿನಿಂದಿತ್ತ ಆಸ್ಟ್ರಿಯದ ಛಾನ್ಸಲರರಾಗಿ ಅಭಿಷಿಕ್ತರಾದ ಡೊಲ್ಫಸರವರ ಸ್ಥಾನವು ಮತ್ತಷ್ಟು ಅಭದ್ರವಾಗುತ್ತ ನಡೆಯಿತು. ಡೊಲ್ಫಸ್ ಸರಕಾರವು ಅನಂತರ ಜ್ಯಾರಿಗೆ ತಂದ ಭಯೋತ್ಪಾದಕ ಕಾನೂನುಗಳು ವಿರೋಧ ಪಕ್ಷದವರ ಕ್ರಾಂತಿಯ ತೃಷ್ಣೆಯನ್ನು ಮತ್ತಷ್ಟು ಹೆಚ್ಚಿಸಲವಕಾಶವಾದುವು.

ಕ್ರಾಂತಿಕಾರರಾದ ನಾಝೀ ತಲೆತಿರುಕರು ಜರ್ಮನಿಯಿಂದ ಯುದ್ಧ ಹತ್ಯಾರುಗಳನ್ನು ತರಿಸಿದರೆಂದು ಹೇಳುವರು!

ಆ ಮೇಲೆ ನಡೆದುದೆಲ್ಲ ತಿಳಿದೇ ಇದೆ,–ಡೊಲ್ಫಸರವರ ಕೊಲೆ! ಇಟೇಲಿಯು, ನಾಝಿಗಳು ಆಸ್ಟ್ರಿಯವನ್ನು ಸಂಪೂರ್ಣವಾಗಿ ವಶಪಡಿಸಿಕೊಳ್ಳದಂತೆ ಮುಂದೆ ಬಂತು. ಅತ್ತ, ಯುಗೊಸ್ಲೊವಿಯ, ರುಮೇನಿಯದವರೂ ಆಸ್ಟ್ರಿಯದ ಹಿತಚಿಂತಕರಾದರು. ನಾಝಿಗಳು ತತ್ಕಾಲಕ್ಕೆ ಹಿಮ್ಮೆಟ್ಟುವುದಾಯಿತು.

ಈ ಆಸ್ಟ್ರಿಯದ ವಿವಾದವೇ ಮತ್ತೊಂದು ಮಹಾಯುದ್ಧಕ್ಕೆ ಕಾರಣವಾಗಬಹುದೋ ಎಂಬೊಂದು ಸಂದೇಹವೂ ಇದೆ.

ಸೂಲಗಿತ್ತಿಯರ ಬಗ್ಗೆಯೂ ಒಂದು 'ಬಿಲ್ಲು.'

ತರಬೇತಿ ಹೊಂದಿರದ, ಅಶುದ್ಧ ಮತ್ತು ಅಜ್ಞಾನಿಗಳಾದ ಸೂಲಗಿತ್ತಿಯರ ದೆಸೆಯಿಂದಾಗಿ ವರ್ಷಂಪ್ರತಿ ಎಷ್ಟೋ ಮರಣಗಳು ಸಂಭವಿಸುವುದುಂಟು. ಅದಕ್ಕಾಗಿ ಸೂಲಗಿತ್ತಿತನ ಮಾಡುವವರೆಲ್ಲ ತರಬೇತಿ ಹೊಂದಿದವರಾಗಿದ್ದು ಸರಕಾರದ ಮೂಲಕ ರಿಜಿಸ್ಟರ್ ಮಾಡಲ್ಪಟ್ಟವರಾಗಬೇಕೆಂಬ ಬಗೆಗೆ ಕೆಲವು ಪ್ರಾಂತ್ಯಗಳಲ್ಲಿ ಕಾನೂನು ಇದೆ; ಬಿಹಾರ್–ಒರಿಸ್ಸಗಳಲ್ಲಿ ಮಾತ್ರ ಇಲ್ಲ. ಈಗ, "ನರ್ಸಸ್ ರಿಜಿಸ್ಟ್ರೇಷನ್ ಬಿಲ್" ಎಂಬ ಹೆಸರಿನ ಒಂದು ಬಿಲ್ಲು ಅಲ್ಲಿಯ ಕೌನ್ಸಿಲಿನ ಮುಂದೆ ಬರಲಿದೆ. ಈ ಮಸೂದೆಯು ಜ್ಯಾರಿಗೆ ಬಂದರೆ, ರಿಜಿಸ್ಟರ್ ಮಾಡಲ್ಪಡದವರು ಸೂಲಗಿತ್ತಿತನ ಮಾಡಬಾರದಾಗಿದೆ. ಜನರಿಗೆ 'ಹೆಂಗೆಯ ಸುಖ' ಹೆಚ್ಚಬಹುದೆಂದಾಸೆ.

ಹದಿನೆಂಟು ಶಿಲ್ಲಿಂಗುಗಳಿಗೊಂದು ಸೈಕಲ್!

ಜಾಪಾನಿನವರ ಉಪಟಳ! ಬ್ರಿಟಿಷರಿಗೆ ಇದೊಂದು ದೊಡ್ಡ ಸಮಸ್ಯೆಯಾಗಿ ಬಿಟ್ಟಿದೆ! ಜಾಪಾನಿನಿಂದ ಸೈಕಲುಗಳು ಸ್ಟೀಮರುಗಳ ಮೇಲೆ ಪ್ರಯಾಣ ಬೆಳಸಿ ಕರವನ್ನು ತೆತ್ತು, ಆಫ್ರಿಕದಲ್ಲಿನ ಬ್ರಿಟಿಷ್ ಸಂತೆಗೆ ಹೋಗಿ, ೧೮ ಶಿಲ್ಲಿಂಗುಗಳಿಗೆ ವಿಕ್ರಯಿಸಲ್ಪಡುವುವೆಂದರೆ ಅದೊಂದು ದೊಡ್ಡ ಅದ್ಭುತ! ಬ್ರಿಟಿಷ್ ಸೈಕಲ್ ವ್ಯಾಪಾರಿಗಳು ಈ ಸ್ಪರ್ಧೆಯನ್ನು ತಡೆಯಲಾರದೆ ಹಿಮ್ಮೆಟ್ಟಬೇಕಾಗಿದೆ.

ಜಾಪಾನು ಅರಿವೆಗಳಲ್ಲೂ ಸ್ಪರ್ಧಿಸುತ್ತಿದೆ. ಜನರು ಆರ್ಥಿಕ ಸಂಕಷ್ಟದಿಂದ ಇನ್ನೂ ಮುಕ್ತರಾಗಿಲ್ಲ. ಈ ಕಾಲದಲ್ಲಿ ಜಾಪಾನಿನ ಸರಕುಗಳಿಗೆ ಒಳ್ಳೆ ಗಿರಾಕಿಯಿದೆ.

ರಾಷ್ಟ್ರೀಯ ಪಕ್ಷದ ಧೋರಣೆ. ಪಂಡಿತ ಮಾಲವೀಯರ ಪ್ರಕಟಣೆ.

"ರಾಷ್ಟ್ರೀಯ ಪಕ್ಷಕ್ಕೆ, ಕೊಂಗ್ರೆಸ್ಸಿನ ಹೆಸರಿನಲ್ಲಿ ಚುನಾವಣೆಗಳಲ್ಲಿ ಭಾಗವಹಿಸಲು ಯಾವ ಅಧಿಕಾರವೂ ಇಲ್ಲ"ವೆಂದು, ಕೊಂಗ್ರೆಸ್ಸಿನ ಅಧ್ಯಕ್ಷರಾದ ಸರದಾರ ವಲ್ಲಭಭಾಯಿ ಪಟೇಲರು ಕೊಟ್ಟ ಪ್ರಕಟಣೆಯನ್ನು ಕುರಿತು ಆಡುತ್ತ ಪಂಡಿತ ಮಾಲವೀಯರು, ರಾಷ್ಟ್ರೀಯ ಪಕ್ಷದ ಧೋರಣೆಯೆಂತಹದೆಂಬುದನ್ನು ಈ ರೀತಿಯಾಗಿ ಸ್ಪಷ್ಟೀಕರಿಸಿರುವರು:—

"ಕೊಂಗ್ರೆಸ್ ರಾಷ್ಟ್ರೀಯ ಪಕ್ಷವು, ಕೊಂಗ್ರೆಸ್ಸಿನ ಹೆಸರಿನಲ್ಲಿ ಚುನಾವಣೆಗಳಲ್ಲಿ ಭಾಗವಹಿಸುವುದಿಲ್ಲ. ತನ್ನ ಉಮೇದ್ವಾರರನ್ನು ತನ್ನ ಹೆಸರಿನಲ್ಲೇ ಮುಂದೆ ತರುವುದು. 'ಕೊಂಗ್ರೆಸ್ಸಿನೊಳಗಣ ಪಕ್ಷ'ವೆಂದೇ ರಾಷ್ಟ್ರೀಯ ಪಕ್ಷವು ಹೇಳಿಕೊಳ್ಳುವ ಕಾರಣವೇನೆಂದರೆ, ರಾಷ್ಟ್ರೀಯ ಪಕ್ಷಕ್ಕೂ ಕೊಂಗ್ರೆಸ್ಸಿಗೂ ಜಾತೀಯ ಎವಾರ್ಡಿನ ಕುರಿತಾಗಿ ಮಾತ್ರ ಅಭಿಪ್ರಾಯ ಭೇದವಿದೆ. ನಮ್ಮ ರಾಷ್ಟ್ರ ಸಭೆಯ ಧೋರಣೆಯನ್ನು ಸಂಪೂರ್ಣವಾಗಿ ಪಾಲಿಸುವುದು ರಾಷ್ಟ್ರೀಯ ಪಕ್ಷದ ಧ್ಯೇಯ. ರಾಷ್ಟ್ರ ಸಭೆಯು ಹಿಮ್ಮೆಟ್ಟಿದಲ್ಲಿ ರಾಷ್ಟ್ರೀಯ ಪಕ್ಷವು ಆ ಕೊರತೆಯನ್ನು ತುಂಬಿಕೊಡುವುದು. ಹಾಗಾದ ಕಾರಣ 'ಕೊಂಗ್ರೆಸ್ ಪಾರ್ಲಿಮೆಂಟರಿ ಬೋರ್ಡೆಂಬ ನಾಮಧೇಯದಿಂದ ಮೆರೆಯಲು ಹೆಚ್ಚಿನ ಅಧಿಕಾರವು ರಾಷ್ಟ್ರೀಯ ಪಕ್ಷಕ್ಕಿದೆ.

"ಸಿ. ಆರ್. ದಾಸ್ ಮತ್ತು ಪಂಡಿತ ಮೋತಿಲಾಲರು ತಮ್ಮ ಸಂಘವನ್ನು ೧೯೨೨ರಲ್ಲಿ 'ಕೊಂಗ್ರೆಸ್ ಖಿಲಾಫತ್ ಸ್ವರಾಜ್ಯ ಪಕ್ಷ'ವೆಂದು ಕರೆದರು. ಆ ಪಕ್ಷವು ಜನನಕ್ಕೆ ಬಂದಾದ ಮೇಲೆ ೮ ತಿಂಗಳ ತನಕ ರಾಷ್ಟ್ರ ಸಭೆಯು ಅದನ್ನು ಗುರುತಿಸದೆ ಕೊನೆಗೆ ಗುರುತಿಸಿತು. ನಮ್ಮ ರಾಷ್ಟ್ರೀಯ ಪಕ್ಷವು ಕೂಡ ಶೀಘ್ರದಲ್ಲೇ ಕೊಂಗ್ರೆಸ್ಸಿನವರಿಂದ ಗುರುತಿಸಲ್ಪಡುವುದೆಂದು ಭರವಸೆ."

ಮುಸ್ಸಲೋನಿಯವರ ಸಿಂಹನಾದ. "ಯುದ್ಧಕ್ಕೆ ಸನ್ನದ್ಧರಾಗಿರಿ!"

ಇಟೇಲಿಯದ ಸೈನ್ಯದ ಕವಾಯತ್ತುಗಳೂ, ಶತ್ರು ಸೈನ್ಯದ ಮೇಲೆ ದಂಡೆತ್ತಿಹೋಗುವುದು, ಶತ್ರುಗಳನ್ನು ತಡೆವುದು ಇವೇ ಮೊದಲಾದ ಪ್ರದರ್ಶನ ರೂಪವಾದ ಮಿಲಿಟರಿ ಆಟಗಳೂ ಕಳೆದ ವಾರ ಬೊಲೋಗ್ನಾದಲ್ಲಿ ಜರಗಿದುವು. ಈ ಆಟಗಳ ನಂತರ ಮುಸ್ಸಲೋನಿಯವರು ಸೇನಾನಿಗಳನ್ನೂ, ವಿದೇಶಕ್ಕೆ ರಾಯಭಾರಿಗಳಾಗಿಯೂ ಮತ್ತಿತರ ಕಾರ್ಯಗಳಲ್ಲೂ ಹೋಗುವ ಅಧಿಕಾರಿಗಳನ್ನೂ ನೆರೆಯಿಸಿ ಹೀಗೆ ಸಾರಿದರು:—

"ಇಟೇಲಿಯ ಜನಾಂಗವನ್ನು ದಂಡಾಳುಗಳ ಜನಾಂಗವನ್ನಾಗಿ ಮಾಡಬೇಕಾಗಿದೆ. ಜನರೆಲ್ಲರಿಗೆ ಯುದ್ಧಗಳ ವಿಷಯಕವಾದ ಭೀತಿ ಇರಕೂಡದು; ಯುದ್ಧ ಮಾನಸಿಕತೆ ಹುಟ್ಟಬೇಕು. ಜನಾಂಗದ ಉನ್ನತಿಯಾಗಲಿ ಅಧನತಿಯಾಗಲಿ ಸೈನ್ಯದ ಮೇಲೆ ಅವಲಂಬಿಸಿದೆ. ಯುದ್ಧದ ಕರೆಬಂದಾಗ ಪ್ರತಿಯೊಬ್ಬ ಇಟೇಲಿಯಾನನೂ ಉತ್ತರ ಕೊಡಲೇಬೇಕು. ಯುರೋಪಿನಲ್ಲಿ ಯಾರಿಗೂ ಯುದ್ಧ ಬೇಡವಾಗಿರಬಹುದು. ಆದರೆ, ವಾತಾವರಣವನ್ನು ನೋಡಿದರೆ ಯುದ್ಧವು ಯಾವ ಕ್ಷಣಕ್ಕೂ ಏಳಬಹುದೆಂದು ತೋರುವುದು. ನಾವು ಸಿದ್ಧರಾಗಿರಬೇಕು–ಇಂದಿನ ಯುದ್ಧಕ್ಕೆ; ನಾಳಿಯ ಸಮರಕ್ಕಲ್ಲ!"

ಅಮೇರಿಕದ ಪ್ರಸಿದ್ಧ ಸರ್ಜನ್ ದಂತವೈದ್ಯರಾದ– ಡಾ॥ ವಿರೋ ಪಿ. ಡೆ ಸಾ, ಡಿ. ಡಿ. ಎಸ್.,

ಇವರು "ಕೊಪ್ರನ್" ದಂತಮಂಜನದ ವಿಷಯವಾಗಿ ಹೀಗೆ ಬರೆಯುತ್ತಾರೆ:–



ಎಲ್ಲೆಲ್ಲೂ ದೊರೆವುದು.

ನಾನು, ಶಾಸ್ತ್ರೋಕ್ತವಾದ ಈ 'ಕೊಪ್ರನನ್ನು' ನನ್ನ ವೈದ್ಯಕೀಯ ಸಲಹೆ ಪಡೆದ ದಂತ ಬಾಧೆಯುಳ್ಳವರಿಗೆ ನಿರವಿಸಿ, ಜಾಗರೂಕತೆಯಿಂದ ಅದರ ಗುಣಗಳನ್ನು ಕಂಡಿರುವೆನು.

ಕೊಪ್ರನ್ ದಂತಮಂಜನದ ಗುಣವಿವರವೆಲ್ಲ ಅಕ್ಷರಶಃ ನಿಜ. ಅದರಲ್ಲುಪಯೋಗವಾಗುವ ಮುಖ್ಯ ವಸ್ತುಗಳೆಲ್ಲ ಪ್ರತ್ಯಪ್ರತ್ಯೇಕವಾಗಿ ಬಹು ಕಾಲದಿಂದ ಹಲ್ಲುಗಳಿಗೆ ಬಲವೀವ ಗುಣಗಳುಳ್ಳುದೆಂದು ಸಿದ್ಧಾಂತವಾಗಿರಲು, ಅವುಗಳೆಲ್ಲ ಸೇರಿ ಉಂಟಾದ ಈ ಮಂಜನವು ಅತ್ಯುತ್ತಮವೇ ಆಗಿದೆ.

ಬಾಳೆಕಾಯಿನ ಹಸಿ ಕಡ್ಡಿಯೇ ಹಲ್ಲುಗಳಿಗೆ ಆರೋಗ್ಯಕರ; ಇತರ ಜಿನಸುಗಳೊಂದಿಗೆ ಈ ಬಾಳೆಕಾಯಿನ ಸತ್ವವು ಸೇರಿದೆಯಾದ ಕಾರಣ 'ಕೊಪ್ರನ್' ಒಂದು ಆದರ್ಶ ದಂತಮಂಜನವಾಯಿತು. ನಾನು ಕಂಡಂತೆ ಕೊಪ್ರನಿನಿಂದ ವಸಡುಗಳಿಂದಾಗುವ ಸ್ರಾವ ನಿಂತು, ಅವು ಪುಷ್ಟಿಗೊಂಡು, ನವಚೇತನ ಹೊಂದುತ್ತವೆ. ಅದರ ಉಪಯೋಗದಿಂದ ಬಾಯೊಳಗಿನ ವಿಷಕಾರಕ ಕ್ರಿಮಿಗಳು ನಾಶವಾಗುವುವು. ಅದರ ರುಚಿಯು ಹಿತಕರವಾಗಿದ್ದು, ಬಾಯಿಯ ದುರ್ವಾಸನೆ ನೀಗಿ, ಉಚ್ಛ್ವಾಸಕ್ಕೊಂದು ಸೌರಭವುಂಟಾಗುವುದು.

ಈಗ ಪೇಟೆಯಲ್ಲಿರುವ ದಂತಮಂಜನಗಳಲ್ಲಿ ಕೊಪ್ರನಿಗೆ ಅಗ್ರಸ್ಥಾನವಿರುವುದನ್ನು ನಾನು ಮುಂದಾಗಿ ಕಾಣಬಲ್ಲೆ.

ಕೊಪ್ರನಿಗೆ ಶಿಫಾರಸು ಬೇಕಾಗಿಲ್ಲ; ಬೇಕು ನಿಮ್ಮದೊಂದು ಪರೀಕ್ಷೆ ಮಾತ್ರ.

ಅದನ್ನುಪಯೋಗಿಸಿದಂತೆ ಆರೋಗ್ಯಕರವಾಗಿ ಬೆಳೆವುವು ನಿಮ್ಮ ಹಲ್ಲುಗಳು; ಅದುವೇ ಕೊಪ್ರನಿಗೆ ಸರ್ವ ಜನಾದರವನ್ನು ಸಾಧಿಸಿಕೊಡುವುದು.

ತಯಾರಿಸುವವರು:—

ಕೊಪ್ರನ್ ಕೆಮಿಕಲ್ ಕೋ., ಲಿಮಿಟೆಡ್, 83/85 ತಾರದೇವ್ ರೋಡ್, ಬೊಂಬಾಯಿ.

ವಿವಿಧ ವಿಷಯ.

ಕೋತಿಗಳು ತಮ್ಮ ಯಜಮಾನನ ಕೊಲೆಗಾರರನ್ನು ಪತ್ತೆ ಮಾಡಿದುವು!

ಬಾಯಿಬಾರದ ಆ ಮೂಕಪ್ರಾಣಿಗಳು—ವಾನರಗಳು ಒಂದು ಕೊಲೆಯ ಮೊಕದ್ದಮೆಯಲ್ಲೀಗ ಮುಖ್ಯ ಸಾಕ್ಷಿಗಾರರು! ಇದೀಗ ಕೊಮಿಲ್ಲ ಜಿಲ್ಲೆಯ ಆಶ್ಚರ್ಯಕರವಾದ ಸುದ್ದಿ.

ಡೊಂಬರವನೊಬ್ಬನು, ಎರಡು ಕೋತಿಗಳನ್ನು ಹಿಡಕೊಂಡು ಕೊಮಿಲ್ಲಕ್ಕೆ ಬಂದು, ಆ ಕೋತಿಗಳಿಂದ ಆಶ್ಚರ್ಯಕರವಾದ ಆಟಗಳನ್ನಾಡಿಸುತ್ತಿದ್ದನು. ಒಂದು ದಿನ ಆತನನ್ನು ಇಬ್ಬರು ದುರಾತ್ಮರು ದಾರಿಯಲ್ಲಿ ಹಿಡಿದು, ಕೋತಿಗಳನ್ನು ಕೋಲಿನಿಂದ ದೂರಕ್ಕೋಡಿಸಿ, ಆತನನ್ನು ಕೊಂದು, ಹೆಣವನ್ನು ಅಲ್ಲೇ ಹೂಳಿಟ್ಟು, ಸಿಕ್ಕಿದ ೩ ರೂಪಾಯಿಗಳನ್ನು ಹಿಡಕೊಂಡು ಶಾಲಿಗೆ ಬುದ್ಧಿ ಹೇಳಿದರು. ಆ ಕೋತಿಗಳು ಒಂದು ಮರವೇರಿ ಕುಳಿತು, ಇದೆಲ್ಲವನ್ನು ದೂರದಿಂದ ನೋಡಿದುವು. ಕೊಲೆಗಡಕರು ಹೊರಟುಹೋದ ನಂತರ ಕೋತಿಗಳು ಕೆಳಗಿಳಿದು ಬಂದು, ಒಂದು ಚಿಕ್ಕ ಬಿದಿರು ತುಂಡನ್ನು ಆ ಹೆಣ ಹೂಳಿಟ್ಟಲ್ಲಿ ಗುರುತಿಗಾಗಿ ಇಟ್ಟುಬಿಟ್ಟು, ಮನೆಗೋಡಿಬಂದು, ತಮ್ಮ ಯಜಮಾನನ (ಕೊಲೆ ಮಾಡಲ್ಪಟ್ಟಾತನ) ಹೆಂಡತಿಯನ್ನು ನೋಡಿ, ಕಣ್ಣೀರು ಸುರಿಸಿ, ಆಕೆಯನ್ನು ಅಲ್ಲಿಗೆಳೆದು ತಂದು; ಸ್ಥಳವನ್ನು ತೋರಿಸಿದುವು. ಪೋಲೀಸರಿಗೆ ಸುದ್ದಿ ಮುಟ್ಟಲು, ಅವರು ಬಂದು, ಆ ಸ್ಥಳವನ್ನಗೆದರು. ಶವವು ನೋಡ ಸಿಕ್ಕಿತು. ಕೋತಿಗಳು ಪೋಲೀಸರನ್ನು ಪೇಟೆಗೆ ಕರಕೊಂಡುಬಂದು, ಜನಸಮೂದಾಯದಲ್ಲಿ ಕೊಲೆಗಡಕರನ್ನು ಕಂಡು ಹಿಡಿದು, ಅವರ ಮೈಮೇಲೆ ಹಾರಿ, ಅವರನ್ನು ಪರಚಿ, ತಮ್ಮ ಸೇಡು ತೀರಿಸಿಕೊಂಡುವು. ಅವರೂ ತಮ್ಮ ತಪ್ಪನ್ನೊಪ್ಪಿಕೊಂಡರು. ವಿಚಾರಣೆ ನಡೆದಿದೆ. ಕೋತಿಗಳನ್ನು ಸಾಕ್ಷಿಗಾಗಿ ಕೋರ್ಟಿಗೆ ಒಯ್ಯುರಂತೆ.

"ಬೆಕ್ಕಿಗೆ ಆಟ......"

"ಬೆಕ್ಕಿಗೆ ಆಟ" ಹೆಂದಿಷ್ಟೆ ಅಲ್ಲ. "ಪ್ರಾಣಸಂಕಟವೂ ಬೆಕ್ಕಿಗೆ" ಎಂದಾಯಿತು,—ಕ್ಯಾಂಡಿ (ಸಿಲೋನ್) ಯಲ್ಲಿ! ಆಗಸತಿಯೊಬ್ಬಳು ರಾತ್ರಿ ತನ್ನ ಗುಡಿಸಲಿನಲ್ಲಿ ಮಲಗಿದ್ದಳು. ಆಕೆಯು ಪ್ರೀತಿಯಿಂದ ಸಾಕಿದ ಎರಡು ಬೆಕ್ಕುಗಳೂ ಆಕೆಯ ಕೋಣೆಯಲ್ಲಿದ್ದುವು. ಒಂದು ನಾಗರ ಹಾವು ಆ ಕೋಣೆಯನ್ನು ಪ್ರವೇಶಿಸಿ, ಆಗಸತಿಯು ಹಾಸುಗೆಯ ಕಡೆಗೆ ಸಾಗಿತು. ಬೆಕ್ಕುಗಳು ಅದನ್ನು ತಡೆದು, ಅದರೊಡನೆ ಕಾದಾಡಿ ತಮ್ಮ ಯಜಮಾನಿಯ ಪ್ರಾಣವನ್ನು ರಕ್ಷಿಸಲು ನೋಡಿದುವು. ಆದರೆ, ಹಾವು ಆ ಬೆಕ್ಕುಗಳಿಗೆ ಚೆನ್ನಾಗಿ ಕಚ್ಚಲು, ಅವು ವಿಷವೇರಿ ಸತ್ತುಬಿದ್ದುವು. ಆ ಮುದುಕಿಯನ್ನೂ ಕೊಂದು ತೀರಿಸಿ, ಹಾವು ಹೊರಟು ಹೋಯಿತು!

ಪ್ರಪಂಚದ ಅತಿ ಚಿಕ್ಕ ಮೋಟಾರು!

ಒಂದು ಅದ್ಭುತ! ಇದನ್ನು ಟುಟಿಕೋರಿನದ ಡಿ. ಪಿ. ಫೆರ್ನಾಂಡಿಸ್ ಎಂಬವರು ತಯಾರಿಸಿರುವರು. ಈ ಮೋಟಾರನ್ನು ನಿಮ್ಮ ಕೈಯಲ್ಲಿ ಹಿಡಿದು, ಕೈಯನ್ನು ಮುಚ್ಚಿ ಬಿಡಬಹುದು. ಒಂದು ಚಿಕ್ಕ ಉಂಗುರಕ್ಕಿಂತ ದೊಡ್ಡದಿಲ್ಲ. ಭಾರ ಕೇವಲ ೧೨ ತೊಲೆಗಳಷ್ಟು! ಮಾತ್ರ, ಇದರಿಂದ ಪ್ರಯೋಜನವೇನು?

ಚಿಕ್ಕಾಸುಗಳನ್ನು ಕೂಡಿಸಿದಿರಿ

—ಎಂಬ ಬುದ್ಧಿವಾದವನ್ನು ಕೇಳುವವರೆಷ್ಟು ಮಂದಿ? ಆದರೆ, ನೋಡಿ,—ಇಂಗ್ಲಾಂಡ್ ದೇಶದ ವೂಲ್‌ವಿಚ್ ಆರ್ಸೆನಲ್ ಎಂಬಲ್ಲಿನ ಡಬ್ಲ್ಯು. ಜೆ. ಮಿಲ್ಸ್ ಎಂಬವನು—ಕೂಲಿಗಾರ—ತನ್ನ ಜೀವಮಾನದಲ್ಲಿ ಚಿಕ್ಕಾಸುಗಳನ್ನೆ ಕೂಡಹಾಕಿ, ಸಾಯುವಾಗ ಆ ಚಿಕ್ಕಾಸುಗಳ ಮೊತ್ತವನ್ನು ಒಂದು ಆಸ್ಪತ್ರೆಗೆ ದಾನಮಾಡಿದನು. ಮೊಬಲಗು ಎಷ್ಟಾಯಿತು ಬಲ್ಲಿರಾ?—೩೫೦೦ ಪವನುಗಳು!

ಸೂರ್ಯನನ್ನು ದೂರುತ್ತಾರೆ!—

ಯಾರು?—ಇಂಗ್ಲಾಂಡಿನ ಜನರು. ಅಲ್ಲಿ ಕಳೆದ ತಿಂಗಳಲ್ಲಿ ಮಳೆ ಚೆನ್ನಾಗಿ ಬಾರದೆ, ಸೆಕೆ ಹೆಚ್ಚಿ ಕೆರೆಬಾವಿ, ನಗರಗಳೆಲ್ಲ ಕಳವಳಿಸಿದುವು. "ಸೂರ್ಯನನ್ನು ಕದಿಯುವ ಕಳ್ಳ!" ಎಂದು ಜನರ ಸಂತಾಪದ ಕೂಗು. ಬಿಸಿಲು ಬಾದರೆ ದಿನಕ್ಕೆ ಥೇಮ್ಸ್ ನದಿಯಿಂದ ೩೦ ಮಿಲ್ಲಿಯ ಗೆಲನ್ ನೀರು ಅಧಿಕವಾಗಿ ಹೋಗುವುದಂತೆ.

ಪ್ರಚಲಿತಸಮಾಚಾರ.

ಮದರಾಸಿನ ಬಳಿಯಲ್ಲಿ—

—ಕಿಲ್ಪಾಕ್ ಎಂಬಲ್ಲಿ, ಇತಿಹಾಸಪೂರ್ವದ ಕೆಲವು ವಸ್ತುಗಳು ದೊರೆತಿವೆ. ಸುಮಾರು ಐದುಸಾವಿರ ವರ್ಷಗಳ ಹಿಂದಣ ಕಾಲದವುಗಳೆಂದು ಅಂದಾಜು ಹಾಕಬಹುದಂತಹ ಕೆಲವು ಪಾತ್ರೆಗಳೂ ಇವೆ. ಈ ವಸ್ತುಗಳನ್ನು ಮದರಾಸಿನ ವಸ್ತುಸಂಗ್ರಹಾಲಯಕ್ಕೆ ಕಳುಹಿಸಿ ಕೊಟ್ಟಿರುವರು.

ಸಂಡ್ವೀಪಗಳ ಬಳಿಯಲ್ಲಿ—

—ಸುಮಾರು ೧೫ನೇ ಶತಮಾನದವುಗಳೆಂಬಂತೆ ಕಾಣುತ್ತಿರುವ ಹಳೆಯ ಹಡಗುಗಳು ಸಮುದ್ರದಲ್ಲಿ ಮುಳುಗಿರುವುದು ಕಂಡುಹಿಡಿಯಲ್ಪಟ್ಟಿವೆ. ಇದರಿಂದ, ಹಿಂದೂದೇಶದ ಪೂರ್ವಕಾಲದ ನೌಕಾವಿಷಯಗಳನೇಕ ತಿಳಿದುಬರಬಹುದೆಂದೂಹಿಸಲಾಗಿದೆ. ಸಂಡ್ವೀಪಗಳು ಹಡಗುಗಳನ್ನು ಕಟ್ಟುವ ಹೆಸರಾದ ದ್ವೀಪವಾಗಿತ್ತಂತೆ. ಸಮುದ್ರಗಳ್ಳರ ಕಾಟವೂ ಹೆಚ್ಚಿತ್ತು.

ಸಂಯುಕ್ತ ಅಮೇರಿಕದ ಅಧ್ಯಕ್ಷ ರೂಸ್‌ವೆಲ್ಟರವರು.

ಅಕ್ಕಿಯ ಪ್ರಶ್ನೆ ಹೇಗೂ ತೀರ್ಮಾನವಾಗಬಹುದೆಂದು—

—ಸಿಮ್ಲಾಗುಡ್ಡದಿಂದೊಂದು ಗಾಳಿವರ್ತಮಾನ: ಸರಕಾರ ದವರೇ ಸ್ವಪಕ್ಷೋಧಿಸಬಹುದಂತೆ. ವಿದೇಶೀ ಅಕ್ಕಿಯ ಆಮದನ್ನು ತಡೆಯಲಾಗದಿದ್ದರೂ, ಆ ಅಕ್ಕಿಯು ಸುಲಭವಾಗಿ ನಮ್ಮ ಕರಾವಳಿಗಳಲ್ಲಿ ಬಂದಿಳಿಯದಂತೆ ಆಮದು ಕರವನ್ನು ಹೊರಿಸಲು ಒಂದು ಮಸೂದೆಯನ್ನು ಸರಕಾರದವರೇ, ಎಸೆಂಬ್ಲಿಯ ಈ ಬಾರಿಯ ಅಧಿವೇಶನವು ಕೊನೆಗೊಳ್ಳುವುದರೊಳಗೆ ತರಲಿರುವರೆಂದು ಕೇಳಬರುತ್ತದೆ. ಇದು ನಿಜವಾದರೆ, ವಿದೇಶೀ ಅಕ್ಕಿಯ ಬೆಲೆಯು ಏರಿ, ನಮ್ಮ ದೇಶೀಯ ಅಕ್ಕಿಗೂ ಧಾರಣೆ ಏರಬಹುದೆಂದು ತೋರುವುದು. [ಈ ಸುದ್ದಿಯು ಪತ್ರಿಕೆಗಳಿಗೆ ಮುಟ್ಟುವುದರೊಳಗೆ ಸಯಾಮಿನಿಂದ ಪುನಃ ೩೫೦೦ ಟನ್ ಅಕ್ಕಿ ಬಂದು ಮದರಾಸು ಬಂದರದಲ್ಲಿಳಿದಿದೆ.]

ಏನು ಹಾವಳಿ ಈ ಜಪಾನಿನವರದು!

ಸಿಲೋನಿಗೆ ತಮ್ಮ ಕಡಿಮೆ ಬೆಲೆಯ ಅರಿವೆಯನ್ನು ಡಿಸಿ ದ್ರಿಟಿಷರ ಹೊಟ್ಟೆಯ ಮೇಲೆ ಕಾಲಿಟ್ಟುದು ಸಾಲದೆ, ಈಗ ಸಿಮೆಂಟನ್ನೂ, ಬಲು ಕಡಿಮೆ ಬೆಲೆಯಲ್ಲಿ ಕೊಂಡೊಯ್ದು, ಅಲ್ಲಿ ಮಾರಾಟ ಮಾಡುವರೆಂದರೆ, ಬ್ರಿಟಿಷರ ಯಾವತ್ತು ವ್ಯಾಪಾರವನ್ನು ಮಣ್ಣುಗೂಡಿಸಬೇಕೆಂದು ಇವರ ಹವಣಿಕೆಯೇ? ಸಿಲೋನಿನಲ್ಲಿ ಸಿಮೆಂಟ್ ವ್ಯಾಪಾರವೆಲ್ಲ ಪೂರ್ಣವಾಗಿ ಬ್ರಿಟಿಷರ ಕೈಯಲ್ಲೇ (monopoly) ಇತ್ತು! ೧೯೩೩ರ ತನಕ ಕೊಲೊಂಬೋ ಮುನಿಸಿಪಾಲಿಟಿ ಕೂಡ ಬ್ರಿಟಿಷ್ ಸಿಮೆಂಟ್ ಕಂಪೆನಿಗಳಿಗೇ ಕಂಟ್ರಾಕ್ಟು ಕೊಟ್ಟಿತ್ತು. ಈ ವರ್ಷ ಜಪಾನಿನ ಬೆನ್ನು ಕಟ್ಟಿದೆ. ಕೆಲ ಬ್ರಿಟಿಷರು ಜಪಾನ್ ಸಿಮೆಂಟಿನ ಮೇಲಿನ ಕರವನ್ನು ಮಾತ್ರ ಹೆಚ್ಚಿಸಬೇಕೆಂದು ಪ್ರಯತ್ನದಲ್ಲಿರುವರಂತೆ.

ಸ್ವರ್ಣಪ್ರವಾಹವು ನಿಂತಿತೆ?

ಕಳೆದ ವಾರ ಬೊಂಬಾಯಿಯಿಂದ ವಿಲಾಯತಿಗೆ ಬಂಗಾರವು ರಫ್ತಾಗಲಿಲ್ಲ. ಸ್ವರ್ಣವೆಲ್ಲ ಮುಗಿಯಿತೋ ಅಥವಾ ರಫ್ತು ನಿಂತಿತೇ ಎಂಬ ಪ್ರಶ್ನೆಯಿದ್ದಿದೆ.

ಜಪಾನಿನ ನೌಕಾ ಯೋಜನೆ.

ಜಪಾನಿನವರಿಗೆ ಹೊಸ ಹಡಗುಗಳ ಆಲೋಚನೆಯಾಗಿದೆ. ಅನೇಕ ಹಳೆ ಹಡಗುಗಳ ಸ್ಥಾನದಲ್ಲಿ ಹೊಸ ಹಡಗುಗಳನ್ನು ಇನ್ನು ಐದು ವರ್ಷಗಳೊಳಗೆ ಕಟ್ಟುವರು.

ಜಿನ್ನರು ಗವರ್ನರರಾಗುವರೇ?

ಸಾರ್ವಭೌಮ ಸರಕಾರಕ್ಕೆ ಶ್ವೇತಪತ್ರವನ್ನು ಹೇಗೂ ಹಿಂದೂದೇಶದವರ ಮೇಲೆ ಹೊರಿಸಬೇಕಾಗಿದೆ. ಆದರೆ, ಮುಸ್ಲಿಮರೂ ಇದಕ್ಕೆ ವಿರೋಧವನ್ನು ಪ್ರಕಟಿಸುತ್ತಿರುವುದನ್ನು ನೋಡಿ, ಆಂಗ್ಲ—ಮುಸ್ಲಿಂ ಸಂಬಂಧವು ಇದರಿಂದ ಎಷ್ಟು ಕೆಡುವುದೋ ಎಂಬ ಅಂಜಿಕೆಯೂ ಈಗ ಉಂಟಾಗಿದ್ದು, ಮುಸ್ಲಿಮರನ್ನು ಹೇಗೆ ಒಲಿಸಿಕೊಳ್ಳಲೆಂದು ಆಲೋಚನೆಯಾಗುತ್ತಿದೆ. ಶ್ವೇತಪತ್ರದೊಳಗಿನ ಸುಧಾರಣೆಗಳು ಕಾರ್ಯರೂಪಕ್ಕೆ ಬರುವಾಗ ಒಬ್ಬ ಹಿಂದೂವಿಗೂ ಒಬ್ಬ ಮುಸ್ಲಿಮನಿಗೂ ಒಂದೊಂದು ಗವರ್ನರ ಹುದ್ದೆಯನ್ನು ಕೊಡಬಹುದೆಂದೂ, ಮುಸ್ಲಿಮರ ಪೈಕಿ ಜಿನ್ನರ ಹೆಸರು ಸರಕಾರಕ್ಕೆ ಸೂಚಿತವಾಗಿದೆಯೆಂದೂ ಸುದ್ದಿ.

ಮಹಿಳಾ ಅಡ್ವೋಕೇಟರು—

—ಹೆಚ್ಚುತ್ತಿರುವರು. ನಾಲ್ಕೈದು ವರ್ಷಗಳ ಹಿಂದೆ ನಮ್ಮ ಪ್ರಾಂತ್ಯದಲ್ಲಿ ಇದೊಂದು ಕೊರತೆಯಿತ್ತು. ಈಗ ಮಹಿಳೆಯರು ಬ್ಯಾರಿಸ್ಟರುಗಳಲ್ಲೂ, ವ್ಯಾಪಾರಕ್ಷೇತ್ರದಲ್ಲೂ ತಾವು ಪುರುಷರಷ್ಟೆ ವಿಚಕ್ಷಣತೆಯಿಂದ ಕೆಲಸ ಮಾಡಬಲ್ಲೆವೆಂದು ಭರವಸೆಯಿಂದ ಮುಂದರಿಯುತ್ತಿದ್ದಾರೆ. ಕಳೆದ ವಾರ ಮಿಸ್. ಎಂ. ಎ. ಕೃಷ್ಣಮ್ಮಾಳ್ ಮತ್ತು ಮಿಸ್. ಎಂ. ಎ. ಯದುಗಿರಿ ಎಂಬಿಬ್ಬರು ಅಡ್ವೊಕೇಟರು ಹೈಕೋರ್ಟಿಗೆ ಬಂದಿರುವರು.

ಜಾಭುವದಲ್ಲಿ ಸುಧಾರಣೆಗಳಂತೆ!

ಜಾಭುವ ಸಂಸ್ಥಾನಾಧೀಶರ ಮೇಲೆ ಕೆಲವೊಂದು ಆರೋಪಗಳನ್ನು ಹೊರಿಸಿ ಮಹಾಜನರ ಮನವಿಯೊಂದು ವೈಸರಾಯರಿಗೆ ತಲುಪಿತ್ತಷ್ಟೆ. ಅಷ್ಟರೊಳಗೆ ಸಂಸ್ಥಾನದ ದಿವಾನರು ಕೆಲವು ಸುಧಾರಣೆಗಳನ್ನು ಥಕ್ಕನೆ ಸಾರಿಬಿಟ್ಟಿರುವರು. ಇದೇ ತಾ. ೧೫ರಿಂದ, ಸಂಸ್ಥಾನದ ಆಡಳಿತದ ಬಗ್ಗೆ ಒಂದು ಕೌನ್ಸಿಲನ್ನು ಮಹಾರಾಜರು ತೆರೆದು, ಅದರಲ್ಲಿ ೩ ಪ್ರಜಾಪ್ರತಿನಿಧಿಗಳಿರುವಂತೆ ಮಾಡಿರುವರಂತೆ. ಸುಮಾರು ೩೮ ಸಾವಿರ ರೂಪಾಯಿಗಳಷ್ಟು ಭೂಕಂದಾಯ ಮಾಫಿ ಮಾಡೋಣಾಗಿದೆಯಂತೆ.

ನಿದ್ದೆಯಲ್ಲಿ ನಡೆವವರಿಗೆ—

—ಈ ಸುದ್ದಿಯು ಕೌತುಕವನ್ನುಂಟುಮಾಡದಿರದು. ಫ್ಲಿಂಟ್ ಶಾಯರಿನ ಪ್ರಿಸ್ಟೇಟಿನ್ ಸ್ಟೇಷನಿನ ಬಳಿಯಲ್ಲಿ, ನಡುರಾತ್ರಿ ಕಳೆದು ಮುಂಜಾನೆ ಸುಮಾರು ೫ ಘಂಟೆಯ ಸಮಯದಲ್ಲಿ, ರೈಲ್ವೆಯ ಸಿಗ್ನಲ್ ತಂತಿಗಳು ಆಕಸ್ಮಿಕವಾಗಿ ಚಲಿಸಿದಂತಾಯಿತು. ಸಿಗ್ನಲ್‌ಬೋಕ್ಸಿನ ಬಳಿಯಲ್ಲಿ ಎಡ್ವಾರ್ಡ್ ಎಂಬವನು ಇದ್ದವನು ಈ ಚಲನೆ ಏನೆಂದು ಆಶ್ಚರ್ಯಗೊಂಡು ಆತನು ದೃಷ್ಟಿ ಹಾದಿಯಲ್ಲಿ ನುಗ್ಗುತ್ತಿರಲು, ಕಂಬಿಗಳ ಮೇಲೆ ಬಿಳಿಯ ಪೋಷಾಕುಗಳನ್ನು ತೊಟ್ಟುಕೊಂಡು ಯಾರೋ ನಿಂತಂತೆ ಕಂಡಿತು. "ಯಾರು" ಎಂದು ಎಡ್ವರ್ಡನು ಕೂಗಿದನು. ಉತ್ತರವಿಲ್ಲ! ಧೈರ್ಯಮಾಡಿಕೊಂಡು ಎಡ್ವರ್ಡನು ಮುಂದೆ ಹೋಗಿ ನೋಡಿದಾಗ, ಪಾಯಿಜಾಮೆಗಳನ್ನು ಹಾಕಿಕೊಂಡು ನಿಂತಿದ್ದ ಹುಡುಗನೊಬ್ಬ; ಕಣ್ಣುಗಳನ್ನು ಮುಚ್ಚಿ, ನಿದ್ದೆಯಲ್ಲಿದ್ದಾನೆ! ಎಡ್ವರ್ಡನು ಆತನನ್ನು ಕರಕೊಂಡು ಬಂದು ಒಂದು ಬದಿಯಲ್ಲಿ ಮಲಗಿಸಿದ ಕೂಡಲೇ ರೈಲುಬಂಡಿ ಬಂದುಹೋಯಿತು. ಅರ್ಧ ತಾಸಿನ ನಂತರ ಆ ಹುಡುಗನು ಎಚ್ಚರವಾಗಿ, ತಾನೆಲ್ಲಿರುವೆನೆಂದು ಆಶ್ಚರ್ಯಪಟ್ಟನು. ಅವನು ಪರವೂರಿನವನಂತೆ. ವಿಹಾರಕ್ಕಾಗಿ ಇತರ ಹುಡುಗರೊಡನೆ ಬಂದು ಒಂದು ಡೇರೆಯಲ್ಲಿ ಮಲಗಿದ್ದನು. ರಾತ್ರಿಯಲ್ಲಿದ್ದು, ಎಚ್ಚರವಿಲ್ಲದೆ ನಾಲ್ಕಾರು ಮೈಲುಗಳ ತನಕ ನಡೆದು ಬಂದಿದ್ದನಂತೆ!

ಅಮೇರಿಕವು ಮಿತವ್ಯಯ ಸಾಧನೆಯಲ್ಲಿದೆ!

ಅಲ್ಲಿಯ ಭಂಡಾರದಲ್ಲೀಗ ೨,೩೫೮,೧೯೩,೩೫೦ ಡಾಲ್ಲರುಗಳುಳಿದಿವೆ. (ಇದು ೫೦೬,೦೦೦,೦೦೦ ಪವನುಗಳಷ್ಟಾಯಿತು). ಅಲ್ಲಿಯ ನ್ಯಾಯಾಧೀಶರಿಗೆ ಐಸ್ ಹಾಕಿದ ನೀರನ್ನೊದಗಿಸುವ ಪದ್ಧತಿಯಿತ್ತು. ಈಗಿನ ಮಿತವ್ಯಯ ಸಾಧನೆಯು ಈ "ಐಸ್ ನೀರ"ನ್ನೂ ಅಲ್ಲಿ ಆರಂಭವಾಗಿದೆ. ಇನ್ನು ಅವರಿಗೆ ನೀರು ಮಾತ್ರ; "ಐಸ್" ಇಲ್ಲ. ಆದರೆ, ೨೦ ಮಿಲ್ಲಿಯ ಪವನುಗಳಷ್ಟು ಹೊಸ ಯುದ್ಧ ನಾವೆಗಳಿಗಾಗಿ ವೆಚ್ಚ ಮಾಡುವರಂತೆ!

ತುಂಡು ಸುದ್ದಿ.

ವೈಸರಾಯರ ಭೂಕಂಪ ನಿಧಿಯು ರೂ. ೫೦,೯೯,೯೧೩ಕ್ಕೆ ಏರಿಕೆಯಾಗಿದೆ.

ಇಂಡಿಯಾ ಸರಕಾರದ ಕಚೇರಿಯು ಸಿಮ್ಲಾದಲ್ಲಿ ಇದೇ ಬರುವ ಅಕ್ಟೋಬರ ತಾ. ೩೧ರಲ್ಲಿ ಮುಚ್ಚಲ್ಪಟ್ಟು ಡೆಲ್ಲಿಯಲ್ಲಿ ಮರುದಿನ ತೆರೆಯಲ್ಪಡುವುದು.

ಯೆಹೂದ್ಯರ ಜಾಗತಿಕ ಪರಿಷತ್ತು ಪುನಃ ಸೇರಿ, ಪುನಃ ಜರ್ಮನಿಯನ್ನು ಬಹಿಷ್ಕರಿಸತಕ್ಕದೆಂಬ ಠರಾವಾಗಿದೆ.

ನ್ಯೂಝಿಲಾಂಡಿನ ಈ ವರ್ಷದ ಆಯವ್ಯಯದ ಪಟ್ಟಿಯು ತೃಪ್ತಿಕರವಾಗಿದ್ದು, ಕಳೆದ ವರ್ಷದಲ್ಲಾದ ಸಂಬಳಕಡಿತಗಳು ಈ ವರ್ಷ ತುಂಬಿ ಕೊಡಲ್ಪಡುವವೆ ನಿರ್ಧಾರವಾಗಿದೆ.

ಮಹಾತ್ಮಾ ಗಾಂಧಿಯವರ ಕರೆ ಬಂದು, ಪಟ್ಟಾಭಿ ಸೀತಾರಾಮಯ್ಯನವರು ಮಛಲೀಪಟ್ಣದಿಂದ ವಾರ್ಧಕ್ಕೆ ಧಾವಿಸಿರುವರು.

ಹರ್ ಹಿಟ್ಲರರ ಆಜ್ಞೆಯಂತೆ ೪೦೩ ಮಂದಿ ರಾಜಕೀಯ ಕೈದಿಗಳೂ, ೧೬೧೦ ಕ್ರಿಮಿನಲ್ ಕೈದಿಗಳೂ ಜರ್ಮನಿಯಲ್ಲಿ ಬಿಡುಗಡೆ ಮಾಡಲ್ಪಟ್ಟಿರುವರು.

ಜಾಪಾನ್ ಸರಕಾರದವರು ಅಲ್ಲಿಯ ಅಕ್ಕಿ ವ್ಯಾಪಾರವನ್ನು ಸಂಪೂರ್ಣವಾಗಿ ತಮ್ಮ ವಶಪಡಿಸಲಿರುವರು.

ನಮ್ಮ ಅಧಿಪತ್ಯದ ಪಬ್ಲಿಕ್ ಹೆಲ್ತ್ ಆಫೀಸರಾದ ಮೇಜರ್ ಹಸ್ಸರ್ ಲೋ, ಇವರು ಬೊಂಬಾಯಿಗೆ ವರ್ಗಾಯಿಸಲ್ಪಡುವವರಿದ್ದು, ಅವರ ಸ್ಥಾನದಲ್ಲಿ ಮೇಜರ ಸಿ. ಎಂ. ಗಣಪತಿ. ಐ. ಎಂ. ಎಸ್. ಇವರು ನೇಮಕ ಹೊಂದಲಿರುವರೆಂದು ಸುದ್ದಿ. ಮೇಜರ್ ಗಣಪತಿಯವರು ಕೊಡಗಿನವರು; ಸರ್ ಹರಿಸಿಂಘ ಗೌರರವರ ಅಳಿಯ.

ಶ್ರೀ ಭುಲಾಭಾಯಿ ದೇಸಾಯಿಯವರಿಗೆ ನಾಗಪುರ ಮುನಿಸಿಪಾಲಿಟಿಯವರು ಮಾನಪತ್ರವನ್ನರ್ಪಿಸಿ ಸತ್ಕರಿಸಿದರು.

ಸೈನ್ಯಸಂಸ್ಕರಣಾ ಮಸೂದೆಯಲ್ಲಿ ಸರ್ ಅಬ್ದುರ್ ರಹಿಮರು ತಂದ ತಿದ್ದುಪಡಿಯನ್ನು ಸರಕಾರದವರು ಸ್ವೀಕರಿಸದೆ, ಆ ಮಸೂದೆಯನ್ನು ಮುಂದಿನ ವರುಷದವರೆಗೆಂದಾದ್ಯಂತ ತಡೆದರು.

ಶ್ವೇತಪತ್ರವು ಸ್ವೀಕಾರಾರ್ಹವಲ್ಲವೆಂದು, ಮೌಲಾನಾ ಶೌಕತಾಲಿಯಂತಹವರ ಸಹಿಗಳಿಂದ, ಮುಸ್ಲಿಮ್ ಯೂನಿಟಿ ಬೋರ್ಡಿನವರ ಒಂದು ಪ್ರಕಟಣೆ ಹೊರಟಿದೆ.

(೧೧ನೇ ಪುಟದಿಂದ ಮುಂದರಿದುದು.)

ಯೂನಿಯನ ಪ್ರಸಿಡೆಂಟರೊಡನೆ ಆಗಾಗ್ಗೆ, ಧೈರ್ಯವಾದಿ ಕೊಟ್ಟು ಬಲುಮಾನ ಮಾಡಿಸಿರುವ ಕೆಲವು ರಿಕಾರ್ಡುಗಳನ್ನು ನಾನು ಓದಿದ್ದೇನೆ. ಸಿಂಹಾಸನಕ್ಕೆ ಕುಳಿತುದಕ್ಕೆ ಏನಾದರು ಕಾಲದಲ್ಲಿ ಹೊರಗೆ ಹೋದುದಕ್ಕೆ ಮನವೊಲಿಸುವ ಮಹಾಶಯರಿದ್ದರು.

ನಿರಂಕುಶ ಪ್ರಭುತ್ವ—ತಾಲೂಕು ಬೋರ್ಡಿನಲ್ಲಿ ನಿರಂಕುಶ ಪ್ರಭುತ್ವ ಇತ್ತೆಂದು ರುಜುಪಡಿಸಲು ನನ್ನಲ್ಲಿ ಅನೇಕ ರುಜುವಾತುಗಳಿವೆ. ಸರಕಾರದವರು ಒಂದು ವಿಚಾರಣಾ ಸಮಿತಿಯನ್ನು ಏರ್ಪಡಿಸಿದರೆ ಅಲ್ಲಿಯೇ ರುಜುಪಡಿಸುವರೆ ಸಿದ್ಧನಿರುವೆ; ನಾನು ಪತ್ರಿಕೆಯಲ್ಲಿ ನಿರಂಕುಶ ಪ್ರಭುತ್ವವನ್ನು ಖಂಡಿಸಿ ಲೇಖನ ಬರೆದಾಗ ನೀವೆಲ್ಲಿದ್ದಿರಿ? ಮೌನವ್ರತ ಹಿಡಿದಿದ್ದಿರಿ ಲೋಕಲ್ ನೆನಪಿದೆಯೆ?

ಶ್ರೀ ಭಟ್ಟರೇ, ನಿಮ್ಮ ವೋಟನ್ನು ಸ್ಟೇಂಡಿಂಗ್ ಕಮಿಟಿಗಾಗಲಿ, ಜಿಲ್ಲಾ ಬೋರ್ಡಿಗಾಗಲಿ ಇಲ್ಲಿ ಯಾರೂ ಕೇಳಲಿಲ್ಲ. ನಮ್ಮ ಸರ್ಕಲಿನವರಿಗೆ ಯಾರನ್ನು ಕಳುಹಿಸಬೇಕೆಂದು ಚೆನ್ನಾಗಿ ತಿಳಿದಿದೆ. ನಿಮ್ಮ ವೋಟನ್ನು ಗಟ್ಟಿಯಾಗಿ ಕಟ್ಟಿಟ್ಟುಕೊಳ್ಳಿರಿ. ಜಿಲ್ಲಾ ಬೋರ್ಡ್ ಪ್ರಸಿಡೆಂಟರಿಗಾಗಲಿ, ಸದಸ್ಯರಿಗಾಗಲಿ ಮಾಡಿದ ಸಂಸ್ಥೆಯಲ್ಲಿ ಪ್ರತಿಯೊಬ್ಬ ಮತದಾರನಿಗೂ ನಾಗರಿಕನಿಗೂ ಬೋರ್ಡಿನ ವರ್ತನೆಯನ್ನು ಪರಿಶೀಲಿಸುವ ಖಂಡಿಸುವ ಹಕ್ಕಿದೆ. ಈ ಹಕ್ಕು ಬಾಧ್ಯತೆಗಳನ್ನು ರಕ್ಷಿಸಿಕೊಳ್ಳುವುದು ಅವರ ಕರ್ತವ್ಯ. ನಿಮಗೆ ಇಷ್ಟವಿಲ್ಲದಿದ್ದರೆ ಸುಮ್ಮಗಿರಿ. ದಕ್ಷಿಣೆಗೆ ತಕ್ಕ ಪ್ರದಕ್ಷಿಣೆಯಷ್ಟೆ.

[ರಾಷ್ಟ್ರಬಂಧುವಿಗೆ ಕಳುಹಿದ್ದನ್ನು ಅದರ ಸಂಪಾದಕರು ತಿರಸ್ಕರಿಸಿದ ಕಾರಣ ಈ ಪತ್ರಿಕೆಯಲ್ಲಿ ಪ್ರಕಟಿಸಬೇಕಾಯಿತು.]

ಕೋ. ತ. ಕಾರಂತ.

ನೋಟೀಸು.

ಕಾಸರಗೋಡು ಡಿಸ್ಟ್ರಿಕ್ಟ್ ಮುನ್ಸೀಫ್ ಕೋರ್ಟಿನಲ್ಲಿ.

ಕ್ರಮ ನಂಬ್ರ 362/1934.

1. ಕುಂಞಪ್ಪ ಯಾನೆ ಇಬ್ರಾಯಿನ ಬ್ಯಾರಿ, 2. ಮಮ್ಮುಂಞಿ ಯಾನೆ ಮಮ್ಮದೆ ಬ್ಯಾರಿ—ಇಬ್ರಾಯಿನ ಬ್ಯಾರಿ ಮಕ್ಕಳು—ಕಾಸರಗೋಡು ತಾಲೂಕು ಕೈಯ್ಯಾರ ಗ್ರಾಮದಲ್ಲಿರುವವರು—ವಾದಿರು.

ಮತ್ತು

1. ದಾಸಣ್ಣ ಯಾನೆ ನಾರಾಯಣ ಬಲ್ಲಾಳಯ—ಕೃಷ್ಣ ಬಲ್ಲಾಳಯರ ಮಗ—ತಿರುವಾಂಕೂರು ಸಂಸ್ಥಾನದ ಚೇರ್ತಲೆ ತಾಲೂಕು ಬೈಲೂರ ಗ್ರಾಮದಲ್ಲಿರುವವ. 2. ರಾಮಚಂದ್ರ ಕಲ್ಯಾಣಿತ್ತಾಯ, 3. ಶ್ರೀನಿವಾಸ ಕಲ್ಯಾಣಿತ್ತಾಯ—ನೀರುಳ್ಳಿ ವೆಂಕಟ್ರಮಣ ಕಲ್ಯಾಣಿತ್ತಾಯರ ಮಕ್ಕಳು—ಮಂಗಳೂರು ಶಹರ ಜಪ್ಪು ವಾರ್ಡ್ ಪೊಯ್ಯೆಯೆಂಬಲ್ಲಿ ಕಾಫಿ ಹೊಟೇಲು ವ್ಯಾಪಾರಸ್ಥರು—ಪ್ರತಿವಾದಿರು.

1ನೇ ಪ್ರತಿವಾದಿಯು ವಾದಿರ ತಂದೆಗೆ ತಾ.17-7-1926ರಲ್ಲು ರೂ. 2000-0-0ಕ್ಕೆ ಬರೆಸಿಕೊಟ್ಟ ಅಡವು ದಸ್ತಾವೇಜಿನ ಬಾಬ್ತು 17—7—1933ರ ವ್ಯಾದೆಗೆ ಬರತಕ್ಕ ಒಂದು ವರ್ಷದ ಬಡ್ಡಿ ವ ಅದರ ಮೇಲಣ ಬಡ್ಡಿ ಕೂಡಾ ರೂ. 152—10—9ನ್ನು ಅಡವಿನ ಅಸಲು ಹಣ ಒಳಪಡಿಸಿ ದಾವಾ ಆಸ್ತಿಗಳ ಮಾರಾಟದಿಂದ ವಸೂಲು ಪಡೆಯುವರೆ ಸದ್ರಿ ಆಸ್ತಿಗಳ ನಂತರದ ಅಡವುದಾರರಾದ 2, 3ನೇ ಪ್ರತಿವಾದಿರನ್ನು ಕೂಡಾ ಕಕ್ಷಿಯಲ್ಲಿ ಸೇರಿಸಿ ವಾದಿಯರು ಮೇಲ್ಕಂಡ ದಾವೆ ಮಾಡಿರುತ್ತಾರೆ. ಸದ್ರಿ ನ್ಯಾಯ್ಯವು ತಾ. 13—9—1934ಕ್ಕೆ ಪ್ರಥಮ ತನ್ಖಿ ಬಗ್ಗೆ ಇಟ್ಟಿರುತ್ತದೆ. ಆ ದಿವಸ ಪ್ರತಿವಾದಿರು ಹಾಜರಾಗದೆ ಇದ್ದ ಪಕ್ಷದಲ್ಲಿ ಅವರನ್ನು ಯೆಕ್ಸ್‌ಪಾರ್ಟಿಯಿಂದ ನ್ಯಾಯ್ಯವು ತೀರ್ಮಾನಿಸಲ್ಪಡುವುದು.

Kasargod 25—8—'34. } K. Sundar Rama Shetty,
Vakil for Plaintiff.

ಮಂಗಳೂರಿನ ಪೇಟೆಧಾರಣೆ.

ಅಕ್ಕಿ—ಇದರ ಕ್ರಯವು ಈ ವಾರದಲ್ಲಿ ಹೆಚ್ಚುಕಡಿಮೆಯಾಗಿರುವುದಿಲ್ಲ. ಪೇಟೆಯಲ್ಲಿ ಬಂದಾಣ ಅಧಾರ್ಜೆಯಷ್ಟು ಭೆಲಿಯಲ್ಲಿ ಏರಿಳಿತವಿರುವುದಾದರೂ ಈ ಕ್ರಯವು ಇನ್ನೂ ಹೇಳಲವಕಾಶವಿಲ್ಲ. ಬರುವ ತಿಂಗಳ ಆದಿಯಲ್ಲಿ ಸ್ಟೀಮರು ಪ್ರಾರಂಭವಾದೊಡನೆ ಸರಕು ಆಮದಾಗಿ ಬೆಲೆಯಲ್ಲಿ ಇಳಿತಾಯವಾಗಬಹುದೆಂದು ನಿರೀಕ್ಷೆ.

ಕಾಫಿಯ ದರ.

ಕಾಫಿಮಾರ್ಕೆಟು ಕೂಡ ಚುರುಕಾಗಿಲ್ಲ. ಏಲಕ್ಕಿ ಅಡಿಕೆಗಳ ದರವೂ ಹಾಗೆಯೇ.

ನೋಟೀಸು.

ಕಾಸರಗೋಡು ಡಿಸ್ಟ್ರಿಕ್ಟ್ ಮುನ್ಸೀಫ್ ಕೋರ್ಟಿನಲ್ಲಿ.

ಸ್ಮಾಲ ನಂಬ್ರ 375/34.

ಇಸ್ಮಾಲಿ ಬ್ಯಾರಿ, ಮಮ್ಮದೆ ಬ್ಯಾರಿ ಮಗ, ಕಾಸರಗೋಡು ತಾಲೂಕು ಶಿರಿಯ ಗ್ರಾಮ ನಡುವುಳಿಯದಲ್ಲಿ—ವಾದಿ.

ಮತ್ತು

ಆಲಿ ಕುಂಞಿ ಬ್ಯಾರಿ, ಬಡ್ಸ ಬ್ಯಾರಿ ಮಗ, ಸದ್ರಿ ಶಿರಿಯ ಗ್ರಾಮದ ನಡುಉಳಿಯದಲ್ಲಿರುವವ—ಪ್ರತಿವಾದಿ.

ಸದ್ರಿ ಪ್ರತಿವಾದಿರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ—

ಮೇಲ್ಕಂಡ ನ್ಯಾಯ್ಯವು ತಾ. 10.9.34ಕ್ಕೆ ಆಖೈರ ತನ್ಖಿಗೆ ಇಟ್ಟಿರುವದರಿಂದ ಆ ಕುರಿತು ನಿಮಗೇನಾದ್ರೂ ಆಕ್ಷೇಪಣೆಯಿದ್ದಲ್ಲಿ ಸದ್ರಿ ತಾ. 10—9—34ಕ್ಕೆ ಹಾಜರಾಗಿ ವ್ಯವಹರಿಸತಕ್ಕದ್ದು. ತಪ್ಪಿದರೆ ಏಕಪಕ್ಷವಾಗಿ ತೀರ್ಮಾನಿಸಲ್ಪಡುವುದು ಎಂತ ಈ ಮೂಲಕ ತಿಳಿಯಪಡಿಸೋಣಾಗಿಯದೆ.

ಕಾಸರಗೋಡು, 29—8—34 } K. Narsing Nayak,
ವಾದಿಯ ಕಡೆ ವಕೀಲ.

ಚಾತುಕುಟ್ಟಿ ವೈದ್ಯರ

ವಿಶೂಚಿಕಾ ಸಂಹಾರಿ
Vishuchika Samhari
(PILCO)

ಕಾಲೆರಕ್ಕೆ ದಿವ್ಯಾಷಧ! ಉಪಯೋಗಿಸಿದರೆ ಗುಣ ಖಾತ್ರಿ!
ಕ್ರಯ ಡಬ್ಬಿ 1ಕ್ಕೆ ರೂ. 1—0—0.

ಸ್ತ್ರೀರೋಗ ನಿವಾರಿಣೀ ತೈಲ
Anti-Venereal Oil
(A. V. Oil)

ಸ್ತ್ರೀರೋಗ ನಿವಾರಣೆಗೆ ಅಪೂರ್ವ ವನಸ್ಪತಿ ಔಷಧಿ. ಕುಟುಂಬ ಪಾರಂಪರ್ಯದ್ದವ ತಗಲಿದ ರೋಗವು ಗುಣವಾಗುವುದು. ಸಿರೋಗಿಗಳೂ ಹೊಟ್ಟೆಯ ಶುದ್ಧಿಗಾಗಿ ಜುಲಾಬಿನ ಪದ್ಧತಿಯಂತೆ ತೆಗೆದುಕೊಳ್ಳಬಹುದು.

8 ಔನ್ಸ್‌ಗಳ ಬಾಟ್ಲಿ 1ಕ್ಕೆ ರೂ. 2—8—0.

ಕೆ. ವಿ. ಕೃಷ್ಣನ್,
ಕಲ್ಲಾಯಿ, ಮಲಬಾರ್,
ಅಥವಾ
ಬಾಲ್ ಮತ್ತು ಕಂಪೆನಿ, ಕಲ್ಲಿಕೋಟೆ,
ಇಲ್ಲಿ ಸಿಗುವುದು.

[ಗುಣಬಾರದಿದ್ದರೆ ಹಣ ವಾಪಾಸು]

ಸುಪ್ರಸಿದ್ಧ ವೈದ್ಯರಾದ ಎಸ್. ಕೆ. [illegible]

ಸಂತತಿ ಪ್ರತಿಬಂಧಕ ಚೂರ್ಣ (ರಿಜಿಸ್ಟರ್ಡ್)

ಬಹಳ [illegible] ಹಡೆಯುವುದರಿಂದ ಹೆಂಗಸರ [illegible] ಅಶಕ್ತಿಯಾಗುತ್ತದೆ. ಬಹಳ ಬಡತನದಲ್ಲಿ ವಿಶೇಷ ಮಕ್ಕಳಾಗುವುದರಿಂದ ದುಃಖವಾಗುತ್ತದೆ. ಈ ಕಾರಣದಿಂದಾಗಲಿ ಅಥವಾ ಬೇರೆ ಕಾರಣದಿಂದಲೂ, ಮಕ್ಕಳನ್ನು ಹಡೆಯುವುದು ಬಂದಾಗಬೇಕೆಂದು ಇಚ್ಛಿಸುವವರು ಈ ಚೂರ್ಣವನ್ನು ಉಪಯೋಗಿಸಬೇಕು. ಇದರ ಸೇವನೆಯಿಂದ [illegible] ನೇಮದಂತೆ [illegible]. ಶರೀರಕ್ಕೆ ಏನೂ ಅಪಾಯವಾಗದೆ [illegible] ಪೂರ್ಣವಾಗಿದ್ದು ಕೂಡಲೇ ಗರ್ಭಧಾರಣ ಬಂದಾಗುವುದು. [illegible] ಏನು ಮಾಡಿದರೂ [illegible]. ಕೂಡಲೇ [illegible] ಔಷಧ [illegible] ಸರ್ಟಿಫಿಕೇಟ ಡಾಕ್ಟರ ಧಿ. ಎ. ವೈದ್ಯ, ಎಲ್. [illegible] ಈ ಚೂರ್ಣದಿಂದ ಯಾವ ತರದ ಅಪಾಯವಾಗದು ಗರ್ಭಧಾರಣವೂ ಆಗುವುದಿಲ್ಲ. [illegible] ರೂ. [illegible] ವಿ. ಪಿ. [illegible]

ವಿಳಾಸ:— ಸಂಜೀವಿನೀ ಔಷಧಾಲಯ, ಮು. ಪೊ. [illegible] S M C

ಮಂಗಳೂರಿನ ಪೇಟೆಧಾರಣೆ.

ಸಾಮುಗ್ರಿಗಳು	ಇಂದ	ವರೆಗೆ
	ರೂ. ಆ.	ರೂ. ಆ.
ರಾಶಿ ಅಕ್ಕಿ ...	4—4	4—8
ಮುಸ್ಕತಿ ...	4—12	5—6
ಗುಡ್ಡು ...	4—4	4—12
ಸುಗ್ಗಿ ...	4—8	4—12
ಊರ ಅವ್ವಲ್ ಬೆಳ್ತಿಗೆ ...	5—0	5—4
ರಂಗೂನು ಬೆ. ಗೋ. ಗಳ್ಕೆ ...	5—10	6—4
ಎಲ್ಲೂರುಬೆ. ಮು. ಗಳ್ಕೆ ...	4—0	4—0
ಗೋದಿ ಗೋಣಿ ಗಳ್ಕೆ ...	10—0	12—8
ತೊಗರಿ ಗೋಣಿ ಗಳ್ಕೆ ...	9—8	10—0
ಹುರುಳಿ ಗೋಣಿ ಗಳ್ಕೆ ...	6—2	[illegible]—4
ಕಡಲೆ ಗೋಣಿ ಗಳ್ಕೆ ...	8—4	9—8
ತೊಗರಿಬೇಳೆ ಗೋಣಿ ಗಳ್ಕೆ ...	10—0	17—0
ಉದ್ದು ಗೋಣಿ ಗಳ್ಕೆ ...	7—0	7—8
ಹೆಸರು ಗೋಣಿ ಗಳ್ಕೆ ...	7—0	7—8
ಊರುಬೆಲ್ಲ ಖಂಡಿ ಗಳ್ಕೆ ...	40—0	45—0
ಉಪ್ಪು ಗೋಣಿ ಗಳ್ಕೆ ...	5—4	5—8
ಕೊಬ್ರಿ ಖಂಡಿ ಗಳ್ಕೆ ...	40—0	42—0
ಕೊಬ್ರಿ ಹಿಂಡಿ ಖಂಡಿ ಗಳ್ಕೆ ...	19—0	19—8
ಎಳ್ಳಿಂಡಿ ಖಂಡಿ ಗಳ್ಕೆ ...	23—12	27—0
ತೆಂಗಿನ ಎಣ್ಣೆ ಮಣ ಗಳ್ಕೆ ...	2—15	3—14
ಎಳ್ಳೆಣ್ಣೆ ಮಣ ಗಳ್ಕೆ ...	5—0	5—8
ಬೆಣ್ಣೆಎಣ್ಣೆ ಪೆಟ್ಟಿಗೆ ಗಳ್ಕೆ ...	6—8	8—0
ಮೋರಿಸ ಸಕ್ಕರೆ ಮ. ಗಳ್ಕೆ ...	3—10	3—14
ಮೆಣಸು ...	7—0	7—8
ಸಾಸಿವೆ ಮುಡಿ ಗಳ್ಕೆ ...	4—8	5—4
ಕಾಳುಮೆಣಸು ಖಂ. ಗಳ್ಕೆ ...	136—8	137—8
ಯೇಲಕ್ಕಿ ಮಣ ಗಳ್ಕೆ ...	18—0	22—0
ಹೊಸ ಗೇರುಬೀಜ ಮು. ಗಳ್ಕೆ	3—4	3—5
ಕಬ್ಬಿಣ ಖಂಡಿ ಗಳ್ಕೆ ...	42—0	44—0
ತಾಂಬ್ರತಗಡು ಮ. ಗಳ್ಕೆ ...	10—0	10—0
ತಾಂಬ್ರಪಾತ್ರಗಳು ಮ. ಗಳ್ಕೆ	13—0	14—8
ಚೀನಿಬೆಲ್ಲ ಸೇರು ಗಳ್ಕೆ ...	14—12	15—0
ಹಿತ್ತಾಳೆ ತಗಡು ಮು. ಗಳ್ಕೆ ...	9—0	9—8
ಸವನು ಗಳ್ಕೆ ...	20—10	21—0
ಹುಣಸೆ ಹುಳಿ ಖಂಡಿ ಗಳ್ಕೆ	30—0	35—0
ನೇಟಿವ್ ಕಾಫಿ ಖಂಡಿ ಗಳ್ಕೆ	182—0	198—0
ಫಿಟೇರಿ ಕಾಫಿ ಖಂಡಿ ಗಳ್ಕೆ ...	296—8	280—8
ಹಳೆ ಅಡಿಕೆ ...	118—0	124—0
ಹೊಸ ಅಡಿಕೆ ...	62—0	92—0

ಬೇಕಾಗಿದ್ದಾರೆ.

ತಿಂಗಳಿಗೆ ರೂ. 200ರ ಮೇಲೆ ಚೀಫ್ ಏಜಂಟರೂ, ರೂ. 100ರ ಮೇಲೆ ಏಜಂಟರೂ ರೂ. 40 ಮತ್ತು ಪ್ರೊವಿಡೆಂಟ್ ಫಂಡ್ ಮತ್ತು ಕಮಿಶನಿನ ಮೇಲೆ ಒರ್ಗನೈಜರರೂ ಬೇಕಾಗಿದ್ದಾರೆ.

ಇಂಗ್ಲಿಷಿನಲ್ಲಿ ಬರೆಯಿರಿ:-

Uplifting Banking Corporation Ltd.
169-171, Javeri Bazar, Bombay.

ದಿ. ಕೆನರಾ ನ್ಯೂಸ್ ಏಜನ್ಸಿ.

ಪ್ರೊಪ್ರೈಟರ್: ಬಿ. ಅಚ್ಚುತಪ್ಪೈ,

ಕಾರ್ಕಳ.

ಇಲ್ಲಿ ಎಲ್ಲಾ ವರ್ತಮಾನ ಪತ್ರಗಳೂ, ಇತರ ಪುಸ್ತಕಗಳೂ ವಿಕ್ರಯಿಸಲ್ಪಡುತ್ತವೆ.

(ಶಾಪು: ಬಸ್‌ಸ್ಟೇಂಡಿನ ಬಳಿ.)

ಶಾಲಿವಾಹನ ಬ। ಶಕ ೧೮೫೬ನೆಯ ಭಾವ ಸಂವತ್ಸರದ ಶ್ರಾವಣ ೮ ಶನಿವಾರದಿಂದ—ಶ್ರಾವಣ ಬ। ೧೪। ಶುಕ್ರವಾರದ ವರೇಗಿನ ಪಂಚಾಂಗ. (೧೯೩೪ನೇಯ ಸಿಂಹಸೋಣ

[illegible]	[illegible]	[illegible]	[illegible]	[illegible]	[illegible]	[illegible]	ಸೂರ್ಯ ಉ.	ಸೂರ್ಯ ಅಸ್ತ	[illegible]
1	ಶನಿ	೮	೩೧.೩೦	ರೋಹಿಣೀ	೪೨.೩೧	೧೬	6.21	6.40	
2	ರವಿ	೯	೩೪.೧೪	ಮೃಗಶಿರಾ	೪೬.೧೪	೧೭	6.21	6.40	
3	ಸೋಮ	೧೦	೩೮.೦	ಆರ್ದ್ರಾ	೫೩.೧೪	೧೮	6.21	6.39	
4	ಮಂಗಳ	೧೧	೪೨.೪೪	ಪುನರ್ವಸೂ	೫೬.೪೪	೧೯	6.21	6.39	
5	ಬುಧ	೧೨	೪೬.೩೧	ಪುಷ್ಯಾ	೬೦.೦	೨೦	6.21	6.38	
6	ಗುರು	೧೩	೫೨.೩೦	ಪುಷ್ಯಾ	೪.೧೪	೨೧	6.21	6.34	
7	ಶುಕ್ರ	೧೪	೫೭.೦	ಆಶ್ಲೇಷಾ	೧೦.೩೧	೨೨	6.21	6.37	

ಶ್ರೀಮದ್ಭುವನೇಂದ್ರ ಮಹೌಷಧಾಲಯ, ಕಟಪಾಡಿ, ದ. ಕ.

ಪಾರಂಪರ್ಯದ ಅನುಭವಸಿದ್ಧೌಷಧಗಳು — **ಸ್ವರ್ಣ, ರಜತ ಪದಕಗಳನ್ನು ಪಡೆದ ದಿವ್ಯೌಷಧಗಳು**

1. ರಕ್ತಾರಕ್–(ರಕ್ತದೋಷ ಸಂಬಂಧ ಯಾವತ್ತೂ ರೋಗಗಳಿಗೆ ದಿವ್ಯೌಷಧ). 2. ಗರ್ಭಪಾಲ–(ಗರ್ಭಶೂಲ, ಗರ್ಭಸ್ರಾವಗಳಿಗೆ ಅತೀ ಉಪಯುಕ್ತ) 3. ಚಂದ್ರಮಸ್–ವಾಂತಿ ಭೇದಿಗೆ ಅತ್ಯುತ್ತಮ) 4. ನೇತ್ರಾಂಜನ–(ನೇತ್ರ ರೋಗಗಳಿಗೆ ದಿವ್ಯೌಷಧ) 5. ಮಧುರೀಕೃತನಿಂಬ ತೈಲ–(ಸರ್ವ ತರದ ವಾತರೋಗಗಳಿಗೂ, ಚರ್ಮ ವ್ಯಾಧಿಗಳಿಗೂ ಉತ್ತಮ.) 6. ಭುವನಾಂಜನ–ಶಾರೀರಕ ನೋವುಗಳಿಗೆ ಅತ್ಯುತ್ತಮ. 7. ರಸಬಿಂದು–ಫರಂಗಿ, ಮೇಹ, ದುಷ್ಟ ವ್ರಣಗಳಿಗೆ ಸಿದ್ಧೌಷಧ. 8. ಮಹಾ ಮದನಕಾಮೇಶ್ವರೀ ಲೇಹ್ಯ–ನಪುಂಸಕತ್ವ, ಧಾತು ಕ್ಷೀಣತೆ ಕ್ಷಯಕಾಸ ಮೊದಲಾದುವುಗಳಿಗೆ ಅತೀ ಉಪಯುಕ್ತ.

ನಮ್ಮ ಔಷಧಗಳು ದೊರೆಯುವ ಸ್ಥಳಗಳು

ಬೊಂಬಾಯಿ ಸಂಸ್ಥಾನದ ಪ್ರಾಮುಖ್ಯ ಏಜಂಟರು:—(ಉತ್ತರಕನ್ನಡ ಜಿಲ್ಲೆ ಹೊರತು) ಕೊಚ್ಚಿಕಾರ್ ಆನಂದ್ರಾಯ ಪೈ, ಲೋಹಾರ್ ಚಾಲ್, ಬೊಂಬಾಯಿ ನಂಬ್ರ 2.

ಮಂಗಳೂರು:—1. ರಘುವೇಂದ್ರ ರಂಗ ಪೈ, ರಥಬೀದಿ ಮಂಗಳೂರು. 2. ಡಾಕ್ಟರ್ ಕೆ. ಎನ್. ಭಂಡಾರಿ, ಕೆನರಾ ಡಿಸ್ಪೆನ್ಸರಿ, ಕೊಡಿಯಾಲ್‌ಬೈಲ್, ಮಂಗಳೂರು. 3. ಆರ್. ಗೋಪಾಳಕೃಷ್ಣರಾವ್, ಪ್ರೊಪ್ರೈಟರ್, ಗೋಪಾಳಕೃಷ್ಣ ವೈದ್ಯಾಶ್ರಮ, ಮಾರ್ಕೆಟ್ ಈಸ್ಟ್‌ರೋಡ್, ಮಂಗಳೂರು. ಬಂಟ್ವಾಳ:—ವೇದಮೂರ್ತಿ ಬಿ. ಶುಕಾಚಾರ್, ಶ್ರೀ. ಗೋಪಾಳಕೃಷ್ಣ ಆಯುರ್ವೇದಿಕ್ ಫಾರ್ಮಸಿ, ಬಂಟ್ವಾಳ. ಮೂಡಬಿದ್ರಿ:—ಡಾಕ್ಟರ್ ಎಮ್. ವಿ. ಮಲ್ಯ, ಮೂಡಬಿದ್ರಿ. ಕಾರ್ಕಳ:—ವಿ. ವಿ. ಶೆಣೈ, ಕೆಮಿಸ್ಟ್ ಕಾರ್ಕಳ. ಮಂಜೇಶ್ವರ:—ಕೆ. ಸರ್ವೋತ್ತಮ ಬಾಬಕಮ್ತಿ ಮತ್ತು ಬೆಳ್ಳೆ ನಾರಾಯಣ ರಾವ್ ಅನುಭಾಗ, ಮರ್ಚಂಟ್ಸ್, ಮಂಜೇಶ್ವರ. ಕಾಪು:—ಡಾಕ್ಟರ್ ಬಿ. ಕೆ. ಬೇಕಲ್ಸ್ ಡಿಸ್ಪೆನ್ಸರಿ ಕಾಪು. ಉದ್ಯಾವರ:—ಯು. ಗೋಪಾಳ ಶ್ಯಾನುಭಾಗ, ಮರ್ಚೆಂಟ್ ಉದ್ಯಾವರ. ಉಡುಪಿ:—1. ಪೈ ಫಾರ್ಮೆಸಿ, 2. ಡಾಕ್ಟರ್ ಪಿ. ರಾಘವೇಂದ್ರ ನಾಯಕ್ ಡಿಸ್ಪೆನ್ಸರಿ, 3. ಶಿರಂಗಾಳ ಜನಾರ್ಧನ ನಾಯಕ್ ಎಂಡ್ ಕೊ, ಹೊಸ್ಪಿಟಲ್ ರೋಡ್, ಉಡುಪಿ, 4. ಆರ್. ಎಸ್. ಶೆಣೈ, ರಥಬೀದಿ, ಉಡುಪಿ. ಕಲ್ಯಾಣಪುರ:—ಡಾಕ್ಟರ್ ಟಿ. ಮಹಮ್ಮದ್ ಇಸ್ಮೈಲ್, ತಿಮ್ಮಣ್ಣಕುದ್ರು ಕಲ್ಯಾಣಪುರ. ಬ್ರಹ್ಮಾವರ:—1. ಕೊಚ್ಚಿಕಾರ ವೈಕುಂಠ ಪೈ ಎಂಡ್ ಸನ್ಸ್, ಮರ್ಚಂಟ್ಸ್, ಬ್ರಹ್ಮಾವರ. 2. ಕೆ. ಶೇಷಗಿರಿ ನಾಗಪ್ಪಾ ಎಂಡ್ ಸನ್ಸ್, ಕೆಮಿಸ್ಟ್ ಎಂಡ್ ಡ್ರಗ್ಗಿಸ್ಟ್ಸ್, ಬ್ರಹ್ಮಾವರ. ಬಾರ್ಕೂರು:—ಬಿ. ಭಗವಂತ ಮಲ್ಯ, ಪ್ರೊಪ್ರೈಟರ್, ಆರ್. ಪಿ. ಔಷಧಾಲಯ, ಬಾರ್ಕೂರು. ಕೋಟ:—ವೇದಮೂರ್ತಿ ನಾಗೇಶ ನರಸಿಂಹ ಭಟ್ಟ, ಮುರಲೀಧರ ಕೃಷ್ಣ ದೇವಸ್ಥಾನ, ಕೋಟ ವರುಣತೀರ್ಥ, ಕೋಟ. ಕುಂದಾಪುರ:—1. ಕೆ. ಆರ್. ಭಟ್ಟ, ಕೆಮಿಸ್ಟ್, ಕುಂದಾಪುರ. 2. ಡಾಕ್ಟರ್ ಕೆ. ಆರ್. ಕಾಮತ್ ಡಿಸ್ಪೆನ್ಸರಿ, ಕುಂದಾಪುರ. ಗಂಗೊಳ್ಳಿ:—ಜಿ. ಸುರೇಂದ್ರನಾಥ ನಾಯ್ಕ, ಮರ್ಚೆಂಟ್, ಗಂಗೊಳ್ಳಿ. ಬೈಂದೂರು:—ಕೆ. ಪುತ್ತು ಶ್ಯಾನುಭಾಗ, ಮರ್ಚೆಂಟ್ ಬೈಂದೂರು. ಭಟ್ಕಳ:—ವಾಮನನರಸಿಂಹ ನಾಯಕ್, ಗುಡೆ ಅಂಗಡಿಕಾರ್, ಮರ್ಚೆಂಟ್ ಎಂಡ್ ಕಂಟ್ರಾಕ್ಟರ್, ಭಟ್ಕಳ ಉ. ಕನ್ನಡಾ. ಅಂಕೋಲಾ:—ಕೃಷ್ಣ ಹಮ್ಮಯ್ಯ ನ್ಯಾಸ, ಪಟ್ಟಿವಾಲ್, ಧರ್ಮಶಾಲೆಯ ಬಳಿ, ಅಂಕೋಲಾ, ಉ. ಕನ್ನಡಾ. ಹೆಬ್ರಿ:—1. ಎಚ್. ಮುಕುಂದ ಪೈ ಮತ್ತು ಡಾಕ್ಟರ್ ಎಂ. ಪಿ. ಕಲ್ಕೂರ್, ಹೆಬ್ರಿ. 2. ಡಾಕ್ಟರ್ ವ್ಹಿ. ಆರ್. ಆಚಾರ್ಯ, ರೂರಲ್ ಡಿಸ್ಪೆನ್ಸರಿ, ಹೆಬ್ರಿ. ಹಾಲಾಡಿ:—ಯು. ನರಸಿಂಹ ಕಾಮತ್, ಮರ್ಚಂಟ್ ಹಾಲಾಡಿ. ಹೊಸಂಗಡಿ:—ಎಚ್. ರಾಮಚಂದ್ರ ಕಾಮತ್, ಮರ್ಚಂಟ್ ಹೊಸಂಗಡಿ, ಕುಂದಾಪುರ ತಾಲೂಕು. ನಗರ:—ಸಿ. ನಾರಾಯಣ ರಾವ್, ಸಾಹುಕಾರ, ನಗರ. ತೀರ್ಥಹಳ್ಳಿ:—ಡಾಕ್ಟರ್ ಕೆ. ನಂಸಿಂಹಾ, ಶ್ರೀ ಕೃಷ್ಣಾ ಡಿಸ್ಪೆನ್ಸರಿ, ತೀರ್ಥಹಳ್ಳಿ. ಕೊಪ್ಪಾ:—ಡಾಕ್ಟರ್ ಟಿ. ಕೆ ಭಟ್, ಎಂ. ಬಿ. ಎಂಡ್ ಬಿ. ಎಸ್, ಪೊಪ್ಯುಲರ್ ಫಾರ್ಮೆಸಿ, ಕೊಪ್ಪಾ, ಕಡೂರು ಡಿಸ್ಟ್ರಿಕ್ಟ್. ಶಿವಮೊಗ್ಗಾ:—ಡಾಕ್ಟರ್ ಎಂ. ಆರ್. ಪೈ, ಬಿಗ್ ಬಜಾರ್, ಶಿವಮೊಗ್ಗಾ. ಸಾಗರ:—ಡಾಕ್ಟರ್ ಬಿ. ನರಹರಿ ರಾವ್, ಸಾಗರ.

ಹೆಚ್ಚಿನ ಮಾಹಿತಿ ಜಗ್ಗೆ ಈ ವಿಳಾಸಕ್ಕೆ ಬರಕೊಳ್ಳಬಹುದು. **ನಾಯಕ್ ಬ್ರದರ್ಸ್,** ಶ್ರೀಮದ್ಭುವನೇಂದ್ರ ಮಹೌಷಧಾಲಯ, ಪೋಷ್ಟ ಕಟಪಾಡಿ, ದ. ಕ.

ಶುದ್ಧ ಸ್ವದೇಶಿ! **ಸ್ವದೇಶಿ ಭಾಂಡವಾಳದಿಂದ** **ಸ್ವದೇಶಿಯರಿಗಾಗಿ!**

ಗಂಧದ ಸಾಬೂನು (ಸೆಂಡಲ್‌ವುಡ್) ನಿರ್ವಿವಾದವಾಗಿ ಅತ್ಯುತ್ತಮವಾದುದು!

ತಾಜಾ ಗಂಧದ ತೈಲ ಮೊದಲಾದ ವನಸ್ಪತಿ ತೈಲಗಳಿಂದಲೇ ತಯಾರಿಸಿದ ಅತ್ಯುತ್ತಮ ಸಾಬೂನು.

ಮೈಸೂರು ಸರಕಾರದ ಗಂಧದೆಣ್ಣೆ ಕಾರ್ಖಾನೆಯಲ್ಲಿ ದೊರೆವ ಆ ಉತ್ತಮ ಎಣ್ಣೆಯ ಸ್ನಿಗ್ಧ ಸುಗಂಧವುಳ್ಳದ್ದು.

ಪ್ರಾಣಿಜನ್ಯ ಚರ್ಬಿಯ ಸ್ಪರ್ಶವೂ ಇಲ್ಲದ

ಮಲಬಾರು ಸೋಪ್

ಮಲಬಾರು ಸೆಂಡಲ್ ವುಡ್

ದಿ ವೆಜಿಟೇಬಲ್ ಸೋಪ್ ವರ್ಕ್ಸ್, ಕಲ್ಲಿಕೋಟೆ.

ಪ್ರೊಪ್ರೈಟರ್:—ಸನ್ ಬ್ರೆಂಡ್ ಕೊಡೆಯ ಖ್ಯಾತಿಯ ಸೇಟ್ ನಾಗಜೀ ಪುರುಷೋತ್ತಮ ಮತ್ತು ಕಂಪೆನಿ, ಕಲ್ಲಿಕೋಟೆ.

ಈ ಜಿಲ್ಲೆಗೆ ಪ್ರವರ್ತಕರು:— ರಾಘವೇಂದ್ರ ರಂಗ ಪೈ ರಥಬೀದಿ, ಮಂಗಳೂರು.

ಇಂದೇ ಆರಂಭಿಸಿರಿ!

ಸುಪ್ರಸಿದ್ಧ **ಆತಂಕನಿಗ್ರಹ ಮಾತ್ರೆ**

ಗಳನ್ನು ಉಪಯೋಗಿಸಲಿಕ್ಕೆ.

ಜೀವನದ ಜಯಶೀಲತೆಯು ಏನೆಯನ್ನೇರಿ, ಲೋಕದಲ್ಲಿ ಸಾವಿರಾರು ಜನರು ಅದನ್ನು ಪ್ರತಿದಿನವೂ ಉಪಯೋಗಿಸುತ್ತಿದ್ದಾರೆ.

ನರ ಮತ್ತು ಶಾರೀರಿಕ ದೌರ್ಬಲ್ಯಕ್ಕೆ ಭದ್ರತೆಯು.

ಆರೋಗ್ಯಕ್ಕೆ ಕವಚವು.

32 ಮಾತ್ರೆಗಳ ಟಿನ್ನೊಂದಕ್ಕೆ ರೂ. 1

ಹೆಚ್ಚಿನ ವಿವರಕ್ಕೆ, ಧರ್ಮಾರ್ಥ ಹಾಗೂ ಟಪ್ಪಾಲು ಹಾಕಲು ಬಿನಹ ಕಳುಹಿಸಲ್ಪಡುವ ನಮ್ಮ

ಕಾವ:ಶಾಸ್ತ್ರವನ್ನೋದಿರಿ.

Agents.—Shah Company, MANGALORE

" Pearl & Sons, MANGALORE.

Atank Nigrah Pharmacy,
Chickpet, Bangalore.

ಆತಂಕನಿಗ್ರಹ ಫಾರ್ಮಸಿ,
ಚಿಕ್ಕಪೇಟೆ, ಬೆಂಗಳೂರು.

ಎಲ್ಲಾ ಚಂದಾದಾರರು ತಮ್ಮ ಪತ್ರವ್ಯವಹಾರದೊಂದಿಗೆ ಅವರವರ ಚಂದಾ ನಂಬರುಗಳನ್ನು ಆಗತ್ಯವಾಗಿ ನಮೂದಿಸತಕ್ಕದ್ದು. ಸಂ. ಸ್ವ.

BUY ADVERTISED GOODS

ದಿ ಪೊಪ್ಯುಲರ್ ಇನ್ಶೂರೆನ್ಸ್ ಕಂಪೆನಿ, ಲಿಮಿಟೆಡ್,

(ಹೆಡ್ ಆಫೀಸು – ಮಂಗಳೂರು).

ನಮ್ಮ ಜಿಲ್ಲೆಯು ಪ್ರತಿ ವರ್ಷವೂ ಸುಮಾರು 15 ಲಕ್ಷ ರೂಪಾಯಿಗಳನ್ನು ಪ್ರೀಮಿಯಮ್ ರೂಪದಲ್ಲಿ ದೇಶೀಯ ಮತ್ತು ಪರದೇಶೀಯ ಕಂಪೆನಿಗಳಿಗೆ ಪ್ರವಾಹರೂಪವಾಗಿ ಸಲ್ಲಿಸುತ್ತಲೇ ಇದೆಯಲ್ಲದೆ, ಈ ಜಿಲ್ಲೆಯು ತಾನಾಗಿ ಒಂದೇ ಒಂದು ಜೀವವಿಮೆ ಸಂಘವನ್ನು ಇದುವರೆಗೆ ಘಟಿಸಿಲ್ಲ. ನಮ್ಮ ದೇಶದ ಈ ದೆಸೆಯಲ್ಲಿ, ನಮ್ಮದಿದೇ ಮೊದಲನೆ ಪ್ರಯತ್ನವಾಗಿದೆ.

ಈ ಕಂಪೆನಿಯ ವಿಚಾರದಲ್ಲಿ ಹೇಳುವುದಾದರೆ,–ಕಂಪೆನಿಯು ನಿಮ್ಮದೇ; ನಿಮಗೆ ತಿಳಿದಿರುವ ಮತ್ತು ನಿಮ್ಮ ವಿಶ್ವಾಸಕ್ಕೆ ಅರ್ಹರಾಗಿರುವವರೇ ಆಡಳಿತವನ್ನು ನಿರ್ವಹಿಸುವರು; ನಿಮ್ಮ ಹಣವು ಸ್ವದೇಶದಲ್ಲೆ ಸಂಪದಭ್ಯುದಯ ಕಾರ್ಯಗಳಿಗಾಗಿ ವಿನಿಯೋಗಿಸಲ್ಪಡುವುದು;–ಎಂಬೀ ವಿಷಯಗಳನ್ನು ಪರ್ಯಾಲೋಚಿಸಿದಲ್ಲಿ, ಸ್ವದೇಶವಾತ್ಸಲ್ಯವುಳ್ಳವರೆಲ್ಲರೂ ಈ ಕಂಪೆನಿಯನ್ನೆ ಪ್ರೋತ್ಸಾಹಿಸುವುದು ಅವಶ್ಯವೆಂದು ತಾನಾಗಿ ಹೊಳೆಯದಿರದು.

ಪ್ರತಿ ಒಂದು ವಿಧದಲ್ಲಿಯೂ ನಿಮ್ಮದಾದ ಈ ಕಂಪೆನಿಯಲ್ಲಿ ಒಂದು ಪೊಪ್ಯುಲರ್ ಪೊಲಿಸಿಯನ್ನು ಪಡೆದು
ಸ್ವದೇಶೀಯರ ಪ್ರಯತ್ನಗಳನ್ನು ಪ್ರೋತ್ಸಾಹಿಸಿರಿ!

ಹೆಚ್ಚಿನ ವಿವರಕ್ಕೆ ಹೆಡ್ ಆಫೀಸಿಗೆ ಬರೆದುಕೊಂಡರೆ, ಸಂತೋಷದಿಂದ ಕೂಡಲೆ ತಿಳಿಸಲಾಗುವುದು.

☞ ಎಲ್ಲಾ ಕಡೆಗಳಲ್ಲಿಯೂ ಯೋಗ್ಯ ಏಜಂಟರುಗಳು ಬೇಕು. ಧಾರಾಳ ಕಮಿಶನ್ ಕೊಡಲಾಗುವುದು.

ಬೊಂಬಾಯಿ ಸಂಸ್ಥಾನದ ಪ್ರಾಮುಖ್ಯ ಏಜಂಟರು:–ಪ್ರಭಾಕರ ಕಂಪೆನಿ, 415 ಕಿರ್ದೀಮಾನ್ ರಸ್ತೆ, ಬೊಂಬಾಯಿ.

WANTED.

Four Organisers to organise the work of the South Indian General Assurance Society, Ltd., in the following places noted below. Capable organisers can expect to have attractive and encouraging terms with sound footing for their future.

(1) South Canara, (2) Mysore, Hassan and Coorg, (3) Kadur, Shimoga, Chitaldroog and Tumkur, (4) Mangalore, Kolar.

For terms and other particulars please apply to—

The Divisional Manager,
The South Indian General Assurance Co. Ltd.
64, III Cross Road, Srirampur Extn. Malleswaram Post, BANGALORE.

OR

The Managing Agents,
The S. I. G. A. Co. Ltd.
55, Poonamallee High Road, Kilpauk, MADRAS.

ಪಂಡಿತ ಜವಾಹೀರಲಾಲ ನೆಹರೂ... ಹುಬ್ಬಳ್ಳಿ ಪ್ರದರ್ಶನದಲ್ಲಿ ಸುವರ್ಣ ಪದಕ ದೊರೆತ
ಒಂದೇ ಸವನಾಗಿ ೩೫ ವರ್ಷದ ಅನುಭವದಿಂದ
ಹಿಂದೂದೇಶದ ಸಾವಿರಾರು ಜನರಿಂದ ವರ್ಣಿಸಲ್ಪಟ್ಟ ಆಯುರ್ವೇದೌಷಧ

ಈ ದ್ರಾಕ್ಷಾಮೃತವು ಸಹ್ಯಾದ್ರಿ ಪರ್ವತದಲ್ಲಿರುವ ಅನೇಕ ವನಸ್ಪತಿಗಳ ರಸಾರ್ಕಗಳೊಂದಿಗೆ ದ್ರಾಕ್ಷಾರಸವನ್ನು ಮಿಶ್ರಮಾಡಿ ಸ್ವದೇಶೀ ಯಂತ್ರದಿಂದ ಶಾಸ್ತ್ರೋಕ್ತ ಪದ್ಧತಿ ಪ್ರಕಾರ ತಯಾರು ಮಾಡಿರುವುದರಿಂದ ಸ್ವಾದಿಷ್ಟವು ಮತ್ತು ಮಧುರವು ಆಗಿದೆ.

ದ್ರಾಕ್ಷಾಮೃತ

[illegible]

2-6-33

ಸ್ವದೇಶಾಭಿಮಾನಿಗೆ ಚಂದಾದಾರರಾಗಿರಿ!

Canara Bank, Limited.

Established 1906.

Authorised Capital	10,00000—0—0
Subscribed capital	6,00,000—0—0
Paid up Capital	3,30,000—0—0
Reserves	4,31,000—0—0

Head Office:—**Bunder, Mangalore** Local Offices:—**City & Bunder.**

BRANCHES:— Bombay, Cochin, Calicut, Ernakulam, Alleppey, Chikmagalur, Gangoli, Coondapoor, Udipi, Karkal, Puttur, Kasaragod, & Buntwal Out-agency.

Interest is allowed on Current, Fixed and Savings Bank Accounts, rates of which may be ascertained on application. Advances made on approved securities at easy rates. All kinds of Banking business transacted. Rules of business on application.

The Bangalore Branch Office of the Bank at No. 1 Albert Victor Road, Bangalore City has been opened on 8-1-36.

A. Madhava Pai,
Secretary.

LOOK SHARP! LOOK AHEAD!!

Murdeshwar's Banking Institute.

Pioneer Institute on the West Coast

Opens out Careers for Business-men, Graduates, Under-graduates, and S. S. L. C's and also for those who have not passed any University examination.

Coaches students for the Specialised Banking Courses (C. A. I. B. & C. A. I. I. B.) and also for Accountancy, Secretarial, and Insurance Courses (L. A. A., A. C. R. A., F. C. R. A., F. I. S. A., A. C. I. I., etc.,

Ambitious students wishing to obtain responsible positions such as those of Managers and Secretaries in Business line should join immediately. Ladies are also coached.

Enrol yourself NOW. Classes are in full swing. Expert tuition (Oral or Postal) by well-qualified and experienced teachers.

FEES VERY MODERATE.

For further particulars apply to—

The Principal,
2 Fernandes Mansion,
Hampankatta, Mangalore (S. India)

[illegible]

Shiromani Narayanacharya,
Choukhamba, Benares City.

[illegible]

ಶಿರೋಮಣಿ ನಾರಾಯಣಾಚಾರ್ಯ
ಚೌಖಂಬಾ, ಬನಾರಸ್ (ಕಾಶಿ)

---

77 ವರ್ಷಗಳು.

ಅಸಂಖ್ಯಾತರಾದ ನಮ್ಮ ... ಗಳ ಕೇಳಿಕೆ ಮತ್ತು ಅನುಕೂಲತೆ ... ಇದೇ ... ತಿಳಿದು, ಅವರಿಗೆ ಸುಲಭದರದ ಯೋಗ್ಯ ಹಾಗೂ ಬಹುಕಾಲ ಬಾಳುವ ಸರ್ವ ತರದ ಉಡುಪುತೊಡುಪುಗಳನ್ನು ಒದಗಿಸುವ ನಮ್ಮ ಎರಡು ತಲಾಂತರಗಳ ಅನುಭವವು ಮುಂದಕ್ಕೂ ಸಂತೃಪ್ತಿಯನ್ನೇ ಕೊಡುವುದಲ್ಲವೇ?

ಸ್ವದೇಶೀ

ಕಾರ್ಖಾನೆಗಳಲ್ಲಾದ ನೂಲು ಮತ್ತು ಕೈಮಗ್ಗದ ವಸ್ತ್ರ, ಹೊದಿಕೆಗಳೂ, ಬೆಡ್ ಶೀಟ್, ಟವಾಲುಗಳೂ ಧೋತಿ, ಸೀರೆ— ಬೈರಾಸು— ಚೆಕ್ಕು— ಚೀಟು ಇತ್ಯಾದಿ ಎಲ್ಲವೂ ಯಾವಾಗಲೂ ಮಾರಾಟಕ್ಕಿವೆ.

ಶ್ರೀನಿವಾಸ ರಂಗ ಪೈ,

[ಸಾಯಿಬರ ಹೌಸ್]
ರಥಬೀದಿ, ಮಂಗಳೂರು.

Srinivasa Ranga Pai,
Representatives for South Canara and Malabar.

For — **A. & F. Harvey,**
Managers: Madura Mills Co, Ltd.

Edited, Printed & Published By A. S. Kamath at the Sharada Press, Car Street, Mangalore.

... ರೂಪಾಯಿ 2-0-0 Registered No. M. 498. ಟಪ್ಪಾಲು ಹಾಸಲು ಸೇರಿ ರೂಪಾಯಿ 2-13-0

ಸ್ವದೇಶಾಭಿಮಾನಿ.

(ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ೧೯೦೭ರಲ್ಲಿ ಸ್ಥಾಪಿತವಾದುದು.)
ಪ್ರತಿ ಶುಕ್ರವಾರವೂ ಮಂಗಳೂರು ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ.

ರತ್ನೈರ್ಮಹಾರ್ಹೈಸ್ತುತುಷುರ್ನ ದೇವಾ । ನ ಭೇಜಿರೇ ಭೀಮವಿಷೇಣ ಭೀತಿಮ್ ॥ ಸುಧಾಂ ವಿನಾ ನ ಪ್ರಯಯುರ್ವಿರಾಮಂ । ನ ನಿಶ್ಚಿತಾರ್ಥಾದ್ವಿರಮಂತಿ ಧೀರಾ ॥ ೧ ॥
ದೊರೆಯಲನುಪಮರತ್ನಗಳು ಸಾ । ಗರದ ಮಥಿಸಲು ಸುರರಿಗದರಿಂ । ಹರುಷವಾಯಿತೆ? ಮತ್ತೆ ವಿಷ್ವದ ಸುಡುಕ ಬರುತಿರುವ ॥
ಗರಲಕವರಂಜಿದರೆ? ಸುಧೆಯನು । ಪರಿತು ಕ್ಷುದ್ರರ ತೆರದ ಕುಳಿತರೆ? । ತೆರಳ ಬಲ್ಲರೆ ತೊರೆದು ಧೀರರು ನಿಶ್ಚಿತಾರ್ಥವನು? ॥ ೧ ॥

(Oldest Kanarese Weekly in South Kanara

ಪುಸ್ತಕ ೨೮. ಮಂಗಳೂರು, ತಾ ೭ನೇ ಶುಕ್ರವಾರ ಸಪ್ಟಂಬರ ೧೯೩೪ (7-9-34) ಸಂಚಿಕೆ ೩೬

THE CANARA BANKING CORPORATION, UDIPI, LTD.

(Incorporated in British India)
Established 1906

Head office:—UDIPI, S K. **Branches:—Coondapoor, Mangalore, Shimoga & Madras**

Notice.

The following rates of interest on deposits will come into force with effect from 13-8-1934.

Short term Deposits $2\frac{1}{2}$ per cent

Fixed Deposits of	3 months	$2\frac{1}{2}$	per cent p. a.
,, ,,	6 ,,	3	,, ,,
,, ,,	9 ,,	$3\frac{1}{2}$	,, ,,
,, ,,	1 or 2 years	$4\frac{1}{2}$	,, ,,
,, ,,	3 or 4 years	5	,, ,,

(Interest payable half yearly)

Office of the Corporation
UDIPI S. K.
12-8-34

By order
M. Srinivas Prabhu,
Ag. Manager

(Regd.)

ಅಮೃತಾಂಜನ.

ಇದು ಕಟ್ಟು ಶಿರೋವೇದನ, ಕಣ್ಣುಕೊಡುವ ವಾತ, ಧಾಟಿ ನೋವು, ವಿಶೇಷ ಉಳುಕ, ಅನೆಕಸೀಲು ಹೊಟ್ಟೆನೋವು ವಿಪರೀತ ಛಾಯು, ಬಹು ಶೀತ, ಸಹಿಸಲಸದಳವಾದ ಚಳಿ, ಕೈಕಾಲು ಮರಗಟ್ಟುವುದು, ಲುಂಬಾಗೊ ಮೊದಲಾದ ಎಲ್ಲಾ ತರದ ಬೇನೆಗಳನ್ನು ಅತೀ ತ್ವರೆಯಲ್ಲೇ ಗುಣಪಡಿಸುತ್ತದೆ ಎಲ್ಲೆಲ್ಲಿಯೂ ಮಾರಲ್ಪಡುತ್ತಿದೆ

ರಿಂಗ್‌ವರ್ಮ್ ಮುಲಾಮು — ಇದು ರಿಂಗ್‌ವರ್ಮನ್ನು, ಕಜ್ಜಿಯನ್ನು, ಇನ್ನಿತರ ಚರ್ಮರೋಗಗಳನ್ನು, ಎಂಥಾ ಗಲ ಮುಟ್ಟಿಸುವುದರೊಳಗೆ ಗುಣಪಡಿಸುತ್ತದೆ.

ಡಬ್ಬಿ 1ಕ್ಕೆ 6 ಆಣೆ ಡಜನಿಗೆ ರೂ 3-8-0 ಅಂಚೆವೆಚ್ಚ ಪ್ರತ್ಯೇಕ

ಅಮೃತಾಂಜನ ಡಿಪೋ,
ಮದರಾಸು ಮತ್ತು ಬೊಂಬಾಯಿ

ದಿ ಬೊಂಬೇ ಲ್ಯಾಫ್ ಎಶ್ಯೂರೆನ್ಸ್ ಕಂಪೆನಿ ಲಿಮಿಟೆಡ್, ಬೊಂಬೇ.

1908ರಲ್ಲಿ ಸ್ಥಾಪಿತವಾದುದು.

ಪೊಲಿಸಿದಾರರಿಗೆ ವಿಶೇಷ ರಿಯಾಯತಿ.

ವರ್ಷಾವಧಿಯ ಪ್ರೀಮಿಯಮ್ಮುಗಳನ್ನು ತೆರುವ ಎಲ್ಲಾ ಪೊಲಿಸಿದಾರರಿಗೂ "ಸಿಲ್ವರ್ ಜ್ಯೂಬಿಲಿ" ರಿಯಾಯತಿಯಾಗಿ ಅವರವರ ಮುಂದಿನ ಪ್ರತಿ ವಾರ್ಷಿಕ ಪ್ರಿಮಿಯಮ್ಮಿನಲ್ಲಿ ಶೇಕಡಾ 2½ ಸಲೆಯಷ್ಟು ಕಡಿಮೆಯಾದ ಮೊಬಲಗನ್ನು ತೆರುವ ರಿಯಾಯತಿ ಕೊಡಲಾಗಿದೆ ಈ ರಿಯಾಯತಿಯ ಪ್ರಯೋಜನವನ್ನು ಆಗಲೇ ನೂರಾರು ಮಂದಿ ಪೊಲಿಸಿದಾರರು ಪಡಕೊಂಡಿದ್ದಾರೆ ವರ್ಷಕ್ಕೊಮ್ಮೆ ಪ್ರಿಮಿಯಮ್ಮಿನ ಕಂತನ್ನು ಕಟ್ಟಲಪೇಕ್ಷಿಸುವವರು ತಮ್ಮ ಪೊಲಿಸಿಯ ನಂಬರುಗಳನ್ನು ನಮೂದಿಸಿ ನಮಗೆ ಯಾ ಸಮ್ಬಂಧಪಟ್ಟ ನಮ್ಮ ಇತರ ಆಫೀಸಿಗೆ ತಿಳಿಸಬೇಕಾಗಿ ಈ ಮೂಲಕ ವಿನಂತಿ ಮಾಡಿಕೊಳ್ಳೋಣಾಗುತ್ತದೆ.

ವಿ. ಸೂ.—ಪ್ರಾತಿನಿಧ್ಯವಿಲ್ಲದ ಜಿಲ್ಲೆಗಳಿಂದ ಉತ್ಸಾಹಶಾಲಿ ಗೃಹಸ್ಥರುಗಳ ಏಜನ್ಸಿ ಅರ್ಜಿಗಳು ಅಂಗೀಕರಿಸಲಾಗುವುವು.

ಕೊಚ್ಚಿಕಾರ್ ಬ್ರದರ್ಸ್, ಮದ್ರಾಸ್ ಬ್ರೇಂಚ್ ಸೆಕ್ರೆಟರಿಯವರು.

ಆಫೀಸುಗಳು:—(1) ಪೋಸ್ಟ್ ಬೋಕ್ಸ್ ನಂಬ್ರ 337, ಪಾಪಾಂಟ್ ರೋಡ್, ಮದ್ರಾಸ್, (2) ಚಿಕ್ಕಪೇಟೆ ಸರ್ಕಲ್, ಬೆಂಗಳೂರು ಸಿಟಿ; (3) ಮಂಗಳೂರು, ದಕ್ಷಿಣ ಕನ್ನಡ, (4) ಉಡುಪಿ, ದಕ್ಷಿಣ ಕನ್ನಡ; (5) ಇಸ್ಮಾಯಿಲ್ ಬಿಲ್ಡಿಂಗ್, ಲಿಪಿಪಂಟ್ ಬಝಾರ್, ಕೊಂಬಾಯಿ, ನಂಬ್ರ 2, (6) ಕಲ್ಲಿಕೋಟೆ

ಅವರ ಮೇಲೆ ಮನುಷ್ಯರಿಗೆ ಮಾತ್ರ ಪ್ರೇಮವೆಂದು ತಿಳಿಯಬೇಡಿ; ಹಾವು ಮೊಸಳೆಗಳಿಗೂ ಅವರೆಂದರೆ ಅಷ್ಟು ಒಲವು. ಅವರು ಮಲಗುವ ಕೋಣೆಯಲ್ಲೇ ಅವುಗಳೂ ಮಲಗುತ್ತವೆ.

× × × × ×

ಅಷ್ಟೆಯೋ? ಹೃದಯರೋಗಕ್ಕೂ ಅವರ ಮೇಲೆ ಸ್ವಲ್ಪ ಸ್ವಲ್ಪ ಮಮತೆ ಇದೆಯೆಂದು ಸುದ್ದಿ ಇತ್ತು ಆದರೆ ಅವರು ಅದನ್ನು ಹೆಚ್ಚು ಪ್ರೀತಿಸಲಿಲ್ಲವೆಂದು ವಾರ್ತೆ ಇರುವುದು ಸಂತೋಷಕರವೇ ಅಲ್ಲವೆ. ಅವರ ಪತ್ನಿಯವರು ಅಸ್ವಸ್ಥರಾಗಿದ್ದರೂ ಜವಾಹರಲಾಲರನ್ನು ಜೈಲಿಗೊಯ್ದರು! ಏನು ಮಮತೆ ಈ ಜವಾಹರರ ಮೇಲೆ ನಮ್ಮ ಜನರಿಗೆ!

× × × × ×

ಅಯ್ಯಾ ಜವಾಹರಲಾಲರೇ, "ರಾಷ್ಟ್ರಬಂಧು"ವಿನಲ್ಲಿ 'ಶ್ರೀಧರ'ರೆಂಬ ನನ್ನೊಬ್ಬ ಸ್ನೇಹಿತರಿರುವರಯ್ಯಾ! ಅವರಂತಹ ಮಿತ್ರರು ನಿಮಗೆ ಅನೇಕರಿರುವರಯ್ಯಾ! ನಮ್ಮ ಪುಣ್ಯ!

× × × × ×

ಶ್ರೀಧರರು ಲೇಖನಗಳ ಪಟಾಕಿಗಳನ್ನು ಬಿಟ್ಟು, ಮಂಗಳೂರಿನ ಕನ್ನಡ ವಾರ್ತಾ ಪತ್ರಿಕೆಗಳನ್ನು ಸುಧಾರಿಸುವುದಕ್ಕಾಗಿ ಸೊಂಟಕ್ಕೆ ವಸ್ತ್ರ ಬಿಗಿದಿರುವರು! ಹಾಗೆಯೇ ನಿಮ್ಮ ನಾಲಗೆಗೆ ಸ್ಕ್ಯಾನ್‌ಪೇಪರ್ ಹಾಕಬೇಕೆಂದು ನಿಮ್ಮ ಮಿತ್ರರ ಹಟ! ಬಂದದ್ದೆಲ್ಲ ಬರಲಯ್ಯಾ! ಸಾವಿರಾರು ಬಗೆಯ ಕಾಗದಗಳೂ, ನೂರಾರು ಬಗೆಯ ಶಾಯಿಯೂ, ಲಕ್ಷ ಲಕ್ಷ ಸರಳಾನೆಯ ಪೆನ್ನುಗಳೂ, ಅನೇಕ ಜಾತಿಯ ಸ್ಕ್ಯಾನ್‌ಪೇಪರ್‌ಗಳೂ ಇವೆ! ಏನು ಮಾಡಲಿಕ್ಕಾಗುತ್ತದೆ ಈ ಜನರನ್ನು! ಹೆದರಬೇಡಿ.

× × × × ×

ಮಂಗಳೂರು ಮುನಿಸಿಪಾಲಿಟಿಯ ಆ ವಾರ್ಡ್ ಈ ವಾರ್ಡುಗಳಿಗೆ ಉಮೇದ್ವಾರರಾಗಿ ನಿಂತಿರುವವರ ಚಳವಳವು ನಗರದಲ್ಲೆಲ್ಲ ಭರದಿಂದ ಸಾಗುತ್ತಿದೆ! ನೋಟುಗಳು ಪುಡಿಯಾಗುತ್ತವೆ! ರೂಪಾಯಿಗಳು ಕರಗುತ್ತವೆ! ಪೆಟ್ರೋಲು ಆವಿಯಾಗುತ್ತಿದೆ! ಮೋಟರ್ ಟಯರುಗಳು ಸವೆಯುತ್ತಿವೆ! ಮಾರ್ಗಗಳು ತೆಳ್ಳಗಾಗುತ್ತಿವೆ!

× × × × ×

ಈ ಗಡಿಬಿಡಿಯನ್ನು ನೋಡುವಾಗ ಒಂದು ವಾರ್ಡಿಗೆ ಉಮೇದ್ವಾರನಾಗಿ ನಾನೂ ನಿಲ್ಲಬೇಕೋ ಎಂಬ ಆಶೆಯು ತಲೆಯಲ್ಲಿ ಮೂಡುತ್ತದೆ!

× × × × ×

ಬೇಗನೇ ವೋಟಿಗೆ ನಿಲ್ಲಬೇಕೆಂದಿದೆ. ಹಿತಚಿಂತಕರು (ಯಾರ ಹಿತಚಿಂತಕರೆಂದು ಪ್ರಶ್ನಿಸಬೇಡಿ!) ತಮ್ಮ ಒಂದೇ ಒಂದು ವೋಟನ್ನು ಸ್ವಾಲಿನಿಗೆ ಕೊಡುವರೆಂದು ಭಾವಿಸಿ ನೀರು ದಾನಮಾಡುವ ಉದಾರಿ—

'ಸಾಯ್ಬ'

ಪ್ರತಿಯೊಬ್ಬ ತಾಯಿಯೂ ಮಗುವಿಗೆ
ಎದೆ ಹಾಲು ಕೊಡಬಹುದು

ಪ್ರತಿಯೊಂದು ತಾಯಿಯೂ ತನ್ನ ಮಗುವಿಗೆ ಎದೆ ಹಾಲು ಕೊಡಬೇಕೆಂದು ಆಶಿಸುತ್ತಾಳೆ. ಕಾರಣ, ಅದು ಅತ್ಯುತ್ತಮ ಆಹಾರ, ಆರೋಗ್ಯಕರವಾಗಿ ಬೆಳೆಯಬೇಕಾದರೆ ಅದಕ್ಕೆ ಎದೆ ಹಾಲು ಅವಶ್ಯ. ಆದರೆ ಹೆಚ್ಚಿನ ತಾಯಂದಿರಿಗೆ ಇದನ್ನು ಕೊಡಲು ಶಕ್ತಿಯಿಲ್ಲ. ಇದ್ದರೂ ಸಾಕಷ್ಟು ಹಾಲು ಕೊಡಲು ಸಾಧ್ಯವಾಗುವುದಿಲ್ಲ.

ಮಗು ಹೆರುವ ಮೊದಲೂ ನಂತರವೂ ಪ್ರತಿಯೊಬ್ಬ ತಾಯಿಯೂ ಬಿಡದೆ ಓವಲ್ಟಿನ್ ಸೇವಿಸಿದರೆ ಎದೆ ಹಾಲನ್ನು ಸುಲಭವಾಗಿ ಕೊಡಬಹುದು. ಓವಲ್ಟಿನ್ ಹಾಲನ್ನು ಹೆಚ್ಚಿಸುತ್ತದೆ. ತಾಯಿಗೆ ಶಕ್ತಿ ಅವಳ ಆರೋಗ್ಯವು ಸಮಾನ ರೀತಿಯಿಂದಿರುವಂತೆ ಸಾಧಕವಾಗುತ್ತದೆ. ಇದು ಅತೀ ಶುದ್ಧವಾದ ಆಹಾರ. ಇದನ್ನು ಟೋನಿಕ್ ಆಹಾರಗಳಿಂದ ತಯಾರಿಸಲಾಗಿದೆ. ಬೆಳೆದ ಬಾರ್ಲಿ, ದನದ ಕೆನೆ ಹಾಲು, ಸ್ವಚ್ಛಲಾಗಿ ತಯಾರಿಸಲ್ಪಟ್ಟ ಕೊಕ್ಕೊಗಳು ಇದರ ಸಾರ.

OVALTINE

ಮೊಲೆ ಹಾಲು ಕೊಡಲು ಸಾಧಕವಾಗಿದೆ.

ತಯಾರಿಯಲ್ಲಿ ಕರ ಸ್ಪರ್ಶಿತವಾಗಿಲ್ಲ. ಎಲ್ಲಾ ಕೆಮಿಸ್ಟರಲ್ಲಿಯೂ ಸ್ಟೋರುಗಳಲ್ಲಿಯೂ ಸಿಗುತ್ತದೆ.
ಏಜಂಟ್—ಜೇಮ್ಸ್ ರೈಟ್, 85ಎ ಕ್ಲಿಪನ್ ಸ್ಟ್ರೀಟ್ ಕಲ್ಕತ್ತ. ಮತ್ತು ಮದ್ರಾಸು, ಮುಂಬಾಯಿಗಳಲ್ಲಿ.

OV/116

ಕುಷ್ಠರೋಗ ಮತ್ತು ಬಿಳಿ ಕೊಷ್ಠ.

ಎಷ್ಟು ದೀರ್ಘಕಾಲ ಅಥವಾ ಯಾವ ಕಾರಣವೇ ಇರಲಿ, ನಾಲ್ಕೇ ವಾರಗಳಲ್ಲಿ ಪೂರ್ಣ ಗುಣಪಡಿಸುವುದು. ಯಶಸ್ಸು ಖಾತರಿ; 'ಗ್ಯಾರಂಟಿ'. ವಿವರವನ್ನು ಅಪೇಕ್ಷಿಸಿದ್ದಲ್ಲಿ ಕಳುಹಿಸಲಾಗುವುದು.

ವಿಳಾಸ:—

Kamala Works, Panchpota, Bengal.

ಕಣ್ಣಿನ ಪರೆ.

"ಏ—ಸನ್" ಎಂಬ 'ನೇತ್ರಭಾಸ್ಕರ — ಈ ಔಷಧ ಕಣ್ಣುಪರೆ, ದೃಷ್ಟಿಮಾಂದ್ಯ ಇತ್ಯಾದಿಯನ್ನು ಶೀಘ್ರವಾಗಿಯೂ ಶಾಶ್ವತವಾಗಿಯೂ ಗುಣಪಡಿಸುತ್ತದೆ. ಶಸ್ತ್ರಕ್ರಿಯೆಯು ಆವಶ್ಯವಿಲ್ಲ. ಖಾತರಿ ಗುಣಲಾಭ. ಗುಣವಾಗದಿದ್ದರೆ ಹಣ ಪರತ್. ಕ್ರಯ ರೂ 2.

ಪತ್ರವ್ಯವಹಾರ ಇಂಗ್ಲೀಷಿನಲ್ಲಿ:—

Hary yasram, Panchpota, Bengal.

Karnataka Chemical and Pharmaceutical Works, Ltd., Udipi. (South India)

ಕುಂಭಕೋಣದಲ್ಲಿಯೂ ಮಧುರೆಯಲ್ಲಿಯೂ ಮೈಸೂರಿನಲ್ಲಿಯೂ ಸುವರ್ಣ ಪದಕಗಳನ್ನು ಪಡೆದಿರುವ

ಕರ್ಣಾಟಕ ಕೆಮಿಕಲ್ ಎಂಡ್ ಫಾರ್ಮಸ್ಯೂಟಿಕಲ್ ವರ್ಕ್ಸ್, ಲಿಮಿಟೆಡ್, ಉಡುಪಿ. (ದಕ್ಷಿಣ ಹಿಂದೂಸ್ಥಾನ).

ನಮ್ಮಲ್ಲಿ ಟಿಂಕ್ಚರ್, ವಗೈರೆ ಎಲ್ಲಾ ಎಲ್ಲೋಪತಿಕ್ ಔಷಧ ದ್ರವ್ಯಗಳೂ, ಆಯುರ್ವೇದಿಯ ಔಷಧಿಗಳೂ, ಟಾಯ್ಲೆಟ್ ಸಾಮಗ್ರಿಗಳೂ, ಸಾಬೂನುಗಳೂ, ಫೌಂಟೆನ್ ಪೆನ್ ಶಾಯಿಗಳೂ ತಯಾರಿಸಲ್ಪಡುತ್ತವೆ.

ದ್ರಾಕ್ಷಾಸವ, ಪ್ರಸೂತಿ ಸಂಜೀವನ, ನಿಯೋವಿಗರ್, ಸ್ನೋ,
ಕ್ಷೀರಬಲಾ, ಕಾರ್ಬೋಫ್ಲೋಜಿಸ್ಟಿನ್ ಯುಟೇರಿನಾ, ಇಂಕ್ಸ್

ಮೆನೇಜಿಂಗ್ ಡೈರೆಕ್ಟರ್—ವೆಂಕಟ್ರಾಯ ಅಚ್ಚುಪ್ಪ ಬಾಳಿಗ.

ಹೆಡ್ ಆಫೀಸು. ಉಡುಪಿ. (ದಕ್ಷಿಣ ಹಿಂದೂಸ್ಥಾನ)

ಬ್ರೇಂಚ ಆಫೀಸು ದೇವಕರಣ ಮೆನ್ಶನ್ಸ್, 48 ಪ್ರಿನ್ಸೆಸ್ ಸ್ಟ್ರೀಟ್, ಬೊಂಬಾಯಿ ನಂ. 2.

ಪಶ್ಚಿಮ ಕರಾವಳಿ ಮತ್ತು ಮೈಸೂರು ಪ್ರಾಂತ್ಯಗಳ ಪ್ರಾಮುಖ್ಯ ಏಜಂಟರು:—

ಕರ್ಣಾಟಕ ಪ್ರೊಡಕ್ಟ್ಸ್ ಡಿಸ್ಟ್ರಿಬ್ಯೂಟಿಂಗ್ ಕಂಪೆನಿ, ಮಂಗಳೂರು.

ಅನುಕ್ರಮಣಿಕೆ.

ಅಗ್ರಲೇಖ
ಎಸೆಂಬ್ಲಿಯ ಕಾರ್ಯಕಲಾಪಗಳ ಸಿಂಹಾವಲೋಕನ ೫
ಸ್ಫುಟವಿಚಾರಗಳು ೬
ಮೂಲೆಮೂಲೆಯಿಂದ ೧೦
ನೋಟಗಳು ೪
ವರ್ತಮಾನ ಸಂಗ್ರಹ ೨೨
ವಿವಿಧ ಸಮಾಚಾರಗಳು ೧೧
ಪತ್ರವ್ಯವಹಾರ ೧೪
ಕೇರು! ೨
ಮಂಗಳೂರು ೯
ಗ್ನಾನ ೬
ಹಿಂದೀ ಮಾತಾಪಿತರಿಗೆ ಬ್ರಿಟಿಷರಿಗೆ ಕಲಿಸುವ ಪಾಠ ೫
ಆಳುವಾ ಸಂಸ್ಥಾನಾಧೀಶರು ಸದಭ್ಯಸ್ಥರಾಗುವರೇ? ೧೩

ಸ್ವದೇಶಾಭಿಮಾನಿ.

ತಾ. ೭ನೇ ಶುಕ್ರವಾರ ಸಪ್ಟಂಬರ ೧೯೩೪

ಎಸೆಂಬ್ಲಿಯ ಕಾರ್ಯಕಲಾಪಗಳ ಸಿಂಹಾವಲೋಕನ.

ಡೆಲ್ಹಿ ಕಾಲದ ಕಡೆ ಅಧಿವೇಶನವನ್ನು ಈಗಾಗಲೇ ಮುಗಿಸಿ, ಎಸೆಂಬ್ಲಿಯು ಸದ್ಯಕ್ಕೆ ಮುಕ್ತಾಯಗೊಳಿಸಲ್ಪಟ್ಟಿದೆ. ಎಸೆಂಬ್ಲಿಯ ಇತಿಹಾಸದಲ್ಲಿ ಇದರಷ್ಟು 'ಮಹತ್ವದ' ಅಧಿವೇಶನವು ಮತ್ತೊಂದು ಜರಗಿದುದಿಲ್ಲ. ಜನತೆಯು ಇನ್ನು ಮುಂದೆ ಬಹುಕಾಲಕ್ಕೆ ಮರೆಯದಷ್ಟು, ಆದರೆ ಸಂತೋಷಸ್ಮರಣೆಯಿಂದಾದದ್ದಷ್ಟು ಕಾರ್ಯಕಲಾಪಗಳ ದಾಖಲೆಯನ್ನು ಈ ಅಧಿವೇಶನವು ನಮ್ಮ ಮುಂದಿರಿಸಿದೆ.

ಈ ಅಧಿವೇಶನಗಳಲ್ಲಿ ಎಸೆಂಬ್ಲಿಯು ಮಾಡಿದೆ ಕಾರ್ಯವೇನು?—ದೇಶ ಹಿತಸಾಧನೆಯ ಹೆಸರಲ್ಲಿ ಒಂದರ ಹಿಂದೆ ಒಂದರಂತೆ ಮಂಜೂರುಮಾಡಿದ ಶಾಸನಗಳು' ದೇಶದ ಸಂಪದಭ್ಯುದಯಾಪೇಕ್ಷಕ ಕಂದ ಮಸೂದೆಗಳು' ಸೈನ್ಯ ಮತ್ತು ನೌಕಾ ಶಿಸ್ತು ಸಂಬಂಧವಾದ ಮಸೂದೆ, ಅಸ್ಸಾಮ್ ಮತ್ತು ಬಂಗಾಳ ಕ್ರಿಮಿನಲ್ ಲೋ ಎಮೆಂಡ್‌ಮೆಂಟ್ ಮಸೂದೆ, ಉಕ್ಕಿನ ರಕ್ಷಣಾ ಸೂತ್ರ, ಮತ್ತು ಅಬಕಾರಿ ಸುಂಕದ ಮಸೂದೆಗಳು' ದೇವಾಲಯ ಪ್ರವೇಶದ ಮಸೂದೆಯೊಂದು ಒಂದು ವರ್ಷದ ತನಕ ಸೋಲಿಸಲ್ಪಟ್ಟು ಕಾನೂನಿಗೆ ಅದರ ಪ್ರಾಣದಾಕೃತಿಯಿಂದಲೇ ನಿರಾಕರಿಸಲ್ಪಟ್ಟಿತು. ಸಂಸ್ಥಾನಿಕರ ಸಹಾಯಾರ್ಥ ಒಂದು ಶಾಸನವಾಯಿತು. ಕಾರ್ಖಾನೆಗಳ ಮಸೂದೆಯೊಂದು ಅರ್ಧಮರ್ಧ ಸಮ್ಮತಿಯಿಂದ ಹೇಗೂ ಮಂಜೂರಾಯಿತು.

ಈ ಮೇಲಿನ ಮಸೂದೆಗಳಿಂದ ಹಿಂದೂದೇಶವು ಪಡೆವ ಸೌಭಾಗ್ಯವೆಂತಹದೆಂಬುದನ್ನು ಹಲವರು ತಿಳಿದೇ ಇರುವರು. 'ಇಂಪೀರಿಯಲ್ ಪ್ರಿಫರೆನ್ಸ್' ಎಂಬ ಹೆಸರಲ್ಲಿ ಬ್ರಿಟ್ಟಿನಿನ ಉಕ್ಕಿನ ಸಾಮಾನುಗಳು ಆದಾಯದ ಮೇಲಿನ ಸುಂಕವನ್ನು ತೆಗೆದುಹಾಕಿದುದು (ರಕ್ಷಣಾಸೂತ್ರದಿಂದ, ಕಾಪಾಡಲ್ಪಟ್ಟ ಹಿಂದೀ ಸಾಮಾನುಗಳಿಗೆದುರಾಗಿ ಮಾತ್ರ ಅಲ್ಪ ಅಬಕಾರಿ ಸುಂಕವನ್ನಿರಿಸಿ) ನಮ್ಮ ದೇಶದ ಕೈಗಾರಿಕೆಯ ಅಭಿವೃದ್ಧಿಗೆ ಎಷ್ಟು ಸಹಕಾರಿಯಾಗಬಹುದೋ ಇನ್ನು ತಿಳಿದುಬಾರದಿರದು. ಸಂಸ್ಥಾನಿಕರ ರಕ್ಷಣೆಯ ಮಸೂದೆಯು ಸಂಸ್ಥಾನಿಕರಿಗೂ ಬ್ರಿಟಿಷ್ ಪ್ರಜೆಗಳಿಗೂ ಇರುವ ಸಂಬಂಧವನ್ನು ಮತ್ತಷ್ಟು ದೂರವಿರಿಸದಾದರೆ— ಸಂಸ್ಥಾನಗಳಲ್ಲಿ ನಡೆವುದೇನೂ ಅದು ನಮಗೆ ಪೂರ್ಣವಾಗಿ ತಿಳಿದುಬರುವಂತೆ ಸಹಕಾರಿಯಾಗಲಾರದು; ಮೊದಲಿದ್ದುದಕ್ಕಿಂತ ನಮ್ಮ ಸಂಬಂಧವನ್ನು ಹತ್ತಿರಗೊಳಿಸದು. ಬಂಗಾಳದ ಭಯೋತ್ಪಾದಕರ ಬಗ್ಗೆ ಉಂಟಾದ ಶಾಸನವು ಬರುವ ವರ್ಷಕ್ಕೆ ಅವಧಿ ಮುಗಿವುದಿರಲು ಅದನ್ನಿನ್ನೂ ದೀರ್ಘ ಅವಧಿಗೆ ಆಯುಷ್ಯಕೊಟ್ಟ ಪುಣ್ಯವನ್ನೂ ನಮ್ಮ ಎಸೆಂಬ್ಲಿಯು ಕಟ್ಟಿಕೊಂಡಿತು. ಒತ್ತಾವದ ಒಪ್ಪಂದವು ತಂದ ಸೌಭಾಗ್ಯವೆಂತಹದೆಂಬುದರ ಕಿಂಚಿತ್ ಛಾಯೆಯಾದರೂ ಡಾ| ಮೊಕ್‌ರವರ ವರದಿಯಿಂದ ತಿಳಿದುಬರಲು ಅಸಂತುಷ್ಟಿಕರವಾದ ಆ ಸತ್ಯವನ್ನು ಅಲ್ಲಲ್ಲಿ ಮರುಗುಕೊಟ್ಟು ಸಮಾಧಾನದ ಸೋಗನ್ನು ನಮ್ಮ ಎಸೆಂಬ್ಲಿಯು ತಾಳಿಕೊಳಿತು.

ಎಸೆಂಬ್ಲಿಯ ಕಾರ್ಯಕಲಾಪಗಳ ದಾಖಲೆಯನ್ನು ವಿಮರ್ಶಿಸುತ್ತ ನಾವು ಸರಕಾರವನ್ನೇ ಎಲ್ಲಕ್ಕೂ ಹೊಣೆಯಾಗಿ ಬೆರಳಿಟ್ಟು ತೋರಿಸುವುದು ಸಮಂಜಸವಲ್ಲ. ಜನರ ಪ್ರತಿನಿಧಿಗಳೆಂಬ ಮೊಹರು ಪಡೆದು ಎಸೆಂಬ್ಲಿ ಆಸನಗಳನ್ನಲಂಕರಿಸಿದ ಸದಸ್ಯರು ಬಹುಮಟ್ಟಿಗೆ ಹೊಣೆಯಾಗುವರು. ಸರಕಾರ ಪಕ್ಷವು ನುಡಿದುದಕ್ಕೆಲ್ಲ ತಲೆಯಲ್ಲಾಡಿಸುವ 'ಬಸವಣ್ಣ'ಗಳಾಗಿ ಎಷ್ಟೋ ಮಂದಿ, ಪೂರ್ವಾಪರ ವಿಚಾರವಿಲ್ಲದೆ—ಒಂದರ ಹಿಂದೆ ಒಂದು ಶಾಸನವು ಸರಾಗವಾಗಿ ಮಂಜೂರುಗೊಳ್ಳುವಂತೆ ಸಹಾಯಕರಾಗಿರುವರು. ನಾವು ಈ ಮೊದಲು ಹೇಳಿದ ಶಾಸನಗಳನ್ನು ಮಂಜೂರು ಮಾಡಲು ಸಹಾಯಕರಾದ ಅವರು ಕರಾಬು ಗುತ್ತಿಗೆಗಳನ್ನು ತೆಗೆದುಹಾಕಬೇಕೆಂಬ ಮಸೂದೆಯು ಬಿದ್ದುಹೋಗುವಾಗ ಏನು ಮಾಡಿದರು? ವಿದೇಶೀ ಅಕ್ಕಿಯ ಆಮದನ್ನು ತಡೆವಂತೆ ಸರಕಾರವನ್ನು ಒತ್ತಾಯಗೊಳಿಸಿ, ಚಳವಳಿಸಿದವರೆಷ್ಟು? ಸ್ವರ್ಣ ಪ್ರವಾಹವನ್ನು ತಡೆಯುವ ಯತ್ನವನ್ನು ಕೈಕೊಂಡವರೆಷ್ಟು?— ನಮ್ಮ ಪ್ರಾಂತಿಕ ಕೌನ್ಸಿಲುಗಳ ವಿಷಯವಾಗಿ ಜನರಿಗೆ ಅನಾದರ ಹುಟ್ಟಿದೆಯಾದರೆ ಎಸೆಂಬ್ಲಿಯ ವಿಷಯವಾಗಿ ಉದಯಿಸಿದ ಜುಗುಪ್ಸೆಯು ವರ್ಣಿಸ ಲತಹದಲ್ಲವೆನ್ನಬೇಕು. ಎಸೆಂಬ್ಲಿಯ ಚರಿತ್ರದಲ್ಲಿ ಈಗಿನ ಎಸೆಂಬ್ಲಿಯಷ್ಟು ಸಾಧು ವಾದಷ್ಟು ಮತ್ತು ಸರಕಾರದ ಆಜ್ಞಾನುವರ್ತಿಯಾಗಿ ದಾಸ್ಯ ಮನೋವೃತ್ತಿಯನ್ನು ಪ್ರಕಟಿಸಿದಷ್ಟು ಕನಿಷ್ಠ ತರಗತಿಯ ಮತ್ತೊಂದು ಗುಂಪು ಎಲ್ಲಿಯೂ ನೋಡಸಿಗದು. ಸರಕಾರಕ್ಕೆ ಅನುಕೂಲರಾಗಿದ್ದ ಮೆಂಬರರನ್ನಾದರೂ ಸರಕಾರವೇ ಪೂರ್ಣವಾಗಿ ನಂಬಿ, ಕಾಣಿಕೆಯಾದಷ್ಟು ಗೌರವವಿತ್ತು ಕಾಣಲಿಲ್ಲವೆಂಬುದು ಮತ್ತೊಂದು ಖೇದಕರ ಸತ್ಯ, ವಾಸ್ತವವೂ ಆಹುದು.

ಈ ಮೇಲಿನ ದಾಖಲೆಯನ್ನು ನೋಡುವಾಗ, ಎಸೆಂಬ್ಲಿಯು ಹಿಪ್ಪತ್ತು ಅಧಿವೇಶನವು ಮಾಡಿದುದರಲ್ಲಿ ಪುಣ್ಯಕಾರ್ಯವಾವುದೆಂದು ಗುರುತಿಸಲು ಕಷ್ಟವಾಗುವುದು. ಎಸೆಂಬ್ಲಿ ಸದಸ್ಯರು ಮಾಡಿದುದಕ್ಕೆ, ಮುಂದೆ ಅದರ ಫಲಾಫಲಗಳನ್ನುಣ್ಣುತ್ತಿರುವ ಜನತೆಗೆ ಇವರೇ ಜವಾಬು ಕೊಡಬೇಕಾಗುವುದು.

ಈಗಿನ ಎಸೆಂಬ್ಲಿಯ ಅವಧಿಯು ಇನ್ನೂ ಅಲ್ಪಕಾಲ ಮಾತ್ರ ಉಳಿದಿದೆ. ಅಷ್ಟರಲ್ಲಿ ಮತ್ತೊಂದು—ಕೊನೆಯ—ಅಧಿವೇಶನವು ಜರಗಬಹುದು. ಅದು, ಶ್ವೇತಪತ್ರದ ಮೇಲಿನ ಜೊಯಿಂಟ್ ಪಾರ್ಲಿಮೆಂಟರಿ ಕಮಿಟಿಯ ವಿಮರ್ಶೆಯ ವರದಿಯ ಪರಿಶೀಲನೆ ಮಾಡಿ, ಅಭಿಪ್ರಾಯ ಪ್ರಕಟಣೆಗಾಗಿರುತ್ತದೆ. ಆ ಅಧಿವೇಶನದಲ್ಲಿ ಎಸೆಂಬ್ಲಿಯು ಯಾವ ಮಹತ್ಕಾರ್ಯ ಮಾಡುವುದೋ ನೋಡುತ್ತಿರುವ.

ಜನರಿಗೊಂದು ಉತ್ತಮವಾದ ಪಾಠವನ್ನೇ ನಮ್ಮ ಎಸೆಂಬ್ಲಿ ಮೆಂಬರರು ಕಲಿಸಿದರೆನ್ನಬೇಕು. ಜನರಿಗೆ ತಮ್ಮ ಮತಗಳನ್ನು ಹೇಗೆ ಉಪಯೋಗಿಸಬೇಕೆಂದು ತಿಳಿದಿಲ್ಲ. ಇನ್ನು ಬರುವ ಚುನಾವಣೆಗಳಲ್ಲಿ ಮತಗಳ ಸದುಪಯೋಗವಾಗಬಹುದೆಂದು ಹಾರೈಸಬಹುದೇ?

ಸ್ಫುಟವಿಚಾರಗಳು.

ಬೇಸಾಯಗಾರರ ಸಂಕಷ್ಟಗಳು

ಹೆಚ್ಚುತ್ತಿವೆಯೆಂದು ಕಿವಿಯಾರೆ ಕೇಳಿ ದಣಿದಿದ್ದರಾದರೂ ಕಳೆದ ತಿಂಗಳಲ್ಲಿ ಗ್ರಾಮ ಪರಿಶೋಧನೆಗೆ ಹೊರಟ ಪುತ್ತೂರು ರೆವೆನ್ಯೂ ಡಿವಿಜನಲ್ ಆಫೀಸರರವರೂ, ತಾಲೂಕು ತಹಶಿಲ್ದಾರರವರೂ ಮತ್ತು ಎಗ್ರಿಕಲ್ಚರಲ್ ಡೆಮೊನ್‌ಸ್ಟ್ರೇಟರರೂ ಇಷ್ಟರಲ್ಲೇ ಅನೇಕ ವಿಷಯಗಳನ್ನು ಕಣ್ಣಾರೆ ಕಂಡು ನಿಜಸ್ಥಿತಿಯನ್ನರಿತುಕೊಂಡರೆಂಬ ವಿಷಯವು ಸಂತೋಷಪ್ರದವೇ. ಅಳಿಕೆ ಗ್ರಾಮದ ಕಡಂಬಿಲ ಮೊದಲಾದ ಅನೇಕ ಕಡೆಗಳಲ್ಲಿನ ಹೊಲಗದ್ದೆಗಳು ಕ್ರಿಮಿಗಳ ಹಾವಳಿಗೆ ತುತ್ತಾಗಿ ರೈತರು ಸಂಕಷ್ಟಕ್ಕೆ ಗುರಿಯಾಗಿರುವುದೂ, ಎಲ್ಲಿ ನೋಡಿದರೂ ಅಡಕೆ ತೋಟಗಳಿಗೆ ಕೊಳೆರೋಗವು ತಗಲಿ, ಎಳೆಯ ಅಡಕೆಗಳು ರಾಶಿರಾಶಿಯಾಗಿ ಉದುರಿಬಿದ್ದಿರುವುದೂ ಸತ್ಯವಿಷಗಳೆಂದು ತಿಳಿದ ಅಧಿಕಾರಿಗಳು ಕೃಷೀವಲರ ಪರವಾಗಿ ಸಹಾನುಭೂತಿಪರರಾಗಿ ನುಡಿಯುವರೇ ಎಂದು ನಿರೀಕ್ಷಿಸುತ್ತಿರೋಣ.

ಕನ್ನಡಿಗರೆಂದರೆ ಕೈ ಹಿಂದೆ!

ಮುಂಬಾಯಿ ಮತ್ತು ಮದರಾಸು ಪ್ರಾಂತ್ಯಗಳಲ್ಲಿರುವ ಕನ್ನಡ ಶಾಸನಗಳನ್ನು ಸಂಶೋಧಿಸಿ, ಸಂಗ್ರಹಿಸಿ ಪ್ರಕಾಶಿಸುವ ಕುರಿತಾಗಿ ಸರಕಾರವು ಪಟ್ಟ ಶ್ರಮವೆಷ್ಟೆಂದು ರಾವ್ ಬಹದೂರ್ ಬಿ. ಎಲ್. ಪಾಟೀಲರು ಕಳೆದ ವಾರ ನ್ಯಾಯವಿಧಾಯಕ ಸಭೆಯಲ್ಲಿ ಪ್ರಶ್ನಿಸಿದರು. ಉತ್ತರವಾಗಿ ಶ್ರೀ ಜಿ. ಎಸ್. ಬಜ್ಪೇಯವರ ಹೇಳಿಂದರ —"ಮುಂಬಾಯಿ ಪ್ರಾಂತ್ಯದ ಶಾಸನಗಳ ನಕಲೆತ್ತುವ ಕಾರ್ಯವು ಇನ್ನು ೨ ವರ್ಷಗಳೊಳಗೆ ಪೂರ್ಣವಾಗಬಹುದು. ೨ ಮುಂಬಾಯಿ ಕರ್ನಾಟಕದಲ್ಲಿ ೨೩೫ ಕನ್ನಡ ಶಾಸನಗಳು ಸಂಗ್ರಹವಾಗಿದೆ. ೩ ೧೨೭೨ ಕನ್ನಡ ಶಾಸನಗಳ ಪ್ರತಿ ನಕಲೆತ್ತಲಾಗಿದೆ. ೪ ೧೯೨೬-೨೭ರಿಂದ ೧೯೩೦-೩೧ರ ವರೆಗೆ ೧೯೩೨-೩೩ರಿಂದ ೧೯೩೩-೩೪ರ ವರೆಗೂ ಎತ್ತಲ್ಪಟ್ಟ ಶಾಸನಗಳ ನಕಲುಗಳು ಮುದ್ರಣದಲ್ಲಿವೆ." ಶಾಸನ ಸಂಶೋಧನಾ ಖಾತೆಯಲಿ ಕತ್ತರಿ ಪ್ರಯೋಗವಾಗಿರುವುದರಿಂದ ಈ ಸಂಬಂಧವಾದ ಕೆಲಸವು ಮುಂದೆ ಸಾಗಲಿಲ್ಲವೆಂದು ಒಂದ ನೆಪವಿದೆ. ಕನ್ನಡಿಗರೆಂದರೆ ಕೈಹಿಂದೆಂದು ತಿಳಿದಿರುವೆವಾದರೂ, ಈ ನೆಪವು ಈ ಅನುಕೂಲ್ಯ ಕೆಲಸವನ್ನು ಹಿಂದಕ್ಕೆ ತಳ್ಳುವಂತಾಗದಿರಲೆಂದು ಆಶಿಸಬಹುದಲ್ಲವೇ?

ಮಂಗಳೂರು ಮುನಿಸಿಪಾಲಿಟಿಯ—

ಕೌನ್ಸಿಲ್ ಚುನಾವಣೆಗೆ ಈ ಸಲವೂ ಉಮೇದ್ವಾರರ ಸಂಖ್ಯೆಯು ಯಾವ ರೀತಿಯಲ್ಲೂ ಕಡಮೆಯಾಗಿಲ್ಲ. ವೋಟು ಸಂಪಾದನೆಯ ಯುಕ್ತಿಯುಕ್ತ ಶ್ರಮವು ಉಮೇದ್ವಾರರ ಮೇಲ್ಬಿದ್ದಿದೆ. ವೋಟರರಿಗಾಗುವ ಉಪದೇಶವು ಎಲ್ಲೆಲ್ಲೂ ಕೇಳಿಬರುತ್ತಿದೆ. ಹೀಗೆ ಸಾಧಿಸುವುದು ಸ್ವಾಭಾವಿಕವೆಂದಿದ್ದರೂ, ಕೆಲವು ಗೂಡಾರ್ಥವನ್ನಿಟ್ಟು ತಮ್ಮ ಮಿತ್ರರ ಹೆಸರುಗಳನ್ನು ಉಮೇದ್ವಾರರ ಪಟ್ಟಿಯಲ್ಲಿ ಸುಮ್ಮ ಸುಮ್ಮನೆ ಸೇರಿಸಿ ಪತ್ರಿಕೆಗಳಲ್ಲಿ ಪ್ರಕಟಿಸುವುದೂ, ಒಬ್ಬನಿಗೆ ವಾಗ್ದಾನ ಮಾಡಿದ ವೋಟನ್ನೂ ಇನ್ನೊಬ್ಬನಿಗೆ ಕೊಡಿಸುವಂತೆ ಒತ್ತಾಯ ಪಡಿಸಿ ಸ್ಥಾನ ಮರ್ಯಾದೆಗಾಗಿ ನೀತಿಯ, ಗೌರವವನ್ನು ಕೆಡಿಸುವುದೂ ಹೆಚ್ಚುತ್ತಿದೆ. "ಕೌಂಗ್ರೆಸ್‌ವಾಲರ ವೋಟು ಸಂಪಾದನೆಯ ಕ್ರಿಯೆಯಲ್ಲಿ ಪಾವಿತ್ರ್ಯವಿಲ್ಲದಿದ್ದರೆ ಕೊಂಗ್ರೆಸ್ಸೇ ನಾಶವಾಗುವುದು"—ಎಂದು ಮಹಾತ್ಮಾ ಗಾಂಧಿಯವರು ತನ್ನ ಮೊನ್ನಿನ ಉಪವಾಸಾಂತ್ಯದಲ್ಲಿ ಹೇಳಿದುದರ ತಿರುಳನ್ನು ನಮ್ಮ ಕೌನ್ಸಿಲ್ ಉಮೇದ್ವಾರರೂ ಅರಿಯುವರೇ?

ಶ್ರೀಯುತ ನರೇಂದ್ರ ಬೋಸರು

ಅನಿಶ್ಚಿತ ಅವಧಿಯ ತನಕ ಸೆರೆಯಾಳಾಗಿಯೇ ಇಂಬೇಕೆಂದು ಬಂಗಾಳ ಸರಕಾರವು ನಿರ್ಧರಿಸಲು ಕಾರಣವಾದ ಮಹಾ ಅಪರಾಧವಾದರೂ ಏನೆಂದು ವಂಗದೇಶಸ್ಥರು ಪ್ರಶ್ನಿಸುವಂತೆ, ಈಗೀಗ, ಜಗತ್ತೂ ವಿಚಾರಿಸುತ್ತಿದೆ. ಆದರೆ ಸರಕಾರವು ಮಾತ್ರ—'ಇವರು ಕ್ರಾಂತಿಕಾರಕ ಪಿತೂರಿಯಲ್ಲಿ ತಲ್ಲೀನರಾದವರು'—ಎಂದೇ ಉತ್ತರವೀಯುತ್ತಿದೆ. ಶ್ರೀ ಬೋಸರ ದಸ್ತಗಿರಿಯು ನಡೆದ ಮೇಲೆ ಎಷ್ಟೋ ಮಂದಿ ಕ್ರಾಂತಿಕಾರರನ್ನು ಹಿಡಿದು, ವಿಚಾರಿಸಿ ಶಿಕ್ಷಿಸಲಾಯಿತು. ಆದರೆ ಒಂದೇ ಒಂದು ವಿಚಾರಣೆಯಲ್ಲಿ 'ಮುಖಂಡ'ರೆಂದೆನಿಸಲ್ಪಟ್ಟ ಶ್ರೀ ಬೋಸರ ಪ್ರಸ್ತಾಪವೇ ಬರಲಿಲ್ಲ. ವಿಚಾರಣೆಯಿಲ್ಲದೆ, ಸತ್ಯಾಸತ್ಯತೆಯು ಬಯಲುಗೊಳಿಸಲ್ಪಡದೆ, ಕಾರಾಗೃಹದಲ್ಲೇ ಇರಬೇಕೆಂದಾದ ಶ್ರೀ ಬೋಸರ ಬೆಂಬಲವಾಗಿ ನಿಲ್ಲಲು ಈ ಮೇಲಿನ ವಿಚಾರವೊಂದೇ ಸಾಲದೇ?

ಆಳ್ವಾರು ಮಹಾರಾಜರ ದುರ್ದೈವವು—

ಅವರನ್ನು ಇನ್ನೂ ಕೈಬಿಡಲಿಲ್ಲ. ಇಂಡಿಯಾ ಸರಕಾರದಿಂದ ಹೊರದೂಡಲ್ಪಟ್ಟ ಮಹಾರಾಜರು ಬರುವ ಮಾರ್ಚ ತಿಂಗಳಲ್ಲಿ ಸಂಸ್ಥಾನಕ್ಕೆ ಬರುವರೆಂದು ಪತ್ರಿಕೆಗಳಲ್ಲಿ ಪ್ರಕಟವಾದುದನ್ನು ಇಂಡಿಯಾ ಸರಕಾರದ ರಾಜಕೀಯ ಖಾತೆಯು ತಿಳಿದು, ಒಡನೆ—'ಆಳ್ವಾರು ಮಹಾರಾಜರು ಬರುವ ಮಾರ್ಚ ತಿಂಗಳಲ್ಲಿ ಸಂಸ್ಥಾನಕ್ಕೆ ಬರುವರೆಂಬ ವಾರ್ತೆಯು ಹರಡಿರುತ್ತದೆ. ಆದರೆ ಇದು ಶುದ್ಧ ಸುಳ್ಳು. ಸಂಸ್ಥಾನದ ಆರ್ಥಿಕ ಸ್ಥಿತಿ ಸುಧಾರಣೆಯಾಗುವವರೆಗೆ ಆಳ್ವಾರಿನಲ್ಲಿ ಇಂಡಿಯಾ ಸರಕಾರವೇ ದೊರೆತನ ನಡೆಸುವುದೆಂದು ಮೊದಲೇ ತಿಳಿಸಲಾಗಿದೆ. ಇಷ್ಟರ ತನಕವೂ ಆ ಸಂಸ್ಥಾನದಲ್ಲಿ ದ್ರವ್ಯಾಭಾವವು ಕಡಮೆಯಾಗಿರುವುದಿಲ್ಲ. ಹೀಗಿರಲಾಗಿ ಮಹಾರಾಜರು ಇನ್ನಷ್ಟು ಸಮಯ ಸಂಸ್ಥಾನದಿಂದ ಹೊರಗಿರಬೇಕೆಂದು ನಿಷ್ಕರ್ಷೆಯಾಗಿಲ್ಲ' ಎಂದು ಒಂದು ಪ್ರಕಟಣೆಯನ್ನು ಹೊರಡಿಸಿದರು. ಆಳ್ವಾರಿನ ಆರ್ಥಿಕ ಸುಧಾರಣೆಯ ದೃಷ್ಟಿಯಿಂದಲೇ ಮಹಾರಾಜರನ್ನು ಸಂಸ್ಥಾನದಿಂದ ಹೊರಪಡಿಸಲಾಯಿತೆಂದು ಸರಕಾರವು ಪುನಃ ಪುನಃ ಹೇಳುತ್ತಿರುವಾಗ, ಮಹಾರಾಜರ ದುರ್ದೈವದಿಂದ ಹೊರಗಿನ ನೂರಾರು ವ್ಯಕ್ತಿಗಳ ಸಹಾಯದಿಂದ ನಂಬದವರು ಕಣ್ತೆರೆಯಬೇಕಾಗಿದೆ.

ಲೋರ್ಡ್ ವಿಲ್ಲಿಂಗ್ಡನ್ನರು

ವೈಸರಾಯರಾಗಿ ಇನ್ನು ಮೂರು ವರ್ಷಗಳ ವರೆಗಿರಬೇಕೆಂದು ಅವರು ಇಂಗ್ಲೆಂಡಿಗೆ ಹೋದಾಗ ಸರ್ ಸಾಮುವೇಲ್ ಹೋರರ ಮೂಲಕ ಬ್ರಿಟಿಷ್ ಮಂತ್ರಿಮಂಡಲವು ಅರಿಕೆ ಮಾಡಿಕೊಂಡಿತಾಗಿಯೂ ವೈಸರಾಯರು ಆ ವಿಷಯಕವಾಗಿ ಚಿಂತಿಸುತ್ತಿರುವರಾಗಿಯೂ 'ಸ್ಟಾರ್ ಒಫ್ ಇಂಡಿಯಾ' ಪತ್ರಿಕೆಯು ಪ್ರಕಟಿಸಿರುತ್ತದೆ. ಲೋರ್ಡ್ ವಿಲ್ಲಿಂಗ್ಡನ್ನರು ೬೯ ವರ್ಷದ ವಯಸ್ಸಿನ ವೃದ್ಧರಾಗಿದ್ದು ಅವಿಶ್ರಾಂತರಾಗಿ ದಣಿಯುವುದು— ಅವರನ್ನು ದಣಿಸುವುದು—ಧರ್ಮವಲ್ಲವೆಂದಿದ್ದರೂ, ಇನ್ನು ಮೂರು ವರ್ಷಗಳೊಳಗೆ ಹಿಂದೂಸ್ಥಾನಕ್ಕೆ ದೊರಕಲಿರುವ ಸುಧಾರಣೆಯ ಭಾಗ್ಯಲಕ್ಷ್ಮಿಯನ್ನು ದೇಶಕ್ಕೆ ಸ್ವಾಗತೀಕರಿಸಿ, ನಡೆಸುವ ಮಹಾಕಾರ್ಯವು ಅವರ ಬುದ್ಧಿಬಲದಿಂದಲೇ ನಡೆಯಬೇಕೆಂದು ಸರಕಾರದ ಆಕಾಂಕ್ಷೆ. 'ಹಿಂದೂದೇಶವು ಸುಖವಾಗಿಯೇ ಇದೆ'—ಎಂದು ಇಂಗ್ಲಾಂಡಿನ ಮಾರ್ಗವಾಗಿಯೇ ಹೇಳಿದ ಲೋರ್ಡ್ ವಿಲ್ಲಿಂಗ್ಡನ್ನರ ಆಶಾವಾದವು ಅವರಲ್ಲಿ ಶಕ್ತಿಯನ್ನು ತೃಪ್ತಗೊಳಿಸಿ ಇನ್ನು ಮೂರು ವರ್ಷಗಳ ಹುದ್ದೆಯ ದಾನವನ್ನು ಸ್ವೀಕರಿಸುವಂತೆ ಪ್ರೇರೇಪಿಸದಿರದು. ಶ್ವೇತಪತ್ರ ಮತ್ತು ಕಮ್ಯೂನಲ್ ಎವಾರ್ಡುಗಳ ಗತಿಯೇನೆಂದು ನಿರೀಕ್ಷಿಸುವ.

ಲೋಧ್ರ

ಸುಪ್ರಸವಕ್ಕಾಗಿ ದಿವ್ಯ ಟಾನಿಕ್.

ಸ್ತ್ರೀಯರಿಗೊಂದು ಮಹಾ ವರ.

ಯಾವ ತರದ ಅಥವಾ ಎಲ್ಲಾ ತರದ ಮುಟ್ಟು ದೋಷ, ಮುಟ್ಟಾಗುವುದರಲ್ಲಿ ನೋವು, ಅಕ್ರಮ ತರದ ಮತ್ತು ಮುಟ್ಟಾಗದಿರುವಿಕೆ, ಬಿಳಿ ಸೆರಗು, ಗರ್ಭಕೋಶದ ದೋಷ ಅಶುದ್ಧ ಮುಟ್ಟು, ಬಂಜೆತನ, ಸೂತಿಕಾವಾಯು, ಅಶುದ್ಧರಕ್ತ, ಮೇರೆ ದಾಟಿ ಅಥವಾ ಬೇಕಾದಷ್ಟು ಮುಟ್ಟಾಗದಿರುವುದು, ಸ್ತ್ರೀಯರ ಅಂಗಾಂಗಗಳ ಇನ್ನಿತರ ಅನೇಕಾನೇಕ ರೋಗಗಳುಳ್ಳ ಸ್ತ್ರೀಯರನ್ನು ಈ ಔಷಧಿಯು ಸಂಪೂರ್ಣ ಗುಣಗೊಳಿಸಿರುತ್ತದೆ.

ಲೋಧ್ರ

ಎರಡು ಸೈಜಿನಲ್ಲಿ ದೊರೆಯುತ್ತದೆ. ರೂ. 3 ಮತ್ತು 1-10-0

ಕೇಸರಿ ಕುಟೀರಂ

ಇಂಡಿಯನ್ ಕೆಮಿಸ್ಟ್ಸ್ ಮತ್ತು ಡ್ರಗಿಸ್ಟ್ಸ್, ಎಗ್ಮೋರ್ ಮದರಾಸು,

Sole Agents for West Coast and North Kanara:—

Wanted Agents in Principal Towns. ಪೊಪ್ಯುಲರ್ ಸ್ಟೋರ್ಸ್,

For terms Apply to:—POPULAR STORES, Mangalore. ರಥಬೀದಿ ಮಂಗಳೂರು.

'ಸ್ವದೇಶಾಭಿಮಾನಿ'ಯ

ಸಾಹಿತ್ಯ ಸಂಚಿಕೆ

ತಿಂಗಳಿಗೊಂದರಂತೆ ಹೊರಡುತ್ತದೆ.

ಡೆಮಿ ¼ ಆಕಾರದ 8 ಪುಟಗಳು.

ವರ್ಷಕ್ಕೆ 96 ಪುಟಗಳ

ಒಂದು ಗ್ರಂಥವೇ ಪುಕ್ಕಟೆಯಾಗಿ ದೊರೆತಂತೆ!

ಪ್ರತಿ ಸಾಹಿತ್ಯ ಸಂಚಿಕೆಯಲ್ಲಿ

ಕತೆಗಳು, ಕವನಗಳು
ವಿಮರ್ಶೆ, ಜೀವನಚರಿತ್ರೆ
ಸಾಹಿತ್ಯವಿಚಾರ
ಹರಟೆಗಳು

ಪ್ರಸಿದ್ಧ ಲೇಖಕರಿಂದಲೇ ಬರುವವು.

'ಸ್ವದೇಶಾಭಿಮಾನಿ'ಗೆ ಚಂದಾದಾರರಾಗಿರಿ.

ವಾರ್ಷಿಕ ಚಂದಾ ರೂ. **2** ಮಾತ್ರ.

ಅಂಚೆ ವೆಚ್ಚ ಅಣೆ **13.**

ಮೆನೇಜರ್,
ಸ್ವದೇಶಾಭಿಮಾನಿ,
ರಥಬೀದಿ — ಮಂಗಳೂರು.

ಕಿರ್ಲೋಸ್ಕರವು

ಗುಣ-ಬಾಳಿಕೆಗಳ ಸೂಚಕವು.



ಕಿರ್ಲೋಸ್ಕರ ನೆಲಗಡಲೆ ಸುಲಿಯುವ ಯಂತ್ರಗಳನ್ನು ಪ್ರತಿಷ್ಠಿಸುವುದರಿಂದ,— ಅದರ ಖರ್ಚು ಕಡಿಮೆಯಾದರೂ ಅತ್ಯಧಿಕ ಕೆಲಸವು ಪೂರೈಸಲ್ಪಡುವುದೆಂಬ ಭರವಸೆಯಿದೆ. ಶಾಸ್ತ್ರೀಯವಾಗಿಯೂ ಪೂರ್ಣ ತೃಪ್ತಿಕೊಡುವಂತೆಯೂ ಅವು ರಚಿಸಲ್ಪಟ್ಟಿವೆ. ಕೈಯಿಂದ ಚಲಿಸುವಂತಹದೂ ವಿದ್ಯುಚ್ಛಕ್ತಿಯಿಂದ ಚಲಿಸುವಂತಹದೂ ಎರಡೂ ಬಗೆಯಿವೆ.

ಸಚಿತ್ರ ಕೆಟಲಾಗು, ಅಪೇಕ್ಷಿಸಿದ್ದಲ್ಲಿ ಕಳುಹಲಾಗುವುದು.

ಕಿರ್ಲೋಸ್ಕರ ಬ್ರದರ್ಸ್ ಲಿಮಿಟೆಡ್,

ಕಿರ್ಲೋಸ್ಕರವಾಡಿ, (ಸತಾರಾ.)

ಡಿಸ್ಟ್ರಿಬ್ಯೂಟರರು:— ಮೆಸರ್ಸ್ ಪೆರ್ರಿ ಎಂಡ್ ಕೊ, ಲಿಮಿಟೆಡ್,
ಮೌಂಟ್ ರೋಡ್, ಮದ್ರಾಸ್.

ಚಾತುಕುಟ್ಟಿ ವೈದ್ಯರ

ವಿಶೂಚಿಕಾ ಸಂಹಾರಿ

Vishuchika Samhari

(PILCO)

ಕೊಲೆರಕ್ಕೆ ದಿವ್ಯೌಷಧ! ಉಪಯೋಗಿಸಿದರೆ ಗುಣ ಖಾತ್ರಿ!

ಕ್ರಯ ಡಬ್ಬಿ 1ಕ್ಕೆ ರೂ. 1-0-0.

ಗುಹ್ಯರೋಗ ನಿವಾರಿಣೀ ತೈಲ

Anti-Venereal Oil

(A. V. Oil)

ಗುಹ್ಯರೋಗ ಚಿಕಿತ್ಸೆಗೆ ಅಮೋಘ ವನಸ್ಪತಿ ಔಷಧಿ. ಕುಟುಂಬ ಪಾರಂಪರ್ಯದ ತಗಲಿದ ರೋಗವು ಗುಣವಾಗುವುದು. ನಿರೋಗಿಗಳೂ ಹೊಟ್ಟೆಯ ಶುದ್ಧಿಗಾಗಿ ಜುಲಾಬಿನ ಹಾಗೆ ತೆಗೆದುಕೊಳ್ಳಬಹುದು.

8 ಔನ್ಸ್‌ಗಳ ಬಾಟ್ಲಿ 1ಕ್ಕೆ ರೂ. 2-8-0.

ಕೆ. ವಿ. ಕೃಷ್ಣನ್,
ಕೊಲ್ಲಾಯಿ, ಮಲಬಾರ್,
ಅಥವಾ
ಬಾಲ್ ಮತ್ತು ಕಂಪೆನಿ, ಕಲ್ಲಿಕೋಟೆ,
ಇಲ್ಲಿ ಸಿಗುವುದು.

ಕ್ಷಯಕ್ಷೀಣಾದಿಗಳಿಗೆ

ಚ್ಯವನಪ್ರಾಶಾವಲೇಹ.

ಪ್ರಸೂತಿ ರೋಗಾದಿಗಳಿಗೆ

ದಶಮೂಲಾರಿಷ್ಟ.

(ಕಸ್ತೂರಿ ಮಿಶ್ರಣ)

ಸಮಸ್ತ ವಾತರೋಗಗಳಿಗೆ

ಮಹಾನಾರಾಯಣ ತೈಲ.

ಶ್ರೀ ರಾಮಕೃಷ್ಣ ಧರ್ಮವೈದ್ಯಾಶ್ರಮ ಸಂಘ, ಡೊಂಗರಕೇರಿ ರಸ್ತೆ, ಮಂಗಳೂರು.

ಚಿತ್ರಾಯುತ ಸಮೇತ

ಋಗ್ವೇದೀ ಸಂಧ್ಯಾವಂದನೆ.

(ಗೃಹಸ್ಥರಿಗೆ—ಊರ್ಧ್ವಪುಂಡ್ರ—ಮುದ್ರಾಧಾರಣ ವಿಧಿ)
ಸ್ಮಾರ್ತರಿಗೆ—ಭಸ್ಮಧಾರಣ ವಿಧಿ, ಕೂಡಿ).

ಎಂ. ನರಸಿಂಗರಾವ್, ಬಿ. ಎ., ಎಂ. ಎಲ್.
ಇವರಿಂದ ರಚಿತವಾದ
ಪ್ರತಿಪದಾರ್ಥಟೀಕಾ ವಿಧಿಸಹಿತ.

ಬೆಲೆ ಆಣೆ 3.

(30, 60, 100 ಪ್ರತಿಗಳನ್ನು ಒಮ್ಮೆಲೆ ಕೊಳ್ಳುವವರಿಗೆ ಒಳ್ಳೆಯ ಡಿಸ್ಕೌಂಟು)

ವಿಳಾಸ:— ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು

ನಮ್ಮ ಸಲಹೆಯೇ ಪ್ರಾಧಾನ್ಯವಾದದ್ದೆಂದು ತಿಳಿಯಬೇಡಿ.

ಕಲ್ಲಿಕೋಟೆ ಅಶೋಕ ಆಸ್ಪತ್ರೆಯ ಚೀಫ್ ಮೆಡಿಕಲ್ ಆಫೀಸರರಾದ ಡಾ॥ ವಿ. ಐ. ರಾಮನ್, ಎಂ. ಆರ್., ಸಿ. ಎಸ್. ಇವರು ಬರೆದಿರುವುದನ್ನು ಓದಿ ನೋಡಿ—"ನಾನು ನಿಮ್ಮ ಆಶ್ಚರ್ಯಕರವಾದ ಜೀವಾಮೃತಂ ಟಾನಿಕನ್ನು ನರಗಳಲ್ಲಿ ಬಲಕ ಇರಿಕ ಹಸಿವು ಕಡಿಮೆಯಾಗಿರುವುದು, ಶಕ್ತಿ ಕಡಿಮೆಯಾಗಿರುವುದು, ಇವು ಪ್ರಾಪ್ತವಾಗಿರುವ ಅನೇಕ ರೋಗಿಗಳಿಗೆ ಕೊಟ್ಟಿರುತ್ತೇನೆ, ಅದರ ಫಲಿತಾಂಶಗಳು ಬಹು ತೃಪ್ತಿಕರವಾಗಿದೆ. ಜೀವಾಮೃತವನ್ನು ದೇಹಶಕ್ತಿ ಕುಗ್ಗಿರುವ ಎಲ್ಲಾ ಸಂದರ್ಭಗಳಲ್ಲೂ ಸರ್ವೇ ಸಾಮಾನ್ಯವಾಗಿ ಉಪಯೋಗಿಸಬಹುದೆಂದು ನಾನು ಮನಃಪೂರ್ವಕವಾಗಿ ಶಿಫಾರಸು ಮಾಡುತ್ತೇನೆ"

ಜೀವಾಮೃತವು

ನರಗಳಿಗೆ ಶಕ್ತಿ ಕೊಡುತ್ತದೆ. ವೀರ್ಯ ವೃದ್ಧಿಮಾಡುತ್ತದೆ. ಹಸಿವು ಹೆಚ್ಚಿಸುತ್ತದೆ. ರಕ್ತ ವೃದ್ಧಿಮಾಡುತ್ತದೆ.

ಪಂಡಿತ ಡಿ. ಗೋಪಾಲಾಚಾರ್ಯರವರ **ಜೀವಾಮೃತವು**

ಎಲ್ಲಾ ಔಷಧ ಮಾರುವವರಲ್ಲೂ, ಸ್ಟೋರುಗಳಲ್ಲೂ ದೊರೆಯುತ್ತದೆ. (ಸಂಪೂರ್ಣ ವಿವರಗಳಿಗೆ ಇವತ್ತೇ ಬರೆಯಿರಿ)

ಆಯುರ್ವೇದಾಶ್ರಮಂ, ಪೋ. ಬಾಕ್ಸು ನಂ. 212, ಮದ್ರಾಸು.

ಸೋಲ್ ಏಜಂಟರು:— ಸಿಟಿ ಮೆಡಿಕಲ್ ಮತ್ತು ಜನರಲ್ ಏಜನ್ಸಿ, ಚಿಕ್ಕಪೇಟೆ ಬೆಂಗಳೂರು. (ಉಡುಪಿ ಹೋಟೆಲ್ ಹತ್ತಿರ)

ದಕ್ಷಿಣ ಕನ್ನಡದ ಏಜಂಟರು— ಪೊಪ್ಯುಲರ್ ಸ್ಟೋರ್ಸ್, ಮಂಗಳೂರು. P. No 104

ಸೈಂಟಿಫಿಕ್ ಸ್ವರ್ಣಾಭರಣಗಳು

(ನಿಜವಾದ ಬಂಗಾರಕ್ಕೆ ಬದಲಾಗಿ ಇವು ತಯಾರಿಸಲ್ಪಟ್ಟಿವೆ.)

ಹೈಕೋರ್ಟು ಜಡ್ಜರುಗಳಿಂದಲೂ, ಸರಕಾರದ ಮಂತ್ರಿಗಳಿಂದಲೂ, ಇತರ ಪ್ರಮುಖರಿಂದಲೂ ಕೊಂಡಾಡಲ್ಪಟ್ಟಿವೆ.

ಪತ್ರವ್ಯವಹಾರವನ್ನು ಇಂಗ್ಲಿಷಿನಲ್ಲೇ ಮಾಡಬೇಕು.

ಹೊಸ ಕೆಟಲಾಗು ಧರ್ಮಾರ್ಥ.

ವಿಳಾಸ:—
The Scientific Gold Bangles Co., Ltd.,
Head Office:—48, Byragimutam Street,
Post Box No. 208, Madras.

An Advertisement In

'Swadeshabhimani'

Means a sure fortune to you

Ask for Contract Rates.

The Swadeshabhimani office,
Car Street, Mangalore.

Preserve Your Wealth by BIRTH-CONTROL.

ದೇಶದ ಐಶ್ವರ್ಯವನ್ನು ಮಿತಸಂತತಿಯಿಂದ ಕಾದಿಡಿ.

ಮೂರೇ ಮೂರು ರೂಪಾಯಿಗಳಿಂದ ಸ್ತ್ರೀಯರಿಗೆ ಪ್ರಸವಭಯವನ್ನು ನಿಲ್ಲಿಸುವುದು. ಬೇಕಾದ್ದಲ್ಲಿ ತಿರಿಗಿ ಗರ್ಭವಾಗುವಂತೆ ಔಷಧವಿದೆ.

ವರ್ಷಕ್ಕೊಂದರಂತೆ ಹೆತ್ತು ತಾಯಿ—ಮಕ್ಕಳು ನರಳದಂತೆ ದೂರ ದೂರ ಮಾಡುವುದು. ಆರೋಗ್ಯಕ್ಕೆ ಹಾನಿಯಿಲ್ಲ.

ವಿಳಾಸ:— ಪಂಡಿತ ಕೆ. ನಾರಾಯಣರಾವ್,
ಆಯುರ್ವೇದ ಭಿಷಕ್, ಕಾರ್ಕಳ, ದ. ಕ.

[N. B.— ಉತ್ತರವನ್ನಪೇಕ್ಷಿಸುವವರು ಒಂದಾಣೆಯ ಟಪ್ಪಾಲು ಸ್ಟಾಂಪಿನೊಂದಿಗೆ ಬರೆಯಬೇಕು.]

ಹಿಂದೀ ವಾತಾವರಣವು ಬ್ರಿಟಿಷರಿಗೆ ಕಲಿಸುವ ಪಾಠ.

ಹಿಂದೀಯರಿಗೆ ಸ್ವಾತಂತ್ರ್ಯದ ಕೃಷೆ ಹುಟ್ಟಿದೆ. ಅದಕ್ಕಾಗಿ ಹತ್ತಿಪ್ಪತ್ತು ವರ್ಷಗಳು ಒಂದಲ್ಲೊಂದು ವಿಧದ ಹೋರಾಟದಲ್ಲಿ ಸಂದು ಹೋಗಿವೆ. ಈ ಹೋರಾಟವನ್ನು ಲೋಕದ ಇತರ ರಾಷ್ಟ್ರಗಳ ಸ್ವಾತಂತ್ರ್ಯ ಸಂಗ್ರಾಮದೊಡನೆ ತುಲನೆಮಾಡಲು ಬರುವುದೇ? ಉತ್ತರವು ಸುಲಭವಲ್ಲ. ಸ್ವತಂತ್ರಸಾಧನೆಯ ಮಟ್ಟಿಗೆ ಇತರ ಎಲ್ಲಾ ರಾಷ್ಟ್ರಗಳಿಗಿಂತ ಭಿನ್ನವಾದ್ದೊಂದು ಹಾದಿಯನ್ನು ಹಿಂದೂದೇಶವು ಹಿಡಿದಿದೆ. ಅದರ ಪಂಥವು ಒಂದೆರಡು ಗುಣಗಳಲ್ಲಿ ಹೊರತು ಮಿಕ್ಕವುಗಳಲ್ಲಿ ಇತರ ರಾಷ್ಟ್ರಗಳ ಧರ್ಮದ ತೂಕಕ್ಕೆ ನಿಲ್ಲುವಂತಹದಲ್ಲ. ಹಿಂದೂದೇಶದ ಪಂಥವು ಒಂದು ನೈಯಲ್ಲಿ ಮಿಕ್ಕವುಗಳಿಗಿಂತ ಉತ್ತಮವಾಗಿ ತೋರಿದರೆ ಇನ್ನೊಂದು ಬದಿಯಲ್ಲಿ ಕಳಕೆಯದಾಗಿ ತೋರುವುದು. ಈ ಕಾರಣದಿಂದ ಇತರ ರಾಷ್ಟ್ರಗಳೊಡನೆ ಭಾರತವನ್ನು ತೂಕಕ್ಕಿಡಬಾರದು. ಹಿಂದೂದೇಶದ ಚಳವಳಗಳನ್ನು ವಿಮರ್ಶಿಸುವವರು, ಪಾಶ್ಚಿಮಾತ್ಯ ವಾತಾವರಣದಿಂದ ಹೊರಟು ಬರುವುದಾದರೆ, ಕೈತೊಳೆದುಕೊಂಡು, ಬಾಯಿ ಮುಕ್ಕಳಿಸಿ ಅಲ್ಲಿಯ ಅಣುಗಳನ್ನು ಕೂಡಾ ಕಳಕೊಂಡು ನಿರ್ಮಲರಾಗಿ ಬರಬೇಕು. ಆಗ ಲೋಕದ ಎಲ್ಲಾ ಶಕ್ತಿಗಳಿಗಿಂತ ಭಿನ್ನವಾದ ಚೇತನವೊಂದು ಅವರ ಪರೀಕ್ಷೆಗೆ ಸಿಗುವುದು. ಹಿಂದೂದೇಶದ ಚಳವಳವು ಸೋತಂತೆ ತೋರುವುದು--ಇದು ಅಭಿರುಚಿಯ ಭೇದವಲ್ಲದೆ ವಸ್ತುಸ್ಥಿತಿಯಲ್ಲ. ಸೋಲುಗೆಲವನ್ನು ನಿರ್ಣಯಿಸುವುದರಲ್ಲಿ ಲೋಕವು ಒಂದು ಕ್ರಮವನ್ನು ಹಿಡಿದಿದೆ. ಅದು ವಂಶಪಾರಂಪರ್ಯದಿಂದೆಂಬಂತೆ ಕಲಿತುಬಂದುದು. ಆದ್ದರಿಂದ ಹಿಂದೂದೇಶದ ಸತ್ಯಾಗ್ರಹ ಚಳವಳದಂಥಾ ಆತ್ಮಶಕ್ತಿಯ ಪರೀಕ್ಷೆಯು ಅದರ ನವೀನಕಾರ್ಯ. ಸತ್ಯಾಗ್ರಹವು ಬಹುಕಾಲದ ಅನುಭವವನ್ನು ಪಡೆದು ಲೋಕದ ಪ್ರಬಲ ಸಾಧನೆಯಾಗಿ ಮುಂಚೂಣಿಯಾಗುವಾಗ, ಎಲ್ಲಾ ಕೆಲಸಗಳನ್ನು ಸತ್ಯಾಗ್ರಹೀ ಕೋಲಿನಿಂದ ಅಳೆಯುವ ಬುದ್ಧಿಯು ಲೋಕಕ್ಕೆ ತನ್ನಂತೆ ಬಂದುಬಿಡುವುದು. ಆ ತನಕ ತನ್ನಲ್ಲಿ ತಾನೇ ಅನುಭವಿಸಿಕೊಂಡಿರುವುದು ಸತ್ಯಾಗ್ರಹದ ರೀತಿಯಾಗಿ ನಿಲ್ಲುವುದು. ಇಷ್ಟರ ವರೆಗೆ ಭಾರತವು ಆ ನೆಲೆಯಿಂದ ಮುಂದುವರಿದಿಲ್ಲ. ಅದರ ಹಿಡಿತವು ಸಡಿಲಾದಂತಿರುವ ಈ ಕಾಲದಲ್ಲಿ ಅದಾವ ಗತಿಯಲ್ಲಿದೆ? ಎಂಬ ಪ್ರಶ್ನೆ ಬರಬಹುದು. ಸತ್ಯಾಗ್ರಹದಲ್ಲಿರುವ, ಬಿದ್ದುಹೋಗುವ ಭಾಗವೊಂದು ಅದರ ಪ್ರಾಮುಖ್ಯ ಅಂಗವಲ್ಲ. ಆ ಭಾಗದ ಹಿರಿದು-ಕಿರಿದಿನ ಮೇಲೆ ಸತ್ಯಾಗ್ರಹಕ್ಕೆ ಬೆಲೆಕಟ್ಟಲಾಗುವುದಿಲ್ಲ. ಅದು ತಿರುಳಿನಿಂದ ತಿರುಳಿಗೆ ಅಂಟುತ್ತಾ ಮುಂದುವರಿಯುವುದು. ಹಾಗೆ ಮುಂದುವರಿಯುವ ನಿತ್ಯದ ಬೆಳವಣಿಗೆಯು ಅಗೋಚರವಾದ ವಿಷಯ.

ನ್ಯಾಯದ ಪ್ರಭಾವ

ನಾವು ನೋಡುತ್ತಿದ್ದಂತೆ ಹಠಾತ್ತಾಗಿ ಬೆಳೆಯುವ ಯಾವ ಧರ್ಮವಾದರೂ ಚಿರಂಜೀವಿಯಲ್ಲ. ಶಾಶ್ವತವಾದುದು ಒಳಗಿನಿಂದಲೇ ಬೆಳೆದು ಬರಬೇಕು. ಅಂಥಾ ಚಿರಂಜೀವಿಯಾದ ಶಕ್ತಿಯನ್ನು ನಿರ್ಮಿಸುವಾಗ ಕಾಲವು ತನ್ನ ಪಕ್ಕದೊಳಗಿಟ್ಟುಕೊಂಡು ಕಾವು ಕೊಡುವ ಅಗತ್ಯವಿದೆ. ಅದು ಪ್ರಪಂಚಕ್ಕೆ ಅಗೋಚರವಾಗಿರುವ ಈ ದೀರ್ಘ ಸಮಯದಲ್ಲಿ ಹೊರಗಿನ ಟೀಕೆ ಟಿಪ್ಪಣಿಗಳು ತಡೆಯಿಲ್ಲದೆ ಸುಳಿದಾಡುವುವು. ಸತ್ಯಾಗ್ರಹದಂಥಾ ಪ್ರಚಂಡ ಶಕ್ತಿಯನ್ನು ಹೊರಗಿನ ಪರಿಣಾಮಗಳಿಂದ ತಿಳಿಯುವಷ್ಟೇ ಜ್ಞಾನವಿರುವವರು ಸತ್ಯಸ್ಥಿತಿಗೆ ವಿರುದ್ಧವಾದ ಕೆಲಸಗಳನ್ನು ಈ ಶಕ್ತಿಯ ಪರದೆಯಾಗಿ ನಿರ್ಮಿಸಿಡುವರು. ಯಾವ ಕಡೆಗೂ ನಿಲ್ಲದ ಆತ್ಮಶಕ್ತಿಯು ಹೊರಬೀಳುವಾಗ ಆ ರಭಸಕ್ಕೆ ತೆರೆಗಳೆಲ್ಲಾ ತಾವಾಗಿ ಹರಿದು ಹೋಗದಿರವು. ಇದು ಭವಿಷ್ಯದ ಭರವಸೆಯಾಯಿತು. ಸದ್ಯಸ್ಥಿತಿಯಲ್ಲಿ ಸತ್ಯಾಗ್ರಹದ ಜಯವನ್ನು ನಾವು ಒಂದು ಕಡೆಯಲ್ಲಿ ಕಾಣಲು ಸಾಧ್ಯವಿದೆ. ಹಿಂದೂದೇಶದ ಚಳವಳವು ನಿಂತಲ್ಲಿ ಆತ್ಮಶಕ್ತಿಯನ್ನೂ ಚಲಿಸಿದಲ್ಲಿ ಬಂಧನ ವಿಮೋಚನೆಯನ್ನೂ ಸಾಧಿಸುವಂತಹದಿದೆ. ಇದು ಅಪೇಕ್ಷಿತ ಫಲವನ್ನು ಕೊಟ್ಟಿಲ್ಲವಾದರೆ ಅದರ ಕೆಲಸಗಾರರ ಕೊರತೆಯಿಂದ ಹೊರತು ಚಳವಳದ ದೋಷದಿಂದಲ್ಲ. ಅದು ಹೊರಬಿದ್ದ ಪ್ರಮಾಣದಲ್ಲಿ ಪ್ರತಿಫಲವನ್ನೂ ಕೊಟ್ಟಿದೆ. ಗಾಂಧಿಜೀಯವರ ಸತ್ಯಾಗ್ರಹ ಪಂಥದ ಮುಖ್ಯ ಧ್ಯೇಯವೆಂದರೆ ಹೃದಯ ಪರಿವರ್ತನೆ. ಇದನ್ನದು ಆಶ್ಚರ್ಯಕರ ರೀತಿಯಿಂದ ಸಾಧಿಸಿದೆ. ಹಿಂಸಾತ್ಮಕ ಚಳವಳವು ಕ್ರೋಧ ಮತ್ತು ದ್ವೇಷವನ್ನು ಬೆಳೆಸುವುದು, ರಾಜಕೀಯ ಯುಕ್ತಿಯು ಭೇದ ಮತ್ತು ಅಸೂಯೆಯನ್ನು ಹುಟ್ಟಿಸುವುದು. ಆದರೆ ಅಹಿಂಸಾತ್ಮಕ ಸತ್ಯಾಗ್ರಹವು ವೈರಿಯಲ್ಲಾದರೂ ಪವಿತ್ರಪ್ರೇಮವನ್ನು ನಿರ್ಮಿಸುವುದು. ಹಿಂದೀಯರು ಈ ತತ್ವದ ನಿಜತ್ವವನ್ನು ಆಲೋಚಿಸಿ ತಿಳಿಯಬೇಕಾಗಿಲ್ಲ, ಸ್ವಕೀಯ ಹಾಗೂ ಪರಕೀಯ ಜನರ ವರ್ತನೆಯಲ್ಲಿ ಅದರ ಚಿಹ್ನೆಯನ್ನು ಕಂಡುಕೊಳ್ಳಬಹುದು. 1930ನೇ ಇಸವಿಯ ಉಪ್ಪಿನ ಸತ್ಯಾಗ್ರಹದ ಪ್ರಾದುರ್ಭಾವದ ಸಮಯದಲ್ಲಿ ವೈಸರಾಯ್ ಲೋರ್ಡ್ ಇರ್ವಿನರು ತನ್ನ ಎಸೆಂಬ್ಲಿ ಭಾಷಣದಲ್ಲಿ "ಅವರ ಕೃತ್ಯವನ್ನು ದೇಶ ಘಾತುಕವೆಂದು ಸಂಬೋಧಿಸುವಾಗಲೇ, ಉಜ್ವಲ ದೇಶಪ್ರೇಮದಿಂದ ಅವರೀ ಕೃತ್ಯವನ್ನು ನಡೆಸುತ್ತಿರುವುದನ್ನು ಒಪ್ಪಿಕೊಳ್ಳಬೇಕಾಗುತ್ತದೆ" ಎಂದು ಸ್ಪಷ್ಟವಾಗಿ ನುಡಿದಿರುವರು. ತನ್ನ ವಿರೋಧವನ್ನು ಮುರಿಯುವುದಕ್ಕಾಗಿ, ಸಂದರ್ಭ ಬಂದರೆ ಕಣ್ಣು ಮುಂದಿನ ಪರ್ವತಾಕಾರವನ್ನಾದರೂ ಅಲ್ಲಗಳೆಯಲು ಸಿದ್ಧವಿರುವ ಬ್ರಿಟಿಷ್ ಸರಕಾರದ ಪ್ರತಿನಿಧಿಯ ಉದ್ಗಾರವಿದು! ಆತ್ಮಶಕ್ತಿಯು ಒಳಗಿಂದೊಳಗೆ ಬಲು ದೂರದ ವರೆಗೆ ಸಾಗಿ ಹೋಗುವುದೆಂಬುದಕ್ಕೆ ನಿದರ್ಶನವಿದು. ಇಡೀ ಮಾನವ ವರ್ಗದ ಹೃದಯದಲ್ಲಿ ಉತ್ತರ ಮಾರ್ಗವೊಂದಿದೆ--ಅದೇ ಮನಸ್ಸಾಕ್ಷಿ. ಮನುಷ್ಯರೆಲ್ಲ ಸಿಕೊಂಡವರಿಗೆಲ್ಲರ ಮನಸ್ಸಾಕ್ಷಿಯೂ ಒಂದೇ ದಿಶೆಗೆ ತಿರುಗಿದೆ-- ನ್ಯಾಯವನ್ನೆ ಕೋರಿಸುತ್ತಿದೆ. ಮಾನವ ಗರ್ಜನೆಯನ್ನು ಒಂದಾಗಿ ಸಂಬಂಧ ಕಟ್ಟಿರುವ ಸೂತ್ರವೆಂದರೆ ಈ ಮನಸ್ಸಾಕ್ಷಿ. ಅದು ನುಡಿಯುತ್ತಲೇ ಇದೆ. ಕೇಳುವವರಿಲ್ಲವೆಂದು ಸುಮ್ಮಗಾಗದು. ಮನಸ್ಸಾಕ್ಷಿಯೆಂಬುದು ಜೀವಮಾನದ ಸೊತ್ತಲ್ಲ, ಲೌಕಿಕ ಪೋಷಣೆಯಿಂದ ಪುಷ್ಟಿ ಹೊಂದುವಂತಹದಲ್ಲ. ಮನುಷ್ಯನ ಲಕ್ಷ್ಯವನ್ನು ತನ್ನ ಕಡೆಗೆಳೆಯುವ ಬಿರಗೆ ಅಲ್ಲಿಲ್ಲ. ಅದು ಲೌಕಿಕ ಹೃದಯದಲ್ಲಿ ಪಾರಮಾರ್ಥಿಕ ಬೀಜ. ನಷ್ಟವುಗೊತ್ತಾಗದಿದ್ದರೆ ಯಾವುದನ್ನಾದರೂ ಕಳಕೊಳ್ಳುವ ಲೋಪವು ಮಾನುಷ್ಯತ್ವದಲ್ಲಿದೆ. ಆ ದೆಸೆಯಿಂದಲೇ ಮನಸ್ಸಾಕ್ಷಿಗೆ ಈ ಕಾಲದಲ್ಲಿ ಬೆಲೆ ಕಡಿಮೆಯಾಗಿದೆ. ಆದರೆ, ಅಳಿಯದಂತಹ ಆ ಮಾನುಷ್ಯತ್ವವು ಸತ್ಯಾಗ್ರಹದಂಥಾ ಪ್ರೇರಣೆಯ ದೆಸೆಯಿಂದ ಇರ್ವಿನರಂತಹ ವಿರೋಧಿಗಳಲ್ಲಾದರೂ ತೋರಿ ಬರುವುದಿದೆ.

ಲೋರ್ಡ್ ವಿಲ್ಲಿಂಗ್ಡನ್ನರ ಝೇಂಕಾರ!

ಸದ್ಯದ ಹಿಂದೀ ರಾಷ್ಟ್ರೀಯ ಸಂಗ್ರಾಮವು ರಾಜಕೀಯ ದೃಷ್ಟ್ಯಾ ಉಚಿತವಾದುದೆನ್ನಲಾಗುವುದಿಲ್ಲ. ಸ್ವಾತಂತ್ರ್ಯದೊಡನೆ ಇದರ ಸಂಬಂಧವನ್ನು ಕಲ್ಪಿಸಲೂ ಹಿಂದು ಮುಂದು ನೋಡಬೇಕಾಗುವುದು. ಮಹಾತ್ಮಾಜೀಯವರ ಆತ್ಮಶಕ್ತಿಯ ಚಳವಳವು ತಪ್ಪಾಗಿ ಕಾಣಲು ಕೆಲಸಗಾರರ ದುರ್ಬಲತೆಯೇ ಕಾರಣ. ಈ ಸೋಲಿನಲ್ಲಾದರೂ, ಪರಕೀಯರು ನಮ್ಮ ನಡುವೆ ನೆಮ್ಮದಿಯ ಬಾಳುವೆಯನ್ನು ಸಾಗಿಸುವಂತಿಲ್ಲ. ಅಂಥ ಹೊಗೆಯೊಂದು ಹಿಂದೀ ರಂಗವನ್ನು ಆವರಿಸಿದೆ. ಈ ಬಿಕ್ಕಟ್ಟಿನ ವಾತಾವರಣದಲ್ಲಿ ಸರಕಾರವು ತಲೆಯೆತ್ತಿ ದರ್ಪದಿಂದ ವರ್ತಿಸುತ್ತಿರುವಂತೆ ಕಾಣಬಹುದು. ಇದು ಕೇವಲ ಕೃತಕ ವಿದ್ಯಮಾನ. ಇಲ್ಲಿಯ ಬಿಸಿಯಿಂದ ಕರಗದ 'ದರ್ಪ'ದಂತಹ ಗಟ್ಟಿ ವಸ್ತುವಾವುದೂ ನಮ್ಮ ಸರಕಾರದಲ್ಲಿ ಉಳಿದಿಲ್ಲ. ನಷ್ಟದ ಹೆದರಿಕೆಯು ಪ್ರೇರಣೆಯಾಗಿ ಹಲವು ಅಕೃತ್ಯಗಳನ್ನು ಅವರಿಂದ ಮಾಡಿಸಿರಬಹುದು. ಆದರೆ ಬೆಳೆಯುತ್ತಾ ಬರುತ್ತಿರುವ ವಿರುದ್ಧ ಮನಸ್ಸಾಕ್ಷಿಯು ಬ್ರಿಟಿಷ್ ಅಧಿಕಾರಿಗಳ ನೆಮ್ಮದಿಯನ್ನು ಕೆಡಿಸುತ್ತಾ ಇದೆ. ವೈಸರಾಯ್ ಲೋರ್ಡ್ ವಿಲ್ಲಿಂಗ್ಡನ್ನರ ಈ ಸಲದ ಇಂಗ್ಲೆಂಡಿನ ಪ್ರಯಾಣವು ಇದಕ್ಕೊಂದು ದೃಷ್ಟಾಂತ. ಪ್ರಕ್ಷುಬ್ಧ ಮನಸ್ಸಿನ ಸಮುದಾಯವನ್ನು ವಿಲ್ಲಿಂಗ್ಡನ್ನರು ಆಳಬೇಕಿದ್ದಿತು. ಈ ಸಂಬಂಧದಿಂದ ವಿಲ್ಲಿಂಗ್ಡನ್ನರ ಮನೋಮುದ್ರೆಯು ತಂಡದ ಮೇಲೆ ಬೀಳುವುದು ಅಸಾಧ್ಯ. ಪ್ರಚಂಡಸಂಡೋಹದ ಬಲಿಷ್ಠ ಅಪೇಕ್ಷೆಯು ವಿಲ್ಲಿಂಗ್ಡನ್ನರ ಮನಸ್ಸಿನಲ್ಲಿ ಬಿಂಬಿಸುವುದು ಸುಲಭಸಾಧ್ಯ. ಕಾರ್ಯ ಸಾಧನೆಗಾಗಿ ವೈಸರಾಯರಿದನ್ನು ಒಪ್ಪದಿರಬೇಕಾಯಿತು. ಈ ಸ್ಥಿತಿಯಲ್ಲಿ ಗುಟ್ಟನ್ನುಳಿಸಿಕೊಂಡ ಪ್ರಯಾಸವನ್ನು ಇಂಗ್ಲೆಂಡಿನಲ್ಲಿ ಬಿಟ್ಟು ಬರುವ ಕೆಲಸವನ್ನು ಅವರೀಗ ಮಾಡಿರುವರು. ಹಿಂದೀ ಸ್ವಾತಂತ್ರ್ಯವನ್ನು ತೀವ್ರವಾಗಿ ವಿರೋಧಿಸುವವರನ್ನು ಖಂಡಿಸದಿರಲು ಅವರಿಂದಾಗಲಿಲ್ಲ. ಆದರೂ ಕಾರ್ಯಜಾಣರ ಲಕ್ಷಣವನ್ನವರು ಬಿಟ್ಟಿಲ್ಲ. ಹಿಂದೂದೇಶಕ್ಕೆ ಹೊರಡುವಾಗ "ಇಂಡಿಯವು ಆರೋಗ್ಯದಲ್ಲಿದೆ" ಎಂದಿರುವರು. ಇದು ಅವರ ಬಲುವನ್ನು ಸಮರ್ಥಿಸಲು ಬೇಕಾದ ಏಕಪಕ್ಷೀಯವಾದ. ಇತರರು ಪಡೆಯಬೇಕಾದ ಅಂಶವು ಸ್ವಲ್ಪವೂ ಅಲ್ಲಿಲ್ಲ. ಹಿಂದೂದೇಶವು ಇನ್ನೂ ರಣರಂಗದಲ್ಲಿರುವುದೆಂಬ ಗುಟ್ಟನ್ನು ನಮ್ಮವರ ಗರ್ಜನೆಗಳಿಂದ ತಿಳಿಯುವಷ್ಟೇ ಸ್ಪಷ್ಟವಾಗಿ ಇದಿರು ಕಡೆಯವರ ಇಂಥಾ ಝೇಂಕಾರಗಳಿಂದಲೂ ತಿಳಿಯಲು ಬರುತ್ತದೆ. ಸದ್ಯಕ್ಕೆ ಇದೇ ಶುಭಶಕುನ.

ಮಹಾತ್ಮರ ಆಜ್ಞೆಗಳನ್ನು ಪಾಲಿಸಿರಿ!

ದೇಶಬಾಂಧವರೇ, ನಿಮ್ಮ ಸತ್ವವನ್ನು ಪರದೇಶೀಯರು ಮಾತ್ರವಲ್ಲದೆ ನಿಮ್ಮೊಳಗೇ ಒಂದು ಪಂಗಡದವರು ಇನ್ನೊಂದು ಪಂಗಡದವರನ್ನು ಕೂಡ ಅಪಹರಿಸದಂತಾಗಬೇಕಾದರೆ, ನೀವು ಖಾದಿಯನ್ನು ಅಂಗೀಕರಿಸಬೇಕು. ಪಾಶ್ಚಿಮಾತ್ಯನಾಗರಿಕತೆಯು ಬೌದ್ಧಾರ್ಥ್ಯರನ್ನು ನಿಸ್ಸತ್ವ ಮಾಡುವುದರಲ್ಲಿ ಆಧರಿಸಿದೆ. ಜಗತ್ತಿನಲ್ಲೆಲ್ಲಾ ಅತ್ಯಂತ ಹೆಚ್ಚು ಖರ್ಚು ತಗಲುವ ರಾಜ್ಯಾಡಳಿತ ಕ್ರಮವನ್ನು ನಮ್ಮ ಮೇಲೆ ಹೊರಿಸಿರುತ್ತಾ, ನಮ್ಮ ಬಡ ಬಾಂಧವರನ್ನು ಹೆಚ್ಚೆಚ್ಚು ನಿಸ್ಸತ್ವಗೊಳಿಸುವುದೇ ಇದರ ಪರಿಣಾಮವಾಗಿದೆ. ಇಂತಹ ನಮ್ಮ ಬಡಬಾಂಧವರಿಂದಲೇ ತಯಾರಾದ ಕೈನೂಲಿನ ಕೈನೇಯ್ಗೆಯ ಖಾದಿಯನ್ನು ಕೂಡ ನಾವು ಕೊಳ್ಳಲಾರೆವೆಂದರೆ ಇವರ ಉದ್ಧಾರವಾಗುವುದಾದರೂ ಹೇಗೆ? ಹಬೆಯ ಶಕ್ತಿಯ ಯಂತ್ರಗಳ ಮೂಲಕ ಸಮಗ್ರ ಹಿಂದೂದೇಶದಲ್ಲಿ ಕೃಷಿ ಮಾಡಬಹುದೆಂದು ನಾವು ಕನಸು ಕಟ್ಟಬಹುದಾದರೂ, ಇಂದಿನ ದಿನದ ಮಟ್ಟಿಗೆ ಕೃಷಿಯು ಒಕ್ಕಲಿಗರಿಂದಲೇ ಹಳೇ ಪದ್ಧತಿಯಲ್ಲೇ ನಿರ್ವಹಿಸಲಾಗುತ್ತದಷ್ಟೆ, ಮತ್ತು ಇವರಿಗೊಂದು ಉಪವೃತ್ತಿಯನ್ನು ನಾವು ಒದಗಿಸಿ ಕೊಡಬೇಕು. ನಮಗೆ ಬೇಕಾದ ವಸ್ತ್ರವನ್ನು ಒದಗಿಸಿ ಕೊಡಬೇಕು, ನಮಗೆ ಬೇಕಾದ ವಸ್ತ್ರವನ್ನು ಒದಗಿಸಿ ಕೊಡುವುದೇ ಈ ಉಪವೃತ್ತಿಯಾಗಿರುತ್ತದೆ.

ಸ್ವಾತಂತ್ರ್ಯಕ್ಕಾಗಿ ಉನ್ನತಿಗಾಗಿ ಹೆಣಗಾಡುತ್ತಿರುವ ಜನಾಂಗಕ್ಕೆ ಶಿಸ್ತು ಮಾತ್ರವೇ ಮಹಾ ಶಕ್ತಿಯನ್ನೊದಗಿಸಬಲ್ಲುದು. ಇಂದು ಕಂಗೆಟ್ಟ ಜರ್ಮನಿಗೆ ಸಾಮರ್ಥ್ಯವನ್ನುಂಟು ಮಾಡಿದುದು ಇದೇ ಶಿಸ್ತು; ಇದೇ ಶಿಸ್ತಿನಿಂದ ಯೂರೋಪನ್ನೆಲ್ಲಾ ಜರ್ಮನಿಯು ಬೆರಗುಗೊಳಿಸಿದೆ. ಹಿಟ್ಲರರು ಜರ್ಮನರನ್ನು ಯಾವುದೋ ಒಂದು ಬಗೆಯ ವಸ್ತುವನ್ನುಪಯೋಗಿಸಬೇಕೆಂದು ಅಪೇಕ್ಷಿಸಿದರೆ, ಅವರೆಲ್ಲ ಸುಮ್ಮನೆ ಆ ಆಜ್ಞೆಯನ್ನು ಶಿರಸಾವಹಿಸುವರು. ನಮ್ಮ ಬಾಂಧವರನ್ನು ಹೊಟ್ಟೆ ಹಸಿವೆಯಿಂದ ಮುಕ್ತರಾಗಿಸಲು ನಮ್ಮ ಹಿಟ್ಲರರು (ಮಹಾತ್ಮಾ ಗಾಂಧಿಯು) ಖಾದಿ ಧಾರಣ ಮಾಡಬೇಕೆಂದು ಅಡಿಗಡಿಗೆ ಅರಿಕೆ ಮಾಡುತ್ತ ಇರಲು, ನಾವದನ್ನು ಪಾಲಿಸಬೇಡವೆ?

ವಿದ್ಯಾವಂತ ತರುಣರು ಖಾದಿ ಪೋಷಾಕಿಲ್ಲದೆ ಇರುವುದನ್ನು ನೋಡಲು ಮಹಾತ್ಮರಿಗೆ ಎಷ್ಟು ಕಷ್ಟದಾಯಕ? ಬಡ ಹಳ್ಳಿಗರಾರೂ ಆರ್ಥಿಕ ದುಃಸ್ಥಿತಿಯಿಂದ ಖಾದಿಯನ್ನು ಧರಿಸಲಾಗದಿದ್ದರೆ ಅದನ್ನು ಅರಿತುಕೊಳ್ಳಲಾಗುತ್ತದೆ, ಆದರೆ ಪುಸ್ತಕ, ಸಂಬಳ, ಸಿನೆಮಾ, ಸಿಗರೇಟು, ಹೊಟೆಲು ಇತ್ಯಾದಿಗಳಿಗಾಗಿ ವೆಚ್ಚಮಾಡಬಲ್ಲ ತರುಣ ಬಾಂಧವರು ಖಾದಿಗೆ ಬೆಲೆ ಹೆಚ್ಚು, ಖಾದಿ ಒರಟು ಎನ್ನುವುದು ಸಮರ್ಪಕವಾಗುವುದಿಲ್ಲ.

ನಮ್ಮ ರಾಷ್ಟ್ರದ ಅಭ್ಯುದಯವಾಗಬೇಕಿದ್ದರೆ, ಖಾದಿಯ ಹೊರತು ಬೇರೆ ದಾರಿಯಿಲ್ಲ. ಇಂದು ಖಾದಿಗಿಂತ ಧೈರ್ಯಶಾಲಿ, ಮೋಜಿನ ಅಥವಾ ಅಂದದ ಉಡುಪು ಬೇರೊಂದಿಲ್ಲ. ಜನರೆಲ್ಲ ಒಟ್ಟುಗೂಡಿ ಸ್ವರಾಜ್ಯಪಂಗಡಕ್ಕೆ ಮತಕೊಡಲು ನಿರಾಕರಿಸಿದಾಗ್ಯೂ, ಅವರು ಖಾದಿಧಾರಣ ಮಾಡಿದ್ದಲ್ಲಿ ತೃಪ್ತಿಯಿದೆ. ಏಕೆಂದರೆ ಮತಗಳನ್ನು ಕೊಡುವುದು ೩ ವರ್ಷಗಳಿಗೊಮ್ಮೆಯಾಗಿರುತ್ತಾ, ಖಾದಿ ಧಾರಣವೆಂಬುದು ಕಾಂಗ್ರೆಸ್ಸಿಗೆ ಹಾಗೂ ಜನತೆಗೆ ಅನುದಿನದ ಮತವಾಗಿರುತ್ತದೆ. ಗಾಂಧಿಯವರ ಪಕ್ಷದಲ್ಲಿದ್ದೇವೆಂದು ಇಡೀ ಲೋಕವನ್ನೇ ಬೆರಗುಮಾಡಬೇಕೆಂದಿದ್ದರೆ, ಇಂದಿನಿಂದಲೇ ಖಾದಿಧಾರಣದ ಪ್ರತಿಜ್ಞೆಯನ್ನು ಕೈಕೊಳ್ಳಿರಿ. ಇದರಿಂದ ಹಳ್ಳಿಗರಲ್ಲುಂಟಾಗುವ ಸುಪರಿಣಾಮವನ್ನು ಊಹಿಸಿರಿ. ನೀವು ಖಾದಿಯನ್ನು ಧರಿಸಿದಿರೆಂದರೆ, ಆಗ ಮಾತ್ರವೇ ನೀವು ಅವರ ಪ್ರತಿನಿಧಿ ಅಥವಾ ಪಕ್ಷದವರೆಂದು ಆಗುವಿರಿ. ಹೊರತು ನಿಮ್ಮ ಬಗ್ಗೆ ಅವರಲ್ಲಿ ಯಾವ ಸಂಶಯವೂ ಬರಲಾರದು. ನಮಗೆ ಅತ್ಯಾವಶ್ಯಕವಾದ ವಸ್ತ್ರದ ಮಟ್ಟಿಗೆ ಖಾದಿಯನ್ನುಪಯೋಗಿಸಿರೆಂದು ಆ ದಿನದಲೂ ಮಹಾತ್ಮರು ಹೇಳುತ್ತಿರಲು, ದೇಶಬಾಂಧವರೇ, ನಿಮ್ಮ ಹಾಗೂ ಭರತಮಾತೆಯ ಕಲ್ಯಾಣದ ಸಾಧನವಾಗಿರುವ ಖಾದಿಯನ್ನು ಧರಿಸಲಾರಿರಾ?

ನಮ್ಮ ಮುಂದಿನ ವೈಸರಾಯರು ಯಾರಾಗಬಹುದು?

ನಮ್ಮ ವೈಸರಾಯರಾದ ವಿಲ್ಲಿಂಗ್ಡನ್ ಪ್ರಭುಗಳು ಇಂಗ್ಲಾಂಡಿಗೆ ಹೋಗಿ ಮರಳಬೇಕಾದರೆ, ತಮ್ಮ ಮುಂದಿನ ಪ್ರಭುಗಳಾರೆಂಬುದರ ಕುರಿತು ಸ್ಟೇಟ್ ಸೆಕ್ರೆಟರಿಗಳೊಡನೆ ಚರ್ಚಿಸಿರುವರಂತೆ. ಮುಂದಿನವರಾರೆಂಬ ಸ್ಪಷ್ಟ ಹೆಸರು ಪ್ರಕಟವಾಗಲಿಲ್ಲ. "ಡೈಲಿ ಎಕ್ಸ್‌ಪ್ರೆಸ್" ಪತ್ರಿಕೆಯು--ಈ ಕೆಳಗಿನವರಲ್ಲೊಬ್ಬರು ನಿಸ್ಸಂದೇಹವಾಗಿ ವೈಸರಾಯರಾಗಿ ನೇಮಿಸಲ್ಪಡುವರೆಂದು ಹೇಳುತ್ತಿದೆ —

(೧) ಅಂತೋನಿ ಏಡನ್ ಇವರು ತುರ್ಕಿ, ಪರ್ಶಿಯಾ ಮತ್ತು ಸೋವಿಯಟ್ ರಷ್ಯಗಳ ಪ್ರಶ್ನೆಯಲ್ಲಿ ಚಾಣಾಕ್ಷರಂತೆ.

(೨) ಆನರೇಬಲ್ ಒಲಿವರ್ ಸ್ಟೇನ್ಲಿ ನಮ್ಮ ಮದರಾಸು ಗವರ್ನರರು.

(೩) ಡಫ್ ಕೂಪರ್: ಇವರು ಹಿಂದೂದೇಶದ ಸೈನ್ಯವಿಚಾರ, ಆರ್ಥಿಕ ವಿಚಾರಗಳಲ್ಲಿ ನಿಪುಣತರರಂತೆ.

[ಮತ್ತೊಂದು ಪತ್ರಿಕೆಯು ಲೋರ್ಡ್ ವಿಲ್ಲಿಂಗ್ ಮತ್ತು ಲೋರ್ಡ್ ಝೆಟ್ಲೆಂಡ್, ಇವರ ಹೆಸರುಗಳ ನ್ನೆತ್ತಿದೆ.]

FRESH CONSIGNMENT ARRIVED.

UNEQUAL QUALITY——————EXCEPTIONAL PRICE.

A TIRE THAT SAVES YOU REPUTATION AND MONEY.

The Canara Public Conveyance Co., Ltd.

MANGALORE.

ಜ್ಞಾನ.

(ಪ್ರಬಂಧಮಾಲೆ)

ಲೇಖಕರು:—ಶ್ರೀ ಶಿವರಾಮ ಕಾರಂತ.

ಅಧ್ಯಾಯ ೧೩.

ಪ್ರಕೃತಿಶಾಸ್ತ್ರ.

ಪಂಡಿತರು ಸೇರಿ—ನೆಲ, ನೀರು, ಆಕಾಶ, ಮಾನ, ಮರ್ಯಾದೆ, ಎಲ್ಲಕ್ಕೂ ಒಂದೊಂದು ಶಾಸ್ತ್ರ ಮಾಡಿದ ಮೇಲೆ ಗಿಡ ಮರ—ನಾಯಿ, ನರಿಗಳಿಗೂ ಸಹ ಒಂದು ಶಾಸ್ತ್ರ ಬೇಡವೇ? ಶಾಸ್ತ್ರವು ಎಲ್ಲರ ಜೀವನಕ್ಕೂ ಅತಿ ಅವಶ್ಯವಾದು ದೆಂದು, ಅವುಗಳ ಜೀವನಕ್ಕೆ ಸರಿಯಾಗಿ ಒಂದು ಶಾಸ್ತ್ರ ಮಾಡಿ, ಅವುಗಳು ಈ ಶಾಸ್ತ್ರದಂತೆ ಆಚರಿಸಬೇಕೆಂದು ಪಂಡಿತರು ಹೇಳಿದರು. ಇದೇ—ಪ್ರಕೃತಿಶಾಸ್ತ್ರ. ಗಿಡಗಳ ವಿಚಾರ ಹೇಳುವುದು ಸಸ್ಯಶಾಸ್ತ್ರ, ಪ್ರಾಣಿಗಳ ವಿಚಾರ ಹೇಳುವುದು ಪ್ರಾಣಿಶಾಸ್ತ್ರ, ಮನುಷ್ಯ ಶರೀರದ ವಿಚಾರ ಹೇಳುವುದು—ಮನುಷ್ಯದೇಹಶಾಸ್ತ್ರ,— ಇವೆಲ್ಲ ಪ್ರಕೃತಿ ಶಾಸ್ತ್ರದ ಮಕ್ಕಳು. ಈ ಮೂರರಲ್ಲಿ—ಮನುಷ್ಯಶಾಸ್ತ್ರವು ಪ್ರಾಣಿ ಶಾಸ್ತ್ರಕ್ಕಿಂತ ಶ್ರೇಷ್ಠವೆಂದೂ, ಅದು ಸಸ್ಯಶಾಸ್ತ್ರಕ್ಕೂ ಶ್ರೇಷ್ಠವೆಂದೂ—ಸಸ್ಯಶಾಸ್ತ್ರವು ಭೂಶಾಸ್ತ್ರ ಮೊದಲಾದುವುಗಳಿಗಿಂತ ಶ್ರೇಷ್ಠವೆಂದೂ ತಿಳಿಯಬೇಕು.

ನಾವೀಗ ಸಸ್ಯಶಾಸ್ತ್ರದ ಪರಿಮಿತಿಯನ್ನು ಚರ್ಚಿಸುವ. ಇದು ಕೇವಲ ಗಿಡಗಳ ವಿಷಯ—ಅಂದರೆ ಅವುಗಳ ಹುಟ್ಟು ಸಾವು, ಇವೆರಡರ ನಡುವಣ ಬಾಳ್ವೆಯನ್ನು ಕುರಿತು ಬಣ್ಣಿಸುತ್ತದೆ. ಗಿಡಗಳಲ್ಲಿ ತರತರದ ಜಾತಿಗಳಿರುವುವಂತೆ. ಇವುಗಳ ಸಂಖ್ಯೆ ಅಪರಿಮಿತವಂತೆ. ಇವೆಲ್ಲವಕ್ಕೆ ಒಂದು ಹೆಸರು ಇದೆಯಂತೆ. ಕೆಲವು ಗಿಡಗಳು—ಸೂಕ್ಷ್ಮದರ್ಶಕಕ್ಕೂ ಕಾಣಸಿಗದಷ್ಟು ಸೂಕ್ಷ್ಮವಾಗಿವೆಯಂತೆ. ಇನ್ನು ಕೆಲವು ಬರಿ ಕಣ್ಣಿನಿಂದ ಪೂರ್ಣ ನೋಡಲಾರದಷ್ಟು ದೊಡ್ಡವಂತೆ.

ಗಿಡಗಳ ಮತ್ತು ಪ್ರಾಣಿಗಳ ಹಿರಿಯರು ಒಂದೇ ಇರಬೇಕು ಎಂದು ಪಂಡಿತರ ವಾದ. ಇದೇ ಮೂಲ ಜೀವಾಣು. ಇದರ ಬೆಳವಣಿಗೆಯ ವಿಚಾರವನ್ನು ಜೀವ ಶಾಸ್ತ್ರವು ಹೇಳುತ್ತದೆ.

ಭೂಮಿಯಲ್ಲಿ ಬಲು ಪೂರ್ವದಲ್ಲಿ ಗಿಡಮರವಿಲ್ಲದೆ, ಅದರ ಬೆಳವಣಿಗೆಗೆ ಬೇಕಾದ ನೆಲ, ನೀರು, ಹವೆಗಳಷ್ಟೇ ಉಂಟಾದುವಂತೆ. ಆಗ ಎಲ್ಲಿಂದಲೋ ಏನೊ, ಅಥವಾ ತನ್ನಷ್ಟಕ್ಕೇನೋ— ಏನೊ ಎಂಬಂತೆ ಕೆಲವು ಜೀವಾಣುಗಳು ಕಾಣಿಸಿದುವು. ಕೆಲವು ಇವುಗಳಲ್ಲಿ ಗಿಡಗಳಾದುವು; ಕೆಲವು ಪ್ರಾಣಿಗಳಾದುವು. ಇವು ಮೊದಲು ನೀರಲ್ಲಿ ವಾಸಿಸಿದ್ದಿರಬೇಕೆನ್ನುತ್ತಾರೆ. ಕೆಲವರ ಅಭಿಪ್ರಾಯವು ನೆಲದಲ್ಲೇ ಬೆಳೆದುವೆಂದಿದೆ. ನೆಲದಲ್ಲಿದ್ದು ಅಲ್ಲಿಗೆ ನೀರು ಬರಲು ಮುಳುಗಿ ಸತ್ತಿರಬೇಕೆಂದೂ, ನೀರಲ್ಲಿದ್ದವು—ನೀರು ಒಣಗಲು ಸತ್ತಿರಬೇಕೆಂದೂ ಅನ್ನುತ್ತಾರೆ. ಹೀಗೆ ಸಾಯದೆ ಉಳಿದುವು ಬದುಕಿ—ಗಿಡಗಳಾದುವು. ಬೇರೆ ಇತರ ವಸ್ತುಗಳು ತಿನ್ನಲು ಸಿಗುವ ಮೊದಲು, ಗಿಡವು ಗಿಡವನ್ನೆ ತಿಂದಿರಬಹುದಂತೆ. ನೀರಲ್ಲಿರುವಾಗ ಅದು ಸಂಚಾರೀ ಜೀವನ ಮಾಡುತ್ತಿತ್ತಂತೆ. ಕೆಲವೊಂದು ತರದ ಅಂತರಗಂಗೆಗಳು ಇಂಥವುಗಳು ಎನ್ನುತ್ತಾರೆ. ನೆಲಕ್ಕೆ ಅದೇ ಗಿಡವು ಬಂದು ಬೀಳಲು ಚಲಿಸುವುದನ್ನು ಬಿಟ್ಟು ಬೇರೂರಿತಂತೆ. ಅದೇ—ಅಥವ ಅದರ ಕುಟುಂ—ಮರ ಬೀಳಲು, ಆಯಿತೆನ್ನುತ್ತಾರೆ.

ಇವು ಬದುಕಲು ಆಹಾರ ಬೇಕೆಂದೂ ಅದನ್ನು ಅವು ಗಾಳಿಯಿಂದಲೂ, ನೆಲದಿಂದಲೂ ಆರಿಸುತ್ತವೆನ್ನುತ್ತಾರೆ. ಗಾಳಿಯಿಂದ ಆಹಾರವನ್ನು ಹೀರುವ ಕೈಗಳೇ ರೆಂಬೆಯೆಂದೂ, ನೆಲದಿಂದ ಹೀರುವ ಕೈಗಳು ಬೇರೆಂದೂ ಅನಿಸಿದುವು. ಗಿಡಗಳು ನಮಗೆ ಬಲು ಉಪಕಾರ ಮಾಡುತ್ತವೆ. ಕಾರಣ—ಅವು ಗಾಳಿಯಲ್ಲಿನ ಅಂಗಾರಾಮ್ಲದಿಂದ ನಮಗೆ ಬೇಕಾಗುವ ಆಮ್ಲವಾಯುವನ್ನು ವಿಂಗಡಿಸಿ ಕೊಡುವುವಂತೆ. ಇದು ನಮಗೆ ತಿಳಿದು ನಾವು ಅವುಗಳಿಗೆ ಕೃತಜ್ಞರಾಗಿರುವೆವಾದರೂ—ಅವುಗಳಿಗೆ ನಮ್ಮ ಉಪಕಾರ, ಅದರೆ ನಾವು ಅಂಗಾರಾಮ್ಲವನ್ನು ಅವಕ್ಕೆ ಕೊಡುವ ವಿಚಾರ, ತಿಳಿದೇ ಇಲ್ಲ.

ಗಿಡಗಳಿಗೆ ಬುದ್ಧಿಯಿರಲೂ ಬಹುದು, ನೋವಾಗಲೂ ಬಹುದು, ಹೆದರಿಕೆಯೂ ಇದ್ದೀತು—ಎಂದು ಹೇಳುತ್ತಾರೆ. ಇವೆಲ್ಲ ಇದ್ದರೂ ನಮ್ಮಷ್ಟು ಬುದ್ಧಿ ಅವಕ್ಕಿಲ್ಲವೆಂಬುದು ಎಷ್ಟೋ ಸಮಾಧಾನದ ಸಂಗತಿಯು.

ಇವುಗಳಲ್ಲೂ ಬಾಳ್ವೆಯ ಹೋರಾಟ ಬಹಳವಾಗಿದೆಯಂತೆ. ದನಗಳು ಬಂದು ತಿನ್ನುವುವೆಂದು ಕೆಲವು ಗಿಡಗಳು ಮುಳ್ಳನ್ನು ಚುಚ್ಚುವುವಂತೆ. ಕೆಲವು ಹಣ್ಣುಗಳು ಪ್ರಾಣಿಗಳ ಬಾಯಿಗೆ ಸಿಗದಂತೆ—ಹುಳಿಯಾಗುವುವಂತೆ. ಕೆಲವು ಸೂರ್ಯನ ಬೆಳಕಿಗಾಗಿ, ಇತರ ಗಿಡಗಳನ್ನು ತಳ್ಳಿ ಮೇಲೆ ಓಡುವುವಂತೆ. ಕೆಲವು ನೆಲದ ಮೇಲೆ ಹರುಳಾಡುವುವಂತೆ.

ಇನ್ನು ಅವುಗಳಿಗೂ ಸಂತಾನದ ಆಸೆಯಿದೆಯಾದರೂ ವಿವಾಹ ಪದ್ಧತಿಯುಳ್ಳವುಗಳಲ್ಲಿ ಬೆಳವಣಿಗೆಯನ್ನು ಹೊಂದಿಲ್ಲವೆನ್ನುತ್ತಾರೆ. ಗಿಡಗಳು ಹೂಬಿಡುವುದು ತಂತಮ್ಮ ಮದುವೆಯಂತೆ. ಗಂಡು ಹೂ, ಹೆಣ್ಣು ಹೂ—ಸಹ ಇದೆಯಂತೆ. ಅವು ಪತಂಗಗಳಂತಹ ಪುರೋಹಿತರಿಂದ ತಮ್ಮ ಲಗ್ನಮಾಡಿಸಿಕೊಂಡು—ಸಂತಾನ ಪಡೆಯುವುವಂತೆ. ಈ ಪುರೋಹಿತರು ಸಿಗದಿದ್ದರೆ, ಇನ್ನಾವುದಾದರೂ ಉಪಾಯದಿಂದ ಲಗ್ನವಾಗಿ, ಮಕ್ಕಳನ್ನು ಪಡೆಯುವುವಂತೆ. ಕೆಲವು ಗಿಡಗಳ ಹಣ್ಣು, ಬೀಜಗಳ ರೂಪದಲ್ಲಿ ಅಲ್ಲದಿದ್ದರೂ, ದಂಟು ಗಡ್ಡೆಗಳ ರೂಪದಿಂದ ತಮ್ಮ ಕುಲವನ್ನು ಹೆಚ್ಚಿಸುವುವಂತೆ. ಈ ಎಲ್ಲ ಸಾಮಾನ್ಯ ಜ್ಞಾನವನ್ನು ವಿರಾಮವಿರುವವರು ತಿಳಿದುಕೊಂಡಿರುವುದರಲ್ಲಿ ಆಕ್ಷೇಪವಿಲ್ಲ.

ವಿದ್ಯಾರ್ಥಿಯು ಮುಖ್ಯ ತಿಳಿದಿರಬೇಕಾದ ಸಂಗತಿಯೆಂದರೆ—

(1) ಕುಂಬಳ, ಹಾಗಲು, ಪಡವಲ ಮೊದಲಾದುವು ಊಟಕ್ಕೆ ಬೇಕಾದ ತರಕಾರಿಯನ್ನು ಕೊಡುವುವೆಂದೂ

(2) ತೆಂಗು, ಮಾವು, ಹಲಸು, ನೇಬು—ಮೊದಲಾದುವು ಮನುಷ್ಯನಿಗೆ ಅವಶ್ಯವಾದ, ರುಚಿ ರುಚಿ ಹಣ್ಣುಗಳನ್ನು ಕೊಡುವುವೆಂದೂ—

(8) ಭತ್ತ, ಗೋಧಿ ಮೊದಲಾದುವು—ರೊಟ್ಟಿ, ದೋಸೆಗಳಿಗೆ ಬೇಕಾದ ಹಿಟ್ಟು ಕೊಡುವುವೆಂದೂ

(4, ಸಾಗುವಾನಿ, ಹಲಸು, ಬೀಟೆ, ಮೊದಲಾದುವು ಮನೆ ಕಟ್ಟಲು ಕಟ್ಟಿಗೆ ಕೊಡುವುವೆಂದೂ ಉಳಿದುವುಗಳು ಬಿಸಿ ನೀರಿಗಲ್ಲದೆ ಇತರ ಉಪಯೋಗಕ್ಕೆ ಬರುವುದಿಲ್ಲವೆಂದೂ ತಿಳಿದರೂ ಸಾಕು.

ಈಗ ನಾವು—ಎರಡನೆಯದಾದ ಪ್ರಾಣಿ ಶಾಸ್ತ್ರದ ವಿಚಾರ ಮಾಡುವ. ಈ ಹಿಂದಿನ ಯುಗದಲ್ಲಿ—ಆನೆಯನ್ನು ಮೀರಿಸುವ ಪೆಡಂಭೂತಗಳಿದ್ದುವಂತೆ. ಕೆಲವುಗಳ ಶರೀರವೇ 80—40 ಅಡಿ ಉದ್ದವಾಗಿತ್ತಂತೆ. ನಾನಾ ರೂಪ, ನಾನಾ ವಿಕಾರ ಸ್ವಭಾವಗಳು ಅವುಗಳದ್ದಂತೆ. ಈಗ ಅವುಗಳಿಲ್ಲವೆಂಬುದು ಎಷ್ಟೋ ಕ್ಷೇಮಕರ. ಈಗಿರುವ ಪ್ರಾಣಿಗಳನ್ನು ಮುಖ್ಯ ಎರಡು ವರ್ಗಗಳಾಗಿ ಮಾಡಬಹುದು.

(1) ಮನುಷ್ಯನ ಉಪಯೋಗಕ್ಕೆ ಬರುವ ದನ, ನಾಯಿ, ಕುದುರೆ ಇತ್ಯಾದಿ.

(2) ಉಪಯೋಗಕ್ಕೆ ಬಾರದ ಇತರ ಯಾವತ್ತು ಜೀವಿಗಳು.

ಈ ಎರಡನ್ನು ಮೀರಿದುವೆಂದರೆ ಕೆಲವು ಬಾರಿ ಮನುಷ್ಯನನ್ನು ಬೆದರಿಸುವ—ಚೇಳು. ಹಾವು, ಹುಲಿ, ಕರಡಿ—ಮೊದಲಾದುವು.

ಈ ಪ್ರಾಣಿಗಳಲ್ಲಿ ಗೋತ್ರ ವಿಶೇಷವಿರುವುದೆಂದೂ, ಅದನ್ನು ಶೋಧಿಸಿ ನೋಡಿದಲ್ಲಿ—ಹಂದಿಯು, ಆನೆಯ ವಂಶದ್ದೆಂದೂ, ಎರೆ ಹುಳುವು ನಾಗರಹಾವಿನ ಕುಲದ್ದೆಂದೂ—ಮನೆಯ ಬೆಕ್ಕು, ಹೆಬ್ಬುಲಿಯ ಕುಲದ್ದೆಂದೂ ತಿಳಿಯುವುದು. ಇವುಗಳಲ್ಲಿ ದಾಯಾದಿ ಕಲಹವಾಗಿ ಒಂದರ ಮುಖ ಒಂದು ನೋಡದೆ ಬಲು ಸಮಯವಾದುದರಿಂದ ಇವುಗಳ ರೂಪ, ಸ್ವಭಾವಗಳಲ್ಲಿ ಭಿನ್ನತೆ ಉಂಟಾಗಿದೆಯೆಂದೂ ಹೇಳುತ್ತಾರೆ.

ಆಹಾರ. ಪ್ರಾಣಿಗಳಿಗೂ ಆಹಾರ ಬೇಕು. ಇದರ ದೆಸೆಯಿಂದ ಅವುಗಳು ತಂತಮ್ಮನ್ನೇ ಕೊಂದು, ಮನುಷ್ಯನಿಗೆ ಅದಷ್ಟು ಕಡಿಮೆ ಉಪದ್ರಕಾರಿಗಳಾಗಿವೆ. ಹೀಗೆ ಕೊಂದುಕೊಳ್ಳಲು ಅವುಗಳಿಗೆ ತರತರದ ಹಲ್ಲು, ಉಗುರು, ಬಾಲ—ಇತ್ಯಾದಿ ಆಯುಧಗಳಿವೆ. ಆಹಾರ ಸಿಗದೆ ಹೋದರೆ ಪ್ರಾಣಿಗಳು ಸಾಯುತ್ತವಂತೆ. ಕೆಲವು ಹಲವು ಉಪವಾಸದ ದಿವಸಗಳನ್ನು ಕಳೆಯಬಲ್ಲವಂತೆ. ಮನುಷ್ಯನು ಈ ಒಂದು ಗುಟ್ಟನ್ನು ಅವುಗಳಿಂದ ತಿಳಿದು ಲಾಭ ಪಡೆಯಬಹುದು.

ಸಂತತಿ. ಕೆಲವು ಪ್ರಾಣಿಗಳು ಮರಿಯನ್ನಿಡುವುವೆಂದೂ, ಕೆಲವು ಮೊಟ್ಟೆಯಿಟ್ಟು ಮರಿಯಾಗುವುವೆಂದೂ ಇತ್ತೀಚೆಗೆ ತಿಳಿದು ಬಂದಿದೆ. ಕೆಲವು ಪ್ರಾಣಿಗಳು ಒಂದೇ ಮರಿಯಿಟ್ಟರೆ, ಕೆಲವು ನೂರಾರು ಮರಿಯಿಡುವುವಂತೆ. ಕೆಲವು ಬೇಗ ಬೇಗ ಮರಿಯಿಟ್ಟರೆ, ಕೆಲವು ಬಲು ನಿಧಾನ ಇಡುವುವಂತೆ. ಆದರೆ ಈ ಮರಿಗಳಲ್ಲಿ ಹೆಚ್ಚಿನವು ಬೇಗ ಸಾಯುವುದರಿಂದಲೂ, ಉಳಿದುವು ಅನಂತರ ಸಾಯುವುದರಿಂದಲೂ ವಿಶೇಷ ಹಾನಿಯು ಮನುಷ್ಯನಿಗಿರುವುದಿಲ್ಲ.

ಪ್ರಾಣಿಗಳ ಪ್ರಣಯ. ಪ್ರಾಣಿ ಜೀವನದಲ್ಲಿ ನಾವು ಕಲಿಯಬಹುದಾದ ಒಂದು ಸಂಗತಿಯೆಂದರೆ ಪ್ರಣಯ. ಅದರಲ್ಲೂ ಹಕ್ಕಿಗಳ ಪ್ರೇಮ ಸಂಸ್ಥೆಯು ಬಲು ಮುಂದರಿದುದು. ಇಲ್ಲಿ ಗಂಡು ಹೆಣ್ಣಿನ ಸಲುವಾಗಿ ನಾನಾ ತರದ ಬಣ್ಣವನ್ನು ತೊಟ್ಟು ಕುಣಿಯುವುದು, ಕೆಲವು ಭಾರಿ ಹೆಣ್ಣು ಗಂಡಿನ ಸಲುವಾಗಿ ಆಕರ್ಷಕ ಬಣ್ಣ ತಾಳುವುದು. ಇದರಿಂದ ಅವಿವಾಹಿತ ತರುಣ ತರುಣಿಯರು—ಆದಷ್ಟು ಬೆಡಗಿನ ಉಡುಗೆ ಧರಿಸುವುದು ಅತಿ ಅವಶ್ಯವೆಂದು ತಿಳಿಯಬೇಕು.

ಕೆಲವು ಪಕ್ಷಿಗಳು ಅನುರಾಗವನ್ನೆ ತಮ್ಮ ಕುಣಿತದಿಂದಲೂ, ಕೆಲವು ತಮ್ಮ ಗಾನದಿಂದಲೂ ತೋರಿಸುವುವು. ಉತ್ತರ ಧ್ರುವದ ಪೆಂಗ್ವಿನ್ ಹಕ್ಕಿಯು—ತರುಣಿಯ ಬಳಿಗೆ ಹೋಗಿ ಹಲ್ಲಿಂದ ಒಂದು ಕಲ್ಲನ್ನು ಕಚ್ಚಿ ಅದರ ಕಾಲು ಬುಡಕ್ಕೆ ಇರಿಸುವುದು. ಆ ಹೆಣ್ಣು ಅದನ್ನು ಸ್ವೀಕರಿಸಲು—ಅವುಗಳಲ್ಲಿ ವಿವಾಹವಾಗುವುದು. ಅವುಗಳಲ್ಲಿ ಕನ್ಯಾದಾನ ಪದ್ಧತಿಯಿಲ್ಲವೆಂದೂ, ಪುರೋಹಿತರ ತೊಂದರೆಯಿಲ್ಲವೆಂದೂ ಮನುಷ್ಯನು ಅತಿ ಅವಶ್ಯವಾಗಿ ತಿಳಿದಿರಬೇಕಾಗಿದೆ. ಕೆಲವು ಬಾರಿ ಅಸುರೀ ವಿವಾಹ ಪದ್ಧತಿಯೂ (ಉದಾ:—ಸೀಲುಗಳಲ್ಲಿ ಈ ಪದ್ಧತಿಯಿದೆ); ಹಲವು ಬಾರಿ ಸ್ವಯಂವರ ವಿಧಿಯೂ ಅವುಗಳಲ್ಲಿ ರೂಢಿಯಿದೆ. ಈ ಪದ್ಧತಿಯು ಅಲ್ಲಿನ ಹೆಣ್ಣು ಗಂಡಿನ ಸಂಖ್ಯೆಯ ಮೇಲೆ ಹೊಂದಿರುತ್ತದೆ ಎನ್ನುತ್ತಾರೆ. ಅವುಗಳಲ್ಲಿ ಸವರ್ಣ, ಸಗೋತ್ರ ವಿವಾಹಗಳಾಗಿರಬೇಕು—ಎನ್ನುತ್ತಾರೆ. ಒಂದು ಜಿಂಕೆಯಲ್ಲಿ ನೂರಾರು ಜಾತಿ ಕಾಣಲು—ಮನುಸ್ಮೃತಿಯಲ್ಲಿ ಹೇಳಿರುವಂತೆ ಅವುಗಳಲ್ಲಿ ಅನುಲೋಮ, ಪ್ರತಿಲೋಮ, ಮಹಾಲೋಮ—ವಿಲೋಮ ಮೊದಲಾದ ವಿವಾಹಗಳಾಗಿರಬೇಕೆಂಬುದು ಸ್ಪಷ್ಟ. ಈಗಲೂ ಈ ರೀತಿ ವಿವರ್ಣ ಲಗ್ನಗಳು ಆಗುತ್ತಿವೆಯಂತೆ.

ಕೆಲವು ಜಾತಿಯ ಪ್ರಾಣಿಗಳು ತಮ್ಮ ಊರಿಗೆ ಇತರ ಜಾತಿಯ ಪ್ರಾಣಿಗಳನ್ನು ಬರಲು ಬಿಡುವುದು ಸಹ ಇಲ್ಲವಂತೆ. ಇಂಥವು ವರ್ಣಸೌಂದರ್ಯವನ್ನು ತಡೆಯುವುವು. ಈ ವಿಷಯದಲ್ಲಿ—ಕೆನಡಾ ಆಸ್ಟ್ರೇಲಿಯ ಮೊದಲಾದ ದೇಶದ ಬಿಳಿ ಜನರ ನಡೆಯು ಎಷ್ಟು ನ್ಯಾಯವಾದುದೆಂದು ಯೋಚಿಸಿರಿ.

ಅವುಗಳಲ್ಲಿ ದಾಂಪತ್ಯನೀತಿಯು ಅಧಿಕವಾಗಿದ್ದರೂ ಬಹುಪತ್ನೀವ್ರತವೂ, ಬಹು ಪತಿವ್ರತವೂ ಕಾಣಸಿಗುವುದುಂಟು. ಪ್ರಾಣಿ ಜೀವನದ ಈ ಸಂಸ್ಥೆಯಿಂದ ಪುರುಷನು ತನಗೆ ಅನುಕೂಲವಾದ ಯಾವ ಆದರ್ಶವನ್ನೂ ತೆಗೆದುಕೊಳ್ಳಬಹುದು.

ಇದಲ್ಲದೆ ಪ್ರಾಣಿಶಾಸ್ತ್ರದಿಂದ ವಿಶೇಷ ಉಪಯೋಗವು ಮನುಷ್ಯನಿಗಿಲ್ಲ. ಇದ್ದರೆ ಅವು ಈ ಕೆಳಗಿನವು:—

ಜಿಂಕೆ, ಮೊಲ, ಹಂದಿ ಮೊದಲಾದುವುಗಳ ಮಾಂಸ ಮನುಷ್ಯನೂ ಸಹ ತಿನ್ನಲು ಬರುವಂತಿದೆ.

ಆನೆ ಮೊದಲಾದುವುಗಳ ದಂತ ಬಲು ಬೆಲೆಯುಳ್ಳದ್ದು. ಸೀಲ್, ಹಿಮಕರಿ, ಚಿರತೆ, ಜಿಂಕೆ; ಮೊದಲಾದುವುಗಳ ಚರ್ಮ ಬಲು ಚೆಲುವಿನದು.

ಮಿಂಚುಳ್ಳಿ, ಉಷ್ಟ್ರ ಮೊದಲಾದ ಹಕ್ಕಿಗಳ ಗರಿಗಳನ್ನು ಹೇಟುಗಳಿಗೆ ಸಿಕ್ಕಿಸಲು ಬರುತ್ತದೆ—ಎಂದು.

ಈ ಪ್ರಾಣಿಶಾಸ್ತ್ರವನ್ನು ಕಲಿಯುವುದರಿಂದ—ತರತರದ ಪ್ರಾಣಿಗಳು ಹೆಚ್ಚಾಗಿ ಅಡಗಿರುವ ಸ್ಥಳ, ಅವುಗಳು ಮರಿಯಿಡುವ ಕಾಲ, ಇವುಗಳೆಲ್ಲ ಅತಿ ಸುಲಭವಲ್ಲಿ ತಿಳಿದು ಬಂದು ಅವುಗಳನ್ನು ಹಿಡಿಯಲು ಸಹಾಯವಾಗುವುದು.

ಕಾಡಿನಲ್ಲಿ ಬಲು ಕ್ರೂರವಾಗಿ ಸಂಚರಿಸುವ ಹುಲಿ, ಸಿಂಹ ಮೊದಲಾದ ಪ್ರಾಣಿಗಳು, ಕುದುರೆಯಂತೆ ಸವಾರಿಗೆ ಬರುವುದಿಲ್ಲವಾದರೂ, ಅವನ್ನು ಪಂಜರದಲ್ಲಿರಿಸಿದಾಗ ನೋಡಲು ಬಲು ಚಂದವಾಗಿರುವುದೆಂದು ಎಷ್ಟೋ ಶಾಸ್ತ್ರಜ್ಞರು ತರ್ಕಿಸುತ್ತಾರೆ.

ಇನ್ನೆಷ್ಟೋ ಪ್ರಾಣಿಗಳು—ಮನುಷ್ಯನಿಗೆ ಬರುವ ಪ್ಲೇಗು ಮೈಲಿಗೆ ಮೊದಲಾದ ರೋಗಾಣುಗಳನ್ನು ತಾವೇ ಹೊತ್ತು—ಬದಲು ಮನುಷ್ಯನಿಗೆ—ರೋಗ ನಿವಾರಕ ಸಿಧವು, ವೆಕ್ಸೀನ ಮೊದಲಾದುವನ್ನು ಕೊಟ್ಟು— ಪರೋಪಕಾರ ಮಾಡುತ್ತವಂತೆ. ಈ ಎಲ್ಲಾ ಕಾರಣಗಳಿಂದ ಮನುಷ್ಯನು ಪ್ರಾಣಿಗಿಂತ ಶ್ರೇಷ್ಠನೆಂದು ತಿಳಿಯುವುದು. ಪ್ರಾಣಿಗಳೂ ಸಹ ಈ ವಿಷಯದಲ್ಲಿ ಮನುಷ್ಯನನ್ನು ಇದಿರಿಸಲು ಮನಸ್ಸು ಮಾಡಲಿಲ್ಲವೆಂದು ಪಂಡಿತರು ಹೇಳುತ್ತಾರೆ.

ಈ ಎರಡು ಶಾಸ್ತ್ರಗಳನ್ನು ಚೆನ್ನಾಗಿ ಜೀರ್ಣಿಸಿಕೊಂಡ ಬಳಿಕ ನಾವು—ಸ್ವತಃ ನಮ್ಮ ದೇಹಶಾಸ್ತ್ರವನ್ನು ಕಲಿತುಕೊಳ್ಳಬೇಕಾಗುವುದು. ಅದೇ ಮುಂದಿನ ಅಧ್ಯಾಯದ ವಿಷಯ.

ಬಡ ಹಿಂದೂಸ್ಥಾನದ ಸಾಲದ ಹೊರೆ.

ಹಿಂದೂದೇಶದ ಸಾಲದ ಹೊರೆ ಎಷ್ಟು, ಅದನ್ನು ಕಡಿಮೆಮಾಡುವ ಸುಲಭೋಪಾಯಗಳಾವುವು, ಎಂಬುದನ್ನು ಚೆನ್ನಾಗಿ ವಿಚಾರಣೆ ನಡೆಸಿ ಒಂದು ವರದಿಯನ್ನೊಪ್ಪಿಸುವಂತೆ ಒಂದು ವಿಚಾರಣಾಸಮಿತಿಯನ್ನೇರ್ಪಡಿಸಬೇಕೆಂದು ಮಿ॥ ಹುಸ್ಸೇನ ಇಮಾಮರು ತಂದ ಠರಾವಿನ ಕುರಿತು ಕೌನ್ಸಿಲ್ ಸ್ಟೇಟಿನಲ್ಲಿ ಚರ್ಚೆ ನಡೆಯಿತು. ಆ ಚರ್ಚೆಯ ಸಂದರ್ಭದಲ್ಲಿ ತಿಳಿದು ಬಂದ ವಿಚಾರಗಳಿವು.

೧೯೨೩ನೇ ಮಾರ್ಚ ತಾ. ೩೧ಕ್ಕೆ ಅಂತ್ಯವಾಗುವ ವರ್ಷದಲ್ಲಿ ಹಿಂದೂಸ್ಥಾನದ ಸಾಲದ ಮೊತ್ತ ೮೮೩ ಕೋಟಿಗಳಷ್ಟಿತ್ತು. ೧೯೩೪ನೇ ಮಾರ್ಚಿಯಲ್ಲಿ ಇದು ೯೭೭॥ ಕೋಟಿಯಾಗಿದೆ. ಹೀಗೆ ಆ ಹನ್ನೊಂದು ವರ್ಷಗಳಲ್ಲಿ ಸಾಲವು ವರ್ಧಿಸುತ್ತಲೇ ಹೋಗಿದೆ.

NOTES
ನೋಟಗಳು

ಶಾಂತಿಗಾಗಿರುವ ನೊಬೆಲ್ ಬಹುಮಾನವನ್ನು ಗತಿಸಿದ ಆಸ್ಟ್ರಿಯದ ಛಾನ್ಸಲರ್ ಡೊಲ್ಫ ಸರವರ ಹೆಸರಲ್ಲಿ ಸಲ್ಲಿಸಬಾರದೇ ಎಂದು ಆ ಬಹುಮಾನಕ್ಕೆ ಸಂಬಂಧಪಟ್ಟ ಸಮಿತಿಯವರಿಗೊಂದು ಸೂಚನೆಯಾಗಿದೆ. ಕಾರಣ? ಡೊಲ್ಫ ಸರವರ ಮರಣವು ಯುರೋಪಿನ ಶಾಂತಿಪಾಲನೆಗೆ ಕಾರಣವಾಯಿತಂತೆ!

* * *

ಇದರಿಂದ ತಿಳಿದುಬರುವುದೇನು?—ಛಾನ್ಸಲರರಾಗಿ ಪಿಸ್ತೂಲಿನ ಪೆಟ್ಟಿಗೆ ಆಹುತಿಯಾಗಿ ಪರಮ ಶಾಂತಿಯನ್ನೈದಿದರೆ ಶಾಂತಿಗಾಗಿ ನೊಬೆಲ್ ಬಹುಮಾನ ದೊರೆಯಬಹುದು.

* * *

ಹುಚ್ಚು ನಾಯಿಯೊಂದು ರಥಬೀದಿಯಲ್ಲಿ ಕಳೆದ ಶನಿವಾರ ನಾಲ್ವರನ್ನು ಮಾತ್ರ ಕಚ್ಚುವುದರೊಳಗೆ ಕೊಲೆಗಡಕರ ದೊಣ್ಣೆಗೆ ಬಲಿಯಾಯಿತು. ಎರಡು ನಾಯಿಗಳನ್ನೂ ಅದು ಕಚ್ಚಿ ಉಪದೇಶಗೊಟ್ಟಿದೆಯಾದಕಾರಣ, ಹುಚ್ಚು ನಾಯಿಗಳ ಶಾಶ್ವತ ಸಂತಾನವೊಂದು ಉಳಿವ ಲಕ್ಷಣಗಳಿವೆ.

* * *

ಖಾನ್ ಅಬ್ದುಲ್ ಗಫರ್ ಖಾನರೂ ಅವರ ಸಹೋದರರೂ, ಜೈಲಿನಲ್ಲಿದ್ದಾಗ ಪಡೆಯುತಿದ್ದಷ್ಟೇ 'ಭತ್ತೆ'ಯನ್ನು ಈಗಲೂ ಪಡೆಯುತ್ತಿರುವರು. ಇದನ್ನು ಹೊಂದಲು ಖಾನ್ ದ್ವಯವು ಮಾಡಿದ ಮಹಾಕಾರ್ಯ ವಿಷ್ಣೇ-ಗಡಿನಾಡು ಮತ್ತು ಪಂಜಾಬಿಗೆ ಹೋಗಬಾರದೆಂಬ ನಿರ್ಬಂಧದ ನೋಟೀಸನ್ನು ಸರಕಾರದಿಂದ ಪಡೆದು ಓದಿದುದು!

* * *

ಮಂಗಳೂರು ನಗರದ ಆರೋಗ್ಯದ ವರದಿಯಲ್ಲಿ ಸಿಡುಬಿನ ಅಂಕೆಸಂಖ್ಯೆಗಳು ಕಡಿಮೆಯಾಗುತ್ತಿವೆ. ಆದರೆ, ಕ್ಷಯದಿಂದಾದ ಮರಣಗಳ ಸಂಖ್ಯೆಗಳು ಹೆಚ್ಚುತ್ತಿವೆ. ಹೇಗಿದೆ ಆರೋಗ್ಯದ ತಕ್ಕಡಿ?

* * *

ಅಶ್ಲೀಲ ಚಲಚ್ಚಿತ್ರಗಳ ವಿರುದ್ಧವಾಗಿ ಪ್ರಚಾರವು ಅಮೇರಿಕದಲ್ಲಿಯೂ ನಮ್ಮ ದೇಶದಲ್ಲಿಯೂ ಆರಂಭವಾಗಿದೆ. ಇದರಿಂದ ದರ್ಜಿಗಳ ಆರ್ಥಿಕ ಸಂಕಷ್ಟ ನಿವಾರಣೆಯಾಗಬಹುದೆಂಬ ನಿರೀಕ್ಷೆಯಿದೆ.

* * *

ಪೀಡಿಸಿ ವೋಟು ಪಡೆಯಬಾರದೆಂದು ಕೊಂಗ್ರೆಸ್ಸಿಗೆ ವೈಸರಾಯರ ಹಿತಸೂಚನೆ. ಪೀಡನೆಯು ಎಂದೂ ಜಯಶಾಲಿಯಾಗದು. ಅನುಭವಶಾಲಿಗಳಾಡಿದ ಮಾತನ್ನು ಕೊಂಗ್ರೆಸ್ಸು ಮಾಸಿಸದೇ?

* * *

ಒಂದು ಮೋಟಾರು ಬಸ್ಸಿಗಾಗಿ ಕಿನ್ನಿಗೋಳಿಯಲ್ಲಿ 'ಸುಮಾರು ನೂರಿನ್ನೂರು ಜನರು ಅಂಗಲಾಚಿ ಬೇಡಿ ಕಣ್ಣೀರು ಸುರಿಸಿದರೆಂದು ರಾಷ್ಟ್ರಬಂಧುವಿನಲ್ಲಿ 'ಪ್ರತ್ಯಕ್ಷದರ್ಶಿ'ಯ ವಾರ್ತೆ. ಬಹುಶಃ ಅಷ್ಟು ಕಣ್ಣೀರೂ ಮೋಟರ್ ಬಸ್ಸಿನಡಿಯಿಂದ ಹರಿದುಹೋಗಲಿಲ್ಲವೆಂದು ತೋರುವುದು. ಇಲ್ಲದಿದ್ದರೆ ಡ್ರೈವರ್ ಇಲ್ಲದೆ ಬಸ್ಸುಗಳು ತೇಲಿಬರುತಿದ್ದುವು.

* * *

'ಸಂಗೀತವೆಂಬ ಅಸ್ತ್ರದಿಂದ ಹಿಂದೂ-ಮುಸ್ಲಿಂ ಐಕ್ಯವು ಸಾಧ್ಯವೆಂದು ಜಯಕರ ಮಹಾಶಯರ ಅಭಿಪ್ರಾಯ! (ಅದನ್ನು ಮಜೀದಿಯ ಮುಂದೆ ನಡೆಸದಿದ್ದರೆ ಮಾತ್ರ ಎಂದು ನಮ್ಮ ಅಭಿಪ್ರಾಯ.)

ಮೋಡರ್ನ್ ರಿವ್ಯೂ ಪತ್ರಿಕಾಕರ್ತರು ಹೊಣೆ ತೆರಬೇಕು!

ಕಲ್ಕತ್ತೆಯ 'ಮೋಡರ್ನ್ ರಿವ್ಯೂ' ಪತ್ರಿಕೆಯ ಮುದ್ರಕರೂ ಪ್ರಕಾಶಕರೂ ಮ್ಯಾನೇಜರೂ ಒಂದು ಸಾವಿರ ರೂಪಾಯಿಯ ಹೊಣೆ ತೆರಬೇಕೆಂದು 'ಪ್ರೆಸ್ ಎಮರ್ಜೆನ್ಸಿ' ಕಾನೂನಿನನ್ವಯ ಅವರಿಗೆ ನೋಟೀಸು ಕಳುಹಿದೆ. ವಿದೇಶೀ ಪತ್ರಿಕೆಗಳಿಂದ ಕೆಲವೊಂದು ಲೇಖನಗಳನ್ನೆತ್ತಿ ಕೊಟ್ಟುದರಲ್ಲಿ ಆಕ್ಷೇಪಕರ ಅಂಶವಿತ್ತಂತೆ. ಹೊಣೆಯನ್ನು ಇದೇ ತಾ. ೭ರೊಳಗೆ ತೆರಬೇಕಾಗಿದೆ.

ಅಮೇರಿಕದ ಡಾಕ್ಟರರ ದಸ್ತಗಿರಿ!

ಚಿಕಾಗೋ ನಗರದ ಐದು ಮಂದಿ ಡಾಕ್ಟರರನ್ನೂ ಪಾತ್ರಿಟ್ಟರು ಪ್ರಮುಖರನ್ನೂ ದಸ್ತಗಿರಿ ಮಾಡಿರುವರು. ಕೆಲಕಾಲದ ಹಿಂದೆ ಕೊಲ್ಲಲ್ಪಟ್ಟ 'ಅಮೇರಿಕದ ನಂಬ್ರ ೧ನೇ ಶತ್ರು'ವೆನಿಸಿದ ಡಿಲ್ಲಿಂಜರನ ಮುಖದ ಮೇಲೆ ಶಸ್ತ್ರಕ್ರಿಯೆ ನಡೆಸಿ ಇವರು ಅವನ ಗುರುತು ಪೋಲೀಸರಿಗೆ ಹತ್ತದಂತೆಮಾಡಲು ಸಹಕಾರಿಯಾದವರೆಂದು ಆಪಾದನೆ.

ಉಗ್ರ ಉಪವಾಸ

ಶಿನ್ ಅರ್ಯ ಎಂಬ ಬರ್ಮೀಯ ಕೈದಿಯು ಮಂಡಲೇ ಜೈಲಿನಲ್ಲಿ ಉಪವಾಸ ಹಿಡಿದು ೫೦ ದಿನಗಳು ದಾಟಿದುವು. ತನ್ನನ್ನು 'ಎ' ತರಗತಿಗೆ ಕಳುಹಲಿಲ್ಲವೆಂಬುದೇ ಉಪವಾಸದ ಕಾರಣ.

ಮಾಲವೀಯ-ಪಲ್ಲಭಭಾಯಿಯವರೊಳಗೆ ಒಪ್ಪಂದವಾಗುವುದೇ?

ಪಂಡಿತ ಮಾಲವೀಯರನ್ನು ಪುನಃ ಕೊಂಗ್ರೆಸ್ಸಿನ ಕಡೆಗೆ ಒಲಿಸಿಕೊಳ್ಳುವರೆ ಯತ್ನಗಳಾಗಿವೆಯೆಂದೂ, ಮಾಲವೀಯರು ತಮ್ಮ ರಾಷ್ಟ್ರೀಯ ಪಕ್ಷವನ್ನು ಕೊಂಗ್ರೆಸ್ಸಿನೊಳಗೇ ಭುಕ್ತ ಮಾಡಬಹುದೆಂದೂ ಒಂದು ಸುದ್ದಿ.

ಪದ್ಮೆಯ ಪ್ರಕೋಪ.
ಬಿಹಾರ್ ಮತ್ತು ಬಂಗಾಳಗಳಲ್ಲಿ ನೆರೆ.

ಹಿಂದೆಂದೂ ಕಂಡೂ ಕೇಳದಂತಹ ಭಯಂಕರ ನೆರೆಯು ಇಂದು ಬಂಗಾಳದಲ್ಲಿಯೂ ಬಿಹಾರಿನಲ್ಲಿಯೂ ಹಾವಳಿಗಿಟ್ಟಿದೆ. ಪದ್ಮಾನದಿಯು ಉಕ್ಕಿ ಹರಿದು, ಇಬ್ಬದಿಗಳಲ್ಲಿಯೂ ಜಲಸಾಮ್ರಾಜ್ಯವೇ ಸ್ಥಾಪನೆಯಾಗಿದೆ! ರಾಜರಸ್ತೆಗಳು ಹಾಳುಬಿದ್ದಿವೆ. ಅಲ್ಲಲ್ಲಿ ರೈಲ್ವೆ ಲೈನುಗಳು ಕಡಿದುಹೋಗಿವೆ

ಕೆಂಬ್ರಿಜ್ ವಿಶ್ವವಿದ್ಯಾಲಯದ ಹೊಸ ಗ್ರಂಥಾಲಯ.

ಐದು ಲಕ್ಷ ಪವನುಗಳ ವ್ಯಯದಿಂದ ರಚಿಸಿದ ಕೆಂಬ್ರಿಜ್ ವಿಶ್ವವಿದ್ಯಾಲಯದ ಹೊಸ ಗ್ರಂಥಾಲಯವನ್ನು ಬರುವ ತಿಂಗಳಲ್ಲಿ ನಮ್ಮ ಸಾರ್ವಭೌಮರು ತೆರೆಯುವರು.

ನೆರೆಹಾವಳಿ ಪ್ರದೇಶದವರಿಗೆ ಸಹಾಯ.

ಬಿಹಾರ್ ಭೂಕಂಪನಿಧಿಯಿಂದ ನೆರೆಹಾವಳಿ ಪ್ರದೇಶದಲ್ಲಿನ ಜನರಿಗೆ ಸಹಾಯ ಸಲ್ಲುವುದು ಅತೀವ ಆಗತ್ಯವೆಂದು ತೋರಿ, ಸುಮಾರು ೩ ಲಕ್ಷ ರೂಪಾಯಿಗಳಷ್ಟು ಮೊಬಲಗನ್ನು ಈ ಬಗ್ಗೆ ಪ್ರತ್ಯೇಕಿಸಲಾಗಿದೆ. ಛಾಪ್ರಾ ಜಿಲ್ಲೆಗೆ ರೂ. ೨೦ ಸಾವಿರ; ಮುಜಫರ ಪುರಕ್ಕೆ ೧೬ ಸಾವಿರ; ಮೊಂಘೀರಕ್ಕೆ ೧೮ ಸಾವಿರ; ಪಾಟ್ನಾಕ್ಕೆ ೧೬,೪೦೦; ಶಹಾಬಾದಿಗೆ ೭೦೦೦; ಪೂರ್ಣಿಯಕ್ಕೆ ೭೦೦೦; ಭಾಗಲ್ಪುರಕ್ಕೆ ೫೦೦೦; ಗಯಾ ೬೩೦೦; ದರ್ಭಾಂಗ ೫೦೦೦.

ಪುದುಕೋಟೆಯ ರಾಣಿಯವರಿಗೆ ಜಖಂ.

ಪುದುಕೋಟೆಯ ಮಹಾರಾಣಿಯವರು ಲಂಡನಿನಲ್ಲಿದ್ದಾರೆ. ಅವರು ಕುಳಿತ ಮೋಟಾರು ಕಳೆದ ವಾರ ಸಸ್ಸೆಕ್ಸ್ ಎಂಬಲ್ಲಿ, ಒಂದು ಲೋರಿಗೆ ಢಿಕ್ಕಿ ಹೊಡೆದು, ರಾಣಿಯವರಿಗೆ ಜಖಂ ಉಂಟಾಗಿ ಆಸ್ಪತ್ರೆಗೆ ಚಿಕಿತ್ಸೆ ಬಗ್ಗೆ ಸಾಗಿಸಿರುವರು.

ಪುನಃ ಭೂಕಂಪ?

ಕಳೆದ ತಿಂಗಳ ಕೊನೆಯ ವಾರದಲ್ಲಿ ಬಿಹಾರ್ ಪ್ರಾಂತ್ಯವೆಲ್ಲ ಮತ್ತೊಮ್ಮೆ ಬಲವಾಗಿ ನಡುಗಿಹೋಯಿತು! ಬಲವಾದ ಭೂಕಂಪ! ಜನರೆಲ್ಲ ಭಯಭೀತರಾಗಿ ಮನೆಗಳನ್ನು ಬಿಟ್ಟು ಹೊರಗೋಡಿಬಂದು ನಿಂತರು. ಕೆಲವೇ ಕ್ಷಣ ಮಾತ್ರ ಕಂಪನವಾಯಿತು! ಕಟ್ಟಡಗಳಿಗೆ ಹಾನಿ ತಟ್ಟಲಿಲ್ಲವೆಂಬುದೊಂದು ದೊಡ್ಡ ಅದೃಷ್ಟವೇ ಆಗಿದೆ.

(ಈ ಜಿಲ್ಲೆಯಿಂದ ಮುಂದುವರಿದುದು)

ಉಡುಪಿಗೆ ಹೆಗ್ಗೆ ಹಲವು ನರ್ಸ್ ಆಸ್ಪತ್ರೆಗಳು, ಇಲ್ಲಿನ ಪತ್ರದುಷರ ಇಲ್ಲಿ ಕೆಲವು ಹಿಂದೂಗೃಹಸ್ಥರ ಅಭಿಪ್ರಾಯವನ್ನು ತಿಳಿಸಬಹುದಿತ್ತು. ಇತರ ಅಧಿಕಾರರಂತೆಯಾದರೂ ತಾವು ಸ್ವತಹ ನೋಡಿಕೊಂಡು ನಿಧಾನವಾಗಿ ಈ ಸಂಗತಿಯನ್ನು ಇತ್ಯರ್ಥಮಾಡಬಹುದಿತ್ತು. ಬೋರ್ಡ್ ಮೆಂಬರರು ಮತ್ತು ವೋಟರರೇ ಇದಕ್ಕೆ ಉತ್ತರವೀಯಲಿ ಎಂದು ಬಾತ್ಮಿದಾರರೊಬ್ಬರು ಬರೆಯುತ್ತಾರೆ.

ಪಡುಬಿದ್ರೆ — ಸ್ಥಳೀಯ ಉದಯಾದ್ರಿ ಗಣೇಶ ಮಂದಿರದಲ್ಲಿ ಎಂದಿನಂತೆ ನಡೆದುಬರತಕ್ಕ ಚೌತಿ ಮಹೋತ್ಸವವು ಸಪ್ಟಂಬರ ತಾ. ೧೧ನೇ ಮಂಗಳವಾರದಿಂದ ಒಕ್ಟೋಬರ ತಾ. ೧೭ನೇ ವಿಜಯದಶಮಿ ಪರಿಯಂತರ ನಡೆಯುವುದು. ಭಕ್ತಾದಿಗಳೆಲ್ಲರಿಗೂ ಸುಸ್ವಾಗತ.

ಉದ್ಯಾವರ — ಈ ಗ್ರಾಮದಲ್ಲಿರುವ ರೈತರು ಹಾಗೂ ಸಾಹುಕಾರರಾದ ಶ್ರೀಯುತ ಯು. ಸದಿಯ ಮರಕಾಲರವರು ವರುಷಂಪ್ರತಿ ನಡೆಸಿಕೊಂಡು ಬಂದಂತೆಯೇ ಈ ವರ್ಷವೂ ಶ್ರೀ ಕೃಷ್ಣಾಷ್ಟಮಿಯ ಮುಂಚಿನ ದಿನ (ತಾ. ೩೦-೮-೩೪ನೇ) ಬೃಹಸ್ಪತಿವಾರ ದಿನ ಬೆಳಿಗ್ಗೆ ಸುಮಾರು ೯ ಗಂಟೆಯಿಂದ ಅಪರಾಹ್ನ ೩ ಗಂಟೆಯ ವರೆಗೆ ಜಾತಿಭೇದವಿಲ್ಲದೆ ಸುಮಾರು ೩೦೦೦ ಜನರಿಗೆ ಪ್ರತಿಯೊಬ್ಬರಿಗೆ ತಲೆತುಂಬಾ ಎಣ್ಣೆ ಎರೆದು, ಸುಮಾರು ೩೮ ಮುಡಿ ಮುಸ್ಕಿ ಅಕ್ಕಿ ದಾನ ಮಾಡಿದರು.

ಈ ಪುಣ್ಯಾತ್ಮರು ಬಡವರ ಮೇಲೆ ಕರುಣೆಯಿಟ್ಟು ಆ ಧರ್ಮವನ್ನು ನಡೆಸಿದ್ದರಿಂದ ಶ್ರೀ ಕೃಷ್ಣಗೋಕುಲಾಷ್ಟಮಿಯ ಹಬ್ಬವು ಬಡಬಗ್ಗರಿಗೆ ಆಹಾರದ ಕೊರತೆ ಇಲ್ಲದೆ ಅತಿ ಸಂತೋಷದಿಂದ ಆಚರಿಸುವಂತಾದುದು ಅತ್ಯಂತ ಶ್ಲಾಘನೀಯವು.

ಕಾರ್ಕಳ — ಈ ತಾಲೂಕಿನ ಎಲಿಮೆಂಟರಿ ಶಾಲೆಗಳ ಉಪಾಧ್ಯಾಯರ ಸಂಘತ್ತು ಇದೇ ತಿಂಗಳ ತಾ. ೧೫ನೇ ಶನಿವಾರ ಪೂರ್ವಾಹ್ನ ಗಂಟೆ ೯.೩೦ಕ್ಕೆ ಕಾರ್ಕಳ ಬೋರ್ಡ್ ಹೈ ಎಲಿಮೆಂಟರಿ ಶಾಲೆಯಲ್ಲಿ ಜರಗುವುದಾಗಿಯೂ, ಮೇಲಾಧಿಕಾರಿಗಳ ಹುಕುಂ ಮೇರೆಗೆ ಕಾರ್ಕಳ ತಾಲೂಕಿನ ಎಲ್ಲಾ ಪ್ರಾಥಮಿಕ ಶಾಲೆಗಳ ಉಪಾಧ್ಯಾಯರು ಸದರಿ ಮಹಾಸಭೆಗೆ ತಪ್ಪದೆ ಬರಬೇಕಾಗಿ ಅಪೇಕ್ಷಿಸೋಣಾಗುತ್ತದೆಂದೂ, ಠರಾವುಗಳನ್ನು ಕಳುಹಿಸಬಯಸುವವರು ಮೂರು ದಿನಗಳ ಮೊದಲಾಗಿ ಸಂಘದ ಕಾರ್ಯದರ್ಶಿಯವರಿಗೆ ಆ ಕುರಿತು ಸೂಚಿಸತಕ್ಕದ್ದಾಗಿಯೂ ಸಂಬಂಧಪಟ್ಟ ಎಲ್ಲಾ ಉಪಾಧ್ಯಾಯರಿಗೆ ಈ ಮೂಲಕ ತಿಳಿಸೋಣಾಗುತ್ತದೆ.

ಹಿರಿಯಡ್ಕ — ಇಲ್ಲಿಯ ಆಶ್ವಿಸಮಾಜ ಮಂದಿರದಲ್ಲಿ ತಾ. ೨೪-೮-೩೪ರಲ್ಲಿ ಶ್ರೀ ಎಚ್. ಮಂಜುನಾಥರಾಯರ ಪೌರೋಹಿತ್ಯದಲ್ಲಿ, ಉಪಾಕರ್ಮವಿಧಿಯು ಜರಗಿತು. ಸಮಾಜದ ಸದಸ್ಯರೂ, ಇತರರೂ ತುಂಬಾ ನೆರೆದಿದ್ದರು. ಶ್ರೀ ಓ. ಕೆ. ಅನಂತಯ್ಯನವರು "ಯಜ್ಞೋಪವೀತ" ಎಂಬುದರ ಕುರಿತೂ, ಶ್ರೀ ಹಿರಿಯಡ್ಕ ವಿರೇಜ ವೆಂಕಟ್ರಮಣಯ್ಯನವರು "ಸಾಪ್ತಾಹಿಕ ಅಧಿವೇಶನ"ದ ಕುರಿತೂ, ಭಾಷಣಗಳನ್ನಿತ್ತ ಮೇಲೆ ಅಂದಿನ ಸಭೆಯು ಮುಕ್ತಾಯವಾಯಿತು. ತಾರೀಕು ೨೬-೮-೩೪ರಲ್ಲಿ ಜರಗಿದ ಅಧಿವೇಶನದಲ್ಲಿ ಶ್ರೀ ದಿ. ಲಕ್ಷ್ಮಣದೇವ ವಿದ್ಯಾರ್ಥಿಯವರ ಸದ್ಧರ್ಮ ಪ್ರಚಾರಕ ಗ್ರಂಥಮಾಲೆಯಿಂದ ಪ್ರಕಟಿಸಲ್ಪಟ್ಟ "ನಮ್ಮ ದೇಶ" ಎಂಬ ಪುಸ್ತಕವನ್ನು ಸವಿಸ್ತಾರವಾಗಿ ಓದಿಹೇಳಿದ ನಂತರ ಶ್ರೀ ಹಿ. ಕೆ. ಅನಂತಯ್ಯನವರು "ಸಂಧ್ಯಾವಂದನೆಯ ಮಹತ್ವ"ದ ಕುರಿತು ಚಿಕ್ಕ ಭಾಷಣವನ್ನಿತ್ತರು. ತಾ. ೨-೯-೩೪ನೇ ಆದಿತ್ಯವಾರವೂ ಎಂದಿನಂತೆ ಸಾಪ್ತಾಹಿಕ ಅಧಿವೇಶನವು ಯಥಾಯೋಗ್ಯವಾಗಿ ಜರಗಿ ಮುಗಿಯಿತು.

ಮೂಲ್ಕಿ — ಸ್ಥಳೀಯ ಲೋಕಲ್ ಫಂಡ್ ಆಸ್ಪತ್ರೆಯ ಬಡ ನಿಧಿಯ ದಾನಾ ಮಹಾಸಭೆಯೂ ತಾರೀಕು ೨೬-೮-೩೪ರಲ್ಲಿ ಡಾಕ್ಟರ್ ಕರಂಜೆ ರಾಮರಾಯರ ಅಧ್ಯಕ್ಷತೆಯಲ್ಲಿ ಜರಗಿ, ಸದರಿ ನಿಧಿಯ ನಿಬಂಧನೆಗಳು ಮಂಜೂರು ಮಾಡಲ್ಪಟ್ಟು, ಸದ್ರಿ ಡಾಕ್ಟರರು ಅತ್ಯಂತ ಸಂತೋಷದಿಂದ ಒಪ್ಪಿಸುವೆನೆಂದು ವಾಗ್ದಾನಮಾಡಿದ ರೂ. ೩೫೦ನ್ನು ವಂದನಾಪೂರ್ವಕ ಸ್ವೀಕರಿಸಿದ್ದಲ್ಲದೆ, ಸದ್ರಿ ಧನಸಹಾಯಕ್ಕೆ ಫಂಡಿನಿಂದ ರೂ. ೩೫೦ನ್ನು ಹಾಕಿ ಒಂದು ವೆರಿಗೆವಾರ್ಡನ್ನು ಆಸ್ಪತ್ರೆಯ ವಠಾರದಲ್ಲಿ ಕಟ್ಟಿಸಿ, ಅದಕ್ಕೆ "ಶ್ರೀಮತಿ ರಮಾಬಾಯಿ ರಾಮರಾವ್ ಕರಂಜೆ ಸ್ಮಾರಕಮಂದಿರ" ಎಂಬ ಹೆಸರನ್ನಿಡುವುದಾಗಿ ನಿರ್ಣಯಿಸಲಾಯಿತು.

ಕಾದಪ್ರಿತ್ಯದ ಕಾರಖಾನೆ!

ಮದರಾಸು ನಗರದೊಳಗೆ ನಾನಾ ಕಾರಣಗಳಿಂದ ಹೆಚ್ಚುತ್ತಿರುವ ಕಳ್ಳಭಟ್ಟಿಯ ಮತ್ತು ಅದರ ಬಾಧಕ ಸಾಧಕಗಳೇನು ಎಂಬುದನ್ನು ಪರಿಶೀಲಿಸಿ ವರದಿಯನ್ನೊಪ್ಪಿಸಲು ಒಂದು ಸಮಿತಿಯನ್ನೇರ್ಪಡಿಸಬೇಕೆಂದು ಮದರಾಸು ನಗರಸಭೆಯಲ್ಲಿ ಮಿ. ಅಬ್ದುಲ್ ಅಜೀಜ್ ಖಾನರೆಂಬ ಸದಸ್ಯರು ಒಂದು ಠರಾವು ತರಲಿದ್ದಾರೆ.

ಅಮೇರಿಕದಲ್ಲಿ ಮಹಾಮುಷ್ಕರ.

ಸಂಯುಕ್ತ ಅಮೇರಿಕದ ಕೂಲಿಗಾರರು ಅಳವಳಿ ಮಹಾ ಮುಷ್ಕರವನ್ನಾರಂಭಿಸಿರುವರು. ಸುಮಾರು ಒಂದು ಮಿಲ್ಲಿಯದಷ್ಟು ಜನರು ಈ ಮುಷ್ಕರದಲ್ಲಿ ಸೇರಿರುವರೆಂದು ಅಂದಾಜುಮಾಡಲಾಗಿದೆ. ೩೦೦ ಅರಳೆ ಗಿರಣಿಗಳಲ್ಲಿನ ಅರ್ಧ ಮಿಲ್ಲಿಯ ಕೆಲಸಗಾರರು; ರೇಶ್ಮೆ ಕಾರ್ಖಾನೆಗಳ ೩ ಲಕ್ಷ ಕೆಲಸಗಾರರು; ಉಣ್ಣೆ ಕಾರ್ಖಾನೆಗಳ ೧೪ ಲಕ್ಷ ಕೆಲಸಗಾರರು. ಕೆಲಸದ ಅವಧಿಯನ್ನು ದಿನಕ್ಕೆ ಆರು ತಾಸುಗಳಾಗಿ ಮತ್ತು ವಾರಕ್ಕೆ ೫ ದಿನಗಳಾಗಿ ನಿಶ್ಚಯಿಸಬೇಕೆಂಬುದು ಇವರ ಮುಖ್ಯ ಬೇಳಿಕೆ. ಶಾಂತಿಯುತ್ತಗಳು ನಡೆದಿವೆ.

ನೋಟೀಸು.
ಉಡ್ಪಿ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ.

O. P. No. 46/1934.

ವಾದಿರಾಜ ಭಟ್ಟ—ಪದ್ಮನಾಭ ಭಟ್ಟರ ಮಗ ಶಿವಳ್ಳಿ ಬ್ರಾಹ್ಮಣ - ಕೊಡಂಗಳ—ಮಣಿಪುರ ಗ್ರಾಮ- ಉಡುಪಿ ತಾಲೂಕು— ಅರ್ಜಿದಾರ.

ಮತ್ತು

1. ನಾರಾಯಣ ಭಟ್ಟ, 2. ರಂಗಭಟ್ಟ, 3. ರಾಮಕೃಷ್ಣ ಪೋತಿ, 4. ಶ್ರೀನಿವಾಸನ್ ಪೋತಿ, 5. ಅನಂದತೀರ್ಥ ಭಟ್ಟ—ಶಿವಳ್ಳಿ ಬ್ರಾಹ್ಮಣರು—ಕೊಡಂಗಳ ಪದ್ಮನಾಭ ಭಟ್ಟರ ಮಕ್ಕಳು—ಎದ್ರಿರು.

ಇವರೊಳಗೆ—

ತಾ. 22-6-1934ರಲ್ಲಿ ಮೃತಪಟ್ಟ ತನ್ನ ತಮ್ಮ ವಾಸುದೇವನ ಹೆಂಡತಿ ಭೂಮಿಯಮ್ಮ [illegible]ಳ ಸಕಲ ಸೊತ್ತುಗಳಿಗೆ ತಾನು ವ [illegible] ಮಾತ್ರ ಹಕ್ಕುದಾರರೆಂದೂ- ವ್ಯಕಳು ವಾದಿಯಾಗಿ ನರಸಿಂಹಾಚಾರ್ಯನ ಮೇಲೆ ನಡೆಸಿದ ಕಾರ್ಕಳ ಮುನ್ಸಿಫ್ ಕೋರ್ಟ್ ಕ್ರಮ ನಂಬ್ರ 382/34ನೇ ವ್ಯಾಜ್ಯದಲ್ಲಿ ಪ್ರತಿವಾದಿಯು ರಾಜಿಯಾದ ವಾದಿ ಕಡೆ ವಕೀಲರು ಮಾ। ರಾ। ಎ. ಎನ್. ಸೀತಾರಾಮಾಚಾರ್ಯ ಬಿ. ಎ. ಬಿ. ಎಲ್ ಇವರ ಹಸ್ತ ಸಲ್ಲಾಸಿದ ಬಾಬತು, ಸದರಿ ವಕೀಲರ ಕೈಯ ಇರತಕ್ಕ ರೂ. 120—8—0ನ್ನು ಪಡಕೊಳ್ಳುವ ಬಗ್ಗೆ ತನಗೆ 1925ನೇ ಇಸವಿಯ XXXIXನೇ ಆಕ್ಟಿನ ಸೆಕ್ಷನ್ 372, ಪಾರ್ಟು X ಮೇರೆಗೆ ಒಂದು ಪಾರೀಸ್ ಸರ್ಟಿಫಿಕೇಟು ಕೊಡಬೇಕಾಗಿಯೂ ವಗ್ಯೆರೆ ಹೇಳಿ ಅರ್ಜಿದಾರನು ಮೇಲ್ಕಂಡ ಕೋರ್ಟಿಗೆ ಅರ್ಜಿಮಾಡಿದ್ದಾನೆ. ಅರ್ಜಿಯು ತಾ. 29-9-34ಕ್ಕೆ ತನಖಿಗೆ ಬರುತ್ತದೆ. ಆಕ್ಷೇಪಿಸುವವರು ಆ ದಿನ ಬೆಳಿಗ್ಗೆ 10 ಘಂಟೆಗೆ ಹಾಜರಾಗಿ ಜಾಹೀರು ಮಾಡತಕ್ಕದ್ದು ಎಂಬ ಸಂಗತಿ ಈ ಮೂಲಕ ತಿಳಿಸಿಯದೆ.

Udipi, 6-9-34. (Sd) P. N. Madhava Rao, ಅರ್ಜಿದಾರನ ಕಡೆ ವಕೀಲ

ನೋಟೀಸು.
ಮಂಗಳೂರು ಮುನ್ಸೀಫ್ ಕೋರ್ಟಿನಲ್ಲಿ.

I. P. No. 34/34.

ಎಮ್. ದೇವರಾಯ ಶೆಣೈ—ಅರ್ಜಿದಾರ

ಮತ್ತು

ಬಿ. ಅನಂತ ಶೆಣೈ ಕೂಡಾ—ರೆಸ್ಪಾಂಡೆಂಟರು.

ಅರ್ಜಿದಾರನು ಈ ಮೂಲಕ ತಿಳಿಯಪಡಿಸುವುದೇನೆಂದರೆ:—

ಮೇಲೆ ಹೆಸರು ಕಾಣಿಸಿದ ಅರ್ಜಿದಾರನು ನನ್ನನ್ನು ದಿವಾಳಿಯೆಂದು ಸ್ಥಾಪಿಸಬೇಕೆಂತ ಮೇಲಣ ಕೋರ್ಟಿನಲ್ಲಿ ದಾಖಲು ಮಾಡಿದ I. P. 34/34ನೇ ಅರ್ಜಿಯು ತಾ. 12-9-'34ಕ್ಕೆ ತನ್ನಿಗೆ ಇಟ್ಟಿದೆ. ಆ ಬಗ್ಗೆ ಆಕ್ಷೇಪಿಸುವವರು ತಮ್ಮ ಆಕ್ಷೇಪಣೆಗಳನ್ನು ಸದ್ರಿ ತಾರೀಕಿಗೆ ಸದ್ರಿ ಕೋರ್ಟಿಗೆ ಹ್ವಾಜೀರು ಮಾಡಿಕೊಳ್ಳತಕ್ಕದ್ದು.

ಮಂಗಳೂರು, ತಾ. 15-8-34. K. Gopal Rao, ಅರ್ಜಿದಾರನ ಕಡೆ ಎಡ್ವೋಕೇಟ್.

ಮಂಗಳೂರು.

ಶಾರದಾ ವಿದ್ಯಾಲಯದಲ್ಲಿ ೬ ದಿನ ಸಾಯಂಕಾಲ ಗಂಟೆ ೬-೩೦ಕ್ಕೆ ವಿದ್ವಾನ್ ಟಿ. ನಾರಾಯಣ ಭಟ್ಟರ ಅಧ್ಯಕ್ಷತೆಯಲ್ಲಿ ಲೀಲಾಮಾನುಷ ಶ್ರೀಕೃಷ್ಣನ ವಿಷಯ ಶ್ರೀಯುತ ಪಂಜೂರು ಲಕ್ಷ್ಮೀನಾರಾಯಣ ಪುಣಿಂಚತ್ತಾಯರು ಭಾಷಣ ಮಾಡುವರು. ನಂತರ ಬಾಲಿಕೆಯೊಬ್ಬಳ ಗಾಯನವೂ ಇದೆ. ಸರ್ವರಿಗೂ ಸ್ವಾಗತವಿದೆ!

ಇದೇ ಬರುವ ಮುನಿಸಿಪಾಲಿಟಿ ಚುನಾವಣೆಗೆ ಖಾಲಿ ಬೀಳಲಿರುವ ಯಾವುದಾದರೂ ಒಂದು ವಾರ್ಡಿಗೆ ಪಡುಂಬೂರು ರಂಗಶರ್ಮ್ಯಯವರು ಉಮೇದ್ವಾರರಾಗಿ ನಿಲ್ಲಲಿಚ್ಛಿಸುವರಾಗಿ ತಿಳಿದುಬರುತ್ತದೆ.

ಇದೇ ತಾ. ೯ನೇ ಆದಿತ್ಯವಾರ ಬೆಳಗ್ಗೆ ಗಂಟೆ ೮ಗೆ ಸರಿಯಾಗಿ ಶಾಂಡೇಶ್ವರದಲ್ಲಿರುವ ಸಿಟಿ ಅಭ್ಯಸವಾಸ ಮಂದಿರದಲ್ಲಿ "ಗಣೇಶ ಜನ್ಮ"ದ ಕುರಿತು ಭಾಷಣವಿರುವುದು. ಚೌತಿಹಬ್ಬದ ಕುರಿತು ಕೆಲವು ಮಹನೀಯರು ಮಾತನಾಡಲಿರುವರು. ಸರ್ವರಿಗೂ ಸ್ವಾಗತವಿದೆ.

ಸ್ಪೆಶಲ್ ಸ್ವಾಟ್ ಸ್ಕೂಲುಗಳಲ್ಲಿ ಒಂದು ವರ್ಷ ಕಲಿತು ೮ನೇ ದರ್ಜೆ ಸರ್ಟಿಫಿಕೇಟನ್ನು ಡಿಪ್ಯೂಟಿ ಇನ್ಸಪೆಕ್ಟರರಿಂದ ಪಡೆದ ಲೋವರ್ ಎಲಿಮೆಂಟರಿ ಗ್ರೇಡ್ ಟ್ರೈನ್ಡ್ ಉಪಾಧ್ಯಾಯರ ಸರ್ಟಿಫಿಕೇಟುಗಳನ್ನೂ, ಅವರು ೧೯೩೩ನೇ ಇಸವಿ ಸಪ್ಟಂಬರ ತಾ. ೪ರ ಮೊದಲು ಪಾಸಾಗಿದ್ದರೆ ಹಾಯರ್ ಎಲಿಮೆಂಟರಿ ಗ್ರೇಡ್ ಸರ್ಟಿಫಿಕೇಟಾಗಿ ಮಾರ್ಪಡಿಸಬಹುದೆಂದು ಕಳೆದ ಅಗೋಸ್ತು ತಾ. ೨೪ರ ಫೋರ್ಟ್ ಸ್ಯಂಟ್ ಜೋರ್ಜ ಗಜೇಟಿನಲ್ಲಿ ಪ್ರಕಟವಾಗಿದೆ.

"ಎಲಿಮೆಂಟರಿ ಶಾಲಾ ಉಪಾಧ್ಯಾಯರ ಜಿಲ್ಲಾ ಸಂಘದ ಮಹಾಸಭೆಯು ಬರುವ ತಾ. ೧೩-೧೦-೩೯ನೇ ಶುಕ್ರವಾರ ಅಪರಾಹ್ನ ಗಂಟೆ ೧ರಿಂದ ೪ರ ವರೆಗೆ ಪುತ್ತೂರು ಹಾಯರ್ ಎಲಿಮೆಂಟರಿ ಶಾಲೆಯಲ್ಲಿ ಜರಗುವುದು. ಬೋರ್ಡು, ಏಡೆಡ್, ಪಂಚಾಯತ, ಲೇಬರ್ ಮುಂತಾದ ಎಲ್ಲಾ ಶಾಲೆಗಳ ಉಪಾಧ್ಯಾಯರೂ ಉಪಾಧ್ಯಾಯಿನಿಯರೂ, ವಿದ್ಯಾಭಿಮಾನಿಗಳೂ ದಯಮಾಡಿ ಸಂಘದ ಸಭಾಕಾರ್ಯವನ್ನು ನೆರವೇರಿಸಿಕೊಡಬೇಕಾಗಿ ವಿನಂತಿ. ಜಿಲ್ಲೆಯ ಪ್ರತಿಯೊಂದು ರೇಂಜಿನಿಂದ ೫ ಮಂದಿಗೆ ಕಡಿಮೆಯಾಗದಂತೆ ಪ್ರತಿನಿಧಿಗಳನ್ನು ಕಳುಹಿಸಿಕೊಡುವುದೂ ಪ್ರತಿನಿಧಿಗಳ ಹೆಸರುಗಳನ್ನೂ, ಸಭೆಯಲ್ಲಿ ಇಡಬೇಕಾದ ನಿರ್ಣಯಗಳನ್ನೂ ೧೦ ದಿವಸಗಳಿಗೆ ಮುಂದಾಗಿ ನಮಗೆ ಮುಂದಾಗಿ ರವಾನಿಸಿಕೊಟ್ಟರೆ ಉತ್ತಮ. ಮಹಾಸಭೆಯು ಪುತ್ತೂರು ದಸರಾ ಮಹೋತ್ಸವದ ಕಾಲದಲ್ಲಿ ನಡೆಯುವುದರಿಂದ ನೂತನ ತರದ ದಸರಾ ಮಹೋತ್ಸವವನ್ನೂ ಕಲಾ ಪ್ರದರ್ಶನವನ್ನೂ ನೋಡಿ ಯಾ ಭಾಗವಹಿಸಿ ಆನಂದ ಪಡಲು ಒಳ್ಳೇ ಸಂದರ್ಭ. ಆದುದರಿಂದ ಉತ್ಸಾಹವುಳ್ಳ ಜಿಲ್ಲೆಯ ಉಪಾಧ್ಯಾಯರು ದಯಮಾಡಿಸುವರಾಗಿ ಭರವಸೆ" ಎಂದು ಜಿಲ್ಲಾ ಕಾರ್ಯದರ್ಶಿಯವರು ಬರೆಯುತ್ತಾರೆ.

ಅತ್ತಾವರದ ಶ್ರೀ ಅರಸು ಮುಂಡತ್ತಾಯ ದೇವಾಲಯದವರ ಆಶ್ರಯದಲ್ಲಿ "ಶ್ರೀ ಕೃಷ್ಣ ಜಯಂತ್ಯುತ್ಸವ ಕಮಿಟಿ"ಯವರು ವರ್ಷಂಪ್ರತಿ ನಡೆಸುವ 'ಮೊಸರು ಗಡಿಗೆ' ಸನ್ನಾರಂಭಕ್ಕೆ ಸಂಬಂಧಪಟ್ಟ ಪೂಜಾದಿ ವಿನೋದಗಳು ಈ ವರ್ಷದಲ್ಲಿ ಕಮಿಟಿ ಮೆಂಬರರೊಳಗೆ ಅಭಿಪ್ರಾಯ ಭೇದದಿಂದ ತೊಡಕುಗಳು ಬರಬಹುದೆಂಬ ಅಂಜಿಕೆಯಿತ್ತಾದರೂ ಕಮಿಟಿಯೊಳಗಣ ಕೆಲವು ಹಿರಿಯ ಮತ್ತು ವಿವೇಕಿ ಮೆಂಬರರ ಶ್ರಮದಿಂದಾಗಿ ಆ ಕಕ್ಷಿಗಳೆಲ್ಲ ನಿವಾರಣೆ ಹೊಂದಿ, ಶ್ರೀ ಮೋನಪ್ಪ ಪೂಜಾರಿಯವರ ಅಧ್ಯಕ್ಷತೆಯಲ್ಲಿ ಸುಸೂತ್ರವಾಗಿ ನಡೆದುವೆಂದು ತಿಳಿಸಲು ಸಂತೋಷಪಡುತ್ತೇವೆ.

ಇದೇ ಬರುವ ತಾ. ೧೧-೧೦-೩೯ನೇ ಬುಧವಾರ ನಡೆಯಲಿಕ್ಕಿರುವ ಬೆಳ್ತಂಗಡಿ ಡಿಸ್ಟ್ರಿಕ್ಟ್ ಬೋರ್ಡು ಸರ್ಕಲಿನ ಚುನಾವಣೆಯಲ್ಲಿ, ಮಂಗಳೂರಲ್ಲಿರುವ ಮಾಜಿ ತಾಲೂಕು ಬೋರ್ಡ್ ಮೆಂಬರ್ ಬಳಂಜೆ ರಾಮಭಟ್ಟ, ಬಿ. ಎ. ಬಿ. ಎಲ್. ಎಡ್ವೊಕೇಟ್‌ರವರು, ಮೆಂಬರಿಕೆಗೆ ಉಮೇದ್ವಾರರಾಗಿ ನಿಲ್ಲುವರು.

ಇದೇ ಕಳೆದ ತಾ. ೪ನೇ ಸೋಮವಾರ ಸಾಯಂಕಾಲ ೫ ಗಂಟೆಗೆ ಸೈಂಟ್ ಎಲೋಸಿಯಸ್ ಕೋಲೇಜಿನ "ಕಿರಿಯ ಕರ್ನಾಟಕ ಸಂಘ"ದಲ್ಲೊಂದು ವಿಶೇಷ ಸಭೆಯಾಯಿತು. ಸಂಘದ ಅಧ್ಯಕ್ಷ ರಾ| ಬೆಳ್ಳೆ ಭುಜಂಗ ರಾಯರು ಸೊಗಸಾದ ನುಡಿಗಳಿಂದ ಭಾಷಣಕರ್ತರ ಪರಿಚಯವನ್ನು ಹೇಳಿದ ಮೇಲೆ, ಶ್ರೀ ಪುಣಿಂಚತ್ತಾಯರು "ಸಮಾಜ ಸುಧಾರಣೆ"ಯ ವಿಷಯವಾಗಿ ಸರಸವಾಗಿ ಭಾಷಣ ಕೊಟ್ಟರು. ಕೊನೆಗೆ ಕಾರ್ಯದರ್ಶಿ ರಾ| ಬಾಬು ಶೆಟ್ಟರು ಭಾಷಣಕರ್ತರಿಗೆ ಧನ್ಯವಾದಗಳನ್ನರ್ಪಿಸಲು ಸಭಾ ವಿಸರ್ಜನೆಯಾಯಿತು.

ಚಿತ್ರಮಂಡಳಿಯ ಕಥಾಸ್ಪರ್ಧೆಯ ನಿಯಮಗಳು ಹೀಗಿವೆಯೆಂದು ಸಂಬಂಧಪಟ್ಟವರು ತಿಳಿಸುತ್ತಾರೆ:—

(೧) ಎರಡು ಬಹುಮಾನಗಳು ಕೊಡಲ್ಪಡುವುವು; ಹಿರಿಯರಿಗೊಂದು ಕಿರಿಯರಿಗೊಂದು; ೧೬ ವರ್ಷ ದಾಟಿದವರು ಹಿರಿಯರು. (೨) ಕಥೆಯು ಸ್ವತಂತ್ರವಾಗಿದ್ದು, ಭಾಷಾಂತರವಾಗಿರಬಾರದು. (೩) ಕಳುಹಿಸಲ್ಪಡುವ ಕಥೆಯು ಈ ವರೆಗೆ ಅಚ್ಚಾಗಿರದೆ ಸ್ಪರ್ಧೆಗೆಂದೇ ಬರೆದಿದ್ದಿರಬೇಕು. (೪) ಅಧ್ಯಕ್ಷರ ಮತ್ತು ಪರೀಕ್ಷಾಕರ್ತರ ತೀರ್ಮಾನವೇ ಕಡೆಯದಾಗಿರುತ್ತದೆ.

ಇದೇ ಬರುವ ಅಕ್ಟೋಬರ ತಿಂಗಳ ತಾ. ೧ರಿಂದ ಇಲ್ಲಿಯ ಹಂಪನಕಟ್ಟೆಯಲ್ಲಿರುವ ಬಡವರ ಬಂಧು ಕಾರ್ಯಾಲಯದಲ್ಲಿ, ಬರುವ ೧೯೪೦ನೇ ಇಸ್ವಿ ಫೆಬ್ರವರಿ ತಿಂಗಳಲ್ಲಿ ಜರಗುವ ಪ್ರಥಮ, ಮಧ್ಯಮ, ರಾಷ್ಟ್ರಭಾಷಾ ಪರೀಕ್ಷೆಗಳಿಗೆ ಕುಳಿತುಕೊಳ್ಳುವವರಿಗೆಲ್ಲ ಶ್ರೀ. ಬಿ. ಲಕ್ಷ್ಮೀಶ ದೇವ ವಿದ್ಯಾರ್ಥಿ, ಹಿಂದೀ ಅಧ್ಯಾಪಕ ಇವರಿಂದ ಯೋಗ್ಯ ರೀತಿಯಲ್ಲಿ ಪಾಠಗಳನ್ನು ಕೊಡಿಸಲಾಗುವುದು. ಮಹಿಳೆಯರಿಗಾಗಿ ಯೋಗ್ಯವಾದ ಏರ್ಪಾಡು ಮಾಡಲಾಗುವುದು. ಕಲಿಯಲಿಚ್ಛಿಸುವವರು ಈ ತಿಂಗಳ ಅಂತ್ಯದೊಳಗಾಗಿ ಕ್ಲಾಸಿನ ಸಮಯ ಇತ್ಯಾದಿ ಬೇರೆ ಸಂಗತಿಗಳನ್ನು ಬಡವರ ಬಂಧು ಆಫೀಸಿನಲ್ಲಿ ಬೆಳಗ್ಗೆ ೯-೧೧, ಸಾಯಂಕಾಲ ೪-೬ಕ್ಕೆ ಬಂದು ತಿಳಿದುಕೊಳ್ಳಬಹುದೆಂದು ವ್ಯವಸ್ಥಾಪಕರು ತಿಳಿಸುತ್ತಾರೆ.

ತಾ. ೩೧-೮-೩೯ನೇ 'ಸ್ವದೇಶಾಭಿಮಾನಿ'ಯಲ್ಲಿ—"ವ್ಯಾಪಾರಸ್ಥರೇ, ಎಚ್ಚರಿಕೆ! ನೆನಪಿರಲಿ,—ಇದೇ ಅಕ್ಟೋಬರ ತಿಂಗಳಿನಿಂದ, ಸರಕಾರದವರ ಬೆಂಡ್ರೋಲ್ ಇಲ್ಲದ ಬೆಂಕಿಪೆಟ್ಟಿಗೆಗಳನ್ನು ಮಾರಾಟಮಾಡಕೂಡದಾಗಿದೆ"—ಎಂಬ ಎಚ್ಚರಿಕೆಯು ಪ್ರಕಟವಾಗಿತ್ತಷ್ಟೆ! ಇದು ತಪ್ಪಭಿಪ್ರಾಯಕ್ಕೆ ಎಡೆಕೊಟ್ಟಿರುವುದರಿಂದ, ಈ ಸಂಬಂಧವಾದ ಸರಕಾರದ ಆಜ್ಞೆಯನ್ನು ೧೯೩೯ರ ಏಪ್ರಿಲ್ ತಾ. ೨೧ರ 'ಗಜೇಟ್ ಒಫ್ ಇಂಡಿಯಾ'ದಿಂದೆತ್ತಿ ಈ ಕೆಳಗೆ ಕೊಡಲಾಗಿದೆ:— (2) The Governor General in Council may, by a like notification, direct that, after a date to be specified in the notification, no matches shall be sold or offered or kept for sale in British India except in packets, boxes or booklets bearing such a banderol or stamp so affixed". ಹೀಗಿರುವುದರಿಂದ, ಸರಕಾರವು ಇನ್ನು ಜ್ಯಾಹೀರುಮಾಡಲಿರುವ ತಾರೀಕಿನಿಂದ ಮೊದಲ್ಗೊಂಡು ಸರಕಾರದವರ ಬೆಂಡ್ರೋಲು ಇಲ್ಲದ ಬೆಂಕಿಪೆಟ್ಟಿಗೆಗಳನ್ನು ಮಾರಕೂಡದೆಂದು ತಿಳಿಯಬೇಕಲ್ಲದೆ, ಪ್ರಕೃತ ಅದರ ವ್ಯಾಪಾರವು ನಿಷೇಧಿಸಲ್ಪಟ್ಟಿರುವುದಿಲ್ಲ.

ಇದೇ ಸಪ್ಟಂಬರ ತಾ. ೧೬ಕ್ಕೆ ಅಂತ್ಯವಾಗುವ ವಾರದ ನಮ್ಮ ನಗರದ ಆರೋಗ್ಯದ ವರದಿ:—ಮರಣಗಳು ೨೧; ಜನನಗಳು ೪೩. ಮರಣಗಳ ಪೈಕಿ ಸಿಡುಬು ೧, ವಿಷಮ ಜ್ವರ ೧, ನ್ಯೂಮೋನಿಯಾ ೨ ಕ್ಷಯ ೩, ಇತರ ಶ್ವಾಸಕೋಶ ಸಂಬಂಧವಾದುದು ೧, ಆಮಶಂಕೆ ೨, ಅತಿಸಾರ ೨, ಶಿಶುಮರಣ ೧ ಮತ್ತು ಇತರ ಎಲ್ಲಾ ಕಾರಣಗಳಿಂದ ೮. ಇವುಗಳಲ್ಲಿ ೧ ವರ್ಷದೊಳಗಣ ಶಿಶುಮರಣ ೫. ಈ ವಾರದಲ್ಲಿ ಸಿಡುಬು ಒಬ್ಬನಿಗೆ ಮಾತ್ರ ತಗಲಿದೆ.

ಶ್ರೀಕೃಷ್ಣ ಸಿನೆಮದಲ್ಲಿ ಈ ದಿನದಿಂದ, ಮೆಟ್ರೋ ಗೋಲ್ಡ್ವಿನ್ ಮೇಯರ್ಸ್ ಕಂಪೆನಿಯವರ "ಹೆಲ್ ಡೈವರ್ಸ್" ಎಂಬ ಚಿತ್ರವು ಪ್ರದರ್ಶಿಸಲ್ಪಡುತ್ತಿದೆ. ಇದರಲ್ಲಿ ಕ್ಲಾರ್ಕ್ ಗೇಬ್ಲ್, ವಾಲ್ಲೇಸ್ ಬೀರಿ ಮೊದಲಾದ ಸುಪರಿಚಿತ ನಟರು ಅಭಿನಯಿಸಿರುವರು. ತಾ. ೧೦ರಿಂದ 'ಸುಸೈಡ್ ಫ್ಲೀಟ್' ಎಂಬ ಚಿತ್ರವು ಪ್ರದರ್ಶಿಸಲಾಗುವುದು.

ತಿದ್ದುಪಡಿ:—ಕಳೆದ ಸಂಚಿಕೆಯಲ್ಲಿ ಮಂಗಳೂರು ವರ್ತಮಾನದ ಕಲಮಿನಲ್ಲಿ "ಸಾಹುಕಾರ ಶ್ರೀ ವಿಟ್ಠಲ ಶಾಂತರಾಮರವರು ಮುನಿಸಿಪಲ್ ಚುನಾವಣೆಗೆ ಉಮೇದ್ವಾರರಾಗಿರುವರು" ಎಂದು ಅಚಾತುರ್ಯದಿಂದ ಪ್ರಕಟವಾಗಿದೆ. ಆ ಮಹನೀಯರು ತಾನು ಚುನಾವಣೆಗೆ ನಿಲ್ಲುವುದಿಲ್ಲವೆಂಬುದನ್ನು ಸ್ಪಷ್ಟವಾಗಿ ತಿಳಿಸಿದ್ದಾರೆ.

ಹುಲಿಬೇಟೆಯಲ್ಲಿ ಪ್ರಸಿದ್ಧರಾಗಿರುವ ಮಿ| ಕೈತಾನ್ ಲೋಬೋ, ವಕೀಲ್, ಇವರು ಶಾವಂಜೆಗೆ ಹೋಗಿ, ಅಲ್ಲಿ ಬಹು ಸಮಯದಿಂದ ಜನಜಾನುವಾರುಗಳಿಗೆ ಉಪಟಳ ಕೊಡುತ್ತಿದ್ದ ದೊಡ್ಡ ಹುಲಿಯೊಂದನ್ನು ಸಾಹಸದಿಂದ ಬಂದೂಕು ಹಾರಿಸಿ ಕೊಂದು, ಅಲ್ಲಿಯ ನಿವಾಸಿಗಳ ಕೃತಜ್ಞತೆಗೆ ಪಾತ್ರರಾಗಿರುವರು.

ಸಾರ್ವಜನಿಕ ಮೈದಾನಿನೊಳಗೆ ಕ್ರಿಕೆಟ್ ಆಡುವ ಸ್ಥಳವನ್ನು ಸಮತಟ್ಟಾಗಿ ಮಾಡುತ್ತಿರುವರು. ಒಂದು 'ಬೇಂಡ್ ಸ್ಟ್ಯಾಂಡ್' ಮತ್ತು ಚಿಕ್ಕ ಉದ್ಯಾನವನ್ನೂ ರಚಿಸುವರಂತೆ.

ತಾಲೂಕುಗಳಿಂದ

ಪುತ್ತೂರು— ಇಲ್ಲಿ ಇದೇ ಒಕ್ಟೋಬರ ತಾರೀಕು ೧೧ರಿಂದ ತಾ. ೧೪ರ ತನಕ ನಡೆವ ದಸರಾ ಮಹೋತ್ಸವದ ಸಂದರ್ಭದಲ್ಲಿ ಒಂದು ಪುಸ್ತಕಪ್ರದರ್ಶನವನ್ನು ಜರಗಿಸುವುದೆಂದು ಗೊತ್ತಾಗಿದೆ. ಶ್ರೀ| ಪಂಜೆ ಮಂಗೇಶರಾಯರು ಇದನ್ನು ತೆರೆಯುವರು. (ಇದರ ಕುರಿತು ಮತ್ತು ದಸರಾ ಮಹೋತ್ಸವದ ಕಾರ್ಯಕ್ರಮಗಳ ಕುರಿತು ಸವಿವರವಾದ ಮಾಹಿತಿಯನ್ನು ಮುಂದಿನ ಸಂಚಿಕೆಯಲ್ಲಿ ಕೊಡಲಾಗುವುದು.)

ಉಡುಪಿ— ಶಾಲೆಗಳೊಳಗೆ ನಡೆವ ಈ ಕೆಳಗಣ ಕ್ರಿಕೆಟ್ ಟೂರ್ನಮೆಂಟುಗಳ ಬಗ್ಗೆ ಅರ್ಜಿಗಳನ್ನು ಅವುಗಳೊಂದಿಗೆ ನಿರವಿಸಿದ ಫೀಜನ್ನೂ ಈ ಕೆಳಗೆ ಸಹಿ ಮಾಡಿದವರಿಗೆ ಇದೇ ತಾ. ೧೨-೯-೧೯೩೯ರೊಳಗೆ ಮುಟ್ಟುವಂತೆ ತಲಪಿಸಬೇಕಾಗಿದೆ: ಶಾಲೆಗಳೊಳಗಣ

ನಮ್ಮ ಜಿಲ್ಲೆಯ "ಕರ್ನಾಟಕ ಕೆಮಿಕಲ್ ಎಂಡ್ ಫರ್ಮಸ್ಯೂಟಿಕಲ್ ವರ್ಕ್ಸ್, ಲಿಮಿಟೆಡ್ ಉಡುಪಿ" ಈ ಸಂಸ್ಥೆಯ ಔಷಧಗಳು, ಇದೇ ಕಳೆದ ಫೆಬ್ರವರಿ ತಿಂಗಳಲ್ಲಿ ಬೊಂಬಾಯಿಯಲ್ಲಿ ಜರಗಿದ "ಎಚ್. ಓ. ಎಚ್." ಎಂಬ ಮಹಾ ದೇಶಾಸೇವಾ ಪ್ರದರ್ಶನದಲ್ಲಿ ಸ್ವರ್ಣಪದಕ ಬಹುಮಾನ ಪಡೆದಿವೆಯೆಂದು ತಿಳಿಸಲು ತುಂಬಾ ಸಂತೋಷಪಡುತ್ತೇವೆ. ಈ ಸಂಸ್ಥೆಯವರಿಗೆ ನಮ್ಮ ಅಭಿವಂದನೆಗಳು.

ಶ್ರೀ ವಿವೇಕಾನಂದ ಸಭೆಯವರು ಇದೇ ತಾ. ೨ನೇ ರವಿವಾರ ಕೆನರಾ ಹೈಸ್ಕೂಲಿನಲ್ಲಿ ಶ್ರೀಕೃಷ್ಣ ಜಯಂತ್ಯುತ್ಸವವನ್ನು, ಗೀತಾ ವ್ಯಾಖ್ಯಾನ, ಭಾಷಣ, ಶ್ರೀಕೃಷ್ಣನ ಸಂದೇಶ ವಿವರಣೆ, ಮೊದಲಾದ ಕಾರ್ಯಕ್ರಮಗಳಿಂದ ಆಚರಿಸಿದರು.

ರೋಮಿನಲ್ಲಿ ಬ್ರಿಜಿಟ್ಟೈನ್ ಸನ್ಯಾಸಿನಿಗಳಾಗಿ ದೀಕ್ಷೆ ವಹಿಸಲು ಮಂಗಳೂರಿನ ನಾಲ್ವರು ಕ್ರೈಸ್ತ ಬಾಲಿಕೆಯರು ನಿನ್ನೆ ಇಲ್ಲಿಂದ ಹೊರಟುಹೋಗಿರುವರು:—ಮಿ. ಎಫ್. ಎಕ್ಸ್. ಮಸ್ಕರೇನ್ಹಾಸರ ಪುತ್ರಿ ಮಿಸ್. ದಾರೊತಿ ಕ್ಯಾಥ್ಲಿನ್ ಮಸ್ಕರೇನ್ಹಾಸ್, ದಿ| ಪಿ| ಸಾಲ್ವದೋರ್ ಸೊರೆಂಶಾರ ಪುತ್ರಿ ಮಿಸ್ ರೋಜ್ ಮೆರಿ ಸೊರೆಂಶಾ, ಮಿ| ಲಿಯಾಂದ್ರ ಕುವೇಲರ ಪುತ್ರಿ ಮಿಸ್ ಮೇರಿ ಮಾರ್ಗರೆಟ್ ಕುವೇಲ್, ದಿ| ಮಿ. ಪಿ. ಜೆ. ಗೋನ್ಸಾಲ್ವಿಸರ ಪುತ್ರಿ ಮಿಸ್ ಎಲಿಜಬೆತ್ ರೋಝಾ.

ಇಲ್ಲಿಂದ ಮಲಬಾರಿಗೆ ವರ್ಗವಾಗಿ ಹೋದ ಸರ್ಕಲ್ ಇನ್ಸ್‌ಪೆಕ್ಟರ್ ಮಿ| ಚಾಪ್ಮ್ಯಾಡ್ ಸಾಹೇಬರ ಬದಲಿಗೆ ಮಿ| ಎಂ. ಲೋಬೋರವರು ಇಲ್ಲಿಗೆ ನೇಮಕಹೊಂದಿರುವರು.

ಇಲ್ಲಿಯ ಸಾರಸ್ವತ ಸಮಾಜದ ಮುಂದಾಳುಗಳಲ್ಲೊಬ್ಬರೂ ಪ್ರಮುಖ ಸಾಹುಕಾರರಲ್ಲೊಬ್ಬರೂ ಆಗಿದ್ದ ಶ್ರೀ| ಪ್ರಭು ದೇವರಾಯರು ಕಳೆದ ರವಿವಾರ ಮುಂಜಾನೆ ಕಾಲವಾದರೆಂದು ತಿಳಿಸಲು ವಿಷಾದಿಸುತ್ತೇವೆ.

ಇದೇ ಬರುವ ಮಂಗಳೂರು ಮುನಿಸಿಪಲ್ ೬ನೇ ವಾರ್ಡಿಗೆ ಸಾಹುಕಾರ್ ಮರ್ಕಡ ಪದ್ಮನಾಭಶೆಟ್ಟಿಯವರು ಉಮೇದ್ವಾರರಾಗಿ ನಿಲ್ಲುವರೆಂದು ತಿಳಿದುಬರುತ್ತದೆ.

ಪಂಪ್ವೆಲ್ಡ್ ಪೇಟೆಯಲ್ಲಿ, ಶ್ರೀ| ಎಂ. ವಿಟ್ಠಪ್ಪಪ್ರಭುಗಳವರ ಮಹಡಿಯ ಮೇಲೆ "ಹಿಂದೀ ಪ್ರೇಮಿ ಮಂಡಿರ"ವು ಇದೇ ಕಳೆದ ಬುಧವಾರ ಸ್ಥಾಪಿಸಲ್ಪಟ್ಟಿದೆ.

ಮಂಗಳೂರು ಮುನಿಸಿಪಾಲಿಟಿ ಚುನಾವಣೆಗಳ ಸಂಬಂಧವಾದ ನೋಮಿನೇಶನ್ ಪತ್ರಗಳನ್ನು ಉಮೇದ್ವಾರರು ಇದೇ ತಾ. ೧೪ನೇ ದಿನ ಪೂರ್ವಾಹ್ನ ಘಂಟೆ ೧೧ರಿಂದ ಅಪರಾಹ್ನ ೪ರೊಳಗೆ ಮುನಿಸಿಪಲ್ ಆಫೀಸಿಗೆ ತಲಪಿಸಬೇಕಾಗಿದೆ. ನೋಮಿನೇಶನ್ ಪತ್ರಗಳ ಪರಿಶೋಧನೆಯು ತಾ. ೧೬-೧೦-೩೯ನೇ ಪೂರ್ವಾಹ್ನ ಘಂಟೆ ೧೧ರಿಂದ ಆರಂಭವಾಗುವುದು. ಸ್ವೀಕೃತವಾದ ನೋಮಿನೇಶನುಗಳ ಪಟ್ಟಿಯು ತಾ. ೧೯-೯-೩೯ರಲ್ಲಿ ಪ್ರಕಟಿಸಲಾಗುವುದು. ವೋಟುಗಳನ್ನು ತಾ. ೨೬-೯-೩೯ರಲ್ಲಿ ಸ್ವೀಕರಿಸಲಾಗುತ್ತದೆ. ತಾ. ೨೬ರಲ್ಲಿ ಪೂರ್ವಾಹ್ನ ಘಂಟೆ ೧೧ರಿಂದ ವೋಟುಗಳನ್ನು ಲೆಕ್ಕಮಾಡಲಾಗುವುದು. ನೊಮಿನೇಶನ್ ಪತ್ರಗಳನ್ನು ಒಪ್ಪಿಸುವ ದಿನ ಯಾ ಅದರ ಮುಂಚಿತವಾಗಿ ತೆರಬೇಕಾದ ಠೇವಣಾತಿ ಮೊಬಲಗು ರೂ. ೫೦ನ್ನು ಮುನಿಸಿಪಲ್ ಆಫೀಸಿನಲ್ಲಿ ತೆತ್ತು, ಅದರ ರಶೀದಿಯನ್ನು ನೋಮಿನೇಶನ್ ಪತ್ರಗಳೊಂದಿಗೆ ಹಾಜರು ಪಡಿಸಬೇಕಾಗಿದೆ.

ಕ್ರಿಕೆಟ್ ಪಂದ್ಯಾಟ (ಸೀನಿಯರ್ಸ್) ರೂ. ೩; ಜೂನಿಯರ್ಸ್ ರೂ. ೨; ಇತರ ಸ್ಪರ್ಧಾತ್ಮಕ ಆಟಗಳು ರೂ. ೨. "Secretary to the Advisory Board of the Ex-taluk Board gymkhana Fund, Udipi"

ಕಳೆದ ವಾರದಲ್ಲಿ ಇಲ್ಲಿನ ಬೋರ್ಡ್ ಹೈಸ್ಕೂಲಿನಲ್ಲಿ, ಅಮೇರಿಕದಲ್ಲಿ ಪ್ರವಾಸಮಾಡಿಕೊಂಡಿದ್ದ ಶ್ರೀ. ಪಿ. ಗಣೇಶರಾಯರು ಅಮ್ಮ ಅನುಭವಗಳನ್ನು ಕುರಿತು ವಿದ್ಯಾರ್ಥಿಗಳಿಗೆ ಅನುಗುಣವಾದ ಭಾಷಣಮಾಡಿದರು.

ತಾ. ೨೮ಕ್ಕೆ ಇಲ್ಲಿನ ಸಂಸ್ಕೃತ ಕೋಲೇಜಿನ ವರ್ಧಂತಿ ಉತ್ಸವವು ಯಥೋಚಿತವಾಗಿ ಶ್ರೀ ಅಷ್ಟಮಠಗಳ ಯತಿವರ್ಯರುಗಳ ಸಮಕ್ಷಮ ಸಾಂಗವಾಗಿ ನೆರವೇರಿತು. ವಿದ್ಯಾರ್ಥಿಗಳಿಗೆ ಪಾರಿತೋಷಕಗಳಲ್ಲಿ ಕೆಲವನ್ನು ಈ ಸಲ ಕೊಟ್ಟಿಲ್ಲವಾಗಿ ಸುದ್ದಿ.

ಇಲ್ಲಿನ ಸರಕಾರೀ ಆಸ್ಪತ್ರೆಯ ಲೇಡಿ ಅಸಿಸ್ಟೆಂಟ್ ಡಾ| ಮಿಸ್. ಟಿ. ಎಮ್. ಸುಂದರಿಬಾಯಿಯವರಿಗೆ ಪುತ್ತೂರಿಗೆ ವರ್ಗವಾಗಿರುತ್ತದೆ. ಇವರ ಚಾರ್ಜನ್ನು ತಾ. ೩ನೆಯ ದಿನ ಸೇಲಮಿನಿಂದ ಬಂದಿರುವ ಡಾಕ್ಟರ್ ಮಿಸ್. ವಿ. ಕಲ್ಯಾಣಿ ಅಮ್ಮಾಳ್ ಇವರು ವಹಿಸಿದ್ದಾರೆ.

ಪರಸ್ಪರ ಸಹಾಯಕ ಸಂಘಗಳ ರಿಜಿಸ್ಟ್ರಾರರು ತಾ. ೩ನೇ ದಿನ ಇಲ್ಲಿಗೆ ಚಿತ್ತೈಸಿದ್ದು, ಕಲ್ಯಾಣಪುರದ ಇಂಡಸ್ಟ್ರಿಯಲ್ ಸೊಸೈಟಿಯನ್ನು ಸಂದರ್ಶಿಸಿದರು; ಅದರ ಅಭಿವೃದ್ಧಿಗಾಗಿ ಹಲವು ಸಲಹೆಗಳನ್ನಿತ್ತರು. ಉಡುಪಿ ತಾಲೂಕು ಲೋಕಲ್ ಕೋ-ಒಪರೇಟಿವ್ ಯೂನಿಯನ್ನಿನ ಸಭೆಯೂ ಅವರ ಸಮಕ್ಷಮ ಜರುಗಿತು. ಸಂಘದ ಕಾರ್ಯಕಲಾಪಗಳನ್ನು ಸಹಾನುಭೂತಿಯಿಂದ ಅವಲೋಕಿಸಿದರು.

ಶ್ರೀಕೃಷ್ಣದೇವರ ಸನ್ನಿಧಿಯಲ್ಲಿ ವರ್ಷಂಪ್ರತಿ ನಡೆಯುವಂತೆ ತಾ. ೧೬ಕ್ಕೆ ವಿಟ್ಲಪಿಂಡಿ ಉತ್ಸವವು ಜರುಗಿತು.

ದುರ್ಗಾಪರಮೇಶ್ವರೀ ಮೋಟರ್ ಸರ್ವಿಸಿನವರು ಈಚೆಗೆ ಉಡುಪಿಗೆ ತಮ್ಮ ಸರ್ವೀಸುಗಳನ್ನು ಕಾರ್ಕಳ ಮಾರ್ಗವಾಗಿಯೂ, ಕರಾವಳಿಯಿಂದಲೂ ತೊಡಗಿರುತ್ತಾರೆ. ತಾ. ೧ರಿಂದ ಕಾರ್ಕಳ ಮಾರ್ಗವಾಗಿ ಮಂಗಳೂರಿಗೆ ಎರಡನೇ ಸರ್ವೀಸನ್ನು ಪ್ರಾರಂಭಿಸಿರುತ್ತಾರೆ.

ಇಲ್ಲಿನ ರೋಮನ್ ಕೆಥೋಲಿಕ್ ಇಗರ್ಜಿಯ ಎದುರಿನಲ್ಲಿ ಕಥೋಲಿಕರಿಂದಲೇ ಈಚೆಗೆ ಹೊಸದಾಗಿ ಸ್ಥಾಪಿಸಿರುವ ಉಡುಪಿ ಪ್ರೆಸ್ ಎದುರುಗಡೆಯಲ್ಲಿದ್ದ ಎರಡು ಅಶ್ವತ್ಥದಮರಗಳನ್ನು ತೀರಬೇಕೆಂದು ಮನಃಪೂರ್ವಕವಾಗಿ ತಾಲೂಕು ಬೋರ್ಡಿಗೂ, ಅನಂತರ ಡಿವಿಜನಲ್ ಆಫೀಸರರು ಜಿಲ್ಲಾ ಕಲೆಕ್ಟರರಿಗೂ ಪ್ರೆಸ್ಸಿನ ಕಡೆಯಿಂದ ಅರ್ಜಿ ಮಾಡಲಾಗಿದ್ದಲ್ಲಿ, ಮರಗಳನ್ನು ತೀರಲಿಕ್ಕೆ ಹುಕುಂ ದೊರೆತಿದ್ದಿಲ್ಲ. ಅಪಾಯಕರವಾಗಬಹುದಾದ ಕೆಲವೊಂದು ಗೆಲ್ಲುಗಳನ್ನು ಮಾತ್ರ ಕಡಿಸಲಾಗಿತ್ತು. ಈ ಬಗ್ಗೆ ಹಲವು ಗೃಹಸ್ಥರು ಚಳವಳಮಾಡಿದ್ದರು; ಆಯಾ ಅಧಿಕಾರಿಗಳು ಸ್ವತಃ ಸ್ಥಳಕ್ಕೆ ಬಂದು ರೆಕಾರ್ಡು ಅವಲೋಕನ ಮಾಡಿಯೇ ಈ ತೀರ್ಮಾನವಾದ, ಕೊಟ್ಟದ್ದಾಗಿ ತಿಳಿದುಬರುತ್ತದೆ. ಆದರೆ ಪ್ರೆಸ್ಸಿನವರ ಕಡೆಯಿಂದ ಜಿಲ್ಲಾ ಬೋ| ಪ್ರಸಿಡೆಂಟರಿಗೆ ಅರ್ಜಿ ಹೋದಲ್ಲಿ, ಸದ್ರಿ ಪ್ರಸಿಡೆಂಟರ ಹುಕುಮಿನಂತೆ ಸದ್ರಿ ಅಶ್ವತ್ಥ ಮರಗಳು ಸರ್ಕಾರದ್ದಾಗಿ, ರೋಮನ್ ಕ್ರೈಸ್ತರೇ ಅದನ್ನು ವಹಿಸಿಕೊಂಡು, ಬಳಿಯ ದೊಡ್ಡ ಮರಗಳನ್ನು ಕಡಿಯುವ ಅವಸರದಲ್ಲೇ ಒಂದು ಅಶ್ವತ್ಥದಮರವನ್ನು ಕಡಿದರು. ಮರುದಿನ ಇನ್ನೊಂದು ಮರವನ್ನು ಕಡಿಯುವ ಸಿದ್ಧತೆಮಾಡಲಾಗುವುದನ್ನು ನೋಡಿಕೊಂಡು, ಅದನ್ನು ತಾತ್ಕಾಲಿಕವಾಗಿ ನಿಲ್ಲಿಸಿಬಿಟ್ಟು, ಮುಂದೆ ನ್ಯಾಯದಂತೆ ಸಂಬಂಧಪಟ್ಟ ಅಧಿಕಾರಸ್ಥರಲ್ಲಿ ಅಪೀಲು ಮಾಡೋಣವೆಂದು ಜಿಲ್ಲಾ ಬೋರ್ಡು ಮೆಂಬರ, ಅಸಿಸ್ಟೆಂಟ್ ಇಂಜಿನೀಯರ್, ವಕೀಲರನ್ನು ಮಾತನಾಡಿಸಲು ಅಶ್ವತ್ಥದಮರ ಕಡಿಯಲ್ಪಡುವುದನ್ನು ತಾತ್ಕಾಲಿಕ ನಿಲ್ಲಿಸುವ ದಾರಿ ಸಿಗಲಿಲ್ಲ; ಜಿಲ್ಲಾ ಬೋರ್ಡು ಪ್ರಸಿಡೆಂಟರಿಗೆ ತಂತಿ ಮೂಲಕ ತಿಳಿಸೋಣವೆಂದಲ್ಲಿಯೂ ಉತ್ತರ ಬರುವುದರೊಳಗಾಗಿ ಕೆಲಸಮುಗಿಯುವುದಿದ್ದುದರಿಂದ ನಿರರ್ಥಕವಾಗಿತ್ತು; ಹಾಗೆ ಹೀಗೆ ಎಂದು ಮೆಜಿಸ್ಟ್ರೇಟರಲ್ಲಿ ಅರ್ಜಿಮಾಡೋಣವೆನ್ನುವುದರಲ್ಲಿ ಮರಕಡಿಯಲಾದುದರಿಂದ ನಿರ್ವಾಹವಿಲ್ಲದಾಯಿತು. ಎಷ್ಟೋ ವರ್ಷಗಳಿಂದ ಹಿಂದೂ ವರ್ಗದವರು ಸಾರ್ವಜನಿಕವಾಗಿ ಪೂಜಿಸುತ್ತಿದ್ದ ಅಶ್ವತ್ಥದ ಮರಗಳು ಹಿಂದುಗಡೆಯಿಂದ ರೋಮನ್ ಕೆಥೋಲಿಕರ ಪ್ರೆಸ್ಸು ಹೊಸತಾಗಿ ಬಂತೆಂಬುದರಿಂದಲೇ ಅವರ ಅಧಿಕಾರಕ್ಕೂ, ಇತರ ಬಲಕ್ಕೂ ಬಗ್ಗಿಕೊಂಡು ಹಿಂದೂವಾಗಿರುವ ಜಿ. ಬೋ. ಪ್ರಸಿಡೆಂಟರು ಕಡಿಯಲಪ್ಪಣೆಕೊಟ್ಟಿದ್ದು ಅತಿ ವಿಷಾದಕರ. ಇದರ ಬಗ್ಗೆ ಹಿಂದೂವರ್ಗದವರಲ್ಲಿ ಬಹಳ ಚಳವಳಿಸುವಿಕೆಯುಂಟಾಗಿದೆ. ಮಾನ್ಯ ಪ್ರೆಸಿಡೆಂಟರು

(೬ನೇ ಪುಟಕ್ಕೆ ಮುಂದುವರಿಸಿಯದೆ)

ನೋಟೀಸು

ಕಾಸರಗೋಡು ಡಿಸ್ಟ್ರಿಕ್ಟ್ ಮುನ್ಸೀಫ್ ಕೋರ್ಟಿನಲ್ಲಿ.

ಸ್ಮಾಲ್ ಕಾಸ್ ನಂಬ್ರ 377/'34.

ತಯ್ಯಿಲ್ಲತ್ತಿಲ್ಲತ್ತು ಸುಬ್ರಹ್ಮಣ್ಯನ್ ನಂಬೂದಿರಿ, ಮಾಧವನ್ ನಂಬೂದಿರಿಯ ಮಗ, ಕಾಸರಗೋಡು ತಾಲೂಕು ತೆಂಕು ತ್ರಿಕ್ಕರಿಪುರ ಗ್ರಾಮದಲ್ಲಿರುವವ—ವಾದಿ-

ಮತ್ತು

1. ಉದಿನೂರು ತೆಕ್ಕೇಮಠತ್ತಿಲ್ ವಿಷ್ಣುನಂಬಿ, 2. ಉದಿನೂರು ತೆಕ್ಕೇಮಠತ್ತಿಲ್ ವಾಸುದೇವನ್‌ನಂಬಿ, ಸಾವಿತ್ರಿ ಅಮ್ಮನ ಮಕ್ಕಳು, ಕಾಸರಗೋಡು ತಾಲ್ಲೂಕು ಉದಿನೂರು ಗ್ರಾಮದಲ್ಲಿರುವವರು—ಪ್ರತಿವಾದಿರು.

ಇವರೊಳಗೆ—

ಸದ್ರಿ ವಾದಿಗೆ ಪ್ರತಿವಾದಿರು ತಾರೀಕು 17-7-'31ರಲ್ಲಿ ರೂಪಾಯಿ 325/-ಕ್ಕೆ ಬರೆಕೊಟ್ಟ ಡಿಮಾಂಡು ಪ್ರೊಮಿಸರಿ ನೋಟಿನ ಅಸಲು ಮತ್ತು ಅದರ ಮೇಲಣ ಸಾಲಿಯಾನ ಸೇಕಡಾ 24ರಸಲೆ ಬಡ್ಡಿ ಕೂಡಾ ರೂಪಾಯಿ 500-0-0ಕ್ಕೆ ವಾದಿಯು ಪ್ರತಿವಾದಿರ ಮೇಲೆ ದಾಖಲ್ಲು ಮಾಡಿರುವ ಸದ್ರಿ ವಾಜ್ಯವು ತಾರೀಕು 18-9-'34ಕ್ಕೆ ಪ್ರತಿವಾದಿರ ಹಾಜರು ಬಗ್ಗೆ ಇಟ್ಟಿರುತ್ತದೆ. ಪ್ರತಿವಾದಿರು ಸ್ವತಹಾ ಯಾ ವಕೀಲರ ಮುಖಾಂತರ ಆ ದಿವಸ ಸದ್ರಿ ಕೋರ್ಟು ಮುಂಧೆ ಬೆಳಗ್ಗೆ ಘಂಟೆ 10ಕ್ಕೆ ಹಾಜರಾಗಿ ತಮ್ಮ ಉದಾಹರಣೆಗಳನ್ನು ಜ್ಯಾಹೀರು ಮಾಡಲಿಕ್ಕೆ ತಪ್ಪಿದರೆ ಎಕ್ಸ್ ಪಾರ್ಟಿಯಾಗಿ ಸದ್ರಿ ವ್ಯಾಜ್ಯವು ತೀರ್ಮಾನಿಸಿ ಸೋಣಾದೀತು ಎಂಬ ಸಂಗ್ತಿ ಈ ಮೂಲಕ ತಿಳಿಸೋಣಾಗಿದೆ.

ಕಾಸರಗೋಡು, 28-8-'34 } K. Ramavarma Rajah, B. A., B. L., *Vakil for Plaintiff*

ನೋಟೀಸು

ಕಾರ್ಕಳ ಡಿಸ್ಟ್ರಿಕ್ಟ್ ಮುನ್ಸೀಫ್ ಕೋರ್ಟಿನಲ್ಲಿ.

ಸ್ಮಾಲ್ ನಂಬ್ರ 196/1934.

A. S. ಅಬ್ದುಲ್ ರಹಿಮಾನ್ ಸಾಹೇಬ—ವಾದಿ.

ಮತ್ತು

ಸುಲೆಮಾನ ಬ್ಯಾರಿ—ಪ್ರತಿವಾದಿ.

ಇವರೊಳಗೆ—

ವಾದಿಗೆ ಪ್ರತಿವಾದಿಯು ಇದೇ ಕಳೆದ ತಾ. 28-6-'31ರಲ್ಲು ರೂ. 58-8-0ಕ್ಕೆ ಬರಕೊಟ್ಟ ಡಿಮಾಂಡ ಪ್ರೊಮಿಸರಿ ನೋಟಿನ ಅಸಲು ಬಡ್ಡಿ ರೂ. 88-9-6ನ್ನು ಬರವಾಡಿ ಕೊಳ್ಳುವರೆ ವಾದಿಯು ಮೇಲ್ಕಂಡ ದಾವೆ ಮಾಡಿರುತ್ತಾನೆ. ಸದ್ರಿ ದಾವೆಯು ಇದೇ ತಾ. 24-9-'34ಕ್ಕೆ ಪ್ರತಿವಾದಿಯು ಹಾಜರಾತಿ ಬಗ್ಗೆ ಇಟ್ಟಿರುತ್ತದೆ. ಆದುದರಿಂದ ಸದ್ರಿ ತಾರೀಕಿನ ಬೆಳಗ್ಗೆ 11 ಘಂಟೆಗೆ ಪ್ರತಿವಾದಿಯು ಕೋರ್ಟು ಮುಂದೆ ಹಾಜರಾಗತಕ್ಕದ್ದು. ತಪ್ಪಿದರೆ ಆತನ ಗೈರ ಹಾಜರಿಯಲ್ಲಿ ಈ ದಾವಾ ತೀರ್ಮಾನಿಸೋಣಾದೀತೆಂಬ ಸಂಗ್ತಿ ಈ ಮೂಲಕ ತಿಳಿಸೋಣಾಗುತ್ತದೆ.

ಕೋರ್ಟು ಹುಕುಂ ಪ್ರಕಾರ

ಕಾರ್ಕಳ, 29-8-34 } H. S. Hussain, *Vakil for Plaintiff.*

ಬೇಕಾಗಿದ್ದಾರೆ.

ತಿಂಗಳಿಗೆ ರೂ. 200ರ ಮೇಲೆ ಚೀಫ್ ಏಜಂಟರೂ, ರೂ. 100ರ ಮೇಲೆ ಏಜಂಟರೂ ರೂ. 40 ಮತ್ತು ಪ್ರೊವಿಡೆಂಟ್ ಫಂಡ್ ಮತ್ತು ಕಮಿಶನಿನ ಮೇಲೆ ಒಗನೈಜರರೂ ಬೇಕಾಗಿದ್ದಾರೆ.

ಇಂಗ್ಲಿಷಿನಲ್ಲಿ ಬರೆಯಿರಿ:-

Uplifting Banking Corporation Ltd.
169-171, Javeri Bazar, Bombay.

ಬೇಕಾಗಿದೆ.

ಮಂಗಳೂರು ಬಂದರದಲ್ಲಿ ೫೦೦ ಡಬ್ಬಿ ಚಿಮ್ನಿ ಎಣ್ಣೆ ಹಿಡಿಯುವ ಒಂದು ಗೋಡೌನು ಬೇಕಾಗಿದೆ. ಕಟ್ಟೋಣವು ಕಲ್ಲಿನದ್ದಾಗಿರಬೇಕು. ನದೀತೀರದಲ್ಲಿದ್ದರೆ ಉತ್ತಮ. ಬಾಡಿಗೆ ಮತ್ತು ಇತರ ವಿಷಯಗಳನ್ನು ನಮೂದಿಸಿ ಕೂಡಲೇ ಬರೆಯಿರಿ.

"ಜವಾಹಿರ್" ಛಾಪಿನ ಚಿಮ್ನಿ ಎಣ್ಣೆಯನ್ನು ಮಾರಲು ಮಂಗಳೂರು ಪಟ್ಟಣಕ್ಕೊಬ್ಬ ಏಜಂಟರು ಬೇಕಾಗಿದ್ದಾರೆ. ವ್ಯಾಪಾರಿಗಳು ಮಾತ್ರವೇ ಬರೆಯಿರಿ.

Apply:—**T. Madhava Pai,**
Distributor, Kasaragod S. K.

A Recuring Pleasure — *To Smoke them*

MANGALORE

DARBAR BEEDIES

Thousands enjoy them daily all over India.
When buying see our Trade Mark!

ಮಂಗಳೂರು ದರ್ಬಾರ್ ಬೀಡಿಗಳು

ಇವುಗಳನ್ನು ಸೇದುವುದೆಂದರೆ ಆನಂದ!

ಯಾವ ಕೂಟದಲ್ಲೂ ಸಿಗರೇಟುಗಳ ಸ್ಥಾನವನ್ನು ಯೋಗ್ಯವೆನಿಸುವಂತೆ ವಹಿಸುವ ಬೀಡಿಗಳಿರುವುವಾದರೆ—ಅವುಗಳು

ದಿ ಗ್ರೇಟ್ ದರ್ಬಾರ್ ಬೀಡಿ ವರ್ಕ್ಸ್

ರಥಬೀದಿ, ಮಂಗಳೂರು.

ಇವರಿಂದ ತಯಾರಿಸಲ್ಪಟ್ಟವುಗಳು.

The Canara Public Conveyance Company, Ltd., Mangalore.

WE TAKE UTMOST CARE OF PASSENGERS.

Read the following letter:-

Modern Hindu Hotel,
Calicut, 17—6—1934.

Dear Sir,

We wish to thank you for all that you did for us to make our stay at Mangalore comfortable. It is extremely nice of you to have looked after us as you did.

Yours faithfully,
(Sd.) **A. V. Ramaswami.**

The same service is offered to all. We call for reports from passengers, if they have failed to receive similar attention and assure to take prompt action to see that inconvenience is not repeated.

Chikmagalur Public Conveyance Motor Service, Chikmagalur.

ಚಿಕ್ಕಮಗಳೂರು ಪಬ್ಲಿಕ್ ಕನ್ವೆಯನ್ಸ್ ಮೋಟರ್ ಸರ್ವಿಸ್,

ಚಿಕ್ಕಮಗಳೂರು

ಮುಂಬಾಯಿಯಿಂದ – ಮಂಗಳೂರಿಗೆ.
ಮಂಗಳೂರಿನಿಂದ – ಮುಂಬಾಯಿಗೆ.

ಅಲ್ಲದೆ

ಹುಬ್ಬಳ್ಳಿ, ಧಾರವಾಡ, ಗೋವಾ, ಮುಂಬಾಯಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಯ ಎಲ್ಲಾ ಭಾಗಗಳಿಗೆ ಪ್ರಯಾಣ ನಡಿಸಲಿಕ್ಕೆ

ಮಂಗಳೂರು—ಕಡೂರು ಹಾದಿಗಿಂತ ಉತ್ತಮ ಬೇರೆ ಹಾದಿಯಿಲ್ಲ!

ಹೊಸ ಬಸ್ಸುಗಳು. ಅನುಕೂಲ ಪ್ರಯಾಣ ಸೌಕರ್ಯಗಳು

ಕಡೂರು ಜಿಲ್ಲೆಯೊಳಗಿನ ಎಲ್ಲಾ ಕಾಫಿ ತೋಟಗಳಿಗೆ ಕೂಲಿಕಾರರನ್ನು ತರಲಿಕ್ಕೂ ಅಲ್ಲಿಂದ ಕೊಂಡುಹೋಗಲಿಕ್ಕೂ ನಾವು ಎಲ್ಲಾ ತರದ ಸಹಾಯವನ್ನೂ ಕೊಡುತ್ತೇವೆ.

ಚಿಕ್ಕಮಗಳೂರಿನಿಂದ— ಶಿವಮೊಗ್ಗಕ್ಕೆ, ಬೇಲೂರಿಗೆ, ಕಡೂರಿಗೆ.
—ಮೂಡಗೆರೆಗೆ, ಸಕಲೇಶಪುರಕ್ಕೆ.
—ಮಂಗಳೂರಿಗೆ, ಮೂಡಬಿದ್ರೆಗೆ, ಪುತ್ತೂರಿಗೆ, ಸುಳ್ಯಕ್ಕೆ.
—ಧರ್ಮಸ್ಥಳಕ್ಕೆ, ವೇಣೂರಿಗೆ, ಸುಬ್ರಹ್ಮಣ್ಯಕ್ಕೆ.

ನಿರಾಯಾಸದ ಪ್ರಯಾಣ! ಉತ್ಸಾಹಕರ ಸೌಕರ್ಯ!

ಬೇಕಾದ ಮಾಹಿತಿಗೆ ನಮ್ಮ ಆಫೀಸಿಗೆ ಬರೆದು ತಿಳಿದುಕೊಳ್ಳಿರಿ.

ಸಂಪಾದಕರ ಟಪ್ಪಾಲುಪೆಟ್ಟಿಗೆ.

ಪತ್ರಿಕಾರರ ಅಭಿಪ್ರಾಯಗಳಿಗೆ ನಾವು ಜವಾಬ್ದಾರರಲ್ಲ. ಎಲ್ಲ ಲೇಖಕರು ತಮ್ಮ ಸಂಪೂರ್ಣ ಹೆಸರು ವಿಳಾಸಗಳನ್ನು ಕೊಡತಕ್ಕದ್ದು. ದೀರ್ಘ ಲೇಖನಗಳಿಗೆ ಎಡೆ ಕೊಡಲಾಗುವುದಿಲ್ಲ. ಲೇಖನಗಳು ಸಾರ್ವಜನಿಕ ಹಿತಪ್ರೇರಿತವಾದದ್ದು ಯುಕ್ತ ರೀತಿಯಲ್ಲಿರತಕ್ಕದ್ದು.

(ಸಂ. ಸ್ವ.)

'ಹಿತೈಷಿ'ಯ 'ಇಗರ್ಜಿ ಶಾಲೆಗಳು' ಎಂಬ ಲೇಖನಕ್ಕೆ ಉತ್ತರ.

"ಹಿತೈಷಿ"ಯು ಹಿತದ ಹೆಸರಿನಿಂದ ಇಲ್ಲದ ಅನಾಹುತವನ್ನು ಎಬ್ಬಿಸಲು ನೋಡುವಂತಿದೆ. ಅವರು ತುಂಬ ನಂಬುವಂತಿರುವವರಲ್ಲದೆ ನಿಷ್ಪಕ್ಷಪಾತಿಯ ಗೋಚರಕ್ಕೆ ಹೋದಂತೆ ತೋರುವುದಿಲ್ಲ. ಇಗರ್ಜಿ ಶಾಲೆಗಳಿಂದ ಅದರಲ್ಲೂ ಅಗ್ರಾರ್ ಶಾಲೆಯಿಂದ ಜನತೆಗೆ ಆದ ಪ್ರಯೋಜನಗಳು ಯಥೇಷ್ಟ ಇವೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕ್ರೈಸ್ತರು ಲೋವರ್ ಎಲಿಮೆಂಟರಿ, ಹಾಯರ್ ಎಲಿಮೆಂಟರಿ, ಸೆಕೆಂಡರಿ ಸ್ಕೂಲ್ಸ್ ಮತ್ತು ಕಾಲೇಜುಗಳನ್ನು ನಡೆಸುತ್ತಿರುವುದು ಸರ್ವಸಾಮಾನ್ಯ ಎಲ್ಲರಿಗೂ ತಿಳಿದ ವಿಷಯವಾಗಿದೆ. ಮಾತ್ರವಲ್ಲ, ಅವರ ಕೆಲಸವು ಇನ್‌ಸ್ಪೆಕ್ಟರ್ ಮಹಾಶಯರ ಮನ್ನಣೆಗೂ ಪಾತ್ರವಾಗಿದೆ. ಇಗರ್ಜಿ ಶಾಲೆಗಳು ಯೋಗ್ಯ ರೀತಿಯಿಂದ ನಡೆಯುತ್ತಿವೆ ಎಂಬುದನ್ನು ತಿಳಿಸಲು ಇದೇ ಸಾಕಲ್ಲವೇ? ಕೆಟ್ಟ ಕಾರುಬಾರವು ಇದ್ದುದಾದರೆ ಅವು ಇಷ್ಟರ ವರೆಗೆ ಎಂದೂ ಬಾಳುತ್ತಿದ್ದಿಲ್ಲ! ಇಗರ್ಜಿ ಶಾಲೆಗಳಿಗೆ ಬರುವವರೆಲ್ಲರೂ ಕ್ರೈಸ್ತರೆಂದು ಹಿತೈಷಿಯ ಒಂದು ಅಪವಾದ. ಆದರೆ ಅಗ್ರಾರದಲ್ಲಿಯ ಒಂದು ಶಾಲೆಯಲ್ಲಿ 3/4 ಭಾಗವು ಹಿಂದೂಗಳಿರುವರು. ಇನ್ನೊಂದು ಇಗರ್ಜಿಗೆ ಸಂಬಂಧಪಟ್ಟ ಶಾಲೆಯಲ್ಲಿ ಕೇಳು ಜಾತಿಯವರೂ ಆದಿದ್ರಾವಿಡರೂ ಇರುವರು. ಹಾ. ೧೯೩೩-೩೪ರಲ್ಲಿ ಶಾಲೆಯನ್ನು ಸಂದರ್ಶಿಸಿದ ಇನ್‌ಸ್ಪೆಕ್ಟರ್ ಮಹಾಶಯರು ಈ ಕುರಿತು, "ಈ ಶಾಲೆಯಲ್ಲಿ ೯ ಮಂದಿ ಆದಿದ್ರಾವಿಡರು ಕಲಿಯುತ್ತಿರುವುದನ್ನು ನೋಡಿ ನನಗೆ ತುಂಬಾ ಸಂತೋಷವಾಯಿತು" ಎಂದು ಬರೆದಿರುವರು. ಇದಕ್ಕೆ ಹಿತೈಷಿಯ ಉತ್ತರವೇನು? ಕ್ಲಾಸಿನಲ್ಲಿ ಶಾಸ್ತ್ರ ಕಲಿಸುತ್ತಾರೆಂಬ ಹಿತೈಷಿಯ ಅಪವಾದವೇನೋ ಗಹನವಾದುದು. ಆದರೆ, ಪ್ರತಿದಿವಸದ ೫ ಗಂಟೆ ಕೆಲಸದಲ್ಲಿ ಒಂದು ಗಂಟೆಯೂ ಶಾಸ್ತ್ರಪಠನಕ್ಕೆ ವಿನಿಯೋಗಿಸಲ್ಪಡುವುದೆಂಬ ನನಗೆ ಮಾತ್ರ ಬುದ್ಧಿಸುಳ್ಳು. ಶಾಸ್ತ್ರ ಕಲಿಸುತ್ತಾರೆ—ಆದರೆ ಇದನ್ನು ಕಲಿಸುವವರು ಕ್ರೈಸ್ತರು; ಕಲಿಯುವವರೂ ಕ್ರೈಸ್ತರು ಮಾತ್ರವಲ್ಲ, ಶಾಲೆಯ ಯಾವತ್ತೂ ಜಾತಿಗಳಿಗೆ ತೊಂದರೆಯು ಬಾರದಂತೆ ಶಾಸ್ತ್ರದ ಕ್ಲಾಸು ಪ್ರತ್ಯೇಕ ನಡೆಸಲ್ಪಡುತ್ತದೆ. ಶಾಲೆಯ ೫ ಘಂಟೆ ಕೆಲಸಕ್ಕೂ ಈ ಕೆಲಸಕ್ಕೂ ಏನೂ ಸಂಬಂಧವಿಲ್ಲ. ಇದರಲ್ಲಿ ದೋಷವೇನು? ಇದು ಇನ್ಸ್‌ಪೆಕ್ಟರರ ಕಣ್ಣಿಗೆ ಕಾಣಿಸದಿದ್ದರೇನು? ಕಾಲನಿಯೋಜನ ಪಟ್ಟಿಯಲ್ಲಿ ಹಾಕಲ್ಪಡದಿದ್ದರೇನು? ಇದೆಲ್ಲ ಪ್ರತಿಯೊಬ್ಬ ಇನ್ಸ್‌ಪೆಕ್ಟರರಿಗೂ ತಿಳಿದ ವಿಷಯವು.

ಬಲ್ಲಾಳ ಸೆಂಟರಿನ ಉಪಾಧ್ಯಾಯ ಸಂಘದಲ್ಲಿ [illegible] ಮಾಸ್ಟ್ರ ಗುರುಗಳೊಬ್ಬರು, ನಮಗೆ '[C]ommunal' ಶಾಲೆಗಳು ಬೇಕೆಂದು ಒತ್ತಿ ಹೇಳಿದ್ದರೆಂದು ಹಿತೈಷಿಯು ಒಂದು ದೊಡ್ಡ ದೋಷವನ್ನು ಎತ್ತಿ ಹಿಡಿದಿರುವರು. ಆದರೆ, ನಾನು ಕೇಳಿದ ಮಟ್ಟಿಗೆ ಅವರ ಭಾಷಣವು ಹೀಗಿತ್ತು—'ಚೇಂಪಿಯನ್ ಸ್ಕೀಮ್ ಬಂದೊಡನೆ ಕ್ರೈಸ್ತರು ತಮ್ಮ ಇಗರ್ಜಿ ಶಾಲೆಗಳನ್ನು ಕಾಪಾಡಿಕೊಳ್ಳಬೇಕಾಗುವುದು. ಅದು ಮಕ್ಕಳಿಗೆ ಯೋಗ್ಯ ವಿದ್ಯಾಭ್ಯಾಸವನ್ನು ಒದಗಿಸಿಕೊಡುವುದಲ್ಲದೆ, ತಮ್ಮವರಿಗೆ ಧಾರ್ಮಿಕ ಶಿಕ್ಷಣವನ್ನು ಬೋಧಿಸಲು ಸಹಕಾರಿಯಾಗಿದೆ' ಎಂದು ಹೇಳಿದ್ದರು. ಇದರಲ್ಲಿ ದೋಷವೇನು? ದೋಷವಿದ್ದರೆ ಹಿತೈಷಿಗಳ ಶ್ರವಣಶಕ್ತಿಯಲ್ಲಿರಬಹುದಲ್ಲವೇ? ಇಗರ್ಜಿ ಶಾಲೆಗಳಿಂದ ಕೆಥೋಲಿಕ್ ಎಜ್ಯುಕೇಶನ್ ಬೋರ್ಡಿನವರು ಆದಾಯವಾದ ಬೇಕೆಂದಿರುವರೆಂದು ಹಿತೈಷಿಯ ಇನ್ನೊಂದು ಅಪವಾದ. ಆದರೆ, ಅವರ ಉದ್ದಿಷ್ಟವು ಪೂರ್ಣ ವಿರುದ್ಧವಾಗಿರುವುದು. ಶಾಲೆಗಳ ಯಾಜಮಾನ್ಯದಲ್ಲಿ ಆಗಾಗ್ಗೆ ಬದಲಾವಣೆಗಳು ಉಂಟಾಗಿರುವುದರಿಂದ, ಶಾಲೆಯ ಕೆಲಸದಲ್ಲಿ ಯಾವ ತರದ ಕುಂದುಕೊರತೆಗಳು ಉಂಟಾಗದಂತೆ ನೋಡಿಕೊಳ್ಳುವುದೇ ಈ ಬೋರ್ಡಿನ ಮುಖ್ಯ ಉದ್ದೇಶವಾಗಿದೆ. ಹರಕು, ಇಗರ್ಜಿಯ ಹಣವನ್ನು ಶಾಲೆಗಳಿಗೆ ತೆಗೆಯತಕ್ಕದೆಂದು ಮಾತ್ರ ಹಿತೈಷಿಗಳ ಅಕ್ಷಿಯಲ್ಲಿ ಏನೊಂದೂ ತಪ್ಪು ಇದ್ದಂತೆ ತೋರುವುದಿಲ್ಲ. ಈಗಿನಂತಹ ಆರ್ಥಿಕ ದುಸ್ಥಿತಿಯ ಕಾಲದಲ್ಲಿ ಇಗರ್ಜಿಗಳನ್ನೂ ಶಾಲೆಗಳನ್ನೂ ಯೋಗ್ಯ ರೀತಿಯಲ್ಲಿ ನಡೆಸಬೇಕಾದರೆ ಹಣದ ವ್ಯಯವನ್ನು ಯಾವ ರೀತಿಯಲ್ಲಿ ಮಾಡಬೇಕೆಂದು ಹಿತೈಷಿಗಳಿಗಿಂತ ಹೆಚ್ಚಿನ ಅನುಭವ ಮಾಸ್ಟ ಪಾದ್ರಿಗಳಿಗೆ ಇದ್ದೀತೆಂದು ನನ್ನ ಅಭಿಮತ.

ಇಗರ್ಜಿ ಶಾಲೆಗಳಿಗೆ ಕೊಡಲ್ಪಡುವ ಸಾರ್ವಜನಿಕ ಹಣದ ನೋವು ಹಿತೈಷಿಗೆ ಚೆನ್ನಾಗಿ ಇದ್ದಂತೆ ತೋರುತ್ತದೆ. ಆದರೆ ಸಾರ್ವಜನಿಕ ಹಣದಲ್ಲಿ ಕ್ರೈಸ್ತರದ್ದೂ ಒಂದು ಭಾಗವಿದೆಯೆಂಬುದು ಮಾತ್ರ ಅವರಿಗೆ ಚೆನ್ನಾಗಿ ತಿಳಿದಿರದು. ದಕ್ಷಿಣ ಕನ್ನಡ ಜಿಲ್ಲೆಯ ಕ್ರೈಸ್ತರು ಪರಕೀಯರಲ್ಲ. ತಮ್ಮ ಜಿಲ್ಲೆಯ ಹಿತವು ಹಿತೈಷಿಗಳಿಗೆ ಇದ್ದಷ್ಟಾದರೂ ಅವರಿಗೂ ಇದೆ. ಆದುಕಾರಣ, ತಮ್ಮ ಜಿಲ್ಲೆಯ ಅಭಿವೃದ್ಧಿಗಾಗಿಯೇ ಅವರು ಇಂತಹ ಶಾಲೆಗಳನ್ನು ಕಟ್ಟಿಕೊಂಡು ದುಡಿಯುತ್ತಿರುವಾಗ, ಹಿತೈಷಿಗಳಿಗೆ ಇದರಲ್ಲಿ ಕಂಡುಬಂದ ಕೊರತೆಯೇನು?

೧೯೩೩-೩೪ರಲ್ಲಿ, ಅಗ್ರಾರ್ ಶಾಲಾ ಉಪಾಧ್ಯಾಯರಿಗೆ ಸಂಬಳದಲ್ಲಿ ನೇರವಾ - ೧೧ರಂತೆ ಕಡಿತವೆಂದು ಹಿತೈಷಿಯ ಪ್ರಲಾಪ. ಆದರೆ ಗವರ್ನಮೆಂಟ್ ಗ್ರಾಂಟಿನಲ್ಲಿ 23%-18% ಕಡಿತ ಬಂದುದರ ಚಿಂತೆಯೇ ಹಿತೈಷಿಗೆ ಇದ್ದಂತೆ ಕಾಣುವುದಿಲ್ಲ. ಯಾವುದೊಂದು ಸಂಸ್ಥೆಯು ಯೋಗ್ಯ ರೀತಿಯಲ್ಲಿ ನಡೆಯಬೇಕಾದರೆ, ಅದರ ಆಯವನ್ನು ನೋಡಿ ವ್ಯಯಮಾಡಬೇಕಲ್ಲವೇ? ಹಾಸಿಗೆ ನೋಡಿ ಕಾಲು ಚಾಚಬೇಕಲ್ಲವೇ? ಆದುದರಿಂದ ಮಕ್ಕಳ ಸಂಬಳದಲ್ಲಿಯೂ, ಗವರ್ನಮೆಂಟ್ ಗ್ರಾಂಟಿನಲ್ಲಿಯೂ ಕಡಿತಬಂದ ಕಾಲದಲ್ಲಿಯೂ ಶಾಲಾ ಅಧಿಕಾರಿಗಳು ಉಪಾಧ್ಯಾಯರಿಗೆ ಒಂದೆರಡು ವರುಷಗಳ ತನಕ ಕಡಿಮೆ ಸಂಬಳದಲ್ಲಿ ಕೆಲಸಮಾಡಬೇಕೆಂಬುದರಲ್ಲಿ ಆಶ್ಚರ್ಯವೇನು? ಮತ್ತು ಉಪಾಧ್ಯಾಯರ ಸಮ್ಮತಿಯಿಂದಲೇ ಇಂತಹ ಕಡಿತವು ಮಾಡಲ್ಪಡುವುದು. ಅಂದ್ರಬೋಲ, ಹಿತೈಷಿಯು ದೂರಲಿಕ್ಕೆ ಕಾರಣವಿಲ್ಲ. ೨೫ ರೂಪಾಯಿ ಸಂಬಳದ ಅಗ್ರಾರ್ ಶಾಲಾ ಹೆಡ್‌ಮಾಸ್ತರರನ್ನು ೨೦/ ರೂಪಾಯಿಗೆ ನಿಲ್ಲಲು ಕೇಳಿದುದರಿಂದ, ಕೆಲಸದಿಂದ ನಿವೃತ್ತಿಗೊಳಿಸಿದರೆಂದು ಹಿತೈಷಿಯ ಚೀರಿಕೆ. ಅದು ಶಾಲಾಧಿಕಾರಿಗಳಿಗೆ ಸಂಬಂಧಪಟ್ಟ ವಿಷಯ. ಅವರು ಯಾವಾಗಲೂ ಶಾಲೆಯ ಹಿತವನ್ನೇ ತಮ್ಮ ಮುಂದಿಟ್ಟುಕೊಂಡು ಮುಂದುವರಿಯುತ್ತಿರುವರೆಂದು ನಮ್ಮ ಭರವಸೆ.

ಒಟ್ಟಿನ ಮೇಲೆ 'ಹಿತೈಷಿ'ಯೆಂದು ಕರೆಯುವ ಆ ಮಹಾನುಭಾವರು ಯಾರ ಹಿತೈಷಿಯೆಂದು ತಿಳಿಯುವಂತಿಲ್ಲ. ಅವರ ಮಾತುಗಳನ್ನು ಓದಿದರೆ ನಂಜು ಪ್ರತಿಯೊಂದು ಮಾತಿನಲ್ಲಿಯೂ ಇಣಿಕಿನೋಡುತ್ತದೆ. ಅಂತೂ, ಅವರು ಅಗ್ರಾರ ಶಾಲೆಯ ಸ್ವಾರ್ಥಹಿತೈಷಿಗಳಲ್ಲವೆಂದು ವಿಶ್ವಾಸ.

ಜೋಸೆಫ್ ರೇಗೋ,
ಅಗ್ರಾರ್ ಶಾಲೆಯ ಸಹಾಯಕ ಉಪಾಧ್ಯಾಯ.

ಆಗುಂಬೆ-ತೀರ್ಥಹಳ್ಳಿ ರಸ್ತೆಯ ಸುಖ!

ನಮ್ಮ ಮೈಸೂರು ಮಾದರಿ ಸಂಸ್ಥಾನ, ಆದರೆ, ಕೆಲವೊಂದು ರಸ್ತೆಗಳ ದುಸ್ಥಿತಿಯನ್ನು ನೋಡಿದರೆ, ಇದು ಮಾತ್ರ ಯಾರಿಗೂ ಮಾದರಿಯಾಗದಿರಲೆಂದು ಮನಃಪೂರ್ವಕವಾಗಿ ಹಾರೈಸುವೆನು.

ಆಗುಂಬೆಯಿಂದ ತೀರ್ಥಹಳ್ಳಿಗೆ ೧೯ ಮೈಲುಗಳ ಅಂತರವಿದೆ. ಈ ಹತ್ತೊಂಭತ್ತು ಮೈಲುಗಳನ್ನು ಮೋಟಾರು ವಾಹನಗಳಲ್ಲಾಗಲೀ ಗಾಡಿಯಲ್ಲಾಗಲೀ ದಾಟುವುದೆಂದರೆ ೧೯೦ ಮೈಲುಗಳ ಶ್ರಮವು ತೋರುವುದೆಂದಾಗ ಆ ರಸ್ತೆಯ ಉತ್ಕೃಷ್ಟತೆಯ ಕಿಂಚಿತ್ ಚಿತ್ರದ ಕಲ್ಪನೆಯಾಗಬಹುದು. ದಾರಿಯಲ್ಲಿ ಅಲ್ಲಲ್ಲಿ ಸೀರಿನ ಸ್ಥಾನವನ್ನು ಕಡೆಗಟ್ಟುವ ದೆಸೆಯಿಂದಲೋ ಏನೋ ಹಾಕಿಟ್ಟ ಕಲ್ಲುಗಳು; ಅವುಗಳ ಮೇಲಿಂದ ಮೋಟಾರು ವಾಹನವು ಹೋಗುವಾಗ ಜೀವವನ್ನು ಕೈಯಲ್ಲಿ ಹಿಡಿದೇ ದಾಟಬೇಕು. ರಸ್ತೆಯ ಸ್ಥಿತಿಯು ಇತರ ಕಡೆಗಳಲ್ಲಿಯೂ ಶೋಚನೀಯ. ಯಾವ ಬಂಡಿಯ ಚಕ್ರಗಳೂ ಸಮತಟ್ಟಾಗಿ ನಿಲ್ಲಲಾರದಷ್ಟು ಏರುತಗ್ಗುಗಳು, ಹೊಂಡಗಳು. ರಸ್ತೆ ರಿಪೇರಿಗೆಂದು ಹಣ ಮಂಜೂರಾಗಿ ಕಂಟ್ರಾಕ್ಟು ವಹಿಸಿಕೊಡಲ್ಪಟ್ಟರೂ, ಕಂಟ್ರಾಕ್ಟರರು ಇನ್ನೂ ರಸ್ತೆರಿಪೇರಿ ಕೆಲಸವನ್ನು ಆರಂಭಿಸಿದುದಿಲ್ಲ. ಅಂತು, ಈ ರಸ್ತೆಯಿಂದ ಪ್ರಯಾಣ ಮಾಡುವವರ ದುರ್ಭಾಗ್ಯವು ಸರ್ವ ವಿಧದಿಂದಲೂ ಹೆಚ್ಚುತ್ತಿರುವುದು!

ಮತ್ತೊಂದು ವಿಚಾರ—ಆಗುಂಬೆಯಿಂದ ಸುಮಾರು ೪೫ ಮೈಲಿಯಷ್ಟು ಕನಕ್ಕೆ ರಸ್ತೆಯ ಮೇಲೆ, ಇಬ್ಬದಿಗಳಿಂದಲೂ ಬೆಳೆದುಬಂದ ಕಾಡಿನಿಂದ ಮರದ ಗೆಲ್ಲುಗಳು ಹರಡಿದ್ದು, ಸೂರ್ಯನ ಕಿರಣಗಳೇ ಬೀಳದಂತಾಗಿ, ರಸ್ತೆಗಳು ಮಳೆಗಾಲದಲ್ಲಿ ಯಾವಾಗಲೂ ದುಸ್ಥಿತಿಯಲ್ಲಿ ಇರುವಂತಾಗಿದೆ. ಆ ಕೊಂಬೆಗಳನ್ನು ಕಡಿಸಿದ್ದರೆ ರಸ್ತೆಯು ಸ್ಥಿತಿಯಲ್ಲಿ ಸುಧಾರಣೆಯಾಗಬಹುದೋ ಏನೋ ಎಂಬಾಸೆ.

ರಸ್ತೆರಿಪೇರಿಯ ಕಡೆಗೆ ಕಂಟ್ರಾಕ್ಟರರು ಗಮನ ಕೊಟ್ಟುದು ಸಾಕಾಗಲಿಲ್ಲ. ಇಂತಹ ರಸ್ತೆಗಳಲ್ಲಿ ರಿಪೇರಿ ಕೆಲಸವು ವರ್ಷಗಟ್ಟಳೆ ನಡೆದೇ ಇರುತ್ತಿದ್ದರೂ ಚೆನ್ನಾಗಿಲ್ಲ. ರಿಪೇರಿಯಿಲ್ಲದಿದ್ದರೂ ಬೇಗನೇ ನಡೆದು ಮುಗಿಯಬೇಕು. ಪ್ರಯಾಣಿಕರ ಹಾಗೂ ಮೋಟಾರು ಇತ್ಯಾದಿ ವಾಹನಗಳ ಚಲಾವಣೆಯ ಸುಖವನ್ನು ಅಧಿಕಾರಿಗಳು ಲಕ್ಷಿಸಬೇಕಾಗಿದೆ. ದೊಡ್ಡ ಅಧಿಕಾರಿಗಳು ಬಹುಶಃ ಈ ಮಾರ್ಗವಾಗಿ ಬರುವುದೇ ಇಲ್ಲವೆಂದು ತೋರುವುದು. ಒಮ್ಮೆ ಬರುತ್ತಿದ್ದರೆ, ಇಂತಹ ರಸ್ತೆಯು ಮೈಸೂರು ದೇಶದ ಮತ್ತಾವ ಕಡೆಯಲ್ಲೂ ಇಲ್ಲವೆಂಬುದನ್ನು ಮನಗಾಣುತ್ತಿದ್ದರು. ಇಂತಹ ರಸ್ತೆಗಳು ಯಾವ ಪ್ರಾಂತ್ಯಕ್ಕೂ ಭೂಷಣವಾಗಿಲ್ಲ. ಸಂಬಂಧಪಟ್ಟ ಮೇಲಧಿಕಾರಿಗಳ ಗಮನವು ಈ ಕಡೆಗೆ ಹರಿದು, ಈ ರಸ್ತೆಯ ಸುಧಾರಣೆಯಾಗುವುದೆಂದು ಭರವಸೆಪಡುವ,—

ಪ್ರಯಾಣಿಕ.

ಮೊಗವೀರ ಫ್ರೀ ನ್ಯಾಟ್‌ಸ್ಕೂಲ್, ಮುಂಬಾಯಿ.

ಮುಂಬಾಯಿಯಲ್ಲಿ ಈಗೀಗ ಕನ್ನಡಿಗರು ಪ್ರಗತಿಯ ಮಾರ್ಗವಲಂಬಿಗಳಾಗಿದ್ದಾರೆಂಬುದು ಸಂತೋಷದ ಸಂಗತಿ. ಮುಂಬಾಯಿಯ ಕೋಟಿಯೊಳಗೊಂದರಲ್ಲಿ ದಕ್ಷಿಣ ಕನ್ನಡಿಗರ ಸಂಘ-ಸಂಸ್ಥೆಗಳು ಅನೇಕ ಇವೆ. ಈ ಸಂಸ್ಥೆಗಳೆಲ್ಲವೂ ಒಂದೊಂದು ಉದ್ದೇಶ್ಯವನ್ನಿಟ್ಟುಕೊಂಡು ಪರಿಶ್ರಮಸಾಧನೆಯಲ್ಲಿ ಮುನ್ನಡೆಯುತ್ತಿರುವುದು ಕನ್ನಡಿಗರೆಲ್ಲರಿಗೂ ಅಭಿಮಾನದ ವಿಷಯವೇ ಸರಿ. ಪ್ರಸ್ತುತ, ನಾನೀಗ ಒಂದೆರಡು ಮಾತುಗಳನ್ನು ಬರೆಯಬೇಕೆಂದಿರುವುದು 'ಮೊಗವೀರ ಫ್ರೀ ನ್ಯಾಟ್ ಸ್ಕೂಲಿನ ವಿಷಯ. ಈ ಶಾಲೆಯು ದಕ್ಷಿಣ ಕನ್ನಡದ ಮೊಗವೀರ ಬ್ರದರಿಂದ ಸ್ಥಾಪಿತವಾದ "ಮೊಗವೀರ ವ್ಯವಸ್ಥಾಪಕ ಮಂಡಳಿ"ಯವರಿಂದ ನಡೆಸಲ್ಪಡುತ್ತದೆ. ಇದು ೮ ವರ್ಷಗಳಿಂದಲೇ ಸ್ಥಾಪಿಸಲ್ಪಟ್ಟು—ನಡೆಸಲ್ಪಡುತ್ತಿದ್ದರೂ, ಇಲ್ಲಿಗೆ ಸ್ವಜಾತಿಯೊಂದೇ ಎಂಬ ಸ್ವಾರ್ಥವನ್ನಿಟ್ಟುಕೊಳ್ಳದೆ ಸರ್ವ ಮತದ ವಿದ್ಯಾರ್ಥಿಗಳಿಗೂ ಪ್ರವೇಶವನ್ನಿಟ್ಟುದುದಲ್ಲದೆ, ಇತರ ಜಾತಿಯ ಉಪಾಧ್ಯಾಯರುಗಳನ್ನೂ ನಿಯಮಿಸಿಕೊಂಡಿರುವುದು ಶ್ಲಾಘನೀಯವೇ ಸರಿ. ಅಲ್ಲದೆ ಈಗಿನ ಮುಖ್ಯೋಪಾಧ್ಯಾಯರ ಪದವಿಯನ್ನು ಸರಮತೀಯರಾದ ಶ್ರೀಯುತ ಕೆ. ಎನ್. ಗ್ಯಾಟೊಂಡೆಯವರಿಗೆ ಕೊಟ್ಟಿರುವುದು ಈ ಸಂಸ್ಥೆಯ ನಿಸ್ವಾರ್ಥತೆಯ ಹೆಗ್ಗುರುತೆಂದೇ ಭಾವಿಸಬೇಕಾಗಿದೆ. ಈ ಶಾಲೆಯಲ್ಲಿ ಹೆಚ್ಚುಕಮ್ಮಿ ಇಪ್ಪತ್ತರಷ್ಟು ಅಧ್ಯಾಪಕರುಗಳೂ, ೩೦೦ಕ್ಕೂ ಮಿಕ್ಕಿದ ವಿದ್ಯಾರ್ಥಿಗಳೂ ಇರುವರು. ಅಧ್ಯಾಪಕರ ಪೈಕಿ ಶ್ರೀಗಳಾದ ಆರ್. ಪಿ. ಕುಂದರರೂ, ಬಿ. ಎಲ್. ಕೋಟ್ಯಾನರೂ ಶಾಲೆಯ ಸುಪರಿಂಟೆಂಡೆಂಟರಾಗಿದ್ದಾರೆ. ಇವರ ದೂರದರ್ಶಿತ್ವ ಹಾಗೂ ಚಟುವಟಿಕೆಯಿಂದಲೂ, ಮುಖ್ಯೋಪಾಧ್ಯಾಯರ ಸೌಹಾರ್ದ—ವಿಶೇಷತೆಯಿಂದಲೂ, ಇತರ ಅಧ್ಯಾಪಕರ ಸಹಾನುಭೂತಿ—ಸಹಕಾರದಿಂದಲೂ ಈ ಶಾಲೆಯು ಉತ್ತಮ ರೀತಿಯಿಂದ ಸಾಗುತ್ತಿರುವುದೆಂದರೆ ಹೆಚ್ಚಿನದಲ್ಲ.

ಈ ಶಾಲೆಯ ಸ್ಥಾಪನೆಯಿಂದಾಗಿ, ನಿರಕ್ಷರಕುಕ್ಷಿಗಳಾಗಿದ್ದು, ಸಣ್ಣ ಸಣ್ಣ ಕೆಲಸದಲ್ಲಿದ್ದು ರಾತ್ರಿಸಮಯವನ್ನು ವ್ಯರ್ಥ ಕಳೆಯುತ್ತಿದ್ದ ಅನೇಕ ಮಂದಿ ವಿದ್ಯಾದಾನ ಪಡೆದು, ಈಗ ವಿದ್ಯಾಸಂಪನ್ನರಾದುದಲ್ಲದೆ, ದೊಡ್ಡ ದೊಡ್ಡ ಗಿರಣಿಗಳಲ್ಲೋ ಇತರ ಪ್ರಮುಖ ವ್ಯಾಪಾರಿ ಸಂಸ್ಥೆಗಳಲ್ಲೋ ಉನ್ನತ ಹುದ್ದೆಯಲ್ಲಿದ್ದು ಗೌರವಿಸಿಕೊಳ್ಳುತ್ತಿರುವುದು ಕಂಡುಬರುತ್ತದೆ. ಈ ರೀತಿ ವಿದ್ಯಾದಾನ ಮಾಡುತ್ತಿರುವ ಕಾರ್ಯತತ್ಪರ ಮಂಡಳಿಯು ಇತರ ಅನೇಕ ಕಾರ್ಯಕ್ರಮಗಳಲ್ಲಿ ಶ್ರೇಷ್ಠವು ಪಾಲುದು. ಇಲ್ಲಿ ಇತರ ಸರಕಾರೀ ಶಾಲೆಗಳ ಪಠ್ಯಪುಸ್ತಕಗಳನ್ನೇ ಮುಂದೂರುಮಾಡಿ ಇಟ್ಟುಕೊಂಡಿರುವುದು ಯೋಗ್ಯವೇ. ಇಲ್ಲಿ ಕಲಿತ ವಿದ್ಯಾರ್ಥಿಗಳು ಇತರ ಯಾವ ಸರಕಾರೀ (ಹಗಲು) ಶಾಲೆಯಲ್ಲಿ ಕಲಿತ ವಿದ್ಯಾರ್ಥಿಗಳನ್ನೂ ಸರಿಗಟ್ಟಬಲ್ಲರೆಂಬುದು ನನ್ನ ಅನುಭವದ ಮಾತು. ಇಲ್ಲಿಯ ಸಂಪೂರ್ಣ ಇಯತ್ತೆಗಳಲ್ಲಿ ತೇರ್ಗಡೆ ಹೊಂದಿದ ವಿದ್ಯಾರ್ಥಿಯು ಸರಕಾರಿ (ಹಗಲು) ಶಾಲೆಯ ಎಸ್. ಎಸ್. ಎಲ್. ಸಿ. ಕ್ಲಾಸಿಗೆ ಪ್ರವೇಶಿಸಬಹುದೆಂದು ದೃಢವಾಗಿ ಹೇಳಬಲ್ಲೆನು.

ಇಲ್ಲಿ ಪಾದರಕ್ಕೂ ನೀತಿಪಾಠಕ್ಕಾಗಿ ಪ್ರತ್ಯೇಕ ಕ್ಲಾಸನ್ನು ಮಾಡಿ ತಿಳಿದವರಿಂದ ಮಕ್ಕಳಿಗೆ ನೀತಿಬೋಧನೆ

(೧೩ನೇ ಪುಟಕ್ಕೆ ಮುಂದುವರಿದಿದೆ)

ರೇಶ್ಮೆಯಂತೆ, ನುಣುಪಾದ ಮತ್ತು ಹೊಳಪಾದ ಕೇಶಧಾಮ

ದಿನನಿತ್ಯದ ಸ್ನಾನಕ್ಕೆ ಮುಂಚಿತವಾಗಿ ನಿಮ್ಮ ಕೂದಲುಗಳನ್ನು ಚೆನ್ನಾಗಿ ಬಾಚಿ, ಬ್ರಷಿನಿಂದ ಸವರಿ, ಆ ನಂತರ

"ಕುಂತಳ ಕೌಮುದಿ"

ಎಂಬ ಹಿಂದೂಸ್ಥಾನದ ಪ್ರಸಿದ್ಧ ಕೇಶ ತೈಲ್ಯದಿಂದ ಕೂದಲುಗಳ ಬುಡವನ್ನು ಜಾಗರೂಕತೆಯಿಂದ ತಿಕ್ಕಿರಿ.

(ಮನಸ್ಸುಗ್ಧಕರವಾದ ಸುಗಂಧವನ್ನುಳ್ಳದು.)

ಹಿಂದೂಸ್ಥಾನದಲ್ಲೆಲ್ಲ ಸರ್ವತ್ರ ಉಪಯೋಗಿಸಲ್ಪಡುತ್ತಿದೆ.

ತಯಾರಿಸುವವರು:— ಬೆಲೆ ಸೀಸೆ ಒಂದಕ್ಕೆ ರೂ.0—12—0.

ಆರ್. ಸಿ. ಸೇನ್ ಎಂಡ್ ಕೋ., ಲಿಮಿಟೆಡ್, ಕಲ್ಕತ್ತ.

ಏಜಂಟರು:— ಕುಂತಳ ಕೌಮುದಿ ತೈಲ, ವೆನ್‌ಲೊಕ್ ಆಸ್ಪತ್ರೆ ಎದುರು, ಮಂಗಳೂರು.

[ಗುಣಬಾರದಿದ್ದರೆ ಹಣ ವಾಪಾಸು]

ಸುಪ್ರಸಿದ್ಧ ವೈದ್ಯರಾದ ಎಮ್. ಜಿ. ರಜಪೂತ ಇವರ

ಸಂತತಿ ಪ್ರತಿಬಂಧಕ ಚೂರ್ಣ (ರಜಿಸ್ಟರ್ಡ)

ಬಹಳ ಸಾರಿ ಹಡಿಯುವುದರಿಂದ ಹೆಂಗಸರ ಆಕೃತಿಯು ಅಶಕ್ತಿಯಾಗುತ್ತದೆ. ಬಹಳ ಬಡತನದಲ್ಲಿ ವಿಶೇಷ ಮಕ್ಕಳಾಗುವುದರಿಂದ ದುಃಖವಾಗುತ್ತದೆ. ಈ ಕಾರಣದಿಂದಲೂ ಅಥವಾ ಬೇರೆ ಕಾರಣದಿಂದಲೂ ಮಕ್ಕಳನ್ನು ಹಡಿಯುವುದು ಬಂದಾಗಬೇಕೆಂದು ಇಚ್ಛಿಸುವವರು ಈ ಚೂರ್ಣವನ್ನು ಉಪಯೋಗಿಸಬೇಕು. ಇದರ ಸೇವನೆಯಿಂದ ಮುಟ್ಟಾಗುವಿಕೆಯು ನೇಮದಂತೆ ನಡೆಯುವುದು. ಶರೀರಕ್ಕೆ ಏನೂ ಅಪಾಯವಾಗದೆ ಸಂಸಾರಸುಖವು ಪೂರ್ಣವಾಗಿದ್ದು ಕೂಡಲೇ ಗರ್ಭಧಾರಣ ಬಂದಾಗುವುದು. ಅದನಂತರ ಏನು ಮಾಡಿದರೂ ಶುರುವಾಗುವುದಿಲ್ಲ. ಮೊದಲೇ ಪೂರಾ ವಿಚಾರ ಮಾಡಿ ಔಷಧ ಬೇಡಿರಿ. ಮುಖ್ಯ ಸರ್ಟಿಫಿಕೇಟ ಡಾಕ್ಟರ ಬಿ. ಎ. ವೈದ್ಯ, ಎಲ್. ಸಿ. ಪಿ. ಎಸ್. ಕೇಳಬಹುದು. ಖಾತ್ರಿ: ಈ ಚೂರ್ಣದಿಂದ ಯಾವ ತರಹ ಅಪಾಯವಾಗದು. ಗರ್ಭಧಾರಣವೂ ಆಗುವದಿಲ್ಲ. ಪೂರ್ಣ ಗುಣಕಾರಿ ತಪ್ಪಿ ತಿನ್ನುತ್ತ ರೂ. ೪—೦—೦. ಪಿ. ಪಿ. [illegible]

ವಿಳಾಸ:— ಸಂಜೀವಿನೀ ಔಷಧಾಲಯ ಮು. ಪೋ. ಮಿರಜ, S. M. C.

ನೋಟೀಸು

ಕಾಸರಗೋಡು ಡಿಸ್ಟ್ರಿಕ್ಟ್ ಮುನ್ಸೀಫ್ ಕೋರ್ಟಿನಲ್ಲಿ

ಕ್ರಮವ್ಯಾಜ್ಯದ ನಂಬ್ರ 377/'34.

ಉಯ್ಯಕ್ಕಾಟ್ಟಿಲ್ಲತ್ತ ಸುಬ್ರಹ್ಮಣ್ಯನ್ ನಂಬೂಧರಿ, ಮಾಧವನ್ ನಂಬೂದಿರಿಯ ಮಗ, ಕಾಸರಗೋಡು ತಾಲೂಕು ತೆಂಕು ತ್ರಿಕ್ಕರ್ಪೂರ ಗ್ರಾಮದಲ್ಲಿರುವವ—ವಾದಿ

ಮತ್ತು

1 ಉದಿನೂರು ತೆಕ್ಕೇಮುಠತ್ತಿಲ್ ವಿಷ್ಣುನಂಬಿ, 2. ಉದಿನೂರು ತೆಕ್ಕೇಮುಠತ್ತಿಲ್ ವಾಸುದೇವನ್ ನಂಬಿ, ಸಾವಿತ್ರಿ ಅಮ್ಮನ ಮಕ್ಕಳು, ಕಾಸರಗೋಡು ತಾಲ್ಲೂಕು ಉದಿನೂರು ಗ್ರಾಮದಲ್ಲಿರುವವರು—ಪ್ರತಿವಾದಿರು

ಇವರೊಳಗೆ—

ಸದ್ರಿ ವಾದಿಗೆ ಪ್ರತಿವಾದಿರು ತಾರೀಕು 17–7–'31ರಲ್ಲಿ ರೂಪಾಯಿ 325/-ಕ್ಕೆ ಬರಕೊಟ್ಟ ದಿಮಾಂಡು ಪ್ರೊಮಿಸರಿ ನೋಟಿನ ಅಸಲು ಮತ್ತು ಅದರ ಮೇಲಣ ಸಾಲಿಯಾನ ಸೇಕಡಾ 24ರಸಲೆ ಬಡ್ಡಿ ಕೂಡಾ ರೂಪಾಯಿ 600-0-0ಕ್ಕೆ ವಾದಿಯು ಪ್ರತಿವಾದಿರ ಮೇಲೆ ದಾಕ್ಲು ಮಾಡಿರುವ ಸದ್ರಿ ವ್ಯಾಜ್ಯವು ತಾರೀಕು 18–9–'34ಕ್ಕೆ ಪ್ರತಿವಾದಿರ ಹಾಜರು ಬಗ್ಗೆ ಇಟ್ಟಿರುತ್ತದೆ ಪ್ರತಿವಾದಿರು ಸ್ವತಹಾ ಯಾ ವಕೀಲರ ಮುಖಾಂತರ ಆ ದಿವಸ ಸದ್ರಿ ಕೋರ್ಟಿನ ಮುಂದೆ ಬೆಳಿಗ್ಗೆ ಘಂಟೆ 10ಕ್ಕೆ ಹಾಜರಾಗಿ ತಮ್ಮ ಉದಾಹರಣೆಗಳನ್ನು ಜಾಹೀರು ಮಾಡಲಿಕ್ಕೆ ತಪ್ಪಿದರೆ ಎಕ್ಸ್‌ಪಾರ್ಟಿಯಾಗಿ ಸದ್ರಿ ವ್ಯಾಜ್ಯವು ತೀರ್ಮಾನಿಸೋಣಾದೀತು ಎಂಬ ಸಂಗ್ತಿ ಈ ಮೂಲಕ ತಿಳಿಸೋಣಾಗಿದೆ

ಕಾಸರಗೋಡು
28–8–34

K Ramavarma Rajah
B A B L
Vakil for Plaintiff

ನೋಟೀಸು

ಕಾರ್ಕಳ ಡಿಸ್ಟ್ರಿಕ್ಟ್ ಮುನ್ಸೀಫ್ ಕೋರ್ಟಿನಲ್ಲಿ

ಸ್ಮಾಲ್ ಸೂಟ್ಸ್ 196/1934.

A. S. ಅಬ್ದುಲ್ ರಹಿಮಾನ್ ಸಾಹೇಬ—ವಾದಿ.

ಮತ್ತು

ಸುಲೆಮಾನ ಬ್ಯಾರಿ—ಪ್ರತಿವಾದಿ

ಇವರೊಳಗೆ—

ವಾದಿಗೆ ಪ್ರತಿವಾದಿಯು ಇದೇ ಕಳೆದ ತಾ. 28–6–'31ರಲ್ಲಿ ರೂ 68–8–0ಕ್ಕೆ ಬರಕೊಟ್ಟ ದಿಮಾಂಡ ಪ್ರೊಮಿಸರಿ ನೋಟಿನ ಅಸಲು ಬಡ್ಡಿ ರೂ 88–9–6ನ್ನು ಬರಮಾಡಿಕೊಳ್ಳುವರೆ ವಾದಿಯು ಮೇಲ್ಕಂಡ ದಾವೆ ಮಾಡಿರುತ್ತಾನೆ ಸದ್ರಿ ದಾವೆಯು ಇದೇ ತಾ 24–9–'34ಕ್ಕೆ ಪ್ರತಿವಾದಿಯು ಹಾಜರಾತಿ ಬಗ್ಗೆ ಇಟ್ಟಿರುತ್ತದೆ ಆದುದರಿಂದ ಸದ್ರಿ ತಾರೀಕಿಗೆ ಬೆಳಿಗ್ಗೆ 11 ಘಂಟೆಗೆ ಪ್ರತಿವಾದಿಯು ಕೋರ್ಟಿನ ಮುಂದೆ ಹಾಜರಾಗತಕ್ಕದ್ದು. ತಪ್ಪಿದರೆ ಆತನ ಗೈರ ಹಾಜರಿಯಲ್ಲಿ ಈ ದಾವಾ ತೀರ್ಮಾನಿಸೋಣಾದೀತೆಂಬ ಸಂಗ್ತಿ ಈ ಮೂಲಕ ತಿಳಿಸೋಣಾಗುತ್ತದೆ.

ಕೋರ್ಟಿನ ಹುಕುಂ ಪ್ರಕಾರ

ಕಾರ್ಕಳ,
29–8–34

H S Hussain,
Vakil for Plaintiff

ಬೇಕಾಗಿದ್ದಾರೆ.

ತಿಂಗಳಿಗೆ ರೂ. 200ರ ಮೇಲೆ ಚೀಫ್ ಏಜಂಟರೂ, ರೂ 100ರ ಮೇಲೆ ಏಜಂಟರೂ ರೂ 40 ಮತ್ತು ಪ್ರೊವಿಡೆಂಟ್ ಫಂಡ್ ಮತ್ತು ಕಮಿಶನಿನ ಮೇಲೆ ಆರ್ಗನೈಜರರೂ ಬೇಕಾಗಿದ್ದಾರೆ

ಇಂಗ್ಲಿಷಿನಲ್ಲಿ ಬರೆಯಿರಿ —

Uplifting Banking Corporation Ltd.

169 171, Javeri Bazar, Bombay.

ಬೇಕಾಗಿದೆ.

ಮಂಗಳೂರು ಬಂದರದಲ್ಲಿ ೫೦೦ ಡಬ್ಬಿ ಚಿಮ್ಣಿ ಎಣ್ಣೆ ಹಿಡಿಯುವ ಒಂದು ಗೋಡೌನು ಬೇಕಾಗಿದೆ ಕಟ್ಟೋಣವು ಕಲ್ಲಿನದ್ದಾಗಿರಬೇಕು ನದೀತೀರದಲ್ಲಿದ್ದರೆ ಉತ್ತಮ ಬಾಡಿಗೆ ಮತ್ತು ಇತರ ವಿಷಯಗಳನ್ನು ನಮೂದಿಸಿ ಕೂಡಲೇ ಬರೆಯಿರಿ

"ಜವಾಹಿರ್" ನಮೂನೆಯ ಚಿಮ್ಣಿ ಎಣ್ಣೆಯನ್ನು ಮಾರಲು ಮಂಗಳೂರು ಪಟ್ಟಣಕ್ಕೊಬ್ಬ ಏಜಂಟರು ಬೇಕಾಗಿದ್ದಾರೆ ವ್ಯಾಪಾರಿಗಳು ಮಾತ್ರವೇ ಬರೆಯಿರಿ.

Apply **T. Madhava Pai,**

Distributor, Kasaragod ಽ K

A Recuring Pleasure *To Smoke them*

MANGALORE

DARBAR BEEDIES

Thousands enjoy them daily all over India

When buying see our Trade Mark!

ಮಂಗಳೂರು ದರ್ಬಾರ್ ಬೀಡಿಗಳು

ಇವುಗಳನ್ನು ಸೇದ ವುದೆಂದರ ಆನಂದ

ಯಾವ ಕಾಲದಲ್ಲೂ ಸಿಗರೇಟುಗಳ ಸ್ಥಾನವನ್ನು ಯೋಗ್ಯವೆನಿಸುವ ತೆ ರಹಿಸುವ ಬೀಡಿಗಳಿರುವುವಾದರೆ—ಅವುಗಳು

ದಿ ಗ್ರೇಟ್ ದರ್ಬಾರ್ ಬೀಡಿ ವರ್ಕ್ಸ್

ರಥಬೀದಿ, ಮಂಗಳೂರು

ಇವಾ೬ ಡ ತಯಾರಿಸ್ಪಟ್ಟವುಗಳ

The Canara Public Conveyance Company, Ltd., Mangalore.

WE TAKE UTMOST CARE OF PASSENGERS

Read the following letter –

Modern Hindu Hotel,
Calicut, 17—6 – 1934

Dear Sir,

We wish to thank you for all that you did for us to make our stay at Mangalore comfortable It is extremely nice of you to have looked after us as you did

Yours faithfully,

(Sd.) **A. V. Ramaswami.**

The same service is offered to all We call for reports from passengers, if they have failed to receive similar attention and assure to take prompt action to see that inconvenience is not repeated.

Chikmagalur Public Conveyance Motor Service, Chikmagalur.

ಚಿಕ್ಕಮಗಳೂರು ಪಬ್ಲಿಕ್ ಕನ್ವೆಯನ್ಸ್ ಮೋಟರ್ ಸರ್ವಿಸ್,

ಚಿಕ್ಕಮಗಳೂರು

ಮುಂಬಾಯಿಯಿಂದ – ಮಂಗಳೂರಿಗೆ

ಮಂಗಳೂರಿನಿಂದ – ಮುಂಬಾಯಿಗೆ

ಅಲ್ಲದೆ

ಹುಬ್ಬಳ್ಳಿ, ಧಾರವಾಡ ಗೋವಾ, ಮುಂಬಾಯಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಯ ಎಲ್ಲಾ ಭಾಗಗಳಿಗೆ ಪ್ರಯಾಣ ನಡಿಸಲಿಕ್ಕೆ ಮಂಗಳೂರು – ಕಡೂರು ಹಾದಿಗಿಂತ ಉತ್ತಮ ಬೇರೆ ಹಾದಿಯಿಲ್ಲ!

ಹೊಸ ಬಸ್ಸುಗಳು ಅನುಕೂಲ ಪ್ರಯಾಣ ಸೌಕರ್ಯಗಳು

ಕಡೂರು ಜಿಲ್ಲೆಯೊಳಗಿನ ಎಲ್ಲಾ ಕಾಫಿ ತೋಟಗಳಿಗೆ ಕೂಲಿಕಾರರನ್ನು ತರಲಿಕ್ಕೂ ಅಲ್ಲಿಂದ ಕೊಂಡುಹೋಗಲಿಕ್ಕೂ ನಾವು ಎಲ್ಲಾ ತರದ ಸಹಾಯವನ್ನೂ ಕೊಡುತ್ತೇವೆ

ಚಿಕ್ಕಮಗಳೂರಿನಿಂದ— ಶಿವಮೊಗ್ಗಕ್ಕೆ, ಬೀರೂರಿಗೆ, ಕಡೂರಿಗೆ-
– ಮೂಡಗೆರೆಗೆ, ಸಕಲೇಶಪುರಕ್ಕೆ.
– ಮಂಗಳೂರಿಗೆ, ಮೂಡಬಿದ್ರೆಗೆ, ಪುತ್ತೂರಿಗೆ, ಮುಲ್ಕಿಗೆ.
—ಧರ್ಮಸ್ಥಳಕ್ಕೆ, ವೇಣೂರಿಗೆ, ಸುಬ್ರಹ್ಮಣ್ಯಕ್ಕೆ.

ನಿರಾಯಾಸದ ಪ್ರಯಾಣ! ಉತ್ಸಾಹಕರ ಸೌಕರ್ಯ!

ಬೇಕಾದ ಮಾಹಿತಿಗೆ ನಮ್ಮ ಆಫೀಸಿಗೆ ಬರೆದು ತಿಳಿದುಕೊಳ್ಳಿರಿ.

ಸಂಪಾದಕರ ಟಪ್ಪಾಲುಪೆಟ್ಟಿಗೆ.

ಪತ್ರಿಕಾದಾರರ ಅಭಿಪ್ರಾಯಗಳಿಗೆ ನಾವು ಜವಾಬ್ದಾರರಲ್ಲ. ಎಲ್ಲಾ ಲೇಖಕರು ತಮ್ಮ ಸಂಪೂರ್ಣ ಹೆಸರು ವಿಳಾಸಗಳನ್ನು ಕೊಡತಕ್ಕದ್ದು. ದೀರ್ಘ ಲೇಖನಗಳಿಗೆ ಎಡೆ ಕೊಡಲಾಗುವುದಿಲ್ಲ. ಲೇಖನಗಳು ಸಾರ್ವಜನಿಕ ಹಿತದೃಷ್ಟಿಯುಂದಿದ್ದು, ಯುಕ್ತ ಶೈಲಿಯಲ್ಲಿರತಕ್ಕದ್ದು. (ಸಂ. ಸ್ವ.)

'ಹಿತೈಷಿ'ಯ 'ಇಗರ್ಜಿ ಶಾಲೆಗಳು' ಎಂಬ ಲೇಖನಕ್ಕೆ ಉತ್ತರ.

"ಹಿತೈಷಿ"ಯು ಹಿತದ ಹೆಸರಿನಿಂದ ಇಲ್ಲದ ಅಪಾಯವನ್ನು ಎಬ್ಬಿಸಲು ನೋಡುವಂತಿದೆ. ಅವರು ಕುಂಟು ನೆಪವನ್ನು ತಂದಿರುವರಲ್ಲದೆ ವಾಸ್ತವಿಕ ಸ್ಥಿತಿಯ ಗೋಚರಿಸುವಂತೆ ತಿಳಿಸುವುದಿಲ್ಲ. ಇಗರ್ಜಿ ಶಾಲೆಗಳಿಂದ ಅವರಲ್ಲೂ, ಆಗ್ರಾರ್ ಶಾಲೆಯಿಂದ ಜನತೆಗೆ ಆದ ಪ್ರಯೋಜನಗಳು ಯಥೇಷ್ಟ ಇವೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕ್ರೈಸ್ತರು ಲೋವರ್ ಎಲಿಮೆಂಟರಿ, ಹಾಯರ್ ಎಲಿಮೆಂಟರಿ, ಸೆಕೆಂಡರಿ ಸ್ಕೂಲ್ ಮತ್ತು ಕಾಲೇಜುಗಳನ್ನು ನಡೆಸುತ್ತಿರುವುದು ಸರ್ವಸಾಮಾನ್ಯ ಎಲ್ಲರಿಗೂ ತಿಳಿದ ವಿಷಯವಾಗಿದೆ. ಮಾತ್ರವಲ್ಲ, ಅವರ ಕೆಲಸವೂ ಇನ್‌ಸ್ಪೆಕ್ಟರ್ ಮಹಾಶಯರ ಮನ್ನಣೆಗೂ ಪಾತ್ರವಾಗಿದೆ. ಇಗರ್ಜಿ ಶಾಲೆಗಳು ಯೋಗ್ಯ ರೀತಿಯಿಂದ ನಡೆಯುತ್ತಿವೆ ಎಂಬುದನ್ನು ತಿಳಿಸಲು ಇದೇ ಸಾಕಲ್ಲವೇ? ಕೆಟ್ಟ ಧೋರಣೆಯು ಇದ್ದುದಾದರೆ ಅವು ಇಷ್ಟರ ತನಕ ಎಂದೂ ಬಾಳುತ್ತಿದ್ದಿಲ್ಲ! ಇಗರ್ಜಿ ಶಾಲೆಗಳಿಗೆ ಬರುವವರೆಲ್ಲರೂ ಕ್ರೈಸ್ತರೆಂದು ಹಿತೈಷಿಯ ಒಂದು ಅಪವಾದ, ಆದರೆ ಆಗ್ರಾರದಲ್ಲಿಯ ಒಂದು ಶಾಲೆಯಲ್ಲಿ ೨/೩ ಭಾಗವು ಹಿಂದೂಗಳಿರುವರು. ಇನ್ನೊಂದು ಇಗರ್ಜಿಗೆ ಸಂಬಂಧಪಟ್ಟ ಶಾಲೆಯಲ್ಲಿ ಕೀಳು ಜಾತಿಯವರೂ ಅಧಿದ್ರಾವಿಡರೂ ಇರುವರು. ತಾ. ೧೬-೨-೩೬ರಲ್ಲಿ ಶಾಲೆಯನ್ನು ಸಂದರ್ಶಿಸಿದ ಇನ್‌ಸ್ಪೆಕ್ಟರ್ ಮಹಾಶಯರು ಈ ಕುರಿತು, "ಈ ಶಾಲೆಯಲ್ಲಿ ೮ ಮಂದಿ ಆದಿದ್ರಾವಿಡರು ಕಲಿಯುತ್ತಿರುವುದನ್ನು ನೋಡಿ ನನಗೆ ತುಂಬಾ ಸಂತೋಷವಾಯಿತು" ಎಂದು ಬರೆದಿರುವರು. ಇದಕ್ಕೆ ಹಿತೈಷಿಯ ಉತ್ತರವೇನು? ಕ್ಲಾಸಿನಲ್ಲಿ ಶಾಸ್ತ್ರ ಕಲಿಸುತ್ತಾರೆಂಬ ಹಿತೈಷಿಯ ಅಪವಾದವೇನೋ ವಿಚಾರಾರ್ಹವು. ಆದರೆ, ದಿನನಿತ್ಯದ ೫ ಗಂಟೆ ಕೆಲಸದಲ್ಲಿ ಒಂದು ಗಂಟೆಯು ಶಾಸ್ತ್ರಕಲಿಕೆಗೆ ವಿನಿಯೋಗಿಸಲ್ಪಡುತ್ತದೆಂಬ ಮಾತು ಮಾತ್ರ ಶುದ್ಧ ಸುಳ್ಳು. ಶಾಸ್ತ್ರ ಕಲಿಸುತ್ತಾರೆ—ಆದರೆ ಅದನ್ನು ಕಲಿಸುವವರು ಕ್ರೈಸ್ತರು; ಕಲಿಯುವವರೂ ಕ್ರೈಸ್ತರು, ಮಾತ್ರವಲ್ಲ, ಶಾಲೆಯ ಯಾವತ್ತೂ ಕೆಲಸಕ್ಕೆ ತೊಂದರೆಯು ಬಾರದಂತೆ ಶಾಸ್ತ್ರದ ಕ್ಲಾಸು ಪ್ರತ್ಯೇಕ ನಡೆಸಲ್ಪಡುತ್ತದೆ. ಶಾಲೆಯ ೫ ಘಂಟೆ ಕೆಲಸಕ್ಕೂ ಈ ಕೆಲಸಕ್ಕೂ ಏನೂ ಸಂಬಂಧವಿಲ್ಲ. ಇದರಲ್ಲಿ ದೋಷವೇನು? ಅದು ಇನ್ಸ್‌ಪೆಕ್ಟರರ ಕಣ್ಣಿಗೆ ಕಾಣಿಸದಿದ್ದರೇನು? ಕಾಲನಿಯಾಮಕ ಪಟ್ಟಿಯಲ್ಲಿ ಹಾಕಲ್ಪಡದಿದ್ದರೇನು? ಇದೆಲ್ಲ ಪ್ರತಿಯೊಬ್ಬ ಇನ್ಸ್‌ಪೆಕ್ಟರರಿಗೂ ತಿಳಿದ ವಿಷಯವೆ.

ಬಂಟ್ವಾಳ ಸೆಂಟರಿನ ಉಪಾಧ್ಯಾಯ ಸಂಘದಲ್ಲಿ [illegible] ಮಾನ್ಯ ಗುರುಗಳೊಬ್ಬರು, ನಮಗೆ 'Communal' ಶಾಲೆಗಳು ಬೇಕೆಂದು ಒತ್ತಿ ಹೇಳಿದ್ದರೆಂದು ಹಿತೈಷಿಯು ಒಂದು ದೊಡ್ಡ ದೋಷವನ್ನು ಎತ್ತಿ ಹಿಡಿದಿರುವರು. ಆದರೆ, ನಾನು ಕೇಳಿದ ಮಟ್ಟಿಗೆ ಅವರ ಭಾಷಣವು ಹೀಗಿತ್ತು—'ಟೇಂಪಿಯನ್ ಸ್ಕೀಮ್ ಬಂದೊಡನೆ ಕ್ರೈಸ್ತರು ತಮ್ಮ ಇಗರ್ಜಿಶಾಲೆಗಳನ್ನು ಕಾಪಾಡಿಕೊಳ್ಳಬೇಕಾಗುವುದು. ಅದು ಮಕ್ಕಳಿಗೆ ಯೋಗ್ಯ ವಿದ್ಯಾಭ್ಯಾಸವನ್ನು ಒದಗಿಸಿಕೊಡುವುದಲ್ಲದೆ, ತಮ್ಮವರಿಗೆ ಶಾಸ್ತ್ರೀಯ ಶಿಕ್ಷಣವನ್ನು ಬೋಧಿಸಲು ಸಹಕಾರಿಯಾಗಿದೆ' ಎಂದು ಹೇಳಿದ್ದರು, ಇದರಲ್ಲಿ ದೋಷವೇನು? ದೋಷವಿದ್ದರೆ ಹಿತೈಷಿಗಳ ಶ್ರವಣಶಕ್ತಿಯಲ್ಲಿರಬಹುದಲ್ಲವೇ? ಇಗರ್ಜಿ ಶಾಲೆಗಳಿಂದ ಕಥೋಲಿಕ್ ಎಜ್ಯುಕೇಶನ್ ಬೋರ್ಡಿನವರು ಆದಾಯಮಾಡಬೇಕೆಂದಿರುವರೆಂದು ಹಿತೈಷಿಯ ಇನ್ನೊಂದು ಅಪವಾದ. ಆದರೆ, ಅವರ ಉದ್ದಿಷ್ಟವು ಪೂರ್ಣ ವಿರುದ್ಧವಾಗಿರುವುದು. ಶಾಲೆಗಳ ಯಾಜಮಾನ್ಯದಲ್ಲಿ ಆಗಾಗ್ಗೆ ಬದಲಾವಣೆಗಳು ಉಂಟಾಗಿರುವುದರಿಂದ, ಶಾಲೆಯ ಕೆಲಸದಲ್ಲಿ ಯಾವ ತರದ ತೊಂದರೆಗಳು ಉಂಟಾಗದಂತೆ ನೋಡಿಕೊಳ್ಳುವುದೇ ಈ ಬೋರ್ಡಿನ ಮುಖ್ಯ ಉದ್ದೇಶವಾಗಿದೆ. ಪರಂತು, ಇಗರ್ಜಿಯ ಹಣವನ್ನು ಶಾಲೆಗಳಿಗೆ ತೆಗೆಯಬೇಕೆಂದು ಮಾನ್ಯ ಬಿಶೋಪರ ಅಪ್ಪಣೆಯಲ್ಲಿ ಏನೊಂದೂ ತಪ್ಪು ಇದ್ದಂತೆ ತೋರುವುದಿಲ್ಲ. ಈಗಿನಂತಹ ಆರ್ಥಿಕ ದುಸ್ಥಿತಿಯ ಕಾಲದಲ್ಲಿ ಇಗರ್ಜಿಗಳಿಗೂ ಶಾಲೆಗಳಿಗೂ ಯೋಗ್ಯ ರೀತಿಯಲ್ಲಿ ನಡೆಸಬೇಕಾದರೆ ಹಣದ ವ್ಯಯವನ್ನು ಯಾವ ರೀತಿಯಲ್ಲಿ ಮಾಡಬೇಕೆಂದು ಹಿತೈಷಿಗಳಿಗಿಂತ ಹೆಚ್ಚಿನ ಅನುಭವ ಮಾನ್ಯ ಬಿಶೋಪರಿಗೆ ಇದ್ದೀತೆಂದು ನನ್ನ ಅಭಿಮತ.

ಇಗರ್ಜಿ ಶಾಲೆಗಳಿಗೆ ಕೊಡಲ್ಪಡುವ ಸಾರ್ವಜನಿಕ ಹಣದ ನೋವು ಹಿತೈಷಿಗೆ ಚೆನ್ನಾಗಿ ಇದ್ದಂತೆ ತೋರುತ್ತದೆ. ಆದರೆ ಸಾರ್ವಜನಿಕ ಹಣದಲ್ಲಿ ಕ್ರೈಸ್ತರದ್ದೂ ಒಂದು ಭಾಗವಿದೆಯೆಂಬುದು ಮಾತ್ರ ಅವರಿಗೆ ಚೆನ್ನಾಗಿ ತಿಳಿದಿರಲಿ. ದಕ್ಷಿಣ ಕನ್ನಡ ಜಿಲ್ಲೆಯ ಕ್ರೈಸ್ತರು ಪರಕೀಯರಲ್ಲ. ತಮ್ಮ ಜಿಲ್ಲೆಯ ಹಿತವು ಹಿತೈಷಿಗಳಿಗಿದ್ದಷ್ಟಾದರೂ ಅವರಿಗೂ ಇದೆ. ಆದುಕಾರಣ, ತಮ್ಮ ಜಿಲ್ಲೆಯ ಅಭಿವೃದ್ಧಿಗಾಗಿಯೇ ಅವರು ಇಂತಹ ಶಾಲೆಗಳನ್ನು ಕಟ್ಟಿಕೊಂಡು ದುಡಿಯುತ್ತಿರುವಾಗ, ಹಿತೈಷಿಗಳಿಗೆ ಇದರಲ್ಲಿ ಕಂಡುಬಂದ ಕೊರತೆಯೇನು?

೧೯೩೩-೩೪ರಲ್ಲಿ, ಆಗ್ರಾರ್ ಶಾಲಾ ಉಪಾಧ್ಯಾಯರಿಗೆ ಸಂಬಳದಲ್ಲಿ ಸೇಕಡಾ ೧೦ರಂತೆ ಕಡಿತವೆಂದು ಹಿತೈಷಿಯ ಪ್ರಲಾಪ. ಆದರೆ ಗವರ್ನ್‌ಮೆಂಟ್ ಗ್ರಾಂಟಿನಲ್ಲಿ 23%-18% ಕಡಿತ ಬಂದುದರ ಚಿಂತೆಯೇ ಹಿತೈಷಿಗೆ ಇದ್ದಂತೆ ಕಾಣುವುದಿಲ್ಲ. ಯಾವುದೊಂದು ಸಂಸ್ಥೆಯು ಯೋಗ್ಯ ರೀತಿಯಲ್ಲಿ ನಡೆಯಬೇಕಾದರೆ, ಅದರ ಆಯವನ್ನು ನೋಡಿ ವ್ಯಯಮಾಡಬೇಕಲ್ಲವೇ? ಹಾಸಿಗೆ ನೋಡಿ ಕಾಲು ಚಾಚಬೇಕಲ್ಲವೇ? ಆದುದರಿಂದ ಮಕ್ಕಳ ಸಂಬಳದಲ್ಲಿಯೂ, ಗವರ್ನ್‌ಮೆಂಟ್ ಗ್ರಾಂಟಿನಲ್ಲಿಯೂ ಕಡಿತಬಂದ ಕಾಲದಲ್ಲಿಯೂ ಶಾಲಾ ಅಧಿಕಾರಿಗಳು ಉಪಾಧ್ಯಾಯರಿಗೆ ಒಂದೆರಡು ವರ್ಷಗಳ ತನಕ ಕಡಿಮೆ ಸಂಬಳದಲ್ಲಿ ಕೆಲಸಮಾಡಬೇಕೆಂಬುದರಲ್ಲಿ ಆಶ್ಚರ್ಯವೇನು? ಮತ್ತು ಉಪಾಧ್ಯಾಯರ ಸಮ್ಮತಿಯಿಂದಲೇ ಇಂತಹ ಕಡಿತವು ಮಾಡಲ್ಪಡುವುದು. ಅಂದಮೇಲೆ, ಹಿತೈಷಿಯ ದೂರಿಕ್ಕೆ ಕಾರಣವಿಲ್ಲ. ೨೮ ರೂಪಾಯಿ ಸಂಬಳದ ಆಗ್ರಾರ್ ಶಾಲಾ ಹೆಡ್‌ಮಾಸ್ತರರನ್ನು ೩೦) ರೂಪಾಯಿಗೆ ನಿಲ್ಲಲು ಕೇಳಿದುದರಿಂದ, ಕೆಲಸದಿಂದ ನಿವೃತ್ತಿಗೊಳಿಸಿದರೆಂದು ಹಿತೈಷಿಯ ಟೀಕೆ. ಅದು ಶಾಲಾಧಿಕಾರಿಗಳಿಗೆ ಸಂಬಂಧಪಟ್ಟ ವಿಷಯ. ಅವರು ಯಾವಾಗಲೂ ಶಾಲೆಯ ಹಿತವನ್ನೇ ತಮ್ಮ ಮುಂದಿಟ್ಟುಕೊಂಡು ಮುಂದುವರಿಯುತ್ತಿರುವರೆಂದು ನಮ್ಮ ಭರವಸೆ.

ಒಟ್ಟಿನ ಮೇಲೆ 'ಹಿತೈಷಿ'ಯೆಂದು ಮೆರೆಯುವ ಆ ಮಹಾನುಭಾವರು ಯಾರ ಹಿತೈಷಿಯೆಂದು ತಿಳಿಯುವಂತಿಲ್ಲ. ಅವರ ಮಾತುಗಳನ್ನು ಓದಿದರೆ ನಂಜು ಪ್ರತಿಯೊಂದು ಮಾತಿನಲ್ಲಿಯೂ ಇಣಿಕಿನೋಡುತ್ತದೆ. ಅಂತೂ, ಅವರು ಆಗ್ರಾರ ಶಾಲೆಯ ಸ್ವಾರ್ಥಹಿತೈಷಿಗಳಲ್ಲವೆಂದು ನಿರ್ವಿವಾದ.

ಪೀಟರ್ ರೇಗೋ,
ಆಗ್ರಾರ್ ಶಾಲೆಯ ಸಹಾಯಕ ಉಪಾಧ್ಯಾಯ.

ಆಗುಂಬೆ-ತೀರ್ಥಹಳ್ಳಿ ರಸ್ತೆಯ ಸುಖ!

ನಮ್ಮ ಮೈಸೂರು ಮಾದರಿ ಸಂಸ್ಥಾನ. ಆದರೆ, ಕೆಲವೊಂದು ರಸ್ತೆಗಳ ದುಸ್ಥಿತಿಯನ್ನು ನೋಡಿದರೆ, ಇದು ಮಾತ್ರ ಯಾರಿಗೂ ಮಾದರಿಯಾಗದಿರಲೆಂದು ಮನಃಪೂರ್ವಕವಾಗಿ ಹಾರೈಸುವೆನು.

ಆಗುಂಬೆಯಿಂದ ತೀರ್ಥಹಳ್ಳಿಗೆ ೧೯ ಮೈಲುಗಳ ಅಂತರವಿದೆ. ಈ ಹತ್ತೊಂಭತ್ತು ಮೈಲುಗಳನ್ನು ಮೋಟಾರು ವಾಹನಗಳಲ್ಲಾಗಲೀ ಗಾಡಿಯಲ್ಲಾಗಲೀ ದಾಟುವುದೆಂದರೆ ೧೯೦ ಮೈಲುಗಳ ಶ್ರಮವು ತೋರುವುದೆಂದಾಗ ಆ ರಸ್ತೆಯ ಉತ್ಕೃಷ್ಟತೆಯ ಕಿಂಚಿತ್ ಚಿತ್ರದ ಕಲ್ಪನೆಯಾಗಬಹುದು. ದಾರಿಯಲ್ಲಿ ಅಲ್ಲಲ್ಲಿ ನೀರಿನ ಪ್ರವಾಹವನ್ನು ತಡೆಗಟ್ಟುವ ದೆಸೆಯಿಂದಲೋ ಏನೋ ಹಾಕಿಟ್ಟ ಕಲ್ಲುಗಳು; ಅವುಗಳ ಮೇಲಿಂದ ಮೋಟಾರು ವಾಹನವು ಹೋಗುವಾಗ ಜೀವವನ್ನು ಕೈಯಲ್ಲಿ ಹಿಡಿದೇ ದಾಟಬೇಕು. ರಸ್ತೆಯ ಸ್ಥಿತಿಯು ಇತರ ಕಡೆಗಳಲ್ಲಿಯೂ ಶೋಚನೀಯ. ಯಾವ ಬಂಡಿಯ ಚಕ್ರಗಳೂ ಸಮತಟ್ಟಾಗಿ ನಿಲ್ಲಲಾರದಷ್ಟು ಏರುತಗ್ಗುಗಳು; ಹೊಂಡಗಳು. ರಸ್ತೆ ರಿಪೇರಿಗೆಂದು ಹಣ ಮಂಜೂರಾಗಿ ಕಂಟ್ರಾಕ್ಟು ವಹಿಸಿಕೊಡಲ್ಪಟ್ಟರೂ, ಕಂಟ್ರಾಕ್ಟರರು ಇನ್ನೂ ರಸ್ತೆರಿಪೇರಿ ಕೆಲಸವನ್ನು ಆರಂಭಿಸಿದುದಿಲ್ಲ. ಅಂತು, ಈ ರಸ್ತೆಯಿಂದ ಪ್ರಯಾಣ ಮಾಡುವವರ ದುರ್ಭಾಗ್ಯವು ಸರ್ವ ವಿಧದಿಂದಲೂ ಹೆಚ್ಚುತ್ತಿರುವುದು!

ಮತ್ತೊಂದು ವಿಚಾರ—ಆಗುಂಬೆಯಿಂದ ಸುಮಾರು ೬॥ ಮೈಲಿಯತನಕ, ರಸ್ತೆಯ ಮೇಲೆ, ಇಬ್ಬದಿಗಳಿಂದಲೂ ಬೆಳೆದುಬಂದ ಕಾಡಿನಿಂದ ಮರದ ಗೆಲ್ಲುಗಳು ಹರಡಿದ್ದು, ಸೂರ್ಯನ ಕಿರಣಗಳೇ ಬೀಳದಂತಾಗಿ, ರಸ್ತೆಗಳು ಮಳೆಗಾಲದಲ್ಲಿ ಯಾವಾಗಲೂ ದುಸ್ಥಿತಿಯಲ್ಲೇ ಇರುವಂತಾಗಿದೆ. ಆ ಕೊಂಬೆಗಳನ್ನು ಕಡಿಸಿದ್ದರೆ ರಸ್ತೆಯ ಸ್ಥಿತಿಯಲ್ಲಿ ಸುಧಾರಣೆಯಾಗಬಹುದೋ ಏನೋ ಎಂಬಾಸೆ.

ರಸ್ತೆರಿಪೇರಿಯ ಕಡೆಗೆ ಕಂಟ್ರಾಕ್ಟರರು ಗಮನ ಕೊಟ್ಟದು ಸಾಲದಾಗಿಲ್ಲ. ಇಂತಹ ರಸ್ತೆಗಳಲ್ಲಿ ರಿಪೇರಿ ಕೆಲಸವು ವರ್ಷಗಟ್ಟಲೆ ನಡೆದೇ ಇರುವುದೂ ಚೆನ್ನಾಗಿಲ್ಲ. ರಿಪೇರಿಯಾಗುವುದಿದ್ದರೂ ಬೇಗನೇ ನಡೆದು ಮುಗಿಯಬೇಕು. ಪ್ರಯಾಣಿಕರ ಹಾಗೂ ಮೋಟಾರು ಇತ್ಯಾದಿ ವಾಹನಗಳ ಚಲಾವಣೆಯ ಸುಖವನ್ನೂ ಅಧಿಕಾರಿಗಳು ಲಕ್ಷಿಸಬೇಕಾಗಿದೆ. ದೊಡ್ಡ ಅಧಿಕಾರಿಗಳು ಬಹುಶಃ ಈ ಮಾರ್ಗವಾಗಿ ಬರುವುದೇ ಇಲ್ಲವೆಂದು ತೋರುವುದು. ಒಮ್ಮೆ ಬರುತ್ತಿದ್ದರೆ, ಇಂತಹ ರಸ್ತೆಯು ಮೈಸೂರು ದೇಶದ ಮತ್ತಾವ ಕಡೆಯಲ್ಲೂ ಇಲ್ಲವೆಂಬುದನ್ನು ಮನಗಾಣುತ್ತಿದ್ದರು. ಇಂತಹ ರಸ್ತೆಗಳು ಯಾವ ಪ್ರಾಂತ್ಯಕ್ಕೂ ಭೂಷಣವಾಗಿಲ್ಲ. ಸಂಬಂಧಪಟ್ಟ ಮೇಲಧಿಕಾರಿಗಳ ಗಮನವು ಈ ಕಡೆಗೆ ಹರಿದು; ಈ ರಸ್ತೆಯ ಸುಧಾರಣೆಯಾಗುವುದೆಂದು ಭರವಸೆಪಡುವ,—

ಪ್ರಯಾಣಿಕ.

ಮೊಗವೀರ ಫ್ರೀ ನೈಟ್‌ಸ್ಕೂಲ್, ಮುಂಬಾಯಿ.

ಮುಂಬಾಯಿಯಲ್ಲಿ ಈಗೀಗ ಕನ್ನಡಿಗರು ಪ್ರಗತಿಯ ಮಾರ್ಗಾವಲಂಬಿಗಳಾಗಿದ್ದಾರೆಂಬುದು ಸಂತೋಷದ ಸಂಗತಿ. ಮುಂಬಾಯಿಯ ಕೋಟಿಯೊಳಗೊಂದರಲ್ಲಿ ದಕ್ಷಿಣ ಕನ್ನಡಿಗರ ಸಂಘ-ಸಂಸ್ಥೆಗಳು ಅನೇಕ ಇವೆ. ಈ ಸಂಸ್ಥೆಗಳಲ್ಲವೂ ಒಂದೊಂದು ಉಚ್ಚಧ್ಯೇಯವನ್ನಿಟ್ಟುಕೊಂಡು ಕಾರ್ಯಸಾಧನೆಯಲ್ಲಿ ಮಗ್ನವಾಗಿರುವುದು ಕನ್ನಡಿಗರೆಲ್ಲರಿಗೂ ಅಭಿಮಾನದ ವಿಷಯವೇ ಸರಿ. ಪ್ರಸ್ತುತ, ನಾನೀಗ ಒಂದೆರಡು ಮಾತುಗಳನ್ನು ಬರೆಯಬೇಕೆಂದಿರುವುದು 'ಮೊಗವೀರ ಫ್ರೀ ನೈಟ್ ಸ್ಕೂಲಿನ ವಿಷಯ. ಈ ಶಾಲೆಯು ದಕ್ಷಿಣ ಕನ್ನಡದ ಮೊಗವೀರ ಪ್ರಮುಖರಿಂದ ಸ್ಥಾಪಿತವಾದ "ಮೊಗವೀರ ವ್ಯವಸ್ಥಾಪಕ ಮಂಡಳಿ"ಯವರಿಂದ ನಡೆಸಲ್ಪಡುತ್ತದೆ. ಅದು ಮೊಗವೀರರಿಂದಲೇ ಸ್ಥಾಪಿಸಲ್ಪಟ್ಟು-ನಡೆಸಲ್ಪಡುತ್ತಿದ್ದರೂ, ಇಲ್ಲಿಗೆ ಸ್ವಜಾತಿಯೊಂದೇ ಎಂಬ ಸ್ವಾರ್ಥವನ್ನಿಟ್ಟುಕೊಳ್ಳದೆ ಸರ್ವ ಮತದ ವಿದ್ಯಾರ್ಥಿಗಳಿಗೂ ಪ್ರವೇಶವನ್ನಿತ್ತಿರುವುದಲ್ಲದೆ, ಇತರ ಜಾತಿಯ ಉಪಾಧ್ಯಾಯರುಗಳನ್ನೂ ನಿಯಮಿಸಿಕೊಂಡಿರುವುದು ಶ್ಲಾಘನೀಯವೇ ಸರಿ. ಅಲ್ಲದೆ ಈಗಿನ ಮುಖ್ಯೋಪಾಧ್ಯಾಯರ ಪದವಿಯನ್ನು ಘನಮತೀಯರಾದ ಶ್ರೀಮಾನ್ ಕೆ. ಎನ್. ಗ್ರಾಮಣಿಯವರಿಗೆ ಕೊಟ್ಟಿರುವುದು ಈ ಸಂಸ್ಥೆಯ ನಿಸ್ವಾರ್ಥತೆಯ ಹೆಗ್ಗುರುತೆಂದೇ ಭಾವಿಸಬೇಕಾಗಿದೆ. ಈ ಶಾಲೆಯಲ್ಲಿ ಹೆಚ್ಚುಕಮ್ಮಿ ಇಪ್ಪತ್ತೆರಡು ಅಧ್ಯಾಪಕರುಗಳೂ, ೩೦೦ಕ್ಕೂ ಮಿಕ್ಕಿದ ವಿದ್ಯಾರ್ಥಿಗಳೂ ಇರುವರು. ಅಧ್ಯಾಪಕರ ಪೈಕಿ ಶ್ರೀಗಳಾದ ಆರ್. ಪಿ. ಕುಂದರರೂ, ಬಿ. ಎಲ್. ಕೋಟ್ಯಾನರೂ ಶಾಲೆಯ ಸುಪರಿಂಟೆಂಡೆಂಟರಾಗಿದ್ದಾರೆ. ಇವರ ದೂರದರ್ಶಿತ್ವ ಹಾಗೂ ಚಟುವಟಿಕೆಯಿಂದಲೂ, ಮುಖ್ಯೋಪಾಧ್ಯಾಯರ ಸೌಹಾರ್ದ—ವಿನೀತತೆಯಿಂದಲೂ, ಇತರ ಅಧ್ಯಾಪಕರ ಸಹಾನುಭೂತಿ—ಸಹಕಾರದಿಂದಲೂ ಈ ಶಾಲೆಯು ಉತ್ತಮ ರೀತಿಯಿಂದ ಸಾಗುತ್ತಿರುವುದೆಂದರೆ ಹೆಚ್ಚಿನದಲ್ಲ.

ಈ ಶಾಲೆಯ ಸ್ಥಾಪನೆಯಿಂದಾಗಿ, ನಿರಕ್ಷರಕುಕ್ಷಿಗಳಾಗಿದ್ದು, ಸಣ್ಣ ಸಣ್ಣ ಕೆಲಸದಲ್ಲಿದ್ದು ರಾತ್ರಿಸಮಯವನ್ನು ವ್ಯರ್ಥ ಕಳೆಯುತ್ತಿದ್ದ ಅನೇಕ ಮಂದಿ ವಿದ್ಯಾದಾನ ಪಡೆದು, ಈಗ ವಿದ್ಯಾಸಂಪನ್ನರಾದುದಲ್ಲದೆ, ದೊಡ್ಡ ದೊಡ್ಡ ಗಿರಣಿಗಳಲ್ಲೋ ಇತರ ಪ್ರಮುಖ ವ್ಯಾಪಾರಿ ಸಂಸ್ಥೆಗಳಲ್ಲೋ ಉನ್ನತ ಹುದ್ದೆಯಲ್ಲಿದ್ದು ಗೌರವಿಸಿಕೊಳ್ಳುತ್ತಿರುವುದು ಕಂಡುಬರುತ್ತದೆ. ಈ ರೀತಿ ವಿದ್ಯಾದಾನ ಮಾಡುತ್ತಿರುವ ಕಾರ್ಯವು ಮೇಲಿನ ಮಂಡಳಿಯ ಇತರ ಅನೇಕ ಕಾರ್ಯಕ್ರಮಗಳಲ್ಲಿ ಶ್ರೇಷ್ಠತಮವಾದುದು. ಇಲ್ಲಿ ಇತರ ಸರಕಾರೀ ಶಾಲೆಗಳ ಪಠ್ಯಪುಸ್ತಕಗಳನ್ನೇ ಮಂಜೂರುಮಾಡಿ ಇಟ್ಟುಕೊಂಡಿರುವುದು ಯೋಗ್ಯವೇ. ಇಲ್ಲಿ ಕಲಿತ ವಿದ್ಯಾರ್ಥಿಗಳು ಇತರ ಯಾವ ಸರಕಾರೀ (ಹಗಲು) ಶಾಲೆಯಲ್ಲಿ ಕಲಿತ ವಿದ್ಯಾರ್ಥಿಗಳನ್ನೂ ಸರಿಗಟ್ಟಬಲ್ಲರೆಂಬುದು ನನ್ನ ಅನುಭವದ ಮಾತು. ಇಲ್ಲಿಯ ಸಂಪೂರ್ಣ ಇಯತ್ತೆಗಳಲ್ಲಿ ತೇರ್ಗಡೆ ಹೊಂದಿದ ವಿದ್ಯಾರ್ಥಿಯು ಸರಕಾರಿ (ಹಗಲು) ಶಾಲೆಯ ಎಸ್. ಎಸ್. ಎಲ್. ಸಿ. ಕ್ಲಾಸಿಗೆ ಪ್ರವೇಶಿಸಬಹುದೆಂದು ದೃಢವಾಗಿ ಹೇಳಬಲ್ಲೆನು.

ಇಲ್ಲಿ ವಾರಕ್ಕೊಮ್ಮೆ ನೀತಿಪಾಠಕ್ಕಾಗಿ ಪ್ರತ್ಯೇಕ ಕ್ಲಾಸನ್ನು ಮಾಡಿ ತಿಳಿದವರಿಂದ ಮಕ್ಕಳಿಗೆ ನೀತಿಬೋಧನೆ

(೧೩ನೇ ಪುಟಕ್ಕೆ ಮುಂದುವರಿದಿದೆ)

ರೇಶ್ಮೆಯಂತೆ, ನುಣುಪಾದ ಮತ್ತು ಹೊಳಪಾದ ಕೇಶಧಾಮ

ದಿನನಿತ್ಯದ ಸ್ನಾನಕ್ಕೆ ಮುಂಚಿತವಾಗಿ ನಿಮ್ಮ ಕೂದಲುಗಳನ್ನು ಚೆನ್ನಾಗಿ ಬಾಚಿ, ಬ್ರಶ್ಶಿನಿಂದ ಸವರಿ, ಆ ನಂತರ

"ಕುಂತಳ ಕೌಮುದಿ"

ಎಂಬ ಹಿಂದೂಸ್ಥಾನದ ಪ್ರಸಿದ್ಧ ಕೇಶ ತೈಲ್ಯದಿಂದ ಕೂದಲುಗಳ ಬುಡವನ್ನು ಜಾಗರೂಕತೆಯಿಂದ ತಿಕ್ಕಿರಿ.

(ಮನಮೋಹಕರವಾದ ಸುಗಂಧವನ್ನುಳ್ಳದು.)

ಹಿಂದೂಸ್ಥಾನದಲ್ಲೆಲ್ಲ ಸರ್ವತ್ರ ಉಪಯೋಗಿಸಲ್ಪಡುತ್ತಿದೆ.

ತಯಾರಿಸುವವರು:— ಬೆಲೆ ಸೀಸೆ ಒಂದಕ್ಕೆ ರೂ. 0—12—0.

ಆರ್. ಸಿ. ಸೇನ್ ಎಂಡ್ ಕೋ.,
ಲಿಮಿಟೆಡ್, ಕಲ್ಕತ್ತ.

ಏಜಂಟರು:—
ಕುಂತಳ ಕೌಮುದಿ ತೈಲ,
ವೆನ್‌ಲಾಕ್ ಆಸ್ಪತ್ರೆ ಎದುರು, ಮಂಗಳೂರು.

[ಗುಣಬಾರದಿದ್ದರೆ ಹಣ ವಾಪಾಸು]

ಸುಪ್ರಸಿದ್ಧ ವೈದ್ಯರಾದ ಎಮ್. ಕೆ. ರಜಪೂತ ಇವರ

ಸಂತತಿ ಪ್ರತಿಬಂಧಕ ಚೂರ್ಣ (ರಿಜಿಸ್ಟರ್ಡ್)

ಬಹಳ ಸಾರಿ ಹಡಿಯುವುದರಿಂದ ಹೆಂಗಸರ ದೇಹವು ಅಶಕ್ತವಾಗುತ್ತದೆ. ಬಹಳ ಬಡತನದಲ್ಲಿ ವಿಶೇಷ ಮಕ್ಕಳಾಗುವುದರಿಂದ ದುಃಖವಾಗುತ್ತದೆ. ಈ ಕಾರಣದಿಂದಲೂ ಅಥವಾ ಬೇರೆ ಕಾರಣದಿಂದಲೂ ಮಕ್ಕಳನ್ನು ಹಡಿಯುವುದು ಬಂದಾಗಬೇಕೆಂದು ಇಚ್ಛಿಸುವವರು ಈ ಚೂರ್ಣವನ್ನು ಉಪಯೋಗಿಸಬೇಕು. ಇದರ ಸೇವನೆಯಿಂದ ಮುಟ್ಟಾಗುವಿಕೆಯು ನೇಮದಂತೆ ಸುರುವಿರುವುದು, ಶರೀರಕ್ಕೆ ಏನೂ ಅಪಾಯವಾಗದೆ ಸಂಸಾರಸುಖವು ಪೂರ್ಣವಾಗಿದ್ದು ಕೂಡಲೇ ಗರ್ಭಧಾರಣ ಬಂದಾಗುವುದು. ತದನಂತರ ಏನು ಮಾಡಿದರೂ ಸುರುವಾಗುವುದಿಲ್ಲ. ಮೊದಲೇ ಪೂರಾ ವಿಚಾರ ಮಾಡಿ ಔಷಧ ಬೇಡಿರಿ. ಮುಖ್ಯ ಸರ್ಟಿಫಿಕೇಟು ಡಾಕ್ಟರ ಬಿ. ಎ., ವೈದ್ಯ, ಎಲ್. ಸಿ. ಪಿ. ಎಸ್. ಕೊಡಮಾಡಿರು. ಕಾಣೇ: ಈ ಚೂರ್ಣದಿಂದ ಯಾವ ತರದ ಅಪಾಯವಾಗದು. ಗರ್ಭಧಾರಣವೂ ಆಗುವುದಿಲ್ಲ. ಪೂರ್ಣ ಗುಣಕಾರಿ ಡಬ್ಬಿ ಕಿಮ್ಮತ್ತು ರೂ. ೪—೦—೦. ವಿ. ಪಿ. ಖರ್ಚ ೦.

ವಿಳಾಸ:—ಸಂಜೀವಿನೀ ಔಷಧಾಲಯ ಮು. ಪೋ. ಮಿರಜ, S. M. C.

ಜಾಧುವಾ ಸಂಸ್ಥಾನಾಧೀಶರು ಪದಭ್ರಷ್ಟರಾಗುವರೇ?

...ಕು, ಇಂಡಿಯಾ ಸರಕಾರದ ಹುಕುಂ ... ಜಾಧುವಾ ಸಂಸ್ಥಾನಾಧೀಶರು ಕೆಲ ಕಾಲ ...ದರೂ ಸಿಂಹಾಸನವನ್ನು ಬಿಟ್ಟು ತೊಲಗ ...ಬೇಕು, ಅಥವಾ ಅವರ ವಿಷಯವಾಗಿ ಸಂಸ್ಥಾನದ ಪ್ರಜೆಗಳು ಮುಂದರಿಸಿದ ದೂರು ಗಳನ್ನು ತನಿಖೆ ಮಾಡಲು ಇಂಡಿಯಾ ಸರಕಾರದ ರಾಜಕೀಯ ಇಲಾಖೆಯು ವಿಚಾರಣಾ ಕಮಿಟಿಯನ್ನು ನೇಮಿಸಲು ಒಪ್ಪಿಗೆ ಕೊಡಬೇಕು!

[ಎರಡು ತಿಂಗಳುಗಳ ಹಿಂದೆ ಜಾಧುವದ ಮಹಾಜನರು ಸಭೆಸೇರಿ, ತಮ್ಮ ಪ್ರಭುವು ದುಷ್ಪ್ರಭುವಾಗಿ ...ರ್ಪು ನಿರಪರಾಧಿ ಪ್ರಜೆಗಳನ್ನು ಅನಾವಶ್ಯಕವಾಗಿ ...ರ್ಯದಿಂದ ಕಾಣುತ್ತಿರುವನೆಂದೂ, ಪ್ರಜಾ ಪೀಡೆಯು ಹೆಚ್ಚಿದೆಯೆಂದೂ, ಉಪಟಳವನ್ನು ಸಹಿಸಲಾರದೆ ಅನೇಕ ಕುಟುಂಬಗಳು ಸಂಸ್ಥಾನವನ್ನು ಬಿಟ್ಟು ತೊಲಗಿದವೆಂದೂ ಇಂಡಿಯಾ ದೊರೆತನಕ್ಕೆ ಮೊರೆಯಿಟ್ಟಿದ್ದರು.]

ಸೈನ್ಯ ಸಂಸ್ಕರಣಾ ಮಸೂದೆಯು ಪಾಸಾಯಿತು!

ಸರ್ ಅಬ್ದುರ್ ರಹಿಮರ ತಿದ್ದುಪಡಿಯು ಸೂಚನೆಯು ಅಪಸಾನ್ಯವಾಯಿತು—ಸರಕಾರದ ಛಲವೇ ಮೇಲಿದ್ದು ನಿಂತಿತು—ಸೈನ್ಯ ಶಾಖಾ ಕಾರ್ಯದರ್ಶಿಗಳವರ ಮೋರೆ ಅರಳಿತು—ಸೈನ್ಯ ಸಂಸ್ಕರಣಾ ಮಸೂದೆಯು ತಿದ್ದುಪಡಿಯನ್ನು ಸ್ವೀಕರಿಸದೆ ಮಂಜೂರಾಯಿತು. ೪೮ ಮತಗಳು ವಿರುದ್ಧವಾಗಿದ್ದರೂ ೫೧ ಅನುಕೂಲ ಮತಗಳನ್ನು ಪಡೆದು ಸರಕಾರವು ವಿಜಯ ಹೊಂದಿತು!

ಸರ್ ಅಬ್ದುಲ್ ರಹಿಮರ ತಿದ್ದುಪಡಿಯ ಸೂಚನೆಯೇನೂ ವಿಶೇಷವೂ ಅಸಾಧ್ಯವೂ ಆದುದಾಗಿರಲಿಲ್ಲ. ಹಳತೊಂದು ದಳವನ್ನು ಕ್ರಮೇಣ ಹೊಸ ಹಿಂದೀಯರಿಗೆ ಸ್ಥಾನ ಕೊಡುವ ದೆಸೆಯಿಂದ ಕಳೆಚಿ, ದೇಹರಾಡೂನಿನಿಂದ ತರಬೇತಿ ಹೊಂದಿ ಬರುವ ಹಿಂದೀಯರ ಬಗ್ಗೆ ನೂತನ ಹೆಸರಲ್ಲಿ ನೂತನ ದಳವನ್ನೆ ನಿರ್ಮಾಣ ಮಾಡುವುದಾದರೆ—ಹಿಂದೀ ಆಫೀಸರರಿಗೂ ಬ್ರಿಟಿಷ್ ಆಫೀಸರರಿಗೂ ಸ್ಥಾನ ಗೌರವಗಳು ಏಕಪ್ರಕಾರವಾಗಿರತಕ್ಕದೆಂದೇ ಆ ಸೂಚನೆ. ಹಿಂದೀಯರ ಮತ್ತು ಬ್ರಿಟಿಷರ ಸ್ಥಾನ ಗೌರವಗಳಲ್ಲಿ ಕುಂದಿಲ್ಲವೆಂದು—ಮಸೂದೆಯನ್ನು ಎಸೆಂಬ್ಲಿಗೆ ತಂದಾಗ ಆಶ್ವಾಸನೆ ಕೊಡಲ್ಪಟ್ಟಿತ್ತಾದರೂ, ಈ ತಿದ್ದುಪಡಿಯನ್ನು ಮಾತ್ರ ಸರಕಾರವು ಸ್ವೀಕರಿಸಲೊಪ್ಪದಿದ್ದುದು ಆಶ್ಚರ್ಯಕರವೆನಿಸಿದೆ.

ಗಾಂಧಿಜಿಯವರ ಮುಂದೆ?

ವಿದೇಶೀ ಪತ್ರಿಕೆಗಳ ಊಹೆ ಇಷ್ಟಕ್ಕೂ ಇದೆ ನೋಡಿ:—ಗಾಂಧಿಜಿಯವರು ಇನ್ನು ಹಿಂದೂದೇಶದ ರಾಜಕೀಯ ಕ್ಷೇತ್ರದಲ್ಲಿ ಮುಖಂಡರೆಂದು ಪರಿಗಣಿತರಾಗರು. ಇವರ ಮುಂದಿನ ಮುಖಂಡರಾರಿರಬಹುದು? ಎಂಬ ಪ್ರಶ್ನೆಯು ಕೇಳಲ್ಪಡುತ್ತಿದೆ. ಅರವಿಂದ ಘೋಷರಾಗಿರಬಹುದೇ ಎಂಬೊಂದು ಪ್ರಶ್ನೆಯೂ ಅಲ್ಲಿಯ 'ರೈನೊಲ್ಡ್ಸ ವೀಕ್ಲಿ' ಎಂಬ ಪತ್ರಿಕೆಯಿಂದ ಕೇಳಲ್ಪಟ್ಟಿದೆ. ಆ ಪತ್ರಿಕೆಯು ನುಡಿಯುತ್ತಿದೆ:—ಅರವಿಂದರು ೩೨ ಭಾಷೆಗಳನ್ನು ಬಲ್ಲರು. ೧೯೧೦ರಲ್ಲಿ ಬಂಗಾಳದ ಕ್ರಾಂತಿಕಾರರಿಗೆ ಮುಖಂಡರಾದವರು. ೨೦ ವರ್ಷಗಳಿಂದಿತ್ತೀಚೆಗೆ ರಾಜಕೀಯ ರಂಗದಲ್ಲಿಲ್ಲ. ಪಾಂಡಿಚೇರಿಯಲ್ಲಿ ಕುಳಿತಿದ್ದು, ಹಿಂದೂದೇಶಕ್ಕೆ ಪೂರ್ಣ ಸ್ವಾತಂತ್ರ್ಯ ದೊರೆವ ತನಕ ತಾನು ಬ್ರಿಟಿಷ್ ರಾಜ್ಯದಲ್ಲಿ ಕಾಲಿಡೆನು ಎನ್ನುತ್ತಿರುವರು. ಅಂದಿನಿಂದಿತ್ತ ೫೦೦ ಗ್ರಂಥಗಳನ್ನು ಬರೆದಿರುವರು. ಲಂಡನಿನ ಹಿಂದೀ ರಾಷ್ಟ್ರೀಯರು, ಶ್ರೀ. ಎ. ಪಟೇಲ ಎಂಬವರ ನೇತೃತ್ವದಲ್ಲಿ ಅರವಿಂದರನ್ನು, ಬೊಂಬಾಯಿಯಲ್ಲಿ ಜರಗಲಿರುವ ರಾಷ್ಟ್ರಸಭಾಧಿವೇಶನಕ್ಕೆ ಬಂದು ಗಾಂಧಿಜಿಯವರಿಂದ ಮುಂದಾಳುತನವನ್ನು ವಹಿಸಿಕೊಳ್ಳುವಂತೆ ಕೇಳಿಕೊಳ್ಳಲು ಹೊರಡಲಿದ್ದಾರೆ.!

ಗಾಂಧಿಜಿಯವರ ಆರೋಗ್ಯ.

ಗಾಂಧಿಜಿಯವರು ಆರೋಗ್ಯಲಾಭವನ್ನು ಹೊಂದುತಿದ್ದಾರೆ. ಅವರ ಮೈ ಭಾರವೀಗ ೧೦೧ ರಾತ್ಲುಗಳಷ್ಟಾಗಿದೆ.

ದೇಶಬಂಧು ಸಿ. ಎಫ್ ಆಂಡ್ರೂಸರೂ, ಸರದಾರ ವಲ್ಲಭಭಾಯಿ ಪಟೇಲರವರೂ, ಜೈರಾಮದಾಸ್ ದೌಲತರಾಮರವರೂ ವಾರ್ಧಕ್ಕೆ ಬಂದು ಅವರನ್ನು ಕಂಡರು.

ಎಸೆಂಬ್ಲಿ ಅಧಿವೇಶನದ ಮುಕ್ತಾಯ.

ಬಹು ದೀರ್ಘ ಅವಧಿಯ ಅಧಿವೇಶನವನ್ನು ಈಗಲೀಗ ನಮ್ಮ ಎಸೆಂಬ್ಲಿಯು ಮುಗಿಸಿ, ಎದ್ದಿತು. ಇನ್ನು ಮುಂದಿನ ಅಧಿವೇಶನವೇ ಕೊನೆಯದು.

ಈಗಳಿನ ಎಸೆಂಬ್ಲಿಯ ಚರಿತ್ರದ ಕಡೆಗೆ ವಿಮರ್ಶಾ ಪೂರ್ಣ ದೃಷ್ಟಿಯನ್ನೆಸೆದರೆ ನಮಗೆ ದೃಗ್ಗೋಚರವಾಗುವ ಮುಖ್ಯ ವಿಷಯವೇನು?—ಎಸೆಂಬ್ಲಿಯ ಆ ೯–೧೦ ಅಧಿವೇಶನಗಳೂ ಯಾವುದಾದರೊಂದು ಮುಖ್ಯವಾದ ಶಾಸನವನ್ನು, ಶಾಸನಗ್ರಂಥದಲ್ಲಿ ದಾಖಲುಮಾಡದೆ ಮುಗಿದುದಿಲ್ಲವೆಂಬುದು! ರಾಜಕೀಯ ಮತ್ತು ಆರ್ಥಿಕ ಸುಧಾರಣೆಗಳ ಹೆಸರಲ್ಲಿ ಹೊಸ ಶಾಸನಗಳುಂಟಾದುವು; ಉಪಶಾಸನಗಳೆಂದೂ, ತಿದ್ದುಪಡಿ ಮಾಡಿದ ಶಾಸನಗಳೆಂದೂ ನಾನಾ ಹೆಸರಲ್ಲಿ ಇವುಗಳದೊಂದು ರಾಶಿಯೇ ಆಯಿತು.

ಸರಕಾರವು ತನ್ನ ನೂತನ ಶಾಸನಗಳನ್ನು ಸುಗಮವಾಗಿ ಮಂಜೂರು ಮಾಡಿಸಲು ಸುಲಭವಾಗಿ ಒಪ್ಪುವಂತಹ ಮಾನಸಿಕತೆಯ ಸದಸ್ಯರನ್ನು ಅಪೇಕ್ಷಿಸಿತ್ತಾದರೆ—ಈ ಎಸೆಂಬ್ಲಿಗೆ ದೊರೆತ ಸದಸ್ಯರೆಲ್ಲ ಅಂತಹವರು! ವಿರೋಧವೇ ಇಲ್ಲದೆ ಅಥವಾ ಹೆಚ್ಚಿನ ವಿರೋಧವಿಲ್ಲದೆ ಸರಕಾರವು ಎಸೆಂಬ್ಲಿ ಮುಂದೆ ತಂದುದೆಲ್ಲ ಮಂಜೂರಾಗಿಹೋಯಿತು. ಆ ಕಾಲದ ಎಸೆಂಬ್ಲಿಯ ಪಂಡಿತ ಮೋತಿಲಾಲ ನೆಹರು, ಮುಹಮ್ಮದಾಲಿ ಜಿನ್ನಾರಂತಹ ವಾಗ್ಪಟುಗಳೂ, ಧೀರರೂ, ಜಾಣರೂ ಎಲ್ಲಿ?—ಈ ಎಸೆಂಬ್ಲಿಯ ಸರಕಾರದ ಗೊಂಬೆಗಳೆನಿಸಿದ ಈ ಕುಳ್ಳರೆಲ್ಲಿ?—ಈಗಳಿನ ಎಸೆಂಬ್ಲಿಯಲ್ಲಿ ಸರಕಾರದ ವಿರುದ್ಧ ಪಕ್ಷವೆಂಬುದೇ ಅನೇಕ ಸಾರಿ ಸರಕಾರದೊಡನೆ ಸೇರಿ, ಸುಲಭವಾಗಿ ಮತಕೊಟ್ಟಿದೆ.

ಅಧ್ಯಕ್ಷರ ದಾಖಲೆಯೇನು? ವಿಶೇಷ ತೀರ್ಮಾನಗಳ ಸಂದರ್ಭದಲ್ಲಿ ಅಧ್ಯಕ್ಷರ ಹೆಸರು ಮಿರುಗುವುದು. ಆದರೆ, ನಮ್ಮ ಅಧ್ಯಕ್ಷರಿಗೆ ಅದೊಂದು ಸಂದರ್ಭದಲ್ಲಿ ವಿನಾ ಮಿಕ್ಕ ಸಮಯಗಳಲ್ಲಿ ವಿಶೇಷ ತೀರ್ಮಾನಗಳಾವುದನ್ನೂ ಕೊಡುವಂತಹ ಸಂದರ್ಭಗಳಿರಲಿಲ್ಲ. ಸಂದರ್ಭವೆದ್ದ ಕಾಲದಲ್ಲಿ ಅಧ್ಯಕ್ಷರು ಕೊಟ್ಟ ತೀರ್ಮಾನಗಳೇನೂ ವಿಶೇಷವಲ್ಲ.

ಜನರಿಗೆ ಈ ಎಸೆಂಬ್ಲಿಯ ಮೇಲೆ ವಿಶ್ವಾಸ ಕಡಿಮೆಯಾಯಿತು. ಸರಕಾರಕ್ಕೂ ವಿಶ್ವಾಸವಿಲ್ಲ! ಅಲ್ಲಿರುವ ಸದಸ್ಯರು ಯಾರ ಪ್ರತಿನಿಧಿಗಳಾಗಿ ಅಲ್ಲಿರಬೇಕಿತ್ತೋ ಹಾಗೇನೂ ಇರದೆ, ತಮ್ಮ ಪ್ರತಿನಿಧಿಗಳು ತಾವೇ ಆಗಿರುವರೆಂಬಂತಿದೆ. ಇನ್ನಿದು ಬೇಗನೆ ಮುಗಿದು ಹೊಸ ಚುನಾವಣೆಗಳಾಗುವ ಕಾಲವನ್ನು ದೇಶವೆಲ್ಲ ಆತುರದಿಂದ ಕಾಯುತ್ತಿದೆ.

ಚಲಚ್ಚಿತ್ರದ ಇತಿಹಾಸವು ಬದಲಾಗುತ್ತಿದೆ!

ಅಮೇರಿಕಕ್ಕೆ ಈಗ "ಶೌಚವಿಚಾರ" ಹೊಳೆದಿದೆ; ಕೊಳೆ ಹೆಚ್ಚಿದುದನ್ನು ತೊಳೆದು ಬಿಡೋಣವೆಂಬ ಆಲೋಚನೆಯಾಗಿದೆ. ನಗ್ನವಾಗಿ ರಮಣಿಯರನ್ನು ಚಲಚ್ಚಿತ್ರಗಳಲ್ಲಿ ಪ್ರದರ್ಶಿಸಿದುದೂ, ಪ್ರೇಕ್ಷಕರಲ್ಲಿ ಧೃತ್ಕಾರಗಳಾಗುವಷ್ಟಕ್ಕೆ ಚುಂಬನಾದಿ ಕ್ರೀಡಾವಿನೋದಗಳನ್ನು ಅತಿರೇಕವಾಗಿ ಪ್ರದರ್ಶಿಸಿದುದೂ ವಿಶೇಷವಾಯಿತೆಂದು—ಈಗ ಈ ಶೌಚವಿಚಾರ.

ಈ ಪ್ರಚಾರಕಾರ್ಯದಲ್ಲಿ ಕೆಲ ಸಿನೆಮ ನಟಿಯರೂ ಕೂಡಿರುವರು. ಇವರೇ ಮುಂದಾಳಾಗಿರುವರು. ಇದರ ದೆಸೆಯಿಂದ ಪ್ರಖ್ಯಾತ ಸಿನೆಮ ಕಂಪೆನಿಗಳೆಲ್ಲ, ತಮ್ಮ ಆಲೋಚನೆಯನ್ನು ಬದಲಾಯಿಸಿ, ಅಶ್ಲೀಲವೇನೂ ಇಲ್ಲದ ಚಿತ್ರಗಳನ್ನು ಸಿದ್ಧಗೊಳಿಸಲಾರಂಭಿಸಿವೆ.

ಅಮೇರಿಕದ ಸಿನೆಮಾ ಥಿಯೇಟರುಗಳಲ್ಲಿ, ವಾರಕ್ಕೆ ಮೂರು ದಿನ, ಅಶ್ಲೀಲವಲ್ಲದ ಚಿತ್ರಗಳನ್ನು ಮಾತ್ರ ಪ್ರದರ್ಶಿಸುವರಂತೆ.

ಮಹಾತ್ಮರ ಮತ್ತೊಂದು ಉಪವಾಸ?

ಬೊಂಬಾಯಿಯ ಕೊಂಗ್ರೆಸ್ ಸಭಾಧಿವೇಶನವು ಮುಗಿವ ತನಕ ಮಹಾತ್ಮಾಜಿಯವರು, ತಮ್ಮ ದೇಹಕ್ಕೆ ಅಪಾಯಬರುವ ಯಾವ ಕಠಿನವ್ರತಗಳನ್ನೂ ಕೈಕೊಳ್ಳುವುದಿಲ್ಲವೆಂದೂ, ಜೈಲುವಾಸವನ್ನು ಅಪೇಕ್ಷಿಸರೆಂದೂ ನಿಶ್ಚಯವಾಗಿ ತಿಳಿದಿದೆ. ಈ ನಡುವೆ ಕರಾಚಿಯ ಜೋಯಿಸರೊಬ್ಬರ ಪ್ರವಾದ ಪ್ರಕಟವಾಗಿದೆ:—'ಮಹಾತ್ಮಾ ಗಾಂಧಿಯವರು ಇದೇ ಬರುವ ನವಂಬರ ತಾ. ೧ರಲ್ಲಿ ಒಂದು ಮರಣಾಂತ ಉಪವಾಸವನ್ನು ಕೈಕೊಳ್ಳುವರು. ಕೊಂಗ್ರೆಸ್ಸಿನಲ್ಲಿ ಅಭಿಪ್ರಾಯ ಭೇದವೆದ್ದು, ಪಂಗಡಗಳಾಗುವುದೇ ಇದಕ್ಕೆ ಕಾರಣ.'

ಜಾಪಾನ್ ಸರಕಾರದ ಔದಾರ್ಯ.

ಜಾಪಾನಿನ ರೇಷ್ಮೆ ಕೈಗಾರಿಕೆಯು ಹಿಂದಡಿಯಿಟ್ಟಿದೆ. ಇದರಿಂದ ವ್ಯವಸಾಯಗಾರರು ನಮ್ಮ ರೈತರಂತೆಯೇ ದುಃಸ್ಥಿತಿಗೀಡಾಗಿರುವರು. ಜಾಪಾನ್ ಸರಕಾರವು ಅವರ ಸಹಾಯಾರ್ಥ. ಒಂದೂವರೆ ಲಕ್ಷ ಯೆನ್ನುಗಳನ್ನು ಮಂಜೂರು ಮಾಡಿಯದೆ.

ಶಿಶುವು ವಿನಾಶವನ್ನು ಸಾರಿತು!

ಮೆಕ್ಸಿಕೋ ಪ್ರಾಂತ್ಯವೆಲ್ಲ ಒಂದು ವಿಶೇಷ ಸುದ್ದಿಯಿಂದ ಕಂಗಾಲಾಗಿದೆ. ಭೂಗತವಾದ ಕೂಡಲೇ ಒಂದು ಶಿಶುವು ಸ್ಪೈನ್ ಭಾಷೆಯಲ್ಲಿ ಸ್ಪಷ್ಟವಾಗಿ ಡಾಕ್ಟರರನ್ನು ಕುರಿತು, "ಆರು ತಿಂಗಳ ತನಕ ಭೂಲೋಕದಲ್ಲಿ ವಿನಾಶದ ದುಃಖಮಯ ಘಟನೆಗಳು ನಡೆವುವು. ನೀವು ಯಾವುದನ್ನು ಬಯಸುತ್ತೀರಿ—ತುಫಾನೇ ಅಥವಾ ಭೂಕಂಪವೇ?" ಎಂದು ಪ್ರಶ್ನಿಸಿ ಬಿಟ್ಟಿತು. ವಿಸ್ಮಯ ಹೊಂದಿದ ಡಾಕ್ಟರರು—"ಭೂಕಂಪವಾಗಬಹುದು!" ಎಂದ್ದರಂತೆ. "ತಥಾಸ್ತು!" ಎನ್ನುತ್ತ ಶಿಶುವು ಕೂಡಲೇ ಪ್ರಾಣತ್ಯಾಗ ಮಾಡಿತಂತೆ.

ಜನರು ಭಯಗೊಂಡಿರುವರು. ಅನೇಕರು "ದೇವರೇ ರಕ್ಷಿಸು" ಎಂದು ಮೊರೆಯಿಡುತಿದ್ದಾರೆ. ಈ ಕತೆಯೇನೆಂದು ಸರಕಾರದವರು ವಿಚಾರಿಸುತ್ತಿರುವರು. [ಶಿಶುವು, ಒಂದು ಬಡ ರೈತ ಕುಟುಂಬದಲ್ಲಿ ಜನಿಸಿತಂತೆ.]

ಮುಂದಿನ ಕೊಂಗ್ರೆಸ್ ಅಧ್ಯಕ್ಷರು?

ಕೊಂಗ್ರೆಸ್ ಸಭೆಯ ದಿನಗಳು ಸಮೀಪಿಸುತ್ತಿವೆ. ಮುಂದಿನ ಅಧ್ಯಕ್ಷರಾರೆಂಬ ಬಗೆಗೆ ಬೇರೆ ಬೇರೆ ಪ್ರಾಂತ್ಯಗಳಿಂದ ಅಭಿಪ್ರಾಯಗಳನ್ನು ಸಂಗ್ರಹಿಸುತ್ತಿರುವರು. ಮಧ್ಯ ಪ್ರಾಂತ್ಯದ ಮರಾಠಿ ಪ್ರಾಂತಿಕ ಕೊಂಗ್ರೆಸ್ ಕಮಿಟಿಯು ಬಾಬೂರಾಜೇಂದ್ರ ಪ್ರಸಾದರವರ ಹೆಸರನ್ನು ಸೂಚಿಸಿದೆ.

ಇಜಿಪ್ಟಿಗೂ ಲಂಕೆಶಯರಿಗೂ ನಂಟು!

ಜಾಪಾನಿನವರು ತಮ್ಮ ಅರಿವೆಗಳನ್ನು ಇಜಿಪ್ಟಿನಲ್ಲಿ ತುಂಬಿ ಬಿಟ್ಟಿದ್ದಾರೆ. ಹಿಂದೆ ಲಂಕೆಶಯರಿನ ಮೇಲೆ ಆಧರಿಸಿದ್ದ ಇಜಿಪ್ಟಿಗೆ ಈಗ ಜಾಪಾನೇ ಅರಿವೆ ಉಡಿಸುತ್ತಿದೆ. ಲಂಕೆಶಯರು ಹಿಮ್ಮೆಟ್ಟಿದೆ

ಲಂಕೆಶಯರು, ಕೆಲವೊಂದು ಕಡೆಗಳಲ್ಲಿ, ತನ್ನದೇ ಅರಿವೆಗಳು ಮಾರಾಟವಾಗುವಂತೆ ಪ್ರಯತ್ನಪೂರ್ವಕವಾಗಿ ಸಾಧಿಸಲಿದೆ. ಇಜಿಪ್ಟಿನ ಅರಳೆಯನ್ನು ಕೊಂಡುಕೊಂಡು, ಅರಿವೆಗಳನ್ನು ತಯಾರಿಸಿ, ಇಜಿಪ್ಟಿಗೇ ಕೊಡಿಸುವ ಹಂಚಿಕೆಯಲ್ಲಿದೆ. ಈ ಸಂಬಂಧವಾದ ಕರಾರು ಇಜಿಪ್ಟ—ಲಂಕೆಶಯರುಗಳೊಳಗೆ ಸದ್ಯದಲ್ಲಿ ನಡೆಯಬಹುದೆಂದೂಹಿಸಲಾಗಿದೆ.

ಪ್ರಕಟಣೆ.

ಶ್ರೀ ಕೃಷ್ಣಾ ಮಿಲ್ಸ್ ಕಂಪೆನಿ, ಮಂಗಳೂರು. ದ. ಕ.

ಈ ಮೂಲಕ ನಮ್ಮ ಗ್ರಾಹಕರಿಗೆ ತಿಳಿಯಪಡಿಸುವದೇನೆಂದರೆ:—ನಮ್ಮ ಎಣ್ಣೆಯ ಗಿರಣಿಯು ಅನೇಕ ವರ್ಷಗಳಿಂದ ಎಣ್ಣೆ ತಯಾರಿಯನ್ನು ಮಾಡುತಿದ್ದು, ಸರ್ವ... ಪ್ರೀತಿ ವಿಶ್ವಾಸಕ್ಕೆ ಪಾತ್ರವಾಗಿರುವುದು ಎಲ್ಲರಿಗೂ ತಿಳಿದ ವಿಷಯವಾಗಿರುತ್ತದೆ. ನಾವು ತಯಾರಿಸುವ ಎರಡು ಬಗೆಯ ಕೊಬ್ರಿ ಎಣ್ಣೆಯಲ್ಲಿ ಒಂದನೇ ಮತ್ತು ಎರಡನೇ ತರಗತಿಗಳಿದ್ದು, ಒಂದನೇ ತರಗತಿಯದ್ದು ಬೆಳೆದ ತಾಜಾ ಬೆಳ್ಳೆ ಕೊಬ್ರಿಯಿಂದಲೆ ತಯಾರಿಸಲ್ಪಡುತ್ತದೆಂಬುದು ಸರ್ವ ವಿದಿತ ವಿಷಯ. ಅಲ್ಲದೆ ನಮ್ಮ ಎರಡನೇ ತರಗತಿಯ ಎಣ್ಣೆಯು ಹಾಫೀಸು ಕೊಬ್ರಿಯಿಂದ ತಯಾರಿಸಲ್ಪಟ್ಟಿದ್ದು, ಸರ್ವ ಗ್ರಾಹಕರ ಮೆಚ್ಚುಗೆಗೆ ಪಾತ್ರವಾಗಿದೆಯೆಂಬುದು ತಿಳಿದ ಸಂಗತಿ.

ಆದರೆ ಇತ್ತೀಚೆಗೆ ಕೆಲವು ವ್ಯಾಪಾರಸ್ಥರು ನಮ್ಮ ಗಿರಾಕಿಗಳನ್ನು ತಪ್ಪಿಸುವ ದುರುದ್ದೇಶದಿಂದಲೋ, ಏನೋ ಮಲಬಾರು ಆಸ್ತ ಕಡೆಯಿಂದ ಆಮದಾಗುವ ಎಣ್ಣೆಯನ್ನು ಕೊಂಡು ಅದು ನಮ್ಮ ಕಂಪೆನಿಯ ಎಣ್ಣೆಯೆಂದು ಕುಳವಾರುಗಳಿಗೆ ನಂಬಿಕೆ ಹೇಳಿ ಮೋಸಮಾಡುತಿದ್ದಾರೆಂದು ನಮ್ಮ ಲಕ್ಷ್ಯಕ್ಕೆ ಬಂದಿದೆ. ಹೀಗೆ ಮಲಬಾರಿನ ಎಣ್ಣೆ ಪಡೆದ ನಮ್ಮ ಗಿರಾಕಿಗಳು ನಮ್ಮ ಎಣ್ಣೆದುಯ್ಯಂ ಎಂದು ತಿಳಿಯುವ ಸಂಭವವು ಕೆಲವುಕಡೆ ಇದ್ದಿತೆಂದು ನಮಗೆ ತಿಳಿದುಬಂದಿದೆ.

ಆದುದರಿಂದ ನಾವು ಎಚ್ಚರಿಸುವುದೇನೆಂದರೆ:—ನಮ್ಮ ೧ನೇ ತರಗತಿಯ ಎಣ್ಣೆಯನ್ನು ಮೂಸಿ ನೋಡಿದಲ್ಲಿ ಬೆಳ್ಳೆ ಕೊಬ್ರಿಯ ಸುವಾಸನೆಯಿಂದಿರುವುದು, ತಿಳಿದುಬರುವುದು. ನಮ್ಮ ಎಣ್ಣೆಗೆ ಬೆಂಕಿಯಿಂದ ಬಿಸಿಮಾಡಿದ ಎಣ್ಣೆಯ ದುರ್ವಾಸನೆಯಿರುವುದಿಲ್ಲ. ಎಣ್ಣೆಯನ್ನು ಪಡೆಯುವ ಮೊದಲು ನಮ್ಮ ಗಿರಾಕಿಗಳು ಈ ಕ್ರಮದಿಂದ ಎಣ್ಣೆಯನ್ನು ಪರೀಕ್ಷಿಸಿ ನಮ್ಮ ಎಣ್ಣೆಯನ್ನು ಪಡೆಯುದರೆ ಹಾರೈಸುತ್ತೇವೆ.

ನಮ್ಮ ಎಣ್ಣೆ ದೊರಕುವ ಸ್ಥಳಗಳು.

೧. ಅಡಿಗೆ ವಿಟ್ಟಪ್ಪ ಶೆಣೈ ಎಂಡ್ ಕೊ., ರಥಬೀದಿ ಮಂಗಳೂರು.
೨. ಕೊಂಚಾಡಿ ನಾಗೇಶ ಶೆಣೈ ಎಂಡ್ ಕೊ., ಕದ್ರಿ ಸ್ಟೋರ್ಸ ಮಂಗಳೂರು.

ಎಸ್. ಅಚ್ಯುತ ರಾಯಪ್ಪ ನಾಯಕ್.

ಮೆನೇಜರ್, ಶ್ರೀ ಕೃಷ್ಣಾ ಮಿಲ್ಸ್ ಕಂಪೆನಿ, ಬಂದರ ಮಂಗಳೂರು.

ವಿವಿಧ ವಿಷಯ.

ಇಂಥ ಶಸ್ತ್ರಕ್ರಿಯೆ!

ಶಸ್ತ್ರಕ್ರಿಯೆ ಎಂದೊಡನೆಯೇ ಹಲವರಿಗೆ ಮೈ ಝುಮ್ಮೆನ್ನುವುದೇನು ಸುಳ್ಳಾಗಿಯೇ? ಲಂಡನಿನ ಒಂದು ಆಸ್ಪತ್ರೆಯಲ್ಲಿ ಓರ್ವ ಹೆಂಗಸಿಗೆ ಶಸ್ತ್ರಕ್ರಿಯೆ ಅಗತ್ಯವೆಂದಾಯಿತು. ಶಸ್ತ್ರಕ್ರಿಯೆ ನಡೆಸಿದರು. ಒಳಗೆ ಕಂಡುಬಂದುದೇನು? ಒಂದು ಕತ್ತರಿ! ಈ ಕತ್ತರಿಯು ೧೯೨೧ನೇ ಇಸವಿಯಲ್ಲಿ ಆಕೆಗೆ ಎಪೆಂಡಿಸೈಟಿಸಿಗಾಗಿ ಆಕೆಯ ಮೇಲೆ ಶಸ್ತ್ರಕ್ರಿಯೆ ನಡೆಸಿದಾಗ, ಡಾಕ್ಟರರ ಪ್ರಮಾದದಿಂದಾಗಿ ಹೊಟ್ಟೆಯೊಳಗೇ ಉಳಿದುಹೋಗಿತ್ತಂತೆ! ಕಳೆದ ಹದಿಮೂರು ವರ್ಷಗಳಿಂದಲೂ ಆ ಕತ್ತರಿ ಆ ಹೆಂಗಸಿನ ಹೊಟ್ಟೆಯೊಳಗೆ! ಹೆಂಗಸು ಬದುಕಲಿಲ್ಲ.

ಕಾಪ್ಪನವಿಷದಂತೆ?

ಮಂಗನ ಗ್ರಂಥಿಗಳನ್ನು ಮನುಷ್ಯನಲ್ಲಿಟ್ಟು ಕಸಿಮಾಡಿ ಯೌವನ ದಾನಮಾಡುವುದನ್ನು ಡಾ|| ವರನೊಫರು ಪ್ರಚಾರಕ್ಕೆ ತಂದರು. ಇಂತಹ ಕಸಿಗೆ ೧೦ ಸಾವಿರ ಪವನಿನ ಕನಕವೂ ವೆಚ್ಚವಾಗುವುದುಂಟು. ಆದರೆ, ಹುಚ್ಚುಹಿಡಿದ ನಾಯಿಯು ಯಾರನ್ನಾದರೂ ಕಚ್ಚಿದರೆ ಅವರಿಗೂ ಹುಚ್ಚು ಹಿಡಿಯುವಂತೆ, ಈ ಗ್ರಂಥಿಗಳನ್ನು ಯಾರಲ್ಲಿಟ್ಟಿರುವರೋ ಅವರಿಗೆ ಮಂಗನ ಚೇಷ್ಟೆಗಳು ಬರುವುವೆಂಬುದನ್ನು ಯಾರೂ ಎಣಿಸಿರಲಿಲ್ಲ. ಬುಡಾಪೆಸ್ಟಿನ ಪ್ರೊಫೆಸರ್ ಜೋಸಫ್ ಸಿಂಕೋಲಿಕ್ಸ್ ಎಂಬವರಿಗೆ ಹಾಗಾಯಿತು. ೮೦ ವಯಸ್ಸಿನ ಹಳಬರವರು. ಕಸಿಮಾಡಿಸಿಕೊಂಡರು. ಅಂದಿನಿಂದ ಮಂಗನ ಚೇಷ್ಟೆಗೆ ಆರಂಭ. ಮಂಗನಂತೆ ಆಹಾರ ತಿನ್ನುವರು; ಮಂಗನಂತೆ ಕಿರಚುವರು; ಮಂಗನಂತೆ ಹಾರಾಡಲೂ ಕಲಿತರು! ಇಷ್ಟಾಗಿಯೂ ಬದುಕಿ ಉಳಿದರೇ?—ಇಲ್ಲ. ಸ್ವಲ್ಪ ಕಾಲದಲ್ಲೆ ಪ್ರಾಣವನ್ನೂ ಕಳೆದುಕೊಂಡರು, ಇನ್ನೂ ಯೌವನ ಪ್ರಾಪ್ತಿ ಪುನರ್ಜನ್ಮದಲ್ಲಿ!

ಇಂದೊಂದು ನೂತನಸರ್ಪದಂಶ ಚಿಕಿತ್ಸೆ.

ಆದರೆ, ಯಾರೂ ಈ ನೂತನವನ್ನು ಥಟ್ಟನೆ ಪ್ರಯತ್ನಿಸಬೇಡಿ! ಅದು ನಡೆದುದು ಕಾಥಿಯವಾಡದ ಧೋರಾಜಿ ಎಂಬಲ್ಲಿ! ಒಬ್ಬ ಗ್ರಾಮವಾಸಿಗೆ ಸರ್ಪ ಕಚ್ಚಿತು. ಆತನು ಮೂರ್ಛಾವಸ್ಥೆಯಲ್ಲಿ ಒಂದು ಎತ್ತಿನ ಬಂಡಿಯಲ್ಲಿ ಚಿಕಿತ್ಸೆ ಬಗ್ಗೆ ಒಯ್ಯಲ್ಪಡುತ್ತಿದ್ದಾಗ ನಡುದಾರಿಯಲ್ಲಿ ಹನ್ನೆರಡು ವಯಸ್ಸಿನ ಬಾಲಕನೊಬ್ಬನು ಅವರನ್ನು ತಡೆದು, ಮೂರ್ಛಿತನ ಬಳಿಗೆ ಹೋಗಿ, ತನ್ನ ಗಂಟಲಿನ ಬಳಿಯಲ್ಲೊಂದು ಗಾಯ ಮಾಡಿ, ಸುರಿಯುತ್ತಿರುವ ನೆತ್ತರನ್ನು ಹಾವು ಕಡಿದಾತನ ಗಾಯಕ್ಕೆ ಹಚ್ಚಿದೊಡನೆ, ಮೂರ್ಛಿತನು ಎದ್ದು ಕುಳಿತನು! ಬಾಲಕನು ತನ್ನ ಗಾಯಕ್ಕೆ ತನ್ನ ಎಂಜಲನ್ನು ಹಚ್ಚಿಬಿಟ್ಟು ರಕ್ತಸ್ರಾವ ನಿಲ್ಲಿಸಿದನು! ಆಮೇಲೆ, ಸರ್ಪ ಕಡಿದಾತನ ಗಾಯಕ್ಕೆ ಕಾದ ಕಬ್ಬಿಣದ ಸರಳನ್ನು ಕಾಯಿಸಿಬಿಟ್ಟು, ಅಲ್ಲಿ ಕೂಡಲೇ ಪೂರ್ಣ ಗುಣಮಾಡಿ, [illegible] ಬಹುಮಾನವನ್ನೂ ತೆಗೆದುಕೊಳ್ಳಲೊಪ್ಪದೆ, ಹೊರಟುಹೋಗಿಬಿಟ್ಟನು.

"ಬಿಳಿಮನುಷ್ಯರನ್ನು ತಿನ್ನಬಾರದು!"

ಇದು, ಫಿಜಿದ್ವೀಪಗಳಲ್ಲಿ ವಾಸಿಸಿರುವ, ನೂರು ವರ್ಷ ಪ್ರಾಯದ ನರಭಕ್ಷಕನನೊಬ್ಬನ ಅಭಿಪ್ರಾಯ. ಇವನು ತನ್ನ ಜೀವಮಾನದಲ್ಲಿ ಅನೇಕ ಜನರನ್ನು ಹಿಡಿದು ತಿಂದಿರುವನು. ಆದರೆ, ಬಿಳಿಮನುಷ್ಯರ ಮಾಂಸವು ರುಚಿಕರವಾಗಿಲ್ಲವಂತೆ. ಇಂತಹ ಭಯಂಕರ ಮನುಷ್ಯನನ್ನು ಕಾಣಲೆಂದು, ಇಂಗ್ಲೆಂಡಿನ ೨೫ ಮಂದಿ ಶಾಲಾ ವಿದ್ಯಾರ್ಥಿನಿಯರು ಹೊರಟಿರುವರು.

ಒಂದೇ ದಿನ ಮಾತ್ರ ಕೆಲಸಮಾಡಿದವನು!

ಇವನೆಂತವನು ಭೂಲೋಕದಲ್ಲಿ ಮತ್ತೊಬ್ಬನಿರಲಾರನು. ಸ್ಟೋಕ್‌ಹೋಮ್ ನಗರದ ತಿರುಕನೊಬ್ಬ; ಆತನ ವಯಸ್ಸು ಈಗ ೬೮; ತನ್ನ ಜೀವಮಾನದಲ್ಲಿ, ಅಲೆದಾಡಿ, ತಿರುಪೆಯೆತ್ತಿಯೇ ಜೀವನನಡೆಸಿದ್ದಾನೆ. ಆತನು ಕೆಲಸಮಾಡಿದುದೆಂದರೆ, ೪೦ ವರ್ಷಗಳ ಹಿಂದೆ ಒಂದೇ ಒಂದುದಿನ ಮಾತ್ರ.

ಸರದಾರ ವಲ್ಲಭಭಾಯಿ ಪಟೇಲರು ಅಹಮ್ಮದಾಬಾದ್ ಜಿಲ್ಲಾ ಕಾಂಗ್ರೆಸ್ ಕಮಿಟಿಯ ಅಧ್ಯಕ್ಷರಾಗಿಯೂ ಆರಿಸಲ್ಪಟ್ಟರು.

ಪ್ರಚಲಿತಸಮಾಚಾರ.

ಅಮೇರಿಕದ ಪತ್ರಿಕಾಕರ್ತೆಗೆ ಜರ್ಮನಿಯಿಂದ 'ಗಡೀಪಾರು'

ಅಮೇರಿಕದ ಪ್ರಖ್ಯಾತ ಕಾದಂಬರೀಕಾರರಾದ ಸಿನ್‌ಕ್ಲೇರ್ ಲೂಯಿಸ್ (ನೋಬೆಲ್ ಬಹುಮಾನ ಪಡೆದವರು) ಇವರ ಪತ್ನಿಯಾದ ಡೊರೊಥಿ ಥೊಂಪ್ಸನಳು, ಜರ್ಮನಿ ದೇಶವನ್ನು ೨೪ ತಾಸುಗಳೊಳಗೆ ಬಿಟ್ಟು ತೊಲಗಬೇಕೆಂದು ಜರ್ಮನ್ ಸರಕಾರದ ಆಜ್ಞೆಯಾಗಿದೆ. ಆಕೆಯು, ಜರ್ಮನಿಗೆ ಬಂದು ರಹಸ್ಯಗಳನ್ನು ತಿಳಿದು, ಜರ್ಮನಿಗೆ ವಿರುದ್ಧವಾಗಿ ಅಮೇರಿಕದ ಪತ್ರಿಕೆಗಳಲ್ಲಿ ಲೇಖನಗಳನ್ನು ಪ್ರಕಟಿಸುವಳೆಂಬುದು ಅಪಾದನೆ.

ನಮ್ಮ ವೈಸ್ರಾಯರು—

ಇನ್ನೆಷ್ಟು ಕಾಲ ಗಾದಿಯಲ್ಲಿ ಕುಳಿತುಕೊಳ್ಳುವರೆಂಬ ಪ್ರಶ್ನೆಯು ಅಲ್ಲಲ್ಲಿ ಕೇಳಲ್ಪಡುತ್ತಿದೆ. ಸಾಮಾನ್ಯವಾಗಿ ೫ ವರ್ಷಗಳ ಕಾಲ ಮಾತ್ರ ಒಬ್ಬರು ವೈಸ್ರಾಯರು ಪೀಠದಲ್ಲಿ ಕೆಲಸ ನೋಡುವರು. ಆದರೆ, ವಿಲ್ಲಿಂಗ್ಡನ್ ಪ್ರಭುಗಳು ಇನ್ನೂ ೩ ವರ್ಷಗಳ ತನಕ ಇದ್ದು, ಹೊಸ ಸುಧಾರಣೆಗಳನ್ನಿಲ್ಲಿ ಜ್ಯಾರಿಗೆ ತಂದೇ ಆ ಮೇಲೆ ನಿವೃತ್ತರಾಗಬೇಕೆಂದು ಸಾಮ್ಯುವೆಲ್ ಹೋರರ ಅಗ್ರಹವಿತ್ತಂತೆ. ತಾನು ಆ ವಿಷಯವಾಗಿ ಆಲೋಚಿಸುವೆನೆಂದು ವಿಲ್ಲಿಂಗ್ಡನ್ನರು ತಿಳಿಸಿರುವರಂತೆ.

ಹಿಟ್ಲರರ ಹೊಸ ಆಜ್ಞೆ.

ಹಿಟ್ಲರರು ಪ್ರತಿಯೊಂದು ತಿಂಗಳಲ್ಲೂ ತನ್ನದೊಂದು ಹೊಸ ಯೋಜನೆಯಿಂದ ಪ್ರಪಂಚವನ್ನು ಬೆರಗುಗೊಳಿಸದಿಲ್ಲ. ವಿವಾಹಿತರಾದವರೂ, ಸಂಸಾರಪೋಷಣೆಯ ಭಾರದಿಂದ ಬಳಲಿದವರೂ ಈಗ ಹೆಚ್ಚಾಗಿ ಉದ್ಯೋಗ ಪಡೆವಂತೆಯೂ, ಅವಿವಾಹಿತ ತರುಣರು ಹಳಬರಿಗೆ ಸ್ಥಾನಗಳನ್ನು ಬಿಟ್ಟು ಕೊಡುವಂತೆಯೂ ಒಂದು ಹೊಸ ಆಜ್ಞೆ!

ಇದಕ್ಕೆ 'ನಿದ್ರೆ'ಯೆನ್ನುವರು!

ಜರ್ಮನನೊಬ್ಬ—ವಿಮಾನವೇರಿ ಕುಳಿತನು. ವಿಮಾನವು ಘೋಂಕಾರಮಾಡುತ್ತ ಹೊರಟಿತು. ಒಳ್ಳೇ ಗಾಳಿ ಇದೆ. ಆತನಿಗೆ ನಿದ್ದೆ ಬಿತ್ತು. ಎಚ್ಚರವಾದಾಗ ಏನನ್ನು ನೋಡಿದನು?—ತಾನು ಕುಳಿತ ವಿಮಾನು ಮುರಿದು ಬಿದ್ದಿದೆ; ಅದರಲ್ಲಿ ಕುಳಿತವರೊಳಗೆ ತಾನೊಬ್ಬನು ಮಾತ್ರ ಬದುಕಿರುವೆನು! ಕುಂಭಕರ್ಣನ ಅಜ್ಜನ!

ಕಾಂಗ್ರೆಸ್ ಸಭೆ; ಸ್ವಯಂಸೇವಕರ ವೆಚ್ಚಗಳು!

ಕಾಂಗ್ರೆಸ್ ಸಭೆಯು ಇದೇ ಅಕ್ಟೋಬರ ತಿಂಗಳಲ್ಲಿ ಬೊಂಬಾಯಿಯಲ್ಲಿ ಜರಗುವುದು. ಸ್ವಯಂಸೇವಕರ ಮೇಲ್ವಿಚಾರವನ್ನು ನೋಡುವ ಬಗ್ಗೆ ಶ್ರೀ|| ಕೆ. ಎಫ್. ನರಿಮಾನರು ನಿಯೋಜಿತರಾಗಿರುವರು. ಸ್ವಯಂಸೇವಕರ ವೆಚ್ಚಗಳಿಗೆಂದು ಇವರು ೬೦ ಸಾವಿರ ರೂಪಾಯಿಗಳಿಗೆ ಬಜೆಟು ಮಾಡಿರುವರಂತೆ. ಇದನ್ನು ೪ ಸಾವಿರಕ್ಕೆ ಇಳಿಸಬೇಕೆಂದು ಕಾಂಗ್ರೆಸ್ ಅಧ್ಯಕ್ಷರಾದ ಸರದಾರ ವಲ್ಲಭಭಾಯಿಯವರು ಬರೆದಿದ್ದಾರೆ.

ಶ್ರೀಮತಿ ಕಮಲಾನೆಹರುಗಳವರ ಆರೋಗ್ಯ.

—ಇನ್ನೂ ತೃಪ್ತಿಕರವಾಗಿಲ್ಲ. ಜ್ವರವೆಂತೂ ಇದ್ದೇ ಇದೆ. ಆಗಾಗ ಓಕರಿಕೆಯೂ ಇದೆ. ಹೃತ್ಕೋಶದ ಸ್ಥಿತಿಯೂ ಆತುರಕ್ಕೆಡೆಮಾಡುತ್ತಿದೆ. (ಜವಾಹರಲಾಲರಿಗೆ, ಪತ್ನಿಯ ಸ್ಥಿತಿಯ ಕುರಿತು ಆಗಾಗ ವರದಿ ಮುಟ್ಟಿಸುವ ಏರ್ಪಾಡು ಇದೆಯಂತೆ. ಇದು ಹೊರತು, ಜೈಲಿನಲ್ಲಿ ಅವರಿಗೆ ವಿಶೇಷ ಸೌಕರ್ಯಗಳೇನನ್ನೂ ಈತನಕ ದಯಪಾಲಿಸಿಲ್ಲ.)

ಕೊಲೊಂಬೊದಲ್ಲಿ ಆಯ-ವ್ಯಯ ಪಟ್ಟಿಯ ಚರ್ಚೆ—

—ಯಾಗುತ್ತಿದೆ. ಕೌನ್ಸಿಲ್ ಮಂದಿರದಲ್ಲಿ ಎಲ್ಲವೂ ಚರ್ಚೆಯೇ. ಕಡೆಗೆ ಮಾತು ಸಾಗುತ್ತ, ಅಧ್ಯಕ್ಷರ ಸಂಬಳವನ್ನು ಕಡಿತಕ್ಕೆ ಬಂತು. ಅಧ್ಯಕ್ಷರಿಗೆ ವರ್ಷಕ್ಕೆ ೧೪೦೦೦ ರೂಪಾಯಿ ಕೊಡಲ್ಪಡುತ್ತಿದೆ. ಒಬ್ಬ ಮೆಂಬರರು, ಈ ಸಂಬಳದಿಂದ ೧೩೯೯೯ ರೂಪಾಯಿಗಳನ್ನು ಕಡಿದು, ಅಧ್ಯಕ್ಷರಿಗೆ ವರ್ಷಕ್ಕೆ ಕೇವಲ ಒಂದು ರೂಪಾಯಿಯನ್ನು ಸಲ್ಲಿಸಬೇಕೆಂದರು. ಇದರ ಚರ್ಚೆ ಮುಂದೆ ಸಾಗಲಿಲ್ಲ.

ಅಮೇರಿಕದ ದಸ್ಯುಗಳ ಕೀರ್ತಿ!

ಅಮೇರಿಕದ ದಸ್ಯುಗಳು, ಅಲ್ಲಿಯ ಸೈನ್ಯ—ಪೋಲೀಸರ ದಳಕ್ಕಿಂತ ಹೆಚ್ಚಿರುವರೆಂದು ಕೇಳಿದುದಾಯಿತು. ಇನ್ನು, ಅವರೊಡನೆ ಇರುವ ಹತ್ಯಾರುಗಳು ಎಷ್ಟೆಂದು ಅಂದಾಜುಮಾಡುತ್ತಿರುವರು. ಈ ತನಕ ಪೋಲೀಸರಿಂದ ಸಂಗ್ರಹವಾದ ಹತ್ಯಾರುಗಳು ೩೭೦೪ ಪಿಸ್ತೂಲುಗಳು; ೫೫೦ ಬಂದೂಕುಗಳು; ೫೫೩ ಕತ್ತಿಗಳು; ಇನ್ನು, ಬಾಂಬುಗಳೂ ಇಲ್ಲದಿಲ್ಲ. ಅವುಗಳನ್ನೆಲ್ಲ ಪೋಲೀಸರು ಒಂದು ದೋಣಿಯಲ್ಲಿ ಹಾಕಿ, ಸಮುದ್ರದಲ್ಲಿ ೧೦ ಮೈಲು ದೂರಕ್ಕೊಯ್ದು, ಸಮುದ್ರದಲ್ಲಿ ಮುಳುಗಿಸಿಬಿಟ್ಟರು.

ರೈಲುಗಳಲ್ಲಿ ಪ್ರಯಾಣಮಾಡುವವರು—

—ಎಚ್ಚರವಾಗಿದ್ದಷ್ಟೂ ಸಾಲದು. ಆರ್ಥಿಕ ದುರವಸ್ಥೆಯ ಕಾಲದಲ್ಲಿ ಕಳ್ಳಕಾಕರು ಹೆಚ್ಚುತ್ತಿರುವರು. ರೈಲ್ವೆ ಅಧಿಕಾರಿಗಳು ಎಷ್ಟೊಂದು ಜಾಗರೂಕತೆವಹಿಸಿದರೂ ಆಗಾಗ ರೈಲ್ವೇ ಬಂಡಿಯಲ್ಲಿ ಕಳವು—ಕೊಲೆಗಳು ನಡೆದುದನ್ನು ನಾವು ಕೇಳುತ್ತಿದ್ದೇವೆ. ಕಳೆದ ವಾರ ಮೆಟ್ಟುಪಾಳಂ ಸ್ಟೇಷನಿನ ಬಳಿಯಲ್ಲೊಂದು ಚಿಕ್ಕ ಕಳವು. ರಾತ್ರಿಕಾಲದಲ್ಲಿ ರೈಲುಬಂಡಿಯು ಆ ಸ್ಟೇಷನನ್ನು ಬಿಟ್ಟು ಸ್ವಲ್ಪ ಮುಂದುವರಿಯುವುದರೊಳಗೆ, ಒಬ್ಬ ಪ್ರಯಾಣಿಕನ ಅಂಗಿಯನ್ನು ಯಾರೋ ಹೊರಗಿಂದ ಎಳೆದರಂತೆ, ಕಾದಾಡಿದರೂ ನಿಷ್ಪ್ರಯೋಜನವಾಗಿ, ಕಳ್ಳನು ಅಂಗಿಯನ್ನೆತ್ತಿ ಓಡಿಯೇ ಬಿಟ್ಟನು!

"ಕೊಂದವನಿಗೆ ಕೊಲೆ ತಪ್ಪದು."

ನಿಜ! ಆದರೆ, ಸೆರಜಿವೋ ಎಂಬಲ್ಲಿನ ಜೋರ್ಜ್ ವಿಟ್ ಎಂಬಾತನು ಕೊಲೆಪಾತಕದಿಂದ ತಪ್ಪಿಸಿಕೊಂಡನು! ಆತನಿಗೆ, ವಿಲಾಸಪ್ರಿಯಳಾದ ಹೆಂಡತಿಯೊಬ್ಬಳಿದ್ದಳು. ಆಕೆಗೆ ವಿಲಾಸಸಾಮಗ್ರಿಗಳನ್ನೊದಗಿಸಿಕೊಟ್ಟೇ ಇವನ ಇದ್ದುದೆಲ್ಲ ಮುಗಿದು, ಕೊನೆಗೆ ಜೈಲು ಪ್ರಾಪ್ತಿಯಾಯಿತು. ಜೈಲಿನಿಂದ ಹೊರಗೆ ಬಂದಾಗ ನೋಡಿದ್ದೇನನ್ನು?—ತನ್ನ ಹೆಂಡತಿಯು ಪರಪುರುಷನಿಗೆ ದೇಹವನ್ನು ವಿಕ್ರಯಿಸುತ್ತಿರುವಳು! ಕೋಪೋನ್ಮತ್ತನಾದ ಜೋರ್ಜ್ ವಿಟನು ಆಕೆಯನ್ನು ತಿವಿದುಬಿಟ್ಟನು. ಆದರೆ, ಏನಾಶ್ಚರ್ಯ! ಕೋರ್ಟಿನಲ್ಲಿ ಈತನನ್ನು ನಿರಪರಾಧಿ ಎಂದು ಬಿಟ್ಟುಬಿಟ್ಟರು. ಅದರ ಕಾರಣವಿಷ್ಟು:— ಜೋರ್ಜ್ ವಿಟನ ಹೆಂಡತಿಗೆ ಹೃದಯವು ಬಲು ದುರ್ಬಲವಾಗಿತ್ತಂತೆ. ತನ್ನ ಗಂಡನು ಜೈಲಿನಿಂದ ಬಂದಿರುವನೆಂದೂ ತನ್ನ ಪಾಪಕರ್ಮವನ್ನಾತನು ಬಲ್ಲನೆಂದೂ ತಿಳಿದು ಆಕೆ, ಭಯದಿಂದಲೇ, ತನ್ನ ಗಂಡನ ಮುಖ ನೋಡುತ್ತಲೇ, ಹೃತ್ಕ್ರಿಯೆ ಮುಗಿದು ಪ್ರಾಣತ್ಯಾಗ ಮಾಡಿದಳಂತೆ; ಹಾಗೆ ಸತ್ತವಳನ್ನ ಜೋರ್ಜ್ ವಿಟನು ತಿವಿದುದಂತೆ! ಹೇಗಿದ್ದರೂ ಆಕೆಯ ಮರಣಕ್ಕೆ ಇವನೇ ಕಾರಣವೆಂದಾಯಿತು. ಪರಂತು, ಪಾಪಾತ್ಮಳಾದ ಆಕೆ, ತನ್ನ ಪಾಪದ ಭಯದಿಂದಲೇ ಪ್ರಾಣತ್ಯಾಗಮಾಡಿದಳೆಂದು ನ್ಯಾಯಾಧೀಶರ ಅಭಿಪ್ರಾಯ!

ದೊರೆಗಳು ಮಾನನಷ್ಟದ ಹಣತೆರಬೇಕು

ಸಿಲೋನಿನ ಕರನನ್ನೇಲಾ ಎಂಬಲ್ಲಿ, ಮೋಟಾರ್ ಅಪಘಾತದಲ್ಲಿ ಮಿ|| ಹಂಟ್ಲೀ ಎಂಬವರು ಪತ್ನಿಯೊಂದಿಗೆ ಮೋಟಾರಿನಲ್ಲಿ ಹೋಗುವಾಗ ಅಪಘಾತಕ್ಕೊಳಗಾಗಿ ಆಸ್ಪತ್ರೆ ಸೇರಿದರು. ಮುಂದೆ ಗುಣಲಾಭಹೊಂದಿದರು. ಒಂದು ಪ್ಲಾಂಟರ ಎಸೋಸಿಯೇಶನ್ ಸಭೆಯಲ್ಲಿ, ಈ ಹಂಟ್ಲೀಯವರು ಮೆಡಿಕಲ್ ಸೆರ್ವಿಸ್ ಡೈರೆಕ್ಟರರಿಗೆ—ತಾನು ಆಸ್ಪತ್ರೆಯಲ್ಲಿ ಡಾ|| ಸಭಾಪತಿ ಎಂಬ ಮೆಡಿಕಲ್ ಆಫೀಸರರ ಕೈಕೆಳಗೆ ಸರಿಯಾಗಿ ಚಿಕಿತ್ಸೆ ಹೊಂದಲಿಲ್ಲವೆಂದು ಬರೆದ ಕಾಗದವು—ಓದಲ್ಪಟ್ಟಿತಲ್ಲದೆ, ಪತ್ರಿಕೆಗಳಲ್ಲಿಯೂ ಪ್ರಕಟಿಸಲ್ಪಟ್ಟಿತು. ಡಾಕ್ಟರ ಸಭಾಪತಿಯವರು ಮನನೊಂದು, ಹಂಟ್ಲೀ ಸಾಹೇಬರ ಮೇಲೆ ಮಾನನಷ್ಟದ ದಾವೆ ತಂದರು. ಸಾಹೇಬರು ಡಾಕ್ಟರರಿಗೆ ಹತ್ತು ಸಾವಿರ ರೂಪಾಯಿಗಳನ್ನು ಮಾನನಷ್ಟವಾಗಿ ತೆರಬೇಕೆಂದು ತೀರ್ಪು ಹೊರಟಿದೆ.

ಸಿಂಧ—ಬೊಂಬಾಯಿ ರೈಲ್ವೆ.

ಸಿಂಧದಿಂದ ಬೊಂಬಾಯಿಗೆ ಒಂದು ಹೊಸ ರೈಲ್ವೆ ಲೈನ್ ತೆರೆಯಲ್ಪಡುವ ವಿಚಾರವಿದೆ. ಕೆಲಸವನ್ನು ಸಧ್ಯದಲ್ಲೆ ಆರಂಭಿಸಬಹುದಾಗಿ ಊಹೆಯಿದೆ.

ತುಂಡು ಸುದ್ದಿ.

ಖಾನ್ ಅಬ್ದುಲ್ ಗಫಾರ್ ಖಾನರು ಶಾಂತಿನಿಕೇತನಕ್ಕೆ ತೆರಳಿ, ಕವಿ ರವೀಂದ್ರರಿಂದ ಸ್ವಾಗತಿಸಲ್ಪಟ್ಟರು. ಅಲ್ಲಿಂದ ವಾರ್ಧಕ್ಕೆ ತೆರಳುತ್ತಾರೆ.

ಬೊಂಬಾಯಿಯಲ್ಲಿ ಕಾಂಗ್ರೆಸ್ ಸಭೆ ಜರಗುವಲ್ಲಿಗೆ ಸಮೀಪದಲ್ಲಿ, ಇದೇ ಅಕ್ಟೋಬರ ತಾ|| ೨೦ರಿಂದಾರಂಭವಾಗಿ ೧೫ ದಿನಗಳ ಖಾದಿಪ್ರದರ್ಶನ ನಡೆವಂತೆ ಗೊತ್ತಾಗಿದೆ.

ಶ್ರೀ|| ಎಂ. ಎಸ್. ಅಣೆಯವರು ಪುನಃ ವಕಾಲತನ್ನು ಆರಂಭಿಸಬಹುದಾಗಿ ಸರಕಾರದ ಅಪ್ಪಣೆ ದೊರೆಯಿತು.

ಜರ್ಮನಿಯಿಂದ ದೇಶಭ್ರಷ್ಟರಾಗಿ ಹೋದ ಪ್ರೊಫೆಸರ್ ಐನ್‌ಸ್ಟೈನ್‌ರವರ ಹಿರಿಯ ಮಗಳು ಪ್ಯಾರಿಸಿನಲ್ಲಿ ಕಾಲವಾದಳು.

ಸಿಲ್ಲಿದ್ವೀಪದ ಸೇಲಿನ ಒಂದು ದೀಪಸ್ತಂಭವನ್ನು ಅಧಿಕಾರಿಗಳು ಬಾಡಿಗೆಗೆ ಕೊಡುವೆವೆಂದು ಪ್ರಕಟಿಸಿರುವರು. ಈ ದೀಪಸ್ತಂಭವೀಗ ಉಪಯೋಗದಲ್ಲಿಲ್ಲ.

ಅಮೇರಿಕಕ್ಕೆ ಬರಬೇಕೆಂದು ಗಾಂಧೀಜಿಯವರಿಗೆ ಅನೇಕ ಆಮಂತ್ರಣಗಳು ಬಂದಿವೆ.

ಒಸ್ಮಾನಾಬಾದಿನ ಹೈಸ್ಕೂಲಿನ ಹೆಡ್ ಮಾಸ್ತರರು ಕಾಲವಾದರು. ಅವರ ಹೆಂಡತಿಯು ತನ್ನ ಸೀರೆಗೆ ಸೀಮೆ ಎಣ್ಣೆ ಹೊಯ್ದು ಬೆಂಕಿಹಚ್ಚಿಕೊಂಡು ಪ್ರಾಣತ್ಯಾಗ ಮಾಡಿದಳಂತೆ.

ಅಮೋಲಾ ರೈಲ್ವೇ ಸ್ಟೇಷನಿನಲ್ಲಿ ಅವಿವಾಹಿತೆಯಾದ ೧೬ ವಯಸ್ಸಿನ ಓರ್ವ ಮುಸಲ್ಮಾನ ಬಾಲಿಕೆಯನ್ನು ಕೈದುಮಾಡಿರುವರು. ಆಕೆ ತನಗೆ ಹುಟ್ಟಿದ ಒಂದು ಶಿಶುವನ್ನು ಒಂದು ರೈಲುಬಂಡಿಯೊಳಗೆ ಬಿಟ್ಟಿರುವಳೆಂದು ಅಪಾದನೆ.

ಕರಾಚಿ ನಗರಸಭೆಗೆ, ಇದೀಗ ಮೊದಲನೆ ಬಾರಿ ಮಹಿಳಾ ಸದಸ್ಯರು ಚುನಾಯಿಸಲ್ಪಟ್ಟಿರುವರು.

ಅಹಮ್ಮದಾಬಾದಿನಲ್ಲಿ ಪುನಃ ಮೆನಿಂಜೈಟಿಸ್ ರೋಗವು ತಲೆದೋರಿದೆ.

ಬಂಗಾಳ ಗವರ್ನರರು ಲಂಡನಿಗೆ ತೆರಳಿರುವರು.

ಶ್ರೀ|| ದೇವದಾಸ ಗಾಂಧಿಯವರು ಡಿಲ್ಲಿ ಜಿಲ್ಲಾ ಕಾಂಗ್ರೆಸ್ ಕಮಿಟಿಯ ತನ್ನ ಸ್ಥಾನಕ್ಕೆ ರಾಜೀನಾಮೆ ಕೊಟ್ಟಿರುವರು.

ಭಯೋತ್ಪಾದಕರೆಂಬ ಸಂದೇಹದಿಂದ ವಿಚಾರಣೆಯಿಲ್ಲದೆ ಸೆರೆಗೊಯ್ಯಲ್ಪಟ್ಟ ಶರತ್‌ಚಂದ್ರ ಭೋಸರನ್ನು ಬಿಡುಗಡೆ ಮಾಡಬೇಕೆಂದು ಇಂಡಿಯಾ ಸರಕಾರದ ಗೃಹಮಂತ್ರಿಗಳ ಬಳಿಗೆ ಒಯ್ದ ಮನವಿಯು ನಿಷ್ಫಲವಾಯಿತು.

ಬಿಹಾರ್ ಭೂಕಂಪದಲ್ಲಿ ನಾಶಹೊಂದಿದ್ದ ಪಾಟ್ನದ ಸಿಕ್ಖ ಗುರುದ್ವಾರವನ್ನು ಒಮ್ಮನ್ಯದಿಂದ ವಂತಿಗೆಯಿತ್ತು ಜೀರ್ಣೋದ್ಧಾರ ಮಾಡುವರು. ಈ ಬಗ್ಗೆ ಪಾಟಿಯಾಲ ಮಹಾರಾಜರು ಒಂದು ಸಮಿತಿಯನ್ನು ನೇಮಿಸಿರುವರು.

ಆಗ್ರದಲ್ಲಿ ಹಿಂದೂ ಮುಸ್ಲಿಂ ಮಾರಾಮಾರಿಯಾಯಿತು.

(೧೧ನೇ ಪುಟದಿಂದ ಮುಂದುವರಿದುದು)

ಯನ್ನು ಕೊಡಿಸುತ್ತಿರುವುದೂ, ತಿಂಗಳಿಗೊಮ್ಮೆ ಡಿಬೇಟಿಂಗ್ ಕ್ಲಾಸ್ ಮಾಡಿ, ಅಲ್ಲಿ ಗಹನ ಹಾಗೂ ವಿಚಾರಣೀಯ ವಿಷಯಗಳನ್ನೇ ಚರ್ಚಾಸ್ಪದ ವಿಷಯಗಳನ್ನಾಗಿ ಆರಿಸಿ, ಅಂದಿನ ಚರ್ಚಾಸಭೆಗೆ ಅನುಭವಸ್ಥರನ್ನು ಅಧ್ಯಕ್ಷರನ್ನಾಗಿ ಆರಿಸಿ ಆ ಮೂಲಕ ವಿದ್ಯಾರ್ಥಿಗಳ ವಾಕ್ಚಾತುರ್ಯವನ್ನು ಬೆಳೆಸುತ್ತಿರುವುದೂ ಸ್ತುತ್ಯವೇ!

ದಕ್ಷಿಣ ಕನ್ನಡಿಗ.

ತಿದ್ದುಪಡಿ:—ಕಳೆದ ತಾ|| ೨೪—೮—೧೯೩೪ನೇ ಸ್ವದೇಶಾಭಿಮಾನಿಯಲ್ಲಿ "ಗುರುಪುರ ಪೊಳಲಿ ಗಾಡಿರಸ್ತೆ" ಎಂಬ ಶಿರೋನಾಮೆಯ ಲೇಖನದಲ್ಲಿ ಶ್ರೀಯುತ ದೇಲ್ಲಿಬೆಟ್ಟು ಪದ್ಮನಾಭಯ್ಯನವರು ತಮ್ಮ ದರ್ಖಾಸ್ತು ಸ್ಥಳದಲ್ಲಿ ಜಾತಿ ವರ್ಗದಾರರಿಂದ ರಸ್ತೆಮಾಡಿಸಿಕೊಂಡುವರೆಂಬ ನಂಬಿಕೆಯಿಂದ ಬರೆದದ್ದಾಗಿರುತ್ತದೆ. ಹೊರತು, ಸದರಿಯವರು ನನ್ನ ಕೂಡೆ ತಾನು ರಸ್ತೆಮಾಡಿಸಿ ಕೊಡುತ್ತೇನೆಂತ ಹೇಳಲಿಲ್ಲ. ಹೇಳಿದ್ದರೂ ಅವರು ಸಾರ್ವಜನಿಕ ರಸ್ತೆಗೆ ಅಡ್ಡಿಮಾಡಲಿಲ್ಲವೆಂದು ನಂಬಿ ಬರೆದುದಕ್ಕೆ ವಾಚಕರು ಕ್ಷಮಿಸಬೇಕಾಗಿ ವಿಜ್ಞಾಪಿಸುವ,

ಎಸ್. ವಿ. ಶೀನಪ್ಪ ಹೆಗ್ಡೆ, ಪೊಳಲಿ.

ಬಡತನಕ್ಕೆ ಮಕ್ಕಳು ಹೆಚ್ಚು!

ಹೆಚ್ಚು ಮಕ್ಕಳ ಕಾಟಕ್ಕೆ

ತಕ್ಕ ತಡೆ.

ಗಂಡಸರಿಗೆ—(ಸುಖಾನಂದ) ಸ್ತ್ರೀರೋಗ ಅಂಟದಂತೆ ರಕ್ಷಿಸಿ ಅಪಾಯವಿಲ್ಲದೆ ಗರ್ಭ ನಿರೋಧಕ್ಕೆ ಸಹಕಾರಿಯಾದ ರಬ್ಬರ್ ಸಾಧನ. ಬೆಲೆ 1—8—0.

ಹೆಂಗಸರಿಗೆ—(ಬೆಸಾಂಸ್) ಮೃದುವಾದ ಗರ್ಭನಿರೋಧಕ್ಕೆ ಸಾಧನ. ಉಪಯೋಗಿಸುವಾಗ ಅನಾನುಕೂಲವಿಲ್ಲ. ತೊಂದರೆಯಿಲ್ಲ. ಸುಖವಾಗಿರುವುದು. ಬೆಲೆ 2—4—0. ಉಪಯೋಗಿಸುವ ವಿಧಾನ ಇದರ ಜೊತೆಯಲ್ಲಿರುವುದು. ಆರ್ಡರಿನೊಡನೆ 4 ಆಣೆ ಸ್ಟಾಂಪಿರಬೇಕು.

ವಿಳಾಸ—ಕರ್ನಾಟಕ ಏಜೆನ್ಸಿ,
32, ಕೃಷ್ಣಪ್ಪ ನಾಯಕ್ ಟೆಂಕ್ ಸ್ಟ್ರೀಟ್,
ಜಿ. ಟಿ. ಮದ್ರಾಸು.

ಮಂಗಳೂರು ಡಿಸ್ಟ್ರಿಕ್ಟ್ ಮುನ್ಸೀಫ್ ಕೋರ್ಟಿನಲ್ಲಿ.

ಸ್ಮಾಲ ವ್ಯಾಜ್ಯದ ನಂಬ್ರ 781/1934.

ಕೊಗ್ಗ ಯಾನೆ ಸುಬ್ರಾಯ ಶ್ಯಾನುಭಾಗ—ವಾದಿ

ಮತ್ತು

ಲಕ್ಷ್ಮೀನಾರ್ಣಪ್ಪಯ್ಯ—ಉದಿಯಾವರ ಕಾನದ ಅನಂತಯ್ಯನವರ ಮಗ—ಗಜಾನನ ರಿಸ್ಟೋರೆಂಟಿನ ಪ್ರೊಪ್ರಾಯಿಟರ ಮಂಗಳೂರು ಶಹರ ಮಾರ್ಕೆಟು ರಸ್ತೆ—ಪ್ರತಿವಾದಿ.

ವಾದಿ ವಕೀಲ ಕೆ. ಪಿ. ಗೋಪಾಲಕೃಷ್ಣ ರಾಯನು ಈ ಮೂಲಕ ತಿಳಿಯಪಡಿಸುವುದೇನೆಂದರೆ:—

ಸದ್ರಿ ವಾದಿಗೆ ಪ್ರತಿವಾದಿಯು ತಾರೀಕು 18-8-1934ರಲ್ಲಿ ಸೇಕಡಾ 12½ರ ಬಡ್ಡಿ ನಿಶ್ಚಿ ರೂ. 50ಕ್ಕೆ ಬರಕೊಟ್ಟ ದಿಮಾಂಡ್ ಪ್ರೊ. ನೋಟಿನ ಅಸಲು ಬಡ್ಡಿ ಕೂಡಾ ರೂಪಾಯಿ 52-6-1ನ್ನು ಬರಮಾಡಿಕೊಳ್ಳುವರೆ ಸದ್ರಿ ವಾದಿಯು ಪ್ರತಿವಾದಿಯ ಮೇಲೆ ಮೇಲ್ಕಂಡ ಕೋರ್ಟಿನಲ್ಲಿ ಮೇಲ್ಕಂಡ ವ್ಯಾಜ್ಯವನ್ನು ದಾಖಲ್ ಮಾಡಿರುತ್ತಾನೆ ಮತ್ತು ಈ ವ್ಯಾಜ್ಯವು ಇದೇ 1934ನೇ ಇಸವಿ ಸಪ್ಟಂಬರ ತಿಂಗಳ ತಾರೀಕು 18ನೇ ಮಂಗಳವಾರ ದಿವಸ ಪೂರ್ವಾಹ್ನ ಗಂಟೆ 11ಕ್ಕೆ ತನಖೆಗೆ ಇಟ್ಟಿದೆ. ಮೇಲ್ಕಂಡ ತಾರೀಕಿಗೆ ಮೇಲ್ಕಂಡ ಕೋರ್ಟಿನಲ್ಲಿ ಪ್ರತಿವಾದಿಯು ತಾನು ಸ್ವತಃ ಯಾ ವಕೀಲರ ಮುಖಾಂತರ ಹಾಜರಾಗಿ ತನ್ನ ಉದಾಹರಣೆ ದಾಖಲು ಮಾಡತಕ್ಕದ್ದು. ತಪ್ಪಿದರೆ ಅತನನ್ನು ಸಿವಾಯಿ ಮಾಡಿ ಸದ್ರಿ ವ್ಯಾಜ್ಯವನ್ನು ತೀರ್ಮಾನ ಮಾಡಲಾದೀತು ತಿಳಿದಿರುವದು.

ಮಂಗಳೂರು, 6-9-'34 } **K. P. Gopalkrishna Rao,** *Vakil for Plaintiff.*

ಮಂಗಳೂರಿನ ಪೇಟೆಧಾರಣೆ

ಅಕ್ಕಿ:—ಇದರ ಕ್ರಯವು ಈ ವಾರದಲ್ಲಿ ಒಂದೆರಡಾಣೆಯಷ್ಟು ಕಡಿಮೆಯಾಗಿದೆ. ಪೇಟೆಯಲ್ಲಿ ಒಂದಾಣೆ ಅರ್ಧಾಣೆಯಷ್ಟು ಏರಿಕೆಯಿರುವುದು. ರಂಗೂನು ಅಕ್ಕಿಯ ಕ್ರಯವು ಕಡಿಮೆಯಾಗಿಲ್ಲ. ಪ್ರಥಮ ಸ್ಟೀಮರಿನಲ್ಲಿ ಹೊರಗಿನ ಅಕ್ಕಿ ಬರಲಿರುವುದೆಂದು ನಿರೀಕ್ಷಿಯುರುವುದರಿಂದ ಇದರ ಬೆಲೆಯು ಬರುವ ವಾರ ಇಳಿಯಬಹುದೆಂದು ಊಹೆ.

ನೋಟೀಸು.

ಕಾಸರಗೋಡು ಡಿಸ್ಟ್ರಿಕ್ಟ್ ಮುನ್ಸೀಫ್ ಕೋರ್ಟಿನಲ್ಲಿ.

ಕ್ರಯ ನಂಬ್ರ 184/'34.

1. K. B. ಶೇಕ್ ಅಹಮದ ಸಾಹೇಬ,
2. K. B. ಶೇಕ್ ಇಬ್ರಾಹಿಂ ಸಾಹೇಬ,

ಶೇಕ್ ಮೈದಿನಸ್ಸಾಬರ ಮಕ್ಕಳು, ಕಾಸರಗೋಡು ಕಸಬೆಯಲ್ಲಿರುವವರು—ವಾದಿರು.

ಮತ್ತು

ಶೇಕ್ ಮೈದಿನ ಸಾಹೇಬ ಕೂಡಾ 4 ಜನ—ಪ್ರತಿವಾದಿರು.

ಇವರೊಳಗೆ—

ವಾದಿರ ಪ 1ನೇಯಿಂದ 3ನೇ ವರೆಗಿನ ಪ್ರತಿವಾದಿರ ಕುಟುಂಬದ ವ ಕೂಪ ಹಕ್ಕಿನ ಕಾಸರಗೋಡು ಗ್ರಾಮದ ಸರ್ವೆ ನಂಬ್ರ 83/6ನೇ ಬಾಗ್ಯಾತು ಹಿತ್ಲು ಪಾಲಾಗತಕ್ಕದ್ದಾಗಲೀ ಪರರಿಬಾರಿ ಮಾಡುವರೇ ಆಗಲೀ ಆಗತಕ್ಕದ್ದಲ್ಲ—ವ 3ನೇ ಪ್ರತಿವಾದ ಹಯಾತಬಿಯು ಅದರಲ್ಲಿ ತನ್ನ ಹಕ್ಕನ್ನು ತನ್ನ ಮೊಮ್ಮಗಳು 4ನೇ ಪ್ರತಿವಾದಿಳು ಜುಲೇಕಬಿಗೆ ತಾರೀಕು 12-3-'31ರಲ್ಲು ಕ್ರಯಚೀಟು ಬರಕೊಟ್ಟದ್ದರಿಂದ ಅಂತಾ ಕ್ರಯ ಚೀಟು ಸದ್ರಿ ಆಸ್ತಿ ಮೇಲೆ ಬಾಧಿಸತಕ್ಕದ್ದಲ್ಲವೆಂತ ಕೂಡಾ ಡಿಕ್ಲೇರೇಶನ್ ಬಗ್ಗೆ ವಾದಿರು ಮೇಲ್ಕಂಡ ವ್ಯಾಜ್ಯ ದಾಖಲ್ಲು ಮಾಡಿರುವ ಪ್ರಯುಕ್ತ ಆ ಕುರಿತು ಕುಟುಂಬದಇತರ ಮೆಂಬರ್ರಿಗೇನಾದ್ರೂ ಆಕ್ಷೇಪಗಳು ಇದ್ದಲ್ಲಿ, ಸದ್ರಿ ವ್ಯಾಜ್ಯ ತನ್ಖಿಗಿರುವ ತಾ. 30-10-1934ರ ಒಳಗೆ ಈ ಕೋರ್ಟಿಗೆ ಬಂದು ಜ್ಯಾಹೀರುಮಾಡಿಕೊಳ್ಳತಕ್ಕದ್ದು ಎಂಬದಾಗಿ ಈ ಮೂಲಕ ತಿಳಿಸೋಣಾಗಿಯದೆ.

ಕಾಸರಗೋಡು, 30—8—'34. } **B. Amrith Rao,** *Vakil for Plaintiff.*

ಮಂಗಳೂರಿನ ಪೇಟೆಧಾರಣೆ.

ಸಾಮಗ್ರಿಗಳು	ಇಂದ	ವರೆಗೆ
	ರೂ. ಆ.	ರೂ. ಆ.
ರಾಶಿ ಅಕ್ಕಿ ...	4— 2	4— 8
ಮುಸ್ಕಿ ...	4— 4	5—
ಗುಡ್ಡು ...	4— 4	4—10
ಸುಗ್ಗಿ ...	4— 4	4—10
ಊರ ಅವ್ವಲ್ ಬೆಳ್ತಿಗೆ ...	4—12	5— 4
ರಂಗೂನು ಬೆ. ಗೋ. ಗೆ ...	6— 0	6— 4
ಎಲ್ಲೂರು ಬೆ. ಮು. ಗೆ ...	4— 0	4— 0
ಗೋದಿ ಗೋಣಿ ಗೆ ...	10— 0	12— 8
ಕ್ಲೋಗಂ ಗೋಣಿ ಗೆ ...	9— 8	10— 0
ಹುರುಳಿ ಗೋಣಿ ಗೆ ...	7— 6	7—10
ಕಡಲೆ ಗೋಣಿ ಗೆ ...	7— 8	8— 0
ತೊಗರಿಬೇಳೆ ಗೋಣಿಗೆ ...	10— 0	17— 0
ಉದ್ದು ಗೋಣಿ ಗೆ ...	7— 0	7— 8
ಹೆಸರು ಗೋಣಿ ಗೆ ...	7— 0	7— 8
ಊರುಬೆಲ್ಲ ಖಂಡಿ ಗೆ ...	40— 0	45— 0
ಉಪ್ಪು ಗೋಣಿ ಗೆ ...	5— 4	5— 8
ಕೊಬ್ರಿ ಖಂಡಿ ಗೆ ...	40— 0	42— 0
ಕೊಬ್ರಿ ಹಿಂಡಿ ಖಂಡಿ ಗೆ ...	19— 0	19— 8
ಎಣ್ಣೆ ಖಂಡಿ ಗೆ ...	23—12	27— 0
ಕೊಬ್ರಿ ಎಣ್ಣೆ ಮು. ಗೆ ...	2—15	3—14
ಎಳ್ಳೆಣ್ಣೆ ಮು. ಗೆ ...	5— 0	5— 8
ಚಿಮಿಣಿ ಎಣ್ಣೆ ಪೆಟ್ಟಿಗೆ ಗೆ ...	6— 8	8— 0
ಮೋರಿಸ ಸಕ್ಕರೆ ಮು. ಗೆ ...	3—10	3—14
ಮೆಣಸು ...	7— 0	7— 8
ಸಾಸಿವೆ ಮುಡಿ ಗೆ ...	4— 8	5— 4
ಕಾಳುಮೆಣಸು ಖ. ಗೆ ...	136— 8	137— 8
ಮೆಂತ್ಯೆ ಮು. ಗೆ ...	18— 0	22— 0
ಕೊತ್ತಂಬರಿ ಬೀಜ ಮು. ಗೆ ...	3— 4	3— 5
ಕಬ್ಬಿಣ ಖಂಡಿ ಗೆ ...	42— 0	44— 0
ತಾಮ್ರ ತಗಡು ಮು. ಗೆ ...	10— 0	10— 0
ತಾಮ್ರ ಪಾತ್ರಗಳು ಮು. ಗೆ ...	13— 0	14— 8
ಬೇಬೆಳ್ಳಿ ಸೇರು ಗೆ ...	14—12	15— 0
ಹಿತ್ತಾಳೆ ತಗಡು ಮು. ಗೆ ...	9— 0	9— 8
ಚಿನ್ನ ಗೆ ...	20—10	21— 0
ಹುಣಸೆ ಹುಳಿ ಖಂಡಿ ಗೆ ...	30— 0	35— 0
ನೇಟಿವ್ ಕಾಫಿ ಖಂಡಿ ಗೆ ...	182— 0	198— 0
ಫಿಬೇರಿ ಕಾಫಿ ಖಂಡಿ ಗೆ ...	296— 8	280— 8
ಹಳೆ ಅಡಿಕೆ ...	118— 0	124— 0
ಹೊಸ ಅಡಿಕೆ ...	62— 0	92— 0

ಶಾಲಿವಾಹನ ಬ ಶಕ ೧೮೫೬ನೆಯ ಭಾವ ಸಂವತ್ಸರದ ಶ್ರಾವಣ ೩ ಶನಿವಾರದಿಂದ—ಶ್ರಾವಣ ಬ ೫ ಶುಕ್ರವಾರದ ವರೆಗಿನ ಪಂಚಾಂಗ. (೧೯೩೪ನೇಯ ಸಿಂಹಸೋಣ

ತಾರೀಕು	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ಸೋಣ ದಿನ	ಸೂರ್ಯ ಉ.	ಸೂರ್ಯ ಅಸ್ತ	ವಿಶೇಷ
8	ಶನಿ	೩೦	೩೦,೦	ಪೂ. ಫಾ	೧೩.೭	೨೩	6.21	6.37	[illegible]
9	ರವಿ	●	೧.೧೩	ಹುಬ್ಬ	೨೧.೩೧	೨೪	6.21	6.36	
10	ಸೋಮ	೧	೩,೪೪	ಉತ್ತರಾ	೨೫.೧೪	೨೫	6.21	6.36	
11	ಕುಜ	೨	೫,೩೧	ಹಸ್ತಾ	೨೮,೧೩	೨೬	6.21	6.35	
12 *	ಬುಧ	೩	೫,೪೩	ಚಿತ್ತಾ	೨೯.೩೨	೨೭	6.21	6.34	
13	ಗುರು	೪	೫.೩೧	ಸ್ವಾತಿ	೩೦.೧	೨೮	6.21	6.34	
14	ಶುಕ್ರ	೫	೫,೪೩	ವಿಶಾಖಾ	೨೯,೧೩	೨೯	6.21	6.33	



ಶ್ರೀಮದ್ಭುವನೇಂದ್ರ ಮಹೌಷಧಾಲಯ, ಕಟಪಾಡಿ, ದ. ಕ.

ಪಾರಂಪರ್ಯದ ಅನುಭವಸಿದ್ಧೌಷಧಗಳು. ಸ್ವರ್ಣ, ರಜತ ಪದಕಗಳನ್ನು ಪಡೆದ ದಿವ್ಯೌಷಧಗಳು.

1. ಕೃಷ್ಣಾರಿಶ್ಟ—(ರಕ್ತದೋಷ ಸಂಬಂಧ ಯಾವತ್ತೂ ರೋಗಗಳಿಗೆ ದಿವ್ಯೌಷಧ). 2. ಗರ್ಭಪಾಲ—(ಗರ್ಭಶೂಲ, ಗರ್ಭಸ್ರಾವಗಳಿಗೆ ಅತೀ ಉಪಯುಕ್ತ). 3. ಚಂದ್ರಪ್ರಭಾ—ವಾಂತಿ ಭೇದಿಗೆ ಅತ್ಯುತ್ತಮ) 4. ಶಾಂತಾಂಜನ—(ನೇತ್ರ ರೋಗಗಳಿಗೆ ದಿವ್ಯೌಷಧ) 5. ಮಧುರೀಕೃತನಿಂಬ ತೈಲ—(ಸರ್ವ ತರದ ವಾತರೋಗಗಳಿಗೂ, ಚರ್ಮ ವ್ಯಾಧಿಗಳಿಗೂ ಉತ್ತಮ.) 6. ಭುವನ ಮೋಹನ—ಶಾರೀರಕ ನೋವುಗಳಿಗೆ ಅತ್ಯುತ್ತಮ. 7. ರಸಬಿಂದು—ಫರಂಗಿ, ಮೇಹ, ದುಷ್ಟ ವ್ರಣಗಳಿಗೆ ಸಿದ್ಧೌಷಧ. 8. ಮಹಾ ಮದನಕಾಮೇಶ್ವರೀ ಲೇಹ್ಯ—ನಪುಂಸಕತ್ವ, ಧಾತು ಕ್ಷೀಣತೆ ಇತ್ಯಾದಿಗಳನ್ನು ಹೋಗಲಾಡಿಸುವುದಕ್ಕೆ ಅತೀ ಉಪಯುಕ್ತ.

ನಮ್ಮ ಔಷಧಗಳು ದೊರೆಯುವ ಸ್ಥಳಗಳು

ಬೊಂಬಾಯಿ ಸಂಸ್ಥಾನದ ಪ್ರಾಮುಖ್ಯ ಏಜಂಟರು:—(ಉತ್ತರಕನ್ನಡ ಜಿಲ್ಲೆ ಹೊರತು) ಕೊಚ್ಚಿಕಾರ್ ಆನಂದ್ರಾಯ ಪೈ, ಲೋಹಾರ್ ಚಾಲ್, ಬೊಂಬಾಯಿ ನಂಬ್ರ 2.

ಮಂಗಳೂರು:—1. ರಾಘವೇಂದ್ರ ರಂಗ ಪೈ, ರಥಬೀದಿ ಮಂಗಳೂರು. 2. ಡಾಕ್ಟರ್ ಕೆ. ಎನ್. ಭಂಡಾರಿ, ಕೆನರಾ ಡಿಸ್ಪೆನ್ಸರಿ, ಕೊಡಿಯಾಲ್‍ಬೈಲ್, ಮಂಗಳೂರು. 3. ಆರ್. ಗೋಪಾಲಕೃಷ್ಣರಾವ್, ಪ್ರೊಪ್ರೈಟರ್, ಗೋಪಾಲಕೃಷ್ಣ ವೈದ್ಯಾಶ್ರಮ, ಮಾರ್ಕೆಟ್ ಈಸ್ಟ್‍ರೋಡ್, ಮಂಗಳೂರು. ಬಂಟ್ವಾಳ:—ವೇದಮೂರ್ತಿ ಬಿ. ಪುರಾಣಿಕ್, ಶ್ರೀ. ಗೋಪಾಲಕೃಷ್ಣ ಆಯುರ್ವೇದಿಕ್ ಫಾರ್ಮಸಿ, ಬಂಟ್ವಾಳ. ಮೂಡಬಿದ್ರಿ:—ಡಾಕ್ಟರ್ ಎಮ್. ವಿ. ಮಲ್ಯ, ಮೂಡಬಿದ್ರಿ. ಕಾರ್ಕಳ:—ವಿ. ವಿ. ಶೆಣೈ, ಕೆಮಿಸ್ಟ್ ಕಾರ್ಕಳ. ಮಂಜೇಶ್ವರ:—ಕೆ. ಸರ್ವೋತ್ತಮ ಬಾಳಿಗಾ ಮತ್ತು ಬೆಳ್ಳೆ ನಾರಾಯಣ ರಾಮನಾಥ, ಮರ್ಚಂಟ್ಸ್, ಮಂಜೇಶ್ವರ. ಕಾಪು:—ಡಾಕ್ಟರ್ ಬಿ. ಕೆ. ಬೇಕಲ್ಸ್ ಡಿಸ್ಪೆನ್ಸರಿ ಕಾಪು. ಉದ್ಯಾವರ:—ಯು. ಗೋಪಾಲ ಶ್ಯಾನುಭಾಗ, ಮರ್ಚೆಂಟ್ ಉದ್ಯಾವರ. ಉಡುಪಿ:—1. ವೈದ್ಯಫಾರ್ಮಸಿ, 2. ಡಾಕ್ಟರ್ ಪಿ. ರಾಘವೇಂದ್ರ ನಾಯಕ್ ಡಿಸ್ಪೆನ್ಸರಿ, 3. ಪಾಂಗಾಳ ಜನಾರ್ಧನ ನಾಯಕ್ ಎಂಡ್ ಕೊ, ಹೊಸ್ಪಿಟಲ್ ರೋಡ್, ಉಡುಪಿ, 4. ಆರ್. ಎಸ್. ಶೆಣೈ, ರಥಬೀದಿ, ಉಡುಪಿ. ಕಲ್ಯಾಣಪುರ:—ಡಾಕ್ಟರ್ ಟಿ. ಮಹಮ್ಮದ್ ಇಸ್ಮಾಯಿಲ್, ತಿಮ್ಮಣ್ಣಕುದ್ರು ಕಲ್ಯಾಣಪುರ. ಬ್ರಹ್ಮಾವರ:—1. ಕೊಚ್ಚಿಕಾರ ವೈಕುಂಠ ಪೈ ಎಂಡ್ ಸನ್ಸ್, ಮರ್ಚಂಟ್ಸ್, ಬ್ರಹ್ಮಾವರ. 2. ಕೆ. ಶೇಷಗಿರಿ ನಾಗಪ್ಪಾ ಎಂಡ್ ಸನ್ಸ್, ಕೆಮಿಸ್ಟ್ ಎಂಡ್ ಡ್ರಗ್ಗಿಸ್ಟ್ಸ್, ಬ್ರಹ್ಮಾವರ. ಬಾರಕೂರು:—ಬಿ. ಭಗವಂತ ಮಲ್ಯ, ಪ್ರೊಪ್ರೈಟರ್, ಆರ್. ಪಿ. ಔಷಧಾಲಯ, ಬಾರಕೂರು. ಕೋಟ:—ವೇದಮೂರ್ತಿ ನಾಗೇಶ ನರಸಿಂಹ ಭಟ್ಟ, ಮುರಲೀಧರ ಕೃಷ್ಣ ದೇವಸ್ಥಾನ, ಕೋಟ ವರುಣತೀರ್ಥ, ಕೋಟ. ಕುಂದಾಪುರ:—1. ಕೆ. ಆರ್. ಭಟ್ಟ, ಕೆಮಿಸ್ಟ್, ಕುಂದಾಪುರ. 2ದ ಡಾಕ್ಟರ್ ಕೆ. ಆರ್. ಕಾಮತ್ ಡಿಸ್ಪೆನ್ಸರಿ, ಕುಂದಾಪುರ. ಗಂಗೊಳ್ಳಿ:—ಬಿ. ಸುರೇಂದ್ರನಾಥ ನಾಯ್ಕ, ಮರ್ಚೆಂಟ್, ಗಂಗೊಳ್ಳಿ. ಬೈಂದೂರು:—ಕೆ. ಪುತ್ತು ಶ್ಯಾನುಭಾಗ, ಮರ್ಚೆಂಟ್ ಬೈಂದೂರು. ಭಟ್ಕಳ—ವಾಮನನರಸಿಂಹ ನಾಯಕ್, ಗುಡೆ ಅಂಗಡಿಕಾರ್, ಮರ್ಚಂಟ್ ಎಂಡ್ ಕಂಟ್ರಾಕ್ಟರ್, ಭಟ್ಕಳ ಉ. ಕನ್ನಡಾ. ಅಂಕೋಲಾ:—ಕೃಷ್ಣ ಹಮ್ಮಯ್ಯ ನಾಯ್ಕ, ಪಟ್ಟೆವಾಲ್ಕ ಧರ್ಮಶಾಲೆಯ ಬಳಿ, ಅಂಕೋಲಾ, ಉ. ಕನ್ನಡಾ. ಹೆಬ್ರಿ:—1. ಎಚ್. ಮುಕುಂದ ಪೈ ಮತ್ತು ಡಾಕ್ಟರ್ ಎಂ. ಪಿ. ಕಲ್ಕೂರ್, ಹೆಬ್ರಿ. 2. ಡಾಕ್ಟರ್ ವ್ಹಿ. ಆರ್. ಆಚಾರ್ಯ, ರೂರಲ್ ಡಿಸ್ಪೆನ್ಸರಿ, ಹೆಬ್ರಿ. ಹಾಲಾಡಿ:—ಯು. ನರಸಿಂಹ ಕಾಮತ್, ಮರ್ಚಂಟ್ ಹಾಲಾಡಿ. ಹೊಸಂಗಡಿ:—ಎಚ್. ರಾಮಚಂದ್ರ ಕಾಮತ್, ಮರ್ಚಂಟ್ ಹೊಸಂಗಡಿ, ಕುಂದಾಪುರ ತಾಲೂಕು. ನಗರ:—ಸಿ. ನಾರಾಯಣ ರಾವ್, ಸಾಹುಕಾರ, ನಗರ. ತೀರ್ಥಹಳ್ಳಿ:—ಡಾಕ್ಟರ್ ಕೆ. ನರಸಿಂಹಾ, ಶ್ರೀ ಕೃಷ್ಣಾ ಡಿಸ್ಪೆನ್ಸರಿ, ತೀರ್ಥಹಳ್ಳಿ. ಕೊಪ್ಪ:—ಡಾಕ್ಟರ್ ಟಿ. ಕೆ. ಭಟ್, ಎಂ. ಬಿ. ಎಂಡ್ ಬಿ. ಎಸ್, ಪೋಪ್ಯುಲರ್ ಫಾರ್ಮಸಿ, ಕೊಪ್ಪ, ಕಡೂರು ಡಿಸ್ಟ್ರಿಕ್ಟ್. ಶಿವಮೊಗ್ಗ:—ಡಾಕ್ಟರ್ ಎಂ. ಆರ್. ಪೈ, ಬಿಗ್ ಬಜಾರ್, ಶಿವಮೊಗ್ಗ. ಸಾಗರ:—ಡಾಕ್ಟರ್ ಬಿ. ನರಹರಿ ರಾವ್, ಸಾಗರ.

ಹೆಚ್ಚಿನ ಮಾಹಿತಿ ಬಗ್ಗೆ ಈ ವಿಳಾಸಕ್ಕೆ ಬರಕೊಳ್ಳಬಹುದು. **ನಾಯಕ್ ಬ್ರದರ್ಸ್, ಶ್ರೀಮದ್ಭುವನೇಂದ್ರ ಮಹೌಷಧಾಲಯ, ಪೋಸ್ಟು ಕಟಪಾಡಿ, ದ. ಕ.**

ಶುದ್ಧ ಸ್ವದೇಶಿ! ಸ್ವದೇಶಿ ಭಾಂಡವಾಳದಿಂದ ಸ್ವದೇಶಿಯರಿಗಾಗಿ!

ಗಂಧದ ಸಾಬೂನು (ಸೆಂಡಲ್‍ವುಡ್) ನಿರ್ವಿವಾದವಾಗಿ ಅತ್ಯುತ್ತಮವಾದುದು!

ತಾಜಾ ಗಂಧದ ತೈಲ ಮೊದಲಾದ ವನಸ್ಪತಿ ತೈಲಗಳಿಂದಲೇ ತಯಾರಿಸಿದ ಅತ್ಯುತ್ತಮ ಸಾಬೂನು.

ಮೈಸೂರು ಸರಕಾರದ ಗಂಧದೆಣ್ಣೆ ಕಾರ್ಖಾನೆಯಲ್ಲಿ ದೊರೆವ ಆ ಉತ್ತಮ ಎಣ್ಣೆಯ ಸ್ನಿಗ್ಧ ಸುಗಂಧವುಳ್ಳದ್ದು.

ಪ್ರಾಣಿಜನ್ಯ ಚರ್ಬಿಯ ಸ್ಪರ್ಶವೂ ಇಲ್ಲದ

ಮಲಬಾರು ಸೋಪ್

ಮಲಬಾರು ಸೆಂಡಲ್‍ವುಡ್

ದಿ ವೆಜಿಟೇಬಲ್ ಸೋಪ್ ವರ್ಕ್ಸ್, ಕಲ್ಲಿಕೋಟೆ.

ಪ್ರೊಪ್ರೈಟರ್:—ಸನ್ ಬೆಂಡ್ ಕೊಡಿಯ ಪ್ಯಾಕ್ಟರಿಯ ಸೇಟ್ ನಾಗಜೀ ಪುರುಷೋತ್ತಮ ಮತ್ತು ಕಂಪೆನಿ, ಕಲ್ಲಿಕೋಟೆ.

ಈ ಜಿಲ್ಲೆಗೆ ಪ್ರವರ್ತಕರು:— ರಾಘವೇಂದ್ರ ರಂಗ ಪೈ ರಥಬೀದಿ, ಮಂಗಳೂರು.

ಇಂದೇ ಆರಂಭಿಸಿರಿ!

ಸುಪ್ರಸಿದ್ಧ **ಆತಂಕನಿಗ್ರಹ ಮಾತ್ರೆ**ಗಳನ್ನು ಉಪಯೋಗಿಸಲಿಕ್ಕೆ.

ಜೀವನದ ಜಯಶೀಲತೆಯು ಎಣಿಯನ್ನೇರಿರಿ. ಲೋಕದಲ್ಲಿ ಸಾವಿರಾರು ಜನರು ಅದನ್ನು ಪ್ರತಿದಿನವೂ ಉಪಯೋಗಿಸುತ್ತಿದ್ದಾರೆ.

ನರ ಮತ್ತು ಶಾರೀರಿಕ ದೌರ್ಬಲ್ಯಕ್ಕೆ ಭದ್ರತೆಯು.

ಆರೋಗ್ಯಕ್ಕೆ ಕವಚವು

32 ಮಾತ್ರೆಗಳ ಟಿನ್ನೊಂದಕ್ಕೆ ರೂ. 1

ಹೆಚ್ಚಿನ ವಿವರಕ್ಕೆ ಧರ್ಮಾರ್ಥ ಹಾಗೂ ಟಪ್ಪಾಲು ದ್ವಾರಾ ಕಳುಹಿಸಲ್ಪಡುವ ನಮ್ಮ

ಕಾಮಶಾಸ್ತ್ರವನ್ನೋದಿರಿ.

Agents:—Shah Company, MANGALORE
,, Pearl & Sons, MANGALORE.

Atank Nigrah Pharmacy,
Chickpet, Bangalore.

ಆತಂಕನಿಗ್ರಹ ಫಾರ್ಮಸಿ,
ಚಿಕ್ಕಪೇಟೆ, ಬೆಂಗಳೂರು.

ಎಲ್ಲಾ ಚಂದಾದಾರರು ತಮ್ಮ ಪತ್ರವ್ಯವಹಾರದೊಂದಿಗೆ ಅವರವರ ಚಂದಾ ನಂಬರುಗಳನ್ನು ಅಗತ್ಯವಾಗಿ ನಮೂದಿಸತಕ್ಕದ್ದು. ಸಂ. ಸ್ವ.

BUY ADVERTISED GOODS

ದಿ ಪೋಪ್ಯುಲರ್ ಇನ್ಸೂರೆನ್ಸ್ ಕಂಪೆನಿ, ಲಿಮಿಟೆಡ್,

(ಹೆಡ್ ಆಫೀಸು— ಮಂಗಳೂರು).

ನಮ್ಮ ಜಿಲ್ಲೆಯು ಪ್ರತಿ ವರ್ಷವೂ ಸುಮಾರು 15 ಲಕ್ಷ ರೂಪಾಯಿಗಳನ್ನು ಪ್ರೀಮಿಯಮ್ ರೂಪದಲ್ಲಿ ದೇಶೀಯ ಮತ್ತು ಪರದೇಶೀಯ ಕಂಪೆನಿಗಳಿಗೆ ಪ್ರವಾಹರೂಪವಾಗಿ ಸಲ್ಲಿಸುತ್ತಲೇ ಇದೆಯಲ್ಲದೆ, ಈ ಜಿಲ್ಲೆಯು ತಾನಾಗಿ ಒಂದೇ ಒಂದು ಜೀವವಿಮೆ ಸಂಘವನ್ನು ಇದುವರೆಗೆ ಘಟಿಸಿಲ್ಲ. ನಮ್ಮ ದೇಶದ ಈ ದೆಸೆಯಲ್ಲಿ, ನಮ್ಮದಿದೇ ಮೊದಲನೆ ಪ್ರಯತ್ನವಾಗಿದೆ.

ಈ ಕಂಪೆನಿಯು ವಿಚಾರದಲ್ಲಿ ಹೇಳುವುದಾದರೆ,—ಕಂಪೆನಿಯು ನಿಮ್ಮದೇ; ನಿಮಗೆ ತಿಳಿದಿರುವ ಮತ್ತು ನಿಮ್ಮ ವಿಶ್ವಾಸಕ್ಕೆ ಅರ್ಹರಾಗಿರುವವರೇ ಆಡಳಿತವನ್ನು ನಿರ್ವಹಿಸುವರು; ನಿಮ್ಮ ಹಣವು ಸ್ವದೇಶದಲ್ಲಿ ಸಂಪದಭ್ಯುದಯ ಕಾರ್ಯಗಳಿಗಾಗಿ ವಿನಿಯೋಗಿಸಲ್ಪಡುವುದು;—ಎಂಬೀ ವಿಷಯಗಳನ್ನು ಪರ್ಯಾಲೋಚಿಸಿದಲ್ಲಿ, ಸ್ವದೇಶವಾತ್ಸಲ್ಯವುಳ್ಳವರೆಲ್ಲರೂ ಈ ಕಂಪೆನಿಯನ್ನೆ ಪ್ರೋತ್ಸಾಹಿಸುವುದು ಅವಶ್ಯವೆಂದು ತಾನಾಗಿ ಹೊಳೆಯದಿರದು.

ಪ್ರತಿ ಒಂದು ವಿಧದಲ್ಲಿಯೂ ನಿಮ್ಮದಾದ ಈ ಕಂಪೆನಿಯಲ್ಲಿ ಒಂದು ಪೋಪ್ಯುಲರ್ ಪೋಲಿಸಿಯನ್ನು ಪಡೆದು ಸ್ವದೇಶೀಯರ ಪ್ರಯತ್ನಗಳನ್ನು ಪ್ರೋತ್ಸಾಹಿಸಿರಿ!

ಹೆಚ್ಚಿನ ವಿವರಕ್ಕೆ ಹೆಡ್ ಆಫೀಸಿಗೆ ಬರೆದುಕೊಂಡರೆ, ಸಂತೋಷದಿಂದ ಕೂಡಲೆ ತಿಳಿಸಲಾಗುವುದು.

☞ **ಎಲ್ಲಾ ಕಡೆಗಳಲ್ಲಿಯೂ ಯೋಗ್ಯ ಏಜಂಟರುಗಳು ಬೇಕು. ಧಾರಾಳ ಕಮಿಷನ್ ಕೊಡಲಾದೀತು.**

ಬೊಂಬಾಯಿ ಸಂಸ್ಥಾನದ ಪ್ರಾಮುಖ್ಯ ಏಜಂಟರು:—ಪ್ರಭಾಕರ ಕಂಪೆನಿ, 415 ಶೇಕ್ ಮೇಮಾನ್ ರಸ್ತೆ, ಬೊಂಬಾಯಿ.

WANTED.

Four Organisers to organise the work of the South Indian General Assurance Society, Ltd., in the following places noted below. Capable organisers can expect to have attractive, and encouraging terms with sound footing for their future.

(1) South Canara, (2) Mysore, Hassan and Coorg, (3) Kadur, Shimoga, Chitaldroog and Tumkur, (4) Mangalore, Kolar.

For terms and other particulars please apply to—

The Divisional Manager,
The South Indian General Assurance Co. Ltd.
64, III Cross Road, Srirampur Extn. Malleswaram Post, BANGALORE
OR
The Managing Agents,
The S. I. G. A. Co. Ltd.
55, Poonamallee High Road, Kilpauk, MADRAS.

1876ನೇ ಇಸವಿಯಿಂದಲೂ ಪ್ರಸಿದ್ಧಿ ಹೊಂದಿದ

ಎಮ್. ಗಣಪಯ್ಯ ಎಂಡ್ ಸನ್ಸ್, ಮಂಗಳೂರು.

ಇವರ ಶಾಸ್ತ್ರೀಯ ಮತ್ತು ಅನುಭವಸಿದ್ಧ ಔಷಧಗಳು.

ಮಹಾ ಮದನಕಾಮೇಶ್ವರಿ ಲೇಹ:—ಆಯುರ್ವೇದ ಶಾಸ್ತ್ರದಲ್ಲಿ ಅತಿ ಪ್ರಾಮುಖ್ಯತೆಯನ್ನು ಪಡೆದ ಔಷಧಿ. ನರಗಳ ಮತ್ತು ಜನನೇಂದ್ರಿಯದ ಶಕ್ತಿಹೀನತೆ, ಎದೆನೋವು, ಮಲಬದ್ಧತೆ, ಅಜೀರ್ಣ, ಅರುಚಿ, ಅಗ್ನಿಮಾಂದ್ಯ, ವಾಯು ಉಪದ್ರ ಮೊದಲಾದುವುಗಳನ್ನು ಹೋಗಲಾಡಿಸಿ ಮಾನಸಿಕ ಶಕ್ತಿಯನ್ನು ಹೆಚ್ಚಿಸುವುದು. ರಕ್ತವೃದ್ಧಿಯನ್ನೂ, ವೀರ್ಯ ವೃದ್ಧಿಯನ್ನೂ ಉಂಟುಮಾಡಿ ದೇಹಕ್ಕೆ ಸಂಪೂರ್ಣ ಆರೋಗ್ಯವನ್ನು ಉಂಟುಮಾಡುವುದು. ನಿರೋಗಿಗಳೂ, ಶ್ರಮಜೀವಿಗಳೂ ಇದನ್ನು ಪ್ರತಿನಿತ್ಯ ಸೇವಿಸಿದ್ದಲ್ಲಿ ಶ್ರಮ ಪರಿಹಾರವಾಗಿ ಸುಖನಿದ್ರೆಯು ಲಭಿಸುವುದು.

ಬಾಟ್ಲಿ 1ರ ರೂ. 2-0-0. ಬಾಟ್ಲಿ 3ರ ರೂ. 5-12-0.

ಮೇಹ ಕುಠಾರ:—ಪ್ರಮೇಹ, ಮೂತ್ರಕೃಚ್ಛ್ರ, ಮೂತ್ರ ಹೋಗದಿರುವಿಕೆ, ಮೂತ್ರ ಹೋಗುವಾಗ ಉರಿ, ಮೂತ್ರದ್ವಾರದಿಂದ ಕೀವು ಬರುವುದು, ಮೂತ್ರದಿಂದ ಧಾತು ಹೋಗುವುದು, ಮೂತ್ರ ಆಗಾಗ ಬಂದು ತಡೆಯಲಿಕ್ಕೆ ಸಾಧ್ಯವಿಲ್ಲದಿರುವುದು ಇವೇ ಮೊದಲಾದ ಹಲವು ಮೂತ್ರಕೋಶದ ರೋಗಗಳಿಗೆ ಸಿದ್ಧೌಷಧ.

ಡಬ್ಬಿ 1ಕ್ಕೆ ರೂ. 2-8-0. ಡಬ್ಬಿ 3ರ ರೂ. 7-0-0.

ಕಸ್ತೂರಿ ಮಿಶ್ರಣ ದಶಮೂಲಾರಿಷ್ಟ:—ಇದು ಬಾಣಂತಿಯರಿಗೆ ಅತ್ಯದ್ಭುತಕರವಾದ ಶಕ್ತಿವರ್ಧಕ ರಸಾಯನವಾಗಿರುತ್ತದೆ. ಪ್ರಸವಿಸಿದ ನಂತರ ಅವರ ಪ್ರಸವದ ಆಯಾಸವನ್ನು ಹೋಗಲಾಡಿಸಿ ಗರ್ಭಕೋಶದ ವೇದನೆಗಳನ್ನು ಸಮಾಧಾನಪಡಿಸುವುದು. ಗರ್ಭಕೋಶದಲ್ಲಿ ಕೆಡುಕು ರಕ್ತವು ನಿಲ್ಲದಂತೆ ಮಾಡಿ, ಅಗ್ನಿಮಾಂದ್ಯ, ಅರುಚಿ, ನಂಜಿನ ಜ್ವರ, ರಕ್ತಹೀನತೆ, ನಿದ್ರಾಭಂಗ ಮೊದಲಾದುವುಗಳನ್ನು ಹೋಗಲಾಡಿಸಿ, ದೇಹವನ್ನು ಶಕ್ತಿವಂತವೂ ಆರೋಗ್ಯವಂತವೂ ಮಾಡುವುದು. ಬಾಣಂತಿಯರು ಪುಷ್ಟಿಹೊಂದಿ, ಶಿಶುವಿಗೂ ಧಾರಾಳವಾಗಿ ಹಾಲು ಸಿಕ್ಕುವಂತೆ ಮಾಡುವುದು.

ಬಾಟ್ಲಿ 1ಕ್ಕೆ ರೂ. 1-8-0. ಬಾಟ್ಲಿ 3ರ ರೂ. 3-0-0.

ಶ್ರೀ ವಿಲಾಸ

ಗಣಪತಿ ಹೈಸ್ಕೂಲ್ ರಸ್ತೆ, × ಮಂಗಳೂರು.

ಸರಕಾರೀ ಉದ್ಯೋಗಸ್ಥರಿಂದಲೂ, ವಿದ್ಯಾರ್ಥಿಗಳಿಂದಲೂ, ಪುರಪ್ರಮುಖರಿಂದಲೂ ಆದರಿಸಲ್ಪಡುತ್ತಿರುವ

ಮಂಗಳೂರಿನ ಒಂದು ಪ್ರಾಮುಖ್ಯ ಉಪಹಾರಗೃಹ.

ಶುದ್ಧ ತಿಂಡಿ, ತಾಜಾತುಪ್ಪದ ಮಿಠಾಯಿ, ಎಲ್ಲ ಬಗೆಯ ಒಳ್ಳೆಯ ಸೌಮ್ಯ ಪಾನೀಯಗಳು,—ಶೌಚ್ಯ, ಸ್ಥಳಾನುಕೂಲತೆ ಇವೆಲ್ಲವುಗಳಿಗಾಗಿ 'ಶ್ರೀ ವಿಲಾಸ'ವು ಹೆಸರುಗೊಂಡಿದೆ.

[ವಿವಾಹ, ಉಪನಯನ, ಸತ್ಕಾರಕೂಟ ಇತ್ಯಾದಿಗಳ ಸಂದರ್ಭದಲ್ಲಿ, ಬೇಕಾದ ತರದ ತಿಂಡಿ ತಿನಸುಗಳನ್ನೊದಗಿಸಲಾಗುವುದು.]

ಕುಬೇರ ಗೋಪಾಲ ನಾಯಕ್, ಮ್ಯಾನೇಜರ್.

Wanted.

Old, fully paid-up Shares of the Canara Bank Ltd. (Mangalore), Sellers may write to the undersigned with the rock-bottom rates.

S. Madhav Laxman Nayak,
Brahmin Street, Mangalore.

Canara Bank, Limited.

Established 1906.

Authorised Capital	[illegible]0,00,000-0-0
Subscribed capital	6,00,000-0-0
Paid up Capital	3,30,000-0-0
Reserves	4,31,000-0-0

Head Office:—**Bunder, Mangalore** Local Offices:—**City & Bunder.**

BRANCHES:—Bombay, Cochin, Calicut, Ernakulam, Alleppey, Chikmagalur, Ganguli, Coondapoor, Udipi, Karkal, Puttur, Kasaragod. & Buntwal Out-agency.

Interest is allowed on Current, Fixed and Savings Bank Accounts, rates of which may be ascertained on application. Advances made on approved securities at easy rates. All kinds of Banking business transacted. Rules of business on application.

The Bangalore Branch Office of the Bank at No. 1 Albert Victor Road, Bangalore City has been opened on 5-1-34.

A. Madhava Pai,
Secretary.

ವಿಶೇಷ ಸಂಚಿಕೆ] ಜಯಕರ್ನಾಟಕ [೧೯೩೪

ನಾಟ್ಯಾಂಕ.

ಸಂಪಾದಕರು:—
ಶ್ರೀ ಬೆಳಗಾಂವಿ ರಾಮಚಂದ್ರ, ಬಿ. ಎ.
ಶ್ರೀ ಹ. ವೇ. ಜೋಶಿ, ಬಿ. ಎ.

ನವಂಬರ ಎರಡನೆಯ ವಾರದಲ್ಲಿ ಪ್ರಕಟವಾಗುತ್ತದೆ.

ರಂಗಭೂಮಿ, ನಾಟ್ಯ, ನೃತ್ಯ, ಸಂಗೀತ, ಚಲಚಿತ್ರ ಮೊದಲಾದುವುಗಳ ವಿವಿಧಾಂಗಗಳ ಮೇಲೆ ತಜ್ಞರ ಲೇಖನಗಳು—ಒಂದೆರಡು ತ್ರಿವರ್ಣ ಚಿತ್ರಗಳು—ಅಲ್ಲದೆ, ಬೇರೆ ಹಲವು ಚಿತ್ರಗಳು, ಏಕಾಂಕ ನಾಟಕ, ಕಥೆ, ವ್ಯಂಗ ಚಿತ್ರಗಳು ಇವುಗಳಿಂದೊಡಗೂಡಿ ವಿಶೇಷ ಸಂಚಿಕೆಯು ಕಲ್ಪನೆಗೆ ಮೋಹಕವಾಗುವಂತೆ ಹೊರಬೀಳುವುದು. ೧೯೩೩ರ ವಿಶೇಷ ಸಂಚಿಕೆಯು ವೈಭವವು ಜನರಿಗೆ ಮರವೆಯಾಗಿರಲಾರದು. ಈ ಸಲದ (೧೯೩೪ರ) ವಿಶೇಷ ಸಂಚಿಕೆಯು ರಂಗಭೂಮಿ ಮತ್ತು ತತ್ಸಂಬಂಧ ವಿಷಯಗಳ ಬಗ್ಗೆ ಒಂದು ಸಂಗ್ರಾಹ್ಯ ಗ್ರಂಥವಾಗಿಯೇ ವಾಚಕರ ಕೈಯಲ್ಲಿ ಕಂಗೊಳಿಸುವುದು.

ಬಿಡಿಸಂಚಿಕೆ ೧ ರೂಪಾಯಿ. ಚಂದಾದಾರರಿಗೆ ಉಚಿತವಾಗಿಯೇ ಸಿಗುತ್ತದೆ. ...

ವ್ಯವಸ್ಥಾಪಕ,
ಜಯಕರ್ನಾಟಕ ಕಾರ್ಯಾಲಯ, ಧಾರವಾಡ.

ಶಿರೋಮಣಿ ನಾರಾಯಣಾಚಾರ್ಯ ... ಮಂಗಳೂರು.

Shiromani Narayanacharya,
Choukhamba, Benares City

ಶಾಸ್ತ್ರಗಳೇ ಪ್ರಮಾಣ ... ಆರೋಗ್ಯ, ಅದಕ್ಕೆ ಕಾರಣವೇನು? ಅವರು ರುದ್ರಾಕ್ಷಿಯನ್ನು ಯಾವಾಗಲೂ ಧಾರಣೆ ಮಾಡುತ್ತಿದ್ದರು. ಅದರಿಂದ ಏನು ಫಲ? ಅದನ್ನು ಧರಿಸಿದರೆ ದೀರ್ಘಶಕ್ತಿ, ಬುದ್ಧಿಶಕ್ತಿ, ವಿದ್ಯಾಭಿವೃದ್ಧಿ, ಕೀರ್ತಿ, ಸಂಪತ್ತು ಕೀರ್ತಿ ಇವುಗಳೆಲ್ಲಾ ಆಗುವುವು. ಹಾಗಾದರೆ, ನಮಗೆ ಅಂತಹ ರುದ್ರಾಕ್ಷಿ ಎಲ್ಲಿ ದೊರೆಯುವುದು? ಅದು ಲೋಕಪ್ರಸಿದ್ಧಿ ಹೊಂದಿದ ನಮ್ಮ ಕಾಶೀ ಚೌಖಂಬಾ ಶಿರೋಮಣಿ ನಾರಾಯಣಾಚಾರ್ಯರಲ್ಲಿಯೇ ಯೋಗ್ಯವಾದ ಕ್ರಯಕ್ಕೆ ಉತ್ತಮ ತರದ ರುದ್ರಾಕ್ಷಿ ದೊರೆಯುವುದು.

ಸಣ್ಣ ಅಥವಾ ಪ್ರಮಾಣದ ಕಂಠಿಸರ 1ಕ್ಕೆ ಅಣೆ 10ರಿಂದ ರೂ. 25ರ ವರೆಗೆ. 108 ರುದ್ರಾಕ್ಷಿಗಳುಳ್ಳ ಸರ 1ಕ್ಕೆ ಅಣೆ 3ರಿಂದ ರೂ. 25ರ ವರೆಗೆ. ಗೌರೀಶಂಕರ ರುದ್ರಾಕ್ಷಿ 1ಕ್ಕೆ ರೂ. 3ರಿಂದ ರೂ. 500 ವರೆಗೆ. ಮತ್ತು 3—4—5—6—7—8 ಮುಖಗಳ ಕಾಳು 1ಕ್ಕೆ ಅಣೆ 4ರಿಂದ ಕನಿಷ್ಠ 10. ಮತ್ತು 9—10—11 ಮುಖಗಳುಳ್ಳ ಕಾಳು 1ಕ್ಕೆ ರೂ. 4ರಿಂದ 30ರ ವರೆಗೆ. 12-13-14 ಮುಖದ ಕಾಳು 1ಕ್ಕೆ ಕನಿಷ್ಠ 5ರಿಂದ 100ರ ವರೆಗೆ. ಸಣ್ಣ ರುದ್ರಾಕ್ಷಿ ಅವರೆಕಾಳಿಗಿಂತ ಸಣ್ಣದಾಗುತ್ತ ಕ್ರಯ ಜಾಸ್ತಿ. ದೊಡ್ಡ ರುದ್ರಾಕ್ಷಿ ಅದಕ್ಕಿಂತ ದೊಡ್ಡದಾಗುತ್ತ ಕ್ರಯ ಜಾಸ್ತಿ ಆಗುತ್ತದೆ.

(ವಿವರಕ್ಕೆ ಕೆಟಲಾಗಿಗೆ ಬರೆದರೆ ಇನಾಮಿನೊಂದಿಗೆ ಕಳುಹಿಸುತ್ತೇವೆ. 1 ಅಣೆ ಸ್ಟಾಂಪು ಕಳುಹಿಸಿದರೆ 3 ಇನಾಮುಗಳು— 1 ವಿಶ್ವೇಶ್ವರ ಪಟ, 1 ಕಾಶೀ ನಕ್ಷೆ, 1 ಕೆಟಲಾಗ ಕೂಡಿ 3 ಇನಾಮುಗಳು)

ಶಿರೋಮಣಿ ನಾರಾಯಣಾಚಾರ್ಯ
ಚೌಖಂಬಾ, ಬನಾರಸ್ (ಕಾಶೀ)

---

77 ವರ್ಷಗಳು.

ಅಸಂಖ್ಯಾತರಾದ ಸತ್ಯ ಗಿರಾಕಿಗಳ ಕೇಳಿಕೆ ಮತ್ತು ಅನುಕೂಲತೆಗೆ ಇದೇ ಮುಖ್ಯ ಉತ್ತಮ ಸಾಧನ ತಿಳಿದು, ಅವರಿಗೆ ಸುಲಭ ಬೆಲೆಯೋಗ್ಯ ಹಾಗೂ ಬಹುಕಾಲ ಬಾಳುವ ಸರ್ವ ತರದ ಉಡುಪುತೊಡುಪುಗಳನ್ನು ಒದಗಿಸುವ ನನ್ನ ಎರಡು ತಲಾಂತರಗಳ ಅನುಭವವು ಮುಂದಕ್ಕೂ ಸಂತೃಪ್ತಿಯನ್ನೇ ಕೊಡುವುದಲ್ಲವೇ?

ಸ್ವದೇಶೀ

ಕಾರ್ಖಾನೆಗಳಲ್ಲಾದ ನೂಲು ಮತ್ತು ಕೈಮಗ್ಗದ ವಸ್ತ್ರ, ಹೊದಿಕೆಗಳೂ, ಬೆಡ್ ಶೀಟ್, ಬಾತ್ ಟುವಾಲುಗಳೂ ಧೋತಿ, ಸೀರೆ—ಶೈರವಾಸು—ಚೆಕ್ಕು—ಚೀಟು ಇತ್ಯಾದಿ ಎಲ್ಲವೂ ಯಾವಾಗಲೂ ಮಾರಾಟಕ್ಕಿವೆ.

ಶ್ರೀನಿವಾಸ ರಂಗ ಪೈ,

[ಸಾಹುಕಾರ ದುಕಾನ್]

ರಥಬೀದಿ, ಮಂಗಳೂರು

Srinivasa Ranga Pai,
Representatives for South Canara and Malabar
For— **A. & F. Harvey,**
Managers Madura Mills Co. Ltd.

Registered No. M. 491

ಸ್ವದೇಶಾಭಿಮಾನಿ

(ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ೧೯೦೭ರಲ್ಲಿ ಸ್ಥಾಪಿತವಾದುದು.)

ಪ್ರತಿ ಶುಕ್ರವಾರವೂ ಮಂಗಳೂರು ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ

ರತ್ನೈರ್ಮಹಾರ್ಹೈಸ್ತುತುಷುರ್ನ ದೇವಾ । ನ ಭೇಜಿರೇ ಭೀಮವಿಷೇಣ ಭೀತಿಮ್ ॥ ಸುಧಾಂ ವಿನಾ ನ ಪ್ರಯಯುರ್ವಿರಾಮಂ । ನ ನಿಶ್ಚಿತಾರ್ಥಾದ್ವಿರಮಂತಿ ಧೀರಾಃ ॥ ೧ ॥

ದೊರೆತುಲನುಪಮರತ್ನಗಳು ಸಾ । ಗರವ ಮಥಿಸಲು ಸುರರಿಗದರಿಂ । ಹರುಷವಾಯಿತೆ? ಮತ್ತೆ ವಿಷವ ಸುಡುತ ಬರುತಿರುವ

ಗರಲಕನ್ನಂಜಿದರೆ? ಸುಧೆಯನು । ಮರೆತು ಕ್ಷುದ್ರರ ತೆರದಿ ಕುಳಿತರೆ? । ತೆರಳೆ ಬಲ್ಲರೆ ಕೊರೆದು ಧೀರರು ನಿಶ್ಚಿತಾರ್ಥವನು? ॥ ೧ ॥

(Oldest Kanarese Weekly in South Kanara)

ಪುಸ್ತಕ ೨೮. ಮಂಗಳೂರು, ತಾ. ೧೪ನೇ ಶುಕ್ರವಾರ ಸಪ್ಟಂಬರ ೧೯೩೪ (14–9–34) ಸಂಚಿಕೆ ೩೭

THE CANARA BANKING CORPORATION, UDIPI, LTD.

(Incorporated in British India)

Established 1906

Head office:—UDIPI, S. K. **Branches:—Coondapoor, Mangalore, Shimoga & Madras.**

Authorised Capital Rs 3,50,000/- Subscribed and Called up Rs. 2,25,000/-

STATEMENT OF ASSETS & LIABILITIES as on 31st AUGUST, 1934.

Liabilities		Assets	
1 Paid up Capital	Rs. 2,25,000-0-0	1 Bank Premises,	Rs. 66,892-15 0
2 Reserve and other funds	" 2 50,000 0	2 Investment on G. P. notes	" 6,40,826-4-6
3 Deposits	" 33 22,920-11-5	3 Authorised Investments	" 21,82,571-4-6
4 Due to Bankers	" 60,796 7 10	4 Bills for collection	30,000-2-0
5 Sundries	" 94,574-13-9	5 Sundries	" 40,054 6 3
6 Bills per contra	30,000 2-0	6 Cash on hand & with bankers at call.	" 22,947 5 10
Total	39,83,292-3-1	Total	39,83,292-3-1

Office of the Corporation
UDIPI, S. K.
14–9–34.

M. Shrinivas Prabhu,
Ag. Manager.

(Regd.)

ಅಮೃತಾಂಜನ.

ಇದು ಕೆಟ್ಟ ಶಿರೋವೇದನೆ, ಕಚ್ಚಿಕೊಡುವ ವಾತ, ಥಾರಿ ನೋವು, ವಿಶೇಷ ಉಳುಕು, ಅಸಹನೀಯ ಹಲ್ಲುನೋವು, ವಿಪರೀತ ಛಾಯೆ, ಬಹು ಶೀತ, ಸಹಿಸಲಸದಳವಾದ ಚಳಿ, ಕೈಕಾಲು ಮರಗಟ್ಟುವುದು, ಲುಂಬಾಗೊ ಮೊದಲಾದ ಎಲ್ಲಾ ತರದ ವೇದನೆಗಳನ್ನೂ ಅತೀ ತ್ವರೆಯಲ್ಲೇ ಗುಣ ಪಡಿಸುತ್ತದೆ. ಎಲ್ಲೆಲ್ಲಿಯೂ ಮಾರಲ್ಪಡುತ್ತಿದೆ.

ರಿಂಗ್‌ವರ್ಮ್ ಮುಲಾಮು — ಇದು ರಿಂಗ್‌ವರ್ಮನ್ನೂ ಕಜ್ಜಿಯನ್ನೂ ಇನ್ನಿತರ ಚರ್ಮರೋಗಗಳನ್ನೂ, ಮೂರು ಸಲ ಮುಟ್ಟಿಸುವುದರೊಳಗೆ ಗುಣಪಡಿಸುತ್ತದೆ.

ಡಬ್ಬಿ 1ಕ್ಕೆ 6 ಆಣೆ ಡಜನಿಗೆ ರೂ. 3–8–0. ಅಂಚೆವೆಚ್ಚ ಪ್ರತ್ಯೇಕ.

ಅಮೃತಾಂಜನ ಡಿಪೋ,

ಮದರಾಸು ಮತ್ತು ಬೊಂಬಾಯಿ

ದಿ ಬೊಂಬೇ ಲ್ಯಾಫ್ ಎಶ್ಶೂರೆನ್ಸ್ ಕಂಪೆನಿ ಲಿಮಿಟೆಡ್, ಬೊಂಬೇ.

1908ರಲ್ಲಿ ಸ್ಥಾಪಿತವಾದುದು.

ಪೊಲಿಸಿದಾರರಿಗೆ ವಿಶೇಷ ರಿಯಾಯತಿ.

ವರ್ಷಾವಧಿಯ ಪ್ರೀಮಿಯಮ್ಮುಗಳನ್ನು ತೆರುವ ಎಲ್ಲಾ ಪೊಲಿಸಿದಾರರಿಗೂ "ಸಿಲ್ವರ್ ಜ್ಯೂಬಿಲಿ" ರಿಯಾಯತಿಯಾಗಿ ಅವರವರ ಮುಂದಿನ ಪ್ರತಿ ವಾರ್ಷಿಕ ಪ್ರಿಮಿಯಮ್ಮಿನಲ್ಲಿ ಶೇಕಡಾ 2½ ಸಲೆಯನ್ನು ಕಡಿಮೆಯಾದ ಮೊಬಲಗನ್ನು ತೆರುವ ರಿಯಾಯತಿ ಕೊಡಲಾಗಿದೆ. ಈ ರಿಯಾಯತಿಯ ಪ್ರಯೋಜನವನ್ನು ಆಗಲೇ ನೂರಾರು ಮಂದಿ ಪೊಲಿಸಿದಾರರು ಪಡಕೊಂಡಿದ್ದಾರೆ. ವರ್ಷಕ್ಕೊಮ್ಮೆ ಪ್ರಿಮಿಯಮ್ಮಿನ ಕಂತನ್ನು ಕಟ್ಟಲಪೇಕ್ಷಿಸುವವರು ತಮ್ಮ ಪೊಲಿಸಿಯ ನಂಬರುಗಳನ್ನು ನಮೂದಿಸಿ ನಮಗೆ ಯಾ ಸಮ್ಮಂಧಪಟ್ಟ ನಮ್ಮ ಇತರ ಆಫೀಸಿಗೆ ತಿಳಿಸಬೇಕಾಗಿ ಈ ಮೂಲಕ ವಿನಂತಿ ಮಾಡಿಕೊಳ್ಳೋಣಾಗುತ್ತದೆ.

ವಿ. ಸೂ:—ಪ್ರಾತಿನಿಧ್ಯವಿಲ್ಲದ ಜಿಲ್ಲೆಗಳಿಂದ ಉತ್ಸಾಹಶಾಲಿ ಗೃಹಸ್ಥರುಗಳ ಏಜನ್ಸಿ ಅರ್ಜಿಗಳು ಅಂಗೀಕರಿಸಲ್ಪಡುವುವು.

ಕೊಟ್ಟಿಕಾರ್ ಬ್ರದರ್ಸ್, ಮದ್ರಾಸ್ ಬ್ರೇಂಚ್ ಸೆಕ್ರೆಟರಿಯವರು.

× × × × ×

[illegible]

× × × × ×

"ಖಾದಿ ಕೊಡುವುದು" ಎಂದರೆ [illegible] ಕಾಂಗ್ರೆಸ್ಸಿನವರು [illegible] ಗಾಂಧಿ [illegible] ಉಪವಾಸವನ್ನು [illegible] ಅಭಿಪ್ರಾಯ!

× × × × ×

[illegible] ಕಾಂಗ್ರೆಸ್ಸಿನ [illegible] ಎಂದು ಅವರ ಯೋಚನೆ.

× × × × ×

ಜನವರಿ ೧ರಲ್ಲಿ ಗಾಂಧಿ [illegible] ಒಂದು ಉಪವಾಸವನ್ನು ಕೈಕೊಳ್ಳುವರೆಂದು [illegible] ಸತ್ಯವಾಗಬಹುದೆಂದು [illegible].

× × × × ×

ನೀರು ಕುಡಿದು ಜೀವಿಸುವೆನೆಂದು ಈ ಗಾಂಧೀಜಿಯವರಿಗೆ ಧೈರ್ಯ! ನೀರಿನ ಪ್ರಭಾವದಿಂದ ಹಿಂದೆ ಎಂಟು ಸಲ ಬದುಕಿದರು! ಇನ್ನೆಷ್ಟು ಸಲ ಬದುಕುವರೋ ನೋಡೋಣ!

× × × × ×

ಏನು ಸ್ವಾಮಿ! ನಿಮ್ಮ ವೋಟುಗಳನ್ನು ಯಾರಿಗೆ ಕೊಟ್ಟಿರಿ? ಒಂದೊಂದು ವೋಟಿಗೆ ಐದೈದು ರೂಪಾಯಿ ಕೊಟ್ಟು ಪಡೆಯುವ ಎಷ್ಟೆಷ್ಟು ವೋಟು ಕೊಡಬೇಕು! [illegible]!

× × × × ×

ವೋಟು ಕೊಡುವ ವರೆಗೆ "ರಾಮಣ್ಣ ಸಲಾಂ! "ಭೀಮಣ್ಣ ನಮಸ್ಕಾರ" ಎನ್ನುತ್ತಾರೆ, ದೊಡ್ಡ ಪಟ್ಟದಾನೆಯಂತೆ ನಿಮ್ಮನ್ನು ಸ್ವಾಗತೀಕರಿಸುತ್ತಾರೆ. ವೋಟು ಕೊಟ್ಟು ಹಿಂದಿರುಗುವಾಗ ನೀವು ಆನೆಯ ಮೇಲಿನ ನೊಣವೆಂದೂ ಭಾವಿಸುವುದಿಲ್ಲ! ಆದುದರಿಂದ ನೋಟಿಗಾಗಿ ಕೈನೀಡದಿರಬೇಡಿ!

× × × × ×

ವೋಟಿನ ಒಂದು ಪದ ಹೇಳುತ್ತೇನೆ:—

೧. ನೋಡಿ ವೋಟು ಕೊಡಲುಬೇಕಣ್ಣ!—ವೋಟರರ ಕೇಳಿ ನೋಡಿ ನೋಟು ಪಡೆಯಬೇಕಣ್ಣ!

೨. ಕಾಡಿ ಬೇಡಿ ವೋಟು ಪಡೆಯುವರು:—ಬಳಿಕ ಕೇಳಿ ಓಡಿ ಓಡಿ ನಿಮ್ಮ ಹಿಡಿಯುವರು!

೩. ಬೇಡಿ ಕೊಟ್ಟು ವೋಟು ಪಡೆಯುವರು:—ಪಡೆದು ನಾಡಿಗೊಂದು ಹೋಡಿಯಾಗುವರು.

ಆದುದರಿಂದ ಜೋಕೆ!



ಆರೋಗ್ಯ ಮತ್ತು ಬಲವರ್ಧನೆಗಾಗಿ.

ಯಾವ ಆಟದಲ್ಲಾಗಲೀ, ಯಾವ ಕೆಲಸದಲ್ಲಾಗಲೀ, ದಿನಂಪ್ರತಿಯೂ ಅರ್ಹತೆಯೂ ಶಕ್ತಿಯೂ ಜಯಕ್ಕೆ ಅಗತ್ಯ. ಆದಕ್ಕಾಗಿಯೇ ಪ್ರಖ್ಯಾತ ಆಟಗಾರರು,—ಕೈ, ಮೆದುಳುಗಳಿಂದ ಕೆಲಸ ಮಾಡುವವರು ದಿನನಿತ್ಯವೂ ಓವಲ್ಟಿನ್ನನ್ನು ಸೇವಿಸುವರು.

ಈ ದೇಶದಲ್ಲಿ ಓವಲ್ಟಿನ್ ಅಗತ್ಯ. ಏಕೆಂದರೆ, ಈ ದಿನಗಳ ಕಷ್ಟ ಜೀವನದೊಡನೆ ನಾವು ನಮ್ಮ ಹವಾಗುಣದ ತಾಪವನ್ನು ಸಹಿಸುವಷ್ಟು ಚೈತನ್ಯಶಾಲಿಗಳಾಗಬೇಕು.

ಓವಲ್ಟಿನ್‌ನಲ್ಲಿರುವ ಉತ್ಕೃಷ್ಟ ಪೋಷಣವು ಆರೋಗ್ಯ, ಶಕ್ತಿ ಮತ್ತು ಬಲಕ್ಕೆ ಬೇಕಾದ ಸಾರವನ್ನು ಒದಗಿಸಿಕೊಡುತ್ತದೆ. ಇದನ್ನು ಸದಾ ಸೇವಿಸುತ್ತಿದ್ದರೆ ಮಾನಸಿಕ ಮತ್ತು ದೈಹಿಕ ಶಕ್ತಿಯು ಬರುತ್ತದೆ.

OVALTINE

ಮೆದುಳು, ನರ ಮತ್ತು ದೇಹವನ್ನು ವೃದ್ಧಿಸುತ್ತದೆ.

ತಯಾರಿಯಲ್ಲಿ ಕೈಯಲ್ಲಿ ಸ್ಪರ್ಶಿತವಾಗಿಲ್ಲ. ಕೆಮಿಸ್ಟರಲ್ಲಿಯೂ ಸ್ಟೋರುಗಳಲ್ಲಿಯೂ ಸಿಗುತ್ತದೆ.
ಏಜೆಂಟ್:—ಜೇಮ್ಸ್ ರೈಟ್, ೩೯ಎ, ರತನ್ ಸ್ಟ್ರೀಟ್ ಕಲ್ಕತ್ತ, ಮತ್ತು ಬೊಂಬಾಯಿ ಮದ್ರಾಸುಗಳಲ್ಲಿ.

OV/318

ಸಾಯ್ಬು ವೋಟಿಗೆ ನಿಲ್ಲುತ್ತಾನೆಂದು ಕೆಲವರು ಧಿಗಿಲು ಬಿದ್ದಿರುವರು. "ಯಾವ ಪಾರ್ಟಿಗೆ? ನಮ್ಮದಕ್ಕೋ?" ಕೆಲವು ಉಮೇದ್ವಾರರು ಬೆಚ್ಚಿಬಿದ್ದಿರುವರು! ಅಯ್ಯೋ ಉಮೇದ್ವಾರರೆ, ಚಿಂತಿಸಬೇಡಿ ಸಾಯ್ಬು ನಿಮ್ಮ ಪಾರ್ಟಿಗೆ ನಿಲ್ಲುವುದಿಲ್ಲ. ಅವನ ಪಾರ್ಟಿ ಬೇರೆಯೇ ಇದೆ! ಮುಂದಕ್ಕೆ ಹೇಳುವೆನು.

'ಸಾಯ್ಬು'

ಕಣ್ಣಿನ ಪರೆ.

"ವಿನಸನ್" ಎಂಬ 'ನೇತ್ರಭಾಸ್ಕರ' — ಈ ಔಷಧವು ಕಣ್ಣುಪರೆ, ದೃಷ್ಟಿಮಾಂದ್ಯ ಇತ್ಯಾದಿಯನ್ನು ಶೀಘ್ರವಾಗಿಯೂ ಶಾಶ್ವತವಾಗಿಯೂ ಗುಣಪಡಿಸುತ್ತದೆ. ಶಸ್ತ್ರಕ್ರಿಯೆಯು ಅವಶ್ಯವಿಲ್ಲ. ಖಾತರಿ ಗುಣಲಾಭ. ಗುಣವಾಗದಿದ್ದರೆ ಹಣ ಪರತ್. ಕ್ರಯ ರೂ. 2.

ಪತ್ರವ್ಯವಹಾರ ಇಂಗ್ಲೀಷಿನಲ್ಲಿ:—

Hary yasram, Panchpota, Bengal.

ಕುಷ್ಠರೋಗ ಮತ್ತು ಬಿಳಿ ಕೊ[illegible]

ಎಷ್ಟು ದೀರ್ಘಕಾಲದ [illegible] ಇರಲಿ, ನಾಲ್ಕೇ ವಾರಗಳಲ್ಲಿ ಪೂರ್ಣ ಗುಣಪಡಿಸುವುದು. ಯಶಸ್ಸು ಖಾತರಿ; ಗ್ಯಾರಂಟಿ. ವಿವರವನ್ನು ಅಪೇಕ್ಷಿಸಿದಲ್ಲಿ ಕಳುಹಿಸಲಾಗುವುದು.

ವಿಳಾಸ:—

Kamala Works, Panchpota, Bengal.

Karnataka Chemical and Pharmaceutical Works, Ltd., Udipi (South India)

ಕುಂಭಕೋಣದಲ್ಲಿಯೂ ಮಧುರೆಯಲ್ಲಿಯೂ ಮೈಸೂರಿನಲ್ಲಿಯೂ ಸುವರ್ಣ ಪದಕಗಳನ್ನು ಪಡೆದಿರುವ

ಕರ್ಣಾಟಕ ಕೆಮಿಕಲ್ ಎಂಡ್ ಫಾರ್ಮಸ್ಯೂಟಿಕಲ್ ವರ್ಕ್ಸ್, ಲಿಮಿಟೆಡ್, ಉಡುಪಿ. (ದಕ್ಷಿಣ ಹಿಂದೂಸ್ಥಾನ).

ನಮ್ಮಲ್ಲಿ ಟಿಂಕ್ಚರ್, ವಗೈರೆ ಎಲ್ಲಾ ಎಲೋಪತಿಕ್ ಔಷಧ ದ್ರವ್ಯಗಳೂ, ಆಯುರ್ವೇದಿಯ ಔಷಧಿಗಳೂ, ಟೊಯ್ಲೆಟ್ ಸಾಮಗ್ರಿಗಳೂ, ಸಾಬೂನುಗಳೂ, ಫೌಂಟನ್ ಪೆನ್ ಶಾಯಿಗಳೂ ತಯಾರಿಸಲ್ಪಡುತ್ತವೆ.

ದ್ರಾಕ್ಷಾಸವ, ಪ್ರಸೂತಿ ಸಂಜೀವನ, ನಿಯೋವಿಗರ್, ಸ್ನೋ, ಕ್ಷೀರಬಲಾ, ಕಾರ್ಪ್ಲೋಪ್ಲೊಜಿಸ್ಟಿನ್ ಯುಟೇರಿನಾ, ಇಂಕ್ಸ್

[illegible]

ಹೆಡ್ ಆಫೀಸು. ಉಡುಪಿ. (ದಕ್ಷಿಣ ಹಿಂದೂಸ್ಥಾನ)

ಬ್ರೇಂಚ ಆಫೀಸು [illegible] ಸ್ಟ್ರೀಟ್, ಬೊಂಬಾಯಿ ನಂ. 2.

ಪಶ್ಚಿಮ ಘಟ್ಟ ಮತ್ತು ಮೈಸೂರು ಪ್ರಾಂತ್ಯಗಳ ಪ್ರಮುಖ್ಯ ಏಜಂಟರು:—

ಕರ್ಣಾಟಕ ಪ್ರೊಡಕ್ಟ್ಸ್ ಡಿಸ್ಟ್ರಿಬ್ಯೂಟಿಂಗ್ ಕಂಪೆನಿ, ಮಂಗಳೂರು.

ಅನುಕ್ರಮಣಿಕೆ.

ಅಗ್ರಲೇಖ
ಬರುವ ಮುನಿಸಿಪಲ್ ಚುನಾವಣೆಯೂ ವೋಟರರ ಕರ್ತವ್ಯವೂ ೪
ಸ್ಫುಟವಿಚಾರಗಳು ೫
ಮೂಲೆಮೂಲೆಯಿಂದ ೧೦
ಕೋಟೆಗಳು ೮
ವರ್ತಮಾನ ಸಂಗ್ರಹ ೨
ವಿವಿಧ ಸಮಾಚಾರಗಳು ೧೧
ಪತ್ರವ್ಯವಹಾರ ೧೪
ಸ್ವರು! ೩
ಮಂಗಳೂರು ೯
ಗ್ರಾಮ ೬
ಗಾಂಧೀಯವರು ಕೊಂಗ್ರೆಸ್ಸಿನಿಂದ ನಿವೃತ್ತರಾಗುವರೇ ೫
ಜಗಜ್ಜಟ್ಟಿ ಗಾಮನ ಉಪದೇಶ ೧೩

ಸ್ವದೇಶಾಭಿಮಾನಿ

೧೪ನೇ ಶುಕ್ರವಾರ ಸಪ್ಟಂಬರ ೧೯೩೪

ಬರುವ ಮುನಿಸಿಪಲ್ ಚುನಾವಣೆಯೂ ವೋಟರರ ಕರ್ತವ್ಯವೂ.

ನಮ್ಮ ನಗರದ ಮುನಿಸಿಪಲ್ ಚುನಾವಣೆಯ ದಿನವು ಸಮೀಪಿಸುತ್ತಿದೆ ಸ್ವೀಕೃತವಾದ ನೊಮಿನೇಶನುಗಳ ಪಟ್ಟಿಯನ್ನು ಇದೇ ತಾ ೧೯ರಲ್ಲಿ ಪ್ರಕಟಿಸಲಾಗುವುದು ವೋಟುಗಳನ್ನು ತಾ ೨೬ರಲ್ಲಿ ಸ್ವೀಕರಿಸಲಾಗುವುದೆಂದು ಕಮಿಶನರರು ಪ್ರಕಟಣೆ ಕೊಟ್ಟಿರುವರು ಈ ಸಂದರ್ಭದಲ್ಲಿ ಇಲ್ಲಿ ಎರಡು ಮಾತುಗಳನ್ನು ಹೇಳುವುದು ಅಪ್ರಶಸ್ತವಾಗಲಾರದು.

ಚುನಾವಣೆಯೆಂಬುದು ಒಂದು ಪ್ರಹಸನವಾಗುವಷ್ಟಕ್ಕೆ ಅದರ ಗೌರವವನ್ನು ಕಳಕೊಂಡಿದೆಯೋ ಎಂಬಂತೆ, ಪ್ರಕೃತದ ವಿದ್ಯಮಾನಗಳನ್ನು ಪರಿಶೀಲಿಸಿದಲ್ಲಿ ಕಂಡುಬರುತ್ತಿದೆ. ಚುನಾವಣೆಯೆಂದರೇನು, ಕೌನ್ಸಿಲಿಗೆ ಚುನಾಯಿಸಲ್ಪಟ್ಟರೆ ಅಲ್ಲಿ ತಮ್ಮ ಕರ್ತವ್ಯವೇನು ಮತ್ತು ಎಷ್ಟು ಎಂಬುದರ ಲವಲೇಶವಾದರೂ ಅರಿವಿಲ್ಲದವರೂ ಕೇವಲ ವಿನೋದಕ್ಕಾಗಿಯೋ ಎಂಬಂತೆ ಮುಂಬರಿಯುತ್ತಿರು[illegible] ಪ್ರತಿಯೊಂದು ವಾರ್ಡಿನಲ್ಲೂ ಸ್ಪರ್ಧೆ ಇದಕ್ಕೆ ಜಾತಿದ್ವೇಷ-ಪಂಗಡದ್ವೇಷ ಮತ್ತು ವ್ಯಕ್ತಿದ್ವೇಷಗಳು ಎಷ್ಟು ಕಾರಣವಾಗಿವೆಯೋ ಹೇಳಬರುವುದಿಲ್ಲವಾದರೂ, ಕೇವಲ ನಗರದ ಸೇವೆಯ ಆತುರದಿಂದಲೇ ಇಂತಹ ಸ್ಪರ್ಧೆಯು ಈ ವರ್ಷ ಉಂಟಾಯಿತೆಂದು ನಂಬಲು ಸಾಧ್ಯವಿಲ್ಲ ನೊಮಿನೇಶನುಗಳ ಪತ್ರವನ್ನು ಈ ದಿನ ಹಾಜರುಪಡಿಸಬೇಕಾಗಿದೆ ಇಷ್ಟರೊಳಗೇ ಕೆಲವರು ತಮ್ಮ ಉಮೇದ್ವಾರಿಕೆಯನ್ನು ಹಿಂದೆಗೆಯಲೂ ಸಾಕು. ನೊಮಿನೇಶನ್ ಪತ್ರಗಳನ್ನು ಕೊಟ್ಟನಂತರ ಹಿಂದಡಿಯಿಡುವವರೂ ಇರಬಹುದು. ಇದು ಕೇವಲ ಊಹೆ ಮಾತ್ರವಾದ ಕಾರಣ, ಸ್ಪರ್ಧೆಯು ಸಾಮಾನ್ಯವಾಗಿ ಎಲ್ಲಾ ವಾರ್ಡುಗಳಲ್ಲೂ ಇರಬಹುದೆಂದೇ ಧೈರ್ಯವಾಗಿ ಹೇಳಬಹುದಾಗಿದೆ.

ಚುನಾವಣೆಯೆಂಬುದರ ಅರ್ಥವೇ ಬದಲಾಗುತ್ತ, ಅದು ಸದ್ಯದ ಸ್ಥಿತಿಗೆ ಬಂದು ಮುಟ್ಟಿದಾಗ ಇಂತಹ ಸ್ಪರ್ಧೆಯುಂಟಾಗುವುದೂ, ಸ್ಪರ್ಧೆಯೇ ಚುನಾವಣೆಯ 'ಪ್ರಾಮುಖ್ಯ ಘಟುವಟಿಕೆ' ಎಂದು ಪರಿಗಣಿತವಾಗುವುದೂ ಸಹಜವಾಗಿದೆ. ಆದರೆ, ನಮ್ಮ ನಗರದ ಕೆಲ ವಾರ್ಡುಗಳಲ್ಲಿನ ಸ್ಪರ್ಧೆಯು ಅನೇಕರಿಗೆ ಅರ್ಥವಾಗದಂತಹ ಪ್ರಹಸನವೆಂದು ತೋರ್ದು ಬಾರದಿರದು.

ನಗರದ ಸೇವೆಯ ಆತುರವು ಅನೇಕರಿಗಿದೆ. ಹಳಬರು ಹೊಸಬರಿಗೆ ಆದಕ್ಕಾಗಿ ಇಂಬುಕೊಡಬೇಕಾದುದು ನ್ಯಾಯ. ಆದರೆ ಕೆಲವೊಂದು ವಿಶಿಷ್ಟ ಪ್ರಸಂಗಗಳಲ್ಲಿ. ಈ ಮೇಲಿನ ಧೋರಣೆಯು ಅನ್ಯಾಯವಾಗುವುದು. ಕೌನ್ಸಿಲಿನಲ್ಲಿ ಯಾವ ಕಾರ್ಯದಲ್ಲೂ ಶ್ರದ್ಧೆಯಿಂದ ಭಾಗವಹಿಸದೆ ಕೇವಲ ತಮ್ಮ ಸದಸ್ಯತನವನ್ನು ಕಾಯ್ದುಕೊಳ್ಳುವುದಕ್ಕಾಗಿ ಹಾಜರಾಗುತ್ತಿರುವವರ ವಿಷಯದಲ್ಲಿ ಮಾತ್ರ-ಹೊಸ ಉಮೇದ್ವಾರರು ಎದುರಿಸಬೇಕಾದುದು ಅವಶ್ಯವು ನಗರಾಭಿವೃದ್ಧಿಯ ಕಾರ್ಯದಲ್ಲಿ ಶ್ರದ್ಧೆಯಿಂದ, ನಿರ್ವಂಚನೆಯಿಂದ, ನಿರ್ಭೀತವಾಗಿ, ಜಾತಿದ್ವೇಷ ಯಾ ಸ್ವಾರ್ಥದ ಲವಲೇಶವಿಲ್ಲದೆ ದುಡಿದವರನ್ನು-ಅವರಿನ್ನೂ ಕಾರ್ಯೋತ್ಸುಕರಾಗಿರುವರಾದರೆ-ಸ್ಪರ್ಧಿಸುವುದರಲ್ಲಿ ಔಚಿತ್ಯವಿಲ್ಲ ಇದೆಲ್ಲವನ್ನೂ ಉಮೇದ್ವಾರರು ಗಮನಿಸುವುದು ಸಂಭವನೀಯವಲ್ಲವಾದರೆ ಮತದಾರರು ಅವಶ್ಯವಾಗಿ ಗಮನಿಸಿ, ತಕ್ಕಂತೆ ವರ್ತಿಸಬೇಕಾಗಿದೆ

ನೊಮಿನೇಶನುಗಳ ಪಟ್ಟಿಯು ಪ್ರಕಟವಾದ ದಿನದಿಂದ ವೋಟುಕೊಡುವ ದಿನಕ್ಕೆ ೯ ದಿನಗಳ ಅಂತರವಿದೆ ಮತದಾರರು, ತಮ್ಮ ಮತಗಳನ್ನು ಹೇಗೆ ವಿನಿಯೋಗಿಸಬೇಕೆಂದು ಆಲೋಚಿಸಿ ನಿರ್ಧರಿಸಲು ಈ ವ್ಯವಧಾನವು ಯಥೇಚ್ಛವಾಯಿತು ಮತದಾನದ ಹಕ್ಕನ್ನು ಒಬ್ಬನಿಗೆ ಪಾತ್ರವರಿತು ದಾನಮಾಡಬೇಕೆಂದೇ ಕೊಡಲಾದುದು ಅದನ್ನು ವಿನಿಯೋಗಿಸುವಾಗ ವ್ಯಕ್ತಿತ್ವ ಮತ್ತು 'ದಾಕ್ಷಿಣ್ಯ'ಗಳು ಕಣ್ಣಮುಂದೆ ಬರಬಾರದು ಮತದಾನ ಮಾಡುವವರು ಕೇವಲ ಒತ್ತಾಯಕ್ಕೆ ಕಟ್ಟುಬಿದ್ದು ತಮ್ಮ ವೋಟನ್ನು 'ಅಪಾತ್ರ'ರಿಗೆ ಕೊಟ್ಟು ದುರುಪಯೋಗಪಡಿಸುವುದು ಅಕ್ಷಮ್ಯ ಅಪರಾಧವಾಗುವುದು ಪಾಶ್ಚಾತ್ಯ ನಾಗರಿಕ ದೇಶಗಳಲ್ಲಿ ಪ್ರಾಯಪ್ರಬುದ್ಧರೆಲ್ಲರಿಗೆ ಚುನಾವಣೆಗಳಲ್ಲಿ ವೋಟುಕೊಡುವ (adult suffrage) ಅಧಿಕಾರವಿರುತ್ತದೆ ನಮ್ಮಲ್ಲಿ ತೆರಿಗೆ ತೆರುವವರು ಮಾತ್ರ ವೋಟು ಕೊಡಲರ್ಹರು ಆ ಕಾರಣದಿಂದ ಈ ಕೆಲವೇ ಮಂದಿಗಳು ನಮ್ಮ ನಗರದ ಭವಿಷ್ಯರಚಯಿತರೆನಿಸುವರು ಅವರು ಮತಕೊಡುವ ಜವಾಬುದಾರಿಕೆಯ ಕೆಲಸವನ್ನು ತೀರ ಲಘುವಾಗಿ ಎಣಿಸದೆ, ವಿವೇಕದಿಂದ ಮಾಡಿ ಪೂರೈಸಬೇಕು ನಮ್ಮ ನಗರವೆಂಬ ಅಭಿಮಾನದಿಂದ ದುಡಿವವರಿಗೇ, ನಿಜವಾದ ಯೋಗ್ಯತೆಯುಳ್ಳವರಿಗೇ ವೋಟನ್ನಿತ್ತು ಚುನಾಯಿಸಬೇಕು ಅವರಿವರ ಅಸಂತುಷ್ಟಿಗೆ ಕಾರಣರಾಗಬೇಕಾದೀತೆಂಬ ಅಂಜಿಕೆಯು ವೋಟುಕೊಡುವಲ್ಲಿ ಇರಲೇಬಾರದು ವೋಟು ಕೊಡುವುದರಲ್ಲಿಯೂ ಪಾವಿತ್ರ್ಯ-ಇದೀಗ ಬೇಕಾದುದು ಯೋಗ್ಯರಾದವನ್ನು ಪ್ರತಿನಿಧಿಗಳಾಗ ಆರಿಸುವ ವಿವೇಕವೇ ಆಯಾ ಜನಾಂಗಗಳ ನಾಗರಿಕತೆಯನ್ನು ಅಳೆವ ಮಾನವು. ಇದನ್ನರಿತು ನಮ್ಮ ವೋಟರರು ತಮ್ಮ ಬುದ್ಧಿ ಶಕ್ತಿಯನ್ನೂ ಹಕ್ಕನ್ನೂ ಸದ್ವಿನಿಯೋಗ ಮಾಡುವರೆಂದು ನಿರೀಕ್ಷಿಸಬಹುದೇ?

ಸ್ಫುಟವಿಚಾರಗಳು.

ಕೊಂಗ್ರೆಸ್ ಮತ್ತು ರಾಷ್ಟ್ರಪಕ್ಷೀಯರು—

ಒಂದಾಗಬೇಕೆಂದು ಮಾಡಿದ ಸಾಹಸವು ವಾರ್ಧಾದಲ್ಲಿ ನಿಷ್ಫಲವಾಗಿ, ಬಿದ್ದುಬಿಟ್ಟಿತೆಂಬುದಿದು ಅತ್ಯಂತ ಖೇದಕರ. ಕಮ್ಯೂನಲ್ ಎವಾರ್ಡಿನ ಕುರಿತಾಗಿ ಎದ್ದ ಬೆಂಕಿಯನ್ನು ನಂದಿಸಲು ಮಹಾತ್ಮರು ಅಂತಃಕರಣ ಪೂರಿತರಾಗಿ ಕಂಕಣಬದ್ಧರಾದರೂ, ಪಂಡಿತ ಮಾಲವೀಯರ ಛಲವು ಹಾಗೆ ಮಾಡಲೆಡೆಗೊಡಲಿಲ್ಲ ಇನ್ನು, ಹರಡಬಿಟ್ಟ ಬೆಂಕಿಯು ಎಲ್ಲಿ ಎಷ್ಟನ್ನು ಸುಡುವುದೆಂದು ನೋಡಬೇಕಾಗಿದೆ. ಒಂದು ಕಡೆಯಿಂದ ಮಹಾತ್ಮರು ರಾಜಕೀಯ ರಂಗವನ್ನೇ ತ್ಯಜಿಸಿ ನಡೆವರೆಂಬ ದುಃಖ; ಮತ್ತೊಂದು ಕಡೆಯಿಂದ ನಾಲವೀಯ ಪಂಗಡದವರ ಹೋರಾಟ, ಇನ್ನೊಂದು ಕಡೆಯಿಂದ ಶ್ವೇತಪತ್ರ-ಕಮ್ಯೂನಲ್ ಎವಾರ್ಡುಗಳ ಬೆದರಿಕೆ;-ದೇಶವು ಕಂಗೆಟ್ಟು ತತ್ತರಿಸುವುದು ಅಸ್ವಾಭಾವಿಕವೇ? ಸರಕಾರವನ್ನು ದೂಷಿಸುವ ಬದಲು ಸ್ವಜನರ ಅಸಮರ್ಥತೆ, ನಿರ್ಬಲತೆಗಳನ್ನು ಕಂಡು ಮರುಗಿ ಅವರನ್ನೇ ನಿಂದಿಸಬೇಕಾಗಿದೆ.

ಕೊಂಗ್ರೆಸ್ಸಿನ ಅಧ್ಯಕ್ಷರಾರಾಗಬಹುದು?—

ಎಂಬ ವಿಚಾರವಾಗಿ ವಾದವಿವಾದವು ದೇಶದಲ್ಲಿ ಕಲೆದೋರಿದೆ ಖಾನ್ ಅಬ್ದುಲ್ ಗಫರ್ ಖಾನರನ್ನು ಈ ವರ್ಷ ಚುನಾಯಿಸಬೇಕೆಂದು ಹಲವರ ಆಶಯವಾಗಿದ್ದರೂ, ಖಾನರು ಮಾತ್ರ-"ನಾನು ಸೈನಿಕನಾಗಿಯೇ ಹಿಂಬಾಲಿಸುವೆನು; ಸೈನ್ಯಾಧಿಪತಿಯಾಗಿ ಮುಂಬಾಗೆನು" ಎಂದು ಪೂರ್ವಭಾವಿಯಾಗಿ ಪ್ರಕಟಿಸಿ ತನ್ನ ವಿನೀತತೆ, ಸೌಜನ್ಯ ಮತ್ತು ಭಾವವೈಶಾಲ್ಯವನ್ನು ವ್ಯಕ್ತಗೊಳಿಸಿರುವರು ಪರಿಣಾಮವಾಗಿ, ಶ್ರೀ ಬಾಬುರಾಜೇಂದ್ರ ಪ್ರಸಾದರನ್ನು ಈ ಸಲ ವೇದಿಕೆಗೇರಿಸಬೇಕೆಂದು ರಾಷ್ಟ್ರೀಯವಾದಿಗಳ ಯೋಚನೆಯಾಗಿದೆ ಮೊದಲೇ ಭೂಕಂಪದಿಂದ ಒಳಲಿದ್ದು ಪುನಃ ಮೊನ್ನಿನ ಉಗ್ರ ನೆರೆಹಾವಳಿಯ ದೆಸೆಯಿಂದ ಜೀವನ್ಮೃತರಾದ ಬಿಹಾರಿನವರ ಸಂಕಷ್ಟ ಕಾಲದಲ್ಲಿ ಅವರ ಸೇವಾತತ್ಪರರಾಗಿರುವ ಶ್ರೀ ಪ್ರಸಾದರ ಮೇಲೆ ಕೊಂಗ್ರೆಸ್ಸಿನ ಬಹುಭಾರವನ್ನೂ ಹೇರುವುದೆಂದರೆ- ಬಿಹಾರಿನ ಬಡವರಿಗೆ ಹಾಸಿಬಯಸಿದಂತೆ, ನಿರ್ದಯ ಹೃದಯವನ್ನು ಪ್ರಕಟಿಸಿದಂತೆ!

ಮಂಗಳೂರು ಮುನಿಸಿಪಾಲಿಟಿಯು—

ಸಾರ್ವಜನಿಕ ಮೈದಾನವನ್ನು ಸಮತಟ್ಟಾಗಿ ಮಾಡಿ ನಗರದ ಶೋಭೆಯನ್ನು ಹೆಚ್ಚಿಸುವಂತೆ ಸಾಹಸ ಪಡುತ್ತಿರುವುದೂ, ಅಲ್ಲದೆ ಇದೇ ಮೈದಾನಿನಲ್ಲಿ ಒಂದು "ಬೇಂಡ್ ಸ್ಟೇಂಡ"ನ್ನೂ ಒಂದು ಉದ್ಯಾನವನ್ನೂ ರಚಿಸಲು ಏರ್ಪಾಡು ಮಾಡಲಿರುವುದೂ ಸಂತೋಷದಾಯಕವೇ ಆದರೆ ಸಾರ್ವಜನಿಕ ಟೆಲಿಫೋನ್ ಮತ್ತು ರೇಡಿಯೋಗಳ ಯೋಜನೆಯಾಗಬೇಕೆಂದು ಹಲವು ಸಲ ಪತ್ರಿಕೆಗಳು ಸೂಚಿಸಿದ್ದರೂ ಕೌನ್ಸಿಲಿನವರು ಗಮನಿಸದಿರುವರೇಕೋ' ಬರಿಯ ಮಣ್ಣುದಿಬ್ಬಗಳ ನಿರ್ಮೂಲನಕ್ಕಾಗಿ ಮುನಿಸಿಪಾಲಿಟಿಯು ಹೇರಳ ದ್ರವ್ಯವನ್ನು ವೆಚ್ಚಮಾಡಲು ಸಿದ್ಧವಿರುವಾಗ, ನಗರದ ಲಕ್ಷಣೀಯ ಕೊರತೆಯಾದ ಇದನ್ನು ಹೋಗಲಾಡಿಸಲು ಶೀಘ್ರವಾಗಿ ಮನವಿರಿಸಬಹುದೆಂದು ಕಾಂಕ್ಷೆ ಈ ಏರ್ಪಾಡಿನಿಂದ ಮುನಿಸಿಪಾಲಿಟಿಯು ವ್ಯಯಕ್ಕಿಂತಲೂ ಹೆಚ್ಚಿನ ಆಯವನ್ನೂ ಮಾಡಬಹುದೆಂದಿರುವಾಗ ಕಮಿಶನರರೂ ಚೆಯರ್‌ಮೆನರೂ ಹೊಸ ಕೌನ್ಸಿಲರರೂ ಲಕ್ಷ್ಯವಿಡುವರೇ?

ಶ್ರೀ ಪಂಜೆ ಮಂಗೇಶರಾಯರು

ರಾಯಚೂರಿನಲ್ಲಿ ಜರಗಲಿರುವ ಕರ್ಣಾಟಕ ಸಾಹಿತ್ಯ ಸಮ್ಮೇಲನಕ್ಕೆ ಅಧ್ಯಕ್ಷರಾಗಿ ಆರಿಸಲ್ಪಟ್ಟಿರುವರೆಂಬುದು ದಕ್ಷಿಣ ಕನ್ನಡಿಗರಿಗೊಂದು ಭೂಷಣದ ವಿಷಯ, ಅವರು ಆ ಆಮಂತ್ರಣವನ್ನು ಸ್ವೀಕರಿಸಿರುವರೆಂಬುದೂ ಆನಂದದಾಯಕ, ಇದಕ್ಕಾಗಿ ಅವರನ್ನು ಅಭಿವಂದಿಸೋಣ. ಈ ಸಲದ ಸಮ್ಮೇಲನಕ್ಕೆ ಶ್ರೀ ಮುಂಜೇಶ್ವರ ಗೋವಿಂದ ಪೈಗಳನ್ನು ಅಧ್ಯಕ್ಷರನ್ನಾಗಿ ಕೇಳಿಕೊಳ್ಳಬೇಕೆಂದಿದೆ-ಎಂದು ಸಾಹಿತ್ಯ ಪಕ್ಷೀಯರಲ್ಲಿ ಕೆಲವರು ಹೇಳಿದರೆಂದು ಕೇಳಿದವು. ಕೇಳಿ ಆನಂದಗೊಂಡೆವು ಆದರೆ ಕೇಳಿದುದು ಸಂಭವಿಸಲಿಲ್ಲ. ಇದೇಕೆ?

ಯುದ್ಧವು ಸಂಭವಿಸದು—

ಎಂದು ನುಡಿಯುವವರೆಲ್ಲ ಈ ವಿಷಯವನ್ನರಿಯಬೇಕು. ೧೯೧೩ರಲ್ಲಿ ಶಸ್ತ್ರಸಿದ್ಧತೆಯ ವೆಚ್ಚವು ೩೪೦ಕೋಟಿ ರೂಪಾಯಿ ಆದರೆ ೧೯೩೩ರಲ್ಲಿ ಇದು ೮೮೦ ಕೋಟಿ ರೂಪಾಯಿಗಳಿಗೆ ಮುಟ್ಟಿತು. ಅಂದರೆ ೧೯೧೩ರಿಂದ ೧೯೩೩ರವರೆಗೆ ಶೇಕಡಾ ೧೫೦ ರಷ್ಟು ದ್ರವ್ಯವನ್ನು ಶಸ್ತ್ರ ತಯಾರಿಗಾಗಿ ಪ್ರಪಂಚದ ಎಲ್ಲ ಪ್ರಮುಖ ರಾಷ್ಟ್ರಗಳು ವಿನಿಯೋಗಿಸಿದುವು. ರಷ್ಯವು ದಿನದಿನವೆಂಬಂತೆ ಸೈನ್ಯವನ್ನು ಹೆಚ್ಚಿಸುತ್ತಿದೆ. ಜಾಪಾನು ಶೇಕಡಾ ೨೦೦ರಷ್ಟು ಹೆಚ್ಚಿನ ವ್ಯಯ ಮುಟ್ಟಿಸಿ ಶಸ್ತ್ರ ತಯಾರಿ ಮಾಡಿರುತ್ತದೆ. ಇಟೆಲಿಯು ಯುದ್ಧಕ್ಕೆ ಸರ್ವ ಸಿದ್ಧವಾದ ಕಾಯುತ್ತಿದೆ, ಯುದ್ಧವಾಗಲಾರದೆಂದು ಹೇಳುವಷ್ಟು ಅಕ್ಷಮ್ಯ ಸುಳ್ಳು ಇನ್ನೊಂದಿರಲಾರದು.

ದಕ್ಷಿಣ ಕನ್ನಡ ಜಿಲ್ಲೆಯ ಪ್ರಾಥಮಿಕ ಶಾಲೆಯ ಉಪಯೋಗದ ಪಾಠಪಟ್ಟಿ.

ಇದರ (ತಿದ್ದುಪಡಿ ಆವೃತ್ತಿ)ಯು ಪ್ರಕಟವಾಗಿದ್ದು ಜಿಲ್ಲಾ ಎಡ್ಯುಕೇಶನಲ್ ಕೌನ್ಸಿಲಿನವರ ವಿಚಕ್ಷಣತೆಯು ಪ್ರಕಟವಾಗಿದೆ. ೩೦ ಪುಸ್ತಕಗಳ ಹೆಸರುಗಳನ್ನು ಕೊಟ್ಟು 'ಈ ಪುಸ್ತಕಗಳಲ್ಲಿ ಯಾವುವಾದರೂ ಎರಡು ಕಥೆಯ ಪುಸ್ತಕಗಳನ್ನು ಓದಲಿಕ್ಕೆ ಹುಡುಗರಿಗೆ ಗೊತ್ತಿರಬೇಕು' ಎಂದು ಸೂಚಿಸಿರುವುದೂ ಹತ್ತಿಪ್ಪತ್ತು ಉಪಪಠ್ಯ ಪುಸ್ತಕಗಳನ್ನು ಆರಿಸಿ ಅವುಗಳಲ್ಲಿ ಯಾವುದಾದರೂ 'ಒಂದು'—'ಎರಡು' ಎಂದು ಸೂಚಿಸಿರುವುದೂ ಪ್ರಕಾಶಕರ ಉಪಾಧ್ಯಾಯರ ಮತ್ತು ಮಕ್ಕಳ ಅನುಕೂಲತೆಗೆ ಎಷ್ಟು ಸಹಕಾರಿಯೋ ತಿಳಿದವರಿಗೆ ತಿಳಿಯುವುದು ಅಂತೂ, ಮುಂಬಾಯಿ ಮೈಸೂರು ಯುನಿವರ್ಸಿಟಿಗಳಂತೆ ಮದ್ರಾಸು ಯುನಿವರ್ಸಿಟಿಯೂ ಈ ದಕ್ಷಿಣ ಕನ್ನಡ ಜಿಲ್ಲೆಯ ಎಡ್ಯುಕೇಶನಲ್ ಕೌನ್ಸಿಲನ್ನು ವಶವಿರಿಸಿಕೊಳ್ಳದಿರುವುದು ಸುಖಕರವಲ್ಲವೆಂದೇ ತಿಳಿದುಬರುವುದು

ಬಂಡ್ರೋಲು ಇಲ್ಲದ ಬೆಂಕಿಪೆಟ್ಟಿಗೆಗಳನ್ನು

ಒಕ್ಟೋಬರ ೩೦. ೧ರ ನಂತರ ವಿಕ್ರಯಿಸಬಾರದೆಂದು ಸರಕಾರವು ಜೂನ್ ೩೦ ೧೯೩೪ರಲ್ಲಿ ಕೊಟ್ಟ ಪ್ರಕಟಣೆಯ ಪರಿಣಾಮವಾಗಿ ಬೆಂಕಿಪೆಟ್ಟಿಗೆ ವರ್ತಕರ ಸಭೆಗಳಾಗಿ, ಸರಕಾರಕ್ಕೆ ಮನವಿಗಳು ಹೋಗಿ ಈ ಅವಧಿಯನ್ನು ಇನ್ನೂ ಮುಂದಕ್ಕಿರಿಸಬೇಕೆಂದಾದ ಪ್ರಾರ್ಥನೆಯು ಸರಕಾರದಿಂದ ನಿರಾಕರಿಸಲ್ಪಟ್ಟು, ತಮ್ಮ ಪ್ರಥಮ ಆಜ್ಞೆಯೇ ಪರಿಪಾಲಿಸಲ್ಪಡಬೇಕೆಂದಾದುದು ಅತ್ಯಂತ ವಿಷಾದಕರವಿದೆ. ಅನೇಕ ವರ್ತಕರಲ್ಲಿ ಲಕ್ಷಗಟ್ಟಳೆ ರೂಪಾಯಿಯ ಬೆಂಕಿಪೆಟ್ಟಿಗೆಯು ದಾಸ್ತಾನಾಗಿದ್ದು, ತಮಗೆ ನಷ್ಟ ಸಂಭವಿಸದಂತೆ ಅವರದನ್ನು ವಿಕ್ರಯಿಸಿ ವ್ಯವಸ್ಥೆ ಮಾಡಲು ಬಿಡುವಿಲ್ಲದಂತಾಗಿದೆ ತಮ್ಮಲ್ಲಿ ದಾಸ್ತಾನು ಎಷ್ಟಿರುವುದೆಂದು ವರ್ತಕರು ಸರಕಾರಕ್ಕೆ ತಿಳಿಸಿ, ಆ ನಂತರ ಎಕ್ಸೈಜ್ ಅಧಿಕಾರಿಗಳ ಆ ಕುರಿತಾದ ಅಪ್ಪಣೆಯನ್ನು ನಿರೀಕ್ಷಿಸಬೇಕೆಂದೂ ಒಂದು ಸೂಚನೆಯಿದೆ. ಎಕ್ಸೈಜ್ ಅಧಿಕಾರಿಗಳ ವರ್ತನೆಯೇನೆಂದು ನಿರೀಕ್ಷಿಸೋಣವಾಗಿದೆ.

ಝಾಭುವಾ ಮಹಾರಾಜರು ಹೊರಗೆ ನಡೆಯಬೇಕು—

ಎಂದು ಸರಕಾರವು ಆಜ್ಞೆಯಿತ್ತು—"ಅಲ್ಲಿಯ ಮಹಾರಾಜರ ದುರಾಡಳಿತವನ್ನು ನೋಡುವಾಗ ಅವರು ಅಧಿಪತಿಯಾಗಿರಲು ಸಮರ್ಥರಲ್ಲವೆಂದು ವಿದಿತ"ವೆಂದು ನಿರ್ಧರಿಸಿ ಅವರನ್ನು ಸಂಸ್ಥಾನದಿಂದ ಹೊರಗಿರಿಸಿದೆ. ಅಳ್ವಾರು ಮಹಾರಾಜರು ಸ್ಥಾನಭ್ರಷ್ಟರಾದೊಡನೆ ಝಾಭುವಾದ ಸಮಸ್ಯೆಯೆದ್ದಿತು. ಈಗದು ತೀರ್ಮಾನವಾಗಿರುವಾಗ, ಅತ್ತಲಿಂದ ಪಾಟಿಯಾಲದ ಆಡಳಿತದ ವಿಷಯಕವಾಗಿಯೂ ಗುಲ್ಲೆದ್ದಿದೆ. ಸರಕಾರವು ಎಷ್ಟು ಎಚ್ಚರಿಸಿದರೂ ತಮ್ಮ ಮೇಲಿರುವ ಅಪಾರ ಜವಾಬ್ದಾರಿಕೆಯನ್ನು ಮರೆತು ವಿಲಾಸಪ್ರಿಯರಾಗಿ ಮೆರೆದು ಸೋಲುವ ಇಂತಹ ಸಂಸ್ಥಾನಾಧಿಪರಿಗೆ ಯುಕ್ತಪಾಠವೇ ಸಿಗುತ್ತಿದೆಯೆನ್ನುವ.

ಲೋಧ್ರ

ಸುಪ್ರಸವಕ್ಕಾಗಿ ದಿವ್ಯ ಟಾನಿಕ್.

ಸ್ತ್ರೀಯರಿಗೊಂದ ಮಹಾ ವರ.

ಯಾವ ತರದ ಅಥವಾ ಎಲ್ಲಾ ತರದ ಮುಟ್ಟು ದೋಷ, ಮುಟ್ಟಾಗುವುದರಲ್ಲಿ ನೋವು, ಅಕ್ರಮ ತರದ ಮತ್ತು ಮುಟ್ಟಾಗದಿರುವಿಕೆ, ಬಿಳಿ ಸೆರಗು, ಗರ್ಭಕೋಶದ ದೋಷ ಅಶುದ್ಧ ಮುಟ್ಟು, ಬಂಜೆತನ, ಸೂತಿಕಾವಾಯು, ಅಶುದ್ಧರಕ್ತ, ಮೇರೆ ದಾಟಿ ಅಥವಾ ಬೇಕಾದಷ್ಟು ಮುಟ್ಟಾಗದಿರುವುದು, ಸ್ತ್ರೀಯರ ಅಂಗಾಂಗಗಳ ಇನ್ನಿತರ ಅನೇಕಾನೇಕ ರೋಗಗಳುಳ್ಳ ಸ್ತ್ರೀಯರನ್ನು ಈ ಔಷಧಿಯು ಸಂಪೂರ್ಣ ಗುಣಗೊಳಿಸಿರುತ್ತದೆ.

ಲೋಧ್ರ

ಎರಡು ಸೈಜಿನಲ್ಲಿ ದೊರೆಯುತ್ತದೆ ರೂ. 8 ಮತ್ತು 1–10–0

ಕೇಸರಿ ಕುಟೀರಂ

ಇಂಡಿಯನ್ ಕೆಮಿಸ್ಟ್ಸ್ ಮತ್ತು ಡ್ರಗಿಸ್ಟ್ಸ್, ಎಗ್ಮೋರ್ ಮದರಾಸು,

ದಕ್ಷಿಣ ಕನ್ನಡ ಮತ್ತು ಕೊಡಗು ದೇಶದ ಏಜಂಡರು,
ಪೊಪ್ಯೂಲರ್ ಸ್ಟೋರ್ಸ್, ಮಂಗಳೂರು

ಸ್ವದೇಶಾಭಿಮಾನಿಯ

ಸಾಹಿತ್ಯಸಂಚಿಕೆ

ತಿಂಗಳಿಗೊಂದರಂತೆ ಹೊರಡುವುದು.
ಡೆಮಿ ¼ ಆಕಾರದ 8 ಪುಟಗಳು.

ವರ್ಷಕ್ಕೆ 96 ಪುಟಗಳ

ಒಂದು ಗ್ರಂಥವೇ ಪುಕ್ಕಟೆಯಾಗಿ ದೊರೆತಂತೆ!

ಪ್ರತಿ ಸಾಹಿತ್ಯ ಸಂಚಿಕೆಯಲ್ಲೂ
ಕತೆಗಳು, ಕವನಗಳು
ವಿಮರ್ಶೆ, ಜೀವನಚರಿತ್ರೆ
ಸಾಹಿತ್ಯವಿಚಾರ
ಹರಟೆಗಳು

ಪ್ರಸಿದ್ಧ ಲೇಖಕರಿಂದಲೇ ಬರುವುವು
'ಸ್ವದೇಶಾಭಿಮಾನಿ'ಗೆ ಚಂದಾದಾರರಾಗಿರಿ.

ವಾರ್ಷಿಕ ಚಂದಾ ರೂ. 2 ಮಾತ್ರ.
ಅಂಚೆ ವೆಚ್ಚ ಆಣೆ 13.

ಮೆನೇಜರ್,
ಸ್ವದೇಶಾಭಿಮಾನಿ
ರಥಬೀದಿ ಮಂಗಳೂರು

ಕಿರ್ಲೋಸ್ಕರವು



<u>ಗುಣ–ಬಾಳಿಕೆ</u>ಗಳ ಸೂಚಕವು.

ಕಿರ್ಲೋಸ್ಕರ ನೆಲಗಡಲೆ ಸುಲಿಯುವ ಯಂತ್ರಗಳನ್ನು ಪ್ರತಿಷ್ಠಿಸುವುದರಿಂದ,—ಅದರ ಖರ್ಚು ಕಡಿಮೆಯಾದರೂ ಅತ್ಯಧಿಕ ಕೆಲಸವು ಪೂರೈಸಲ್ಪಡುವುದೆಂಬ ಭರವಸೆಯಿದೆ. ಶಾಶ್ವತವಾಗಿಯೂ ಪೂರ್ಣ ತೃಪ್ತಿಕೊಡುವಂತೆಯೂ ಅವು ರಚಿಸಲ್ಪಟ್ಟಿವೆ. ಕೈಯಿಂದ ಚಲಿಸುವಂತಹದೂ ವಿದ್ಯುಚ್ಛಕ್ತಿಯಿಂದ ಚಲಿಸುವಂತಹದೂ ಎರಡೂ ಬಗೆಯಿದೆ.

ಸಚಿತ್ರ ಕೆಟಲಾಗು, ಅಪೇಕ್ಷಿಸಿದ್ದಲ್ಲಿ ಕಳುಹಲಾಗುವುದು

ಕಿರ್ಲೋಸ್ಕರ ಬ್ರದರ್ಸ್ ಲಿಮಿಟೆಡ್,

ಕಿರ್ಲೋಸ್ಕರವಾಡಿ, (ಸತಾರಾ.)

ಡಿಸ್ಟ್ರಿಬ್ಯೂಟರರು —ಮೆಸರ್ಸ್ ಪೆರ್ರಿ ಎಂಡ್ ಕೊ, ಲಿಮಿಟೆಡ್
ಮೌಂಟ್ ರೋಡ್ ಮದ್ರಾಸ್.

ಚಾತುಕುಟ್ಟಿ ವೈದ್ಯರ

ವಿಶೂಚಿಕಾ ಸಂಹಾರಿ
Vishuchika Samhari
(PILCO)

ಕಾಲರಕ್ಕೆ ದಿವ್ಯೌಷಧಿ ಉಪಯೋಗಿಸಿದರೆ ಗುಣ ಖಾತ್ರಿ
ಕ್ರಯ ಡಬ್ಬಿ 1ಕ್ಕೆ ರೂ 1–0–0

ಗುಹ್ಯರೋಗ ನಿವಾರಿಣೀ ತೈಲ
Anti-Venereal Oil
(A V Oil)

ಗುಹ್ಯರೋಗ ನಿವಾರಣೆಗೆ ಅಮೋಘ ಪವಿತ್ರ ಔಷಧ. ಬಹುಕಾಲ ಪಾರಂಪರ್ಯದ ವ ತಗಲಿದ ರೋಗವು ಗುಣವಾಗುವುದು. ನಿರೋಗಿಗಳೂ ಹೊಟ್ಟೆಯ ಶುದ್ಧಿಗಾಗಿ ಜುಲಾಬಿನ ವ ಧ್ವನಂತೆ ತೆಗೆದುಕೊಳ್ಳಬಹುದು

೬ ಔನ್ಸ್‌ಗಳ ಬಾಟ್ಲಿ 1ಕ್ಕೆ ರೂ 3–8–0.

ಕೆ. ವಿ. ಕೃಷ್ಣನ್,
ಕೊಲ್ಲಾಯಿ, ಮಲಬಾರ್,
ಅಥವಾ
ಬಾಲ್ ಮತ್ತು ಕಂಪೆನಿ, ಕಲ್ಲಿಕೋಟೆ,
ಇಲ್ಲಿ ಸಿಗುವುದು

ಕ್ಷಯಕ್ಷೀಣಾದಿಗಳಿಗೆ
ಚ್ಯವನಪ್ರಾಶಾವ ಲೇಹ.

ಪ್ರಸೂತಿ ರೋಗಾದಿಗಳಿಗೆ
ದಶಮೂಲಾರಿಷ್ಟ
(ಕಸ್ತೂರಿ ಮಿಶ್ರಣ)

ಸಮಸ್ತ ವಾತರೋಗಗಳಿಗೆ
ಮಹಾನಾರಾಯಣ ತೈಲ.

ಶ್ರೀ ರಾಮಕೃಷ್ಣ ಧರ್ಮವೈದ್ಯಾಶ್ರಮ ಸಂಘ, ಡೊಂಗರಕೇರಿ ರಸ್ತೆ, ಮಂಗಳೂರು.

++ ++

ಚಿತ್ರಾಲಂಕೃತ ಸಮೇತ
ಋಗ್ವೇದೀ ಸಂಧ್ಯಾವಂದನೆ.

(ವೈಷ್ಣವರಿಗೆ—ಊರ್ಧ್ವ ಪುಂಡ್ರ—ಮುದ್ರಾಧಾರಣ ವಿಧಿ)
ಸ್ಮಾರ್ತರಿಗೆ—ಭಸ್ಮಧಾರಣ ವಿಧಿ, ಕೂಡ)

ಎಂ ನರಸಿಂಗರಾವ್, ಬಿ ಎ, ಎಂ ಎಲ್,
ಇವರಿಂದ ರಚಿತವಾದ
ಪ್ರತಿಪದಾರ್ಥಟೀಕಾ ವಿಧಿಸಹಿತ

ಬೆಲೆ ಆಣೆ 8

(30 60 100 ಪ್ರತಿಗಳನ್ನು ಒಮ್ಮೆಲೆ ಪಡೆವವರಿಗೆ ಒಳ್ಳೆಯ ಡಿಸ್ಕೌಂಟು)

ವಿಳಾಸ — ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು.

ನಮ್ಮ ಸಲಹೆಯೇ ಪ್ರಾಧಾನ್ಯವಾದದ್ದೆಂದು ತಿಳಿಯಬೇಡಿ

ಕಲ್ಲಿಕೋಟೆ ಅಶೋಕ ಆಸ್ಪತ್ರೆಯ ಚೀಫ್ ಮೆಡಿಕಲ್ ಆಫೀಸರರಾದ ಡಾ| ವಿ. ಬಿ. ರಾಮನ್, ಎಂ ಆರ್, ಸಿ ಎಸ್ ಇವರು ಬರೆದಿರುವುದನ್ನು ಓದಿ ನೋಡಿ—"ನಾನು ನಿಮ್ಮ ಆಶ್ಚರ್ಯಕರವಾದ ಜೀವಾಮೃತಂ ಟಾನಿಕನ್ನು ನರಗಳಲ್ಲಿ ಉರಿತ ಇರಿತ ಹಸಿವು ಕಡಿಮೆಯಾಗಿರುವುದು ಶಕ್ತಿ ಕಡಿಮೆಯಾಗಿರುವುದು, ನಿತ್ಯ ಪ್ರಾಪ್ತವಾಗಿರುವ ಅನೇಕ ರೋಗಗಳಿಗೆ ಕೊಟ್ಟಿರುತ್ತೇನೆ ಅದರ ಫಲಿತಾಂಶಗಳು ಬಹು ತೃಪ್ತಿಕರವಾಗಿದೆ. ಜೀವಾಮೃತವನ್ನು ದೇಹಶಕ್ತಿ ಕುಗ್ಗಿರುವ ಎಲ್ಲಾ ಸಂದರ್ಭಗಳಲ್ಲೂ ಸರ್ವೇ ಸಾಮಾನ್ಯವಾಗಿ ಉಪಯೋಗಿಸಬಹುದೆಂದು ನಾನು ಮನಃಪೂರ್ವಕವಾಗಿ ಶಿಫಾರಸು ಮಾಡುತ್ತೇನೆ"

ಜೀವಾಮೃತವು

ನರಗಳಿಗೆ ಶಕ್ತಿ ಕೊಡುತ್ತದೆ ವೀರ್ಯ ವೃದ್ಧಿಮಾಡುತ್ತದೆ ಹಸಿವು ಹೆಚ್ಚಿಸುತ್ತದೆ ರಕ್ತ ವೃದ್ಧಿಮಾಡುತ್ತದೆ.

ಪಂಡಿತ
ಡಿ ಗೋಪಾಲಾಚಾರ್ಲುರವರ **ಜೀವಾಮೃತವು**

ಎಲ್ಲಾ ಔಷಧ ಮಾರುವವರಲ್ಲೂ, ಸ್ಟೋರುಗಳಲ್ಲೂ ದೊರೆಯುತ್ತದೆ (ಸಂಪೂರ್ಣ ವಿವರಗಳಿಗೆ ಇವತ್ತೇ ಬರೆಯಿರಿ)

ಆಯುರ್ವೇದಾಶ್ರಮಂ, ಪೋ. ಬಾಕ್ಸು ನಂ ೨೦೭, ಮದ್ರಾಸು

ಸೋಲ್ ಏಜಂಟರು – ಸಿಟಿ ಮೆಡಿಕಲ್ ಮತ್ತು ಜನರಲ್ ಏಜನ್ಸಿ, ೯೨ ಚಿಕ್ಕಪೇಟೆ ಬೆಂಗಳೂರು (ಉಡುಪಿ ಹೋಟೆಲ್ ಹತ್ತಿರ)
ದಕ್ಷಿಣ ಕನ್ನಡದ ಏಜಂಟರು– ಪೊಪ್ಯೂಲರ್ ಸ್ಟೋರ್ಸ್, ಮಂಗಳೂರು

P No 104

ಸೈಂಟಿಫಿಕ್
ಸ್ವರ್ಣಾಭರಣಗಳು

(ಸಹಜವಾದ ಬಂಗಾರಕ್ಕೆ ಬದಲಾಗಿ ಇವು ತಯಾರಿಸಲ್ಪಟ್ಟಿವೆ.)

ಹೈಕೋರ್ಟು ಜಡ್ಜರುಗಳಿಂದಲೂ, ಸರಕಾರದ ಮಂತ್ರಿಗಳಿಂದಲೂ, ಇತರ ಪ್ರಮುಖರಿಂದಲೂ ಕೊಂಡಾಡಲ್ಪಟ್ಟಿವೆ.

ಪತ್ರವ್ಯವಹಾರವನ್ನು ಇಂಗ್ಲಿಷಿನಲ್ಲೇ ಮಾಡಬೇಕು.

S.G.B.Co.

ಹೊಸ ಕೆಟಲಾಗು ಧರ್ಮಾರ್ಥ.

ವಿಳಾಸ.–

The Scientific Gold Bangles Co., Ltd.,
Head Office.–48, Byragimatam Street,
Post Box No. 203, Madras.

An Advertisement In

'Swadeshabhimani'

Means a sure fortune to you

Ask for Contract Rates

The Swadeshabhimani office,
Car Street, Mangalore.

Preserve Your Wealth by BIRTH-CONTROL

ದೇಶದ ಐಶ್ವರ್ಯವನ್ನು ಮಿತಸಂತತಿಯಿಂದ ಕಾದಿಡಿ.

ನೂರೇ ಮೂರು ರೂಪಾಯಿಗಳಿಂದ ಸ್ತ್ರೀಯರಿಗೆ ಪ್ರಸವಭಯವನ್ನು ನಿಲ್ಲಿಸುವುದು. ಬೇಕಾದ್ದಲ್ಲಿ ತಿರಿಗಿ ಭರ್ಗವಾಗುವಂತೆ ಔಷಧವಿದೆ

ವರ್ಷಕ್ಕೊಂದರಂತೆ ಹೆತ್ತು ತಾಯಿ—ಮಕ್ಕಳು ನರಳದಂತೆ ಘೋರ ದೂರ ಮಾಡುವುದು. ಆರೋಗ್ಯಕ್ಕೆ ಹಾನಿಯಿಲ್ಲ.

ವಿಳಾಸ —ಪಂಡಿತ ಕೆ ನಾರಾಯಣರಾವ್,
ಆಯುರ್ವೇದ ಭಿಷಕ್, ಕಾರ್ಕಳ, ದ. ಕ.

[*N. B.*—ಉತ್ತರವನ್ನಪೇಕ್ಷಿಸುವವರು ಒಂದೂಕಾಲಾಣೆಯ ಟಪಾಲು ಸ್ಟಾಂಪಿನೊಂದಿಗೆ ಬರೆಯಬೇಕು.]

ಗಾಂಧಿಜಿಯವರು ಕಾಂಗ್ರೆಸ್ಸಿನಿಂದ ನಿವೃತ್ತರಾಗುವರೇ?

ಗಾಂಧಿಜಿಯವರು ಕಾಂಗ್ರೆಸ್ಸಿನಿಂದ—ರಾಜಕೀಯಗಳಿಂದ—ನಿವೃತ್ತರಾಗುವರೆಂಬ ಒಂದು ವಾರ್ತೆ ಹರಡಿದೆ. 'ಇದು ವಿಶ್ವಾಸನೀಯವಾಗಿ ತಿಳಿದುಕೊಂಡುದಾಗಿರುತ್ತದೆ' ಎಂದು 'ಹಿಂದೂ' ಪತ್ರಿಕೆಯ ವಾರ್ತಾದಾಯಕನು ಅಭಿಪ್ರಾಯಪಡುತ್ತಾನೆ. ಗಾಂಧಿಜಿಯವರು ಇದನ್ನು ಖಂಡತುಂಡವಾಗಿ ಅಲ್ಲಗಳೆದುದಿಲ್ಲ. ಪಂಡಿತ ಮಾಲವೀಯ ಮತ್ತು ಅಣೆಯವರು ಕಾಂಗ್ರೆಸ್ಸಿನಿಂದ ಬೇರ್ಪಟ್ಟುದು ಇದಕ್ಕೆ ಕಾರಣವಾಗಿರಬಹುದೆಂಬುದನ್ನು ಮಾತ್ರ ಗಾಂಧಿಜಿಯವರು ಖಂಡಿಸಿ ನುಡಿದಿದ್ದಾರೆ. ಈ ವಾರ್ತೆಯಿಂದ ಹಲವು ಕಾಂಗ್ರೆಸ್ ಕೆಲಸಗಾರರು ದುಃಖಗೊಂಡಿರುವರು.

ಕಾಂಗ್ರೆಸ್ಸಿನ ಮುಖಂಡತನವನ್ನು ಗಾಂಧಿಜಿಯವರು ಬಿಟ್ಟುಕೊಟ್ಟರೆ, ಮುಂದಿನವರಾರು ಆ ಸ್ಥಾನಕ್ಕೆ ಯೋಗ್ಯರೆಂಬುದು ಇನ್ನು ನಿರ್ಣಯವಾಗಬೇಕಾಗಿದೆ. ಅಕ್ಟೋಬರದಲ್ಲಿ ಜರಗಲಿರುವ ರಾಷ್ಟ್ರಸಭಾಧಿವೇಶನದಲ್ಲಿ ಈ ಕುರಿತಾದ ಹೆಚ್ಚಿನ ವಿವರಗಳು ಪ್ರಕಾಶಗೊಳ್ಳುವುವೆಂದೆಣಿಸಲಾಗಿದೆ.

ಗಾಂಧಿಜಿಯವರು ಸದ್ಯಕ್ಕೆ ಯಾವ ಕಾರ್ಯಕ್ಕಾಗಿಯೂ ಸಂಚಾರ ಹೊರಡುವಂತಿಲ್ಲ. ಹರಿಜನೋದ್ಧಾರ ಚಳವಳವನ್ನೇ ಅವರು ಮತ್ತಷ್ಟು ಚೇತನಗೊಳಿಸಿ ಮುಂದೊತ್ತಲು ಶ್ರಮಪಡುವರಾದರೂ ಕಾಂಗ್ರೆಸ್ ಕಾರ್ಯಗಳಲ್ಲಿ ಅಪ್ರತ್ಯಕ್ಷವಾಗಿಯಾದರೂ ಭಾಗವಹಿಸುವರೆಂದು ಶ್ರೀ| ಸಿ. ರಾಜಗೋಪಾಲಾಚಾರ್ಯರ ಮತ. ಕಾಂಗ್ರೆಸ್ಸಿನಲ್ಲಿ ಸುಧಾರಣೆಗಳನ್ನುಂಟುಮಾಡುವಲ್ಲಿ ಅವರದೊಂದು ಯೋಜನೆಯಿದ್ದು ಅದು ಸದ್ಯದಲ್ಲೆ ತಿಳಿಯಬರಬಹುದೂ ಎಂದೂ ಊಹಿಸಲಾಗಿದೆ.

ಜರ್ಮನಿಯ ಕೋಪವು ಬ್ರಿಟಿಷರಿಗೆ ವರದಾನವಾಯಿತು!

ಹಿಟ್ಲರ್ ಆಡಳಿತದ ಕಠಿನಕರವು ಜರ್ಮನಿಯೊಳಗಿನ 'ಅನಾರ್ಯ'ರಾದ ಯಹೂದಿಗಳನೇಕರನ್ನು ಗಡೀಪಾರು ಆಗುವಂತೆ ಸಾಧಿಸಿತು. ಆದರೆ, ಬ್ರಿಟಿಷರ 'ಕರುಣೆ'ಯ ಕರವು ಅವರನ್ನು ಸ್ವಾಗತೀಕರಿಸಿದೆ. ಏಕೆ?

ಬ್ರಿಟಿಷರಿಗೆ ಆದಾಯ, ಆದಾಯ!

ಜರ್ಮನಿಯಿಂದ ದೇಶಭ್ರಷ್ಟರಾಗಿ ಹೋದ ಯಹೂದಿಗಳಲ್ಲಿ ಹಲವರು ಶ್ರೀಮಂತರು; ಒಳ್ಳೆಯ ಕಸಬುಳ್ಳವರು; ಕೈಗಾರಿಕೆಯಲ್ಲಿ ನಿಪುಣರು. ಇಂಥವರನ್ನು ಮಾತ್ರ ಚೆನ್ನಾಗಿ ವಿಚಾರಣೆ ನಡೆಸಿದನಂತರವೆ, ಬ್ರಿಟಿಷರು ತಮ್ಮ ದೇಶದಲ್ಲಿ ನೆಲೆಸಲು ಅಪ್ಪಣೆ ಕೊಟ್ಟಿರುವರು. ಬ್ರಿಟಿಷರಿಗೆ ಇವರಿಂದ ಆದಾಯವಿದೆಯೆಂದು ತಿಳಿದ ಮೇಲೆಯೇ ಸ್ವಾಗತೀಕರಿಸಿದರು. ಬ್ರಿಟಿಷರ ವ್ಯಾಪಾರಕ್ಕೆ ಯಾವುದೊಂದು ವಿಧದ ಪೆಟ್ಟು ತಗ್ಗಲದಂತೆ ಜಾಗರೂಕತೆಯಿಂದ 'ಕರಾರು' ಮಾಡಿಯೇ ಇವರನ್ನು ಬರಗೊಟ್ಟರು. ಕಳೆದ ವರ್ಷ ಇವರಿಂದ ಬ್ರಿಟ್ಟಿಸಿಗೆ ೪,೫೬೭,೦೦೦ ಪವನು ಲಾಭವಿದೆಯಂತೆ.

ಒಂದು ಉದಾಹರಣೆ:—ಜರ್ಮನಿಯಲ್ಲಿ ಗವಸುಗಳ ದೊಡ್ಡ ವ್ಯಾಪಾರವನ್ನು ನಡೆಸುತಿದ್ದ ಯಹೂದಿಯೊಬ್ಬನು ಲಂಡನಿಗೆ ಬಂದು, ಅಲ್ಲಿ ತನ್ನ ವ್ಯಾಪಾರವನ್ನಾರಂಭಿಸಿದನು. ಇದರಿಂದ, ೩೦೦ ಮಂದಿ ಬ್ರಿಟಿಷರಿಗೆ ಕೆಲಸ ದೊರೆಯಿತು. ಜರ್ಮನಿಯಿಂದ ಆಮದಾಗುತಿದ್ದ ಗವಸುಗಳು ಲಂಡನಿನಲ್ಲೇ ತಯಾರಾಗುವಂತೆಯೂ ಆಯಿತು. ಇಂಗ್ಲಾಂಡಿನವರ ಹಣ ಇಂಗ್ಲಾಂಡಿನಲ್ಲೇ ಉಳಿಯಿತು.

ಜರ್ಮನಿಗೆ, ಯಹೂದಿಗಳ ಈ ಬಹಿಷ್ಕಾರದಿಂದ ಬಹಳ ನಷ್ಟವಿದೆಯೆಂದು, ಜರ್ಮನಿಯ ಮಂತ್ರಿಗಳೊಬ್ಬರೇ ಒಪ್ಪಿಕೊಂಡಿರುವರಂತೆ.

ಹಾಗಾದರೆ ಈ ಆತ್ಮಹತ್ಯಾಸಾಧಕ ವರ್ತನೆಯೇಕೆ? ಯಾರು ಬಲ್ಲ!

ಮದರಾಸು ಪ್ರಾಂತ್ಯದಲ್ಲಿ ಕಡ್ಡಾಯ ಶಿಕ್ಷಣ.

ಮದರಾಸು ಸರಕಾರದವರು ಈಗಳಿನ ಪ್ರಾಥಮಿಕ ಶಿಕ್ಷಣದ ಮಸೂದೆಯನ್ನು ತಿದ್ದಿ, ಪ್ರಾಂತ್ಯದಲ್ಲಿ ಕಡ್ಡಾಯವಾದ ಪ್ರಾಥಮಿಕ ಶಿಕ್ಷಣವನ್ನು ಜ್ಯಾರಿಗೆ ತರುವ ಉದ್ದೇಶದಿಂದ ಒಂದು ಮಸೂದೆಯನ್ನು ತಯಾರಿಸುತ್ತಿರುವರೆಂದು ತಿಳಿದುಬಂದಿದೆ. ಮಕ್ಕಳನ್ನು, ಹೆತ್ತವರು ಒತ್ತಾಯದಿಂದ ಶಾಲೆಗೆ ಕಳುಹುವಂತೆ ಕಾನೂನು ಆಗಲಿದೆ. ಇದನ್ನು ಜ್ಯಾರಿಗೆ ತರುವ ಮುಂಚಿತವಾಗಿ ಸಾರ್ವಜನಿಕ ಅಭಿಪ್ರಾಯವನ್ನು ಸಂಗ್ರಹಿಸುವರು.

ಕೌನ್ಸಿಲ್ ಪ್ರವೇಶವು ಅಪೇಕ್ಷಣೀಯವಲ್ಲ!

ಅಲ್ಲಹಾಬಾದ್ ನಗರದ ಕಾಂಗ್ರೆಸ್ ಕಮಿಟಿಯ ಸಭೆ ಜರಗಿ ಈ ಕೆಳಗಿನ ಠರಾವು ಸರ್ವಾನುಮತದಿಂದ ಮಂಜೂರಾಗಿದೆ:—

'ಬರುವ ಎಸೆಂಬ್ಲಿ ಚುನಾವಣೆಗಳಲ್ಲಿ ಕಾಂಗ್ರೆಸ್ಸಿನವರು ಭಾಗವಹಿಸುವುದು ದೇಶದ ಹಿತಕ್ಕೆ ಹಾನಿಕಾರಿಯೆಂದು ಈ ಸಭೆಯು ಅಭಿಪ್ರಾಯಪಡುವುದರಿಂದ, ಅಲ್ಲಹಾಬಾದ್ ಪ್ರಾಂತಿಕ ಕಾಂಗ್ರೆಸ್ ಕಮಿಟಿಯವರು ಚುನಾವಣೆಗಳಲ್ಲಿ ಭಾಗವಹಿಸಬಾರದೆಂದು ಈ ಸಭೆಯು ಸೂಚಿಸುತ್ತದೆ.'

ಈ ಠರಾವನ್ನು 'ಒಪ್ಪದೆ ಕಮಿಟಿಯ ಉಪಾಧ್ಯಕ್ಷರು ಮಾತ್ರ ರಾಜೀನಾಮೆಕೊಟ್ಟಿರುವರು.

ಮಿಡಿತೆಗಳ ಕಾಟಕ್ಕೆ ತಡೆಯೇನು?

ಮಿಡಿತೆಗಳ ಹಾವಳಿಯು, ಬೇಸಾಯಗಾರರಿಗೆ ಮಹಾ ಸಮಸ್ಯೆಯಾಗಿದೆ. ಆಫ್ರಿಕ ಮತ್ತು ಏಷ್ಯಗಳಲ್ಲಿ ಇವುಗಳಿಂದ ವರ್ಷಂಪ್ರತಿ ಆಗುತ್ತಿರುವ ನಷ್ಟವು ಅಷ್ಟಿಷ್ಟಲ್ಲ. ಇವುಗಳ ಕಾಟವನ್ನು ತಡೆವ ಸುಲಭೋಪಾಯ ವಾವುದು ಎಂಬ ಪ್ರಶ್ನೆಯು ಅನೇಕ ವರ್ಷಗಳಿಂದ ಇನ್ನೂ ಉತ್ತರ ಸಿಗದೆ ಹಾಗೆಯೇ ಉಳಿದಿದೆ. ಇದರ ಇತ್ಯರ್ಥಕ್ಕಾಗಿ ಕಳೆದ ಎರಡು ವರ್ಷಗಳಲ್ಲಿ ಎರಡು ಅಂತರ್ರಾಷ್ಟ್ರೀಯ ಪರಿಷತ್ತುಗಳು ಜರಗಿದ್ದು, ಈ ವರ್ಷವೂ ಅಂತಹ ಪರಿಷತ್ತು ಲಂಡನ್ ನಗರದಲ್ಲಿ ಜರಗುವುದೆಂದು ಗೊತ್ತಾಗಿ, ಸಿದ್ಧತೆಗಳು ನಡೆದಿವೆ.

ಅಳ್ವಾರು ಮಹಾರಾಜರ ಕತೆಯೇನು?

ಅಳ್ವಾರು ಮಹಾರಾಜರಿಗೆ ನಮ್ಮ ಇಂಡಿಯಾ ಸರಕಾರವು ಒಂದೂವರೆ ವರ್ಷಗಳ ಹಿಂದೆ ಫಕ್ಕನೆ ಎರಡು ವರ್ಷಗಳ 'ರಜೆ'ಕೊಟ್ಟು ಬಿಟ್ಟಿತ್ತು,—ಅವರ ಸಂಸ್ಥಾನದ ಆರ್ಥಿಕ ಸ್ಥಿತಿಯು ಕ್ರಮವಾಗಿ ನಿಲ್ಲಲೆಂದು. ಆ ಎರಡು ವರ್ಷಗಳು ಬರುವ ಮಾರ್ಚಿ ತಿಂಗಳಿಗೆ ಕೊನೆಗಂಡು, ಅವರು ಪುನಃ ತಮ್ಮ ರಾಜ್ಯಕ್ಕೆ ಹಿಂದಿರುಗುವರೆಂದು ಜನರ ನಂಬಿಗೆ. ಹಾಗೆಯೇ ಪತ್ರಿಕೆಗಳ ನಿರೀಕ್ಷೆ. ಇದನ್ನು ನೋಡಿ ಸರಕಾರವು ಅವಸರವಾಗಿ ಈ ಕೆಳಗಿನ ಅರ್ಥದ ಪ್ರಕಟಣೆಕೊಟ್ಟಿದೆ:—

'ಅಳ್ವಾರು ಮಹಾರಾಜರು ಬರುವ ಮಾರ್ಚಿ ತಿಂಗಳಲ್ಲಿ ತಮ್ಮ ಸಂಸ್ಥಾನಕ್ಕೆ ಮರಳಿ ಬಂದು ರಾಜ್ಯಭಾರವನ್ನು ನಡೆಸುವರೆಂದು ಪ್ರಕಟವಾದುದರ ಕಡೆಗೆ ಇಂಡಿಯಾ ಸರಕಾರದ ಗಮನ ಸೆಳೆಯಲ್ಪಟ್ಟಿದೆ. ರಾಜರು ಸಿಂಹಾಸನವನ್ನು ತೊಲಗಿ ಹೋದಾಗ ಅವರ ಸಂಸ್ಥಾನದ ರಾಜಕಾರಣವನ್ನು ಇಂಡಿಯಾ ಸರಕಾರವು ನೋಡಿಕೊಳ್ಳುವ ಶ್ರಮ ವಹಿಸಿತು. ಆ ರಾಜ್ಯದೊಳಗಿನ ಅಶಾಂತಿಯಲ್ಲ ನೀಗಿ, ಕಾರ್ಯನಿರ್ವಹಣದ ಯಂತ್ರವು ಕ್ರಮವಾಗಿ ನಡೆಯುತ್ತಿರುವ ತನಕ ಇಂಡಿಯಾ ದೊರೆತನವೇ ರಾಜ್ಯಭಾರವನ್ನು ನೋಡುವುದಾದ ಕಾರಣ, ಮಹಾರಾಜರು ಬರುವ ಮಾರ್ಚಿ ತಿಂಗಳಲ್ಲಿ ಬರುವಂತಿಲ್ಲ; ಎಂದಿಗೆ ಬರುವರೆಂಬುದಕ್ಕೆ ನಿಶ್ಚಿತ ಅವಧಿಯೂ ಇಲ್ಲ.'

"ನಾನು ಒಬ್ಬ ವಿನೀತ ಯೋಧನು" ಅಬ್ದುಲ್ ಗಫರ್ ಖಾನರವರ ಪ್ರಕಟಣೆ.

ವಾರ್ಧಕ್ಕೆ ಬಂದ ಗಫರ್ ಖಾನರವರು ಈ ಕೆಳಗಿನ ಒಂದು ಪ್ರಕಟಣೆ ಕೊಟ್ಟಿರುವರು:—

"ನನ್ನನ್ನು ಬರುವ ಕಾಂಗ್ರೆಸ್ ಸಭಾಧಿವೇಶನದಲ್ಲಿ ಅಧ್ಯಕ್ಷಸ್ಥಾನಕ್ಕೆ ಚುನಾಯಿಸಿ ಸನ್ಮಾನಿಸಲು ಬೊಂಬಾಯಿಯಲ್ಲಿ ಆಂದೋಲನವಿರುವುದೆಂದು ತಿಳಿದೆ. ನನ್ನ ಸ್ನೇಹಿತರ ಉದ್ದೇಶವನ್ನು ನಾನು ಬಲ್ಲೆ. ಈ ಘನತೆಯನ್ನು ಮುಸಲ್ಮಾನನಾದ ನನಗಿತ್ತರೆ ಹಿಂದೂ—ಮುಸ್ಲಿಂ ಐಕ್ಯ ಸಾಧನೆಯು ಸುಲಭವಾಗುವುದೆಂದು ಅವರ ಆಸೆ. ನನ್ನ ಪ್ರಾಂತ್ಯವು ಸ್ವಾತಂತ್ರ್ಯ ಸಂಗ್ರಾಮದಲ್ಲಿ ಮಾಡಿದ ಸ್ವಾರ್ಥತ್ಯಾಗದ ಸೇವೆಯನ್ನು ಗುರುತಿಸಿಯೂ ನನ್ನನ್ನು ಈ ರೀತಿಯಾಗಿ ಬಹುಮಾನಿಸಿರಬಹುದು. ಆದರೆ, ನಾನು ಹಿಂದೆ ಅನೇಕ ಬಾರಿ ಹೇಳಿದಂತೆ ಈಗಲೂ ಹೇಳುವೆನು—ನಾನು ದೇಶ ಸೇವೆಯಲ್ಲಿ ನನ್ನ ಕಿಂಚಿತ್ ಕಾರ್ಯಭಾಗವನ್ನು ಮಾಡಿ ಪೂರೈಸಲು ಹೊರಟಿರುವ ನಮ್ರ ಸೇವಕನು; ಯೋಧನು. ನಾಯಕನಾಗುವುದಕ್ಕಿಂತ ಯೋಧನಾಗಿಯೇ ಇರಬೇಕೆಂಬ ಕಾಂಕ್ಷೆ ನನಗೆ. ನಾನು ಅರ್ಪಿಸಿದ ಸ್ವಯಂ ಸೇವೆಯು ನನಗೆ ಅಧ್ಯಕ್ಷನಾಗುವ ಯೋಗ್ಯತೆಯನ್ನು ಇನ್ನೂ ತಂದಿಲ್ಲ. ಈ ಕಾರಣ, ಆ ಸೂಚನೆಯನ್ನು ಎಲ್ಲರೂ ಬಿಟ್ಟುಕೊಟ್ಟರೆ ಅವರಿಗೆ ಕೃತಜ್ಞನು. ನನ್ನ ಪ್ರಾಂತ್ಯಕ್ಕೆ ಮಾಡಬಹುದಾದ ಸಹಾಯವು ಅನೇಕ ವಿಧವಾಗಿದೆಯೆಂಬುದನ್ನು ಸೂಚಿಸಲಿಚ್ಛಿಸುತ್ತೇನೆ."

ಚೀನವು ಎಚ್ಚೆತ್ತಿತು! ಹಿಂದೂದೇಶದಲ್ಲಿ ವಾಣಿಜ್ಯಪ್ರಚಾರ.

ಚೀನಕ್ಕೆ ತನ್ನ ದೇಶದ ವ್ಯಾಪಾರವನ್ನು ಭೂಲೋಕದಲ್ಲೆಲ್ಲ ಪ್ರಸರಿಸಬೇಕೆಂಬ ಪ್ರಬಲವಾದ ಇಚ್ಛೆಯುಂಟಾಗಿದೆ.' ಈ ಕಾರ್ಯಕ್ಕಾಗಿ ವಾಣಿಜ್ಯ ವಿಶಾರದರ ಒಂದು ಕೂಟವು ಹಿಂದೂದೇಶದ ಸಂಚಾರಕ್ಕಾಗಿ ಹೊರಟು ಬಂದಿದೆ.

ಈ ಪ್ರಚಾರಕರ ಕೂಟವನ್ನು, ಚೀನಾ ಸರಕಾರವೂ, ಬೇಂಕುಗಳೂ, ಕಾರ್ಖಾನೆದಾರರೂ ಸಹಾಯವಿತ್ತು ಕಳುಹಿರುವರು. ಚೀನದಲ್ಲಿ ೭೭ ಕಾರ್ಖಾನೆದಾರರಿಂದ ಸಿದ್ಧವಾಗುವ ೨೦೦ ಬಗೆಯ ಸಾಮಾನುಗಳು ಇಲ್ಲಿ ಪ್ರಚಾರಕ್ಕೆ ಬರುವ ಸಂಭವವಿದೆ. ಮುಖ್ಯವಾಗಿ ಸೆಲುಲೈಡಿನ ನಾನಾ ಬಗೆಯ ವಸ್ತುಗಳು, ಪಾದರಕ್ಷೆಗಳು, ಅಲಂಕಾರದ ಸಾಮಗ್ರಿಗಳು, ಇಲೆಕ್ಟ್ರಿಕಲ್ ಸಾಮಾನುಗಳು, ಸಾಬೂನು, ಬೆಂಕಿಪೆಟ್ಟಿಗೆ, ತೈಲ್ಯಗಳು, ಕನ್ನಡಕಗಳು, ಪಿಂಗಾಣಿಯ ಬಟ್ಟಲುಗಳು, ಇವು ಬರಲಿವೆ.

ಈ ವ್ಯಾಪಾರ ಪ್ರಚಾರಕ ಕೂಟದವರು ಅವೆಲ್ಲ ಸಾಮಾನುಗಳ ಸ್ಯಾಂಪಲುಗಳನ್ನು ತಂದಿದ್ದಾರೆ. ಮದರಾಸು, ಬೊಂಬಾಯಿ, ಕಲ್ಕತ್ತಾ ಮೊದಲಾದ ಮುಖ್ಯ ನಗರಗಳಲ್ಲಿ ಇವರು ಸಂಚರಿಸಿ, ಏಜಂಟರನ್ನು ನೇಮಿಸುವರು. ಒಂದೆರಡು ಪ್ರದರ್ಶನಗಳನ್ನು ನಡೆಸುವರಂತೆ.

ಚೀನವು ಕೆಲವೊಂದು ಸಾಮಾನುಗಳನ್ನು, ಇತರ ದೇಶಗಳಿಗಿಂತ ಕಡಿಮೆ ಬೆಲೆಯಲ್ಲಿ ಅತ್ಯುಚ್ಚವಾಗಿ ತಯಾರಿಸಿ ಅತ್ಯಲ್ಪ ಬೆಲೆಗೆ ಮಾರಬಲ್ಲುದಾಗಿದೆ. ರೇಶ್ಮೆ, ಟುವಾಲು, ಮತ್ತು ಇಲೆಕ್ಟ್ರಿಕ್ ಫ್ಯಾನುಗಳನ್ನು ತಯಾರಿಸುವುದರಲ್ಲಿ ಚೀನವು ಹೆಸರುಹೊಂದಿದೆ.

ಜಾಪಾನು ಸಿದ್ಧವಾಗುತ್ತಿದೆ,—ಯುದ್ಧಕ್ಕೆ!

ಯುದ್ಧವೊಂದು ಬಂದೇಬರುವುದೆಂದು ಜಾಪಾನಿಗೆ ಭಯವಿದ್ದೇ ಇದೆ. ಜಾಪಾನು ತನ್ನ ಸಮರಸನ್ನಾಹಗಳನ್ನೆಲ್ಲ ಪೂರ್ಣಗೊಳಿಸುತ್ತಿದೆ.

ಬ್ರಿಟನು ತನ್ನ ಆಕಾಶ ಸೈನ್ಯದ ಕಡೆಗೆ ಹೆಚ್ಚಿನ ಗಮನ ಕೊಡುವಂತೆ ಜಾಪಾನೂ ಆ ಕಡೆಗೆ ತನ್ನ ಲಕ್ಷ್ಯಹರಿಸಿದೆ. ಶತ್ರುಗಳ ಬೋಂಬುಗಳನ್ನು ತಡೆವ ವಿಧಾನವಾವುದು ಎಂದು ಜಾಪಾನಿಗೆ ಚಿಂತೆ.

ಶತ್ರುಪಕ್ಷದವರು ಬಂದು ಆಕಾಶದ ಮೇಲಿಂದ ಕೈಗಾರಿಕೆಯ ಕೇಂದ್ರ ನಗರದಲ್ಲಿ ತಮ್ಮ ಯುದ್ಧ ಚಟುವಟಿಕೆಗಳನ್ನು ಪ್ರದರ್ಶಿಸುವರೆಂದು ಜಾಪಾನಿಗೆ ಗೊತ್ತು. ಅದು ಕಾರಣ, ಯೊಕಾಹಾಮಾ, ಒಸಾಕಾ ಮೊದಲಾದ ನಗರಗಳಲ್ಲೀಗ ವಿಮಾನಸೈನ್ಯವು ಸಿದ್ಧವಾಗುತ್ತಿದೆ. ಒಸಾಕಾದಲ್ಲಿ ಜಾಪಾನಿನವರ ಸೈನ್ಯಕ್ಕೆ ಬೇಕಾಗುವ ಹತ್ಯಾರುಗಳನ್ನು ಸಿದ್ಧಗೊಳಿಸುವ ದೊಡ್ಡ ಕಾರ್ಖಾನೆಗಳಿವೆ. ಜಾಪಾನ್ ರಾಷ್ಟ್ರದ ಯುದ್ಧಹತ್ಯಾರುಗಳಲ್ಲಿ ಸೇಕಡಾ ೮೦ರಷ್ಟು ಅಲ್ಲೆ ತಯಾರಾಗುತ್ತಿವೆ.

ಯುದ್ಧ ಹತ್ಯಾರುಗಳು ಸೇಕಡಾ ೧೫೦ರಷ್ಟು ಹೆಚ್ಚು!

೧೯೧೪ರಿಂದ ಇಂದಿನ ತನಕ, ಪ್ರಪಂಚದ ಪ್ರಬಲ ರಾಷ್ಟ್ರಗಳೆಲ್ಲ ಶಸ್ತ್ರಾಸ್ತ್ರಗಳನ್ನು ಕೂಡಿ ಹಾಕುತ್ತಲೇ ಇದ್ದು, ಇಂದಿಗೆ ಅಂದಿಗಿಂತ ಸೇಕಡಾ ೧೫೦ರಷ್ಟು ಹೆಚ್ಚಿವೆಯೆಂದು ಎಣಿಕೆಯಾಗಿದೆ. ೩೪೦ ಕೋಟಿ ರೂಪ್ಯಾ ಮೌಲ್ಯವಾಗುವಷ್ಟು ಹತ್ಯಾರುಗಳು ೧೯೧೪ರಲ್ಲಿದ್ದುವು. ಇಂದಿನ ಎಲ್ಲ ಸಾಮಗ್ರಿಗಳ ಮೌಲ್ಯ ೮೮೦ ಕೋಟಿ!

ರಷ್ಯವು ಮಾಡಿದ ವೆಚ್ಚಗಳು ಇತರ ರಾಷ್ಟ್ರಗಳಿಗಿಂತ ತುಲನಾತ್ಮಕವಾಗಿ ಅತಿ ಹೆಚ್ಚಿನವು. ಎರಡನೆಯ ಸ್ಥಾನವು ಫ್ರಾನ್ಸಿಗೆ ಸಲುತ್ತದೆ.

ವಿದೇಶೀ ಪತ್ರಿಕೆಗಳ ಮೇಲೆ ಜರ್ಮನಿಯ ನಿರ್ಬಂಧದ ಅಪ್ಪಣೆ.

ಜರ್ಮನ್ ಸರಕಾರವು, ವಿದೇಶೀ ಪತ್ರಿಕೆಗಳನ್ನು, ಪ್ರಾಮುಖ್ಯತೆ ಕೊಟ್ಟು ಅಲ್ಲಲ್ಲಿ ಕೂಗಾಡಿ ವಿಕ್ರಯಿಸಕೂಡದಾಗಿ ಕಟ್ಟಪ್ಪಣೆ ಮಾಡಿದೆಯಷ್ಟೆ? ಅದರ ರಹಸ್ಯವಿಷ್ಟೆ:—

ನಾಝಿಗಳು ಅಧಿಕಾರ-ಆರೂಢರಾದಂದಿನಿಂದ ಮುದ್ರಾಲಯ ಶಾಸನದ ಬಿಗುವು ಜರ್ಮನಿಗಳೊಳಗಣ ಪತ್ರಿಕೆಗಳ ಬಾಯಿಯನ್ನೂ ಬಿಗಿದುಬಿಟ್ಟಿದೆ. ಜರ್ಮನ್ ಪತ್ರಿಕೆಗಳಲ್ಲಿ ಇಂದು ವೈವಿಧ್ಯವಿಲ್ಲ. ಸಪ್ಪೆಯಾದ ಒಂದೇ ವಿಧದ—ನಾಝೀ ಸರಕಾರದ ಪ್ರಶಂಸೆಯ—ಗಾಯನ ಮಾತ್ರ ನಡೆಯುತ್ತಿದೆ. ಇದರಿಂದ ವಿದೇಶೀ ಪತ್ರಿಕೆಗಳಿಗಾಗಿ ಬೇಡಿಕೆಗಳು ಹೆಚ್ಚಿವೆ. ವಿದೇಶೀ ಪತ್ರಿಕೆಗಳು ಜರ್ಮನಿಯ ವಿಷಯಕವಾಗಿ ಕಟೂಕ್ತಿಗಳನ್ನಾಡುವುದೊಂದು; ದೇಶೀ ಪತ್ರಿಕೆಗಳ ಮಾರಾಟವಾಗುವುದಿನ್ನೊಂದು. ಇದಕ್ಕಾಗಿ ಜರ್ಮನ್ ಸರಕಾರವು ಆ ಆಜ್ಞೆ ಮಾಡಬೇಕಾಯಿತು?

ಪುಸ್ತಕಗಳ ವಿಷಯದಲ್ಲೂ ಅಂತಹ ನಿರ್ಬಂಧದ ಅಪ್ಪಣೆ ಜ್ಯಾರಿಯಲ್ಲಿದೆ. ಅಮೇರಿಕದ ಇಬ್ಬರು ಪ್ರಸಿದ್ಧ ಗ್ರಂಥಕರ್ತರ ಪುಸ್ತಕಗಳು ಪ್ರತಿಬಂಧಿಸಲ್ಪಟ್ಟವೆ.

FRESH CONSIGNMENT ARRIVED.

UNEQUAL QUALITY——————EXCEPTIONAL PRICE.

A TIRE THAT SAVES YOU REPUTATION AND MONEY.

The Canara Public Conveyance Co., Ltd.

M A N G A L O R E.

ಜ್ಞಾನ.

(ಪ್ರಬಂಧಮಾಲೆ)

ಲೇಖಕರು:—ಶ್ರೀ ಶಿವರಾಮ ಕಾರಂತ.

ಅಧ್ಯಾಯ ೧ನೆ.

ದೇಹಶಾಸ್ತ್ರ.

ನಮ್ಮ ಶರೀರವನ್ನು ಸಾಕುವುದಕ್ಕಿಂತ ಹೆಚ್ಚಿನ ಧರ್ಮ ಇಲ್ಲವೆಂದು ಸಂಸ್ಕೃತ ಶ್ಲೋಕವೊಂದು ಹೇಳುವುದು. ಆದುದರಿಂದ ಎಲ್ಲದಕ್ಕಿಂತ ಶ್ರೇಷ್ಠವಾದ ನಮ್ಮ ಶರೀರವು ಹೇಗೆ ಕೆಲಸಮಾಡುವುದೆಂದು ನೋಡುವ. ನಮ್ಮ ದೇಹದಲ್ಲಿ ಆರೆಂಟು ಡಿಪಾರ್ಟುಮೆಂಟುಗಳಿವೆ. (1) ಎಲುಬಿನ ಇಲಾಖೆ. (2) ಸ್ನಾಯುಗಳ ಇಲಾಖೆ (3) ಪಚನದ ಇಲಾಖೆ. (4) ರಕ್ತದ ಇಲಾಖೆ. (5) ನರಗಳ ಇಲಾಖೆ. (6) ಉಸಿರು ಇಲಾಖೆ.................ಇತ್ಯಾದಿ, ಇತ್ಯಾದಿ. ಈ ಇಲಾಖೆಗಳ ಸಹಾಯದಿಂದ ನಮ್ಮ ಶರೀರವು ನಿಂತು, ಮಲಗಿ, ಉಂಡು, ತಿಂದು, ತೇಗಿ ತಿರುಗುವುದು. ತೂಕಡಿಸಿ ನಿದ್ರೆಮಾಡುವುದು. ನಿದ್ರೆಯಿಂದ ಎಚ್ಚರಗೊಳ್ಳುವುದು—ಇತ್ಯಾದಿ ತರತರದ ಕೆಲಸಗಳನ್ನು ಮಾಡುವುದು.

ಎಲುಬಿನ ಇಲಾಖೆಯು

ನಮ್ಮ ದೇಹವನ್ನು ನಿಲ್ಲಿಸುವ ಇಲಾಖೆ. ಎಲುಬುಗಳ ಸಂಖ್ಯೆಯು ಒಂದೆರಡಲ್ಲ. ಅವುಗಳು ಸಂಖ್ಯೆಯಲ್ಲಿ 206 ಇದ್ದರೂ, ಪ್ರತಿಯೊಂದಕ್ಕೂ ಒಂದೊಂದು ಹೆಸರಿದೆಯೆಂಬುದು ಸಂತೋಷಕರ. ಇವುಗಳನ್ನು ಶರೀರದೊಳಗೆ ಅಲ್ಲಲ್ಲಿ ಚೆಲ್ಲದೆ ಒಟ್ಟಾಗಿ ಜೋಡಿಸಿಟ್ಟುದರಿಂದ, ಸತ್ತ ಮೇಲೆ ಅವೆಲ್ಲಾ ಒಟ್ಟಾಗಿ, ಬದುಕಿರುವ ಮೆಡಿಕಲ್ ಶಾಲೆಗಳ ವಿದ್ಯಾರ್ಥಿಗಳಿಗೆ ಉಪಯುಕ್ತವಾಗುವುದು. ಈ ಎಲುಬುಗಳು ಬದುಕಿರುವಾಗ—ಅತ್ತ ಇತ್ತ, ಇತ್ತ, ಸುತ್ತು, ಮುತ್ತ ತಿರುಗಬಲ್ಲವೆಂದೂ—ಅನಂತರ ಹಾಗೆ ಮಾಡುವುದಿಲ್ಲವೆಂದೂ ಹೇಳುತ್ತಾರೆ. ಈ ಬೋನುಗಳಲ್ಲಿ ಥೋರೇಸಿಕ್ ವರ್ಟಿಬ್ರವು ಬೆನ್ನಿನಲ್ಲೂ, ಸ್ಪೆನ್ಯಾಡಲ್ ಎಲುಬು ಮುಖದಲ್ಲೂ, ಮೆಟಟಾರ್ಸಲ್ಸ್—ಎಲುಬು ಪಾದಗಳಲ್ಲೂ ಉಂಟೆಂದು ತಿಳಿಯಬೇಕು.

ಬದುಕಿರುವ ಮನುಷ್ಯನ ಎಲುಬಿಗೆ ಸಹ, ಸತ್ತ ಆನೆಯ ದಂತಕ್ಕಿರುವಷ್ಟು ಬೆಲೆಯಿಲ್ಲವೆಂಬುದು ವಿಷಾದಕರವು.

ಸ್ನಾಯು ಇಲಾಖೆಯು.

ನಾವು ನಮ್ಮ ಎಲುಬಿನ ಗೂಡನ್ನು ಕಂಡು ಅಸಹ್ಯಪಡಬಾರದೆಂದೇ ಈ ಇಲಾಖೆಯ ಸ್ನಾಯುಗಳು ಅದನ್ನು ಮುಚ್ಚಿಕೊಳ್ಳುವುವು. ಈ ಸ್ನಾಯುಗಳೂ ಅವನ್ನು ಮುಚ್ಚುವ ಚರ್ಮವೂ ಇಲ್ಲವಾದರೆ (ತುಗ ಬಟ್ಟೆಬರೆಗಳು) ನಮ್ಮನ್ನು ಮೋಹಿಸಿ ಬರುವ ಜನರೇ ಇಲ್ಲವೆಂದು ಹೇಳುತ್ತಾರೆ. ಸ್ನಾಯುಗಳ ಸಂಖ್ಯೆಯೂ ಕಡಿಮೆಯಿಲ್ಲವಂತೆ. ಇವುಗಳು ನೂರಾರು ನಾರುಗಳ ಕಟ್ಟುಗಳಂತೆ. ಅದರಿಂದಲೇ ಕೋಳಿತ ಮೇಲೆ ಬಹಳವಾಗಿ ನಾರುವುವಂತೆ. ಇವುಗಳ ರಚನೆಯು ಹುರಿಹಗ್ಗದಂತಿದೆ ಎಂದು ತಿಳಿದರೆ ಸಾಕು. ಇವುಗಳಲ್ಲಿ—ಬಹಳ ಉಪಕಾರಿಯಾದುವು ಎದೆಗೂಡಿಗೆ ಶ್ವಾಸಕೋಶಗಳ ಸ್ನಾಯುಗಳೆಂದೂ, ನಮಗಾಗಿ ಅವು ಹಗಲಿರುಳು ಚಿಡಿಕೊಳ್ಳುತ್ತವೆಂದೂ ತಿಳಿಯಿರಿ. ಈ ಸ್ನಾಯುಗಳ ಮುಖ್ಯ ಕೊರತೆಯೆಂದರೆ ಅವುಗಳು ಆಹಾರವಿಲ್ಲದೆ ಬದುಕಲಾರವಂತೆ! ಇದಕ್ಕಾಗಿಯೆ ಮನುಷ್ಯನು ದೊಡ್ಡ ದೊಡ್ಡ ಆಫೀಸುಗಳಲ್ಲಿ ನಿಂತು, ಸಂಬಳವನ್ನು ಗಳಿಸಬೇಕಾಗುವುದು. ಇತ್ತೀಚೆಗೆ ಡಾಕ್ಟರರೆಂಬ ವೈದ್ಯರು—ಸ್ನಾಯುಗಳಿಗೂ ಹಲ್ಲುಕಚ್ಚು ನಿಕಟ ಸಂಬಂಧವಿದೆಯೆಂದು ಶೋಧಿಸಿದ್ದಾರೆ.

ಉಸುರಿನ ಇಲಾಖೆ.

ನಮ್ಮ ಎದೆಗೂಡಿನೊಳಗೆ ಎರಡು 'ಫುಟ್‌ಬಾಲ'ನಂಥ ಗಾಳಿಚೀಲಗಳಿವೆಯೆಂದೂ ಅವಿಲ್ಲವಾದರೆ ನಮ್ಮ ಗಾಳಿಯು ಹೊರಡುವುದು ಕಷ್ಟವೆಂದೂ ತಿಳಿದರೆ ಸಾಕು.

ನರಗಳ ಇಲಾಖೆ.

ನಮ್ಮ ಮೈತುಂಬ ನರಗಳು ಜೇಡನ ಬಲೆಯಂತೆ ಹರಡಿವೆ. ಜೇಡನ ಬಲೆಯ ಮೇಲೆ, ಎಲ್ಲಾದರೊಂದು ತುದಿಯಲ್ಲಿ ಒಂದು ನೊಣವು ಎರಗಿದರೇನಾಗುವುದು? ನೊಣಕ್ಕೆ ತಿಳಿಯುವುದು. ಹಾಗೆ—ಯಾರಾದರೂ ಬಂದು ನಮ್ಮ ಮೈಯನ್ನೆಲ್ಲಾದರೂ ಚಿವುಟಿದರೆ—ಅದರ ವರ್ತಮಾನವು ನಮ್ಮ ತಲೆ ಕಾಲುಗಳೊಳಗಿರುವ ಮಿದುಳಿಗೆ ತಲುಪುವುದು. ಅಲ್ಲಿಂದ ಮಿದುಳು ಚಿವುಟಲ್ಪಟ್ಟ ಸದರಿ ಸ್ಥಳಕ್ಕೆ ನರಗಳ ಮೂಲಕ ನೋವನ್ನು ಕಳುಹಿಸುವುದು. ಕೆಲವು ಪ್ರಸಂಗಗಳಲ್ಲಿ ನೋವನ್ನಲ್ಲದೆ ಇತರ ಸಾಮಾನುಗಳನ್ನೂ ಇದು ಕಳುಹಿಸುವುದೆಂದು ತಿಳಿದರೆ ಸಾಕು.

ರಕ್ತದ ಇಲಾಖೆ.

ನಾವು ಒಂದು ಹರಿತವಾದ ಕ್ಷೌರಕತ್ತಿಯನ್ನು ಹಿಡಿದು, ನಮ್ಮ ಕತ್ತನ್ನು ಕತ್ತರಿಸಿದರೆ—ದಳಗಳ ಹೊರಕ್ಕೆ ಹರಿಯುವ ಕೆಂಪು ನೀರೇ ರಕ್ತ. ಈ ಕೆಂಪು ನೀರು ಕಟ್ಟಿರೆ ನೀಲಬಣ್ಣದ ಅಶುದ್ಧರಕ್ತವಾಗುವುದು! ಈ ರಕ್ತವು ನಮ್ಮ ಶರೀರದೊಳಗಿರುವ ಹಲವು ಕೊಳಾಯಿ, ನಳ್ಳಿಗಳ ಮೂಲಕ ಇಡೀ ದಿನ ಸಂಚರಿಸುತ್ತಲೇ ಇರುವುದು. ಈ ಕೆಂಪು ನೀರು, ನಾವು ಕುಡಿಯುವ ಪಾನಕದಂತೆ ದ್ರವರೂಪವಾಗಿರುವುದಂತೆ. ಸೂಕ್ಷ್ಮವಾಗಿ ನೋಡಿದರೆ—ಅದರಲ್ಲಿ ಬಿಳಿ ಕೆಂಪು ಹುಡಿಗಳಿರುವುವಂತೆ! ಅದರ ಜತೆಗೆ ಒಂದು ತರದ ನೀರೂ ಇದೆಯಂತೆ. ಚರಂಡಿಯಲ್ಲಿ ಸೇರಿದ ಧೂಳಿನ ಕಣಗಳು ಅದನ್ನು ಕೆಂಪಾಗಿ ಮಾಡುವಂತೆ, ರಕ್ತದಲ್ಲಿನ ಈ ಕೆಂಪು ಕಣಗಳು ರಕ್ತವನ್ನು ಕೆಂಪಾಗಿ ಮಾಡುವುವು. ರಕ್ತದಿಂದ ನಮಗೆ ತುಂಬಾ ಉಪಕಾರವಿದೆಯೆಂದೂ, ನಾವು ತಿಂದ ಹಲ್ವವನ್ನು ಪತಿ ರೋಮರಂಧ್ರಕ್ಕೂ ಮುಟ್ಟಿಸುವ ಕೆಲಸವು ಅದರದ್ದೇ ಎಂದೂ ತಿಳಿಯಬೇಕು. ಇತ್ತೀಚೆಗೆ ಅದು "ಹಾರ್ಮೋನ್ಸ್" ಎಂಬ ಒಂದು ಜಾತಿಯ ಹೊಸ ಮಾಲುಗಳನ್ನು ತಯಾರಿಸುತ್ತಿದೆಯಂತೆ. ಇವಿಲ್ಲವಾದರೆ, ನಾವಿಷ್ಟರಲ್ಲೇ ಸತ್ತುಹೋಗಿರಬೇಕಂತೆ.

ವಿನಾಳ ಗ್ರಂಥಿಗಳು.

ನಮ್ಮ ಶರೀರದ ಬೇರೆ ಬೇರೆ ಭಾಗಗಳಿಗೆ ಬೇರೆ ಬೇರೆ ಹೆಸರಿದ್ದು, ಬೇರೆ ಬೇರೆ ತರದ ರಸಗಳನ್ನು ಉಂಟುಮಾಡುವ, ವಿನಾಳ ಗ್ರಂಥಿಗಳೆಂಬುವು ಇರುತ್ತವಂತೆ. ವಿನಾಳ ಗ್ರಂಥಿಗಳಿಗೆ ನಾಳಗಳಿಲ್ಲ, ಇವುಗಳು ತಮ್ಮ ಕೆಲಸಕ್ಕೆ ರಾಜಿನಾಮೆ ಕೊಟ್ಟರೆ, ನಾವು ಸಾಯಲೇಬೇಕಾಗುವುದಂತೆ. ಅವು ಅತಿಯಾಗಿ, ಇಲ್ಲವೆ ಕಡಿಮೆಯಾಗಿ ಕೆಲಸ ಮಾಡಿದರೂ ನಮಗೆ ಫಜೀತಿ ತಪ್ಪುವುದಿಲ್ಲ.

ಕತ್ತಿನಲ್ಲಿರುವ ಥ್ಯಾರೈಡ್ ಗ್ರಂಥಿಯು ಬಲು ಚುರುಕಾದರೆ ನಾವು ಗೋಮಟೇಶ್ವರರಂತೆ ಬೆಳೆಯುವೆವಂತೆ. ಇನ್ನೊಂದು ಗ್ರಂಥಿ ಬೆಳೆದರೆ ನಮ್ಮ ಮಿದುಳು ಹತ್ತಿಯ ಪಿಂಡೆಯಷ್ಟು ಬೆಳೆದೀತಂತೆ. ವೃಷಣ ಗ್ರಂಥಿಯು ಸತ್ಯಾಗ್ರಹಮಾಡಿದರೆ—ಮನುಷ್ಯನು ಕೂಡಲೆ ೧॥ ಇಂಚಿನಷ್ಟು ಉದ್ದವಾಗಿ ಬೆಳೆಯಬಹುದಂತೆ. ಕಲಿಯುಗದ ಅಂತ್ಯಕ್ಕೆ ಇಂಥ ಜನರೇ ಹೆಚ್ಚುವರೆಂದು ಶಾಸ್ತ್ರ ಹೇಳುತ್ತಿದೆಯಲ್ಲ. ಅದಕ್ಕೆ ಇದೇ ಮುಖ್ಯ ಕಾರಣವಿರಬೇಕು.

ಪಚನ ಇಲಾಖೆ.

ನಮ್ಮ ಶರೀರದಲ್ಲಿ ಪ್ರಥಮಸ್ಥಾನವು ಈ ಇಲಾಖೆಗೆ ಸಲ್ಲಬೇಕಾಗಿದೆ. ನಮ್ಮ ಹೊಟ್ಟೆಯಲ್ಲಿ ಜಠರಾಗ್ನಿ—ಎಂಬ ಬೆಂಕಿಯೊಂದಿದೆ ಎಂಬುದು ಸುಳ್ಳೆನ್ನುತ್ತಾರೆ. ಪ್ರಾಯಶಃ ಹಿಂದಿನಕಾಲದ ಜನರಿಗೆ ಈ ರೀತಿಯ ಒಲೆಗಳು ಹೊಟ್ಟೆಯಲ್ಲಿ ಇದ್ದಿರಬಹುದೆನ್ನುತ್ತಾರೆ. ಅವರಂತೆ ನಾವು ಹಸಿ ಗಡ್ಡೆಗೆಣಸುಗಳನ್ನು ತಿನ್ನುವುದಿಲ್ಲವಾದುದರಿಂದ ಅವುಗಳು ಈಗ ನೊಂದಿರಬೇಕು.

ನಾವು ಬಾಯಿಯಿಂದ ತಿಂದ ಆಹಾರವು, ಮಲರೂಪದಿಂದ ಶರೀರದಿಂದ ಹೊರಕ್ಕೆ ಹೋಗುವುದು ಆರು ತಿಂಗಳಿನ ಅರ್ಭಕನೂ ಅರಿತಂತಹ ವಿಷಯ. ಅದನ್ನು ನಾವು ಒತ್ತಿ ಹೇಳಬೇಕಾಗಿಲ್ಲ. ಮುಖ್ಯವಾಗಿ ತಿಂಡಿತಿನಸುಗಳ ರುಚಿಯನ್ನುಸವಿಯುವ ಶಕ್ತಿಯು—ನಾಲಗೆಗೆ ಮಾತ್ರ ಇದೆಯೆಂದೂ, ಡಿಪಾರ್ಟುಮೆಂಟಿನ ಉಳಿದ ಕೋಶನಾಳಗಳಿಗೆ ಇಲ್ಲವೆಂದೂ ತಿಳಿದರೆ ಸಾಕು. ಆದುದರಿಂದ ರುಚಿಯಾದ ಪದಾರ್ಥಗಳನ್ನು ಅತಿಯಾಗಿ ತಿನ್ನಲು ಬಯಸುವವನು, ಅದನ್ನು ನುಂಗದೇನೇ, ಜಗಿದು ಉಗಿದು ಬಿಟ್ಟರೆ, ಅವನಿಗೆ ಕಾಯಿಲೆಯು ಬಾರದೆಂದು ಡಾಕ್ಟರು ಅಭಿಪ್ರಾಯ ಪಡುತ್ತಾರೆ.

ನಮ್ಮ ಶರೀರದಲ್ಲಿ ಕಣ್ಣು, ಕಿವಿ, ಮೂಗು ಮೊದಲಾದ ಇತರ ಕೆಲವು ಸಾಮಾನುಗಳಿವೆಯೆಂದು ತಿಳಿಯಿರಿ. ಕಣ್ಣಿಂದ ಕಾಣುವ, ಕಿವಿಯಿಂದ ಕೇಳುವ, ಮೂಗಿನಿಂದ ಮೂಸುವ, ... ಇತ್ಯಾದಿ ಕೆಲಸಗಳನ್ನು ಇತ್ಯಾದಿ ಅವಯವಗಳಿಂದ ಮಾಡುತ್ತೇವೆ.

ನಮ್ಮ ಶರೀರದ ಜ್ಞಾನವು ಇಷ್ಟೆಲ್ಲ ಬೆಳೆದುದು ಡಾಕ್ಟರುಗಳಿಂದಾಗಿ. ಅವರು ರೋಗಗಳು ಎಲ್ಲಿ ಉಂಟಾಗುವುವೆಂದು ಶರೀರವನ್ನು ಹುಡುಕತೊಡಗಿದರು. ಆಗ ಈ ಅವಯವಗಳು ದೊರೆತುವು. ರೋಗಗಳು ಇರದಿರುತ್ತಿದ್ದರೆ ನಮಗೆ ಈ ಅಪಾರ ಜ್ಞಾನವೇ ಬರುತ್ತಿದ್ದಿಲ್ಲ.

ಈಗ ಶರೀರ ಶಾಸ್ತ್ರದ ಎರಡನೆಯ ಪ್ರಸ್ತಾವಕ್ಕೆ ಬರುವ. ಇದೇ ಆಹಾರ ವಿಜ್ಞಾನ. ಮನುಷ್ಯನು ಸಿಕ್ಕಿದ ಆಹಾರವನ್ನು ಸಿಕ್ಕಿದ ಹಾಗೆ ತಿನ್ನಬಾರದೆಂಬುದೇ ಇದರ ತಾತ್ಪರ್ಯ. ಕೆಲವು ಸಾರಿ, ತುಸು ಕಡೆದು ತಿನ್ನಬೇಕು. ಕೆಲವನ್ನು ಬಿಟ್ಟೇ ಬಿಡಬೇಕು. ಕೆಲವನ್ನು ತಾನು ತಿನ್ನದೆ ಇತರರಿಗೆ ಕೊಡಬೇಕು, ಬಿಸಿ ದೋಸೆಯು ಪ್ರಥಮ ವರ್ಗಕ್ಕೂ, ಕಲ್ಲು ಎರಡನೆಯ ವರ್ಗಕ್ಕೂ, ಔಷಧ ಮತ್ತು ವಿಷಗಳು ಮೂರನೆಯ ವರ್ಗಕ್ಕೂ ಸೇರುವ ಪದಾರ್ಥಗಳು.

ನಮ್ಮ ಆಹಾರದಲ್ಲಿ ಹಿಟ್ಟು, ಕೊಬ್ಬು, ಪ್ರೋಟೀನುಗಳೆಂಬ ಪದಾರ್ಥಗಳಿವೆಯಂತೆ. ಹಂದಿ, ತೆಂಗಿನ ಕಾಯಿಗಳಲ್ಲಿ ಜಾಸ್ತಿ ಪ್ರೋಟೀನೂ, ಬಾಳೆಕಾಯಿ, ಇಡ್ಲಿಗಳಲ್ಲಿ ಹಿಟ್ಟು ಹೆಚ್ಚೆಂದೂ, ಎಣ್ಣೆಯಲ್ಲಿ ಕೊಬ್ಬು ಅಧಿಕವೆಂದೂ ಶೋಧಿಸಿ ನೋಡಿದ್ದಾರೆ. ಇಷ್ಟ ಪ್ರಧಾನವಾದ (ಅಂದರೆ ಹಿಟ್ಟು ಹೆಚ್ಚಾಗಿರುವ) ಪದಾರ್ಥಗಳು—ಚಟುವಟಿಕೆಯನ್ನು ಕೊಡುವುವು. ಆದುದರಿಂದ ಆಫೀಸುಗಳಲ್ಲಿ ತುಂಬಾ ಕೆಲಸಮಾಡಬೇಕಾದ ಗುಮಾಸ್ತರು, ಪ್ರತಿ ದಿನ—ಹೋಟೇಲುಗಳ ಇಡ್ಲಿ ದೋಸೆಗಳನ್ನು ತಿನ್ನುವುದು ಅವಶ್ಯಕ. ಪ್ರೋಟೀನು ಬೆಳವಣಿಗೆಗೆ ಅವಶ್ಯ.

ನಮ್ಮ ಆಹಾರದಲ್ಲಿ, ಅವನ್ನು ಹಣ ಕೊಟ್ಟೇ ಕೊಂಡುಕೊಳ್ಳುವ ನಮ್ಮ ಕಣ್ಣಿಗೇನೆ ಕಾಣಸಿಗದ—ವಿಟಮಿನ್ ಎಂಬ ಸೂಕ್ಷ್ಮ ವಸ್ತುಗಳಿವೆಯಂತೆ. ಇವುಗಳ ಸಂಖ್ಯೆಯು ಕನಿಷ್ಠ Aಯಿಂದ Z ತನಕ ಅಂದರೆ 26 ಆದರೂ ಇರಬೇಕೆಂದೂ, ಈಗ ತತ್ಕಾಲಕ್ಕೆ A—Hರ ತನಕ ಶೋಧನೆ ಮಾಡಲಾಗಿದೆಯೆಂದೂ ತಿಳಿಯುತ್ತದೆ. ಉಳಿದುವುಗಳನ್ನು ಮುಂದೆ ಬರಲಿರುವ ಡಾಕ್ಟರರಿಗೆ ಬಿಡಲಾಗಿದೆ. ಕಾರಣ—ಅವರು ವಿಟಮಿನ್—ರಹಿತರಾಗಬೇಕಷ್ಟೆ. ಇವುಗಳಲ್ಲಿ ಕೆಲವು ವಿಟಮಿನುಗಳು ಹಾಲಿನಲ್ಲೂ, ಕೆಲವು ತರಕಾರಿಯಲ್ಲೂ ಇರುವುವಂತೆ. ಅವುಗಳನ್ನು ತಿಂದರೆ ಕೆಡುಕೇ ಆಗದಂತೆ. ಬೆಳೆಯುವ ಮಕ್ಕಳಿಗೆ ವಿಟಮಿನು ಅತಿ ಅವಶ್ಯವೆನ್ನುತ್ತಾರೆ. ಯಾರಾದರೂ ಬೆಳೆಯದೆ ಹೋದರೆ (ಬುದ್ಧಿ ಸಹ) ಅದು ವಿಟಮಿನಿನ ಕೊರತೆಯಿಂದಲೇ ಎಂದು ತಿಳಿಯಬೇಕು.

ಈ ಎಲ್ಲಾ ವಸ್ತುಗಳನ್ನು ಅಂದರೆ ವಿಟಮಿನು, ಪ್ರೋಟೀನು ಇತ್ಯಾದಿಗಳನ್ನು ಮನುಷ್ಯನು ತನ್ನ ಪ್ರಾಯ, ತೂಕ, ಕೆಲಸ, ಸಂಪತ್ತು, ಸಾಲಮೂಲಗಳನ್ನು ನೋಡಿ—ಯುಕ್ತ ಪ್ರಮಾಣದಿಂದ ಸ್ವೀಕರಿಸತಕ್ಕದ್ದು.

ಈಗ ಶರೀರ ಧರ್ಮದ ಮೂರನೆಯ ವಿಷಯವನ್ನು ಯೋಚಿಸುವ. ಇದು ವ್ಯಾಯಾಮವನ್ನು ಕುರಿತಾದ ವಿಷಯ. ಮನುಷ್ಯನು (ಅಂದರೆ ನಾವು) ಆರೋಗ್ಯವಂತನಾಗಿರಲು ಅವನ ಶರೀರವು (ಅಂದರೆ ನಮ್ಮ) ಏನಾದರೊಂದು ಕೆಲಸವನ್ನು ಮಾಡುತ್ತಿರಬೇಕು. ಪ್ರಾಣಿಗಳು ರೋಗರಹಿತವಾಗಿರಲು—ಓಟ, ಹಾರಾಟ, ನಡೆಯುವಿಕೆ, ಸಿಪ್ಪಾಟ ಮೊದಲಾದ ಕೆಲಸಗಳೇ ಕಾರಣವಂತೆ. ಪ್ರಾಣಿಗಳು ಆಹಾರ ಸಂಪಾದನೆಗೆ ಈ ಎಲ್ಲ ಕೆಲಸಗಳನ್ನು ಮಾಡುವುವು. ಆದರೆ ಮನುಷ್ಯನು (ಅಂದರೆ ಗಂಡಸು) ಹೆಂಗಸು ಮಾಡಿದ ಅಡುಗೆಯನ್ನೋ, ಹೊಟೇಲಿನ ತುಪ್ಪದ ದೋಸೆಯನ್ನೋ ತಿನ್ನತೊಡಗಿದುದರಿಂದ—ಶರೀರ ಶ್ರಮವನ್ನು ಮಾಡುತ್ತಲಿಲ್ಲವೆಂದು ತಿಳಿಯಬೇಕು. ಇದರಿಂದಾಗಿ ನಮ್ಮ ಶರೀರವು ದುರ್ಬಲವಾಗುವುದು. ಮಾನ್ಯ ಸರಕಾರದವರು ಅಮಾನ್ಯ ಕೈದಿಗಳಿಂದ ಮಾನ್ಯ ಜೈಲುಗಳಲ್ಲಿ—ನಾನಾ ಕೆಲಸಗಳನ್ನು ಮಾಡಿಸಲು ಇದೇ ಮಾನ್ಯ ಕಾರಣವು ಮುಖ್ಯವಂತೆ.

ದುಡ್ಡಿನ ಅಪೇಕ್ಷೆಯಿಂದ ಮಾಡುವ ಶರೀರ ಶ್ರಮವು ಕೆಲಸವೆಂದೂ, ಈ ಅಪೇಕ್ಷೆಯಿಲ್ಲದೆ ಮಾಡುವ ನಿಷ್ಕಾಮ ಕರ್ಮವು ವ್ಯಾಯಾಮವೆಂದೂ—ಎನಿಸುವುವು. ಇದರಲ್ಲಿ ಎರಡನೆಯದೇ ಶ್ರೇಷ್ಠವೆನ್ನಲು ಭಗವದ್ಗೀತೆಯೇ ಆಧಾರವು. ಆದುದರಿಂದಲೇ ಶರೀರ ವ್ಯಾಯಾಮಮಾಡುವವರಿಗೆ ದೇವರು ಒಲಿಯುವನು. ಆಂಜನೇಯನು ರಾಮಚಂದ್ರನ ಪ್ರೀತಿಗೆ ಪಾತ್ರನಾಗಲು ಅವನ ನಿಷ್ಕಾಮ ವ್ಯಾಯಾಮವೇ (ಕೆಲಸ) ಕಾರಣವಲ್ಲವೇ!

ಮನುಷ್ಯನು—ಬರೇ ಒಂದೊಂದೇ ಅವಯವದಿಂದ ವ್ಯಾಯಾಮ ಮಾಡಿಸಿದರೆ, ಅದೊಂದೊಂದೇ ಬೆಳೆದುಕೊಳ್ಳುವುದು. ವಿನಾಯಕನು ಅತಿಯಾಗಿ ಹೊಟ್ಟೆಗೇನೆ ವ್ಯಾಯಾಮ ಕೊಟ್ಟನು. ಪೂರ್ಣ ವಿನಾಯಕರಾಗಬೇಕಾದರೆ—ಮನುಷ್ಯನು ಮೈತುಂಬ ವ್ಯಾಯಾಮ ಮಾಡಬೇಕು.

ವಾರ್ಧಾ ಸಭೆಯ ಫಲಿತಾಂಶ

[illegible]

ದಕ್ಷಿಣಾಫ್ರಿಕದ ಏಜಂಟ ಜನರಲ್ ಮಹಾರಾಜಾ ಸರ್ ಕುನ್ವರ್ ಸಿಂಘರವರು [illegible] ಹೊರಟು ಬರುವರೆಂದೂ ಅವರ ಸ್ಥಾನದಲ್ಲಿ [illegible] ಮಹಮ್ಮದೀಯನನ್ನು ನೇಮಿಸುವರೆಂದೂ ಸುದ್ದಿ. ಅಲ್ಲಿಗೆ ಕಳುಹಲ್ಪಟ್ಟ ಮೊದಲನೆಯ ಏಜಂಟರು ಬ್ರಾಹ್ಮಣರು; ಎರಡನೆಯವರು ರೆಡ್ಡಿಗಳು; ಮೂರನೆಯವರು [illegible]; ಇನ್ನು ನಾಲ್ಕನೆಯವರು ಮಹಮ್ಮದೀಯರಾದ ಮೇಲೆ ಐದನೆಯ ಸ್ಥಾನದಲ್ಲಿ ಆಂಗ್ಲೋ—ಇಂಡಿಯಾನರನ್ನೆ ಕಳುಹಬಾರದೇಕೆ?—ಆಫ್ರಿಕಕ್ಕೆ ಬೇಕು ಬಣ್ಣಗಳು.

* * *

ಶಿವಮೊಗ್ಗದಲ್ಲಿ ಇತ್ತೀಚೆಗೆ ಒಂದು ಹುಡುಗಿಯನ್ನು ಅಪಹರಿಸಿದ ಮೊಕದ್ದಮೆ! ಚಿಂತಾಮಣಿ ಕನ್ಯಾಪಹಾರ ಮೊಕದ್ದಮೆಯ ನಂತರ ಬಹುಶಃ ಇದು ನಾಲ್ಕನೆಯ 'ಅಪಹಾರ.' ಮಾದರಿಯು ಮೈಸೂರು ಕನ್ಯಾಪಹಾರದಲ್ಲೂ 'ಮಾದರಿ'ಯಾಗುವುದೆಂದು ಮಾತ್ರ, ಇನ್ನು ಕೆಲವು ಇಂತಹ 'ಅಪಹಾರ'ಗಳಾಗದೆ ಯಾರೂ ಎಣಿಸಬಾರದು.

* * *

ಹುಡುಗಿಯರನ್ನು ಹುಡುಗಿಯರೇ ಅಪಹರಿಸಿದರೆಂದು ನಾವು ಎಂದಿನ ತನಕ ಎಲ್ಲಿಯೂ ಓದುವುದಿಲ್ಲವೋ ಅಲ್ಲಿಯ ತನಕ ಅಲ್ಲಿ ಗಂಡಸರಿರಬೇಕೆಂದು ಸುಲಭವಾಗಿ ಊಹಿಸಬಹುದು.

* * *

ನಮ್ಮ ನಗರದ ಇಪ್ಪತ್ತಾರು ವಾರ್ಡುಗಳ ಮೂವತ್ತೆರಡು ಸ್ಥಾನಗಳಿಗೆ ಈ ಬಾರಿ ಸುಮಾರು ಐವತ್ತು ಉಮೇದ್ವಾರರು, ವಾರ್ಡುಗಳನ್ನೂ ಸೀಟುಗಳನ್ನೂ ಹೆಚ್ಚಿಸಿದ ಒಂದು ವ್ಯಕ್ತ ಫಲವೆಂದರೆ ಎಷ್ಟು ಬಗೆಯ ಎಷ್ಟು ಮಂದಿ ನಗರಭಕ್ತರು ನಮ್ಮಲ್ಲಿರುವರೆಂದು ತಿಳಿದುಬಂದುದು.

* * *

ಕಳೆದೆರಡು ವಾರಗಳಿಂದ ಬೊಂಬಾಯಿಯಿಂದ ಚಿನ್ನವು ಪರದೇಶಗಳಿಗೆ ರಫ್ತಾಗದ ರಹಸ್ಯವೇನೆಂದು ಕೊಂಚ ತಿಳಿದುಬಂದಂತಿದೆ. ನಾಟಕಗಳನ್ನು ಮಾಡಿಸುವವರಿಗೂ ಅಭಿನಯಿಸುವವರಿಗೂ ಪದಕಗಳು ಬೇಕಾಗಿವೆ!

* * *

ಪದಕಗಳನ್ನು ಪಡೆವ ಅರ್ಹತೆಯ ರಹಸ್ಯವನ್ನು ತರುಣ ಕವಿಗಳೊಬ್ಬರು ಹೀಗೆ ಭೇದಿಸಿರುವರು.—"ಸ್ತ್ರೀಯಾಗಲಿ ಪುರುಷನಾಗಲಿ ಬಹು ಜನಪ್ರೀತಿಗೆ ಪಾತ್ರರಾಗಬೇಕು."

* * *

ತುರ್ಕಿಯೊಡನೆ ಜಪಾನಿನ ಒಂದು ವಿಚಿತ್ರ ಕರಾರು:—ತುರ್ಕಿಗೆ ಜಪಾನು ೧೦ ಯುದ್ಧ ನೌಕೆಗಳನ್ನು ಕೊಟ್ಟು ಬದಲಾಗಿ ತನ್ನ ಕೆಲವೊಂದು ಸಾಮಾನುಗಳ ಮೇಲೆ 'ತುರ್ಕಿಯಲ್ಲಿ ತಯಾರಾದುದು' ಎಂಬ ಮೊಹರನ್ನೊತ್ತಲು ಅಪ್ಪಣೆಕೊಡಬೇಕು!

* * *

ಆದರೆ, ಕೆಮಲ್ ಪಾಶಾರವರೇನೂ ಕೇಮಲ್ (ಒಂಟೆ) ಅಲ್ಲ. 'ತುರ್ಕಿಯಲ್ಲಿ ತಯಾರಾದುದು' ಎಂದು ಬರೆಯಲು ಅಪ್ಪಣೆ ಕೊಟ್ಟು, 'ಜಪಾನಿನವರಿಂದ; ತುರ್ಕಿ ಸರಕಾರದ ಪರವಾನಗಿ ಪಡೆದು' ಎಂದು ಆವರಣದೊಳಗೆ, ಅದರ ಕೆಳಗೆ ಬರೆಯಲೇಬೇಕೆಂಬ ಆಜ್ಞೆ ಮಾಡಿ, ತುರ್ಕಿಯ ಮಾನ ಕಾಪಾಡುವ ಮುತ್ಸದ್ದಿಗಳವರೆಂದು ನಂಬಿಕೆ.

* * *

ನಗರದೊಳಗೆ ದಿನೇ ದಿನೇ ಹೆಚ್ಚುತ್ತಿರುವ ಕಳ್ಳತನವನ್ನು ಕಡಿಮೆಮಾಡಲು ಯಾವುದಾದರೊಂದು ಉಪಾಯವನ್ನು ಕೈಕೊಳ್ಳಬೇಕೆಂದು ಮದರಾಸು ನಗರ ಸಭೆಯಲ್ಲಿ ಒಬ್ಬ ಸದಸ್ಯರ ಸೂಚನೆ. ಮಾತುಗಳನ್ನು ಕಡಿಮೆ ಮಾಡುವುದು ಪ್ರಥಮ ಉಪಾಯವೆಂದು ನಮ್ಮ ಸೂಚನೆ.

ರಾಷ್ಟ್ರೀಯ ಕಾಂಗ್ರೆಸ್ಸು ಸಂಘಗಳೊಳಗೆ ಒಡಕು.

ಕಾಂಗ್ರೆಸ್ ಪಾರ್ಲಿಮೆಂಟರಿ ಬೋರ್ಡು ಮತ್ತು ರಾಷ್ಟ್ರೀಯ ಪಕ್ಷಗಳೊಳಗೆ ಒಪ್ಪಿಗೆ ಆಗಬಹುದೆಂದಿದ್ದ ಆಶೆಯು ನಿಷ್ಫಲವಾಯಿತು. ಎರಡು ಸಂಘಗಳ ಕಡೆಯಿಂದಲೂ ಅಯಾ ಕಾನ್ಸ್ಟಿಟ್ಯೂಯನ್ಸಿಗಳಲ್ಲಿ ರಿಜರ್ವ್ ಸೀಟುಗಳನ್ನಿರಿಸಬೇಕೆಂಬ [illegible] ಮತ ಕೊಡುವ ಸ್ವಾತಂತ್ರ್ಯವಿರಬೇಕೆಂಬ, ಮತ್ತು ಒಂದು ಪಕ್ಷದವರಾಗಿ ಮತ್ತೊಂದು ಪಕ್ಷವು ಉಮೇದ್ವಾರರನ್ನು ನಿಲ್ಲಿಸದೆ ಹಿಂದೆಗೆಯಬೇಕೆಂಬ ಸೂಚನೆಗಳೆಲ್ಲ ಬಿದ್ದುಹೋದುವು. ಮಾಳವೀಯರು ಪ್ರತಿಯೊಂದು ಪ್ರಾಂತ್ಯದಲ್ಲಿ ತಮ್ಮ ಪಕ್ಷಕ್ಕೆ ಸ್ಥಾನಕೊಡಬೇಕೆಂದು ಕೇಳಿದರು. ಮೊದಲು ಒಟ್ಟು ೧೦ ಸ್ಥಾನಗಳನ್ನು ಮಾಲವೀಯರು ಕೇಳಿದುದನ್ನು ಕಾಂಗ್ರೆಸ್ ಪಾರ್ಲಿಮೆಂಟರಿ ಬೋರ್ಡಿನವರು ಒಪ್ಪಿದ್ದರೆಂದೂ, ಆದರೆ ಕೊನೆಗೆ ಹೆಚ್ಚು ಸೀಟುಗಳನ್ನು ಕೇಳಿದರೆಂದೂ ತಿಳಿದುಬಂದಿದೆ. ಅಸ್ಸಾಮಿನಲ್ಲಿ ೧, ಬಂಗಾಳದಲ್ಲಿ ೩, ಬಿಹಾರದಲ್ಲಿ ೩, ಯುಕ್ತಪ್ರಾಂತ್ಯದಲ್ಲಿ ೩, ಮಧ್ಯಪ್ರಾಂತ್ಯದಲ್ಲಿ ೩, ಪಂಜಾಬ ೩, ಬೊಂಬಾಯಿ ೩; ಹೀಗೆ ಮಾಲವೀಯರ ಕೇಳಿಕೆ. ಇದಕ್ಕೆ ಪಾರ್ಲಿಮೆಂಟರಿ ಬೋರ್ಡಿನ ಒಪ್ಪಿಗೆಯಿಲ್ಲ.

ಆದರೂ, ಮಾಲವೀಯ, ಅಣೆ, ಮತ್ತು ಸರ್ದಾರರಿರುವ ಕಾನ್ಸ್ಟಿಟ್ಯೂಯನ್ಸಿಗಳಲ್ಲಿ, ಕಾಂಗ್ರೆಸ್ಸಿನವರು ಸ್ಪರ್ಧೆಗೆ ನಿಲ್ಲಬಾರದೆಂದು ಠರಾವಾಗಿದೆ

ಕಾಂಗ್ರೆಸ್ ಪಾರ್ಲಿಮೆಂಟರಿ ಬೋರ್ಡಿನವರು ತಮ್ಮ ಕಡೆಯ ಉಮೇದ್ವಾರರ ಪಟ್ಟಿಯನ್ನು ಈ ರೀತಿ ತಯಾರಿಸಿರುವರು: ಮದರಾಸು ಪ್ರಾಂತ್ಯದಿಂದ ೧೧ ಉಮೇದ್ವಾರರು; ಬೊಂಬಾಯಿ ಪ್ರಾಂತ್ಯ—೭; ಪಂಜಾಬ ಪ್ರಾಂತ್ಯ—೪; ಮಧ್ಯಪ್ರಾಂತ್ಯ—೪; ಸಿಂಧ್—೨; ಬಂಗಾಳ—೫; ಅಸ್ಸಾಮ್—೧; ಬಿಹಾರ್—೩; ಯುಕ್ತಪ್ರಾಂತ್ಯ ೪; ಗಡಿಪ್ರಾಂತ್ಯ—(ತಿಳಿದುಬಂದಿಲ್ಲ)

ಸೊಂಡೂರಿನಲ್ಲಿ ಚೀಫ್ ಕೋರ್ಟು.

ಸೊಂಡೂರಿನ ಪ್ರಭುಗಳು ಒಂದು ಚೀಫ್ ಕೋರ್ಟನ್ನು ಸ್ಥಾಪಿಸಿರುವರು. ಇದಕ್ಕೆ ಸದ್ಯಕ್ಕೆ ನ್ಯಾಯಾಧೀಶರಾಗಿ, ಬಳ್ಳಾರಿಯ ಸೆಶನ್ಸ ಜಡ್ಜರು ಕೆಲಸ ನೋಡುವರು.

ಎಸೆಂಬ್ಲಿ ಚುನಾವಣೆಗಳು.

ಎಸೆಂಬ್ಲಿಯ ಚುನಾವಣೆಗಳ ದಿನವು ನಿಶ್ಚಿತವಾಗಿಲ್ಲ. ಇದೇ ಬರುವ ನವಂಬರ ತಾ. ೧೦ನೇ ದಿನವನ್ನು ಮದರಾಸು ಪ್ರಾಂತ್ಯದಲ್ಲಿ, ವೋಟು ಕೊಡುವ ದಿನವಾಗಿ ನಿರ್ಧರಿಸಿ ಪ್ರಕಟನೆ ಕೊಡಬಹುದೆಂದು ನಿರೀಕ್ಷಿಸಲಾಗಿದೆ.

ಕಾಂಗ್ರೆಸ್ ಪಾರ್ಲಿಮೆಂಟರಿ ಬೋರ್ಡು.

ಚುನಾವಣೆಗಳ ಕೆಲ್ಸಗಳ ಬಗ್ಗೆ ಕಾಂಗ್ರೆಸ್ ಪಾರ್ಲಿಮೆಂಟರಿ ಬೋರ್ಡಿನವರು ೨೫ ಸಾವಿರ ರೂಪಾಯಿಗಳನ್ನು ಶೇಖರಿಸಿರುವರೆಂದು ತಿಳಿದುಬರುತ್ತದೆ.

ಹೊಸ ಸುಧಾರಣೆಗಳು.

ಶ್ವೇತಪತ್ರದಲ್ಲಿ ನಮೂದಿಸಿದ ಸುಧಾರಣೆಗಳು ನಮ್ಮ ದೇಶದಲ್ಲಿ ಯಾವಾಗ ಜ್ಯಾರಿಗೆ ಬರುವುವೆಂಬುದರ ಕುರಿತು "ಯುನೈಟೆಡ್ ಪ್ರೆಸ್ಸಿ"ನವರು ಹೀಗೆ ನುಡಿಯುತ್ತಾರೆ: — ಹೊಸ ಸುಧಾರಣೆಗಳು ೧೯೩೬ನೇ ಅಕ್ಟೋಬರ ತಿಂಗಳಿಗಿಂತ ಮುಂಚಿತವಾಗಿ ಜ್ಯಾರಿಗೆ ಬರುವಂತೆ ತೋರುವುದಿಲ್ಲ. ಜೊಯಿಂಟ್ ಪಾರ್ಲಿಮೆಂಟರಿ ಕಮಿಟಿಯ ವರದಿಯು ಇದೇ ನವಂಬರ ತಿಂಗಳಲ್ಲಿ ಪ್ರಕಟವಾಗಬಹುದು. ಆ ನಂತರ ಸಾರ್ವಜನಿಕ (ಕಾಂಗ್ರೆಸ್ ಸಹಿತ) ಅಭಿಪ್ರಾಯಸಂಗ್ರಹಕ್ಕೆ ಮೂರು ತಿಂಗಳ ಕಾಲ ಹಿಡಿಯಬಹುದು. ಪ್ರಾಂತಿಕ ಸರಕಾರಗಳ ಅಭಿಪ್ರಾಯವನ್ನು ಸ್ವೀಕರಿಸಿ, ಅದನ್ನು ಸ್ಟೇಟ್ ಸೆಕ್ರೆಟರಿಗಳವರಿಗೆ ೧೯೩೫ನೇ ಮೇ ತಿಂಗಳೊಳಗೆ ಕಳಿಸುವರು. ಆದಾದ ನಂತರ, ಡೀಲಿಮಿಟೇಶನ್ ಕಮಿಟಿಯ ಸಲಹೆಯಂತೆ ಹೊಸ ಮತದಾರರ ಪಟ್ಟಿಗಳನ್ನು ತಯಾರಿಸಲು ಮೂರು ತಿಂಗಳುಗಳು ಬೇಕಾಗಬಹುದು. ೧೯೩೫ನೇ ಡಿಸೆಂಬರದಲ್ಲಿ ಈ ಹೊಸ ಸುಧಾರಣೆಗಳ ಯೋಜನೆಯನ್ನು ಪಾರ್ಲಿಮೆಂಟಿನ ಮುಂದಿಡಬಹುದು. ಆ ನಂತರ ಹೊಸ ಚುನಾವಣೆಗಳು ೧೯೩೬ನೇ ಎಪ್ರಿಲಿನಲ್ಲಿ ನಡೆದು, ಹೊಸ ಸುಧಾರಣೆಗಳು ೧೯೩೬ನೇ ಅಕ್ಟೋಬರದಲ್ಲಿ ಜ್ಯಾರಿಗೆ ಬರಬಹುದೆಂದು ಅಂದಾಜು ಮಾಡಲಾಗಿದೆ.

ಮದರಾಸು ನಗರದಲ್ಲಿನ ಅನಾರೋಗ್ಯಕರ ಮನೆಗಳು.

ನಗರಗಳಲ್ಲಿ ಅನಾರೋಗ್ಯಕರವಾದ ಗುಡಿಸಲುಗಳು ಇರುವುದು ನಗರಗಳಿಗೆ ಭೂಷಣವಲ್ಲ. ಅವುಗಳನ್ನು ತೆಗೆದು ಆರೋಗ್ಯಕರವಾದ ಮನೆಗಳನ್ನು ಕಟ್ಟಿಸಿಕೊಡುವ ಏರ್ಪಾಡನ್ನು ನಾಗರಿಕ ಸರಕಾರಗಳು ಮಾಡುತ್ತಿವೆ. ಮದರಾಸಿನಲ್ಲಿ ಈ ವಿಷಯ ತನಿಖೆ ನಡೆಸಿ ವರದಿಯನ್ನೊಪ್ಪಿಸುವಂತೆ ನಗರಸಭೆಯವರು ಒಂದು ಕಮಿಟಿಯನ್ನು ನೇಮಿಸಿದ್ದರು. ಅದರ ಸಲಹೆಗಳ ಸಾರಾಂಶ ಹೀಗಿದೆ:—ಅತಿಹೀನವಾದ ಗುಡಿಸಲುಗಳನ್ನು ತೆಗೆದು ಹೊಸ ಮನೆಗಳನ್ನು ಕಟ್ಟಿಸಲು ೧ ಕೋಟಿ ರೂಪಾಯಿಗಳು ಬೇಕಾಗಬಹುದು. ಬಡ್ಡಕರಗತಿಯವರಿಗೆ ೧೦ ಸಾವಿರ ಮನೆಗಳು ಬೇಕಾಗಿವೆ. ಇದಕ್ಕೆ ೨೨ ಲಕ್ಷ ರೂಪಾಯಿಗಳು ಬೇಕಾಗಿವೆ. ಇಷ್ಟನ್ನೂ ಸರಕಾರದಿಂದ—ಅರೆವಾಸಿ ಸಾಲವಾಗಿಯೂ ಉಳಿದುದನ್ನು ಗ್ರಾಂಟಾಗಿಯೂ ಪಡೆಯಬಹುದು.

ಮದರಾಸು ನಗರದಲ್ಲೀಗ, ಸ್ಥಳ ಸಂಕೋಚವಾಗಿ "ಕಿಕ್ಕಿರಿದ" ಮನೆಗಳು ೨೨,೫೦೦ ಇವೆ. ಇದು ಆ ನಗರದ ಒಟ್ಟು ಮನೆಸಂಖ್ಯೆಯ ಶೇಕಡಾ ಇಪ್ಪತ್ತು!

ದಕ್ಷಿಣಾಫ್ರಿಕದ ಏಜಂಟ ಜನರಲರು.

ದಕ್ಷಿಣಾಫ್ರಿಕದ ಏಜಂಟ ಜನರಲರಾದ ಸರ್ ಮಹಾರಾಜಾ ಸಿಂಘರವರು ಸದ್ಯದಲ್ಲಿಯೇ ಸ್ವದೇಶಕ್ಕೆ ಮರಳುವರೆಂದೂ, ಅವರ ಸ್ಥಾನದಲ್ಲಿ ಒಬ್ಬ ಮಹಮ್ಮದೀಯನನ್ನು ನೇಮಿಸುವರೆಂದೂ ಸುದ್ದಿಯಿದೆ.

ನಂಗಾ ಪರ್ವತಾರೋಹಕರು.

ಜರ್ಮನಿಯಿಂದ, ನಂಗಾ ಪರ್ವತವೆಂಬ ಹಿಮಾಲಯದ ಒಂದು ಶಿಖರವನ್ನೇರಬಂದವರು ವಿಫಲರಾಗಿ ಮರಳಿ ತಮ್ಮ ದೇಶಕ್ಕೆ ಹೊರಟುಹೋದರು.

"ಗಾಂಧಿಜಿಯವರ ನಾಯಕತ್ವ ತಪ್ಪಿದರೆ ದೇಶಕ್ಕೆ ಹಾನಿ"

ಮಹಾತ್ಮಾಜಿಯವರು ಕಾಂಗ್ರೆಸ್ಸಿನ ಮುಂದಾಳುತನವನ್ನು ಬಿಟ್ಟುಕೊಡುವರೆಂಬ ವಿಷಯವಾಗಿ ತಮ್ಮ ಅಭಿಪ್ರಾಯವನ್ನು ಕೊಡುತ್ತಾ ನೆಲ್ಲೂರಿನ ಶ್ರೀ ಕಾಳೇಶ್ವರರಾಯರು ಹೀಗೆ ನುಡಿಯುತ್ತಾರೆ:—"ಕಾಂಗ್ರೆಸ್ಸು ಈಗ ಹೊಸ ಕಾರ್ಯಕ್ರಮವನ್ನು ಪ್ರಚಾರಕ್ಕೆ ತರುವುದರಲ್ಲಿದೆ. ಅದರ ಗೌರವವನ್ನೂ ದೇಶದ ಗೌರವವನ್ನೂ ಕಾಪಾಡುವುದಕ್ಕೋಸ್ಕರ ಮಹಾತ್ಮಾಜಿಯವರಂತಹ ವಿವೇಕಿ ಹಾಗೂ ಸರ್ವ ಜನಪ್ರಿಯ ಪುರುಷರ ನಾಯಕತ್ವವು ಈ ಸಂದರ್ಭ ಸ್ಥಿತಿಯಲ್ಲಿ ಅತ್ಯಾವಶ್ಯಕವಾಗಿರಲು, ಅವರು ನಾಯಕತ್ವವನ್ನು ಬಿಟ್ಟುಕೊಟ್ಟರೆ ದೇಶಕ್ಕೆ ಹಾನಿ ಉಂಟಾಗುವುದರಲ್ಲಿ ಸಂದೇಹವಿಲ್ಲ."

ಜಾತೀಯ ಎವಾರ್ಡು. ಕಾಂಗ್ರೆಸ್ ಕಮಿಟಿ ತೀರ್ಮಾನದ ಮೇಲೆ ಸುಭಾಷ್ ಬೋಸರ ಅಭಿಪ್ರಾಯ.

ಜಾತೀಯ ಎವಾರ್ಡಿನ ವಿಷಯವಾಗಿ ಕಾಂಗ್ರೆಸ್ ಕಮಿಟಿಯು ಮಾಡಿದ ಠರಾವು ಸರಿಯಾದುದಲ್ಲವೆಂದೂ, ಬಂಗಾಳವು ಅದನ್ನು ಎದುರಿಸಬೇಕೆಂದೂ ಯುರೋಪಿನಲ್ಲಿರುವ ಶ್ರೀ ಸುಭಾಷ್‌ಚಂದ್ರ ಬೋಸರವರು ಸ್ಪಷ್ಟವಾಗಿ ತಿಳಿಸಿರುವರು.

ಸ್ಟೀಮರು ಉರಿದುಹೋಯಿತು!

ನ್ಯೂಯೋರ್ಕ ನಗರದಿಂದ ಹೊರಟ "ಮೊರೊಕೆಸ್ಲ" ಎಂಬ ಸ್ಟೀಮರು ಬೆಂಕಿಯಿದ್ದು ಸುಟ್ಟುಹೋಯಿತು. ಸ್ಟೀಮರಿನಲ್ಲಿದ್ದ ೫೫೦ ಜನರಲ್ಲಿ ೧೨೦ ಮಂದಿಗಳು ಸತ್ತರು. ಉಳಿದವರಲ್ಲಿ ಅನೇಕರು ಆಸ್ಪತ್ರೆಗೆ ಸಾಗಿಸಲ್ಪಟ್ಟಿರುವರು. ಕಪ್ತಾನನೂ ಮಡಿದಿರುವನು. ಬ್ರಿಟಿಷ ಸ್ಟೀಮರೊಂದು ಹಲವರ ರಕ್ಷಣೆಗೆ ಕಾರಣವಾಯಿತು. ಸಿಡಿಲು ಬಿದ್ದು ಬೆಂಕಿಯಿದ್ದಿರಬಹುದೆಂಬ ಊಹೆ.

ವಿಮಾ ಕಂಪೆನಿಗಳು ಸುಮಾರು ೭ ಲಕ್ಷ ಪವನುಗಳ ಬಾಧ್ಯತೆ ದೊರೆಗಳನ್ನು ತೆರಬೇಕಾಗಬಹುದೆಂದೆಣಿಕೆಯಾಗಿದೆ.

ಸರ್ಕಸ್ಸಿನ ಹಾಸ್ಯಗಾರರಿಗೊಂದು ಶಾಲೆ.

ಮೋಸ್ಕೋ ನಗರದಲ್ಲಿ ಸರ್ಕಸ್ ಹಾಸ್ಯಗಾರರ ಬಗ್ಗೆ ಒಂದು ಶಾಲೆಯು ತೆರೆಯಲ್ಪಟ್ಟಿದೆ. [illegible] ೧೧೧ ವಿದ್ಯಾರ್ಥಿಗಳನ್ನು ತೆಗೆದುಕೊಳ್ಳುವರು. ಹಾಸ್ಯಗಾರರಿಗೆ ಕುದುರೆ ಸವಾರಿ, [illegible] ವನ್ನು ಕಲಿಸುತ್ತಾರಲ್ಲದೆ ಅನೇಕ ವಿದೇಶೀ ಭಾಷೆಗಳನ್ನೂ ಸಮಾಜಶಾಸ್ತ್ರ ಮತ್ತು ಭೂಗೋಳವನ್ನೂ ಕಲಿಸುವರು. ಪ್ರಪಂಚದಲ್ಲಿ ಇಂತಹ ಶಾಲೆ ಇದೇ ಮೊದಲನೆಯದು.

ರಾಮಾಯಣದಲ್ಲಿ ರಾಜದ್ರೋಹ!

ನಾಗಪುರದ ಕ್ರಾಂತಿಕುಮಾರ ಭಾರತೀಯವರು ಅಲ್ಲಿ ಆಗಾಗ ರಾಮಾಯಣ ಪ್ರವಚನ ನಡೆಸುತ್ತಿದ್ದರು. ಅವರು ರಾಮಾಯಣದಲ್ಲಿ ರಾಜದ್ರೋಹವನ್ನು ಬೆರೆಸಿ, ಬೋಧಿಸುವರೆಂದು ಅವರ ಮೇಲೆ ಸರಕಾರದವರ ಮೊಕದ್ದಮೆ! "ರಾಮಾಯಣವನ್ನು ನಾನು ರಾಜದ್ರೋಹವೆಂದು ಬೋಧಿಸುತ್ತಿಲ್ಲ. ನಮ್ಮ ಪೂರ್ವಜರ ವೀರರ ಚರಿತ್ರವದು. ಹಿಂದೆ ಬೋಧಿಸುತ್ತಿದ್ದಂತೆ ಮುಂದೆಯೂ ಬೋಧಿಸುವೆನು. ಹಿಂದೂದೇಶವು ಪರತಂತ್ರ ದೇಶವೆಂದು ಬ್ರಿಟಿಷ ಸರಕಾರವು ಈ ರೀತಿಯಾಗಿ ರಾಮಾಯಣವನ್ನು ಅಪಮಾನಪಡಿಸಿತು!" ಎಂದು ಭಾರತೀಯವರು ಪ್ರಕಟಣೆ ಕೊಟ್ಟರು. ಅವರ ಮೇಲಿನ ಮೊಕದ್ದಮೆಯನ್ನು ಹಿಂತೆಗೆಯಲಾಗಿದೆ.

ಉಪವಾಸದ ವಿಜಯ.

ಅಸಾನ್ಸೋಲದ ಶ್ರೀಮತಿ ಸಾವಿತ್ರಿದೇವಿಗೆ ಒಂದೇ ಹಂಬಲ—ತನ್ನ ಪತಿಯೊಂದಿಗೆ ವಾರ್ಧಾ ಆಶ್ರಮವನ್ನು ಸೇರಬೇಕೆಂದು! ಆದರೆ, ಆಕೆಯ ಹೆತ್ತವರು ಇದಕ್ಕೆ ಒಪ್ಪಿಗೆ ಕೊಡದಾದರು. ಆದಕ್ಕಾಗಿ ಸಾವಿತ್ರಿಯು ಆಮರಣಾಂತ ಉಪವಾಸವನ್ನು ಕೈಕೊಂಡಳು. ೩ನೇ ದಿನದಲ್ಲಿ ಪರವಾನಗಿ ದೊರೆಯಿತು! ಸಾವಿತ್ರಿಯು ತನ್ನ ಪತಿಯನ್ನು ಸೇರಲು ವಾರ್ಧಕ್ಕೆ ಧಾವಿಸಿರುವಳು.

ಸಂಕ್ಷೇಪ ವಾರ್ತೆ.

ಓರಿಸ್ಸ ಸಿಡಿಮದ್ದಿನ ನೋಟಹಬ್ಬಿಯ ಹಸನ್ ಅಲಿ [illegible] ವೃದ್ಧನು ಸ್ವಾಪಾದದಿಂದ, ಸೀರೆನೆರಿಯಲ್ಲಿ ಈಜುತ್ತಿದ್ದ ತನ್ನ ಹೆಂಡತಿಯ ಮೇಲೆ ಗುಂಡು ಹಾರಿಸಿ ಕೊಂದನು. ಅವನಿಗೆ ೮ ತಿಂಗಳ ಕಠಿಣ ಸಜೆ ವಿಧಿಸಲಾಗಿದೆ.

ದೇವರನ್ನು ಪ್ರತ್ಯಕ್ಷವಾಗಿ ಕಾಣಬೇಕೆಂಬ ಹಟ ಹಿಡಿದು ಉನಾ ಜಿಲ್ಲೆಯ ಸ್ವೈನಾದೇವಿ ಮಂದಿರದ ಮುಂದೆ ಒಬ್ಬ "ಯುಕ್ತ ಭಕ್ತ"ನು ಕೆಲ ದಿನಗಳ ತನಕ ಕಾದುಕುಳಿತು, ಕೊನೆಗೆ ಕತ್ತು ಕಡಿದು ಆತ್ಮಹತ್ಯ ಮಾಡಿಕೊಂಡನು.

ಒಬ್ಬ ಬ್ಯಾಂಕರನ ೬೦೦ ರೂಪಾಯಿಗಳ ಚೀಲವನ್ನು ಅಪಹರಿಸಿ ಪಲಾಯನಮಾಡುತ್ತಿದ್ದ ಒಬ್ಬ ಮಾಜಿ ಪೋಲೀಸ್ ಕಾನ್‌ಸ್ಟೇಬಲನನ್ನು ಸೆರೆಹಿಡಿದಿರುವರು.

ಬರೋಡಾ ಕಾಲೇಜಿನಲ್ಲಿ ವ್ಯಾಯಾಮವನ್ನು ಕಡ್ಡಾಯವಾಗಿ ಜ್ಯಾರಿಗೆ ತಂದುದರಿಂದ ಒಂದು ಸಾವಿರ ವಿದ್ಯಾರ್ಥಿಗಳು ದಂಗೆಯೆದ್ದು, ಅದನ್ನು ಐಚ್ಛಿಕವಾಗಿ ಮಾಡಬೇಕೆಂದು ಹಟಹಿಡಿದಿರುವರು.

ದಕ್ಷಿಣ ಚೀನದ ೯ ಬಾಲಿಕೆಯರು, ತಮ್ಮ ಗಂಡಂದಿರ ಮೇಲೆ ಪ್ರೇಮವಿಲ್ಲದೆ ವೈರಾಗ್ಯತಾಳಿ, ಕೈ-ಕೈ ಹಿಡಿದು ನದಿಗೆ ಹಾರಿ ಆತ್ಮಹತ್ಯ ಮಾಡಿಕೊಂಡರು.

ಇಟಲಿಯ ಬೌದ್ಧಸನ್ಯಾಸಿಯಾದ ಲೋಕನಾಥನ್ ರವರ ನೇತೃತ್ವದಲ್ಲಿ ಕೆಲ ಬೌದ್ಧಸನ್ಯಾಸಿಗಳು ಕಾಶಿಗೆ ಬಂದಿರುವರು. ಪಂಡಿತ ಮಾಲವೀಯರೊಡನೆ ಅವರ ಸಂಭಾಷಣೆ ನಡೆಯಿತು.

ಶ್ರೀಮತಿ ಕಸ್ತೂರಿಬಾಯಿ ಗಾಂಧಿಯವರು ಸಬರಮತಿ ಆಶ್ರಮಕ್ಕೆ ಹೋಗಿರುವರು.

"ಫ್ರೀ ಪ್ರೆಸ್" ಪತ್ರಿಕೆಯವರ ಸಂಚಾಲಕತ್ವದಲ್ಲಿ ದ.ಪ್ರಾತಃಕಾಲದ "ದಿನಮಣಿ" ಎಂಬ ಹೊಸ ತಮಿಳು ದೈನಂದಿನಪತ್ರಿಕೆ ಹೊರಟಿದೆ.

ವರ್ತಕರ ಸಂಘದ ಪರವಾಗಿ ಕಾಂಗ್ರೆಸ್ ಪಾರ್ಲಿಮೆಂಟರಿ ಬೋರ್ಡಿನವರು ಎಸೆಂಬ್ಲಿ ಚುನಾವಣೆಗೆ ಉಮೇದ್ವಾರರನ್ನು ಆರಿಸಿದುದಿಲ್ಲ. ಮಾಲವೀಯರ ಹೊಸ ಸಂಘವು ಆ ಕೊರತೆಯನ್ನು ಹೋಗಲಾಡಿಸುವುದಂತೆ.

ಮಂಗಳೂರು.

ಇಲ್ಲಿಯ ಮಂಗಳೂರು ಸಮಾಚಾರ ಪತ್ರಿಕೆಯ ಸಂಪಾದಕರೂ ಮಂಗಳೂರಿನ ಹಿರಿಯ ಮುದ್ರಕರೂ ಆಗಿದ್ದ ಶ್ರೀ ...ರವರು ಇದೇ ಕಳೆದ ತಾ. ೧೦ನೇ ಮಂಗಳವಾರ ಸಾಯಂಕಾಲ ಅಕಾಲ ನಿಧನಹೊಂದಿದ ದುಃಖ ವಾರ್ತೆಯನ್ನು ವಿಷಾದಿಸುತ್ತೇವೆ. ಇವರು "ಜನ ಮಿತ್ರ" ಎಂಬ ನಾಟಕವನ್ನೂ ಬೇರೆ ಬಂದೆರಡು ಚಿಕ್ಕ ಪುಸ್ತಕಗಳನ್ನೂ ಬರೆದು ಪ್ರಸಿದ್ಧಪಡಿಸಿದ್ದರು.

ಮಹಾತ್ಮಾ ಗಾಂಧಿಯವರ ಜನ್ಮದಿನವು ಇದೇ ಬರುವ ಅಕ್ಟೋಬರ ತಾ. ೨ಕ್ಕೆ ಬರುವುದು. ಈ ಸಂದರ್ಭದಲ್ಲಿ "ಗಾಂಧೀ ಸಪ್ತಾಹ"ವನ್ನು ಈ ವರ್ಷವಾದರೂ ಯಥಾ ಯೋಗ್ಯವಾಗಿ ಜರಗಿಸುವಂತೆ ನಮ್ಮ ತಾಲೂಕು ಕಾಂಗ್ರೆಸ್ ಕಮಿಟಿಯವರು ಏರ್ಪಾಡು ಮಾಡುವರೆ? ಎಂದೊಂದು ಪತ್ರ.

"ಶ್ರೀ ಕೃಷ್ಣ ಸಿನೆಮದಲ್ಲಿ ನಿನ್ನೆಯಿಂದ 'ಮುಸ್ಸೊಲ್ ಫ್ರೀಡ್'" ಎಂಬ ಮಹಾಯುದ್ಧದ ಕೆಲಕೆಲವು ವಿಶೇಷ ದೃಶ್ಯಗಳುಳ್ಳ ರೇಡಿಯೋ ಪಿಕ್ಚರ್ಸ್‌ನವರ ಚಿತ್ರವು ಪ್ರದರ್ಶಿಸಲ್ಪಡುತ್ತಿದೆ. ಇದಾದನಂತರ ಜಗತ್ಪ್ರಸಿದ್ಧ "ಫ್ರಾಂಕ್‌ಸ್ಟೈನ್" ಎಂಬ ಚಿತ್ರವು ಪ್ರದರ್ಶಿಸಲಾಗುವುದು" ಎಂದು ಆಡಳಿತಗಾರರು ತಿಳಿಸುತ್ತಾರೆ.

ಬರುವ ಮ್ಯುನಿಸಿಪಲ್ ಚುನಾವಣೆಗೆ ನಂಬ್ರ ೧ನೇ ಕೊಡಿಯಾಲ್‌ಬೈಲ್ ವಾರ್ಡಿನಿಂದ ನಿವೃತ್ತ ಹಜೂರ್ ಶಿರಸ್ತೆದಾರರೂ ಜಯಲಕ್ಷ್ಮೀ ಬ್ಯಾಂಕ್, ಲಿಮಿಟೆಡ್ಡಿನ ಕಾರ್ಯದರ್ಶಿಗಳೂ ಆದ ಶ್ರೀ ಎಂ. ಗಣೇಶರಾಯರು ಉಮೇದ್ವಾರರಾಗಿರುತ್ತಾರೆಂದು ತಿಳಿದುಬರುತ್ತದೆ.

ಮಂಗಳೂರು ಮುನಿಸಿಪಾಲಿಟಿಯ ೭ನೇ ವಾರ್ಡಿನ ಚುನಾವಣೆಗೆ ಶ್ರೀ ಉಳ್ಳಾಲ ಸಂಜೀವರಾಯರು ಉಮೇದ್ವಾರನಾಗಿ ನಿಲ್ಲುತ್ತೇನೆಂದು ಪ್ರಥಮದಲ್ಲಿ ನಿರ್ಧರಿಸಿಕೊಂಡಿದ್ದರಾದರೂ ಈಗ, ಶ್ರೀ ಸಾಹುಕಾರ ಮಾರ್ಕಡ ಪದ್ಮನಾಭಕಮ್ತಿಯವರು ಆ ಸ್ಥಾನಕ್ಕೆ ಉಮೇದ್ವಾರರಾಗಿ ನಿಲ್ಲ ಬಯಸಿರುವುದನ್ನು ತಿಳಿದು, ಇವರ ಅನುಕೂಲತೆಗಾಗಿ ತನ್ನ ಉಮೇದ್ವಾರಿಕೆಯನ್ನು ಹಿಂತೆಗೆದಿರುವರೆಂದು ತಿಳಿದುಬರುತ್ತದೆ.

ಇದೇ ತಿಂಗಳ ಕಳೆದ ತಾ. ೧೦ನೇ ಸೋಮವಾರ ಬೆಳಿಗ್ಗೆ ಘಂಟೆ ೯ಕ್ಕೆ ಮಂಗಳೂರು ಸಿಟಿ ಆರ್ಯಸಮಾಜ ಸದಸ್ಯರಾದ ಶ್ರೀ ಕೆ. ತನಿಯಪ್ಪನವರ ಗಂಡು ಮಗುವಿನ ನಾಮಕರಣ ಸಂಸ್ಕಾರವು ಸದ್ರಿಯವರ ಮನೆಯಲ್ಲಿ ಬಿ. ಲಕ್ಷ್ಮೀದೇವ ವಿದ್ಯಾರ್ಥಿ, ಬಿ. ಕೆ. ಪಂಡಿತ್, ಎ. ಬಾಲಕೃಷ್ಣ ನಾಯಕ್, ಮೊದಲಾದವರಿಂದ ವೈದಿಕ ವಿಧಿಯಂತೆ ನೆರವೇರಿತು. ಮಗುವಿಗೆ ಶಿವಾನಂದನೆಂದು ನಾಮಕರಣ ಮಾಡಲಾಯಿತು. ಸಂಸ್ಕಾರಾನಂತರ ಶ್ರೀ ವಿದ್ಯಾರ್ಥಿಯವರು "ಸಂಸ್ಕಾರದ ಮಹತ್ವ"ದ ಕುರಿತು ಚಿಕ್ಕ ಭಾಷಣವಿತ್ತರು. ಸೀರೇಶ್ವಾಲ್ಯ ಆರ್ಯ ಭಜನೆ ಮಂಡಳಿಯವರ ಭಜನೆಯೂ ಇದ್ದಿತು.

ಇದೇ ತಿಂಗಳ ಬರುವ ತಾ. ೧೬ನೇ ಆದಿತ್ಯವಾರ ಬೆಳಿಗ್ಗೆ ಘಂಟೆ ೮-೩೦ಕ್ಕೆ ಜಾಂದೇಶ್ವರದಲ್ಲಿರುವ ಸಿಟಿ ಆರ್ಯ ಸಮಾಜದ ಮುಂದಿರದಲ್ಲಿ "ಆಸ್ತಿಕವಾದ" (ದೇವರಿದ್ದಾನೋ) ಎಂಬ ಕುರಿತು ಒಂದು ದೊಡ್ಡ ವಾಗ್ವಾದವಿದೆ. ಕೆಲವು ಮಹನೀಯರು ಈ ಕುರಿತು ಚರ್ಚಿಸುವರು. ಸರ್ವರೂ ಬಿತ್ತೈಸಬೇಕಾಗಿ ಕೋರಲಾಗಿದೆ.

ಡಿ. ಸಿ. ಎಮ್. ಮಿಶ್ಯನಿನ ವರ್ಧಂತ್ಯುತ್ಸವವು ಕಳೆದ ಮಂಗಳವಾರ ಸಾಯಂಕಾಲ, "ಸರ್ವೆಂಟ್ಸ್ ಒಫ್ ಇಂಡಿಯಾ ಸೊಸೈಟಿ"ಯ ಸದಸ್ಯರಾದ ಶ್ರೀ ವಿ. ವೆಂಕಟಸುಬ್ಬಯ್ಯನವರ ಅಧ್ಯಕ್ಷತೆಯಲ್ಲಿ ಜರಗಿತು. ಪ್ರಮುಖಾಧಿಕಾರಿಗಳೂ ಪ್ರತಿಷ್ಠಿತ ಗೃಹಸ್ಥರೂ ದಯಮಾಡಿಸಿದ್ದರು. ಶಾಲಾ ವರದಿ ವಾಚನ, ವಿದ್ಯಾರ್ಥಿಗಳಿಗೆ ಬಹುಮಾನ ವಿತರಣ ಇತ್ಯಾದಿ ಕಾರ್ಯಕ್ರಮಗಳೂ ಸಮಾರಂಭಾಂತ್ಯದಲ್ಲಿ ಹರಿಜನ ವಿದ್ಯಾರ್ಥಿಗಳಿಂದ ನಾಟಕವೂ ಯಥಾಸಾಂಗವಾಗಿ ನೆರವೇರಿದುವು. ಮರುದಿನ ಬಾಲವೀರರ "ಕ್ಯಾಂಪ್ ಫಾಯರ್" ಇತ್ಯಾದಿ ವಿನೋದಗಳಿದ್ದುವು.

ಇದೇ ತಾ. ೮ಕ್ಕೆ ಅಂತ್ಯವಾಗುವ ಒಂದು ವಾರದ ನಮ್ಮ ಆರೋಗ್ಯದ ವರದಿ:—ಮರಣ ೩೧; ಜನನ ೫೪. ಸಿಡುಬು ನಾಲ್ವರಿಗೆ ತಗಲಿ ಒಂದು ಮರಣವಾಗಿದೆ. ಕ್ಷಯದಿಂದ ೨ ಮರಣಗಳಾಗಿವೆ; ಆತ್ಮಹತ್ಯೆ ೧.

ಈ ತಿಂಗಳ ಕೊನೆಯ ವಾರದಲ್ಲಿ ನಡೆಯಲಿರುವ ಮುನಿಸಿಪಲ್ ಚುನಾವಣೆಗೆ, ನಂಬ್ರ ೩ನೇ ವಾರ್ಡಿನಿಂದ ಶ್ರೀ ಯು. ಮಂಜುನಾಥ ನಾಯ್ಕ (ಅಧ್ಯಾಪಕ, ಕೆನರಾ ಹೈಸ್ಕೂಲ್) ಇವರು ಉಮೇದ್ವಾರರಾಗುವರೆಂದು ಕೇಳುತ್ತೇವೆ.

ಮಳೆಯು ಕೆಲಕಾಲದಿಂದ ನಿಂತುಹೋಗಿದ್ದು, ಸ್ವಲ್ಪ ಸೆಖೆಯು ಆರಂಭವಾಗಿದೆಯೆನ್ನಬಹುದು.

ದಕ್ಷಿಣ ಕನ್ನಡ, ಮಲಬಾರು, ನೀಲಗಿರಿ ಜಿಲ್ಲೆಗಳ ಪರವಾಗಿ ಎಸೆಂಬ್ಲಿ ಮೆಂಬರರಾಗಿರುವ ಶ್ರೀ ಕೆ. ಪ್ರಭಾಕರ ಕಂಪನ್‌ರವರು ಬರುವ ಚುನಾವಣೆಯಲ್ಲಿಯೂ ಇದೇ ಕೊನ್‌ಸ್ಟಿಟ್ಯೂಯನ್ಸಿಯಿಂದ ಉಮೇದ್ವಾರರಾಗಿರುವರೆಂದು ತಿಳಿದುಬರುತ್ತದೆ.

ಧಿಲ್ಲಿಯ ಕೇಂದ್ರ ಹರಿಜನ ಸೇವಾಸಂಘದವರು, ನಮ್ಮ ಜಿಲ್ಲೆಯಲ್ಲಿ ಹರಿಜನ ಕಾರ್ಯದ ಬಗ್ಗೆ ಇಲ್ಲಿಯ ಜಿಲ್ಲಾ ಹರಿಜನ ಸೇವಾಸಂಘಕ್ಕೆ ಪ್ರಥಮ ಕಂತಾಗಿ ರೂ. ೪೦೦ನ್ನು ಕಳುಹಿಸಿಕೊಟ್ಟಿರುವರು. (ಕಾರ್ಯಾರಂಭ ಮಾಡಲು ೫೦೦ ರೂ. ಗಳನ್ನು ಮೊದಲಾಗಿ ಕಳುಹಬೇಕೆಂದು ಕೆಲತಿಂಗಳ ಹಿಂದೆ ಬರೆದುಕೊಳ್ಳಲಾಗಿತ್ತು) ಇನ್ನು ಮುಂದೆ ಅವಶ್ಯವಿದ್ದಂತೆ ಹಣವು ಕಂತು ಕಂತುಗಳಾಗಿ ಕಳುಹಲಾಗುವುದೆಂದು ತಿಳಿದುಬಂದಿದೆ.

ಡಿಸ್ಟ್ರಿಕ್ಟ್ ಬೋರ್ಡಿನ ಸಾಮಾನ್ಯ ಸಭೆಯೊಂದು ಇದೇ ತಾ. ೨೦ನೇ ಅಪರಾಹ್ನ ಘಂಟೆ ೭-೩೦ಕ್ಕೆ ಇಲ್ಲಿಯ ಡಿಸ್ಟ್ರಿಕ್ಟ್ ಬೋರ್ಡ್ ಆಫೀಸಿನಲ್ಲಿ ಜರಗುವುದು.

ಕಾರ್ಕಳ ಶ್ರೀ ವೆಂಕಟ್ರಮಣ ಥಿಯೇಟ್ರಿಕಲ್ ನಾಟಕ ಕಂಪೆನಿಯವರ ನಾಟಕಗಳು ನಡೆಯುತ್ತಲೇ ಇವೆ.

ಇದೇ ಕಂಪೆನಿಯವರು ಕಳೆದ ತಾ. ೬ನೇ ಗುರುವಾರ ಗುಲೇಬಕಾವಲಿ ಎಂಬ ನಾಟಕವನ್ನಾಡಿದರು. ಕೊನೆಗೆ ಬಕಾವಲಿಯ ಪಾತ್ರವನ್ನು ನಟಿಸಿದ ಈ ಊರಿನ ಶ್ರೀ ಭಾಗೀರಥಿ ಬಾಯಿಯ ವಿದ್ಯಾಭ್ಯುದಯವನ್ನು ಬಯಸಿ, ನಾಟಕಾಭಿಮಾನಿಗಳಲ್ಲಿ ಕೆಲವು ಮಹನೀಯರು ತಯಾರಿಸಿದ್ದ ಸುವರ್ಣ ಪದಕವನ್ನು ಅವರ ಕೋರಿಕೆಯಂತೆ ಶ್ರೀ ಪುಣಿಂಚತ್ತಾಯರು ಅವಳಿಗೆ ಕೊಟ್ಟು, ಪ್ರೋತ್ಸಾಹ ವಚನಗಳನ್ನಾಡಿದರು.

ಕಳೆದ ಶನಿವಾರ ಇದೇ ನಾಟಕ ಮಂಡಲಿಯವರು ಶ್ರೀ ವಿಠೋಬ ದೇವಸ್ಥಾನದಲ್ಲಿ ಸಿದ್ಧವಿದ್ದಿಸಗಳಲ್ಲಿರುವ ಕಾರ್ಯಕಲಾಪ 'ಕಬೀರದಾಸ' ನಾಟಕವನ್ನಾಡಿದರು. ಈ ಕಾರ್ಯದಲ್ಲಿ ಮುಂದಾಳುಗಳಾದ ಸಾಹುಕಾರ ಶ್ರೀ ವಿಟ್ಠಲ ಶೆಣೈ ಶೀತಾರಾಮರವರು ಏರ್ಪಡಿಸಿದ ಚಿನ್ನದ ಪದಕವನ್ನು ಅವರ ಅಪೇಕ್ಷೆಯಂತೆ ಶ್ರೀ ಪುಣಿಂಚತ್ತಾಯರು ಪ್ರೊಪ್ರೈಟರ್ ರಾ॥ ಬಂಟ್ವಾಳ್‌ಕರರಿಗೆ ಕೊಟ್ಟು, ಮಂಡಲಿಯ ಶ್ರೇಯಸ್ಸನ್ನು ಬಯಸಿ ಭಾಷಣ ಮಾಡಿದರು.

ಬೊಂಬಾಯಿಯಲ್ಲಿ ಜರಗಲಿರುವ ಕಾಂಗ್ರೆಸ್ ಅಧಿವೇಶನಕ್ಕೆ ನಮ್ಮ ಜಿಲ್ಲೆಯಿಂದ ಪ್ರತಿನಿಧಿಗಳನ್ನು ಆರಿಸಿ ಕಳುಹಿಸುವ ಕುರಿತಾಗಿ ಆಲೋಚಿಸಲು ಮಂಗಳೂರು ತಾಲೂಕು ಕಾಂಗ್ರೆಸ್ ಕಮಿಟಿಯ ಸಭೆಯು ನಾಳೆ ಸಂಜೆ ಘಂಟೆ ೫ಕ್ಕೆ ಕೊಡಿಯಾಲ್‌ಬೈಲಿನಲ್ಲಿರುವ ಖಾದಿ ಭಂಡಾರದ ಮಹಡಿಯಲ್ಲಿ ಜರಗಲಿದೆ.

ಸುಳ್ಯ ಮತ್ತು ಪುತ್ತೂರಲ್ಲಿ "ಆಸ್ತಿ ಅಡವಿನ ಬ್ಯಾಂಕು"ಗಳನ್ನು ಸ್ಥಾಪಿಸುವ ಆಲೋಚನೆ ನಡೆದಿದೆಯೆಂದು ತಿಳಿದುಬರುತ್ತದೆ.

ಈ ಊರಿನ ಉತ್ಸಾಹಶಾಲಿಗಳಾದ ಕೆಲವು ಯುವಕರು ಸ್ಥಾಪಿಸಿದ 'ಜಗದಂಬಾ ನಾಟಕ ಮಂಡಲಿ'ಯವರು ಕಳೆದ ಆದಿತ್ಯವಾರ 'ಪ್ರಣಯ ದುಂದುಭಿ' ಎಂಬ ನಾಟಕವನ್ನಾಡಿದರು. ರಾ॥ ಗಳಾದ ಯಂ. ಎನ್. ಗಂಗಾಚಾರರೂ ಇದರಲ್ಲಿ ಪಾತ್ರವನ್ನು ವಹಿಸಿದ್ದರು. ಸಂಸ್ಥೆಯವರ ಬಯಕೆಯಂತೆ ನಾಟಕಾಂತ್ಯದಲ್ಲಿ ಶ್ರೀ ಪುಣಿಂಚತ್ತಾಯರು ರಂಗಭೂಮಿಯ ಇಂತಹ ಸೇವಕರನ್ನು ಸರ್ವರೂ ಪ್ರೋತ್ಸಾಹಿಸಬೇಕೆಂದು ಸಮಯೋಚಿತ ಭಾಷಣವಿತ್ತರು.

ಸ್ಥಳೀಕ 'Students Union' ವಿದ್ಯಾರ್ಥಿ ಸಂಘದವರ ಆಶ್ರಯದಲ್ಲಿ, ಶ್ರೀ ಮುಳಿಯ ತಿಮ್ಮಪ್ಪಯ್ಯನವರ ಅಧ್ಯಕ್ಷತೆಯಲ್ಲಿ ತಾ ೯ನೇ ಆದಿತ್ಯವಾರ ಸಂಜೆ ೫ ಗಂಟೆಗೆ ಸಭೆಯೊಂದು ಜರಗಿತು. ಕಾರ್ಯದರ್ಶಿಗಳು ಹಿಂದಿನ ಸಭೆಯ ವರದಿಯನ್ನೋದಿದನಂತರ ರಾ॥ ಯಂ. ಎಸ್. ಕಾಮತರು 'ವೀ. ಸಿ.'ಯವರ ಗೀತೆಗಳಿಂದ ಕೆಲವನ್ನು ಆರಿಸಿ, ಸೊಗಸಾಗಿ ಉಪನ್ಯಾಸಮಾಡಿದರು. ಕಡೆಗೆ ಮು. ರಾ. ತಿಮ್ಮಪ್ಪಯ್ಯನವರೂ 'ವೀ. ಸಿ.'ಯವರ ಭಾವಗರ್ಭಿತವಾದ ಕೆಲವು ಗೀತೆಗಳನ್ನು ಅಂದವಾಗಿ ಹಾಡಿ ಸಂದರ್ಭೋಚಿತ ಭಾಷಣಮಾಡಲು, ಕಾರ್ಯದರ್ಶಿಗಳು ಧನ್ಯವಾದಗಳನ್ನರ್ಪಿಸಿದ ಮೇಲೆ ಸಭಾಂತ್ಯವಾಯಿತು.

ಪೋಲೀಸ್ ಇನ್ಸ್‌ಪೆಕ್ಟರ್ ಜನರಲರವರು ಮಂಗಳೂರಿಗೆ ಬಂದು ಕ್ಯಾಂಪ್ ಮಾಡಿದ್ದರು. ಇಲಾಖೆಗೆ ಸಂಬಂಧಪಟ್ಟ ಯಾವುದೋ ತನಿಖೆಗೆಂದು ಕೇಳಬರುತ್ತದೆ.

ತಾಲೂಕುಗಳಿಂದ

ಹಿರಿಯಡ್ಕ— ಇದೇ ತಾ. ೪ನೇ ರಾತ್ರಿ ಸುಮಾರು ೧೨ ಗಂಟೆ ಸಮಯ ಹಿರಿಯಡ್ಕದಿಂದ ಸುಮಾರು ಒಂದು ಮೈಲು ದೂರವಿರುವ ಬಜೆ ಎಂಬಲ್ಲಿ ಒಂದು ಹುಲಿಯು ಒಬ್ಬ ಮೊಗೇರನ ಮನೆಯ ಒಳಗೆ ಹೊಕ್ಕು ಚಾವಡಿಯಲ್ಲಿ ಮಲಗಿದ್ದ ಒಬ್ಬ ಹೆಂಗುಸಿನ ಮೈಮೇಲೆ ಹಾರಿ ಗಾಯಪಡಿಸಿ; ಆಸ್ವರದಲ್ಲಿ ಹತ್ತಿರವೇ ಮಲಗಿದ್ದ ಇನ್ನೊಬ್ಬನು ಎಚ್ಚತ್ತು ದೀಪ ತರಲಿಕ್ಕೆ ಒಳಗೆ ಮಲಗಿದ್ದವರನ್ನು ಎಚ್ಚರಿಸಿ, ಅವರು ದೀಪತರಲು, ಗಾಯಹೊಂದಿದ ಹೆಂಗಸಿನ ಚಿಕಿತ್ಸೆಮಾಡುವಷ್ಟರಲ್ಲಿ, ಹೊರಗೆ ಹೋದ ಹುಲಿಯು ಪುನಃ ಮನೆಯೊಳಗೆ ಹೊಕ್ಕು, ಮಲಗಿದ್ದ ೩ ಮಕ್ಕಳಿಗೆ ತುಂಬಾ ಗಾಯಪಡಿಸಿತು. ಪೈಕಿ ಒಂದು ಮಗುವು ಬದುಕುವುದೇ ಕಷ್ಟ—ಹೊಟ್ಟೆ ಸೀಳಿಹೋಗಿರುತ್ತದೆ. ಇನ್ನೊಂದಕ್ಕೆ ಜಖಂ ಆಗಿರುತ್ತದೆ. ಜನರ ಗಲಾಟೆಗೆ ಹುಲಿಯು ಹೆದರಿ ಓಡಿತು.

ಕಾರ್ಕಳ — ತಾ. ೯-೯-೩೪ರ ದಿನ ಸಾಯಂ ೫-೩೦ಕ್ಕೆ ಸರಿಯಾಗಿ ಸ್ಥಳೀಯ ಹಿಂದೂ ಬಾಲಿಕಾ ಪಾಠಶಾಲೆಯಲ್ಲಿ ಇಲ್ಲಿಯ ವಕೀಲ ಮತ್ತು ಎಸೆಂಬ್ಲಿಯ ಮಾಜಿ ಸದಸ್ಯರಾದ ಶ್ರೀ ಕೆ. ಸದಾಶಿವ ಭಟ್ಟರ ಅಧ್ಯಕ್ಷತೆಯಲ್ಲಿ ಒಂದು ಸಾರ್ವಜನಿಕ ಸಭೆಯು ನಡೆದು, ಅದೇ ಕೆಲಸಕ್ಕಾಗಿ ಬಂದಿದ್ದ ಕಾರ್ನಾಡ ಸದಾಶಿವರಾಯರೂ, ಸಾಮುವೇಲ್ ಆರೋನರೂ ಸದ್ಯದ ರಾಜಕೀಯ ಪರಿಸ್ಥಿತಿ ಮತ್ತು ಬರುವ ಎಸೆಂಬ್ಲಿ ಚುನಾವಣೆಯಲ್ಲಿ ಕಾಂಗ್ರೆಸ್ ಕಡೆಯ ಉಮೇದ್ವಾರರನ್ನೇ ಆರಿಸುವ ಆವಶ್ಯಕತೆಗಳ ಕುರಿತು ಮಾತನಾಡಿದ ಬಳಿಕ ಬಳಿಕ, ಅಧ್ಯಕ್ಷರು ತಮ್ಮ ಭಾಷಣವನ್ನು ಕೊಡುತ್ತಾ, ಕಾಂಗ್ರೆಸ್ಸಿನ ಕಡೆಯಿಂದ ನಮ್ಮ ಒಬ್ಬೆ ನಿಯುಕ್ತರಾದ ಶ್ರೀ ಆರೋನರಿಗೆ ಕಾರ್ಕಳ ತಾಲೂಕಿನ ಕಡೆಯಿಂದ ಸಂಪೂರ್ಣ ಬೆಂಬಲವನ್ನು ಕೊಡುವ ಭರವಸೆಯನ್ನು ಕೊಟ್ಟರು. ಆ ವೇಳೆ ಧನ್ಯವಾದ ಸಮರ್ಪಣೆಯಾಗಿ ಸಭಾಂತ್ಯವಾಯಿತು.

ಇದೇ ಕಳೆದ ತಾ. ೩ರಲ್ಲಿ 'ಕಾರ್ಕಳ ಶ್ರೀ ಪದ್ಮಸಾಲಿಯಾನ (ಶೆಟ್ಟಿಗಾರ) ವೈಶ್ಯ ಸಮಾಜ ಸೇವಾ ಸಂಘ'ದ ಆಶ್ರಯದಲ್ಲಿ ರಾ॥ ಕೆ. ವಿ. ಕೃಷ್ಣಯ್ಯನವರ ಅಧ್ಯಕ್ಷತೆಯಲ್ಲಿ ಭಗವಾನ್ ಶ್ರೀ ಕೃಷ್ಣನ ಜಯಂತಿಯನ್ನು ಆಚರಿಸಲಾಯಿತು.

ಘರಿಗಿಪೇಟೆ:— ಇದೇ ತಾ. ೯ನೇ ಶನಿವಾರ ಸ್ಯಾಮ್ಸ್ ಗಂಟೆ ೩ಕ್ಕೆ ಶ್ರೀರಾಮ ಹಾಯರ್ ಎಲಿಮೆಂಟರಿ ಶಾಲೆಯ ಶಿಕ್ಷಕಸಂಘದ ಮತ್ತು ಅದು ಹೊರಡಿಸುವ ವಿದ್ಯಾರ್ಥಿಗಳ "ರಾಘವಲೀಲೆ" ಎಂಬ ಮಾಸಪತ್ರಿಕೆಯ ಆರನೆ ವರ್ಧಂತಿ ಉತ್ಸವವು ಶ್ರೀ ವಿ. ನರಸಿಂಹಪೈ, ಅಧ್ಯಾಪಕ ಬಂಟ್ವಾಳ ಹೈಸ್ಕೂಲ್, ಇವರ ಅಧ್ಯಕ್ಷತೆಯಲ್ಲಿ ಜರಗಿತು. ಮಕ್ಕಳು ಬಗೆಬಗೆಯ ವಿನೋದ ಆಟಗಳಿಂದ ಸಂಗೀತ ಯಕ್ಷಗಾನ ಮುಂತಾದ ಚಟುವಟಿಕೆಗಳಿಂದ ನೆರೆದ ಸಭಿಕರನ್ನು ಸಂತೋಷಗೊಳಿಸಿದರು. ನೆರೆದಿದ್ದ ಊರಪರವೂರ ಗೃಹಿಣೀ ಗೃಹಸ್ಥರು ಮಾಸಪತ್ರಿಕೆಯನ್ನು ಶ್ಲಾಘಿಸಿ ಅದರ ಹಿತಚಿಂತನೆಯನ್ನು ಬಯಸಿದ ಬಳಿಕ ಅಧ್ಯಕ್ಷರ ದೀರ್ಘವಾದ ಮತ್ತು ಹಿತಸೂಚನೆಗಳಿಂದ ಯುಕ್ತವಾದ ಭಾಷಣವಾದ ಬಳಿಕ ಉಪಹಾರದೊಂದಿಗೆ ಸಭೆಯು ಮುಕ್ತಾಯವಾಯಿತು.

ಪುತ್ತೂರು — ಮರಾಠೆ ಸಮಾಜದ ಧಾರ್ಮಿಕ, ನೈತಿಕ, ಸಾಂಪತ್ತಿಕ ಮತ್ತು ಸಾಮಾಜಿಕ ವಗೈರೆ ಮುಂದಿನ ಅಭಿವೃದ್ಧಿಗಳ ಕುರಿತು ಶ್ರೀ ಶಾರದಾ ಸಂಘದ ಪರಿಮುಖವಾಗಿ ಯೋಗ್ಯ ವ್ಯವಸ್ಥೆ ಪಡಿಸುವರೆ ಪರ್ಯಾಲೋಚಿಸುವರೆ ಈ ಸಂಘದ ವಿಶೇಷ ಮಹಾಸಭೆಯನ್ನು ತಾ. ೨೩ನೇ ಆದಿತ್ಯವಾರ ಹಗಲು ಘಂಟೆ ೧೦ಕ್ಕೆ ಪುತ್ತೂರು ತಾಲೂಕು ಪುತ್ತೂರು ಗೋವು ಆಸ್ಪತ್ರೆ ಎದುರು ರೂರಲ್ ಕೊಪರೇಟಿವ್ ಸೊಸೈಟಿ ಕಟ್ಟಡದಲ್ಲಿ ಜರಗಿಸುವುದಾಗಿ ನಿಶ್ಚೈಸಿರುತ್ತದೆ. ಆ ಪ್ರಯುಕ್ತ ಸಮಾಜದ ಮಹನೀಯರೆಲ್ಲರೂ, ತಕ್ಕ ಸಮಯಕ್ಕೆ ಮುಂಚಿತವಾಗಿ ದಯಮಾಡಿ ಬಂದು ಸಭೆಯ ಕಾರ್ಯಗಳನ್ನು ನೆರವೇರಿಸಿಕೊಡಬೇಕಾಗಿ ವಿನಯಪೂರ್ವಕ ಅಪೇಕ್ಷೆಯೆಂದು ಸಂಘದ ಅಧ್ಯಕ್ಷರು ತಿಳಿಸುತ್ತಾರೆ.

ಕೋಟೇಶ್ವರ — ಈ ಸೆಂಟರಿನ ಶಾಲಾಧ್ಯಾಪಕರ ಪ್ರಥಮ ಸಭೆಯು ತಾ. ೮-೯-೩೪ನೇ ಶನಿವಾರ ಪೂರ್ವಾಹ್ನ ಗಂಟೆ ೯ಕ್ಕೆ ಕುಂದಾಪುರ ರೇಂಜಿನ ಡಿಪ್ಯೂಟಿ ಇನ್ಸ್‌ಪೆಕ್ಟರವರ ಅಧ್ಯಕ್ಷತೆಯಲ್ಲಿ ಬೋರ್ಡ್ ಹಾ. ಎ. ಶಾಲೆಯಲ್ಲಿ ಜರಗಿ ಸಂಘದ ಕಾರ್ಯಕಾರಿ ಮಂಡಲದ ಅಂಗದವರನ್ನಾಗಿ ಆರು ಜನರನ್ನು ಆರಿಸಿ, ಸದ್ರಿ ಕಮಿಟಿಯು ಆಧಿಕಾರ ಕಾರ್ಯನಿರ್ವಾಹಕರನ್ನು ಆರಿಸುವ ವಿಷಯದಲ್ಲಿ ನಿರ್ಧರಿಸಬೇಕೆಂದು ಮುಂದೂಡಲಾಯಿತು. ವಿಷಯದಲ್ಲಿ ಎಳೆಯ ಕುರಿತು, ಶ್ರೀಯುತ ಸಿ. ಸಿ. ನರಸಿಂಹಯ್ಯನವರೂ, ಅಸ್ಪೃಶ್ಯತಾ ನಿವಾರಣೆಯ ಕುರಿತು ಶ್ರೀ ಟಿ. ಎಲ್. ಉಡುಪರವರೂ ಭಾಷಣ ಕೊಟ್ಟರು. ಮರುದಿನ ಸಭೆಯಲ್ಲಿ ಶ್ರೀ ಯಜ್ಞನಾರಾಯಣ ಉಡುಪರು 'ಸೂರ್ಯನಮಸ್ಕಾರ'ದ ಕುರಿತು ಭಾಷಣವನ್ನೂ, ಶ್ರೀ ಎಚ್. ಪಿ. ಉಪಾಧ್ಯರು ಐದನೇ ಕ್ಲಾಸಿಗೆ 'ಆಹಾರ ಜೀರ್ಣಾಂಗ'ಗಳ ಕುರಿತು ಮಾದರಿ ಪಾಠವನ್ನೂ ಕೊಡಬೇಕೆಂದೂ ನಿರ್ಣಯವಾಯಿತು. ವಿಷಯಗಳ ಉದ್ದೇಶದ ಕುರಿತು, ಅಧ್ಯಕ್ಷರ ಹಿತಸೂಚನೆಯಾದ ನಂತರ ಧನ್ಯವಾದಗಳನ್ನರ್ಪಿಸಿ, ಸಭೆಯು ಅಂತ್ಯವಾಯಿತು.

ಅದೇ ದಿನ ಅಪರಾಹ್ನ ೩ ಘಂಟೆಗೆ ಸದರಿ ಶಾಲೆಯ ವಿದ್ಯಾರ್ಥಿಗಳ ತಾರ್ಕಿಕ ಕೂಟವೊಂದು, ಶ್ರೀ ಟಿ. ಎಲ್. ಉಡುಪರ ಅಧ್ಯಕ್ಷತೆಯಲ್ಲಿ ಜರಗಿತು. ಮಕ್ಕಳು ಅಸ್ಪೃಶ್ಯತಾ ನಿವಾರಣೆಯ ಕುರಿತು ತರ್ಕವಿತರ್ಕಗಳು ನಡೆಸಿದ ನಂತರ, ಶ್ರೀ ಕೆ. ಎಸ್. ಉರಾಳರವರು ಅಸ್ಪೃಶ್ಯತಾ ನಿವಾರಣೆಯಾಗಬೇಕೆಂಬುದನ್ನು ಸಮರ್ಥಿಸಿದರು. ತತ್ಸಂಬಂಧ ಅಧ್ಯಕ್ಷರ ಭಾಷಣಾನಂತರ, ಧನ್ಯವಾದಗಳನ್ನರ್ಪಿಸಿ ಸಭೆಯು ಮುಕ್ತಾಯವಾಯಿತು.

ಶ್ರೀಮಾನ್ ಸುಭಾಷ್ಚಂದ್ರ ಬೋಸರು

ಯುರೋಪಿನ ಸಂಚಾರದಲ್ಲಿ ಇರುವರು. ದಿನೇ ದಿನೇ ಆರೋಗ್ಯಲಾಭ ಹೊಂದುತ್ತಿರುವುದು ಸಂತೋಷಕರ. ಅವರು ಒಂದು ಹೊಸ ಪುಸ್ತಕವನ್ನು ಈಗಾಗಲೇ ಬರೆದು ಮುಗಿಸಿರುವಂತೆ ವರ್ತಮಾನ. ಕಳೆದ ೧೪ ವರ್ಷಗಳ ಹಿಂದೂದೇಶದ ರಾಜಕೀಯ ಸಂಗ್ರಾಮವೆಲ್ಲ ಟೀಕಾದೃಷ್ಟಿಯಿಂದ ಅದರಲ್ಲಿ ಚರ್ಚಿಸಲ್ಪಟ್ಟಿದೆಯಂತೆ. ಆ ಗ್ರಂಥವನ್ನು ಲಂಡನಿನ ವಿಶಾರ್ಟ್ ಎಂಡ್ ಕಂಪೆನಿ ಎಂಬ ಪ್ರಕಾಶಕರು ಪ್ರಸಿದ್ಧಪಡಿಸುವರು.

ವಿಶೇಷ ವಾರ್ತೆ.

೧೯೩೨ನೇ ಜನವರಿ ತಾ. ೪ರಲ್ಲಿ, ಗಾಂಧಿಜಿಯವರನ್ನು ದಸ್ತಗಿರಿಮಾಡಿ ಕಾರಾಗೃಹಕ್ಕೊಯ್ದ ಸಂಬಂಧ, ಗುಂಟೂರು ಮುನಿಸಿಪಾಲಿಟಿಯವರು ಮುನಿಸಿಪಲ್ ಕಚೇರಿಯನ್ನೂ, ಮುನಿಸಿಪಾಲಿಟಿಯ ಕೈಕೆಳಗಿನ ಇತರ ಸಂಸ್ಥೆಗಳನ್ನೂ ಮುಚ್ಚಿದ್ದರು. ಅದರಿಂದ ರೂ. ೧೪೭೭ ನಷ್ಟವಾಯಿತೆಂದು ಲೆಕ್ಕಹಾಕಿ, ಮುನಿಸಿಪಾಲಿಟಿ ಚೆಯರ್ಮನ್ನರೂ, ೯ ಮಂದಿ ಕೌನ್ಸಿಲರರೂ ಕೂಡಿ, ಆ ಮೊತ್ತವನ್ನು ತೆರಬೇಕಾಗಿ ಮದ್ರಾಸು ಸರಕಾರದ ಕಡೆಯಿಂದ ನೋಟೀಸು ಹೊರಟಿದೆ.

ಬಾಪಾಟ್ಲದಲ್ಲಿ, ಲೋಕಲ್‌ಫಂಡ್ ಅಸಿಸ್ಟೆಂಟ್ ಇಂಜಿನಿಯರರ ಚಿಕ್ಕ ಮಗವು ಕದ್ದೊಯ್ಯಲ್ಪಟ್ಟಿತು. ಪೋಲೀಸರು ಪತ್ತೆಮಾಡಲು ಹೋದಾಗ, ಇಬ್ಬರು ಹರಿಜನರು, ಒಂದು ಹೊಲದಲ್ಲಿ ಆ ಮಗುವಿನ ಕೊಗುಳಿ ಅದನ್ನು ತಮ್ಮ ಮನೆಗೊಯ್ದು ಇರಿಸುವವರಾಗಿ ತಿಳಿಸಿದರು. ಮಗು ದೊರೆತಿದೆ. ಮೈಮೇಲಿನ ಸುಮಾರು ೧೦೦ ರೂಪಾಯಿ ಬೆಲೆಬಾಳುವ ಚಿನ್ನಾಭರಣಗಳು ಕಾಣೆ, ಆ ಹರಿಜನರಿಬ್ಬರನ್ನೂ ದಸ್ತಗಿರಿಮಾಡಿರುವರು.

ನೆಲ್ಲೂರು ಕೋರ್ಟಿನೊಳಗೆ ಪೆಟ್ಟಿಗೆಯಲ್ಲಿರಿಸಿದ್ದ ಒಂದು ವಿಶೇಷ ಮೊಕದ್ದಮೆಯ ರಿಕಾರ್ಡುಗಳು, ಬೀಗ ಒಡೆಯಲ್ಪಟ್ಟು ಕಳವಾಗಿವೆ. ಕೋರ್ಟಿನ ಬಾಗಿಲನ್ನು ಒಡೆದುದು ಕಂಡುಬಂದಿಲ್ಲ.

ತ್ರಿವೇಂದ್ರಮಿನಲ್ಲಿ ಗೋಕುಲಾಷ್ಟಮಿ ಉತ್ಸವಸಂಬಂಧವಾದ ಮೆರವಣಿಗೆ ಹೋಗುತ್ತಿದ್ದಾಗ ಮಣೀದಿಬಜಾರ್ ರಸ್ತೆಯಲ್ಲಿ ಮೆರವಣಿಗೆಯ ಜನರ ಮೇಲೆ ಕಲ್ಲಿನ ಸುರಿಮಳೆಯಾಯಿತು. ಪೋಲೀಸರು ಬಂದು ಬಂದೂಕು ಹಾರಿಸಿದ ನಂತರ ಶಾಂತಿ! ಯಾರಿಗೂ ಜಖಂ ಇಲ್ಲ.

ದಕ್ಷಿಣ ಹಿಂದೂಸ್ಥಾನದ ಕೋರ್ಟ್‌ಹೇಂಡ್ ರೈಟರರ ಒಂದು ಪರಿಷತ್ತನ್ನು ಇದೇ ಬರುವ ತಿಂಗಳಲ್ಲಿ ಬೆಂಗಳೂರಲ್ಲಿ ಜರಗಿಸುವ ಸಿದ್ಧತೆಗಳಾಗುತ್ತಿವೆ.

ರಾಮೇಶ್ವರಾಯ್ಪಾಪದಲ್ಲಿ ... ಕ್ಯಾಂಪಿನಲ್ಲಿ ವಾಂತಿಭೇದಿ ತಲೆದೋರಿ ಅನೇಕರು ಬಲಿಯಾದರು.

ಸೈಂಟ್‌ನಿಹಾಲ್ ಸಿಂಘರವರ ವಯೋವೃದ್ಧ ತಂದೆಯವರು ಡೆಹರಾಡೂನಿನಲ್ಲಿ ಕಾಲವಾದರು.

ಹೊಸ ರಾಷ್ಟ್ರೀಯ ಪಕ್ಷದ ಕಡೆಯಿಂದ ಎಸೆಂಬ್ಲಿ ಚುನಾವಣೆಗೆ ಉಮೇದ್ವಾರರನ್ನು ಗೊತ್ತುಪಡಿಸಿರುವರು. ಆಚೆಯವರು ಬಿರಾರಿನಿಂದಲೂ, ಮುಂಜೆಯವರು ಮಧ್ಯಪ್ರಾಂತ್ಯದಿಂದಲೂ, ನಿಯೋಗಿಗಳು ಡಾಕಾದಿಂದಲೂ, ಪಂಡಿತ ಮಾಲವೀಯರು ಅಲ್ಲಹಾಬಾದಿನಿಂದಲೂ ಉಮೇದ್ವಾರರು. ಇಷ್ಟರ ತನಕ ಒಟ್ಟು ೧೮ ಮುಂದಿಗಳನ್ನು ಗೊತ್ತುಪಡಿಸಿರುವರು. ಇನ್ನೂ ೬೦ರ ಹೆಸರುಗಳು ಸದ್ಯದಲ್ಲೇ ಪ್ರಕಟವಾಗಲಿವೆ.

[illegible]

... ತಿಂಗಳಿಂದ ೭೮ ವರೆಗೆ ... ಮಳೆ ಬಿದ್ದಿದೆ.

... ವಿದ್ಯಾವೇತನ ಪಡೆದ ... ಕೆ. ಪದ್ಮಾವತಿಯವರು ... ಪ್ರಯಾಣ ಬೆಳಸಲು ಲಂಡನಿಗೆ ಹೊರಡುತ್ತಲಿರುವರು.

ಕಳೆದ ವಾರ ಗೋಣಿಕೊಪ್ಪದಲ್ಲಿ ನಾಯರು ಗೋವಿಂದನೆಂಬವನು ಬಾಬು ಎಂಬವನಿಗೆ ಚೂರಿ ಹಾಕಿದ್ದು, ತಿವಿಯಲ್ಪಟ್ಟವನು ವೀರರಾಜೇಂದ್ರ ಆಸ್ಪತ್ರೆಗೊಯ್ಯಲ್ಪಟ್ಟನು.

ಧಾರವಾಡ.

ಡಾಕ್ಟರರು, ಹಿಂಪಿಗರು, ಚಹಾ ಭೀಡಿಗಳ ಅಂಗಡಿಕಾರರು ಇವರ ಮೇಲೆ ಲೋಕಲ್ ಬೋರ್ಡಿನವರು ಕರ ಹೇರುವ ಆಲೋಚನೆಯಲ್ಲಿದ್ದು ಅವರೆಲ್ಲರ ಪಟ್ಟಿಯೊಂದನ್ನು ತಯಾರಿಸಲಾಗುತ್ತಿದೆ.

ಕರ್ನಾಟಕ ಕೋಲೇಜಿನಲ್ಲಿ ಪ್ರೊಫೆಸರ್ ಆರ್. ಎ. ಜಹಗೀರದಾರರ ಅಧ್ಯಕ್ಷತೆಯಲ್ಲಿ ವಿದ್ಯಾರ್ಥಿಗಳ ಸಾಹಿತ್ಯವಾಚನ ಸ್ಪರ್ಧೆಯು ನೊನ್ನೆ ನಡೆಯಿತು.

ಶ್ರೀ। ಸಾಲಿ ರಾಮಚಂದ್ರರಾಯರು ರಾಮಾಯಣ ಗ್ರಂಥವೊಂದನ್ನು ರಚಿಸಿದ್ದು, ಅದು ಮುದ್ರಣದಲ್ಲಿದೆ.

ಎರವಾಡಾ ಸೆರೆಯಿಂದ ಬಿಡುಗಡೆ ಹೊಂದಿದ ಶ್ರೀ। ಟುರ್ಲಿ ಬಿಂದಾಚಾರ್ಯರೂ ಶ್ರೀ। ರಾಮಕೃಷ್ಣರೂ ಮುಂಬಾಯಿಗೆ ತೆರಳಿರುವರು.

[illegible]

... ಶ್ರೀ ... ಮಂದಿರದಲ್ಲಿ ... ರದ ಮಂಗಳೋತ್ಸವ ನಡೆಯಿತು. ಅಂದು ೧। ಲಕ್ಷಕ್ಕೆ ಮಿಕ್ಕಿ ನಮಸ್ಕಾರಗಳು ಹಾಕಲ್ಪಟ್ಟವು.

[illegible]

ತಾ. ೮-೯-೩೪ ರ ರಾತ್ರಿಯಿಂದ ಯಲ್ಲಾಪುರ ಹುಬ್ಬಳ್ಳಿ ಮಾರ್ಗಗಳು ಕೂಡುವ ಕತ್ರಿಯ ಬಳಿ ಹೀಪನಳ್ಳಿ ಸುಬ್ರಾಯ ಹೆಗಡೆಯವರು ಉಟ್ಟ ದೋತರದಿಂದ ಉರುಲು ಹಾಕಿಕೊಂಡು ಮರದಡಿ ತೂಗಡಿಸುತ್ತಿದ್ದುದು ಕಂಡು ಬಂತು. ಇದು ತಾ. 4ವರೆಗೆ ಪೋಲೀಸು ವಿಚಾರ ನಡೆಸುತ್ತಿದ್ದಾರೆ.

ಇಲ್ಲಿಯ ಗಣಪತಿ ಹವಾಲದಾರರು ಲೆಕ್ಕಪತ್ರದಲ್ಲಿ ವಂಚನೆ ಮಾಡಿದ ಆರೋಪದ ಮೇಲೆ ಇಲ್ಲಿಯ ಮೆಜಿಸ್ಟ್ರೇಟರಲ್ಲಿ ಖಟ್ಲೆಯು ವಿಚಾರಣೆ ನಡೆದು ಅವರಿಗೆ ೬ ತಿಂಗಳ ಶಿಕ್ಷೆಯಾಯಿತು.

ಶುದ್ಧಿ ಸಂಸ್ಕಾರ.

ಕಳೆದ ಜೂನ್ ತಿಂಗಳ ತಾ. ೧೪ರಲ್ಲಿ, ಗಡೀಸಿಂಘಾ ಎಂಬಲ್ಲಿ ಬಾಧಾನೂ ನಿವಾಸಿ ಶ್ರಿ। ಸೂರತ್‍ರಾಮ್ ಎಂಬವನ ಶುದ್ಧಿಯು ಅವನಿಗೆ ಸಂಬಂಧವಿದ್ದ ಯವನಸ್ತ್ರೀಯೊಂದಿಗೆ, ಫಕಾಲೀಯಲ್ಲಿ ಮಾಡಲಾಯಿತು. ಅಗ್ಗೆ ಸುಮಾರು ೩೦೦ ಜನರು ಹಾಜರಿದ್ದರು. ಶುದ್ಧಿ ಮಾಡಲ್ಪಟ್ಟ ಸ್ತ್ರೀಯೇ ತಯಾರಿಸಿದ ರೊಟ್ಟಿಗಳನ್ನು ಸರ್ವರೂ ಪ್ರೇಮದಿಂದ ಸ್ವೀಕರಿಸಿದರು.

ಸುಮಾರು ೨೫–೩೬ ವರ್ಷಗಳ ಹಿಂದೆ, ರಾಮ ಸೇವಕನೆಂಬವನು (ಬಹೇಲಿಯಾ) ಕೆಳಗಿನ ತರಗತಿಯ ಸ್ತ್ರೀಯೊಬ್ಬಳನ್ನು ವಿವಾಹವಾಗಿದ್ದ ಕಾರಣ ಬಹಿಷ್ಕರಿಸಲ್ಪಟ್ಟಿದ್ದನು.

[illegible] ... ಅವನು ಮುಸಲ್ಮಾನರಾಗಲು ... ಎಂಬಲ್ಲಿಯ ಆರ್ಯಸಮಾಜದವರ ಪ್ರಯತ್ನದಿಂದ ಅವನು ... ದರಿಂದ ರಕ್ಷಿಸಲ್ಪಟ್ಟನು. ಇದೇ ರೀತಿಯಲ್ಲಿ ಅದೇ ಆರ್ಯಸಮಾಜದವರು ಭಗೇಲು ಎಂಬ ಹೆಸರಿನ ಚಮ್ಮಾರನನ್ನೂ ಸಹ ರಕ್ಷಿಸಿದರು.

ವಾರ್ತಾತರಂಗ.

ಬೊಂಬಾಯಿಯ ಆರ್ಯ ಸಮಾಜದವರ ನೇತೃತ್ವದಲ್ಲಿ ನಡೆದ ಅದೊಂದು ವಿವಾಹವನ್ನು ಅಪಮಾನಕರವಾದ ಮಾತುಗಳಿಂದ ಟೀಕಿಸಿದರೆಂಬ ಕಾರಣದಿಂದ ಅಲ್ಲಿಯ 'ಕೊಡಲ್ಪಾಡಿ' ಕನ್ನಡ ವಾರಪತ್ರಿಕಾಕರ್ತರ ಮೇಲೆ ಮಾನನಷ್ಟದ ದಾವೆಯು ದಾಖಲ್ಮಾಡಲ್ಪಟ್ಟಿದೆಯೆಂದು ತಿಳಿದುಬರುತ್ತದೆ.

ವೃತ್ತ ಪತ್ರಿಕಾ ಚಂದಾದಾರರ ಬಗ್ಗೆ ಇರುವ ವಿಮಾ ಪದ್ಧತಿಯನ್ನು ನಿಲ್ಲಿಸಬೇಕೆಂದು ಜರ್ಮನ್ ಸರಕಾರದ ಹೊಸ ಆಜ್ಞೆ.

ಮದರಾಸಿನ ರೆವರೆಂಡ್ ಎಮ್. ಜೆ. ಎಮ್. ಎಂಬವರು ಬರೆದ "ಕೆಥೋಲಿಕ್ ಇಗರ್ಜಿಗಳು" ಎಂಬ ಪುಸ್ತದಲ್ಲಿ ಮಹಮ್ಮದ್ ಪೈಗಂಬರರ ದೂಷಣೆಯಿರುವುದೆಂದು ಅಲ್ಲಿಯ ಮುಸಲ್ಮಾನರು ಚಳವಳಿಸಿ, ನಿಷೇಧ ಸಭೆ ನರೆಸಿ, ಸರಕಾರಕ್ಕೆ ದೂರು ಮುಟ್ಟಿಸಿರುವರು.

ಸಿಲೋನಿನಲ್ಲಿ ಸುಶಿಕ್ಷಿತ ನಿರುದ್ಯೋಗಿಗಳೆಷ್ಟು ಇರುವರೆಂಬುದನ್ನು ತಿಳಕೊಂಡು, ನಿರುದ್ಯೋಗವನ್ನು ಕಡಿಮೆ ಮಾಡಲು ಯಾವ ಉಪಾಯಗಳನ್ನು ಕೈಕೊಳ್ಳಬಹುದೆಂಬುದರ ಕುರಿತು ಆಲೋಚಿಸಲಿರುವರು.

[illegible] ... ಮಹಾಸಭೆಯ ... ಲಾಗಿದೆ.

ನೋಟೀಸು.

ದಕ್ಷಿಣ ಕನ್ನಡ ಡಿಸ್ಟ್ರಿಕ್ಟ್ ಕೋರ್ಟಿನಲ್ಲಿ

O. P. No. 99/1934.

1. ಬಸವನಗುಡಿ ನಾರಾಯಣ ಶೆಟ್ಟಿ, 2. ಬಂಟ್ವಾಳ ಕೊಗ್ಗಯಾನೆ ರಾಮಚಂದ್ರ ಬಾಳಿಗಾ, ಮಂಗಳೂರು ಶಹರಿನಲ್ಲಿರುವವರು– ಅರ್ಜಿದಾರರು.

ಮತ್ತು

ಉಪ್ಪಿನಂಗಡಿ ವೈಕುಂಠ ಭಟ್ಟ, ಸಾವಕಾರ ನಾರಾಯಣ ಭಟ್ಟರ ಮಗ, ಉಪ್ಪಿನಂಗಡಿ ಕಸಬಾ—ರೆಸ್ಪಾಂಡೆಂಟ.

ಉಪ್ಪಿನಂಗಡಿ ಕಸಬೆಯಲ್ಲಿರುವ ಉಪ್ಪಿನಂಗಡಿ ರಾಮನಾಯ್ಕರ ಮಗ, ಮೈನರ್ ದೇವರಾಯ ಯಾನೆ ವೇಣು ಗೋಪಾಲನ ದೇಹದ ಮತ್ತು ಆಸ್ತಿ ಕುರಿತು ಗಾರ್ಡಿಯನ್ ಮೊಕ್ರೂರು ಮಾಡಬೇಕೆಂತ ಸದ್ರಿ ಅರ್ಜಿದಾರರು ಕೊಟ್ಟ ಮೇಲ್ಕಂಡ ಅರ್ಜಿಯನ್ನು ತಾ. 29–9–'34ನೇ ದಿವಸ ಪೂರ್ವಾಹ್ನ 11 ಘಂಟೆಗೆ ಮೇಲ್ಕಂಡ ಕೋರ್ಟಿನಲ್ಲಿ ತನಿಖೆಗೆ ಇಟ್ಟಿರುವದರಿಂದ ಆ ಕುರಿತು ಆಕ್ಷೇಪವಿದ್ದವರು ಸದ್ರಿ ತಾರೀಕಿಗೆ ಮೇಲ್ಕಂಡ ಕೋರ್ಟಿಗೆ ಹಾಜರಾಗಿ ತಮ್ಮ ಆಕ್ಷೇಪಗಳನ್ನು ಜ್ಯಾಹೀರು ಮಾಡಿಕೊಳ್ಳತಕ್ಕದ್ದೆಂತ ಈ ಮೂಲಕ ತಿಳಿಸೋಣಾಗುತ್ತದೆ.

Mangalore, 11–9–'34. | M. Madhava Rao, *Vakil for Petitioner.*

ಉಡುಪಿಯಲ್ಲಿ

ಸ್ವದೇಶಾಭಿಮಾನಿಯ ಬಿಡಿಸಂಚಿಕೆಗಳು ಶ್ರೀ ಯು. ಕೊರಗಪ್ಪ, ನ್ಯೂಸ್ ಏಜಂಟ್, ಸಂತೆಕಟ್ಟೆ ಇವರಲ್ಲಿ ದೊರಕುತ್ತವೆ.

The Canara Public Conveyance Company, Ltd., Mangalore.

WE TAKE UTMOST CARE OF PASSENGERS.

Read the following letter:-

Modern Hindu Hotel,
Calicut, 17—6 1934.

Dear Sir,

We wish to thank you for all that you did for us to make our stay at Mangalore comfortable. It is extremely nice of you to have looked after us as you did.

Yours faithfully,

(Sd.) **A. V. Ramaswami.**

The same service is offered to all. We call for reports from passengers, if they have failed to receive similar attention and assure to take prompt action to see that inconvenience is not repeated.

Chikmagalur Public Conveyance Motor Service, Chikmagalur.

ಚಿಕ್ಕಮಗಳೂರು ಪಬ್ಲಿಕ್ ಕನ್ವೆಯನ್ಸ್ ಮೋಟರ್ ಸರ್ವಿಸ್,

ಚಿಕ್ಕಮಗಳೂರು.

ಮುಂಬಾಯಿಯಿಂದ – ಮಂಗಳೂರಿಗೆ.

ಮಂಗಳೂರಿನಿಂದ – ಮುಂಬಾಯಿಗೆ.

ಅಲ್ಲದೆ

ಹುಬ್ಬಳ್ಳಿ, ಧಾರವಾಡ, ಗೋವಾ, ಮುಂಬಾಯಿ ಮತ್ತು ದಕ್ಷಿಣ ಕನ್ನಡ

ಜಿಲ್ಲೆಯ ಎಲ್ಲಾ ಭಾಗಗಳಿಗೆ ಪ್ರಯಾಣ ನಡಿಸಲಿಕ್ಕೆ

ಮಂಗಳೂರು—ಕಡೂರು ಹಾದಿಗಿಂತ ಉತ್ತಮ ಬೇರೆ ಹಾದಿಯಿಲ್ಲ!

ಹೊಸ ಬಸ್ಸುಗಳು. ಅನುಕೂಲ ಪ್ರಯಾಣ ಸೌಕರ್ಯಗಳು.

ಕಡೂರು ಜಿಲ್ಲೆಯೊಳಗಿನ ಎಲ್ಲಾ ಕಾಫಿ ತೋಟಗಳಿಗೆ

ಕೂಲಿಕಾರರನ್ನು ತರಲಿಕ್ಕೂ ಅಲ್ಲಿಂದ ಕೊಂಡುಹೋಗ

ಲಿಕ್ಕೂ ನಾವು ಎಲ್ಲಾ ತರದ ಸಹಾಯವನ್ನೂ ಕೊಡುತ್ತೇವೆ.

ಚಿಕ್ಕಮಗಳೂರಿನಿಂದ— ಶಿವಮೊಗ್ಗಕ್ಕೆ, ಬೀರೂರಿಗೆ, ಕಡೂರಿಗೆ.
— ಮೂಡಗೆರೆಗೆ, ಸಕಲೇಶಪುರಕ್ಕೆ.
— ಮಂಗಳೂರಿಗೆ, ಮೂಡಬಿದ್ರೆಗೆ, ಪುತ್ತೂರಿಗೆ, ಮೂಲ್ಕಿಗೆ.
—ಧರ್ಮಸ್ಥಳಕ್ಕೆ, ವೇಣೂರಿಗೆ, ಸುಬ್ರಹ್ಮಣ್ಯಕ್ಕೆ.

ಆರಾಯಾಸದ ಪ್ರಯಾಣ! ಉಕ್ಕೃಷ್ಟತರ ಸೌಕರ್ಯ!

ಬೇಕಾದ ಮಾಹಿತಿಗೆ ನಮ್ಮ ಆಫೀಸಿಗೆ ಬರೆದು ತಿಳಿದುಕೊಳ್ಳಿರಿ.

ಸಂಪಾದಕರ ಟಪ್ಪಾಲುಪೆಟ್ಟಿಗೆ.

ಪತ್ರದಾತರ ಅಭಿಪ್ರಾಯಗಳಿಗೆ ನಾವು ಜವಾಬ್ದಾರರಲ್ಲ. ಎಲ್ಲ ಲೇಖಕರು ತಮ್ಮ ಸಂಪೂರ್ಣ ಹೆಸರು ವಿಳಾಸಗಳನ್ನು ಕೊಡತಕ್ಕದ್ದು. ದೀರ್ಘ ಲೇಖನಗಳಿಗೆ ಎಡೆ ಕೊಡಲಾಗುವುದಿಲ್ಲ. ಲೇಖನಗಳು ಸಾರ್ವಜನಿಕ ಹಿತಪ್ರಾಮುಖ್ಯವುಳ್ಳವು, ಯುಕ್ತ ಶೈಲಿಯಲ್ಲಿರತಕ್ಕದ್ದು. (ಸಂ. ಸ್ವ.)

ಮುಲ್ಕಿಯಲ್ಲೊಂದು ಹಾಯರ್ ಎಲಿಮೆಂಟರಿ ಶಾಲೆ

ಎಂಬುದನ್ನು, ತಾ. ೩೧–೮–೧೯೩೪ರ ಸ್ವದೇಶಾಭಿಮಾನಿಯಲ್ಲಿ ಓದಿದ. ಕೊಡವೂರು ಗ್ರಾಮದಲ್ಲಿ ಒಂದು ಹಾಯರ್ ಎಲಿಮೆಂಟರಿ ಶಾಲೆಯು ಅಗತ್ಯವೆಂತಲೂ ಅದನ್ನು ಕೊಡವೂರು ಸೆಂಟರಿನಲ್ಲಿಯೇ ತೆರೆಯುವುದು ಯೋಗ್ಯವೆಂತಲೂ ಸೂಚಿಸಿ, ಮುಲ್ಕಿಯವರಂತೆಯೇ ಕೊಡವೂರು ಗ್ರಾಮದ ನಿವಾಸಿಗಳ ಮನವಿಯೊಂದು ಮಾನ್ಯ ಡಿಸ್ಟ್ರಿಕ್ಟ್‌ಬೋರ್ಡ್ ಪ್ರೆಸಿಡೆಂಟರವರಿಗೆ ಹೋಗಿರುತ್ತದೆ. ಕೊಡವೂರು ಗ್ರಾಮದಲ್ಲಿರುವ ೧೦ ಶಾಲೆಗಳ ಪೈಕಿ ೫ ಶಾಲೆಗಳು ಮಾತ್ರ ಮುಲ್ಕಿಸೆಂಟರಿನಲ್ಲಿದ್ದು, ಮಿಕ್ಕುಳಿದ ೫ ಶಾಲೆಗಳು ಕಲ್ಮಾಡಿ, ಕನ್ನರ್ಪಾಡಿ, ವಡಭಾಂಡೇಶ್ವರ ಮತ್ತು ಕೊಡವೂರು ಸೆಂಟರುಗಳಲ್ಲಿರುತ್ತವೆ. ಮುಲ್ಕಿಯ ೫ ಶಾಲೆಗಳ ಪೈಕಿ ೧ ಬೋರ್ಡು ಹುಡುಗಿಯರ ಶಾಲೆಯೂ, ೧ ಬೋರ್ಡು ಹುಡುಗರ ಶಾಲೆಯೂ ಸಾರ್ವಜನಿಕ ಶಾಲೆಗಳಾಗಿದ್ದು ಮಿಕ್ಕುಳಿದ ೩ ಶಾಲೆಗಳು ಜಾತಿವಾರು ಶಾಲೆಗಳಾಗಿರುತ್ತವೆ. ಅವುಗಳು ಜಾತಿವಾರು ಶಾಲೆಗಳು ಅಲ್ಲದಿದ್ದರೆ ಮುಲ್ಕಿಸೆಂಟರಿನಲ್ಲಿ ೪ ಹುಡುಗರ ಶಾಲೆಗಳು ಇರುತ್ತಿದ್ದಿಲ್ಲ ಮತ್ತು ಅವುಗಳ ಅಗತ್ಯವೂ ಇರುವುದಿಲ್ಲ. ಮುಲ್ಕಿಯಲ್ಲಿರುವ ಶಾಲೆಗಳಿಂದ ೨೦೦ ಬಾಲಕರು ಮತ್ತು ೫೦ ಬಾಲಿಕೆಯರಾದರೂ ಸೆಕೆಂಡರಿ ಶಿಕ್ಷಣವನ್ನು ಅಪೇಕ್ಷಿಸಬಹುದು ಎಂತ ಬರೆದಿರುವುದು ಅತಿಶಯೋಕ್ತಿಯೆಂದೇ ಹೇಳಬೇಕು. ಯಾಕೆಂದರೆ, ಮುಲ್ಕಿಸೆಂಟರಿನ ೫ನೇ ದರ್ಜೆಗಳಿರುವ ಎಲ್ಲಾ ಶಾಲೆಗಳಲ್ಲಿ ೫ನೇ ದರ್ಜೆಯಲ್ಲಿ ಈಗ ಓದುವ ವಿದ್ಯಾರ್ಥಿಗಳ ಒಟ್ಟು ಸಂಖ್ಯೆಯು ೧೫ಕ್ಕೆ ಮಿಕ್ಕಿರುವುದಿಲ್ಲ. ಮುಲ್ಕಿಸೆಂಟರಿನ ನಿವಾಸಿಕರಲ್ಲಿ ಬಹುಪಕ್ಷದವರು ಕೂಲಿಕೆಲಸದವರಾದ್ದರಿಂದ ತಮ್ಮ ಮಕ್ಕಳನ್ನು ಚಿಕ್ಕಂದಿನಲ್ಲಿ ಮಾತ್ರ ಶಾಲೆಗೆ ಕಳುಹಿಸಿ, ಅವರು ಸ್ವಲ್ಪ ದೊಡ್ಡವರಾದಕೂಡಲೇ ಶಾಲೆ ಬಿಡಿಸಿ ಕೂಲಿ ಕೆಲಸಕ್ಕೆ ಕಳುಹಿಸುವುದೇ ಇದಕ್ಕೆ ಕಾರಣವಿರಬಹುದು.

ಅದೂ ಅಲ್ಲದೆ ಈಗಳಿನ ಮುಲ್ಕಿಯ ಬೋರ್ಡುಶಾಲಾ ಕಟ್ಟೋಣವು ಹಾಯರ್ ಎಲಿಮೆಂಟರಿ ಶಾಲೆಗೆ ತೀರಾ ಅಯೋಗ್ಯವೆಂತಲೇ ಹೇಳಬೇಕು. ಅದರ ಸಮೀಪ ಶಾಲಾಮಕ್ಕಳಿಗೆ ಆಟಕ್ಕೆ ಸಾಕಷ್ಟು ಸ್ಥಳವಿರುವುದಿಲ್ಲ. ಅದು ಪೇಟೆಗೆ ಸಮೀಪದಲ್ಲಿದ್ದು, ಸ್ಥಳೀಕ ಮೀನು ಮಾರ್ಕೆಟಿಗೆ ತಾಗಿರುವುದರಿಂದ ಮಕ್ಕಳ ಆರೋಗ್ಯದ ದೃಷ್ಟಿಯಿಂದಲೂ ಅಷ್ಟು ಹಿತಕರವಲ್ಲ. ವಡಭಾಂಡೇಶ್ವರ ಸೆಂಟರಿನಲ್ಲಿರುವ ಪಂಚಮರ ಶಾಲೆಯನ್ನು ಮಕ್ಕಳಿಗೆ ಆಟಕ್ಕೆ ತಕ್ಕ ಸ್ಥಳವಿಲ್ಲವೆಂಬ ಕಾರಣದಿಂದ ಈಗಿರುವ ಸ್ಥಳವನ್ನು ಬಿಟ್ಟು ಯೋಗ್ಯವಾದ ಬೇರೊಂದು ಸ್ಥಳಕ್ಕೆ ಒಯ್ಯಬೇಕೆಂತ ಲೇಬರ್ ಡಿಪಾರ್ಟ್‌ಮೆಂಟಿನವರು ನಿರ್ಧರಿಸಿರುತ್ತಾರೆ. ಹೀಗಿರುತ್ತ ಆಟಕ್ಕೆ ಸ್ಥಳವೇ ಇಲ್ಲದ, ಅತಿ ಅನಾರೋಗ್ಯಕರವಾದ ಮತ್ತು ಗುಲ್ಲು ಗಲಭೆಗಳಿಗೆ ಕೇಂದ್ರಸ್ಥಳವಾದ ಈಗಿನ ಮುಲ್ಕಿ ಬೋರ್ಡು ಶಾಲೆಯ ವಠಾರದಲ್ಲಿಯೇ ಹಾಯರ್ ಎಲಿಮೆಂಟರಿ ಶಾಲೆಯನ್ನು ಏರ್ಪಡಿಸಬೇಕೆಂತ ಸ್ಕೂಲ್ ಎಡ್ವೈಸರಿ ಸಮಿತಿಯ ಸದಸ್ಯರಾದ ಶ್ರೀ. ಎಮ್. ಅಣ್ಣಯ್ಯನವರು ಸಾಧಿಸುವುದು ಕುಂಬಾ ವಿಷಾದಕರ.

ಕೊಡವೂರು ಬೋರ್ಡುಶಾಲೆಯು ಮುಲ್ಕಿಯಿಂದ ೧ ಮೈಲಿನ ಒಳಗೆ ಇದ್ದು, ಕೊಡವೂರು ಗ್ರಾಮದ ಮಧ್ಯಭಾಗದಲ್ಲಿರುತ್ತದೆ. ಅದು ಹಾಯರ್ ಎಲಿಮೆಂಟರಿ ಶಾಲೆಗಳಿಲ್ಲದ ತೆಂಕನಿಡಿಯೂರು, ಬಡಾನಿಡಿಯೂರು ಮೊದಲಾದ ನೆರೆಗ್ರಾಮಗಳಿಗೆ ಸಹ ಅನುಕೂಲವಾದ ಸ್ಥಳದಲ್ಲಿರುತ್ತದೆ. ಶಾಲಾಕಟ್ಟೋಣವು ಹೊಸತಾಗಿರುವುದಲ್ಲದೆ, ಗ್ರಾಮದ ಅತೀ ಆರೋಗ್ಯಕರವಾದ ಸ್ಥಳದಲ್ಲಿರುತ್ತದೆ. ಶಾಲೆಯ ಎದುರು ಮಕ್ಕಳಿಗೆ ಆಟಕ್ಕೆ ತಕ್ಕಷ್ಟು ಸ್ಥಳವೂ ಇರುತ್ತದೆ. ೬ನೇ ದರ್ಜೆಗೆ ಸೇರತಕ್ಕ ಅಂದರೆ, ೨೫ ಮಕ್ಕಳು ಕೊಡವೂರು ಬೋರ್ಡುಶಾಲೆಯ ೫ನೇ ದರ್ಜೆಯಲ್ಲಿರುತ್ತಾರೆ. ಮುಲ್ಕಿಯಿಂದ ಉಡುಪಿಗೆ ಹೋಗುವ ರಸ್ತೆಯ ಬದಿಯಲ್ಲಿಯೇ ಇರುವ ಅದು ಉಡುಪಿ ಹಾಯರ್ ಎಲಿಮೆಂಟರಿ ಶಾಲೆಯಿಂದಲೂ, ಮುಲ್ಕಿಗೆ ಸಮೀಪದಲ್ಲಿರುವ ತಿದಿಯೂರು ಹಾಯರ್ ಎಲಿಮೆಂಟರಿ ಶಾಲೆಯಿಂದಲೂ ಮುಲ್ಕಿಯ ನಿವಾಸಿಗಳಿಗೆ ಅನಾನುಕೂಲವಿಲ್ಲದೆ ಇರುವುದಾದರೆ, ಅವುಗಳಿಂದ ಕೊಡವೂರು ಸೆಂಟರಿನವರಿಗೂ, ತೆಂಕನಿಡಿಯೂರು ಮೊದಲಾದ ನೆರೆಗ್ರಾಮಸ್ಥರಿಗೂ ಏನೂ ಪ್ರಯೋಜನವಿರಲಾರದು. ಈ ಎಲ್ಲಾ ಕಾರಣಗಳಿಂದ ಜಿಲ್ಲಾ ಎಜ್ಯುಕೇಶನ್ ಆಫೀಸರರವರೂ, ಜಿಲ್ಲಾ ಹೆಲ್ತ್ ಆಫೀಸರರವರೂ ಮೇಲ್ಕಂಡ ಎರಡೂ ಶಾಲೆಗಳನ್ನು ಸ್ವತಃ ಸಂದರ್ಶಿಸಿ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸುತ್ತಿದ್ದರೆ ಕುಂಬಾ ಉಪಕಾರವಾಗುತ್ತಿತ್ತು. ಅಂತೂ ಮಾನ್ಯ ಡಿಸ್ಟ್ರಿಕ್ಟ್‌ಬೋರ್ಡಿನವರು ಗ್ರಾಮಸ್ಥರ ಕೋರಿಕೆಯನ್ನು ಸಹಾನುಭೂತಿಯಿಂದ ಪರ್ಯಾಲೋಚಿಸಿ, ಕೊಡವೂರು ಗ್ರಾಮದಲ್ಲಿ ಯೋಗ್ಯವಾದ ಸ್ಥಳದಲ್ಲಿ ಹಾಯರ್ ಎಲಿಮೆಂಟರಿ ಶಾಲೆಯೊಂದನ್ನು ತೆರೆಯುವ ಏರ್ಪಾಡನ್ನು ಮಾಡುವುದಾದರೆ ವಿದ್ಯಾಭಿಲಾಷಿಗಳಾದ ಮಕ್ಕಳಿಗೆ ಕುಂಬಾ ಸಹಾಯ ಮಾಡಿದಂತಾಗುವುದು.

ಕೊಡವೂರು ನಿವಾಸಿ.

ದಸರಾ ಮಹೋತ್ಸವ, ಪುತ್ತೂರು.

(ಅಕ್ಟೋಬರ ತಾ. ೯ರಿಂದ ೧೮ರ ತನಕ ಕಾರ್ಯಕ್ರಮದ ವಿವರ).

ತಾ. ೯ನೇ ಮಂಗಳವಾರ: - ಅಪರಾಹ್ನ ೪-೩೦ರಿಂದ ೫-೩೦ರ ತನಕ ವ್ಯಾಯಾಮ ಪ್ರದರ್ಶನ; ಸಾಯಂಕಾಲ ಘಂಟೆ ೬ಕ್ಕೆ ಶ್ರೀ ಪೇ. ಸೀತಾರಾಮ ಆಚಾರ್ಯರಿಂದ "ಉಪನಿಷತ್ತುಗಳ ಕಾಲ" ಎಂಬ ವಿಷಯ ಭಾಷಣ. ಆ ಮೇಲೆ "ರುಭದತ್ತ" ಎಂಬ ನೃತ್ಯ ನಾಟಕ.

ತಾ. ೧೦ನೇ ಬುಧವಾರ: ಪೂರ್ವಾಹ್ನ ೯ಕ್ಕೆ ಕಲಾಪ್ರದರ್ಶನದ ಆರಂಭ. ಸಾಯಂಕಾಲ ಶ್ರೀ ಜಿ. ಪಿ. ರಾಜರತ್ನಂರವರ ಕವಿತಾ ವಾಚನ-"ಯೆಂಡ್ಕುಡ್ಕ ರತ್ನ" ಆ ಮೇಲೆ "ನಶ್ವರ ಪ್ರಪಂಚ" ಎಂಬ ಗದ್ಯ ನಾಟಕ.

ತಾ. ೧೧ನೇ ಗುರುವಾರ:—ಪೂರ್ವಾಹ್ನ ೯ಕ್ಕೆ ಪುಸ್ತಕ ಪ್ರದರ್ಶನದ ಆರಂಭ; ಸಾಯಂಕಾಲ ಶ್ರೀ ಪಿ. ಶ್ರೀನಿವಾಸ ರಾವ್, ಎಮ್. ಎಸ್. ಸಿ., ಬೆಂಗಳೂರು, ಇವರಿಂದ "ಆಧುನಿಕ ಜೀವನದಲ್ಲಿ ರೇಡಿಯೊ" ಎಂಬ ವಿಷಯ ಭಾಷಣ, ಅನಂತರ "ಪ್ರಪಂಚದ ವೇಷಭೂಷಣಗಳು" ಎಂಬ ದೃಶ್ಯಾವಳಿ.

ತಾ. ೧೨ನೇ ಶುಕ್ರವಾರ:—ಬೆಳಗ್ಗೆ ೮ಕ್ಕೆ ಪಂದ್ಯಾಟ. ಸಾಯಂಕಾಲ ಶ್ರೀ ಶಿವರಾಮ ಕಾರಂತರಿಂದ "ಮುಂದಿನ ಧರ್ಮ" ಎಂಬ ವಿಷಯದ ಮೇಲೆ ಭಾಷಣ. ಅನಂತರ "ಭಕ್ತಿಭ್ರಾಂತರು" ಎಂಬ ನಾಟ್ಯರೂಪ ಚಿತ್ರ.

ತಾ. ೧೩ನೇ ಶನಿವಾರ:—ಬೆಳಗ್ಗೆ ಪಂದ್ಯಾಟಗಳು, ಅಪರಾಹ್ನ ಘಂಟೆ ೩ಕ್ಕೆ ಶ್ರೀ ಬಿ. ಎಮ್. ಶ್ರೀಕಂಠಯ್ಯನವರ ಅಧ್ಯಕ್ಷತೆಯಲ್ಲಿ ಸಾಹಿತ್ಯ ಉತ್ಸವ. ಸಾಯಂಕಾಲ ಶ್ರೀ ಟಿ. ಎಸ್. ಶ್ರೀಕಂಠಯ್ಯನವರಿಂದ "ಪಾಶ್ಚಾತ್ಯ ಪೌರ್ವಾತ್ಯ ಶೃಂಗಾರ ಕಾವ್ಯಗಳು" ಎಂಬ ವಿಷಯದಲ್ಲಿ ಭಾಷಣ. ಅನಂತರ "ಶೀಲ ಭಂಗ"ವೆಂಬ ನೃತ್ಯ ನಾಟಕ ಮತ್ತು "ಮೋಹಮಯೂರ" ನೃತ್ಯ.

ತಾ. ೧೪ನೇ ರವಿವಾರ: - ಸಾಹಿತ್ಯ ಉತ್ಸವ ಸಾಯಂಕಾಲ ಬೆಂಗಳೂರಿನ ಡಾ। ವೆಂಕಟ್ರಾವ್ ಬಾದಾಮಿಯವರಿಂದ "ನಮ್ಮ ಬೇಸಾಯದ ದುರವಸ್ಥೆ" ಎಂಬ ವಿಷಯವನ್ನೆತ್ತಿ ಭಾಷಣ. ಆ ಮೇಲೆ "ಮಂಗನ ಮದುವೆ" ಎಂಬ ವಿನೋದ.

ತಾ. ೧೫ನೇ ಸೋಮವಾರ:—ಬೆಳಗ್ಗೆ ಈಜಾಟ, ಪಾರಿವಾಳ ಹಾರಿಸುವ ವಿನೋದಗಳು, ಅಪರಾಹ್ನ ೪-೩೦ಕ್ಕೆ ಗಾಳಿಪಟ ಸ್ಪರ್ಧೆ ಮತ್ತು ಹಗಲು ವೇಷ. ಸಾಯಂಕಾಲ ಮೈಸೂರಿನ ಶ್ರೀ ಟಿ. ಎಸ್. ವೆಂಕಣ್ಣಯ್ಯನವರಿಂದ "ವಚನಗಳು" ಎಂಬ ಉಪನ್ಯಾಸ, ಅನಂತರ ಯಕ್ಷಗಾನ.

ತಾ. ೧೬ನೇ ಮಂಗಳವಾರ: — ಬೆಳಗ್ಗೆ ೮ರಿಂದ ೧೨ರ ವರೆಗೆ ಹಿರಿಯರೊಳಗೆ ಭಾಷಣ ಸ್ಪರ್ಧೆ, ಅಪರಾಹ್ನ ವ್ಯಾಯಾಮ ಸ್ಪರ್ಧೆ, ಸಾಯಂ. ಡಾ। ಸಿ. ಬಿ. ನಟರಾಜನ್‌ರವರಿಂದ "ಗುಹ್ಯ ರೋಗಗಳು" ಎಂಬ ವಿಷಯದಲ್ಲಿ ಭಾಷಣ. ಅನಂತರ "ನಾಲ್ಕನೇ ಪಿರಾಯ" ಎಂಬ ಗದ್ಯ ನಾಟಕ.

ತಾ. ೧೭ನೇ ಬುಧವಾರ: — ಬೆಳಗ್ಗೆ ಕಿರಿಯರೊಳಗೆ ಭಾಷಣ ಸ್ಪರ್ಧೆ. ಅಪರಾಹ್ನ ವ್ಯಾಯಾಮ ಸ್ಪರ್ಧೆ. ಸಾಯಂಕಾಲ "ಜನಜೀವನದಲ್ಲಿ ಸಾಹಿತ್ಯದ ಸ್ಥಾನ" ಎಂಬ ಭಾಷಣ—ಧಾರವಾಡದ ಶ್ರೀ ಎ. ಟಿ. ಸಾಸನೂರರವರಿಂದ. ಅನಂತರ "ಬದುಕಬಹುದು" ಎಂಬ ಗೀತಾ ನಾಟಕ.

ತಾ. ೧೮ನೇ ಗುರುವಾರ: — ಉಪಸಂಹಾರ ಭಾಷಣಗಳು, "ಯದ್ಭಾವಂ ತದ್ಭವತಿ" ಎಂಬ ವಿನೋದ.

[ಉಪನ್ಯಾಸ, ವಿನೋದಗಳಿಗೆ ಯಾವತ್ತೂ ದಿನಗಳಲ್ಲಿ ಸ್ಥಳವನ್ನು ಕಾದಿಡಬೇಕಾದಲ್ಲಿ ಒಂದು ರೂಪಾಯಿ ಟಿಕೇಟುಗಳಿವೆ.]

ಪುಸ್ತಕ ಪ್ರದರ್ಶನ.

(ಪುತ್ತೂರು ದಸರಾ ಮಹೋತ್ಸವದ ಸಂದರ್ಭದಲ್ಲಿ)

ಅಕ್ಟೋಬರ ತಾ. ೧೧ರಿಂದ ೧೮ರ ತನಕ.

ಶ್ರೀ ಪಂಜೆ ಮಂಗೇಶರಾಯರು ಇದನ್ನು ತಾ. ೧೧ರ ದಿನ ಪ್ರಾತಃಕಾಲ, ಘಂಟೆ ೯ಕ್ಕೆ ತೆರೆಯುವರು.

ಕರ್ಣಾಟಕ ಗ್ರಂಥಕರ್ತ, ಪ್ರಕಾಶಕ, ಪುಸ್ತಕ ವ್ಯಾಪಾರಿಗಳಲ್ಲಿ ವಿನಂತಿ:

ಮಹಾಶಯ,

ನಾವು ಪುತ್ತೂರಿನಲ್ಲಿ ತೆರೆಯಬೇಕೆಂದು ನಿಶ್ಚಯಿಸಿರುವ ಈ ಪುಸ್ತಕ ಪ್ರದರ್ಶನವು ಯಶಸ್ವಿಯಾಗಲು, ತಮ್ಮೆಲ್ಲರ ವಿಶೇಷ ಸಹಾಯವು ಅವಶ್ಯವಾಗಿದೆ. ತಮ್ಮಲ್ಲಿ ದೊರೆಯುವ ಕನ್ನಡ ಪುಸ್ತಕಗಳಲ್ಲಿ ಪ್ರತಿ ಒಂದೊಂದನ್ನು ತಾವು ಅವಶ್ಯವಾಗಿ ನಮ್ಮಲ್ಲಿಗೆ ಕಳುಹಿಸಬೇಕಾಗಿ ಕೋರಿಕೆ. ೧೯೩೦ನೇ ಇಸವಿಯ ನಂತರ ಮುದ್ರಿತವಾದ ಎಲ್ಲಾ ಕನ್ನಡ ಪುಸ್ತಕಗಳೂ ಸ್ವೀಕಾರಾರ್ಹವು. ನಮ್ಮ ಜನರಲ್ಲಿ ವಾಚನಾಭಿರುಚಿಯನ್ನು ಬೆಳೆಯಿಸುವ ಸಲುವಾಗಿ ನಡೆಯುವ ಈ ಕಾರ್ಯಕ್ಕೆ ಆದಷ್ಟು ಹೆಚ್ಚಿನ ಸಂಖ್ಯೆಯಿಂದ ಎಲ್ಲಾ ವಿಧದ ಪುಸ್ತಕಗಳು ಬೇಕಾಗಿವೆ. ಪುಸ್ತಕದ ಪ್ರತಿಗಳ ಜತೆಗೆ—ಅದನ್ನು ಬರೆದವರ, ಮುದ್ರಿಸಿದವರ ಮತ್ತು ಪ್ರಕಾಶಕರ ಹೆಸರನ್ನು ತಿಳಿಸಬೇಕು. ಅದರ ಮೌಲ್ಯವೆಷ್ಟೆಂದೂ, ಅದನ್ನು ಮಾರಬಹುದಾದರೆ ಅನುಮತಿಯನ್ನೂ ಕೊಡಬೇಕು; ವಿಕ್ರಯಿಸಿದ ಮೌಲ್ಯವನ್ನು ಪ್ರದರ್ಶನಾಂತ್ಯದಲ್ಲಿ ಕಳುಹಿಸುವೆವು. ಪುಸ್ತಕಗಳನ್ನು ಮರಳಿ ನಿಮಗೆ ಕಳುಹಿಸುವ ಸಲುವಾಗಿ ಬೇಕಾಗುವ ಮೌಲ್ಯವನ್ನು ಕಳುಹಿಸಬೇಕು; ಪುಸ್ತಕದ ಬಹಿರಂಗವೂ ಹೆಚ್ಚಿನ ಮನ್ನಣೆ ಕೊಡಲಾಗುವುದು; ಗ್ರಂಥಕರ್ತರ ಭಾವಚಿತ್ರವನ್ನು ಆದರದಿಂದ ಸ್ವೀಕರಿಸಿ ಪ್ರದರ್ಶಿಸಲಾಗುವುದು; ಪುಸ್ತಕವನ್ನು ಕಳುಹಿಸುವವರು - ಸಿ. ಪಿ. ಸಿ. ಬಸ್ಸು, ಮಾಡರ್ನ್ ಬಸ್ಸು ಸರ್ವಿಸುಗಳ ಮುಖಾಂತರ ಪುತ್ತೂರಿಗೆ ಮುಟ್ಟಿಸಬಹುದು; ರೈಲ್ವೆ ಮುಖಾಂತರ ಕಳುಹಿಸುವವರು ಪಾರ್ಸೆಲುಗಳನ್ನು ಮಂಗಳೂರಿಗೆ ಕಳುಹಿಸಿ—ರಶೀದಿಯನ್ನು ನಮಗೆ ರವಾನಿಸಬೇಕು.

ಈ ಸಮಯದಲ್ಲಿ ಹಳೇ ಮಕ್ಕಳ ಕನ್ನಡ ಹಸ್ತಲಿಖಿತ ಮಾಸಪತ್ರಿಕೆಯು ಪ್ರದರ್ಶನವೂ ಇದೆ. ಆದುದರಿಂದ ಉತ್ಸಾಹಿ ತರುಣರು ದಸರೆಗಾಗಿ ವಿಶೇಷ ಸಂಚಿಕೆಯನ್ನು ಹೊರಡಿಸಿ ನಮಗೆ ರವಾನಿಸಬೇಕೆಂದು ದಕ್ಷಿಣ ಕನ್ನಡದ ಎಲ್ಲಾ ಶಾಲೆಯವರಲ್ಲೂ ವಿನಂತಿ ಮಾಡುತ್ತೇವೆ ಎಂದು—ಟಿ. ರಾಮಚಂದ್ರರಾವ್, ಎಂ. ಎ. ಬಿ. ಎಲ್. (ಅಧ್ಯಕ್ಷ); ಎಂ. ನಾರಾಯಣ ನಂಬಿಯಾರ್, ಬಿ. ಎ., ಎಲ್. ಟಿ., ಮತ್ತು ಉಗ್ರಾಣ ಮಂಗೇಶರಾವ್, (ಕಾರ್ಯದರ್ಶಿ.) ಇವರು ತಿಳಿಸುತ್ತಾರೆ.

ಸಮುದ್ರದಲ್ಲಿ ಅರ್ಧ ಮೈಲು ಆಳದಲ್ಲಿ!

ಜಲಸಾಮ್ರಾಜ್ಯದ ಅದ್ಭುತಗಳು.

ಗಗನಸಾಮ್ರಾಜ್ಯದ ಶೋಧಕರಲ್ಲಿ ಪ್ರೊಫೆಸರ್ ಪಿಕಾರ್ಡರವರು ಹೆಸರಾಗಿರುವಂತೆ ಜಲಸಾಮ್ರಾಜ್ಯ ಶೋಧಕರಲ್ಲಿ ಡಾಕ್ಟರ್ ವಿಲ್ಲಿಯಮ್ ಬೀಬ್ ಎಂಬವರು ಪರಿಚಿತರಾಗಿರುವರು. ಒಂದು ದೊಡ್ಡ ಉಕ್ಕಿನ ಉರುಟಾಕಾರದ ಚೆಂಡಿನೊಳಗೆ ಕೂತು ಇವರು ಸಮುದ್ರದಲ್ಲಿ ಅರ್ಧ ಮೈಲಿಯಷ್ಟು ಕೆಳಗಿಳಿದು, ಅಲ್ಲಿ ಜೀವಿಸುವ ಕೆಲವೊಂದು ವಿಚಿತ್ರ ಮೀನುಗಳನ್ನು ಕಂಡು ಹಿಡಿದಿರುವರು. ಸಮುದ್ರದಲ್ಲಿ ಇಷ್ಟು ಆಳಕ್ಕೆ ಹೋದವರು ಯಾರೂ ಇಲ್ಲ.

ನೀರಿನಲ್ಲಿ ಕೆಳಗಿಳಿದು ಹೋದಂತೆ, ಸುತ್ತುಮುತ್ತಲಿನ ಸೌಂದರ್ಯವೆಲ್ಲ ವರ್ಣನಾತೀತವಾಗಿರುವುದಂತೆ. ಕೆಳಗಿಳಿವಾಗ ನೀರಿನೊಳಗೂ ಸೂರ್ಯರಶ್ಮಿಗಳ ಬೆಳಕಿರುವುದು, ಇದು ಕ್ರಮೇಣ ಕಡಿಮೆಯಾಗುತ್ತಾ ಹಸುರಾಗಿ ಮಾರ್ಪಡುವುದು. ಮುಂದೆ ಅವರ್ಣನೀಯ ನೀಲಬಣ್ಣ; ಅನಂತರ, ೨೫೦೦ ಅಡಿ ಆಳದಲ್ಲಿ ಕಾರ್ಗತ್ತಲೆ! ಆದರೆ ಏನು ಸೌಂದರ್ಯವದು! - ಅಸಂಖ್ಯಾತ ಮೀನುಗಳು ತಮ್ಮ ಮೈಯಿಂದ ಹೊರಡುವ ಪ್ರಕಾಶದಿಂದ ಆಗಾಗ ಆ ಕತ್ತಲೆಯಲ್ಲಿ ಬೆಳಕನ್ನು ಬೀರುವುವು. ಕೈಯಲ್ಲಿ ಹಿಡಿದ ವಿದ್ಯುದ್ದೀಪದ ಪ್ರಕಾಶದಂತೆಯೇ ಪ್ರಕಾಶವಿದೆ. ಕೆಲಮೀನುಗಳ ಪ್ರಕಾಶವು ಬಲವಾಗಿದೆ.

ಕೆಲವೊಂದು ಮೀನುಗಳು ತೀರ ವಿಚಿತ್ರವಾಗಿವೆಯಂತೆ. ಇವು ಎಂದೂ ನೀರನ್ನು ಬಿಟ್ಟು ಮೇಲೆ ಬಂದುದಿಲ್ಲವೆಂದೂ, ಉಸಿರನ್ನೆಳೆಯದೆ ಜೀವಿಸುವುವೆಂದೂ ಎಣಿಸಲಾಗಿದೆ. ಬೆಳಕೆಂದರೇನೆಂದು ಈ ಮೀನುಗಳಿಗರಿಯದು. ಇಂತಹ ಮೀನುಗಳಲ್ಲಿ ಆರಡಿಗಳಿಗಿಂತಲೂ ಉದ್ದವಾದವುಗಳಿವೆ. ಅವುಗಳು ಬಲು ವೇಗವಾಗಿ ಓಡಾಡುವುವೆಂದೂ, ಅವುಗಳನ್ನು ಹಿಡಿವುದು ತೀರ ಅಸಾಧ್ಯವೆಂದೂ ವಿಲಿಯಮ್ಸ್‌ರವರ ಅಭಿಪ್ರಾಯ.

೩೫೦೦ ಅಡಿ ಕೆಳಗೆ ನೀರಿನ ಒತ್ತಾಟ ಹೆಚ್ಚು—ಭಾರವು ಆ ಉಕ್ಕಿನ ಚೆಂಡನ್ನು (೪೦೦ ರಾತ್ತಲುಗಳ ಉಕ್ಕಿನ ಚೆಂಡು ಅದು) ಒಡೆಯಬಹುದೆಂಬ ಭಯದಿಂದ ಅವರು ಇನ್ನೂ ಕೆಳಗಿಳಿಯಲಿಲ್ಲ.

ಅಷ್ಟಲ್ಲದೆ ಇವರು ಒಯ್ದ ಆಮ್ಲಜನಕದ ಸಂಗ್ರಹವೂ ಮುಗಿಯುತ್ತ ಬಂದಿತ್ತು. ಆದರೂ, ವಿಲಿಯಮ್ಸ್‌ರವರು, ಸಮುದ್ರದೊಳಗಿನ ಜೀವಿಗಳ ವಿಷಯವಾಗಿ ಕೆಲವೊಂದು ಅದ್ಭುತ ಶೋಧಗಳನ್ನು ಮಾಡಿರುವರಂತೆ. ಇನ್ನೊಮ್ಮೆ ೩೦೦೦ ಅಡಿ ಕೆಳಗೆ ಹೋಗುವರಂತೆ.

ಆ ನೀರಿನ ಆಳದಲ್ಲಿ ಚಳಿಯನ್ನು ತಡೆಯಲಾಗುವುದಿಲ್ಲ. ನೀರಿನೊಳಗಿನ ಕತ್ತಲೆಯಲ್ಲಿ ನೋಡಲು ವಿಶೇಷ ಸ್ವಭಾವವುಳ್ಳ ದೀಪಗಳನ್ನೊಯ್ಯುವರು.

ಕೋಕೊಸ್ ದ್ವೀಪದಲ್ಲಿನ ನಿಕ್ಷೇಪ.

ಶಾಂತಸಾಗರದ ನಡುವೆ ಇರುವ ಕೋಕೊಸ್ ದ್ವೀಪಕ್ಕೆ ಬ್ರಿಟಿಷರ ಚಿಕ್ಕ ಗುಂಪೊಂದು ಹೊರಟಿದೆ. ಪೂರ್ವಕಾಲದಲ್ಲಿ ಸಮುದ್ರಕಳ್ಳರು ದರೋಡೆಮಾಡಿ ಸಂಗ್ರಹಿಸಿದ ಧನವನ್ನೆಲ್ಲ ಆ ದ್ವೀಪಕ್ಕೆ ಒಯ್ದು ಬಚ್ಚಿಟ್ಟವರೆಂಬ ಒಂದು ನಂಬಿಕೆಯಿದೆ. ಭೂಗರ್ಭ ಶೋಧದಲ್ಲಿ ಹೆಸರಾದವನೆಲ್ಲ ಈಗ ಆ ನಿಧಿಯನ್ನು ಕಂಡು ಹಿಡಿಯಲು ಹೊರಟಿದ್ದಾರೆ. ಸುಮಾರು ೨೫೦ ಲಕ್ಷ ಪವನು ಬೆಲೆಬಾಳುವ ಧನ-ಕನಕಾದಿಗಳು ದೊರೆಯಬಹುದೆಂಬ ಆಸೆಯಿದೆ.

ನಮ್ಮ ಸಂಸ್ಥಾನಿಕರ ರಾಜಭಕ್ತಿ.

ಸಾರ್ವಭೌಮರ ಪ್ರತಿಮೆ.

ಹಿಂದೂದೇಶದ ಸಂಸ್ಥಾನಾಧೀಶರೆಲ್ಲ ವಂತಿಗೆ ತೆತ್ತು, ನಮ್ಮ ಸಾರ್ವಭೌಮರ ಒಂದು ಶಿಲಾಪ್ರತಿಮೆಯನ್ನು ಡಿಲ್ಲಿಯಲ್ಲಿ ಸ್ಥಾಪಿಸಲು ಆಲೋಚಿಸಿರುವರು. ಸುಮಾರು ೩೫ ಅಡಿ ಎತ್ತರವುಳ್ಳ ಒಂದು ಪೀಠದಲ್ಲಿ, ೧೮ ಅಡಿ ಎತ್ತರವುಳ್ಳ ಚಂದ್ರಕಾಂತ ಶಿಲೆಯ ಪ್ರತಿಮೆಯನ್ನು ರಚಿಸುವರಂತೆ. ಚಕ್ರವರ್ತಿಗಳು ೧೯೧೧ನೇ ಇಸವಿಯ ಡಿಲ್ಲಿ ದರ್ಬಾರ್ ಸಮಯದಲ್ಲಿ ಧರಿಸಿದ ಪೋಷಾಕುಗಳೇ ಈ ಪ್ರತಿಮೆಯಲ್ಲಿ ಕೆತ್ತಲಾಗುವುವು.

ರೇಶ್ಮೆಯಂತೆ, ನುಣುಪಾದ ಮತ್ತು ಹೊಳಪಾದ ಕೇಶಧಾಮ

ದಿನನಿತ್ಯದ ಸ್ನಾನಕ್ಕೆ ಮುಂಚಿತವಾಗಿ ನಿಮ್ಮ ಕೂದಲುಗಳನ್ನು ಚೆನ್ನಾಗಿ ಬಾಚಿ, ಬ್ರಶ್ಶಿನಿಂದ ಸವರಿ, ಆ ನಂತರ

"ಕುಂತಳ ಕೌಮುದಿ"

ಎಂಬ ಹಿಂದೂಸ್ಥಾನದ ಪ್ರಸಿದ್ಧ ಕೇಶ ತೈಲ್ಯದಿಂದ ಕೂದಲುಗಳ ಬುಡವನ್ನು ಜಾಗರೂಕತೆಯಿಂದ ತಿಕ್ಕಿರಿ.

(ಮನಮುಗ್ಧಕರವಾದ ಸುಗಂಧವನ್ನುಳ್ಳದು.)

ಹಿಂದೂಸ್ಥಾನದಲ್ಲೆಲ್ಲ ಸರ್ವತ್ರ ಉಪಯೋಗಿಸಲ್ಪಡುತ್ತಿದೆ.

ತಯಾರಿಸುವವರು:— ಬೆಲೆ ಸೀಸೆ ಒಂದಕ್ಕೆ ರೂ.0—12—0.

ಆರ್. ಸಿ. ಸೇನ್ ಎಂಡ್ ಕೋ.,
ಲಿಮಿಟೆಡ್, ಕಲ್ಕತ್ತ.

ಏಜಂಟರು:—
ಕುಂತಳ ಕೌಮುದಿ ತೈಲ,
ವೆನ್‌ಲಾಕ್ ಆಸ್ಪತ್ರೆ ಎದುರು, ಮಂಗಳೂರು.

ಜಗಜ್ಜಟ್ಟಿ ಗಾಮನ ಉಪದೇಶ.

ಗಾಮ! ಇಪ್ಪತ್ತೈದು ವರ್ಷದ ಹಿಂದೀಯ ನಾಡಿಗೆ ಹೆಮ್ಮೆಯ ದೇಶವಾದರೂ ಗುಂಡಗೆ, ಸಹೃದಯ ವಿಶ್ವ ಛಾಂಪಿಯನನು. ದೀರ್ಘ ಕಾಯದ ಪ್ರಸಿದ್ಧ ಮಲ್ಲ ಜಬಿಸ್ಕೋನನ್ನು ಎರಡೇ ನಿಮಿಷಗಳಲ್ಲಿ ಹಿಡಿದು ನೆಲಕ್ಕಪ್ಪಳಿಸಿದ ವೀರ! ಪ್ರಪಂಚದ ಜಟ್ಟಿಗಳಿಗೆ ಅರಸು! ಮಲ್ಲಯುದ್ಧದಲ್ಲಿ ದಾಖಲೆಯನ್ನು ಸ್ಥಾಪಿಸಿ, ಭಾರತ ವರ್ಷಕ್ಕೆ ಕೀರ್ತಿಯನ್ನು ತಂದ ಬಲಭೀಮ!

ಇಂತಹ ಸರ್ವ ಜನಾದರಣೀಯ ಪುರುಷನು ಭಾಷಣ ಮಾಡುವನೆಂದರೆ—ಕೇಳಲು ಕುತೂಹಲಪಡುವವರು ಸಹಜವಾಗಿ ಸಹಸ್ರಾರು ಮಂದಿ. ಅಂತೇ ಕಳೆದ ವಾರ, ಅಲ್ಲಹಾಬಾದ್ ನಗರದಲ್ಲಿ ಸಾವಿರಾರು ಮಂದಿಗಳು ನೆರೆದು, ಗಾಮನ ಉಪದೇಶವನ್ನು ಆಲೈಸಿದರು:—

"ಹಿಂದೂದೇಶದ ಶಕ್ತಿಯಿಂದು ಕುಂದಿದೆ. ತೇಜೋಹೀನ ಮುಖಗಳೇ ಗೋಚರಿಸುತ್ತಿವೆ. ನಿರ್ಬಲಕಾಯರು ತುಂಬಿದ್ದು, ಮೃತಜೀವನವನ್ನು ನಡೆಸುತ್ತಿರುವರು. ಕಾರಣವೇನು? ಸಾಕಷ್ಟು ವ್ಯಾಯಾಮವನ್ನು ಮಾಡದಿರುವುದು! ನಮ್ಮ ಶಿಕ್ಷಣವು ಇಂದು ವಿದೇಶಿಯಾಗಿ ಮಾರ್ಪಟ್ಟಿದೆ. ವ್ಯಾಯಾಮವೂ, ವಿದೇಶೀ ಪದ್ಧತಿಗಳನ್ನನುಸರಿಸಹತ್ತಿದೆ. ಆ ವಿದೇಶೀ ಪದ್ಧತಿಯನ್ನನುಕರಿಸುವವರೂ ಕಡಿಮೆಯೆನ್ನಬೇಕು. ವಿದೇಶೀ ವ್ಯಾಯಾಮವು ಕೆಟ್ಟುದು ಎಂದು ನಾನು ಹೇಳುವುದಿಲ್ಲ; ಅವುಗಳಲ್ಲಿ ನಮ್ಮ ಮಕ್ಕಳು ಭಾಗವಹಿಸಕೂಡದು ವೆಂದು ಹೇಳುವುದೂ ಇಲ್ಲ. ಆದರೆ, ನಮ್ಮ ಹಿಂದೀ ವ್ಯಾಯಾಮ ಪದ್ಧತಿಯನ್ನು ನಮ್ಮವರು ಮರೆಯುತ್ತಿರುವುದಕ್ಕಾಗಿ ದುಃಖಿಸಬೇಕಾಗಿದೆ.

"ನಾನು ಪ್ರಪಂಚದ ಬೇರೆ ಬೇರೆ ಭಾಗಗಳ ಬೇರೆ ಬೇರೆ ವಿಧದ ವ್ಯಾಯಾಮಗಳ ರೀತಿಗಳನ್ನು ನೋಡಿರುವೆನು. ಅವುಗಳನ್ನು ನೋಡಿದ ನಂತರವೂ ನನ್ನ ಮನಸ್ಸಿಗೆ ಹಿಂದೀ ವ್ಯಾಯಾಮ ಪದ್ಧತಿಯೇ ಎಲ್ಲವುಗಳಿಗಿಂತ ಉತ್ತಮವಾದುದೆಂದು ಖಚಿತವಾಗಿದೆ. ಅತ್ಯಲ್ಪ ಸಮಯದಲ್ಲಿ ಅತ್ಯಧಿಕ ಫಲವನ್ನು ಅತ್ಯಲ್ಪ ಶ್ರಮದಿಂದ ಕೊಡುವ ವ್ಯಾಯಾಮವು ನಮ್ಮ 'ದಂಡ' ಮತ್ತು 'ಬೈಠಕ್' ಇವು.

"ನಾವು ಸ್ವದೇಶಿ ವಸ್ತ್ರಗಳನ್ನು ಕೊಂಡುಕೊಳ್ಳಬೇಕೆಂಬ ಚಳವಳವನ್ನು ಹೂಡಿರುವೆವು. ವ್ಯಾಯಾಮವೂ ಸ್ವದೇಶೀಯಾಗಿರಲಿ!"

ಇದನ್ನು ಹೆತ್ತವರು ಲಕ್ಷ್ಯದಲ್ಲಿಟ್ಟು ತಮ್ಮ ಮಕ್ಕಳನ್ನು ಚಿಕ್ಕಂದಿನಿಂದಲೂ ತಿದ್ದ ತರಬೇಕಾಗಿದೆ.

ಸಾಕಷ್ಟು ವ್ಯಾಯಾಮ, ಯೋಗ್ಯವಾದ ಆಹಾರ, ಕ್ರಮವಾದ ನಿದ್ರೆ ಇವುಗಳು ಮಾನವನ ದೀರ್ಘಾಯುಷ್ಯಕ್ಕೆ ಸಾಧನಗಳು.

ಜಗತ್ತು ಮರಣವನ್ನು ಆಮಂತ್ರಿಸುತ್ತಿದೆ.''

ರಾತ್ರಿ ಕಾಲದಲ್ಲಿ ನಿದ್ದೆಗೆಡುವುದು, ತಾತ್ಕಾಲಿಕ ಚೇತನ ಕೊಡುವ ಹಾನಿಕಾರಕ ಪಾನೀಯಗಳನ್ನು ಕುಡಿವುದು, ಮತ್ತು ಅಕ್ರಮವಾಗಿ ಅಯೋಗ್ಯವಾದ ಆಹಾರಗಳನ್ನು ಭುಂಜಿಸುವುದು, ಇವು ಜನರ ಆಯುಷ್ಯವನ್ನು ಕಡಿಮೆ ಮಾಡುತ್ತಿವೆಯೆಂದು ವೆಂಬ್ಲಿಯ ಮೆಡಿಕಲ್ ಆಫೀಸರರಾದ ಡಾ| ಚಾರ್ಲ್ಸ್ ಇ. ಗೊಡಾರ್ಡ್ ಎಂಬವರು ಹೇಳುತ್ತಿರುವರು. ಈ ಮೇಲಿನ ಅಭ್ಯಾಸಗಳಿಂದ ಪ್ರತಿಯೋರ್ವನೂ ಸಾಮಾನ್ಯವಾಗಿ ತನ್ನ ಆಯುಷ್ಯದಿಂದ ಇಪ್ಪತ್ತು ವರ್ಷಗಳನ್ನು ಕಡಿಮೆಮಾಡಿಕೊಳ್ಳುತ್ತಾನೆ. ಕೆಲವರು ಬದುಕಿ ಉಳಿದರೂ, ಚೇತನವಿಹೀನ ಶವಗಳಂತೆ ಉಳಿದು ತಮಗೂ ತಮ್ಮನ್ನು ಆಧರಿಸುವವರಿಗೂ ಭಾರವಾಗಿ ಉಳಿವರು. ದಿನೇ ದಿನೇ ಇಂತಹ ಅಬಲ ಪ್ರಾಣಿಗಳು ಶಕ್ತಿಯನ್ನು ಕೊಂಚ ಕೊಂಚವಾಗಿ ಕಳೆದುಕೊಳ್ಳುತ್ತಿರುವುದರಿಂದ ಇನ್‌ಫ್ಲುಯಂಜಾ, ಕ್ಷಯ ಮೊದಲಾದುವುಗಳಿಗೆ ಸುಲಭವಾಗಿ ತುತ್ತಾಗಿ ತಮ್ಮ ಬಳಿಯಲ್ಲಿದ್ದವರಿಗೂ ಹರಡಿ ಅಪಕಾರವನ್ನೆ ಮಾಡಿ ಸಾಯುವರು.

ಹಿಂದೀ ವಿಮಾ ಕಾನೂನನ್ನು ತಿದ್ದುವರು.

ಸರಕಾರದವರು ಸದ್ಯದಲ್ಲೆ ಹಿಂದೀ ವಿಮಾಕಂಪೆನಿಗಳ ಮಸೂದೆಯನ್ನು ತಿದ್ದುವ ಆಲೋಚನೆಯಲ್ಲಿರುವರು. ಆ ಕುರಿತಾಗಿ ಸಲಹೆಕೊಡಲು ಓರ್ವ ಸ್ಪೆಶಲ್ ಆಫೀಸರರ ನೇಮಕವಾಗಿದೆಯೆಂದೂ ತಿಳಿದುಬರುತ್ತದೆ.

ಚಿಕ್ಕ ಪುಟ್ಟ ಕಂಪೆನಿಗಳು ತಲೆಯೆತ್ತಿ, ಆತ್ಮಹತ್ಯಾಸಾಧಕವಾದ ಸ್ಪರ್ಧೆಯಿಂದ ತಾವು ಸಾಯುವುದರೊಂದಿಗೆ ಇತರರನ್ನೂ ಅರ್ಧ ಕೊಲ್ಲುತ್ತಿವೆ. ಅನನುಭವಸ್ಥರ ಅಸಮರ್ಪಕವಾದ ಆಡಳಿತದಿಂದಲೂ ಎಷ್ಟೋ ಕಂಪೆನಿಗಳು ನಿರ್ನಾಮಹೊಂದಿವೆ. ಪೊಲಿಸಿದಾರರ ಭದ್ರತೆಯನ್ನು ಮತ್ತಷ್ಟು ಬಲಪಡಿಸಬೇಕಾಗಿದೆ. ಆಡಳಿತ ನೋಡುವವರು ಸ್ವೇಚ್ಛಾಚಾರಿಗಳಾಗದಂತೆ ಬಿಗುವಾದ ಕಾನೂನು ಬೇಕಾಗಿದೆ: ವಿದೇಶೀ ವಿಮಾಕಂಪೆನಿಗಳ ಸ್ಪರ್ಧೆಯನ್ನು ತಡೆದು ಹಿಂದೀ ವಿಮಾಕಂಪೆನಿಗಳು ತಲೆಯೆತ್ತಿ ಮೆರೆವಂತೆ ಅನುಕೂಲ ಶಾಸನಬೇಕಾಗಿದೆ.

ಶಾತಗಳಲ್ಲಿ ಮುಂದರಿದ ರಷ್ಯವು ಆಟದಲ್ಲೂ ಮುಂದರಿಯುತ್ತಿದೆ.

ರಷ್ಯವು ಇಂದು ವಿವಿಧ ತರದ ವ್ಯಾಯಾಮ ಕಸರತ್ತು, ಆಟಗಳಲ್ಲಿ ಬಹಳವಾಗಿ ಮುಂದರಿದಿದೆ. ಮಿಲ್ಲಿಯಗಟ್ಲೆ ಸ್ತ್ರೀಪುರುಷರು ಈಜು ಓಟ, ಹಾರಾಟ, ಹೈಜಂಪ್, ಇತ್ಯಾದಿ ಆಟಗಳಲ್ಲಿ ಅತ್ಯಂತ ಪ್ರವೀಣರಾಗಿರುವರು.

ವರ್ಷಕ್ಕೆ ಎರಡುಬಾರಿ ಇವರ ಪಂದ್ಯಾಟಗಳು ನಡೆಯುತ್ತವೆ. ಈ ವರ್ಷ ೨ ಮಿಲ್ಲಿಯ ಜನರಿಗೂ ಮಿಕ್ಕಿ ವ್ಯಾಯಾಮಗಳಲ್ಲಿ ಸೇರಿರುವರು. ರಷ್ಯಾಧಿಪತಿ ಸ್ಟಾಲಿನರು ಇವರ ಪಂದ್ಯಾಟಗಳ ಸಮಯದಲ್ಲಿ ಸ್ವತಃ ಹಾಜರಿದ್ದು, ಬಹುಮಾನಗಳನ್ನು ಕೊಡಿಸಿ, ಪ್ರೋತ್ಸಾಹಿಸುತ್ತಿರುವರು.

ರಷ್ಯದ ಕ್ರಾಂತಿಯ ಮೊದಲು 'ವ್ಯಾಯಾಮ' ವೆಂದರೇನೆಂದು ಅಲ್ಲಿಯವರಿಗೆ ತಿಳಿದಿರಲಿಲ್ಲ. ಈಗ, ೧೬೦,೦೦೦,೦೦೦ ಜನಸಂಖ್ಯೆಯಲ್ಲಿ ಅರೆವಾಸಿ ಜನರು ನಾನಾ ಬಗೆಯ ವ್ಯಾಯಾಮಗಳಲ್ಲಿ ಪ್ರವೀಣರು.

"ಇನ್ನು ಒಂದೆರಡು ವರ್ಷಗಳಲ್ಲಿ ನಾವು ಪ್ರಪಂಚದ ದಾಖಲೆಗಳನ್ನೆಲ್ಲ ಮುರಿವಷ್ಟಕ್ಕೆ ಈಗಿಂದಲೇ ಸಿದ್ಧತೆಗಳನ್ನು ನಡೆಸಬೇಕು" ಎಂದು ಸ್ಟಾಲಿನರವರು—ಜನರನ್ನು ಹುರಿದುಂಬಿಸುವ ಭಾಷಣ ಮಾಡಿರುವರು.

ರಷ್ಯವನ್ನು ದೂರುವವರೆಲ್ಲ ಕಣ್ಣುಬಿಟ್ಟು ನೋಡುತ್ತಿರುವರು.

ತುರ್ಕಿಗೂ ಜಪಾನಿಗೂ ನಂಟು!

ತುರ್ಕಿಸ್ಥಾನವು ಜಪಾನಿನೊಂದಿಗೆ ಒಂದು ಕರಾರು ಮಾಡಿದೆ;—ವಿಚಿತ್ರ ಕರಾರು!

ತುರ್ಕಿಸ್ಥಾನಕ್ಕೆ ಯುದ್ಧದ ಹಡಗಗಳು ಬೇಕಾಗಿವೆ. ಜಪಾನಿಗೆ ತನ್ನ ಸರಕುಗಳನ್ನು ನಿರಾತಂಕವಾಗಿ ಮಾರಾಟಮಾಡಲು ಅನುಕೂಲವಾದ ಸಂತೆ ಬೇಕಾಗಿದೆ. ತುರ್ಕಿಸ್ಥಾನಕ್ಕೆ ೧೦ ಹಡಗಗಳನ್ನು ಜಪಾನು ತಯಾರಿಸಿಕೊಡುವುದು. ಬದಲಾಗಿ ಜಪಾನು ಅಪೇಕ್ಷಿಸುತ್ತಿರುವುದು ಹೆಚ್ಚೇನೂ ಇಲ್ಲ;—ಜಪಾನಿನ ವಸ್ತುಒಡವೆಗಳನ್ನು 'Made in Turkey' ಎಂಬ ಮೊಹರು ಒತ್ತಿ ಮಾರಾಟ ಮಾಡಲು ಪರವಾನಗಿ ದೊರೆತರೆ ಸಾಕು!

ಕಾರ್ಖಾನೆ ಗೋಡೆಗಳನ್ನು ಕಟ್ಟಿದರೆ ಅವುಗಳನ್ನೊಡೆಯಲು ಜಪಾನು ನೂತನ ಹಂಚಿಕೆಗಳನ್ನು ಮಾಡುತ್ತಿದೆಯೆಂಬುದಕ್ಕೊಂದು ನಿದರ್ಶನ.

ಮೈಸೂರೊಳಗಿನ ಮಿಶ್ಶನ್ ಶಾಲಾಧಿಕಾರಿಗಳಿಂದ ಅಲ್ಲಿನ ಹಿಂದೂ ಉಪಾಧ್ಯಾಯರಿಗೆ ಆಘಾತ.

೧೯೩೪ರಲ್ಲಿ ಸೆಕೆಂಡರಿ ಶಾಲೆಗಳಲ್ಲಿ ಕ್ರಿಸ್ತೀಯ ಮತಪ್ರಸಾರದ ಫಲಿತಾಂಶದ ಕುರಿತು ವಿಚಾರಣೆ ಮಾಡಲಿಕ್ಕೆ ಪ್ರಾಂತಿಕ ಕಮಿಶನಿನವರು ಬೆಂಗಳೂರನ್ನು ಸಂದರ್ಶಿಸಿದ್ದಾಗ ಮೆಥೊಡಿಸ್ಟ್ ಹೈಸ್ಕೂಲ್ ಮತ್ತು ಲಂಡನ್ ಮಿಶನ್ ಹೈಸ್ಕೂಲುಗಳನ್ನು ಒಂದುಗೂಳಿಸಬೇಕಾಗಿ ಮೈಸೂರು ಡಿಸ್ಟ್ರಿಕ್ಟ್ ಸಿನೊಡಿನವರು ಸೂಚಿಸಿದ್ದರು. ಎರಡೂ ಶಾಲೆಗಳ ಹಣಗಳನ್ನು ಒಟ್ಟುಗೂಡಿಸಿದಲ್ಲಿ ಮತಪ್ರಸಾರದ ಧ್ಯೇಯವು ಹೆಚ್ಚಿನ ರೀತಿಯಲ್ಲಿ ಸಫಲವಾಗುವುದೆಂದು ಕಾರಣ ಕೊಡಲಾಗಿತ್ತು. ವಿದ್ಯಾರ್ಥಿಗಳ ಸಂಖ್ಯೆಯನ್ನು ಕ್ಲಾಸುಗಳಲ್ಲಿ ೩೫–೪೦ಕ್ಕೆ ಇಳಿಸಿ, ಇಡಿ ಶಾಲೆಯಲ್ಲಿ ೫೦೦ಕ್ಕೆ ತಂದಿಟ್ಟರೆ, ಉಪಾಧ್ಯಾಯ ವರ್ಗವನ್ನು ಹೆಸರಿಗೆ ಮಾತ್ರವಲ್ಲದೆ ನಿಜವಾಗಿಯೂ ಮಾನಸಿಕತೆಯಲ್ಲೂ ಕ್ರಿಸ್ತೀಯರನ್ನಾಗಿ ಮಾಡುವುದು ತಕ್ಕ ದಾರಿಯೆಂದಿದ್ದರು.

"ನಮ್ಮ ಕ್ರಿಸ್ತ ಮಕ್ಕಳ ವಿದ್ಯಾಭ್ಯಾಸವು ಉಚ್ಚ ದೃಷ್ಟಿಯ ರೀತಿಯಲ್ಲಿ ಆಗುತ್ತಿರುವುದಿಲ್ಲವೆಂಬುದೇ ಆಡಳಿತ ಪದ್ಧತಿಯ ಮುಖ್ಯ ದೋಷವಾಗಿರುತ್ತದೆ. ವಿದ್ಯಾರ್ಥಿಗಳು ಒಂದೇ ಸಮನೆ ಅವರ ಜೊತೆಯಲ್ಲಿ ಕ್ರೈಸ್ತೇತರರ ತಮ್ಮ ಮತಪ್ರಸಾರದ ಕೆಲಸದ ಅಪೇಕ್ಷೆಯುಗಳಿಗೆ ಇತರ ಹೇಯ ಉಪಾಧ್ಯಾಯರು ಅನುಕೂಲರಾಗಿರೆಂದು ನಾನು ಒಪ್ಪುತ್ತೇನೆ. ಉಪಾಧ್ಯಾಯರಲ್ಲಿ ಕ್ರೈಸ್ತೇತರರಿದ್ದರೆ, ವಿದ್ಯಾರ್ಥಿಗಳು ಕ್ರೈಸ್ತ ಉಪಾಧ್ಯಾಯರಿಗೂ ನಿಜ ಅನ್ಯೋನ್ಯತೆ ವೃದ್ಧಿಯಾಗಲಿಕ್ಕೆ ಪ್ರಬಲ ತೊಡಗುಗಳಿವೆ. ಕ್ರೈಸ್ತ ಉಪಾಧ್ಯಾಯರ ಪ್ರತ್ಯೇಕ ಸಭೆಗಳನ್ನು ಕರೆದರೆ ಕ್ರೈಸ್ತ ಅಕ್ರೈಸ್ತ ಉಪಾಧ್ಯಾಯರೊಳಗೆ ವೈಮನಸ್ಸುಂಟಾಗುತ್ತದೆ; ಪಕ್ಷಪಾತದ ಆರೋಪವೂ ಉಂಟಾಗುತ್ತದೆ. ನಾವೆಂದಂತೆ ಎರಡೂ ಶಾಲೆಗಳನ್ನು ಒಂದುಗೂಡಿಸಿದಲ್ಲಿ ಮುಖ್ಯೋಪಾಧ್ಯಾಯ ಸಹಾಯೋಪಾಧ್ಯಾಯರು ತಮ್ಮ ಕೆಲಸವನ್ನು ಯಥಾರ್ಥವಾಗಿಯೂ ಮಿಶನರೀ ಮತಪ್ರಸಾರದ, ಸೇವೆಯಾಗಿ ಗಣಿಸಲಾಗುವುದು; ತಮ್ಮ ವಿದ್ಯಾರ್ಥಿ ವರ್ಗವು ದೇವರು ಸ್ವತಃ ತನ್ನ ಮಕ್ಕಳಾಗಿ ತಮ್ಮ ಆರೈಕೆಗೆ ಕೊಟ್ಟುದಾಗಿ ತಿಳಿಯುವರು" ಎಂದು ಡಿಸ್ಟ್ರಿಕ್ಟ್ ಸಿನೋಡಿನವರ ಸೂಚನೆಯಿತ್ತು.

ಆದುದರಿಂದ ಮೇಲೆ ಸೂಚಿಸಿದಂತೆ ಮುಂದಣ ಶಾಲಾ ವರ್ಷದಲ್ಲಿ ಎರಡೂ ಶಾಲೆಗಳನ್ನು ಒಂದುಗೂಡಿಸುವುದಿರುತ್ತಾ, ಸದ್ಯ ಶಾಲೆಗಳೊಳಗಿನ ಹಲವು ಹಿಂದೂ ಉಪಾಧ್ಯಾಯರು ಕೆಲಸದಿಂದ ತೆಗೆದು ಹಾಕಲ್ಪಡುವರು.

ಮದ್ರಾಸು ಅಧಿವತ್ಯದಲ್ಲಿ ನಡೆದು ಬರುತ್ತಿರುವ ಈ ಪದ್ಧತಿಯು ಬಹಿರಂಗವಾಗಿ ಮೈಸೂರಲ್ಲೂ ಪ್ರಾರಂಭವಾದಂತಾಯಿತು. ಶಾಲಾ ವಿದ್ಯಾರ್ಥಿಗಳಲ್ಲೂ ಕ್ರಿಸ್ತಮತ ಪ್ರಸಾರವಾಗಬೇಕೆಂಬುದೇ ಮಿಶನ್ ಶಾಲೆಗಳ ಮುಖ್ಯ ಧ್ಯೇಯವಾಗಿರುತ್ತಾ, ನಮ್ಮ ಜಿಲ್ಲೆಯೊಳಗಣ ಹಿಂದೂ ವರ್ಗದವರು ತಮ್ಮ ಮಕ್ಕಳನ್ನು ಇನ್ನೂ ಇನ್ನೂ ಅಂತಹ ಶಾಲೆಗಳಿಗೆ ಕಳುಹಿಸಿಕೊಡುವುದರ ಹಿತಾಹಿತಗಳನ್ನು ವಿವೇಚಿಸಿಯಾದರೂ, ಇನ್ನು ಮುಂದಕ್ಕೆ ತಮ್ಮ ಮಕ್ಕಳನ್ನು ಮಿಶನ್ (ಯಾವುದೇ ಆಗಲಿ) ಶಾಲೆಗಳಿಗೆ ಕಳುವುದನ್ನು ನಿಲ್ಲಿಸುವರೇ? ಹಿಂದೂ ಧರ್ಮವನ್ನು ತಾವೇ ಮೆಟ್ಟಿ ಬಲಗುಂದಿಸುವರೇ? ನೋಡಬೇಕಾಗಿದೆ.

ಬೇಕಾಗಿದ್ದಾರೆ.

ತಿಂಗಳಿಗೆ ರೂ. 200ರ ಮೇಲೆ ಚೀಫ್ ಏಜಂಟರೂ, ರೂ. 100ರ ಮೇಲೆ ಏಜಂಟರೂ ರೂ. 40 ಮತ್ತು ಪ್ರೊವಿಡೆಂಟ್ ಫಂಡ್ ಮತ್ತು ಕಮಿಶನಿನ ಮೇಲೆ ಒರ್ಗನೈಜರೂ ಬೇಕಾಗಿದ್ದಾರೆ.

ಇಂಗ್ಲಿಷಿನಲ್ಲಿ ಬರೆಯಿರಿ—

Uplifting Banking Corporation Ltd.
169-171, Javeri Bazar, Bombay.

A Recurring Pleasure *To Smoke them*

REGISTERED



TRADE MARK

Mangalore Darbar Beedies

Thousands enjoy them daily all over India.

When buying see our Trade Mark!

ಮಂಗಳೂರು ದರ್ಬಾರ್ ಬೀಡಿಗಳು

ಇವುಗಳನ್ನು ಸೇದುವುದೆಂದರೆ ಆನಂದ!

ಯಾವ ಕೂಟದಲ್ಲೂ ಸಿಗರೇಟುಗಳ ಸ್ಥಾನವನ್ನು ಯೋಗ್ಯವೆನಿಸುವಂತೆ ವಹಿಸುವ ಬೀಡಿಗಳಿರುವುದಾದರೆ—ಅವುಗಳು

Regd. ದಿ ಗ್ರೇಟ್ ದರ್ಬಾರ್ ಬೀಡಿ ವರ್ಕ್ಸ್ ರಥಬೀದಿ, ಮಂಗಳೂರು.

ಇವರಿಂದ ತಯಾರಿಸಲ್ಪಟ್ಟವುಗಳು.

ವಿವಿಧ ವಿಷಯ.

ಸಿಕ್ಕಿ ಬರುವುದರ ರಹಸ್ಯವೇನು?—

ಎಡಿಯುದೀಗ ಬ್ರಿಟಿಷ್ ವೈದ್ಯಾನಿಕರ ನೂತನ ಶೋಧದ ಪ್ರವೃತ್ತಿ ತೊಟ್ಟಿದೆ. ಅದನ್ನು ಕಂಡು ಹಿಡಿದ-ಬು ಹಲವರು ಬೆಟ್ಟು ಕೂಡಿರುವರು. ಸ್ವಾಭಾವಿಕ ನಿದ್ರೆಯು ಮನುಷ್ಯನ ಆರೋಗ್ಯಕ್ಕೆ ಕಾರಣವಾಗುವದು. ಸ್ವಾಭಾವಿಕ ರೀತಿಯಿಂದ—ಔಷಧಿಗಳನ್ನು ಸೇವಿಸಿ ಬರಿಸುವ ನಿದ್ರೆಯು ತಾತ್ಕಾಲಿಕವಾದ ಸುಖವನ್ನು ಮಾತ್ರ ಉಂಟುಮಾಡುವುದು. ಆದಕಾರಣ, ಸುಲಭವಾಗಿ ಸ್ವಾಭಾವಿಕ ನಿದ್ರೆಯನ್ನು ಹೇಗೆ ಬರಮಾಡಬಹುದು ಎಂಬುದೊಂದು ಪ್ರಶ್ನೆಯಾಗಿದೆ.

ಹೃತ್ಸ್ಪೋಟವೆಂಬುದು

—ಒಂದು ರೋಗವುಳ್ಳದುದು. ಅದಕ್ಕೆ ಚಿಕಿತ್ಸೆ ತೋರಿದರೂ ಮನುಷ್ಯನು ಸಾಯುವನು. ಹಾಗೆ ತೋರಿದುದನ್ನು ಹೇಳಿದರೂ ನಿಷ್ಪ್ರಯೋಜಕವಾಗುವದು. ಆದರೆ, ಮೆಕ್ಸಿಕೋ ನಗರದ ಓರ್ವ ಸ್ತ್ರೀಯು ಹಿಡಿಯಲ್ಪಟ್ಟು ಆಸ್ಪತ್ರೆಗೆ ಸಾಗಿಸಲಾದಾಗ—ಡಾಕ್ಟರು ಉಪಾಯ ಕಾಣದೆ, ಆಕೆಯ ಹೃತ್ಸ್ಫೋಟಕ್ಕಾಧಕವನ್ನು ಧೈರ್ಯದಿಂದ ಹೋದರು, ಏನಾಶ್ಚರ್ಯ! ಹೆಂಗಸು ಗುಣಹೊಂದಿ, ಎಂದಿನಂತೆ ಇರುತ್ತಿದ್ದಾಳೆ!

ಹಾರಾಡುವ ಮೋಟಾರು ಸೈಕಲಿನ ವಿಷಯ ಬಲ್ಲಿರಾ?

ಇದು ಈಗಾಗಲೇ ಸಿದ್ಧವಾಗಿದೆ. ಬೇಗನೆ ಪ್ರಚಾರಕ್ಕೆ ಬರಬಹುದು. ಘಂಟೆಗೆ ೯೫ ಮೈಲುಗಳನ್ನು ಓಡಬಲ್ಲುದು, ಭಾರ ಒಟ್ಟು ೩೧೦ ರಾತ್ತಲ್ಲು, ೪೦೦ ಪವನುಗಳಿಗೆ ಯಾರೂ ಕೊಂಡುಕೊಳ್ಳಬಹುದು. ಹಾರಾಡುವಾಗ ಬಿದ್ದು ಅಪಾಯ ಹೊಂದುವದೆಂಬ ಭಯವಿಲ್ಲ. ವಿಶೇಷವಾದ ಇಂಜನಿಯರಿಂಗ್ ಮಾಹಿತಿಯೂ ಬೇಡ.

ಕೋಳಿಗರಿಗಳ ಹೊಸ ಉಪಯೋಗವೊಂದು—

—ಇಯೋವಾ (ಸಂಯುಕ್ತ ಅಮೇರಿಕ) ಸಂಸ್ಥಾನದ ಶೋಧಕನಿಂದ ತಿಳಿಯಬರುವುದಾಯಿತು. ಈ ಗರಿಗಳನ್ನು ಪದಗೊಳಿಸಿ, ಕೆಲವೊಂದು ದ್ರವಗಳನ್ನು ಬೆರಸಿ, ಮುದ್ರೆಮಾಡಿದುವುಗಳಿಂದ ಫೌಂಟನ್ ಪೆನ್ನಿನಿಂದ, ಬರೆಯುವ ಗಾವಾನುಗಳನ್ನು ಮಾಡಬರುವುದಂತೆ!

ರಾಕ್ಷಸರಾಜ್ಯವೊಂದಿದೆಯೋ?

ಉಗಾಂಡಾ (ಆಫ್ರಿಕ)ದ ವಿಕ್ಟೋರಿಯಾ ರುಡೊಲ್ಫ್ ಎಂಬ ಸರೋವರದ ನಡುವೆ ಒಂದು ದ್ವೀಪವಿದೆ. ಇದನ್ನು ಪ್ರವೇಶಿಸಿ ಮರಳಿ ಬಂದವರಿಲ್ಲ. ಅಲ್ಲಿರುವುದೆಲ್ಲ ವಿಚಿತ್ರವಾದುದೆನ್ನುವರು. ಒಂದು ತಿಂಗಳ ಹಿಂದೆ ಕೆಲವು [illegible]ಯರು ಅತ್ತ ಹೋದವರು, ಇನ್ನೂ ತಿರುಗಿ ಬಂದಿಲ್ಲವೆಂಬುದರಿಂದ ಆ ವಿಚಿತ್ರ ದ್ವೀಪವು ಅವರನ್ನು ನುಂಗಿತೆಂದೆಣಿಸಲಾಗಿದೆ. ಹಿಂದೆ ಅನೇಕಬಾರಿ ಅನೇಕ ಕೋಟಿಗಳು ಅತ್ತ ಹೋಗಿ, ದ್ವೀಪವನ್ನು ಮುಟ್ಟಿದ ಕೂಡಲೇ ಹಿಂದೆ ಓಡಿಬಂದಿರುವವು. ಆ ದ್ವೀಪದ ತೀರದಲ್ಲೆಲ್ಲ ಮೊಸಳೆಗಳು, ಹಿಪ್ಪೊಪೊಟಮಸ್‌ಗಳು ಇವೆಯಂತೆ. ಮರಗಳಲ್ಲಿ ಭಯಂಕರ ಕೋತಿಗಳು, ಗೊರಿಲ್ಲಗಳು, ಹೆಬ್ಬಾವುಗಳು ಹಾಗೆಯೇ ಇತಿಹಾಸಪೂರ್ವದ ಪ್ರಚಂಡ ಜೀವಿಗಳೂ ಇವೆಯೆಂದು ಕೆಲವರ ಅಂಬೋಣ. ನರಭಕ್ಷಕ ರಾಕ್ಷಸರೂ ಇರುವರಂತೆ.

ಆರು ಕೋಟಿ ವರ್ಷಗಳ ಹಿಂದಿನ ಪ್ರಾಣಿಗಳು!

ಆರು ಕೋಟಿ ವರ್ಷಗಳ ಹಿಂದೆ ಭೂಲೋಕದಲ್ಲಿ (ಬಹುಶಃ ಮನುಷ್ಯರಿಲ್ಲದಾಗ) ದೊಡ್ಡ ಪ್ರಾಣಿಗಳು ಸಂಚರಿಸುತ್ತಿದ್ದುವು. ಅವುಗಳ ಅದ್ಭುತಾಕಾರದ ಅಸ್ಥಿಪಂಜರಗಳೀಗ ಅಲ್ಲಲ್ಲಿ ದೊರೆಯುತ್ತವೆ. ಅಮೇರಿಕದ ಟೆಕ್ಸಸ್ ಎಂಬಲ್ಲಿ ೪ ಅಡಿ ಭೂಮಿಯಡಿಯಲ್ಲಿ, ೩೩ ಅಡಿ ಉದ್ದದ ಹಲ್ಲಿಗಳ ಎರಡು ಅಸ್ಥಿಪಂಜರಗಳು ದೊರೆತುದನ್ನು ಬ್ರಿಟಿಷ್ ವಸ್ತುಸಂಗ್ರಹಾಲಯಕ್ಕೆ ಸಾಗಿಸಿರುವರು. ಅಗೆದ ಆರಂಭ (ಕಾಮುಹಲ್ಲಿ ೩ ಅಡಿ ಇದೆ) ಹಲ್ಲಿಗೂ ೪ ೩೩ ಅಡಿ ಉದ್ದದ ಹಲ್ಲಿಗೂ ಎಷ್ಟು ದೃಶ್ಯ!

ಪ್ರಚಲಿತಸಮಾಚಾರ.

ಅಲ್ಲಹಾಬಾದಿನಲ್ಲಿ ಗಫರ್ ಖಾನರು.

ಖಾನ್ ಅಬ್ದುಲ್ ಗಫರ್ ಖಾನರವರು ಅಲ್ಲಹಾಬಾದಿಗೆ ತಾ. ೨೩ಕ್ಕೆ ಆಗಮಿಸಿ, ಸಾರ್ವಜನಿಕ ಸಭೆಯಲ್ಲಿ ಭಾಷಣ ಮಾಡಿದರು. ಇಂದಿನ ರಾಜಕೀಯ ವಾತಾವರಣವು ಪ್ರಕ್ಷುಬ್ಧವಾಗಿದ್ದಾಗ ಸಮೊಸ್ಯೆಗೇ ತಂಡೆಗಳಾಗುತ್ತಿರುವುದಕ್ಕಾಗಿ ಖಾನರು ತಮ್ಮ ಖೇದವನ್ನು ಪ್ರದರ್ಶಿಸುತ್ತ, ಇಂತಹ ಒಡಕುಗಳು ದೇಶದ ಬಲವನ್ನು ಕುಂದಿಸುವುದೆಂದು ಸ್ಪಷ್ಟವಾಗಿ ಹೇಳಿದರು. ಮುಸ್ಲಿಮರು ರಾಷ್ಟ್ರೀಯ ಚಳವಳವನ್ನು ಸೇರಬೇಕೆಂದೂ ಕ್ಷೇತ್ರವನ್ನು ಎಲ್ಲರೂ ಒಗ್ಗಟ್ಟಾಗಿ ತಿರಸ್ಕರಿಸಬೇಕೆಂದೂ ವಿನಂತಿಸಿದರು.

ಗಾಮನನ್ನು ಕಾದಾಡುವೆನೆಂದು ಹೊರಟಿರುವನು—

ನಮ್ಮ ದಕ್ಷಿಣ ದೇಶದ ಪೆಂಕಪ್ಪ ಬುರುಡ! ಇವನು ಕೊಲ್ಹಾಪುರದ ರಾಜರ ಆಶ್ರಯದಲ್ಲಿದ್ದಾನೆ! ಈತನು ಕಾಯನು. ಪಂಜಾಬಿನ ಟಿರಕ್ ಎಂಬ ಪ್ರಖ್ಯಾತ ಜಟ್ಟಿಯನ್ನು ಮೊನ್ನೆ ತಾನೇ ಕೊಲ್ಹಾಪುರದಲ್ಲಿ ಐದೇ ನಿಮಿಷಗಳಲ್ಲಿ ಸೋಲಿಸಿದ್ದಾನೆ. ಇನ್ನು ಗಾಮನೊಡನೆ ಕಾಳಗಕ್ಕೆ ನಿಲ್ಲಲು ಸಿದ್ಧನಾಗಿದ್ದಾನೆ.

ವಿಮಾನದ ವೇಗವನ್ನು ಹೆಚ್ಚಿಸಬೇಕೆಂದು

ವೈಮಾನಿಕರ ಹಟ. ಘಂಟೆಗೆ ೧೬೫ ಮೈಲುಗಳಂತೆ ಓಡುವ ಒಂದು ವಿಮಾನವನ್ನು ಈಗ ಇಂಗ್ಲಾಂಡಿನಿಂದ ಇಂದಿಯಕ್ಕೆ ಪ್ರಯಾಣಕರನ್ನೊಯ್ಯಲು ಉಪಯೋಗಿಸುವರೆಂಬ ಸುದ್ದಿಯಿದೆ. ಇದರ ಪರೀಕ್ಷಾರ್ಥ ಮಾಡು ಹಾರಾಟ ಇದೇ ತಿಂಗಳಲ್ಲಿ ನಡೆಯುವುದು. ಆರು ತಾಸುಗಳೊಳಗೆ, ಇಂಗ್ಲಾಂಡಿನಿಂದ ಇಂಡಿಯಕ್ಕೆ ಬಂದು ಮುಟ್ಟಬೇಕೆಂದು ನಿಶ್ಚಯವಾಗಿದೆ. ನಡುವೆ ಎಲ್ಲಿಯೂ ಇಳಿವುದಿಲ್ಲವಂತೆ.

ಜಪಾನಿನ 'ಮಿದುಳಿ'ನ ಶ್ಯಾಂಡಲ್ ಕಂಡಿರಾ?

ನಮ್ಮ ಸಾರ್ವಭೌಮರ ಪುತ್ರ ರಾಜಕುಮಾರ ಜೋರ್ಜರು ಗ್ರೀಸ್ ರಾಜಕುಮಾರಿಯನ್ನು ವಿವಾಹ ಮಾಡುವರೆಂದು ಪ್ರಕಟವಾಗಿದ್ದುದಷ್ಟೆ? ಈ ವಿವಾಹದ ಸಂದರ್ಭವನ್ನು ನೋಡಿ ಜಪಾನಿನವರು ವಧೂವರರ ಛಾಯಾಚಿತ್ರಗಳುಳ್ಳ ಚಿಕ್ಕ "ಚೀಲ"ಗಳನ್ನು ತಯಾರಿಸುತ್ತಿದ್ದಾರೆ. ಅವು ಇಂಗ್ಲೆಂಡಿನಲ್ಲಿ ಮಾರಾಟವಾಗಬಹುದೆಂದು ಜಪಾನಿನ ನಂಬಿಗೆ.

ಲಂಕಾಶಯರಿಗೆ ಉಸಿರುಕಟ್ಟಿದೆ!

ಅದು ತಲೆಯೆತ್ತಿದಲ್ಲಿ ಜಪಾನು ಕೊಡಹುತ್ತಿದೆ. ಪ್ರಪಂಚದ ವ್ಯಾಪಾರ ಕ್ಷೇತ್ರಗಳಲ್ಲೆಲ್ಲ ಜಪಾನಿನದೇ ಪ್ರಾಬಲ್ಯ; ಜಪಾನ್ ಸರಕುಗಳೇ ಅಗ್ಗ! ಹಿಂದೂ ದೇಶ, ಆಫ್ರಿಕ, ಸಿಲೋನುಗಳಂತಹ ಲಾಭಕರವಾದ ಸಂತೆಗಳಲ್ಲಿ ಲಂಕಾಶಯರು ಹಿಮ್ಮೆಟ್ಟುವಂತೆ ಜಪಾನು ಸಾಧಿಸಿದೆ. ಈಗ, ಈಜಿಪ್ಟಿನಲ್ಲಿಯೂ ಜಪಾನು ಅಳಬಂದಿದೆಯೆಂದು ಕೇಳಿದೆವು. ಲಂಕಾಶಯರಿನ ಯಂತ್ರಗಳು ಇಷ್ಟು ಓಡಿಯದೆ ಹೇಗೆ ಇರಬಲ್ಲುವು? ಬ್ರಿಟನಿಗೆ ಒತ್ತಾಯದ ಒಪ್ಪಂದಗಳಂತಹ ಹಂಚಿಕೆಗಳು ತಿಳಿದಿವೆ. ಆದರೆ, ಜಪಾನು ಬೆಲೆಯನ್ನು ನೋಡಿ ಕೈಯನ್ನು ನುಂಗುವ ಸಾಹಸ ಮಾಡಬಲ್ಲುದೆ? ಈಗ ಲಂಕಾಶಯರು, ಜಪಾನನ್ನು ಈಜಿಪ್ಟಿನಿಂದ ಓಡಿಸಲು ಈಜಿಪ್ಟಿನೊಡನೆ ಕರಾರು ಮಾಡಿಕೊಳ್ಳಲಿದೆಯೆಂದು ಸುದ್ದಿ. ಈಜಿಪ್ಟಿನ ಅರಸಿಗೆ ಸುಮುಹೂರ್ತ ಮಾಡಿದೆಯೆನ್ನುವ!

ಹಿಟ್ಲರರ ಜಾತಕವನ್ನು

ಅಮೇರಿಕದ ಜೋಯಿಸರೊಬ್ಬರು ಸ್ಫುಟಮಾಡಿ—"ಇವರು ತಮ್ಮ ಕಾರ್ಯದಲ್ಲಿ ಜಯಹೊಂದುವುದಿಲ್ಲ"ವೆಂದು ಸ್ಪಷ್ಟವಾಗಿ ಕಾಣುತ್ತದೆ. ಕಾರಣ, ಅವರ ಜಾತಕವು ಹೂವರರಂತೆ, ಆ ಡಿಲ್ಲಿಂಜರ (ಕಳ್ಳ)ನಂತೆ, ಸಾಮುವೇಲ್ ಇನ್ಸುಲನಂತೆ—ಇದೆ" ಎನ್ನುತ್ತಾರೆ.

ಅನ್ವೇಲಿಯದ ಭಾಸ್ಕರ—

—ಡೊಲ್ಪಸರವರ ಕೊಲೆಯ ನಂತರ ಈಗ, ಆ ಕೊಲೆಯಲ್ಲಿ ಭಾಗವಹಿಸಿದವರ ದಸ್ತಗಿರಿ, ವಿಚಾರಣೆ, ಶಿಕ್ಷೆಗಳ ಪರ್ವ ಆರಂಭವಾಗಿದೆ. ಮರಣದಂಡನೆಗೆ ಗುರಿಯಾದವರಲ್ಲಿ ಇಬ್ಬರು ಪೋಲೀಸರು. (ಒಟ್ಟು ೨೦೦ ಮಂದಿ ಪೋಲೀಸರು ದಸ್ತಗಿರಿ ಮಾಡಲ್ಪಟ್ಟಿರುವರು.)

ಸೀಪಾಯಿ ಆಕಾರದ ಕಟ್ಟಡ.

ಅಮೇರಿಕದೇಶದ ಕಡೆಯಲ್ಲಿ ಹಂದಿಯಾಕಾರದ ಕಟ್ಟಡವಿದೆ; ಅದೊಂದು ಹೋಟೇಲು! ಜರ್ಮನಿಯ ಡೋರ್ಟ್ಮಂಡ್ ಎಂಬಲ್ಲಿ ಸೀಪಾಯಿ ಆಕಾರದ ಕಟ್ಟಡವಿದೆಯೆಂದು ಕೇಳಿದೆವು. ಇದೂ ಹೋಟೇಲು. ೩ ಅಂತಸ್ತುಗಳ ಕಟ್ಟಡ; ೪೦೦ ಜನರಿಗೆ ಕುಳಿತುಕೊಳ್ಳುವ ಸ್ಥಳಾನುಕೂಲತೆಯಿದೆ.

ಬೋಂಬಿನ ಉಪಾಸನೆಯು

ಹೆಚ್ಚುತ್ತ ದೇಶದಲ್ಲೆಲ್ಲ ಪಸರಿಸುತ್ತಿದೆಯೆಂದೇ ಹಲವರ ದಿಗಿಲು. ಇದಕ್ಕೆ ಚಿಕಿತ್ಸೆಯೇನೆಂಬುದು ಯಾರಿಗೂ ತಿಳಿದಿಲ್ಲ. ಆದರೆ ಸರಕಾರದವರು ಕಠಿನ ಶಾಸನಗಳನ್ನು ಜ್ಯಾರಿಗೆ ತರುವುದರಿಂದ ಭಯೋತ್ಪಾದಕರ ಚಳವಳಿಯು ಮತ್ತಷ್ಟು ಹೆಚ್ಚುವಂತಾಗುತ್ತದೆಂದೇ ಅಭಿಪ್ರಾಯವಿದೆ. ಸರಕಾರವು ಮಾತ್ರ ಇದನ್ನು ನಂಬುವಂತಿಲ್ಲ. ಬಿಗಿಯಾದ ಶಾಸನಗಳೇನೂ ಅದನ್ನಿನ್ನೂ ಶಮನಿಸುವಲ್ಲಿ ಯಶಸ್ವಿಯಾಗಿಲ್ಲದಿದ್ದಾಗ ಗಾಂಧಿಜಿಯವರನ್ನು ಬಂಗಾಳಕ್ಕೆ ಕರೆಸಿ, ಅವರಿಂದ ಬಿಡಾದರೂ ನಿವಾರಣೋಪಾಯಗಳನ್ನು ಕಂಡುಕೊಂಡರಾಗದೇ ಎಂಬ ಒಂದು ಪ್ರಶ್ನೆ ಈಗ ಎದ್ದಿದೆ. ಯತ್ನಿಸಬಾರದೇಕೆ? ಗಾಂಧಿಜಿಯವರೂ ಕೆಲಕಾಲ ಬಂಗಾಳದಲ್ಲಿದ್ದು, ತಮಗೆ ಅತ್ಯಂತ ಪ್ರಿಯವಾದ ಆ ಕಾರ್ಯದಲ್ಲಿ ವಿಶೇಷ ಶ್ರಮ ವಹಿಸಲು ಸಂತೋಷಗೊಳ್ಳುವರು.

ಬರ್ನಾರ್ಡ್ ಶೋ ಅಂದರೆ—

'ತಿಂಡಿಪೋತ'ನಾಗಿ ಪರಾಡುವ ಮನುಷ್ಯ. ಪಂಪಾನಗರವನ್ನು ನೋಡಿ, "ನೀವದು ಸುಟ್ಟು ಹುಗಿದು ಬಿಟ್ಟಿದು ಚೆನ್ನಾಗಿತ್ತು" ಎಂದರಂತೆ ಒಮ್ಮೆ. "ಮನುಷ್ಯರು ತಮ್ಮ ಅಕ್ಕತನಗಳನ್ನು ಬರೆದರೆ, ಎಲ್ಲ ಸತ್ಯವನ್ನೂ ಬರೆಯುವುದಿಲ್ಲ"ವೆಂದವರೂ ಇವರೇ. "ಬ್ರಿಟನಿನ ರಾಜಕರಣ ಪಟುಗಳೆನಿಸಿದವರ ತಲೆಯಲ್ಲ ಮಿದುಳು ಕಡಿಮೆ" ಎಂದು ಹೇಳಲೂ ಹಿಂಜರಿಯಲಿಲ್ಲ. ಈಗ—"ಮನುಷ್ಯನ ಮಿದುಳು ತಲೆಯಲ್ಲಿರುವುದೆಂಬುದು ಸುಳ್ಳು. ನ್ಯೆಯುಲೆಲ್ಲ ಮಿದುಳು ಇದೆ" ಎನ್ನುತ್ತಾರೆ! ಒಬ್ಬ ಯಂತ್ರಸಂಯೋಜಕನ ಮಿದುಳು ಆತನ ಕೈಯಲ್ಲಿದೆ; ಫೂಟ್‌ಬಾಲ್ ಆಡುವವನ ಮಿದುಳು ಕಾಲಲ್ಲಿದೆಯಂತೆ.

ಬಾಟಾ ಕಂಪೆನಿಯ ಕಿರುಕುಳ!

ಬ್ರಿಟಿಷರ ಬೂಟೀಸುಗಳ ವ್ಯಾಪಾರಕ್ಕೂ ಈಗ ಯಮಸ್ವರೂಪಿಯಾಗಿ, ಪ್ರಸಿದ್ಧ ಝೆಕೋಸ್ಲೊವಾಕಿಯದ ಕಂಪೆನಿಯು ವಿಶ್ವರೂಪ ಪ್ರದರ್ಶನ ಮಾಡುತ್ತಿದೆ. ಬ್ರಿಟಿಷ್ ಮಲಯದಲ್ಲಿ ಬಾಟಾರವರ ಬೂಟೀಸು ಅಂಗಡಿಗಳು ೩೦ ಇವೆ. ಇದನ್ನು ೪೦ಕ್ಕೆ ಹೆಚ್ಚಿಸುವರಂತೆ. ಚೀನದಲ್ಲಿ ೨೦ರಿಂದ ೩೦; ಫ್ರೆಂಚ್ ಇಂಡೋ—ಚೈನದಲ್ಲಿ ೧೬ರಿಂದ ೮೦; ಡಚ್ ಈಸ್ಟ್ ಇಂಡೀಸದಲ್ಲಿ ೪೫ರಿಂದ ೫೦; ಬ್ರಿಟಿಷ್ ಇಂಡಿಯದಲ್ಲಿ ೮೦—೨೦೦—ಹೀಗೆ ಅಂಗಡಿಗಳನ್ನು ನೆಟ್ಟಸಲಾಗುವುದಂತೆ. ಕ್ರಯವೂ ಕಡಿಮೆಯಾಗಬಹುದು. ಒಂದು ದೊಡ್ಡ ಕಾರ್ಖಾನೆಯನ್ನು ಸಿಂಗಪುರದಲ್ಲಿಯೂ, ಮತ್ತೊಂದನ್ನು ಶಾಂಘಾಯಿಯಲ್ಲಿಯೂ ತೆರೆವರೆಂದು ಸುದ್ದಿಯಿದೆ.

ಸುಂದರಿಯರ ಸ್ಪರ್ಧೆ!

ಹದಿನೆಂಟು ದೇಶಗಳ ತರುಣಿಯರು ಪ್ರಾತಿನಿಧ್ಯ ವಹಿಸಿ, ಇಂಗ್ಲಾಂಡ್ ದೇಶದ ಹೇಸ್ಟಿಂಗ್ಸ್ ಎಂಬಲ್ಲಿ ನಡೆಯುವುದು. ಈ ವರ್ಷ ಜರ್ಮನಿ ಮತ್ತು ರಷ್ಯದವರು ಮಾತ್ರ ಇದನ್ನು ಬಹಿಷ್ಕರಿಸಿದ್ದಾರೆ. ಕಾರಣ, "ಮಿಸ್ ಜರ್ಮನಿ" ಎಂದು ಬಂದವಳು ಶುದ್ಧ ಆರ್ಯರಕ್ತದವಳಲ್ಲವಂತೆ; "ಮಿಸ್ ರಷ್ಯ" ಎಂದು ಬಂದವಳು ರಷ್ಯದ ರಾಜಕುಟುಂಬದವಳಂತೆ.

ಸರಕಾರದವರು, ವೃತ್ತಪತ್ರಿಕೆಗಳ ಟೆಲಿಗ್ರಾಮ್ ದರಗಳನ್ನು ಹೆಚ್ಚಿಸುವರು.

ತಮಿಳುನಾಡು ಪ್ರಾಂತಿಕ ಪರಿಷತ್ತಿನ ೩೩ನೇ ಅಧಿವೇಶನವು ಇದೇ ತಿಂಗಳ ೧೫–೧೬ಕ್ಕೆ [illegible]ದಲ್ಲಿ ನಡೆಯುವುದು.

ಪ್ಯಾಲೆಸ್ತೀನ್ ಬಹುಮಾನಪಡೆದವರನ್ನು ತೊಡೆದು[illegible] ಯುಕ್ತಪ್ರಾಂತದ ಸರಕಾರವು ನಿಶ್ಚಯಿಸಿದೆ.

ತುಂಡು ಸುದ್ದಿ.

ಮೀರತ್ ಒಳಸಂಚಿನ ಮೊಕದ್ದಮೆಯ ಕೈದಿಗಳಲ್ಲೊಬ್ಬರಾದ ಫಿಲಿಪ್ ಸ್ಪ್ರೇಟರನ್ನು ಬಿಡುಗಡೆಮಾಡಿರುವರು. (ಸಜೆ ಅವಧಿ ಮುಗಿದಿದೆ.)

ಬಿಹಾರ್ ಭೂಕಂಪ ಸಂಕಷ್ಟನಿವಾರಣಾ ಕಾರ್ಯಕ್ಕಾಗಿ, ಸ್ವಿಟ್ಜರ್ಲೆಂಡಿನ ಇಂಜಿನಿಯರರಾದ ಡಾ. ಪಿಯರಿ ಸಿರಸೋಲರು ಲಂಡನಿನಲ್ಲಿ ಒಂದು ಸ್ವಯಂಸೇವಕ ದಳವನ್ನು ರಚಿಸಿರುವರೆಂದು ತಂತಿಬಂದಿದೆ.

ಭಾಗಲ್ಪುರ ಜಿಲ್ಲೆಯಲ್ಲಿ ೩೦ ಸಾವಿರ ಜನರು ನಿರಾಶ್ರಿತರಾಗಿರುವರು.

ಶ್ರೀಮತಿ ಸರೋಜಿನಿ ನಾಯ್ಡುಗಳವರ ಕಿರಿಯ ಮಗ ಜಯಸೂರ್ಯ ನಾಯ್ಡುಗಳವರು ಜರ್ಮನಿಯ ವಿಶ್ವವಿದ್ಯಾಲಯದಲ್ಲಿ ವೈದ್ಯಕೀಯ ಶಿಕ್ಷಣವನ್ನು ಪೂರೈಸಿ, ಎಮ್. ಡಿ. ಡಿಗ್ರಿ ಪಡೆದು ಹಿಂದೂದೇಶಕ್ಕೆ ಬಂದರು.

ಡಿಲ್ಲಿಯ ಚೀಫ್ ಕಮಿಷನರಿಗೆ ಒಂದು ಬೆದರಿಕೆಯ ಪತ್ರವನ್ನು ಬರೆದ ಸಂಬಾದೀ ಶಾಲಾ ಮಾಸ್ತರನೊಬ್ಬನನ್ನು ದಸ್ತಗಿರಿಮಾಡಿರುವರು.

ಪೂನೆಯ, ಬೀಜಗಳ ವ್ಯಾಪಾರಿಗಳಾದ ಪೋಚಾ ಕಂಪೆನಿಯವರು ತಮ್ಮ ಸಂಸ್ಥೆಯ ಸ್ವರ್ಣೋತ್ಸವವನ್ನು ಈ ವರ್ಷ ಜರಗಿಸುವರು.

ಕಪೂರ್ಥಲಾ ಸಂಸ್ಥಾನದಲ್ಲಿ ಸುಶಿಕ್ಷಿತ ನಿರುದ್ಯೋಗಿಗಳಿಗೆ ನೆರವಾಗಲೆಂದು ಮಹಾರಾಜರು ಆಜ್ಞೆ ಮಾಡಿದ್ದಾರಂತೆ.

ಪುನರ್ವಿವಾಹಗಳಿಗೆ ಪ್ರೋತ್ಸಾಹಕೊಡಲು ಜೋಧಪುರದಲ್ಲಿ "ಸನಾತನ ಧರ್ಮ ವಿಧವಾವಿವಾಹ ಸಭೆ"ಯೊಂದು ಏರ್ಪಟ್ಟಿದೆ.

ಶಾಯರ್ಲಿ ಟೆಂಪಲ್ ಎಂಬ ೬ ವರ್ಷ ಪ್ರಾಯದ ಚಿಕ್ಕ ಮಗುವು ಅಮೇರಿಕದಲ್ಲಿ "ಪ್ರಸಿದ್ಧ" ಸಿನೆಮನಟಿಯಾಗಿ ಪರಿಗಣಿಸಲ್ಪಟ್ಟು, ಹೋಲಿವುಡ್ಡಿನ ಒಂದು ಫಿಲ್ಮ್ ಕಂಪೆನಿಯವರಿಂದ ವಾರಕ್ಕೆ ೨೦೦ ಪವನುಗಳ ಸಂಬಳಪಡೆಯುತ್ತಿದೆ.

ಕೌನ್ಸಿಲ್ ಆಫ್ ಸ್ಟೇಟಿನಲ್ಲಿಯೂ ಸ್ವಸಂಸ್ಕರಣ ಮಸೂದೆಯು ಮಂಜೂರಾಯಿತು.

ಇಂಡಿಯಾ ಸರಕಾರವು ಪುನಃ ಈ ವಾರದಲ್ಲಿ ಸಾಲ ಎತ್ತುವುದೆಂದು ಪ್ರಕಟವಾಗಿದೆ.

ಮುಂಬಯಿ ಶ್ರೀಲಕ್ಷ್ಮೀಕಾಂತ ನಾಟಕ ಸಮಾಜದವರು ತಾ. ೧೩–೯–೩೪ನೇ ಗುರುವಾರ ಸಾಯಂಕಾಲ ತಾಸು ೬-೩೦ಕ್ಕೆ ಗ್ರಾಂಟ್ ರೋಡಿನಲ್ಲಿರುವ ವಿಕ್ಟೋರಿಯಾ ಥಿಯೇಟರಿನಲ್ಲಿ "ಅಜಾತಶತ್ರು" ಎಂಬ ಚಾರಿತ್ರಿಕ ಗುಜರಾತಿ ನಾಟಕವನ್ನು ಮುಂಬಾಯಿ ಫ್ರೀ ಸ್ಕೂಲಿನ ಸಹಾಯಾರ್ಥ ಪ್ರದರ್ಶಿಸಿದರು.

ನಮ್ಮ ಸಾರ್ವಭೌಮರ ಕುವರ ಪ್ರಿನ್ಸ್ ಜೋರ್ಜರು ಗ್ರೀಸ್ ರಾಜಕುಮಾರಿ ಮರೀನಳನ್ನು ವಿವಾಹವಾಗುವರೆಂದು ಪ್ರಕಟವಾಗಿದೆ.

ಬಾಬೂ ರಾಜೇಂದ್ರ ಪ್ರಸಾದ, ಶ್ರೀ ಕೃಷ್ಣಸಿಂಹ, ಡಾ। ಸಯದ್ ಮಹಮೂದ್ ಮೊದಲಾದವರ ನೇತೃತ್ವದಲ್ಲಿ ಪಾಟ್ನಾದಿಂದ "ನವಶಕ್ತಿ" ಎಂಬ ಹೊಸ ಹಿಂದೀ ವಾರಪತ್ರಿಕೆ ಹೊರಟಿದೆ.

ಕೆಲವೊಂದು ಶರ್ತಗಳ ಮೇಲೆ ಎಲ್ಲ ರಾಜಕೀಯ ಕೈದಿಗಳನ್ನು ಬಂಧವಿಮೋಚನಗೊಳಿಸುವುದರ ಕುರಿತಾಗಿ ಕಾಶ್ಮೀರ ಸರಕಾರವು ಆಲೋಚಿಸುತ್ತಿದೆ.

ನಾಗಪುರದ ಚಿತ್ರಗಳನ್ನು ಲಂಡನಿನಲ್ಲಿ ಮಾರಾಟ ಮಾಡಿಸುವ ಹಂಚಿಕೆಯಾಗುತ್ತಿದೆ. ಮಧ್ಯಪ್ರಾಂತ್ಯದ ಸರಕಾರವು ಮುಂದಾಳುತನವನ್ನು ವಹಿಸಿದೆ.

ಸಿಂಗಪುರದ ಮರದ ಕಾರ್ಖಾನೆಗಳಲ್ಲಿ ಜಪಾನ್ಯರಿಗೆ ಸ್ಪರ್ಧೆಯನ್ನು ನಿಲ್ಲಿಸಬೇಕೆಂದು ನಿರ್ಧರಿಸಿವೆ. (ಅಲ್ಲಿರುವ ೧೧ ಕಾರ್ಖಾನೆಗಳಲ್ಲಿ ಚೀನಿಯರ ಕಾರ್ಖಾನೆಗಳು ೯, ಒಂದು ಮಾತ್ರ ಬ್ರಿಟಿಷರದು.)

ಯೋಕೋಹಾಮಾ (ಜಪಾನ್) ದಲ್ಲಿನ ಹಿಂದೀ ವ್ಯಾಪಾರಿಗಳು ಗಾಂಧಿಜಿಯವರ ಹರಿಜನ ನಿಧಿಗೆ ರೂಪಾಯಿ ೩೪೭೨–೯–೦ನ್ನು ಕಳುಹಿಸಿಕೊಟ್ಟಿರುವರು.

ಶಾಂಘಾಯಿ ಅತ್ಯಾಚಾರದ ಮೊಕದ್ದಮೆಯು ವಿಚಾ[illegible]

ತಕ್ಕ ತಡೆ.

ಗರ್ಭನಿರೋಧಕ—(ಸುಖಾನಂದ) ಸ್ತ್ರೀರೋಗ ಅಂಟದಂತೆ ರಕ್ಷಿಸಿ ಅಪಾಯವಿಲ್ಲದೆ ಗರ್ಭ ನಿರೋಧಕ್ಕೆ ಸಹಕಾರಿಯಾದ ರಬ್ಬರ್ ಸಾಧನ. ಬೆಲೆ 1—8—0.

ಗರ್ಭನಿರೋಧಕ—(ಪೆಸಾರಿಸ್) ಮೃದುವಾದ ಗರ್ಭನಿರೋಧಕ್ಕೆ ಸಾಧನ. ಉಪಯೋಗಿಸುದಾಗ ಅನಾನುಕೂಲವಿಲ್ಲ. ತೊಂದರೆಯಿಲ್ಲ. ಸುಖವಾಗಿರುವುದು. ಬೆಲೆ 2—4—0. ಉಪಯೋಗಿಸುವ ವಿಧಾನ ಇದರ ಜೊತೆಯಲ್ಲಿರುವುದು. ಆರ್ಡರಿನೊಡನೆ 4 ಆಣೆ ಸ್ಟಾಂಪಿರಬೇಕು.

ವಿಳಾಸ—ಕರ್ನಾಟಕ ಏಜೆನ್ಸಿ,
32, ಕೃಷ್ಣಪ್ಪ ನಾಯಕ್ ಟೇಂಕ್ ಸ್ಟ್ರೀಟ್,
ಜಿ. ಟಿ. ಮದ್ರಾಸು.

ಮಂಗಳೂರಿನ ಪೇಟೆಧಾರಣೆ.

ಸಾಮಗ್ರಿಗಳು	ಇಂದ	ವರೆಗೆ
	ರೂ. ಆ	ರೂ. ಆ.
ರಾಶಿ ಅಕ್ಕಿ ...	4— 2	4— 8
ಮುಸ್ತಿ ...	4— 4	5—
ಗುಡ್ಡು ...	4— 4	4—10
ಸುಗ್ಗಿ ...	4— 4	4—10
ಊರ ಅವಲ್ ಚೆಕ್ಕಿಗೆ ...	4—12	5— 4
ರಂಗೂನು ಬೆ. ಗೋ. ಒಕ್ಕೆ...	6— 0	6— 4
ಎಲ್ಲಾರು ಬೆ. ಮು. ಒಕ್ಕೆ...	4— 0	4— 0
ಗೋದಿ ಗೋಣಿ ಒಕ್ಕೆ ...	10— 0	12— 8
ತೊಗರಿ ಗೋಣಿ ಒಕ್ಕೆ ...	9— 8	10— 0
ಹುರುಳಿ ಗೋಣಿ ಒಕ್ಕೆ ...	7— 6	7—10
ಕಡಲೆ ಗೋಣಿ ಒಕ್ಕೆ ...	7 — 8	8— 0
ತೊಗರಿಬೇಳೆ ಗೋಣಿ ಒಕ್ಕೆ...	10— 0	17— 0
ಉದ್ದು ಗೋಣಿ ಒಕ್ಕೆ ...	7— 0	7— 8
ಹೆಸರು ಗೋಣಿ ಒಕ್ಕೆ ...	7— 0	7— 8
ಊರುಬೆಲ್ಲ ಖಂಡಿ ಒಕ್ಕೆ ...	40— 0	45— 0
ಉಪ್ಪು ಗೋಣಿ ಒಕ್ಕೆ ...	5— 4	5— 8
ಕೊಬ್ಬರಿ ಖಂಡಿ ಒಕ್ಕೆ ...	40— 0	42— 0
ಕೊಬ್ಬರಿ ಹಿಂಡಿ ಖಂಡಿ ಒಕ್ಕೆ...	19— 0	19— 8
ಎಳ್ಳಿಂಡಿ ಖಂಡಿ ಒಕ್ಕೆ ...	23—12	27— 0
ಕೊಬ್ಬರಿ ಎಣ್ಣೆ ಮಣ ಒಕ್ಕೆ...	2—15	3—14
ಎಳ್ಳೆಣ್ಣೆ ಮಣ ಒಕ್ಕೆ ...	5— 0	5— 8
ಚಿಮಿಣಿಎಣ್ಣೆ ಪೆಟ್ಟಿಗೆ ಒಕ್ಕೆ...	6— 8	8— 0
ಮೋರಿಸ ಸಕ್ಕರೆ ಮ. ಒಕ್ಕೆ...	3—10	3—14
ಮೆಣಸು ...	7— 0	7— 8
ಸಾಸಿವೆ ಮುಡಿ ಒಕ್ಕೆ ...	4— 8	5— 4
ಕಾಳುಮೆಣಸು ಖ. ಒಕ್ಕೆ ...	136— 8	137— 8
ಯೇಲಕ್ಕಿ ಮಣ ಒಕ್ಕೆ ...	18— 0	22— 0
ಹೊಸ ಗೇರುಬೀಜ ಮು. ಒಕ್ಕೆ	3— 4	3— 5
ಕಬ್ಬಿಣ ಖಂಡಿ ಒಕ್ಕೆ ...	42— 0	44— 0
ತಾಂಬ್ರ ತಗಡು ಮ. ಒಕ್ಕೆ...	10— 0	10—0
ತಾಂಬ್ರ ಪಾತ್ರಗಳು ಮ. ಒಕ್ಕೆ	13— 0	14— 8
ಚೀನೀಬೆಳ್ಳಿ ಸೇರು ಒಕ್ಕೆ ...	14—12	15— 0
ಹಿತ್ತಾಳೆ ತಗಡು ಮ. ಒಕ್ಕೆ...	9— 0	9— 8
ಹವನು ಒಕ್ಕೆ ...	20—10	21— 0
ಹುಣಸೆ ಹುಳಿ ಖಂಡಿ ಒಕ್ಕೆ	30— 0	35— 0
ನೇಟಿವ್ ಕಾಫಿ ಖಂಡಿ ಒಕ್ಕೆ	182— 0	198— 0
ಫಿಟೇರಿ ಕಾಫಿ ಖಂಡಿ ಒಕ್ಕೆ...	296— 8	280— 8
ಹಳೆ ಅಡಿಕೆ ...	118— 0	124— 0
ಹೊಸ ಅಡಿಕೆ ...	62— 0	92 — 0

ನಿಮ್ಮ ಆರೋಗ್ಯವು ಈ ಚಿಕ್ಕ ಗುಳಿಗೆಗಳಲ್ಲಿ ಸುಭದ್ರವಾಗಿದೆ.

ಸೂತಕ! ರುಚಿಕರ! ಹಿತಕರ!

ಹರಳೆಣ್ಣೆ ಮಿಶ್ರಿತವಾದ ಸಿಹಿ ಟೊಳಲೇಟು—

ಕೇಸ್—ಫೇನ್—ಮಿಂಟ್

ಹರಳೆಣ್ಣೆ, ಅಗರ್ ಅಗರ್, ಫಿನಲ್‌ಪ್ತಾಲೀನ್, ಪಿಪ್ಪರ್‌ಮಿಂಟ್ ಮತ್ತು ಚೊಕಲೇಟು, ಇವುಗಳನ್ನು ಸೇರಿಸಿ ಸೇವಿಸಲು ಹಿತಕರವಾಗುವಂತೆಯೂ, ಅಬಾಲವೃದ್ಧರನ್ನೆಲ್ಲ ಸಕಲರಿಗೂ ಯಾವ ಕಾಲಕ್ಕೂ ಸುಖಭೇದಿಗಾಗಿ ಅನುಕೂಲವಾಗುವಂತೆ ಇದು ತಯಾರಿಸಲ್ಪಟ್ಟಿದೆ. ಮಲಬದ್ಧತೆಯು ಹಲವು ಭಯಂಕರ ರೋಗಗಳನ್ನು ತರಬಲ್ಲುದು. ಮಲಬದ್ಧತೆ ತೋರಿದಾಗಲೆಲ್ಲ "ಕೇಸ್—ಫೇನ್_ಮಿಂಟ್"ನ್ನು ಸೇವಿಸಿರಿ. ಈ ಟೊಕಲೇಟುಗಳನ್ನು ಒಂದೆರಡು ಸೇವಿಸಿದರೆ ಅನಾಯಾಸವಾದ ಸುಖಭೇದಿ! ಕರುಳುಗಳ ವಿಕಾರವಿಲ್ಲ! ಜಿಗುಪ್ಸೆ ಹುಟ್ಟಿಸುವುದಿಲ್ಲ! ಹೊಟ್ಟೆಯೊಳಗೆ ಯಾವ ವೇದನೆಯೂ ಇಲ್ಲ. ಮಕ್ಕಳು ಆನಂದದಿಂದ ಸೇವಿಸುವರು. ಬಲು ಕಡಿಮೆ ಕ್ರಯ! ಎಲ್ಲೆಲ್ಲಿಯೂ ದೊರೆಯುವುದು: ಅತಿ ಹೆಚ್ಚು ಫಲ!

ಈ ಹೆಸರುಗಳೇನು,—ಓದಿರುವಿರಾ?
ನಾರ_ಹರಿವಾತ_ಸಂಧಿವಾತ_ಕಟಿವಾತ_ತಲೆಶೂಲೆ_ನಡುನೋವು.....!!!!
ಇವುಗಳಿಗೆ ಹೆದರದವರಾರು? ಇವುಗಳೆಷ್ಟು ಜನರನ್ನು ಕಾಡುತ್ತಿವೆ!

ಡಾ। ಫೌಯವರ ಕೆಚೆಟ್ಸ್

ಸೇವನೆಗೆ ಕಷ್ಟವಿಲ್ಲ, ಅರ್ಧ ಚಟ್ಟೆ ನೀರಿನಲ್ಲಿ, ನೋವು ತಲದೋರಿದಾಗಲೆಲ್ಲ—ಈ ಕೆಚೆಟುಗಳನ್ನು ಹಾಕಿ ಸೇವಿಸಿದರೆ—ಅದು ಹೇಗೆ ಗುಣಕಾರಿಯಾಗಿ ಕಾರ್ಯಾರಂಭ ಮಾಡುವುದೆಂಬುದನ್ನು ಆಗಲೇ ಅನುಭವ ಮಾಡುವಿರಿ.

ಕೆಲವೇ ನಿಮಿಷಗಳಲ್ಲಿ ಖಂಡಿತ ಗುಣಲಾಭ!

ನರಗಳ ದೌರ್ಬಲ್ಯ ಸಂಬಂಧವಾದ ಉಪದ್ರಗಳನ್ನೂ ಪರಿಹರಿಸುವುದು.

ಕೊಂಡು, ಕೊಂಡೇ ಅವನ್ನು ಪರೀಕ್ಷಿಸಿರಿ.

'ಕೆಚೆಟು'ಗಳು ನಿರಪಾಯವಾಗಿ, ಭರವಸೆಯಿಂದ ಸೇವಿಸಲ್ಪಡಲು ಯೋಗ್ಯವಾಗಿವೆ.

ಸಂದೇಹವಿಲ್ಲದೆ ಇಂದೇ ಅವುಗಳ ಗುಣಪರೀಕ್ಷೆ ನಡೆಯಲಿ.

The Paragon Products Co., Ballard Estate, Bombay.

ದ. ಕ. ಜಿಲ್ಲೆಯ ಡಿಸ್ಟ್ರಿಬ್ಯೂಟರರು:— **M. K. Prabhu**, MANJESHWAR + S. KANARA.

ನೋಟೀಸು.

ದಕ್ಷಿಣ ಕನ್ನಡ ಡಿಸ್ಟ್ರಿಕ್ಟ್ ಕೋರ್ಟಿನಲ್ಲಿ.

O. P. No. 102/'34.

ಗುರ್ಪುರ ರಘುನಾಥ ಪೈ, ವಗೈರೆರು—ಅರ್ಜಿದಾರರು.

ಮೃತಪಟ್ಟ ಗುರ್ಪುರ ದಾಮೋದರ ಪೈಗಳ ಇನ್ಸೂರೆನ್ಸಿನ ಐವಜು ವಸೂಲಿ ಬಗ್ಗೆ ವಾರಿಸು ಸರ್ಟಿಫಿಕೇಟು ಅಪೇಕ್ಷಿಸಿ ಅರ್ಜಿದಾರರು ದಾಖ್ಲೆ ಮಾಡಿದ ಸದ್ರಿ ಅರ್ಜಿಯು ತಾರೀಕು 28–9–'34ಕ್ಕೆ ಮೇಲ್ಕಂಡ ಕೋರ್ಟಿನ ಮುಂದೆ ತನ್ನಿಗೆ ಇಟ್ಟಿರುತ್ತದೆ. ಆ ಕುರಿತು ಆಕ್ಷೇಪಿಸುವವರು ಸದ್ರಿ ತಾರೀಕಿಗೆ ಮೇಲ್ಕಂಡ ಕೋರ್ಟಿನ ಮುಂದೆ ಹಾಜರಾಗಿ ಜಾಹೀರುಮಾಡತಕ್ಕದ್ದು.

ಮಂಗಳೂರು, 5–9–34. P. N. Bhandarkar, *Vakil for Petitioners.*

ಮಂಗಳೂರಿನ ಪೇಟೆಧಾರಣೆ

ಅಕ್ಕಿ:— ಇದರ ಕ್ರಯವು ಕಳೆದ ವಾರಕ್ಕಿಂತ ಹೆಚ್ಚುಕಡಿಮೆಯಾಗಿರುವುದಿಲ್ಲ. ಪೇಟೆಯಲ್ಲಿ ಒಂದೆರಡಾಣೆಯಷ್ಟು ಹೆಚ್ಚುಕಡಿಮೆಯಿದೆ. ಬರುವ ವಾರದಿಂದ ಇದರ ಬೆಲೆಯಲ್ಲಿ ಹೆಚ್ಚಿನ ಏರಿಳಿತವಿರಬಹುದೆಂದು ಊಹೆ.

ವಾರ್ತಾತರಂಗ.

ಸೇಕಡಾ ೫ರ ತಲಬು ಕಡಿದುದರ ನಿಷೇಧ ಸೂಚನಾರ್ಥ ಬೆಳ್ಜಿಯಮಿನ ಗನಿ ಕೂಲಿಗಾರರು ಮಹಾ ಮುಷ್ಕರವನ್ನು ನಡೆಸುವ ಸಿದ್ಧತೆಯಲ್ಲಿರುವರು.

ಅಲ್ಲಹಾಬಾದಿಗೆ ಬಂದ ಜಗದ್ವಿಖ್ಯಾತ ಗಾಮನೊಂದಿಗೆ, ಪ್ರದರ್ಶನ ರೂಪವಾದ ಕೆಲವು ಮಲ್ಲಯುದ್ಧಗಳ ಏರ್ಪಾಡಾಗಿದೆ.

ಪ್ರಕಟಣೆ.

ಶ್ರೀ ಕೃಷ್ಣಾ ಮಿಲ್ಸ್ ಕಂಪೆನಿ, ಮಂಗಳೂರು, ದ. ಕ.

ಈ ಮೂಲಕ ನಮ್ಮ ಗ್ರಾಹಕರಿಗೆ ತಿಳಿಯಪಡಿಸುವದೇನೆಂದರೆ:—ನಮ್ಮ ಎಣ್ಣೆಯ ಗಿರಣಿಯು ಅನೇಕ ವರ್ಷಗಳಿಂದ ಎಣ್ಣೆ ತಯಾರಿಯನ್ನು ಮಾಡುತಿದ್ದು, ಸರ್ವ ಜನರ ಪ್ರೀತಿ ವಿಶ್ವಾಸಕ್ಕೆ ಪಾತ್ರವಾಗಿರುವುದು ಎಲ್ಲರಿಗೂ ತಿಳಿದ ವಿಷಯವಾಗಿರುತ್ತದೆ. ನಾವು ತಯಾರಿಸುವ ಎರಡು ಬಗೆಯ ಕೊಬ್ರಿ ಎಣ್ಣೆಯಲ್ಲಿ ಒಂದನೇ ಮತ್ತು ಎರಡನೇ ತರಗತಿಗಳಿದ್ದು, ಒಂದನೇ ತರಗತಿಯದ್ದು ಬೆಳೆದ ತಾಜಾ ಬೆಳ್ಳೆ ಕೊಬ್ರಿಯಿಂದಲೆ ತಯಾರಿಸಲ್ಪಡುತ್ತದೆಂಬುದು ಸರ್ವ ವಿದಿತ ವಿಷಯ. ಅಲ್ಲದೆ ನಮ್ಮ ಎರಡನೇ ತರಗತಿಯ ಎಣ್ಣೆಯು ಹಾಫೀಸು ಕೊಬ್ರಿಯಿಂದ ತಯಾರಿಸಲ್ಪಟ್ಟಿದ್ದು, ಸರ್ವ ಗ್ರಾಹಕರ ಮೆಚ್ಚುಗೆಗೆ ಪಾತ್ರವಾಗಿದೆಯೆಂಬುದು ತಿಳಿದ ಸಂಗತಿ.

ಆದರೆ ಇತ್ತೀಚೆಗೆ ಕೆಲವು ವ್ಯಾಪಾರಸ್ಥರು ನಮ್ಮ ಗಿರಾಕಿಗಳನ್ನು ತಪ್ಪಿಸುವ ದುರುದ್ದೇಶದಿಂದಲೋ, ಏನೋ ಮಲಬಾರು ಅತ್ತಕಡೆಯಿಂದ ಆಮದಾಗುವ ಎಣ್ಣೆಯನ್ನು ಕೊಂಡು ಅದು ನಮ್ಮ ಕಂಪೆನಿಯ ಎಣ್ಣೆಯೆಂದು ಬಳಕೆದಾರರುಗಳಿಗೆ ನಂಬಿಕೆ ಹೇಳಿ ಮೋಸಮಾಡುತಿದ್ದಾರೆಂದು ನಮ್ಮ ಲಕ್ಷ್ಯಕ್ಕೆ ಬಂದಿದೆ. ಹೀಗೆ ಮಲಬಾರಿನ ಎಣ್ಣೆ ಪಡೆದ ನಮ್ಮ ಗಿರಾಕಿಗಳು ನಮ್ಮ ಎಣ್ಣೆದುಯ್ಯಂ ಎಂದು ತಿಳಿಯುವ ಸಂಭವವು ಕೆಲವುಕಡೆ ಇದ್ದಿತೆಂದು ನಮಗೆ ತಿಳಿದುಬಂದಿದೆ.

ಆದುದರಿಂದ ನಾವು ಎಚ್ಚರಿಸುವುದೇನೆಂದರೆ:—ನಮ್ಮ ೧ನೇ ತರಗತಿಯ ಎಣ್ಣೆಯನ್ನು ಮೂಸಿ ನೋಡಿದಲ್ಲಿ ಬೆಳ್ಳೆ ಕೊಬ್ರಿಯ ಸುವಾಸನೆಯಿಂದಿರುವುದು, ತಿಳಿದುಬರುವುದು. ನಮ್ಮ ಎಣ್ಣೆಗೆ ಬೆಂಕಿಯಿಂದ ಬಿಸಿಮಾಡಿದ ಎಣ್ಣೆಯ ದುರ್ವಾಸನೆಯಿರುವುದಿಲ್ಲ. ಎಣ್ಣೆಯನ್ನು ಪಡೆಯುವ ಮೊದಲು ನಮ್ಮ ಗಿರಾಕಿಗಳು ಈ ಕ್ರಮದಿಂದ ಎಣ್ಣೆಯನ್ನು ಪರೀಕ್ಷಿಸಿ ನಮ್ಮ ಎಣ್ಣೆಯನ್ನು ಪಡೆಯುವರೆ ಹಾರೈಸುತ್ತೇವೆ.

ನಮ್ಮ ಎಣ್ಣೆ ದೊರಕುವ ಸ್ಥಳಗಳು.

೧. ಅಡಿಗೆ ವಿಟ್ಠಪ್ಪ ಶೆಣೈ ಎಂಡ್ ಕೊ., ರಥಬೀದಿ ಮಂಗಳೂರು.
೨. ಕೊಂಚಾಡಿ ನಾಗೇಶ ಶೆಣೈ ಎಂಡ್ ಕೊ., ಕದ್ರಿ ಸ್ಟೋರ್ಸ್ ಮಂಗಳೂರು.

ಎಸ್. ಅಚ್ಯುತ್ತ ರಾಯಪ್ಪ ನಾಯಕ್.
ಮೆನೇಜರ್, ಶ್ರೀ ಕೃಷ್ಣಾ ಮಿಲ್ಸ್ ಕಂಪೆನಿ, ಬಂದರ ಮಂಗಳೂರು.

ಶಾಲಿವಾಹನ ಬ। ಶಕ ೧೮೫೬ನೆಯ ಭಾವ ಸಂವತ್ಸರದ ಶ್ರಾವಣ ೬ ಶನಿವಾರದಿಂದ—ಶ್ರಾವಣ। ಬ। ೫ ಶುಕ್ರವಾರದ ವರೇಗಿನ ಪಂಚಾಂಗ. (೧೯೩೪ನೇಯ ಸಿಂಹಸೋಣ

ತಾರೀಖು	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	[illegible]	ಸೂರ್ಯ ಉ.	ಸೂರ್ಯ ಅಸ್ತ	[illegible]
15	ಶನಿ	೬	೫.೧	ಅನೂರಾಧಾ	೨೭.೧೪	೪೦	6.22	6.32	[illegible]
16 *	ರವಿ	೭	೨.೧೬	ಜ್ಯೇಷ್ಠಾ	೨೪.೪೬	೪೧	6.22	6.32	
17	ಸೋಮ	೮	೫೫.೪೬	ಮೂಲಾ	೨೧.೨೧	೧	6.22	6.31	
18	ಮಂಗಳ	೯	೫೦.೨	ಪೂ. ಷಾಢಾ	೧೭.೪೦	೨	6.22	6.30	
19	ಬುಧ	೧೦	೪೫.೧೪	ಉ. ಷಾಢಾ	೧೪.೪೧	೩	6.22	6.29	
20	ಗುರು	೧೧	೪೮.೪೦	ಶ್ರಾವಣ	೯.೪೦	೪	6.22	6.29	
21	ಶುಕ್ರ	೧೨	೩೩.೪೦	ಧನಿಷ್ಠಾ	೫.೪೦	೫	6.22	6.28	

ಸ್ಕಿಬ್ಸ್ ಎಗ್ಯೂ ಸ್ಪೆಸಿಫಿಕ್

ಕೋಟ್ಯಾಧೀಶನಿಗೂ ಜನಕೋಟಿಗೂ ಇದುವೇ ರಾಜಮದ್ದು.

ಮಲೇರಿಯ, ಇನ್‌ಫ್ಲುಯಂಜಾ ಮತ್ತು ಜ್ವರಗಳನ್ನು ಗುಣಪಡಿಸುತ್ತದೆ;

ಮೆಡನ್ ಸನ್ಸ್ ಎಂಡ್ ಕೋ., ಬೊಂಬಾಯಿ 2.

MADON SONS & Co
PHARMACEUTICAL CHEMISTS, BOMBAY

ಶ್ರೀಮದ್ಭುವನೇಂದ್ರ ಮಹೌಷಧಾಲಯ, ಕಟಪಾಡಿ, ದ. ಕ.

ಪಾರಂಪರ್ಯದ ಅನುಭವಸಿದ್ಧೌಷಧಗಳು **ಸ್ವರ್ಣ, ರಜತ ಪದಕಗಳನ್ನು ಪಡೆದ ದಿವ್ಯೌಷಧಗಳು.**

1. ಕೃಷ್ಣಾರಕ–(ರಕ್ತದೋಷ ಸಂಬಂಧ ಯಾವತ್ತೂ ರೋಗಗಳಿಗೆ ದಿವ್ಯೌಷಧ). 2. ಗರ್ಭಪಾಲ–(ಗರ್ಭಶೂಲ, ಗರ್ಭಸ್ರಾವಗಳಿಗೆ ಅತೀ ಉಪಯುಕ್ತ). 3. [illegible]–[illegible] ಅತ್ಯುತ್ತಮ). 4. [illegible]–(ನೇತ್ರ ರೋಗಗಳಿಗೆ ದಿವ್ಯೌಷಧ). 5. ಮಧ್ಯೋಲ್ಕೃತನಿಂಬ ತೈಲ–(ಸರ್ವ ತರದ ವಾತರೋಗಗಳಿಗೂ, ಚರ್ಮ ವ್ಯಾಧಿಗಳಿಗೂ ಉತ್ತಮ.) 6. ಭುವನೇಂಜನ–ಶಾರೀರಕ ನೋವುಗಳಿಗೆ ಅತ್ಯುತ್ತಮ. 7. ರಸಬಿಂದು–ಫರಂಗಿ, ಮೇಹ, ದುಷ್ಟ ವ್ರಣಗಳಿಗೆ ಸಿದ್ಧೌಷಧ. 8. ನ. ಹಂ. ಮದನಕಾಮೇಶ್ವರೀ ಲೇಹ್ಯ–ನಪುಂಸಕತ್ವ, ಧಾತು ಕ್ಷೀಣತೆ ಶ್ವಾಸಕಾಸ ಮೊದಲಾದವುಗಳಿಗೆ ಅತೀ ಉಪಯುಕ್ತ.

ನಮ್ಮ ಔಷಧಗಳು ದೊರೆಯುವ ಸ್ಥಳಗಳು

ಬೊಂಬಾಯಿ ಸಂಸ್ಥಾನದ ಪ್ರಾಮುಖ್ಯ ಏಜಂಟರು:–(ಉತ್ತರಕನ್ನಡ ಜಿಲ್ಲೆ ಹೊರತು) ಕೊಚ್ಚಿಕಾರ್ ಆನಂದ್ರಾಯ ಪೈ, ಲೋಹಾರ್ ಚಾಲ್, ಬೊಂಬಾಯಿ ನಂ. 2.

ಮಂಗಳೂರು:–1. ರಾಘವೇಂದ್ರ ರಂಗ ಪೈ, ರಥಬೀದಿ ಮಂಗಳೂರು. 2. ಡಾಕ್ಟರ್ ಕೆ. ಎನ್. ಭಂಡಾರಿ, ಕೆನರಾ ಡಿಸ್ಪೆನ್ಸರಿ, ಕೊಡಿಯಾಲ್‌ಬೈಲ್, ಮಂಗಳೂರು. 3. ಆರ್. ಗೋಪಾಲಕೃಷ್ಣರಾವ್, ಪ್ರೊಪ್ರೈಟರ್, ಗೋಪಾಲಕೃಷ್ಣ ವೈದ್ಯಾಶ್ರಮ, ಮಾರ್ಕೆಟ್ ಆಸ್ಪತ್ರೆರೋಡ್, ಮಂಗಳೂರು. ಬಂಟ್ವಾಳ:–ವೇದಮೂರ್ತಿ ಬಿ. ಶುಕಾಚಾರ್, ಶ್ರೀ. ಗೋಪಾಲಕೃಷ್ಣ ಆಯುರ್ವೇದಿಕ ಫಾರ್ಮಸಿ, ಬಂಟ್ವಾಳ. ಮೂಡಬಿದ್ರಿ:–ಡಾಕ್ಟರ್ ಎಮ್. ವಿ. ಮಲ್ಯ, ಮೂಡಬಿದ್ರಿ. ಕಾರ್ಕಳ:–[illegible] ಕೆಮಿಸ್ಟ್ ಕಾರ್ಕಳ. ಮಂಜೇಶ್ವರ:–ಕೆ. [illegible] ಮತ್ತು ಬೆಳ್ಳೆ ನಾರಾಯಣ [illegible], ಮರ್ಚೆಂಟ್ಸ್, ಮಂಜೇಶ್ವರ. ಕಾಪು:–ಡಾಕ್ಟರ್ ಬಿ. ಕೆ. ಬೇಕಲ್ಸ್ ಡಿಸ್ಪೆನ್ಸರಿ ಕಾಪು. ಉದ್ಯಾವರ:–ಯ. ಗೋಪಾಲ [illegible], ಮರ್ಚೆಂಟ್ ಉದ್ಯಾವರ. ಉಡುಪಿ:–1. ವೈಷ್ಣವೀ ಫಾರ್ಮಸಿ, 2. ಡಾಕ್ಟರ್ ಪಿ. ರಾಘವೇಂದ್ರ ನಾಯಕ್ ಡಿಸ್ಪೆನ್ಸರಿ, 3. [illegible] ಜನಾರ್ಧನ ನಾಯಕ್ ಎಂಡ್ ಕೊ, ಹೋಸ್ಪಿಟಲ್ ರೋಡ್, ಉಡುಪಿ, 4. ಆರ್. ಎಸ್. ಶೆಟ್ಟಿ, ರಥಬೀದಿ, ಉಡುಪಿ. ಕಲ್ಯಾಣಪುರ:–ಡಾಕ್ಟರ್ ಟಿ. [illegible] ಹಸ್ಪಿಟಲ್, ತಿಮ್ಮಣ್ಣ [illegible] ಕಲ್ಯಾಣಪುರ. ಬ್ರಹ್ಮಾವರ:–1. [illegible] ಪೈ ಎಂಡ್ ಸನ್ಸ್, ಮರ್ಚೆಂಟ್ಸ್, ಬ್ರಹ್ಮಾವರ, 2. ಕೆ. ಶೀನಗಿರಿ ನಾಗಪ್ಪಾ ಎಂಡ್ ಸನ್ಸ್, ಕೆಮಿಸ್ಟ್ ಎಂಡ್ ಡ್ರಗ್ಗಿಸ್ಟ್, ಬ್ರಹ್ಮಾವರ. ಬಾರ್ಕೂರು:–[illegible], ಪ್ರೊಪ್ರೈಟರ್, ಆರ್. ಪಿ. ಔಷಧಾಲಯ, ಬಾರ್ಕೂರು. ಕೋಟ:–ವೇದಮೂರ್ತಿ ನಾಗೇಶ ನಾರಾಯಣ ಭಟ್ಟ, [illegible] ಕೃಷ್ಣ ದೇವಸ್ಥಾನ, ಕೋಟ ಪಡುಕಾರ್ತೀರ್ಥ, ಕೋಟ. ಕುಂದಾಪುರ:–1. ಕೆ. ಆರ್. ಭಟ್ಟ, ಕೆಮಿಸ್ಟ್, ಕುಂದಾಪುರ. 2. ಡಾಕ್ಟರ್ ಕೆ. ಆರ್. [illegible] ಡಿಸ್ಪೆನ್ಸರಿ, ಕುಂದಾಪುರ. ಗಂಗೊಳ್ಳಿ:–ಜಿ. ಸುರೇಂದ್ರ [illegible] ನಾಯಕ್, ಮರ್ಚೆಂಟ್, ಗಂಗೊಳ್ಳಿ. ಬೈಂದೂರು:–ಕೆ. ಪುತ್ತು [illegible], ಮರ್ಚೆಂಟ್ ಬೈಂದೂರು. ಭಟ್ಕಳ:–[illegible] ನರಸಿಂಹ ನಾಯಕ್, ಗುಡೆ ಅಂಗಡಿ ಕಾರ್, ಮರ್ಚೆಂಟ್ ಎಂಡ್ ಕಂಟ್ರಾಕ್ಟರ್, ಭಟ್ಕಳ ಉ. ಕನ್ನಡ. ಅಂಕೋಲಾ:–ಕೃಷ್ಣ ಹಮ್ಮಣ್ಣ [illegible], ಧರ್ಮಶಾಲೆಯ ಬಳಿ, ಅಂಕೋಲಾ, ಉ. ಕನ್ನಡ. ಹೆಬ್ರಿ:–1. ಎಚ್. ಮುಕುಂದ ಪೈ ಮತ್ತು ಡಾಕ್ಟರ್ ಎಂ. ಪಿ. ಕಲ್ಮಾಡಿ, ಹೆಬ್ರಿ. 2. ಡಾಕ್ಟರ್ ವ್ಹಿ. ಆರ್. ಆಚಾರ್ಯ, [illegible] ಡಿಸ್ಪೆನ್ಸರಿ, ಹೆಬ್ರಿ. ಹಾಲಾಡಿ:–ಯು. ನರಸಿಂಹ ಕಾಮತ್, ಮರ್ಚೆಂಟ್ ಹಾಲಾಡಿ. ಹೊಸಂಗಡಿ:–ಎಚ್. ರಾಮಚಂದ್ರ ಕಾಮತ್, ಮರ್ಚೆಂಟ್ ಹೊಸಂಗಡಿ, ಕುಂದಾಪುರ ತಾಲೂಕು. ನಗರ:–ಸಿ. ನಾರಾಯಣ ರಾವ್, ಸಾಹುಕಾರರ, ನಗರ. ತೀರ್ಥಹಳ್ಳಿ:–ಡಾಕ್ಟರ್ ಕೆ. ನರಸಿಂಹಾ, ಶ್ರೀ ಕೃಷ್ಣಾ ಡಿಸ್ಪೆನ್ಸರಿ, ತೀರ್ಥಹಳ್ಳಿ. ಕೊಪ್ಪಾ:–ಡಾಕ್ಟರ್ ಟಿ. ಕೆ. ಭಟ್, ಎಂ. ಬಿ. ಎಂಡ್ ಬಿ. ಎಸ್, ಪೊಪ್ಯುಲರ್ ಫಾರ್ಮಸಿ, ಕೊಪ್ಪಾ, ಕಡೂರು ಡಿಸ್ಟ್ರಿಕ್ಟ್. ಶಿವಮೊಗ್ಗಾ:–ಡಾಕ್ಟರ್ ಎಂ. ಆರ್. ಪೈ, ಬಿಗ್ ಬಜಾರ್, ಶಿವಮೊಗ್ಗಾ. ಸಾಗರ:–ಡಾಕ್ಟರ್ ಪಿ. ನರಹರಿ ರಾವ್, ಸಾಗರ.

ಹೆಚ್ಚಿನ ಮಾಹಿತಿ ಬಗ್ಗೆ ಈ ವಿಳಾಸಕ್ಕೆ ಬರೆಯಬಹುದು.

ನಾಯಕ್ ಬ್ರದರ್ಸ್, ಶ್ರೀಮದ್ಭುವನೇಂದ್ರ ಮಹೌಷಧಾಲಯ, ಪೋಸ್ಟ್ ಕಟಪಾಡಿ, ದ. ಕ.

ಶುದ್ಧ ಸ್ವದೇಶಿ! **ಸ್ವದೇಶಿ ಭಾಂಡವಾಳದಿಂದ** **ಸ್ವದೇಶೀಯರಿಗಾಗಿ!**

ಗಂಧದ ಸಾಬೂನು (ಸೆಂಡಲ್ ವುಡ್) ನಿರ್ವಿವಾದವಾಗಿ ಅತ್ಯುತ್ತಮವಾದುದು!

ತಾಜಾ ಗಂಧದ ತೈಲ ಮೊದಲಾದ ವನಸ್ಪತಿ ತೈಲಗಳಿಂದಲೇ ತಯಾರಿಸಿದ ಅತ್ಯುತ್ತಮ ಸಾಬೂನು.

ಮೈಸೂರು ಸರಕಾರದ ಗಂಧದೆಣ್ಣೆ ಕಾರ್ಖಾನೆಯಲ್ಲಿ ದೊರೆವ ಆ ಉತ್ತಮ ಎಣ್ಣೆಯ ಸ್ನಿಗ್ಧ ಸುಗಂಧವುಳ್ಳದ್ದು.

ಪ್ರಾಣಿಜನ್ಯ ಚರ್ಬಿಯ ಸ್ಪರ್ಶವೂ ಇಲ್ಲದ

ಮಲಬಾರು ಸೋಪ್

ಮಲಬಾರು ಸೆಂಡಲ್‌ವುಡ್

ದಿ ವೆಜಿಟೇಬಲ್ ಸೋಪ್ ವರ್ಕ್ಸ್, ಕಲ್ಲಿಕೋಟೆ.

ಪ್ರೊಪ್ರೈಟರ್:–ಸನ್ ಬೆಂಡ್ ಕೊಡಿಯ ಖ್ಯಾತಿಯ ಸೇಟ್ ನಾಗಜೀ ಪುರುಷೋತ್ತಮ ಮತ್ತು ಕಂಪೆನಿ, ಕಲ್ಲಿಕೋಟೆ.

ಈ ಜಿಲ್ಲೆಗೆ ಪ್ರವರ್ತಕರು:– ರಾಘವೇಂದ್ರ ರಂಗ ಪೈ, ರಥಬೀದಿ, ಮಂಗಳೂರು.

ಇಂದೇ ಆರಂಭಿಸಿರಿ!

ಸುಪ್ರಸಿದ್ಧ **ಆತಂಕನಿಗ್ರಹ ಮಾತ್ರೆ**

ಗಳನ್ನು ಉಪಯೋಗಿಸಲಿಕ್ಕೆ.

ಜೀವನದ ಜಯಶೀಲತೆಯ ಸಾಧಿಯನ್ನೀದು. ಲೋಕದಲ್ಲಿ ಸಾವಿರಾರು ಜನರು ಅದನ್ನು ಪ್ರತಿದಿನವೂ ಉಪಯೋಗಿಸುತ್ತಿದ್ದಾರೆ.

ನರ ಮತ್ತು ಶಾರೀರಿಕ ದೌರ್ಬಲ್ಯಕ್ಕೆ ಭದ್ರತೆಯು.

ಆರೋಗ್ಯಕ್ಕೆ ಕವಚವು

32 ಮಾತ್ರೆಗಳ ಟಿನ್ನೊಂದಕ್ಕೆ ರೂ. 1

ಹೆಚ್ಚಿನ ವಿವರಕ್ಕೆ, ಧನಾರ್ಥ ಹಾಗೂ ಟಪಾಲು ಖರ್ಚು ಸಹಿತ ಕಳುಹಿಸಲ್ಪಡುವ ನಮ್ಮ

ಕಾಮಶಾಸ್ತ್ರವನ್ನೋದಿರಿ.

Agents:–Shah Company, MANGALORE.
„ Pearl & Sons, MANGALORE.

Atank Nigrah Pharmacy,
Chickpet, Bangalore.

ಆತಂಕನಿಗ್ರಹ ಫಾರ್ಮಸಿ,
ಚಿಕ್ಕಪೇಟೆ, ಬೆಂಗಳೂರು.

ಎಲ್ಲಾ ಚಂದಾದಾರರು ತಮ್ಮ ಪತ್ರವ್ಯವಹಾರದೊಂದಿಗೆ ಅವರವರ ಚಂದಾ ನಂಬರುಗಳನ್ನು ಅಗತ್ಯವಾಗಿ ನಮೂದಿಸತಕ್ಕದ್ದು. ಸಂ. ಸ್ವ.

BUY ADVERTISED GOODS

ದಿ ಪೊಪ್ಯುಲರ್ ಇನ್ಶೂರೆನ್ಸ್ ಕಂಪೆನಿ, ಲಿಮಿಟೆಡ್,

(ಹೆಡ್ ಆಫೀಸು–ಮಂಗಳೂರು).

ನಮ್ಮ ಜಿಲ್ಲೆಯು ಪ್ರತಿ ವರ್ಷವೂ ಸುಮಾರು 15 ಲಕ್ಷ ರೂಪಾಯಿಗಳನ್ನು ಪ್ರೀಮಿಯಮ್ ರೂಪದಲ್ಲಿ ದೇಶೀಯ ಮತ್ತು ಪರದೇಶೀಯ ಕಂಪೆನಿಗಳಿಗೆ ಪ್ರವಾಹರೂಪವಾಗಿ ಸಲ್ಲಿಸುತ್ತಲೇ ಇದೆಯಲ್ಲದೆ, ಈ ಜಿಲ್ಲೆಯು ತಾನಾಗಿ ಒಂದೇ ಒಂದು ಜೀವವಿಮೆ ಸಂಘವನ್ನು ಇದುವರೆಗೆ ಘಟಿಸಿಲ್ಲ. ನಮ್ಮ ದೇಶದ ಈ ದೆಸೆಯಲ್ಲಿ, ನಮ್ಮದಿದೇ ಮೊದಲನೆ ಪ್ರಯತ್ನವಾಗಿದೆ.

ಈ ಕಂಪೆನಿಯ ವಿಚಾರದಲ್ಲಿ ಹೇಳುವುದಾದರೆ,–ಕಂಪೆನಿಯು ನಿಮ್ಮದೇ; ನಿಮಗೆ ತಿಳಿದಿರುವ ಮತ್ತು ನಿಮ್ಮ ವಿಶ್ವಾಸಕ್ಕೆ ಅರ್ಹರಾಗಿರುವವರೇ ಆಡಳಿತವನ್ನು ನಿರ್ವಹಿಸುವರು; ನಿಮ್ಮ ಹಣವು ಸ್ವದೇಶದಲ್ಲಿ ಸಂಪದಭ್ಯುದಯ ಕಾರ್ಯಗಳಿಗಾಗಿ ವಿನಿಯೋಗಿಸಲ್ಪಡುವುದು;–ಎಂಬೀ ವಿಷಯಗಳನ್ನು ಪರ್ಯಾಲೋಚಿಸಿದಲ್ಲಿ, ಸ್ವದೇಶಾಭಿಮಾನವುಳ್ಳವರೆಲ್ಲರೂ ಈ ಕಂಪೆನಿಯನ್ನೇ ಪ್ರೋತ್ಸಾಹಿಸುವುದು ಅವಶ್ಯವೆಂದು ತಾನಾಗಿ ಹೊಳೆಯದಿರದು.

ಪ್ರತಿ ಒಂದು ವಿಧದಲ್ಲಿಯೂ ಹಿತಮಾದ ಈ ಕಂಪೆನಿಯಲ್ಲಿ ಒಂದು ಪೊಪ್ಯುಲರ್ ಪೋಲಿಸಿಯನ್ನು ಪಡೆದು ಸ್ವದೇಶೀಯರ ಪ್ರಯತ್ನಗಳನ್ನು ಪ್ರೋತ್ಸಾಹಿಸಿರಿ.

ಹೆಚ್ಚಿನ ವಿವರಕ್ಕೆ ಹೆಡ್ ಆಫೀಸಿಗೆ ಬರೆದುಕೊಂಡರೆ, ಸಂತೋಷದಿಂದ ಕೂಡಲೆ ತಿಳಿಸಲಾಗುವುದು.

ಎಲ್ಲಾ ಪಟ್ಟಣಗಳಲ್ಲಿಯೂ ಯೋಗ್ಯ ಏಜಂಟರುಗಳು ಬೇಕು. ಧಾರಾಳ ಕಮಿಷನ್ ಕೊಡಲಾಗುವುದು.

ಬೊಂಬಾಯಿ ಸಂಸ್ಥಾನದ ಪ್ರಾಮುಖ್ಯ ಏಜಂಟರು:–ಪ್ರಭಾಕರ ಕಂಪೆನಿ, 410 [illegible] ರಸ್ತೆ, ಬೊಂಬಾಯಿ.

WANTED.

Four Organisers to organise the work of the South Indian General Assurance Society, Ltd., in the following places noted below. Capable organisers can expect to have attractive and encouraging terms with sound footing for their future.

(1) South Canara, (2) Mysore, Hassan and Coorg, (3) Kadur, Shimoga, Chitaldroog and Tumkur (4) Mangalore, Kolar.

For terms and other particulars please apply to—

The Divisional Manager,
The South Indian General Assurance Co. Ltd.
64, III Cross Road, Srirampur Extn. Malleswaram Post, BANGALORE.

OR

The Managing Agents,
The S. I. G. A. Co. Ltd.
55, Poonamallee High Road, Kilpauk, MADRAS.

[illegible]

ಶ್ಯಾರ್ ಗಾಣಪು ರಾವ್ ಶೇಶನ ಅಂಡ್ ಸನ್ಸ್, [illegible]

[illegible]

1876ನೇ ಇಸವಿಯಿಂದಲೂ ಪ್ರಸಿದ್ಧಿ ಹೊಂದಿದ

ಎಮ್. ಗಣಪಯ್ಯ ಎಂಡ್ ಸನ್ಸ್, ಮಂಗಳೂರು.

ಇವರ ಶಾಸ್ತ್ರೀಯ ಮತ್ತು ಅನುಭವಸಿದ್ಧ ಔಷಧಗಳು.

ಮಹಾ ಮದನಕಾಮೇಶ್ವರಿ ಲೇಹ:—ಆಯುರ್ವೇದ ಶಾಸ್ತ್ರದಲ್ಲಿ ಅತಿ ಪ್ರಾಮುಖ್ಯತೆಯನ್ನು ಪಡೆದ ಔಷಧಿ. ನರಗಳ ಮತ್ತು ಜನನೇಂದ್ರಿಯದ ಶಕ್ತಿಹೀನತೆ, ಎದೆನೋವು, ಮಲಬದ್ಧತೆ, ಅಜೀರ್ಣ, ಅರುಚಿ, ಅಗ್ನಿಮಾಂದ್ಯ, ವಾಯು ಉಪದ್ರ ಮೊದಲಾದುವುಗಳನ್ನು ಹೋಗಲಾಡಿಸಿ ಮಾನಸಿಕ ಶಕ್ತಿಯನ್ನು ಹೆಚ್ಚಿಸುವುದು. ರಕ್ತವೃದ್ಧಿಯನ್ನೂ, ವೀರ್ಯ ವೃದ್ಧಿಯನ್ನೂ ಉಂಟುಮಾಡಿ ದೇಹಕ್ಕೆ ಸಂಪೂರ್ಣ ಆರೋಗ್ಯವನ್ನು ಉಂಟುಮಾಡುವುದು. ನಿರೋಗಿಗಳೂ, ಶ್ರಮಜೀವಿಗಳೂ ಇದನ್ನು ಪ್ರತಿನಿತ್ಯ ಸೇವಿಸುತ್ತಿದ್ದಲ್ಲಿ ಶ್ರಮ ಪರಿಹಾರವಾಗಿ ಸುಖನಿದ್ರೆಯು ಲಭಿಸುವುದು.

ಬಾಟ್ಲಿ 1ರ ರೂ. 2-0-0. ಬಾಟ್ಲಿ 3ರ ರೂ. 5-12-0.

ಮೇಹ ಕುಠಾರ:—ಪ್ರಮೇಹ, ಮೂತ್ರಕೃಚ್ಛ್ರ, ಮೂತ್ರ ಹೋಗದಿರುವಿಕೆ, ಮೂತ್ರ ಹೋಗುವಾಗ ಉರಿ, ಮೂತ್ರದ್ವಾರದಿಂದ ಕೀವು ಬರುವುದು, ಮೂತ್ರದಿಂದ ಧಾತು ಹೋಗುವುದು, ಮೂತ್ರ ಆಗಾಗ ಬಂದು ತಡೆಯಲಿಕ್ಕೆ ಸಾಧ್ಯವಿಲ್ಲದಿರುವುದು ಇವೇ ಮೊದಲಾದ ಹಲವು ಮೂತ್ರಕೋಶದ ರೋಗಗಳಿಗೆ ಸಿದ್ಧೌಷಧ.

ಡಬ್ಬಿ 1ಕ್ಕೆ ರೂ. 2-8-0. ಡಬ್ಬಿ 3ರ ರೂ. 7-0-0.

ಕಸ್ತೂರಿ ಮಿಶ್ರಿತ ದಶಮೂಲಾರಿಷ್ಟ:—ಇದು ಬಾಣಂತಿಯರಿಗೆ ಅತ್ಯದ್ಭುತಕರವಾದ ಶಕ್ತಿವರ್ಧಕ ರಸಾಯನವಾಗಿರುತ್ತದೆ. ಪ್ರಸವಿಸಿದ ನಂತರ ಅವರ ಪ್ರಸವದ ಆಯಾಸವನ್ನು ಹೋಗಲಾಡಿಸಿ ಗರ್ಭಕೋಶದ ವೇದನೆಗಳನ್ನು ಸಮಾಧಾನಪಡಿಸುವುದು. ಗರ್ಭಕೋಶದಲ್ಲಿ ಕೆಡುಕು ರಕ್ತವು ನಿಲ್ಲದಂತೆ ಮಾಡಿ, ಅಗ್ನಿಮಾಂದ್ಯ, ಅರುಚಿ, ಚಳಿಜ್ವರ, ರಕ್ತಹೀನತೆ, ನಿದ್ರಾಭಂಗ ಮೊದಲಾದುವುಗಳನ್ನು ಹೋಗಲಾಡಿಸಿ, ದೇಹವನ್ನು ಶಕ್ತಿವಂತವೂ ಆರೋಗ್ಯವಂತವೂ ಮಾಡುವುದು. ಬಾಣಂತಿಯರು ಪುಷ್ಟಿಹೊಂದಿ, ಶಿಶುವಿಗೂ ಧಾರಾಳವಾಗಿ ಹಾಲು ಸಿಕ್ಕುವಂತೆ ಮಾಡುವುದು.

ಬಾಟ್ಲಿ 1ಕ್ಕೆ ರೂ. 1-8-0. ಬಾಟ್ಲಿ 2ರ ರೂ. 3-0-0.

Shiromani Narayanacharya,
Choukhamba, Benares City

ಶಾಸ್ತ್ರಿಗಳೇ ಪೂಜಾರಿಗಳು ಅಥವಾ [illegible]? ರಾಮಕೃಷ್ಣಯ್ಯನವರೇ [illegible] ಆರೋಗ್ಯವೇ [illegible] ಆರೋಗ್ಯ, ಅದಕ್ಕೆ ಕಾರಣವೇನು? ಅವರು ರುದ್ರಾಕ್ಷಿಯನ್ನು ಯಾವಾಗಲೂ ಧಾರಣೆಮಾಡುತ್ತಿದ್ದರು. ಅದರಿಂದ ಏನು ಫಲ? ಅದನ್ನು ಧರಿಸಿದರೆ [illegible], ಬುದ್ಧಿಶಕ್ತಿ, ವಿದ್ಯಾಭಿವೃದ್ಧಿ, ವೀರ್ಯವೃದ್ಧಿ, ಸಂಪತ್ತು, ಕೀರ್ತಿ ಇವುಗಳೆಲ್ಲಾ ಆಗುವುವು. ಹಾಗಾದರೆ, ನಮಗೆ ಅಂತಹ ರುದ್ರಾಕ್ಷಿ ಎಲ್ಲಿ ದೊರೆಯುವುದು? ಅದು ಲೋಕಪ್ರಸಿದ್ಧಿ ಹೊಂದಿದ ನಮ್ಮ ಕಾಶೀ [illegible] ಯೋಗ್ಯವಾದ ಕ್ರಯಕ್ಕೆ ಉತ್ತಮ ತರದ ರುದ್ರಾಕ್ಷಿ ದೊರೆಯುವುದು.

[illegible] 3-4-5-6-7-8 [illegible] 9-10-11 [illegible] 12-13-14 [illegible] 1000 [illegible]

(ಪವಾಲಕ್ಕೆ [illegible] 1 ಅಸಲು [illegible] 8 ಇನಾಮುಗಳು— 1 [illegible], 1 [illegible], 1 [illegible] ನೊಡನೆ 8 ಇನಾಮುಗಳು)

ಶಿರೋಮಣಿ ನಾರಾಯಣಾಚಾರ್ಯ
ಚೌಖಂಬಾ, ಬನಾರಸ್ (ಕಾಶೀ)

[ಗುಣಬಾರದಿದ್ದರೆ ಹಣ ವಾಪಾಸು]

ಸುಪ್ರಸಿದ್ಧ ವೈದ್ಯರಾದ ಎಮ್. ಕೆ. ರಜಪೂತ ಇವರ

ಸಂತತಿ ಪ್ರತಿಬಂಧಕ ಚೂರ್ಣ (ರಜಿಸ್ಟರ್ಡ್)

[illegible]

ವಿಳಾಸ:—ಸಂಜೀವಿನೀ ಔಷಧಾಲಯ ಮು. ಪೊ. ಪಿಂರಜಿ, S. M. C

Wanted.

Old, fully paid-up Shares of the Canara Bank Ltd. (Mangalore), Sellers may write to the undersigned with the rock-bottom rates.

S. Madhav Laxman Nayak,
Brahmin Street, Mangalore.

Canara Bank, Limited.

Established 1906.

Authorised Capital	10,00000—0—0
Subscribed capital	6,00,000—0—0
Paid up Capital	3,30,000—0—0
Reserves	4,31,000—0—0

Head Office:—**Bunder, Mangalore** Local Offices:—**City & Bunder.**

BRANCHES:— Bombay, Cochin, Calicut, Ernakulam, Alleppey, Chikmagalur, Ganguli, Coondapoor, Udipi, Karkal, Puttur, Kasaragod, & Buntwal Out-agency.

Interest is allowed on Current, Fixed and Savings Bank Accounts, rates of which may be ascertained on application. Advances made on approved securities at easy rates. All kinds of Banking business transacted. Rules of business on application.

The Bangalore Branch Office of the Bank at No. 1 Albert Victor Road, Bangalore City has been opened on 8-1-34.

A. Madhava Pai,
Secretary.

ವಿಶೇಷ ಸಂಚಿಕೆ] ಜಯಕರ್ನಾಟಕ [೧೯೩೪

ನಾಟ್ಯಾಂಕ.

ಸಂಪಾದಕರು:—
ಶ್ರೀ ಬೆಳಗಾಂವಿ ರಾಮಚಂದ್ರ, ಬಿ. ಎ.
ಶ್ರೀ ಹ. ವೇ. ಜೋಶಿ, ಬಿ. ಎ.

ನವಂಬರ ಎರಡನೆಯ ವಾರದಲ್ಲಿ ಪ್ರಕಟವಾಗುವುದು.

ರಂಗಭೂಮಿ, ನಾಟ್ಯ, ನೃತ್ಯ, ಸಂಗೀತ, ಚಲಚಿತ್ರ ಮೊದಲಾದುವುಗಳ ವಿವಿಧಾಂಗಗಳ ಮೇಲೆ ತಜ್ಞರ ಲೇಖನಗಳು—ಒಂದೆರಡು ತ್ರಿವರ್ಣ ಚಿತ್ರಗಳು—ಅಲ್ಲದೆ, ಬೇರೆ ಹಲವು ಚಿತ್ರಗಳು, ಏಕಾಂಕ ನಾಟಕ, ಕಥೆ, ವ್ಯಂಗ ಚಿತ್ರಗಳು ಇವುಗಳೊಂದೊಡನೆ ವಿಶೇಷ ಸಂಚಿಕೆಯು ಕನ್ನಡಿಗರಿಗೆ ಮೋಹಕವಾಗುವಂತೆ ಹೊರಡಲಿರುವುದು. ೧೯೩೩ರ ವಿಶೇಷ ಸಂಚಿಕೆಯ ವೈಭವವು ಜನತೆಗೆ ಮರವೆಯಾಗಿರಲಾರದು. ಈ ಸಲದ (೧೯೩೪ರ) ವಿಶೇಷ ಸಂಚಿಕೆಯು ರಂಗಭೂಮಿ ಮತ್ತು ತತ್ಸಂಬಂಧ ವಿಷಯಗಳ ಬಗ್ಗೆ ಒಂದು ಸಂಗ್ರಾಹ್ಯ ಗ್ರಂಥವಾಗಿಯೇ ವಾಚಕರ ಕೈಯಲ್ಲಿ ಕಂಗೊಳಿಸುವುದು.

ಬಿಡಿಸಂಚಿಕೆ ೧ ರೂಪಾಯಿ. ಚಂದಾದಾರರಿದ್ದವರಿಗೆ ಉಚಿತವಾಗಿಯೇ ಸಿಗುತ್ತದೆ. ಜಾಹೀರಾತುದಾರರಿಗೆ ಸುವರ್ಣಸಂಧಿ. ಕನ್ನಡ ನಾಡಿನಲ್ಲೆಲ್ಲ ವಿಶೇಷ ಸಂಚಿಕೆಯ ಪ್ರಚಾರವಾಗುವಂತೆ ವ್ಯವಸ್ಥೆ ಮಾಡಿದೆ. ದರಗಳಿಗಾಗಿ ಈಗಲೇ ಕೇಳಿಕೊಳ್ಳಿರಿ. ಪುಸ್ತಕ ವ್ಯಾಪಾರಿಗಳಿಗೆ ವಿಶೇಷ ಕಮಿಶನು. ಪ್ರತಿಗಳನ್ನು ಕೊಳ್ಳಬಯಸುವವರು ಈಗಲೇ ಆರ್ಡರು ದಾಖಲು ಮಾಡಬೇಕು. ಕಟ್ಟಕಡೆಗಾಗಿ [illegible].

ವ್ಯವಸ್ಥಾಪಕ,
ಜಯಕರ್ನಾಟಕ ಕಾರ್ಯಾಲಯ, ಧಾರವಾಡ.

---

77 Years!

Two generations of approved service enables us to pick and choose what is cheap, lasting & good to suit the pockets & the tastes of our longstanding wide circle of

CUSTOMERS

who know our

Premier House for Swadeshi.

Mill Yarns—Handloom Cloths, Dhoties—Saries—Chintzes etc.

Shrinivas Ranga Pai
Sawkar Mahal,
Car Street, MANGALORE.

[illegible] ಟಪ್ಪಾಲು ಹಾಸಲು ಸೇರಿ ರೂ. ೩—18—0.

1906.

ಸ್ವದೇಶಾಭಿಮಾನಿ

SWADESHABHIMANI

ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ೧೯೦೬ರಲ್ಲಿ ಸ್ಥಾಪಿತವಾದುದು

[illegible] ಮಂಗಳೂರಿನ ಶಾರದಾ [illegible]ದಲ್ಲಿ ಪ್ರಕಟವಾಗುವ ವಾರಪತ್ರಿಕೆ.

ಮಂಗಳೂರು ತಾ. ೨೧ನೇ ಶುಕ್ರವಾರ ಸಪ್ಟಂಬರ ೧೯೩೪ (21-9 '34) ಸಂಚಿಕೆ ೩೮

The Canara Banking Corporation Udipi, Ltd.

(Incorporated in British India) ESTD· 1906·

Head office:—UDIPI, S K   Branches:—Coondapoor, Mangalore, Shimoga & Madras

Authorised Capital Rs 3,50,000·   Subscribed and Called up Rs 2 25,000

Statement of Assets & Liabilities as on 31st August 1934

LIABILITIES

1.	Paid up Capital	Rs 2,25,000 0—0
2.	Reserve and other funds	„ 200 000—0—0
3.	Deposits	„ 23,22 920—11—6
4.	Due to Bankers	„ 60,796— 7—10
5.	Sundries	„ 94,574 13—9
6	Bills per contra	80,000 0 0
	Total Rs	29 88 292 3 1

ASSETS

1	Bank Premises	Rs 66 892 10—0
2	Investment in G P Notes	6,40,526 4—6
3	Authorised Investments	21,62 771—1—6
4	Bill for collection	80,000—2—0
5	Sundries	„ 40 054—6—3
6	Cash on hand & with Bankers at call	22 947—5—10
	Total	29 88 292—3 1

Office of the Corporation, Udipi, S K 4—9—1934

M Shrinivas Prabhu
Ag Manager

(Regd)

ಅಮೃತಾಂಜನ

ಇದು ಕೆಟ್ಟ ಶಿರೋವೇದನೆ, ಕಷ್ಟಕೊಡುವ ವಾತ, ಭಾರಿ ನೋವು, ವಿಶೇಷ ಉಳುಕು, ಅಸಹನೀಯ ಹಲ್ಲುನೋವು ವಿಪರೀತ ಘಾಯ, ಬಹು ಶೀತ, ಸಹಿಸಲಸದಳವಾದ ಚಳಿ, ಕೈಕಾಲು ಮರಗಟ್ಟುವುದು, ಲುಂಬಾಗೊ ಮೊದಲಾದ ಎಲ್ಲಾ ತರದ ಬೇನೆಗಳನ್ನೂ ಅತೀ ಬೇಗನೇ ಗುಣಪಡಿಸುತ್ತದೆ ಎಲ್ಲೆಲ್ಲಿಯೂ ಮಾರಲ್ಪಡುತ್ತದೆ

ರಿಂಗ ವರ್ಮ್ ಮುಲಾಮು:— ಇದು ರಿಂಗ್‌ವರ್ಮನ್ನೂ ಕಜ್ಜಿಯನ್ನೂ ಇನ್ನಿತರ ಚರ್ಮರೋಗಗಳನ್ನೂ ಮೂರು ಸಲ ಮುಟ್ಟಿಸುವುದರೊಳಗೆ ಗುಣಪಡಿಸುತ್ತದೆ

ಡಬ್ಬಿ 1ಕ್ಕೆ 6 ಆಣೆ. ಡಜನಿಗೆ ರೂ. 3—8—0 ಅಂಚೆವೆಚ್ಚ ಪ್ರತ್ಯೇಕ.

ಅಮೃತಾಂಜನ ಡಿಪ್ಪೋ, ಮದರಾಸು, ಮತ್ತು ಬೊಂಬಾಯಿ

ದಿ ಬೊಂಬೇ ಲ್ಯಾಫ್ ಎಶ್ಯೂರೆನ್ಸ್ ಕಂಪೆನಿ ಲಿಮಿಟೆಡ್, ಬೊಂಬೇ.

1908ರಲ್ಲಿ ಸ್ಥಾಪಿತವಾದುದು.

ಪೊಲಿಸಿದಾರರಿಗೆ ವಿಶೇಷ ರಿಯಾಯತಿ.

ವರ್ಷಾವಧಿಯ ಪ್ರೀಮಿಯಮ್ಮುಗಳನ್ನು ತೆರುವ ಎಲ್ಲಾ ಪೊಲಿಸಿದಾರರಿಗೂ "ಸಿಲ್ವರ್ ಜ್ಯೂಬಿಲಿ" ರಿಯಾಯತಿಯಾಗಿ ಅವರವರ ಮುಂದಿನ ಪ್ರತಿ ವಾರ್ಷಿಕ ಪ್ರಿಮಿಯಮ್ಮಿನಲ್ಲಿ ಶೇಕಡಾ 2½ ಸಲೆಯಷ್ಟು ಕಡಿಮೆಯಾದ ಮೊಬಲಗನ್ನು ತೆರುವ ರಿಯಾಯತಿ ಕೊಡಲಾಗಿದೆ. ಈ ರಿಯಾಯತಿಯ ಪ್ರಯೋಜನವನ್ನು ಆಗಲೇ ನೂರಾರು ಮಂದಿ ಪೊಲಿಸಿದಾರರು ಪಡಕೊಂಡಿದ್ದಾರೆ. ವರ್ಷಕ್ಕೊಮ್ಮೆ ಪ್ರಿಮಿಯಮ್ಮಿನ ಕಂತನ್ನು ಕಟ್ಟಲಪೇಕ್ಷಿಸುವವರು ತಮ್ಮ ಪೊಲಿಸಿಯ ನಂಬರುಗಳನ್ನು ನಮೂದಿಸಿ ನಮಗೆ ಯಾ ಸಮ್ಮಂಧಪಟ್ಟ ನಮ್ಮ ಇತರ ಆಫೀಸಿಗೆ ತಿಳಿಸಬೇಕಾಗಿ ಈ ಮೂಲಕ ವಿನಂತಿ ಮಾಡಿಕೊಳ್ಳೋಣಾಗುತ್ತದೆ.

ವಿ. ಸೂ:—ಪ್ರಾತಿನಿಧ್ಯವಿಲ್ಲದ ಸ್ಥಳಗಳಿಂದ ಉತ್ಸಾಹಶಾಲಿ ಗೃಹಸ್ಥರುಗಳ ಏಜನ್ಸಿ ಅರ್ಜಿಗಳು ಅಂಗೀಕರಿಸಲಾಗುವುವು.

ಕೊಚಿಕಾರ್ ಬ್ರದರ್ಸ್. ಮದ್ರಾಸ್ ಜೋಂಟ್ ಸೆಕೆಟರಿಯವರು.

ಕಂಠಶೋಷಣೆ ಮಾಡಿದರು. ಆಚೆ, ಅವರ ಬಣ್ಣದ ಮಾತುಗಳನ್ನು, ಆರ್ಭಟಗಳನ್ನು ನೋಡುವುದಕ್ಕೆ ಮಜವಾಗಿತ್ತು!

× × × × ×

ಕಾಂಗ್ರೆಸ್ಸಿನ ಸೂತ್ರಗಳನ್ನರಿಯದವರು ಅದಕ್ಕೆ ಸೇರಬಾರದಂತೆ. ಸತ್ಯದ ಅಭಿಪ್ರಾಯ, "ಕಾಲಕ್ಕೆ ತಕ್ಕ ವೇಷ" ಎನ್ನುವುದಲ್ಲ — ಈ ಪ್ರಸ್ತಾಪ ಕಾಂಗ್ರೆಸ್ಸಿನದಲ್ಲ!

× × × × ×

ಮಂಗಳೂರು ಪಟ್ಟಣದಲ್ಲಿ ಕಾಣಸಿಗಬೇಕಾದ ವೋಟಿನ ಗಲಾಟೆ! "ನಮ್ಮ ವೋಟನ್ನು......ರಿಗೆ ಕೊಡಿರಿ" ಎಂಬ ಬೋರ್ಡುಗಳು, ಮನೆ, ಮಠ, ಬಾಗಿಲು ಗೋಡೆಗಳು, ಅಲ್ಲದೆ ಮರ, ಮನೆ ಮರ, ತೆಂಗಿನ ಮರಗಳಲ್ಲಿ ಕಾಣುತ್ತಿವೆ. "ಸರಕಾರ ಪಾಲಿಗಾಗಿ ನೋಟೀಸು ಹೊರಡಿಸುವ ಪ್ರಯೋಜನವಾಗದು" ಎಂದೆನ್ನುವರೆ!

× × × × ×

ಕೋಟಿಲ್ಲಿ ಮತ್ತು ಚಿನ್ನದಲ್ಲಿಯೂ ಕೆಲವರು ವೋಟಿಗೆ ನಿಂತಿರುವರೆಂದು ಸ್ಮಶಾನದ ಹೊರಗಿನ ಜನರ ಬಳಿ ಇಂಗ್ಲಿಷ್ ಬಜಾರಿನಲ್ಲಿ ಯಾರೋ ಹೇಳಿದರಂತೆ! "ಇನ್ನೂರು ರೂಪಾಯಿ ಕೊಟ್ಟರೆ ನನ್ನ ನಾಮಿನೇಶನ್ ಹಿಂತೆಗೆಯುತ್ತೇನೆಂದು ಕಾಳಪ್ಪನವರಿಗೆ ಬೋಳಪ್ಪನವರು ಹೇಳಿರುವರೆಂದು ತಿಳಿದುಬಂದಿದೆ. ಶಹಬಾಶ್! ಕಾಳಪ್ಪನವರೆ! ನೀವೇ ಧನ್ಯರು!

× × × × ×

ಒಂದು ಕಡೆಯಲ್ಲಿ, ವೋಟಿಗೆ ಒಂದು ನೋಟನ್ನು ಕೊಡುವೆನೆಂದು ಮಹಾರಾಯರೊಬ್ಬರು ಮುಂದೆ ಬಂದಿರುವರಂತೆ. ತಾನು ಮಾಡುವ ದುಡ್ಡನ್ನು ತಾನು ಬೆಳ್ಳಗೆ ಹಿಡಿಯದೆ!

× × × × ×

ನೋಮಿನೇಶನ್ ಹಾಕಿದವರ ಹೆಸರುಗಳು ಪ್ರಕಟವಾಗಿದ್ದು ಕಟ್ಟಿದ ೫೦ ರೂಪಾಯಿಗಳಲ್ಲಿ ಎಷ್ಟು ಹಿಂದೆ ಬರಲಿವೆಯೋ ನೋಡಬೇಕು!

× × × × ×

ನಮ್ಮ ಉಮೇದ್ವಾರರು ವೋಟು ಸಂಪಾದನೆಯಲ್ಲೇ ತಮ್ಮ ಸಂಪಾದನೆಯನ್ನು ವ್ಯಯಮಾಡಿ ಬಿಡಬೇಕು ಸ್ವಾಮಿ. ಅದರೆ, ಕೌನ್ಸಿಲಲ್ಲಿ ಕುಳಿತು ಉರಿಗಳಂತಾಗುವರು—ಅದೀಗ ದೊಡ್ಡ ಬ್ಲಂಡರ್!!

× × × × ×

ಆಗಲಿ ಸ್ವಾಮಿ, ಆಗಲಿ—ವೋಟಿನ ಗಲಾಟೆ ಮುಗಿದಾಗಲಿ!—ಎಷ್ಟು ಉಮೇದ್ವಾರರು ಹತಾಶರಾಗಿ ತಿಂಗಳು ಗಟ್ಟಲೆ ಮನೆಯಲ್ಲಿ ಕುಳಿತು ನಾಚಿಕೊಳ್ಳಲಿರುವರು ನೋಡೋಣ!

• • •



ನಿಮ್ಮ ಕುಟುಂಬದ ಸದಾರೋಗ್ಯ

ರುಚಿಕರವಾದ ಓವಲ್ಟಿನ್ನನ್ನು ನಿಮ್ಮ ಕುಟುಂಬದ ಪಾನೀಯವಾಗಿ ದಿನನಿತ್ಯ ಉಪಯೋಗಿಸಿರಿ. ಪ್ರಕೃತಿ ಸಿದ್ಧವಾದ ಪಾನೀಯವು ನಿಮ್ಮ ಕುಟುಂಬದವರ ಆರೋಗ್ಯವನ್ನು ವೃದ್ಧಿಪಡಿಸುವುದು. ಓವಲ್ಟಿನ್ ಎಂಬುದು ಸಂಪೂರ್ಣ ಮತ್ತು ಸಂತೃಪ್ತಿಕರವಾದ ಆಹಾರ. ಇದನ್ನು ಸೃಷ್ಟಿಯ ಅಮೂಲ್ಯ ಟೋನಿಕ್ ಆಹಾರಗಳಿಂದ ತಯಾರಿಸಲಾಗಿದೆ. ಬೆಳೆದ ಬಾರ್ಲಿ, ದನದ ದಪ್ಪ ಹಾಲು, ಮತ್ತು ವಿಶಿಷ್ಟ ಕೋಳಿಮೊಟ್ಟೆಗಳಿಂದ ಇದು ತಯಾರಾಗಿದೆ. ಆರೋಗ್ಯ, ಮತ್ತು ಶಕ್ತಿವರ್ಧನೆಗಳಿಗಾಗಿ ಇದು ಎಲ್ಲ ಚೈತನ್ಯವನ್ನು ಕೊಡುತ್ತದೆ.

ಪ್ರತಿಯೊಬ್ಬರೂ ರಾತ್ರಿಯೂ ಒಂದು ಕಪ್ ಓವಲ್ಟಿನ್ ತೆಗೆದುಕೊಂಡರೆ ಇದು ನಿಮ್ಮನ್ನು ಆರೋಗ್ಯವಂತರನ್ನಾಗಿ ಇಡುವುದು. ದಿನದ ಕೆಲಸಕ್ಕೆ ಇದು ಚೈತನ್ಯ ಶಕ್ತಿಗಳನ್ನು ಕೊಟ್ಟು ರಾತ್ರಿ ಗಾಢ ನಿದ್ರೆಯನ್ನು ಅದರ ಅಮೋಘ ಶಕ್ತಿಯಿಂದ ಕೊಡುತ್ತದೆ. ನಿಮ್ಮ ಕುಟುಂಬವು ಇದರ ರುಚಿಯನ್ನರಿತು ಆರೋಗ್ಯವಂತವಾಗಿ ಬಾಳಲಿ.

OVALTINE

ಮೆದುಳು, ನರ ಮತ್ತು ದೇಹವನ್ನು ವೃದ್ಧಿಸುತ್ತದೆ.

ತಯಾರಿಯಲ್ಲಿ ಕೈಯಲ್ಲಿ ಸ್ಪರ್ಶಿಸಲಾಗಿಲ್ಲ. ಎಲ್ಲ ಕೆಮಿಸ್ಟರಲ್ಲಿಯೂ ಸ್ಟೋರುಗಳಲ್ಲಿಯೂ ಸಿಗುತ್ತದೆ.

ಏಜಂಟ್—ಜೇಮ್ಸ್ ವೈಟ್, 85ಎ, ಕ್ಲೈವ್ ಸ್ಟ್ರೀಟ್, ಕಲ್ಕತ್ತ ಮತ್ತು ಬೊಂಬಾಯಿ ಮದ್ರಾಸುಗಳಲ್ಲಿ

OV/ato

ಕೆಲವು ವೋಟರರು ಈ ಉಮೇದ್ವಾರರಿಗೆ ಬುದ್ಧಿ ಕಲಿಸುವೆವೆಂದು ನಿರ್ಧರಿಸಿಕೊಂಡಿರುವರಂತೆ. ಕಾಳಪ್ಪನಿಗೆ ಭಾಷೆ ಕೊಟ್ಟು, ಬೋಳಪ್ಪನಿಗೆ ವೋಟು ಕೊಡುವರೋ ಏನೋ!

• • •

"ಸಾಯ್ಬರ ವೋಟು ಕೇಳಲು ಒಬ್ಬ ಉಮೇದ್ವಾರರು ಬಂದರಯ್ಯಾ! "ಸಹಾಯ ಮಾಡಿ" ಎಂದರು.

• • •

ಪಾಪ! ಹಿಲ್ಟನ ಉದಿಗೆಶೋಧಿಗಳೆಲ್ಲ ಬೆವರು ಹಿಂಟಿನ ಪಾಲಾಗಿದೆ. ಮುಂದಿದ್ದ ಮುಖ ಚಪ್ಪಟೆಯಾಗಿದೆ.

× × × × ×

ಅವರ ಮುಖ ನೋಡಿ ಸಾಯ್ಬರಿಗೆ ದುಃಖವಾಯಿತು. ಅವರ ಮನಸ್ಸಮಾಧಾನಪಡಿಸುವುದು ಹೇಗೆ?

× × × × ×

ಕೇಳಿ, ಸಾಯ್ಬ ಮಾಡಿದುದನ್ನು—ಅವರ ಕುಂತುಕೊಳ್ಳಲು ಹೇಳಿದ. ಅವರ ಹತ್ತಿರ [illegible] ಮತ್ತು ಮೆಲ್ಲನೆ ಹೇಳಿದ "ನಿಮ್ಮ ರೂಪಾಯಿ ([illegible] ...."

ಮರುಕ್ಷಣ ರಾಯರು ಖಾಲಿ!

ವೋಟು ಯಾರಿಗೆ ಬೇಕು ಎಂದು ಕೇಳುವ,

'ಸಾಯ್ಬ'

Karnataka Chemical and Pharmaceutical Works, Ltd., Udipi. (South India)

ಕುಂಭಕೋಣದಲ್ಲಿಯೂ ಮಧುರೆಯಲ್ಲಿಯೂ ಮೈಸೂರಿನಲ್ಲಿಯೂ ಸುವರ್ಣ ಪದಕಗಳನ್ನು ಪಡೆದಿರುವ

ಕರ್ಣಾಟಕ ಕೆಮಿಕಲ್ ಎಂಡ್ ಫಾರ್ಮಸ್ಯೂಟಿಕಲ್ ವರ್ಕ್ಸ್, ಲಿಮಿಟೆಡ್, ಉಡುಪಿ. (ದಕ್ಷಿಣ ಹಿಂದೂಸ್ಥಾನ).

ನಮ್ಮಲ್ಲಿ ಟಿಂಕ್ಚರ್, ವಗೈರೆ ಎಲ್ಲಾ ಎಲೋಪತಿಕ್ ಔಷಧ ದ್ರವ್ಯಗಳೂ, ಆಯುರ್ವೇದಿಯ ಔಷಧಿಗಳೂ, ಟೈಲೆಟ್ ಸಾಮಗ್ರಿಗಳೂ, ಸಾಬೂನುಗಳೂ, ಫೌಂಟನ್ ಪೆನ್ ಶಾಯಿಗಳೂ ತಯಾರಿಸಲ್ಪಡುತ್ತವೆ.

ದ್ರಾಕ್ಷಾಸವ, ಪ್ರಸೂತಿ ಸಂಜೀವನ, ನಿಯೊವಿಗರ್, ಸ್ನೋ,
ಕ್ಷೀರಬಲಾ, ಕಾರ್ಪೋಫೋಸ್ಫಿನ್ ಯುಟೇರಿನಾ, ಇಂಕ್ಸ್

ಮ್ಯಾನೇಜಿಂಗ್ ಡೈರೆಕ್ಟರ್—ವೆಂಕಟ್ರಾಯ ಅಪ್ಪಿಪ್ಪ ಬಾಳಿಗ.

ಹೆಡ್ ಆಫೀಸು, ಉಡುಪಿ. (ದಕ್ಷಿಣ ಹಿಂದೂಸ್ಥಾನ)

ಬ್ರೇಂಚ ಆಫೀಸು [illegible] ಸ್ಟ್ರೀಟ್, ಬೊಂಬಾಯಿ ನಂ. 2.

ಪಶ್ಚಿಮ ಕರಾವಳಿ ಮತ್ತು ಮೈಸೂರು ಪ್ರಾಂತ್ಯಗಳ ಪ್ರಮುಖ್ಯ ಏಜಂಟರು—

ಕರ್ಣಾಟಕ ಪ್ರೊಡಕ್ಟ್ಸ್ ಡಿಸ್ಟ್ರಿಬ್ಯೂಟಿಂಗ್ ಕಂಪೆನಿ, ಮಂಗಳೂರು.

ಅನುಕ್ರಮಣಿಕೆ.

ಅಗ್ರಲೇಖ
ಭಯೋತ್ಪಾದಕ ಚಳವಳಿಕ್ಕೆ ಚಿಕಿತ್ಸೆಯೇನು? ೨
ಸ್ಫುಟವಿಚಾರಗಳು ೨
ಮೂಲೆಮೂಲೆಯಿಂದ ೧೦
ನೋಟಗಳು ೪
ವರ್ತಮಾನ ಸಂಗ್ರಹ ೨
ವಿವಿಧ ಸಮಾಚಾರಗಳು ೧೧
ಪತ್ರವ್ಯವಹಾರ ೧೨
ನೀರು! ೨
ಮಂಗಳೂರು ೯
ಗ್ನಾನ ೬
ಪ್ರಾಥಮಿಕ ಶಿಕ್ಷಣಸೇವೆ ೫
ಬೆಂಕಿಪೆಟ್ಟಿಗೆಗಳ ಮೇಲಿನ ಸುಂಕ ೧೧

ಸೂಚನೆಗಳನ್ನು ನ್ಮಾಡಿಬಿಟ್ಟಿದೆ. ಪ್ರಚಲಿತ ಶಿಕ್ಷಣ ಪದ್ಧತಿಯು ಧಾರ್ಮಿಕ–ನೈತಿಕ ಕಟ್ಟಲೆಗಳ ತಳಹದಿಯ ಮೇಲೆ ರೂಪಿಸಲ್ಪಟ್ಟಂತಹುದಲ್ಲವೆಂದೂ, ಅದರಿಂದಲೇ ಈ ಭಯೋತ್ಪಾದಕ ಚಳವಳಿವು ಎದ್ದು ಬಂದಿದೆಯೆಂದೂ ಸ್ವಾಗತಾಧ್ಯಕ್ಷ ಪಿ. ಎನ್. ಘೋಷರವರು ಉದ್ಘೋಷಿಸಿರುವರು. ಇದರಲ್ಲಿ ಎಷ್ಟು ತಥ್ಯಾಂಶವಿದೆಯೊ ಹೇಳಬರುವುದಿಲ್ಲ ಈಗಣ ಶಿಕ್ಷಣ ಪದ್ಧತಿಯ ಯುಕ್ತಾ ಯುಕ್ತತೆಗಳ ವಿಮರ್ಶೆಯಂತಿರಲಿ. ಬಂಗಾಳದಲ್ಲಿ ಕೊಡಲ್ಪಡುವಂತಹ ಶಿಕ್ಷಣವೇ ಇತರ ಪ್ರಾಂತ್ಯಗಳಲ್ಲೂ ಕೊಡಲ್ಪಡುತ್ತಿದೆಯಷ್ಟೆ. ಆದರೆ, ಬಂಗಾಳಕ್ಕೆ ಮಾತ್ರ 'ಬೋಂಬಿನ ಬಂಗಾಳ'ವೆಂಬ ದುರ್ನಾಮ [illegible]

ಸರಕಾರದ ಕಾರ್ಯವನ್ನು ಕಷ್ಟತರವನ್ನಾಗಿ ಮಾಡುತ್ತಿದೆ. ಸರಕಾರವು ಇವೆರಡರ ನಡುವೆ ಸಿಲುಕಿ, ಎರಡೂ ಕಿವಿಗಳಿಂದ ಅವರೆಂಬುದನ್ನು ನಂಬುವುದಾದರೆ ಸರಕಾರದ ದಾರಿಯು ಸುಗಮವಾಗುವುದಾಗಿ ಹೇಳಲಾಗುವುದಿಲ್ಲ. ಪರಿಷತ್ತಿನವರಾದರೂ ಕೈಗಾರಿಕೆಗಳ ಅಭಿವೃದ್ಧಿ, ಉದ್ಯೋಗ ದೊರಕಿಸಿಕೊಡುವ ಉದ್ಯಮಗಳು, ರಾಜಕೀಯ ಸ್ವಾತಂತ್ರ್ಯದ ಆವಶ್ಯಕತೆ ಇವುಗಳನ್ನು ಸ್ಪಷ್ಟೀಕರಿಸಿ ಸರಕಾರಕ್ಕೆ ಖಚಿತಪಡಿಸಿ, ಸರಕಾರದ ಸಹಕಾರದಿಂದ ಚಳವಳವನ್ನು ಕಾದಾಡಬೇಕು. ಪ್ರಾಂತ್ಯದ ಅಭಿವೃದ್ಧಿಯು ಸರ್ವತೋಮುಖವಾಗಿ ಸಾಗುತಿದ್ದಂತೆ ಭಯೋತ್ಪಾದಕ ಚಳವಳವು ತಾನಾಗಿಯೇ ನಿರ್ಮೂಲ [illegible]

[illegible]ಕ್ಕಾಗಿ ಒಂದೊಂದು ವರ್ಷದ ಕಠಿಣ ಸಜೆಗೆ ಗುರಿಪಡಿಸಿದರು. ಈ ಶಿಕ್ಷೆಯು ವಿಧಿಸಲ್ಪಟ್ಟ ಮೇಲೂ ಈ ಕೈದಿಗಳು ತಮ್ಮ ಉಪವಾಸವನ್ನು ಬಿಡಲಿಲ್ಲವೆಂದು ತಿಳಿದಿದ್ದೇವೆ. ಒಂದು ವರ್ಷದ ಕಠಿಣ ಸಜೆಯನ್ನನುಭವಿಸುವುದಕ್ಕಾಗಿಯಾದರೂ ಈ ಕೈದಿಗಳು ಬದುಕಬೇಕೆಂದು ಕಾನೂನಿಲ್ಲವಷ್ಟೆ!

ಶ್ರೀ ಶಿವರಾಮ ಕಾರಂತರು ಹೊಸ ಪಾರಪಟ್ಟೆಯ ಕುರಿತಾಗಿ

ಬರೆದ ಲೇಖವೊಂದನ್ನು ೧೩ನೇ ಪುಟದಲ್ಲಿ ಪ್ರಕಟಿಸಿರುತ್ತೇವೆ. ಶ್ರೀಯುತರು ಈ ಪಾರಪಟ್ಟಿಯನ್ನು [illegible]ವಾಗಿ ವಿಮರ್ಶಿಸಿ, ಇರುವ [illegible]ಲ್ಲಿ ಕೆಲವನ್ನು ಎತ್ತಿ ತೋರಿ[illegible] ಧ್ವನಿಯವೇ ಪರಸ್ಪರ ವಾಕ್ಯ ಜೋಡಣೆ, ರೂಢಿ ಪ್ರಯೋಗ, ತರ್ಜುಮೆಯ [illegible]ರತೆಗಳು, ಇವು ಹೊಸ [illegible] ಎಷ್ಟಿವೆಯೆಂದು ತಿಳಿದ[illegible]ಕೆನಗೊಳಗಾಗಿರುವರು ಶ್ರೀ [illegible] ಸೇರಿಸಿರುತ್ತಾರೆಂದು [illegible] ಅಸತ್ಯವೆಂದು ಹೇಳುವು[illegible] ಈ ವಿಚಾರವಾಗಿ ನಮ್ಮ [illegible]ವು ತರ್ಕಿಸಿ ತಿಳಿಯ[illegible]

ಸ್ವದೇಶಾಭಿಮಾನಿ–ಪುರವಣಿ. | ತಾ. ೨೧ನೇ ಶುಕ್ರವಾರ ಸಪ್ಟೆಂಬರ ೧೯೩೪

ಕೊಂಗ್ರೆಸ್ಸಿನ ಭವಿತವ್ಯ: ಮಹಾತ್ಮಾಜಿಯವರ ಪ್ರಕಟಣೆ.

ಮಹಾತ್ಮಾಜೀಯವರು ಈ ಕೆಳಗಿನ ಪ್ರಕಟಣೆಯನ್ನು ಕೊಟ್ಟಿರುವರು:—

"ನಾನು ಕೊಂಗ್ರೆಸ್ಸಿನ ಸ್ಥೂಲ ಸಂಬಂಧವನ್ನು ಕಡಿದು ಕೊಳ್ಳಲಿರುವೆನೆಂಬ ವಾರ್ತೆಯು ಸತ್ಯವಾದುದು. ನನ್ನ ಕೆಲವು ಸ್ನೇಹಿತರ ಅಪೇಕ್ಷೆಯಂತೆ, ಬೊಂಬಾಯಿ ಕೊಂಗ್ರೆಸ್ ಅಧಿವೇಶನ ಮುಗಿವತನಕವೂ ನನ್ನ ನಿರ್ಧಾರವನ್ನು ಮುಂದರಿಸಿಟ್ಟಿರುವೆನು. ನಾನು ಕೊಂಗ್ರೆಸ್ ಕಾರ್ಯಗಳಲ್ಲಿ ಪ್ರತ್ಯಕ್ಷವಾಗಿ ವಿಶೇಷ ಕಾರ್ಯಭಾರವನ್ನು ಹೊತ್ತುಕೊಳ್ಳದಿದ್ದರೂ ಸಂಬಂಧವನ್ನು ಕಡಿದು ಕೊಳ್ಳಬಾರದಾಗಿ ಪಂಡಿತ ಗೋವಿಂದ ವಲ್ಲಭಪಂತ ಮತ್ತು ಮಿ। ಶಾಫಿ ಮಹಮ್ಮದ್ ಕಿದ್ವಾಯಿಯವರ ಸೂಚನೆಗಳಿವೆ. ಆದರೆ, ನಾನು ಕೊಂಗ್ರೆಸ್ಸಿನಿಂದ ನಿವೃತ್ತನಾಗುವ ಸಮಯವು ಒದಗಿರುವುದೆಂಬುದನ್ನು ಸರದಾರ ವಲ್ಲಭಭಾಯಿಯವರು ಅನುಮೋದಿಸುತ್ತಾರೆ. ಮತ್ತೆ ಕೆಲವರು ಈ ಅಭಿಪ್ರಾಯವುಳ್ಳವರಾಗಿಲ್ಲ. ಇದೆಲ್ಲವನ್ನು ಪರ್ಯಾಲೋಚಿಸುತ್ತ ನನ್ನ ನಿರ್ಧಾರವನ್ನು ಕೊಂಗ್ರೆಸ್ ಅಧಿವೇಶನದ ತನಕ [illegible] ಪರಿಸಿರುವೆನು.

"ಕೊಂಗ್ರೆಸ್ಸಿನ ಕಾರ್ಯಗಳು ಸುಸೂತ್ರವಾಗಿ ನಡೆಯುವುದರಲ್ಲಿ ನಾನು ಒಂದು ಬಗೆಯ ಆತಂಕನೆಂದು ಭಾವಿಸುವ ಕೊಂಗ್ರೆಸ್ ಮುತ್ಸದ್ದಿಗಳಿರುವರು. ನನ್ನ ಕಾರ್ಯವಿಧಾನಗಳು ಅವರಿಗೆ ಮೆಚ್ಚಿಕೆಯಾಗಿಲ್ಲ. ನನ್ನೊಬ್ಬನ ಅಧಿಕಾರ ವಾಣಿಯಿಂದಲೇ ಕೊಂಗ್ರೆಸ್ಸು ಕುಣಿಯುತ್ತ, ಮುನ್ನಡೆವ ಬದಲಾಗಿ ಹಿಂದಡಿಯಿಡುತ್ತಿದೆಯೆಂಬ ಅಭಿಪ್ರಾಯವು ಹಲವರಲ್ಲಿದೆ. ಇವರೆಲ್ಲರ ಹಾಗೂ ನನ್ನ ನಿರ್ಧಾರದ ಯುಕ್ತಾಯುಕ್ತತೆಗಳನ್ನೂ ಹಿತಾಹಿತಗಳನ್ನೂ ಚೆನ್ನಾಗಿ ವಿವೇಚಿಸಲು ನನಗೆ ಧಾರಾಳ ಸಮಯ ದೊರೆವುದು. ನಾನು ಮುಂದಿಡುವ ಕೆಲವು ಸೂಚನೆಗಳಿವೆ. ಅದರ ವಿಷಯವಾಗಿ ಕೊಂಗ್ರೆಸ್‌ವಾಲರು ತಮ್ಮ ಸ್ಪಷ್ಟ ಅಭಿಪ್ರಾಯಗಳನ್ನು ಕೊಡುವರೆಂದೆಣಿಸುತ್ತೇನೆ.

"ನನಗೂ ಹಲವು ಕೊಂಗ್ರೆಸ್ ಕೆಲಸಗಾರರಿಗೂ ಅಭಿಪ್ರಾಯಭೇದಗಳಿವೆ. ಅವರು ನನ್ನನ್ನು ಅಂಧಭಕ್ತಿಯಿಂದ ಅನುಸರಿಸಿರುವರು. ಆದರೂ ಸಂತೋಷದಿಂದ ತಮ್ಮ ಬಂಧನವನ್ನು ಒಡಿಸಿಕೊಳ್ಳಲು ಸಿದ್ಧರಿರುವರು. ಅಸಾಧಾರಣ ಮುತ್ಸದ್ದಿಗಳೂ ನನ್ನನ್ನು ಮೌನದಿಂದ ಅನುಸರಿಸಿರುವರು. ಇಂಥವರ ಪ್ರೀತಿ ಮತ್ತು ಒತ್ತಾಯದಿಂದ ನನ್ನ ಅಪ್ಪಣೆಗಳನ್ನು ನಡೆಸುವಂತೆ ಮಾಡುವುದು ವಿಹಿತವಲ್ಲ."

ಖಾದಿಯ ವಿಚಾರವೇನು?

"ಖಾದಿಯನ್ನಿಂದು ಮೂಸಿಸುವವರಿಲ್ಲ. ಖಾದಿ ಮತ್ತು ಚರಕವನ್ನು ನಾನು ಯಾವಾಗಲೂ ಪ್ರಥಮ ಸ್ಥಾನ ಕೊಟ್ಟು ಮುಂದಿಡುವವನು. ಸುಶಿಕ್ಷಿತರೆಂಬವರಿಂದ ಚರಕದಲ್ಲಿ ನೂಲುವುದೆಂಬುದು ಕನಸಿನ ಮಾತಾಗಿ ಹೋಯಿತು. ಅವರಲ್ಲಿ ಹೆಚ್ಚಿನವರಿಗೆ ಚರಕದಲ್ಲಿಂದು ಭರವಸೆಯಿಲ್ಲ. ನಾಲ್ಕಾಣೆ ತೆತ್ತ ಮೆಂಬರರಿಗೆ ಮತದಾನ ಹಕ್ಕು ಕೊಡಲ್ಪಡುವುದಕ್ಕಿಂತ ನಿತ್ಯವೂ ಚರಕದಲ್ಲಿ ನೂಲುವವರಿಗೆ ಕೊಡಬೇಕೆಂದು ನನ್ನ ಸೂಚನೆ. ಕೊಂಗ್ರೆಸ್ಸಿನ ಕಾರ್ಯಕ್ರಮಗಳಲ್ಲಿ ಪ್ರಾಮುಖ್ಯವಾದ ಖಾದಿ ವಿಚಾರವಿಂದು 'ಮೃತಪತ್ರ'ವಾಗಿದೆ. ಹೇಗಿದ್ದರೂ ಖಾದಿಯ ಮೇಲಿನ ನನ್ನ ಭರವಸೆಯು ಹೆಚ್ಚುತ್ತಲೇ ಇದೆ. ಅದು ನಿರುದ್ಯೋಗಿಗಳಿಗೂ ಹಸಿದ ಬಡವರಿಗೂ ಎಷ್ಟು ಆವಶ್ಯಕವೋ ಅಷ್ಟೇ ಸುಶಿಕ್ಷಿತರಿಗೂ ಆಗಿದೆ. ಚರಕದಲ್ಲಿ ನೂಲುವವರಿಂದು 'ಭೂಭಾರ'ವಾಗಿರುವರೆಂದ[illegible] ನನ್ನ ಮತ. ಕೆಲಸದ ಗೌರವದ ಹೆಗುರು[illegible]ತೆಂಬ[illegible]ದು ತರಳ ಕೃಷಿಯು [illegible]ವಾಗಿ ಉಳಿದಿರುವುದೂ ಚರಕವೇ! [illegible] ಜನಾಂಗದ [illegible] ಶ್ವಾಸ[illegible]ವು. ಅದನ್ನು ತೆಗೆದರೆ ಉಳಿದ ಒಂದೇ [illegible] ಕಾರ್ಯ[illegible]ಸಲಾರದ ಜನಾಂಗವು ಅಳಿದು ಹೋಗಬೇಕಾಗ[illegible]

ಅಸೆಂಬ್ಲಿ ಚುನಾವಣೆಗಳು

ಇತರ ಯೋಗ್ಯ ಕಾರ್ಯಕ[illegible]ದ ಅಭಾವದಲ್ಲಿ ಕೊಂಗ್ರೆಸ್ಸು [illegible] ಪ್ರವೇಶಿ[illegible]ವುದು ಅವಶ್ಯವೆಂದು ನನಗೆ ಖಚಿತ[illegible]ದೆ. ಆದರೆ ನಮ್ಮೊಳಗೆ ಆ ವಿಷಯವಾಗಿ ತೀವ್ರ ಅಭಿಪ್ರಾಯ ಭೇದವಿದೆ.

ಸೋಶಲಿಸ್ಟ್ ಪಂಗಡ

ಸೋಶಲಿಸ್ಟ್ ಪಂಗಡದ ರಚನೆಯನ್ನು ನಾನು ಅನುಮೋದಿಸಿರು[illegible]. ಅವರಲ್ಲಿ ಹೆಚ್ಚಿನವರು ಗೌರವಿತರೂ ಸ್ವಾರ್ಥತ್ಯಾಗಿಗಳೂ ಆಗಿರುವರು. ಆದರೆ ಅವರಿಗೂ ನನಗೂ ಅಭಿಪ್ರಾಯಭೇದವಿದೆ. ಅವರ ಕೊಂಗ್ರೆಸ್ಸಿನಲ್ಲಿ ಗಣನೀಯ ಸ್ಥಾನ ಪಡೆವುದಾದರೆ ನಾನು ಕೊಂಗ್ರೆಸ್ಸಿನಲ್ಲಿರುವುದು ಅನುಚಿತ. ಕಾರಣ ಅವರನ್ನು ದರಿಸುತ್ತ ವಿರೋಧಪಕ್ಷದಲ್ಲಿರುವುದು ನನಗೊಲ್ಲದ ಕೆಲಸ. ನನ್ನ ಇಷ್ಟು ಕಾಲದ ಸಾರ್ವಜನಿಕ ಸೇವೆಯಲ್ಲಿ, ಯಾವ ಸಂಸ್ಥೆಗಳಲ್ಲೂ ನಾನು ಅಂತಹ ಸ್ಥಾನದಲ್ಲಿರಲು ಇಚ್ಛಿಸಿದುದಿಲ್ಲ. ಸಂಸ್ಥಾನಗಳ ಸಂಬಂಧವಾಗಿಯೂ ಕೆಲವರು ನಾನು ಸೂಚಿಸಿದುದಕ್ಕಿಂತ ತೀರ ಭಿನ್ನ ಸ್ವಭಾವದ ಧೋರಣೆಯನ್ನು ಸೂಚಿಸಿರುವರು. ಆದರೆ ನನ್ನ ಅಭಿಪ್ರಾಯವನ್ನು ಬದಲಾಯಿಸಲು ನನ್ನಿಂದಾದುದಿಲ್ಲ. ಅಸ್ಪೃಶ್ಯತಾ ಸಮಸ್ಯೆಯ ವಿಷಯವೂ ಹಾಗೆಯೇ. ಅನೇಕ ಕೊಂಗ್ರೆಸ್ ಕೆಲಸಗಾರರಿಗೂ ನನಗೂ ಹರಿಜನ ಕಾರ್ಯದ ವಿಧಿ–ವಿಧಾನಗಳ ವಿಷಯವಾಗಿ ಅಭಿಪ್ರಾಯಭೇದವಿದೆ. ಹಲವರು ನಾನೀ ಪ್ರಶ್ನೆಯನ್ನು ಕೈಯಲ್ಲಿ ತೆಗೆದುಕೊಂಡು ರಾಜಕೀಯ ಸಂಗ್ರಾಮದ ಗತಿಯನ್ನು ತಡೆದೆನೆಂಬ ಅಭಿಪ್ರಾಯವುಳ್ಳವರಾಗಿರುವರು. ಆದರೆ ನಾನು ಇತರ ಯಾವುದಾದರೂ ಕಾರ್ಯವನ್ನು ಕೈಕೊಂಡಿದ್ದರೆ ನನಗೇ ನಾನು ಅಪರಾಧಿಯಾಗುತಿದ್ದೆನೆಂದು ನನಗನಿಸುತ್ತದೆ. ಅಹಿಂಸೆಯ ವಿಚಾರವನ್ನು ತೆಗೆದುಕೊಳ್ಳಿರಿ. ಇತರ ಕೊಂಗ್ರೆಸ್ ಕೆಲಸಗಾರರೊಡನೆ ಅದು ಕೇವಲ ಧೋರಣೆಯಾಗಿ ಉಳಿದಿರುವಾಗ ನನಗದು ಸತ್ಯಾಚರಣೆಯು ಅನಿವಾರ್ಯವಾದ ಧರ್ಮವಾಗಿದೆ.

ಶಾಸನ ನಿರೋಧ.

"ಅಹಿಂಸೆಯ ವಿಷಯವಾಗಿ ಅಷ್ಟು ಸಂದೇಹ–ಸಂಕೋಚತೆಗಳಿರುವುದಾದರೆ ಶಾಸನ ನಿರೋಧದ ವಿಷಯವಾಗಿ ಮತ್ತಷ್ಟು ಹೆಚ್ಚು ಇರಲೇಬೇಕು. ಇಪ್ಪತ್ತೇಳು ವರ್ಷಗಳ ಅಭ್ಯಾಸದನಂತರವೂ ನಾನು ಕೂಡ ಅದನ್ನು ಪೂರ್ಣವಾಗಿ ತಿಳಿದಿರುವೆನೆನ್ನಲಾರೆ. ಶಾಸನನಿರೋಧ

[illegible]ದ ರಾಜಕೀಯ ಕೈದಿಗಳನ್ನು ಬಿಡಿರಿ'—

[illegible]ಯರೊಡನೆ ಲಂಡನಿನಿಂದ [illegible]ಲೇನ್ಸ್‌ಬರಿಯವರೂ ಪ್ರಾರ್ಥಿ[illegible]ಟವಾಗಿದೆ. ಲೇನ್ಸ್‌ಬರಿ[illegible]ಯರೂ ಇನ್ನಿತರ ಹಿಂದೂ[illegible]ಗಳೂ ಅಹಿಂಸಾತ್ಮಕರಾದ [illegible]ಳನ್ನು ಎಸಂಬ್ಲಿಯ ಚುನಾ[illegible]ಕೆಯಲ್ಲಾದರೂ ಬಿಡುಗಡೆ[illegible]ತವನ್ನು ಪ್ರದರ್ಶಿಸಲೆಂದು [illegible]ಬದರಲ್ಲೂ, ವಿಚಾರಣೆ[illegible]ಲ್ಲಿರುವ ಶ್ರೀ ಸರತ್ಚಂದ್ರ [illegible] ಎಸೆಂಬ್ಲಿ ಚುನಾವಣೆಗೆ [illegible]ವೈಸರಾಯರು ಗಮನಿಸು[illegible]ಸೆ ಎಂದಿರುವರು. ವೈಸ[illegible]ರ್ಡ್ ವಿಲ್ಲಿಂಗ್ಡನ್ನರು [illegible] ಅರಿಕೆಯನ್ನು ಮನ್ನಿಸಿ[illegible]ಕ್ಯಗಳಿಗೆ ಪಾತ್ರರಾಗಲೆಂದು

[illegible]ವರು ಕೊಂಗ್ರೆಸ್ಸಿನಲ್ಲೇ ಇರುವರು

[illegible] ಒಂದೆರಡು ತಿಂಗಳುಗಳ[illegible]ಬಾಯಿಯ ರಾಷ್ಟ್ರೀಯ[illegible]ತ್ಯವಾಗುವ ತನಕ ಬಿಟ್ಟು[illegible]ರೆಂದು ಅವರು ತಾರೀಕು[illegible] ಪ್ರಕಟಣೆಯಿಂದ ತಿಳಿದು[illegible]ಕ್ಯಾನಂದಿತರಾಗಿರುವರು. [illegible] ತಾನಾಗಿದ್ದು, ಕೊಂಗ್ರೆ[illegible]ಪ್ರಭಾವಗಳು ಹೊರ[illegible]ಕವಾಗಿದೆ,–ತನ್ನ ಆಶಯ[illegible]ವರ್ತಿಸಲಿಲ್ಲ—ಎಂಬ[illegible]ತಿಸಿ, ತಾನು ಕೊಂಗ್ರೆಸ್ಸಿ[illegible]ಹಿತವೆಂದು ಗಾಂಧಿಜೀ[illegible] ಅವರ ಮಾತಿನ[illegible]ರಿಸಿ ಶ್ರೀ ವಲ್ಲಭಭಾಯಿ[illegible]ರನ್ನು ಕೊಟ್ಟಿರುವರು. [illegible]ಸ್ಸಿನ ಹೊರ ನಿಲ್ಲುವ[illegible] ಭೀತಿಗೊಳಗಾಗಿರುವು[illegible], ಇನ್ನು ಇಷ್ಟರ ವರೆಗಿನ ಆಚರಣೆಗೆ ಅದು ಪಶ್ಚಾತ್ತಾಪವನ್ನು ಮನದಲ್ಲೇ ಸೂಚಿಸಿ, ಕೊಂಗ್ರೆಸ್ಸಿನ ಮುಂದಿನ ಆಡಳಿತೆಯ ಭಾರವನ್ನು ವಹಿಸಿ ಅನುಭವ ಹೊಂದಬೇಕಾಗಿದೆ.

[illegible] ಕಲವು[illegible]ರಾವುಗಳನ್ನು ಮಾಡಿಬಿಟ್ಟಿದೆ. ಸರಕಾರದ ನೂತನ ಶಾಸನಗಳೇನನ್ನೂ ಕುರಿತು ಈ ಪರಿಷತ್ತು [illegible] ಕಾರ್ಯರೂಪಕ್ಕೆ ತರಲುಬಾರದಷ್ಟು ಅಸಾಧ್ಯ[illegible]

ಬಂಗಾಳಕ್ಕೆ ಇತರ ಪ್ರಾಂತ್ಯಗಳಷ್ಟು ಹಕ್ಕು ಬಾಧ್ಯತೆಗಳು ದೊರೆಯಬಾರದೆಂದು ಕಲ್ಕತ್ತೆಯ ಯುರೋಪೀಯರೂ ಸಾಧಿಸುವುದೂ, ಸಾಮಾಜಿಕ–ಆರ್ಥಿಕ–ಉನ್ನತಿಗಳಿಗಾಗಿ[illegible]–ಬಂಗಾಳದ ಜಮೀನುದಾರರು ಮನಮುಟ್ಟಿ ಬಯಸುವುದೂ,

[illegible]ಗಳನ್ನು ಕೇಳುವ ಈ ನಿರಶನವಾದಿಗಳ ವರ್ತನೆಯನ್ನು ನಿರ್ದಾಕ್ಷಿಣ್ಯವಾಗಿ ಖಂಡಿಸಬೇಕು' ಎಂದು ಹೇಳಿ ಸುಧೀರಕುಮಾರ [illegible]ಮಜುಮದಾರ ಮತ್ತು ಇನ್ನಿತರ ದುಃಖರನ್ನು ಅವರು ಅನ್ನಬೇಡವೆಂದು ಹೇಳಿ ಕುಳಿತುದ[illegible]

ವೆಂಬುದು,—ಮೊದಲು ಗುರುಹಿರಿಯರಿಗೂ, ಅಧಿಕಾರಿಗಳಿಗೂ, ಧರ್ಮಕ್ಕೂ ವಿಧೇಯರಾಗಿರುವುದರಿಂದಲೇ, ನಂತರ ಬರಬಹುದು ಈಗ ಈ ವಿಭಾಗದಲ್ಲಿ, ಅಪೂರ್ಣನಾದರೂ—ಒಬ್ಬನೇ ಒಬ್ಬ ಬಾಣಾಕ್ಷನಾಗಿ ನಾನೇ ಇರುವೆನು. ಅದು ಕಾರಣವೇ ಆ ಅಧಿಕಾರವನ್ನು ನಾನೊಬ್ಬನೇ ಇಟ್ಟುಕೊಂಡಿರುವ ಪರಿಮಿತಿಗೆ ತಂದಿರುವೆನು ಅದರಿಂದ ಪದೇ ಪದೇ ಉಂಟಾಗುವ ತಪ್ಪುಗಳನ್ನೂ ಅನರ್ಥವನ್ನೂ ಅದಷ್ಟು ಕಡಿಮೆಮಾಡಲು ನನ್ನ ಈ ನಿರ್ಧಾರವು ಅವಶ್ಯವಾದುದಾಗಿದೆ ಆದರೆ, ಇದನ್ನು ನನ್ನ ಬಂಧುಗಳಾದ ಇತರ ಕೊಂಗ್ರೆಸ್ ಕೆಲಸಗಾರರಿಗೆ ಖಚಿತ ಪಡಿಸಲು ನನ್ನಿಂದಾಗಲಿಲ್ಲ ಶಾಸನಭಂಗ ಚಳವಳಿವು ಏಕೆ ಸಫಲವಾಗದೆ ಹೋಯಿತೆಂಬುದನ್ನು ನಾನು ನನ್ನ ಪಾಟ್ನಾ ಪ್ರಕಟಣೆಯಲ್ಲಿ ಸ್ಪಷ್ಟೀಕರಿಸಿರುವೆನು ನಾವು ಪೂರ್ಣ ಅಹಿಂಸಾವ್ರತಬದ್ಧರಾಗಿದ್ದರೆ ಸರಕಾರದ ಲಕ್ಷ್ಯವನ್ನು ನಮ್ಮ ಕಡೆಗೆ ಸೆಳೆಯಲು ಸಮರ್ಥರಾಗುತಿದ್ದೆವು ನಾವು ಹಿಂಸಾಕೃತ್ಯಗಳಲ್ಲಿ ನಂಬದಿದ್ದರೂ—ಅನೇಕ ವೇಳೆ ಅನೇಕರು ತಮ್ಮ ಹೃದಯದಲ್ಲಿಯೂ ಭಯೋತ್ಪಾದಕರಂತೆ ಹಿಂಸೆಯ ಅಗ್ನಿಯಿದೆಯೆಂಬುದನ್ನು ವ್ಯಕ್ತಪಡಿಸಿರುವರು ಅಹಿಂಸಾ ವ್ರತಪಾಲನೆಯಲ್ಲಿ ಹಲವರು ಮುಂದಡಿಯಿಟ್ಟಿರುವರೆಂದೂ ಧೈರ್ಯ ಶೌರ್ಯ—ಸ್ಥೈರಣೆಗಳನ್ನು ಪ್ರದರ್ಶಿಸಿರುವರೆಂದೂ ಒಪ್ಪುತ್ತೇನೆ ಆದರೆ, ಇಲ್ಲಿ ನಾನು ಹೇಳಲಿಚ್ಛಿಸುವುದೇನೆಂದರೆ,—ಅಬಾಧಿತವಾದ ನಿಷ್ಕಳಂಕವಾದ ಕಾಯಾ—ವಾಚಾ—ಮನಸಾ ಶುದ್ಧವಾದ ವ್ರತಪಾಲನೆಯು ನಮ್ಮಿಂದಾದುದಿಲ್ಲ ಅಹಿಂಸೆಯ ಮೂಲಕ ಸ್ವಾತಂತ್ರ್ಯವನ್ನು ಹೇಗೆ ಹೊಂದಬಹುದೆಂಬುದನ್ನು ಭಯೋತ್ಪಾದಕರಿಗೂ ಸರಕಾರಕ್ಕೂ ತೋರಿಸುವುದೇ ನನ್ನ ಈಗಿನ ಪ್ರಾಮುಖ್ಯ ಕರ್ತವ್ಯ.''

'ಸತ್ಯವೇ ನನ್ನ ದೇವರು.'

"ನನ್ನ ಜೀವನವು ಸತ್ಯಶೋಧನೆಗಾಗಿ ಅರ್ಪಿಸಲಾದುದು ಈ ಶೋಧಕ್ಕಾಗಿ ನನಗೆ ಪೂರ್ಣವಾಗಿ ಕಾರ್ಯ ಸ್ವಾತಂತ್ರ್ಯಬೇಕು ಸತ್ಯವೇ ದೇವರು ಆತನನ್ನು ಅಹಿಂಸಾ ವ್ರತಪಾಲನೆಯಿಂದ ಮಾತ್ರ ಶೋಧಿಸಲು ಸಾಧ್ಯ ನಾನು ರಾಜಕೀಯ ಕ್ಷೇತ್ರಕ್ಕೆ ಈ ಉದ್ದೇಶವಾಗಿಯೇ ಪ್ರವೇಶಿಸಿರುವೆನು ನನ್ನ ಇತರ ಬಂಧುಗಳಿಗೆ ನಾನು ಇದನ್ನು ಖಚಿತ ಪಡಿಸಲಾರೆನಾದರೆ,—(ನಾನು ಅವರಿಗೆ ಇಂದು ತಿಳಿಸಲಿಚ್ಛಿಸಿದುದನ್ನು ಅವರು ಇನ್ನೊಂದು ದಿನವಾದರೂ ತಿಳಿಯಲಾರರೆಂದು ಅಥವಾ ನನ್ನ ಮೂಲಕವೇ ದೇವರು ಕಾರ್ಯ ಅಥವಾ ನುಡಿಯಿಂದ ಅವರಿಗೆ ತಿಳಿಸದಿರನೆಂಬ ಭರವಸೆಯಿಂದ,) ನಾನು ಏಕಾಕಿಯಾಗಿಯೇ ಕಾರ್ಯಸಾಧನೆ ಮಾಡಬೇಕಾದುದು ಸ್ಪಷ್ಟ'

ಪೂರ್ಣ ಸ್ವಾತಂತ್ರ್ಯ

"ಪೂರ್ಣ ಸ್ವಾತಂತ್ರ್ಯ" ಎಂಬುದರಿಂದ ನಾನು, ಪೂರ್ಣವಾಗಿ ಅದರ ಇಂಗ್ಲೀಷು ಪದದ ಇಂಗ್ಲಿಷು ಅರ್ಥದಲ್ಲಿ ಪೂರ್ಣ ಸ್ವರಾಜ್ಯವನ್ನು ಬಯಸುವವನು ಪೂರ್ಣ ಸ್ವರಾಜ್ಯವೆಂಬ ಪದವು ಬಹು ವ್ಯಾಪಕಾರ್ಥವುಳ್ಳುದು. ಪೂರ್ಣ ಸ್ವರಾಜ್ಯದ ವಿಷಯವಾಗಿಯೂ ನನಗೂ ಇತರರಿಗೂ ಅಭಿಪ್ರಾಯಭೇದವಿದ್ದೇ ಇರುವುದು

ಕೆಂಪಂಗಿಗಳು.

'ನಾನು ಯಾವುದಾದರೂ ಒಂದು ಹಿಂದೀ ಗ್ರಾಮದಲ್ಲಿ, (ಇಚ್ಛೆಕವಾಗಿ ಗಡಿನಾಡಿನಲ್ಲಿ) ಇದ್ದು ಕೆಲಸಮಾಡಲು ಇಚ್ಛಿಸುವೆನು ಖುದಾಯಿ ಖಿದಮತಗಾರರು (ಕೆಂಪಂಗಿಗಳು) ನಿಜವಾಗಿಯೂ ಅಹಿಂಸಾ ವ್ರತಪಾಲಕರೂ, ಹಿಂದೂ ಮುಸ್ಲಿಂ ಐಕ್ಯ ಸಾಧಕರೂ ಆಗಿರುವುದಾದರೆ ಅವರ ಮೂಲಕವೇ ಈ ಭೂಮಿಯಲ್ಲಿ ನಾವು ಉದ್ದೇಶಿಸಿರುವ ಎರಡು ಪ್ರಾಮುಖ್ಯ ಮಹಾಕಾರ್ಯಗಳು ಯಶಸ್ವಿಯಾಗಿ ನೆರವೇರುವುದನ್ನು ನಾವು ನೋಡಲಿರುವೆವು ಆಗ ನಾವು ಭಯಪಡುತ್ತಿರುವ ಅಫಘಾನರ ದಾಳಿಯೂ ಕನಸಿನ ಮಾತಾಗಿ ಉಳಿಯುವುದು ಅವರು (ಕೆಂಪಂಗಿಗಳು) ಅಹಿಂಸಾ ವ್ರತ ಮತ್ತು ಹಿಂದೂಮುಸ್ಲಿಂ ಐಕ್ಯದ ಸಾಧಕರಾಗಿರುವರೆಂಬುದನ್ನು ಪುಟಕ್ಕಿಟ್ಟು ನೋಡಿ ಪರೀಕ್ಷಿಸುವ ಆತುರವುಳ್ಳವನಾಗಿದ್ದೇನೆ

'ಕೊಂಗ್ರೆಸ್ ಪಂಗಡದಲ್ಲಿ ಅಪಾವಿತ್ರ್ಯದ ಕಳಂಕವಿರುವ ಕುರಿತಾಗಿ ನಾನು ಹಿಂದೆ ಸ್ಪಷ್ಟವಾಗಿ ಹೇಳಿದ್ದೇನೆ ಆದರೂ ಭಾರತವರ್ಷದ ಏಕಮಾತ್ರ ಅಧಿಕಾರಯುಕ್ತ ಹಾಗೂ ಸಬಲವಾದ ಪ್ರಾತಿನಿಧ್ಯವೇ ಕೊಂಗ್ರೆಸು ಆಗಿದೆಯೆಂದು ನನ್ನ ಅಭಿಪ್ರಾಯ ಅದರ ಉಗಮದಿಂದ ಅದು ಇಂದಿನ ತನಕ ಅಬಾಧಿತವಾದ ಘನವಾದ ತ್ಯಾಗಮಯ ಸೇವೆಯ ಸ್ವರ್ಪಸತ್ತ ಬಂದಿದೆ ಯಾವ ದೇಶವಾದರೂ ಗೌರವ ಪಡತಕ್ಕ ಗೌರವಾಸ್ಪಿತ ತ್ಯಾಗದ ಸೇವೆಯ ದಾಖಲೆಯು ಅದರದು ಇಂದೂ ಅದರಲ್ಲಿ ನಿಷ್ಕಳಂಕ ಪವಿತ್ರಾತ್ಮರಾದ ಸ್ತ್ರೀ ಪುರುಷರಿಲ್ಲದಿಲ್ಲ ಇಂತಹ ಪ್ರಬಲ ಸಂಸ್ಥೆಯನ್ನು ನಾನು ಆತ್ಮವೇದನೆಯಿಂದಲೇ ಇಂದು ತೊಲಗುವವನಾಗಿದ್ದೇನೆ ಆದರೆ, ನಾನು ಅದರೊಳಗಿನ ಪದಕ್ಕಿಂತ ಹೊರಗಿದ್ದೇ ಹೆಚ್ಚಿನ ಸೇವೆಯನ್ನು ಸಲಿಸಬಲ್ಲೆನೆಂಬ ಸಮಾಧಾನ

ತಿದ್ದುಪಡಿಗಳ ಸೂಚನೆ

ಕೊಂಗ್ರೆಸ್ಸಿಗೆ ನಾನು ಸೂಚಿಸುವ ತಿದ್ದುಪಡಿಗಳು ಇವು ಕೆಲವು ನ್ಯಾಯವಾದ ಮತ್ತು ಶಾಂತವಾದ ಎಂಬುದರ ಬದಲಿಗೆ ಸತ್ಯಪೂರ್ಣ ಮತ್ತು ಅಹಿಂಸಾಪೂರ್ಣ ಎಂದಿರಬೇಕು ಕೊಂಗ್ರೆಸ್‌ವಾಲರ ನಿಜವಾಗಿಯೂ ಸತ್ಯ ಅಹಿಂಸೆಗಳಲ್ಲಿ ನಂಬಿಗೆ ಇರುವವರಾದರೆ ಅವರಿಗೆ ಈ ತಿದ್ದುಪಡಿಯನ್ನು ಸ್ವೀಕರಿಸಲು ಆಕ್ಷೇಪವಿಲ್ಲವಷ್ಟೆ ಎರಡನೆಯದಾಗಿ ಮತದಾನದ ಹಕ್ಕಿನ ವಿಚಾರ ಇದು ನಾಲ್ಕಾಣೆ ತೆತ್ತು ಸದಸ್ಯನಾಗುತ್ತಲೇ ಬರುವ ಬದಲಾಗಿ, ೧೫ ನಂಬರಿನ ೮೦೦೦ ಅಡಿ ನೂಲನ್ನು ಕಾಂಗ್ರೆಸ್ ಡಿಪೋವಿಗೆ ಪ್ರತಿ ತಿಂಗಳಲ್ಲೂ ತಂದೊಪ್ಪಿಸುವವರಿಗೆ ಮಾತ್ರ ಕೊಡಬೇಕು ದಿನಕ್ಕೆ ಅರ್ಧ ತಾಸಿನಷ್ಟು ಜನರು ನೂಲಲೇ ಬೇಕು ನಾವು ನಮ್ಮ ಜನಸಾಮಾನ್ಯದ ಸೇವಕರಹುದಾದರೆ ಅವರಿಗಾಗಿ ನೂಲಲು ಗೌರವ ಪಡದಿರಲಾರೆವು ದಿವಂಗತ ಮೌಲಾನಾ ಮಹಮ್ಮದಾಲಿಯವರು ಹೇಳುತ್ತಿದ್ದುದನ್ನು ನಿಮ್ಮ ಸ್ಮರಣೆಗೆ ತರಲಿಚ್ಛಿಸುತ್ತೇನೆ "ಪಾಶವಿಕ ಶಕ್ತಿಯ ಕುರುಹು ಖಡ್ಗವು ಹೇಗೋ ಹಾಗೆ ಚರಕ ಅಥವಾ ತಕ್ಲಿಯು ಅಹಿಂಸೆ, ಸೇವೆ, ದೈನ್ಯಗಳ ಚಿಹ್ನೆ' ವೆಂದು ಅವರನ್ನುತ್ತಿದ್ದರು ಆಗ, ರಾಷ್ಟ್ರೀಯ ಧ್ವಜದಲ್ಲೊಂದಂಶವಾಗಿಯೂ ಚರಕವು ಸ್ವೀಕರಿಸಲ್ಪಟ್ಟಿತು ಪ್ರತಿಯೊಂದು ಗೃಹದಲ್ಲಿಯೂ ಚರಕವು ಗಾನ ಮಾಡುವುದೆಂದು ಹಾಗೆ ಮಾಡಲಾಯಿತು ಚರಕ ಸ ದೇಶದಲ್ಲಿ ಕೊಂಗ್ರೆಸ್‌ವಾಲರಿಗೆ ನಂಬಿಗೆಯಿಲ್ಲವಾದರೆ ರಾಷ್ಟ್ರಧ್ವಜದಿಂದದನ್ನು ಅಳಿಸಬೇಕು, ಖದ್ದರಿನ ವಿಷಯವೂ ಹಾಗೆಯೇ ಖಾದಿ ನಿಬಂಧನೆಯನ್ನು ಉದ್ದೇಶದಿಂದ ಉಲ್ಲಂಘಿಸಿ ನಡೆಯುವುದು ಅಥವಾ ವಂಚನೆಯಿಂದ ನಡೆಯುವುದು ಅಸಹನೀಯವಾಗಿದೆ (ಆರು ತಿಂಗಳಿಂದಾದರೂ ನಿತ್ಯವೂ ಖಾದಿ ಧರಿಸುವವರೇ ಕೊಂಗ್ರೆಸ್ ಚುನಾವಣೆಗಳಲ್ಲಿ ವೋಟು ಕೊಡಲರ್ಹರೆಂಬುದು ಮೂರನೆಯ ತಿದ್ದುಪಡಿ ಡೆಲಿಗೇಟರುಗಳ ಸಂಖ್ಯೆಯನ್ನು ೬ ಸಾವಿರದಿಂದ ೧ ಸಾವಿರಕ್ಕಿಳಿಸಬೇಕೆಂದು ನಾಲ್ಕನೆಯ ಸೂಚನೆ)'

"ನಾನು ಕೆಲವು ಮುಖ್ಯ ತಿದ್ದುಪಡಿಗಳನ್ನು ಮಾತ್ರ ಮುಂದಿರಿಸಿರುವೆನು ಇವುಗಳನ್ನು ಸ್ಪಷ್ಟೀಕರಿಸುವ ಇನ್ನಿತರ ಠರಾವುಗಳು ಬರಲಿವೆ ಕೊಂಗ್ರೆಸ್‌ವಾಲರು ಅವುಗಳನ್ನು ಪರ್ಯಾಲೋಚಿಸಿ ತಮ್ಮ ಅಭಿಪ್ರಾಯಗಳನ್ನು ಸ್ಪಷ್ಟೀಕರಿಸಲಿ"

ಅನುಕ್ರಮಣಿಕೆ.

ಅಗ್ರಲೇಖ
ಭಯೋತ್ಪಾದಕ ಚಳವಳಿಗೆ ಚಿಕಿತ್ಸೆಯೇನು? ೪
ಸ್ಫುಟವಿಚಾರಗಳು ,,
ದುಃಖದಮೂಲೆಯಿಂದ ೧೦
ನೋಟಗಳು ೮
ವರ್ತಮಾನ ಸಂಗ್ರಹ ,,
ವಿವಿಧ ಸಮಾಚಾರಗಳು ೧೧
ಪತ್ರವ್ಯವಹಾರ ೧೪
ನೀರು! ೨
ಮಂಗಳೂರು ೯
ಧ್ಯಾನ ೬
ಪ್ರಾಥಮಿಕ ಶಿಕ್ಷಣನೀತಿ ೫
ಟೆಂಕಪಟ್ಟಿಗೆಗಳ ಮೇಲಿನ ಸುಂಕ ೭

ಸ್ವದೇಶಾಭಿಮಾನಿ.

...೧ನೇ ಶುಕ್ರವಾರ ಸಪ್ಟಂಬರ ೧೯೩೪

ಭಯೋತ್ಪಾದಕ ಚಳವಳಿಗೆ ಚಿಕಿತ್ಸೆಯೇನು?

ಇಂದಿನ ಅಶಾಂತ ಭಾರತವರ್ಷದಲ್ಲಿ ಜನತೆಯ ಹಾಗೂ ಸರಕಾರದ ಚಿತ್ತ ಸ್ವಾಸ್ಥ್ಯವನ್ನು ವಿಶೇಷವಾಗಿ ಕದಡಿಸಿದ ಸಮಸ್ಯೆಯು ಬಂಗಾಳದ ಭಯೋತ್ಪಾದಕ ಚಳವಳಿ. ಇದು, ವಂಗವಿಭಜನೆಯ ಕಾಲದಿಂದಲೂ ತಲೆಯೆತ್ತಿದ್ದು, ಇಂದಿನ ತನಕ, ಎಲ್ಲ ಬಗೆಯ ಯತ್ನಗಳನ್ನು ಮೀರಿ ಉಜ್ವಲಿಸುತ್ತಲೇ ಇದೆ. 'ಉಷ್ಣಮುಷ್ಣೇನ ಶೀತಲಃ' ಎಂಬ ತತ್ವವನ್ನನುಸರಿಸಿ ಸರಕಾರವು, ಭಯೋತ್ಪಾದಕರನ್ನು ಭಯೋತ್ಪಾದಕ ಕಾನೂನುಗಳಿಂದಲೇ ನಿರ್ಮೂಲಿಸಬೇಕೆಂದು ಉಗ್ರ ಶಾಸನಗಳನ್ನು ಒಂದರ ಮೇಲೊಂದರಂತೆ ಜ್ಯಾರಿಗೆ ತರುತ್ತಿದೆ. ಪೋಲಿಸ ನುಡಿಯು ಕೆಲವೊಂದು ಪ್ರಸಂಗಗಳಲ್ಲಿ ನಿಜವೆಂದು ಕಂಡಿರಬಹುದಾದರೂ ಜನಾಂಗವೆಂಬ ಮಹಾಕಾಯದ ಚಲನವಲನಗಳನ್ನು ಕ್ರಮಪಡಿಸುವುದರಲ್ಲಿಯೂ ಅದೇ ತತ್ವವನ್ನು ಎಲ್ಲ ಕಾಲಗಳಲ್ಲಿಯೂ ಹೊಂದಿಸುವುದರಿಂದ ಸತ್ಪರಿಣಾಮವುಂಟಾದೀತೆಂದು ಹೇಳಲಾಗುವುದಿಲ್ಲ. ಬೆಂಕಿಯನ್ನು ನಂದಿಸಲ್ಕು ಬೆಂಕಿಯನ್ನುಪಯೋಗಿಸುವುದರಿಂದ ನಿರೀಕ್ಷಿತ ಫಲವು ದೊರೆ...

ಮಾನವನ ಸ್ವಭಾವವು ಸುತ್ತುಮುತ್ತಲಿನ ವಾತಾವರಣದ ಮೇಲೆಯೇ ಬಹುಮಟ್ಟಿಗೆ ಅವಲಂಬಿಸಿದೆ. ಸ್ವಭಾವತಃ ಒಬ್ಬನು ಹಿಂಸಾಪ್ರಿಯನಿರಬಹುದು. 'ಆದರೆ ಶಾಂತಿಪಾಠವು ಆತನನ್ನು ತಿದ್ದಬಲ್ಲುದು. ಕಲ್ಪಿತ ಅನ್ಯಾಯಗಳಾಗಲಿ ನಿಜವಾದುದಾಗಲಿ,—ತನಗೊಬ್ಬನು ಅನ್ಯಾಯಮಾಡಿರುವನೆಂದು ತಿಳಿದ ಮೇಲೆಯೇ ಒಬ್ಬನು ಪ್ರತೀಕಾರದ ಭಾವನೆಯಿಂದ ಪ್ರೇರಿತನಾಗಿ ಹಿಂಸಾಕೃತಿಯ ಕಡೆಗೊಲಿಯುವನು. ಅಂತಹವರನ್ನು ಸದ್ದಾರಿಗೆ ತರಲು ಯತ್ನಿಸುವವರು, ಮತಿಗೆಡದೆ ವರ್ತಿಸಿದರೆ ಮಾತ್ರ ಅವರ ಉದ್ಧಾರವಾಗುವ ಸಂಭವವಿದೆ.

ಕಳೆದ ವಾರ ಕಲ್ಕತ್ತೆಯಲ್ಲಿ, ಭಯೋತ್ಪಾದಕ ಚಳವಳಿಯ ನಿರ್ಮೂಲಕ್ಕಾಗಿ ಯಾವ ಕಾರ್ಯಕ್ರಮವನ್ನು ಕೈಗೊಳ್ಳಬಹುದೆಂದು ಆಲೋಚಿಸಲು ಸೇರಿದ ಪರಿಷತ್ತು, ಉತ್ಸಾಹದ ಭರದಲ್ಲಿ ಅವಿಚಾರದ ಕೆಲವು ಠರಾವುಗಳನ್ನು ಮಾಡಿಬಿಟ್ಟಿದೆ. ಸರಕಾರದ ನೂತನ ಶಾಸನಗಳೇನನ್ನೂ ಕುರಿತು ಈ ಪರಿಷತ್ತು ಟೀಕಿಸಹೋಗದಿದ್ದರೂ ಕಾರ್ಯರೂಪಕ್ಕೆ ತರಲುಬಾರದಷ್ಟು ಅಸಾಧ್ಯ ಸೂಚನೆಗಳನ್ನು ಮಾಡಿಬಿಟ್ಟಿದೆ. ಪ್ರಚಲಿತ ಶಿಕ್ಷಣ ಪದ್ಧತಿಯು ಧಾರ್ಮಿಕ—ನೈತಿಕ ಕಟ್ಟಳೆಗಳ ತಳಹದಿಯ ಮೇಲೆ ರೂಪಿಸಲ್ಪಟ್ಟಂತಹುದಲ್ಲವೆಂದೂ, ಅದರಿಂದಲೇ ಈ ಭಯೋತ್ಪಾದಕ ಚಳವಳಿವು ಎದ್ದುಬಂದಿದೆಯೆಂದೂ ಸ್ವಾಗತಾಧ್ಯಕ್ಷ ಪಿ. ಎನ್. ಘೋಷರವರು ಉದ್ಘೋಷಿಸಿರುವರು. ಇದರಲ್ಲಿ ಎಷ್ಟು ತಥ್ಯಾಂಶವಿದೆಯೊ ಹೇಳಬರುವುದಿಲ್ಲ. ಈಗಣ ಶಿಕ್ಷಣ ಪದ್ಧತಿಯ ಯುಕ್ತಾಯುಕ್ತತೆಗಳ ವಿಮರ್ಶೆಯಂತಿರಲಿ. ಬಂಗಾಳದಲ್ಲಿ ಕೊಡಲ್ಪಡುವಂತಹ ಶಿಕ್ಷಣವೇ ಇತರ ಪ್ರಾಂತ್ಯಗಳಲ್ಲೂ ಕೊಡಲ್ಪಡುತ್ತಿದೆಯಷ್ಟೆ. ಆದರೆ, ಬಂಗಾಳಕ್ಕೆ ಮಾತ್ರ 'ಬೋಂಬಿನ ಬಂಗಾಳ'ವೆಂಬ ದುರ್ನಾಮವೇಕೆ ಬಂತು? ಅದೇಕೆ,—ಧಾರ್ಮಿಕ ಅಂಧಶ್ರದ್ಧೆಯೇ ಭಯೋತ್ಪಾದಕರನ್ನು ಅಕೃತ್ಯಗಳಿಗೆ ಪ್ರೇರೇಪಿಸುತ್ತಿದೆಯೆಂದೂ, ಹಾಗೆ 'ದೇಶಸೇವೆ' ಎಂಬ ಹೆಸರಲ್ಲಿ ಪ್ರಾಣಬಲಿ ಕೊಡುವುದರಲ್ಲಿ ಅವರು ಗೌರವಪಡುತ್ತಿರುವರೆಂದೂ ಎನ್ನಬಹುದು. 'ಧಾರ್ಮಿಕ'ವಲ್ಲದ ಶಿಕ್ಷಣವು ಚಳವಳಿಗೆ ಅನುಕೂಲವಾಗುವ ಬದಲಾಗಿ ಪ್ರತಿಕೂಲವಾಗಿದೆಯೆಂದೇ ಹೇಳಬಹುದು. ಹಾಗಾದರೆ, ಈ ಚಳವಳಿವು ಹತೋಟಿಗೆ ತರಲಾಗದಷ್ಟು ಮೀರಿಹೋಗಲು ಕಾರಣವೇನು?—

—ಅದೇನೂ ವ್ಯಾಪಕಾರ್ಥವುಳ್ಳ, ನಿಗೂಢವಾದ ಸಮಸ್ಯೆಯಾಗಿಲ್ಲ;—ದಾರಿದ್ರ್ಯ ಮತ್ತು ರಾಜಕೀಯ ಸ್ವಾತಂತ್ರ್ಯದ ತೃಷೆ! ನಿರುದ್ಯೋಗ ಸಮಸ್ಯೆಗೆ ಮಾತ್ರ ಶ್ರೀಮಾನ್ ಘೋಷರು ಪ್ರಾಮುಖ್ಯತೆಯನ್ನು ಕೊಟ್ಟು ಆಡಿರುವರು. ಪ್ರತಿಯೊಬ್ಬ ಬಂಗಾಳಿ ಯುವಕನಿಗೆ ಉದ್ಯೋಗ ದೊರಕಿಸಿ ಕೊಡುವಲ್ಲಿ ಸರಕಾರವೂ ಜನತೆಯೂ ಸಾಧಿಸುವುದಾದರೆ ಅದರಿಂದ ಒಳ್ಳೆಯ ಫಲವಿದೆ. ಪರಂತು, ಘೋಷರೆಂದಂತೆ 'ಬಂಗಾಳಿಗಳಿಗೇ ಬಂಗಾಳ'ವೆಂಬ ತತ್ವವನ್ನನುಸರಿಸುವುದರಲ್ಲಿ ಹುರುಳಿಲ್ಲ. ಭಾಷಣದ ಆವೇಶ ಭರದಲ್ಲಿ ಘೋಷರು "ಇತರ ಪ್ರಾಂತ್ಯಗಳು ಬಂಗಾಳದ ಸತ್ವವನ್ನು ಹೀರುತ್ತ ಬಂಗಾಳಿಗಳಿಗೆ ಮಾತ್ರ ತಮ್ಮ ಪ್ರಾಂತ್ಯಗಳಿಂದ ದೂರವಿರಿಸಿರುವರು" ಎಂದು ಆಡಿದುದು ಮಾತ್ರ ಶುದ್ಧ ಅವಿವೇಕತನವಾಗಿದೆ. ಇದರಿಂದ "ಪ್ರಾಂತಿಕ ದ್ವೇಷ"ವನ್ನುಜ್ವಲಿಸಿದಂತಾಗುವುದು. 'ಪ್ರಾಂತಿಕತನ'ವೇ-ಭಯೋತ್ಪಾದಕ ಚಳವಳಿದ ವಿಸ್ತರಣದ ಹಲವು ಕಾರಣಗಳಲ್ಲಿ ಒಂದೆನ್ನಬಹುದು. ಬ್ರಿಟಿಷ್ ಆಡಳಿತದ ಆರಂಭದಲ್ಲಿ ಆಂಗ್ಲೇಯವೆನಿಸಿದ ಸಕಲವನ್ನು ಮೆಚ್ಚಿ ಸ್ವಾಗತೀಕರಿಸಿದವರಲ್ಲಿ ಮೊದಲಿಗರಾದ ಬಂಗಾಳಿಗಳು ಬ್ರಿಟಿಷರ ದ್ವೇಷವನ್ನು ಸಾಧಿಸುವುದರಲ್ಲಿಯೂ ಮೊದಲಿಗರಾಗಿ ಮುಂದೆ ಬಂದು, ತಮ್ಮ ಪ್ರಾಂತ್ಯದ ಈ ಚಳವಳಿವೇ ಹಿಂದೂದೇಶವನ್ನು ಸ್ವತಂತ್ರವನ್ನಾಗಿ ಮಾಡಬಲ್ಲುದೆಂದು ನೆನೆದಿರುವಷ್ಟು ಮೂರ್ಖರಾಗಿರುವರು. ಹಿಂದೂದೇಶದ ವಿಸ್ತಾರ, ಭಾಷೆಗಳು, ಜನರು, ಪಂಗಡಗಳು, ರೀತಿರಿವಾಜುಗಳು, ನಡತೆ, ರಾಜಕೀಯ ಅಭಿಪ್ರಾಯಗಳು ಇವೆಲ್ಲವನ್ನೂ ಅವರು ನೆನೆದರೆ,—ಕೆಲಮಂದಿ ನಿರಪರಾಧಿ ಅಧೀಸರರನ್ನು ಕೊಲ್ಲುವುದರಿಂದ ಕೆಡುಕಲ್ಲದೆ ಒಳಿತಿಲ್ಲವೆಂಬುದನ್ನು ಮನಗಾಣದಿರರು. ಆದರೆ, ಇಂದು ನಮ್ಮ ದುರ್ಭಾಗ್ಯದಿಂದ ಅವರು ಇನ್ನೂ ಬೋಂಬು ಉಪಾಸಕರಾಗಿಯೇ ಇರುವರು.

ನಾವು ಹೇಳಿದಂತೆ ದಾರಿದ್ರ್ಯ ಮತ್ತು ರಾಜಕೀಯ ಸ್ವಾತಂತ್ರ್ಯ ವಿಹೀನತೆ ಇವುಗಳೇ ಭಯೋತ್ಪಾದಕ ಚಳವಳಿವು ದೃಢವಾಗುವಂತೆ ಮಾಡಿವೆ. ಕಠಿಣ ಶಾಸನಗಳು ಅದನ್ನು ಮತ್ತಷ್ಟು ವಿಸ್ತರಿಸುತ್ತಿದೆ. ಈ ಕಾಲದಲ್ಲಿ ಬಂಗಾಳಕ್ಕೆ ಇತರ ಪ್ರಾಂತ್ಯಗಳಷ್ಟು ಹಕ್ಕು ಬಾಧ್ಯತೆಗಳು ದೊರೆಯಬಾರದೆಂದು ಕಲ್ಕತ್ತೆಯ ಯುರೋಪೀಯರೂ ಸಾಧಿಸುವುದೂ, ಸಾಮಾಜಿಕ-ಆರ್ಥಿಕ ಉನ್ನತಿಸ್ಥಾನಗಳಿಂದ ಬಂಗಾಳದ ಜವಿಾನದಾರರು ಮನಮುಟ್ಟಿ ಬಯಸುವುದೂ, ಸರಕಾರದ ಕಾರ್ಯವನ್ನು ಕಷ್ಟತಮವನ್ನಾಗಿ ಮಾಡುತ್ತಿದೆ. ಸರಕಾರವು ಇವೆರಡರ ನಡುವೆ ಸಿಲುಕಿ, ಎರಡೂ ಕಿವಿಗಳಿಂದ ಅವರಂದುದನ್ನು ನಂಬುವುದಾದರೆ ಸರಕಾರದ ದಾರಿಯು ಸುಗಮವಾಗುವುದಾಗಿ ಹೇಳಲಾಗುವುದಿಲ್ಲ. ಪರಿಷತ್ತಿನವರಾದರೂ ಕೈಗಾರಿಕೆಗಳ ಅಭಿವೃದ್ಧಿ, ಉದ್ಯೋಗ ದೊರಕಿಸಿಕೊಡುವ ಉದ್ಯಮಗಳು, ರಾಜಕೀಯ ಸ್ವಾತಂತ್ರ್ಯದ ಆವಶ್ಯಕತೆ ಇವುಗಳನ್ನು ಸ್ಪಷ್ಟೀಕರಿಸಿ ಸರಕಾರಕ್ಕೆ ಖಚಿತಪಡಿಸಿ, ಸರಕಾರದ ಸಹಕಾರದಿಂದ ಚಳವಳಿವನ್ನು ಕಾದಾಡಬೇಕು. ಪ್ರಾಂತ್ಯದ ಅಭಿವೃದ್ಧಿಯು ಸರ್ವತೋಮುಖವಾಗಿ ಸಾಗುತ್ತಿದ್ದಂತೆ ಭಯೋತ್ಪಾದಕ ಚಳವಳಿವು ತಾನಾಗಿಯೇ ನಿರ್ಮೂಲವಾಗದೆ ಇದ್ದೀತೇ?

ಸ್ಫುಟ ವಿಚಾರಗಳು.

ಕೌನ್ಸಿಲ್ ಚುನಾವಣೆಗೆ ನಾನು ಮುಂದು ತಾನು ಮುಂದೆಂದು

ಹಾರಿ ಬರುವ ಉಮೇದ್ವಾರರು ಇನ್ನಾದರೂ ಪಾಠ ಕಲಿಯಬೇಕಾಗಿದೆ. ಕೆಲವು ವಾರ್ಡುಗಳಲ್ಲಿ ಇಬ್ಬರು ಉಮೇದ್ವಾರರು ನಾನು, ತಾನೆಂದು ಹೋರಾಡಿ, ಭಗೀರಥ ಪ್ರಯತ್ನವನ್ನು ಮಾಡಿ, ಹಲಕೆಲವು ವೋಟುಗಳನ್ನು ಸಂಪಾದಿಸಿ, ಹಣ ವ್ಯಯ ಮಾಡಿ, ಕೊನೆಗೆ, ನೊಮಿನೇಶನ್ ಕಳುಹಿಸುವ ಸಂದಿಗ್ಧ ಸಮಯದಲ್ಲಿ ಪರಸ್ಪರ ಮೈತ್ರಿಭಾವವನ್ನು ತೋರಿ, ತಮ್ಮ ಉಮೇದ್ವಾರಿಕೆಯನ್ನು ಹಿಂತೆಗೆದುದು ಕಂಡುಬರುತ್ತದೆ. ಇವರು ಕಾರ್ಯಾರಂಭದಲ್ಲೇ ಹಿಂದು ಮುಂದಾಲೋಚಿಸುತ್ತಿದ್ದರೆ ಪರಿಶ್ರಮದ ಇಂತಹ ನಿರರ್ಥಕತೆಗೂ ನಿಷ್ಫಲತೆಗೂ ಎಡೆಯುತ್ತೇ? ಸ್ವಸಾಮರ್ಥ್ಯವನ್ನರಿತು ಜಯಾಪಜಯಗಳ ಒಂದು ಅಳತೆಯನ್ನಾದರೂ ಮಾಡಿಕೊಳ್ಳುವುದಾದರೆ, ಈ ರೀತಿಯ ಸ್ಪರ್ಧೆಯ ಪ್ರದರ್ಶನಕ್ಕೆ ಕಾರಣವಿತ್ತೇ?

ಮಂಗಳೂರು ಮುನಿಸಿಪಾಲಿಟಿಯ ಕೌನ್ಸಿಲ್ ಚುನಾವಣೆಯು

ನಗರದಲ್ಲಿ ಗಡಿಬಿಡಿಯನ್ನುಂಟುಮಾಡಲು ಕಾರಣವಾದಂತೆ, ಅದು, ವೋಟರರ ಪಟ್ಟಿಯಲ್ಲಿರುವ ಕುಂದು ಕೊರತೆಗಳನ್ನು ಬಯಲಿಗೆಳೆಯಲೂ ಸಹಕಾರಿಯಾಗಿದೆ. ವೋಟರರ ಕೆಲವು ಪಟ್ಟಿಗಳನ್ನು ತೆಗೆದು ಪರಿಶೀಲಿಸಿದರೆ,—ಮೂರು ನಾಲ್ಕು ವರ್ಷಗಳ ಹಿಂದೆ ಒಂದು ಆಫೀಸಿನಿಂದ ಇನ್ನೊಂದು ಆಫೀಸಿಗೆ ಹೋಗಿ ಉದ್ಯೋಗ ನೋಡುವವರ ಹೆಸರುಗಳೂ, ಮೃತರಾದವರ ಹೆಸರುಗಳೂ ಕಂಡುಬರುವುವು. ಅಲ್ಲದೆ ಕಂದಾಯ ಕೊಡುವ ಕೆಲವು ನಾಗರಿಕರ ಹೆಸರುಗಳು ಆ ಪಟ್ಟಿಗಳಲ್ಲಿರುವುದೂ ಕಂಡುಬರುವುದಿಲ್ಲ. ಇಂತಹ ಅವ್ಯವಸ್ಥೆಗೆ ಕಾರಣವೇನು? ಚುನಾವಣೆಯು ಸಮೀಪಿಸುವ ಮೊದಲು ವೋಟರರ ಶುದ್ಧ ಪಟ್ಟಿಯೊಂದನ್ನು ತಯಾರಿಸಲು ಕಷ್ಟಸಾಧ್ಯವೇ? ಸಂಬಂಧಪಟ್ಟ ಅಧಿಕಾರಿಗಳು ಈ ವಿಷಯಕವಾಗಿ ಸ್ವಲ್ಪ ಗಮನವಿತ್ತು ನಗರಸಭೆಯ ಪ್ರತಿಷ್ಠೆಯನ್ನು ಹೆಚ್ಚಿಸಬಾರದೇಕೆ?

'ಅನ್ನ ಬೇಡ'ವೆನ್ನುವವರಿಗೆ ಒಂದು ವರ್ಷದ ಕಠಿಣ ಸಜೆ

ವಿಧಿಸಿದ್ದಾರೆಂದು ಹಳ್ಳಿಗನೊಬ್ಬನು ಹೇಳಿದರೆ ನಾಗರಿಕರು ನಂಬಲಾರರು. ಆದರೆ ಅಲಿಪುರದಲ್ಲಿನ ಸಬ್ ಡಿವಿಜನಲ್ ಮೆಜಿಸ್ಟ್ರೇಟರು—ಸುಸಂಸ್ಕೃತರು—'ಹಕ್ಕಿನಲ್ಲಿಲ್ಲದ ಅನುಕೂಲತೆಗಳನ್ನು ಕೇಳುವ ಈ ನಿರಶನವಾದಿಗಳ ವರ್ತನೆಯನ್ನು ನಿರ್ದಾಕ್ಷಿಣ್ಯವಾಗಿ ಖಂಡಿಸಬೇಕು' ಎಂದು ಹೇಳಿ ಸುಧೀರಕುಮಾರ ಸಮುಜದಾರ ಮತ್ತು ಇನ್ನಿತರ ಮೂವರನ್ನು ಅವರು ಅನ್ನಬೇಡವೆಂದು ಹೇಳಿ ಕುಳಿತುದಕ್ಕಾಗಿ ಒಂದೊಂದು ವರ್ಷದ ಕಠಿಣ ಸಜೆಗೆ ಗುರಿಪಡಿಸಿದರು. ಈ ಶಿಕ್ಷೆಯು ವಿಧಿಸಲ್ಪಟ್ಟ ಮೇಲೂ ಈ ಕೈದಿಗಳು ತಮ್ಮ ಉಪವಾಸವನ್ನು ಬಿಡಲಿಲ್ಲವೆಂದು ತಿಳಿದಿದ್ದೇವೆ. ಒಂದು ವರ್ಷದ ಕಠಿಣ ಸಜೆಯನ್ನನುಭವಿಸುವುದಕ್ಕಾಗಿಯಾದರೂ ಈ ಕೈದಿಗಳು ಬದುಕಬೇಕೆಂದು ಕಾನೂನಿಲ್ಲವಷ್ಟೆ!

ಶ್ರೀ ಶಿವರಾಮ ಕಾರಂತರು ಹೊಸ ಪಾಠಪಟ್ಟಿಯ ಕುರಿತಾಗಿ

ಬರೆದ ಲೇಖವೊಂದನ್ನು ೧೩ನೇ ಪುಟದಲ್ಲಿ ಪ್ರಕಟಿಸಿರುತ್ತೇವೆ. ಶ್ರೀಯುತರು ಈ ಪಾಠಪಟ್ಟಿಯನ್ನು ಗಾಢವಾಗಿ ವಿಮರ್ಶಿಸಿ, ಇರುವ ದೋಷಲೋಪಗಳಲ್ಲಿ ಕೆಲವನ್ನು ಎತ್ತಿ ತೋರಿಸಿರುವುದು ಶ್ಲಾಘನೀಯವೇ. ಪರಸ್ಪರ ಸಂಬಂಧವಿಲ್ಲದ ವಾಕ್ಯ ಜೋಡಣೆ; ರೂಢಿಯಲ್ಲಿಲ್ಲದ ಶಬ್ದ ಪ್ರಯೋಗ; ತರ್ಜುಮೆಯಲ್ಲಾದ ಕುಂದುಕೊರತೆಗಳು; ಇವು ಹೊಸ ಪಾಠಪಟ್ಟಿಯಲ್ಲಿ ಎಷ್ಟಿವೆಯೆಂದು ತಿಳಿದ ಎಲ್ಲರೂ ಆಲೋಚನೆಗೊಳಗಾಗಿರುವರು. ಶ್ರೀ ಕಾರಂತರು—'ಕಣ್ಮುಚ್ಚಿ ಸೇರಿಸಿರುತ್ತಾರೆ'ಂದು ಒತ್ತಿ ಹೇಳಿರುವುದು ಅಸತ್ಯವೆಂದು ಹೇಳುವುದಾದರೂ ಹೇಗೆ? ಈ ವಿಚಾರವಾಗಿ ನಮ್ಮ ಉಪಾಧ್ಯಾಯ ವರ್ಗವು ತರ್ಕಿಸಿ ತಿಳಿಯಬೇಕಾಗಿದೆ.

'ಅಹಿಂಸಾತ್ಮಕರಾದ ರಾಜಕೀಯ ಕೈದಿಗಳನ್ನು ಬಿಡಿರಿ'—

ಎಂದು ಹಿಂದೀಯರೊಡನೆ ಲಂಡನಿನಿಂದ ಮಿ। ಜೋರ್ಜ್ ಲೇನ್ಸ್‌ಬರಿಯವರೂ ಪ್ರಾರ್ಥಿಸಿರುವರೆಂದು ಪ್ರಕಟವಾಗಿದೆ. ಲೇನ್ಸ್‌ಬರಿಯವರು—'ವೈಸರಾಯರೂ ಇನ್ನಿತರ ಹಿಂದೂ ದೇಶದ ಅಧಿಕಾರಿಗಳೂ ಅಹಿಂಸಾತ್ಮಕರಾದ ರಾಜಕೀಯ ಕೈದಿಗಳನ್ನು ಎಸೆಂಬ್ಲಿಯ ಚುನಾವಣೆಯ ಈ ವೇಳೆಯಲ್ಲಾದರೂ ಬಿಡುಗಡೆ ಮಾಡಿ ಮೈತ್ರಿಭಾವವನ್ನು ಪ್ರದರ್ಶಿಸಲೆಂದು ಹಾರೈಸುತ್ತೇನೆ. ಅದರಲ್ಲೂ, ವಿಚಾರಣೆ ಇಲ್ಲದೆ ಬಂಧನದಲ್ಲಿರುವ ಶ್ರೀ ಶರತ್ಚಂದ್ರ ಬೋಸರಂತಹವರು ಎಸೆಂಬ್ಲಿ ಚುನಾವಣೆಗೆ ನಿಂತಿರುವುದರಿಂದ ವೈಸರಾಯರು ಗಮನಿಸುವರೆಂದು ಆಶಿಸುತ್ತೇನೆ' ಎಂದಿರುವರು. ವೈಸರಾಯರಾದ ಲೋರ್ಡ್ ವಿಲ್ಲಿಂಗ್ಡನ್ನರು ಲೇನ್ಸ್‌ಬರಿಯವರ ಅರಿಕೆಯನ್ನು ಮನ್ನಿಸಿ ದೇಶದ ಪ್ರೀತಿವಾತ್ಸಲ್ಯಗಳಿಗೆ ಪಾತ್ರರಾಗಲೆಂದು ಹಾರೈಸುವುದುಳಿದಿದೆ.

ಮಹಾತ್ಮಾಜೀಯವರು ಕೊಂಗ್ರೆಸ್ಸಿನಲ್ಲೇ ಇರುವರು.

ಅದನ್ನು ಇನ್ನು ಒಂದೆರಡು ತಿಂಗಳುಗಳವರೆಗೆ—ಅಂದರೆ ಮುಂಬಾಯಿಯ ರಾಷ್ಟ್ರೀಯ ಮಹಾಸಭೆಯು ಅಂತ್ಯವಾಗುವ ತನಕ ಬಿಟ್ಟು ಹೊರ ನಿಲ್ಲುವುದಿಲ್ಲವೆಂದು ಅವರು ತಾರೀಕು ೧೭ರಲ್ಲಿ ಕೊಟ್ಟ ಪ್ರಕಟಣೆಯಿಂದ ತಿಳಿದು ದೇಶೀಯರು ಅತ್ಯಾನಂದಿತರಾಗಿರುವರು. ಕೊಂಗ್ರೆಸ್ಸಿನ ಸರ್ವಶಕ್ತಿ ತಾನಾಗಿದ್ದು, ಕೊಂಗ್ರೆಸ್ಸಿನ ನೈಜಸ್ವಭಾವ-ಪ್ರಭಾವಗಳು ಹೊರಹೊಮ್ಮಲು ಪ್ರತಿಬಂಧಕವಾಗಿದೆ;-ತನ್ನ ಆಶಯದಂತೆ ಕೊಂಗ್ರೆಸ್ಸಿನವರು ವರ್ತಿಸಲಿಲ್ಲ—ಎಂಬ ಕಾರಣಗಳನ್ನು ಸೂಚಿಸಿ, ತಾನು ಕೊಂಗ್ರೆಸ್ಸಿನಿಂದ ದೂರವಿರುವುದೇ ಹಿತವೆಂದು ಗಾಂಧಿಜೀಯವರು ಹೇಳಿರುವರು. ಅವರ ಮಾತಿನ ಸತ್ಯತೆಯನ್ನು ಪುಷ್ಟೀಕರಿಸಿ ಶ್ರೀ ವಲ್ಲಭಭಾಯಿ ಪಟೇಲರೂ ಪ್ರಕಟಣೆಯನ್ನು ಕೊಟ್ಟಿರುವರು. ಮಹಾತ್ಮರು ಕೊಂಗ್ರೆಸ್ಸಿನ ಹೊರ ನಿಲ್ಲುವರೆಂದು ದೇಶವು ಭಯಭೀತಿಗೊಳಗಾಗಿರುವುದಾದರೂ, ತನ್ನ ಇಷ್ಟರ ವರೆಗಿನ ಆಚರಣೆಗೆ ಅದು ಪಶ್ಚಾತ್ತಾಪವನ್ನು ಮನದಲ್ಲೇ ಸೂಚಿಸಿ, ಕೊಂಗ್ರೆಸ್ಸಿನ ಮುಂದಿನ ಆಡಳಿತೆಯ ಭಾರವನ್ನು ವಹಿಸಿ ಅನುಭವ ಹೊಂದಬೇಕಾಗಿದೆ.

ಲೋಧ್ರ

ಸುಪ್ರಸವಕ್ಕಾಗಿ ದಿವ್ಯ ಟಾನಿಕ್.

ಸ್ತ್ರೀಯರಿಗೊಂದು ಮಹಾ ವರ.

ಯಾವ ತರದ ಅಥವಾ ಎಲ್ಲಾ ತರದ ಮುಟ್ಟು ದೋಷ, ಮುಟ್ಟಾಗುವುದರಲ್ಲಿ ನೋವು, ಅಕ್ರಮ ತರದ ಮತ್ತು ಮುಟ್ಟಾಗದಿರುವಿಕೆ, ಬಿಳಿ ಸೆರಗು, ಗರ್ಭಕೋಶದ ದೋಷ ಅಶುದ್ಧ ಮುಟ್ಟು, ಬಂಜೆತನ, ಸೂತಿಕಾವಾಯು, ಅಶುದ್ಧರಕ್ತ, ಮೇರೆ ದಾಟಿ ಅಥವಾ ಬೇಕಾದಷ್ಟು ಮುಟ್ಟಾಗದಿರುವುದು, ಸ್ತ್ರೀಯರ ಅಂಗಾಂಗಗಳ ಇನ್ನಿತರ ಅನೇಕಾನೇಕ ರೋಗಗಳುಳ್ಳ ಸ್ತ್ರೀಯರನ್ನು ಈ ಔಷಧಿಯು ಸಂಪೂರ್ಣ ಗುಣಗೊಳಿಸಿರುತ್ತದೆ.

ಲೋಧ್ರ

ಎರಡು ಸೈಜಿನಲ್ಲಿ ದೊರೆಯುತ್ತದೆ ರೂ 8 ಮತ್ತು 1–10–0

ಕೇಸರಿ ಕುಟೀರಂ

ಇಂಡಿಯನ್ ಕೆಮಿಸ್ಟ್ಸ್ ಮತ್ತು ಡ್ರಗಿಸ್ಟ್ಸ್, ಎಗ್ಮೋರ್ ಮದರಾಸು,

ದಕ್ಷಿಣ ಕನ್ನಡ ಮತ್ತು ಕೊಡಗು ದೇಶದ ಏಜಂಡರು,
ಪೊಪ್ಯುಲರ್ ಸ್ಟೋರ್ಸ್, ಮಂಗಳೂರು

"ಸ್ವದೇಶಾಭಿಮಾನಿ"ಯ

ಸಾಹಿತ್ಯಸಂಚಿಕೆ

ತಿಂಗಳಿಗೊಂದರಂತೆ ಹೊರಡುವುದು.
ಡೆಮಿ ¼ ಆಕಾರದ 8 ಪುಟಗಳು.

ವರ್ಷಕ್ಕೆ 96 ಪುಟಗಳ

ಒಂದು ಗ್ರಂಥವೇ ಪುಕ್ಕಟೆಯಾಗಿ ದೊರೆತಂತೆ!

ಪ್ರತಿ ಸಾಹಿತ್ಯ ಸಂಚಿಕೆಯಲ್ಲೂ,
ಕತೆಗಳು, ಕವನಗಳು
ವಿಮರ್ಶೆ, ಜೀವನಚರಿತ್ರೆ
ಸಾಹಿತ್ಯವಿಚಾರ
ಹರಟೆಗಳು

ಪ್ರಸಿದ್ಧ ಲೇಖಕರಿಂದಲೇ ಬರುವುವು.
'ಸ್ವದೇಶಾಭಿಮಾನಿ'ಗೆ ಚಂದಾದಾರರಾಗಿರಿ.

ವಾರ್ಷಿಕ ಚಂದಾ ರೂ. 2 ಮಾತ್ರ,
ಅಂಚೆ ವೆಚ್ಚ ಆಣೆ 13.

ಮೆನೇಜರ್,
ಸ್ವದೇಶಾಭಿಮಾನಿ,
ರಥಬೀದಿ — ಮಂಗಳೂರು.

ಕಿರ್ಲೋಸ್ಕರವು

ಗುಣ-ಬಾಳಿಕೆಗಳ ಸೂಚಕವು.



ಕಿರ್ಲೋಸ್ಕರ ನೆಲಗಡಲೆ ಸುಲಿಯುವ ಯಂತ್ರಗಳನ್ನು ಪ್ರತಿಷ್ಠಿಸುವುದರಿಂದ,—ಅದರ ಖರ್ಚು ಕಡಿಮೆಯಾದರೂ ಅತ್ಯಧಿಕ ಕೆಲಸವು ಪೂರೈಸಲ್ಪಡುವುದೆಂಬ ಭರವಸೆಯಿದೆ ಶಾಸ್ತ್ರೀಯವಾಗಿಯೂ ಪೂರ್ಣತೃಪ್ತಿ ಕೊಡುವಂತೆಯೂ ಅವು ರಚಿಸಲ್ಪಟ್ಟಿವೆ ಕೈಯಿಂದ ಚಲಿಸುವಂತಹದೂ ವಿದ್ಯುಚ್ಛಕ್ತಿಯಿಂದ ಚಲಿಸುವಂತಹದೂ ಎರಡೂ ಬಗೆಯಿದೆ

ಸಚಿತ್ರ ಕೆಟಲಾಗು, ಅಪೇಕ್ಷಿಸಿದ್ದಲ್ಲಿ ಕಳುಹಲಾಗುವುದು

ಕಿರ್ಲೋಸ್ಕರ ಬ್ರದರ್ಸ್ ಲಿಮಿಟೆಡ.

ಕಿರ್ಲೋಸ್ಕರವಾಡಿ, (ಸತಾರಾ.)

ದಿಸ್ಟ್ರಿಬ್ಯೂಟರರು — ಮೆಸರ್ಸ್ ಪೆರ್ರಿ ಎಂಡ್ ಕೊ, ಲಿಮಿಟೆಡ್,
ಮೌಂಟ್ ರೋಡ್ ಮದ್ರಾಸ್

ಚಾತುಕುಟ್ಟಿ ವೈದ್ಯರ

ವಿಶೂಚಿಕಾ ಸಂಹಾರಿ
Vishuchika Samhari
(PILCO)

ಕಾಲರಕ್ಕೆ ದಿವ್ಯಾಷಧಿ! ಉಪಯೋಗಿಸಿದರೆ ಗುಣ ಖಾತ್ರಿ!
ಕ್ರಯ ಡಬ್ಬಿ 1ಕ್ಕೆ ರೂ 1–0–0

ಗುಹ್ಯರೋಗ ನಿವಾರಿಣೀ ತೈಲ
Anti-Venereal Oil
(A V Oil)

ಗುಹ್ಯರೋಗ ನಿವಾರಣೆಗೆ ಆರೋಗ್ಯ ಎಸು ೩ ದಿವಸ, ಕುಟುಂಬ ಪಾರಂಪರ್ಯದ ದ ತಗಲಿದ ರೋಗವು ಗುಣವಾಗುವುದು. ಈರೋಗಿಗಳ ಹೊಟ್ಟೆಯ ಶುದ್ಧಿಗಾಗಿ ಜುಲಾಬಿನ ಮದ್ದಿನಂತೆ ತೆಗೆದುಕೊಳ್ಳಬಹುದು.

8 ಔನ್ಸಿನ ಬಾಟ್ಲಿ 1ಕ್ಕೆ ರೂ 2—8—0

ಕೆ. ವಿ. ಕೃಷ್ಣನ್,
ಕಲ್ಲಾಯಿ, ಮಲಬಾರ್,
ಅಥವಾ
ಬಾಲ್ ಮತ್ತು ಕಂಪೆನಿ, ಕಲ್ಲಿಕೋಟೆ,
ಇಲ್ಲಿ ಸಿಗುವುದು

ಕ್ಷಯಕ್ಷೀಣಾದಿಗಳಿಗೆ

ಚ್ಯವನಪ್ರಾಶಾವಲೇಹ

ಪ್ರಸೂತಿ ರೋಗಾದಿಗಳಿಗೆ

ದಶಮೂಲಾರಿಷ್ಟ.

(ಕಸ್ತೂರಿ ಮಿಶ್ರಣ)

ಸಮಸ್ತ ವಾತರೋಗಗಳಿಗೆ

ಮಹಾನಾರಾಯಣ ತೈಲ.

ಶ್ರೀ ರಾಮಕೃಷ್ಣ ಧರ್ಮವೈದ್ಯಾಶ್ರಮ
ಸಂಘ, ಡೊಂಗರಕೇರಿ ರಸ್ತೆ, ಮಂಗಳೂರು

ಟಿಪ್ಪಣಿ ಸಹಿತ

ಋಗ್ವೇದೀ ಸಂಧ್ಯಾವಂದನೆ.

(ವೈಷ್ಣವರಿಗೆ—ಊರ್ಧ್ವ ಪುಂಡ್ರ—ಮುದ್ರಾಧಾರಣ ವಿಧಿ)
ಸ್ಮಾರ್ತರಿಗೆ—ಭಸ್ಮಧಾರಣ ವಿಧಿ, ಕೂಡಿ)

ಎಂ ನರಸಿಂಗರಾವ್, ಬಿ ಎ, ಎಂ ಎಲ್.
ಇವರಿಂದ ರಚಿತವಾದ
ಪ್ರತಿಪದಾರ್ಥಟೀಕಾ ವಿಧಿಸಹಿತ

ಬೆಲೆ ಆಣೆ 8

(80, 60, 100 ಪ್ರತಿಗಳನ್ನು ಒಮ್ಮೆಲೆ ಪಡೆಯುವವರಿಗೆ ಒಳ್ಳೆಯ ಡಿಸ್ಕೌಂಟು)

ವಿಳಾಸ — **ಶಾರದಾ ಛಾಪಖಾನೆ,**
ರಥಬೀದಿ, ಮಂಗಳೂರು.

ನಮ್ಮ ಸಲಹೆಯೇ ಪ್ರಾಧಾನ್ಯವಾದದ್ದೆಂದು ತಿಳಿಯಬೇಡಿ

ಕಲ್ಲಿಕೋಟೆ ಅಶೋಕ ಆಸ್ಪತ್ರೆಯ ಚೀಫ್ ಮೆಡಿಕಲ್ ಆಫೀಸರರಾದ ಡಾ। ವಿ. ಬಿ ರಾಮನ್ ಎಂ ಆರ್ ಸಿ ಎಸ್ ಇವರು ಬರೆದಿರುವುದನ್ನು ಓದಿ ನೋಡಿ—"ನಾನು ನಿಮ್ಮ ಆಶ್ಚರ್ಯಕರವಾದ ಜೀವಾಮೃತಂ ಟಾನಿಕನ್ನು ನರಗಳಲ್ಲಿ ಬಲಿಕ ಇರಿಕ ಹಸಿವು ಕಡಿಮೆಯಾಗಿರುವುದು ತೂಕವು ಕಡಿಮೆಯಾಗಿರುವುದು, ಇತ್ಯಾದಿ ಪ್ರಾಪ್ತವಾಗಿರುವ ಅನೇಕ ರೋಗಿಗಳಿಗೆ ಕೊಟ್ಟಿರುತ್ತೇನೆ ಅದರ ಫಲಿತಾಂಶಗಳು ಬಹು ತೃಪ್ತಿಕರವಾಗಿದೆ. ಜೀವಾಮೃತವನ್ನು ದೇಹಶಕ್ತಿ ಕುಗ್ಗಿರುವ ಎಲ್ಲಾ ಸಂದರ್ಭಗಳಲ್ಲಿ ಸರ್ವ ಸಾಮಾನ್ಯವಾಗಿ ಉಪಯೋಗಿಸಬಹುದೆಂದು ನಾನು ಮನಃಪೂರ್ವಕವಾಗಿ ಶಿಫಾರಸು ಮಾಡುತ್ತೇನೆ"

ಜೀವಾಮೃತವು

ನರಗಳಿಗೆ ಶಕ್ತಿ ಕೊಡುತ್ತದೆ. ವೀರ್ಯ ವೃದ್ಧಿಮಾಡುತ್ತದೆ. ಹಸಿವು ಹೆಚ್ಚಿಸುತ್ತದೆ. ರಕ್ತ ವೃದ್ಧಿಮಾಡುತ್ತದೆ

ಪಂಡಿತ ಡಿ. ಗೋಪಾಲಾಚಾರ್ಲುರವರ **ಜೀವಾಮೃತವು**

ಎಲ್ಲಾ ಔಷಧ ವ್ಯಾಪಾರಿಗಳಲ್ಲೂ, ಸ್ಟೋರುಗಳಲ್ಲೂ ದೊರೆಯುತ್ತದೆ. (ಸಂಪೂರ್ಣ ವಿವರಗಳಿಗೆ ಇವತ್ತೇ ಬರೆಯಿರಿ)

ಆಯುರ್ವೇದಾಶ್ರಮಂ, ಪೋ. ಬಾಕ್ಸ್ ನಂ ೩೮೭, ಮದ್ರಾಸು.

ಸೋಲ್ ಏಜಂಟರು:- ಸಿಟಿ ಮೆಡಿಕಲ್ ಮತ್ತು ಜನರಲ್ ಏಜನ್ಸಿ, ೯೨ ಚಿಕ್ಕಪೇಟೆ ಬೆಂಗಳೂರು (ಉಡುಪಿ ಹೋಟೆಲ್ ಹತ್ತಿರ)
ದಕ್ಷಿಣ ಕನ್ನಡದ ಏಜಂಟರು— ಪೋಪ್ಯುಲರ್ ಸ್ಟೋರ್ಸ್, ಮಂಗಳೂರು

P No 104

ಸೈಂಟಿಫಿಕ್

ಸ್ವರ್ಣಾಭರಣಗಳು

(ನಿಜವಾದ ಬಂಗಾರಕ್ಕೆ ಬದಲಾಗಿ ಇವು ತಯಾರಿಸಲ್ಪಟ್ಟಿವೆ.)

ಹೈಕೋರ್ಟು ಜಡ್ಜರುಗಳಿಂದಲೂ, ಸರಕಾರದ ಮಂತ್ರಿಗಳಿಂದಲೂ, ಇತರ ಪ್ರಮುಖರಿಂದಲೂ ಕೊಂಡಾಡಲ್ಪಟ್ಟಿವೆ.

ಪತ್ರವ್ಯವಹಾರವನ್ನು ಇಂಗ್ಲಿಷಿನಲ್ಲೇ ಮಾಡಬೇಕು

S.G.B.Co.

ಹೊಸ ಕೆಟಲಾಗು ಧರ್ಮಾರ್ಥ.

ವಿಳಾಸ:-
The Scientific Gold Bangles Co., Ltd.,
Head Office -48, Byragimatam Street,
Post Box No. 208, Madras,

An Advertisement in

'Swadeshabhimani'

Means a sure fortune to you

Ask for Contract Rates.

The Swadeshabhimani office,
Car Street, Mangalore

Preserve Your Wealth by BIRTH-CONTROL

ದೇಶದ ಐಶ್ವರ್ಯವನ್ನು ಮಿತಸಂತತಿಯಿಂದ ಕಾದಿಡಿ.

ಮೂರೇ ಮೂರು ರೂಪಾಯಿಗಳಿಂದ ಸ್ತ್ರೀಯರಿಗೆ ಪ್ರಸವಭಯವನ್ನು ನಿಲ್ಲಿಸುವುದು ಬೇಕಾದಲ್ಲಿ ತಿರಿಗಿ ಭರ್ಗವಾಗುವಂತೆ ಔಷಧವಿದೆ.

ವರ್ಷಕ್ಕೊಂದರಂತೆ ಹೆತ್ತು ತಾಯಿ—ಮಕ್ಕಳು ನರಳದಂತೆ ದೂರ ದೂರ ಮಾಡುವುದು. ಆರೋಗ್ಯಕ್ಕೆ ಹಾನಿಯಿಲ್ಲ.

ವಿಳಾಸ — ಪಂಡಿತ ಕೆ. ಶ್ಯಾಮಸುಂದರ್,
ಆಯುರ್ವೇದ ಫಾರ್, ಕಾರ್ಕಳ, ದ. ಕ.

[N. B.—ಉತ್ತರವನ್ನಪೇಕ್ಷಿಸುವವರು ಒಂದಾಣೆಯ ಸ್ಟ್ಯಾಂಪಿನೊಂದಿಗೆ ಬರೆಯಬೇಕು.]

ಪ್ರಾಥಮಿಕ ಶಿಕ್ಷಣಸೇವೆ.

(ಕೋ. ಶ ಕಾರಂತ, ಬಿ ಎ , ಬಿ. ಎಲ್.)

ಬಾಲ ಪ್ರಪಂಚ.

ಮನೆಯಲ್ಲಿ, ಕೇರಿಯ, ಊರಲ್ಲಿ ಆಗುವ ವಿಶೇಷಕಾರ್ಯಗಳು, ಮದುವೆ ಮುಂಜಿ ಮೊದಲಾದ ಸಂಸ್ಕಾರ ಕ್ರಿಯೆಗಳು, ಮಕ್ಕಳ ರಾಜ್ಯದಿಂದ ಹೊರಗಲ್ಲ ಅವರನ್ನು ಬಹಿಷ್ಕರಿಸವುದೇ ಅಸಾಧ್ಯವು ಅವರಿದ್ದರೆ ಆ ಕಾರ್ಯಕ್ರಿಯೆಗಳಿಗೆ ಹೊಸ ಹೊಳವು, ಹೊಸ ಬಣ್ಣ ಬರುತ್ತದೆ ಯಾರೂ ಪುಸ್ತಕಗಳನ್ನು ಮಕ್ಕಳ ಮುಂದಿಟ್ಟು ಪಾಠ ಕಲಿಸಿರುವುದು ಕಂಡುಬರುವುದಿಲ್ಲ ಶಾಲೆಯಲ್ಲಿ ಅದು ಏನು? ಇದು ಏನು? ಎಂದು ಈಗ ಕಲಿಸಿಕೊಡುವಂತೆ ಇದು ಉಪನಯನ ಸಂಸ್ಕಾರ ವಿಧಿ, ಅದು ಮದುವೆ, ಎಂದು ಯಾರೂ ಹೇಳಿಕೊಡುವುದು ನನಗಂತೂ ತೋರಿಬರಲಿಲ್ಲವು. ಮಗುವಾದರೂ ಮದುವೆಯಾದರೇನು ಎಂದು ಕೇಳುವುದುಂಟೇ? ಮದುವೆಯಾಗುವುದೇಕೆ ಎನ್ನುವುದುಂಟೆ? ಮದುವೆಯ ವಿನಿಯೋಗವನ್ನು ಕಣ್ಣಾರೆ ಕಂಡು ತಾನು ಮರುದಿನ ಏಕೆ ಆ ಕೂಡಲೆ ಮದುವೆಮಾಡಲು, ಮಾಡಿಕೊಳ್ಳಲು, ಉಪಕ್ರಮಿಸುತ್ತದೆ? ಅಪ್ಪನು ಮಾಡುವ ದೇವರ ಪೂಜೆಯನ್ನು ಕಂಡು ಮಗನೂ ದೇವರ ಪೂಜೆಯ ಭಟ್ಟನಾಗ ತನು ತಾನು ಸ್ನಾನ ಮಾಡುವಂತೆ ಮಡಿಯನ್ನು ತೊಡುವಂತೆ, ಭಸ್ಮ ಅಥವಾ ಗೋಪಿಚಂದನದ ನಾಮವನ್ನು ಎಳೆವಂತೆ ನಟಿಸುವನು ಹೆಣ್ಣು ಮಕ್ಕಳು ಒಂದು ವಸ್ತುವನ್ನಾಗಲಿ ತಲೆದಿಂಬನ್ನಾಗಲಿ ಹಿಡಿದು 'ತನ್ನ ಮಗು' ಎಂದು ಮುದ್ದಾಡುವುವು, ಹಾಲನ್ನು ಉಣಿಸುವುವು ತಾಯಿ ಮಾಡಿದಂತೆ ಮಾಡಲು ಉಪಕ್ರಮಿಸುವುವು ಯಾರಾದರೂ ಏನು ಹೆಂಗಸಾಗ ವವಳು ತಾಯಿಯಂತೆ ಈಗಲೇ ವರ್ತಿಸಲು ಕಲಿ ಎಂದೂ ಪುಸ್ತಕಕೊಟ್ಟು ಕಲಿಸುವುದುಂಟೇ? ಗಂಡು ಮಕ್ಕಳ ವರ್ತನೆಯು ಹೆಣ್ಣು ಮಕ್ಕಳ ವರ್ತನೆಯಿಂದ ಭಿನ್ನವಾಗಿರುವುದಾದರೂ ಏಕೆ? ಚಿಕ್ಕಂದಿನಲ್ಲಿ ಪುಸ್ತಕವನ್ನು ಕೊಟ್ಟು ವ್ಯವಹಾರವನ್ನು ಹೇಳಿಕೊಡುವುದುಂಟೇ?

ಅನುಕರಣೆ ಎಂಬ ಸೂತ್ರವೇ ಮಕ್ಕಳ ಶಿಕ್ಷಣದ ಜೀವಾಳ ಎಂದು ನನಗನ್ನಿಸುತ್ತದೆ ಕೆಲವರು ಡೈರೆಕ್ಟ (ಪ್ರತ್ಯಕ್ಷ)ವಿಧಾನ ಎನ್ನುತ್ತಾರೆ ಕೆಲವರು 'ನೆಚುರಲ್' (ಸ್ವಾಭಾವಿಕ) ಯಾ ನೈಸರ್ಗಿಕ ವಿಧಾನ ಎನ್ನುತ್ತಾರೆ ನನಗಂತೂ ಅನುಕರಣೆ (Imitation) ಎಂದನ್ನಿಸುತ್ತದೆ ಇದರ ಬೆಂಬಲವಾಗಿ ಬೋಧಕನ ಅನುಭವವು ಮಾನ್ಯವೆನ್ನಿಸುತ್ತದೆ ಮಗುವು ಮಾತನ್ನು ಕಲಿಯುವ ಸಮಯ, ಆರಂಭವಾಗುವ ಮೊದಲು ಅದಕ್ಕೆ ಯಾರನ್ನು ಏನೆಂದು ಕರೆಯಬೇಕೆಂದು ಎಂತೂ ತಿಳಿಯುವಂತಿಲ್ಲ ತಾಯಿಯದ್ದೂ ತನ್ನ ಹಿಗ್ಗಿಗಾಗಿ ತನ್ನನ್ನು 'ಅಮ್ಮ ಎಂದು ಕೇಳು ಹೇಳು' ಎಂದು ಉಪಾಧ್ಯಾಯಿನಿ ಕೆಲಸಮಾಡತೊಡಗುವಳು. ಪತಿಯನ್ನು ತೋರಿಸಿ 'ಅಪ್ಪ' ಎನ್ನು ಎಂದು ಕಲಿಸಹತ್ತುವಳು ಮಗುವು ಅದು ಏನು? ಇದು ಏನು? ಎನ್ನುವುದಿಲ್ಲ ಅದು ತಾಯಿ ಅಥವಾ ಇತರರು ಹೇಳಿಕೊಡುವಂತೆ ಹೇಳಲು ಯತ್ನಿಸುವುದು ತನ್ನಿಂದಾಗಲಾರದು ಎಂದು ತಿಳಿದರೆ ಸುಮ್ಮಗಿರುವುದು ಕೆಲವು ಸಮಯದ ಮೇಲೆ ಬೇರಾವುದಾದರೂ ವಿಚಾರಗಳ ಕಡೆಗೆ ದೃಷ್ಟಿ ಹರಿಸಹತ್ತುವುದು ತನ್ನ ಸುತ್ತಲಿರುವ ವಾತಾವರಣದಂತೆ ರೂಪುಗೊಳ್ಳಲು ಯತ್ನಿಸುವುದು. ತುಳುವಿನ ಗಾಳಿ ಬೀಸುತ್ತಿದ್ದರೆ ಅಪ್ಪಗೆ ಅಮ್ಮೆ ಎನ್ನುವುದು, ಕನ್ನಡವಾದರೆ ಅಪ್ಪನೆನ್ನುವುದು. ತಾಯಿಯನ್ನು ಮನೆಯವರು ಹೆಸರಿನಿಂದ ಕರೆದರೆ ಅಂತೇ ತಾನೂ ಕರೆವುದು; ಅಕ್ಕ ಎಂದು ಅವಳ ತಂಗಿಯಂದಿರು ಕರೆದರೆ ಅಕ್ಕ ಎಂದು ಕರೆವುದು ಮಕ್ಕಳ ಬಾಲಪ್ರಪಂಚವು ಅವರನ್ನು ಆವರಿಸಿಕೊಂಡಿರುವ ವಿಸ್ತಾರಪ್ರಪಂಚದ ಪ್ರತಿಬಿಂಬವಾಗಲೆತ್ನಿಸುವುದು, ಆಗುವುದು ಬ್ರಹ್ಮಾಂಡದಂತೆ ಪಿಂಡಾಂಡ ಎಂಬುದು ಇಲ್ಲಿಯೂ ಸಾಧು

ಇಂತಾದ ಮೇಲೆ ಮಕ್ಕಳ ಶಾಲೆಯು ಬಾಲಪ್ರಪಂಚವಾಗಿರಬೇಕು ಅಸ್ವಾಭಾವಿಕವಾಗಿರುವುದಾದರೆ ಮಾನಸಿಕ ಬೆಳವು ಕುಂದಿ ಅನಾರೋಗ್ಯಕ್ಕೆ ತುತ್ತಾಗುವುದು ಇದು ಕಾರಣ ಶಾಲೆಯು ಪ್ರಪಂಚವಾಗಿರಬೇಕು 'ಉದ್ಯಾನ ವಾಗಿದ್ದರೆ ಸಾಕೆಂದು ಕೆಲವರ ಅಭಿಪ್ರಾಯ ಆದರೆ ಉದ್ಯಾನವು ಪ್ರಪಂಚದ ಒಂದಂಶವು, ಅಪೂರ್ಣ ಪ್ರಪಂಚವು ಆದರೆ ಈಗ ಪುಸ್ತಕ ಪ್ರಪಂಚವಾಗಿ ಪರಿಣಮಿಸಿದೆ ಪುಸ್ತಕಗಳಿಂದ ತುಂಬಿ ಯಾಂತ್ರಿಕ ವಿದ್ಯಾಭ್ಯಾಸವಾಗಿ ಪರಿಣಮಿಸಿದೆ ಹುಡುಗ ಓದು ಎಂಬ ಓದು ಪಾರವಾಗಿ ತುಂಟರ ಬಿರುಗಾಳಿ ಕೀಡುತ್ತದೆ

ಪ್ರಾಥಮಿಕ ಶಾಲೆಗಳಲ್ಲಿ ನಾನು ಕಲಿತ ದಿನಗಳಿನ್ನೂ ಮಾಸಿಹೋಗಿಲ್ಲವು ಮೂರನೆ ತರಗತಿಯನ್ನು ಮುಗಿಸಿ ಹೈಸ್ಕೂಲಿನ ಮೆಟ್ಟಲನ್ನು ಏರಿದ್ದೆ ಆಗ ನಮ್ಮ ಶಾಲೆಗಳಲ್ಲಿ ಕೇವಲ ಪಠ್ಯಪುಸ್ತಕ ಮಾತ್ರ ಇದ್ದುವು ಪಠ್ಯಪುಸ್ತಕದಲ್ಲಿಯೇ ನಾವು ಕಲಿಯಬೇಕಿದ್ದ ಪದ್ಯಗಳಿದ್ದವು ಉಪಾಧ್ಯಾಯರು ಇನ್ನು ಹೆಚ್ಚಿನ ಕೆಲವು ಹಳ್ಳಿಯ ಹಾಡುಗಳನ್ನು ಹೇಳಿಕೊಡುತಿದ್ದರು ಉಪಪಠ್ಯಗಳ ಗೊಡವೆ ಇರಲಿಲ್ಲ ಅಧ್ಯಾಪಕರೆ ತಮ್ಮ ಸ್ವಂತ ಮಾತುಗಳಿಂದ ಕತೆಗಳನ್ನು ಹೇಳುತಿದ್ದರು ಆದರೆ ಈಗ 'ಹುಡುಗ, ಈ ಕಥೆಯನ್ನು ಓದು ಎನ್ನುವ ದಿನಗಳಾಗಿ ಪರಿಣಮಿಸಿದೆ ಆರಂಭದಿಂದ ಅಂತ್ಯದ ವರೆಗೆ ಒಂದೇ ಸವನೆ ಪಂಜಾಬ ಮೈಲ್ ಬಂಡಿಯಂತೆ ಕಥೆಗಳನ್ನು ಬಾಯಿಪಾಠ ಮಾಡಿದನ್ನು ಕಾಯುವ ದಿನಗಳಾಗಿ ಪರಿಣಮಿಸಿದೆ

ಎಸ್ ಎಸ್ ಎಲ್ ಸಿ ಪರೀಕ್ಷೆಯ ವರೆಗೆ ನಮಗೆ ಗದ್ಯಪುಸ್ತಕ ಬೇರೆ ಪದ್ಯಪುಸ್ತಕ ಬೇರೆ, ಇರಲಿಲ್ಲವು ಈಗಲೂ ಕನ್ನಡ ಇಂಗ್ಲಿಷ ಭಾಗದಲ್ಲಿ ಗದ್ಯಪದ್ಯ ಬೆರೆತಿರುವ ಪುಸ್ತಕವನ್ನು ಇಡುತ್ತಾರೆ ಆದರೆ ಕಾಲೇಜು ತರಗತಿಗಳಲ್ಲಿ ಪದ್ಯಪುಸ್ತಕಗಳು ಗದ್ಯದಿಂದ ಬೇರಾದವು ನಮ್ಮ ಪ್ರಾಥಮಿಕ ಶಾಲಾ ಮಕ್ಕಳನ್ನು ಒಂದೇಸವನೆ ಕಾಲೇಜಿನ ಯೋಗ್ಯತೆಯುಳ್ಳವರಾಗಿ ಮಾಡಬೇಕೆಂದೂ ಬಾಲಕ ದರ್ಜೆಯಿಂದ ಪದ್ಯಪುಸ್ತಕ ಬೇರೆ ಗದ್ಯಪುಸ್ತಕ ಬೇರೆ ಸಾಲದುದಕ್ಕೆ ಬೇಕಷ್ಟು ಉಪಪಠ್ಯಗಳಿವೆ ಇಂಥ ಶೋಚನೀಯ ಅಧಃಪತತಕ್ಕೆ ನಮ್ಮ ಪ್ರಾಥಮಿಕ ಶಿಕ್ಷಣವು ಬಲಿಯಾಗಿದೆ ಈ ಬಂಧನದಿಂದ ವಿಮೋಚನೆಯ ಬಗೆಯೆಂತು?

ಪ್ರಾಥಮಿಕ ಶಾಲೆಗಳು ಎಂತಿರಬೇಕೆಂಬ ನವಸೂತ್ರಗಳಾದ ಪ್ರೊಜೆಕ್ಟ ಮೆಥಡ್, ಡಾಲ್ಟನ್ ಪ್ಲೇನ್ ಮತ್ತು ಡಾಕ್ಟರ್ ಮೊಂಟಸೂರಿ ಮೆಥಡ್ ಮೊದಲಾದವುಗಳ ತಿರುಳನ್ನು ಬಗೆದು ನಮ್ಮ ದೇಶಕ್ಕೆ ಎಷ್ಟು ಹೊಂದಿಕೆಯಾಗುತ್ತದೆ ವೆಂದು ಪರಿಶೀಲಿಸಬೇಕು

ಪ್ರೊಜೆಕ್ಟ ಮೆಥಡ್.

ಪ್ರೊಜೆಕ್ಟ ಎಂಬ ಆಂಗ್ಲಪದವು ಅನೇಕ ಕಾಲದಿಂದಲೂ ಬಳಕೆಯಲ್ಲಿದ್ದು ಆಲೋಚನೆ-ಹವಣಿಕೆ (Plan), ಪೂರ್ವಕಭಾವ, ಚಿಂತಿತಾರ್ಥ, ಹದನ ನಕಾಶೆ ಎಂಬ ಅರ್ಥ ಮಾಡಲ್ಪಡುತ್ತದೆ ಪ್ರೊ ಎಂದರೆ ಮುಂದಕ್ಕೆ; ಜಸೆರೆ (jacera) ಎಂದರೆ ಒಗೆ, ಎಸೆ, ಬಿಸಾಡು, ಎಂದು ಧಾತುವಿನಂದರ್ಥವಾಗುತ್ತದೆ. ಆದರೆ ವಿದ್ಯಾಭ್ಯಾಸದಲ್ಲಿ ಒಂದು ವಿಶೇಷಾರ್ಥದಲ್ಲಿ ಉಪಯೋಗಿಸಲ್ಪಟ್ಟಿದೆ. ಮಕ್ಕಳಿಗೂ ಜೀವನಕ್ಕೂ ಮಧ್ಯಬಂದಿರುವ ಕಾಲುವೆಗೆ ಸಂಕ ಕಟ್ಟುವುದೇ ಈ ವಿಧಾನದ ಮುಖ್ಯೋದ್ದೇಶವು ಕನ್ನಡದಲ್ಲಿ ಸರಿಯಾದ ಅರ್ಥಗರ್ಭಿತ ಪದವು ನನ್ನ ತಿಳಿವಿಗೆ ಬರಲಿಲ್ಲವಾದ ಕಾರಣ ಪ್ರೊಜೆಕ್ಟ ಎಂದೇ ಪ್ರಯೋಗಿಸುವೆ

ಹಳೆಯ ಪದ್ಧತಿಯು ರುಚಿಸದಾಯಿತು ಬಳಕೆಯಲ್ಲಿದ್ದು ನವವಿದ್ಯಾಶೋಧಕರ ದೃಷ್ಟಿಯಲ್ಲಿ ಫಲವನ್ನೀಯಲಿಲ್ಲ ಹೊಸದನ್ನು ಆರಂಭಿಸುವುದೆಂತು? ಎಂಬ ಪ್ರಶ್ನೆಯು ಎಲ್ಲರ ಮುಂದೆ 'ಲೋಕೋ ಭಿನ್ನರುಚಿ' ಎಂಬುದು ಈ ಶೋಧಕರ ಅಭಿಪ್ರಾಯದಲ್ಲಿಯೂ ಸಾಧುವಾಯಿತು ಒಮ್ಮತವು ಎಲ್ಲಿಯೂ ಕಾಣಲಾರದಾಯಿತು ಪ್ರೊಜೆಕ್ಟ ವಿಧಾನದ ಪ್ರತಿಪಾಲಕರೇ ಒಮ್ಮನಲಾಗದೆ ಪರಾಜಯರಾಗಿರುವರು ಅವರಲ್ಲಿಯೂ ಭೇದ-ಅಭಿಪ್ರಾಯದ ಎರಡು ಪಂಗಡಗಳು ಕಾಣಿಸಿಕೊಂಡಿವೆ ಇಂತಿರಲಾಗಿ ನಮ್ಮ ನಾಡಿನಲ್ಲಿ ಯಾರನ್ನು ಅನುಸರಿಸಲಿ?

ವಿದ್ಯಾಭ್ಯಾಸದ ವಿಚಾರದಲ್ಲಿ ಪ್ರೊಜೆಕ್ಟ ಎಂಬ ಪದದ ಪ್ರಯೋಗವು ೧೯೦೮ರಿಂದ ಆಗಲಾರಂಭವಾಗಿದೆ ಅದರ ಮೊದಲು ಇದರ ಸುಳಿವು ವಿದ್ಯಾಖಾತೆಯಲ್ಲಿರಲಿಲ್ಲ ಆರ್ ಡಬ್ಲ್ಯು ಸ್ಟಿಂಸನ್‌ರೇ ಇದನ್ನು ಪ್ರಯೋಗದಲ್ಲಿ ಮೊತ್ತಮೊದಲು ತಂದವರು-ಇವರು ಮಸ್ಸಚಸಟ್ಟಿ (Massachussette)ಯ ವಿದ್ಯಾಮಂಡಳಿಯ ಏಜಂಟ (ಪಾರುಪತ್ಯ)ರಾಗಿದ್ದರು ಮಸ್ಸಚಸಟ್ಟಿಯ ವ್ಯವಸಾಯದ ಹೈಸ್ಕೂಲುಗಳಲ್ಲಿ 'Part time work 'ಅಂಶ ಕಾಲ ಕೆಲಸ ಎಂಬ ಹವಣಿಯನ್ನು ಪ್ರಯೋಗದಲ್ಲಿ ತಂದರು ನೋರ್ಥಾಂಪ್ಟನ್ ವ್ಯವಸಾಯ ಶಾಲೆಯಲ್ಲಿ ಇದು ಪ್ರಥಮದಲ್ಲಿ ಯತ್ನಿಸಲಾಯಿತು

ವ್ಯವಸಾಯದಲ್ಲಿ ಚೆನ್ನಾಗಿ ತರಬೇತಿಯನ್ನು ಹೊಂದಿದವನೊಬ್ಬನನ್ನು ಅಲ್ಲಿ ವಿನಿಯೋಗಿಸಿದರು ಮನೆಯಲ್ಲಿ ತಮ್ಮ ತಮ್ಮ ಕೃಷಿಕ್ಷೇತ್ರಗಳಲ್ಲಿ ವಿದ್ಯಾರ್ಥಿಗಳ ಮಾಡಬೇಕಾಗಿರುವ ಕೆಲಸಗಳಲ್ಲಿ ಇವನು ನೆರವಾಗುತಿದ್ದನು ಇದನ್ನು 'ಹೋಮ್ ಪ್ರೊಜೆಕ್ಟ ಎಂದು ಕರೆಯಲಾರಂಭಿಸಿದರು ಸ್ಟಿಂಸನರ ಈ ವಿದ್ಯಾಸೂತ್ರವು ಎಲ್ಲೆಲ್ಲಿಯೂ ಮಾನ್ಯವಾಯಿತು ಅಂತೆ ಅನೇಕ ಶಾಲೆಗಳಲ್ಲಿ ಕಲಿಸಲು ತೊಡಗಿದರು ಕಾರ್ಯ ಸಿದ್ಧಿ ಕ್ರಿಯಾಸಿದ್ಧಿಯನ್ನು ಕಂಡು ಮಸ್ಸಚಸಟ್ಟಿಯ ಸರಕಾರವು ೧೯೧೧ರಲ್ಲಿ ಆರಿಸಲ್ಪಡುವ ಹೈಸ್ಕೂಲುಗಳ ವಿಭಾಗವಾಗಿ ಇಂಥ ವ್ಯವಸಾಯದ ಶಾಖೆಯನ್ನು ತೆರೆಯಲೇಬೇಕೆಂಬ ಕಾಯಿದೆಯನ್ನು ಸ್ವೀಕಾರ ಮಾಡಿತು ಇದರ ಬಗ್ಗೆ ನುರಿತ ಯೋಗ್ಯ ಅಧ್ಯಾಪಕರನ್ನು ನೇಮಿಸಲೇಬೇಕು ಇವರ ಸಂಬಳದ ⅔ ಅಂಶವನ್ನು ಸರಕಾರವು ಗ್ರಾಂಟಾಗಿ ಸಹಾಯ ಮಾಡುವುದು ಇಂತು ಆದರ ಬೆಳವು ಇನ್ನು ಅದರ ವಿಧಾನ

ಒಬ್ಬ ವಿದ್ಯಾರ್ಥಿಗೆ ಗೆಣಸನ್ನು ಬೆಳೆಯಿಸಬೇಕೆಂಬ ಇಚ್ಛೆಯೆನ್ನುವ ಪ್ರೊಜೆಕ್ಟ ಕ್ರಮರೀತ್ಯಾ ಅದನ್ನರಿತು ಎಸಗಬಹುದೆಂದರೆ ಮೊದಲು ಒಂದು ಕ್ಷೇತ್ರವನ್ನು ಆರಿಸಬೇಕು, ನೆಲವನ್ನು ಸಜ್ಜುಗೊಳಿಸಬೇಕು ಬೀಜವಾಗಿ ಉಪಯೋಗಿಸಬಹುದಾದ ಗೆಣಸನ್ನು ಆರಿಸಬೇಕು, ಅದನ್ನು ಬಿತ್ತಿ, ನೀರು, ಗೊಬ್ಬರವನ್ನು ಹಾಕಿ ಬೆಳೆಬೆಳೆಯಿಸಬೇಕು ಬೆಳೆವ ಕಾಲ ಕಾದು ಕೊಯ್ಯಬೇಕು ಇದೇ ಪ್ರೊಜೆಕ್ಟ ಮೆಥಡಿನ ರಹಸ್ಯ ಇದೇ ಯಥಾರ್ಥ ಜೀವನ ಹೊರ ಪ್ರಪಂಚದಲ್ಲಿ ಎಂತಿರಬೇಕೆಂಬುದನ್ನು ಇಲ್ಲಿಯೇ ಕಲಿಯುವುದು. ಹೊರ ಪ್ರಪಂಚದಲ್ಲಿ ಹೋರಾಡಲು ಸಿದ್ಧಮಾಡುವುದಲ್ಲ, ಮಾಡಲ್ಪಡುವುದಲ್ಲ. ಅದು ತಯಾರು ಮಾಡುವ ಯಂತ್ರಾಲಯವಲ್ಲ. ಇದೇ ಪ್ರೊಜೆಕ್ಟ ಮೆಥಡ್ ಶಾಲೆಯನ್ನು ಬಾಲಪ್ರಪಂಚವಾಗಿ ಮಾಡುವುದೇ ಉದ್ದೇಶವಾಗಿದೆ.

ಇದೇ ಸೂತ್ರವನ್ನು ಇತರ ಶಾಲೆಗಳಲ್ಲಿ ಪ್ರಯೋಗಕ್ಕೆ ತಂದರು ಪ್ರಾಥಮಿಕ ಶಿಕ್ಷಣ ದೃಷ್ಟಿಯಿಂದ ಪ್ರೊಜೆಕ್ಟ ಮೆಥಡಿನ ಕ್ರಮವನ್ನು ವಿಚಾರಿಸಬೇಕಾಗಿದೆ

ಪ್ರೊಜೆಕ್ಟ ಮೆಥಡ್ ಎಂದರೆ ಬಾಳ್ವೆಯ ಕ್ರಮ (Method of living) ನಮ್ಮ ಬಾಳ್ವೆಯಲ್ಲಿ ಅನೇಕ ಬಗೆಯ ಘಟನೆಗಳು ಸಂಪ್ರಾಪ್ತವಾಗುತ್ತಿವೆ ಕೆಲವುಗಳನ್ನು ನಾವು ಮೊದಲೇ ಊಹಿಸಬಹುದಾಗುತ್ತದೆ ಕೆಲವು ಆಕಸ್ಮಿಕವಾಗಿ ಬಂದೊದಗುತ್ತವೆ ಅದಕ್ಕೆ ಅನುಗುಣವಾಗಿ ನಾವೂ ಅನುಕೂಲವನ್ನು ಸರಿಪಡಿಸಿಕೊಳ್ಳಬೇಕಾಗುತ್ತದೆ ವಿಚಾರಿಸಲು ತೊಡಗುತ್ತೇವೆ, ನಾವು ಏನನ್ನು ಮಾಡುತ್ತಿರುವೆವು ಏನನ್ನು ಮಾಡಬೇಕು, ಏಕೆ ಹೀಗೆ ಮಾಡುತ್ತೇವೆ, ಕಾರಣವೇನು ಎಂಬ ಪ್ರಶ್ನಾವಳಿಯು ಬಂದೇ ಬರುತ್ತದೆ

ಒಬ್ಬ ೮ ವರ್ಷದ ಹುಡುಗನು ಒಂದು ಕೈಬಂಡಿಯನ್ನು ಮಾಡುವ ಆಸೆ ತಲೆದೋರಿದವನೆಂದು ಊಹಿಸಿರಿ ಅವನು ಚಕ್ರವಾಗಿ ಉಪಯೋಗಿಸಲು ಚಕ್ರದ ಆಕಾರವುಳ್ಳ ಸಾಮಾನನ್ನು ಹುಡುಕ ತೊಡಗುವನು ಆಗ ಅವನಿಗೆ ಅದು ಸಿಗುವ ವರೆಗೆ ದಣಿವಿಲ್ಲ, ಬಾಯಾರಿಕೆ ಹಸಿವೆಯು ಬಾಧೆಯಿಲ್ಲ ತನ್ನ ತಂದೆಯ ಅಥವಾ ನೆರೆಮನೆಯವನ ಬಂಡಿಯನ್ನು ಪರೀಕ್ಷಿಸುವನು ಅದರಂತೆ ಮಾಡಲು ಸಾಮಗ್ರಿಗಳನ್ನು ಹುಡುಕುವನು ತನ್ನ ಯತ್ನವು ಸಾಗದಿದ್ದರೆ ಪುನಃ ಸರಿಯಾಗುವ ವರೆಗೆ ಯತ್ನ ಮಾಡುತ್ತಿರುವನು ಈ ಹುಡುಗನು ಈ ಬಗೆಯಿಂದ ಯತ್ನಿಸುವುದರಿಂದ ಅವನಿಗೆ ಅನೇಕ ಅನುಭವಗಳು ಪ್ರಾಪ್ತವಾಗಲೇ ಬೇಕು ಹೊಸದು ಕೆಲವು ವಿಚಾರಗಳು ಅವನಿಗೆ ತಿಳಿಯಬರುತ್ತವೆ ಈ ಹುಡುಗನು ಈ ತೆರನೆ ಕಲಿಯುವುದು "ಪ್ರೊಜೆಕ್ಟ ಮೆಥಡ್" ರೀತಿಯಿಂದ

ಹಳೆ ಪದ್ಧತಿಯಂತೆ ಲಕ್ಷ್ಯವು ಉಪಾಧ್ಯಾಯನ ಕಡೆಗೆ ನೆಡಲ್ಪಡುತಿತ್ತು ಈಗ ಮಕ್ಕಳ ಕಡೆಗೆ ಹರಿಯುವುದು ಶಾಲೆಯೆಂಬುದು ಮಕ್ಕಳ ಕೂಟವಾಗಿರಬೇಕು (Club) ಅವನ ಸಂಶೋಧನಾಲಯ ಅಥವಾ ಕಾರಖಾನೆಯಾಗಿರಬೇಕು ಅವನ 'ಪ್ರಜಾಧಿಪತ್ಯವಾಗಿರಬೇಕು ಪ್ರಾಣದಯೆಯ ಸಂಘವಾಗಿರಬೇಕು ಸಂಕ್ಷೇಪದಲ್ಲಿ ಹೇಳುವುದಾದರೆ ಶಾಲೆಯು ಅವನ ಸಂಸಾರವಾಗಿರಬೇಕು (In a sense his family) ಅದಕ್ಕವನು ಪ್ರಜಾಧಿಪತ್ಯದ ಪ್ರತಿನಿಧಿ ಅವನ ವಿಶ್ವದ ಹೆಚ್ಚಿನ ಭಾಗವನ್ನು ಶಾಲೆಯು ವಹಿಸಬೇಕು ಅವನ ಉಳಿದ ಆಯುವನ್ನು ಹೊರಸಂಸಾರದಲ್ಲಿ, ಬಾಹ್ಯವಿಶ್ವದಲ್ಲಿ ಕಳೆವಾಗ ಈ ಬದಲಾವಣೆಯು ಹಿತಕರ ಮತ್ತು ಸುಲಭವಾಗುವುದು ಆತನು ಅನ್ಯರಾಶ್ರಯವನ್ನು ನಿರೀಕ್ಷಿಸುವಂತಿರಲಾರದು ಶಾಲೆಯು ಮಕ್ಕಳ ಜೀವಾಳ ಅಥವಾ ಸಂಸಾರ ಬಾಳ್ವೆಯಾಗಿರಬೇಕು The school is life or should be

ಅಂತ ಮೇಲೆ ಪ್ರೊಜೆಕ್ಟ ವಿಧಾನವು ಮಕ್ಕಳನ್ನು ಜೀವನ ಸಂಗ್ರಾಮದಲ್ಲಿ ಉಪಕ್ರಮಿಸುವುದು ಅದಕ್ಕೆ ಬೇಕಾದ ಅನುಕೂಲತೆಗಳನ್ನು ಒದಗಿಸುವುದು, ತೃಪ್ತಿಕರವಾಗಿ ಬಾಳುವುದು, ಯೋಗ್ಯವಾದ ಉದ್ಯಮಗಳನ್ನು ಒದಗಿಸುವುದು-ಎಂದರೆ ಮಕ್ಕಳಿಗೆ ಮಾರ್ಗವನ್ನು ಮುಂದೋರುವುದು, ಅವರಿಗೆ ನೆರವಾಗುವುದು—It means guiding and assisting them

ಪ್ರೊಜೆಕ್ಟ ಮೆಥಡ್ ಎಂದರೆ ಕಾರ್ಯದ ವಿಧಾನವೆನ್ನಲು ಬರುವುದಿಲ್ಲ ಹೆಚ್ಚಿನ ಅಧಿಕಾರಕ್ಕೆ ಅಲ್ಲಿ ಎಡೆಯಿಲ್ಲ ಮಕ್ಕಳ ರಾಜ್ಯವದು. ಮಕ್ಕಳೇ ಹೆಚ್ಚಿನ ಹೊಣೆಗಾರಿಕೆಯನ್ನು ವಹಿಸುತ್ತಿರುವುವು. ಶಾಲೆಯ ಕೆಲಸ

(ಆನೇ ಕಡೆಗೆ ಮುಂದುವರಿದಿದೆ)

FRESH CONSIGNMENT ARRIVED.

UNEQUAL QUALITY——————EXCEPTIONAL PRICE.

A TIRE THAT SAVES YOU REPUTATION AND MONEY.

The Canara Public Conveyance Co., Ltd.

MANGALORE.

ಜ್ಞಾನ

(ಪ್ರಬಂಧಮಾಲೆ)

ಲೇಖಕರು— ಶ್ರೀ ಶಿವರಾಮ ಕಾರಂತ

ಅಧ್ಯಾಯ ೧೫

ವಿದ್ಯೆ

ವಿದ್ಯೆಯುಳ್ಳದವನು ಪಶುವಿನಂತಾಗುತ್ತಾನೆ– ಎಂದು ಶಾಸ್ತ್ರದ ವಚನವಿದೆ. ಅಂದರೆ, ಅಧರಂತೆ ಉಳುವುದಕ್ಕೆ ಹಾಳಿಗೂ ಉಪಯೋಗಿಸಲ್ಪಡುತ್ತಾನೆ ಎಂಬುದು ಈ ಮಾತಿನ ತಾತ್ಪರ್ಯವಲ್ಲ. ಅವನು ಬುದ್ಧಿಹೀನನಾಗುತ್ತಾನೆ— ಎಂಬುದೇ ಅದರ ತಾತ್ಪರ್ಯ. ಅವನು ತನ್ನ 5ನೇಯ ವರುಷ ಪ್ರಾಯದ ತನಕ ಹೀಗಿದ್ದರೂ ಚಿಂತೆಯಿಲ್ಲ. ಆ ಮೇಲೆ, ಇರಬಾರದೆಂಬುದರಿಂದ ಅವನನ್ನು ತಂದೆತಾಯಿಗಳು ಶಾಲೆಗೆ ಕಳುಹಿಸಿ ಕೆಲವು ವರ್ಷಗಳಾದರೂ ವಿದ್ಯೆ ಕಲಿಸಬೇಕು. ಹಾಗೆ 10—8 ವರುಷಗಳ ವರೆಗೆ ಅವನು ಓದು ಮುಗಿಸಿಬಿಟ್ಟರೆ, ತಿರುಗಿ ಪಶುವಿನಂತಾಗುವುದಿಲ್ಲ ವೆಂಬುದರಿಂದ, ಎಲ್ಲರೂ ಹೆಚ್ಚಾಗಿ ಶಾಲೆಗೆ ಹೋಗುತ್ತಾರೆ ಸ್ತ್ರೀಯರೂ ಸಹ ಶಾಲೆಗೆ ಚಿಕ್ಕ ವಯಸ್ಸಿನಲ್ಲಿ ಹೋಗಿ ಬರುವುದರಿಂದ ಅಪಾಯವಿಲ್ಲವೆಂದು ಪಂಡಿತರ ಅಭಿಪ್ರಾಯ. ಆದರೆ, ಅವರ ಚುರುಕು ಕಡಿಮೆಯೆಂಬುದರಿಂದ ಅವರಿಗೆ ಬೇರೆ ಶಾಲೆಗಳನ್ನು ಅಂದರೆ, ಹೆಣ್ಣು ಶಾಲೆಗಳನ್ನು ಏರ್ಪಡಿಸುತ್ತಾರೆ ಹೆಣ್ಣು ಹುಡುಗರು, ಗಂಡು ಹುಡುಗರು ಒಂದೇ ಶಾಲೆಯಲ್ಲಿ ಓದಿದರೆ ಅವರಲ್ಲಿ ಸ್ಪರ್ಧೆಯು ಎದ್ದು, ಹೆಂಗಸರು ಗಂಡುಬೀರಿಗಳಾಗುವ ಭೀತಿಯುಂಟೆಂದೂ, ಜನಸಂಖ್ಯೆಯು ಏರುವ ಪ್ರಸಂಗವುಂಟೆಂದೂ—ಬಹಳ ತಿಳಿದವರು ಹೇಳುತ್ತಾರೆ

ಈಗ ನಾವು ವಿದ್ಯೆಯೇನು—ಎಂದು ವಿಚಾರಿಸುವ ಮನುಷ್ಯನನ್ನು ವಿದ್ಯಾವಂತನನ್ನಾಗಿ ಮಾಡುವುದೇ ವಿದ್ಯೆ ಅದನ್ನು ಕಲಿಸುವ ಸ್ಥಳಕ್ಕೆ ಶಾಲೆಯೆಂದೂ ಹೇಳಿಕೊಡುವವನು— ಗುರುವೆಂದೂ, ಕಲಿಯುವವನು—ಶಿಷ್ಯನೆಂದೂ ತಿಳಿಯಬೇಕು ಹಿಂದಿನ ಕಾಲದಲ್ಲಿ ಶಾಲೆಗಳಿಗೆ—ಆಶ್ರಮವೆಂದೂ ಅನ್ನುತ್ತಿದ್ದರು ಈಗಿನ ಕಾಲದಲ್ಲಿ ಶಿಷ್ಯನಿಗೆ 'ಸ್ಟೂಡೆಂಟ್' ಅನ್ನುತ್ತಾರೆ

ಗುರು, ಆಗುವ ಮನುಷ್ಯನ ಸಾಕಿದ ತಂದೆತಾಯಿಗಿಂತ ಶ್ರೇಷ್ಠನೆಂದೂ, ಅವನು ವಿದ್ಯಾದಾನ ಮಾಡುವನೆಂದೂ ಶಾಸ್ತ್ರವು ಹೇಳುವುದು ಇದನ್ನು ಕೆಲವು ಜನರು ತಪ್ಪಾಗಿ ತಿಳಿಯುವುದುಂಟು ತಂದೆಗಿಂತ ಗುರುವು ಶ್ರೇಷ್ಠ ಅವನಿಗಿಂತ ವಿದ್ಯೆ ಶ್ರೇಷ್ಠ—ಎಂದು ವಿದ್ಯಾವಂತರಾದ ಹುಡುಗರು ತಾವು ಕಲಿತ ಬುದ್ಧಿಯ ಬಲದಿಂದ—ತಂದೆಗಿಂತ ತಮ್ಮ ವಿದ್ಯೆ ಮೇಲೆಂದು ಅವರು ಹೇಳಿದುದನ್ನು ಕೇಳದೆ ಇರುವುದುಂಟು. ಇದು ಅನ್ಯಾಯವೆಂದು, ತಂದೆತಾಯಿಯಾದ ಪ್ರತಿಯೊಬ್ಬನಿ(ಳಿ)ಗೂ ತಿಳಿದಿದೆ ಹಿಂದಿನ ಕಾಲದ ಹುಡುಗರು ಹೀಗೆಂದೂ ಮಾಡುತ್ತಿರಲಿಲ್ಲ ಅವರು ಎಷ್ಟು ವಿದ್ಯಾವಂತರಾದರೂ ವಿದ್ಯೆಗಿಂತ ಗುರುಶ್ರೇಷ್ಠ, ಅವನಿಂದ ತಂದೆ ಶ್ರೇಷ್ಠ ಎಂದು ತಿಳಿಯುತ್ತಿದ್ದರಂತೆ ಅದಕ್ಕಲ್ಲವೆ ಶ್ರೀರಾಮಚಂದ್ರನು ಅರಣ್ಯಕ್ಕೆ ಹೋಗಿ ಹೆಂಡತಿಯನ್ನು ಕಳೆದುಕೊಂಡುದು!

ಈಗ ವಿದ್ಯೆಯೆಂದರೇನು—ಶಿಷ್ಯನೆಂದರೇನು– ಗುರುವೆಂದರೇನು—ಎಂಬುದನ್ನು ವಿಚಾರಿಸುವ ವಿದ್ಯೆಯೆಂದರೆ ಪಶುವನ್ನು ಮನುಷ್ಯನನ್ನಾಗಿ ಮಾಡುವ ಶಕ್ತಿ ಅದೇ "ಗ್ನಾನ" ವಿತ್—ಧ್ಯೆ ಅಂದರೆ ತಿಳಿದುಕೊಳ್ಳತಕ್ಕದ್ದು—ವಿದ್ಯೆ. ಈಗ ಒಂದು ಊರಿನಲ್ಲಿ ಒಬ್ಬಾಕೆಯು ಒಮ್ಮೆಗೇ ಆರು ಮರಿಯಿಟ್ಟಳೆಂದು ತಿಳಿಯಿರಿ. ಇದನ್ನು ನಾವು ತಿಳಿಯಬೇಡವೇ? ಆಗ ಅದು ವಿದ್ಯೆಯಾಗಿರುವುದು ಗುರುವೆಂದರೆ ಈ ವಿದ್ಯೆಯನ್ನು ಬೋಧಿಸುವವನು ಶಿಷ್ಯನೆಂದರೆ, ಬೋಧಿಸಲ್ಪಡುವವನು. ಗುರುವು ತನ್ನಲ್ಲಿರುವ ವಿದ್ಯೆಯನ್ನು ಶಿಷ್ಯನಲ್ಲಿ ಸುರಿಯುತ್ತಾನೆ ಶಿಷ್ಯನು—ಬರಿಪಾತ್ರೆಯಿದ್ದಂತೆ ತಿಳುವಳಿಕೆಯಿಲ್ಲದ ಪ್ರಾಣಿ. ಅವನಲ್ಲಿ—ಗುರುವು ತನ್ನ ಜ್ಞಾನವನ್ನೆಲ್ಲಾ ಸುರಿಯುವನು ಅವನಿಗೆ 40 ಮಂದಿ ಶಿಷ್ಯರಿದ್ದರೆ ಅಷ್ಟೂ ಜನರಲ್ಲಿ ಇದನ್ನು ಸುರಿಯುವನು. ಇದರಲ್ಲಿನ ಮುಖ್ಯ ಆಶ್ಚರ್ಯವೆಂದರೆ—ಅವನು ಅಷ್ಟನ್ನು ಸುರಿದರೂ ಅವನ ಹತ್ತಿರವಿರುವ ವಿದ್ಯೆಯು ವ್ಯಯವಾಗುವುದಿಲ್ಲವಂತೆ. ಈ ಚಮತ್ಕಾರವನ್ನು ಕಂಡು, ಕೆಲವು ಶೋಧಕರು ಇದೇ ರೀತಿ ಚಿನ್ನವನ್ನು ಸುರಿಯಲು ಬರುವುದೇ—ಎಂದು ಯತ್ನಿಸುತ್ತಿದ್ದಾರೆ.

ಕೆಲವು ಬಾರಿ ಈ ವಿದ್ಯೆಯು ಘನವಾಗಿರುವುದರಿಂದ ಶಿಷ್ಯನಲ್ಲಿ ಸುರಿಯಲು ಕಷ್ಟವಾಗುವುದು; ಬೆತ್ತದ ಏಟುಗಳಿಂದ ಶಿಷ್ಯನನ್ನು ಬಿಸಿ ಮಾಡಿ, ವಿದ್ಯೆಯು ಕರಗಿ ಅವನಲ್ಲಿ ಸೇರುವಂತೆ ಮಾಡುವರು.

ಈಗೀಗ ವಿಾಸೆ ಬಂದವರು ಸಹ ಕಲಿಯುವ ವಿದ್ಯೆಯಿದೆಯಂತೆ ಕೆಲವು ದೇಶಗಳಲ್ಲಿ ಉದಾ ತುರ್ಕಿ, ರಸ್ಯಾ ಮೊದಲಾದಲ್ಲಿ ವಿಾಸೆ ಬಂದವರಿಗೂ ಸಹ ಮಕ್ಕಳಿಗೆ ಹೇಳುವ 'ಅ ಆ' ಪಾಠವನ್ನು ಹೇಳುತ್ತಾರಂತೆ ಪ್ರಾಯಶಃ ಮುಪ್ಪು ಶೈಶವಗಳೆರಡು ಸಮವೆಂಬುದರಿಂದಿರಬೇಕು.

ಈಗೀಗ ಜ್ಞಾನಿಗಳು—ಶಿಕ್ಷಣದ ರೀತಿಯನ್ನು ಬೇರೆ ಮಾಡಿರುತ್ತಾರೆ ಹಿಂದಿನ ಕಾಲದ, ಬೆತ್ತದ ಕ್ರಮ ಒಳ್ಳೆಯದಲ್ಲವಂತೆ ಅಲ್ಲದೆ—ಕೆಲವರಿಗೆ ಕೆಲವುದರಲ್ಲಿ ಮಾತ್ರ ಅಭಿರುಚಿಯಿರುವುದರಿಂದ—ಮಕ್ಕಳನ್ನು ಎಲ್ಲಾ ತರದ ವಿದ್ಯೆಯನ್ನು ಕಲಿಯುವಂತೆ ಮಾಡಕೂಡದೆನ್ನುತ್ತಾರೆ ಮನಸ್ಸಿಗೊಂದು ಧರ್ಮವಿದೆಯಂತೆ ಶಿಶುಗಳ ಮನಸ್ಸಿನ ಧರ್ಮವನ್ನು ಅರಿತು ಉಪಾಧ್ಯಾಯನು ಪಾಠ ಹೇಳಬೇಕಂತೆ ಇದು ಅಸಾಧ್ಯದ ಮಾತು ಶಿಶುವಿನ ಮನೋಧರ್ಮವರಿತ ಮೇಲೆ ನಾವು ದೊಡ್ಡವರು, ಬಲ್ಲವರು—ಎನಿಸುವುದು ತಿರುಗಿ ಅಲ್ಲಿಗೇ ಒಂದರೆ ನಾವು ಮಕ್ಕಳಾಗುವುದಿಲ್ಲವೇ? ಆಗ ನಮಗೆ ಇನ್ನೊಬ್ಬರು ಉಪಾಧ್ಯಾಯರು ಬೇಕೆಂದಾಗಲಿಲ್ಲವೇ?

ಇನ್ನೊಂದು ವಿಚಾರ, ಈಗ ತಾನೆ ಹುಟ್ಟಿದ ಮಕ್ಕಳಿಗೆ ಪ್ರಪಂಚದ ಜ್ಞಾನವೇ ಇರುವುದಿಲ್ಲ ಅಂಥವುಗಳಿಗೆ ಯಾವುದು ಪ್ರಯೋಜನಕಾರಿ ಎಂಬುದನ್ನು ಬುದ್ಧಿಶಾಲಿಯಾದ ಉಪಾಧ್ಯಾಯನಲ್ಲವೆ ನಿರ್ಣಯಿಸಬೇಕು? ಇನ್ನೊಂದು ವಾದವು ಈ ಅಭಿಪ್ರಾಯವನ್ನು ಬಲಗೊಳಿಸುವುದು 40 ಹುಡುಗರ ಒಂದು ತರಗತಿಯಲ್ಲಿ ಒಬ್ಬ ಉಪಾಧ್ಯಾಯನು 40 ಮನಸ್ಸುಗಳಿಗೆ ಸರಿಯಾಗಿ ಪಾಠ ಹೇಳುವುದು ಕಷ್ಟದ ಕೆಲಸ ಬದಲು—40 ಹುಡುಗರು ಒಬ್ಬ ಉಪಾಧ್ಯಾಯನ ಮನೋಧರ್ಮ ತಿಳಿದು—ಅವನಿಗೆ ಬೇಕಾದ ತರಕಾರಿಗಳನ್ನು ತಂದುಕೊಟ್ಟು ತೃಪ್ತಿಪಡಿಸುವುದು ಲೇಸಾದ ಕ್ರಮವಲ್ಲವೇ?

ಮಿಡೇಮ್ ಮಾಂಟಿಸೂರಿ ಎಂಬವರು ಮಕ್ಕಳಿಗಾಗಿ ನರ್ಸರಿ ಶಾಲೆ ಅಥವ ಮಕ್ಕಳ ಕೂಟ—ಎಂಬ ಶಾಲೆಯನ್ನು ಮಾಡುತ್ತಿರುವರಂತೆ ಇಲ್ಲಿ ಮಕ್ಕಳಿಗೆ ಆಟದಿಂದಲೇ ಪಾಠ ಹೇಳುವುದಂತೆ ಪಾಠವೇ ಇವರ ಪಾಲಿಗೆ ಆಟವಾದ ಮೇಲೆ ಇವರ ಆಟವೇ ಹೇಗಾಗಬೇಕಾಯಿತು? ಉಳಿದವರಿಗೆ ಪೀಚಾಟವೇ ಸರಿ ಮಕ್ಕಳ ಕುತೂಹಲವನ್ನು ಹೆಚ್ಚಿಸಿ ಅವರು ಕೇಳುವ ಪ್ರಶ್ನೆಗಳಿಗೆ ಉಪಾಧ್ಯಾಯನು ಉತ್ತರ ಕೊಡಬೇಕೆ ಬುದು ಮತ್ತೊಂದು ವರ್ಗದ ಪಂಡಿತರ ಮತ ಇದೂ ಅಧಿಕ ಪ್ರಸಂಗವೇ ಸರಿ ಮಕ್ಕಳ ಕುತೂಹಲ ಹೆಚ್ಚಿದರೆ,—ಮನೆಯಲ್ಲಿನ ಕಾಸನ್ನೆಲ್ಲಾ ಬರಿದು ಮಾಡಿಬಿಟ್ಟಾವು ಅಲ್ಲದೆ 40 ಜನರ ಒಂದು ಕ್ಲಾಸಿನಲ್ಲಿ 40 ಹುಡುಗರು ಕೇಳುವ—(ತಲಾ ಒಂದರ ಮೂರರಂತೆ ಪ್ರಶ್ನೆಯನ್ನು ತಿಳಿದರೂ–) 120 ಪ್ರಶ್ನೆಗಳಿಗೆ ಉಪಾಧ್ಯಾಯನು ಉತ್ತರಿಸಲು ಒಂದು ದಿನವೇ ಸಾಕಾಗದು

ಈ ಎಲ್ಲ ಕಾರಣಗಳಿಂದ ನಮ್ಮ ಪ್ರಾಚೀನ ಕಾಲದ ವಿದ್ಯಾಭ್ಯಾಸವೇ ಲೇಸೆಂದು ತೋರುವುದು ಆಗಿನ ಕಾಲದಲ್ಲಿ ಶಿಕ್ಷಣವು ಹೇಗೆ ನಡೆಯುತ್ತಿತ್ತೆಂಬ ವಿಚಾರ ವಿವರವಾಗಿ ತಿಳಿದಿಲ್ಲವಾದುದರಿಂದ ಆಗಿನ ಶಿಕ್ಷವು ತೊಡಕಿಲ್ಲದೆ ಸಾಗಿರಬೇಕೆಂದು ನಿರ್ವಿವಾದವೇ ಸರಿ ಅಲ್ಲದೆ—ಪ್ರಾಚೀನ ಗುರುಗಳ ಶಿಕ್ಷಣದಿಂದ ತಮಗೆ ತೊಂದರೆಯಾಗಿದೆಯೆಂದು ಯಾವ ಹುಡುಗನೂ ದೂರು ಕೊಟ್ಟ ವಿಷಯವಾಗಿ ಚರಿತ್ರೆಯಾಗಲಿ, ಶಿಲಾಲಿಪಿಗಳಾಗಲಿ ಹೇಳುವುದಿಲ್ಲ

ಮುಖ್ಯವಾಗಿ ನಮಗೆ ವಿದ್ಯೆ ಬೇಕು ಹುಡುಗರು ಶಾಲೆಗೆ ಹೋಗುವುದು ಅವಶ್ಯ ಇಲ್ಲವಾದರೆ ಮನೆಯಲ್ಲಿ ತಾಯಿಯು ಅಡುಗೆ ಮಾಡುವುದಕ್ಕೆ ವಿರಾಮ ಸಿಗದು ಹೆಚ್ಚು ಹಣ ಬೇಕಾಗುವಲ್ಲಿ ಬಡವರ ಹುಡುಗರು, ವಿದ್ಯೆಯನ್ನು ಮುಂದರಿಸಲು ವಿಶ್ವವಿದ್ಯಾಲಯಗಳಿಗೆ ಹೋಗಕೂಡದೆಂದು ತೀರ್ಮಾನಿಸತಕ್ಕದ್ದು ಅಲ್ಲದೆ ಈಗಿನ ನಮ್ಮ ಸರಾಸರಿ ಆಯುಷ್ಪ್ರಮಾಣವು 28–24 ವರುಷವಿರುತ್ತ—ಎಲ್ಲಾ ಕಾಲವನ್ನು ವಿದ್ಯೆಯಲ್ಲಿ ಕಳೆಯಲು ಬರುವುದಿಲ್ಲವೆಂದ ನಿಮಿತ್ತ—ಸಾಮಾನ್ಯವಾಗಿ ¼ನೇ ಅಂಶ ಅಂದರೆ 6 ವರುಷ ಕಾಲ ವಿದ್ಯೆ ಕಲಿಯುವುದರಿಂದ ಹೆಚ್ಚಿನ ಅಪಾಯವಿಲ್ಲವೆಂದೂ—ದುಡಿದೇ ಬದುಕಬೇಕಾಗಿಲ್ಲದ ಶ್ರೀಮಂತರ ಮಕ್ಕಳು 24ನೇ ವಯಸ್ಸಿನ ತನಕವೂ, ತಪ್ಪಿ ಬದುಕಿ ಉಳಿದಲ್ಲಿ ಅನಂತರವೂ ಶಾಲಾ ಕಾಲೇಜುಗಳಿಗೆ ಹೋಗಬಹುದೆಂದು ನಿರ್ಧರಿಸಬಹುದು.

ಮಾತ್ರ ಶಿಕ್ಷಣವಿರತಕ್ಕ ಶಾಲೆಗಳಲ್ಲಿ—ಹುಡುಗರು ಉಪಾಧ್ಯಾಯರ ಮನೆಗೆ ಪ್ರತಿನಿತ್ಯ ಸಾಕಾಗುವಷ್ಟು ತರಕಾರಿಯನ್ನು ಒಯ್ದು ಮುಟ್ಟಿಸಬೇಕೆಂದೂ, ಗುರುದಕ್ಷಿಣೆ ಕೊಡದೆ ಕಲಿತ ವಿದ್ಯೆಯು ಜೀರ್ಣವಾಗದೆಂದೂ ಹೇಳಿ ಈ ಪ್ರಾಮುಖ್ಯ ಅಧ್ಯಾಯವನ್ನು ಮುಗಿಸುತ್ತೇವೆ.

ನೋಟೀಸು.

ಉಡುಪಿ ಡಿಸ್ಟ್ರಿಕ್ಟ್ ಮುನ್ಸೀಫ್ ಕೋರ್ಟಿನಲ್ಲಿ.

O P. 51/34

ಪಿಲಿಫ್– ಫೆರ್ನಾಂಡಿಸ್—ಸಾಲ್ವೋದರ ಫೆರ್ನಾಂಡಿಸರ ಮಗ—ಉಡುಪಿ ತಾಲೂಕು ಪಡು ತೋನ್ಸೆ ಗ್ರಾಮದಲ್ಲಿರುವವರು— ಅರ್ಜದಾರ

ಮತ್ತು

1 ಫ್ಲೋರಿನ್ ಅಂದ್ರ್ರಾದ ಬ್ಯಾ, 2 ರೋಜಿನಾ ಅಂದ್ರಾದ ಬ್ಯಾ, 3 ಕಾತ್ರಿನ್ ಅಂದ್ರಾದ ಬ್ಯಾ—ಜಾಕೋಬ ಅಂದ್ರಾದರ ಮಗಳಂದಿರು 4 ಜೋಸೆಫ್ ಅಂದ್ರಾದ 5. ಇಗ್ನೇಶಿಯುಸ ಅಂದ್ರಾದ 6 ಸಿಮಾಂವ ಅಂದ್ರಾದ (ಮ್ಯಾನರ ಇವರ ಗಾರ್ಡಿಯನ್ 5ನೇ ಎದ್ರಿ) 7 ಅಂತೋನಿ ಫೆರ್ನಾಂಡಿಸ್—ಜಾಕೋಬ ಸಾವಂತರ ಮೊಮ್ಮಕ್ಕಳು 8 ದಾವಿದ್ ಮಿನೆಜಸ್ 9 ರೋಜಿನಾ ಫೆರ್ನಾಂಡಿಸ್ ಬ್ಯಾ—ಇವಳು ಜಾಕೋಬ ಅಂದ್ರಾದರ ಮೊಮ್ಮಗಳು 8ನೇಯವರು 9ನೇಯವರ ಗಾರ್ಡಿಯನ್ ಮತ್ತು ಗಂಡ—ಎದ್ರಿರು.

ಅರ್ಜದಾರನ ಮಾವ 1–3ನೇ ಎದ್ರಿರ ತಂದೆ, 4–7 ಮತ್ತು 9ನೇ ಎದ್ರಿರ ಅಜ್ಜ ಉಡುಪಿ ತಾಲೂಕು ಪಡುತೋನ್ಸೆ ಗ್ರಾಮದ ಜಾಕೋಬ ಸಾವಂತರು ವೀಲು ಮನೈರೆ ಮಾಡದೆ ಮೃತಪಟ್ಟ ತರುವಾಯ, ಸದ್ರಿಯವರ ಬಾಬ್ತು ಸ್ಥಿರಾಸ್ತಿಗಳು ಈ ಕೋರ್ಟಿನಲ್ಲಿ ಆದ ಕ್ರಮ ನಂಬ್ರ 398/31ರಲ್ಲಿ ನಡೆದ ಅಮಲ್ಜಾರಿಯಲ್ಲಿ ಏಲಂ ಆಗಿ, ಸದ್ರಿ ಡಿಕ್ರಿ ಪೂರ್ಣ ಸಮಾಧಾನವಾದ ತರುವಾಯ ಉಳಿದ ಐವೇಜಿನಲ್ಲಿ, ಅರ್ಜದಾರರ ಹೆಂಡತಿ ಎವುಜಿಬ್ ಅಂದ್ರಾದ ಬ್ಯಾ ಮತ್ತು ಮಗಳು ಮಾರ್ಗರೆಟ್ ಫೆರ್ನಾಂಡಿಸ್ ಬ್ಯಾ ಕೂಡ ಹಕ್ಕುದಾರರಾಗಿರುತ್ತಾ, ಸದ್ರಿಯವರು ಕೂಡ ವೀಲು ಮನೈರೆ ಮಾಡದೆ ಮೃತಪಟ್ಟಿರುವುದರಿಂದ, ಸದ್ರಿಯವರ ವಾರಿಸ್ದಾರನಾದ ಅರ್ಜದಾರನು, ಸದ್ರಿ ಕೋರ್ಟಿನಲ್ಲಿ ಡಿಪೋಜಿಟ್ ನಲ್ಲಿರುವ ಐವೇಜಿನಲ್ಲಿ ರೂ 480–13–2ನ್ನು ಪಡೆಯಲು ಅರ್ಹನಾಗಿರುತ್ತೇನೆಂತಲೂ, ಸದ್ರಿ ಐವೇಜನ್ನು ಪಡೆಯುವರೆ ತನಗೆ ಒಂದು ವಾರೀಸು ಸರ್ಟಿಫಿಕೇಟು ಕೊಡಬೇಕಾಗಿಯೂ ಕೇಳಿ ಕೊಟ್ಟ ಮೇಲ್ಕಂಡ ಅರ್ಜಿಯು ತಾರೀಕು 23–10–'34ಕ್ಕೆ ಇಟ್ಟಿರುವುದರಿಂದ, ಆ ಕುರಿತು ಆಕ್ಷೇಪ ಇರುವವರು ಈ ಕೋರ್ಟಿನ ಮುಂದೆ ಸದ್ರಿ ತಾರೀಕ ದಿವಸ ಹಗಲು ಘಂಟೆ 10ಕ್ಕೆ ಹಾಜರಾಗಿ ತಮ್ಮ ಆಕ್ಷೇಪಗಳನ್ನು ಜ್ಯಾಹೀರುಮಾಡಿಕೊಳ್ಳತಕ್ಕದ್ದು ಎಂತ ಈ ಮೂಲಕ ತಿಳಿಸಲಾಗುತ್ತದೆ.

Udipi 17–9–'34 }

K Vittal Nayak

Pleader for Petitioner

ದಿ ಕೆನರಾ ಬ್ಯಾಂಕಿಂಗ್ ಕೋರ್ಪೊರೇಶನ್, ಉಡ್ಪಿ, ಲಿಮಿಟೆಡ್, ಮಂಗಳೂರು

ನೋಟೀಸು.

ಈ ಕೆಳಗೆ ಹೆಸರು ಕಾಣಿಸಿದವರು ಸದರಿ ಬೇಂಕಿನಿಂದ ಚಿನ್ನಾಭರಣಗಳ ಈಡಿನ ಮೇಲೆ ಪಡೆದ ಮೂಲಧನವಾಗಲಿ, ಅದರ ಬಡ್ಡಿಯನ್ನಾಗಲೀ ವಾಯಿದೆಗೆ ಕೊಡದೆ ಇದ್ದುದರಿಂದಲೂ ಸದರಿಯವರಿಗೆ ಬಿಟ್ಟ ರಿಜಿಸ್ಟ್ರಿ ನೋಟೀಸು ಅವರಿಗೆ ಪಾವತಿ ಆಗದೆ ಇರುವ ಕಾರಣದಿಂದಲೂ ಈ ಮೂಲಕ ತಿಳಿಯಪಡಿಸುವುದೇನೆಂದರೆ– ಸದ್ರಿಯವರಿಂದ ಬೇಂಕಿಗೆ ಸಲ್ಲತಕ್ಕ ಸಾಲದ ಬಡ್ಡಿ ಐವೇಜು ರಿಜಿಸ್ಟ್ರಿನೋಟೀಸು ಖರ್ಚು ಮತ್ತು ಈ ನೋಟೀಸು ಖರ್ಚು ವ ಬಡ್ಡಿಗೆ ಬಡ್ಡಿ ಕೂಡಿಸಿ ಇದೇ 1934ನೇ ಇಸವಿ ಅಕ್ಟೋಬರ ತಿಂಗಳ ತಾ 25ನೇ ಗುರುವಾರದ ಒಳಗೆ ತಂದುಕೊಟ್ಟು ಅಡವಿಟ್ಟ ನಗಗಳನ್ನು ಸದ್ರಿಯವರು ಬಿಡಿಸಿಕೊಂಡು ಹೋಗದೆ ಇದ್ದರೆ ಸದ್ರಿಯವರು ಈಡಾಗಿಟ್ಟ ನಗಗಳನ್ನು ಇದೇ 1934ನೇ ಇಸವಿ ಅಕ್ಟೋಬರ ತಿಂಗಳು ತಾ 27ನೇ ಶನಿವಾರ ಮಧ್ಯಾಹ್ನ ಘಂಟೆ 1ಕ್ಕೆ ಸರಿಯಾಗಿ ಬೇಂಕಿನ ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡಲಾಗುವುದು—

ಸಾಲದ ನಂಬ್ರ 4/31 ಈಡಿಟ್ಟವರ ಹೆಸರು M. Unhi Rustum S/o Rustum, Proprietor, Rustum Grand Electric Cinema, Sagara, Shimoga Dt. ಮೊಬಲಗು ರೂ 300–0–0.

ಸಾಲದ ನಂಬ್ರ 380/32. ಈಡಿಟ್ಟವರ ಹೆಸರು K. Sridhara Rao, S/o Narnappaya, Patel of Iddya Village, Surathkal ಮೊಬಲಗು ರೂ. 75–0–0.

Office of the Corporation Mangalore 18–9–1934.

K. Vittal Bhandary,

Agent.

ಭಯೋತ್ಪಾದಕರ ಮೂಲೋತ್ಪಾಟನವಾಗಬೇಕು!

[illegible] ಗಳು.

[illegible] ಪತ್ರಿಕೆಗಳಿಗಂತೂ ಭಯಂಕರ [illegible] ಇಲ್ಲ. ಮುಂಡಾಸುಗಳನ್ನು ಮುಖಗಳನ್ನೂ ನೋಡಿ ಬೆದರುವವರಿದ್ದಾರೆ. ವಿಚಿತ್ರವೆಂದರೆ ಮುಂಡಾಸಿನವರು ಇಲ್ಲದವರನ್ನು ನೋಡಿ ಬೆದರುವವರು!

* * *

'ಜಾತಿದ್ವೇಷ'ವು ಇಲ್ಲದಿದ್ದಲ್ಲಿ ಅದರ ಬೀಜವನ್ನು ಬಿತ್ತುವವರು ಇರುವರು. 'ಜಾತಿಯಿಲ್ಲದವರೇ' ಇದನ್ನು ಬಿತ್ತುವರೆಂದರೆ,—ಕೇಳಿಯಾರಿಗಾದರೂ ಬೋಧ್ಯವೆನಿಸಬಹುದು.

* * *

ಈ ಬಾರಿಯ ನಮ್ಮ ಮುನಿಸಿಪಲ್ ಚುನಾವಣೆಗಳಲ್ಲಿ ಜಾತಿದ್ವೇಷವೇ 'ಒಡೆದು ಕಾಣುತ್ತಿದೆ'ಯೆನ್ನುವ ಕೆಲಮಂದಿ ತುಂಟರು ಡಂಗುರಹೊಯ್ಯಲು ಹೊರಟಿರುವರು. ಆದರೆ, ಜಾತಿ-ಜಾತಿಗಳೊಳಗೇ ಇರುವ ತಿಕ್ಕಾಟವನ್ನು ನೋಡಿದ್ದರೆ ಜಾತಿದ್ವೇಷ (ಅಥವಾ ಒಂದೇ ಜಾತಿಯವರ 'ಸ್ವಾರ್ಥಸಾಧನೆ') ಎಂಬುದು ಈ ತುಂಟಚೋರರ ಕಲ್ಪನೆಯ ಭೂತವೆಂದು ತಿಳಿದುಬಾರದಿರದು.

* * *

ಎಂದಾದರೊನ್ನು ಯಾವುದಾದರೊಂದು ಸಮಾಜದ ಉಮೇದ್ವಾರರ ಸಂಖ್ಯೆ ಕೊಂಚ ಹೆಚ್ಚಾಗಿರುವುದನ್ನು ಕಾಣುತ್ತಲೇ—'ಇದು ಸ್ವಾರ್ಥ; ಇದು ದ್ವೇಷ'ವೆಂದು ಕೂಗುವುದರಲ್ಲಿ ಅರ್ಥವಿಲ್ಲ. ಜಾತಿದ್ವೇಷದ ಕಿಡಿಯನ್ನಿಟ್ಟುಬಿಡುವ ಹವಣಿಕೆಯಿದು.

* * *

ಅಂಥವರು ಹಿಂದೆ ಯಾವುದಾದರೊಂದು ಒಂದೇ ಸಮಾಜದವರು ಪ್ರಾಮುಖ್ಯ ಸಂಸ್ಥೆಗಳ ಮೇಲ್ಪದವಿಯಲ್ಲಿ ರಾರಾಜಿಸುವಾಗ ಆಗಲೂ 'ಜಾತಿದ್ವೇಷ!'ವೆಂಬ ಕೂಗನ್ನೆಬ್ಬಿಸಲಿಲ್ಲ. ಈಗ ಮಾತ್ರ 'ಜಾತಿದ್ವೇಷ'ವೆಂದ ಕಿಡಿಯನ್ನಿಟ್ಟುಬಿಡುವುದರ ಮರ್ಮವೇನು?

* * *

ತಮ್ಮ ಸಾಲಕ್ಕಾಗಿ ಜೈಲಿಗೆ ಕಳುಹದೆ ರಿಯಾಯತಿ ತೋರಿದ ಬ್ಯಾಂಕರರನ್ನು, ಔಷಧ ಕೊಟ್ಟು ಬೀಲು ಕಳುಹದ ಡಾಕ್ಟರರನ್ನು, ಸುಳ್ಳು ಸತ್ಯ ವ್ಯಾಜ್ಯಗಳೆರಡನ್ನೂ ವಹಿಸಿಕೊಂಡು ರುಸುಮು ಕೇಳಲು ಸಂಕೋಚಗೊಳ್ಳುವ ವಕೀಲರನ್ನು, ಅಂಗಡಿ ಸಾಮಾನಿನ 'ಬಾಕಿ'ಗಾಗಿ ಡಿಕ್ರಿ ಹೊಡೆದೂ ಸುಮ್ಮನೆ ಕುಳಿತ ಅಂಗಡಿಗಾರರನ್ನು, ಪ್ರೊನೋಟು ಇಲ್ಲದೆ ಹಣಕೊಟ್ಟ ಜಮೀನುದಾರರನ್ನು—ಅವರವರ 'ಹಂಗೀ'ಕರು ಹೊಗಳುವುದು ಸಹಜವಾಗಿರಬಹುದು. ವೋಟರರು ಮಾತ್ರ ಕಣ್ಣು ಮುಚ್ಚಿ ನಡೆಯದಿರಲಿ!

* * *

ಇದೊಂದು ವಾರವು, ಆರೋಗ್ಯದೃಷ್ಟ್ಯಾ ಬಹು ಅಪಾಯಕಾರಿಯಾದುದು. ತಾ. ೨೮ರ ತನಕ ಉದ್ರೇಕದಿಂದ ನೆತ್ತರು ಬಿಸಿಯಾಗಬಹುದಾದ ಕೆಲವರಿಗೆ ತಾ. ೨೯ನೇ ದಿನ ಥಕ್ಕನೆ ವಿರುದ್ಧ ಮಾರ್ಪಾಟಾಗಬಹುದು. ತಾ. ೨೮ರ ತನಕ ಶುದ್ಧ ಗಾಳಿಯನ್ನರಿಯದ ವೋಟರರಿಗೆ ತಾ. ೨೯ನೇ ದಿನ ಥಕ್ಕನೆ ಮೋಟಾರ್ ಸಂಚಾರದಿಂದ ಅದರ ಸುಖ ದೊರೆಯಬಹುದು. ಇವೆರಡೂ ಬಗೆ—ಆರೋಗ್ಯಕ್ಕೆ ಕೆಡುಕು.

* * *

ಸ್ಪರ್ಧೆಯಿರುವ ವಾರ್ಡುಗಳಲ್ಲಿ, ಯಾರನ್ನು ಚುನಾಯಿಸಬೇಕು ಎಂದು ತಿಳಿಯದ ವೋಟರರು, ಉಮೇದ್ವಾರರ ಬಳಿಗೆ ಹೋಗಿ ಮಾತಾಡಿದರೆ ಅವರೇ ಹೇಳುವರು.

* * *

ಖಾನ್ ಅಬ್ದುಲ್ ಗಫರ್‌ಖಾನರು ಸೈನಿಕನ್ನಾಗಿಯೇ ಉಳಿಯುವರಂತೆ. ಬಾಬೂ ರಾಜೇಂದ್ರ ಪ್ರಸಾದರವರು ಭೂಕಂಪ ಪ್ರದೇಶದಲ್ಲಿ ಇರಲಿಚ್ಛಿಸುವರಂತೆ. ಇಬ್ಬರಿಗೂ ಕೊಂಗ್ರೆಸ್ ಅಧ್ಯಕ್ಷಸ್ಥಾನವು ಅಪೇಕ್ಷಣೀಯವೆನಿಸಲಿಲ್ಲ.

[illegible]—ಭಯೋತ್ಪಾದಕ ಚಳವಳಿಯನ್ನು [illegible] ಎಂದು ಏರ್ಪಡಿಸಿದ ಸಭೆಯಲ್ಲಿ ಸ್ವಾಗತ ಸಮಿತಿ ಅಧ್ಯಕ್ಷರಾದ ಶ್ರೀ ಹಿ. ಎಸ್. [illegible] ರವರ ಭಾಷಣದಾರಾಂಶವು (೧೫—೯—೩೪) ಯುವಕರಿಗೆ ಉದ್ಯೋಗಗಳನ್ನು ದೊರಕಿಸಿಕೊಡುವುದೊಂದು ಮುಖ್ಯ ಕಾರ್ಯ. ಹಾಗೆಯೇ, ಎಳೆಯ ಪ್ರಾಯದಿಂದಲೇ ಅವರನ್ನು ಭಯೋತ್ಪಾದಕ ಚಳವಳಿಯ ನಿಷ್ಫಲತೆ ಹಾಗೂ ದುಷ್ಪರಿಣಾಮಗಳ ಕುರಿತಾಗಿ ಎಚ್ಚರಿಸಬೇಕೆಂದೂ ಸೂಚನೆಯಾಗಿದೆ. ೩೫ ವರ್ಷಗಳಿಂದ ಹಬ್ಬಿ ಬರುತ್ತಲೇ ಇರುವ ಈ ಚಳವಳಿಯನ್ನು ನಿಲ್ಲಿಸಲು ಶಾಂತಿಪ್ರಿಯ ಪ್ರಜೆಗಳೆಲ್ಲರೂ ಸಹಕರಿಸಬೇಕೆಂದೂ ಸರಕಾರದಿಂದಲೂ ಪೂರ್ಣ ಸಹಕಾರ—ಸಹಾಯಗಳು ನಿರೀಕ್ಷಿಸಲಾಗಿವೆಯೆಂದೂ ಅಧ್ಯಕ್ಷರ ಭಾಷಣವಾಗಿದೆ. ಈ ಪರಿಷತ್ತಿನವರು ಸರಕಾರಕ್ಕೆ ಒಂದು ಮನವಿ ಮಾಡತಕ್ಕದ್ದೆಂದು ನಿರ್ಧರಿಸಿರುವರು: ಭಯೋತ್ಪಾದಕ ಚಳವಳವನ್ನು ನಿಲ್ಲಿಸಲು ಪ್ರಚಾರಕಾರ್ಯ; ಸರಕಾರವು ಹೆಚ್ಚು ಬಂಗಾಳೀ ಯುವಕರಿಗೆ ಕೆಲಸ ಕೊಡಿಸಬೇಕು, ಯುರೋಪಿಯ ಸಂಸ್ಥೆಗಳೂ ಬಂಗಾಳಿಗಳನ್ನೆ ಕೆಲಸಕ್ಕೆ ಹಚ್ಚಿಕೊಳ್ಳಬೇಕು, ಕೊಂಗ್ರೆಸ್ಸಿನವರೂ ಈ ಸಮಸ್ಯೆಯ ಕಡೆಗೆ ಗಮನಕೊಡಬೇಕು—ಈ ಸೂಚನೆಗಳಾಗಿವೆ.

ಕಡಲನೀರಿನಿಂದ ಪೆಟ್ರೋಲು.

ಸಮುದ್ರದ ನೀರಿನಿಂದ, ಅಲ್ಪ ವೆಚ್ಚದಲ್ಲಿ ಉತ್ತಮ ತರಗತಿಯ ಪೆಟ್ರೋಲನ್ನು ತಯಾರಿಸುವ ಕ್ರಮವನ್ನು ತಾನು ಕಂಡುಹಿಡಿದಿರುವೆನೆಂದು, ಫ್ರಾನ್ಸಿನ ಆಲ್ಬರ್ಟ್ ನಾಮಾಂಕಿತ ವೈಜ್ಞಾನಿಕನು ಪ್ರಕಟಿಸಿರುವನು. ಅದರ ವಿಧಾನವನ್ನು ತಿಳಿಸಬೇಕಾದರೆ ೨೫ ಮಿಲ್ಲಿಯ ಪವನುಗಳನ್ನು ಕೊಡಬೇಕೆಂದು ಕೇಳಿಕೆ.

ಡಾರ್ಜಿಲಿಂಗ್ ಅತ್ಯಾಚಾರ. ಅಪರಾಧಿಕರಿಗೆ ಫಾಸಿ.

ಲೇಬಂಗ್ (ಡಾರ್ಜಿಲಿಂಗ)ದಲ್ಲಿ ಬಂಗಾಳ ಗವರ್ನರರ ಕಡೆಗೆ ಇದೇ ಕಳೆದ ಮೇ ತಾ. ೮ರಲ್ಲಿ ಕುದುರೆ ಜೂಜಿನ ಸಂದರ್ಭದಲ್ಲಿ, ಪಿಸ್ತೂಲು ಹಾರಿಸಿ ಕೊಲೆಗೆ ಯತ್ನಿಸಿದರೆಂಬ ಅಪಾದನೆಯಲ್ಲಿ ದೋಷಾರೋಪಣೆಗೊಳಪಡಿಸಲ್ಪಟ್ಟವರ ವಿಚಾರಣೆ ಮುಗಿಯಿತು. ಅಪಾಧಿತರಲ್ಲಿ, ಭವಾನಿ ಭಟ್ಟಾಚಾರ್ಜಿ, ರವೀಂದ್ರ ಬೆನರ್ಜಿ ಮತ್ತು ಮನೋರಂಜನ ಬೆನರ್ಜಿ, ಇವರಿಗೆ ಫಾಸಿ; ಸುಕ ಮಾರ ಘೋಷ ಮತ್ತು ಮಧುಸೂಧನ ಬೆನರ್ಜಿ ಎಂಬವರಿಗೆ ೧೪ ವರ್ಷಗಳ ಕಠಿಣ ಸಜೆ; ಮಿಸ್ ಮುಜುಮದಾರಳಿಗೆ ಆಜನ್ಮ ದ್ವೀಪಾಂತರವಾಸ, ಸುಶೀಲ ಚಕ್ರವರ್ತಿಗೆ ಹನ್ನೆರಡು ವರ್ಷಗಳ ಕಠಿಣ ಸಜೆ.

ವಿಶೇಷ ನ್ಯಾಯಾಧೀಶಮಂಡಲವೊಂದು ಈ ಮೊಕದ್ದಮೆಯ ವಿಚಾರಣೆಗಾಗಿ ನೇಮಿಸಲಾಗಿತ್ತು.

ಜಪಾನಿನವರ ಸಹಾಯದಿಂದ ಹೊಸ ಉಕ್ಕಿನ ಕಾರ್ಖಾನೆ.

ಮುಂಬಾಯಿಯ ತಾತಾನಗರ ಟ್ರಿಬ್ ಫ್ಯಾಕ್ಟ್ರಿಯ ಜಗನ್ನಾಥ ಅಗರ್‌ವಾಲಾ ಎಂಬವರು ದೊಡ್ಡದೊಂದು ಉಕ್ಕಿನ ಕಾರ್ಖಾನೆಯನ್ನು ತೆರೆಯಲಿರುವರೆಂದೂ, ಜಪಾನಿನಿಂದ ಚಾಣಾಕ್ಷ ಕೆಲಸಗಾರರನ್ನು ಕರೆತರಿಸಿ, ತಾತಾರವರ ಉಕ್ಕಿನ ವ್ಯಾಪಾರವನ್ನು ಸ್ಪರ್ಧಿಸಬಹುದೆಂದೂ ಸುದ್ದಿ ಹರಡಿದೆ.

ಹೈದರಾಬಾದ್ ಪೋಸ್ಟಾಫೀಸಿನಲ್ಲಿ ೧೩,೦೦೦ ರೂಪಾಯಿಗಳನ್ನು ದುರುಪಯೋಗಪಡಿಸಿದ ಅಬ್ದುಲ್ ಅಕ್ಬರ್ ಖಾದ್ರಿ ಎಂಬವನನ್ನು ಮುಂಬಾಯಿಯಲ್ಲಿ ದಸ್ತಗಿರಿ ಮಾಡಿರುವರು.



ಡಾ। ಪಿ. ಸುರೇಂದ್ರನಾಥ ಬಾಳಿಗರವರು, ಪಿ. ಎಚ್. ಡಿ. ಪ್ರಥಮ ಹಿಂದೀಯ ಕ್ಯುರೇಟರ್ ಒಫ್ ರೆಕೊರ್ಡ್ಸ್‌ರಾಗಿ ನೇಮಿಸಲ್ಪಟ್ಟಿರುವರು. ಇವರು ರಿಟಾಯರ್ಡ್ ಡಿ. ಎಂ. ಒ. ರಾದ ಶ್ರೀಯುತ ಬಂಟ್ವಾಳ ಡಾ। ರಾಘು ಬಾಳಿಗರವರ ಪುತ್ರರು.

"ಪೂರ್ಣ ಸ್ವರಾಜ್ಯವೇ ನಮ್ಮ ಧ್ಯೇಯವು."

ವಾರ್ಧಾಗಂಜದಲ್ಲಿ ಸೇರಿದ ಕೊಂಗ್ರೆಸ್ ಕಾರ್ಯಕಾರಿ ಸಮಿತಿಯು ಈ ಕೆಳಗಿನ ಪ್ರಕಟಣೆ ಕೊಟ್ಟಿದೆ:—

"ಕೊಂಗ್ರೆಸ್ಸು ಪೂರ್ಣ ಸ್ವಾತಂತ್ರ್ಯದ ನಿರ್ಧಾರದಿಂದ ಹಿಂದಡಿಯಿಡುತ್ತಿದೆಯೆಂದು ಕೆಲವರಲ್ಲಿ ಸಂದೇಹವೆದ್ದಿದೆಯೆಂದು ತಿಳಿದುಬಂದಿದೆ. ಅದು ಕಾರಣ, ಅವರ ಸಂಶಯ ನಿವಾರಣಾರ್ಥ ಈ ಪ್ರಕಟಣೆಯನ್ನು ಕೊಡುತ್ತ, ಪೂರ್ಣ ಸ್ವರಾಜ್ಯವನ್ನೆ ನಿಶ್ಚಿತಗುರಿಯಾಗಿಟ್ಟುಕೊಂಡು ಕೊಂಗ್ರೆಸ್ಸು ಮುನ್ನಡೆಯುತ್ತಿದೆಯೆಂದು ತಿಳಿಸಬಯಸುವೆವು."

ಸಂಕ್ಷೇಪ ವಾರ್ತೆ.

ಅತ್ಯಾಚಾರಕ್ಕೆ ಪ್ರೇರಿಸಿದನೆಂಬ ಅಪರಾಧಕ್ಕೆ ಕಲ್ಕತ್ತೆಯ ಚೀಫ್ ಪ್ರೆಸಿಡೆನ್ಸಿ ಮೆಜಿಸ್ಟ್ರೇಟರು ಒಬ್ಬ ಜರ್ಮನ್ ಯುವಕನಿಗೆ ಆರು ತಿಂಗಳ ಸಜೆ ವಿಧಿಸಿದರು.

ಜರ್ಮನಿಯ ರೈಲುಬಂಡಿಗಳಲ್ಲಿ ಮೂರನೆ ತರಗತಿಯಲ್ಲೂ ಮೆತ್ತನೆಯ ಆಸನಗಳನ್ನಿರಿಸಿ ಪಯಣಿಗರ ಸುಖವನ್ನು ಹೆಚ್ಚಿಸಿರುವರು.

ಮುಂಬಾಯಿಯಲ್ಲಿ ಕೊಂಗ್ರೆಸ್ ಸಭಾಧಿವೇಶನದ ಸಮಯದಲ್ಲಿ ನಡೆಯಲಿರುವ ಸ್ವದೇಶೀ ವಸ್ತುಪ್ರದರ್ಶನಕ್ಕೆ ವಸ್ತುಗಳನ್ನು ಕಳುಹಿಸುವವರಿಗೆ ರೈಲ್ವೆ ದರಗಳಲ್ಲಿ ಜಿ. ಐ. ಪಿ. ಮತ್ತು ಬಿ. ಬಿ. ಸಿ. ಐ. ರೈಲ್ವೆ ಕಂಪೆನಿಗಳು ರಿಯಾಯಿತಿ ತೋರಿಸುವುವೆಂದು ಪ್ರಕಟವಾಗಿದೆ.



ಕೊಂಗ್ರೆಸ್ ಪಾರ್ಲಿಮೆಂಟರಿ ಬೋರ್ಡಿನ ಪ್ರಕಟಣೆಯನ್ನು ಪಂಡಿತ್ ಮಾಲವೀಯರು ವಿಮರ್ಶಿಸುತ್ತ ಶ್ರೀ ದೇಸಾಯಿ ಮತ್ತು ಡಾ। ರೋಯಿಯವರಿಗೆ ಹೇಳುತ್ತಿರುವರು. ಕೊಂಗ್ರೆಸ್ ಮತ್ತು ಮಾಲವೀಯರವರು ಸ್ವರಾಜ್ಯಪಕ್ಷಗಳೊಳಗೆ ರಾಜಿಯಾಗುವುದೆಂದು ಊಹಿಸಲ್ಪಟ್ಟಿದ್ದರೂ ಅದು ನಿಷ್ಪ್ರಯೋಜಕವಾಯಿತು.

ಬಿಹಾರಿನ ನೆರೆ

ಬಿಹಾರಿನ ನೆರೆಗಳು ಈಗ ಸ್ವಲ್ಪ ಕಡಿಮೆಯಾದ ಸಂತೋಷಕರ ವಾರ್ತೆಯಿದೆ.

ಸರದಾರ್ ಸಬ್‌ಡಿವಿಜನಿನಲ್ಲಿ ೧೫೦೦ ಹಳ್ಳಿಗಳು ನೆರೆಯಿಂದ ಬಹುವಿಧ ನಷ್ಟಕ್ಕೊಳಗಾಗಿರುವಂತೆ ವರದಿಯಿದೆ. ಈ ಹಳ್ಳಿಗಳಲ್ಲಿ ಕಷ್ಟಕ್ಕೀಡಾದ ಜನರು ೫ ಲಕ್ಷ! ಅಲ್ಲಲ್ಲಿ ವಾಂತಿಭೇದಿಯೂ ತಲೆದೋರಿದೆ. ಪೀಡಿತರಿಗೆ ಸಹಾಯಿಸಲ್ಪಡುವ ಕಾರ್ಯ ನಡೆದಿದೆ.

ಗೋಣಿಚೀಲದಲ್ಲಿ ಹೆಂಗಸಿನ ಶವ

ಸೀಲ್ದಾ—ಢಿಲ್ಲಿ ಎಕ್ಸ್‌ಪ್ರೆಸ್ ರೈಲುಬಂಡಿಯು ಮೊಘಲ ಸರಾಯಿ ಸ್ಟೇಶನಿಗೆ ತಲುಪುವಾಗ ಮೂರನೇ ತರಗತಿಯ ಲ್ಯಾಟ್ರೀನಿನಲ್ಲಿ ಬಿಟ್ಟುಹೋದ ಒಂದು ಗೋಣಿಚೀಲವನ್ನು ರೈಲ್ವೆ ಅಧಿಕಾರಿಗಳು ತೆಗೆದು ನೋಡಿದ್ದಲ್ಲಿ—ಕುತ್ತಿಗೆಯ ಮೇಲೆ ಗಾಯವಿರುವ ಒಂದು ಹೆಂಗಸಿನ ಶವವು ಅದರಲ್ಲಿದ್ದುದು ಕಂಡುಬಂತು. ಹೆಣವನ್ನು ಆಸ್ಪತ್ರೆಗೆ ಸಾಗಿಸಿದರು. ಕೊಲೆಗಡುಕರಾರೆಂದು ಪತ್ತೆಯಿಲ್ಲ.

ವಿಚಿತ್ರ ಶಿಶು.

ಚಿಕಾಗೋದಲ್ಲಿ ಓರ್ವ ಹೆಂಗಸು ಆಸ್ಪತ್ರೆಯಲ್ಲಿ ಒಂದು ವಿಚಿತ್ರ ಶಿಶುವನ್ನು ಪ್ರಸವಿಸಿರುವಳು. ಅದಕ್ಕೆ ೪ ಅಂಗುಲದ ಒಂದು ಬಾಲವಿತ್ತು. ಕೈ-ಕಾಲುಗಳು ಬಾವಲಿಯ ಕಾಲುಗಳಂತಿವೆ. ಮೈಮೇಲೆಲ್ಲ ರೋಮ. ಮುಖವು ಕಪ್ಪಗೆ. ಶಿಶುವು [illegible] ಹರ್ಷದಿಂದಿತ್ತು.

ಕ್ಯೂಬಾ ದ್ವೀಪದಲ್ಲಿ ದಂಗೆ

ಕ್ಯೂಬಾ ದ್ವೀಪದ ಒಂದು ಗಿರಣಿಯಲ್ಲಿ ಮುಷ್ಕರಗಾರರು ದಂಗೆಯನ್ನಾರಂಭಿಸಿ, ಗಿರಣಿಯ ಬಾಗಿಲುಗಳನ್ನೊಡೆದು ಬೆಂಕಿಹಚ್ಚಲು ಯತ್ನಿಸಿದರು. ಪೋಲೀಸ ದಳದ ಮೇಲೆ ಕೈಮಾಡಿ, ಅನೇಕರನ್ನು ಜಖಂಗೊಳಿಸಿರುವರು. ಯಾವ ಸ್ಥಿತಿಯಲ್ಲೂ ಗೋಳಿಬಾರು ಮಾಡಬಾರದೆಂದೇ ೩೦೦೦ ಪೋಲೀಸರಿಗೂ ಮೇಲಾಧಿಕಾರಿಗಳು ಎಚ್ಚರಿಗೆ ಕೊಟ್ಟಿದ್ದರು.

೧೪೨ ಮಂದಿ ಜಖಂಗೊಂಡನಂತರ, [illegible]ಯವರ ಯತ್ನದಿಂದ ದಂಗೆ ಶಾಂತವಾಯಿತು.

ಅಮೇರಿಕದ ಮಹಾಮುಷ್ಕರ

ಅಮೇರಿಕದ ಗಿರಣಿಕೂಲಿಯಾಳುಗಳ ಮುಷ್ಕರವು ಪ್ರಬಲಿಸಿದೆ. ಒಂದೆರಡು ಕಡೆಗಳಲ್ಲಿ ಚಿಕ್ಕ ದಂಗೆಗಳಾಗಿವೆ. ಕಠಿಣಕಾನೂನು ಜ್ಯಾರಿಯಲ್ಲಿದೆ. ರಾಜಿಯ ಪ್ರಯತ್ನಗಳು ವಿಫಲವಾಗಿವೆ. ಇನ್ನು, ಅಧ್ಯಕ್ಷ ರೂಸ್‌ವೆಲ್ಟರೇ ರಾಜಿಪ್ರಸ್ತಾಪಗಳಲ್ಲಿ ಮಧ್ಯಸ್ತಿಕೆ ವಹಿಸಲಿರುವರೆಂದು ನಿರೀಕ್ಷೆ.

ಇದೇ ಕಳೆದ ಜುಲಾಯಿ ತಾ. ೧೬ರಿಂದ, ಕಣ್ಣಾನೂರು ಜೈಲಿನಲ್ಲಿ, ಮದ್ರಾಸು ಒಳಸಂಚಿನ ಮೊಕದ್ದಮೆಯ ಕೈದಿಗಳೆಲ್ಲೊಬ್ಬರಾದ [illegible] ಉಪವಾಸವಿರುವರೆಂದು ತಿಳಿದುಬಂದಿದೆ.

ನೋಟೀಸು.

ಪುತ್ತೂರು ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ.

ಕ್ರಮನಂಬ್ರ 381/1934.

ವೆಂಕಪ್ಪನಾಯ್ಕ, ಕೂಳೂರು ಶೇಷಗಿರಿನಾಯ್ಕರ ಮಗ ಹಾಲಿ ಪಾಣೆಮಂಗಳೂರು ಕಸಬಾ—ವಾದಿ,

ಎದ್ರು

ಶೇಷಗಿರಿನಾಯ್ಕ ಚಿತ್ತಾರ ಬಾಳಪ್ಪಯ್ಯನ ಮಗ, ಬಾಳ್ತಿಲ ಗ್ರಾಮಸ್ತ—ಪ್ರತಿವಾದಿ.

ಇವರೊಳಗೆ

ಸದರಿ ಪ್ರತಿವಾದಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ

ಈ ಪ್ರತಿವಾದಿ ವ ಶಿವರಾಮನಾಯ್ಕ ಕೂಡಾ 2 ಜನರು ವಾದಿಗೆ ರೂ. 500—0—0ಕ್ಕೆ ತಾರೀಕು 8—10—1931ರಲ್ಲು ಬರಕೊಟ್ಟ ಪ್ರೊ ನೋಟಿನ ಅಸಲು ಮತ್ತು ಬಡ್ಡಿ ಕೂಡಾ ರೂ. 637—8—0ನ್ನು ಬರಮಾಡಿಕೊಳ್ಳುವರೆ ಸದರಿ ವಾದಿಯು ಮೇಲ್ಕಂಡ ಕೋರ್ಟಿನಲ್ಲಿ ದಾಖಲುಮಾಡಿದ ವ್ಯಾಜ್ಯವು ಕಡಿಮೆ ಬಗ್ಗೆ ತಾ. 8—10—1934ಕ್ಕೆ ಇಟ್ಟಿರುತ್ತದೆ. ಆ ದಿವಸ ಹಗಲು 10 ಘಂಟೆಗೆ ಮೇಲ್ಕಂಡ ಕೋರ್ಟಿನಲ್ಲಿ ಹಾಜರಾಗಿ ವ್ಯವಹರಿಸಿಕೊಳ್ಳಬಹುದು. ತಪ್ಪಿದರೆ, ಸದರಿ ವ್ಯಾಜ್ಯವು ಏಕಪಕ್ಷವಾಗಿ ತೀರ್ಮಾನಿಸಲ್ಪಡುವುದು ಎಂದು ಕೋರ್ಟು ಹುಕುಂ ಪ್ರಕಾರ ಈ ನೋಟೀಸು ಮೂಲಕ ತಿಳಿಯಪಡಿಸಿಯದೆ.

Puttur, S. K. } B. Achyuta Baliga,
19—9—1934 } Vakil for Plaintiff.

ಮಂಗಳೂರು.

ಮಂಗಳೂರು ತಾಲೂಕು ಕೊಂಗ್ರೆಸ್ ಸಮಿತಿಯ ಸಭೆಯು ಕಳೆದ ತಾ. ೧೫ರಲ್ಲಿ ಡಾ। ಯು. ಪಿ ಮಲ್ಯ ಇವರ ಅಧ್ಯಕ್ಷತೆಯಲ್ಲಿ ಜರಗಿತು. ಮೊದಲು, ದಿವಂಗತ ... ರಾಯರ ಅಕಾಲನಿಧನದ ಬಗ್ಗೆ ದುಃಖ ... ಮೃತರ ಆತ್ಮಕ್ಕೆ ಶಾಂತಿಯುಂಟಾಗ ಲೆಂದು ಪ್ರಾರ್ಥಿಸಲಾಯಿತು ನಂತರ, ಬೊಂಬಾಯಿ ಯಲ್ಲಿ ಜರಗಲಿರುವ ೪೮ನೇ ರಾಷ್ಟ್ರಸಭಾಧಿವೇಶನಕ್ಕೆ ಪ್ರತಿನಿಧಿಗಳನ್ನು ಕಳುಹುವ ಕುರಿತು ಚರ್ಚೆ ಇದೇ ತಾ. ೩೧ರೊಳಗೆ ಕೊಂಗ್ರೆಸ್ ಸದಸ್ಯರಾಗುವವರೇ ಹಾಗೆ ಪ್ರತಿನಿಧಿಗಳಾಗಲು ಅರ್ಹತೆ ಪಡೆಯುವರೆಂದೂ, ಅವ ರೊಳಗಿಂದ ಒಬ್ಬನನ್ನು —ನಮ್ಮ ಜಿಲ್ಲಾ ಸಮಿತಿ ಮತ್ತು ತಾಲೂಕು ಕಮಿಟಿಗಳು ಒಟ್ಟಿಗೆ ಸೇರಿ ಚುನಾಯಿಸತಕ್ಕ ದೆಂದೂ, ಈ ಬಗ್ಗೆ ಸಭೆಯು ಇದೇ ತಾ ೩೧ರಲ್ಲಿ ಸೇರ ತಕ್ಕದೆಂದೂ ನಿರ್ಧಾರವಾಗಿದೆ.

ಇದೇ ತಾ. ೧೬ನೇ ಸೋಮವಾರ ಜರಗಿದ ಇಲ್ಲಿಯ ದೇರೆಬೈಲು ಆದಿದ್ರಾವಿಡರ ಸಹಕಾರಿ ಸಂಘದ ಮಹಾ ಸಭೆಗೆ ಡಿಪ್ಯೂಟಿ ರಿಜಿಸ್ಟ್ರಾರರಾದ ಶ್ರೀ। ಕಣ್ಣನ್ ನಾಯರ ರವರು ದಯಮಾಡಿಸಿ ಸಹಕಾರಿ ಸಂಘಗಳ ಪ್ರಯೋಜನ ವನ್ನು ಆದಿದ್ರಾವಿಡರ ಮಾತೃಭಾಷೆಯಿಂದಲೇ ಚಲೋ ದಾಗಿ ವಿವರಿಸಿ ಭಾಷಣ ಮಾಡಿದರು ಸಂಘದಲ್ಲಿ ಪಂಚಾಯತ ಮೆಂಬರುಗಳನ್ನು ಹೆಚ್ಚಿಸುವ ಅವಶ್ಯಕತೆ ಯನ್ನೂ ಸೂಚಿಸಿರುವರು ಅಲ್ಲಿಂದ ಮಂಗಳೂರಿಗೆ ಹಿಂದಿರುಗುತ್ತ ಮಾನ್ಯ ಡಿಪ್ಯೂಟಿ ರಿಜಿಸ್ಟ್ರಾರರವರು ದೇರೆಬೈಲು ಕಾಫಿತೋಟದ ಡಿ ಸಿ ಎಂ. ಕೊಲೊನಿಗಳನ್ನು ಸಂದರ್ಶಿಸಿ ಕೊಲನಿಗಳಲ್ಲಿ ಒಳ್ಳೆಯ ಸಸಿಗಿಡಗಳನ್ನು ನೆಡಬೇಕೆಂಬ ಹಿತಸೂಚನೆ ಕೊಟ್ಟಿರುತ್ತಾರೆ

ಇದೇ ಬರುವ ಆಕ್ಟೋಬರ ತಾ ೧ರಿಂದ ಪೆಂಟ್ರೋಲು ಹಚ್ಚಲ್ಪಡುವ ಬೆಂಕಿಪೆಟ್ಟಿಗೆಗಳ ಮಾರಾಟವು ನಿಷೇಧಿಸಲ್ಪ ಟ್ಟಿದೆಯೆಂದು ಸರಕಾರದ ಪ್ರಕಟಣೆಯಾಗಿರಲು —ಬೆಂಕಿ ಪೆಟ್ಟಿಗೆಗಳ ಸ್ಟಾಕು ಹೆಚ್ಚಿರುವ ಮಂಗಳೂರಿನ ಸಾಹು ಕಾರರು ನಮ್ಮ ಜಿಲ್ಲಾ ಕಲೆಕ್ಟರ ದೊರೆಗಳವರ ಮೂಲಕ ಮಹಾಮಾನ್ಯ ಮದರಾಸು ಗವರ್ನರ ದೊರೆಗಳವರಿಗೆ ಈ ಕೆಳಗಿನ ಮನವಿ ಸಲ್ಲಿಸಿರುವರು —"ಈ ಕೆಳಗೆ ಸಹಿ ಹಾಕಿದವರು ಮಂಗಳೂರಿನ ಸಾಹುಕಾರರಾದ ನಾವು ತಮ್ಮ ದಯಾಪೂರ್ಣ ಪರ್ಯಾಲೋಚನೆಗಾಗಿ ಈ ಮನವಿಯನ್ನು ಕಳುಹಿಸಿರುವೆವು ಇಂಡಿಯಾ ದೊರೆತನದ ಆರ್ಥಿಕ ಇಲಾಖೆಯವರು ಪ್ರಕಟಿಸಿದಂತೆ ಬೆಂಕಿಪೆಟ್ಟಿಗೆ ಗಳ ಸ್ಟಾಕನ್ನು ... ಇದೇ ಆಕ್ಟೋಬರ ತಿಂಗಳಿಂದ ಪೆಂಟ್ರೋಲ್ ಸುಂಕವನ್ನು ತೆರಬೇಕಾಗಿದೆ ಯೆಂದು ಪ್ರಮುಖ ... ಪತ್ರಿಕೆಗಳಲ್ಲಿ ಪ್ರಕಟವಾದ ವಾರ್ತೆಯನ್ನು ಕೇಳಿ ನಾವು ದಿಗಿಲುಗೊಂಡಿರುವೆವು ಈ ಮನವಿ ಮಾಡಿದವರೊಡನೆ ಹೆಚ್ಚು ಕ್ರಯದ ಬೆಂಕಿ ಪೆಟ್ಟಿಗೆಯು ದಾಸ್ತಾನಿರುವ ಪ್ರಯುಕ್ತ ಅಧಿಕವಾಗಿ ಪೆಂಟ್ರೋಲು ಸುಂಕವನ್ನು ತೆರುವುದರಿಂದ ನಾವು ವಿಶೇಷ ನಷ್ಟ—ಕಷ್ಟಗಳಿಗೊಳಗಾಗುವುದು ಖಂಡಿತವೆಂದು ತಮ್ಮ ಸರಕಾರದ ರಕ್ಷಣೆಯನ್ನು ಬಯಸಿರುವೆವು. ಈ ಪರಿಸ್ಥಿತಿ ಯಲ್ಲಿ ನಮ್ಮ ಬೆಂಕಿಪೆಟ್ಟಿಗೆಯ ಸಂಗ್ರಹವು ಮಾರಾಟ ವಾಗಿ ಹೋಗುವ ತನಕ ಆ ಅಧಿಕ ಸುಂಕವು ನಮಗೆ ... ವಾಗದಂತೆ ಕಾಪಾಡಬೇಕಾಗಿಯೂ ಸ್ಥಳೀಯ ಅಬಕಾರಿ ಅಧಿಕಾರಿಗಳು ನಮ್ಮನ್ನು ಅನಾವಶ್ಯಕ ಕಷ್ಟ ಗಳಿಗೊಳಪಡಿಸದಂತೆ ಅಪ್ಪಣೆ ಕೊಡಿಸಬೇಕಾಗಿಯೂ ಪ್ರಾರ್ಥಿಸುತ್ತೇವೆ" (ಇದರ ಕೆಳಗೆ ೩೨ ಮಂದಿ ಸಾಹು ಕಾರರು ಸಹಿಮಾಡಿರುವರು)

ಇದೇ ತಾ. ೨೪ರಿಂದ ಗಣಪತಿ ಹೈಸ್ಕೂಲಿನ ಹಿಂದೀ ಮಂದಿರದಲ್ಲಿ ಈ ಕೆಳಗಿನಂತೆ ಹಿಂದೀ ವರ್ಗಗಳು ಪ್ರಾರಂಭಿಸಲ್ಪಡುವುವು.—ಸೋಮ ಬುಧ ಶುಕ್ರವಾರ ಗಳಲ್ಲಿ ಸಾಯಂಕಾಲ ೫ರಿಂದ ೬ರ ವರೆಗೆ ಪ್ರಾಥಮಿಕ, ಹಾಗೆಯೇ ಮಾಧ್ಯಮಿಕ ಮಂಗಳ, ಗುರು ಶನಿವಾರ ಗಳಲ್ಲಿ ಶ್ಯಾಮ ಘಂಟೆ ೫ರಿಂದ ೬ರ ವರೆಗೆ ರಾಷ್ಟ್ರಭಾಷೆ ರಾತ್ರಿಶಾಲೆಯ ವಿವರ ಹೀಗಿದೆ—ಮಂಗಳ ಶುಕ್ರ ರವಿ ವಾರಗಳಲ್ಲಿ ರಾತ್ರಿ ೭ರಿಂದ ೮ರ ವರೆಗೆ ಪ್ರಾಥಮಿಕ, ಸೋಮ, ಬುಧ, ಶನಿವಾರಗಳಲ್ಲಿ ರಾತ್ರಿ ೭ರಿಂದ ೮ರ ವರೆಗೆ ಮಾಧ್ಯಮಿಕ, ಗುರುವಾರ ರಾತ್ರಿ ೭ರಿಂದ ೮ ೩೦ರ ವರೆಗೆ ರಾಷ್ಟ್ರಭಾಷೆ. ಉಮೇದ್ವಾರರು ಇದೇ ತಾರೀಕು ೨೩ರೊಳಗೆ ತಮ್ಮ ಹೆಸರುಗಳನ್ನು ದಾಖಲುಮಾಡಿಸಿ ಕೊಳ್ಳಬೇಕಾಗಿದೆ.

ಬಡವರಬಂಧು ಕಾರ್ಯಾಲಯದಲ್ಲಿ ಹಿಂದೀ ವರ್ಗ ಗಳು ಇದೇ ಆಕ್ಟೋಬರ ತಾ. ೧ರಿಂದ ಪ್ರಾರಂಭವಾಗು ವುವು ಪ್ರತಿದಿನ ರಾತ್ರಿ ೭ರಿಂದ ೮ರ ವರೆಗೆ ಪ್ರಾಥಮಿಕ, ಸೋಮ, ಬುಧ, ಶುಕ್ರ ಮತ್ತು ಶನಿವಾರಗಳಲ್ಲಿ ಶ್ಯಾಮ ೬—೬॥ ವರೆಗೆ ಮಧ್ಯಮ ಮಧ್ಯಮ ವಾರಗಳ ದಿವಸಗಳಲ್ಲಿ ಶ್ಯಾಮ ೫ರಿಂದ ೬॥ ತನಕ ರಾಷ್ಟ್ರಭಾಷಾ ಪಠ್ಯಪುಸ್ತಕ ಗಳ ವಿವರವನ್ನು ಬಡವರಬಂಧು ಕಾರ್ಯಾಲಯದಲ್ಲಿ ತಿಳಕೊಳ್ಳಬಹುದು. ಉಮೇದ್ವಾರರು ತಮ್ಮ ಹೆಸರು ಗಳನ್ನು ಇದೇ ಸಪ್ಟಂಬರ ತಿಂಗಳ ತಾ. ೨೫ರೊಳಗೆ ಹಂಪನಕಟ್ಟೆಯಲ್ಲಿರುವ ಬಡವರಬಂಧು ಕಾರ್ಯಾಲಯ ದಲ್ಲಿ ವ್ಯವಸ್ಥಾಪಕರಿಗೆ ತಿಳಿಸಿ ದಾಖಲು ಮಾಡಿಸಿಕೊಳ್ಳ ಬಹುದು

"ಶ್ರೀ ಕೃಷ್ಣ ಸಿನೆಮಾದಲ್ಲಿ ನಾಳೆಯಿಂದ "ಕಿಂಗ್ ಆಫ್ ದಿ ಜಂಗ್ಲ್" ಎಂಬ ಹೆಸರಿನ ಬಸ್ಟರ್ ಕ್ರೆಬ್ ಎಂಬ ಪ್ರಖ್ಯಾತ ನಟನ ಅಭಿನಯ ವಿರುವ (ಟಾರ್ಝನ ತರಗ ತಿಯ) ಚಿತ್ರವು ಪ್ರದರ್ಶಿಸಲ್ಪಡುತ್ತಿದೆ. ಪೆರಮೌಂಟ್ ಕಂಪೆನಿಯವರ ಟಾರ್ಝನ ಚಿತ್ರಗಳಲ್ಲಿ ಇದೇ ಉತ್ತಮ ವಾದುದು. ಇದಾದ ನಂತರ "ಟ್ರೆಶರ್" ಎಂಬ ಅತ್ಯುಜ್ವಲ ಚಿತ್ರವು ಪ್ರದರ್ಶಿತವಾಗುವಂತೆ ಏರ್ಪಾಡು ಮಾಡಲಾಗಿದೆ"ಯೆಂದು ಆಡಳಿತಗಾರರು ತಿಳಿಸುತ್ತಾರೆ.

ಇದೇ ತಿಂಗಳ ತಾ ೨೩ನೇ ಆದಿತ್ಯವಾರ ಬೆಳಿಗ್ಗೆ ೮ ಗಂಟೆಗೆ ಇಲ್ಲಿಯ ಸಿಟಿ ಆರ್ಯ ಸಮಾಜದಲ್ಲಿ ಅಸ್ತಿತ್ವ ವಾದ (ದೇವರಿದ್ದಾನೋ) ಎಂಬ ಕುರಿತು ಶಾಸ್ತ್ರಾರ್ಥ ನಡೆಯುವುದು ವೈದಿಕ ಸಿದ್ಧಾಂತಗಳಲ್ಲಿ ಪ್ರತಿಯೊಬ್ಬರ ವಿಚಾರವು ವೃದ್ಧಿಯಾಗುವ ಉದ್ದೇಶದಿಂದ ಬೇರೆ ಬೇರೆ ವಿಷಯಗಳಲ್ಲಿ ಆಗಾಗ ಶಾಸ್ತ್ರಾರ್ಥಗಳನ್ನು ಜರಗಿ ಸುವ ಏರ್ಪಾಡು ಮಾಡಲಾಗಿದೆ ಸರ್ವರಿಗೂ ಸ್ವಾಗತವಿದೆ

ಕಳೆದ ತಾ ೧೬ನೇ ಆದಿತ್ಯವಾರ ಬೆಳಿಗ್ಗೆ ಶ್ರೀ ಶಿವಭಕ್ತಿ ಯೋಗ ಸಂಘದಲ್ಲಿ ಪಣಂಬೂರಿನ ಶ್ರೀ। ವೆಂಕಟಕೃಷ್ಣಯ್ಯ ನವರ ಮಧುರ ಹರಿಕಥೆಯು ನಡೆಯಿತು

ಮಂಗಳೂರು ಮುನಿಸಿಪಾಲಿಟಿಯ ಕೌನ್ಸಿಲ ಚುನಾವಣೆಯ ಉಮೇದ್ವಾರರು

(Final List)

ಕದ್ರಿ ವಾರ್ಡ್—ಶ್ರೀ ಜೆ ಪಿ ಮಟಾಡೋ, ಸ್ತ್ರೀ ಯರಿಗೆ ಕಾದಿಡಲ್ಪಟ್ಟ ಒಂದ ಸ್ಥಾನಕ್ಕೆ ಮಿಸೆಸ್ ಲೂಸಿ ಕ್ರೇಷ್ಟ ಮತ್ತು ಮಿಸ್ ಪ್ರಿಟೊ.

ಕೊಡಿಯಾಲಬೈಲ್ ವಾರ್ಡ್ ಶ್ರೀಯುತ ಡಾ. ಕೆ ಸಂಜೀವ ಶೆಟ್ಟಿಯವರು

ಕಂಬಳ ವಾರ್ಡ್—ಶ್ರೀ। ಡಾ ಕೆ ವಿಠ್ಠಲ ಶೆಟ್ಟಿ

ಮಣ್ಣಗುಡ್ಡೆ ವಾರ್ಡ್—ಶ್ರೀಗಳಾದ ಕೆ ಆರ್ ಕಾರಂತ ಮತ್ತು ಮಿ ಲಕ್ಷ್ಮಣ ಶೆಟ್ಟಿಯವರು

ಬೋಳೂರು ಶ್ರೀ। ಜೆ ಎ ಫುರ್ತಾದೊ

ಕುದ್ರೋಳಿ— ಶ್ರೀಗಳಾದ ಕೆ ನಾಗಣ್ಣ ಹೆಗ್ಡೆ ದಾವೂದ್ ಶೇಟ್

ನವಾಯತ್— ಶ್ರೀಯುತರಾದ ವೆಂಕಟ್ರಾಯ ಬಾಳಿಗ ಮರ್ಕದ ಪದ್ಮನಾಭ ಕಾಮತರು.

ಗೋಳಿಕಟ್ಟೆ—ಶ್ರೀ ಕಲ್ಯಾಣ ನರಸಿಂಹ ಶೆಣೈ ಎ ಮೂಸಬ್ಬ ನವರು

ಬಂದರ ಶ್ರೀ ಆರ್ ಎಸ್ ನಗರ್ಕಾರರು

ಡೊಂಗರಕೇರಿ—ಶ್ರೀಗಳಾದ ಎಸ್ ಗೋಪಾಲ ನಾಯ್ಕ ಮತ್ತು ಡಾ। ಸ್ ಉಪೇಂದ್ರ ಪೈಯವರು.

ತ್ರಿಶೂಲೇಶ್ವರ— ಶ್ರೀಗಳಾದ ಡಾ। ಯು. ಪಿ. ಮಲ್ಯ ಮತ್ತು ಎ ಪಾಂಡುರಂಗ ಭಂಡಾರಿಗಳು

ಸೆಂಟ್ರಲ್—ಶ್ರೀ। ಎಂ ಎ ತಲ್ವಾರ್

ಮಾರ್ಕೆಟು— (ಉತ್ತರ) ಎರಡು ಸ್ಥಾನಗಳು, ಒಂದು ಸ್ತ್ರೀಯರಿಗೆ ಕಾದಿಡಲ್ಪಟ್ಟಿದೆ ಶ್ರೀಯುತರಾದ ಎಂ ಮಂಗೇಶರಾವ್ ಯಂ ಮಾಧವರಾವ ಶ್ರೀಮತಿ ಎಸ್ ಆರ್ ಪ್ರಾಂಜ

ಮಾರ್ಕೆಟು—(ದಕ್ಷಿಣ) ಶ್ರೀಗಳಾದ ರಾಘವೇಂದ್ರ ಪೈ ರಂಗರಾವ್ ತಲಚೇರಿಕರ್

ಕೋರ್ಟ್—ಮಿ ಎಲ್ ಸಿ ಪಾಯಸ್

ಬೆಂದೂರ್—ಮಿ ಜೋನ್ ಗೋನ್ಸಾಲ್ವಿಸ್, ಮಿ ಎ ಆರ್ ಡಿಸೋಜ

ಬಲ್ಮಠ—ಎ ಎಫ್ ಜತನ್ನ

ಫಳ್ನೀರ್—(೨ ಸ್ಥಾನಗಳು) ಮಿ ಎಂ ಎಸ್ ಶ್ರೀಷ್ಠ ಮಿ ಡಾ। ಎ. ಎಫ್ ಕೊಹೆಲೋ

ಮಿಲಾಗ್ರಿಸ್—ಶ್ರೀ ಎಸ್ ಎನ್ ಸುವರ್ಣ

ಕಂಟೋನ್ಮೆಂಟ್—ಶ್ರೀ ಡಾ। ಎಚ್ ವಿ. ಅಡಪ್ಪ

ಪೋರ್ಟ್—(೨ ಸ್ಥಾನಗಳು—ಒಂದು ಮಹಮ್ಮ ದೀಯರಿಗೆ ಕಾದಿಡಲ್ಪಟ್ಟಿದೆ) ಶ್ರೀಗಳಾದ ಕುಂಞಾಂಬು ಸಾಹೇಬ್ ರಾವ್‌ಸಾಹೇಬ್ ಸೆಲ್ಲಿಕ್ಕಾ ವೆಂಕಟ್ರಾವು.

ರುಜಾರಿಯೊ—ಮಿ ಬಿ ಎಂ ಡಿಸೋಜ.

ಅತ್ತಾವರ—(೨ ಸ್ಥಾನ) ಶ್ರೀ। ಬಿ ವಾಮನಶೆಣ್ಯೆ ಮತ್ತು ಶ್ರೀ ಗುರುವ, ಬೇದಿಗುಡ್ಡೆ

ಹೊಯಿಗೆ ಬಜಾರ್—ಶ್ರೀಗಳಾದ ಮಹಾಬಲ ರೈ, ಟಿ ನಾರಾಯಣ ಭಂಡಾರಿ.

ಮಂಗಳಾದೇವಿ—ಮಿ ಜೆ ಸಿ ರೇಗೋ.

ಜಪ್ಪು—ಶ್ರೀಯುತ ಗಜಾನನ ರಾವ್,

ಇದೇ ತಾ. ೨೬ನೇ ದಿನ ಬೆಳಿಗ್ಗೆ ೭ರಿಂದ ಸಂಜೆ ೬ರ ತನಕ ವೋಟು ಸ್ವೀಕರಿಸಲಾಗುವುದು

ತಾಲೂಕುಗಳಿಂದ.

ಪುತ್ತೂರು—ಇದೇ ಕಳೆದ ತಾ ೯ನೇ ರವಿವಾರ ಪುತ್ತೂರು ಸಂಗೀತ ಶಾಲೆಯ ಪ್ರಥಮ ವಾರ್ಷಿಕವರ್ಧಂತಿ ಸಭೆಯು ಪುತ್ತೂರು ಡಿ। ಮುನ್ಸೀಫ ಶ್ರೀ ಸಿ. ವ್ಯಾಸರಾವ್ ಎಮ್ ಎಲ್, ಇವರ ಅಧ್ಯಕ್ಷತೆಯಲ್ಲಿ ಜರಗಿತು. ಸಂಗೀತ ಶಾಲೆಯ ಮಕ್ಕಳ ಪ್ರಾರ್ಥನಾ ಪದ್ಯವಾದ ಬಳಿಕ ಶಾಲೆಯ ಕಾರ್ಯನಿರ್ವಾಹಕ ಸಂಘದ ಅಧ್ಯಕ್ಷರಾದ ರಾ। ಎಂ ರಾಮನ್ ನಂಬಿಯಾರ ಬಿ ಎ ಎಲ್ ಟಿ ಇವರು ಸಭಿಕರಿಗೆ ಸ್ವಾಗತ ಭಾಷಣಗೈದನಂತರ ಕಾರ್ಯ ದರ್ಶಿ ರಾ। ಎಸ್ ಕೆ ಈಶ್ವರಭಟ್ಟರು ಶಾಲೆಯ ವರದಿ ಮತ್ತು ಒಡಿಟ್ ರಿಪೋರ್ಟನ್ನು ಓದಿಹೇಳಿದರು ಶಾಲಾ ಹಿತಚಿಂತಕರನೇಕರು ಶಾಲೆಯ ಪ್ರಯೋಜನದ ಕುರಿತು ಭಾಷಣವಿತ್ತ ತರುವಾಯ ಸದ್ರಿ ಶಾಲಾ ಆಡಳಿತ ಬಗ್ಗೆ ಒಂದು ಸಂಘಸ್ಥಾಪನೆಯಾಯಿತು ಅಧ್ಯಕ್ಷರು ತಮ್ಮ ಭಾಷಣದಲ್ಲಿ ಈ ಶಾಲೆಗೆ ಉತ್ತರೋತ್ತರ ಅಭಿವೃದ್ಧಿ ಯನ್ನು ಕೋರಿ ಊರ ಮಹನೀಯರೆಲ್ಲರೂ ಈ ಶಾಲೆಗೆ ಪ್ರೋತ್ಸಾಹವನ್ನು ಕೊಡಬೇಕೆಂದು ನೊಡಲಾಗಿ ಆಡಿದರು. ಮಕ್ಕಳ ಸಂಗೀತ ಪ್ರದರ್ಶನವೂ ಸಂಗೀತ ವಿದ್ವಾನ್ ರಾ। ಬಿ ಕೃಷ್ಣರಾಯರ ಸಂಗೀತ ಕಛೇರಿಯೂ ಜರಗಿದ ಮೇಲೆ ಧನ್ಯವಾದಗಳೇ ಮೊದಲಾದ ಉಪಚಾರಗಳೊಂದಿಗೆ ಸಭೆಯು ಮುಕ್ತಾಯವಾಯಿತು

ಉಡುಪಿ— ಇಲ್ಲಿಯ ಮಿತ್ರಮಂಡಲಿಯವರು ಇದೇ ಆಕ್ಟೋಬರ ತಿಂಗಳಲ್ಲಿ ನವರಾತ್ರಿ ಸಮಯ ದಸರಾ ಮಹೋತ್ಸವವನ್ನು ಜರಗಿಸಲಿರುವರು ಈ ಸಂದರ್ಭದಲ್ಲಿ ಅನೇಕ ತರದ ಕಲಾಕೌಶಲಗಳನ್ನು ಪ್ರದರ್ಶಿಸುವ ಏರ್ಪಾಡು ಮಾಡಲಾಗಿದೆ

ಇದೇ ಬರುವ ನವಂಬರ ತಿಂಗಳ ಅಖೈರಿಗೆ ಇಲ್ಲಿಯ ಉಡುಪಿ ಜಿಮ್ನೇಶಿಯಮಿನ ಕಡೆಯಿಂದ ಅಂಗಸಾಧಕ ಪಂದ್ಯಾಟಗಳು ನಡೆಸಲ್ಪಡಲಿವೆ ನಿಶ್ಚಿತ ತಾರೀಕನ್ನು ಸಕಾಲದಲ್ಲಿ ತಿಳಿಸಲಾಗುತ್ತದೆ ಭಾರ ಎತ್ತುವಿಕೆ ಅಂಗ ಸೌಂದರ್ಯ ಆಸನಗಳು ಮುಂತಾದ ವಿಷಯಗಳಲ್ಲಿ ಸ್ಪರ್ಧೆ ಇದೆ ಇಲ್ಲಿಯ ವಕೀಲರೂ ಗೃಹಸ್ಥರಿಂದ ಈಗಲೇ ನಾಲ್ಕು ಬೆಳ್ಳಿಯ ಕಪ್ಪುಗಳೂ ಒಂದು ಬಂಗಾರದ ಪದಕವೂ ಇದಕ್ಕಾಗಿ ಸಂಗ್ರಹಿಸಲ್ಪಟ್ಟಿವೆ ಸದ್ಯ ಈ ಸ್ಪರ್ಧೆಯು ಕುಂದಾಪುರ ಡಿವಿಜನಿನೊಳಗಣವರಿಗೆಂದು ನಿರ್ಣಯಿಸಲಾಗಿದೆ

ಮಿತ್ರ ಮಂಡಳಿಯ ಪರವಾಗಿ ಪ್ರಕಟಿಸಲಾದ ಪಟ್ಟಿ ಗಳನ್ನು ಏಕೆ ಅಳ ಸಬೇಕು" ಎಂಬುವರ ಕುರಿತು ಸಭೆ ಭಾಷಣಗಳು ಜರಗಿದವು ಪಂಡಿತರೂ ಇತರ ಗೃಹಸ್ಥರೂ ಭಾಷಣವಿತ್ತರು ಸಭೆಗೆ ಅನೇಕ ಮಂದಿಯೂ ಸೇರಿದ್ದರು

ಹಲವು ಕೊಂದರೆ ತೊಡಕುಗಳಿಂದ ಈ ವರ್ಷವೂ ಹಿಂದೀ ವ್ಯಾಸಂಗವು ಸುವ್ಯವಸ್ಥಿತವಾಗದಿದ್ದರೂ ಕೆಲವು ಹಿಂದೀ ಪ್ರೇಮಿಗಳ ಉತ್ಸಾಹದಿಂದಲೇ ಇದೇ ತಾ ೯ಕ್ಕೆ ಜರಗಿದ ಹಿಂದೀ ಪರೀಕ್ಷೆಗೆ ಇಲ್ಲಿಂದ ೨೭ ಮಂದಿ ಸ್ತ್ರೀ ಪುರುಷರು ಕುಳಿತಿದ್ದರು ಪ್ರಥಮ ಮಧ್ಯಮ ಹಾಗೂ ರಾಷ್ಟ್ರಭಾಷಾ ಪರೀಕ್ಷೆಗಳಿಗೆಲ್ಲಾ ಪರೀಕ್ಷಾರ್ಥಿಗಳಿದ್ದರು

ತಾ ೧೧ಕ್ಕೆ ಶ್ರೀ ಕೆ ಸದಾಶಿವರಾವ್ ಮತ್ತು ಸಾಮು ವೇಲ್ ಆರೋನರು ಇಲ್ಲಿಗೆ ಚಿತ್ತೈಸಿದ್ದು ಇಲ್ಲಿನ ಪ್ರಮುಖ ಗೃಹಸ್ಥರನೇಕರನ್ನು ಕಂಡು ಎರಡನೆಯವ ೨ ಎಸೆಂಬ್ಲಿ ಚುನಾವಣೆಗೆ ಉಮೇದ್ವಾರರಾಗಿರುತ್ತಾ ಇಲ್ಲಿನ ವೋಟರರ ಬೆಂಬಲ ಅಪೇಕ್ಷಿಸಿ ಈ ಬಗ್ಗೆ ಅವಶ್ಯವಿರುವ ಏರ್ಪಾಡುಗಳನ್ನು ವ್ಯವಸ್ಥಿತಗೊಳಿಸಿರುತ್ತಾರೆ

ಸ್ಥಳೀಯ ಬೋರ್ಡು ಹೈಸ್ಕೂಲಿನಲ್ಲಿ ಸಾರ್ಯಿಂಗ್ (ಹೊಲಿಗೆ) ಮಿಸ್ಟ್ರೆಸ್ ಕೆಲಸವನ್ನು ಶ್ರೀ ಲಲಿತಾಬಾಯಿ ದೇವರಾವ್ ಇವರಿಗೆ ಕೊಡಲ್ಪಟ್ಟಿದೆ, ಹೆಣ್ಣು ಹುಡುಗಿಯರಲ್ಲಿ ಬೇಕಾದ ಒಂದು ಕಲಾಜ್ಞಾನದ ಅಭ್ಯಾಸಪ್ರಾರಂಭವನ್ನೆಸಗಿ ಸಹಕರಿಸಿದಕ್ಕೆ ಬೋರ್ಡಿನವ ರಿಗೆ ಧನ್ಯವಾದಗಳು

ಕಾರ್ಕಳ ತಾ ೧೫—೯—೩೪ರ ದಿವಸ ಈ ತಾಲೂಕಿನ ಪ್ರಾಥಮಿಕ ಶಾಲಾ ಉಪಾಧ್ಯಾಯರ ಮಹಾ ಸಭೆಯು ರಾ। ಮೊಳಹಳ್ಳಿ ಶಿವರಾಯರ ಅಧ್ಯಕ್ಷತೆಯಲ್ಲಿ ಅತ್ಯಂತ ಯಶಸ್ವಿಯಾಗಿ ಜರಗಿತು. ಇನ್ನಾದರೂ ಈ ಸಂಘವು ಚೇತನಗೊಂಡು ತನ್ನ ಉದ್ದೇಶಸಾಧನೆಯಲ್ಲಿ ತತ್ಪರವಾಗುವುದೆಂದು ವಿಶ್ವಾಸವಿದೆ.

ಮೊಳಹಳ್ಳಿ— ಸ್ಥಳೀಯ ಬೋರ್ಡು ಹೈಸ್ಕೂಲಿನಲ್ಲಿ ಹೆಮ್ಮಕ್ಕಳ ಪ್ರಯೋಜನಾರ್ಥ 'ಸಂಗೀತ ಕ್ಲಾಸು' ತೆರೆಯ ಲ್ಪಟ್ಟಿದ್ದು, ಸದ್ರಿ ಶಾಲಾ ಅಧ್ಯಾಪಕ ಶ್ರೀ ಕೆ. ಗೋಪಾಲಕೃಷ್ಣ ... ಕೆಲಸ ಮಾಡುತ್ತಿರುವುದು ಸ್ತುತ್ಯ!

ಸ್ಥಳೀಯ ಲೋಕಲ್ ಫಂಡ್ ಆಸ್ಪತ್ರೆಯ ವೈದ್ಯ ಉದ್ಯೋಗಸ್ಥರಾದ ಶ್ರೀ। ಡಾ। ಎಂ ಉಪೇಂದ್ರರಾಯರು ಒಂದು ತಿಂಗಳ ರಜೆಯ ಮೇಲೆ ಹೋಗಿದ್ದು, ಸದ್ರಿ ಆಸ್ಪತ್ರೆಯ ಗೌರವ ವೈದ್ಯ ಶ್ರೀ। ಡಾ। ಕೆ ಶ್ಯಾಮಶೆಟ್ಟಿ ಈಗ ಚಾರ್ಜಿನಲ್ಲಿರುವರು

ಸ್ಥಳೀಯ ಶ್ರೀ ದುರ್ಗಾದೇವಿ ಧರ್ಮಾರ್ಥ ರಾತ್ರಿ ಶಾಲೆಯ ಪರವಾಗಿ ಏರ್ಪಡಿಸಿದ ಸೋದ್ರಿಯ ಟಿಕೇಟು ಪುಸ್ತಕಗಳು ಒಳ್ಳೇ ಭರದಿಂದ ಹೊರಗೆ ಹೋಗುತ್ತಿರುವು ದನ್ನು ನೋಡುವಾಗ ಶ್ರೀ ಪಂಚದುರ್ಗೆಯ ದಯದಿಂದ ಈ ಯೋಜನೆಯು ಸಂಪೂರ್ಣ ಯಶಸ್ವಿಯಾಗಬಹುದಾಗಿ ತೋರುತ್ತದೆ

ಶ್ರೀ ಮಂಜುನಾಥ ಪ್ರಸನ್ನ। ಧರ್ಮಸ್ಥಳ.

ಇದೇ ಭಾವ ಸಂವತ್ಸರ ಕಾರ್ತಿಕ ಬ॥ ೧೧ ಏಕಾದಶೀ ಮೊದಲ್ಗೊಂಡು ೩೦ ಅಮಾವಾಸ್ಯೆ ತನಕ (೯೩೪ನೇ ಇಸ್ವಿ ಡಿಸಂಬರ ತಿಂಗಳ ೩ರಿಂದ ೭ರ ವರೆಗೆ) ಶ್ರೀ ಧರ್ಮ ಸ್ಥಳದ ಶ್ರೀ ಮಂಜುನಾಥ ಸ್ವಾಮಿಯವರ ಸನ್ನಿಧಿಯಲ್ಲಿ ಪೂರ್ವಪದ್ಧತಿಯಂತೆ ನಡೆಯಲಿಕ್ಕಿರುವ ದೀಪೋತ್ಸವ ಸಮಾರಂಭದಲ್ಲಿ ಕಳೆದ ವರ್ಷದಂತೆಯೇ ಕಡೇ ೨ ದಿವಸಗಳಲ್ಲಿ ವಿವಿಧ ಮತ ಧರ್ಮ ಸಮ್ಮೇಲನ ಮಹೋತ್ಸವವು ಬೆಂಗಳೂರಿನ ಶ್ರೀಮಾನ್ ಪ್ರಾಚ್ಯ ವಿದ್ಯಾ ವಿಚಕ್ಷಣ ಮಹಾಮಹೋಪಾಧ್ಯಾಯ ರಾವ್ ಬಹದ್ದೂರ್ ಆರ್ ನರಸಿಂಹಾಚಾರ್ಯ ಎಂ ಎ ಎಂ ಆರ್ ಎ ಎಸ್ ಇವರ ಅಧ್ಯಕ್ಷತೆಯಲ್ಲಿ ನೆರವೇರಿಸ ಬೇಕೆಂದು ನಿಶ್ಚೈಸಲ್ಪಟ್ಟಿದೆ ಪ್ರಥಮ ದಿವಸದಲ್ಲಿ "ಜಡ ಚೈತನ್ಯವಸ್ತುಗಳೂ ಮತ್ತು ಅವುಗಳೊಳಗಿನ ಪರಸ್ಪರ ಸಂಬಂಧವೂ" (Matter and Spirit & their Mutual connection) ಮತ್ತು ಎರಡನೇ ದಿವಸದಲ್ಲಿ "ಆಧುನಿಕ ವೈಜ್ಞಾನಿಕ ಸಂಶೋಧನೆಗಳು ಮತ ಧರ್ಮಗಳಿಗೆ ಸಾಧಕವೋ? ಬಾಧಕವೋ? ಎಂಬೀ ವಿಷಯಗಳ ಕುರಿತು ದ್ವೈತ ಅದ್ವೈತ ವಿಶಿಷ್ಟಾದ್ವೈತ ಜೈನ ಬೌದ್ಧ ಆರ್ಯಸಮಾಜ ಕ್ರಿಶ್ಚಿಯನ್ ಮುಸ ಲ್ಮಾನ ಮೊದಲಾದ ಬೇರೆ ಬೇರೆ ಮತಗಳ ಪ್ರಸಿದ್ಧ ವಿದ್ವಾಂಸರುಗಳ ಭಾಷಣಗಳ ಏರ್ಪಾಡು ಮಾಡಲಾಗು ವುದು ಈ ವಿಷಯದಲ್ಲಿ ಜಿಜ್ಞಾಸುಗಳು ಹೆಚ್ಚಿನ ಮಾಹಿತಿಗಳನ್ನು ಪತ್ರವ್ಯವಹಾರದ ಮೂಲಕ ತಿಳಿದು ಕೊಳ್ಳಬಹುದು ಇದೇ ಸಂದರ್ಭದಲ್ಲಿ ಕೃಷಿ ಮತ್ತು ಆರೋಗ್ಯ ಸಂಬಂಧವಾದ ಭಾಷಣಗಳೂ ದೇಖಾವೆಗಳೂ ಇರುವುವು ಕಳೆದ ವರ್ಷದ ವಿವಿಧ ಸಮ್ಮೇಲನಗಳ ಮತ್ತು ವಸ್ತು ಪ್ರದರ್ಶನದ ಸಂಕ್ಷಿಪ್ತ ವರದಿಯು ಬರುವ ದೀಪೋತ್ಸವ ಕಾಲದಲ್ಲಿಯೇ ಪ್ರಕಟಿಸಲಾಗುವುದು

ಈ ಮೇಲಿನ ಎಲ್ಲಾ ವಿಷಯಗಳ ಕುರಿತು ಇನ್ನು ಮುಂದಿನ ಪತ್ರವ್ಯವಹಾರಗಳು ಇಲ್ಲಿಯ ಧರ್ಮಸ್ಥಳದ ಪುರಸಭೆಯ ಕಾರ್ಯದರ್ಶಿ ಮೂಲಕ ನಡೆಯಿಸಲ್ಪಡು ವುದು ಎಂದು ಶ್ರೀ ಧರ್ಮಸ್ಥಳ ಮಂಜಯ್ಯಹೆಗ್ಗಡೆ ಯವರ ತಿಳಿಸುತ್ತಾರೆ

NOTICE.

This is to notify that from 1—10—1934 the Office of the **Canara Bank, Ltd, Puttur,** will be located in the Upstairs opposite to the present building The Bank undertakes all banking transactions on Moderate Terms

The following will be the hours of Business from 1-10-34 —On Weekdays 9 A M 12 NOON 2 P M-3-30 P M On Saturdays-9 A M-12-30 P M only

ಕೆನರಾಬೇಂಕ್, ಲಿಮಿಟೆಡ್, ಪುತ್ತೂರು

ಇದೇ ತಾ 1 10—34ರಿಂದ ಬೇಂಕಿನವರು ತಮ್ಮ ಆಫೀಸನ್ನು ಈಗಿರುವ ಕಟ್ಟೋಣದ ಎದುರುಗಡೆಯ ಮಾಳಿಗೆಯಲ್ಲಿ ತೆರೆಯುವರು. ಟಿನ್ಸಾಕ್ಷನಗಳ ಮತ್ತು ಡಿಪ್ಪಾಜಿಟು ಕಾದಿನ ಮೇಲೆ ಅತೀ ಸುಲಭ ದರದ ಬಡ್ಡಿ ಯಲ್ಲಿ ಹಣವು ಕೊಡಲ್ಪಡುವುದು.

ಆಫೀಸು ಸಮಯ —

ಸೋಮವಾರದಿಂದ ಶುಕ್ರವಾರದ ವರೆಗೆ— ಬೆಳಿಗ್ಗೆ ೯ರಿಂದ ೧೨ರ ವರೆಗೆ, ಮಧ್ಯಾಹ್ನ ೨ರಿಂದ ೩ ೩೦ರ ವರೆಗೆ ಶನಿವಾರ — ಬೆಳಿಗ್ಗೆ ೯ರಿಂದ ೧೨ ೩೦ರ ವರೆಗೆ.

Office of Canara Bank, Ltd, Puttur, 17 9-34 — A. Venkat Rao, Agent.

O. P. 89/1934.

... ಅರ್ಜಿದಾರರು ... ಕೋರಿಗಡಿಂದ ... ಈ ಬಗ್ಗೆ ತನಗೆ ... ತಾರೀಖು 18-10-1934ಕ್ಕೆ ... ಕೋರ್ಟಿನಲ್ಲಿ ಇಟ್ಟಿರುತ್ತದೆ ಎಂತ ಈ ಮೂಲಕ ತಿಳಿಸಲಾಗುತ್ತದೆ.

G. Sanjiva Rau,
ತಾ. 14—9—'34. B A LL B
Pleader for Petitioner.

... ಮಾಡಿದ ... ನೋಟೀಸಿನ ವ್ಯಾಧಿ ಕೂಡಾ ತಾ. 19-10-'34ಕ್ಕೆ ಇಟ್ಟಿರುವುದರಿಂದ ... ಸ್ವತಹಾ ಯಾ ವಕೀಲರ ಮುಖಾಂತರ ತನ್ನಿ ತಾರೀಕಿನ ಬೆಳಿಗ್ಗೆ 10 ಘಂಟೆಗೆ ಈ ಕೋರ್ಟಿಗೆ ಹಾಜರಾಗಿ ಉದಹರಿಸದಿದ್ದರೆ ಏಕಪಕ್ಷವಾಗಿ ತೀರ್ಮಾನಿಸಲ್ಪಡುವುದು

ಕಾರ್ಕಳ 17-9-34 } M. Mukunda Kamath, *Pleader for Petitioner*

... ತಾ. 18-10-'34ನೇ ದಿನ ಒಪ್ಪಿ ... ಕಾರ್ಕಳ ಡಿಸ್ಟ್ರಿಕ್ಟ್ ಮುನ್ಸೀಫ್ ಕೋರ್ಟಿಗೆ ಹಾಜರಾಗಿ ... ಸನ್ನುಂಥವಪ್ಪ ಸರ್ವ ಜನರಿಗೂ ತಿಳಿಸೋಣಾಗುತ್ತದೆ.

ಕಾರ್ಕಳ 18-9-'34 } ಇಡ್ಯದ ವಾಸುದೇವಯ್ಯ, ಬಿ. ಎ. ಬಿ. ಎಲ್ ಅರ್ಜಿದಾರರ ಕಡೆ ವಕೀಲು

ನೋಟೀಸು.

ಕಾರ್ಕಳ ಡಿಸ್ಟ್ರಿಕ್ಟ್ ಮುನ್ಸೀಫ್ ಕೋರ್ಟಿನಲ್ಲಿ.

O S No 446/31
R. E. P. No 578/34
R E. A No 630/34

ಲಕ್ಷ್ಮಣ ಕಿನ್ನಿ, ವಾದಿ ಮೊಕ್ತ್ಯಾರ— ಅರ್ಜಿದಾರ.

1. ರಾಮರಾವ್, 2 ಪಟೇಲ ನಾರಾಯಣ ರಾವ್, ಮುಂಡ್ಕೂರು ಮಂಜುನಾಥ ರಾಯರ ಮಕ್ಕಳು, ಮುಂಡ್ಕೂರು ಕಸಬಾ— ಪ್ರತಿವಾದಿರು—ಎದ್ರುರು

ಅರ್ಜಿದಾರನು ಎದ್ರುರ ಮೇಲೆ ನಡೆಸಿದ ಸದ್ರಿ ಅಮಲ್‌ಜಾರಿಯಲ್ಲಿ ಎದ್ರುರು ಟ್ರಸ್ಟಿಗಳಾಗಿರುವ ಅವರ ಮನೆದೇವರಾದ ಶ್ರೀ ಮಂಗೇಶ ಮಹಾರುದ್ರ ದೇವರ ಭಂಡಾರದ ಹಕ್ಕಿನ ಸ್ಥಿರಾಸ್ತಿಗಳು ಏಲಂ ಬಗ್ಗೆ ಏಲಂ ಇಸ್ತಿ

ನೋಟೀಸು.

ಕಾರ್ಕಳ ಡಿಸ್ಟ್ರಿಕ್ಟ್ ಮುನ್ಸೀಫ್ ಕೋರ್ಟಿನಲ್ಲಿ

O P No 81/34.

ಫಲ್ಯಾರು ಕಮಲಮ್ಮ ವಗೈರರು—ಅರ್ಜಿದಾರ್ರು

ಫಲ್ಯಾರು ಗ್ರಾಮದ ಶೀತಾರಾಮಾಚಾರ್ಯ ಯಾನೆ ಶೀತಾರಾಮ ಉಡ್ಪರು ತಾ 17—11—'32ರಲ್ಲು ಮೃತವಾಗಿರುವ ಕಾರಣ ಅವರ ಬಾಬ್ತು ಓರಿಯಂಟಲ್ ಲೈಫ್ ಇನ್ಸೂರೆನ್ಸ್ ಕಂಪೆನಿಯಲ್ಲಿರುವ ನಂಬ್ರ 84,5460ನೇ ಪೊಲಿಸಿ ಹಣ ಮತ್ತು ಬೇರೊಂದು ಹಣ ಕೂಡಾ ವಸೂಲು ಮಾಡುವರೆ ಅವರ ವಿಧವೆಯಾದ ಸದ್ರಿ ಕಮಲಮ್ಮ ಮತ್ತು ಅವರ ಸಹೋದರರು ಮತ್ತು ಅವರ ತಾಯಿ ಕೂಡಾ ಸೇರಿ ಸದ್ರಿ ಕಮಲಮ್ಮನ ಹೆಸರಲ್ಲಿ ವಾರೀಸು ಸರ್ಟಿಫಿಕೇಟು ಕೊಡಬೇಕಾಗಿ ಕೇಳಿ ಬರೆಕೊಂಡ ಮೇಲೆ ಕಾಣಿಸಿರುವ ಅರ್ಜಿಯು ತಾ. 18 10-'34ನೇ ದಿನ ತನ್ನಿ ಬಗ್ಗೆ ಮೇಲೆ

ನೋಟೀಸು.

ಕಾರ್ಕಳ ಡಿ. ಮುನ್ಸೀಫ ಕೋರ್ಟಿನಲ್ಲಿ

ಕ್ರಮ ನಂಬ್ರ 618/1934

ಮುಂಡ್ಕೂರು ಅಚ್ಚಣ್ಣ ಕಿನ್ನಿ—ವಾದಿ
ವಿಟ್ಟಪ್ಪ ಶ್ಯಾನುಭಾಗ—ಪ್ರತಿವಾದಿ

ಪ್ರತಿವಾದಿ ವಿಟ್ಟಪ್ಪ ಶ್ಯಾನುಭಾಗ— ಶ್ರೀನಿವಾಸ ಶ್ಯಾನುಭಾಗರ ಮಗ ಮುಂಡ್ಕೂರು ಕಸಬಾ ಜೈನ ಪೇಟೆಯಲ್ಲಿರುವವ

ವಾದಿಯ ಅಂಗಡಿಗೆ ಪ್ರತಿವಾದಿಯಿಂದ ಬಹಾ ಲೇವಾದೇವಿ ಬಾಬ್ತು ಅಸಲು ಬಡ್ಡಿ ಕೂಡಾ ರೂ 192—12—7ಕ್ಕೆ ಈ ಕೋರ್ಟಿನಲ್ಲಿ ವಾದಿಯು ಪ್ರತಿವಾದಿ ಮೇಲೆ ದಾಖಲು ಮಾಡಿದ ಸದ್ರಿ ದಾವೆಯು ಆಖೈರ ತನ್ನಿ ಬಗ್ಗೆ ತಾ 18 10—1934ಕ್ಕೆ ಇಟ್ಟಿದೆ ಆದುದರಿಂದ ಈ ತಾರೀಕಿನ ಬೆಳಿಗ್ಗೆ 10 ಘಂಟೆಗೆ ಪ್ರತಿವಾದಿಯು ಸ್ವತಹ ಯಾ ವಕೀಲರ ಮುಖಾಂತ್ರ ಈ ಕೋರ್ಟಿನ ಮುಂದೆ ಹಾಜ್ರಾಗಿ ಉದಾಹರಣೆ ಕೊಡದಿದ್ದರೆ ಅತನನ್ನು ಶಿಖ್ಯಾ ಮಾಡಿ ಏಕಪಕ್ಷವಾಗಿ ಫೈಸಲು ಮಾಡೋಣಾದೀತೆಂತ ತಿಳಿಸಿರತಕ್ಕದ್ದು

ಕಾರ್ಕಳ 17 9 34 } M Mukunda Kamath *Vakil Plaintiff*

ನೋಟೀಸು.

ಕಾರ್ಕಳ ಡಿಸ್ಟ್ರಿಕ್ಟ್ ಮುನ್ಸೀಫ್ ಕೋರ್ಟಿನಲ್ಲಿ.

O. S. No. 446/34

ವೆಂಕಟ್ರಮಣ ಶ್ಯಾನುಭಾಗ—ವಾದಿ

1 ಮುಂಡ್ಕೂರು ... 2 ಜನಾರ್ಧನ ಸುಬ್ರಾಯ ... ಪ್ರತಿವಾದಿರು.

ವಾದಿ ಮತ್ತು 2ನೇ ಪ್ರತಿವಾದಿ ಕೂಡಾ ಅವರ ಕುಟುಂಬದ ಕಡೆಯಿಂದ ಮೂಲ್ಕಿ ಬಂದ್ರದಲ್ಲಿ ನಡೆಸುವ ವ್ಯಾಪಾರದ ಭಂಡಸಾಲೆಗೆ 1ನೇ ಪ್ರತಿವಾದಿಯಿಂದ ಬಹ ಅಸಲು ಬಡ್ಡಿ ಕೂಡಾ ರೂ 191-7-9ನ್ನು ಬರ ಮಾಡಿ ಕೊಳ್ಳುವರೆ ವಾದಿಯು ದಾಖಲು ಮಾಡಿದ ಸದ್ರಿ ದಾವೆಯು ಆಖೈರ ತನ್ನಿಗೆ ತಾ. 16-10 34ಕ್ಕೆ ಇಟ್ಟಿರುವುದರಿಂದ ಈ ಕುರಿತು ಉದಾಹರಣೆ ಕೊಡುವರೆ ಸದ್ರಿ ತನ್ನಿ ತಾರೀಕಿನ ಬೆಳಿಗ್ಗೆ 10 ಘಂಟೆಗೆ ಪ್ರತಿವಾದಿರು ಸ್ವತಹ ಯಾ ವಕೀಲರ ಮುಖಾಂತರ ಹಾಜರಾಗಿ ಉದಾಹರಣೆ ಕೊಡದಿದ್ದರೆ ಪ್ರತಿವಾದಿರನ್ನು ಶಿಖ್ಯಾ ಮಾಡಿ ಏಕಪಕ್ಷವಾಗಿ ತೀರ್ಮಾನಿಸಲಾದೀತು.

ಕಾರ್ಕಳ 17 9-34 } M Munkunda Kamath, *Pleader for Plff.*

ಬೇಕಾಗಿದ್ದಾರೆ

ತಿಂಗಳಿಗೆ ರೂ 200ರ ಮೇಲೆ ಚೀಫ್ ಏಜಂಟರೂ ರೂ 100ರ ಮೇಲೆ ಏಜಂಟರೂ ರೂ 40 ಮತ್ತು ಪ್ರೊವಿಡೆಂಟ್ ಫಂಡ್ ಮತ್ತು ಕಮಿಶನಿನ ಮೇಲೆ ಒಗೆನೈಜರರೂ ಬೇಕಾಗಿದ್ದಾರೆ

ಇಂಗ್ಲಿಷಿನಲ್ಲಿ ಬರೆಯಿರಿ

Uplifting Banking Corporation Ltd
169 171 Javeri Bazar, Bombay

The Canara Public Conveyance Company, Ltd., Mangalore.

WE TAKE UTMOST CARE OF PASSENGERS

Read the following letter:—

Modern Hindu Hotel,
Calicut, 17—6 - 1934.

Dear Sir,

We wish to thank you for all that you did for us to make our stay at Mangalore comfortable It is extremely nice of you to have looked after us as you did

Yours faithfully,
(Sd) A. V. Ramaswami.

The same service is offered to all. We call for reports from passengers, if they have failed to receive similar attention and assure to take prompt action to see that inconvenience is not repeated.

Chikmagalur Public Conveyance Motor Service, Chikmagalur.

ಚಿಕ್ಕಮಗಳೂರು ಪಬ್ಲಿಕ್ ಕನ್ವೆಯನ್ಸ್ ಮೋಟರ್ ಸರ್ವಿಸ್,
ಚಿಕ್ಕಮಗಳೂರು

ಮುಂಬಾಯಿಯಿಂದ - ಮಂಗಳೂರಿಗೆ
ಮಂಗಳೂರಿನಿಂದ - ಮುಂಬಾಯಿಗೆ.

ಅಲ್ಲದೆ

ಹುಬ್ಬಳ್ಳಿ, ಧಾರವಾಡ, ಗೋವಾ, ಮುಂಬಾಯಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಯ ಎಲ್ಲಾ ಭಾಗಗಳಿಗೆ ಪ್ರಯಾಣ ನಡಿಸಲಿಕ್ಕೆ

ಮಂಗಳೂರು—ಕಡೂರು ಹಾದಿಗಿಂತ ಉತ್ತಮ ಬೇರೆ ಹಾದಿಯಿಲ್ಲ!

ಹೊಸ ಬಸ್ಸುಗಳು ಅನುಕೂಲ ಪ್ರಯಾಣ ಸೌಕರ್ಯಗಳು

ಕಡೂರು ಜಿಲ್ಲೆಯೊಳಗಿನ ಎಲ್ಲಾ ಕಾಫಿ ತೋಟಗಳಿಗೆ ಕೂಲಿಕಾರರನ್ನು ತರಲಿಕ್ಕೂ ಅಲ್ಲಿಂದ ಕೊಂಡುಹೋಗಲಿಕ್ಕೂ ನಾವು ಎಲ್ಲಾ ತರದ ಸಹಾಯವನ್ನೂ ಕೊಡುತ್ತೇವೆ.

ಚಿಕ್ಕಮಗಳೂರಿನಿಂದ— ಶಿವಮೊಗ್ಗಕ್ಕೆ, ಬೇಲೂರಿಗೆ, ಕಡೂರಿಗೆ,
— ಮೂಡಗೆರೆಗೆ, ಸಕಲೇಶಪುರಕ್ಕೆ,
— ಮಂಗಳೂರಿಗೆ, ಮೂಡಬಿದ್ರೆಗೆ, ಪುತ್ತೂರಿಗೆ, ಮೂಲ್ಕಿಗೆ
—ಧರ್ಮಸ್ಥಳಕ್ಕೆ, ವೇಣೂರಿಗೆ, ಸುಬ್ರಹ್ಮಣ್ಯಕ್ಕೆ

ನಿರಾಯಾಸದ ಪ್ರಯಾಣ! ಉತ್ತಮ ...

ಬೇಕಾದ ಮಾಹಿತಿಗೆ ನಮ್ಮ ಆಫೀಸಿಗೆ ಬರೆದು ತಿಳಿಯಿರಿ.

ವಿವಿಧ ವಿಷಯ.

ಅಳಿಯ ಸಂಸಾರ!

ಲಿಷ್ಬನ್ನಗ್ಭಿಚಿಕಲೆಟ್ಟಳು ಸಿನೋರಿಟಾ ಎಡಿಲ್ಫಿಡ್ ಫ್ರೆಸ್ ಎಂದು ಅಳಿಯ ಹೆಸರು, ಪ್ರಾಯ ೪೦, ಇಷ್ಟರಲ್ಲೇ ೩೨ ಮಕ್ಕಳನ್ನು ಹೆತ್ತಿದ್ದಾಳೆ; ೩೩ನೇ ಹೆರಿಗೆಗೆ ಆಸ್ಪತ್ರೆಗೆ ತೆರಳಿದ್ದಾಳೆ. ಆ ೩೩ ಮಕ್ಕಳ ಅಕ್ಕರೆಯನ್ನೂ ಅಳಿಮನೆಗೆ ಬರುವ ತನಕ, ಗಂಡನು ನೋಡಿಕೊಳ್ಳುತ್ತಾನೆ.

ಜೈಲಿನೊಳಗೆ ಹುಟ್ಟಿ, ಅಲ್ಲೇ ಬೆಳೆದವನು!

ನಾಗ್ಯ ಗೌಡನೆಂಬವನು! ನಾಗಪುರದ ನಿವಾಸಿ, ಈತನ ತಂದೆ ಹೆಸರುವಾಸಿ ಕಳ್ಳ. ನಾಗ್ಯನು ಜೈಲಿನಲ್ಲೇ ಜನಿಸಿದನು. ಮುಂದೆ ತಂದೆಯ ಹೆಜ್ಜೆಯಲ್ಲೇ ನಡೆಯ ಕಲಿತು, ಈಗ ಜೈಲಲ್ಲಿರುತ್ತಾನೆ. ಈತನ ವಯಸ್ಸು ೩೯ ಅದರ, ೧೮ ವರ್ಷಗಳು ಜೈಲಲ್ಲಿ ಸಂದಿವೆ!

ದನಕ್ಕೆ ಮರಣದಂಡನೆಯಂತೆ!

ನೀವೆಂದಾದರೂ ಕೇಳಿದುದುಂಟೇ? ಜುಗೋಸ್ಲಾವಿಯದಲ್ಲಿ ಒಂದು ದನದ ವಿಚಾರಣೆ! ಅದು ಒಬ್ಬನನ್ನು ಹಾಯ್ದು ಬಿಟ್ಟ ರಭಸಕ್ಕೆ ಬಡವನು ಸೀಳಲ್ಪಟ್ಟು, ಅಲ್ಲೇ ಮೃತಪಟ್ಟನಂತೆ. ದನದ ಮೇಲೆ ಖಟ್ಲೆ! ದನವು 'ಗಿಲ್ಟಿ' ಯಾದುದರಿಂದ, ಅದಕ್ಕೆ ಮರಣದಂಡನೆಯಾಗುತಕ್ಕುದೆಂದೂ ತೀರ್ಪು! –

ಬಂಗಾರದ ಮೊಟ್ಟೆಯ ಕತೆ ಕೇಳಿರುವಿರಲ್ಲವೇ?

ಈಗ ಮತ್ತೊಂದು ಮೊಟ್ಟೆಯ ಕತೆ ಬಂದಿದೆ. ಅದು ಬಂಗಾರದ ತತ್ತಿಯಲ್ಲವಾದರೂ ತುಂಬಾ ಬಂಗಾರವನ್ನು ತರಲಾರಂಭಿಸಿದೆ, ಇಲ್ಲಿನಸ್ ಸಂಸ್ಥಾನದ ದಂಡೀ ಎಂಬಲ್ಲಿ ಒಬ್ಬ ಬೇಸಾಯಗಾರನ ಒಂದು ಕೋಳಿಯು ಕಪ್ಪುಕಪ್ಪಾದ ಒಂದು ತತ್ತಿಯನ್ನು ಇಟ್ಟುಬಿಟ್ಟಿತು. ಇಂತಹ ತತ್ತಿಯು ಮತ್ತೆಲ್ಲಿಯೂ ಇಲ್ಲ. ಅದನ್ನು ನೋಡುವ ಜನರ ಹಿಂಡೇ ಹಿಂಡು. ಆ ಬೇಸಾಯಗಾರನಿಗೆ ಕೊನೆಗೊಂದು ಆಲೋಚನೆ ಹೊಳೆಯಿತು. ಹತ್ತು ಸೆಂಟುಗಳನ್ನು ಕೊಟ್ಟರೆ ಮಾತ್ರ ಆ ತತ್ತಿ ನೋಡಲು ಬಿಡುತ್ತಾನೆ. ನೋಡುವವರ ಸಂಖ್ಯೆ ಹೆಚ್ಚುತ್ತಲೇ ಇದೆ.

'ಮಳೆಯ ಮರ'ವೆಂಬುದೊಂದು ಇದೆ!

ಇದು ಆಶ್ಚರ್ಯವೆನಿಸಬಹುದು. ಆದರೆ, ನಿಜವೇ! ಪೆರುವಿನ ಅಪ್ಪುಕಗಳೆತ್ತೊಂದು ಇದು ಪ್ರಪಂಚದ ಯಾವ ಕಡೆಯಲ್ಲೂ ಮಳೆ ಬಾರದಿದ್ದರೂ ಈ ಮರದ ಕೆಳಗೆ ಮಳೆಯಿದ್ದೇ ಇದೆ. ಇದರ ಎಲೆಗಳು, ಬಿಡಿಸಿದ ಕೊಡೆಯಂತೆ ಇವೆ. ಅವುಗಳು ಗಾಳಿಯೊಳಗಿನ ನೀರಿನ ತೇವವನ್ನು ಹೀರಿಕೊಂಡು, ಹನಿಹನಿಯಾಗಿ ಕೆಳಗೆ ಬಿಡುವುವು. ಹೀಗೆ ದಿನಕ್ಕೆ ೧೮೦೦ ರಿಂದ ೧೫ ಗೆಲನುಗಳಷ್ಟು ನೀರನ್ನು ಹೀರಿಕೊಂಡು ಕೆಳಗೆ ಮಳೆಗರೆಯುವುವು!

ಒಮ್ಮೆಗೇ ಐದು ಶಿಶುಗಳು ಜನಿಸಿದರೆ—

...ಅದೊಂದು ದೊಡ್ಡ ಅದ್ಭುತವೆಂದೂ, ಈ ತನಕ ನಡೆದುದಿಲ್ಲವೆಂದೂ ಕೆಲಕಾಲದ ಹಿಂದೆ ನಾವು ತಿಳಿದೆವು. ಆದರೆ, ಈಗ ಪೂರ್ವದ ಇತಿಹಾಸವನ್ನು ಶೋಧಿಸಿದರೆ, ಕಳೆದ ಎರಡೂವರೆ ಶತಮಾನಗಳಲ್ಲಿ ಒಮ್ಮೆಗೇ ೬ ಶಿಶುಗಳು ಜನಿಸಿದ ೪ ದಾಖಲೆಗಳಿವೆಯಂತೆ. ಒಮ್ಮೆಗೇ ಐದು ಶಿಶುಗಳು ಹುಟ್ಟಿದ ಸಂಭವಗಳು ೩೪ (ಆದರೆ, ಇಂತಹ ಶಿಶುಗಳು ೩೦ ದಿನಗಳಿಗಿಂತ ಹೆಚ್ಚು ಬದುಕುವುದಿಲ್ಲವಂತೆ)

ಅಣುಗಳ ಲೆಕ್ಕ

ಒಂದು ರಾತ್ತು ಮಣ್ಣಿನಲ್ಲಿ ೪೦,೦೦೦,೦೦೦,೦೦೦ ಅಣುಗಳಿರಬಹುದಂತೆ!

೫೦೦೦ ವರ್ಷಗಳ ಹಿಂದೆಯೂ ಇದ್ದುವು.

ಈಗಿನಂತೆ ನ್ಯಾಯಸ್ಥಾನಗಳು ೫ ಸಾವಿರ ವರ್ಷಗಳ ಹಿಂದೆಯೂ ಇದ್ದುವು. ಇಜಿಪ್ಟಿನಲ್ಲಿ, ನ್ಯಾಯಸ್ಥಾನಗಳಿಗೆ ವ್ಯಾಜ್ಯವನ್ನು ಕೊಂಡೊಯ್ಯುವಾಗ, ವ್ಯಾಜ್ಯದ ವಿವರವನ್ನು ಸಂಕ್ಷೇಪವಾಗಿ ಬರೆದು ದಾಖಲು ಮಾಡುವ ಪದ್ಧತಿ, ಈಗಿನಂತೆಯೇ ಇತ್ತಂತೆ. ಇಂತಹ ಒಂದು ವ್ಯಾಜ್ಯದ ರಿಕಾರ್ಡು ಈಗ ಸಿಕ್ಕಿರುವುದನ್ನು ವಸ್ತು ಪ್ರದರ್ಶನಾಲಯಕ್ಕೆ ಕಳುಹಿರುವರು.

ಪ್ರಚಲಿತಸಮಾಚಾರ.

ಮದುವೆಯ ಮೋಜು!

ರವೀಂದ್ರಚಂದ್ರ ಚೌಧುರಿ ಎಂಬಾತನೊಬ್ಬ ಸುಮಾರು ೪೦ ವಯಸ್ಸಿನಗಬಹುದು. ಮೊದಲು ನಾಲ್ಕು ಬಾರಿ ಮದುವೆಯಾದವನ್ನು ಮಕ್ಕಳೂ ಇವೆ. ಆದರೆ, ಇತ್ತೀಚೆಗೆ ಪಾರಾ ಎಂಬಲ್ಲಿಗೆ ಬಂದು, ಒಂದು ಮನೆಯಲ್ಲುಳಕೊಂಡು, ಒಂದು ಹೆಣ್ಣನ್ನು ನೋಡಿ, ಮೋಹಿಸಿ ಐದನೆ ವಿವಾಹಕ್ಕೆ ಆಲೋಚಿಸಿದನು. ವರದಕ್ಷಿಣೆ ಬೇಡವೆಂದನು. ವಿವಾಹವಾಗುವುದೆಂದು ನಿಶ್ಚಯವಾಯಿತು. ಅಷ್ಟರಲ್ಲಿ, ಕೆಲವು ಯುವಕರು, ಆತನಿಗೆ ಈ ಮೊದಲು ವಿವಾಹವಾಗಿದೆಯೆಂಬ ಸುದ್ದಿ ತಿಳಿದು, ಫರದೀಪುರಕ್ಕೆ ಹೋಗಿ, ಆತನ ಮೊದಲ ಹೆಂಡತಿಯೊಬ್ಬಳನ್ನೂ, ಮತ್ತೊಬ್ಬಳ ಮಕ್ಕಳನ್ನೂ, ಮೂರನೆಯವರ ಮಾವನನ್ನೂ, ನಾಲ್ಕನೆಯವಳ ಅತ್ತೆಯನ್ನೂ ಕರಕೊಂಡು ಬಂದರು. ಮದುವೆ ಮಂಟಪದಲ್ಲಿ ಕೋಲಾಹಲ! ವರನು ಆಗಲೇ ಖಾಸ!

ಈ ಪರಾಕ್ರಮಿಯ ಚರಿತ್ರೆ ಕೇಳಿ!

ಸಿಲೋನಿನಲ್ಲಿ ನಾಯಿಗಳನ್ನು ಕೊಲ್ಲುವವನೊಬ್ಬ ಬೀದಿನಾಯಿಗಳನ್ನು ಕೊಂದರೆ ಸರಕಾರದಿಂದ ಹಣವು ದೊರೆವುದೆಂದು ತಿಳಿದು, ಕೊಲೆಗೆ ಆರಂಭಮಾಡಿದನು. ಕೆಲವೇ ದಿನಗಳಲ್ಲಿ ನೂರಾರು ನಾಯಿಗಳನ್ನು ಕೊಂದು, ಅವುಗಳ ಬಾಲಗಳನ್ನು ಗುರುತಿಗಾಗಿ ಕಳುಹಿಸಿದನು. ಅಧಿಕಾರಿಗಳಿಗೆ ಆಶ್ಚರ್ಯವಾಯಿತು. ಆದರೆ, ಪರೀಕ್ಷೆ ಮಾಡಿ ನೋಡಿದಲ್ಲಿ — ಆ ಬಾಲಗಳಲ್ಲಿ ನಾಯಿಯವು ಕಡಿಮೆ, ಕೋತಿ ಮೊದಲಾದುವುಗಳ ಬಾಲ ಹೆಚ್ಚು. ಈಗ ಆತನ ಮೇಲೆ ಚಾರ್ಜು!

ನಾಗಪುರದ ಮುನಿಸಿಪಲ್ ಚುನಾವಣೆಗಳು—

ಸ್ವಾರಸ್ಯವಾಗಿವೆ ಚುನಾವಣೆಯಲ್ಲಿ ಸ್ಪರ್ಧಿಸುವವರು ೧೬ ವಕೀಲರು, ನಾಲ್ವರು ಡಾಕ್ಟರರು, ೩೦ ಮಿಲ್ಲಿನ ಹರಿಜನರು, ೬ ಗುಂಡಿ ಪಹಿಲ್ವಾನರು!

ಅರಸರು ಚಿಕ್ಕವರಾದರೇನು?

ವಿಲಾಯತಿಯಲ್ಲಿ ಅವರ ವೆಚ್ಚಗಳು ದೊಡ್ಡವು! ಸಯಾಂ ಅರಸರ ಒಂದು ಉದಾಹರಣೆ ಇಲ್ಲಿದೆ. ಬುಡಾಪೆಸ್ಟಿನಲ್ಲಿ ಈ ಅರಸರು ಒಂದು ಹೊಟೇಲಲ್ಲಿ ಒಂಭತ್ತೇ ದಿನ ಉಳಕೊಂಡಿದ್ದರು. ಹೋಟೆಲು ವೆಚ್ಚಗಳು ಹೆಚ್ಚಲ್ಲ—೩೬೦ ಪವನುಗಳು! ಅನಂತರ ಹೊಟೇಲಿನ ಸೇವಕರಿಗೆ ಕೊಟ್ಟ ಬಕ್ಷೀಸು ೪೦ ಪವನುಗಳು, ಪಿಕ್ಚರ್ ಪೋಸ್ಟ್ ಕಾರ್ಡುಗಳಿಗೆ ೨೦ ಪವನು, ಅಲ್ಲಿಂದ ಹೊರಡುವ ವೇಳೆಯಲ್ಲಿ ಕೆಲವರಿಗೆ, ತನ್ನ ಆಗಮನದ ಸ್ಮಾರಕವಾಗಿ ಕೊಟ್ಟ ಉಡುಗೊರೆಗಳ ಮೌಲ್ಯ ೩೦೦ ಪವನು.

ಮುಂದಿನ ಕೊಂಗ್ರೆಸ್ ಅಧ್ಯಕ್ಷ ಪದವಿಯು—

ಬಾಬು ರಾಜೇಂದ್ರ ಪ್ರಸಾದರವರ ಪಾಲಿಗೆ ಬರುವಂತೆ ತೋರುವುದು. ಕರ್ನಾಟಕ ಪ್ರಾಂತಿಕ ಕೊಂಗ್ರೆಸ್ ಕಮಿಟಿಯು ಕೂಡಿ ಈ ತನಕ ಒಟ್ಟು ೬ ಪ್ರಾಂತ್ಯಗಳು ಬಾಬು ರಾಜೇಂದ್ರ ಪ್ರಸಾದರವರ ಹೆಸರನ್ನೇ ಸೂಚಿಸಿವೆ.

೫೦೦೦ ವರ್ಷಗಳ ಹಿಂದಣ ಗೋದಿ

ಅದು ಸಿಂಧದ ಪಿಟಾರ. ಸಿಂಧಪ್ರಾಂತ್ಯದ ಒಂದು ಗೋರಿಯನ್ನು ಅಗೆವಾಗ, ಅದು ೫ ಸಾವಿರ ವರ್ಷಗಳ ಹಿಂದಣ ಗೋರಿಯೆಂದು ಸಿದ್ಧಾಂತವಾಯಿತು. ಆ ಗೋರಿಯಲ್ಲಿ ಕೆಲವು ಗೋದಿ ಕಾಳುಗಳು ದೊರೆತುವು. ಕರ್ನಲ್ ಜೆಫ್ಸನ್ ಕ್ಲಿಬ್ಬರ್ನ್ ಎಂಬವರು ಅದನ್ನು ಇಂಗ್ಲಾಂಡಿಗೆ ಒಯ್ದು ಬಿತ್ತಿದರು. ಕೆಲವೇ ಕಾಲದಲ್ಲಿ ೭ ಅಡಿ ಎತ್ತರಕ್ಕೆ ತೆನೆಗಳೆದ್ದು ನಿಂತಿವೆ! ಇಷ್ಟರನೇ ಶತಮಾನದವರು ಬೆಳೆಯ ಸುಧಾರಣೆಯ ವಿಷಯದಲ್ಲಿ ಹೆಮ್ಮೆ ಪಡಲೇನೂ ಇಲ್ಲ. ೫ ಸಾವಿರ ವರ್ಷಗಳ ಹಿಂದಣ ಬೆಳೆಯು ಉತ್ತಮೋತ್ತಮವಾಗಿತ್ತು ಎಂದು ಕರ್ನಲ್ ಸಾಹೇಬರು ಹೇಳುತ್ತಾರೆ.

ಕಲ್ಕತ್ತಾ ಜಿಲ್ಲಾ ಕೊಂಗ್ರೆಸ್—

–ಕಮಿಟಿಯ ಸಭೆಯು ಕಾರ್ಯನಿರ್ವಾಹಕ ಸಮಿತಿಯ ಚುನಾವಣೆಗೆಂದು ನೆರೆದು, ಎರಡು ಪಂಗಡಗಳಾಗಿ, ಎರಡು ಪಂಗಡಗಳೂ ಚೆನ್ನಾಗಿ ಹೊಡೆದುಕೊಂಡ ಫಲವಾಗಿ—ಕೆಲವರ ತಲೆಗಳ ಮೇಲೆ ಗಾಯಗಳು! ಆಸ್ಪತ್ರೆಗೊಯ್ಯಬೇಕಾಯಿತು. ಈ ಚುನಾವಣಾ ಸಭೆಯನ್ನು ಶ್ರೀ ಅಣೆಯವರು, ಗಾಂಧೀಯವರ ಅಪೇಕ್ಷೆಯಂತೆ ರಚಿಸಿದ್ದರು.

ಅರ್ಬುದ ರೋಗವು—

—ವೈದ್ಯಕೀಯ ಪ್ರಪಂಚದ ಮತಿಗೆಟ್ಟಿಸಿದನ್ನು ಭಯಂಕರವಾದುದೆಂಬುದನ್ನೂ, ಅದರ ಕಾಲಂಕಾಣಗಳನ್ನಾರೂ ತಿಳಿದಿರಲಿಲ್ಲವೆಂಬುದನ್ನೂ ಬಲ್ಲೆವು. ಆದರೆ ಡಾ। ವನ್ ಬ್ರಹ್ಮರ್ ಎಂಬ ಜರ್ಮನ್ ವೈದ್ಯರೀಗ ಅರ್ಬುದ ರೋಗವು ಏತರಿಂದ ಬಲಾಗುವುದೆಂಬುದನ್ನೂ, ಅದನ್ನು ಕಡೆವ ಸಾಧ್ಯತೆಗಳನ್ನೂ ಕಂಡುಹಿಡಿದಿರುತ್ತಾರೆ. ಇವರ ಶೋಧವಿದು ಸಾವಿರಾರು ಜನರಿಗೆ ವರದಾನವಾಗಿ ಪರಿಣಮಿಸಬಹುದೆಂದು ಭರವಸೆಯಿಂದ ನಿರೀಕ್ಷಿಸಲಾಗಿದೆ.

ಹಿಮಾಲಯದ ಚಲಚ್ಚಿತ್ರ.

ಪ್ರೊಫೆಸರ್ ಡೈರೆನ್ ಫರ್ಥ್ ಎಂಬವರ ನೇತೃತ್ವದಲ್ಲಿ ಜರ್ಮನಿ, ಇಟೆಲಿ, ಆಸ್ಟ್ರೀಯ, ಅಮೇರಿಕ ಮತ್ತು ಸ್ವಿಟ್ಜರ್ಲೆಂಡಿನ ಒಟ್ಟು ೧೪ ಮಂದಿಗಳು ಹಿಮಾಲಯ ಪರ್ವತವನ್ನು ಸುಮಾರು ೨೫,೬೦೦ ಅಡಿಗಳಷ್ಟು ಎತ್ತರ ಕ್ಕೇರಿ, ಅಲ್ಲಿಂದೊಂದು ಚಲಚ್ಚಿತ್ರದ ಸದ್ದಿಕೆಗೆ ಬೇಕಾಗುವಷ್ಟು ಚಿತ್ರಗಳನ್ನು ತೆಗೆದಿಳಿವರು. ೨೪ ಸಾವಿರ ಅಡಿಗಳ ಮೇಲೆ ಇವರಿಗೆ ಹವೆಯು ಪ್ರತಿಕೂಲವಾಯಿತು. ಇವರೊಡನಿದ್ದ ಚಟ್ಟೆಗೆಯು ಉಳಿಯಲಾರದಷ್ಟು ಚಳಿ! ಒಬ್ಬ ಹೆಂಗುಸು ಮಂಜಿನಿಂದಲೇ ಕೆಲದಿನ ಅಂಧೆಯಾಗಿ ಹೋದಳಂತೆ!

ನಮ್ಮ ಮದರಾಸು ಗವರ್ನರರು—

ಸರ್ ಜೋರ್ಜ್ ಸ್ಟೇನ್ಲಿಯವರು ಇದೇ ಬರುವ ನವಂಬರ ತಾ ೧೪ಕ್ಕೆ ನಿವೃತ್ತರಾಗಿ ಮದರಾಸಿನಿಂದ ಹೊರಟು, ತಾರೀಕು ೧೬ಕ್ಕೆ ಬೊಂಬಾಯಿಯಿಂದ ಇಂಗ್ಲಾಂಡಿಗೆ ಹಡಗು ಹತ್ತುವರು. ಹೊಸ ಗವರ್ನರರಾದ ಲೋರ್ಡ್ ಎರ್ಸ್ಕಿನರವರು ತಾ ೧೬ಕ್ಕೆ ಬಂದು ಮದರಾಸಿಗೆ ತಲಪುತ್ತಾರೆ.

ಸಿಲೋನಿನಲ್ಲಿ ಹುಚ್ಚರ ಸಂಖ್ಯೆ—

ಹೆಚ್ಚಿದೆಯೆಂದು ತೋರುವುದು. ಇಲ್ಲದಿದ್ದರೆ ೬೦೦ ಹಚ್ಚರಿಗಾಗಿ ಇರುವ ಆಸ್ಪತ್ರೆಯಲ್ಲಿ ೧೮೮೦ ಹುಚ್ಚರನ್ನು ತುರುಕಿದುದರ ಅರ್ಥವೇನು? ಇದು, ಅವರನ್ನು "ತಹ ಚ್ಚ"ರನ್ನಾಗಿ ಮಾಡದೇ? ಇದರಿಂದ ಹುಚ್ಚರು ಗುಣವಾಗುವ ಬದಲಾಗಿ, ಅವರಲ್ಲಿ ಕ್ಷೇಕರಿಗೆ ಕ್ಷಯ, ಆಮಶಂಕೆಯಂತಹ ರೋಗಗಳು ಬಂದು, ಅನೇಕರ ಮರಣಗಳಾದುವಂತೆ. ಈ ವಿಚಾರವು ಅಲ್ಲಿಯ ಕೌನ್ಸಿಲ್ ತನಕವೂ ಹೋಗಿದೆ. ಮತ್ತೊಂದು ಹುಚ್ಚರ ಆಸ್ಪತ್ರೆಯನ್ನು (ಅಂಗೋಡಾದಲ್ಲಿ) ತೆರೆಯುವ ಆಲೋಚನೆ ಮಾಡುತ್ತಿರುವರು.

ಹಿಂದೂದೇಶಕ್ಕೆ ಬೇಕಾದುದೇನು?

— ಎಂಬ ವಿಚಾರದಲ್ಲಿ ಸರ್ ಸಿ. ಪಿ. ರಾಮಸ್ವಾಮಿ ಐಯ್ಯರರಿಂದ, ನಾಗಪುರದ ವಿದ್ಯಾರ್ಥಿಗಳಿಗೊಂದು ಭಾಷಣ! ಬೇಕಂತೆ ಶಸ್ತ್ರಸನ್ಯಾಸ, ಶಿಸ್ತು ಮತ್ತು 'ಪ್ಲಾನಿಂಗ್'! ಈ ಮೂರೂ ಇಂದಿಯದಲ್ಲಿಲ್ಲವೆಂದು ಸರ್ ಮಹಾಶಯರ ಅಭಿಪ್ರಾಯ. ಶಸ್ತ್ರಗಳು ಇಲ್ಲಿ ಹೆಚ್ಚಿವೆ, ಅಥವಾ ಮಿಲಿಟರಿ? ಶಿಸ್ತು ಮಾಯವಾಗಿದೆ, ಹಿಂದೀಯರಲ್ಲಿ? 'ಪ್ಲಾನಿಂಗ್' ಅವಶ್ಯಕ, ಏತರದು? ಆರ್ಥಿಕ ವಿಚಾರವೇ?—ಇಷ್ಟನ್ನು ಹೇಳಿ ಸರ್ ಮಹಾಶಯರು ಸಿಮ್ಲಾದ ಕಡೆಗೆ ಪ್ರಯಾಣ ಬೆಳೆಸಿದರು. ಶಿಕ್ಷಣ ಮುಗಿಯುತ್ತಲೇ ಉದ್ಯೋಗವೆಲ್ಲೆಂದು ಕತ್ತು ನೀಡುವ ವಿದ್ಯಾರ್ಥಿಗಳು ಆಲೋಚಿಸಲಿ!

ಕೊಂಗ್ರೆಸ್ಸಿನ ಮೇಲೆ ಪ್ರತಿಬಂಧ—

— ಜನಾನಸ್ಥಿರಿ ತ್ರಾವಣಕೋರು ಸರಕಾರವು ಪ್ರಜಾಪಕ್ಷದ ಮೇಲೆ ಬರೆ ಎಳೆದುಬಿಟ್ಟಿತೋ ಎಂಬಂತೆ ತ್ರಿವೇಂಡ್ರಮಿನಲ್ಲಿ ಭಾರೀ ಸಭೆ! ಪ್ರಜೆಗಳ ಹಕ್ಕುಗಳ ಮೇಲೆ, ಸ್ವಾತಂತ್ರ್ಯದ ಮೇಲೆ ಇಂತಹ ಭಾರದಡಗಳನ್ನಿರಿಸುವುದು ಸರಕಾರಕ್ಕೆ ನ್ಯಾಯವಾಗಿಲ್ಲವೆಂದೇ ಜನರ ನಿಷೇಧ. ಕೊಂಗ್ರೆಸ್ಸಿನ ಮೇಲಿನ ನಿರ್ಬಂಧಗಳನ್ನೆಲ್ಲ ತ್ರಾವಣಕೋರು ಸರಕಾರವು ತೆಗೆದುಹಾಕಬೇಕಾಗಿ ಒತ್ತಾಯಪಡಿಸುವ ಠರಾವಾಗಿ, ದಿವಾನರನ್ನು ಜನ ಪ್ರತಿನಿಧಿಗಳು ಕಾಣುವಂತೆ ಗೊತ್ತುಪಡಿಸಲಾಗಿದೆ.

ಜಮಿನ್ದಾರರು ತಮ್ಮ ಜಮೀನುಗಳಿಂದ ಒಂದಂಶ ಸ್ಥಳವನ್ನು ಗೋಚರಾವಿಗೆ ಬಿಟ್ಟುಕೊಡಬೇಕೆಂಬುದನ್ನು ಕಡ್ಡಾಯವಾಗಿ ಮಾಡಲು ಸಂಯುಕ್ತ ಪ್ರಾಂತ್ಯದ ಕೌನ್ಸಿಲಿನಲ್ಲಿ ಒಂದು ಮಸೂದೆ ತರಲಾಗಿದೆ.

ತುಂಡು ಸುದ್ದಿ.

ಗಯಾ ಬಳಿಯಲ್ಲಿ, ಒಂದು ಮಗುವನ್ನು ಹಿಡಕೊಂಡು ರೈಲ್ವೇಲೈನಿನಲ್ಲಿ ದಾಟುತ್ತಿದ್ದ ಓರ್ವ ಹೆಂಗುಸು ಆಗಲೇ ಬರುತಿದ್ದ ರೈಲಿನಡಿಗೆ ಬಿದ್ದು ಮರಣಪಟ್ಟಳು. ಮಗುವು ಸುರಕ್ಷಿತವಾಗಿದೆಯೆಂಬುದು ಅದ್ಭುತವು!

ಗ್ರೇಟ್ ಬ್ರಿಟ್ಟಿನಿನಲ್ಲಿ ವರ್ಷಕ್ಕೆ ಒಂದು ಮಿಲ್ಲಿಯಕ್ಕೂ ಹೆಚ್ಚಿನ ಶಸ್ತ್ರಕ್ರಿಯೆ (ಒಪರೇಶನು) ಗಳು ನಡೆವುವೆಂದು ಲೆಕ್ಕವಾಗಿದೆ.

ಕಾವಲಿಯ ಪ್ರಯಸವಕರ ಬಂಗಲೆಯಲ್ಲಿ ಉರಿಸಿದ ಒಂದು ಪೆಟ್ರೋಮೆಕ್ಸ್ ದೀಪವು ಥಕ್ಕನೆ ಸಿಡಿದು ಹೊರಾಗಿ, ಪೋಲೀಸ್ ಸುಪರಿಂಟೆಂಡೆಂಟರ ಬಟ್ಲರನ ಮರಣಕ್ಕೆ ಕಾರಣವಾಯಿತು.

ಸೌತ್‌ವೇಲ್ಸ್ ಕೋಲ್ ಫೀಲ್ಡುಗಳ ೧೪೦೦೦೦ ಮಂದಿ ಕೆಲಸಗಾರರು, ಇದೇ ತಿಂಗಳ ೩೨ ತಾರೀಕೊಳಗೆ ತಮ್ಮ ಕಲಬನ್ನು ಹೆಚ್ಚಿಸದಿದ್ದಲ್ಲಿ ಮುಷ್ಕರವನ್ನಾರಂಭಿಸುವುದಾಗಿ ಬೆದರಿಕೆ ಹಾಕಿರುವರು.

ಅಲ್ ಇಂಡಿಯಾ ಕೊಂಗ್ರೆಸ್ ಸೋಶಲಿಸ್ಟ್ ಪಂಗಡದವರು "ಕೊಂಗ್ರೆಸ್ ಸೋಶಲಿಸ್ಟ್" ಎಂಬ ಹೆಸರಿನ ಒಂದು ವಾರಪತ್ರಿಕೆಯನ್ನು (ಇಂಗ್ಲೀಷು) ಕಲ್ಕತ್ತದಿಂದ ಹೊರಡಿಸುವರು.

ರುಮಾನ್ಯಿಯ ಬಾಲಕನೊಬ್ಬನು ನಿದ್ದೆಯಲ್ಲಿ ಗೊರಕೆ ಹೊಡೆಯುವ ಬದಲಾಗಿ ಬಿಗಿಲೂದುತ್ತಿರುವನು. ಬಿಗಿಲು ಒಂದು ಫರ್ಲಾಂಗು ದೂರಕ್ಕೆ ಕೇಳಿಸುತ್ತಿದೆ.

ಬೊಂಬಾಯಿಯ "ಅಬ್ದುಲ್ ಗಫರ್ ನಗರ"ದಲ್ಲಿ ಕೊಂಗ್ರೆಸ್ ಸಭಾಧಿವೇಶನದ ಚಪ್ಪರವನ್ನಲಂಕರಿಸಲು ಸುಮಾರು ೪೦ ಸಾವಿರ ರೂಪಾಯಿ ಬೆಲೆಯ ೨ ಲಕ್ಷ ಗಜ ಖಾದಿಯು ಬೇಕಾಗಿರುವುದೆಂದು ತಿಳಿದುಬಂದಿದೆ.

ಬೊಗ್ರಾ ಎಂಬಲ್ಲಿ, ಓರ್ವ ಸಾಹುಕಾರನ ಮನೆಯಲ್ಲಿ ಇಲಿಗಾಗಿ ಇಟ್ಟ ಗೂಡಿನಲ್ಲಿ ಆರು ಅಡಿಯ ನಾಗರಹಾವು ಬಿದ್ದಿದೆ!

ಬೆಂಗಾಂವುರದಲ್ಲಿ ಇನ್ನು ಮುಂದೆ, ಬಾಡಿಗೆಗೆ ಕೊಡಲ್ಪಡುವ ದೇವಾಲಯಗಳ ಸಂಸ್ಥೆಗಳ ಮೇಲೆ ತೆರಿಗೆ ಹಾಕಬೇಕೆಂದು ನಿಶ್ಚಯಿಸಿರುವರು.

ಅಲ್ಮೋರಾ ಜಿಲ್ಲೆಯ ಕಾಟ್ಯೂರ ಎಂಬ ಗ್ರಾಮದಲ್ಲಿ ಸಿಡಿಲು ಬಡೆದು ಒಂದೇ ಬಾರಿಗೆ ೨೦ ದನಗಳು ಸತ್ತುಬಿದ್ದುವು.

ಗ್ವಾಲಿಯರ್ ಹೈಸ್ಕೂಲಿನ Vಫಾರ್ಮ್ ವಿದ್ಯಾರ್ಥಿ ರಾಧಾಕೃಷ್ಣ ಭಾರ್ಗವ ಎಂಬಾತನು ಬಡತನದ ದೆಸೆಯಿಂದ ಪಾಠಪುಸ್ತಕಗಳನ್ನು ಕೊಂಡುಕೊಳ್ಳಲಾರದ ದುಃಖದಿಂದ ಪಾಷಾಣವನ್ನು ಸೇವಿಸಿ ಆತ್ಮಹತ್ಯ ಮಾಡಿಕೊಂಡನು.

LOOK SHARP! LOOK AHEAD!

Murdeshwar's Banking Institute.

Pioneer Institute on the West Coast

Opens out Careers for Business men, Graduates, Under graduates, and S. S. L. C.s and also for those who have not passed any University examination.

Coaches students for the Specialised Banking Courses (I. A. I. B. & C. A. I. I. B.) and also for Accountancy, Secretarial, and Insurance Courses (L. A. A., A. C. R. A., F. C. R. A., F. I. S. A., A. C. I. I., etc.)

Classes for the Cambridge School Certificate (Senior Cambridge) Examination for 1935 are also held.

Ladies are also admitted.

Enrol yourself NOW. Classes are in full swing. Expert tuition (Oral or Postal) by well-qualified and experienced Lecturers.

FEES VERY MODERATE

For further particulars apply to—

The Principal,
2 Fernandes Mansion,
Hampankatta, Mangalore (S. India.)

ಬೆಂಕಿ ಪೆಟ್ಟಿಗೆಗಳ ಮೇಲಿನ ಸುಂಕ.

ಅವರ ಕಾರಣ ಪಾತ್ರಗಳು.

ಹಿಂದೆ ಬೆಂಕಿ ಪೆಟ್ಟಿಗೆ ಕಾರ್ಖಾನೆದಾರರ ಸಂಘದವರು ಫೈನಾನ್ಸ್ ಮೆಂಬರರಾದ ಸರ್ ಜೇಮ್ಸ್ ಗ್ರಿಗರವರಲ್ಲಿಗೆ ಒಯ್ದ ಮನವಿಯಲ್ಲಿ—ಸರಕಾರವು ಬೆಂಡ್ರೋಲುಗಳನ್ನು ಕಾರ್ಖಾನೆದಾರರು ಕೊಂಡುಕೊಳ್ಳುವ ವಿಷಯವಾಗಿ ಅನುಕೂಲವಾಗಿ ಪರ್ಯಾಲೋಚಿಸದಿದ್ದರೆ, ಪರಿಮಿತ ಭಂಡವಾಲದಿಂದ ನಡೆಯುತ್ತಿರುವ ಕಾರ್ಖಾನೆಗಳಿಗೆ ಅದು ಸಹಿಸಲಾಗದಂತಹ ಆಘಾತವಾಗುವುದೆಂದು ಸ್ಪಷ್ಟೀಕರಿಸಿರುವರು. ಇನ್ನು ಬೆಂಡ್ರೋಲುಗಳನ್ನು ನಗದಿ ಹಣ ತೆತ್ತು ಕೊಂಡುಕೊಳ್ಳಬೇಕಾಗಿರುವುದರಿಂದ ಕಾರ್ಖಾನೆದಾರರಲ್ಲನೇಕರಿಗೆ ಭಂಡವಾಲವನ್ನೂ ಹೆಚ್ಚಿಸುವ ಆವಶ್ಯಕತೆ ತೋರಬಹುದು. ವಿದೇಶೀ ಕಂಪೆನಿಗಳ ಸ್ಪರ್ಧೆಯು ತೀವ್ರವಾಗಿರುವುದರಿಂದ ಇದು ಸಾಧ್ಯವಾಗುವುದು ಸಂಭವನೀಯವಲ್ಲ.

ಈಗ ಹಿಂದೂದೇಶದಲ್ಲಿ ವರ್ಷವೊಂದಕ್ಕೆ ಸುಮಾರು ೨೦,೦೦೦,೦೦೦ ಗ್ರೋಸ್ ಬೆಂಕಿಪೆಟ್ಟಿಗೆಗಳು ಖರ್ಚಾಗುತ್ತಿವೆ. ಇದರಿಂದ ಗ್ರೋಸಿಗೆ ರೂ. ೧—೮—೦ರಂತೆ, ಸರಕಾರಕ್ಕೆ ಅಬಕಾರಿ ಸುಂಕದ ಹೆಸರಲ್ಲಿ ರೂಪಾಯಿ ೩೦೦,೦೦೦,೦೦೦ ಉತ್ಪತ್ತಿಯಾಗಬಹುದು. ಇಂಡಿಯದ ಬೆಂಕಿಪೆಟ್ಟಿಗೆ ಕಾರ್ಖಾನೆಗಳು ಹೆಚ್ಚಾಗಿ ಬೊಂಬಾಯಿ, ಕಲ್ಕತ್ತಾ, ಮದರಾಸು, ರಂಗೂನುಗಳಂತಹ ಮುಖ್ಯ ನಗರಗಳಲ್ಲಿ ಇದ್ದು, ಬೆಂಕಿಪೆಟ್ಟಿಗೆಗಳು ಅಲ್ಲಿಂದ ನೂರಾರು ಮೈಲು ದೂರದ ಹಳ್ಳಿಪಳ್ಳಿಗಳಿಗೂ, ಏಜಂಟರ ಮುಖಾಂತರ ತಲಪಿ, ದೊಡ್ಡ ಸಾಹುಕಾರರಿಂದ ಚಿಕ್ಕವರಿಗೆ ಸಿಗಬೇಕಾಗಿದೆ. ಹೀಗಾಗಿ ಬೆಂಡ್ರೋಲನ್ನು ಕೊಂಡುಕೊಂಡು ಬೆಂಕಿಪೆಟ್ಟಿಗೆಗಳಿಗೆ ಹಚ್ಚಿ ಅವನ್ನು ಮಾರಾಟಕ್ಕೆ ಹಾಕುವಾಗ ಅಥವಾ ಅವು ಮಾರಾಟದ ಸ್ಥಳಕ್ಕೆ ಮುಟ್ಟುವಾಗ ಕನಿಷ್ಠ ಮೂರು ತಿಂಗಳ ಅವಧಿ ಬೇಕಾಗಬಹುದು. ಈ ಕಾರಣದಿಂದ ಬೆಂಕಿಪೆಟ್ಟಿಗೆ ಕಾರ್ಖಾನೆದಾರರು ಅಥವಾ ಮಧ್ಯವರ್ತಿಯಾಗಿ ಬರುವ ಸಾಹುಕಾರರು ಸರಕಾರಕ್ಕೆ ೩ ಕೋಟಿ ರೂಪಾಯಿಗಳ ಆದಾಯವನ್ನು ತಂದುಕೊಡಲು ತಾವು ಇನ್ನು ೭೫ ಲಕ್ಷ ರೂಪಾಯಿಗಳ ಭಂಡವಾಲವನ್ನು ಅಧಿಕವಾಗಿ ಸಂಚಯಿಕ್ಕಿರಿಸಬೇಕೆಂದಾಯಿತು. ಆದರೆ, ಸ್ಪರ್ಧೆಯ ಈ ದಿನಗಳಲ್ಲಿ ಆ ೭೫ ಲಕ್ಷ ರೂಪಾಯಿಗಳಿಂದಲೂ ತೃಪ್ತಿಕರವಾದ ಲಾಭವು ಬರಬಹುದೆಂಬ ಆಸೆಯಿಲ್ಲ. ಬೆಂಡ್ರೋಲುಗಳನ್ನು ಮುಂಗಡವಾಗಿ ಹಣ ತೆತ್ತು ಕೊಂಡುಕೊಳ್ಳಬೇಕೆಂದು ಸರಕಾರವು ವಿಧಿಸಿರುವುದರಿಂದ ಆಗುವ ಮುಖ್ಯ ದುಷ್ಪರಿಣಾಮಗಳು ಇವೆರಡು:—(೧) ಧನಬಲವಿರುವ ಸ್ವೀಡನ್ ಮತ್ತು ಜಾಪಾನ್ ಬೆಂಕಿಪೆಟ್ಟಿಗೆ ಕಾರ್ಖಾನೆಗಳ ಪ್ರಾಬಲ್ಯವು ಅಧಿಕವಾಗುವುದು. (೨) ಧನಬಲವಿಲ್ಲದ ಹಿಂದೀ ಕಾರ್ಖಾನೆಗಳನ್ನು ಕಡಿಮೆ ವೆಚ್ಚಗಳಲ್ಲಿ ಉತ್ಪತ್ತಿಯಾಗುವಂತಹ ಚಿಕ್ಕ ಊರುಗಳಿಗೆ ಸಾಗಿಸುವಂತಾಗಬೇಕಾದ ಆವಶ್ಯಕತೆಯೊದಗುವುದು. ಎರಡನೆ ಸಂಭವದಲ್ಲಿ ದೊಡ್ಡ ನಗರಗಳ ಸಾಹುಕಾರರು ಸುಲಭವಾಗಿ, ಉಪಾಯವಿಲ್ಲದೆ, ವಿದೇಶೀ ಕಂಪೆನಿಗಳೊಡನೆ ವ್ಯಾಪಾರವನ್ನಾರಂಭಿಸಬೇಕಾಗುವುದು.

ಬೆಂಡ್ರೋಲುಗಳನ್ನು ಹಚ್ಚುವುದರಲ್ಲಿ ಮತ್ತೊಂದು ಕಷ್ಟ ತಲೆದೋರುವುದು. ಬೆಂಡ್ರೋಲುಗಳನ್ನು ಹಚ್ಚುವುದರಲ್ಲಿ ಪ್ರತಿಯೊಂದು ಪೆಟ್ಟಿಗೆಯ ಮೇಲೆ ಹಚ್ಚಬೇಕು. ಇದರಿಂದ, ಆ ಬೆಂಡ್ರೋಲಿನ ಅಂಟು ಬೆಂಕಿಕಡ್ಡಿಗಳಿಗೆ ತಗಲಿ, ಅವು ತೇವದಿಂದ ಹಾಳಾಗಬಹುದು. ಇನ್ನು ಬೆಂಡ್ರೋಲುಗಳನ್ನು ಒಂದೊಂದಾಗಿಯೇ ಕೈಯಿಂದ ಹಚ್ಚಬೇಕು. ಅದನ್ನು ಶೀಘ್ರವಾಗಿ ಹಚ್ಚಲು ಯಾವ ಯಂತ್ರವೂ ಇಲ್ಲ. ಇದರಿಂದ ಅಧಿಕ ಶ್ರಮ, ಅಧಿಕ ವ್ಯಯಗಳಿಗೆ ಕಾರಣವಾಗುವುದಾಯಿತು. ಬೆಂಡ್ರೋಲು ಕ್ರಮದ ವಿಷಯವಾಗಿ ಸರಕಾರದ ಚಿತ್ತವು ಹೇಗೆ ನಿಲ್ಲಬಹುದೆಂಬುದನ್ನು ಅರಿಯಲಾರದೆ ಯಾರೂ ಅಂತಹ ಯಂತ್ರವನ್ನು ಸಿದ್ಧಗೊಳಿಸಲು ಧೈರ್ಯಪಡುವುದೂ ಇಲ್ಲ. ಇವೆಲ್ಲ ದೃಷ್ಟಿಯಿಂದ ನೋಡಿದರೆ ಬೆಂಕಿಪೆಟ್ಟಿಗೆ ಕಾರ್ಖಾನೆದಾರರು ಉಭಯಸಂಕಟಕ್ಕೆ ಗುರಿಯಾಗಿರುವರು. ಈ ಕ್ರಮದಿಂದ ನಷ್ಟವೇ ಅಲ್ಲದೆ ಮತ್ತೇನೂ ಗೋಚರಿಸದು.

ಜನೇ ಪುಟದಿಂದ ಮುಂದುವರಿದುದು.

ವನ್ನು ವಾಸ್ತವಿಕ ಜೀವನಾಂಗವೆಂದು ಅವರು ತಿಳಿಯುವರು. ಶಾಲೆಯ ಹೊರಗಿನ ಜೀವನಕ್ಕೂ ಒಳಗಿನ ಜೀವನಕ್ಕೂ ಮಕ್ಕಳು ಭೇದವನ್ನು ಕಾಣುವುದಿಲ್ಲ.

ಶಾಲೆಯಲ್ಲಿ ಪ್ರಜಾಧಿಪತ್ಯ. ಹಿರಿಯರಿಗೆ ಪ್ರಜಾಧಿಪತ್ಯವು ಒಗ್ಗುವುದಾದರೆ; ಅದಕ್ಕಾಗಿ ಜನರು ಕಾದಾಡುವುದಾದರೆ, ಕಿರಿಯರಿಗೂ ಪ್ರಜಾಧಿಪತ್ಯದ ಆವಶ್ಯಕತೆ. ಶಾಲೆಯಲ್ಲಿ ಸ್ವಾತಂತ್ರ್ಯದ ವಾತಾವರಣವಿರಬೇಕು.

ಜೀವಿಸುವುದು, ಕಲಿಯುವುದು ಮತ್ತು ಕಲಿಸುವುದು ಇವು ಬಹು ಕಷ್ಟದ ಪ್ರಸಂಗಗಳು. ಪ್ರೊಜೆಕ್ಟ್ ಮೆಥಡ್ ಎಂದರೆ ಬಾಳ್ವೆಯ ಕ್ರಮ ಎಂದು ಹಿಂದೆ ಹೇಳಿರುವೆವು. ಮಕ್ಕಳ ಸ್ವಬುದ್ಧಿಯಿಂದ ಅನ್ಯರ ಒಡನಾಟಿಕೆಯಿಂದ ಕಲಿಯುವ ವಿಧಾನವಾಗಿರುವುದು. ಅದೊಂದು ರೀತಿಯಲ್ಲಿ ಕಲಿಸುವ ಮಾರ್ಗವೆ. ಮಕ್ಕಳಿಗೆ ತಕ್ಕುದಾದ ವಾತಾವರಣವನ್ನು ಕಲ್ಪಿಸುವುದು ಅಧ್ಯಾಪಕನ ಕೆಲಸವಾಗಿರುವುದರಿಂದ "ಕಲಿಸುವುದು" ಎನ್ನುವುದು.

ಒಂದು ಉದಾಹರಣೆಯಿಂದ ಈ ವಿಧಾನದ ತಿರುಳು ತಿಳಿಯುವುದು. ಪ್ರೊಜೆಕ್ಟ ಮೆಥಡಿನಲ್ಲಿ ಅಧ್ಯಾಪಕನ ಕರ್ತವ್ಯಸ್ಥಾನವೂ ಮನಗಾಣುವುದು. ಒಂದೆಡೆಯಲ್ಲಿ ಒಂದು ತರಗತಿಯ ವಿದ್ಯಾರ್ಥಿಗಳಿಗೆ ಶಾಲೆಯ ಸಭೆಯಲ್ಲಿ ಒಂದು ಚಿಕ್ಕ ನಾಟಕವನ್ನು ಅಭಿನಯಿಸಲು ಆಮಂತ್ರಣವಿತ್ತು. ಆಗ ಅಧ್ಯಾಪಕರು "ಅದರ ವಿಚಾರ ಏನು ಮಾಡಲಿ" ಎಂಬ ಪ್ರಶ್ನೆಯನ್ನು ಮಕ್ಕಳ ಮುಂದಿಟ್ಟರು. 'ಒಂದನ್ನು ತಯಾರಿಸಿರಿ' ಎಂದು ಉತ್ತರ. 'ಯಾವುದರ ವಿಚಾರವಾಗಿ?' ಎಂದು ಮರುಪ್ರಶ್ನೆ. ಅನೇಕ ಸೂಚನೆ ಸಲಹೆಗಳು ಕೊಡಲ್ಪಟ್ಟವು; ಅವು ಮಕ್ಕಳಿಂದಲೇ ನಿರಾಕರಿಸಲ್ಪಟ್ಟುವು. "ಅದು ಚೆನ್ನಾಗದು" ಎಂದು ಎಲ್ಲರ ಆಕ್ಷೇಪ. ಕೊನೆಗೆ 'ರಿಪ್ ವೇನ್ ವಿಂಕಲ್' ಎಂಬ ಹೆಸರು ಸೂಚಿಸಲ್ಪಟ್ಟಿತು. ಆಗ ಎಲ್ಲರಲ್ಲಿ ಹೆಚ್ಚಿನ ಉತ್ಸಾಹವು ಕಾಣಿಸಿತು. ಆದರೆ ಅದು ಬಹು ದೀರ್ಘವಾದ ವಿಚಾರವೆಂದು ಅಧ್ಯಾಪಕರು ಎಚ್ಚರಿಸಿದರು. ಕೇವಲ ೨೦ ನಿಮಿಷದಲ್ಲಿ ಅದು ಸಾಗಬೇಕಿದೆ ಎಂದರು. ಆಗ ಮಕ್ಕಳು 'ಕೊನೆಯ ಎರಡು ದೃಶ್ಯಗಳನ್ನು ಅಭಿನಯಿಸಿದರಾಯಿತು. ಕಥಾಭಾಗವು ಎಲ್ಲರಿಗೆ ತಿಳಿದುದೇ' ಎಂದರು.

ಅದನ್ನು ಕ್ರಮಪಡಿಸುವ ಕಾರ್ಯವು ಮುಂದೆ ಉಪಸ್ಥಿತವಾಯಿತು. ಯಾರ್‍ಯಾರು ಯಾವ ಯಾವ ಭಾಗವನ್ನು ವಹಿಸಬೇಕೆಂದು ಮಕ್ಕಳೆ ಆರಿಸಿದರು. ಅಭಿನಯಕ್ಕೆ ತೊಡಗಿದರು. ಅಧ್ಯಾಪಕರಿಗೆ ಹೆಚ್ಚಿನ ಭಾಗವಿರಲಿಲ್ಲ. ಕೇವಲ ಆ ದಿನದ ಸಭಾಧ್ಯಕ್ಷರಾಗಬೇಕಾಯಿತು. ಇದೇ ಅಧ್ಯಾಪಕನ ಕೆಲಸವು. ಸಮಯವು ಹಾಳಾಗದಂತೆ ಅವ್ಯವಸ್ಥಿತ ಪ್ರಪಂಚವಾಗದಂತೆ, ಅಂದಿನ ಕಾರ್ಯಭಾಗಗಳು ಪರಸ್ಪರ ಸಂಬಂಧವಿರುವಂತೆ ನೋಡಿಕೊಳ್ಳುವುದೇ ಅಧ್ಯಾಪಕನ ಕೆಲಸ. ಅಗತ್ಯವಿರುವಲ್ಲಿ ಮಕ್ಕಳ ಕಾರ್ಯಕ್ಕೆ ನೆರವಾಗಬೇಕು. ಅವರನ್ನು ಉತ್ಸಾಹದಿಂದ ಸ್ಫೂರ್ತಿಗೊಳಿಸಬೇಕು. ಸಮಯ ಶ್ರಮ ಹಾಳಾಗದಂತೆ ನೋಡಿಕೊಳ್ಳುವುದೇ ಅಧ್ಯಾಪಕನ ಕರ್ತವ್ಯ.

ಪ್ರೊಜೆಕ್ಟ್ ಮೆಥಡಿನಲ್ಲಿ 4 ಮಾದರಿಗಳಿವೆ.

1. Where the purpose is to embody some idea or plan in external form as building a boat, writing a letter, preseqting a play. ಉದ್ದೇಶವು ಆಲೋಚನೆ ಅಥವಾ ವಿಚಾರವನ್ನು ಬಾಹ್ಯವಾಗಿಯೂ ರೂಪಗೊಡುವುದು. ಉದಾಹರಣೆ: ದೋಣಿಯನ್ನು ತಯಾರಿಸುವುದು, ಪತ್ರವನ್ನು ಬರೆಯುವುದು, ಒಂದು ದೃಶ್ಯವನ್ನು ಅಭಿನಯಿಸುವುದು.

2. Where the purpose is to enjoy some (Aesthetic) experience listening to a story, hearing a symphony, appreciating a picture. ಲಲಿತ ಸೌಂದರ್ಯಕಲೆ ಮೊದಲಾದುವುಗಳಿಂದಾಗುವ ಆನಂದವನ್ನು ಭೋಗಿಸುವುದು. ಉದಾ: ಕಥಾಶ್ರವಣ, ಸ್ವರ ಮೇಳನೆಯನ್ನು ಕೇಳುವುದು, ಒಂದು ಚಿತ್ರವನ್ನು ಗಣ್ಯ ಮಾಡುವುದು, ಪರಿಶೀಲಿಸುವುದು.

3. Where the purpose is to straighten out some intellectual difficulty, to solve some difficult problem so as to find out whether or not dewfalls to ascertain how New york outgrew Philadelphia ಬೌದ್ಧಿಕ ಸಮಸ್ಯೆಗಳನ್ನು ಬಿಡಿಸುವುದು, ಕಠಿನ ಪ್ರಶ್ನೆಗಳನ್ನು ಅರ್ಥ ಮಾಡುವುದು. ಉದಾ: ಮಂಜು ಮಳೆ ಇಂದು ಬೀಳುವುದೆ? ವಿಜಯನಗರ ರಾಜ್ಯವು ಅಳಿಯಲು ಕಾರಣವೇನು?

4. Where the purpose is to obtain some degree of skill or knowledge. As learning the regular verb in French. ಮಕ್ಕಳ ನೈಪುಣ್ಯ ಅಥವಾ ಅರಿವಿನ ಅಭಿವೃದ್ಧಿ ಗುರಿಯಾಗಿರುವುದು.

ಪ್ರೊಜೆಕ್ಟ್ ಮೆಥಡಿನಿಂದಾಗುವ ಫಲವನ್ನು ಅಳೆಯಲು ನಾಲ್ಕು ಸೂತ್ರಗಳಿವೆ. ಸಮಾಜಕ್ಕೆ ರಾಷ್ಟ್ರಕ್ಕೆ ಮಕ್ಕಳನ್ನು ಸಿದ್ಧಗೊಳಿಸುವುದೇ ಶಾಲೆಯ ಧ್ಯೇಯವೆನ್ನುವರು. ಆದರೆ ಈ ವಿಧಾನದಂತೆ ಶಾಲೆಯು ಅಂಥ ಕೆಲಸಕ್ಕೆ ಸ್ಥಳವಲ್ಲ. ಅವನ್ನು ಮಾಡಲು ಕಲಿಸುವುದೇ ಪ್ರೊಜೆಕ್ಟ್ ವಿಧಾನದ ಉದ್ದೇಶವು. To do and not to prepare for it:

1. ಅನುಭವದ ಸ್ವಭಾವವೇನು?
2. ಮಕ್ಕಳೆಷ್ಟು ಭಾಗವಹಿಸಿರುವರು?
3. ಉದ್ದೇಶವು ಎಷ್ಟು ತೂಕ ಕಾರ್ಯರೂಪದಲ್ಲಿ ಪರಿಣಮಿಸಿತು?
4. ಸಮಯ ಶ್ರಮದ ಮಿತವ್ಯಯ ಎಂತು ನಡೆದಿದೆ?

ಪ್ರತಿಯೊಂದು ಪ್ರೊಜೆಕ್ಟಿನಿಂದ ಸಿಗುವ ಪ್ರಯೋಜನವೇನು ಎಂದು ಪರಿಶೀಲಿಸಬೇಕು. Knowledge, power, attitude, or skill acquired through the project. ಪ್ರೊಜೆಕ್ಟಿನಿಂದ ಮಕ್ಕಳ ವಿಚಾರ ಶಕ್ತಿ, ಅಭಿರುಚಿ, ನೈಪುಣ್ಯ ಇವುಗಳಲ್ಲಿ ಏನು ಹೊಸ ಪರಿಣಾಮವಾಗಿದೆ ಎಂದು ಪರೀಕ್ಷಿಸಿ ನೋಡುವುದೇ ಅಧ್ಯಾಪಕನ ಕೆಲಸ.

ಮಹಾತ್ಮಾಜಿಯವರು 'ನಿವೃತ್ತ' ರಾಗುವ ವಿಚಾರವೇನು?

ವಾರ್ಧಾಗಂಜದಲ್ಲಿ ಸೇರಿದ ಕೊಂಗ್ರೆಸ್ ವರ್ಕಿಂಗ್ ಕಮಿಟಿಯು, ಗಾಂಧಿಜಿಯವರು ಕೊಂಗ್ರೆಸ್ ಮುಖಂಡತನವನ್ನು ಪರಿತ್ಯಜಿಸುವ ವಿಚಾರವನ್ನೆತ್ತಿ ಬಹುಕಾಲ ಚರ್ಚೆ ನಡೆಸಿದೆ. 'ನಾನು ಕೊಂಗ್ರೆಸ್ಸಿನ ಹೊರಗಿದ್ದೇ ದೇಶಸೇವೆಯನ್ನು ಚೆನ್ನಾಗಿ ಮಾಡಬಲ್ಲೆ'ನೆಂದು ಗಾಂಧಿಜಿಯವರ ವಾದ. ಕೊಂಗ್ರೆಸ್ಸಿನ ಕಾರ್ಯಕ್ರಮಗಳಲ್ಲಿ ಗಾಂಧಿಜಿಯವರೇ ನಿರ್ದೇಶಕರಾಗಿರಬೇಕೆಂದು ಕಮಿಟಿಯು ಪಟ್ಟಾಯಿಸಿದೆ. ಬೊಂಬಾಯಿಯ ಕೊಂಗ್ರೆಸ್ ಸಭಾಧಿವೇಶನದಲ್ಲಿ ಕೊಂಗ್ರೆಸ್ ಸ್ವರೂಪವನ್ನು ತಿದ್ದುವುದಾಗಿಯೂ, ಕೊಂಗ್ರೆಸ್ಸಿನೊಳಗಿನ ಶಿಸ್ತು, ನಿಬಂಧನೆಗಳನ್ನೆಲ್ಲ ಯಾರೂ ಉಲ್ಲಂಘಿಸದಂತೆ ಕಠಿನ ನಿಯಮಗಳನ್ನು ರಚಿಸಲಾಗುವುದಾಗಿಯೂ ಗಾಂಧಿಜಿಯವರಿಗೆ ಆಶ್ವಾಸನೆ ಕೊಡಲಾಗಿದೆ.

ಗಾಂಧಿಜಿಯವರು ತಮ್ಮ ನಿರ್ಧಾರವನ್ನಿನ್ನೂ ತಿಳಿಸಿಲ್ಲ. ಹೇಗಿದ್ದರೂ, ಈ ಸಲ ಬೊಂಬಾಯಿಯ ಕೊಂಗ್ರೆಸ್ಸು ಮುಗಿಯುವವರೆಗೆ ಸ್ಪಷ್ಟವಾಗಿ ತಿಳಿಸುವಂತಿಲ್ಲ. ಅವರು ಇಚ್ಛಿಸಿದ ಬದಲಾವಣೆಗಳು ಕಾರ್ಯರೂಪಕ್ಕೆ ಬರುವುದಾದರೆ 'ನಿವೃತ್ತ'ರಾಗದಿರಲೂ ಸಾಕೆಂದು ಊಹಿಸಲಾಗಿದೆ.

A Recurring Pleasure — *To Smoke them*

REGISTERED

TRADE MARK

Mangalore Darbar Beedies

Thousands enjoy them daily all over India.

When buying see our Trade Mark!

THE GREAT DARBAR BEEDI WORKS, CAR STREET, MANGALORE

ಮಂಗಳೂರು ದರ್ಬಾರ್ ಬೀಡಿಗಳು

ಇವುಗಳನ್ನು ಸೇದುವುದೆಂದರೆ ಆನಂದ!

ಯಾವ ಕೊಟದಲ್ಲೂ ಸಿಗರೇಟುಗಳ ಸ್ಥಾನವನ್ನು ಯೋಗ್ಯವೆನಿಸುವಂತೆ ವಹಿಸುವ ಬೀಡಿಗಳಿರುವುವಾದರೆ—ಅವುಗಳು

Regd. ದಿ ಗ್ರೇಟ್ ದರ್ಬಾರ್ ಬೀಡಿ ವರ್ಕ್ಸ್, ರಥಬೀದಿ, ಮಂಗಳೂರು.

ಇವರಿಂದ ತಯಾರಿಸಲ್ಪಟ್ಟವುಗಳು.

ಸಂಪಾದಕರ ಟಪ್ಪಾಲುಪೆಟ್ಟಿಗೆ.

ಪತ್ರಕಾರರ ಅಭಿಪ್ರಾಯಗಳಿಗೆ ನಾವು ಜವಾಬ್ದಾರರಲ್ಲ. ಎಲ್ಲಾ ಲೇಖಕರು ತಮ್ಮ ಸಂಪೂರ್ಣ ಹೆಸರು ವಿಳಾಸಗಳನ್ನು ಕೊಡತಕ್ಕದ್ದು. ದೀರ್ಘ ಲೇಖನಗಳಿಗೆ ಎಡೆ ಕೊಡಲಾಗುವುದಿಲ್ಲ. ಲೇಖನಗಳು ಸಾರ್ವಜನಿಕ ಹಿತಕ್ಕೆ ಸಂಬಂಧಿಸಿದ್ದು ಯುಕ್ತ ಶೈಲಿಯಲ್ಲಿ ರಚಿಸಲ್ಪಟ್ಟದ್ದು. (ಸಂ. ಸ್ವ.)

ಹೊಸ ಪಾಠದ ಪಟ್ಟಿ.

ಕೆಲವು ಆಕ್ಷೇಪಗಳು.

ಲೇಖಕ—ಶಿವರಾಮ ಕಾರಂತ.

ಎರಡು ವರ್ಷಗಳ ಅವಧಿಯಲ್ಲಿ ಸಿದ್ಧವಾಗುತ್ತಿದೆಯೆಂದ ಹೊಸ ಪಾಠಪಟ್ಟಿಯು ಮೊನ್ನೆ ತಾನೆ ಪ್ರಕಟವಾಗಿದೆ. ಅದರ ಸ್ವಲ್ಪಭಾಗದ ವಿಮರ್ಶೆಯನ್ನು ಮಾತ್ರ ಇಲ್ಲಿ ಮಾಡುತ್ತೇನೆ.

ಈ ಪಟ್ಟಿಯಲ್ಲಿ - ಯಾವ ಯಾವ ಕ್ಲಾಸಿಗೆ ಯಾವ ಯಾವ ಪಾಠಗಳು — ಎಷ್ಟೆಷ್ಟು ಪಿರಿಯೆಡುಗಳು ಇರಬೇಕೆಂಬ ವರ್ಗೀಕರಣವು ಇದ್ದಿದ್ದರೆ ಚೆನ್ನಾಗಿತ್ತು. ಕೊನೆಗೆ ಕಟ್ಟಕಡೆಗೆ ಸೇರಿಸಿದ್ದ ವಿಜ್ಞಾನದ ಒಂದು ಪಾಠಕ್ರಮಕ್ಕೆ ಈ ನಿಯಮವು ಕಾಣುವುದು. ಉಳಿದವುಗಳ ಗತಿ ಯೇನು? ಯಾವ ವಿಷಯಕ್ಕೆ ಎಷ್ಟು ಪಿರಿಯೆಡುಗಳು ಇರಬೇಕೆಂಬ ನಿಯಮವಿಲ್ಲವೆ? ಹೀಗೆ ಪಾಠಪಟ್ಟಿಯ ರಚಯಿತರ ಸೂಚನೆಯು ಬಂದಿಲ್ಲವೇನು?

ಈ ಲೇಖನದಲ್ಲಿ ನಾನು ಸವಿಸ್ತಾರವಾದ ವಿಮರ್ಶೆ ಮಾಡುವುದಿಲ್ಲ. ಅದರ ಕೊನೆಯ ವಿಜ್ಞಾನದ ಭಾಗವನ್ನಷ್ಟೇ ವಿಮರ್ಶಿಸುತ್ತೇನೆ. ಉಳಿದವುಗಳ ವಿಷಯ ಒಂದೆರಡು ಮಾತುಗಳನ್ನು ಹೇಳುವುದು ಅವಶ್ಯವೆಂದು ಕಾಣುವುದು. ಇದರಲ್ಲಿ ಉಪಯೋಗಿಸಿದ ವಿಜ್ಞಾನ, ಇಲ್ಲವೆ ಶಾಸ್ತ್ರೀಯ ಸಂಬಂಧವಾದ ವಿಷಯಗಳಿಗೆ— ದೇಶಾದ ಕನ್ನಡ ಪದಗಳನ್ನು ಉಪಯೋಗಿಸುವಾಗ ಅವುಗಳ ಮುಗ್ಗುಲಿಗೇನೆ ಇಂಗ್ಲಿಷ್ ಅನುವಾದ ಕೊಟ್ಟದ್ದರೆ ವಿದ್ಯಾರ್ಥಿಗಳಿಗೆ ಅಪಕಾರವಾಗುತ್ತಿರಲಿಲ್ಲ.

ಈ ಪಾಠಪಟ್ಟಿಯನ್ನು ನಿರ್ಮಿಸುವಾಗ — ಕಣ್ಣು, ಬಾಯಿ, ಮೂಗು — ಎಂಬ ವಿವಿಧ ವಿಷಯಗಳನ್ನು ಸೂಚಿಸುವಾಗ, ಆ ಹೆಸರುಗಳನ್ನು ಮಾತ್ರ ಹಾಕಿ ಇಲ್ಲಿಸಿದ್ದೆ. ಯಾವ ಉದ್ದೇಶದಿಂದ ಅವುಗಳನ್ನು ಸೂಚಿಸಿದ ಎಂಬುದನ್ನು ತಿಳಿಸಿದ್ದರೆ ಶಿಕ್ಷಕರಾಗಲಿ, ಪುಸ್ತಕ ಬರೆಯುವವರಾಗಲಿ ಸಹಾಯವಿತ್ತು. ಈಗ ಹಾಗಿಲ್ಲದುದರಿಂದ ಆ ಶಬ್ದಗಳನ್ನು ಉಪಯೋಗಿಸಿ, ಒಂದೊಂದು ವಾಕ್ಯ ಬರೆದರೇನೆ "ಪಾಠಪಟ್ಟಿಗೆ ಸರಿಯಾದ" ಪುಸ್ತಕ ಎನ್ನುವಂತಾಗಿದೆ.

ಈಗ ಈ ಲೇಖದ ವಿಷಯಕ್ಕೆ ಬರೋಣ. ಇದು IV, VII, VIIIನೇ ತರಗತಿಗಳಿಗೆ ನಿಯೋಜಿಸಿದ ವಿಜ್ಞಾನ ವಿಭಾಗ.

ಇತ್ತೀಚೆಗೆ S. S. L. C. ಬೋರ್ಡಿನವರು ಹೊರಡಿಸಿದ ಕ್ರಮೋಪದೇಶವನ್ನು - ಈ ಪಾಠಕ್ರಮದಲ್ಲಿ, ವಿನಾ ಲೋಪವಿಲ್ಲದೆ ತುಂಬಿಸಿದ್ದಾರೆ. ಅವರ ಪಠ್ಯಕ್ರಮವು ಉತ್ತಮವಾದ ನಿಜ— ಅದರೆ ಆಯಾಯ ತರಗತಿಗಳಿಗೆ ಎಷ್ಟು ಒಪ್ಪತಕ್ಕದ್ದು — ಎಂಬುದು ತೀರ ವಿವಾದಾಸ್ಪದ ವಿಷಯ. ಅದನ್ನೇ ಇಡೀ ಜೀರ್ಣಿಸುವ ಹವ್ಯಾಸವು ಇವರಿಗೆ ಅವಶ್ಯವಿರಲಿಲ್ಲ. ಅಲ್ಲದೆ— ಹಳ್ಳಿಯ ಹುಡುಗರಿಗೆ, ಹಳ್ಳಿಯ ಉಪಾಧ್ಯಾಯರು ಕೊಡುವ ಶಿಕ್ಷಣದಲ್ಲಿ—ಇವುಗಳಲ್ಲಿನ ಸಂಗತಿಗಳನ್ನು ಜೀರ್ಣಿಸಿಕೊಳ್ಳಲು ಬಂದೀತೇ ಎಂಬುದನ್ನು ನೋಡದೆ ಸೇರಿಸಿದುದನ್ನು ನೋಡಿದರೆ— ಶಿಕ್ಷಣದ ಬದಲು ಶಿಕ್ಷೆಯು ಇವರ ಉದ್ದೇಶವೆಂದು ಕಾಣುವುದು.

ಇದನ್ನು ಕನ್ನಡಿಸಿ ಹಾಕುವಾಗಲೂ— ಎಷ್ಟು ಕಡೆಯಲ್ಲಿ ತೀರ ಅಪಾರ್ಥ ಬರುವಂತೆ ಕನ್ನಡಿಸಿದ್ದಾರೆ! ಮೂಲ ಇಂಗ್ಲಿಷ್ ಶಬ್ದವನ್ನು ಜತೆಯಲ್ಲಿ ಇದ್ದಿದ್ದರೆ— ಇವರು ಉದ್ದೇಶಿಸಿದ ವಿಷಯವೇನೆಂದು ತಿಳಿಯುವ ಹಾಗಿತ್ತು. ಈಗಳಾದರೆ—ಪಾಠಪಟ್ಟಿ ಬರೆದವರನ್ನು ಕೇಳಬೇಕಾಗಿದೆ.

ಕೆಲವು ಉದಾಹರಣೆಗಳು.

ಹೂಗಳು ಅರೆ ಮುಗಿಯುವಿಕೆ (P 76). ಇಲ್ಲಿ ಮುಗಿಯುವಿಕೆ ಎಂದರೇನು (Closing?)

ಮರದ ಹಾಪಾತಿನ ಮೇಲೆ 'ವಿನಿಯರ್' ಪಟ್ಟೀ. ಇದಕ್ಕೆ ಕನ್ನಡ ಅರ್ಥವೇನು?

ಉಷ್ಣತೆಯ ಮೂಲ? (P. P. 77)— ಎಂದರೆ Sources of heat ಎಂದಾಗುವುದೇ! ಅಲ್ಲದೆ Orgin of heat ಎಂದಾಗುವುದೇ!

ನರಮಂಡಲವು? ಇದು Nervous system ಎಂಬ ಅಭಿಪ್ರಾಯವನ್ನು ಕೊಡಬಲ್ಲುದೆ? ನರಮಂಡಲವು ಮನುಷ್ಯನ ಪ್ರತ್ಯಕ್ಷ ಅಂಗವು— ಎಂದರೆ Nervous system the physical counterpart of the mind— ಎಂದು ಅರ್ಥವಾದೀತೆ ? ಮನಸ್ಸೇ 'ನರಮಂಡಲ'ವೆಂದಾದೀತೇ?

VII Std.

ಆಹಾರವಸ್ತುಗಳಲ್ಲಿರುವ ದ್ರವ್ಯಗಳು? ಇಲ್ಲಿ ದ್ರವ್ಯ ಎನ್ನುವುದಕ್ಕೆ ಏನು ಅರ್ಥ? ಮುಂದೆ ದ್ರವ್ಯವೆಂದರೆ Elements ಎಂದೂ ಉಪಯೋಗಿಸಿದ್ದಾರೆ!

ನಾನಾ ವಿಧದ ಗ್ರಂಥಿಗಳು. "ಅವುಗಳಿಂದಾಗುವ ಚಲನೆಗಳ ಪ್ರಕಾರಗಳು" ಈ ವಾಕ್ಯದ ಅರ್ಥವೇನು?

'ದೇಹದಾರ್ಢ್ಯ' - ಎಂಬ ಶಿರೋಲೇಖದ ಕೆಳಗೆ ಬೆಂಕಿನೊಂದಿಸುವ ಯಂತ್ರಗಳೂ, ಅವುಗಳ ರಚನೆಯೂ, ಉಪಯೋಗವೂ ಬರುವುದು (!) ಇದು ಕಣ್ಮುಚ್ಚಿ S. S. L. C. ಯವರ ಪಾಠಪಟ್ಟಿ ತಯಾರಿಸಿದುದರ ಪ್ರತಿಫಲ. ಇವೆರಡರ ಸಂಬಂಧವೇನು?

ಮೂಲದ್ರವ್ಯ, ಸಂಯುಕ್ತದ್ರವ್ಯ, ಮಿಶ್ರದ್ರವ್ಯ P. (83) ಎಂದರೆ Elements, Compounds & mixtures ಎಂಬ ಅರ್ಥವಾದೀತೆ?

ಕೂಡಿಕೆಯ ಸೆಲ್ಲುಗಳು—ಎಂದರೇನು? (P. P. 84) Storage cell ಎಂಬ ಅರ್ಥ ಹೊಳೆದೀತೆ?

VIIನೇ ಕ್ಲಾಸು.

ಮೀನುಬಾಲದ ಆಕೃತಿಯ ದೀಪಗಳು (P. P. 88) ಎಂಬುದರ ಅರ್ಥವೇನು? 'Gas and fish tail jets of acetylene'— ಎಂಬುದರ ಅರ್ಥವೇ ಬರುವುದೇ? ಈ ಮೀನುಬಾಲದ ಆಕಾರದಿಂದ ದೀಪಕ್ಕೇನು ಮಹತ್ವವಂತೆ!

ಜೀವಾಣುಗಳು—ಎಂದರೇನು. ಇದುತನಕ ಜೀವಾಣು ಎಂಬ ಪದಕ್ಕೆ protoplasm ಎಂಬ ಅರ್ಥ ರೂಢಿಯಲ್ಲಿತ್ತು. ಈಗ Becteria ಎಂಬ ಅರ್ಥಸೂಚನೆ ಮಾಡುವುದಾದರೆ ಹಾಗೆಯೇ ಇಂಗ್ಲಿಷಿನಲ್ಲಿ ಬರೆಯಬಾರದೇ?

ಹೆಚ್ಚು ಕಟ್ಟುವಾಗಲೂ, ಕೇವವಿರುವಲ್ಲಿಯೂ ಜೀವಾಣುವಿನಕ್ರಿಯೆ (P. P. 88) — ಎಂಬುದು ಮೂಲದ "Means to control growth and extermination of Becteria — ಎಂಬ ಅರ್ಥವನ್ನು ಕೊಡುವುದೇನು?

'ಉತ್ಕ್ರಾಂತಿ ಉಂಟಾದುದನ್ನು ವಿವರಿಸಲು ಉದಾಹರಣೆಗಳು (P. P. 89). ಉತ್ಕ್ರಾಂತಿ— ಎಂಬ ಪದವು ಉದ್ದೇಶಿಸಲ್ಪಟ್ಟ Progressive change ಅರ್ಥಾತ್ Evolution ಎಂಬ ಅಭಿಪ್ರಾಯವನ್ನು ಕೊಡುವುದೇ Revolution ಎಂಬ ಅಭಿಪ್ರಾಯ ಕೊಡುವುದೇ ....

ನಾದದ ಧರ, ತೀವ್ರತೆ, ಸಾಂದ್ರತೆ .... ಇದರಲ್ಲಿ 'ನಾದದ ಸಾಂದ್ರತೆ' — ಎಂದರೆ ಏನು ಅರ್ಥ? ಮೂಲದಲ್ಲಿ Pitch, Intensity and on what they depend ಎಂದಿದ್ದರೆ ಈ 'ಸಾಂದ್ರತೆ' ಎಲ್ಲಿಂದ ಬಂದಿತು?

ಇಷ್ಟೆಲ್ಲ ಕಣ್ಮುಚ್ಚಿ ಕರ್ನಾಟಮಾಡಿದುದರ ಚಮತ್ಕಾರಗಳಾದರೆ, ಈ ಹೊಸ ಕೊಡಲಿಯಿಂದಾಗುವ ಅನರ್ಥವನ್ನು ಕೆಳಗೆ ಸೂಚಿಸುತ್ತೇನೆ. ಈ ವಿಷಯಗಳು ಹಳ್ಳಿಯ ಮಕ್ಕಳಿಗೆ ಎಷ್ಟು ಹಿಡಿದೀತು— ಆಯಾಯ ಕ್ಲಾಸಿಗೆ ಅವು ಯೋಗ್ಯವೇ — ಎಂಬುದನ್ನು ವಿಚಾರಿಸುವ.

VIನೇ ದರ್ಜೆ.

ಹತ್ತಿ, ನಾರು, ರೇಶ್ಮೆ, ರಬ್ಬರು ಇತ್ಯಾದಿಗಳ ಉಡಿಗೆಗಳನ್ನು ಮಡಚಿಟ್ಟರೆ, ವಾಯುಗುಣಕ್ಕೆ ತಕ್ಕಂತೆ ಇಟ್ಟುಕೊಳ್ಳುವಿಕೆ.—ಇದು ಯಾವ ದೇಶಕ್ಕಾಗಿ ಹೇಳುವ ಪಾಠವಂತೆ?

ಒಣಮಡಿ (Dry cleaning)—ಇದು ಎಷ್ಟು ಜನರಿಗೆ ಉಪಯುಕ್ತವೆಂದು ಅದರ ಪಾಠವೇಕೆ?

ಲೋಹಚುಂಬಕದ ಲಕ್ಷಣಗಳು— ಇಂದು ಈ ಕ್ಲಾಸಿಗೆ ತಕ್ಕ ಪಾಠವೇ?

ಪೆರಿಸ್ಕೋಪ್! ಅದರ ಕಲಿಕೆ ಈ ಕ್ಲಾಸಿಗೇನು? ಗೆಲಿಲಿಯೊ ಟೋರಿಸಲ್ಲಿಯವರ ಶೋಧನೆಗಳು.—(ಯಾವುದಂತೆ?)

ಕಾಗದವನ್ನು ತಯಾರಿಸಲು ಅಗತ್ಯವಾದ ಪದಾರ್ಥಗಳು.

VIIನೇ ದರ್ಜೆ.

೧. ಮಿಶ್ರ ಆಹಾರ ಎಂದರೇನು? ಇಲ್ಲಿ mixed diet ಎಂದರೆ ಸಮ್ಯಕ್ ಆಹಾರವೆಂದರ್ಥವೇ? — ಅಲ್ಲದೆ Protiens, Vitamins, fats etc. ಸೇರಿದ ಆಹಾರವೆಂಬ ಅಭಿಪ್ರಾಯವೇ?

ಬೆಂಕಿನಂದಿಸುವ ತಮ್ಮ ಯಂತ್ರಗಳು. ಅವುಗಳ ರಚನೆ (!) ಉಪಯೋಗಕ್ರಮ. (ಇದು ಹಳ್ಳಿಯ ಹುಡುಗರಿಗೇನು?

'ಸಿಮೆಂಟ್'ನ ತಯಾರಿಯ ಕ್ರಮ.

ಗೆಲಿಲಿಯೋ, ಕ್ಲೆಪ್ಲರ್ ಮತ್ತು ನ್ಯೂಟನರ ವಿಚಾರ.

Pressure Cookers (?) ಎಂದರೇನು. ಸ್ಟೋವ್ಸ್ ಎಂದು ಅರ್ಥವೇ?

ರಾಸಾಯನಿಕ ಶಕ್ತಿಯನ್ನು ವಿದ್ಯುಚ್ಛಕ್ತಿಯನ್ನಾಗಿ ಮಾರ್ಪಡಿಸುವ ವಿಧಾನಗಳು.

ವಿದ್ಯುದ್ದೀಪ (ಯಾವ ದ್ವೀಪ?) ಗಳ ಜೋಡಣೆ— ಎರಡು ವಿಧ(?)

VIIIನೇ ದರ್ಜೆ.

ಸ್ಥಳೀಕ ವಿದ್ಯಮಾನಗಳಿಗೆ ತಕ್ಕಂತೆ ಪ್ರಾಣಿಗಳು ಜೀವನವನ್ನು ತಿದ್ದಿಕೊಳ್ಳುವುದರ ಕೆಲವು ಮುಖ್ಯ ಉದಾಹರಣೆಗಳು.

ಪೀನಾಬಕ್ತಿಯ ಬೆಳಕಿನ ಪ್ರಮಾಣ— ಎಂಬುದರ ವಿವರಣೆ.

ಉತ್ಕ್ರಾಂತಿ ಉಂಟಾದುದನ್ನು ವಿವರಿಸಲು ಉದಾಹರಣೆಗಳು.

ವಾಯುವಿಮಾನ - (ಎಂಬ ಶಬ್ದವಿದೆ)— ಅದರ ವಿಷಯ ಹೇಳಬೇಕಾದ ವಿವರವ್ಯಾವುದು?

ವಿದ್ಯುತ್ ಪ್ರವಾಹಗಳು — ಫೆರಡಿಯ ಜೀವನ ವೃತ್ತಾಂತ— ವಿದ್ಯುಚ್ಛಕ್ತಿಯ ಯೂನಿಟುಗಳು ..... ಬೆಳಕು ಓರೆಯಾಗಿ ಹರಿಯೋಣಾದರ ವೈಚಿತ್ರ್ಯ. ಇಲ್ಲಿ ಓರೆಯೆಂಬುದು Bending of light ಎಂದೇ? Refraction ಎಂಬ ಅರ್ಥವೇ?

ಇಷ್ಟೇ ಇಲ್ಲ, ಗಡುತರವಾದ ಇನ್ನೆಷ್ಟೋ ಗುಳಿಗೆಗಳು ಈ ವಿಜ್ಞಾನ ವಿಭಾಗವೊಂದರಲ್ಲೇ ಇವೆ. ಇದನ್ನು ಕಲಿಸುವುದು ಸಾಧ್ಯವೇ ಇಲ್ಲವೆ—ಎಂಬುದನ್ನು ವಿಚಾರಿಸದೆ ತುರುಕಿದುದರ ಅಭಿಪ್ರಾಯವೇನೋ ಹೊಳೆಯದು.

ಅಂತು— ಈ ವಿಚಾರವಾಗಿ, ಉಪಾಧ್ಯಾಯರುಪದರೂ ತಮ್ಮ ಆಕ್ಷೇಪಗಳನ್ನು, ಇದು ಕೊರಳಿಗ ಕಲ್ಲಾಗುವ ಮೊದಲು—ಕಮಿಟಿಯವರಿಗೆ ತಿಳಿಸುವುದು ಅವಶ್ಯ.

ಡಿಸ್ಟ್ರಿಕ್ಟ್‌ಬೋರ್ಡ್ ಎಲಿಮೆಂಟರಿ ಶಾಲೆಗಳ ಉಪಾಧ್ಯಾಯ ಉಪಾಧ್ಯಾಯಿನಿಯರಿಗೆ ಹೊಸ ಸ್ಕೇಲು,—ಇದೀ ಜಿಲ್ಲೆಗೆ ೧೯೩೪ನೇ ಎಪ್ರಿಲ್ ತಾ. ೧೮ ಲಾಗ್ಯಾತು ಪ್ರಚಾರಕ್ಕೆ ಬಂತು.

ಇಡೀ ಜಿಲ್ಲೆಯಲ್ಲಿರುವ ಎಲ್ಲಾ ಬೋರ್ಡ್ ಎಲಿಮೆಂಟರಿ ಶಾಲಾ ಉಪಾಧ್ಯಾಯ ಉಪಾಧ್ಯಾಯಿನಿಯರಿಗೆ ಒಂದೇ ತರದ ಸ್ಕೇಲ್ ಮಾಡಬೇಕೆಂಬ ಉಪಾಧ್ಯಾಯರ ಅರಿಕೆಗಳು ಇಂದು ಸಾರ್ಥಕವಾದುವು. ಒಂದೇ ಸ್ಕೇಲು ಒಂದು ಜಿಲ್ಲೆಗಲ್ಲ, ಇಡೀ ಮದ್ರಾಸು ಸಂಸ್ಥಾನಕ್ಕೇ ಒಂದು ಸ್ಕೇಲು. ಸಂತೋಷವಾರ್ತೆ!

ಸ್ಕೇಲು.

ಉಪಾಧ್ಯಾಯರಿಗೆ:—ಲೋವರ್ ಎಲಿಮೆಂಟರಿ ಗ್ರೇಡ್ ಟ್ರೈನ್ಡ್ ರೂ. 15 — ½ — 20. ಅನ್‌ಟ್ರೈನ್ಡ್ ಇಲ್ಲ. ಹಾಯರ್ ಎಲಿಮೆಂಟರಿ ಗ್ರೇಡ್ ಟ್ರೈನ್ಡ್ ರೂ. 20—½—24—2/2—30; ಅನ್‌ಟ್ರೈನ್ಡ್ ರೂ. 15. ಸೆಕೆಂಡರಿ ಗ್ರೇಡ್ ಟ್ರೈನ್ಡ್ ರೂ. 25-2/2—45; ಅನ್‌ಟ್ರೈನ್ಡ್ ರೂ. 20.

ಉಪಾಧ್ಯಾಯಿನಿಯರಿಗೆ:— ಲೋವರ್ ಎಲಿಮೆಂಟರಿ ಗ್ರೇಡ್ ಟ್ರೈನ್ಡ್ ರೂ. 20—½—25; ಅನ್‌ಟ್ರೈನ್ಡ್ ರೂ. 15. ಹಾಯರ್ ಎಲಿಮೆಂಟರಿ ಗ್ರೇಡ್ ಟ್ರೈನ್ಡ್ ರೂ. 25—½—29—2/2—35; ಅನ್‌ಟ್ರೈನ್ಡ್ ರೂ. 20. ಸೆಕೆಂಡರಿ ಗ್ರೇಡ್ ಟ್ರೈನ್ಡ್ ರೂ. 30—2/2—50; ಅನ್‌ಟ್ರೈನ್ಡ್ ರೂ. 25.

ಈ ಸ್ಕೇಲಿಗಿಂತ ಕಡಿಮೆ ಸಂಬಳ ಇರುವವರಿಗೆ ಈ ಸ್ಕೇಲಿನ ಆರಂಭದ ಸಂಬಳವು ದೊರೆಯುವುದು. ಮೇಲಿನ ಸಂಗತಿಗೆ ಉದಾಹರಣಾರ್ಥವಾಗಿ—ಒಬ್ಬ ಲೋವರ್ ಎಲಿಮೆಂಟರಿ ಗ್ರೇಡಿನ ಉಪಾಧ್ಯಾಯನಿಗೆ ಈ ಸ್ಕೇಲ್ ಜಾರಿಗೆ ಬರುವ ಮೊದಲು ರೂ. ೧೨ ಸಿಕ್ಕುತ್ತಾದರೆ ಆ ಗ್ರೇಡಿನ ಸಂಬಳವು ರೂ. ೧೫ರಿಂದ ೨೦ರ ವರೆಗೆ ಇರುವುದರಿಂದ ಅವನ ಹೊಸ ಸಂಬಳವು ರೂ. ೧೫ರಿಂದಲೇ ಪ್ರಾರಂಭವಾಗುವುದು. ಅದೇ ಗ್ರೇಡಿನ ೧೪ ರೂಪಾಯಿ ಸಂಬಳವಿರುವ ಉಪಾಧ್ಯಾಯನಿಗೆ ಹೊಸ ಸ್ಕೇಲಿನ ಪ್ರಕಾರ ರೂ. ೧೫ರಿಂದಲೂ ಉಪಾಧ್ಯಾಯಿನಿಗೆ ರೂ. ೨೦ರಿಂದಲೂ ಪ್ರಾರಂಭವಾಗುವುದು.

ರೂ. ೨೫ ಸಂಬಳ ಸಿಕ್ಕುವ ಒಬ್ಬ ಹಾಯರ್ ಎಲಿಮೆಂಟರಿ ಗ್ರೇಡಿನ ಉಪಾಧ್ಯಾಯರಿಗೆ ಹೊಸ ಸ್ಕೇಲಿನ ಪ್ರಕಾರ ರೂ. ೨೨ ಸಿಕ್ಕುವುದು. ರೂ. ೧ ಪರ್ಸನಲ್ ಎಲ್ಲೋವೆನ್ಸ್ ಆಗಿರುವುದು. (ಏಕೆಂದರೆ ಇವರಿಗೆ ೨ ವರ್ಷಕ್ಕೊಂದಾವರ್ತಿ ೨ ರೂಪಾಯಿ ಬಡ್ತಿ).

ಹೊಸ ಸ್ಕೇಲಿಗೆ ಮಿಕ್ಕಿ ಸಂಬಳವಿರುವವರಿಗೆ ತಕ್ಕಾಲಕ್ಕೆ ಅದು ಪರ್ಸನಲ್ ಎಲ್ಲೋವೆನ್ಸ್ ಆಗಿ ಎಣಿಸಲ್ಪಡುವುದು. ಸರಕಾರದವರು ಇದಕ್ಕೆ ವಿರುದ್ಧ ಹುಕುಂ ಕೊಡುವ ವರೆಗೆ ಹಾಗೆಯೇ ಸಂಬಳ ಕೊಡಲಾಗುವುದು. (ಅಂದರೆ ಲೋವರ್ ಗ್ರೇಡಿನ ಉಪಾಧ್ಯಾಯರ ಗ್ರೇಡಿನ ಕಡೇ ಸಂಬಳವು ರೂ. ೨೦ ಎಂದು ಇದೆ. ಆದರೆ ಅನೇಕರಿಗೆ ೨೧, ೨೨, ೨೩, ೨೪, ೨೫ರ ವರೆಗೆ ಸಿಕ್ಕುತ್ತದೆ. ಇವರು ರಕ್ಷಿಸಲ್ಪಟ್ಟರು. ತಾಲೂಕು ಬೋರ್ಡ್‌ಗಳು ಮಾಡಿರಬಹುದಾದ ಗತ ತಾಲೂಕು ಬೋರ್ಡ್‌ಗಳು ಕೊಡುತ್ತಿದ್ದ ಎಲ್ಲೋವೆನ್ಸ್ ಕಡಿತಗಳನ್ನು ತಾ. ೧ ೪ ೩೪ರಿಂದ ರದ್ದುಮಾಡಿಯದೆ. ಸರ್ಟಿಫಿಕೇಟು ಮುಂತಾದ್ದು ಇಲ್ಲದೆ ಇಷ್ಟರ ವರೆಗೆ ವಿದ್ಯಾ ಇಲಾಖೆಯವರ ಅನುಮತಿ ಪ್ರಕಾರ ಕೆಲಸಮಾಡಿಕೊಂಡಿದ್ದವರನ್ನು ಅನ್‌ಟ್ರೈನ್ಡ್ ಎಂದು ಗಣಿಸಿ ಅನ್‌ಟ್ರೈನ್ಡ್‌ಗಳ ದರದ ಸಂಬಳ ಕೊಡಲಾಗುವುದು.

ಬೋರ್ಡ್ ಎಲಿಮೆಂಟರಿ ಶಾಲಾ ಮುಖ್ಯ ಉಪಾಧ್ಯಾಯ—ಉಪಾಧ್ಯಾಯಿನಿಯರಿಗೊಂದು ಹೊಸ ಅಧಿಕಾರ:—ಇಷ್ಟರ ವರೆಗೆ ಬೋರ್ಡ್ ಶಾಲೆಯ ಎಲ್ಲಾ ಉಪಾಧ್ಯಾಯ ಉಪಾಧ್ಯಾಯಿನಿಯರಿಗೆ ಕೇಜುವಲ್ ರಜೆ ಕೊಡುವ ಅಧಿಕಾರವು ಬೋರ್ಡಿನವರಿಗೆ ಇತ್ತು. ಈಗ ಕೊಟ್ಟ ಹುಕುಂ ಪ್ರಕಾರ ಅಸಿಸ್ಟೆಂಟ್ ಉಪಾಧ್ಯಾಯರಿಗೆ ರಜೆ ಕೊಡುವ ಅಧಿಕಾರ ಹೆಡ್ ಮಾಸ್ತರ, ಮತ್ತು ಹೆಡ್ ಮಿಸ್ಟ್ರೆಸುಗಳಿಗೆ ಕೊಡಲ್ಪಟ್ಟಿದೆ. ಮುಖ್ಯ ಉಪಾಧ್ಯಾಯರಿಗೆ ಕೇಜುವಲ್ ರಜೆ ಕೊಡುವ ಅಧಿಕಾರ ಬೋರ್ಡಿನವರು ಇಟ್ಟುಕೊಂಡಿದ್ದಾರೆ. ಬೋರ್ಡ್ ಆಫೀಸಿನಲ್ಲಿ ಕೆಲಸ ಕಡಿಮೆಮಾಡುವುದೇ ಇದರ ಉದ್ದಿಶ್ಯವಂತೆ.

ಶಾಲೆಯ ಹತ್ತಿರ ನಿವಾಸ:—ಶಾಲಾ ಉಪಾಧ್ಯಾಯ ಉಪಾಧ್ಯಾಯಿನಿಯರು ಶಾಲೆ ಇರುವ ಊರಿನಲ್ಲಿಯ ಗ್ರಾಮದಲ್ಲಿಯೇ ಬಿಡಾರಮಾಡಿ ಇರಬೇಕೆಂಬ ಇನ್ನೊಂದು ಬೋರ್ಡಿನ ಹುಕುಂ ಹೊರಟಿದೆ. ಉಪಾಧ್ಯಾಯರು ದೂರದೂರ ಊರುಗಳಲ್ಲಿ ವಾಸವಾಗಿದ್ದು ಬರುವಾಗ ದಣು ಹೆಚ್ಚಾಗಿ ಕಲಿಸಲಿಕ್ಕೆ ಉತ್ತೇಜನ ಕಡಿಮೆಯಾಗುತ್ತದೆಂದೂ, ಗ್ರಾಮದ ಮಕ್ಕಳಿಗೆ ಸಂಬಯಾದ ವಿದ್ಯಾಭ್ಯಾಸವನ್ನು ಕೊಡಲಿಕ್ಕೆ ಉಪಾಧ್ಯಾಯರಿಗೆ ಸಮಯ ಸಿಕ್ಕುವುದಿಲ್ಲವಾದ್ದರಿಂದಲೂ, ಮಕ್ಕಳ ಹೆತ್ತವರ ಪರಿಚಯ ಮಾಡಲಿಕ್ಕೆ ಸಾಧ್ಯವಾಗದೆ ಇರುವುದರಿಂದಲೂ ಅನೇಕ ಶಾಲೆಗಳು ಹಾಳಾಗಿ ಹೈರೆಕ್ಟರಿಗೆ ದೂರುಹೋಗಿ ಈ ಹುಕುಂ ಹೊರಡಲು ಕಾರಣವೆಂದು ಬೋರ್ಡಿನವರು ಕೊಟ್ಟ ಹುಕುಮಿನಲ್ಲಿ ಕಾಣುತ್ತದೆ.

ರೇಶ್ಮೆಯಂತೆ, ನುಣುಪಾದ ಮತ್ತು ಹೊಳಪಾದ ಕೇಶಧಾಮ

ದಿನನಿತ್ಯದ ಸ್ನಾನಕ್ಕೆ ಮುಂಚಿತವಾಗಿ ನಿಮ್ಮ ಕೂದಲುಗಳನ್ನು ಚೆನ್ನಾಗಿ ಬಾಚಿ, ಬ್ರಶ್ಶಿನಿಂದ ಸವರಿ, ಆ ನಂತರ

"ಕುಂತಳ ಕೌಮುದಿ"

ಎಂಬ ಹಿಂದೂಸ್ಥಾನದ ಪ್ರಸಿದ್ಧ ಕೇಶ ತೈಲ್ಯದಿಂದ ಕೂದಲುಗಳ ಬುಡವನ್ನು ಜಾಗರೂಕತೆಯಿಂದ ತಿಕ್ಕಿರಿ.

(ಮನಮುಗ್ಧಕರವಾದ ಸುಗಂಧವನ್ನುಳ್ಳದು.)

ಹಿಂದೂಸ್ಥಾನದಲ್ಲೆಲ್ಲ ಸರ್ವತ್ರ ಉಪಯೋಗಿಸಲ್ಪಡುತ್ತಿದೆ.

ತಯಾರಿಸುವವರು:— ಬೆಲೆ ಸೀಸೆ ಒಂದಕ್ಕೆ ರೂ.0—12—0.

ಆರ್. ಸಿ. ಸೇನ್ ಎಂಡ್ ಕೋ., ಲಿಮಿಟೆಡ್, ಕಲ್ಕತ್ತ.

ವಿಕ್ರೇತರು:— ಕುಂತಳ ಕೌಮುದಿ ತೈಲ, ವೆನ್ಲಾಕ್ ಆಸ್ಪತ್ರೆ ಎದುರು, ಮಂಗಳೂರು.

ವಿಶೇಷ ಸಂಚಿಕೆ! ವಿಶೇಷ ಸಂಚಿಕೆ!

ಕಥಾಕುಂಜ

ಸಂಪಾದಕರು — ಶ್ರೀ ಪ್ರಾಟಿ ನಾರಾಯಣರು ಶ್ರೀ ಹೊಸ ಅರಕಲಗೂಡರಾಯರು B. A (Hons).

ಈ ಸಂಚಿಕೆಯು ಕ್ರೌನ್ ¼ ಆಕಾರದ 100ಪುಟ ಗಳಿಂದ ಜನವರಿ 1935ಕ್ಕೆ ಹೊರಡುವದು. ಕನ್ನಡ ದೇಶದ ಉತ್ತಮ ಬರೆಹಗಾರರ ಹೊಸ ಹೊಸ ಕತೆ, ನಾಟಕ, ಕವಿತೆಗಳಿಂದ ಸಾಹಿತ್ಯದ ಸವಿಯೂಟವನ್ನೇ ಕೊಡುವುದು!

ಈ ಸಂಚಿಕೆ 12 ಆಣೆ ವರ್ಷಾರಂಭದ ಚಂದಾದಾರರಿಗೆ ಉಚಿತ. ಅರ್ಧ ವರ್ಷದ ಚಂದಾದಾರರಿಗೆ ಅರ್ಧ ಬೆಲೆ. (ಅಂಚೆ ಕಳುಹಿಸಬೇಕು.)

ಜಾಹೀರಾತುದಾರರಿಗೆ ವಿಶೇಷ ಸಂಧಿ

ದರಗಳಿಗಾಗಿ ಈಗಲೇ ಬರೆಯಿರಿ! ಪುಸ್ತಕ ವ್ಯಾಪಾರಿಗಳಿಗೆ ವಿಶೇಷ ಸವಲತ್ತು.

ನಿಯಮಿತ ಪ್ರತಿಗಳು ಹೊರಡುವವು ತ್ವರೆ ಮಾಡಿರಿ. ಹಿಂದಿನಂತೆ ನಿರಾಶರಾಗಬೇಡಿರಿ!

ಕಥಾಕುಂಜ ಕಾರ್ಯಾಲಯ

ಬೆಳಗಾಂವಿ

ಮಂಗಳೂರಿನ ಪೇಟೆಧಾರಣೆ.

ಸಾಮಗ್ರಿಗಳು	ಇಂದ ರೂ. ಆ.	ವರೆಗೆ ರೂ. ಆ.
ರಾಶಿ ಅಕ್ಕಿ ...	4— 2	4— 8
ಮುಸ್ಕಿ ...	4— 4	5—
ಗುಡ್ಡ ...	4— 4	4—10
ಸುಗ್ಗಿ ...	4— 4	4—10
ಊರ ಅಪ್ಸಲ್ ಬೆಳ್ತಿಗೆ ...	4—12	5— 4
ರಂಗೂನು ಬೆ. ಗೋ. ೧ಕ್ಕೆ...	6— 0	6— 4
ಎಲ್ಲೂರು ಬೆ. ಮು. ೧ಕ್ಕೆ...	4— 0	4— 0
ಗೋದಿ ಗೋಣಿ ೧ಕ್ಕೆ ...	10— 0	12— 8
ತೊಗರಿ ಗೋಣಿ ೧ಕ್ಕೆ ...	9— 8	10— 0
ಹುರುಳಿ ಗೋಣಿ ೧ಕ್ಕೆ ...	7 — 6	7—10
ಕಡಲೆ ಗೋಣಿ ೧ಕ್ಕೆ ...	7 — 8	8— 0
ತೊಗರಿಬೇಳೆ ಗೋಣಿ ೧ಕ್ಕೆ...	10— 0	17— 0
ಉದ್ದು ಗೋಣಿ ೧ಕ್ಕೆ ...	7— 0	7— 8
ಹೆಸರು ಗೋಣಿ ೧ಕ್ಕೆ ...	7— 0	7— 8
ಊರುಬೆಲ್ಲ ಖಂಡಿ ೧ಕ್ಕೆ ...	40— 0	45— 0
ಉಪ್ಪು ಗೋಣಿ ೧ಕ್ಕೆ ...	5— 4	5— 8
ಕೊಬ್ರಿ ಖಂಡಿ ೧ಕ್ಕೆ ...	40— 0	42— 0
ಕೊಬ್ರಿ ಹಿಂಡಿ ಖಂಡಿ ೧ಕ್ಕೆ...	19— 0	19— 8
ಎಳ್ಳಿಂಡಿ ಖಂಡಿ ೧ಕ್ಕೆ ...	23—12	27— 0
ಕೊಬ್ರಿ ಎಣ್ಣೆ ಮಣ ೧ಕ್ಕೆ...	2—15	3—14
ಎಳ್ಳೆಣ್ಣೆ ಮಣ ೧ಕ್ಕೆ ...	5— 0	5— 8
ಚಿಮಿಣಿ ಎಣ್ಣೆ ಪೆಟ್ಟಿಗೆ ೧ಕ್ಕೆ...	6— 8	8— 0
ಮೋರಿಸ ಸಕ್ಕರೆ ಮ. ೧ಕ್ಕೆ...	3—10	3—14
ಮೆಣಸು ...	7— 0	7— 8
ಸಾಸಿವೆ ಮುಡಿ ೧ಕ್ಕೆ ...	4— 8	5— 4
ಕಾಳುಮೆಣಸು ಖ. ೧ಕ್ಕೆ ...	136— 8	137— 8
ಯೇಲಕ್ಕಿ ಮಣ ೧ಕ್ಕೆ ...	18— 0	22— 0
ಹೊಸ ಗೇರುಬೀಜ ಮು. ೧ಕ್ಕೆ	3— 4	3— 5
ಕಬ್ಬಿಣ ಖಂಡಿ ೧ಕ್ಕೆ ...	42— 0	44— 0
ತಾಂಬ್ರ ತಗಡು ಮ. ೧ಕ್ಕೆ...	10— 0	10—0
ತಾಂಬ್ರ ಪಾತ್ರಗಳು ಮ. ೧ಕ್ಕೆ	13— 0	14— 8
ಜೀಣಬೆಳ್ಳಿ ಸೇರು ೧ಕ್ಕೆ ...	14—12	15— 0
ಹಿತ್ತಾಳೆ ತಗಡು ಮ. ೧ಕ್ಕೆ...	9— 0	9— 8
ಪವನು ೧ಕ್ಕೆ ...	20—10	21— 0
ಹುಣಸೆ ಹುಳಿ ಖಂಡಿ ೧ಕ್ಕೆ	30— 0	35— 0
ನೇಟಿವ್ ಕಾಫಿ ಖಂಡಿ ೧ಕ್ಕೆ	182— 0	198— 0
ಫಿಬೇರಿ ಕಾಫಿ ಖಂಡಿ ೧ಕ್ಕೆ...	296— 8	280— 8
ಹಳೆ ಅಡಿಕೆ ...	118— 0	124— 0
ಹೊಸ ಅಡಿಕೆ ...	62— 0	92 — 0

ನಿಮ್ಮ ಆರೋಗ್ಯವು ಈ ಚಿಕ್ಕ ಗುಳಿಗೆಗಳಲ್ಲಿ

ಸುಭದ್ರವಾಗಿದೆ.

ನೂತನ! ರುಚಿಕರ! ಹಿತಕರ!

ಹರಳೆಣ್ಣೆ ಮಿಶ್ರಿತವಾದ ಸಿಹಿ ಚೋಕಲೇಟು—

- ಕೇಸ್–ಫೆನ್–ಮಿಂಟ್

ಹರಳೆಣ್ಣೆ, ಅಗರ್ – ಅಗರ್, ಫೆನಲ್‌ಫ್ತಾಲೀನ್, ಪೆಪ್ಪರ್‌ಮಿಂಟ್ ಮತ್ತು ಚೋಕಲೇಟು, ಇವುಗಳನ್ನು ಸೇರಿಸಿ ಸೇವಿಸಲು ಹಿತಕರವಾಗುವಂತೆಯೂ, ಆಬಾಲವೃದ್ಧರೆನ್ನದೆ ಸಕಲರಿಗೂ ಯಾವ ಕಾಲಕ್ಕೂ ಸುಖಭೇದಿಗಾಗಿ ಅನುಕೂಲವಾಗುವಂತೆ ಇದು ತಯಾರಿಸಲ್ಪಟ್ಟಿದೆ. ಮಲಬದ್ಧತೆಯು ಹಲವು ಭಯಂಕರ ರೋಗಗಳನ್ನು ತರಬಲ್ಲುದು. ಮಲಬದ್ಧತೆ ತೋರಿದಾಗಲೆಲ್ಲ "ಕೇಸ್–ಫೆನ್–ಮಿಂಟ್"ನ್ನು ಸೇವಿಸಿರಿ. ಈ ಚೋಕಲೇಟುಗಳನ್ನು ಒಂದೆರಡು ಸೇವಿಸಿದರೆ ಆನಾಯಾಸವಾದ ಸುಖಭೇದಿ! ಕರುಳುಗಳ ವಿಕಾರವಿಲ್ಲ! ಜಿಗುಪ್ಸೆ ಹುಟ್ಟಿಸುವುದಿಲ್ಲ! ಹೊಟ್ಟೆಯೊಳಗೆ ಯಾವ ವೇದನೆಯೂ ಇಲ್ಲ. ಮಕ್ಕಳು ಆನಂದದಿಂದ ಸೇವಿಸುವರು.

ಈ ಹೆಸರುಗಳೇನು,—ಓದಿರುವಿರಾ?

ವಾತ–ಪರಿವಾತ–ಸಂಧಿವಾತ–ಕಟಿವಾತ–ಕಾಲಶೂಲೆ–ನರದೌರ್ಬಲ್ಯ.....!!!!

ಇವುಗಳಿಗೆ ಹೆದರದವರಾರು? ಇವುಗಳೆಷ್ಟು ಜನರನ್ನು ಕಾಡುತ್ತಿವೆ!

ಡಾ॥ ಫೌಯವರ ಕೆಚೆಟ್ಸ್

ಸೇವನೆಗೆ ಕಷ್ಟವಿಲ್ಲ, ಅರ್ಧ ತಟ್ಟೆ ನೀರಿನಲ್ಲಿ, ನೋವು ಶಮನವಾದಾಗಲೆಲ್ಲ— ಈ ಕೆಚೆಟುಗಳನ್ನು ಹಾಕಿ ಸೇವಿಸಿದರೆ – ಅದು ಹೇಗೆ ಗುಣಕಾರಿಯಾಗಿ ಕಾರ್ಯಾರಂಭ ಮಾಡುವುದೆಂಬುದನ್ನು ಆಗಲೇ ಅನುಭವ ಮಾಡುವಿರಿ.

ಕೆಲವೇ ನಿಮಿಷಗಳಲ್ಲಿ ಖಂಡಿತ ಗುಣಲಾಭ!

ನರಗಳ ದೌರ್ಬಲ್ಯ ಸಂಬಂಧವಾದ ಉಪದ್ರಗಳನ್ನೂ ಪರಿಹರಿಸುವುದು.

ಕೊಂಡು, ಕೊಂಡೇ ಅವನ್ನು ಪರೀಕ್ಷಿಸಿರಿ.

'ಕೆಚೆಟು'ಗಳು ನಿರಪಾಯವಾಗಿ, ಭರವಸೆಯಿಂದ ಸೇವಿಸಲ್ಪಡಲು ಯೋಗ್ಯವಾಗಿವೆ.

ಸಂದೇಹವಿಲ್ಲದೆ ಇಂದೇ ಅವುಗಳ ಗುಣಪರೀಕ್ಷೆ ನಡೆಯಲಿ.

ಬಲು ಕಡಿಮೆ ಕ್ರಯ! ಎಲ್ಲೆಲ್ಲಿಯೂ ದೊರೆಯುವುದು. ಅತಿ ಹೆಚ್ಚು ಫಲ!

The Paragon Products Co., Ballard Estate, Bombay.

ದ. ಕ. ಜಿಲ್ಲೆಯ ಡಿಸ್ಟ್ರಿಬ್ಯೂಟರರು:— **M. K. Prabhu,** MANJESHWAR + S. KANARA.

ನೋಟೀಸು.

ಕಾಸರಗೋಡು ಡಿಸ್ಟ್ರಿಕ್ಟ್ ಮುನ್ಸೀಫ್ ಕೋರ್ಟಿನಲ್ಲಿ.

O. P. 121/1934.

ಮಮ್ಮುಂಞಿ ಯಾನೆ ಮಹಮ್ಮದ ಬ್ಯಾರಿ ಮೂಸಾನ ಅಬ್ದುಲ್ಲ ಬ್ಯಾರಿ ಮಗ ಪುತ್ತೂರು ಗ್ರಾಮ—ಅರ್ಜಿದಾರ.

ಮತ್ತು

1. ಐಸಮ್ಮಾ ಮೃತ ಕುಂಞಿಪಳ್ಳಿತಾಯಿ, 2. ಮೊಯಿದಿಂ ಕುಂಞಿ, 3. ಖದೀಜಾಬಿ—ಸದ್ರಿ ಮೃತನ ಸಹೋದರ ಮ ಸಹೋದರಿ. 4. ಐಸಾಬಿ ಮೃತನ ಹೆಂಡ್ತಿ—ರಿಸ್ಪಾಂಡೆಂಟರು.

ಇವರೊಳಗೆ

ತಾ. 16-4-1931ರಲ್ಲು ಬೀರಾಂ ಮೊಯಿದಿನ ಕೂಡಾ 2 ಜನರು ಬರಕೊಟ್ಟ ಪ್ರೋ. ನೋಟಿನ ಹಕ್ಕು ಸದ್ರಿ ಮೃತ ಕುಂಞಿಪಳ್ಳಿಗೆ ಬಂದದ್ದನ್ನು ಆತನ ವಾರೀಸುದಾರರಾದ ರಿಸ್ಪಾಂಡೆಂಟರು ಅರ್ಜಿದಾರಗೆ ಟ್ರೇನ್ಸ್‌ಫರ್ ಮಾಡಿದ ಪ್ರಕಾರ ವಾರೀಸ್ ಸರ್ಟಿಫಿಕೇಟು ತನಗೆ ಕೊಡಿಸಬೇಕಾಗಿ ಅರ್ಜಿದಾರನು ದಾಖಲು ಮಾಡಿದ ಸದ್ರಿ ಅರ್ಜಿಯು ತಾ 29-9-'34ಕ್ಕೆ ಇಟ್ಟಿರುವುದರಿಂದ ಆಕ್ಷೇಪವಿದ್ದವರು ಆ ಸಮಯದೊಳಗೆ ಜ್ಯಾಹೀರುಮಾಡತಕ್ಕದ್ದೆಂತ ಈ ಮೂಲಕ ತಿಳಿಸಲಾಗಿಯದೆ.

ಕಾಸರಗೋಡು 17—9-'34 — **B. Amrith Rau,** *Vakil for Petitioner.*

Wanted.

Wanted a Secondary Grade or Higher Grade Trained teacher who is well up in Kanarese. Applications should reach the undersigned on or before the 31st instant. State also the minimum pay acceptable.

The Manager,
M. A. School, KOODLU.
P. O. Kasaragod.

ಪ್ರಕಟಣೆ.

ಶ್ರೀ ಕೃಷ್ಣಾ ಮಿಲ್ಸ್ ಕಂಪೆನಿ, ಮಂಗಳೂರು. ದ. ಕ.

ಈ ಮೂಲಕ ನಮ್ಮ ಗ್ರಾಹಕರಿಗೆ ತಿಳಿಯಪಡಿಸುವದೇನೆಂದರೆ:—ನಮ್ಮ ಎಣ್ಣೆಯ ಗಿರಣಿಯು ಅನೇಕ ವರ್ಷಗಳಿಂದ ಎಣ್ಣೆ ತಯಾರಿಯನ್ನು ಮಾಡುತಿದ್ದು, ಸರ್ವ ಜನರ ಪ್ರೀತಿ ವಿಶ್ವಾಸಕ್ಕೆ ಪಾತ್ರವಾಗಿರುವುದು ಎಲ್ಲರಿಗೂ ತಿಳಿದ ವಿಷಯವಾಗಿರುತ್ತದೆ. ನಾವು ತಯಾರಿಸುವ ಎರಡು ಬಗೆಯ ಕೊಬ್ರಿ ಎಣ್ಣೆಯಲ್ಲಿ ಒಂದನೇ ಮತ್ತು ಎರಡನೇ ತರಗತಿಗಳಿದ್ದು, ಒಂದನೇ ತರಗತಿಯದ್ದು ಬೆಳೆದ ತಾಜಾ ಬೆಳ್ಳೆ ಕೊಬ್ರಿಯಿಂದಲೆ ತಯಾರಿಸಲ್ಪಡುತ್ತದೆಂಬುದು ಸರ್ವ ವಿದಿತ ವಿಷಯ. ಅಲ್ಲದೆ ನಮ್ಮ ಎರಡನೇ ತರಗತಿಯ ಎಣ್ಣೆಯು ಹಾಫೀಸು ಕೊಬ್ರಿಯಿಂದ ತಯಾರಿಸಲ್ಪಟ್ಟದ್ದು, ಸರ್ವ ಗ್ರಾಹಕರ ಮೆಚ್ಚುಗೆಗೆ ಪಾತ್ರವಾಗಿದೆಯೆಂಬುದು ತಿಳಿದ ಸಂಗತಿ.

ಆದರೆ ಇತ್ತೀಚೆಗೆ ಕೆಲವು ವ್ಯಾಪಾರಸ್ಥರು ನಮ್ಮ ಗಿರಾಕಿಗಳನ್ನು ತಪ್ಪಿಸುವ ದುರುದ್ದೇಶದಿಂದಲೋ, ಏನೋ ಮಲಬಾರು ಅತ್ತಕಡೆಯಿಂದ ತಯಾರಾಗುವ ಎಣ್ಣೆಯನ್ನು ಕೊಂಡು ಅದು ನಮ್ಮ ಕಂಪೆನಿಯ ಎಣ್ಣೆಯೆಂದು ಕುಳವಾರುಗಳಿಗೆ ನಂಬಿಕೆ ಹೇಳಿ ಮೋಸಮಾಡುತಿದ್ದಾರೆಂದು ನಮ್ಮ ಲಕ್ಷ್ಯಕ್ಕೆ ಬಂದಿದೆ. ಹೀಗೆ ಮಲಬಾರಿನ ಎಣ್ಣೆ ಪಡೆದ ನಮ್ಮ ಗಿರಾಕಿಗಳು ನಮ್ಮ ಎಣ್ಣೆದುಯ್ಯಂ ಎಂದು ತಿಳಿಯುವ ಸಂಭವವು ಕೆಲವುಕಡೆ ಇದ್ದಿತೆಂದು ನಮಗೆ ತಿಳಿದುಬಂದಿದೆ.

ಆದುದರಿಂದ ನಾವು ಎಚ್ಚರಿಸುವುದೇನೆಂದರೆ:—ನಮ್ಮ ೧ನೇ ತರಗತಿಯ ಎಣ್ಣೆಯನ್ನು ಮೂಸಿ ನೋಡಿದಲ್ಲಿ ಬೆಳ್ಳೆ ಕೊಬ್ರಿಯ ಸುವಾಸನೆಯಿಂದಿರುವುದು, ತಿಳಿದುಬರುವುದು. ನಮ್ಮ ಎಣ್ಣೆಗೆ ಬೆಂಕಿಯಿಂದ ಬಿಸಿಮಾಡಿದ ಎಣ್ಣೆಯ ದುರ್ವಾಸನೆಯಿರುವುದಿಲ್ಲ. ಎಣ್ಣೆಯನ್ನು ಪಡೆಯುವ ಮೊದಲು ನಮ್ಮ ಗಿರಾಕಿಗಳು ಈ ಕ್ರಮದಿಂದ ಎಣ್ಣೆಯನ್ನು ಪರೀಕ್ಷಿಸಿ ನಮ್ಮ ಎಣ್ಣೆಯನ್ನು ಪಡೆಯುವರೆ ಹಾರೈಸುತ್ತೇವೆ.

ನಮ್ಮ ಎಣ್ಣೆ ದೊರಕುವ ಸ್ಥಳಗಳು.

೧. ಅಡಿಗೆ ವಿಟ್ಠಪ್ಪ ಶೆಣೈ ಎಂಡ್ ಕೊ., ರಥಬೀದಿ ಮಂಗಳೂರು.
೨. ಕೊಂಚಾಡಿ ನಾಗೇಶ ಶೆಣೈ ಎಂಡ್ ಕೊ., ಕದ್ರಿ ಸ್ಟೋರ್ಸು ಮಂಗಳೂರು.

ಎಸ್. ಅಚ್ಯುತ್ತ ರಾಯಪ್ಪ ನಾಯಕ್.

ಮೆನೇಜರ್, ಶ್ರೀ ಕೃಷ್ಣಾ ಮಿಲ್ಸ್ ಕಂಪೆನಿ, ಬಂದರ ಮಂಗಳೂರು.

ಶಾಲಿವಾಹನ ಬ॥ ಶಕ ೧೮೫೬ನೆಯ ಭಾವ ಸಂವತ್ಸರದ ಭಾದ್ರಪದ ಶು॥೧೪ ಶನಿವಾರದಿಂದ—ಭಾದ್ರಪದ ಬ॥ ೫ ಶುಕ್ರವಾರದ ವರೆಗಿನ ಪಂಚಾಂಗ. (೧೮೩೪ನೇಯ ಸಿಂಹಸೋಣ

ತಾರೀಕು	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	[illegible]	ಸೂರ್ಯ ಉ.	ಸೂರ್ಯ ಅಸ್ತ	[illegible]
22*	ಶನಿ	೧೪	೨೬.೪೧	ಶತಭಿಷಾ	೧.೪೬	೬	6·22	6.27	[illegible]
23	ರವಿ	⊛	೨೧.೪೪	ಪೂ. ಭಾದ್ರಾ	೫೬.೧೪	೭	6.22	6.27	
24	ಸೋಮ	೧	೧೬.೧೪	ರೇವತೀ	೫೪.೪೪	೮	6·22	6·26	
25	ಕುಜ	೨	೧೧.೩೧	ಅಶ್ವಿನೀ	೫೪.೧	೯	6·22	6·25	
26	ಬುಧ	೩	೬.೧೪	ಭರಣೀ	೫೪.೪೬	೧೦	6.22	6.24	
27	ಗುರು	೪	೪.೧	ಕೃತ್ತಿಕಾ	೫೬.೪೪	೧೧	6·22	6.24	
28	ಶುಕ್ರ	೫	೨.೦	ರೋಹಿಣೀ	೫೯.೪೬	೧೨	6.22	6.23	

ಶ್ರೀಮಧ್ಭುವನೇಂದ್ರ ಮಹೌಷಧಾಲಯ, ಕಟಪಾಡಿ, ದ. ಕ.

ಪಾರಂಪರ್ಯದ ಅನುಭವಸಿದ್ಧೌಷಧಗಳು — **ಸ್ವರ್ಣ! ರಜತ ಪದಕಗಳನ್ನು ಪಡೆದ ದಿವ್ಯೌಷಧಗಳು.**

1. ಶುದ್ಧಾರಕ್—(ರಕ್ತದೋಷ ಸಂಬಂಧ ಯಾವತ್ತೂ ರೋಗಗಳಿಗೆ ದಿವ್ಯೌಷಧ). 2. ಗರ್ಭಪಾಲ—(ಗರ್ಭಶೂಲ, ಗರ್ಭಸ್ರಾವಗಳಿಗೆ ಅತೀ ಉಪಯುಕ್ತ) 3. ಚಂದ್ರಮುಸ್—ದಾಂತ ರೋಗಕ್ಕೆ ಅತ್ಯುತ್ತಮ) 4. ನಯನಾಂಜನ—(ನೇತ್ರ ರೋಗಗಳಿಗೆ ದಿವ್ಯೌಷಧ) 5. ಮಧುರೀಕೃತನಿಂಬ ತೈಲ—(ಸರ್ವ ತರದ ವಾತರೋಗಗಳಿಗೂ, ಚರ್ಮ ವ್ಯಾಧಿಗಳಿಗೂ ಉತ್ತಮ.) 6. ಧುವ ರಸಾಯನ—ಶಾರೀರಕ ಬಲಹೀನತೆಗೆ ಅತ್ಯುತ್ತಮ. 7. ರಸಬಿಂದು—ಫರಂಗಿ, ಮೇಹ, ದುಷ್ಟ ವ್ರಣಗಳಿಗೆ ಸಿದ್ಧೌಷಧ. 8. ಮಹಾ ಮದನಕಾಮೇಶ್ವರೀ ಲೇಹ್ಯ—ನಪುಂಸಕತ್ವ, ಧಾತು ಕ್ಷೀಣತೆ ಮುಂತಾದ ರೋಗಗಳಿಗೆ ಅತೀ ಉಪಯುಕ್ತ.

ನಮ್ಮ ಔಷಧಗಳು ದೊರೆಯುವ ಸ್ಥಳಗಳು

ಬೊಂಬಾಯಿ ಸಂಸ್ಥಾನದ ಪ್ರಧಾನ ಏಜಂಟರು:—(ಉತ್ತರಕನ್ನಡ ಜಿಲ್ಲೆ ಹೊರತು) ಕೊಚ್ಚಿಕಾರ್ ಆನಂದ್ರಾಯ ಪೈ, ಲೋಹಾರ್ ಚಾಲ್, ಬೊಂಬಾಯಿ ನಂ. 2. ಮಂಗಳೂರು:—1. ರಾಘವೇಂದ್ರ ರಂಗ ಪೈ, ರಥಬೀದಿ ಮಂಗಳೂರು. 2. ಡಾಕ್ಟರ್ ಕೆ. ಎನ್. ಭಂಡಾರಿ, ಕೆನರಾ ಡಿಸ್ಪೆನ್ಸರಿ, ಕೊಡಿಯಾಲ್‌ಬೈಲ್, ಮಂಗಳೂರು. 3. ಆರ್. ಗೋಪಾಲಕೃಷ್ಣರಾವ್, ಪ್ರೊಪ್ರೈಟರ್, ಗೋಪಾಲಕೃಷ್ಣ ವೈದ್ಯಾಶ್ರಮ, ಮಾರ್ಕೆಟ್ ಕ್ರಾಸ್‌ರೋಡ್, ಮಂಗಳೂರು. ಬಂಟ್ವಾಳ:—ವೇದಮೂರ್ತಿ ಬಿ. ಕೃಷ್ಣದಾಸ್, ಶ್ರೀ. ಗೋಪಾಲಕೃಷ್ಣ ಆಯುರ್ವೇದಿಕ್ ಫಾರ್ಮಸಿ, ಬಂಟ್ವಾಳ. ಮೂಡಬಿದ್ರಿ:—ಡಾಕ್ಟರ್ ಎಮ್. ವಿ. ಮಲ್ಯ, ಮೂಡಬಿದ್ರಿ. ಕಾರ್ಕಳ:—ವಿ. ಶೆಣೈ, ಕೆಮಿಸ್ಟ್ ಕಾರ್ಕಳ. ಮಂಜೇಶ್ವರ:—ಕೆ. ನರೋತ್ತಮ ಬಾಳಿಗ ಮತ್ತು ಬಿ. ನಾರಾಯಣ ಭಂಡಾರ್ಕಾರ್, ಮರ್ಚಂಟ್ಸ್, ಮಂಜೇಶ್ವರ. ಕಾಪು:—ಡಾಕ್ಟರ್ ಬಿ. ಕೆ. ಮೇಡಿಕಲ್ ಡಿಸ್ಪೆನ್ಸರಿ, ಕಾಪು. ಉದ್ಯಾವರ:—ಯು. ಗೋಪಾಲ ಕಾಮತ್, ಮರ್ಚಂಟ್, ಉದ್ಯಾವರ. ಉಡುಪಿ:—1. ಶ್ರೀಕೃಷ್ಣ ಫಾರ್ಮಸಿ, 2. ಡಾಕ್ಟರ್ ಪಿ. ರಾಘವೇಂದ್ರ ನಾಯಕ್ ಡಿಸ್ಪೆನ್ಸರಿ, 3. ಶಾನುಭಾಗ್ ಜನಾರ್ಧನ ನಾಯಕ್ ಎಂಡ್ ಕೊ, ಹೊಸ್ಪಿಟಲ್ ರೋಡ್, ಉಡುಪಿ, 4. ಆರ್. ಎಸ್. ಪೈ, ರಥಬೀದಿ, ಉಡುಪಿ. ಕಲ್ಯಾಣಪುರ:—ಡಾಕ್ಟರ್ ಕೆ. ಮಾಧವ ಪಾಟೀಲ್, ಶಿವಪ್ಪಯ್ಯ ಕೊತ್ತಲ, ಕಲ್ಯಾಣಪುರ. ಬ್ರಹ್ಮಾವರ:—1. ಕೊಚ್ಚಿಕಾರ ಶ್ರೀಕಂಠ ಪೈ ಎಂಡ್ ಸನ್ಸ್, ಮರ್ಚಂಟ್ಸ್, ಬ್ರಹ್ಮಾವರ. 2. ಕೆ. ಶೇಷಗಿರಿ ನಾಗಪ್ಪಾ ಎಂಡ್ ಸನ್ಸ್, ಕೆಮಿಸ್ಟ್ ಎಂಡ್ ಡ್ರಗ್ಗಿಸ್ಟ್, ಬ್ರಹ್ಮಾವರ. ಬಾರ್ಕೂರು:—ಬಿ. ಭಗವಂತ ಮಲ್ಯ, ಪ್ರೊಪ್ರೈಟರ್, ಆರ್. ಪಿ. ಔಷಧಾಲಯ, ಬಾರ್ಕೂರು. ಕೋಟ:—ವೇದಮೂರ್ತಿ ನಾಗೇಶ ನರಸಿಂಹ ಭಟ್ಟ, ಮುರಲೀಧರ ಕೃಷ್ಣ ದೇವಸ್ಥಾನ, ಕೋಟ ವರುಣತೀರ್ಥ, ಕೋಟ. ಕುಂದಾಪುರ:—1. ಕೆ. ಆರ್. ಭಟ್ಟ, ಕೆಮಿಸ್ಟ್, ಕುಂದಾಪುರ. 2. ಡಾಕ್ಟರ್ ಕೆ. ಆರ್. ಕಾಮತ್ ಡಿಸ್ಪೆನ್ಸರಿ, ಕುಂದಾಪುರ. ಗಂಗೊಳ್ಳಿ:—ಜಿ. ಸುರೇಂದ್ರನಾಥ ನಾಯಕ್, ಮರ್ಚಂಟ್, ಗಂಗೊಳ್ಳಿ. ಬೈಂದೂರು:—ಕೆ. ಪುತ್ತು ಶ್ಯಾನಭಾಗ, ಮರ್ಚಂಟ್, ಬೈಂದೂರು. ಭಟ್ಕಳ:—ವಾಮನನರಸಿಂಹ ನಾಯಕ್, ಗುಡೆ ಅಂಗಡಿಕಾರ್, ಮರ್ಚಂಟ್ ಎಂಡ್ ಕಂಟ್ರಾಕ್ಟರ್, ಭಟ್ಕಳ ಉ. ಕನ್ನಡ. ಅಂಕೋಲಾ:—ಕೃಷ್ಣ ಹಮ್ಮಯ್ಯ ನ್ಯಾಕ ಪಟ್ವರ್ಧನ್, ಧರ್ಮಶಾಲೆಯ ಬಳಿ, ಅಂಕೋಲಾ, ಉ. ಕನ್ನಡ. ಹೆಬ್ರಿ:—1. ಎಚ್. ಮುಕುಂದ ಪೈ ಮತ್ತು ಡಾಕ್ಟರ್ ಎಂ. ಪಿ. ಕಲ್ಕೂರ್, ಹೆಬ್ರಿ. 2. ಡಾಕ್ಟರ್ ವ್ಹಿ. ಆರ್. ಆಚಾರ್ಯ, ರಾಜಲ್ ಡಿಸ್ಪೆನ್ಸರಿ, ಹೆಬ್ರಿ. ಹಾಲಾಡಿ:—ಯು. ನರಸಿಂಹ ಕಾಮತ್, ಮರ್ಚಂಟ್ ಹಾಲಾಡಿ. ಹೊಸಂಗಡಿ:—ಎಚ್. ರಾಮಚಂದ್ರ ಕಾಮತ್, ಮರ್ಚಂಟ್ ಹೊಸಂಗಡಿ, ಕುಂದಾಪುರ ತಾಲೂಕು. ನಗರ:—ಸಿ. ನಾರಾಯಣ ರಾವ್, ಸಾಹುಕಾರ, ನಗರ. ತೀರ್ಥಹಳ್ಳಿ:—ಡಾಕ್ಟರ್ ಕೆ. ನರಸಿಂಹಾ, ಶ್ರೀ ಕೃಷ್ಣ ಡಿಸ್ಪೆನ್ಸರಿ, ತೀರ್ಥಹಳ್ಳಿ. ಕೊಪ್ಪ:—ಡಾಕ್ಟರ್ ಟಿ. ಕೆ. ಭಟ್, ಎಂ. ಬಿ. ಎಂಡ್ ಬಿ. ಎಸ್., ಪೋಪ್ಯುಲರ್ ಫಾರ್ಮಸಿ, ಕೊಪ್ಪ, ಕಡೂರು ಡಿಸ್ಟ್ರಿಕ್ಟ್. ಶಿವಮೊಗ್ಗ:—ಡಾಕ್ಟರ್ ಎಂ. ಆರ್. ಪೈ, ಬಿಗ್ ಬಜಾರ್, ಶಿವಮೊಗ್ಗ. ಸಾಗರ:—ಡಾಕ್ಟರ್ ಬಿ. ನರಹರಿ ರಾವ್, ಸಾಗರ.

ಪೂರ್ಣ ಮಾಹಿತಿ ಬಗ್ಗೆ ಈ ವಿಳಾಸಕ್ಕೆ ಬರೆಕೊಳ್ಳಬಹುದು. — **ನಾಯಕ್ ಬ್ರದರ್ಸ್, ಶ್ರೀಮದ್ಭುವನೇಂದ್ರ ಮಹೌಷಧಾಲಯ, ಪೋಸ್ಟ್ ಕಟಪಾಡಿ, ದ. ಕ.**

ಶುದ್ಧ ಸ್ವದೇಶಿ! ಸ್ವದೇಶಿ ಭಾಂಡವಾಳದಿಂದ **ಸ್ವದೇಶಿಯರಿಗಾಗಿ!**

ಗಂಧದ ಸಾಬೂನು (ಸೆಂಡಲ್‌ವುಡ್) ನಿರ್ವಿವಾದವಾಗಿ ಅತ್ಯುತ್ತಮವಾದುದು!

ತಾಜಾ ಗಂಧದ ತೈಲ ಮೊದಲಾದ ವನಸ್ಪತಿ ತೈಲಗಳಿಂದಲೇ ತಯಾರಿಸಿದ ಅತ್ಯುತ್ತಮ ಸಾಬೂನು.

ಮೈಸೂರು ಸರಕಾರದ ಗಂಧದೆಣ್ಣೆ ಕಾರ್ಖಾನೆಯಲ್ಲಿ ದೊರೆವ ಆ ಉತ್ತಮ ಎಣ್ಣೆಯ ಸ್ನಿಗ್ಧ ಸುಗಂಧವುಳ್ಳದ್ದು.

ಪ್ರಾಣಿಜನ್ಯ ಚರ್ಬಿಯ ಸ್ಪರ್ಶವೂ ಇಲ್ಲದ

ಮಲಬಾರು ಸೋಪ್

ಮಲಬಾರು ಸೆಂಡಲ್‌ವುಡ್

ದಿ ವೆಜಿಟೇಬಲ್ ಸೋಪ್ ವರ್ಕ್ಸ್, ಕಲ್ಲಿಕೋಟೆ.

ಪ್ರೊಪ್ರೈಟರ್:—ಸನ್ ಬ್ರಾಂಡ್ ಕೊಡೆಯ ಖ್ಯಾತಿಯ ಸೇಟ್ ನಾಗಜೀ ಪುರುಷೋತ್ತಮ ಮತ್ತು ಕಂಪೆನಿ, ಕಲ್ಲಿಕೋಟೆ.

ಈ ಜಿಲ್ಲೆಗೆ ಪ್ರವರ್ತಕರು:— **ರಾಘವೇಂದ್ರ ರಂಗ ಪೈ, ರಥಬೀದಿ, ಮಂಗಳೂರು.**

ಇಂದೇ ಆರಂಭಿಸಿರಿ!

ಸುಪ್ರಸಿದ್ಧ **ಆತಂಕನಿಗ್ರಹ ಮಾತ್ರೆ**

ಗಳನ್ನು ಉಪಯೋಗಿಸಲಿಕ್ಕೆ.

ಜೀವನದ ಜಯಶೀಲತೆಯು ಏಣಿಯನ್ನೇರಿರಿ. ಲೋಕದಲ್ಲಿ ಸಾವಿರಾರು ಜನರು ಅದನ್ನು ಪ್ರತಿದಿನವೂ ಉಪಯೋಗಿಸುತ್ತಿದ್ದಾರೆ.

ನರ ಮತ್ತು ಶಾರೀರಿಕ ದೌರ್ಬಲ್ಯಕ್ಕೆ ಭದ್ರತೆಯು.

ಆರೋಗ್ಯಕ್ಕೆ ಕವಚವು

32 ಮಾತ್ರೆಗಳ ಟಿನ್ನೊಂದಕ್ಕೆ ರೂ. 1

ಹೆಚ್ಚಿನ ವಿವರಕ್ಕೆ ಭವಸಾರ್ಥ ಹಾಗೂ ಟಿಪ್ಪಣಿ ಟಪಾಲು ವಿನಹ ಕಳುಹಿಸಲ್ಪಡುವ ನಮ್ಮ

ಕಾಮಶಾಸ್ತ್ರವನ್ನೋದಿರಿ.

Agents:—Shah Company, MANGALORE.

" Pearl & Sons, MANGALORE.

Atank Nigrah Pharmacy,
Chickpet, Bangalore.

ಆತಂಕನಿಗ್ರಹ ಫಾರ್ಮಸಿ,
ಚಿಕ್ಕಪೇಟೆ, ಬೆಂಗಳೂರು.

ಎಲ್ಲಾ ಚಂದಾದಾರರು ತಮ್ಮ ಪತ್ರವ್ಯವಹಾರದೊಂದಿಗೆ ಅವರವರ ಚಂದಾ ನಂಬರುಗಳನ್ನು ಅಗತ್ಯವಾಗಿ ನಮೂದಿಸತಕ್ಕದ್ದು. ಸಂ. ಸ್ವ.

BUY ADVERTISED GOODS

ದಿ ಪೊಪ್ಯುಲರ್ ಇನ್ಶೂರೆನ್ಸ್ ಕಂಪೆನಿ, ಲಿಮಿಟೆಡ್,

(ಹೆಡ್ ಆಫೀಸು—ಮಂಗಳೂರು).

ನಮ್ಮ ಜಿಲ್ಲೆಯು ಪ್ರತಿ ವರ್ಷವೂ ಸುಮಾರು 15 ಲಕ್ಷ ರೂಪಾಯಿಗಳನ್ನು ಪ್ರೀಮಿಯಮ್ ರೂಪದಲ್ಲಿ ದೇಶೀಯ ಮತ್ತು ಪರದೇಶೀಯ ಕಂಪೆನಿಗಳಿಗೆ ಪ್ರವಾಹರೂಪವಾಗಿ ಸಲ್ಲಿಸುತ್ತಲೇ ಇದೆಯಲ್ಲದೆ, ಈ ಜಿಲ್ಲೆಯು ತಾನಾಗಿ ಒಂದೇ ಒಂದು ಜೀವವಿಮೆ ಸಂಘವನ್ನು ಇದುವರೆಗೆ ಘಟಿಸಿಲ್ಲ. ನಮ್ಮ ದೇಶದ ಈ ದೆಸೆಯಲ್ಲಿ, ನಮ್ಮದಿದೇ ಮೊದಲನೆ ಪ್ರಯತ್ನವಾಗಿದೆ.

ಈ ಕಂಪೆನಿಯ ವಿಚಾರದಲ್ಲಿ ಹೇಳುವುದಾದರೆ;—ಕಂಪೆನಿಯು ನಿಮ್ಮದೇ; ನಿಮಗೆ ತಿಳಿದಿರುವ ಮತ್ತು ನಿಮ್ಮ ವಿಶ್ವಾಸಕ್ಕೆ ಅರ್ಹರಾಗಿರುವವರೇ ಆಡಳಿತವನ್ನು ನಿರ್ವಹಿಸುವರು; ನಿಮ್ಮ ಹಣವು ಸ್ವದೇಶದಲ್ಲಿ ಸಂಪದಭ್ಯುದಯ ಕಾರ್ಯಗಳಿಗಾಗಿ ವಿನಿಯೋಗಿಸಲ್ಪಡುವುದು;—ಎಂಬೀ ವಿಷಯಗಳನ್ನು ಪರ್ಯಾಲೋಚಿಸಿದಲ್ಲಿ, ಸ್ವದೇಶವಾತ್ಸಲ್ಯವುಳ್ಳವರೆಲ್ಲರೂ ಈ ಕಂಪೆನಿಯನ್ನು ಪ್ರೋತ್ಸಾಹಿಸುವುದು ಅವಶ್ಯವೆಂಬುದು ತಾನಾಗಿ ಹೊಳೆಯದಿರದು.

ಪ್ರತಿ ಒಂದು ವಿಧದಲ್ಲಿಯೂ ನಿಮ್ಮದಾದ ಈ ಕಂಪೆನಿಯಲ್ಲಿ ಒಂದು ಪೊಪ್ಯುಲರ್ ಪೊಲಿಸಿಯನ್ನು ಪಡೆದು

ಸ್ವದೇಶೀಯರ ಪ್ರಯತ್ನಗಳನ್ನು ಪ್ರೋತ್ಸಾಹಿಸಿರಿ!

ಹೆಚ್ಚಿನ ವಿವರಕ್ಕೆ ಹೆಡ್ ಆಫೀಸಿಗೆ ಬರೆದುಕೊಂಡರೆ, ಸಂತೋಷದಿಂದ ಕೂಡಲೆ ತಿಳಿಸಲಾಗುವುದು.

☞ ಎಲ್ಲಾ ಕಡೆಗಳಲ್ಲಿಯೂ ಯೋಗ್ಯ ಏಜಂಟರುಗಳು ಬೇಕು. ಭಾರೀ ಕಮಿಶನ್ ಕೊಡಲಾಗುವುದು.

ಬೊಂಬಾಯಿ ಸಂಸ್ಥಾನದ ಪ್ರಾಮುಖ್ಯ ಏಜಂಟರು:—ಪ್ರಭಾಕರ ಕಂಪೆನಿ, 415 ಶೇಖ್‌ಮೇಮೂನ್ ರಸ್ತೆ, ಬೊಂಬಾಯಿ.

[illegible] ... to extend the work of the South Indian General Assurance Society, Ltd., in the following places noted below. [illegible] organisers can expect to have attractive and encouraging [illegible] with sound [illegible] for their fitness.

(1) South Canara, (2) Mysore, Hassan and Coorg, (3) Kadur, Shimoga, Chitaldroog and Tumkur, (4) Mangalore, Kolar.

For terms and other particulars please apply to—

The Divisional Manager,
The South Indian General Assurance Co. Ltd.
64, III Cross Road, Srirampur Extn. Malleswaram Post, BANGALORE,

OR

The Managing Agents,
The S. I. G. A. Co. Ltd.
55, Poonamallee High Road, Kilpauk, MADRAS.

1876ನೇ ಇಸವಿಯಿಂದಲೂ ಪ್ರಸಿದ್ಧಿ ಹೊಂದಿದ

ಎಮ್. ಗಣಪಯ್ಯ ಎಂಡ್ ಸನ್ಸ್, ಮಂಗಳೂರು.

ಇವರ ಶಾಸ್ತ್ರೀಯ ಮತ್ತು ಅನುಭವಸಿದ್ಧ ಔಷಧಗಳು.

ಮಹಾ ಮದನಕಾಮೇಶ್ವರಿ ಲೇಹ:—ಆಯುರ್ವೇದ ಶಾಸ್ತ್ರದಲ್ಲಿ ಅತಿ ಶ್ರೇಷ್ಠ [illegible] ನರಗಳ ಮತ್ತು ಜನನೇಂದ್ರಿಯದ ಶಕ್ತಿಹೀನತೆ, ಎದೆನೋವು, ಮಲಬದ್ಧತೆ, ಅಜೀರ್ಣ, ಅರುಚಿ, ಅಗ್ನಿಮಾಂದ್ಯ, ವಾಯು ಉಪದ್ರ ಮೊದಲಾದವುಗಳನ್ನು ಹೋಗಲಾಡಿಸಿ ಮಾನಸಿಕ ಶಕ್ತಿಯನ್ನು ಹೆಚ್ಚಿಸುವುದು. [illegible] ಸಂಪೂರ್ಣ ಆರೋಗ್ಯವನ್ನು ಉಂಟುಮಾಡುವುದು. [illegible]

ಬಾಟ್ಲಿ 1ರ ರೂ. 2-0-0. ಬಾಟ್ಲಿ 3ರ ರೂ. 5-12-0.

ಮೇಹ ಕುಠಾರ:—ಪ್ರಮೇಹ, ಮೂತ್ರಕೃಚ್ಛ್ರ, ಮೂತ್ರ ಹೋಗದಿರುವಿಕೆ, ಮೂತ್ರ ಹೋಗುವಾಗ ಉರಿ, [illegible] ಮೂತ್ರಕೋಶದ ರೋಗಗಳಿಗೆ ಸಿದ್ಧೌಷಧ.

ಡಬ್ಬಿ 1ಕ್ಕೆ ರೂ. 2-8-0. ಡಬ್ಬಿ 3ರ ರೂ. 7-0-0.

ಕಸ್ತೂರಿ ಮಿಶ್ರಿತ ದಶಮೂಲಾರಿಷ್ಟ:—ಇದು ಬಾಣಂತಿಯರಿಗೆ [illegible] ಗರ್ಭಕೋಶದ ವೇದನೆಗಳನ್ನು ಸಮಾಧಾನಪಡಿಸುವುದು. [illegible] ಅಗ್ನಿಮಾಂದ್ಯ, ಅರುಚಿ, [illegible] ಜ್ವರ, ರಕ್ತಹೀನತೆ, ನಿದ್ರಾಭಂಗ ಮೊದಲಾದವುಗಳನ್ನು ಹೋಗಲಾಡಿಸಿ, ದೇಹವನ್ನು ಶಕ್ತಿವಂತವೂ ಆರೋಗ್ಯವಂತವೂ ಮಾಡುವುದು. [illegible]

ಬಾಟ್ಲಿ 1ಕ್ಕೆ ರೂ. 1-8-0. ಬಾಟ್ಲಿ 3ರ ರೂ. 3-0-0.

[ಗುಣಬಾರದಿದ್ದರೆ ಹಣ ವಾಪಾಸು]

ಸುಪ್ರಸಿದ್ಧ ವೈದ್ಯರಾದ ಎಮ್. ಕೆ. [illegible] ಅವರ

ಸಂತತಿ ಪ್ರತಿಬಂಧಕ ಚೂರ್ಣ (ರಜಿಸ್ಟರ್)

[illegible]

ವಿಳಾಸ:—ಸಂತತಿ [illegible] ಔಷಧಾಲಯ ಮು ಪೋ. [illegible], S. M. C.

Canara Bank, Limited.

Established 1906.

Authorised Capital	10,00000-0-0
Subscribed capital	6,00,000-0-0
Paid up Capital	3,30,000-0-0
Reserves	4,31,000-0-0

Head Office:—**Bunder, Mangalore** Local Offices:—City & Bunder.

BRANCHES:— Bombay, Cochin, Calicut, Ernakulam, Alleppey, Chikmagalur, Ganguli, Coondapoor, Udipi, Karkal, Puttur, Kasaragod. & Buntwal Out-agency.

Interest is allowed on Current, Fixed and Savings Bank Accounts, rates of which may be ascertained on application. Advances made on approved securities at easy rates. All kinds of Banking business transacted. Rules of business on application.

The Bangalore Branch Office of the Bank at No. 1 Albert Victor Road, Bangalore City has been opened on [illegible].

A. Madhava Pai,
Secretary.

Wanted.

Old, fully paid-up Shares of the Canara Bank Ltd. (Mangalore). Sellers may write to the undersigned with the rock-bottom rates.

S. Madhav Laxman Nayak,
Brahmin Street, Mangalore.

ವಿಶೇಷ ಸಂಚಿಕೆ] ಜಯಕರ್ನಾಟಕ [ಅಗಸ್ಟ

ನಾಟ್ಯಾಂಕ.

ಸಂಪಾದಕರು:—

ಶ್ರೀ ಬೆಳಗಾಂವಿ ರಾಮಚಂದ್ರ, ಬಿ. ಎ.

ಶ್ರೀ ದ. ವೇ. ಜೋಶಿ, ಬಿ. ಎ.

ನವಂಬರ ಎರಡನೆಯ ವಾರದಲ್ಲಿ ಪ್ರಕಟವಾಗುವುದು.

ರಂಗಭೂಮಿ, ನಾಟ್ಯ, ನೃತ್ಯ, ಸಂಗೀತ, ಚಲಚ್ಚಿತ್ರ ಮೊದಲಾದವುಗಳ ವಿವಿಧಾಂಗಗಳ ಮೇಲೆ [illegible]

[illegible]

Shiromani Narayanacharya, Choukhamba, Benares City.

[illegible]

ಶಿರೋಮಣಿ ನಾರಾಯಣಾಚಾರ್ಯ
ಚೌಖಂಬಾ, ಬನಾರಸ್ (ಕಾಶೀ)

---

77 Years!



Two generations of approved service enables us to pick and choose what is cheap, lasting & good to suit the pockets & the tastes of our longstanding wide circle of

CUSTOMERS

who know our

Premier House for Swadeshi.

Mill Yarns—Handloom Cloths, Dhoties—Saries—Cintses etc.

Shrinivas Ranga Pai
Sawkar Mahal,
Car Street, MANGALORE.

[illegible]

ಸ್ವದೇಶಾಭಿಮಾನಿ.

SWADESHABHIMANI

ESTABLISHED 1906. **POINEER WEEKLY OF SOUTH KANARA.**

(ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ೧೯೦೬ರಲ್ಲಿ ಸ್ಥಾಪಿತವಾದುದು.)

ಪ್ರತಿ ಶುಕ್ರವಾರವೂ ಮಂಗಳೂರಿನ ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ.

ರತ್ನೈರ್ಮಹಾರ್ಹೈಸ್ತುತುಷುರ್ನ ದೇವಾ। ನ ಭೇಜಿರೇ ಭೀಮವಿಷೇಣ ಭೀತಿಮ್॥ ಸುಧಾಂ ವಿನಾ ನ ಪ್ರಯಯುರ್ವಿರಾಮಂ। ನ ನಿಶ್ಚಿತಾರ್ಥಾದ್ವಿರಮಂತಿ ಧೀರಾ॥೧॥

ದೊರೆಯಲನುಪಮರತ್ನಗಳು ಸಾ। ಗರವ ಮಥಿಸಲು ಸುರರಿಗದರಿಂ। ಹರುಷವಾಯಿತೆ? ಮತ್ತೆ ವಿಶ್ವವ ಸುಡುತ ಬರುತಿರುವ॥

ಗರಲಕವರಂಜಿದರೆ? ಸುಧೆಯನು। ಮರೆತು ಕ್ಷುದ್ರರ ತೆರದಿ ಕುಳಿತರೆ?। ತೆರಳ ಬಲ್ಲರೆ ತೊರೆದು ಧೀರರು ನಿಶ್ಚಿತಾರ್ಥವನು?॥೧॥

ಪುಸ್ತಕ ೨೮. ಮಂಗಳೂರು ತಾ. ೨೮ನೇ ಶುಕ್ರವಾರ ಸಪ್ಟೆಂಬರ ೧೯೩೪. (28 – 9 - '34) ಸಂಚಿಕೆ ೩೯

The Canara Banking Corporation Udipi, Ltd.

(Incorporated in British India) ESDT· 1906·

Head office:—UDIPI, S. K. **Branches:—Coondapoor, Mangalore, Shimoga & Madras.**

Authorised Capital Rs. 3,50,000· Subscribed and Called up Rs. 2,25,000·

Statement of Assets & Liabilities as on 31st August 1934

LIABILITIES			ASSETS		
1.	Paid up Capital	Rs. 2,25,000—0—0	1.	Bank Premises	Rs. 66,892—15—0
2.	Reserve and other funds	,, 250,000—0 0	2.	Investment on G. P. Notes	,, 6,40,826—4—6
3.	Deposits	,, 23,22,920-11 6	3.	Authorised Investments	,, 21,82,571—1—6
4.	Due to Bankers	,, 60,796 7-10	4.	Bill for collection	,, 30,000—2—0
5.	Sundries	,, 94,574-13-9	5.	Sundries	,, 40,054—6—3
6.	Bills per contra	,, 30,000—0—0	6.	Cash on hand & with Bankers at call	,, 22,947—5—10
	Total Rs.	29,83,292—3 1		Total	29,83,292—3—1

Office of the Corporation, Udipi, S. K. 4—9 - 1934.

M. Shrinivas Prabhu.

Ag. Manager.

(Regd)

ಅಮೃತಾಂಜನ.

ಇದು ಕೆಟ್ಟ ಶಿರೋವೇದನೆ, ಕಷ್ಟಕೊಡುವ ವಾತ, ಭಾರಿ ನೋವು, ವಿಶೇಷ ಉಳುಕು, ಅಸಹನೀಯ ಹಲ್ಲುನೋವು, ವಿಪರೀತ ಘಾಯ, ಬಹು ಶೀತ, ಸಹಿಸಲಸದಳವಾದ ಚಳಿ, ಕೈಕಾಲು ಮರಗಟ್ಟುವುದು, ಲುಂಬಾಗೊ ಮೊದಲಾದ ಎಲ್ಲಾ ತರದ ಬೇನೆಗಳನ್ನೂ ಅತೀ ಬೇಗನೇ ಗುಣಪಡಿಸುತ್ತದೆ. ಎಲ್ಲೆಲ್ಲಿಯೂ ಮಾರಲ್ಪಡುತ್ತಿದೆ.

ರಿಂಗ್‌ವರ್ಮ್ ಮುಲಾಮು:— ಇದು ರಿಂಗ್‌ವರ್ಮನ್ನೂ ಕಜ್ಜಿಯನ್ನೂ ಇನ್ನಿತರ ಚರ್ಮರೋಗಗಳನ್ನೂ ಮೂರು ಸಲ ಮುಟ್ಟಿಸುವುದರೊಳಗೆ ಗುಣಪಡಿಸುತ್ತದೆ.

ಡಬ್ಬಿ 1ಕ್ಕೆ 6 ಆಣೆ. ಡಜನಿಗೆ ರೂ. 3—8—0. ಅಂಚೆವೆಚ್ಚ ಪ್ರತ್ಯೇಕ.

ಅಮೃತಾಂಜನ ಡಿಪ್ಪೋ, ಮದರಾಸು, ಮತ್ತು ಬೊಂಬಾಯಿ.

ದಿ ಬೊಂಬೇ ಲ್ಯಾಫ್ ಎಶ್ಶೂರೆನ್ಸ್ ಕಂಪೆನಿ ಲಿಮಿಟೆಡ್, ಬೊಂಬೇ.

1908ರಲ್ಲಿ ಸ್ಥಾಪಿತವಾದುದು.

ಪೋಲಿಸಿದಾರರಿಗೆ ವಿಶೇಷ ರಿಯಾಯತಿ.

ವರ್ಷಾವಧಿಯ ಪ್ರೀಮಿಯಮ್ಮುಗಳನ್ನು ತೆರುವ ಎಲ್ಲಾ ಪೋಲಿಸಿದಾರರಿಗೂ "ಸಿಲ್ವರ್ ಜ್ಯುಬಿಲಿ" ರಿಯಾಯತಿಯಾಗಿ ಅವರವರ ಮುಂದಿನ ಪ್ರತಿ ವಾರ್ಷಿಕ ಪ್ರಿಮಿಯಮ್ಮಿನಲ್ಲಿ ಶೇಕಡಾ 2½ ಸಲೆಯಷ್ಟು ಕಡಿಮೆಯಾದ ಮೊಬಲಗನ್ನು ತೆರುವ ರಿಯಾಯತಿ ಕೊಡಲಾಗಿದೆ. ಈ ರಿಯಾಯತಿಯ ಪ್ರಯೋಜನವನ್ನು ಆಗಲೇ ನೂರಾರು ಮಂದಿ ಪೋಲಿಸಿದಾರರು ಪಡಕೊಂಡಿದ್ದಾರೆ. ವರ್ಷಕ್ಕೊಮ್ಮೆ ಪ್ರಿಮಿಯಮ್ಮಿನ ಕಂತನ್ನು ಕಟ್ಟಲಪೇಕ್ಷಿಸುವವರು ತಮ್ಮ ಪೋಲಿಸಿಯ ನಂಬರುಗಳನ್ನು ನಮೂದಿಸಿ ನಮಗೆ ಯಾ ಸಮ್ಮಂಧಪಟ್ಟ ನಮ್ಮ ಇತರ ಆಫೀಸಿಗೆ ತಿಳಿಸಬೇಕಾಗಿ ಈ ಮೂಲಕ ವಿನಂತಿ ಮಾಡಿಕೊಳ್ಳೋಣಾಗುತ್ತದೆ.

ವಿ. ಸೂ:— ಪ್ರಾತಿನಿಧ್ಯವಿಲ್ಲದ ಜಿಲ್ಲೆಗಳಿಂದ ಉತ್ಸಾಹಶಾಲಿ ಗೃಹಸ್ಥರುಗಳ ಏಜನ್ಸಿ ಅರ್ಜಿಗಳು ಅಂಗೀಕರಿಸಲಾಗುವವು.

ಕೊಬ್ಬಿಕಾರ್ ಬ್ರದರ್ಸ್, ಮದ್ರಾಸ್ ಬ್ರೇಂಚ್ ಸೆಕ್ರೆಟರಿಯವರು.

× × × × ×

ಬಹಿರಂಗ ಕಾರು ಓಡಿ ಓಡಿ ಪಟ್ಟೋಲು ಮುಗಿಯಿತು! ಬಾಳುವವರ ಟೀಕೆ ಓಡಿ ಓಡಿ ಟಯರು ಒಡೆಯಿತು! ಬಾಳುವವರ ಸ್ಟೆಕರ್ ಓಡಿ ಓಡಿ ಕಾಲು ಸೋತಿತು! ತಪ್ಪಿಸುವವರ ಹೇಳು ಬಾಲಿ!

× × × × ×

ಅಂತಸ್ತಿ ಇರುವ ಕೆಲ ಉಮೇದ್ವಾರರ ಹೃದಯದ ಮೇಲೆ ಕ್ಷಾಯ್ನ್ನು ಡಿಗ್ರಿಯನ್ನು ಮನಸ್ಸಿನ ಮೂಲಕ ಇಟ್ಟು ನೋಡಿರಿ!—ಏನು ಕಂಡುಬಂತು? ಹಾರ್ಟ್ ಬೀಟಿಂಗ್ ಸೆಕುಂಡಿಗೆ ೧೦೦ ಸಲ! ಭಯ, ತತ್ತರ, ಕಳವಳ, ಪ್ರಾರ್ಥನೆ, ಕ್ರೋಧ, ಶಂಕೆ, ಆವಸರಗಳೆಲ್ಲ ಆ ಹೃದಯಗಳೊಳಗೆ ನರ್ತಿಸುತ್ತಿದ್ದುವು.

× × × × ×

ಇಷ್ಟರವರೆಗೆ ಶೇಕ್‌ಹೇಂಡ್ ಎಂದರೇನೆಂದು ತಿಳಿಯದವರಿಗೂ ಶೇಕ್ ಹೇಂಡ್! ಅನ್ಯರಲ್ಲೊಂದು ನಮಸ್ಕಾರವನ್ನು ದೊಡ್ಡವರಿಂದ ಪಡೆಯದ ಬಡ ಟೀಕ್ಸ್‌ಪೇಯರಿಗೂ ನಮಸ್ಕಾರ! ಅಂತೂ, "ಅನುಕೂಲಶಾಸ್ತ್ರ" ಪುಸ್ತಕವು ಮೊನ್ನೆ ತಾನಾಗಿಯೇ ತೆರೆದುಕೊಂಡಿತ್ತು

× × × × ×

ಎದ್ದು ನಡೆಯಲಾರದ ಮುದುಕರನ್ನು ಎತ್ತಿಕೊಂಡು ಪೋಲಿಂಗ್ ಬೂತಿಗೊಯ್ಯಲು ಸ್ವಯಂಸೇವಕರೇನು? ಮೋಟರುಗಳ ತಲೆ ತಿರುಗಿಸಲು ಕರೆಂಟ್ ತಂದರೇನು? ಮುನಿಸಿಪಾಲಿಟಿಯ ಬಾಗಿಲು ಕಾಯಲು ಬೆಳಗ್ಗಿನಿಂದ ಸಂಜೆಯ ವರೆಗೆ ಜನರ ಗುಂಪೇನು?

× × × × ×

ಎರಡು ಮೂರು ವರ್ಷಗಳಿಂದ ಪೆಟ್ಟಿಗೆಯಡಿಯಲ್ಲಿದ್ದ ಹುಡಿ ಕಾಸೆಲ್ಲ ಹೋಟೆಲುಗಳಲ್ಲಿ ಪುಡಿ! ಬಡವರಿಗೆಂದರೆ ಮುಕ್ಕಾಲು ಬಿಡಲಾರದ ಮಹಾಶಯರು ಬೀದಿಬೀದಿಯ ಎಡೆಸಂಕೆಯ ಹುಡುಗರಿಗೆ ಚೆಕ್ ಕೊಟ್ಟರು! ಇಂಥ ತ್ಯಾಗವರರಿಗೆ ಕಾಸು ಹಾಗಿಸಿದರಂತೆ!

× × × × ×

ಕೆಲವು ದೇವಸ್ಥಾನಗಳ ಭಾಗ್ಯ!—ಅನೇಕ ಹರಿಕೆಗಳು ಬಂದು ಮುಟ್ಟಿವೆಯಂತೆ—"ನಾನು ಕೌನ್ಸಿಲು ಚುನಾವಣೆಯಲ್ಲಿ ಗೆಲ್ಲುವಂತೆ ಪ್ರಾರ್ಥಿಸಿರಿ, ಭಟ್ರೆ" ಎಂದು ಭಟ್ರಿಗೆ ದಕ್ಷಿಣೆಯಿತ್ತ ವಿಚಕ್ಷಣರಾಯರ ಅರಿಕೆಯಂತೆ!

× × × × ×

ಅಂತೂ, ಮೋಟರ್‌ವಾಲರ ಪುಣ್ಯ! ಗಾಡಿವಾಲರ ಭಾಗ್ಯ! ಬಡವರ ಅದೃಷ್ಟ! ಕೌನ್ಸಿಲರರ ನಸೀಬ್? ಪೋಲ್ಲಿಂಗ್ ಬೂತಿನ ಲಕ್!

× × × × ×



ಪ್ರಕೃತಿಸಿದ್ಧವಾಗಿ ನಿಮ್ಮ ಮಗುವನ್ನು ಸಾಕಿರಿ.

ಪ್ರಕೃತಿಯು ಒದಗಿಸಿಟ್ಟಿರುವ ಪೋಷಣೆಯನ್ನು ಪಡೆಯಲು ನಿಮ್ಮ ಮಗುವಿಗೆ ಹಕ್ಕಿರುತ್ತದೆ. ಎದೆ ಹಾಲನ್ನು ಕೊಡುವುದು ತಾಯಿಯ ಕರ್ತವ್ಯ. ಮಗುವಿನ ಹಕ್ಕು. ಮಗುವಿಗೆ ಆರೋಗ್ಯ ಮತ್ತು ದೃಢತೆಯ ಬುನಾದಿಯನ್ನೊದಗಿಸಿ ಕೊಡುವುದಕ್ಕೆ ತಾಯಿಯ ಹಾಲಿನಂತೆ ಬೇರೊಂದಿಲ್ಲ. ಆದರೆ ಹೆಚ್ಚಿನ ತಾಯಂದಿಯರಿಗೆ ಮಗುವಿಗೆ ಎದೆ ಹಾಲು ಕೊಡಲು ಕಷ್ಟವೆಂದು ಭಾಸವಾಗುತ್ತದೆ. ತಾಯಿಯ ಎದೆ ಹಾಲಿಲ್ಲದಿರುವುದರಿಂದಲೂ, ಇದ್ದರೂ ಕಡಿಮೆಯಾದುದರಿಂದ ಹೆಚ್ಚಿನ ತಾಯಂದಿರಿಗೆ ಮಗುವಿಗೆ ಪೋಷಿಯನ್ನೆಸಲಾಗುವುದಿಲ್ಲ.

ಮಗುವು ಜನಿಸುವ ಮೊದಲೂ, ಮೇಲೂ ಓವಲ್ಟಿನ್ ಕುಡಿದು ತಮ್ಮ ಶಕ್ತಿಯನ್ನು ರಕ್ಷಿಸಿಕೊಳ್ಳಬೇಕು. ಇದನ್ನು ಸೃಷ್ಟಿಜನ್ಯವಾದ ಟೋನಿಕ್ ಆಹಾರಾಂಗಗಳಿಂದಲೂ, ಬೆಳೆದ ಬಾರ್ಲಿ ಸಾರದಿಂದಲೂ, ಹನದ ಕೆನೆ ಹಾಲಿನಿಂದಲೂ, ಮತ್ತು ವಿಶಿಷ್ಟವಾಗಿ ತಯಾರಿಸಿದ ಕೊಕ್ಕೊವಿನ ಸಾರದಿಂದಲೂ ತಯಾರಿಸಲ್ಪಡಲಾಗಿದೆ. ಇದು ಹಾಲನ್ನು ಹೆಚ್ಚಿಸುತ್ತದೆ. ಅಲ್ಲದೆ ತಾಯಿಯ ಬಲವನ್ನು ಕುಂದಲು ಬಿಡದೆ, ಆರೋಗ್ಯವು ಶೀಘ್ರವಾಗಿ ವೃದ್ಧಿಗೊಳ್ಳುವಂತೆ ಮಾಡುತ್ತದೆ.

OVALTINE

ಮಗುವಿಗೆ ಎದೆಹಾಲು ಕೊಡಲು ಸಹಕಾರಿಯಾಗಿದೆ.

ತಯಾರಿಯಲ್ಲಿ ಕೈಯಲ್ಲಿ ಸ್ಪರ್ಶಿತವಾಗಿಲ್ಲ. ಎಲ್ಲಾ ಕೆಮಿಸ್ಟರಲ್ಲಿಯೂ ಸ್ಟೋರುಗಳಲ್ಲಿಯೂ ದೊರೆಯುತ್ತದೆ,

ಏಜಂಟ್ಸ್—ಜೇಮ್ಸ್ ರೈಟ್ ೩೬ಎ ರಿಪನ್ ಸ್ಟ್ರೀಟ್, ಕಲ್ಕತ್ತಾ ಮತ್ತು ಬೊಂಬಾಯಿ, ಮದ್ರಾಸ್

OV/191

ದೇವರಾಣೆ ಹಾಕಿ ಕೃಷ್ಣಪ್ಪನಿಗೆ ಕೊಡುವೆನೆಂದಿದ್ದ ವೋಟನ್ನು ಬೂತಿನೊಳಗೆ ದೂಮಪ್ಪನಿಗೆ ಕೊಟ್ಟವರೂ ಇದ್ದಾರೆ. ರಾಮಪ್ಪನಿಗೆ ವೋಟು ಕೊಡುವೆನೆಂದು ಹೇಳಿ, ನೋಟು ಪಡೆದು ರಂಗಪ್ಪನಿಗೆ ವೋಟು ಕೊಟ್ಟ ದೇವರ ಮಕ್ಕಳೂ ಇದ್ದಾರೆ! ಕೌನ್ಸಿಲು ಚುನಾವಣೆಯೆಂದರೆ ಸುಳ್ಳಿನ ಮಾತು ಮುರಿಯುವ ಉದಯ ಕಾಲವೋ?

* * *

ಮುದುಕಿಯೊಬ್ಬಳನ್ನು ಮುನಿಸಿಪಲ್ ಆಫೀಸಿಗೆ ಮೋಟರಿನಲ್ಲೊಯ್ದು ಅವಳ ವೋಟು ಪಡೆದಾದ ಮೇಲೆ ಅವಳನ್ನು ಮುನಿಸಿಪಲ್ ಕಟ್ಟೋಣದ ಬಳಿ ನಿಲ್ಲಿಸಿ ಅವಳನ್ನು ಮರಳಿ ಪುಣ್ಯಾತ್ಮರೂ ಮೊದಲಿನ ಕಾಲದಲ್ಲಿದ್ದರು. ಈಗ ಅಂತಹವರಿಲ್ಲದಿರುವುದು ನಮ್ಮ ಭಾಗ್ಯವೆನ್ನೋಣ!

* * *

ಅಂತೂ ವೋಟು ಮುಗಿಯಿತು. ಇದರ ಪರಿಣಾಮವೇನೆಂದ ಬರುವ ವಾರವೇ ಹೇಳುವೆ.

ಮುಂದೆ ಒಂದು ಪದಾ—

ಊರೆಲ್ಲಾ ವೋಟು!
ಹಾಳಾಯ್ತು ಕೋಟು!
ಹರಿಯಿತಯ್ಯ ನೋಟು!
ಬಿದ್ದು ಹೋಯ್ತು ಹೇಟು!
ವೋಟುಬಿತ್ತು ಲೇಟು!
ಮುಖಕ್ಕೊಂದು ಗೀಟು!
ಕೌನ್ಸಿಲಿಂಗೆ ವೋಟು!

'ಸಾಯ್ನ'

Karnataka Chemical and Pharmaceutical Works, Ltd , Udipi. (South India)

ಕುಂಭಕೋಣದಲ್ಲಿಯೂ ಮಧುರೆಯಲ್ಲಿಯೂ ಮೈಸೂರಿನಲ್ಲಿಯೂ ಸುವರ್ಣ ಪದಕಗಳನ್ನು ಪಡೆದಿರುವ

ಕರ್ಣಾಟಕ ಕೆಮಿಕಲ್ ಎಂಡ್ ಫಾರ್ಮಸ್ಯೂಟಿಕಲ್ ವರ್ಕ್ಸ್, ಲಿಮಿಟೆಡ್, ಉಡುಪಿ. (ದಕ್ಷಿಣ ಹಿಂದೂಸ್ಥಾನ)

ನಮ್ಮಲ್ಲಿ ಟಿಂಕ್ಚರ್ಸ್ ವಗೈರೆ ಎಲ್ಲಾ ಎಲ್ಲೋಪತಿಕ್ ಔಷಧ ದ್ರವ್ಯಗಳೂ, ಆಯುರ್ವೇದಿಯ ಔಷಧಿಗಳೂ, ಟ್ವಾಲೆಟ್ ಸಾಮಗ್ರಿಗಳೂ, ಸಾಬೂನುಗಳೂ, ಫೌಂಟನ್ ಪೆನ್ ಶಾಯಿಗಳೂ ತಯಾರಿಸಲ್ಪಡುತ್ತವೆ

ದ್ರಾಕ್ಷಾಸವ, ಪ್ರಸೂತಿ ಸಂಜೀವನ, ನಿಯೊವಿಗರ್, ಸ್ನೋ,
ಕ್ಷೀರಬಲಾ, ಕಾರ್ಬೊಫ್ಲೋಜಿಸ್ಟಿನ್, ಯುಟೇರಿನಾ, ಇಂಕ್ಸ್

ಮೆನೇಜಿಂಗ್ ಡೈರೆಕ್ಟರ್—ವೆಂಕಟರಾಯ ಅಪ್ಪಾಪ್ಪ ಬಾಳಿಗ

ಹೆಡ್ ಆಫೀಸು.
ಉಡುಪಿ. (ದಕ್ಷಿಣ ಹಿಂದೂಸ್ಥಾನ)

ಬ್ರೇಂಚ ಆಫೀಸು
ದೇವಕರಣ ಮೆನ್ಶನ್, 45 ಪ್ರಿನ್ಸೆಸ್ ಸ್ಟ್ರೀಟ್, ಬೊಂಬಾಯಿ ನಂ. 2.

ಪಶ್ಚಿಮ ಕರಾವಳಿ ಮತ್ತು ಮೈಸೂರು ಪ್ರಾಂತ್ಯಗಳ ಪ್ರಾಮುಖ್ಯ ಏಜಂಟರು:—

ಕರ್ಣಾಟಕ ಪ್ರೊಡಕ್ಟ್ಸ್ ಡಿಸ್ಟ್ರಿಬ್ಯೂಟಿಂಗ್ ಕಂಪೆನಿ, ಮಂಗಳೂರು.

ಅನುಕ್ರಮಣಿಕೆ.

ಅಗ್ರಲೇಖ
ಮಹಾತ್ಮಾಜಿಯವರ ಸ್ಪಷ್ಟೋಕ್ತಿ. . . . ೩
ಸ್ಫುಟವಿಚಾರಗಳು . . ೫
ಟೀಕೆಗಳು . . . ೪
ವರ್ತಮಾನ ಸಂಗ್ರಹ . . ೫
ವಿವಿಧ ಸಮಾಚಾರಗಳು . . ೧೧
ಪತ್ರವ್ಯವಹಾರ . . . ೧೩
ತೀರು! . . . ೨
ಮಂಗಳೂರು . . . ೯
ಗ್ರಾಮ ೬
ಗರ್ಭಿಣಿಯರು ಹೇಗಿರಬೇಕು. . . ೮
ಶ್ರೀಮಂತರ ವಿಲಾಸ ವಸ್ತು. . . ೧೦

ಸ್ವದೇಶಾಭಿಮಾನಿ.

ತಾ-೨೮ನೇ ಶುಕ್ರವಾರ ಸಪ್ಟಂಬರ ೧೯೩೪

ಮಹಾತ್ಮಾಜಿಯವರ ಸ್ಪಷ್ಟೋಕ್ತಿ.

ಮಹಾತ್ಮಾಜಿಯವರು ಸುದೀರ್ಘವಾದ ಒಂದು ಪ್ರಕಟಣೆಯನ್ನು ಕೊಟ್ಟು,–ಕಾಂಗ್ರೆಸ್ಸಿನಲ್ಲಾಗಬೇಕಾದ ಕೆಲವೊಂದು ತಿದ್ದುಪಡಿಗಳ ಸೂಚನೆಗಳನ್ನು ಮುಂದಿಡುತ್ತ, ಅವುಗಳು ಸ್ವೀಕಾರ್ಯವಾಗುವ ಸಂಭವದಲ್ಲಿ ತಾನು ಕಾಂಗ್ರೆಸ್ಸು ಚಟುವಟಿಕೆಗಳಿಂದ ನಿವೃತ್ತನಾಗದೆ ಉಳಿಯಬಹುದೆಂಬ ಅಭಿಪ್ರಾಯವನ್ನು ಸ್ಪಷ್ಟೀಕರಿಸಿರುವರು. ಅವರ ಪ್ರಕಟಣೆಯಿಂದ ಹಲವರಿಗೆ ದುಃಖವೂ, ಅನೇಕರಿಗೆ ಸಂದೇಹ ಮಾನಸಿಕತೆಯೂ ಉಂಟಾಗಿದೆಯೆನ್ನಬಹುದು. ಅವರಾಡಿದ ಪ್ರತಿಯೊಂದು ನುಡಿಯೂ ಸತ್ಯದಿಂದ ಪ್ರಕಾಶಿತವಾಗಿದೆ ಅಂತೇ ಪ್ರತಿಯೊಂದರಲ್ಲೂ ವೇದನೆಯ ದನಿಯು ಕೇಳಬರುತ್ತಿದೆ

ಮಹಾತ್ಮಾಜಿಯವರ ಜೀವನವು ಸತ್ಯಶೋಧನೆಗಾಗಿಯೇ ಇದೆ ಅವರು ಸಾರ್ವಜನಿಕ ಚಟುವಟಿಕೆಗಳಲ್ಲಿ ಪ್ರವೇಶಿಸುವಾಗಲೇ ಸತ್ಯಶೋಧನೆಯನ್ನೆ ಮುಖ್ಯ ಧ್ಯೇಯವನ್ನಾಗಿ ಇಟ್ಟುಕೊಳ್ಳುತ್ತ, ಅಂದಿನಿಂದತ್ತ ತಮ್ಮ ಸ್ವಾರ್ಥತ್ಯಾಗ, ಪವಿತ್ರಾಚರಣೆ, ಅಹಿಂಸಾವ್ರತಪಾಲನೆಗಳಿಂದಲೇ ತಮ್ಮ ವಿಶ್ವಧರ್ಮವನ್ನು ಪ್ರಚಾರಗೊಳಿಸಿ ಮುಂತರಲು ಸಮರ್ಥರಾದರು ನುಡಿದಂತೆ ನಡೆನವರೆಂಬುದರಿಂದಲೇ ಅವರಿಂದು ... ಹೃದಯಾಕಾಶದಲ್ಲಿ ಮೆರೆಯುತ್ತಿರುವವರು. ಅದುವೇ ಅವರನ್ನು ಕಾಂಗ್ರೆಸ್ಸಿನ 'ಸರ್ವಾಧಿಕಾರಿ'ಯನ್ನಾಗಿ ಮಾಡಿತು ಆದರೆ, ಇಂದು ಗಾಂಧಿಜಿಯವರು ಸಂದೇಹಾಸ್ಪದ ವ್ಯಕ್ತಿಯಲ್ಲಿರುವುದು ಅಸಾಧ್ಯವೂ ಅನುಚಿತವೂ ಎಂದು ಮನಗಂಡು ಈ ಪ್ರಕಟಣೆಯನ್ನು ಕೊಟ್ಟಿರುವರು. ಅವರ ವ್ಯಕ್ತಿತ್ವವು ಇತರ ಮುಖಂಡರನ್ನು ಆಚ್ಛಾದಿಸಿ, ಅವರು ಗಾಂಧಿಜಿಯವರನ್ನು ಮೌನವಾಗಿ ಹಿಂಬಾಲಿಸುವಂತೆ ಮಾಡಿದುವು ಹಲವರ ಹಲವು ಅಭಿಪ್ರಾಯಗಳು ಯಾವುದಾದರೊಂದು ಕಾರ್ಯ ಯಾ ಸಂಸ್ಥೆಯು ಸುಗಮವಾಗಿ ನಡೆವಲ್ಲಿ ಆತಂಕವಾಗುವುವು, ನಾಯಕನನ್ನು ಮೌನವಾಗಿ ಹಿಂಬಾಲಿಸಿದಲ್ಲದೆ ಯಾವ ಸಾಮುದಾಯಿಕ ಚಳವಳವೂ ಯಶಸ್ವಿಯಾಗಲಾರದು ಪರಂತು, ನಾಯಕನ ಆದರ್ಶವನ್ನು ಕಾರ್ಯತಃ ಪೂರ್ಣವಾಗಿ ವ್ಯಕ್ತಪಡಿಸಲಾರದ ಅಥವಾ ಒಪ್ಪಲಾರದ ಅನುಯಾಯಿಗಳಿರುವರಾದರೆ ನಾಯಕನ 'ಸರ್ವತಂತ್ರ ಸ್ವಾತಂತ್ರ್ಯ'ವೆಂಬುದು ಕೇವಲ ಪ್ರಹಸನವೆನಿಸುವುದೆಂದೂ, ಇಂತಹ ಪರಿಸ್ಥಿತಿಯಲ್ಲಿ ತಾನು ಕಾಂಗ್ರೆಸ್ಸಿನಲ್ಲಿರುವುದು ಅನುಕೂಲವೆನಿಸುವ ಬದಲಾಗಿ ಆತಂಕವೆಂದೂ ಗಾಂಧಿಜಿಯವರು ನುಡಿಯುವರು. ಇದನ್ನು ಸರಕಾರ ಪಲ್ಲಭಭಾಯಿ ಮೊದಲಾದ ಅನೇಕ ಮುಖಂಡರು ಒಪ್ಪಿರುವರು. ಗಾಂಧಿಜಿಯವರು ಮುಂದಿಡುವ ಶರ್ತಗಳಲ್ಲಿ (ಅಥವಾ ಸೂಚನೆಗಳಲ್ಲಿ) ಸತ್ಯ ಮತ್ತು ಅಹಿಂಸೆ, ಖಾದಿಧಾರಣೆ, ಸತ್ಯಾಗ್ರಹ, ಅಸ್ಪೃಶ್ಯತಾ ನಿವಾರಣೆ– ಇವುಗಳೇ ಪ್ರಾಮುಖ್ಯವಾಗಿವೆ. ಈ ಮೇಲಿನ ವಿಷಯಗಳಲ್ಲಿ ಅವರಿಗೆ ಪೂರ್ಣ ನಂಬಿಗೆಯಿದೆ. ಅದನ್ನಾರೂ ತರ್ಕಿಸಹೋಗುವುದು ನಿರರ್ಥಕವೇ ಆಗಿದೆ ಇವುಗಳ ಹೊರತಾಗಿ ಅವರಿಗೆ ಜೀವನದಲ್ಲಿ ಮತ್ತಾವ ಆಸಕ್ತಿಯೂ ಇರದೆಂದು ಹೇಳಬಹುದು ಇವುಗಳನ್ನು ಸ್ವೀಕರಿಸುವುದರಿಂದ ಮಾತ್ರ ಕಾಂಗ್ರೆಸ್ಸಿನವರು ಗಾಂಧಿಜಿಯವರ ಸೇವೆಯನ್ನು ಪಡೆಯಬಹುದಾಗಿದೆ. ಆದರೆ, ಇವುಗಳೆಲ್ಲವನ್ನು ಅಂಗೀಕರಿಸುವುದೂ ಆಚರಣೆಯಲ್ಲಿ ತರುವುದೂ, ಮಾತ್ರ ಕೆಲವೇ ಮಂದಿಗೆ ಸಾಧ್ಯವೆಂದು ತೋರುವುದು ಕಳೆದ ಹದಿನೈದು ವರ್ಷಗಳ ಚರಿತ್ರವು ಇದನ್ನು ಸ್ಪಷ್ಟೀಕರಿಸಿದೆ ಆ ಹದಿನೈದು ವರ್ಷಗಳ ಇತಿಹಾಸವನ್ನು ವಿಮರ್ಶಿಸಿಯೇ ಗಾಂಧಿಜಿಯವರು ಇಂದು ತಮ್ಮ ಸ್ವೈರಣೆಯನ್ನು ಕಳಕೊಂಡು, ತಮ್ಮ ಸೂಚನೆಗಳನ್ನು ಶರ್ತಗಳ ರೂಪದಲ್ಲಿ ಮುಂದಿಟ್ಟಿರುವರು

ಅಹಿಂಸೆಯ ವಿಚಾರವಾಗಿ ಹೇಳುವುದಾದರೆ, ಕಾಂಗ್ರೆಸ್ಸು ಅದನ್ನು ಸ್ಥೂಲವಾಗಿ ತನ್ನ ಧೋರಣೆಯೆಂದು ಸ್ವೀಕರಿಸಬಹುದು ಪರಂತು, ಕಾಂಗ್ರೆಸ್ ಕೆಲಸಗಾರರೆಲ್ಲ ಆದನ್ನ ಅಹಿಂಸಾವ್ರತಪಾಲಕರಾಗಿಯೇ ಇರುವರೆಂದು ಹೇಳಲಾಗುವುದಿಲ್ಲ ಪ್ರಪಂಚದ ಬೇರೆ ಬೇರೆ ದೇಶಗಳ ಘಟನೆಗಳನ್ನೋದುತ್ತಿರುವ ಹಲವರಿಗೆ ಇಂದು ಅಹಿಂಸೆಯಲ್ಲಿ ವಿಶ್ವಾಸ ಕಳೆದು ಹೋಗುತ್ತಿದೆಯೋ ಎಂಬ ಅಂಜಿಕೆಯುಂಟಾಗಿದೆ ಯಾರೂ, ಎಂದಾದರೊಮ್ಮೆ ತಾವು ಹಿಂಸೆಗೆ ಪ್ರೇರೇಪಿಸಲ್ಪಡದಿರಲಾರೆವೆಂಬುದನ್ನು ಧೈರ್ಯವಾಗಿ ಹೇಳಲಾರರು. ಚರಕದ ವಿಷಯದಲ್ಲಿ ಗಾಂಧಿಜಿಯವರ ಶರ್ತವು ಸ್ವೀಕಾರ್ಯವಾಗುವುದು ಸಂದೇಹಾಸ್ಪದ ವಿಷಯವು ಬಹು ಸಂಖ್ಯಾಕರು ಇಂದು ಖಾದಿಯ ಮೇಲಣ ವಿಶ್ವಾಸವನ್ನು ಕಳಕೊಂಡವರೆಂಬುದನ್ನು ಗಾಂಧಿಜಿಯವರೇ ಒಪ್ಪುವರು ಗಿರಣಿನೂಲಿನ ಮುಂದೆ ಖಾದಿಯು ತಲೆಯೆತ್ತುವುದು ಸದ್ಯಃ ಸಂಭವನೀಯವಲ್ಲವೆಂದು ತೋರುತ್ತಿದೆ. ಕೈನೂಲಿನ ಕೈಮಗ್ಗದ ತತ್ವವನ್ನು ಇಂದು ಯಾರೂ ವಿರೋಧಿಸಹೋಗುವುದಿಲ್ಲ, ಆದರೆ, ಅದನ್ನು ಆಚರಣೆಯಲ್ಲಿ ತರುವವರು ಮಾತ್ರ ಕಡಿಮೆಯೆಂಬುದು ಸೋಜಿಗವು ತಿಂಗಳಿಗೆ ಇಂತಿಷ್ಟು ನೂಲನ್ನು ತಂದೊಪ್ಪಿಸುವವನೇ ಕಾಂಗ್ರೆಸ್ ಸದಸ್ಯತನಕ್ಕೆ ಬಾಧ್ಯಸ್ಥನೆಂಬ ಮಹಾತ್ಮಾಜಿಯವರ ಸೂಚನೆಯು ಈಗಾಗಲೇ ಹಲವರಿಂದ ವಿರೋಧಿಸಲ್ಪಟ್ಟಿದೆ ಕಾಂಗ್ರೆಸ್ ಕೆಲಸಗಾರರೆಲ್ಲ ನೂಲತ್ತಿರಲೇಬೇಕೆಂಬ ಮಹಾತ್ಮಾಜಿಯವರ ಅಪೇಕ್ಷೆಯೂ ಫಲಿತಕ್ಕೆ ಬರಬಹುದೆಂದು ಹೇಳಲಾಗುವುದಿಲ್ಲ.

ಅಸ್ಪೃಶ್ಯತಾ ನಿವಾರಣೆಯ ವಿಚಾರವೂ ದೊಡ್ಡ ಸಮಸ್ಯೆಯಾಗಿದೆ ಅಸ್ಪೃಶ್ಯರ ಉದ್ಧಾರವಾಗಬೇಕೆಂಬವರು ನಮಗೆ ಬಹು ಸಂಖ್ಯೆಯಲ್ಲಿ ದೊರೆಯಬಹುದು ಆದರೆ, ಅವರ ಆರ್ಥಿಕ, ಸಾಮಾಜಿಕ, ರಾಜಕೀಯ ಸ್ಥಿತಿಗತಿಗಳ ಸುಧಾರಣೆಯ ಕಡೆಗೆ ಮಾತ್ರ ಬಹುಮತ ದೊರೆವುದಲ್ಲದೆ, ದೇವಾಲಯ ಪ್ರವೇಶದಂತಹ ಪ್ರಸಂಗಗಳಲ್ಲಿ ಹೆಚ್ಚಿನ ವಿರೋಧವೇ ಪ್ರಕಟವಾಗುವುದೂ, ಇದರಿಂದ ಆ ಚಳವಳಕ್ಕೆ ಸಹಾಯವಾಗುವ ಬದಲಾಗಿ ಅಪಕಾರವಾಗುವುದೂ ಅಸಂಭವನೀಯವಲ್ಲ

ಇನ್ನು ಕಾಂಗ್ರೆಸ್ಸಿನ ವಿಚಾರ ಗಾಂಧಿಜಿಯವರು ಸಂಖ್ಯೆಗೆ ಪ್ರಾಮುಖ್ಯತೆ ಕೊಡುವುದಿಲ್ಲ ಅವರಿಗೆ ಕಾರ್ಯಕುಶಲರಾದ ಕೆಲವೇ ಮಂದಿ ಇದ್ದರೂ ಸಂತುಷ್ಟಿಯಿದೆ ಪರಂತು, ಕಾಂಗ್ರೆಸ್ಸಿನಂತಹ ಸಂಸ್ಥೆಯು ಸಾಮುದಾಯಿಕ ಸಹಕಾರ, ಸಹಾನುಭೂತಿಗಳಿಲ್ಲದೆ ರಾಜಕೀಯ ಹೋರಾಟದಲ್ಲಿ ಮುನ್ನಡೆಯಲಾರದು ಕಾಂಗ್ರೆಸ್ಸಿಗೆ ಕಾರ್ಯಕುಶಲರೂ ಬೇಕು; ಸಹಾನುಭೂತಿಯುಳ್ಳವರ ಆಧಾರವೂ ಅವಶ್ಯ. ಅದನ್ನು ಖಾದಿಧಾರಣೆ–'ನೂಲಿನ ಸದಸ್ಯತನ' ಇವುಗಳ ಶರ್ತದಿಂದ ಸಂಖ್ಯಾಬಲಕುಂದಿಸುವುದು ವಿಹಿತವಲ್ಲ.

ಈ ಮೇಲಿನ ವಿಚಾರಗಳೆನ್ನೆಲ್ಲ ವಿಮರ್ಶಿಸಿದರೆ ಗಾಂಧಿಜಿಯವರ ಸೂಚನೆಗಳು ಸ್ವೀಕರಿಸಲ್ಪಡುವ ಭರವಸೆಯು ತೋರುವುದಿಲ್ಲ ಅದರಲ್ಲಿ ಒಂದಂಶವನ್ನಾದರೂ ಕಾಂಗ್ರೆಸ್ಸು ಒಪ್ಪದೆ ಹೋದರೆ ಗಾಂಧಿಜಿಯವರು ನಿವೃತ್ತರಾಗುವರೆಂದೇ ತೋರುವುದು ಗಾಂಧಿಜಿಯವರಂತಹ ಶಾಂತಶೀಲ ಮುತ್ಸದ್ದಿಗಳನ್ನು ಕಳಕೊಳ್ಳುವುದರಿಂದ ಕಾಂಗ್ರೆಸ್ಸಿನ ಬಲವು ಕುಂದುವುದೆಂದು ಮಾತ್ರ ಹೇಳಬರುವುದಿಲ್ಲ ಕಾರಣ, ಗಾಂಧಿಜಿಯವರು ತಮ್ಮ ಧರ್ಮವನ್ನು ಕಾಂಗ್ರೆಸ್ಸಿನ ಹೊರಗೆ ಇದ್ದೂ ಪ್ರಚಾರಗೊಳಿಸಬಹುದು, ಕಾಂಗ್ರೆಸ್ಸು ತನಗೆ ಸರಿದೋರಿದಂತೆ ಹೊಸ ಹಾದಿಯನ್ನು ಕಂಡುಕೊಂಡು ಇತರ ಮುಖಂಡರ ನೇತೃತ್ವದಲ್ಲಿ ಮುನ್ನಡೆಯಬಹುದು

ಗಾಂಧಿಜಿಯವರ ಪ್ರಕಟಣೆಯ ದೆಸೆಯಿಂದಾಗಿ ಈ ವರ್ಷದ ರಾಷ್ಟ್ರಸಭಾಧಿವೇಶನವು ಅತಿ ಮಹತ್ವದ್ದಾಗಿದೆ ಆ ಪ್ರಕಟಣೆಯ ಇತ್ಯರ್ಥವೇನಾಗುವುದೋ ಕುತೂಹಲದಿಂದ ನಿರೀಕ್ಷಿಸುತ್ತಿರುವ

ಸ್ಫುಟ ವಿ ಚಾ ರ ಗ ಳು.

ಇದು ಯಾರಿಗೆ ಬೇಕು?

ನಿರುದ್ಯೋಗಿಗಳ ಸಂಖ್ಯೆಯು ಹಿಂದೂ ದೇಶದಲ್ಲಿ ಹೆಚ್ಚುತ್ತಿದೆಯೆಂದು ದೇಶದಲ್ಲಿ ಕೂಗು ಎದ್ದಿದೆ ಶಾಲಾ ಕಾಲೇಜುಗಳಿಂದ ವರ್ಷಪ್ರತಿ ಸಾವಿರಾರು ವಿದ್ಯಾರ್ಥಿಗಳು ಹೊರಬಿದ್ದು ಬೀದಿ ಬೀಗಾರಿಗಳಂತೆ ತಿರುಗಾಡುತಿದ್ದಾರೆಂದು ಜನರ ಪೇಚಾಟಾರಂಭವಾಗಿದೆ ಆದರೇನು? ಬೆಂಕಿಯ ಮಧ್ಯೆ ನಿಂತು ಬೊಬ್ಬಿಡುವವನಂತೆ ದೇಶವು ನಿರುಪಾಯವಾಗಿ, ಕಂಗಾಣದೆ, ಕಂಗೆಟ್ಟು ತತ್ತರಿಸುತ್ತಿದೆ ಇಷ್ಟಾದರೂ ನಿರುದ್ಯೋಗ ಸಮಸ್ಯೆಯ ಭಂಜಕಾಳಿಗರಿಂದಾಗಲಿ ಸರಕಾರದಿಂದಾಗಲೀ ಕೃಪಾಪೂರ್ಣವಾಗಿ ಕಾಣಲ್ಪಟ್ಟ ಚಿಹ್ನೆಗಳು ಕಂಡ ಬರುವುದಿಲ್ಲ ವಿದೇಶಗಳಲ್ಲಿ ಅರ್ಥಶಾಸ್ತ್ರಜ್ಞರು ಈ ಸಮಸ್ಯೆಯ ಪರಿಹಾರಾರ್ಥ ಸಾಧಿಸುತ್ತಿರುವರು ಆದರೆ ಹಿಂದೂದೇಶದಲ್ಲಿದು ಯಾರಿಗೆ ಬೇಕು? ನಿರುದ್ಯೋಗಿಗಳಿಷ್ಟೆಂದು ನೋಡಲು ಒಂದು ಖಾನೆಸುಮಾರಿಯನ್ನೂ ತೆಗೆಯಲು ಚಿತ್ತವಿಡದ ಸರಕಾರವು ದೇಶದ ದಾರಿದ್ರ್ಯವನ್ನು ದೂರೀಕರಿಸಲು ಸಶಕ್ತವಾಗುವುದೇ?

ಸರಕಾರವಾದುದರಿಂದ ಇದರಲ್ಲೊಂದು ನೀತಿಯಿರಬಹುದು.

ಕಳೆದ ತಿಂಗಳಲ್ಲಿ ಪಂಡಿತ ಜವಾಹರಲಾಲರ ಪತ್ನಿಯವರ ದೇಹಸ್ಥಿತಿಯು ನಿರಾಶಾಜನಕವಾದ ಪರಿಣಾಮವಾಗಿ, ಪಂಡಿತ ಜವಾಹರಲಾಲರನ್ನು ಕೆಲವು ದಿನಗಳ ಅವಧಿಗೆ ಬಿಡುಗಡೆ ಮಾಡಿದುದೂ, ಶ್ರೀಮತಿಯವರ ಸ್ಥಿತಿಯು ಕಿಂಚಿತ್ತು ನೆಟ್ಟಗಾದೊಡನೆ ಸರಕಾರವು ಜವಾಹರಲಾಲರನ್ನು ಪುನಃ ಬಂಧಿಸಿದುದೂ ಪ್ರಕಟವಾಗಿದೆ ಮೊನ್ನೆ ಪುನಃ ಶ್ರೀಮತಿ ಕಮಲಾನೆಹರುರವರ ರೋಗವು ಉಲ್ಬಣಗೊಂಡಿತು ಇದನ್ನು ತಿಳಿದ ಸರಕಾರವು ಜವಾಹರಲಾಲರನ್ನು (ಪೋಲೀಸ ಪಹರೆಯೊಡನೆ) 'ಆನಂದಭವನ'ಕ್ಕೆ ಕರೆದೊಯ್ದು, ಹಾಸಿಗೆ ಹಿಡಿದಿದ್ದ ಕಮಲಾನೆಹರುರವರ ದರ್ಶನ ಲಾಭವನ್ನು ಅವರಿಗೆ ಕೊಟ್ಟು, ಮೂರೇ ಮೂರು ತಾಸುಗಳೊಳಗೆ ಅವರನ್ನು ಪುನಃ ಸೆರೆಗೊಯ್ದರು ಸಂಯುಕ್ತ ಪ್ರಾಂತ್ಯದ ಸರಕಾರವಾಗಿರುವುದರಿಂದ ಇದರಲ್ಲೊಂದು ನೀತಿಯಿರಬಹುದು ಅದಾವ ನೀತಿಯೆಂದು ಇನ್ನು ತಿಳಿಯಲಿದೆ.

ಬೆಕ್ಕು ಸನ್ಯಾಸಿಯಾಗಿದೆ!

ಆಶ್ಚರ್ಯಕರ ವರ್ತಮಾನವಿದು ರಷ್ಯವು ಜನಾಂಗಸಭೆ (ಲೀಗ್ ಒಫ್ ನೇಶನ್ಸ್)ಗೆ ಸೇರಿತೆಂಬುದು. ಈ ವಾರ್ತೆಯನ್ನು ಕೇಳಿದ ಇಂಗ್ಲಾಂಡು ನಿದ್ರಿಸಿರುವುದಿಲ್ಲ; ಫ್ರಾನ್ಸ್ ಆಶ್ಚರ್ಯದಿಂದ ಬೆಪ್ಪಾಗಿದೆ; ಇಟೆಲಿಯು ಬೆರಗಾಗಿದೆ; ಜರ್ಮನಿಯು ವ್ಯಂಗ್ಯವಾಗಿ ನಗುತ್ತಿದೆ ದಿನೇ ದಿನೇ ಅಸ್ತ್ರ ಶಸ್ತ್ರಗಳ ರಾಶಿಗಳನ್ನು ಹೆಚ್ಚಿಸುತ್ತಿರುವ ರಷ್ಯದ ಬೆಕ್ಕು ಥಕ್ಕನೆ ಸನ್ಯಾಸಿಯಾಯಿತೇಕೆ? ರಷ್ಯವು ಇಷ್ಟು ಸುಲಭದಲ್ಲಿ ಒಳ ಪ್ರವೇಶಿಸಿತೇಕೆ? ಎಂಬ ವಿಚಾರಗಳು ವಿಕ್ಕಳಿದವರ ಮೆದುಳನ್ನು ಕೊರೆಯುತ್ತಿವೆ 'ನನಗೆ ಶಸ್ತ್ರಗಳು ಬೇಡ'ವೆಂದು ರಷ್ಯವು ಹೇಳಿರುವುದನ್ನು ಕೇಳಿದ ಪಟುಗಳಿಗೆ ಮಾರ್ಜಾಲ ಸನ್ಯಾಸಿಯು 'ನಾನು ಇಲಿಗಳನ್ನು ತಿನ್ನುವುದನ್ನು ಬಿಟ್ಟಿರುವೆನು' ಎಂದುದು ಸ್ಮರಣೆಗೆ ಬರಬಹುದು

ಇದರರ್ಥವು ಸುಲಭ ಗ್ರಾಹ್ಯವಲ್ಲ!

ಖಾನ್ ಅಬ್ದುಲ್ ಗಫರ್ ಖಾನರು ತನ್ನ ಜನ್ಮಭೂಮಿಯಾದ ಗಡಿನಾಡಿಗೆ ಪ್ರವೇಶಿಸಬಾರದೆಂದು ಅಲ್ಲಿಯ ದೊರೆತನವು ಕಟ್ಟಪ್ಪಣೆ ಮಾಡಿದುದಲ್ಲದೆ, ಅಲ್ಲಿಯ ಕಾಂಗ್ರೆಸ್ಸಿನ ಕೆಂಪಂಗಿಯವರ ಮಂಡಲಿಯನ್ನು ಬಹಿಷ್ಕರಿಸಲಾಗಿದೆ ರಾಷ್ಟ್ರೀಯ ವಾದಿಗಳ ಆಚರಣೆಗಳನ್ನು ಹೀಗೆ ನಿರ್ಬಂಧಿಸಿಟ್ಟು, ನ್ಯಾಯವಿಧಾಯಕ ಸಭೆಯ ಚುನಾವಣಾ ಕೆಲಸಗಳನ್ನು ಅಧಿಕಾರಿಗಳು ಮುಂದರಿಸುತಿದ್ದಾರೆ ಇದರ ಮೇಲೆ 'ಶಾಂತಿಶಾಸನ'ವನ್ನು ಪುನಃ ಆರು ತಿಂಗಳಿಗೆ ಮುಂದರಿಸಿಟ್ಟಿರುವರು ಈ ದ್ವಿಮುಖ ನ್ಯಾಯದ ಅರ್ಥವು ಸುಲಭಗ್ರಾಹ್ಯವಲ್ಲ ಆದರೂ, ಗಡಿನಾಡಿನ ಪ್ರಾಂತಿಕ ಕಾಂಗ್ರೆಸ್ ಕಮಿಟಿಯ ಕಾರ್ಯದರ್ಶಿಯವರಾದ ಸರ್ದಾರ್ ರಾಮ್ ಸಿಂಘರವರು 'ಇದು ರಾಷ್ಟ್ರೀಯ ವಾದಿಗಳ ಬಲವನ್ನು ಮುರಿಯಲಿರುವ ಹಂಚಿಕೆ'–ಎಂದು ಹೇಳಿದುದಕ್ಕೆ 'ಹೌದೆ'ನ್ನುವವರು ಅಧಿಕ ಸಂಖ್ಯೆಯಲ್ಲಿರುವರು

ಒಳಗಿನ ಗುಟ್ಟು'

ಭಗೀರಥ ಪ್ರಯತ್ನಮಾಡಿ, ಸಾವಿರಗಟ್ಟಳೆ ರೂಪಾಯಿಗಳನ್ನು ವೆಚ್ಚಮಾಡಿ, ವೋಟುಗಳನ್ನು ಪಡೆದು ದೇಶದ ಪ್ರತಿನಿಧಿಗಳು ನ್ಯಾಯವಿಧಾಯಕ ಸಭೆಗಳನ್ನು ಪ್ರವೇಶಿಸುತ್ತಾರೆಂಬುದು ಸರ್ವವಿದಿತ ವಿಷಯ ಆದರೇನು? ದೇಶ ಹಿತಸಾಧಕವಾದ ಒಂದು ಶಾಸನವನ್ನಾದರೂ ಸುಲಭದಲ್ಲಿ ಹೊರತರುವ ಕೆಲಸವು ನಮ್ಮ ಪ್ರತಿನಿಧಿಗಳಿಂದಾಗುವುದಿಲ್ಲ ಇದಕ್ಕೆ ಕಾರಣವೇನೆಂದು ದೇಶಿಗರು ತರ್ಕಿಸುವುದು ಅಸ್ವಾಭಾವಿಕವಲ್ಲ ಆದರೆ, ಒಳಗಿನ ಗುಟ್ಟು ಬೇರೆಯೇ ಇದೆ ಇದನ್ನು ಸರ್ ಅಬ್ದುರ್ ರಹಿಮರು ಮೊನ್ನೆ ಹೀಗೆಂದು ಬಯಲುಗೊಳಿಸಿರುವರು–'ದಿಲ್ಲಿಯಲ್ಲಾಗಲೀ, ಸಿಮ್ಲಾದಲ್ಲಾಗಲೀ, ಸಭೆ ಜರಗೋಣದ ಸಮಯದಲ್ಲಿ ಸದಸ್ಯರ ಹಾಜರಾತಿಯೇ ಕಡಿಮೆ! ನಮ್ಮ ಸದಸ್ಯರು ನ್ಯಾಯವಿಧಾಯಕ ಸಭೆಗಳಿಗೆ ತಪ್ಪದೆ, ಅಧಿಕಸಂಖ್ಯೆಯಿಂದ ಬರುತಿದ್ದರೆ, ನಡೆದ ಅನೇಕ ಅಧಿವೇಶನಗಳಲ್ಲಿ ನಾವು ನಮ್ಮ ಶಕ್ತಿಯನ್ನು ಸರಕಾರಕ್ಕೆ ತಿಳುಹಿಸಬಹುದಿತ್ತು' ಕೌನ್ಸಿಲ್ ಮೆಂಬರರು ರಹಿಮರ ಮಾತಿನ ಅರ್ಥವನ್ನು ತಿಳಿಯುವರೇ?

ದಸರಾ ಸಂಚಿಕೆ

ಉತ್ತಮ ಮುದ್ರಣ—ವಿವಿಧ ಚಿತ್ರಗಳು.

ಜಾಹೀರಾತಿಗೆ ಮುಖ್ಯ ಕೇಂದ್ರ

?

ಸ್ವದೇಶಾಭಿಮಾನಿ ಆಫೀಸು,

ಮಂಗಳೂರು, ದ. ಕ.

ಲೋಧ್ರಮ್

ಸುಪ್ರಸವಕ್ಕಾಗಿ ದಿವ್ಯ ಟಾನಿಕ್.

ಸ್ತ್ರೀಯರಿಗೊಂದು ಮಹಾ ವರ.

ಯಾವ ತರದ ಅಥವಾ ಎಲ್ಲಾ ತರದ ಮುಟ್ಟು ದೋಷ, ಮುಟ್ಟಾಗುವುದರಲ್ಲಿ ನೋವು, ಅಕ್ರಮ ತರದ ಮತ್ತು ಮುಟ್ಟಾಗದಿರುವಿಕೆ, ಬಿಳಿ ಸೆರಗು, ಗರ್ಭಕೋಶದ ದೋಷ ಅಶುದ್ಧ ಮುಟ್ಟು, ಬಂಜೆತನ, ಸೂತಿಕಾವಾಯು, ಅಶುದ್ಧರಕ್ತ, ಮೇರೆ ದಾಟಿ ಅಥವಾ ಬೇಕಾದಷ್ಟು ಮುಟ್ಟಾಗದಿರುವುದು, ಸ್ತ್ರೀಯರ ಅಂಗಾಂಗಗಳ ಇನ್ನಿತರ ಅನೇಕಾನೇಕ ರೋಗಗಳುಳ್ಳ ಸ್ತ್ರೀಯರನ್ನು ಈ ಔಷಧಿಯು ಸಂಪೂರ್ಣ ಗುಣಗೊಳಿಸಿರುತ್ತದೆ.

ಲೋಧ್ರ

ಎರಡು ಸೈಜಿನಲ್ಲಿ ದೊರೆಯುತ್ತದೆ. ರೂ. 8 ಮತ್ತು 1–10–0

ಕೇಸರಿ ಕುಟೀರಂ

ಇಂಡಿಯನ್ ಕೆಮಿಸ್ಟ್ಸ್ ಮತ್ತು ಡ್ರಗಿಸ್ಟ್ಸ್, ಎಗ್ಮೋರ್ ಮದರಾಸು,

ದಕ್ಷಿಣ ಕನ್ನಡ ಮತ್ತು ಕೊಡಗು ದೇಶದ ಏಜಂಡರು,
ಪೊಪ್ಯುಲರ್ ಸ್ಟೋರ್ಸ್, ಮಂಗಳೂರು.

"ಸ್ವದೇಶಾಭಿಮಾನಿ"ಯ

ಸಾಹಿತ್ಯಸಂಚಿಕೆ

ತಿಂಗಳಿಗೊಂದರಂತೆ ಹೊರಡುವುದು.
ಡೆಮಿ ⅛ ಆಕಾರದ 8 ಪುಟಗಳು.

ವರ್ಷಕ್ಕೆ 96 ಪುಟಗಳ

ಒಂದು ಗ್ರಂಥವೇ ಪುಕ್ಕಟೆಯಾಗಿ ದೊರೆಕುಂತೆ!

ಪ್ರತಿ ಸಾಹಿತ್ಯ ಸಂಚಿಕೆಯಲ್ಲೂ
ಕತೆಗಳು, ಕವನಗಳು
ವಿಮರ್ಶೆ, ಜೀವನಚರಿತೆ
ಸಾಹಿತ್ಯವಿಚಾರ
ಹರಟೆಗಳು

ಪ್ರಸಿದ್ಧ ಲೇಖಕರಿಂದಲೇ ಬರುವುವು.
'ಸ್ವದೇಶಾಭಿಮಾನಿ'ಗೆ ಚಂದಾದಾರರಾಗಿರಿ.

ವಾರ್ಷಿಕ ಚಂದಾ ರೂ. 2 ಮಾತ್ರ.
ಅಂಚೆ ವೆಚ್ಚ ಆಣೆ 13.

ಮೆನೇಜರ್,
ಸ್ವದೇಶಾಭಿಮಾನಿ,
ರಥಬೀದಿ— ಮಂಗಳೂರು.

ಕಿರ್ಲೋಸ್ಕರವು.

ಗುಣ–ಬಾಳಿಕೆಗಳ ಸೂಚಕವು.



ಕಿರ್ಲೋಸ್ಕರ ನೆಲಗಡಲೆ ಸುಲಿಯುವ ಯಂತ್ರಗಳನ್ನು ಪ್ರತಿಷ್ಠಿಸುವುದರಿಂದ,—ಅದರ ಖರ್ಚು ಕಡಿಮೆಯಾದರೂ ಅತ್ಯಧಿಕ ಕೆಲಸವು ಪೂರೈಸಲ್ಪಡುವುದೆಂಬ ಭರವಸೆಯಿದೆ. ಶಾಸ್ತ್ರೀಯವಾಗಿಯೂ ಪೂರ್ಣ ತೃಪ್ತಿಕೊಡುವಂತೆಯೂ ಅವು ರಚಿಸಲ್ಪಟ್ಟಿವೆ.

ಕೈಯಿಂದ ಚಲಿಸುವಂತಹದೂ ವಿದ್ಯುಚ್ಛಕ್ತಿಯಿಂದ ಚಲಿಸುವಂತಹದೂ ಎರಡೂ ಬಗೆಯಿದೆ.

ಸಚಿತ್ರ ಕೆಟಲಾಗು, ಅಪೇಕ್ಷಿಸಿದ್ದಲ್ಲಿ ಕಳುಹಲಾಗುವುದು.

ಕಿರ್ಲೋಸ್ಕರ ಬ್ರದರ್ಸ್ ಲಿಮಿಟೆಡ್,

ಕಿರ್ಲೋಸ್ಕರವಾಡಿ, (ಸತಾರಾ.)

ಡಿಸ್ಟ್ರಿಬ್ಯೂಟರರು:—ಮೆಸರ್ಸ್ ಪೆರ್ರಿ ಎಂಡ್ ಕೊ, ಲಿಮಿಟೆಡ್,
ಮೌಂಟ್ ರೋಡ್, ಮದ್ರಾಸ್.

ಚಾತುಕುಟ್ಟಿ ವೈದ್ಯರ

ವಿಶೂಚಿಕಾ ಸಂಹಾರಿ

Vishuchika Samhari

(PILCO)

ಕೊಲೆರಕ್ಕೆ ದಿವ್ಯೌಷಧ! ಉಪಯೋಗಿಸಿದರೆ ಗುಣ ಖಾತ್ರಿ!
ಕ್ರಯ ಡಬ್ಬಿ 1ಕ್ಕೆ ರೂ. 1–0–0.

ಗುಹ್ಯರೋಗ ನಿವಾರಿಣೀ ತೈಲ

Anti-Venereal Oil

(A. V. Oil)

ಗುಹ್ಯರೋಗ ನಿವಾರಣೆಗೆ ಅಮೋಘ ವನಸ್ಪತಿ ಔಷಧಿ; ಕುಟುಂಬ ಹಾಳಾಗುವಂತೆ ಹತ್ತಿರುವ ರೋಗವು ಗುಣವಾಗುವುದು. ಪಿರಿಸೇಗಿಗಳೂ ಹೊಟ್ಟೆಯ ಬುದ್ಧಿಗಾಗಿ ಜುಲಾಬಿನ ಮದ್ದಿನಂತೆ ತೆಗೆದುಕೊಳ್ಳಬಹುದು.

8 ಔನ್ಸ್‌ಗಳ ಬಾಟ್ಲಿ 1ಕ್ಕೆ ರೂ. 2–8–0.

ಕೆ. ವಿ. ಕೃಷ್ಣನ್,
ಕಲ್ಲಾಯಿ, ಮಲಬಾರ್,
ಅಥವಾ
ಬಾಲ್ ಮತ್ತು ಕಂಪೆನಿ, ಕಲ್ಲಿಕೋಟೆ,
ಇಲ್ಲಿ ಸಿಗುವುದು.

ಕ್ಷಯಕ್ಷೀಣಾದಿಗಳಿಗೆ

ಚ್ಯವನಪ್ರಾಶಾವಲೇಹ.

ಪ್ರಸೂತಿ ರೋಗಾದಿಗಳಿಗೆ

ದಶಮೂಲಾರಿಷ್ಟ.

(ಕಸ್ತೂರಿ ಮಿಶ್ರಣ)

ಸಮಸ್ತ ವಾತರೋಗಗಳಿಗೆ

ಮಹಾನಾರಾಯಣ ತೈಲ.

ಶ್ರೀ ರಾಮಕೃಷ್ಣ ಧರ್ಮವೈದ್ಯಾಶ್ರಮ ಸಂಘ, ಡೊಂಗರಕೇರಿ ರಸ್ತೆ, ಮಂಗಳೂರು.

ಚಿತ್ರಾಕೃತಿ ಸಮೇತ

ಋಗ್ವೇದೀ ಸಂಧ್ಯಾವಂದನೆ.

(ವೈಷ್ಣವರಿಗೆ—ಊರ್ಧ್ವ ಪುಂಡ್ರ—ಮುದ್ರಾಧಾರಣ ವಿಧಿ; ಸ್ಮಾರ್ತರಿಗೆ—ಭಸ್ಮಧಾರಣ ವಿಧಿ, ಕೂಡಿ)

ಎಂ. ನರಸಿಂಗರಾವ್, ಬಿ. ಎ., ಎಂ. ಎಲ್.
ಇವರಿಂದ ರಚಿತವಾದ
ಪ್ರತಿಪದಾರ್ಥಟೀಕಾ ವಿಧಸಹಿತ.

ಬೆಲೆ ಆಣೆ 8.

(30, 60, 100 ಪ್ರತಿಗಳನ್ನು ಒಟ್ಟಾಗಿ ಪಡೆಕೊಳ್ಳುವವರಿಗೆ ಒಳ್ಳೆಯ ಡಿಸ್ಕೌಂಟು)

ವಿಳಾಸ:— ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು.

ನಮ್ಮ ಸಲಹೆಯೇ ಪ್ರಾಧಾನ್ಯವಾದದ್ದೆಂದು ತಿಳಿಯಬೇಡಿ.

ಕಲ್ಲಿಕೋಟೆ ಅಕೋಳ ಆಸ್ಪತ್ರೆಯ ಚೀಫ್ ಮೆಡಿಕಲ್ ಆಫೀಸರರಾದ ಡಾ| ವಿ. ಐ. ರಾಮನ್, ಎಂ. ಆರ್., ಸಿ. ಎಸ್. ಇವರು ಬರೆದಿರುವುದನ್ನು ಓದಿ ನೋಡಿ—"ನಾನು ನಿಮ್ಮ ಆಶ್ಚರ್ಯಕರವಾದ ಜೀವಾಮೃತಂ ಟಾನಿಕನ್ನು ನರಗಳಲ್ಲಿ ಬಲಹೀನತೆ ಹಸಿವು ಕಡಿಮೆಯಾಗಿರುವುದು, ಶಕ್ತಿ ಕಡಿಮೆಯಾಗಿರುವುದು, ಇತ್ಯಾದಿ ಪ್ರಾಪ್ತವಾಗಿರುವ ಅನೇಕ ರೋಗಿಗಳಿಗೆ ಕೊಟ್ಟಿರುತ್ತೇನೆ. ಅದರ ಫಲಿತಾಂಶಗಳು ಬಹು ತೃಪ್ತಿಕರವಾಗಿದೆ. ಜೀವಾಮೃತವನ್ನು ದೇಹಶಕ್ತಿ ಕುಗ್ಗಿರುವ ಎಲ್ಲಾ ಸಂದರ್ಭಗಳಲ್ಲೂ ಸರ್ವೇ ಸಾಮಾನ್ಯವಾಗಿ ಉಪಯೋಗಿಸಬಹುದೆಂದು ನಾನು ಮನಃಪೂರ್ವಕವಾಗಿ ಶಿಫಾರಸು ಮಾಡುತ್ತೇನೆ"

ಜೀವಾಮೃತವು

ನರಗಳಿಗೆ ಶಕ್ತಿ ಕೊಡುತ್ತದೆ. ವೀರ್ಯ ವೃದ್ಧಿಮಾಡುತ್ತದೆ. ಹಸಿವು ಹೆಚ್ಚಿಸುತ್ತದೆ. ರಕ್ತ ವೃದ್ಧಿಮಾಡುತ್ತದೆ.

ಪಂಡಿತ ಡಿ. ಗೋಪಾಲಾಚಾರ್ಲುರವರ **ಜೀವಾಮೃತವು**

ಎಲ್ಲಾ ಔಷಧ ವಹಾರುವವರಲ್ಲೂ, ಸ್ಟೋರುಗಳಲ್ಲೂ ದೊರೆಯುತ್ತದೆ. (ಸಂಪೂರ್ಣ ವಿವರಗಳಿಗೆ ಇವತ್ತೇ ಬರೆಯಿರಿ)

ಆಯುರ್ವೇದಾಶ್ರಮಂ, ಪೋ. ಬಾಕ್ಸ್ ನಂ. ೨೮೭, ಮದ್ರಾಸು.

ಸೋಲ್ ಏಜಂಟರು:— ಸಿಟಿ ಮೆಡಿಕಲ್ ಮತ್ತು ಜನರಲ್ ಏಜನ್ಸಿ, ೯೩ ಚಿಕ್ಕಪೇಟೆ ಬೆಂಗಳೂರು. (ಉಡುಪಿ ಹೋಟೆಲ್ ಹತ್ತಿರ)
ದಕ್ಷಿಣ ಕನ್ನಡದ ಏಜಂಟರು— ಪೋಪ್ಯುಲರ್ ಸ್ಟೋರ್ಸ್, ಮಂಗಳೂರು. P. No. 104

ಸೈಂಟಿಫಿಕ್ ಸ್ವರ್ಣಾಭರಣಗಳು

(ನಿಜವಾದ ಬಂಗಾರಕ್ಕೆ ಬದಲಾಗಿ ಇವು ತಯಾರಿಸಲ್ಪಟ್ಟಿವೆ.)

ಹೈಕೋರ್ಟು ಜಡ್ಜರುಗಳಿಂದಲೂ, ಸರಕಾರದ ಮಂತ್ರಿಗಳಿಂದಲೂ, ಇತರ ಪ್ರಮುಖರಿಂದಲೂ ಕೊಂಡಾಡಲ್ಪಟ್ಟಿವೆ.

ಪತ್ರವ್ಯವಹಾರವನ್ನು ಇಂಗ್ಲಿಷಿನಲ್ಲೇ ಮಾಡಬೇಕು.

S.G.B.C.

ಹೊಸ ಕೆಟಲಾಗು ಧರ್ಮಾರ್ಥ.

ವಿಳಾಸ:-
The Scientific Gold Bangles Co., Ltd.,
Head Office:-48, Byragimatam Street,
Post Box No. 203, Madras.

An Advertisement In

'Swadeshabhimani'

Means a sure fortune to you

Ask for Contract Rates.

The Swadeshabhimani office,
Car Street, Mangalore.

Preserve Your Wealth by BIRTH-CONTROL.

ದೇಶದ ಐಶ್ವರ್ಯವನ್ನು ಮಿತಸಂತತಿಯಿಂದ ಕಾದಿಡಿ.

ಮೂರೇ ಮೂರು ರೂಪಾಯಿಗಳಿಂದ ಸ್ತ್ರೀಯರಿಗೆ ಪ್ರಸವಭಯವನ್ನು ನಿಲ್ಲಿಸುವುದು. ಬೇಕಾದ್ದಲ್ಲಿ ತಿರಿಗಿ ಗರ್ಭವಾಗುವಂತೆ ಔಷಧವಿದೆ.

ವರ್ಷಕ್ಕೊಂದರಂತೆ ಹೆತ್ತು ತಾಯಿ—ಮಕ್ಕಳು ನರಳದಂತೆ ದೂರ ದೂರ ಮಾಡುವುದು. ಆರೋಗ್ಯಕ್ಕೆ ಹಾನಿಯಿಲ್ಲ.

ವಿಳಾಸ:— ಪಂಡಿತ ಕೆ. ನಾರಾಯಣರಾವ್, ಆಯುರ್ವೇದ ಫಾರ್ಮಸಿ, ಕಾರ್ಕಳ, ದ. ಕ.
Branches—Kukkundoor & Kalkamba, (Gurpoor) ಬ್ರಾ:—ಕುಕ್ಕುಂದೂರು, ಕೈಕಂಬ, ಗುರುಪುರ.
[N. B.—ಉತ್ತರವನ್ನು ಅಪೇಕ್ಷಿಸುವವರು ಒಂದಾಣೆಯ ಸ್ಟಾಂಪನ್ನು ಕಳುಹಿಸಿರಿ ಬರೆಯಬೇಕು.]

ಗರ್ಭಿಣಿಯರು ಹೇಗಿರಬೇಕು?

ಸ್ತ್ರೀಯರು ಗರ್ಭಿಣಿಯರಾಗಿದ್ದಾಗ ಅನೇಕ ವಿಧದಲ್ಲಿ ತಪ್ಪು ತಿಳುವಳಿಕೆಗಳಿಗೆ ಬಲಿ ಬಿದ್ದು, ತಮ್ಮ ಆರೋಗ್ಯವನ್ನು ಕೆಡಿಸಿಕೊಳ್ಳುತ್ತಾರೆ. ಇದರ ಪರಿಣಾಮವು ಪ್ರಸವ ಕಾಲದಲ್ಲಿ ಬಹಳ ಪೀಡೆಯನ್ನು ಕೊಡುವುದಲ್ಲದೆ ಒಂದೊಂದು ವೇಳೆ ಮಗುವಿನ ಮೇಲೂ ಅದರ ಪ್ರಭಾವವು ಬೀಳುತ್ತದೆ. ಸೀಮಂತದ ಹೆಸರಲ್ಲಿ ಸ್ತ್ರೀಯರು ಗರ್ಭಿಣಿಯರಿಗೆ ಯಥೇಷ್ಟ ತಿನ್ನಿಸುವ ಪದ್ಧತಿಯು ಈಗ ಎಲ್ಲೆಲ್ಲಿಯೂ ವಾಡಿಕೆಯಲ್ಲಿದೆ. ಈ ಪದ್ಧತಿಯಿಂದ ಸೇಕಡಾ ೯೫ರಷ್ಟು ಗರ್ಭಿಣಿಯರು ತಮ್ಮ ಆರೋಗ್ಯವನ್ನು ಕೆಡಿಸಿಕೊಂಡಂತಹ ಅನೇಕ ಉದಾಹರಣೆಗಳು ನಮಗೆ ದೊರಿಯುವುವು. ಇಂತಹ ಪರಿಸ್ಥಿತಿಯಲ್ಲಿ ಸ್ತ್ರೀಯರು ಗರ್ಭಿಣಿಯರಾಗಿದ್ದಾಗ ಅನುಸರಿಸತಕ್ಕ ಕ್ರಮಗಳಲ್ಲಿ ಕೆಲವನ್ನು ಇಲ್ಲಿ ಕೊಡುವೆವು.

ಬಿಸಿ ನೀರಲ್ಲಿ ವಸ್ತ್ರವನ್ನು ಒದ್ದೆ ಮಾಡಿ ಶರೀರವನ್ನು ಯಾವಾಗಲೂ ಒರಸುತ್ತಿರಬೇಕು. ಇದರಿಂದ ರೋಮಕೂಪಗಳು ಸ್ವಚ್ಛವಾಗಿರುವುವು. ಶರೀರದ ದುರ್ಗಂಧ ವಸ್ತುಗಳೆಲ್ಲವೂ ಸುಲಭದಿಂದ ದೂರವಾಗುವುವು. ಕೈಯಿಂದ ಗಟ್ಟಿಯಾಗಿ ತಿಕ್ಕುವುದರಿಂದ ಶರೀರಕ್ಕೆ ಬಹಳ ಆಯಾಸವುಂಟಾಗುವುದಲ್ಲದೆ ಗರ್ಭಕ್ಕೂ ಪೀಡೆಯುಂಟಾಗುತ್ತದೆ. ಗರ್ಭಾವಸ್ಥೆಯಲ್ಲಿ ಚಿಕ್ಕದಾದ ನರಕಕ್ಕೂ ಕೂಡ ಸಂಪೂರ್ಣ ವಿಶ್ರಾಂತಿ ದೊರೆಯತಕ್ಕದ್ದು. ಇದು ಹೊರತು ಗರ್ಭಕಾಲದಲ್ಲಿ ಶರೀರದೊಳಗೆ ಅನಾರೋಗ್ಯಕರ ವಸ್ತುಗಳು ಹೆಚ್ಚಿನ ಅಂಶದಲ್ಲಿರುತ್ತವೆ. ಇದನ್ನು ಸ್ವಚ್ಛಮಾಡುವಾಗ ಗರ್ಭಕ್ಕೆ ಧಕ್ಕೆ ತಗಲದಂತೆ ಬಹಳ ಜಾಗ್ರತೆಯಲ್ಲಿರಬೇಕು. ಗರ್ಭವತಿಯರು ಮನೋವಾಕ್ಕಾಯದಿಂದ ಸಂಪೂರ್ಣ ಪರಿಶುದ್ಧತೆಯಲ್ಲಿದ್ದರೆ ಅವರ ಮನಸ್ಸು ಯಾವಾಗಲೂ ಪ್ರಸನ್ನತೆಯಲ್ಲಿರುವುದಲ್ಲದೆ ದೇಹದಲ್ಲಿಯೂ ಪೂರ್ಣತರದ ಸ್ಫೂರ್ತಿ ದೊರೆಯುತ್ತದೆ. ಗರ್ಭವೂ ಬಲಿಷ್ಠವಾಗಿರುತ್ತದೆ.

ಊಟ— ಗರ್ಭಿಣಿಯರಲ್ಲಿ ಜೀರ್ಣಶಕ್ತಿಯು ಬಹಳ ಕಡಿಮೆಯಾಗಿರುತ್ತದೆ. ಆದುದರಿಂದ ಸುಲಭವಾಗಿ ಜೀರ್ಣವಾಗದಂತಹ ರೀತಿಯಲ್ಲಿ ಊಟಮಾಡಬಾರದು. ಗರ್ಭಿಣಿಯ ಮತ್ತು ಅವಳ ಗರ್ಭದಲ್ಲಿರುವ ಶಿಶುವಿನ ಪೋಷಣೆಗೆ ಬೇಕಾಗುವಷ್ಟೇ ಆಹಾರವನ್ನು ಉಪಯೋಗಿಸತಕ್ಕದ್ದು. ಹೆಚ್ಚಾಗಿ ಹಣ್ಣುಹಂಪಲು, ಹಾಲು, ಬೆಣ್ಣೆ ಇತ್ಯಾದಿ ಸಂಪೂರ್ಣತರದ **ಸಾತ್ವಿಕ** ಆಹಾರಗಳನ್ನೇ ಸೇವಿಸತಕ್ಕದ್ದು. **ಗರ್ಭಿಣಿಯರಲ್ಲಿ** ಅರುಚಿಯಾಗದಂತೆ **ಭೋಜನದ** ವಸ್ತುಗಳನ್ನು ಆಗಾಗ ಪರಿವರ್ತಿಸುತ್ತಿರಬೇಕು. ಗರ್ಭಿಣಿಯರು ಹೆಚ್ಚಾಗಿ ನೀರು ಕುಡಿಯಬೇಕು. ಇದರಿಂದ ಮೂತ್ರ ಮತ್ತು ಸ್ವೇದದ್ವಾರವು ಶುದ್ಧವಾಗುತ್ತದೆ. ಕೋಷ್ಠಬದ್ಧತೆಯಾಗುವುದಿಲ್ಲ. ಖಾರ, ಹುಳಿ ಇತ್ಯಾದಿ ಪದಾರ್ಥಗಳನ್ನು ಪೂರ್ಣ ತ್ಯಜಿಸಬೇಕು. ತಾಮಸ ಪದಾರ್ಥಗಳಿಂದ ಶಿಶುವಿನ ಆರೋಗ್ಯವು ಸಹ ಕೆಡುತ್ತದೆ.

ವ್ಯಾಯಾಮ:— ಗರ್ಭಿಣಿಯರು ಯಾವಾಗಲೂ ಮಲಗಿಕೊಂಡೇ ಅಥವಾ ಕುಳಿತಲ್ಲೇ ಇರಬಾರದು. ಇದರಿಂದ ಶರೀರದಲ್ಲಿ ಆಲಸ್ಯವು ವೃದ್ಧಿಯಾಗಿ ಇದರ ದುಷ್ಪರಿಣಾಮವು ಗರ್ಭದ ಮೇಲೂ ಉಂಟಾಗುತ್ತದೆ. ಆದುದರಿಂದ ಗರ್ಭಕ್ಕೆ ನೋವು ತಗಲದ ರೀತಿಯಲ್ಲಿ ಸಾಧಾರಣ ತರದ ವ್ಯಾಯಾಮವನ್ನು (ಶುದ್ಧವಾದ ಗಾಳಿ ಇರುವ ಸ್ಥಳದಲ್ಲಿ ಆಗಾಗ ತಿರುಗಾಡುತ್ತಿರಬೇಕು) ಮಾಡುತ್ತಿರಬೇಕು. ಶರೀರಕ್ಕೆ ಹೆಚ್ಚು ಆಯಾಸವಾಗುವ ವರೆಗೂ ತಿರುಗಾಡಬಾರದು. ಥಕ್ಕನೆ ಏಳುವುದು, ಮಾಳಿಗೆ ಮೆಟ್ಟಲು ಇಳಿಯುವಾಗ ಹಾರುತ್ತಾ ಇಳಿಯುವುದು, ಭಾರವಾದ ವಸ್ತುಗಳನ್ನು ಎತ್ತುವುದು, ಹೆಚ್ಚು ಹೊತ್ತಿನವರೆಗೆ ಬಗ್ಗಿಕೊಂಡು ಕೆಲಸಮಾಡುತ್ತಿರುವುದು, ನಿದ್ರೆ ಕೆಡುವುದು ಇವೇ ಮೊದಲಾದುವುಗಳನ್ನು ಗರ್ಭಿಣಿಯರು ಮಾಡಲೇಬಾರದು.

ಸಂತೋಷ:— ಮನಸ್ಸಿಗೆ ಪ್ರಸನ್ನತೆಯುಂಟಾಗುವ ದೃಶ್ಯಗಳನ್ನೇ ನೋಡಬೇಕು. ಭಯಂಕರ ದೃಶ್ಯಗಳಿಂದ ಗರ್ಭಕ್ಕೂ ಹಾನಿಯುಂಟಾಗುತ್ತದೆ. ಹೆಚ್ಚು ಜನಸಂದಣಿ ಇರುವಂತಹ ಸಿನೆಮ, ನಾಟಕಗೃಹ, ಜಾತ್ರೆ, ದೇವಸ್ಥಾನ ಮುಂತಾದ ಸ್ಥಳಗಳಿಗೆ ಗರ್ಭಿಣಿಯರು ಹೋಗಕೂಡದು. ಏಕೆಂದರೆ ಜನಸಂದಣಿ ಹೆಚ್ಚಿರುವಲ್ಲಿ 'ಕಾರ್ಬನ್ ಡಿಯಾಕ್ಸೈಡ್' ಎಂಬ ಹಾನಿಕಾರಕ ವಾಯು ಹೆಚ್ಚಿರುತ್ತದೆ. ಇದು ಅವಳ ಶರೀರವನ್ನು ಪ್ರವೇಶಿಸಿ ಆರೋಗ್ಯವನ್ನು ಕೆಡಿಸುತ್ತದೆ. ಏನೂ ತಿಳಿಯದವರು ಇಂತಹ ಸ್ಥಿತಿಯಲ್ಲಿ ಭೂತಗಳ ಉಪದ್ರವ ಅಥವಾ ಇನ್ನಿತರ ದೈವಗಳ ಉಪದ್ರವ ಎಂಬ ನಂಬಿಕೆಯನ್ನು ತಾಳಿ ಬಲಿ, ಮಂತ್ರ, ಹರಕೆ ಇತ್ಯಾದಿಗಳಿಂದ ಆಕೆಯ ಆರೋಗ್ಯವನ್ನು ಮತ್ತಷ್ಟು ಕೆಡಿಸಿಬಿಡುತ್ತಾರೆ. ಹೀಗೆಂದಿಗೂ ಮಾಡಬಾರದು.

ಗರ್ಭಿಣಿಯರು ಯಾವಾಗಲೂ ಕ್ರೋಧರಹಿತರಾಗಿರಬೇಕು. ನಿಕೃಷ್ಟವಾದ ಕಥೆ ಉಪನ್ಯಾಸಾದಿಗಳನ್ನು ಓದದೆ ಧಾರ್ಮಿಕ, ಸಾಮಾಜಿಕ ಸಂಬಂಧವಾದ ಉತ್ತಮ ಪುಸ್ತಕಗಳನ್ನೇ ಓದಬೇಕು. ಇದರ ಪ್ರಭಾವದಿಂದ ಆಕೆಯ ಬುದ್ಧಿಯು ಶುಭ್ರವಾಗಿ ಅದರಿಂದ ಶಿಶುವಿನಲ್ಲಿಯೂ ವಿಶೇಷವಾದ ಗುಣಗಳು ಉಂಟಾಗುತ್ತವೆ. ಯಾವಾಗಲೂ ವಿದ್ಯಾವಂತೆ ಸ್ತ್ರೀಯರ ಸಹವಾಸದಲ್ಲಿದ್ದು, ಉತ್ತಮೋತ್ತಮವಾದ ರೀತಿಯ ವಾರ್ತಾಲಾಪಗಳನ್ನೇ ಮಾಡುತ್ತಾ ಸಂತೋಷದಿಂದಿರಬೇಕು.

ಸಂಭೋಗ— ಗರ್ಭಾವಸ್ಥೆಯಲ್ಲಿ ಪತಿಯೊಂದಿಗೆ ಸಂಭೋಗಮಾಡಬಾರದು. ಇದರಿಂದಾಗಿ ಗರ್ಭದಲ್ಲಿರುವ ಶಿಶುವು ಭಯಂಕರವಾದ ರೋಗಗಳಿಗೀಡಾಗುತ್ತದೆ. ತರತರದ ಅಂಗಹೀನತೆಗೆ ತುತ್ತಾಗುತ್ತದೆ. ಒಮ್ಮೊಮ್ಮೆ ಗರ್ಭಪಾತವಾಗಿ ಅವಳ ಜೀವನವೇ ನಾಶವಾಗುತ್ತದೆ. ತಂದೆ ತಾಯಿಗಳೂ ವಿಶಿಷ್ಟ ವಿಷಯವಾಸನೆಯುಳ್ಳವರಾಗಿದ್ದರೆ ಅದೇ ಗುಣವು ಅವರಲ್ಲಿ ಹುಟ್ಟುವ ಮಕ್ಕಳಲ್ಲಿಯೂ ಬರುತ್ತದೆ. ಆದುದರಿಂದ ಸ್ತ್ರೀಯರು ಮುಟ್ಟಾಗುವುದು ನಿಂತಕೂಡಲೇ (ಗರ್ಭಕೋಶದಲ್ಲಿ ವೀರ್ಯವು ನೆಲೆನಿಂತ ಕೂಡಲೇ) ಗರ್ಭವು ಬೆಳೆದು ನಿಶ್ಚಿತ ಅವಧಿಯಲ್ಲಿ ಪ್ರಸವಿಸಿ ನಂತರ ಆಕೆಯ ದೇಹಸ್ಥಿತಿಯು ಯಥಾಪ್ರಕಾರ ಬಲಯುಕ್ತವಾದ ಸ್ಥಿತಿಗೆ ಬರುವ ವರೆಗೆ ಪತಿ ಪತ್ನಿಯರಿಬ್ಬರೂ ಪೂರ್ಣ ಬ್ರಹ್ಮಚರ್ಯದಿಂದಿರಬೇಕು.

ಪರಾಮರ್ಶೆಯ ಆವಶ್ಯಕತೆ:— ಗರ್ಭಿಣಿಯರಿಗೆ ಯಾವಾಗಲೂ ತಲೆನೋವು, ಕೆಂಪುಬಣ್ಣದ ಮೂತ್ರ ಹೋಗುವುದು, ಮುಖ ಮತ್ತು ಕಣ್ಣಿನ ನಾಲ್ಕೂ ಕಡೆ ಮುದುಡಿಹೋಗುವಿಕೆ, ಒಮ್ಮೊಮ್ಮೆ ಯೋನಿಯಿಂದ ರಕ್ತಸ್ರಾವ ಆಗುವಿಕೆ, ಇತ್ಯಾದಿ ಸಂದರ್ಭಗಳು ಹೆಚ್ಚಾಗಿ ಆಗುವುದುಂಟು. ಅನೇಕರು ಇದನ್ನು ಅಲಕ್ಷ್ಯಭಾವದಿಂದಲೂ ಹೆಚ್ಚಾಗಿ ಲಜ್ಜೆಯಿಂದಲೂ ಬಚ್ಚಿಡುತ್ತಾರೆ. ಈ ತರದ ಅಸಂಬದ್ಧ ಲಜ್ಜೆಯಿಂದ ಭಯಂಕರವಾದ ರೋಗಕ್ಕೆ ತುತ್ತಾಗುತ್ತಾರೆ. ಹೀಗಾಗದಂತೆ ಗರ್ಭಿಣಿಯರು ಆಗಾಗ ತಮ್ಮ ದೇಹ ಮತ್ತು ಗರ್ಭದ ಸ್ಥಿತಿಗತಿಗಳನ್ನು, ಚೆನ್ನಾಗಿ ಬಲ್ಲ ವೈದ್ಯರಿಂದ ಆಗಾಗ ಪರೀಕ್ಷಿಸುತ್ತಿರಬೇಕು. ಈ ಲೇಖನವನ್ನು ಓದುವ ವಾಚಕರೆಲ್ಲರೂ ಇದರಲ್ಲಿ ಪ್ರತಿಯೊಂದು ವಿಷಯವನ್ನು ಚೆನ್ನಾಗಿ ತಿಳಿದುಕೊಂಡು ಸ್ತ್ರೀಯರಲ್ಲಿ ಇದನ್ನು ಉತ್ತಮ ರೀತಿಯಲ್ಲಿ ಪ್ರಚಾರಗೊಳಿಸಿದರೆ ಎಷ್ಟೋ ಮಾತೆ...

ಸ್ಕೀಮ್ ರಿಪೋರ್ಟಿಗೆ ಆಕ್ಷೇಪಣೆಗಳು.

[ಶ್ರೀ ಎಚ್ ಶಂಕರನಾರಾಯಣ ರಾವ್, ವಕೀಲ, ಮಂಗಳೂರು ಇವರು ಸ್ಪೆಶಲ್ ಅಸಿಸ್ಟಾಂಟ್ ಸೆಟ್ಲಮೆಂಟು ಆಫೀಸರ್, IV ಪಾರ್ಟಿ ಮಂಗಳೂರು ಇವರಿಗೆ ಕಳುಹಿಸಿದ ಆಕ್ಷೇಪಣಾ ವರದಿಯ ಸಾರಾಂಶ]

ಪ್ರಜೆಗಳು ತಮ್ಮ ಹುಟ್ಟುವಳಿಯ ಒಂದಂಶವನ್ನು, ರಾಜ್ಯದ ಕಾರ್ಯನಿರ್ವಹಣೆಕ್ಕೆ ಸಹಾಯವಾಗಿ ರಾಜನಿಗೆ ತೆರುತ್ತಿರಬೇಕೆಂದು ವಿಧಿಸಲಾದುದೇ ತೀರ್ವೆ. ಇದು, ಹಿಂದೂ ಅರಸರ ಆಡಳಿತದಲ್ಲಿ, ಹುಟ್ಟುವಳಿಯ 1/6 (ಅಥವಾ 1/10ರಷ್ಟು ಕೂಡ) ಇತ್ತು. ಕೆಲ ಅನಿವಾರ್ಯ ಸಂದರ್ಭಗಳಲ್ಲಿ ಅರಸನು, ಹುಟ್ಟುವಳಿಯ ಕಾಲಂಶಕ್ಕೆ ಮೀರದಷ್ಟು ತೀರ್ವೆ ವಸೂಲು ಮಾಡುವ ಪದ್ಧತಿಯಿತ್ತು. ಆದರೆ, ಹಿಂದೂ ಅರಸರ ಆಡಳಿತದಲ್ಲಿ ದ್ವಿತೀಯ ಬೆಳೆಯ ಮೇಲೆ ಎಂದೂ ತೀರ್ವೆ ಹೊರಿಸುತಿರಲಿಲ್ಲ. ಸಾಮಾನ್ಯವಾದ 1/6 ಅಂಶದ ತೀರ್ವೆಗೆ, ಧಾರ್ಮಿಕ ಶಿಕ್ಷಣಾದಿ ಸಾರ್ವಜನಿಕೋಪಯುಕ್ತ ಸಂಸ್ಥೆಗಳ ಬಗ್ಗೆ 1 12ರಷ್ಟು ಅಧಿಕ ತೀರ್ವೆಯನ್ನೂ ವಸೂಲು ಮಾಡುತ್ತಿದ್ದರು. ಇದು ವಿಜಯನಗರದರಸುಗಳ ಕಾಲದಲ್ಲಿ ಮತ್ತಷ್ಟು ಸ್ಪಷ್ಟವಾಗಿ ಪ್ರಚಾರಕ್ಕೆ ಬಂತು. ಆ ಕಾಲದಲ್ಲಿ ಹುಟ್ಟುವಳಿಯ ¼ ಅಂಶ ತೀರ್ವೆಯನ್ನು ಧಾರ್ಮಿಕ ಶಿಕ್ಷಣಾದಿ ಸತ್ಕಾರ್ಯಗಳ ಬಗ್ಗೆ ವಸೂಲು ಮಾಡುತ್ತಿದ್ದರು. ಇದ 2,84,604 ಪಗೋಡಾಗಳಷ್ಟು. ಬಿದನೂರಿನ ಅರಸರು ಅದನ್ನು 320827 ಪಗೋಡಾಗಳಿಗೇರಿಸಿದರು. ಹೈದರಾಲಿಯು 533202ಕ್ಕೆ ಹೆಚ್ಚಿಸಿದನು. ಈ ಸಂಖ್ಯೆಯು ಹುಟ್ಟುವಳಿಯ ಅರ್ಧಾಂಶಕ್ಕಿಂತ ಕಿಂಚಿತ್ ಕಡಿಮೆಯಾಗಿತ್ತು. ಟಿಪ್ಪುವು ಅದನ್ನು 616089ಕ್ಕೆ ಹೆಚ್ಚಿಸಿದನು. ಅವನ ನಂತರ ಈಸ್ಟ್ ಇಂಡಿಯಾ ಕಂಪನಿಯವರ ಆಡಳಿತದಲ್ಲಿ ದಕ್ಷಿಣ ಕನ್ನಡ ಜಿಲ್ಲೆಗೆ ಬಂದ ಸರ್ ಥಾಮಸ್ ಮನ್ರೋರವರೂ ತಾವು ಟಿಪ್ಪುವಿನಷ್ಟು ತೀರ್ವೆ ವಸೂಲು ಮಾಡಲು ಹಕ್ಕುಳ್ಳವರೆ ದೆಣಿಸಿದಂಗ್ಯ್ ಕಡೆಗೆ ಅಧಿಕ ದ ದೇಶವೆಲ್ಲ ಬಂಜರ ಬೀಳುವ ಸಂಭವವುಂಟಾದೀತೆಂಬುದನ್ನು ಮನಗಂಡರು. ಆದ ಕಾರಣ ಅವರ ಟಿಪ್ಪುವು ವಿಧಿಸಿದುದರಲ್ಲಿ 115941ರಷ್ಟನ್ನು ಕಡಿಮೆಮಾಡಿ 465148 ಇರಿಸಿದರು. ತೀರ್ವೆಯನ್ನು ಕ್ಷಿಪ್ರಗತಿಯಾಗಿ ವಸೂಲು ಮಾಡುವುದನ್ನು ಮನ್ರೋರವರು ಆಗ ವಿಧಿಸಿದರು. ವಸೂಲಿಯು ಅಪೇಕ್ಷಿಸಿದಂತೆ ಆಗಲಿಲ್ಲ. ಹುಟ್ಟುವಳಿಯ ⅓ ಅಂಶದಷ್ಟನ್ನು ಮಾತ್ರ ಅವರು ಪಡೆಯಲು ಸಮರ್ಥರಾದರು. ಕೆಲವು ವರ್ಗಗಳಿಂದ ಅಷ್ಟನ್ನು ಕೂಡ ತೆರಲಾಗಲಿಲ್ಲ. ಆ ಸಮಯದಲ್ಲಿ (1881ರಲ್ಲಿ) ಕೆಲಾಂಶವನ್ನು ಕಡಿಮೆಮಾಡಲೇಬೇಕಾಯಿತು. ಆ ಸೆಟ್ಲಮೆಂಟೇ 1902ರ ತನಕವೂ ಶಾಶ್ವತವಾಯಿತ.

ಪ್ರಾಂತ್ಯದ ಇತರ ಭಾಗಗಳಲ್ಲಿ ಬೇರೇಜು ಹುಟ್ಟುವಳಿಯ 1/6ನೇ ಅಂಶವಾಗಿತ್ತಾದರೆ ನಮ್ಮ ಜಿಲ್ಲೆಯಲ್ಲಿ ¼. ಇಲ್ಲಿಯಂತೆ ಬಂಗಾಳದಲ್ಲಿಯೂ ಸೆಟ್ಲಮೆಂಟನ್ನು ಶಾಶ್ವತವಾಗಿಸಿದೆಯೆಂಬ ಕಾರಣದಿಂದ, ಇತರ ಕಡೆಗಳಿಗಿಂತ ದುಬಾರಿಯಷ್ಟು ತೀರ್ವೆ ಹೊರಿಸಲಾಯಿತು. ಕಾಯಂ ಆಗಿ ಕೊಡಲ್ಪಟ್ಟ ಸೆಟ್ಲಮೆಂಟನ್ನು ಸರಕಾರವು ಸುಮಾರು 70 ವರ್ಷಗಳ ತನಕ ಮುರಿಯಲೊಪ್ಪಲಿಲ್ಲ. ಆದರೆ, ಈ ಶಾಶ್ವತದ ಸ್ವಭಾವವೇನೆಂದರೆ— ಪ್ರಾಂತ್ಯದ ಇತರ ಭಾಗಗಳ ಹುಟ್ಟುವಳಿ 1116 ಆಗುವಾಗ ನಮ್ಮ ಜಿಲ್ಲೆಯಲ್ಲಿ 860 ಮಾತ್ರ. ಬೇರೆ ಕಡೆಗಳಲ್ಲಿ ಸರಾಸರಿ ಎಸೆಸ್‌ಮೆಂಟು ರೂ 2-1-4 ಆಗಿರುವಾಗ ನಮ್ಮ ಜಿಲ್ಲೆಯಲ್ಲಿ ರೂ 4-7-4, ತಂಜಾವೂರಿನಲ್ಲಿ ನಂಜಾ ಜಮೀನಿಗೆ ಎಕ್ರೆಗೆ ರೂ 6-7-0 ಎಸೆಸ್‌ಮೆಂಟು ಇರುವುದಾದರೆ ನಮ್ಮಲ್ಲಿ ರೂ 6-13-0 (ತಂಜಾವೂರು ಡಿಸ್ಟ್ರಿಕ್ಟ್ ಗೆಜೇಟಿಯರ್ ಪುಟ 188 ಮತ್ತು ದ. ಕ. ಜಿಲ್ಲಾ ಬೋರ್ಡಿನ ಪ್ರೊಸಿಡಿಂಗ್ಸು ತಾ 9-10-1905-ನಂಬ್ರ 982-ಪುಟ 24) ತಂಜಾವೂರಿನ ಹುಟ್ಟುವಳಿಯು ನಮ್ಮ ಜಿಲ್ಲೆಗಿಂತ ಸೇಕಡಾ 50ರಷ್ಟು ಹೆಚ್ಚಿನದಾದರೂ ದಕ್ಷಿಣ ಕನ್ನಡಕ್ಕಿಂತ 4 ಆಣೆಗಳಷ್ಟು ಕಡಿಮೆ ತೀರ್ವೆ. ತಂಜಾವೂರಿನ ಆ ತೀರ್ವೆಯು ನೀರಿನ ತೆರಿಗೆ ಕೂಡಿದಾಗಿದೆ, ನಮ್ಮ ಜಿಲ್ಲೆಯ ಬೆಳೆಯು ಮಳೆಯ ಮೇಲೆಯೇ ಹೊಂದಿಕೊಂಡಿದೆ. ಇದರಿಂದ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ವಿಧಿಸಿದ ತೀರ್ವೆಯು, ತುಲನಾತ್ಮಕವಾಗಿ ಎಷ್ಟು ಅಧಿಕವೆಂದು ತಿಳಿದು ಬರುವುದು. ಮಲಬಾರಿನ ದರಗಳು ಇತರ ಕಡೆಗಿಂತ ಸೇಕಡಾ 40ರಷ್ಟು ಹೆಚ್ಚಿರುವುವಾದರೂ ಕನಿಷ್ಠ ತರಗತಿಯ ಜಮೀನಿನ ವಿಷಯದಲ್ಲಿ ನಮ್ಮ ಜಿಲ್ಲೆಯ ದರಗಳು ಸೇಕಡಾ 150ರಿಂದ 300ರಷ್ಟು ಹೆಚ್ಚು ಇವೆ. ಇದನ್ನು ನಾವು ನಮ್ಮ ಜಿಲ್ಲೆಯ ಉತ್ಪತ್ತಿ ಮತ್ತು ಎಸೆಸ್‌ಮೆಂಟುಗಳ ಸಂಖ್ಯೆಗಳನ್ನು, ಇತರ ಜಿಲ್ಲೆಗಳಿಗೆ ಹೋಲಿಸುವುದರಿಂದ ಸುಲಭವಾಗಿ ತಿಳಿಯಬಹುದು.

[ಸಶೇಷ]

...ಯರಲ್ಲಿ ಅಂಟಿಕೊಂಡಿರುವ ತಪ್ಪು ತಿಳುವಳಿಕೆಗಳು ನಾಶವಾಗಿ ಅವರ ಜೀವನದ ಉನ್ನತಿಯಾಗುವುದಲ್ಲದೆ ಭವಿಷ್ಯದ ಸಂತಾನವಾದರೂ ಬಲವಂತ ಮತ್ತು ಬುದ್ಧಿಶಾಲಿಯಾಗುವುದು.

B L V

ಹರಿಜನರೂ ಕೊಂಗ್ರೆಸ್ಸೂ

ಬರುವ ಎಸೆಂಬ್ಲಿ ಚುನಾವಣೆಯಲ್ಲಿ ಯೋಗ್ಯರಾದ ೫ ಮಂದಿ ಹರಿಜನ ಉಮೇದ್ವಾರರನ್ನು ಆರಿಸಿ ಕಳುಹಬೇಕೆಂದು ಅಖಿಲ ಭಾರತ ಡಿ. ಸಿ. ಮಿಶ್ಯನಿನ ಶ್ರೀ ಜಿ. ಎಮ್. ಥಾಪರೆ ಎಂಬವರ ಸೂಚನೆ. ಕೊಂಗ್ರೆಸ್ಸು ಈಗ ಸರಕಾರದೊಡನೆ ಘೋರ 'ಸಂಗ್ರಾಮ'ಕ್ಕೆ ನಿಂತಿರುವ ಕಾಲದಲ್ಲಿ ಹರಿಜನ ಉಮೇದ್ವಾರರನ್ನು ಆರಿಸಿ ಕೊಂಗ್ರೆಸ್ ರಾಜಕೀಯಗಳಲ್ಲಿ ಅವರನ್ನು ಅದ್ದಿಬಿಡುವುದು ಕೊಂಗ್ರೆಸ್ ಪಾರ್ಲಿಮೆಂಟರಿ ಬೋರ್ಡಿಗೆ ಉಚಿತವಲ್ಲವೆಂದು, ಗಾಂಧಿಜಿಯವರ ಅಭಿಪ್ರಾಯವೇ ಎಲ್ಲಾ ತಿಕ್ಕಾಣಗಳಿಗೆ ಹರಿಜನರ ಮತಗಳು ಬೇಕಾಗಿದ್ದರೂ ಹರಿಜನ ಉಮೇದ್ವಾರರು ಬೇಡವಾದ ಈ ಕೊಂಗ್ರೆಸ್ ಧೋರಣೆಯು ಕಾರ್ಯಗತವಾಗುವುದಿಲ್ಲವೆಂದೂ, ಗಾಂಧಿಜಿಯವರು ತಮ್ಮ ಈ ಅಭಿಪ್ರಾಯವನ್ನು ಪುನರಾಲೋಚಿಸಬೇಕೆಂದೂ ಥಾಪರೆಯವರು ಪತ್ರ ಬರೆದಿರುವರು.

ಅಸ್ಸಾಮ್ ಪ್ರಾಂತ್ಯವು ಗೋಳಿಡುತ್ತಿದೆ

ನೆರೆಯು ಅಸ್ಸಾಮ್ ಪ್ರಾಂತ್ಯವನ್ನು ದಾರಿದ್ರ್ಯ ದೇವತೆಯ ಚರಣದಲ್ಲಿ ಕೆಡವಿದೆ. ಹಸಿದ ಮುಖಗಳು ಇತರ ಪ್ರಾಂತ್ಯಗಳ ಕಡೆಗೆ ತಿರುಗಿ ಧನಸಹಾಯಕ್ಕಾಗಿ ಕೂಗುತ್ತಿವೆ. ವಿಧವೆಯರೂ ಅನಾಥ ಬಾಲರೂ ಉಪವಾಸದಿಂದ ಮರಣಕ್ಕೀಡಾಗುವ ಭಯಂಕರ ಸ್ಥಿತಿಯೊದಗಿದೆ. ಬಟ್ಟೆಬರೆಗಳಿಲ್ಲದೆ ನಗ್ನ ಸ್ಥಿತಿಯಲ್ಲಿ ಸಾವಿರಾರು ಮಂದಿ ಇರುವರು. ನವಾಗಂಗದ ಕೊಂಗ್ರೆಸ್ ಕಮಿಟಿಯವರು ಸಹಾಯಧನಕ್ಕಾಗಿ ವಿನಂತಿಸುತ್ತಿದ್ದಾರೆ.

ಬಿಹಾರ್ ಪ್ರಾಂತ್ಯದ ಸ್ಥಿತಿಯು ಮತ್ತಷ್ಟು ಕರುಣಾಜನಕವಾಗಿದೆ. ಈಗ ನೆರೆಗಳು ನಿಂತುಹೋದುವೇನೋ ನಿಜ. ಆದರೆ, ಕಳೆದ ನಾಲ್ಕು ವಾರಗಳ ನೆರೆಯು ತೋರಿದು ಹೋದ ಗೋಳನ್ನು ಪರಿಹರಿಸುವ ಮಹಾಕಾರ್ಯವು ಅಲ್ಲಿಯ ಭೂಕಂಪ ಸಂಕಷ್ಟನಿವಾರಣಾ ಸಮಿತಿಯವರ ಪಾಲಿಗೆ ಬಿದ್ದಿದೆ.

HOUNSA

FRESH CONSIGNMENT ARRIVED.

UNEQUAL QUALITY——————EXCEPTIONAL PRICE.

A TIRE THAT SAVES YOU REPUTATION AND MONEY.

The Canara Public Conveyance Co., Ltd.

MANGALORE.

ಜ್ಞಾನ

(ಪ್ರಬಂಧಮಾಲೆ)

ಲೇಖಕರು:— ಶ್ರೀ ಶಿವರಾಮ ಕಾರಂತ

ಅಧ್ಯಾಯ ೧೬.

ನಯಶಾಸ್ತ್ರ.

ಜಗತ್ತಿನ ಸರಕಾರಗಳು ತೊಡಕಿಲ್ಲದೆ ನಯವಾಗಿ ಹರಿಯಬೇಕೆಂಬುದರಿಂದ ಈ ಶಾಸ್ತ್ರಕ್ಕೆ ಶಾಸ್ತ್ರಿಗಳು 'ನಯಶಾಸ್ತ್ರ' ಎಂದು ಹೆಸರನ್ನು ಇರಿಸಿರುತ್ತಾರೆ. ಇದು ಬಲು ನಯವಾಗಿರದಿದ್ದರೆ ದೇಶದಲ್ಲಿ—ಕ್ರಾಂತಿ, ದಂಗೆ, ಮತ್ಸರ ಇತ್ಯಾದಿ ಹಲವು ಅಡಚಣೆಗಳು ಬರುವುವೆಂದು ವಾಚಕ ಮಹಾಶಯರು (ಒಬ್ಬನೇ ಈ ಪುಸ್ತಕವನ್ನು ಓದುವ ಸಂದರ್ಭದಲ್ಲಿ ಮಹಾಶಯನು ಎಂದು ಓದಿಕೊಳ್ಳತಕ್ಕದ್ದು) ತಿಳಿಯತಕ್ಕದ್ದು.

ಒಂದು ರಾಷ್ಟ್ರವನ್ನು, ಅಲ್ಲಿನ ಜನರನ್ನು, ಪ್ರಾಣಿಗಳನ್ನು ಇತರ ಸಾಮಾನುಗಳನ್ನು—ಹೇಗೆ ನಡೆಯಿಸಿಕೊಂಡು ಹೋಗಬೇಕು, ಜನರಿಂದ ಕಂದಾಯ ಹೇಗೆ ವಸೂಲು ಮಾಡಬೇಕು, ಬೇರೆ ರಾಜರ ಮೇಲೆ ಹೇಗೆ ಯುದ್ಧ ಮಾಡಬೇಕು—ಎಂಬ ವಿಷಯವನ್ನು ತಿಳಿಸುವ ಶಾಸ್ತ್ರವೇ ನಯಶಾಸ್ತ್ರ. ಒಂದು ರಾಜ್ಯವು ಬೆಳೆದಂತೆ, ಅದರ ಜನಸಂಖ್ಯೆಯು ಹೆಚ್ಚಿದಂತೆ ಅದರ ಕಷ್ಟವು ಹೆಚ್ಚುವುದೆಂದೂ ತಿಳಿಯತಕ್ಕದ್ದು. ಧರ್ಮಶಾಸ್ತ್ರದ ರೀತಿಯನ್ನು ಅನುಸರಿಸಿ ನಡೆಯುವುದಾದರೆ—ಇದನ್ನು ನಿರ್ಣಯಿಸಲು ಉಳಿದವರಿಗೆ—ಅಂದರೆ ನಮ್ಮನಿಮಗೆ ಅಧಿಕಾರವಿಲ್ಲ. ಇದೆಲ್ಲವೂ ರಾಜನ ಕರ್ತವ್ಯ. ರಾಜನೆಂಬವನು—ದೇವರ ಅವತಾರವೆನ್ನುವರು. ನಮ್ಮ ಹಿಂದುದೇಶದಲ್ಲೂ ಇಂಥ ಹಲವೊಂದು ದೇವರ ಅವತಾರಗಳಿವೆ. ಈ ದೇವರುಗಳು ಪರಸ್ಪರ ಜಗಳವಾಡದಂತೆ ನೋಡುವ ದೊಡ್ಡ ದೇವರೇ ಚಕ್ರವರ್ತಿಗಳು. ನಮ್ಮ ದೇಶದ ಚಕ್ರವರ್ತಿಗಳು ಇಂಗ್ಲೆಂಡೆಂಬ ದ್ವೀಪದಲ್ಲಿರುತ್ತಾರೆ. ರಾಜರೆಂಬ ಜನರು—ಪೂರ್ವಜನ್ಮದಲ್ಲಿ ತುಂಬಾ ಪುಣ್ಯಮಾಡಿ ಈ ಜನ್ಮದಲ್ಲಿ ಗದ್ದುಗೆಯೇರಿದರು. ಅವರು ಮಾಡಿದ ಪುಣ್ಯವು ಬದುಕಿರುವಾಗಲೇ ಖರ್ಚಾಯಿತೆಂದರೆ— ಅವರು ಪದಚ್ಯುತರಾಗುತ್ತಾರೆ. ಪ್ರತ್ಯಕ್ಷ ದೇವತೆಗಳಾದ ರಾಜರು— ಪರಸ್ಪರ ಯುದ್ಧಮಾಡಿ ಅಧರ್ಮವನ್ನು ಕೊಂದುಬಿಡುವುದೂ ಉಂಟು.

ಹಿಂದುಸ್ಥಾನವನ್ನು ಪ್ರಾಚೀನ ಕಾಲದಿಂದ, ಸೂರ್ಯವಂಶ, ಚಂದ್ರವಂಶದ ರಾಜರು ಆಳುತ್ತಿದ್ದರು. ಇವರು ಸೂರ್ಯಚಂದ್ರರ ಮಕ್ಕಳು ಮರಿಮಕ್ಕಳಿರಬೇಕು. ಈಗಿನ ಎಷ್ಟೋ ಅರಸರು—ಅವರ ಸಂತತಿಯೇ ಆದುದರಿಂದ, ಅವರು ಮಾಡುವ ತಪ್ಪುಗಳಿಗೆ ಪಾಪವಿಲ್ಲವೆನ್ನುತ್ತಾರೆ. ನಮ್ಮ ದೇಶಕ್ಕೆ ಹೊರಗಿನಿಂದ ಕೆಲವು ನಕ್ಷತ್ರವಂಶದ ಅರಸರೂ ಬಹಳ ಹಿಂದೆ ಬಂದು ಸೇರಿಕೊಂಡರು. ಇದರಿಂದಾಗಿ ಇವತ್ತು ಈ ರಾಜರ ಸಂಖ್ಯೆ ಕೆಲವು ಡಜನುಗಳಿಗೆ ಮೇಲ್ಪಟ್ಟು ಇದೆ. ವಿದೇಶಗಳಲ್ಲೂ ಹಲವು ಅರಸರಿರುತ್ತಾರೆ. ಇವರಲ್ಲಿ ಕೆಲವರು ಶನಿ ಮೊದಲಾದ ಗ್ರಹಗಳ ವಂಶದವರೂ, ಕೆಲವರು— ಚಿಕ್ಕ ಪುಟ್ಟ ಉಲ್ಕ, ಧೂಮಕೇತುಗಳ ವಂಶದವರೆಂದೂ ತಿಳಿಯಬೇಕು. ಆದುದರಿಂದ ಅವರಲ್ಲಿ, ಅನೇಕ [illegible]ಕವಂಶದ ರಾಜರು ಉದುರಿ ಹೋಗಿರುತ್ತಾರೆ. ಈ [illegible]ತಿಯು ಸೂರ್ಯ ಚಂದ್ರ ವಂಶದ ರಾಜರಿಗಿಲ್ಲ. ಆಚಂದ್ರಾರ್ಕವಾಗಿ ಅವರಿಗೆ ಬದುಕಲು ಅಧಿಕಾರವಿದೆ.

ರಾಜನಾದವನ ಮುಖ್ಯ ಕರ್ತವ್ಯವೆಂದರೆ, ಜನರಿಂದ ಸಕಾಲಕ್ಕೆ ಕಂದಾಯವನ್ನು ವಸೂಲು ಮಾಡುವುದು. ಕಾರಣ—ಜನರಲ್ಲೇ ತುಂಬಾ ಹಣವು ಉಳಿದರೆ, ಅವರು ಅದನ್ನು ದುರ್ವ್ಯಯಪಡಿಸುವುದೆಂಬ ಭೀತಿಯಿದೆ. ಆದುದರಿಂದ ರಾಜನು—ಶ್ಯಾನುಭಾಗ, ಉಗ್ರಾಣಿಗಳ ಮುಖಾಂತರ ತರತರದ ತೆರಿಗೆಗಳನ್ನು ಒಟ್ಟುಮಾಡಿ ತನ್ನ ಬೊಕ್ಕಸದಲ್ಲಿ ಇರಿಸಿಕೊಳ್ಳುತ್ತಾನೆ. ಇದರಲ್ಲಿ ಒಂದು ಭಾಗವನ್ನು, ಬಲು ಉಪಕಾರಬುದ್ಧಿಯಿಂದ—ಜನರಿಗೆ ರಸ್ತೆ, ಆಸ್ಪತ್ರೆಗಳನ್ನು ಕಟ್ಟಿಸಲು ಮರಳಿ ಕೊಡುತ್ತಾನೆ. ಇದಕ್ಕಾಗಿ ನಾವು, 'ಅರಸರು ದೀರ್ಘಕಾಲ ಬಾಳಲಿ'— ಎಂದು ಹಾಡುತ್ತಿರಬೇಕು. ಅರಸರ ಖಜಾನೆಯಲ್ಲಿ ಹಿಡಿಸಲಾರದಷ್ಟು ಹಣವು ಉಳಿದುಬಿಟ್ಟರೆ, ಪರರಾಜ್ಯದ ಮೇಲೆ ದಂಡೆತ್ತಿ ಹೋಗಿ ಅದನ್ನು ವ್ಯಯಿಸಬೇಕೆಂದು ನೀತಿಸಾರವು ಹೇಳುವುದು. ಅರಸನು ಅರ್ಧಾಂಶ ಕಂದಾಯವನ್ನು ಆನೆ, ಆಭರಣ, ಅಂಗನೆಯರ ಸಲುವಾಗಿಯೂ, 1/6ನೇ ಅಂಶವನ್ನು ಸೇನೆ ಸಿಬ್ಬಂದಿಗಳಿಗೂ 1/6ನೇ ಅಂಶವನ್ನು ಪ್ರಜಾಹಿತಕ್ಕೂ ಉಪಯೋಗಿಸತಕ್ಕದ್ದೆಂದು ಧರ್ಮವು ಹೇಳುವುದು. ಹೀಗೆ ವ್ಯಯಿಸಲು, ಅವನಿಗೇ ಬುದ್ಧಿ ಸಾಲದೆ ಹೋದರೆ (ಹೀಗಿರಲಾರದು, ಕಾರಣ ಅವನು ಪ್ರತ್ಯಕ್ಷ ದೇವರು)—ಬೇರೆ ದಿವಾನರು, ಮಂತ್ರಿಗಳು ಎಂಬವರನ್ನು ಬಳಿಯಲ್ಲಿರಿಸಿಕೊಂಡು, ಅವರಿಂದ ತನಗೆ ಅನುಕೂಲಿಸುವ, ಉಪದೇಶಗಳನ್ನು ಕಡವಾಗಿ ತೆಗೆದುಕೊಳ್ಳಬೇಕು.

ಈಗಿನ ದಿನಗಳ ಜನರಿಗೆ ಈ ನಕ್ಷತ್ರ, ಗ್ರಹ, ಸೂರ್ಯ ಚಂದ್ರರ ವಂಶದ ಅರಸರ ಮೇಲೆ ಮಮತೆ ಕಡಿಮೆಯಾಗಿದೆ. ಇದು ಕಲಿಯುಗದ ಮಹಿಮೆ. ಅಲ್ಲದೆ—ಇವರು ನಕ್ಷತ್ರಗಳಿಂದ ಬಂದರೂ, ತಮಗೆ ಸಾಧಾರಣ 16. C.P. ವಿದ್ಯುತ್ ಬಲ್ಬಿನಷ್ಟು ಬೆಳಕು, ಅರಸರಿಂದ ಸಿಗುವುದಿಲ್ಲವೆಂದು—ಎಷ್ಟೊ ಅರಸರನ್ನು ಸಿಂಹಾಸನಗಳಿಂದ ಉರುಳಿಸಿ ಬಿಟ್ಟಿದ್ದಾರೆ. ಕೆಲವು ಕಡೆಗಳಲ್ಲಿ ಈ ಮಹಾಪಾಪವನ್ನು ಮಾಡಲು ಅಂಜಿ, ಅರಸರನ್ನು ಸಿಂಹಾಸನದಲ್ಲೇ ಬಿಟ್ಟು, ಸಿಂಹಾಸನದ ಸುತ್ತು ಕಬ್ಬಿಣದ ಸಲಾಕೆಗಳನ್ನು ಇರಿಸಿ, ಪಂಜರದಂತೆ ಮಾಡಿ, ಜೂಗಳಲ್ಲಿ ಪ್ರಾಣಿಗಳನ್ನು ಪ್ರದರ್ಶಿಸುವಂತೆ ಪ್ರದರ್ಶಿಸುತ್ತಾರೆ. ಇಷ್ಟು ಗೌರವವಾದರೂ ಅವರಿಗೆ ಸಲ್ಲುವುದು ಅವಶ್ಯವಲ್ಲವೆ!

ಈಗಿನ ವಿಚಾರಕ್ರಾಂತಿಯು ಬೇರೆ. ಜನರಿಗೆ ಪ್ರಜಾಸತ್ತೆಯು ಬೇಕಂತೆ. ಪ್ರಜಾಸತ್ತೆಯೆಂದರೆ ಪ್ರಜಾತಂತ್ರ. ಜನರು ತಾವಾಗಿ ತಮ್ಮನ್ನೆ ಆಳುವುದೇ ಈ ತಂತ್ರದ ಗುಟ್ಟು. ಜನರು ತಮ್ಮ ಕಂದಾಯವನ್ನು ಕಿತ್ತು, ಖರ್ಚುಮಾಡಲು, ತಮ್ಮ ಪ್ರತಿನಿಧಿಗಳನ್ನು ನೇಮಿಸುತ್ತಾರಲ್ಲ. ಈ ಅಧಿಕಾರಕ್ಕೆ 'ಓಟು' ಎನ್ನುತ್ತಾರೆ. ದುಡ್ಡಿಲ್ಲದವರಿಗೆ ಈ ಓಟಿನ ಅಧಿಕಾರವಿಲ್ಲ. ಕೆಲವು ದೇಶಗಳಲ್ಲಿ—ಹೆಂಗಸರಿಗೆ ಅಡುಗೆ ತಾಪತ್ರಯವಿರುವುದರಿಂದ ಓಟು ಬೇಡವೆಂದು ನಿರ್ಣಯಿಸಿದ್ದಾರೆ. ಈ ಓಟಿನ ಬಲದಿಂದ, ನಮ್ಮ ಇಷ್ಟ ಬಂದ ಮೂರ್ಖನನ್ನು ಸಹ ನಾವು ಎಸೆಂಬ್ಲಿ ಮೊದಲಾದ ಮಹಾ ಸಭೆಗಳಿಗೆ ಜನರನ್ನು ಆರಿಸಬಹುದಂತೆ. ಈ ಮೆಂಬರಿಕೆ ಆಸೆಯಿರುವವರು ತಮ್ಮ ಮನೋಧರ್ಮಕ್ಕೆ ಸರಿಯಾಗಿ ಪಂಗಡವನ್ನು ಮಾಡಿಕೊಂಡು ತಮ್ಮ ಪ್ರತಿನಿಧಿಗಳನ್ನು ಆರಿಸಿ, ಅವರಿಗಾಗಿ ಜನರ ಓಟನ್ನು ಕೇಳಿ, ಸಭೆಗಳಿಗೆ ಆರಿಸುವರು. ಇದು ತುಸು ಕಷ್ಟದ ವಿಷಯ. ಈಗ, ಊಟಕ್ಕೆ ಬೇಳೆ ಸಾರೇ ಅವಶ್ಯವೆನ್ನುವ ಒಂದು ತಂಡವಿದೆಯೆಂದೂ, ಊಟವಿಲ್ಲವಾದರೂ ಚಿಂತೆಯಿಲ್ಲ ಕಾಫಿ ಇದ್ದೇ ತೀರಬೇಕೆಂದೂ, ಇದೂ ಬೇಡ ವಿಸ್ಕಿಯೇ ಮುಖ್ಯವೆಂದೂ ಮೂರು ಭಿನ್ನ ಅಭಿಪ್ರಾಯಗಳಿವೆಯೆಂದು ತಿಳಿಯಿರಿ. ಒಂದೊಂದು ಅಭಿಪ್ರಾಯದ ಜನರು ಈಗ ಸೇರಿಕೊಂಡು, ವಿಸ್ಕಿಪಾರ್ಟಿ, ಸಾರುಪಾರ್ಟಿ, ಕಾಫಿ ಪಾರ್ಟಿ— ಎಂಬ ಪಂಗಡಗಳಾಗುವುವು. ಇವುಗಳ ಮೆಂಬರರು ಸಭೆಗೆ ಆರಿಸಿಬರುತ್ತಾರೆ. ಅವರಲ್ಲಿ ವಿಸ್ಕಿ ಪಂಗಡದ ಸದಸ್ಯರ ಸಂಖ್ಯೆ ಉಳಿದವರಿಗಿಂತ ಹೆಚ್ಚಾದರೆ, ಅವರೇ ಮುಂದೆ ಸರಕಾರವನ್ನು ನಡೆಸುವರು. ಹೀಗೆ ಪಾರ್ಟಿ ಮಾಡಿಕೊಳ್ಳಲು ಅವರವರ ಅಭಿರುಚಿಯೇ ಕಾರಣ. ಅದಕ್ಕೆ ಯಾವ ಹೆಸರನ್ನೂ ಇರಿಸಿಕೊಳ್ಳಬಹುದು. ಅಂತು, ಈ ಪಾರ್ಟಿಗಳ ಸಂಖ್ಯೆಯು ಸಭೆಯ ಸದಸ್ಯರ ಸಂಖ್ಯೆಗಿಂತ ಹೆಚ್ಚಬಾರದೆಂದು ನಿಯಮವಿದೆ. ಅಲ್ಲದೆ ಪಾರ್ಟಿಗಳ ಪ್ರತಿಜ್ಞೆಯೊಂದಿದೆ. ಅದರಂತೆ, ಆರಿಸಿ ಬಂದ ಅಧಿಕಾರಿಗಳು, ತಮ್ಮ ಪಂಗಡದವರಿಗಲ್ಲದೆ ಉಳಿದವರಿಗೆ ಸರಕಾರಿ ಚಾಕರಿ, ಕಂಟ್ರಾಕ್ಟು ಮೊದಲಾದುವನ್ನು ಕೊಡುವುದಿಲ್ಲೆಂದು ಪ್ರತಿಜ್ಞೆ ತೆಗೆದುಕೊಳ್ಳಬೇಕು.

ಈ ರೀತಿಯ ಪ್ರಜಾತಂತ್ರವು ಅಮೇರಿಕ, ಫ್ರಾನ್ಸು ಮೊದಲಾದ ಹಲವು ದೇಶಗಳಲ್ಲಿದೆ. ಇವುಗಳು ಸಹ ಚೆನ್ನಾಗಿ ಕೆಲಸ ಮಾಡುವುದಿಲ್ಲವೆಂದು ಕೆಲವರ ಮತ. ಮನುಷ್ಯನ ಬುದ್ಧಿಯು, ಇಂದು ಪ್ರಜಾತಂತ್ರಕ್ಕೆ ಮೀರಿ ಹೋಗಿದೆಯೆಂದು ಬಲು ಜನರ ಅಭಿಪ್ರಾಯ. ಕೆಲವರನ್ನುತ್ತಾರೆ—"ಜನರ ಬುದ್ಧಿಯೆಂದರೆ ಸಾರಾಯಿಯ ಹಾಗೆ. ಅವರ ಬಹುಮತದಂತೆ ಸರಕಾರ ನಡೆಯಿಸುವುದೆಂದರೆ, ತರತರದ ಸಾರಾಯಿಗಳನ್ನು ಸೇರಿಸಿ ಕುಡಿದಂತೆ"—ಎಂದು. ಈ ವಿಚಾರವನ್ನು ಸಾರಾಯಿಯ ಅಭ್ಯಾಸವಿಲ್ಲದ ಜನರಿಗೆ ಹೇಳಿ ಉಪಯೋಗವಿಲ್ಲವೆಂದು ಇಲ್ಲಿಗೆ ನಿಲ್ಲಿಸಲಾಗಿದೆ. ಅಂತು ಇಷ್ಟು ನಿಜ—ಪ್ರಜಾತಂತ್ರವು ಬಂದು ಬಹಳ ದಿನಗಳಾದುವು. ಈ ಫ್ಯಾಶನು, ಹಳೆತಾಯಿತೆಂದು.

ಈಗಿನ ತಾರೀಕಿನ ಸರಕಾರವೆಂದರೆ—ಪೆಸಿಸಮ್. ಇದನ್ನು ಕೆಲವರು—'ಫಾಸಿಜಂ'— ಎನ್ನುವುದೂ ಉಂಟು. ಜನರು ಫಾಸಿಗೆ ಕೊಟ್ಟಂತೆ ಎಂಬುದು ಅವರ ತಾತ್ಪರ್ಯವಿರಬೇಕು. ಈ ಸರಕಾರವು ಒಬ್ಬ ನಾಯಕನ ಕೈಯಲ್ಲಿರುವುದು. ಅವನು ಇತರರಿಂದ ಆರಿಸಲ್ಪಡುವಷ್ಟು ಅಸ್ವತಂತ್ರನಾಗದೆ ತಾನೇ ತನ್ನನ್ನು ಆರಿಸಿಕೊಂಡು ಮುಂದೆ ಬರುವನು. ಮುಂದೆ ತನಗೆ ಬೇಕಾದ ಇತರರನ್ನು ಅವನು ಆರಿಸುವನು. ಹೀಗೆ ಆರಿಸಲ್ಪಟ್ಟವರು, ಉಳಿದವರನ್ನು ಆರಿಸುವರು. ಇವರಿಂದ ಯಾವತ್ತೂ ಜನರು ಆರಿಸಲ್ಪಡುವರು. ಈ ಸರ್ವಾಧಿಕಾರಿಯಿಂದಾಗಲಿ, ಅವನ ಅಧಿಕಾರಿಗಳಿಂದಾಗಲಿ ಆರಿಸಲ್ಪಡದವರು ದೇಶದ ಹೊರಗೆ ಹಾರಿಸಲ್ಪಡುವರು. ಜನರು ಯಾವಾಗಲೂ ಬುದ್ಧಿವಂತರಿರುವುದಿಲ್ಲ. ಹೆಡ್ಡರು ಹೆಡ್ಡರನ್ನೆ ಆರಿಸುವರು—ಆದುದರಿಂದ ಪ್ರಜಾತಂತ್ರವು ವ್ಯರ್ಥವೆಂದು—ಇವರ ಅಂಬೋಣ. ಆದುದರಿಂದ ತಾನು ಇತರರಿಗಿಂತ ಬುದ್ಧಿವಂತನೆಂಬವನು—ತಾನೇ ಅಧಿಕಾರಿಯಾಗಿ, ಉಳಿದವರನ್ನು ದೇಶದ ಹಿತಕ್ಕಾಗಿ ನಡೆಯಿಸುವನು. ಅವನ ರಭಸಕ್ಕೆ ಸರಿಯಾಗಿ ನಡೆಯಲಾರದವರು ಹಿಂದುಳಿಯುತ್ತಾರೆಂದು ತಿಳಿಯಬೇಕು.

ಒಬ್ಬ ಸರ್ವಾಧಿಕಾರಿಯು ಕಾಲದಲ್ಲಿ, ಅವನಿಗೂ ಬುದ್ಧಿವಂತನು ಬಂದರೆ ಅವನು ಸರ್ವಾಧಿಕಾರಿಯಾಗುವನು. ಈತನು ಸಾಯುವ ಮೊದಲು, ಮಠದ ಸ್ವಾಮಿಯರ ಪಟ್ಟ ಕಟ್ಟುವಂತೆ, ಇನ್ನೊಬ್ಬ ಬುದ್ಧಿವಂತನನ್ನು ರಾಜ್ಯಕ್ಕೆ ಕೊಟ್ಟು ಹೋಗುವನು. ಇವನು ಅತಿ ಬುದ್ಧಿವಂತನಾದರೆ, ದೇಶಕ್ಕೆ ಕೆಟ್ಟದ್ದುಂಟೆಂದು ಜನರ ಅಭಿಮತ. ಅಂತು, ಸರ್ವಾಧಿಕಾರಿ ತಾನಾಗಿರುವ ವಿಷಯದಲ್ಲಿ ಪ್ರತಿ ಪ್ರಜೆಯೂ ತಾನು ಯೋಗ್ಯನು, ಎಂದು ತಿಳಿಯುತ್ತಿರುವುದು ಸಂತೋಷದ ವಿಷಯ.

ಈಗ ಇನ್ನೊಂದು ಬಗೆಯ ಸರಕಾರವು ಬಂದಿದೆ. ಇದು ನಿಜವಾದ ಪ್ರಜಾತಂತ್ರವಂತೆ. ಇದೇ ಕಮ್ಯುನಿಸಮ್ ಎಂಬುದು. ಈ ಇಸುಮಿನಲ್ಲಿ ದೇಶದ—ನೆಲ, ನೀರು—ಗಾಳಿ, ಗನಿ—ಚಿನ್ನ—ಎಲ್ಲವೂ ದೇಶದ್ದು, ಮಿದುಳು—ಸಹ ದೇಶವು—ಎಲ್ಲರದ್ದು. ಎಲ್ಲರಿಗೂ ಅದರಲ್ಲಿ ಅಧಿಕಾರವಿದೆ. ಎಲ್ಲರಿಂದ, ಎಲ್ಲರ ಹಿತಕ್ಕಾಗಿ, ಎಲ್ಲರು ಆಳಿ, ಎಲ್ಲರು ಆಳಿಸಿಕೊಳ್ಳುವುದೇ ಇದರ ಗುರಿ. ಎಲ್ಲರಿಗೂ ಇದು ಗುರಿಯು. ಹೀಗೆ, ಎಲ್ಲವರ ಪಂಗಡದಲ್ಲಿರಲು—ಕೆಲಸ ಮಾಡದವರಿಗೆ ಮಾತ್ರ ಅಧಿಕಾರವಿಲ್ಲವೆಂಬುದು ಇವರು ಮಾಡುವ ಅನ್ಯಾಯವೇ ಸರಿ. ಈ ಜನರ ಹೇಳಿಕೆಯಂತೆ—ಎಲ್ಲರಿಗೂ ಎಲ್ಲಾ ಜೀವನ ನಡೆಯಿಸಲು ಸ್ವಾತಂತ್ರ್ಯವಿದೆ (ಶ್ರೀಮಂತ ಜೀವನ, ನಿರುದ್ಯೋಗದ ಜೀವನ ಬಿಟ್ಟು) ಯಂತೆ! ಎಲ್ಲರಿಗೂ ಸಮ ಹಕ್ಕು. ಮಗುವಿನಿಂದ ಮುದುಕರ ತನಕ, ಹೆಂಗಸರಿಂದ ಗಂಡಸರ ತನಕ, ಎಲ್ಲರೂ ಕ್ರಿಕೆಟ್ ಆಡಬಹುದು, ಎಲ್ಲರೂ 1 ರಾತ್ಲ ಒಣರೊಟ್ಟಿ ತಿನ್ನಬಹುದು, ಎಲ್ಲರೂ ಓದಬಹುದು, ಎಲ್ಲರೂ ಬದುಕಬಹುದು, ಎಲ್ಲರೂ ವಿವಾಹವಾಗಬಹುದು, ಎಲ್ಲರೂ—ವಿವಾಹವಿಚ್ಛೇದ ಮಾಡಿಕೊಳ್ಳಬಹುದು. ಇಂಥ ಸರಕಾರವಿರುವ ರಷ್ಯದಲ್ಲಿ ಜನರೇ ದೇವರಾಗಿರುತ್ತಾರೆ. ಆದುದರಿಂದ ಆ ದೇಶದಲ್ಲಿ ಹೊರಗಿನಿಂದ ಬಂದಿರುವ ಏಸು ಮೊದಲಾದ ದೇವರಿಗೆ ಒಳಗಿರಲು ಅಪ್ಪಣೆಯಿಲ್ಲವಂತೆ!

ಇಲ್ಲೂ—ಎಲ್ಲರಂತೆ ಕೆಲಸ ಮಾಡಲು ಮನಸ್ಸಿಲ್ಲದವರೂ, ಮಾಡಿದ ಕೆಲಸಕ್ಕಿಂತ ಹೆಚ್ಚು ಕದಿಯುವವರೂ ಇರುವರಂತೆ. ಇವರನ್ನು ಎಲ್ಲರ ಪಟ್ಟಿಯಿಂದ ಇಲ್ಲದಂತೆ ಮಾಡುತ್ತಾರಂತೆ.

ಇಂಥ ದೇಶದಲ್ಲಿನ ಅಂಗಡಿಗಳು ಎಲ್ಲರ ಅಂಗಡಿಗಳೇ ವಿನಹ ಖಾಸಗಿ ಅಂಗಡಿಗಳಲ್ಲ. ಕಲೆ, ಯೋಚನೆ, ಮಿದುಳು—ಎಲ್ಲವೂ ಎಲ್ಲರದು. ಒಬ್ಬೊಬ್ಬನದಲ್ಲ. ಯಾವನ ಮನುಷ್ಯನು ಇದು ತನ್ನ ತಲೆ ಅನ್ನುವ ಬದಲು ಎಲ್ಲರ ತಲೆಯೆಂದೂ, ತನ್ನ ಹೆಂಡತಿಯೆನ್ನುವ ಬದಲು ಎಲ್ಲರ ಹೆಂಡತಿಯೆಂದೂ,—ಹೇಳುವಂತಾದೀತೆಂದ ಟೀಕಾಕಾರರು ನುಡಿಯುತ್ತಾರೆ. ಆದರೆ ಇದು,—'ಎಲ್ಲಾ ಟೀಕಾಕಾರರೂ ಅಲ್ಲ,' 'ಎಲ್ಲಾ ಟೀಕೆಯೂ ಅಲ್ಲ' 'ಎಲ್ಲರ ಟೀಕೆಯೂ ಅಲ್ಲ'.

ಇಂಥ ಎಲ್ಲರ ಸರಕಾರದ ಪ್ರಜೆಗಳು ಎಲ್ಲರಾದುದರಿಂದ—ಇಲ್ಲಿ ಕಲಾವಿದ, ರಸಿಕ, ಕಲಾಪ್ರೇಮಿ ಎಂಬ ಬೇರೆ ಜಾತಿಗಳಿಲ್ಲ. ಎಲ್ಲರು ಎಲ್ಲಾ ಜಾತಿಯವರು.

ಇಂಥ ಸರಕಾರವೂ, ನಮ್ಮ ಸಭ್ಯತೆಗೆ ಅವಮಾನಕರವೇ ಸರಿ. ಮನುಷ್ಯನನ್ನು ಆಳಲು ಒಂದು ಸರಕಾರ ಬೇಕೆಂದರೆ—ಅವನು ಅಸಭ್ಯನಿರಬೇಕೆಂದು ಹೇಳಿದ ಹಾಗಾಯಿತು. ಅಲ್ಲದೆ ಅವನಿಗೆ ಬೇರೆಯವರಿಂದ, ಅಥವಾ ಎಲ್ಲರಿಂದ ಆಳಿಸಿಕೊಳ್ಳಲು ಬಂದರೆ ತನ್ನಿಂದಲೇ ಏಕೆ ಆಳಿಸಿಕೊಳ್ಳಲಾರನು, ಎಂಬುದು ಇನ್ನೊಂದು ಪ್ರಶ್ನೆ. ಈ ರೀತಿಯ ಜನರು ತಮಗೆ ಸರಕಾರವೇ ಬೇಡ—ಎನ್ನುತ್ತಾರೆ. ಇವರನ್ನು ನಿಸ್ಸರಕಾರದವರು—ಎನ್ನುವ. ನಿಸ್ಸರಕಾರದಲ್ಲಿ*—ಕಾಯಿದೆ, ಕಾನೂನು ಯಾವುದೂ ಬೇಕಿಲ್ಲವಂತೆ. ಇದ್ದರೂ, ಆಚಂದ್ರಾರ್ಕ ಕಾಯಿದೆಗಳು ಬೇಕಿಲ್ಲವಂತೆ. ಈ ನಿಮಿಷಕ್ಕೆ ಬೇಕಾಗುವ ಕಾಯಿದೆಯನ್ನು ಈ ನಿಮಿಷವೇ ಮಾಡಿ ಮುಂದಿನ ನಿಮಿಷದಲ್ಲಿ ಮರೆತು ಬಿಡಬಹುದು. ಉಳಿದ ವಿಷಯಗಳಲ್ಲಿ ನಿಸ್ಸರಕಾರದವರು ಎಲ್ಲರ ಸರಕಾರದಂತೆ ಸಮತಾವಾದಿಗಳು. ಇವರಿಗೂ ಅವರಿಗೂ ಇರುವ ಇನ್ನೊಂದು ಮುಖ್ಯ ಭೇದವೆಂದರೆ—ಇವರು ಸೇನೆ, ಯುದ್ಧಗಳು ಬೇಡವೆನ್ನುವವರು. ಸರಕಾರವೇ ಇಲ್ಲದ ಮೇಲೆ ಸೇನೆಯಾಕೆ? ಸಾಯುವವರಿಲ್ಲದ ಮೇಲೆ ಸಮರವೇಕೆ?

---

*ನಿಸ್ಸರಕಾರ—ಎಂಬುದು ದೊಡ್ಡ ವ್ಯಾಕರಣ ದ್ರೋಹ. ಇಲ್ಲಿ "ನಿಃ" ಎಂಬ ಸಂಸ್ಕೃತ (ಹಿಂದೂ) ಕುಮಾರಿಯೂ 'ಸರಕಾರ'ವೆಂಬ ಉರ್ದುಕುಮಾರನನ್ನು ವರಿಸಿ ಒಂದಾಗಿರುವುದು. ಇದು ಅಶಾಸ್ತ್ರೀಯ ವಿವಾಹವೆಂದು ತಿಳಿಯತಕ್ಕದ್ದು. ಕೇವಲ ಹಿಂದು ಮುಸಲ್ಮಾನರ ಐಕ್ಯದ ಸಲುವಾಗಿ ಈ ರೀತಿಯ ನಂಟಸ್ತಿಕೆಯನ್ನು ಮಾಡಿಸಿರುತ್ತೇವೆ. ಹಿರಿಯರು [illegible] ಮಾಡದಿರಲಾರರೆಂಬುದನ್ನು ನಂಬದಿರಲಾರೆನಾಗಿರಬಹುದಲ್ಲ.

(ಈ ಅಧ್ಯಾಯವು ಮುಂದಿನ ಸಂಚಿಕೆಯಲ್ಲಿ ಕೊನೆಗೊಳ್ಳುವುದು)

ಜಾಪಾನಿನಲ್ಲಿ ಸುಂಟರ ಗಾಳಿಯ ಹಾವಳಿ.

[illegible] ಕೋಲಗಳು.

ಒಂದು ರೇಡಿಯೋ ಸೆಟ್ಟನ್ನು ತರಿಸಿ ಎಲ್ಲಿ ಇಡಿಸಬಹುದೆಂಬ ವಿಷಯದಲ್ಲಿ ನಮ್ಮ ನಗರ ಸಭೆಯಲ್ಲಿ ಇಬ್ಬರು ರಾವ್ ಬಹದ್ದೂರರ ಎರಡು ಅಭಿಪ್ರಾಯಗಳು. ಈ ವಿಚಾರಕ್ಕೂ ಒಂದು ಕಮಿಟಿಯ ಅವಶ್ಯಕತೆ ಕಂಡಿತು. (ರೇಡಿಯೋ ಸೆಟ್ಟಿನ ಬೆಲೆ ರೂ. ೩೫೦.)

* * *

ಮೊಬಲಗು ಹೆಚ್ಚಿನದಲ್ಲ; ವಿಷಯವೂ ಅಲ್ಪವಲ್ಲ. ಆದಕಾರಣ 'ಸೆಟ್ಟ'ನ್ನು ಎಲ್ಲಿಂದ ಕೊಂಡುಕೊಳ್ಳಬೇಕೆಂಬ ವಿಷಯವನ್ನು ಚರ್ಚಿಸಿ, ಆ ವಿಚಾರವನ್ನು ಒಂದು ಕಮಿಟಿಯ ವಿಮರ್ಶೆಗೊಪ್ಪಿಸಬಹುದಾಗಿದೆ.

* * *

'ಚುನಾವಣೆಗಳಲ್ಲಿ ಪಾವಿತ್ರ್ಯಬೇಕೆಂದು ಮಹಾತ್ಮಾಜಿಯವರು ಹೇಳಿದರು. ಅದು ಕೊಂಗ್ರೆಸ್ ವಾಲರನ್ನು ಕುರಿತು ಆಡಿದ ಮಾತು.

* * *

ನಗರ ಸಭೆಯ ಚುನಾವಣೆಯಲ್ಲಿ ಉಮೇದ್ವಾರರಾದ ಕೆಲವರ ಮೋಟಾರುಗಳು ಶರಾಬು ಗುತ್ತಿಗೆಗಳ ಮುಂದೆ ನಿಲ್ಲುವುದೇಕೆ ಎಂದು ಕೆಲವರಿಗೆ ಆಶ್ಚರ್ಯ. ನಿಂತಿದ್ದರೂ ಏನಾಯಿತು? ಮೋಟಾರು ಗುತ್ತಿಗೆಯೊಳಗೆ ಹೋಗಬಾರದು; ಗುತ್ತಿಗೆಯು ಮೋಟಾರಿದ್ದಲ್ಲಿಗೆ ಬರಬೇಕು. ಇದು ಶಿಸ್ತು.

* * *

ಜನರು ಈಗ ತಿಳಿಯಲಿಚ್ಛಿಸುವುದು ಇಷ್ಟು:-'ಕುಡಿಯಬೇಡಿರೆನ್ನುವುದಕ್ಕೂ ಕುಡಿಸುವುದಕ್ಕೂ ಭೇದವೇನು?' ಎಂದು.

* * *

ಮೋಟಾರಿಗೆ ಪೆಟ್ರೋಲಿನ ಅವಶ್ಯಕತೆಯಿದೆ; ಮನುಷ್ಯರಿಗೂ ಇದೆ. ಇವೆರಡರ ಲಕ್ಷ್ಯವು ಸಿಗದೆ ಮಂಕರಾಗುವವರೂ ಇರುವರು.

* * *

ಈ ಸಲದ ಚುನಾವಣೆಯು ನಮಗೆ ಇಷ್ಟನ್ನು ತಿಳಿಸಿದೆ:-ದುಡ್ಡಿದ್ದವರೂ, ಇಲ್ಲದವರೂ, ಸೋತವರೂ ಬೇರೆಲ್ಲಿಯೂ ಸೋಲದವರೂ, ಕೌನ್ಸಿಲೆಂದರೇನೆಂದು ತಿಳಿದವರೂ ತಿಳಿಯದವರೂ ಚುನಾವಣೆಗೆ ನಿಲ್ಲಬಹುದು.

* * *

ಚರ್ಚ್‌ಹಿಲ್ಲರು ಹೊಸ ವೇಷಧಾರಣೆ ಮಾಡಿರುವರು. ಚಲಚ್ಚಿತ್ರದ ಮೂಲಕ ಜಾಪಾನಿನ ಅಭ್ಯುದಯ ಮೊದಲಾದ ವಿಷಯಗಳ ಮೇಲೆ ತಮ್ಮ ಜ್ಞಾನ ಭಂಡಾರವನ್ನು ಹಂಚುವರಂತೆ. ಜಾಪಾನಿನಿಂದ ೨೦ ಶಿಲ್ಲಿಂಗುಗಳ ಸೈಕಲು ಬಂದ ಮೇಲೂ ಜಾಪಾನಿನ ಅಭ್ಯುದಯವು ಬ್ರಿಟಿಷರಿಗೆ ತಿಳಿಯಲಿಲ್ಲವೇ?

* * *

ಮಹಾ ಪೂಜೆಯಾಗದೆ ಅಂಗಿ-ಕೋಟುಗಳನ್ನು ಹಾಕಿಕೊಂಡವರು ದೇವಾಲಯ ಪ್ರವೇಶ ಮಾಡಬಾರದೆಂದಿರುವುದರಿಂದ ಆ ಮಹಾಪೂಜೆಯನ್ನು ಬೇಗನೆ ತೀರಿಸುವಂತೆ ವಿನಂತಿಸಿಕೊಳ್ಳಲು ಭಕ್ತವೃಂದವು ಉಡುಪಿಯ ಪರ್ಯಾಯ ಸ್ವಾಮಿಗಳವರ ಬಳಿಗೆ 'ಡೆಪ್ಯುಟೇಶನ್' ಒಯ್ಯುವುದೆಂದು ಸುದ್ದಿ. ಇದು ವೇಗದ ಯುಗ.

* * *

ಪೂಜೆಯಲ್ಲಿಯೂ 'ಶೋರ್ಟ್‌ಹೇಂಡ್' ಇರಬಹುದು. ದೇವದರ್ಶನದಲ್ಲಿಯೂ ಊಟದಲ್ಲಿಯೂ ಇರುವುದೇ ಎಂಬುದು ಇನ್ನು ತಿಳಿದು ಬರಬೇಕಾಗಿದೆ.

* * *

ಇದೊಂದು ಸುದ್ದಿ--ಧಾರವಾಡದಲ್ಲಿ ಸ್ತ್ರೀಯರ ಒಂದು ಕ್ರಿಕೆಟ್ ವರ್ಗವು ರಚಿಸಲ್ಪಟ್ಟಿದೆಯೆಂದು! ಜಾಹಿರಾತುದಾರರು 'ನೋಟ್' ಮಾಡಿಕೊಳ್ಳಲಿ!

ಸಾವಿರಾರು ಮರಣಗಳು.

ಕಳೆದ ೩೦ ವರ್ಷಗಳಿಂದ ಕಂಡೂ ಕೇಳದಂಥ ಭಯಂಕರ ಸುಂಟರಗಾಳಿಯು ಜಾಪಾನಿನ ಮೇಲೆ ಬೀಸಿ ಅಪಾರ ಆಸ್ತಿಯ ವಿನಾಶದ ಗುರುತನ್ನು ಬಿಟ್ಟು ಹೋಗಿದೆ. ಜಾಪಾನಿನ ಬೇರೆ ಬೇರೆ ಭಾಗಗಳಲ್ಲಿ ಸಾವಿರಾರು ಮಕ್ಕಳು ಕೊಲ್ಲಲ್ಪಟ್ಟಿರುವರೆಂದು ಊಹಿಸಲಾಗಿದೆ. ಈ ತನಕ ದೊರೆತ ಲೆಕ್ಕದಂತೆ ಒಸಾಕಾದಲ್ಲಿ ೬೩೭ ಮಂದಿ ಹತರಾಗಿರುವರು, ೩೦೫೩ ಮಂದಿಗಳಿಗೆ ಜಖಂ; ಅಲ್ಲದೆ ಕ್ಯೋಟೋದಲ್ಲಿ ೧೮೪ ಮಂದಿ ಮರಣಪಟ್ಟಿರುವರು, ೩೦೬ ಮಂದಿಗೆ ಜಖಂ; ಟೋಕಿಯೋದಲ್ಲಿ ೪ ಮರಣ; ೩೩ ಜನರಿಗೆ ಜಖಂ, ೨೩೫೦ ದೋಣಿಗಳು ಸಮುದ್ರದಲ್ಲಿ ಮುಳುಗಿಹೋಗಿವೆ. ಇವುಗಳಲ್ಲಿ ಮರಣಪಟ್ಟವರ ಲೆಕ್ಕವಿಂದು ತಿಳಿದುಬಂದಿಲ್ಲ. ಸುಮಾರು ೫೦ ಸಾವಿರ ಮನೆಗಳು ನೆಲಸಮವಾಗಿವೆ. ಹತರಾದವರಲ್ಲಿ ಹೆಚ್ಚಿನವರು ಚಿಕ್ಕ ಮಕ್ಕಳು.

ಮೌ। ಶೌಕತಾಲಿಯವರು.

ಮೌಲಾನಾ ಶೌಕತಾಲಿಯವರು ಎಸೆಂಬ್ಲಿ ಉಮೇದ್ವಾರಿಕೆಯನ್ನು ತಿಳಿಸಿದ್ದು, ಪ್ರಚಾರಕಾರ್ಯಕ್ಕಾಗಿ ಅಲ್ಲಹಾಬಾದಿಗೆ ಬಂದು ಕೆಲ ಮುಸ್ಲಿಂ ಮುಖಂಡರನ್ನು ಕಂಡು ಮಾತಾಡಿ, ಬನಾರಸಿಗೆ ತೆರಳಿದರು. ಡಾಕ್ಟರ್ ಶಫತ್ ಅಹಮದ್‌ಖಾನರು ಇವರಿಗೆ ಪ್ರತಿಸ್ಪರ್ಧಿಗಳು.

ಲಾಹೋರಿನ ಚುನಾವಣೆ ನಾಟಕ.

ಮುನ್ಸಿಪಲ್ ಚುನಾವಣೆಯ ಸಂಬಂಧ ಒಂದು ಖೂನಿ ನಡೆಯಿತೆಂದು ಲಾಹೋರಿನ ವೈಸ್ ಚೆಯರ್ಮ್ಯಾನರೇ ಮೊದಲಾದ ಕೆಲ ಮಂದಿಗಳು ಆಪಾದನೆಗೊಳಗಾಗಿರುವರು. ಈಗ, ಒಬ್ಬ ಇಲೆಕ್ಶನ್ ಏಜಂಟನನ್ನು (ಮುಸ್ಲಿಂ) ನಡುರಾತ್ರಿ ಯಾರೋ ಕಡಿದರೆಂಬ ಸುದ್ದಿ.

೧೦೦೦೦ ರೂಪಾಯಿ ಬಹುಮಾನ! ಸರ್ಪದಂಶವನ್ನು ಮಂತ್ರವಾದದಿಂದ ಚಿಕಿತ್ಸಿಸಬಹುದೇ?

ಬೊಂಬಾಯಿ ಹಾಫ್ಕಿನ್ ಇನ್ಸ್ಟಿಟ್ಯೂಟಿನವರು, ಕೇವಲ ಮಂತ್ರವಾದದಿಂದ ಸರ್ಪವಿಷವನ್ನು ಗುಣಪಡಿಸಬಹುದೆಂಬುದನ್ನು ನಂಬಲಾರರು,—ಹಾಗೆ ಗುಣಪಡಿಸುವವರಿಗೆ ೧೦,೦೦೦ ರೂಪಾಯಿ ಬಹುಮಾನ ಕೊಡುವವಾಗಿ ಸಾರಿರುವರು.

ಲಾಹೋರಿನ ಮೋಥ ಗೇಟ್ ಎಂಬಲ್ಲಿ ವಾಸಿಸುವ ಮಹಮದ್ ಶಾಫಿ ಎಂಬವರು ಮುಂದೆ ಬಂದು, ತಾನು ಗುಣಪಡಿಸಿ ತೋರಿಸಬಲ್ಲೆನೆಂದೂ, ಪ್ರಯೋಗಾರ್ಥ ಒಂದು ಕೋತಿಗೆ ತೀಕ್ಷ್ಣ ವಿಷವುಳ್ಳ ನಾಗರಹಾವನ್ನು ಕಚ್ಚಿಸಿ ತನ್ನ ಸಾಮರ್ಥ್ಯವನ್ನು ತೋರುವೆನೆಂದೂ ಪ್ರಕಟನೆ ಕೊಟ್ಟಿದ್ದಾರೆ. ಹಾಫ್ಕಿನ್ ಇನ್ಸ್ಟಿಟ್ಯೂಟಿನವರು ಒಪ್ಪಿದರೆ ಇವರು ಬೊಂಬಾಯಿಗೆ ಬರಲು ಸಿದ್ಧರು. (ಕುರಾನಿನಿಂದ ಕೆಲವು ಮಂತ್ರಗಳನ್ನುಚ್ಚರಿಸಿಯೇ ಇವರು ಗುಣಪಡಿಸುವರಂತೆ)

ಕಡಪಾ ಜಿಲ್ಲೆಯಲ್ಲಿ 'ಆಸ್ಬೆಸ್ಟೋ' ನಾರು.

ವಿದ್ಯುಚ್ಛಕ್ತಿಯ ತಂತಿಗಳಿಗೆ, ಬೆಂಕಿ ಹಿಡಿಯದಂತೆ, ಮತ್ತಿತರ ವಸ್ತುಗಳಿಗೆ, ಬೋಗುಣಿಗಳಿಗೆ, ಸಾಮಾನ್ಯ ಹಂಚಿನ ಬದಲಾಗಿ ಇಡುವ ಸಿಮೆಂಟ್ ಹಂಚುಗಳಿಗೆ, ಮತ್ತಿತರ ಅನೇಕ ಬಗೆಯ ಉಪಯೋಗಕ್ಕೆ ಬರುವಂತಹ 'ಆಸ್ಬೆಸ್ಟೊ' ವಸ್ತುವು ಕಡಪಾ ಜಿಲ್ಲೆಯ ಒಂದು ಪ್ರದೇಶದಲ್ಲಿ ದೊರೆತಿದೆ. ಮದರಾಸಿನಲ್ಲಿರುವ ಮಿ। ಟಿ. ಹೆಚ್. ಕ್ಲೈನ್ ಎಂಬವರು ಒಂದು ಕಂಪೆನಿಯನ್ನು ಸ್ಥಾಪಿಸಿ, ಈ ನಾರಿನ ಪ್ರದೇಶವನ್ನು ಬಾಡಿಗೆಗೆ ಪಡೆದಿರುವರು. ಈಗಾಗಲೇ ಈ 'ಆಸ್ಬೆಸ್ಟೊ'ವಿಗೆ ಸುಮಾರು ೪೫ ಸಾವಿರ ರೂಪಾಯಿಗಳ ಬೇಡಿಕೆ ಬಂದಿದೆಯಂತೆ. ಒಬ್ಬನು ಬಾವಿ ಅಗೆವಾಗ ಇದನ್ನು ಕಂಡುಕೊಂಡನು.

ರಿಸರ್ವ್ ಬೇಂಕ್ ನೇಮಕಗಳು.

ಭಾವೀ ರಿಸರ್ವ್ ಬ್ಯಾಂಕಿನ ಗವರ್ನರರಾಗಿ ಸರ್ ಓಸ್ಬೋರ್ನ್ ಸ್ಮಿತ್ ಎಂಬವರ ನೇಮಕವಾಗಿದೆ. ಡೆಪ್ಯುಟಿ ಗವರ್ನರರಾಗಿ, ಇಂಡಿಯಾ ಹೈಕಮಿಶನರರಾಗಿರುವ ಸರ್ ಭೂಪೇನ ಮಿತ್ರರನ್ನು ನೇಮಿಸಬಹುದೆಂದು ಸುದ್ದಿ.

ಕೋರ್ಟಿನಲ್ಲಿ ಹಿಂದೂವಿನ ಕೊಲೆ.

ಸಿಂಧಪ್ರಾಂತ್ಯದ ಹೈದರಾಬಾದಿನಲ್ಲಿ, ಜುಡಿಶಿಯಲ್ ಕಮಿಶನರರ ಕೋರ್ಟಿನಲ್ಲಿ ಮಹಾರಾಜ ನಾಥುರಾಮ್ ಎಂಬವರ ವಿಚಾರಣೆಯು ತಾ. ೨೦ರಲ್ಲಿ ನಡೆಯುತಿತ್ತು. ನಾಥುರಾಮ್‌ರವರು "ಇಸ್ಲಾಮಿನ ಚರಿತ್ರೆ"ಯೆಂಬ ಪುಸ್ತಕವನ್ನು ಬರೆದುದೇ ಅಪರಾಧ. ಅವರಿಗೆ ಸೆಶನ್ಸ್ ಕೋರ್ಟಿನಲ್ಲಿ ಈ ಬಗ್ಗೆ ೧೮ ತಿಂಗಳ ಶಿಕ್ಷೆಯಾದುದರ ಮೇಲೆ ಈ ಕೋರ್ಟಿನಲ್ಲಿ ಅಪೀಲು ದಾಖಲು ಮಾಡಲಾಗಿತ್ತು. ನಾಥುರಾಮ್‌ರವರು ಒಂದು ಬದಿಯಲ್ಲಿ ಕುಳಿತಿರಲು, ಕೆಲವು ಮುಸ್ಲಿಮರು ಅವರನ್ನು ಸುತ್ತುಗಟ್ಟಿ ಇಬ್ಬರು ಅವರ ಕೈಗಳನ್ನು ಹಿಡಿಯಲು ಒಬ್ಬನು ಚೂರಿಯಿಂದ ತಿವಿದನು. ನಾಥುರಾಮ್‌ರವರನ್ನು ಆಸ್ಪತ್ರೆಗೊಯ್ದರೂ ಸಫಲವಾಗದೆ, ಪ್ರಾಣತ್ಯಾಗಮಾಡಿದರು.

ಇಬ್ಬರು ಮುಸ್ಲಿಮರನ್ನು ಕೈದು ಮಾಡಿರುವರು. ಸಿಂಧಪ್ರಾಂತ್ಯದ ಅನೇಕ ನಗರಗಳಲ್ಲಿ, ಈ ಕೊಲೆಯ ನಿಷೇಧಾರ್ಥ ಹರ್ತಾಲವನ್ನಾಚರಿಸಲಾಗಿದೆ.

ಬೊಂಬಾಯಿಗೊಂದು ಹೊಸ ಸಿನೆಮಾ ಕಂಪೆನಿ.

"ಬೊಂಬಾಯಿ ಟೋಕಿಸ್ ಲಿಮಿಟೆಡ್" ಎಂಬ ಹೆಸರಿನಲ್ಲಿ, ಬಹು ವ್ಯಯದಿಂದ, ಬೊಂಬಾಯಿಯ ಮಲಬಾರ್ ಹಿಲ್ಲಿನಲ್ಲಿ, ನೇಪಿಯನ್ ಸೀ ರಸ್ತೆಯಲ್ಲಿ ಒಂದು ದೊಡ್ಡ 'ಸ್ಟುಡಿಯೋ'ವನ್ನು ರಚಿಸುತ್ತಿರುವರು. ಇಂಗ್ಲಾಂಡಿನಿಂದಿಬ್ಬರು ಯಂತ್ರಸಂಯೋಜಕರು ಈ ಬಗ್ಗೆ ಬಂದಿರುವರು.

'ಬೇಂಕ್ ಆಫ್ ಇಂಗ್ಲಾಂಡಿ'ನ ಲಾಭ.

ಪ್ರಸಿದ್ಧ 'ಬೇಂಕ್ ಆಫ್ ಇಂಗ್ಲಾಂಡು' ಈ ವರ್ಷ ಸೇಕಡಾ ೬ರಂತೆ ಡಿವಿಡೆಂಡನ್ನು ಕೊಟ್ಟಿದೆ. ಲಾಭದ ಮೊತ್ತ ರೂ. ೬೩೩,೦೦೦ ಪವನು!

ಲಖ್ನೋ ನಗರಕ್ಕೆ ವಿದ್ಯುಚ್ಛಕ್ತಿ ಸ್ಮಶಾನ.

ಲಖ್ನೋ ನಗರದ ಸ್ಮಶಾನ ಘಟ್ಟಗಳನ್ನು ತೆಗೆದು, ವಿದ್ಯುಚ್ಛಕ್ತಿಯ ಸ್ಮಶಾನಗಳನ್ನು ನಿರ್ಮಿಸುವರೆಂದು ಸುದ್ದಿಯಿದೆ. ಇದು ಹಿಂದೂದೇಶದಲ್ಲಿ ಎರಡನೆಯದಾಗುವುದು. ಪ್ರಥಮವಾಗಿ ಕಲ್ಕತ್ತದಲ್ಲಿ ೧೯೦೬ರಲ್ಲಿ ಇಂತಹ ಒಂದು ಸ್ಮಶಾನವನ್ನು ಸ್ಥಾಪಿಸಿರುವರು. ಇಂತಹ ಸ್ಮಶಾನವು ಮೊದಲನೆಯದಾಗಿ ಇಟೇಲಿಯಲ್ಲಿ ೧೮೬೯ರಲ್ಲಿ ರಚಿಸಲಾಯಿತೆಂದೂ, ಈಗ ಅಲ್ಲಿ ೩೮ ಸ್ಮಶಾನ ಭೂಮಿಗಳಿವೆಯೆಂದೂ ತಿಳಿದುಬರುತ್ತದೆ.

ಅಹಮ್ಮದಾಬಾದಿನಲ್ಲಿ ಪುನಃ ಮುಷ್ಕರ.

ಅಹಮ್ಮದಾಬಾದಿನ ರಾಮಕೃಷ್ಣ ಮತ್ತು ಜಹಾಂಗೀರ್ ವಕೀಲ್ ಎಂಬೆರಡು ಗಿರಣಿಗಳ ಕೂಲಿಯಾಳುಗಳು ಸಂಬಳ ಕಡಿತದ ಪ್ರಶ್ನೆಯ ಮೇಲೆಯೇ ಪುನಃ ಮುಷ್ಕರ ಹಿಡಿದಿರುವರು. ಮಜೂರ ಸಂಘದವರಿಂದ ಈ ಮುಷ್ಕರವು ಅಧಿಕೃತವಾದುದಲ್ಲವಾದ ಕಾರಣ, ಮುಷ್ಕರಗಾರರು ಪುನಃ ಕೆಲಸಕ್ಕೆ ಸೇರಬೇಕೆಂದು ಸಂಘದವರ ಅಪ್ಪಣೆ. ಆದರೆ, ಗಿರಣಿ ಅಧಿಕಾರಿಗಳು ಇಷ್ಟರೊಳಗೇ ಹೊಸ ಕೂಲಿಗಾರರನ್ನು ಸೇರಿಸಿಕೊಂಡಿರುವರು.

ಬೊಂಬಾಯಿ ಕೊಂಗ್ರೆಸ್; ಪತ್ರಿಕಾ ಪ್ರತಿನಿಧಿಗಳ ಸ್ಥಳಾನುಕೂಲತೆಯ ವಿಚಾರ

"ಕೊಂಗ್ರೆಸ್ ಅಧಿವೇಶನದ ಸಂದರ್ಭದಲ್ಲಿ ಪತ್ರಿಕಾ ಪ್ರತಿನಿಧಿಗಳಿಗೆ ಪರಿಮಿತ ಸ್ಥಳವನ್ನು ಮಾತ್ರ ಇಡಲಾಗಿದೆ. ವಿಶೇಷ ಪ್ರತಿನಿಧಿಗಳನ್ನು ಕಳುಹಲಿಚ್ಛಿಸುವ ಪತ್ರಿಕಾಧಿಪರು ಮುಂಚಿತವಾಗಿಯೇ ತಿಳಿಸಬೇಕು" ಎಂದು ಕೊಂಗ್ರೆಸ್ಸಿನ ಸ್ವಾಗತ ಸಮಿತಿಯ ಜನರಲ್ ಸೆಕ್ರೆಟರಿಯವರು ಪ್ರಕಟನೆ ಕೊಟ್ಟಿರುವರು.

ಬವೇರಿಯಾದ ಅಬಲೆಯ ಸಾಹಸ.

ಬವೇರಿಯಾ ಪ್ರಾಂತ್ಯದ [illegible] ಎಂಬ ಗ್ರಾಮದ [illegible] ಹೆಂಗಸು, ಮೂವರು ದರೋಡೆಕಾರರನ್ನು ಕಾದಾಡಿ ಪರಾಜಯಗೊಳಿಸಿರುವಳು! ಆ ನಗೆ(?) ಜಖಂಗೊಂಡು ಆಸ್ಪತ್ರೆಗೊಯ್ಯಲ್ಪಟ್ಟಿದ್ದಾಳೆ. ದರೋಡೆಕಾರರು ಪರಾರಿಯಾದರು. ಆಕೆಗೆ ಸರಕಾರದ ಬಹುಮಾನ ದೊರೆಯಬಹುದು.

ಸಂಕ್ಷೇಪ ವಾರ್ತೆ

ಇಟೇಲಿಯ ಎಲ್ಲ ಮಕ್ಕಳಿಗೆ ಆರೇ ವಯಸ್ಸಿನಿಂದ ಸೈನಿಕ ತರಬೇತಿಯನ್ನು ಕೊಡಬೇಕೆಂಬ ಒಂದು ಸೂಚನೆ ಮಂತ್ರಿಮಂಡಲವು ಅನುಮೋದಿಸಿದೆ. ಇನ್ನು ಓದು, ಬರಹಗಳಲ್ಲಿ ಮಾತ್ರ ಜಾಣರಾಗಿದ್ದರೆ ಸಾಲದು; ಯುದ್ಧ ವಿಚಾರಗಳನ್ನೂ ವಿದ್ಯಾರ್ಥಿಯು ಚೆನ್ನಾಗಿ ತಿಳಿದಿರಬೇಕು.

ನೃತ್ಯಕಲಾ ಕೋವಿದ ಉದಯಶಂಕರರು ಹಿಂದೂ ದೇಶಕ್ಕೆ ಬಂದಿರುವರು. ಇನ್ನು ಕೆಲವೇ ದಿನಗಳಲ್ಲಿ [illegible] ಹೋಗಲಿದ್ದಾನೆ. ಅಲ್ಲಿ "ಕಥಾಕಳಿ" ನೃತ್ಯವನ್ನು ಅಭ್ಯಸಿಸಲಿರುವನು.

ಮದರಾಸಿನವರು ಕವೀಂದ್ರ ರವೀಂದ್ರರನ್ನು, ಅಕ್ಟೋಬರ ತಾ. ೨೦ಕ್ಕೆ ಮದರಾಸಿಗೆ ಬಂದು ಒಂದು ವಾರ ಉಳಕೊಳ್ಳುವಂತೆ ಕೇಳಿಕೊಂಡಿರುವರು. ಈ ಸಂದರ್ಭದಲ್ಲಿ "ಠಾಕೂರ ಸಪ್ತಾಹ"ವೊಂದನ್ನು ಜರಗಿಸಬೇಕೆಂಬ ಆಲೋಚನೆಯೂ ನಡೆದಿದೆ.

ಕಾಶಿ ಮಹಾರಾಜರು ದತ್ತ ಸ್ವೀಕಾರಮಾಡಿರುವರು. ಅವರನ್ನು ಅಭಿನಂದಿಸಿ ಕಾಶಿಯ ಪಂಡಿತವರ್ಯರು ಮಾನಪತ್ರವನ್ನರ್ಪಿಸಿದರು.

"ಸಪ್ಟಂಬರ ತಾ. ೨೬ರಿಂದ ಜಾಗ್ರತೆ" ಎಂದು ದರ್ಭಾಂಗದ ಮಾರವಾಡಿಗಳ ಅಂಗಡಿಗಳಿಗೆ ಯಾರೋ ನೋಟೀಸು ಹಚ್ಚಿರುವರು. ಗವರ್ನರರು ಅಲ್ಲಿಗೆ ತಾ. ೨೮ಕ್ಕೆ ಹೋಗುವರು.

ಸಂಯುಕ್ತ ಅಮೇರಿಕದ ಮಹಾಮುಷ್ಕರವು ಕೊನೆಗೊಂಡಿತು.

ಒಂದು ಸಾವಿರ ಕೆಲಸಗಾರರು ಬೊಂಬಾಯಿಯಲ್ಲಿ ಕೊಂಗ್ರೆಸ್ ನಗರದ ನಿರ್ಮಾಣದಲ್ಲಿ ನಿರತರಾಗಿರುವರು.

೧೪ ಪ್ರಾಂತಿಕ ಕೊಂಗ್ರೆಸ್ ಕಮಿಟಿಗಳು ಬಾಬೂ ರಾಜೇಂದ್ರ ಪ್ರಸಾದರವರ ಹೆಸರನ್ನು ಸೂಚಿಸಿರುವುದರಿಂದ, ಉಳಿದ ಕಮಿಟಿಗಳು ವಿರೋಧಾಭಿಪ್ರಾಯ [illegible] ಪ್ರಸಾದರವರನ್ನೇ ಅಧ್ಯಕ್ಷರನ್ನಾಗಿ ಚುನಾಯಿಸುವ [illegible].

ನಮ್ಮ ಸಾರ್ವಭೌಮರ ೪ನೇ ಕುಮಾರ ಜೋರ್ಜರವರ ವಿವಾಹೋತ್ಸವವು ಇದೇ ಬರುವ ನವಂಬರ ತಾರೀಕು ೨೯ರಲ್ಲಿ ಜರಗುವುದು.

ಹತ್ತು ರೂಪಾಯಿಗಳಿಗೆ ಬಂಧ ಕಟ್ಟಿ, ಲಾಹೋರು ನಗರದ ೧೬ ವಯಸ್ಸಿನ ಬಾಲಕನು ಎತ್ತರದ ಸಂಕದಿಂದ ನದಿಗೆ ಹಾರಿದವನು ಮತ್ತೆ ಏಳಲೇ ಇಲ್ಲ.

ಆಕಾಲಿ ಸಿಖ್ಖರ ಪರಿಷತ್ತು ಬಾಹೋಲಾ ಎಂಬಲ್ಲಿ ಸೇರಿ, ಜಾತೀಯ ನಿರ್ಧಾರವನ್ನು ನಿಷೇಧಿಸಿ ಠರಾವಿತ್ತಿತು.

ಹಿಂದೂದೇಶದ ರೈತರಿಗೆ ರಷ್ಯದ ಕ್ರಾಂತಿಕಾರರ ಉದಾಹರಣೆಯಿಂದ ಭಾಷಣ ಮೂಲಕ ಬೋಧನೆ ಕೊಟ್ಟರೆಂದು ಲಖ್ನೋ ಸಿಟಿ ಮೆಜಿಸ್ಟ್ರೇಟರು, ಕೊಂಗ್ರೆಸ್ ಕೆಲಸಗಾರರಾದ ಶ್ರೀ ಭುವನೇಶ್ವರ ನಾರಾಯಣ ವರ್ಮ ಎಂಬವರಿಗೆ ೨ ವರ್ಷದ ಕಠಿಣ ಸಜೆ ವಿಧಿಸಿರುವರು.

ಇಂಗ್ಲಾಂಡಿನಿಂದ ಇಂಡಿಯಕ್ಕೆ ಎರಡೇ ದಿನಗಳಲ್ಲಿ ತಲಪುವ ನಿರ್ಧಾರದಿಂದ ಸರ್ ಅಲನ್ ಕೊಬ್ಬನ್ ಎಂಬವರು ಇದೇ ತಾ. ೨೨ರಲ್ಲಿ ಹೊರಟು, ಪರಾಜಯ ಹೊಂದಿದರು.

ಸಿಂಧಿಯಾ ಸ್ಟೀಮ್ ನೇವಿಗೇಶನ್ ಕಂಪೆನಿ ಮತ್ತು ಇತರ ಬ್ರಿಟಿಷ ಕಂಪೆನಿಗಳೊಳಗೆ ಸ್ಟೀಮರು ದರಗಳ ವಿಷಯವಿದ್ದ ಸ್ಪರ್ಧೆಯು ಕಳೆದ ವಾರ ಒಂದು ಒಪ್ಪಂದವಾಗಿ ಮುಗಿಯಿತು.

ಮೂರು ವಾರಗಳ ನಂತರ, ಕಳೆದ ವಾರ ರೂಪಾಯಿ ೨೬,೨೯,೪೫೬ ಮೌಲ್ಯದ ಭಂಗಾರವು ಪುನಃ ಬೊಂಬಾಯಿಯಿಂದ ಪರದೇಶಗಳಿಗೆ ರಫ್ತಾಯಿತು. ಇದು ಕೂಡಿ ಈ ತನಕ ರಫ್ತಾದುದರ ಮೌಲ್ಯ ರೂ. ೧೯,೬೪೫,೬೪೧,೫೦೮.

ಮುನ್ಸಿಪಲ್ ನೌಕರರಿಗೆ ಒಂದು ಯೂನಿಫಾರ್ಮಿನ ಬದಲಾಗಿ ಎರಡು ಜೊತೆ ಯೂನಿಫಾರ್ಮುಗಳನ್ನು ಕೊಡಬೇಕೆಂದು ಬೆಂಗಳೂರು ಮುನ್ಸಿಪಾಲಿಟಿಯ ಠರಾವು.

ಮಂಗಳೂರು.

ದಕ್ಷಿಣ ಕನ್ನಡ ಜಿಲ್ಲೆಯ ಹರಿಜನ ಸೇವಾಸಂಘದ ಪರವಾಗಿ ಸೆಂಟ್ರಲ್ ಬೋರ್ಡಿನಿಂದ ಖಾಸಾಗಿ ಬಂದಿರುವ ಸ್ಕೀಮಿನ ಕುರಿತು ಆಲೋಚಿಸುವ ಹಾಗೂ ಇನ್ನಿತರ ಕೆಲವು ಮುಖ್ಯ ವಿಷಯಗಳನ್ನು ಚರ್ಚಿಸುವ ಮತ್ತು ಮುಂದಿನ ಕಾರ್ಯಕ್ರಮವನ್ನು ತಯಾರಿಸುವ ಉದ್ದೇಶದಿಂದ ಬರುವ ೩೦—೯—೩೪ನೇ ಆದಿತ್ಯವಾರ ಸಾಯಂಕಾಲ ೪ ಘಂಟೆಗೆ ಮಂಗಳೂರಿನಲ್ಲಿರುವ ಡಿ. ಸಿ. ಮಿಶ್ಯನಿನ ಹಾಲಿನಲ್ಲಿ ಸೇರುವ ಮಹಾ ಸಭೆಗೆ ಮೆಂಬರರೆಲ್ಲರೂ ದಯಮಾಡಿ ಬರಬೇಕಾಗಿ ಅಪೇಕ್ಷಿಸುತ್ತೇನೆ” ಎಂದು ಹರಿಜನಸೇವಾಸಂಘದ ಕಾರ್ಯದರ್ಶಿ ಶ್ರೀ ಎಸ್. ಎಸ್. ಶಿಲ್ಲೆಯವರು ಬರೆಯುತ್ತಾರೆ.

ಇದೇ ತಿಂಗಳ ತಾ. ೨೩ನೇ ಆದಿತ್ಯವಾರ ಮಂಗಳೂರು ಸಿಟಿ ಆರ್ಯ ಸಮಾಜ ಮಂದಿರದಲ್ಲಿ ಶ್ರೀ ನಾರಾಯಣ ಶಿಲ್ಲೆಯವರ ಅಧ್ಯಕ್ಷತೆಯಲ್ಲಿ “ಆಸ್ತಿಕವಾದ” (ದೇವರು ಇದ್ದಾನೋ) ಎಂಬ ವಿಷಯದ ಕುರಿತು ಒಂದು ವಾಗ್ವಾದ ನಡೆಯಿತು. ಶ್ರೀ ಬಸ್ತಿ ದಾಸಪ್ಪ ಶೆಣೈಯವರು ಆಸ್ತಿಕವಾದವನ್ನು ಸಮರ್ಥಿಸಿ ಮಾತನಾಡಿದರು. ನಾಸ್ತಿಕ ಮತದ ಪಕ್ಷವನ್ನು ಹಿಡಿದು ಶ್ರೀ ವಿದ್ಯಾರ್ಥಿ, ವಿಶ್ವಭಾನು ಇವರು ವಾದಿಸಿದರು. ಬಳಿಕ, ಅಧ್ಯಕ್ಷರು ತಮ್ಮ ಭಾಷಣದಲ್ಲಿ ‘ಪರಮಾತ್ಮನೊಬ್ಬನು ಇದ್ದಾನೆ’ ಎಂಬುದನ್ನು ಯುಕ್ತಿಯುಕ್ತವಾದ ಮತ್ತು ಅನೇಕ ಪ್ರಮಾಣಯುಕ್ತ ಅಭಿಪ್ರಾಯದಿಂದ ಉತ್ತಮ ರೀತಿಯಲ್ಲಿ ಪುಷ್ಟೀಕರಿಸಿದರು. ಸಭಿಕರಲ್ಲಿ ಇತರ ಒಬ್ಬ ಮಹಾಶಯರೂ ಭಾಗವಹಿಸಿದ್ದರು. ನಂತರ, ಸಮಾಜದ ಕಾರ್ಯದರ್ಶಿಗಳು ಅಧ್ಯಕ್ಷರಿಗೂ, ಸಭಿಕರಿಗೂ ಧನ್ಯವಾದಗಳನ್ನರ್ಪಿಸಿ ವೈದಿಕ ಧರ್ಮದ ಸಿದ್ಧಾಂತದ ತಿಳುವಳಿಕೆಯು ಪ್ರತಿಯೊರ್ವನಲ್ಲಿ ಆಗಬೇಕು ಮತ್ತು ಎಲ್ಲರಲ್ಲಿ ಈ ಕುರಿತು ವಿಚಾರ ವೃದ್ಧಿಯಾಗಬೇಕಾಗಿಯೇ ಇಂತಹ ತರ್ಕ ಸಭೆಗಳನ್ನು ಏರ್ಪಡಿಸಲಾಗಿರುತ್ತದೆ ಎಂಬುದನ್ನು ವಿವರಿಸಿದ ನಂತರ ಸಭೆಯು ಕೊನೆಗೊಂಡಿತು. ಇದೇ ಬರುವ ತಾ. ೩೦ನೇ ದಿನ ಸಮಾಜ ಮಂದಿರದಲ್ಲಿ ಶ್ರೀಯುತ ಬಾಲಕೃಷ್ಣ ನಾಯಕರವರು “ಸಂಸ್ಕಾರ ಜೀವನ” ಎಂಬ ಕುರಿತು ಬೆಳಗ್ಗೆ ೮ ಗಂಟೆಗೆ ಭಾಷಣಮಾಡುವರು. ಸರ್ವರಿಗೂ ಸುಸ್ವಾಗತವಿದೆ.

ಈ ಸಲದ ಟೀಚರ ಮೆನೇಜರರ ಕಡೆಯಿಂದ ಮೂಲಿಕ, ಕೊಳಕಾಡಿ ರಾ। ಕೆ. ಪಿ. ರಾಮರಾಯರನ್ನೂ, ಅರ್ಕುಳ ರಾಮ ಹೆಗಡೆಯವರನ್ನೂ ಟೀಚರ ಮೆನೇಜರರು ಚುನಾಯಿಸುವುದು ಸ್ಪಷ್ಟ ಎಂದೊಂದು ವಾರ್ತೆ.

ಇದೇ ಅಕ್ಟೋಬರ ತಾ. ೧ನೇ ಸೋಮವಾರ ದಿನ, ಇಲ್ಲಿಯ ಬಿಸೆಂಟ್ ಗರ್ಲ್ಸ್ ಶಾಲೆಯಲ್ಲಿ ಶ್ರೀಮತಿ ಕಲ್ಯಾಣಿಬಾಯಿ ಪಂಡಿತ ಅಧ್ಯಕ್ಷತೆಯಲ್ಲಿ ‘ಬಿಸೆಂಟ್ ದಿನಾಚರಣೆ’ಯು ಜರಗಲಿದೆ.

ನಗರ ಸಭೆಯ ಚುನಾವಣೆಯ ವೋಟಿನ ಕೋಲಾಹಲವು ಕಳೆದ ಬುಧವಾರ ನಡೆದು ಮುಗಿಯಿತು. ಮೋಟಾರು ಓಡಾಟವು ಈ ವರ್ಷ ವಿಶೇಷವಾಗಿತ್ತು. ಜನರ ಕುತೂಹಲವೂ ಕಡಿಮೆಯಿರಲಿಲ್ಲ. ವೋಟು ಗಳನ್ನು ಈ ದಿನ ಎಣಿಕೆ ಮಾಡಲಾಗುವುದು. ಫಲಿತಾಂಶವು ಸಾಯಂಕಾಲ ಪ್ರಕಟವಾಗಬಹುದು.

ದ. ಕ. ಜಿಲ್ಲಾ ಕಾಂಗ್ರೆಸು ಸಮಿತಿ ಹಾಗೂ ಮಂಗಳೂರು ತಾಲೂಕು ಕಾಂಗ್ರೆಸುಸಮಿತಿಯ ಜಂಟಿಸಭೆಯೊಂದು ಸ್ಥಳೀಯ ಖಾದೀಭಂಡಾರದ ಕಟ್ಟಡದಲ್ಲಿ ತಾ. ೨೪ನೇ ದಿನ ಡಾ। ಯು. ಪಿ. ಮಲ್ಯರ ಅಧ್ಯಕ್ಷತೆಯಲ್ಲಿ ಜರಗಿತು. ದೇಶಭಕ್ತ ಕಾರ್ನಾಡು ಸದಾಶಿವ ರಾಯರು ಹಾಗೂ ಮೊನ್ನೆ ತಾನೇ ವೆಲ್ಲೂರು ಜೈಲಿನಿಂದ ಬಿಡುಗಡೆ ಹೊಂದಿ ತವರೂರಿಗೆ ಬಂದಿರುವ ವೀರನಾರೀ ಶ್ರೀಮತಿ ಕಮಲಾದೇವಿ ಇವರು ಕೂಡಾ ಹಾಜರಿದ್ದರು. ಸಭೆಯಲ್ಲಿ, ಬರುವ ಕಾಂಗ್ರೆಸು ಅಧಿವೇಶನಕ್ಕೆ ಪ್ರತಿನಿಧಿಗಳಾಗಿ ಹೋಗಲಿಚ್ಛಿಸಿರುವವರನ್ನು ಚುನಾಯಿಸಲಾಯಿತು. ಮಂಗಳೂರು ತಾಲೂಕಿನಿಂದ ೧೨ ಮಂದಿ ಆರಿಸಲ್ಪಟ್ಟಿರು, ಎಸೆಂಬ್ಲಿ ಇಲೆಕ್ಷನ್ ಬೋರ್ಡನ್ನು ಸ್ಥಾಪಿಸುವ ಕಾರ್ಯವು ಬರುವ ತಾ. ೩೦ನೇ ದಿನಕ್ಕೆ ಮುಂದೂಡಲ್ಪಟ್ಟಿತು. ಮಹಾತ್ಮಾಜಿಯವರ ಜನ್ಮ ದಿನೋತ್ಸವದ ಪವಿತ್ರ ವಾರವನ್ನು ಕೈಲಾದ ಮಟ್ಟಿಗೆ ಯಶಸ್ವಿಯಾಗಿ ಜರಗಿಸಬೇಕೆಂದೂ ಜಿಲ್ಲೆಯ ಮಹಾಜನರು ಉತ್ಸಾಹದಿಂದ ಆ ವಾರದ ಕಾರ್ಯಕ್ರಮಗಳಲ್ಲಿ ಭಾಗವಹಿಸಲು ವಿನಂತಿ ಮಾಡಿಕೊಳ್ಳಬೇಕೆಂದೂ ತೀರ್ಮಾನವಾಗಿ ಸಭೆಯು ಕೊನೆಗೊಂಡಿತು.

“ಮಹಾತ್ಮಾಜಿಯವರ ಜನ್ಮದಿನೋತ್ಸವದ ಪವಿತ್ರ ವಾರವು ಇದೇ ಬರುವ ಒಕ್ಟೋಬರ ತಾ, ೨ರಿಂದ ೯ನೇ ದಿನ ಪರ್ಯಂತ ಅವಿಛಿನ್ನ ರೀತಿಯಲ್ಲಿ ಆಚರಿಸಲ್ಪಡುತ್ತದೆ. ಹಾಗೂ ಸಾಧು ಸೂಚನೆ ಆ ಪವಿತ್ರವಾರದಲ್ಲಿ ಇಲ್ಲಿ ಆಚರಿಸುವವರನ್ನೇ. ಮೆರವಣಿಗೆ, ಧ್ವಜವಂದನ ಸಭೆ, ಖಾದೀ ಮಾರಾಟ, ಕಾಂಗ್ರೆಸಿಗೆ ಸದಸ್ಯರನ್ನು ಸೇರಿಸುವುದು ಇವೇ ಮೊದಲಾದ ಕಾರ್ಯಕ್ರಮಗಳನ್ನು ನಾವು ಅಂಗೀಕರಿಸುತ್ತಾ, ಇದನ್ನು ಯಶಸ್ವಿಗೊಳಿಸಲು ಮಂಗಳೂರು ಮಹಾಜನರ ಸಂಪೂರ್ಣ ಸಹಕಾರ ಹಾಗೂ ಸಹಾನುಭೂತಿಯನ್ನು ಅತಿ ದೈನ್ಯತೆಯಿಂದ ಬೇಡುತ್ತೇವೆ” ಎಂಬುದಾಗಿ ಸ್ಥಳೀಯ ಕಾಂಗ್ರೆಸುಸಮಿತಿಯ ಜತೆಕಾರ್ಯದರ್ಶಿಗಳಾದ ಶ್ರೀ. ಕೃಷ್ಣಪ್ಪ ತಿಂಗಳಾಯ ಮತ್ತು ಬಿ. ಅನಂತಶೈ ಇವರು ತಿಳಿಸುತ್ತಾರೆ.

ಶ್ರೀ ಕಾರ್ನಾಡು ಸದಾಶಿವರಾಯರ ಮೇಲಿನ ಖಟ್ಲೆಯು ಪುನಃ ಬರುವ ಒಕ್ಟೋಬರ ತಾ. ೬ಕ್ಕೆ ಮುಂದಿಡಲ್ಪಟ್ಟಿದೆ.

ಬೋಳಾರ ಹಳೆಕೋಟೆ ಮಾರಿಯಮ್ಮದೇವರ “ಭಂಡಾರಮನೆ”ಗೆ ಇದೇ ತಾ. ೨೬ನೇ ರಾತ್ರಿ ೮ ಗಂಟೆ ಸಮಯಕ್ಕೆ ಥಳ್ಳನೆ ಬೆಂಕಿ ಬಿದ್ದು ಸುಟ್ಟುಹೋಯಿತು. ಆರೇಳು ವರ್ಷಗಳ ಹಿಂದೆ ಇದೇ ಸ್ಥಳದಲ್ಲಿದ್ದ ಅತಿ ದೊಡ್ಡ ಕಟ್ಟಡವು ಇದೇ ರೀತಿ ಬೆಂಕಿಬಿದ್ದು ಸುಟ್ಟುಹೋದ ನಂತರ ಈ ಕಟ್ಟಡವನ್ನು ಚಿಕ್ಕದಾಗಿ ಕಟ್ಟಿಸಲಾಗಿತ್ತು. ಇದು ಮೊನ್ನೆ ತಾನೇ ಅಗ್ನಿದೇವತೆಗೆ ಬಲಿಯಾದುದು ಆಶ್ಚರ್ಯ. ಸಾಮಾನುಗಳೇನೂ ನಷ್ಟವಾಗಲಿಲ್ಲ.

ಸ್ಕೌಟ್ ಮಾಸ್ತರರ ತರಬೇತಿಯು ಬರುವ ಒಕ್ಟೋಬರ ತಾ. ೧೯ರಿಂದ ೨೮ರ ತನಕ ಗುರ್ಪುರ ಪ್ರಯಾಣಿಕರ ಬಂಗಲೆಯ ಮೈದಾನಿನಲ್ಲಿ ನಡೆಯುವುದು. “ಕಬ್” ಮಾಸ್ತರರ ತರಬೇತಿಯು ಒಕ್ಟೋಬರ ತಾ. ೨೯ರಿಂದ ನವಂಬರ ತಾ. ೫ರ ವರೆಗೆ ನಡೆಯಲಿದೆ.

ಉಡುಪಿ ತಾಲೂಕಿನಲ್ಲಿ ಗೌಡಸಾರಸ್ವತ ಸ್ಥಂಪದಲ್ಲಿ ಶ್ರೀಮಂತರಾಗಿ ಹೆಸರುವಾಸಿಯಾಗಿರುವ ಬಾಂಗಾಳ ನಾಯಕ ಮನೆತನದ ಹಾಗೂ ಇಲ್ಲಿನ ಪ್ರಮುಖ ವಕೀಲರೂ ಜಮೀನ್ದಾರರೂ ಆಗಿರುವ ಶ್ರೀ ಪಿ. ಪಾಂಡುರಂಗ ನಾಯಕ್ ಬಿ. ಎ., ಬಿ. ಎಲ್. ಎಡ್ವೋಕೇಟ್ ಇವರ ದ್ವಿತೀಯ ಪುತ್ರ ಶ್ರೀ ಪಿ. ರಮಾನಾಥನಾಯಕ್ ಎಮ್. ಎ. ಇವರು ಐ. ಸಿ. ಎಸ್.ಗೆ ಆರಿಸಲ್ಪಟ್ಟಿರುವರಾಗಿ ತಾ. ೨೭ನೆ ದಿನ ಕೇಬಲ್ ಮೂಲಕ ವರ್ತಮಾನ ಬಂದಿರುತ್ತದೆ. ಇವರಿಗೆ ಧನ್ಯವಾದಗಳು.

ಪುತ್ತೂರು ದಸರಾ ಕಾಲದ ಪ್ರದರ್ಶನಗಳಿಗೆ—

ಧರ್ಮಾರ್ಥವಾಗಿ ವಸ್ತುಗಳನ್ನು ಒಯ್ಯುವರೆ ಸಿ. ಪಿ. ಸಿ ಮೋಟರ್ ಕಂಪೆನಿಯವರು ಒಡಂಬಟ್ಟಿರುವರು. ಯಾವತ್ತೂ ಶಾಲಾ ಉಪಾಧ್ಯಾಯರೂ, ಪ್ರದರ್ಶಕರೂ ಅವರ ಈ ಸೌಜನ್ಯದ ಉಪಯೋಗವನ್ನು ಹೊಂದಲಿ. ಪಾರ್ಸೆಲುಗಳನ್ನು ಭದ್ರವಾಗಿ ಮಾಡತಕ್ಕದೆಂದೂ, ಆಕಸ್ಮಿಕ ಅವಘಡಗಳಿಗೆ ಬಸ್ಸು ಕಂಪೆನಿಯವರು ಹೊಣೆಯಲ್ಲವೆಂದೂ ತಿಳಿಯತಕ್ಕದ್ದು.

ಶಿವರಾಮ ಕಾರಂತ.

ಮೂಲ್ಕಿ — ಸ್ಥಳೀಕ ಬೋರ್ಡ್ ಹೈಸ್ಕೂಲು ಮೈಕಲ್‌ಮಾಸ್ ಸಂಬಂಧ ತಾ. ೨೯ಕ್ಕೆ ಮುಚ್ಚಲ್ಪಟ್ಟು ಇದೇ ಬರುವ ತಾ. ೧—೧೦—೩೪ಕ್ಕೆ ತೆರೆಯಲ್ಪಡುವುದು.

ಸ್ಥಳೀಕ ಬೋರ್ಡ್ ಹೈಸ್ಕೂಲಿನಲ್ಲಿ “ಪ್ರಭಾತ” ಎಂಬ ಹಸ್ತ ಲಿಖಿತ ತ್ರೈಮಾಸಿಕ ಪತ್ರಿಯು ಹೊರಟಿದ್ದು ಇಂಗ್ಲೀಷು ಕನ್ನಡ ಕೂಡಿ ಅಮೂಲ್ಯ ವಿಷಯಗಳಿಂದ ತುಂಬಿರುವುದು ಸಂತೋಷಕರ.

ಸ್ಥಳೀಕ ಶ್ರೀ ವೆಂಕಟ್ರಮಣ ದೇವಳದ ಕಡೆಯಿಂದ ಒಂದು “ರೇಡಿಯೋ” ತರಿಸುತ್ತಾರಾಗಿ ವದಂತಿಯಿದೆ.

ಇಲ್ಲಿ ನೂತನವಾಗಿ ಸ್ಥಾಪಿಸಲ್ಪಟ್ಟ ಬಿಲ್ಲವ ಸಮಾಜ ಸೇವಾಸಂಘದವರು ಈ ವರೆಗೆ ಜಮೆಯಾದ ಹಣದಲ್ಲಿ ರೂ. ೨೦೦ನ್ನು ನಿರಖು ಠೇವಣಾತಿಯಾಗಿ ಬೇಂಕಿನಲ್ಲಿಟ್ಟಿರುತ್ತಾರೆ.

ರೈಲುಬಂಡಿಗಳ ಸಮಯ.

	ಹೊರಡುವ ಸಮಯ	ಇಲ್ಲಿಗೆ ತಲುಪುವ ಸಮಯ
ಮೈಲ್	ಬೆಳಗ್ಗೆ ೯.೫೫	ಸ್ಸಾಯಂ ೪.೨೦
ಮಿಕ್ಸೆಡ್	,, ೬	ರಾತ್ರಿ ೮.೪೫
ಪೆಸೆಂಜರ್	ಅಪರಾಹ್ನ ೧೨.೫೫	ಅಪರಾಹ್ನ ೨.೫೦
ಶಟ್ಲ್	ಸಾಯಂ ೫.೨೫	ಬೆಳಗ್ಗೆ ೯.೪೦

ಹೊಸ ಸರ್ವೀಸುಗಳು.

ಕಾಂಞಂಗಾಡ್	ಬೆಳಗ್ಗೆ ೮.೪೫	
ವರೆಗಿನ ಬಂಡಿ		ಅಪರಾಹ್ನ ೧.೩೨
ಕಾಸರಗೋಡು	ಅಪರಾಹ್ನ ೩.೨೫	
ವರೆಗಿನ ಬಂಡಿ		ಸಾಯಂ ೬.೦೫

ತಾಲೂಕುಗಳಿಂದ.

ಉಡುಪಿ — ಇದೇ ಬರುವ ನವರಾತ್ರಿ ವೇಳೆ ಗಾಯನ, ಭಾಷಣ, ಅಂಗಸಾಧಕ ಪ್ರದರ್ಶನ, ಕೀರ್ತನೆ ಇತ್ಯಾದಿಗಳಿಂದೊಡಗೂಡಿದ ಸಮಾರಂಭವೊಂದು ಶ್ರೀಗಳಾದ ಎಸ್. ಯು. ಪಣಿಯಾಡಿ ಮತ್ತು ಯು. ಎ. ಪೈ ಇವರ ಮುಂದಾಳುತನದಿಂದ ಜರಗುವುದಾಗಿ ಪ್ರಕಟವಾಗಿದೆ.

ತಾ. ೨೩ನೆಯ ದಿನ ಕುಕುನಾಡ್ ಧಾಪಟಿನೆಯಲ್ಲಿ ಉಡುಪಿ ತಾಲೂಕು ಕಾಂಗ್ರೆಸು ಸದಸ್ಯರ ಮಹಾಸಭೆಯು ಶ್ರೀ ಬಿ. ವಾಸುದೇವರಾವ್, ವಕೀಲ, ಇವರ ಅಧ್ಯಕ್ಷತೆ ಜರುಗಿತು. ಬೊಂಬಾಯಿ ಕಾಂಗ್ರೆಸಿಗೆ ಪ್ರತಿನಿಧಿಗಳನ್ನು ಆರಿಸುವುದೇ ಕಾರ್ಯಕಾರಿಮಂಡಳಿ ಸದಸ್ಯತನದ ಖಾಲಿಬಿದ್ದ ಸ್ಥಾನಗಳನ್ನು ಭರ್ತಿಮಾಡುವುದೇ ಕಾರ್ಯಕ್ರಮವಾಗಿತ್ತು.

ತಾ. ೨೪ನೇಗೆ, ಮಾಜಿ ಪಾ। ಬೋ। ಆಫೀಸಿನಲ್ಲಿ ವಕೀಲ ಶ್ರೀ ಎಂ. ವಿಠ್ಠಲ ಕಾಮತರ ಅಧ್ಯಕ್ಷತೆಯಲ್ಲಿ ಕೆಲ ಪುರಪ್ರಮುಖರ ಸಭೆ ಸೇರಿಸಲ್ಪಟ್ಟು “ಮೆಟರ್ನಿಟಿ ಮತ್ತು ಚಾಲ್ಡ್ ವೆಲ್‌ಫೇರ್” ಕೇಂದ್ರವನ್ನು ತೆರೆಯುವ ಯೋಜನೆಯಾಗಿದೆ. ಕಮಿಟಿಯೊಂದೂ ಸ್ಥಾಪನೆಯಾಗಿದೆ.

ಅಕ್ಕಿ ಧಾರಣೆಯು ಬಹಳ ತಗ್ಗಿದೆ; ಬಡವರ ಭಾಗ್ಯ.

ಗಾಂಧಿ ಜಯಂತಿಯು ಸಧ್ಯ ಬರಲಿದೆ; ಅದನ್ನು ಯಾವುದೇ ರೀತಿಯಲ್ಲಿ ಆಚರಿಸುವ ಸಿದ್ಧತೆಗಳು ಕಾಣುವುದಿಲ್ಲ.

ಕಾರ್ಕಳ — ಇಲ್ಲಿನ ಅನಂತಶಯನದಲ್ಲಿ ಕಳೆದ ೧೦ ವರ್ಷಗಳಿಂದ ನಡೆಸಿಕೊಂಡು ಬರುತ್ತಿದ್ದ ಶ್ರೀ ದುರ್ಗಾಪ್ರಸಾದ ವೈದ್ಯಶಾಲೆಯ ಶಾಖೆಯೊಂದನ್ನು ಶ್ರೀ ಕೆ. ನಾರಾಯಣರಾವ್, ಆಯುರ್ವೇದ ಭಿಷಕ್ ಇವರು ಈ ದಿನ (ತಾ. ೨೮) ಗುರುಪುರ ಬಂಗ್ಲೆ ಬಳಿ ಕೈಕಂಭದ ಹತ್ತಿರ ಸಾಹುಕಾರ್ ಶ್ರೀ ರಾಮಚಂದ್ರ ಪೈ ಇವರ ಭಂಡಸಾಲೆ ಬಳಿಯಿರುವ ಹೊಸ ಕಟ್ಟೋಣದ ಮಹಡಿಯಲ್ಲಿ, ಶ್ರೀ ಎಂ. ಎಸ್. ಅಧಿಕಾರಿ ವಕೀಲ್, ಇವರ ಅಧ್ಯಕ್ಷತೆಯಲ್ಲಿ ತೆರೆಯುವರು.

ಅಜೆಕಾರು ಹಲವು ಕಾಲದಿಂದ ಕೈಕೊಂಡ ಇಲ್ಲಿಯ ರೋಮನ್ ಕೆಥೋಲಿಕರ ನವೀನ ಇಗರ್ಜಿಯ ಕೆಲಸವು ಪೂರ್ತಿಯಾಗುತ್ತಾ ಬಂತು. ಸಧ್ಯದಲ್ಲೇ ಅದರ ಪ್ರವೇಶೋತ್ಸವವು ಬಹು ವಿಜೃಂಭಣೆಯಿಂದ ಜರಗಲಿದೆ.

ಏಳೆಂಟು ಗ್ರಾಮಗಳಿಗೆ ಮಧ್ಯಸ್ಥಳವೂ, ಒಂದು ಇಗರ್ಜಿ, ಪೋಸ್ಟ್ ಆಫೀಸು, ಮೋಟರ್ ಸ್ಟೇಶನ್ ಮತ್ತು ಸಹಕಾರ ಸಂಘವೂ ಇದ್ದು, ಎಕ್ಸೈಜ್ ಸಬ್ ಇನ್ಸ್‌ಪೆಕ್ಟರ್, ರೆವಿನ್ಯೂ ಇನ್ಸ್‌ಪೆಕ್ಟರ್ ಮತ್ತು ಫೋರೆಸ್ಟರರ ಮೊಕ್ಕಾಂ ಸ್ಥಳವೂ ಹಾಯರ್ ಎಲಿಮೆಂಟರಿ ಶಾಲೆ ತೆರೆಯಲು ಯೋಗ್ಯ ಕೇಂದ್ರವೂ ಆಗಿರುವ ಅಜೆಕಾರಲ್ಲಿ ಒಂದು ಪಂಚಾಯತ ಕೋರ್ಟು ಶೀಘ್ರದಲ್ಲೇ ಸ್ಥಾಪಿತವಾಗಲಿದೆ. ಮೆಂಬರಿಕೆಗೆ ಉಮೇದ್ವಾರರೂ ಹಲವರಿರುವರು.

ಅಜೆಕಾರ ಶಾಲೆಯಲ್ಲಿ ನವರಾತ್ರಿಯಲ್ಲಿ ಜರಗುವ ಶಾರದಾ ಪೂಜೋತ್ಸವದ ಸಮಯ, ಈ ವರ್ಷದ ಆರೋಗ್ಯ ಮತ್ತು ಶಿಶುಸಪ್ತಾಹವನ್ನು ಆಚರಿಸುವರಾಗಿ ತಿಳಿದುಬರುವುದು.

ಅಡನೀರು — ಇದೇ ಸೆಪ್ಟಂಬರ ತಾ. ೨೯ನೇ ಶನಿವಾರ ರಾತ್ರಿ ೮ ಗಂಟೆಗೆ ಸರಿಯಾಗಿ ಶ್ರೀ ಮದ್ಯಡನೀರು ಮಠದಲ್ಲಿ ಶ್ರೀಮಾನ್ ಉಳ್ಯಾಲ ಮಂಗೇಶರಾಯರ ಅಧ್ಯಕ್ಷತೆಯಿಂದಲೂ, ರಾ. ಮೈಂದಪ್ಪರೈಗಳ ಹಾಡುವಿಕೆಯಿಂದಲೂ, ರಾ। ಪಕಳ ಈಶ್ವರಪ್ಪಯ್ಯನವರ ಮೃದಂಗ ಬಾರಿಸುವಿಕೆಯಿಂದಲೂ ಯಕ್ಷಗಾನ ಸಮಾರಂಭವೊಂದು ನೆರವೇರಲಿರುವುದು. ಪ್ರಸಂಗ ‘ವಾಲೀ ಸಂಹಾರ’ ಮತ್ತು ‘ಅಂಗದ ಸಂಧಾನ’ ಎಡ್ವೋಕೇಟ್ ಕೆ. ಬಾಲಕೃಷ್ಣ ರಾಯರು, ಕವಿಭೂಷಣ ಕೆ. ಪಿ. ವೆಂಕಪ್ಪಶೆಟ್ಟರು, ಶ್ರೀಗಳಾದ ನಾರಾಯಣ ಶಿಲ್ಲೆಯವರು, ಸಾಲ್ಯಯ್ಯಾಚಾರಿಗಳು, ಬಳ್ಳಮಜಲು ರಂಗಪ್ಪಯ್ಯನವರು, ಕ್ಯಾಂಪನ್ನ ಶೀಕರು, ಕಾರಿಕ್ಕಾಡಿ ವಿಷ್ಣು ಮಾಸ್ತರು, ಕಂಡೆತ್ತೋಡಿ ನಾರಾಯಣ ಶೀರೂರಾಯರು, ಗೋಪಾಲಕೃಷ್ಣ ಪುಣಿಂಚತ್ತಾಯರು, ತಿರುಮಲೇಶ್ವರ ಭಟ್ಟರು—ಮೊದಲಾದ ಮಹನೀಯರು ಪಾತ್ರಗಳನ್ನು ವಹಿಸಲಿರುವರು. ಸರ್ವರಿಗೂ ಸುಸ್ವಾಗತವಿದೆಯೆಂದು ಕಾರ್ಯದರ್ಶಿಗಳು ತಿಳಿಸುತ್ತಾರೆ.

ಕುಕ್ಕುಂದೂರು— ಇಲ್ಲಿಯ ದುರ್ಗಾ ಹಾಯರ್ ಎಲಿಮೆಂಟರಿ ಶಾಲೆಯ ದಸರಾ ಮಹೋತ್ಸವವು ತಾ. ೦೪—೧೦—೩೪ನೇ ದಿನ ಪ್ರಾರಂಭವಾಗಿ ತಾ. ೧೫ನೇ ದಿನ ಹಿಂದೀ ನಾಟಕ, ತಾ. ೧೬ನೇ ದಿನ ವಿದ್ಯಾರ್ಥಿಗಳ ಹಿರಿಯರ ದಿನ, ತಾ. ೧೭ಕ್ಕೆ ಸ್ಕೂಲ್ ಡೇ ಯೊಂದಿಗೆ ನಡೆಯಲಿದ್ದು, ಈ ಸಮಯ ಗ್ರಾಮಸಂಚಾರ ಸ್ಕೌಟ್ ಶಿಬಿರಾಗ್ನಿ, ವಿವಿಧ ಪಂದ್ಯಾಟಗಳು, ಉಪನ್ಯಾಸಗಳು, ಮಕ್ಕಳ ಕವಿತೆಗಳು, ಹಳ್ಳಿಯ ಕವನಗಳು ಇತ್ಯಾದಿ ಕಾರ್ಯಕ್ರಮದಿಂದ ನಡೆಸಲ್ಪಡುವುದರಿಂದ ಈ ಸಂದರ್ಭದಲ್ಲಿ ವಿದ್ಯಾಭಿಮಾನಿಗಳಾದ ಬಂಧುಭಗಿನಿಯರೂ ಅಧ್ಯಾಪಕ, ಅಧ್ಯಾಪಕಿಯರೂ, ದಯಮಾಡಿ ಬಂದು ಪ್ರೋತ್ಸಾಹಿಸಬೇಕಾಗಿ ಈ ಸಮಾರಂಭದ ಕಮಿಟಿಯವರ ಸವಿನಯ ಆಮಂತ್ರಣವಿದೆ.

ಇಲ್ಲಿಯ ಉಪಾಧ್ಯಾಯರ ಸಭೆಗೆ ಅಧ್ಯಕ್ಷರಾಗಿ ದಯಮಾಡಿಸಿದ್ದ ಮಾನ್ಯ ಮೊಳಹಳ್ಳಿ ಶಿವರಾಯರು ಈ ಶಾಲೆಯನ್ನು ಸಂದರ್ಶಿಸಿ ಅನೇಕ ಸಲಹೆಗಳನ್ನಿತ್ತು ತೆರಳಿದರು.

ಹೆಬ್ರಿ — ಪೇಟೆಪಟ್ಟಣಗಳ ಸುಖಸೌಕರ್ಯಗಳ ಗಾಳಿಸೋಂಕದ, ಹೊಳೆಯಿಂದ ಸುತ್ತುಗಟ್ಟಿದ ಬಡ ಹಳ್ಳಿಯಿದು. ಜನಸಂಖ್ಯೆಯು ಸುಮಾರು ಆರೇಳು ಸಾವಿರದಷ್ಟು. ಇದರಲ್ಲಿ ಬಡವರೇ ಅಧಿಕ. ಹಳ್ಳಿ ಕಾಡುಪ್ರದೇಶವಾದುದರಿಂದಲೂ ಜನರು ಎಡೆಬಿಡದೆ ಗೇಯಬೇಕಾದುದರಿಂದಲೂ ದೀರ್ಘಕಾಲದ ಕಾಯಿಲೆಗಳಾಗಲಿ, ಅಭಿಘಾತಾದಿ (Medicolegil) ಕಾಯಿಲೆಗಳಾಗಲಿ ತಪ್ಪುವುದು ಕಡಿಮೆಯೆನ್ನಬಹುದು. ಹೀಗಿದ್ದರೂ ಇಲ್ಲಿ ಉಡುಪಿ ತಾಲೂಕುಬೋರ್ಡಿನವರು ತೆರೆದಿದ್ದ ಒಂದು ಡಿಸ್ಪೆನ್ಸರಿಯನ್ನು ಕೂಡ ಇತ್ತೀಚೆಗೆ ಮುಚ್ಚಿರುತ್ತಾರೆ. ೧೫—೨೦ ಮೈಲುಗಳೊಳಗೆ ಬೇರೆ ಡಿಸ್ಪೆನ್ಸರಿ ಸಹ ಇರುವುದಿಲ್ಲ. ಈಗ ಡಾ। ಎಮ್. ಪಿ. ಕಲ್ಕೂರ ಎಂಬವರು ತಮ್ಮ ಖಾಸಗಿ ವೈದ್ಯಶಾಲೆಯನ್ನು ಇಲ್ಲಿ ತೆರೆದಿರುವರು. ಇವರು ಊರಿನವರ ಸೇವೆಯನ್ನು ಸದಾ ಮಾಡುವಂತಾಗಲೆಂದೂ ಇವರಿಗೆ ಊರಿನವರ ಪ್ರೋತ್ಸಾಹವು ದೊರಕುವಂತಾಗಲೆಂದೂ ಹಾರೈಕೆ. ಡಿ. ಬೋರ್ಡಿನವರಾದರೂ ಇವರಿಗೆ ತಕ್ಕಷ್ಟು ಗ್ರಾಂಟನ್ನು ಕೊಟ್ಟು ಪ್ರೋತ್ಸಾಹಿಸುವರೆಂದು ನಂಬಲಾಗಿದೆ.

ಬಜಪೆ ಇಲ್ಲಿಯ ಸೆಂಟರಿನ ಉಪಾಧ್ಯಾಯರ ಸಂಘದ ಸಭೆಯು ತಾ. ೧೫—೯—೩೪ನೇ ಶನಿವಾರ ದಿನ ಇಲ್ಲಿಯ ಹೈಯರ್ ಎಲಿಮೆಂಟರಿ ಶಾಲೆಯಲ್ಲಿ ಜಿಲ್ಲಾ ಟೀಚರ್ಸ್ ಗಿಲ್ಡಿನ ಸೆಕ್ರೆಟರಿಯವರಾದ ಶ್ರೀಯುತ ಎಸ್. ಮುಕುಂದರಾಯರವರ ಅಧ್ಯಕ್ಷತೆಯಲ್ಲಿ ಜರಗಿತು.

ಕಟಪಾಡಿ — ದಕ್ಷಿಣ ಭಾರತ ಹಿಂದೀಪ್ರಚಾರ ಸಭೆಯವರ ೬ ಕೇಂದ್ರದ ಪರೀಕ್ಷೆಯು ಕಳೆದ ತಾರೀಖು ೯ರಲ್ಲಿ ಸ್ಥಳೀಯ ವೆಂಕಟರಮಣಸ್ವಾಮಿ ಹಾಯರ್ ಎಲಿಮೆಂಟರಿ ಶಾಲೆಯಲ್ಲಿ, ಸದರಿ ಶಾಲೆಯ ಮೆನೇಜರರಾದ ಶ್ರೀ ರಾಮದಾಸ್ ನಾಯಕ್ ಬಿ. ಎ., ಎಲ್. ಟಿ. ಯವರ ನೇತೃತ್ವದಲ್ಲಿ ಜರಗಿತು.

ಇದೇ ದಿನ ಸಾಯಂಕಾಲ ಎಲ್ಲಾ ಹಿಂದಿಪ್ರೇಮಿಗಳ ಸಭೆಯೊಂದು ಶ್ರೀ ರಾಮದಾಸ್ ನಾಯಕರ ಅಧ್ಯಕ್ಷತೆಯಲ್ಲಿ ಕೂಡಿಬಂತು. ಹಿಂದಿ ಭಾಷಾ ಪ್ರಚಾರದ ಕುರಿತು ಶ್ರೀ ಗಣಪಯ್ಯ ಶೆಟ್ಟಿ, ಜನಾರ್ಧನ ಕೆದ, ರಾಮಚಂದ್ರ ಭಟ್, ಪಿಜಿನ ಕಾಮತ್, ಶ್ರೀನಿವಾಸ ಭಟ್ ಮೊದಲಾದವರು ಸುರಸವಾಗಿ ಮಾತನಾಡಿದರು.

ಉದ್ಯಾವರ — ಈ ಕೇಂದ್ರದ ಹಿಂದಿ ಪರೀಕ್ಷೆಯು ಕೂಡಾ ಇದೇ ದಿನ ನಡೆಯಿತು. ದಾಕ್ಟರ್ ಕೋಮಲಪ್ಪಾಜಿಗಳ ಮೊದಲಾದವರ ಪ್ರೋತ್ಸಾಹ ಮತ್ತು ಹಿಂದೀ ಪ್ರಚಾರಕರಾದ ಶ್ರೀ ಕಟೀಲ್ ಗಣಪತಿ ಶರ್ಮರ ಪರಿಶ್ರಮದಿಂದ ೧೬ ಮಂದಿ ಪ್ರಾಥಮಿಕ ಪರೀಕ್ಷೆಯಲ್ಲಿ ಭಾಗಿಗಳಾಗಿರುವರು.

ಇದೇ ದಿನ ಸಾಯಂಕಾಲ ಕೆಥೋಲಿಕ್ ಶಾಲೆಯ ಮುಖ್ಯೋಪಾಧ್ಯಾಯರಾದ ಶ್ರೀ ಡಾಲ್ಪೋಜರ ಅಧ್ಯಕ್ಷತೆಯಲ್ಲಿ ಹಿಂದೀ ಪ್ರೇಮಿಗಳ ಸಭೆಯೊಂದು ಜರಗಿತು.

ಮಂಜೇಶ್ವರ — ಇಲ್ಲಿಯ ದರ್ಶನಪಾತ್ರಿಗಳಾದ ವೇ। ಶ್ರೀ ರಘುಭಟ್ಟರವರು ಇದೇ ಕಳೆದ ತಾ. ೧೭ರಲ್ಲಿ ಕಾಲವಾದರೆಂದು ತಿಳಿಸಲು ವಿಷಾದಿಸುತ್ತೇವೆ.

ಪಡುಪೆರಾರು — ಇಲ್ಲಿಯ ಶ್ರೀ ವಿಷ್ಣುಮೂರ್ತಿ ದೇವಸ್ಥಾನದ ಪರವಾಗಿ ಒಂದು ಸಾವಿರ ರೂಪಾಯಿಯ ಒಂದು ಲಾಟರಿಯನ್ನು ಇದೇ ಡಿಸೆಂಬರ ತಾ. ೩೧ರಲ್ಲಿ ಎತ್ತಲಿರುವರೆಂದೂ, ಅದಕ್ಕೆ ಸಾರ್ವಜನಿಕರು ಸಹಾಯಿಸಬೇಕಾಗಿಯೂ ಆಡಳಿತದಾರರು ಈ ಮೂಲಕ ಅರಿಕೆಮಾಡಿಕೊಳ್ಳುತ್ತಾರೆ.

[illegible]

[illegible] ಬಹಳ ಹಿಂದೆ [illegible] ಇವರು ಇದನ್ನು [illegible] ಸಂಬಂಧಿಸಿ, ನಗ್ನತಾ ಉಪಾಸಕರಾಗಿರುವರು. ಇವರ ವಸಾಹತುಗಳ ವಿಷಯವಾಗಿ ನಾವು ಆಗಾಗ ಓದುತ್ತಿದ್ದೇವೆ. ಅಂತಹ ಒಂದು ವಸಾಹತು, ಇಂಗ್ಲಾಂಡಿನ ನ್ಯೂಫೋರೆಸ್ಟ್ ಎಂಬಲ್ಲಿ, ನಾಗರಿಕರಿಂದ ಅನತಿದೂರದಲ್ಲಿ, ಇರುವುದೆಂಬ ವಿಷಯವು ಬಯಲಿಗೆ ಬಂದಿದೆ.

ಒಂದು ವರ್ಷದ ಮಗುವಿನಿಂದ ಸಪ್ತತಿ ವಯಸ್ಕರ ತನಕ ಸ್ತ್ರೀಪುರುಷರು ಇದರಲ್ಲಿರುವರು. ಇವರ ಸಂಖ್ಯೆ ಎಷ್ಟಿರುವುದೋ ತಿಳಿದಿಲ್ಲ. ಹೆಚ್ಚಿನವರಿಗೆ ಈ ವಸಾಹತವು ಎಲ್ಲಿದೆಯೆಂಬುದೂ ತಿಳಿದಿಲ್ಲ. ಅಷ್ಟು ರಹಸ್ಯವಾಗಿ ಇದು ನಡೆಯುತ್ತಿದೆ.

ಇದರಲ್ಲಿ ಸೇರಿರುವವರಲ್ಲಿ ಹೆಚ್ಚಿನವರು ಶ್ರೀಮಂತರು. ಇವರೆಲ್ಲ ಮೋಟಾರುಗಳಲ್ಲಿ ಬಂದು ಹೋಗುತ್ತಿರುವರು. ಹೆಚ್ಚಾಗಿ ವಿವಾಹವಾದ ದಂಪತಿಗಳು ಅಥವಾ ಭಾವೀ ದಂಪತಿಗಳೇ ಇದರಲ್ಲಿರುವರು. ಇವರಿಗೆ, ಆ ವಸಾಹತಿನೊಳಗೆ ಚಿಕ್ಕ ಒಂದು ತುಂಡು ವಸ್ತ್ರವಾದರೂ ಇರುವುದಿಲ್ಲ. ಇವರಲ್ಲೋರ್ವ ಹುಡುಗಿಯು ಬಹುಕಾಲದಿಂದ ವಸ್ತ್ರವನ್ನೆ ಧರಿಸದ ಕಾರಣ, ಈಗ ಅವಳಿಗೆ ಒಂದೆರಡು ಘಂಟೆಗಳ ಕಾಲ ಉಡುಪಿನಲ್ಲಿದ್ದರೂ ಸಂಕಟವಾಗುವುದಂತೆ.

ಮರಗಳ ಕೆಳಗೆ ಇವರ ಟೀಪಾರ್ಟಿ ನಡೆಯುವುದು. ವಿಚಿತ್ರವೆಂದರೆ—ಇಂತಹವರಿಗೆ ಸೇವಕ-ಸೇವಕಿಯರಿದ್ದಾರೆ. ಈ ಸೇವಕ ವರ್ಗವು ಮಾತ್ರ ನಗ್ನನಾಗಿಲ್ಲ.

ಇವರೆಲ್ಲ ಟೆನ್ನಿಸ್ ಮೊದಲಾದ ಆಟಗಳನ್ನಾಡುವರು. ಆಡುವವರೂ ನೋಡುವವರೂ ನಗ್ನ. ಅದು ಕಾರಣವೆ ಯಾರಿಗೂ ಯಾವ ವಿಧದ ಲಜ್ಜೆಯೂ ಇರುವುದಿಲ್ಲ. ನಗರಕ್ಕೆ ಬರುವ ಕಾಲದಲ್ಲಿ ಮಾತ್ರ, ಉಡುಪುಗಳನ್ನು ಧರಿಸಿಬರುವರು.

ಈ ವಸಾಹತಿನೊಳಗೆ ಯಾರಿಗೂ ಪ್ರವೇಶವಿಲ್ಲ. ಯಾರಾದರೂ ಥಕ್ಕನೆ ಆಗಮಿಸಿದರೆ, ವಸಾಹತಿನ ಹೊರಗಿರುವ ಒಂದು ಚಿಕ್ಕ ಮನೆಯಲ್ಲಿ, ನಗ್ನತಾ—ಉಪಾಸಕರ ಕಾರ್ಯದರ್ಶಿಯು ಅವರನ್ನು, ಉಡುಪುಗಳನ್ನು ಧರಿಸಿಯೇ ಭೇಟಿಯಾಗಿ, ಮಾತಾಡಿ ಕಳುಹಿಸಿಕೊಡುವನು. ಬ್ರಹ್ಮಚಾರಿಗಳಾರಿಗೂ ಅಲ್ಲಿ ಪ್ರವೇಶವಿಲ್ಲ.

---

೫೦೦ ನಿಷಿದ್ಧ ಪುಸ್ತಕಗಳು!
ರಂಗಪುರದಲ್ಲಿ ಪೋಲೀಸರ ದಾಳಿ.

ರಂಗಪುರದ ಶ್ರೀ। ಮಹೇಂದ್ರ ಪ್ಯಾನಿ ಎಂಬವರ ಮನೆಗೆ ಪೋಲೀಸರು ದಾಳಿಯಿಟ್ಟು ಜಪ್ತಿ ನಡೆಸಿದಾಗ, ಸರಕಾರದಿಂದ ನಿಷಿದ್ಧಿಸಲ್ಪಟ್ಟ ೫೦೦ ಪುಸ್ತಕಗಳು ದೊರೆತುವು. ಪೋಲೀಸರು ಅವುಗಳನ್ನು ವಶಪಡಿಸಿಕೊಂಡು, ಮಹೇಂದ್ರರವರು ಆಗ ಅಲ್ಲಿಲ್ಲದಿರುವ ಕಾರಣ ಅವರ ಪತ್ನಿಯನ್ನು ಮಾತ್ರ ದಸ್ತಗಿರಿ ಮಾಡಿದರು. ಆ ನಂತರ ಅವರನ್ನು ಸಾವಿರ ರೂಪಾಯಿ ಹೊಣೆಯ ಮೇಲೆ ಬಿಡುಗಡೆ ಮಾಡಿರುವರು.

ಓರ್ವ ವಕೀಲರ ಗುಮಾಸ್ತ ಕುಂಜ ಚಕ್ರವರ್ತಿ ಎಂಬಾತನನ್ನೂ,—(ವಯಸ್ಸು ೫೫) ಆತನ ಮನೆಯಲ್ಲಿ ಜಪ್ತಿ ನಡೆದನಂತರ 'ಸ್ವಾಧೀನತಾ' ಎಂಬ ಪುಸ್ತಕದ ಎರಡು ಪ್ರತಿಗಳ ಸಮೇತ ದಸ್ತಗಿರಿ ಮಾಡಿದರು.

ಕಿಶೋರ ಮೋಹನದಾಸ (ವಯಸ್ಸು ೨೦) ಯುವಕನ ಪೆಟ್ಟಿಗೆಯಲ್ಲಿ ಬಂದೂಕಿನ ತೋಟೆಗಳು ದೊರೆತುವಂತೆ; ಆತನ ದಸ್ತಗಿರಿಯೂ ಆಗಿದೆ.

೫೦ ವಯಸ್ಸಿನ ಜ್ಯೋತಿಷ ಚಂದ್ರ ಮೂಲಿಕ ನೆಂಬಾತನನ್ನು ಕ್ರಿ. ಪ್ರೊ. ಕೋಡಿನ ೧೫೦ನೇ ಪ್ರಕರಣದನ್ವಯ ದಸ್ತಗಿರಿ ಮಾಡಿರುತ್ತಾರೆ. ಇದೇ ಸೆಕ್ಷನಿನಂತೆ ಪರೀಕ್ಷಿತ ಚಂದ್ರಸೇನ

ಮತ್ತು [illegible] ಎಂಬಿಬ್ಬರನ್ನು ದಸ್ತಗಿರಿ ಮಾಡಿದರು.

ಬೇರೆ ಒಬ್ಬಿಬ್ಬರು ಜಮೀನುದಾರರನ್ನು ದಸ್ತಗಿರಿ ಮಾಡಿ, ಆ ನಂತರ ಬಿಡುಗಡೆ ಮಾಡಿಯನರು.

ಹಿಂದೂ ಸಮಾಜದಲ್ಲಿ ದಾಂಪತ್ಯ ವಿಚ್ಛೇದ.

ಕೊಚ್ಚಿ ಸರಕಾರವು ತಿಯ್ಯ ಸಮಾಜದವರ ಬಗ್ಗೆ 'ಕೊಚ್ಚಿ ಮಕ್ಕತ್ತಾಯಂ ತಿಯ್ಯ ಮಸೂದೆ' ಎಂಬ ಹೆಸರಲ್ಲಿ ಬಂದಿರುವ ಮಸೂದೆಯ ವಿಮರ್ಶೆ ನಡೆಸಿ, ಅಭಿಪ್ರಾಯ ಸಂಗ್ರಹ ಮಾಡಿ ವರದಿಯನ್ನೊಪ್ಪಿಸಲು ಕೇಳಿಕೊಂಡಿರುವಂತೆ, ಆ ಕಮಿಟಿಯು ಮಾಡಿರುವ ಶಿಫಾರಸುಗಳಲ್ಲಿ ಇವು ಮೂರು ಮುಖ್ಯ:— (೧) ದಾಂಪತ್ಯ ವಿಚ್ಛೇದವು ಜ್ಯಾರಿಗೆ ತರಲ್ಪಡಬೇಕು. (೨) ಬಹುಪತ್ನಿತ್ವವು ನಿಷಿದ್ಧಿಸಲ್ಪಡತಕ್ಕದು. (೩) ಹೆಮ್ಮಕ್ಕಳು, ಪಿತ್ರಾರ್ಜಿತದಿಂದ, ಗಂಡು ಮಕ್ಕಳು ಪಡೆವ ಮೂರನೇ ಒಂದಂಶ ಆಸ್ತಿಗೆ ಬಾಧ್ಯರು.

ನೋಟೀಸು.

ಕಾರ್ಕಳ ಡಿ. ಮುನ್ಸೀಫ್ ಕೋರ್ಟಿನಲ್ಲಿ

O. S. No. 199/1934.

ಅಣ್ಣಯ್ಯ ಕುಂಜಿತ್ತಾಯ— ವಾದಿ

ಮತ್ತು

ಸುಬ್ಬಕ್ಕ ಸೆಟ್ಟಿ ಕೂಡಾ 4 ಜನರು- ಪ್ರತಿವಾದಿರು

ಇವರೊಳಗೆ

ಬೈರಂಪಳ್ಳಿ ಶೇಶ ಕುಂಜಿತ್ತಾಯರ ಮಗ 4ನೇ ಪ್ರತಿವಾದಿ ವೆಂಕಟ್ರಮಣ ಕುಂಜಿತ್ತಾಯರಿಗೆ.

ಮೇಲ್ಕಂಡ ವ್ಯಾಜ್ಯವು ನಿಮ್ಮ ಹಾಜ್ರಾತಿ ಬಗ್ಗೆ ತಾ. 2-10-1934ಕ್ಕೆ ಇಟ್ಟಿದೆ. ನೀವು ಸ್ವತಃ ಆಗಲಿ ವ ವಕೀಲರ ದ್ವಾರಾ ಆಗಲಿ ಸದ್ರಿ ದಿನ ಮೇಲ್ಕಂಡ ಕೋರ್ಟಿನಲ್ಲಿ ಬೆಳಿಗ್ಗೆ ಘಂಟೆ 11ಕ್ಕೆ ಹಾಜ್ರಾಗಿ ನಿಮ್ಮ ಆಕ್ಷೇಪಗಳನ್ನು ಹೇಳಿಕೊಳ್ಳತಕ್ಕದ್ದು. ಸದ್ರಿ ದಿನ ನೀವು ಹಾಜ್ರಾಗದಿದ್ದರೆ ನಿಮ್ಮ ಗೈರುಹಾಜರಿಯಲ್ಲಿ ಸದ್ರಿ ವ್ಯಾಜ್ಯವು ತೀರ್ಮಾನಿಸಲಾಗುವುದು.

ಕಾರ್ಕಳ 19-9-34. } P. N. Shetty, *Pleader for Plaintiff.*

ನೋಟೀಸು.

ದ. ಕ. ಮಂಗಳೂರು ಡಿಸ್ಟ್ರಿಕ್ಟ್ ಮುನ್ಸೀಫ್ ಕೋರ್ಟಿನಲ್ಲಿ.

ಕ್ರಮ ನಂಬ್ರ 239/'34

ಲಕ್ಷ್ಮಿ ಅಮ್ಮ—ವಾದಿ.

ಮತ್ತು

1. ಕೇಪ್ಟನ್ ಎಮ್. ನರಸಿಂಹ ಪೈ, I. M. S. ಇವರ ಪವರ್ ಓಫ್ ಎಟೊರ್ನಿ ಹೋಲ್ಡರ್ ಕುಡ್ಪಿ ರಘುನಾಥ ಶ್ಯಾನುಭಾಗ, 2. ವೆಂಕಟರಾವ್, 3. ಶ್ರೀನಿವಾಸ ರಾವ್, 4. ಮುದ್ದುಮಾರ್ಲ್ರ, 5. ಶ್ರೀನಿವಾಸಯ್ಯ, 6. ಅಪ್ಪಯ್ಯ ಯಾನೆ ಲಕ್ಷ್ಮಿನಾರಾಯಣ—ಪ್ರತಿವಾದಿರು.

[illegible] ಪ್ರತಿವಾದಿ [illegible] ಮುಗ ಶ್ರೀನಿವಾಸಯ್ಯನಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ—

ಸದ್ರಿ ವಾದಿಳು ಪ್ರತಿವಾದಿರ ಮೇಲೆ, ತನಗೆ 1933 ನೆ 1934ನೇ ಇಸವಿ ಎಪ್ರಿಲ್ ಆಖೈರಿಗೆ ಬರತಕ್ಕ ಜೀವನಾಂಶದ ಹಣಗಳನ್ನು ದಾವಾ ಆಸ್ತಿಯು ಜವಾಬ್ದಾರಿಯಿಂದ ಬರಮಾಡಿಕೊಳ್ಳುವರೆ ಮತ್ತು ಇತರ ನಿವೃತ್ತಿಗಳ ಬಗ್ಗೆ ದಾಖ್ಲು ಮಾಡಿದ ಮೇಲ್ಯಾಣಿಸಿದ ದಾವೆಯನ್ನು ತಾ. 15-10-'34ಕ್ಕೆ ತನ್ನಿ ಬಗ್ಗೆ ಇಟ್ಟಿರುತ್ತದೆ. ಸದ್ರಿ ದಿವಸ ಪ್ರತಿವಾದಿರು ಈ ಕೋರ್ಟು ಮುಂದೆ 11 ಘಂಟೆಗೆ ಹಾಜರಾಗಿ ತಮ್ಮ ಆಕ್ಷೇಪಗಳನ್ನು ಜ್ಯಾಹೀರು ಮಾಡಿಕೊಳ್ಳತಕ್ಕದ್ದು. ತಪ್ಪಿದ್ದಲ್ಲಿ ಏಕಪಕ್ಷವಾಗಿ ತೀರ್ಮಾನಿಸಲ್ಪಡುವುದು.

ಮಂಗಳೂರು, 24—9—'34. } K. Ramakrishna Rao, *Vakil for Plaintiff.*

ನೋಟೀಸು.

ಕಾಸರಗೋಡು ಡಿ. ಮು. ಕೋರ್ಟಿನಲ್ಲಿ.

O. P. No. /1934.

1. ಬಾವಾತುಮ್ಮಾ, ಮೃತಪಟ್ಟ ಅಬ್ದುಲ್ಲ ಬ್ಯಾರಿ ಹೆಂಡ್ತಿ ವ ಮ್ಯಾಕುಂಞ ಮ್ಯೊಲಾರರ ಮಗಳು, 2. ಮರಿಯಮ್ಮಾ, 3. ಐಸಾಬಿ, 4. ಮಮ್ಮದ, 1ನೇ ಅರ್ಜದಾರಳ ಮ್ಯಾನರ ಮಕ್ಕಳು, ಇವರ ಕ್ಷೇಮಚಿಂತಕಳು ಇವರ ತಾಯಿ 1ನೇ ಅರ್ಜದಾರಳು ಬೀವಾತುಮ್ಮ, ಕಾಸರಗೋಡು ತಾಲ್ಕು ಪಳ್ಳಿಕ್ಕರೆ ಗ್ರಾಮದ ಕೋಟೆಕ್ಕುಲದಲ್ಲಿರುವವರು—ಅರ್ಜದಾರರು.

ತಾ. 15-9-'34.

ಸದ್ರಿ ವ್ಯವಹರಣೆಯ ಅರ್ಜದಾರರು ಜ್ಯಾಹೀರು ಮಾಡಿಕೊಳ್ಳುವುದೇನೆಂದರೆ:—

ಕಾಸರಗೋಡು ತಾಲೂಕು ಪಳ್ಳಿಕ್ಕರೆ ಗ್ರಾಮದಲ್ಲಿರುವ ಮಮ್ಮದ ಕುಟ್ಟಿ ಮ್ಯೊಲಾರರ ಮಗ, ತಾ. 29-6-'34ರಲ್ಲಿ ಮೃತಪಟ್ಟ ಅಬ್ದುಲ್ಲ ಬ್ಯಾರಿಯು, ಕಾಸರಗೋಡು ಬ್ರೆಂಚ್ ಕೆನರಾ ಬ್ಯಾಂಕಿನಲ್ಲಿ ವ ಜಯಲಕ್ಷ್ಮಿ [illegible] ನಲ್ಲಿ ಅಡವಿಟ್ಟ ನಗಗಳನ್ನು ಸದ್ರಿ ಮೃತನ ನ್ಯಾಯವಾದ ವಾರಿಸುದಾರರಾದ ಸದ್ರಿ ಅರ್ಜದಾರರು ಪಡಕೊಳ್ಳುವರೆ ವಾರಿಸು ಸರ್ಟಿಫಿಕೇಟುಗೋಸ್ಕರ ಸದ್ರಿ ಅರ್ಜಿ ದಾಖ್ಲು ಮಾಡಿರುವುದರಿಂದ ಆ ಬಗ್ಗೆ ಆಕ್ಷೇಪಿಸುವವರು ತಾ. 4—10—'34ರಲ್ಲಿ ಸದ್ರಿ ಕೋರ್ಟು ಮುಂದೆ ಹಾಜರಾಗಿ ಮನವಿಮಾಡಿಕೊಳ್ಳತಕ್ಕದ್ದು ಎಂತ ಈ ಮೂಲಕ ತಿಳಿಸಲಾಗುತ್ತದೆ.

Kasaragod, 15-9-'34. } K. P. Madhava Rao, *Advocate for Petitioners.*

ನೋಟೀಸು.

ಕಾರ್ಕಳ ಡಿ. ಮುನ್ಸೀಫ್ ಕೋರ್ಟಿನಲ್ಲಿ.

ಕ್ರಮ ನಂಬ್ರ 399/'84.

C. ಶರ್ಪುದ್ದೀನ್ ಸಾಹೇಬ—ವಾದಿ.

ಮತ್ತು

1. ರುಖಿಯಾಬಿ, 2. ಹಯಾತಬಿ, 3. ಶೇಕ ಇಸ್ಮಾಯಿಲ್, 4. ಶೇಕ ಅಹಮ್ಮದ ಯಾನೆ ಬಾಚ್ಯಾ—ಪ್ರತಿವಾದಿರು.

ಇವರೊಳಗೆ–

ಸದ್ರಿ ವ್ಯಾಜ್ಯದ 1, 2, 3ನೇ ಪ್ರತಿವಾದಿರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ–

1ನೇ ಪ್ರತಿವಾದಿಳ ಗಂಡ 2, 3, 4ನೇ ಪ್ರತಿವಾದಿರ ತಂದೆ ಈಚೆಗೆ ಮೃತಪಟ್ಟ ಅಜಿಮುದ್ದಿನ ಸಾಹೇಬರು ತಾ. 9-7-'29ರಲ್ಲಿ ರೂ. 118-0-0ಕ್ಕೆ ವಾದಿಗೆ ಬರಕೊಟ್ಟ ಡಿಮಾಂಡ ಪ್ರೊಮಿಸರಿ ನೋಟಿನ ಅಸ್ಲು ಬಡ್ಡಿ ಪೈಕಿ ತಾ. 31-12-'31ರಲ್ಲಿ ರೂ. 60-0-0 ಮಾತ್ರ ವಸೂಲು ಕೊಟ್ಟಿದ್ದಾರೆ. ಬಾಕಿ ಬಹಾ ಅಸಲು ಬಡ್ಡಿ ರೂ. 124-13-0ಕ್ಕೆ ವಾದಿಯು ದಾಖಲು ಮಾಡಿದ ಸದ್ರಿ ದಾವೆಯು ತಾರೀಖು 19-10-'34ಕ್ಕೆ ಇಟ್ಟಿದೆ. ಆದುದರಿಂದ ಸದ್ರಿ ಪ್ರತಿವಾದಿರು ಸದ್ರಿ ತಾರೀಕಿನಲ್ಲಿ ಬೆಳಿಗ್ಗೆ 11ಘಂಟೆಗೆ ಕೋರ್ಟು ಮುಂದೆ ಹಾಜರಾಗದಿದ್ದರೆ ಸದ್ರಿ ಪ್ರತಿವಾದಿರನ್ನು ಎಕ್ಸ್‌ಪಾರ್ಟಿ ಮಾಡಿ ದಾವೆ ತೀರ್ಮಾನಿಸೋಣಾದೀತೆಂಬ ಸಂಗ್ತಿ ಈ ಮೂಲಕ ತಿಳಿಸೋಣಾಗುತ್ತದೆ.

Karkala, 19-9-34 } H. S. Hussain, *Vakil for Plaintiff.*

ರೇಶ್ಮೆಯಂತೆ, ನುಣುಪಾದ ಮತ್ತು ಹೊಳಪಾದ ಕೇಶಧಾಮ.

ದಿನನಿತ್ಯದ ಸ್ನಾನಕ್ಕೆ ಮುಂಚಿತವಾಗಿ ನಿಮ್ಮ ಕೂದಲುಗಳನ್ನು ಚೆನ್ನಾಗಿ ಬಾಚಿ, ಬ್ರಶ್ಶಿನಿಂದ ಸವರಿ, ಆ ನಂತರ

"ಕುಂತಳ ಕೌಮುದಿ"

ಎಂಬ ಹಿಂದೂಸ್ಥಾನದ ಪ್ರಸಿದ್ಧ ಕೇಶ ತೈಲ್ಯದಿಂದ ಕೂದಲುಗಳ ಬುಡವನ್ನು ಜಾಗರೂಕತೆಯಿಂದ ತಿಕ್ಕಿರಿ.

(ಮನವುಗ್ಗಕರವಾದ ಸುಗಂಧವನ್ನುಳ್ಳದು.)

ಹಿಂದೂಸ್ಥಾನದಲ್ಲೆಲ್ಲ ಸರ್ವತ್ರ ಉಪಯೋಗಿಸಲ್ಪಡುತ್ತಿದೆ.

ತಯಾರಿಸುವವರು:— ಬೆಲೆ ಸೀಸೆ ಒಂದಕ್ಕೆ ರೂ.0—12—0

ಆರ್. ಸಿ. ಸೇನ್ ಎಂಡ್ ಕೋ.,

ಲಿಮಿಟೆಡ್, ಕಲ್ಕತ್ತ.

ಏಜಂಟರು:—

ಕುಂತಳ ಕೌಮುದಿ ತೈಲ,

ವೆನ್‌ಲೋಕ್ ಆಸ್ಪತ್ರೆ ಎದುರು, ಮಂಗಳೂರು.

A Recurring Pleasure *To Smoke them*

REGISTERED



TRADE MARK

Mangalore Darbar Beedies

Thousands enjoy them daily all over India.

When buying see our Trade Mark!

ಮಂಗಳೂರು ದರ್ಬಾರ್ ಬೀಡಿಗಳು

ಅವುಗಳನ್ನು ಸೇದುವುದೆಂದರೆ ಆನಂದ!

ಯಾವ ಕೂಟದಲ್ಲೂ ಸಿಗರೇಟುಗಳ ಸ್ಥಾನವನ್ನು ಯೋಗ್ಯವೆನಿಸುವಂತೆ ವಹಿಸುವ ಬೀಡಿಗಳಿರುವುವಾದರೆ—ಅವುಗಳು

Regd. ದಿ ಗ್ರೇಟ್ ದರ್ಬಾರ್ ಬೀಡಿ ವರ್ಕ್ಸ್ ರಥಬೀದಿ, ಮಂಗಳೂರು.

ಅವರಿಂದ ತಯಾರಿಸಲ್ಪಟ್ಟವುಗಳು.

ವಿವಿಧ ವಿಷಯ.

ಹಾವುಗಳ ಭಯ!

— ಮನುಷ್ಯನಿಗಿದ್ದಷ್ಟು ಮತ್ತಾರಿಗೂ ಇಲ್ಲ. ಅದರೆ "ಚಿಂಪಾಂಜಿ"ಗೂ ಮನುಷ್ಯರಂತೆಯೇ ಎಂದು ಇತ್ತೀಚೆಗೆ ತಿಳಿದುಬಂದಿದೆ. ವಾನರನಿಗೂ ನರನಿಗೂ ಸಮೀಪದ ಸಂಬಂಧವಿದೆ ಎಂದು ಡಾರ್ವಿನನು ಹೇಳಿರುವ ಹೇಳಿಕೆಗೆ ಇದೊಂದು ಪುಷ್ಟಿಕರ ರುಜುವಾತೆನ್ನುವ. ಇದರ ಸತ್ಯತೆಯನ್ನು ಪರೀಕ್ಷಿಸಲು, ಒಂದು ಹಾವನ್ನು ನಾನಾ ಮೃಗ ಪಕ್ಷಿಗಳ ಎದುರು ಹಿಡಿದಾಗ, ಅವಾವುವೂ ಹೆದರಲಿಲ್ಲ. ಚಿಂಪಾಂಜಿಯು ಮಾತ್ರ ಭಯಪಟ್ಟಿತಂತೆ.

ಭಯವು ಏನುಮಾಡಬಲ್ಲದು?

ಮನುಷ್ಯನನ್ನು ಕೊಲ್ಲುವುದಿದೆ. ಅದರೆ, ತಲೆ ಕೂದಲನ್ನು ಕೆಲವೇ ತಾಸುಗಳಲ್ಲಿ ಬೆಳ್ಳಗಾಗಿ ಮಾರ್ಪಡಿಸಲೂ ಬಲ್ಲದು! ದಕ್ಷಿಣಾಫ್ರಿಕದ ಒಂದು ಕಾಡು ಪ್ರದೇಶದಲ್ಲೊಬ್ಬನು ಹುಲಿಯನ್ನು ಹಿಡಿಯಲೆಂದು ಒಂದು ಕಾಡಿನಲ್ಲಿ ಗೂಡನ್ನಿರಿಸಿದ್ದನು. ಮರುದಿನ, ಹುಲಿ ಬಿದ್ದಿರುವುದೋ ಎಂದು ನೋಡಲು ಅತ್ತ ಬರುತ್ತಿದ್ದಾಗ ಒಂದು ಕಡೆಯಲ್ಲಿ ಥಕ್ಕನೆ ಒಂದು ಚಿರತೆಯನ್ನು ಭೇಟಿಯಾದನು. ಚಿರತೆಗೂ ಈತನಿಗೂ ಎರಡೇ ಅಡಿಗಳ ಅಂತರ! ಕೆಲವು ನಿಮಿಷದ ತನಕ ಈತನೂ ಚಿರತೆಯೂ ನೀರವ. ಥಕ್ಕನೆ ಚಿರತೆಯು ಅತ್ತ ಓಡಿಹೋಯಿತು. ಇವನು ಇತ್ತ ಓಡಿಬಂದನು. ನಗರಕ್ಕೆ ಬರುವಾಗ ಈತನಿಗೆ ಬೋಧವೇ ತಪ್ಪಿತು. ನಡುಗುತ್ತಿದ್ದನು. ಏನಾಶ್ಚರ್ಯ!—ಈತನ ಕೂದಲುಗಳೆಲ್ಲ ಬೆಳ್ಳಗಾಗಿ ಮಾರ್ಪಟ್ಟಿದ್ದುವು! ಭಯ!

ಇನ್ನೂ ಉಳಿದಿರುವರು ೫೦ ಲಕ್ಷ!

ಯಾರು? ಗುಲಾಮರು, ಆಫ್ರಿ ಗುಲಾಮರು ಉಳಿದಿರುವರಿನ್ನೂ ೫೦ ಲಕ್ಷ ಭೂಲೋಕದಲ್ಲಿ! ಈ ಕಾಲದಲ್ಲೂ ಗುಲಾಮರಿರುವರೆಂಬುದನ್ನು ನಂಬದಿರುವವರಿರಬಹುದು. ಅದರೆ, ಇದ್ದೇ ಇರುವರೆಂಬುದು ನೀಗ್ರೋಗಳ ಸ್ವಾತಂತ್ರ್ಯದ ಶತಮಾನೋತ್ಸವವನ್ನು ಮೊನ್ನೆ ತಾನೆ ಲಂಡನಿನಲ್ಲಿ ಜರಗಿಸಿದಾಗ ಪ್ರಕಟವಾಗಿದೆ! ಪ್ರಪಂಚದ ಕೆಲವೊಂದು ದೇಶಗಳಲ್ಲಿ ಗುಲಾಮ ವ್ಯಾಪಾರವು ನಡೆದೇ ಇದೆಯಂತೆ!

ಎರಡೇ ನಿಮಿಷಗಳಲ್ಲಿ ಚಿತ್ರ!

ಇದು ವಿಚಿತ್ರ ಸುದ್ದಿ. ಒಂದು ಚಲಚ್ಚಿತ್ರವನ್ನು ಸಿದ್ಧಗೊಳಿಸಿ ಪ್ರದರ್ಶನಯೋಗ್ಯವಾಗಬೇಕಾದರೆ ಕನಿಷ್ಠ ಹದಿನೈದು ದಿನಗಳಾದರೂ ಬೇಕಾಗುವುವು. ಅದರೆ, ಜರ್ಮನಿಯಲ್ಲಿ, ಇನ್ನು ಕೇವಲ ಎರಡು ನಿಮಿಷಗಳೊಳಗೆ ಒಂದು ಚಲಚ್ಚಿತ್ರ ಸಿದ್ಧವಾಗಿ ಪ್ರದರ್ಶಿತವಾಗುವಂತೆ ಒಂದು ಹೊಸ ಶೋಧವಾಗಿದೆ! ಇದು, ವರ್ತಮಾನ ಚಲಚ್ಚಿತ್ರಗಳ ವಿಷಯದಲ್ಲಿ ಮಾತ್ರ ಸಾಧ್ಯವಾಗುವುದು. ಒಂದು ವಿಶೇಷ ಸಮಾರಂಭದ ಚಿತ್ರವನ್ನು ತೆಗೆದು (ಬರ್ಲಿನ್ ನಗರದಲ್ಲಿ) ೭೫ ಸೆಕುಂದಗಳೊಳಗೆ ಮುಗಿಸಿ, ಕೂಡಲೇ ಪ್ರದರ್ಶಿಸಿರುವರು. ಚಿತ್ರವು ಸ್ಪಷ್ಟವೂ ಸುಂದರವೂ ಆಗಿತ್ತಂತೆ!

ಆಫ್ರಿಕದವರಿಗೊಂದು ನಿಘಂಟು—

— ಸಿದ್ಧವಾಗುತ್ತಿದೆ. ಇದು, ವೆಬ್ಸ್ಟರರ ನಿಘಂಟುವಿಗಿಂತಲೂ ಹೆಚ್ಚು ಪುಟಗಳನ್ನೊಳಗೊಂಡು, ಹೆಚ್ಚು ಶಬ್ದಗಳುಳ್ಳುದೂ ಆಗುವುದೆಂದು ಸಂಭಾವಿಸಲಾಗಿದೆ. ಇದನ್ನು ಅಚ್ಚು ಹಾಕಿಸಲು, ಹೊಸ ಅಕ್ಷರದ ಮೊಳೆಗಳನ್ನು ತಯಾರಿಸಿರುವರು.

ಪ್ರಪಂಚದಲ್ಲಿ ಇವನೇ ಅತಿ ಗಿಡ್ಡವನು!

ಕೆ. ಓಬಲಾ ರೋ ಎಂದು ಅವನ ಹೆಸರು. ಅವನು ಒಟ್ಟು ೩೦ ಇಂಚು ಎತ್ತರ ಇದ್ದಾನೆ! ಚೆನ್ನಾಗಿ ಹಾಡಬಲ್ಲನು; ನರ್ತಿಸಬಲ್ಲನು; ಹಾಸ್ಯಗಾರನೂ ಹೌದು. ಅವನ ಭಾರ ಒಟ್ಟು ೧೯ ರಾತ್ತಲ್ಲು! ಪ್ರಾಯ ೩೦ ವರ್ಷ! ಢಿಲ್ಲಿಗೆ ಬಂದು, ವಿವಿಧ ವಿನೋದಗಳಿಂದ ಜನರ ಮನೋರಂಜನೆ ಮಾಡುತ್ತಿರುವನು. ಮಹಾರಾಜರುಗಳಿಂದಲೂ, ಇತರ ಅನೇಕ ಅಧಿಕಾರಿಗಳಿಂದಲೂ ಸುಮಾರು ೨೦೦ ಬಹುಮಾನ ಪದಕಗಳನ್ನು ಪಡೆದಿರುವನು.

ಸಿನೆಮಾ ಸಂಖ್ಯೆಗಳು!

ಬ್ರಿಟನಿನಲ್ಲಿ ಒಂದು ವಾರಕ್ಕೆ ೧೮,೫೦೦,೦೦೦ ಜನರು ಸಿನೆಮಾವನ್ನು ನೋಡುವರು. ಇವರೆಲ್ಲರು ತೆರುವ ಹಣ ೪,೦೦೦,೦೦೦ ಪವನಾಗುವುದು. ೧೯೩೩ರಲ್ಲಿ ಇಂಗ್ಲೆಂಡು ಅಮೇರಿಕಕ್ಕೆ ಚಿತ್ರಗಳ ಬಾಡಿಗೆ ರೂಪದಲ್ಲಿ ೫,೩೦೦,೦೦೦ ಪವನು ತೆತ್ತಿದೆ. ಬ್ರಿಟಿಷ್ ಸಿನೆಮಾಗಳಿಂದ ಸರಕಾರಕ್ಕೆ ೧೯೩೩ರಲ್ಲಿ ಹುಟ್ಟಿ ಬಂದ ತೆರಿಗೆ ೬,೭೦೦,೦೦೦ ಪವನು!

ಪ್ರಚಲಿತಸಮಾಚಾರ.

ಫಿರ್ದೌಸಿಯ ಸಹಸ್ರ ವರ್ಷೋತ್ಸವ.

ಪರ್ಶಿಯದ ಮಹಾ ಕವಿ ಫಿರ್ದೌಸಿಯ ೧೦೦೦ ವರುಷದ ಜನ್ಮದಿನೋತ್ಸವವು ಇದೇ ಬರುವ ಅಕ್ಟೋಬರ ತಾ. ೩ರಿಂದ ಆರಂಭವಾಗಿ ೧೪ ದಿನಗಳ ತನಕ ವಿಜೃಂಭಣೆಯಿಂದ ಪರ್ಶಿಯದ ರಾಜಧಾನಿಯಲ್ಲಿ ನಡೆಯಲಿದೆ. ಹಿಂದೀಯರಲ್ಲಿ ಸರ್ ಮಹಮ್ಮದ್ ಇಕ್ಬಾಲ್, ಸರದಾರ್ ದಸ್ತೂರ್ ನಾರಿಮನ್ ಮೊದಲಾದವರಿಗೆ ಆಮಂತ್ರಣ ಬಂದಿದೆ.

ಹರಿಜನರಿಗೆ ಬಾವಿಗಳು.

ಮೊರಾದಾಬಾದಿನ ಹರಿಜನ ಸೇವಾ ಸಂಘದವರು ಈ ವರ್ಷ, ಸರಕಾರದ ಸಹಾಯದಿಂದ, ಅಲ್ಲಿ ಹರಿಜನರ ಬಗ್ಗೆ ಕೆಲವು ಬಾವಿಗಳನ್ನು ತೋಡಿಸುವರು. ಸರಕಾರವು ೧೨೩೦ ರೂಪಾಯಿ ಸಹಾಯಧನ ಕೊಡುವುದು. ಅಖಿಲ ಭಾರತ ಹರಿಜನ ಸೇವಾ ಸಂಘದವರು ೧೦೦೦ ರೂಪಾಯಿಯನ್ನು ಮಂಜೂರು ಮಾಡಿರುತ್ತಾರೆ. ಆ ಜಿಲ್ಲೆಯ ೩೦೦೦ ಹಳ್ಳಿಗಳಲ್ಲಿ—೫೦೦ ಹಳ್ಳಿಗಳಲ್ಲಿ ಹರಿಜನರಿಗೆ ಬಾವಿಗಳೇ ಇಲ್ಲವಂತೆ! ಇತರರು ತಮ್ಮ ಬಾವಿಗಳನ್ನು ಮುಟ್ಟಗೊಡರು.

ಎಸೆಂಬ್ಲಿ ಮೆಂಬರರ ಭತ್ತೆ.

ಎಸೆಂಬ್ಲಿ ಮೆಂಬರರಿಗೆ, ಅಧಿವೇಶನ ಸಮಯದಲ್ಲಿ ದಿನಕ್ಕೆ ರೂ. ೨೦ರಂತೆ ಭತ್ತೆದೊರೆಯುತ್ತಿದೆ. ಇದನ್ನು ತಿದ್ದಿ, ತಿಂಗಳಿಗೆ ೪೦೦ ರೂಪಾಯಿಗಳಂತೆ ಕೊಡಿಸುವಂತಾಗಬೇಕೆಂದು ಸರಕಾರಕ್ಕೆ ಬರೆದುಕೊಳ್ಳಲಾಗಿತ್ತು. ಸರಕಾರವು ಸದ್ಯಕ್ಕೆ ಅದನ್ನು ಪರ್ಯಾಲೋಚಿಸುವುದಿಲ್ಲವಾಗಿ ತಿಳಿದುಬಂದಿದೆ.

ನಿರುದ್ಯೋಗಿಗಳ ದುರ್ಭಾಗ್ಯ.

ಮುಂಬಾಯಿ ನಗರಸಭೆಯವರು, ೧೦ ಲಕ್ಷ ರೂಪಾಯಿ ಸಾಲವನ್ನೆತ್ತಿ, ಕೆಲವು ಕಾಮಗಾರಿಗಳನ್ನಾರಂಭಿಸಿ, ತನ್ಮೂಲಕ ಅನೇಕ ನಿರುದ್ಯೋಗಿಗಳಿಗೆ ಕೆಲಸವನ್ನು ಕಲ್ಪಿಸಿಕೊಡುವ ಠರಾವುಮಾಡಿದ್ದರು. ಆ ಠರಾವನ್ನು ಪರಿಶೀಲಿಸುತ್ತ ನಗರಸಭೆಯ ಕಮೀಷನರರಾದ ಟೊಂಟನ್ ಸಾಹೇಬರು, ಪ್ರಕೃತ ಧನಾಭಾವದ ಸಮಯದಲ್ಲಿ ಸಾಲವೆತ್ತುವುದು ಹಿತಕರವಲ್ಲವೆಂದೂ, ಆ ೧೦ ಲಕ್ಷ ರೂಪಾಯಿಗಳಲ್ಲಿ ಹೆಚ್ಚಿನ ಮೊಬಲಗು ಉಪಕರಣಗಳ ಬಗ್ಗೆ ವೆಚ್ಚವಾಗುವ ಕಾರಣ ನಿರುದ್ಯೋಗಿಗಳಿಗೆ ಸ್ವಲ್ಪ ಸಹಾಯವು ದೊರೆಯುವುದೆಂತಲೂ ಅಭಿಪ್ರಾಯಪಟ್ಟಿರುವರು.

ಶ್ರೀಮತಿ ಕಸ್ತೂರಿಬಾಯಿ ಗಾಂಧಿಯವರು—

— ಲಂಡನಿಗೆ ಹೋಗಿ, ಅಲ್ಲಿರುವ ಮೀರಾಬಾಯಿ (ಮಿಸ್. ಸ್ಲೇಡ್) ಯವರನ್ನು ಕೂಡಿ, ಹಿಂದೂದೇಶದ ಚಳವಳದ—ವಿಶೇಷವಾಗಿ ಸ್ತ್ರೀಯರ ಪರವಾದ—ಪ್ರಚಾರಕಾರ್ಯ ನಡೆಸಲಿರುವರೆಂಬ ಸುದ್ದಿಯು ಹರಡಿದೆ. ಶ್ರೀಮತಿಯವರು ತಮ್ಮ ಭಾಷಣಗಳನ್ನು ಗುಜರಾಥಿಯಲ್ಲಿಯೇ ಮಾಡಲಿರುವರೆಂದೂ; ಅದನ್ನು ಮಿಸ್ ಸ್ಲೇಡರವರು ಇಂಗ್ಲೀಷಿನಲ್ಲಿ ತರ್ಜುಮೆ ಮಾಡಿ ಹೇಳುವರೆಂದೂ ತಿಳಿದುಬಂದಿದೆ.

ಉದಯಶಂಕರನು—

— ನಾಳೆ, (ಶನಿವಾರ ತಾ. ೨೯) ಕಲ್ಕತ್ತೆಯಿಂದ ಮುಂಬಾಯಿಗೆ ಹೊರಡುವನು. ಅಲ್ಲಿ ಐದಾರು ದಿನ ಉಳಿದುಕೊಂಡು, ಒಕ್ಟೋಬರ ತಾ. ೮ರಲ್ಲಿ ತಿರುವಾಂಕೋಡಿಗೆ ಹೊರಡುತ್ತಾನೆ. ತಿರುವಾಂಕೋಡಿನ ಮಹಾರಾಜರು ಅತನನ್ನು ಕಲ್ಕತ್ತೆಯಲ್ಲಿ ಭೇಟಿಯಾದಾಗ, ತಮ್ಮಲ್ಲಿಗೆ ಬರುವಂತೆ ಆಮಂತ್ರಿಸಿರುವರಂತೆ.

ಜಪಾನಿಗೆ ಇಂಡಿಯದ ಮೇಲೆ ಕರುಣೆ!

ಏನು ಸೋಜಿಗವಿದು! ಹಿಂದೂದೇಶದಲ್ಲಿ ಜಪಾನ್ ಸರಕುಗಳ ಹಾವಳಿ ಹೆಚ್ಚಿದೆಯೆಂದು ಜಪಾನ್ ಸರಕಾರವು ತನ್ನ ನಿರ್ಗತ ವ್ಯಾಪಾರವನ್ನು ತಡೆವ ಆಲೋಚನೆಯಲ್ಲಿದೆಯಂತೆ. ಅದನ್ನು ಹತೋಟಿಗೆ ತರಲು, ಇಂಡಿಯಾ ಸರಕಾರದವರು ಸುಂಕದ ಗೋಡೆಯನ್ನು ಮತ್ತಷ್ಟು ಏರಿಸಬೇಕೆಂದು ಜಪಾನೇ ಕೇಳಿಕೊಳ್ಳುವುದಂತೆ! ಅನಂತರ, ವ್ಯಾಪಾರವನ್ನು ಪ್ರಸುತತಿಸಿ, ಪುನಃ ಸುಂಕದ ಗೋಡೆಯನ್ನು ತಗ್ಗಿಸುವಂತೆಯೂ ಕೇಳಿಕೊಳ್ಳುವುದಂತೆ! ನಂಬುವವರು ನಂಬಬಹುದು.

ಲಿಂಡ್‌ಬರ್ಗ್ ಶಿಶುವಿನ ಕಳವು ನೆನಪಿದೆಯೇ?

ಎರಡು ವರ್ಷಗಳ ಹಿಂದೆ, ಅಮೇರಿಕದ ಪ್ರಸಿದ್ಧ ವೈಮಾನಿಕರಾದ ಲಿಂಡ್‌ಬರ್ಗರ ಲೋಕವಿಖ್ಯಾತ ಸೌಂದರ್ಯದ ಮಗುವನ್ನು ದುರಾತ್ಮರಾರೋ ಕಳವು ಮಾಡಿ ಒಯ್ದು, ಹಣ ಕೇಳಿ, ಕೊನೆಗೆ ಅದನ್ನು ಕೊಲೆ ಮಾಡಿದ್ದರಷ್ಟೆ. ಕಳ್ಳರ ಪತ್ತೆಯನ್ನೂ ನಡೆಯುತ್ತಲೇ ಇದ್ದು, ಮೊನ್ನೆ ತಾನೆ ಇಬ್ಬರನ್ನು ಗುಮಾನಿಯಿಂದ ಕೈದುಮಾಡಿರುವರಾಗಿ ಸುದ್ದಿ.

ದೇವಾಲಯ ಪ್ರವೇಶದ ಮಸೂದೆಯು—

—ಬಿದ್ದುಹೋಯಿತೆಂದು ಶ್ರೀಮಾನ್ ಜಯಕರರು ಅಗಾಧ ದುಃಖಕ್ಕೊಳಗಾದಂತೆ ತೋರಿದೆ. ಬೊಂಬಾಯಿಯ ಯುವಕ ಸಂಘದಲ್ಲಿ ಭಾಷಣ ಮಾಡುತ್ತ, "ನನಗೆ ಆರು ವರ್ಷಗಳಿಂದ ಇಂಡಿಯಾ ಸರಕಾರದ ಹಣೆಬರಹ ಗೊತ್ತು; ಬರುತ್ತಾ ಬರುತ್ತಾ ಕತ್ತೆಯಾಗುತ್ತಿದೆ ಅದು. ಹಿಂದೂಗಳೂ ಮುಸ್ಲಿಮರೂ ಸರಕಾರವೂ ಈ ಮೂವರೂ ಕೂಡಿ ಕೊಂದರಯ್ಯ ಅದನ್ನು" ಎಂದು ಪ್ರಲಾಪಿಸಿದರು. "ಆ ಮಸೂದೆಯ ವಿಷಯವಾಗಿ ಅಗಬೇಕಾದಷ್ಟು ಪ್ರಚಾರಕಾರ್ಯವಾದುದಿಲ್ಲ, ಗಾಂಧಿಜಿಯವರ ಉಪವಾಸದಿಂದ ವಿಧ್ನಮಾನಗಳು ಮತ್ತಷ್ಟು ಕಠಿಣವಾದುವು" ಎಂದೂ ತಿಳುಹಿಸಿ—"ಇದೊಂದು ದೊಡ್ಡ ದಗಳೆಯ ಮಸೂದೆ" ಎಂದು ಮುಗಿಸಿದರು.

ತುಂಡು ಸುದ್ದಿ.

ಶ್ರೀಮತಿ ಕಮಲಾ ನೆಹರೂರವರ ದೇಹಸ್ಥಿತಿಯು ಗಾಬರಿಗೆ ಕಾರಣವಾಗಿದೆ. ಜ್ವರವು ೧೦೩ ಡಿಗ್ರಿಗಳಿಗೇರಿದೆ.

ಪಂಡಿತ ಜವಾಹರಲಾಲರನ್ನು, ಮುಂಬಾಯಿ ಕೊಂಗ್ರೆಸ್ ಮುಗಿದನಂತರ, ನವೆಂಬರ ತಿಂಗಳಲ್ಲಿ ಬಿಡುಗಡೆಮಾಡಬಹುದೆಂದು "ಲೀಡರ್" ಪತ್ರಿಕೆಯ ಸುದ್ದಿ.

ಭಯೋತ್ಪಾದಕ ಚಳವಳದ ನಿರ್ಮೂಲನಕ್ಕೆ ಜನರೂ ಕಣ್ಣವಿದ್ದಷ್ಟು ಪ್ರಯತ್ನಪಡುತ್ತಿರಬೇಕೆಂದು ಅಸ್ಸಾಂ ಕೌನ್ಸಿಲಿನಲ್ಲಿ ಗವರ್ನರರ ವಿನಂತಿ.

ಸಯಾಮಿನ ಮಂತ್ರಿಮಂಡಲವು ರಾಜೀನಾಮೆ ಕೊಟ್ಟಿದೆ.

ಬಿಹಾರಿನ ನೆರೆಹಾವಳಿ ಪ್ರದೇಶಗಳಲ್ಲಿ, ಉಪವಾಸದಿಂದ ಮರಣಗಳಾದ ವಾರ್ತೆಯಿದೆ.

ಬಾಬೂ ರಾಜೇಂದ್ರಪ್ರಸಾದರವರು ಕೊಂಚ ಅಸ್ವಸ್ಥರಾಗಿರುವರು.

ಲೈಸೆನ್ಸ್ ಫೀಸನ್ನು ಕಡಿಮೆಮಾಡಬೇಕೆಂಬುದೇ ಮೊದಲಾದ ಕಾರಣಗಳಿಂದ ಲಾಹೋರಿನ ಟಾಂಗಾವಾಲರೆಲ್ಲ ಮುಷ್ಕರಹಿಡಿದಿರುವರು.

ನೂರಾರು ಜನರ ಪ್ರಾಣಹಾನಿಗೆ ಕಾರಣವಾದ "ಮೊರೊಕೆಸ್" ಸ್ಟೀಮರಿನ ದಹನ ಸಂಬಂಧವಾದ ವಿಚಾರಣೆ ನಡೆಯುತ್ತಿದೆ.

"ನಾಯಕರಿಗೆ"ಯ ಹೆಸರಲ್ಲಿ ಕಲ್ಕತ್ತಾ ಕಾರ್ಪರೇಶನಿನವರಿಗೆ ಕಳೆದ ವರ್ಷ ರೂ. ೬೮೩೫ ಸಂಗ್ರಹವಾಗಿದೆ.

ತಿರೂರಿನಲ್ಲಿ ಬೊಂಬಾಯಿ ಲೈಫ್ ಎಶ್ಯೂರೆನ್ಸ್ ಕಂಪೆನಿಯ ಶಾಖೆ.

ಇದೇ ಸಪ್ಟಂಬರ ತಾ. ೨೪ರಲ್ಲಿ, ತಿರೂರಿನಲ್ಲಿ ಬೊಂಬಾಯಿ ಲೈಫ್ ಎಶ್ಯೂರೆನ್ಸ್ ಕಂಪೆನಿಯ ಏಜನ್ಸಿ ಅಫೀಸನ್ನು ತೆರೆದ ಸಂದರ್ಭದಲ್ಲಿ ತೆಗೆದ ಛಾಯಾಚಿತ್ರ.

ಈ ಬೊಂಬಾಯಿ ಲೈಫ್ ಎಶ್ಯೂರೆನ್ಸ್ ಕಂಪೆನಿಯ ಏಜನ್ಸಿ ಅಫೀಸನ್ನು ತಿರೂರಿನ 'ಆಂಡಿಕಾ ವಿಲಾಸ'ವೆಂಬ ಹೊಸ ಕಟ್ಟಡದಲ್ಲಿ ತೆರೆಯುವ ಸಮಾರಂಭವು, ಮಲಬಾರಿನ ಎಡಿಶನಲ್ ಡಿಸ್ಟ್ರಿಕ್ಟ್ ಮೇಜಿಸ್ಟ್ರೇಟರಾದ ರಾವ್ ಬಹದ್ದೂರ್ ಕುಂಞಿರಾಮನ್ ನಾಯರವರ ಅಧ್ಯಕ್ಷತೆಯಲ್ಲಿ, ಇದೇ ತಿಂಗಳ ತಾ. ೨೪ರಲ್ಲಿ, ವಿಜೃಂಭಣೆಯಿಂದ ಜರಗಿತು. ಅನೇಕ ಪುರಪ್ರಮುಖರೂ ಅಧಿಕಾರಿಗಳೂ ಈ ಸಮಾರಂಭಕ್ಕೆ ದಯಮಾಡಿಸಿದ್ದರು. ಉಪಸ್ಥಿತರಾದವರಲ್ಲಿ ಕಂಪೆನಿಯ ಮದರಾಸು ಶಾಖಾ ಕಾರ್ಯದರ್ಶಿಯವರಾದ ಮೆಸ್ಸರ್ಸ್ ಕೊಟ್ಟಕಾರ್ ಬ್ರದರ್ಸ್ ಇದರ ಮೆನೇಜಿಂಗ್ ಪ್ರೊಪ್ರೈಟರರಾದ ಶ್ರೀ ಕೆ. ಪದ್ಮನಾಭ ಪೈಯವರೂ, ಮಲಬಾರು ಡಿಸ್ಟ್ರಿಕ್ಟ್ ಏಜಂಟರಾದ ಶ್ರೀ ಸಿ. ಶಂಕರನ್ ನಾಯರರೂ, ನೀಲಂಬೂರಿನ ಎಳಿಯ ರಾಜರವರೂ, ಕಲ್ಲಿಕೋಟೆಯ ಸಬ್ ಜಡ್ಜರಾದ ಶ್ರೀ ಪಿ. ಕೆ. ರಾಮುಣ್ಣಿ ಮೆನನರವರೂ, ಡಿಸ್ಟ್ರಿಕ್ಟ್ ಮುನ್ಸೀಫರಾದ ಶ್ರೀ ಸಿ. ರಾಮುಣ್ಣಿ ನಾಯರರೂ, ಡೆಪ್ಯುಟಿ ಕಲೆಕ್ಟರರಾದ ಶ್ರೀ ಎನ್. ಕುಂಞಪ್ಪ ನಂಬಿಯಾರರೂ, ಡಿಸ್ಟ್ರಿಕ್ಟ್ ರಜಿಸ್ಟ್ರಾರರಾದ ಶ್ರೀ ಎ. ಬಿ. ಕರುಣಾಕರ ಮೆನನರವರೂ ಪ್ರಮುಖರಾಗಿದ್ದರು.

ಶ್ರೀಯುತ ಪದ್ಮನಾಭ ಪೈಯವರು, ಶ್ರೀ ನಾರಾಯಣ ಮೆನನರವರು ಕಳೆದ ನಾಲ್ಕು ವರ್ಷಗಳಲ್ಲಿ ಮಾಡಿದ ಕಾರ್ಯವಿಶೇಷತೆಯನ್ನು ಪ್ರಶಂಸಿಸಿ, ಏಜನ್ಸಿ ಶಾಖೆಯನ್ನು ತೆರೆಯಲು ಅನುಕೂಲವಾಗಿ ಘಟಿಸಿಬಂದ ಕಾರಣಗಳನ್ನೂ ತಿಳಿಸಿ ಸುದೀರ್ಘವಾದ ಭಾಷಣ ಮಾಡುತ್ತ, ಕಂಪೆನಿಯು ೧೯೦೮ನೇ ಇಸವಿಯ ತನ್ನ ಜನನಕಾಲದಿಂದ ಇಂದಿನ ತನಕ ಪಡೆದ ಅಭಿವೃದ್ಧಿಯನ್ನು ಅಂಕೆ ಸಂಖ್ಯೆಗಳಿಂದ ವಿಶದಪಡಿಸಿದರು. ಅನಂತರ, ಶ್ರೀ ನಾರಾಯಣರವರು ಮಾಡಿದ ಪಿಮಾ ಕಾರ್ಯಕ್ಕಾಗಿ ಅವರಿಗೆ ಒಂದು ಸ್ವರ್ಣಪದಕವನ್ನು ಶ್ರೀಯುತ ಪದ್ಮನಾಭ ಪೈಯವರು ಬಹುಮಾನವಾಗಿ ಕೊಟ್ಟರು.

ಅಧ್ಯಕ್ಷ ಮಹಾಶಯರು ಶ್ರೀ ನಾರಾಯಣ ಮೆನೋನರ ಗುಣಗಳನ್ನು ಶ್ಲಾಘಿಸುತ್ತ, ಚಿಕ್ಕ ಊರಾದ ತಿರೂರಿನಲ್ಲಿಯೂ ಇಂತಹ ಸಮಾರಂಭಕ್ಕೆ ಇಷ್ಟೊಂದು ಜನರು ನೆರೆದಿರುವುದು ಶ್ರೀ ನಾರಾಯಣರವರ ಬಗ್ಗೆ ಪುರಜನರಿಗೆ ಇರುವ ಗೌರವ-ಆದರಗಳನ್ನು ವ್ಯಕ್ತಪಡಿಸುತ್ತಿದೆಯೆಂದು ಹೇಳಿ, ಅಫೀಸಿನ ಉದ್ಘಾಟನಾ ಸಮಾರಂಭವನ್ನು ನೆರವೇರಿಸಿ, ಶ್ರೀ ಮೆನೋನರನ್ನು ಸ್ವರ್ಣಪದಕದಿಂದ ಭೂಷಿಸಿದರು. ಕೊನೆಯದಾಗಿ ಶ್ರೀ ಮೆನೋನರು ಅಧ್ಯಕ್ಷರಿಗೂ ನೆರೆದ ಅತಿಥಿಗಳಿಗೂ ಧನ್ಯವಾದಗಳನ್ನರ್ಪಿಸಲಾಗಿ, ಫಲಾಹಾರದ ನಂತರ ಈ ಸಂತೋಷಸಮಾರಂಭವು ಕೊನೆಗೊಂಡಿತು.

ನೋಟೀಸು

[illegible] ಮುನ್ಸೀಫ್ ಕೋರ್ಟಿನಲ್ಲಿ.

ಕ್ರಮ ನಂಬ್ರ [illegible]

R. E. P. No. 555/34.

[illegible]ಭಾಗ—ವಾದಿ—ಅರ್ಜಿದಾರ.

ಮತ್ತು

ನಸುರ್ ಶೆಟ್ಟಿ ಸಹಾ 2 ಜನ ಪ್ರತಿವಾದಿರು—ಎದ್ರಿರು. ಸದ್ರಿ ಅವ್ನ ಡಾರಿಯ ಎದ್ರಿರು 1. ನಸುರ್ ಶೆಟ್ಟಿ. 2. ನಾರಾಯಣ ಶೆಟ್ಟಿ—ಕೊರಗ ಶೆಟ್ಟಿಯ ಅಳಿಯಂದಿರು—ಮಂಗಳೂರು ತಾಲೂಕು [illegible] ಗ್ರಾಮದಲ್ಲಿ ಅಣ್ಣಾಜಿಗೋಳಿಯಲ್ಲಿರುವವರು. ಹಾಲಿ.

C/o Hindu Hotel, Amber tips Tea Co.'s Building, Post Byculla Bombay, No. 8.

ಇವರಿಗೆ ಈ ಮೂಲಕ ತಿಳಿಸುವುದೇನೆಂದರೆ:—

ಮೇಲೆ ಕಾಣಿಸಿರುವ ಕೋರ್ಟಿನಲ್ಲಿ ಮೇಲೆ ಹೆಸರು ಕಾಣಿಸಿರುವ ಅರ್ಜಿದಾರನು ದಾಖಲು ಮಾಡಿರುವ ಅಮಲಜಾರಿಯಲ್ಲಿ ಹಾಜರು ಪಡಿಸಿರುವ ಏಲಂ ಇಸ್ತಿಹಾರಿನ ಮಸೂದೆ ಕುರಿತು ವ ಏಲಂ ಸಮಯ ದರ್ಖಾಸ್ತಿಗೆ ನಿಲ್ಲಲಿಕ್ಕೆ ಪರ್ಮಿಶನ್ ಕೇಳಿ ಅರ್ಜಿದಾರನು ಕೊಟ್ಟ ಅರ್ಜಿ ಕುರಿತು ಸಹಾ ಆಕ್ಷೇಪಣೆಗಳು ಇರುವುದಾದರೆ ಹೇಳುವ ಬಗ್ಗೆ ತಾ. 25–10–1934ಕ್ಕೆ ಇಡೋಣಾಗಿರುತ್ತದೆಂತಲೂ ಆ ದಿನ ಬೆಳಿಗ್ಗೆ 11 ಘಂಟೆಗೆ ಅವರು ಈ ಕೋರ್ಟಿಗೆ ಹಾಜರು ಆಗಿ ಆಕ್ಷೇಪಣೆ ಇರುವುದಾದರೆ ಜ್ಯಾಹೀರು ಮಾಡಬಹುದು ಎಂತ ಈ ಮೂಲಕ ತಿಳಿಸೋಣಾಗಿರುತ್ತದೆ. ಈ ಮುಂಚೆ ಮಾಡಿಸಿದ ನೋಟೀಸುಗಳಿಗೆ ಅವರು ಸಿಕ್ಕದೆ ಇರುವುದರಿಂದ ಕೋರ್ಟಿನವರ ಹುಕುಂ ಪ್ರಕಾರ ಈ ನೋಟೀಸನ್ನು ಪ್ರಕಟಪಡಿಸಿರುವುದಾಗಿರುತ್ತದೆ.

ಕಾರ್ಕಳ 22–9–'34 } ಇಡ್ಯದ ವಾಸುದೇವಯ್ಯ, ಬಿ. ಎ. ಬಿ. ಎಲ್. ಅರ್ಜಿದಾರನ ಕಡೆ ವಕೀಲ.

ನೋಟೀಸು.

[illegible] ಡಿಸ್ಟ್ರಿಕ್ಟ್ ಕೋರ್ಟಿನಲ್ಲಿ.

O. P. No. 108/1934.

ಮೃತಪಟ್ಟ ವೆಂಕಪ್ಪ ದಾಸನ ಸೊತ್ತಿನ ವಿಷಯದಲ್ಲಿ.

1. ವಾಮನ ದಾಸ, 2. ಲಿಂಗಪ್ಪ ದಾಸ—ಅರ್ಜಿದಾರರು.

ಮೇಲಣ ಅರ್ಜಿದಾರರು ಮಂಗಳೂರು ತಾಲ್ಲೂಕು ಪಚ್ಚನಾಡಿ ಗ್ರಾಮದಲ್ಲಿ 19[illegible]ನೇ ಇಸವಿ ಮಾರ್ಚಿ ತಿಂಗಳಲ್ಲಿ ಮೃತಪಟ್ಟ ವೆಂಕಪ್ಪ ದಾಸನಿಗೆ ಮಂಗಳೂರು ರೋಮನ್ ಕೆಥೋಲಿಕ್ ಪ್ರೊವಿಡೆಂಟ್ ಫಂಡಿನಿಂದ ಪೊಲಿಸಿ ನಂಬ್ರ 582ನೇಗೆ ತಾ. 4–12–1907ನೇ ನೊಮಿನಿ ಲಿಸ್ಟು ಪ್ರಕಾರ ಬರತಕ್ಕ ಹಣಗಳನ್ನು ವಸ್ಲು ಪಡೆಯುವರೆ 1ನೇ ಅರ್ಜಿದಾರಗೆ ವಾರಿಸ ಸರ್ಟಿಫಿಕೇಟು ಕೊಡಬೇಕಾಗಿ ದಾಖಲು ಮಾಡಿದ ಮೇಲಿನ ಅರ್ಜಿಯು ತಾ. 16–10–'34ನೇ ದಿವಸ ಹಗಲು ಘಂಟೆ 11ಕ್ಕೆ ತನಿಖೆಗೆ ಇಟ್ಟಿರುತ್ತದೆ. ಆಕ್ಷೇಪವುಳ್ಳವರು ತಮ್ಮ ಆಕ್ಷೇಪಣೆಗಳನ್ನು ಜ್ಯಾಹೀರು ಮಾಡಿಕೊಳ್ಳತಕ್ಕದ್ದು.

ಕೊಡಿಯಾಲ್ಬೈಲ್, ಮಂಗಳೂರು, 19–9–34 } John Gonsalves, *Vakil for Petitioners.*

ನೋಟೀಸು.

ಕಾರ್ಕಳ ಡಿಸ್ಟ್ರಿಕ್ಟ್ ಮುನ್ಸೀಫ್ ಕೋರ್ಟಿನಲ್ಲಿ

ಕ್ರಮ ನಂಬ್ರ 3/'34

ಚಂದಯ್ಯ ಅದ್ಯಂತಾಯ—ವಾದಿ.

ಮತ್ತು

ಶ್ರೀನಿವಾಸ ಕಮ್ತಿ ಸಹಾ—ಪ್ರತಿವಾದಿರು.

ಇವರೊಳಗೆ—

ಮೇಲ್ಕಂಡ ದಾವೆಯಲ್ಲಿ ಕಾರ್ಕಳ ತಾಲ್ಲೂಕು ಕಾಂತಾವರ ಗ್ರಾಮದಲ್ಲಿ ಇರುವ ಸದರಿ ದಾವೆಯ 2ನೇ ಪ್ರತಿವಾದಿ ಸುಬ್ರಾಯ ಕಮ್ತಿ ಮಗ 6ನೇ ಪ್ರತಿವಾದಿ ಆನಂದಗೆ ಪುನಃ ನೋಟೀಸಿಗೆ ಹುಕುಂ ಆಗಿ ಸದ್ರಿ ದಾವೆಯನ್ನು ತಾ. 19–10–'34ಕ್ಕೆ ಇಟ್ಟಿರುವುದರಿಂದ ಆ ದಿನ ಬೆಳಿಗ್ಗೆ 11 ಘಂಟೆಗೆ ಈ ಕೋರ್ಟಿನ ಮುಂದೆ ಹಾಜರಾಗಿ ಉಜರು ಹೇಳಬಹುದು. ಇಲ್ಲವಾದರೆ ಸದ್ರಿ ದಾವೆಯು ಏಕಪಕ್ಷವಾಗಿ ತೀರ್ಮಾನಿಸಲ್ಪಡುವುದು ಎಂಬ ಸಂಗತಿಯನ್ನು ಈ ಮೂಲಕ ತಿಳಿಸೋಣಾಗಿದೆ.

ಕಾರ್ಕಳ 18–9–'34. } P. Ramachandra Rao, ವಾದಿಯ ಕಡೆ ವಕೀಲ.

ನೋಟೀಸು.

ಕಾಸರಗೋಡು ಡಿಸ್ಟ್ರಿಕ್ಟ್ ಮುನ್ಸೀಫ್ ಕೋರ್ಟಿನಲ್ಲಿ.

O. S. No. 398/'34.

ಸೊಕಾಲ ಮೂಸೆ ಬ್ಯಾರಿ—ಇದ್ದಿಂಕುಂಞಿ ಬ್ಯಾರಿಗಳ ಮಗ—ಕಾಸರಗೋಡು ತಾಲೂಕು ಕೂಡಿಬೈಲ್ ಗ್ರಾಮ—ವಾದಿ.

ಮತ್ತು

ಸೇಕ ಆದಂ ಸ್ಯಾಬ—ಲಾಬ್ಬಾರುವಳ್ಳ ಸೇಕ ಮೊಯಿದಿನ ಸ್ಯಾಬರ ಮಗ—ಸದ್ರಿ ತಾಲ್ಲೂಕು ಮಂಗಲ್ಪಾಡಿ ಗ್ರಾಮ—ಪ್ರತಿವಾದಿ.

ಸದ್ರಿ ಪ್ರತಿವಾದಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ, ಪ್ರತಿವಾದಿಯು ವಾದಿಗೆ ತಾ. 30–7–1931ರಲ್ಲು ರೂ. 200/-ಕ್ಕೆ ಬರಕೊಟ್ಟ ಪ್ರೋ. ನೋಟಿನ ಅಸಲು ಬಡ್ಡಿ ರೂ. 312-2-0ಕ್ಕೆ ವಾದಿಯು ಮಾಡಿದ ಸದ್ರಿ ವ್ಯಾಜ್ಯವು ಇದೇ ಬರುವ ಅಕ್ಟೋಬರ ತಾರೀಕು 6ನೇ ಶನಿವಾರ ದಿವಸ ಮೇಲ್ಕಂಡ ಕೋರ್ಟಿನಲ್ಲಿ ಅಖೈರ ತನಿಖೆಗೆ ಇಟ್ಟಿರುವುದರಿಂದ ಆ ಕುರಿತು ಆಕ್ಷೇಪಣೆ ಇದ್ದಲ್ಲಿ ಸದ್ರಿ ತಾರೀಕು 6–10–1934ಕ್ಕೆ ಕೋರ್ಟು ಮುಂದೆ ಹಾಜರಾಗಿ ವ್ಯವಹರಿಸತಕ್ಕದು. ತಪ್ಪಿದರೆ ಏಕಪಕ್ಷವಾಗಿ ತೀರ್ಮಾನಿಸಲ್ಪಡುವುದು ಎಂತ ಈ ಮೂಲಕ ತಿಳಿಯಪಡಿಸಿರುತ್ತಾರೆ.

ಕಾಸರಗೋಡು 18–9–'34 } K. Vittal Nayak Advocate, *Pleader for Plff.*

ನೋಟೀಸು.

ಕಾಸರಗೋಡು ಡಿಸ್ಟ್ರಿಕ್ಟ್ ಮುನ್ಸೀಫ್ ಕೋರ್ಟಿನಲ್ಲಿ.

ಕ್ರಮ ನಂಬ್ರ 187/1934.

ಹೇರೂರು ಸುಬ್ಬ ಶೆಟ್ಟಿ ಸಹಾ 3 ಜನರು—ವಾದಿರು.

ಮತ್ತು

1. ಸುಬ್ಬ. 2. ಅಕ್ಕಪ್ಪ. 3. ಐತಪ್ಪ. 4. ಚೋಮು. 5. ಕೋಮುಂಞಿ. 6. ಅಕ್ಕುಂಞಿ. 7. ದೇರಿ. 8. ಚೋಮು. 9. ಬಂಟು. 10. ದೂಮು.

11. ನಾರಾಯಣರಾವ್, 12. ವಸಂತರಾವ್—ಕಜ್ಲೆ ಸುಂದರರಾಯರ ಮಕ್ಕಳು, ಪೈಕಿ 12ನೇಯವ ಮ್ಯಾನರ. ಈತನ ಪ್ರೊಪರ್ಟಿ ಗಾರ್ಡಿಯನ 11ನೇ ಪ್ರತಿವಾದಿ ನಾರಾಯಣರಾವ್, ಬೆಂಗಳೂರು ಸಿಟಿ ಪೈಕಿ ಮಲ್ಲೇಶ್ವರದಲ್ಲಿ ಸಂಪಿಗೆ ರೋಡಿನಲ್ಲಿರುವವರು.

14. ತಿಂಞಣ್ಣಾಳ್ವ. 15. ಸಂಕಪ್ಪ ಭಂಡಾರಿ, 16. ಸಾಂತ ಭಂಡಾರಿ—ಪ್ರತಿವಾದಿರು.

1ರಿಂದ 7ನೇ ವರೇಗಿನ ಪ್ರತಿವಾದಿರು ವಗೈರೆರು ಅವರ ಕುಟುಂಬದ ಉತ್ತಮ ಪ್ರಯೋಜನಾರ್ಥದ ಬಗ್ಗೆ ವಾದಿರ ಕುಟುಂಬದ್ವಜಮಾನ ವ ಆಡಳ್ತೆದಾರರಾಗಿದ್ದ 14ನೇ ಪ್ರತಿವಾದಿ ಹೆಸರಲ್ಲಿ ತಾ. 10–1–1910ರಲ್ಲು ರೂ. 1600ಕ್ಕೆ ಬರಕೊಟ್ಟ ಅದರ [illegible] ಅಸಲು ಬಡ್ಡಿ ಐವಜು ಬರಮಾಡಿಕೊಳ್ಳುವ[illegible] ವಾದಿರು ಅವರ ಕುಟುಂಬದ ಪರವಾಗಿ ಮಾಡಿದ ಮೇಲ್ಕಂಡ ವ್ಯಾಜ್ಯವು ತಾ. 5–10–1934ಕ್ಕೆ ಇಟ್ಟಿರುತ್ತದೆ. ಆ ದಿನಸ 11–12ನೇ ಪ್ರತಿವಾದಿರು ಹಾಜರ್‍ಾಗದೆ ಇದ್ದರೆ ಅವರನ್ನು ಎಕ್ಸ್ ಪಾರ್ಟಿ ಮಾಡಿ ವ್ಯಾಜ್ಯ ತೀರ್ಮಾನಿಸಲ್ಪಡುವುದು.

Kasargod 15–9–'34 } K. Sunder Rama Shetty *Vakil for Plaintiff.*

The Canara Public Conveyance Company, Ltd., Mangalore.

WE TAKE UTMOST CARE OF PASSENGERS.

Read the following letter:—

Modern Hindu Hotel,
Calicut, 17—6 -1934.

Dear Sir,

We wish to thank you for all that you did for us to make our stay at Mangalore comfortable. It is extremely nice of you to have looked after us as you did.

Yours faithfully,

(Sd.) **A. V. Ramaswami.**

The same service is offered to all. We call for reports from passengers, if they have failed to receive similar attention and assure to take prompt action to see that inconvenience is not repeated.

Chikmagalur Public Conveyance Motor Service, Chikmagalur.

ಚಿಕ್ಕಮಗಳೂರು ಪಬ್ಲಿಕ್ ಕನ್ವೆಯನ್ಸ್ ಮೋಟರ್ ಸರ್ವಿಸ್, ಚಿಕ್ಕಮಗಳೂರು.

ಮುಂಬಾಯಿಯಿಂದ – ಮಂಗಳೂರಿಗೆ
ಮಂಗಳೂರಿನಿಂದ – ಮುಂಬಾಯಿಗೆ

ಅಲ್ಲದೆ

ಹುಬ್ಬಳ್ಳಿ, ಧಾರವಾಡ, ಗೋವಾ, ಮುಂಬಾಯಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಯ ಎಲ್ಲಾ ಭಾಗಗಳಿಗೆ ಪ್ರಯಾಣ ನಡಿಸಲಿಕ್ಕೆ ಮಂಗಳೂರು—ಕಡೂರು ಹಾದಿಗಿಂತ ಉತ್ತಮ ಬೇರೆ ಹಾದಿಯಿಲ್ಲ!

ಹೊಸ ಬಸ್ಸುಗಳು. ಅನುಕೂಲ ಪ್ರಯಾಣ ಸೌಕರ್ಯಗಳು

ಕಡೂರು ಜಿಲ್ಲೆಯೊಳಗಿನ ಎಲ್ಲಾ ಕಾಫಿ ತೋಟಗಳಿಗೆ ಕೂಲಿಕಾರರನ್ನು ತರಲಿಕ್ಕೂ ಅಲ್ಲಿಂದ ಕೊಂಡುಹೋಗಲಿಕ್ಕೂ ನಾವು ಎಲ್ಲಾ ತರದ ಸಹಾಯವನ್ನೂ ಕೊಡುತ್ತೇವೆ.

ಚಿಕ್ಕಮಗಳೂರಿನಿಂದ— ಶಿವಮೊಗ್ಗಕ್ಕೆ, ಬೇಲೂರಿಗೆ, ಕಡೂರಿಗೆ.
—ಮೂಡಗೆರೆಗೆ, ಸಕಲೇಶಪುರಕ್ಕೆ.
—ಮಂಗಳೂರಿಗೆ, ಮೂಡಬಿದ್ರೆಗೆ, ಪುತ್ತೂರಿಗೆ, ಮೂಲ್ಕಿಗೆ.
—ಧರ್ಮಸ್ಥಳಕ್ಕೆ, ವೇಣೂರಿಗೆ, ಸುಬ್ರಹ್ಮಣ್ಯಕ್ಕೆ.

ನಿರಾಯಾಸದ ಪ್ರಯಾಣ! ಉತ್ಸಾಹಕರ ಸೌಕರ್ಯ!

ಬೇಕಾದ ಮಾಹಿತಿಗೆ ನಮ್ಮ ಆಫೀಸಿಗೆ ಬರೆದು ತಿಳಿದುಕೊಳ್ಳಿರಿ.

ಸಂಪಾದಕರ ಟಪ್ಪಾಲುಪೆಟ್ಟಿಗೆ.

ಪತ್ರಿಕಾಕರ್ತರ ಅಭಿಪ್ರಾಯಗಳಿಗೆ ನಾವು ಜವಾಬ್ದಾರರಲ್ಲ. ಬಹಳ ಲೇಖನಗಳು ಬಂದು ಸಂಗ್ರಹವಾದರೆ ಪ್ರಕಟಿಸಲು ಸ್ಥಳವಕಾಶವಿಲ್ಲ. ದೀರ್ಘ ಲೇಖನಗಳಿಗೆ ಎಡೆ ಕೊಡಲಾಗುವುದಿಲ್ಲ. ಲೇಖನಗಳು ಸಾರ್ವಜನಿಕ ಹಿತದೃಷ್ಟಿಯುಳ್ಳವುಗಳು ಮತ್ತು ಸ್ಫುಟವಾದ ಕೈಬರಹದಲ್ಲಿರತಕ್ಕವು. (ಸಂ. ಸ್ನ.)

ಶ್ರೀ ಶಾರಂಕರ ಪ್ರಶ್ನೆಗಳ ಕೋಶ(!)ಕ್ಕೆ

ಸ್ವಾಮಿ, ಶ್ರೀ. ಶ. ಶಾರಂಕರರೇ!

ನಿಮ್ಮ ೩೧-೮-೩೯ನೇ "ಸ್ವದೇಶಾಭಿಮಾನಿ"ಯಲ್ಲಿನ ಪತ್ರವನ್ನು ಓದಿದೆನು, ಮತ್ತು ನೀವು ಅದರಲ್ಲಿ ತೋರಿಸಿದ ಕಲ್ಪನಾ ಸಾಮರ್ಥ್ಯವನ್ನು ಬಗೆಬಗೆದು ಆಶ್ಚರ್ಯಪಡುತ್ತಿದ್ದೇನೆ. ನಾನು ಶಾಂಡವನ್ನೆಸಗಿದ್ದು ಕಲಿಕ ಮುದ್ರಣಾಲಯವು ಯಾವುದೆಂದು ನನಗೆ ತಿಳಿಯದಿರುವಾಗ ನಿಮಗೆ ಹೇಗೆ ತಿಳಿದುಬಂತೆಂಬುದು ಅರ್ಥವಾಗುವುದಿಲ್ಲ. 'ಪ್ರೂಫ್' ತಿದ್ದುವವರ ಮೂತಿಗೆ ಮಸಿ ಹಚ್ಚಿಸುವವನು ಕಟ್ಟಿಬಿದ್ದು ದಸ್ಕತು ಮಾಡುವುದು ಅಭಿಮಾನವಲ್ಲ! — ಈ ಕಲ್ಪಿತದ ಕಥೆಯು ಎಷ್ಟೆಂದು ಬಗೆದರೂ ಪೂರ್ತಿಯಾಗಲೊಲ್ಲದು. ಮುಗುಳ್ನಗೆ ಅರಳಲು ಸ್ವಶಕ್ತಿ ಇಲ್ಲದಿದ್ದರೆ ಅನ್ಯರ ಕೈಕಾಲು ಕಟ್ಟಿಕೊಂಡವನ್ನಿಕ್ಕೆ ಫಲವೇನೋ ಅರಿಯೆ. ನೋಡುವಾಗ, ಲೇಖಕರು ಕಲ್ಪನಾ ಸಾಮ್ರಾಜ್ಯದಿಂದ ಅನತಿದೂರ ನಾಡಿಗೆ ಹಾರಿ ಹೋಗಿರುವರೋ ಎಂದೆನಿಸುವುದು. ಈ ನಿಮ್ಮ ಮಾತು ಗಳು ವ್ಯಂಗವೋ ಸರಳವೋ ಇಲ್ಲವೆ ದ್ವಿರರ್ಥಕವೋ ಯಾವುದೂ ತಿಳಿಯುವುದಿಲ್ಲ. ಪ್ರೂಫ್ ತಿದ್ದುವವರು ಯಾರು? ಮಸಿ ಹಚ್ಚಿಸುವವರು ಯಾರು? ದಸ್ಕತು ಹಾಕುವುದು ಯಾರು? ನಾನು ಯಾವುದಾದರೊಂದು ಮುದ್ರಣಾಲಯದಲ್ಲಿ ಇದ್ದುದನ್ನು ನೀವು ಎಂದಾದರೊಂದು ದಿನ ನೋಡಿದರೆ ಅಥವಾ ನೋಡಿದವರು ನಿಮ್ಮ ಕಿವಿಗೆ ಊದಿದರೆ, ನಾನು ಪ್ರೂಫ್ ತಿದ್ದುವವನೋ ಮಸಿ ಹಚ್ಚಿಸುವವನೋ ಇವರಲ್ಲೊಬ್ಬನು ಎಂದು ಒಮ್ಮಿಂದೊಮ್ಮೆ ನಿರ್ಧಾರಕ್ಕೆ ಹಾರಿಬಿಡುವುದು ಸರಿಯೇ, ಶಾರಂಕರರೇ? ನಿಮಗೆ ಅಷ್ಟೂ ಗೊತ್ತಾಗುವುದಿಲ್ಲವೆ ವಕೀಲರೆ? ನೀವು ಡಾಕ್ಟರರೊಬ್ಬರಲ್ಲಿದ್ದರೆ ನೀವೇ ಡಾಕ್ಟರರೆಂದೊ, ರೋಗಿಯೆಂದೊ, ಕಂಪೌಂಡರರೆಂದೊ ಬಗೆದು ಬಿಡಲೋ ಸ್ವಾಮಿ? ಅಂತೂ ನಿಮ್ಮ ಪತ್ರದಲ್ಲಿ ನೀವು ನನ್ನ ವಿಚಾರದಲ್ಲಿ ಕವಿದಿರುವ ಅನಂದಮಯ ಅಜ್ಞಾನವನ್ನು ಪ್ರದರ್ಶಿಸಿರುವಿರಲ್ಲ? ಕರ್ನಾಟಕರ್ನೇಕರಾಗಿ ಕೇಳಿದ — ನರ್ತಮಾನಕ್ಕೆ ಅನುಸಾರವಾಗಿ ಹೊಗಳಿದೋ ಬೇರೊಬ್ಬ ಮಾನ್ಯನನ್ನು ನಾನೆಂದು ಬಗೆದಿರುವಿರಿ. ಇಲ್ಲಿಗೆಯೇ ಕಲೆ ಕಳಕೊಂಡವರ ಚಾಡಿಯ ಕೇಳಿಯಿಂದ ನಮ್ಮ ಮನೋಗಡಿಯಾರದ ಮುಳ್ಳುಗಳನ್ನು ಅನವಶ್ಯವಾಗಿ ತಿರುಗಿಸಿ ಬೆಳಗ್ಗಿನ ಕಾಲಕ್ಕೆ ಮಧ್ಯಾಹ್ನದ ಗಂಟೆಯನ್ನು ತೋರಿಸುವಿರಲ್ಲ? ಅನಂತವಾದ ಪ್ರಶ್ನೆಗಳ ಮಳೆಗರೆದು ತ್ರಾಸವನ್ನು ಎಬ್ಬಿಸಬೇಡಿ ಎಂದು ಕೇಳುತ್ತೇನೆ ಸ್ವಲ್ಪ ಶಾಂತರಾಗಿರಿ.

ಪರಿಚಯ:— ಒಬ್ಬರನ್ನು ದೂರದಿಂದ ನೋಡಿದ ಮಾತ್ರಕ್ಕೆ ಅವರ ಯೋಗ್ಯತೆಯನ್ನು ನಿರ್ಧರಿಸಬಲ್ಲಿರೇ? ನೀವು ನಮ್ಮ ಸರಣಿಯಲ್ಲಿ ಮುಖತಃ ಮಾತನಾಡಿದ್ದು ದೇನು? "ನಾನು ಶನಿವಾರ ಶಾಲೆಮಾಡುವುದನ್ನು ನಿಲ್ಲಿಸಲು ಯತ್ನಿಸುತ್ತೇನೆ, ಅದಕ್ಕಾಗಿ ಧೈರ್ಯವನ್ನು ತಾಳಲು ಮುದ್ರಣಕ್ಕೆ ಹೋಗಬೇಕು, ನೀವೆಲ್ಲಾ ಜೊತೆಗೆ ಕೊಡಿರಿ" ಎಂದಷ್ಟೆ ಅಲ್ಲವೆ? ಬೇರೇನಾದರೂ ಇದೆಯೇ? ಆಗ ಬಾವುಟಾಲೆಯ ಹೆಡ್ಮಾಸ್ತರರು ನಿಮಗೆ ಶಾಸನ ಒಪ್ಪಿಸುತ್ತಿದ್ದರೆ ಪ್ರಾಯಶಃ ಈ ಗಲಾಟೆಗೆ ಎಡೆ ಇರುತ್ತಿರಲಿಲ್ಲವೆಂದು ಕಾಣುತ್ತೆ. ಅವರು ಗವರ್ನಮೆಂಟ್ ಕಾಲೇಜಿನಲ್ಲಿ ಇಂಟರ್‌ಮೀಡಿಯೇಟ್ ಕ್ಲಾಸಿನಲ್ಲಿ ಎಂಟು ತಿಂಗಳು ಓದುತ್ತಿದ್ದರೆಂಬುದನ್ನು ನಿಮಗೆ ಯಾರೂ ಹೇಳಲಿಲ್ಲವೇ? ಆದರೂ ಅವರು ಅಪೂರ್ಣ ಸೆಕೆಂಡ್ರಿಗ್ರೇಡ್! ನೀವಲ್ಲಿಯೋ ಅಪೂರ್ಣ ವಕೀಲರಾಗಿದ್ದೂ ಬಿ. ಎಲ್. ಎಂದು ಸೇರಿಸಿಕೊಂಡು ಸಂಬಂಧಪಟ್ಟವರಿಂದ ಎಚ್ಚರಿಸಲ್ಪಟ್ಟಿದ್ದರೆ ಎಲ್ಲರೂ ಅಪೂರ್ಣ ಎಂದು ಭಾವಿಸುವಿರಾ? ನಿಮ್ಮ ಪ್ರತಿಭೆ ನಿಮ್ಮದು? ಅವರು ವಿದ್ಯಾಮಂತ್ರಿಗಳ ಸನ್ನಿಧಿಗೆ ಕಳುಹಲ್ಪಡದಿದ್ದರೆ ಅಧ್ಯಾಪಕವೃತ್ತಿಯಲ್ಲಿ ಅನುಭವವಿಲ್ಲವೆಂದು ನಿಮ್ಮ ಅರ್ಥವುಂಟೇ? ಕರ್ನಾಟಕದ ವರದಿಯಲ್ಲಿ ಇವರ ಹೆಸರು ಕಾಣಿಸುತ್ತದಂತೆ, ಆದರೆ ಅದನ್ನು ನೋಡಿ,—'ಡ' ಹೇಳಿದಂಗೆ ಕಾಣಿಸುವುದಿಲ್ಲ. ಇವರನ್ನು "ಡಾಕ್ಟರ್ ಅಫ್ ಲಾ" ಎಂದು ಯಾರೂ ಕರೆದಿಲ್ಲ. ಹಲ ಅರ್ನಾಲ್ಡ್ ಎಜ್ಯುಕೇಶನಿನ ಕುರಿತು ತುಂಬಾ ಕೆಲಸವನ್ನು ಮಾಡಿದವನು. ಅವನಂತೆ ಇವರೂ ವಿದ್ಯಾಭ್ಯಾಸದಲ್ಲಿ

ಕುಂಚ ಪ್ರಕಾಶಪಡಿಸುತ್ತಾರೆಂಬ ಅರ್ಥದ ಹೊರತನ್ನು ಬರೆದುದಲ್ಲದೆ, ಬೇರೇನೂ ಅಲ್ಲ. ಮೈಗಳ್ಳರುಗಳು ಇದಕ್ಕೆ ಕೇಳಿದರೇ ಇಲ್ಲವಂತೆ. ಮು. ಬೇಲ್ಸ್ ದೊರೆಗಳ ಕಾಲದಲ್ಲಿ ರೂ. ೨೦೦ರಲ್ಲಿ ಕೆಲಸಕ್ಕೆ ಸೇರಿದ್ದರಂತೆ, ಎಂಬ ಮಾತ್ರಕ್ಕೆ ಉನ್ನತಿಯನ್ನು ಹೊಂದಬಾರದೆಂದಿದೆಯೇ? ನೀವು ಪ್ರಾಥಮಿಕ ಶಾಲಾ ಉಪಾಧ್ಯಾಯರಾಗಿದ್ದವರು ಈಗ ವಕೀಲಿಕೆಗೆ ಹೋಗಲಿಲ್ಲವೆ ಸ್ವಾಮಿ?

ಅಪರಾಧಿಗೇಗೆ ಜ್ಞಾನ ಜ್ಞಾನ ಅಗಿದ್ದರೆ ಅದರಲ್ಲಿ ಆಶ್ಚರ್ಯವೇನಿದೆ? ಅಂತೂ ನೀವು ಶಾಲೆಶಾಲೆಗೆ ಹೋಗಿ ಉಪಾಧ್ಯಾಯರ ಪರಿಚಯ ಮಾಡಿಕೊಂಡದ್ದೂ ಗೊತ್ತಿದೆ, ಕಲ್ಯಾಣಪುರದಲ್ಲಿ ತಮಗಾದ ಮರ್ಯಾದೆಯೂ ತಿಳಿದಿದೆ. ಆದರೆ ನನಗೆ ಉಪಾಧ್ಯಾಯರ ಪರಿಚಯವಿಲ್ಲವೆಂದು ಮಾತ್ರ ಹೇಳಬೇಡಿರಯ್ಯ!

ವಿರಂಚಿತ ಪ್ರಭೃತ್ತ:— . . . . ವಿಚಾರಣಾ ಸಮಿತಿಯನ್ನು ನಿರ್ಣಯಿಸಿದರೆ . . . . . ಹತ್ತಿಟೆಳದರೆ . . . ಅಚ್ಚಿಗೆ ವಿಷಿಸೆ ಬಂದರೆ . . . ಸಿದ್ಧರಿರುವಿರಷ್ಟೆ! ನಿಮ್ಮ ರುಜುವಾತುಗಳಿಂದ ಎನೆಲ್ಲಾ ಅಡಿಮೇಲಾಗುವುದೋ ನೋಡುವ ಆಶೆ ಇದೆ.

ಯು. ಎಸ್. ಭಟ್.

ಪ್ರಿಯ ಪತ್ರಕರ್ತರೇ,

ಹೊಸಂಗಡಿ ಸಹಕಾರಿ ಸಂಘದ ಕ್ಷೇಮನಿಧಿಯನ್ನು ಹೊಸಂಗಡಿ ಮತ್ತು ಸಿದ್ದಾಪುರ ಶಾಲೆಗಳ ಮಕ್ಕಳ ಶಿಕ್ಷಣಕ್ಕೆ ಅಗತ್ಯವಿರುವ ಸಾಹಿತ್ಯೋಪಕರಣಗಳನ್ನು ಒದಗಿಸಿಕೊಡುವ ಬಗ್ಗೆ ನೇಮಿಸಲ್ಪಟ್ಟ ಮೂರು ಜನದ ಎಣ್ಣಲಿಕರೂ — ಅಗತ್ಯದ ಯಾವ ಏಲೆವಾರಿಯನ್ನೂ ನಡಿಸದಿದ್ದುದನ್ನು ಮಾನ್ಯ ಅಧಿಕಾರಿಗಳು ತಿಳಿದು ಪ್ರತಿಯರು ಮೂವರಿಗೂ ಪ್ರತ್ಯೇಕ ನೋಟೀಸು ಮೂಲಕ ಎಚ್ಚರಿಸಿದ ನಂತರ ನಿನ್ನೆ ದಿನ ಸಭೆಸೇರಿ ನಿರ್ಣಯ ಮಂಜೂರಾಗಿದೆ ಎಂತ ಕೇಳುತ್ತೇವೆ. ಆದರೆ ಮಂಜೂರಾದ ಈ ನಿರ್ಣಯದಲ್ಲಿ ಬೋನಾಳಿಯೊಂಬಲ್ಲಿ ಒಂದು ಹೊಸ ಶಾಲಾಕಟ್ಟೋಣವನ್ನು ಕಟ್ಟಿಸಬೇಕಾಗಿ ನಿರ್ಣಯವಾಗಿದೆಯಂತೆ. ಸಂಗತಿ ಕೇಳುವಾಗ ಅಶ್ಚರ್ಯವೇ ಆಗಿದೆ. ಹೊಸಂಗಡಿ ಮತ್ತು ಸಿದ್ದಾಪುರ ಗ್ರಾಮದ ಶಾಲೆಗಳಿಗೆ ಏನು? ಎಂಬುದು ಕೇಳಿಸುವುದಿಲ್ಲ. ಬಹುಶಃ ಈ ಕಟ್ಟೋಣಕ್ಕಾಗಿ ಹಣ ಉಳಿಯದೆಂದು ಭಾವಿಸಿ, ಗ್ರಾಮಸ್ಥರು — ಈ ವಿಚಾರವನ್ನು ಸಹಕಾರ ಸಂಘಗಳ ಜಿಲ್ಲಾ ಅಧಿಕಾರಿಗಳಿಗೂ, ಡಿಸ್ಟ್ರಿಕ್ಟ್ ಪ್ರೆಸಿಡೆಂಟರವರಿಗೂ ಮನವಿ ರವಾನಿಸಿರುತ್ತಾರೆ. ಆದರೆ ಈ ಕೆಳಗಿನ ಕೆಲವು ಸಂಗತಿಗಳಲ್ಲಿ ಸ್ಪಷ್ಟತೆಯು ಅಗತ್ಯವಾದ್ದರಿಂದ ತಿಳಿದವರು ಉತ್ತರಕೊಟ್ಟಿದ್ದಾದರೆ ಉಪಕಾರವಾಗುತ್ತಿತ್ತು.

೧. ಈ ಕ್ಷೇಮನಿಧಿಯ ಹಣವೆಷ್ಟು? ಅದು ಪ್ರಕೃತ ಎಲ್ಲಿದೆ? ಇದರಲ್ಲಿ ಹೊಸಕಟ್ಟೋಣಕ್ಕೆಷ್ಟು—ಹೊಸಂಗಡಿ ಸಿದ್ದಾಪುರ ಶಾಲೆಗಳ ಸಾಹಿತ್ಯಕ್ಕೆಷ್ಟೆಂದು ಪ್ರತ್ಯೇಕಿಸಿದೆಯೇ? ಹಾಗಾದರೆ ಎಷ್ಟು? (೨) ಇಷ್ಟರವರೆಗೆ ಆದರ ವಿಲೇವಾರಿ ನಡಿಸದೆ ಟ್ರಸ್ಟಿಗಳು ಚಾಡಿಯೊಂದಿಸಲು ಕಾರಣವೇನು? (೩) ಉಪಾಧ್ಯಾಯರೊಡನೆ ಟ್ರಸ್ಟಿಗಳು ಶಾಲೆಗೆ ಅಗತ್ಯವಿರುವ ಸಾಹಿತ್ಯಗಳ ಪಟ್ಟಿಯನ್ನು ಕೇಳಿ ಬರೆದುಕೊಂಡಿರುವರೇ? (೪) ಪ್ರಕೃತ ಬೋನಾಳಿ ಶಾಲೆಯಲ್ಲಿ ಮಕ್ಕಳ ಸಂಖ್ಯೆ ಎಷ್ಟು? ಶಾಲೆಗೆ ಬರುವವರಿಗಿಂತ ಬಾರದೆ ಹಾದಿಯಲ್ಲಿ ಬೀಳುವ ಮಕ್ಕಳು ಹೆಚ್ಚಾಗಿರಬಹುದೇ? (೫) ಗ್ರಾಮದಲ್ಲಿ ಒಂದು ಮೈಲು ಅಂತರದಲ್ಲಿ, ಒಂದು ಶಾಲೆಯಿರುತ್ತಾ, ಇನ್ನೊಂದು ಶಾಲೆಯನ್ನು ಈ ಹಣದಿಂದ ಕಟ್ಟಿಸಬೇಕೇಂಬುದು ಏಕೆ? ಅಷ್ಟು ಅಗತ್ಯವೆಂತಿದ್ದರೆ, ಗ್ರಾಮದವರೇ ಆ ವಿಚಾರ ಪ್ರತ್ಯೇಕ ಪ್ರಯತ್ನಗಳನ್ನೇಕೆ ಮಾಡಬಾರದು? (೬) ಹೊಸಂಗಡಿ ಗ್ರಾಮಸ್ಥರ ಮೇಲ್ವಿಚಾರದಲ್ಲಿ ಜಮೆಯಾದ ಕ್ಷೇಮನಿಧಿಯ ಹಣವನ್ನು ಹೊಸಂಗಡಿ ಶಾಲೆಗೇ ಕೊಡಿಸಬಾರದೇಕೆ? (೭) ಈ ಸಂಗತಿಯಲ್ಲಿ ಹೊಸಂಗಡಿ ಗ್ರಾಮಸ್ಥರು ಮುಂದೆ ಬಂದು, ಒಂದು ಮಹಾಸಭೆಯನ್ನು ಕರೆದು ಠರಾವು ಮಾಡಿ ಮಾನ್ಯ ಅಧಿಕಾರಿಗಳಿಗೆ ನಿವೇದಿಸಿಕೊಂಡರಾಗದೇ?

ಗ್ರಾಮಸ್ಥರು ಈ ವಿಚಾರ ಆಲೋಚಿಸಿ ಉತ್ತರಕೊಡುವರಾಗಿ ಖಂಡಿತ ನಂಬಿರುವ,

ಕಾರ್ಯನಿರ್ವಾಹಕನಾಗಿದ್ದ

೧೬-೯-೩೯. ವೆಂಬರರಲ್ಲೊಬ್ಬ.

ಶ್ರೀ ಜಗದಾಂಬಾ ನಾಟಕ ಮಂಡಳಿಯವರ ಒಂದು ಪ್ರಹಸನ.

ಈ ಬೋಳಿನ ಕಂಪೆನಿಯವರು ತಾ. ೨೧-೯-೩೯ರಲ್ಲಿ "ಮಾರುತಿ ವಿಜಯ"ವೆಂಬ ನಾಟಕವನ್ನಾಡಿದರು. ನಾಟಕದ ನಡುವೆ ಹೆಸರಿಲ್ಲದ ಒಂದು ಪ್ರಹಸನವನ್ನು (ಅಥವಾ ಹೆಸರಿರಬಹುದು, ಕಂಪೆನಿಯವರು ಪ್ರಕಟಿಸಿದುದಿಲ್ಲ.) ಪ್ರೇಕ್ಷಕರ ಮನೋರಂಜನೆಗೆಂದು ಅಭಿನಯಿಸಿದರು. ಅದನ್ನು ನೋಡಿ ನನಗೆ ನಮ್ಮ ಪ್ರಹಸನಗಳೆಂಬವು ಇಂತಹ ಅವಸ್ಥೆಗೆ ಬಂದಿರುವುವೇ ಎಂದು ಆಶ್ಚರ್ಯವೂ ವ್ಯಸನವೂ ಆಯಿತು. ಪ್ರಹಸನಗಳಿಗೆ ಸಾಹಿತ್ಯದಲ್ಲಾಗಲೀ ರಂಗಭೂಮಿಯಲ್ಲಾಗಲೀ ಉಚ್ಚ ಸ್ಥಾನವಿದೆ. ಅವುಗಳು ನಗೆಯ ತೆರೆಯನ್ನೆಬ್ಬಿಸುವಾಗ ವಿಚಾರಶಕ್ತಿಯನ್ನೂ ಹುಟ್ಟಿಸುವ ಸಾಧನಗಳು. ಹಾಸ್ಯರಸದಲ್ಲಿ ಅದ್ದಿದ ಮಾತುಗಳು ಅಶ್ಲೀಲವಾಗಿದ್ದರೆ ಅದು ಹಾಸ್ಯವೆನಿಸದು, ಅಂತಹ ನುಡಿಗಳಿರುವ ಹಾಸ್ಯವು ಹಾಸ್ಯವಲ್ಲ.

ಈ ಬೋಳಿನ ಕಂಪೆನಿಯವರು ಆಡಿದ ಪ್ರಹಸನದಲ್ಲಿ ಅನಾವಶ್ಯಕವಾದ ಅಶ್ಲೀಲ ನುಡಿಗಳು ಕೇಳಿದ್ದವು. ಉದಾಹರಣಾರ್ಥ — ಅಂಗ್ಲ ವೇಷಭೂಷಣಗಳಿಂದ ಬ್ರಾಹ್ಮಣನನ್ನು ಪುಸಲಾಯಿಸುವ ಒಬ್ಬ ಸಿರುವನ್ಯೋಗಿಯು ಆ ಬ್ರಾಹ್ಮಣನ ಹೆಂಡತಿ ಮತ್ತು ಮಗಳ ವಿಷಯದಲ್ಲಾಡುವ ಒಂದೆರಡು ಮಾತುಗಳೂ, ಹಣವನ್ನು ನಾಳೆ ಸಲಿಸುತ್ತೇನೆಂದು ಕೈಯಾಡಿಸುವ ವಿಧಾನವೂ ಛೀಛೀ ಕರಗಳಿಗೆ ಸೇರುತ್ತವೆ. ಇದು, ಆಡುವ ನಟರಿಗೂ ಕೇಳುವ ಪ್ರೇಕ್ಷಕರಿಗೂ ಭೂಷಣವಾಗಿಲ್ಲ! ನನ್ನ ಸ್ನೇಹಿತರಾದ ಜಗದಾಂಬಾ ಕಂಪೆನಿಯವರು ಮುಂದೆ ಪ್ರಹಸನಗಳನ್ನಾರಿಸುವಾಗ ಭವಹಾಸ್ಯವನ್ನೇ ಉಳ್ಳ ಪ್ರಹಸನಗಳನ್ನು ಆರಿಸುವರೆಂದು ನಂಬಿಕೆ.

ಪ್ರೇಕ್ಷಕರಲ್ಲೊಬ್ಬ.



ಕಿಬ್ಸ್ ಎಗ್ಯೂ ಸ್ಪೆಸಿಫಿಕ್

ಕೋಟ್ಯಾಧೀಶನಿಗೂ ಬಡಕೂಲಿಗನಿಗೂ ಇದುವೇ

ರಾಜಮದ್ದು

ಮಲೇರಿಯಾಜ್ವರ, ಇನ್‌ಫ್ಲುಯಂಜಾ ಮತ್ತು ಜ್ವರಗಳನ್ನು

ಗುಣಪಡಿಸುತ್ತದೆ;

ಮೆಡನ್ ಸನ್ಸ್ ಎಂಡ್ ಕೋ.,

ಬೊಂಬಾಯಿ, 2.

MADON SONS & Co

PHARMACEUTICAL CHEMISTS, BOMBAY

ಮಂಗಳೂರಿನ ಪೇಟೆಧಾರಣೆ.

ಸಾಮಗ್ರಿಗಳು	ಇಂದ	ವರೆಗೆ
	ರೂ. ಆ.	ರೂ. ಆ.
ರಾಶಿ ಅಕ್ಕಿ ...	4—2	4—8
ಮುಸ್ಕಿ ...	4—4	5—
ಗುಡ್ಡ ...	4—4	4—10
ಸುಗ್ಗಿ ...	4—4	4—10
ಊರ ಅಜ್ಜರ್ ಬೆಳ್ತಿಗೆ ...	4—12	5—4
ರಂಗೂನು ಬೆ. ಗೋ. ೧ಕ್ಕೆ ...	6—0	6—4
ಎಲ್ಲೂರು ಬೆ. ಮು. ೧ಕ್ಕೆ ...	4—0	4—0
ಗೋಧಿ ಗೋಣಿ ೧ಕ್ಕೆ ...	10—0	12—8
ತೊಗರಿ ಗೋಣಿ ೧ಕ್ಕೆ ...	9—8	10—0
ಹುರುಳಿ ಗೋಣಿ ೧ಕ್ಕೆ ...	7—6	7—10
ಕಡಲೆ ಗೋಣಿ ೧ಕ್ಕೆ ...	7—8	8—0
ಕೊಗಂಡೀ ಗೋಣಿ ೧ಕ್ಕೆ ...	10—0	17—0
ಉದ್ದು ಗೋಣಿ ೧ಕ್ಕೆ ...	7—0	7—8
ಹೆಸರು ಗೋಣಿ ೧ಕ್ಕೆ ...	7—0	7—8
ಊರುಬೆಲ್ಲ ಖಂಡಿ ೧ಕ್ಕೆ ...	40—0	45—0
ಉಪ್ಪು ಗೋಣಿ ೧ಕ್ಕೆ ...	5—4	5—8
ಕೊಬ್ರಿ ಖಂಡಿ ೧ಕ್ಕೆ ...	40—0	42—0
ಕೊಬ್ರಿ ಹಿಂಡಿ ಖಂಡಿ ೧ಕ್ಕೆ ...	19—0	19—8
ಎಳ್ಳಿಂಡಿ ಖಂಡಿ ೧ಕ್ಕೆ ...	23—12	27—0
ಕೊಬ್ರಿ ಎಣ್ಣೆ ಮಣ ೧ಕ್ಕೆ ...	2—15	3—14
ಎಳ್ಳೆಣ್ಣೆ ಮಣ ೧ಕ್ಕೆ ...	5—0	5—8
ಚಿಮಿಣಿಎಣ್ಣೆ ಪೆಟ್ಟಿಗೆ ೧ಕ್ಕೆ ...	6—8	8—0
ದೋರಿನ ಸಕ್ಕರೆ ಮು. ೧ಕ್ಕೆ ...	3—10	3—14
ಮೆಣಸು ...	7—0	7—8
ಸಾಸಿವೆ ಮುಡಿ ೧ಕ್ಕೆ ...	4—8	5—4
ಕಾಳುಮೆಣಸು ಖ. ೧ಕ್ಕೆ ...	136—8	137—8
ಯೇಲಕ್ಕಿ ಮಣ ೧ಕ್ಕೆ ...	18—0	22—0
ಹೊಸ ಗೇರುಬೀಜ ಮು. ೧ಕ್ಕೆ	3—4	3—5
ಕಬ್ಬಿಣ ಖಂಡಿ ೧ಕ್ಕೆ ...	42—0	44—0
ಕಾಂಪ್ಸುಹಗಲು ಮು. ೧ಕ್ಕೆ ...	10—0	10—0
ಕಾಂಪ್ಸುಕಾತ್ರಗಳು ಮು. ೧ಕ್ಕೆ	13—0	14—8
ಅರಬೆಲ್ಲ ಸೀರು ೧ಕ್ಕೆ ...	14—12	15—0
ಹಿತ್ತಾಳೆ ತಗಡು ಮು. ೧ಕ್ಕೆ ...	9—0	9—8
ಸವನು ೧ಕ್ಕೆ ...	20—10	21—0
ಹುಣಸೆ ಹುಳಿ ಖಂಡಿ ೧ಕ್ಕೆ	30—0	35—0
ನೇಟಿವ್ ಕಾಫಿ ಖಂಡಿ ೧ಕ್ಕೆ	182—0	198—0
ಫಟೇರ ಕಾಫಿ ಖಂಡಿ ೧ಕ್ಕೆ ...	296—8	280—8
ಹಳೆ ಅಡಿಕೆ ...	118—0	124—0
ಹೊಸ ಅಡಿಕೆ ...	62—0	92—0

ನೋಟೀಸು.

ಕಾರ್ಕಳ ಡಿಸ್ಟ್ರಿಕ್ಟ್ ಮುನ್ಸೀಫ್ ಕೋರ್ಟಿನಲ್ಲಿ

O. S. No. 317/1934.

ಪಾಂಡುರಂಗ ಕಿಣಿ—ವಾದಿ

ಮತ್ತು

ರುಕ್ಕು ಶೆಟ್ಟಿ ಸಹಾ 2 ಜನರು ಪ್ರತಿವಾದಿರು

ಇವರೊಳಗೆ

2ನೇ ಪ್ರತಿವಾದಿಳು ಶೀಶ ಶೆಟ್ಟಿ. 1ನೇ ಪ್ರತಿವಾದಿ ರುಕ್ಕು ಶೆಟ್ಟಿಯು ಹೊಸೆ-ಕಾರ್ಕಳ ತಾಲೂಕು ಕಡಂದಲೆ ಕಸಬಾ ಗ್ರಾಮದ ಸುಳಿಮುಗೇರು ಎಂಬಲ್ಲಿರುವವಳು.

ತಾ. 29—7—1904ರಲ್ಲು ರಿಜಿಸ್ಟ್ರಿಶಿಂ ಆದ ವಿಭಾಗ ಪತ್ರ ಪ್ರಕಾರ ಪ್ರತಿವಾದಿರಿಂದ ಬೋಳ ಕಸಬಾ ಗ್ರಾಮದ ಮೂಲಂಗಿಯಲ್ಲಿರುವ ವೀರಮ್ಮ ಶೆಟ್ಟಿ ಮಗಳು ಲಿಂಗಮ್ಮ ಶೆಟ್ಟಿಳಿಗೆ ಸಿಕ್ಕತಕ್ಕ ಹುಟ್ಟುವಳಿ ಭರ್ತಿ ಐವಜನ್ನು ವಸೂಲು ಮಾಡುವ ಹಕ್ಕನ್ನು ಟ್ರಿನ್ಸ್‌ಫರ್ ಪಡೆದ ಸದ್ರಿ ವಾದಿಯು ನಿನ್ನ ಮೇಲೆ ಕೂಡಾ ಸದ್ರಿ ಹುಟ್ಟುವಳ್ಳಿ ಭರ್ತಿ ಐವಜು ರೂ. 368-11—8ನ್ನು ಬರವಾಡಿಕೊಳ್ಳುವರೆ ಸದ್ರಿ ದಾವಾ ದಾಕ್ಲು ಮಾಡಿ ಸದ್ರಿ ದಾವೆಯು ನಿನ್ನ ಉದಾಹರಣೆ ಬಗ್ಗೆ ಬರುವ ತಾ. 28-9—1934ಕ್ಕೆ ಇಟ್ಟಿರುತ್ತದೆ. ಆದುದರಿಂದ ಸದ್ರಿ ತಾರೀಖಿನ ಬೆಳಿಗ್ಯೆ 10 ಗಂಟೆಗೆ ನೀನು ಸ್ವತಹಾ ಯಾ ಕ್ರಮವಾದ ಅನುಭವ ಕೊಟ್ಟು ವಕೀಲರ ಮುಖಾಂತರ ಮೇಲ್ಕಂಡ ಕೋರ್ಟಿನಲ್ಲಿ ಹಾಜರಾಗಿ ನಿನ್ನ ಆಕ್ಷೇಪಗಳನ್ನು ಜ್ಯಾಹೀರು ಮಾಡಿಕೊಳ್ಳತಕ್ಕದ್ದು. ಇಲ್ಲವಾದರೆ ನಿನ್ನನ್ನು ಎಕ್ಸ್‌ಪಾರ್ಟೆ ಮಾಡಿ ಸದ್ರಿ ದಾವೆಯಲ್ಲಿ ನಿನ್ನ ಮೇಲೆ ಕೂಡ ದಿಕ್ರಿ ಕೊಡೋಣಾಗುವುದು.

ಕಾರ್ಕಳ 25-9-34. } **I. N. Naik,** Vakil.

ಶಾಲಿವಾಹನ ಶಕ ೧೮೫೬ನೆಯ ಭಾವ ಸಂವತ್ಸರದ ಭಾದ್ರಪದ ಬ. ೬ ಶನಿವಾರದಿಂದ—ಭಾದ್ರಪದ ಬ. ೧೨ ಶುಕ್ರವಾರದ ವರೇಗಿನ ಪಂಚಾಂಗ. (೧೮೫೬ನೇಯ ಸಿಂಹಸೋಣ

ತಾರೀಖು	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ಸೌರದಿನ	ಸೂರ್ಯ ಉ.	ಸೂರ್ಯ ಅಸ್ತ	ವಿಶೇಷ
29	ಶನಿ	೬	೧.೦	ಮೃಗಶಿರಾ	೬೦.೦	೧೩	6.22	6.22	[illegible]
30	ರವಿ	೭	೧.೩೬	ಮೃಗಶಿರಾ	೪.೦	೧೪	6.22	6.22	
1	ಸೋಮ	೮	೩.೧೪	ಆರ್ದ್ರಾ	೯.೩೦	೧೫	6.22	6.21	
2	ಭೌಮ	೯	೩.೧	ಪುನರ್ವಸು	೧೫.೪೪	೧೬	6.22	6.21	
3	ಬುಧ	೧೦	೧೦.೧	ಪುಷ್ಯ	೨೧.೪೬	೧೭	6.22	6.20	
4	ಗುರು	೧೧	೧೪.೩೨	ಆಶ್ಲೇಷಾ	೨೮.೦೬	೧೮	6.22	6.19	
5	ಶುಕ್ರ	೧೨	೧೯.೪೪	ಮಘಾ	೩೪.೦	೧೯	6.22	6.19	

ಪ್ರಕಟಣೆ.

ಶ್ರೀ ಕೃಷ್ಣಾ ಮಿಲ್ಸ್ ಕಂಪೆನಿ, ಮಂಗಳೂರು.

ಈ ಮೂಲಕ ನಮ್ಮ ಗ್ರಾಹಕರಿಗೆ ತಿಳಿಯಪಡಿಸುವದೇನೆಂದರೆ:—ನಮ್ಮ ಎಣ್ಣೆಯ ಗಿರಣಿಯು ಅನೇಕ ವರ್ಷಗಳಿಂದ ಎಣ್ಣೆ ತಯಾರಿಯನ್ನು ಮಾಡುತ್ತಿದ್ದು, ಸರ್ವ ಜನರ ಪ್ರೀತಿ ವಿಶ್ವಾಸಕ್ಕೆ ಪಾತ್ರವಾಗಿರುವುದು ಎಲ್ಲರಿಗೂ ತಿಳಿದ ವಿಷಯವಾಗಿರುತ್ತದೆ. ನಾವು ತಯಾರಿಸುವ ಎರಡು ಬಗೆಯ ಕೊಬ್ರಿ ಎಣ್ಣೆಯಲ್ಲಿ ಒಂದನೇ ಮತ್ತು ಎರಡನೇ ತರಗತಿಗಳಿದ್ದು, ಒಂದನೇ ತರಗತಿಯದ್ದು ಬೆಳೆದ ತಾಜಾ ಬೆಳ್ಳಿ ಕೊಬ್ರಿಯಿಂದಲೆ ತಯಾರಿಸಲ್ಪಡುತ್ತದೆಂಬುದು ಸರ್ವ ವಿದಿತ ವಿಷಯ. ಅಲ್ಲದೆ ನಮ್ಮ ಎರಡನೇ ತರಗತಿಯ ಎಣ್ಣೆಯು ಹಾಫೀಸು ಕೊಬ್ರಿಯಿಂದ ತಯಾರಿಸಲ್ಪಟ್ಟಿದ್ದು, ಸರ್ವ ಗ್ರಾಹಕರ ಮೆಚ್ಚುಗೆಗೆ ಪಾತ್ರವಾಗಿದೆಯೆಂಬುದು ತಿಳಿದ ಸಂಗತಿ.

ಆದರೆ ಇತ್ತೀಚೆಗೆ ಕೆಲವು ವ್ಯಾಪಾರಸ್ಥರು ನಮ್ಮ ಗಿರಾಕಿಗಳನ್ನು ತಪ್ಪಿಸುವ ದುರುದ್ದೇಶದಿಂದಲೋ, ಏನೋ ಮಲಬಾರು ಅತ್ತಕಡೆಯಿಂದ ಆಮದಾಗುವ ಎಣ್ಣೆಯನ್ನು ಕೊಂಡು ಅದು ನಮ್ಮ ಕಂಪೆನಿಯ ಎಣ್ಣೆಯೆಂದು ಕುಳವಾರುಗಳಿಗೆ ನಂಬಿಕೆ ಹೇಳಿ ಮೋಸಮಾಡುತ್ತಿದ್ದಾರೆಂದು ನಮ್ಮ ಲಕ್ಷ್ಯಕ್ಕೆ ಬಂದಿದೆ. ಹೀಗೆ ಮಲಬಾರಿನ ಎಣ್ಣೆ ಪಡೆದ ನಮ್ಮ ಗಿರಾಕಿಗಳು ನಮ್ಮ ಎಣ್ಣೆ ದುಯ್ಯಂ ಎಂದು ತಿಳಿಯುವ ಸಂಭವವು ಕೆಲವುಕಡೆ ಇದ್ದಿತೆಂದು ನಮಗೆ ತಿಳಿದುಬಂದಿದೆ.

ಆದುದರಿಂದ ನಾವು ಎಚ್ಚರಿಸುವುದೇನೆಂದರೆ:—ನಮ್ಮ ೧ನೇ ತರಗತಿಯ ಎಣ್ಣೆಯನ್ನು ಮೂಸಿ ನೋಡಿದಲ್ಲಿ ಬೆಳ್ಳಿ ಕೊಬ್ರಿಯ ಸುವಾಸನೆಯಿಂದಿರುವುದು, ತಿಳಿದುಬರುವುದು. ನಮ್ಮ ಎಣ್ಣೆಗೆ ಬೆಂಕಿಯಿಂದ ಬಿಸಿಮಾಡಿದ ಎಣ್ಣೆಯ ದುರ್ವಾಸನೆಯಿರುವುದಿಲ್ಲ. ಎಣ್ಣೆಯನ್ನು ಪಡೆಯುವ ಮೊದಲು ನಮ್ಮ ಗಿರಾಕಿಗಳು ಈ ಕ್ರಮದಿಂದ ಎಣ್ಣೆಯನ್ನು ಪರೀಕ್ಷಿಸಿ ನಮ್ಮ ಎಣ್ಣೆಯನ್ನು ಪಡೆಯುವರೆ ಹಾರೈಸುತ್ತೇವೆ.

ನಮ್ಮ ಎಣ್ಣೆ ದೊರಕುವ ಸ್ಥಳಗಳು.

೧. ಅಡಿಗೆ ವಿಟ್ಠಪ್ಪ ಶೆಣೈ ಎಂಡ್ ಕೊ., ರಥಬೀದಿ ಮಂಗಳೂರು.

೨. ಕೊಂಚಾಡಿ ನಾಗೇಶ ಶೆಣೈ ಎಂಡ್ ಕೊ., ಕದ್ರಿ ಸ್ಟೋರ್ಸು ಮಂಗಳೂರು.

ಎಸ್. ಅಚ್ಯುತ್ತ ರಾಯಪ್ಪ ನಾಯಕ್.

ಮೆನೇಜರ್, ಶ್ರೀ ಕೃಷ್ಣಾ ಮಿಲ್ಸ್ ಕಂಪೆನಿ, ಬಂದರ ಮಂಗಳೂರು.

"ITS A PARAGON PRODUCT."

ಅದನ್ನು ಅಲಕ್ಷಿಸದಿರಿ!

ಶಿಶು ಜೀವನವು ಅತಿ ಕೋಮಲ ಹಾಗೂ ಅನಿಶ್ಚಿತ! ಅದು ಕೇಳುತ್ತಿರುವುದು ಕೆಲ್ಸಿಯಂ, ಫೋಸ್ಫರಸ್, ವಿಟಮಿನ್ (ಎ. ಬಿ. ಸಿ. ಡಿ.) ಮತ್ತು ಪ್ರಾಚೀನ ಆಯುರ್ವೇದವು ನಿರವಿಸಿದ, ನವಜೀವನದಾಯಕವಾದ ಹಿಂದೂದೇಶದ ಕೆಲವೊಂದು ಮೂಲಿಕೆಗಳ ಸಾರವನ್ನು!

ಪ್ರಪಂಚವನ್ನೆಲ್ಲ ಹುಡುಕಿನೋಡಿ,—ಇಂತಹ ಅದ್ಭುತಕರ ಮತ್ತು ಶೀಘ್ರ ಫಲದಾಯಕ ಶಾಸ್ತ್ರೋಕ್ತ ಔಷಧ ದೊರೆವುದೇ ಎಂದು! ಈ **"ಬೇಬಿಸ್ ಜುವೆನಲ್"ಗೆ ಆಲ್ ಇಂಡಿಯಾ ಸೈಂಟಿಫಿಕ್ ಎಂಡ್ ಸೆನಿಟರಿ ಎಕ್ಸಿಬಿಷನಿನಲ್ಲಿ ಸ್ವರ್ಣಪದಕ** ದೊರೆತಿರುವುದೇ ಅದರ ಗುಣಶ್ರೇಷ್ಠತೆಗೆ ಪುರಾವೆ.

BABY'S Juvenol

RECOMMENDED BY ... MEDICAL MEN

ಎಲ್ಲ ಕೆಮಿಸ್ಟರಲ್ಲಿಯೂ ರೂ. 2 ಮತ್ತು ರೂ. 1¼ಕ್ಕೆ ದೊರೆಯುತ್ತದೆ.

ಅಥವಾ

ಮೆಸರ್ಸ ಶೈ ಫಾರ್ಮಸಿ ಎಂಡ್ ಕಂಪೆನಿ,

ರಥಬೀದಿ, ಮಂಗಳೂರು.

ನಾಯಕ್ ಬ್ರದರ್ಸರ
ಶ್ರೀಮದ್ಭುವನೇಂದ್ರ ಮಹೌಷಧಾಲಯ, ಕಟಪಾಡಿ, ದ. ಕ.

ಪಾರಂಪರ್ಯದ ಅನುಭವಸಿದ್ಧೌಷಧಗಳು' ಸ್ವರ್ಣ, ರಜತ ಪದಕಗಳನ್ನು ಪಡೆದ ದಿವ್ಯೌಷಧಗಳು!

ಮೃದ್ವೀಕಾಸವ - (ನಿಶ್ಶಾಣಕ್ಕೆ ಅತ್ಯಂತ ಗುಣಕಾರಿ)
ಮಹಾಮದನ ಕಾಮೇಶ್ವರೀ ಲೇಹ್ಯ – (ನಪುಂಸಕತ್ವ, ಧಾತುಕ್ಷೀಣತೆಗೆ ಅತ್ಯುತ್ತಮ)
ಹಿಮಸಾಗರ ತೈಲ್ಯ – (ನಿದ್ರಾನಾಶಕ್ಕೆ ಅತೀ ಉಪಯುಕ್ತ)
ಮಹಾಮಾಷ ತೈಲ್ಯ – (ಪಕ್ಷವಾತಕ್ಕೆ ಅತ್ಯಂತ ಗುಣಕಾರಿ)
ಗರ್ಭಪಾಲ - (ಗರ್ಭಶೂಲ, ಗರ್ಭಸ್ರಾವಗಳಿಗೆ ದಿವ್ಯೌಷಧ)
ಗುಡ ಪಿಪ್ಪಲಿ – (ಲೀವರ್ ರೋಗಕ್ಕೆ ಅತ್ಯುತ್ತಮ)

ಇವುಗಳಲ್ಲದೆ ಶಾಸ್ತ್ರೀಯ ರೀತ್ಯಾ ತಯಾರಿಸಿದ ಅರಿಷ್ಟಗಳು, ಆಸವಗಳು, ಲೇಹ್ಯಗಳು, ಭಸ್ಮಗಳು, ತೈಲ್ಯಗಳು ಇತ್ಯಾದಿ ಯಾವಾಗಲೂ ಮಾರಾಟಕ್ಕೆ ಸಿದ್ಧವಿರುತ್ತವೆ. ಹೆಚ್ಚಿನ ಮಾಹಿತಿಗೂ ಕೆಟಲಾಗಿಗೂ ಈ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳಬಹುದು

ನಾಯಕ್ ಬ್ರದರ್ಸರ ಶ್ರೀಮದ್ಭುವನೇಂದ್ರ ಮಹೌಷಧಾಲಯ, ಕಟಪಾಡಿ, ದ. ಕನ್ನಡ

ಶುದ್ಧ ಸ್ವದೇಶಿ! ಸ್ವದೇಶಿ ಭಾಂಡವಾಳದಿಂದ ಸ್ವದೇಶಿಯರಿಗಾಗಿ!

ಗಂಧದ ಸಾಬೂನು (ಸೆಂಡಲ್‌ವುಡ್) ನಿರ್ವಿವಾದನಾಗಿ ಅತ್ಯುತ್ತಮವಾದುದು'

ತಾಜಾ ಗಂಧದ ತೈಲ ಮೊದಲಾದ ವನಸ್ಪತಿ ತೈಲಗಳಿಂದಲೇ ತಯಾರಿಸಿದ ಅತ್ಯುತ್ತಮ ಸಾಬೂನು.

ಮೈಸೂರು ಸರಕಾರದ ಗಂಧದೆಣ್ಣೆ ಕಾರ್ಖಾನೆಯಲ್ಲಿ ದೊರೆವ ಆ ಉತ್ತಮ ಎಣ್ಣೆಯ ಸ್ನಿಗ್ಧ ಸುಗಂಧವುಳ್ಳದ್ದು.

ಪ್ರಾಣಿಜನ್ಯ ಚರ್ಬಿಯ ಸ್ಪರ್ಶವೂ ಇಲ್ಲದ

ಮಲಬಾರು ಸೋಪ್

ಮಲಬಾರು ಸೆಂಡಲ್‌ವುಡ್

ದಿ ವೆಜಿಟೇಬಲ್ ಸೋಪ್ ವರ್ಕ್ಸ್, ಕಲ್ಲಿಕೋಟೆ

ಪ್ರೊಪ್ರೈಟರ್ — ಸನ್ ಬೆಂಡ್ ಕೊಡೆಯ ಖ್ಯಾತಿಯ ಸೇಟ್ ನಾಗಜೀ ಪುರುಷೋತ್ತಮ ಮತ್ತು ಕಂಪೆನಿ, ಕಲ್ಲಿಕೋಟೆ

ಈ ಜಿಲ್ಲೆಗೆ ಪ್ರವರ್ತಕರು.— ರಾಘವೇಂದ್ರ ರಂಗ ಪೈ, ರಥಬೀದಿ, ಮಂಗಳೂರು.

ಇಂದೇ ಆರಂಭಿಸಿರಿ!

ಸುಪ್ರಸಿದ್ಧ **ಆತಂಕನಿಗ್ರಹ ಮಾತ್ರೆ**

ಗಳನ್ನು ಉಪಯೋಗಿಸಲಿಕ್ಕೆ
ಜೀವನದ ಜಯಶೀಲತೆಯ ವಿಜಯನ್ನೇರಿರಿ ಲೋಕ
ದಲ್ಲಿ ಸಾವಿರಾರು ಜನರು ಅದನ್ನು ಪ್ರತಿದಿನವೂ
ಉಪಯೋಗಿಸುತ್ತಿದ್ದಾರೆ

ನರ ಮತ್ತು ಶಾರೀರಿಕ ದೌರ್ಬಲ್ಯಕ್ಕೆ
ಭದ್ರತೆಯು.

ಆರೋಗ್ಯಕ್ಕೆ ಕವಚವು

32 ಮಾತ್ರೆಗಳ ಟಿನ್ನೊಂದಕ್ಕೆ ರೂ 1

ಹೆಚ್ಚಿನ ವಿವರಕ್ಕೆ ಧರ್ಮಾರ್ಥ ಹಾಗೂ ಟಪ್ಪಾಲು
ಹಾಸಲು ವಿನಹ ಕಳುಹಿಸಲ್ಪಡುವ ನಮ್ಮ
ಕಾಮಶಾಸ್ತ್ರವನ್ನೋದಿರಿ.

Ag nt —Shah Company MANGALORE
Pearl & Sons MANGALORE

Atank Nigrah Pharmacy,
Chickpet Bangalore
ಆತಂಕನಿಗ್ರಹ ಫಾರ್ಮಸಿ,
ಚಿಕ್ಕಪೇಟೆ ಬೆಂಗಳೂರು.

ಎಲ್ಲಾ ಚಂದಾದಾರರು ತಮ್ಮ ಪತ್ರವ್ಯವ
ಹಾರದೊಂದಿಗೆ ಅವರವರ ಚಂದಾ
ನಂಬರುಗಳನ್ನು ಅಗತ್ಯವಾಗಿ ",
ನಮೂದಿಸತಕ್ಕದ್ದು ಸಂ ಸ್ಥ.

BUY ADVERTISED GOODS

ದಿ ಪೊಪ್ಯುಲರ್ ಇನ್ಶೂರೆನ್ಸ್ ಕಂಪೆನಿ, ಲಿಮಿಟೆಡ್,

(ಹೆಡ್ ಆಫೀಸು — ಮಂಗಳೂರು)

ನಮ್ಮ ಜಿಲ್ಲೆಯು ಪ್ರತಿ ವರ್ಷವೂ ಸುಮಾರು 15 ಲಕ್ಷ ರೂಪಾಯಿಗಳನ್ನು ಪ್ರೀಮಿಯಮ್ ರೂಪದಲ್ಲಿ ದೇಶೀಯ ಮತ್ತು ಪರದೇಶೀಯ ಕಂಪೆನಿಗಳಿಗೆ ಪ್ರವಾಹರೂಪವಾಗಿ ಸಲ್ಲಿಸುತ್ತಲೇ ಇದೆಯಲ್ಲದೆ, ಈ ಜಿಲ್ಲೆಯು ತಾನಾಗಿ ಒಂದೇ ಒಂದು ಜೀವವಿಮೆ ಸಂಘವನ್ನು ಇದುವರೆಗೆ ಘಟಿಸಿಲ್ಲ. ನಮ್ಮ ದೇಶದ ಈ ದೆಸೆಯಲ್ಲಿ, ನಮ್ಮದಿದೇ ಮೊದಲನೆ ಪ್ರಯತ್ನವಾಗಿದೆ

ಈ ಕಂಪೆನಿಯ ವಿಚಾರದಲ್ಲಿ ಹೇಳುವುದಾದರೆ,—ಕಂಪೆನಿಯು ನಿಮ್ಮದೇ; ನಿಮಗೆ ತಿಳಿದಿರುವ ಮತ್ತು ನಿಮ್ಮ ವಿಶ್ವಾಸಕ್ಕೆ ಅರ್ಹರಾಗಿರುವವರೇ ಆಡಳಿತವನ್ನು ನಿರ್ವಹಿಸುವರು; ನಿಮ್ಮ ಹಣವು ಸ್ವದೇಶದಲ್ಲಿ ಸಂಪದಭ್ಯುದಯ ಕಾರ್ಯಗಳಿಗಾಗಿ ವಿನಿಯೋಗಿಸಲ್ಪಡುವುದು,—ಎಂಬೀ ವಿಷಯಗಳನ್ನು ಪರ್ಯಾಲೋಚಿಸಿದಲ್ಲಿ, ಸ್ವದೇಶವಾತ್ಸಲ್ಯವುಳ್ಳವರೆಲ್ಲರೂ ಈ ಕಂಪೆನಿಯನ್ನೆ ಪ್ರೋತ್ಸಾಹಿಸುವುದು ಅವಶ್ಯವೆಂದು ತಾನಾಗಿ ಹೊಳೆಯದಿರದು

ಪ್ರತಿ ಒಂದು ವಿಧದಲ್ಲಿಯೂ ನಿಮ್ಮದಾದ ಈ ಕಂಪೆನಿಯಲ್ಲಿ ಒಂದು ಪೊಪ್ಯುಲರ್ ಪೋಲಿಸಿಯನ್ನು ಪಡೆದು ಸ್ವದೇಶೀಯರ ಪ್ರಯತ್ನಗಳನ್ನು ಪ್ರೋತ್ಸಾಹಿಸಿರಿ'

ಹೆಚ್ಚಿನ ವಿವರಕ್ಕೆ ಹೆಡ್ ಆಫೀಸಿಗೆ ಬರೆದುಕೊಂಡರೆ, ಸಂತೋಷದಿಂದ ಕೂಡಲೆ ತಿಳಿಸಲಾಗುವುದು.

☞ ಎಲ್ಲಾ ಶಹರಗಳಲ್ಲಿಯೂ ಯೋಗ್ಯ ಏಜಂಟರುಗಳು ಬೇಕು. ಧಾರಾಳ ಕಮಿಶನ್ ಕೊಡಲಾಗುವುದು.

ಬೊಂಬಾಯಿ ಸಂಸ್ಥಾನದ ಪ್ರಾಮುಖ್ಯ ಏಜಂಟರು:—ಪ್ರಭಾಕರ ಕಂಪೆನಿ, 415 ಶೇಕ್ ಮೆಮನ್ ರಸ್ತೆ, ಬೊಂಬಾಯಿ.

... Defunct[?] to organise the work of the South Indian General Assurance Society, Ltd. in the following places noted below. Capable organisers can expect to have attractive and encouraging ... with sound footing for their future.

(1) South Canara, (2) Mysore, Hassan and Coorg, (3) Kadur, Shimoga, Chitaldroog and Tumkur, (4) Mangalore, Kolar

For terms and other particulars please apply to—

The Divisional Manager,
The South Indian General Assurance Co. Ltd.
64, III Cross Road, Sritampur Extn. Malleswaram Post, BANGALORE

OR

The Managing Agents,
The S. I. G. A. Co. Ltd.
55, Poonamallee High Road, Kilpauk, MADRAS.

1876ನೇ ಇಸವಿಯಿಂದಲೂ ಪ್ರಸಿದ್ಧಿ ಹೊಂದಿದ

ಎಮ್. ಗಣಪಯ್ಯ ಎಂಡ್ ಸನ್ಸ್, ಮಂಗಳೂರು.

ಇವರ ಶಾಸ್ತ್ರೀಯ ಮತ್ತು ಅನುಭವಸಿದ್ಧ ಔಷಧಗಳು.

ಮಹಾ ಮದನಕಾಮೇಶ್ವರಿ ಲೇಹ:—ಆಯುರ್ವೇದ ಶಾಸ್ತ್ರದಲ್ಲಿ ಅತಿ ಪ್ರಾಮುಖ್ಯತೆಯನ್ನು ಪಡೆದ ಔಷಧಿ. ನರಗಳ ಮತ್ತು ಜನನೇಂದ್ರಿಯದ ಶಕ್ತಿಹೀನತೆ, ಎದೆನೋವು, ನಿಬಲತ್ವತೆ, ಅಜೀರ್ಣ, ಅರುಚಿ, ಅಗ್ನಿಮಾಂದ್ಯ, ವಾಯು ಉಪದ್ರ ಮೊದಲಾದುವುಗಳನ್ನು ಹೋಗಲಾಡಿಸಿ ಮಾನಸಿಕ ಶಕ್ತಿಯನ್ನು ಹೆಚ್ಚಿಸುವುದು, ರಕ್ತವೃದ್ಧಿಯನ್ನೂ, ವೀರ್ಯ ವೃದ್ಧಿಯನ್ನೂ ಉಂಟುಮಾಡಿ ದೇಹಕ್ಕೆ ಸಂಪೂರ್ಣ ಆರೋಗ್ಯವನ್ನು ಉಂಟುಮಾಡುವುದು. ನಿರೋಗಿಗಳೂ, ಶ್ರಮಜೀವಿಗಳೂ ಇದನ್ನು ಪ್ರತಿನಿತ್ಯ ಸೇವಿಸಿದ್ದಲ್ಲಿ ಶ್ರಮ ಪರಿಹಾರವಾಗಿ ಸುಖನಿದ್ರೆಯು ಲಭಿಸುವುದು.

ಬಾಟ್ಲಿ 1ರ ರೂ. 2-0-0. ಬಾಟ್ಲಿ 3ರ ರೂ 5-12-0.

ಮೇಹ ಕುಠಾರ:—ಪ್ರಮೇಹ, ಮೂತ್ರಕೃಚ್ಛ್ರ, ಮೂತ್ರ ಹೋಗದಿರುವಿಕೆ, ಮೂತ್ರ ಹೋಗುವಾಗ ಉರಿ, ಮೂತ್ರದ್ವಾರದಿಂದ ಕೀವು ಬರುವುದು, ಮೂತ್ರದಿಂದ ಧಾತು ಹೋಗುವುದು, ಮೂತ್ರ ಆಗಾಗ ಬಂದು ತಡೆಯಲಿಕ್ಕೆ ಸಾಧ್ಯವಿಲ್ಲದಿರುವುದು ಇವೇ ಮೊದಲಾದ ಹಲವು ಮೂತ್ರಕೋಶದ ರೋಗಗಳಿಗೆ ಸಿದ್ಧೌಷಧ.

ಡಬ್ಬಿ 1ಕ್ಕೆ ರೂ. 2-8-0. ಡಬ್ಬಿ 3ರ ರೂ. 7-0-0.

ಕಸ್ತೂರಿ ಮಿಶ್ರಿತ ದಶಮೂಲಾರಿಷ್ಟ—ಇದು ಬಾಣಂತಿಯರಿಗೆ ಅತ್ಯದ್ಭುತಕರವಾದ ಶಕ್ತಿವರ್ಧಕ ರಸಾಯನವಾಗಿರುತ್ತದೆ. ಪ್ರಸವಿಸಿದ ನಂತರ ಅವರ ಪ್ರಸವದ ಆಯಾಸವನ್ನು ಹೋಗಲಾಡಿಸಿ ಗರ್ಭಕೋಶದ ವೇದನೆಗಳನ್ನು ಸಮಾಧಾನಪಡಿಸುವುದು. ಗರ್ಭಕೋಶದಲ್ಲಿ ಕೆಟ್ಟ ರಕ್ತವು ನಿಲ್ಲದಂತೆ ಮಾಡಿ, ಅಗ್ನಿಮಾಂದ್ಯ, ಅರುಚಿ, ಸಂಧಿಜ ಜ್ವರ, ರಕ್ತಹೀನತೆ, ನಿದ್ರಾಭಂಗ ಮೊದಲಾದುವುಗಳನ್ನು ಹೋಗಲಾಡಿಸಿ ದೇಹವನ್ನು ಶಕ್ತಿವಂತವೂ ಆರೋಗ್ಯವಂತವೂ ಮಾಡುವುದು. ಬಾಣಂತಿಯರು ಪುಷ್ಟಿಹೊಂದಿ, ಶಿಶುವಿಗೂ ಧಾರಾಳವಾಗಿ ಹಾಲು ಸಿಕ್ಕುವಂತೆ ಮಾಡುವುದು.

ಬಾಟ್ಲಿ 1ಕ್ಕೆ ರೂ. 1-8-0. ಬಾಟ್ಲಿ 2ರ ರೂ. 3-0-0.

[ಗುಣಬಾರದಿದ್ದರೆ ಹಣ ವಾಪಾಸು]

ಸುಪ್ರಸಿದ್ಧ ವೈದ್ಯರಾದ ಎಮ್. ಕೆ. ರಜಪೂತ ಇವರ

ಸಂತತಿ ಪ್ರತಿಬಂಧಕ ಚೂರ್ಣ (ರಿಜಿಸ್ಟರ್ಡ)

ಬಹಳ ಸಾರಿ ಹಡಿಯುವುದರಿಂದ ಹೆಂಗಸರ ಅತಿಶಯ ಅಶಕ್ತಿಯಾಗುತ್ತದೆ. ಬಹಳ ಬಡತನದಲ್ಲಿ ವಿಶೇಷ ಮಕ್ಕಳಾಗುವುದರಿಂದ ದುಃಖವಾಗುತ್ತದೆ. ಈ ಕಾರಣದಿಂದಲೂ ಅಥವಾ ಬೇರೆ ಕಾರಣದಿಂದಲೂ ಮಕ್ಕಳನ್ನು ಹಡಿಯುವುದು ಬಂದಾಗಬೇಕೆಂದು ಇಚ್ಛಿಸುವವರು ಈ ಚೂರ್ಣವನ್ನು ಉಪಯೋಗಿಸಬೇಕು. ಇದರ ಸೇವನೆಯಿಂದ ಮುಟ್ಟಾಗುವಿಕೆಯು ನೇಮದಂತೆ ಸುರುವಿರುವುದು. ಶರೀರಕ್ಕೆ ಏನೂ ಅಪಾಯವಾಗದೆ ಸಂಸಾರಸುಖವು ಪೂರ್ಣವಾಗಿದ್ದು ಕೂಡಲೇ ಗರ್ಭಧಾರಣ ಬಂದಾಗುವುದು. ತದನಂತರ ಏನು ಮಾಡಿದರೂ ಸುರುವಾಗುವುದಿಲ್ಲ. ಮೊದಲೇ ಪೂರಾ ವಿಚಾರ ಮಾಡಿ ಔಷಧ ಬೇಕು. ಮುಖ್ಯ ಸರ್ಟಿಫಿಕೇಟು ಡಾಕ್ಟರ ಪಿ. ಎ. ಕೃಷ್ಣ, ಎಲ್. ಸಿ. ಪಿ. ಎಸ್. ಕೆಳವಾಮಾಡಿದ್ದು. ತಾಕೀ — ಈ ಚೂರ್ಣದಿಂದ ಯಾವ ತರದ ಅಪಾಯವಾಗದು. ಗರ್ಭಧಾರಣವೂ ಆಗುವುದಿಲ್ಲ. ಪೂರ್ಣ ಗುಣಕಾರಿ ಡಬ್ಬಿ ಕಿಮ್ಮತ್ತು ರೂ. ೪-೦-೦ ವಿ. ಪಿ. ಅಡೆ ೮

ವಿಳಾಸ—ಸಂಜೀವಿನೀ ಔಷಧಾಲಯ ಮು. ಪೋ. ಮಿರಜ, S. M. C.

Canara Bank, Limited.

Established 1906.

Authorised Capital	10,00000-0-0
Subscribed capital	6,00,000—0—0
Paid up Capital,	3,10,000—0—0
Reserves	4,31,000-0-0

Head Office —**Bunder, Mangalore** Local Offices - **City & Bunder.**

BRANCHES— Bombay, Cochin, Calicut, Ernakulam, Alleppey, Chikmagalur, Gangoli Coondapoor, Udipi, Karkal, Puttur, Kasaragod, & Buntwal Out-agency.

Interest is allowed on Current, Fixed and Savings Bank Accounts, rates of which may be ascertained on application. Advances made on approved securities at easy rates. All kinds of Banking business transacted. Rules of business on application.

The Bangalore Branch Office of the Bank at No. 1 Albert Victor Road, Bangalore City has been opened on 8-1-34.

A. Madhava Pai,
Secretary.

ಬೇಕಾಗಿದ್ದಾರೆ.

ತಿಂಗಳಿಗೆ ರೂ 200ರ ಮೇಲೆ ಚೀಫ್ ಏಜಂಟರೂ, ರೂ 100ರ ಮೇಲೆ ಏಜಂಟರೂ ರೂ 40 ಮತ್ತು ಪ್ರೊವಿಡೆಂಟ್ ಫಂಡ್ ಮತ್ತು ಕಮಿಶನಿನ ಮೇಲೆ ಒರ್ಗನೈಜರರೂ ಬೇಕಾಗಿದ್ದಾರೆ

ಇಂಗ್ಲಿಷಿನಲ್ಲಿ ಬರೆಯಿರಿ -

Uplifting Banking Corporation Ltd.
169 171, Javeri Bazar, Bombay

ವಿಶೇಷ ಸಂಚಿಕೆ] ಜಯಕರ್ನಾಟಕ [೧೯೩೪

ನಾಟ್ಯಾಂಕ.

ಸಂಪಾದಕರು —
ಶ್ರೀ ಬೆಳಗಾಂವಿ ರಾಮಚಂದ್ರ, ಬಿ. ಎ
ಶ್ರೀ ಹ. ಪಿ. ಜೋಶಿ, ಬಿ. ಎ.

ನವೆಂಬರ ಪ್ರಥಮ ವಾರದಲ್ಲಿ ಪ್ರಕಟವಾಗುವುದು

ರಂಗಭೂಮಿ, ನಾಟ್ಯ, ನೃತ್ಯ, ಸಂಗೀತ, ಚಲಚಿತ್ರ ಮೊದಲಾದುವುಗಳ ವಿವಿಧಾಂಗಗಳ ಮೇಲೆ ತಜ್ಞರ ಲೇಖನಗಳು—ಬಂದೆರಡು ತ್ರಿವರ್ಣಚಿತ್ರಗಳು—ಅಲ್ಲದೆ, ಬೇರೆ ಹಲವು ಚಿತ್ರಗಳು, ಏಕಾಂಕ ನಾಟಕ, ಕಥೆ, ವ್ಯಂಗ ಚಿತ್ರಗಳು ಇವುಗಳಿಂದೊಡಗೂಡಿ ವಿಶೇಷ ಸಂಚಿಕೆಯು ಕನ್ನಡಿಗರಿಗೆ ಮೋಹಕವಾಗುವಂತೆ ಹೊರಬೀಳುವುದು, ೧೯೩೩ರ ವಿಶೇಷ ಸಂಚಿಕೆಯ ವೈಭವವು ಜನರಿಗೆ ಮರವೆಯಾಗಿರಲಾರದು, ಈ ಸಲದ (೧೯೩೪ರ) ವಿಶೇಷ ಸಂಚಿಕೆಯು ರಂಗಭೂಮಿ ಮತ್ತು ತತ್ಸಂಬಂಧ ವಿಷಯಗಳ ಬಗ್ಗೆ ಒಂದು ಸಂಗ್ರಾಹ್ಯ ಗ್ರಂಥವಾಗಿಯೇ ವಾಚಕರ ಕೈಯಲ್ಲಿ ಬರಲಿರುವುದು,

ಬಿಡಿಸಂಚಿಕೆ ೧ ರೂಪಾಯಿ. ಚಂದಾದಾರರಿಗೆ ಉಚಿತವಾಗಿಯೇ ಸಿಗುತ್ತದೆ. ಜಾಹೀರಾತುದಾರರಿಗೆ ಸುವರ್ಣಸಂಧಿ. ಕನ್ನಡ ನಾಡಿನಲ್ಲೆಲ್ಲ ವಿಶೇಷ ಸಂಚಿಕೆಯು ಪ್ರಚಾರವಾಗುವಂತೆ ವ್ಯವಸ್ಥೆ ಮಾಡಿದೆ. ದರಗಳಿಗಾಗಿ ಈಗಲೇ ಕೇಳಿಕೊಳ್ಳಿರಿ. ... [illegible]

ವ್ಯವಸ್ಥಾಪಕ,
[illegible], ಧಾರವಾಡ.

ಡಾಕ್ಟರ್ ಗೌತಮ ರಾವ್ ಕೇಶವ ಎಂಡ್ ಸನ್ಸ್, ಫಾರ್ಮಸಿಸ್ಟ್ಸ್, [illegible]
[illegible] ಕಂಪೆನಿ, ಮಂಗಳೂರು.
[illegible]

Shiromani Narayanacharya,
Choukhamba, Benares City

ಶಾಸ್ತ್ರಗಳೇ ಪೂರ್ವಜರು ಅರಿಯರೇ ಅಥವಾ ಈಗಿನವರೇ? ರಾಮಕೃಷ್ಣನವರೇ ಪೂರ್ವಜರ ಆರೋಗ್ಯವೇ ... ಆರೋಗ್ಯ ಅದಕ್ಕೆ ಕಾರಣವೇನು? ಅವರು ರುದ್ರಾಕ್ಷಿಯನ್ನು ... ಧಾರಣೆಮಾಡುತ್ತಿದ್ದರು. ಅದರಿಂದ ಏನು ಫಲ? ಅದನ್ನು ಧರಿಸಿದರೆ ಜೀರ್ಣಶಕ್ತಿ, ಬುದ್ಧಿಶಕ್ತಿ, ವಿದ್ಯಾಭಿವೃದ್ಧಿ, ದೀರ್ಘವೃದ್ಧಿ, ಸಂಪತ್ತು ಕೀರ್ತಿ ಇವುಗಳೆಲ್ಲಾ ಆಗುವುವು ಹಾಗಾದರೆ, ನಮಗೆ ಅಂತಹ ರುದ್ರಾಕ್ಷಿ ಎಲ್ಲಿ ದೊರೆಯುವುದು? ಅದು ಲೋಕಪ್ರಸಿದ್ಧಿ ಹೊಂದಿದ ನಮ್ಮ ಕಾಶೀ ಚೌಖಂಬಾ ಶಿರೋಮಣಿ ನಾರಾಯಣಾಚಾರ್ಯರಲ್ಲಿಯೇ ಯೋಗ್ಯವಾದ ಕ್ರಯಕ್ಕೆ ಉತ್ತಮ ಬಗೆಯ ರುದ್ರಾಕ್ಷಿ ದೊರೆಯುವುದು.

ಸಣ್ಣ ಅರ್ಧ ಪ್ರಮಾಣದ ಕಂಠಿಸರ 1ಕ್ಕೆ ಆಣೆ 1ರಿಂದ ರೂ 25ರ ವರೆಗೆ 108 ರುದ್ರಾಕ್ಷಿಗಳುಳ್ಳ ಸರ 1ಕ್ಕೆ ಆಣೆ 3ರಿಂದ ರೂ 25ರ ವರೆಗೆ ಗೌರೀಶಂಕರ ರುದ್ರಾಕ್ಷಿ 1ಕ್ಕೆ ರೂ. 3ರಿಂದ ರೂ. 50ರ ವರೆಗೆ ಮತ್ತು 3-4-5-6-7-8 ಮುಖಗಳ ಕಾಳು 1ಕ್ಕೆ ಆಣೆ 4ರಿಂದ ರೂಪಾಯಿ 10 ಮತ್ತು 9-10-11 ಮುಖಗಳುಳ್ಳ ಕಾಳು 1ಕ್ಕೆ ರೂ 20ರಿಂದ 30ರ ವರೆಗೆ 12 13-14 ಮುಖದ ಕಾಳು 1ಕ್ಕೆ ರೂಪಾಯಿ 50ರಿಂದ 100ರ ವರೆಗೆ ಸಣ್ಣ ರುದ್ರಾಕ್ಷಿ ಅವರೆಕಾಳಿನಂತ ಸಣ್ಣದಾದುದಕ್ಕೆ ಕ್ರಯ ಜಾಸ್ತಿ ದೊಡ್ಡ ರುದ್ರಾಕ್ಷಿ ಅವರಿಗಿಂತ ದೊಡ್ಡದಾದುದಕ್ಕೆ ಕ್ರಯ ಜಾಸ್ತಿ ಆಗುವುದು. (ವಿವರಕ್ಕೆ ಕೆಟಲಾಗಿಗೆ ಬರೆದರೆ ಇನಾಮವಾಗಿ ಕಳುಹಿಸುತ್ತೇವೆ 1 ಆಣೆ ಸ್ಟಾಂಪು ಕಳುಹಿಸಿದರೆ 3 ಇನಾಮುಗಳು— 1 ವಿಶ್ವೇಶ್ವರ ಪಟ, 1 ಕಾಶೀ ನಕ್ಷೆ 1 ... ಜೊತೆ 3 ಇನಾಮುಗಳು)

ಶಿರೋಮಣಿ ನಾರಾಯಣಾಚಾರ್ಯ
ಚೌಖಂಬಾ, ಬನಾರಸ್ (ಕಾಶೀ)

77 ವರ್ಷಗಳು.

ಅಸಂಖ್ಯಾತರಾದ ನಮ್ಮ ಗಿರಾಕಿಗಳ ಬೇಕುಗಳ ಮತ್ತು ಅನುಕೂಲತೆಗಳನ್ನು ಇದೇ ಮಾಸ್ತಾಯಿಕದಿಂದ ತಿಳಿದು, ಅವರಿಗೆ ಸುಲಭ ದರದ ಯೋಗ್ಯ ಹಾಗೂ ಬಹುಕಾಲ ಬಾಳುವ ಸರ್ವ ತರದ ಉಡುಪುತೊಡುಪುಗಳನ್ನು ಒದಗಿಸುವ ನಮ್ಮ ಏರಡೆ ಶತಮಾನಾಂತರಗಳ ಅನುಭವವು ಮುಂದಕ್ಕೂ ಸಂತೃಪ್ತಿಯನ್ನೇ ಕೊಡುವುದಲ್ಲವೇ?

ಸ್ವದೇಶೀ

ಕಾರ್ಖಾನೆಗಳಲ್ಲಾದ ನೂಲು ಮತ್ತು ಕೈಮಗ್ಗದ ವಸ್ತ್ರ, ಹೊದಿಕೆಗಳೂ, ಬೆಡ್‌ಶೀಟ್, ಬಾತ್ ಟುವಾಲುಗಳೂ ಧೋತಿ, ಸೀರೆ—ಪೈರವಾಸು—ಚೆಕ್ಕು—ಚೀಟು ಇತ್ಯಾದಿ ಎಲ್ಲವೂ ಯಾವಾಗಲೂ ಮಾರಾಟಕ್ಕಿವೆ.

ಶ್ರೀನಿವಾಸ ರಂಗ ಪೈ,
[ಸ್ಥಾಪಿತವಾದ ೧೮೫೭]
ರಥಬೀದಿ, ಮಂಗಳೂರು.

Srinivasa Ranga Pai,
Representatives for South Canara and Malabar,
For **A. & F. Harvey,**
Managers Madura Mills Co. Ltd

Edited, Printed & Published By A. B. Kamath at the Sharada Press, Car Street, Mangalore.

Registered No. 496.

ಸ್ವದೇಶಾಭಿಮಾನಿ.

SWADESHABHIMANI

ESTABLISHED 1906. PIONEER WEEKLY OF SOUTH KANARA.

(ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ೧೯೦೬ರಲ್ಲಿ ಸ್ಥಾಪಿತವಾದುದು.)

ಪ್ರತಿ ಶುಕ್ರವಾರವೂ ಮಂಗಳೂರಿನ ಶಾರದಾ ಛಾಪಖಾನೆಯಲ್ಲಿ ಪ್ರಕಟನಾಗುವ ವಾರಪತ್ರಿಕೆ

ರಕ್ಷೈರ್ಮಹಾರ್ಘೈಸ್ತುತುಷುರ್ನ ದೇವಾ। ನ ಭೇಜಿರೇ ಭೀಮವಿಷೇಣ ಭೀತಿಮ್॥ ಸುಧಾಂ ವಿನಾ ನ ಪ್ರಯಯುರ್ವಿರಾಮಂ। ನ ನಿಶ್ಚಿತಾರ್ಥಾದ್ವಿರಮಂತಿ ಧೀರಾಃ॥೧॥
ದೊರೆಯಲನುಪಮರತ್ನಗಳು ಸಾ। ಗರವ ಮಥಿಸಲು ಸುರರಿಗದರಿಂ। ಹರುಷವಾಯಿತೆ? ಮತ್ತೆ ವಿಶ್ವವ ಸುಡುತ ಬರುತಿರುವ॥
ಗರಲಕವರಂಜಿದರೆ? ಸುಧೆಯುಸು। ವರಿತು ಕ್ಷುದ್ರರ ತೆರದಿ ಕುಳಿತರೆ?। ತೆರಳ ಬಲ್ಲರೆ ತೊರೆದು ಧೀರರು ನಿಶ್ಚಿತಾರ್ಥವನು? ॥ ೧ ॥

ಪುಸ್ತಕ ೨೮. ಮಂಗಳೂರು ತಾ. ೧೯ನೇ ಶುಕ್ರವಾರ ಒಕ್ಟೋಬರ ೧೯೩೪ (19-10-'34) ಸಂಚಿಕೆ ೪೧

SAMPLE-COPY

The Canara Banking Corporation Udipi, Ltd.

(Incorporated in British India) ESTD. 1906.

Head office:—UDIPI, S. K **Branches:—Goondapoor, Mangalore, Shimoga & Madras**

Authorised Capital Rs 3 50,000 Subscribed and Called up Rs 2,25 000

Statement of Assets & Liabilities as on 31st August 1934

	Liabilities			Assets		
1	Paid up Capital	Rs 2 25 000—0 0	1	Bank Premises	Rs	66,892 15—0
2	Reserve and other funds	2 50 000—0 0	2	Investment on G P Notes		6,40,826—4—6
3	Deposits	, 23 22 920 11 6	3	Authorised Investments	,	21 82 571—1—6
4	Due to Bankers	60,796 10	4	Bill for collection	,	30,000—2—0
5	Sundries	94 574 13	5	Sundries		40 054 6—8
6	Bills per contra	30 000 2	6	Cash on hand & with Bankers at call		22 947—5—10
	Total Rs	29,83 292—3 1		Total		29,83 292—3—1

Office of the Corporation, Udipi, S. K 4—9—1934.

M Shrinivas Prabhu,
Ag Manager.

ಅಮೃತಾಂಜನ.

ಇದು ಕೆಟ್ಟ ಶಿರೋವೇದನೆ, ಕಷ್ಟಕೊಡುವ ವಾತ, ಭಾರಿ ನೋವು, ವಿಶೇಷ ಉಳುಕು, ಅಸಹನೀಯ ಹಲ್ಲುನೋವು ವಿಪರೀತ ಘಾಯ, ಬಹು ಶೀತ, ಸಹಿಸಲಸದಳವಾದ ಚಳಿ ಕೈಕಾಲು ಮರಗಟ್ಟುವುದು ಲುಂಬಾಗೊ ಮೊದಲಾದ ಎಲ್ಲಾ ತರದ ಬೇನೆಗಳನ್ನೂ ಅತೀ ಬೇಗನೇ ಗುಣಪಡಿಸುತ್ತದೆ ಎಲ್ಲೆಲ್ಲಿಯೂ ಮಾರಲ್ಪಡುತ್ತಿದೆ

ರಿಂಗ್‌ವರ್ಮ್ ಮುಲಾಮು:– ಇದು ರಿಂಗ್‌ವರ್ಮನ್ನೂ ಕಜ್ಜಿಯನ್ನೂ ಇನ್ನಿತರ ಚರ್ಮರೋಗಗಳನ್ನೂ ಮೂರು ಸಲ ಮುಟ್ಟಿಸುವುದರೊಳಗೆ ಗುಣಪಡಿಸುತ್ತದೆ.

ಡಬ್ಬಿ 1ಕ್ಕೆ 6 ಆಣೆ. ಡಜನಿಗೆ ರೂ. 3—8—0 ಅಂಚೆವೆಚ್ಚ ಪ್ರತ್ಯೇಕ.

ಅಮೃತಾಂಜನ ಡಿಪೋ, ಮದರಾಸು, ಮತ್ತು ಬೊಂಬಾಯಿ.

ದಿ ಬೊಂಬೇ ಲ್ಯಾಫ್ ಎಶ್ಯೂರೆನ್ಸ್ ಕಂಪೆನಿ ಲಿಮಿಟೆಡ್, ಬೊಂಬೇ.

1908ರಲ್ಲಿ ಸ್ಥಾಪಿತವಾದುದು.

ಪೊಲಿಸಿದಾರರಿಗೆ ವಿಶೇಷ ರಿಯಾಯತಿ.

ವರ್ಷಾವಧಿಯ ಪ್ರೀಮಿಯಮ್ಮುಗಳನ್ನು ತೆರುವ ಎಲ್ಲಾ ಪೊಲಿಸಿದಾರರಿಗೂ "ಸಿಲ್ವರ್ ಜ್ಯೂಬಿಲಿ" ರಿಯಾಯತಿಯಾಗಿ ಅವರವರ ಮುಂದಿನ ಪ್ರತಿ ವಾರ್ಷಿಕ ಪ್ರೀಮಿಯಮ್ಮಿನಲ್ಲಿ ಶೇಕಡಾ 2½ ಸಲೆಯಷ್ಟು ಕಡಿಮೆಯಾದ ಮೊಬಲಗನ್ನು ತೆರುವ ರಿಯಾಯತಿ ಕೊಡಲಾಗಿದೆ. ಈ ರಿಯಾಯತಿಯ ಪ್ರಯೋಜನವನ್ನು ಆಗಲೇ ನೂರಾರು ಮಂದಿ ಪೊಲಿಸಿದಾರರು ಪಡಕೊಂಡಿದ್ದಾರೆ. ವರ್ಷಕ್ಕೊಮ್ಮೆ ಪ್ರೀಮಿಯಮ್ಮಿನ ಕಂತನ್ನು ಕಟ್ಟಲಪೇಕ್ಷಿಸುವವರು ತಮ್ಮ ಪೊಲಿಸಿಯ ನಂಬರುಗಳನ್ನು ನಮೂದಿಸಿ ನಮಗೆ ಯಾ ಸಮ್ಮಂಧಪಟ್ಟ ನಮ್ಮ ಇತರ ಆಫೀಸಿಗೆ ತಿಳಿಸಬೇಕಾಗಿ ಈ ಮೂಲಕ ವಿನಂತಿ ಮಾಡಿಕೊಳ್ಳೋಣಾಗುತ್ತದೆ.

ವಿ. ಸೂ:—ಪ್ರಾತಿನಿಧ್ಯವಿಲ್ಲದ ಜಿಲ್ಲೆಗಳಿಂದ ಉತ್ಸಾಹಶಾಲಿ ಗೃಹಸ್ಥರುಗಳ ಏಜನ್ಸಿ ಅರ್ಜಿಗಳು ಅಂಗೀಕರಿಸಲಾಗುತ್ತವೆ.

ಕೊಟ್ಟಿಕಾರ್ ಬ್ರದರ್ಸ್, ಮದ್ರಾಸ್ ಬ್ರೇಂಚ್ ಸೆಕ್ರೆಟರಿಯವರು.

[illegible] ಮಾಡುತ್ತ! [illegible], [illegible], [illegible], [illegible] ಅಲ್ಲಿ [illegible] [illegible] ಮಾಡಿಯೂ [illegible].

× × × × ×

[illegible] ಈ [illegible] ಅಲ್ಲವೆಂದು [illegible] ಅಲ್ಲವೆಂದು ನನ್ನ [illegible] [illegible] ಪದವಿಯಂತು [illegible], [illegible] ಬದಲಾಯಿತು.

× × × × ×

[illegible] ಒಬ್ಬ [illegible] [illegible], [illegible] [illegible] ಎಂದು ಹೇಳುವ.

× × × × ×

ಸ್ವದೇಶಾಭಿಮಾನಿಯು ಸ್ಪೆಶಲ್ ಎಡಿಶನ್‌ಗಳನ್ನು [illegible] ಯಲ್ಲಿ ಹಿಡಿದುಕೊಂಡು ಮೈಸೂರು [illegible], ನೂರಾರು ಜನ ಚಂದಾದಾರರನ್ನು ಮಾಡಿ, "ಸಕಲವು ಎಂದರೆ ನಾನೇ" ಎಂದು ಹೇಳಿಕೊಳ್ಳುವ ಭಾಗ್ಯವು [illegible] [illegible] [illegible] [illegible] [illegible] [illegible]!

× × × × ×

ತಾ. ೧೨-೧೦-೩೪ರಲ್ಲಿ ಸ್ವದೇಶಾಭಿಮಾನಿಯು ಹೊರಡುವುದಿಲ್ಲವೆಂದು [illegible] ಹೆಂದಾದಾರರು ತಮ್ಮ ೮ ತಾರೀಖಿನ ಸಂಚಿಕೆ ಕಳಿಸಲಿಲ್ಲವೆಂದು ಸಂಪಾದಕರಿಗೆ ದೂರು ಅಂತೆ. ಏಕೆ ರಾಯರೆ, ಹೀಗೆ ಮಾಡುವುದು? ವಾರಕ್ಕೊಮ್ಮೆಯಾದರೂ ಪತ್ರಿಕೆಯ ಮುಖ ನೋಡದಿದ್ದರೆ ಬೇಸರವಾಗುವುದಲ್ಲವೇ!

× × × × ×

ಸ್ವದೇಶಾಭಿಮಾನಿಯು ದಸರಾ ಸಂಚಿಕೆಯು ಈ ಸಲ [illegible] ಗ್ರೇಂಡ್ ಆಗಿ ಹೊರಬಿದ್ದಿತು ನೋಡಿರಯ್ಯ! ಏನು [illegible]? ಏನು ಅಂದ! [illegible] ಸಂಚಿಕೆಯನ್ನು ಹರಿವಾದ ಮೇಲೂ "ಇದರಲ್ಲಿ ಏನುಂಟು ಮಣ್ಣು?" ಎಂದು ಹೇಳುವವರು ನಮ್ಮಲ್ಲಿರುವರೆಂದು ಸಂಪಾದಕರಿಗೆ ತಿಳಿದಿದೆ. ಹಾಗೆ ಹೇಳುವವರಿಗೆ ಬರುವ ಸಂಚಿಕೆಯಲ್ಲಿ [illegible] ಸೇರು ಅಕ್ಕಿ ಮತ್ತು ಒಂದೊಂದು ನಾತಿಕಾಯಿಗಳನ್ನು ಕಳುಹಿಸುವ ಏರ್ಪಾಡು ಮಾಡಿದರೆ ಉತ್ತಮ.

× × × × ×

ಈ ಸರ್ತಿ ಮಂಗಳೂರಲ್ಲಿ ನೂರುಗಟ್ಟಳೆ ವೇಷಗಳು! ನೂರಾರು ಹುಲಿಗಳು! ಗೂಡಿನೊಳಗಿನ ಹುಲಿಯೊಂದು ಇತ್ತು. ಇವುಗಳಿಗೆ ಚಂಡೆಗಳು ಸಿಕ್ಕಿರಬಹುದು.

× × × × ×

ಮೈಸೂರು ದಸರ ಚಂಡೆ
ರಾವತ್ ರಾವತ್ ರಾವತ್,
ಮೈಸೂರು ಊರ ಚಂಡೆ
ರಾವತ್ ರಾವತ್ ರಾವತ್.
ದೊಡ್ಡ ದೊಡ್ಡ [illegible] ಚಂಡೆ
ರಾವತ್ ರಾವತ್ ರಾವತ್.

'ಸಾಕ್ಷ್ಯ'

ಅಸ್ವಸ್ಥದ ನಂತರ

ನಿಮ್ಮ ಶಕ್ತಿಯನ್ನು ವೃದ್ಧಿಸುತ್ತದೆ.

ಅಸ್ವಸ್ಥರಾದ ನಂತರ ನಿಮ್ಮ ದೇಹವು ನಿರ್ಬಲಗೊಳ್ಳುತ್ತದೆ. ನಿಮ್ಮ ದೇಹಪ್ರಕೃತಿಯು ಅಪಾಯಕರವಿರುತ್ತದೆ. ನಿಮಗೆ ಶಕ್ತಿ ಚೈತನ್ಯವಿಲ್ಲ. ನಿಮ್ಮ ಬಲವೆಲ್ಲಾ ಹೋಗಿದೆ. ನಿಮ್ಮ ಬಲವನ್ನು ಪುನಃ ತರುವುದು ಒಂದು ಮಹಾ ಕೆಲಸ. ಹೊಸ ಶಕ್ತಿಯು ಸರಿಯಾದ ಪೋಷಣೆಯಲ್ಲಿದೆ. ನಿತ್ಯದ ಆಹಾರದಲ್ಲಿ ಜೀವನಾಂಶವಿರುವುದಿಲ್ಲ. ಆದುದರಿಂದ ಅಸ್ವಸ್ಥಗೊಂಡವನು ಸಂಪೂರ್ಣ ಸರಿಯಾದ ಮತ್ತು ಸಮತೂಕ ಆಹಾರವಾದ 'ಓವಲ್ಟಿನ್'ನ್ನು ಸೇವಿಸಬೇಕು.

ಓವಲ್ಟಿನ್ ಎಂಬುದು ಪ್ರಕೃತಿಸಿದ್ಧ ಆಹಾರ. ಬೆಳೆದ ಬಾರ್ಲಿ, ದನದ ಕೆನೆ ಹಾಲು, ವಿಶೇಷವಾದ ಕೋಳಿ ಮೊಟ್ಟೆಗಳಿಂದ ತಯಾರಿಸಲ್ಪಟ್ಟದ್ದು, ಅಸ್ವಸ್ಥದ ನಂತರ ಬೇಕಾದ ಶಕ್ತಿಯನ್ನೊದಗಿಸುತ್ತದೆ. ಆರೋಗ್ಯ, ಬಲಗಳು [illegible].

OVALTINE

ಮೆದುಳು, ನರ ಮತ್ತು ದೇಹವನ್ನು ವೃದ್ಧಿಸುತ್ತದೆ.

ತಯಾರಿಯಲ್ಲಿ ಕೈಯಲ್ಲಿ ಸ್ಪರ್ಶಿಸಲಾಗಿಲ್ಲ. ಎಲ್ಲಾ ಕೆಮಿಸ್ಟರಲ್ಲಿಯೂ ಸ್ಟೋರುಗಳಲ್ಲಿಯೂ ದೊರೆಯುತ್ತದೆ.

OV/196

'ಜುಂಬನ'ವನ್ನು ಹೋರಾಡುವರು!

ಚುಂಬನದ ಮೇಲೆ ಸಂಗ್ರಾಮ ಹೂಡುವವರಿದ್ದಾರೆ. "ಎಂಟಿ ಕಿಸ್ಸಿಂಗ್ ಲೀಗ್" ಎಂಬ ನೂತನ ಸಂಘವನ್ನು ಅವರು ಸ್ಥಾಪಿಸಿದ್ದಾರೆ. ಈ ಸಂಘಗಳೀಗ ಅಮೇರಿಕ, ಆಸ್ಟ್ರಿಯ, ಫ್ರಾನ್ಸ ಮತ್ತು ಸೋವಿಯಟ್ ರಷ್ಯಗಳಲ್ಲಿವೆ. ಇವರಿಗೆ ಚುಂಬನಗಳೆಂದರೆ ಆಗದು. ಚುಂಬನ ಕೊಡುವುದು ಆರೋಗ್ಯದೃಷ್ಟ್ಯಾ ನಿಜವಲ್ಲವೆಂದೇ ಇವರ ಮತ. ಇವರ ಪ್ರಚಾರಕಾರ್ಯ ಚೆನ್ನಾಗಿ ಸಾಗುತ್ತಿದೆ.

ಕಟ್ಟೋಗಳು 'ಬೆಳೆಯುತ್ತಿವೆ'

[illegible] ನಗರಗಳಲ್ಲಿ, ಕಟ್ಟೋಗಳು ಬೆಳೆಯುತ್ತಿರುತ್ತವೆ. ಹೇಗೆಂದು ಬಲ್ಲಿರಾ? ಹೊಸ ಕಟ್ಟೋ ಬೇಕಾದಾಗ, ಅಲ್ಲಿನ ಮೂಲನಿವಾಸಿಯು ಒಂದು ಕಡದ ನಿಡದ ಕೊಂಬೆಯನ್ನು ಕಡಿದು, ಅದಕ್ಕೆರಡು ಕೊಕ್ಕು ಮಾಡಿ, ಕಟ್ಟೋನಂತೆ ಕೊಟ್ಟುಕೊಳ್ಳುವರು. ಅಲ್ಲಿಯ ಮೂಲನಿವಾಸಿಗಳೆಲ್ಲ ಅದನ್ನೇ [illegible].

[illegible]

ಏನು ಚಿತ್ರ, ಧರಣಿದಿ — [illegible], ಸಿಂಸಿನ್ನಾಟದ [illegible] ಬೋರ್ಡ್ ಡ್ರೈವರ್, ಒಮ್ಮೆ ಒಂದು ಅಪಘಾತದಲ್ಲಿ [illegible]. ಅಂದಿನಿಂದ ಒಂದು ಚಿತ್ರ [illegible],— ಎಡೆಬಿಡದೆ ಮಾತಾಡುತ್ತಿರುವುದು. [illegible] ಅರಂಭಿಸಿ ೩೦೦ ತಿಂಗಳುಗಳಾದುವು. ಮಾತಾಡುತ್ತಲೇ ಇದ್ದಾನೆ. ಒಂದು ಕ್ಷಣದ ವಿರಾಮವೂ ಇಲ್ಲ. ಇನ್ನೂ ಮರಣ ಬರದೆ ಇರುವುದೊಂದು ದೊಡ್ಡ ಅದ್ಭುತ!

Karnataka Chemical and Pharmaceutical Works, Ltd., Udipi. (South India)

[illegible] ಮೈಸೂರಿನಲ್ಲಿಯೂ [illegible] ಪಡೆದಿರುವ

ಕರ್ಣಾಟಕ ಕೆಮಿಕಲ್ ಎಂಡ್ ಫಾರ್ಮಸ್ಯೂಟಿಕಲ್ ವರ್ಕ್ಸ್, ಲಿಮಿಟೆಡ್, ಉಡುಪಿ. (ದಕ್ಷಿಣ ಹಿಂದೂಸ್ಥಾನ).

ನಮ್ಮಲ್ಲಿ ಟಿಂಕ್ಚರ್ಸ್ ವಗೈರೆ ಎಲ್ಲಾ ಎಲ್ಲೋಪತಿಕ್ ಔಷಧ ದ್ರವ್ಯಗಳೂ, ಆಯುರ್ವೇದಿಯ ಔಷಧಗಳೂ, ಟ್ವಾಲೆಟ್ ಸಾಮಗ್ರಿಗಳೂ, ಸಾಬೂನುಗಳೂ, ಫೌಂಟನ್ ಪೆನ್ ಶಾಯಿಗಳೂ ತಯಾರಿಸಲ್ಪಡುತ್ತವೆ.

ದ್ರಾಕ್ಷಾಸವ, ಪ್ರಸೂತಿ ಸಂಜೀವನ, ವಿನೆಗರ್, ಸ್ನೋ, ಕ್ಷೀರಬಲಾ, ಕಾರ್ಪೋಫ್ಲೋಜಿಸ್ಟಿನ್ ಯುಟೇರಿನಾ, ಇಂಕ್ಸ್

ಮೆನೆಜಿಂಗ್ ಡೈರೆಕ್ಟರ್—ವೆಂಕಟ್ರಾಯ ಅಚ್ಯುತ ಬಾಳಿಗ.

ಹೆಡ್ ಆಫೀಸು, ಉಡುಪಿ. (ದಕ್ಷಿಣ ಹಿಂದೂಸ್ಥಾನ)

ಬ್ರೇಂಚ್ ಆಫೀಸು, [illegible] ಸ್ಟ್ರೀಟ್, [illegible].

ಪಶ್ಚಿಮ ಕರಾವಳಿ ಮತ್ತು ಮೈಸೂರು ಪ್ರಾಂತ್ಯಗಳ ಪ್ರಾಮುಖ್ಯ ಏಜಂಟರು:—

ಕರ್ಣಾಟಕ ಪ್ರೊಡಕ್ಟ್ಸ್ ಡಿಸ್ಟ್ರಿಬ್ಯೂಟಿಂಗ್ ಕಂಪೆನಿ, ಮಂಗಳೂರು.

ಕೊಂಗ್ರೆಸ್ ಸುಧಾರಣೆ: ಗಾಂಧಿಜಿಯವರ ಆಯೋಜನೆ.

ಮಹಾತ್ಮಾ ಗಾಂಧಿಯವರು ವಾರ್ಧಾದಿಂದ ಪುನಃ ಒಂದು ಪ್ರಕಟಣೆ ಕೊಟ್ಟಿರುವರು—

"ನಾನು ಕೊಂಗ್ರೆಸಿನಿಂದ ನಿವೃತ್ತನಾಗುವೆನೆಂದು ಹೇಳಿದ ನಂತರ ಪತ್ರಿಕೆಗಳಲ್ಲಿ ಈ ವಿಷಯವಾಗಿ ಎಷ್ಟೋ ಪ್ರಕಟಣೆಗಳಾಗಿವೆ; ಅಭಿಪ್ರಾಯಗಳು ವ್ಯಕ್ತಗೊಂಡಿವೆ. ಇವುಗಳ ಮೇಲಿಂದ ನೋಡುವ ಸದಸ್ಯತನ ಮತ್ತು ನಿತ್ಯ ಖಾದಿಧಾರಣೆ ಇವುಗಳು ಅನೇಕ ಕೊಂಗ್ರೆಸ್ ಕೆಲಸಗಾರರಿಗೆ ಒಪ್ಪಿಗೆಯಾಗಿಲ್ಲವೆಂದು ನನಗನಿಸುತ್ತಿದೆ. ಹಾಗೆಯೇ ಶಾಂತವಾದ ಮತ್ತು ನ್ಯಾಯವಾದ ಎಂಬ ಶಬ್ದಗಳನ್ನು 'ಸತ್ಯ-ಅಹಿಂಸೆ' ಎಂದು ತಿದ್ದಿಕೊಳ್ಳಲೂ ಒಪ್ಪದವರನೇಕರಿದ್ದಂತೆ ತಿಳಿದುಬರುತ್ತದೆ. ಈ ಮೇಲಿನ ತಿದ್ದುಪಡಿಗಳನ್ನು ಕೊಂಗ್ರೆಸ್ ಸಭೆಯಲ್ಲಿ ಡೆಲಿಗೇಟರು, — ಕೇವಲ ಕೊಂಗ್ರೆಸ್ಸಿನಲ್ಲಿ ನಾನಿರಬೇಕೆಂದೇ ಪುರಸ್ಕರಿಸಬೇಕೆಂದು ನಾನು ಇಚ್ಛಿಸುವುದಿಲ್ಲ. ಅಂತಹ ಸ್ಥಾನವು ನನಗೆ ಅಪೇಕ್ಷಣೀಯವಾಗಿಲ್ಲ. ನಾನು ಕೊಂಗ್ರೆಸ್ಸಿನ 'ಪೋಷಕ'ನಾಗಬೇಕೆಂಬ ಕಾಂಕ್ಷೆಯುಳ್ಳವನಾಗಿಲ್ಲ. ದೇಶದ ದೀನ ಸೇವಕನು ನಾನು; ಸೇವಕನಾಗಿಯೇ ಇರುವೆನು.

"ನಿವೃತ್ತನಾಗುವೆನೆಂಬ ನನ್ನ ಪ್ರಕಟಣೆಯು ಬೆದರಿಕೆಯಾಗಲಿ 'ಶರತ್ತಾ'ಗಲಿ ಅಲ್ಲವೆಂದು ತಿಳಿಸಬಿಚ್ಛಿಸುತ್ತೇನೆ. ನಾನು ಕೊಂಗ್ರೆಸ್ಸಿನಲ್ಲಿದ್ದು ನನ್ನಿಂದ ಅಬಾಧಿತವಾದ ಉತ್ತಮ ಸೇವೆಯು ಅಪೇಕ್ಷಿಸಲ್ಪಡುವಾಗ ಆ ತಿದ್ದುಪಡಿಗಳೂ ಸ್ವೀಕೃತವಾಗುವುದೂ ಅವಶ್ಯವಿದೆಯಷ್ಟೆ. ಆದರೆ ಆ ತಿದ್ದುಪಡಿಗಳು ಹೃತ್ಪೂರ್ವಕವಾಗಿ ಮಾನ್ಯವಾಗುವಂತಿಲ್ಲವೆಂದು ನನಗೆ ಸ್ಪಷ್ಟವಾಗಿ ತೋರುತ್ತದೆ. ಅದುಕಾರಣ, ಕೊಂಗ್ರೆಸ್ ಕಮಿಟಿಯ ಸಭೆಯವರು ಹೇಳಲಿಚ್ಛಿರುವುದಕ್ಕೊಳಪಟ್ಟು, ಬೊಂಬಾಯಿಯ ಅಧಿವೇಶನವು ಮುಗಿಯುತ್ತಲೇ ನಾನು ನಿವೃತ್ತನಾಗಲಿಚ್ಛಿಸುತ್ತೇನೆ. ಡಾ ಅನ್ಸಾರಿ, ವಲ್ಲಭಭಾಯಿ ಪಟೇಲ, ಖಾನ್ ಸಹೋದರರು ಇವರೆಲ್ಲ ನನ್ನ ನಿರ್ಧಾರವನ್ನು ಸಮರ್ಥಿಸುವರು. ನನ್ನಂತಹ ಮನುಷ್ಯನು ಕೊಂಗ್ರೆಸ್ಸಿನಲ್ಲಿದ್ದು ಇತರ ಹಲವು ಕೆಲಸಗಾರರಿಗೂ ನನಗೂ ಅಭಿಪ್ರಾಯ ಭೇದಗಳಿರುವುದಾದರೆ, ಕೊಂಗ್ರೆಸ್ಸು ಮುಂದುವರಿಯಲು ಕಷ್ಟವೆನಿಸುವುದು; ಶಕ್ತಿಯು ಕುಂದುವುದು.

"ನಾನು ನಿವೃತ್ತನಾದ ನಂತರ ಕೌನ್ಸಿಲು ಬಹಿಷ್ಕಾರದ ಪ್ರಶ್ನೆಯು ಕೆಲವರನ್ನು ಈಗಿನ ಕೊಂಗ್ರೆಸ್ ಕಾರ್ಯಕ್ರಮಕ್ಕೆ ಪ್ರತಿಕೂಲವಾಗಿ ವರ್ತಿಸುವಂತೆ ಮಾಡಬಹುದು. ಆದರೆ ಕೌನ್ಸಿಲ್ ಬಹಿಷ್ಕಾರವೆಂಬುದು ಶಾಶ್ವತವಾಗಿರತಕ್ಕದೆಂದು ಅದನ್ನು ಕೈಗೊಂಡಿರಲಿಲ್ಲವೆಂಬುದನ್ನು ತಿಳಿಸಬಿಚ್ಛಿಸುತ್ತೇನೆ. ಮತದಾರರು ಕೂಡ ಕೊಂಗ್ರೆಸ್ಸಿನ ಯೋಗ್ಯತೆಯನ್ನು ಗ್ರಹಿಸಿ ಕೊಂಗ್ರೆಸ್ಸಿಗೆ ಚುನಾವಣೆಗಳಲ್ಲಿ ಜಯವು ದೊರೆವಂತೆ ಯತ್ನಿಸುವರಾಗಿ ನಂಬಿರುವೆನು.

"ಕೊಂಗ್ರೆಸ್ ಡೆಲಿಗೇಟರುಗಳ ಸಂಖ್ಯೆಯು 6000ದಿಂದ 1000ಕ್ಕೆ ಇಳಿಸಲ್ಪಡಬೇಕು. ಕೊಂಗ್ರೆಸ್ ಅಧಿವೇಶನಗಳ ಕಾರ್ಯವೆಷ್ಟೋ ವಿನೋದ ಪ್ರದರ್ಶನಾದಿಗಳೆಂದು ತೋರುತ್ತಾಗುವುದಿದೆ. ನಾನು ಈ ಕೆಳಗೆ ಸೂಚಿಸಲಿರುವ ತಿದ್ದುಪಡಿಗಳೆಲ್ಲ ನನ್ನ ವೈಯಕ್ತಿಕ ಅಭಿಪ್ರಾಯಗಳು. ಈ ತಿದ್ದುಪಡಿಗಳು ಆಕಸ್ಮಿಕವಾಗಿ ಬಂದುವೆಂದು ಯಾರೂ ಆಕ್ಷೇಪಿಸಬಾರದೆಂದು, ನಾನು ವಲ್ಲಭಭಾಯಿಯವರ ಅನುಮತಿ ಪಡೆದು, ಮೊದಲೇ ಪ್ರಕಟಿಸಿರುವೆನು. ಇವುಗಳನ್ನು ವಿಷಯನಿಯಾಮಕ ಕಮಿಟಿಯೂ ಕೊಂಗ್ರೆಸ್ಸೂ ಪರ್ಯಾಲೋಚಿಸಲಿ. ಈ ಸಾವಿರ ಡೆಲಿಗೇಟರ ಆಯಾ ಪ್ರಾಂತ್ಯದ ಜನಸಂಖ್ಯೆಯ ಮೇಲೆ ಆಧರಿಸಿ ಹಂಚಲ್ಪಡುವುದಿಲ್ಲ; ಕೊಂಗ್ರೆಸ್ ಸದಸ್ಯರ ಸಂಖ್ಯೆಯ ಮೇಲೆ. ಪ್ರತಿ ಸಾವಿರ ಸದಸ್ಯರಿಗೆ ಒಬ್ಬ ಡೆಲಿಗೇಟನು—ಅಂದರೆ ಹಿಂದೂದೇಶದಲ್ಲಿ 1 ಮಿಲ್ಲಿಯ ಕೊಂಗ್ರೆಸ್ ಸದಸ್ಯರಿರಬೇಕಾಗುವುದು. ಚುನಾವಣೆಗಳಲ್ಲಿ ಮತ ಕೊಡುವವನು ಆರು ತಿಂಗಳ ಮುಂಚಿತವಾಗಿಯಾದರೂ ಸದಸ್ಯತನದ ನಿಬಂಧನೆಗಳನ್ನು ತೀರಬೇಕು. 6 ತಿಂಗಳಿಂದ ಸದಸ್ಯರಾಗಿರುವವರಿಂದಲೇ ಡೆಲಿಗೇಟರನ್ನು ಸದಸ್ಯರ ಬಹುಮತದಿಂದ ಚುನಾಯಿಸಬೇಕು. ಹೀಗೆ ಚುನಾಯಿಸಲ್ಪಟ್ಟ ಡೆಲಿಗೇಟರುಗಳು ಅಖಿಲ ಭಾರತ ಕೊಂಗ್ರೆಸ್ ಕಮಿಟಿಯ ಸದಸ್ಯರಾಗುವರು. ಹಾಗೆಯೇ ತಂತಮ್ಮ ಪ್ರಾಂತಿಕ ಕೊಂಗ್ರೆಸ್ ಕಮಿಟಿ ಸದಸ್ಯರಾಗುವರು. ಇದರಿಂದ ಪ್ರತ್ಯೇಕ ಚುನಾವಣೆಗಳ ಶ್ರಮವೂ ಇಲ್ಲ; ವ್ಯಯವೂ ಇಲ್ಲ. ಚುನಾವಣೆಗಳಲ್ಲಿ ಮೋಸ ನಡೆಯದಂತೆಯೂ ಸಾಧಿಸಿದಂತಾಗುವುದು.

ಇನ್ನೊಂದು ವಿಚಾರವೇನೆಂದರೆ:—ಪ್ರತಿಯೊಬ್ಬ ಸದಸ್ಯನೂ ತನ್ನ ಸಹಿಯನ್ನು ದೇವನಾಗರಿ ಅಥವಾ ಉರ್ದು ಲಿಪಿಯಲ್ಲಿ ಮಾಡತಕ್ಕದು. ಇದನ್ನು ಯಾರೂ ಒಂದು ತಾಸಿನಲ್ಲಿ ಕಲಿಯಬಹುದು. ಮತ್ತೊಂದು ತಿದ್ದುಪಡಿಯೆಂದರೆ,—ಅಧ್ಯಕ್ಷರೇ ತನಗೆ ಬೇಕಾದ ಕಾರ್ಯ ನಿರ್ವಾಹಕ ಮಂಡಲಿಯನ್ನು ಚುನಾಯಿಸಬೇಕು. ಇದರಿಂದ ಅಧ್ಯಕ್ಷರ ಕಾರ್ಯವು ಸುಗಮವಾಗುವುದು. ಇನ್ನು,—ಕೊಂಗ್ರೆಸ್ ಅಧಿವೇಶನದ ಸಮಯದಲ್ಲಿ ನಡೆಯುವ ವಿನೋದಗಳ ಮತ್ತು ಪ್ರದರ್ಶನದ ಕಾರ್ಯಭಾರವನ್ನು ಸ್ವಾಗತ ಸಮಿತಿಯ ಮೇಲೆ ಹೊರಿಸಬಾರದು. ಪ್ರದರ್ಶನದ ಕಾರ್ಯಭಾಗವೆಲ್ಲ ಅಖಿಲಭಾರತ ಚರಕಾ ಸಂಘಕ್ಕೊಪ್ಪಿಸಲ್ಪಡಬೇಕು. ಸ್ವಾಗತಸಮಿತಿಯು ಕೇವಲ ಅಧಿವೇಶನದ ಕಾರ್ಯ ವ್ಯವಸ್ಥೆಯನ್ನು ನೋಡಿಕೊಳ್ಳತಕ್ಕದ್ದು. ಕೊನೆಯ ತಿದ್ದುಪಡಿಯೆಂದರೆ—ಸ್ವದೇಶೀ ವಿಚಾರ. ಕೊಂಗ್ರೆಸ್ಸಿನ ಕಾರ್ಯಕ್ರಮದ ಒಂದು ಅಂಗವು ಗ್ರಾಮಗಳಲ್ಲಿನ ಪ್ರಾಚೀನ ಕೈಗಾರಿಕೆಗಳ ಪುನರಭಿವೃದ್ಧಿಗೆಯತ್ನಿಸುವಂತಾಗಬೇಕು. ಕೇವಲ, ವಿದೇಶೀ ಅಲಂಕಾರ ಸಾಮಗ್ರಿಗಳ, ವಿಲಾಸ ವಸ್ತುಗಳ ಅನುಕರಣೆಯಾದರೆ ಅದು ಸ್ವದೇಶಿಯಾಗಲಿಲ್ಲ. ಹಳ್ಳಿಗಳ ಪೂರ್ವದ ಕೈಗಾರಿಕೆಗಳು ಹೇಗೆ ನಿರ್ನಾಮ ಹೊಂದಿದುವು, ಅವುಗಳನ್ನು ಹೇಗೆ ಪುನರುದ್ಧರಿಸಬಹುದು—ಎಂಬುದನ್ನು ನೋಡಬೇಕು. (ಅಖಿಲಭಾರತ ಚರಕಾ ಸಂಘವೀಗ ೫೦೦೦ ಗ್ರಾಮಗಳಲ್ಲಿ ೨೫೦,೦೦೦ ಜನರಿಗೆ ಅನ್ನಕ್ಕೆ ಮಾರ್ಗ ಕಲ್ಪಿಸಿಕೊಟ್ಟಿದೆ. ಕಳೆದ ಹತ್ತು ವರ್ಷಗಳಲ್ಲಿ ಮಜೂರಿ ರೂಪದಲ್ಲಿ ೨॥ ಕೋಟಿ ರೂಪಾಯಿಗಳು ಹಳ್ಳಿಗಳಲ್ಲಿ ಹಂಚಲ್ಪಟ್ಟಿವೆ.

"ಕೊಂಗ್ರೆಸ್ಸಿನ ನಿಯಮ ನಿಬಂಧನೆಗಳ ಮೊದಲನೆ ಪ್ರಕರಣದಂತೆ ನಡೆದುಕೊಳ್ಳುವವರು, ವಾರ್ಷಿಕ ಚಂದಾ ಕೊಟ್ಟು, ೪ ಆಣೆ ಕೊಟ್ಟು ಸದಸ್ಯರಾಗಬೇಕು; ಇವರು ೧೮ ವಯಸ್ಸಿಗೆ ಮೀರಿದವರಾಗಿರಬೇಕು; ಅರ್ಜಿಯಲ್ಲಿ ಗ್ರಾಮ, ತಾಲೂಕು, ಜಿಲ್ಲೆ, ಪ್ರಾಂತ್ಯ, ಪ್ರಾಯ, ಹೆಸರು ಮತ್ತು ದೇವನಾಗರಿ ಅಥವಾ ಉರ್ದು ಲಿಪಿಯ ಸಹಿಯಿರತಕ್ಕದು; ಸದಸ್ಯತನವು ೬ ತಿಂಗಳಿಂದ ಪ್ರಾರಂಭ ಯಲ್ಲಿದ್ದವರು ಮಾತ್ರ, ತಮಗೆ ಕೊಡಲ್ಪಡುವ ಸರ್ಟಿಫಿಕೇಟಿನಲ್ಲಿ ನಮೂದಿಸಿರುವ ಪ್ರದೇಶದೊಳಗೆ ಮಾತ್ರ ಡೆಲಿಗೇಟರುಗಳನ್ನು ಚುನಾಯಿಸಲರ್ಹರು; ಕಲ್ಕತ್ತಾ ನಗರವು ಪ್ರತ್ಯೇಕ ಕೊಂಗ್ರೆಸ್ ಪ್ರಾಂತ್ಯವೆಂದು ಪರಿಗಣಿಸಲ್ಪಡಬೇಕು; ೨೦೦೦ ಅಥವಾ ಹೆಚ್ಚು ಜನಸಂಖ್ಯೆಯುಳ್ಳ ಗ್ರಾಮ ಅಥವಾ ನಗರಗಳನ್ನು ಸರ್ಕಲುಗಳಾಗಿ ಪ್ರತಿಯೊಂದು ಸರ್ಕಲಿಗೆ ಸಾವಿರ ಜನಸಂಖ್ಯೆ ಯಿರುವಂತೆ—ವಿಭಜಿಸಬೇಕು. ಕೊಂಗ್ರೆಸ್ ಕಮಿಟಿಗೆ ಇಡೀ ದೇಶದಿಂದ ಒಟ್ಟು ೧೦೦೦ ಡೆಲಿಗೇಟರುಗಳನ್ನು ಮಾತ್ರ ಚುನಾಯಿಸಬೇಕು; ಕನಿಷ್ಠಪಕ್ಷಕ್ಕೆ ೧೦ ಸದಸ್ಯರಾದರೂ ಇಲ್ಲದ ಗ್ರಾಮಗಳಿಗೆ ಮತಕೊಡಲು ಅಧಿಕಾರವಿಲ್ಲ; ಸದಸ್ಯರ ಮತ್ತು ಡೆಲಿಗೇಟರುಗಳ ಪಟ್ಟಿಯನ್ನು ಕೊಂಗ್ರೆಸ್ ಕಾರ್ಯಕಾರಿ ಸಮಿತಿಗೆ ಮುಟ್ಟಿಸಬೇಕು; ನಿಬಂಧನೆಗಳಿಗೆ ತಪ್ಪಿ ನಡೆದ ಪ್ರಾಂತಿಕ ಕೊಂಗ್ರೆಸ್ ಕಮಿಟಿಯನ್ನು ಅ. ಭಾ. ಕೊಂ. ಕಾ. ಸಮಿತಿಯು ಪದಚ್ಯುತ ಮಾಡಿ ಹೊಸ ನೇಮಕಗಳನ್ನು ಮಾಡಬೇಕು; ಆಯಾ ಕೊಂಗ್ರೆಸ್ ಶಾಖೆಗಳ ರಜಿಸ್ಟರುಗಳನ್ನು ಇನ್ಸ್‌ಪೆಕ್ಟರುಗಳನ್ನು ನೇಮಿಸಿ ತನಿಖೆ ಮಾಡಿಸಬೇಕು.

ಪಂಡಿತ ಮಾಲವೀಯರು ಚುನಾವಣೆಗೆ ನಿಲ್ಲಲಾರರು!

ಕೊಂಗ್ರೆಸ್ಸಿನೊಡನೆ ಅಭಿಪ್ರಾಯಭೇದವೆದ್ದು, ಅದನ್ನು ಕೃಶಿಸಿ ರಾಷ್ಟ್ರೀಯ ಪಕ್ಷವನ್ನು ಸ್ಥಾಪಿಸಿ, ಚುನಾವಣೆಯ ಸಿದ್ಧತೆಗಳನ್ನು ನಡೆಸಿದ ಪಂಡಿತ ಮದನಮೋಹನ ಮಾಲವೀಯರೇ ಈಗ ಎಸೆಂಬ್ಲಿ ಚುನಾವಣೆಗೆ ನಿಲ್ಲದಂತಹ ತೊಡರುಗಳು ಬಂದಿವೆಯೆಂಬ ವರ್ತಮಾನವು ಪ್ರಕಟವಾಗಿದೆ. ರಾಷ್ಟ್ರೀಯ ಪಕ್ಷಕ್ಕಷ್ಟೆ ಅಲ್ಲ,—ಕೊಂಗ್ರೆಸ್‌ವಾಲರಿಗೂ, ಪ್ರತಿಯೋರ್ವ ಭಾರತೀಯನಿಗೂ ಈ ವಾರ್ತೆಯು ವಿಸ್ಮಯಪ್ರದವಾದಂತೆ ದಂಗು ಬಡಿಸಿದೆ. ಕಾರಣ, ಮಾಲವೀಯರಿಗೆ ಕೊಂಗ್ರೆಸ್ಸಿನೊಡನೆ ಏಕಾಭಿಪ್ರಾಯವಿಲ್ಲದಿದ್ದರೂ ಅವರ ನಿರ್ವಂಚನೆಯ ದೇಶಹಿತೈಷಿಗಳೆಂದೂ, ನಿರ್ಭೀತಿಯೋದ್ಧರೆಂದೂ, ಅಸಾಮಾನ್ಯ ಮುತ್ಸದ್ದಿಗಳೆಂದೂ, ಎಸೆಂಬ್ಲಿಯಲ್ಲಿ ಇವರಿಂದ ದೇಶಹಿತಸಾಧಕವಾದ ಹಲವು ಕಾರ್ಯಗಳಾಗಲು ಸಾಧ್ಯವಿತ್ತೆಂದೂ ಜನರಿಗೆ ಖಚಿತ. ಆದರೆ,—ಅದೆಲ್ಲವೂ ಕನಸಾಯಿತು. ಮಾಲವೀಯರೀಗ ಚುನಾವಣೆ 'ಅರ್ಹ'ರಲ್ಲ! ಅಲ್ಲಹಾಬಾದ್—ಝಾನ್ಸಿ ಕೊನ್ಸ್‌ಟಿಟ್ಯೂಯನ್ಸಿಯಿಂದ ದಾಖಲು ಮಾಡಲ್ಪಟ್ಟ ಅವರ ನೊಮಿನೇಶನ್ ಪತ್ರವು ತಿರಸ್ಕರಿಸಲ್ಪಟ್ಟಿದೆ. ಕಾರಣ?. ಮತದಾರರ ಪಟ್ಟಿಯಲ್ಲಿ ಅವರ ಹೆಸರು ತೋರುವುದಿಲ್ಲ ಎಂದೆನಿಸಲಾಗಿದೆ. ಇದಿನ್ನೂ ಸ್ಪಷ್ಟವಾಗಿ ತಿಳಿದುಬಂದಿಲ್ಲವಾದರೂ,—ಅವರ ನೊಮಿನೇಶನ್ ಪತ್ರವನ್ನು ತಿರಸ್ಕರಿಸಿದುದಕ್ಕೆ ಮತ್ತಾವ ಕಾರಣವೂ ಇರಲಾರದೆಂದು ಊಹೆ.

ಹೀಗೆ, ಯಾವ ಪಕ್ಷದ ರಚಯಿತರೂ ಮುಖಂಡರೂ ಅನಿಷ್ಠವಾಗಿ, ವಾಸ್ತವವಾಗಿ, ಎಸೆಂಬ್ಲಿಗೆ ಚುನಾಯಿತರಾಗಬೇಕಾಗಿದ್ದರೋ, ವಿಧ್ವನ್ಮಾನಗಳು ಈ ರೀತಿ ದುಃಖಕರವಾಗಿ ಪರಿವರ್ತನವಾಗಿ ಅವರೇ ಎಸೆಂಬ್ಲಿಯ ಹೊರಗೆ ನಿಲ್ಲಬೇಕಾಯಿತು! ಇದೊಂದು 'ದುಃಖಕರವಾದ ಪ್ರಹಸನ'ವಲ್ಲದೆ ಮತ್ತೇನು?

ಮತದಾರರ ಪಟ್ಟಿಯಲ್ಲೇ ಮಾಲವೀಯರ ಹೆಸರು ಬಂದಿಲ್ಲವಾದರೆ—(ಇಂತಹ ತಪ್ಪುಗಳು ಮತದಾರರ ಪಟ್ಟಿಯಲ್ಲಾಗುತ್ತಿರುವುದು ವಿಷಾದಕರವಲ್ಲವೇ?)—ಇನ್ನು ಮುಂದೆ ಎಂದಾದರೂ ಉಪಚುನಾವಣೆಯ ಮೂಲಕ ವಾದರೂ ಮಾಲವೀಯರು ಎಸೆಂಬ್ಲಿಯನ್ನು ಪ್ರವೇಶಿಸಬರುವುದಿಲ್ಲ.

ಅತ್ತ ಕೃಷ್ಣಕಾಂತ ಮಾಲವೀಯರೂ ಬನಾರಸ್—ಗೋರಕಪುರ ಕೊನ್ಸ್‌ಟಿಟ್ಯೂಯನ್ಸಿಯಿಂದ ನಿಲ್ಲಲಾರರೆಂಬ ಪ್ರಕಟಣೆಯಾಗಿದೆ. ಇವರ ಹೆಸರೂ ಮತ್ತಾವ ಕೊನ್ಸ್‌ಟಿಟ್ಯೂಯನ್ಸಿಯಲ್ಲೂ ಇಲ್ಲ! ರಾಷ್ಟ್ರೀಯ ಪಕ್ಷದ ಮತ್ತೊಬ್ಬ ಉಮೇದ್ವಾರರಾದ ಶ್ರೀ. ಚಿಂತಾಮಣಿಯವರೂ ಪ್ರತಿಸ್ಪರ್ಧಿಗಳಿಲ್ಲದೆ ಚುನಾಯಿತರಾಗಬೇಕೆಂದು ಮಾಡಿದ ಸಾಧನೆಗಳೆಲ್ಲವೂ ನಿಷ್ಫಲವಾದುವು. ಕೊಂಗ್ರೆಸ್ಸಿನವರು ಅವರ ಕೊನ್ಸ್‌ಟಿಟ್ಯೂಯನ್ಸಿಯಿಂದ ಹಿಂದೆಗೆಯಲೊಪ್ಪಲಿಲ್ಲ. ಚಿಂತಾಮಣಿಯವರು ಅಲ್ಲಹಾಬಾದ್-ಝಾನ್ಸಿ ಡಿವಿಜನಿನಿಂದ ಉಮೇದ್ವಾರರಾಗಿದ್ದರು. ಈಗ, ಅನಾರೋಗ್ಯದ ನೆಪದಿಂದ, ಶ್ರೀ. ಭಗವಾನ್‌ದಾಸರಿಗೆದುರಾಗಿರುವ ತನ್ನ ಉಮೇದ್ವಾರಿಕೆಯನ್ನು ತಾವೇ ಹಿಂದೆಗೆದರು.

ನೋಟೀಸು.

ಅತ್ತೂರು ವೈಕುಂಠ ಪ್ರಭು ಬೇಂಕ್ ಮಂಗಳೂರು.

ಈ ಕೆಳಗೆ ಹೆಸರು ಕಾಣಿಸಿದವರು ಸದ್ರಿ ಬೇಂಕಿನಿಂದ ನಗದ ಈಡಿನ ಮೇಲೆ ಸಾಲ ಪಡಕೊಂಡ ನಂತರ, ಕ್ಲಿಪ್ತ ವ್ಯಾಧಿಗೆ ಅಸಲು, ಬಡ್ಡಿ ಕೊಡದೆ ಈ ವರೆಗೆ ಬಾಕಿ ಮಾಡಿರುವುದರಿಂದಲೂ, ಸದ್ರಿ ಸಾಲಗಳನ್ನು ಒಲಮಾಡಿಕೊಳ್ಳುವರೆ ಅವರಿಗೆ ಬಿಟ್ಟ ರಜಿಸ್ಟ್ರಿ ನೋಟೀಸುಗಳು ಜ್ಯಾರಿಯಾಗಿಯೂ ಕೆಲವು ಜ್ಯಾರಿಯಾಗದೆಯೂ ಬಂದಿರುವುದರಿಂದಲೂ ಸದ್ರಿಯವರು ಈಡಿಟ್ಟ ನಗಗಳನ್ನು ಇದೇ 1934ನೇ ಇಸವಿ ಅಕ್ಟೋಬರ ತಿಂಗಳ ತಾ. 25ನೇ ಗುರುವಾರದ ಒಳಗೆ ಅಸಲು ಬಡ್ಡಿ ವ ನೋಟೀಸು ಖರ್ಚು ತಂದುಕೊಟ್ಟು ಅಡವಿಟ್ಟ ನಗಗಳನ್ನು ಬಿಡಿಸಿಕೊಂಡು ಹೋಗದೆ ಇದ್ದರೆ ಸದರಿಯವರು ಈಡಾಗಿಟ್ಟ ನಗಗಳನ್ನು ಇದೇ 1934ನೇ ಇಸವಿ ಅಕ್ಟೋಬರ ತಿಂಗಳ ತಾ. 27ನೇ ಶನಿವಾರ ದಿವಸ ಯಾ ಅನಂತರ ನಮಗೆ ಯುಕ್ತ ಕಂಡ ತಾರೀಕಿನಲ್ಲಿ ನಮ್ಮ ಬೇಂಕಿನ ಆಫೀಸಿನಲ್ಲಿ 2 ಘಂಟೆಗೆ ಬಹಿರಂಗವಾಗಿ ಏಲಂ ಮಾಡಲಾದೀತು.

ಸಾಲದ ನಂಬ್ರ.	ಹೆಸರು, ವಿಳಾಸ.	ಸಾಲದ ಮೊಬಲಗು. ರೂ. ಆ. ಪೈ.
678/33	ಕೃಷ್ಣ ಶೇಟ್, ನಾರಾಯಣ ಶೇಟರ ಮಗ, ಮಾರ್ಕೆಟ್ ರೋಡ್ ಮಂಗಳೂರು.	10 0-0
580/32	ಹಮ್ಮದೆ ಬ್ಯಾರಿ, ಜಮಾಲ್ ಬ್ಯಾರಿ ಮಗ ಪುದುಗ್ರಾಮ, ಫರಂಗಿಪೇಟೆ ಪೋಸ್ಟು	6 0 0
2141/32	ಅಬ್ದುಲ್‌ಖಾದ್ರಿ ಬ್ಯಾರಿ, ಬೆಯ್ಯಬ್ಯಾರಿ ಮಗ, ಅಡ್ಯಾರಕಟ್ಟೆ, ಕಂಕನಾಡಿ ಪೋಸ್ಟು	11 0-0
1460/32	ಪಕೀರಬ್ಯಾರಿ, ಹಮ್ಮದೆಬ್ಯಾರಿ ಮಗ ಕೂಳೂರು ಕುಂಬತ್ತಬೈಲು ಗ್ರಾಮ, ಆರ್ಟಿಪಾಡ್ಲ ಕದವು ಬಳಿ ಪಣಂಬೂರು ಪೊ	12-0—0
1700/32	ಜನಾರ್ಧನ, ಐತಪ್ಪನ ಮಗ ಕಂಕನಾಡಿ ಮಾರ್ನಮಿಕಟ್ಟೆ ಬಳಿ ವ್ಯಾಪಾರಿ ಕಂಕನಾಡಿ ಪೋಸ್ಟು.	16-0-0
1384/32	ಪಕೀರ ಬ್ಯಾರಿ, ಹಮ್ಮದೆ ಬ್ಯಾರಿ ಕುಂಬತ್ತಬೈಲು ಗ್ರಾಮ ಕೂಳೂರು ಆರ್ಟಿಪಾಡ್ಲ ಕದವು ಬಳಿ ಪಣಂಬೂರು—	25—0 0
2324/32	ಸೋಮಪ್ಪ, ಗುತ್ತೇದಾರ ಅಂತಪ್ಪನವರ ಅಳಿಯ, ಮಾರ್ನಮಿಕಟ್ಟೆ ಕಂಕನಾಡಿ	40—0-0
2566/32	ಕಾಂತಪ್ಪ ಮೂಲ್ಯ, ಬಸಪ್ಪ ಮೂಲ್ಯನ ಅಳಿಯ ಮಣ್ಣಗುಡ್ಡೆ ಮಗ್ಗದ ಕೆಲಸ ಮಂಗಳೂರು	20-0-0
2263/32	ಇಸ್ಮಾಯಿಲ್ ಬ್ಯಾರಿ ಬೆರಿಯ ಪಾಂಡಿಯಲ್ ಅಬ್ದುಲ್ ಖಾದ್ರಿ ಬ್ಯಾರಿ ಗೋಳಿಕಟ್ಟೆ ಬಜಾರ್ ಮಂಗಳೂರು.	10-0-0
2729/32	ಪಾಂಡುರಂಗ ಪ್ರಭು, ಕೃಷ್ಣ ಪ್ರಭುಗಳ ಮಗ ಕರಂಬಾರು ಗ್ರಾಮ, ವ್ಯಾಪಾರಸ್ಥ ಬಜಪೆ.	15-0-0
2972/32	ಯು. ಮೊಯ್ದಿನ್ ಬ್ಯಾರಿ, ಹಮ್ಮದೆ ಬ್ಯಾರಿಗಳ ಮಗ ಉಳ್ಳಾಲ ಬೋರ್ಡು ಶಾಲಾ ಮಾಸ್ತರ್ ಉಳ್ಳಾಲ	18-0—0
636/33	ರಾಮ ಶೇಟ್, ನಾರಾಯಣ ಶೇಟ್ರ ಮಗ ಮಾರ್ಕೆಟು ರಸ್ತೆ ಮಂಗಳೂರು	25—0-0
325/33	ಇಬ್ರಾಹಿಂ ಬ್ಯಾರಿ ಪೋಕ್ರೆ ಬ್ಯಾರಿ, ಕುದ್ರೋಳಿ ಮೀನಿನ ವ್ಯಾಪಾರಿ ಮಂಗಳೂರು	6-0-0
2503/32	ಲಿಂಗಪ್ಪ ಪುತ್ರನ್, ಗುರುವಪ್ಪ ಪುತ್ರನ ಅಳಿಯ ಬೈಕಂಪಾಡಿ ಗ್ರಾಮ ಪಟ್ಲ ಹೊಗೆಗುಡ್ಡೆ ಪಣಂಬೂರು	20-0-0
479/33	ಶ್ರೀನಿವಾಸ ಮೂರ್ತಿ, ವಿಷ್ಣು ಮೂರ್ತಿರ ಮಗ ಉಪಾಧ್ಯಾಯ, ಬಿ ಇ ಎಂ ಕೇಡಿಗುಡ್ಡೆ ಮಂಗಳೂರು	12-0-0
2173/32	ಪಕೀರ ನ್ಯಾಕ, ದೇವು ನ್ಯಾಕರ ಮಗ ಅತ್ತಾವರ ಬಾಬುಗುಡ್ಡೆ ಮಂಗಳೂರು	15-0-0
2869/32	ಕೃಷ್ಣ ಶೇಟ್, ರಾಮಶೇಟ್ರ, ಬಿಜಯ ಪೋಸ್ಟು ಬಿಜಯ.	14-0-0
662/33	ಕೃಷ್ಣಶೇಟ್, ರಾಮಶೇಟ್—ಬಿಜಯ ಪೋಸ್ಟ್ ಬಿಜಯ.	6-0-0
157/32	ಕೆ. ರಾಮ ಪುದುವಾಳ್; ಕೋರ ಪುದುವಾಳರ ಮಗ ಜೂನಿಯರ್ ಬಿ.ಎ.ಸ್ಟುಡಂಟ್ ಸ್ಟೆಂಟ್ ಎ. ಕೋಲೆಜ್ ಮಂಗಳೂರು	10-0-0
1455/33	ಮಹಮ್ಮದ್ ಬ್ಯಾರಿ, ಮಮ ಬ್ಯಾರಿ ಮಗ ಹಳೇ ಮಟ್ಟಿ ಬಜಾರ್ ಮಂಗಳೂರು.	28-0-0
1304/32	ಜನಾರ್ಧನ, ಐತಪ್ಪ ಪೂಜಾರಿ ಮಗ ಮಾರ್ನಮಿಕಟ್ಟೆ ಬಳಿ ಅಂಗಡಿ—ಕಂಕನಾಡಿ.	7-0-0
2158/32	ಅಬ್ದುಲ್‌ರೈಮನ್, ಇಸ್ಮಾಲಿ ಬ್ಯಾರಿ ಮಗ ಹಳೇ ಮಟ್ಟಿ ಬಜಾರ್ ಬೀದಿ ಅಂಗಡಿ ಮಂಗಳೂರು.	25-0-0
2609/33	ಸುಂದರ್ ಶೇಟ್, ಸುಬ್ರಾಯ ಶೇಟ್, ಮಾರ್ಕೆಟ್ ರೋಡು ಮಂಗಳೂರು. (ಬೆಳ್ಳಿ)	55-0-0
121/34	ಸುಂದರ್ ಶೇಟ್, ಸುಬ್ರಾಯ ಶೇಟ್ ಮಾರ್ಕೆಟ್ ರೋಡು ಮಂಗಳೂರು ಡಿ	22-0-0
210/34	ಸುಂದರ್ ಶೇಟ್, ಸುಬ್ರಾಯ ಶೇಟ್ ಮಾರ್ಕೆಟ್ ರೋಡು ಮಂಗಳೂರು ಡಿ	11-0-0
220/34	ಸುಂದರ್ ಶೇಟ್, ಸುಬ್ರಾಯ ಶೇಟ್ ಮಾರ್ಕೆಟ್ ರೋಡ್ ಮಂಗಳೂರು ಡಿ	20-0-0
2610/33	ಸುಂದರ್ ಶೇಟ್, ಸುಬ್ರಾಯ ಶೇಟ್ ಮಾರ್ಕೆಟ್ ರೋಡ್ ಮಂಗಳೂರು ಡಿ	45-0-0
418/33	ಸುಂದರ್ ಶೇಟ್, ಸುಬ್ರಾಯ ಶೇಟ್ ಮಾರ್ಕೆಟ್ ರೋಡ್ ಮಂಗಳೂರು ಡಿ	13-0-0
2427/33	ಕೆ. ಬಿ. ಮೊಯ್ದಿನಬ್ಯಾರಿ, ಬೆಂಗರೆ ಇಸ್ಮಾಲಿ ಬ್ಯಾರಿ ಕಿನ್ನಿಯ ಗ್ರಾಮ ಮಂಜೇಶ್ವರ ಡಿ	8-0-0

ಎ.ವಿ.ಪಿ.ಬೇಂಕ್, ಮಂಗಳೂರು.
ತಾರೀಖು 19-10-1934

A. V. Prabhu,
ಪ್ರೊಪ್ರೈಟರ್.

[illegible]

Original Petition No. 116 of 1934.

In the matter of the estate of Chinnu Shettigara, deceased, son of [illegible] Shettigara, died on or about [illegible]-1931 at Mangalore.

Kamala, widow of Chinnu Shettigara, residing at Karkala Kasba, Karkal Taluk—Petitioner.

Is hereby given that the Petitioner has filed the above application praying that she may be granted probate as well as letters of administration with regard to entire properties and credits of the deceased Chinnu Shettigara with the will annexed and that the said application is posted to 31-10-1934 for hearing at 11 A. M. before the above Court. Relations of the said deceased Chinnu Shettigara may appear in person or by pleader and oppose the application, failing which the same will be heard and decided in their absence.

B. Vaikunta Baliga,
Vakil for Petitioner.

Mangalore, 6-10-1934.

ನೋಟೀಸು.

ಕಾಸರಗೋಡು ಡಿಸ್ಟ್ರಿಕ್ಟ್ ಮುನ್ಸೀಫ್ ಕೋರ್ಟಿನಲ್ಲಿ.

O. P. No. 188/1934.

1. ಸರಸ್ವತಿ. 2. ಸಾವಿತ್ರಿ—ಮ್ಯಾನರರು, ಇವರ ಗಾರ್ಡಿಯನ್ ಶಂಕರನ್ ನಂಬೂದಿರಿ—ಅರ್ಜಿದಾರರು.

ಮತ್ತು .

1. ದೇವಕಿ ಅಂತರ್ಜನಂ. 2. ಈಶ್ವರನ್ (ಮ್ಯಾನರ್) ಇವನ ಗಾರ್ಡಿಯನ್—1ನೇ ದೇವಕಿ ಅಂತರ್ಜನಂ—ರೆಸ್ಪೊಂಡೆಂಟ್ಸು.

ಕೊಡಕ್ಕಾಟ ಗ್ರಾಮದಲ್ಲಿ ವಾಸ್ತವಿಸಿದ್ದ ಕಳೆದ 1109ನೇ ಕರ್ಕಾಟಕ ಮಾಸ 10ರಲ್ಲು ಮೃತಪಟ್ಟ ಕಾಯತ್ತೆ ಪುದುಮನ ಇಲ್ಲತ್ತ ವಿಷ್ಣು ನಂಬೂದ್ರಿಯ ಹಿರೇ ಹೆಂಡತಿ ಮಕ್ಕಳಾದ ಮ್ಯಾನರ್ ಅರ್ಜಿದಾರರು ಸದ್ರಿ ಮೃತಪಟ್ಟ ವಿಷ್ಣು ನಂಬೂದಿರಿಯ ಎಲ್ಲಾ ಸ್ಥಿರಚರ ಸೊತ್ತುಗಳ ಅರೆವಾಶಿ ಹಕ್ಕಿಗೆ ಬಾಧ್ಯಸ್ತರು ವ ಹಕ್ಕುದಾರರೆಂತ ವಗೈರೆ ಸದ್ರಿಯವರ ಕಡೆಯಿಂದ ದಾಖಲಾದ ಮೇಲ್ಕಂಡ ಅರ್ಜಿಯು ತಾರೀಕು 29—10—1934ಕ್ಕೆ ತನ್ನಿಗಟ್ಟಿರುತ್ತದೆ. ಆ ಕುರಿತು ಆಕ್ಷೇಪಿಸುವರೆ ಅಪೇಕ್ಷೆಯುಳ್ಳವರು ಸದ್ರಿ ದಿವಸ ಹಗಲು 11 ಘಂಟೆಗೆ ಈ ಕೋರ್ಟಿನ ಮುಂದೆ ಹಾಜರಾಗಿ ವ್ಯವಹರಿಸತಕ್ಕದ್ದು. ತಪ್ಪಿದರೆ ಏಕಪಕ್ಷವಾಗಿ ತೀರ್ಮಾನಿಸಲ್ಪಡುವುದೆಂತ ಈ ಮೂಲಕ ತಿಳಿಸೋಣಾಗುತ್ತದೆ.

ಕಾಸರಗೋಡು, 15—10—'34 } ಎ. ವಿ. ನಾರಾಯಣ ಮೇನೋನ್.
ಅರ್ಜಿದಾರರ ಕಡೆ ವಕೀಲ್.

ನೋಟೀಸು.

ಪುತ್ತೂರು ರೆವೆನ್ಯೂ ಡಿವಿಜನಲ್ ಅಫೀಸರವರಿಂದ.

ನೋಟೀಸು.

ದಕ್ಷಿಣಕನ್ನಡಜಿಲ್ಲಾ ಪುತ್ತೂರು ತಾಲ್ಲೂಕು ಸುಬ್ರಹ್ಮಣ್ಯ ಗ್ರಾಮದ ಕುಲುಗುಂದದಲ್ಲಿ ವರ್ಷಂಪ್ರತಿ ಆಗುವ ಡಾಣ್ಣಾರು ಸಂತೆಯು ಈ ವರ್ಷ 1934ನೇ ಇಸವಿ ನವಂಬರ ತಿಂಗಳ 21ನೇ ತಾರೀಕಿನಿಂದ ದಶಂಬರ ತಿಂಗಳ 6ನೇ ತಾ. ವರೆಗೆ ಜರಗುವುದು. ಅಂದರೆ ಸಂತೆಯು [illegible] ಹುಣ್ಣಿಮೆ ದಿವಸ ಪ್ರಾರಂಭವಾಗಿ [illegible] ಅಮವಾಸ್ಯೆಯ ದಿನ ಅಂದರೆ ಸುಬ್ರ

[illegible] ವರಿಂದ ಬಿಡು [illegible] ದ ಬರತಕ್ಕ ಮಾಡತಕ್ಕದ್ದು.

[illegible]
9—10—'34 } [illegible]

ನೋಟೀಸು.

ಉಡುಪಿ ಡಿ. ಮುನ್ಸೀಫ್ ಕೋರ್ಟಿನಲ್ಲಿ.

ಕ್ರಮಸಂಖ್ಯೆ 361/1931 R. I. A. 764/1934.

ದೇನಿ ಬ್ಯಾ—ವಾದಿಗಳು—ಅರ್ಜಿದಾರರು.

ಮತ್ತು

1. ಪಾಂಡುರಂಗರಾವ್, ಶೀರೂರು ವೆಂಕಟ್ರಾಯರ ಮಗ, ಬ್ರಹ್ಮಾವರ. 2. ಶಿವರಾಮರಾವ್—ಪ್ರತಿವಾದಿರು—ಎದ್ರಿರು.

ಇವರೊಳಗೆ

[illegible] 341—1934 [illegible] ಯಲ್ಲಿ [illegible] 310—11—0 ಮುಂದಿನ ಬಡ್ಡಿ ಮತ್ತು ಈ ಅರ್ಜಿ ಖರ್ಚು ಕೂಡಾ ಐವೇಜು ಗಳನ್ನು 1ನೇ ಪ್ರತಿವಾದಿಯು ಸ್ವತಹ ಮತ್ತು 1-2ನೇ ಪ್ರತಿವಾದಿರು ಅವರ ಕುಟುಂಬದ ಸೊತ್ತುಗಳಿಂದ ಕೂಡಾ ಅರ್ಜಿದಾರರಿಗೆ ತೆರುವಂತೆ ಪರ್ಸನಲ್ ಡಿಕ್ರಿ ಕೊಡಬೇಕಾಗಿ ಅರ್ಜಿದಾರರು ಮೇಲ್ಕಂಡ ಅರ್ಜಿ ಕೊಟ್ಟಿರುವುದರಿಂದ ಆ ಕುರಿತು 1ನೇ ಪ್ರತಿವಾದಿಗೆ ಏನಾದರೂ ಆಕ್ಷೇಪಣೆ ಇದ್ದ ಪಕ್ಷದಲ್ಲಿ ಅದನ್ನು 1934ನೇ ಇಸವಿ ಅಕ್ಟೋಬರ ತಿಂಗಳ 27ನೇ ತಾರೀಕು ಹಗಲು 10 ಗಂಟೆಗೆ ಮೇಲ್ಕಂಡ ಕೋರ್ಟಿನಲ್ಲಿ 1ನೇ ಪ್ರತಿವಾದಿಯು ಖುದ್ದು ಅಗಲೀ ವಕೀಲ

[illegible] ಹಾಗೆ ಹಾಜರಾಗದಿದ್ದರೆ ಸದ್ರಿ ವಿಷಯದಲ್ಲಿ ಏಕಪಕ್ಷವಾಗಿ ತೀರ್ಮಾನಿಸಲ್ಪಡುವುದು.

[illegible]
18—10—'34 } K. L. Narayan Rao
Counsel for Petitioner.

ರೋಗಹಾರದಿರಲು.

ದುಷ್ಟ ರೋಗಗಳಲ್ಲಿ ಹೆಂಗಸರ [illegible] ಮಾಡುವ [illegible]!

ಆ ರೋಗ ಹತ್ತದಂತೆ ಇರಲು [illegible] ತಂಡಿರುವ ರಬ್ಬರಿನ ಸಾಧನವನ್ನು ಉಪಯೋಗಿಸಿರಿ!

ಗಂಡಸರದ್ದು—ಬೆಲೆ 1—8—0
ಹೆಂಗಸರಿಗೆ (ಗರ್ಭನಿರೋಧಕ್ಕೆ) 2—4—0
ಆರ್ಡರಿನೊಂದಿಗೆ 4 ಆಣೆ ಸ್ಟಾಂಪು ಕಳುಹಬೇಕು.

ವಿಳಾಸ—ಕರ್ನಾಟಕ ಏಜನ್ಸಿ,
32, ಕೃಷ್ಣಪ್ಪ ನ್ಯಾಕ್ ಟೇಂಕ್ ಸ್ಟ್ರೀಟ್,
ಜಿ. ಟಿ. ಮದ್ರಾಸು.

ನೋಟೀಸು.

ಜಯಲಕ್ಷ್ಮಿ ಬೇಂಕ್ ಲಿಮಿಟೆಡ್, ಪುತ್ತೂರು.

ಈ ಕೆಳಗೆ ಹೆಸರು ಕಾಣಿಸಿದವರು ಸದ್ರಿ ಬೇಂಕಿನಿಂದ ನಗ ಈಡಿನ ಮೇಲೆ ಸಾಲ ಪಡಕೊಂಡ ನಂತರ ಸದ್ರಿ ಸಾಲವನ್ನು ಬರಮಾಡಿಕೊಳ್ಳುವರೆ ಅವರಿಗೆ ಬಿಟ್ಟ ರಿಜಿಸ್ಟ್ರಿನೋಟೀಸುಗಳು ನಮಗೆ ವಾಪಸು ಬಂದಿರುವುದರಿಂದ ಸದ್ರಿಯವರು ಈಡಿಟ್ಟ ನಗಗಳು ತಾ. 27-10-'34 ರಲ್ಲು ಶನಿವಾರ ದಿವಸ ಯಾ ನಂತರ ನಮಗೆ ಯುಕ್ತಕಂಡ ತಾರೀಕಿನಲ್ಲಿ ಈ ಬೇಂಕಿನ ಆಫೀಸಿನಲ್ಲಿ ಬಹಿರಂಗವಾಗಿ ಏಲಂಮಾಡೋಣಾಗುವದೆಂಬುದನ್ನು ಈ ಮೂಲಕ ತಿಳಿಸಿರುತ್ತದೆ.

ಸಾಲದ ಜಂಡ್ರಾ ನಂಬ್ರ.	ಸಾಲಪಡಕೊಂಡವನ ಹೆಸರು.	ಅಂದಾಜು ಮೌಲ್ಯ. ರೂ.	ಆ.	ಪೈ.	ಷರಾ.
895 / 30-31	ಪಂಜಜೆ ಗಣಪತಿ ಭಟ್ಟ—ತಿಮ್ಮಣ್ಣ ಭಟ್ರ ಮಗ, ವರ್ಗದಾರ, ಕುರುಂಬುಡೇಲು, ಬೆಳ್ಳಾರೆ.	30	0	0	
2751 / 30-31	ಬಿದ್ಮಜೆ ಆದಿರಾಜ ಅರಿಗಾ—ಅಪ್ಪು ಅರಿಗರ ಅಳಿಯ, ವರ್ಗದಾರ, ಕೊಡಿಂಬಳ ಗ್ರಾಮ.	31	0	0	
3983 / 30-31	ಡಿ.	30	0	0	
1170 / 31-32	ಮೇಲಂತಬೆಟ್ಟು ಲಿಂಗಪ್ಪ ಪೂಜಾರಿ—ದಿಕಯ್ಯ ಪೂಜಾರಿ ಅಳಿಯ, ಬೇಸಾಯಗಾರ, ಮೇಲಂತಬೆಟ್ಟು ಗ್ರಾಮ.	24	0	0	
1009 / 33-34	ಡಿ.	99	0	0	
3355 / 31-32	ಬಳ್ಳಾಲ ಪದ್ಮನಾಭ ಭಟ್ಟ—ಮಹಾದೇವ ಭಟ್ರ ಮಗ, ವರ್ಗದಾರ, ಕಡಂಬಳಪಾಕ್ಕೆ, ಮುಂಡಾಜೆ ಗ್ರಾಮ.	106	0	0	
4260 / 31-32	ಎಡಮಲೆ ರಾಮಕೃಷ್ಣ ಭಟ್ಟ—ವೆಂಕಟೇಶ ಭಟ್ರ ಮಗ, ವರ್ಗದಾರ, ಪಡ್ರೆ ಗ್ರಾಮ.	29	0	0	
103 / 32-33	ಬರೆಬೆಟ್ಟು ದೂಮಪ್ಪ ರೈ—ಮುತ್ತಪ್ಪ ರೈ ಅಳಿಯ, ಬೇಸಾಯಗಾರ, ಕೊಲನಾಡು ಗ್ರಾಮ.	74	0	0	
684 / 32-34	ಕೊಮರ್ಗಾನು ಗಂಗಪ್ಪ ಪೂಜಾರಿ—ಸಂಕಪ್ಪ ಪೂಜಾರಿ ಅಳಿಯ, ಬೇಸಾಯ ಮತ್ತು ಮೂರ್ತೆ, ಬಾಳ್ತಿಲ ಗ್ರಾಮ.	10	0	0	
1335 / 32-33	ಕಡುಮನೆ ವಾಸುದೇವ ಹೆಬ್ಬಾರ—ವೆಂಕಟರಮಣ ಹೆಬ್ಬಾರರ ಮಗ, ವರ್ಗದಾರ, ಅಡೂರು ಗ್ರಾಮ	17	0	0	
1635 / 32-33	ನಂದಾವರ ಕೃಷ್ಣರಾಯ ಕ್ಯಾನುಭಾಗ—ರಾಮಯ್ಯ ಕ್ಯಾನುಭಾಗರ ಮಗ, ವ್ಯಾಪಾರಿ, ಉಪ್ಪಿನಂಗಡಿ.	74	0	0	
2407 / 32-33	ಮುಡಿಪಾರು ರಾಮಣ್ಣ ರೈ—ಸೋಮಪ್ಪ ರೈ ಅಳಿಯ, ಬೇಸಾಯ, ಕಳೆಂಜ ಗ್ರಾಮ.	8	0	0	
2889 / 32-33	ಸುದೆಕಾರು ಕೃಷ್ಣಯ್ಯ—ವೆಂಕಟರಮಣಯ್ಯರ ಮಗ, ವರ್ಗದಾರ, ಬಾಳ್ತಿಲ ಗ್ರಾಮ.	207	0	0	
3632 / 32-33	ಎಳ್ಮುಡಿ ಸೋಮಯ್ಯ ಶೆಟ್ಟಿ—ಶಿವಪ್ಪ ಶೆಟ್ಟಿ ಮಗ, ಪುತ್ತೂರು ಕಸಬಾ.	70	0	0	
3821 / 32-33	ಅರಿಯಡ್ಕ ತಿಮ್ಮಣ್ಣ ರೈ—ಮಂಜಪ್ಪ ರೈಗಳ ಮೊಮ್ಮಗ, ವರ್ಗದಾರ, ಅರಿಯಡ್ಕ ಗ್ರಾಮ.	315	0	0	
3937 / 32-33	ಪಾಣೆಮಂಗಳೂರು ಅದ್ದಬ್ಯಾರಿ—ಸಾಬ್‌ಬ್ಯಾರಿ ಮಗ, ವ್ಯಾಪಾರಿ, ಪಾಣೆಮಂಗಳೂರು.	33	0	0	
294 / 33-34	ಇರಂತಾಜೆ ಸಾಂತಪ್ಪ ರೈ—ಸೋಮಪ್ಪ ರೈ ಮೊಮ್ಮಗ, ಬೇಸಾಯ, ಕೆಯ್ಯೂರು ಗ್ರಾಮ.	38	0	0	
3177 / 33-34	ಡಿ.	18	0	0	
1535 / 33-34	ಕೊಡಂಗೆ ಕೇಶವ ಭಟ್ಟ—ಮುತ್ತು ಯಾನೆ ಮಹಾಬಲ ಭಟ್ರ ಮಗ, ಪುರೋಹಿತ್ಯ, ಕನ್ಯಾನ ಗ್ರಾಮ.	15	0	0	
3427 / 33-34	ಕೈಲಾರು ತಿಮ್ಮಣ್ಣ ಭಟ್ಟ—ಈಶ್ವರ ಭಟ್ರ ಮಗ, ವರ್ಗದಾರ, ಕೆದಿಲ ಗ್ರಾಮ.	61	0	0	
	ಜುಮ್ಲಾ	1293	0	0	

Jaya Laxmi Bank, Ltd.,
Puttur, South Kanara.
Dated 16—10—1934.

P. Sanjva Rao,
Agent.

ಅನುಕ್ರಮಣಿಕೆ.

ಅಗ್ರಲೇಖ
ಮಹಾತ್ಮಾಜಿಯವರ ಪ್ರಕಟಣೆ ೧
ಸ್ಫುಟವಿಚಾರಗಳು ,,
ಟಿಪ್ಪಣಿಗಳು ೪
ವರ್ತಮಾನ ಸಂಗ್ರಹ ,,
ಓದು... ಪತ್ರಗಳು ೧೧
ಪತ್ರ... ೧೪
ಬೀರು! ೨
ಮಂಗ... ೯
ಗ್ಯಾನ... ೬
ಒಂದು ಸುಂದರ ದೃಶ್ಯ ೫
ಮೂಲೆಮೂಲೆಯಿಂದ ೧೦

ಸ್ವದೇಶಾಭಿಮಾನಿ

ತಾ. ೧೯ ನೇ ಶುಕ್ರವಾರ ಒಕ್ಟೋಬರ '೩೪

ಮಹಾತ್ಮಾಜೀಯವರ ಪ್ರಕಟಣೆ.

ರಾಷ್ಟ್ರ ಸಭಾಧಿವೇಶನವು ಆರಂಭವಾಗುವ ಕೆಲದಿನಗಳ ಮುಂಚಿತವಾಗಿಯೇ ಮಹಾತ್ಮಾ ಗಾಂಧಿಯವರು, ಕೊಂಗ್ರೆಸ್ಸಿನಲ್ಲಿ ತನ್ನ ಪ್ರತ್ಯಕ್ಷ ಸಂಬಂಧವಿರಲು ಯಾವ ಬದಲಾವಣೆಗಳು ತನಗೆ ಅವಶ್ಯಕವೆಂದು ಕಂಡಿರುವುವೋ ಅವುಗಳನ್ನೆಲ್ಲ, ಪುನಃ ಒಂದು ಪ್ರಕಟಣೆಯ ಮೂಲಕ ಜನತೆಯ ಮುಂದೆ ಇಟ್ಟಿರುವರು. "ಸರದಾರ ವಲ್ಲಭಭಾಯಿಯವರೊಡನೆ ಚರ್ಚಿಸಿ, ಅವರ ಸಮ್ಮತಿಯಿಂದ ಇವಿಷ್ಟು 'ಬದಲಾವಣೆ'ಗಳನ್ನು ಸ್ಪಷ್ಟೀಕರಿಸಿರುತ್ತೇನೆ. ಇವು ಆವಶ್ಯಕವೆಂದು ನನಗೆ ಖಚಿತವಾಗಿದೆ. ಅಷ್ಟೆ ವಿನಾ ಇದು 'ಒದರಿಕೆ'ಯೆಂದಾಗಲಿ 'ಶರ್ತ'ವೆಂದಾಗಲಿ ಯಾರೂ ವಿಪರೀತಾರ್ಥದಿಂದ ಸ್ವೀಕರಿಸಬಾರದು. ಅವು ಸ್ವೀಕೃತವಾಗುವ ಸಂಭವವಿಲ್ಲದಿದ್ದರೆ, ನನ್ನಿಂದ ಕೊಂಗ್ರೆಸ್ಸಿನಲ್ಲಿ ಆತಂಕವಲ್ಲದೆ ಅನುಕೂಲ್ಯವಿಲ್ಲವೆಂಬ ಕಾರಣದಿಂದಲೇ ನಾನು ನಿವೃತ್ತನಾಗುವೆನು" ಎಂದು, ಅವರು ತಮ್ಮ ಸರಳವಾದ ಶೈಲಿಯಲ್ಲಿ ನುಡಿಯುವರು.

ಗಾಂಧಿಜಿಯವರ ಮೊದಲನೆಯ ಪ್ರಕಟಣೆಯಲ್ಲಿ ಸ್ಪಷ್ಟೀಕರಿಸಲ್ಪಡದ ಒಂದೆರಡು ಅಂಶಗಳನ್ನು ಇದರಲ್ಲಿ ಸವಿವರವಾಗಿ ಕೊಡಲಾಗಿವೆ. ಅವು ಕಠಿನ ಟೀಕೆಗೆ ಸಿಲುಕಲಾರದಷ್ಟು ಬಿಗಿಯಾಗಿದ್ದರೂ, ಗಾಂಧಿಜಿಯವರು ಮತ್ತಷ್ಟು ನ್ಯಾಯವಾದ ಕಾರಣಗಳನ್ನು ಕೊಟ್ಟು ಅವುಗಳನ್ನು ಸ್ಫುಟಗೊಳಿಸಬೇಕಿತ್ತೆಂದು ನಮಗೆ ತೋರುವುದು. ಕೊಂಗ್ರೆಸ್ ಡೆಲಿಗೇಟರುಗಳ ಸಂಖ್ಯೆಯು ಆರು ಸಾವಿರವಿದ್ದುದರಿಂದ ಅಧಿವೇಶನಗಳಾಗಲಿ ಕೊಂಗ್ರೆಸ್ಸಿನ ಕಾರ್ಯಕ್ರಮಗಳಾಗಲಿ ಆಗಬೇಕಾದಷ್ಟು ಸುಗಮವಾಗಿ ನಡೆದು ಮುಗಿಯುತ್ತಿದ್ದುವೆಂದು ನಾವು ಹೇಳುವುದಿಲ್ಲ. ಆದರೆ, ಆ ಸಂಖ್ಯೆಯಿಂದ ಐದು ಸಾವಿರವನ್ನಳಿಸುವುದರಿಂದ ಯಾವ ಬಗೆಯ ಲಾಭವು ಎಷ್ಟಾಗುವುದೆಂದೂ, ಕೊಂಗ್ರೆಸ್ ಕಾರ್ಯಕ್ರಮಗಳು ಹೇಗೆ ಅಬಾಧಿತವಾಗಿ, ಅಲ್ಪ ಶ್ರಮದಿಂದ ನಡೆಸಲ್ಪಡಲು ಸಾಧ್ಯವಿದೆಯೆಂದೂ ಊಹಿಸುವುದು ಕಷ್ಟವಾಗುವುದು. ಆ ಡೆಲಿಗೇಟರುಗಳನ್ನು, ಆರು ತಿಂಗಳುಗಳಿಂದಾದರೂ ಕೊಂಗ್ರೆಸ್ ಸದಸ್ಯರಾಗಿದ್ದವರೊಳಗಿನ ಯಾರನ್ನಾದರೂ ಚುನಾಯಿಸಬೇಕೆಂಬುದು ಮತ್ತೊಂದು. ಇದು, ಕೊಂಗ್ರೆಸ್ಸಿನ ಕಳೆದ ಅರ್ಧ ಶತಮಾನದ ಇತಿಹಾಸದಲ್ಲಿನ ಸರ್ವಮಾನ್ಯ ನಿಬಂಧನೆಯನ್ನೆ ಅದಿಮೇಲಾಗಿ ಮಾಡಿದಂತಾಗುವುದೆಂಬುದರಲ್ಲಿ ಸಂದೇಹವಿಲ್ಲ. ಕೇವಲ ಸದಸ್ಯಮಾತ್ರನು ಡೆಲಿಗೇಟನಾಗುವುದರಿಂದ ಆಯಾ ಪ್ರಾಂತ್ಯದ ಜನಸಂಖ್ಯೆಯ ದಾಮಾಶಯದಲ್ಲಿ ಪ್ರಾತಿನಿಧ್ಯ ದೊರೆವುದಿಲ್ಲ. ಅದು ಅವಶ್ಯವಿಲ್ಲವೆಂದು ಗಾಂಧಿಜಿಯವರ ಮತ. ಇದರಿಂದ ಸಾರ್ವತ್ರಿಕ ಅತೃಪ್ತಿಯೇ ತಲೆದೋರುವುದೆಂದು ನಮಗನಿಸುವುದು. ಸದಸ್ಯರ ಸಂಖ್ಯೆಯು ಅತಿ ಹೆಚ್ಚಾಗಿರುವ ಯಾವುದಾದರೂ ಪ್ರಾಂತ್ಯವೇ ಕೊಂಗ್ರೆಸ್ ಕಮಿಟಿಯಲ್ಲಿ ವಿಜೃಂಭಿಸುವ ಫಲವು ಇದರಿಂದುಂಟಾಗುವುದು ಖಂಡಿತ. "ಕೊಂಗ್ರೆಸ್ಸೆಂಬುದು ರಾಷ್ಟ್ರದ ಪ್ರತಿನಿಧಿ" ಎಂಬ ಹೆಸರಿಗೆ ಇದರಿಂದ ಕುಂದುಂಟಾಗುವುದು. ಇಂತಹ ಡೆಲಿಗೇಟರೇ ಆಯಾ ಪ್ರಾಂತ್ಯಗಳಲ್ಲಿ ಪ್ರಾಂತಿಕ ಕೊಂಗ್ರೆಸ್ ಕಮಿಟಿ ಮೆಂಬರರೂ, ಅಖಿಲಭಾರತ ಕೊಂಗ್ರೆಸ್ ಕಮಿಟಿ ಮೆಂಬರರೂ ಆಗುವರು. ಪ್ರತ್ಯೇಕ ಕೊಂಗ್ರೆಸ್ ಕಮಿಟಿ ಚುನಾವಣೆಯ ಶ್ರಮವೂ ವೆಚ್ಚವೂ ಇದರಿಂದ ತಪ್ಪಿತೆಂದು ಮಹಾತ್ಮಾಜಿಯವರು ಕಾರಣ ಕೊಡುವರು. ವೆಚ್ಚಗಳೇನೋ ಅಲ್ಪ ಸ್ವಲ್ಪ ಉಳಿಯಬಹುದು. ಪರಂತು, ಆ "ವೆಚ್ಚಗಳ ವೆಚ್ಚಗಳು" ಎಂತಹವು ಮತ್ತು ಎಷ್ಟು ಎಂಬುದನ್ನು ಅಲಕ್ಷಿಸದೆ ಚೆನ್ನಾಗಿ ವಿವೇಚಿಸಿ ನೋಡಿದರೆ, ಈ ತಿದ್ದುಪಡಿಯು ವ್ಯವಹಾರೋಚಿತವಾಗಿಲ್ಲವೆಂದು ಮನಗಾಣದಿರದು.

ಕೌನ್ಸಿಲ್ ಪ್ರವೇಶ ಮತ್ತು ಸ್ವದೇಶೀ ಪ್ರಚಾರದ ವಿಷಯವಾಗಿ ಮಹಾತ್ಮಾಜಿಯವರು ನಿರ್ದೇಶಿಸಿದ ಪ್ರಕಟನಾಂಶವು ಅನುಲಕ್ಷಣೀಯವಾಗಿದೆ. ಕೌನ್ಸಿಲ್ ಪ್ರವೇಶದ ವಿಷಯವಾಗಿ ಸಂದೇಹ ವೃತ್ತಿಯಲ್ಲಿರುವವರೂ ವಿರುದ್ಧಾಭಿಪ್ರಾಯವಿರುವವರೂ ಹಲವರಿದ್ದಾರೆ. ಗಾಂಧಿಜಿಯವರು ನಿವೃತ್ತರಾಗುವುದೇ ಅವರಿಗೆ ತಮ್ಮ ಸಂದೇಹದ ಸ್ಪಷ್ಟೀಕರಣೆಯಾಗಿ ಭಾಸವಾಗಬಾರದೆಂದು ಗಾಂಧಿಜಿಯವರು ಸ್ಪಷ್ಟವಾಗಿ,—'ಕೌನ್ಸಿಲ್ ಬಹಿಷ್ಕಾರವು ಎಂದೂ ಶಾಶ್ವತಧೋರಣೆಯಾಗಿ ಸ್ವೀಕರಿಸಲ್ಪಟ್ಟುದಲ್ಲ; ತಾತ್ಕಾಲಿಕವಾದುದಾಗಿತ್ತು. ಕೊಂಗ್ರೆಸ್ಸು ಈ ಸಮಯದಲ್ಲಿ, ಕೌನ್ಸಿಲು ಪ್ರವೇಶದ ಕಾರ್ಯಕ್ರಮವನ್ನು ಕೈಗೊಂಡುದು ಉಚಿತವೇ ಆದುದು. ದೇಶದ ಏಕಮಾತ್ರ ಹಿತೈಷಿ ಪ್ರತಿನಿಧಿಯೆಂಬ ಯಶಸ್ಸು ಇಂದು ಕೊಂಗ್ರೆಸ್ಸಿನದೇ. ಕೊಂಗ್ರೆಸ್ಸಿನ ಮೇಲೆ ಭರವಸೆಯಿರಿಸಿ, ಚುನಾವಣೆಗಳಲ್ಲಿ ಸಾರ್ವತ್ರಿಕವಾಗಿ ಕೊಂಗ್ರೆಸ್ಸಿಗೇ ವಿಜಯ ದೊರೆವಂತೆ ಮತಕೊಟ್ಟು, ಕೊಡಿಸಿ, ಸಹಕರಿಸಿರಿ' ಎಂದಿರುತ್ತಾರೆ. ಸ್ವದೇಶೀ ವಿಷಯವಾಗಿ ಮಹಾತ್ಮರಾಡುವ ಮಾತು ನಿಜವಾಗಿಯೂ ಆಚರಣಾ ಯೋಗ್ಯವಾದಂತೆ ಕಾರ್ಯರೂಪಕ್ಕೆ ಹಚ್ಚಬರುವಂಥದೂ ಆಗಿದೆ. ಹಳ್ಳಿಹಳ್ಳಿಗಳಲ್ಲಿಯೂ ಸ್ವದೇಶೀ ಪ್ರಚಾರವಾಗಬೇಕು. ಕೇವಲ ವಿದೇಶೀ ವಿಲಾಸ ಸಾಮುಗ್ರಿಗಳಂತೇ ಕೃತ್ರಿಮವಾಗಿ ಇಲ್ಲಿಯೂ ತಯಾರಿಸಿ ಮಾರಾಟಮಾಡಿದರೆ ಅದು 'ಸ್ವದೇಶೀ' ಎಂಬ ತತ್ವವನ್ನೊಳಗೊಂಡಿಲ್ಲ. ಹಿಂದೂ ದೇಶಕ್ಕೆ ಇಲ್ಲಿ ಬೇಕಾದ 'ಸ್ವದೇಶಿ'ಯು ಕೇವಲ ಹಿಂದೀ ಧನ, ಹಿಂದೀ ಶ್ರಮ ಹಿಂದೀ ವಸ್ತುಗಳಿಲ್ಲದಾದ 'ಸ್ವದೇಶಿ'ಯಷ್ಟೆ ಅಲ್ಲ,—ಉಪವಾಸೀ ಹಳ್ಳಿಗನಿಗೆ ಅನ್ನಕೊಡುವಂತಹ ಸ್ವದೇಶಿಯೂ ಆಗಬೇಕಾಗಿದೆ. ಗ್ರಾಮಗಳಲ್ಲಿನ ಮನೆ ಕೈಗಾರಿಕೆಗಳು ಯಾವುವು, ಹೇಗೆ ನಿರ್ನಾಮವಾದುವೆಂಬುದರ ಕಾರಣಗಳನ್ನು ತಿಳಿದು, ಅವುಗಳ ಪುನರುಜ್ಜೀವನವನ್ನು ಸಾಧಿಸಬೇಕಾಗಿದೆ. ಕೊಂಗ್ರೆಸ್ಸಿನವರು ಶಾಸನಸಭೆ (Parliamentary Board) ನ್ನು ಸ್ಥಾಪಿಸಿ ಚುನಾವಣೆಗಳ ಕಾರ್ಯಭಾಗವನ್ನು ಅದಕ್ಕೆ ವಹಿಸಿಕೊಟ್ಟಂತೆ, 'ಗ್ರಾಮ ಕೈಗಾರಿಕೆಗಳ ಪುನರುಜ್ಜೀವನ ಸಂಘ'ವೊಂದನ್ನೂ ಏರ್ಪಡಿಸಿ, ದೇಶದ ಸಂಪದಭ್ಯುದಯ ಸಾಧಕವಾದ ಈ ಉದ್ಯಮಕ್ಕೆ ಪ್ರಾಮುಖ್ಯತೆ ಕೊಡುವುದರಿಂದ, ರಾಜಕೀಯ ಚಳವಳವೂ ಪುಷ್ಟಿಗೊಳ್ಳಲನುಕೂಲವಿದೆ; ಚಳವಳವನ್ನು ಬಹುಮಟ್ಟಿಗೆ ಅಹಿಂಸಾತ್ಮಕವಾಗಿಯೇ ಮುನ್ನಡೆಸುವ ಯತ್ನವೂ ಸಾಧಿಸಲ್ಪಡಲನುಕೂಲವಾಗದಿರದು. ಇದೆಲ್ಲವನ್ನೂ ಈ ಬಾರಿಯ ರಾಷ್ಟ್ರಸಭಾಧಿವೇಶನದಲ್ಲಿ ಚರ್ಚಿಸಿ, ಯೋಗ್ಯ ನಿರ್ಧಾರಗಳನ್ನು ಮಾಡುವುದು ಅವಶ್ಯವಿದೆ.

ಸ್ಫುಟವಿಚಾರಗಳು.

ಹಿಂದೂದೇಶದ ಬಾಸೆಲ್ ಇವಾಂಜೆಲಿಕಲ್ ಮಿಶನಿನ ಶತಮಾನೋತ್ಸವ.

ಬಾಸೆಲ್ ಮಿಶನಿನವರು ದಕ್ಷಿಣ ಕನ್ನಡಕ್ಕೆ ಬಂದು ಇದೇ ತಾ. 14ಕ್ಕೆ ನೂರು ವರ್ಷಗಳಾದುವು. ಈ ಸಂಬಂಧವಾದ ಶತಮಾನೋತ್ಸವವು ಜಿಲ್ಲೆಯಲ್ಲೆಲ್ಲಾ ಅತ್ಯಂತ ವಿಜೃಂಭಣೆಯಿಂದಲೂ ಶ್ರದ್ಧೆಯಿಂದಲೂ ಜರುಗಿತು. ಬಾಸೆಲ್ ಮಿಶನರಿಗಳು ದಕ್ಷಿಣ ಕನ್ನಡಕ್ಕೆ ಬಂದು ಚತುರೋಪಾಯಗಳಿಂದ ಮತಪ್ರಸಾರ ಮಾಡಿದರಲ್ಲದೆ, ಅದರೊಡನೆ ಜನರ ಜ್ಞಾನವರ್ಧನೆಗೆ ಸಾಧಕವಾದ ಅನೇಕ ಪುಸ್ತಕಗಳನ್ನು ಮುದ್ರಿಸಿ, ಉಪನ್ಯಾಸಗನ್ನಿತ್ತು, ಜನರ ದಾರಿದ್ರ್ಯನಿವಾರಣೆಗೆ ಸಾಧಕವಾದ ಕೈಗಾರಿಕೆಯ ಸಂಸ್ಥೆಗಳನ್ನು ಸ್ಥಾಪಿಸಿ ನೆಲೆಸಿಂತರು. ಕನ್ನಡ ಭಾಷಾಭಿವೃದ್ಧಿಯು ಕೂಡಾ ಇವರಿಂದ ಬಹಳವಾಗಿ ನಡೆದಿದೆಯೆಂಬುದಕ್ಕೆ ಕಿಟ್ಟೆಲ್ ಶಬ್ದಕೋಶಗಳೇ ಮೊದಲಾದ ಮಹಾಗ್ರಂಥಗಳು ಸಾಕ್ಷ್ಯವಾಗಿವೆ. ಅಂತಹ ಮಿಶನರಿಗಳ ಶತಮಾನೋತ್ಸವವನ್ನು ಪ್ರೊಟೆಸ್ಟಾಂಟರೇ ಅಲ್ಲದೆ ಅಖಿಳ ಕನ್ನಡಿಗರೂ ಕೈಕೊಳ್ಳಬೇಕಿತ್ತು.

ಶುಭಚಿಹ್ನೆ

ಈ ಸಲ ಐ. ಸಿ. ಎಸ್.ನಲ್ಲಿ ಉತ್ತೀರ್ಣರಾದವರಲ್ಲಿ 26 ಮಂದಿಗೆ ಶೀಘ್ರದಲ್ಲಿ ಇಂಡಿಯನ್ ಸಿವಿಲ್ ಸರ್ವಿಸಿನಲ್ಲಿ ಉದ್ಯೋಗವು ಲಭ್ಯವಾಗುವುದೆಂದು ತಿಳಿದುಬರುತ್ತದೆ. 26 ಮಂದಿಯಲ್ಲಿ 13 ಮಂದಿ ಯುರೋಪಿಯನರು; 13 ಮಂದಿ ಹಿಂದೀಯರು ಎಂಬುದು ಹಿಂದೀ ಶಿಕ್ಷಣ ರಂಗದಲ್ಲೊಂದು ಶುಭಚಿಹ್ನೆಯೆಂದೇ ಹೇಳಬಹುದು. ಈ 13 ಮಂದಿ ಹಿಂದೀಯರಲ್ಲಿ 10 ಮಂದಿ ಹಿಂದುಗಳು; ಒಬ್ಬ ಮಹಮ್ಮದೀಯ; ಒಬ್ಬ ಪಾರ್ಸಿ; ಒಬ್ಬ ಆಂಗ್ಲೋ ಇಂಡಿಯನ್ ಎಂದು ತಿಳಿದುಬಂದಿದೆ. ಕರ್ತವ್ಯನಿಷ್ಠೆಯೊಡನೆ ಇವರು ದೇಶಸೇವೆಯನ್ನು ಮಾಡುವಂತಾಗಲೆಂದು ಹಾರೈಸುವ.

ಬಳ್ಳಾರಿಯು ಆಂಧ್ರದೇಶಕ್ಕೋ?

ಬಳ್ಳಾರಿಯು ಆಂಧ್ರ ವಿಶ್ವವಿದ್ಯಾಲಯದ ಜುರಿಸ್‌ಡಿಕ್ಷನ್‌ಗೆ ಸೇರಿಸಲ್ಪಡುತ್ತದೆಂದು ವಾರ್ತೆಯಿದ್ದು, ಆ ವಿಷಯವು ಈಗ ಮದ್ರಾಸು ನ್ಯಾಯವಿಧಾಯಕ ಸಭೆಯ ಮುಂದೆ 'ಆಂಧ್ರ ಯೂನಿವರ್ಸಿಟಿ ಎಮೆಂಡ್‌ಮೆಂಟ್ ಏಕ್ಟ್' ಎಂಬ ರೂಪದಿಂದ ನಿಂತಿದೆ. 'ಬಳ್ಳಾರಿ ಬಾರ್'ನ ಅನೇಕ ಪ್ರಮುಖ ಸದಸ್ಯರೂ, ಬಳ್ಳಾರಿಯ ಮದ್ರಾಸು ವೀರಶೈವ ವಿದ್ಯಾವರ್ಧಕ ಸಂಘದವರೂ ನಿಷೇಧ ಸಭೆಗಳನ್ನು ಜರುಗಿಸಿ ತಮ್ಮ ಅಸಮ್ಮತಿಯನ್ನು ಸೂಚಿಸಿರುವರು. ಬಳ್ಳಾರಿಯವರು ಸಂಪೂರ್ಣ ಎಚ್ಚರವಿರಲಾರರಾದರೆ ತಮ್ಮ ದೌರ್ಬಲ್ಯ ಪ್ರದರ್ಶನ ಮಾಡಿದಂತಾಗುವುದು.

ಸ್ವಾಗತವಿಲ್ಲ!

ದಶಂಬರ ತಿಂಗಳಲ್ಲಿ ಮುಂಬಾಯಿ ಗವರ್ನರರು ಅಹಮ್ಮದಾಬಾದಿಗೆ ಬರುವಾಗ ಅವರಿಗೆ ಸ್ವಾಗತವನ್ನು ಬಯಸಬೇಕೋ ಬೇಡವೋ ಎಂಬುದಾಗಿ ಅಹಮ್ಮದಾಬಾದ್ ಮುನಿಸಿಪಾಲಿಟಿಯವರು ವಾದಿಸಿ, 31 ಮಂದಿ 'ಬೇಡ'ವೆಂದೂ, 16 ಮಂದಿ 'ಬೇಕು' ಎಂದೂ ಹೇಳಿ, ಮುಂಬಾಯಿ ಗವರ್ನರರಿಗೆ ಸ್ವಾಗತವನ್ನು ಬಯಸುವುದೇ ಬೇಡವೆಂದು ನಿರ್ಧರಿಸಿದರು!. 'ಬೇಕು' ಎಂದವರು—ಮುಂಬಾಯಿಗೆ ಲೋರ್ಡ್ ಬ್ರಬೋರ್ನರು ಗವರ್ನರರಾದ ಮೇಲೆ, ಏನಿಲ್ಲದಿದ್ದರೂ ಮುಂಬಾಯಿಯ ವ್ಯಾಪಾರ ವಾಣಿಜ್ಯಗಳ ಪರಿಸ್ಥಿತಿಗಳು ಸುಧಾರಿತಗೊಂಡುವು. ಅವೆಲ್ಲಕ್ಕೆ ಗವರ್ನರರೇ ಕಾರಣ' ಎಂದರು. 'ಬೇಡ' ಎಂದವರು 'ಅದು ಸುಳ್ಳು' ಎಂದರು; ಕೊಂಗ್ರೆಸ್ ಪಕ್ಷೀಯರು ಬಹು ಜಾಣ್ಮೆಯಿಂದ ಮೌನರಾಗಿ ಕುಳಿತು ತಮ್ಮ ಪ್ರತಿಕೂಲ ಮತವನ್ನು ಸೂಚಿಸಿದರು; ಇವರ ವರ್ತನೆಯನ್ನು ಕಂಡು ಅಧ್ಯಕ್ಷರು ಇವರನ್ನು ಪ್ರಶಂಸಿಸಿದರು. ಮುನಿಸಿಪಾಲಿಟಿಯವರ ನಿರ್ಧಾರವು ಗವರ್ನರರ ವಕ್ರದೃಷ್ಟಿಗೆ ಪಾತ್ರವಾಗಿ, ಸುಪರಿಣಾಮಗಳು ತಲೆದೋರಲಿಕ್ಕಿಲ್ಲವೆಂದು ಹೇಳುವಾಗ, ಕೊಂಗ್ರೆಸ್ ಪಾಲರ ವಿವೇಕಕ್ಕಾಗಿ ಅವರನ್ನು ಅಭಿನಂದಿಸಬೇಕಾಗಿದೆ.

ಮುಂಬಾಯಿಯವರು

ರಾಜಕೀಯದಲ್ಲಿ ಮುಂಬಂದಂತೆ ಹಟವಾದಿತ್ವದಲ್ಲೂ ಮುಂದಿರುವರೆಂದು ಮುಂಬಾಯಿಯಲ್ಲಿ ೧೯೩೪ರ ಜೂನ್ ತಿಂಗಳಲ್ಲಿ ಅಂತ್ಯವಾದ ಮೂರು ತಿಂಗಳುಗಳಲ್ಲಿ ೨೯,೧೦,೨೧೦ ದಿನಗಳು ಮುಷ್ಕರದ ಪರಿಣಾಮವಾಗಿ ಜನರಿಗೆ ಕೆಲಸವಿಲ್ಲದೆ ನಷ್ಟವಾದುವೆಂದು ಸರಕಾರವೇ ಲೆಕ್ಕಮಾಡಿ ಪ್ರಕಟಿಸಿರುವುದರಿಂದ ವ್ಯಕ್ತ. ಇದಕ್ಕೆ ಕಾರಣವೇನು? ಆಳುಗಳಿಗೂ ಧನಿಗಳಿಗೂ ಇರುವ ಪರಸ್ಪರ ತಿಕ್ಕಾಟ; ಭಂಡವಾಳಗಾರರಿಗೂ ಕೂಲಿಗಾರರಿಗೂ ಇರುವ ವೈಷಮ್ಯ. ಯಾವಾಗ ಕೇಳಿದರೂ ಮುಂಬಾಯಿಯಲ್ಲಿ ಮುಷ್ಕರಗಳು! ಚಳವಳಗಳು! ಮುಂಬಾಯಿಯಲ್ಲಿನ ಈ ರೀತಿಯ ಅವ್ಯವಸ್ಥೆಯ ನಿರ್ಮೂಲನಕ್ಕಾಗಿ ಕೊರ್ಪರೇಶನಿನವರೂ ಮುಂಬಾಯಿ ಸರಕಾರವೂ ಕೂಡಿ ಯೋಜನೆಗಳನ್ನು ಹೂಡಬಾರದೇಕೆ? ಭಂಡವಾಳಿಗರನ್ನು ಸಕಾರಣವಾದ ನಿರ್ಬಂಧದೊಳಗಿಡಬಾರದೇಕೆ!

ಮಾನ್ಯ ಮೆಕ್ಡೊನಾಲ್ಡರು

ನೇತ್ರರೋಗದಿಂದ ಗುಣಹೊಂದಿ, ೩ ತಿಂಗಳ ಅವಧಿಯ ನಂತರ ಪುನಃ ಮೊನ್ನೆ ರಾಜಕಾರಣಕ್ಕಿಳಿದಿರುವರು. ಬಂದವರು ಅವಿಶ್ರಾಂತರಾಗಿ ದುಡಿಯಬೇಕಾದ ಸನ್ನಿವೇಶಗಳ ಸಮಾಗಮವಾಗಿದೆ. ಶ್ವೇತಪತ್ರ ನಿರ್ಮೂಲನಕ್ಕಾಗಿ ಡ್ಯಾಹಾರ್ದರ ಎತ್ತಿದ ಕೈ; ಹಿಂದೂಸ್ಥಾನದ ನ್ಯಾಯವಿಧಾಯಕ ಸಭೆಗಳು ಕೊಂಗ್ರೆಸ್ ಪಕ್ಷೀಯರ ವಶವಾಗುವುವೋ ಎಂಬ ಭಯ; ಎರಡರ ಮಧ್ಯೆ ಮಿ। ಮೆಕ್ಡೋನಾಲ್ಡರಿಗೆ ತ್ರಿಶಂಕು ಸ್ವರ್ಗ. ಶ್ವೇತಪತ್ರವು ಇವರ ಪದದಿಂದ ಎಂದು ಹೊರಗೆ ಬರುವುದೋ ನಿರೀಕ್ಷಿಸೋಣ.

೨೦ನೆಯ ಕರ್ಣಾಟಕ ಸಾಹಿತ್ಯ ಸಮ್ಮೇಲನವು –

ದಶಂಬರ ಕೊನೆಯ ವಾರದಲ್ಲಿ ಹೈದರಾಬಾದಿನ ರಾಯಚೂರಿನಲ್ಲಿ ಶ್ರೀಮಾನ್ ಪಂಜೆ ಮಂಗೇಶರಾಯರ ಅಧ್ಯಕ್ಷತೆಯಲ್ಲಿ ಜರಗುವುದೆಂದು ನಿರ್ಧರಿಸಲ್ಪಟ್ಟಿರುತ್ತದೆ. ಹುಬ್ಬಳ್ಳಿಯಲ್ಲಿ ನಡೆದ ಪರಿಷತ್ತಿನಲ್ಲಿ ಮುದ್ರಿತ ಭಾಷಣಗಳನ್ನು ಓದಿಯೋ, ನೀರಸ ಪದ್ಯಗಳನ್ನು ಹಾಡಿಯೋ ಸಮಯವನ್ನು ಹಾಳುಗೈದರೆಂದು 'ಪ್ರೇಮ'ದಲ್ಲಿ ಓದಿದೆವು. ನಿಜಾಂ ಸಂಸ್ಥಾನದ ಕನ್ನಡಿಗರು ಭಾಷಾಸೇವೆಯಲ್ಲಿ ಮುಂದರಿಯುತ್ತಿರುವುದನ್ನು ಪರಿಶೀಲಿಸುವಾಗ, ಈ ವರ್ಷದ ಸಾಹಿತ್ಯ ಸಮ್ಮೇಲನವನ್ನು ಇವರು ಅತ್ಯಂತ ಪರಿಷ್ಕಾರ ಮತ್ತು ಪರಿಪೂರ್ಣವಾಗಿ ಮಾಡಿ ಮುಗಿಸುವರೆಂಬ ಆಶೆಯಿದೆ.

ಇದನ್ನು ತಡೆಯಬಾರದೇಕೆ?

ಬರಿಗೈಯಲ್ಲಿ ಹಿಂದೂಸ್ಥಾನಕ್ಕೆ ಬಂದ ಸಾವಿರಾರು ವಿದೇಶೀಯರು ಸ್ವನಾಡಿಗೆ ಹಿಂತೆರಳುವಾಗ ಕೋಟ್ಯಾಧಿಪತಿಗಳೆಂದೆಣಿಸಿಕೊಂಡು ಹೋಗುವ ಪದ್ಧತಿಯು ಹಿಂದೆ ಇತ್ತು; ಈಗ ಇದೆ; ಮುಂದಕ್ಕೂ ಇರುವುದು. ಇತ್ತೀಚೆಗೆ ಮದ್ರಾಸಿನಿಂದ ಇಂಗ್ಲಾಂಡಿಗೆ ಹೊರಟುಹೋದ ಒಬ್ಬ ಸದ್ಗೃಹಸ್ಥರು 97 ಲಕ್ಷ ರೂಪಾಯಿಗಳನ್ನು ಒಯ್ದರು. ದ್ರವ್ಯವೇನೋ ಅವರೇ ಸಂಪಾದಿಸಿದುದು; ಆದರೆ ಅದು ಹಿಂದೂಸ್ಥಾನದ ದುಡ್ಡಲ್ಲವೇ? ಅದರ ಮೇಲೆ ಕಠಿನ ತೆರಿಗೆಯನ್ನೇಕೆ ಹೊರಿಸಬಾರದು? ಸರ್ ಡೇವಿಡ್ ಯೂಲರು ಹಿಂದೂಸ್ಥಾನದಲ್ಲಿದ್ದಾಗ ಹೇರಳ ಹಣವನ್ನು ಸಂಪಾದಿಸಿದ್ದರು. ಅವರ ಆಸ್ತಿಯಿಂದ 8 ಕೋಟಿಗಳ 'ಡೆತ್ ಡ್ಯೂಟಿ'ಯು ದೊರೆಯಿತು. ಈ ಹಣವು ಹಿಂದೂಸ್ಥಾನದಲ್ಲುಳಿಯುತ್ತಿದ್ದರೆ?

ಲೋಧ್ರ

ಸುಪ್ರಸವಕ್ಕಾಗಿ ದಿವ್ಯ ಟಾನಿಕ್.

ಸ್ತ್ರೀಯರಿಗೊಂದು ಮಹಾ ವರ.

ಯಾವ ತರದ ಅಥವಾ ಎಲ್ಲಾ ತರದ ಮುಟ್ಟು ದೋಷ, ಮುಟ್ಟಾಗುವ್ರದರಲ್ಲಿ ನೋವು, ಅಕ್ರಮ ತರದ ಮತ್ತು ಮುಟ್ಟಾಗದಿರುವಿಕೆ, ಬಿಳಿ ಸೆರಗು, ಗರ್ಭಕೋಶದ ದೋಷ ಅಶುದ್ಧ ಮುಟ್ಟು, ಬಂಜೆತನ, ಸೂತಿಕಾವಾಯು, ಅಶುದ್ಧರಕ್ತ, ಮೇರೆ ದಾಟಿ ಅಥವಾ ಬೇಕಾದಷ್ಟು ಮುಟ್ಟಾಗದಿರುವುದು, ಸ್ತ್ರೀಯರ ಅಂಗಾಂಗಗಳ ಇನ್ನಿತರ ಅನೇಕಾನೇಕ ರೋಗಗಳುಳ್ಳ ಸ್ತ್ರೀಯರನ್ನು ಈ ಔಷಧಿಯು ಸಂಪೂರ್ಣ ಗುಣಗೊಳಿಸಿರುತ್ತದೆ.

ಲೋಧ್ರ

ಎರಡು ಸೈಜಿನಲ್ಲಿ ದೊರೆಯುತ್ತದೆ   ರೂ 8 ಮತ್ತು 1-10-0

ಕೇಸರಿ ಕುಟೀರಂ

ಇಂಡಿಯನ್ ಕೆಮಿಸ್ಟ್ಸ್ ಮತ್ತು ಡ್ರಗಿಸ್ಟ್ಸ್, ಎಗ್ಮೋರ್ ಮದರಾಸು,

ದಕ್ಷಿಣ ಕನ್ನಡ ಮತ್ತು ಕೊಡಗು ದೇಶದ ಏಜಂಟರು,
ಪೊಪ್ಯುಲರ್ ಸ್ಟೋರ್ಸ್, ಮಂಗಳೂರು

"ಸ್ವದೇಶಾಭಿಮಾನಿ"ಯ

ಸಾಹಿತ್ಯಸಂಚಿಕೆ

ತಿಂಗಳಿಗೊಂದರಂತೆ ಹೊರಡುವುದು.

ಡೆಮಿ ¼ ಆಕಾರದ 8 ಪುಟಗಳು

ವರ್ಷಕ್ಕೆ 96 ಪುಟಗಳ

ಒಂದು ಗ್ರಂಥವೇ ಪುಕ್ಕಟೆಯಾಗಿ ದೊರೆತಂತೆ!

ಪ್ರತಿ ಸಾಹಿತ್ಯ ಸಂಚಿಕೆಯಲ್ಲೂ
ಕತೆಗಳು, ಕವನಗಳು
ವಿಮರ್ಶೆ, ಜೀವನಚರಿತೆ
ಸಾಹಿತ್ಯವಿಚಾರ
ಚರಚೆಗಳು

ಪ್ರಸಿದ್ಧ ಲೇಖಕರಿಂದಲೇ ಬರುವುವು.
'ಸ್ವದೇಶಾಭಿಮಾನಿ' ಗೆ ಚಂದಾದಾರರಾಗಿರಿ.

ವಾರ್ಷಿಕ ಚಂದಾ ರೂ. 2 ಮಾತ್ರ.
ಅಂಚೆ ವೆಚ್ಚ ಆಣೆ 13.

ಮೆನೇಜರ್,
ಸ್ವದೇಶಾಭಿಮಾನಿ,
ರಥಬೀದಿ — ಮಂಗಳೂರು.

ರಚನೆಯ ಉತ್ಕೃಷ್ಟತೆಗೂ ಹೆಚ್ಚಿನ ಫಲಕೂ

Kirloskar

ಕಲ್ಯಾಣ ನೆಲಗಡಲೆ ಯಂತ್ರ



ಇದು ಅದ್ವಿತೀಯವೆನಿಸಿದೆ ಕಾರಣವೇನೆಂದರೆ ಅದು ಆಧುನಿಕ ಯಂತ್ರಸುಧಾರಣೆಗಳನ್ನೆಲ್ಲ ಒಳಗೊಂಡಿದ್ದು, ತಾಸಿಗೆ 75ರಿಂದ 80 ಗೋಣಿಗಳನ್ನು ನೆಲಗಡಲೆಯನ್ನು ಅತ್ಯಲ್ಪ ವೆಚ್ಚದಲ್ಲಿ—ಸುಲಿಯುವ ಕೆಲಸ ಮಾಡುವುದು

ಹಿಂದೂಸ್ಥಾನದಲ್ಲೆಲ್ಲಾ ನೂರಾರು ಯಂತ್ರಗಳು ಉಪಯೋಗದಲ್ಲಿವೆ

ಸಚಿತ್ರ ಕೆಟಲಾಗು, ಅಪೇಕ್ಷಿಸಿದ್ದಲ್ಲಿ ಕಳುಹಲಾಗುವುದು.

ಕಿರ್ಲೋಸ್ಕರ ಬ್ರದರ್ಸ್ ಲಿಮಿಟೆಡ್,

ಕಿರ್ಲೋಸ್ಕರವಾಡಿ, (ಸತಾರಾ.)

ಡಿಸ್ಟ್ರಿಬ್ಯೂಟರರು —ಮೆಸರ್ಸ್ ಪೆರ್ರಿ ಎಂಡ್ ಕೊ, ಲಿಮಿಟೆಡ್,
ಮೌಂಟ್ ರೋಡ್ ಮದ್ರಾಸ್

ಚಾತುಕುಟ್ಟಿ ವೈದ್ಯರ

ವಿಶೂಚಿಕಾ ಸಂಹಾರಿ
Vishuchika Samhari
(PILCO)

ಕಾಲರಕ್ಕೆ ದಿವ್ಯೌಷಧಿ! ಉಪಯೋಗಿಸಿದರೆ ಗುಣ ಖಾತ್ರಿ!
ಕ್ರಯ ಡಬ್ಬಿ 1ಕ್ಕೆ ರೂ. 1-0-0

ಗುಹ್ಯರೋಗ ನಿವಾರಿಣೀ ತೈಲ
Anti-Venereal Oil
(A V Oil)

ಗುಹ್ಯರೋಗ ನಿವಾರಣೆಗೆ ಅನೇಕ ವನಸ್ಪತಿ ಔಷಧಿ ಕುಟುಂಬ ಪಾರಂಪರ್ಯದ ಈ ತೈಲದ ರೀತಿಗಳು ಗುಣವಾಗುವುದು ನಿರೀಕ್ಷೆ ... ಪುಸ್ತಿಕೆಯ ಪ್ರಕಾರ ಉಪಯೋಗಿಸಬೇಕು ... ತೆಗೆದುಕೊಳ್ಳಬಹುದು

8 ಔನ್ಸ್‌ಗಳ ಬಾಟ್ಲಿ 1ಕ್ಕೆ ರೂ. 2 0 0

ಕೆ ವಿ. ಕೃಷ್ಣನ್,
ಕಲ್ಲಾಯಿ, ಮಲಬಾರ್
ಅಥವಾ
ಬಾಲ್ ಸಿ. ಮತ್ತು ಕಂಪೆನಿ, ಕಲ್ಲಿಕೋಟೆ,
ಇಲ್ಲಿ ಸಿಗುವುದು

ಸ್ತ್ರೀಯುಕ್ತೀಪಾದಿಗಳಿಗೆ

ಚ್ಯವನಪ್ರಾಶಾವಲೇಹ.

ಪ್ರಸೂತಿ ರೋಗಾದಿಗಳಿಗೆ

ದಶಮೂಲಾರಿಷ್ಟ

(ಕಸ್ತೂರಿ ಮಿಶ್ರಿತ)

ಸಮಸ್ತ ವಾತರೋಗಗಳಿಗೆ

ಮಹಾನಾರಾಯಣ ತೈಲ.

ಶ್ರೀ ರಾಮಕೃಷ್ಣ ಧನ್ವಂತ್ರಿವೈದ್ಯಾಶ್ರಮ
ಸಂಘ, ಡೊಂಗರಕೇರಿ ರಸ್ತೆ, ಮಂಗಳೂರು

ಚಿತ್ರಾಸಹಿತ ಸಮೇತ

ಋಗ್ವೇದೀ ಸಂಧ್ಯಾವಂದನೆ.

(ಸ್ವಚ್ಛವಾದ—ಬಾಲ್ಯ ಪೂರ್ಣ ಮುದ್ರಾಧಾರ ವಿಧಿ)
ಸ್ಮಾರ್ತರಿಗೆ—ಭಸ್ಮಧಾರಣ ವಿಧಿ ಕೂಡ)

ಎಂ ನರಸಿಂಗರಾವ್, ಬಿ ಎ, ಎಂ ಎಲ್,
ಇವರಿಂದ ರಚಿತವಾದ
ಪ್ರತಿಪಾದಾರ್ಥಟೀಕಾ ವಿಧಸಹಿತ
ಬೆಲೆ ಆಣೆ 8

(80 60 100 ಪ್ರತಿಗಳನ್ನು ಒಟ್ಟಿಗೆ ತಕ್ಕೊಳ್ಳುವವರಿಗೆ ಒಳ್ಳೆಯ ಡಿಸ್ಕೌಂಟು)

ವಿಳಾಸ — ಶಾರದಾ ಛಾಪಖಾನೆ,
ರಥಬೀದಿ ಮಂಗಳೂರು

ನಮ್ಮ ಸಲಹೆಯೇ ಪ್ರಾಧಾನ್ಯವಾದದ್ದೆಂದು ತಿಳಿಯಬೇಡಿ

ಕಲ್ಲಿಕೋಟೆ ಅಶೋಕ ಆಸ್ಪತ್ರೆಯ ಚೀಫ್ ಮೆಡಿಕಲ್ ಆಫೀಸರರಾದ ಡಾ. ವಿ. ಐ ರಾಮನ್ ಎಲ್ ಆರ್ ಸಿ ಎಸ್ ಇವರು ಬರೆದಿರುವುದನ್ನು ಓದಿ ನೋಡಿ—"ನಾನು ನಿಮ್ಮ ಆಶ್ಚರ್ಯಕರವಾದ ಜೀವಾಮೃತಂ ಟಾನಿಕನ್ನು ನರಗಳಲ್ಲಿ ಬಲಹೀನತೆ ಹಸಿವು ಕಡಿಮೆಯಾಗಿರುವುದು ತೂಕವು ಕಡಿಮೆಯಾಗಿರುವುದು ಇವು ಪ್ರಾಪ್ತವಾಗಿರುವ ಅನೇಕ ರೋಗಿಗಳಿಗೆ ಕೊಟ್ಟಿರುತ್ತೇನೆ ಅದರ ಫಲಿತಾಂಶಗಳು ಬಹು ತೃಪ್ತಿಕರವಾಗಿದೆ. ಜೀವಾಮೃತವನ್ನು ದೇಹಶಕ್ತಿ ಕುಗ್ಗಿರುವ ಎಲ್ಲಾ ಸಂದರ್ಭಗಳಲ್ಲೂ ಸರ್ವೇ ಸಾಮಾನ್ಯವಾಗಿ ಉಪಯೋಗಿಸಬಹುದೆಂದು ನಾನು ಮನಃಪೂರ್ವಕವಾಗಿ ಶಿಫಾರಸು ಮಾಡುತ್ತೇನೆ"

ಜೀವಾಮೃತವು

ನರಗಳಿಗೆ ಶಕ್ತಿ ಕೊಡುತ್ತದೆ ವೀರ್ಯ ವೃದ್ಧಿಮಾಡುತ್ತದೆ ಹಸಿವು ಹೆಚ್ಚಿಸುತ್ತದೆ ರಕ್ತ ವೃದ್ಧಿಮಾಡುತ್ತದೆ

ಪಂಡಿತ
ಡಿ. ಗೋಪಾಲಾಚಾರ್ಯುರವರ   ಜೀವಾಮೃತವು

ಎಲ್ಲಾ ಔಷಧ ಮಾರುವವರಲ್ಲೂ, ಸ್ಟೋರುಗಳಲ್ಲೂ ದೊರೆಯುತ್ತದೆ (ಸಂಪೂರ್ಣ ವಿವರಗಳಿಗೆ ಇವತ್ತೇ ಬರೆಯಿರಿ)

ಆಯುರ್ವೇದಾಶ್ರಮಂ, ಪೋ ಬಾಕ್ಸ್ ನಂ 2೧೭, ಮದ್ರಾಸು

ಸೋಲ್ ಏಜಂಟರು ಸಿಟಿ ಮೆಡಿಕಲ್ ಮತ್ತು ಜನರಲ್ ಏಜನ್ಸಿ, ೧೩ ಚಿಕ್ಕಪೇಟೆ ಬೆಂಗಳೂರು (ಅಲೂಬ ಹೋಟೆಲ್ ಹತ್ತಿರ)
ದಕ್ಷಿಣ ಕನ್ನಡದ ಏಜಂಟರು— ಪೊಪ್ಯುಲರ್ ಸ್ಟೋರ್ಸ್, ಮಂಗಳೂರು

P No 104

ಸೈಂಟಿಫಿಕ್

ಸ್ವರ್ಣಾಭರಣಗಳು

(ನಿಜವಾದ ಬಂಗಾರಕ್ಕೆ ಬದಲಾಗಿ ಇವು ತಯಾರಿಸಲ್ಪಟ್ಟಿವೆ)

ಹೈಕೋರ್ಟು ಜಡ್ಜರುಗಳಿಂದಲೂ, ಸರಕಾರದ ಮಂತ್ರಿಗಳಿಂದಲೂ, ಇತರ ಪ್ರಮುಖರಿಂದಲೂ ಕೊಂಡಾಡಲ್ಪಟ್ಟಿವೆ

ಪತ್ರವ್ಯವಹಾರವನ್ನು ಇಂಗ್ಲಿಷಿನಲ್ಲೇ ಮಾಡಬೇಕು

S.G.B.Co.

ಹೊಸ ಕೆಟಲಾಗು ಧರ್ಮಾರ್ಥ.

ವಿಳಾಸ:-
TheScientificGold Bangles Co., Ltd.,
Head Office:-43, Byragimatam Street,
Post Box No. 203, Madras.

An Advertisement in

'Swadeshabhimani'

Means a sure fortune to you

Ask for Contract Rates

The Swadeshabhimani office,
Car Street, Mangalore.

Preserve Your Wealth by BIRTH CONTROL

ದೇಶದ ಐಶ್ವರ್ಯವನ್ನು ಮಿತಸಂತತಿಯಿಂದ ಕಾದಿಡಿ.

ಮೂರೇ ಮೂರು ರೂಪಾಯಿಗಳಿಂದ ಸ್ತ್ರೀಯರಿಗೆ ಪ್ರಸವಭಯವನ್ನು ನಿಲ್ಲಿಸುವುದು ಬೇಕಾದ್ದಲ್ಲಿ ತಿರಿಗಿ ಗರ್ಭವಾಗುವಂತೆ ಔಷಧವಿದೆ

ವರ್ಷಕ್ಕೊಂದರಂತೆ ಹೆತ್ತು ತಾಯಿ—ಮಕ್ಕಳು ನರಳದಂತೆ ದೂರ ದೂರ ಮಾಡುವುದು ಆರೋಗ್ಯಕ್ಕೆ ಹಾನಿಯಿಲ್ಲ

ವಿಳಾಸ —ಪಂಡಿತ ಕೆ ನಾರಾಯಣರಾವ್, ಆಯುರ್ವೇದ ಭಿಷಕ್, ಕಾರ್ಕಳ, ದ ಕ.

Branches—Kukkundoor & Kalkamba, (Gurpoor) ಬ್ರಾ —ಕುಕ್ಕುಂದೂರು, ಕೈಕಂಬ, ಗುರ್ಪುರ

[N. B —ಉತ್ತರವನ್ನಪೇಕ್ಷಿಸುವವರು ಒಂದಾಣೆಯ ಅಂಚೆಯ ಟಿಕೇಟು ಸ್ಟಾಂಪನ್ನು ಹಾಕಿ ಬರೆಯಬೇಕು]

ಯುಗೋಸ್ಲೇವಿಯಾ ಅರಸರ ಮತ್ತು ಫ್ರೆಂಚ್ ಮಂತ್ರಿಗಳ ಕೊಲೆ!

ಯುರೋಪ್ ಖಂಡದಲ್ಲಿ ತೋರುತಿದ್ದ ತಾತ್ಕಾಲಿಕ ಶಾಂತಿಯು ಕ್ಷಣದೊಳಗೆ ಮಾರ್ಪಾಟ ಹೊಂದಿತು! ಕ್ಷೋಭೆಯು ಯುರೋಪಿನ ವಾತಾವರಣದಲ್ಲಿ ಭೀಕರ ನಾದವನ್ನುಂಟುಮಾಡಿತು!–ಇದೇ ತಾರೀಕು ೯ರಲ್ಲಿ, ಯುಗೊಸ್ಲೇವಿಯದ ಅರಸರಾದ ಅಲೆಕ್ಸಾಂದರವರು ಫ್ರಾನ್ಸಿನ ವಿದೇಶೀ ಮಂತ್ರಿ ಬಾರ್ಥೋವರೊಡನೆ, ಎರಡೂ ರಾಜ್ಯಗಳ ಭಾವೀ ರಾಜಕೀಯ ಸಂಬಂಧಗಳ ಒಂದು ಯೋಜನೆಯನ್ನು ಪೂರೈಸಲೆಂದು ಮಾರ್ಸೇಲ್ಸ್ ನಗರವನ್ನು ಪ್ರವೇಶಿಸಿದಾಗ, ರಾಜಕೀಯ ಧರ್ಮಾಂಧನೊಬ್ಬನು ಮೋಟಾರಿಗೆ ಹಾರಿ, ರಿವಾಲ್ವರು ಹಾರಿಸಿದನು. ಮರ್ಮಸ್ಥಾನಕ್ಕೆ ಪೆಟ್ಟು ತಗಲಿ, ಅಲೆಕ್ಸಾಂದರ್ ನೃಪತಿಗಳೂ ಬಾರ್ಥೋವರವರೂ ಮಡಿದು ಬಿದ್ದರು!

ಸಾವಿರಾರು ಜನರು ರಸ್ತೆಯ ಇಕ್ಕಡೆಯಲ್ಲಿಯೂ ಜಯಘೋಷ ಮಾಡುತ್ತ ನಿಂತುಕೊಂಡಿದ್ದರು!–ಈ ಅತ್ಯಾಚಾರವನ್ನು ನೋಡಿ ಜನಸಂದಣಿಯು ರೋಷಾಗ್ನಿಯಿಂದ ರಣನಾದವನ್ನೆ ಮಾಡಿತು ಕೊಲೆಗಡಕನನ್ನು ಮೋಟರ್ ಡ್ರೈವರನೂ ಅಂಗರಕ್ಷಕರೂ ಹಿಡಿದೆಳೆದರಾದರೂ, ರೋಷಾಂಧ ಜನರೇ ಆತನನ್ನು, ಅಲ್ಲೇ–ಆಗಲೇ–ನಾಯಿಯನ್ನು ಕೊಲ್ಲುವಂತೆ ಕೊಂದು ಹಾಕಿದರು

ಕೊಲೆಗಡಕನ ಹೆಸರು ಪಟ್ರಸ್ ಕಾಲೇಮನ್ ಎಂದು, ವಯಸ್ಸು ೩೪, ಝಾಗ್ರೇಬ್ ಎಂಬಲ್ಲಿಯ ಒಬ್ಬ ವ್ಯಾಪಾರಿ ರಾಜವ್ಯಕ್ತಿಗಳ ಸಂರಕ್ಷಣೆಗಾಗಿ ಪೋಲೀಸರು ಕೈಕೊಂಡ ಕಾವಲಿನ ವ್ಯವಸ್ಥೆಯನ್ನೆಲ್ಲ ಈತನು ವ್ಯರ್ಥವಾಗಿಸಿ, ಹತ್ಯಾದೋಷವನ್ನು ಕಟ್ಟಿಕೊಂಡು, ತಾನೂ ಬಲಿಯಾದನು! ಗಲಭೆಯಲ್ಲಿ ಓರ್ವ ಹೆಂಗಸೂ ಮಡಿದಳು ಅನೇಕರಿಗೆ–ಸುಗ್ಗಾಟದಿಂದಲೇ ಜಖಂ ಉಂಟಾಯಿತು

ಅರಸರ ಮತ್ತು ಮಂತ್ರಿಯವರ ದೇಹಗಳನ್ನು ಅಂದು ಸರಕಾರೀ ಕಟ್ಟಡದಲ್ಲಿರಿಸಿ, ಮಾರುದಿನ,—ಮೊದಲನೆಯದನ್ನು ಯುಗೋಸ್ಲೇವಿಯಕ್ಕೆ ಯುದ್ಧನಾವೆಯಲ್ಲಿ ಕಳುಹಿಕೊಟ್ಟರುವರು, ಎರಡನೆಯದನ್ನು ಪ್ಯಾರಿಸ್ ನಗರಕ್ಕೆ ಕಳುಹಿಕೊಡಲಾಗಿದೆ

ದೇಶವಿದೇಶಗಳು ಈ ವಾರ್ತೆಯನ್ನು ಕೇಳಿ, ಇದೇನು ಅವಾಂತರವೆಂದು ದಂಗುಬಡಿದಂತೆ ಮೌನವಾಗಿವೆ ಪ್ಯಾರಿಸ್ ನಗರದ ಒಂದು ಪತ್ರಿಕೆಯು, ಪೋಲೀಸರ ಮೇಲೆ ಅಪವಾದ ಹೊರಿಸಿದುದಕ್ಕೆ, ಅದನ್ನು ನಿರ್ಬಂಧಿಸಿರುವರು. ಪೋಲೀಸರು ಮುತುವರ್ಜಿಯಿಂದ ಕಾವಲು ಮಾಡುತ್ತಿರಲಿಲ್ಲವೆಂದು ಆ ಪತ್ರಿಕೆಯ ಟೀಕೆ. ಅಂದು ನಗರದ ಪತ್ರಿಕೆಗಳಲ್ಲಿ ಆ ವಾರ್ತೆಯು ಉತ್ಪ್ರೇಕ್ಷೆಯಿಂದ ಪ್ರಕಟವಾಗದಂತೆ ಎಚ್ಚರಿಕೆ ವಹಿಸಿಕೊಳ್ಳಲಾಗಿತ್ತು.

ಅರಸರ ಕುಮಾರನಿಗೆ ಮರುದಿನ ಈ ವಾರ್ತೆಯನ್ನು ತಿಳಿಸಿದರು ಮಹಾರಾಜ್ಞಿಯು ಪತಿಯ ಮರಣದ ವಾರ್ತೆಯನ್ನು ಕೇಳಿ ಮಾರ್ಸೇಲ್ಸ್ ನಗರಕ್ಕೆ ರೈಲಿನಲ್ಲಿ ಧಾವಿಸುತ್ತ, ದಾರಿಯಲ್ಲಿ ಅನೇಕ ವೇಳೆ ಮೂರ್ಛಿತಳಾದಳು. ಯುಗೊಸ್ಲೇವಿಯ ನಗರದಲ್ಲಿ ಪ್ರಜೆಗಳು ದುಃಖದಿಂದ ಕಣ್ಣೀರಿಟ್ಟರು. ಎಲ್ಲೆಲ್ಲಿಯೂ ಶೋಕದ ದೃಶ್ಯ!

ಯುಗೋಸ್ಲೇವಿಯದಲ್ಲಿ ದುಃಖ ಪ್ರದರ್ಶನಾರ್ಥ ಕೆಲಕಾಲ ಆನಂದೋತ್ಸವಗಳು ಜರಗಲಾರವೆಂದು ಗೊತ್ತಾಗಿದೆ. ಲಂಡನಿನಿಂದ ನಮ್ಮ ಸಾರ್ವಭೌಮರು ಸಹಾನುಭೂತಿಯ ತಂತಿ ಕಳುಹಿರುವರು.

ಯುಗೋಸ್ಲೇವಿಯದ ಸಿಂಹಾಸನವನ್ನು ಮೃತ ನೃಪತಿಯ ಬಾಲಕನು, ಪ್ರಾಯಭರಿತನಾಗಿರದ ಪ್ರಯುಕ್ತ, ಈಗ ಏರಲಾರನು. ಆತನ ಸ್ಥಳದಲ್ಲಿ, ಮಂತ್ರಿ ಮಂಡಲ್ಲದವರ ಶಿಫಾರಸಿನಿಂದ ರಿಜೆಂಟರನ್ನು ನೇಮಿಸಲಾಗುವುದು.

ಯುಗೋಸ್ಲೇವಿಯದ ಅರಸರೆಲ್ಲ ಬಹು ಕಾಲದಿಂದ, ಒಂದಲ್ಲ ಒಂದು ವಿಧದಲ್ಲಿ, ಅವಘಡದಲ್ಲಿ ಅಥವಾ ಕೊಲೆಗಡುಕನ ಕೈಯಲ್ಲಿ ಮರಣಪಟ್ಟಿದ್ದರೆಂಬುದೊಂದು ವಿಶೇಷ!

ಅಲೆಕ್ಸಾಂದರ್ ನೃಪತಿಯ ಪೂರ್ವದ ನೆನಹು.

ಇವರ ಮೇಲೆ ೧೯೨೧ರಲ್ಲಿ, ಇವರ ರಾಜ್ಯದಲ್ಲೇ ಒಮ್ಮೆ ಅತ್ಯಾಚಾರದ ಯತ್ನವಾಗಿತ್ತು ಇದು ಕಮ್ಯೂನಿಸ್ಟರ ಒಳಸಂಚಿನ ಫಲವಾಗಿತ್ತು ಇವರು ೧೮೮೮ರಲ್ಲಿ ಜನಿಸಿದರು ೧೮೯೦ರಲ್ಲಿ ತನ್ನ ತಾಯಿಯನ್ನು ಕಳಕೊಂಡರು ಬಾಲ್ಯದಲ್ಲಿ ತಂದೆಯೊಡನೆ ರಾಜ್ಯಭ್ರಷ್ಟರಾಗಿ ಅಲೆದಾಡಿದರು. ೧೯೦೪ರಲ್ಲಿ ಸ್ಯೆಂಟ್ ಪೀಟರ್ಸ್‌ಬರ್ಗ (ರಷ್ಯ) ಶಿಕ್ಷಣದ ಬಗ್ಗೆ ಕಳುಹಲ್ಪಟ್ಟರು ಆ ನಂತರ ಟ್ಸಾರ್ ನೃಪತಿಗಳ ಕೈಕೆಳಗೆ ಐದು ವರ್ಷ, ಸೇನಾಪತಿಯಾಗಿ ಕೆಲಸ ಮಾಡಿದರು ೧೯೧೪ರಲ್ಲಿ ಇವರ ತಂದೆಯವರು ಇವರನ್ನು ತನ್ನ ಸ್ಥಾನಕ್ಕೆ ಉತ್ತರಾಧಿಕಾರಿಯನ್ನಾಗಿ ಮಾಡಿದರು ಆಗಲೇ ಮಹಾ ಯುದ್ಧವಾರಂಭವಾಗಲು, ಇತರ ಸೈನಿಕರೊಡನೆ ಇವರು ಮಹಾ ಕಷ್ಟಗಳಿಗೀಡಾಗುವುದಾಯಿತು ಮುಂದೆ ಯುದ್ಧ ಮುಗಿದ ನಂತರ, ೧೯೨೧ರಲ್ಲಿ ಯುಗೋಸ್ಲೇವಿಯದ ಪಟ್ಟವು ಇವರಿಗೆ ಲಭಿಸಿತು ಒಂದು ವರ್ಷದ ನಂತರ ರುಮೇನಿಯದ ರಾಜಕುಮಾರಿಯನ್ನು ವಿವಾಹವಾದರು ೧೯೨೩ರಲ್ಲಿ ಇವರಿಗೆ ಪುತ್ರಸಂತಾನ ಪ್ರಾಪ್ತಿಯಾಯಿತು.

೧೯೨೯ರಲ್ಲಿ ಇವರು ಡಿಕ್ಟೇಟರ್ ಪದ್ಧತಿಯ ರಾಜ್ಯಭಾರವನ್ನು ಸ್ಥಾಪಿಸಿದರೂ ೧೯೩೧ರಲ್ಲಿ ಪುನಃ ಪೂರ್ವಪದ್ಧತಿಯ ರಾಜ್ಯಭಾರವನ್ನು ಬಹುಮಟ್ಟಿಗೆ ಪ್ರಚಾರಕ್ಕೆ ತಂದರು ಇವರು ತನ್ನ ರಾಜ್ಯದಲ್ಲೂ ಇಂಗ್ಲಾಂಡ್ ಮೊದಲಾದ ಕಡೆಗಳಲ್ಲೂ ಜನಪ್ರೀತರಾಗಿದ್ದರು.

ಬಾರ್ಥೋ ಸಾಹೇಬರು.

ಈ ಮಹಾನುಭಾವರು ೧೮೬೨ರಲ್ಲಿ ಜನಿಸಿದರು. ಪ್ಯಾರಿಸ್ ವಿಶ್ವವಿದ್ಯಾಲಯದಲ್ಲಿ ಇವರ ಶಿಕ್ಷಣ. ೧೮೮೯ರಿಂದ ೧೯೨೨ರ ವರೆಗೆ ಇವರು ಫ್ರಾನ್ಸಿನ ಎಸೆಂಬ್ಲಿಗೆಡಿಪ್ಯುಟಿಗಳಾಗಿದ್ದು ೧೯೨೨ರಿಂದ ಸಿನೇಟರರಾದರು. ಸರಕಾರದ ನಾನಾ ಇಲಾಖೆಗಳಲ್ಲಿ ಮಂತ್ರಿಪದವಿಯಲ್ಲಿ ರಾರಾಜಿಸಿ, ವಿಚಕ್ಷಣತೆಯಿಂದ ದುಡಿದಿರುವರು. ಕಳೆದ ಫೆಬ್ರುವರಿ ತಿಂಗಳಲ್ಲಿ ಇವರನ್ನು ವಿದೇಶಿ ವ್ಯವಹಾರಗಳ ಸಚಿವರನ್ನಾಗಿ ನೇಮಿಸಲಾಯಿತು. ಶಸ್ತ್ರಸನ್ಯಾಸ ಪರಿಷತ್ತಿಗೆ ಫ್ರಾನ್ಸಿನಿಂದ ಮುಂದಾಳಾಗಿ ಹೋದವರು ಇವರೇ. ರಷ್ಯವು ಲೀಗ್ ಆಫ್ ನೇಶನ್ಸನ್ನು ಸೇರುವಂತೆ ಸಾಧಿಸಿದ ಯಶಸ್ಸಿನ ಕೀರ್ತಿಯು ಈ ಬಾರ್ಥೋ ಸಾಹೇಬರದ್ದಾಗಿದೆ

ಈ ದುರ್ಘಟನೆಯು ಯುದ್ಧಕ್ಕೆ ಕಾರಣವಾಗಬಹುದೇ?

ಕೊಲೆಮಾಡಲ್ಪಟ್ಟ ಅರಸರು ಯುಗೋಸ್ಲೇವಿಯದವರು, ಕೊಲೆ ಮಾಡಲ್ಪಟ್ಟುದು ಫ್ರಾನ್ಸಿನ ಮಾರ್ಸೇಲಿನಗರದಲ್ಲಿ! ಇದು, ಯುಗೋಸ್ಲೇವಿಯದೊಡನೆ ಸಂಬಂಧವಿದ್ದವರನ್ನೆಲ್ಲ, ಒಂದಲ್ಲ ಒಂದು ವಿಧದಿಂದ ರೇಗಿಸಿತೇ?–ಆದರೆ, ಕೊಲೆಯ ಯತ್ನವು ಫ್ರಾನ್ಸಿನ ಮಂತ್ರಿಗಳ ಮೇಲೆಯೂ ಆಗಿರುತ್ತ, ಅವರೂ ಅದೇ ಕೊಲೆಗಡಕನ ಕೈಯಿಂದ ಮರಣಪಟ್ಟಿರುತ್ತ–ಎರಡೂ ರಾಜ್ಯಗಳೂ ವಿಷಮಭಾವವನ್ನು ತಾಳಲು ಕಾರಣವಿರದಷ್ಟೆ, ಪರಂತು,–ಈ ಘಟನೆಯು ಅಲ್ಲಿಂದಲ್ಲೆ ತಣಿದು ಹೋಗುವಂತಿಲ್ಲವೆಂದು ಕೆಲವರ ಅಂಜಿಕೆ ಮತ್ತೊಂದು ಮಹಾಯುದ್ಧಕ್ಕೆ ಇದುವೇ ಆರಂಭದ ಕಿಡಿಯಾಗಬಹುದೆಂದು ಅನೇಕರಿಗೆ ಸಂದೇಹ

ಒಂದು ಸುಂದರ ದೃಶ್ಯ.

ಲಾಯ್ಸ್ ಹಿಪ್ಪಾ.'

ನಮ್ಮ ಜಿಲ್ಲೆಯಲ್ಲಿ ಬತ್ತದ ಪೈರಿಗೆ ತಗಲುವ ರಾಯಿಸ್ ಹಿಪ್ಪಾ ಎಂಬ ಕಪ್ಪು ನೊಣದ ಕಾಟ ಮತ್ತು ಅದರ ನಿವಾರಣೋಪಾಯಗಳು —

ಬತ್ತದ ಪೈರಿಗೆ ಹಾವಳಿಯನ್ನುಂಟುಮಾಡುವ ಕಪ್ಪು ನೊಣಗಳನ್ನು ತುಳುವ ನಾಡಿನಲ್ಲಿ ವಾಡಿಕೆಯಾಗಿ ಕಿಲಿಂಜಿ ಎನ್ನುವರು ಈ ಜಿಲ್ಲೆಯಲ್ಲಿ ಸರ್ವಸಾಧಾರಣ ಎಲ್ಲಾ ಕಡೆಗಳಲ್ಲಿಯೂ ಈಗ ಕಟಾವಿಗೆ ಬಂದಿರುವ ಕಾರ್ತಿಯಾ ಎಣೆಲು ಎಂದು ಕರೆಯಲ್ಪಡುವ ಒಂದನೇ ಬೆಳೆಗೆ ಬಾಧಿಸಿದ ಈ ನೊಣಗಳ ಪರಿಚಯವು ಸರ್ವರಿಗೂ ಇರಬಹುದು ಇತ್ತೀಚೆಗೆ ಇವು ಒಂದನೆ ಬೆಳೆಯಿಂದ ಮಾಯವಾದಂತೆ ನಾಶವಾಗಿವೆ ಎಂದೂ ಮುಂದೆ ಇವುಗಳಿಂದ ಏನೂ ಭಯವಿಲ್ಲೆಂದೂ ಹೆಚ್ಚಿನ ಪಕ್ಷದವರ ಅಭಿಪ್ರಾಯವಿದೆ

ಆದರೆ ಸೋಣ ತಿಂಗಳಲ್ಲಿ ಬಿತ್ತಿದ ಎಳೆತಾದ ಸುಗ್ಗಿಯ ನೇಜಿಯ ಅಗೆಗಳನ್ನು ಜಾಗ್ರತೆಯಾಗಿ ಪರೀಕ್ಷಿಸಿಕೊಂಡು ಹೋಗುವಾಗ ಒಂದೆರಡು ಗ್ರಾಮಗಳಲ್ಲಿ ಈ ನೊಣಗಳು ನೇಜಿಯಲ್ಲಿ ಕಂಡುಬಂದುವು. ಇದೇ ರೀತಿಯಲ್ಲಿ ಇವು ಇತರ ಗ್ರಾಮಗಳಲ್ಲಿಯೂ ತಲೆ ದೋರಲು ಕಾರಣವು ಕಂಡು ಬರುವುದರಿಂದ ಎಲ್ಲಾ ರೈತರೂ ಬಹಳ ಎಚ್ಚರಿಕೆಯಲ್ಲಿದ್ದು ಈ ಕೆಳಗೆ ಸೂಚಿಸಿದಂತೆ ನಿವಾರಣೋಪಾಯಗಳನ್ನು ವಿಳಂಬವಿಲ್ಲದೆ ನಡೆಸಿ ಇವುಗಳ ಹಾವಳಿಯನ್ನು ಅಡಗಿಸಬಹುದು.

ನಿವಾರಣೋಪಾಯಗಳು (೧) ನೇಜಿಯು ಸ್ವಲ್ಪ ಸಣ್ಣದಾಗಿರುವಾಗ ಈ ನೊಣಗಳು ಕಂಡುಬಂದಲ್ಲಿ ಕ್ರೂಡ್ ಆಯಿಲ್ ಇಮಲ್ಶನ್ ಅಥವಾ ಫಿಶ್ ಆಯಿಲ್ ಸೋಪ್ ಎಂಬ ಔಷಧಗಳನ್ನು ನೀರು ಹಾಯಿಸುವ ಕಡೆಗಳಲ್ಲಿಟ್ಟು ಇದು ಮೆಲ್ಲ ಮೆಲ್ಲಗೆ ಕರಗಿಕೊಂಡು ಹೋಗುವಂತೆ ನೀರು ಹಾಯಿಸಿ ನೇಜಿ ಸಂಪೂರ್ಣ ಮುಳುಗುವಂತೆ ಮಾಡಿ ಈ ನೀರನ್ನು ಸುಮಾರು ಹದಿನೆರಡು ತಾಸು ಹೀಗೆಯೇ ನಿಲ್ಲಿಸಿ ತರುವಾಯ ಹೊರಕ್ಕೆ ಬಿಡಬೇಕು ಹೀಗೆ ಮಾಡುವುದರಿಂದ ಹೆಚ್ಚಿನ ಪ್ರಯೋಜನವು ದೊರೆಯುತ್ತದೆ,

(೨) ನೇಜಿಯು ಉದ್ದ ಬೆಳೆದು ನೀರನ್ನು ಹಾಯಿಸಿ ಮುಳುಗಿಸಲು ಸಾಧ್ಯವಾಗದ ಸಂದರ್ಭಗಳಲ್ಲಿ ಒಣಹುಲ್ಲಿನ ಹಗ್ಗಕ್ಕೆ ಬಟ್ಟೆಯನ್ನು ಸುತ್ತಿ ಸೀಮೆ ಎಣ್ಣೆಯಲ್ಲಿ ಮುಳುಗಿಸಿ ಹಗ್ಗದ ಎರಡು ತುದಿಗಳನ್ನು ಇಬ್ಬರು ಹಿಡಿದು ನೇಜಿಯ ತಲೆಯ ಮೇಲಿಂದ ಬಿಡದೆ ಎರಡು ಮೂರು ದಿನ ಮುಂಜಾನೆ ಎಳೆದರೆ ನೊಣದ ಹಾವಳಿ ಬಹಳ ಕಡಿಮೆಯಾಗುತ್ತದೆ.

(೩) ನೇಜಿಯು ದೊಡ್ಡದಾಗಿರುವಾಗ ನೊಣಗಳು ತಲೆದೋರಿದರೆ ಕೈ ಬಲೆಗಳನ್ನು ನೇಜಿಯ ಯಾ ಪೈರಿನ ಮೇಲೆ ಬೀಸಿ ನೊಣಗಳನ್ನು ಜಮೆಪಡಿಸಬಹುದು. ಹೀಗೆ ಚೀಲದಲ್ಲಿ ತುಂಬಿದ ನೊಣಗಳನ್ನು ಸ್ವಲ್ಪ ಚಿಮ್ನಿ ಎಣ್ಣೆ ಬೆರೆಸಿದ ನೀರಿನ ಪಾತ್ರೆಯಲ್ಲಿ ಹಾಕಿ ನಾಶಪಡಿಸಬಹುದು.

(೪) ನೊಣಗಳು ನೇಜಿಯಲ್ಲಿ ಕುಳಿತು ಮೊಟ್ಟೆ ಇಟ್ಟು ಅದರಿಂದ ಬಂದಿರುವ ಕ್ರಿಮಿಗಳು ನೇಜಿಯಲ್ಲಿ ಕಂಡುಬಂದಾಗ ನೇಜಿಯನ್ನು ಕಿತ್ತು ತಿರಿಗಿ ನೆಡುವ ಮುಂಚೆ, ಅದರ ತುದಿಯನ್ನು ಕತ್ತರಿಸಿ ಅವುಗಳನ್ನು ಕೆಸರಲ್ಲಿ ಹೂಳಬೇಕು. ಈ ಕ್ರಮವು ಬಹಳ ಉತ್ತಮವಾಗಿದೆ ಆದರೆ ಕತ್ತರಿಸಿದ ಭಾಗಗಳನ್ನು ಹುಣಿಗಳ ಮೇಲೆ ಅಂತೆಯೇ ಒಣಗಲಿಕ್ಕೆ ಬಿಡಬಾರದು ಹೀಗೆ ಮಾಡಿದರೆ ನೇಜಿಯ ತುದಿಯನ್ನು ಕತ್ತರಿಸಿದುದರಿಂದಾಗುವ ಪ್ರಯೋಜನವು ದೊರೆಯಲಾರದು ಏಕೆಂದರೆ ನೇಜಿಯ ತುದಿಯಲ್ಲಿರುವ ಸಣ್ಣ ಹುಳಗಳು ಬೆಳೆದು ... ನೊಣಗಳಾಗಿ ಬರುವುದರಿಂದ ಅವುಗಳನ್ನು ಸಂಪೂರ್ಣ ನಾಶಪಡಿಸಿದರೆ ಮುಂದೆ ನೊಣಗಳ ಸಂಖ್ಯೆಯನ್ನೇ ತಗ್ಗಿಸಿದಂತಾಗುತ್ತದೆ

ಬೊಂಬಾಯಿಯ ರಾಷ್ಟ್ರಸಭಾಧಿವೇಶನದ ಸನ್ನಾಹಗಳು.

ಕೊಂಗ್ರೆಸ್ ಅಧಿವೇಶನದ ಸಿದ್ಧತೆಗಳೆಲ್ಲ ನಡೆಯುತ್ತಿವೆ ವರ್ಲಿಯಲ್ಲಿ ಕೊಂಗ್ರೆಸ್ ನಗರ ನಿರ್ಮಾಣ ಕಾರ್ಯವು ಇದೇ ತಾರೀಕು ೨೫ರೊಳಗೆ ಮುಗಿಯಬಹುದಾಗಿ ಎಣಿಸಲಾಗಿದೆ

ಚುನಾಯಿತ ಅಧ್ಯಕ್ಷ ಬಾಬೂ ರಾಜೇಂದ್ರಪ್ರಸಾದರವರು ಸ್ಪೆಶ್ಯಲ್ ಬಂಡಿಯಲ್ಲಿ ಕುಳಿತು ೨೩ ರಂದು ಬರುವರು. ಕಲ್ಯಾಣ ಸ್ಟೇಷನ್ನಲ್ಲಿ ಅವರನ್ನು, ಸ್ವಾಗತಸಮಿತಿ ಅಧ್ಯಕ್ಷರಾದ ಶ್ರೀ| ಕೆ ಎಫ್ ನರಿಮಾನರು ಎದುರ್ಗೊಂಡು ಅವರನ್ನು ಕೂಡಿ ಬೊಂಬಾಯಿಗೆ ಬರುವರು ವಿಕ್ಟೋರಿಯಾ ಟರ್ಮಿನಸ್ ನಿಲ್ದಾಣದಲ್ಲಿ, ಅಲಂಕೃತ ಪ್ಲಾಟ್‌ಫೋರ್ಮ್ ಒಂದರಲ್ಲಿ ಬಂಡಿಯನ್ನು ನಿಲ್ಲಿಸಿ ಅಧ್ಯಕ್ಷರನ್ನು, ನಾಲ್ಕು ಕುದುರೆಗಳ ಒಂದು ಬಂಡಿಯಲ್ಲಿ ಕುಳ್ಳಿರಿಸಿ, ಪ್ರಾಮುಖ್ಯ ರಸ್ತೆಗಳಿಂದ ಮೆರೆವಣಿಗೆಯಾಗಿ ಕೊಂಗ್ರೆಸ್ ನಗರಕ್ಕೊಯ್ಯುವರು

ಈ ಬಂಡಿಯನ್ನು ಬೊಂಬಾಯಿಯ ಸಾಹುಕಾರರೊಬ್ಬರು,–ಗಾಂಧಿಜಿಯವರು ಬೊಂಬಾಯಿಯಿಂದ ಬಂದಿಳಿಯುತ್ತಲೇ ಅವರನ್ನು ಕುಳ್ಳಿರಿಸಬೇಕೆಂದು ಸಿದ್ಧಪಡಿಸಿದ್ದರು. ಆದರೆ, ಗಾಂಧಿಜಿಯವರು ಅದರಲ್ಲಿ ಕುಳಿತುಕೊಳ್ಳಲೊಪ್ಪಲಿಲ್ಲ.

FRESH CONSIGNMENT ARRIVED.

UNEQUAL QUALITY · EXCEPTIONAL PRICE.

A TIRE THAT SAVES YOU REPUTATION AND MONEY

The Canara Pubic Conveyance Co., Ltd.

MANGALORE.

ಜ್ಞಾನ

(ಪ್ರಬಂಧಮಾಲೆ)

ಲೇಖಕರು:—ಶ್ರೀ ಶಿವರಾಮ ಕಾರಂತ.

(ಕಳೆದ ಸಂಚಿಕೆಯಿಂದ ಮುಂದುವರಿದುದು)

ಕಲಾ.

ಮನೆಗೆ ಹೋದವನು ಚಿತ್ರ ಬರೆಯಲು, ತನ್ನ ನೆನಪನ್ನು ಮುಂದಿರಿಸಿಕೊಂಡು ತೊಡಗಿದನು. ಅವನಿಗೇಕೋ ತಾನೂ ಕಾಣಲು ಬಯಸಿದ, ಶರೀರದ ರೇಖೆಗಳ ಸೊಬಗಿಗೂ ಅವನಿಗೂ ನಡುವೆ ಅಡ್ಡ ಬಂದ ಒದ್ದೆ ಬಟ್ಟೆಯ ಮೇಲೆ ಬೇಸರವಾಯಿತು. ಅದಿಲ್ಲವೆಂದೇ ತಿಳಿದು ಚಿತ್ರವನ್ನು ಬರೆದು, ಧಾವಿಸಿ ಹೋಗಿ ಒಪ್ಪಿಸಿದನು. ಅವನು ಅದೊಂದೇ ಚಿತ್ರಕ್ಕೆ 8,000 ರೂಪಾಯಿಯನ್ನು ಕೊಟ್ಟನು! ಈಗ Bಯು ಅತ್ಯಂತ ಕಲಾವಿದನೆನಿಸಿದನು.

ಇನ್ನೊಂದು ವಿಚಾರ: ಕ್ರಮೇಣ Aಯಂತೆ, Bಯು Cಯ ಮೇಲೆ ಅನುರಕ್ತನಾದನು. ಮತ್ತೇನು—ಪ್ರಣಯ ಪತ್ರವನ್ನು ಬರೆದನು. ಅದು Cಯ ಧನ್ಯವಾದ ಸಹಿತವಾಗಿ ಅವನಿಗೆ ಮರಳಿ ಬಂದಿತು. ಅಂದಿನಿಂದ Cಯ ಮೇಲೆ ಅವನಿಗೆ ತುಂಬಾ ಮುನಿಸು. ಮೊದಲು ಅವಳನ್ನು ನೋಡಿದಾಗ ಅವಳೊಬ್ಬ ಸ್ವರ್ಗಸುಂದರಿಯೆಂದು ಕಂಡಿದ್ದರೆ, ಈಗ ತೀರ ಕುರೂಪಿಯಾಗಿ ಕಾಣಿಸಿಬಿಟ್ಟಳು. ಮತ್ತೇನು—ಹಾಗೆಯೇ ಚಿತ್ರ ಬರೆದನು. ಆದರೆ ಆ ಚಿತ್ರವನ್ನು A ಬಳಿಗೆ ಒಯ್ಯಲು ಅವನು ಇವನನ್ನು ಓಡಿಸಿಬಿಟ್ಟನು. ಇವನ ಆಶ್ರಯದಾತನನ್ನು ತಪ್ಪಿಸಿದನು.

ಒಂದು ದಿನ G ಎಂಬ ಒಬ್ಬ ಗೆಳೆಯನು Bಯ ಮನೆಗೆ ಬರುತ್ತಾನೆ. ಅವನೂ ಇವನಂತೆ ನಿರುದ್ಯೋಗಿಯು. ಬೇರೆ ಕೆಲಸವನ್ನು ಕಾಣದೆ Bಯ ದಪ್ತರವನ್ನು Gಯು ಬಿಡಿಸುತ್ತಾನೆ. ಆ ರಾಶಿಯಲ್ಲಿ Cಯ ಒನೆಯ ಚಿತ್ರವು ಸಿಗುವುದು. ಅದನ್ನು ಕಂಡು ನಕ್ಕುಬಿಡುವನು. ಇದ್ಯಾರ ಚಿತ್ರವೆಂದು Bಯನ್ನು ಕೇಳುವನು. ಎಲ್ಲೋ ಕಂಡಂತಿದೆ ಎನ್ನಲು Bಯು ಮಾತಾಡನು. ಅದು ಕೇವಲ—'ನನ್ನ ಸೃಷ್ಟಿಯು' ಎನ್ನುವನು. Gಯ ಬಲವಂತವು ಬೆಳೆಯಲು ಅದ Cಯ ಚಿತ್ರವೆಂದು ಹೇಳಿ, ತಾನು ಅದನ್ನು ಬರೆದ ಪ್ರಸಂಗವನ್ನು ತಿಳಿಸುವನು. Gಯು ಕೂಡಲೇ ಆ ಚಿತ್ರವನ್ನು ಕೊಳ್ಳುವನು. ಏಕೆ ಬಲ್ಲಿರಾ? ಅವನು Cಯಿಂದ ತಿರಸ್ಕರಿಸಲ್ಪಟ್ಟ ಪ್ರಣಯಿಯು. ಈಗಲೂ Bಯು ಕಲಾವಿದನೆನಿಸುವನು.

ಈಗ ಬರೇ ಚಿತ್ರದ ವಿಚಾರ ಒಂದನ್ನು ಹೇಳಿದೆವು. Bಯು ತನ್ನ ಸ್ಫೂರ್ತಿಯನ್ನು ಕಾಗದಕ್ಕೆ ಕುಚ್ಚಿನಿಂದ ಅಂಟಿಸುವ ಬದಲು, ಕಲ್ಲಿನಲ್ಲೋ, ಆಪೆ ಮಣ್ಣಿನಲ್ಲೋ ಕೆತ್ತುವನೆಂದು ತಿಳಿಯಿರಿ; ಆಗ ಅವನು ಶಿಲ್ಪಕಲಾವಿದನೆನಿಸುವನು. ಇವೆರಡೂ ಬಾರದೆ ಅವನು ಲೇಖನಿಯನ್ನು ಹಿಡಿದು ಬರೆದರೆ ಕವಿಯಾಗುವನು. Aಯ ಪ್ರಣಯದಿಂದ ತೊಡಗಿ, Cಯು ಮಳೆಯಲ್ಲಿ ತೊಯ್ದ ವಿಷಯವನ್ನೂ Gಯನ್ನು ತಿರಸ್ಕರಿಸಿದ ವಿಷಯವನ್ನೂ ಸೇರಿಸಿ Aಗೆ ಆಕೆಯೊಡನೆ ಲಗ್ನವಾದ ವಿಷಯದಲ್ಲಿ ಮುಗಿಸಿ ಈ ಕಥೆಯನ್ನು ಬರೆದರೆ ಆಗ ಅವನು ನಾಟಕಕಾರನಾಗುವನು: ಇಂಥ ನಾಟಕವು ಕಾಮಿಡಿ ನಾಟಕವೆಂಬ ಜಾತಿಗೆ ಸೇರುವುದು. ಹೀಗೆ ಮಾಡದೆ, Cಯನ್ನು Aಯೊಡನೆ ಲಗ್ನಮಾಡಿಸುವ ಬದಲು, ಆ ಮನಸ್ಸನ್ನು ಮಾತ್ರವೇ ತೋರಿ, ತಾನು (Bಯು) ಅವಳ ತಿರಸ್ಕೃತ ಪ್ರಣಯಕ್ಕಾಗಿ ಆತ್ಮಹತ್ಯೆ ಮಾಡಿಕೊಂಡಂತೆಯೂ; ಅದರಿಂದಾಗಿ Cಗೆ ಅದೇ ಉದ್ಯಾನದ ಕಾರಂಜಿಯ ಮೂತಿಗೆ ತನ್ನ ಮೂಗನ್ನು ಸಿಕ್ಕಿಸಿಕೊಂಡು ಆತ್ಮಹತ್ಯೆಯನ್ನು ಮಾಡಿಕೊಂಡಳೆಂದು ಬರೆದರೆ ಆಗ ಅದು 'ಟ್ರೆಜಡಿ' ನಾಟಕವಾಗುವುದು. ಇವೆರಡು ಶ್ರೇಷ್ಠ ತರದ ನಾಟಕಗಳು.

ಈ ವಿಷಯವನ್ನೇ ಒಡೆದು—ಅಲ್ಲೊಂದು ಇಲ್ಲೊಂದು ಎಂದರೆ, Cಯು ಉದ್ಯಾನಕ್ಕೆ ಬಂದದ್ದು; Cಯ ಸೀರೆಯು ಗುಲಾಬಿ ಗಿಡದ J ಎಂಬ ಮುಳ್ಳಿಗೆ ಸಿಕ್ಕಿದುದು; Cಯು ಮಳೆಯಲ್ಲಿ ನೆನೆದುದು; Cಯ ನೀಲ ಕುಪ್ಪಸ, Cಯ ಬಾಬಡ್ ಹೆಯರ್, ಇವನ್ನು ಬೇರೆ ಬೇರೆ ವಸ್ತುಗಳಿಗೆ ಹೋಲಿಸಿ ಬರೆದರೆ, ಅವೆಲ್ಲ ತುಂಡುಗಳು ಕವಿತೆಗಳಾಗುವುವು.

ಉದಾ:—Cಯ ನೀಲ ಕುಪ್ಪಸವನ್ನು ಆಕಾಶಕ್ಕೂ, ಅವಳ ಕಣ್ಣನ್ನು ತಾರೆಗಳಿಗೂ, ಮುಖವನ್ನು ಚಂದ್ರನಿಗೂ ಹೋಲಿಸುವನು.

Cಯ ಬಾಬಡ್ ತಲೆಗೂದಲನ್ನು ಸೂರ್ಯಬಿಂಬವನ್ನು ಮುಚ್ಚುವ ಕತ್ತಲಿನ ಡಬ್ಬಿಯ ಮುಚ್ಚಳಕ್ಕೂ ಹೋಲಿಸುವನು—ಎಂದು ತಿಳಿಯಿರಿ.

ಇವೆಲ್ಲಕ್ಕಿಂತಲೂ Cಯು ಆ ದಿನ ಮಳೆಯಲ್ಲಿ ನೆನೆದುದು— ಕವಿತಾಸ್ಫೂರ್ತಿಗೆ ಇನ್ನೂ ಹೆಚ್ಚಿನ ವಿಷಯವು. ಅದನ್ನು ಬರೆಯಲು ಅತಿ ಹೆಚ್ಚಿನ ಚಮತ್ಕಾರವು ಬೇಕು.

ಅವಳು ಓಡಿದುದನ್ನು ವರ್ಣಿಸುವನೆಂದು ತಿಳಿಯಿರಿ. ಹಿಂದೆ ನೋಡುವಾಗ ಅವಳ ಬಿಡಿಸಿದ ತಲೆಗೂದಲೊಂದೇ ಕಂಡು, ಸಿಡಿಲಿನ ಬೆದರಿಕೆಗೆ ವಕ್ರವಾಗಿ ಬಳಕುತ್ತ ಹೆಡೆಬಿಡಿಸಿ ಓಡುವ ನಾಗರಹಾವಿಗೆ ಹೋಲಿಸಬೇಕು (ಕಡಿಮೆ ಪಕ್ಷಕ್ಕೆ.)

ತಲೆಯ ಮೇಲೆ ಮಳೆನೀರು ಬಿದ್ದು ಸಿಡಿದು ಹಾರುವಾಗ, ಅದರ ಮೇಲೆ ಮಿಂಚು ಹೊಳೆದು ನಾಗರತ್ನದಂತೆ ಕಾಣುತ್ತಿತ್ತು—ಎನ್ನಬೇಕು.

ಆಕೆಯು, ಮರದ ಛಾಯೆಯನ್ನು ಸೇರಿಕೊಂಡು ನಿಂತಿರಲು ಆಕೆಯ ಬಟ್ಟೆಯು ಅರ್ಧ ದೃಶ್ಯಾವಸ್ಥೆಯಲ್ಲಿರಲು ಆಕೆಯ ಶರೀರವು ಗಾಳಿಗೆ ಹಾರುವ ಹಾವಿನ ಪೊರೆಯಂತಿತ್ತು ಎಂದು ಮುಂತಾಗಿ ಕವಿತೆಗೆ ಅವಶ್ಯವಾದ ಪ್ರಾಸ ಇತ್ಯಾದಿ ರಂಗುಗಳಿಂದ ಬಿಡಿಸಿದರೆ ಆಗ ಅದು ಅಸಭ್ಯಕ ಕವಿತೆಯಾವುದು.

ಈ ಒಂದೇ ವಿಷಯವನ್ನು—ಬರೇ ಚಂದ್ರಕಾಂತ ಶಿಲೆಯಲ್ಲಿ ಕೆತ್ತಿ ಕೊಟ್ಟರೆ—ಮಹಾರಾಜರುಗಳು Dಯ ಆ ವಿಗ್ರಹವನ್ನು ತಮ್ಮ ಸ್ನಾನದ ಮನೆಗಳಲ್ಲಿ ನಿಲ್ಲಿಸುವರು. Bಗೆ ಇದರಿಂದ ನೂರಿನ್ನೂರು ಬಹುಮಾನ ಪದಕಗಳಾದರೂ ಸಿಗುವುವು.

ಕಲಾವಿದನು ತನ್ನ ಖುಶಿ ಬಂದಂತೆ ಬರೆಯಬಹುದೇ? ಎಂಬುದೊಂದು ಪ್ರಶ್ನೆ. ಈಗ ಅಂಥವರೇ ಬಹಳವಾಗಿದ್ದಾರೆ. ಕಲೆಯನ್ನು ನಿರ್ಣಯಿಸಲು ಬಹುಮತವೇ ಮುಖ್ಯ. ಜನರಿಗೆ ಒಪ್ಪದ್ದು ಕಲೆಯಾಗಲಾರದೆಂದು ಪ್ರಾಜ್ಞರು ಅನ್ನುತ್ತಾರೆ. ಇಲ್ಲವಾದರೆ ಸಂಬಂಧಿಸಿದವರು ಅಂದರೆ A, C, G—ಇಂಥವರಲ್ಲಿ ಯಾರಾದರೂ ಒಬ್ಬರು ಒಪ್ಪಬೇಕು. ಆಗ ಸಂಬಂಧ ಪಟ್ಟವರಿಂದಲೇ ಶಿಫಾರಸು ದೊರೆತರೆ ಬಹುಜನರ ಒಪ್ಪುವಿಕೆಯು ಅವಶ್ಯವಿಲ್ಲ. ಕಲಾವಿದನು ಸದ್ಯದ ಪ್ರಸಂಗದಲ್ಲಿ—Bಯು ಕೆಲವು ವಿಚಾರದಲ್ಲಿ ಎಚ್ಚರನಾಗಿರಬೇಕು.

ಕಳೆದ ವಾರ ಸೇಲಮಿನಲ್ಲಿ ಆದ ಬಸ್ ಅಪಘಡದ ಭಾವಚಿತ್ರ.

ಆಕೆಯ ಮೈಬಣ್ಣ, ಸೀರೆಯ ಬಣ್ಣ, ಕಣ್ಣು, ಮೂಗು, ತುಟಿ ಇವುಗಳ ಸಂಖ್ಯೆಯನ್ನು ಬರೆಯುವ ನೋಡಲು ಕೆಟ್ಟಾಗಿ ಎಣಿಸಬಾರದು. ಹಾಗೆ ಬರೆಯಲೂ ಬಾರದು. ಅವೇ ಬಣ್ಣ, ಅವೇ ಸಂಖ್ಯೆಗಳು ಚಿತ್ರದಲ್ಲಿ ಇರಲೇ ಬೇಕು.

ಮೈಬಣ್ಣವೆನ್ನುವ

ಯೋಗ್ಯ ಚಿತ್ರಗಾರನು ನೇರಾಗಿ Cಯ ಬಳಿಗೆ ಹೋಗಿ ಅವಳನ್ನು ಪರಿಶೀಲಿಸುವನು. ತನಗೆ ಊಹೆಯಿಂದ ಅದೇ ರೀತಿಯಲ್ಲಿ ವರ್ಣ ಮಿಶ್ರಮಾಡಲು ಬಾರದಿದ್ದರೆ, ಆಕೆಯ ಮೈಮೇಲೆ ಬಣ್ಣವನ್ನು ಸವರಿ-ಮೈಯ್ಯಾವುದು; ಬಣ್ಣವಾವುದು ಎಂದು ತಿಳಿಯದೆ ಹೋದ ಬಳಿಕ ಹೆಚ್ಚಿದ ಬಣ್ಣವನ್ನು ಕೆರೆದು ಕಾಗದದ ಮೇಲೆ ಬಳಿಯಬೇಕು.

ಇನ್ನು Cಯು ಮಳೆಗೆ ತುತ್ತಾದ ಚಿತ್ರದ ವಿಷಯ ಹೇಳುವ. ಇಂಥ ಚಿತ್ರವನ್ನು ಬಿಡಿಸುವಾಗಲಂತು ಇನ್ನಷ್ಟು ಎಚ್ಚರ ಬೇಕು. ಮೈಯ ಅಳತೆ ಪ್ರಮಾಣಗಳು ಮಿಲ್ಲಿಮೀಟರಿಗೂ ವ್ಯತ್ಯಾಸವಾಗಬಾರದು. ಬಟ್ಟೆ ಬರೆಗಳಿಂದಾಗಿ ಶರೀರದ ನೈಸರ್ಗಿಕ ಬೆಡಗು ಇಷ್ಟಿಷ್ಟೂ ಕೆಡಬಾರದು.

ಈ ಕೆಲಸವು ಕವಿಯ ಪಾಲಿಗೆ ಇನ್ನೂ ಕಷ್ಟವಾಗುವುದು. ಅವನು ತುಟಿಯನ್ನಾಗಲಿ, ಕಣ್ಣನ್ನಾಗಲಿ ಇದ್ದಂತೆಯೇ ಬಣ್ಣಿಸಲು ಬರುವುದಿಲ್ಲ. ಹಾಗೆ ಮಾಡುವುದಾದರೆ ಆಗ ತುಟಿಯನ್ನು ತುಟಿಗೂ, ಕಣ್ಣನ್ನು ಕಣ್ಣಿಗೂ ಹೋಲಿಸಬೇಕು. ಇದು ಕಾವ್ಯಧರ್ಮಕ್ಕೆ ವಿರುದ್ಧವಾಗುವುದು. ಅದುದರಿಂದ ಕಣ್ಣನ್ನು ಕನಿಷ್ಠ ಒಂದು ಚಂದ್ರನಿಗೂ (ಪೂರ್ಣಿಮಾ), ಇಲ್ಲವೆ ಸೂರ್ಯನಿಗೂ, ಇಲ್ಲವೆ ಯಾವುದಾದರೂ ನಕ್ಷತ್ರಕ್ಕೂ ತುಟಿಯನ್ನು ನವನೀತಕ್ಕೂ, ನವಕುಸುಮಕ್ಕೂ ಅದರಂತಿರುವ ಇನ್ನಾವುದಕ್ಕೂ, ಹೋಲಿಸಬೇಕು. ಹೋಲಿಕೆಗೆ ತರುವ ವಸ್ತುವಿನ ಕಿಮ್ಮತ್ತು, ಮೂಲ ವಸ್ತುವಿಗಿಂತ ಎಂದೂ ಕಡಿಮೆಯಿರಕೂಡದು.

ಈ ಎಲ್ಲಾ ವಿಚಾರಗಳಿಂದ ಕಲೆಯ ವಿಷಯದಲ್ಲಿ ಸ್ಫೂರ್ತಿ, ಪ್ರತಿಭೆ, ಕಲಾವಂತ, ರಸಿಕ, ಕಲಾಪ್ರೇಮಿ—+ ಇವರ ಧರ್ಮಗಳನ್ನು ಹೇಳಿದಹಾಯಿತು.

ಮುಂದಿನ ಅಧ್ಯಾಯದಲ್ಲಿ ಈ ನಿಯಮಗಳನ್ನೆಲ್ಲಾ ಮೀರಿ, ತಾವೇ ಕಲಾವಿದರು ಎಂದು ಹುಡುಕುತ್ತಿರುವ ಕೆಲವು ಜನರ ವಿಚಾರ ಹೇಳುತ್ತೇವೆ. ಈ ಜನರು—ನಾಟಕ, ನರ್ತನ, ವರ್ಣಕಲೆ, ಶಿಲಾಕಲೆ,—ಇವೆಲ್ಲಕ್ಕೂ ಕೈಹಚ್ಚಿ ಪೀಕಲಾಟವನ್ನು ತೊಡಗಿರುವರು. ಇಂಥವರಿಂದ ದೂರಾಗಿರಲು, ಅವರ ಸಂಗತಿಯನ್ನು ತಿಳಿಯಲು ಅವಶ್ಯವು.

+ರಸಿಕನಿಗೂ ಕಲಾಪ್ರೇಮಿಗೂ ಭೇದವಿದೆ. ರಸಿಕನು ಕಲೆಯ ವಸ್ತುವನ್ನು ಹಣವನ್ನು ಕೊಟ್ಟು ಕೊಂಡುಕೊಳ್ಳುವನು, ಕಲಾಪ್ರೇಮಿಯು ಅಂಥವನಲ್ಲ. ಆದರೂ ಅದರ ಉಪಯೋಗ ಹೊಂದುವವನು.

ಮೈಸೂರು ದಸರೆ.

ಅಕ್ಟೋಬರ ತಾ. 9ರಲ್ಲಿ ಆರಂಭವಾದ ದಸರಾ ಉತ್ಸವವು ಮೊನ್ನೆ ಅಂತ್ಯಗೊಂಡಿತು. ಈ ವರ್ಷದ ಪ್ರದರ್ಶನವು ವಿಶೇಷ ರೀತಿಯಲ್ಲಿ ನಡೆದಿದೆ. ಕಾರ್ಯದರ್ಶಿಗಳಾದ ಶ್ರೀ ಎಸ್. ಜಿ. ಶಾಸ್ತ್ರಿಗಳವರ ದಕ್ಷತೆಯಿಂದ ಪ್ರದರ್ಶನ ರಂಗವು ಅಂದವಾಗಿಯೂ ಆಕರ್ಷಕವಾಗಿಯೂ ಅಲಂಕೃತವಾಗಿದೆ. ಈ ವರ್ಷ ಮಳೆಯ ಅಭಾವದಿಂದ ಮೈಸೂರಿನಲ್ಲಿ ಎರಡನೆ ಬೆಳಿಗ್ಗೆ ಆತಂಕವಾಯಿತಲ್ಲದೆ, ದಸರಾ ಸಮಯದಲ್ಲಿ ಪ್ಲೇಗ್ ಜಾಡ್ಯವು ಮೈಸೂರು ನಗರದಲ್ಲಿ ತಲೆದೋರಿದುದರಿಂದ ಪ್ರೇಕ್ಷಕರ ಸಂಖ್ಯೆಯು ಕೊಂಚ ಕಡಿಮೆಯಾಗುವುದಾಯಿತು. ಸ್ಯಾನಿಟರಿ ಇಲಾಖೆಯವರ ಕಾರ್ಯಕ್ಷಮತೆಯಿಂದ ಅದು ಉಲ್ಬಣವಾಗದಂತೆಯೂ ಆಯಿತು. ಮೇಲಾಗಿ, ಕೊಂಚ ಮಳೆಯೂ ಆರಂಭವಾದುದು ಅದಕ್ಕೆ ಸಹಕಾರಿಯಾಯಿತು.

ಸ್ವಾಮಿ ಜ್ಞಾನೇಶ್ವರಾನಂದರವರ ಉಪದೇಶ.

'ಇಂಡಿಯವು ಅಮೇರಿಕದವರಿಂದ ಕಲಿತುಕೊಳ್ಳಬೇಕಾದುದೆಷ್ಟೋ ಇದೆ. ಕೇವಲ ತತ್ವಜ್ಞಾನ ಬೋಧೆಯು ಪ್ರಯೋಜನವಿಲ್ಲ. ಪ್ರತಿಯೊಬ್ಬನೂ ಸತ್ಕರ್ಮನಿರತನಾಗಬೇಕು. 'ಕರ್ಮಯೋಗಿ'ಯಾಗಬೇಕು. ಮೈ ಬಗ್ಗಿ ಕೆಲಸ ಮಾಡುವುದನ್ನೂ, ಆಲಸ್ಯವಿಲ್ಲದೆ ದುಡಿಯುವುದನ್ನೂ ಕಲಿಯುತ್ತಿರಬೇಕು. ಭಾರತೀಯರಲ್ಲಿ ಚೇತನವು ತಲೆದೋರಬೇಕು; ವಿಚಕ್ಷಣತೆಗಾಗಿ ಸಾಧಿಸಬೇಕು; ಸತ್ಕಾರ್ಯದ ಯಶಸ್ಸಿಗಾಗಿ ಕಾಂಕ್ಷೆಯಿರಬೇಕು' ಎಂಬುದಾಗಿ ಮೈಸೂರಿನ ಪುರಭವನದಲ್ಲಿ ಸ್ವಾಮಿ ಜ್ಞಾನೇಶ್ವರಾನಂದರವರು, ಭಾಷಣಮಾಡಿದರು.

ಈ ವರ್ಷದ ಐ. ಸಿ. ಎಸ್.ಗಳು.

ಈ ವರ್ಷ ಐ. ಸಿ. ಎಸ್. ಪರೀಕ್ಷೆಯಲ್ಲಿ ಉತ್ತೀರ್ಣರಾದವರಲ್ಲಿ, ೨೬ ಮಂದಿಗೆ ಇಂಡಿಯನ್ ಸಿವಿಲ್ ಸರ್ವಿಸಿನಲ್ಲಿ ನೇಮಕಗಳಾಗುವುವೆಂದು ಸುದ್ದಿಯಿದೆ. ಹದಿಮೂರು ಯುರೋಪಿಯನರೂ, ೧೦ ಮಂದಿ ಹಿಂದೂಗಳೂ, ಒಬ್ಬ ಮಹಮ್ಮದೀಯನೂ, ಒಬ್ಬ ಪಾರ್ಸಿಯೂ, ಒಬ್ಬ ಆಂಗ್ಲೋ ಇಂಡಿಯಾನನೂ ಕೆಲಸ ಪಡೆಯುವರು.

ಬಂದೂಕಿಗೆ ಬಲಿಕೊಡುವರು!

ರಷ್ಯಾ ಸರಕಾರಕ್ಕೆದುರಾಗಿ ರಹಸ್ಯವಾಗಿ ಪ್ರಚಾರಕಾರ್ಯ ಮಾಡುತ್ತಿದ್ದ ಮೂವರು ರಷ್ಯಾ ಕೆಲಸಗಾರರನ್ನು ಅಲ್ಲಿ ಬಂದೂಕಿಗೆ ಬಲಿಕೊಡುವರು. ಮತ್ತೆ ಮೂವರಿಗೆ ಸಜೆ ವಿಧಿಸಲಾಗಿದೆ.

ಗಾಂಧೀ ಜಯಂತಿ.

ಈ ಸಪ್ಟೆಂಬರ ೩೦ನೇ ತಾರೀಖು ದೇಶದ ನಾನಾ ನಗರಗಳಲ್ಲಿ ಉತ್ಸಾಹಪೂರ್ವಕವಾಗಿ ಆಚರಿಸಲಾಯಿತು. ಪರದಿಗಳಿವೆ. ಮುಖ್ಯವಾಗಿ ಸ್ವದೇಶೀ ಪ್ರಚಾರದ ಬಗ್ಗೆ ಭಾಷಣ, ಖಾದಿ ಮಾರಾಟ ಇವೇ ಮುಖ್ಯ ಕಾರ್ಯಗಳು.

ಖಾನ್ ಅಬ್ದುಲ್ ಗಫರ್ ಖಾನರವರು.

ಇವರು ಇನ್ನೂ ಬಂಗಾಳ ಪ್ರಾಂತ್ಯದಲ್ಲೇ ಇರುವರು. ಹಳ್ಳಿಗಳಲ್ಲಿ ಸಂಚರಿಸುತ್ತಿದ್ದಾರೆ. ಕಾಂಗ್ರೆಸ್ ಅಧಿವೇಶನಕ್ಕೆ ಸರಿಯಾಗಿ ಬೊಂಬಾಯಿಗೆ ತೆರಳುವರು

ಮಿ। ಬಾಲ್ಡ್‌ವಿನ್ ಸಾಹೇಬರು
ಹಿಂದೀಯರಿಗೆ ಸ್ವೇಚ್ಛಾಪತ್ರ ಸುಧಾರಣೆಗಳನ್ನು ಕೊಡಕೂಡದೆಂದು ಇಂಗ್ಲಾಂಡಿನಲ್ಲಿ ಡ್ಯಾಹಾರ್ಡರು ಇವರನ್ನು ಎಚ್ಚರಿಸುತ್ತಿರುವರು

ಮೀರಾ ಬಾಯಿಯವರು

ಮೀರಾಬಾಯಿ (ಮಿಸ್ ಸ್ಲೇಡ್) ಇವರು ನ್ಯೂಯಾರ್ಕ ನಗರಕ್ಕೆ ತಲುಪಿದರು. ಅಲ್ಲಿಯ ರೆವೆರೆಂಡ್ ಜೆ. ಎಲ್. ಹೋಮ್ಸ್ ಎಂಬವರ ಅತಿಥಿಯಾಗಿರುವರು. ಇವರು ಎರಡು ವಾರಗಳಷ್ಟು ಕಾಲ ಅಮೇರಿಕದಲ್ಲಿ ಸಂಚರಿಸಿ ಹಿಂದೂದೇಶದ ರಾಜಕೀಯ ಪರಿಸ್ಥಿತಿ ಹಾಗೂ ಗಾಂಧಿಜಿಯವರ ಉಪದೇಶಗಳು—ಈ ಕುರಿತು ಅಲ್ಲಿ ಭಾಷಣ ಮಾಡುವರು. ಅಲ್ಲಿಯ ಪತ್ರಿಕಾ ವಾರ್ತಾದಾಯಕರು ಭೇಟಿಯಾದಾಗ—ಹಿಂದೂದೇಶದಲ್ಲಿ ಅಸ್ಪೃಶ್ಯತಾ ನಿವಾರಣಾ ಚಳವಳವು ಭರದಿಂದ ಸಾಗುತ್ತಿದೆಯೆಂದೂ ಶೀಘ್ರ ಪ್ರಗತಿಯಾಗುತ್ತಿದೆಯೆಂದೂ ತಿಳಿಸಿರುವರು

ಎಸೆಂಬ್ಲಿ ಚುನಾವಣೆಗೆ ಅರ್ಹತೆ

ಒಂದು ವರ್ಷಕ್ಕಿಂತ ಹೆಚ್ಚು ಅವಧಿಯ ಸಜೆಯವರು ಎಸೆಂಬ್ಲಿ ಚುನಾವಣೆಗೆ ನಿಲ್ಲಲರ್ಹರಲ್ಲವೆಂದು ಸರಕಾರವು ಪ್ರಕಟಿಸಿದೆ. ಇದರಿಂದ ಕಾಂಗ್ರೆಸ್ ಪಕ್ಷದ ಅನೇಕರಿಗೆ ತೊಡಕಾಗಿರುವುದು

ರೈಲ್ವೇ ಅಪಘಾತ

ರಾಯಚೂರು ಮದರಾಸು ಲೈನಿನಲ್ಲಿ ಪುತ್ತೂರು ಬಳಿಯಲ್ಲಿ ಕಂಚಿಪಟ್ಟಿ ರೈಲ್ವೇ ಅಪಘಾತವುಂಟಾಗಿ, ಐದು ಪಾರ್ಸೆಲು ಬಂಡಿಗಳು ಮಗುಚಿದಿವೆ. ಇಬ್ಬರಿಗೆ ಜಖಂ ಉಂಟಾಗಿದೆ

ಹಿಂದೂದೇಶಕ್ಕೆ ಅಮೇರಿಕದ ಕುದುರೆಗಳು

ಹಿಂದೂದೇಶದ ಸೈನ್ಯಕ್ಕೆ ಅಮೇರಿಕದ ಕಾನ್ಸಾಸ್ ಪ್ರಾಂತ್ಯದಿಂದ ಕುದುರೆಗಳನ್ನು ಕೊಂಡುಕೊಳ್ಳುವರಂತೆ. ಜಪಾನಿನವರೂ ಹಿಂದೊಮ್ಮೆ ಕೊಂಡುಕೊಂಡಿರುವರು. ಅಶ್ವ ವ್ಯಾಪಾರದಲ್ಲಿ ಅಲ್ಲಿಯ ಕಾನ್ಸಾಸ್ ಪ್ರಾಂತ್ಯವು ಹೆಸರುಗೊಂಡಿದೆ.

ಮದರಾಸು ಗವರ್ನರರಿಗೆ ಸನದು

ಮದರಾಸಿಗೆ ಹೊಸ ಗವರ್ನರರಾಗಿ ಬರುವ ಲೋರ್ಡ್ ಎರ್ಸ್ಕಿನರವರಿಗೆ ಸಾರ್ವಭೌಮರು ಜಿ. ಸಿ. ಐ. ಇ. ಸನದನ್ನು ದಯಪಾಲಿಸಿರುವರು.

ಅರ್ಚ್ ಬಿಶೋಪರ ಮರಣ!

ಲಾಟ್ವಿಯದ ಧರ್ಮಗುರು ಅರ್ಚ್ ಬಿಶಪರ ಮನೆಗೆ ಬೆಂಕಿ! ಬಿಶಪರು ಸುಟ್ಟುಬಿದ್ದು ಸತ್ತು ಹೋದರು! ಆದರೆ, ತಲೆಯ ಮೇಲೆ ಗಾಯವಿದೆ. ಕೊಲೆಯೋ ಬೆಂಕಿಯ ಮರಣವೋ ಸಂದೇಹ. ಬೆಂಕಿಯ ಮುಂಚಿತವಾಗಿ ಅವರ ಮನೆಯಿಂದ ಅನೇಕ ಕಾಗದಪತ್ರಗಳು ಕಳವಾಗಿದ್ದುವು.

ಶ್ರೀಮತಿ ಕಮಲಾದೇವಿಯವರು.

ಇವರು ಬೊಂಬಾಯಿಗೆ ಇದೇ ತಾ ೧೦ಕ್ಕೆ ತಲುಪಿ, ಮಿಸ್ ಸೋಫಿಯಾ ಸೋಮ್ಜಿ, ನರಿಮಾನ್, ಎಸ್ ಎ ಬ್ರೈಲ್ವಿ, ಪುರುಷೋತ್ತಮದಾಸ್ ತ್ರಿಕಮ್‌ದಾಸ್ ಮೊದಲಾದವರಿಂದ ಸ್ವಾಗತೀಕರಿಸಲ್ಪಟ್ಟರು.

ಶಿವಮೊಗ್ಗ ದಂಗೆಯ ಅಪೀಲಿನ ಫಲಿತಾಂಶ

ಶಿವಮೊಗ್ಗದಲ್ಲಿ ಕಳೆದ ವರ್ಷ ನಡೆದ ದಂಗೆಯಲ್ಲಿ ಶಿಕ್ಷಿಸಲ್ಪಟ್ಟ ಆರು ಮಂದಿ ಮಹಾಶಯರು ಮೈಸೂರು ಹೈಕೋರ್ಟಿಗೆ ಮಾಡಿದ ಅಪೀಲಿನ ತೀರ್ಪು ಇದೇ ತಾ ೫ರಲ್ಲಿ ಕೊಡಲ್ಪಟ್ಟಿತು. ಅಪಾದಿತರಿಗೆ ಬಿಡುಗಡೆಯಾಯಿತು. ಶಿವಮೊಗ್ಗೆಯ ಪಬ್ಲಿಕ್ ಪ್ರಾಸಿಕ್ಯೂಟರರಾದ ಶ್ರೀ ಟಿ ಕೃಷ್ಣರಾಯರು ಕೇವ್ರೊಂದು ಅಧಿಕಾರಿಗಳ ವಿಷಯವಾಗಿ ಆಡಿದುದನ್ನು ಚೀಫ್ ಜಸ್ಟೀಸರು ತೀಕ್ಷ್ಣವಾಗಿ ಖಂಡಿಸಿರುವರು. ಪಬ್ಲಿಕ್ ಪ್ರಾಸಿಕ್ಯೂಟರರು, ತಾನಾಡಿದ ಅವಾಚ್ಯ ಶಬ್ದಗಳ ಬಗ್ಗೆ ಪಶ್ಚಾತ್ತಾಪ ಸೂಚಿಸಿರುವರು

ಮೋಟಾರು ವಾಹನಗಳ ನಿಬಂಧನೆಗಳು

ಅವುಗಳಲ್ಲಿ ತಿದ್ದುಪಡಿಗಳನ್ನು ಸೂಚಿಸುವ ಬಗ್ಗೆ ಸರಕಾರದವರು ಒಂದು ಕಮಿಟಿಯನ್ನು ನೇಮಕಮಾಡುವರೆಂದು ತಿಳಿದುಬಂದಿದೆ

ಜರ್ಮನಿಯ ಲೋಕವಿಖ್ಯಾತ ಪ್ರೊಫೆಸರ್ ಐನ್‌ಸ್ಟೀನ್‌ರವರು

ದ್ವಿತೀಯ ಕರ್ನಾಟಕ ಜ್ಯೋತಿಷಿಕ ಸಮ್ಮೇಲನ

ಈ ಸಮಾರಂಭವನ್ನು ಮೈಸೂರಿನ ಪುರಭವನದಲ್ಲಿ ಯುವರಾಜರು ತೆರೆದರು. ಸಮ್ಮೇಳನಕ್ಕೆ ದಿವಾನರಾದ ಸರ್ ಮಿರ್ಜಾ ಇಸ್ಮಾಯಿಲ್, ನಂಜುಂಡರಾಜ ಅರಸು, ಡಾ। ಇ ಪಿ ಮೆಟ್‌ಕಾಫ್, ಪ್ರೊ। ವಾಡಿಯಾ ಮೊದಲಾದ ಪ್ರಮುಖರೂ ದಯಮಾಡಿಸಿದ್ದರು. ಸ್ವಾಗತ ಸಮಿತಿಯ ಅಧ್ಯಕ್ಷರಾದ ರಾಜ ಕವಿಭೂಷಣ ಕೃಷ್ಣರಾಜ ಅರಸರವರು ಜ್ಯೋತಿಷಿಕ ಶೋಧನೆಗಳ ಕಡೆಗೆ ಕನ್ನಡಿಗರ ಅಲಕ್ಷ್ಯವಿರುವುದಕ್ಕಾಗಿ ವಿಷಾದಿಸಿ, ಮರೆತು ಹೋಗುತ್ತಿರುವ ಈ ಶಾಸ್ತ್ರದ ಪುನರುದ್ಧಾರಕ್ಕಾಗಿ ವಿನಂತಿಸಿದರು. ಸಮ್ಮೇಲನವು ಚರ್ಚೆಯಲ್ಲಿ ಮುಗಿಯದೆ ರಚನೆಗಳು ಕಾರ್ಯರೂಪದಲ್ಲಿ ಫಲಿಸುವುದನ್ನು ತಾನು ನೋಡಬಯಸುತ್ತೇನೆಂದು ಯುವರಾಜರ ಭಾಷಣವಾಯಿತು. ಅಧ್ಯಕ್ಷರಾದ ಸರ್ ಪಿ ರಮೇಶನ್‌ರವರು ಅಮೂಲ್ಯ ಸೂಚನೆಗಳನ್ನಿತ್ತು ಸುದೀರ್ಘವಾದ ಭಾಷಣ ಮಾಡಿದ ನಂತರ ಧನ್ಯವಾದ ಸಮರ್ಪಣೆಯಾಗಿ ಸಮ್ಮೇಲನವು ಕೊನೆಗೊಂಡಿತು

ಮಿ। ಪ್ವೊನ್ಕಾರರ ಮರಣ!

ಫ್ರಾನ್ಸಿನ ಮಾಜಿ ಅಧ್ಯಕ್ಷರಾಗಿದ್ದ ಮಿ। ಪ್ವೊನ್ಕಾರರು ಇದೇ ತಾ. ೧೫ರಲ್ಲಿ ಮುಂಜಾನೆ ಪ್ಯಾರಿಸ್ ನಗರದಲ್ಲಿ ದೈವಾಧೀನರಾದರೆಂಬ ವಾರ್ತೆ ಬಂದಿದೆ. ಇವರು ಅಪ್ರತಿಮ ದೇಶಭಕ್ತರೆಂದು ಹೆಸರಾದವರು. ಜರ್ಮನಿಯ ಬದ್ಧದ್ವೇಷಿಗಳು.

ಜರ್ಮನಿಯ ಸೌಕರ್ಯ ರಚನೆ.

ಜರ್ಮನಿಯಾ ಸರಕಾರವು 'ಸೌಕರ್ಯ ನಿಲ್ದಾಣಗಳ' ನಿರ್ಮಾಣ ಕಾರ್ಯವನ್ನು ಕೈಕೊಳ್ಳುವುದು. ಮೂರು ನಿಲ್ದಾಣಗಳಾಗುವುವೆಂದು ತಿಳಿದುಬಂದಿದೆ. ಯುದ್ಧ ವಿಮಾನಗಳನ್ನು ಕಟ್ಟಿಸುವ ಕಂಟ್ರಾಕ್ಟನ್ನು ವಹಿಸಲು ಜಾಪಾನಿನ ಸಂಸ್ಥೆಗಳು ಮುಂದೆ ಬಂದಿವೆ.

ಕಾಂಗ್ರೆಸ್ ಕಮಿಟಿಯ ಸಭೆ.

ಅಖಿಲ ಭಾರತ ಕಾಂಗ್ರೆಸ್ ಕಮಿಟಿಯ ಸಭೆಯು ಇದೇ ತಾ. ೨೭ರಲ್ಲಿ, ಬೊಂಬಾಯಿಯಲ್ಲಿ ಅಪರಾಹ್ನ ೪ ಗಂಟೆ ೩ಕ್ಕೆ ಕೂಡುವುದೆಂದು ಗೊತ್ತಾಗಿದೆ.

ಶ್ರೀಮಾನ್ ಸತ್ಯಮೂರ್ತಿಯವರು
ಮದರಾಸು ನಗರದಿಂದ ಕಾಂಗ್ರೆಸ್ ಪರವಾಗಿ ಎಸೆಂಬ್ಲಿ ಚುನಾವಣೆಗೆ ಉಮೇದ್ವಾರರು

ಜಾಭುವಾ ಸಂಸ್ಥಾನಾಧೀಶರ ವಿಚಾರ

ಪ್ರಜೆಗಳ ಕಡೆಯಿಂದ ಇಂಡಿಯಾ ದೊರೆತನಕ್ಕೆ ಮನವಿ ಹೋದ ಫಲವಾಗಿ ಜಾಭುವಾ ಸಂಸ್ಥಾನಾಧೀಶರಿಗೆ ಸರಕಾರದಿಂದ ಶರ್ತಗಳ ಪತ್ರ ತಲುಪಿ ಸಂಸ್ಥಾನಾಧೀಶರು ತಾವು ಸಿಂಹಾಸನವನ್ನು ಬಿಟ್ಟು ತೊಲಗಲು ಒಪ್ಪಿರುವರು. ಸಂಸ್ಥಾನದ ಕಾರ್ಯನಿರ್ವಹಣಕ್ಕೆ ಇಂಡಿಯಾ ಸರಕಾರವು ಒಂದು ಸಮಿತಿಯ ರಚನೆಮಾಡಿದೆ

ಪ್ರತ್ಯೇಕ ಒರಿಸ್ಸಾ ಪ್ರಾಂತ್ಯ

ಬಿಹಾರ್—ಒರಿಸ್ಸಾ ಎಂದಿರುವ ಈಗಿನ ಪ್ರಾಂತ್ಯವನ್ನು ಬಿಹಾರಿನಿಂದ ಪ್ರತ್ಯೇಕಿಸಿ ಪ್ರತ್ಯೇಕ ಒರಿಸ್ಸಾ ಪ್ರಾಂತ್ಯ ಮಾಡುವ ಆಲೋಚನೆಯಾಗಿದ್ದು ಅದನ್ನು ಸಾರ್ವಭೌಮರ ಅಪ್ಪಣೆ ಪಡೆದುಕೊಂಡು —(೧೯೩೫ನೇ ಮೇ ೩೦ ರಲ್ಲಿ) ಸ್ಥಾಪಿಸಲಾಗುವುದೆಂದು ತಿಳಿದುಬರುತ್ತದೆ

ಸಂಕ್ಷೇಪ ವಾರ್ತೆ

ಅಹಮ್ಮದಾಬಾದಿನಲ್ಲಿ ಮುನಸಿಪಾಲಿಟಿಯ ಕೆಲಸವು ಇನ್ನೂ ಕೊನೆಗೊಂಡಿಲ್ಲ. ಪ್ಲೇಗ್ ಜಾಡ್ಯವು ತಲೆಯೆತ್ತಬಹುದೆಂದೂ, ಒಂದು ಅಂಚೆಕಯಿಂದಾಗಿದೆ. ಅದು ಕಾರಣ, ಇನ್ನು ೧೫೦ ಮಂದಿ ಕಸಗುಡಿಸುವವರನ್ನು ಹೆಚ್ಚಿಸುವಂತೆ ನಗರಸಭೆಯು ನಿಶ್ಚಯಿಸಿದೆ.

ಜಾನುವಾರುಗಳ ರೋಗಕ್ಕೆ ಕಾರಣನೆಂದೂಹಿಸಿ ಹರಿಜನನೊಬ್ಬನನ್ನು ಕೊಂದ ಭಾವನಗರ ಸಂಸ್ಥಾನದ ಕುಸ್ತಾಜಿ ನಾರಾಯಣನೆಂಬವನಿಗೆ ೫ ವರ್ಷದ ಸಜೆಯಾಯಿತು

ಪ್ರಧಾನ ಸ್ಕೌಟರಾದ ಸರ್ ಬೇಡನ್ ಪೋವೆಲ್ಲರು ಸಪತ್ನೀಕರಾಗಿ ಆಸ್ಟ್ರೇಲಿಯಕ್ಕೆ ಸಂಚಾರ ಹೊರಟಿದ್ದು, ದಾರಿಯಲ್ಲಿ ಮಲಯಾ ದ್ವೀಪವನ್ನು ಸಂಚರಿಸುವರು

ಪೆರೇಗ್ವೇ (ಅಮೇರಿಕ) ದಲ್ಲಿ ಚಹಾ ಬದಲಾಗಿ ಜನರು ಒಂದು ಬಗೆಯ ಬೇರನ್ನು ಉಪಯೋಗಿಸಲು ಆರಂಭಿಸಿರುವರು. ಇದು ಚಹದಂತೆ ದುಷ್ಪರಿಣಾಮವನ್ನುಂಟುಮಾಡುವುದಿಲ್ಲವಂತೆ

ಸೇಲಮಿನಲ್ಲಿ ಹಸಿದ ಕೆಲವರು ಒಂದು ಅಕ್ಕಿಯ ಉಗ್ರಾಣವನ್ನು ಲೂಟಿಯಿಸಿರುವರು. ೧೩ ದಸ್ತಗಿರಿಗಳಾಗಿವೆ.

ಪಂಚಮ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ ಕೊಡುತ್ತಬೇಕೆಂದು ಕೃಷ್ಣಾ ಜಿಲ್ಲಾ ಬೋರ್ಡಿನಲ್ಲಿ ಠರಾವಾಗಿದೆ. ಇದನ್ನು ಸರಕಾರದವರೂ ಅನುಮೋದಿಸಿರುವರು

ಚಿತ್ತೂರಿನ "ಶ್ರೀ ಲಕ್ಷ್ಮೀ ಇಂಡಿಯನ್ ಮ್ಯಾಚ್ ಫ್ಯಾಕ್ಟರಿ" ಎಂಬ ಬೆಂಕಿಪೆಟ್ಟಿಗೆ ಕಾರ್ಖಾನೆಯಲ್ಲಿ ಬೆಂಕಿಯೆದ್ದು ಸುಮಾರು ೬೦೦ ಗ್ರಾಸ್ ಬೆಂಕಿಪೆಟ್ಟಿಗೆಗಳೂ ಹಲವು ಮರೆಮುಟ್ಟುಗಳೂ ಸುಟ್ಟುಹೋಗಿ, ೫ ಸಾವಿರ ರೂಪಾಯಿಯ ನಷ್ಟ ಸಂಭವಿಸಿದೆ

ಬ್ರಿಟಿಷರ ವ್ಯಾಪಾರವು ವೃದ್ಧಿಹೊಂದುತ್ತಿರುವ ಪ್ರೋತ್ಸಾಹಕರ ಅಂಕಸಂಖ್ಯೆಗಳು ಪ್ರಕಟವಾಗಿವೆ.

ಸಿಲೋನಿನ ಆಯ ವ್ಯಯದ ಪಟ್ಟಿಯಲ್ಲಿ ೪೩ ಲಕ್ಷದ ಉಳಿಕೆಯಾಗಬಹುದೆಂದು ಅಂದಾಜು

ಪಟ್ನಾನಗರದ ರಸ್ತೆಗಳಲ್ಲಿನ ಅಪಘಾತಗಳು ಕಡಿಮೆಯಾಗುತ್ತಿವೆಯೆಂದು ವರದಿ

ಕಳ್ಳರು ಮನೆಯೊಳಗೆ ಹೊಕ್ಕವರೆ ಕೂಡಲೇ ತಿಳಿವ ಒಂದು ನೂತನ ಯಂತ್ರವು ಪ್ಯಾರಿಸಿನಲ್ಲಿ ಸಿದ್ಧವಾಗಿದ್ದು, ಅಂಚೆಯವರೊಡನೆ ಕ್ರಿಯೆಕ್ಕೆ ದೊರೆವುದಂತೆ

ಊರಗಾಂವ ಗ್ರಾಮದಲ್ಲಿ ಒಂದು ಬಂಡೆಕಲ್ಲು ಸಿಡಿದು ಐದು ಮರಣಗಳಾದವು

ಸರ್ ಓ ಎ ಸ್ ಎಫ್ ಚಾಂಬರ್ಲೇನರು ಯುರೋಪಿಗೆ ಪ್ರಯಾಣಮಾಡುವರೆಂದು ತಿಳಿದುಬರುತ್ತದೆ.

ಬಳ್ಳಾರಿಯಲ್ಲಿ ಈಗಿನ ಅಭಾವ ಮಳೆಯಿಲ್ಲ ಕಷ್ಟವು ತಲೆದೋರಿದಂತಿದೆ

ಬಹುಕಾಲದ ಅನಾವೃಷ್ಟಿಯ ನಂತರ ಇದೀಗ ಸಿಲೋನಿನಲ್ಲಿ ಮಳೆಯುಂಟಾಯಿತು

ದಿ ಬೊಂಬಾಯಿ ಲೈಫ್ ಎಶ್ಯೂರೆನ್ಸ್ ಕಂಪೆನಿ ಲಿಮಿಟೆಡ್, ಇದರ ಚೆಯರ್‌ಮ್ಯಾನರಾದ
ಸರ್ ಲಲ್ಲೂಭಾಯಿ ಶ್ಯಾಮಲ್‌ದಾಸ್, ಕೆಟಿ. ಸಿ. ಐ. ಇ. ಜೆ ಪಿ, ಇವರು

ಮಂಗಳೂರು.

ಕೆನರಾ ಹೈಸ್ಕೂಲಿನಲ್ಲಿ ಇದೇ ತಾ. ೧೪ರಿಂದ ೧೬ರ ತನಕ, ದಸರಾ ಸಂದರ್ಭದಲ್ಲಿ, ಸಾಹಿತ್ಯೋತ್ಸವವು ಯಶಸ್ವಿಕರವಾಗಿ ಜರಗಿಸಲ್ಪಟ್ಟಿತು. ತಾ. ೧೪ರಲ್ಲಿ, ಮೈಸೂರಿನ ಶ್ರೀ ಬಿ. ಎಮ್. ಶ್ರೀಕಂಠಯ್ಯನವರನ್ನು ಮಿತ್ರಮಂಡಲಿಯವರು ಆಮಂತ್ರಿಸಿದ್ದರು. ಅವರೊಂದಿಗೆ ಬಿ. ಸೀ. ಯವರೂ ದಯಮಾಡಿಸಿದ್ದರು. ಸ್ಟೇಶನ್‍ನಲ್ಲಿ ಸತ್ಕಾರವಾಗುತ್ತಿದ್ದಾಗ, ಶ್ರೀ ವಿದ್ವಾನ್ ಕಡೆಂಗೋಡ್ಲು ಶಂಕರಭಟ್ಟರು ಮಿತ್ರಮಂಡಲಿಯ ಅಧ್ಯಕ್ಷರ ಅಪೇಕ್ಷೆಯಂತೆ, ಮಿತ್ರಮಂಡಲಿಯು ಈಗ ನಡೆಸುತ್ತಿರುವ ಸಾಹಿತ್ಯಸೇವೆಯ ಸ್ಥೂಲವಿಮರ್ಶೆಮಾಡಿ ಭಾಷಣ ಮಾಡಿದರು. ಅದು ಮುಗಿದು, ಕೆನರಾ ಹೈಸ್ಕೂಲಿನ ಭುವನೇಂದ್ರ ಸಭಾಸದನದಲ್ಲಿ ಶ್ರೀ ಅಮ್ಮೆಂಬಳ ಶ್ರೀನಿವಾಸ ಪೈಗಳವರ ಅಧ್ಯಕ್ಷತೆಯಲ್ಲಿ ಸಭೆಗೂಡಿತು. ಸಭೆಯಲ್ಲಿ ವಿದ್ವಾನ್ ಬಿ. ಶಂಕರಭಟ್ಟರು "ದಕ್ಷಿಣ ಕನ್ನಡದ ವೃತ್ತಪತ್ರಿಕೆಗಳು" ಎಂಬೀ ವಿಷಯವನ್ನೆತ್ತಿ ಚಿಕ್ಕ ಭಾಷಣ ಮಾಡಿದರು. ಮಾನ್ಯ ಅತಿಥಿಗಳ ಪರಿಚಯವನ್ನು ಶ್ರೀ ಪಂಜೇ ಮಂಗೇಶರಾಯರೂ ಶ್ರೀ ಮುಳಿಯ ತಿಮ್ಮಪ್ಪಯ್ಯ ವಿದ್ವಾನ್ ಅವರೂ ಮಾಡಿಕೊಟ್ಟ ನಂತರ, ಶ್ರೀಯುತ ಶ್ರೀಕಂಠಯ್ಯನವರು ಸಾಹಿತ್ಯಸೇವೆಯಲ್ಲಿ ದಕ್ಷಿಣ ಕನ್ನಡದವರ ಪಾಲು ಕಡಿಮೆಯಿಲ್ಲವೆಂದೂ, ನವಕವಿತೆಯು ಇಲ್ಲೇ ಜನ್ಮವೆತ್ತಿದ್ದು, ಈಗ ಬೇರೆ ಬೇರೆ ಕಡೆಗಳಲ್ಲಿ ವಿಕಸಿಸಿ, ತನ್ನ ಸೌರಭ್ಯವನ್ನು ಹರಡುತ್ತಿದೆಯೆಂದೂ, ಕರ್ನಾಟಕದಲ್ಲಿ ಈಗ ಆಧಾರವಾಗಿರುವ ಕನ್ನಡ—ಇಂಗ್ಲೀಷು ನಿಘಂಟು ಮಂಗಳೂರಲ್ಲಿ ಕಿಟ್ಟೆಲ್ ಸಾಹೇಬರಿಂದ ಕನ್ನಡ ಪಂಡಿತರ ಸಹಾಯ ಪಡೆದು ಅಚ್ಚುಹಾಕಿಸಲ್ಪಟ್ಟಿತೆಂದೂ ನುಡಿದು,—ಇಲ್ಲಿಯೇ ಪ್ರಥಮತಃ ಕನ್ನಡ ಮುದ್ರಣಕಾರ್ಯ ಪ್ರಾರಂಭವಾಯಿತೆಂದು ಶ್ರೀ ಬಿ. ಶಂಕರಭಟ್ಟರು ನುಡಿದುದನ್ನು ಮತ್ತಷ್ಟು ಪುಷ್ಟೀಕರಿಸಿ,—ಅನಂತರ, ತಾನು ಇಂಗ್ಲಿಷ್ ಪ್ರೊಫೆಸರನಾದರೂ ತನಗೆ ಕನ್ನಡದ ಮೇಲೆ ಅಭಿಮಾನಹುಟ್ಟಿದ ಬಗ್ಗೆ, ಆದ ವಿಕಾಸಗೊಂಡ ರೀತಿ ಇವುಗಳನ್ನು ಅಚ್ಚುಕಟ್ಟಾದ ಸೊಗಸಾದ ಶೈಲಿಯಲ್ಲಿ ಮನದಟ್ಟಾಗುವಂತೆ ವಿವರಿಸಿ ಭಾಷಣ ಮಾಡಿದರು. ಕೊನೆಯದಾಗಿ "ಡಾಕ್ಟರ್" ಎಂಬ ಚಿಕ್ಕ ನಾಟಕವು ಅಭಿನಯಿಸಲ್ಪಟ್ಟು, ಶ್ರೀ ಎಮ್. ಎನ್. ಕಾಮತರಿಂದ ಧನ್ಯವಾದ ಸಮರ್ಪಣೆಯಾಗಿ ಅಂದಿನ ಸಮಾರಂಭವು ಕೊನೆಗೊಂಡಿತು.

ಮರುದಿನ (ತಾ. ೧೫—೧೦—೩೪) ಶ್ರೀ ಶ್ರೀಕಂಠಯ್ಯನವರು ಸೈಂಟ್ ಎಲೋಸಿಯಸ್ ಕೊಲೇಜಿನಲ್ಲಿ, ಅಲ್ಲಿಯ ಕರ್ನಾಟಕ ಸಂಘದ ಆಶ್ರಯದಲ್ಲಿ ಕನ್ನಡದ ಪಲ್ಲಿ—ಆಧುನಿಕ ಕವಿತೆ ಈ ವಿಷಯವನ್ನೆತ್ತಿ ಭಾಷಣ ಮಾಡಿದರು.

ತಾ. ೧೫ರಲ್ಲಿ ಕೆನರಾ ಹೈಸ್ಕೂಲಿನಲ್ಲಿ "ಮಕ್ಕಳ ದಿನ"ವು ಆಚರಿಸಲ್ಪಟ್ಟಿತು. ಕೆನರಾ ಗರ್ಲ್ಸ್‌ಸ್ಕೂಲ್ ಬಾಲಕಿಯರಿಂದ ಸಂಗೀತಾದಿ ವಿನೋದಗಳಿದ್ದುವು. ತಾ. ೧೬ರಲ್ಲಿ, "ಬಾಂಧವ ಬಳಗ"ದವರ ಆಶ್ರಯದಲ್ಲಿ, ಸಾಹಿತ್ಯೋತ್ಸವದ ಕೊನೆಯ ದಿನವು ಆಚರಿಸಲ್ಪಟ್ಟಿತು. ಶ್ರೀ ಎಮ್. ಎನ್. ಕಾಮತರವರು "ಬಾಂಧವ ಬಳಗ"ದ ಪರಿಚಯವನ್ನು ಸಂಕ್ಷಿಪ್ತವಾಗಿ ಮಾಡಿಕೊಟ್ಟು, "ಇಂದಿನ ಸರಸ್ವತಿ" ಎಂಬ ವಿಷಯವನ್ನೆತ್ತಿ ಮನೋಹರವಾಗಿ ತಮ್ಮ—ವಿನೋದಪೂರ್ಣಶೈಲಿಯಿಂದ ಭಾಷಣಮಾಡಿದರು. ಶ್ರೀ ಎಮ್. ವಾಸುದೇವ ಪ್ರಭು, ಎಮ್. ಎ., ಎಲ್. ಟಿ., ಇವರ ಕೊಳಲವಾದನವೂ, ಶ್ರೀ ಎಮ್. ಸರ್ವೋತ್ತಮ ಪೈ ಮತ್ತು ಶ್ರೀ ಯು. ಮಂಜುನಾಥ ನಾಯ್ಕ ಇವರಿಂದ ಚಿಕ್ಕ ದೃಶ್ಯಗಳೆರಡೂ ಓದಲ್ಪಟ್ಟ ಮೇಲೆ, ಶ್ರೀ ಬಿ. ವೇಣುಗೋಪಾಲರಾಯರಿಂದ "ಈ ಸಭೆಯು ಕರೆಯಿಸುತ್ತದೆ" ಎಂಬ ವಿನೋದವೂ (Solo-acting) ಕೊನೆಯದಾಗಿ "ಆತ್ಮಕ್ಕೆ ಶಾಂತಿಯಿರಲಿ" ಎಂಬ ಚಿಕ್ಕ ಪ್ರಹಸನವೂ ಅಭಿನಯಿಸಲ್ಪಟ್ಟ ನಂತರ, ಧನ್ಯವಾದ ಸಮರ್ಪಣೆಯಾಗಿ, ಸಮಾರಂಭವು ಅಂತ್ಯವಾಯಿತು. (ತಾ. ೧೪ ಮತ್ತು ೧೫ರಲ್ಲಿ ಕರ್ನಾಟಕ ವೃತ್ತಪತ್ರಿಕಾ ಪ್ರದರ್ಶನವು ನಡೆದಿತ್ತು.)

ಗಣಪತಿ ಹೈಸ್ಕೂಲಿನಲ್ಲಿ ವಿಜಯ ದಶಮಿ ಸಮಾರಂಭಗಳು ತಾ. ೧೫—೧೭ರಲ್ಲಿ ಜರಗಿದುವು. ಮೊದಲನೆ ದಿನ "ಸ್ತ್ರೀಯರ ದಿನ"ವು ಆಚರಿಸಲಾಯಿತು. ಮರುದಿನ ಮಕ್ಕಳ ಬ್ಯಾಂಕನ್ನು ತೆರೆವ ಸಮಾರಂಭವು ಜರಗಿತು. ತಾ. ೧೭ರಲ್ಲಿ ಶಾಲಾವರ್ಧಂತ್ಯುತ್ಸವವು, ನಿವೃತ್ತ ಡಿಸ್ಟ್ರಿಕ್ಟ ಜಡ್ಜ ರಾವ್ ಬಹದ್ದೂರ್ ಶ್ರೀ ಬಿ. ವೆಂಕಟ್ರಾಯರವರ ಅಧ್ಯಕ್ಷತೆಯಲ್ಲಿ ಯಥಾಸಾಂಗವಾಗಿ ನೆರವೇರಿತು.

ದ. ಕ. ಜಿಲ್ಲಾ ಕೊಂಗ್ರೆಸ್ ಇಲೆಕ್ಷನ್ ಆಫೀಸು ಹಂಪನಕಟ್ಟೆಯಲ್ಲಿರುವ ಫೆರ್ನಾಂಡಿಸ್ ಬಿಲ್ಡಿಂಗಿನ ಮಹಡಿಯ ಮೇಲೆ ತೆರೆಯಲ್ಪಟ್ಟಿದೆ. ಶ್ರೀ ಬಿ. [illegible] ಭಂಡಾರಿಗಳೇ ಮೊದಲಾದ ಕೊಂಗ್ರೆಸ್ ಕೆಲಸಗಾರರು ಚುನಾವಣೆಯ ಸಂಬಂಧವಾದ ಕಾರ್ಯದಲ್ಲಿ ಶ್ರದ್ಧೆಯಿಂದ ಕೆಲಸಮಾಡುತ್ತಿರುವರು.

ಶ್ರೀ ಸ್ವಾಮಿ ವೆಂಕಟಾಚಲರವರು ಕಳೆದ ವಾರ ಇಲ್ಲಿಗೆ ದಯಮಾಡಿಸಿದ್ದು, ಕೆಲ ವೋಟರರನ್ನೂ ಪ್ರಮುಖರನ್ನೂ ಕಂಡು ಮಾತಾಡಿ, ಹಿಂತಿರಳಿದರು.

ಇದೇ ಇಳಿದ ತಾ. ೭ನೇ ರವಿವಾರ, ಇಲ್ಲಿಯ ದೇರೆಬೈಲಿನಲ್ಲಿರುವ ಒಂದು ಕೆರೆಗೆ ಸ್ನಾನಕ್ಕೆ ಹೋದ ಜೋ ಮಸ್ಕರೇಂಞಸ್ ಎಂಬ ಸುಮಾರು ೧೪ ವರ್ಷ ವಯಸ್ಸಿನ ಕ್ರೈಸ್ತ ಬಾಲಕನು, ಈಜು ಬಾರದ ಕಾರಣ ಕೆರೆಯಲ್ಲಿ ಮುಳುಗಿ ಮೃತನಾದನು. ಅವನೊಡನೆ ಇದ್ದ ಮತ್ತಿಬ್ಬರು ಸ್ನೇಹಿತರು ಅತನನ್ನು ಬದುಕಿಸಲು ಯತ್ನಿಸಿದರೂ ಸಾಧ್ಯವಾಗಲಿಲ್ಲವೆಂದು ತಿಳಿದುಬರುತ್ತದೆ.

ಶ್ರೀ ವೆಂಕಟ್ರಮಣ ಥಿಯೆಟ್ರಿಕಲ್ ನಾಟಕ ಕಂಪೆನಿಯವರ ನಾಟಕಗಳು ಇನ್ನೂ ಅಭಿನಯಿಸಲಾಗುತ್ತಿದ್ದು, ಕಳೆದ ಬುಧವಾರ, ನೂತನವಾಗಿ ತಯಾರಿಸಲಾದ "ಶನಿಪ್ರಭಾವ" ಎಂಬುದನ್ನಾಡಿ ತೋರಿಸಿದರು. ಇವರ ಇನ್ನೂ ಒಂದೆರಡು ಹೊಸ ಪ್ರಯೋಗಗಳಾಗಲಿವೆಯೆಂದು ಕೇಳುತ್ತೇನೆ.

ಕಳೆದೊಂದು ತಿಂಗಳಿಂದ ತೀವ್ರ ಸೆಖೆಯ ಅನುಭವವಾಗುತ್ತಲಿದೆ. ಮಳೆಯು, ಕಳೆದವಾರ ಒಂದೆರಡು ದಿನ ಹೊರತು, ಸುತರಾಂ ಇಲ್ಲವೆನ್ನಬೇಕು.

ಮುಂಬಾಯಿಯಲ್ಲಿ ಇದೇ ತಿಂಗಳ ಕೊನೆಯ ವಾರದಲ್ಲಿ ಜರಗಲಿರುವ ರಾಷ್ಟ್ರಸಭಾಧಿವೇಶನಕ್ಕೆ ಮಂಗಳೂರಿನಿಂದ ಅನೇಕರು ಈಗಾಗಲೇ ಹೊರಟುಹೋಗಿರುವರು. ಸ್ಟೀಮರ್ ಕಂಪೆನಿಯವರೂ ಟಿಕೇಟು ದರಗಳಲ್ಲಿ ರಿಯಾಯಿತಿ ತೋರಿರುವ ಕಾರಣ ಇನ್ನೂ ಹಲವರು ಹೋಗಬಹುದಾಗಿ ಎಣಿಸಲಾಗಿದೆ.

ಈ ವರ್ಷ ಮಂಗಳೂರಲ್ಲಿ "ದಸರಾ" ಉತ್ಸವವು ವಿಶೇಷ ಉತ್ಸಾಹದಿಂದ ಜರುಗಿತೆನ್ನಬಹುದು. ಸಾಹಿತ್ಯೋತ್ಸವವಲ್ಲದೆ ಮಹಾನವಮಿಯ ಒಂಭತ್ತು ದಿನಗಳಲ್ಲೂ ನಾನಾ "ವೇಷ"ಗಳಿಗೂ ಕಡಿಮೆಯಿರಲಿಲ್ಲ. ಈ ವರ್ಷ ಹರಿಜನರೂ "ರಾಧಾ—ಕೃಷ್ಣ" ಮುಂತಾದ ವೇಷಗಳಿಂದ ಪ್ರದರ್ಶನಗಳನ್ನು ಅನೇಕವನ್ನಾಡಿಸಿದುದೊಂದು ಈ ಬಾರಿಯ ದಸರೆಯಲ್ಲಿ ವಿಶೇಷ.

"ಶ್ರೀ ಕೃಷ್ಣ ಸಿನೆಮಾ"ದಲ್ಲಿ ಈ ದಿನದಿಂದ ಮೊದಲ್ಗೊಂಡು "ಲೋಸ್ಟ ಸ್ಪೆಶಲ್" ಎಂಬ ಯೂನಿವರ್ಸಲ್ ಕಂಪೆನಿಯ ಸೀರಿಯಲ್ ಆರಂಭವಾಗುವುದು; ಇದು ಹನ್ನೆರಡು ಅಧ್ಯಾಯಗಳನ್ನೊಳಗೊಂಡಿದ್ದು, ಮೂರು ಖಂಡಗಳಾಗಿ ತೋರಿಸಲಾಗುತ್ತದೆ. ಮೊದಲನೆ ಖಂಡ ತಾ. ೧೯ರಿಂದ; ದ್ವಿತೀಯ ಖಂಡ ತಾ. ೨೨ರಿಂದ ಮತ್ತು ತೃತೀಯ ಖಂಡ ತಾ. ೨೫ರಿಂದ. ಸರ್ ಆರ್ಥರ್ ಕೊನನ್ ಡೋಯ್ಲ್ ಎಂಬ ಪ್ರಖ್ಯಾತ ಆಂಗ್ಲ ಕಾದಂಬರೀಕಾರರಿಂದ ಬರೆಯಲ್ಪಟ್ಟ ಚಿತ್ರವಿದು" ಎಂದು ಆಡಳಿತಗಾರರು ತಿಳಿಸುತ್ತಾರೆ.

ಇಲ್ಲಿಯ ಔದ್ಯೋಗಿಕ ಶಾಲೆಯ "ಇಂಜಿನಿಯರಿಂಗ್ ಎಸೋಸಿಯೇಶನ್"ನ ಪ್ರಾರಂಭೋತ್ಸವವು ಕಳೆದ ಶನಿವಾರ (ತಾ. ೧೩—೧೦—೩೪) ಸಾಯಂಕಾಲ ಘಂಟೆ ೫-೩೦ಕ್ಕೆ, ಮಿ। ಎಮ್. ಎಸ್. ಶ್ರೀಷ್ಠ, ಎಮ್. ಎಲ್. ಸಿ., ಇವರ ಅಧ್ಯಕ್ಷತೆಯಲ್ಲಿ ಜರಗಿಸಲ್ಪಟ್ಟಿತು.

ಇದೇ ತಾ. ೬ನೇ ಶನಿವಾರ ಅಪರಾಹ್ನ ಘಂಟೆ ೪ಕ್ಕೆ ಕರಾಚಿ ಆರ್ಯಸಮಾಜದ ಪ್ರಚಾರಕರೆಂಬ್ಲಲ್ಪಟ್ಟರಾದ ಶ್ರೀ ಪಂಡಿತ ಮನೋಹರಲಾಲ ಆರ್ಯರವರು ಸ್ಥಳೀಯ ಆರ್ಯಸಮಾಜದವರ ಆಶ್ರಯದಲ್ಲಿ, ಇಲ್ಲಿಯ ಸಾರ್ವಜನಿಕ ಮೈದಾನದಲ್ಲಿ "ಆರ್ಯಸಮಾಜವೆಂದರೇನು?" ಎಂಬ ವಿಷಯವನ್ನೆತ್ತಿ ಭಾಷಣಮಾಡಿದರು.

ಅಂಕೋಲಾ ಮೆಜಿಸ್ಟ್ರೇಟರ ಕೋರ್ಟಿನಲ್ಲಿ, ಶ್ರೀಯುತ ಕಾರ್ನಾಡು ಸದಾಶಿವರಾಯರ ಮೇಲಿನ ಮೊಕದ್ದಮೆಯ ವಿಚಾರಣೆ ಮುಗಿದು, ೧ ದಿನದ ಸಜೆ ಮತ್ತು ರೂ. ೩೦ ದಂಡ ಅಥವಾ ೧೫ ದಿನಗಳ ಸಜೆ ಎಂದು ತೀರ್ಪು ಇದೇ ತಾ. ೧೭ರಲ್ಲಿ ಕೊಡಲಾಯಿತು. ದಂಡವನ್ನು ಯಾರೋ ಅಲ್ಲೆ ತೆತ್ತರು. ಶ್ರೀಯುತರು ೧ ದಿನದ ಸಜೆ ಅನುಭವಿಸಿ ಮಂಗಳೂರಿಗೆ ಮರಳಿರುವರು.

ಮಂಗಳೂರಿನಿಂದ ಮುಂಬಾಯಿಗೆ ಕೊಂಗ್ರೆಸ್ ಅಧಿವೇಶನಕ್ಕೆ ಡೆಲಿಗೇಟರಾಗಿ ಅಥವಾ ಪ್ರೇಕ್ಷಕರಾಗಿ ಹೋಗುವವರಿಗೆ ಬೊಂಬೈ ಸ್ಟೀಮ್ ನೇವಿಗೇಶನ್ ಕಂಪೆನಿಯವರು ಈ ಕೆಳಗಿನ ದರಗಳಲ್ಲಿ 'ರಿಟರ್ನ್' (ಮರಳಿ ಬರುವ) ಟಿಕೇಟುಗಳನ್ನು ಕೊಡುವರು:—ಕೆಳಗಿನ ತರಗತಿ ರೂಪಾಯಿ ೯—೮—೦; ಮೇಲ್ತರಗತಿ ರೂ. ೧೫—೦—೦. ಈ ದರಗಳು ಒಟ್ಟಿಗೆ, ಮುಂಬಯಿಗೆ ಹೋಗಿ ಪುನಃ ಮಂಗಳೂರಿಗೆ ಮರಳಲು ಕೊಡಲ್ಪಡುವುವು. ಪ್ರಯಾಣಿಕರು ತಾವು ಕೊಂಗ್ರೆಸ್ ಡೆಲಿಗೇಟರು ಅಥವಾ ಪ್ರೇಕ್ಷಕರೆಂಬ ಬಗ್ಗೆ ಕೊಂಗ್ರೆಸ್ ಅಧಿಕಾರಿಗಳಿಂದ ಶಿಫಾರಸುಪತ್ರವನ್ನು ತಂದೊಪ್ಪಿಸಬೇಕು. ಟಿಕೇಟುಗಳು ಇದೇ ತಾ. ೧೫ರಿಂದ ಕೊಡಲ್ಪಡುವುವು; ಇವು ತಾ. ೧೦—೧೧—೧೯೩೪ರ ವರೆಗೆ ಮಾತ್ರ ಸಿಂಧುವಾಗುವುವು. ಸ್ಟೀಮರುಗಳು ಮಂಗಳೂರಿನಿಂದ ವಾರಕ್ಕೆರಡಾವರ್ತಿ,—ಸೋಮವಾರ ಅಪರಾಹ್ನ ೧ ಘಂಟೆಗೂ, ಶುಕ್ರವಾರ ಪೂರ್ವಾಹ್ನ ೯ ಘಂಟೆಗೂ ಹೊರಟು, ಮುಂಬಾಯಿಗೆ ಪ್ರತಿ ಗುರುವಾರ ಮತ್ತು ರವಿವಾರ ತಲಪುವುವು. ಸ್ಟೀಮರುಗಳ ಮೇಲೆ ಬ್ರಾಹ್ಮಣರ ಹೊಟೇಲುಗಳೂ ಇವೆ. (ಕೊಂಗ್ರೆಸ್ ಅಧಿವೇಶನವು ಇದೇ ತಿಂಗಳ ತಾ. ೨೬, ೨೭, ೨೮ನೇ ದಿನಗಳಲ್ಲಿ ನಡೆಯುವುದು).

ಗಾಂಧೀ ಜಯಂತ್ಯುತ್ಸವದ ಸಂಬಂಧವಾದ ಕಾರ್ಯಕ್ರಮಗಳು, ಇದೇ ತಾರೀಕು ೨ರಿಂದ ೯ರ ತನಕ ಚ್ಯುತಿ ಇಲ್ಲದೆ ನಡೆದು ಮುಗಿದುವು.

ಇಲ್ಲಿಯ ಕೆನರಾ ಹೈಸ್ಕೂಲಿನ ಕಾಮಧೇನು ಸ್ಕೌಟು ದಳದವರು ಇದೇ ಕಳೆದ ತಾ. ೧೦ನೇ ಬುಧವಾರ ಬೆಳಗ್ಗೆ ಕಾಸರಗೋಡಿಗೆ ಹೊರಟು, ಅಲ್ಲಿಗೆ ತಲಪಿದರು. ಶಾಲೆಯ ಮಾಜಿ ಮೆನೇಜರಾದ ರಾ। ಶ್ರೀನಿವಾಸ ಪೈಗಳು ಅವರನ್ನು ಫಲಾಹಾರಾದಿಗಳಿಂದ ಸತ್ಕರಿಸಿದರು. ಸಂಜೆ ಚಂದ್ರಗಿರಿ ನದಿ, ಕೋಟೆ ನೋಡಲಾದುವುಗಳನ್ನು ಸಂದರ್ಶಿದರು. ಮರುದಿನ ಗುರುವಾರ ಮಧೂರಿನ ಗಣಪತಿ ದೇವಾಲಯವನ್ನು ನೋಡಿ, ಮಾಯಿಪಾಡಿ ಅರಸರಾದ ಶ್ರೀ ವಿಶ್ವಪತಿ ರಾಮವರ್ಮರಾಜರ ಆಹ್ವಾನದಂತೆ ಅವರ ಅರಮನೆಗೆ ಹೋಗಿ, ಅವರ ಉಪಚಾರಗಳನ್ನು ಸ್ವೀಕರಿಸಿ ಅಲ್ಲಿಯೇ ಸಮೀಪದಲ್ಲಿರುವ ಅನಂತಪುರ ದೇವಾಲಯವನ್ನು ಕಂಡು, ಕಾಸರಗೋಡಿಗೆ ಹಿಂದಿರುಗಿದರು. ಮರುದಿನ ಕಾಸರಗೋಡು ಬೋರ್ಡ್ ಹೈಸ್ಕೂಲು, ಕೋಟೆ ಪೇಟೆ ಮೊದಲಾದುವುಗಳನ್ನು ನೋಡಿದುದಾಯಿತು. ಅಂದು ರಾತ್ರಿ ೯ ಗಂಟೆಗೆ ದಳದವರು "ಶ್ರೀನಿವಾಸ ಪ್ರಿಂಟಿಂಗ್ ವರ್ಕ್ಸ್" ಇದರ ಮೆನೇಜರರ ಆಶ್ರಯದಲ್ಲಿ ಒಂದು ವಿನೋದಕೂಟ (Variety entertainment) ವನ್ನು ವ್ಯವಸ್ಥೆಗೊಳಿಸಿ, ಪುರಜನರನ್ನು ಅತ್ಯಾನಂದಗೊಳಿಸಿ, ಅವರ ಆಶೀರ್ವಾದವನ್ನು ಪಡೆದರು.

ಶನಿವಾರ ಬೆಳಗ್ಗೆ ಅಲ್ಲಿಂದ ಹೊರಟು ಬೇಕಲಕ್ಕೆ ತಲಪಿ, ಅಲ್ಲಿಯ ಕೋಟೆಯೊಳಗೆ ಇಳಿದು, ಸಮುದ್ರಸ್ನಾನವನ್ನು ಪೂರೈಸಿ, ಹೊಸದುರ್ಗಕ್ಕೆ ತಲಪಿದರು. ಹೊಸದುರ್ಗದಲ್ಲಿ ದೇವಳ, ಕೋಟೆ, ಪಟ್ಟಣ ಇವೆಲ್ಲವುಗಳನ್ನು ನೋಡಿ, ರಾತ್ರಿ ಬೋರ್ಡು ಹೈಯರ್ ಎಲಿಮೆಂಟರಿ ಶಾಲೆಯಲ್ಲಿ ವಿಶ್ರಾಂತಿ ಪಡೆದು, ಆದಿತ್ಯವಾರ ೧೧ ಗಂಟೆಯ ಟ್ರೈನಿನಲ್ಲಿ ಮಂಗಳೂರಿಗೆ ತಲಪಿದರು. ಸ್ಕೌಟುದಳದವರಿಗೆ ಅಲ್ಲಲ್ಲಿ ಉದಾರ ಆತಿಥ್ಯಗಳಿಂದ ಸತ್ಕರಿಸಿದ, ಅವರು ಉಳಕೊಳ್ಳಲು ಸೌಕರ್ಯಗಳನ್ನು ಕಲ್ಪಿಸಿದ ಮಹನೀಯರುಗಳೆಲ್ಲರಿಗೂ ತಾವು ಆಭಾರಿಗಳಾಗಿರುವರೆಂದು ದಳದ ಅಧಿಕಾರಿಗಳು ತಿಳಿಸುತ್ತಾರೆ.

ಇದೇ ಕಳೆದ ತಾ. ೧೪ನೇ ಆದಿತ್ಯವಾರ ಬೆಳಗ್ಗೆ ೧೦ ಘಂಟೆಗೆ ಸೈಂಟ್ ಎಲೋಸಿಯಸ್ ಕೊಲೇಜಿನ ಪ್ರೊಫೆಸರರಾದ ಶ್ರೀ ರಾಮಚಂದ್ರ ಅಯ್ಯರರ ಅಧ್ಯಕ್ಷತೆಯಲ್ಲಿ ಕಂಕನಾಡಿ ಹಿಂದೂ ಶಾಲೆಯ ೧೧ನೆಯ ವಾರ್ಷಿಕೋತ್ಸವವು ಜರಗಿತು.

ನಮ್ಮ ಜಿಲ್ಲಾ ದ್ವಿತೀಯ ಫಲಪುಷ್ಪ ಪ್ರದರ್ಶನವು ಇದೇ ತಾ. ೬ರಿಂದ ೯ರ ತನಕ ನಡೆಯಿತು. ಈ ಬಾರಿ ಪ್ರಥಮ ಬಹುಮಾನವು ಶ್ರೀ ಕೆ. ಟಿ. ಆಳ್ವರಿಗೆ ದೊರೆತಿದೆ.

ಕೃತಕ ಭಂಡಾರದ ಸಂಬಂಧವಾದ, ಜಯಲಕ್ಷ್ಮೀ ಬೇಂಕ್, ಲಿಮಿಟೆಡ್, ಇದರ ಮೊಕದ್ದಮೆಯು ಮುಗಿದು ಅಪಾದಿತರಿಗೆ ಈ ಕೆಳಗಿನಂತೆ ಶಿಕ್ಷೆ ವಿಧಿಸಲಾಗಿದೆ:—ಒಬ್ಬರಿಗೆ ೫ ವರ್ಷ ಸಜೆ ಮತ್ತು ರೂ. ೧೦೦೦ ದಂಡ; ೪ ಜನರಿಗೆ ತಲಾ ನಾಲ್ಕು ವರ್ಷ ಸಜೆ, ಇಬ್ಬರಿಗೆ ಬಿಡುಗಡೆಯಾಯಿತು.

ಸಿಟಿ ಆರ್ಯಸಮಾಜ ಮಂಗಳೂರು:—ಇದೇ ತಿಂಗಳ ತಾ ೨೦ನೇ ಆದಿತ್ಯವಾರ ಪ್ರಾತಃಕಾಲ ಘಂಟೆ ೮-೩೦ಕ್ಕೆ ಶಾಂತೇಶ್ವರದಲ್ಲಿನ ಸಮಾಜಮಂದಿರದಲ್ಲಿ "ಆರ್ಯಜೀವನ" ಎಂಬ ಕುರಿತು ಭಾಷಣವಿದೆ. ಸರ್ವರೂ ಸಹಕರಿಸಬೇಕಾಗಿ ವಿನಂತಿ. ಇದೇ ಸಮಯ ಗಂಟೆ ೯-೩೦ಕ್ಕೆ ಸಮಾಜದ ಕಾರ್ಯನಿರ್ವಾಹಕ ಸಮಿತಿಯ ಸಭೆಯು ನೇರಲಿದೆ.

ಬಾಡಿಗೆಗೆ—

ಮನೆಗಳು ಮತ್ತು ಅಂಗಡಿಗಳು ಮಂಗಳೂರು ಪೇಟೆಯೊಳಗೆ ಕೊಡಲಿಕ್ಕಿವೆ. ಮಾಹಿತಿಗೆ ಕೆಳಗಿನ ವಿಳಾಸದವರಲ್ಲಿ ವಿಚಾರಿಸಿರಿ:—

ಅನಂತರಾವ್ ಕೃಷ್ಣರಾವ್ ನಾಡ್ಕರ್ಣಿ,
ಡೊಂಗರಕೇರಿ ಗಲ್ಲಿ, ಮಂಗಳೂರು.

ತಾಲೂಕುಗಳಿಂದ.

ಉಡುಪಿ— "ಉಡುಪಿಗೂ ಒಂದು ಮುನಿಸಿಪಾಲಿಟಿಯನ್ನು ಈಗ್ಗೆ ಸರಕಾರದವರು ಹೊಂದಿಸುವರ ದ್ವಾರ; ಈ ಬಗ್ಗೆ ಪ್ರಾಂತಿಕ ಸರಕಾರವು ಜಿಲ್ಲಾ ಕಲೆಕ್ಟರರಿಂದ ಬೇಕಾದ ಮಾಹಿತಿಯನ್ನು ವಿಚಾರಿಸಿದ ಕುರಿತು ಪ್ರಕಟಣೆಯು ಹೊರಟಿರುತ್ತದಷ್ಟೆ. ಹಲವು ವರ್ಷಗಳಿಂದ ಈ ಬಗ್ಗೆ ಊರ ಗೃಹಸ್ಥರು ಆಕ್ಷೇಪಗಳನ್ನೆತ್ತಿ ಈ ಮೊದಲು ಬಹಳವಾಗಿ ಪ್ರತಿರೋಧಿಸಿದ್ದರು. ಬರೇ ಹೆಸರು ಮತ್ತು ಜನಸಂಖ್ಯೆಯು ಬಾಹುಳ್ಯದ ಕಾರಣಗಳಿಂದ ಉಡುಪಿಗೆ ಮುನಿಸಿಪಾಲಿಟಿಯನ್ನು ಹೊರಿಸುವುದರಲ್ಲಿ ನ್ಯಾಯಕಾಣುವುದಿಲ್ಲ. ಶ್ರೀಕೃಷ್ಣ ದೇವಸ್ಥಾನ ಮತ್ತು ಅಷ್ಟಮಠಗಳಿವೆಯೆಂದರೆ ಇದು ಊರಿನ ಸಂಪತ್ತಿಗೆ ಕಾರಣವಲ್ಲ. ವ್ಯಾಪಾರವೆಂದರೋ ಹಿಂದಿನ ವ್ಯಾಪಾರ ಪಟಾಟೋಪಗಳೇ ಇಲ್ಲ; ಅಲ್ಲಲ್ಲಿ ಹಳ್ಳಿಹಳ್ಳಿಗಳಲ್ಲಿ ಕೂಡ ರಖಮು ಚಿಲ್ಲರೆ ಎಲ್ಲಾ ಬಗೆಗಳ ವ್ಯಾಪಾರ ತೊಡಗಿಕೊಂಡು, ಆ ಬಾಬಿನಲ್ಲಿಯೂ ಆದಾಯ ಕಡಿಮೆ. ವಿಶೇಷ ಕೈಗಾರಿಕೆ ಉತ್ಪನ್ನಗಳೂ ಇಲ್ಲ; ಮಿಶ್ಯನ್ ಮಗ್ಗಗಳಲ್ಲಿ ನೇಯ್ಗೆಯ ಕೆಲಸವು ಹಿರಿದಿದ್ದಷ್ಟು ಈಗ ಇಲ್ಲ. ಮೇಲಾಗಿ ಪರ್ಗದಾರರ ಕೃಷಿಗಾರರ ಉತ್ಪನ್ನವು ಸದ್ಯದ ಆರ್ಥಿಕ ದುರ್ದೆಶೆಯಿಂದ ತೀರಾ ಕಡಿಮೆಯಾಗಿದೆ. ಅಂದರೆ ಉಡುಪಿ ಊರಿನವರು ಈಗಿರುವ ಸ್ಥಿತಿಗತಿಗಳಿಂದ ಒಂದು ಚಿಕ್ಕಾಸಿನ ಹೊಸ ಅಥವಾ ಹೆಚ್ಚಿಗೆ ತೆರಿಗೆಯನ್ನು ಕೊಡಲಾರರು. ಸರಕಾರಕ್ಕೊಂದು ಮನವಿ ಮಾಡಬೇಕೆಂಬ ವದಂತಿ ಇದೆ. ಪಟ್ಟಣ ಪ್ರಮುಖರು ಈ ಬಗ್ಗೆ ನ್ಯಾಯವಾದ ಮತ್ತು ಸಮ್ಮತವಾದ ಆಕ್ಷೇಪಣೆಯನ್ನು ಸಕಾಲದಲ್ಲಿ ಮಾಡಿ ಬಡಜನರನ್ನು ಸಂರಕ್ಷಿಸುವರೇ?" ಎಂದೊಬ್ಬ ಬಾತ್ಮಿದಾರರು ಬರೆಯುತ್ತಾರೆ.

ಬೊಂಬಾಯಿ ಸ್ಟೀಮ್ ನೇವಿಗೇಶನ್ ಕಂಪೆನಿಯವರು ಕಾಂಗ್ರೆಸ್ಸಿಗೋಸ್ಕರ ಬೊಂಬಾಯಿಗೆ ಹೋಗಿ ಬರಲು, ಪ್ರತಿನಿಧಿ ವ ಪ್ರೇಕ್ಷಕರಿಗೆ ಇದೇ ತಾ. ೧೫ರಿಂದ ನವಂಬರ ತಾ. ೧೧ರ ವರೆಗೆ ಅರ್ಧ ದರದ ರಿಯಾಯತಿಯನ್ನು ಕೊಟ್ಟಿರುವುದು ಸ್ತುತ್ಯ. ಆದರೆ ಇದೇ ಲೈನಿನಲ್ಲಿ ಎಲ್ಲಾ ಬಂದರುಗಳಿಗೆ ಬೊಂಬಾಯಿಯಿಂದ ದರಗಳನ್ನು ಕಡಿಮೆ ಮಾಡಿರುವರಾದರೂ, ಪೆಸೆಂಜರರ ಮಟ್ಟಿಗೆ ಒಂದನೆಯದಾದ ಮಲ್ಪೆ ಬಂದರಿಗೆ ದರವನ್ನು ಏನೊಂದೂ ಕಡಿಮೆಮಾಡದಿರುವುದು ಶೋಚನೀಯ!

ಈ ವರ್ಷ ದಸರೆಯ ಕಾಲದಲ್ಲಿ ಬಹಳ ಗದ್ದಲ; ಹೆಚ್ಚಿನ ಉತ್ಸಾಹ ಮತ್ತು ಉತ್ಸವಗಳು. ಅದರಲ್ಲೂ ಶ್ರೀಗಳಾದ ಪಿಜು. ಎ. ಪೈ ಮತ್ತು ಎಸ್. ಯು. ಪಣಿಯಾಡಿಯವರಿಂದ ವ್ಯವಸ್ಥಿತಗೊಳಿಸಲ್ಪಟ್ಟ ಉಡುಪಿ ಮಹಾಜನ ಸಭಾ ಇವರ ಕಡೆಯಿಂದ ಜರಗಿದ ಒಂಭತ್ತೂ ದಿನಗಳ ಸಮಾರಂಭವು ತೀರ ನೂತನವೂ ಜನಮನಾಕರ್ಷಣವೂ ಆಗಿತ್ತು. ಮಿತ್ರಮಂಡಳಿ, ಶ್ರೀ ಅನಂತೇಶ್ವರ ಪ್ರಾಥಮಿಕ ಶಾಲೆಗಳ ಉತ್ಸವಾದಿಗಳು ಚೆನ್ನಾಗಿದ್ದುವು.

ಕಳೆದ ಮಂಗಳವಾರ ಅಷ್ಟರಳಿಕ ಎಂಬಲ್ಲಿ ಶ್ರೀ ಉಪ್ಪೂರು ನಾಗಪ್ಪನವರು ಅಂದಚಂದವಾಗಿ ನಿರ್ಮಿಸಿ ಶೃಂಗರಿಸಿದ ತನ್ನ ಪ್ರಶಾಂತಭವನದಲ್ಲಿ ಒಂದು ಸಾಮ್ರಾಜಿಕ ಸಂತೋಷಕೂಟವನ್ನು ಜರಗಿಸಿದ್ದರು. ಈ ಸಂದರ್ಭದಲ್ಲಿ ತಳು, ಕರ್ನಾಟಕ ಮಲೆಯಾಳ ಮೊಗವೀರರ ಕೆಲವು ಮಾನ್ಯ ಗೃಹಸ್ಥರು ಬಂದಿದ್ದರಲ್ಲದೆ, ಉಡುಪಿಯ ಇತರ ಸಮುದಾಯದ ಕೆಲವು ಸರಕಾರೀ ಉದ್ಯೋಗಸ್ಥರೂ ಆಮಂತ್ರಿತರಾಗಿದ್ದರು.

ಪೊಳಲಿ—"ಗುರುಪುರ—ಪೊಳಲಿ ಗಾಡಿರಸ್ತೆಯ ಸಹಾಯಾರ್ಥ ಕೆಲ ಮಹನೀಯರಿಂದ ಈ ತನಕ ಒಟ್ಟು ರೂ. ೬೯—೧೩—೦ ವಾಗ್ದತ್ತವಾಗಿರುತ್ತದೆ. ಈ ಪೈಕಿ ವಸೂಲಾದ ರೂ. ೩೦; ಆಕ್ಟೋಬರಿ ೨ ಖಚಾರಾಗಿರುವುದು" ಎಂದು ಶ್ರೀ ಎಸ್. ಎ. ಶೀನಪ್ಪ ಹೆಗ್ಡೆಯವರು ಬರೆಯುತ್ತಾರೆ.

ಅಜೆಕಾರು— ಇದೇ ತಾ. ೧೪ರಲ್ಲಿ ಅಪರಾಹ್ನ ಘಂಟೆ ೩ಕ್ಕೆ ಅಜೆಕಾರು ಶಾಲಾ ಮಂದಿರದಲ್ಲಿ ಶಾಲಾ ವರ್ಧಂತ್ಯುತ್ಸವವೂ, ಆರೋಗ್ಯ ಸಪ್ತಾಹವೂ ಮತ್ತು ಶ್ರೀ ಶಾರದಾ ಪೂಜೋತ್ಸವವೂ ವಕೀಲ ಶ್ರೀ ಸಂಜಪ್ಪ ಶೆಟ್ರು ಅಧ್ಯಕ್ಷತೆಯಲ್ಲಿ ಜರಗಿತು.

ಕಾಸರಗೋಡು—ಈ ತಾಲೂಕಿನ ಸ್ವಾತಂತ್ರ್ಯ ಬಿಡೆಡ್ ಶಾಲೆಯಲ್ಲಿ ಇದೇ ಕಳೆದ ತಾ. ೧೬ನೇ ರಾತ್ರಿ ಘಂಟೆ ೯ಕ್ಕೆ, ವಿದ್ವಾನ್ ಸುರತ್ಕಲ್ ಸುಬ್ಬರಾಯರ ಅಧ್ಯಕ್ಷತೆಯಲ್ಲಿ ಯಕ್ಷಗಾನ ತಾಳಮದ್ದಳೆ ಜರಗಿತು.

ಬಂಟವಾಳ—ಇಲ್ಲಿಯ ಲೋಕಲ್ ಫಂಡ್ ಆಸ್ಪತ್ರೆಯ ಡಾಕ್ಟರರು ಕೆಲದಿನಗಳಿಂದ ಅಸ್ವಸ್ಥದಲ್ಲಿರುವ ಪ್ರಯುಕ್ತ, ಇವರ ಗೈರುಹಾಜರಿಯಲ್ಲಿ ಬೇರೆ ಡಾಕ್ಟರರನ್ನು ತಾತ್ಕಾಲಿಕವಾಗಿ ನೇಮಿಸಿದರೆ ಉಪಕಾರವಾಗುತ್ತಿತೆಂದು ಒಂದು ಬಾತ್ಮಿ. (ತಾ. ೧೧—೧೦—೩೪.)

ಗಂಗೊಳ್ಳಿ:—ಇಲ್ಲಿಯ ಸರಸ್ವತಿ ವಿದ್ಯಾಲಯ ಹಾಯರ್ ಎಲಿಮೆಂಟರಿ ಶಾಲೆಯಲ್ಲಿ ಇದೇ ತಿಂಗಳ ತಾ. ೧೪ನೇ ಸಾಯಂಕಾಲ ವಾಡಿಕೆಯಂತೆ ಶ್ರೀ ಶಾರದಾ ಪೂಜೆಯು ವಿಜೃಂಭಣೆಯಿಂದ ಜರಗಿತು.

[illegible]

[illegible] ಲಿಂಗಪ್ಪಯ್ಯ [illegible] ಪ್ರಾಯದ [illegible] ಮೂಲಕ ಸರ್ವ ಜನರಿಗೂ [illegible]—

[illegible] ಕಂಠೀರವದ ತಾರೀಖು 8-10-1934ನೇ ಸಂಚಿಕೆಯ 9ನೇ ಪುಟದಲ್ಲಿ ನನ್ನ ತಂದೆ ಲಿಂಗಪ್ಪಯ್ಯನು ನನ್ನ ವಿಷಯದಲ್ಲಿ [illegible] ಈ ಸಂಗತಿಗಳೆಲ್ಲಾ [illegible] ನಾನು ಸಣ್ಣ ಪ್ರಾಯದಿಂದಲೇ ಮಂದಬುದ್ಧಿಯವನಾಗಿದ್ದುದಾಗಲಿ, ಈಗ ಪ್ರಾಯಬಂದ ತರುವಾಯ ಸಿಕ್ಕಿದವರ ದುರ್ಬೋಧನೆಗೆ ಒಳಪಟ್ಟು ದುರಾಭ್ಯಾಸಗಳಿಗೆ ತೊಡಗಿದ್ದಾಗಲಿ ಇರುವುದಿಲ್ಲ. ನನ್ನ ಕುಟುಂಬದ ಗೌರವಾಭಿವೃದ್ಧಿಗೋಸ್ಕರವೇ ದುಡಿಯುತ್ತಿದ್ದೇನೆ. ನನ್ನ ತಂದೆ ಸದ್ರಿ ಲಿಂಗಪ್ಪಯ್ಯನವರಿಗೆ ಈಗ ಸುಮಾರು 63 ವರ್ಷ ಪ್ರಾಯವಿದ್ದು, ಹೆಚ್ಚಿನ ಸಮಯ, ಕೂಡ್ಲಿನಲ್ಲೇ ಇದ್ದು, ನಮ್ಮ ಮನೆಯ ವ ಆಸ್ತಿಯ ಕ್ಷೇಮಚಿಂತನೆಗೆ ಮನಸ್ಸುಕೊಡದೆ, ಹುಟ್ಟುವಳಿಯನ್ನು ಮಾತ್ರ ಕೊಂಡು ಹೋಗಿ ದುರ್ವ್ಯಯಪಡಿಸುತ್ತಿದ್ದಾರೆ. ಸಾಲದ ಬಡ್ಡಿ ವಗೈರೆ ಸಲ್ಲಿಸಿ ರಶೀದಿ ಸಹ ಮಾಡಿಸಿರುವುದಿಲ್ಲ. ಇತ್ತಲಾಗೆ ಯೆಲ್ಲಂಗಳ ಸುಬ್ರಾಯ ಎಂಬವರ ಪ್ರೇರೇಪಣೆಯಿಂದ, ಕೂಡ್ಲು ಸದಾಶಿವ ಶ್ಯಾನಭೋಗರಿಂದ ನನಗೆ ಬರಲಿಕ್ಕಿರುವ ರೂ. 2000ದ ನನ್ನ ಹೆಸರಿನ ಪ್ರೋ ನೋಟಿನ ಮೇಲ್ಚೀಟನ್ನು ಸಹ ನನ್ನಿಂದ ನನ್ನ ತಂದೆಯೇ ಪಡೆಕೊಂಡು ಆ ಮೇಲೆ ಹೀಗೆ ನನ್ನ ವಿಷಯ ಟೀಕಿಸಿದ್ದಾಗಿರುತ್ತದೆ. ಈಗ ನಾನೇ ಮನೆಯಲ್ಲಿರುವುದರಿಂದಲೂ ಎಲ್ಲಾ ಕಡ ಗಟ್ಟಿಗಳನ್ನು ಸುಧಾರಿಸಬೇಕಾಗಿರುವುದರಿಂದಲೂ ಅಲ್ಪಸ್ವಲ್ಪ ಸಾಲ ಮಾಡಬೇಕಾಗಿ ಬಂದಿದೆ. ಇನ್ನೂ ಬರಲಿಕ್ಕೆ ಅವಕಾಶವುಂಟು. ಇನ್ನು ಕೂಡ ನನ್ನ ತಂದೆಯು ಹುಟ್ಟುವಳಿಯನ್ನು ದುರುಪಯೋಗಪಡಿಸಿ ಬಡ್ಡಿ ಸಲ್ಲಿಸದೆ ಸಾಲ ವೃದ್ಧಿಯಾಗಗೊಟ್ಟರೂ ಬೇರೆ ಹೊಸ ಸಾಲಗಳನ್ನು ಮಾಡಿದರೂ ನನ್ನ ಆಸ್ತಿಗೆ ಬಾಧಿಸತಕ್ಕದ್ದಲ್ಲವೆಂಬ ಸಂಗತಿ ಈ ಮೂಲಕ ಸರ್ವರಿಗೂ ತಿಳಿಸೋಣಾಗುತ್ತದೆ.

ಈಶ್ವರಯ್ಯನ ರುಜು.

ಸಂಕಪ್ಪ ರೈ ಸಾಕ್ಷಿ.

ಹಿಂದೀಯರಾದ ನಾವು ಹೇಗೆ ಮೋಸಹೊಂದುವೆವು!

ಓದಿರಿ—ದೀನರಾದ ನಮ್ಮ (ಹಿಂದೀಯರ) ಅಜ್ಞಾನವನ್ನು ವಿದೇಶೀ ಕಾರ್ಖಾನೆದಾರರು ಹೇಗೆ ಸದುಪಯೋಗ ಪಡಿಸಿಕೊಳ್ಳುವರೆಂಬುದನ್ನು ತಿಳಿದುಕೊಳ್ಳಲು— ಓದಿರಿ ಇದನ್ನು!—

ನೆಲಗಡಲೆ ಎಣ್ಣೆಯು ಬಾದಾಮಿ ಎಣ್ಣೆಯಾಗಿದೆಯೆಂದು ಗೊತ್ತೇ?

ನಮ್ಮ ದೇಶದಲ್ಲಿ "ಶುದ್ಧ ಲೂಕಾ ಬಾದಾಮಿ ಎಣ್ಣೆ" ಎಂಬ ಹೆಸರಲ್ಲಿ ಮಾರಾಟಮಾಡಲ್ಪಡುತ್ತಿರುವ ಎಣ್ಣೆಯು ಬಾದಾಮಿ ಎಣ್ಣೆಯಲ್ಲ; ನಮ್ಮ ದೇಶದಿಂದಲೇ ಒಯ್ದು ನೆಲಗಡಲೆಯಿಂದ ತೆಗೆದ ಶುದ್ಧ ನೆಲಗಡಲೆ ಎಣ್ಣೆಯಾಗಿದೆ. ("ಇಂಡಿಜೆನಸ್ ಡ್ರಗ್ಸ್ ಒಫ್ ಇಂಡಿಯಾ" ಇದರ ಪುಟ 69ನ್ನು ನೋಡಿ.)

ವನಸ್ಪತಿ ತೈಲವಲ್ಲ—ಮೀನಿನ ತೈಲ! ತಿಳಿಯಿತೇ?

"ಇಂಪೀರಿಯಲ್ ಕೌನ್ಸಿಲ್ ಒಫ್ ಅಗ್ರಿಕಲ್ಚರಲ್ ರಿಸರ್ಚ್" ಇದರ "ಇಂಡಿಯನ್ ಓಯಿಲ್ ಕ್ರಶ್ಶಿಂಗ್ ಇಂಡಸ್ಟ್ರಿ ಕಮಿಟಿ"ಯ ತೃತೀಯ ಸಭೆಯಲ್ಲಿ, ಪ್ರಕೃತ ಪರದೇಶದಿಂದ "Edible Hardened Oil" (ಆಹಾರಕ್ಕುಪಯೋಗಿಸಬಹುದಾದ ತೈಲ) ಎಂಬ ಚೀಟನ್ನು ಹಚ್ಚಿಸಿ, ಪರದೇಶಗಳಿಂದ ಮತ್ಸ್ಯತೈಲವನ್ನು ಹಿಂದೂದೇಶಕ್ಕೆ ಆಮದು ಮಾಡಿ "ಸಸ್ಯತೈಲ"ವೆಂಬುದಾಗಿ ಮಾರಾಟಮಾಡುತ್ತಿರುವರೆಂದು ಬಯಲಾಯಿತು. ಆದರೆ,—

ಸತ್ತ ಹೆಗ್ಗಣಗಳ, ಬೆಕ್ಕುಗಳ, ನಾಯಿಗಳ ಮತ್ತು ದನ ಇತ್ಯಾದಿಗಳ ಕೊಬ್ಬಿನಿಂದಾಗುವ ಸಾಬೂನುಗಳು!—

ಇವುಗಳಿಗೆ ಸರಿಗಟ್ಟುವಂತಹುದು ಮತ್ತಾವುದಿದೆ? ಯುರೋಪಿನಲ್ಲಿ ಮೃಗಗಳ ಕೊಬ್ಬನ್ನೂ, ಮೀನು ಎಣ್ಣೆಯನ್ನೂ ಆಹಾರಕ್ಕಾಗಿ ಉಪಯೋಗಿಸುತ್ತಿರುವಲ್ಲಿ ಸಾಬೂನುತಯಾರಿಯಲ್ಲಿ ಉಪಯೋಗಿಸುವ ಹೆಚ್ಚಿನ ಕೊಬ್ಬುಗಳು ಸತ್ತ ಮೃಗಗಳ ಶರೀರಗಳಿಂದಲೂ, ವಧಾಖಾನೆಗಳಿಂದಲೂ, ರಸ್ತೆಗಳ 'ಕಚರಾ'ದಿಂದಲೂ, ಒಮ್ಮೊಮ್ಮೆ ನರದೇಹಗಳಿಂದಲೂ ದೊರಕಿಸಿಕೊಂಡಂಥವುಗಳಾಗಿವೆ. (ಸರ್ ಎಫ್. ಎ. ಟಾಲ್ಬೊಟರವರ "ಮಿಲ್ಲಿಯನ್ಸ್ ಫ್ರೊಮ್ ವೇಸ್ಟ್" ಎಂಬ ಗ್ರಂಥವನ್ನೋದಿರಿ.)

ಗೊಡ್ರೆಜ್ ವನಸ್ಪತಿ ಸುಗಂಧಸಾಬೂನುಗಳ

ವಿಷಯವಾಗಿ, ಅದನ್ನುಪಯೋಗಿಸುವ ಪ್ರಸಿದ್ಧಪುರುಷರೇನು ಹೇಳುವರೋ ಓದಿರಿ:—

ಕವಿರವೀಂದ್ರ:—"ಗೊಡ್ರೆಜ್ ಸಾಬೂನುಗಳಿಗಿಂತ ಉತ್ತಮವಾದ ವಿದೇಶೀ ಸಾಬೂನುಗಳನ್ನು ನಾನು ಕಂಡಿಲ್ಲ. ಇನ್ನು ಮುಂದೆ ಗೊಡ್ರೆಜ್ ಸಾಬೂನುಗಳನ್ನೆ ಉಪಯೋಗಿಸಲು ನಿರ್ಧರಿಸಿದ್ದೇನೆ."

ಕೆಲ ವರ್ಷಗಳ ಹಿಂದೆ **ಡಾ| ಅನ್ನಿಬಿಸೆಂಟರು** ತಮ್ಮ "ನ್ಯೂ ಇಂಡಿಯಾ"ದ ಪತ್ರಿಕೆಯಲ್ಲಿ, ಗೊಡ್ರೆಜ್ ಸಾಬೂನುಗಳ ಪ್ರಪಂಚದಲ್ಲಿ ಅತ್ಯುತ್ಕೃಷ್ಟವೆಂದು ಪ್ರಶಂಸಿಸಿದ್ದರು.

ರಾಷ್ಟ್ರೀಯ ಮಹಾಸಭೆಯ ಮಾಜಿ ಅಧ್ಯಕ್ಷರಾದ ಡಾ| ಅನ್ಸಾರಿಯವರು— ಗೊಡ್ರೆಜ್ ಸಾಬೂನುಗಳ ವಿಷಯವಾಗಿ ಹೇಳುವರು:—"ಗೊಡ್ರೆಜ್ ಸಾಬೂನುಗಳ ಉತ್ತಮ ಗುಣಗಳನ್ನು ಗುರುತಿಸಲು ನನಗೆ ಅತ್ಯಾನಂದವಾಗುತ್ತದೆ. ನಾನು ಅವುಗಳನ್ನು ಕಳೆದ ಹತ್ತು ವರ್ಷಗಳಿಂದಲೂ ಉಪಯೋಗಿಸುತ್ತಿದ್ದು, ಯುರೋಪಿನ ಯಾವ ಉತ್ತಮ ಸಾಬೂನುಗಳಿಗಿಂತಲೂ ಉತ್ಕೃಷ್ಟವೆಂಬುದನ್ನು ಮನಗಂಡಿದ್ದೇನೆ. ಅವುಗಳು ಹಿಂದೂದೇಶದಲ್ಲಿ ಸಿದ್ಧವಾಗುತ್ತಿರುವುದಕ್ಕೂ ಅವುಗಳ ಉತ್ಕೃಷ್ಟತೆಯ ದೆಸೆಯಿಂದಲೂ ಹಿಂದೀಯರೆಲ್ಲ ಅವುಗಳನ್ನೇ ಉಪಯೋಗಿಸಬೇಕೆಂದು ನನ್ನ ಸಲಹೆ."

ಗೊಡ್ರೆಜ್ ಗಂಧದ ಸಾಬೂನು ಮತ್ತು ಶೇವಿಂಗ್ ಸ್ಟಿಕ್ } ಇವುಗಳನ್ನು ಉಪಯೋಗಿಸಿರಿ.

ಸೋಲ್ ಏಜಂಟರು:

ನಾಥಿರ ಷಾ, ಫ್ಲಿಂಟರ್ ಎಂಡ್ ಕೋ., 165/C, ಬ್ರೋಡ್ವೆ, ಮದರಾಸು.

ಹೆಡ್ ಆಫೀಸು: ಬೊಂಬಾಯಿ. ಇತರ ಶಾಖೆಗಳು - ಕಲ್ಕತ್ತಾ, ಲಾಹೋರ್ ಮತ್ತು ಕರಾಚಿ.

ವಿ. ಸೂ:—ಗೊಡ್ರೆಜ್‌ರವರ ಹೆಸರಲ್ಲಿ ಮಾರಾಟವಾಗುತ್ತಿರುವ ಬಾರ್‌ಸೋಪ್ ಮತ್ತು ಇತರ (ಬಟ್ಟೆಯೊಗೆಯುವ) ಸಾಬೂನುಗಳಲ್ಲಿ ಗೋದ್ರೆಜರವರಿಗೆ ಸಂಬಂಧವಿಲ್ಲ.

The Canara Public Conveyance Company, Ltd., Mangalore.

WE TAKE UTMOST CARE OF PASSENGERS.

Read the following letter:-

Modern Hindu Hotel,
Calicut, 17—6 1934.

Dear Sir,

We wish to thank you for all that you did for us to make our stay at Mangalore comfortable. It is extremely nice of you to have looked after us as you did.

Yours faithfully,

(Sd.) **A. V. Ramaswami.**

The same service is offered to all. We call for reports from passengers, if they have failed to receive similar attention and assure to take prompt action to see that inconvenience is not repeated.

Chikmagalur Public Conveyance Motor Service, Chikmagalur.

ಚಿಕ್ಕಮಗಳೂರು ಪಬ್ಲಿಕ್ ಕನ್ವೆಯನ್ಸ್ ಮೋಟರ್ ಸರ್ವಿಸ್,

ಚಿಕ್ಕಮಗಳೂರು

ಮುಂಬಾಯಿಯಿಂದ – ಮಂಗಳೂರಿಗೆ.

ಮಂಗಳೂರಿನಿಂದ – ಮುಂಬಾಯಿಗೆ.

ಅಲ್ಲದೆ

ಹುಬ್ಬಳ್ಳಿ, ಧಾರವಾಡ, ಗೋವಾ, ಮುಂಬಾಯಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಯ ಎಲ್ಲಾ ಭಾಗಗಳಿಗೆ ಪ್ರಯಾಣ ನಡಿಸಲಿಕ್ಕೆ

ಮಂಗಳೂರು—ಕಡೂರು ಹಾದಿಗಿಂತ ಉತ್ತಮ ಬೇರೆ ಹಾದಿಯಿಲ್ಲ!

ಹೊಸ ಬಸ್ಸುಗಳು. ಅನುಕೂಲ ಪ್ರಯಾಣ ಸೌಕರ್ಯಗಳು

ಕಡೂರು ಜಿಲ್ಲೆಯೊಳಗಿನ ಎಲ್ಲಾ ಕಾಫಿ ತೋಟಗಳಿಗೆ

ಕೂಲಿಕಾರರನ್ನು ತರಲಿಕ್ಕೂ ಅಲ್ಲಿಂದ ಕೊಂಡುಹೋಗಲಿಕ್ಕೂ ನಾವು ಎಲ್ಲಾ ತರದ ಸಹಾಯವನ್ನೂ ಕೊಡುತ್ತೇವೆ

ಚಿಕ್ಕಮಗಳೂರಿನಿಂದ— ಶಿವಮೊಗ್ಗಕ್ಕೆ, ಬೇಲೂರಿಗೆ, ಕಡೂರಿಗೆ-
- ಮೂಡಗೆರೆಗೆ, ಸಕಲೇಶಪುರಕ್ಕೆ.
—ಮಂಗಳೂರಿಗೆ, ಮೂಡಬಿದ್ರೆಗೆ, ಪುತ್ತೂರಿಗೆ, ಮೂಲ್ಕಿಗೆ
—ಧರ್ಮಸ್ಥಳಕ್ಕೆ, ವೇಣೂರಿಗೆ, ಸುಬ್ರಹ್ಮಣ್ಯಕ್ಕೆ.

ಮಿತವ್ಯಯದ ಪ್ರಯಾಣ! ಉತ್ಸಾಹಕರ ಸೌಕರ್ಯ

ಬೇಕಾದ ಮಾಹಿತಿಗೆ ಪತ್ರ [illegible] ಬರೆದು ತಿಳಿದುಕೊಳ್ಳಿರಿ.

ವಿವಿಧ ವಿಷಯ.

ಒಬ್ಬಳನ್ನೆ ಐದು ಬಾರಿ ವರಿಸುವುದು!—

ಇದು ಸಾಧ್ಯವೇ, ಎಂದು ನೀವು ಕೇಳಬಹುದು. ಹಿಂದುದೇಶದಲ್ಲಿ ಸಾಧ್ಯವಲ್ಲ. ಅಥವಾ ರೂಢಿಯಲ್ಲಿಲ್ಲ. ಆದರೆ ಪರಂತು ಪಾಶ್ಚಾತ್ಯರಲ್ಲಿ ಎಲ್ಲವೂ ಸಾಧ್ಯವೆ. ಪಾರ್ಕೋಂದ್ಲಿನ ಅಬ್ರಹಾಮ್ ಕೈಶರನೆಂಬವನು ಒಂದೇ ಹೆಂಗುಸನ್ನು ನಾಲ್ಕು ಬಾರಿ ವಿಚ್ಛೇದದಿಂದ ದೂರಕ್ಕೊಡಿಸಿದನು. ಆಕೆಯನ್ನೇ ಪುನಃ ಐದು ಬಾರಿ ವಿವಾಹವಾದನು. ಕೊನೆಯಸಲ ಆತನಿಗೆ ಅಸ್ವಸ್ಥವಾಯಿತು. ದಾಂಪತ್ಯ ವಿಚ್ಛೇದವಾಗಿ ದೂರಕ್ಕೋದಿದ "ಮಾಜಿ ಹೆಂಡತಿ"ಯನ್ನು ಕರೆಸಿ, ಪಶ್ಚಾತ್ತಾಪವನ್ನು ಸೂಚಿಸಿ, ಕ್ಷಮಾಯಾಚನೆಮಾಡಿ, ಇನ್ನೊಮ್ಮೆ ವಿವಾಹವಾಗೆಂದನು. ಆಕೆ ಒಪ್ಪಿದಳು. ಈಗ ಸುಖವಾಗಿರುವರು.

ಈ ವರ್ಷದ ಹನೆ—

ತೀರ ವಿಚಿತ್ರವೆಂದು ದಾಖಲೆಯಾಯಿತು. ಪ್ರಪಂಚದ ಅನೇಕ ಕಡೆಗಳಲ್ಲಿ ಈ ವರ್ಷ ಭಾರೀ ಸೆಖೆ! ಕೆಲ ಕಡೆಗಳಲ್ಲಿ ಭಾರೀ ವೃಷ್ಟಿ. ಅದನ್ನನುಸರಿಸಿ ಈ ವರ್ಷದ ಚಳಿಯೂ ವಿಶೇಷವಾಗಿಯೇ ಇರಬಹುದೆಂದು ತಜ್ಞರು ಅಭಿಪ್ರಾಯಪಡುತ್ತಿರುವರು.

ಮನುಷ್ಯನ ತುಟಿಯ ಮೇಲೆ ಕೊಂಬು!

—ವಿಸ್ಮಯವಿದು! ಕ್ಯಾರ್ಲ್ಟೌನ್ ಎಂಬಲ್ಲಿಯ ನೋರ್ತ್ ರೈಡಿಂಗ್ ಎಂಬ ಗ್ರಾಮದಲ್ಲಿ ಒಬ್ಬನ ತುಟಿಯ ಮೇಲೆ ಒಂದು ದನದ ಕೊಂಬು ಬೆಳೆಯಲಾರಂಭಿಸಿದೆಯಂತೆ! – ಆರು ವರ್ಷಗಳ ಹಿಂದೆ ಒಂದು ದನವು ಹಾಯ್ದಾಗ, ಆತನ ಕೆಳತುಟಿಯು ಹರಿದು ಹೋಯಿತು. ಅಂದಿನಿಂದ, ಅಲ್ಲಿಂದ, ಒಂದು ಕೊಂಬು ಬೆಳೆಯಲಾರಂಭ! ಇದನ್ನು ಚಿಟಿಕೆ ಹೊಡೆದು ನೋಡಿದರೆ ದನದ ಕೊಂಬಿನಲ್ಲಾಗುವ ಶಬ್ದವುಂಟಾಗುತ್ತದೆ.

ಬ್ರಿಟ್ಟೆನಿನಲ್ಲಿ ಇನ್ನೂ ಇರುವರು—

"ಮಾಟಗಾತಿ"ಯರು! – ೬೦ ಸಾವಿರ ಮಂದಿ ಇರುವರಂತೆ. ಇವರೆಲ್ಲ ಪೋಲೀಸರ ಕಣ್ಣು ತಪ್ಪಿಸಿ, ಭಾವಿಕ ಜನರನ್ನು ವಂಚನೆಗೊಳಿಸಿ, ದೆವ್ವಕ್ಕೆ ಹಾಕಿ, ಹಣ ಸೆಳೆಯುತ್ತಿರುವರಂತೆ. ಇವರು ನಾನಾ ಭಯಂಕರ ಪ್ರವಾದಗಳನ್ನು ನುಡಿದ ದೆಸೆಯಿಂದ, ಭಯಭೀತರಾಗಿ ಎಷ್ಟೋ ಮರಣಗಳೂ ಆತ್ಮಹತ್ಯೆಗಳೂ ಆಗಿವೆಯಂತೆ.

ಗ್ರೀಟಾ ಗಾರ್ಬೋಳ ಸಂಬಳ!

ಅಮೇರಿಕದ ಪ್ರಖ್ಯಾತ ಸಿನಮಾ ನಟಿಯಾದ ಗ್ರೀಟಾ ಗಾರ್ಬೋಳಿಗೆ ಪ್ರತಿಯೊಂದು ಚಿತ್ರದಲ್ಲಿ ಅಭಿನಯಿಸಿದುದಕ್ಕೆ ೫೦ ಸಾವಿರ ಪವನು ದೊರೆಯುತಿತ್ತು. ಈಗ ೬೦ ಸಾವಿರ! ಆಕೆ ವರ್ಷಕ್ಕೆ ಎರಡು ಚಿತ್ರಗಳಲ್ಲಿ ಅಭಿನಯಿಸುತ್ತಾಳೆ.

ಎಸೆಂಬ್ಲಿ ಚುನಾವಣೆಗಳು.

ಎಸೆಂಬ್ಲಿ ಚುನಾವಣೆಗೆ, ದೇಶದ ಸಮಸ್ತ ಕಡೆಗಳಲ್ಲಿಯೂ ಭರದಿಂದ ಸಿದ್ಧತೆಗಳು ನಡೆದಿವೆ. ಚುನಾವಣೆಗಳು ಬರುವ ನವಂಬರ ತಾ. ೧೦ರಲ್ಲಿ ನಡೆವುವು. ಈ ಕೆಳಗಿನವರು ಪ್ರತಿಸ್ಪರ್ಧಿಗಳಿಲ್ಲದೆ ಆರಿಸಲ್ಪಟ್ಟಿರುವರು:—

ಅಪ್ಪರ್ ವರ್ಗದಾರರ ವತಿಯಿಂದ ಪಿಯೋದಾಸ ದುರ್ಗಾ; ಕಾಶಿಯಿಂದ ಮುನ್ಷಿ ಈಶ್ವರ ಶರಣ; ಸಂಯುಕ್ತ ಪ್ರಾಂತ್ಯದಲ್ಲಿ ನಾಲ್ವರು—ಹೀಗೆ ಅನೇಕ ಕಡೆಗಳಲ್ಲಿ ಪ್ರತಿಸ್ಪರ್ಧಿಗಳಿಲ್ಲದೆ ಚುನಾವಣೆಗಳಾಗಿವೆ.

ನೋಮಿನೇಶನ್ ಪೇಪರುಗಳನ್ನು ಎಲ್ಲ ಕಡೆಗಳಲ್ಲಿಯೂ ದಾಖಲು ಮಾಡಿದುದಾಯಿತು.

ನಮ್ಮ ಜಿಲ್ಲೆಯ ಪರವಾಗಿ ನಿಂತಿರುವ ಸಾಮುವೇಲ್ ಅರೂನರ ನೋಮಿನೇಶನ್ ಪತ್ರವು ಸ್ವೀಕೃತವಾಗಿದೆ. ಮದರಾಸಿನ ಸತ್ಯಮೂರ್ತಿಗಳ ನೋಮಿನೇಶನ್ ಪತ್ರವೂ ಸ್ವೀಕೃತವಾಯಿತೆಂದು ಕೇಳುತ್ತೇವೆ.

ಮೈಸೂರು ಸಂಸ್ಥಾನದ ಚಾಮರಾಜ ನಗರದಲ್ಲಿ, ಕ್ರೈಸ್ತಮತಕ್ಕೆ ಪರಿವರ್ತನಾದ ಮಾದಯ್ಯನೆಂಬ ಆದಿಕರ್ನಾಟಕ ಬಾಲಕನೊಬ್ಬನನ್ನು ಶುದ್ಧಿಗೊಳಿಸಿ ಪುನಃ ಹಿಂದೂಸಮಾಜಕ್ಕೆ ಸ್ವೀಕರಿಸಿದರು.

ಪ್ರಚಲಿತಸಮಾಚಾರ.

ನಮ್ಮ ಸಾರ್ವಭೌಮರು ಸಿಂಹಾಸನವೇರಿ,—

೧೯೩೫ಕ್ಕೆ ೨೫ ವರ್ಷಗಳು ತುಂಬುವುವು. ೧೯೩೫ರಲ್ಲಿ ರಜತೋತ್ಸವ ಜರುಗಿಸಬೇಕೆಂದು ಗೊತ್ತಾಗಿದೆ. ಈ ಉತ್ಸವವನ್ನು ವಿಶೇಷ ವೈಭವದಿಂದ ಜರುಗಿಸಬೇಕೆಂದು ಸಾರ್ವಭೌಮರ ಇಚ್ಛೆಯಿಲ್ಲವಾದರೂ,— ಆ ಆನಂದೋತ್ಸವವನ್ನು ಅಲಕ್ಷಿಸುವಷ್ಟು ನಿರಾಡಂಬರವಾಗಿ ಆಚರಿಸಬಾರದಷ್ಟೆ. ಇದಕ್ಕಾಗಿ, ಯಾವ ಬಗೆಯ ಅಲಂಕಾರಗಳು ಬೇಕು, ಯಾವ ಕಾರ್ಯಕ್ರಮವು ಆವಶ್ಯವಿದೆ, ಎಷ್ಟು ಹಣವು ಬೇಕಾಗಬಹುದೆಂಬುದನ್ನು ಕುರಿತು ಆಲೋಚಿಸುವರೆ ಕಲ್ಕತ್ತಾ ಕೋರ್ಪರೇಶನಿನವರು ಈಗಲೇ ಒಂದು ಕಮಿಟಿಯನ್ನು ನೇಮಿಸಿರುವರು. ಈ ನಡುವೆ,—

ಒಂದು 'ಪಿಟೀಲಾಯಣ'

ಕಲ್ಕತ್ತಾ ಕೋರ್ಪರೇಶನ್ ಮೆಂಬರರಾದ ಶ್ರೀಯುತ ಬಿ. ಎನ್. ಬೆನರ್ಜಿಯವರದು! ಏನೆಂದರೆ,—"ರಜತೋತ್ಸವ ಜರಗಲಿರುವುದು ೧೯೩೫ನೇ ಮೇ ತಿಂಗಳಲ್ಲಿ. ಅಷ್ಟರೊಳಗೆ ಹೊಸ ಸುಧಾರಣೆಗಳು ಬರಬಹುದು; ಬದಲಾವಣೆಗಳಾಗಬಹುದು. ಈ ದೆಸೆಯಿಂದ ಆ ವಿಚಾರವನ್ನು ೧೯೩೫ನೇ ಫೆಬ್ರುವರಿ ತಿಂಗಳ ತನಕ ಮುಂದರಿಸಿಟ್ಟರಾಗದೇ?" ಎಂದು. ಅದಕ್ಕೆ ಡಾ| ಜೆ. ಎನ್. ಮಿತ್ರರವರು ಕೂಡಲೇ ಎದುರಾಡಿದರು:—"ಸಾರ್ವಭೌಮರ ನೆನಪನ್ನು ರಾಜಕೀಯಗಳೊಂದಿಗೆ ಸಂಬಂಧಿಸಿ ನುಡಿಯುವುದನ್ನು ಕೇಳಿ ನನಗೆ ನಾಚಿಕೆಯಾಗುತ್ತದೆ!" ಮತ್ತೊಬ್ಬ ಸದಸ್ಯರೆಷ್ಟು, "ರಜತೋತ್ಸವದ ಬಗ್ಗೆ ವೆಚ್ಚ ಮಾಡುವ ಹಣದಿಂದ ಮುನಿಸಿಪಲ್ ಉದ್ಯೋಗಿಗಳ ಬಗ್ಗೆ ಒಂದು ಚಿಕಿತ್ಸಾಶ್ರಮವನ್ನು ತೆರೆದರಾಗದೇ!" ಎಂದು ಸೂಚಿಸಿದರು. ಅಂತು, ಯಾವ ಕಾರ್ಯಕ್ರಮವನ್ನು ಕೈಕೊಳ್ಳುವರೋ ಇನ್ನು ತಿಳಿಯಬೇಕಾಗಿದೆ.

ಮುಖ್ಯ ಸಚಿವ ಮೆಕ್ಡೋನಾಲ್ಡರು—

– ನೇತ್ರವ್ಯಾಧಿಯಿಂದ ಗುಣಹೊಂದಿ, ರಜೆಮುಗಿಸಿ, ಲಂಡನ್ ನಗರಕ್ಕೆ ಮರಳಿಬಂದಿರುವರು. ರಾಜಕಾರಣದಿಂದ ಶಾಶ್ವತರಜೆ ಪಡೆವರೋ ಎಂದು ಸಂದೇಹವಿದ್ದವರ ಪ್ರವಾದವನ್ನೆಲ್ಲ ಇವರು ಮಿಥ್ಯವಾಗಿಸಿ ತೋರಿಸಿದರು. ಬಂದವರಿಗೆ ಬಿಡುವಿಲ್ಲ. ಕಾರ್ಯಭಾರವನ್ನು ಹೊತ್ತುಕೊಳ್ಳದೆ ಬಿಡಲಿಲ್ಲ. ಪಾರ್ಲಿಮೆಂಟು ಇದೇ ತಾ. ೩೦ರಲ್ಲಿ ಸೇರುವುದು.

ಗಡಿಪ್ರಾಂತ್ಯಗಳಲ್ಲಿ 'ಗಾಂಧಿ ಆಶ್ರಮ'ಗಳು.

ಗಡಿಪ್ರಾಂತ್ಯದ ಪ್ರತಿಯೊಂದು ಜಿಲ್ಲೆಯಲ್ಲಿಯೂ ಒಂದೊಂದು 'ಗಾಂಧಿ ಆಶ್ರಮ'ವನ್ನು ಸ್ಥಾಪಿಸುವಂತೆ ಖಾನ್ ಅಬ್ದುಲ್ ಗಫರ್ ಖಾನರವರ ಇಚ್ಛೆಯಂತೆ, ಸಿದ್ಧತೆಗಳಾಗುತ್ತಿವೆ. ಗಫರ್ ಖಾನರವರು ತಮ್ಮ ಸಂಚಾರಕಾಲದಲ್ಲಿ, ಅಲ್ಲಲ್ಲಿ ಆಶ್ರಮಗಳನ್ನು ನೋಡಿ, ಅಲ್ಲಿಯ ಸರಳಜೀವನವನ್ನೂ ಆದರ್ಶ ಶಿಕ್ಷಣವನ್ನೂ ಕಂಡು ಮುಗ್ಧರಾಗಿರುವರು.

ನೀರಿನ ವಿವಾದ.

ತುಂಗಭದ್ರಾ ನದಿಯ ನೀರನ್ನು ಮದರಾಸು, ಹೈದರಾಬಾದು, ಮತ್ತು ಮೈಸೂರು ಹೀಗೆ ಮೂರು ಸರಕಾರಗಳು ಹಂಚಿಕೊಳ್ಳಬೇಕೆಂದು ಒಂದು ಕಾನ್ಫರೆನ್ಸು ನಡೆಯಿತು. ಮುಗಿಯಿತು. ಫಲ? — ಸಮಾಧಾನಕರವಿಲ್ಲ. ವಿವಾದವು ಮುಗಿದಂತೆ ತೋರುವುದಿಲ್ಲ.

ಹೊಸತೊಂದು ಪಿಸ್ತೂಲು—

– ಫ್ರಾನ್ಸಿನಲ್ಲಿ ಇದೀಗ ಸಿದ್ಧವಾಗಿದೆ. ಇದು ಒಂದು ವಿಧದ ಪ್ರಕಾಶವನ್ನು ಬೀರುವುದು. ಆ ಪ್ರಕಾಶವನ್ನು ನೋಡುತ್ತಲೇ ಎದುರಾಳಿಯ ಕಣ್ಣು ಕಟ್ಟಿದಂತಾಗುವುದು. ಇದರಿಂದ ಕಳ್ಳಕಾಕರ ಉಪಟಳವು ಕಡಿಮೆಯಾಗಬಹುದೆಂದೂ, ದಂಗೆಗಳನ್ನು ಅಕ್ಕಲ್ಪ ಅವಧಿಯಲ್ಲಿ ನಿಲ್ಲಿಸಬಹುದೆಂದೂ ಎಣಿಸಲಾಗಿದೆ. ಉಪಯೋಗಿಸುವ ವಿಧಾನವನ್ನು ಫ್ರೆಂಚ್ ಪೋಲೀಸರಿಗೆ ತೋರಿಸಲಾಗಿದೆ. ಇಂತಹ ಪಿಸ್ತೂಲುಗಳು ಕಳ್ಳಕಾಕರ ಕೈ ಸೇರದಿದ್ದರಾಯಿತೆಂದೇ ಜನರ ಇಚ್ಛೆ.

ಹಿಂದೀಯನಿಗೆ ಇಟೇಲಿಯಿಂದ ವಿದ್ಯಾರ್ಥಿವೇತನ.

ಆನಂದದ ಸುದ್ದಿ:—ರೋಮ್ ನಗರದ "ಮುಸ್ಸೊಲೋನಿ ಸಂಸ್ಥೆ"ಯಲ್ಲಿ, ಕ್ಷಯರೋಗ ಚಿಕಿತ್ಸಾ ವಿಧಾನದ ಪ್ರೌಢಶಿಕ್ಷಣ ಹಾಗೂ ಶೋಧದ ಬಗ್ಗೆ ಈ ವರ್ಷ ಒಂದು ವೇತನವು, ಭೋವಾಲಿಯ ಕ್ಷಯರೋಗ ಚಿಕಿತ್ಸಾಶ್ರಮದಲ್ಲಿ ರೇಡಿಯೋಲೋಜಿಸ್ಟರೂ ಸುಪರಿಂಟೆಂಡೆಂಟರೂ ಆಗಿರುವ ಡಾ| ಆರ್. ಎ. ಕೆ. ಟಂಡನ್ ಎಂಬವರಿಗೆ ದೊರೆತಿದೆ. ಇವರಿನ್ನು, ಇದೇ ಬರುವ ನವಂಬರ ತಿಂಗಳಲ್ಲಿ ರೋಮ್ ನಗರಕ್ಕೆ ಹೊರಟು ಹೋಗುವರು.

ಶ್ರೀ| ಎ. ಎಲ್. ಶೆಟ್ಟಿಯವರು—

– ದಕ್ಷಿಣ ಕನ್ನಡ ಜಿಲ್ಲೆಯವರಾಗಿದ್ದು, ಬಹಳ ಕಾಲದಿಂದ ಬೊಂಬಾಯಿಯಲ್ಲಿ ನೆಲಸಿದವರು. ಇವರು ಕಮ್ಯೂನಿಸ್ಟ್ ಸಾಹಿತ್ಯಗಳನ್ನು ಪರದೇಶಗಳಿಂದ ಆಮದು ಮಾಡಿದರೆಂಬ ಆಪಾದನೆಯಲ್ಲಿ ಸೆರೆಹಿಡಿಯಲ್ಪಟ್ಟಿರುವರೆಂದೂ, ಇವರೊಂದಿಗೆ ಮೂವರು ಕಲಾಸಿಗಳನ್ನೂ ಕೈದುಮಾಡಿರುವರೆಂದೂ ತಿಳಿದುಬರುತ್ತದೆ. ಕೈದು ಅಕ್ಟೋಬರ ತಾ. ೩ರಲ್ಲಿ ನಡೆದಿದೆ. ಸರಕಾರಕ್ಕೆ ಬರೆದುಕೊಳ್ಳಲಾಗಿದೆ. ಸರಕಾರದ ಮುಂದಿನ ಅಪ್ಪಣೆ ತೀವ ತನಕ ಇವರನ್ನು ಬೈಕುಲಾ "ಹೌಸ್ ಒಫ್ ಕರೆಕ್ಷನ್" ಕಾರಾಗೃಹದಲ್ಲಿರಿಸಿರುವರು.

ಕೂಲಿಗಾರರ ವಿವಾದ—

—ಬ್ರಿಟಿಷ್ ಇಂಡಿಯದಲ್ಲಿ, ೧೯೩೪ನೇ ಜೂನ್ ತಿಂಗಳಿಗೆ ಅಂತ್ಯಗೊಳ್ಳುವ ಮೂರು ತಿಂಗಳುಗಳಲ್ಲಿ ಎಲ್ಲೆಲ್ಲಿ ಎಷ್ಟೆಷ್ಟು ಎಂಬುದನ್ನು ಸರಕಾರದವರು ಪ್ರಕಟಿಸಿರುವರು. ಒಟ್ಟು ವಿವಾದಗಳು ೫೪; ಇವುಗಳಲ್ಲಿ ಮಜೂರಿಯ ವಿಷಯಕವಾದವುಗಳು ೪೦; ೭ ವಿವಾದಗಳು ಅಧಿಕಾರಿಗಳ ನೇಮಕಗಳ ಪ್ರತಿಭಟನಾರ್ಥವಾದುವು; ಎರಡು ಕೆಲಸದ ಗಂಟೆಗಳ ವಿಷಯವಾಗಿ; ಉಳಿದ ನಾಲ್ಕು – ? ಇವರಲ್ಲಿ ಬೊಂಬಾಯಿಯು ಪಾಲು ದೊಡ್ಡದು; ಮದರಾಸಿನದು ಚಿಕ್ಕದು, ೧,೭೩,೬೦೩ ಕೆಲಸಗಾರರು ಬೊಂಬಾಯಿಯ ವಿವಾದಗಳಲ್ಲಿ ಸಂಬಂಧಪಟ್ಟವರು. ಈ ಕಾರಣ, ಎಲ್ಲರ ಕೆಲಸದ ಅವಧಿಯ ಮೊತ್ತವನ್ನೆಣಿಸಿದರೆ ಬೊಂಬಾಯಿ ಪ್ರಾಂತ್ಯವೊಂದರಲ್ಲಿ ೩೯,೦೧,೩೦೦ ದಿನಗಳು ಕೆಲಸವಿಲ್ಲದೆ ನಷ್ಟವಾದುವಾಗಿ ತಿಳಿದುಬರುತ್ತದೆ!

ನೈಸರ್ಗಿಯರ ಭೂಕಂಪ ನಿಧಿ

–ಐವತ್ತು ಲಕ್ಷ ರೂಪಾಯಿಗಳಿಗೂ ಮಿಕ್ಕಿ ದೊರೆಯಿತು. ಅದರಲ್ಲಿ ಹೆಚ್ಚಿನ ಭಾಗವು ವಿನಿಯೋಗಿಸಿದುದೂ ಆಯಿತು. ಈ ನಿಧಿಗೆ ಲಕ್ನೋ ನಗರದಿಂದ ಹೋಗುವ ಸಹಾಯಧನದ ಪಟ್ಟಿಯು ಮುಗಿದಿದಂತೆ. ಲಕ್ನೋ ನಗರವು ಒಟ್ಟು ೩೦ ಸಾವಿರ ರೂಪಾಯಿ ಸಹಾಯಧನ ತೆತ್ತಿದೆ.

ಶ್ವೇತಪತ್ರ ವಿಮರ್ಶಕ ಸಿಲೆಕ್ಟ್ ಕಮಿಟಿಯ ಮುಖ್ಯ ಕಾರ್ಯಭಾಗವೆಲ್ಲ ಈಗಾಗಲೇ ಪೂರೈಸಿತು.

ಅಖಿಲ ಭಾರತ "ಅಸ್ಪೃಶ್ಯ"ರ ಪರಿಷತ್ತು ಇದೇ ತಾ. ೧೯ರಿಂದ ೨೧ರ ತನಕ ಮೈನಪುರದಲ್ಲಿ ಜರಗುವುದು. ಅಂಬೇಡಕರರೂ ದಯಮಾಡಿಸುವರು.

ಎರ್ನಾಕುಳಂ—ಶೋರನೂರ್ ಹೊಸ ರೈಲ್ವೆಯನ್ನು ತೆರೆವ ಸಮಾರಂಭವು ಈ ವಾರದಲ್ಲಿ ಕೊಚ್ಚಿ ಮಹಾರಾಜರವರಿಂದ ಜರಗಿಸಲ್ಪಡುವುದು.

ವ್ಯಾಪಾರವೃದ್ಧಿಯ ದೃಷ್ಟಿಯಿಂದ ಮುಂಬಾಯಿ ನಗರವನ್ನೆ ಹಿಂದೂದೇಶದ ಕೇಂದ್ರ ವಿಮಾನನಿಲ್ದಾಣವನ್ನಾಗಿ ಮಾಡಬೇಕೆಂದು ಸರಕಾರವನ್ನು ಕೇಳಿಕೊಳ್ಳತಕ್ಕದ್ದೆಂಬ ಠರಾವು ಮುಂಬಾಯಿ ನಗರಸಭೆಯಲ್ಲಿ ಮಾನ್ಯವಾಗಲಿಲ್ಲ. ಬದಲಾಗಿ, ವ್ಯಾಪಾರವೃದ್ಧಿಗೆ ಬೇರಾವುದಾದರೂ ಸೂಚನೆಗಳನ್ನು ಕೊಡಲೆಂದು ಒಂದು ಕಮಿಟಿಯು ನೇಮಕವಾಗಬೇಕಾಗಿ ಗೊತ್ತಾಗಿದೆ.

ತುಂಡು ಸುದ್ದಿ.

ಸಿನೆಮಯಲ್ಲಿಯೂ ಹೆಚ್ಚಾಗಿ ಜನವರಿಂದುಪಯೋಗಿಸಲ್ಪಡುತ್ತಿರುವ ಕಾರಣ ಬೆಂಗಳೂರು ನಗರಸಭೆಯವರು ಅದರ ಮೇಲಿನ ಆಕ್ಟ್ರಾಯಿ ಕರವನ್ನು ತೆಗೆದುಹಾಕಿರುವರು.

ಕಪುರ್ತಲಾ ಮಹಾರಾಜರು ಪ್ಯಾರಿಸ್ ನಗರದಲ್ಲಿ ವಿಹರಿಸುತ್ತಿರುವ ಪ್ರಯುಕ್ತ, ತಾವು ಸ್ವದೇಶಕ್ಕೆ ಮರಳುವ ತನಕ ಹಿಂದೂ ಸಿಕ್ಖಪರಿಷತ್ತಿನ ಅವಧಿಯನ್ನು ಮುಂದರಿಸಬೇಕೆಂದು ಬರೆದಿರುವರು.

ಎಸೆಂಬ್ಲಿ ಮೆಂಬರರಾದ ಶ್ರೀ| ಆರ್. ಎಸ್. ಶರ್ಮರವರು ಲಂಡನಿಗೆ ತೆರಳಿದ್ದು, ನಮ್ಮ ಹೊಸ ಗವರ್ನರರಾದ ಲೋರ್ಡ್ ಎರ್ಸ್ಕಿನರವರನ್ನು ಕಂಡು, ಹಿಂದೂದೇಶದ ರಾಜಕೀಯ ಪರಿಸ್ಥಿತಿಯ ಕುರಿತಾಗಿ ಸಂಭಾಷಿಸಿದರು.

ಪಂಜಾಬಿನ ಬಾಸೆಹಲ್ ಎಂಬಲ್ಲಿ, ಕಲ್ಲುಕಟ್ಟುವ ಮೇಸ್ತ್ರಿಗಳ ಬಗ್ಗೆ ಒಂದು ಶಾಲೆ ತೆರೆಯಲಾಗಿದೆ.

ಲಂಡನಿನ ಒಲಿಂಪಿಯಾ ಮೋಟಾರು ಪ್ರದರ್ಶನವು ತೆರೆಯಲ್ಪಟ್ಟಿದೆ. ಈ ವರ್ಷ ವಿಶೇಷ ಪ್ರೇಕ್ಷಕರಿರುವರು.

ಕವಿರವೀಂದ್ರರು ಕಾಶೀ ಹಿಂದೂ ವಿಶ್ವವಿದ್ಯಾಲಯದ ಪದವೀದಾನ ಸಮಾರಂಭದ (ನವಂಬರ ತಾ. ೧೦ರಲ್ಲಿ) ಭಾಷಣಮಾಡುವರು.

ಮುಂಬಾಯಿ ಚೌಪಾತಿ ತೀರದಲ್ಲಿರುವ ಲೋಕಮಾನ್ಯ ತಿಲಕರ ಶಿಲಾಪ್ರತಿಮೆಯನ್ನು ವಿದ್ಯುದ್ದೀಪ ಬೆಳಕಿನಿಂದ ಬೆಳಗಬೇಕೆಂಬ ಒಂದು ಠರಾವು ಮುಂಬಾಯಿ ನಗರಸಭೆಯಲ್ಲಿ ಮಾನ್ಯವಾಗಲಿಲ್ಲ.

ಲಿವರ್ ಪೂಲಿನ ಮೆಸರ್ಸ್ ಕಾಮೆಲ್ ಲೈರ್ಡ್ ಕಂಪೆನಿಯವರು ತಯಾರಿಸಿದ "ಕ್ಲೆಮೆಂಟ್" ಎಂಬ ಸ್ಟೀಮರು ಸಮುದ್ರಕ್ಕಿಳಿಸಲಾಯಿತು. ಇದು ಕೂಡಿ ಆ ಕಂಪೆನಿಯು ೧೦೦೦ ಸ್ಟೀಮರುಗಳನ್ನು ತಯಾರಿಸಿದಂತಾಯಿತು.

ಕನ್ನಡ ಸಾಹಿತ್ಯ ಸಮ್ಮೇಳನ.

ರಾಯಚೂರಿನಲ್ಲಿ, ಡಿಸೆಂಬರ್ ಕಡೆಯಲ್ಲಿ.

೨೦ನೆಯ ಕರ್ನಾಟಕ ಸಾಹಿತ್ಯ ಸಮ್ಮೇಳನವು ಹೈದರಾಬಾದು ಸಂಸ್ಥಾನದಲ್ಲಿರುವ ರಾಯಚೂರು ನಗರದಲ್ಲಿ ೧೯೩೪ನೆಯ ಡಿಸೆಂಬರ ೨೮, ೨೯, ೩೦ನೆಯ ತಾರೀಕು (ಶುಕ್ರವಾರ, ಶನಿವಾರ, ಭಾನುವಾರ)ಗಳಲ್ಲಿ ನಡೆಯುವಂತೆ ನಿರ್ಧಾರವಾಗಿದೆ. ಇಲ್ಲಿಯ ಪ್ರಸಿದ್ಧ ವಕೀಲರಾದ ಶ್ರೀಮಾನ್ ಗುಡಿಹಾಳ ಹನುಮಂತರಾವ್ ದೇಶಪಾಂಡೆ ಇವರ ನೇತೃತ್ವದಲ್ಲಿ ಸ್ವಾಗತಮಂಡಳಿ ಏರ್ಪಟ್ಟು ಸಮ್ಮೇಳನಕ್ಕೆ ಬೇಕಾದ ಅನುಕೂಲತೆಗಳನ್ನು ಸಂಭ್ರಮದಿಂದ ಸಿದ್ಧಗೊಳಿಸುತ್ತಿದೆ.

ಸುಪ್ರಸಿದ್ಧ ಸಾಹಿತಿಗಳಾದ ಮಂಗಳೂರಿನ ಶ್ರೀಮಾನ್ ಪಂಜೆ ಮಂಗೇಶರಾವ್ ಬಿ.ಎ., ಎಲ್. ಟಿ. ಇವರು ಅಧ್ಯಕ್ಷಸ್ಥಾನವನ್ನು ವಹಿಸಲು ದಯವಿಟ್ಟು ಒಪ್ಪಿರುತ್ತಾರೆ.

ಸಮ್ಮೇಳನದಲ್ಲಿ ಪ್ರಬಂಧಗಳನ್ನೋದಬೇಕೆಂದಾಗಲಿ, ನಿರ್ಣಯಗಳನ್ನು ಸೂಚಿಸಬೇಕೆಂದಾಗಲಿ, ಕೀರ್ತನೆ ಕಾವ್ಯವಾಚನ ನಾಟಕ ಮೊದಲಾದುವುಗಳನ್ನು ನಡೆಯಬೇಕೆಂದಾಗಲಿ, ಅಥವಾ ಆ ಕಾಲದಲ್ಲಿ ಬೇರೆ ಸಭೆ ಪ್ರದರ್ಶನ ಮೊದಲಾದುವುಗಳನ್ನು ಸೇರಿಸಬೇಕೆಂದಾಗಲಿ ಇಷ್ಟಪಡುವವರು ತಮ್ಮ ಉದ್ದೇಶವನ್ನು ೧೯೩೪ರ ಒಕ್ಟೋಬರ್ ೩೧ರೊಳಗಾಗಿ ಬೆಂಗಳೂರಲ್ಲಿರುವ ಸಾಹಿತ್ಯಪರಿಷತ್ತಿನ ಕಾರ್ಯದರ್ಶಿಯವರಿಗಾಗಲಿ ಅಥವಾ ರಾಯಚೂರಿನಲ್ಲಿರುವ ಸ್ವಾಗತಮಂಡಳಿಯ ಕಾರ್ಯದರ್ಶಿಯವರಿಗಾಗಲಿ ತಿಳಿಯಪಡಿಸಬೇಕೆಂದು ಕೋರಿದೆ.

ನಿಜಾಂ ಕರ್ನಾಟಕದಲ್ಲಿರುವ ನಮ್ಮ ಭಾಷಾಬಂಧುಗಳು ಈ ಸಮ್ಮೇಳನವು ಅತ್ಯಂತ ಯಶಸ್ವಿಯಾಗಿ ನಡೆಯಬೇಕೆಂದು ಆಶೆಪಟ್ಟುಕೊಂಡು ಉತ್ಸಾಹದಿಂದ ಏರ್ಪಾಟುಗಳನ್ನು ನಡೆಸುತ್ತಿದ್ದಾರೆ. ಸಮಸ್ತ ಕರ್ನಾಟಕದ ನಾನಾ ಭಾಗಗಳಲ್ಲಿರುವ ದೇಶಭಕ್ತರೂ, ಭಾಷಾಭಿಮಾನಿಗಳೂ, ಸಾಹಿತ್ಯೋಪಾಸಕರೂ, ಕಲಾಭಿಜ್ಞರೂ ಸಮ್ಮೇಳನಕ್ಕೆ ಬರುವರೆಂದು ರಾಯಚೂರಿನ ಸ್ವಾಗತಮಂಡಲಿಯು ನಿರೀಕ್ಷಿಸಿಕೊಂಡಿದೆ. ಕನ್ನಡನಾಡಿನ ಎಲ್ಲ ಪ್ರಾಂತಗಳಿಂದಲೂ ಮಹಾಜನರು ತಂಡೋಪತಂಡವಾಗಿ ರಾಯಚೂರಿಗೆ ದಯಮಾಡಿ ಬಂದು, ಸಮ್ಮೇಳನ ಕಾರ್ಯದಲ್ಲಿ ಭಾಗಿಗಳಾಗಿ, ತಾಯ್ನುಡಿಯ ಏಳಿಗೆಯ ಕೆಲಸಕ್ಕೆ ಬೆಂಬಲಕೊಡಬೇಕೆಂದು ಕರ್ನಾಟಕ ಸಾಹಿತ್ಯಪರಿಷತ್ತು ಮನಃಪೂರ್ವಕವಾಗಿ ಪ್ರಾರ್ಥಿಸುತ್ತದೆ.

[illegible]

[illegible] ೧-೯-೩೪ನೇ ದಿವಸ [illegible] ಸೆಟ್ಲಮೆಂಟು ಆಫೀಸರರಿಗೆ ಟಪ್ಪಾಲು ಮೂಲಕ ರವಾನಿಸಿದ ಆಕ್ಷೇಪಣೆಗಳ ಸಾರಾಂಶ:—

೧. ಸದರಿ ಸ್ಕೀಮು ರಿಪೋರ್ಟು ಯಾನೆ ಸೆಟ್ಲಮೆಂಟು ವರದಿಗೆ ಆಕ್ಷೇಪಣೆಗಳನ್ನು ಕೊಡುವ ಬಗ್ಗೆ ಮೊಟ್ಟ ಮೊದಲು ಸರಕಾರದವರು ರೈತರಿಗೆ ಕೊಟ್ಟ ವಾಯಿದೆಯು ಬಹಳ ಕಡಿಮೆಯಾಗಿತ್ತು. ವಿಷಯಸಂಗ್ರಹದ ಬಗ್ಗೆ ಸಂಬಳ ತಿನ್ನುವ ಅನೇಕ ನೌಕರರ ಬೆಂಬಲ ವಿದ್ದರೂ, ಸದರಿ ವರದಿಯನ್ನು ತಯಾರಿಸುವ ಬಗ್ಗೆ ಸೆಟ್ಲಮೆಂಟ್ ಆಫೀಸರರಿಗೆ ಕಡಿಮೆಪಕ್ಷ ಎರಡು ವರುಷಗಳ ಸಮಯ ಹಿಡಿದದೆ. ಹೀಗಿರುತ್ತಾ, ಅಂಥ ವರದಿಯನ್ನು ತುದಿಯಿಂದ ಬುಡದ ವರೆಗೆ ವಿಮರ್ಶೆಮಾಡಿ ಅದರ ಯಾವತ್ತೂ ಮತಲಬುಗಳಿಗೆ ತಕ್ಕಷ್ಟು ಆಧಾರಗಳ ಮೂಲಕ ಆಕ್ಷೇಪಣೆಗಳನ್ನು ಕೊಡುವ ಬಗ್ಗೆ ಜಿಲ್ಲೆಯ ಬೇರೆ ಬೇರೆ ವರ್ಗಧಾರರ ಸಂಘಗಳು ಕೇಳಿಕೊಂಡಂತೆ, ರೈತರಿಗೆ ನ್ಯಾಯವನ್ನು ಮಾಡಬೇಕೆಂಬ ಮನಸ್ಸು ಸರಕಾರದವರಿಗೆ ಇದ್ದಿದ್ದರೆ, ಸಮಯವನ್ನು ಕನಿಷ್ಠಪಕ್ಷಕ್ಕೆ ಮತ್ತೂ ಮೂರು ತಿಂಗಳ ಮಟ್ಟಿಗಾದರೂ ಮುಂದರಿಸಬೇಕಾಗಿತ್ತು. ಇದಕ್ಕೆ ಬದಲಾಗಿ ವ್ಯಾದೆಯನ್ನು ಬರೇ ತೋರಿಕೆಯ ಮಟ್ಟಿಗೆ ಹೆಸರಿಗೆ ತಕ್ಕ, ತಾ. ೧-೯-೩೪ರ ವರೆಗೆ ಮುಂದರಿಸೋಣಾಗಿತ್ತು. ಇಷ್ಟು ಸ್ವಲ್ಪ ಸಮಯದೊಳಗೆ ಬೇಕಾದಷ್ಟು ಆಧಾರಗಳನ್ನು ಕೊಟ್ಟು ಸದರಿ ವರದಿಗೆ ಆಕ್ಷೇಪಣೆಗಳನ್ನು ಕೊಡುವರೆ ಸರ್ವಸಾಮಾನ್ಯವಾದ ರೈತನಿಗೆ ಸಾಧ್ಯವಿದೆಯೇ ಎಂಬುದು ಮೊದಲು ಪ್ರಶ್ನೆ.

೨. ಈ ಕೆಳಗಿನ ಆಕ್ಷೇಪಗಳನ್ನು ಎರಡು ಭಾಗಗಳಾಗಿ ವಿಂಗಡಿಸಿಯದೆ. ಒಂದನೇದಾಗಿ ಸದರಿ ವರದಿಗೆ ಆಧಾರವಾದ ವಿಷಯಗಳು ಮತ್ತು ಅಂಥಾ ವಿಷಯಗಳ ಮೇಲೆ ಆಧರಿಸಿದ ತೀರ್ಮಾನಗಳು; ಮತ್ತು ಎರಡನೇದಾಗಿ, ಸದರಿ ವಿಷಯಗಳು ಮತ್ತು ತೀರ್ಮಾನಗಳನ್ನೇ ಆಧಾರವಾಗಿಟ್ಟುಕೊಂಡು ರಿಸೆಟ್ಲಮೆಂಟು ಯಾನೆ ಸರ್ವಸಾಮಾನ್ಯ ಚಾಲ್ತಿಯಿರತಕ್ಕ ತೀರ್ವೆಯನ್ನು ಏರಿಸುವ ಬಗ್ಗೆ ಮಾಡಿದ ಶಿಫಾರಸುಗಳು.

೩. ವಿಷಯಗಳು:—ಇವುಗಳು ಯಾವುವೆಂದರೆ—(೧) ಗ್ರಾಮಸಂಚಾರ, ತನಿಖಿ ಮತ್ತು ವಿಚಾರಣೆ ಇವುಗಳಿಂದ ಸಂಗ್ರಹಿಸಿದಂಥವುಗಳು.

(೨) ಕಳೆದ ಸೆಟ್ಲಮೆಂಟಿನ ಉಪಯೋಗದ ಬಗ್ಗೆ ತಯಾರಿಸಿದ ವ ಉಪಯೋಗಿಸಲ್ಪಟ್ಟಂಥವುಗಳು.

(೪) ಗ್ರಾಮಸಂಚಾರ, ತನಿಖಿ ಮತ್ತು ವಿಚಾರಣೆಗಳು:—ಸದರಿ ವರದಿಯಲ್ಲಿ ಬಹಳವಾಗಿ ಪ್ರಶಂಸಿಸಲ್ಪಟ್ಟ 'ಗ್ರಾಮಸಂಚಾರ' ವಗ್ಯೆರೆಗಳಿಗೆ ಸಾಕಷ್ಟು ಪ್ರಕಟಣೆಯಿಲ್ಲದ್ದರಿಂದ ಸೆಟ್ಲಮೆಂಟು ಇಲಾಖೆಯ ಕೀಳು ನೌಕರರು ಆಯಾಯ ಗ್ರಾಮಗಳಿಗೆ ಬರುವವರೆಗೂ ಅವುಗಳು ರೈತರ ತಿಳುವಳಿಕೆಗೆ ಬರಲಿಲ್ಲವೆಂದು ಹೇಳಿದರೆ ಅತಿಶಯೋಕ್ತಿಯಾಗಲಾರದು. ಅದ್ದರಿಂದ ಸದರಿ ವರದಿಯ ಕರ್ತೃಗಳಾದ ಆಫೀಸರರು ನಡಿಸಿದ್ದಾಗಿ ಹೇಳುವ 'ಗ್ರಾಮಸಂಚರಣೆ' ವಗ್ಯೆರೆಗಳ ಕಾಲದಲ್ಲಿ ರೈತರು ತಮ್ಮ ಹಾಲಹವಾಲೆಗಳನ್ನು ನೋಡಿಕೊಳ್ಳಲು ಶಕ್ತರಾಗಲಿಲ್ಲ. ಒಂದು ವೇಳೆ ಅಂಥಾ 'ಗ್ರಾಮಸಂಚರಣೆ' ವಗ್ಯೆರೆಗಳಿಗೆ ಸಾಕಷ್ಟು ಪ್ರಕಟಣೆ ಇದ್ದಿದ್ದರೂ, ಮತ್ತು ಅಂಥಾ 'ಗ್ರಾಮಸಂಚರಣೆ' ವಗ್ಯೆರೆಗಳು ಪ್ರಕಟಣೆ ಪ್ರಕಾರ ಆಯಾಯ ಕಾಲಗಳಲ್ಲಿ ನಡೆದಿದ್ದರೂ, ಅವುಗಳು ಜಿಲ್ಲೆಯ [illegible] ಗ್ರಾಮಗಳ ಕ್ಷೇತ್ರಗಳ (ಶೇಕಡಾ [illegible]) ಕ್ಕೆ ಮಾತ್ರ ಸಂಬಂಧಪಟ್ಟವುಗಳಾಗಿದ್ದರಿಂದ ಅವುಗಳಿಂದ ಸಂಗ್ರಹವಾದ ಅಲ್ಪ ವಿಷಯಗಳ ಮೇಲೆ (ಇಡೀ ಜಿಲ್ಲೆಯ) ರೈತರಿಗೆ ಅಪಾರವಾದ ಪರಿಣಾಮಗಳನ್ನುಂಟುಮಾಡುವ ಸದರಿ ವರದಿ ವ ಅದರಲ್ಲಿನ ತೀರ್ಮಾನ ವ ಶಿಫಾರಸುಗಳನ್ನು ಎಂದಿಗೂ ಆಧರಿಸಬಾರದಾಗಿತ್ತು.

(ಸಶೇಷ.)

ಮೇಜು ಹಾರಾಡುವುದು!!!

ಗ್ಲೋರ್ಲಿಕ್ ಎಂಬಲ್ಲಿಯ ಈಸ್ಟ್‌ಟಿಟನ್ ನಾಮಾಂಕಿತ ಆಸ್ಪತ್ರೆಯಲ್ಲಿ, ಒಂದು ಕೊಠಡಿಯಲ್ಲಿರಿಸಿದ ಮೇಜು; ರಾತ್ರಿಕಾಲದಲ್ಲಿ, ದೀಪಗಳನ್ನು ನೊಂದಿಸಿದ ಕೂಡಲೇ ನೆಗೆಯಲು ಆರಂಭಿಸುವುದು. ದೀಪವನ್ನು ಬೆಳಗಿದ ಕೂಡಲೇ ನೆಗೆದಾಟ ನಿಲ್ಲುವುದು. ಆ ಕೊಠಡಿಯಲ್ಲಿ ಒಂದು ಹುಡುಗಿ ಚಿಕಿತ್ಸೆಗಾಗಿ ಬಂದಿರುವಳು. ಅಂದಿನಿಂದ ಈ ವಿಚಿತ್ರಕ್ಕೆ ಆರಂಭವಾಗಿದೆ. ಆ ಹುಡುಗಿಯ ಮತ್ತು ಇನ್ನೊಬ್ಬ ರೋಗಿಯ ಮಂಚಗಳ ನಡುವೆ ಈ ಮೇಜನ್ನು ಇರಿಸಿರುವರು. ಆಸ್ಪತ್ರೆಯ ಡಾಕ್ಟರರೇ ಸ್ವತಃ ಆ ಕೋಣೆಗೆ ಗುಂಪು ಕಟ್ಟಿ ಹೋಗಿ, ದೀಪ ನೊಂದಿಸಿ ಪರೀಕ್ಷಿಸಿದರು. ದೀಪ ನೊಂದಿಸಿದ ಕೂಡಲೇ ಮೇಜು ಹಾರಾಡುವುದು ಖಂಡಿತ! ಒಬ್ಬನು ಆ ಮೇಜನ್ನೇರಿ ಕುಳಿತು, ದೀಪವನ್ನು ನೊಂದಿಸಿದನು. ಕೂಡಲೇ ಅವನೊಂದಿಗೇ ಮೇಜು ಹಾರಿತಂತೆ! ದೀಪ ಬೆಳಗಿ, ಕೂಡಲೇ ಅವನನ್ನು ರಕ್ಷಿಸಿದರು. ಕೋಣೆಯ ಮಾಡನ್ನೂ, ನೆಲವನ್ನೂ, ಗೋಡೆಗಳನ್ನೂ ಚೆನ್ನಾಗಿ ಪರೀಕ್ಷಿಸಿ ನೋಡಿದುದಾಯಿತು. ಈ ವಿಚಿತ್ರವೇನೆಂದು ತಿಳಿಯದೆ ಎಲ್ಲರೂ ಮಂಕರಾಗಿರುವರು.

'ಕೊಂಗ್ರೆಸಿನ ಮೇಲೆ ವಿಶ್ವಾಸವಿಡಿ.'

ಹೀಗೆಂದು ಪಾಟ್ನಾ ಹೈಕೋರ್ಟಿನ ಮಾಜಿ ಜಡ್ಜರಾದ ಶ್ರೀ ಪಿ. ಆರ್. ದಾಸರವರು ಒಂದು ಪ್ರಕಟಣೆಯ ಮೂಲಕ ವಿನಂತಿಸಿಕೊಳ್ಳುತ್ತಾ, 'ನಾವು ರಾಷ್ಟ್ರೀಯ ಪಕ್ಷವನ್ನು ದಿವಂಗತ ಸಿ. ಆರ್. ದಾಸರ ಮೇಲ್ಪಂಕ್ತಿಯನ್ನನುಸರಿಸಿ ರಚಿಸಿರುವೆವು' ಎಂಬ ಮಾಲವೀಯರ ಹೇಳಿಕೆಯನ್ನು ಪ್ರತಿಭಟಿಸಿರುತ್ತಾರೆ.

'ಕೊಂಗ್ರೆಸ್ಸಿಗೆ ಅಪಜಯವಾದರೆ, ಕೊಂಗ್ರೆಸ್ಸಿನ ಕಡೆಗೆ ಜನರ ಸಹಾನುಭೂತಿಯಿಲ್ಲವೆಂಬ ಸರಕಾರದ ಅಭಿಪ್ರಾಯವು ಸ್ಪಷ್ಟೀಕರಿಸಲ್ಪಟ್ಟಂತಾಯಿತು. ಕೊಂಗ್ರೆಸ್ಸು ನಿಮ್ಮ ವಿಶ್ವಾಸಕ್ಕೆ ಪಾತ್ರವಾಗಿಲ್ಲವೇ?' ಎಂದವರು ಪ್ರಶ್ನಿಸುವರು.

ಕುಷ್ಠರೋಗಿಗಳಿಗೆ ಸಹಾಯ.

ಇಂಗ್ಲಾಂಡಿನ ಪ್ರೆಸ್ಟನ್ ಎಂಬಲ್ಲಿಯ ಹರ್ಬರ್ಟ್ ಸ್ಪೆನ್ಸರ್ ಎಂಬವರು, ಹಿಂದೂ ದೇಶಕ್ಕೆ ಬಂದು, ಇಲ್ಲಿಯ ಕುಷ್ಠರೋಗ ಚಿಕಿತ್ಸಾಲಯಗಳಲ್ಲಿ ಕೆಲಸಮಾಡಿ ಅನುಭವ ಪಡೆಯುವರಂತೆ. ಇಂಗ್ಲಾಂಡಿನಲ್ಲಿ ಕುಷ್ಠರೋಗಿಗಳ ಸಹಾಯಾರ್ಥ ಒಂದು ಸ್ವಯಂಸೇವಕರ ಪಡೆ [illegible]. ಸ್ವಯಂಸೇವಕರು ತರಬೇತಿಗಾಗಿ ಇಲ್ಲಿಗೆ ಬರುವವರಿದ್ದಾರೆ. ಈ ಸ್ವಯಂಸೇವಕದಳದವರು ಒಂಭತ್ತು ತಿಂಗಳ ತನಕ ಬೇರೆ ಬೇರೆ ಕಡೆಗಳಲ್ಲಿ ತರಬೇತಿ ಹೊಂದಿ, ಮುಂದೆ, ಪ್ರಪಂಚದ ಬೇರೆ ಬೇರೆ ಕಡೆಗಳಿಗೆ ಹೋಗಿ, ಕುಷ್ಠ ರೋಗಿಗಳಿಗೆ ಚಿಕಿತ್ಸಿಸುವ ಸೇವಾಶ್ರಮಗಳನ್ನು ತೆರೆವ ಅಥವಾ ಸಹಾಯಮಾಡುವ ಉದ್ಯಮವನ್ನು ಕೈಕೊಳ್ಳುವರೆಂದು ಗೊತ್ತಾಗಿದೆ.

ಫ್ರಾನ್ಸಿನ ಗಲಭೆಯ ನಂತರ

ಮಾರ್ಸೇಲಿ ಕೊಲೆಗಳಾದುವು; ದೇಶವು ಇನ್ನೂ ಸಂದೇಹಾಸ್ಪದ ಸ್ಥಿತಿಯಲ್ಲಿದೆ. ಫ್ರೆಂಚ್ ಮಂತ್ರಿಗಳು ರಾಜೀನಾಮೆ ಕೊಟ್ಟರು. ಹೊಸ ನೇಮಕಗಳಾಗುವುವು. ಈ ಕೊಲೆಗಳು ಮತ್ತೊಂದು ಸಮರಕ್ಕೆ ಕಾರಣವಾಗಬಹುದೆಂಬ ಅಂಜಿಕೆ ಮಾತ್ರ ಈಗ ಜನರಲ್ಲಿ, ಕೊಂಚ ಕೊಲಗಿದಂತಿದೆ.

ಇದೇನು ಕಲಹ—ಯುದ್ಧಕ್ಕೆ ಕಾರಣವೇ?

'ಕೊಕೊಸ್' ಎಂಬ ದ್ವೀಪದಲ್ಲಿ, ಪೂರ್ವ ಕಾಲದಲ್ಲಿ ಸಮುದ್ರಕಳ್ಳರು ಲಕ್ಷಾಂತರ ದ್ರವ್ಯಾಭರಣಗಳನ್ನು ಹೂಳಿಟ್ಟಿದ್ದರೆಂಬುದನ್ನು ಆಲಿಸಿಯೋ—ಹೇಗೋ—ತಿಳಿದು, ಕೆಲವು ಬ್ರಿಟಿಷ್ ಸಾಹಸಿಗಳು ಆ ದ್ವೀಪಕ್ಕೆ ತೆರಳಿರುವರು. ಇವರೇ ಆ ದ್ವೀಪದಲ್ಲಿ ಮೊದಲು ಬಂದು ಕಾಲೂರಿದವರೆಂಬ ಕಾರಣದಿಂದ ತಮ್ಮ ಸ್ವಾಮಿತ್ವವನ್ನು ಸ್ಥಾಪಿಸುವರೆಂಬುದನ್ನು ಕೇಳಿ, ಕೊಸ್ಟಾರಿಕನ್ ಎಂಬ ಪ್ರದೇಶದ ಸರಕಾರದವರು, ಆ ದ್ವೀಪವು ತಮ್ಮ ಆಡಳಿತದೊಳಗಿನದ್ದೆಂದು ಸಾರಿ, ಆ ದ್ವೀಪದ ಕಡೆಗೆ ಧಾವಿಸಿರುವರು. ಬ್ರಿಟಿಷರನ್ನೋಡಿಸುವರಂತೆ. ಆ ದ್ವೀಪದಲ್ಲಿ ಯಾರ ಧ್ವಜವೂ ಇಲ್ಲದಿದ್ದ ಕಾರಣ—ತಾವೇ (ಬ್ರಿಟಿಷ) ಸ್ವಾಮಿಗಳೆಂದು ಬ್ರಿಟಿಷರ ಹಟ. ಇನ್ನೇನು,—ಇದುವೇ ಒಂದು ಒಂದು ಕಲಹವು ವಿಷಮ ಪರಿಣಾಮವನ್ನು ತರಬಹುದೇ ಎಂಬುದೊಂದು ಭಯ ತಲೆದೋರುವುದಾಗಿದೆ.

ರೇಶ್ಮೆಯಂತೆ, ನುಣುಪಾದ ಮತ್ತು ಹೊಳಪಾದ ಕೇಶಧಾಮ

ದಿನನಿತ್ಯದ ಸ್ನಾನಕ್ಕೆ ಮುಂಚಿತವಾಗಿ ನಿಮ್ಮ ಕೂದಲುಗಳನ್ನು ಚೆನ್ನಾಗಿ ಬಾಚಿ, ಬ್ರಶ್ಶಿನಿಂದ ಸವರಿ, ಆ ನಂತರ

"ಕುಂತಳ ಕೌಮುದಿ"

ಎಂಬ ಹಿಂದೂಸ್ಥಾನದ ಪ್ರಸಿದ್ಧ ಕೇಶ ತೈಲ್ಯದಿಂದ ಕೂದಲುಗಳ ಬುಡವನ್ನು ಜಾಗರೂಕತೆಯಿಂದ ತಿಕ್ಕಿರಿ.

(ಮನಮುಗ್ಧಕರವಾದ ಸುಗಂಧವನ್ನುಳ್ಳದು.)

ಹಿಂದೂಸ್ಥಾನದಲ್ಲೆಲ್ಲ ಸರ್ವತ್ರ ಉಪಯೋಗಿಸಲ್ಪಡುತ್ತಿದೆ.

ತಯಾರಕರು:— ಬೆಲೆ ಸೀಸೆ ಒಂದಕ್ಕೆ ರೂ. 0—12—0.

ಆರ್. ಸಿ. ಸೇನ್ ಎಂಡ್ ಕೋ.,
ಲಿಮಿಟೆಡ್, ಕಲ್ಕತ್ತ.

ಏಜಂಟರು:—
ಕುಂತಳ ಕೌಮುದಿ ತೈಲ,
ವೆನ್‌ಲೊಕ್ ಆಸ್ಪತ್ರೆ ಎದುರು, ಮಂಗಳೂರು.

'ಜವಾಹಿರ್' ಬೆಣ್ಣೆ ಎಣ್ಣೆ

ರಾತ್ರಿಯಲ್ಲಿ ಸೂರ್ಯನಂತೆ ಪ್ರಕಾಶಕೊಡುವುದೆಂದರೆ
ಇದೇ

'ಜವಾಹಿರ್' ಬೆಣ್ಣೆ ಎಣ್ಣೆ

ನಿಮ್ಮೂರಲ್ಲಿ ಇದು ಮಾರಲ್ಪಡುತ್ತಿದೆಯೋ? ಇಲ್ಲವಾದರೆ ಕೂಡಲೇ ಏಜನ್ಸಿಗಾಗಿ ಬರೆದುಕೊಳ್ಳಿರಿ.

ವಿಳಾಸ:—

T. Madhava Pai,
Distributor, Kasargod, S. K.

A Recurring Pleasure — *To Smoke them*

REGISTERED



TRADE MARK

Mangalore Darbar Beedies

Thousands enjoy them daily all over India.

When buying see our Trade Mark!

Regd. Trade Mark.

ಮಂಗಳೂರು ದರ್ಬಾರ್ ಬೀಡಿಗಳು

ಇವುಗಳನ್ನು ಸೇದುವುದೆಂದರೆ ಆನಂದ!

ಯಾವ ಕೂಟದಲ್ಲೂ ಸಿಗರೇಟುಗಳ ಸ್ಥಾನವನ್ನು ಯೋಗ್ಯವೆನಿಸುವಂತೆ ವಹಿಸುವ ಬೀಡಿಗಳಿರುವುದಾದರೆ—ಅವುಗಳು

Regd. ದಿ ಗ್ರೇಟ್ ದರ್ಬಾರ್ ಬೀಡಿ ವರ್ಕ್ಸ್ ರಥಬೀದಿ, ಮಂಗಳೂರು.

ಇವರಿಂದ ತಯಾರಿಸಲ್ಪಟ್ಟವುಗಳು.

ಸಂಪಾದಕರ ಟಪ್ಪಾಲು ಪೆಟ್ಟಿಗೆ.

ಬಾತ್ಮಿದಾರರ ಅಭಿಪ್ರಾಯಗಳಿಗೆ ನಾವು ಜವಾಬ್ದಾರರಲ್ಲ. ಎಲ್ಲಾ ಲೇಖಕರು ತಮ್ಮ ಸಂಪೂರ್ಣ ಹೆಸರು ವಿಳಾಸಗಳನ್ನು ಕೊಡತಕ್ಕದ್ದು. ದೀರ್ಘ ಲೇಖನಗಳಿಗೆ ಎಡೆ ಕೊಡಲಾಗುವುದಿಲ್ಲ. ಲೇಖನಗಳು ಸಾರ್ವಜನಿಕ ಹಿತದೃಷ್ಟಿಯಿಂದಿದ್ದು ಯುಕ್ತ ಶೈಲಿಯಲ್ಲಿರತಕ್ಕದ್ದು. (ಸಂ. ಸ್ವಾ.)

[ಮುಲ್ಕಿಯಲ್ಲಿ ಒಂದು ಹಾಯರ್ ಎಲಿಮೆಂಟರಿ ಶಾಲೆ" ಮತ್ತು "ಆಡೆಕಾರಿಗೊಂದು ಹಾಯರ್ ಎಲಿಮೆಂಟರಿ ಶಾಲೆಯು ಅವಶ್ಯ" ಎಂಬೀ ಎರಡು ಬಾತ್ಮಿಗಳು ನಮಗೆ ತಲಪಿವೆ. ಸ್ಥಳಾಭಾವದಿಂದ ಈ ಸಂಚಿಕೆಯಲ್ಲಿ ಪ್ರಕಟಿಸಲಾಗಲಿಲ್ಲ. ಸಂ. ಸ್ವಾ.]

'ಮುಂಬಾಯಿ ಗೌಡಸಾರಸ್ವತ ಸಭಾ'

[ಈ ಮೇಲಿನ ಸಂಘದ ಕುರಿತಾಗಿ ನಮಗೊಂದು ಬಾತ್ಮಿ ತಲಪಿದೆ. ಅದರ ಮುಖ್ಯಾಂಶವನ್ನು ಎತ್ತಿ ಈ ಕೆಳಗೆ ಕೊಟ್ಟಿರುವೆವು. ಈ ಬಾತ್ಮಿದಾರರು ಪಡುವ ಅಭಿಪ್ರಾಯಗಳೂ ಅನ್ನೆಷ್ಟೇ ಜನರಲ್ಲಿದ್ದಿರಬಹುದು. ಸಂಬಂಧಪಟ್ಟವರು ಅದಕ್ಕೆ ಸದುತ್ತರವನ್ನು ಕೊಟ್ಟು ಸಮಾಧಾನಪಡಿಸುವರೆಂಗಿ ನಂಬಲಾಗಿದೆ. ಸಂ. ಸ್ವಾ.)

"ಮುಂಬಾಯಿ ಗೌಡಸಾರಸ್ವತ ಸಭಾ" ಎಂಬ ಹೊಸರಿನ ಸಂಸ್ಥೆಯೊಂದು ಸ್ಥಾಪಿತವಾಗಿ, ಅದರ ಒಂದು ಕಾರ್ಯಕಾರಿ ಸಂಗಡವು ಧನಸಂಗ್ರಹಾರ್ಥ ಊರೂರುಗಳಲ್ಲಿ ಸಂಚರಿಸುತ್ತದೆ. ಸ್ವಸಮಾಜದವರ ಸಾಮಾಜಿಕ—ಆರ್ಥಿಕ ಏಳ್ಗೆಗಾಗಿ ಸಾಧಿಸುವುದು ಈ ಸಂಸ್ಥೆಯ ಉದ್ದೇಶವೆಂದು ಈ ಸಂಸ್ಥೆಯವರ ಪ್ರಕಟಣೆಗಳಿಂದ ತಿಳಿದೆವು. ಇವರು ಸಂಗ್ರಹಿಸುವ (ಅಥವಾ ಸಂಗ್ರಹಿಸಿದ) ನಿಧಿಯು ಸುಮಾರು ೪೦ ಸಾವಿರಕ್ಕೆ ಕಡಿಮೆಯಾಗದು. ಇದನ್ನು ಕಾಶೀಕ್ಷೇತ್ರ ಮೊದಲಾದ ಸ್ಥಳಗಳಲ್ಲಿ ಮಠಗಳನ್ನು ಜೀರ್ಣೋದ್ಧಾರ ಮಾಡಿಸುವರೇ ವಿನಿಯೋಗಿಸಲಾಗುವುದೆಂದು ತಿಳಿದುಬರುತ್ತದೆ. "ಚಟುವಟಿಕೆ"ಗಳನ್ನು ಈ ರೀತಿ ಪ್ರಾರಂಭಿಸಿದರೆ ಸಮಾಜದ ಉನ್ನತಿಯು ಸಾಧಿಸಲ್ಪಡುವುದೇ? ಈಗಳಿನ ಪರಿಸ್ಥಿತಿಯನ್ನು ಪರಿಶೀಲಿಸಿದರೆ ನಮ್ಮ ಸಮಾಜವು ಸಾಮಾಜಿಕ ತೊಡಕುಗಳಿಂದಲೂ ಆರ್ಥಿಕ ಅಡಚಣೆಗಳಿಂದಲೂ ಕಷ್ಟಪಡುತ್ತಿದೆ. ಕೆಲವರಿಗೆ ವರದಕ್ಷಿಣೆ, ಸ್ತ್ರೀಶಿಕ್ಷಣದ ಕೊರತೆ,—ಇತ್ಯಾದಿ ಕಷ್ಟ. ಮತ್ತೆ ಕೆಲವರಿಗೆ ಬಾಲಕರ ಶಿಕ್ಷಣಕ್ಕಾಗಿ ಹಣವಿಲ್ಲದ ಕಷ್ಟ. ಸಾಮಾಜಿಕ ತೊಡಕುಗಳಿಂದ ಬೇಸತ್ತ ಅನೇಕರು ಸ್ವೇಚ್ಛಾವರ್ತನೆಯಿಂದ ಆಚರಿಸ ತೊಡಗಿರುವರು. ಇತ್ತ ಧರ್ಮಗುರುಗಳು ಇದ್ದಾರೋ ಇಲ್ಲವೋ ಎಂಬುದು ಶಿಷ್ಯವರ್ಗದವರಿಗೆ ತಿಳಿದಿಲ್ಲ. ಶಿಷ್ಯವರ್ಗವು ಎಲ್ಲಿದೆಯೆಂದು ಧರ್ಮಗುರುಗಳಿಗೆ ತಿಳಿದಿಲ್ಲ. ಹೀಗೆ ಅನೇಕ ವಿಧದಲ್ಲಿ ಸಮಾಜವು—ಒಂದು ಕಡೆಯಲ್ಲಿ ಸಾಮಾಜಿಕ ಬಂಧನದ ಚಿಂತೆ,—ಮತ್ತೊಂದು ಕಡೆಯಲ್ಲಿ ಸ್ವೇಚ್ಛಾವರ್ತನೆ—ಹೀಗಿರುವಾಗ—ಈ ಮೇಲಿನ ಸಭೆಯವರು ಹಣ ಸಂಗ್ರಹಿಸಿ, ದೂರದ ಊರುಗಳಲ್ಲಿರುವ ದೇವಾಲಯಗಳನ್ನೋ ಮಠಗಳನ್ನೋ ಜೀರ್ಣೋದ್ಧಾರ ಮಾಡಿಸುವುದು ಸರಿಯೇ?—ಬದಲಾಗಿ, ಅಲ್ಲಲ್ಲಿ ಜಾತಿ ಮುಖಂಡರ ಸಹಾಯದಿಂದ ಸ್ವಸಮಾಜದ ಸಭೆಗಳನ್ನು ಸೇರಿಸಿ, ಸಮಾಜ ಸುಧಾರಣೆಯು ಹೇಗೆ ಆಗಬಹುದೆಂದು ಚರ್ಚಿಸಿ, ಅದರಂತೆ ವರ್ತಿಸಬಾರದೆ? ಮಹಾಜನರ ಮತ್ತು ಧರ್ಮಗುರುಗಳ ಸಹಾಯಬೇಕು; ಸಹಾನುಭೂತಿ ಬೇಕು. ಅವುಗಳನ್ನು, ಸಮಾಜೋದ್ಧಾರಕರಾಗಿ ಈಗ ಮುಂದೆ ಬಂದಿರುವವರು ಸಾಧಿಸಬೇಕು.

ಈ ವರ್ಷದ ಬೆಳೆ

ಈ ವರ್ಷದ ಬೆಳೆ ಎಲ್ಲೆಲ್ಲಿಯೂ ನೋಟಕ್ಕೆ ಕಂಗೊಳಿಸುವುದಿದ್ದಾಗ್ಯೂ, ಕಳೆದ ವರ್ಷದ ಬೆಳೆಗಿಂತ ಸರ್ವಸಾಧಾರಣ ಉತ್ತಮವೆನಿಸಿದ್ದರೂ, ಈಗ್ಗೆ ೧೦ ವರ್ಷಗಳ ಹಿಂದಿನ ಬೆಳೆಗಿಂತ ಅವನತಿ ಸ್ಥಿತಿಯಲ್ಲೇ ಇರುತ್ತದೆ ಎಂಬುದು ಸ್ವಂತ ಸಾಗುವಳಿ ಮಾಡುವ ಭೂಮಾಲಿಕನ ಅನುಭವ. ಈ ವರ್ಷದಲ್ಲಿ ಭತ್ತದ ಪೈರಿನ ತೆನೆಗಳಲ್ಲಿ ಹಿಡಿದಿರುವ ಭತ್ತವು ಕೆಲವು ವರ್ಷಗಳ ಹಿಂದಿನ ಭತ್ತದ ಸಂಖ್ಯೆಗಳಿಗಿಂತ ಒಂದು ತೆನೆಯಲ್ಲಿ ೪—೧೦ರಂತೆ ಕಡಿಮೆಯಾಗಿಯೂ, ಅದರಲ್ಲೂ 'ಜಳ್ಳು' (ಜೊಳ್ಳು) ಭತ್ತಗಳು ಅಧಿಕವಾಗಿಯೇ ಇದ್ದು ನೋಟಕ್ಕೆ ಅಂದವಾಗಿ ಕಂಡರೂ ಪರಿಣಾಮವು ಹೀಗಿರುತ್ತದೆ. ಈ ವರ್ಷದ ಮಳೆಯು ಸಾಕಾಷ್ಟು ಸಕಾಲದಲ್ಲಿ ಬಾರದೆಯೂ, ಭೂಮಿಯಲ್ಲಿ ಪರತೆಯು ಬಹಳ ಕ್ಷೀಣಿಸಿಯೂ, ಈಗ್ಗೆ ತಾತ್ಕಾಲಿಕ ೩, ೪ ದಿವಸಗಳ ಹಿಂದೆ ಸ್ವಲ್ಪ ಮಳೆ ಬಂದಿದ್ದರೂ ಪರತೆಯಾಗಲು ಸಾಧ್ಯವಿಲ್ಲದೆ, ಎರಡನೇ ಬೆಳೆ ಸಾಗುವಳಿಯು ಕಡಿಮೆಯಾಗಲು ಅಸ್ಥಿರವಾಗಿಯೂ, ಆದ ಸಾಗುವಳಿಗಳಿಗೂ ಸರಿಯಾದ, ನೀರಿಲ್ಲದೆ ನಿರೀಕ್ಷಿಸಿದ ಬೆಳೆ ಸಿಕ್ಕಲು ಅಭ್ಯಂತರವಾಗಿದೆ. ಮತ್ತು, ಈ ಸಮಯಗಳಲ್ಲಿ ಸರ್ವಸಾಧಾರಣವಾದ ಹಳೆಯ ಅಕ್ಕಿ ಬೆಲೆಯು ೪ ರೂಪಾಯಿ ವರೆಗೆ ಇರುವಂತಾದ್ದಕ್ಕೆ ಈಗ ರೂ. ೩ರ ಪ್ರಕಾರ ಎಣಿಸಬಹುದಾಗಿರುತ್ತದೆ. ಈ ವರ್ಷ ಅಂತೂ ಕಳೆದ ವರ್ಷದಂತೆ ಗವರ್ನಮೆಂಟಿನವರು ರಿಯಾಯಿತಿಯನ್ನು ಕೊಡದಿದ್ದರೆ, ಕಿರ್ವೆ ಕೊಡಲು ತುಂಬಾ ಕಷ್ಟವಾದೀತು. ಕಳೆದ ವರ್ಷದ ರಿಯಾಯಿತಿಗಳಿಂದ ಹೆಚ್ಚಿನ ಧನಿ ವ ಒಕ್ಕಲುಗಳ ಆ ಸಮಯದ ಕೆಲವು ದಿವಸಗಳ ಅರ್ಧ ಉಪವಾಸಗಳಾದರೂ ನಿಂತಿರುತ್ತದೆ. ದಯಾಳು ಗವರ್ನಮೆಂಟಿನವರು ಈ ವಿಷಯ ಪರ್ಯಾಲೋಚಿಸಿ ಮುಂದಿನ ವರ್ಷದ ರಿಯಾಯಿತಿಯನ್ನು ದಯಪಾಲಿಸರೆ?

ಭೂಮಾಲಿಕ.

ದ. ಕ. ಜಿಲ್ಲಾ ಟೀಚರ್ ಮೆನೇಜರರ ಸಂಘದ ಮಹಾ ಸಭೆಯ ಪ್ರೊಸಿಡಿಂಗ್ಸು:

ಈ ಮಹಾಸಭೆಯು ಕಳೆದ ತಾ. ೧೩—೯—೩೭ರಲ್ಲು ಅಪರಾಹ್ನ ಗಂಟೆ ೩ಕ್ಕೆ ಮಂಗಳೂರು ಗವರ್ನಮೆಂಟ್ ಹಾಯರ್ ಎಲಿಮೆಂಟರಿ ಟ್ರೈನಿಂಗ್ ಶಾಲೆಯಲ್ಲಿ ಮ॥ ರಾ॥ ಪಂಜೆ ಮಂಗೇಶರಾವ್ ಅವರ್ಗಳ್, ಬಿ. ಎ. ಎಲ್. ಟಿ. ಇವರ ಅಧ್ಯಕ್ಷತೆಯಲ್ಲಿ ಜರುಗಿತು. ಸಂಘದ ಕಾಯಂ ಅಧ್ಯಕ್ಷರಾದ ಕುರ್ಕಾಲು ಗಣಪಯ್ಯ ಶೆಟ್ರು ಸಂಘದ ದಶವಾರ್ಷಿಕ ಸಂಕ್ಷಿಪ್ತ ಇತಿಹಾಸವನ್ನು ವಿವರಿಸಿದ ಬಳಿಕ ಈ ಕೆಳಗಿನ ನಿರ್ಣಯಗಳು ಸರ್ವ ಸಮ್ಮತಿಯಿಂದ ಮಂಜೂರು ಮಾಡಲ್ಪಟ್ಟವು. ೧. ಈ ಜಿಲ್ಲೆಯ ಏಡೆಡ್ ಶಾಲೆಗಳಿಗೆ ಪ್ರತಿ ವರ್ಷವೂ ಗ್ರಾಂಟಿನಲ್ಲಿ ವಿಶೇಷ ಕಡಿತವುಂಟಾಗಿ ಶಾಲೆಗಳ ಸ್ಥಿತಿಯು ಬಹಳ ಗಂಡಾಂತರಕ್ಕೆ ಒಳಗಾದ್ದರಿಂದ ಟೀಚಿಂಗ್ ಗ್ರಾಂಟಿನಲ್ಲಿ ಈ ರೀತಿ ಕಡಿತವುಂಟಾಗದಂತೆ ಗ್ರಾಂಟನ್ನು ಸಂಕ್ಷನ್ ಮಾಡುವಂತೆ ಸರಕಾರಕ್ಕೆ ಬರಕೊಳ್ಳತಕ್ಕದ್ದು. ೨. ಏಡೆಡ್ ಶಾಲೆಗಳಿಗೆ ಕೊನೆಯ ಪಕ್ಷ ಈ ಕೆಳಗಿನ ದರದಂತೆ ಗ್ರೇಡಿನ ಸ್ಕೇಲನ್ನು ಏರಿಸುವಂತೆ ಸರಕಾರಕ್ಕೆ ಬರಕೊಳ್ಳತಕ್ಕದ್ದು.

ಲೋವರ್ ಗ್ರೇಡ್ ತಿಂಗಳೊಂದಕ್ಕೆ —ಅನ್‌ಟ್ರೈನ್ಡ್ ೮—೦—೦, ಟ್ರೈನ್ಡ್ ೧೨—೦—೦; ಹಯರ್ ಗ್ರೇಡ್ ತಿಂಗಳೊಂದಕ್ಕೆ ಅನ್‌ಟ್ರೈನ್ಡ್ ರೂ ೧೨, ಟ್ರೈನ್ಡ್ ರೂ. ೧೫; ಸೆಕೆಂಡರಿ ಗ್ರೇಡ್ ತಿಂಗಳು ೧ಕ್ಕೆ ಅನ್‌ಟ್ರೈನ್ಡ್ ರೂ. ೧೫, ಟ್ರೈನ್ಡ್ ರೂ. ೨೦. ೩. ಆಯಾಯ ಶಾಲೆಗಳ ಯೋಗ್ಯತೆ ಮೇರೆಗೆ ಲೋವರ್ ಎಲಿಮೆಂಟರಿ ಶಾಲೆಗಳಿಗೆ ಸೇಕಡಾ ೫೦ರ ವರೆಗೂ, ಹಯರ್ ಎಲಿಮೆಂಟರಿ ಶಾಲೆಗಳಿಗೆ ಸೇಕಡಾ ೧೦೦ರ ವರೆಗೂ, ಅಭಿವೃದ್ಧಿ ಗ್ರಾಂಟನ್ನು ಕೊಡಿಸಿಕೊಡುವಂತೆ ಸರಕಾರಕ್ಕೆ ಬರಕೊಳ್ಳತಕ್ಕದ್ದು. ೪. ನೋನ್ ಟೀಚರ್ ಮೆನೇಜರ ಸಂಬಂಧವಾಗಿ ಕೊಡತಕ್ಕ ಕಂಪೆನ್ಸೇಶನ್ ಗ್ರಾಂಟನ್ನು ಪ್ರತಿ ವರ್ಷವೂ ಕಡಿತವಾಗದ ರೀತಿಯಲ್ಲಿ ಕೊಡಿಸುವಂತೆ ಸರಕಾರಕ್ಕೆ ಬರಕೊಳ್ಳುವುದು. ೫. ಸರಕಾರದವರು ಸದ್ಯಕ್ಕೆ ನಿಲ್ಲಿಸಲ್ಪಟ್ಟ ಬಿಲ್ಡಿಂಗ್ ವ ಫರ್ನಿಚರ್ ಗ್ರಾಂಟಿನ ಹಣವನ್ನು ಕಾಯಂ ಮಂಜೂರಾತಿ ಪಡೆದ ಎಲ್ಲಾ ಶಾಲೆಗಳಿಗೂ ಕೊಡಿಸುವಂತೆ ಸರಕಾರಕ್ಕೆ ಬರಕೊಳ್ಳುವುದು. ೬. ಹಯರ್ ಎಲಿಮೆಂಟರಿ ಶಾಲೆಗಳಂತೆಯೇ ಲೋವರ್ ಎಲಿಮೆಂಟರಿ ಶಾಲೆಗಳಿಗೂ ೩ ತಿಂಗಳಿಗೊಮ್ಮೆ ಎಡ್ವಾನ್ಸ್ ಗ್ರಾಂಟನ್ನು ಕೊಡುವಂತೆ ಸರಕಾರಕ್ಕೂ ಡಿ॥ ಇ॥ ಕೌನ್ಸಿಲಿಗೂ ಬರಕೊಳ್ಳತಕ್ಕದ್ದು. ೭. ಡಿ॥ ಇ॥ ಕೌನ್ಸಿಲಿನ ಗ್ರಾಂಟ್ ಸಬ್ ಕಮಿಟಿಯವರು ತಮ್ಮ ಮೀಟಿಂಗಿನಲ್ಲಿ ಪ್ರತಿ ಶಾಲೆಯ ಗ್ರಾಂಟ್ ನಿರ್ಣಯಿಸಲ್ಪಟ್ಟ ಕೂಡಲೇ ಆಯಾಯ ಶಾಲೆಯ ಮೆನೇಜರರಿಗೆ ಸದ್ರಿ ಗ್ರಾಂಟಿನ ಸಂಖ್ಯೆಯನ್ನು ತಿಳಿಸಬೇಕಾಗಿಯೂ, ಗ್ರಾಂಟ್ ಸಬ್ ಕಮಿಟಿಯ ಮೀಟಿಂಗು ವರ್ಷಕ್ಕೊಮ್ಮೆ ಜರಗದೆ ೧ ತಿಂಗಳಿಗೊಮ್ಮೆ ಜರಗಿಸಬೇಕಾಗಿಯೂ ಡಿ॥ ಇ॥ ಕೌನ್ಸಿಲಿಗೆ ಬರಕೊಳ್ಳತಕ್ಕದ್ದು. ೮. ಗ್ರಾಂಟ್ ಮೀಟಿಂಗು ಜರಗಿ ೧೫ ದಿವಸಗಳೊಳಗಾದರೂ ವರ್ಷಾವಧಿ ವ ಕಂತು ಗ್ರಾಂಟುಗಳ ಚೆಕ್ಕುಗಳು ಪ್ರತಿ ಶಾಲಾ ಮೆನೇಜರರಿಗೆ ದೊರೆಯುವಂತೆ ಡಿ॥ ಇ॥ ಕೌನ್ಸಿಲಿಗೆ ಬರಕೊಳ್ಳತಕ್ಕದ್ದು. ೯. ಟೀಚರ್ ಮೆನೇಜರರು ತಮ್ಮ ಶಾಲಾ ಕಟ್ಟೋಣ, ಸಾಮಾನುಗಳಿಗೆ ಹೇರಳ ಹಣ ಖರ್ಚು ಮಾಡುತ್ತಿದ್ದರಿಂದ ಎಮಲ್ಗಮೇಶನ್ ಸ್ಕೀಮಿನ ಬೆಸೆಯಿಂದ ಸದ್ರಿ ಶಾಲೆಗಳಿಗೆ ಹೆಚ್ಚಿನ ಬಾಧಕ ಬಾರದಂತೆ ಡಿ॥ ಇ॥ ಕೌನ್ಸಿಲಿಗೆ ಬರಕೊಳ್ಳತಕ್ಕದ್ದು. ೧೦. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕಳೆದ ಮಾರ್ಚ ೩೧ಕ್ಕೆ ಇರುವ ೧೬೫ ಮಂದಿ ಟೀಚರ್ ಮೆನೇಜರರ ಪೈಕಿ ೧೧೦ ಮಂದಿ ಮಾತ್ರ ಚಾಲ್ತಿ ವರ್ಷದಲ್ಲಿ ಸಂಘದ ಮೆಂಬರರಾಗಿರುವುದರಿಂದ ಬಾಕಿ ಉಳಿದವರು ಸಹ ಚಾಲ್ತಿ ವರ್ಷದಲ್ಲಿ ಸಂಘದ ಮೆಂಬರರಾಗಿ ಸೇರುವಂತೆ ತಿಳಿಸತಕ್ಕದ್ದು. ೧೧. ಚಾಲ್ತಿ ವರ್ಷದಲ್ಲಿ ಪ್ರತಿ ತಾಲೂಕು ಸಂಘದಲ್ಲಿ ವಸೂಲಾದ ಹಣದಿಂದ ಅರ್ಧ ಅಂಶವನ್ನು ಜಿಲ್ಲಾ ಸಂಘಕ್ಕೆ ಕಳುಹಿಸಿಕೊಡುವಂತೆ ಬರಕೊಳ್ಳತಕ್ಕದ್ದು. ೧೨. ಜಿಲ್ಲಾ ಸಂಘಕ್ಕೆ ಉಡುಪಿ ತಾಲೂಕಿನಿಂದ ಕೆ. ಗಣಪಯ್ಯ ಶೆಟ್ಟರನ್ನು ಅಧ್ಯಕ್ಷರನ್ನಾಗಿಯೂ, ಮಂಗಳೂರು ತಾಲೂಕಿನಿಂದ ಕೆ. ಸುಬ್ಬಣ್ಣಯ್ಯನವರನ್ನು ಕಾರ್ಯದರ್ಶಿಯರನ್ನಾಗಿಯೂ, ಕಾಸರಗೋಡು ತಾಲೂಕಿನಿಂದ ಡಿ॥ ವಿಷ್ಣುಮೂರ್ತಿ ಹೊಳ್ಳರನ್ನೂ, ಕಾರ್ಕಳ ತಾಲೂಕಿನಿಂದ ದೂಮಣ್ಣ ನಾಯ್ಕರನ್ನೂ, ಪುತ್ತೂರು ತಾಲೂಕಿನಿಂದ ಜಿ. ಅನಂತಯ್ಯನವರನ್ನೂ ಕೂಡ ೫ ಮಂದಿಯನ್ನು ಆಡಳಿತ ಮಂಡಲದ ಮೆಂಬರರಾಗಿ ಆರಿಸಲಾಯಿತು. ೧೩. ಈ ಸಂಘದ ಪ್ರತಿನಿಧಿಗಳಾಗಿ ಡಿಸ್ಟ್ರಿಕ್ಟ್ ಎಡ್ಯುಕೇಶನಲ್ ಕೌನ್ಸಿಲಿನಲ್ಲಿ ಮೆಂಬರರಾಗಿದ್ದ ಕೆ. ಗಣಪಯ್ಯ ಶೆಟ್ರು, ಕೆ. ಸುಬ್ಬಣ್ಣಯ್ಯ ಇವರ ಮೆಂಬರಿಕೆಯ ಅವಧಿಯು ತಾ. ೩೧-೭-೩೭ಕ್ಕೆ ಗುಜರಾದ್ದರಿಂದ ಸದ್ರಿ ೨ ಸ್ಥಾನಗಳಿಗೆ ಮೆಂಬರರನ್ನು ಆರಿಸುವ ವಿಷಯವು ಸಭೆಯ ಮುಂದೆ ಬಂತು. ಡಿಸ್ಟ್ರಿಕ್ಟ್ ಎಡ್ಯುಕೇಶನಲ್ ಕೌನ್ಸಿಲನಲ್ಲಿ ಎಮಲ್ಗಮೇಶನ್ ಸ್ಕೀಮ್ ಇತ್ಯರ್ಥವಾಗಲಿಕ್ಕಿರುವ ಈ ಸಂದಿಗ್ಧ ಸಮಯದಲ್ಲಿ ಸದ್ರಿ ಸ್ಕೀಮಿನ ಕುರಿತು ಇಡೀ ಜಿಲ್ಲೆಯ ಅನುಭವಗಳನ್ನು ಸಂಗ್ರಹಿಸಿ ಕಳೆದ ಆರು ವರ್ಷಗಳಿಂದ ಕೌನ್ಸಿಲಿನಲ್ಲಿ ಮನಃಪೂರ್ವಕವಾಗಿ ಕೆಲಸ ಮಾಡುತ್ತಿದ್ದ ಕೆ. ಗಣಪಯ್ಯ ಶೆಟ್ರನ್ನು, ಕೆ. ಸುಬ್ಬಣ್ಣಯ್ಯನವರನ್ನು ತಿರುಗಿ ೩ ವರ್ಷಗಳ ಮಟ್ಟಿಗೆ ಕೌನ್ಸಿಲಿನಲ್ಲಿ ಮೆಂಬರರಾಗಿರುವಂತೆ ಸರ್ವಸಮ್ಮತದಿಂದ ಆರಿಸಲಾಯಿತು.

(ಸಹಿ) ಪಿ. ಮಂಗೇಶರಾವ್, ಪ್ರಸಿಡೆಂಟ್.



Notice.

In the court of the District Judge of S. Kanara.

O. P. No. 114/34.

Between:—

Katta Srinivasa Rao—Petitioner.

And

Ramayya Shastry & another—Respondent.

In the matter of the minor Sharada Bai

Notice is hereby given that the petitioner has filed an application before the District Judge of South Kanara praying that he may be appointed guardian of the person and property of the minor Sharada Bai widow of Rudrayya Shastry residing in Charmady village and that the allowance for the maintenance of the minor may be fixed etc.

The said petition stands posted to 27-10-34, at 11 A. M. and any person interested in the matter may be persent at the hearing on the said date.

Mangalore, 8thOct 1634. } G. Somasheker Rao, *Vakil for Petitioner.*

ಮಂಗಳೂರಿನ ಪೇಟೆಧಾರಣೆ.

ಸಾಮಗ್ರಿಗಳು	ಇಂದ	ವರೆಗೆ
	ರೂ. ಆ	ರೂ. ಆ.
ರಾಶಿ ಅಕ್ಕಿ ...	4— 2	4— 8
ಮುಸ್ಕಿ ...	4— 4	5—
ಗುಡ್ಡ ...	4— 4	4—10
ಸುಗ್ಗಿ ...	4— 4	4—10
ಊರ ಅವ್ವಲ್ ಬೆಸ್ತಿಗೆ ...	4—12	5— 4
ರಂಗೂನು ಬಿ. ಗೋ. ಅಕ್ಕಿ...	6— 0	6— 4
ಎಲ್ಲೂರು ಬೆ. ಮು. ಅಕ್ಕಿ...	4— 0	4— 0
ಗೋಧಿ ಗೋಣಿ ಅಕ್ಕಿ ...	10— 0	12— 8
ತೊಗರಿ ಗೋಣಿ ಅಕ್ಕಿ ...	9— 8	10— 0
ಹುರುಳಿ ಗೋಣಿ ಅಕ್ಕಿ ...	7 — 6	7—10
ಕಡಲೆ ಗೋಣಿ ಅಕ್ಕಿ ...	7 — 8	8— 0
ತೊಗರಿಬೇಳೆ ಗೋಣಿ ಅಕ್ಕಿ...	10— 0	17— 0
ಉದ್ದು ಗೋಣಿ ಅಕ್ಕಿ ...	7— 0	7— 8
ಹೆಸರು ಗೋಣಿ ಅಕ್ಕಿ ...	7— 0	7— 8
ಊರುಬೆಲ್ಲ ಖಂಡಿ ಅಕ್ಕಿ ...	40— 0	45— 0
ಉಪ್ಪು ಗೋಣಿ ಅಕ್ಕಿ ...	5— 4	5— 8
ಕೊಬ್ಬರಿ ಖಂಡಿ ಅಕ್ಕಿ ...	40— 0	42— 0
ಕೊಬ್ಬರಿ ಹಿಂಡಿ ಖಂಡಿ ಅಕ್ಕಿ...	19— 0	19— 8
ಎಣ್ಣೆಂಡಿ ಖಂಡಿ ಅಕ್ಕಿ ...	23—12	27— 0
ಕೊಬ್ಬರಿ ಎಣ್ಣೆ ಮುಡಿ ಅಕ್ಕಿ...	2—15	3—14
ಎಳ್ಳೆಣ್ಣೆ ಮುಡಿ ಅಕ್ಕಿ ...	5— 0	5— 8
ಚಿಮಣಿಎಣ್ಣೆ ಪೆಟ್ಟಿಗೆ ಅಕ್ಕಿ...	6— 8	8— 0
ಮೋರಿಸ ಸಕ್ಕರೆ ಮು. ಅಕ್ಕಿ...	3—10	3—14
ಮೆಣಸು ...	7— 0	7— 8
ಸಾಸಿವೆ ಮುಡಿ ಅಕ್ಕಿ ...	4— 8	5— 4
ಕಾಳುಮೆಣಸು ಖ. ಅಕ್ಕಿ ...	136— 8	137— 8
ಯೇಲಕ್ಕಿ ಮುಡಿ ಅಕ್ಕಿ ...	18— 0	22— 0
ಹೊಸ ಗೇರುಬೀಜ ಮು. ಅಕ್ಕಿ	3— 4	3— 5
ಕಬ್ಬಿಣ ಖಂಡಿ ಅಕ್ಕಿ ...	42— 0	44— 0
ತಾಂಬ್ರ ಕಗಡು ಮು. ಅಕ್ಕಿ...	10— 0	10—0
ತಾಂಬ್ರ ಪಾತ್ರಗಳು ಮು. ಅಕ್ಕಿ	13— 0	14— 8
ಹಿತ್ತಾಳೆ ಸೇರು ಅಕ್ಕಿ ...	14—12	15— 0
ಹಿತ್ತಾಳೆ ತಗಡು ಮು. ಅಕ್ಕಿ...	9— 0	9— 8
ಸತುವು ಅಕ್ಕಿ ...	20—10	21— 0
ಹುಣಸೆ ಹುಳಿ ಖಂಡಿ ಅಕ್ಕಿ	30— 0	35— 0
ನೇಟಿವ್ ಕಾಫಿ ಖಂಡಿ ಅಕ್ಕಿ	182— 0	198— 0
ಪ್ಲಾಂಟರ್ ಕಾಫಿ ಖಂಡಿ ಅಕ್ಕಿ...	296— 8	280— 8
ಹಳೆ ಅಡಿಕೆ ...	118— 0	124— 0
ಹೊಸ ಅಡಿಕೆ ...	62— 0	92 — 0

ಶಾಲಿವಾಹನ ಬ್ಯಶಕ ೧೮೫೬ನೆಯ ಭಾವ ಸಂವತ್ಸರದ ಆಶ್ವೀಜ ಶು। ೧೩ ಶನಿವಾರದಿಂದ—ಆಶ್ವೀಜ ಬ। ೪ ಶುಕ್ರವಾರದ ವರೇಗಿನ ಪಂಚಾಂಗ. (೧೯೩೪ನೇಯ ಸಿಂಹಸೋಣ

ತಾರೀಖು	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ಚಂದ್ರ	ಸೂರ್ಯ ಉ.	ಸೂರ್ಯ ಅಸ್ತ	ಷರಾ
20	ಶನಿ	೧೩	೪೫	ಪೂ. ಭಾದ್ರ	೧೫॥	೩	6·22	6.18	*
21	ರವಿ	೧೪	೪೦	ಉ. ಭಾದ್ರ	೧೫॥।	೪	6.22	6.17	
22	ಸೋಮ	(ಅಮಾವಾಸ್ಯೆ ಚಿಹ್ನೆ)	೩೮	ರೇವತೀ	೧೪	೫	6·22	6·17	
23	ಮಂಗಳ	೧	೩೬	ಅಶ್ವಿನೀ	೧೩।	೬	6·22	6·16	
24	ಬುಧ	೨	೩೪।	ಭರಣೀ	೧೩।	೭	6.22	6.15	
25	ಗುರು	೩	೩೩॥	ಕೃತ್ತಿಕಾ	೧೩।	೮	6·22	6.14	
26	ಶುಕ್ರ	೪	೩೩।	ರೋಹಿಣೀ	೧೪	೯	6.22	6.14	

ನಿಮ್ಮ ಆರೋಗ್ಯವು ಈ ಚಿಕ್ಕ ಗುಳಿಗೆಗಳಲ್ಲಿ

ಸುಭದ್ರವಾಗಿದೆ-

ಸೂತನ! ದುಬಳರ! ಹಿತಕರ!

ಹರಳೆಣ್ಣೆ ಮಿಶ್ರಿತವಾದ ಸಿಹಿ ಗುಳಿಗೆಯು—

ಕೇಸ್—ಫೆನ್—ಮಿಂಟ್

ಹರಳೆಣ್ಣೆ, ಅಗರ್ ಅಗರ್, ಪೆನಲ್‌ಫ್ತಾಲೀನ್, ಪೆಪ್ಪರ್‌ಮಿಂಟ್ ಮತ್ತು ಚಾಕ ಲೇಟು, ಇವುಗಳನ್ನು ಸೇರಿಸಿ ಸೇವಿಸಲು ಹಿತಕರವಾಗುವಂತೆಯೂ, ಆಬಾಲವೃದ್ಧ ರೆನ್ನದೆ ಸಕಲರಿಗೂ ಯಾವ ಕಾಲಕ್ಕೂ ಸುಖಭೇದಿಯಾಗಿ ಅನುಕೂಲವಾಗುವಂತೆ ಇದು ತಯಾರಿಸಲ್ಪಟ್ಟಿದೆ. ಮಲಬದ್ಧತೆಯು ಹಲವು ಭಯಂಕರ ರೋಗಗಳನ್ನು ತರಬಲ್ಲುದು. ಮಲಬದ್ಧತೆ ತೋರಿದಾಗಲೆಲ್ಲ "ಕೇಸ್—ಫೆನ್—ಮಿಂಟ್"ನ್ನು ಸೇವಿಸಿರಿ. ಈ ಚಾಕಲೇಟುಗಳನ್ನು ಒಂದೆರಡು ಸೇವಿಸಿದರೆ ಅನಾ...

ಈ ಹೆಸರುಗಳೇನು,—ಓದಿರುವಿರಾ?

ದಾಕ—ಪರಿವಾಕ—ಸಂಧಿವಾತ—ಲಟವಾತ—ಕಲಕೂಲಿ—ನಡುಸೋಕು......!!!!

ಇವುಗಳಿಗೆ ಹೆದರದವರಾರು? ಇವುಗಳೆಲ್ಲ ಜನರನ್ನು ಕಾಡುತ್ತಿವೆ!

ಡಾ। ಫೌಯುವರ ಕೆಚೆಟ್ಸ್

ಸೇವನೆಗೆ ಕಷ್ಟವಿಲ್ಲ, ಅರ್ಧ ಚಟ್ಟೆ ನೀರಿನಲ್ಲಿ, - ನೋವು ತಲೆದೋರಿದಾಗಲೆಲ್ಲ— ಈ ಕೆಚೆಟುಗಳನ್ನು ಹಾಕಿ ಸೇವಿಸಿದರೆ— ಅದು ಹೇಗೆ ಗುಣಕಾರಿಯಾಗಿ ಕಾರ್ಯಾರಂಭ ಮಾಡುವುದೆಂಬುದನ್ನು ಆಗಲೇ ಅನುಭವ ಮಾಡುವಿರಿ.

ಕೆಲವೇ ನಿಮಿಷಗಳಲ್ಲಿ ಖಂಡಿತ ಗುಣಲಾಭ!

ನರಗಳ ದೌರ್ಬಲ್ಯ ಸಂಬಂಧವಾದ ಉಪದ್ರಗಳೆನ್ನೂ ಪರಿಹರಿಸುವುದು.

ಕೊಂಡುಕೊಂಡೇ ಅದನ್ನು ಪರೀಕ್ಷಿಸಿರಿ.

'ಕೆಚೆಟು'ಗಳು ನಿರಪಾಯವಾಗಿ, ಭರವಸೆಯಿಂದ ಸೇವಿಸಲ್ಪಡಲು ಯೋಗ್ಯವಾಗಿವೆ.

ಸಂದೇಹವಿಲ್ಲದೆ ಇಂದೇ ಅವುಗಳ ಗುಣಪರೀಕ್ಷೆ ನಡೆಯಲಿ.

ಯಾಸವಾದ ಸುಖಭೇದಿ! ಕರುಳುಗಳ ವಿಕಾರವಿಲ್ಲ! ಜಿಗುಪ್ಸೆ ಹುಟ್ಟಿಸುವುದಿಲ್ಲ! ಹೊಟ್ಟೆಯೊಳಗೆ ಯಾವ ವೇದನೆಯೂ ಇಲ್ಲ. ಮಕ್ಕಳು ಆನಂದದಿಂದ ಸೇವಿಸುವರು.

ಬಲು ಕಡಿಮೆ ಕ್ರಯ! ಎಲ್ಲೆಲ್ಲಿಯೂ ದೊರೆಯುವುದು. ಅತಿ ಹೆಚ್ಚು ಫಲ!

The Paragon Products Co., Ballard Estate, Bombay.

ದ. ಕ. ಜಿಲ್ಲೆಯ ಡಿಸ್ಟ್ರಿಬ್ಯೂಟರರು:— **M. K. Prabhu**, MANJESHWAR + S. KANARA.

Wanted

Organisers, Agents and Sub-Agents in every village of South Kanara and Coorg, for East & West Insurance Co. Ltd., Bombay, on pay and commission.

Apply—

Padubidri Bros,
Chief Agents,
East & West Insurance Co. Ltd.,
Padubidri S. K.

ಬಡತನಕ್ಕೆ ಮಕ್ಕಳು ಹೆಚ್ಚು!

ಹೆಚ್ಚು ಮಕ್ಕಳ ಕಾಟಕ್ಕೆ?

ತಕ್ಕ ತಡೆ.

ಗಂಡಸರಿಗೆ—(ಸುಖಾನಂದ) ಸ್ತ್ರೀರೋಗ ಅಂಟದಂತೆ ರಕ್ಷಿಸಿ ಅಪಾಯವಿಲ್ಲದೆ ಗರ್ಭ ನಿರೋಧಕ್ಕೆ ಸಹಕಾರಿಯಾದ ರಬ್ಬರ್ ಸಾಧನ. ಬೆಲೆ 1—8—0.

ಹೆಂಗಸರಿಗೆ—(ಪೆಸಾರಿಸ್) ಮೃದುವಾದ ಗರ್ಭನಿರೋಧಕ್ಕೆ ಸಾಧನ. ಉಪಯೋಗಿಸಿದಾಗ ಅನಾನುಕೂಲವಿಲ್ಲ. ತೊಂದರೆಯಿಲ್ಲ. ಸುಖವಾಗಿರುವುದು. ಬೆಲೆ 2—4—0. ಉಪಯೋಗಿಸುವ ವಿಧಾನ ಇದರ ಜೊತೆಯಲ್ಲಿರುವುದು. ಆರ್ಡರಿನೊಡನೆ 4 ಆಣೆ ಸ್ಟಾಂಪಿರಬೇಕು.

ವಿಳಾಸ— ಕರ್ನಾಟಕ ಏಜೆನ್ಸಿ,
32, ಕೃಷ್ಣಪ್ಪ ನಾಯಕ್ ಟೇಂಕ್ ಸ್ಟ್ರೀಟ್,
ಜಿ. ಟಿ. ಮದ್ರಾಸು.

"ಮಿತಸಂತತಿ"—ಮಿತಸಂತತಿ"

ಎಂದು ಹಲುಬಿದರೆ ಫಲವಿಲ್ಲ! ಮಕ್ಕಳು ಹೆಚ್ಚೆಂದು ಮರುಗುವವರು ಅವುಗಳನ್ನು ತಡೆಯಲು ಹಂಚಿಕೆಗಳನ್ನು ಹೂಡಿ ಸಂಸಾರ ಸುಖಹೊಂದಬೇಕು.

ಫ್ರೋರೆಸ್ ಕೇಪ್ ಪೆಸರಿ

(Frorace Cap Pessary)

ವೆಂಬ ಈ ಅಮೂಲ್ಯ ಚೀಲವನ್ನುಪಯೋಗಿಸುವುದರಿಂದ 'ಮಿತಸಂತತಿ'ಯ ಸೂತ್ರವು ಪರಿಪಾಲಿಸಲ್ಪಡುವುದು. ಈ ಚೀಲದ ಉಪಯೋಗವನ್ನು ಪ್ರಸಿದ್ಧ ವೈದ್ಯರೂ ಡಾ। ಮೇರಿಸ್ಟೋಪ್ಸರೂ ಪರೀಕ್ಷಿಸಿ ಜಗತ್ತಿಗೆ ಶಿಫಾರಸು ಮಾಡಿರುವರು.

1 ಆಣೆ ಅಂಚೆ ಚೀಟು ರವಾನಿಸಿದರೆ ಕೆಟಲಾಗು ಕಳುಹಿಸುತ್ತೇವೆ.

ಫ್ರೋರೆಸ್ ಚಿನೊಸೋಲ್ ಸೊಲ್ಯುಬ್ಲ್ಸ್

(Froraco Chinosol Solubles)

ಎಲ್ಲವನ್ನೂ ನಂಬಿ ಮೋಸ ಹೋಗಬೇಡಿರಿ.

ಎಂಬುದನ್ನು ಇದರೊಡನೆ ಉಪಯೋಗಿಸಿರಿ, ಇದು ದ್ರಾವಕವೆಂಬುದು ಮಿತಸಂತತಿಯ ಚೀಲದ ಉಪಯೋಗದಲ್ಲಿ ಅತ್ಯಂತ ಸಹಕಾರಿಯಾಗಿದೆ. ದೇಹಕ್ಕೆ ಹಾನಿಯು ಸರ್ವಥಾ ಇಲ್ಲ.

ಅನೇಕ ಬಗೆಯ ಚೀಲಗಳು ಹಲವು ಬೆಲೆಗೆ ಸಿಕ್ಕುತ್ತವೆ. ಆದರೆ...

ಫ್ರೋರೆಸ್ ಎಂಬ ಹೆಸರುಳ್ಳದು ಸರ್ವೋತ್ಕೃಷ್ಟ! ಇದರ ಕ್ರಯ ಒಂದು ಟಿನ್ನಿಗೆ ರೂ. 2—0—0 (ಹನ್ನೆರಡು ಬಾಟ್ಲಿಗಳಿವೆ.)

"Lam Butt" Contraceptiene ಲೇಮ್ ಬಟ್ ಕೊಂಟ್ರಾಸೆಪ್ಟಿನ್ ಎಂಬ ದ್ರಾವಕವನ್ನೂ ರಬ್ಬರ್ ಚೀಲಗಳ ಬದಲಾಗಿ ಉಪಯೋಗಿಸಬಹುದು.

ಮುಖ್ಯ ಪ್ರವರ್ತಕರು:—**The Pioneer Book Depot,**
373/375 Esplanade Road, Madras.

ಮಂಗಳೂರು ಏಜಂಟರು:—

ದಿ ಮಂಗಳೂರು ಟ್ರೇಡಿಂಗ್ ಎಸೋಸಿಯೇಶನ್ ಲಿಮಿಟೆಡ್,
ರಥಬೀದಿ ಮಂಗಳೂರು.

ಸ್ವದೇಶಾಭಿಮಾನಿಯನ್ನು ಓದಿರಿ!

ಇಂದೇ ಚಂದಾದಾರರಾಗಿರಿ!



ಸ್ಕ್ವಿಬ್ಸ್ ಎಗ್ಯೂ ಸ್ಪೆಸಿಫಿಕ್

ಕೋಟ್ಯಾಧೀಶನಿಗೂ ಜನಕೋಟಿಗೂ ಇದುವೇ ರಾಜಮದ್ದು

ಮಲೆಜ್ವರ, ಇನ್‌ಫ್ಲುಯೆಂಜಾ ಮತ್ತು ಜ್ವರಗಳನ್ನು ಗುಣಪಡಿಸುತ್ತದೆ.

ಮೆಡನ್ ಸನ್ಸ್ ಎಂಡ್ ಕೋ.,
ಬೊಂಬಾಯಿ, 2.

MADON SONS & Co
PHARMACEUTICAL CHEMISTS, BOMBAY

ನಾಯಕ್ ಬ್ರದರ್ಸರ

ಶ್ರೀಮದ್ಭುವನೇಂದ್ರ ಮಹೌಷಧಾಲಯ, ಕಟಪಾಡಿ, ದ.ಕ.

ಪಾರಂಪರ್ಯದ ಅನುಭವಸಿದ್ಧೌಷಧಗಳು! ಸ್ವರ್ಣ, ರಜತ ಪದಕಗಳನ್ನು ಪಡೆದ ದಿವ್ಯೌಷಧಗಳು!

ಮೃಧ್ವೀಕಾಸವ (ನಿತ್ರಾಣಕ್ಕೆ ಅತ್ಯಂತ ಗುಣಕಾರಿ)

ಮಹಾಮದನ ಕಾಮೇಶ್ವರೀ ಲೇಹ್ಯ–(ನಪುಂಸಕತ್ವ, ಧಾತುಕ್ಷೀಣತೆಗೆ ಅತ್ಯುತ್ತಮ)

ಹಿಮಸಾಗರ ತೈಲ್ಯ–(ನಿದ್ರಾನಾಶಕ್ಕೆ ಅತೀ ಉಪಯುಕ್ತ)

ಮಹಾಮಾಷ ತೈಲ್ಯ (ಪಕ್ಷವಾತಕ್ಕೆ ಅತ್ಯಂತ ಗುಣಕಾರಿ)

ಗರ್ಭಪಾಲ (ಗರ್ಭಶೂಲ, ಗರ್ಭಸ್ರಾವಗಳಿಗೆ ದಿವ್ಯೌಷಧ)

ಗುಡ ಪಿಪ್ಪಲಿ–(ಲೀವರ್ ರೋಗಕ್ಕೆ ಅತ್ಯುತ್ತಮ)

ಇವುಗಳಲ್ಲದೆ ಶಾಸ್ತ್ರೀಯ ರೀತ್ಯಾ ತಯಾರಿಸಿದ ಅರಿಷ್ಟಗಳು, ಆಸವಗಳು, ಲೇಹ್ಯಗಳು, ಭಸ್ಮಗಳು, ತೈಲ್ಯಗಳು ಇತ್ಯಾದಿ ಯಾವಾಗಲೂ ಮಾರಾಟಕ್ಕೆ ಸಿದ್ಧವಿರುತ್ತವೆ. ಹೆಚ್ಚಿನ ಮಾಹಿತಿಗೂ ಕೆಟಲಾಗಿಗೂ ಈ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳಬಹುದು.

ನಾಯಕ್ ಬ್ರದರ್ಸರ ಶ್ರೀಮದ್ಭುವನೇಂದ್ರ ಮಹೌಷಧಾಲಯ, ಕಟಪಾಡಿ, ದ. ಕನ್ನಡ.

ಶುದ್ಧ ಸ್ವದೇಶಿ! ಸ್ವದೇಶಿ ಭಾಂಡವಾಳದಿಂದ ಸ್ವದೇಶಿಯರಿಗಾಗಿ!

ಗಂಧದ ಸಾಬೂನು (ಸೆಂಡಲ್‌ವುಡ್) ನಿರ್ವಿವಾದವಾಗಿ ಅತ್ಯುತ್ತಮವಾದುದು!

ತಾಜಾ ಗಂಧದ ತೈಲ ಮೊದಲಾದ ವನಸ್ಪತಿ ತೈಲಗಳಿಂದಲೇ ತಯಾರಿಸಿದ ಅತ್ಯುತ್ತಮ ಸಾಬೂನು.

ಮೈಸೂರು ಸರಕಾರದ ಗಂಧದೆಣ್ಣೆ ಕಾರ್ಖಾನೆಯಲ್ಲಿ ದೊರೆವ ಆ ಉತ್ತಮ ಎಣ್ಣೆಯ ಸ್ನಿಗ್ಧ ಸುಗಂಧವುಳ್ಳದ್ದು.

ಪ್ರಾಣಿಜನ್ಯ ಚರ್ಬಿಯ ಸ್ಪರ್ಶವೂ ಇಲ್ಲದ

ಮಲಬಾರು ಸೋಪ್

ಮಲಬಾರು ಸೆಂಡಲ್ ವುಡ್

ದಿ ವೆಜಿಟೇಬಲ್ ಸೋಪ್ ವರ್ಕ್ಸ್, ಕಲ್ಲಿಕೋಟೆ.

ಪ್ರೊಪ್ರೈಟರ್:—ಸನ್ ಬ್ರೆಂಡ್ ಕೊಡೆಯ ಖ್ಯಾತಿಯ ಸೇಟ್ ನಾಗಜೀ ಪುರುಷೋತ್ತಮ ಮತ್ತು ಕಂಪೆನಿ, ಕಲ್ಲಿಕೋಟೆ.

ಈ ಜಿಲ್ಲೆಗೆ ಪ್ರವರ್ತಕರು:— ರಾಘವೇಂದ್ರ ರಂಗ ಪೈ, ರಥಬೀದಿ, ಮಂಗಳೂರು.

ಇಂದೇ ಆರಂಭಿಸಿರಿ!

ಸುಪ್ರಸಿದ್ಧ ಆತಂಕನಿಗ್ರಹ ಮಾತ್ರೆಗಳನ್ನು ಉಪಯೋಗಿಸಲಿಕ್ಕೆ.

ಜೀವನದ ಜಯಶೀಲತೆಯ ಏಣಿಯನ್ನೇರಿ. ಲೋಕದಲ್ಲಿ ಸಾವಿರಾರು ಜನರು ಅದನ್ನು ಪ್ರತಿದಿನವೂ ಉಪಯೋಗಿಸುತ್ತಿದ್ದಾರೆ.

ನರ ಮತ್ತು ಶಾರೀರಿಕ ದೌರ್ಬಲ್ಯಕ್ಕೆ ಭದ್ರತೆಯು.

ಆರೋಗ್ಯಕ್ಕೆ ಕವಚವು

32 ಮಾತ್ರೆಗಳ ಟಿನ್ನೊಂದಕ್ಕೆ ರೂ. 1

ಹೆಚ್ಚಿನ ವಿವರಕ್ಕೆ, ಧರ್ಮಾರ್ಥ ಹಾಗೂ ಟಪ್ಪಾಲು ಹಾಸಲು ವಿನಹ ಕಳುಹಿಸಲ್ಪಡುವ ನಮ್ಮ

ಕಾಮಶಾಸ್ತ್ರವನ್ನೋದಿರಿ.

Agents:—Shah Company, MANGALORE.
„ Pearl & Sons, MANGALORE.

Atank Nigrah Pharmacy,
Chickpet, Bangalore.

ಆತಂಕನಿಗ್ರಹ ಫಾರ್ಮಸಿ,
ಚಿಕ್ಕಪೇಟೆ, ಬೆಂಗಳೂರು.

ಎಲ್ಲಾ ಚಂದಾದಾರರು ತಮ್ಮ ಪತ್ರವ್ಯವಹಾರದೊಂದಿಗೆ ಅವರವರ ಚಂದಾ ನಂಬರುಗಳನ್ನು ಅಗತ್ಯವಾಗಿ ನಮೂದಿಸತಕ್ಕದ್ದು. ಸಂ. ಸ್ವ.

BUY ADVERTISED GOODS

ಸ್ವದೇಶೀಯ ಉದ್ಯಮವನ್ನು ಪ್ರೋತ್ಸಾಹಿಸಿ! ನಿಮ್ಮದೀ ಸಂಸ್ಥೆಗೆ ಉತ್ತೇಜನ ಕೊಡಿ!!

ದಿ ಪೋಪ್ಯುಲರ್ ಇನ್ಸೂರೆನ್ಸ್ ಕಂಪೆನಿ, ಲಿಮಿಟೆಡ್, ಹೆಡ್ ಆಫೀಸು - ಮಂಗಳೂರು

ಪಶ್ಚಿಮ ಕರಾವಳಿಯಲ್ಲಿ ಇದೇ ಮೊದಲನೆಯ ವಿಮಾಸಂಘ.

ಪೋಲಿಸಿದಾರರಿಗೆ ವಿಶೇಷ ರಿಯಾಯತಿ! ಸ್ತ್ರೀಯರ ಜೀವವಿಮೆಯನ್ನೂ ಸ್ವೀಕರಿಸಲಾಗುತ್ತದೆ!

ಜೀವವಿಮೆಯ ಒಳ್ಳೆಯ ಎಲ್ಲ ಸೌಕರ್ಯಗಳನ್ನೂ ಸಾಕಷ್ಟು ಸುಲಭ ದರದಲ್ಲಿ ಒದಗಿಸಿಕೊಡುವ ಈ ಕಂಪೆನಿಗೆ ಮುಕ್ತಹಸ್ತದಿಂದ ಸಹಕರಿಸಿ!!

[ವಿ. ಸೂ. — 'ಇಂಡಸ್ಟ್ರೀಯಲ್ ವಿಮೆ' ಎಂಬ 'ರೂಪಾಯಿ ಪೋಲಿಸಿ'ಗಳ ಸುಲಭ ಕಂತಿನ ವಿಮೆಯ ವಿಷಯವಾಗಿ ವಿಚಾರಿಸಿರಿ.]

ಪ್ರತಿಯೊಂದು ತಾಲೂಕಿನಲ್ಲಿ, ಜಿಲ್ಲೆಯಲ್ಲಿ ಮತ್ತು ನಗರದಲ್ಲಿ ಪರಿಚಿತರೂ ಆದ ಯೋಗ್ಯ ಗೃಹಸ್ಥರಿಂದ ಏಜೆನ್ಸಿಯ ಕುರಿತು ಅರ್ಜಿಗಳು ಅಪೇಕ್ಷಿಸಲ್ಪಟ್ಟಿವೆ. ಮನಸ್ಸಿಟ್ಟು ಕೆಲಸ ಮಾಡುವವರಿಗೆ ಧಾರಾಳ ಕಮಿಶನ್ ಕೊಡಲಾಗುವುದು.

ಹೆಚ್ಚಿನ ವಿವರಕ್ಕೆ ಹೆಡ್ ಆಫೀಸಿಗೆ ಬರೆದುಕೊಳ್ಳತಕ್ಕದ್ದು.

ಪಾಲಿಸಿ ನಂಬ್ರ 939 – ವೋಟ ಮರಕಲ (ಮೃತಪಟ್ಟಾತ)

"ಸುಮಾರು 6 ತಿಂಗಳ ಹಿಂದೆ, 'ಪಾಪ್ಯುಲರ್ ಇನ್ಸುರೆನ್ಸ್ ಕಂಪೆನಿ, ಲಿಮಿಟೆಡ್, ಮಂಗಳೂರು' ಎಂಬೀ ಸಂಸ್ಥೆಯಲ್ಲಿ ನನ್ನ ಮೃತಪುತ್ರನು ಇಳಿದ ವಿಮೆಯ ಪೋಲಿಸಿಯ ಸಂಬಂಧವಾಗಿ ರೂ. 997–೪–0ನ್ನು ನಾನು ಪಡೆದಿರುತ್ತೇನಾಗಿ ತಿಳಿಸಲು ನನಗೆ ಅತ್ಯಾನಂದವಾಗುತ್ತದೆ. ಕಂಪೆನಿಯು ನನಗೆ ಸಲ್ಲತಕ್ಕ ಈ ಮೊಬಲಗಿನ ಪಾವತಿಯನ್ನು ಜಾಗ್ರತೆಯೇ ಮಾಡಿರುವುದಕ್ಕಾಗಿ ನಾನು ಮನಃಪೂರ್ವಕವಾಗಿ ವಂದಿಸುತ್ತೇನಲ್ಲದೆ, ಮ್ಯಾನೇಜಿಂಗ್ ಡೈರೆಕ್ಟರರಾದ ಶ್ರೀ ಜಿ. ಶಿಶ್ಶಲ ರಾಯರು ನಮ್ಮಲ್ಲಿಗೆ ಸ್ವತಃ ಬಂದು ನನ್ನ ಕೈಯಲ್ಲಿಯೇ ಆ ಮೊಬಲಗಿನ ಚೆಕ್ಕನ್ನು ಕೊಟ್ಟು ಹೋದದ್ದೆಂಬುದನ್ನೂ ಸೂಚಿಸದಿರಲಾರೆ. ಇದರಿಂದ ಈ ವಿಮಾ ಕಾರ್ಯಾಲಯದ ಮೂಲಕ ಅರ್ಪಿಸಲಾಗುವ ಅನೇಕಾ ಸೌಕರ್ಯಗಳೆಷ್ಟೆಂಬುದು ಚನ್ನಾಗಿ ವ್ಯಕ್ತವಾಗುತ್ತದೆ. ಈ ಕಂಪೆನಿಗೆ ಸರ್ವದಾ ಯಶಸ್ಸು ಉಂಟಾಗಲೆಂದು ನನ್ನ ಹಾರೈಕೆ."

ಮುಲ್ಕಿ 9–9–1934. ನಾಗು ಮರಕಲತಿ.

WANTED.

Four Organisers to organise the work of the South Indian General Assurance Society, Ltd., in the following places noted below. Capable organisers can expect to have attractive and encouraging terms with sound footing for their future.

(1) South Canara, (2) Mysore, Hassan and Coorg, (3) Kadur, Shimoga, Chitaldroog, and Tumkur. (4) Mangalore, Kolar.

For terms and other particulars please apply to—

The Divisional Manager,
The South Indian General Assurance Co. Ltd.
64, III Cross Road, Srirampur Extn Malleswaram Post, BANGALORE
OR
The Managing Agents,
The S. I. G. A. Co. Ltd.
55, Poonamallee High Road, Kilpauk, MADRAS.

1876ನೇ ಇಸವಿಯಿಂದಲೂ ಪ್ರಸಿದ್ಧಿ ಹೊಂದಿದ

ಎಮ್. ಗಣಪಯ್ಯ ಎಂಡ್ ಸನ್ಸ್, ಮಂಗಳೂರು.

ಇವರ ಶಾಸ್ತ್ರೀಯ ಮತ್ತು ಅನುಭವಸಿದ್ಧ ಔಷಧಗಳು.

ಮಹಾ ಮದನಕಾಮೇಶ್ವರಿ ಲೇಹ:— [illegible]

ಬಾಟ್ಲಿ 1 ರ ರೂ. 2-0-0. ಬಾಟ್ಲಿ 3 ರ ರೂ. 5-12-0.

ಮೇಹ ಕುಠಾರ:— [illegible]

ಡಬ್ಬಿ 1ಕ್ಕೆ ರೂ. 2-8-0. ಡಬ್ಬಿ 3 ರ ರೂ. 7-0-0.

ಕಸ್ತೂರಿ ಮಿಶ್ರಿತ ಬಾಲರೋಗಾರಿಷ್ಟ — [illegible]

ಬಾಟ್ಲಿ 1ಕ್ಕೆ ರೂ. 1-8-0. ಬಾಟ್ಲಿ 2ರ ರೂ. 3-0-0.

[ಗುಣಬಾರದಿದ್ದರೆ ಹಣ ವಾಪಾಸು]

ಸುಪ್ರಸಿದ್ಧ ವೈದ್ಯರಾದ ಎಮ್. ಕೆ. ರಜಪೂತ ಇವರ

ಸಂತತಿ ಪ್ರತಿಬಂಧಕ ಚೂರ್ಣ (ರಿಜಿಸ್ಟರ್ಡ)

[illegible]

ವಿಳಾಸ — ಸಂತತಿನಿರೋಧಕ ಔಷಧಾಲಯ ಮು ಪೊ ಮಿರಜ್, S M C

Canara Bank, Limited.

Established 1906.

Authorised Capital	10,00000—0—0
Subscribed capital	6,00,000—0—0
Paid up Capital	3,50,000—0—0
Reserves	4,31,000 0—0

Head Office—**Bunder, Mangalore** Local Offices **City & Bunder**

BRANCHES— Bombay, Cochin, Calicut, Ernakulam, Alleppey, Chikmagalur, Ganguli, Coondapoor, Udipi, Karkal, Puttur, Kasaragod, & Buntwal Out-agency.

Interest is allowed on Current, Fixed and Savings Bank Accounts, rates of which may be ascertained on application Advances made on approved securities at easy rates. All kinds of Banking business transacted. Rules of business on application.

The Bangalore Branch Office of the Bank at No. 1 Albert Victor Road, Bangalore City has been opened on 3-1-35.

A. Madhava Pai,
Secretary.

Wanted

200 old fully paid-up Shares of the Canara Bank Ltd (Mangalore), at Rs 85 per share Intending sellers may apply to the undersigned

S. Madhav Laxman Nayak,
Brahmin Street, Mangalore

ಜಯಕರ್ನಾಟಕ

ನಾಟ್ಯಾಂಕ.

ಸಂಪಾದಕರು —
ಶ್ರೀ ಬೆಳಗಾಂವಿ ರಾಮಚಂದ್ರ, ಬಿ. ಎ.
ಶ್ರೀ ಹ. ಪಿ. ಜೋಶಿ, ಬಿ. ಎ.

[illegible]

ವ್ಯವಸ್ಥಾಪಕ,
ಜಯಕರ್ನಾಟಕ ಕಾರ್ಯಾಲಯ, ಧಾರವಾಡ.

ಡಾಕ್ಟರ ವಾಮನ ಗೋಪಾಲರವರ



[illegible]

ಡಾ॥ ಗೌತಮ ರಾವ್ ಕೇಶವರವರ,
ಫೋಸ್ಫರಸ್ ಗುಳಿಗೆಗಳು.

[illegible]

Shiromani Narayanacharya,
Choukhamba, Benares City

[illegible]

ಶಿರೋಮಣಿ ನಾರಾಯಣಾಚಾರ್ಯ
ಚೌಖಂಬಾ, ಬನಾರಸ್ (ಕಾಶೀ)

---

77 Years!

Two generations of approved service enables us to pick and choose what is cheap, lasting & good to suit the pockets & the tastes of our longstanding wide circle of

CUSTOMERS

who know our

Premier House for Swadeshi.

Mill Yarns—Handloom Cloths, Dhoties—Saries—Cintzes etc.

Shrinivas Ranga Pai
Sawkar Mahal,
Car Street, MANGALORE.

ಸ್ವದೇಶಾಭಿಮಾನಿ.

SWADESHABHIMANI

ESTABLISHED 1906. PIONEER WEEKLY OF SOUTH KANARA.

(ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ೧೯೦೬ರಲ್ಲಿ ಸ್ಥಾಪಿತವಾದುದು.)

ಪ್ರತಿ ಶುಕ್ರವಾರವೂ ಮಂಗಳೂರಿನ ಶಾರದಾ ಛಾಪಖಾನೆಯಲ್ಲಿ ಪ್ರಕಟನಾಗುವ ವಾರಪತ್ರಿಕೆ.

ರತ್ನೈರ್ಮಹಾರ್ಹೈಸ್ತುತುಷುರ್ನ ದೇವಾ। ನ ಭೇಜಿರೇ ಭೀಮವಿಷೇಣ ಭೀತಿಮ್॥ ಸುಧಾಂ ವಿನಾ ನ ಪ್ರಯಯುರ್ವಿರಾಮಂ। ನ ನಿಶ್ಚಿತಾರ್ಥಾದ್ವಿರಮಂತಿ ಧೀರಾ॥೧॥
ದೊರೆಯಲನುಪಮರತ್ನಗಳು ಸಾ। ಗರವ ಮಥಿಸಲು ಸುರರಿಗದರಿಂ। ಹರುಷವಾಯಿತೆ? ಮತ್ತೆ ವಿಷವ ಸುಡುತ ಬರುತಿರುವ॥
ಗರಲಕವರಂಜಿದರೆ? ಸುಧೆಯನು। ಮರೆತು ಕ್ಷುದ್ರರ ತೆರದಿ ಕುಳಿತರೆ? । ತೆರಳ ಬಲ್ಲರೆ ತೊರೆದು ಧೀರರು ನಿಶ್ಚಿತಾರ್ಥವನು? ॥ ೧ ॥

ಪುಸ್ತಕ ೨೮. ಮಂಗಳೂರು ತಾ. ೨೬ನೇ ಶುಕ್ರವಾರ ಒಕ್ಟೋಬರ ೧೯೩೪. (26-10-'34) ಸಂಚಿಕೆ ೪೨

The Canara Banking Corporation Udipi, Ltd.

(Incorporated in British India) ESTD. 1906.

Head office:—UDIPI, S. K. **Branches:—Coondapoor, Mangalore, Shimoga & Madras.**

Authorised Capital Rs. 3,50,000. Subscribed and Called up Rs. 2,25,000.

NOTICE

Is hereby given to the public and to the heirs of late Mr. Bola Madhava Rau, Merchant, Moolky, that in exercise of the lien in favour of the Corporation for the liabilities of the late Mr. Bola Madhava Rau, 151 shares numbered 1136, 3297 to 3326, 3334 to 3453 will be sold with accrued dividend from 1—1—1934 by public auction on Saturday the 27th October, 1934 at 2 P. M. at its registered Head office at Udipi.

Office of the Corporation,
Udipi, S. K. 3—10—1934.

M. Shrinivas Prabhu,
Ag. Manager.

(Regd)

ಅಮೃತಾಂಜನ.

ಇದು ಕಟ್ಟು ಶಿರೋವೇದನೆ, ಕಷ್ಟಕೊಡುವ ವಾತ, ಭಾರಿ ನೋವು, ವಿಶೇಷ ಉಳುಕು, ಅಸಹನೀಯ ಹಲ್ಲುನೋವು, ವಿಪರೀತ ಘಾಯ, ಬಹು ಶೀತ, ಸಹಿಸಲಸದಳವಾದ ಚಳಿ, ಕೈಕಾಲು ಮರಗಟ್ಟುವುದು, ಲುಂಬಾಗೊ ಮೊದಲಾದ ಎಲ್ಲಾ ತರದ ಬೇನೆಗಳನ್ನೂ ಅತೀ ಬೇಗನೇ ಗುಣಪಡಿಸುತ್ತದೆ. ಎಲ್ಲೆಲ್ಲಿಯೂ ಮಾರಲ್ಪಡುತ್ತಿದೆ.

ರಿಂಗ್‌ವರ್ಮ್ ಮುಲಾಮು:— ಇದು ರಿಂಗ್‌ವರ್ಮನ್ನೂ ಕಜ್ಜಿಯನ್ನೂ ಇನ್ನಿತರ ಚರ್ಮರೋಗಗಳನ್ನೂ ಮೂರು ಸಲ ಮುಟ್ಟಿಸುವುದರೊಳಗೆ ಗುಣಪಡಿಸುತ್ತದೆ.

ಡಬ್ಬಿ 1ಕ್ಕೆ 6 ಆಣೆ. ಡಜನಿಗೆ ರೂ. 3—8—0. ಅಂಚೆವೆಚ್ಚ ಪ್ರತ್ಯೇಕ.

ಅಮೃತಾಂಜನ ಡಿಪ್ಪೋ, ಮದರಾಸು ಮತ್ತು ಬೊಂಬಾಯಿ.

ದಿ ಬೊಂಬೇ ಲ್ಯಾಫ್ ಎಶ್ಯೂರೆನ್ಸ್ ಕಂಪೆನಿ ಲಿಮಿಟೆಡ್, ಬೊಂಬೇ.

1908ರಲ್ಲಿ ಸ್ಥಾಪಿತವಾದುದು.

ಪೊಲಿಸಿದಾರರಿಗೆ ವಿಶೇಷ ರಿಯಾಯತಿ.

ವರ್ಷಾವಧಿಯ ಪ್ರೀಮಿಯಮ್ಮುಗಳನ್ನು ತೆರುವ ಎಲ್ಲಾ ಪೊಲಿಸಿದಾರರಿಗೂ "ಸಿಲ್ವರ್ ಜ್ಯೂಬಿಲಿ" ರಿಯಾಯತಿಯಾಗಿ ಅವರವರ ಮುಂದಿನ ಪ್ರತಿ ವಾರ್ಷಿಕ ಪ್ರೀಮಿಯಮ್ಮಿನಲ್ಲಿ ಶೇಕಡಾ 2½ ಸಲೆಯಷ್ಟು ಕಡಿಮೆಯಾದ ಮೊಬಲಗನ್ನು ತೆರುವ ರಿಯಾಯತಿ ಕೊಡಲಾಗಿದೆ. ಈ ರಿಯಾಯತಿಯ ಪ್ರಯೋಜನವನ್ನು ಆಗಲೇ ನೂರಾರು ಮಂದಿ ಪೊಲಿಸಿದಾರರು ಪಡಕೊಂಡಿದ್ದಾರೆ. ವರ್ಷಕ್ಕೊಮ್ಮೆ ಪ್ರೀಮಿಯಮ್ಮಿನ ಕಂತನ್ನು ಕಟ್ಟಲಪೇಕ್ಷಿಸುವವರು ತಮ್ಮ ಪೊಲಿಸಿಯ ನಂಬರುಗಳನ್ನು ನಮೂದಿಸಿ ನಮಗೆ ಯಾ ಸಮ್ಮಂಧಪಟ್ಟ ನಮ್ಮ ಇತರ ಆಫೀಸಿಗೆ ತಿಳಿಸಬೇಕಾಗಿ ಈ ಮೂಲಕ ವಿನಂತಿ ಮಾಡಿಕೊಳ್ಳಲಾಗುತ್ತದೆ.

ವಿ. ಸೂ:—ಪ್ರಾತಿನಿಧ್ಯವಿಲ್ಲದ ಜಿಲ್ಲೆಗಳಿಂದ ಉತ್ಸಾಹಶಾಲಿ ಗೃಹಸ್ಥರುಗಳ ಏಜನ್ಸಿ ಅರ್ಜಿಗಳು ಅಂಗೀಕರಿಸಲಾಗುವುವು.

ಕೊಟ್ಟಿಕಾರ್ ಬ್ರದರ್ಸ್, ಮದ್ರಾಸ್ ಬ್ರೇಂಚ್ ಸೆಕ್ರೆಟರಿಯವರು.

[illegible] ಗುಜರಾ [illegible] ಬಂದಾಗುತ್ತ [illegible] ಮುಂದೆ [illegible] [illegible]

× × × × ×

[illegible] ಮುಂಬಾಯಿಯಲ್ಲಿ [illegible] (ಮುಂದಿನ ಕಾಂಗ್ರೆಸ್ಸಿಗೆ ಹೋಗಿರುವವರು) ಸಿಗಬಹುದೆಂದು ಭಾವಿಸಿ ಅವನು [illegible] ಅಲ್ಲಿ ತೆರೆದಿರುತ್ತಾನಷ್ಟೆ.

× × × × ×

ಓಹೋ, ಇದೋ ಮುಂಬಾಯಿ ಎಂಬ ಊರು? ಮೊದಲು ಚಿತ್ರದಲ್ಲಿ ಮಾತ್ರ ನೋಡಿದ್ದೆನು; ಕಾಂಗ್ರೆಸ್ ನಗರವೆಂಬುದು ಇದೇ ಏನೋ? ಸುತ್ತಮುತ್ತಲಿನ ಗಾಳಿಯು [illegible] ಆಗಿದೆಯಲ್ಲ! ಇದಕ್ಕೆ ಕಾರಣ ವೇನು?

× × × × ×

ಈ ಕಾಂಗ್ರೆಸ್ ನಗರದ ಬಳಿ ಪೋಲೀಸರ ಕೆಲವು ಸ್ಟೇಶನುಗಳು ಸ್ಥಾಪಿತವಾಗಿವೆಯಲ್ಲ! ಇದೇಕೆ? ಓಹೋ, ಮರೆತೆ; ರಾತ್ರಿಯಾದರೆ ಹಗಲು ಹೇಗೆ ಆಗುವುದು ಸ್ವಾಭಾವಿಕವೋ, ಹಾಗೆ, ಕಾಂಗ್ರೆಸ್ ಇದ್ದಲ್ಲಿ ಪೋಲೀಸರೂ ಇರಬೇಕೆಂಬುದೂ ನಿಜವೆಂದು ಮರೆತಿದ್ದೆ.

× × × × ×

ಇದೇನು? ಮಹಾತ್ಮರ ಮುಖ ಸಪ್ಪೆಯಾಗಿದೆ! ಕಾಂಗ್ರೆಸ್ಸನ್ನು ಬಿಡಬೇಕೆಂಬ ಚಿಂತೆಯಿಂದಾಗಿರಬಹುದು! ಅನೇಕ ಕಾಂಗ್ರೆಸ್‌ವಾಲರು ತನಗೆ ವಿರುದ್ಧರಾಗಿರುವರೆಂಬ ದುಃಖದಿಂದಲೋ?

× × × × ×

ಮಹಾತ್ಮಾ ಗಾಂಧಿಯವರ ಪೋಲಿಸಿಯನ್ನು ಕಂಡು ಮತ್ಸರದ ಕೆಲವು ಕಾಂಗ್ರೆಸ್‌ವಾಲರು, ಮಹಾತ್ಮರು ಕಾಂಗ್ರೆಸ್ ಚಪ್ಪರಕ್ಕೆ ಬಂದೊಡನೆ ತಮ್ಮ ಹಟವನ್ನು ಬಿಟ್ಟು ಮಹಾತ್ಮರ ಬೆನ್ನು ತಟ್ಟಿ "ನೀವು ಕಾಂಗ್ರೆಸ್ ಬಿಟ್ಟು ಹೊರಗೆ ಹೋಗಬಾರದು" ಎಂದಿರುವರಂತೆ! ಏನು ಹೀಕಲಾಟ ಈ ಸದಸ್ಯರದು!

× × × × ×

ಮಹಾತ್ಮರು ಒಂದು ಮಹಾ ಯೋಜನೆಯಲ್ಲಿ ಇರುವರಂತೆ! ಅದೇನು ಗೊತ್ತಿರುವುದೇ? ಅಕ್ಕಿಯ ಗಿರಣಿ, ವಸ್ತ್ರದ ಗಿರಣಿಗಳನ್ನು ಸಾಧ್ಯವಿದ್ದಷ್ಟು ಕಡಿಮೆ ಮಾಡಿ, ಬಡವರು ಯಂತ್ರಗಳನ್ನು ನಂಬದಂತೆ ಮಾಡಬೇಕೆಂದು ಆಲೋಚನೆಯಂತೆ! ಇದಕ್ಕಾಗಿ ಮಹಾತ್ಮರು ಪುನಹ ಅಖಿಲ ಹಿಂದೂಸ್ಥಾನದ ಸಂಚಾರಕ್ಕೆ ತೊಡಗುವರಂತೆ. ಅಯ್ಯಾ, ವಲ್ಲಭಭಾಯಿ ಪಟೇಲರೇ, ನಿಮ್ಮ ಬಲಗೈಯಾದ ಮಹಾತ್ಮರಿಗೆ ಬುದ್ಧಿ ಹೇಳಲಾರಿರಾ? ಪ್ರಾಯ ಮೀರಿದೆ ಎಂದು ಹೇಳಿ!

× × × × ×

ಪಾಪ! ನಮ್ಮ ಪಂಡಿತ ಮಾಲವೀಯರು ಈ ಸಲ ಕಾಂಗ್ರೆಸ್ಸಿಗೆ ಲೇಟ್ ಆಗಿ ಬಂದರು ಹೋಗಿದರು! ಸರ್ ಸಾಮುವೇಲರಿಗೆ ಪತ್ರ ಬರೆಯುತ್ತಿದ್ದರೆಂದು ತೋರುತ್ತೆ. ("ತ್ತೆ" ಎಂಬುದು ಮೈಸೂರು ಭಾಷೆ. ನಾನು ಅಲ್ಲಿ ಕಲಿತುದು.)

× × × × ×

ಈ ವರ್ಷದ ಕಾಂಗ್ರೆಸ್ ಚಪ್ಪರದೊಳಗೆ ದೊಡ್ಡವರೆನಿಸಲ್ಪಟ್ಟಿರುವ ಎಲ್ಲಾ ರಾಜಕೀಯ ಧುರೀಣರೂ, ಇರುವರಷ್ಟೆ! (ಪಂಡಿತ ಜವಾಹರಲಾಲರು ಮಾತ್ರ ಸರಳುಗಳೆಡೆಯಲ್ಲಿರುವರು) ಇವರೆಲ್ಲ ಒಂದಾಗಿ ಯಾವ ನಿರ್ಧಾರವನ್ನು ಮಾಡಲಿರುವರೋ ತಿಳಿಯಬೇಕು!

× × × × ×

ಹರಿಜನೋದ್ಧಾರಕ್ಕೆ ಸನಾತನಿಗಳು ವಿರೋಧರಾಗಿರುವಂತೆ, ಗಾಂಧೀ ವಲ್ಲಭಭಾಯಿಯವರ ಕಾರ್ಯಗಳಿಗೆ ಟ್ರೇಡ್ ಯೂನಿಯನ್ ಎಂಬುದು ಮುಂಬಾಯಿಯಲ್ಲಿ ಇದ್ದಿ!

× × × × ×

ಮಿಸ್, ಮಣಿಬೆನ್ ಪೇಥಾರೆಂಬವರು ಇವರ ಮುಂದಾಳಂತೆ! "ಗಾಂಧಿಗೆ ಧಿಕ್ಕಾರ! ವಲ್ಲಭಭಾಯಿಗೆ ತಿರಸ್ಕಾರ!" ಎಂದು ಅರ್ಭಟಿಸುತ್ತಿರುವರಂತೆ ಇವರು! ಬೊಬ್ಬಿಟ್ಟು ಬಾಯಾರುವಾಗ ಕುಡಿಯುವುದಕ್ಕಾಗಿ ಇವರು ನೀರನ್ನು ಬಳಿ ಇರಿಸಿರುವರೇ?

× × × × ×

'ಇಂಡಿಯನ್ ರಿವ್ಯೂವ್ಸ್' ಎಂಬ ಪತ್ರ ಇಂಗ್ಲಾಂಡಿನಿಂದ ನವಂಬರ ತಿಂಗಳಲ್ಲಿ ಹೊರಡುವುದಂತೆ! (ಅಷ್ಟರೊಳಗೆ ಕಾಂಗ್ರೆಸ್ಸಿನ ಆಲೋಚನೆಗಳು ಪ್ರೈಟ್ ಹೋಲ್‌ಗೆ ತಿಳಿದು ಅದಕ್ಕೆ ತಕ್ಕಂತೆ ಉಪಾಯಮಾಡಬಹುದೆಂದು ಯೋಜನೆಯಿರಬಹುದು! ಛೈ! ಇಂಡಿಯನ್ ರಿವ್ಯೂವ್ಸ್‌ಗೆ!

'ಸಾಯ್ಬ'.

ಸ್ವಾಭಾವಿಕವಾದ ದೀರ್ಘ ನಿದ್ರೆಯು ಆರೋಗ್ಯಕ್ಕೆ ಆವಶ್ಯಕ.

ಅನೇಕರಿಗೆ ರಾತ್ರಿ ಸರಿಯಾದ ನಿದ್ದೆ ಬರುವುದಿಲ್ಲ—ಕಾರಣವೇನು? ನರಗಳು ನಿರ್ಬಲವಾಗಿವೆ. ಮೆದುಳು ನಿಶ್ಶಕ್ತವಾಗಿದೆ. ಬೇಸರದಿಂದಲೂ, ವಿಪರೀತ ಕೆಲಸದಿಂದಲೂ, ಹವಾ ಗುಣದಿಂದಲೂ, ಆವೇಶದಿಂದಲೂ ಹೀಗಾಗುತ್ತದೆ.

ಆರೋಗ್ಯದಿಂದಿರಬೇಕಾದರೆ, ನೀವು ಸರಿಯಾಗಿ ನಿದ್ದೆಮಾಡಬೇಕು. ಸರಿಯಾಗಿ ನಿದ್ದೆ ಹತ್ತದಿದ್ದರೆ ಆರೋಗ್ಯವು ನೆಟ್ಟಗಾಗುವುದಿಲ್ಲ. ಮೆದುಳು ಮತ್ತು ನರಗಳನ್ನು ಸಮಾಧಾನಗೊಳಿಸುವುದರಿಂದಲೇ ಸರಿಯಾದ ನಿದ್ದೆಯು ಬರುವುದು. ಸರಿಯಾದ ಪೋಷಣೆಯೇ ಇದಕ್ಕೆ ಅಗತ್ಯ. ಇಂತಹ ಪೋಷಣೆಯೂ, ಮೆದುಳು ನರಗಳ ಸಮಾಧಾನವೂ ಒಳ್ಳೆ ನಿದ್ದೆಯೂ ರುಚಿಕರವಾದ 'ಓವಲ್ಟಿನ್' ಸೇವನೆಯಿಂದ ಲಭಿಸುತ್ತವೆ. ಈ ಅಮೂಲ್ಯ ಪಾನೀಯವು ಪ್ರಕೃತಿಯ ಆಹಾರಗಳಿಂದಲೇ ತಯಾರಿಸಲ್ಪಟ್ಟಿದೆ. ಬೆಳೆದ ಬಾರ್ಲಿ, ದನದ ಕೆನೆ ಹಾಲು ಮತ್ತು ಸ್ವಚ್ಛ ಕೋಕೋಗಳಿಂದ ಇದನ್ನು ತಯಾರಿಸಲಾಯಿತು. ಅಸಂಖ್ಯಾತ ಸಾವಿರಾರು ಜನರು ಈ ಓವಲ್ಟಿನ್ ಪಾನೀಯದಿಂದಲೇ ಗಾಢ ನಿದ್ದೆಯನ್ನು ಹೊಂದುತ್ತಿರುವರು—ಶಕ್ತಿಯನ್ನು ಸಂಪಾದಿಸುತ್ತಿರುವರು.

OVALTINE

ಸ್ವಾಭಾವಿಕವಾದ ದೀರ್ಘ ನಿದ್ದೆಯನ್ನು ಕೊಡುತ್ತದೆ.

ತಯಾರಿಯಲ್ಲಿ ಕೈಯಲ್ಲಿ ಸ್ಪರ್ಶಿತವಾಗಿಲ್ಲ. ಎಲ್ಲಾ ಕೆಮಿಸ್ಟರಲ್ಲಿಯೂ ಸ್ಟೋರುಗಳಲ್ಲಿಯೂ ದೊರೆಯುತ್ತದೆ

ಏಜೆಂಟ್—ಜೇಮ್ಸ್ ರೈಟ್, 8ಎ ಗ್ರೆಸನ್ ಸ್ಟ್ರೀಟ್ ಕಲ್ಕತ್ತ, ಮತ್ತು ಬೊಂಬಾಯಿ, ಮದ್ರಾಸುಗಳಲ್ಲಿ.

OV/308

Karnataka Chemical and Pharmaceutical Works, Ltd., Udipi. (South India)

ಕರ್ಣಾಟಕ ಕೆಮಿಕಲ್ ಎಂಡ್ ಫಾರ್ಮಸ್ಯೂಟಿಕಲ್ ವರ್ಕ್ಸ್, ಲಿಮಿಟೆಡ್, ಉಡುಪಿ. (ದಕ್ಷಿಣ ಹಿಂದೂಸ್ಥಾನ).

ತಾ. 10-10-1934ರಲ್ಲಿ ನಮ್ಮ ಡಿಸ್ಪೆನ್ಸಿಂಗ್ ಇಲಾಖೆಯನ್ನು ತೆರೆದಂದಿನಿಂದ ನಮ್ಮ ಗಿರಾಕಿಗಳು ತಮ್ಮ ಕಾಹಿಲೆಗಳನ್ನು ನಮ್ಮ ಡಾಕ್ಟರರಿಂದ ಧರ್ಮಾರ್ಥವಾಗಿ ಪರೀಕ್ಷಿಸಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಬಡವರಿಗೆ ಧರ್ಮಾರ್ಥವಾಗಿ ಔಷಧವನ್ನು ಕೊಡುವ ಏರ್ಪಾಡೂ ಮಾಡಿರುತ್ತದೆ. ಈಗ ಪರವೂರಿನವರಿಗೂ ಇದರ ಪ್ರಯೋಜನ ಸಿಕ್ಕುವಂತೆ ಪತ್ರ ಮುಖಾಂತರವೂ ಔಷಧಗಳನ್ನು ಸೂಚಿಸುವ ಏರ್ಪಾಡನ್ನು ಮಾಡಿರುತ್ತೇವೆ.

ದ್ರಾಕ್ಷಾಸವ (ಉಲ್ಲಾಸ ಉಂಟುಮಾಡುವುದಕ್ಕೆ)	**ಚ್ಯವನಪ್ರಾಶ** (ಕ್ಷಯಕ್ಷಿಣಾದಿಗಳಿಗೆ)
ಪ್ರಸೂತಿ ಸಂಜೀವನ (ಬಾಣಂತಿಯರಿಗೆ)	**ಬ್ರಹ್ಮಿ ತೈಲ** (ಮೆದುಳಿನ ಕೆಲಸಗಾರರಿಗೆ)
ಹಿಮಸಾಗರ ತೈಲ (ನಿದ್ರಾನಾಶಕ್ಕೆ)	**ಕ್ಷೀರಬಲಾ** (ಪಕ್ಷವಾತಕ್ಕೆ)
ನಿಯೋವಿಗರ್ (ನಿತ್ರಾಣಕ್ಕೆ)	**ಕಾರ್ವೋಫ್ಲೋಜಿಸ್ಟಿನ್** (ಕಫ, ಬಾವು ಇತ್ಯಾದಿಗೆ
ಗ್ರ್ಯಾಪ್ ಲಿಕ್ವಿಡ್ (ಮಕ್ಕಳ ಆರೋಗ್ಯಕ್ಕೆ)	**ಯುಟೆರೀನಾ** (ಋತುಶೂಲೆ ಇತ್ಯಾದಿಗೆ)

ಮೆನೆಜಿಂಗ್ ಡ್ಯಾರೆಕ್ಟರ್—ವೆಂಕಟ್ರಾಯ ಅಜ್ಜಪ್ಪ ಬಾಳಿಗ.

ಹೆಡ್ ಆಫೀಸು ಮತ್ತು ಕಾರಖಾನೆ:—ಉಡುಪಿ, ದಕ್ಷಿಣ ಹಿಂದೂಸ್ಥಾನ.

ವ್ಯಾಪಾರದ ಡಿಪೋ:—(1) ದೇವಕರಣ ಮೆನ್ಶನ್, 45 ಪ್ರಿನ್ಸೆಸ್ ಸ್ಟ್ರೀಟ್, ಬೊಂಬಾಯಿ ನಂ 2

ಏಜೆಂಟ್ಸ್— (2) 1/70 ಸ್ಯಾಂಕ್ಷನ್ ಸ್ಟ್ರೀಟ [illegible] ಬೀದಿ, ಜಾರ್ಜ್ ಟೌನ್ ಮದರಾಸು.

ಕರ್ಣಾಟಕ ಪ್ರೊಡಕ್ಟ್ಸ್ ಡಿಸ್ಟ್ರಿಬ್ಯೂಟಿಂಗ್ ಕೋ, ಮಂಗಳೂರು.

ಅನುಕ್ರಮಣಿಕೆ.

ಅಗ್ರಲೇಖ

ಎಸೆಂಬ್ಲಿ ಚುನಾವಣೆಗಳು, ೧-೩

ಸ್ಫುಟವಿಚಾರಗಳು ೩

ಟೀಕೆಗಳು ೪

ವರ್ತಮಾನ ಸಂಗ್ರಹ ೫

ವಿವಿಧ ಸಮಾಚಾರಗಳು ೧೧

ಪತ್ರವ್ಯವಹಾರ ೧೪

ಸ್ಥಳೀಯ ೨

ಮಂಗಳೂರು ೯

ನಲ್ವತ್ತೆಂಟನೇ ರಾಷ್ಟ್ರಸಭಾಧಿವೇಶನ ಪೂರ್ವರಂಗ ೭

ಕಳೆದ ೫೦ ವರ್ಷಗಳ ರಾಜಕೀಯ ಹೋರಾಟ, ೫

ಮೂಲೆಮೂಲೆಯಿಂದ ೧೦

ಸ್ವದೇಶಾಭಿಮಾನಿ.

ತಾ. ೨೬ನೇ ಶುಕ್ರವಾರ ಒಕ್ಟೋಬರ '೩೪

ಎಸೆಂಬ್ಲಿ ಚುನಾವಣೆಗಳು.

ಬಹು ಕಾಲದ ವಿರಾಮದ ನಂತರ,—ಈ ವರ್ಷ—ಎಸೆಂಬ್ಲಿ ಚುನಾವಣೆಗಳು ಜರಗಿಸಲ್ಪಡುವುವು ಪ್ರತಿಯೊಂದು ಕೊನ್ಸ್‌ಟಿಟ್ಯೂಯನ್ಸಿಯಿಂದ ಕೊಂಗ್ರೆಸ್ ಉಮೇದ್ವಾರರೂ, ಅನೇಕ ಸ್ಥಾನಗಳಿಗೆ ಹೊಸ ರಾಷ್ಟ್ರೀಯ ಪಕ್ಷದವರೂ ಸ್ಪರ್ಧಿಸಲಿರುವುದರಿಂದ ಈ ಬಾರಿಯ ಚುನಾವಣೆಗಳಲ್ಲಿ ಅಪೂರ್ವವಾದ ಉತ್ಸಾಹವು ಕಂಡುಬರುತ್ತಿದೆ

ಎಸೆಂಬ್ಲಿ ಚುನಾವಣೆಗಳು, ಉಮೇದ್ವಾರರಿಗೆಷ್ಟು ಶ್ರಮವಿಶೇಷವುಳ್ಳದಾಗಿರುವವೋ ಅಷ್ಟೇ ವೋಟರರಿಗೂ ಆಗಿವೆ ನಗರಸಭೆಗಳ ಚುನಾವಣೆಗಳಲ್ಲಿ ಉಮೇದ್ವಾರರು ಹಲವರಾದರೂ, ವೋಟರರ ಸಂಖ್ಯೆ ಚಿಕ್ಕದು, ವೋಟರರೂ ಉಮೇದ್ವಾರರನ್ನು ಚೆನ್ನಾಗಿ ಬಲ್ಲವರಾಗಿರುವರು ಆದರೆ, ಎಸೆಂಬ್ಲಿ ಉಮೇದ್ವಾರರ ವಿಚಾರ ಹಾಗಿಲ್ಲ ಅನೇಕ ಜಿಲ್ಲೆಗಳಿಗೆ ಒಬ್ಬೊಬ್ಬರು ಮಾತ್ರ ಉಮೇದ್ವಾರರಾಗಿ ಮುಂದೆ ಬರುವರು ಹಲವು ವೋಟರರಿಗೆ ಅವರ ಪರಿಚಯವಿರುವುದೂ ಯೋಗ್ಯತೆ ಗ್ರಹಿಸುವುದೂ ಕಷ್ಟಸಾಧ್ಯವಾಗಿದೆ ವೋಟರರು ಕೇವಲ, ಆಯಾ ಉಮೇದ್ವಾರರ ಪರ [illegible]ಗಿ ಕೆಲಸಮಾಡುವವರ ಮಾತಿನಮೇಲೆಯೋ [illegible]ಗಳಲ್ಲಿ ಕಂಡುಬರುವ ಜಾಹೀರಾತು [illegible]ವಾದ (ಅಥವಾ ಉಮೇದ್ವಾರರ ಸಮೀಪ ಸಂಬಂಧವುಳ್ಳವರ ಪ್ರಕಟಣೆ)ಗಳ ಮೇಲೆಯೋ ಅವರಾರೆಂದು ತಿಳಿದುಕೊಳ್ಳಲೆತ್ನಿಸಬೇಕಾಗುವುದು ಅನೇಕವೇಳೆ, ಹಾಗೆ ತಿಳಿದುಕೊಂಡುದು ಮುಂದೆ ಪ್ರತಿಕೂಲ ಫಲದಿಂದ ಕಣ್ತೆರೆಯಿಸುವುದೂ ಇದೆ ಅದುಕಾರಣ, ವೋಟರರು ಅತ್ಯಂತ ಜಾಗರೂಕತೆಯಿಂದ ವರ್ತಿಸಬೇಕಾಗಿದೆ.

ಈ ಬಾರಿ ವೋಟರರ ಕರ್ತವ್ಯವು ಊಹಿಸಿದುದಕ್ಕಿಂತ ಸುಲಭವಾಗಿದೆಯೆನ್ನಬಹುದು. ಕಾರಣ, ಕೊಂಗ್ರೆಸ್ ಪರವಾಗಿಯೂ ಉಮೇದ್ವಾರರು ಮುಂದೆ ಬಂದಿರುವರು ವೋಟರರು ವ್ಯಕ್ತಿಯನ್ನು ಗುರುತಿಸುವ ಬದಲಾಗಿ ಪಕ್ಷವನ್ನೆ ಗುರುತಿಸುವ ಸಂಭವ ಹೆಚ್ಚು.

ಕೊಂಗ್ರೆಸ್ಸಿನಿಂದ ಅಧಿಕೃತರಾಗಿರದ ಉಮೇದ್ವಾರರು ಕೊಂಗ್ರೆಸ್ ವಿರೋಧಿಗಳಲ್ಲವಾದರೂ ಎಲ್ಲರೂ ಕೊಂಗ್ರೆಸ್ ಪಕ್ಷಪಾತಿಗಳಲ್ಲ. ರಾಜಕೀಯಗಳ ಮಟ್ಟಿಗೆ ಕೊಂಗ್ರೆಸ್ಸಿನೊಡನೆ ವಿರುದ್ಧಾಭಿಪ್ರಾಯವಿಲ್ಲದವರು, ಮಹಾತ್ಮಾಜಿಯವರ ಕೆಲಕೆಲವು ಸುಧಾರಣಾ ಯೋಜನೆಗಳ ದೆಸೆಯಿಂದ ಕೊಂಗ್ರೆಸ್ಸಿನ ಮೇಲೆ ವಕ್ರದೃಷ್ಟಿಯುಳ್ಳರುವುದೂ, ಕೆಲವೊಮ್ಮೆ ಪ್ರಕಟವಾಗಿ ಕೋಪಕಾರುವುದೂ ಲೋಕಕ್ಕೇ ತಿಳಿದಿದೆ. ಯಾವ ಉಮೇದ್ವಾರನೂ ದೇಶವಿಘಾತುಕವಾದುದನ್ನು ಸೃಷ್ಟಿಸಲು ಅಥವಾ ಅಂತಹದಕ್ಕೆ ಬೆಂಬಲಕೊಡಲು ಎಸೆಂಬ್ಲಿಗೆ ಹೋಗಲಿಚ್ಛಿಸಿಲ್ಲ. ಪ್ರತಿಯೊಬ್ಬನಿಗೂ ತನ್ನ ಸಮಾಜ, ತನ್ನ ಪ್ರಾಂತ್ಯ, ತನ್ನ ದೇಶ ಎಂಬ ಅಭಿಮಾನವಿದೆ. ಪರಂತು, ಒಮ್ಮೊಮ್ಮೆ ಒಳಗಿನ ಕಚ್ಚಾಟಗಳೂ, ಅಜ್ಞಾನವೂ ದೇಶವಿಘಾತುಕವಾದ ಪರಿಣಾಮಗಳನ್ನೆ ತರುವುದು. ಪ್ರಜೆಗಳ ಸಂಕಷ್ಟಗಳನ್ನು ಸರಕಾರಕ್ಕೆ ತಿಳಿಸಬೇಕಾದವರು, ಸರಕಾರದ ತಪ್ಪಭಿಪ್ರಾಯಗಳಿದ್ದರೆ ತಿದ್ದಬೇಕಾದವರು, ಕೇವಲ ಬ್ಯೂರೋಕ್ರೆಸಿಯ ಮಂದಸ್ಮಿತಕ್ಕಾಗಿಯೇ ತಮ್ಮ ಆತ್ಮಸಾಕ್ಷಿಗೆ ವಿರುದ್ಧವಾಗಿ ವರ್ತಿಸಿ, ತಾವು ಆ ಮೂಲಕ ಸರಕಾರಕ್ಕೂ ಪ್ರಜೆಗಳಿಗೂ ಅನ್ಯಾಯಮಾಡುವೆವೆಂಬುದನ್ನೂ ಗ್ರಹಿಸದೆ ಇರುವುದುಂಟು ಆದರೆ, ಎಲ್ಲರೂ ಹೀಗಿರಲಾರರೆಂದೇ ನಮ್ಮ ಭರವಸೆ

ವೋಟರರ ಕರ್ತವ್ಯವು ವೋಟು ಕೊಡುವುದಹುದ, ಆದರೆ, ಯೋಗ್ಯರಾದವರಿಗೆ ವೋಟು ಕೊಡಬೇಕು ವೋಟುಗಳಿಗೆ ಬೆಲೆಯಿದೆ, ಆದರೆ, ನಾಣ್ಯರೂಪವಾದ ಬೆಲೆಯಲ್ಲ

ದೇಶದ ಮೇಲೆ ಕೊಂಗ್ರೆಸ್ಸಿನ ವರ್ಚಸ್ಸು ಎಷ್ಟಿದೆ, ಜನರಿಗೆ ಕೊಂಗ್ರೆಸ್ಸಿನ ಮೇಲೆ ಆದರ-ವಿಶ್ವಾಸಗಳೆಷ್ಟಿದೆ-ಎಂಬುದು ಈ ಚುನಾವಣೆಗಳಲ್ಲಿ ಪ್ರಕಟವಾಗುವುದು ದೇಶದ ಹಿತಚಿಂತಕರಾರು, ನೈಜ ಪ್ರತಿನಿಧಿಯಾರು, ನಿಸ್ವಾರ್ಥ ಸೇವಕರಾರು—ಎಂಬೀ ವಿಷಯಗಳನ್ನು ಚೆನ್ನಾಗಿ ಪರ್ಯಾಲೋಚಿಸಿಯೇ ವೋಟರರು ಮತದಾನ ಮಾಡುವರೇ?

ಸ್ಫುಟವಿಚಾರಗಳು.

ಪ್ರಾಮುಖ್ಯ ವಿಷಯಗಳಿವು

ಧಾರವಾಡದಲ್ಲಿ ನಡೆದ ನಾಡಹಬ್ಬದ ಔದ್ಯೋಗಿಕ ಪ್ರದರ್ಶನವನ್ನು ಮೊನ್ನೆ ಶ್ರೀ ಕಂಭಾವಿ ನಾರಾಯಣರಾಯರು ತೆರೆದಾಗ ಅವರಿತ್ತ ಕೆಲವು ಸೂಚನೆಗಳು ಮನನಯೋಗ್ಯವಿವೆ ಒಕ್ಕಲತನ, ನೇಯ್ಗೆ, ಕಂಬಳಿ ತಯಾರಿ, ಎಣ್ಣೆಯ ವ್ಯಾಪಾರ, ಅಡವಿಗಳು, ಔಷಧಿಸಿದ್ಧತೆ, ವಿದ್ಯುಚ್ಛಕ್ತಿ, ಬಳೆ, ಮತ್ತು ಆಟದ ಸಾಮಾನುಗಳ ಕೈಗಾರಿಕೆ ಮೊದಲಾದ ಅನೇಕ ವಿಷಯಗಳನ್ನೆತ್ತಿ ಶ್ರೀ ನಾರಾಯಣರು ವಿವರಿಸಿ, 'ನಮ್ಮಲ್ಲಿ ಸಾಹಸಬೇಕು, ಧೈರ್ಯಬೇಕು; ಉದ್ಯೋಗಸ್ಪೃಹೆ ಬೇಕು, ಸಾಂಘಿಕ ವರ್ತನೆಯೂ ಬೇಕು' ಎಂದು ತರುಣರನ್ನು ಹುರಿದುಂಬಿಸಿದರು ಇವುಗಳನ್ನೆಲ್ಲ ಕೈಕೊಂಡು ದೇಶದಲ್ಲಿ ಔದ್ಯೋಗಿಕ ಶಿಕ್ಷಣಪ್ರಚಾರವಾಗಬೇಕು ಖರೆ, ಆದರೆ 'ಹೇಗೆ?' ಎಂಬುದೊಂದು ಪ್ರಶ್ನೆ ಪರಿಸ್ಥಿತಿ ಪರಿಶೀಲನೆ ಮಾಡುವಾಗ ನಮ್ಮ ಆಶಯಗಳೆಲ್ಲ ಆಶಯಗಳಾಗಿಯೇ ಉಳಿದು ಬೀಳುವ ಅದೃಷ್ಟವನ್ನು ಪಡೆದಿವೆಯೋ ಹೊರತು, ಯಾವುದೂ ಕಾರ್ಯರೂಪಕ್ಕೆ ಬರುವಂತಹ ಚಿಹ್ನೆಯು ತೋರುವುದಿಲ್ಲ ಇನ್ನು ಮಹಾತ್ಮಾ ಗಾಂಧಿಯವರು ಗ್ರಾಮ ಸಂಘಟನಾ ಸಂಘವನ್ನು ಸ್ಥಾಪಿಸಿ ದುಡಿಯುವರಂತೆ ಮಹಾತ್ಮರ ಸಾಹಸದಲ್ಲಿ ಅಪನಂಬಿಕೆಯು ಅಪವಾದವು ಇರಲಾರದಾದರೂ, ಅವರಂತಹ ಪ್ರತಿಭಾಸಂಪನ್ನರ ಉದ್ಯಮವೂ ಕೂಡಾ ಎಷ್ಟರಮಟ್ಟಿಗೆ ಯಶಸ್ವಿಯಾದೀತೋ ಎಂಬ ಶಂಕೆಯಿದೆ

ವಿಜಾಪುರ ಜಿಲ್ಲೆಯ ಪ್ರಥಮ ಸಾಹಿತ್ಯ ಸಮ್ಮೇಲನವು

ಮೊನ್ನೆ ವಿಜಾಪುರದಲ್ಲಿ ಶ್ರೀ। ಮುದವೀಡು ಕೃಷ್ಣರಾಯರ ಅಧ್ಯಕ್ಷತೆಯಲ್ಲಿ ಜರಗಿತು. ಭಾಷೆಯ ಏಕೀಕರಣ, ಭಾಷಾಪ್ರಚಾರ, ಸಾಹಿತ್ಯಪ್ರಸಾರ ಮೊದಲಾದುಗಳ ಕುರಿತು ಠರಾವುಗಳಾದುವು. ಭಾಷೆಯ ಏಕೀಕರಣದ ಕುರಿತಾಗಿ ಸ್ವಾಗತಾಧ್ಯಕ್ಷರಾದ ರಾವ್ ಸಾಹೇಬ ಪಿ. ಜಿ. ಹಳಕಟ್ಟಿ, ಬಿ. ಎ. ಎಲ್ ಎಲ್ ಬಿ. ಯವರು ಮಾತನಾಡುತ್ತಾ ಭಾಷೆಯ ಐಕ್ಯತೆಗಾಗಿ ಕೊರಗಿ—'ಪಠ್ಯಪುಸ್ತಕಗಳು ಅಖಿಳ ಕರ್ನಾಟಕದಲ್ಲಿ ಒಂದೇ ಬಗೆಯವುಗಳಾದರೆ ಈ ಧ್ಯೇಯವು ಸಾಧಿಸುವುದು'ಎಂದು ಸೂಚಿಸಿದರು.ಇದು ವಾಸ್ತವವೆ. ವೈದ್ಯಭಾನು ಡಿ. ಕೆ ಭಾರದ್ವಾಜರು ನಮ್ಮ ದಸರಾಸಂಚಿಕೆಯಲ್ಲಿ ಸೂಚಿಸಿರುವಂತೆ ನಾಲ್ಕು ಸರಕಾರಗಳ ಪ್ರತಿನಿಧಿಗಳು ಒಂದಾಗಿ 'ಕನ್ನಡ ಪಠ್ಯಪುಸ್ತಕ ಸಮಿತಿ'ಯೊಂದನ್ನು ಸ್ಥಾಪಿಸಿ ನಾಲ್ಕು ಸರಕಾರಗಳೊಡನೆ ವ್ಯವಹರಿಸಿ ಪಠ್ಯಪುಸ್ತಕ ಸಮಸ್ಯೆಯನ್ನು ಬಗೆಹರಿಸಬೇಕಾಗಿದೆ. ಈ ವಿಷಯಕವಾಗಿ ನಮ್ಮ ಸಾಹಿತ್ಯ ಪರಿಷತ್ತು ಏನೆನ್ನುವುದೋ?

ಕವಿರವೀಂದ್ರರನ್ನು ಕರೆದರಾಗದೇ?

'ವಿಶ್ವಭಾರತಿ'ಯ ಜನಕರಾದ ಕವಿ ರವೀಂದ್ರರು ಮೊನ್ನೆ ಮದ್ರಾಸಿಗೆ ಬಂದಿಳಿದಿರುವರೆಂಬುದು ದಕ್ಷಿಣ ಹಿಂದೂಸ್ಥಾನದವರಿಗೆ ಆನಂದಕರ ವಾರ್ತೆ ಬಂದಿಳಿದವರೇ ದಕ್ಷಿಣ ಹಿಂದೂಸ್ಥಾನದವರ ಕಲಾಜ್ಞಾನವನ್ನು, ಪ್ರಶಂಸಿಸಿ—'ಇಲ್ಲಿ ಕಲಾಕುಶಲತೆಯು ಸಜೀವವಾಗಿದೆ' ಎಂದಿರುವರು ಮದ್ರಾಸಿನ ವರೆಗೆ ಬಂದಿರುವ ರವೀಂದ್ರರರನ್ನು ನಮ್ಮ ನಗರಸಭೆಯವರು ಮಂಗಳೂರಿಗೆ ಆಮಂತ್ರಿಸಿ, ಅಂದೊಮ್ಮೆ ಮಂಗಳೂರನ್ನುಸಂದರ್ಶಿಸಿ ಹೋದ ಅವರಿಗೆ ನಮ್ಮ ಪ್ರಗತಿಯನ್ನು ತೋರಿಸಿ, ರವೀಂದ್ರ ಭಕ್ತರಿಗೆ ಅವರ ದರ್ಶನಲಾಭವನ್ನು ಏಕೆ ಮಾಡಿಕೊಡಬಾರದ ! 'ವಿಶ್ವಭಾರತಿ'ಯ ಥೈಲಿಗೆ ನಮ್ಮವರ ಕಾಣಿಕೆಯನ್ನು ಏಕೆ ಅರ್ಪಿಸುವಂತಾಗಬಾರದು? ಮುನಿಸಿಪಾಲಿಟಿಯವರು ಯೋಚಿಸುವರೇ?

ಇದಕ್ಕೊಂದು ಶಾಸನವು ಬೇಕಾಗಿದೆ.

ಹತ್ತು ವರ್ಷಗಳ ಹಿಂದೆ ಇದ್ದುದಕ್ಕಿಂತ ಹತ್ತರಷ್ಟು ಪಾಲು ಹೆಚ್ಚಿದೆಯಂತೆ,—ಹಿಂದೂಸ್ಥಾನದಲ್ಲಿ ಧೂಮ್ರಪಾನ ಮಾಡುವವರ ಸಂಖ್ಯೆ! 'ಮುಂಬಾಯಿ ಇಲೆಕ್ಟ್ರಿಕ್ ಸಪ್ಲೈ ಎಂಡ್ ಟ್ರೇಮ್‌ವೇಸ್ ಕಂಪೆನಿ'ಯವರು ಈ ಸತ್ಯ ಸಂಗತಿಯನ್ನು ಕಂಡುಹಿಡಿದಿರುತ್ತಾರೆ ಇದಕ್ಕೆ ಕಾರಣವಿರಬಹುದು. ಒಂದು ಸಿಗರೇಟಿಗೆ ಆ ಪೈ ಕ್ರಯವಿದ್ದಾಗ ಮಧ್ಯಮ ತರಗತಿಯ ಪುರುಷರಿಗಲ್ಲದೆ, ಅಧಮ ತರಗತಿಯವರಿಗಂತೂ ಈ ಧೂಮ್ರಪಾನಕ್ಕೆ ತೊಡಗದೆ, ಇದು ಭಾಗ್ಯವಂತರ ಹಕ್ಕಿನ ಅಭ್ಯಾಸವಾಗಿತ್ತು ಆದರೆ ಈಗ,—ಮೂರು ಪೈಗೆ ಎರಡರಂತೆಯೂ ಸಿಗರೇಟು ದೊರೆಯಲಾರಂಭವಾದ ಫಲವಾಗಿ ಬಡವರು ಕೂಡಾ ಈ ಧೂಮ್ರಪಾನಕ್ಕೆ ಬಲಿಬೀಳಲೇಬೇಕಾಗಿದೆ ಅಪ್ರಾಯಸ್ಥರು ಧೂಮ್ರಪಾನ ಮಾಡಬಾರದೆಂಬ ಬಗ್ಗೆ ಒಂದು ಶಾಸನವು ಬರುತ್ತದೆಂದು ಪ್ರಕಟವಾಗಿತ್ತು. ಆದರದು ಬಿದ್ದುಹೋಗಿ ಬಾಲಕರೂ ಕೂಡಾ ಬೀಡಿ ಸಿಗರೇಟುಗಳನ್ನು ಸೇದುವಂತಾಗಿದೆ ಕೊಂಗ್ರೆಸ್ಸಿನ ಪರವಾಗಿ ಶಾಸನ ಸಭೆಗಳನ್ನು ಪ್ರವೇಶಿಸಲಿರುವವರು ಈ ವಿಷಯವಾಗಿ ಆಲೋಚಿಸಿ ಸಾಧಿಸಿದರೆ ದೇಶಹಿತವಾಗಬಹುದು

ನಮ್ಮ ಡಿಸ್ಟ್ರಿಕ್ಟ್ ಮೆಜಿಸ್ಟ್ರೇಟರು.

ಒಂದು ಅಪ್ಪಣೆಯನ್ನು ಪ್ರಕಟಿಸಿ—ಮದರಾಸು ಹೈಕೋರ್ಟಿನ ನಿರ್ಣಯದಂತೆ,—ಮುಂದಕ್ಕೆ ಯಾರಾದರೂ ಪ್ರೈಜ್ ಚಿಟ್ಟಿ ಫಂಡುಗಳನ್ನು ಸ್ಥಾಪಿಸಕೂಡದೆಂದೂ, ಈ ಅಪ್ಪಣೆಯನ್ನುಲ್ಲಂಘಿಸಿದವರನ್ನು ಶಿಕ್ಷಿಸಲಾಗುವುದೆಂದೂ ಸಾರಿರುತ್ತಾರೆ ಈ ಶಾಸನದ ಫಲವಾಗಿ ಅನೇಕ ಬೇಂಕುಗಳು ನಡೆಸುತ್ತಾ ಬರುತ್ತಿದ್ದ ಮಾಸಿಕ ಪ್ರೈಜ್ ಚಿಟ್ಟಿಗಳೂ, ಅನೇಕ ಅಂಗಡಿಗಳು ತಮ್ಮ ವಸ್ತುವಿಕ್ರಯ ದೃಷ್ಟಿಯಿಂದ ನಿರ್ವಹಿಸುತ್ತಿದ್ದ ಫಂಡುಗಳೂ ಅವಸಾನಹೊಂದಬೇಕಾಗಿದೆ. ಸರಕಾರದ ಆಜ್ಞೆಯು ಅನೇಕರನ್ನು ನಿರಾಶೆಗೀಡುಮಾಡಿತಾದರೂ,ದೇಶಹಿತದೃಷ್ಟಿಯಿಂದ ಈ ಶಾಸನವು ತೀರಲ್ಪೇಕಾರಾರ್ಹವಿದೆ ತಮಗೆ ನಷ್ಟವಾಗದಂತೆ (ಲಾಭವಿಟ್ಟು) ಉಪಾಯಗಳನ್ನು ಹೂಡಿ, ಜನರನ್ನು ಆಶೆಯ ಭ್ರಾಂತಿಗೊಳಗುಮಾಡಿ ದ್ರವ್ಯಾರ್ಜನೆ ಮಾಡುತ್ತಿದ್ದವರನ್ನು ಸರಕಾರವು ಈ ರೀತಿಯಲ್ಲಿ ನಿರ್ಬಂಧಿಸುವುದು ರಾಜಧರ್ಮವಿದೆ.

ಮೈಸೂರಿನ ರೇಶ್ಮೆ ಕೈಗಾರಿಕೆಯು.

ದಿನೇದಿನೇ ಅಧೋಗತಿಯನ್ನು ಹೊಂದುತ್ತಿದೆಯೆಂದು ಕೇಳಬರುತ್ತಲಿದೆ.ಮೊನ್ನೆ ದಿವಾನರು ಎಸೆಂಬ್ಲಿಯಲ್ಲಿ ಭಾಷಣಮಾಡುತ್ತ, ಈವಿಷಯವನ್ನು ತರ್ಕಿಸಿ ಕೆಲವು ಅಮೋಘ ಸೂಚನೆಗಳನ್ನಿತ್ತರು ಮೈಸೂರಿನವರೇ ಮೈಸೂರಿನ ಕೈಗಾರಿಕೆಯನ್ನು ಪ್ರೋತ್ಸಾಹಿಸುವುದಿಲ್ಲವೆಂದಾದರೆ ಅದಕ್ಕಿಂತ ಸೋಜಿಗ ವಿಷಯವಾವುದು? ೭ ವರ್ಷಗಳ ಹಿಂದೆ ೫೩ ಸಾವಿರ ಎಕ್ರೆ ಹಿಪ್ಲಿ ನೇರಳೆ ವ್ಯವಸಾಯ ಪ್ರದೇಶವು ಪ್ರಯೋಗದಲ್ಲಿತ್ತಾದರೆ, ಈಗ ಇದು ೩೩ ಸಾವಿರ ಎಕ್ರೆಗೆ ಬಂದು ನಿಂತಿದೆ ವಿದೇಶೀಯ ಸ್ಪರ್ಧೆಯು ಮೈಸೂರಿನ ಈ ಕೈಗಾರಿಕೆಯನ್ನು ಸದೆಬಡೆಯುತ್ತಿದೆ ಟೇರಿಫ್ ಬೋರ್ಡಿನವರ ಸೂಚನೆ ಮೇರೆಗೆ ಇಂಡಿಯಾ ಸರಕಾರವು ಮಾಡಿದ ಆಯೋಜನೆಯಿಂದಲೂ ಪ್ರಯೋಜನವಾಗದೆ ಹೋಯಿತೆಂದು ಗುಲ್ಲೆದ್ದಿದೆ ಮೈಸೂರಿನವರು ಈಗ ಮೊರೆಯಿಟ್ಟರೆ ಫಲವಿಲ್ಲ, ರೇಶ್ಮೆಬೋರ್ಡ ಒಂದನ್ನು ಸ್ಥಾಪಿಸಿ ಜನರು ದೇಶೀಯ ರೇಶ್ಮೆಯನ್ನೇ ಕೊಂಡುಕೊಳ್ಳಬೇಕೆಂದು ಶೀಘ್ರದಲ್ಲೇ ಚಳವಳಿಸಬೇಕಾಗಿದೆ.

ಇದು ಸುಖಕರವಲ್ಲ:

ಇದೇ ತಾ ೨೧ರಲ್ಲಿ ಮದರಾಸಿನಲ್ಲಿ 'ಲೇಂಡ್ ಮೋರ್ಗೇಜ್ ಬೇಂಕ್ಸ್ ಕೊನ್ಫರೆನ್ಸ್' ಎಂಬುದು ದಿವಾನ್ ಬಹದ್ದೂರ್ ಎಂ ರಾಮಚಂದ್ರರಾಯರ ಅಧ್ಯಕ್ಷತೆಯಲ್ಲಿ ಜರಗಿತು ಅಧ್ಯಕ್ಷರು ಅಭಿಪ್ರಾಯಪಡುತ್ತಾ—'ಬೇಂಕುಗಳಿಗೆ ಅಡವು ಹಾಕಿದ ಭೂಮಿಗಳನ್ನು ಬೇಂಕುಗಳೇ ವಶೀಕರಿಸುವುದನ್ನು ಸಾಧ್ಯವಿದ್ದಷ್ಟು ಮಟ್ಟಿಗೆ ಕಡಮೆಮಾಡಬೇಕು, ಸ್ಥಿರಸೊತ್ತುಗಳನ್ನು ಹಸ್ತಗತಮಾಡಿ ಸಾಲಗಾರರನ್ನು ಮತ್ತಷ್ಟು ಕಷ್ಟಕ್ಕೀಡುಮಾಡುವ ಬದಲು, ಅವನ ಚರಸೊತ್ತನ್ನು ವಶೀಕರಿಸಬಹುದು' ಎಂದರು ಅಧ್ಯಕ್ಷರ ಸೂಚನೆಯೇನೋ ಸಹಾನುಭೂತಿಪರವಾದುದು, ಆದರೆ ಈ ಸೂಚನೆಯು ಎಷ್ಟರಮಟ್ಟಿಗೆ ಕಾರ್ಯಕಾರಿಯೆಂದು ಊಹಿಸಲಸಾಧ್ಯ ಬೇಂಕುಗಳು ಹೊರಿಸುವ ಭಾರವಾದ ಬಡ್ಡಿಯನ್ನಾಗಲೀ, ಅಸಲನ್ನಾಗಲೀ ಕೊಡಲು ಸಮರ್ಥರಾಗದೆ, ಅದವುಹಾಕಿದ ಭೂಮಿಗಳನ್ನೇ ಬೇಂಕಿಗೆ ಬಿಟ್ಟುಕೊಟ್ಟು ಹತಾಶರಾಗಿ—ಪಶ್ಚಾತ್ತಾಪಕ್ಕೊಳಗಾಗುವ ಸಂಸಾರಿಗಳ ಸಂಖ್ಯೆಯು ಹೆಚ್ಚುತ್ತದೆಯೇ ವಿನಹಾ, ಬೇಂಕುಗಳು ಸಾಲಗಾರರ ಮೇಲೆ ದಯೆಯಿಟ್ಟು ವರ್ತಿಸಿದುದು ಅಪರೂಪವೆಂದೇ ಕಂಡುಬರುವುದು. ಇಷ್ಟಾಗಿಯೂ ಸಾಲ ಪಡೆಯುವವರು ಈಗ ರೂಪಾಯಿ ೫೦೦೦ವನ್ನು ಪಡೆಯುವ ಹಕ್ಕುಳ್ಳವರಾದರೆ, ಮುಂದಕ್ಕೆ ಅವರು ರೂ ೧೦,೦೦೦ವನ್ನು ಸಾಲಪಡೆವ ಹಕ್ಕುಳ್ಳವರಾಗುವಂತಾಗಬೇಕೆಂದು ಒಂದು ಸೂಚನೆಯು ಸಮಾಲೋಚನೆಗೆ ಬಂದಿದೆ ರೂಪಾಯಿ ೫೦೦೦ರದ ಸಾಲವನ್ನೇ ತೀರಿಸಲು ಸಮರ್ಥರಲ್ಲದ ಸಾಲಗಾರರು ರೂ ೧೦,೦೦೦ವನ್ನು ಪಡೆಯಬೇಕೆಂಬ ಈ ಸಲಹೆಯು ಬೇಂಕುಗಳಿಗೂ ಅಥವಾ ಸಾಲಪಡೆಯುವವರಿಗೂ ಸುಖಕರವಾಗಿಲ್ಲ

ಶಾರದಾ ಆಕ್ಟ್

ಎಂಬುದು ೧೯೩೦ರ ಎಪ್ರಿಲ್ ತಿಂಗಳಲ್ಲಿ ಶಾಸನವಾಗಿಳಿದು ನಾಲ್ಕೂವರೆ ವರ್ಷಗಳಾದರೂ, ಇನ್ನೂ ನಡೆವ ಬಾಲ್ಯವಿವಾಹಗಳನ್ನು ನಿರ್ಬಂಧಿಸುವಷ್ಟುಶಕ್ತಿಯುಕ್ತವಾಗಲಿಲ್ಲವೆಂದರೆ ಅತಿಶಯೋಕ್ತಿಯಲ್ಲ, ಕೆಲವು ಕಡೆಗಳಲ್ಲಿ ಇಂತಹ ನಿಷಿದ್ಧ ವಿವಾಹವು ನಡೆದು ಅಧಿಕಾರಿಗಳಿಗೆ ದೂರು ಹೋದರೆ,—ದುರ್ದೈವವಶಾತ್ ಹುಡುಗಿಯು ೧೪ ವರ್ಷ ಪ್ರಾಯವನ್ನು ದಾಟಿರುವಳೆಂದು ವಾದಿಸಿ ವಿವಾಹವು ನಡೆದೇ ಬಿಡುವುದು. ದಕ್ಷಿಣ ಕನ್ನಡದ ಅಶಿಕ್ಷಿತರಲ್ಲಿ ನಡೆವ ಈ ಬಾಲ್ಯವಿವಾಹಗಳು ಯಾರ ಅವಗಾಹನೆಗೂ ಬರುತ್ತಿಲ್ಲ ಹಾಗೆ ನಡೆಯುವ ವಿವಾಹಗಳ ದೂರನ್ನು ಅಧಿಕಾರಿಗಳಿಗೆ ತಿಳಿಯಪಡಿಸುವುದಕ್ಕೆ ಸುವ್ಯವಸ್ಥಿತ ಸಂಘವೂ ಇಲ್ಲಿಲ್ಲ. ಪರಿಣಾಮವಾಗಿ,—ಶಾಸನವು ಸೋಲಿಸಲ್ಪಟ್ಟು ಪೂರ್ವಪದ್ಧತಿಯು ಮುಂದರಿಯುತ್ತದೆ.

ಲೋಧ್ರ

ಸುಪ್ರಸವಕ್ಕಾಗಿ ದಿವ್ಯ ಟಾನಿಕ್.

ಸ್ತ್ರೀಯರಿಗೊಂದು ಮಹಾ ವರ

ಯಾವ ತರದ ಅಥವಾ ಎಲ್ಲಾ ತರದ ಮುಟ್ಟು ದೋಷ, ಮುಟ್ಟಾಗುವುದರಲ್ಲಿ ನೋವು, ಅಕ್ರಮ ತರದ ಮತ್ತು ಮುಟ್ಟಾಗದಿರುವಿಕೆ, ಬಿಳಿ ಸೆರಗು, ಗರ್ಭಕೋಶದ ದೋಷ ಅಶುದ್ಧ ಮುಟ್ಟು, ಬಂಜೆತನ, ಸೂತಿಕಾವಾಯು, ಅಶುದ್ಧರಕ್ತ, ಮೇರೆ ದಾಟ ಅಥವಾ ಬೇಕಾದಷ್ಟು ಮುಟ್ಟಾಗದಿರುವುದು, ಸ್ತ್ರೀಯರ ಅಂಗಾಂಗಗಳ ಇನ್ನಿತರ ಅನೇಕಾನೇಕ ರೋಗಗಳುಳ್ಳ ಸ್ತ್ರೀಯರನ್ನು ಈ ಔಷಧಿಯು ಸಂಪೂರ್ಣ ಗುಣಗೊಳಿಸಿರುತ್ತದೆ.

ಲೋಧ್ರ

ಎರಡು ಸೈಜಿನಲ್ಲಿ ದೊರೆಯುತ್ತದೆ. ರೂ. 8 ಮತ್ತು 1-10-0

ಕೇಸರಿ ಕುಟೀರಂ

ಇಂಡಿಯನ್ ಕೆಮಿಸ್ಟ್ಸ್ ಮತ್ತು ಡ್ರಗಿಸ್ಟ್ಸ್, ಎಗ್ಮೋರ್ ಮದರಾಸು,

ದಕ್ಷಿಣ ಕನ್ನಡ ಮತ್ತು ಕೊಡಗು ದೇಶದ ಏಜಂಟರು,
ಪೊಪ್ಯುಲರ್ ಸ್ಟೋರ್ಸ್, ಮಂಗಳೂರು.

"ಸ್ವದೇಶಾಭಿಮಾನಿ"ಯ

ಸಾಹಿತ್ಯಸಂಚಿಕೆ

ತಿಂಗಳಿಗೊಂದರಂತೆ ಹೊರಡುವುದು.

ಡೆಮಿ ¼ ಆಕಾರದ 8 ಪುಟಗಳು.

ವರ್ಷಕ್ಕೆ 96 ಪುಟಗಳ

ಒಂದು ಗ್ರಂಥವೇ ಪುಕ್ಕಟೆಯಾಗಿ ದೊರೆತಂತೆ!

ಪ್ರತಿ ಸಾಹಿತ್ಯ ಸಂಚಿಕೆಯಲ್ಲೂ

ಕತೆಗಳು, ಕವನಗಳು
ವಿಮರ್ಶೆ, ಜೀವನಚರಿತೆ
ಸಾಹಿತ್ಯವಿಚಾರ
ಹರಟೆಗಳು

ಪ್ರಸಿದ್ಧ ಲೇಖಕರಿಂದಲೇ ಬರುವುವು.

'ಸ್ವದೇಶಾಭಿಮಾನಿ'ಗೆ ಚಂದಾದಾರರಾಗಿರಿ.

ವಾರ್ಷಿಕ ಚಂದಾ ರೂ. 2 ಮಾತ್ರ.

ಅಂಚೆ ವೆಚ್ಚ ಆಣೆ 13.

ಮೆನೇಜರ್,
ಸ್ವದೇಶಾಭಿಮಾನಿ,
ರಥಬೀದಿ – ಮಂಗಳೂರು

ರಚನೆಯ ಉತ್ಕೃಷ್ಟತೆಗೂ ಹೆಚ್ಚಿನ ಫಲಕ್ಕೂ

Kirloskar

ಕಲ್ಯಾಣ ನೆಲಗಡಲೆ ಯಂತ್ರ



ಇದು ಅದ್ವಿತೀಯವೆನಿಸಿದೆ. ಕಾರಣವೇನೆಂದರೆ, ಅದು ಆಧುನಿಕ ಯಂತ್ರಸುಧಾರಣೆಗಳನ್ನೆಲ್ಲ ಒಳಗೊಂಡಿದ್ದು, ತಾಸಿಗೆ 75ರಿಂದ 80 ಗೋಣಿಗಳಷ್ಟು ನೆಲಗಡಲೆಯನ್ನು ಅತ್ಯಲ್ಪ ವೆಚ್ಚದಲ್ಲಿ—ಸುಲಿಯುವ ಕೆಲಸ ಮಾಡುವುದು.

ಹಿಂದೂಸ್ಥಾನದಲ್ಲೆಲ್ಲಾ ನೂರಾರು ಯಂತ್ರಗಳು ಉಪಯೋಗದಲ್ಲಿವೆ.

ಸಚಿತ್ರ ಕೆಟಲಾಗು, ಅಪೇಕ್ಷಿಸಿದ್ದಲ್ಲಿ ಕಳುಹಲಾಗುವುದು.

ಕಿರ್ಲೋಸ್ಕರ ಬ್ರದರ್ಸ್ ಲಿಮಿಟೆಡ್,

ಕಿರ್ಲೋಸ್ಕರವಾಡಿ, (ಸತಾರಾ.)

ಡಿಸ್ಟ್ರಿಬ್ಯೂಟರರು:—ಮೆಸರ್ಸ್ ಪೆರ್ರಿ ಎಂಡ್ ಕೊ, ಲಿಮಿಟೆಡ್,
ಮೌಂಟ್ ರೋಡ್, ಮದ್ರಾಸ್.

ಚಾತುಕುಟ್ಟಿ ವೈದ್ಯರ

ವಿಶೂಚಿಕಾ ಸಂಹಾರಿ
Vishuchika Samhari
(PILCO)

ಕಾಲರಕ್ಕೆ ದಿವ್ಯೌಷಧ! ಉಪಯೋಗಿಸಿದರೆ ಗುಣ ಖಾತ್ರಿ!

ಬೆಲೆ ಡಬ್ಬಿ 1ಕ್ಕೆ ರೂ. 1-0-0.

ಗುಹ್ಯರೋಗ ನಿವಾರಿಣೀ ತೈಲ
Anti-Venereal Oil
(A. V. Oil)

ಗುಹ್ಯರೋಗ ನಿವಾರಣೆಗೆ ಅಮೋಘ ವನಸ್ಪತಿ ಔಷಧಿ ಕಾಯಿಲೆಯು ಪಾರಂಭದ ಈ ತಗಲಿದ ರೋಗವು ಗುಣವಾಗುವುದು. ಸಿರೋಗಿಗಳೂ ಚಿಕಿತ್ಸೆಯ ಬದ್ಧಿಗಾಗಿ ಜುಲಾಬಿನ ಮದ್ದಿನಂತೆ ತೆಗೆದುಕೊಳ್ಳಬಹುದು.

8 ಔನ್ಸಿನ ಬಾಟ್ಲಿ 1ಕ್ಕೆ ರೂ. 2-8-0.

ಕೆ. ವಿ. ಕೃಷ್ಣನ್,
ಕಲ್ಲಾಯಿ, ಮಲಬಾರ್,
ಅಥವಾ
ಬಾಲ್ ಸಿ. ಮತ್ತು ಕಂಪೆನಿ, ಕಲ್ಲಿಕೋಟೆ
ಇಲ್ಲಿ ಸಿಗುವುದು.

ಕ್ಷಯಕ್ಷೀಣಾದಿಗಳಿಗೆ

ಚ್ಯವನಪ್ರಾಶಾವಲೇಹ.

ಪ್ರಸೂತಿ ರೋಗಾದಿಗಳಿಗೆ

ದಶಮೂಲಾರಿಷ್ಟ.

(ಕಸ್ತೂರಿ ಮಿಶ್ರಣ)

ಸಮಸ್ತ ವಾತರೋಗಗಳಿಗೆ

ಮಹಾನಾರಾಯಣ ತೈಲ.

ಶ್ರೀ ರಾಮಕೃಷ್ಣ ಧರ್ಮವೈದ್ಯಾಶ್ರಮ ಸಂಘ, ಡೊಂಗರಕೇರಿ ರಸ್ತೆ, ಮಂಗಳೂರು.

++ ++

ಚಿತ್ರಾಹುತಿ ಸಮೇತ

ಋಗ್ವೇದೀ ಸಂಧ್ಯಾವಂದನೆ.

(ವೈಶ್ವದೇವ—ಊರ್ಧ್ವಪುಂಡ್ರ—ಮುದ್ರಾಧಾರಣ ವಿಧಿ)
ಸ್ಮಾರ್ತರಿಗೆ—ಭಸ್ಮಧಾರಣ ವಿಧಿ, ಕರಾದಿ)

ಎಂ. ನರಸಿಂಗರಾವ್, ಬಿ. ಎ., ಎಂ. ಎಲ್

ಇವರಿಂದ ರಚಿತವಾದ

ಪ್ರತಿಪದಾರ್ಥಟೀಕಾ ವಿಧಿಸಹಿತ.

ಬೆಲೆ ಆಣೆ 3.

30, 60, 100 ಪ್ರತಿಗಳನ್ನು ಒಮ್ಮೆಲೆ ಪಡೆಯುವ...
...ರಿಗೆ ಒಳ್ಳೆಯ ಡಿಸ್ಕೌಂಟು)

ವಿಳಾಸ:— ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು

ನಮ್ಮ ಸಲಹೆಯೇ ಪ್ರಾಧಾನ್ಯವಾದದ್ದೆಂದು ತಿಳಿಯಬೇಡಿ.

ಕಲ್ಲಿಕೋಟೆ ಅಶೋಕ ಆಸ್ಪತ್ರೆಯ ಚೀಫ್ ಮೆಡಿಕಲ್ ಆಫೀಸರರಾದ ಡಾ। ವಿ. ಬಿ. ರಾಮನ್, ಎಂ. ಆರ್., ಸಿ. ಎಸ್. ಇವರು ಬರೆದಿರುವುದನ್ನು ಓದಿ ನೋಡಿ—"ನಾನು ನಿಮ್ಮ ಆಶ್ಚರ್ಯಕರವಾದ ಜೀವಾಮೃತಂ ಟಾನಿಕನ್ನು ನರಗಳಲ್ಲಿ ಬಲಕ ಇಂಕ ಹಸಿವು ಕಡಿಮೆಯಾಗಿರುವುದು, ಕೂಕವು ಕಡಿಮೆಯಾಗಿರುವುದು, ಇವು ಪ್ರಾಪ್ತವಾಗಿರುವ ಅನೇಕ ರೋಗಿಗಳಿಗೆ ಕೊಟ್ಟಿರುತ್ತೇನೆ, ಅದರ ಫಲಿತಾಂಶಗಳು ಬಹು ತೃಪ್ತಿಕರವಾಗಿದೆ. ಜೀವಾಮೃತವನ್ನು ದೇಹಶಕ್ತಿ ಕುಗ್ಗಿರುವ ಎಲ್ಲಾ ಸಂದರ್ಭಗಳಲ್ಲೂ ಸರ್ವ ಸಾಮಾನ್ಯವಾಗಿ ಉಪಯೋಗಿಸಬಹುದೆಂದು ನಾನು ಮನಃಪೂರ್ವಕವಾಗಿ ಶಿಫಾರಸು ಮಾಡುತ್ತೇನೆ"

ಜೀವಾಮೃತವು

ನರಗಳಿಗೆ ಶಕ್ತಿ ಕೊಡುತ್ತದೆ. ವೀರ್ಯ ವೃದ್ಧಿಮಾಡುತ್ತದೆ. ಹಸಿವು ಹೆಚ್ಚಿಸುತ್ತದೆ. ರಕ್ತ ವೃದ್ಧಿಮಾಡುತ್ತದೆ.

ಪಂಡಿತ
ಡಿ. ಗೋಪಾಲಾಚಾರ್ಲುರವರ ಜೀವಾಮೃತವು

ಎಲ್ಲಾ ಔಷಧ ಮಾರುವವರಲ್ಲೂ, ಸ್ಟೋರುಗಳಲ್ಲೂ ದೊರೆಯುತ್ತದೆ. (ಸಂಪೂರ್ಣ ವಿವರಗಳಿಗೆ ಇವತ್ತೇ ಬರೆಯಿರಿ)

ಆಯುರ್ವೇದಾಶ್ರಮಂ, ಪೋ. ಬಾಕ್ಸು ನಂ. ೨೦೭, ಮದ್ರಾಸು.

ಸೋಲ್ ಏಜಂಟರು:— ಸಿಟಿ ಮೆಡಿಕಲ್ ಮತ್ತು ಜನರಲ್ ಏಜನ್ಸಿ, ಕಾಟಿ ಚಿಕ್ಕಪೇಟೆ ಬೆಂಗಳೂರು. (ಉಡುಪಿ ಹೋಟೆಲ್ ಹತ್ತಿರ)
ದಕ್ಷಿಣ ಕನ್ನಡದ ಏಜಂಟರು— ಪೊಪ್ಯುಲರ್ ಸ್ಟೋರ್ಸ್, ಮಂಗಳೂರು. P. No. 104

ಸೈಂಟಿಫಿಕ್ ಸ್ವರ್ಣಾಭರಣಗಳು

(ನಿಜವಾದ ಬಂಗಾರಕ್ಕೆ ಬದಲಾಗಿ ಇವು ತಯಾರಿಸಲ್ಪಟ್ಟಿವೆ.)

ಹೈಕೋರ್ಟು ಜಡ್ಜರುಗಳಿಂದಲೂ, ಸರಕಾರದ ಮಂತ್ರಿಗಳಿಂದಲೂ, ಇತರ ಪ್ರಮುಖರಿಂದಲೂ ಕೊಂಡಾಡಲ್ಪಟ್ಟಿವೆ.

ಪತ್ರವ್ಯವಹಾರವನ್ನು ಇಂಗ್ಲಿಷಿನಲ್ಲೇ ಮಾಡಬೇಕು.

S.G.B.Co.

ಹೊಸ ಕೆಟಲಾಗು ಧರ್ಮಾರ್ಥ.

ವಿಳಾಸ:—

The Scientific Gold Bangles Co., Ltd.,
Head Office:—48, Byragimatam Street,
Post Box No. 209, Madras.

An Advertisement in

'Swadeshabhimani'

Means a sure fortune to you

Ask for Contract Rates.

The Swadeshabhimani office,
Car Street, Mangalore.

---

preserve Your Wealth by BIRTH-CONTROL.

ದೇಶದ ಐಶ್ವರ್ಯವನ್ನು ಮಿತಸಂತತಿಯಿಂದ ಕಾದಿಡಿ.

ಮೂರೇ ಮೂರು ರೂಪಾಯಿಗಳಿಂದ ಸ್ತ್ರೀಯರಿಗೆ ಪ್ರಸವಭಯವನ್ನು ನಿಲ್ಲಿಸುವುದು. ಬೇಕಾದ್ದಲ್ಲಿ ತಿರಿಗಿ ಭರ್ಗವಾಗುವಂತೆ ಔಷಧವಿದೆ.

ವರ್ಷಕ್ಕೊಂದರಂತೆ ಹೆತ್ತು ತಾಯಿ—ಮಕ್ಕಳು ನರಳದಂತೆ ದೂರ ದೂರ ಮಾಡುವುದು. ಆರೋಗ್ಯಕ್ಕೆ ಹಾನಿಯಿಲ್ಲ.

ವಿಳಾಸ:— **ಪಂಡಿತ ಕೆ. ನಾರಾಯಣರಾವ್,** ಆಯುರ್ವೇದ ಫಿಸಿ, ಕಾರ್ಕಳ, ದ. ಕ.

Branches—Kukkundoor & Kalkamba, (Gurpoor) ಬ್ರಾ:—ಕುಕ್ಕುಂದೂರು, ಕೈಕಂಬ, ಗುರ್ಪುರ

[N. B.—ಉತ್ತರವನ್ನಪೇಕ್ಷಿಸುವವರು ಒಂದಾಣೆಯ ಟಪ್ಪಾಲು ಸ್ಟಾಂಪಿನೊಂದಿಗೆ ಬರೆಯಬೇಕು.]

ಕಳೆದ ಐವತ್ತು ವರ್ಷಗಳ ರಾಜಕೀಯ ಹೋರಾಟ.

ಕೊಂಗ್ರೆಸ್ ಮು ಖಂಡರು. (ಎಡದಿಂದ ಎರಡನೆಯವರು ಈ ಬಾರಿಯ ಕೊಂಗ್ರೆಸ್ ಅಧ್ಯಕ್ಷರಾದ ಶ್ರೀ ಬಾಬೂ ರಾಜೇಂದ್ರ ಪ್ರಸಾದರವರು.)

ಕೊಂಗ್ರೆಸ್ಸಿನ ಸಂಕ್ಷಿಪ್ತ ಇತಿಹಾಸ

ಪ್ರಚಲಿತ ಅಧಿವೇಶನದೊಡನೆ ನಮ್ಮ ಕೊಂಗ್ರೆಸ್ಸು ತನ್ನ ೫೦ನೇ ವರ್ಷದಲ್ಲಿ ಕಾಲಿಡುವುದು. ಯಾವುದು ಸರಕಾರದ ಪ್ರೋತ್ಸಾಹದಿಂದ ಜನನಕ್ಕೆ ಬಂತೋ, ಅದುವೇ ದೇಶದ ಪ್ರಬಲ ರಾಜಕೀಯ ಸಂಸ್ಥೆಯಾಗಿ ಧೃತವಾಗಿ, ಜನರ ಏಕಮಾತ್ರ ನೈಜ ಪ್ರತಿನಿಧಿಯೆನಿಸಿ, ಪ್ರಪಂಚದಲ್ಲಿ ಅತ್ಯಪೂರ್ವವಾದ ಸ್ಥಾನವನ್ನುಗಳಿಸಿ ಇಂದು ತಲೆಯೆತ್ತಿ ನಿಂತಿತು! ಇದರ ಕಳೆದ ೫೦ ವರ್ಷಗಳ ಇತಿಹಾಸವು ಕೆಲವೇ ಪಂಕ್ತಿಗಳಲ್ಲಿ ಸಂಕ್ಷೇಪಿಸಲ್ಪಟ್ಟು ಇಲ್ಲಿ ಕೊಡಲಾಗಿದೆ.

ಆಗಳಿನ ವೈಸರಾಯರಾದ ಲೋರ್ಡ್ ಡಾಲ್‌ಹೌಸಿಯ ಆಶೀರ್ವಾದವನ್ನು ಪಡೆದು ಕೊಂಗ್ರೆಸ್ಸು ಆರಂಭಿಸಲ್ಪಟ್ಟಿತು. ಪ್ರಥಮದ ಅಧ್ಯಕ್ಷಸ್ಥಾನವನ್ನು ಡಾಲ್ ಹೌಸಿಯವರೇ ವಹಿಸಬೇಕೆಂದು ಜನರು ಪ್ರಾರ್ಥಿಸಿಕೊಂಡರೂ ಡಾಲ್‌ಹೌಸಿಯವರು ಅದಕ್ಕೆ ಮಾತ್ರ ಒಪ್ಪಲಿಲ್ಲ.

ಕ್ರಮೇಣ ಕೊಂಗ್ರೆಸ್ಸು ಬಲಗೊಳ್ಳುತ್ತ ಬಂತು. ಸರಕಾರಕ್ಕೆ ಹಿತಕರವೆಂದು ಕಾಣದಂತಹ ಕೇಳಿಕೆಗಳನ್ನು ಮುಂತಂದಿತು. ಅಧಿಕಾರಿಗಳು ಕೊಂಗ್ರೆಸ್ಸಿನ ವಿಷಯವಾಗಿದ್ದ ಅನುಕೂಲಾಭಿಪ್ರಾಯವನ್ನು ಸ್ವಲ್ಪ ತಿದ್ದಿಕೊಳ್ಳಬೇಕಾಯಿತು. ಅದರೂ ವಿರೋಧಿಸಲಿಲ್ಲ. ಕೊಂಗ್ರೆಸ್ಸಿನ ಕೇಳಿಕೆಗಳೆಲ್ಲ ತುಂಟತನದ ಕೇಳಿಕೆಗಳೆಂದೆನಿಸಿತು ಮಾತ್ರ. "ಏನೋ, ವರ್ಷಕ್ಕೆ ಮೂರು ದಿನ ಸೇರಿ, ಒಂದು ವರ್ಷ ಸಭೆ ನಡೆಸಿ, ಏನೇನೋ ಕೇಳುವರು—ಇವರು"—ಎಂದೇ ನೆನಸಿ, ಅಧಿಕಾರವರ್ಗವು ನಗುವುದಾಯಿತು.

ಮುಂದೆ, ಈ "ತುಂಟತನದ" ಕೇಳಿಕೆಗಳ ಮೇಲಣ ಪರಿಹಾಸ್ಯದ ದೃಷ್ಟಿಗಳು ಬದಲಾಯಿಸಿದುವು. "ಇದು ಹಿಂದೂಗಳ ಕೂಟ"ವೆಂಬ ಕೂಗು ಮೆಲ್ಲನೆ ಎದ್ದಿತು. ಇದಕ್ಕೆ ಬಣ್ಣ ಕೊಡಲೋ ಏನೋ,—ಸರ್ ಸೈಯದ್ ಅಹಮದ್‌ರಂತಹ ಮುಸ್ಲಿಂ ಮುಖಂಡರು ಕೊಂಗ್ರೆಸ್ಸಿನಿಂದ ಹೊರಗೆ ಕಾಲಿಟ್ಟುಬಿಟ್ಟರು.

ಆದರೆ, ಅನೇಕ ಮುಸ್ಲಿಂ ಮುಖಂಡರ ಅಭಿಪ್ರಾಯವೇ ಬೇರೆಯಾಯಿತು. 'ಕೊಂಗ್ರೆಸ್ಸು ಹಿಂದೂಗಳ ಸಂಸ್ಥೆ' ಎಂದು ಟೀಕಾಕಾರರು ಹೇಳುವುದು ಯಾವುದೋ ಗೂಢ ಉದ್ದೇಶಕ್ಕಾಗಿ ಎಂದೂ, ಆ ಉದ್ದೇಶವು ದೇಶಹಿತ ಚಿಂತನೆಯಿಂದುದಯಿಸಿಲ್ಲವೆಂದೂ ಅವರಿಗನಿಸಿತು. ಹಲವು ಮುಸ್ಲಿಮರು ಪುನಃ ಕೊಂಗ್ರೆಸ್ಸನ್ನು ಸೇರಿದರು. ಎಷ್ಟೋ ಮಂದಿ ಕೊಂಗ್ರೆಸ್ ಅಧ್ಯಕ್ಷರೂ ಆದರು.

ಲೋರ್ಡ್ ಕರ್ಝನರು ಹಿಂದೂದೇಶಕ್ಕೆ ವೈಸರಾಯರಾಗಿ ಬಂದರು. ಆಳುವವರಿಗೆ ಕೊಂಗ್ರೆಸ್ಸಿನಿಂದೇನೂ ಬಾಧಕವಿಲ್ಲವೆಂದು ಇವರ ಮತ. ಇವರ ಧೋರಣೆಯೂ ಅಂತಹುದು. ಇದನ್ನು ಕೊಂಗ್ರೆಸ್ಸಿನವರು ವಿರೋಧಿಸಿದರು. "ದೇಶದ ಸಂಪತ್ತನ್ನು ಹೀರುವ ಆಳ್ವಿಕೆಯಿದು!" ಎಂದು ಕೇಂದ್ರ ಶಾಸನ ಸಭೆಯಲ್ಲಿ ಸರ್ ಪಿ. ಎಂ. ಮೆಹತಾರವರೂ ಗೋಖಲೆಯವರೂ ಕರ್ಝನ್ ಪ್ರಭುಗಳ ಆಳ್ವಿಕೆಯನ್ನು ತೀಕ್ಷ್ಣವಾಗಿ ಟೀಕಿಸಿದರು. ಕರ್ಝನರ ಕೈಯೇನೂ 'ಢಿಲಾ'ಗಲಿಲ್ಲ. ಭದ್ರಮುಷ್ಟಿಯನ್ನೆ ಪ್ರದರ್ಶಿಸಿದರು. ವಿಭಾಗಿಸಿ ಆಳುವ ಧೋರಣೆಯನ್ನು ಕೈಕೊಂಡರು. ವಿಶೇಷವಾಗಿ ತೊಂದರೆ ಕೊಡುವ ಪ್ರಾಂತ್ಯವು ಬಂಗಾಳವೆಂದು ಅವರು ಗುರುತಿಸಿದರೋ ಏನೋ! ಬಂಗಾಳವನ್ನು ವಿಭಾಗಿಸಿದರು. ಪ್ರೀತಿಯ ಪಂಗತಿಯಾಗಿ ಮುಸ್ಲಿಮರು ದೇಶಿತರು. ಇದನ್ನೇನೂ ರಹಸ್ಯದಲ್ಲಿಡಲಿಲ್ಲ. ಆದರೆ,—ಜನಾಂಗದ ಉತ್ತರವೇ ಬೇರೆ;—ಸ್ವದೇಶೀಯುಗದ ಉದಯ ಮತ್ತು ಬಹಿಷ್ಕಾರ!

ಮೂರು ಪುರುಷ ಸಿಂಹಗಳು ಅಂದಿನ ರಾಜಕೀಯ ಹೋರಾಟದಲ್ಲಿ ತ್ರಿಮೂರ್ತಿಗಳಾಗಿ ಗಣ್ಯರಾದರು;—ಲಾಲ್, ಬಾಲ್, ಪಾಲ್! ಲಾಲಾ ಲಜಪತ ರೈಯವರು ಪಂಜಾಬಿನಲ್ಲಿ; ಬಾಲ್ ಗಂಗಾಧರ ತಿಲಕರವರು ಮಹಾರಾಷ್ಟ್ರದಲ್ಲಿ; ಮತ್ತು ವಿಪಿನಚಂದ್ರಪಾಲರವರು ಬಂಗಾಳದಲ್ಲಿ! ಬಾಬು ಅರವಿಂದ ಘೋಷರವರೂ ಆಗಲೇ ರಾಜಕೀಯ ರಂಗಕ್ಕೆ ಬಂದಿಳಿದರು. ಬಂಕಿಮ್‌ಚಂದ್ರ ಚಟರ್ಜಿಯವರ 'ಆನಂದಮಠ' ಗ್ರಂಥದೊಳಗಿನ "ವಂದೇ ಮಾತರಂ"ಹಾಡು ರಾಷ್ಟ್ರೀಯ ಗೀತೆಯಾಗಿ ಹೊರಗೆ ಬಂತು. ರಾಷ್ಟ್ರೀಯ ಶಿಕ್ಷಣದ ಕೌನ್ಸಿಲು ಒಂದು ಸ್ಥಾಪಿಸಲ್ಪಟ್ಟಿತು.

ಕರ್ಝನರ ನಂತರ ಬಂದವರು ಮಿಂಟೋ ಪ್ರಭುಗಳು. ಆಗಲೇ ಅತ್ತ ಇಂಗ್ಲಾಂಡಿನಲ್ಲಿ, ವೈಟ್ ಹೋಲಿನಲ್ಲಿ, 'ತತ್ವಜ್ಞಾನಿ'ಗಳಾದ ಮೋರ್ಲೀ ಪ್ರಭುಗಳು ಅಧಿಕಾರಾರೂಢರಾದರು, ಹಿಂದೂದೇಶದವರಿಗೊಂದು ಆಸೆ,—ಈ ಪ್ರಭುಗಳಿಂದಾಗಿ ಸರಕಾರದ ಧೋರಣೆಯು ಬದಲಾಗಬಹುದೇ ಎಂದು. ಆದರೆ, ಪುನಃ ನಿರಾಶೆಯೇ! ಗಾಳಿಗೋಪುರಗಳೆಲ್ಲ ಒಡೆದೇ ಹೋದುವು!

೧೯೦೭ರಲ್ಲಿ ಕೊಂಗ್ರೆಸ್ಸಿನೊಳಗೇ ಅಭಿಪ್ರಾಯಭೇದವೆದ್ದಿತು. ದೇಶದವರ ಮುಂದಿನ ಕರ್ತವ್ಯವೇನು?-ಎಂಬುದು ಪ್ರಶ್ನೆ. ೧೯೦೭ರಲ್ಲಿ ಸೂರತ್ ಕೊಂಗ್ರೆಸ್ಸಿನಲ್ಲಿ, ದಾದಾಭಾಯಿ ನೌರೋಜಿಯವರು ಅಧ್ಯಕ್ಷರಾಗಿ ಶಾಂತಿಸ್ಥಾಪಿಸಲೆತ್ನಿಸಿದರು. ಆದರೂ, ಕೆಲವರು ಕಲ್ಕತ್ತಾ ಕೊಂಗ್ರೆಸ್ಸಿನಲ್ಲಾದ ಠರಾವಿನಂತೆ 'ಬಹಿಷ್ಕಾರ' ಕಾರ್ಯಕ್ರಮವನ್ನು ಅನುಸರಿಸಬೇಕೆಂಬ ಹಟತೊಟ್ಟರು. ಅದೇ ಸೂರತ್ ಕೊಂಗ್ರೆಸ್ಸಿನಲ್ಲಿ ಮುಂದಿನ ಅಧ್ಯಕ್ಷಸ್ಥಾನದ ಪ್ರಶ್ನೆಯೂ ಬಂದು, ಮೊದಲೇಟರು ರಾಶ್ ಬಿಹಾರಿ ಘೋಷರನ್ನು ರಾಷ್ಟ್ರೀಯರು ತಿಲಕರನ್ನು ಸೂಚಿಸಿದರು. ಇದುವೇ ಒಂದು ದೊಡ್ಡ ಗೊಂದಲವಾಗಿ, ಗೊಂದಲದಲ್ಲೇ ಮುಗಿಯಿತು.

ರಾಷ್ಟ್ರೀಯರ ಸಂಕಷ್ಟಗಳೇನೂ ಕಡಿಮೆಯಿರಲಿಲ್ಲ. ಲಾಲಾ ಲಜಪತ ರೈಯವರನ್ನು ಒಂದು ಸುಳ್ಳು ಅಪಾದನೆಯ ಮೇಲೆ ಬರ್ಮಾಕ್ಕೆ ಗಡೀಪಾರು ಮಾಡಲಾಯಿತು. ತಿಲಕರನ್ನು ರಾಜದ್ರೋಹಕ್ಕಾಗಿ ಆರು ವರ್ಷಗಳ ಕಠಿನ ಸಜೆಗೆ ಗುರಿಮಾಡಿದರು. ಒಂಭತ್ತು ಮಂದಿ ಬಂಗಾಳ ಮುಖಂಡರನ್ನು—ನಿರಪರಾಧಿಗಳನ್ನು ಕಾರಾಗೃಹದಲ್ಲಿರಿಸಿದರು. ಕೊಂಗ್ರೆಸ್ ಆಟವು ಕೇವಲ ಆಟವಾಗಿಯೇ, ಮಂದಪಕ್ಷೀಯರಿಂದಲೇ ನಡೆಸಲ್ಪಟ್ಟಿತು.

ಆಗ ಬಂತು ಯುದ್ಧ,—ಘನಘೋರವಾದ, ಪ್ರಪಂಚ ವಿನಾಶಕಾರೀ ಮಹಾಯುದ್ಧ! ನಮ್ಮ ಮುಖಂಡರಲ್ಲಿಯೂ ಬದಲಾವಣೆಗಳಾದುವು. ಬ್ರಿಟಿಷರ ಬೆಂಬಲಕ್ಕೆ ನಿಲ್ಲುವುದೇ ಯುಕ್ತವೆಂದು ಎಲ್ಲರೂ ನಿರ್ಧರಿಸಿದರು. ಅಧಿಕಾರಿಗಳ ಕಡೆಯಿಂದಲೂ ಆಶಾಜನಕ ಭಾಷೆಗಳಾದುವು. ಹಿಂದೀ ಚಳವಳಗಾರರ ಕಡೆಗೆ ಕರ್ಝನರೂ ಸಂತೋಷದಿಂದ ಮುಖವರಳಿಸಿದರು! ೧೯೧೪ರಲ್ಲಿ, ಮದರಾಸಿನಲ್ಲಿ ಕೊಂಗ್ರೆಸ್ ಅಧಿವೇಶನವು ಜರಗಿದಾಗ, ಆಗಳಿನ ಗವರ್ನರರಾದ ಲೋರ್ಡ್ ಪೆಂಟ್ಲೆಂಡರೂ(ಮಂಗಳೂರಿನ ಪೆಂಟ್ಲೆಂಡ್ ಪೇಟೆಯು ಅವರ ಸ್ಮಾರಕವಾಗಿ ಅವರ ಅಭಿದಾನವನ್ನು ಪಡೆದಿದೆ)—ಆ ಅಧಿವೇಶನಕ್ಕೆ ದಯಮಾಡಿಸಿದರು!

ಅದರೇನು?—ಈ ಸುಖಸಂತೋಷದ ವಾತಾವರಣವು ಹೆಚ್ಚು ಕಾಲ ನಿಲ್ಲಲಿಲ್ಲ. ಬೊಂಬಾಯಿಯ ಅಧಿವೇಶನದಲ್ಲಿ ಡಾ। ಅನ್ನಿಬಿಸೆಂಟರಿಂದ ಹೋಮ್ ರೂಲ್ ಚಳವಳದ ಸೂಚನೆಯಾಯಿತು. ಇದು ೧೯೧೬ರಲ್ಲಿ, ಲಕ್ನೋ ನಗರದಲ್ಲಾರಂಭವಾಯಿತು. ಡಾ। ಸಪ್ರೂ, ಶ್ರೀ। ಜಯಕರ ಮೊದಲಾದ ಪ್ರಮುಖ ಕೆಲಸಗಾರರು ಇದರಲ್ಲಿ ಸೇರಿದರು. ಈ ಕಾಲದಲ್ಲೀಗ ಕೊಂಗ್ರೆಸ್ಸಿನಲ್ಲಿ 'ಸತ್ಯಾಗ್ರಹ'ದ ಆಂದೋಲನದ ಸುಳಿವು ಕಂಡು ಬಂದುದು. ಡಾ। ಅನ್ನಿಬಿಸೆಂಟರು ಬಂಧಿಸಲ್ಪಟ್ಟಿದ್ದರು. ಇದಕ್ಕೆರಡು ವರ್ಷಗಳ ಹಿಂದೆಯೇ ದಕ್ಷಿಣಾಫ್ರಿಕದಿಂದ ಬಂದ ಗಾಂಧಿಜಿಯವರು, ಕಲ್ಕತ್ತೆಯಲ್ಲಿ ಒಂದು ವಿಶೇಷ ಪರಿಷತ್ತನ್ನು ಜರಗಿಸಿದರು. ಸಿ. ಪಿ. ರಾಮಸ್ವಾಮಯ್ಯರು,—ಬಿಸೆಂಟರನ್ನು ಬಿಡುಗಡೆ ಮಾಡದಿದ್ದರೆ, ಸತ್ಯಾಗ್ರಹವನ್ನಾರಂಭಿಸಬೇಕೆಂಬ ಠರಾವನ್ನು ತಂದರು. ಆದರೆ, ಅಷ್ಟು ನಡೆಯಲವಕಾಶವಿರದಾಯಿತು. ಮೊಂಟಗ್ಯೂ ಸಾಹೇಬರು ಇಂಡಿಯಾ ಆಫೀಸಿನ ಅಧಿಕಾರದಲ್ಲಿ ಬಂದಿದ್ದು, ಸ್ವರಾಜ್ಯವೇ ಭಾರತ ವರ್ಷದ ಗುರಿಯೆಂಬುದನ್ನು ಸ್ಪಷ್ಟೀಕರಿಸಿ ಪ್ರಕಟಣೆ (೧೯೧೭ರಲ್ಲಿ) ಕೊಡಿಸಿದರು. ಸುಧಾರಣಾ ರೂಪವಾದ ಕೆಲ ಮಾರ್ಪಾಟುಗಳಾದುವು. ಬಂದಿಗಳನ್ನು ಬಿಡುಗಡೆ ಮಾಡಿದರು.

ಅತ್ತ ಬಂಗಾಳದಲ್ಲಿ ಭಯೋತ್ಪಾದಕರು ತಲೆಯೆತ್ತಿದ್ದರು. ಇದರ ನಿರ್ಮೂಲನದ ನೆವದಿಂದ ರೌಲೆಟ್ ಸಾಹೇಬರ ನೇತೃತ್ವದಲ್ಲೊಂದು ಕಮಿಶನು ನೇಮಕವಾಗಿ, ವಿಚಾರಣೆ ನಡೆಸಿ ಫಲರೂಪವಾಗಿ 'ರೌಲೆಟ್ ಆಕ್ಟು' ಜ್ಯಾರಿಗೆ ತರಲ್ಪಟ್ಟಿತು. ಹಿಂದೂದೇಶದ ರಾಜಕೀಯ ಚಳವಳಕ್ಕೆ ಇದರಿಂದ ಆಘಾತವಿದೆಯೆಂದು ಮನಗಂಡ ಮುಖಂಡರು ಇದಕ್ಕೆ ವಿರೋಧವಾಗಿ ಎದ್ದರು. ೧೯೧೯ರಲ್ಲಿ ಸತ್ಯಾಗ್ರಹ ರೂಪವಾದ ಚಳವಳವೆದ್ದಿತು. ಪಂಜಾಬಿನ ಜಲಿಯನ್ ವಾಲಾಬಾಗ್ ನಾಟಕವಾಯಿತು. ಹತ್ಯಾಕಾಂಡವನ್ನಾರಂಭಿಸಿ ಜನರಲ್ ಡಾಯರರು ವಿಜಯಿಯಾದರು. ಗಾಂಧಿಜಿಯವರು ತಮ್ಮ ಸತ್ಯಾಗ್ರಹವನ್ನು ಹಿಂದೆಗೆದರು. ಮೊಂಟಿಗ್ಯೂ ಸಾಹೇಬರಿಂದ ಹಂಟರ್ ಕಮಿ

(೭ನೇ ಪುಟಕ್ಕೆ ಮುಂದುವರಿಯುವುದು)

FRESH CONSIGNMENT ARRIVED.

UNEQUAL QUALITY——————EXCEPTIONAL PRICE.

A TIRE THAT SAVES YOU REPUTATION AND MONEY.

The Canara Pubic Conveyance Co., Ltd.

MANGALORE.

ನಲ್ವತ್ತೊಂಟನೇ ರಾಷ್ಟ್ರಸಭಾಧಿವೇಶನ; ಪೂರ್ವರಂಗ.

ಬಾಬೂರಾಜೇಂದ್ರ ಪ್ರಸಾದರವರ ಆಗಮನ.

ಬೊಂಬಾಯಿ, ತಾ. ೨೦-೧೦-೧೯೩೪.

ನಲ್ವತ್ತೊಂಟನೇ ರಾಷ್ಟ್ರಸಭಾಧಿವೇಶದ ಅಧ್ಯಕ್ಷರಾಗಿ ಆರಿಸಲ್ಪಟ್ಟ ಬಿಹಾರಿನ ಮುಖಂಡರಾದ ಬಾಬೂರಾಜೇಂದ್ರ ಪ್ರಸಾದರವರು, ರೈಲು ಬಂಡಿಯಲ್ಲಿ ಬೊಂಬಾಯಿಗೆ ಬರುತ್ತ, ಕಲ್ಯಾಣದಲ್ಲಿಳಿದು, ಅಲ್ಲಿಯ ನಗರಸಭೆಯವರ ಮಾನಪತ್ರವನ್ನು ಸ್ವೀಕರಿಸಿ, ಅಲ್ಲಿಂದ ಸ್ಪೆಶಲ್ ರೈಲು ಬಂಡಿಯಲ್ಲಿ (ರೂ. ೫೫೦ ವೆಚ್ಚದಿಂದ)—ಬೆಳಿಗ್ಗೆ ೯-೩೦ಕ್ಕೆ ಬೊಂಬಾಯಿಗೆ ಬಂದು ತಲಪಿದರು. ವಿಕ್ಟೋರಿಯಾ ಸಿಲ್ದಾಣದ ಪ್ಲಾಟ್‌ಫೋರ್ಮ್ ಇವರ ಸ್ವಾಗತಕ್ಕಾಗಿ ಅಲಂಕರಿಸಲ್ಪಟ್ಟಿತ್ತು. ಸಿಲ್ದಾಣದ ಒಳಗೂ ಹೊರಗೂ ಲಕ್ಷೋಪಲಕ್ಷ ಜನರು ನೆರೆದು, ರಾಷ್ಟ್ರದ ಮುಖಂಡನ ಆಗಮನವನ್ನು ನಿರೀಕ್ಷಿಸುತ್ತಿದ್ದರು. ರೈಲು ಬಂಡಿ ತಲಪಿದೊಡನೆ—"ಬಾಬೂರಾಜೇಂದ್ರ ಪ್ರಸಾದಕೀ ಜೈ"—"ವಂದೇ ಮಾತರಂ" ಜಯಘೋಷವು ವಾತಾವರಣದಲ್ಲಿ ಧ್ವನಿಸಿತು. ಶ್ರೀ. ಭರುಚಾ ನರು ಅಧ್ಯಕ್ಷರಿಗೆ ಪುಷ್ಪಹಾರವನ್ನು ಅರ್ಪಿಸಿ,—ಅವರ ಬಗ್ಗೆ ಸಿದ್ಧವಾಗಿದ್ದ—ನಾಲ್ಕು ಕುದುರೆಗಳನ್ನು ಕಟ್ಟಿದ ಬಂಡಿಯಲ್ಲಿ—ಅವರನ್ನು ನಗರದ ಮುಖ್ಯ ರಸ್ತೆಗಳಿಂದ ಮೆರೆವಣಿಗೆಯಾಗಿ ಕೊಂಗ್ರೆಸ್ ಮಂದಿರಕ್ಕೊಯ್ದರು. ಮೆರೆವಣಿಗೆಯ ಮುಂದೆ ಕೊಂಗ್ರೆಸ್ ಸೈನ್ಯವೂ, ಮಹಿಳಾ ಸ್ವಯಂಸೇವಕಿಯರೂ ಸಾಲಾಗಿ ನಡೆದಿದ್ದರು. ಅರಳೆ ಗಿರಣಿ ಮಾಲಿಕರು ದಾರಿಯಲ್ಲಿ, ಹತ್ತಿಯ ತೋರಣಗಳನ್ನು ಕಟ್ಟಿಸಿದ್ದರು. (ಇಂತಹ ತೋರಣವನ್ನು, ನಮ್ಮ ಸಾರ್ವಭೌಮರು ಮಹಾರಾಜ್ಞಿಯವರೊಂದಿಗೆ ೧೯೧೧ರಲ್ಲಿ ಬೊಂಬಾಯಿಗೆ ದಯಮಾಡಿಸಿದ್ದಾಗ ರಚಿಸಿದ್ದರು.) ದಾರಿಯುದ್ದಕ್ಕೂ ಜನಸಾಗರದಿಂದ ಜಯಘೋಷಗಳು! ಎಲ್ಲೆಲ್ಲಿಯೂ ಉತ್ಸಾಹ; ನವಚೇತನ; ಜನಾಂಗದ ಮುಖಂಡನಿಗೆ ಆದರದ ಸ್ವಾಗತ!

ಕೊಂಗ್ರೆಸ್ ಭವನದಲ್ಲಿ ಬಾಬೂ ರಾಜೇಂದ್ರ ಪ್ರಸಾದರವರನ್ನು ಬೊಂಬಾಯಿ ಪ್ರಾಂತಿಕ ಕೊಂಗ್ರೆಸ್ ಕಮಿಟಿಯ ಅಧ್ಯಕ್ಷರೂ ಮೆಂಬರರೂ ಸ್ವಾಗತೀಕರಿಸಿ, ಹೂಮಾಲೆ ಹಾಕಿ ಸತ್ಕರಿಸಿದರು. ಅಲ್ಲಿಂದ ಬಾಬುಗಳು ಕೊಂಗ್ರೆಸ್ ನಗರಕ್ಕೆ ತೆರಳಿದರು.

ಬಾಬೂರಾಜೇಂದ್ರ ಪ್ರಸಾದರವರು ಈಗಾಗಲೇ ಕೆಲದಿನಗಳ ಅಸ್ವಸ್ಥದಿಂದ ಎದ್ದು ಬಂದವರು. ಅದುಕಾರಣ, ಸ್ವಾಗತಸನ್ಮಾನದಲ್ಲಿ ವಿಶೇಷ ಆಡಂಬರಗಳಾಗಲಿ, ದೇಹಕ್ಕೂ ಮನಸ್ಸಿಗೂ ಶ್ರಮಕೊಡುವ ಹೆಚ್ಚಿನ ಕಾರ್ಯಕ್ರಮಗಳಾಗಲಿ ಇರಬಾರದೆಂದು ಮೊದಲೇ ತಿಳಿಸಿದ್ದರು.

ಪ್ರಸಾದರೊಡನೆ ಒಂದು ಚಿಕ್ಕ ಸಂಭಾಷಣೆ.

'ಹಿಂದೂ' ಪತ್ರಿಕಾ ಪ್ರತಿನಿಧಿಯು, ಬಾಬೂರಾಜೇಂದ್ರ ಪ್ರಸಾದರವರ ಬಂಡಿಯಲ್ಲಿ ಹೊರಟಿದ್ದನು. ಅವರೊಡನೆ ಆ ಪ್ರತಿನಿಧಿಯು ಸಂಭಾಷಿಸಿದುದರ ಸಾರಾಂಶವು ಮಹತ್ವದ್ದಾಗಿದೆ:—

"ನಾಲ್ಕಾಣೆ ಸದಸ್ಯತನದ ಬದಲಾಗಿ ನೂಲಿನ ಸದಸ್ಯತನವಿರಬೇಕೆಂಬ ಬಗ್ಗೆ ನಿಮ್ಮ ಅಭಿಪ್ರಾಯವೇನು?"

"ಈಗ ಏನೂ ಹೇಳಲಾರೆ. ಅಧ್ಯಕ್ಷ ಪೀಠದಿಂದಲೇ ವಿವರಿಸಲ್ಪಡುವೆನು."

"ಕೊಂಗ್ರೆಸ್ ಡೆಲಿಗೇಟರುಗಳ ಸಂಖ್ಯೆಯನ್ನು ಕಡಿದು ಮಾಡುವ ವಿಷಯವೋ?"

"ನಾನು ಗಾಂಧಿಜಿಯವರ ಅಭಿಪ್ರಾಯಕ್ಕೆ ಪ್ರತಿಕೂಲವಾಗಿಯಾಗಲಿ ವಿರುದ್ಧವಾಗಿಯಾಗಲಿ ಸಹಕರಿಸುವವನಲ್ಲವೆಂದು ನೀವು ಬಲ್ಲಿರಿ! ಮುಂದೆಯೂ ಹಾಗೇ ಇರುವೆ!"

"ಚಂಪಾರನಿನಗಳು, ನೀವು ನನ್ನ ಇದೇ ಪ್ರಶ್ನೆಗಳನ್ನು ಮಾತ್ರವಲ್ಲ, ಇನ್ನೆಷ್ಟೋ ಪ್ರಶ್ನೆಗಳಿಗೂ ಉತ್ತರ ಕೊಟ್ಟಂತಾಯಿತು" ಎನ್ನುತ್ತ ಪತ್ರಿಕಾಪ್ರತಿನಿಧಿಯು ಪ್ರಸಾದರಿಗೆ ತಿಳಿಸಿದನು.

ಖಾದಿ ಪ್ರದರ್ಶನ.

ಬೊಂಬಾಯಿ, ತಾ. ೨೦-೧೦-೧೯೩೪.

ಅಖಿಲಭಾರತ ಖಾದಿ ಪ್ರದರ್ಶನವನ್ನು 'ಗಫರ್ ಖಾನ್ ನಗರ' (ಕೊಂಗ್ರೆಸ್ ನಗರದ ಹೆಸರು)—ಖಾನ್ ಅಬ್ದುಲ್ ಗಫರ್ ಖಾನರವರು, ಸಾವಿರಾರು ಮಂದಿ ಪ್ರೇಕ್ಷಕರ ಮುಂದೆ, ಈ ದಿನ ಸಾಯಂಕಾಲ ತೆರೆದರು. ಸರದಾರ್ ವಲ್ಲಭಭಾಯಿ ಪಟೇಲ, ಸರೋಜನಿದೇವಿ, 'ನರಿಮಾನ್', ಭುಲಾಭಾಯಿ ದೇಸಾಯಿ ಮೊದಲಾದವರೂ ಇದ್ದರು.

ಶ್ರೀಮತಿ ಸರೋಜನಿಯವರು ಖಾನ್ ಸಹೋದರರನ್ನು ಪುಷ್ಪಮಾಲೆಗಳಿಂದ ಸನ್ಮಾನಿಸಿ, ಅವರ ಸ್ವಾರ್ಥತ್ಯಾಗ, ಧೈರ್ಯಾದಿಗುಣ ಗಣಗಳನ್ನು ಹೊಗಳಿ ಚಿಕ್ಕ ಭಾಷಣಮಾಡಿದರು.

(ಮಧ್ಯದಲ್ಲಿ ಕುಳಿತವರು ಖಾನ್ ಅಬ್ದುಲ್ ಗಫರ್ ಖಾನರವರು.)

ಪ್ರದರ್ಶನದ ಪ್ರಾರಂಭೋತ್ಸವವನ್ನು ನೆರವೇರಿಸುತ್ತ ಖಾನರವರು ಖಾದಿಯ ಮಹತ್ವವನ್ನು ವಿವರಿಸುತ್ತ, ಖಾದಿಯೇ ಹಿಂದೂದೇಶದ ಉಪವಾಸೀ ಮಿಲ್ಲಿಯಗಳಿಗೆ ಅನ್ನಕೊಡುವ ಪ್ರಕೃತದ ಏಕಮಾತ್ರ ಸುಲಭ ಹಾಗೂ ಹೆಚ್ಚಿನ ಭಂಡವಾಲದ ಆವಶ್ಯಕತೆಯುಲ್ಲದ ಉದ್ಯಮವೆಂಬುದನ್ನು ವಿಶದೀಕರಿಸಿ, ಮುಖಂಡರು ತಾವು ಸ್ವತಹ ಚರಕದಲ್ಲಿ ನೂಲುವುದರ ಮೂಲಕ ಇತರ ಜನಸಾಮಾನ್ಯಕ್ಕೆ ಮೇಲ್ಪಂಕ್ತಿಯಾಗಬೇಕಾಗಿ ವಿನಂತಿಸಿದರು. ಗಾಂಧಿಜಿಯವರು ಇಂದು ಹಿಂದೂದೇಶದಲ್ಲಿ, ವಿರಾಮವಿಲ್ಲದೆ ದುಡಿವವರು. ಅವರೇ ಚರಕದಲ್ಲಿ ನೂಲಲು ಸಮಯವನ್ನು ಕಂಡುಕೊಳ್ಳುವರು. ಅದುಕಾರಣ, ಇತರರು ತಮಗೆ ಸಮಯವಿಲ್ಲವೆಂಬ ನೆಪವನ್ನು ಮುಂದುಮಾಡಿ, ನೂಲದೆ, ಸೋಮಾರಿಗಳಾಗುವುದು ಯುಕ್ತವಲ್ಲವೆಂದು ಖಾನರ ಬೋಧನೆ:—

'ನಾನು ಈಗ ಸಂಪೂರ್ಣ ಖಾದಿಧಾರಿ. ಅದುಕಾರಣವೇ ನನಗೆ ಈ ಪ್ರದರ್ಶನವನ್ನು ತೆರೆಯಲು ಅತ್ಯಾನಂದವೆನಿಸುವುದು. ನಾನು ನಂಬದ ಯಾವುದರಲ್ಲಿಯೂ ನಾನು ಕೈಹಾಕುವವನಲ್ಲ. ನನ್ನ ಇಷ್ಟು ವರ್ಷದ ಅನುಭವವೂ, ನನಗೆ ಖಾದಿಯ ಮೇಲಣ ವಿಶ್ವಾಸವನ್ನು ಹೆಚ್ಚಿಸಿದೆ. ಆ ಭರವಸೆಯ ದೃಢೀಕರಣಕ್ಕಾಗಿಯೇ ನಾನು ನಿತ್ಯವೂ ಚರಕದಲ್ಲಿ ಒಂದೊಂದು ತಾಸು ನೂಲುವ ಅಭ್ಯಾಸ ಮಾಡಿಟ್ಟುಕೊಂಡಿರುವೆನು.

"ಗಿರಣಿ ವಸ್ತ್ರಗಳು, ಹಿಂದೀಯರಲ್ಲದ ಇತರರಿಗೂ ಕೊಂಚ ಜನದ ಖಾನ್ನು ಕೊಡುವುವು; ಮಾತ್ರವಲ್ಲ, ಖಾದಿ ಚಳವಳಿಕ್ಕೆ ಪ್ರೋತ್ಸಾಹ ಕೊಡುವುದರ ಬದಲಾಗಿ ಪ್ರತಿಕೂಲವಾಗಿವೆ. ಖಾದಿ ಕೇಂದ್ರಗಳನ್ನು ಪ್ರತಿಯೊಂದು ಗ್ರಾಮದಲ್ಲಿಯೂ ಏರ್ಪಡಿಸುವ ವ್ಯವಸ್ಥೆಯಾಗಲಿ!" ಎಂದು ತಮ್ಮ ಭಾಷಣವನ್ನು ಮುಗಿಸಿದರು.

ಭಾಷಣವು ಮುಗಿದ ನಂತರ "ವಂದೇ ಮಾತರಂ" ಗೀತೆಯನ್ನು ಹಾಡಲಾಯಿತು. ಅನಂತರ ಖಾನರವರು ಇತರ ಮುಖಂಡರೊಂದಿಗೆ ಪ್ರದರ್ಶನ ಸ್ಥಳವೆಲ್ಲವನ್ನೂ ಸಂದರ್ಶಿಸಿ, ಆನಂದಪಟ್ಟರು.

ಪ್ರದರ್ಶನದಲ್ಲಿ ಮಹತ್ವದ ಅನೇಕ ಚಿತ್ರಗಳೂ ಪ್ರದರ್ಶಿತವಾಗಿವೆ. ಶ್ರೀಮತಿ ಸರೋಜಿನಿ ದೇವಿಯವರು ಕಲಾವಿಭಾಗವನ್ನು ಯಶಸ್ವಿಗೊಳಿಸಲು ತುಂಬ ಶ್ರಮವಹಿಸಿರುವರು.

ಈ ಮೇಲಿನ ಸಂಭಾಷಣೆಯಿಂದ; ಗಾಂಧಿಜಿಯವರ ತಿದ್ದುಪಡಿ ಸೂಚನೆಗಳನ್ನೆಲ್ಲ ಬಾಬೂರಾಜೇಂದ್ರ ಪ್ರಸಾದರವರು ಪೂರ್ಣವಾಗಿ ಅನುಮೋದಿಸುವರೆಂದೇ ಎನ್ನಬೇಕು.

ಅವರ ಸಂದೇಶ.

ಅಧ್ಯಕ್ಷ ಪೀಠವನ್ನೇರುವ ಸಂದರ್ಭದಲ್ಲಿ ಜನಾಂಗಕ್ಕೆ ಅವರ ಸಂದೇಶವೇನು, ಎಂದು ಪತ್ರಿಕಾ ಪ್ರತಿನಿಧಿಯು ಪುನಃ ಪ್ರಶ್ನಿಸಲು ಬಾಬೂರಾಜೇಂದ್ರರು ಹೀಗೆಂದರು:—"ಸಂದೇಶವಿದೆ, ಪರಂತು ನೂತನವಲ್ಲ. ಬರುವ ಎಸೆಂಬ್ಲಿ ಚುನಾವಣೆಯಲ್ಲಿ ಕೊಂಗ್ರೆಸ್ ಉಮೇದ್ವಾರರನ್ನೆ ಜನರು ಚುನಾಯಿಸಲಿ—ಎಂದು ಜನಾಂಗದೊಡನೆ ನನ್ನ ವಿನಂತಿ. ಮತದಾರರ ಮುಂದಿರುವ ಪ್ರಶ್ನೆಯಿಷ್ಟು:—ಕೊಂಗ್ರೆಸ್ಸು ಜನಾಂಗಕ್ಕಾಗಿ ಹೋರಾಡಿದುದನ್ನು ಕೃತಜ್ಞತೆಯಿಂದ ಸ್ಮರಿಸಿ ಕೊಂಗ್ರೆಸ್ಸಿಗೇ ಚುನಾವಣೆಗಳಲ್ಲಿ ಜಯವು ಲಭಿಸುವಂತೆ ಸಾಧಿಸಿಕೊಡುವುದು; ಅಥವಾ ಪ್ರತಿಕೂಲವಾಗಿ ವರ್ತಿಸಿ, ಸರಕಾರದ ದಬ್ಬಾಳಿಕೆಯನ್ನು ತಾವು ಸಮರ್ಥಿಸಿದೆವೆಂದು ಪ್ರಕಟಿಸುವುದು. ದೇಶವು ಗಾಂಧಿಜಿಯವರ ಪಕ್ಷದಲ್ಲಿ ನಿಂತು (ನಿಲ್ಲುವುದೆಂದು ನನ್ನ ಭರವಸೆ) ಅವರನ್ನು ಸಮರ್ಥಿಸುವುದಾದರೆ,—ಅವರಿಗೆ ಗಾಂಧಿಜಿಯವರ ಮೇಲಿರುವ ವಿಶ್ವಾಸವೆಷ್ಟೆಂದು ಚುನಾವಣೆಗಳಲ್ಲಿ ವ್ಯಕ್ತವಾಗಬೇಕು. ಅದರಿಂದ ನಾವು, ಸರಕಾರಕ್ಕೆ, ದಬ್ಬಾಳಿಕೆಯು ನಿಷ್ಪ್ರಯೋಜಕವೆಂಬುದನ್ನು ತೋರಿಸಿಕೊಟ್ಟಂತಾಗುವುದು."

ಕೊಂಗ್ರೆಸ್ ಕಾರ್ಯಕಾರಿ ಸಮಿತಿಯ ಸಭೆ.

ಬೊಂಬಾಯಿ, ತಾ. ೨೧-೧೦-'೩೪.

ಕೊಂಗ್ರೆಸ್ ಕಾರ್ಯಕಾರಿ ಸಮಿತಿಯ ಸಭೆಯು ಈ ದಿನ ಸೇರಿ, ಕಳೆದ ಮೇ ತಿಂಗಳ ನಿರ್ಧಾರಗಳನ್ನೆಲ್ಲ ಪುನರ್ವಿಮರ್ಶಿಸಿ, ಸಮರ್ಥಿಸಿದೆ. ಅನಂತರ ಕೊಂಗ್ರೆಸ್ ಪಾರ್ಲಿಮೆಂಟರಿ ಬೋರ್ಡಿನ ವಿಚಾರ, ಧೋರಣೆ, ಕಾರ್ಯಕ್ರಮ ಇತ್ಯಾದಿಗಳ ಚರ್ಚೆ ನಡೆದಿದೆ. ಇದರಿಂದ,—ಮಾಲವೀಯರು ಕಮ್ಯೂನಲ್ ಎವಾರ್ಡಿನ ಕುರಿತಾಗಿ ತರುವೆನೆಂದಿದ್ದ ತಿದ್ದುಪಡಿ ಸೂಚನೆಗೆ ಅವಕಾಶವಿಟ್ಟಂತೆ ತೋರುವುದಿಲ್ಲ.

ಮಾಲವೀಯ ಪಕ್ಷದವರಾರೂ ಇನ್ನು ಬಂದಿಲ್ಲ. ಕೊಂಗ್ರೆಸ್ ಕಮಿಟಿಯ ಮೇಲಣ ನಿರ್ಧಾರವನ್ನಿವರು ಯಾವ ಭಾವದಿಂದ ಅಂಗೀಕರಿಸುವರೋ ನೋಡಬೇಕಾಗಿದೆ.

ಅಖಿಲಭಾರತ ಗ್ರಾಮ ಕೈಗಾರಿಕಾಸಂಘವೊಂದನ್ನು ರಚಿಸಬೇಕೆಂದೂ, ಪ್ರದರ್ಶನಗಳನ್ನು ಮುಂದೆ ಅಖಿಲಭಾರತ ಚರಕಾ ಸಂಘದವರೇ ನಡೆಸಬೇಕೆಂದೂ ಗಾಂಧಿಜಿಯವರು ತಿದ್ದುಪಡಿ ಸೂಚಿಸಿರುವರಷ್ಟೆ. ಈ ವಿಚಾರವಾಗಿ ಕೊಂಗ್ರೆಸ್ ಕಾರ್ಯಕಾರಿ ಸಮಿತಿಯ ಅಭಿಪ್ರಾಯವೇನೆಂದು ಇನ್ನೂ ಪ್ರಕಟವಾಗಿಲ್ಲ.

ರಾಷ್ಟ್ರಸಭಾಧಿವೇಶನದವರ ಅನುಮೋದನೆಗಾಗಿ ಕಾರ್ಯಕಾರಿ ಸಮಿತಿಯು ಈ ಕೆಳಗಣ ಠರಾವುಗಳ ಸಲಹೆ ಕೊಟ್ಟಿದೆ:—

'ಈ ಕೊಂಗ್ರೆಸ್ಸು, ಆಬಾಲಸ್ತ್ರೀವೃದ್ಧರೆಲ್ಲರು ಸ್ವರಾಜ್ಯ ಸಂಗ್ರಾಮಕ್ಕಾಗಿ ಮಾಡಿದ ಸ್ವಾರ್ಥತ್ಯಾಗಕ್ಕಾಗಿಯೂ ಕಷ್ಟ ಸಹಿಷ್ಣುತೆಗಾಗಿಯೂ ಅವರನ್ನು ಅಭಿವಂದಿಸುತ್ತದೆ, ಮತ್ತು, ಅಹಿಂಸಾಬದ್ಧವಾದ ಅಸಹಕಾರ ಮತ್ತು ಶಾಸನನಿರೋಧದ ವಿನಾ ದೇಶದಲ್ಲಿ ಸಾರ್ವತ್ರಿಕ ಸಾಮುದಾಯಿಕ ಜಾಗೃತಿಯುಂಟಾಗುತ್ತಿದ್ದಿಲ್ಲವೆಂದು ಈ ಸಭೆಯ ನಿಶ್ಚಯಾಭಿಪ್ರಾಯವಾಗಿದೆ.'

'ಶಾಸನನಿರೋಧ ಚಳವಳವನ್ನು (ಗಾಂಧಿಜಿಯವರ ಹೊರತಾಗಿ) ಹಿಂದೆಗೆವ ಆವಶ್ಯಕತೆಯನ್ನೂ, ಅಪೇಕ್ಷೆಯನ್ನೂ ಮನಗಾಣುವಾಗ,—ಭಯೋತ್ಪಾದಕ ಚಳವಳಿಕ್ಕೆ ಹೆದ್ದಾರಿಯಾಗುವ ಹಿಂಸಾಬದ್ಧ ಕಾರ್ಯಕ್ರಮಗಳ ಬದಲಾಗಿ ಅಹಿಂಸಾತ್ಮಕವಾದ ಅಸಹಕಾರ ಮತ್ತು ಶಾಸನನಿರೋಧಗಳಲ್ಲಿ ಈ ಸಭೆಯು ತನ್ನ ಅಚಲವಿಶ್ವಾಸವನ್ನು ದೃಢೀಕರಿಸುತ್ತದೆ.'

'೧೯೩೪ರ ಮೇ ತಿಂಗಳ ಕೊಂಗ್ರೆಸ್ ಕಮಿಟಿ ನಿರ್ಧಾರಗಳನ್ನು ಕೊಂಗ್ರೆಸ್ಸು ಅನುಮೋದಿಸುತ್ತದೆ ಮತ್ತು ಆ ನಂತರ ಪಾರ್ಲಿಮೆಂಟರಿ ಬೋರ್ಡ್, ಅದರ ಧೋರಣೆ, ಕಾರ್ಯಕ್ರಮ, ಪುನರ್ಘಟನಾ ಆಯೋಜನೆ, ವಿದೇಶಗಳಲ್ಲಿ ನೆಲೆಸಿರುವ ಹಿಂದೀಯರ ವಿಚಾರ, ಮೃತ ಮುಖಂಡರ ಆತ್ಮಕ್ಕೆ ಶಾಂತಿಯನ್ನು ಕೋರುವ ಠರಾವು ಮತ್ತು ಸ್ವದೇಶೀ ವಿಷಯಕವಾದ ಠರಾವುಗಳು—ಈ ಕುರಿತಾಗಿ ಪರ್ಯಾಲೋಚಿಸುತ್ತದೆ.'

'ಶ್ರೀಮತಿ ಕಮಲಾ ನೆಹರುಗಳವರ ಅನಾರೋಗ್ಯದ ದೆಸೆಯಿಂದ ಅವರ ಕುಟುಂಬಕ್ಕಾಗಿರುವ ದುಃಖ—ಆತುರಗಳಲ್ಲಿ ಈ ಕೊಂಗ್ರೆಸ್ಸು ಭಾಗಿಯಾಗಿದೆ—ಮತ್ತು, ಹವಾ ಬದಲಾವಣೆಯ ದೆಸೆಯಿಂದ ಅವರಿಗೆ ಆರೋಗ್ಯ ಲಾಭವಾಗಲೆಂದು ಆಶಿಸುತ್ತದೆ.'

(ಆನೇ ಪುಟದಿಂದ ಮುಂದುವರಿದುದು.)

ಟಿಯು ನೇಮಕವಾಯಿತು. ಫಲವಾಗಿ ಮುಂದಿನ ಕೊಂಗ್ರೆಸ್ ದಿನ, ರಾಜಕೀಯ ಬಂದಿಗಳ (ಅಲಿ ಸಹೋದರರ ಸಹಿತ) ವಿಮೋಚನೆಯಾಯಿತು.

ಕೊಂಗ್ರೆಸ್ಸು ಕೌನ್ಸಿಲ್ ಬಹಿಷ್ಕಾರದ ಕಾರ್ಯಕ್ರಮವನ್ನು ಕೈಕೊಂಡಿತು. ಅಸಹಕಾರ ಚಳವಳಿವು ತಲೆಯೆತ್ತಿತು. ಪ್ರಿನ್ಸ್ ಒಫ್ ವೇಲ್ಸರ ಆಗಮನಕ್ಕೂ ಬಹಿಷ್ಕಾರ! ಆದರೆ, ಜನರು ಇನ್ನೂ ಅಹಿಂಸಾವ್ರತಬದ್ಧರಾಗಲು ಸಿದ್ಧರಾಗಿಲ್ಲದುದನ್ನು ಕಂಡು ಗಾಂಧಿಜಿಯವರು ಅಸಹಕಾರ ಚಳವಳವನ್ನು ಹಿಂದೆಗೆದರು. ಹಾಗಾದರೂ—ಗಾಂಧಿಜಿಯವರನ್ನು ದಸ್ತಗಿರಿ ಮಾಡಿ, ಆರು ವರ್ಷದ ಸಜೆ ವಿಧಿಸಿದರು.

ಇದಾದ ಮೇಲೆ, ಪುನಃ ಶಾಸನ ನಿರೋಧ ಚಳವಳವನ್ನು ಪುನರುಜ್ಜೀವಿಸಬಹುದೇ ಎಂಬುದನ್ನು ವಿಮರ್ಶಿಸಲು ಕೊಂಗ್ರೆಸ್ಸಿನವರು ಒಂದು ಕಮಿಟಿಯನ್ನು ಕಳುಹಿದರು. ಅದು ಪ್ರತಿಕೂಲವಾಗಿ ವರದಿಕೊಟ್ಟಿತು. ದೇಶಬಂಧು ಸಿ. ಆರ್. ದಾಸರು ಕೌನ್ಸಿಲ್ ಪ್ರವೇಶದ ಹಂಚಿಕೆ ತೆಗೆದರು. ಕೊಂಗ್ರೆಸ್‌ವಾಲರು ಸಾಧ್ಯವಿದ್ದಷ್ಟು ಸ್ಥಾನಗಳನ್ನಾಕ್ರಮಿಸತಕ್ಕದೆಂದಾಯಿತು.

ಆ ತಟವು ಕೆಲಕಾಲ ನಡೆಯಿತು. ಮುಂದೆ ಕೆಲ ವರ್ಷಗಳಲ್ಲಿ ಬಂದುದು ಸೈಮನ್ ಕಮಿಶನ್! ಇದು ಹಿಂದೂದೇಶಕ್ಕೆ ಬೇಕಾಗಿರಲಿಲ್ಲ. ಎಲ್ಲೆಲ್ಲಿಯೂ ನಿಷೇಧ! ಲೇಬರ್ ಸರಕಾರವು ಮತ್ತೊಂದು ಹಂಚಿಕೆ ತೆಗೆಯಿತು—ರೌಂಡ್‌ಟೇಬಲ್ ಕೊನ್ಫರೆನ್ಸು! ರೌಂಡ್ ಟೇಬಲ್ ಪರಿಷತ್ತುಗಳು ಮಾಡಿದುದೇನೂ ಇಲ್ಲ. ಮತ್ತಷ್ಟು ಅತೃಪ್ತಿ; ಮತ್ತಷ್ಟು ಅಶಾಂತಿ. ಆಗಲೇ ಬಂದುದು—ಶಾಸನ ನಿರೋಧ ಚಳವಳ!

ಇಂದು ಕೊಂಗ್ರೆಸ್ ಎಲ್ಲಿಗೆ ಬಂದಿದೆ? ಪುನಃ ಕೌನ್ಸಿಲ್ ಪ್ರವೇಶದ ಕಾರ್ಯಕ್ರಮದ ಕಡೆಗೊಲಿದಿದೆ. ಗ್ರಾಮ ಸಂಘಟನೆಯ ಕಾರ್ಯದ ಆಯೋಜನೆಯಲ್ಲಿದೆ.

ಗಾಂಧಿಜಿಯವರು ನಿವೃತ್ತರಾಗುವುದು ನಿಶ್ಚಯ!

[illegible]ಗಳು.

[illegible] ಈ ವರ್ಷ ಜರಗಿದ [illegible] ಮತ್ತು [illegible] ಸಂದರ್ಭ [illegible] ದೇವರುಗಳ ಸ್ಪರ್ಧೆ ಬಗ್ಗೆ ಮೊದ[illegible] ಒಬ್ಬ ಕೊರಗರ ಹೆಂಗಸಿಗೆ; [illegible] ಮುಂಡಾಲ ಹೊಲೆಯನಿಗೆ; [illegible] 'ಸಪಲಿಗ'ರ ಹೆಂಗಸಿಗೆ!

* * *

'ಅಸ್ಪೃಶ್ಯರ' ಬಗ್ಗೆಯೇ ಈ ಸ್ಪರ್ಧೆ ಏರ್ಪಡಿಸಲಾಯಿತೆಂಬ ಶಂಕೆಯುಳ್ಳವರಿರ ಬಹುದು. ಆದರೆ, ಹಾಗೆ ಶಂಕಿಸುವ ಬದಲಾಗಿ,—ಅಸ್ಪೃಶ್ಯರೆನಿಸಿದವರ ವರಾರಗಳು ಮಾತ್ರ, ಅಸ್ಪೃಶ್ಯವಲ್ಲ; ಅಸ್ಪೃಶ್ಯರಲ್ಲದವರ ವರಾರಗಳು ಅಸ್ಪೃಶ್ಯ,—ಇವೆರಡರಲ್ಲಿ ಯಾವುದು ಸರಿ, ಯಾವುದು ತಪ್ಪು ಎಂದಾಲೋಚಿಸುವುದೊಳ್ಳಿತು.

* * *

ಪರ್ಜನ್ಯನ ಸುದ್ದಿಯಿಲ್ಲದೆ ಅನೇಕ ದಿನಗಳಾದವು ನಗರದ ರಸ್ತೆಗಳಲ್ಲಿ ಧೂಳಿಯ ಪ್ರತಾಪವೂ ಬಿಸಿಲಿನ ತಾಪದೊಂದಿಗೆ ಹೆಚ್ಚುತ್ತಿದೆ ಮುನಿಸಿಪಾಲಿಟಿಯ ನೀರಿನ ಲೋರಿಗಳು ಹೊರಗೆ ಬಂದಿಲ್ಲವೇಕೆಂದು ಹಲವರಿಗೆ ಆಶ್ಚರ್ಯ

* * *

ಆದರೆ, ಕೆಲೆಂಡರಿನಲ್ಲಿ ಇನ್ನೂ ಮಳೆಯಿದೆ ಕೆಲೆಂಡರಿನ ಆಧಾರದ ಮೇಲೆ ನಡೆಯುವ ಲೋರಿಗಳನ್ನು ಯಾರೂ ಧರ್ಮ ಭಂಗಕ್ಕೆ ಪ್ರೇರಿಸಿಸರು

* * *

ಶ್ರೀ ಬಿ ಎಮ್ ಶ್ರೀ ಕಂಠಯ್ಯನವರಿಗೆ ಟೀಪಾರ್ಟಿ ಸತ್ಕಾರವಾಗುತ್ತಿದ್ದಾಗ 'ಮಿತ್ರಮಂಡಲಿ'ಯ ಅಧ್ಯಕ್ಷರ ಅಪೇಕ್ಷೆಯಂತೆ ಎರಡು ಮಾತುಗಳನ್ನಾಡಿದ ಶ್ರೀ ಕೆ ಶಂಕರ ಭಟ್ಟ, ವಿದ್ವಾನ್ ಇವರು 'ಮಿತ್ರಮಂಡಲಿಯು ಯಾವಾಗ ಆರಂಭವಾಯಿತು, ಯಾರಿಂದ ಆರಂಭಿಸಲ್ಪಟ್ಟಿತು' ಎಂಬ ವಿಷಯವು ತನಗೆ ತಿಳಿದಿಲ್ಲವೆಂಬೊಂದು ಮಾತನ್ನಾಡಿದುದು ಸರಿಯಲ್ಲವೆಂದು ಅನೇಕರು ನೊಂದುಕೊಂಡಿರುವರು

* * *

ತಿಳಿದುದನ್ನಾಡಿದವರೂ ಆಕ್ಷೇಪಿಸುವವರು ತಿಳಿಯದುದನ್ನೂ ಆಡಬೇಕೆಂದು ಅಪೇಕ್ಷಿಸುವುದು ಮಾತ್ರ ವಿಚಿತ್ರ

* * *

ನಿವೃತ್ತನಾಗುವೆನೆಂದೇ ಗಾಂಧಿಜಿಯವರ ಹಟ. ಕೊಂಗ್ರೆಸ್ಸಿನಲ್ಲಿ ತ್ರಿಕರಣಪೂರ್ವಕವಾಗಿ ಅಹಿಂಸಾವ್ರತವು ಆಚರಿಸಲ್ಪಡದಿರುವುದೇ ಕಾರಣ

* * *

ನಿವೃತ್ತರಾಗುವವರನ್ನು ಬಲಾತ್ಕರಿಸುವುದೇ ಹಿಂಸೆಯ ಒಂದು ಉದಾಹರಣೆಯಾಗಿದೆಯೆಂಬುದನ್ನು ತಿಳಿಯದೆ, ಕೆಲವರಿನ್ನೂ ಗಾಂಧಿಜೀಯವರನ್ನು ಒತ್ತಾಯಪಡಿಸುವುದು ಚೋದ್ಯ

ಅಲೆಕ್ಝಂಡರ್ ನೃಪತಿಗಳ ಶವಸಂಸ್ಕಾರ.

ಅನೇಕ ರಾಜ್ಯಗಳ ರಾಜ್ಯಪ್ರತಿನಿಧಿಗಳು ನೆರೆದು, ಯುಗೋಸ್ಲೇವಿಯದ ನೃಪತಿ ಅಲೆಕ್ಝಂಡರರ ಶವಸಂಸ್ಕಾರವು ರಾಜ್ಯಯೋಗ್ಯವಾಗಿ ಬೆಲ್ಗ್ರೇಡ್ ನಗರದಲ್ಲಿ ಕಳೆದ ವಾರ ನಡೆಸಲ್ಪಟ್ಟಿತು

ಮಾಲ್ಡೀವಿ ಸಿಂಹಾಸನ.

ಮಾಲ್ಡೀವಿಯ ಪದಚ್ಯುತ ಸುಲ್ತಾನರ ಸಹೋದರರೊಬ್ಬರು ಹಿಂದೂದೇಶದಲ್ಲಿ ಕೆಲವರ್ಷಗಳಿಂದ ಇರುವರು. ಅವರೀಗ ಕೊಲೊಂಬೋ ನಗರಕ್ಕೆ ತೆರಳಿರುತ್ತಾರೆ ಮಾಲ್ಡೀವಿಯ ಸಿಂಹಾಸನಕ್ಕೆ ಬಾಧ್ಯಸ್ಥರಿವರು ಪತ್ರಿಕಾ ಪ್ರತಿನಿಧಿಯು ಭೇಟಿಯಾದಾಗ "ಮಾಲ್ಡೀವಿಯವರಿಗೆ ನನ್ನ ಆಳ್ವಿಕೆ ಬೇಕಾದರೆ ಮಾತ್ರ ನಾನು ಸಿಂಹಾಸನವೇರಲು ಸಿದ್ಧನು. ಇಲ್ಲವಾದರೆ, ಸ್ವಜನರ ರಕ್ತಪಾತದಿಂದ ನನಗೆ ಸಿಂಹಾಸನ ಬೇಡ" ಎಂದಿರುವರು.

ಬೊಂಬಾಯಿ, ತಾ. ೨೬.

ಬೊಂಬಾಯಿಯಲ್ಲಿ ಈ ದಿನ ಸೇರಿದ ವಿಷಯ ನಿಯಾಮಕ ಸಮಿತಿಯ ಸಭೆಯಲ್ಲಿ ಗಾಂಧಿಜಿಯವರು ತಾವು ಕೊಂಗ್ರೆಸ್ಸಿನಿಂದ ನಿವೃತ್ತರಾಗುವುದು ನಿಶ್ಚಯವೆಂದು ಹೇಳಿದರು

"ನನ್ನನ್ನು ಒತ್ತಾಯಪಡಿಸಬೇಡಿ, ನಾನು ಸೂಚಿಸಿರುವ ತಿದ್ದುಪಡಿಗಳು ಸ್ವೀಕೃತವಾದರೂ ನಾನು ಕೊಂಗ್ರೆಸ್ಸಿನಲ್ಲಿರಲಾರೆ. ಕಾರ್ಯಕಾರಿ ಸಮಿತಿಯ ಬಹುಮತವು ನನ್ನ ನಿವೃತ್ತಿಯನ್ನನುಮೋದಿಸುತ್ತದೆ ಕಾಯ, ವಾಚಾ, ಮನಸಾ ಕೊಂಗ್ರೆಸ್ಸಿನಲ್ಲಿ ಅಹಿಂಸಾ ವಾತಾವರಣವಿಲ್ಲ. ಅದು ಉಂಟಾಗುವ ತನಕ ನಾನು ಕೊಂಗ್ರೆಸ್ಸಿನಲ್ಲಿರಲಿಚ್ಛಿಸುವುದಿಲ್ಲ ನನ್ನನ್ನು ಈಗ ಯಾರೂ ಬಲಾತ್ಕರಿಸಬಾರದು" ಎಂದು ಸ್ಪಷ್ಟವಾಗಿ ವಿನಂತಿಸಿರುವರು

ಗಾಂಧಿಜಿಯವರು ಸೂಚಿಸಿದಂತೆ ನ್ಯಾಯವಾದ ಮತ್ತು ಶಾಂತವಾದ ಎಂಬ ಶಬ್ದಗಳನ್ನು 'ಸತ್ಯವಾದ ಮತ್ತು ಅಹಿಂಸಾಬದ್ಧವಾದ' ಎಂದು ತಿದ್ದಬೇಕೆಂಬ ಠರಾವನ್ನು ಕಾರ್ಯಕಾರಿ ಸಮಿತಿಯವರು ಅಧಿವೇಶನದಲ್ಲಿ ತರಲಿರುವರು ನೂಲಿನ ಸದಸ್ಯತನದ ನಿಯಮವನ್ನೂ ಆ ಭಾ ಕೊಂ ಕಮಿಟಿಯವರಿಗೂ ಕಾರ್ಯನಿರ್ವಾಹಕರಿಗೂ ಮಾತ್ರ ಉಪಯೋಗಿಸಬೇಕೆಂದು ಸಮಿತಿಯ ನಿರ್ಧಾರ

ದಿವಂಗತ ವಿ. ಜೆ ಪಟೇಲರ ಪುಣ್ಯತಿಥಿ.

ಇದೇ ತಾ. ೨೨ರಲ್ಲಿ ಬೊಂಬಾಯಿಯಲ್ಲಿ ಆಚರಿಸಲ್ಪಟ್ಟಿತು. ಆಜಾದ್ ಮೈದಾನಿನಲ್ಲಿ ಪ್ರಚಂಡ ಸಭೆ ನೆರೆದು, ಡಾ ಅನ್ಸಾರಿ, ಮಹಾತ್ಮಾ ಗಾಂಧಿ ಮೊದಲಾದ ಮುಖಂಡರಿಂದ ಪಟೇಲರ ಗುಣಕಥನ ರೂಪವಾದ ಭಾಷಣಗಳಾದುವು

ಸ್ಟೀಮ್‌ರೋಡ್ ರೋಲರಿನ ಕೆಳಗೆ ಜಜ್ಜಲ್ಪಟ್ಟನು.

ರಂಗೂನಿನಲ್ಲಿ ೧೦ ವಯಸ್ಸಿನ ಬಾಲಕನೊಬ್ಬ ರಸ್ತೆಯ ದುರುಸ್ತಿಗೆಂದು ಓಡುತ್ತಿದ್ದ ಸ್ಟೀಮ್ ರೋಡ್ ರೋಲರನ್ನು ಹತ್ತಬೇಕೆಂದು ಆಸೆಯಾಗಿ ಮೆಲ್ಲನೆ ಏರಲು ಯತ್ನಿಸಿದನು ಕಾಲು ಜಾರಿತು ಭಾರವಾದ ಚಕ್ರಗಳ ಕೆಳಗೆ ಬಿದ್ದು ನುಚ್ಚು ನೂರಾಗಿ ಹೋದನು

ವಿಕ್ಟೋರಿಯಾ ಸಂಸ್ಥಾನದ ಶತಮಾನೋತ್ಸವ

ಆಸ್ಟ್ರೇಲಿಯದ ವಿಕ್ಟೋರಿಯಾ ಸಂಸ್ಥಾನವು ಸ್ಥಾಪನೆಯಾಗಿ ನೂರು ವರ್ಷಗಳಾದುವು. ಆದರ ಸಾಂವತ್ಸರಿಕೋತ್ಸವವು ಇದೇ ತಾ ೧೮ರಲ್ಲಿ ಮೆಲ್ಬೋರ್ನ್ ನಗರದಲ್ಲಿ ವಿಜೃಂಭಣೆಯಿಂದ ಜರಗಿತು

ಅಫೀಮು ಸಾಬೂನು ಪೆಟ್ಟಿಗೆಗಳಲ್ಲಿ!

ಸುಮಾರು ೨೨೦೦ ತೊಲೆಗಳಷ್ಟು ಚೀನಾ ಅಫೀಮನ್ನು ಸಾಬೂನು ಪೆಟ್ಟಿಗೆಗಳಲ್ಲಿ ತುಂಬಿಸಿ ಅಬಕಾರಿಗಳ ಕಣ್ಣು ತಪ್ಪಿಸಿ ಒಯ್ಯುತ್ತಿದ್ದ ಕೆಲವರನ್ನು ರಂಗೂನು ಬಳಿ ಸ್ಟೀಮರಿನಲ್ಲಿ ಸೆರೆಹಿಡಿದಿರುವರು

ಮಾನಿಲದಲ್ಲಿ ಸುಂಟರಗಾಳಿ ಹಾವಳಿ.

ಮಾನಿಲದಲ್ಲಿ ಝಂಝಾಮಾರುತಪ್ರತಾಪದಿಂದ ೭೨ ಮರಣಗಳಾಗಿವೆ ರಸ್ತೆಗಳಲ್ಲಿನ ತಂತಿ ಕಂಭಗಳೂ ದೀಪಸ್ತಂಭಗಳೂ ನಿರ್ನಾಮವಾಗಿವೆ

ಮೈಸೂರು ದಸರಾ ಪನದುಗಳು.

ದಸರಾ ಮಹೋತ್ಸವದ ಸಂದರ್ಭದಲ್ಲಿ ಶ್ರೀಮನ್ಮಹಾರಾಜರವರು ಕೌನ್ಸಿಲರಾದ ಶ್ರೀ ಎಸ್ ಪಿ ರಾಜಗೋಪಾಲಾಚಾರಿಯವರಿಗೆ ರಾಜಮಂತ್ರ ಪ್ರವೀಣ", ಚೀಫ್ ಸೆಕ್ರಿಟೆರಿಯವರಾದ ಶ್ರೀ ಆರ್ ರಂಗರಾಯರಿಗೆ "ರಾಜಸೇವಾಸಕ್ತ" ಮತ್ತು ಲಕ್ಷ್ಮೀದೇವಮ್ಮ (ಬೆಂಗಳೂರು ಮುನ್ಸಿಪಲ್ ಕೌನ್ಸಿಲರಾದ ಶ್ರೀ ಶ್ರೀನಿವಾಸ ಚೆಟ್ಟಿಯವರ ಸಹೋದರಿ) ರವರಿಗೆ "ಧರ್ಮಪರಾಯಣೆ" ಎಂಬ ಬಿರುದುಗಳನ್ನು ದಯಪಾಲಿಸಿರುವರು.

[ಈ ಬಾರಿಯ ದಸರೆಗೆ ನಮ್ಮ ಮದರಾಸು ಗವರ್ನರ್ ಸಾಹೇಬರವರು ಸಪತ್ನೀಕರಾಗಿ ದಯಮಾಡಿಸಿದ್ದರು. ಇವರು ಹೊರಡುವಾಗ ಸನ್ಮಾನಾರ್ಥ ತೋಪುಗಳು ಹಾರಿಸಲಾದುವು.]

ಮದರಾಸು ಕೌನ್ಸಿಲು.

ಮದರಾಸು ಕೌನ್ಸಿಲಿನ ಅಧಿವೇಶನವಾರಂಭವಾಗಿದೆ. ಈ ೩ರಲ್ಲಿ ಸೇರಿದ ಅಧಿವೇಶನದಲ್ಲಿ, "ಮದರಾಸು ಲೋಕಲ್ ಬೋರ್ಡ್ಸ್ ತಿದ್ದುಪಡಿ ಮಸೂದೆ"ಯೂ, ಮದರಾಸು, ಸಿಟಿ ಸಿವಿಲ್ ಕೋರ್ಟು ಮಸೂದೆಯೂ ಹಾಸಾದುವು ೧೯೩೦ನೇ ಮುನಿಸಿಪಾಲಿಟಿಗಳ ಮಸೂದೆಯನ್ನು ತಿದ್ದುವ ಬಗ್ಗೆ ಸೂಚನೆಗಳು ಸರಕಾರದಿಂದ ಬಂದಿವೆ. ಮುನಿಸಿಪಲ್ ಸದಸ್ಯರು ಇಂತಿಷ್ಟು ಸಭೆಗಳಿಗೆ ಹಾಜರಾಗದಿದ್ದರೆ ಅವರ ಮೆಂಬರಿಕೆ ಗುಣಾರಾಗುವುದೆಂದೂ, ಅವರನ್ನು ಪುನಃ ಅಂಗೀಕರಿಸುವ ಕ್ರಮಗಳೂ, ಮುನಿಸಿಪಲ್ ಸಂಸ್ಥೆಗಳ ಪ್ರಧಾನ—ಶಕ್ತಿಗಳ ಅಧಿಕಾರವು ಸರಕಾರಕ್ಕಿರಬೇಕೆಂದೂ, ಒಂದು ಮುನಿಸಿಪಾಲಿಟಿಯ ನೌಕರರನ್ನು ಅಗತ್ಯಕಂಡಂತೆ ಮತ್ತೊಂದಕ್ಕೆ ವರ್ಗಾಯಿಸುವಂತಾಗಬೇಕೆಂದೂ ಮೊದಲಾಗಿ ಮಸೂದೆಯಲ್ಲಿ ಕಾಣಿಸಲಾಗಿದೆ. ಈ ಮಸೂದೆಯನ್ನು ಸಿಲೆಕ್ಟ್ ಕಮಿಟಿಯ ವಿಮರ್ಶೆಗೊಪ್ಪಿಸಬೇಕೆಂದು ಅನೇಕ ಸದಸ್ಯರ ಅಗ್ರಹವಿದೆ

ನೋಟೀಸು

ಕಾಸರಗೋಡು ಡಿಸ್ಟ್ರಿಕ್ಟ್ ಮುನ್ಸೀಫ್ ಕೋರ್ಟಿನಲ್ಲಿ.

O P. No 145/1934

ಅಬ್ದುಲ್ಲ ಯಾನೆ ಅಂದುಂಞಿ ಬ್ಯಾರಿ, ಬಿರ್ಯಾನಿ ಬ್ಯಾರಿ ಮಗ ಮೊಗ್ರಾಲ ಗ್ರಾಮದ ಪೇರಲ ಇಸ್ಲಾಮಿಯ ಶಾಲೆಯ ಆಕ್ಟಿಂಗ ಮೆನೇಜರ್ ಅರ್ಜಿದಾರ

ಮತ್ತು

1 ಖದಿಜುಮ್ಮ, 2 ಐಸಮ್ಮ,

8 ಮಮ್ಮದ ಕುಂಞಿ, 4 ನಬೀಸಾ—ಮ್ಯಾನರರು ಇವರ ಗಾರ್ಡಿಯನ್ 2ನೇ ರೆಸ್ಪಾಂಡೆಂಟಳು—ರೆಸ್ಪಾಂಡೆಂಟರು

ಇವರೊಳಗೆ—

ಸದ್ರಿ ವ್ಯವಹರಣೆಯ ಅರ್ಜಿದಾರನ ಕಡೆ ತಿಳಿಯಪಡಿಸುವುದೇನೆಂದರೆ—

1ನೇ ರೆಸ್ಪೋಂಡೆಂಟಳ ಮಗ, 2ನೇ ರೆಸ್ಪೋಂಡೆಂಟಳ ಗಂಡ, ವ 8 ಮತ್ತು 4ನೇ ರೆಸ್ಪೋಂಡೆಂಟರ ತಂದೆ, ಮೊಗ್ರಾಲ ಗ್ರಾಮದ ಪೇರಲ ಇಸ್ಲಾಮಿ ಶಾಲೆಯ ಮೆನೇಜರನಾಗಿದ್ದ ಅಬ್ದುಲ್ಲ ಬ್ಯಾರಿ ಎಂಬವನು ಮೃತಪಟ್ಟು ಆತನ ವಾರಿಸ್‌ದಾರರಾದ ರೆಸ್ಪೋಂಡೆಂಟರು ಅರ್ಜಿದಾರನನ್ನು ಸದ್ರಿ ಶಾಲೆಯ ಮೆನೇಜರನಾಗಿ ನೇಮಿಸಿದ ಪ್ರಕಾರ ಸದ್ರಿ ಶಾಲೆಗೆ ಗವರ್ನ್‌ಮೆಂಟಿನಿಂದ ಬರತಕ್ಕ ಗ್ರೆಂಟಿನ ಐವಜು ವಸೂಲು ಪಡೆಯುವರೆಯೂ ಸದ್ರಿ ಶಾಲೆಯ ಆಡಳಿತೆ ನೋಡಿ ಬರುವರೆಯೂ ಹಕ್ಕುದಾರನಾದ ಅರ್ಜಿದಾರನು ಸದ್ರಿ ಶಾಲೆಗೆ ತಾ 31–8–'34ಕ್ಕೆ ಸಿಗತಕ್ಕ ಗ್ರೆಂಟಿನ ರೂ 50ನ್ನು ವಸೂಲ ಪಡಿಯುವರೆ ತನಗೆ ಸಕ್ಸೆಶ್ಶನ್ ಸರ್ಟಿಫಿಕೇಟು ಕೊಡಿಸಬೇಕಾಗಿ ಅರ್ಜಿದಾರರು ಮೇಲ್ಕಂಡ ಕೋರ್ಟಿನಲ್ಲಿ ದಾಖ್ಲೆಮಾಡಿದ ಅರ್ಜಿಯು ತಸ್ಕಿ ಬಗ್ಗೆ ತಾ 5–11–'34ಕ್ಕೆ ಇಡೋಣಾಗಿಯದೆ ಆ ಕುರಿತು ಆಕ್ಷೇಪವುಳ್ಳವರು ಸದ್ರಿ ತಾರೀಕಿಗೆ ಈ ಕೋರ್ಟು ಮುಂದೆ ಹಾಜರಾಗಿ ಸದ್ರಿಯವರ ಆಕ್ಷೇಪಗಳನ್ನು ಜ್ಯಾಹೀರುಮಾಡಿಕೊಳ್ಳಬಹುದು ಎಂತ ಈ ಮೂಲಕ ತಿಳಿಸೋಣಾಗ ತ್ತದೆ

ಕಾಸರಗೋಡು 25–10–'34 } S Lakshaman Rao *Vakil for Petitioner*

ನೋಟೀಸು.

ಮಂಗಳೂರು ತಾಲೂಕು ಉಳ್ವಾಲ ಮಾಗಣೆಗೆ ಸೇರಿದ ಸೋಮೇಶ್ವರ ಭಗವತಿ ಸ್ಥಾನದ ಭಂಡಾರಕ್ಕೆ ವಂತಿಗೆಯನ್ನು ತೆತ್ತು ಬರುವ ಈ ಕೆಳಗೆ ದಸ್ಕತ್ತು ಮಾಡಿದ ಮುಂಬಾಯಿಯಲ್ಲಿರುವ ಸೋಮೇಶ್ವರ ಬೋವಿ ಮಹಾ ಸಭೆಯವರು ಈ ಮೂಲಕ ಎಲ್ಲಾ ಜನರಿಗೆ ತಿಳಿಯಪಡಿಸುವುದೇನೆಂದರೆ —

ಸೋಮೇಶ್ವರ ಭಗವತಿ ಸ್ಥಾನದ ಭಂಡಾರಕ್ಕೆ ಸಂಬಂಧಪಟ್ಟ ಮೊಕ್ತೇಸರರು ಯಾ, ಅವರ ಅನುಯಾಯಿಗಳು ಕೂಡಾ ಭಂಡಾರಕ್ಕೆ ಅನಾವಶ್ಯಕವಾಗಿ ಸಾಲವನ್ನು ಮಾಡಿ, ಹಣ ದುರ್ವ್ಯಯ, ಯಾ, ದುರುಪಯೋಗ ಮಾಡುವ ಇರಾದೆಯಿಂದ ಭಂಡಾರದ ಸ್ಥಿರಚರ ಆಸ್ತಿಗಳನ್ನು ಅಡವು, ಯಾ ಗರಾಧಾರೆಯಿಂದ ಪರಾಧೀನ ಮಾಡುವರೆ ನಿಶ್ಚೈಸಿರುತ್ತಾರೆಂದು ತಿಳಿದು ಬರುವುದರಿಂದಲೂ, ಈಗ ಅಂಥಾ ಹಣದ ಆವಶ್ಯಕತೆಯಿಲ್ಲದಿರುವದರಿಂದಲೂ [illegible]ದರ ಆಸ್ತಿಗಳನ್ನು ಮೇಲ್ಕಾಣಿಸಿದ ರೀತಿ[illegible] ಯಾವ ತರದ ಪರಾಧೀನತೆ ವಗೈರೆಗಳ ಮೂಲಕ ಪಡೆದುಕೊಂಡರೆ ಭಂಡಾರವು ಅಂಥಾ ಸಾಲಗಳಿಗೆ ಜೋಣೆಯಾಗಲಿಕ್ಕಿಲ್ಲವೆಂತಲೂ ವ, ಅಂಥಾ ಪರಾಧೀನಗಳು ಸಿಂಧುವಾಗತಕ್ಕವುಗಳಲ್ಲವೆಂತಲೂ ಈ ಮೂಲಕ ಸರ್ವರಿಗೆ ತಿಳಿಸೋಣಾಗಿಯದೆ

ಪರಮೇಶ್ವರ ಯು ಸೋಮಪ್ಪ ಸುಬ್ಬ ಯು ಮಂಜಪ್ಪ ಯು ಕೊಗರಪ್ಪ ಯು ವೀರಪ್ಪ ಯು ಮಂಜಪ್ಪ ಯಸ್ ಮಂಜಪ್ಪ ಯು ಸುಂದರ ಯು ಕುಮಾರಯ್ಯ ಯು ಬಸಪ್ಪ ಯು ಜಾಮಪ್ಪ ಯು ಚಂದಪ್ಪ ಯು ಗ ತ್ಯಪ್ಪ ಯು ಶ್ರೀನಿವಾಸ ಯು. ಐತಪ್ಪ ಯು ರಾಮಪ್ಪ ಯು. ಸೋಮ ಪಕೀರ ಯು ಪರಮೇಶ್ವರ ಭವಾನಿಶಂಕರ ಉಚ್ಚಿಲ ಯು ಮಂಜಪ್ಪ ಯು ಬಿ ಪರಮೇಶ್ವರ ಪರಮೇಶ್ವರ ಜಾಮ, ಯು ಬೀರಪ್ಪ ಯು ಕಂಣ ಪರಮೇಶ್ವರ ಪಕೀರ ಯು ಪರಮೇಶ್ವರ ಯು ಕಂಞಿಲಿ ಯು ಜಾಮ ಯು ಸೋಮ ನೆತ್ತಿಲಕುಮಾರ, ಲಕ್ಷ್ಮಣ ಚನಿಯಪ್ಪ ಬಸಪ್ಪಬೋಮ. ಕೊರಗ, ಕೆ ಎಮ್ ಗುಡ್ಡ ಯು ಕೆವರಪ್ಪ.

ಸಂಕ್ಷೇಪವಾರ್ತೆ.

ಬಂಗಾಳದ ಗವರ್ನರರು ಗೌರವ (ಆನರರಿ) ಶಸ್ತ್ರ ಸೆಂಟರಾಗಿ ನಮ್ಮ ಸೈನ್ಯದಲ್ಲಿ ಸೇರಿಸಲ್ಪಟ್ಟಿರುವರು.

ಕೊಮನ್ಸ್ ಸಭಾ ಸಂದರ್ಭದಲ್ಲಿ ನವೆಂಬರ ತಾ. ೧೬ರಲ್ಲಿ ಶಸ್ತ್ರ ಸನ್ಯಾಸದ ವಿಷಯದಲ್ಲಿ ಚರ್ಚೆಯಾಗಲಿದೆ.

ರೈತರಿಗೆ ಆಸ್ತಿ ಅಡಮಾನದ ಮೇಲೆ ಸಾಲಕೊಡುವ ಬಗ್ಗೆ ಮಧ್ಯ ಪ್ರಾಂತ್ಯದ ಸರಕಾರವು ಬರುವ ವರ್ಷ ಹತ್ತು ಬ್ಯಾಂಕುಗಳನ್ನು ಸ್ಥಾಪಿಸುವುದಾಗಿ ತಿಳಿದು ಬಂದಿದೆ.

'ಕಮ್ಯೂನಿಷ್ಟ'ರಾಗಿ ಒಟ್ಟಿಗೆ ಜೈಲಿನಲ್ಲಿ ಆರು ವರ್ಷಗಳ ಕಾರಾಗೃಹವಾಸವನ್ನನುಭವಿಸುತ್ತಿರುವ ಎಸ್. ಎಸ್ ಜೋಯರ ಆಸ್ವಸ್ಥವು ಗಾಬರಿಗೆ ಕಾರಣವಾಗಿರುವ ಕಾರಣ ಅವರ ಬಿಡುಗಡೆಗಾಗಿ ಪ್ರಾರ್ಥಿಸಿ, ಬೊಂಬಾಯಿಯ ಟ್ರೇಡ್ ಯೂನಿಯನ್‌ನವರು ಸರಕಾರಕ್ಕೆ ಪ್ರಚಂಡ ಅರ್ಜಿಯೊಂದನ್ನು ಕಳುಹುವರಾಗಿ ವಾರ್ತೆ

ವಿಯೆನ್ನಾ ಬಳಿ ಪುನಃ ನಾಝಿಗಳು ಒಬ್ಬ ಹಳ್ಳಿಗನ ಕೊಲೆಮಾಡಿರುವರು

ಹಿಂದೀ ಗರ್ಲ್ ಗೈಡುಗಳು ಪಶ್ಚಿಮಾಫ್ರಿಕದ ಸಂಚಾರವನ್ನು ಈ ವಾರ ಮುಗಿಸುವರು.

ಲಂಡನಿನ ಬಂದರಿನ ಬಿಡಾವಣೆಯ ಆಲೋಚನೆಯಾಗುತ್ತಿದೆ ಕಳೆದ ೨೪ ವರ್ಷಗಳಲ್ಲಿ ಈ ಬಗ್ಗೆ ೧೬,೦೦೦,೦೦೦ ಪವನು ವೆಚ್ಚವಾಗಿದೆ ಇನ್ನೂ ೧೫ ೦೦೦ ೦೦೦ ಪವನನ್ನು ಬರುವ ವರ್ಷ ವೆಚ್ಚ ಮಾಡುವರಂತೆ

ಸ್ವಿಟ್ಸರ್ ದ್ವೀಪದಲ್ಲಿ ಅಪೂರ್ವ ಸುಂಟರಗಾಳಿಯ ದೆಸೆ ಒಬ್ಬ ಮನುಷ್ಯನು ಹಾರಿಸಲ್ಪಟ್ಟು ಸಮುದ್ರಕ್ಕೆ ಬಿದ್ದು ಮುಳುಗಿ ಮೃತನಾದನು ಮತ್ತೆಷ್ಟೋ ಹಾನಿಗಳಾಗಿವೆ

ಒಂದ ಒಕ್ಕ ಜನರ ಭಾಗವಹಿಸಿ, ಲಾಹೋರ[illegible]ಲ್ಲಿ ದಸರಾ ಮಹೋತ್ಸವವು ಯಾವ ಗಲಭೆಯೂ ಇಲ್ಲದೆ ಶಾಂತವಾಗಿ ನೆರವೇರಿತು.

ಟಪ್ಪಾಲು ವಿಮಾನಗಳಲ್ಲಿ – ಟಪಾಲು ಸಾಗಿಸುವುದೀಗ ಹೆಚ್ಚಾಗಿದೆ. ಸಪ್ಟಂಬರ ತಿಂಗಳಿಗೆ ಅಂತ್ಯವಾಗುವ ೬೨ ವರ್ಷದಲ್ಲಿ ೬೦,೨೩೦ ರಾತ್ಲ ಟಪ್ಪಾಲು ಒಯ್ಯಲ್ಪಟ್ಟಿವೆ.

೧೧,೦೦೦ ಮಂದಿ ಹಿಂದೀಯರು ಕಳೆದ ಸಪ್ಟಂಬರ ತಿಂಗಳಲ್ಲಿ ಮಲಯ ದ್ವೀಪಗಳಿಗೆ ಹೋಗಿ ನೆಲೆಸಿರುವರು

ಮಂಗಳೂರು.

ಇದೇ ತಿಂಗಳ ತಾ. ೨೮ನೇ ಆದಿತ್ಯವಾರ ಪ್ರಾತಃಕಾಲ ಘಂಟೆ ೯ಕ್ಕೆ ಶಿವ ಆಯುರ್ವೇದ ಮಂದಿರದಲ್ಲಿ ಸಮಾಜದ ಎಲ್ಲಾ ಸದಸ್ಯರ ಒಂದು ವಿಶೇಷ ಸಭೆಯು ಜರಗಲಿದೆ. ಕಾರ್ಯನಿರ್ವಾಹಕ ಕಮಿಟಿಯು ತಾ. ೨೧ರಲ್ಲಿ ನಿಶ್ಚಯಿಸಿದ ಕೆಲವು ವಿಷಯಗಳಿಗೆ ಎಲ್ಲಾ ಸದಸ್ಯರ ಸಮ್ಮತಿ ಬೇಕಾಗಿರುವುದರಿಂದ ಈ ತೀರ್ಮಾನದ ಬಗ್ಗೆ ಸರ್ವ ಸದಸ್ಯರೂ ತಪ್ಪ ಸಮಯಕ್ಕೆ ಬರಬೇಕಾಗಿ ಕಾರ್ಯದರ್ಶಿಯವರ ವಿನಂತಿಯಾಗಿದೆ.

ಇದೇ ತಿಂಗಳ ತಾ. ೧೪ಕ್ಕೆ ಬಡವರ ಬಂಧು ಕಾರ್ಯಾಲಯದಲ್ಲಿ ತೆರೆದ ಹಿಂದೀ ಕ್ಲಾಸುಗಳಲ್ಲಿ ಈಗಲೇ ಸುಮಾರು ೫೦ ಮಂದಿ ವಿದ್ಯಾರ್ಥಿಗಳು ಹಿಂದೀ ಕಲಿಯುತ್ತಿದ್ದಾರೆ. ಇದೇ ಬರುವ ನವಂಬರ ೧ನೇ ತಾರೀಕಿನಿಂದ ಪ್ರತಿ ವಾರದಲ್ಲಿ ೪ ದಿವಸ ಸಾಯಂ. ೬॥ ತನಕ 'ರಾಷ್ಟ್ರಭಾಷಾ' ಕ್ಲಾಸುಗಳು ಪ್ರಾರಂಭಿಸುವುವು. ಇದಲ್ಲದೆ ಮಹಿಳೆಯರಿಗಾಗಿಯೂ ಪ್ರತ್ಯೇಕ ಕ್ಲಾಸು ನಡಿಸಲಾಗುವುದು. ಇದೇ ಬರುವ ೧೯೩೫ನೇ ಫೆಬ್ರುವರಿ ತಾ. ೧೭ಕ್ಕೆ ಜರಗುವ ಪರೀಕ್ಷೆಗೆ ಕೂಡುಕೊಳ್ಳಬೇಕೆಂದವರು ಶೀಘ್ರವಾಗಿ ತಂತಮ್ಮ ಹೆಸರುಗಳನ್ನು ಕೊಡಬೇಕಾಗಿ ವ್ಯವಸ್ಥಾಪಕರ ಅಪೇಕ್ಷೆ.

ರಾವ್‌ಬಹದ್ದೂರ್ ಎಸ್. ಎಚ್. ಸುವರ್ಣ, ಎಡ್ವೋಕೇಟ್ ಇವರ ಸಹೋದರ ಶ್ರೀಯುತ ಶಾರದಾಬಾಯಿ ಕಲ್ಯಾಣ್ ಬಿ.ಎ., ಇವರು ಈ ವರ್ಷ ಒನರರಿ ಮೇಜಿಸ್ಟ್ರೇಟರಾಗಿ ನೇಮಕಹೊಂದಿರುವರೆಂದು ತಿಳಿದು ಬರುತ್ತದೆ. ಬಿಲ್ಲವ ಸಮಾಜದ ಮಹಿಳೆಯರಲ್ಲಿ ಈ ಪದವಿಯನ್ನು ಇವರು ಪ್ರಥಮದ್ವಾಗಿ ಪಡೆದಿರುವರೆಂಬುದು ಸಮಾಜಕ್ಕೊಂದು ಭೂಷಣವಾಗಿದೆ.

ಶ್ರೀಯುತ ಮಂಜೇಶ ತಲವಾರ್ ಎಡ್ವೊಕೇಟ್ ಇವರ ಸಹೋದರರಾದ ಶ್ರೀಯುತ ಪುರುಷೋತ್ತಮ ತಲವಾರ್‌ರವರು ನೆಲ್ಲೂರಿನಲ್ಲಿ ತನ್ನ ಒಂದು ವರ್ಷದ ಸಬ್ ಇನ್ಸ್‌ಪೆಕ್ಟರಿ ತರಬೇತು ಮುಗಿಸಿ, ಇದೇ ತಾ. ೨೧ರಲ್ಲಿ ತಲಚೇರಿಯಲ್ಲಿ ಸಬ್ ಇನ್ಸ್‌ಪೆಕ್ಟರ್ ಚಾರ್ಜನ್ನು ವಹಿಸಲಿರುವರಾಗಿ ತಿಳಿದುಬರುತ್ತದೆ. ಶ್ರೀಯುತರು ನೆಲ್ಲೂರಿನಲ್ಲಿ ನಡೆದ ಕೆಲವು ಕ್ರಿಕೆಟ್ ಪಂದ್ಯಾಟಗಳಲ್ಲಿ ಆಡಿ ಅಲ್ಲಿಯ ದಾಖಲೆಯನ್ನು (Record) ಮೀರಿಸಿದ್ದಲ್ಲದೆ ಅನೇಕ [illegible]ಗಳನ್ನು ಪಡೆದಿರುತ್ತಾರೆ. ಬಿಲ್ಲವ ಸಮಾಜದ ಕಾರ್ಯದಲ್ಲಿ ಉತ್ಸಾಹಿಗಳಾಗಿಯೂ ಇರುವರು.

ಶ್ರೀಕೃಷ್ಣ ಸಿನೆಮಾದಲ್ಲಿ ಧ್ವನಿಯುಕ್ತವಾದ ಪ್ರಖ್ಯಾತ 'ಬೆನ್‌ಹರ್' ಚಿತ್ರವು ಇದೇ ತಾ. ೨೬ರಿಂದ ಪ್ರದರ್ಶಿಸಲ್ಪಡುವದಾಗಿ ಆಡಳಿತಗಾರರು ತಿಳಿಸುತ್ತಾರೆ.

ಕಳೆದ ಆದಿತ್ಯವಾರ ಶ್ರೀ ಸತ್ಯೋದಯ ಸಂಘದಲ್ಲಿ ವಿದ್ವಾನ್ ಯು. ರಾಮಕೃಷ್ಣನವರು ಭಕ್ತಿಯ ಕುರಿತು ಅರ್ಥಗರ್ಭಿತವಾದ ಭಾಷಣವಿತ್ತರು.

"ಆರ್ಮಿಸ್ಟೈಸ್" (ಮಹಾಯುದ್ಧವು ಮುಗಿದ) ದಿನವು ವರ್ಷಂಪ್ರತಿಯಂತೆ, ಇದೇ ನವಂಬರ ತಾ. ೧೧ರಲ್ಲಿ ಆಚರಿಸಲ್ಪಡುವುದು. ಬ್ರಿಟಿಷ್ ಸಾಮ್ರಾಜ್ಯದಲ್ಲೆಲ್ಲ ೧೧ ಘಂಟೆಗೆ, ೨ ನಿಮಿಷಗಳ ಮೌನವನ್ನಾಚರಿಸಲಾಗುವುದು.

ಸೇಲಮಿನ ಡಿಸ್ಟ್ರಿಕ್ಟ್ ಮುನ್ಸೀಫರಾಗಿರುವ ಶ್ರೀ ಎಚ್. ಎಸ್. ರಾಮಸ್ವಾಮಿ ಅಯ್ಯರರು ಇಲ್ಲಿಯ ಸಬ್ ಜಡ್ಜರಾಗಿ ನೇಮಕ ಹೊಂದಿರುವರು.

ಹಾಸನದ ಕ್ರಿಕೆಟ್ ಸಂಗಡದವರು ಮಂಗಳೂರಿಗೆ ಬಂದಿದ್ದು, ಕಳೆದ ಶನಿವಾರ ಇಲ್ಲಿಯ ಸೈಂಟ್ ಎಲೋಶಿಯಸ್ ಕೊಲೇಜಿನ ಕ್ರಿಕೆಟ್ ಸಂಗಡದೊಡನೆ ಪಂದ್ಯಾಟ ಮಾಡಿದರು.

ಶ್ರೀ ಸಾಹುಕಾರ ವೆಂಕಟೇಶ ಪೈ, ಬ್ಯಾಂಕರ್ ಇವರೂ, ಶ್ರೀ ಎ. ಕೃಷ್ಣಾಜಿರಾವ್ ಇವರೂ ಇಲ್ಲಿಯ ಬೆಂಚ್ ಮೆಜಿಸ್ಟ್ರೇಟರಾಗಿ ನೇಮಕಪಟ್ಟಿರುವರು.

"ಬಾಂಧವ ಬಳಗ"ದವರ ವಾರ್ಷಿಕ ಸಭೆಯು ಕೆನರಾ ಹೈಸ್ಕೂಲಿನಲ್ಲಿ ಕಳೆದ ಶನಿವಾರ ಸಾಯಂಕಾಲ ಜರಗಿ, ಶ್ರೀ ಎಮ್. ಎಸ್. ಕಾಮತರವರಿಂದ 'ಕಾವ್ಯ' ಎಂಬ ವಿಷಯದನ್ನೆತ್ತಿ ಭಾಷಣವಾಯಿತು.

ಇಲ್ಲಿಯ ಪುತ್ತೂರ್ಕರ ಗಲ್ಲಿಯಲ್ಲಿ ವಾಸಿಸುತ್ತಿದ್ದ ಶಂಕರ ಎಂಬ ಹೆಸರಿನ ದರ್ಜಿಯು ಕೆಲಕಾಲದಿಂದ ಕ್ಷಯರೋಗ ಪೀಡಿತನಾಗಿದ್ದು, ಕಳೆದ ಶನಿವಾರ ಬೆಳಗಿನ ಜಾವದಲ್ಲಿ ಕಾಲವಾದನು. ಆತನ ಪತ್ನಿಯು, ಪತಿಯ ಮರಣದ ದುಃಖದಿಂದ ಆಗಲೇ ಬಾವಿಗೆ ಹಾರಿ ಆತ್ಮಹತ್ಯೆ ಮಾಡಿಕೊಂಡಳು. ಆಕೆಯ ಶವವನ್ನು ಬೆಳಗ್ಗೆ ಸೂರ್ಯೋದಯದ ನಂತರ ತೆಗೆದ ಪ್ರಯತ್ನವಾಯಿತು. ಬಾವಿಗೆ ಇಳಿದ್ದವರಲ್ಲೊಬ್ಬನು, ಶವದ ಕುತ್ತಿಗೆಯಲ್ಲಿದ್ದ ಒಂದು ಆಭರಣವನ್ನು ಕದ್ದು, ತನ್ನ ಮತ್ತೊಬ್ಬ ಸ್ನೇಹಿತನೊಡನೆ ಕೊಟ್ಟನಂತೆ. ಈ ಕಳವು ಅಲ್ಲಿ ಪತ್ತೆಯಾಯಿತು. ಕಳ್ಳನು ಅಪರಾಧವನ್ನೊಪ್ಪಿಕೊಂಡನಂತೆ. ಆಭರಣವೂ ದೊರೆಯಿತು. ಇಬ್ಬರನ್ನೂ ಕೈದುಮಾಡಿ ಪೋಲೀಸ್ ಸ್ಟೇಶನಿಗೊಯ್ದರು.

ನಗರ್ಕರ್ಸ್ ಬ್ಯಾಂಕ್ ಲಿಮಿಟೆಡ್, ಎಂಬ ಹೆಸರಿನಿಂದ ಹೊಸ ಬ್ಯಾಂಕು ಒಂದು, ರಥಬೀದಿಯಲ್ಲಿನ ಮೆಸ್ಸರ್ಸ್ ನಗರ್ಕರ್ ಎಂಡ್ ಸನ್ಸ್ ಇವರ ಅಂಗಡಿಯ ಮಹಡಿಯ ಮೇಲೆ, ಇದೇ ಕಳೆದ ತಾ. ೨೨ನೇ ಸೋಮವಾರ ತೆರೆಯಲಾಗಿದೆ. ಶ್ರೀ ನಗರ ನರಸಿಂಹ ಶೆಣೈಯವರೇ ಇದರ ಮೆನೇಜಿಂಗ್ ಡೈರೆಕ್ಟರರು

ಶ್ರೀ ವೆಂಕಟ್ರಮಣ ದೇವಾಲಯದ ಮುಂದಿನ ಹೊಸ ರಸ್ತೆಯ ಕಾಮಗಾರಿಯು ಹೇಗೂ ಮುಗಿಯಿತು. ಭವಂತೀಶ್ವರ ಗಣಪತಿ ದೇವಸ್ಥಾನದ ಕೇರಿಗಳು ಬಂದು ಕೂಡುವಲ್ಲಿ ಬಲು ಇಕ್ಕಟ್ಟಾಗಿದ್ದ ಸ್ಥಳವೀಗ ಈ ಹೊಸ ರಸ್ತೆಯ ದೆಸೆಯಿಂದ ವಿಶಾಲವಾಗಿ, ಗಾಡಿ ಓಡಾಡುವವರಿಗೂ, ಜನರಿಗೂ ಸೌಕರ್ಯ ಹೆಚ್ಚಿಸಿದೆ. ಇಲ್ಲಿ ನಡುವೆ ಒಂದು ವಿದ್ಯುದ್ದೀಪವನ್ನು ಇಡಿಸುವುದುತ್ತಮವೆಂದು ಹಲವರ ಅಭಿಪ್ರಾಯ.

ಇದೇ ಕಳೆದ ಸೋಮವಾರ ಸೈಂಟ್ ಎಲೋಶಿಯಸ್ ಕೊಲೇಜಿನ ಕನ್ನಡ ಪಂಡಿತರಾದ ಶ್ರೀ ಮುಳಿಯ ತಿಮ್ಮಪ್ಪಯ್ಯ ವಿದ್ವಾನ್‌ರವರು, ಸ್ಟುಡೆಂಟ್ಸ್ ಯೂನಿಯನ್ನಿನ ಆಶ್ರಯದಲ್ಲಿ ಥಿಯೋಸೋಫಿಕಲ್ ಲೋಜಿನ ಸಭಾಸದನದಲ್ಲಿ "ಪಂಪಭಾರತದ ಕರ್ಣ" ಎಂಬ ವಿಷಯವನ್ನೆತ್ತಿ ಭಾಷಣಮಾಡಿದರು.

ಬಾಸೆಲ್ ಮಿಶ್ಯನು ನಮ್ಮ ಜಿಲ್ಲೆಗೆ ಬಂದು ನೆಲಸಿ ನೂರು ವರುಷಗಳಾದುವು. ಇದರ ಸ್ಮಾರಕವಾಗಿ, ಶತಸಾಂವತ್ಸರಿಕೋತ್ಸವವು ಕಳೆದ ಶನಿವಾರ ಜರಗಿತು. ಬಾಸೆಲ್ ಮಿಶ್ಯನಿನ ಪ್ರಚಾರಕರು ಬಂದಿಳಿದ ಸ್ಥಳ (ಬೋಳೂರಿನಲ್ಲಿ ಈಗ "ಕೊಮನ್‌ವೆಲ್ತ್ ಟೈಲ್ ವರ್ಕ್ಸ್" ಇರುವಲ್ಲಿ) ಧ್ವಜ ಪತಾಕೆಗಳಿಂದಲಂಕರಿಸಿದ್ದರು. ಪ್ರಾತಃ ಸ್ನಾತಕರೆಲ್ಲ ಅಲ್ಲಿ ಮೊದಲು ನೆರೆದು, ಪ್ರಾರ್ಥನೆಯಾದ ನಂತರ, "ಕೊಮನ್‌ವೆಲ್ತ್ ಟೈಲ್ ವರ್ಕ್ಸ್"ನ ಮಾಲೀಕರಾದ ಶ್ರೀ ಸುಜೀರ ಕೇಶವನಾಯ್ಕ ಇವರು ಜರ್ಮನಿಯಿಂದ ಬಂದಿದ್ದ ಮಿ॥ ವರ್ ದೊರೆಗಳವರಿಗೆ ಒಂದು ಬೆಳ್ಳಿಯ ತಟ್ಟೆಯನ್ನು ಉಡುಗೊರೆಯಾಗಿ ಕೊಟ್ಟು ಬಳಿಕ, ಮೆರವಣಿಗೆಯು ಬಾಸೆಲ್ ಮಿಶ್ಯನ್ ಬುಕ್ ಡಿಪೋವಿಗೆ ಬಂದು ಸೇರಿ, ಅಲ್ಲಿಂದ ಕವಲುಗಳಾಗಿ, ಆವರವರು ತಂತಮಗೆ ಸಂಬಂಧಪಟ್ಟ ಇಗರ್ಜಿಗಳಿಗೆ ಹೋದರು. ಇಗರ್ಜಿಯಲ್ಲಿ ಇವಾಂಜಲಿಕಲ್ ಮಿಶ್ಯನ ಪೂರ್ವಚರಿತ್ರ, ಅದು ದಕ್ಷಿಣ ಕನ್ನಡಕ್ಕೆ ಬಂದು ನೆಲೆ ಮಾಡಿದ ಪ್ರಚಾರ ಕಾರ್ಯದ ವಿವರ, ಇವುಗಳೆಲ್ಲ ನಡೆದು, ಪ್ರೊತೆಸ್ತಾಂತ ಮತವು ಇನ್ನಷ್ಟು ಪ್ರಸಾರಗೊಂಡು ಅಭಿವೃದ್ಧಿ ಹೊಂದುತ್ತಿರಲೆಂಬ ಬಗೆಗೆ ಪ್ರಾರ್ಥನೆಗಳಾದುವು. (ಮಂಗಳೂರು ನಗರವು, ಬಾಸೆಲ್ ಮಿಶ್ಯನಿನ ಮುಖ್ಯ ಠಾಣೆಯಾಗಿದೆ. ಈ ಸಮಾರಂಭಕ್ಕೆ ಕರ್ನಾಟಕದ ಎಲ್ಲ ಕಡೆಗಳಿಂದಲೂ ಪ್ರೊತೆಸ್ತಾಂತ ಪ್ರತಿನಿಧಿಗಳು ಬಂದಿದ್ದರು.)

ಇದೇ ತಾ. ೨೦ಕ್ಕೆ ಅಂತ್ಯವಾಗುವ ಒಂದು ವಾರದ ನಮ್ಮ ನಗರದ ಆರೋಗ್ಯದ ವರದಿ:— ಮರಣ ೧೫; ಜನನ ೩೯. (ಮರಣಗಳ ಪೈಕಿ ಸಿಡುಬು ೧; ಕ್ಷಯ ೨)

ರೈಲುಬಂಡಿಗಳ ಸಮಯ.

	ಹೊರಡುವ ಸಮಯ	ಇಲ್ಲಿಗೆ ತಲಪುವ ಸಮಯ
ಮೈಲ್	ಬೆಳಗ್ಗೆ ೯.೫೫	ಸಾಯಂ ೪.೨೦
ಮಿಕ್ಸೆಡ್	,, ೬	ರಾತ್ರಿ ೮.೪೫
ಪೆಸೆಂಜರ್	ಅಪರಾಹ್ನ ೧೨.೫೫	ಅಪರಾಹ್ನ ೨.೫೦
ಶಟ್ಲ್	ಸಾಯಂ ೫.೨೫	ಬೆಳಗ್ಗೆ ೯.೪೦

ಹೊಸ ಸರ್ವೀಸುಗಳು.

ಕಾಞ್ಞಂಗಾಡ್	ಬೆಳಗ್ಗೆ ೮.೪೦,	
ಮರಳಿನ ಬಂಡಿ		ಅಪರಾಹ್ನ ೧.೨೨,
ಕಾಸರಗೋಡು	ಅಪರಾಹ್ನ ೩.೨೫,	
ಮರಳಿನ ಬಂಡಿ,		ಸಾಯಂ ೬.೧೫,

Notice.

As all the copies of our "Dasara Number 1934" have been sold out in a week, the Karnataka reading public are requested not to send any stamps asking for the same nor write to our Mangalore Office.

The Manager,
'Swadeshabhimani,'
Mangalore.

ತಾಲೂಕುಗಳಿಂದ.

ಕುಕ್ಕುಂದೂರು — ಇಲ್ಲಿಯ ಮಿಗಾರ್ ಹಾಯರ್ ಎಲಿಮೆಂಟರಿ ಶಾಲೆಯ ಶಿಕ್ಷಕವೃಂದ, ಶಾರದಾ ಪೂಜೆ ಮತ್ತು ವರ್ಧಂತ್ಯುತ್ಸವವು ತಾ. ೧೪ರಿಂದ ೧೮ರ ವರೆಗೆ ೫ ದಿವಸಗಳ ತನಕ ಸಂಭ್ರಮದಿಂದ ಜರಗಿದುವು. ತಾ. ೧೭ರ ದಿನ ನಡೆದ ವರ್ಧಂತಿ ಉತ್ಸವದಂದು ಸ್ಥಳೀಯ ಬೋರ್ಡ್ ಹೈಸ್ಕೂಲ್ ಮುಖ್ಯೋಪಾಧ್ಯಾಯರಾದ ಶ್ರೀ ಬಿ. ಬಾಲಕೃಷ್ಣ ಪುರಾಣಿಕ, ಬಿ.ಎ., ಎಲ್.ಟಿ. ಯವರು ಅಧ್ಯಕ್ಷಸ್ಥಾನವನ್ನಲಂಕರಿಸಿದ್ದರು. ಮಾತ್ರವಲ್ಲ, ಮಿ. ರಫಿದ್ದೀನ್ ಅಹಮ್ಮದ್ ಸಾಹೇಬ, ಬಿ. ಬಿ. ಡೊಮೆಲ್ಲೊ, ಶ್ರೀಯುತರುಗಳಾದ ಎಸ್. ಎಸ್. ಕೆ. ಬಿಜೂರಕರ, ಗಂಗಾಚಾರ್, ನರಸಿಂಹ ಪುರಾಣಿಕ, ಬಿ. ಸುಬ್ಬರಾವ್, ಕಟಪಾಡಿ ಶ್ರೀನಿವಾಸ ಶೆಟ್ಟಿ, ಬಿ. ಸುಬ್ರಾಯ ಬಾಳಿಗರವರು ಈ ಐದು ದಿನಗಳಲ್ಲಿ ನಡೆದ ವಿವಿಧ ಕಾರ್ಯಕ್ರಮಗಳ ಅಧ್ಯಕ್ಷರಾಗಿ ಅಥವಾ ಭಾಷಣಕಾರರಾಗಿ ಉತ್ಸವದ ಸಫಲತೆಗೆ ವಿಶೇಷರೀತಿಯಿಂದ ಕಾರಣೀಭೂತರಾಗಿರುವರು.

ಕಾರ್ಕಳ — ಇಲ್ಲಿಯ ಶ್ರೀ ವೆಂಕಟ್ರಮಣ ಹಾಯರ್ ಎಲಿಮೆಂಟರಿ ಶಾಲೆಯ ಶಾರದಾ ಪೂಜೋತ್ಸವವು ತಾ. ೧೬-೧೦-೩೪ರ ದಿನ ಉಪಾಧ್ಯಾಯರ ಹಾಗೂ ವಿದ್ಯಾರ್ಥಿಗಳ ವಿಶೇಷ ಉತ್ಸಾಹದಿಂದ ಸಂಭ್ರಮಪೂರ್ವಕವಾಗಿ ಶಾಲಾಮಂದಿರದಲ್ಲಿ ನಡೆಯಿತು. ರಾ॥ ಕುಕ್ಕುಂದೂರು ಸುಬ್ರಾಯ ಕಾಮತ್, ಕೆ. ಬಿ. ಕಾಮತ್ ಎಮ್. ಎ. ಬಿ. ಎಲ್., ಕೆ. ವಾಸುದೇವ ಕಿಣಿ ಬಿ. ಎ., ಎಲ್. ಟಿ., ಮೊದಲಾದವರು ಬಂದು ಶಾಲೆಯ ಅಭಿವೃದ್ಧಿಯನ್ನು ಬಯಸಿಯೂ ವಿದ್ಯಾರ್ಥಿಗಳನ್ನು ಆಶೀರ್ವದಿಸಿಯೂ ದೇವಿಯ ಕೃಪಾಕಟಾಕ್ಷಕ್ಕೆ ಪಾತ್ರರಾಗಿರುವರು.

ಉಡುಪಿ — ಇಲ್ಲಿಯ ಮಿತ್ರಮಂಡಳಿಯವರು ಸಾಹಿತ್ಯೋತ್ಸವದ ಸಂದರ್ಭದಲ್ಲಿ ಏರ್ಪಡಿಸಿದ ಸಣ್ಣ ಕತೆಗಳ ಸ್ಪರ್ಧೆಯಲ್ಲಿ ಶ್ರೀ ಕೆ. ಕೇಶವ ಕಾಮತ್, ಉಡುಪಿ, ಇವರಿಗೆ "ದೇಶಪಾಂಡೆ, ಎಮ್. ಎ." ಎಂಬ ಕಥೆಗೂ, ಏಕಾಂಕ ನಾಟಕ ಸ್ಪರ್ಧೆಯಲ್ಲಿ ಶ್ರೀ ಶಿಲಾನದಿ ರಾಮಚಂದ್ರ ನಾಯಕ, ಬಿ.ಎ., ಇವರ "ಧನದಾಸ" ಎಂಬ ನಾಟಕಕ್ಕೂ ರಜತ ಪದಕಗಳು ಬಹುಮಾನವಾಗಿ ಕೊಡಲ್ಪಡುವುವೆಂದು 'ಮಿತ್ರಮಂಡಳಿ'ಯವರು ತಿಳಿಸುತ್ತಾರೆ.

ಕರ್ನಾಟಕ ಕೆಮಿಕಲ್ ಎಂಡ್ ಫಾರ್ಮಸ್ಯುಟಿಕಲ್ ವರ್ಕ್ಸ್, ಲಿಮಿಟೆಡ್, ಇವರ ಕಾರ್ಖಾನೆಯಲ್ಲಿ ತಯಾರಾಗತಕ್ಕ ಎಲ್ಲಾ ಔಷಧಗಳನ್ನು ವಿಕ್ರಯಿಸುವರೆ ಕಳೆದ ವರ್ಷ ಇವರು ಉಡುಪಿ ತಾಲೂಕು ಕಛೇರಿಯ ಬಳಿಯಲ್ಲಿ ಇವರ ಕಾರ್ಖಾನೆಯ ಇದಿರು ಅಂಗಡಿಯನ್ನು (Show Room) ತೆರೆದಿರುವುದರಿಂದ ಇವರ ವ್ಯಾಪಾರದ ಮೇಲೆ ಜನರಿಗೆ ವಿಶ್ವಾಸವು ಹೆಚ್ಚುತ್ತಾ ಹೋಗಿ ಇವರ ಗಿರಾಕಿಗಳ ಸಂಖ್ಯೆಯು ದಿನೇ ದಿನೇ ವೃದ್ಧಿಯಾಗುತ್ತಾ ಬಂದಿದೆಯಾದರೂ ಈ ವರೆಗೆ ರೋಗಿಗಳನ್ನು ಪರೀಕ್ಷಿಸಿ ಔಷಧವನ್ನು ಕೊಡುವಂಥಾ ಯೋಗ್ಯ ವೈದ್ಯರ ಅಭಾವದಿಂದ ಇವರ ಗಿರಾಕಿಗಳಿಗೆ ತುಂಬಾ ತೊಂದರೆಯು ಉಂಟಾಗುತಿತ್ತು. ಈ ಕುಂದನ್ನು ಹೋಗಲಾಡಿಸುವರೆ ಇವರು ಈಗ ಎಲ್. ಐ. ಎಮ್. ಪಾಸಾದ ಡಾಕ್ಟರರನ್ನು ಈ ಕೆಲಸಕ್ಕಾಗಿ ನೇಮಕ ಮಾಡಿರುತ್ತಾರೆಂದೂ ಇವರು ಏನೂ ಚಾರ್ಜು ಮಾಡದೆ ರೋಗಿಗಳನ್ನು ಪರೀಕ್ಷೆಮಾಡಿ ಅವರಿಗೆ ತಕ್ಕುದಾದ ಔಷಧವನ್ನು ತಿಳಿಸುತ್ತಾರೆಂದೂ ಇದಲ್ಲದೆ ಏನೂ ಅನುಕೂಲ ಇಲ್ಲದ ಬಡಜನರಿಗೆ ಮದ್ದನ್ನು ಧರ್ಮಾರ್ಥವಾಗಿಯೇ ಕೊಡುವ ವ್ಯವಸ್ಥೆಯನ್ನು ಮಾಡಿರುತ್ತಾರೆಂದೂ ತಿಳಿದುಬರುತ್ತದೆ. ಆದುದರಿಂದ ಸರ್ವರೂ ಇದರ ಪ್ರಯೋಜನವನ್ನು ಪಡೆದು, ಇವರ ಕಾರ್ಯವನ್ನು ಸಫಲಗೊಳಿಸಬೇಕಾಗಿದೆ ಎಂದೊಂದು ವಾರ್ತೆ.

ಪೆರ್ಡೂರು — ಇಲ್ಲಿಯ ದೇವಸ್ಥಾನದ ಆಡಳಿತೆಯ ಸುವ್ಯವಸ್ಥೆಯ ಬಗ್ಗೆ ಮದ್ರಾಸು ಹಿಂದೂ ರಿಲಿಜಿಯಸ್ ಬೋರ್ಡಿನವರು ಸ್ಕೀಮಿನ ಹನ್ನೆರಡು ಮತ್ತು ಎರಡನೇ ಕಲಂ ಪ್ರಕಾರ ಅಲಂಗಾರು ನಾರಾಯಣ ಹೆಗ್ಡೆ, ಪಾಮನ ಶೇಷಗಿರಿ ಮಲ್ಯ ಮತ್ತು ಅನಂತಯ್ಯ ಹೆಬ್ಬಾರರನ್ನು ನೇಮಿಸಿರುವರೆಂಬುದು ತುಂಬಾ ಸಂತೋಷಕರ.

ನಮ್ಮ ದಸರಾ ಸಂಚಿಕೆಯ ಪ್ರತಿಗಳೆಲ್ಲವೂ ಕಳೆದ ವಾರದೇ ಮಾರಾಟವಾಗಿ ಹೋದದ್ದರಿಂದ, ದಯಮಾಡಿ ಯಾರೂ ಆ ಸಂಚಿಕೆಯನ್ನಪೇಕ್ಷಿಸಿ ನಮಗೆ ಪತ್ರ ಬರೆಯಬಾರದಾಗಿಯೂ, ಅಂಚೆ ಟಿಕೇಟುಗಳನ್ನು ಕಳುಹಬಾರದಾಗಿಯೂ ವಿನಂತಿ.

ಮೆನೇಜರ್—
ಸ್ವದೇಶಾಭಿಮಾನಿ, ಮಂಗಳೂರು.

ಇವರು ದೇವಸ್ಥಾನದ ಪರವಾಗಿ ತುಂಬಾ ಕೆಲಸ ಮಾಡಿದವರಾಗಿರುತ್ತಾರೆ.

ಬೈಕಂಪಾಡಿ — ಇಲ್ಲಿಯ ಮಹಮ್ಮದಿ ಬೋರ್ಡು ಶಾಲೆಯಲ್ಲಿ ತಾ. ೧೫-೧೦-೩೪ನೇ ದಿನ "ಆರೋಗ್ಯ ಸಪ್ತಾಹ"ವನ್ನು ಜಿಲ್ಲಾ ಅಹಮ್ಮದ್ ಸಾಹೇಬರ ಅಧ್ಯಕ್ಷತೆಯಲ್ಲಿ ಬಹು ವಿಜೃಂಭಣೆಯಿಂದ ಜರಗಿಸಿದರು.

ಇಲ್ಲಿಯ ಕುಚ್ಚಿಕ್ಕೂರು ಕೋಡಿಗೆ ಸಂಕವಾಗುತ್ತಿದ್ದರೆ, ಶಾಲಾಮಕ್ಕಳಿಗಲ್ಲದೆ, ಆಸುಪಾಸು ಪತ್ತಾರು ಗ್ರಾಮಸ್ಥರಿಗೆ ಉಪಕಾರವಾಗುತ್ತಿತ್ತು; ಎಂದೊಂದು ವಾರ್ತೆ.

ಇಲ್ಲೊಂದು ಬಾಲಕಿಯರ ಶಾಲೆ ತೆರೆಯಲ್ಪಡುತ್ತದಂತೆ. ಬೇಗನೇ ತೆರೆದರೆ ತುಂಬಾ ಉಪಕಾರ.

ಪುತ್ತೂರು — ನವಂಬ್ರ ೧೫ನೇ ಪುತ್ತೂರು ರೂರಲ್ ಕ್ರೆಡಿಟ್ ಸಹಕಾರಿ ಸಂಘದ ರಜತೋತ್ಸವವು ಇದೇ ತಿಂಗಳ ತಾ. ೨೮ನೇ ಭಾನುವಾರ ಸಾಯಂಕಾಲ ೪ ಘಂಟೆಗೆ ಸಂಘದ ಭವನದಲ್ಲಿ ಜರಗುವುದು.

ಫಲಿಮಾರು — ಇದೇ ಕಳೆದ ತಾ. ೧೫ರಲ್ಲಿ ಇಲ್ಲಿಯ ಮಠದಲ್ಲಿ ಮಂಗಳೂರಿನ ಶ್ರೀ ಎಮ್. ವಾಸುದೇವ ಪ್ರಭು, ಎಮ್. ಎ., ಎಲ್. ಟಿ., ಇವರ ಕೊಳಲ ಗಾಯನವೂ, ಶ್ರೀ ನಾರಾಯಣ ಸ್ವಾಮಿಪಿಳ್ಳೆಯವರ ಫಿಡ್ಲ್ ವಾದನವೂ ನಡೆಯಿತು.

ಫರಂಗಿಪೇಟೆ:— ಈ ಸರ್ಕಲಿನ ಉಪಾಧ್ಯಾಯರ ಸಂಘದ ಜರುಗುವ ಮಾಸಿಕ ಸಭೆಯು ಇದೇ ತಾ. ೨೭-೧೦-೧೯೩೪ಕ್ಕೆ ಫರಂಗಿಪೇಟೆಯಲ್ಲಿ ಜರಗುವುದು.

ಇಲ್ಲಿಯ ಸೈಂಟ್ ಫಿಡಾಲಿಸ್ ಮೊನಸ್ಟ್ರಿಯ ೧೯ನೇ ವರ್ಧಂತಿ ಹಬ್ಬವು ತಾ. ೧೮-೧೦-೧೯೩೪ನೇ ದಿನ ಬಹು ವಿಜೃಂಭಣೆಯಿಂದ ಜರಗಿತು.

ಕಾಲಾವಧಿಯಂತೆ ಇಲ್ಲಿಯ ಶ್ರೀ ರಾಮಾ ಹಾ. ಎಲಿಮೆಂಟರಿ ಶಾಲೆಯಲ್ಲಿ ಶ್ರೀ ಶಾರದಾ ಪೂಜೆಯು ತಾ. ೧೪ರಿಂದ ೧೮ರ ವರೆಗೆ ಬಹು ವಿಜೃಂಭಣೆಯಿಂದ ಆಚರಿಸಲ್ಪಟ್ಟಿತು. ಮಕ್ಕಳ ವಿವಿಧ ಆಟಗಳು, ಸಂತೆಯ ದೃಶ್ಯ, ಆರೋಗ್ಯ ವ ಶಿಶುಪಾಲನೆಯ ಕುರಿತು ಉಪನ್ಯಾಸಗಳು ಇತ್ಯಾದಿ ಗ್ರಾಮಸ್ಥರ ಸಹಕಾರದಿಂದ ನಡೆಸಲ್ಪಟ್ಟಿತು.

ಪೆರ್ಲ — ಇಲ್ಲಿಯ ಶ್ರೀ ಸತ್ಯನಾರಾಯಣ ಹಾಯರ್ ಎಲಿಮೆಂಟ್ರಿ ಶಾಲೆಯಲ್ಲಿ ವರ್ಷಂಪ್ರತಿ ನಡೆಯತಕ್ಕ ಶ್ರೀ ಶಾರದಾ ಪೂಜೆಯು ತಾ. ೧೮ನೇ ಗುರುವಾರ ಬಹಳ ವಿಜೃಂಭಣೆಯಿಂದ ನಡೆಯಿತು. ಹಿಂದಿನ ರಾತ್ರಿ ಶಾಲಾ ಹುಡುಗರು 'ಕೃಷ್ಣ ಸಂಧಾನ'ವೆಂಬ ನಾಟಕವನ್ನು ಅಭಿನಯಿಸಿದರು. ಪ್ರಾತಃಕಾಲಕ್ಕೆ ಶ್ರೀ ಶಾರದಾ ಪೂಜೆಗೆ ಪ್ರಾರಂಭವಾಯಿತು. ಸುಮಾರು ಒಂಭತ್ತು ಗಂಟೆಗೆ ಶಾಲೆಯು ಜನರಿಂದ ಕಿಕ್ಕಿರಿದು ಹೋಗಿತ್ತು. ಸರಿಯಾಗಿ ಒಂಭತ್ತಕ್ಕೆ ಮಹಾ ಪೂಜೆಯು ಆಯಿತು. ಆ ಮೇಲೆ ಸುಮಾರು ಇಪ್ಪತ್ತು ಐದು ಮಕ್ಕಳಿಗೆ ಶಾಲಾ ಮುಖ್ಯ ಅಧ್ಯಾಪಕರು ಅಕ್ಷರಾಭ್ಯಾಸವನ್ನು ಮಾಡಿಸಿದರು. ಇದರ ಮೇಲೆ ಸಮಸ್ತರಿಗೂ ಫಲಾಹಾರವು ಹಂಚಲಾಯಿತು. ಅಪರಾಹ್ನ ಎರಡು ಗಂಟೆಗೆ ಶ್ರೀಯುತ ಬಲಿಪ ಭಾಗವತರ ಹಾಡು ಮತ್ತು ಕೆಮ್ಮಣ್ಣು ನಾರಾಯಣಯ್ಯನವರ ಮೃದಂಗವಾದನಗಳೊಡನೆ ಯಕ್ಷಗಾನ ಸಭೆಯೊಂದು ಜರಗಿತು.

ತಾ. ೧೯-೧೦-೩೪ರಲ್ಲಿ 'ಶಿಶುಸಪ್ತಾಹ'ವು ಎಲ್ಲಾ ಕಡೆಗಳಲ್ಲಿಯೂ ಆಚರಿಸಲ್ಪಡುವಂತೆ ಇಲ್ಲಿಯೂ ಬಹಳ ವಿಶೇಷವಾಗಿ ಆಚರಿಸಲ್ಪಟ್ಟಿತು. ಬೆಳಗ್ಗೆ ಶಾಲೆಯು ಸುತ್ತು ಮುತ್ತಲೂ ಶೃಂಗರಿಸಿ ಹತ್ತರಿಂದ ಹನ್ನೆರಡರ ವರೆಗೆ ಭಾಷಣ, ಆರೋಗ್ಯದ ಕುರಿತು ಪ್ರಬಂಧ ಬರೆಯುವುದರಲ್ಲಿ ಸ್ಪರ್ಧೆ ಇತ್ಯಾದಿಗಳು ನಡೆದುವು. ಸರಿಯಾಗಿ ಎರಡು ಗಂಟೆಗೆ ಮುಖ್ಯಾಧ್ಯಾಪಕರು 'ಶಿಶುಸಪ್ತಾಹ'ವೆಂಬುದರ ಅರ್ಥ, ಅದರ ಆಚರಣೆಯ ಉದ್ದೇಶ ಮೊದಲಾದುವನ್ನು ವಿವರಿಸಿದ ಬಳಿಕ ಮೂರು ಗಂಟೆಗೆ ಮೆರವಣಿಗೆ ಹೊರಟಿತು. ಬಾಲಕ ಬಾಲಿಕೆಯರು ಆರೋಗ್ಯದ ಕುರಿತಾದ ಗೀತೆಗಳನ್ನು ಹಾಡಿ 'ರಾಮಭಜನೆ' ಮಾಡುತ್ತಾ ಹಿಂತಿರುಗಿ ಶಾಲೆಯನ್ನು ಸೇರಿದರು. ಮಾನ್ಯ ಹೆಲ್ತ್ ಇನ್ಸ್‌ಪೆಕ್ಟರರು ಇಲ್ಲಿಗೆ ಬಂದು (ಮಾಯಾಲಾಂದ್ರ) ಪ್ರದರ್ಶನವನ್ನು ಮಾಡುವವರಾಗಿ ಇದ್ದು, ಬರಲು ಸಂದರ್ಭವಿಲ್ಲದ ಕಾರಣ, ಐದು ಗಂಟೆಗೆ ಈ ಉತ್ಸವವು ಉತ್ಸಾಹಪೂರ್ವಕವಾಗಿ [illegible].

ನೋಟೀಸು.

ಕಾರ್ಕಳ ಸಬ್ ಕೋರ್ಟಿನಲ್ಲಿ.

O. S. 304/1934.

ಸರಸ್ವತಿ (ವಸ್ಸಾನರಳು) ಇವಳ ಬಗ್ಗೆ ಇವಳ ಹಿತಚಿಂತಕ ಗಂಡ ತಿಂಮಣ್ಣಯ್ಯ— ವಾದಿಳು.

ಮತ್ತು

ರಾಮಪ್ಪಯ್ಯ ಕೂಡಾ 18 ಜನರು— ಪ್ರತಿವಾದಿರು.

ಇವರೊಳಗೆ—

ಸದ್ರಿ ದಾವೆಯ 3ನೇ ಪ್ರತಿವಾದಿ, ಪದ್ಮನಾಭಯ್ಯ (1) ಸಪ್ಲಿಮೆಂಟು 4ನೇ ಪ್ರತಿವಾದ ಚಂದಪ್ಪ ಶ್ಯಾನುಭಾಗ ಯಾನೆ ಶೆಟ್ಟಿ 1 ಮತ್ತು ಸಪ್ಲಿಮೆಂಟು 18ನೇ ಪ್ರತಿವಾದಿ ವೆಂಕಟ್ರಮಣ ಉದ್ಯಾಯ (1) ಕೂಡಾ 3 ಜನರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ:—

ಮೇಲ್ಕಂಡ ವಸ್ಸಾನೆರ ವಾದಿಳ ತಾಯಿ ಈಗ ಮೃತಪಟ್ಟ ಭಾಗಿರತಿ ಅಮ್ಮಗೆ 1-2-3ನೇ ಪ್ರತಿವಾದಿರು ತಾ. 9–1–1914ರಲ್ಲಿ ರೂಪ್ಯಾ 400-0-0ಕ್ಕೆ ಬರಕೊಟ್ಟ ಕೋರಡವು ದಸ್ತಾವೇಜಿನ ಬಾಬ್ತು ಬಹಾ ಅಸಲು ಬಡ್ಡಿ ಐವೇಜು ಬರಮಾಡುವ ಬಗ್ಗೆ ಮೇಲ್ಕಂಡ ದಾವೆಯನ್ನು ಮೇಲ್ಕಾಣಿಸಿದ ಕೋರ್ಟಿನಲ್ಲಿ ವಾದಿಳು ದಾಕ್ಲ ಮಾಡಿರುತ್ತಾಳೆ. ಅದ್ದರಿಂದ ಆ ಕುರಿತು ನಿಮಗೇನಾದರೂ ಆಕ್ಷೇಪಗಳಿದ್ದರೆ ತಾ. 19–11–'34ನೇ ಪೂರ್ವಾಹ್ನ ಗಂಟೆ 10ಕ್ಕೆ ನೀವು ಸದ್ರಿ ಕೋರ್ಟಿನ ಮುಂದೆ ಸ್ವತಹಾ ಯಾ ವಕೀಲರ ಮುಖಾಂತರ ಹಾಜರಾಗಿ ನಿಮ್ಮ ಆಕ್ಷೇಪಗಳನ್ನು ಜ್ಯಾರಿಮಾಡಿಕೊಳ್ಳತಕ್ಕದ್ದು. ತಪ್ಪಿದರೆ ನಿಮ್ಮನ್ನು ಶಿವ್ಯಾಮಾಡಿ ವಾದಿಳ ಗುಣಕ್ಕೆ ತೀರ್ಮಾನಿಸಲ್ಪಡುವುದು ಎಂಬ ಸಂಗ್ತಿ ಈ ಮೂಲಕ ತಿಳಿಸೋಣಾಗುತ್ತದೆ.

ಕಾರ್ಕಳ, 22–10–34. } **K. Mahabala Hegde,** *Pleader for Plaintiff.*

ನೋಟೀಸು.

ಅತ್ತಾವರು ವೈಕುಂಠ ಪ್ರಭು ಬೇಂಕ್—ಮಂಗಳೂರು.

ಈ ಕೆಳಗೆ ಹೆಸರು ಕಾಣಿಸಿದವರು ಸದ್ರಿ ಬೇಂಕಿನಿಂದ ನಗದ ಈಡಿನ ಮೇಲೆ ಸಾಲ ಪಡಕೊಂಡ ನಂತರ ಕ್ಲಪ್ತ ಮ್ಯಾದಿಗೆ ಅಸಲು ಬಡ್ಡಿ ಕೊಡದೆ ಈ ವರೆಗೆ ಬಾಕಿ ಮಾಡಿರುವುದರಿಂದಲೂ ಸದ್ರಿ ಸಾಲಗಳನ್ನು ಬರಮಾಡಿಕೊಳ್ಳುವರೆ ಅವರಿಗೆ ಬಿಟ್ಟ ರಿಜಿಸ್ತ್ರಿ ನೋಟೀಸುಗಳು ಜ್ಯಾರಿಯಾಗಿಯೂ ಕೆಲವು ಜ್ಯಾರಿಯಾಗದೆಯೂ ಬಂದಿರುವುದರಿಂದಲೂ ಸದ್ರಿಯವರು ಈಡಿಟ್ಟ ನಗಗಳನ್ನು ಇದೇ 1934ನೇ ಇಸವಿ ಅಕ್ಟೋಬರ ತಿಂಗಳ ತಾ; 31ನೇ ಬುಧವಾರದೊಳಗೆ ಅಸಲು ಬಡ್ಡಿ ವ ನೋಟೀಸು ಖರ್ಚು ತಂದುಕೊಟ್ಟು ಅದವಿಟ್ಟ ನಗಗಳನ್ನು ಬಿಡಿಸಿಕೊಂಡು ಹೋಗದಿದ್ದರೆ ಸದ್ರಿಯವರು ಈಡಾಗಿಟ್ಟ ನಗಗಳನ್ನು ಇದೇ 1934ನೇ ಇಸವಿ ನವಂಬರ ತಿಂಗಳ ತಾರೀಕು 3ನೇ ಶನಿವಾರ ದಿವಸ ಯಾ ಅನಂತರ ನಮಗೆ ಯುಕ್ತ ಕಂಡ ತಾರೀಕಿನಲ್ಲಿ ನಮ್ಮ ಬೇಂಕಿನ ಆಫೀಸಿನಲ್ಲಿ 2 ಘಂಟೆಗೆ ಬಹಿರಂಗವಾಗಿ ಏಲಂ ಮಾಡಲಾದೀತು.

(A) ಸಾಲದ ನಂಬ್ರ	ಹೆಸರು, ವಿಳಾಸ.	ಸಾಲದ ಮೊಬಲಗು. ರೂ. ಆ. ಪೈ.
101/33	ಶಂಕರ, ಬಸಪ್ಪನ ಮಗ, ದಿವಾನ್ ಬಹದೂರ್ ಯನ್. ಸುಬ್ಬಣ್ಣರಾಯರ ಮೋಟಾರ್ ಡ್ರೈವರ್ ಸೂಟರ್ಸ್‌ಪೇಟೆ ಕಂಕನಾಡಿ	4-0-0
165/33	ಅಬ್ದುಲ್‌ಖಾದ್ರಿ ಬ್ಯಾರಿ, ಪಕೀರ ಬ್ಯಾರಿ ಮಗ ಬೈಕಂಪಾಡಿ ಗ್ರಾಮ ಅಂಗರಗುಂಡಿ ಪಣಂಬೂರು.	15-0-0
405/33	ಶಂಕರ, ಬಸಪ್ಪನ ಮಗ ದಿವಾನ್ ಬಹದೂರ್ ಯನ್. ಸುಬ್ಬಣ್ಣರಾಯರ ಮೋಟಾರ್ ಡ್ರೈವರ್ ಸೂಟರ್ಸ್‌ಪೇಟೆ ಕಂಕನಾಡಿ	11-0-0
4/32	ಕುಕ್ಕ, ಸಂಜೀವ ಮಗ ಅಶ್ವತ್ಥರ ಬಾಬುಗುಡ್ಡೆ ಮಂಗಳೂರು.	6-0-0
97/32	ಬೆಂಗ್ರ, ಚಾರಪ್ಪ ಪೂಜಾರಿ ಮಗ, ಸಿ. ಪಿ. ಸಿ. ಕಂಪೆನಿಯಲ್ಲಿ ಕೆಲ್ಸ ಮಂಗಳೂರು.	5-0-0
728/33	ಕೃಷ್ಣ ಭಟ್ಟ ಹಂಭಟ್ಟ, ಕೋಟೆಕಾರ ಗ್ರಾಮ, ಉಳ್ಳಾಲ	4-0-0
633/33	ಯಂ. ಕೆ. ಮೋಂಡ, ಕೃಷ್ಣ ಶೆಟ್ಟಿ ಅಳಿಯ, ಮುಳಲಿ ಮೊಗ್ರು ಗ್ರಾಮ ಮುಚೂರ್.	5-0-0
997/33	ರಾಮಕೃಷ್ಣ ಪಜತ್ತಾಯ, ನಾರಾಯಣ ಪಜತ್ತಾಯರ ಮಗ, ಹೋಟಿಲ್ ಕೀಪರ್ ಶ್ರೀಕ್ಷೇತ್ರ ದೇವಸ್ಥಾನದ ಬಳಿ ಮಂಗಳೂರು	10-0-0
690/32	ಅಬ್ದುಲ್ ಬ್ಯಾರಿ, ಇದಿನಬ್ಯಾರಿ ಮಗ, ಅಡ್ಯಾರ ಕಣ್ಣೂರು ಗ್ರಾಮ ಆವೆಮುಣ್ಣ ಕಂಟ್ರಾಕ್ಟರ್ ಕಂಕನಾಡಿ	15-0-0
9/33	ಅಬ್ದುಲ್ಲ ಬ್ಯಾರಿ, ಇದಿನ ಬ್ಯಾರಿ ಮಗ ಅಡ್ಯಾರ ಕಣ್ಣೂರು ಗ್ರಾಮ ಆವೆಮಣ್ಣಿನ ಕಂಟ್ರಾಕ್ಟರ್ ಕಂಕನಾಡಿ	35-0-0
535/33	ಇಸ್ಮಾಲಿ ಬ್ಯಾರಿ, ಅಬ್ದುಲ್ ಖಾದ್ರಿ ಬ್ಯಾರಿ ಮಗ್ಗ ಅಂಗಡಿ ವ್ಯಾಪಾರ ಕಂಡದಪಳ್ಳಿ ಬಳಿ ಮಂಗಳೂರು.	7-0-0
241/33	ಅಬ್ದುಲ್ಲ ಬ್ಯಾರಿ, ಟಿಮ್ಮಬ್ಯಾರಿ ಮಗ, ಅಡ್ಯಾರಕಣ್ಣೂರು ಗ್ರಾಮ, ಕಂಕನಾಡಿ	7-0-0
155/34	ಸುಂದರ್ ಶೇಟ್, ಸುಬ್ರಾಯ ಶೇಟ್ರು ಮಗ ಮಾರ್ಕೆಟ್ ರೋಡ್ ಮಂಗಳೂರು	7-0-0
164/34	ಸುಂದರ್ ಶೇಟ್, ಸುಬ್ರಾಯ ಶೇಟ್ರು ಮಗ ಮಾರ್ಕೆಟ್ ರೋಡ್ ಮಂಗಳೂರು	7-0-0
173/34	ಸುಂದರ್ ಶೇಟ್, ಸುಬ್ರಾಯ ಶೇಟ್ರು ಮಗ ಮಾರ್ಕೆಟ್ ರೋಡ್ ಮಂಗಳೂರು	35-0-0
174/34	ಸುಂದರ್ ಶೇಟ್, ಸುಬ್ರಾಯ ಶೇಟ್ರು ಮಗ ಮಾರ್ಕೆಟ್ ರೋಡು ಮಂಗಳೂರು	9-0-0
88/34	ಸುಬ್ರಾಯ ಶೇಟ್, ಉಡುಪಿ ಮಂಜುನಾಥ ಶೇಟ್ರ ಮಗ, ಬೂವಂತಕೇರಿ ಮಂಗಳೂರು.	12-0-0
125/34	ಸುಬ್ರಾಯ ಶೇಟ್, ಉಡುಪಿ ಮಂಜುನಾಥ ಶೇಟ್ರ ಮಗ, ಬೂವಂತಕೇರಿ ಮಂಗಳೂರು.	7-0-0
216/34	ಸುಬ್ರಾಯ ಶೇಟ್, ಉಡುಪಿ ಮಂಜುನಾಥ ಶೇಟ್ರ ಮಗ, ಬೂವಂತಕೇರಿ ಮಂಗಳೂರು.	8-0-0
234/34	ಸುಬ್ರಾಯ ಶೇಟ್, ಉಡುಪಿ ಮಂಜುನಾಥ ಶೇಟ್ರ ಮಗ, ಬೂವಂತಕೇರಿ ಮಂಗಳೂರು.	13-0-0
280/34	ಸುಬ್ರಾಯ ಶೇಟ್, ಉಡುಪಿ ಮಂಜುನಾಥ ಶೇಟ್ರ ಮಗ, ಬೂವಂತಕೇರಿ ಮಂಗಳೂರು.	6-0-0
1337/33	ನಾಗಪ್ಪ ಆಚಾರಿ, ವೆಂಕಟಸುಬ್ಬ ಆಚಾರಿಯ ಮಗ, ಶರವು ಗಣಪತಿ ದೇವಸ್ಥಾನದ ಬಳಿ ಮಂಗಳೂರು;	5-0-0
402/33	ಬಿ. ಸುಬ್ಬಪ್ಪ, ಬಿತು ಮೇಸ್ತ್ರಿ ಮಗ, c/o. ವಕೀಲ್ ಯಂ. ಗೋವಿಂದ ಸಾಲ್ವೀಸ್ ಕೊಡಿಯಾಲ್‌ಬೈಲ್ ಮಂಗಳೂರು	6-0-0
1096/33	ಶೀನಪ್ಪ ನ್ಯಾಕ, ಗಣಪತಿ ನ್ಯಾಕರ ಮಗ, ಬೋಳೂರು ಗ್ರಾಮ ಕಲ್ಲ ಸುಂದರರಾಯರ ಮನೆ ಬಳಿ ಮಂಗಳೂರು.	5-0-0
565/33	ಅಹಮದ್ ಬಾವ, ಸಾಯಬಿಬ್ಯಾರಿ ಮಗ, ಕಂಜಾರು ಗ್ರಾಮ ಬಜಪ್ಪೆ ಪೋಸ್ಟು.	10-0-0
2616/32	ನೀಲಯ್ಯ ಆಚಾರಿ, ತಿಮ್ಮಪ್ಪ ಆಚಾರಿ ಮಗ ಕಂಬಳ ಮಂಗಳೂರು.	16-0-0
1516/32	ಗಣಪತಿರಾವ್, ವಿಷ್ಣುಯ್ಯನವರ ಮಗ ಪುತ್ತೂರು ತಾಲೂಕು ನೇರಿಯಗ್ರಾಮದ ಕೊಡನೆ, ಚಾರ್ಮಾಡಿ.	35-0-0
1833/32	ಮಲ್ಲಪ್ಪ, ಹಾಜಯ್ಯನವರ ಮಗ, ಚಿಕ್ಕಮಗಳೂರು ಗ್ರಾಮ ಕಾರ್ಪೆಂಟರ್, ಕಂಕನಾಡಿ.	25-0-0
2631/32	ವೈದಿನ ಬ್ಯಾರಿ, ಉಸನೆ ಬ್ಯಾರಿ ಮಗ, ಮರಕ್ಕಡ ಗ್ರಾಮ ಪಣಂಬೂರು.	14-0-0

ಎ. ವಿ. ಪಿ. ಬೇಂಕ್ ಮಂಗಳೂರು, ತಾ. 20—10—1934. } **A. V. Prabhu,** ಪ್ರೊಪ್ರೈಟರ್.

The Canara Public Conveyance Company, Ltd., Mangalore.

WE TAKE UTMOST CARE OF PASSENGERS.

Read the following letter:—

Modern Hindu Hotel,
CALICUT, 17—6 1934.

Dear Sir,

We wish to thank you for all that you did for us to make our stay at Mangalore comfortable. It is extremely nice of you to have looked after us as you did.

Yours faithfully,

(Sd.) **A. V. Ramaswami.**

The same service is offered to all. We call for reports from passengers, if they have failed to receive similar attention and assure to take prompt action to see that inconvenience is not repeated.

Chikmagalur Public Conveyance Motor Service, Chikmagalur.

ಚಿಕ್ಕಮಗಳೂರು ಪಬ್ಲಿಕ್ ಕನ್ವೆಯನ್ಸ್ ಮೋಟರ್ ಸರ್ವಿಸ್,

ಚಿಕ್ಕಮಗಳೂರು

ಮುಂಬಾಯಿಯಿಂದ – ಮಂಗಳೂರಿಗೆ
ಮಂಗಳೂರಿನಿಂದ – ಮುಂಬಾಯಿಗೆ.

ಅಲ್ಲದೆ

ಹುಬ್ಬಳ್ಳಿ, ಧಾರವಾಡ, ಗೋವಾ, ಮುಂಬಾಯಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಯ ಎಲ್ಲಾ ಭಾಗಗಳಿಗೆ ಪ್ರಯಾಣ ನಡಿಸಲಿಕ್ಕೆ

ಮಂಗಳೂರು—ಕಡೂರು ಹಾದಿಗಿಂತ ಉತ್ತಮ ಬೇರೆ ಹಾದಿಯಿಲ್ಲ!

ಹೊಸ ಬಸ್ಸುಗಳು ಅನುಕೂಲ ಪ್ರಯಾಣ ಸೌಕರ್ಯಗಳು

ಕಡೂರು ಜಿಲ್ಲೆಯೊಳಗಿನ ಎಲ್ಲಾ ಕಾಫಿ ತೋಟಗಳಿಗೆ ಕೂಲಿಕಾರರನ್ನು ತರಲಿಕ್ಕೂ ಅಲ್ಲಿಂದ ಕೊಂಡುಹೋಗಲಿಕ್ಕೂ ನಾವು ಎಲ್ಲಾ ತರದ ಸಹಾಯವನ್ನೂ ಕೊಡುತ್ತೇವೆ.

ಚಿಕ್ಕಮಗಳೂರಿನಿಂದ— ಶಿವಮೊಗ್ಗಕ್ಕೆ, ಬೀರೂರಿಗೆ, ಕಡೂರಿಗೆ.
— ಮೂಡಗೆರೆಗೆ, ಸಕಲೇಶಪುರಕ್ಕೆ
—ಮಂಗಳೂರಿಗೆ, ಮೂಡಬಿದ್ರೆಗೆ, ಪುತ್ತೂರಿಗೆ, ಮಣಿಪಾಲಕ್ಕೆ.
—ಧರ್ಮಸ್ಥಳಕ್ಕೆ, ವೇಣೂರಿಗೆ, ಸುಬ್ರಹ್ಮಣ್ಯಕ್ಕೆ.

ನಿರಾಯಾಸದ ಪ್ರಯಾಣ! ಉತ್ಸಾಹಕರ ಸೌಕರ್ಯ!

ವಿವಿಧ ವಿಷಯ.

ಅಗರಲ್ಲಿ ಮದುವೆ ಬೇಕಂತೆ!

ಜೀರ್ಣಯುಕ್ತದಲ್ಲಿ ಇಲ್ಲಿದವನು — ಕೆಲ್ಸನ್ ಜೋನ್ ಮ್ಯಾಯರ್! ಅವನಿಗೆ ವಯಸ್ಸು ೮೧! ವಿವಾಹಕ್ಕಾಗಿ ವೆಸ್ಟ್‌ಮಿನಿಸ್ಟರಿನ ರಜಿಸ್ಟರ್ ಆಫೀಸಿಗೆ ಬರಮಾಡಿಕೊಂಡಿದ್ದಾನೆ, ವಧುವಿನ ಹೆಸರು ಎಲಿಜಬೆತ್, ವಯಸ್ಸು ೬೦!

ಅವನೀಗ ಇಲ್ಲ—ಮೂವತ್ತಾಯಿತು!

ಕ್ರಿ.ಶ. ೧೯೦೪ನೇ ವರ್ಷದಲ್ಲಿ ಕ..ಕ ಕಾಯ ನಾಗಿದ್ದ ವ ನೊಬ್ಬ ಪಾಲವೋರ್ ಎಂಬಲ್ಲಿಯ ಮೂಲನಿವಾಸಿಯೊಬ್ಬನಂತೆ! ಅವನು ೬೮ ಅಡಿ ಎತ್ತರವಾಗಿದ್ದನೆನ್ನುವರು! ಅವನೀಗ ಬದುಕಿ ಉಳಿದಿಲ್ಲವೆಂಬುದು ಒಂದು ಸಮಾಧಾನ.

ಹಾವುಗಳೇ ಕಾಪಾಡಿದುವು!—

ಸರಜಾಮೋದಲ್ಲಿ, ಹದಿನೈದು ವಯಸ್ಸಿನ ಜೋರ್ಡನ್ ಹಾಂಡಕ್ಕೆಸೆಂಟ ಯುವಕನು, ದನಕರುಗಳನ್ನು ಹುಲ್ಲು ಗಾವಲಿಗೊಯ್ಯುತ್ತಿದ್ದನು, ಆಕಸ್ಮಿಕವಾಗಿ ಒಂದು ಕರಡಿ ಬಂದು, ಅವನ ಮೇಲೆ ಹಾರಿತು. ದನಗಳೆಲ್ಲ ಓಡಿಬಿಟ್ಟುವು; ಆ ಕರಡಿಯನ್ನು ಕೊಂಬುಗಳಿಂದ ಹಾಯ್ದುವು; ಸೀಳಿದುವು; ಕೊಂದುವು!

ಭೂಕಂಪದ ಭಯ!

ವೆಲ್ಲಿಂಗ್ಟನಿನವರಿಗೆ ಭೂಕಂಪದ ಭಯ ಆರಂಭವಾಗಿದೆ. ಅಲ್ಲಿಯ ಪುರಸಭೆಯ ಪ್ರಾಸಾದವನ್ನು ಅಗೆದು ತೆಗೆದುಬಿಡುವರಂತೆ.. ನೂರಾರು ಕೆಲಸಗಾರರು ಪ್ರಯತ್ನ ಪಡುತ್ತಿರುವರು. ಆದರೆ, ಸಾಮಾನ್ಯ ಹಾರೆಗುದ್ದಲಿಗಳ ಪೆಟ್ಟು ಆ ಪ್ರಾಸಾದವನ್ನೇನೂ ಮಾಡಲಾರದು! ಅಷ್ಟು ಗಟ್ಟಿಮುಟ್ಟಾದ ಕಟ್ಟಡ! ಅದನ್ನು ೩೦ ವರ್ಷಗಳ ಕೆಳಗೆ ಕಟ್ಟಿಸಿದ ಮೇಸ್ತ್ರಿ ಹೇಳುತ್ತಾನೆ:—"ಇವರಿಗೆ ಹುಚ್ಚು! ಭೂಕಂಪವಾದರೆ, ಪಟ್ಟಣವೆಲ್ಲ ಮೊದಲು ನಿರ್ನಾಮವಾಗದೆ ಈ ಪ್ರಾಸಾದವು ಬೀಳದು" ಎಂದು. ಅದನ್ನು ಬೀಳಿಸಬೆಚ್ಚಿಸುವವರಿಗೂ ಅದರ ಸತ್ಯತೆ ಈಗ ಮನವರಿಕೆಯಾಗಿದೆ.

ಒಂದೇ ಬಗೆಯ ಉಡುಪು ಇರಲಿ!

ಜರ್ಮನಿಯ ಹೊಸ ಶಾಸನ—ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳೆಲ್ಲ, ವರ್ಗ, ಮತ, ಜಾತಿಗಳ ಭೇದವು ಗೋಚರಿಸದಂತೆ ಒಂದೇ ಬಗೆಯ ಸರಳವಾದ ಉಡುಪುಗಳನ್ನು ಧರಿಸಬೇಕೆಂದು! ಹಾಗೆಯೇ, ಶಿಕ್ಷಣವನ್ನೂ ಯಾವುದಾದರೊಂದು ವಿದ್ಯಾಲಯದಲ್ಲೇ (ಮೊದಲನೆ ಎರಡು ಟರ್ಮುಗಳು) ಪೂರೈಸಬೇಕು.

ಇಪ್ಪತ್ತಮೂರು ದಿನ 'ಸಾರಾಯಿ ಮಲ್ಲ'!

ಮೂಸ್ ಬ್ರಾಂಕ್ಸದ ಸಭೆಯಲ್ಲಿ, ಹೆಲೆನ್ ಲೂವಿಸ್ ಎಂಬವಳದೊಂದು ಅರ್ಜಿ,—ದಾಂಪತ್ಯವಿಚ್ಛೇದಕ್ಕಾಗಿ! "ಏಕೆ? ಕಾರಣವೇನು?" ಜಡ್ಜರ ಪ್ರಶ್ನೆ. "೨೩ ದಿನ ಸಾರಾಯಿ ಕುಡಿದೇ ಇದ್ದ; ಅವುಲೇ ಅಮಲು ಇಳಿದಿದ್ದವೇ ಇಲ್ಲ!" ಎಂದಳು ಸಾಧ್ವಿ. "ವಿಚ್ಛೇದವಾಗಲಿ!" ಎಂದರು ಜಡ್ಜರು.

ರಾಜಕುಮಾರರು ಚಲಚ್ಚಿತ್ರದಲ್ಲಿ!

"ಇಪ್ಪತ್ತು ವರ್ಷಗಳ ನಂತರ!" ಎಂಬುದೊಂದು ಚಲಚ್ಚಿತ್ರ ಇಂಗ್ಲಾಂಡಿನಲ್ಲಿ ಸಿದ್ಧವಾಗಿದೆ. ನಮ್ಮ ಸಾರ್ವಭೌಮರ ಹಿರೇ ಕುಮಾರರೂ ಒಂದು 'ಸನ್ನಿವೇಶ' ಇದರಲ್ಲಿ!

ಕಪ್ಪು ಮಳೆ ಬಂತಂತೆ!

ಬುರೊಮನೊ ಏರಿಯಲ್ಲಿ ಕಳೆದ ವಾರ ಮಳೆ—ಕಪ್ಪು ಕಪ್ಪು! ಜನರಿಗೆ ಆಶ್ಚರ್ಯ, ಮಳೆನೀರು ಕಪ್ಪಾದುದು ಹೇಗೆಂದು! ಕೊನೆಗೆ ನೋಡಲಾಗಿ, ಸ್ವಲ್ಪ ದೂರ, ಕಂಪಾನಾ ಎಂಬಲ್ಲಿ, ಒಂದೆರಡು ದಿನಗಳ ಹಿಂದೆ ಸೀಮೆಯೆಣ್ಣೆಯ ಮಹಾ ಯಾಗವಾಗಿತ್ತು. ಅದರ ಕರಿಯ ಮೋಡಗಳೊಂದಿಗೆ ಬೆರೆತುದ ಫಲವೆಂದು ಊಹಿಸಲಾಯಿತು!

ಕಾಂಗ್ರೆಸ್ ಪಾರ್ಲಿಮೆಂಟರಿ ಬೋರ್ಡಿನ ಅಧ್ಯಕ್ಷ ರಾಜ ಡಾ। ಅನ್ಸಾರಿಯವರು, ಆರೋಗ್ಯಲಾಭ ಸಂಬಂಧ ಪಾಪ ತಮ್ಮ ಯೂರೋಪ್ ಸಂಚಾರವನ್ನು ಮುಗಿಸಿ ವಾರ್ಧಕ್ಕೆ ಬಂದು ಗಾಂಧಿಜಿಯವರನ್ನು ಕಂಡು ಮಾತಾಡಿ, ದಿಲ್ಲಿಗೆ ತೆರಳಿರುವರು. ಅವರ ಆರೋಗ್ಯವು ಸುಧಾರಿಸಿದೆ.

ಪ್ರಚಲಿತಸಮಾಚಾರ.

ಪ್ರಿಟಿಷರಿಗೆ ಆಶ್ಚರ್ಯದ ಸುದ್ದಿ!

ವಿಜಯರಾಘವಾಚಾರಿಯವರು ಇಂಗ್ಲಾಂಡಿನಲ್ಲಿ ಭಾಷಣ ಮಾಡುತ್ತ, ಕಾಂಗ್ರೆಸ್‌ಲೇಬರ್ ಪಂಕ್ತಿಗೆ ಪ್ರತಿನಿಧಿಗಳಾಗಿ ಕಳುಹಲ್ಪಟ್ಟವರು ನಿಜವಾದ ಪ್ರಜಾಪ್ರತಿನಿಧಿಗಳಲ್ಲವೆಂದೂ ಸರಕಾರದವರೇ ನೇಮಕವಮಾಡಿದವರೆಂದೂ ತಿಳಿಸಲು, ಸಭಿಕರೆಲ್ಲ ವಿಸ್ಮಯಪಟ್ಟರಂತೆ.

'ಸ್ಕೌಟ್' ಯುವಕನ ಹಟ.

ಅಜಮಾರದ ಬಾಲವೀರ ದಳದ ಯುವಕನೊಬ್ಬ; ಸ್ವದೇಶೀ ಪ್ರೇಮಿ! ವಿದೇಶೀ ಅರಿವೆಯ 'ಯೂನಿಫಾರ್ಮ'ನ್ನು ಕೆಡಿಸುವುದಿಲ್ಲವೆಂದು ಹಟಹಿಡಿದನು. ಆವನ ತಿರಸ್ಕಾರಕ್ಕಾಗಿ, ಅವನನ್ನು ಆ ದಳದಿಂದ ತೆಗೆದುಹಾಕಿರುವರು.

ಎಲ್ಲವೂ ಕಾಂಗ್ರೆಸ್ಸಿಗರಾಯಿತು.

ಜಬ್ಬಲ್ಪುರದ ಸುದ್ದಿ—ಅಲ್ಲಿಯ ಸ್ಥಳೀಯ ಸಂಸ್ಥೆಗಳ (ಡಿಸ್ಟ್ರಿಕ್ಟ್ ಕೌನ್ಸಿಲ್ ಸಹಿತ) ಚುನಾವಣೆಗಳಲ್ಲಿ ಕಾಂಗ್ರೆಸ್ಸಿನವರದೇ ಮೇಲ್ಗೈ. ಎಲ್ಲ ಸ್ಥಾನಗಳೂ ಕಾಂಗ್ರೆಸ್‌ವಾಲಾಗಳಿಂದಲೇ ವಶಪಡಿಸಿಕೊಳ್ಳಲ್ಪಟ್ಟಿವೆ.

ಪಂಜಾಬಿನವರ 'ಸ್ವದೇಶೀಪ್ರೇಮ'ದ ಸುದ್ದಿ—

ಕೇಳಿದಿರಾ?—ಒಂದಾನೊಂದು ಕಾಲದಲ್ಲಿ ಸ್ವದೇಶೀ ಅರಿವೆಯ ಪುರಸ್ಕಾರದಲ್ಲಿ ಪಂಜಾಬಿಗೆ ಅಗ್ರಸ್ಥಾನ ಸಲ್ಲುತಿತ್ತು. ಈಗಲಾದರೋ—ಹಿಂದೂದೇಶಕ್ಕೆ ಆಮದಾಗುತ್ತಿರುವ ವಿದೇಶೀ ಅರಿವೆಯಲ್ಲಿ ಅರೆವಾಸಿಯಷ್ಟನ್ನು ಪಂಜಾಬೇ ನುಂಗುತ್ತಿದೆ!

ದಸರಾ ರಜೆ ಕಡಿಮೆ ಮಾಡಬೇಡಿ!

ಲಾಹೋರಿನ ಫೋರ್‌ಮನ್ ಕ್ರಿಶ್ಚನ್ ಕಾಲೇಜಿನಲ್ಲಿ ಈ ವರ್ಷ ಒಂದು ದಿನ ಮಾತ್ರ ದಸರಾ ರಜೆ ಕೊಡಲು, — ವರ್ಷಂಪ್ರತಿಯಂತೆ ೪ ದಿನ ಕೊಡಲೇಬೇಕೆಂದು ವಿದ್ಯಾರ್ಥಿಗಳ ಹಟ; ಮುಷ್ಕರ! ಅರ್ಧ ದಿವಸದ ಮುಷ್ಕರ ಮುಗಿಯುತ್ತಲೆ, ನಾಲ್ಕು ದಿನ ರಜೆ ಕೊಟ್ಟರು!

ಸಿಲೋನಿನಲ್ಲಿ ತಕ್ಕೀರುಗಳು ಬೆಚ್ಚುತ್ತಿವೆ.

ಸಿಲೋನ್ ದ್ವೀಪದ ಸ್ತ್ರೀಯರುಗಳಿಗೆ (ದೊಂಬಿ, ಕೊಲೆ ಇತ್ಯಾದಿ) ಹೆಸರಾದುದು ಇತ್ತೀಚೆಗೆ ತಕ್ಕೀರುಗಳು ಹೆಚ್ಚುತ್ತಲೇ ಇವೆಯೆಂದು, ಸರಕಾರದ ಗಮನಕ್ಕೆ ಬಂದಿದೆ. ಅಲ್ಲಿಯ ಸ್ಟೇಟ್ ಕೌನ್ಸಿಲಿನಲ್ಲಿ ಬಂದ ಸೂಚನೆಯಂತೆ, ಈ ತಕ್ಕೀರುಗಳ ವಿಚಾರವಾಗಿ ವಿಮರ್ಶೆ ನಡೆಸಿ ವರದಿಯನ್ನೊಪ್ಪಿಸಲು ಸರಕಾರದವರು ಒಂದು ಸಮಿತಿಯನ್ನು ನೇಮಿಸಿರುವರು.

ಮದರಾಸು ಕೌನ್ಸಿಲು.

ಮದರಾಸು ಕೌನ್ಸಿಲಿನ ಅಧಿವೇಶನವು ಇದೇ ತಾ. ೨೩ಕ್ಕೆ ಆರಂಭವಾಗಿದೆ. ಶ್ರೀ। ಕೆ. ಪಟ್ಟಾಭಿರಾಮಯ್ಯನವರು, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಈಗಿನ ಆರ್ಥಿಕ ದುಸ್ಥಿತಿಯಲ್ಲಿ ಸೆಟ್ಲ್‌ಮೆಂಟ್ ದರಗಳನ್ನು ಜ್ಯಾರಿಗೆ ತರಬಾರದಾಗಿ ಕೇಳಿಕೊಳ್ಳುವರು. ದಕ್ಷಿಣ ಕನ್ನಡದಲ್ಲಿ ರಿಸರ್ವ್ ಫೋರೆಸ್ಟ್ ರಿಯಾಯಿತಿಗಳನ್ನು ಹಿಂತೆಗೆದ ದೆಸೆಯಿಂದ ರಹಿತರಿಗುಂಟಾದ ಸಂಕಷ್ಟ ಎಷ್ಟೆಂಬುದನ್ನು ವಿಮರ್ಶಿಸಲು ಒಂದು ವಿಚಾರಣಾ ಸಮಿತಿಯನ್ನು ನೇಮಕಮಾಡಬೇಕಾಗಿ ಶ್ರೀ। ಎ. ರಾಮಕೃಷ್ಣ ರೆಡ್ಡಿಯವರು ಸರಕಾರಕ್ಕೆ ವಿನಂತಿಸಿರುವರು.

ವಿದ್ಯಾರ್ಥಿಯುವರೂ ರಾಜಕೀಯಗಳೂ.

ರಾಜಕೀಯ ಚಳವಳಿಯ ಉಜ್ವಲತೆಯ ದಿನಗಳಲ್ಲಿ ಹಿಂದೂದೇಶದ ನಾನಾ ಭಾಗಗಳಲ್ಲಿ, ಚಳವಳಿಯನ್ನು ಸೇರಿದವರೆಂದೋ ಅಥವಾ ಸೇರಬಹುದೆಂದೋ ಅನೇಕ ವಿದ್ಯಾರ್ಥಿಗಳನ್ನು ನಿರ್ಬಂಧಕ್ಕೊಳಪಡಿಸಿದ್ದರು; ಕೆಲವರನ್ನು ಶಾಲೆಗಳಿಂದ ತೆಗೆದು ಹಾಕಿದ್ದರು; ಕೆಲವರ ವಿದ್ಯಾರ್ಥಿವೇತನಗಳು ರದ್ದುಮಾಡಲ್ಪಟ್ಟದ್ದುವು. ಆದರೆ, ಇಂಗ್ಲಾಂಡಿನಲ್ಲಿ ಇಂತಹ ಘಟನೆಗಳು ಬಲು ಕಡಿಮೆ. ಕಳೆದ ವಾರ ಮಾತ್ರ, ಆಕ್ಸ್‌ಫರ್ಡ್ ವಿದ್ಯಾರ್ಥಿಯೊಬ್ಬನು ಒಂದು ಮುಷ್ಕರದಲ್ಲಿ ಭಾಗಿಯಾದನೆಂಬ ಕಾರಣದಿಂದ ಆತನ ವಿದ್ಯಾರ್ಥಿವೇತನವನ್ನು ಒಂದು ವರ್ಷದ ಅವಧಿಗೆ ರದ್ದುಗೊಳಿಸಿರುವರು. ಇದಾದ ನಂತರ ಆ [illegible]

ಒಂದು ನೌಕಾ ಸಂಬಂಧವಾದ ಚಲಚ್ಚಿತ್ರ ಪ್ರದರ್ಶನದ ವೇಳೆಯಲ್ಲಿ "ನಾವು ಶಾಂತರು; ಯುದ್ಧ ಬೇಡವು!" ಎಂದು ಕೂಗಿ ಗಲಭೆ ಮಾಡಿದುದಕ್ಕೆ, ಆತನನ್ನು ಪೋಲೀಸ್ ಕೋರ್ಟಿಗೊಯ್ದು, ಇನ್ನು ಗಲಭೆ ಮಾಡುವುದಿಲ್ಲವೆಂಬ ಬಗ್ಗೆ ಮುಚ್ಚಳಿಕೆ ಬರೆದುಕೊಡಬೇಕೆಂದರು. ಆತನು ಒಪ್ಪಲಿಲ್ಲ. ಕೊನೆಗೆ ಜೈಲಿಗೊಯ್ಯಲ್ಪಟ್ಟ ಸಂತರ ಒಪ್ಪಿದನು. ಆ ಮೇಲೆ ಬಿಡುಗಡೆಮಾಡಿದರು. ಇವನು 'ಗ್ರೇಟ್ ವೆಸ್ಟರ್ನ್ ರೈಲ್ವೇ' ಕಂಪೆನಿಯ ಇನ್ಸ್‌ಪೆಕ್ಟರನ ಪುತ್ರ.

ಜಾಗತಿಕ ಪತ್ರಿಕೋದ್ಯೋಗಿಗಳ ಪರಿಷತ್ತು.

ಜಾಗತಿಕ ಪತ್ರಿಕಾ ವ್ಯವಸಾಯಿಗಳ ಪರಿಷತ್ತು ಬರುವ ಮಾರ್ಚ್ ತಿಂಗಳಲ್ಲಿ ಮೆಲ್ಬೋರ್ನ್ ನಗರದಲ್ಲಿ ಜರಗುವುದು! ಹಿಂದೂದೇಶದಿಂದ ಕಲ್ಕತ್ತೆಯ "ಅಮೃತ ಬಜಾರ ಪತ್ರಿಕೆ"ಯ ಸಂಪಾದಕರಾದ ತುಷಾರ ಕಾಂತಿ ಘೋಷರೂ, ಯೂನೈಟೆಡ್ ಪ್ರೆಸ್ಸಿನ ಶ್ರೀ ವಿಧುಭೂಷಣರೂ ಹೊರಡುವರು. ಘೋಷರು ಬೊಂಬಾಯಿಗೆ ತಲಪಿರುವರು. ಇದೇ ತಾ. ೨೨ರಲ್ಲಿ ಬೊಂಬಾಯಿಯಲ್ಲಿ ಜರಗುವ ಪತ್ರಿಕಾಮ್ಯಾನೇಜರ ಪಂಕ್ತಿಯ ಚರ್ಚೆಗಳಲ್ಲಿ ಭಾಗವಹಿಸಿ ಘೋಷರು ಪೂನೆಗೆ ಹೋಗಿ, ಅಲ್ಲಿ ಕೆಲವು ಪತ್ರಿಕಾಕರ್ತರನ್ನು ಕಂಡು ಅಲ್ಲಿಯ ಪತ್ರಿಕಾ ವ್ಯವಸಾಯಗಳ ಹಾಲಹವಾಲೆಗಳನ್ನು ಚೆನ್ನಾಗಿ ತಿಳಿದುಕೊಳ್ಳುವರು."

ಹಂಗೇರಿಯಲ್ಲಿ 'ಹಂಗರ್ ಸ್ಟ್ರೈಕ್'

'ಹಂಗರ್ ಸ್ಟ್ರೈಕ್' ಎಂಬ ಉಪವಾಸದ ಹಟದ ಮುಷ್ಕರವು ಈಗ ಎಲ್ಲೆಲ್ಲಿಯೂ ಹರಡಿದೆ. ಹಂಗೇರಿಯ ಒಂದು ಗಣಿಯಲ್ಲಿಯೂ ಒಂದು ಸಾವಿರ ಕೆಲಸಗಾರರು ಗಣಿಯೊಳಗೆ ಒಂದು ಸಾವಿರ ಅಡಿ ಆಳದಲ್ಲಿ ಇಳಿದು, ನಾಲ್ಕು ದಿನಗಳಿಂದ ಉಪವಾಸ ಹಿಡಿದರು. ಐದಾರು ದಿನಗಳಾದುವು. "ನಮ್ಮ ಸಂಬಳವನ್ನು ಹೆಚ್ಚಿಸುವೆವೆಂದು ಭಾಷೆ ಕೊಡಬೇಕು. ಇಲ್ಲದಿದ್ದರೆ, ಇಲ್ಲೇ, ಗಾಳಿ ಸಂಚಾರದ ಯಂತ್ರವನ್ನು ಮುಚ್ಚಿ, ಪ್ರಾಣಬಲಿ ಕೊಡುವೆವು!" ಎಂದು ಬೆದರಿಕೆ! ಸಹೋದರರೂ ಆಹಾರವಿಲ್ಲದೆಯೂ ಹಲವರು, ಚಿಕ್ಕ ಕೆಸರು ಕುಂಡಗಳಲ್ಲಿ ಮೂರ್ಛೆ ಬಿದ್ದು, ಕಲ್ಲಿದ್ದಲಿನ ತುಂಡುಗಳ ಕಲೆ ಕೆಸರಿನಲ್ಲೇ ಮಲಗಿದರು! "ನಮ್ಮ ಶವದಾನಗಳನ್ನು ತಯಾರಿಸಿರಿ!" ಎಂದು ಮೇಲೆ ಅಧಿಕಾರಿಗಳಿಗೆ ತಿಳಿಸಿದರು. "ಅರೆಹೊಟ್ಟೆಯ ಜೀವನಕ್ಕಿಂತ ಈ ಸ್ವರ್ಗವೇ ಲೇಸು!" ಎಂದೂ ನುಡಿದರು. ಕೊನೆಗೆ ರಾಜಿಯತ್ನಗಳು ನಡೆದು, ಅವರ ಶರ್ತಗಳಿಗೊಪ್ಪಿದ ಮೇಲೆ, ಮೇಲಕ್ಕೆ ಬರಲೊಪ್ಪಿದರು!

ಮಾರ್ಸೇಲಿ ಅತ್ಯಾಚಾರದ ಪುನರ್ಧ್ವನಿ.

ಮಾರ್ಸೇಲಿ ಅತ್ಯಾಚಾರ ಪ್ರಕರಣದಲ್ಲಿ ಸಂಬಂಧಪಟ್ಟ ಮಿಂಚೋ ಕ್ರಾರ್ಸ್ ಎಂಬಾತನನ್ನು ಯುಗೋಸ್ಲೇವಿಯ ಪೋಲೀಸರು ದಸ್ತಗಿರಿ ಮಾಡಿರುವರು. ಅರಸನನ್ನು ಕೊಲ್ಲಲು, ಒಳಸಂಚುಗಾರರು ಈತನಿಗೆ ಅಪ್ಪಣೆ ಮಾಡಿದ್ದರಂತೆ. ಆದರೆ, ಈತನು ಭಯದಿಂದಲೇ ಪಿಸ್ತೂಲು ಎತ್ತಲಿಲ್ಲ.

ಕೇಂಬ್ರಿಜಿನ ಹೊಸ ಗ್ರಂಥಾಲಯ.

ಕೇಂಬ್ರಿಜ್ ವಿಶ್ವವಿದ್ಯಾಲಯದ ಹೊಸ ಗ್ರಂಥಾಲಯವು ಸಿದ್ಧವಾಗಿದೆ. ೧೧,೫೦೦,೦೦೦ ಗ್ರಂಥಗಳಿವೆ. ಇವುಗಳನ್ನು ಕಪಾಟುಗಳಲ್ಲಿಟ್ಟು, ಆ ಕಪಾಟುಗಳನ್ನು ಸಾಲಾಗಿ ಇರಿಸಿದರೆ, ೪೦ ಮೈಲುಗಳಷ್ಟು ಉದ್ದಕ್ಕೆ ಸೇರುವುವು. ಇದರಲ್ಲಿ ೧೪೫೬ರಲ್ಲಿ ಅಚ್ಚಾದ ೪೨ ಪಂಕ್ತಿಗಳ ಒಂದು ಬೈಬಲ್ ಗ್ರಂಥವೂ ಇದೆ. ಈ ಗ್ರಂಥವೊಂದನ್ನೇ ೫೦ ಸಾವಿರ ಪವನುಗಳಿಗೆ ವಿಮೆಯುಳಿಸಿರುವರು. ಈ ಗ್ರಂಥಾಲಯವನ್ನು ಕಟ್ಟಿಸಲು ೩ ಲಕ್ಷ ಪವನು ವೆಚ್ಚವಾಗಿರುವುದು. ಪಾಚನಾಲಯದ ಕೊಠಡಿಯು ೧೯೪ ಫೀಟು ಉದ್ದವಿದೆ. ನಮ್ಮ ಸಾರ್ವಭೌಮರು ಇದರ ಆರಂಭೋತ್ಸವವನ್ನು ಇದೇ ಕಳೆದ ಸೋಮವಾರ ಜರಗಿಸಿದರು.

ತಿದ್ದುಪಡಿ.

'ಸ್ವದೇಶಾಭಿಮಾನಿ'ಯ ತಾ. ೫—೧೦—೧೯೩೪ನೇ ಸಂಚಿಕೆಯಲ್ಲಿ, ಪುಟ ೧೧ರಲ್ಲಿ 'ಭಾಗಮಂಡಲದಲ್ಲಿ ಪ್ಲೇಗ್ ಇದೆ' ಎಂದು ಪ್ರಕಟವಾಗಿತ್ತು. ಈಗ ವಿಚಾರಿಸಿದ್ದಲ್ಲಿ, ಆ ವದಂತಿಯು ನಿಜವಾದುದಲ್ಲವೆಂದೂ, ಕೊಡಗಿನಲ್ಲಿ ಪ್ಲೇಗ್ ಆಗಲಿ ಸುತರಾಂ ಇರುವುದಿಲ್ಲವೆಂದೂ ತಿಳಿದುಬಂದಿದೆ. ಆದ ಕಾರಣ, ಅಲ್ಲಿ ನಡೆಯಲಿರುವ ತುಲಾಕಾವೇರಿ ಸಂಕ್ರಮಣ ಉತ್ಸವಕ್ಕೆ ದಯಮಾಡಿಸುವವರು ಅಂಜಬೇಕಾಗಿಲ್ಲವೆಂದು ಪಾತ್ತಿದಾರರೊಬ್ಬರು ಬರೆಯುವರು.

ತುಂಡು ಸುದ್ದಿ.

ಮಸಾಲ್ದೀವಿಯ ಸುಲ್ತಾನರನ್ನು [ಪದಚ್ಯುತಮಾಡಲಾಯಿತಷ್ಟೆ?—ಆ ವಿಚಾರದಲ್ಲಿ ಸಿಲೋನ್ ಸರಕಾರವು ಕೈಹಾಕುವುದಿಲ್ಲವೆಂದು ತಿಳಿದುಬಂದಿದೆ. ಪದಚ್ಯುತ ಸುಲ್ತಾನರು ಸರಕಾರಕ್ಕೆ ಮನವಿ ಮಾಡಿರುವರಂತೆ.

ಭೋಪಾಲಿ ಅತ್ಯಾಚಾರಕ್ಕೊಳಗಾಗಲ್ಪಟ್ಟ ಶ್ರೀಮತಿ ಕಮಲ ನೆಹರೂರವರಲ್ಲಿ ಗ. ದಾಳಾಭ ತೋರುತ್ತಿದೆ.

ಮಾರ್ಸೇಲಿ ಅತ್ಯಾಚಾರದ ಚಲಚ್ಚಿತ್ರವು ಇಷ್ಟರೊಳಗೇ ಸಿದ್ಧವಾಯಿತು. ಆದರೆ, ಅದನ್ನು ಹೊಲ್ಲೆಂಡ್, ಜರ್ಮನಿ ಮತ್ತು ಫ್ರಾನ್ಸುಗಳಲ್ಲಿ ಪ್ರದರ್ಶಿಸದಂತೆ ಆಯಾ ಸರಕಾರಗಳು ಕಟ್ಟಪ್ಪಣೆ ಮಾಡಿವೆ. ಬ್ರಿಟಿಷ್ ಸಿನೆಮಗಳಲ್ಲಿ ಮಾತ್ರ ನಿರಾತಂಕವಾಗಿ ಪ್ರದರ್ಶಿಸಲ್ಪಡುವುದು.

ಕರಾಚಿಯಿಂದ ಲಾಹೋರಿನ ತನಕ ಟಪ್ಪಾಲು ವಿಮಾನಿನ ಸರ್ವೀಸನ್ನು ಇದೇ ಬರುವ ಡಿಸೆಂಬರ ತಾ. ೪ರಿಂದ ಆರಂಭಿಸುವರೆಂದು ಪ್ರಕಟವಾಗಿದೆ.

ಬೊಂಬಾಯಿ ಗವರ್ನರರು ಸದ್ಯದಲ್ಲಿ ಅಹಮ್ಮದಾಬಾದಿಗೆ ಸಂದರ್ಶನಾರ್ಥ ತೆರಳಲಿರುವರು. ಅವರಿಗೆ ಮಾನಪತ್ರವನ್ನರ್ಪಿಸುವ ಕುರಿತಾಗಿ ಅಲ್ಲಿಯ ಮುನಿಸಿಪಾಲಿಟಿಯಲ್ಲಿ ಚರ್ಚೆಯಾಗಿ, ಬೇಡವೆಂದೇ ನಿರ್ಧಾರವಾಗಿದೆ.

"ಬ್ರಿಟಿಷ್ ದಸಾಹತುಗಳಲ್ಲಿ ಇವುಗಳನ್ನು ವಿಕ್ರಯಿಸಿರಿ" ಎನ್ನುತ್ತ, ಲಂಕಾಶಯರಿನ ಗಿರಣಿ ಮ್ಯಾಲಕರಿಗೆ ಜಪಾನಿನವರು ತಮ್ಮ ಅರಿವೆಗಂಟುಗಳನ್ನೊಪ್ಪಿಸುತಿದ್ದಾರೆ!

ಜರ್ಮನಿಯ ಆಯಾತವು ೧೦ ಮಿಲ್ಲಿಯ ಮಾರ್ಕುಗಳಷ್ಟು, ಮತ್ತು ನಿರ್ಗತ ವ್ಯಾಪಾರವು ೧೬೬ ಮಿಲ್ಲಿಯ ದಷ್ಟು ಹೆಚ್ಚಿದೆ.

ದಕ್ಷಿಣಾಫ್ರಿಕದಿಂದ ಬ್ರಿಟಿಷ್ ವಸ್ತು ಸಂಗ್ರಹಾಲಯಕ್ಕೆ ೭೦೦೦ ಅರುವೆಗಳ ಸಂಗ್ರಹವು ಕಳುಹಿಸಲ್ಪಟ್ಟಿದೆ.

ದಕ್ಷಿಣ ಕನ್ನಡಿಗರಿಂದ ಅದ್ಭುತ ಅಂಗಸಾಧನಾ ದೇಖಾವೆ.

ಕಳೆದ ತಾ. ೧೪ನೇ ರವಿವಾರ, ಮುಂಬಾಯಿಯ ಸರ್ ಕವಾಸ್ಜಿ ಜಹಂಗೀರ ಸಾರ್ವಜನಿಕ ಮಂದಿರದಲ್ಲಿ, ಪ್ರೊ। ಶೇಷಪ್ಪನವರು, ದಿ ಸೌತ್ ಕೆನರಾ ಫಿಸಿಕಲ್ ಇನ್ಸ್ಟಿಟ್ಯೂಟಿನ ತಮ್ಮ ಶಿಷ್ಯವರ್ಗದವರಿಂದ ಅಸಾಧಾರಣವೂ ಆಶ್ಚರ್ಯಕರವೂ ಆದ ಅಂಗಸಾಧನಾ ದೇಖಾವೆಗಳನ್ನು ಪ್ರದರ್ಶಿಸಿದರು. ಉಜ್ವಲ ಸ್ವದೇಶಾಭಿಮಾನಿಯೂ ರಾಷ್ಟ್ರಸೇವಾಧುರೀಣರೂ ಆದ ಶ್ರೀಯುತ ಕೆ. ಎಫ್. ನರಿಮನರು ಅಂದಿನ ಸಭಾಧ್ಯಕ್ಷರಾಗಿದ್ದರು. ಸಭಾಮಂದಿರವು ಪ್ರೇಕ್ಷಕರಿಂದ ಕಿಕ್ಕಿರಿದಿದ್ದಿತು. ಸಾಹಸಿಗಳಾದ ಯುವಕರ, ದಿಗ್ಭ್ರಮೆಗೊಳಿಸುವಂತಹ ಚಾತುರ್ಯಕೃತ್ಯಗಳು ನೋಟಕರನ್ನು ದಂಗುಬಡಿಸುತ್ತಿದ್ದುವು. ಎಳೆವಯಸ್ಸಿನ ಕೆಲ ಬಾಲಕರೂ, ಬಾಲಿಕೆಯರೀರ್ವರೂ ತಮ್ಮ ಚಟುವಟಿಕೆಯಿಂದ ನೋಟಕರನ್ನು ಕಲಿದೂಗುವಂತೆ ಮಾಡಿದರು.

ಮಾನ್ಯ ಅಧ್ಯಕ್ಷರು ತನ್ನ ಭಾಷಣದಲ್ಲಿ ಪ್ರೊ। ಶೇಷಪ್ಪನವರನ್ನು ಧಾರಾಳವಾಗಿ ಪುರಸ್ಕರಿಸಿದುದಲ್ಲದೆ, ಅವರ ಈ ಕಾರ್ಯನಿರ್ವಹಣವು ಹಿಂದೀಯರೆಲ್ಲರಿಗೆ ಅಭಿಮಾನಾಸ್ಪದವಾದುದೆಂದರು. ತಾನು ಸಭಾಮಂದಿರವನ್ನು ಪ್ರವೇಶಿಸುವಾಗ ಇಂತಹ ಗಂಭೀರಪ್ರದರ್ಶನವನ್ನು ನೋಡುವೆನೆಂದು ಊಹಿಸಿಲ್ಲವೆಂದೂ, ಈಗಲಾದರೂ ಪ್ರೊ। ಶೇಷಪ್ಪನವರೂ ಅವರ ಶಿಷ್ಯರೂ ಹಿಂದೀಯರ ಕಾರ್ಯದಕ್ಷತೆಯನ್ನು ಯಥಾರ್ಥರೀತಿಯಲ್ಲಿ ಪ್ರದರ್ಶಿಸಿದ ಹಾಗಾಯಿತೆಂದೂ, ಶ್ರೀ। ನರಿಮನರೆಂದರು. ಅದರೆ ಇಂತಹ ಸಾಹಸಿಗಳು ಕೂಡ ಧನದ ಅಭಾವಕ್ಕೆ ಕಟ್ಟುಬಿದ್ದು ಯಾವ ಕಾರ್ಯವನ್ನೂ ಮುಂದುವರಿಸಲಾರದವರಾಗಿರುವುದು ಹಿಂದೀಯರ ಗೌರವಕ್ಕೆ ಹಾನಿಕರವಾದುದು; ಲಜ್ಜಾಸ್ಪದವಾದುದು. ಆದುದರಿಂದ ಇನ್ನಾದರೂ ನಮ್ಮ ಲಕ್ಷಾಧಿಪತಿಗಳೂ ಧನಿಕರಲ್ಲಿ ಕೆಲವರು ಮುಂದೆ ಬಂದು ಈ ಸಂಸ್ಥೆಗೆ ಯುಕ್ತ ಬೆಂಬಲವೀಯುವರೆಂದು ಹಾರೈಸಿ ಅಧ್ಯಕ್ಷರು ತನ್ನ ಭಾಷಣವನ್ನು ಮುಗಿಸಿದರು. ಅಧ್ಯಕ್ಷರಿಗೂ ಸಭಿಕರಿಗೂ ಸಂಸ್ಥೆಯ ಪರವಾಗಿ ಧನ್ಯವಾದಗಳನ್ನಿತ್ತ ತರುವಾಯ ಕಾರ್ಯಕ್ರಮದಲ್ಲಿ ಉಳಿದಂತವು ಅಭಿನಯಿಸಲ್ಪಟ್ಟು ಪ್ರದರ್ಶನವು ಕೊನೆಗೊಂಡಿತು.

[illegible]

[illegible] ಉತ್ಪತ್ತಿ [illegible] ಸರಾಸರಿ ಉತ್ಪತ್ತಿಯು ನ್ಯಾಯವಾದ ಮತ್ತು [illegible] ಕೇವಲ [illegible] ಮತ್ತು ಅಪ್ರತ್ಯಕ್ಷವಾದ ತಪ್ಪು ಲೆಕ್ಕಾಚಾರಗಳಿಂದಲೂ, ನಿರಾಧಾರವಾದ ಊಹನೆಗಳಿಂದಲೂ ತುಂಬಿರುತ್ತದೆ. ಅವುಗಳು ಯಾವುವೆಂದರೆ:

(i) ಉತ್ತಮ (Good), ಮಧ್ಯಮ (Middling) ಮತ್ತು ಕನಿಷ್ಠ (Bad) ಈ ಮೂರು ತರಗತಿಯ ಉತ್ಪತ್ತಿ ಪರಿಶೋಧನೆ (Crop experiments)ಗಳ ಸರಾಸರಿಗಳಿಂದ (Primary averages) ಪ್ರತಿ ತರಗತಿಯ (Taram) ಮಣ್ಣಿನ ಅಖೈರು ಸರಾಸರಿ ಉತ್ಪತ್ತಿ (Ultimate average Out-turn)ಯನ್ನು ತಪ್ಪು ರೀತಿಯಲ್ಲಿ ಲೆಖ್ಖ ಮಾಡಿದ್ದರಿಂದ ಪ್ರತಿ ತರಗತಿಯ ಮಣ್ಣಿನ ಅಖೈರು ಸರಾಸರಿ ಉತ್ಪತ್ತಿಯು ನ್ಯಾಯವಾದ ಮತ್ತು ನಿಜವಾದ ಉತ್ಪತ್ತಿಗಳಿಗಿಂತ ಅತೀ ಹೆಚ್ಚಾಗಿ ಪರಿಣಮಿಸಿದ್ದು;

(ii) ಧಾನ್ಯದ ನಗದು ಮೌಲ್ಯ (Money value of the grain outturn)ವನ್ನು ನಿರ್ಣಯಿಸುವ ಬಗ್ಗೆ ಬೆಲೆ ಕಟ್ಟುವರೆ ಆಧರಿಸಿದ ಅತ್ಯಧಿಕವಾದ ದರಗಳು;

(iii) ಹಸಿಭತ್ತದ ಕುಂದಲಿನ ಬಗ್ಗೂ ದುವಾಳಿ ಮತ್ತು ಫಲವತ್ತಾಗಿಲ್ಲದ ಸ್ಥಳಗಳ ಬಗ್ಗೂ ಕೊಡಿಸಿದ ಅತ್ಯಲ್ಪ ವಜಾವಟ್ಟು;

(iv) ಸಾಗುವಳಿ ಖರ್ಚಿನ ಬಗ್ಗೆ ಕೊಟ್ಟ ಬಹಳ ಕಡಿಮೆ ವ ತಪ್ಪು ಲೆಕ್ಕಾಚಾರದ ವಜಾವಟ್ಟು; ಮತ್ತು ನಿಕೃಷ್ಟ ತರಗತಿಯ ಮಣ್ಣುಗಳ ಬಾಬಿನಲ್ಲಿ ಸದರಿ ಖರ್ಚನ್ನು ಅತಿರೇಕ ಕಡಿಮೆ ಮಾಡಿದುದು;

(v) ಗ್ರಾಮಗಳನ್ನು "ಗ್ರೂಪು" (Groups) ವಾರು ವಿಂಗಡಿಸಿದ್ದು ಮತ್ತು

(vi) ಸರಕಾರದವರು ತಮ್ಮ ಖರ್ಚಿನಿಂದ ಯಾವ ರೀತಿಯಲ್ಲಿಯೂ ಸಾಗುವಳಿ ಬಗ್ಗೆ ನೀರಿನ ಸರಬರಾಯಿ ಮಾಡದೆ ಇರುವಾಗ್ಗೆ ನಂಜ ಭೂಮಿಗಳ ಮೇಲೆ ಎರಡನೇ ಬೆಳೆ(ಗಳ)ಯ ಬಗ್ಗೆ ತೀರ್ವೆ ಹೊರಿಸಿದ್ದು ಮತ್ತು ಬಾಗಾಯತು ಅಥವಾ ತೋಟ ಸ್ಥಳಗಳಿಗೆ ಅತೀ ಹೆಚ್ಚಿನ ದರ ಹೊರಿಸಿದ್ದು.

(೭) ಅತ್ಯಧಿಕವಾದ ಸರಾಸರಿ ಉತ್ಪತ್ತಿ:—ಒಂದನೇದಾಗಿ ಉತ್ಪತ್ತಿ ಪರಿಶೋಧನೆಯ ಕ್ರಮವು ಅನೇಕ ವರುಷಗಳ ವರೆಗೆ ವಿಸ್ತರಿಸಿದ್ದು ಬಹಳ ಹೆಚ್ಚು ಸಂಖ್ಯೆಯಿಂದ ನಡೆಯಿಸಲ್ಪಡಬೇಕಿತ್ತು. ಆದರೆ ಉತ್ಪತ್ತಿ [illegible] ಮತ್ತು ಮಣ್ಣುಗಳು [illegible] (ಇತ್ಯಾ) ವರುಷಗಳಿಂದಲೂ ವ್ಯವಸಾಯಕ್ಕೆ ಸಂಬಂಧಪಟ್ಟ ಮಳೆ ಮತ್ತಿತರ ವಿಷಯಗಳಲ್ಲಿ ಬಹಳ ಗುಣಕರವಾಗಿದ್ದುದಾಗಿಯೂ ಸದರಿ ಸರಕಾರಿ ನಂಬ್ರ [illegible] ಯಲ್ಲಿ ಹೇಳಿದ ಮಿತಿ ಗಣನೆ ಪುಟದಲ್ಲಿ ಕಂಡುಬರುತ್ತದೆ; ಮತ್ತು ಉಡುಪಿ ತಾಲೂಕಿನಲ್ಲಿ ನಡೆಸಿದಂಥಾ ಉತ್ಪತ್ತಿ ಪರಿಶೋಧನೆಗಳ ಸರಾಸರಿ (Primary averages)ಗಳನ್ನು ಪ್ರತಿ ತರಂಮಿನ ಮಣ್ಣಿನ ಅಖೈರು ಸರಾಸರಿ (Ultimate averages for outturn) ಎಣಿಸುವಾಗ್ಗೆ ಲೆಕ್ಕಕ್ಕೆ ಹಿಡಿಯದೆಯಿದ್ದದ್ದು ಸದರಿ ಎರಡು ವರುಷಗಳು ಕೃಷಿ ಬಗ್ಗೆ ಬಹಳ ಅನುಕೂಲವಾಗಿದ್ದುವೆಂಬುದನ್ನು ಸ್ಪಷ್ಟಪಡಿಸುತ್ತದೆ. ಎರಡನೇದಾಗಿ, ಉತ್ತಮ, ಮಧ್ಯಮ ಮತ್ತು ಕನಿಷ್ಠ (Good, middling and bad) ತರದ ಉತ್ಪತ್ತಿ ಪರಿಶೋಧನೆಗಳಿಂದ ಕಂಡು ಬಂದ ಸರಾಸರಿ (Primary averages)ಗಳಿಂದ ಪ್ರತಿ ತರಗತಿಯ (Taram) ಮಣ್ಣಿನ ಸರಾಸರಿ ಉತ್ಪತ್ತಿ (Ultimate averages for outturns) ಯನ್ನು ಎಣಿಸುವಾಗ್ಗೆ ಗಣಿತ ಶಾಸ್ತ್ರದ 'ಸರಾಸರಿ ಸೂತ್ರ' (Law of averages)ವು ಗುರುತು ಸಿಕ್ಕದ ರೀತಿಯಲ್ಲಿ ಕೆಡಿಸಲ್ಪಟ್ಟಿದೆ. ಯಾಕೆಂದರೆ 'ಅ' ಸಂಖ್ಯೆಗಳ ಸರಾಸರಿಯು 'ಬ' ಮತ್ತು 'ಸ' ಸಂಖ್ಯೆಗಳ ಸರಾಸರಿಯು 'ರ' ಆದರೆ, 'ಅ' ಮತ್ತು 'ಸ' ಸಂಖ್ಯೆಗಳ ಒಟ್ಟು ಸರಾಸರಿಯು

$$\frac{(ಅ\times ಬ)+(ಸ\times ರ)}{(ಅ+ಸ)}$$

ಆಗುತ್ತದೆ; 'ಅ' ಮತ್ತು 'ಸ' ಅಥವಾ 'ಬ' ಮತ್ತು 'ರ' ಇವುಗಳು ಒಂದಕ್ಕೊಂದು ಸರಿಯಾಗಿದ್ದರೇನೇ ಹೊರತು ಇತರ ಯಾವಾಗಲೂ 'ಅ' ಮತ್ತು 'ಸ' ಸಂಖ್ಯೆಗಳ ಸರಾಸರಿಯು ½ (ಬ+ರ) ಆಗಲಾರದು. ಇದು ಗಣಿತ ಶಾಸ್ತ್ರದ ಮೂಲ ತತ್ವ. ಇದನ್ನೇ ಕೆಡಿಸಿ ಬಿಟ್ಟಿದ್ದಾರೆ. ಕಳೆದ ಸೆಟ್ಲಮೆಂಟಿನಲ್ಲಿ ನಡೆದ ಈ ಪ್ರತ್ಯಕ್ಷವಾದ ತಪ್ಪನ್ನು ಶಾಶ್ವತವಾಗಿ ಸ್ಥಿರಪಡಿಸುವ ಯತ್ನವು ಈ ವರದಿಯಲ್ಲಿ ನಡೆದಿದೆ.' ಮೂರನೇದಾಗಿ ಅಖೈರು ಸರಾಸರಿಯನ್ನು ತೆಗೆಯುವುದರಲ್ಲಿ ಮೇಲ್ಕಂಡಂತೆ ತಪ್ಪು ಲೆಕ್ಕಾಚಾರದಿಂದ ರೈತರಿಗೆ ಆದ ನಷ್ಟವು ಕಡಿಮೆಯಾಯಿತೋ ಎಂಬಂತೆ, ಕನಿಷ್ಠ ತರಗತಿಯ ಉತ್ಪತ್ತಿ ಪರಿಶೋಧನೆಗಳ ಸರಾಸರಿ (averages of bad types of crop-experiments)ಗಳನ್ನು ಲೆಕ್ಕಕ್ಕೆ ಹಿಡಿಯದೆ ಹೆಚ್ಚು ಸಂಖ್ಯೆಯ ಸರಾಸರಿಗಳು ಬರುವ ಉತ್ತಮ ಮತ್ತು ಮಧ್ಯಮ (Good and middling) ತರಗತಿಯ ಉತ್ಪತ್ತಿ ಪರಿಶೋಧನೆಗಳ ಸರಾಸರಿಗಳ ಮೇಲೆಯೇ ಕಳೆದ ಸೆಟ್ಲಮೆಂಟು ಅಧಿಕಾರಿಗಳ (ಮೇಲ್ಕಂಡಂತೆ [illegible]

[illegible] (Ultimate averages) [illegible] ಮತ್ತು [illegible] ಸರಕಾರಿ ನಂಬ್ರ 787/1902ನೇ [illegible] ಸರಕಾರಿ [illegible] ಕೃಷಿಗಳಲ್ಲಿ ಕಂಡು ಬರುವ ಉತ್ಪತ್ತಿ ಪರಿಶೋಧನೆಗಳ ಸಂಖ್ಯೆ ಮತ್ತು ಅವುಗಳಿಂದ ಸಿಕ್ಕಿದ ಉತ್ಪತ್ತಿಗಳ ಸರಾಸರಿಗಳು (Primary averages) ಇವುಗಳ ಮೇಲೆ ಆಧರಿಸಿ ತಯಾರಿಸಲ್ಪಟ್ಟಿವೆ. (ಇನ್ನೂ ಇದೆ)

'ರಾಯ್ಸ್ ಹಿಪ್ಪ'

(ಕಳೆದ ಸಂಚಿಕೆಯಿಂದ ಮುಂದುವರಿದುದು.)

೫. ತುಂತೂರು ಹೊಡೆಯೋಣ—ಕ್ರೂಡ್ ಆಯಿಲ್ ಇಮಲ್ಶನ್ ಅಥವಾ ಫಿಶ್ ಆಯಿಲ್ ಸೋಪನ್ನು ಆರು ಗೆಲನ್ ನೀರಿಗೆ ಒಂದು ರಾತಲಿನಂತೆ ಕಲಸಿ ಸ್ಪ್ರೇಯರಿನ ಮೂಲಕ ನೇಜಿಯ ಮೇಲೆ ತುಂತೂರಿ ಹೊಡೆದ ಪಕ್ಷದಲ್ಲಿ ನೊಣಗಳು ಇದರ ವಾಸನೆಗೆ ಓಡುವುವು. ಅದಲ್ಲದೆ ಸಣ್ಣ ಹುಳಗಳೂ ಮೊಟ್ಟೆಗಳೂ ನಾಶವಾಗುವುವು.

ಸೂಚನೆ:—(a) ಮೇಲೆ ಕಾಣಿಸಿದ ನಿವಾರಣೋಪಾಯಗಳಲ್ಲಿ 2, 3, 4ನೇ ಕಲಮಿನ ವಿಧಿಗಳನ್ನು ಮುಂಜಾನೆ ಮಾಡಬೇಕು. ಏಕೆಂದರೆ— ಮುಂಜಾನೆಯಲ್ಲಿ ನೊಣಗಳು ನೇಜಿಯ ತಲೆಯಲ್ಲಿರುತ್ತವೆ. ಸಾಯಂಕಾಲವಾಗುತ್ತಲೇ ಈ ನೊಣಗಳಲ್ಲಿ ಹೆಚ್ಚಿನ ಅಂಶ ಎಲೆಗಳಿಂದ ಕೆಳಕ್ಕೆ ಇಳಿದು ವಿರಮಿಸಿಕೊಳ್ಳುತ್ತವೆ.

(b) ಒಟ್ಟಾರೆ ಹಲವು ಪ್ರಯತ್ನದಿಂದ ನೊಣಗಳು ಹಬ್ಬದಂತೆ ನೋಡಬೇಕು. ನೇಜಿಯ ಕಳದಿಂದ ನೇಜಿಯನ್ನು ಕಿತ್ತು ಇತರ ಗದ್ದೆಗೆ ನೆಡುವಾಗ ಅದನ್ನು ಮೇಲೆ ಹೇಳಿದ ರೀತಿಯಿಂದ ಹುಳ ರಹಿತವಾಗಿ ಮಾಡಿಸುವುದು ಅತ್ಯಾವಶ್ಯಕ. ಹೀಗೆ ಮಾಡುವುದರಿಂದ ಸುಗ್ಗಿ [illegible] ಬೆಳೆಯನ್ನು [illegible] ಉಪಾಯವನ್ನು ತಪ್ಪಿಸಿಕೊಳ್ಳಬಹುದು.

(c) [illegible] ನಿವಾರಣೋಪಾಯವನ್ನು ನಡೆಸಿದಾಗ್ಗೂ, ನೆರೆಹೊರೆಯ ಇತರರು ಕೈಕೊಂಡಿಸಿ ಇದರಲ್ಲಿ ಹೆಚ್ಚಿನ ಫಲಕಾರಿಯಾಗಲಾರದು. ಇಂತಹ ಕಾರ್ಯಕ್ಕೆ ರೈತರೊಳಗೆ ಪರಸ್ಪರ ಸಹಾಯವೂ ಸಹಾನುಭೂತಿಯೂ ಅಗತ್ಯ.

(d) ನಮ್ಮ ಜಿಲ್ಲೆಯ ಅಭಿವೃದ್ಧಿಯನ್ನು ಬಯಸುವ ಹಿತಾಕಾಂಕ್ಷಿಗಳು ಉದಾರಾತ್ಮೆಯಿಂದ ಮೇಲೆ ಕಾಣಿಸಿದ ನಿವಾರಣೋಪಾಯಗಳನ್ನು ತಮ್ಮ ಆಶ್ರಯದಾತರಿಗೂ, ನೆರೆಹೊರೆಯವರಿಗೂ ಬೋಧಿಸಿ ತಕ್ಕ ಸಮಯದಲ್ಲಿಯೇ ಪರಸ್ಪರ ಸಹಾಯವನ್ನು ಬೆಳೆಸಿ, ಸುಗ್ಗಿ ಬೆಳೆಯನ್ನು ಕಾಪಾಡಿಸುವಂತೆ ಮಾಡುವರಾಗಿ ಕೋರುತ್ತೇನೆ.

(e) ಹೆಚ್ಚಿನ ಅನುಭವ ಬೇಕಾದವರು ಆಯಾಯ ತಾಲೂಕಿನ ಎಗ್ರಿಕಲ್ಚರಲ್ ಡಿಮೋನ್ಸ್ಟ್ರೇಟರರಿಂದಾಗಲೀ ಕಲೆಕ್ಟೇರಿಯಲ್ಲಿರುವ ವ್ಯವಸಾಯ ಡಿಪ್ಯುಟಿ ಡೈರೆಕ್ಟರರಿಂದಾಗಲೀ ಪಡೆಯಬಹುದು.

ಎಸ್. ಕೃಷ್ಣ ನಾಯಕ್,

ಎಗ್ರಿಕಲ್ಚರಲ್ ಡಿಮೋನ್‌ಸ್ಟ್ರೇಟರ್ ಮಂಗಳೂರು.

ರೋಗಬಾರದಿರಲಿ....

ಮುಖ್ಯ ರೋಗಗಳಲ್ಲಿ ಹೆಂಗಸರ ಮೋಹಕ್ಕೆ ಸಿಕ್ಕಿ ಸಾಯಲಿ ಹಟ್ಟಿಕೊಳ್ಳಬೇಡಿ!

ಆ ರೋಗ ಹತ್ತದಂತೆ ಇರಲು ನಾವು ಜರ್ಮನಿಯಿಂದ ತರಿಸುವ ಟ್ಯೂಬಿನ ಸಾಧನವನ್ನು ಉಪಯೋಗಿಸಿರಿ!

ನಂತಸ ದ್ವ ಬೆಲೆ 1 - 8 - 0

ಡೆಂಗಸಾಗಿ (ಗಳ್ಳಿಸಿಕೊಳ್ಳಕ್ಕೆ) 2 - 4 - 0

ಅರ್ಜಿ ಸಿಲೂಡನೆ ¼ ಅಣೆ ಸ್ಟಾಂಪು ಇಡಬೇಕು.

ವಿಳಾಸ—ಕರ್ನಾಟಕ ಏಜನ್ಸಿ,

52, ಕೃಷ್ಣಪ್ಪ ನ್ಯಾಕ್ ಟೇಂಕ್ ಸ್ಟ್ರೀಟ್,

ಜಿ. ಟಿ. ಮದ್ರಾಸು

ಕೇಶಕ್ಕೆ ಸೊಂಪು, ನುಣುಪು ಮತ್ತು ಹೊಳಪಾದ ಕೇಶಧಾರಣೆ

ದಿನಸಿತ್ಯದ ಸ್ನಾನಕ್ಕೆ ಮುಂಚಿತವಾಗಿ ನಿಮ್ಮ ಕೂದಲುಗಳನ್ನು ಚೆನ್ನಾಗಿ ಬಾಚಿ, ಬ್ರಶ್ಶಿನಿಂದ ಸವರಿ, ಆ ನಂತರ

"ಕುಂತಳ ಕೌಮುದಿ"

ಎಂಬ ಹಿಂದೂಸ್ಥಾನದ ಪ್ರಸಿದ್ಧ ಕೇಶ ತೈಲ್ಯದಿಂದ ಕೂದಲುಗಳ ಬುಡವನ್ನು ಜಾಗರೂಕತೆಯಿಂದ ತಿಕ್ಕಿರಿ.

(ಮನವುಗ್ಗ ಕರವಾದ ಸುಗಂಧವನ್ನುಳ್ಳದು.)

ಹಿಂದೂಸ್ಥಾನದಲ್ಲೆಲ್ಲ ಸರ್ವತ್ರ ಉಪಯೋಗಿಸಲ್ಪಡುತ್ತದೆ.

ತಯಾರಿಸುವವರು:— ಬೆಲೆ ಸೀಸೆ ಒಂದಕ್ಕೆ ರೂ.0—12—0.

ಆರ್. ಸಿ. ಸೇನ್ ಎಂಡ್ ಕೋ.,

ಲಿಮಿಟೆಡ್, ಕಲ್ಕತ್ತಾ.

ಏಜಂಟರು:—

ಕುಂತಳ ಕೌಮುದಿ ತೈಲ,

ವೆನ್‌ಲೋಕ್ ಆಸ್ಪತ್ರೆ ಎದುರು, ಮಂಗಳೂರು.

ಸ್ವದೇಶೀಯ ಉದ್ಯಮವನ್ನು ಪ್ರೋತ್ಸಾಹಿಸಿ! ನಿಮ್ಮದೀ ಸಂಸ್ಥೆಗೆ ಉತ್ತೇಜನ ಕೊಡಿ!!

ದಿ ಪೊಪ್ಯುಲರ್ ಇನ್ಶೂರೆನ್ಸ್ ಕಂಪೆನಿ, ಲಿಮಿಟೆಡ್, ಹೆಡ್ ಆಫೀಸು,–ಮಂಗಳೂರು

ಪಶ್ಚಿಮ ಕರಾವಳಿಯಲ್ಲಿ ಇದೇ ಮೊದಲನೆಯ ವಿಮಾಸಂಘ.

ಪೊಲಿಸಿದಾರರಿಗೆ ವಿಶೇಷ ರಿಯಾಯತಿ! ಸ್ತ್ರೀಯರ ಜೀವವಿಮೆಯನ್ನೂ ಸ್ವೀಕರಿಸಲಾಗುತ್ತದೆ!

ಜೀವವಿಮೆಯ ಬಳ್ಳಿಯ ಎಲ್ಲ ಸೌಕರ್ಯಗಳನ್ನೂ ಸಾಕಷ್ಟು ಸುಲಭ ದರದಲ್ಲಿ ಒದಗಿಸಿಕೊಡುವ ಈ ಕಂಪೆನಿಗೆ ಮುಕ್ತಹಸ್ತರಾಗಿ ಸಹಕರಿಸಿ!!

[ವಿ. ಸೂ.—'ಇಂಡಸ್ಟ್ರೀಯಲ್ ವಿಮೆ' ಎಂಬ 'ರೂಪಾಯಿ ಪೊಲಿಸಿ'ಗಳ ಸುಲಭ ಕಂತಿನ ವಿಮೆಯ ವಿಷಯವಾಗಿ ವಿಚಾರಿಸಿರಿ.]

ಪ್ರತಿಯೊಂದು ತಾಲೂಕಿನಲ್ಲಿ, ಜಿಲ್ಲೆಯಲ್ಲಿ ಮತ್ತು ನಗರದಲ್ಲಿ ಪರಿಚಿತರೂ ಆದ ಯೋಗ್ಯ ಗೃಹಸ್ಥರಿಂದ ಏಜನ್ಸಿಯ ಕುರಿತು ಅರ್ಜಿಗಳು ಅಪೇಕ್ಷಿಸಲ್ಪಟ್ಟಿವೆ. ಪ-ನಸ್ಸಿಟ್ಟು ಕೆಲಸ ಮಾಡುವವರಿಗೆ ಧಾರಾಳ ಕಮಿಶನ್ ಕೊಡಲಾಗುವುದು. ಹೆಚ್ಚಿನ ವಿವರಕ್ಕೆ ಹೆಡ್ ಆಫೀಸಿಗೆ ಬರೆದುಕೊಳ್ಳತಕ್ಕದ್ದು.

ಪಾಲಿಸಿ ನಂಬ್ರ 939— ಮೋಟ ಮರಕಲ (ಮೃತಪಟ್ಟಾತ)

"ಸುಮಾರು 6 ತಿಂಗಳ ಹಿಂದೆ, 'ಪಾಪ್ಯುಲರ್ ಇನ್ಶೂರೆನ್ಸ್ ಕಂಪೆನಿ, ಲಿಮಿಟೆಡ್, ಮಂಗಳೂರು' ಎಂಬೀ ಸಂಸ್ಥೆಯಲ್ಲಿ ನನ್ನ ಮೃತಪುತ್ರನು ಪಡೆದ ವಿಮೆಯ ಪೊಲಿಸಿಯ ಸಂಬಂಧವಾಗಿ ರೂ. 997—೨—0ನ್ನು [illegible] ನನಗೆ ಅತ್ಯಾನಂದವಾಗುತ್ತದೆ. [illegible] ಪೂರ್ವಕವಾಗಿ ವಂದಿಸುತ್ತೇನಲ್ಲದೆ, ಮ್ಯಾನೇಜಿಂಗ್ ಡೈರೆಕ್ಟರರಾದ ಶ್ರೀ [illegible] ರಾಯರು [illegible] ಸ್ಮರಿಸದಿರಲಾರೆ. ಇದರಿಂದ ಈ ವಿಮಾ ಕಾರ್ಯಾಲಯದ [illegible] ಈ ಕಂಪೆನಿಗೆ ಸರ್ವದಾ ಯಶಸ್ಸು ಉಂಟಾಗಲೆಂದು ನನ್ನ ಹಾರೈಕೆ."

ಮಲ್ಪೆ 9-9-1934. ನಾಗು ಮರಕಲತಿ.

ಸಂಪಾದಕರ ಟಪ್ಪಾಲು ಪೆಟ್ಟಿಗೆ.

ಪತ್ರಕಾರರ ಅಭಿಪ್ರಾಯಗಳಿಗೆ ನಾವು ಜವಾಬ್ದಾರರಲ್ಲ. ಎಲ್ಲ ಲೇಖಕರು ತಮ್ಮ ಸಂಪೂರ್ಣ ಹೆಸರು ವಿಳಾಸಗಳನ್ನು ಕೊಡತಕ್ಕದ್ದು. ದೀರ್ಘ ಲೇಖನಗಳಿಗೆ ಎಡೆ ಕೊಡಲಾಗುವುದಿಲ್ಲ. ಲೇಖನಗಳು ಸಾರ್ವಜನಿಕ ಔಚಿತ್ಯವುಳ್ಳುದಿದ್ದು ಯುಕ್ತ ಶೈಲಿಯಲ್ಲಿರತಕ್ಕದ್ದು. (ಸಂ. ಸ್ವ.)

ಆರೋಗ್ಯ ಮತ್ತು ಶಿಶುಸಪ್ತಾಹ, ಕಾರ್ಕಳ.

ಪರದೆ ಪಾಠನ, ಸಭೆ, ಭಾಷಣ, ಮೆರವಣಿಗೆ ಸ್ಪರ್ಧೆ, ಸಿನೇಮಾ, ನಾಟಕ, ಸ್ಕೌಟರ ಶಿಬಿರಾಗ್ನಿ, ಪ್ರದರ್ಶನ, ಸಂಕೀರ್ತನ ಮೊದಲಾದ ಕಾರ್ಯಕ್ರಮಗಳಿಂದ ಇಲ್ಲಿಯ ಆರೋಗ್ಯ ಮತ್ತು ಶಿಶುಸಪ್ತಾಹವು ಯಥಾಪೂರ್ವ ನಡೆಯಿತು. ಆದರೆ ವರ್ಷದಿಂದ ವರ್ಷಕ್ಕೆ ಈ ಉತ್ಸವದಲ್ಲಿ ಸಾರ್ವಜನಿಕರ, ಅದರಲ್ಲೂ, ಮುಖ್ಯವಾಗಿ ಈ ಊರಿನ ಎಲ್ಲಾ ಶಾಲೆಗಳ ಉಪಾಧ್ಯಾಯ – ವಿದ್ಯಾರ್ಥಿಗಳ ಹಾರ್ದಿಕ ಸಹಕಾರ–ಸಹಾನುಭೂತಿಗಳು ಪೂರ್ಣರೂಪದಿಂದ ದೊರೆಯದೆ, ಅವು ಕಡಿಮೆ ಕಡಿಮೆಯಾಗುತ್ತ ಬರುವುದು ಯಾರ ಅಲಕ್ಷ್ಯ–ಅಸಡ್ಡೆ–ಉದಾಸೀನತೆಗಳಿಂದ ಎಂದು ಸ್ಪಷ್ಟವಾಗಿ ಹೇಳಲಿಕ್ಕೆ ಬಾರದಿದ್ದರೂ ಮುಂದಾದರೂ ಹೀಗಾಗದಂತೆ ಸಪ್ತಾಹಸಮಿತಿಯು ಎಚ್ಚರದಿಂದಿರಬೇಕೆಂದು ನನ್ನ ವಿನಯಪೂರ್ವಕ ಸೂಚನೆ ಇರುತ್ತದೆ. ಕಾರ್ಯಕ್ರಮವನ್ನು ಕನ್ನಡದಲ್ಲಿಯೂ ಅಚ್ಚುಹಾಕಿಸುವುದು ಮಾತ್ರವಲ್ಲದೆ, ಅದಿದ್ರಾವಿಡ, ಮುಟಿಟರ ಕೇಂಪಿಂಗ್ ಗ್ರೌಂಡ್ ಎಂಬ ಪರಿಂಧಾಕರಾಯನ ಕಾಲದ ಹೆಸರುಗಳನ್ನು ಬಿಟ್ಟು ಹರಿಜನರು, ಸ್ವರಾಜ್ಯ ಮೈದಾನ ಮೊದಲಾದ ಎಲ್ಲರಿಗೂ ತಿಳಿದಿರುವ ಈಗಿನ ಕಾಲದ ಹೆಸರುಗಳನ್ನೇ ಕಾರ್ಯಕ್ರಮದಲ್ಲಿ ಪ್ರಯೋಗಿಸುವುದೂ, ಆಟ, ಸ್ಪರ್ಧೆ, ಶಿಬಿರಾಗ್ನಿ ಮೊದಲಾದುವುಗಳನ್ನು ಒಂದೆರಡು ಶಾಲೆಗಳಿಗಾಗಿ ಪರಿಮಿತಗೊಳಿಸದೆ, ಅವುಗಳಲ್ಲಿ ಎಲ್ಲ ಶಾಲೆಗಳೂ ಭಾಗವಹಿಸುವಂತೆ ಸಾಧಿಸಿ, ಅದನ್ನು ಮನೋರಂಜಕವೂ ಆಕರ್ಷಕವೂ ಆಗಿರುವಂತೆ ಮಾಡುವುದು ಮೊದಲಾದ ಸಂಘಟನೆಗಳ ಯೋಗ್ಯತಾಯೋಗ್ಯತೆಗಳನ್ನು ಪರಾಮರ್ಶಿಸಿ ಉತ್ಸವವು ಇನ್ನು ಮುಂದಾದರೂ ಇನ್ನಷ್ಟು ಸಫಲವಾಗುವಂತೆ ಸಪ್ತಾಹಸಮಿತಿಯು ಪ್ರಯತ್ನಿಸುವುದಾಗಿ ನಂಬುತ್ತೇನೆ. ಹೇಗಿದ್ದರೂ, ಶಾರೀರಿಕ ಮಾನಸಿಕ ನಾನಾ ತರಹದ ಕಷ್ಟಗಳಿಗೆ ಗುರಿಯಾಗಿಯೂ ಉತ್ಸವಕ್ಕೆ ಇಷ್ಟು ಯಶಸ್ಸನ್ನು ತಂದುಕೊಟ್ಟ ಸ್ಥಳೀಯ ಹೆಲ್ತ್ ಇನ್ಸ್‌ಪೆಕ್ಟರ್ ರಾ। ಎ. ವೇಣುಗೋಪಾಲರಾಯರು ನಮ್ಮೆಲ್ಲರ ಕೃತಜ್ಞತೆಗೂ ಧನ್ಯವಾದಗಳಿಗೂ ಪಾತ್ರರಾಗಿದ್ದಾರೆ.

ಕಾರ್ಕಳ ನಿವಾಸಿ.

ರಾಷ್ಟ್ರಸಭೆಯು ಹೆಸರಿಟ್ಟ 'ಖಾಸಗಿ ಸೊತ್ತು' ಯಾವುದು?

"ಜಗತ್ತಿನಲ್ಲಿ ದಯೆತೋರುವ ಭಾರತೀಯ ಸಂಸ್ಥೆಯೆಂದರೆ ರಾಷ್ಟ್ರಸಭೆ, ನಿರ್ಗತಿಕರ ಹಿತವನ್ನು ಬಯಸುವ ಏಕಮಾತ್ರ ಪಕ್ಷವೆಂದರೆ ಕೊಂಗ್ರೆಸು ಪಕ್ಷ" ಎಂಬ ಭಾವನೆಯು ಹಿಂದೀಯರಲ್ಲಿ ಹುಟ್ಟಿತು. ಈಗ ಮುಂದೆ ಬಂದಿರುವ ಸಮಾಜ ಸಮತಾವಾದಿಗಳು ಆ ಕುರಿತು ಇನ್ನೂ ಮುಂದುವರಿದು ಕೊಂಗ್ರೆಸು ಚಿಂತಿಸುತ್ತಿರುವುದನ್ನೂ ವಾದಿಸಿರುವ ಫಲಕೊಟ್ಟಿರುವರು. ರಾಷ್ಟ್ರಸಭೆಯು ಮೊದಲನೇ ಬಾರಿ ಅಸಹಕಾರವನ್ನು ಹೂಡಿದಾಗ ಆ ವರೆಗೆ ರಾಜಕೀಯದಲ್ಲಿ ಮಿತಿಯನ್ನೇ ಅನುಭವಿಸುತ್ತಿದ್ದ ಹಿಂದೀ ವಾತಾವರಣದಲ್ಲಿ ಭಕ್ತನ ವಿರಬಂಧ ಭರತವು ಒಮ್ಮೆಗೆ ಎಲ್ಲರ ವಿಚಾರಬುದ್ಧಿಯನ್ನೂ ಹಿಮ್ಮೆಟ್ಟಿಸಿತು. ಅದರ ವಿರೋಧಿಗಳೆಂತೆಯೇ ಅನುಯಾಯಿಗಳೂ ವಿಚಾರಶೂನ್ಯರಾಗಿಯೇ ಇದ್ದರು. ಅದು ಅವರವರ ಭಾವನೆಗಳನ್ನು ಅವುಗಳ ರೂಪಕ್ಕನುಸಾರವಾಗಿ ಉದ್ರೇಕಗೊಳಿಸುವಾಗ ಆ ಗೊಂದಲದಲ್ಲಿಯೂ ತನ್ನ ಅರಸ್ತಿಕೆಯನ್ನು ತೋರಿಸುವಷ್ಟು ಕುರುಹು ವಿಚಾರಬುದ್ಧಿಯಲ್ಲಿಲ್ಲ. ವಿರೋಧಿಗಳ ಅಭಿರುಚಿಗದು ವಿರುದ್ಧ; ಹಾಗೆಯೇ ಅನುಯಾಯಿಗಳ ಮನೋವೃತ್ತಿಗೆ ಅನುಕೂಲ—ಹೀಗಾಗಿ ಅಸಹಕಾರವು ಪ್ರತಿಕೂಲ, ಅನುಕೂಲವನ್ನು ಗಳಿಸಿಕೊಂಡಿತು. ಆ ಚಳವಳಿಕ್ಕೆ ಕೆಲಕಾಲದ ಆಯುಷ್ಯವಾದಮೇಲೆ ಅದರ ವಿಮರ್ಶೆಗೆ ಮೊದಲಾಯಿತು. ಈಗ ಕಲಿಯುತ್ತಿ ಬರುತ್ತಿರುವ ಸಮಾಜಸಮತಾವಾದ ಚಳವಳಿಯು ಮೇಲೆ ಹಾಕಿದ್ದ ಅಪವಾದವನ್ನು ತರುವುದಿಲ್ಲ. ಅದರ ಯೋಗ್ಯ ವಿಮರ್ಶೆಯು ಇನ್ನೂ ಬಾಕಿಯಲ್ಲಿದೆ. ಭಾವನೆಯು ಕಾಲ್ಪನಿಕ ಆಧಾರದ ಮೇಲೆ ಅದು ನಿಂತಿದೆ–ಹಾಗೆಯೇ ಮುಂದುವರಿಯುತ್ತಿದೆ. ವಿಚಾರದ ಗಟ್ಟಿಯಾದ ಅಸ್ತಿವಾರವು ಇನ್ನೂ ಹಾಕಲ್ಪಟ್ಟಿಲ್ಲ. ಅದಕೆ ಅದರ ಪಾಲಿನ ಬಹು ಭಾಗವನ್ನು ರಾಷ್ಟ್ರಸಭೆಯು ಮೊದಲೇ ತನ್ನ ಧೋರಣೆಯಲ್ಲಿ ಸೇರಿಸಿಕೊಂಡು ಲೋಕದಿದಿರಲ್ಲಿ ಅದರ ಕುರಿತು ನ್ಯಾಯದ ಬೆಂಬಲವನ್ನು ಸಂಪಾದಿಸಿದೆ. ಸಮಾಜವಾದಿಗಳು ಅದನ್ನು ಅಂಗೀಕರಿಸಿದರೆಂದ ಮಾತ್ರಕ್ಕೆ ಪುನರ್ವಿಮರ್ಶೆಯ ಅಗತ್ಯವಿಲ್ಲ. ಉಳಿದುದು ಕೊಂಗ್ರೆಸಿಗೂ ಸಮಾಜವಾದಿಗಳಿಗೂ ಇರುವ ಭೇದದ ವಿಮರ್ಶೆ. ಅದನ್ನೊಂದಿಷ್ಟು ನೋಡೋಣ.

ಖಾಸಗೀ ಸೊತ್ತು — ರಾಷ್ಟ್ರಸಭೆ — ಸಮತಾವಾದೀಪಕ್ಷ. ಇವುಗಳೊಳಗಿನ ಪ್ರಾಮುಖ್ಯ ಭೇದವೆಂದರೆ ಖಾಸಗೀ ಸೊತ್ತಿನ ರಕ್ಷಣೆಯ ಕುರಿತು. ಸಂಪೂರ್ಣ ಸ್ವಾತಂತ್ರ್ಯವೇ ತನ್ನ ಧ್ಯೇಯವೆಂದು ಸಾರಿದ ಕರಾಚಿ ಕೊಂಗ್ರೆಸು ಖಾಸಗೀ ಸೊತ್ತನ್ನು ರಕ್ಷಿಸುವ ಅಭಯವನ್ನು ಕೊಟ್ಟಿತು. ಇತ್ತೀಚೆಗೆ ಸಮಾಜವಾದವು ಬೆಳೆಯುತ್ತಾ ಬಂದಂತೆ ಕೊಂಗ್ರೆಸಿನ ಅಭಯವಚನವನ್ನು ಇನ್ನಷ್ಟು ಬಿತ್ತಿಹೇಳಿ ಧುರೀಣರು ಸಂಶಯಗ್ರಸ್ತರನ್ನು ಸಂತೈಸಹತ್ತಿರುವರು. ಜಮೀನುದಾರರ ಭಯಭರಿತ ಮನವಿಗೆ ಉತ್ತರವೀಯುವಾಗ 'ಗಾಂಧೀಜೀಯವರು "ನಿಮ್ಮ ಖಾಸಗೀ ಸೊತ್ತಿನ ಕುರಿತು ಅನ್ಯಾಯವು ನಡೆಸಲ್ಪಡುವುದಾದರೆ, ನಾನು ಸದಾ ನಿಮ್ಮ ಪಕ್ಷ ವಹಿಸುವೆನೆಂದು ತಿಳಿಯಿರಿ" ಎಂದಿರುವರು. ಮುಂಬಯಿಯಲ್ಲಿ ಜರಗಿದ ರಾಷ್ಟ್ರಸಭಾ ಕಾರ್ಯಕಾರೀ ಸಮಿತಿಯು 'ಯೋಗ್ಯ ಪ್ರತಿಫಲವನ್ನೀಯದೆ ಯಾವ ಖಾಸಗೀ ಸೊತ್ತನ್ನೂ ಅಪಹರಿಸುವಂತಿಲ್ಲ'ವೆಂದು ನಿರ್ಣಯಿಸಿದುದಲ್ಲದೆ ಕಾಶಿಯ ಸಭೆಯು ಅದನ್ನೇ ಪುನರಾವರ್ತಿಸಿರುವುದು. ಹಿಂದೂದೇಶಕ್ಕೆ ಪೂರ್ಣ ಸ್ವಾತಂತ್ರ್ಯವು ದೊರೆತ ಮೇಲೆ ಗತಕಾಲದ ಅವಶೇಷವೊಂದನ್ನು ರಾಷ್ಟ್ರಸಭೆಯು ದಯೆಯಿಂದ ಕಾಯುವಂತಾಗುವುದೆಂದು ನಂಬಬಹುದು. ಎಲ್ಲವನ್ನೂ ಅಡಿಮೇಲು ಮಾಡಬೇಕೆಂದು ಮುಂದೊತ್ತಿಕೊಂಡು ಬರುತ್ತಿರುವ ಕ್ರಾಂತಿಯೊಂದರಿಂದ ತಪ್ಪಿಸಿ ಚಿರಕಾಲ ಬಾಳುವಂತೆ ಮಾಡಬೇಕೆಂದು ಯಾವ ವಿಷಯವನ್ನು ಕೊಂಗ್ರೆಸು ಬಯಸಿರುವುದೋ, ಆ 'ಖಾಸಗೀ ಸೊತ್ತಿ'ನ ಅರ್ಥವೇನು ಎಂಬುದೀಗ ಪ್ರಶ್ನೆ. 'ಖಾಸಗೀ ಸೊತ್ತು' ಇಷ್ಟರಲ್ಲೇ ನಿಲ್ಲಿಸಿದಿಟ್ಟರೆ ಇದೊಂದು ಒಗಟಾಗುವುದು! ಪ್ರಕೃತದ ಪರಿಸ್ಥಿತಿಯನ್ನು ನೋಡಿದರೆ ನಮ್ಮ ರಾಷ್ಟ್ರೀಯ ಸಂಪತ್ತು ಖಾಸಗೀ ಸೊತ್ತಾಗಿ ವಿಂಗಡಿಸಲ್ಪಟ್ಟಿದೆ. ಅದನ್ನು ಕಾದಿಟ್ಟು ಸ್ವಾತಂತ್ರ್ಯಕ್ಕೆ ರೂಪುಕೊಡಲು ಸಾಧ್ಯವಿಲ್ಲ. ಕೇವಲ ಹಿಂಸೆಗೆ ಹೆದರಿ ಖಾಸಗೀ ಸೊತ್ತನ್ನು ರಕ್ಷಿಸುವ ಭಾಷೆಕೊಟ್ಟಿರುವ ಕೊಂಗ್ರೆಸು ಇಂತಹ ಹಿಂಸೆಗೆ ಎಂದಿಗೂ ಸಮ್ಮತಿಯನ್ನೀಯಲಾರದು. ಹಾಗಾದರೆ ಕೊಂಗ್ರೆಸಿನ ರಕ್ಷಣೆಯಲ್ಲಿ ಬರುವ ಆ ಸೊತ್ತು ಯಾವುದು? ಅದು ಸಮತಾವಾದಿಗಳ ಮುಕ್ಕೆ ಬಲಿಬೀಳುವಂತಹದೆ? ಎಂಬುದೀಗ ಪ್ರಶ್ನೆ. ಸರ್ವ ಸಮತಾವಾದವು ಲೋಕದ ಇತರ ರಾಷ್ಟ್ರಗಳಲ್ಲಿದ್ದಂತೆ ಧನದರ್ಪದ ಬದ್ಧವಿರೋಧಿಯಾಗಿ ನಿಂತಿದೆ. ಆದರೆ ಅದಿಯಾ ಆದೇಶವನ್ನು ನೋಡುವಾಗ ತನ್ನ ವಿರೋಧಿಯನ್ನು ನಾಶಮಾಡಬೇಕೆಂಬುದಾಗಿ ಮಾಡುವುದೇ ಗುರಿಯೆಂಬಂತಿದೆ. ಇದು ನ್ಯಾಯ ಹಾಗೂ ಶಾಂತಿಯನ್ನು ಪ್ರೀತಿಸುವವರನ್ನು ಬೇಸರಕ್ಕೀಡುಮಾಡಬಹುದು. ಹೀಗೆ ಬೇಸರಪಡುವವರು ಬಡವರ ಕುರಿತು ಪಡುವ ಕನಿಕರವು ಏನೂ ಸಾಲದೆನ್ನಬೇಕಾಗುತ್ತದೆ. ಸಮತಾವಾದದ ಧ್ಯೇಯವು ಧನಿಕರ ದಮನವೆಂಬುದು ಸುಸ್ಪಷ್ಟ. ಆದರೆ ಆ ಕೊನೆಯ ಗುರಿಯ ವರೆಗೂ ಈ ವಾದವನ್ನು ಸಾಗಿಸುವ ಅಥವಾ ಮಧ್ಯದಲ್ಲೇ ಶಾಂತಿಯ ನೆಲೆಯಲ್ಲೇ ನಿಲ್ಲಿಸುವ ತೀರ್ಮಾನವು ಧನಿಕರ ಕೈಯಲ್ಲಿದೆ. ಇದರಿಂದ ಸ್ಪಷ್ಟವಾಗುವುದೆಂದರೆ ಕ್ರಾಂತಿಯು ಯಾ ಶಾಂತಿಯು ಆ ಧನಿಕರ ಹೊಣೆಗಾರಿಕೆಯಲ್ಲೇ ಉಳಿದಿರುತ್ತದೆ. ತಪ್ಪನ್ನು ಮಾಡಿ ತೀರ್ಮಾನಿಸಲ್ಪಟ್ಟಿರುವ ಶಿಕ್ಷೆಯನ್ನನುಭವಿಸುವ ರೀತಿಯಲ್ಲೇ ಅವರು ವರ್ತಿಸುತ್ತಾ ಬಂದರೆ ಯಾರೇನು ಮಾಡಬಲ್ಲರು?

ನ್ಯಾಯವಾದ ಹಕ್ಕು— ಸಾಮ್ಯವಾದವು ಎಲ್ಲವನ್ನೂ ಸಮತಟ್ಟುಗೊಳಿಸುವಾಗ ಹಾಗೆ ಆಗಲು ಸಾಧ್ಯವಿಲ್ಲದ ಕೆಲವು ಸಂಗತಿಗಳು ಪ್ರಪಂಚದಲ್ಲಿವೆ. ರಾಷ್ಟ್ರಹಿತಕ್ಕೆ–ಸಾಮುದಾಯಿಕ ಪೋಷಣೆಗೆ ಅಗತ್ಯವಿರುವ ಕೆಲವು ವಿಶೇಷಗಳು ಹಲವೊಂದು ವ್ಯಕ್ತಿಗಳಲ್ಲಿ ಇರುವುದುಂಟು. ಎಲ್ಲವೂ ಸಾಮ್ಯವಾದದ ಕ್ರಾಂತಿಗೆ ಬಲಿಯಾಗಬೇಕೆ? ಸಾಮ್ಯವಾದವೆಂದರೆ ಯಾಂತ್ರಿಕ ಚಳವಳಿಯಲ್ಲ. ರಾಷ್ಟ್ರಹಿತದ ದೃಷ್ಟಿಯಿಂದ ಹಿತಾಹಿತವನ್ನು ಗಣಿಸುತ್ತಾ ಸಜೀವವಾಗಿ ಮುಂದುವರಿಯಬೇಕಾದ ಚಳವಳಿ. ಇದು ತನ್ನ ಇದಿರಿನ ಪಥದಲ್ಲಿ ಅಮೂಲ್ಯವಾದುದು ದೊರೆತಾಗ ಅದಕ್ಕೆ ಪೋಷಣೆಯೀಯುವ ಕೆಲಸವನ್ನು ಮಾಡಬೇಕಾಗಿದೆ. ವ್ಯಕ್ತಿಯನ್ನು ಸಂಘದೊಡನೆ ಮಿಲನಮಾಡುವಾಗ ಈ ವ್ಯಕ್ತಿಗೆ ಬೇಕಾಗಿ ಅತನಲ್ಲಿರುವ ವಿಶಿಷ್ಟತೆಯನ್ನು ಬಿಟ್ಟುಬಿಡಬೇಕೆಂದರೆ ಪ್ರಪಂಚದ ಸ್ವರವೊಂದನ್ನು ಕೆಡಿಸಿದಂತಾಗುವುದು. ಲೋಕಸೌಂದರ್ಯವೊಂದನ್ನು ಕಳಕೊಂಡಂತಾಗುವುದು. ಸಾಮ್ಯಕ್ಕಾಗಿ ಅಮೂಲ್ಯವನ್ನು ದಮನಿಸುವುದಲ್ಲ. ಆದರೆ ಆ ಅಮೂಲ್ಯವೆಂಬುದು ದೇಶದ ಉತ್ತಮ ಸೊತ್ತುಗಳ ಸಾಲಿನಲ್ಲಿರಬೇಕು. ನಾವು ಸಾಮ್ಯವಾದಂತಹ ಕ್ರಾಂತಿಯ ಕಾಲದಲ್ಲಿ ಪ್ರತಿಯೊಂದನ್ನು ಈ ದೃಷ್ಟಿಯಿಂದ ವಿಮರ್ಶಿಸಿ ನೋಡಿದರೆ, ಮೇಲುಕೀಳನ್ನು ಕಂಡುಹಿಡಿಯಲಾಗುತ್ತದೆ. ರಾಷ್ಟ್ರಸಭೆಯು ಹೆಸರಿಟ್ಟ ಖಾಸಗೀ ಸೊತ್ತು ಇದೇ ಜಾತಿಯದಾದರೆ ಅದರ ಪೋಷಣೆಯು ಅಗತ್ಯ. ಇಂದು ಕೇವಲ ಹೆಸರಿನ ಆಧಾರದ ಮೇಲೆಯೇ ಕೊಂಗ್ರೆಸು—ಸಾಮ್ಯವಾದೀ ಪಕ್ಷಗಳು ವಾದವನ್ನು ಬೆಳೆಸುತ್ತಾ ಬಂದಿವೆ. ಮುಂಬಾಯಿ ಕೊಂಗ್ರೆಸಿನಲ್ಲಿ ಇದರ ಸ್ಪಷ್ಟವಾದ ಆಕಾರವನ್ನು ತಿಳಿಸಬೇಕೆಂಬ ಠರಾವು ಬರಲಿರುವುದರಿಂದ ರಾಷ್ಟ್ರಸಭೆಯು ಹೆಸರಿಟ್ಟ ಖಾಸಗೀ ಸೊತ್ತು ಯಾವುದು ಎಂಬುದನ್ನು ತಿಳಿಯಲನುಕೂಲವಿದೆ. ವಿಮರ್ಶಕರಿಗೆ ನಿಜವಾದ ವಿಷಯವು ಆಗ ದೊರೆಯುವುದು.

M. V. H.

ಅಂಕೆಶಯಂಿನ ಓರ್ವ ಅಂಧನಾರಿಯು, ೧೩ ವರ್ಷಗಳ ನಂತರ ಥಕ್ಕನೆ ದೃಷ್ಟಿಶಕ್ತಿ ಪಡೆದು, ಡಾಕ್ಟರರನ್ನು ಬೆರಗುಗೊಳಿಸಿರುವಳು.

ಬೊಂಬಾಯಿಯ ಮುಸ್ಲಿಂ ಯುವಕನೊಬ್ಬನು ವಿನಾಕಾರಣವಾಗಿ ತನ್ನ ಹೆಂಡತಿಯನ್ನು ಹಿಂಸಿಸಿ, ಆಕೆಯ ರೋದನವನ್ನು ಕಾಳಲಾರದೆ ಮಹಡಿಯಿಂದ ಕೆಳಗೆ ನೆಗೆದು ಆಸ್ಪತ್ರೆಗೆ ಸಾಗಿಸಲ್ಪಟ್ಟನು.

ಹಿಂದೂದೇಶದೊಳಗಿನ ಆರು ಕ್ರಿಶ್ಚಿಯನ್ ಕಾಲೇಜುಗಳಿಗೆ ಇನ್ನು ೧೩೦೦೦೦ ಪವನುಗಳ ಸಹಾಯಧನವು ಅವಶ್ಯವಿದೆಯೆಂದು ಲಂಡನಿನ "ಟೈಮ್ಸ್" ಪತ್ರಿಕೆಯಲ್ಲಿ ಕ್ರೈಸ್ತ ಗುರುಗಳ ಮತ್ತು ಮುಖಂಡರ ವಿನಂತಿಯೊಂದು ಪ್ರಕಟವಾಗಿದೆ.

ಟೆಲಿಗ್ರಾಫ್ ಮೂಲಕ ಅಸ್ಟ್ರೇಲಿಯಾದಿಂದ ಇಂಗ್ಲೆಂಡಿಗೆ ಚಿತ್ರಗಳನ್ನು ಕಳುಹಿಸಲಾರಂಭವಾಗಿದೆ.

ಪಂಡಿತ ಮಾಲವೀಯರು ತೀರಾ ಅಸ್ವಸ್ಥವಾಗಿರುವರು. ಕಲ್ಕತ್ತೆಗೆ ಚಿಕಿತ್ಸೆ ಬಗ್ಗೆ ಹೋಗಿರುವರು.

ಮುರಿಗೇರುವ ಆಟಗಳನ್ನು ಪ್ರತಿಬಂಧಿಸಬೇಕೆಂದು ಬಸ್ಸೂರ್ ಮುನಿಸಿಪಾಲಿಟಿಯು ಆಜ್ಞೆ ಹೊರಡಿಸಿದೆ.

ಎಸೆಂಬ್ಲಿ ಓಟರರಲ್ಲಿ ವಿನಂತಿ.

ರಾಜಕೀಯ ವಿಷಯಗಳಲ್ಲಿ ನನ್ನ ಅಭಿಪ್ರಾಯದ ವಿಷಯದಲ್ಲಿ ಸಂದೇಹವನ್ನು ವ್ಯಕ್ತಪಡಿಸುವುದನ್ನು ನೋಡಿದೆ. ದಕ್ಷಿಣ ಕನ್ನಡದ, ಮುಖ್ಯವಾಗಿ ದೂರದ ಎಸೆಂಬ್ಲಿಯ ಚುನಾವಣೆಯಲ್ಲಿ ನನ್ನನ್ನು ಸರ್ವಾಂಗೀಣ ಅವರಲ್ಲಿರುವುದೂ ಸ್ವಾಭಾವಿಕವೆ. ಪ್ರಸ್ತುತದ ಲೇಖನ

ಯನ್ನು ಬರೆಯುತ್ತೇನೆ: ಆ ಜಿಲ್ಲೆಯ ಉತ್ಕೃಷ್ಟ ಹೈಸ್ಕೂಲುಗಳಲ್ಲಿ ಒಂದಾಗಿದೆ ಎಂಬ ಪ್ರಸಿದ್ಧಿಯನ್ನು ಈ ಹೈಸ್ಕೂಲು ಪಡೆದಿದೆ. ೧೩ ವರ್ಷಗಳಿಂದ ತಾಲೂಕು ಬೋರ್ಡು, ಡಿ. ಬೋರ್ಡುಗಳ ಸದಸ್ಯನಾಗಿದ್ದು ಲೋಕಲ್ ಫಂಡ್ ಸಂಸ್ಥೆಗಳಲ್ಲಿ ಹೆಚ್ಚಿನ ಆಸಕ್ತಿಯನ್ನು ವಹಿಸುತ್ತಿದ್ದೇನೆ. ಹೊಸ ಕೌನ್ಸಿಲುಗಳ ಪ್ರಾರಂಭವಾದಾಗ, ೧೯೨೧ರಲ್ಲಿ ದಕ್ಷಿಣ ಕನ್ನಡ, ಮಲಬಾರ್, ನೀಲಗಿರಿಗಳ ವರ್ಗದಾರರ ಪ್ರತಿನಿಧಿಯಾಗಿ ಮದ್ರಾಸಿನ ನ್ಯಾಯವಿಧಾಯಕ ಸಭೆಗೆ ಉಮೇದುವಾರನಾಗಿ ನಿಂತು ಪ್ರಬಲ ಬಹುಮತದಿಂದ ಚುನಾವಣೆ ಹೊಂದಿದೆ. ಎರಡನೆಯ ಕೌನ್ಸಿಲಿನ ಅವಧಿಯಲ್ಲಿಯೂ ವರ್ಗದಾರರ ಪ್ರತಿನಿಧಿಯಾಗಿ ಕೌನ್ಸಿಲಿನಲ್ಲಿದ್ದೆ. ಹಿಂದೂಮತ ಸಂಸ್ಥೆಗಳ ಕಾನೂನು, ಮಲಬಾರ ಒಕ್ಕಲುತನದ ಕಾನೂನು—ಇವುಗಳ ಬಗ್ಗೆ ನಾನು ಪಟ್ಟ ಶ್ರಮವನ್ನು, ಕೌನ್ಸಿಲಿನ ಸಕಲ ಪಕ್ಷದವರೂ ಅಭಿನಂದಿಸಿದರು.

೧೯೩೦ರಲ್ಲಿ, ಪಶ್ಚಿಮ ಕರಾವಳಿ ನೀಲಗಿರಿಗಳಿಂದ ಪ್ರತಿಸ್ಪರ್ಧಿಗಳಿಲ್ಲದೆ, ಎಸೆಂಬ್ಲಿಗೆ ಚುನಾವಣೆ ಹೊಂದಿದೆನು. ಎಸೆಂಬ್ಲಿಯೊಳಗೆ ವಿರೋಧಪಕ್ಷಕ್ಕೆ (Opposition) ದಿವಾನ್ ಬಹದ್ದೂರ್ ಟಿ. ರಂಗಾಚಾರ್ಯರು ನಾಯಕರಾಗಿದ್ದಾಗ ಆ ಪಕ್ಷವನ್ನು ಸೇರಿದೆ. ಅನಾರೋಗ್ಯದ ದೆಸೆಯಿಂದ ಅವರು ನಿವೃತ್ತರಾದ ಮೇಲೆ, ಪ್ರಜಾಸತ್ತಾವಾದಿಗಳ ಪಕ್ಷ (Democratic Party)ವನ್ನು ನಾವು ಸ್ಥಾಪಿಸಿದೆವು. ಇದು ವಿರೋಧ ಪಕ್ಷದವರ ಇನ್ನೊಂದು ಸಂಗಡವೆಂದು ಪರಿಗಣಿಸಲ್ಪಟ್ಟಿದೆ. ವಿರೋಧ ಪಕ್ಷಕ್ಕೆ ಸೇರಿದವನಾಗಿ, ಕಳೆದ ನಾಲ್ಕು ವರ್ಷಗಳಿಂದಲೂ ಸರಕಾರಕ್ಕೆ ವಿರೋಧವಾಗಿಯೇ ನಾನು ಮತದಾನ ಮಾಡುತ್ತಿದ್ದುದು ಎಲ್ಲರಿಗೂ ತಿಳಿದ ವಿಚಾರ. ಪ್ರೆಸ್ ಆಕ್ಟ್, ಕ್ರಿಮಿನಲ್ ಕಾನೂನಿನ ತಿದ್ದುಪಡಿ, ಆಶ್ರಿತ ರಾಜರ ಸಂರಕ್ಷಣೆಯ ಮಸೂದೆ, ಮತ್ತು ತೆರಿಗೆಯೇರಿಸುವ ಎಲ್ಲ ಸೂಚನೆಗಳಿಗೆ ನಾನು ಪ್ರಬಲ ವಿರೋಧಿಯಾಗಿದ್ದೆ.

ವಿರೋಧ ಪಕ್ಷದ ನಾಯಕರಾದ ಶ್ರೀ. ಸರ್ ಅಬ್ದುರ್ ರಹಿಮಾನರೂ, ನನ್ನ ಸಂಗಡದ ನಾಯಕರಾದ ಶ್ರೀ. ಕೆ. ಸಿ. ನಿಯೋಗಿಗಳೂ, ನನ್ನ ಮತದಾರರ ವರ್ಗಕ್ಕೆ ಬರೆದ ಪತ್ರದಲ್ಲಿ ತೋರುವಂತೆ (ಇದನ್ನು ಇಲ್ಲಿ ಪ್ರಕಟಿಸಲಾಗುವುದು) ರಿಜರ್ವ ಬ್ಯಾಂಕ್, ಟೆಕ್ಸ್‌ಟೈಲ್ ಬಿಲ್ ಮೊದಲಾದುವುಗಳಲ್ಲಿ ನಾನು ಆಸಕ್ತಿಯನ್ನು ವಹಿಸಿದ್ದೆನು. ಇದು ಬಹಳ ಪ್ರಶಂಸಿಸಲಾಗಿದೆ. ಸ್ಥಳೀಯ ಜನರಿಗೆ ಸಂಬಂಧಪಟ್ಟ ವಿಷಯಗಳಲ್ಲಿ ನಾನು ಸಾಧ್ಯವಿದ್ದಷ್ಟು ಪ್ರಯೋಜನವನ್ನು ಮಾಡಿದ್ದೇನೆ. ಈ ಕೌನ್ಸಿಲುಗಳೂ, ಎಸೆಂಬ್ಲಿಯೂ, ಕೇವಲ ಆಡಳಿತಗಾರರಿಗಾಗಿರುವುದರಿಂದ ಸಾಮಾಜಿಕ ಮತ್ತು ಧಾರ್ಮಿಕ ಸುಧಾರಣೆಗೆ ಹೊರಡುವುದಕ್ಕೆ ಇವು ಸಮರ್ಥವಾಗಿಲ್ಲ ಎಂಬುದು ನನ್ನ ವಿಶ್ವಾಸವಾಗಿದೆ.

ನನ್ನ ಮತದಾರರ ವರ್ಗವು, ವಿಶ್ವಾಸವಿಟ್ಟು ನನ್ನನ್ನು ಎಸೆಂಬ್ಲಿಗೆ ಕಳುಹಿಸಿದ ಪಕ್ಷದಲ್ಲಿ, ಇದೇ ಧೋರಣೆಯನ್ನು ನಾನು ಮುಂದೆಯೂ ಅನುಸರಿಸುವುದಲ್ಲದೆ, ನನ್ನ ಸಮಯ ಮತ್ತು ಅನುಭವಗಳನ್ನು ದೇಶದ ಪ್ರಯೋಜನಕ್ಕಾಗಿ, ಮುಖ್ಯವಾಗಿ ನನ್ನ ಮತದಾರರ ಹಿತಕ್ಕಾಗಿ, ಉಪಯೋಗಿಸುವೆನೆಂದು ನಾನು ಭರವಸೆ ಕೊಡುತ್ತೇನೆ.

ಮಂಗಳೂರು, ತಾ. 8-10-1934.

ಕೆ. ಪ್ರಭಾಕರ ತಂಬಾನ್.

ಗಳು ... ಮಣಿಕ್ಕೆ ರೂ. ೧೧-೦-೦. ... ಮಣಿಕ್ಕೆ ರೂ. ೧೦... ಮಣಿಕ್ಕೆ ರೂ. ೧೦. ನೇಟಿವ್ ... ಮಣಿಕ್ಕೆ ರೂ. ೧೫. ರೋಬಸ್ಟ ಮಣಿಕ್ಕೆ ರೂ. ೯-೮-೦. ... ಮಣಿಕ್ಕೆ ರೂ. ೩-೦-೦. ಏಲಕ್ಕಿ ಮಣಿಕ್ಕೆ ರೂ. ೩೦-೦-೦. ಸಣ್ಣಕ್ಕಿ ... ೧೪-೮-೦. ಬೆಜವಾಡ ಅಕ್ಕಿ ಮಣಿಕ್ಕೆ ರೂ. ೧೩-೮-೦. ಕುಚಲಕ್ಕಿ ಮಣಿಕ್ಕೆ ರೂಪಾಯಿ ೧೩-೦-೦. ರಾಗಿ ಮಣಿಕ್ಕೆ ರೂ. ೬-೦-೦. ಕೊತ್ತಂಬರಿ ಮಣಿಕ್ಕೆ ರೂ. ೬-೮-೦. ಸಾಸುವೆ ಮಣಿಕ್ಕೆ ರೂ. ೧೧. ಮೆಣಸಿನ ಕಾಯಿ ಮಣಿಕ್ಕೆ ರೂ. ೫. ಬೆಲ್ಲ ಮಣಿಕ್ಕೆ ರೂ. ೩-೪-೦ ತೆಂಗಿನ ಹಣ್ಣು ಸಾವಿರಕ್ಕೆ ರೂ. ೧೦ರಿಂದ ೩೦ರ ವರೆಗಿದೆ.

ಮಂಗಳೂರಲ್ಲಿ ಗೋಣಿ ಅಕ್ಕಿಯು ಕುಂಟುತ್ತಿದೆ.

ಮಂಗಳೂರಿನ ಪೇಟೆಧಾರಣೆ

ಸಾಮುಗ್ರಿಗಳು	ಇಂದ	ವರೆಗೆ
	ರೂ. ಆ	ರೂ. ಆ
ರಾಶಿ ಅಕ್ಕಿ ...	4— 2	4— 8
ಮುಸ್ರಂ ...	4— 4	5—
ಗುಬ್ಬು ...	4— 4	4—10
ಸುಗ್ಗಿ ...	4— 4	4—10
ಊರ ಅವ್ವಲ್ ಬೆಳ್ತಿಗೆ ...	4—12	5— 4
ರಂಗೂನು ಬೆ. ಗೋ. ಗಳ್ಳಿ...	6— 0	6— 4
ಎಲ್ಲೂರು ಬೆ. ಮು. ಗಳ್ಳಿ...	4— 0	4— 0
ಗೋದಿ ಗೋಣಿ ಗಳ್ಳಿ ...	10— 0	12— 8
ಕೊಗರ ಗೋಣಿ ಗಳ್ಳಿ ...	9— 8	10— 0
ಹುರುಳಿ ಗೋಣಿ ಗಳ್ಳಿ ...	7 — 6	7—10
ಅಲಸಂದೆ ಗೋಣಿ ಗಳ್ಳಿ ...	7 — 8	8— 0
ಕೊಂಗಂಬೇಳೆ ಗೋಣಿ ಗಳ್ಳಿ...	10— 0	17— 0
ಉದ್ದು ಗೋಣಿ ಗಳ್ಳಿ ...	7— 0	7— 8
ಹೆಸರು ಗೋಣಿ ಗಳ್ಳಿ ...	7— 0	7— 8
ಊರುಬೆಲ್ಲ ಖಂಡಿ ಗಳ್ಳಿ ...	40— 0	45— 0
ಉಪ್ಪು ಗೋಣಿ ಗಳ್ಳಿ ...	5— 4	5— 8
ಕೊಪ್ರ ಖಂಡಿ ಗಳ್ಳಿ ...	40— 0	42— 0
ಕೊಪ್ರ ಹಿಂಡಿ ಖಂಡಿ ಗಳ್ಳಿ...	19— 0	19— 8
ಎಳ್ಳಿಂಡಿ ಖಂಡಿ ಗಳ್ಳಿ ...	23—12	27— 0
ಕೊಪ್ರ ಎಣ್ಣೆ ಮುಣ ಗಳ್ಳಿ...	2—15	3—14
ಎಳ್ಳೆಣ್ಣೆ ಮುಣ ಗಳ್ಳಿ ...	5— 0	5— 8
ಮಾರಿಶಸ್ ಸಕ್ಕರೆ ಪಟ್ಟಿಗೆ ಗಳ್ಳಿ...	6— 8	8— 0
ಮೋರಿಸ ಸಕ್ಕರೆ ಮು. ಗಳ್ಳಿ...	3—10	3—14
ಮೆಣಸು ...	7— 0	7— 8
ಸಾಸಿವೆ ಮುಡಿ ಗಳ್ಳಿ ...	4— 8	5— 4
ಕಾಳುಮೆಣಸು ಖ. ಗಳ್ಳಿ ...	136— 8	137— 8
ಯೇಲಕ್ಕಿ ಮುಣ ಗಳ್ಳಿ ...	18— 0	22— 0
ಹೊಸ ಗೇರುಬೀಜ ಮು. ಗಳ್ಳಿ	3— 4	3— 5
ಕಪ್ಪಣ ಖಂಡಿ ಗಳ್ಳಿ ...	42— 0	44— 0
ತಾಂಬ್ರಕಗಡು ಮು. ಗಳ್ಳಿ...	10— 0	10—0
ತಾಂಬ್ರಪಾತ್ರೆಗಳು ಮು. ಗಳ್ಳಿ	13— 0	14— 8
ಅಚಿಟೆಲ್ಲಿ ಸೇರು ಗಳ್ಳಿ ...	14—12	15— 0
ಹಿತ್ತಾಳೆ ತಗಡು ಮು. ಗಳ್ಳಿ...	9— 0	9— 8
ಸಪಸು ಗಳ್ಳಿ ...	20—10	21— 0
ಹುಣಸೆ ಹುಳಿ ಖಂಡಿ ಗಳ್ಳಿ	30— 0	35— 0
ನೇಟಿವ್ ಕಾಫಿ ಖಂಡಿ ಗಳ್ಳಿ	182— 0	198— 0
ಫೀಬೇರಿ ಕಾಫಿ ಖಂಡಿ ಗಳ್ಳಿ...	296— 8	280— 8
ಹಳೆ ಅಡಿಕೆ ...	118— 0	124— 0
ಹೊಸ ಅಡಿಕೆ ...	62— 0	92 — 0

ನಿಮ್ಮ ಆರೋಗ್ಯವು ಈ ಚಿಕ್ಕ ಗುಳಿಗೆಗಳಲ್ಲಿ

ಸುಭದ್ರವಾಗಿದೆ.

ನೂತನ! ರುಚಿಕರ! ಹಿತಕರ!

ಹರಳೆಣ್ಣೆ ಮಿಶ್ರಿತವಾದ ಸಿಹಿ ಚೊಕಲೇಟು—

ಕೇಸ್—ಫೇನ್—ಮಿಂಟ್

ಹರಳೆಣ್ಣೆ, ಅಗರ್—ಅಗರ್, ಪೆನಲ್‌ಥ್ಯಾಲೀನ್, ಪೆಪ್ಪರ್‌ಮಿಂಟ್ ಮತ್ತು ಚೊಕಲೇಟು, ಇವುಗಳನ್ನು ಸೇರಿಸಿ ಸೇವಿಸಲು ಹಿತಕರವಾಗುವಂತೆಯೂ, ಆಬಾಲವೃದ್ಧರೆಲ್ಲದೆ ಸಕಲರಿಗೂ ಯಾವ ಕಾಲಕ್ಕೂ ಸುಖಭೇದಿಗಾಗಿ ಅನುಕೂಲವಾಗುವಂತೆ ಇದು ತಯಾರಿಸಲ್ಪಟ್ಟಿದೆ. ಮಲಬದ್ಧತೆಯು ಹಲವು ಭಯಂಕರ ರೋಗಗಳನ್ನು ತರಬಲ್ಲುದು. ಮಲಬದ್ಧತೆ ತೋರಿದಾಗಲೆಲ್ಲ "ಕೇಸ್—ಫೇನ್—ಮಿಂಟ್"ನ್ನು ಸೇವಿಸಿರಿ. ಈ ಚೊಕಲೇಟುಗಳನ್ನು ಒಂದೆರಡು ಸೇವಿಸಿದರೆ ಅನೇಕ

ಈ ಹೆಸರುಗಳೇನು,—ಓದಿರುವಿರಾ?

ವಾತ—ಪಂಡುವಾತ—ಸಂಧಿವಾತ—ಕಟಿವಾತ—ತಲೆಶೂಲೆ—ನರದೌರ್ಬಲ್ಯ.....!!!!

ಇವುಗಳಿಗೆ ಹೆದರದವರಾರು? ಇವುಗಳೆಷ್ಟು ಜನರನ್ನು ಕಾಡುತ್ತಿವೆ!

ಡಾ॥ ಫೌಯುವರ ಕೆಚೆಟ್ಸ್

ಸೇವನೆಗೆ ಕಷ್ಟವಿಲ್ಲ, ಅರ್ಧ ಬಟ್ಟಲು ನೀರಿನಲ್ಲಿ,— ನೋವು ತಲೆದೋರಿದಾಗಲೆಲ್ಲ— ಈ ಕೆಚೆಟುಗಳನ್ನು ಹಾಕಿ ಸೇವಿಸಿದರೆ— ಅದು ಹೇಗೆ ಗುಣಕಾರಿಯಾಗಿ ಕಾರ್ಯಾರಂಭ ಮಾಡುವುದೆಂಬುದನ್ನು ಆಗಲೇ ಅನುಭವ ಮಾಡುವಿರಿ.

ಕೆಲವೇ ನಿಮಿಷಗಳಲ್ಲಿ ಖಂಡಿತ ಗುಣಲಾಭ!

ನರಗಳ ದೌರ್ಬಲ್ಯ ಸಂಬಂಧವಾದ ಉಪದ್ರಗಳನ್ನೂ ಪರಿಹರಿಸುವುದು.

ಕೊಂಡುಕೊಂಡೇ ಅವನ್ನು ಪರೀಕ್ಷಿಸಿರಿ.

'ಕೆಚೆಟು'ಗಳು ನಿರಪಾಯವಾಗಿ, ಭರವಸೆಯಿಂದ ಸೇವಿಸಲ್ಪಡಲು ಯೋಗ್ಯವಾಗಿವೆ.

ಸಂದೇಹವಿಲ್ಲದೆ ಇಂದೇ ಅವುಗಳ ಗುಣಪರೀಕ್ಷೆ ನಡೆಯಲಿ.

ಯಾಸವಾದ ಸುಖಭೇದಿ! ಕರುಳುಗಳ ವಿಕಾರವಿಲ್ಲ! ಜಿಗುಪ್ಸೆ ಹುಟ್ಟಿಸುವುದಿಲ್ಲ! ಹೊಟ್ಟೆಯೊಳಗೆ ಯಾವ ವೇದನೆಯೂ ಇಲ್ಲ. ಮಕ್ಕಳು ಆನಂದದಿಂದ ಸೇವಿಸುವರು.

ಬಲು ಕಡಿಮೆ ಕ್ರಯ! ಎಲ್ಲೆಲ್ಲಿಯೂ ದೊರೆಯುವುದು. ಅತಿ ಹೆಚ್ಚು ಫಲ!

The Paragon Products Co., Ballard Estate, Bombay.

ದ. ಕ. ಜಿಲ್ಲೆಯ ಡಿಸ್ಟ್ರಿಬ್ಯೂಟರರು:— M. K. Prabhu, MANJESHWAR + S. KANARA.

"ಮಿತಸಂತತಿ'—ಮಿತಸಂತತಿ" ಎಂದು ಹಲುಬಿದರೆ ಫಲವಿಲ್ಲ;

ಪ್ರೊರೆಸ್ ಕೇಪ್ ಪೆಸರಿ

ವೆಂಬ ಈ ಅಮೂಲ್ಯ ಚೀಲವನ್ನುಪಯೋಗಿಸುವುದರಿಂದ ಮಿತಸಂತತಿಯು ಸೂತ್ರವು ಪರಿಪಾಲಿಸಲ್ಪಡುವುದು. ಈ ಚೀಲದ ಉಪಯೋಗವನ್ನು ಪ್ರಸಿದ್ಧ ವೈದ್ಯರೂ ಡಾ॥ ಮೇರಿಸ್ಟೋಪರೂ ಪರೀಕ್ಷಿಸಿ ಜಗತ್ತಿಗೆ ಶಿಫಾರಸು ಮಾಡಿರುವರು.

1 ಆಣೆ ಅಂಚೆ ಚೀಟುರವಾನಿಸಿದರೆ ಕೆಟಲಾಗು ಕಳುಹಿಸುತ್ತೇವೆ.

ಪ್ರೊರೆಸ್ ಚಿನೊಸೊಲ್ ಸೊಲ್ಯುಬ್ಲ್ಸ (Prorace Chinosal Solubles)

ಎಂಬುದನ್ನು ಇದರೊಡನೆ ಉಪಯೋಗಿಸಿರಿ. ಇದು ದ್ರಾವಕವಸಂತಿದೆ.

ಪ್ರೊರೆಸ್ ಎಂಬ ಹೆಸರುಳ್ಳದು ಸರ್ವೋತ್ಕೃಷ್ಟ! ಇದರ ಕ್ರಯ ಒಂದು ಟಿನ್ನಿಗೆ ರೂ. 2—0—0 (ಹನ್ನೆರಡು ಬಾಟ್ಲಿಗಳಿವೆ.)

ಮುಖ್ಯ ಪ್ರವರ್ತಕರು:—The Pioneer Book Depot,
375/375 Esplanade Road, Madras.

ಮಂಗಳೂರು ಏಜಂಟರು:—
ದಿ ಮಂಗಳೂರು ಟ್ರೇಡಿಂಗ್ ಎಸೊಸಿಯೇಶನ್ ಲಿಮಿಟೆಡ್, ಮಂಗಳೂರು.

'ಜವಾಹಿರ್' ಚಿಮ್ಣಿ ಎಣ್ಣೆ

ರಾತ್ರಿಯಲ್ಲಿ ಸೂರ್ಯನಂತೆ ಪ್ರಕಾಶಕೊಡುವುದೆಂದರೆ ಇದೇ

'ಜವಾಹಿರ್' ಚಿಮ್ಣಿ ಎಣ್ಣೆ

ನಿಮ್ಮೂರಲ್ಲಿ ಇದು ಮಾರಲ್ಪಡುತ್ತಿದೆಯೋ? ಇಲ್ಲವಾದರೆ ಕೂಡಲೇ ಏಜನ್ಸಿಗಾಗಿ ಬರೆದುಕೊಳ್ಳಿರಿ.

ವಿಳಾಸ:—

T. Madhava Pai,
Distributor, Kasargod, S. K.

ನೋಟೀಸು.

ಕುಂದಾಪುರ ಡಿಸ್ಟ್ರಿಕ್ಟ್ ಮುನ್ಸೀಫ್ ಕೋರ್ಟಿನಲ್ಲಿ.

O. S. No. 438/'34

ವಾದಿ—ಅನಂತ ಕಾರಂತ.
ಪ್ರತಿವಾದಿ—ಗೋವಿಂದರಾಯ.

ಸದ್ರಿ ವಾದಿಯು ಸದ್ರಿ ಪ್ರತಿವಾದಿಯ ಮೇಲೆ ಗೇಣಿ ಬಾಕಿ ಬಗ್ಗೆ ಆಸ್ತಿ ಸ್ವಾಧೀನತೆ ಬಗ್ಗೆ ಕೂಡಾ ಮೇಲ್ಕಂಡ ದಾವೆಯನ್ನು ದಾಖಲು ಮಾಡಿದ್ದಾನೆ. ಸದ್ರಿ ದಾವೆಯು ತಾ. 29—10—'34ಕ್ಕೆ ತನ್ನಿಗೆ ಇಟ್ಟಿರುತ್ತದೆ. ಆ ದಿವಸ ಹಗಲು 11 ಘಂಟೆಗೆ ಸದ್ರಿ ಪ್ರತಿವಾದಿಯು ಕೋರ್ಟು ಮುಂದೆ ಹಾಜರಾಗಲಿಕ್ಕೆ ತಪ್ಪಿದಲ್ಲಿ ಸದ್ರಿ ಪ್ರತಿವಾದಿಯ ಗೈರಹಾಜರಿಯಲ್ಲಿ ಸದ್ರಿ ನ್ಯಾಯವನ್ನು ಕೇಳಿ ತೈಸಲು ಮಾಡೋಣಾದೀತು.

ಮೊಕ್ಕಾಂ ಕುಂದಾಪುರ, 22—10—1934. B. Mahabala Holla, Advocate for Plaintiff

ಶಾಲಿವಾಹನ ಬ॥ ಶಕ ೧೮೫೬ನೆಯ ಭಾವ ಸಂವತ್ಸರದ ಆಶ್ವೀಜ ಬ॥ ೫ ಶನಿವಾರದಿಂದ— ಆಶ್ವೀಜ ಬ॥ ೧೩ ಶುಕ್ರವಾರದ ವರೇಗಿನ ಪಂಚಾಂಗ. (೧೯೩೪ನೇಯ ಸಿಂಹಸೋಣ

ತಾರೀಕು	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ಸೌರಮಾನ	ಸೂರ್ಯ ಉ.	ಸೂರ್ಯ ಅಸ್ತ	ವಿಶೇಷ
27	ಶನಿ	೫	೪೦	ಮೃಗಶಿರಾ	೨೨	೧೦	6.22	6.18	*
28	ರವಿ	೬	೪೪	ಆರ್ದ್ರಾ	೨೭	೧೧	6.22	6.17	
29	ಸೋಮ	೭	೪೯	ಪುನರ್ವಸು	೩೩	೧೨	6.22	6.17	
30	ಮಂಗಳ	೮	೫೪	ಪುಷ್ಯ	೩೯	೧೩	6.22	6.16	
31	ಬುಧ	೯	೫೯	ಆಶ್ಲೇಷ	೪೫	೧೪	6.22	6.15	
1	ಗುರು	೧೦	೬೦	ಮಘ	೫೨	೧೫	6.22	6.14	
2	ಶುಕ್ರ	೧೦	೪	ಪುಬ್ಬ	೫೬	೧೬	6.22	6.14	

ಸ್ಕಿಬ್ಬ್ಸ್ ಎಗ್ಯೂ ಸ್ಪೆಸಿಫಿಕ್

ಕೋಟ್ಯಾಧೀಶನಿಗೂ ಜನಕೋಟಿಗೂ ಇದುವೇ ರಾಜಮದ್ದು

ಮಲೆಜ್ವರ, ಇನ್‌ಫ್ಲುಯಂಜಾ ಮತ್ತು ಜ್ವರಗಳನ್ನು ಗುಣಪಡಿಸುತ್ತದೆ;

ಮೆಡನ್ ಸನ್ಸ್ ಎಂಡ್ ಕೋ., ಬೊಂಬಾಯಿ, 2.

MADON SONS & Co
PHARMACEUTICAL CHEMISTS, BOMBAY

ನಾಯಕ್ ಬ್ರದರ್ಸರ

ಶ್ರೀಮದ್ಭುವನೇಂದ್ರ ಮಹೌಷಧಾಲಯ, ಕಟಪಾಡಿ, ದ.ಕ.

ಪಾರಂಪರ್ಯದ ಅನುಭವಸಿದ್ಧೌಷಧಗಳು! ಸ್ವರ್ಣ, ರಜತ ಪದಕಗಳನ್ನು ಪಡೆದ ದಿವ್ಯೌಷಧಗಳು

ಮೃಧ್ವಿಕಾಸವ (ನಿಶ್ರಾಣಕ್ಕೆ ಅತ್ಯಂತ ಗುಣಕಾರಿ)
ಮಹಾಮದನ ಕಾಮೇಶ್ವರೀ ಲೇಹ್ಯ—(ನಪುಂಸಕತ್ವ, ಧಾತುಕ್ಷೀಣತೆಗೆ ಅತ್ಯುತ್ತಮ)
ಹಿಮಸಾಗರ ತೈಲ—(ನಿದ್ರಾನಾಶಕ್ಕೆ ಅತೀ ಉಪಯುಕ್ತ)
ಮಹಾಮಾಷ ತೈಲ—(ಪಕ್ಷವಾತಕ್ಕೆ ಅತ್ಯಂತ ಗುಣಕಾರಿ)
ಗರ್ಭಪಾಲ (ಗರ್ಭಶೂಲ, ಗರ್ಭಸ್ರಾವಗಳಿಗೆ ದಿವ್ಯೌಷಧ)
ಗುಡ ಪಿಪ್ಪಲಿ—(ಲೀವರ್ ರೋಗಕ್ಕೆ ಅತ್ಯುತ್ತಮ)

ಇವುಗಳಲ್ಲದೆ ಶಾಸ್ತ್ರೀಯ ರೀತ್ಯಾ ತಯಾರಿಸಿದ ಅರಿಷ್ಟಗಳು, ಆಸವಗಳ, ಲೇಹ್ಯಗಳು, ಭಸ್ಮಗಳು, ತೈಲಗಳು ಇತ್ಯಾದಿ ಯಾವಾಗಲೂ ಮಾರಾಟಕ್ಕೆ ಸಿದ್ಧವಿರುತ್ತವೆ. ಹೆಚ್ಚಿನ ಮಾಹಿತಿಗೂ ಕೇಟಲಾಗಿಗೂ ಈ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳಬಹುದು.

ನಾಯಕ್ ಬ್ರದರ್ಸರ ಶ್ರೀಮದ್ಭುವನೇಂದ್ರ ಮಹೌಷಧಾಲಯ, ಕಟಪಾಡಿ, ದ. ಕನ್ನಡ.

ಶುದ್ಧ ಸ್ವದೇಶಿ! ಸ್ವದೇಶಿ ಭಾಂಡವಾಳದಿಂದ ಸ್ವದೇಶಿಯರಿಗಾಗಿ!

ಗಂಧದ ಸಾಬೂನು (ಸೆಂಡಲ್‌ವುಡ್) ನಿರ್ವಿವಾದವಾಗಿ ಅತ್ಯುತ್ತಮವಾದುದು!

ತಾಜಾ ಗಂಧದ ತೈಲ ಮೊದಲಾದ ವನಸ್ಪತಿ ತೈಲಗಳಿಂದಲೇ ತಯಾರಿಸಿದ ಅತ್ಯುತ್ತಮ ಸಾಬೂನು.
ಮೈಸೂರು ಸರಕಾರದ ಗಂಧದೆಣ್ಣೆ ಕಾರ್ಖಾನೆಯಲ್ಲಿ ದೊರೆವ ಆ ಉತ್ತಮ ಎಣ್ಣೆಯ ಸ್ನಿಗ್ಧ ಸುಗಂಧವುಳ್ಳದ್ದು.

ಪ್ರಾಣಿಜನ್ಯ ಚರ್ಬಿಯ ಸ್ಪರ್ಶವೂ ಇಲ್ಲದ

ಮಲಬಾರು ಸೋಪ್

ಮಲಬಾರು ಸೇಂಡಲ್ ಸೋಪ್

ಡಿ ವೆಜಿಟೇಬಲ್ ಸೋಪ್ ವರ್ಕ್ಸ್, ಕಲ್ಲಿಕೋಟೆ.

ಪ್ರೊಪ್ರೈಟರ್:—ಸನ್ ಬ್ರೆಂಡ್ ಕೊಡಿಯ ಖ್ಯಾತಿಯ ಸೇಟ್ ನಾಗಜೀ ಪುರುಷೋತ್ತಮ ಮತ್ತು ಕಂಪೆನಿ, ಕಲ್ಲಿಕೋಟೆ.

ಈ ಜಿಲ್ಲೆಗೆ ಪ್ರವರ್ತಕರು:— ರಾಘವೇಂದ್ರ ರಂಗ ಪೈ ರಥಬೀದಿ, ಮಂಗಳೂರು.

ಇಂದೇ ಆರಂಭಿಸಿರಿ!
ಸುಪ್ರಸಿದ್ಧ **ಆತಂಕನಿಗ್ರಹ ಮಾತ್ರೆ**
ಗಳನ್ನು ಉಪಯೋಗಿಸಲಿಕ್ಕೆ.
ಜೀವನದ ಜಯಶೀಲತೆಯ ಏಣಿಯನ್ನೇರಿ, ಲೋಕದಲ್ಲಿ ಸಾವಿರಾರು ಜನರು ಅದನ್ನು ಪ್ರತಿದಿನವೂ ಉಪಯೋಗಿಸುತ್ತಿದ್ದಾರೆ.
ನರ ಮತ್ತು ಶಾರೀರಿಕ ದೌರ್ಬಲ್ಯಕ್ಕೆ ಭದ್ರತೆಯು.
ಆರೋಗ್ಯಕ್ಕೆ ಕವಚವು
32 ಮಾತ್ರೆಗಳ ಟಿನ್ನೊಂದಕ್ಕೆ ರೂ. 1
ಹೆಚ್ಚಿನ ವಿವರಕ್ಕೆ, ಧರ್ಮಾರ್ಥ ಹಾಗೂ ಟಪ್ಪಾಲು ಹಾಸಲು ವಿನಹ ಕಳುಹಿಸಲ್ಪಡುವ ನಮ್ಮ
ಕಾಮಶಾಸ್ತ್ರವನ್ನೋದಿರಿ.
Agents:—Shah Company, MANGALORE.
„ Pearl & Sons, MANGALORE.
Atank Nigrah Pharmacy,
Chickpet, Bangalore.
ಆತಂಕನಿಗ್ರಹ ಫಾರ್ಮಸಿ,
ಚಿಕ್ಕಪೇಟೆ, ಬೆಂಗಳೂರು.

ಎಲ್ಲಾ ಚಂದಾದಾರರು ತಮ್ಮ ಪತ್ರವ್ಯವಹಾರದೊಂದಿಗೆ ಅವರವರ ಚಂದಾ ನಂಬರುಗಳನ್ನು ಅಗತ್ಯವಾಗಿ ನಮೂದಿಸತಕ್ಕದ್ದು. ಸಂ. ಸ್ವ.

BUY ADVERTISED GOODS

A Recurring Pleasure *To Smoke them*

REGISTERED

TRADE MARK

Mangalore Darbar Beedies

Thousands enjoy them daily all over India.
When buying see our Trade Mark!

THE GREAT DARBAR BEEDI WORKS CAR STREET, MANGALORE
Regd. Trade Mark.

ಮಂಗಳೂರು ದರ್ಬಾರ್ ಬೀಡಿಗಳು

ಇವುಗಳನ್ನು ಸೇದುವುದೆಂದರೆ ಆನಂದ!
ಯಾವ ಕೂಟದಲ್ಲೂ ಸಿಗರೇಟುಗಳ ಸ್ಥಾನವನ್ನು ಯೋಗ್ಯವೆನಿಸುವಂತೆ ವಹಿಸುವ ಬೀಡಿಗಳಿರುವುವಾದರೆ—ಅವುಗಳು

Regd. ದಿ ಗ್ರೇಟ್ ದರ್ಬಾರ್ ಬೀಡಿ ವರ್ಕ್ಸ್ ರಥಬೀದಿ, ಮಂಗಳೂರು.
ಇವರಿಂದ ತಯಾರಿಸಲ್ಪಟ್ಟವುಗಳು.

ಬಡತನಕ್ಕೆ ಮಕ್ಕಳು ಹೆಚ್ಚು!
ಹೆಚ್ಚು ಮಕ್ಕಳ ಕಾಟಕ್ಕೆ?
ತಕ್ಕ ತಡೆ.

ಗಂಡಸರಿಗೆ—(ಸುಖಾನಂದ) ಸ್ತ್ರೀರೋಗ ಅಂಟದಂತೆ ರಕ್ಷಿಸಿ ಅಪಾಯವಿಲ್ಲದೆ ಗರ್ಭ ನಿರೋಧಕ್ಕೆ ಸಹಕಾರಿಯಾದ ರಬ್ಬರ್ ಸಾಧನ. ಬೆಲೆ 1—8—0.

ಹೆಂಗಸರಿಗೆ—(ಪೆಸಾರಿಸ್) ಮೃದುವಾದ ಗರ್ಭನಿರೋಧಕ್ಕೆ ಸಾಧನ. ಉಪಯೋಗಿಸಿದಾಗ ಅನಾನುಕೂಲವಿಲ್ಲ. ತೊಂದರೆಯಿಲ್ಲ. ಸುಖವಾಗಿರುವುದು. ಬೆಲೆ 2—4—0. ಉಪಯೋಗಿಸುವ ವಿಧಾನ ಇದರ ಜೊತೆಯಲ್ಲಿರುವುದು. ಆರ್ಡರಿನೊಡನೆ 4 ಆಣೆ ಸ್ಟ್ಯಾಂಪಿರಬೇಕು.

ವಿಳಾಸ—ಕರ್ನಾಟಕ ಏಜೆನ್ಸಿ,
82, ಕೃಷ್ಣಪ್ಪ ನಾಯಕ್ ಟೇಂಕ್ ಸ್ಟ್ರೀಟ್,
ಜಿ. ಟಿ. ಮದ್ರಾಸು.

WANTED.

Four Organisers to organise the work of the South Indian General Assurance Society, Ltd., in the following places noted below. Capable organisers can expect to have attractive and encouraging terms with sound footing for their future.

(1) South Canara, (2) Mysore, Hassan and Coorg, (3) Kadur, Shimoga, Chitaldroog and Tumkur. (4) Mangalore, Kolar.

For terms and other particulars please apply to—

The Divisional Manager,
The South Indian General Assurance Co. Ltd.
64, III Cross Road, Srirampur Extn. Malleswaram Post, BANGALORE.

OR

The Managing Agents,
The S. I. G. A. Co. Ltd.
55, Poonamallee High Road, Kilpauk, MADRAS.

1876ನೇ ಇಸವಿಯಿಂದಲೂ ಪ್ರಸಿದ್ಧಿ ಹೊಂದಿದ

ಎಮ್. ಗಣಪಯ್ಯ ಎಂಡ್ ಸನ್ಸ್, ಮಂಗಳೂರು.

ಇವರ ಶಾಸ್ತ್ರೀಯ ಮತ್ತು ಅನುಭವಸಿದ್ಧ ಔಷಧಗಳು.

[illegible]

ಬಾಟ್ಲಿ 1ರ ರೂ. 2-0-0. ಬಾಟ್ಲಿ 3ರ ರೂ. 5-12-0.

[illegible]

ಡಬ್ಬಿ 1ಕ್ಕೆ ರೂ. 2-8-0. ಡಬ್ಬಿ 3ರ ರೂ. 7-0-0.

[illegible]

ಬಾಟ್ಲಿ 1ಕ್ಕೆ ರೂ. 1-8-0. ಬಾಟ್ಲಿ 3ರ ರೂ. 3-0-0.

[ಗುಣಬಾರದಿದ್ದರೆ ಹಣ ವಾಪಾಸು]

ಸುಪ್ರಸಿದ್ಧ ವೈದ್ಯರಾದ ಎಮ್. ಕೆ. ರಜಪೂತ ಇವರ

ಸಂತತಿ ಪ್ರತಿಬಂಧಕ ಚೂರ್ಣ (ರಿಜಿಸ್ಟರ್ಡ)

[illegible]

ವಿಳಾಸ:—ಸಂಜೀವಿನೀ ಔಷಧಾಲಯ ಮು ಪೊ. ವಿರಲೆ, S. M. C.

Canara Bank, Limited.

Established 1906.

Authorised Capital	10,00000—0—0
Subscribed capital	6,00,000—0—0
Paid up Capital	3,80,000—0—0
Reserves	4,31,000 0—0

Head Office:—Bunder, Mangalore. Local Offices:—City & Bunder.

BRANCHES:— Bombay, Cochin, Calicut, Ernakulam, Alleppey, Chikmagalur, Ganguli, Coondapoor, Udipi, Karkal, Puttur, Kasaragod, & Buntwal Out-agency.

Interest is allowed on Current, Fixed and Savings Bank Accounts, rates of which may be ascertained on application. Advances made on approved securities at easy rates. All kinds of Banking business transacted. Rules of business on application.

The Bangalore Branch Office of the Bank at No. 1 Albert Victor Road, Bangalore City has been opened on 8-1-34.

A. Madhava Pai,
Secretary.

Wanted.

200 old fully paid-up Shares of the Canara Bank Ltd. (Mangalore), at Rs. 85 per share. Intending sellers may apply to the undersigned.

S. Madhav Laxman Nayak,
Brahmin Street, Mangalore.

ನಾಟ್ಯಾಂಕ.

ಸಂಪಾದಕರು:—

[illegible]

[illegible]

ಡಾ. ಗೋವಿಂದ ರಾವ್ ಕೇಶವರ್ಧಕ

[illegible]

Shiromani Narayanacharya,
Choukhamba, Benares City

[illegible]

ಶಿರೋಮಣಿ ನಾರಾಯಣಾಚಾರ್ಯ
ಚೌಖಂಬಾ, ಬನಾರಸ್ (ಕಾಶಿ)

77 Years!

Two generations of approved service enables us to pick and choose what is cheap, lasting & good to suit the pockets & the tastes of our longstanding wide circle of

CUSTOMERS

who know our

Premier House for Swadeshi

Mill Yarns—Handloom Cloths, Dhoties—Saries—Cintzes etc.

Shrinivas Ranga Pai

Sawkar Mahal,
Car Street, MANGALORE.